Digitization by eGangotri and Sarayu Trust. Funding by MoE-IKS

ಗುಬ್ಬಿ ಮಲ್ಲಣಾರ್ಯವಿರಚಿತ

ವೀರಶೈವಾಮೃತಪುರಾಣ

ಭಾಗ-೧

ಗೌರವ ಪ್ರತಿ
ಶ್ರೀ ನಾಗನೂರ ರುದ್ರಾಕ್ಷಿಮಠ
ಬೆಳಗಾವಿ

ಸಂಪಾದಕರು:
ಡಾ. ಆರ್. ಸಿ. ಹಿರೇಮಠ ಎಂ.ಎ.; ಪಿಎಚ್.ಡಿ
ನಿವೃತ್ತ ಕುಲಪತಿಗಳು

ಪ್ರಕಾಶಕರು:
ಎನ್. ಎಸ್. ಎಸ್. ಕಲ್ಯಾಣಕೇಂದ್ರ
೨೯೩–೮ನೆಯ ಬ್ಲಾಕ್, ಜಯನಗರ
ಬೆಂಗಳೂರು, ೫೬೦ ೦೮೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Q234:222 8811
33NOH.1

Hiremath, R.C., ed.
Veerasaivamrita purana

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Q234:222
33NOH.1

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8811

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕಾಶಕರ ನುಡಿ

ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಡಾ. ಶಿವಬಸವ ಮಹಾಸ್ವಾಮಿಗಳು ರುದ್ರಾಕ್ಷಿ ಮಠ ನಾಗನೂರು, ಬೆಳಗಾಂವಿ ಇವರು ಈ ಯುಗದ ಜೀವಗಳ ಉದ್ಧಾರಕ್ಕಾಗಿ ಜನ್ಮವೆತ್ತಿಂತಿರುವರು. ವೀರಶೈವದ ನೂತನ ಯುಗ ಪ್ರವರ್ತಕರಾದ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಪವಿತ್ರ ಸಂಕಲ್ಪಗಳನ್ನೆಲ್ಲ ಕೃತಿಗಿಳಿಸಲು ನಮ್ಮೆಲ್ಲರ ಮಧ್ಯದಲ್ಲಿ ನಿಂತಂತಿರುವರು ಶ್ರೀಗಳವರು. ತಮ್ಮ ಆಯುಷ್ಯವನ್ನೆಲ್ಲ ಸಮಾಜದ ಏಳ್ಗೆಗಾಗಿ ಶ್ರೀಗಂಧದಂತೆ ತೇದು ನಾಡದೇವಿಗೆ ಅರ್ಪಿಸಿರುವರು. ಬಡವಿದ್ಯಾರ್ಥಿಗಳಿಗೆ ಜಾತಿಮತ ಪಂಥ ಪ್ರದೇಶಗಳ ತಾರತಮ್ಯವಿಲ್ಲದೆ ಉದಾರಾತಿಥ್ಯವನ್ನು ನೀಡಿ ಲಕ್ಷಾಂತರ ಜನರಿಗೆ ವಿದ್ಯಾದಾನ ಮಾಡಿರುವರು. ಆ ಪ್ರಸಾದ ನಿಲಯದಲ್ಲಿ ಪ್ರಸಾದ ಕಾಯರಾದ ಅನೇಕ ವಿದ್ಯಾರ್ಥಿಗಳು ನಾಡಿನ ಒಳಹೊರಗೆ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದು ಸಮಾಜಕ್ಕೆ ಆಧಾರ ಸ್ತಂಭರಾಗಿರುವರು. ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಸಮಾಜದ ಸರ್ವಾಂಗೀಣ ಉನ್ನತಿಗೆ ಕಾರಣೀಭೂತರಾಗಿರುವ ಇಂತಹ ಮಹಾನುಭಾವರು ನೂರು ಸಂವತ್ಸರಗಳ ಸಾರ್ಥಕ ಜೀವನವನ್ನು ಜೀವಿಸಿ ಇಂದು ಏಕೋತ್ತರ ಶತ ಸಂವತ್ಸರದಲ್ಲಿ ನಿಂತಿರುವುದು ನಾಡಿನ ಪುಣ್ಯವಿಶೇಷ. ಇಂತಹ ಮಹಾಮಹಿಮರ ಶತಮಾನೋತ್ಸವ ನಾಡಿನ ಮಂಗಲೋತ್ಸವ.

ಈ ಶತಮಾನೋತ್ಸವದ ಮಂಗಲ ಸಮಯದಲ್ಲಿ ತನ್ನ ಅಳಿಲು ಸೇವೆಯನ್ನು ಸಲ್ಲಿಸಲು ಎನ್.ಎಸ್.ಎಸ್. ಕಲ್ಯಾಣಕೇಂದ್ರ, ಜಯನಗರ ಬೆಂಗಳೂರು ಸಂಕಲ್ಪ ಮಾಡಿದ್ದಿತು. ಅದಕ್ಕೆ ಕಾರಣವೂ ಉಂಟು. ಈ ಕೇಂದ್ರ ನಾಗನೂರು ಶ್ರೀ ಶಿವಬಸವ ಮಹಾಸ್ವಾಮಿಗಳವರ ಶುಭನಾಮವನ್ನು ಹೊತ್ತು ಅವರ ಪರಮಾಶೀರ್ವಾದದಿಂದ ಮುಂದೆ ಬಂದಿದೆ. ಶಿಕ್ಷಣದ ಬಗೆಗೆ ಅತ್ಯಂತ ಆಸ್ಥೆವಹಿಸಿದ ಶ್ರೀಗಳವರು ಆಡಳಿತೆಯಲ್ಲಿ ದಕ್ಷರೆನಿಸುವ ವ್ಯಕ್ತಿಗಳನ್ನು ರೂಪಿಸುವ ಸಂಕಲ್ಪಮಾಡಿದರು. ಆಯ್.ಎಫ್.ಎಸ್.;ಆಯ್.ಎ.ಎಸ್. ಆಯ್.ಪಿ.ಎಸ್. ಹಾಗೂ ಕೆ.ಎ.ಎಸ್. ಪರೀಕ್ಷೆಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ಉತ್ತೀರ್ಣರಾಗಬೇಕೆಂಬ ಸದಿಚ್ಛೆಯಿಂದ ಶ್ರೀಗಳು ಅಂತಹ ವಿದ್ಯಾರ್ಥಿಗಳಿಗೆ ತರಬೇತು ನೀಡುವ ಸಂಸ್ಥೆಯೊಂದನ್ನು ಸ್ಥಾಪಿಸುವ ವಿಚಾರವನ್ನು ಮಾಡಿದರು. ಅದರ ಫಲವಾಗಿಯೇ ಎನ್.ಎಸ್.ಎಸ್. ಕಲ್ಯಾಣ ಕೇಂದ್ರ ಬೆಂಗಳೂರಲ್ಲಿ ಜನ್ಮ ತಳೆಯಿತು. ವಿದ್ಯಾರ್ಥಿಗಳಿಗೆ ತರಬೇತಿಯ ಯೋಜನೆ ಮಾಡುವುದು, ಅವರಿಗೆ ಶಿಷ್ಯವೇತನ ನೀಡುವುದು ಗ್ರಂಥಭಾಂಡಾರದ ಅನುಕೂಲತೆಯನ್ನೊದಗಿಸುವುದು ಇವೇ ಮೊದಲಾದ ಕಾರ್ಯಗಳನ್ನು ಕಲ್ಯಾಣ ಕೇಂದ್ರ ಮಾಡುತ್ತ ಬಂದಿದೆ. ಅನೇಕ ವಿದ್ಯಾರ್ಥಿಗಳು ಈ ಯೋಜನೆಯ ಉಪಯೋಗ ಮಾಡಿಕೊಂಡು ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಇದೀಗ ಈ ಕಲ್ಯಾಣ ಕೇಂದ್ರ ನಮ್ಮ ದೇಶದ ರಾಜಧಾನಿಯಾದ ದಿಲ್ಲಿಯಲ್ಲಿ ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಖೆಯನ್ನು ಪ್ರಾರಂಭಿಸಿದೆ. ವಿದ್ಯಾರ್ಥಿಗಳ ಆಯ್ಕೆಮಾಡಿ ದಿಲ್ಲಿಯಲ್ಲಿಯೇ ಅವರಿಗೆ ಊಟ ವಸತಿ, ತರಬೇತಿಯ ವ್ಯವಸ್ಥೆ ಮಾಡುವ ಯೋಜನೆಯಿದೆ. ಈಗ ಈ ಸಂಸ್ಥೆ ಮಹತ್ವದ ಗ್ರಂಥಗಳ ಪ್ರಕಟನೆಯ ಕಡೆಗೆ ಲಕ್ಷ್ಯಪೂರೈಸಲು ಪ್ರಾರಂಭಿಸಿದೆ.

ಪೂಜ್ಯಮಹಾಸ್ವಾಮಿಗಳವರ ಶತಮಾನೋತ್ಸವದ ಸ್ಮಾರಕವಾಗಿ ವೀರಶೈವಾಮೃತ ಮಹಾ ಪುರಾಣವನ್ನು ಪ್ರಕಟಿಸಬೇಕೆಂದು ಈ ಕೇಂದ್ರ ನಿರ್ಧರಿಸಿತು. ವೀರಶೈವಾಮೃತ ಪುರಾಣವು ನಮ್ಮ ಸಾಹಿತ್ಯದಲ್ಲಿಯೇ ಅತ್ಯಂತ ಹಿರಿಯದಾದ ಗ್ರಂಥ. ಗಾತ್ರ ಮತ್ತು ಸತ್ತ್ವ ಎರಡು ದೃಷ್ಟಿಯಿಂದಲೂ ಹಿರಿಯ ಗ್ರಂಥ. ಇದು ೧೯೦೬ ರಲ್ಲಿ ಬೆಂಗಳೂರೊಳಗೆ ಬೆಂಗಳೂರು ನಂಜುಂಡಶಾಸ್ತ್ರಿಗಳವರ ಶಿವಪ್ಪಶಾಸ್ತ್ರಿಗಳಿಂದ ಪ್ರಕಟವಾಗಿದ್ದಿತು. ಈ ಗ್ರಂಥದ ಪ್ರತಿಗಳು ತೀರಿಹೋಗಿ ಅನೇಕ ದಶಕಗಳಾಗಿದ್ದವು. ಈಗ ಮತ್ತೆ ಅದರ ಪ್ರತಿಗಳು ಅವಶ್ಯವಾಗಿದ್ದವು. ಇದರ ಕೆಲವು ತಾಳೆಯ ಪ್ರತಿಗಳು ಉಪಲಬ್ಧವಾದವು. ಇವನ್ನು ಉಪಯೋಗಿಸಿ ಈ ಗ್ರಂಥದ ನೂತನ ಆವಿಷ್ಕರಣವನ್ನು ತರುವುದು ಅವಶ್ಯವೆಂದು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಸಂಸ್ಥಾನಮಠ ಡಂಬಳ-ಗದಗ ಅವರು ಸಲಹೆ ಮಾಡಿದರು.

ನಮ್ಮ ಸುದೈವದಿಂದ ಈ ಕಾರ್ಯವನ್ನು ಸಮರ್ಥ ರೀತಿಯಿಂದ ಪೂರೈಸಬಲ್ಲ ತಜ್ಞರೊಬ್ಬರು ದೊರೆತರು. ಅವರೇ ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳೂ, ವಚನ ಸಾಹಿತ್ಯ ಸಂಶೋಧನೆ ಹಾಗೂ ಪ್ರಾಚೀನ ಕಾವ್ಯ ಪರಿಷ್ಕರಣ ಕಾರ್ಯದಲ್ಲಿ ನುರಿತವರೂ ಆದ ಡಾ|| ಆರ್.ಸಿ. ಹಿರೇಮಠ ಅವರು, ಈ ಕಾರ್ಯವನ್ನು ಸಮರ್ಥರೀತಿಯಿಂದ ಪೂರೈಸಿಕೊಟ್ಟರು. ಗದುಗಿನ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣಾಲಯದ ಸಂಚಾಲಕ ಶ್ರೀ ಅಶೋಕ ಅವರು ಅಲ್ಪಾವಧಿಯಲ್ಲಿ ಈ ಬೃಹದ್ ಗ್ರಂಥವನ್ನು ಅಂದವಾಗಿ ಮುದ್ರಿಸಿರುವರು. ಡಾ. ಶ್ರೀ ನಿ.ಪ್ರ.ಸ್ವ. ಶಿವಬಸವ ಸ್ವಾಮಿಗಳು ಇವರೆಲ್ಲರಿಗೆ ಪರಮಾಶೀರ್ವಾದವನ್ನೀಯಲಿ.

ಇಂತು

ಜಿ. ಎಂ. ಹಿರೇಮಠ
ಕಾರ್ಯದರ್ಶಿಗಳು
ಎನ್.ಎಸ್.ಎಸ್. ಕಲ್ಯಾಣಕೇಂದ್ರ
ಬೆಂಗಳೂರು

ಸಿ. ಎ. ಜಮಖಂಡಿಮಠ
ಚೆಅರಮನ್ನರು
ಎನ್.ಎಸ್.ಎಸ್. ಕಲ್ಯಾಣಕೇಂದ್ರ
ಬೆಂಗಳೂರು

ಬೆಂಗಳೂರು
೧೪-೧-೯೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿವಿಡಿ

ಭಾಗ ೧

ಪ್ರಕಾಶಕರ ನುಡಿ			೩
ಪ್ರಸ್ತಾವನೆ			೭
ಕಾಂಡ ೧			
ಸಂಧಿ:	೧	ಗುರು–ಶಿಷ್ಯ ಶಿವಕವಿ ಸ್ತುತಿ	೩
	೨	ವಸ್ತುನಿರ್ದೇಶ	೧೭
	೩	ಭಕ್ತನ ಮಹತ್ವ	೨೭
	೪	ಸೃಷ್ಟಿ ವಿಸ್ತಾರ	೫೧
	೫	ಪ್ರಣವ ಸೃಷ್ಟಿ	೬೧
	೬	ಅನಾದಿ ಭಾವನ ಮೂರ್ತಿಗಳು	೭೯
	೭	ಸೃಷ್ಟಿವಿಷಯ ಕಥನ	೯೩
	೮	ಮೂರ್ತ್ಯಾದಿ ಕಂಗಳು	೧೦೫
	೯	ನಿಷ್ಕಲ–ಸಕಲ ನಿಷ್ಕಲ–ಸಕಲ	೧೧೫
ಕಾಂಡ ೨			
ಸಂಧಿ:	೧೦	ಚಂದ್ರಧರಲೀಲೆ, ಉಮಾಮಹೇಶ್ವರಲೀಲೆ, ವೃಷಭಾರೂಢಲೀಲೆ ನಟೇಶ್ವರಲೀಲೆ, ಗಿರಿಜಾಕಲ್ಯಾಣಲೀಲೆ	೧೩೧
	೧೧	ಭಿಕ್ಷಾಟನಲೀಲೆ	೧೫೧
	೧೨	ಭಿಕ್ಷಾಟನಲೀಲೆ	೧೬೧
	೧೩	ಕಾಮದಹನಲೀಲೆ	೧೭೯
	೧೪	ಶ್ವೇತನಕಥೆ, ಮಾರ್ಕಾಂಡೇಯ ಚರಿತೆ	೧೮೭
	೧೫	ಶ್ವೇತನಕಥೆ	೧೯೯
	೧೬	ಸುಕುಮಾರನಕಥೆ	೨೧೧
	೧೭	ಅಷ್ಟಮಕಾಲದಹನ ಕಥೆ	೨೨೫
	೧೮	ತ್ರಿಪುರದಹನಕಥೆ ಲೀಲೆ	೨೪೧
	೧೯	ತ್ರಿಪುರದಹನ ಲೀಲೆ	೨೫೩
	೨೦	ನವಲೀಲೆ ಸಂಪೂರ್ಣ	೨೬೩
	೨೧	ಜಲಂಧರಹರಲೀಲೆ	೨೭೭
	೨೨	ಚಕ್ರಂಬದೆದನಾಮಾಧವಂ	೨೯೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಂಡ ೩			
ಸಂಧಿ:	೨೩	ಬ್ರಹ್ಮಶಿರಚ್ಛೇದನ	೩೦೯
	೨೪	ದಕ್ಷಾಧ್ವರ	೩೧೩
	೨೫	ವೀರಭದ್ರನುಜ್ಜುಗಿಸಿದಂ	೩೨೪
	೨೬	ದಕ್ಷಮಸ್ತಕಂಗಡಿದಂ	೩೩೩
	೨೭	ಶಂಖುಕರ್ಣನಕಥೆ	೩೪೯
	೨೮	ನರಸಿಂಹ ಸಂಹಾರ–ಶರಭಲೀಲೆ	೩೬೧
	೨೯	ದಧೀಚಿಮುನಿದಂಪತಿಗಳಾ ಪೊರೆದಂ	೩೭೫
	೩೦	ಜ್ವಾಲವ್ಯಾಲ ಪಂಚಮೇಢ್ರಾಸುರ ಸಂಹಾರ	೩೮೩
	೩೧	ಹನುಮದಿಷ್ಟಲಿಂಗಪ್ರದಾನ	೩೯೭
	೩೨	ವಿಷ್ಣು ದಶಾವತಾರ ಶಾಪನಿರೂಪಣ	೪೦೯
	೩೩	ಮತ್ಸ್ಯಾದಿ ದಶಾವತಾರ ಸಂಹರಣ ಕಥೆ	೪೨೧
	೩೪	ಅರ್ಧನಾರೀಶ್ವರ ಲೀಲೆ	೪೪೧
	೩೫	ಕಿರಾತರುದ್ರಲೀಲೆ	೪೪೭
	೩೬	ಕಂಕಾಳಧರಲೀಲೆ	೪೫೫
	೩೭	ಚಂಡೇಕಾನುಗ್ರಹ	೪೬೩
	೩೮	ವಿಷಧರಲೀಲೆ	೪೭೫
	೩೯	ಉರುಲಿಂಗಲೀಲೆ	೪೯೩
	೪೦	ವಿನಾಯಕ ಬೋಧೆ	೫೦೭
	೪೧	ಸ್ಕಂದೋತ್ಪತ್ತಿ	೫೧೯
	೪೨	ಸ್ಕಂದೋತ್ಪತ್ತಿ	೫೩೧
	೪೩	ತಾರಕ ಸಂಹಾರ	೫೪೧
	೪೪	ಗಂಗಾಧರಲೀಲೆ	೫೫೩
	೪೫	ಭಗೀರಥ–ದೇವಗಂಗೆ	೫೬೫
	೪೬	ವಿಷ್ಣುಪಾದೋದ್ಭವಗಂಗಾ ನಿರಸನ	೫೮೩
ಕಾಂಡ ೪			
ಸಂಧಿ:	೪೭	ಅನ್ನದಾನ ಮಹಿಮೆ	೫೯೯
	೪೮	ಗೌತಮಋಷಿ–ವಿಪ್ರಶಾಪ	೬೧೭
	೪೯	ವಾದಿಗಳ ಕೋಲಾಹಲ	೬೨೭
	೫೦	ನಿರೀಶ್ವರವಾದಿಗಳು–ಗೌತಮ	೬೩೯
	೫೧	ಕರ್ಮವಾದಿ, ಕಾಲದೈವವಾದಿಗಳ ಸೋಲು	೬೫೧
	೫೨	ಮಾಯಾತ್ರಿಗುಣವಾದಿ, ಕರ್ಮಯೋಗಿಗಳ ಸೋಲು	೬೬೭
	೫೩	ಚಾರ್ವಾಕ–ಬೌದ್ಧರ ಪರಾಜಯ	೬೮೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ:	೫೪	ಜೈನರು ಶಿವಭಕ್ತರಾದ ಕಥೆ	೬೯೯
	೫೫	ತಿರುಜ್ಞಾನಸಂಬಂಧಿಗಳು	೭೦೭
	೫೬	ಪಿಳ್ಳೈಯನಾರ ಕಥೆ	೭೧೭
	೫೭	ಗೌತಮ ಕಾಪಾಲಿಕಾದಿಗಳ ಜಯಿಸಿದ ಕಥೆ	೭೨೭
	೫೮	ಗೌತಮನ ಮೆರವಣಿಗೆ	೭೩೯
	೫೯	ಭೂಗೋಳಕಥನ	೭೫೧
	೬೦	ಮೇರುಪ್ರದೇಶಾದಿಗಳು	೭೬೩
	೬೧	ಊರ್ಧ್ವಲೋಕಗಳು	೭೭೫
	೬೨	ಶಿವಲೋಕವಿಸ್ತಾರ	೭೮೫
	೬೩	ಧರ್ಮಾಧರ್ಮ ಸ್ವರೂಪ	೭೯೩
	೬೪	ಪುಣ್ಯಪಾಪಿಗಳ ಸತ್ಕಾರಬಂಧನ	೮೦೩
	೬೫	ನರಕಯಾತನೆ	೮೧೫
	೬೬	ಪಿಂಡೋತ್ಪತ್ತಿ–ದಶವಾಯುಗಳು	೮೩೧
	೬೭	ಪಿಂಡ ಜನನಾದಿಕ್ರಮ	೮೩೭
	೬೮	ಗರ್ಭಸ್ಥ ಶಿಶು–ಪೂರ್ವಜನ್ಮಸ್ಮರಣೆ	೮೫೧
	೬೯	ಸಾಮುದ್ರಿಕಾಲಕ್ಷಣ	೮೬೧
	೭೦	ಕಾಲಜ್ಞಾನಮರಣ ಚಿಹ್ನ	೮೭೫
	೭೧	ಸಂಸಾರಹೇಯ	೮೮೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸ್ತಾವನೆ

ವೀರಶೈವಾಮೃತ ಪುರಾಣವು ತತ್ವಪ್ರಧಾನವಾದ ಕೃತಿ. ಈ ಪುರಾಣದಲ್ಲಿ ನಿರೂಪಿಸಿದ ವೀರಶೈವದ ಸಾರವನ್ನು ಕವಿ ಹೀಗೆ ವಿವರಿಸಿರುವನು:

ಈ ಭಕ್ತಿಯುದ್ಧರಿಪ ಕಾರಣಂ ಬಸವೇಶ
ನೇ ಭುವನದೊಳ್ ಪುಟ್ಟಿದನ ನಾಮುವಾವವನ
ಶೋಭನ ಮುಖಾಬ್ಜದೊಳಗಿರ್ಪುದಂತಲ್ಲಿ ನಾಂ ನೆಲೆಸಿರ್ಪೆನೆಂದು ನುಡಿದಂ
ಆ ಭವಾನೀಶನಾ ಶ್ರುತಿಪುರಾಣ ಸ್ಮೃತಿಯ
ವೈಭವ ಪ್ರಖ್ಯಾತ ಬಸವೇಶ್ವರಾದಿಯ ಮ
ಹಾ ಭವ್ಯಗಣ ನಿಕರದಾಚರಣೆ ವೀರಶೈವಂ ಕೇಳು ಮಗನೆಯೆಂದಂ[1]
ವೀರಶೈವನಬಗೆಯುವೆಂತೆನಲು ಲಾಲಿಸಾ
ಗೌರಿ ಲೋಕಾಚಾರವರ್ಜಿತಂ ಭಾವಿಸಲು
ದಾರ ಲೋಕಾಲೋಕಪರಿಹರು ತಿಥಿಲಗ್ನ ನಕ್ಷತ್ರಯೋಗಕರಣಂ
ವಾರಂಗಳಿಲ್ಲವಾ ತೀರ್ಥಯಾತ್ರೆಗಳನುರೆ
ಹಾರಂ ನ ವೇದಿಯಪೌ ಪೊರ್ದನಾಪ್ವೈದಿಕಾ
ಚಾರಮಂ ವರ್ಣಾಶ್ರಮಂಗಳಂ ಬಗೆಯನೆಲ್ಲಾ ಮಂತ್ರಮಂ ಗಣಿಸನು[2]
ಶಿವಮಂತ್ರಜಪವನೆಲ್ಲಾಗಳುಂ ಸ್ಮರಿಸುವಂ
ಭವಿಗಳಂ ಧಿಃಕ್ಕರಿಸಿ ಭಕ್ತರಂ ಸೇವಿಪಂ
ತವಸದಾ ಮಾಹೇಶ್ವರರ ಸಂಗದಿಂದೊಪ್ಪುವಾತನೇ ವೀರಶೈವಂ[3]

ಭಕ್ತಿಯನ್ನು ಉದ್ಧರಿಸುವ ಬಸವೇಶನು ಭುವನದಲ್ಲಿ ಹುಟ್ಟಿದನು. ಅವನ ನಾಮವು ಯಾರ ಮುಖಕಮಲದಲ್ಲಿ ಇರುವುದೋ ಅಲ್ಲಿ ನಾನಿರುವೆನೆಂದು ಭವಾನೀಶನು ನುಡಿದನು. ಪ್ರಖ್ಯಾತರಾದ ಬಸವೇಶ್ವರಾದಿ ಮಹಾಶರಣ ಗಣ ಸಮೂಹದಾಚರಣೆಯೇ ವೀರಶೈವ. ಅಂತಹ ವೀರಶೈವನು ಲೋಕಾಚಾರವರ್ಜಿತನು ಲೋಕಾಲೋಕಗಳನ್ನು ಪರಿಗಣಿಸನು; ಆತನಿಗೆ ತಿಥಿ, ವಾರ, ನಕ್ಷತ್ರ, ಯೋಗಕರಣಾದಿಗಳ ಹಂಗಿಲ್ಲ. ಆತನು ತೀರ್ಥಯಾತ್ರೆಗಳನ್ನು ಕೈಕೊಳ್ಳನು. ವೇದಮಾರ್ಗವನ್ನು ಮನ್ನಿಸನು. ಅವನಿಗೆ

---

1 ವೀರಶೈವಾಮೃತ ಪುರಾಣ: ಕಾಂಡ ೭. ಸಂ. ౨ ಪ. ೮

2 ,, ,, ೭. ಸಂ. ೬ ಪ. ೭

3 ,, ,, ೭. ಸಂ. ೬ ಪ. ೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೇದಿಕಾಚರಣೆಗಳಿಲ್ಲ. ಆ ವೀರಶೈವನು ವರ್ಣಾಶ್ರಮಗಳನ್ನು ಪರಿಪಾಲಿಸನು; ಎಲ್ಲಾ ಮಂತ್ರಗಳನ್ನು ತ್ಯಜಿಸಿ ಶಿವ ಮಂತ್ರವನ್ನು ಮಾತ್ರ ಸದಾ ಜಪಿಸುವನು: ಅದನ್ನೇ ಧ್ಯಾನಿಸುವನು. ಭವಿಸಂಗವನ್ನು ಬಿಟ್ಟು ಸದಾ ಭಕ್ತರ ಮಧ್ಯದಲ್ಲಿರತಕ್ಕವನು. ಈತನೇ ವೀರಶೈವನು.

ಈ ಅಭಿಪ್ರಾಯವನ್ನು ವೀರಶೈವಾಮೃತ ಪುರಾಣದಲ್ಲಿ ನೂರಾರು ಕಡೆಗೆ ಕಾಣುತ್ತೇವೆ. ಬಸವಾದಿಶರಣರು ಚರಿಸಿ ತೋರಿದ ಮಾರ್ಗವೇ ಈ ಪುರಾಣದ ವೀರಶೈವಾಮೃತವು. ಈ ವೀರಶೈವಾಮೃತವನ್ನು ವಿವರಿಸುವುದೇ ವೀರಶೈವಾಮೃತ ಪುರಾಣ.

ಹಲಗೆ ದೇವರು ತಮ್ಮ ಗುರು ಶೀಲವಂತ ದೇಶಿಕರಡಿಗೆ ನಮಸ್ಕರಿಸಿ ಸದ್ಭಕ್ತಿಶ್ವಾರ್ಥವಹ ವೀರಶೈವವನ್ನು ವಿವರಿಸಬೇಕೆಂದು ಪ್ರಾರ್ಥಿಸಿದರು. ಅವರು ಹೇಳಿದುದನ್ನು ಹಲಗೆದೇವರು ಕೆಂಚವೀರಣ್ಣೊಡೆಯರಿಗೆ ಜ್ಯೋತಿಯಮ್ಮನಾಲಯದಲ್ಲಿ ಬಿತ್ತರಿಸಿದರು. ಮಹಾವೀರ ಶೀಲಸಂಪನ್ನ ಕಲ್ಲೇಶ್ವರ, ಸೈಂಧವದ ಶಾಂತದೇವರು, ಕಲ್ಯಾಣ ಮಲ್ಲೇಶ್ವರರು ನಂಜಯ್ಯ, ಸಪ್ಪೆಯ ಮಲ್ಲಿಕಾರ್ಜುನ, ಸಮಾಧಿ ಸಿದ್ದಮ್ಮ, ಸಪ್ಪೆಯಮ್ಮ ಮುಂತಾದವರ ಮಧ್ಯದಲ್ಲಿ ಈ ಸಿದ್ಧಾಂತವನ್ನು ಜ್ಯೋತಿಯಮ್ಮನ ಗೃಹದಲ್ಲಿ ಬೋಧಿಸಲಾಯಿತು.[1]

ಈ ಜ್ಯೋತಿಯಮ್ಮ ಪುಣ್ಯವಂತೆ. ಓರುಗಲ್ಲಿನ ಪ್ರತಾಪರುದ್ರನ ಮಗ ಓರುಗಲ್ಲ ವೀರೇಶನ ಹೆಸರನ್ನು ಪಡೆದ ವೀರಪಾಚಾರ್ಯ ಆತನು ಬಿಲ್ಲಾಳನ ಭಕ್ತಿಯಿಂದ ತೇಕಲ್ಲಿನಲ್ಲಿ ಪತ್ನೀಸಮೇತನಾಗಿ ವೀರಭದ್ರನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಸದ್ಭಕ್ತರನ್ನು ಪೊರೆದಾತನು. ಆತನನ್ನು ಸಪ್ಪೆಯ ವೀರಪಾಚಾರ್ಯನೆಂದು ಕರೆದುದುಂಟು. ಈತನ ಮಗ ವೀರಪಾರ್ಯ, ಈ ವೀರಪಾರ್ಯನ ಮಗ ಆ ದಿನಾಥಾರ್ಯ; ಆತನ ಮಗ ಮಾದಿರಾಜ; ಮಾದಿರಾಜನ ಕುಮಾರನು ನಾಗಮಲ್ಲೇಶ. ಆತನ ಪುತ್ರ ನಾಗಿದೇವಾಚಾರ್ಯ. ಆತನ ಮಗಳ ಮಗಳು ವೀರಮ್ಮ. ಆಕೆ ಜ್ಯೋತಿದೇವರ ಪತ್ನಿ. ಈ ವೀರಮ್ಮ ಜ್ಯೋತಿಯಮ್ಮನೆಂದು ಹೆಸರಾಗಿದ್ದಳು. ಹಲಗೆದೇವರು ಈ ಜ್ಯೋತಿಯಮ್ಮನ ಗೃಹದಲ್ಲಿ ಕೆಂಚವೀರಣ್ಣ ಮೊದಲಾದ ಶಿಷ್ಯಸಮೂಹಕ್ಕೆ ವೀರಶೈವ ತತ್ವವನ್ನು ವಿವರಿಸಿದ್ದರು

ಈ ವೀರಶೈವಾಮೃತಾಖ್ಯ ಸಂಗ್ರಹವನೀ
ಭೂವಳಯದಲ್ಲಿ ಕೃತಿಯಂಮಾಳ್ಪ ಶಿವಕವಿಯ
ದಾವನೆಂದಱಿದು ಹಲಗೆಯ ದೇಶಿಕಂ ಮಲ್ಲಣಾರ್ಯನಂ ಕರೆದುನುಡಿದಂ
ನಾವು ಪೇಳ್ವೀಬೋಧೆಯುವದನಮಾಡುವೊಡೆ
ಪಾವನ ಚರಿತ್ರಕೇಳ್ ನೀನೆಯೋಗ್ಯಂಕಣಾ

ಎಂದು ವಿರಕ್ತಾಧೀಶ್ವರ ಹಲಗೆದೇವರು ವೀರಶೈವಾಮೃತ ಪುರಾಣ ರಚಿಸಲು ಮಲ್ಲಣಾರ್ಯರಿಗೆ ಪ್ರೇರಣೆಯಿತ್ತರು. 'ದೇವ ಕೇಳ್ ಅಂತು ಮಾಡುವೆಂ ಎನಗೇಂಸ್ವತಂತ್ರವೇ' ಎಂದು ಮಲ್ಲಣಾರ್ಯರು ವಿನಯದಿಂದ ಉತ್ತರಿಸಿದರು. ಹೀಗೆ ವೀರಶೈವಾಮೃತ ಪುರಾಣದ ಕರ್ತೃ ಮಲ್ಲಣಾರ್ಯ ಈ ವಿಷಯವನ್ನು ವೀರಶೈವಾಮೃತ ಪುರಾಣದ ಪ್ರತಿ ಸಂಧಿಯ

1 ವೀರಶೈವಾಮೃತ ಪುರಾಣ: ಕಾಂಡ ೧ ಸಂಧಿ ೧. ಪದ್ಯಗಳು ೪೬, ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊನೆಯ ಎರಡು ಪದ್ಯಗಳಲ್ಲಿ ಸ್ಪಷ್ಟಪಡಿಸಿರುವರು. ಕವಿ ತಾನು ದಕ್ಷಿಣ ಕೈಲಾಸವೆನಿಸಿದ ಕಕುದ್ಗಿರಿ (ಶಿವಗಂಗೆ)ಯ ಗವಿಯ ಸಿಂಹಾಸನಾಲಂಕೃತ ಶಾಂತನಂಜೇಶ್ವರನ ಅಂಘ್ರಿ ಪಂಕಜನೆಂದು ಹೇಳಿಕೊಂಡಿದ್ದಾನೆ. ಈ ಶಾಂತನಂಜೇಶನ ಗುರುಪರಂಪರೆ ಭವ್ಯವಾಗಿದೆ. ಮತಿಯ ಶಾಂತೇಶ–ಶಂಭುಗುರುವಲ್ಲಭ–ಮತಿಯ ವೀರೇಶ–ಸಿದ್ಧರಾಮೇಶ–ಶಾಂತನಂಜೇಶ್ವರು–ಚಿಕ್ಕಶಾಂತೇಶ್ವರ–ಶಾಂತನಂಜೇಶ್ವರ. ಇಂತಹ ಶಿವಗಂಗೆಯ ಸಿಂಹಾಸನಾಧಿಪತಿಗಳ ಪಾದಪಂಕಜ ಭೃಂಗನಾಗಿದ್ದ ಮಲ್ಲಣಾರ್ಯ. ಈ ಮಲ್ಲಣಾರ್ಯರ ವಂಶ ಪರಂಪರೆ ಹೀಗಿದೆ:

ಅಮರಗುಂಡದ
ಮಲ್ಲಿಕಾರ್ಜುನ
↓ ಶಿಷ್ಯ
ಶೂಲವೇರಿದ
ಗುರುಭಕ್ತ
↓
ದೇಶಿಕ ಪಟ್ಟವರ್ಧನ
ಸೌಂದರ್ಯ ಮಲ್ಲಿಕಾರ್ಜುನ ಪಂಡಿತ
↓
ಶಿವನನ್ನು ಮಾತನಾಡಿಸಿದ
ನಾಗನಾಥಾರ್ಯ
↓
ಶೂದ್ರನಿಂದ ವೇದವನ್ನೋದಿಸಿದ
ಅಮರಗುಂಡಾರ್ಯ
↓
ಗುಬ್ಬಿಯ ಮಲ್ಲಣ್ಣ
↓
ಗುರುಭಕ್ತ ಪತ್ನಿ ಸಪ್ಪೆಯಮ್ಮ
↓
ಗುಬ್ಬಿಯ ಮಲ್ಲಣಾರ್ಯ

(ಈ ವಂಶವೃಕ್ಷದಲ್ಲಿರುವುದು ತಂದೆಮಕ್ಕಳ ಸಂಬಂಧ)

ಮಲ್ಲಣಾರ್ಯರು ಗುಬ್ಬಿಯವರು. ಅಂತೆಯೇ ಅವರನ್ನು ಗುಬ್ಬಿಯ ಮಲ್ಲಣಾರ್ಯರೆಂದೂ ವಾತುಲತಂತ್ರ ಟೀಕೆ ಗಣಭಾಷಿತ ರತ್ನಮಾಲೆಗಳ ಕರ್ತೃವೂ ಮಲ್ಲಣಾರ್ಯರ ಪಿತಾಮಹನೂ ಆದ ಈ ಮಲ್ಲಣ್ಣನನ್ನು ಗುಬ್ಬಿಯ ಮಲ್ಲಣ್ಣನೆಂದೂ ಕರೆಯಲಾಗುತ್ತಿದೆ. ಗುಬ್ಬಿ ಮೊದಲು ಅಮರಗುಂಡಕ್ಷೇತ್ರವೆಂದು ಹೆಸರಾಗಿದ್ದಿತು. ತೋಂಟದ ಸಿದ್ಧಲಿಂಗೇಶ್ವರರ ತರುವಾಯ ಎಡೆಯೂರು, ಗುಬ್ಬಿ ಮೊದಲಾದ ಸ್ಥಳಗಳು ಬಹಳ ಪ್ರಸಿದ್ಧಿಗೆ ಬಂದುವು. ಅಮರ ಗುಂಡಕ್ಷೇತ್ರಕ್ಕೆ ಗುಬ್ಬಿ ಎಂಬ ಹೆಸರು ಬಂದುದಕ್ಕೆ ಒಂದು ಕಥೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನಜನಿತವಾಗಿ ಬಂದಿದೆ. ಅಮರಗುಂಡದ ಮಲ್ಲಿಕಾರ್ಜುನ ಪಂಡಿತರು ಪ್ರತಿನಿತ್ಯ ಮಠದಲ್ಲಿ ಪುರಾಣ ಪ್ರವಚನ ಮಾಡುತ್ತಿದ್ದರು. ಆಗ ದಿನಾಲು ಎರಡು ಗುಬ್ಬಿಗಳು ಬಂದು ಮರದ ಕೊಂಬಿನ ಮೇಲೆ ಕುಳಿತುಕೊಳ್ಳುತ್ತಿದ್ದವಂತೆ. ಪುರಾಣ ಮುಕ್ತಾಯದ ದಿನ ಎರಡೂ ಗುಬ್ಬಿಗಳು ಚಟ್ಟನೆ ಬಿದ್ದು ಮಡಿದವಂತೆ. ಅಂದಿನಿಂದ ಆ ಊರಿಗೆ ಗುಬ್ಬಿ ಎಂಬ ಹೆಸರು ಬಂದಿತಂತೆ. ಇದು ಏನಿದ್ದರೂ ಗುಬ್ಬಿ ಒಂದು ಪ್ರಸಿದ್ಧವಾದ ಸ್ಥಳವೆಂಬುದರಲ್ಲಿ ಸಂದೇಹ ವಿಲ್ಲ. ಅಲ್ಲಿ ಅಮರಗುಂಡದ ಮಲ್ಲಿಕಾರ್ಜುನರ ಕುರುಹಾಗಿ ಅಮರಗುಂಡ ಮಲ್ಲೇಶ್ವರನ ದೇವಾಲಯವಿದೆ. ಸತ್ತ ಗುಬ್ಬಿಗಳ ಸ್ಮಾರಕವೆನ್ನುವಂತೆ ಆ ದೇವಾಲಯದಲ್ಲಿ ಬಸವನ ವಿಗ್ರಹವಿದೆ. ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಗುರುವಾದ ಹರದನಹಳ್ಳಿ ಗೋಸಲ ಚನ್ನಬಸವೇಶ್ವರರ ಶಿವಯೋಗ ಸಮಾಧಿ ಗುಬ್ಬಿಯಲ್ಲಿದೆ.

ಈ ಮನೆತನ ಕವಿತ್ವ ಪಾಂಡಿತ್ಯಗಳಿಗೆ ತವರಾಗಿದ್ದಿತು. ಮಲ್ಲಣಾರ್ಯರ ಅಜ್ಜ ಗುಬ್ಬಿಯ ಮಲ್ಲಣ್ಣ ವಾತುಲ ತಂತ್ರಕ್ಕೆ ಕನ್ನಡ ಟೀಕೆಯನ್ನು ರಚಿಸಿದರು. ಗಣಭಾಷಿತ ರತ್ನಮಾಲೆಯೆಂಬ ವಚನ ಗ್ರಂಥವನ್ನು ರಚಿಸಿರುವರು. ಗುಬ್ಬಿಯ ಮಲ್ಲಣ್ಣನು ತೋಂಟದಾರ್ಯರ ಶಿಷ್ಯರಲ್ಲಿ ಒಬ್ಬನಾಗಿದ್ದನು. ವಾತುಲ ತಂತ್ರ ಟೀಕೆ ಕ್ರಿ.ಶ. ೧೪೮೦ನೆಯ ಇಸ್ವಿ ಮಾರ್ಚ ೮ ನೆಯ ದಿನಾಂಕ ಪರಾಭವ ಸಂವತ್ಸರ ಗುರುವಾರದಂದು ಪೂರ್ತಿಗೊಂಡಿದೆ. ಶ್ರೀಗುರು ತೋಂಟದಾರ್ಯರ ಶಿಷ್ಯ ಮಹಾಂತಯ್ಯನು ಆದರ ಪ್ರತಿ ಮಾಡಿರುವನು. ನಾಗವರ್ಮನ ಛಂದಸ್ಸಿನ ಉಪೋದ್ಘಾತದಲ್ಲಿ ಕಿಟೆಲ್ಲರು ಮಲ್ಲಣಾರ್ಯನು 'ರಾಮಸ್ತವರಾಜ' ಎಂಬ ಒಂದು ತೆಲುಗು ಕೃತಿಯನ್ನು ರಚಿಸಿರುವುದಾಗಿ ಹೇಳುತ್ತಾರೆ. ಮಲ್ಲಣಾರ್ಯನಿಗೆ ಯೋಗ ಶಾಸ್ತ್ರದ ಪರಿಚಯವಿದ್ದುದು ಆತನ ಕೃತಿಗಳಿಂದ ವಿದಿತವಾಗುತ್ತದೆ. ಆದರೆ ಪ್ರಸ್ತುತ ಮಲ್ಲಣಾರ್ಯನೇ ರಾಮಸ್ತವರಾಜ ಬರೆದಿರಬಹುದೋ ಏನೋ ಎಂಬುದನ್ನು ಖಚಿತವಾದ ಆಧಾರಗಳಿಂದ ನಿಷ್ಕರ್ಷಿಸಬೇಕಾಗುತ್ತದೆ.

ಮಲ್ಲಣಾರ್ಯರ ಅಜ್ಜ ಹೀಗೆ ಪ್ರತಿಭೆ ಪಾಂಡಿತ್ಯಗಳಿಗೆ ಹೆಸರಾಗಿದ್ದಂತೆ ಆತನ ಮಗ ಶಾಂತೇಶನು ಕವಿಯಾಗಿ ತೋಂಟದ ಸಿದ್ಧೇಶ್ವರ ಪುರಾಣವನ್ನು ರಚಿಸಿರುವನು. ಆಗಮ, ಉಪನಿಷತ್ತು ಮೊದಲಾದವುಗಳಿಂದ ಅನೇಕ ಶ್ಲೋಕಗಳನ್ನು ಈತನು ಉದ್ಧರಿಸಿರುವನು. ಭಾಮಿನಿಷಟ್ಪದಿಯಲ್ಲಿರುವ ಈ ಸಿದ್ಧೇಶ್ವರ ಪುರಾಣವನ್ನು ಕವಿ ಶಾಂತೇಶನು ಶಾಲಿವಾಹನ ಶಕ ೧೪೪೩ನೆಯ ರೌದ್ರಿಸಂವತ್ಸರದಲ್ಲಿ (ಕ್ರಿ.ಶ. ೧೫೬೧) ರಚಿಸಿದಂತೆ ಗ್ರಂಥಸ್ಥ ಆಧಾರದಿಂದ ತಿಳಿದುಬರುತ್ತದೆ. ಮುತ್ತಜ್ಜ ಗುಬ್ಬಿಯ ಮಲ್ಲಣ್ಣನನ್ನು ಕುರಿತು 'ಅಮರ್ದು ರಾಜಿಸಿ ಸಕಲ ಶಾಸ್ತ್ರಾಗಮಗಳಂ ನೇರ್ಪಿ ತಿಳಿದು'1 ಎಂದು ಹೇಳಿ ಆತನ ಪಾಂಡಿತ್ಯವನ್ನು ಎತ್ತಿ ಹಿಡಿದರೆ ತಮ್ಮ ತಂದೆಯ ವಿಷಯವಾಗಿ ಹೀಗೆ ಹೇಳುತ್ತಾನೆ.

ಧರಣಿಯೊಳ್ ಸಂಸ್ಕೃತ ಮಹಾ ಬಂ
ಧುರದ ಕರ್ಣಾಟಂಗಳಾದಿಯ

---

1 ಶಾಂತೇಶಕವಿ : ತೋಂಟದ ಸಿದ್ಧೇಶ್ವರ ಪುರಾಣ: ೧.೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಸ ಶಾಸ್ತ್ರಂಗಳು ಮುಖೋಗ್ಗತವಾಗಿ ರಾಜಿಸುವ2

ಈ ಮಾತು ವೀರಶೈವಾಮೃತ ಪುರಾಣಕ್ಕೆ ಅಕ್ಷರಶಃ ಅನ್ವಯವಾಗುತ್ತದೆ. ಮಾತು ಮಾತಿಗೆ ಬರುವ ಈ ಉದ್ಧರಣೆಗಳಿಂದ ಪಾಂಡಿತ್ಯ, ಶಾಸ್ತ್ರಜ್ಞಾನ ಈ ಮನೆತನಕ್ಕೆ ಬಳುವಳಿಯಾಗಿ ಬಂದಂತೆ ಭಾಸವಾಗುತ್ತದೆ. ಇಂತಹ ಪಾಂಡಿತ್ಯ ಪ್ರತಿಭೆಗಳ ಮನೆತನದಲ್ಲಿ ಗುಬ್ಬಿಯ ಮಲ್ಲಣಾರ್ಯರು ಜನಿಸಿರುವರು.

ಕವಿಯ ಕಾಲ

ವೀರಶೈವಾಮೃತ ಪುರಾಣದಲ್ಲಿ ಆ ಕೃತಿ ಸಮಾಪ್ತಿಗೊಂಡ ಕಾಲದ ಉಲ್ಲೇಖವಿದೆ.

ಏನೆನಲು ಶಾಲಿವಾಹನ ಶಕಂ ಸಾವಿರದ
ನಾನೂರ ಐವತ್ತು ಎರಡು ವರುಷವದಾದ
ನೂನತೆಯ ವಿಕೃತಿ ವತ್ಸರದೊಳಾಶ್ವಯುಜ ಮಾಸದ ಶುದ್ಧ
ಪಂಚಮಿಯೊಳು
ಶ್ರೀನಿಶಾಕರ ವಾರ ಜ್ಯೇಷ್ಠಾಸು ನಕ್ಷತ್ರ
ವೈನಿಹಿತ ಸೌಭಾಗ್ಯ ಯೋಗವಣೆಜಾ ಕರಣ
ವೀ ನಿರುದ್ಧಕೆ ವೀರಶೈವಾಮೃತಂ ಪೂರ್ಣಮಾಯ್ತು ಶಿವಮಸ್ತು ಸತತಂ3

ಶಾಲಿವಾಹನ ಶಕೆ ೧೪೫೨ನೆಯ ವಿಕೃತಿ ಸಂವತ್ಸರದ ಆಶ್ವಯುಜ ಮಾಸದ ಶುದ್ಧ ಪಂಚಮಿ ಸೋಮವಾರ ಜ್ಯೇಷ್ಠಾ ನಕ್ಷದಲ್ಲಿ ವೀರಶೈವಾಮೃತ ಪುರಾಣವು ಸಮಾಪ್ತಿಗೊಂಡಿದೆ. ಅಂದರೆ ಕ್ರಿ.ಶ. ೧೫೩೦ ರಲ್ಲಿ ಕೃತಿ ಪೂರ್ತಿಗೊಂಡಿದೆಯೆಂದು ಅರ್ಥವಾಗುತ್ತದೆ. ಈತನ ಇನ್ನೊಂದು ಕೃತಿಯಾದ ಭಾವ ಚಿಂತಾರತ್ನವು ಪೂರ್ತಿಗೊಂಡ ದಿನಾಂಕವನ್ನು ಕವಿ ಆ ಕೃತಿಯ ಕೊನೆಯಲ್ಲಿ ಉಲ್ಲೇಖಿಸಿರುವನು:

ಬಾಣಗುಣ ವಾರ್ಧಿವಿಧು ಸಂದ ಶಕವರ್ಷದಿಂ
ಮೇಣಮಲವತ್ಸರಂ ಶ್ರೀಮುಖಂ ಕಾರ್ತಿಕಥಂ
ರೀಣವಹ ಶುದ್ಧ ಸಪ್ತಮಿ ಶುಕ್ರವಾರವಾ ಶ್ರವಣ ನಕ್ಷತ್ರದಲ್ಲಿ

ಪಂಚಬಾಣ, ತ್ರಿಗುಣ, ಚತುಸ್ಸಮುದ್ರ ಓರ್ವಚಂದ್ರಮ ಈ ಪರಿಜ್ಞಾನದಿಂದ ಮೇಲಿನ ಸಂಖ್ಯೆ ೫೩೪೧–ಇದನ್ನು ತಿರುವು ಮುರುವಾಗಿ ಮಾಡಿದರೆ ಕಾವ್ಯ ಪರಿಸಮಾಪ್ತಿಗೊಂಡ ಶಕ ವರ್ಷದ ಸಂಖ್ಯೆ ೧೪೩೫ ಎಂದಾಗುತ್ತದೆ. ಅಂದರೆ ಭಾವ ಚಿಂತಾರತ್ನ ಶಾಲಿವಾಹನ ಶಕೆ ೧೪೩೫ ನೆಯ ಶ್ರೀಮುಖ ನಾಮ ಸಂವತ್ಸರದ ಕಾರ್ತಿಕ ಶುದ್ಧ ಸಪ್ತಮಿ ಶುಕ್ರವಾರ ಶ್ರವಣಾ ನಕ್ಷದಲ್ಲಿ ಪೂರ್ತಿಗೊಂಡಿದೆ. ಅಂದರೆ ಕ್ರಿ. ಶ. ೧೫೧೩ರಲ್ಲಿ ಈ ಕೃತಿ ಮುಗಿತಾಯಗೊಂಡಿದೆ. ಮಲ್ಲಣಾರ್ಯರು, ಕ್ರಿ. ಶ. ೧೫೧೩, ೧೫೩೦ ರಲ್ಲಿ ಕಾವ್ಯ ರಚಿಸಿದ್ದು ಕ್ರಿ.ಶ. ೧೫೬೧ ರವರೆಗೆ ಜೀವಿಸಿರಬೇಕು. ಈತನ ಮಗ ಶಾಂತೇಶನು ಕ್ರಿ.ಶ. ೧೫೬೧ರಲ್ಲಿ

---

2 ಶಾಂತೇಶಕವಿ: ತೋಂಟದ ಸಿದ್ಧೇಶ್ವರ ಪುರಾಣ: ೧.೧೬

3 ಗುಬ್ಬಿಯ ಮಲ್ಲಣಾರ್ಯ: ವೀರಶೈವಾಮೃಶ ಪುರಾಣ. ಕಾಂ. ಲ. ಸಂ. ೨೨. ಪ. ೫೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಚಿಸಿದ ಸಿದ್ಧೇಶ್ವರ ಪುರಾಣದಲ್ಲಿ ತಮ್ಮ ತಂದೆಯನ್ನು ಕುರಿತು ಹೇಳುವಾಗ 'ಶಿವನ ಮಹಿಮೆಯ ಲೀಲೆಯಿಂ ಪ್ರಕಟಿಸುವನು,' 'ಸರಸಶಾಸ್ತ್ರಂಗಳು ಮುಖೋದ್ಗತವಾಗಿ ರಾಜಿಸುವ' ಎಂದಿದ್ದಾನೆ. ಇಲ್ಲಿ ಪ್ರಕಟಿಸುವ, ರಾಜಿಸುವ ಎಂಬ ವರ್ತಮಾನ ಕಾಲದ ಪ್ರಯೋಗಗಳು ಆಗ ಗುಬ್ಬಿಯ ಮಲ್ಲಣಾರ್ಯರು ಜೀವಿಸಿರುವುದನ್ನು ಸೂಚಿಸುತ್ತವೆ. ಅವರು ಹುಟ್ಟಿದ ಹಾಗೂ ಹೊಂದಿದ ತೇದಿಗಳು ಉಪಲಬ್ಧವಿರುವದಿಲ್ಲ.

ಮಲ್ಲಣಾರ್ಯರ ಕೃತಿಗಳು

ಈತನ ಉಪಲಬ್ಧವಿರುವ ಕನ್ನಡ ಕೃತಿಗಳು ಎರಡು:

೧. ಭಾವ ಚಿಂತಾರತ್ನ

೨. ವೀರಶೈವಾಮೃತ ಪುರಾಣ

'ಪುರಾತನ ರಗಳೆ' ಎಂಬ ಕೃತಿಯನ್ನು ರಚಿಸಿರುವ ಪ್ರತೀತಿಯಿದೆಯೆಂದು ಕವಿಚರಿತೆಕಾರರು ಹೇಳಿರುವರು. ಆದರೆ ಆ ಕೃತಿ ಉಪಲಬ್ಧವಿರುವುದಿಲ್ಲ.

ಭಾವ ಚಿಂತಾರತ್ನ

ಭಾವ ಚಿಂತಾರತ್ನ ಸತ್ಯೇಂದ್ರ ಚೋಳನ ಕಥೆಯನ್ನು ಬಿತ್ತರಿಸುವ ವಾರ್ಧಿಕ ಷಟ್ಪದಿಯ ಕಾವ್ಯ. ಸತ್ಯೇಂದ್ರ ಚೋಳನ ದೊರೆಯ ಮಗ ವೈಹಾಳಿಗೆ ಹೋಗುವಾಗ ಆತನ ತುರಗ ಖುರಕ್ಕೆ ಸಿಲುಕಿ ತಿರುಕೊಳವಿನಾಚಿಯ ಮಗ ಮಡಿಯುತ್ತಾನೆ. ಇದ್ದ ಮಕ್ಕಳೆಲ್ಲ ಮಡಿದು ಉಳಿದವನೊಬ್ಬನೂ ಹೀಗೆ ಮಡಿದನೆಂದು ತಾಯಿ ಮಮ್ಮಲ ಮರುಗುತ್ತಾಳೆ; ಗೋಳಿಡುತ್ತಾಳೆ. ಅರಸು ಸತ್ಯೇಂದ್ರ ಚೋಳ ಅಪರಾಧಿಯಾದ ತನ್ನ ಮಗನನ್ನು ಕೊಲ್ಲಿಸುತ್ತಾನೆ. ಕೊನೆಗೆ ಪಂಚಾಕ್ಷರಿ ಮಂತ್ರ ಮಹಿಮೆಯಿಂದ ಮಡಿದವರೆಲ್ಲ ಮರಳಿ ಪ್ರಾಣವನ್ನು ಪಡೆಯುತ್ತಾರೆ. ಕಾವ್ಯ ಸುಖಾಂತವಾಗುತ್ತದೆ. ಈ ಕಾವ್ಯ ಭಕ್ತಿ ಹಾಗೂ ಕರುಣ ರಸ ಪ್ರಧಾನವಾದುದು. ಪ್ರತಿಯೊಂದು ಪದ್ಯದಲ್ಲಿ ಉತ್ಪ್ರೇಕ್ಷಾಲಂಕಾರ ವಿದ್ದರೂ ಕಥೆಗೆ ಹಾಗೂ ರಸಪ್ರವಾಹಕ್ಕೆ ಎಲ್ಲಿಯೂ ಅಡೆತಡೆಯುಂಟಾಗಿಲ್ಲ. ಅನವಶ್ಯಕವಾದ ವರ್ಣನೆಗಳಿಗೂ ಇಲ್ಲಿ ಆಸ್ಪದವಿಲ್ಲ. ನೇರವಾಗಿ ಕಥೆಯನ್ನು ಬಿತ್ತರಿಸುವುದು ರಸಮಯ ಸನ್ನಿವೇಶಗಳನ್ನು ಸೃಷ್ಟಿಮಾಡುವುದು ಕವಿಯ ಉದ್ದೇಶವಾಗಿದೆ. ಕಾರಣ ಇಲ್ಲಿಯ ಷಟ್ಪದಿಗಳಿಗೆ ದ್ರುತಗತಿಯಿದೆ, ರಸಸ್ಯಂದಿಯಾಗಿ ಕಾವ್ಯ ಭರದಿಂದ ಸಾಗುತ್ತದೆ. ಸತ್ಯೇಂದ್ರ ಚೋಳ, ತಿರುಕೊಳವಿನಾಚಿ ಇವರ ಪಾತ್ರ ಚೆನ್ನಾಗಿ ಚಿತ್ರಿತವಾಗಿವೆ. ಭಕ್ತಿಯ ಪ್ರಭಾವವನ್ನು, ಪಂಚಾಕ್ಷರೀ ಮಂತ್ರ ಮಹಿಮೆಯನ್ನು ಎತ್ತಿ ತೋರಿಸುವ ಕವಿಯ ಉದ್ದೇಶ ಸಫಲವಾಗಿದೆ.

ಈ ಕಾವ್ಯದ ಕಥಾವಸ್ತು ತಮಿಳುನಾಡಿಗೆ ಸಂಬಂಧಪಟ್ಟುದು. ತಮಿಳುನಾಡಿನ ಶಿವಭಕ್ತರು ಕರ್ನಾಟಕದ ವೀರಶೈವರಿಗೆ ಪೂಜ್ಯರಾಗಿರುವರು. ಆ ನಾಡಿನ ಅರುವತ್ತು ಮೂವರು ಪುರಾತನರು ಬಸವಾದಿ ಪ್ರಮಥರಿಗೂ ಆರಾಧ್ಯರಾಗಿದ್ದರು. ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ತಮಿಳುನಾಡಿನ ಕಥೆಗಳಲ್ಲಿ ಸತ್ಯೇಂದ್ರ ಚೋಳನ ಕಥೆ ಅತಿ ಮಹತ್ವವಾದುದು. ಆದರೆ ತಮಿಳು ನಾಡಿನ ಚೋಳ ದೊರೆಗಳಲ್ಲಿ ಸತ್ಯೇಂದ್ರ ಚೋಳನೆಂಬ ದೊರೆಯ ಹೆಸರೇ ಕಂಡುಬರುವುದಿಲ್ಲ. ತಮಿಳು ಸಾಹಿತ್ಯದಲ್ಲಿಯ ಈ ಕಥೆ ಕಂಡುಬರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರೆ ಇದಕ್ಕೆ ಸಂವಾದಿಯಾಗಿವೆ ತಮಿಳು ಪೆರಿಯ ಪುರಾಣದಲ್ಲಿ ಬರುವ ಮನು ನೀತಿಕಂತ ಚೋಳನ ಕಥೆ. ಈ ಮನು ಚೋಳನ ಕಥೆ ಹರಿಹರನ ಒಂದು ರಗಳೆಯಲ್ಲಿ ಸೋಮರಾಜನ ಉದ್ಭಟ ಕಾವ್ಯದಲ್ಲಿ ಕಂಡುಬರುತ್ತದೆ. ಈ ಮನುನೀತಿ ಕಂತನ ಕಥೆ ತಮಿಳುನಾಡಿನ ತಂಜಾವೂರು ಜಿಲ್ಲೆಯ ತಿರುವಾರೂರಿಗೆ ಸಂಬಂಧಪಟ್ಟುದು. ಆ ಊರ ದೇವಾಲಯವೊಂದರಲ್ಲಿ ವಿಕ್ರಮಚೋಳನ ಕಾಲದ ಒಂದು ಶಿಲಾಶಾಸನ (ಕ್ರಿ.ಶ. ೧೧೨೫) ದಲ್ಲಿ ಮನು ಚೋಳನ ಕಥೆ ಉಲ್ಲಿಖಿತವಾಗಿದೆ: ಮನುರಾಜನು ತನ್ನ ಮಗ ಪ್ರಿಯವರ್ಧನನ ತಪ್ಪಿಗಾಗಿ ಆತನ ಮೇಲೆ ರಥವನ್ನು ಹಾಯಿಸುವಂತೆ ಉಭಯ ಕುಲಾಮಲನೆಂಬ ಮಂತ್ರಿಗೆ ಅಪ್ಪಣೆ ಮಾಡುತ್ತಾನೆ. ಈ ಶಾಸನ ಆ ಮಂತ್ರಿಯ ವಂಶದವರಿಗೆ ಕೊಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿದ ಶಿಲಪ್ಪದಿಗಾರಂ ಎಂಬ ತಮಿಳು ಕಾವ್ಯದಲ್ಲಿ ಸತ್ತಕರುವಿಗೆ ಚೋಳರಾಜನು ನ್ಯಾಯವಿತ್ತ ಪ್ರಸಂಗ ಬಂದಿದೆ. ಮಹಾವಂಶ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭಾವಚಿಂತಾರತ್ನದ ಕಥೆಗೆ ತೀರ ಸಮೀಪದ ಕಥೆ ಹೇಳುತ್ತದೆ. ಕರು ಸತ್ತು ಬಿದ್ದುದೆ ಆದಕ್ಕೆ ಕಾರಣ. ತಮಿಳು ಚೋಳ ಎಳಾರನ ಮಗ. ಎಳಾರ ಮಗನ ತಪ್ಪಿಗಾಗಿ ಆತನನ್ನು ಕೊಲ್ಲಿಸಿ ಸತ್ಯ, ನ್ಯಾಯಗಳನ್ನು ಪ್ರತಿಷ್ಠಾಪನೆ ಮಾಡಿದನು. ಈ ಎಳಾರ ದೊರೆ ಕ್ರಿ.ಶ.ಪೂ. ೨ನೆಯ ಶತಮಾನದವನು. ತಮಿಳುನಾಡಿನ ಶಿಲ್ಪದಲ್ಲಿಯೂ ಈ ಕಥೆ ಕಂಡುಬರುತ್ತದೆ. ಕರು ಸತ್ತು ಬಿದ್ದಿದೆ. ಹಸು ದೇವಾಲಯದ ಮುಂದಿನ ನ್ಯಾಯದ ಗಂಟೆಯನ್ನು ತನ್ನ ಕೋಡಿನಿಂದ ಬಾರಿಸುತ್ತದೆ. ಒಳಗೆ ದೇವಾಲಯದಲ್ಲಿ, ರಾಜನ ರಥವನ್ನು ಕೆತ್ತಲಾಗಿದೆ. ಲೇಪಾಕ್ಷಿ ಮುಂತಾದ ದೇವಾಲಯಗಳಲ್ಲಿ ಈ ಚಿತ್ರ ಕಂಡುಬರುತ್ತದೆ. ಹೀಗೆ ಈ ಕಥೆಯ ಮೂಲ ತಮಿಳುನಾಡು. ಅಂತೆ ಗುಬ್ಬಿ ಮಲ್ಲಣಾರ್ಯರ ಭಾವ ಚಿಂತಾರತ್ನದಲ್ಲಿ ಈ ಕಥೆಯನ್ನು ತಿರುಜ್ಞಾನ ಸಂಬಂಧರು ಕುಲಚ್ಚರಯರನ್ನು ಉದ್ದೇಶಿಸಿ ಹೇಳಿದ್ದಾರೆ. ಮಲ್ಲಣಾರ್ಯರ ಈ ಕಾವ್ಯ ಚಿಕ್ಕದಾದರೂ ಚೊಕ್ಕವಾಗಿದೆ ಪ್ರಭಾವಶಾಲಿಯಾಗಿದೆ. ಕನ್ನಡದಲ್ಲಿ ಮೊತ್ತಮೊದಲು ಈ ಕಾವ್ಯವನ್ನು ಬರದಾತನು ಗುಬ್ಬಿಯ ಮಲ್ಲಣಾರ್ಯ. ಆಮೇಲೆ ಭೈರವೇಶ್ವರ ಕಾವ್ಯ, ಪಾಲ್ಕುರಿಕೆ ಸೋಮನಾಥ ಪುರಾಣ, ರಾಘವಾಂಕ ಕಾವ್ಯ, ಗುರುರಾಜ ಚಾರಿತ್ರ, ಬಸವ ಪುರಾಣದ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಚೆನ್ನಬಸವ ಪುರಾಣ, ಸತ್ಯೇಂದ್ರ ಚೋಳ ಸಾಂಗತ್ಯ ಮೊದಲಾದ ಕೃತಿಗಳಲ್ಲಿ ಕಂಡುಬರುವ ಸತ್ಯೇಂದ್ರ ಚೋಳನ ಕಥೆಗೆ ಭಾವಚಿಂತಾರತ್ನವೇ ಮೂಲ. ಕನ್ನಡದಲ್ಲಿ ಸುಪ್ರಸಿದ್ಧವಾದ ರಾಜಶೇಖರ ವಿಳಾಸಕ್ಕೆ ಮೂಲಮಾತೃಕೆ ಗುಬ್ಬಿಯ ಮಲ್ಲಣಾರ್ಯರ ಭಾವಚಿಂತಾರತ್ನ. 'ವರಮಲ್ಲಣಾರ್ಯರುರ್ವೀಕವಿರಾಜ ರಾಜಿನುತಮಾಗಿರೆ ವರ್ಣಕದಿಂದ ಭಾವರತ್ನಾಕರಮಾಗಿ ಪೇಳ್ದ ಕಥೆಯನ್ನು ತಾನು ವಸ್ತುಕದಿಂದ ಪೇಳ್ದು'ದಾಗಿ ಷಡಕ್ಷರ ದೇವ ಹೇಳುತ್ತಾನೆ. ಹೀಗೆ ಗುಬ್ಬಿಯ ಮಲ್ಲಣಾರ್ಯರ ಭಾವಚಿಂತಾರತ್ನ ಒಂದು ವಿಶಿಷ್ಟ ಕಾವ್ಯವಾಗಿ ನಿಂತಿದೆ ಕನ್ನಡದಲ್ಲಿ.

ವೀರಶೈವಾಮೃತ ಪುರಾಣ

ವೀರಶೈವಾಮೃತ ಪುರಾಣದ ವಿಮರ್ಶೆಗೆ ಕೈಹಾಕುವ ಮುನ್ನ ಭಾರತೀಯ ಪುರಾಣಗಳು ಇವುಗಳ ವಿಷಯವನ್ನು ಸಾದ್ಯಂತವಾಗಿ ವಿವೇಚಿಸುವುದು ಅವಶ್ಯವೆನಿಸಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತೀಯ ಪುರಾಣಗಳು

ಪುರಾಣಗಳು ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದು ಕೊಂಡಿವೆ; ಮತ್ತು ಅತಿ ಪ್ರಮುಖ ಪಾತ್ರವಹಿಸಿವೆ. ವೇದ ಆಗಮಗಳಂತೆ ಪುರಾಣಗಳೂ ಭಾರತೀಯರ ದೃಷ್ಟಿಯಲ್ಲಿ ಪೂಜ್ಯವಾಗಿವೆ. ವೇದಗಳಿಗೆ ಬರೆದ ಭಾಷ್ಯವೇ ಪುರಾಣಗಳು ಎಂಬ ಕಲ್ಪನೆ ಬೆಳೆದುಬಂದಿದೆ.

"ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬ್ರಹ್ಮಯೇತ್"

ಎಂಬ ಉಕ್ತಿಯಲ್ಲಿ ಇತಿಹಾಸ ಮತ್ತು ಪುರಾಣಗಳು, ವೇದಗಳ ಸ್ಪಷ್ಟೀಕೃತ ಆವೃತ್ತಿ ಎಂಬ ಹೇಳಿಕೆ ಇದೆ. ಋಷಿಗಳು ಕಂಡು ಉಂಡ ಬ್ರಹ್ಮಜ್ಞಾನದ, ಬ್ರಹ್ಮಾನಂದದ ರಹಸ್ಯ ವೇದಗಳಲ್ಲಿ ಅಡಕವಾಗಿದೆ. ವೇದ ಸೂಕ್ತಗಳಲ್ಲಿ ಉಕ್ತವಾದ ತತ್ವಜ್ಞಾನ ಜನಸಾಮಾನ್ಯರ ಗ್ರಹಣಶಕ್ತಿಗೆ ನಿಲುಕದಾಗಿತ್ತು. ಮೊದಲನೆಯದಾಗಿ ಸಾಮಾನ್ಯನ ಬೌದ್ಧಿಕ ಅಳತೆಗೋಲು ತತ್ವಜ್ಞಾನದ ಆಳಕ್ಕೆ ಇಳಿಯಲಸಾಧ್ಯವಾಯಿತು. ಎರಡನೆಯದಾಗಿ ವೈದಿಕ ಭಾಷೆ, ಆಡುಭಾಷೆಯಿಂದ ಭಿನ್ನವಾಗಿದ್ದು ಸಾಮಾನ್ಯನಿಂದ ಬಹುದೂರದಲ್ಲಿತ್ತು. ಇವುಗಳ ಫಲವಾಗಿ ಕೇವಲ ಬುದ್ಧಿಮತ್ತೆಯ ಸಹಾಯದಿಂದ ವೇದಗಳ ಅಧ್ಯಯನ ಸಾಗದಾಯಿತು. ಹೀಗಾಗಿ ವೇದಗಳ ಅಧ್ಯಯನಕ್ಕೆ ವ್ಯಾಖ್ಯಾನದ ಆವಶ್ಯಕತೆ ಹೆಚ್ಚಾಯಿತು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೆಂಬ ಚತುರ್ವೇದಗಳು ನಾಲ್ಕು ಭಿನ್ನ ಮೂಲಭೂತತತ್ತ್ವಗಳ ವಿವರಣೆಯನ್ನು ಕೊಡುತ್ತವೆ. ಭಾರತೀಯ ಮಹಾಕಾವ್ಯಗಳೆನಿಸಿದ ರಾಮಾಯಣ ಮಹಾಭಾರತಗಳ ರಚನೆಯ ಉದ್ದೇಶ, ವೇದ ಉಪನಿಷತ್ತುಗಳ ಧ್ಯೇಯ ಮತ್ತು ಆದರ್ಶಗಳ ಪ್ರಚಾರ. ಪ್ರಾಚೀನ ಕಾಲದಲ್ಲಿ ಪ್ರಸಿದ್ಧರಾಗಿದ್ದ ಮಹಾವ್ಯಕ್ತಿಗಳ ಕಥೆಯನ್ನು ಮನೋಜ್ಞವಾಗಿ ಹೇಳುವ ಪುರಾಣಗಳು, ಅವರ ಉದಾರ ಚರಿತೆಯ, ಧ್ಯೇಯ ಸಾಧನೆಯ ಆದರ್ಶಗಳ ಕಡೆಗೆ ಸಾಮಾನ್ಯನ ಮನವನ್ನು ಆಕರ್ಷಿಸುತ್ತವೆ. ಧರ್ಮ ಮತ್ತು ಕರ್ಮಗಳ ಬೋಧನೆ ಮತ್ತು ಪ್ರಚಾರ ಕಾರ್ಯವನ್ನು ಪುರಾಣಗಳು ಮಾಡಿದುವೆನ್ನಬಹುದು.

ಪುರಾಣ ಮತ್ತು ಮಹಾಕಾವ್ಯಗಳ ಒಳ ಆತ್ಮ ಸ್ಥೂಲವಾಗಿ ಒಂದೇ ಆಗಿ ಕಂಡು ಬಂದರೂ ಪುರಾಣಗಳ ವಸ್ತು ಮತ್ತು ರೀತಿಯಲ್ಲಿ ಸೂಕ್ಷ್ಮ ವ್ಯತ್ಯಾಸ ಕಂಡುಬರುತ್ತದೆ. ಇತಿಹಾಸ ಅಥವಾ ಮಹಾಕಾವ್ಯಗಳಲ್ಲಿ ಕಥನವಸ್ತು ಪ್ರಮುಖವಾದರೆ, ಪುರಾಣಗಳಲ್ಲಿ ತಾತ್ವಿಕ ಮತ್ತು ಧಾರ್ಮಿಕ ಅಂಶಗಳು ಪ್ರಾಮುಖ್ಯತೆಯನ್ನು ಪಡೆದಿವೆ. ವಿಶ್ವೋತ್ಪತ್ತಿ ಶಾಸ್ತ್ರ, ಪರಮಾರ್ಥ ವಿದ್ಯೆ ಮತ್ತು ತತ್ತ್ವಜ್ಞಾನಗಳ ವಿವೇಚನೆಯೇ ಹೆಚ್ಚಾಗಿ ಕಥನ ಅಂಶ ಕಡಿಮೆಯಾಗಿದೆ. ಮಹಾ ಕಾವ್ಯಗಳಲ್ಲಿರುವ ಕಥೆಯು ಬೇರು ಐತಿಹಾಸಿಕವಿದ್ದಿರಬಹುದು; ಆದರೆ ಅದು ಪುರಾಣಗಳಲ್ಲಿ ಸಂಪೂರ್ಣ ಕಾಲ್ಪನಿಕ. ಪುರಾಣ ಮತ್ತು ಮಹಾಕಾವ್ಯಗಳು ವೇದಗಳ ಸರಿಸಮಾನವಾಗಿ ನಿಂತಿವೆ.

ವಾಜಸ್ನೇಯ ಬ್ರಾಹ್ಮಣೋಪನಿಷತ್ತು ಹೀಗೆ ಹೇಳುತ್ತದೆ:

"ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯದ್ದ್ರುಗ್ವೇದೋ
ಯಜುರ್ವೇದಃ ಸಾಮವೇದೋಽಥರ್ವಾಂಗೀರಸ ಇತಿಹಾಸಃ ಪುರಾಣಂ?"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ಕು ವೇದಗಳು, ಇತಿಹಾಸ ಮತ್ತು ಪುರಾಣಗಳು ಜ್ಞಾನರೂಪದಲ್ಲಿರುವ ದೇವದೇವನ ಉಸಿರು. ಉಚ್ಛ್ವಾಸ ನಿಶ್ವಾಸಗಳು ಹೇಗೆ ಪ್ರಕೃತಿಸಹಜವೋ ಅಂತೆಯೇ ವೇದ ಪುರಾಣ ಗಳ ನಿರ್ಮಿತಿಯೂ ಅಸಹಾಯ ಮತ್ತು ಸಹಜವಾದುದು.

ವಾಯುಪುರಾಣ ಮತ್ತೂ ಮುಂದುವರಿದು ಹೀಗೆ ಹೇಳುತ್ತದೆ:

"ಪುರಾಣಂ ಸ್ವರಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಾಸ್ಮೃತಂ
ಅನಂತರಂ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ||"

ಪರಬ್ರಹ್ಮನು ಮೊದಲಿಗೆ ಪುರಾಣಗಳನ್ನು ಸೃಷ್ಟಿಸಿ ತರುವಾಯ ವೇದಗಳನ್ನು ರಚಿಸಿದ್ದಾನೆ ಎಂದು ಮೇಲಿನ ಶ್ಲೋಕ ಹೇಳುತ್ತದೆ. ಇದರ ಸತ್ಯಾಸತ್ಯತೆಯ ಬಗೆಗೆ ಅನುಮಾನ ವಾದರೂ, ಒಂದಾನೊಂದು ಕಾಲದಲ್ಲಿ ಪುರಾಣಗಳಿಗೆ ಭಾರತೀಯರು ಕೊಟ್ಟ ಸ್ಥಾನದ ಅರಿವು ನಮಗಾಗುತ್ತದೆ.

ಪುರಾಣಗಳು ವೇದವ್ಯಾಸಕೃತ ಎಂಬ ಪ್ರತೀತಿ ಇದೆ. ಆದರೆ ಇವುಗಳ ವಸ್ತು ಮತ್ತು ರಚನೆಗಳನ್ನು ದೃಷ್ಟಿಯಲ್ಲಿರಿಸಿ ಪರಿಶೀಲಿಸಿದರೆ ಏಕಕರ್ತೃತ್ವದ ಬಗೆಗೆ ಅನುಮಾನ ವಾಗುತ್ತದೆ. ವೇದವ್ಯಾಸಕೃತವೆಂದು ಹೇಳಲಾದ ವೇದಗಳ ವಿಸ್ತೃತ ರೂಪವೇ ಪುರಾಣ ಗಳು ಎಂಬುದೇನೋ ನಿಜ. ವೇದಗಳ ತಾತ್ವಿಕ ವಿವೇಚನೆ ಉಪನಿಷತ್ತು ಮತ್ತು ಭಗವದ್ಗೀತೆಗಳಲ್ಲಿಯೇ ವಿವರವಾಗಿ ಕಾಣದೊರೆಯುತ್ತದೆ; ವೇದಗಳಲ್ಲಿರುವ ಸಾಂಕೇತಿಕ ಕಥೆಗಳಾದ ಸತ್ಯಕಾಮ, ಜಾಬಾಲ, ನಚಿಕೇತ ಮೊದಲಾದುವು ಉಪನಿಷತ್ತುಗಳಲ್ಲಿ ವರ್ಣಿತ ವಾಗಿ ಪ್ರಸಿದ್ಧವಾಗಿವೆ. ಭಗವದ್ಗೀತೆ ಮಹಾಭಾರತದ ಒಂದು ಅಂಗವಾಗಿ ಬಂದಿದೆ. ವೇದಗಳ ತಾತ್ತ್ವಿಕ ವಿವೇಚನೆಯು ಉಪನಿಷತ್ತು ಮತ್ತು ಭಗವದ್ಗೀತೆಗಳಲ್ಲಿಯೂ ಕಂಡು ಬಂದರೂ ಸುಲಲಿತವಾದ ಶೈಲಿ, ಸಂಕ್ಷಿಪ್ತತತೆಗಳು ಓದುಗರ ಮೇಲೆ ಪರಿಣಾಮ ಬೀರು ತ್ತವೆ. ಕಾಲಕ್ರಮೇಣ ಉಪನಿಷತ್ತು ಮತ್ತು ಭಗವದ್ಗೀತೆಗಳ ಮೇಲೆಯೂ ವ್ಯಾಖ್ಯಾನ ಬರೆಯುವ ಆವಶ್ಯಕತೆ ಉಂಟಾಯಿತು. ಮಹತ್ವಪೂರ್ಣವಾದ ಮತ್ತು ಆಳವಾದ ತತ್ವ ವಿವೇಚನೆಯನ್ನು ಜನಪ್ರಿಯವಾಗುವಂತೆ ನಿರೂಪಿಸುವ ಕಾರ್ಯ ಪುರಾಣಗಳಲ್ಲಿ ಸಿದ್ಧಿಸಿತು. ಕೆಲವು ಉದಾಹರಣೆಗಳನ್ನು ನೋಡಬಹುದು:

ಈ ಜಗತ್ತು ಪ್ರಕೃತಿ ಮತ್ತು ಪುರುಷರ ಲೀಲೆಯಿಂದ ಉದ್ಭವವಾಯಿತು.

ದೇವೀಭಾಗವತ ಪುರಾಣ ಜಗತ್ತಿನ ವ್ಯುತ್ಪತ್ತಿಯನ್ನು ಮನಸೆಳೆಯುವ ಮನ ವೊಲಿಸುವ ಕಥನರೂಪದಲ್ಲಿ ಹೆಣೆಯುತ್ತದೆ. ಪುರುಷ ಪ್ರೇಮಪ್ರತೀಕವೆಂದೂ, ಪ್ರಕೃತಿ ಸೌಂದರ್ಯಪ್ರತೀಕವೆಂದೂ ವರ್ಣಿತರಾಗಿದ್ದಾರೆ. ಈ ಎರಡು ಶಕ್ತಿಗಳ ಮಿಲನದಿಂದ ಜನಿಸಿದುದೇ ಈ ಬ್ರಹ್ಮಾಂಡ.

ಬ್ರಹ್ಮದೇವ ಮತ್ತು ವಿಷ್ಣುದೇವರಲ್ಲಿ ಯಾರು ಹೆಚ್ಚು ಎಂಬ ಬಗೆಗೆ ಒಮ್ಮೆ ಕಲಹ ಹುಟ್ಟಿತು. ನಿರ್ಣಯಕ್ಕಾಗಿ ಶಿವನೆಡೆಗೆ ಬಂದಾಗ, ತಾನು ಲಿಂಗಾಕಾರವನ್ನು ಹೊಂದುವು ದಾಗಿಯೂ ಬ್ರಹ್ಮನು ಮುಡಿಯನ್ನು ಮುಟ್ಟಿ ಬರಬೇಕೆಂದೂ, ವಿಷ್ಣು ಪಾದಗಳನ್ನು ಮುಟ್ಟಿ ಬರಬೇಕೆಂದೂ ಸೂಚಿಸಿದ. ಯಾರು ಶೀಘ್ರವಾಗಿ ಹಿಂದಿರುಗುವರೋ ಅವರೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿರಿಯರು ಎಂದ ಶಿವನ ಮಾತಿಗೆ ಒಪ್ಪಿ ತಮ್ಮ ತಮ್ಮ ಗುರಿಯತ್ತ ಸಾಗಿದರು. ಲಿಂಗಾಕಾರ ತಾಳಿದ ಶಿವನು ಬೆಳೆದನು. ಪಯಣದಿಂದ ಆಯಾಸಗೊಂಡ ಬ್ರಹ್ಮನು ನಿಂತು ಸುತ್ತಲೂ ದೃಷ್ಟಿಹರಿಸಿದನು. ಆಕಸ್ಮಿಕವಾಗಿ ಕಾಮಧೇನು ಗೋಚರಿಸಿತು. ಬ್ರಹ್ಮನಿಗೆ ಒಂದು ಉಪಾಯ ಹೊಳೆಯಿತು. ತಾನು ಲಿಂಗದ ಮುಡಿಯನ್ನು ಮುಟ್ಟಿದುದಾಗಿ ಸುಳ್ಳು ಸಾಕ್ಷ್ಯ ನುಡಿಯಲು ಕೇಳಿಕೊಂಡ. ಸೃಷ್ಟಿಕರ್ತನಾದ ಬ್ರಹ್ಮನೇ ಕೇಳುತ್ತಿರುವಾಗ ತಾನು ಒಲ್ಲೆ ಎನ್ನಲಾಗದೆ, ಸುಳ್ಳು ಹೇಳುವ ಮನಸ್ಸೂ ಇಲ್ಲದೆ ಕಾಮಧೇನು ಸಂದಿಗ್ಧದಲ್ಲಿ ಸಿಲುಕಿತು. ಒಂದು ಕ್ಷಣ ವಿಚಾರಮಾಡಿ ಒಪ್ಪಿಗೆ ಕೊಟ್ಟಿತು. ಬ್ರಹ್ಮ ಕಾಮಧೇನುವಿನೊಡನೆ ಶಿವನಲ್ಲಿಗೆ ಬರುವ ವೇಳೆಗೆ ವಿಷ್ಣುವೂ ಆಗಮಿಸಿದ. ಇಬ್ಬರ ಕಾರ್ಯಸಾಧನೆಯ ಬಗೆಗೆ ಶಿವ ಪ್ರಶ್ನಿಸಲು ವಿಷ್ಣು ಮೌನ ತಾಳಿದ; ಬ್ರಹ್ಮ ತಾನೂ ಹೂಡಿದ್ದ ಸಂಚಿನ ಪ್ರಕಾರ ತಾನು ಶಿವಲಿಂಗದ ಮುಡಿಯನ್ನು ಮುಟ್ಟಿ ಬಂದುದಾಗಿಯೂ ಅದಕ್ಕೆ ಕಾಮಧೇನುವೇ ಸಾಕ್ಷಿಯೆಂದೂ ಹೇಳಿದ. ಬ್ರಹ್ಮದೇವನ ಸಂಚಿನ ಸುಳ್ಳು ಶಿವನಿಗೆ ತಿಳಿಯದೆ ಇದ್ದೀತೆ? ಹುಸಿನಗೆಯೊಡನೆ ಶಿವ ಕಾಮಧೇನುವಿನೆಡೆಗೆ ಪ್ರಶ್ನಾರ್ಥಕದೃಷ್ಟಿ ಹರಿಸಿದಾಗ, ಕಾಮಧೇನು ತಲೆಯನ್ನಲುಗಿಸಿ ಬ್ರಹ್ಮನ ಪರ ಸಾಕ್ಷ್ಯ ನುಡಿಯಿತು; ಬಾಲವನ್ನು ಮೇಲೆತ್ತಿ ಅಲ್ಲಾಡಿಸಿ ಬ್ರಹ್ಮನು ಹೇಳುತ್ತಿರುವುದು ನಿಜವಲ್ಲ ಎಂಬ ಸಂಕೇತವನ್ನು ಮಾಡಿತು. ಸುಳ್ಳು ಮತ್ತು ಮೋಸಗಳಿಗಾಗಿ ಬ್ರಹ್ಮನು ಶಿಕ್ಷೆಯನ್ನನುಭವಿಸಬೇಕಾಯಿತು. ಲಿಂಗ ಅನಾದಿ ಮತ್ತು ಅನಂತ ಎಂಬುದು ನಿರ್ವಿವಾದ ಎಂದು ಶಿವ ಸ್ಪಷ್ಟಪಡಿಸಿದ. ಈ ತಾತ್ವಿಕ ಸತ್ಯವನ್ನು ಸ್ಥಿರಪಡಿಸುವ ಸಲುವಾಗಿಯೇ ಲಿಂಗಪುರಾಣದಲ್ಲಿ ಈ ಕಥೆಯನ್ನು ಹೆಣೆಯಲಾಗಿದೆ.

ಮತ್ಸ್ಯ ಪುರಾಣದಲ್ಲಿ ಬ್ರಹ್ಮ, ತನ್ನ ಮಗಳಾದ ಸರಸ್ವತಿಯನ್ನು ವಿವಾಹವಾದ ಒಂದು ಕಥೆ ಉಕ್ತವಾಗಿದೆ. ಬ್ರಹ್ಮ ಕರ್ಮದೇವತೆ; ಸರಸ್ವತಿ ಜ್ಞಾನದೇವತೆ ಯಾವುದೇ ಕ್ರಿಯೆ ನಿರ್ದೋಷವೆಂದು ಸಿದ್ಧವಾಗಬೇಕಾದರೆ ಅದಕ್ಕೆ ಜ್ಞಾನದ ಬೆಂಬಲ ಅತ್ಯಾವಶ್ಯಕ. ಜ್ಞಾನಯುಕ್ತ ಕ್ರಿಯೆ ಮಾತ್ರ ಮಾನವನನ್ನು ಮೋಕ್ಷದೆಡೆಗೆ ಒಯ್ಯಲು ಸಾಧಕವಾಗುತ್ತದೆ. ಜ್ಞಾನರಹಿತ ಕ್ರಿಯೆಯೇ ಆಗಲಿ, ಕ್ರಿಯಾರಹಿತ ಜ್ಞಾನವೇ ಆಗಲಿ ದುಃಖ ಮತ್ತು ಮರ್ತ್ಯತ್ವದ ಕಡೆಗೆ ಒಯ್ಯುತ್ತವೆ. ಜ್ಞಾನ ಮತ್ತು ಕ್ರಿಯೆಗಳ ಸಮ್ಮಿಳನದ ದ್ಯೋತಕವಾಗಿಯೇ ಬ್ರಹ್ಮ, ಸರಸ್ವತಿಯನ್ನು ತನ್ನ ಹೃದಯದಲ್ಲಿಯೇ ಇರಿಸಿಕೊಂಡ.

ಹೀಗೆ ಪುರಾಣಗಳು ಸಾಂಕೇತಿಕ ಕಥೆಗಳ ಆಧಾರದ ಮೇಲೆ ರಚಿತವಾಗಿವೆ. "ಪುರಾಣಗಳು ತಮ್ಮ ಹೆಸರಿಗೆ ತಕ್ಕಂತೆ ಪುರಾತನ ಕಾಲದಿಂದಲೂ ಸಾಗಿಬಂದಿರುವ ಸೃಷ್ಟಿ ವರ್ಣನೆ, ಸಾಂಕೇತಿಕ ಕಟ್ಟುಕತೆ, ರೂಪಕ, ಸಂಪ್ರದಾಯ, ಮತ, ಸಮಾಜ ನಿಯಮ ಮುಂತಾದವುಗಳ ಜನಪ್ರಿಯ ನಿರೂಪಣೆಗಳು. ಇದೇ ಪುರಾಣಗಳ ಮೂಲೋದ್ದೇಶ. ಉಚ್ಚತಮವಾದ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಸತ್ಯಗಳನ್ನು ಕಥೆ, ಆಖ್ಯಾನ. ಸಂಕೇತ, ಅಡ್ಡಕಥೆ, ಪವಾಡ, ದೃಷ್ಟಾಂತಗಳ ಮೂಲಕ ಜನಸಾಮಾನ್ಯರಿಗೆ ತಿಳಿಯಪಡಿಸುವುದೇ ಪುರಾಣಗಳ ಗುರಿ"1 ಎಂದು ಶ್ರೀ ಅರವಿಂದರು ಹೇಳಿರುವುದು ಗಮನಾರ್ಹ. ಒಂದು

1 Shri Aurobindo: Foundations of Indian Culture p. 352.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಮುಖವಾದ ಕಥೆ ಪ್ರಚಲಿತವಾಗಿದ್ದರೆ ಅದರ ಸುತ್ತ ನೂರಾರು ಉಪಕಥೆಗಳು ಹೆಣೆದು ಕೊಂಡಿರುತ್ತವೆ. ಪ್ರತಿಯೊಂದು ಉಪಕಥೆಯೂ ಒಂದೊಂದು ತಾತ್ವಿಕ ಸತ್ಯ ಅಥವಾ ನೈತಿಕ ಸೂತ್ರವನ್ನು ಸ್ಪಷ್ಟೀಕರಿಸುತ್ತದೆ. ಪುರಾಣಗಳಲ್ಲಿ ಕಂಡುಬರುವ ಸಾಂಕೇತಿಕತೆಯ ಸಂಪೂರ್ಣ ಜ್ಞಾನ ಲಭಿಸಿದಾಗ ಮಾತ್ರ ಪುರಾಣಗಳ ಅಧ್ಯಯನದಲ್ಲಿ ಆಸಕ್ತಿ ಅಭಿರುಚಿಗಳು ಬೆಳೆಯುತ್ತವೆ.

ಹದಿನೆಂಟು ಪುರಾಣಗಳು ಮತ್ತು ಅವುಗಳ ಕರ್ತೃತ್ವ

ಚತುರ್ವೇದಗಳ, ಷಡಂಗಗಳಾದ ಶಾಸ್ತ್ರಗಳ ಮತ್ತು ೧೮ ಪುರಾಣಗಳ ಉಲ್ಲೇಖ ಭಾರತೀಯ ಸಾಹಿತ್ಯದಲ್ಲಿ ಮೇಲಿಂದಮೇಲೆ ಕಂಡುಬರುತ್ತದೆ. ಈ ೧೮ ಪುರಾಣಗಳು ಕೆಳಗಿನಂತಿವೆ:

೧. ಬ್ರಹ್ಮಪುರಾಣ
೨. ಪದ್ಮಪುರಾಣ
೩. ವಿಷ್ಣುಪುರಾಣ
೪. ಶಿವಪುರಾಣ
೫. ಭಾಗವತಪುರಾಣ
೬. ನಾರದೀಯ ಪುರಾಣ
೭. ಮಾರ್ಕಂಡೇಯಪುರಾಣ
೮. ಅಗ್ನಿಪುರಾಣ
೯. ಭವಿಷ್ಯಪುರಾಣ
೧೦. ಬ್ರಹ್ಮವೈವರ್ತಪುರಾಣ
೧೧. ಲಿಂಗಪುರಾಣ
೧೨. ವರಾಹಪುರಾಣ
೧೩. ಸ್ಕಂದಪುರಾಣ
೧೪. ವಾಮನಪುರಾಣ
೧೫. ಕೂರ್ಮಪುರಾಣ
೧೬. ಮತ್ಸ್ಯಪುರಾಣ
೧೭. ಗರುಡಪುರಾಣ
೧೮. ಬ್ರಹ್ಮಾಂಡಪುರಾಣ

ಮೇಲಿನ ೧೮ ಪುರಾಣಗಳೂ ವ್ಯಾಸರಚಿತವೆಂಬ ನಂಬಿಕೆ ಬೆಳೆದುಬಂದಿರುವುದರಿಂದ ಇವುಗಳನ್ನು "ವ್ಯಾಸೋಕ್ತ ಪುರಾಣಗಳು" ಎಂದೇ ಕರೆಯುವ ರೂಢಿ ಇದೆ. ಮಹಾಭಾರತವೂ ವ್ಯಾಸಭಾರತ ಎಂಬ ಹೆಸರನ್ನೇ ಪಡೆದಿದೆ. ಎಲ್ಲವೂ "ವ್ಯಾಸ ಕೃತ" ಎಂಬ ಸಾಮಾನ್ಯ ನಂಬಿಕೆ ಇದ್ದರೂ, ಇದು ನಂಬಲಸಾಧ್ಯ. ಮಹಾಭಾರತ ಆದಿಯಲ್ಲಿ "ಜಯ" ಎಂಬ ೫೦೦೦ ಸೂತ್ರಗಳಿಂದ ಕೂಡಿದ್ದ ಚಿಕ್ಕ ಗ್ರಂಥವಾಗಿತ್ತು. ಕಾಲಕ್ರಮೇಣ ಹಲವಾರು ಕವಿಗಳು ಚಮತ್ಕಾರದಿಂದ ಕೈಯಾಡಿಸಿದುದರಿಂದ ಗಾತ್ರ ಹಿಗ್ಗಿ ಇಂದಿನ ಮಹಾಭಾರತ ವಾಯಿತು. ಪುರಾಣಗಳಲ್ಲೂ ಹೀಗೆಯೇ ಏನಾದರೂ ಆಗಿರಬಹುದು. ಹಿಗ್ಗುವಿಕೆ ಮತ್ತು ಪ್ರಕ್ಷಿಪ್ತತೆಗಳಲ್ಲಿ ಕಲಾನೈಪುಣ್ಯವಿಲ್ಲದ ಅಪಕ್ವತೆ ಪುರಾಣಗಳಲ್ಲಿ ಕಂಡುಬರುತ್ತದೆ. ೧೫ನೆಯ ಶತಮಾನದ ಸುರಂಗ ಕವಿ ತನ್ನ ತ್ರಿಷಷ್ಟಿ ಪುರಾತನ ಚಾರಿತ್ರದಲ್ಲಿ ತನ್ನ ಕೃತಿಯ ಆಕರ ಲೈಂಗ್ಯಪುರಾಣವೆಂದು ಹೇಳುತ್ತಾನೆ. ಈ ಕಥೆಗಳು ಲಿಂಗಪುರಾಣದಲ್ಲಿ ಇಂದು ಕಂಡುಬರುವುದಿಲ್ಲವಾದುದರಿಂದ ಪ್ರಕ್ಷಿಪ್ತತೆ ಮತ್ತು ವಿಕ್ಷಿಪ್ತತೆಗಳು ಇನ್ನೂ ನಡೆಯುತ್ತಿರಬಹುದೆಂದು ಊಹಿಸಬಹುದು. ೧೮ ಪುರಾಣಗಳೂ ಏಕಕರ್ತೃಕಗಳಾಗಿರದೆ ಭಿನ್ನ ಕರ್ತೃಕಗಳಾಗಿದ್ದು ಕಾಲ ಕ್ರಮೇಣ ವಿಸ್ತೃತವಾಗಿರುವ ಸಂಭವವೇ ಹೆಚ್ಚು. ಪುರಾಣಗಳ ವಸ್ತುವಿನ ಆಧಾರದ ಮೇಲೆ ಅವುಗಳನ್ನು ನಾಲ್ಕು ಗುಂಪುಗಳಾಗಿ ವಿಭಾಗಿಸಬಹುದು:

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಬ್ರಹ್ಮಸಂಬಂಧಿಯಾದ ಪುರಾಣಗಳು:
ಬ್ರಹ್ಮಪುರಾಣ, ಬ್ರಹ್ಮವೈವರ್ತಪುರಾಣ.

೨. ವಿಷ್ಣುಸಂಬಂಧಿಯಾದ ಪುರಾಣಗಳು:
ವಿಷ್ಣುಪುರಾಣ, ಭಾಗವತಪುರಾಣ, ಕೂರ್ಮಪುರಾಣ, ಗರುಡಪುರಾಣ, ವರಾಹ ಪುರಾಣ, ವಾಮನಪುರಾಣ, ಮತ್ಸ್ಯಪುರಾಣ.

೩. ಶಿವಸಂಬಂಧಿಯಾದ ಪುರಾಣಗಳು:
ಶಿವಪುರಾಣ, ಮಾರ್ಕಂಡೇಯಪುರಾಣ, ಲಿಂಗಪುರಾಣ, ಸ್ಕಂದಪುರಾಣ.

೪. ಇತರ ಪುರಾಣಗಳು:
ಭವಿಷ್ಯಪುರಾಣ, ಪದ್ಮಪುರಾಣ, ನಾರದೀಯಪುರಾಣ, ಅಗ್ನಿಪುರಾಣ, ಬ್ರಹ್ಮಾಂಡ ಪುರಾಣ.

ಮೋನೀರ್ ವಿಲ್ಲಿಯವ್ಸ್ ಸಂಸ್ಕೃತ ಶಬ್ದಕೋಶದ ಪ್ರಕಾರ ೧೮ ಪುರಾಣಗಳ ವಿಭಾಗಕ್ರಮ ಕೆಳಗಿನಂತಿವೆ:

೧. ರಾಜಸಿಕ ಉತ್ಕರ್ಷವನ್ನು ಪ್ರತಿಪಾದಿಸುವ ಬ್ರಹ್ಮಸಂಬಂಧೀ ಪುರಾಣಗಳು:
ಬ್ರಹ್ಮಾಂಡಪುರಾಣ, ಬ್ರಹ್ಮಪುರಾಣ, ಬ್ರಹ್ಮವೈವರ್ತಪುರಾಣ, ಮಾರ್ಕಂಡೇಯ ಪುರಾಣ, ಭವಿಷ್ಯಪುರಾಣ, ವಾಮನಪುರಾಣ.

೨. ಸಾತ್ವಿಕ ಉತ್ಕರ್ಷವನ್ನು ಪ್ರತಿಪಾದಿಸುವ ವಿಷ್ಣುಸಂಬಂಧೀಪುರಾಣಗಳು:
ವಿಷ್ಣುಪುರಾಣ, ಭಾಗವತಪುರಾಣ, ನಾರದೀಯಪುರಾಣ, ಗರುಡಪುರಾಣ, ಪದ್ಮಪುರಾಣ, ವರಾಹಪುರಾಣ.

೩. ತಾಮಸಿಕ ಉತ್ಕರ್ಷವನ್ನು ಪ್ರತಿಪಾದಿಸುವ ಶಿವಸಂಬಂಧೀಪುರಾಣಗಳು:
ಶಿವಪುರಾಣ, ಲಿಂಗಪುರಾಣ, ಸ್ಕಂದಪುರಾಣ, ಅಗ್ನಿಪುರಾಣ, ವಾಯುಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ.

ಕೆಲ ವಿದ್ವಾಂಸರು ಮತ್ತೊಂದು ರೀತಿಯಲ್ಲಿ ನಾಲ್ಕು ಗುಂಪುಗಳಾಗಿ ವಿಭಜಿಸಿದರೆ ಮತ್ತೆ ಕೆಲವರು ಆರು ಗುಂಪುಗಳಾಗಿ ವಿಭಜನೆ ಮಾಡುತ್ತಾರೆ.

೧೮ ಪುರಾಣಗಳೂ ಏಕಕರ್ತೃಕವಾಗಿದ್ದರೆ, ಮೇಲಿನ ವಿವಾದಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ವಿಷ್ಣುಸಂಬಂಧಿಯಾದ ಪುರಾಣಗಳು ವಿಷ್ಣುಪಾರಮ್ಯವನ್ನು ಎತ್ತಿ ಹಿಡಿಯುವ ಕಥೆಗಳನ್ನು ಹೆಣೆದರೆ, ಶೈವಪುರಾಣಗಳು ಶಿವಪಾರಮ್ಯವನ್ನು ಎತ್ತಿ ಹಿಡಿಯುತ್ತವೆ. ಹಿಂದೂಧರ್ಮದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಶಿವ–ಇವರುಗಳ ಆರಾಧನೆ ನಡೆದಿತ್ತು. ವೈದಿಕಧರ್ಮ ಪ್ರಚಲಿತವಾಗಿದ್ದ ಕಾಲದಲ್ಲಿ ಶಿವ ಮತ್ತು ಹರಿ ಆರಾಧ್ಯದೈವತ ಗಳಾದರು. ಬ್ರಹ್ಮದೇವನ ಸ್ಥಾನ ಕೆಳಗಿಳಿಯಿತು. ೧೮ ಪುರಾಣಗಳ ಪಟ್ಟಿಕೆಯನ್ನು ಪರಿಶೀಲಿಸಿದಾಗ ಈ ಮಾತಿನ ಸತ್ಯ ಅರಿವಾಗುತ್ತದೆ. ಬ್ರಹ್ಮಸಂಬಂಧಿಯಾದ ಪುರಾಣಗಳ ಸಂಖ್ಯೆ ವಿಷ್ಣು ಮತ್ತು ಶಿವಸಂಬಂಧೀಪುರಾಣಗಳಿಗಿಂತ ಕಡಿಮೆಯಿರುವುದು ಕಂಡುಬರುತ್ತದೆ. ಜನರಲ್ಲಿ ಶಿವ ಮತ್ತು ವಿಷ್ಣು ದೇವತೆಗಳ ಮೇಲಿನ ನಂಬಿಕೆ ಹೆಚ್ಚಾದಂತೆ, ಆ ಆ ಧರ್ಮದ ಅನುಯಾಯಿಗಳು ತಂತಮ್ಮ ಮತಪ್ರಸಾರಕ್ಕಾಗಿ ಪುರಾಣಗಳನ್ನು ರಚಿಸಿದರು. ಕೆಲವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುರಾಣಗಳು ವಿಶಿಷ್ಟ ಮತದ ಕಟ್ಟಿಗೆ ಒಳಪಡದೆ ಸಾಮಾನ್ಯ ತತ್ವಗಳನ್ನು ಪ್ರತಿಪಾದಿಸುತ್ತವೆಯೆಂಬುದು ಗಮನಾರ್ಹವಾದ ಅಂಶವಾದರೂ ಸಧ್ಯದಲ್ಲಿ ಅವುಗಳ ವಿವೇಚನೆ ಅನವಶ್ಯ. ವಿವಿಧ ಮತಭೇದಗಳಿಂದ ಕೂಡಿರುವ ಎಲ್ಲಾ ಪುರಾಣಗಳ ಕರ್ತೃತ್ವವನ್ನೂ ಒಬ್ಬ ವ್ಯಕ್ತಿಯ ಮೇಲೆಯೇ ಆರೋಪಿಸುವುದು ಕಷ್ಟ. ಪುರಾಣಗಳ ಮೂಲಭೂತ ತತ್ವಗಳಲ್ಲಿ, ಧಾರ್ಮಿಕ ನಂಬಿಕೆಗಳಲ್ಲಿ, ಶೈಲಿಯಲ್ಲಿ ಕಂಡುಬರುವ ವ್ಯತ್ಯಾಸ ಇದಕ್ಕೆ ಸಾಕ್ಷಿ ನುಡಿಯುತ್ತದೆ. ವೇದಗಳನ್ನು ವಿಸ್ತರಿಸಿ ಅವುಗಳ ಮೂಲಭೂತ ತತ್ವವನ್ನು ವ್ಯಾಖ್ಯಾನಿಸಲೆಂದೇ ರಚಿತವಾದ ಪುರಾಣಗಳ ಕರ್ತೃತ್ವವನ್ನು, ವೇದಕರ್ತೃ ವ್ಯಾಸನಿಗೇ ಆರೋಪಿಸುವ ರೂಢಿ ಬೆಳೆದು ಬಂದಿತ್ತು.

ಪುರಾಣಗಳ ಕಾಲ

ವೇದಗಳ ಮತ್ತು ಉಪನಿಷತ್ತುಗಳ ಕಾಲದ ತರುವಾಯ ಪುರಾಣಗಳ ಕಾಲ ಪ್ರಾರಂಭವಾಗುತ್ತದೆ. ಪುರಾಣಗಳಲ್ಲಿ ಪ್ರತಿಪಾದಿತವಾದ ಮೂಲಭೂತ ತತ್ವಗಳು ವೇದೋಪನಿಷತ್ತುಗಳಲ್ಲಿ ಬೀಜರೂಪದಲ್ಲಿರುವುದನ್ನು ನೋಡಬಹುದು. ಪುರಾಣಗಳು ವೇದಪೂರ್ವವೆಂದು ವಾಯುಪುರಾಣ ಹೇಳಿದೆಯಾದರೂ ಆ ಉಕ್ತಿಯ ಪ್ರತಿಪದಾರ್ಥವನ್ನು ಗ್ರಹಿಸುವುದು ಸಾಧುವಾಗಲಾರದು. ವಾಯುಪುರಾಣಕರ್ತೃ, ಪುರಾಣಗಳ ಬಗೆಗೆ ತಳೆದಿದ್ದ ಗೌರವಭಾವನೆಯನ್ನು ಆ ಹೇಳಿಕೆ ಪ್ರತಿಬಿಂಬಿಸುತ್ತದೆ. ಬೌದ್ಧ ಚಾರ್ವಾಕ ಮೊದಲಾದ ನಾಸ್ತಿಕ ಧರ್ಮಗಳು ಜನಪ್ರಿಯವಾಗುತ್ತಿದ್ದು, ಸುಮಾರು ಕ್ರಿ. ಪೂ. ೫ನೆಯ ಶತಮಾನದ ವೇಳೆಗೆ ವೈದಿಕಧರ್ಮ ಖಿಲವಾಗುತ್ತಿತ್ತು. ಜನಮನದಲ್ಲಿ ಮತ್ತೆ ವೈದಿಕ ಧರ್ಮ ನೆಲೆ ನಿಲ್ಲುವಂತೆ ಮಾಡುವ ಪ್ರಯತ್ನ ಪುರಾಣಗಳಿಂದ ಪ್ರಾರಂಭವಾಗಿರಬಹುದು.

ಪುರಾಣಗಳ ಕಾಲದ ಬಗೆಗೆ ದೇಶೀಯ ಮತ್ತು ಪಾಶ್ಚಾತ್ಯ ವಿದ್ವಾಂಸರನೇಕರು ಚರ್ಚಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರಲ್ಲಿ ಕೆಲವರ ಅಭಿಪ್ರಾಯದಂತೆ ಪುರಾಣಗಳ ಕಾಲ ಕ್ರಿ. ಶ. ಸುಮಾರು ೧೦ನೆಯ ಶತಮಾನ. ಆದರೆ ಅಮರ ಕೋಶದಲ್ಲಿ ಹೇಳಲಾದ ಪುರಾಣ ವ್ಯಾಖ್ಯೆಯನ್ನು ನೋಡಿದರೆ ಮೇಲಿನ ಊಹೆ ಸಮಂಜಸವೆನಿಸದು. ಅಮರುಕನು ಇಂತಹ ನಿಖರವಾದ ನಿಶ್ಚಿತವಾದ ವ್ಯಾಖ್ಯೆಯನ್ನು ಕೊಡಬೇಕಾದರೆ ಅವನ ಕಾಲಕ್ಕಾಗಲೇ ಪ್ರಮುಖ ಪುರಾಣಗಳೆಲ್ಲಾ ರಚಿತವಾಗಿದ್ದುವು ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಎಲ್ಲ ವೈದಿಕಪುರಾಣಗಳಿಗೂ ಈ ವ್ಯಾಖ್ಯೆ ಸರಿಹೊಂದುತ್ತದೆ. ಯಾವಾಗಲೂ ಸಾಹಿತ್ಯ ಕೃಷಿ ಮೊದಲು, ತರುವಾಯ ಅದರ ವಿಶ್ಲೇಷಣೆ, ವ್ಯಾಖ್ಯಾನ. ಇದು ಸಾಮಾನ್ಯ ನಿಯಮ. ಸಾಹಿತ್ಯಿಕ ರೂಪದ ವಿವರಣೆ ಮೊದಲು ಹುಟ್ಟಿ, ಅನಂತರದಲ್ಲಿ ಆ ವ್ಯಾಖ್ಯೆಗೆ ತಕ್ಕಂತೆ ವಿವರಣೆಗೆ ಸರಿಹೊಂದುವಂತೆ ಆ ವಿಶಿಷ್ಟ ಸಾಹಿತ್ಯ ನಿರ್ಮಿತಿಯಾಗುವುದು ಊಹೆಗೆ ನಿಲುಕದ ಮಾತು. ಯಾವುದೇ ಒಂದು ವಿಶಿಷ್ಟ ಸಾಹಿತ್ಯ ರೂಪುಗೊಂಡು ಅದು ಸಮೃದ್ಧವಾಗಿ ಬೆಳೆದಮೇಲೆ ಅದರ ಗುಣದೋಷಗಳನ್ನು ವಿಶ್ಲೇಷಿಸಿ, ಅದರ ವ್ಯಾಖ್ಯೆಯನ್ನು ಮುಂದಿಡುವುದು ಪರಂಪರೆಯ ಸಂಪ್ರದಾಯದಿಂದ ಬೆಳೆದುಬಂದಿದೆ. ಈ ದೃಷ್ಟಿಯಿಂದ ವಿಚಾರ ಮಾಡಿದಾಗ, ಪುರಾಣಗಳ ಕಾಲಮಿತಿ ಅಮರಕೋಶಕ್ಕೆ ಪ್ರಾಚೀನವಾಗಿರಬೇಕು. ಅಮರಕೋಶದಲ್ಲಿ ಪ್ರಕ್ಷಿಪ್ತವಾದ ಹಲವಾರು ಭಾಗಗಳಿವೆಯೆಂಬುದನ್ನು ಎಲ್ಲರೂ ಒಪ್ಪ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ತಾರೆ. ಪುರಾಣಗಳ ವ್ಯಾಖ್ಯೆಯನ್ನು ಹೇಳುವ ಭಾಗವೂ ಪ್ರಕ್ಷಿಪ್ತವಾಗಿರಬಾರದೇಕೆ ಎಂಬ ಅನುಮಾನ ಸಹಜವಾಗಿಯೇ ಉದ್ಭವಿಸುತ್ತದೆ. ಆದರೆ ಅಮರಕೋಶದ ಪ್ರತಿಗಳಲ್ಲೆಲ್ಲಾ ಒಂದೇ ಬಗೆಯ ಪಾಠ ದೊರೆಯುವುದಲ್ಲದೆ, ಈ ಶ್ಲೋಕದ ಶೈಲಿ ಮತ್ತು ಭಾಷೆ ಉಳಿದ ಶ್ಲೋಕಗಳಂತೆಯೇ ಇರುವುದರಿಂದಲೂ ಈ ಅನುಮಾನಕ್ಕೆ ಆಸ್ಪದವೂ ಇಲ್ಲ, ಆಧಾರವೂ ಇಲ್ಲ.

ಅಮರಕೋಶದ ಕಾಲ ಸು. ಕ್ರಿ. ಪೂ. ೧ನೆಯ ಶತಮಾನ. ಆದುದರಿಂದ ಪುರಾಣಗಳ ಕಾಲ ಕ್ರಿ. ಪೂ. ೧ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಬೌದ್ಧ ಮತ್ತು ಜೈನ ಮತಗಳು ಉತ್ಕರ್ಷ ಸ್ಥಿತಿಯಲ್ಲಿದ್ದಾಗ ಏಕದೇವೋಪಾಸನೆ, ದೈವಭಕ್ತಿ, ನಂಬಿಕೆಗಳು ಮಸುಳಿಸುತ್ತಿದ್ದುವು. ವೈದಿಕ, ಜೈನ ಹಾಗೂ ಬೌದ್ಧ ಮತಗಳ ನಡುವೆ ಘರ್ಷಣೆ ನಡೆದು ಜನತೆ ದಿಕ್ಕೆಟ್ಟಿದ್ದಿತು. ವೈದಿಕ ಧರ್ಮದ ಕಡೆಗೆ ಜನರ ಮನ ಒಲಿಸಲು, ಆಸಕ್ತಿ ಹುಟ್ಟಿಸಲು, ಶ್ರದ್ಧೆ ಬೆಳೆಸಲು, ನಂಬಿಕೆ ಬಲಗೊಳಿಸಲು ಪುರಾಣಗಳ ನಿರ್ಮಿತಿ ಸಹಾಯಕವಾಗಿರಬಹುದು.

ಪುರಾಣಗಳ ವಿಶೇಷ ಲಕ್ಷಣಗಳು

"ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ
ವಂಶಾನುಚರಿತಾನುಚ್ಚೈವ ಪುರಾಣಂ ಪಂಚಲಕ್ಷಣಂ||"

ಎಂದು ಅಮರಕೋಶ ಪುರಾಣದ ವ್ಯಾಖ್ಯೆಯನ್ನು ಹೇಳುತ್ತದೆ. ವೈದಿಕ ಪುರಾಣಗಳು ಸಾಗರದಂತೆ ವಿಶಾಲವಾದುವು, ಅಪಾರವಾದುವು ಮತ್ತು ಆಳವಾದುವು, ಪ್ರಾಚೀನ ಭಾರತೀಯ ಜ್ಞಾನವನ್ನೆಲ್ಲಾ ತನ್ನೊಳಗೆ ಅಳವಡಿಸಿಕೊಂಡಿದೆ. ವಿಶ್ವೋತ್ಪತ್ತಿಶಾಸ್ತ್ರ, ಭೂಗರ್ಭಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ನೀತಿಶಾಸ್ತ್ರ, ತತ್ವಶಾಸ್ತ್ರ ಮೊದಲಾದ ಎಲ್ಲವನ್ನೂ ಪುರಾಣಗಳು ಒಳಗೊಂಡಿವೆ. ಸುವ್ಯಸ್ಥಿತವಾದ ಜೋಡಣೆ ಇಲ್ಲದಿದ್ದರೂ ಪುರಾಣಗಳನ್ನು ವಿಶ್ವಕೋಶ ಎನ್ನಲು ಅಭ್ಯಂತರವಿಲ್ಲ. ಕಲಾಕೌಶಲ್ಯದ ಅಂಶವನ್ನು ಗಣನೆಗೆ ತೆಗೆದುಕೊಂಡರೆ ಪುರಾಣಗಳು ಅಷ್ಟೇನೂ ಉತ್ಕೃಷ್ಟವೆನಿಸಲಾರವಾದರೂ, ಸಾಂಸ್ಕೃತಿಕವಾಗಿ ಇವುಗಳ ಮಟ್ಟ ಅತ್ಯುನ್ನತವೆನ್ನಬಹುದು. ಪ್ರಾಚೀನ ಭಾರತದಲ್ಲಿ ಚಾರಿತ್ರಿಕ ದಾಖಲೆಗಳು ದೊರಕಲಾರವಾದರೂ, ಪುರಾಣಗಳು ಇತಿಹಾಸಕ್ಕೆ ಸಂಬಂಧಪಟ್ಟ ಕೆಲವು ಅಂಶಗಳನ್ನು ಒದಗಿಸುತ್ತವೆ. ಆದರೆ ಈ ಎಲ್ಲ ಅಂಶಗಳೂ ವಿಶ್ವಾಸನೀಯ ಎನಿಸಿಕೊಳ್ಳಲಾರವು. ಬೇರೆ ಆಧಾರಗಳ ಬೆಂಬಲದಿಂದ ದೃಢಪಡಿಸಬೇಕು. ಪೌರಾಣಿಕ ಕಥೆಗಳ ತಾತ್ವಿಕ ಮಹತ್ವ, ಸಾಂಕೇತಿಕತೆ ಮತ್ತು ನೈತಿಕ ಅಂಶಗಳು ಜನರ ಮನದ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಪುರಾಣಗಳು ಧಾರ್ಮಿಕ, ತಾತ್ವಿಕ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ಒಳಗೊಂಡಿವೆ. ಈ ಎಲ್ಲ ದೃಷ್ಟಿಯಿಂದ ಪುರಾಣಗಳ ಅಭ್ಯಾಸ ಪ್ರಯೋಜನಕರ. ಈಗಾಗಲೆ ಈ ದಿಸೆಯಲ್ಲಿ ಪಂಡಿತರು ಅಭ್ಯಾಸ ಮಾಡುತ್ತಿದ್ದಾರೆ.

ಪುರಾಣಗಳ ಕಲ್ಪನೆ ಭಾರತಕ್ಕಷ್ಟೇ ಮೀಸಲಾಗಿಲ್ಲ. ಪ್ರತಿಯೊಂದು ಧರ್ಮವೂ ತನ್ನದೇ ಆದ ದೇವತಾಖ್ಯಾನಗಳಿಂದ ಕೂಡಿದ ಸಾಹಿತ್ಯವನ್ನು ಹೊಂದಿರುತ್ತದೆ. ಉದಾಹರಣೆಗೆ: ಗ್ರೀಕರ ದೇವತಾಖ್ಯಾನ, ಕ್ರಿಶ್ಚಿಯನ್ ದೇವತಾಖ್ಯಾನ, ಇಸ್ಲಾಂ ದೇವತಾಖ್ಯಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲಾದುವು. ಭಾರತದಲ್ಲಿಯೇ ಹಲವಾರು ಧರ್ಮಗಳು ತಲೆಯೆತ್ತಿವೆ. ಧರ್ಮಗಳೊಡನೆಯೆ ಅವುಗಳಿಗೆ ಸಂಬಂಧಪಟ್ಟ ದೇವತಾಖ್ಯಾನಗಳೂ ಸಹ ಹುಟ್ಟಿಕೊಂಡಿವೆ. ಇಂತಹ ಧರ್ಮಗಳಲ್ಲಿ ಜೈನಧರ್ಮವೂ ಒಂದು. ಎಲ್ಲ ಧರ್ಮಗಳಂತೆ ಈ ಧರ್ಮವೂ ಸಹ ತನ್ನದೇ ಆದ ವಿಶಿಷ್ಟ ಪೌರಾಣಿಕ ಸಾಹಿತ್ಯವನ್ನು ಒಳಗೊಂಡಿದೆ. ಜೈನಧರ್ಮದ ಉಗಮವಾದಂದಿನಿಂದ ಮತಪ್ರಸಾರಕ್ಕಾಗಿ ಶ್ರಮಿಸಿದ ೨೪ ತೀರ್ಥಂಕರರ ಚರಿತ್ರೆಯನ್ನು ಒಳಗೊಂಡಿರುವ ಜೈನಪುರಾಣಗಳೆ ಆ ಧರ್ಮದ ಪೌರಾಣಿಕ ಸಾಹಿತ್ಯ. ಜೈನಪುರಾಣಗಳು, ವೈದಿಕ ಪುರಾಣಗಳಿಂದ ಭಿನ್ನವಾದ ಕೆಲವು ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿವೆ. ಜೈನ ಪುರಾಣದ ಎಂಟು ಪ್ರಮುಖ ಅಂಗಗಳು ಇಂತಿವೆ.

೧. ತೀರ್ಥಂಕರರ ಭವಾವಳಿ
೨. ಪಂಚಕಲ್ಯಾಣಗಳು
೩. ವಿಶ್ವೋತ್ಪತ್ತಿ
೪. ಜೈನ ಪರಮಾರ್ಥವಿದ್ಯೆ
೫. ಕರ್ಮತತ್ವ
೬. ಅಣುವ್ರತಗಳು
೭. ಗುಣವ್ರತಗಳು
೮. ಹನ್ನೆರಡು ಬಗೆಯ ತಪಸ್ಸು

ಇವುಗಳೆಲ್ಲಾ ಜೈನಪುರಾಣಗಳಲ್ಲಿ ಚಿತ್ರಿತವಾಗಿರುತ್ತವೆ.

ಜೈನಪುರಾಣಗಳು ತಮ್ಮದೇ ಆದ ಐಕ್ಯಮತವನ್ನು ಸಾಧಿಸಿಕೊಂಡಿವೆ. ಅಸಂಖ್ಯಾತವಾಗಿ ಕಂಡುಬರುವ ಉಪಕಥೆಗಳು ತಮ್ಮ ನೆರಳಿನಿಂದ ಮೂಲಕಥೆಯನ್ನು ಮುಚ್ಚಿಬಿಟ್ಟವೆಯಲ್ಲದೆ ಸಾಮಾನ್ಯ ಓದುಗ ಭವಾವಳಿಗಳ ಅರಣ್ಯದಲ್ಲಿ ದಿಕ್ಕೆಟ್ಟು ಅಲೆಯುವಂತೆ ಆಗುತ್ತದೆ.

ಸಾಂಪ್ರದಾಯಿಕತೆಯ ಹಾದಿಯಲ್ಲಿಯೇ ನಡೆದುಬಂದ ಪುರಾಣಗಳಲ್ಲಿ 'ಪರಂಪರೆಯಿಂದ ಬಂದ ಪಂಚಕಲ್ಯಾಣಗಳ ವರ್ಣನೆ, ಪರಾವಿದ್ಯೆ, ಕರ್ಮತತ್ವ, ನರಕ ವರ್ಣನೆ ಮೊದಲಾದುವುಗಳಿಂದ ಕೂಡಿ ಜೈನಪುರಾಣಗಳು ಒಂದೇ ಅಚ್ಚಿನಲ್ಲಿ ಎರಕ ಹೊಯ್ದಂತೆ ಪಡಿಯಚ್ಚುಗಳಾಗಿವೆ. ವೈವಿಧ್ಯತೆ ಮತ್ತು ಕಲಾಪರಿಪೂರ್ಣತೆಯ ಕುಂದು ಗೋಚರಿಸುತ್ತದೆ.

ವೀರಶೈವಧರ್ಮ ಹಿಂದೂಧರ್ಮದ ಮತ್ತೊಂದು ವಿಶಿಷ್ಟ ಉಪಭಾಗವಾದರೂ, ಅದು ೧೮ ವೈದಿಕ ಪುರಾಣಗಳನ್ನು ಮಾನ್ಯ ಮಾಡುವುದಿಲ್ಲ. ವೈದಿಕ ಮತ್ತು ವೀರಶೈವ ಧರ್ಮಗಳ ನಡುವೆ ಕೆಲವು ಮೂಲಭೂತ ತತ್ತ್ವಗಳಲ್ಲಿ ಸಾಮ್ಯ ಕಂಡುಬಂದರೂ ವೀರಶೈವ ವೈದಿಕದಿಂದ ಸಿಡಿದು ದೂರ ನಿಲ್ಲುತ್ತದೆ. ಪೌರಾಣಿಕ ಸಾಹಿತ್ಯವನ್ನು ತನ್ನದೇ ಆದ ರೀತಿಯಲ್ಲಿ ಬೆಳಸಿಕೊಂಡಿದೆ. ರೂಪ, ಆತ್ಮ ಮತ್ತು ವಸ್ತುಗಳಲ್ಲಿ ತನ್ನ ವೈಶಿಷ್ಟ್ಯವನ್ನು ರೂಪಿಸಿಕೊಂಡಿದೆ, ರೂಢಿಸಿಕೊಂಡಿವೆ.

ವೀರಶೈವ ಸಾಹಿತ್ಯವೆಲ್ಲ ವೀರಶೈವ ಪುರಾಣಗಳಲ್ಲ. ಅಲ್ಲಿ ವಚನಸಾಹಿತ್ಯ, ಅದರ ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಸಿದ್ಧಾಂತಗಳ ಸಾಹಿತ್ಯವಿದೆಯೆಂಬುದು ಸಾಹಿತ್ಯಜ್ಞರ ಅರಿತಕ್ಕೆ ಬಂದಿದೆ; ಶತಕಸಾಹಿತ್ಯಕ್ಕೇನೂ ಕೊರತೆಯಿಲ್ಲ. ಕಾವ್ಯರೂಪದಲ್ಲಿ ಬಂದ ವೀರಶೈವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಹಿತ್ಯವೆಲ್ಲವೂ ಪುರಾಣಸಾಹಿತ್ಯವಲ್ಲ. ವೀರಶೈವ ಕಾವ್ಯಸಾಹಿತ್ಯವನ್ನು ಶುದ್ಧಸಾಹಿತ್ಯ, ಪುರಾಣಸಾಹಿತ್ಯ, ಮಿಶ್ರ ಸಾಹಿತ್ಯವೆಂದು ವಿಭಜಿಸಬಹುದು.

ಹರಿಹರ, ರಾಘವಾಂಕ, ಚಾಮರಸ, ಸುರಂಗ, ಷಡಕ್ಷರದೇವ ಮೊದಲಾದವರ ಕೃತಿಗಳು ಯಾವ ವಸ್ತುವನ್ನೇ ಕುರಿತು ಬರೆದಿರಲಿ, ಯಾವ ರೂಪದಲ್ಲಿಯೇ ಇರಲಿ, ಶುದ್ಧಸಾಹಿತ್ಯದಲ್ಲಿ ಪರಿಗಣಿತವಾಗುತ್ತವೆ; ರಸನಿಷ್ಠವಾಗಿರುವುದೇ ಅದಕ್ಕೆ ಕಾರಣ. ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯದಾಗರವೆನಿಪ ಕಥೆಗೆ ಅಷ್ಟಾದಶ ವರ್ಣನೆಗಳ ಹಂಗೇಕೆ ಎಂದು ಅಂಥ ವರ್ಣನೆಗಳನ್ನು ಬಿಟ್ಟು ಕೇವಲ ಕಥಾನಾಯಕರ ಜೀವನವನ್ನೇ ಕೇಂದ್ರೀಕರಿಸಿ ಬರೆದ ಹರಿಹರ, ರಾಘವಾಂಕ, ಚಾಮರಸಾದಿ ಕವಿಕೃತಿಗಳಾಗಲಿ, ಅಷ್ಟಾದಶ ವರ್ಣನೆಗಳ ಚೌಕಟ್ಟಿನಲ್ಲಿ ಬರೆದ ಗಿರಿಜಾಕಲ್ಯಾಣ, ತ್ರಿಷಷ್ಟಿ ಪುರಾತನಚಾರಿತ್ರ, ರಾಜಶೇಖರ ವಿಳಾಸ, ಶಬರಶಂಕರವಿಳಾಸ, ವೃಷಭೇಂದ್ರವಿಜಯದಂತಹ ಪ್ರೌಢ ಕಾವ್ಯಗಳಾಗಲಿ ಅಲ್ಲಿ ರಸವೇ ಪ್ರಧಾನ. ಆ ಕಾವ್ಯನಿರ್ಮಿತಿಯಲ್ಲಿ ಕಲೆ ಪ್ರಧಾನವಾಗಿದೆಯಲ್ಲದೆ ಪ್ರಚಾರವಲ್ಲ. ಶರಣರ ಮಹಿಮೆ, ಶಿವಲೀಲೆಗಳ ವರ್ಣನೆ, ಇಂತಹ ಯಾವ ವಸ್ತುವಿದ್ದರೂ ಭಾವಪೂರ್ಣನಾದ ಕವಿ ಅಲ್ಲಿ ಒಡೆದು ಕಾಣುತ್ತಾನೆ. ಚರ್ಚೆ, ಸಂಗ್ರಹ, ವಿವರಣೆ, ಪ್ರಚಾರಗಳಿಗಿಂತ, ಸೃಜನಶಕ್ತಿ, ಸಮಷ್ಟಿದೃಷ್ಟಿ, ಕಲೆ, ರಸ ಇವು ಅಲ್ಲಿ ಮುಖ್ಯವಾಗಿರುತ್ತವೆ.

ವೀರಶೈವ ಪುರಾಣಗಳೆಂಬುವು ಈ ವಿಭಾಗದ ಪ್ರಾರಂಭದಲ್ಲಿ ವಿವರಿಸಿದ ಪುರಾಣಗಳ ಸಾಮಾನ್ಯ ಉದ್ದೇಶಕ್ಕಾಗಿ ರಚಿತವಾಗಿವೆ. ಬಸವಪುರಾಣ, ಪದ್ಮರಾಜಪುರಾಣ, ಪ್ರಭುದೇವರ ಪುರಾಣ, ಮಹದೇವಿಯಕ್ಕನ ಪುರಾಣ, ದೇವರ ದಾಸಿಮಯ್ಯನ ಪುರಾಣ, ದೇವಾಂಗದಾಸಿಮಯ್ಯ ಪುರಾಣ, ಶಿವತತ್ವ ಚಿಂತಾಮಣಿ, ಚೆನ್ನಬಸವಪುರಾಣ, ವೀರಶೈವಾಮೃತ ಮಹಾಪುರಾಣ, ಶಂಕರದಾಸಿಮಯ್ಯನ ಪುರಾಣ, ಚತುರಾಚಾರ್ಯಪುರಾಣ, ರೇವಣಸಿದ್ಧೇಶ್ವರಪುರಾಣ, ಏಕೋರಾಮೇಶ್ವರಪುರಾಣ, ತೋಂಟದ ಸಿದ್ಧೇಶ್ವರಪುರಾಣ, ಸಿದ್ಧೇಶ್ವರಪುರಾಣ, ಪಾಲ್ಕುರಿಕೆ ಸೋಮೇಶ್ವರಪುರಾಣ—ಇಂತಿವೆಲ್ಲ ಪುರಾಣವೆಂದು ರಚಿತವಾದುವು. ಸಿದ್ಧನಂಜೇಶನ ರಾಘವಾಂಕಚಾರಿತ್ರ, ಗುರುರಾಜಚಾರಿತ್ರ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ ಮುಂತಾದ ಕೃತಿಗಳು ಚಾರಿತ್ರಪ್ರಧಾನವಾಗುವುದನ್ನು ಬಿಟ್ಟು ಪುರಾಣದ ಹಾದಿಯನ್ನು ಹಿಡಿದಿವೆ. ಷಟ್ಪದಿ, ಸಾಂಗತ್ಯ ಮುಂತಾದ ನಡುಗನ್ನಡದ ಸುಲಭ ಶೈಲಿಯಲ್ಲಿ ಬರೆದ ವೀರಶೈವ ಕೃತಿ ಮೇಗಣ ಯಾವುದೇ ಗುಂಪಿಗೆ ಸೇರಿದ್ದರೂ ಜನತೆ ಅದನ್ನು ಪುರಾಣಪ್ರವಚನಕ್ಕಾಗಿ ಉಪಯೋಗಿಸಬಹುದು; ಭಕ್ತಿಯಿಂದ ಲಾಲಿಸಬಹುದು. ಹಾಗೆಂದ ಮಾತ್ರಕ್ಕೆ ಅವನ್ನು ಪುರಾಣಗಳೆಂದು ಪರಿಗ್ರಹಿಸಲಾಗದು.

"ಶಿವನಂ ತದೀಯ ಶರಣವ್ರಜ"ವನ್ನು ಕುರಿತು ಕೃತಿರಚನೆ ಮಾಡುವುದು ಗಿರೀಶಂಗೆ ನಾಲಗೆಯನ್ನು ಮಾರಿದ ವೀರಶೈವ ಕವಿಗಳ ಉದ್ದೇಶ. ಶುದ್ಧಸಾಹಿತ್ಯವಿರಲಿ, ಪುರಾಣಸಾಹಿತ್ಯವಿರಲಿ ಅದು ಈ ನಿಯಮಕ್ಕೆ ಬದ್ಧವಾಗಿದೆ. ಶಿವನನ್ನು ಎಂದರೆ ಪರಶಿವನನ್ನು ಕುರಿತು ಎಂಬುದು ಸುಸ್ಪಷ್ಟ. ಲೋಕೋದ್ಧಾರ ನಿಮಿತ್ತ ಶಿವನು ಭೂಲೋಕದಲ್ಲಿ ಅವತರಿಸುವುದಿಲ್ಲ. ಅವನ ಲೀಲೆಯೆ ಈ ಚರಾಚರಸೃಷ್ಟಿ. ಲೀಲೆಯಾದಡೆ ಉಮಾಮಹೇಶ್ವರ; ಲೀಲೆ ನಿಂದಡೆ ಸ್ವಯಂಭು. ಆ ಲೀಲೆಯಲ್ಲಿಯೇ ಶಿವನು ವಿವಿಧ ರೂಪದಲ್ಲಿ ಗೋಚರಿಸಿ ಭಕ್ತರನ್ನು ಉದ್ಧರಿಸುವನು. ಆತನ ಅನಂತ ಲೀಲೆಗಳಲ್ಲಿ ಪಂಚವಿಂಶತಿ ಲೀಲೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಳು ಪ್ರಸಿದ್ಧವಾಗಿವೆ. ಶೈವಸಾಹಿತ್ಯದಲ್ಲಿ ಅವುಗಳ ಉಲ್ಲೇಖ ವಿಪುಲವಾಗಿದೆ. ಆ ಪಂಚ ವಿಂಶತಿ ಲೀಲೆಗಳೆಂದರೆ:

೧. ಸೋಮಧರಲೀಲೆ
೨. ಉಮಾಮಹೇಶ್ವರಲೀಲೆ
೩. ವೃಷಭಾರೂಢಲೀಲೆ
೪. ತಾಂಡವಲೀಲೆ
೫. ಗಿರಿಜಾಕಲ್ಯಾಣಲೀಲೆ
೬. ಭಿಕ್ಷಾಟನಲೀಲೆ
೭. ಮಾರಹರಲೀಲೆ
೮. ಕಾಲಹರಲೀಲೆ
೯. ತ್ರಿಪುರದಹನಲೀಲೆ
೧೦. ಜಲಂಧರಲೀಲೆ
೧೧. ಅಜಾರಿಲೀಲೆ
೧೨. ವೀರಭದ್ರಲೀಲೆ
೧೩. ಶರಭಲೀಲೆ
೧೪. ಅರ್ಧನಾರೀಶ್ವರಲೀಲೆ
೧೫. ಕಿರಾತಲೀಲೆ
೧೬. ಕಂಕಾಳಲೀಲೆ
೧೭. ಚಂಡೇಶಾನುಗ್ರಹಲೀಲೆ
೧೮. ವಿಷಧರಲೀಲೆ
೧೯. ಚಕ್ರದಾನಲೀಲೆ
೨೦. ವಿಘ್ನಪ್ರಸಾದಲೀಲೆ
೨೧. ಉಮಾಸ್ಕಂದಲೀಲೆ
೨೨. ಏಕಪಾದಲೀಲೆ
೨೩. ಸುಖಾವಹಲೀಲೆ
೨೪. ದಕ್ಷಿಣಾಮೂರ್ತಿಲೀಲೆ
೨೫. ಲಿಂಗೋದ್ಭವಲೀಲೆ

ಈ ಲೀಲೆಗಳನ್ನು ಆಧರಿಸಿ ಬರೆದ ವೀರಶೈವ ಸಾಹಿತ್ಯದ ಪ್ರಮುಖ ಕೃತಿಗಳು ಇಂತಿವೆ:

ಶಿವಲೀಲಾಪರ ಕೃತಿಗಳು

ಶುದ್ಧ ಸಾಹಿತ್ಯ ಕಾವ್ಯಗಳು | ಪುರಾಣ ಕಾವ್ಯಗಳು

೧. ಗಿರಿಜಾಕಲ್ಯಾಣ–ಹರಿಹರದೇವ
೨. ವೀರೇಶಚರಿತೆ–ರಾಘವಾಂಕ
೩. ಶರಭಚಾರಿತ್ರ–ರಾಘವಾಂಕ
೪. ಭಿಕ್ಷಾಟನಚರಿತ್ರೆ (ವಾರ್ಧಕ)–ಗುರುಲಿಂಗವಿಭು (೧೫೫೦)
೫. ವೀರಭದ್ರವಿಜಯ (ಚಂಪೂ)–ವೀರಭದ್ರರಾಜ (೧೫೩೯)
೬. ವೀರಭದ್ರವಿಜಯ (ಭಾಮಿನಿ)–ನಿಶ್ಚರಿತಾತ್ಮ (೧೬೦೦)
೭. ವೀರಭದ್ರ ಸಾಂಗತ್ಯ
೮. ವೀರಭದ್ರಲೀಲಾರತ್ನ (ಸಾಂಗತ್ಯ)–ಶಾಂತವೀರ (೧೬೦೮)
೯. ಶಬರಶಂಕರವಿಳಾಸ–ಷಡಕ್ಷರದೇವ

ತದೀಯ ಶರಣವ್ರಜವೆಂದರೆ ಶಿವತತ್ವವನ್ನು ಜೀವಿಸಿ, ಸಾಕ್ಷಾತ್ ಶಿವಸ್ವರೂಪರಾದ ಮಹಾನುಭಾವರು, ಶಿವಭಕ್ತಿಪರಾಯಣರು, ಶಿವಸಮಯ ಪ್ರತಿಷ್ಠಾಪಕರು, ಶಿವತತ್ವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಧಕರು, ಬೋಧಕರು, ತದೀಯ ಶರಣವ್ರಜದಲ್ಲಿಯೇ ಬರುತ್ತಾರೆ. ನಿಚ್ಚಳ ವೀರಶೈವ ಪರಿಭಾಷೆಯಲ್ಲಿ ಹೇಳುವುದಾದರೆ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನೇ ಪರಿಪಾಲಿಸಿದವರು ಶಿವಶರಣರು. ಅವರನ್ನು ಪುರಾತನರು, ಬಸವಾದಿ ಪ್ರಮಥರು, ರೇಣುಕಾದ್ಯಾಚಾರ್ಯರು, ಪಂಡಿತತ್ರಯರು, ವಿರಕ್ತರು–ನೂರೊಂದು ವಿರಕ್ತರು, ಏಳನೂರೊಂದು ವಿರಕ್ತರು–ಎಂದು ಮುಂತಾಗಿ ವಿಭಜಿಸಬಹುದು.

ಪುರಾತನರೆಂದರೆ ತಮಿಳುನಾಡಿನ ಶಿವಭಕ್ತರು. ಅರವತ್ತುಮೂವರು ಪುರಾತನರು ತಮಿಳುನಾಡಿನಲ್ಲಿ ಪ್ರಸಿದ್ಧರಾಗಿ ಹೋಗಿರುವರು. ಜೈನ, ಬೌದ್ಧ ಸಮಯಗಳ ಮೂಲಕ ಈ ನಾಡಿನಲ್ಲಿ ನಶಿಸಿಹೋಗುತ್ತಿದ್ದ ಸಮಯದಲ್ಲಿ ಈ ಅರುವತ್ತಮೂವರು ಪುರಾತನರು ಅವತರಿಸಿ ಶಿವಧರ್ಮವನ್ನು ಪ್ರತಿಷ್ಠಾಪಿಸಿದರು. ತಿರುನೀಲಕಂಠರನ್ನು ಮೊದಲ್ಗೊಂಡು ಸೌಂದರನಂಬಿಯ ವರೆಗೆ ಅರುವತ್ತುಮೂವರ ಚರಿತೆಯನ್ನು ತಮಿಳು ಭಾಷೆಯಲ್ಲಿ ಶಕ್ಕೀಳಾರ್ ಕವಿ 'ಪೆರಿಯ ಪುರಾಣಂ' ಎಂಬ ಗ್ರಂಥದಲ್ಲಿ ವಿವರಿಸಿರುವನು. ಕ್ರಿ. ಶ. ೬ನೆಯ ಶತಮಾನದಿಂದ ೯ನೇ ಶತಮಾನದ ವರೆಗಿನ ಅವಧಿ ಈ ತ್ರಿಷಷ್ಟಿ ಪುರಾತನರ ಕಾಲವೆಂದು ತಿಳಿಯಬಹುದು. ಇವರು ಐತಿಹಾಸಿಕ ವ್ಯಕ್ತಿಗಳೆಂಬುದು ಗಮನಾರ್ಹ. ಇವರನ್ನು ಕುರಿತು ಕನ್ನಡದಲ್ಲಿ ನಿರ್ಮಿತವಾದ ಸಾಹಿತ್ಯ ಇಂತಿದೆ:

ಪುರಾತನಪರ ಸಾಹಿತ್ಯ

- ೬೩ ಶಿವರನ್ನು ಕುರಿತು
  - ಶುದ್ಧ
    - ೧ ಹರಿಹರನ ರಗಳೆಗಳು
    - ೨ ತ್ರಿಷಷ್ಟಿ ಪುರಾತನ ಚಾರಿತ್ರ
    - ೩ ಅರುವತ್ತು ಮೂವರು ಪುರಾತನರ ಚರಿತ್ರೆ
    - ೪ ಅರುವತ್ತು ಮೂವರು ಪುರಾತನರ ಸಾಂಗತ್ಯ
  - ಪುರಾಣ
- ಒಬ್ಬೊಬ್ಬರನ್ನು ಕುರಿತು
  - ಶುದ್ಧ
    - ೧ ಸೌಂದರ ವಿಳಾಸ
    - ೨ ಚೇರಮ ಕಾವ್ಯ
    - ೩ ತ್ರಿಭುವನ ತಿಲಕ ಸಾಂಗತ್ಯ
    - ೪ ದೀಪದಕಲಿಯಾರ ಕಾವ್ಯ
  - ಪುರಾಣ
    - ೧ ಸೌಂದರಪುರಾಣ

ಬಸವಾದಿ ಪ್ರಮಥರ ಸಾಹಿತ್ಯ

- ಶುದ್ಧ
  - ಬಸವರಾಜದೇವರ ರಗಳೆ–ಹರಿಹರ
  - ವೃಷಭೇಂದ್ರವಿಜಯ–ಷಡಕ್ಷರದೇವ
- ಪುರಾಣ
  - ಬಸವಪುರಾಣ–ಭೀಮಕವಿ
  - ಸಿಂಗಿರಾಜಪುರಾಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಸವಶಿಖಾಮಣಿ
ಬಸವೇಶ್ವರ ಕಾವ್ಯ (ಸಾಂಗತ್ಯ)
—ಬಸವಲಿಂಗ
ಪ್ರಭುದೇವರ ರಗಳೆ—ಹರಿಹರ
ಪ್ರಭುಲಿಂಗಲೀಲೆ—ಚಾಮರಸ
ಮಹಾದೇವಿಯಕ್ಕನ ರಗಳೆ—ಹರಿಹರ
ಪ್ರಭುವಿನ ಸಾಂಗತ್ಯ
—ಪರ್ವತೇಶ (೧೬೦೮)
ಉದ್ಭಟಕಾವ್ಯ—ಉದ್ಭಟದೇವ
ಉದ್ಭಟಕಾವ್ಯ—ಬಸವಾಂಕ
ಸಿದ್ಧರಾಮಚಾರಿತ್ರ—ರಾಘವಾಂಕ
ಸೋಮನಾಥಚಾರಿತ್ರ—ರಾಘವಾಂಕ
ಮಡಿವಾಳಯ್ಯನ ಸಾಂಗತ್ಯ
ನನ್ನಯ್ಯಗಳ ಚರಿತೆ (ಚಂಪೂ)
—ಕವಿ ಮಾದಣ್ಣ (೧೬೫೦)
ನನ್ನಯ್ಯಗಳ ಚರಿತ್ರೆ (ಸಾಂಗತ್ಯ)
—ಪರ್ವತದೇವ
ಸುಜ್ಞಾನಿದೇವ ಕಾವ್ಯ
(ನನ್ನಯ್ಯ ಚರಿತ್ರೆ)—೧೭೦೦
ಅಮುಗಿದೇವಯ್ಯನ ಸಾಂಗತ್ಯ
—ಶಿವಲಿಂಗಾರ್ಯ (೧೬೦೦)
ಉರಿಲಿಂಗ ಪೆದ್ದಯ್ಯನ ಕಥೆ (ಷಟ್ಪದಿ)
—ಬಸವರಾಜ

ಚೋರಬಸವಪುರಾಣ—ಶಂಕರಕವಿ
ಭಕ್ತಿರಸಸೋನೆ (೧೬೫೦)
ನಂದಿಯಾಗಮಲೀಲೆ (ಭಾಮಿನಿ)
ವೀರಸಂಗಯ್ಯ (೧೫೮೯)
ಪ್ರಭುದೇವರ ಪುರಾಣ
—ಎಳಂದೂರ ಹರಿಹರ
ಮಹಾದೇವಿಯಕ್ಕನ ಪುರಾಣ
—ಹರೀಶ್ವರ
ದೇವರದಾಸಿಮಯ್ಯ ಪುರಾಣ (ಭಾಮಿನಿ)
ವಿರೂಪಾಕ್ಷ ದೇಶಿಕ
ದೇವಾಂಗ ದಾಸಿಮಯ್ಯ ಪುರಾಣ
(ಸಾಂಗತ್ಯ)
ಚೆನ್ನಬಸವಪುರಾಣ
—ವಿರೂಪಾಕ್ಷ ಪಂಡಿತ
ಶಂಕರದಾಸಿಮಯ್ಯನ ಪುರಾಣ
(ಭಾಮಿನಿ)
—ಮಲ್ಲಿಕಾರ್ಜುನದೇವ (೧೬೮೭)
ಅಬ್ಬಲೂರ ಚರಿತೆ
ಗೊಲ್ಲಾಳೇಶ್ವರ ಪುರಾಣ
ಸಕಲೇಶ ಮಾದಿರಾಜ ಪುರಾಣ

ರೇಣುಕಾಚಾರ್ಯರು, ಏಕೋರಾಮಾರಾಧ್ಯರು, ಪಂಡಿತಾರಾಧ್ಯರು, ಮರುಳಾರಾಧ್ಯರು, ವಿಶ್ವಾರಾಧ್ಯರು ಎಂಬ ಪಂಚ ಆಚಾರ್ಯರು ವೀರಶೈವರಿಗೆ ಪೂಜ್ಯರಾಗಿರುವರು. ಅವರನ್ನು ಕುರಿತು ಸಾಹಿತ್ಯ ಹುಟ್ಟಿಬಂದ ವಿವರ ಹೀಗೆ:

ಆಚಾರ್ಯಪರ ಸಾಹಿತ್ಯ
↓
ಶುದ್ಧ | ಪುರಾಣ
↓ | ↓

ಶುದ್ಧ:
ರೇವಣಸಿದ್ಧೇಶ್ವರ ರಗಳೆ
—ಹರಿಹರದೇವ
ರೇವಣಸಿದ್ಧೇಶ್ವರ ಕಾವ್ಯ

ಪುರಾಣ:
ಚತುರಾಚಾರ್ಯ ಪುರಾಣ
—ಸಂಪಾದನೆಯ ಪರ್ವತೇಶ
(೧೬೯೮)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೇವಣ ಸಾಂಗತ್ಯ
ರೇಣುಕ ವಿಜಯ
ರೇವಣಸಿದ್ಧ ಚಾರಿತ್ರ
ಮರುಳಸಿದ್ಧ ಸಾಂಗತ್ಯ

ರೇವಣಸಿದ್ಧೇಶ್ವರ ಪುರಾಣ
–ಚತುರ್ಮುಖ ಬೊಮ್ಮರಸ
(೧೫೦೦)
ಏಕೋರಾಮೇಶ್ವರದೇವರ ಪುರಾಣ
–ನಂಜಣಾರ್ಯ
ಮರುಳಸಿದ್ಧಪುರಾಣ-ದೇಪ

ನೂರೊಂದು ವಿರಕ್ತರು
↓
ಶುದ್ಧ
ನೂರೊಂದು ವಿರಕ್ತರ ಕಾವ್ಯ
ಕರಸ್ಥಳನಾಗಯ್ಯನ ಚರಿತೆ

ಪುರಾಣ

ಏಳುನೂರೊಂದು ವಿರಕ್ತರು
↓
ಶುದ್ಧ
↓
ಸಿದ್ಧಲಿಂಗ ಸಾಹಿತ್ಯ-ಹೇರಂಬ

ಪುರಾಣ
↓
ತೋಂಟದ ಸಿದ್ಧೇಶ್ವರ ಪುರಾಣ (ಭಾಮಿನಿ)
–ಶಾಂತೇಶ (೧೫೬೧)
ಸಿದ್ಧೇಶ್ವರ ಮಹಾಪುರಾಣ (ವಾರ್ಧಕ)
–ವಿರಕ್ತ ತೋಂಟದಾರ್ಯ (೧೫೬೦)

ಶರಣ ಕವಿಗಳು
↓
ಶುದ್ಧ
ಹರಿಹರ ಮಹತ್ವ

ಪುರಾಣ
ಪದ್ಮರಾಜ ಪುರಾಣ
ಪಾಲ್ಕುರಿಕೆ ಸೋಮೇಶ್ವರ ಪುರಾಣ
ರಾಘವಾಂಕ ಚಾರಿತ್ರ

ಇತರ ಶರಣರು
↓
ಶುದ್ಧ
ಹಮ್ಮೀರ ಕಾವ್ಯ
ಮಹಲಿಂಗಲೀಲೆ
ಮಹಾಲಿಂಗೇಂದ್ರವಿಜಯ
ಶಿವಲಿಂಗಚಾರಿತ್ರ

ಪುರಾಣ
↓
ತತ್ವಪರ ಪುರಾಣಗಳು
↓
ಶಿವತತ್ವಚಿಂತಾಮಣಿ

ಪ್ರೌಢರಾಯನ ಕಾವ್ಯ
ಗುರುರಾಜ ಚಾರಿತ್ರ
ಕೊಟ್ಟೂರ ಬಸವೇಶ್ವರ ಪುರಾಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವಾಮೃತ ಮಹಾಪುರಾಣ	ಸಂಗಮೇಶ್ವರ ಪುರಾಣ
ಕ್ಷೇತ್ರಜ್ಞ ಸುಮನೋವಾದ	ಶಿವಾಧಿಕ್ಯ ಪುರಾಣ
ಅಷ್ಟಾವರಣ ತಿಲಕ	ಕುಮಾರೇಶ್ವರ ಪುರಾಣ
ಷಟ್ಸ್ಥಲ ತಿಲಕ	ಭೈರವೇಶ್ವರ ಪುರಾಣ

ಆಧುನಿಕ ಪುರಾಣಗಳು

ದ್ಯಾಂಪುರ ಚನ್ನಕವಿಗಳ ಪುರಾಣಗಳು:

೧. ಹೇಮರಡ್ಡಿ ಮಲ್ಲಮ್ಮನ ಪುರಾಣ
೨. ಹಾಲಕೆರೆ ಅನ್ನದಾನಸ್ವಾಮಿಗಳ ಪುರಾಣ
೩. ನಾಲ್ವತವಾಡದ ವೀರೇಶ್ವರ ಪುರಾಣ
೪. ಹುಚ್ಚೇಶ್ವರ ಪುರಾಣ
೫. ಇಳಕಲ್ಲ ಮಹಾಂತ ಸ್ವಾಮಿಗಳ ಪುರಾಣ
೬. ಬಾಲಲೀಲಾ ಮಹಾಂತಶಿವಯೋಗೀಶ್ವರ ಪುರಾಣ
೭. ಹಾನಗಲ್ಲ ಕುಮಾರಸ್ವಾಮಿಗಳ ಪುರಾಣ
೮. ಶಿರಹಟ್ಟಿ ಫಕೀರಸ್ವಾಮಿಗಳ ಪುರಾಣ
೯. ಕಂಬಳಿಹಾಳ ದೊಡ್ಡಬಸವೇಶ್ವರ ಪುರಾಣ

ಸರ್ವದರ್ಶನತೀರ್ಥ, ಪಂಡಿತ ವೈ. ನಾಗೇಶಶಾಸ್ತ್ರಿಗಳ ಪುರಾಣಗಳು:

೧. ಮರಿಯೋಗೀಶ್ವರ ಪುರಾಣ
೨. ಫಲಹಾರೇಶ್ವರ ಪುರಾಣ
೩. ಅರ್ಧನಾರೀಶ್ವರ ಪುರಾಣ
೪. ಸಿದ್ಧಲಿಂಗೇಶ್ವರ ಪುರಾಣ
೫. ಗವಿಸಿದ್ಧೇಶ್ವರ ಪುರಾಣಂ
೬. ಜಯದೇವ ಲೀಲೆ
೭. ಶ್ರೀ ಮೃತ್ಯುಂಜಯ ಲೀಲಾವಿಲಾಸಂ

ಪಂಡಿತ ಹುಕ್ಕೇರಿ ಸದಾಶಿವಶಾಸ್ತ್ರಿಗಳ ಪುರಾಣಗಳು:

೧. ಅಥಣಿ ಶಿವಯೋಗಿಗಳ ಪುರಾಣ
೨. ಬಿದರಿ ಕುಮಾರೇಶ್ವರ ಪುರಾಣ

ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರ ಪುರಾಣಗಳು:

೧. ಶ್ರೀ ಸಿದ್ಧರಾಮೇಶ್ವರ ಪುರಾಣ

ವೀರಶೈವ ಸಂಸ್ಕೃತ ಕಾವ್ಯಗಳು

೧. ರೇಣುಕ ಚಂಪೂ
೨. ರೇಣುಕ ವಿಜಯಂ
೩. ಬಸವೇಶ ವಿಜಯಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ವೀರಭದ್ರಪುರಾಣಂ
೫. ಸಾನಂದ ಚರಿತೆ
೬. ಪಂಡಿತಾರಾಧ್ಯ ಚಾರಿತ್ರ್ಯಂ

ವೀರಶೈವ ತೆಲುಗು ಕೃತಿಗಳು

ಶುದ್ಧ

ಪಂಡಿತಾರಾಧ್ಯ ಚರಿತ್ರೆ-ಶ್ರೀನಾಥ
ಪ್ರಭುಲಿಂಗಲೀಲೆ (ದ್ವಿಪದಿ)
—ಪಡುಪರ್ತಿ ಸೋಮ
ಪ್ರಭುಲಿಂಗಲೀಲೆ (ಚಂಪೂ)
—ಪಡುಪರ್ತಿ ಬಸವಪ್ಪ

ಪುರಾಣ

ಬಸವ ಪುರಾಣಮು
—ಪಾಲ್ಕುರಿಕೆ ಸೋಮನಾಥ
ಪಂಡಿತಾರಾಧ್ಯ ಚರಿತೆ
ಬಸವ ಪುರಾಣಮು
—ಮಹಾದೇವ ಕವಿ
ಚೆನ್ನಬಸವಪುರಾಣಮು
—ಅತ್ತಲೂರಿ ಪಾಪಕವಿ
ದೇವಾಂಗ ಪುರಾಣಮು
—ಭದ್ರಕವಿ ಲಿಂಗಕವಿ
ಬಸವ ಪುರಾಣ (ಚಂಪೂ)
—ಪಡುಪರ್ತಿ ಸೋಮ
ಮರಿಬಸವಪುರಾಣಮು—ಸಿದ್ಧಕವಿ

ತಮಿಳು ಕೃತಿಗಳು

ಶುದ್ಧ

ಪ್ರಭುಲಿಂಗಲೀಲೆ
—ಶಿವಪ್ರಕಾಶ ಸ್ವಾಮಿ

ಪುರಾಣ

ಸೀಕಾಳತ್ತಿ ಪುರಾಣಂ
ದಕ್ಷಯಾಗ ಪುರಾಣಂ

ಮರಾಠಿ ಕೃತಿಗಳು

ಶುದ್ಧ

ಪ್ರಭುಲಿಂಗಲೀಲೆ

ಪುರಾಣ

ಹಿಂದೀ ಕೃತಿಗಳು

ಶುದ್ಧ

ಪುರಾಣ

ಬಸವ ಪುರಾಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂಗ್ಲೀಷ್ ಕೃತಿಗಳು

೧) ಬಸವ ಪುರಾಣ—(The Journal of the Bombay, Branch Royal Asiatic Society 865–66 Vol. VIII)

೨) ಚೆನ್ನ ಬಸವ ಪುರಾಣ— —do—

by Rev. G. Wurth.

ಶಿವಲೀಲೆ, ಶಿವಶರಣರ ಲೀಲೆ, ತತ್ವ ನಿರೂಪಣೆ ಇವು ಮೇಲೆ ನಿರ್ದೇಶಿಸಿದ ಕೃತಿಗಳ ವಸ್ತುಸಾಮಗ್ರಿ. ಮೊದಲಿನವೆರಡನ್ನು ಪ್ರತ್ಯೇಕವಾಗಿಟ್ಟುಕೊಂಡು ಶುದ್ಧಕಾವ್ಯ ನಿರ್ಮಿತಿಯಾಗಿದ್ದರೆ ಎರಡು ಅಥವಾ ಮೂರರ ಸಮ್ಮಿಶ್ರಣದಿಂದ ಪುರಾಣ ಸಾಹಿತ್ಯ ಸೃಷ್ಟಿಯಾಗಿದೆ.

ಮೇಲೆ ನಿರ್ದೇಶಿಸಿದ ವೀರಶೈವ ಪುರಾಣಗಳನ್ನು ಪೃಥಕ್ಕರಿಸಿದರೆ ಆ ಪುರಾಣಗಳಲ್ಲಿ ಬರುವ ವಿಷಯರಾಶಿಯನ್ನು ಹೀಗೆ ವಿವರಿಸಬಹುದು:

ವೀರಶೈವ ಪುರಾಣಗಳ ವಿಷಯ

i) ಶಿವನ ಪಂಚವಿಂಶತಿ ಲೀಲೆಗಳ ಸುದೀರ್ಘ ವಿವರಣೆ.

ii) ಶಿವಭಕ್ತರ ಚರಿತ್ರೆ.

೧) ಪ್ರಮಥಗಣ—೪೬೫	೫) ಷೋಡಶರು—೧೬
೨) ರುದ್ರಗಣ—೧೭೧	೬) ತೇರಸರು—೧೩
೩) ಯೋಗಾಚಾರ್ಯರು—೨೮	೭) ದಶಗಣರು—೧೦
೪) ತ್ರಿಷಷ್ಟಿ ಪುರಾತನರು—೬	೮) ಅಮರ ಗಣರು—೨೩೪
	=೧೦೦೦

ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆಯ ಸೋಮ, ಹರಿಹರಾದಿಗಳು ತಮಗೆ ಪ್ರಾಚೀನರಾದ ವೀರಶೈವರನ್ನು ಮೇಲಣ ಎಂಟು ವಿಧದಲ್ಲಿ ವರ್ಗೀಕರಿಸಿದರು. (ಇಲ್ಲಿ ಪ್ರಮಥಗಣ, ರುದ್ರಗಣ, ಶಿವಲೋಕ ಸಂಬಂಧಿಗಳು, ಯೋಗಾಚಾರ್ಯರಲ್ಲಿ ಲಕುಲೀಶ್ವರ ಮುಂತಾದ ಲೌಕಿಕ ಹೆಸರುಗಳು ಕಂಡುಬರುವುದರಿಂದ ವೀರಶೈವದ ಇತಿಹಾಸವನ್ನು ಯೋಗಾಚಾರ್ಯರಿಂದ ಪ್ರಾರಂಭ ಮಾಡಬಹುದು. ೮ನೆಯ ವರ್ಗದವರಾದ ಅಮರ ಗಣಂಗಳ ಸಂಖ್ಯೆ ೭೭೦ಕ್ಕೆ ಏರಿದೆ) ಕಲ್ಯಾಣದ ಪತನ ವಿಜಯನಗರದ ಜನನದ ಮಧ್ಯದ ಸುಮಾರು ೬೦೦ ಜನ ವೀರಶೈವ ಶರಣರನ್ನು ಗುರುತಿಸಿ "ನೂತನರು" ಎಂಬ ಹೆಸರಿನಿಂದ ೯ನೆಯ ವರ್ಗ ಸ್ಥಾಪಿಸಿದವನು ಲಕ್ಕಣದಂಡೇಶ. ಮುಂದೆ ೧೦ನೆಯದಾಗಿ ನೂರೊಂದು ವಿರಕ್ತರು, ೧೧ನೆಯದಾಗಿ ೭೦೧ ವಿರಕ್ತರು ವರ್ಗೀಕರಿಸಲ್ಪಟ್ಟವರಾಗಿದ್ದಾರೆ. ಈ ೭೦೧ ವಿರಕ್ತರ ತರುವಾಯದ ಶರಣರ ಚರಿತೆ ಗುರುರಾಜಚಾರಿತ್ರ ಮೊದಲಾದ ಕಾವ್ಯಗಳಲ್ಲಿ ಬರುತ್ತಿದ್ದರೂ ೧೨ನೆಯದಾಗಿ ಯಾರೂ ವರ್ಗೀಕರಿಸಿಲ್ಲ. ವೀರಶೈವ ಪುರಾಣಗಳಲ್ಲಿ ಈ ೧೨ ವರ್ಗಗಳಿಗೆ ಸಂಬಂಧಿಸಿದ ವ್ಯಕ್ತಿಗಳ ವಿಷಯ ಕಂಡುಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ವೀರಶೈವ ಮತತತ್ವನಿರೂಪಣೆ:

ಚೆನ್ನಬಸವಪ್ರರಾಣ, ವೀರಶೈವಾಮೃತ ಮಹಾಪುರಾಣ, ಶಿವತತ್ವಚಿಂತಾಮಣಿ ಮೊದಲಾದವುಗಳಲ್ಲಿ ನಿರೂಪಿತವಾದ ಷಟ್‌ಸ್ಥಲ, ನೂರೊಂದುಸ್ಥಲ, ಅಷ್ಟಾವರಣ, ಕರಣ ಹಸಿಗೆ, ಮಿಶ್ರಾರ್ಪಣ ಮೊದಲಾದ ವಿಷಯುಗಳನ್ನು ಅವಲೋಕಿಸಬಹುದು.

೪. ವಾದ ಪ್ರಕರಣ:

ಕೆಲವು ಪುರಾಣಗಳಂತೂ ಅನ್ಯ ಮತವಾದಿಯ ಗರ್ವಭಂಗಕ್ಕಾಗಿಯೇ ಹುಟ್ಟಿ ಕೊಂಡಿವೆ.

ವೀರಶೈವ	ವಾದಿ	ಆಸ್ಥಾನ	ಕೃತಿಗಳು
ರೇವಣಸಿದ್ಧ	ವೈಷ್ಣವಚೋಳ	—	ರೇವಣಸಿದ್ಧೇಶ್ವರ ಪುರಾಣ
ಏಕೋರಾಮಿತಂದೆ	ವ್ಯಾಸ	ಮುದ್ರಾಪುರದ ವೀರಭಾಸ್ಕರನೃಪತಿ	ಕೆಲವು ವೀರಶೈವ ಪುರಾಣಗಳು
ಬಸವ	ಮೀಮಾಂಸಕಾಚಾರ್ಯ	ಕಲಚೂರಿ	ಶಿವತತ್ವಚಿಂತಾಮಣಿ, ಮತ್ತು ಸಿಂಗಿರಾಜ ಪುರಾಣ
ಪಂಡಿತಾರಾಧ್ಯ	ಬುದ್ಧಗುರು	ವೆಲನಾಡಚೋಳ	ಪಂಡಿತಾರಾಧ್ಯ ಚರಿತೆ
ಪಾಲ್ಕುರಿಕೆ ಸೋಮ	೧) ಚಕ್ರಪಾಣಿ ರಂಗನಾಥ ೨) ಮೊಸರುಕುರಿಕೆಶಾಸ್ತ್ರಿ ೩) ಅಜ್ಯಕುರಿಕೆಶಾಸ್ತ್ರಿ	ಕಾಕತೀಯರು	ಗುರುರಾಜ ಚಾರಿತ್ರ
ಕೆರೆಯ ಪದ್ಮರಸ	ತ್ರಿಭುವನ ತಾತ	ಹೊಯ್ಸಳ	ಪದ್ಮರಾಜ ಪುರಾಣ
ರಾಘವಾಂಕ	ಕುಮಾರವ್ಯಾಸ	—	ಹರಿಹರ ಮಹತ್ವ?
ಜಕ್ಕಣಾಚಾರ್ಯ	ಮುಕುಂದ ಪೆದ್ದಿ	ಪ್ರೌಢದೇವರಾಯ	ತರುವಾಯದ ವೀರಶೈವ ಪುರಾಣಗಳು

೫. ರಾಜಕೀಯ ಅಂಶಗಳು:

ಚೋಳ, ಕಲ್ಯಾಣ ಚಾಲುಕ್ಯ, ಕಲಚೂರ್ಯ, ಕಾಕತೀಯ, ಹೊಯ್ಸಳ, ಕಪಿಲ, ವಿಜಯನಗರ, ಮೈಸೂರು, ಮಹಮದೀಯ, ಕೆಳದಿ ಅರಸುಮನೆತನಗಳಲ್ಲದೆ ಪಾಳೆಯ ಗಾರರು ಉಲ್ಲಿಖಿತರಾಗಿದ್ದಾರೆ.

ಚೋಳ:

೬೩ರ ಅವಧಿಯಲ್ಲಿ ಕರಿಕಾಲ ಚೋಳ, ಮುಕ್ಕಣ್ಣ ಚೋಳ, ಸತ್ಯೇಂದ್ರ ಚೋಳ, ಧರ್ಮಚೋಳ, ಭೀಮಚೋಳ, ಉತ್ತುಂಗ ಚೋಳ, ಕುಲೋತ್ತುಂಗ ಚೋಳ, ಅಯ್ವಾಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚೋಳ, ರಾಜೇಂದ್ರ ಚೋಳ, ಮೊನೆಧರ ಚೋಳ, ಕೈವಲ್ಯ ಚೋಳ, ಮನುಜೇಂದ್ರ ಚೋಳ, ಮನು ಚೋಳ, ವೀರ ಚೋಳ, ಪಗಲ್ಚೋಳ ಎಂಬ ಚೋಳರಾಜರ ಚರಿತ್ರೆ ಬರುತ್ತದೆ. ಭಾವಚಿಂತಾರತ್ನ, ರಾಜಶೇಖರವಿಳಾಸ, ಚೋಳರಾಜ ಸಾಂಗತ್ಯ ಮೊದಲಾದ ಪುರಾಣಗಳು ಈ ಅರಸರನ್ನೇ ಕುರಿತು ಹುಟ್ಟಿವೆ. ಹರಿಹರನ ರಗಳೆ, ರೇವಣಸಿದ್ಧೇಶ್ವರ ಪುರಾಣ, ಸೌಂದರ ಪುರಾಣ, ಸೌಂದರವಿಳಾಸ, ದೀಪದ ಕಲಿಯರ ಕಾವ್ಯ, ಚೇರಮ ಕಾವ್ಯ, ತ್ರಿಭುವನ ತಿಲಕ, ತ್ರಿಷಷ್ಟಿ ಪುರಾತನರ ಚರಿತ್ರೆಗಳಲ್ಲಿ ಸಾಂದರ್ಭಿಕವಾಗಿ ಚೋಳ ರಾಜರ ಚರಿತ್ರೆ ಸೇರಿಕೊಂಡಿವೆ. ಇದಲ್ಲದೆ ಚೇರ, ಪಾಂಡ್ಯ–ಮೊದಲಾದ ಅರಸರ ಉಲ್ಲೇಖ ಆಗಾಗ ಬರುತ್ತದೆ.

ಚಾಲುಕ್ಯರು:

೧. ರೇವಣಸಿದ್ಧೇಶ್ವರ ಕಲ್ಯಾಣಕ್ಷಿತಿಪ ಚಾಳುಕ್ಯನಿಗೆ ಸುರಗಿಯನ್ನು ತೋರಿದನಂತೆ.
೨. ಕೊಂಡಗುಳಿ ಕೇಶಿರಾಜ ಚಾಲುಕ್ಯ ವಿಕ್ರಮಾದಿತ್ಯನಲ್ಲಿ ಮಂತ್ರಿಯಾಗಿದ್ದನು.
೩. ಕಲ್ಯಾಣ ಚಾಲುಕ್ಯರಾಜ ತ್ರಿಭುವನಮಲ್ಲ ಸೋಮೇಶ್ವರ (೧೧೮೨–೧೧೮೯) ಏಕಾಂತರಾಮನನ್ನು ಬರಮಾಡಿಕೊಂಡು ಸತ್ಕರಿಸಿ ಅಬ್ಬಲೂರನ್ನು ದತ್ತಿಯಾಗಿ ಕೊಟ್ಟನು.
೪. ದೇವರದಾಸಿಮಯ್ಯನು ಪೊಟ್ಟಲಕೆರೆಯ ಚಾಳುಕ್ಯ ಜಯಸಿಂಹನ ಆಸ್ಥಾನದಲ್ಲಿ ಪರ ವಾದಿಗಳನ್ನು ಗೆದ್ದು ರಾಣಿಯಾದ ಸುಗ್ಗಲೆಗೆ ಲಿಂಗದೀಕ್ಷೆ ಕೊಟ್ಟನು.

ಕಲಚೂರ್ಯರು:

ವೀರಶೈವ ಆಂದೋಲನ ನಡೆದುದು ಕಲಚೂರ್ಯರ ಕಾಲದಲ್ಲಿ. ಬಿಜ್ಜಳನ ಉಲ್ಲೇಖ ಸರ್ವಸಾಮಾನ್ಯವಾಗಿದೆ. ಬಸವ, ಚೆನ್ನಬಸವ ಮೊದಲಾದ ಅನೇಕ ವಚನಕಾರರು ಆಗಿ ಹೋಗಿದ್ದಾರೆ. 'ಸಿದ್ಧರಾಮ ಚರಿತೆ'ಯಲ್ಲಿಯ ಕರ್ಣದೇವ ಪ್ರಸಂಗ ಐತಿಹಾಸಿಕ ದೃಷ್ಟಿ ಯಿಂದ ಗಮನಾರ್ಹವಾದುದು. ಸೊಡ್ಡಳ ಬಾಚರಸ, ಗುಪ್ತಮಂಚಣ್ಣ, ತಂಗಟೂರು ಮಾರಯ್ಯ, ರಾಯಸದ ಮಂಚಣ್ಣ ಇವರೆಲ್ಲ ಬಿಜ್ಜಳನಲ್ಲಿ ಅಧಿಕಾರಿಗಳಾಗಿದ್ದರೆಂದು ತಿಳಿದು ಬರುತ್ತದೆ.

ಕಾಕತೀಯರು:

ಗಣಪತಿ ನೃಪಾಲನ ಉಲ್ಲೇಖ ವೀರಗುಂಡ ಬ್ರಹ್ಮಯ್ಯರೊಂದಿಗೆ ಬರುತ್ತದೆ. ಕಾಕತೀಯ ಪ್ರತಾಪರುದ್ರನ ಆಸ್ಥಾನದಲ್ಲಿ ರಾಘವಾಂಕನು ಪರವಾದಿಗಳನ್ನು ಗೆದ್ದುದು, ಈ ರಾಜಮನೆತನದ ವಿಷಯ ತೆಲುಗು ವೀರಶೈವ ಪುರಾಣಗಳಲ್ಲಿ ಬಂದಿರಲೂಬಹುದು.

ಕದಂಬರು:

ಕದಂಬ ಕಾಮರಸನು (೧೧೮೦–೧೨೦೩) ಏಕಾಂತರಾಮನನ್ನು ಹಾನಗಲ್ಲಿಗೆ ಕರೆದು ಕೊಂಡು ಹೋಗಿ ಸತ್ಕರಿಸಿ ಮಲ್ಲವಳ್ಳಿ ಗ್ರಾಮವನ್ನು ದತ್ತಿಯಾಗಿ ಬಿಟ್ಟನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಯ್ಸಳ:

ಹರಿಹರ ಕರಣಿಕ, ಕೆರೆಯ ಪದ್ಮರಸ ಮಂತ್ರಿ, ರಾಘವಾಂಕ ಹೊಯ್ಸಳರ ಓಲಗದಲ್ಲಿ ನಡೆದ ತ್ರಿಭುವನತಾತನ ವಾದಪ್ರಸಂಗದಲ್ಲಿ ಪಾಲುಗೊಂಡಿದ್ದರು. ಇವನ ಸಮಾಧಿ ಬೇಲೂರಿನಲ್ಲಿ ಆಯಿತು. ಪದ್ಮರಾಜಪುರಾಣ ಮೊದಲಾದವುಗಳಲ್ಲಿ ಈ ಮನೆತನದ ಉಲ್ಲೇಖ ಬರುತ್ತದೆ.

ಕಂಪಿಲ:

ರಾಘವಾಂಕನಿಗೆ ಪಾದಪೆಂಡೆ ನೀಡಿದವನು ಕಂಪಿಲದೇವರಾಯನೇ ಆಗಿರಬೇಕು. ಚೆನ್ನಬಸವಪುರಾಣದಲ್ಲಿ ಈ ಮನೆತನದ ಉಲ್ಲೇಖ ಬರುತ್ತದೆ. ಕುಮಾರ ರಾಮನನ್ನು ಕುರಿತು ಹುಟ್ಟಿಕೊಂಡ ಎಲ್ಲ ಕಾವ್ಯಗಳಲ್ಲಿಯೂ ಈ ಉಲ್ಲೇಖ ಬರುತ್ತದೆ.

ವಿಜಯನಗರ:

(ಸಂಗಮ, ಸಾಳ್ವ, ತುಳು, ಆರವೀಡು)

ಪ್ರೌಢರಾಯನ ಕಾಲದ ನೂರೊಂದು ವಿರಕ್ತರು, ವಿರೂಪಾಕ್ಷನ ಕಾಲದ ಏಳು ನೂರೊಂದು ವಿರಕ್ತರು.

ಸಾಳೆಯಗಾರರು:

೧. ಗುಮ್ಮಳಾಪುರವರಾಧೀಶ ಚಿಕ್ಕವೀರಣಾರ್ಯನ ವಂಶವಿವರಣೆ ಬೊಮ್ಮರಸನ ಸೌಂದರ ಪುರಾಣದಲ್ಲಿ ಬರುತ್ತದೆ.
೨. ಉಮ್ಮತ್ತೂರಿನ ವೀರನಂಜೇಂದ್ರನ ಉಲ್ಲೇಖ ನೀಲಕಂಠಾಚಾರ್ಯನ 'ಆರಾಧ್ಯ ಚರಿತ್ರೆ'ಯಲ್ಲಿ ಬರುತ್ತದೆ.
೩. ಚೋಳರ ಭೀಮ ಏಳು ಬೀಡಿನ ಗೋವನಾದ ವಿರೂಪರಾಜನು ತನ್ನ ತ್ರಿಭುವನ ತಿಲಕ ಚೇರಮ ಕಾವ್ಯದಲ್ಲಿ ತನ್ನ ವಂಶವನ್ನು ಹೇಳಿಕೊಂಡಿದ್ದಾನೆ.
೪. ಈ ವಿರೂಪರಾಜನ ಮಗ ವೀರಭದ್ರರಾಜನು ತನ್ನ ವೀರಭದ್ರ ವಿಜಯದಲ್ಲಿ ತನ್ನ ಮನೆತನವನ್ನು ಉಲ್ಲೇಖಿಸಿದ್ದಾನೆ.
೫. ಮೈಸೂರಿನ ಇಮ್ಮಡಿ ಕೃಷ್ಣರಾಜನ ಸೇನಾಪತಿ ಕಳಲೆಯ ನಂಜರಾಜನ ಆಸ್ಥಾನದಲ್ಲಿ ನೂರೊಂದನು ಸೌಂದರ ಕಾವ್ಯದಲ್ಲಿ ಕಳಲೆ ನಂಜರಾಜನ ವಿಷಯವನ್ನು ಹೇಳಿದ್ದಾನೆ.

ಉದ್ಭಟ, ಮಳೆಯರಾಜ, ಓಹಿಲ ಮೊದಲಾದ ರಾಜರ ಚರಿತ್ರೆ ವೀರಶೈವದಲ್ಲಿ ಸುಪ್ರಸಿದ್ಧ.

ಕೆಲವು ವೀರಶೈವ ಪುರಾಣಗಳ ವಿಷಯ ವಿಭಜನೆ

೧. ಬಸವಪುರಾಣ

ಕಥಾನಾಯಕನ ಚರಿತ್ರೆ, ಕಾಂಡ ೧, ೨:

ಪೀಠಿಕೆ, ಶಿವನ ಒಡ್ಡೋಲಗ, ನಾರದದರ್ಶನ, ನಂದೀಶ್ವರನು ಶಿಲಾದ ಮುನಿಗು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಯಿಸುವುದು, ಬಸವೇಶ್ವರನು ಮರ್ತ್ಯಕ್ಕೆ ಬರುವುದು, ಬಾಗೇವಾಡಿಯಲ್ಲಿ ಬಸವೇಶ್ವರನ ಜನನ, ಸಂಗಮೇಶ್ವರ ದರ್ಶನ, ಬಾಲ್ಯ, ಉಪನಯನನಿರಾಕರಣೆ, ಕಲ್ಯಾಣಗಮನ-ವಿವಾಹ, ಭಕ್ತಿಪ್ರತಿಜ್ಞೆ, ಚೆನ್ನಬಸವಣ್ಣನವರು-ಪ್ರಭುದೇವರು ಕಲ್ಯಾಣಕ್ಕೆ ಆಗಮಿಸು ವುದು, ಬಂದಿಕಾರ-ಭಕ್ತ.

ಶಿವಭಕ್ತರ ಕಥೆಗಳು, ಕಾಂಡ ೩:

ಮುಗ್ಧ ಭಕ್ತರ ಕಥೆಗಳು-ಸಕಳೇಶ ಮಾದರಸರು.

ಕಾಂಡ ೪-೮:

ಮಡಿವಾಳ ಮಾಚಿದೇವನ ಕಥೆ, ವೀರಭಕ್ತರ ಕಥೆಗಳು, ಆದಿಶರಣರ ಕಥೆಗಳು, ಅರವತ್ತುಮೂವರ ಕಥೆಗಳು, ಬಸವಪೂರ್ವದ ಶರಣರ ಕಥೆಗಳು.

ಕಥಾನಾಯಕನ ಚರಿತ್ರೆ

ಕಾಂಡ ೮, ಸಂಧಿ ೫೮-ಬಸವೇಶ್ವರನ ವಿಷದ ಪವಾಡ.

ಕಾಂಡ ೮, ಸಂಧಿ ೫೯-ಜಗದೇವಯ್ಯಗಳ ಕಥೆ.

ಕಾಂಡ ೮, ಸಂಧಿ ೬೦-ಬಸವಣ್ಣನವರ ಐಕ್ಯ.

೨. ಶಿವತತ್ವ ಚಿಂತಾಮಣಿ:

ಸಂಧಿ ೧-೨೫, ಶಿವನ ಪಂಚವಿಂಶತಿ ಲೀಲೆಗಳು

ಚಾರಿತ್ರಿಕ ಅಂಶ:

ಸಂ. ೨೬ ಭುವನ ಕೋಶ
ಸಂ. ೨೭ ಶಿವಲೋಕ ವಿಸ್ತಾರ
ಸಂ. ೨೮ ನಾರದ ದರ್ಶನ
ಸಂ. ೨೯ ಶಿವನಂದಿಕೇಶ್ವರ ಸಂವಾದ
ಸಂ. ೩೦ ಬಸವ ಜನನ
ಸಂ. ೩೧ ಬಸವನ ಮದುವೆ; ಪ್ರಧಾನ ಪಟ್ಟ
ಸಂ. ೩೨ ಬಸವೇಶ್ವರನ ಪವಾಡ
ಸಂ. ೩೩ ಮೀಮಾಂಸಕನ ಪವಾಡ
ಸಂ. ೩೪ ಪ್ರಥಮ ಗಣ, ರುದ್ರ ಗಣ, ಯೋಗಾಚಾರ್ಯ, ತೇರಸ, ದಶಗಣ ಚರಿತ್ರೆ.
ಸಂ. ೩೫ ಅರುವತ್ತುಮೂರು ಪುರಾತನ ಚರಿತ್ರೆ
ಸಂ. ೩೬ ಷೋಡಶರ ಕಥೆ.
ಸಂ. ೩೭ ಅಸಂಖ್ಯಾತರ ಕಥೆ
ಸಂ. ೩೮ ನೂತನರ (ಕಲ್ಯಾಣಪತನ-ವಿಜಯನಗರ ರಾಜ್ಯೋದಯದ ಮಧ್ಯದ ಶರಣರ) ಕಥೆ.

ತತ್ವವಿವರಣೆ:

ಸಂ. ೩೯ ಧರ್ಮಾಧರ್ಮ, ಪಿಂಡೋತ್ಪತ್ತಿ, ಸಂಸಾರ ಹೇಯ
ಸಂ. ೪೦ ಪಂಚಾಕ್ಷರಿ ಮಹಿಮೆ
ಸಂ. ೪೧ ವಿಭೂತಿಯ ಮಹಿಮೆ
ಸಂ. ೪೨ ರುದ್ರಾಕ್ಷಿಯ ಮಹತ್ವ
ಸಂ. ೪೩ ದೀಕ್ಷಾವಿಧಾನ
ಸಂ. ೪೪ ಗುರು ಶುಶ್ರೂಷಾಕ್ರಮ
ಸಂ. ೪೫ ಲಿಂಗಾರ್ಚನೆಯ ನಿಯಮ
ಸಂ. ೪೬ ಪಾದೋದಕ ಮಹತ್ವ
ಸಂ. ೪೭ ಪ್ರಸಾದ ಮಹಿಮೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂ. ೪೮ ಷಟ್‌ಸ್ಥಲ ಬ್ರಹ್ಮನಿರ್ಣಯ
ಸಂ. ೫೦ ಅಂಗಸ್ಥಲ
ಸಂ. ೫೨ ಲಿಂಗಾಂಗ ಸಂಯೋಗ
ಸಂ. ೫೩ ಸರ್ವಾಂಗಲಿಂಗ ಸ್ಥಲ
ಸಂ. ೪೯ ಲಿಂಗಸ್ಥಲ
ಸಂ. ೫೧ ಲಿಂಗಾಂಗ ಸಂಯೋಗ ಸ್ಥಲ
ಸಂ. ೫೪ ಕ್ರಿಯಾ ವಿಶ್ರಾಂತಿ

೩. ವೀರಶೈವಾಮೃತ ಮಹಾಪುರಾಣ

ತತ್ವವಿವರಣೆ: ಕಾಂಡ ೧

ಸಂಧಿ ೧. ಪೀಠಿಕೆ, ೨. ವಸ್ತುನಿರ್ದೇಶ, ೩. ಪಂಚಾವರಣಾಂಗ ಸದ್ವೃತ್ತ ಲಕ್ಷಣ. ೪. ಅನಾದಿ ಜಂಗಮದ ಮಕುಟದಲ್ಲಿ ಶೂನ್ಯ ಲಿಂಗೋತ್ಪತ್ತಿ ಕ್ರಮ, ೫. ಚಿದಂಬರೋದ್ಧರಣೆ, ತ್ರ್ಯಕ್ಷರ, ಪಂಚಾಕ್ಷರ, ಷಡಕ್ಷರ ವಿವರಣ, ೬. ಭಾವಮೂರ್ತಿ ಲಕ್ಷಣ, ೭. ಮಾಹೇಶ್ವರ ಭೇದ ಸೃಷ್ಟಿ ವಿಷಯ ಕಥನ, ೮. ಲಿಂಗಾಂಗ ಸ್ವರೂಪ ವಿವರಣಗಳು, ೯. ನಿಷ್ಕಳ-ಸಕಲ, ನಿಷ್ಕಳ-ಸಕಳ ಶಕ್ತಿಸಾದಾಖ್ಯ ಲಕ್ಷಣ.

ಶಿವಲೀಲೆ: ಕಾಂಡ ೨, ೩, ೪, ೫, ೬

ಶಿವನ ಪಂಚವಿಂಶತಿ ಲೀಲೆಗಳು

ತತ್ವವಿವರಣೆ: ಕಾಂಡ ೭

ಸಂಧಿ ೧. ವಿರಾಟರೂಪ ಲಕ್ಷಣ, ೨. ಸಪ್ತಶೈವ, ತ್ರಿಶೈವಗಳ ವಿವರಣೆ, ೨. ವೀರಶೈವ ಮತ್ತು ಕರಣಹಸಿಗೆ, ೪. ಗುರು ಶಿಷ್ಯ ಲಕ್ಷಣ, ದೀಕ್ಷಾಸುದಿನ, ೫. ದೀಕ್ಷಾಮಂಟಪ ಕ್ರಮ. ೬. ಪಂಚಕಲಶ ಪ್ರತಿಷ್ಠಾಪನಾ, ೭. ರುದ್ರಾಕ್ಷಿ ಜಪ ಲಕ್ಷಣ, ೮. ಯೋಗಾಸನ-ಪಂಚಕಲಶ ವಿಧಾನ, ೯. ಚಕ್ರಬೀಜ, ರುದ್ರಾಭಿಷೇಕ, ೧೦. ಅಷ್ಟವಿಧ ಪೂಜೆ, ೧೧. ಷೋಡಶೋಪಚಾರ, ೧೨. ಶ್ರೀಗುರು ಶಿಷ್ಯನನ್ನು ಮಂತ್ರಮೂರ್ತಿ ಮಾಡುವಿಕೆ, ೧೩. ದೀಕ್ಷಾ ವಿಧಾನ, ೧೪. ಗುರುಸೇವಾವಿಧಾನ, ೧೫. ವೀರಶೈವಧರ್ಮ ಸದಾಚಾರ ಮತ್ತು ಶೀಲಕ್ರಮ, ೧೭. ಅರುವತ್ತುನಾಲ್ಕು ಶೀಲವಿವರಣೆ, ೧೭. ಕ್ರಿಯಾಸಮಾಧಿ ವಿಷಯ.

ಶರಣಚರಿತ್ರೆ: ಕಾಂಡ ೮

ಸಂಧಿ ೧. ಬಸವಾವತರಣ, ೨. ಪೆಟ್ಟಿಗೆ ಪವಾಡ, ಬಸವಸಮಕಾಲೀನ ಶರಣರ ಕಥೆ, ೩. ಪಾಲ್ಕುರಿಕೆ ಸೋಮನ ಬಸವಪುರಾಣ ಕಥಾಸಂಗ್ರಹ, ೪. ಬಸವೇಶ್ವರನ ಇತರ ಪವಾಡಗಳು, ೫, ೬, ೭. ಪಂಡಿತಾರಾಧ್ಯಚರಿತ್ರೆ ಸಂಗ್ರಹ, ೮. ನೂತನರ ಚರಿತ್ರೆ (ಶಿವತತ್ವ ಚಿಂತಾಮಣಿ ಕಥಾಸಂಗ್ರಹ ಮತ್ತು ತನಗೆ ತಿಳಿದ ಮಿಕ್ಕ ಶರಣರ ಕಥಾ ಸಂಗ್ರಹ).

ತತ್ವವಿವರಣೆ: ಕಾಂಡ ೮

ಸಂಧಿ ೯ ಷಟ್‌ಸ್ಥಲ, ೧೦ ಅಂಗಸ್ಥಲ.

ಒಟ್ಟಾಗಿ ಈ ಕೃತಿಯು ತತ್ವ-ಚರಿತ್ರೆ-ಲೀಲೆಗಳ ತ್ರಿವೇಣಿಯಾಗಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಚೆನ್ನಬಸವಪುರಾಣ:

ಕಥಾನಾಯಕನ ಚರಿತ್ರೆ: ಕಾಂಡ ೧

ಪೀಠಿಕೆ, ಶಿವನ ಒಡ್ಡೋಲಗ, ನಾರದದರ್ಶನ, ಚನ್ನಬಸವ ಉತ್ಪತ್ತಿ, ಪುಷ್ಪಕೋತ್ಸವ, ಇಷ್ಟಲಿಂಗಧಾರಣೆ, ಮಂಚಣ್ಣನ ಚಹಡಿ, ರಾಜನೀತಿ, ಚಂದ್ರೋದಯ, ರಾತ್ರಿ ವಿಹಾರ, ಕಲ್ಯಾಣ ದೇಶವರ್ಣನೆ.

ಶಿವಲೀಲೆಗಳು: ಕಾಂಡ ೨, ೩, ೪

ಶಿವನ ಪಂಚವಿಂಶತಿ ಲೀಲೆಗಳು.

ವೀರಶೈವರ ಚರಿತ್ರೆ: ಕಾಂಡ ೫

ಸೋಮಸೂರ್ಯಾನ್ವಯ ವರ್ಣನೆ, ಶೈವರ (೬೩ ಪುರಾತನರು, ಷೋಡಶರು ಮತ್ತು ತೇರಸರು, ದಶಗಣರು) ಕಥೆ, ಸಾನಂದ ಗಣೇಶ್ವರನ ಕಥೆ, ವೀರಶೈವ ಶರಣರ (೭೭೦ ಅಮರಗಣಂಗಳ) ಕಥೆ.

ತತ್ವನಿರೂಪಣೆ:

ಪಿಂಡೋತ್ಪತ್ತಿ, ಕರಣಹಸಿಗೆ, ದೀಕ್ಷಾವಿಧಾನ, ಲಿಂಗಾರ್ಚನಾವಿಧಾನ, ಷಟ್‌ಸ್ಥಲ ನಿರ್ಣಯ ಸಂಧಿ.

ವೀರಶೈವರ ಚರಿತ್ರೆ:

ಕಾಲಜ್ಞಾನ ಸಂಧಿ–ಕಲ್ಯಾಣ ಕ್ರಾಂತಿ, ಹೊಯ್ಸಳ ರಾಜ್ಯ, ಕಂಪಿಲ ರಾಜ್ಯ, ಸಂಗಮ, ಸಾಳ್ವ, ತುಳುವಂಶಗಳೊಂದಿಗೆ ಶರಣರ ಚರಿತ್ರೆ.

೫. ರಾಘವಾಂಕ ಚಾರಿತ್ರ:

ಸಂಧಿ ೧. ಪೀಠಿಕೆ, ೨. ರಾಘವಾಂಕನ ಜನನ, ಹರಿಹರನಿಂದ ವಿದ್ಯಾಭ್ಯಾಸ, ೩. ದೇವರಾಜನ ಆಸ್ಥಾನದಲ್ಲಿ ಹರಿಶ್ಚಂದ್ರಕಾವ್ಯವಾಚನ, ೪. ಮುರಿದ ಹಲ್ಲು ಮರಳಿ ಪಡೆದದ್ದು, ೫. ಶಿವಭಕ್ತರ ಸತ್‌ಕಥೆಗಳು ಮತ್ತು ಗುರು ಮಹಿಮೆ, ೬. ಲಿಂಗಮಹಾತ್ಮೆ, ೭. ಕಮಳಾಯಿಯ ಕಥೆ, ೮, ೯, ೧೦, ೧೧, ೧೨. ಜಂಗಮ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ, ಪಾದತೀರ್ಥ, ಪ್ರಸಾದ ಮಹಾತ್ಮೆ, ೧೩. ಸೋಮನಾಥ ಚರಿತ್ರ ಸಂಗ್ರಹ, ೧೪. ಶರಭಾದಿ ಕಾವ್ಯಗಳ ಚರಿತ್ರ, ೧೫. ಭೀಮಕವಿ ವಿದ್ಯಾದಾನ, ಸಿದ್ಧರಾಮಚರಿತ್ರ ಸಂಗ್ರಹ, ೧೬. ರಾಘವಾಂಕ ಪದ್ಮರಸರ ಸಂದರ್ಶನ, ೧೭. ಓರಂಗಲ್ಲ ಪ್ರಯಾಣ, ೧೮. ಪ್ರತಾಪರುದ್ರನ ಆಸ್ಥಾನಪಂಡಿತರನ್ನು ಗೆದ್ದದ್ದು, ೧೯. ರಾಘವಾಂಕನ ಸಮಾಧಿ.

೬. ಗುರುರಾಜ ಚಾರಿತ್ರ:

"ಒರೆವೆನಾಚಾರ್ಯರುದ್ಭವವನಾ, ಪರಮ ಸದ್
ಗುರುವಂಶವಂ, ಶಿವನ ಪಂಚವಿಂಶತಿ ಲೀಲೆ,
ಹರಪೂಜೆಯುಂ, ಪಂಡಿತಾರಾಧ್ಯರೊರೆದ ಗಣಸಾಹಸ್ರ ನಾಮಂಗಳಂ
ಧರೆಯಲ್ಲಿ ಶಿವಕೃಪೆವಡೆದ ನೂತನದ
ಹರ ಪುರಾತನರ ಕಥೆಗಳಂ........"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ಪದ್ಯ ಈ ಪುರಾಣಕ್ಕೆ ಪರಿವಿಡಿಯಾಗಿದೆ. ಪಾಲ್ಕುರಿಕೆ ಸೋಮನ ಬಸವ ಪುರಾಣ ಮತ್ತು ಪಂಡಿತಾರಾಧ್ಯ ಚರಿತ್ರೆ, ಲಕ್ಕಣನ ಶಿವತತ್ವ ಚಿಂತಾಮಣಿ, ಮಲ್ಲಣನ ವೀರಶೈವಾಮೃತ ಮಹಾಪುರಾಣಗಳ ಶರಣರ ಚರಿತ್ರ ಇಲ್ಲಿ ಒಟ್ಟು ಗೂಡಿ ನಿಂತಿದೆ. ಹೀಗಾಗಿ ಇದೊಂದು ಶರಣಚರಿತ್ರಸಾಗರ.

೭. ಪ್ರೌಢದೇವರಾಯನ ಕಾವ್ಯ

"........ಎಲೆ ಜಕ್ಕಣಾರ್ಯ! ತಿಳಿಪು ನಿನೆನೆಗೆ ಚಾಮರಸ ಬಪ್ಪನ್ನೆಗಂ ಮಲಹರನ ಶರಣರಾ ಕಥೆಯಂ........" ಎಂಬ ಪ್ರೌಢದೇವರಾಯನ ವಿನಂತಿಯ ಮೇರೆಗೆ ೧೧ ದಿನಗಳ ವರೆಗೆ ಹೇಳಿದ ಶರಣರ ಕಥೆಗಳು. ಪ್ರೌಢರಾಯನ ಚರಿತ್ರೆಯಾಗಲಿ, ಅವನ ಸಮಕಾಲೀನ ಶರಣರ ಕಥೆಯಾಗಲಿ, ಕಲ್ಯಾಣಪತನದ ತರುವಾಯದ ಶರಣರ ಕಥೆಯಾಗಲಿ ಬರದೆ ಬಸವ ಸಮಕಾಲೀನ ಮತ್ತು ಬಸವಪೂರ್ವದ ಶರಣರ ಕಥೆಗಳಿವೆ.

೮. ಸಿಂಗಿರಾಜ ಪುರಾಣ

ಇದು ಸ್ವತಂತ್ರ ಪದ್ಧತಿಯ ಪುರಾಣ. "........ಆದ್ಯರ ವಚನಸಿದ್ಧಿ ಸಾರೋದ್ಧಾರ ಶಾಸನವಿದು........" ಗುರುದೇಮಿದೇವಯ್ಯನಿಗೆ ಗೊತ್ತಿದ್ದ ೯೪ ಪವಾಡಗಳು ಮಾತ್ರ ಇಲ್ಲಿ ೪೦ ಸಂಧಿಗಳಲ್ಲಿ ವಿಸ್ತಾರಗೊಂಡಿವೆ. ಮೊದಲಿನ ೭ ಸಂಧಿಗಳು ಬಸವಣ್ಣನ ಜನನ, ವಿವಾಹ, ಮಂತ್ರಿಪದವಿಗಳನ್ನು ವಿವರಿಸುತ್ತವೆ. ಶರಣರ ವಚನ (೮೨), ಹಾಡು (೨) ಗಳಿಂದ ಘಟನೆಗಳನ್ನು ಸಮರ್ಥಿಸುತ್ತಾನೆ. ಆದರ ವಿವರ ಕೆಳಗಿನಂತಿದೆ:

ಸಂಧಿ	ವಚನ	ಹಾಡು	ಸಂಧಿ	ವಚನ	ಹಾಡು
೨	೧೧	೧	೧೧	೨	—
೪	೩	—	೧೭	೧	—
೫	೧೮	—	೧೯	[illegible]	—
೯	೪	—	೨೨	೨	—
೧೦	೨	—	೨೫	೧	—
೨೭	೩	—	೩೮	೨	—
೨೮	೨	—	೩೯	೨	—
೩೧	೧೧	—	೪೨	೨	—
೩೩	೧	—	೪೫	೧	—
೩೪	೧	೧	೪೮	೧	—
೩೫	೧	—			
			ಒಟ್ಟು	೮೨	೨

೧. ಉಪ್ಪಲದಿನ್ನೆಯ ಸಂಗಮೇಶ್ವರನು ವಿಜಾಪುರದ ಆದಿಲ್‌ಶಾಹ ಒಣಗಿಸಿದ್ದ ಮರವನ್ನು ಚಿಗುರಿಸಿ ಅರಸನಿಂದ ವಂದನೆ ಪಡೆದನು. (ಗುರುರಾಜ ಚಾರಿತ್ರ)

೨. ಕೊಟ್ಟೂರ ಬಸವೇಶನು ಕುತುಬುಶಾಹ ನಿಜಾಮಲಕ ಕುಬಾರ ಇವರ ಮನೆಯಲ್ಲಿ ಶಿವಗೆಂದು ಸಿಂಗರಿಸಿದ ಮಂಚವೇರಿ ಬಯಲಾದನು. (ಗುರುರಾಜಚಾರಿತ್ರ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಮಹಲಿಂಗ ಮುನಿಗಳು ಘೋರ್ಪಡೆ ವಂಶದ ಮಾಲೋಜಿ ಮಹಾರಾಜನಿಂದ ನರಗಟ್ಟಿ ಗ್ರಾಮವನ್ನು ಪಡೆದನು. ಮಲರೋಗದಿಂದ ಸತ್ತಮಾಲೋಜಿಯ ಮಗ ಗೋವಿಂದರಾಜನ ಪ್ರಾಣ ಉಳಿಸಿಕೊಟ್ಟನು. ಮಾಲೋಜಿಯ ಇನ್ನೊಬ್ಬ ಮಗ ಕೇದಾರ ಭಾವನು ವಿಷಪ್ರಾಶನದಿಂದ ಪ್ರಾಣ ನೀಗಿದನು. ಗೋವಿಂದರಾಯನ ಮಗ ನಾರಾಯಣನು ಬಾಲಗ್ರಹದಿಂದ ಮರಣ ಹೊಂದಿದಾಗ ಮುನಿನಾಥನು ಬದುಕಿಸಿದನು. (ಮಹಲಿಂಗಲೀಲೆ)

೪. ....ತೋಂಟದ ಸಿದ್ಧಲಿಂಗೇಶ್ವರನು ತುರುಷ್ಕರಾಜನಿಗೆ ಜೀವದಾನ ಮಾಡಿದ ವಿಷಯ ಎರಡೂ ಪುರಾಣಗಳಲ್ಲಿ ಬಂದಿದೆ.

ವೀರಶೈವಪುರಾಣ ಲಕ್ಷಣಗಳು

ವೀರಶೈವ ಪುರಾಣಪರಂಪರೆಗೆ ಆದಿಯೆಂದರೆ "ಬಸವ ಪುರಾಣ"ವೆಂದೇ ಹೇಳಬೇಕು. ಭೀಮಕವಿಯು ಬಸವ ಪುರಾಣ ರಚನೆಯ ಸುಬಂಧವಾಗಿ ಹೇಳಿದ ಪದ್ಯದಲ್ಲಿ ಆ ಪುರಾಣದ ಲಕ್ಷಣ ಧ್ವನಿತವಾಗುವಂತಿದೆ.

ಆದಿಲಿಂಗ ರಹಸ್ಯ ಸಿದ್ಧಾಂ
ತಾದಿ ವೇದ ಪುರಾಣ ಸಮ್ಮತ
ವಾದ ಬಸವ ಪುರಾತನರ ಹೀತಾರ್ಥ ಮಾತೃಕದಿ
ಕೋದ ಮಣಿಗಣ ಸೂತ್ರದಂತಿರೆ
ಆದಿಗಣಚರಿತಂಗಳೊಳು ಸಂ
ವೇದಿಸಲು ಬಸವನ ಚರಿತೆಯಂ ಬಣ್ಣಿಸುವೆನೊಸೆದು.

ಇಲ್ಲಿ ಕವಿ ಬಸವಚರಿತೆಯನ್ನು ಆದಿಗಣಚರಿತೆಗಳಲ್ಲಿ ಸಂವೇದಿಸಿ ಬರೆದಿರುವನು. ಬಸವಚರಿತೆ, ಆದಿಗಣಚರಿತೆಗಳೇ ಬಸವಪುರಾಣ ಲಕ್ಷಣಗಳು. ಈ ಚರಿತೆಗಳನ್ನು ಕೋದ ಮಣಿಗಣಸೂತ್ರದಂತೆ ಹೇಳಬೇಕು. ಬಸವಚರಿತೆಗೆ ಬಸವ ಪುರಾತನರ ಗೀತೆಗಳೇ ಮಾತೃಕೆ. ಏಕೆಂದರೆ ಅವು ವೇದ ಪುರಾಣಸಮ್ಮತವಾದುವು. ಚರಿತೆಯೆಂಬಲ್ಲಿ ಐತಿಹಾಸಿಕ ಅಂಶ ಹಾಗೂ ಪವಾಡಗಳೆರಡರ ಅರ್ಥವೂ ಅಡಕವಾಗಿವೆ. ಪವಾಡಗಳೇ ಆ ವ್ಯಕ್ತಿಯ ಮಹಿಮಾತಿಶಯವನ್ನು ಬಿತ್ತರಿಸುವುದರಿಂದಲೂ ಜನಸಾಮಾನ್ಯರ ಚಿತ್ತವನ್ನು ಸುಲಭವಾಗಿಯೇ ಸೆಳೆದು ಅಲ್ಲಿಯ ಭಕ್ತಿಯ ಬೀಜವನ್ನು ಬಿತ್ತಬಲ್ಲವಾದುವರಿಂದಲೂ ನೈಜ ಚರಿತ್ರೆಗಿಂತಲೂ ಪವಾಡಗಳಿಗೇ ಪ್ರಧಾನ ಸ್ಥಾನವನ್ನು ಇತ್ತಿರುವನು. ಚರಿತ್ರೆಯ ಮೌಲ್ಯ ಇಂದಿನವರಿಗೆ ಅಧಿಕವಾಗಿರಬಹುದು. ಅಂದಿನವರಿಗೆ ಪವಾಡಗಳೇ ಅಧಿಕ ಮೌಲ್ಯವುಳ್ಳವಾಗಿದ್ದುವು. ಬಸವಾದಿ ಪ್ರಮಥರ ವಚನಗಳ ಆಧಾರದಿಂದ ಬಸವಚರಿತೆಯನ್ನು ವಿವರಿಸಿರುವನು.

ಬಸವಪುರಾಣದ ದೃಷ್ಟಿಯಲ್ಲಿ ವೀರಶೈವ ಪುರಾಣದ ಲಕ್ಷಣಗಳು ಎರಡೇ ಎರಡು:

೧. ಬಸವ ಚರಿತೆ; ೨. ಆದಿಗಣಚರಿತೆ

ಇವೆರಡನ್ನೂ ಜೋಡಿಸಿರುವ ಬಗೆಯೆಂತು? ಬಸವಣ್ಣನವರ ಜೀವನ ಚರಿತೆಯಲ್ಲಿ ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಪ್ರಭುದೇವ, ಕಿನ್ನರಿ ಬ್ರಹ್ಮಯ್ಯನವರೇ ಮೊದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಾದ ಸಮಕಾಲೀನ ಶರಣರ ಜೀವನ ಹಾಸುಹೊಕ್ಕಾಗಿ ಬೆರೆತಿರುವುದರಿಂದ ಅವರೆಲ್ಲರ ಚರಿತೆಗಳೂ ಬಸವಚರಿತೆಯೊಡವರೆದು ಬರುತ್ತವೆ; ಬರುವುದು ಸಹಜ; ಅವು ಹಾಗೆ ಬಂದಿವೆ. ಬಸವಣ್ಣನವರ ಭಕ್ತಿ ದೃಢವಾಗುವಂತೆ, ಅವರ ಮರ್ತ್ಯದ ಮಣಿಹ ಪೂರೈಸು ವಂತೆ ಅವರ ಸುತ್ತಣ ಈ ಶರಣರು ಪರೀಕ್ಷೆಯೊಡ್ಡಿರುವರು, ಸಹಾಯ ನೀಡಿರುವರು.

ಪ್ರಸ್ತುತ ಪ್ರಶ್ನೆಯೆಂದರೆ ಆದಿಗಣಚರಿತೆ, ಬಸವಚರಿತೆಯಲ್ಲಿ ಬೆರೆದ ಪರಿಯೆಂತು? ಬಸವಣ್ಣನವರ ಜೀವನದ ಇಲ್ಲವೆ ಪರಿಸರದ ಕೆಲವು ಘಟನೆಗಳು ಪವಾಡಗಳು ಆದಿ ಶರಣರ ಸ್ಮರಣೆಯನ್ನು ತಂದು ಆ ಚರಿತೆಗಳ ನಿರೂಪಣೆಗೆ ಸನ್ನಿವೇಶ ನಿರ್ಮಿತಿಯಾಗಿ ಅವುಗಳನ್ನು ದೃಷ್ಟಾಂತರೂಪದಿಂದಲೋ ಬೋಧೆಯ ರೂಪದಿಂದಲೋ ವಿವರಿಸುವರು.

ಮುಗ್ಧಸಂಗಯ್ಯನನ್ನು ಕಂಡು ಆಶ್ಚರ್ಯಚಕಿತನಾದ ಚನ್ನಬಸವಣ್ಣನಿಗೆ ಬಸವಣ್ಣನವರು ಮುಗ್ಧ ಭಕ್ತರ ಕಥೆಗಳನ್ನು ಹೇಳುವರು. ಮಾಚಿದೇವರ ಸಂದರ್ಭದಲ್ಲಿ ಬಸವಣ್ಣನವರು ಬಿಜ್ಜಳನಿಗೆ ವೀರಭಕ್ತರ ಕಥೆಗಳನ್ನುಸುರುವರು. ಬಸವಣ್ಣನವರ ಭಕ್ತಿಯ ಹಮ್ಮನ್ನು ಕಳೆಯಲು ಮಾಚಿದೇವರು ಆದಿ ಶರಣರ ಕಥೆಗಳನ್ನು ವಿವರಿಸುವರು. ನಂಬಿಯಣ್ಣ ೬೩ ಜನ ಪುರಾತನರನ್ನು ಕುರಿತು ಹೇಗೆ ಹಾಡಿದನೆಂಬುದನ್ನು ಮಾಚಿದೇವ ಬಸವಣ್ಣನವರಿಗೆ ಅವರ ಕಥೆಗಳನ್ನು ಸಂಕ್ಷೇಪವಾಗಿ ಹೇಳುವನು. ಹೀಗೆ ಬಸವಪುರಾಣದಲ್ಲಿ ಆದಿಗಣಚರಿತೆ ಬಂದಿದೆ. ಅವೆಲ್ಲ ಮಣಿಹಾರದಂತೆ ಸುಂದರವಾಗಿ ಸಹಜವಾಗಿ ಒಂದುಗೂಡಿವೆಯೇ ಎಂಬುದು ವಿಮರ್ಶೆಯ ಮಾತು. ಅಷ್ಟೊಂದು ಕಲೆ ಅಲ್ಲಿ ಇದೆಯೆಂಬುದನ್ನು ಒಪ್ಪಿಕೊಳ್ಳುವುದು ಕಷ್ಟವಾದರೂ ಇವೆಲ್ಲ ಶರಣರ ಚರಿತೆಗಳನ್ನು ಬಸವಚರಿತೆಯೆಂಬ ಸೂತ್ರಕ್ಕೆ ಪವಣಿಸಿವೆಯೆಂಬುದು ನಿರ್ವಿವಾದ.

ಈ ಪುರಾಣದ ಕಥಾವಸ್ತುವನ್ನು ಹಮ್ಮುವಲ್ಲಿ ಪಾಲ್ಕುರಿಕೆ ಸೋಮನಾಥ ಕವಿ ಒಂದು ಕಾರ್ಯವನ್ನು ಮಾಡಿರುವನು. ಬಸವಣ್ಣನವರ ಜೀವನದ ಘಟನೆ ಪವಾಡಗಳಿಗೆ ಸಮಾನವಾದುದನ್ನು ಹಿಂದಿನ ಶರಣರ ಜೀವನದಲ್ಲಿ ಕಾಣುವುದರ ಜೊತೆಗೆ, ಹಿಂದಿನ ಶರಣರ ಜೀವನದ ಕೆಲವು ಮಹತ್ವದ ಘಟನೆ, ಪವಾಡಗಳು ಬಸವಣ್ಣನವರ ಜೀವನದಲ್ಲಿ ನಡೆದುವೆಂದು ತೋರಿಸಲು ಅದನ್ನು ಕವಿ ತಾನೇ ಸೃಜಿಸಿದಂತೆ ತೋರುತ್ತದೆ. ಅಂತೆಯೇ ತಮಿಳುನಾಡಿನ ಕೆಲವು ಪುರಾತನರ ಹಾಗೂ ಬಸವಣ್ಣನವರ ಜೀವನದಲ್ಲಿ ಬರುವ ಕೆಲವೊಂದು ಕಥೆ, ಪವಾಡಗಳಲ್ಲಿ ಅಷ್ಟೊಂದು ಸಾಮ್ಯ ಕಂಡುಬರುತ್ತದೆ. ಜಂಗಮವು ಮನೆಗೆ ಬಂದಾಗ ಚಿರುತೊಂಡನಾಯನಾರರು ಮಗನನ್ನೇ ಆತನಿಗೆ ಉಣಬಡಿಸಿದರೆ ಬಸವಣ್ಣನವರು ಜಂಗಮಕ್ಕೆ ತಮ್ಮ ಪ್ರೀತಿಯೆನ್ನೇ ಅರ್ಪಿಸುತ್ತಾರೆ. ಇಂತಹ ಕಥೆಗಳು ಸಾದೃಶ್ಯ ಜನ್ಯವಾದುವುಗಳೆ.

ಬಸವಪುರಾಣದಿಂದ ಪದ್ಮರಾಜಪುರಾಣಕ್ಕೆ ಬಂದರೆ ವೀರಶೈವ ಪುರಾಣ ಲಕ್ಷಣದಲ್ಲಿ ಹೆಚ್ಚಳವಾದುದನ್ನು ಕಾಣುತ್ತೇವೆ. ಕಥಾನಾಯಕನ ಚರಿತೆ, ಪೂರ್ವದ ಶರಣರ ಚರಿತೆ ಬಸವಪುರಾಣದಂತೆ ಇಲ್ಲಿಯೂ ಮೇಳೈಸಿಬರುತ್ತವೆ. ಪದ್ಮರಾಜರ ಜೀವನವನ್ನು ಹೇಳುತ್ತ ಸಮಕಾಲೀನ ಕವೀಶ್ವರ ಹರೀಶ್ವರನ ಕಥೆ, ಸಕಳೇಶ ಮಾದರಸರ ಕಥೆ, ಶಿವದೇವರ ಕಥೆ, ರಾಘವಾಂಕ, ಪುಲಿಗೆರೆಯ ಮಾಯಿದೇವ, ದೋರಾಂಬುಧಿಯ ರಾಮಣ್ಣ

ಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂತಾದವರ ಉಲ್ಲೇಖಗಳು ಸಮುಚಿತ ಸ್ಥಾನದಲ್ಲಿ ಬರುವುದಲ್ಲದೆ ಪದ್ಮರಾಜರ ಮಹಿಮಾತಿಶಯುವನ್ನು ಬಣ್ಣಿಸಲು ಅನೇಕ ಪವಾಡಗಳು ಕಲ್ಪಿತವಾಗಿವೆ. ಬಸವಪುರಾಣ ರಚನೆಯ ಸಮಯದಲ್ಲಿ ಬಸವಣ್ಣನವರ ಪೂರ್ವದ ಶರಣರ, ಪುರಾತನರ ಕಥೆಗಳು ಸಾದೃಶ್ಯ ಮೂಲಕ ಆ ಪುರಾಣದಲ್ಲಿಬಂದರೆ ಪದ್ಮರಾಜಪುರಾಣದಲ್ಲಿ ಬಸವಾದಿ ಶರಣರ ಕಥೆಗಳು ಉಪಾಖ್ಯಾನಗಳಾಗಿ ಬರುತ್ತವೆ. ಪದ್ಮರಾಜರು ಹೊಯ್ಸಳ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದುದರಿಂದ ಬಸವಣ್ಣನವರ ಜೀವನದ ಕೆಲವು ಘಟನೆಗಳು ಸಾದೃಶ್ಯ ರೂಪವಾಗಿ ಪದ್ಮರಾಜರ ಮಹಿಮೆಯನ್ನು ನಿರೂಪಿಸುವಲ್ಲಿ ಬರುತ್ತವೆ. ಬಸವಣ್ಣನವರ ಮೇಲೆ ಬಿಜ್ಜಳನ ಭಾಂಡಾರದ ಅಪವ್ಯಯದ ಆರೋಪ ಬಂದಂತೆ ಕೆರೆ ಕಟ್ಟಿಸಲು ಪದ್ಮರಸರು ಭಾಂಡಾರದ ಹಣವನ್ನು ಉಪಯೋಗಿಸಿದರೆಂಬ ಆರೋಪ ಬರುತ್ತದೆ. ಪದ್ಮರಸರನ್ನು ಬಸವಣ್ಣನವರ ಎತ್ತರಕ್ಕೆ ಏರಿಸಬೇಕೆಂಬ ಕವಿಯ ಆಶಯ ಇಂತಹ ಘಟನೆಗಳನ್ನು ಕಲ್ಪಿಸಿರುವುದು ಸಹಜ.

ಪದ್ಮರಾಜಪುರಾಣದಲ್ಲಿ ವೀರಶೈವ ಪುರಾಣದ ಇನ್ನೊಂದು ಲಕ್ಷಣ ಕಂಡುಬರುತ್ತದೆ. ಮುಂದಿನ ವೀರಶೈವ ಪುರಾಣಗಳಲ್ಲಿ ಬರುವ ವಾದಕಾಂಡ ಮೊಟ್ಟಮೊದಲ ಸಲ ಪದ್ಮರಾಜಪುರಾಣದಲ್ಲಿ ಬರುತ್ತದೆ. ವಿಷ್ಣು ಸರ್ವೋತ್ತಮನೆಂದು ತ್ರಿಭುವನತಾತನು ಬೇಲೂರಲ್ಲಿ ಸಾರಿ ಪ್ರತಿವಾದಿಗಳನ್ನು ಆಹ್ವಾನಿಸಿರಲು, ಕೆರೆಯ ಪದ್ಮರಸರು ಅನೇಕ ಶಿವಭಕ್ತರೊಡನೆ ಅಲ್ಲಿಗೈತಂದು ವಾದದಲ್ಲಿ ತ್ರಿಭುವನ ತಾತನನ್ನು ಸೋಲಿಸುವರು. ಆ ವಾದದಲ್ಲಿ ಶಿವಸರ್ವೋತ್ತಮತ್ತ್ವವನ್ನು ಎತ್ತಿ ಹಿಡಿಯುವ ಅನೇಕ ಉಕ್ತಿಗಳನ್ನು ವೇದಾಗಮ ಪುರಾಣೇತಿಹಾಸಗಳಿಂದ ಉದ್ಧರಿಸಿದರೆ ತ್ರಿಭುವನತಾತನೂ ತನ್ನ ವಾದವನ್ನು ಸಮರ್ಥಿಸಲು ಆಧಾರಗಳನ್ನೀಯುವನು. ಪದ್ಮರಾಜಪುರಾಣದ ಈ ಭಾಗವು ಪಾಂಡಿತ್ಯ, ತರ್ಕ, ವಿಚಾರಗಳ ತಾಂಡವವಾಗಿವೆ. ಕೊನೆಗೆ ಪದ್ಮರಸರು ವಾದದಲ್ಲಿ ವಿಜಯ ಶೀಲರಾಗಲು ಅವರನ್ನು ಶಿವಾದ್ವೈತ ಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯರೆಂದು ಕರೆಯಲಾಗುವುದು. ಹೀಗೆ ಪದ್ಮರಾಜಪುರಾಣದನ್ವಯ ವೀರಶೈವಪುರಾಣದ ಲಕ್ಷಣಗಳು ಮೂರು:

೧. ಕಥೆ (ಕಥಾನಾಯಕನ ಜೀವನಚರಿತ್ರೆ)
೨. ಉಪಕಥೆ (ಹಿಂದಿನ ಶರಣರ ಕಥೆಗಳು)
೩. ವಾದಕಾಂಡ (ಶಿವಪಾರಮ್ಯ ಪ್ರತಿಷ್ಠಾಪನೆಯ ವಾದ)

ವೀರಶೈವ ಪುರಾಣ ಲಕ್ಷಣಗಳ ಅಭಿವೃದ್ಧಿಯ ದೃಷ್ಟಿಯಿಂದ ಮುಂದಿನ ಮಹತ್ವದ ಪುರಾಣವೆಂದರೆ ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿ. ಶಿವತತ್ವಚಿಂತಾಮಣಿಯಲ್ಲಿ ಬರುವ ವಿಷಯಗಳನ್ನು ಲಕ್ಕಣ್ಣ ದಂಡೇಶನು ಹೀಗೆ ವಿವರಿಸಿರುವನು:

ಪರಮ ಶಿವತತ್ವಚಿಂತಾಮಣಿಯ ಕೃತಿಯೊಳಂ
ಮೆರೆವ ನಿತ್ಯಾನಿತ್ಯ ವಸ್ತುವಿನ ವಿವರಣಂ
ವರಸಕಲ ನಿಷ್ಕಲದ ಪರಿಯ ನಿಷ್ಕಲ ತತ್ವ ಸಕಲ ವಾದಾಭೇದವು
ಇರೆ ಭುವನಕೋಶ ಶಿವಲೋಕದಭಿವರ್ಣನಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರನ ದಿವ್ಯಾಸ್ಥಾನ ನಾರದನ ದರುಶನಂ
ಪುರಹರನ ನಂದೀಶ ಸುವಾದವಂ ಜಗವ ಪಾಲಿಸುವಡುದಯವಾದ
ಬಸವನವತಾರ ಬಸವನ ನಾಮನಿರ್ವಚನ
ವೆಸೆವ ಬಾಲ್ಯದ ಲೀಲೆ ಮೇಲಣ ಪವಾಡಗಳ್
ವಸುಧೆಯೊಳು ಶಿವಧರ್ಮಮಾರ್ಗಮಂ ನೆಱೆ ತೋಱೆ ಮೆಱೆದಾ ಗಣಪ್ರಶಂಸೆ
ಎಸೆವ ಧರ್ಮಾಧರ್ಮ ಪಿಂಡದುತ್ಪತ್ತಿಯಂ
ವಿಷಮ ಸಂಸೃತಿಹೇಯ ಪಂಚಾಕ್ಷರಿಯ ಮಹಿಮೆ
ಭಸಿತ ರುದ್ರಾಕ್ಷೆಗಳ ಮಹಾತ್ಮ್ಯಮಂ ಕರುಣದಿಂದ ಶ್ರೀಗಳು ಮಾಡುವ
ವರಲಿಂಗಧಾರಣಂ ಶಿವನ ಪೂಜಾನಿಯಮ
ಪರಿವಿಡಿಯ ಪಾದೋದಕ ಪ್ರಸಾದಕ್ರಮಂ
ಉರು ಶಿವಾಧಿಕ್ಯ ಮಾಹೇಶ್ವರಾಚರಣೆಯಂ ಮೇಲೆ ಷಟ್‌ಸ್ಥಲವೆಂಬಿವ
ಧರೆಯ ಶಿವಭಕ್ತರೆಲ್ಲಂ ಕೇಳ್ದು ಸುಜ್ಞಾನ
ಭರಿತರಾಗುತ ಶಿವಾನಂದ ರಸಮಯರಾಗಿ
ಪರಮ ಸರ್ವಜ್ಞತ್ವಕೊಡೆಯುರಪ್ಪರ ವಿಮಲ ಚರಣಾಂಬುಜಕ್ಕೆ ಶರಣು.

ಕೃತಿಗೆ ಪದಿನೆಂಟಂಗವೆನೆ........

ಲಕ್ಕಣ್ಣ ದಂಡೇಶನು ಪರಂಪರೆಯಿಂದ ಬಂದ ಅಷ್ಟಾದಶ ವರ್ಣನೆಗಳಿಗೆ ಪ್ರತಿಯಾಗಿ ತನ್ನ ಕೃತಿಗೆ ಕೆಳಗಿನ ಪದಿನೆಂಟಂಗಗಳನ್ನು ಹೇಳಿರುವನು. ಅವೇ ವೀರಶೈವ ಪುರಾಣದ ಲಕ್ಷಣಗಳು. ಅವು ಹೀಗಿವೆ:

೧. ನಿತ್ಯಾನಿತ್ಯ ವಸ್ತುವಿನ ವಿವರಣೆ
೨. ಸಕಲ ನಿಷ್ಕಲ ತತ್ತ್ವವಿಚಾರ
೩. ಪಂಚವಿಂಶತಿಲೀಲೆ
೪. ಭುವನಕೋಶ
೫. ಶಿವಲೋಕದಭಿವರ್ಣನ
೬. ಹರನ ದಿವ್ಯಾಸ್ಥಾನ–ನಾರದ ದರ್ಶನ
೭. ಶಿವನಂದೀಶ ಸಂವಾದ
೮. ಬಸವೇಶ್ವರಾವತಾರ–ಬಾಲಲೀಲೆ, ಪವಾಡ
೯. ಶಿವಧರ್ಮ ಮಾರ್ಗವನ್ನು ತೋರಿದ ವಿಷಯ ಹಾಗೂ ಪ್ರಶಂಸೆ
೧೦. ಧರ್ಮಾಧರ್ಮ, ಪಿಂಡೋತ್ಪತ್ತಿ
೧೧. ಸಂಸಾರ ಹೇಯ
೧೨. ಪಂಚಾಕ್ಷರೀ ಮಹಿಮೆ
೧೩. ಭಸಿತ ರುದ್ರಾಕ್ಷಿ ಮಹಾತ್ಮ್ಯೆ
೧೪. ಲಿಂಗಧಾರಣ
೧೫. ಪಾದೋದಕ ಪ್ರಸಾದಕ್ರಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೭. ಶಿವಾಧಿಕ್ಯ

೧೮. ಮಾಹೇಶ್ವರಾಚರಣೆ

೧೯. ಷಟ್‌ಸ್ಥಲ

ವೀರಶೈವಾಮೃತಪುರಾಣ ತತ್ವಪ್ರಧಾನ ಪುರಾಣವಾಗಿರುವುದರಿಂದ ಅದರಲ್ಲಿ,

೧. ಪ್ರವೃತ್ತಿತತ್ವವಿವರಣೆ

೨. ಪಂಚವಿಂಶತಿ ಲೀಲೆಗಳು

೩. ನಿವೃತ್ತಿತತ್ವನಿರೂಪಣೆ

೪. ಬಸವಾದಿ ಪ್ರಮಥರ ಹಾಗೂ ಶರಣರ ಚರಿತ್ರ ನಿರೂಪಣೆ

೫. ಷಟ್‌ಸ್ಥಲ ವಿವರಣೆ

ಈ ಪಂಚಾಂಗಗಳು ಬಹು ಸೂಕ್ಷ್ಮ ವಿವರಣೆಯೊಂದಿಗೆ ವೀರಶೈವಾಮೃತ ಮಹಾಪುರಾಣದಲ್ಲಿ ನಿರೂಪಿತವಾಗಿವೆ.

ವೀರಶೈವ ಪುರಾಣಪರಂಪರೆಯಲ್ಲಿ ಕೊನೆಯ ಮಹತ್ವದ ಕೃತಿ–ಚೆನ್ನಬಸವ ಪುರಾಣ. ವಿರೂಪಾಕ್ಷ ಪಂಡಿತನು ತನ್ನ ಪುರಾಣಲಕ್ಷಣಗಳನ್ನು ಹೀಗೆ ವಿವರಿಸಿರುವನು:

ಪರಿವಿಡಿಯೊಳೀ ಪುರಾಣದ ಕಥಾಕುಳಕಮಂ
ವಿರಚಿಪೆಂ ಕೈಲಾಸವರ್ಣನಂ ನಾರದನ
ದರುಶನಂ ಚೆನ್ನಬಸವೋತ್ಪತ್ತಿ ಪುಷ್ಪಕೋತ್ಸಾಹಮಾತನ ಸುಲೀಲೆ
ಅರಸಿನಾಸ್ಥಾನಮಾ ಪುರದೇಶವರ್ಣನಂ
ಗುರುಚೆನ್ನಬಸವನಾ ಸಿದ್ಧರಾಮೇಶ್ವರಂ
ಗೊರೆದ ಶಿವತತ್ವಮಾ ಶಿವನ (........) ಲೀಲೆ ಸೋಮಸೂರ್ಯಾನ್ವಯಂ
ಹರಶರಣ ಚರಿತ ದೀಕ್ಷಾ ವಿಧಾನಂ ಷಟ್ಸ್ಥಲಂ ಸುಕಾಲಜ್ಞಾನವು
ಇಂತಿಪಲ್ಲಿಂ ಚೆನ್ನಬಸವಪೌರಾಣದಾ
ದ್ಯಂತ ಸತ್ಕಥೆಯ ಸೂಚನೆ

ಚೆನ್ನಬಸವ ಪುರಾಣದನ್ವಯ ಪುರಾಣಲಕ್ಷಣಗಳು ಇಂತಿವೆ:

೧. ಕೈಲಾಸ ವರ್ಣನೆ

೨. ನಾರದನ ದರ್ಶನ

೩. ಚೆನ್ನಬಸವೋತ್ಪತ್ತಿ

೪. ಪುಷ್ಪಕೋತ್ಸಾಹ

೫. ಚೆನ್ನಬಸವಣ್ಣನವರ ಬಾಲಲೀಲೆ

೬. ಪುರದೇಶ ವರ್ಣನ

೭. ಅರಸಿನಾಸ್ಥಾನ

೮. ಗುರುಚೆನ್ನಬಸವನು ಸಿದ್ಧರಾಮೇಶನಿಗೆ ಹೇಳಿದ ಶಿವತತ್ವ

೯. ಪಿಂಡೋತ್ಪತ್ತಿ, ಕರಣ ಹಸಿಗೆ

೧೦. ಪಂಚವಿಂಶತಿ ಲೀಲೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೧. ಸೋಮಸೂರ್ಯಾನ್ವಯ
೧೨. ಶಿವಶರಣಚರಿತೆ (ಶೈವ ಶರಣರು–ವೀರಶೈವ ಶರಣರು)
೧೩. ದೀಕ್ಷಾವಿಧಾನ–ಲಿಂಗಪೂಜಾ ವಿಧಾನ
೧೪. ಷಟ್‌ಸ್ಥಲ ನಿರ್ಣಯ
೧೫. ಕಾಲಜ್ಞಾನ

ವೀರಶೈವ ಪುರಾಣ ಲಕ್ಷಣಗಳು ಹೆಚ್ಚುತ್ತ ಹೊರಟಿರುವುದು ಇದರಿಂದ ವೇದ್ಯವಾಗುತ್ತದೆ. ಕಥಾನಾಯಕರ ಚಾರಿತ್ರಿಕ ಅಂಶಗಳು ಕರಗುತ್ತ; ಲೀಲೆಗಳ, ಶಿವಶರಣರ ಕಥೆಗಳ, ತತ್ವಗಳ ವಿವರಣೆ ಹಿಗ್ಗುತ್ತ ಹೋದುದನ್ನು ಗಮನಿಸಬೇಕು. ಮೊದಮೊದಲು ಕಥಾನಾಯಕನ ಜೀವನಕ್ಕೆ ಸಂಬಂಧಪಟ್ಟ ಇಲ್ಲವೆ ಆ ದಿವ್ಯ ಜೀವನದ ಘಟನೆಗಳ ಸಾದೃಶ್ಯವುಳ್ಳ ಶರಣರ, ಪುರಾತನರ ಕಥೆಗಳು ಕೋದ ಮಣಿಹಾರದಂತೆ ಬರುತ್ತಿದ್ದರೆ ಈ ಹಿಂದಿನ ಶರಣರ, ಪುರಾತನರ, ನೂತನರ, ಸಮಕಾಲೀನ ಶರಣರ ಕಥೆಗಳನ್ನು ಹೇಳುವುದು ಸಂಪ್ರದಾಯವಾಗಿಬಿಟ್ಟಿದೆ. ಅವನ್ನು ಪ್ರತ್ಯೇಕವಾಗಿಯೇ ವಿವರಿಸಲಾಗುತ್ತದೆ. ಶಿವತತ್ವ ಚಿಂತಾಮಣಿಯು ಬರುವ ಹಿಂದಿನ ಎಲ್ಲ ಶರಣರ ಚರಿತ್ರೆಗಳಿಗೆ ಮತ್ತೆ ಮಧ್ಯಕಾಲೀನ ಶರಣ ಚರಿತ್ರೆಗಳನ್ನು ಸೇರಿಸಿ ತನ್ನ ಕಾಲದ ವರೆಗೆ ಶರಣರ ಪಟ್ಟಿಯನ್ನು ಸಿದ್ಧಪಡಿಸಿದೆ. ಮುಂದೆ ಈ ಕಾರ್ಯವನ್ನು ವೀರಶೈವಾಮೃತ ಮಹಾಪುರಾಣ ಮುಂದುವರಿಸಿದೆ.

ವೀರಶೈವಾಮೃತ ಪುರಾಣ

ವೀರಶೈವಾಮೃತ ಪುರಾಣವು ಕನ್ನಡದಲ್ಲಿ ಅತ್ಯಂತ ಬೃಹತ್ ಕಾವ್ಯ. ಇದು ಎಂಟು ಕಾಂಡ, ಒಂದುನೂರು ಮೂವತ್ತಾರು ಸಂಧಿ, ಏಳುಸಾವಿರದ ತೊಂಬತ್ತೊಂಬತ್ತು ವಾರ್ಧಿಕ ಷಟ್ಪದಿಗಳು ಎಂಟುನೂರು ಹದಿನೇಳು ಸಂಸ್ಕೃತ ಶ್ಲೋಕಗಳನ್ನು ಒಳಗೊಂಡಿದೆ. ವಿಷಯು ವೀರಶೈವ ಸಿದ್ಧಾಂತ ನಿರೂಪಣೆ: ಇದನ್ನು ಗುರು ಶೀಲವಂತದೇವರು ಹಲಗೆ ದೇವರ ಪ್ರಾರ್ಥನೆಯ ಮೇರೆಗೆ ಅವರಿಗೆ ಬೋಧಿಸಿದ್ದರು. ಅದನ್ನು ಹಲಗೆದೇವರು ಕೆಂಚ ವೀರಾರ್ಯರಗೆ ವಿವರಿಸಿರುವರು. ಗುಬ್ಬಿಯ ಮಲ್ಲಣಾರ್ಯರು ಇದಕ್ಕೆ ಪದನಂ ಮಾಡಿರುವರು. ಅಂದರೆ ಪದ್ಯದಲ್ಲಿ ಕೃತಿ ವಿರಚನೆ ಮಾಡಿರುವರು ಎಂದರ್ಥ. ಹಲಗೆ ದೇವರು ಕೆಂಚ ವೀರಾರ್ಯರಿಗೆ ಹೇಳಿದಂತೆ ಈ ಕೃತಿಯಲ್ಲಿ ಸಾವಿರಾರು ಕಡೆಗೆ ಉಲ್ಲೇಖ ಬರುತ್ತದೆ. ಇದರರ್ಥ ಗುಬ್ಬಿಯ ಮಲ್ಲಣಾರ್ಯರು ಕೇವಲ ಪದ್ಯ ರಚಿಸಿರುವರು. ವಸ್ತು ವಿಷಯವೆಲ್ಲ ಹಲಗೆ ದೇವರದು ಎಂಬ ಕಲ್ಪನೆಯುಂಟಾಗುವುದು ಸಹಜ. ಹಲಗೆದೇವರು ವೀರಶೈವ ಸಿದ್ಧಾಂತವನ್ನು ಅದರ ಹಿನ್ನೆಲೆ ಮುನ್ನೆಲೆಗಳನ್ನು ವಿವರಿಸಿರಬೇಕು. ಅದನ್ನು ರಕ್ತಗತ ಮಾಡಿಕೊಂಡು ಸ್ವಾನುಭವದಿಂದ ಬರೆಯದೆ ಇಂತಹ ಬೃಹತ್ ಕಾವ್ಯವಾಗಲಾರದು. ಕವಿ ಈ ರೀತಿ ಹೇಳಿದುದು ಆತನ ಗುರುಭಕ್ತಿ ದ್ಯೋತಕ.

ದೇಗುಲವೆ ಮಾತಾಡುವಂದದೊ
ಳಾಗಿರದೆ ಒಳಗಿರ್ದು ನುಡಿದೊಡೆ
ಲೋಗರಿಗೆ ಪ್ರತಿಶಬ್ದದಿಂದಾ ಪರಿಯಲೆನ್ನೊಳಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಾಗಿನಿಂದಲಿ ಗುರುಗುಹೇಶ್ವರ
ನಾಗಳೆನ್ನನು ನುಡಿಸಿದೊಡೆ ನುಡಿ
ದಾಗು ಮಾಡಿಯೆ ಪೇಳ್ದನೀ ಪ್ರಭುಲಿಂಗಲೀಲೆಯನು

ಎಂದು ಚಾಮರಸನೂ

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ

ಎಂದು ಕುಮಾರವ್ಯಾಸನೂ ಹೀಗೆಯೇ ಇನ್ನೂ ಅನೇಕ ಜನ ಕವಿಗಳೂ ಹೇಳಿದಂತೆ ಗುಬ್ಬಿಯ ಮಲ್ಲಣಾರ್ಯರು ತಮ್ಮ ಗುರು ಭಕ್ತಿಯನ್ನು ಪ್ರಕಟಿಸಿರುವರೆಂದು ಭಾವಿಸಬೇಕು. ಗುಬ್ಬಿಯ ಮಲ್ಲಣಾರ್ಯರು ಸ್ವತಃ ಪ್ರತಿಭಾನ್ವಿತ ಕವಿಗಳು. ಭಾವಚಿಂತಾರತ್ನ ಹಾಗೂ ವೀರ ಶೈವಾಮೃತ ಪುರಾಣದಲ್ಲಿ ಹೇರಳವಾಗಿ ಬರುವ ಕಾವ್ಯಮಯ ವರ್ಣನೆಗಳು, ಕವಿ ಕಲ್ಪನೆ ಗಳು ಅವರ ಕವಿತ್ವ ಶಕ್ತಿಗೆ ಸಾಕ್ಷಿಯಾಗಿವೆ. ವೇದಾಂತ, ಸಿದ್ಧಾಂತ, ಧರ್ಮ, ತತ್ವ, ಧಾರ್ಮಿಕ ಆಚರಣೆಯ ವಿಧಿವಿಧಾನ, ಶಾಸ್ತ್ರ, ಮಂತ್ರ, ತಂತ್ರ ಮುಂತಾದವುಗಳಲ್ಲಿ ನಿಸ್ಸೀಮರಾದ ಗುಬ್ಬಿ ಮಲ್ಲಣಾರ್ಯರು ಸ್ವಾನುಭಾವ, ಸ್ವವಿವೇಚನೆಯಿಂದ ವೀರಶೈವಾಮೃತ ಪುರಾಣವನ್ನು ರಚಿಸಿರುವರು. 'ಸರಸ ಶಾಸ್ತ್ರಂಗಳು ಮುಖೋದ್ಗತವಾಗಿ' ರಾಜಿಸುತ್ತಿದ್ದ ನೆಂದು ಆತನ ಮಗ ಕವಿ ಶಾಂತೇಶನು ಸಿದ್ಧೇಶ್ವರ ಪುರಾಣದಲ್ಲಿ ಹೇಳಿರುವುದು ಸತ್ಯವೆನಿಸು ತ್ತದೆ. ಈ ಗ್ರಂಥದಲ್ಲಿ ಬಂದಿರುವ ೮೧೭ ಸಂಸ್ಕೃತ ಶ್ಲೋಕಗಳು ಇದಕ್ಕೆ ಸಾಕ್ಷಿಯಾಗಿವೆ.

ವೀರಶೈವಾಮೃತ ಪುರಾಣವು ಒಂದು ವಿಶಿಷ್ಟ ತೆರನಾದ ಪುರಾಣ. ಬಸವ ಪುರಾಣ, ಚೆನ್ನಬಸವ ಪುರಾಣ, ಸಿಂಗಿರಾಜ ಪುರಾಣಗಳಂತೆ ಅಲ್ಲಿ ಒಬ್ಬ ಮಹಿಮಾನ್ವಿತ ಶರಣನ ಚರಿತ್ರೆ ಕಥಾವಸ್ತುವಾಗಿಲ್ಲ. ಶಿವತತ್ವ ಚಿಂತಾಮಣಿಯಂತೆ ಧರ್ಮ, ತತ್ವಶಾಸ್ತ್ರ ನಿರೂಪ ಣೆಯೇ ವೀರಶೈವಾಮೃತ ಪುರಾಣದ ಮುಖ್ಯವಿಷಯ. ಚೆನ್ನಬಸವ ಪುರಾಣದಲ್ಲಿ ಸಹ ಚೆನ್ನಬಸವಣ್ಣನವರ ಚರಿತ್ರೆ ಬಂದಿರುವುದು ಮೊದಲಿನ ನಾಲ್ಕೈದು ಸಂಧಿಗಳಲ್ಲಿ ಮಾತ್ರ. ಪುರಾಣದ ಬಹುಭಾಗವೆಲ್ಲ, ಶಿವತತ್ವ ವಿವೇಚನೆ, ಪಿಂಡೋತ್ಪತ್ತಿ, ಕರಣ ಹಸಿಗೆ, ಪಂಚ ವಿಂಶತಿ ಲೀಲೆ, ದೀಕ್ಷಾ ವಿಧಾನ, ಲಿಂಗಪೂಜಾ ವಿಧಾನ, ಷಟ್‌ಸ್ಥಲ ನಿರ್ಣಯ ಇವುಗಳಿಂದ ತುಂಬಿಹೋಗಿದೆ. ತತ್ವಪ್ರಧಾನವಾಗಿರುವ ವೀರಶೈವಾಮೃತ ಪುರಾಣದಲ್ಲಿ

೧. ಪ್ರವೃತ್ತಿ ತತ್ವವಿವರಣೆ
೨. ಶಿವನ ಪಂಚವಿಂಶತಿ ಲೀಲೆಗಳು
೩. ನಿವೃತ್ತಿ ತತ್ವ ನಿರೂಪಣೆ
೪. ಬಸವಾದಿ ಶರಣರ ಚರಿತ್ರ ನಿರೂಪಣೆ
೫. ಷಟ್ಸ್ಥಲ ನಿರೂಪಣೆ.

ಇವು ಪ್ರಧಾನ ವಿಷಯುಗಳಾಗಿ ಬಂದಿವೆ. ಪ್ರಥಮಕಾಂಡದಲ್ಲಿ ವಸ್ತು ನಿರ್ದೇಶ, ಪಂಚಾ ವರಣಾಂಗ ಸದ್ಭಕ್ತ ಲಕ್ಷಣ, ಅನಾದಿ ಜಂಗಮದ ಮಕುಟದಲ್ಲಿ ಶೂನ್ಯಲಿಂಗೋತ್ಪತ್ತಿ, ಚಿದಂಬರೋದ್ಧರಣೆ, ತ್ರ್ಯಕ್ಷರ, ಪಂಚಾಕ್ಷರ, ಷಡಕ್ಷರ ವಿವರಣೆ, ಭಾವಮೂರ್ತಿ ಲಕ್ಷಣ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗಾಂಗ ಸ್ವರೂಪ ವಿವರಣೆ, ನಿಷ್ಕಲ, ಸಕಲ, ಸಕಲ-ನಿಷ್ಕಲ, ಶಕ್ತಿ ಸಾದಾಖ್ಯ ಲಕ್ಷಣ ಗಳನ್ನು ವಿವರಿಸಿ ೨ ನೆಯ ಕಾಂಡದಿಂದ ೪ ನೆಯ ಕಾಂಡ ಮುಗಿಯುವವರೆಗೆ ಪರಶಿವನ ಪಂಚವಿಂಶತಿ ಲೀಲೆಗಳ ವರ್ಣನೆಯಿದೆ. ದಕ್ಷಿಣಾಮೂರ್ತಿ ಲೀಲೆಯ ನಂತರ ದಾರುವವನದ ಮುನಿಗಳಿಗೆ ಪರಶಿವನು ಸ್ವಾತ್ಮಯೋಗ ಪ್ರದೀಪಿಕೆಯನ್ನು ವಿವರಿಸುವನು. ವೀರಶೈವದ ಶಕ್ತಿ ವಿಶಿಷ್ಟ ದ್ವೈತವನ್ನು ಅರ್ಥಮಾಡಿಕೊಳ್ಳುವುದಕ್ಕೆ ಅದ್ವೈತ ವೇದಾಂತದ ವಿವರಣೆ ಅವಶ್ಯವೆಂದು ಅದನ್ನು ವಿವರಿಸುತ್ತಾನೆ. ಅಹಂಕಾರವು ಆತ್ಮನಲ್ಲವೆಂದು ಹೇಳಿ ಆತ್ಮನು ದೇಶಕಾಲಾದಿ ಸರ್ವಪ್ರೇರಕನೆಂದು ಸಾರುವನು. ಬ್ರಹ್ಮವೇ ತಾನೆಂಬ ಸದ್ವಿಂಶಿಕೆಯನ್ನು ವಿವರಿಸಿ, ಅವಸ್ಥಾತ್ರಯ ಕಾರಣ ಚಿತ್ತೇ ತಾನೆಂದು ತಿಳಿಸುವನು. ಆಮೇಲೆ ಆತ್ಮ ಚಿದ್ವಿಂಶಿಕೆಯನ್ನು ವಿವರಿಸುವನು. ಪರಮಾತ್ಮನು ಬಹುರೂಪನೆಂದು ತಿಳಿಸುವನು. ಆತ್ಮನು ಆನಂದ ಸ್ವರೂಪನೆಂಬುದನ್ನು ವಿವರಿಸುವನು. ತತ್ತ್ವಮುನಿ ವಾಕ್ಯವನ್ನು ವಿವರಿಸುವನು. ಮೂಲವಸ್ತುವೇ ಜಗತ್ಕಾರಣವೆಂದು ಹೇಳಿ ಆತ್ಮ ವಿದ್ಯೆಯನ್ನು ತಿಳಿಸು ವನು. ಬಂಧವಳಿದಾತ್ಮನೇ ಮುಕ್ತನೆಂದು ಹೇಳಿ ಶಿಷ್ಯ ಗುರುವಾಗುವ ಬಗೆಯನ್ನು ಬಿತ್ತ ರಿಸುವನು. ವೇದಾಂತವನ್ನು ವಿವರಿಸುವ ಈ ಭಾಗ ಶಾಂಕರ ಭಾಷ್ಯದಂತೆ ಗಂಭೀರವಾಗಿದೆ; ಶಾಸ್ತ್ರೀಯವಾಗಿದೆ. ಗುಬ್ಬಿಯ ಮಲ್ಲಣಾರ್ಯರ ವಾದ ಸರಣಿ, ವಿವೇಚನೆ, ಪಾಂಡಿತ್ಯ, ಶಾಸ್ತ್ರೀಯತೆಗೆ ಎಲ್ಲರೂ ತಲೆದೂಗಬೇಕು. ವೇದಾಂತ ವಿಷಯದಲ್ಲಿ ಅಷ್ಟೆ ನಿಸ್ಸೀಮ ರಾಗಿದ್ದರು. ವೇದಾಂತ ವಿಷಯವನ್ನು ವಿವರಿಸುವಾಗ ಅಲ್ಲಲ್ಲಿ ವೀರಶೈವ ಹೀಗಲ್ಲವೆಂದು ಸೂಚಿಸುತ್ತಾನೆ. ಇದರಿಂದ ವೇದಾಂತಕ್ಕೂ ವೀರಶೈವಕ್ಕೂ ಇರುವ ವ್ಯತ್ಯಾಸ ವ್ಯಕ್ತ ವಾಗುತ್ತದೆ. ವೀರಶೈವಾಮೃತ ಪುರಾಣದಲ್ಲಿ ವೇದಾಂತ ವಿಚಾರವೇಕೆಂದು ಪ್ರಶ್ನಿಸುವ ವರಿಗೆ ಇಲ್ಲಿ ಉತ್ತರ ದೊರೆಯುತ್ತದೆ. ವೇದಾಂತ ವಿಚಾರಗಳನ್ನು ಮಂಡಿಸುವಲ್ಲಿ ಶ್ರುತಿ ಸ್ಮೃತಿಗಳ ಪ್ರಮಾಣಗಳನ್ನು ಹೇರಳವಾಗಿ ಉದ್ಧರಿಸುವರು. ಇದರಿಂದ ಗುಬ್ಬಿಯ ಮಲ್ಲಣಾರ್ಯರ ತತ್ತ್ವಜ್ಞಾನದ ಆಳ ಅಭಿವ್ಯಕ್ತವಾಗುತ್ತದೆ. ಅವರ ತರ್ಕಸರಣಿ ವಾದ, ವಿಚಾರ ನಿರ್ಣಯ ನಿಚ್ಚಳವಾದುವು.

ಮಹಾಲಿಂಗೋದ್ಭವ ಆರನೆಯ ಕಾಂಡದಿಂದ ಆರಂಭವಾಗುತ್ತದೆ. ಮಹಾಲಿಂಗ ಮೂರ್ತಿ ವಿಷ್ಣು ಬ್ರಹ್ಮರಿಗೆ ಆತ್ಮ ಧರ್ಮವನ್ನು ಅರುಹುವನು. ಶತರತ್ನದಲ್ಲಿ ಆತ್ಮ ತ್ರಯದ ಅವಸ್ಥೆಗಳನ್ನು ವಿವರಿಸಲಾಗಿದೆ. ಷಡಧ್ವಗಳನ್ನು ವಿಸ್ತರಿಸುವನು. ಮಹಾ ಮಾಯೆಯೇ ಪರಶಿವ ಪರಾಶಕ್ತಿಯೆಂದು ತಿಳಿಸುವನು. ಕಾಲತ್ರಯಕ್ರಮ ದೀಕ್ಷಾವಿಷಯ ವನ್ನು ವಿವರಿಸುವನು.

ಮುಂದಿನ ಏಳನೆಯ ಕಾಂಡದಲ್ಲಿ ಶೈವಧರ್ಮದ ವಿಷಯವನ್ನು ಎತ್ತಿಕೊಳ್ಳಲಾಗಿದೆ. ವೀರಶೈವವು ಶೈವಧರ್ಮ ಮಹಾವೃಕ್ಷದ ಸುಮಧುರ ಫಲವಾಗಿರುವುದರಿಂದ ವೀರಶೈವ ವನ್ನು ಅರ್ಥಮಾಡಿಕೊಳ್ಳಲು ಸಪ್ತಶೈವ ತ್ರಿಶೈವಗಳ ವಿವರ ಅವಶ್ಯವೆಂದು ಶೈವ ಚರಿತ್ರೆ, ಸಿದ್ಧಾಂತಗಳನ್ನು ವಿಶದವಾಗಿ ವಿವರಿಸುವರು. ಈ ಹಿನ್ನೆಲೆಯಲ್ಲಿ ವೀರಶೈವವನ್ನೂ ಕರಣ ಹಸಿಗೆಯನ್ನೂ ತಿಳಿಸುವರು. ಇಲ್ಲಿ ದೀಕ್ಷಾ ಕ್ರಮವನ್ನು ಸವಿವರವಾಗಿ ತಿಳಿಯಪಡಿಸುವರು. ದೀಕ್ಷಾ ಮಂಟಪ, ಪಂಚಕಲಶ ಪ್ರತಿಷ್ಠಾಪನೆ, ರುದ್ರಾಕ್ಷಿ, ಜಪ, ಯೋಗಾಸನಗಳನ್ನು ವಿವರಿಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಗುರು ಶಿಷ್ಯನನ್ನು ಮಂತ್ರಮೂರ್ತಿಯಾಗಿ ಮಾಡುವನು. ಮಂತ್ರಾಂಗನಾದ ಶಿಷ್ಯನಿಗೆ ದೀಕ್ಷೆಯನ್ನು ಮಾಡುವನು. ವೀರಶೈವಧರ್ಮದ ಸದಾಚಾರಶೀಲ ಕ್ರಮಗಳನ್ನು ತಿಳಿಸುವರು. ಅರವತ್ತುನಾಲ್ಕು ಶೀಲಗಳನ್ನು ವಿವರಿಸಿರುವರು. ಕೊನೆಗೆ ಕ್ರಿಯಾ ಸಮಾಧಿಯ ವಿವರವನ್ನು ಕೊಟ್ಟಿರುವರು.

ಈ ಭಾಗ ವೀರಶೈವ ವಿವರಗಳನ್ನು ಧಾರ್ಮಿಕ ಆಚರಣೆಗಳನ್ನು ವಿಧಿವಿಧಾನಗಳನ್ನು ತಿಳಿಸುವ ಕೈಪಿಡಿಯಾಗಿದೆ. ಮಂತ್ರ ತಂತ್ರಗಳನ್ನು ಯಥೇಷ್ಟವಾಗಿ ಉದ್ಧರಿಸುವರು.

ಎಂಟನೆಯ ಕಾಂಡದಲ್ಲಿ ಪಾಲ್ಕುರಿಕೆ ಸೋಮನಾಥನ ಬಸವ ಪುರಾಣವನ್ನನುಸರಿಸಿ ಬಸವೇಶನ ಅನೇಕ ಚರಿತ್ರೆಯನ್ನು ಹೇಳುವರು. ಬಸವೇಶ್ವರನ ಅನೇಕ ಪವಾಡಗಳನ್ನು ವಿವರಿಸಲಾಗಿದೆ. ಆ ಮೇಲೆ ಪಂಡಿತಾರಾಧ್ಯರ ಚರಿತ್ರೆಯನ್ನು ಹೇಳುವರು. ಇದನ್ನು ಸಹ ಪಾಲ್ಕುರಿಕೆ ಸೋಮೇಶನ ಆರಾಧ್ಯ ಚರಿತ್ರೆಯನ್ನನುಸರಿಸಿಯೇ ಹೇಳಲಾಗಿದೆ. ಪಂಡಿತಾರಾಧ್ಯರು ಬಸವಣ್ಣನವರ ವಿಷಯವಾಗಿ ಇಟ್ಟುಕೊಂಡ ಪೂಜ್ಯ ಭಾವನೆ ಪರಿಸ್ಫುಟವಾಗುವಂತೆ ಚಿತ್ರಿಸಿದ್ದಾರೆ. ಪಂಡಿತಾರಾಧ್ಯರು ಬಸವಣ್ಣನವರ ದರ್ಶನಕ್ಕೆ ಹೊರಡುವಷ್ಟರಲ್ಲಿ ಅವರು ಸಂಗಮೇಶ್ವರನಲ್ಲಿ ಐಕ್ಯವಾದ ವಿಷಯ ತಿಳಿದುಬರುತ್ತದೆ. ಬಸವಾ ಬಸವಾ ಬಸವಾ ಎಂದು ಆರಾಧ್ಯರು ಹಂಬಲಿಸುವವರು. ಅವನ ನಾಮಸ್ಮರಣೆಯಿಂದ ಅವರಿಗೆ ಕನ್ನಡ ಬಂದುಹೋಗುವುದು.

ವೀರಶೈವ ಪುರಾಣಗಳಲ್ಲಿ ವಾದ ಪ್ರಕರಣ ಒಂದು ವಿಶಿಷ್ಟವಾದ ಲಕ್ಷಣವಾಗಿ ಪರಿವರ್ತಿತವಾಗಿದೆ. ರೇವಣಸಿದ್ಧೇಶ್ವರ . ಪುರಾಣ, ಶಿವತತ್ತ್ವ ಚಿಂತಾಮಣಿ, ಸಿಂಗರಾಜ ಪುರಾಣ, ಪಂಡಿತಾರಾಧ್ಯಚರಿತ್ರೆ, ಗುರುರಾಜ ಚಾರಿತ್ರ್ಯ, ಪದ್ಮರಾಜ ಪುರಾಣ ಮೊದಲಾದವುಗಳಲ್ಲಿ ಬರುವ ವಾದ ಪ್ರಕರಣಗಳು ಬಹುಮಹತ್ವವಾದುವು. ಬೌದ್ಧರು, ಮೀಮಾಂಸಕರು, ವೈಷ್ಣವರು ಇವರೇ ಮೊದಲಾದವರನ್ನು ಅನುಕ್ರಮವಾಗಿ ಪಂಡಿತಾಧ್ಯರು (ಪಂಡಿತಾರಾಧ್ಯ ಚರಿತ್ರೆ) ಬಸವಣ್ಣ (ಶಿವತತ್ತ್ವ ಚಿಂತಾಮಣಿ, ಸಿಂಗಿರಾಜ ಪುರಾಣ) ರೇವಣಸಿದ್ಧ (ರೇವಣಸಿದ್ಧೇಶ್ವರ ಪುರಾಣ,) ಕೆರೆಯಪದ್ಮರಸರು (ಪದ್ಮರಾಜ ಪುರಾಣ) ಎದುರಿಸಿ ವಾದದಲ್ಲಿ ಜಯಶೀಲರಾಗಿರುವರು. ವೈಷ್ಣವ, ಚೋಳ, ವ್ಯಾಸ, ಮೀಮಾಂಸಕಾಚಾರ್ಯ, ಬುದ್ಧಗುರು, ಚಕ್ರಪಾಣಿ ರಂಗನಾಥ, ತ್ರಿಭುವನತಾತ, ಮುಕುಂದಿ ಪೆದ್ದಿ ಮುಂತಾದವರು ಸೋತು ಹೋಗಿರುವರು. ಚಕ್ರಪಾಣಿ ರಂಗನಾಥ ವೀರಶೈವ ದೀಕ್ಷೆ ಪಡೆದಿರುವನು. ವೀರಶೈವಾಮೃತ ಪುರಾಣದಲ್ಲಿ ವಾದ ಪ್ರಕರಣ, ಮಹಿಮಾಪ್ರಕರಣಗಳು ವಿಶದವಾಗಿ ಬಂದಿವೆ.

ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತ ಪುರಾಣ, ಚೆನ್ನಬಸವ ಪುರಾಣಗಳಲ್ಲಿ ನೂತನ ಶರಣರ ಚರಿತ್ರೆಗಳನ್ನು ವಿವರಿಸಲಾಗಿದೆ. ತಂತಮ್ಮ ಸಮಕಾಲೀನ ಭಕ್ತರ ಚರಿತ್ರೆಯನ್ನು ಸಂಗ್ರಹಿಸಿ ಒಮ್ಮೊಮ್ಮೆ ಹೆಸರಿಸಿ, ಮತ್ತೊಮ್ಮೆ ಹಲವರ ವೈಶಿಷ್ಟ್ಯಗಳನ್ನು ಒದಗಿಸಿ ಶರಣರ ಚರಿತ್ರೆಗಳನ್ನು ಕೊಟ್ಟಿರುವನು. ವೀರಶೈವಾಮೃತ ಪುರಾಣದಲ್ಲಿ ಇಂತಹ ಸಾವಿರಾರು ಭಕ್ತರ ಹೆಸರುಗಳು ಬಂದಿವೆ. ಇದು ವೀರಶೈವದ ಚರಿತ್ರೆಯ ದೃಷ್ಟಿಯಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಹು ಮಹತ್ತ್ವವಾದ ಸಂಗ್ರಹ. ಈ ಕವಿಗಳ ಧಾರ್ಮಿಕ, ಪೌರಾಣಿಕ, ಚಾರಿತ್ರಿಕ ದೃಷ್ಟಿ ಪ್ರಶಂಸನೀಯವಾಗಿದೆ.

ಕೊನೆಗೆ ಏಕೋತ್ತರ ಶತಸ್ಥಲ, ಷಟ್‌ಸ್ಥಲ,ಅಷ್ಟಾವರಣ, ಪಂಚಾಚಾರಗಳ ವಿವರಣೆ ಬರುತ್ತದೆ. ಅಂಗಸ್ಥಲ, ಲಿಂಗಸ್ಥಲಗಳೆರಡನ್ನೂ ವಿವರಿಸಿ ೪೪ ಅಂಗಸ್ಥಲ, ೫೭ ಅಂಗಸ್ಥಲ, ಕಾರಣಾಂಗಸ್ಥಲ, ಮಿಶ್ರ ಷಟ್‌ಸ್ಥಲ, ೨೧೬ ಸ್ಥಲಗಳು ಅವುಗಳ ಸಂಬಂಧ, ಮಿಶ್ರಾರ್ಪಣ, ಷಟ್‌ಸ್ಥಲ ಬ್ರಹ್ಮ ಮುಂತಾದವುಗಳ ಅತಿಸೂಕ್ಷ್ಮ ವಿವರಗಳನ್ನು ತಿಳಿಸಿ ಪಿಂಡಾದಿ ಜ್ಞಾನ ಶೂನ್ಯರತವಾದ ಏಕೋತ್ತರ ಸ್ಥಲಗಳನ್ನು ಮಾರ್ಮಿಕವಾಗುವಂತೆ ವಿವರಿಸುವರು. ಕೊನೆಗೆ ಚಿದ್‌ಬ್ರಹ್ಮಾಂಡದ ಬಸವಾದಿ ಶರಣರ ಆಚರಣೆಯನ್ನು ಹೇಳಲಾಗಿದೆ. ವೀರಶೈವಾಮೃತದ ವಿಷಯಸಾರವನ್ನು ಈ ಗ್ರಂಥದ ಕೊನೆಗೆ ಕೊಡಲಾಗಿದೆ.

ಹೀಗೆ ವೀರಶೈವಾಮೃತ ಪುರಾಣವು ವೀರಶೈವದ ಒಂದು ವಿಶ್ವ ಕೋಶವಾಗಿದೆ. ಕೇವಲ ವೀರಶೈವದ ಕೋಶಮಾತ್ರವಲ್ಲ ವೇದಾಂತ,ಶೈವ ಸಿದ್ಧಾಂತಗಳ ಕೋಶವೂ ಆಗಿದೆ. ಶೈವ ವೀರಶೈವಕ್ಕೆ ಸಂಬಂಧಪಟ್ಟ ಸಾವಿರಾರು ಕಥೆಗಳೂ ಅನೇಕ ಚರಿತ್ರೆಗಳೂ ಇದರಲ್ಲಿ ಉಕ್ತವಾಗಿವೆ. ಪರಶಿವನ ಪಂಚವಿಂಶತಿ ಲೀಲೆಗಳು ವೇದ, ಆಗಮ ಶಾಸ್ತ್ರಗಳ ಉಪಕರಣ ಗಳು, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಮೊದಲಾದ ವಿಚಾರಗಳು ಇಲ್ಲಿ ಬಂದಿವೆ. ಇಂತಹ ಸಾವಿರಾರು ವಿಷಯಗಳನ್ನು ಒಳಗೊಳ್ಳುವ ಒಂದು ಬೃಹತ್ ಕಾವ್ಯವನ್ನು ರಚಿಸಿ ರುವ ಮಲ್ಲಣಾರ್ಯರ ಶಕ್ತಿ ಸಾಮಾನ್ಯವಲ್ಲ. ಅವರ ಕಾವ್ಯ ಪ್ರತಿಭೆ, ಭಾವ ಚಿಂತಾರತ್ನ ದಲ್ಲಿ ತುಂಬಿ ಪ್ರಕಟವಾಗಿದೆ. ವೀರಶೈವಾಮೃತ ಪುರಾಣದಲ್ಲಿಯೂ ಅವಕಾಶ ದೊರೆತಾಗ ಲೆಲ್ಲ ಕಾವ್ಯ ಪ್ರತಿಭೆ ಎದ್ದು ಕಾಣುತ್ತದೆ. ಆದರೆ ಶಾಸ್ತ್ರವಿಷಯಗಳನ್ನು ಸಿದ್ಧಾಂತಗಳನ್ನು ಷಟ್ಪದಿಯ ಚೌಕಟ್ಟಿನಲ್ಲಿ ಅವುಗಳ ಮೂಲ ಆಶಯಕ್ಕೆ ಭಂಗ ಬಾರದಂತೆ ಹೇಳಿದ ಗುಬ್ಬಿಯ ಮಲ್ಲಣಾರ್ಯರ ಸತ್ವಪೂರ್ಣ ಷಟ್ಪದಿಯ ಶೈಲಿಯನ್ನು ಮೆಚ್ಚಲೇಬೇಕು. ಅನೇಕ ಸಂದರ್ಭದಲ್ಲಿ ವೇದಾಗಮೋಕ್ತ ಸೂಕ್ತಿಗಳನ್ನು ಷಟ್ಪದಿಯಲ್ಲಿಯೇ ಅಳವಡಿಸಿರುವುದು ಉಭಯ ಭಾಷೆಗಳ ಮೇಲೆ ಕವಿಗಿದ್ದ ಪ್ರಭುತ್ವವನ್ನು ವ್ಯಕ್ತಪಡಿಸುತ್ತವೆ. ಆತನ ಶಬ್ದ ಸಂಪತ್ತಿ ಅಪಾರ. ಅವನ ವಾರ್ಧಿಕ ಷಟ್ಪದಿಗಳು ಮಾರ್ಗ ದೇಶಿಗಳ ಸಂಗಮವಾಗಿವೆ. ಶಾಸ್ತ್ರದಂತಹ ಗಂಭೀರ, ಸೂಕ್ಷ್ಮಾತ್‌ಸೂಕ್ಷ್ಮ ವಿಚಾರಗಳನ್ನು ಅಭಿವ್ಯಕ್ತಪಡಿಸುವ ಶಕ್ತಿ ಆರುಷಟ್ಪದಿಗೆ ಪ್ರಾಪ್ತವಾದುದು ಪ್ರಶಂಸನೀಯ.

ಇದು ಗಾತ್ರ ದೃಷ್ಟಿಯಿಂದ ಮಾತ್ರ ಬೃಹತ್‌ಕೃತಿಯಲ್ಲ, ಸತ್ವದೃಷ್ಟಿಯಿಂದಲೂ ಹಿರಿದಾಗಿದೆ. ಒಂದು ಕೃತಿಯ ಮೌಲ್ಯವನ್ನು ಕೇವಲ ಸಾಹಿತ್ಯದೃಷ್ಟಿಯಿಂದ ನೋಡುವ ಕಾಲ ಈಗ ಹಿಂದಾಗಿದೆ. ಬದುಕಿಗೆ ಅವಶ್ಯವಾದ ಅನೇಕ ವಿಷಯಗಳಿವೆ; ಅಂತಹ ವಿಷಯಗಳನ್ನು ಕುರಿತು ಬರೆದ ಕೃತಿಗಳನ್ನು ಆ ದೃಷ್ಟಿಯಿಂದಲೇ ನೋಡಿ ಬೆಲೆ ಕಟ್ಟಬೇಕಾಗುತ್ತದೆ. ವೀರಶೈವಾಮೃತ ಪುರಾಣ ಆ ದೃಷ್ಟಿಯಿಂದ ಒಂದು ಮಹತ್ವದ ಕೃತಿಯೆಂದು ಹೇಳಬೇಕಾಗುತ್ತದೆ. ಕವಿಯ ಪ್ರತಿಭೆ, ಪಾಂಡಿತ್ಯ, ಭಾಷಾಶಕ್ತಿ–ಶಬ್ಧ ಸಂಪತ್ತಿ, ತಾತ್ವಿಕ ದೃಷ್ಟಿ, ಧಾರ್ಮಿಕ ವಿವೇಚನೆ, ಪುರಾತನ ನೂತನಗಳನ್ನು ಸಮನ್ವಯ ಮಾಡುವ ಜಾಣ್ಮೆ ಇವು ಪ್ರಶಂಸನೀಯವಾಗಿವೆ. ಗುಬ್ಬಿಯ ಮಲ್ಲಣಾರ್ಯರು ಬಸವಣ್ಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವರ ವಿಷಯವಾಗಿ ಇಟ್ಟುಕೊಂಡ ಭಾವನೆ ಅಪ್ರತಿಮವಾಗಿದೆ. ಅವರ ದೃಷ್ಟಿಯಲ್ಲಿ ಬಸವೇಶ ಮಂತ್ರಮೂರ್ತಿ ಲಿಂಗಸ್ವರೂಪ. ಆದುದರಿಂದ ಬಸವೇಶ್ವರಾದಿ ಪ್ರಮಥರ ಆಚರಣೆಯೇ ವೀರಶೈವವೆಂದು ಕವಿ ಘಂಟಾಗೋಷವಾಗಿ ಸಾರಿರುವುದು ನಿತ್ಯಸತ್ಯ. ಬಸವ ಪೌರಾಣವನ್ನು ಹೇಳುವುದು ಅವರ ವೃತ್ತಿಯಾದಂತಿದ್ದಿತು. ಕಾರಣ ಗುಬ್ಬಿಯ ಮಲ್ಲ ಣಾರ್ಯರು ಬಸವ ಪೌರಾಣದ ಮಲ್ಲಣಾರ್ಯರೆಂದೇ ನೆಗಳ್ತೆವಡೆದಿರುವರು.

ಗ್ರಂಥ ಪ್ರಕಟನೆ

ವೀರಶೈವಾಮೃತ ಪುರಾಣವನ್ನು ಸಂಪಾದನೆ ಮಾಡಬೇಕೆಂಬ ನಮ್ಮ ಸಂಕಲ್ಪ ಕಾಲುಶತಮಾನದಷ್ಟು ಹಳೆಯದು. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಆಯೋಜನೆಯನ್ನು ಸ್ವೀಕರಿಸಿದ್ದಿತು. ಕಾರ್ಯವನ್ನು ಪ್ರಾರಂಭಮಾಡಿ ಬೇರೆ ಸಾಹಿತ್ಯಿಕ ಕಾರ್ಯ ಗಳ ಒತ್ತಡದ ಮೂಲಕ ಅದನ್ನು ಸ್ಥಗಿತವಿಡಲಾಗಿದ್ದಿತು. ಒಂದು ಅಣಿ ತಪ್ಪಿದರೆ ಸಾವಿರ ಅಣಿ ತಪ್ಪುವುದೆಂಬ ಮಾತು ದಿಟವಾದುದು. ಕಾಗದ ಮುದ್ರಣ, ಇತರ ವಸ್ತುಗಳ ಬೆಲೆ ಗಳು ಗಗನಕ್ಕೇರಿದಾಗ, ಒಂದಕ್ಕೆ ನೂರ್ಮಡಿಯಾದಾಗ ಇಂತಹ ಬೃಹತ್ ಗ್ರಂಥವನ್ನು ಪ್ರಕಟಿಸಲು ಮುಂದೆ ಬರುವ ಸಂಸ್ಥೆಗಳೂ ಜನಗಳೂ ವಿರಳ. ಹಿಂದೆ ೧೯೦೬,೧೯೦೭ನೆಯ ಇಸ್ವಿಗಳಲ್ಲೂ ಬೆಂಗಳೂರು ನಂಜುಂಡ ಶಾಸ್ತ್ರಿಗಳವರ ಮಕ್ಕಳಾದ ಶಿವಪ್ಪ ಶಾಸ್ತ್ರಿಗಳು ಈ ಗ್ರಂಥವನ್ನು ಪ್ರಕಟಿಸಿದಾಗ ಅನೇಕಜನ ಮಹಾಸ್ವಾಮಿಗಳೂ ಮಹನೀಯರೂ ಉದಾರ ವಾಗಿ ದಾನಮಾಡಿದರೆಂದು ಶಾಸ್ತ್ರಿಗಳು ಹೇಳುತ್ತಾರೆ:

೧) ಶ್ರೀ ಮನ್ಮಹಾ ಜಗದ್ಗುರು ಚಿನ್ಮೂಲಾದ್ರಿ ಬೃಹನ್ಮಠ ಜಯದೇವ ಮುರುಘ ರಾಜೇಂದ್ರ ದೇಶಿಕೇಂದ್ರರವರು.

೨) ಶ್ರೀಮನ್‌ಮಹಾಭ್ರೂಪ್ರರ ತ್ರಿಸಹಸ್ರಮಠ ಗಂಗಾಧರಸ್ವಾಮಿಗಳವರು.

೩) ಶ್ರೀಮನ್‌ಮಹಾ ಕೃತಪುರೀ ತೋಂಟದಾರ್ಯಸ್ವಾಮಿಗಳವರು.

೪) ಶ್ರೀಮನ್‌ಮಹಾ ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳವರು ಹಾಗೂ ಈ ನಾಡಿನ ಇತರ ೨೦-೨೨ ಜನ ಮಹಾಸ್ವಾಮಿಗಳವರು ವಾರದ ಮಲ್ಲಪ್ಪನವರು, ವೀರಶೈವ ಮಹಾಸಭೆಯವರು ಧನಸಹಾಯ ಮಾಡಿದ್ದರು.

ಈ ಗ್ರಂಥದ ಪ್ರತಿಗಳು ತೀರಿಹೋಗಿ ಅನೇಕ ವರ್ಷಗಳಾಗಿದ್ದರೂ ಗ್ರಂಥ ಬೆಳಕು ಕಾಣದೆ ಹಾಗೆಯೇ ಉಳಿದಿದ್ದಿತು.

ಶತಾಯುಷಿಗಳಾದ ನಾಗನೂರು ಪೂಜ್ಯ ಶಿವಬಸವ ಸ್ವಾಮಿಗಳವರ ಶತಮಾನೋ ತ್ಸವದ ಮಂಗಲ ಸಮಯದಲ್ಲಿ ಈ ಗ್ರಂಥ ಪ್ರಕಟವಾಗುವ ಸುಯೋಗ ಪ್ರಾಪ್ತವಾಯಿತು. ಈ ಮಹತ್‌ಕಾರ್ಯಕ್ಕೆ ಮುಂದೆಬಂದ ಸಂಸ್ಥೆ ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ, ಬೆಂಗಳೂರು. ಆ ಸಂಸ್ಥೆಯ ಪದಾಧಿಕಾರಿಗಳು ಶ್ರೀ ಸಿ. ಎ. ಜಮಖಂಡಿ ಮಠ ಆಯ್.ಎ.ಎಸ್(ನಿವೃತ್ತ) ಬೆಂಗಳೂರು, ಚೆಅರಮನ್ನರು, ಶ್ರೀ ಕೆ. ಎಂ. ನಂಜಪ್ಪ ನವರು ಬೆಂಗಳೂರು, ಶ್ರೀ ಜಿ. ಎಂ. ಹಿರೇಮಠ ನಿವೃತ್ತ ಪ್ರಾಂತಸಾಹೇಬರು ಗೌ. ಕಾರ್ಯದರ್ಶಿಗಳು.

ಈ ಸಂಸ್ಥೆಯವರು ಮುಕ್ತಹಸ್ತದಿಂದ ಈ ಗ್ರಂಥಪ್ರಕಟನೆಗೆ ಲಕ್ಷಾಂತರ ರೂ. ವೆಚ್ಚ ಮಾಡಲು ಮುಂದೆ ಬಂದುದು ಚರಿತ್ರಾರ್ಹ ವಿಷಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಾಯುಷಿ ಪೂಜ್ಯ ಡಾ.ಶಿವಬಸವ ಸ್ವಾಮಿಗಳವರ ಉತ್ತರಾಧಿಕಾರಿಗಳಾಗಿ ನಾಗನೂರು ಶ್ರೀ ರುದ್ರಾಕ್ಷಿ ಮಠದ ಪೀಠವನ್ನೇರಿದ ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳವರ ಸಂಕಲ್ಪ, ಸಹಾಯ, ಶ್ರದ್ಧೆ, ಸಹಕಾರ, ಆಶೀರ್ವಾದಗಳನ್ನು ಬಣ್ಣಿಸುವ ಶಕ್ತಿ ಶಬ್ದಕ್ಕಿಲ್ಲ. ಶತಮಾನೋತ್ಸವದ ಸಂದರ್ಭದಲ್ಲಿ ಈ ಗ್ರಂಥ ಪ್ರಕಟವಾಗಲೇಬೇಕೆಂದು ಸಂಕಲ್ಪ ಮಾಡಿದವರೂ ಎನ್-ಎಸ್–ಎಸ್ ಕಲ್ಯಾಣ ಕೇಂದ್ರದ ಅಧಿಕಾರಿಗಳ ಒಪ್ಪಿಗೆಯನ್ನು ಪಡೆದವರೂ ಈ ಶ್ರೀಗಳೇ. ಅವರ ತೀಕ್ಷ್ಣ ಬುದ್ಧಿ, ಉದಾರ ದೃಷ್ಟಿ, ಶಾಂತಸ್ವಭಾವ, ಕರ್ತೃತ್ವ ಶಕ್ತಿ ಈ ದಿಶೆಯಲ್ಲಿ ಕೆಲಸ ಮಾಡಿ ಈ ಗ್ರಂಥ ಪ್ರಕಟವಾಗಲು ಕಾರಣವಾದವು. ಇದೆಲ್ಲದರ ಹಿಂದೆ ಇದ್ದ ಮಹಾ ಚೇತನಶಕ್ತಿಯೆಂದರೆ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸಂಸ್ಥಾನಮಠ ಡಂಬಳ ಗದಗ ಈ ಮಹಾಸನ್ನಿಧಾನ. ಅವರು ಪಟ್ಟವೇರಿದ ೧೨ ವರ್ಷಗಳ ಅವಧಿಯಲ್ಲಿ ಪ್ರಕಟಿಸಿದ ಹಿರಿಕಿರಿಯ ಕೃತಿಗಳು ನಮ್ಮ ಸಾಹಿತ್ಯದಲ್ಲಿ ಹೊಸಯುಗವನ್ನು ಪ್ರಾರಂಭಿಸಿದರೆ ತಮ್ಮ ಅಸ್ಖಲಿತವಾಣಿಯಿಂದ ಬಂದ ಅಮೃತ ತುಲ್ಯಭಾಷಣಗಳು ಜನ ಜೀವನದ ಹೃನ್ಮಂದಿರದಲ್ಲಿ ಲಿಂಗದ ಬೆಳಕನ್ನು ಪ್ರಜ್ವಲಿಸಿವೆ: ಧಾರ್ಮಿಕ, ಸಾಮಾಜಿಕ ಜಾಗ್ರತಿಯನ್ನುಂಟು ಮಾಡಿವೆ. ಅವರ ಸತ್ಯ ಶುದ್ಧ ಆಚಾರ, ನಿರಾಡಂಬರ ಜೀವನ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳು ನಾಡಿಗೆ ಆದರ್ಶವನ್ನು ನೀಡಿವೆ. ಅಂತಹ ಪುಣ್ಯಚರಿತರ ಸಂಕಲ್ಪ ಈ ಕೃತಿಗಿದೆ. ಮೇಲೆ ನಿರ್ದೇಶಿಸಿದ ಪುಣ್ಯಪುರುಷರ ಚರಿತೆ ಗಂಗಾ ಜಲದಂತೆ ಪವಿತ್ರವಾಗಿದೆ. ಇವರೆಲ್ಲರಿಗೆ ಭಕ್ತಿ ಪೂರಿತಪ್ರಣಾಮಗಳು

ಗ್ರಂಥಸಂಪಾದನೆ

ಈ ಗ್ರಂಥ ಸಂಪಾದನೆಗೆ ಬಳಸಿದ ಪ್ರತಿಗಳ ವಿವರ

ತಾ : ಇದು ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದೊಳಗಿನ ೨೬೪೯ ನೆಯ ಕ್ರಮಾಂಕದ ತಾಳೆಗರಿಯ ಪ್ರತಿ, ಮೊದಲಿನಿಂದ ಕೊನೆಯವರೆಗೆ ಪೂರ್ತಿ ಇದೆ. ಬಹಳ ಹಳೆಯ ಪ್ರತಿಯಾದುದರಿಂದ ಖಿಲಿವಾಗ ತೊಡಗಿದೆ. ತೃಟಿತವಾಗುವ ಸ್ಥಿತಿಯಲ್ಲಿಯೂ ಇದೆ.

ಶಕಟರೇಫೆ (ಱ) ಯನ್ನು ಅತ್ಯಂತ ಶುದ್ಧವಾಗಿ ಬಳಸಿರುವುದರಿಂದ ಪ್ರತಿ ತೀರ ಹಳೆಯದೆಂದು ತೋರುತ್ತದೆ.

ಈ ಪ್ರತಿಯ ಕೊನೆಯ ಗದ್ಯ ಹೀಗಿದೆ:

ಬಸವಲಿಂಗದೇವರು ಬರದು ಸಮಾಪ್ತವಾಯಿತು. ಶ್ರೀಶ್ರೀಶ್ರೀಮತು ಸತ್ತು ಚಿತ್ತಾನಂದ ನಿತ್ಯಪರಿಪೂರ್ಣಮವಿರಳ ಪರಂಜ್ಯೋತಿ ಪ್ರಕಾಶ ಸ್ವರೂಪಿಗಳಾದಂಥ ಷಟ್ ಸ್ಥಲ ಬ್ರಹ್ಮಿಗಳಾದ ತೋಂಟದ ಸಿದ್ಧಲಿಂಗೇಶ್ವರನ ಸಂಪ್ರದಾಯಕರಾದ, ಅಡಿಗೆರಗಿ ಬಂದ ಆತ್ಮರುಗಳಿಗೆ ಸುರುಚಿರದ ಪಿಂಡಾದಿ ಜ್ಞಾನ ಶೂನ್ಯಾಂತವಾದ ನೂರೊಂದು ಸ್ಥಳಕುಳಂಗಳ ಅಱಿವಾಚರಣೆಯನ್ನು ಪ್ರತಿಪಾದಿತ ಮೂರ್ತ್ಯಾತೀತ ವಸ್ತ್ರಪರಬ್ರಹ್ಮಿ ಕಟ್ಟಿಗೆ ಹಳ್ಳಿ ಸಿದ್ಧಲೀಗೇಶ್ವರನ ಚಿತ್ಕರಕಮಲೋದಯ ಸುಜ್ಞಾನ ಪುಂಜಪ್ರದ ಲೋಕಾದಿ ಲೌಕಿಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೋಗ ತೃಣೀಕೃತ ಭಕ್ತ ಜನ ಬಂಧು ಆಚಾರಾಗ್ರಣಿ ಬಸವಪ್ರಭು ಚೀಲಾಳ ಸ್ವಾಮಿಗಳ ಪಾದಾರವಿಂದಕ್ಕೆ ಈ ವೀರಶೈವಾಮೃತ ಪುರಾಣವನ್ನು ಕನ್ನಡದೇಶದ ರನ್ನಗನ್ನಡಿಯಂತೆ ಶೋಭಿಸುತ್ತಿರ್ಪ ಕಾನಕಾನ ಹಳ್ಳಿಯುವಳೆಯುದ ತುಂಗಣಿ ಗ್ರಾಮದ ಆರಾಧ್ಯ ಬಸವಲಿಂಗ ದೇವರು ಮಾರಸಮುದ್ರದ ಶರಣಯ್ಯನ ಗುರುಪಾದ ಸೆಟ್ಟಿಯು ಭಕ್ತಿಯೆಂದು ವೀರ ಶೈವಾಮೃತ ಪುರಾಣವ ಸಮರ್ಪಿಸಿದರು. ಗುರುಪಾದ ಸೆಟ್ಟಿಯ ಭಕ್ತಿ. ಬಸವಲಿಂಗ ದೇವರ ಬರಹ ಇದಕ್ಕೆ ಚೀಲಾಳ ಸ್ವಾಮಿಗಳೇ ಕರ್ತರು ಇಂತೀ ಜಯತು.

ಕರಕೃತಮಪರಾಧಃ ಕ್ಷಂತುಮರ್ಹಂತಿಸಂತಃ ಪುನರಪಿ ಈ ಶಾಸ್ತ್ರಮಂ ಬೇಳೇಶ್ವರನು ತಮ್ಮ ಕರಸರಸಿಜಾತ ಕಪಿಲ ಸಿದ್ಧಸ್ವಾಮಿಗಳಿಗೆ ಪಾಲಿಸಿದರು ಶ್ರೀಶ್ರೀಶ್ರೀ.

ಇದರಿಂದ ತಿಳಿದು ಬರುವ ಸಂಗತಿಗಳು ಇಷ್ಟು

೧) ಈ ಪ್ರತಿಯಲ್ಲಿ ಕಾಣುವುದು ಬಸವಲಿಂಗ ದೇವರ ಬರೆಹ, ಅಂದರೆ ಪ್ರತಿ ಮಾಡಿದವರು ಬಸವಲಿಂಗದೇವರು.

೨) ಈ ಬಸವಲಿಂಗ ದೇವರು ಕನ್ನಡ ದೇಶದ ರನ್ನ ಗನ್ನಡಿಯಂತೆ ಶೋಭಿಸುತ್ತಿರುವ ಕಾನಕಾನ ಹಳ್ಳಿಯು ವಳಯುದ ತುಂಗಣಿ ಗ್ರಾಮದ ಆರಾಧ್ಯರು.

೩) ಇದು ಮಾರಸಮುದ್ರದ ಶರಣಯ್ಯನ ಗುರುಪಾದ ಸೆಟ್ಟಿಯು ಭಕ್ತಿ. ಅಂದರೆ ಗುರುಪಾದ ಸೆಟ್ಟರು ತಮ್ಮ ಭಕ್ತಿಯ ಕಾಣಿಕೆಯನ್ನಿತ್ತು ಈ ಪ್ರತಿಯನ್ನು ಬರೆಸಿದರು.

೪) ಈ ಪ್ರತಿಯನ್ನು ಬರೆಸಲು ಪ್ರೇರಣೆಯಿತ್ತವರು ಚೀಲಾಳ ಸ್ವಾಮಿಗಳು. ಅವರೇ ಕರ್ತರು. ಇದನ್ನು ಈ ಚೀಲಾಳ ಸ್ವಾಮಿಗಳ ಪಾದಾರವಿಂದಕ್ಕೆ ಸಮರ್ಪಿಸಲಾಗಿದೆ. ಚೀಲಾಳ ಸ್ವಾಮಿಗಳು ತೋಂಟದ ಸಿದ್ಧಲಿಂಗೇಶ್ವರನ ಸಂಪ್ರದಾಯದ ಪರಬ್ರಹ್ಮ ಕಟ್ಟಿಗೆ ಹಳ್ಳಿ ಸಿದ್ಧಲಿಂಗೇಶ್ವರನ ಚಿತ್ಕಮಲ ಸಂಜಾತರು. ಅಂದರೆ ಅವರಿಂದ ದೀಕ್ಷೆಪಡೆದ ಶಿಷ್ಯರು. ಇವರ ಪೂರ್ಣ ಹೆಸರು ಬಸವಪ್ರಭು ಚೀಲಾಳ ಸ್ವಾಮಿ. ಈ ಬಸವ ಪ್ರಭು ಚೀಲಾಳ ಸ್ವಾಮಿಗಳು ಸುಜ್ಞಾನ ಪೂಜ್ಯರು, ಲೌಕಿಕ ಭೋಗ ವನ್ನು ತೃಣೀಕರಿಸಿದವರು, ಭಕ್ತ ಜನ ಬಂಧುಗಳು, ಆಚಾರಾಗ್ರಣಿಗಳು.

ಇವರ ಗುರು ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಸ್ವಾಮಿಗಳು. ಇವರು ತಮ್ಮ ಅಡಿಗೆರಗಿ ಬಂದ ಆತ್ಮರುಗಳಿಗೆ ಪಿಂಡಾದಿ ಜ್ಞಾನ ಶೂನ್ಯಾಂತವಾದ ನೂರೊಂದು ಸ್ಥಳಕುಳಂಗಳ ಅರಿವು ಆಚರಣೆಯನ್ನು ಮಾಡಿಕೊಡುವವರು. ತೋಂಟದ ಸಿದ್ಧಲಿಂಗಯತಿಗಳು ಸಚ್ಚಿದಾನಂದ ನಿತ್ಯಪರಿಪೂರ್ಣರು ಅವಿರಳ ಪರಂಜ್ಯೋತಿ ಸ್ವರೂಪರು ಷಟ್‌ಸ್ಥಲ ಬ್ರಹ್ಮಿಗಳು.

೫) ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಸ್ವಾಮಿಗಳ ಹಾಗೂ ಬಸವಪ್ರಭು ಚೀಲಾಳ ಸ್ವಾಮಿಗಳ ಕಾಲದಲ್ಲಿ ಈ ಪ್ರತಿಯನ್ನು ಬರೆಯಲಾಗಿದೆಯೆಂದು ವ್ಯಕ್ತವಾಗುತ್ತದೆ.

'ನಿರಂಜನ ವಂಶರತ್ನಾಕರ'ದಲ್ಲಿ ಕಟ್ಟಿಗೆ ಹಳ್ಳಿ ಸಿದ್ಧವೀರಸ್ವಾಮಿಗಳು ಹಿರಿಯ ಶಿಷ್ಯಂದಿರೊಬ್ಬರಿಗೆ ತಮ್ಮ ಗುರುಗಳಾದ ಸಿದ್ಧಲಿಂಗಯತೀಶ್ವರರ ನಾಮವನ್ನಿಟ್ಟು (ನೊಡ) ಸಿದ್ಧಲಿಂಗದೇಶಿಕೇಂದ್ರನೆಂದು ಕರೆದುದಾಗಿ ಉಲ್ಲಿಖಿತವಾಗಿದೆ. ಅವರಿಗೆ ತಮ್ಮ ಚರಂತಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಟ್ಟವನ್ನು ಕೊಟ್ಟರು. ಇವರೇ ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಸ್ವಾಮಿಗಳು. ಬಸವಪ್ರಭು ಚೀಲಾಳ ಸ್ವಾಮಿಗಳು ಕಟ್ಟಿಗೆ ಹಳ್ಳಿ ಸಿದ್ಧಲಿಂಗೇಶ್ವರನ ಕರಕಮಲ ಸಂಜಾತರು.

ತೋಂಟದ ಸಿದ್ಧಲಿಂಗ ಶಿವಯೋಗಿಗಳಿಂದ ಕಟ್ಟಿಗೆ ಹಳ್ಳಿ ಸಿದ್ಧಲಿಂಗ ಸ್ವಾಮಿಗಳು ೦ನೆಯವರು. ಇವರ ಶಿಷ್ಯ ಚೀಲಾಳ ಸ್ವಾಮಿಗಳು ೮ನೆಯವರಾಗುತ್ತಾರೆ. ತೋಂಟದ ಸಿದ್ಧಲಿಂಗಯತಿಗಳ ಕಾಲ ಕ್ರಿ. ಶ. ೧೪೮೦ ತಲೆಮಾರಿಗೆ ೨೫ ವರ್ಷಗಳಂತೆ ಹಿಡಿದರೆ ಚೀಲಾಳ ಸ್ವಾಮಿಗಳ ಕಾಲ ಕ್ರಿ. ಶ. ೧೬೮೦ ಆಗುತ್ತದೆ. ಈ ಕಾಲದಲ್ಲಿ ಅಂದರೆ ವೀರಶೈವಾಮೃತ ಪುರಾಣ ರಚನೆಯ ನಂತರದ (೧೫೩೦) ೧೫೦ ನೆಯ ವರ್ಷ ಈ ಪ್ರತಿ ಯನ್ನು ಮಾಡಿದಂತೆ ಊಹಿಸಬಹುದು. ಕಾರಣ ಈ ತಾಳೆಪ್ರತಿಯ ಕಾಲ ಕ್ರಿ.ಶ.ಸು.೧೬೮೦ ಎಂದು ಊಹಿಸಬಹುದು. ಆದುದರಿಂದ ಇದು ಸು. ೩೦೦ ವರ್ಷ ಹಿಂದಿನ ಪ್ರ. ಯಾಗುತ್ತದೆ.

ಇದು ಎರಡು ಸಂಪ್ರುಟಗಳಲ್ಲಿ ಅಚ್ಚಾಗಿದೆ. ಮೊದಲನೆಯ ಸಂಪ್ರುಟವನ್ನು (ಮೊದಲಿನ ನಾಲ್ಕು ಕಾಂಡಗಳನ್ನು) ಬೆಂಗಳೂರು ವೇ. ಸಂಜುಂಡ ಶಾಸ್ತ್ರಿಗಳವರ ಪುತ್ರ ಶಿವಪ್ಪ ಶಾಸ್ತ್ರಿಗಳು ಹಾಗೂ ಮಾಗಡಿ, ಎಸ್, ವೀರಪ್ಪ ಶಾಸ್ತ್ರಿಗಳು ಪರಿಷ್ಕರಿಸಿರುವರು. ಇದು ೧೯೦೭ ನೆಯ ಇಸ್ವಿಯಲ್ಲಿ ಬೆಂಗಳೂರಲ್ಲಿ ಮುದ್ರಣಗೊಂಡಿದೆ.

ಎರಡನೆಯ ಸಂಪ್ರುಟವನ್ನು ಶಿವಪ್ಪ ಶಾಸ್ತ್ರಿಗಳೊಬ್ಬರೇ ಪರಿಷ್ಕರಿಸಿ ಕ್ರಿ.ಶ. ೧೯೦೭ ರಲ್ಲಿ ಪ್ರಕಟಿಸಿರುವರು.

'ತಾ' ಪ್ರತಿಯನ್ನು ಮೂಲವಾಗಿಟ್ಟುಕೊಂಡು ಆ ಪ್ರತಿಯೊಡನೆ ತುಲನೆ ಮಾಡಿ ಅಚ್ಚಿನ ಪ್ರತಿಯನ್ನು ಸಿದ್ಧಮಾಡಲಾಗಿದೆ. ತಾ ಮತ್ತು ಅ ಪ್ರತಿಗಳೆರಡೂ ಬೇರೆ ಬೇರೆ ಬಳಗಕ್ಕೆ ಸೇರಿದವುಗಳು.

ಇವಲ್ಲದೆ ಇನ್ನೂ ಕೆಲವು ಕಾಗದಪ್ರತಿಗಳಿವೆ. ಅವು 'ತಾ' ಪ್ರತಿಯ ಬಳಗಕ್ಕೆ ಸೇರಿರುವುದರಿಂದಲೂ ಅಪೂರ್ಣವಾಗಿರುವುದರಿಂದಲೂ ಸಂಸ್ಕರಣಕ್ಕೆ ಪೂರ್ತಿಯಾಗಿ ಬಳಸಿ ಕೊಳ್ಳಲಿಲ್ಲ. ತಾ ಮತ್ತು ಅ ಎರಡೂ ಪ್ರತಿಗಳೊಳಗೆ ಸಂಸ್ಕೃತ ಶ್ಲೋಕಗಳಲ್ಲಿ ಅನೇಕ ಸಂದೇಹಗಳು ಕಂಡು ಬರುವುದರಿಂದ ಅಂತಹ ಸಂದರ್ಭಗಳಲ್ಲಿ ಮೇಲಿನ ಪ್ರತಿ ಗಳನ್ನು ನೋಡಲಾಗಿದೆ. ಆದರೂ ಸಂದೇಹಗಳು ಸಂಪೂರ್ಣವಾಗಿ ಪರಿಹಾರವಾಗಲಿಲ್ಲ. ಕೆಲವನ್ನು ಪಾಣಿನಿಯ ವ್ಯಾಕರಣದನ್ವಯ ಸಂಸ್ಕರಿಸಿ ಮಿಕ್ಕವುಗಳಲ್ಲಿ ಒಂದೇ ಬಗೆಯ ಸಂದೇಹಗಳು ಕ್ರಮಬದ್ಧವಾಗಿ ಕಂಡು ಬರುವುದರಿಂದ ಆಗಮಗಳ ಸಂಸ್ಕೃತ ಬೌದ್ಧ ಹೈಬ್ರಿಡ್ ಸಂಸ್ಕೃತದಂತೆ ಬೇರೆಯಾಗಿರಬಹುದೇನೋ ಎಂಬ ಶಂಕೆಯಿಂದ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಸಂಸ್ಕೃತ ಭಾಷಾತಜ್ಞರು ಈ ಸಮಸ್ಯೆಯನ್ನು ಪರಿಶೀಲಿಸುವುದು ಅವಶ್ಯವೆನಿಸಿದೆ.

ನಮಗೆ ಈ ಕಾಗದ ಪ್ರತಿಗಳಲ್ಲೊಂದು ಬೇರೊಂದು ದೃಷ್ಟಿಯಿಂದ ಸ್ಮರಣೀಯ ವಾಗಿದೆ. ವೀರಶೈವಾಮೃತ ಪುರಾಣದ ಹಸ್ತಪ್ರತಿಗಳು ನಮಗೆ ಉಪಲಬ್ಧವಾಗದ ಕಾಲವೊಂದಿತ್ತು. ಒಂದು ದಿನ ಪಂಡಿತ ನಾಗಭೂಷಣ ಶಾಸ್ತ್ರಿಗಳೊಡನೆ ಮಾತನಾಡುತ್ತ ಕುಳಿತಾಗ ವೀರಶೈವಾಮೃತ ಪುರಾಣದ ಹಸ್ತಪ್ರತಿ ಉಪಲಬ್ಧವಾಗದ ವಿಷಯವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸ್ತಾಪಿಸಿದೆವು. ಶಾಸ್ತ್ರಿಗಳು ತಮ್ಮ ಹತ್ತಿರ ಒಂದು ಪ್ರತಿಯಿದೆ ಎಂದು ಹೇಳಿ ಅತ್ಯಂತ ಸ್ವಾರಸ್ಯಮಯವಾದ ವಿಷಯವನ್ನು ತಿಳಿಸಿದರು.

ಶಾಸ್ತ್ರಿಗಳ ಹಿರಿಯರು ತಮ್ಮ ಆಸ್ತಿಯನ್ನೆಲ್ಲ ಹಂಚಿಕೊಳ್ಳುವ ಕಾಲಕ್ಕೆ ಪುಸ್ತಕ ಹಾಗೂ ಇತರ ಕೆಲವು ಜಂಗಮ ಆಸ್ತಿ ಎರಡನ್ನು ಬೇರೆ ಬೇರೆ ಇಟ್ಟು ಇವುಗಳಲ್ಲಿ ಬೇಕಾದು ದೊಂದನ್ನು ಆರಿಸಿಕೊಳ್ಳಲು ದೈವದವರು ಹೇಳಿದರಂತೆ. ವಿರಾತಮ್ಮನೆಂಬ ಶಾಸ್ತ್ರಿ ಗಳವರ ಅಜ್ಜಿ ಇತರ ಆಸ್ತಿಯನ್ನು ಬಿಟ್ಟು ಪುಸ್ತಕಗಳನ್ನೇ ಆಯ್ದು ಕೊಂಡಳಂತೆ. ಆ ಪುಸ್ತಕಗಳಲ್ಲಿ ವೀರಶೈವಾಮೃತ ಪುರಾಣವೊಂದಿದ್ದಿತು. ಅದನ್ನು ಆ ವೃದ್ಧೆ ಬಹಳ ಯೋಗ್ಯರೀತಿಯಿಂದ ಕಾಯ್ದಿಟ್ಟು ಯಾರಿಗೂ ತೋರಿಸುತ್ತಿರಲಿಲ್ಲವಂತೆ. ಕೊನೆಗೆ ಒಂದು ದಿನ ಆ ತಾಯಿ ಶಾಸ್ತ್ರಿಗಳನ್ನು ಕರೆದು ಆ ಪ್ರತಿಯನ್ನು ಗಂಟಿನಿಂದ ತೆಗೆದು ಇದನ್ನು ಜೋಕೆಯಿಂದ ಇಟ್ಟುಕೊಳ್ಳಬೇಕೆಂದು ಹೇಳಿಕೊಟ್ಟಳಂತೆ. ಇದು ಯಾವ ಸಂಕಲ್ಪವೋ ತಿಳಿಯದು. ಸಂಗನಾಳದ ಶಾಸ್ತ್ರಿಮತ ವಿದ್ವತ್ತ್ವವನ್ನು ಪರಂಪರೆಯಿಂದ ಕಾಯ್ದುಕೊಂಡು ಬಂದ ಸ್ಥಳ. ಈ ವೀರಶೈವಾಮೃತದ ಪ್ರತಿಯನ್ನು ಆ ಮತದವರೇ ಸ್ವತಃ ಬರೆದಿಟ್ಟು ಕೊಂಡಿರುವ ಸಂಭವವಿದೆ. ಅದನ್ನು ವಿರಾತಮ್ಮ ನೋಡಿ ಆ ಪುಸ್ತಕದ ವಿಷಯವಾಗಿ ಪ್ರೀತಿ ಗೌರವವನ್ನು ಇಟ್ಟುಕೊಂಡು ಬಂದಿರಬೇಕು. ಅಂತೆಯೇ ಆಕೆ ಅದನ್ನು ಜೋಕೆ ಯಿಂದ ಜೋಪಾನ ಮಾಡಿಕೊಂಡು ಬಂದಿರುವ ಸಂಭವವಿದೆ.

ಶಾಸ್ತ್ರಿಗಳಿಂದ ಈ ವಿಷಯ ತಿಳಿದೊಡನೆ ಅದನ್ನು ತರಬೇಕೆಂದು ಬಿನ್ನವಿಸಿದೆವು. ಮರುಮಾತನಾಡದೆ ಶಾಸ್ತ್ರಿಗಳು ಆ ಪ್ರತಿಯನ್ನು ತಂದುಕೊಟ್ಟರು. ಅದಕ್ಕೆ ಕಾ. ಪ್ರ. ೧೩೭೭ ಎಂಬ ಕ್ರಮಾಂಕವನ್ನು ಕೊಟ್ಟು ವೀರಶೈವಾಮೃತ ಪುರಾಣದ ಸಂಪಾದನೆಯ ಕಾರ್ಯವನ್ನು ಕೈಕೊಳ್ಳಬೇಕೆಂದು ನಿರ್ಣಯ ಮಾಡಿದೆವು. ಇದು ಕಾಲು ಶತಮಾನ ಹಿಂದಿನ ವಿಷಯ. ಈ ಕಾರ್ಯಕ್ಕೆ ಪ್ರೇರಣೆಯಿತ್ತ ಕಾ. ಪ್ರ. ೧೩೭೭ ಸಂಸ್ಮರಣೀಯವಾಗಿದೆ. ಮುಂದೆ ಇದೇ ಬಳಗಕ್ಕೆ ಸೇರಿದ ತಾಳೆ ಯೋಲೆಯ ಪ್ರತಿ ೨೬೪೯ ಉಪಲಬ್ಧವಾದ ಮೇಲೆ ಅದನ್ನೇ ಮೂಲವನ್ನಾಗಿಟ್ಟುಕೊಂಡು ಸಂಸ್ಕರಣ ಕಾರ್ಯವನ್ನು ಮುಗಿಸಲಾಗಿದೆ.

ಕೃತಜ್ಞತೆಗಳು

ಪೂಜ್ಯ ಶ್ರೀ ನಿ. ಪ್ರ. ಡಾ. ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠ, ನಾಗನೂರು, ಬೆಳಗಾವಿ–ಈ ಮಹಾಸನ್ನಿಧಿಯವರು ಆತ್ಮಸಿದ್ಧಿ ಲೋಕಸಂಗ್ರಹ ಎರಡನ್ನೂ ಮೌನದಿಂದ ಸಾಧಿಸಿದ ಮಹಾಮಹಿಮರು. ತಮ್ಮ ಅನುಷ್ಠಾನದ ಬಲದಿಂದ ಆತ್ಮಸಿದ್ಧಿಯನ್ನು ಶೈಕ್ಷಣಿಕ ಕಾಯಕದ ಬಲದಿಂದ ಲೋಕ–ಕಲ್ಯಾಣವನ್ನು ಸಾಧಿಸಿ ಶತಾಯುಷಿಗಳಾಗಿರುವರು. ಪೂಜ್ಯ ಶ್ರೀಗಳ ಶತಮಾನೋತ್ಸವದ ಸಂಬಂಧದಲ್ಲಿ ಪ್ರಕಟಿಸಬೇಕೆಂಬ ಯೋಜನೆಯನ್ನು ಒಪ್ಪಿಕೊಂಡವರು ಪೂಜ್ಯ ಡಾ. ಶಿವಬಸವ ಸ್ವಾಮಿಗಳವರ ಉತ್ತರಾಧಿಕಾರಿಗಳಾದ ಶ್ರೀ ನಿ. ಪ್ರ. ಸ್ವ ಸಿದ್ಧರಾಮ ಸ್ವಾಮಿಗಳು. ಈ ಕಾರ್ಯದಲ್ಲಿ ನಡುವೆ ತಲೆದೋರಿದ ಎಡರುತೊಡರುಗಳನ್ನು ಪರಿಹರಿಸಿ ಇದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವಂತೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವದಿಸಿದವರು ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ ಇವರು.

ಈ ಮೂವರು ಪೂಜ್ಯರ ಸನ್ನಿಧಿಯಲ್ಲಿ ಅನಂತ ಭಕ್ತಿಪೂರಿತ ಪ್ರಣಾಮಗಳನ್ನು ಅರ್ಪಿಸಿ ಕೃತಜ್ಞತೆಯನ್ನು ಸೂಚಿಸುತ್ತೇವೆ.

ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ ಬೆಂಗಳೂರು-ಈ ಮಹಾಸಂಸ್ಥೆಯ ಪದಾಧಿಕಾರಿಗಳಾದ

ಶ್ರೀ ಸಿ. ಎ. ಜಮುಖಂಡಿಮಠ
ಆಯ್. ಎ. ಎಸ್ (ನಿವೃತ್ತ) ಚೆಅರಮನ್ನರು

ಶ್ರೀ ಕೆ. ಎಂ. ಸಂಜಪ್ಪನವರು
ಬೆಂಗಳೂರು, ಸದಸ್ಯರು

ಶ್ರೀ ಜಿ. ಎಂ. ಹಿರೇಮಠ
ಕಾರ್ಯದರ್ಶಿಗಳು

ಈ ಮಹನೀಯರು ವೀರಶೈವಾಮೃತ ಪುರಾಣ ಪ್ರಕಟನೆಯ ಪವಿತ್ರವಾದ ಹೊಣೆಯನ್ನು ಹೊತ್ತುಕೊಳ್ಳಲು ಮುಂದೆ ಬಂದಿರುವುದು ಅತ್ಯಂತ ಸ್ತುತ್ಯವಾದ ಕಾರ್ಯ. ಎನ್. ಎಸ್. ಎಸ್. ಕಲ್ಯಾಣ ಕೇಂದ್ರದ ಹೆಸರು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಚಿರಂತನವಾಗಿ ಉಳಿಯುವಂತಾಗಿದೆ. ಈ ಕೇಂದ್ರದ ಎಲ್ಲ ಪದಾಧಿಕಾರಿಗಳಿಗೂ ನಾವು ಚಿರಋಣಿಯಾಗಿದ್ದೇವೆ. ಅವರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು.

ಈ ಕಾರ್ಯದಲ್ಲಿ ನಮಗೆ ನಾನಾ ಬಗೆಯ ನೆರವನ್ನಿತ್ತವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರೊ. ಡಾ. ಎಂ. ಎಂ. ಕಲಬುರ್ಗಿ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ವ್ಹಿ. ಶಿರೂರ, ಡಾ. ಬಿ. ಆರ್. ಹಿರೇಮಠ, ಪ್ರೊ. ಬಿ. ಬಿ. ಕಡ್ಲಿ ಹಾಗೂ ಹಲವಾರು ವಿದ್ಯಾರ್ಥಿಗಳು. ಇವರೆಲ್ಲರಿಗೆ ನಮ್ಮ ಅನಂತ ಕೃತಜ್ಞತೆಗಳು.

ಶ್ರೀ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣಾಲಯದ ಸಂಚಾಲಕ ಶ್ರೀ ಅಶೋಕ ಅವರು ಈ ಗ್ರಂಥವನ್ನು ಅಲ್ಪಾವಧಿಯಲ್ಲಿ ಅಂದವಾಗಿ ಅಚ್ಚು ಮಾಡಿ ಕೊಟ್ಟಿದ್ದಾರೆ. ಅವರಿಗೂ ನಮ್ಮ ಅನಂತ ಕೃತಜ್ಞತೆಗಳು.

ಆರ್. ಸಿ. ಹಿರೇಮಠ
ಸಂಪಾದಕರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವಾಮೃತ ಪುರಾಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ : ೧

ಶ್ರೀ ವಿಮಲಗುರುಲಕ್ಷಣಂ ಸಾಂಪ್ರದಾಯ ಶಿವ
ದೇವಪ್ರಸಾದ ಪಿಂಡಸ್ವರೂಪಾದ ಸ
ದ್ಭಾವಿ ಶಿಷ್ಯೋದ್ಭವಂಗಳ ಕಾವ್ಯಕೃತ ಶಿವಕವೀಶಾದಿಗಳನೊರೆವೆನು

ಶ್ರೀಮದನುಪಮ ನಿತ್ಯ ನಿರ್ಮಲ ಚಿದಾನಂದ
ಸಾಮವೇದಾತೀತ ಪರಶಿವ ಸದಾಶಿವ ಮ
ಹಾಮಹಿಮ ಪಂಚಶಕ್ತ್ಯಾಧಾರನೆನಿಪ ಮಾಹೇಶಲೀಲಾವಿಗ್ರಹ
ಸ್ವಾಮಿ ಗುರುಲಿಂಗ ಜಂಗಮರೂಪನಾಗಿಯೆ
ನ್ನೀ ಮನೋವಾಕ್ಕಾಯ ಕಂಗಳೊಳ್ಬಿಡದಿರ್ಪ
ರಾಮಣೀಯಕ ಶಾಂತಮಲ್ಲಿಕಾರ್ಜುನ ರಕ್ಷಿಸಯ್ಯ ನಿನ್ನಯ ಶರಣರ ೧

ಬಲನೆಡದೊಳಾದಿಯಂತ್ಯದೊಳೊಳಗೆ ಹೊಱಗೆ ತಿಳಿ
ಯಲು ಮುಂದೆ ಪಿಂತೆ ಕರಪದಮಸ್ತಕಾದ್ಯಂಗ
ದಲಘುರೋಮಾದಿಗಳೊಳಾ ಕೆಳಗು ಮೇಲೆ ನಖಮುಖಸಪ್ತಧಾತುಗಳೊಳು
ಸುಲಭವೆನಿಪೇಕವಕ್ತ್ರದ ಯುಗ್ಮನೇತ್ರ ನಿ
ರ್ಮಲ ಕರ್ಣಯುಗಳೈಕನಾಸಿಕದೆ ತೋರ್ಪ ಸ
ಲ್ಲಲಿತಲಕ್ಷಣಭಕ್ತಸದ್ಧರ್ಮವಿರ್ಕೆನ್ನ ಮಾನಸಗೃಹಾಂತರದೊಳು ೨

ಶರಿರವಿಲ್ಲದ ಲಿಂಗರೂಪಾಗಿ ಕೂಡಿಪ್ಪ
ಧರೆಯಷ್ಟಷಷ್ಟಿತೀರ್ಥಂಗಳಂಗುಷ್ಠದೊಳ
ಗಿರೆ ಸಪ್ತಸಾಗರಂಗಳು ಮೇಲೆ ಮೆಱೆವ ಕುಲಗಿರಿಗಳುನ್ನತದೊಳೆಸೆವ
ಹರಡಿನೊಳು ನಕ್ಷತ್ರವಾ ಗ್ರಹಂ ಜಂಘೆಯೊಳ
ಗರರೆ ಮೂವತ್ತಾಱು ತತ್ವವಿಹ ಗುರು ಮನದೊ
ಳಿರಲಡಿಯನರ್ಚಿಸುವೆನವನ ವಾಕ್ಯವೆ ಮಂತ್ರವವನ ಕೃಪೆ ಮುಕ್ತಿಯೆನಗೆ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಲಿಂಗಜಂಗಮಮಂ ಲಿಂಗಜಂಗಮವಾರ್ಯ
ಚರಲಿಂಗ ಗುರುವ ವೈವೇಷ್ಟಭಾವಪ್ರಾಣ
ದಿರವೀಗ ಲಿಂಗವೃತ್ತಾತ್ತಕಾರ ಗುರು ಗೋಳಕಂ ಲಿಂಗವಾ ಗೋಮುಖಂ
ಸ್ಥಿರಜಂಗಮಮಂ ವೃತ್ತಪೀಠ ದೀರ್ಘವಿಶಾಲ
ಸರಿಯರ್ಧ ಗೋಮುಖದ ಶಾಂತಮಲ್ಲೇಶ ಬಂ
ಧುರಲಕ್ಷಣದ ನಾಮವೆತ್ತ ಲಿಂಗಕೆ ನಮಿಸುತೀ ಪ್ರಬಂಧವ ತೊಡಗಿದೆಂ ೪

ನಿರುಪಾಧಿ ನಿಸ್ಸಂಗಿ ನಿರ್ಮಲ ನಿರಾಭಾರಿ
ಯುರು ನಿತ್ಯ ನಿರ್ದೇಹಿ ನಿಸ್ಸೀಮ ಸುಜ್ಞಾನಿ
ವರಭಕ್ತ ಸತ್ಪ್ರಾಣಿ ಸನ್ಮೂರ್ತಿ ಮುಕ್ತ ಮದ ಮೋಹಾದಿ ಗುಣವಿರಹಿತ
ಭರಿತ ಮಾಯಾದೇಹ ಮಲರಹಿತ ಪಂಚವಾ
ಕ್ಷರಮುಖಪ್ರಣವಾಂಗ ಪರತತ್ವವಜೀವ ಚಿ
ದ್ಧರ ಬಿಟ್ಟಮಂಡೆಯ ಪ್ರಭುಜಂಗಮದ ಪಾದಮಿರ್ಕೆನ್ನ ಹೃದಯದೊಳಗೆ ೫

ಧರೆಗೆ ದಕ್ಷಿಣಮಹಾಕೈಲಾಸವೀ ಕಕು
ದ್ಗಿರಿಯ ಮೇಲಣ ಗವಿಯ ಮಲೆಯ ಶಾಂತೇಶ್ವರನ
ಪರಿವಿಡಿಯ ಶಂಭುದೇಶಿಕ ಮಲೆಯ ವೀರೇಶ ಸಿದ್ಧರಾಮಸ್ವಾಮಿಯ
ಕರಕಮಲಸಂಭೂತ ಚರಚಕ್ರವರ್ತಿ ಬಂ
ಧುರಸದಾಚಾರ ಶಿಷ್ಯಪ್ರದ ಶಿವಾಗಮೋ
ದ್ಧರಣ ಗುರುಶಾಂತನಂಜೇಶ್ವರ ಪದಾಂಭೋಜಮಿರ್ಕೆನ್ನ ಚಿತ್ತದೊಳಗೆ ೬

ವೀರಮಾಹೇಶ್ವರಾಚಾರ ಮೋಹದ ಕೆಂಚ
ವೀರಾಹ್ವಯಂ ಕೂರ್ತು ಬಿನ್ನವಿಸುತಿರ್ದಪಂ
ವೀರಶೈವದ ಸಚ್ಚಿದಾನಂದ ನಿತ್ಯ ಪರಿಪೂರ್ಣನಹ ನಂಜೇಶ್ವರ
ಚಾರಲಿಂಗಂ ಎನಗೆಯೆನ್ನ ಸತ್ಪ್ರಾಣೇಶ
ಕಾರಣಾತ್ಮಕನಪ್ಪ ಚಿದ್ರೂಪ ನಿರ್ಮಲಾ
ಧಾರ ಜಂಗಮಲಿಂಗದಾದಿ ಮಧ್ಯಾಂತವಜೀವಿಚ್ಛಿಯಾಗಿರ್ದಪ್ಪುದು ೭

ಇದಕಿನ್ನು ಸುವಿಚಾರವಾವುದೆನೆ ನಂಜೇಶ
ನುದಿತಹರುಷದೊಳು ನುಡಿವುತ್ತಿರ್ದನೆಂತೆನಲು
ಸದಮಳನೆ ತಮ್ಮ ಕೇಳ್ಳೆ ಮಹಾಸ್ವಾದೋದಕಾಂಬುನಿಧಿಯೆಡೆಯೊಳಿರ್ದು
ಉದಕವಾಗಲ್ಬೇಕು ತೃಷೆಯಾದುದೆಂಬ ಛಂ
ದದೊಳಮೃತವಾಹಾರವಾಗಿರ್ದು ಸಾವಿಗಂ
ಜಿದೆನೆಂಬ ಮಾಳ್ಕೆಯಿಂ ಕಡವರಂ ಮನೆಯೊಳಿರೆ ಜಲಗ ತೊಳೆವವನಂದದೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿಂತಿಸಲ್ಬೇಕೆ ಸಾಕ್ಷಾದ್ಗುರುವಿರುತ್ತಿರಲ
ದೆಂತೆನಲು ದೇಶಿಕನ ನಿಜವಂ ರಹಸ್ಯದೊ
ಳ್ಪಿಂತೆ ಕೇಳ್ದಱಿಯೆಯಾ ಪಣೆಯು ಕಣ್ ಚಂದ್ರಕಳೆಯುಂಟಾದ ಶಿವನೆ ಕೂರ್ತು
ಮುಂತೆರಡು ತೋಳುಸಹಿತವನೆಯ್ದೆ ಮಱಿಸಿಲೋ
ಕಾಂತರದೊಳೆಸೆವ ಗುರುರೂಪಾದೆ ನಾನೆಂದು
ಕಂತುಹರನೇ ನುಡಿದನೈ ಮತ್ತೆ ಗುರುವಿಗೆಱಗುವ ಬಗೆಯು ಕೇಳೆಂದನು ೯

ಆವವಂ ಗುರುವಾತನೇ ಶಿವಂ ಬಳಿಕ ಕೂ
ರ್ತಾವವಂ ಶಿವನಾತನೇ ಗುರುವೆನುತ್ತಲಾ
ವಾವ ಪರಿಯಿಂ ನುಡಿದು ನೆನೆದು ನಿಶ್ಚೈಸಿ ಭಕ್ತಿಯು ಮುಕ್ತಿಯೊದವ ಕೊಡುವ
ಪಾವನ ಗುರೂತ್ತಮಗೆ ಶರಣೆಂಬರೈ ಮತ್ತೆ
ಭಾವಿಸಲ್ಖಂಡಿತವದಿಲ್ಲದಿಹ ಬಳಸಿದ ಮ
ಹಾವಿಶಾಲದ ಬೆಳಗಿನಿಂ ಚರಾಚರವನೊಳಕೊಂಡೆಸೆವ ಲೋಕವಂದ್ಯ ೧೦

ಆತಂಗೆ ಶರಣೆಂಬರೈ ಜ್ಞಾನತತ್ವಮಂ
ಪ್ರೀತಿಯಿಂದಡರಿ ಮಿಕ್ಕಿನ ತತ್ವವೆಲ್ಲವಂ
ತಾ ತಳೆದಲಂಕರಿಸಿಯಜ್ಞಾನವೆಂಬ ಕತ್ತಲೆಯ ತೊಲಗಿಪ ಸೂರ್ಯನು
ಸಾತಿಶಯರೂಪಂಗೆ ನಮಿಸುವರು ಮತ್ತೆ ಗುರು
ವೇ ತಿಳಿವೊಡಾ ಮಹಾದೇವಂ ಸದಾಶಿವಂ
ಪ್ರೀತಿಯೊಳ್ಗುರು ತತ್ವದಿಂದ ಪರವಿಲ್ಲವಾ ಶ್ರೀ ಗುರುವಿಗೆಱಗುತಿಹರು ೧೧

||ಸಾಕ್ಷಿ|| ಶ್ಲೋಕ್

ಲಲಾಟಲೋಚನಂ ಚಾಂದ್ರೀಂ ಕಲಾಮಪಿ ಚ ತದ್ದ್ವಯಂ
ಅಂತರ್ನಿಧಾಯ ವರ್ತೇಹಂ ಗುರುರೂಪೋ ಮಹೇಶ್ವರಿ ೧
ಯೋ ಗುರುಸ್ಸಶಿವಃಪ್ರೋಕ್ತೋ ಯಶ್ಶಿವಸ್ಸಗುರುಃಸ್ಮೃತಃ
ಭಕ್ತಿ ಮುಕ್ತಿಪ್ರದಾತಾ ಚ ತಸ್ಮೈ ಶ್ರೀಗುರವೇ ನಮಃ ೨
ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ
ಜಗದ್ವಂದಿತಪಾದಾಯ ತಸ್ಮೈ ಶ್ರೀಗುರವೇ ನಮಃ ೩

ಎಂದೆನಿಸುವಾ ಮಹಾ ಶ್ರೀಗುರುವೆ ಸಚ್ಚಿದಾ
ನಂದ ಹಲಗೇಶ್ವರಾಹ್ವಯದಿಂ ಸ್ವರೂಪದಿಂ
ಮುಂದೆ ರಾಜಿಸುತಿರಲ್ ತಮ್ಮ ಕೇಳೈ ನಿನ್ನ ಮನಸಿನೊಳು ಚಿಂತೆಯೇಕೆ
ಕಂದಿ ಕೊರಗಲ್ಕೇಕೆ ನಿನಗಾಂ ಸಹಾಯಿಯೈ
ಸಂದೇಹ ಬೇಡವೆನಲದನೇ ಮನಂಗೊಂಡು
ಛಂದದಿಂ ಗುರುವಿನೆಡೆಗೆಯ್ತುರುತ್ತಿರ್ದನಾ ಕೆಂಚವೀರಾಖ್ಯನೊಲಿದು ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಸಗೊಂಬೆನೆಂದು ಬರೆ ಚಿತ್ತದೊಳಗಾನಂದ
ರಸವೆಯ್ದೆ ತುಳ್ಕಿ ಹರುಷಾಶ್ರು ಕಂಗಳೊಳುಗಲು
ಮಿಸುಪಂಗದಲ್ಲಿ ಪುಳಕಂಗಳುಣ್ಮುತ್ತಿರಲು ಸಾಷ್ಟಾಂಗದಿಂ ಗುರುವಿನ
ಎಸೆವ ಚರಣಾಂಬುಜಂಗಳ್ಗೆ ಬಾಗುತೆದ್ದು ಕರ
ಬಿಸಜಂಗಳಂ ಮುಗಿದುಕೊಂಡಾಡತೊಡಗಿದಂ
ಅಸಮಾಕ್ಷನೊರೆದಾ ರಹಸ್ಯದಾ ಗ್ರಂಥಪ್ರಮಾಣೆನಿಂದೆಂತೆಂದೊಡೆ ೧೩

ಎನಗೊಡೆಯನಾಗಿ ಸರ್ವರ್ಗೊಡೆಯನಾದ ಮ
ತ್ತೆನಗೆ ಗುರುವಾಗಿ ಸರ್ವರ್ಗೆ ಗುರುವಾದ ಮ
ತ್ತೆನಗೆ ನೈಜಾತ್ಮನಾಗುತ್ತಾ ಸಮಸ್ತ ಭೂತಾತ್ಮನಾಗುತ್ತಮಿರ್ಪ
ಅನಘಗುರುವೇ ನಿನಗೆ ವಂದಿಸುವೆನೆಂಬಂತೆ
ಘನಭಕ್ತಿಯಿಂ ನಮಿಸುತೆದ್ದು ಕರವಂ ಮುಗಿದು
ವಿನಯದಿಂ ಬಿನ್ನವಿಸತೊಡಗಿದಂ ಕೆಂಚವೀರಾಹ್ವಯಂ ಭಕ್ತಿಯಿಂದ ೧೪

||ಸಾಕ್ಷಿ|| ರಹಸ್ಯೇ

ಮನ್ನಾಥಸ್ತ್ರಿಜಗನ್ನಾಥೋ ಮದ್ಗುರುಸ್ತ್ರಿಜಗದ್ಗುರುಃ
ಸ್ವಾತ್ಮಾ ಚ ಸರ್ವಭೂತಾತ್ಮಾ ತಸ್ಮೈ ಶ್ರೀಗುರವೇ ನಮಃ ೪

ವರಸುತಕ್ಷೇತ್ರಾದಿಗಳ್ಗೆ ಗುರುನಾಮವಿ
ಟ್ಟಿರುತ ಗುರುನಿಂದೆಗಳಿವನ್ನೆಗಂ ದೇಶಿಕಂ
ಕರುಣಿಸಲ್ಕಾಗನಮಂ ಕೈಲಾಸದಿಂದೀಶನೇಳ್ತರಲ್ ಕ್ಷೇತ್ರದಲ್ಲಿ
ಪರಿಕಿಸದಿರಲ್ವೇಳಿಸುತ್ತಾರ್ಯನಿಂ ನಂದಿ
ತರಲು ಶಿವಪುರವ ಪೊನ್ನಾಂಬಲಂ ಮಾಡಿ ಶಂ
ಕರನೆ ವಾಗೀಶನಾದಪ್ಪೊಳಿತಿಯಂತೆನಗೆ ಗುರುವೆ ನೀವಲ್ಲದುಂಟೆ ೧೫

ಶ್ರೀಗುರುವೆ ಚಿತ್ತವಿಪುದೆನ್ನ ಸತ್ಪ್ರಾಣೇಶ
ನಾಗಿರ್ಪ ಸಚ್ಚಿದಾನಂದ ಜಂಗಮಲಿಂಗ
ವೇ ಗಾಡಿಯಿಂದ ನೀವಾದಾ ಸ್ವರೂಪನಿರವಂ ಪೇಳ್ವುದೆನೆ ಕರುಣದಿ
ಆಗಲೊರೆಯಲ್ತೊಡಗಿದಂ ಹಲಗೆಯಾಚಾರ್ಯ
ನಾಗಮ ಪುರಾಣವೇದಾರ್ಥಮಂ ಮನದೊಳನು
ರಾಗಿಸುತ ಪರಮಾಮೃತದ ಸೋನೆ ಭೋರೆಂದು ಸೈಗಱೆವ ಮಾಳ್ಕೆಯಿಂದ ೧೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತೆಂದೊಡೆಲೆ ಮಗನೆ ಪೂರ್ವದೊಳು ನಿಜಗುರು ಮ
ಹಂತ ನಿಷ್ಕಲಶಾಂತಸತ್ಪ್ರಭುವೆನಿಪ ಶೀಲ
ವಂತಾರ್ಯಗುರುವೆಮಗೆ ಕರುಣದೆ ನಿರೂಪಮಂ ಕೊಟ್ಟರಾ ತೆಱದೆ ನಿನಗೆ
ನಾಂ ತಿಳುಪುವೆಂ ಕೂರ್ತು ಸದ್ಭಕ್ತಿಯಿಂದಲ
ತ್ಯಂತವಾಸ್ಥೆಯೊಳು ಕೇಳ್ವೈ ಮಗನೆಯೆನುತ ಚಿ
ತ್ಕಾಂತ ಹಲಗೆಯ ದೇಶಿಕಂ ಪೇಳತೊಡಗಿದಂ ನಿಜವಚನದತಿಶಯವನು ೧೭

ಎನ್ನಾರ್ಯನಿರವನಱಿದೆಱಗಿದರ್ಗಳಿವವೈ
ಮುನ್ನಿರ್ದ ಮಲ ಮಾಯೆ ಕರ್ಮತನು ಕರಣೇಂದ್ರಿ
ಯನ್ನಾಡೆ ಸಂಸಾರಬಾಧೆ ನಿಮಿಷಾರ್ಧದಿಂದವೆ ಭಕ್ತಿ ಸುಜ್ಞಾನವು
ಉನ್ನತದ ವೈರಾಗ್ಯದಿಷ್ಟಸಿದ್ಧಿಗಳಾಗಿ
ಸನ್ನುತದ ನಿಶ್ಚಯಂಬಡೆವರೆಂತೆನಲು ನಾ
ನಿನ್ನೊರೆವೆ ಸತ್ತು ಚಿತ್ತಾನಂದ ನಿತ್ಯಪರಿಪೂರ್ಣತ್ವದಿಂದಮೆಸೆವ ೧೮

ಜ್ಞಾನಕ್ರಿಯಾಸ್ವರೂಪಾಗಿ ಭಕ್ತರ ಹೃದಯ
ದಾನಂದದಲ್ಲಿ ಮತ್ಸ್ವರಣದೊಳು ಸನ್ನಹಿತ
ಸಾನುರಾಗಿಯೆನಿಪ್ಪ ಗುರುವ ಮಚ್ಚಿತ್ತದೊಳು ಸ್ಥಿತಿಟ್ಟು ಬೆಸಗೊಂಡೆನು
ತಾನದೆಂತೆನಲೆಲೆ ದೇಶಿಕಾ ನೀಂ ಪೇಳ್ವ
ನೂನವಹ ವೀರಶೈವಾಮೃತದೊಳಖಿಳ ವೇ
ದಾನುಕೂಲಾಗಮ ಸ್ಮೃತಿ ದಿವ್ಯಪೌರಾಣ ಪರಮಾರ್ಥಪೂರ್ಣಮಪ್ಪ ೧೯

ಪರಶಿವಕ್ರೀಡಾ ವಿನೋದಕಥೆಯೆಂಬ ಸಾ
ಗರದೊಳಗೆ ತಾನೆನ್ನ ಶಕ್ತಿಯನುಸಾರದಿಂ
ಪರಿಕಿಸಲ್ಕೆಲಕೆಲವನರ್ಘ್ಯರತ್ನಂಗಳಂ ಪೋಲ್ಪಪ್ರಮಾಣುಗಳನೆ
ವಿರಚಿಸಲ್ತೆಗೆದು ಕೇಳ್ವರ್ಗೆ ಭೂಷಣವೆನಿಸು
ತಿರೆ ವೀರಶೈವಾಮೃತಾಖ್ಯದಿಂ ಪೇಳ್ವೆನೆಂ
ದೆರಡು ಕರವಂ ಮುಗಿದು ಗುರುವಿನನ್ವಯವ ಬಿತ್ತರಿಸಿದಂ ಹಲಗೇಶನು ೨೦

ಸಾದರದೊಳೆಯ್ದೆ ಪೇಳಲ್ ಸ್ವಸ್ತಿ ಸುಸಮಸ್ತ
ವೇದಾಗಮಾಗ್ರ ಪೌರಾಣಶಾಸ್ತ್ರೋಪನಿಷ
ದಾದಿ ವಿದ್ಯಾಂತರ್ಗತೋರು ಶಿವ ನಿಜಸತ್ಸಮಾಧಿಗತ ತಾತ್ಪರ್ಯರು
ಮೋದದಿಂದಸಮಸರ್ವಾಂಗೇಂದ್ರಿಯಾಧಿಕಸ
ದೋದಯದ ಕರಣವಿಷಯ ಪ್ರಾಣದಾನಂದ
ವಾದ ಪರಿಪೂರ್ಣ ಪರಶಿವ ಪದಧ್ಯಾನಾನುಸಕ್ತರುಂ ಪರಿಭಾವಿಸೆ ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಕಿಸಲ್ ಶುದ್ಧ ಶಿವತತ್ವದಾಧರಣಾಂಗ
ಕರಣೇಂದ್ರಿಯ ಸ್ವರೂಪರುಮೆಸೆವ ಜಂಗಮದ
ಚರಣೋದಕಪ್ರಸಾದಗ್ರಾಹಕಾಗ್ರ ಪರಮಾನಂದ ಸದ್ರೂಪರುಂ
ನಿರುಪಮಿತ ಚಿದ್ಭಸಿತಮಣಿಮಂತ್ರ ಸರ್ವಾಂಗ
ವರಭೂಷಣರ್ ಭಾವಿಸಲ್ ಬಳಿಕ ಸದ್ಭಾವ
ಚರಿತ ಚಿಲ್ಲಿಂಗಕರಣಾದಿಸಂಪನ್ನರುಂ ಷಡ್ಗುಣೈಶ್ವರ್ಯಯುತರು ೨೨

ಏಪೇಳ್ವೆನೆಸೆವ ಷಡ್ಬ್ರಹ್ಮಾಂಗದಿವ್ಯಸ್ವ
ರೂಪರುಂ ವ್ಯಕ್ತೀಕೃತೋತ್ತಮದ ತತ್ವವಿ
ದ್ಯಾಪರಮನಿರ್ಣಯರುಮೆಸೆವ ಭಕ್ತಿಜ್ಞಾನವೈರಾಗ್ಯಸಂಪನ್ನರು
ಭಾಪುರೇ ಸರ್ವಲೋಕದ ಜೀವರಂತಸ್ತ
ಮೋಪಹಾರಣಕಾರಣಾಂಗರುಂ ಶಿವಶರಣ
ರೋಪಹೃತ್ಕಮಲಕರ್ಣಿಕೆಯ ನಿಜವಾಸರುಂ ಶಿವನ ಲೀಲಾವಿಗ್ರಹ ೨೩

ವರ ಕಳಾಚೈತನ್ಯರೂಪರುಂ ಸತಿಸುತಾ
ದ್ಯರು ಬಂಧು ಮೂಲ ಮಾಯಾಕರ್ಮರಹಿತರುಂ
ಚಿರ ವೀರಶೈವ ಸನ್ನಹಿತರುಂ ವೀರವ್ರತಾಚಾರ ಶೀಲನಿಯಮ
ಭರಿತರು ವಿಚಾರ ಸುಜ್ಞಾನದಾನಾತಿಶಯ
ವರ ಧರ್ಮ ಸುಗುಣದಾಸೋಹದೊಳು ಸಂಪನ್ನ
ರುರು ಪಂಚವರ್ಣ ಷಡ್ವರ್ಣ ಮೂಲಪ್ರಣವ ದಿವ್ಯಾತ್ಮಸದ್ರೂಪರು ೨೪

ಪರಿಕಿಸಲು ಲೀಲಾಸ್ವಯಂಭು ಪ್ರಸನ್ನ ನಿಜ
ಗುರುಶಾಂತ ಮಲ್ಲಿಕಾರ್ಜುನದೇವರಂಘ್ರಿಸರ
ಸಿರುಹಪೂಜಕರು ಚಿನ್ಮೂರ್ತಿಭಕ್ತಾರಾಧ್ಯರೆನಿಸಿ ರಾಜಿಸುತಮಿರ್ಪ
ಕರುಣಿ ನಿಜಲಿಂಗಚಿಕ್ಕಾಭಿಧಾನವನುಳ್ಳ
ವರ ಶೀಲವಂತದೇವರ ಪೂರ್ವವೆಂತೆನಲು
ವಿರಚಿಸುವೆನ್ನೈ ಕೇಳೆನುತ್ತ ಹಲಗೆಯ ದೇಶಿಕಂ ಪೇಳಲುಜ್ಜುಗಿಸಿದಂ ೨೫

ಏನೆಂಬೆನ್ನೈ ಪ್ರಥಮದಲ್ಲಿ ಭಾವಿಸೆ ಸಚ್ಚಿ
ದಾನಂದ ನಿತ್ಯ ಪರಿಪೂರ್ಣನೆಂದೆನಿಸುವ ಮ
ಹಾ ನಿಷ್ಕಲಾಗ್ರ ಗುರುಲಿಂಗದೇವರ್ ದ್ವಿತೀಯದೊಳು ಪರಿಭಾವಿಸುವೊಡೆ
ತಾನುರೆ ಪರಂ ಗೂಢಮುಂ ಶರೀರಸ್ಥಮೆನೆ
ಸಾನುರಾಗದೊಳು ಲಿಂಗಕ್ಷೇತ್ರಮುಮನಾದಿ
ಯಾ ನಿಜವೆನಿಪ್ಪ ನಿಷ್ಕಲದ ಶಿವಲಿಂಗದೇವರು ತತ್ತೃತೀಯದಲ್ಲಿ ೨೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಗೆಯಲು ಶಿವಾಮೂರ್ತಿ ಮೂರ್ತಿಯಾ ಕರ್ತೃಕ
ರ್ಮಗಳೀಶನಹ ಸದಾಶಿವಲಿಂಗದೇವರುಂ
ಮಿಗೆ ಚತುರ್ಥದೊಳು ಭವ ಸರ್ವ ರುದ್ರಂ ಭೀಮನುಂ ಮಹಾದೇವನುಗ್ರಂ
ಸೊಗಸೀವ ಸೋಮ ಪಶುಪತಿಯೆಂಬ ದಿವ್ಯನಾ
ಮಗಳಿಂದ ರಾಜಿಪೀಶ್ವರಲಿಂಗದೇವರಾ
ವಗ ಪಂಚಮದೊಳು ತತ್ಪಂಚವಿಂಶತಿ ಲೀಲೆಗಳ ತಾಳ್ದನೆಂತೆಂದೊಡೆ ೨೭

ಚಿರಸೋಮಧರಸೋಮ ವೃಷವಾಹತಾಂಡವಂ
ಗಿರಿಜಾಪ ಭಿಕ್ಷುಕಾಮಾಂತಕ ತ್ರಿಪುರಜಲ
ಧರಧಾತೃ ದಕ್ಷಾಚ್ಯುತಾರ್ಯಾರ್ಧನಾರಿ ಶಬರಾಂಗಿ ಕಂಕಾಳಿ ಚಂಡ
ವರ ವಿಸದ ವಿಷ್ಣು ವಿಭಮುಖ ಗುಹೇಷ್ಟದನೇಕ
ಚರಣೆ ಸುಖವಹ ದಕ್ಷಿಣದ ಮಹಾಲಿಂಗಾಂಗ
ದುರು ಪಂಚವಿಂಶತಿ ಮಹೇಶದೇವರು ಮೆಱೆದಿರಾ ಷಷ್ಟಮದೊಳು ಬಳಿಕ ೨೮

ಶಿವ ಮಹೇಶ್ವರ ರುದ್ರರತಿಶಯ ಶ್ರೀಕಂಠ
ನವಿರತಂ ಶಂಭುವೀಶ್ವರನು ಪಶುಪತಿಯೊಳೊ
ಪ್ಪುವ ಮಹಾದೇವನಾ ನೀಲಕಂಠಂ ವೃಷಧ್ವಜ ಪರಮರೆಂದೆನಿಸುವ
ಸುವಿಮಲೈಕಾದಶ ಮಹಾರುದ್ರಮೂರ್ತಿದೇ
ವವರೇಣ್ಯ ಗುರುಮೂರ್ತಿ ಮೆಱೆವನ್ನೈ ಸಂತಸದೆ
ಕುವರ ಕೇಳ್ವೈ ಮುಂದೆ ದಿವ್ಯನಾಮವನಾಂತು ಮೆಱೆವ ದೇಶಿಕನ ಬಗೆಯ ೨೯

ಓವಿ ಸಪ್ತಮದ ಭವಮೃಡಹಶಾಖ್ಯದ ತತ್ರ
ಯಾವಯುದ ದೇವರಷ್ಟಮದಲ್ಲಿ ವಿಶ್ವತಃ
ಪಾವನ ವಿರಾಡ್ರೂಪದೇವರುಂ ನವಮದೊಳು ಪರಿಪೂರ್ಣಸೂಕ್ಷ್ಮಮಪ್ಪ
ಜೀವಚೇತನದುರು ಹಿರಣ್ಯಗರ್ಭಾಖ್ಯಗುರು
ದೇವರಾ ದಶಮದೊಳು ಕಾರಣತನುವಿನ ಗು
ಪ್ತಾವಸ್ಥೆಯಾನಂದರೂಪದಾ ಪ್ರಾಜ್ಞದೇವರು ತದೇಕಾದಶದೊಳು ೩೦

ತಾನೊಪ್ಪುತಿರ್ಪ ಸೂಕ್ಷ್ಮಾಂಗದಾ ಸ್ವಪ್ನಾಭಿ
ಮಾನಿಯೆಂದೆನಿಪ ತೈಜಸದೇವರೆನಿಸುವರು
ಸಾನುರಾಗ ದ್ವಾದಶದೊಳು ಮತ್ತಾ ಸ್ಥೂಲದೇಹಜಾಗ್ರಾಭಿಮಾನಿ
ಆನಂದ ವಿಶ್ವೇಶದೇವತ್ರಯೋದಶಾ
ಸ್ಥಾನದೊಳಗಾತ್ಮತ್ರಯಂಗಳುಂ ಕಾಲತ್ರ
ಯಾನುಕೂಲದೊಳೆಸೆವ ತತ್ವತ್ರಯಂ ಶರೀರತ್ರಯಂಗಳುಮೆನಿಸುವ ೩೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆರಯ್ಯಲಾ ತ್ರಿಪುಟಿ ನಾದ ಬಿಂದ್ವಾಧಿಕ ಕ
ಳಾರೂಪದಿಂ ಪ್ರಕಾಶಿತ ಮನಸ್ಸತ್ವವೆಸೆ
ವಾ ರಜೋಗುಣದಿಂದ ರುದ್ರ ವಿಷ್ಣು ಬ್ರಹ್ಮದೇವತ್ರಯದೊಳು [ನಿಂದು]
ಪ್ರೇರಿಪಾ ತ್ರಿಗುಣಕ್ಕತೀತವಹ ಶಿವತತ್ವ
ಕಾರಣದೊಳಾದಿ ಮಧ್ಯಾಂತವಱಿದೊರೆದು ಬೋ
ಧಾರತಿಯ ದೀಕ್ಷೆಯಂ ಮಾಳ್ಪ ನಿಜಲಿಂಗಚಿಕ್ಕಾರಾಧ್ಯರೆಸೆದಿರ್ಪರು ೩೨

ಆ ಗುರೂತ್ತಮನ ಮೂಲಾಧಾರದನುಭವಸು
ಯೋಗಕೃತನಿಶ್ಚಯದ ಸುಮನಃಶಿವಜ್ಞಾನ
ರಾಗಕರಕಮಲದೊಳ್ಸಂಭವಿಸಿದುತ್ತಮರ್ವೀರ ಹಲಗೆಯ ದೇವರು
ಶ್ರೀಗುರುವಿನನ್ವಯವನುಱೆ ನುತಿಸಿ ಸಾಷ್ಟಾಂಗ
ರಾಗಿ ವಂದಿಸುತೆದ್ದು ಕರಕಮಲವಂ ಮುಗಿದು
ಪೋಗೆ ಬಿನ್ನವಿಸತೊಡಗಿದೆವಂದು ನಾವು ಕೇಳ್ಳೆ ಕೆಂಚವೀರಾಹ್ವಯ ೩೩

ಸ್ವಾಮಿ ಮದ್ಗುರುವೆ ಚಿದ್ಗುರುವೇ ಮಹದ್ಗುರುವೆ
ಸಾಮರ್ಥ್ಯರೂಪಾಯೆನುತ್ತ ನುತಿಸುತ್ತಲೆ
ನ್ನೀ ಮೂಲವೆನಿಪಾದಿ ಮಧ್ಯಾವಸಾನ ನಿತ್ಯಾನಿತ್ಯಮಂ ತಿಳಿಯಿಸಿ
ಶ್ರೀಮನ್ಮಹಾಭಕ್ತಿ ಸುಜ್ಞಾನ ವೈರಾಗ್ಯ
ಧಾಮವೆನಿಪಮಲ ಷಟ್ಸ್ಥಲವರ್ತನೆಯನಿತ್ತ
ಹೋ ಮುಕ್ತಿಯೊಳು ನಿತ್ಯಮುಕ್ತಿಯಂ ಕೊಟ್ಟು ರಕ್ಷಿಪುದೆಂದು ಬಿನ್ನವಿಸಲು ೩೪

ಬಿನ್ನವಿಸಿದೆನಗೆ ನೀವಾರಾದ ಋಷಿ ಸಗಣ
ಮಂ ನೀಡೆ ಭಿಕ್ಷಕ್ಕೆ ಯಮಲೋಕದಿಂದಜ್ಞ
ನಂ ನಾಡೆ ಮಗುಳಿಸುತ ಪುಟ್ಟಿದಾತನ ಸೂಕ್ಷ್ಮದೇಹಮಂ ನರಕದಿವಿಯ
ಉನ್ನತದ ಬಂಧ ಭೋಗಂಗಳೆಡೆಗೊಯಿದ ಋಷಿ
ಯನ್ನಯದ ನಿಂದಕರಿಗವನಘಂ ಪೋಗಲುಱೆ
ಚಿನ್ಮಯದ ಬೋಧೆಯಂ ಪೇಳ್ದು ರಕ್ಷಿಸಿದ ದೇಶಿಕನಿಗಗ್ಗಳವೆನಿಸುವ ೩೫

ಆ ಗುರೂತ್ತಮನೆನ್ನ ಕರೆದು ಮನ್ನಿಸಿ ಮಗನೆ
ರಾಗದಿಂ ಪೇಳುವೆನೆನುತ್ತ ಬೋಧಿಸಿದಿರವ
ನೀಗ ನಿನಗಱುಪುವೆಂ ಕೇಳಯ್ಯ ಕೆಂಚವೀರಾಹ್ವಯಾ ಮುಂದೆ ಕೂರ್ತು
ನೀ ಗಱುವನಹುದಱಿಂದೊಱೆವೆ ಪಿಂಡೋದ್ಭವವ
ದಾಗುತಿರ್ದಪ್ಪುದೈ ಸೂಚನಾವಾಕ್ಯಕ್ರ
ಮಾಗಮದಿನಿದು ಮಹಾ ಚಿತ್ಪಿಂಡವೆಂದಱುವುದೈ ತಿಳಿದು ಹೃದಯದೊಳಗೆ ೩೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ನಿತ್ಯಾದಿ ನಾಮುವನುಳ್ಳ ನಿಷ್ಕಲ ಸ
ದೋತ್ತಮದ ಲಿಂಗಮಧ್ಯದೊಳಂ ಪರಾದಿ ನಾ
ಮೋತ್ತರವನುಳ್ಳ ನಿಷ್ಕಲದ ಶಿವಲಿಂಗದೇವರು ಸಮುದ್ಭವವಾದುದು
ಚಿತ್ತದೊಲವಿಂ ಕೇಳ್ವುದಾ ಲಿಂಗಮಧ್ಯದೊಳು
ದಾತ್ತದ ಶಿವಾದಿನಾಮುವನುಳ್ಳ ನಿಷ್ಕಲತೆ
ವೆತ್ತ ಗುರುಲಿಂಗೋದ್ಭವಂ ಬಳಿಕ ಗುರುಲಿಂಗಮಧ್ಯದೊಳು ತಿಳಿಯಲಾಗಿ ೩೭

ಸಕಲ ನಿಷ್ಕಲರೂಪನಪ್ಪ ಜಂಗಮಲಿಂಗ
ನಕಲಂಕನುದ್ಭವಂ ಬಳಿಕಲಾ ಜಂಗಮಾ
ಧಿಕನ ಮಧ್ಯದೊಳು ಚಂದ್ರಧರಾದಿ ನಾಮಧೇಯವನುಳ್ಳ ಸಾಕಾರದ
ಸುಕರ ಲಿಂಗೋತ್ಪತ್ತಿಯಾ ಲಿಂಗಮಧ್ಯದೊಳ್
ಪ್ರಕಟ ರುದ್ರೋತ್ಪತ್ತಿಯಾ ರುದ್ರಭಾಳದೊಳ್
ಚಕಿತ ವರವೀರಭದ್ರೋತ್ಪತ್ತಿಯಾ ವೀರಭದ್ರ ಚಿದ್ಭಾವದಲ್ಲಿ ೩೮

ವೀರ ಹಲಗೆಯ ದೇವರುದ್ಭವವದೆಂತೆಂದೊ
ಡೋರಂತೆಯಾ ಮಹಾ ಚಿದ್ಭಾವ ಮಧ್ಯಸಾ
ಕಾರ ಪ್ರಸನ್ನಪ್ರಸಾದದುದ್ಭವದಾ ಪ್ರಸಾದಮೂರ್ತಿಯನೆ ಕರೆದು
ಕಾರುಣ್ಯದಿಂ ವೀರಭದ್ರದೇವರು ಹರುಷ
ದೋರಣದೆ ನುಡಿವುತಿರ್ದಪರದೆಂತೆಂದೊಡೀ
ಧಾರುಣಿಗೆ ನೀನು ಶಿವಭಕ್ತರ ನಿಮಿತ್ತದಿಂ ಹೋಗಬೇಕಯ್ಯ ಮಗನೆ ೩೯

ಎಂದೆನಲು ಬಿನ್ನಪಂ ಮರ್ತ್ಯವೆತ್ತಂ ನಿನ್ನ
ಕಂದ ನಾನೆತ್ತಲೆಲೆ ಜೀಯ ಧರಣಿಯ ಸಕಲ
ದಂದುಗಕ್ಕಾಱಿ ನಾಂ ಪೋಗಲಂಜುವೆನೆಂದೊಡಂಜದಿರು ಮಗನೆ ಕೇಳು
ಇಂದು ನಮ್ಮಯ ಕಾರಣದಿ ಹೋಗು ಭಕ್ತರಾ
ನಂದದಿಂದಾಚಾರ್ಯನಂ ಬಯಸುತಿರ್ದಪರು
ಸಂದೆಗಂ ಬೇಡ ಶರಣರ್ಗೆ ಬೋಧಿಸಬೇಹುದೆಂದು ನುಡಿವುತ್ತಿರ್ದನು ೪೦

ಹೋಗಿ ಮರ್ತ್ಯಕ್ಕೆ ಸರ್ವಾಚಾರಸಂಪನ್ನ
ನಾಗಿ ಷಟ್‌ಸ್ಥಲಮಾರ್ಗಿಯೆನಿಸಿ ಸಜ್ಜನಸಂಗಿ
ಯಾಗಿ ನೀ ವೀರಹಲಗೆಯದೇವರೆಂದೆಂಬ ನಾಮಧೇಯದೆ ಚಿನ್ನಿಧಿ
ಯಾಗಿ ಗುರುಮಾರ್ಗದಾಚಾರಮಂ ಪಿಡಿದು ನೀ
ನೇಗಳುಂ ದಿನದಿನಕೆ ಉನ್ನತಜ್ಞಾನಿ ಶಿವ
ಯೋಗಿಯೆಂದೆನಿಸಿ ಬೆಳೆವುತ್ತನಿತ್ಯಾದಿಕರಣಂಗಳೆಲ್ಲವನು ಜಱಿದು ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಱೆ ನಿತ್ಯವಸ್ತುವಿನ ಸದ್ವಿವೇಕದ ಬಗೆಯ
ನಱಿದು ಜಂಗಮಸುಪ್ರಸಾದಮಂ ಪಡೆದು ಧರೆ
ಯಱಿಯೆ ಚರಿಸಲ್ವೇಕು ಹೋಗೆನಲು ಮರ್ತ್ಯದೊಳು ನರರೂಪದೊಳು ಕರಣದ
ಕೊಱಚಾಟವುಂಟದಱ ಸಂಸಾರಕಾಱೆನೆನೆ
ಮಱುಗಬೇಡದಕೆಂದು ನಂಬುಗೆಯ ಕೊಟ್ಟನೆ
ನ್ನಱಿಯನೆಂತೆನೆ ನಿನ್ನ ಕಾಯ ಕರಣೇಂದ್ರಿಯಾತ್ಮಜ್ಞಾನವರ್ತನೆಯೊಳು ೪೨

ನಾವಿಪ್ಪೆವೆಂದೊಡಂಬಡಿಸಿ ಸುಖದುಃಖಂಗ
ಳಾವುವುಂಟವು ನಮ್ಮವೆಂದು ಸಂತೈಸಿ ಕೇ
ಳೈ ವರಕುಮಾರ ನಿನ್ನಯ ಮಹಾ ಸದ್ವರ್ತನಾವೃತ್ತಿಯಾರ್ಯೆಕೆಗೆ
ಓವಿ ಸದ್ಭಕ್ತರಂ ಕಾಯ್ದಿಪ್ಪುಟ್ಟೊಡಂಬಡಿಸಿ
ಯಾವಗಂ ನಾವು ಹೆಱಹಿಂಗದಿಹೆವೆಂದು ಸ
ದ್ಭಾವದಿಂ ಬೀಳ್ಕೊಟ್ಟು ವೀರೇಶ ಧರಣಿಯೊಳು ಶೀಲವಂತಾರ್ಯನಾದಂ ೪೩

ವೀರಭದ್ರಾಜ್ಞೆಯಿಂದೆಯಿತಂದ ಚಿತ್ಪಿಂಡ
ವೇ ರಸೆಯೊಳಮಳಭಕ್ತರ ಗರ್ಭದೊಳು ಸದಾ
ಚಾರದಿಂದುದ್ಭವಿಸಿ ದಿವ್ಯ ಗುರುಕರಕಮಲ ಸಂಭೂತನಾಗಿ ಬಳಿಕ
ಸಾರ ಚಿದ್ವರ್ತನಾಧಿಕಶೀಲಮಂ ಪಡೆದು
ದಾರದಾ ಸ್ವಯ ಚರಂ ಪರವೆಂಬ ಸುಸ್ಥಲವ
ನಾರೈದು ತಾನೆಯಂಗಂಗೊಂಡು ಷಟಸ್ಥಲಜ್ಞಾನಾಂಗನಾಗಿನಲಿದು ೪೪

ಪರಮ ಭಕ್ತರ ಗೃಹಂಗಳೊಳೆಯ್ದೆಯಱಿವಿನಿಂ
ಚರಿಸಿ ಮುಕ್ತಿಕ್ಷೇತ್ರವೆಂದೆನಿಸಿ ನಿಜ ನಿತ್ಯ
ಕರ ನಿವಾಸವದೆನಿಸಿ ಪರಮ ತೇಜಃಪುಂಜವೆನಿಸಿ ಮಿಗೆ ಸಂತೋಷದೆ
ವರ ನಿತ್ಯಮುಕ್ತತ್ವವೆಂದೆನಿಸಿ ತೋಱಿ ಮ
ದ್ಗುರುಲಿಂಗ ಜಂಗಮದ ಮಹಿಮೆಯಂ ಸೂಚಿಸುತ
ಗುರುಚರಾಧಿಕಭಕ್ತರೊಳ್ವೆರಸಿ ಶ್ರುತಗುರುಸ್ವಾನುಭಾವದೊಳು ನಡೆದು ೪೫

ಗುರುಮುಖ್ಯದಖಿಳ ಸದ್ವರ್ತನೆಯೊಳಾಚರಿಸಿ
ಗುರು ಶೀಲವಂತದೇಶಿಕನಡಿಗೆ ವಂದಿಸುತೆ
ಗುರುವೆ ಸದ್ಭಕ್ತರಿಷ್ಟಾರ್ಥವಹ ವೀರಶೈವಾಮೃತಾಖ್ಯದ ಬೋಧೆಯ
ಒರೆವುದೆಂದಾನು ಬೆಸಗೊಳಲದಂ ಪೇಳ್ದರಾ
ಪರಿಯ ಕಣ್ದೆಳುವಾಗಿ ಕೆಂಚವೀರಾಖ್ಯಬಿ
ತ್ತರಿಸುವೆವು ಕೇಳೆಂದು ಹಲಗೆಯಾರ್ಯಂ ಪೇಳತೊಡಗಿದನದೆಂತೆಂದೊಡೆ ೪೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾವಂಗವಂ ತಳೆದು ಧರಣಿಯೊಳ್ ಚರಿಸುತ ಮ
ಹಾ ವೀರ ಶೀಲಸಂಪನ್ನ ಕಲ್ಲೇಶ್ವರಂ
ಪಾವನದ ಸೈಂಧಿವದಶಾಂತದೇವರು ದಿವ್ಯ ಕಲ್ಯಾಣ ಮಲ್ಲೇಶ್ವರಂ
ಓವಿ ನಂಜಯ್ಯ ಸಪ್ಪೆಯ ಮಲ್ಲಿಕಾರ್ಜುನ ಮ
ಹಾವಿಭು ಸಮಾಧಿ ಸಿದ್ಧಂ ಮಸಪ್ಪಯ್ಯ ಮೃಂಗ
ಳೀ ವಿವೇಕಿಗಳ ಮಧ್ಯಜ್ಯೋತಿಯಂ ಮನಾಲಯದಲ್ಲಿ ಬಿತ್ತರಿಪೆನು ೪೭

ಈ ವೀರಶೈವಾಮೃತಾಖ್ಯ ಸಂಗ್ರಹವನೀ
ಭೂವಳಯದಲ್ಲಿ ಕೃತಿಯಂ ಮಾಳ್ಪ ಶಿವಕವಿಯು
ದಾವನೆಂದಱಿದು ಹಲಗೆಯ ದೇಶಿಕಂ ಮಲ್ಲಣಾರ್ಯನಂ ಕರೆದು ನುಡಿದಂ
ನಾವು ಪೇಳ್ವೀ ಬೋಧೆಯಂ ಪದನ ಮಾಡುವೊಡೆ
ಪಾವನ ಚರಿತ್ರ ಕೇಳ್ ನೀನೆಯೋಗ್ಯಂ ಕಣಾ
ಶಾವಕಾನ್ವಯದಮರಗುಂಡ ಮಲ್ಲೇಶ್ವರಾಚಾರ್ಯನೇಂ ಸಾಮಾನ್ಯನೇ ೪೮

ಅವರ ಶಿಷ್ಯಂ ಶೂಲವೇಱಿದ ಮಹತ್ವವು
ಳ್ಳವಿಚಲಿತ ಗುರುಭಕ್ತನಾತನ ಕುಮಾರನಾ
ಪ್ರವರದೇಶಿಕಪಟ್ಟವರ್ಧನಂ ಸೌಂದರ್ಯಮಲ್ಲಿಕಾರ್ಜುನಪಂಡಿತಂ
ತವೆ ತತ್ತನೂಭವಂ ನಾಗನಾಥಾರ್ಯನಾ
ಶಿವನ ನುಡಿಸಿದ ನಾತನಣುಗನಹಿಯಂ ಲಿಂಗ
ಕವಧಾನದಿಂ ಛತ್ರವಂ ಮಾಡಿದಮರಗುಂಡಾರ್ಯನಾತನ ಪುತ್ರನು ೪೯

ಖ್ಯಾತನಾ ಪುಲ್ಕಸಾಂಗನ ಲಸದ್ಬ್ರಾಹ್ಮಣ
ವ್ರಾತಕಗ್ಗಳವ ಮಾಡುತ ವೇದವೋದಿಸಿದ
ಪೂತಮಾನಸನಿಂತು ಮೆಱೆವನ್ವಯದೊಳು ಗುಬ್ಬಿಯ ಮಲ್ಲಣಾಚಾರ್ಯನು
ಜಾತನಾಗುತ್ತಲನುಭವಯೋಗ ಷಟ್‌ಸ್ಥಲ
ಖ್ಯಾತಮಂ ಗಣಭಾಷ್ಯರತ್ನಮಾಲೆಯ ಮಾಡಿ
ವಾತೂಲಕಂ ಟಿಪ್ಪಣವನೆಸಗಿದವನ ಪೌತ್ರಂ ನೀನದೇಂ ಬಡವನೇ ೫೦

ಕರ್ಣಾಟ ಸಂಸ್ಕೃತೋಭಯ ಕವಿತ್ವಂಗಳಂ
ಪೂರ್ಣ ಲಕ್ಷಣ ಚಮತ್ಕಾರದಿಂದಂ ಮಾಳ್ಪ
ನಿರ್ಣಯಕೆ ನೀನೆಯುಗ್ಗಳವಲಾ ಬಸವಪೌರಾಣಾರ್ಥಮಂ ಪೇಳ್ವೊಡೆ
ಅರ್ಣವಪ್ರಾಂತ ಭೂಮಿಯೊಳು ಪೆಸರಾಗಿರ್ದು
ಕೀರ್ಣಭಾವದೊಳುಃ ಸತ್ಯೇಂದ್ರಚೋಳನ ಕೃತಿಯ
ವರ್ಣಿಸಿದೆಯಖಿಳ ಕವಿಗಳು ಪೊಗಳೆ ನೀನದಱಿನುತ್ತಮಂ ಕೇಳೆಂದನು ೫೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನುತ ಹಲಗೆಯ ದೇಶಿಕಂ ಕೂರ್ತು ಕರುಣದಿಂ
ವಿನುತಿಸುತ ಮಲ್ಲಣಾರ್ಯನೆ ಕೇಳು ನಾವು ಸ
ಜ್ಜನರಿಗೀ ವೀರಶೈವಾಮೃತಾಹ್ವಯ ಬೋಧೆಯಂ ಪೇಳ್ವುದಕ್ಕೆ ನೀನು
ಸನೆಯದಿಂ ಪದನ ಮಾಡೆನಲದಂ ಕೈಕೊಂಡು
ವಿನತನಾಗುತ ದೇವ ಕೇಳಂತುಮಾಡುವೆಂ
ಎನಗೇಂ ಸ್ವತಂತ್ರಮೇಯೆನುತ ಬಿತ್ತರಿಸಿದಂ ಕೃತಿಯ ಸನ್ಮೋಕ್ಷಗತಿಯ ೫೨

ಈ ಕ್ಷಿತಿಯ ಸತ್ಕವಿಗಳೀ ಮಲ್ಲಣಾರ್ಯನಱಿ
ಲಕ್ಷಣವನಱಿಯದುಸುರಿದನೆಂದು ನಲವಿನಿಂ
ದೀಕ್ಷಿಸುತ ಸತಿಸಪ್ತಮಿಗಳಗಳ್ದುರು ಬಿಂದುಗಳನಿನಾಗಮಕಾರಕ
ಕುಕ್ಷಿಕ್ರಿಯಾಹೀನಪುನರುಕ್ತಿಗಳಿವೆಂದು
ಲಕ್ಷಿಸಲ್ಬೇಡವಾ ರಾಘವಾಂಕಾದಿಗಳ್
ತ್ರ್ಯಕ್ಷ ನಿಷ್ಠರ ವಚನದಂತೆ ಪರಮಾರ್ಥ ಕವಿತೆಯ ಪೇಳ್ದ ಬಗೆಯೆಂತೆನೆ ೫೩

ಶ್ರೀ ವಿರಕ್ತಾಧೀಶ್ವರಂ ಹಲಗೆಯಾಚಾರ್ಯ
ನೋವಿಯಾ ಕೆಂಚವೀರಾಖ್ಯಂಗೆ ಪೇಳ್ದ ಶೋ
ಭಾವಹದ ವೀರಶೈವಾಮೃತಪುರಾಣದಧಿದೈವ ಜಂಗಮಲಿಂಗವೆ
ಆ ವೇದ ಪೌರಾಣ ಶಾಸ್ತ್ರೋಪನಿಷದರ್ಥ
ಸಾವಧಾನದ ಪುರಾತನ ವಚನರೂಪ ಸ
ದ್ಭಾವಿ ಮೇಲಣಗವಿಯ ಶಾಂತನಂಜೇಶ ಗುರುಸಾಂಪ್ರದಾಯವದೆಂತೆನೆ ೫೪

ಧರೆಗೆ ದಕ್ಷಿಣಮಹಾಕೈಲಾಸ ವೀರೇಶ
ಗುರುಪಂಚಕಳಶವದ್ರಾಜಿತಾಧಿಕಗುಪ್ತ
ಸರಸಿ ನದಿ ಶಿಖರ ಸಂಭವತೀರ್ಥ ಕುಂಭಜಕೃಪಾವರದ ದರುಶಗಂಗಾ
ಧರವಿವಾಹಾಗ್ರಪರಿಷನ್ಮಹಿಷದುಷ್ಟಸಂ
ಹರಣ ಹೊನ್ನಾಂಬಿಕಾನಾಥ ವಿಲಸತ್ಕಕು
ದ್ಗಿರಿಯ ಮೇಲಣ ಗವಿಯಸಿಂಹಾಸನದ ಚರಮಹಾಮಹತ್ತೆಸೆದಿರ್ಪುದು ೫೫

ಭೂತಳದ ಹಿಮಸೇತು ಮಧ್ಯತೀರ್ಥವ ನೋಡಿ
ಶೀತಜಲಪಾನ ಮರಣಾಂತ ಮೋಕ್ಷದವೆಂಬ
ಕೇತಾರ ವಾರಣಾಸ್ಯಾಧಿಕದ ಶಿಖರ ದರುಶನ ಮುಕ್ತಿ ಸಿರಿಗಿರಿಯಲಾ
ಆ ತಾಣದಿಂದ ಗುಂಜಾಧಿಕಂ ಶಿವಗಂಗೆ
ಸಾತಿಶಯಮೆಂದು ಮೇಲಣ ಗವಿಯೊಳಿಹ ಪರಂ
ಜ್ಯೋತಿ ಸ್ವರೂಪದ ಮಹತ್ತು ಮಹಿಮಾಕುಜದ ಬಿತ್ತು ಮೆಱೆಯಿತ್ತು ಸತತಂ ೫೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮಹತ್ತೆಂಬನರ್ಘ್ಯದರತ್ನನಿವಹ ಚಿಂ
ತಾಮಣಿ ಸುಮೋಕ್ಷಪುರುಷದ ಕಣಿ ಚರಾಗ್ರಣಿ
ಸ್ತೋಮ ಸದ್ಗುಣಿ ದೋಷಗಜಮೃಹಾಸೃಣಿ ಪಾವನೀಕೃತಾಖಿಲ ಧಾರಿಣಿ
ಸಾಮರ್ಥ್ಯಕೋಶ ಯಮಕಾಮಕರ್ಮವಿನಾಶ
ನಾಮ ಪಾವನದೀಶ ಸಂಹೃತಾಖಿಳಪಾಶ
ಮಾಮರುಳ್ಗರೆ ಚಿದ್ಭೇಷ ರಾಜಿಸಿದನಾ ಮಲೆಯಶಾಂತೇಶ ಸುಪ್ರಕಾಶ ೫೭

ಆ ರಾಮಣೀಯಕಂ ಮಲೆಯ ಶಾಂತೇಶನ ಶ
ರೀರವೇ ತಾನಾದ ಮೂರ್ತಿಯ ತಪಕ್ಕಗಿದು
ಮಾರನಾ ವನಿತೆಯರ ಮೊಲೆ ಮೊಗ ಮುಡಿಗಳೆಂಬ ಗಿರಿದುರ್ಗ ಜಲದುರ್ಗಮಂ
ಚಾರುವನದುರ್ಗಮಂ ಸಾರಲವನಾಳ್ಗಳ್ಗೆ
ಕೂರುಗುರ್ದಂ ತಾಂಗುಲಂಗಳಿಂ ಹತಿಸೆ ಚರ
ಣಾರವಿಂದದ ಭಕ್ತಿ ಕಾಮನೆನಿಸಲು ಮೆಱೆದನಾ ಶಂಭು ಗುರುವಲ್ಲಭಂ ೫೮

ಆ ಮಹಾ ಶಂಭುದೇಶಿಕನ ಮಹಿಮಾಂಬುನಿಧಿ
ಸೋಮ ಶಿಷ್ಯಾವಳಿಪ್ರೇಮ ನಿರವಧಿಸುಚಿ
ದ್ಧಾಮ ತಾಪಸಸಾರ್ವಭೌಮ ಸಂಹೃತಕಾಲಕಾಮ ಘನಪುಣ್ಯನಾಮ
ಭೂಮಿ ಪುನರಾಗತವಿಜೂರ್ತಿ ನಿರ್ಮಲ ಹೃದಯ
ತಾಮರಸ ವಿಸ್ಫೂರ್ತಿ ವಿಗತಾರ್ಥಿಯೊಪ್ಪಿದಂ
ಶ್ರೀಮಲೆಯ ವೀರೇಶಮೂರ್ತಿ ನಿರ್ಮಲಕೀರ್ತಿ ಚರಚಕ್ರವರ್ತಿ ನಲವಿಂ ೫೯

ಆ ಮಲೆಯ ವೀರೇಶನನ್ವಯಾಮೃತವಾರ್ಧಿ
ಸೋಮನೆಂದೆನಿಸಿ ತತ್ಪಟ್ಟವರ್ಧನ ಘನಮ
ಹಾಮಹತ್ತಿಗೆ ಪರಮ ಪರಿಣಾಮವೆಯ್ದಿಸುವ ಸ್ವಪನಾ ಗವಿಯೊಳೆಸಗಿ
ಭೂಮಿಯೊಳಗಂದು ಸೊನ್ನಲಿಗೆಯೊಳು ಮೆಱೆದ ಚಿ
ದ್ಧಾಮನೇ ತಾನೆಂದೆನಿಪ್ಪವಂ ಶ್ರೀ ಸಿದ್ಧ
ರಾಮೇಶ ಗುರುನಾಥನಖಿಳಮಹಿಮಾಧಿಕ ವರೂಥ ಘನಸುಗುಣಯೂಥ ೬೦

ಅಂತಪ್ಪ ಸಿದ್ಧರಾಮೇಶ್ವರ ಗುರೂತ್ತಮ
ಸ್ವಾಂತಹರುಷಿತ ಹಸ್ತಕಮಲದೊಳಗುದ್ಭವಿಸಿ
ಕಾಂತದೀಪದೊಳು ಮುಟ್ಟಿಸಿದ ಪಂಜೆಂಬಂತೆ ಕುಂಭವಿಬ್ಬಳನೀರನೆ
ತಾಂ ತೀವಿಕೊಂಬುದಾ ಕುಂಭದೊಳಗಸ್ತ್ಯನೊಗೆ
ದಂ ತಾ ಸಮುದ್ರಮಂ ಮೊಗೆದ ಕೀರ್ತಿಯ ಪೋಲ್ವ
ಶಾಂತನಂಜೇಶ್ವರಂ ಭೂವಳಯದೀಶ್ವರಂ ಮೆಱೆವನೊಲಿದು ಮಹೇಶ್ವರಂ ೬೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂಡಳೇಶ್ವರರಾಯ ಮಣಿಕಿರಣಮಕುಟಕರ
ದಂಡನಖಚರಣ ವಿಲಸದ್ವಿರಾಜಿತ ತರುಣ
ಚಂಡಪ್ರಕಾಶ ಚರಸಂಕುಲ ಸದಾವರಣ ನೈರ್ಮಲ್ಯದಿವ್ಯಕರಣ
ಕೊಂಡಾಡುವರ ಭಾಗ್ಯಕೋಶ ದುಷ್ಕೃತನಾಶ
ಚಂಡಿಕಾಪತಿಸನ್ನಿಕಾಶ ಶಿಷ್ಯಾಬ್ಜಮಾ
ರ್ತಾಂಡಪ್ರಕಾಶ ಗುರುಶಾಂತ ನಂಜೇಶ ನೊಪ್ಪಿರ್ಪನತಿ ಸೌಖ್ಯಭೇಷ ೬೨

ನೆಟ್ಟನಾ ಶಾಂತನಂಜೇಶ ಗುರುಕೃಪೆಯೆಂಬ
ತೊಟ್ಟಿಲೊಳು ಬೆಳೆಯೆ ನಿಜಚಿತ್ತಕ್ಕೆ ಮೋಹವಳ
ವಟ್ಟು ರಾಜಿಪ ಚಿಕ್ಕಶಾಂತೇಶ್ವರಂಗೆ ಯುವರಾಜ ಪಟ್ಟವನಮರ್ಚಿ
ಪಟ್ಟಿರ್ಪ ಮೇಲಣಗವಿಯ ಚರಮುಹತ್ತಿಗಂ
ಕಟ್ಟಕ್ಕರಿಂ ಪರಮಸುಖದ ಸೇವೆಯ ಮನಂ
ಮುಟ್ಟಿ ಮಾಡುತ್ತ ಸತ್ಕೀರ್ತಿ ಶಿವಸಾಮ್ರಾಜ್ಯವಾಳುತೊಪ್ಪಿರ್ಪನಾರ್ಯಂ ೬೩

ಪರಶಿವಂ ಶೀಲಸಂಪಾದನೆ ಸದಾಚಾರ
ದಿರವನಂದಗಜೆಗೊರೆವಾ ಗ್ರಂಥದರ್ಥಮಂ
ಧರೆಯೊಳಿಂತೀ ವರ್ತಮಾನದೊಳ್ ಪ್ರತ್ಯಕ್ಷಮಾಗಿ ತೋರಿದಪೆನೆಂದು
ಕರುಣದಿಂ ಶಾಂತನಂಜೇಶ್ವರಂ ತಾನೆಯಾ
ದಿರವೆಂಬುದೇ ನಿಶ್ಚಯಂ ತಾನದಲ್ಲದಿರೆ
ಗುರುಮಹಾಸಿಂಹಾಸನಾಧಿಪತಿಗೀ ಭಕ್ತಿಯಾಚರಣೆಯೇಕಪ್ಪುದು ೬೪

ಭೂಲೋಕಪಾವನಕಕುದ್ಗಿರಿಸದಾಕ್ಷಿಣ್ಯ
ಕೈಲಾಸವದರಿ ಮೇಲಣಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲ ಷಟ್‌ಸ್ಥಲಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೬೫

ಇದು ವೀರಶೈವ ಷಟ್‌ಸ್ಥಲಮಾರ್ಗಿಸದ್ಭಾವ
ಸಚನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಾವ್ಯಮುಖ ಪದ್ಧತಿಯ ಮೇಲೆ ಗುರುನುಡಿಯ ತೊಡಗಿತೊಂದನೆಯ

ಪ್ರಥಮ ಸ್ಥಲಂ ಸಮಾಪ್ತಂ ಶ್ರೀ ಶ್ರೀ ಶ್ರೀ [ಸಂಧಿ ೬೬

ಸಂಧಿ ೧ ಕ್ಕಂ ಪದ ೬೬ ಕ್ಕಂ, ಗ್ರಂಥ ೫ ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ : ೨

ಭೂವಿನುತ ಹಲಗೆಯಾರ್ಯಂ ಕೆಂಚವೀರಸ
ದ್ಭಾವಿಗಾ ವಸ್ತುನಿರ್ದೇಶ ಗುರುಲಿಂಗ ಚರ
ಪಾವನಪ್ರಸಾದತೀರ್ಥಾಂಗಿಯುಪ್ಪಮಲ ಸದ್ಭಕ್ತನಂ ಬಿತ್ತರಿಸಿದಂ ॥

ಕಾಚಿದಂಗನೆ ಗಜಾಧಿಪನನೇತಕೆ ಕೊಂದೆ
ಯೈ ಚಂದ್ರಧರಯೆನಲು ನಿನ್ನ ನಡೆ ತೊಡೆ ಮೊಲೆಗೆ
ಆ ಚಮೂಭೂಷಣನ ಗಮನ ಕರ ಕುಂಭಸ್ಥಲಂಗಳೊಪ್ಪಂ ಸೆಳೆದು ನೀಂ
ಗೋಚರಿಸಿ ತಳೆಯೆ ಬಂಡಾದ ಗಂಡಸ್ಥಲದಿ
ನಾಚಿಯಿಂ ನಾಂ ಮಣ್ಣ ಹೊಯಿದು ಕೊಂಡಪೆನೆಂಬು
ದೌ ಚದುರೆಯೆಂದು ಮಾನರ್ುಡಿವ ಭಿಕ್ಷಾಟಣಸಮೀಚಿ ಜಯ ಶಾಂತಮಲ್ಲ ೧

ಉಱೆ ಕಕುದ್ಗಿರಿಯ ದಕ್ಷಿಣ ಗುಪ್ತನದಿಗೆ ನೇ
ಸಱುಗುಲದನಪರಾಧದಾ ತಟಾಕಂ ಸರಿಯೆ
ನೆಱೆಯಮೃತವೆಂಬುದೇ ತ್ರಿದಿವ ಸಂಪದವಲಾ ನಿತ್ಯವೆಂದೆನಿಸಿ ಸತತಂ ॥
ಮೆಱೆವ ಮೇಲಣಗವಿಯ ಚರಲಿಂಗಸೇವೆಗ
ಳ್ಕಱೊಳೊಡರ್ಚಿದನಲಾ ಶಾಂತನಂಜೇಶನೇಂ
ಮೆಱೆಯನೀ ಸೊಗಸ ಸೈಗಱೆಯಲೆಂದೊಪ್ಪುವೀ ಕೆಱೆಯ ಬಣ್ಣಿಪನಾವವಂ ೨

ಮೊದಲಲ್ಲಿ ವಸ್ತುನಿರ್ದೇಶಮಂ ಕೇಳಾಗ
ಮಾದ ವಚನವೆಂತೆನಲು ಕುಱುಪಿಲ್ಲದೆರಡುಮಿ
ಲ್ಲದ ಶೂನ್ಯಮೆನಿಪ ರೂಪಿಲ್ಲದತಿಶಯ ಮಾಗುತೇ ತೆಱದೊಳಂ ಬಳಸದ
ಸದಮಲಂ ಪೆಸರಿಲ್ಲ ಕುಲವಿಲ್ಲ ಶುದ್ಧವಾ
ದುದು ಬಳಿಕಲಾದಿಯಿಲ್ಲದುದೆ ಶಿವನೆಂದು ಪೇ
ಳ್ವುದು ಕಣಾ ಲಿಂಗಪೌರಾಣದೊಳ್ ಕೇಳ್ಮತ್ತೆ ಹರಿಯಜರು ನುತಿಸಿದಿರವ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲಿಲ್ಲ ತಳನಿಲ್ಲ ನಡುವಿಲ್ಲ ರೂಪಿಲ್ಲ
ಪೋಲಿಸಲ್ಕಾದಿಮಧ್ಯಾಂತವಿಲ್ಲದ ಮಹಾ
ಲೋಲನೈ ಬಳಿಕೊಳಗು ಹೊಱಗಿಲ್ಲವಿಲ್ಲೆಂಬ ನುಡಿಯಿಲ್ಲ ದಿಕ್ಕು ಹತ್ತು
ಆಲಂಬವಿಲ್ಲದೆಲ್ಲಾ ಶೂನ್ಯವಾದೆರಡ
ರಾಲಾಪವಿಲ್ಲದುನ್ನತಪದಂ ಮತ್ತೆ ವಾ
ಗ್ಜಾಲಂ ಮನೋಭಾವವಿಲ್ಲದಿಹ ಪರಶಿವಂ ಸರ್ವಶೂನ್ಯಂ ಪರಿಕಿಸೆ ೪

ಆ ನಿರಾಕಾರ ಪರಮಾನಂದವೈ ಮತ್ತೆ
ನೀನಾಲಿಸುಪನಿಷದ್ವಚನದರ್ಥಂ ನಾಮ
ವೇನೆಂಬೆ ಹಿಡಿತಂಗಳವಧಿ ಕಾರಣಕಲೋಪಾಧಿ ಸಂಗಂಗಳಿಲ್ಲ
ದಾನಂದ ನಿರುಪಾಧಿ ನಿಷ್ಕ್ರಿಯಾ ನಿಃಪುಣ್ಯ
ವೈ ನಿರಘವಾ ನಿರುತ್ತರಗುಣದ ನಿರ್ವಾಸ
ನಾನಿರ್ವಹಾದ್ವೈತ ನಿಶ್ಚಲ ನಿರಂಜನನೊಳೆನ್ನ ನೋಡೆಂದನಾರ್ಯಂ ೫

ಭೂನುತ ಚಿದೋಪದೇಶದ ಸಂಗ್ರಹದೊಳಣುಗ
ಳೀನಾಲಿಸೈ ಕೆಂಪು ಹೊಂಬಣ್ಣ ಬಿಳಿದು ಕ
ಪ್ಪಾ ನಿಖಿಲವರ್ಣವಿಲ್ಲದುದೆಲ್ಲೈ ಜ್ಞಾನಾತಿಶಯಂ ವಿವಾದಿಯಂ ವಿಚಾರ
ತಾನಿದುವೆ ವಸ್ತುನಿರ್ದೇಶವಿಂತಹ ವಸ್ತು
ವೇ ನಮ್ಮ ಭಕ್ತ ಜಂಗಮಲಿಂಗರೂಪದಿಂ
ಸಾನುರಾಗದೊಳೊಪ್ಪುತಿರ್ಪುದದು ಹೇಂಗೆನಲು ಮಗನೆ ಕೇಳ್ಬಿತ್ತರಿಪೆನು ೬

||ಸಾಕ್ಷಿ|| ಈಶ್ವರ ಉವಾಚ
॥ಶಿವಾಗಮೇ॥ ಅಲಕ್ಷ್ಯಮದ್ವಯಂ ಶೂನ್ಯಮಮೂರ್ತಂ ಪರಮಾವ್ಯಯಂ
ಅನಾಮಮಕುಲಂ ಶುದ್ಧಮನಾದ್ಯಂ ಶಿವಮುಚ್ಯತೇ ೧

ವರಪುರಾತನವಚನದಲ್ಲಿ ವೇದಾಗಮೋ
ತ್ಕರವೆಂದ ಸದ್ಗ್ರಂಥದರ್ಥಮಂ ಕೇಳಯ್ಯ
ಪರಿಕಿಸಲ್ ಶಿವನೆ ಭಕ್ತಂ ಕಣಾ ತದ್ಭಕ್ತನೇ ಶಿವಂ ತಾನಾ ತೆಱಿಂ
ಒರೆವೆ ಕೇಳಾ ಭಕ್ತನೇ ಶಿವಂ ಭಾವಿಸ಼ವೊ
ಡೆರಡು ಕೂಡಿದೊಡಂತಿದೇ ಜಂಗಮಂ ಕಣಾ
ತರುಣ ಕೇಳೆಂದಿತ್ತ ಕೆಂಚವೀರಾಹ್ವಯಂಗೊರೆದನಾ ಹಲಗೆಯಾರ್ಯಂ ೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓತು ಶಿವನಿಂತೆಂದನೆನಗೆಯಾ ಭಕ್ತನೇ
ಚೇತನಂ ಭಕ್ತಂಗೆ ನಾನೆ ಚೇತನವಲಾ
ಪ್ರೀತಿಯಿಂ ಭಕ್ತನೆಂತಿಪ್ಪನಂತಿಪ್ಪುದಾ ಲಿಂಗವಂತಾ ಲಿಂಗವು
ತಾ ತಳ್ತು ಭಕ್ತನಂತಿಪ್ಪುದದಱಿಂ ಕೂರ್ತು
ನೀ ತಿಳಿಯಲುಭಯಕ್ಕೆ ಭೇದವಿಲ್ಲೆಂದು ವಿ
ಖ್ಯಾತದೇಶಿಕನಮವು ಕರತಳಾಮಳಕವಾಗಲು ಕೂರ್ತು ಬಿತ್ತರಿಸಿದಂ ೮

ಜಂಗಮವೆ ಲಿಂಗರೂಪಂ ಲಿಂಗವೇ ಕೂರ್ತು
ಜಂಗಮದ ರೂಪನಾ ಲಿಂಗಜಂಗಮವದೇ
ಕಾಂಗದೊಳನಾದಿಭಕ್ತನ ರೂಪೆಲ್ಲೈ ಲಿಂಗವೇ ಬಿಂದು ಶೂನ್ಯದಲ್ಲಿ
ಜಂಗಮಂ ನಾದ ಶೂನ್ಯಂ ಭಕ್ತ ಭಾವಿಸಲೆ
ಹೇಂಗೆನಲು ಭಕ್ತಂಗೆ ಲಿಂಗವೇ ಪರಿಕಿಸ
ಲ್ಕಂಗವಾದುದದಱಿಂದ ಲಿಂಗಕ್ಕೆ ಬೇಱಿಂಗವಿಲ್ಲ ಮತ್ತಾ ಭಕ್ತಗೆ ೯

ಜಂಗಮವೆ ಹರಣವಾದುದದಱಿಂದ ಬೇಱಿಯಾ
ಜಂಗಮಕ್ಕಂ ಪ್ರಾಣವಿಲ್ಲೈಯನಾದಿ ಭ
ಕ್ತಂಗೆ ಕುಱುಹಾವುದೆನಲಂಗವೇ ಲಿಂಗ ಜಂಗಮವೆ ತಾ ಪ್ರಾಣವಾಯ್ತು
ಲಿಂಗ ಜಂಗಮ ಭಕ್ತರೀ ಮೂವರೇಕತೆಯೆ
ಹೇಂಗೆನಲು ಲಿಂಗವೇ ಅಂಗವೈ ಹರಣವಾ
ಜಂಗಮಂ ಭಕ್ತನೇಯಾತ್ಮನಿದು ವೇದಾಗಮಂಗಳರ್ಥಂ ನಿಶ್ಚಯಂ ೧೦

ಜ್ಞಾನದೊಳ್ಕ್ರಿಯೆಯೊಂದಿಯಿರ್ಪುದಾ ಕ್ರಿಯೆಯೊಳಾ
ಜ್ಞಾನವೊಂದಿರ್ಪುದಂತಾ ಕ್ರಿಯೆಯುಮಂತಹಾ
ಜ್ಞಾನವೆರಡುಂ ಕೂಡಿದಾ ಮೂರ್ತಿಯೇ ಭಕ್ತನೆಂದಱಿವುದದು ಕಾರಣ
ಜ್ಞಾನವೇ ಜಂಗಮಂ ಸತ್ಕ್ರಿಯೆಯೆ ಲಿಂಗವೈ
ಜ್ಞಾನಕ್ರಿಯೆಗಳೆರಡು ಕೂಡಿರ್ದ ರೂಪವೇ
ತಾನದ-ವೆ ಭಕ್ತನೆಂದಳ್ತಿಯಿಂ ಬಿತ್ತರಿಸುತಿರ್ದನಾ ಗುರುರಾಯನು ೧೧

ವೀರಾಗಮದ ವಚನದೊಳು ಕಾಯವಿಲ್ಲುದುದೆ
ಓರಂತೆ ಲಿಂಗವಾ ಪ್ರಾಣವಿಲ್ಲದುದೆ- ಉ
ದಾರಿಜಂಗಮವಯ್ಯ ಭಕ್ತಂಗಿವೆರಡಱಿೞಳು ಲಿಂಗವೇ ದೇಹವಾಯ್ತು
ಚಾರು ಜಂಗಮವೈದೆ ಸತ್ಪ್ರಾಣವಾದುದದು
ಕಾರಣವನಾದಿರೂಪಂ ಭಕ್ತನಾದಿರೂ
ಪಾರಯ್ಯೆ ಲಿಂಗವಾ ಪ್ರಾಣವೀ ಲಿಂಗ ಜಂಗವ-ವೆರಡವಂಗೆ ಕೇಳು ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದೊಡಾ ಭಕ್ತನೇ ಜಂಗಮಂ ಬಳಿಕ ಕೇ
ಳಾದಿನಾವಮಂ ಲಿಂಗವಾಯಿತ್ತು ಶರಣಂಗ
ನಾದಿಯೆಂಬುದು ಪೆಸರಿವೆರಡಾದೊಡೇನು ಜಂಗಮವಿವ ಟಿೊಳೇಕರೂಪಂ
ವೋದದಿಂ ಸಕಲರೂಪಂ ಭಕ್ತನಯ್ಯ ಶಿವ
ನೇ ದಿಟಂ ನಿಷ್ಕಲಂ ಬಳಿಕಿಂತಿವೆರಡುವೊಂ
ದಾದೊಡಾ ಚರರೂಪವೆಂದು ಪೇಳಲ್ಪಡುವುದೈ ಮುಂದೆ ಕೇಳೊರೆವೆನು ೧೩

ಶಿವನಂಗವೇ ಶರಣನೈ ಶರಣನಂಗವೇ
ಶಿವನು ಶಿವಭಕ್ತಸಮಯೋಗವಾ ತನ್ನಿಚ್ಛೆ
ಯವತಾರದಂಗವಂ ಪಡೆವನೈ ಮತ್ತೆ ಲಿಂಗವ ಧರಿಸಿದವನೆ ಲಿಂಗಂ
ಶಿವನೊಳಾ ಭಕ್ತನೊಳು ಭೇದವಿನಿತಿಲ್ಲವೈ
ತವೆ ಕರ್ತೃರೂಪ ಭಕ್ತನೆ ಭೃತ್ಯ ವೀರಶೈ
ವವನಾಶ್ರಯಿಸಿದವಂಗೆಣೆಯಾವನೈ ಬಳಿಕ ಕೇಳು ವಚನಾಂತರದೊಳು ೧೪

ಲಿಂಗ ಜಂಗಮವಾದಿಗಳು ಕಣಾ ಸದ್ಭಕ್ತ
ಪುಂಗವನನಾದಿರೂಪಂ ಭಾವಿಸಲು ಲಿಂಗ
ಜಂಗಮ ಮಹಾಭಕ್ತರೀ ಮೂವರೇಕರೂಪಂ ಬಳಿಕ್ಕೆಸೆವಂಗವೇ
ಲಿಂಗವೆಂದಱಿ ಹರಣವೇ ಜಂಗಮಂ ಕೇಳು
ಲಿಂಗಜಂಗಮದೇಕತೆಯ ರೂಪು ಭಕ್ತನೀ
ಯಂಗವಣೆಯಂ ಕೇಳೆನುತ್ತ ಬಿತ್ತರಿಸಿದಂ ಶಿಷ್ಯಗಂತಾ ದೇಶಿಕಂ ೧೫

ದೇಹವೇ ಸಕಲರೂಪಂ ಲಸತ್ಪ್ರಾಣವೇ
ಮೋಹಿ ಕೇಳ್ ಸಕಲ ನಿಷ್ಕಲವೆಲ್ಶೈ ನಿಷ್ಕಲಂ
ಊಹಿಸಲು ಪರಮಾತ್ಮನೈ ತ್ರಿವಿಧವೇಕವೈ ತತ್ತ್ವನಿರ್ಣಯವಱಿಯಲು
ಬೇಹುದದುಕಾರಣಂ ಭಕ್ತನೇ ಸಕಲವಹ
ರೂಹಾದನೈ ಸಕಲ ನಿಷ್ಕಲಂ ಜಂಗಮಂ
ನೇಹದಿಂ ನಿಷ್ಕಲಂ ಶಿವರೂಪವೀ ಮೂಱನೇಕರೂಪೆಂದಱಿವುದು ೧೬

ನಾದರೂಪಂ ಜಂಗಮಂ ಕಣಾ ಬಿಂದುರೂ
ಪಾದುದಾ ಲಿಂಗವಿಂತೆರಡೊಂದುಗೂಡಿರ್ದ
ಭೇದ ಸದ್ವೀರಶೈವೋತ್ತಮಂ ಭಕ್ತನಮಕಾರಣಂ ತದ್ಭಕ್ತನು
ಸಾದರದೆ ಸರ್ವಕಾರಣ ರೂಪ ಸರ್ವತ
ತ್ತ್ವಾದಿಗಳಿಗಂ ತಾನೆ ಪರತತ್ತ್ವವೆನಿಸುವನ
ನಾದಿರೂಪಂ ಭಕ್ತನೆಂಬುದು ಸದೋದಿತವಿದಂ ಕೇಳ್ವುದೆಲೆ ಭವಾನಿ ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆಯಾ ಭಕ್ತನೇ ಲಿಂಗಾಂಗಿ ಲಿಂಗದಾ
ಯೋರ್ಣತ್ತಮಂ ಲಿಂಗಮೂರ್ತಿಸ್ವರೂಪಂ ನವ್ಯ
ಚಿತ್ತಶುದ್ಧಂ ಜಂಗಮ ಪ್ರಾಣಿ ತದ್ರೂಪದಾಸೋಹಿ ಲಿಂಗನಿಷ್ಠಂ
ತತ್ಪದಾ ವೀರಶೈವವ್ರತಸಮಾಶ್ರಯನು
ದಾತ್ತಸರ್ವಾಚಾರಸಂಪನ್ನನಧಿಕಸ
ದ್ವೃತ್ತನಾ ಲಿಂಗ ಜಂಗಮರೂಪನೆಂದೆನಿಸುವಂ ಭಕ್ತವಲ್ಲಭನಲಾ ೧೮

ಶ್ರೀಪರಾಕ್ರಮಃಚೋಳಸಭೆಯಲ್ಲಿ ಮಾಧುರಾ
ಲಾಪದಿಂ ಶಂಕರಯ್ಯಂ ಬಿರಿದಿಸಿಂದಿರ
ಲ್ಕೋಪದಿಂದೀಳದೇಶದ ಗಾನನೇಳ್ತಂದಿರಲ್ಕ ರಾಗರಸಾಂಕನಾ
ವೋಪತೊತ್ತಿನ ಮಗನೆನುತ್ತ ಪಾಡಲ್ಕೇಳಿ
ಯಾ ಪುರಾವನಿಯಾತ ನೋಡಿದಂ ಗಡ ಶಿವಂ
ಭಾಪು ಭಕ್ತರ್ಗೆ ಸೇವಕನೆನಲ್ ಭಕ್ತನೇ ಮಿಗಿಲು ಪರತತ್ತ್ವಭಕ್ತಂ ೧೯

ಪರಿಕಿಸಲನಾದಿಮೂರ್ತಿಪ್ರವರ ಭಕ್ತನೈ
ನಿರುತವಿದು ಚಿದ್ರೂಪ ಚಿದ್ಘನಾನಂದನ
ತ್ಯುರುಚಿನ್ಮಯಂ ಚಿದ್ವಿಲಾಸನೈ ಸಾಕ್ಷಾಚ್ಛಿವಂ ವೀರಶೈವನವನ
ಇರವೆ ಶುಭವದನೆ ಮತ್ಪ್ರಿಯೆ ಕೇಳೆನುತ್ತಲಾ
ಪರಶಿವಂ ಗಿರಿಜೆಗೊರೆದಂ ಕಣಾ ಬಳಿಕಲು
ತ್ತರದ ವಾತೂಳಾಗಮದೊಳಿಪ್ಪ ಪರಮಾರ್ಥವೆಂತೆನಲು ಬಿತ್ತರಿಪೆನು ೨೦

ಏನೆಂಬೆ ಕೇಡಿಲ್ಲದುದು ತುಂಬಿ ತುಳ್ಕುವ ಚಿ
ದಾನಂದಸದ್ರೂಪವಾ ಬ್ರಹ್ಮಕೀರ್ತನಂ
ತಾನದುವಖಂಡರೂಪಂತಪ್ಪವಂ ಭಕ್ತನೆಂದು ಪೇಳಲ್ಪಟ್ಟುದು
ಸಾನುರಾಗದೆ ಕಾಣಲಾದುದೈ ಜಗವಲ್ಲಿ
ಲೀನವಹುದೊಳಕೊಂಬ ಲಿಂಗವೇ ನಿತ್ಯವೈ
ಸೂನುವೇ ಲಘುವಲ್ಲದತಿಶಯದ ಪರಿಪೂರ್ಣವೇಗುರುವೆನುತ್ತಱುವುದು ೨೧

ತನ್ನ ತಾನೇ ಪ್ರಕಾಶಿಪ ರೂಪನುಳ್ಳವಂ
ಚಿನ್ನವ್ಯಜಂಗಮಂ ಸೌಖ್ಯಮುಮನಂತಗುಣ
ದಿನ್ನೆಱೆ ವಿಶೇಷವಾದುದು ಸುಪ್ರಸಾದವೆಂದೆಯ್ದೆ ಪೇಳಲ್ಪಟ್ಟುದು
ಸನ್ನಹಿತಲಿಂಗ ಗುರು ಜಂಗಮಪ್ರಸಾದ
ವಿನ್ನಿವರ ಸುಸ್ವಾನುಭಾವ ಸುಜ್ಞಾನರಸ
ದುನ್ನತದಿ ಸುಪ್ರವಾಹದಿನಖಂಡಾನಂದವಾಗಿ ಮಾಡಲ್ಪಟ್ಟುದು ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚೈತನ್ಯಸುಸ್ವರೂಪದ ಭೇದತತಿಯುಳ್ಳು
ದೇ ತಿಳಿಯೆ ಪಾದೋದಕವುದೆಂದು ನಿಶ್ಚೈಪು
ದೈ ತರುಣ ಕೇಳ್ವುದಾ ಪಾದೋದಕಸ್ವರೂಪನೆ ಭಕ್ತನೆಂದಱಿವುದು
ಆ ತೆಱಂ ಗ್ರಂಥಾಂತರಂಗಳಿಂ ಮತ್ತೆ ಭ
ಕ್ತಾತಿಶಯವುಮಂ ಕೇಳೆನುತ್ತ ಗುರುವರನತಿ
ಪ್ರೀತಿಯಿಂ ಬಿತ್ತರಿಸುತಿರ್ದನಾ ಕೆಂಚವೀರಾಹ್ವಯಂ ಹರುಷಿನಲ್ಕೆ ೨೩

ಗುರು ಲಿಂಗ ಜಂಗಮಂ ತತ್ಪ್ರಸಾದಂ ದಿವ್ಯ
ಚರಣೋದಕಂಗಳಿವಱಿರೊಬ್ಬುಳಿಕೆಯಾ ಸ್ವರೂ
ಪರರೇಯುನಾದಿಯುಹ ವೀರಶೈವಂ ಕೇಳ್ವುದೆಂತೆನಲ್ಕಾಚಾರವು
ಗುರುಸಮ್ಮತಂ ನಿಷ್ಠೆ ಲಿಂಗಸಂಬಂಧವ
ತ್ಯುರುತರದ ಸುಜ್ಞಾನವೆಂಬುದೇ ಸಾಕ್ಷಾತ
ಚರಸಮ್ಮತಂಗಳಿಂತಿವರು ಸುಪ್ರತ್ಯಕ್ಷವೇ ಪ್ರಸಾದಂ ನಿಶ್ಚಯಂ ೨೪

ತತ್ತದೇಕೀರಸಂ ಪಾದೋದಕಂ ಕೇಳು
ದಾತ್ತ ಪಾದೋದಕ ಸರೂಪನೆಯುನಾದಿ ಭ
ಕ್ತೋತ್ತಮಂ ಬಳಿಕವನ ಮಹಿಮೆಯುಂ ವಾಯುಪೌರಾಣದೊಳಗಗಜಾತೆಗೆ
ಬಿತ್ತರಿಸಿದಂ ಶಿವಂ ಭಕ್ತನೇ ಮತ್ಪ್ರಿಯಂ
ಮತ್ತೆನಗವಂ ಪ್ರಾಣವದಱಿನೆನಗವ ಮಿಗಿಲೆ
ನುತ್ತಲಾ ಭಕ್ತರಂ ನಿಚ್ಚಲುಂ ಶರಣೆಂಬೆ ನಾನೆಂದನಾ ಶಂಕರಂ ೨೫

ಬಳಿಕ ಶಿವವಚನವಂತಾಪೇಕ್ಷೆಯಿಲ್ಲದ
ಗ್ಗಳನ ಮೌನವ್ರತಿಯು ಶಾಂತನಂ ಸರ್ವೈರ
ವಳವಟ್ಟನಂ ಸಕಲ ಸಮದರ್ಶಿಯತ್ಯಧಿಕ ಕರುಣೆಯೆನಿಸುವ ಭಕ್ತನ
ಬಳಿವಿಡಿದು ಪೋಪೆ ನಾಂ ತದ್ಭಕ್ತವರನ ಪದ
ತಳದ ಧೂಳೆನ್ನ ಮಸ್ತಕದಲ್ಲಿ ಬೀಳೆ ವೆ
ಗ್ಗಳ ಪಾವನಂ ನಾನಹೆಂ ಕಣಾ ಕೇಳೆಂದನೀಶ ದಿವ್ಯಪ್ರಕಾಶ ೨೬

ನುತಶೈವಪೌರಾಣದೊಳು ವಾಯವೀಯ ಸಂ
ಹಿತೆಯುಲ್ಲಿ ಭಕ್ತನಂಗವೆ ಶಿವಂ ತತ್ಪ್ರಾಣ
ವತಿಶಯ ಶಿವಪ್ರಾಣವಲ್ಲದನ್ಯತ್ರವಿಲ್ಲಾ ಭಕ್ತ ಸತ್ಪ್ರಾಣವು
ಕೃತಿದೇಹವೆರಡನನ್ಯತೆಯಿಂದ ಲಿಂಗಸಂ
ಗತಿಯುಹವು ಸರ್ವಾಂಗಲಿಂಗಿಯಾ ಭಕ್ತನೂ
ರ್ಜಿತಮಹಿಮನವನ ಬಣ್ಣಿಸಲಳವೆ ಕೇಳೈ ಕುಮಾರಯೆಂದಂ ದೇಶಿಕಂ ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಹಾಲಿಂಗವೇ ಮನವನೆಡೆಗೊಂಡಿಪ್ಪ
ದೈ ಮಿಸುಗುವಿಷ್ಟಲಿಂಗವೆ ತನುವನೊಳಕೊಂಡು
ಸಾಮರ್ಥ್ಯದಿಂದಿಪ್ಪುದಾ ಮನಂ ದೇಹವೆರಡುಂ ಲಿಂಗಸಂಗವಾಗಿ
ಪ್ರೇಮದಿಂ ಸರ್ವಾಂಗಲಿಂಗಿಯಾದಂ ಭಕ್ತ
ನಾ ಮಹಿಮನವನ ಬಣ್ಣಿಸೆ ವೇದಕಳವಲ್ಲ
ವೈ ಮಗನೆ ಕೇಳೆಂದು ಬಿತ್ತರಿಸುತಿರ್ದನಾ ದೇಶಿಕಂ ಹೃತಪಾಶಕಂ ೨೮

ಲಿಂಗವಂ ಬಿಡದಪ್ಪಿದವನೆನ್ನ ಹರಣವಾ
ಲಿಂಗಾಂಗಿಯೆನ್ನಾತ್ಮಜನ್ಮಸ್ಥಲಂ ಸದಾ
ಲಿಂಗಾಂಗಿಯೆನ್ನ ಜೀವಂ ಬಿಡದೆಯೆನ್ನ ರಕ್ಷಿಸುವವಂ ನನಗೆ ಕರ್ತಂ
ಹಾಂಗೆನಗೆ ಸತ್ಪ್ರಭುವವಂ ಸ್ವಾಮಿಯೆನಗವಂ
ತಾಂ ಗುರು ಶಿವಾದ್ವೈತ ವಿಜ್ಞಾನಿ ನಿಷ್ಠೆ ಶೈ
ವಾಂಗಿ ಸುಮಹಾತ್ಮನಂಘ್ರಿಯನೆನ್ನ ತಲೆಯಲ್ಲಿ ತಳೆದು ಸೇವೆಯ ಮಾಡುವೆಂ ೨೯

ಪ್ರೀತಿಯಿಂ ಲಿಂಗವೇ ಪಂಚಾಕ್ಷರಿಯ ರೂಪ
ವೈ ತಿಳಿಯೆ ಭಕ್ತನೆ ಷಡಕ್ಷರಾಂಗಂ ಕೇಳ್ವು
ದೈ ತನುಜ ಲಿಂಗಭಕ್ತರೊಳು ಭಕ್ತನೆಯಧಿಕನಧಿಕನಂತದುಕಾರಣ
ಓತು ಕೇಳೈ ಸ್ಕಾಂದದೊಳು ನನ್ನ ಭಕ್ತರ ಮ
ಹಾತಿಶಯಮಂ ಬಲ್ಲನಾರು ಶಿವನಾ ಜಗ
ನ್ಮಾತೆ ನಂದೀಶರಱಿವರು ಗುಹಂ ಬಲ್ಲನೋ ಮೇಣಱಿಯನೊಯೆಂದುದು ೩೦

ಆಯರ್ಥದೊಳು ಕೇಳು ಕೋಟಿ ಕೋಟಿಯು ಕೋಟಿ
ಯಾಯುಷ್ಯಮಂ ಕೋಟಿ ಜಿಹ್ವೆಯೊಳುಮೆಲ್ಲಾಗ
ಳೋಯಾರದಿಂ ನುಡಿದು ಕೊಂಡಾಡಲಳವಲ್ಲವಾವಾತನಿಂದಮೆನಲು
ಆಯುಗ್ಗಳದ ಲಿಂಗವೊಳಹೊಱಗಿರಲ್ಪ್ರಾಣ
ಕಾಯಮಂ ಮಾಡಿಕೊಂಡಾ ಲಿಂಗದೊಳಹೊಱಗ
ಜೇಯಪೂರ್ಣತೆಯೊಳವಗವಿಸಿಕೊಂಡಿಪ್ಪ ಭಕ್ತನನಱಿಯಲಾರಿಗಳವು ೩೧

ಗುರು ಲಿಂಗ ದಿವ್ಯ ಜಂಗಮ ಸುಪ್ರಸಾದವೆಂ
ಬುರುತರದ ನಾಲ್ಕಱಿೊಳಗೇಕದರುಶನವಾಗಿ
ಚರಿಪ ವರ್ತನವೀಗ ವೀರಶೈವಾಗಮದೊಳೆಯ್ದೆ ವರ್ತನೆಯೆಂಬುದು
ತರುಣ ಕೇಳದಱಿಂದ ವೀರಶೈವವ್ರತದ
ವರನಿಷ್ಠೆ ಮೋಕ್ಷ ಮಾರ್ಗಾಪೇಕ್ಷ ಭಕ್ತನೇ
ಪರಿಕಿಸಲ್ಕಧಿಕಾರಿ ಮುಂದಿನ್ನು ಬಿತ್ತರಿಪೆನೈ ಪ್ರಯೋಜನದಿರವನು ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಭಕ್ತಿಯಿಂದ ಸಂಪಾದಿಸಲು ಪಟ್ಟಿರ್ದ
ಶಿವನ ಸಾಕ್ಷಾತ್ಕರದ್ವಾರದಿಂದಾದ ಮು
ಕ್ತಿವಿಶೇಷವಖಿಳ ಭಕ್ತರ್ಗಿರ್ದ್ಯೆ ಲಿಂಗದಲ್ಲಿಯ ಭಕ್ತಿ ಲಿಂಗಪೂಜೆ
ತವೆ ಲಿಂಗಧಾರಣಂ ಲಿಂಗಪ್ರಸಾದಮಂ
ಸವಿವುದಾ ಲಿಂಗಶ್ರುತಿಶ್ರವಣ ಲಿಂಗದೊ
ಪ್ಪುವ ಲಸದ್ಧ್ಯಾನವಾ ಸರ್ವಲಿಂಗಾಲಿಂಗಿಯುರು ಪರಾಯಣತೆಯೆಂದು ೩೩

ನೀನಱಿವುದ್ಯೆ ಪ್ರಯೋಜನವಿನ್ನು ವಿಷಯಮಂ
ಸೂನುವೇ ಕೇಳು ಗುರುಲಿಂಗ ಜಂಗಮು ಶೇಷ
ವಾ ನವ್ಯಪದಜಲಂಗಳುಮೇಕರೂಪೆಂದು ತಿಳಿವ ಭಕ್ತನ ವಿವೇಕಂ
ತಾನೆ ವಿಷಯಾರ್ಥಸ್ವರೂಪಿನೀ ಶಾಸ್ತ್ರಕ್ಕ
ನೂನ ವರವೀರಶೈವಾಮೃತಾಹ್ವಯವೆಂದು
ಜಾನಿಸಱಿವುದು ವಿಷಯುವವನೆಲ್ಲ ಸಂಬಂಧಿಸುವುದು ಸಂಬಂಧವೆನಿಕುಂ ೩೪

ತರುಣ ಕೇಳ್ಯೆ ಪದಾರ್ಥವನಿನ್ನು ತಾಂ ಕಾಣ್ಬ
ಶರಣನಾ ಕಾಣ್ಕೆಗೀಡಾದ ಲಿಂಗಂಗಳಿಂ
ತೆರಡೊಂದಿ ಪರಿಪೂರ್ಣಭಾವದಿಂದಗ್ನಿಯುಉಷ್ಣಂ ಪುಷ್ಪಗಂಧವಂತೆ
ಕರವೆಸೆವುದೇ ಪದಾರ್ಥಂ ಕಣಾ ಪಿಂದೆ ಬಿ
ತ್ತರಿಸಿದಧಿಕಾರಿಪ್ರಯೋಜನಂ ವಿಷಯ ಬಂ
ಧುರದ ಸಂಬಂಧಂ ಪದಾರ್ಥಂಗಳೆಂದು ಹಲಗೆಯ ದೇಶಿಕಂ ಪೇಳ್ದನು ೩೫

||ಸಾಕ್ಷಿ|| ವಚನಾಂತರೇ–

ಶಿವೋ ಭಕ್ತ ಇತಿ ಪ್ರೋಕ್ತೋ ಯಥಾ ಭಕ್ತಃಶ್ಶಿವಸ್ತಥಾ
ಶಿವಭಕ್ತಯುತಂ ರೂಪಂ ಜಂಗಮಂ ಚ ನಿರೂಪ್ಯತೇ ೧

ಜಂಗಮಂ ಲಿಂಗರೂಪಂ ಚ ಲಿಂಗಂ ಜಂಗಮು ರೂಪಕಂ
ಲಿಂಗ ಜಾಗಮುಮೇಕತ್ವಂ ಅನಾದಿಭಕ್ತಮುಚ್ಯತೇ ೨

ಜ್ಞಾನೇನ್ಯೆವ ಕ್ರಿಯಾಯುಕ್ತಂ ಕ್ರಿಯಯಾಜ್ಞಾನಸಂಯುತಂ
ಜ್ಞಾನಕ್ರಿಯಾದ್ವಿರೂಪಂಚ ಭಕ್ತಲಕ್ಷಣಮುಚ್ಯತೇ ೩

ಉತ್ತರವಾತೂಲೇ–

ನಿತ್ಯಂ ಪೂರ್ಣಂ ಚಿದಾನಂದಂ ಸದ್ರೂಪಂ ಬ್ರಹ್ಮಕೀರ್ತನಂ
ತದೇವಾಖಂಡರೂಪಂ ಚ ಯತ್ತದ್ಭಕ್ತಮುದಾಹೃತಂ ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಯುಪೌರಾಣೇ–

ಭಕ್ತೋ ಮಮಪ್ರಿಯೋ ದೇವಿ ಭಕ್ತಃಪ್ರಾಣೋ ಮಮೈವ ತು
ಮತ್ತೋಽಧಿಕೋಹಿ ಭಕ್ತಶ್ಚ ತಸ್ಮಾದ್ಭಕ್ತಂ ನಮಾಮ್ಯಹಂ ೫

ಅನಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶಿನಂ
ಅನುವ್ರಜಾಮ್ಯಹಂ ನಿತ್ಯಂ ಪೂಜ್ಯಂ ಯಾಮ್ಯಂಘ್ರಿರೇಣುಭಿಃ ೬

ಸ್ಕಾಂದೇ–
ಮದ್ಭಕ್ತಾನಾಂ ಚ ಮಹಾತ್ಮ್ಯಂ ಕೋ ವಾ ಜಾನಾತಿ ತತ್ವತಃ
ಜಾನೇಹಂ ತ್ವಂ ಚ ಜಾನಾಸಿ ನಂದೀಜಾನಾತಿ ವಾ ಗುಹಃ ೭

॥ಇಂದ್ರವಜ್ರವೃತ್ತ॥ ತದ್ದೃಶ್ಯರೂಪೇಣ ಸಲಿಂಗಭಕ್ತಂ
ತದೇಕರೂಪಂ ಪರಿಪೂರ್ಣಭಾವಂ
ವಹ್ನ್ಯುಷ್ಣರೂಪಂ ಕುಸುಮಾಗ್ರಗಂಧಂ
ತದ್ರೂಪಮೇವಂ ಸುಪದಾರ್ಥರೂಪಂ ೮

ಚಾರು ನಂಜೇಶ್ವರಸಹಾಯದಿಂದಾ ಕೆಂಚ
ವೀರಾಖ್ಯನೆಯಿದೆ ಬೆಸಗೊಳಲು ಹಲಗೆಯ ದೇವ
ರೋರಂತೆ ನಿರವಿಸಿದ ವೀರಶೈವಾಮೃತಪುರಾಣಾಖ್ಯಸಂಗ್ರಹವನು
ಆರೈದು ಪದನ ಮಾಡೆಂದವರ್ಬೆಸಸಿದ್ದ
ಕಾರಣದೆ ಗುರುಭಕ್ತನನ್ವಯೋದ್ಭವ ಬಸವ
ಪೌರಾಣದುರು ಮಲ್ಲಣಾರ್ಯನೊರೆದಿದನೋದಿದವರಿಗಿಷ್ಟಾರ್ಥವಹುದು ೫೬

ಇದು ವೀರಶೈವ ಷಟ್‌ಸ್ಥಲಮಾರ್ಗಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಲಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಪದಾರ್ಥವನೊರದೆನೆಂದು ಬಿತ್ತರಿಪಲ್ಲಿ ತಿಳಿಯಲೆರಡನೆಯ ಸಂಧಿ ೫೭

ಅಂತು ಸಂಧಿ ೨ ಕ್ಕಂ ಪದ ೧೧೫ ಕ್ಕಂ ಗ್ರಂಥ ೧೩ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

○

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩

ಮಿಸುಪ ಗುರು ಲಿಂಗ ಜಂಗಮ ಶೇಷಪಾದಜಲ
ಭಸಿತ ರುದ್ರಾಕ್ಷಿ ಪಂಚಾಕ್ಷರಿಗಳೆಂಟಂಗ
ವೆಸೆವ ಭಕ್ತನ ಮಹತ್ವವನೆಯಿದೆ ಬಿತ್ತರಿಸಿದಂ ಹಲಗೆಯಾಚಾರ್ಯನು

ಪುರ ಕಾಲಸಂಹಾರ ಪರಮ ಮಹಿಮಾಧಾರ
ಕರುಣಾಕಟಾಕ್ಷ ಸದ್ವರಭಕ್ತ ಜನರಕ್ಷ
ಗಿರಿಜಾ ಮನಃಪ್ರೀತ ನಿರುಪಮಿತ ವಿಖ್ಯಾತ ದುರಿತವನದಾವದೇವ
ಗುರುಬಸವಸನ್ಮುಖ್ಯ ಶರಣಸಂತತಿಸಖ್ಯ
ಹರಿಯಜಾಧಿಕವಂದ್ಯ ಸುರಚಿರ ಮಹಾನಿಂದ್ಯ
ಧರೆಯುಱಿಯೆ ಕಾರ್ವಿಲ್ಲನುರುಪಿದಗ್ಗದ ಗೆಲ್ಲದರಸ ಜಯಶಾಂತಮಲ್ಲ ೧

ಉರು ಗುಣತ್ರಯದ ಮೇಲಣ ಕೇಶವ ಬ್ರಹ್ಮ
ಸುರರ ಮತಿಯಿಂದೆ ಮೇಲಣ ಪುರಾಣಾಗಮೋ
ತ್ಕರವೇದದುಪನಿಷದ್ವಚನ ದುಕ್ತಿಗಳ ಮೇಲಣ ಮಲೆಯ ಶಾಂತೇಶ್ವರ
ಪರಿವಿಡಿಯ ಪಟ್ಟವರ್ಧನರಪ್ಪ ಲೋಕೈಕ
ಗುರುಗಳಾಚರಣೆಯಿಂದೆಸೆವ ಮೇಲಣಗವಿಯ
ಚರಚಕ್ರವರ್ತಿ ಭಕ್ತಪ್ರಣುತ ಶಾಂತನಂಜೇಶ್ವರ ಸ್ವಾಮಿ ಶರಣು ೨

ಮುಂತೆ ಕೇಳ್ಕೈ ಕೆಂಚವೀರಾಹ್ವಯಾ ನೀನ
ನಂತಮೋಹದೊಳು ಪಿಂದೊರೆದ ಗುರುಲಿಂಗ ಸುಮ
ಹಂತ ಜಂಗಮ ಸುಪ್ರಸಾದ ಪಾದೋದಕಂಗಳೊಳಧಿಕ ಭಾಗ್ಯವಪ್ಪ
ಶಾಂತನೆಂದೆನಿಸಿರ್ಪನಾದಿಮೂರ್ತಿಯುಮಾದ
ಕಾಂತ ಶಿವಭಕ್ತನೆ ಗುರುತ್ವವೆಂದೆನಿಸಿದನ
ದೆಂತೆನಲು ಗುರುವಿನಿರವಂ ಕೊರ್ತು ಪೇಳ್ವೆನೈ ವೀರಾಗಮಾರ್ಥದಲ್ಲಿ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನಗೆ ಕಾರಣವಾದುದೇನುಮಿಲ್ಲದುದು ನೆ
ಟ್ಟನೆ ದಿವ್ಯ ಸುಪ್ರಕಾಶತೆಯನುಳ್ಳುದು ಸರ್ವ
ವೆನಿತುಮುಂಟವಱ ಲೀಲೆಗಳಲ್ಲಿ ಮೊದಲಮೂರ್ತಿಯನುಳ್ಳ ಮಹಿಮಾಧಿಕಂ
ಅನಘನಾ ಪದಿನಾಲ್ಕು ಲೋಕಾದಿಲೋಕಂಗ
ಳನಿತಕ್ಕೆ ಮೊದಲಕಾರಣವಾದುದೀಗ ಪಾ
ವನವಪ್ಪ ಗುರುತತ್ವವೆಂದೆನಿಪುದದಱ ಮಹಿಮೆಯ ಮುಂದೆ ಕೇಳೊರೆವೆನು ೪

ಲೋಕಾದಿಲೋಕಂಗಳಿರವನಱಿದಂತವ
ಕ್ಕಾಕೆವಾಳನುಮಾಗಿ ಕಾರಣಕೆ ಕಾರಣನು
ಮಾಕಾಶ ಭೂಚಕ್ರಕಂಥೆಯಂ ಧರಿಸಿ ಭುವನಾಧೀಶನಾಗಿ ತಾನೆ
ಜೋಕೆಯಿಂ ಭುವನರಕ್ಷಕನಾಗುತುಂ ಮತ್ತ
ನೇಕ ಲಕ್ಷದ ಜೀವಸಂತತಿಯನೊಳಕೊಂಡ
ಭೂಕಂಥೆಯುಳ್ಳುದೇ ಗುರುತತ್ವವೆಂದು ನೀನಱಿವುದೈ ವರ ಕುಮಾರ ೫

ಪ್ರಣವರೂಪಂ ಭೂರ್ಭುವರ್ಲೋಕಮುಖ್ಯದ
ಗ್ರಣಿ ಸುಭರ್ಗೋ ದೇವ ಧೀಮಹಿಯೆನಿಪ್ಪ ಕಾ
ರಣರೂಪನಾಗಿ ತಚ್ಛಕ್ರಕಂಥೆಯ ಶಾಂತಮಲ್ಲೇಶ ಸರ್ವಜ್ಞನು
ಅಣಿಯರದೆ ಶಿವಮೂರ್ತಿ ನೆಗಪಿರ್ದ ಕೊರಲ ಸ
ದ್ಗುಣಿಯೂರ್ಧ್ವಮುಖಕವ-ಲಪದ್ಮಾಸನದೊಳು ಚಿ
ನ್ಮಣಿಯಾಗಿ ಗುರುತತ್ತ್ವವೆಸೆದಿರ್ದ ಕಾಲವೆಂತೆನಲೂನು ಬಿತ್ತರಿಪೆನು ೬

ದೇವತಾಸಂಬಂಧ ಯುಗಕೋಟಿಗಳನಿಡು
ತ್ತಾವಗಂ ಮೂಱುಕೋಟಿಗಳಿಂದ ಗುಣಿಸಿದೊಡ
ದಾವ ಗಣನೆಯ ವರುಷವಾ ಮೂಱುಪದ್ಮಕಗ್ಗಳವಪ್ಪ ಸದ್ಗುರುವಿನ
ಪಾವನದ ಶತಕಂಥೆಯೆಂತಾದುದಾ ಬ್ರಹ್ಮ
ನೇ ವಿಚಾರಿಪೊಡುಂಗುರಂ ವಿಷ್ಣುವೇ ಸೂತ್ರ
ವೋವಿ ಕಾಲಾಗ್ನಿರುದ್ರನೆ ಸೂಚಿ ಈಶ್ವರನೆ ಕಂಥೆ ಹೊಲಿದಾತನೆ ಗುರು ೭

ಪರಿಕಿಸಲಖಂಡವಾ ಬ್ರಹ್ಮಾಂಡಕೋಟಿಗಳ
ಧರಿಸಿಹ ಪರಬ್ರಹ್ಮಲೀಲಾವಿನೋದಿಯಾ
ಪರಮಪ್ರಭೂತ್ತಮಂ ಪರಶಿವಾನಂದಂ ಪರಾತ್ಪರಮಕಾರಣಾಂಗಂ
ನಿರುಪಮೈಕಂ ಪ್ರಥಮಕಂಥಾಧರಂ ಪಂಚ
ವರಮೂರ್ತಿಗಳೊಳಭೇದಂ ತಾನೆನಿಸಿ ಮೆಱೆವ
ಗುರುವಿನಿರವಂ ಬಣ್ಣಿಸಲು ವೇದಶಾಸ್ತ್ರಂಗಳಳವಲ್ಲವೈ ಕುಮಾರ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಕಿಸಲ್ಕೈವೊಗಂ ಪಂಚಮುಬ್ರಹ್ಮಾಂಗ
ಪರತರಾನಂದಕಾರಣನು ಚತುರಾಶ್ರಯುದ
ಗುರುವನೀ ತೆಱದಿಂದ ಭಾವಿಸಲ್ತತ್ಕವಂ ಸತ್ಕ್ರಿಯಾಪರಿಪೂರ್ಣನು
ನಿರುಪಮಾಚಾರಸಂಪನ್ನನತಿಶಯುದಗೋ
ಚರ ನಿಷ್ಕ್ರಿಯಾ ಗುರುತ್ತಮನು ನಿಃಶೂನ್ಯನನ
ವರತಂ ನಿರಾಲಂಬ ನಾಲ್ಕುಪರಿ ಮಧ್ಯಪಂಚಕನಾವು ಸಂಪನ್ನನು ೯

ಗುರುವನಾ ಸ್ಥೂಲಸೂಕ್ಷ್ಮದ ಭೇದದಿಂದಲನ
ವರತಮುಂ ನೆನೆವವಂ ಪ್ರಜ್ಞನೆನಿಸುವನು ತ
ತ್ಪರಿವಿಡಿಯ ನಾಲ್ಕುದಿಕ್ಕುಗಳ ನಡುವಿಪ್ಪ ಮೇಲಣ ಪಂಚಮುಖದ ಮೂರ್ತಿ
ಇರವೀಗ ಭೂಚಕ್ರಕಂಥೆಯೆನಿಪುದು ಕಣಾ
ತರುಣ ಕೇಳದಱೊಳಗನಂತ ಲೋಕೋತ್ಪತ್ತಿ
ಯುರುತರದನಾದಿಶರಣಂಗಾದಿಕಂಥೆಯುದು ಧರಿಸಿ ಕರಮೆಸೆದಿರ್ಪುದು ೧೦

ಅವಧೂತನೆನಿಸಿ ಹುಟ್ಟಿಲ್ಲದ ನಿಜಾವಯುಂ
ಭುವಿಯೊಳಾರೂಢ ನಿರವಯುನೆನಿಸಿ ಪರುಷದಿಂ
ದವೆಯುಧಿಕನೆನಿಸಿರ್ದ ಗುರುಪಾದಪಂಕಜಂಗಳ ನಾವು ಕೀರ್ತಿಸುವೆವು
ಅವಿರತಂ ಸೋಂಕಿದಾಗಲೆ ತನ್ನ ರೂಪಮಾ
ಡುವ ಮೂರ್ತಿಯುಂ ಬಲ್ಲನಾವವಂ ವೀರಾಗ
ಮುವ ಕೇಳಿದಾ ಮುಂದೆ ವರರಹಸ್ಯದೊಳು ಗುರುವಿನಮಹಿಮೆಯೆಂತೆಂದೊಡೆ
೧೧

ಸರಸಿಜೋದ್ಭವನು ಮತ್ತಾ ವಿಷ್ಣು ರುದ್ರರೀ
ಶ್ವರ ಸದಾಶಿವರ ಗರ್ಭದೊಳು ಬೈತೆಸೆವ ಸ
ದ್ಗುರುವಿಗೆ ನಮಸ್ಕಾರವೈ ಮತ್ತೆ ಚೈತನ್ಯರೂಪನಾ ಕೇಡಿಲ್ಲದ
ಉರುತರದ ಶಾಂತನಾಕಾಶವಂ ಮೀಱಿರ್ದ
ಪರತರ ನಿರಂಜನಂ ನಾದಮುಂ ಬಿಂದು ಕಲೆ
ಯಿರವಿಂಗತೀತಗುರುವಿನ ಪಾದಪಂಕಜಕೆ ಶರಣೆಂಬುದೇ ಮುಖ್ಯವು ೧೨

ಬಳಿಕಲಾ ಸ್ಥಾವರಕೆ ಜಂಗಮಕೆಯಾಧಾರ
ವಿಳಸಿತಸ್ಥಿರನಾಗಿ ಲೋಕವಂದಿತಚರಣ
ನಳಿನನಾದಾತನೆ ನಮಸ್ಕಾರಕರ್ಹನೈ ಗುರುವಲಾ ಮಾತೆ ಪಿತನು
ಇಳೆಯೊಳಗೆ ಸಕಲಬಾಂಧವನಾದನೀಗ ಗುರು
ತಿಳಕನೈ ಗುರುತತ್ವದಿಂದ ಪರವಿಲ್ಲದ
ಗ್ಗಳನಾತನಂಘ್ರಿಕಮಲಕ್ಕೆ ವಂದನೆಗಳಂ ಮಾಡಬೇಕೈ ಸಂತತಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣಾಗಮದಲ್ಲಿ ಗುರುವಿಂಗೆ ಮಿಗಿಲಿಲ್ಲ
ವಾರಯ್ಯೆ ಮಿಗಿಲಿಲ್ಲ ಮಿಗಿಲಿಲ್ಲವಿಲ್ಲಂ ಕು
ಮಾರ ನಿಶ್ಚಯ ನಿಶ್ಚಯಂ ನಿಶ್ಚಯಂ ನಿಶ್ಚಯಂ ಶಿವನ ವಾಕ್ಯ ವಾಕ್ಯಂ
ಪಾರಮರಹಸ್ಯದೊಳು ತೈಲವರ್ತಿಗಳೇಗು
ಕಾರವಾ ಜ್ವಲನವೆರುಕಾರವೆರಡಱ ಕೂಟ
ವೇ ರಮ್ಯವಾ ಸ್ವಯಂಜ್ಯೋತಿಯಾತನೆ ಗುರುವೆನಿಪ್ಪನೈ ಕಂದ ಕೇಳು ೧೪

ಆ ಗುಕಾರವೆ ವರಾಂಗಿಯೆ ನಿನ್ನ ರೂಪಲಾ
ಶ್ರೀ ಗೌರಿ ಕೇಳಾ ರುಕಾರವೆನ್ನಯ ರೂಪು
ಮೇಗೆರಡಱೀಕತ್ವಸೌಖ್ಯವೇ ಗುರುರೂಪದೇ ಮಹಾಜಪಕೆ ಮುಖ್ಯಂ
ಚಾಗುರೇ ನಿನಗೆಯಾಂ ಪೇಳ್ವೆನತಿಗೋಪ್ಯತರ
ವಾಗಿರ್ಪ ಸಾರಕ್ಕೆ ಸಾರವೆರಡಕ್ಕಱವ
ಲಾ ಗುರುವೆನಿಪ್ಪ ವರ್ಣಂ ತದರ್ಥಕ್ಕೆ ವಿಸ್ತರಬೋಧೆಯೆಂದನಭವಂ ೧೫

ನಿರ್ಮಾಲ್ಯಮಂ ದಾಂಟಿ ಪುಷ್ಪದತ್ತಂ ಬಂದು
ಮಾರ್ಮೆಯ ತಳೆದು ಭಟ್ಟಾಚಾರ್ಯನಾಗಿರು
ತ್ತೊರ್ಮೆ ವಾದಿಗಳೊಳೀಶ್ವರನಾಸ್ತಿಯೆಂದಲ್ಲಿ ಪೂರ್ವಮೀಮಾಂಸವಾದಿ
ದುರ್ಮತರ ಗೆಲಿದು ಬಯಲಾದ ಶಿವನಂ ಕಂಡು
ಪೆರ್ಮೆಯುತ್ತರದ ಮೀಮಾಂಸದಿಂ ಖಂಡಿಸುತ
ಶರ್ಮದಿಂ ನಾಸ್ತಿತತ್ತ್ವಂ ಗುರೋಃ ಪರಮೆಂದನದಱಿನಧಿಕಂಗುರುವಲಾ ೧೬

ವೀರಾಗಮೇ–

ಶೂನ್ಯಂ ಸರ್ವಂ ಸಮಸ್ತಸ್ಯಾ ಲೀಲಾಸ್ವಾದಿಮಮೂರ್ತಿಕಂ
ಉದ್ಭವಂ ಚ ಚತುರ್ದಶ್ಯ ಲೋಕಾಲೋಕಾದಿಕಾರಣಂ ೧

ಲೋಕಾಲೋಕ ಪರಿಜ್ಞಾನಾ ಧಾರಸ್ಯಾದಿಮಕಾರಣಂ
ದ್ಯಾವಾ ಭೂಚಕ್ರಕಂಥಾದಿ ಧಾರಣಂ ಭುವನಾಧಿಪಂ ೨

ಬ್ರಹ್ಮಾಂಗುಲ್ಯಸ್ತಥಾಧಾರಂ ವಿಷ್ಣುಸ್ಯೂತಾಗ್ರ ಸೂತ್ರವತ್
ಕಾಲಾಗ್ನಿರುದ್ರಸೂಚಿತ್ವಂ ಶತಕಂಥಂ ತದೀಶ್ವರಂ ೩

ಚತುರ್ಮಠಂಚ ನಾಮಾನಿ ವಿದ್ಯಂತೇ ಪಾಚಮಧ್ಯಕಂ
ಗುರುಸ್ಥೂಲಂ ಸೂಕ್ಷ್ಮಭಾವಮೇವಂ ಧ್ಯಾಯೇ ದ್ವಿಚಕ್ಷಣಃ ೪

ಪರಮರಹಸ್ಯೇ–

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ
ಏತೇ ಗರ್ಭಗತಾಶ್ಚೈವ ತಸ್ಮೈ ಶ್ರೀಗುರವೇ ನಮಃ ೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣಾಗಮೇ–

ನಗುರೋರಧಿಕಂ ನಗುರೋರಧಿಕಂ ನಗುರೋರಧಿಕಂ ನಗುರೋರಧಿಕಂ
ವಿದಿತಂ ವಿದಿತಂ ವಿದಿತಂ ವಿದಿತಂ ಶಿವಶಾಸನತಃ ಶಿವಶಾಸನತಃ ೬

ರಹಸ್ಯೇ–

ಗುಕಾರಂ ತೈಲವರ್ತಿಶ್ಚ ರುಕಾರಂ ಜ್ವಲನಸ್ತಥಾ
ದ್ವಯೋರ್ಯುಕ್ತಂ ಪ್ರಭಾವೇನ ಸ್ವಯಂಜ್ಯೋತಿರ್ಗುರುಸ್ಮೃತಃ ೭

ಮಹೇಶಾನ್ನಾ ಪರೋ ದೇವೋ ಮಹಿಮ್ನೋ ನಾಪರಸ್ತವಃ
ಅಘೋರಾನ್ನಾ ಪರೋ ಮಂತ್ರೋ ನಾಸ್ತಿತತ್ತ್ವಂ ಗುರೋಃಪರಂ ೮

ಲಿಂಗಲಕ್ಷಣ

ಮತ್ತಾ ಪರಂಜ್ಯೋತಿ ಸತ್ಪರಬ್ರಹ್ಮರೂ
ಪೋತ್ತಮವದಾದ ಗುರುವೇ ಲಿಂಗವೆಂತೆಂದೊ
ಡುತ್ತರದ ವಾತೂಲದೊಳು ಶಂಭುವೆಂದ ವಾಕ್ಯವನೊರೆವೆ ಶಿವನುಂಟಲಾ
ಚಿತ್ತಶುದ್ಧದೊಳು ಕೇಳೈ ಸಚ್ಚಿದಾನಂದ
ವೆತ್ತ ಪರಿಪೂರ್ಣಂ ನಿರಂಜನಮಕಾರಣಂ
ಸುತ್ತೇನು ಕಾರ್ಯವಿಲ್ಲದುದು ನುಡಿಯುಂ ಮನಸ್ಸಂ ಮೀಱಿದುಪರಿತತ್ವಂ ೧೭

ಆಕಾಶದೋಪಾದಿಯಿಂದಲೂ ಪೂರ್ಣಂ ನಿ
ರಾಕಾರನೈ ದೇಹ ಪಾದಂಗಳಿಲ್ಲದನ
ಲಾ ಕೇಳ್ವುದೆನಗೆ ಪೋದಪೆನು ಬಂದಪೆನೆಂಬುದಂ ಹಸಿವು ನೀರಡಿಕೆಯು
ಆಕರಣೆಯಿಲ್ಲನಂತರದಲ್ಲಿ ಶಿವನಖಿಳ
ಲೋಕದೊಳ್ಬೆಳಗುವ ನಿಜಪ್ರಕಾಶಾಂಗನೈ
ಶ್ರೀಕೇವಲಂ ಲಿಂಗವೆಂದುಮುನ್ನಿಂದ ಪೇಳಲ್ಪಟ್ಟುದೈ ಪರಿಕಿಸೆ ೧೮

ಯತಿಗಳಿರ ಕೇಳಿರೀಯದೆ ಪೂಜ್ಯವಂತದೇ
ಶ್ರುತಿಮಸ್ತಕದೊಳಿರ್ಪುದೈ ಪರಂ ಗೂಢಮೆಂ
ದತಿಶಯ ಶರೀರಸ್ಥವೆಂದು ಲಿಂಗಕ್ಷೇತ್ರವೆಂದನಾದಿಯುಮೆನಿಪ್ಪ
ನುತವಾದನಾದಿಯೀಶ್ವರನ ತೇಜಸ್ಸಮು
ಗ್ರತೆಯು ಲಿಂಗವದೈದು ಕುಱುಹಿಂದಲಿಪ್ಪುದೈ
ಸುತ ಕೇಳ್ವುದದಱ ವಿಸ್ತಾರವಾಗಮದೊಳಗನಂತಪರಿಯರ್ಥವೆಂದ ೧೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಪುರಾತನವಾಕ್ಯದೊಳು ನಾದ ಬಿಂದುವಾ
ಕಲೆಗತೀತಂ ಲಿಂಗ ಸರ್ವಬ್ರಹ್ಮಾಂಡಮಂ
ಡಲವಾಸಿ ಗುರುವಿನುತ್ತಮ ಭಾವಲಿಂಗವಾ ಗುರುವಿನಿಂದುದ್ಭವಿಸಿತು
ನಲಿದಖಿಳಲೋಕಂಗಳಲ್ಲಿ ಮುಕ್ತಿಕ್ಷೇತ್ರ
ನಿಲಯುವೆನಿಸುವ ಲಿಂಗವಾ ಶಿಷ್ಯಭಾವಕ
ಗ್ಗಲದೆ ಕಾಣಲ್ಬಾರದಾ ದೃಶ್ಯವೆನಲದುವೆ ಕೆಡುವದೆಂದೞಿ ಕುಮಾರಾ ೨೦

ಮರಳಿ ಕಾಣಿಸುತಿಪ್ಪ ಕಾಣಿಸದ ರೂಪನು
ಳ್ಳುರುತತ್ತ್ವವೇ ಶಿವನೆನುತ್ತ ಪೂಜಿಸುವುದನ
ವರತವಾ ಲಿಂಗವೆ ಪರಂಜ್ಯೋತಿಯುಂ ಪರಬ್ರಹ್ಮವೆನಿಸುವುದು ನಾದಂ
ವರ ಲಿಂಗವಾ ಬಿಂದುವೇ ಪೀಠವೈ ಬಳಿ
ಕ್ಕೆರಡೆನಿಪ ನಾದ ಬಿಂದುಗಳೊಂದಿದಾ ರೂಪ
ವಿರದೆ ಲೋಕಂಗಳಂ ಪುಟ್ಟಿಸಲ್ಕಾನೆ ಕಾರಣವೆಂದು ತಿಳಿ ಕುಮಾರ ೨೧

ಲಿಂಗವೇ ಶಂಭುವೆಂದೞಿ ಪೀಠವೇ ಶಕ್ತಿ
ಸಾಂಗವೆಂದೆಯ್ದೆ ಪೇಳಲ್ಪಡುವುದೈ ಶರಣ
ಸಂಗಿ ಶಿವಶಕ್ತಿಯೋಗಂ ಜಗತ್ಸೃಷ್ಟಿ ರಕ್ಷೆಗೆ ಲಯಕೆ ಕಾರಣವೆಲೈ
ಲಿಂಗದೊಳ್ಪುಟ್ಟುವುದು ಲೋಕಸುಸ್ಥಾವರಂ
ಜಂಗಮುವದದುಕಾರಣಂ ತದಾಕಾರವಮಯ
ಲಿಂಗರೂಪೆಂದೞಿವುದೈ ಚಿತ್ತಶುದ್ಧದಿಂದೆಲೆ ಕುಮಾರಕನೆ ಕೇಳು ೨೨

ಆಕಾಶವೇ ಲಿಂಗವೆಂಬರೈ ಪೃಥ್ವಿಯೇ
ಶ್ರೀಕರದ ಪೀಠವೈ ಸರ್ವಭೂತಂಗಳ್ಗೆ
ಜೋಕೆಯಿಂದುತ್ಪತ್ತಿ ಲಯಕೆ ನೆಲೆವನೆಯುಪ್ಪ ಲಿಂಗವುದ್ಭವಿಸಿತು ಕಣಾ
ನೀ ಕೇಳು ಲಿಂಗಮಧ್ಯದೊಳೀ ಜಗತ್ಸರ್ವ
ಲೋಕ ಸಚರಾಚರಂ ಲಿಂಗಕ್ಕೆ ಬೇೞಾಗ
ನೇಕ ವಿಧದಿಂ ನೋಡೆ ಪರಪಿಲ್ಲವದುಕಾರಣಂ ಲಿಂಗವಂ ಪೂಜಿಸು ೨೩

ವಿವರಿಸಲ್ಕಾಕಾರವುಂ ನಿರಾಕಾರಂಗ
ಳಿವೞಿ ಕೂಟದ ಮಧ್ಯವಾ ಲಿಂಗರೂಪಲಾ
ತವೆ ಸದಾ ವ್ಯಕ್ತವೆಂದೇ ಕಲ್ಪಿಸಲ್ಪಟ್ಟುದೈ ಗೋಳಕಾಕಾರವು
ಪ್ರವಿಮಲದ ಲಿಂಗಲಕ್ಷಣವಿದಂ ಕೇಳಿದಾ
ಸವಿನುಡಿಯ ಬೋಧೆಯಿಂದೆಯ್ದೆ ತಿಳುಪುವೆನು ಲಿಂ
ಗವೆ ತಾನೆ ಕೂರ್ತು ಜಂಗಮುವಾದನೆಂದದೞಿ ಲಕ್ಷಣವ ಶಿವವಚನದಿಂ ೨೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಭಾವದಿಂ ಹಿಕ್ಕೆ ಬಳ್ಳಿ ಬದನೆಯು ಕಾಯ್ಗ
ಳಿವಱಲ್ಲಿ ಲಿಂಗವೇ ರೂಪಾದುದೈ ಮತ್ತೆ
ಯುವತಿ ಜಾರೋಪಪತಿಯುಪಹತಿಯು ಗೆಲಿದು ಬಸವಾದಿ ಗಣರಿರವನಲ್ಲಿ
ಸವಿ ನಿಂದೆಯೆಂಬಂತೆ ನುಡಿಯಲೀಳ್ಕೊಂಡ ಲಿಂ
ಗವನದ್ರಿಯಂ ಕರಂಗಿಸಿ ಘಟ್ಟಿವಾಳನೇ
ಕವನೆಸಗೆಯಣು ಮಹದ್ರೂಪಲಿಂಗದ ಮಹತ್ತ್ವವನಱಿವರಾರಿಳೆಯೊಳು ೨೫

||ಸಾಕ್ಷಿ|| ಉತ್ತರವಾತೂಲೇ-
ಶಿವೋಽಸ್ತಿ ಸಚ್ಚಿದಾನಂದಃ ಪರಿಪೂರ್ಣೋ ನಿರಂಜನಃ
ಅಕಾರಣಮಕಾರ್ಯಂ ಚ ಮನೋವಾಚಾಮಗೋಚರಂ ೯

ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್
ಯಥಾದಿವ್ಯೈಶ್ವರಂ ತೇಜ। ಸ್ತಲ್ಲಿಂಗಂ ಪಂಚಸಂಜ್ಞಕಂ ೧೦

ಪುರಾತರ ವಚನಕ್ಕೆ ಸೇರಿದ ಗ್ರಂಥ-
ಅದೃಶ್ಯಂ ಭಾವನೋ ನಾಸ್ತಿ ದೃಶ್ಯಮೇವ ವಿನಶ್ಯತಿ
ದೃಶ್ಯಾದೃಶ್ಯಂ ರೂಪತತ್ತ್ವಂ ಶಿವಮಿತ್ಯರ್ಚಯೇತ್ಸದಾ ೧೧

ಶಿವಧರ್ಮೋತ್ತರೇ-
ಲಿಂಗೇನ ಜಾಯತೇ ತತ್ರ ಜಗತ್ಸ್ಥಾವರಜಂಗಮಂ
ತಸ್ಮಾಲ್ಲಿಂಗವಿಶೇಷೇಣ ಲಿಂಗರೂಪಮುದಾಹೃತಂ ೧೨

ಜಂಗಮದ ಲಕ್ಷಣ

ಜಂಗಮದ ಲಕ್ಷಣವನೊರೆವೆನೈ ಕೇಳು ತಂ
ತ್ರಂಗಳೊಳಗೆಸೆವ ವೀರಾಗಮದೊಳಾ ಶಿವನೆ
ಜಂಗಮಾಕಾರದೊಳು ಪುಟ್ಟಿದನು ಪಂಚಮುದ್ರಾದಿ ಭೂಷಣವನಾಂತಂ
ಪಿಂಗದೀ ಲೋಕಕ್ಕೆ ಕರ್ತನಾಗುತ್ತಲಾ
ಜಂಗಮಂ ಮೆಱೆಶಿವನೆಂಬುದು ತಥ ವಿದನೆ ನೀ
ನಂಗೈಸಿ ಮೂಱು ಕರಣಂಗಳಿಂದಱಿ ಕೆಂಚವೀರಾಖ್ಯ ಮುಂದೆ ಪೇಳ್ವೆಂ ೨೬

ಆವನೊರ್ವಂ ಸರ್ವ ಲೋಕೋಪಕಾರಕ್ಕೆ
ದೇವಾದಿದೇವ ಪರಮೇಶ್ವರಂ ಚರಿಸುತ್ತ
ಲೋವಿ ನಿಂದಿರುತಿರ್ಪನಾತನೇ ಜಂಗಮವವಂಗೆ ನಾಂ ವಂದಿಸುವೆನು
ಭಾವಿಸೆ ಜಕಾರವಾ ಬ್ರಹ್ಮಂಗಕಾರವಂ
ತಾ ವಿಷ್ಣುವೈ ಮಕಾರಂ ರುದ್ರನಪ್ಪನೀ
ಮೂವರ್ಗೆ ಕಾರಣಾತ್ಮಕನಲಾ ಜಂಗಮಂ ನಿರ್ವಚನಮಂ ಕೇಳಿದ ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕಾ ಜಕಾರದಿಂ ಜನಿಸಿತಾ ಪೃಥ್ವಿಯು
ಗ್ಗಳ ಗಕಾರದಿನಾಗಸಂ ಪುಟ್ಟಿತಿಂತೆರಡ
ಱೊಳೆ ಮೆಱೆವುತಾ ಮಕಾರಂ ಮರ್ತ್ಯಲೋಕವಾದುದು ಜಂಗಮಂ ಭಾವಿಸೆ
ತಿಳಿಯೆ ಜಗದೀಶ್ವರಂ ಜಂಗಮಂ ತ್ರ್ಯಕ್ಷರಂ
ಗಳೊಳೆ ಹದಿನಾಲ್ಕು ಲೋಕಾಶ್ರಯು ಸ್ವರ್ಗ ನಿ
ರ್ವಳ ಮರ್ತ್ಯ ಪಾತಾಳವಾ ಜಂಗಮಂ ಮೆಱೆವನಾನಂದದಿಂದ ತಾನು ೨೮

ಆಕಾರವೆನಿಸದವನಾಧಾರವಿಲ್ಲದಂ
ವ್ಯಾಕುಲಂ ಪೊರ್ದದವನೈ ಕಾಳಿಮಂ ಪುಗದ
ನೇಕ ಪದವಿಯು ಸುಪ್ರಕಾಶಮಂ ಬಗೆಯುದಾಜ್ಞೇಯಲಕ್ಷಣೆ ಜಂಗಮಂ
ಆಕಾಶರೂಪಂ ಜಟಾಕಾಶವಯ್ಯ ತ
ತ್ತ್ವಾಕಾಶವವನೇ ನಿರಂಜನಂ ತಿಳಿವೊಡೆ ಹೃ
ದಾಕಾಶವಾ ಚಿದಾಕಾಶವೈ ಶೂನ್ಯಜಂಗಮಲಕ್ಷಣಂ ದುರ್ಲಭಂ ೨೯

ಮನವಿಲ್ಲದಂ ಮೇಲದೊಂದುವಂ ಬಗೆಯದಂ
ತನುವಱಿಯಬಾರದಾತಂ ಸರ್ವಶೂನ್ಯವಾ
ದನುವನೆಯ್ದಿದವನುತ್ತಮ ಜಂಗಮಸ್ಥಲದ ಸಂಪನ್ನನವನ ಮೂರ್ತಿ
ಘನಲಿಂಗಮೂರ್ತಿ ತನ್ನಯ ಲೀಲೆಯೇ ಶೀಲ
ದನುಪಮದ ಸುಗುಣವಾ ಗುಣ ಸರ್ವದಾ ಲಿಂಗ
ವೆನಿಪುದಿದು ಜಂಗಮದ ಲಕ್ಷಣಂ ಕೇಳೆಂದು ಪೇಳುತಿರ್ದಂ ದೇಶಿಕಂ ೩೦

ಎರಡಿಲ್ಲದಿಹುದಧಿಕದೆರಡುಳ್ಳುದೈ ಮಾರ್ಗ
ದಿರವಿಲ್ಲದುದು ಮಹಾ ಮಾರ್ಗಮುಳ್ಳುದು ಕೇಳು
ತರುಣ ಶಾಸ್ತ್ರಾತೀತಮುನ್ನತದ ಶಾಸ್ತ್ರರೂಪಂ ಜಂಗಮದ ಲಕ್ಷಣಂ
ಇರೆ ಶೂನ್ಯ ನಿಃಶೂನ್ಯವಿಲ್ಲದುದು ಸೀಮೆಯುರು
ತರದ ನಿಸ್ಸೀಮೆಯಿಲ್ಲದುದತೀತಾನಂದ
ಕರವರರೆ ಕೇಡಿಲ್ಲದಿಪ್ಪಭೇದ್ಯಂ ಜಂಗಮಸ್ಥಲಂ ಪರಿಭಾವಿಸೆ ೩೧

ಜಡೆ ಕರಸ್ಥಲಲಿಂಗ ಪಂಚಾಕ್ಷರಿಯನೆಯ್ದೆ
ನುಡಿವ ನಾಲಗೆ ದಿವ್ಯಭಸಿತಲೇಪನದ ಚೆ
ಲ್ವೊಡಲು ಕೊರಲಲ್ಲಿ ರುದ್ರಾಕ್ಷಮಾಲಿಕೆಯಾ ಪ್ರಸನ್ನಮುಖದೊಳು ಶಾಂತಿಯು
ಕಡಲೆನಿಪ ನಿಜಕರ್ಣಕುಂಡಲಂಗಳ ಲೋಕ
ದಡಿಕಿಲಂ ಪುಲ್ಗೆ ಬಗೆಯದ ಮುಗುಳುನಗೆಯುನು
ಳ್ಳೊಡೆಯಂ ಮನೋಹರನುಮಾದಿ ಮಧ್ಯಾಂತವಿರಹಿತ ಮಹಾನಂದ
ರೂಪಂ ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ರಮದಿಂದ ದೇವಿ ಕೇಳಾ ವಿಭುವನಾದಿಜಂ
ಗಮವಜಹರೀಂದ್ರಾರ್ಚಿತಂ ಮೊದಲ್ಕಡೆಯಿಲ್ಲ
ದಮಳ ಸರ್ವಾನಂದನುಱಿ ಸುರಾರ್ಚಿತನೆಸೆವನಾದಿಜಂಗಮವೆಂದಱಿ
ಕಮಲಮುಖಿ ಶಿವರುದ್ರಪೂಜಿತಂ ಮತ್ತೆಯಾ
ರಮಣೀಯ ಸದ್ರೂಪವೇ ಜಕಾರಂ ಕಣಾ
ವಿಮಲ ಚಿದ್ರೂಪವೆ ಗಕಾರವಾನಂದವೆ ಮಕಾರವಿದಱಿಂ ಜಂಗಮಂ ೩೩

ನಾದರೂಪಂ ಜಕಾರಂ ಬಿಂದುರೂಪವೆಲೆ
ಮಾದೇವಿ ಕೇಳ್ಗಕಾರಂ ಕಳಾತೀತವೆನ
ಲಾದುದು ಮಕಾರವಿಂತೆಸೆವಭೇದ್ಯಂ ಜಂಗಮಸ್ಥಲವಲಾ ಜಕಾರ
ಸಾದರದೆ ಗುರುರೂಪವಾ ಗಕಾಗಂ ಮಹಾ
ಹ್ಲಾದಲಿಂಗಂ ಮಕಾರಂ ಜಂಗಮಜ್ಞೇಯ
ವೈ ದೇವಿಯಾ ತ್ರಿಮೂರ್ತ್ಯಾತ್ಮಕಂ ಜಂಗಮಂ ಮತ್ತೆ ನಾಂ ಬಿತ್ತರಿಪೆನು ೩೪

ಎಸೆವಭೇದ್ಯಂ ಜಕಾರಂ ಗಕಾರಂ ಕೇಳು
ಕುಸುಮಗಂಧಿನಿಯಗೋಚರವಾ ಮಕಾರವೇ
ಎಸೆವಾ ಮಹತ್ತರಂ ಮಿಸುಪಭೇದ್ಯಂ ಜಂಗಮಸ್ಥಲವಲಾ ಬಳಿಕ್ಕ
ಪೆಸರಹ ಜಕಾರವೇ ಪುಟ್ಟಿಲ್ಲದುದು ಕಣಾ
ಸುಸರದ ಗಕಾರವೇ ಗಮನವಿಲ್ಲದುದು ರಾ
ಜಿಸುವಾ ಮಕಾರವೇ ಮರಣವಿಲ್ಲದುದು ಜಂಗಮದ ಲಕ್ಷಣ ಭಾವಿಸೆ ೩೫

ಜ್ಞಾನಮಯುವಹ ಜಟಾಬಂಧಂ ಮನೋರೂಢ
ದಾನಂದಕಂಥೆಯಿಂದಂ ಮನೋಲೀಯವದು
ತಾನೆ ಭಸ್ಮಾಂಗವಾ ಜ್ಞಾನತಲ್ಲೀಯ ಜಂಗಮವೈ ಬಳಿಕ್ಕ ಕೇಳು
ತಾನಣುವಿಗಣುವಾ ಮಹತ್ತಿಗೆ ಮಹತ್ತಲಾ
ಏನೆಂಬೆ ಸರ್ವಜೀವಿಗಳ ಮಧ್ಯಸ್ಥಂ ನ
ವೀನದುತ್ತಮಜಂಗಮಸ್ಥಲಂ ಮತ್ತೆ ತಿಳುಪುವೆನು ಸಂತೋಷದಿಂದ ೩೬

ಅಣಿಮಾದಿಯಷ್ಟಸಿದ್ಧಿಗಳ ಮಿಗೆ ನವನಿಧಿಯು
ಗಣನೆ ಯೈಶ್ವರ್ಯಂಗಳಧಿಕ ಸೃಷ್ಟಿಗಳ ಕಾ
ರಣವಾದುದೀ ಜಂಗಮದ ಲಕ್ಷಣಂ ಮುಂದೆ ನಿನಗೆಯಾಂ ಬಿತ್ತರಿಪೆನು
ಅಣುಗ ಕೇಳೈ ಪರಾತ್ಪರವಾ ಪ್ರಸಾದಲ
ಕ್ಷಣವನೇಕಾಗ್ರಚಿತ್ತದಿ ಕೆಂಚವೀರ ಕಾ
ರಣಕ ಕೇಳೆಂದು ಹಲಗೆಯ ದೇಶಿಕಂ ನುಡಿದನತಿಶಯಾನಂದದಿಂದ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಿಂಗದಾ ಶಾಂತಿಭೂಷಣದ ದಸರಯ್ಯನು
ತ್ರ್ತುಂಗಲಾಂಛನನಿಷ್ಠನೇಣಾದಿನಾಯಕಂ
ಮಂಗಳ ವೃಷಾಧಿಪಂ ಜಡೆದಲೆಗೆ ತಲೆಗೊಟ್ಟ ಚೋಳನುರೆ ಸಿರಿಯಾಳನ
ಭಂಗಿಸಿದ ನಿಂಬಿಯಕ್ಕಂಗಳಿವರತಿಶಯದ
ಜಂಗಮದ ಭಕ್ತಿನಿಷ್ಠೆಗೆ ರಚಿಸಿದವರಲಾ
ಜಂಗಮವೆ ಮಿಗಿಲು ಜಂಗಮವೆ ಘನವೈ ಕೆಂಚವೀರಾಖ್ಯ ಕೇಳೆಂದನು ೩೮

||ಸಾಕ್ಷಿ|| ವೀರಾಗಮೇ–

ಶಿವ ಏವ ಸಮುತ್ಪನ್ನಃ ಶಿವ ಏವ ವಿಭೂಷಿತಃ
ಶಿವ ಏವ ಜಗತ್ಕರ್ತಾ ಜಂಗಮಶ್ಚ ಪ್ರಶಸ್ಯತೇ ೧೩

ಜಕಾರಾ ಜ್ಜನಿತಾ ಪೃಥ್ವೀ ಗಕಾರಾದಾಕಾಶಮುದ್ಭವಂ
ಮಕಾರಾನ್ಮರ್ತ್ಯಲೋಕಶ್ಚ ಜಂಗಮೋ ಜಗದೀಶ್ವರಃ ೧೪

ಜಟಕರಸ್ಥಲೇ ಲಿಂಗಂ ಮುಖೇ ಪಂಚಾಕ್ಷರಾಮೃತಂ
ವಿಭೂತಿ ಲೇಪನಂ ದೇಹೇ ಗಲೇ ರುದ್ರಾಕ್ಷಮಾಲಿಕಾ ೧೫

ಪ್ರಸನ್ನವದನಃ ಶಾಂತಃ ಕರ್ಣಕುಂಡಲಮಂಡಿತಃ
ತೃಣೀಕೃತ ಜಗತ್ಸರ್ವಂ ಮಂದಸ್ಮಿತಮನೋಹರಃ ೧೬

ಸತ್ಸ್ವರೂಪಂ ಜಕಾರಂ ಚ ಚಿತ್ಸ್ವರೂಪಂ ಗಕಾರಕಂ
ಆನಂದತ್ವಂ ಮಕಾರಂಚ ನಿತ್ಯಮಾನೇನ ಜಂಗಮಂ ೧೭

ಜಕಾರಂ ಜನನಂ ನಾಸ್ತಿ ಗಕಾರಂ ಗಮನಂ ನಹಿ
ಮಕಾರಂ ಮರಣಂ ನಾಸ್ತಿ ತಸ್ಯ ಜಂಗಮ ಲಕ್ಷಣಂ ೧೮

ಪ್ರಸಾದ ಲಕ್ಷಣ

ತವೆ ತತ್ತ್ವದೀಪಿಕೆಯ ವಾಕ್ಯದೊಳು ಕೇಳಯ್ಯ
ಶಿವ ಸುಪ್ರಸಾದವೇ ಮುಕ್ತಿ ಮೂಲಂ ಕಣಾ
ಶಿವನೆಹಗೆ ಸರ್ವದೇವರೊಳಧಿಕನಂತೆ ಕರ್ಮಂಗಳೆಲ್ಲಕ್ಕೆಮಿಗಿಲು
ಪ್ರವಿಮಲ ಪುರಾತನರ ಸದ್ಗ್ರಂಥದರ್ಥವೈ
ಶಿವನೊರೆದ ಮತ್ಪ್ರಾಣ ಮಲ್ಲಿಂಗ ಜಂಗಮಂ
ವಿವರಿಸಲ್ಕೆಮ್ಮಿಬ್ಬರಿಗೆ ತತ್ಪ್ರಸಾದವೇಭಾಗ್ಯವೆಂಬುದು ನಿಶ್ಚಯಂ ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚರಲಿಂಗ ದಿವ್ಯಪ್ರಸಾದವಿಲ್ಲದೆಯಾವ
ನಿರದೆನ್ನ ಪೂಜಿಸುವನಾತಂಗೆ ಘನಮುಕ್ತಿ
ದೊರೆಕೊಳ್ಳದೈ ಕೋಟಿ ಜನ್ಮದೊಳಗಂತಾಗಿ ಕರತಳದ ಶಿವಲಿಂಗಕಂ
ಪರಮ ಜಂಗಮ ಸುಪ್ರಸಾದವರ್ಪಿಸಿಕೊಂಬು
ದುರುತರವೆಲ್ಲೈ ಕೇಳ್ವುದದಱಿಂದ ಲಿಂಗವವ
ನರರೆ ಗುರುವಾತನಾ ಜಂಗಮಂ ತಾನಪ್ಪನವಗೆ ಸರಿಯಾರಿಳೆಯೊಳು ೪೦

ಅದು ಕಾರಣಂ ಜಂಗಮಪ್ರಸಾದವನೆ ಕೊಂ
ಬುದು ಕಣಾ ಲಿಂಗದೊಡವೆರಸಿ ಕೇಳೈ ಮತ್ತೆ
ವಿದಿತವಾ ಪ್ರಾಣಪ್ರಸಾದಮವ್ಯಕ್ತವೆಂಬುದು ಲಿಂಗಸುಪ್ರಸಾದಂ
ಸದಮಲ ವ್ಯಕ್ತವೆಂಬುದು ಲಿಂಗಜಂಗಮ
ಪ್ರದವಖಂಡಿತ ತತ್ಪ್ರಸಾದವೆಂದಱಿ ವಿಮಲ
ಹೃದಯ ಕೇಳೈ ಚರಾಚರ ಸುಪ್ರಸಾದವೇ ಭೋಗಿಸಲು ತಕ್ಕುದದನು ೪೧

ಆವವಂ ಕೈಕೊಂಬನವನಿಂ ಚರಾಚರಂ
ಪಾವನಂ ನಿರ್ಮಾಲ್ಯದಿಂದ ನಿರ್ಮಲವಲಾ
ದೇವಿ ಸರ್ವಾರ್ಗ್ಯದಱಿನಧಿಕ ನಿರ್ಮಾಲ್ಯಮಂ ಧರಿಸೆ ಮಸ್ತಕದೊಳೊಲಿದು
ದೇವ ಪ್ರಸಾದೋದಕಂ ಪ್ರಸಾದಾನ್ನಮಂ
ಸೇವಿಸಲು ಸರ್ವಪಾತಕವಳಿಗುಮೆಯ್ದೆ ರಾ
ಜೀವ ಮುಖಿಯೆಂದನೀಶಂ ಮುಂದೆ ವೀರಾಗಮದೊಳೊರೆವೆನೈ ಕುಮಾರ ೪೨

ಪರಮಪಾದೋದಕಂ ಸತ್ಪವಿತ್ರಂ ಕೇಳು
ತರುಣಿ ಮದ್ಭಕ್ತಶೇಷಂ ನಿರ್ಮಲಂ ದಿವ್ಯ
ತರವಪ್ಪ ನಿರ್ಮಾಲ್ಯವೇ ಪರಾನಂದವಾ ಶುದ್ಧಶೈವೋನ್ನತವಲಾ
ಅರರೆ ನಿರ್ಮಾಲ್ಯ ಪರಮಜ್ಞಾನರೂಪಕಂ
ಚಿರತರಾಮೃತರೂಪನಾದಿ ಜಂಗಮಲಿಂಗ
ವಿರದಾದಿಲಿಂಗವಾ ಜಂಗಮವಿರೋಧೇಷ್ಟಲಿಂಗಶೇಷಂ ಕಿಲ್ಬಿಷಂ ೪೩

ಮತ್ತೆ ಕೇಳೈ ಸ್ಕಾಂದದೊಳು ಮಹಾವ್ರತಿಗಳಿಗೆ
ಉತ್ತಮಂ ಚರಲಿಂಗಪೂಜನಂ ಶ್ರೇಷ್ಠತ್ವ
ವೆತ್ತಕ್ಷಯಂ ಜಂಗಮದ ದರ್ಶನಂ ಕಣಾ ನಾನಿನಗಿದಂ ಪೇಳ್ವೆನು
ಚಿತ್ತಿನಗ್ಗಳದ ಜಂಗಮದಾ ಪ್ರಸಾದಮಂ
ತತ್ತೀರ್ಥಮಂ ಕೊಂಡು ಸುಖಿಯಹೆನು ನವಿಲನೇ
ಱುತ್ತ ಚರಿಸುವ ಮಗನೆ ಕೇಳೆಂದು ಮುಂದೆ ಪೇಳುತ್ತಿರ್ದನಾ ಶಂಕರಂ ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತವೆ ಭಕ್ತಜನ ಸುಪ್ರಸಾದವಮಂ ಸಂತಸದೆ
ಶಿವಗರ್ಪಿಸುತ್ತ ಮಿಕ್ಕುದು ತತ್ಸವಿತ್ರವೆಂ
ದವಿರತಂ ಸೇವಿಪುದು ಭಕ್ತಿಯುಳ್ಳವರು ಮತ್ತಂ ನನಗೆ ಚರಲಿಂಗದ
ಸವಿಶೇಷ ಶೇಷಮಂ ಜಂಗಮಾಘ್ರಾತಮಂ
ತವೆ ಪಿಡಿದುದಂ ನೋಡಿತಂ ಕೊಡುವುದೈ ಕೂರ್ತು
ಕುವರ ಮಾನಸ ವಾಚಕಂ ಕಾಯಕಂಗಳಿಂ ಸರ್ವವಸ್ತುವ ಚರಕ್ಕೇ ೪೫

ಕೊಟ್ಟಾ ಪ್ರಸಾದಮಂ ಲಿಂಗಕರ್ಪಿಸಿಕೊಂಬು
ದೊಟ್ಟಜೆಯ ಕಾಳಿಕಾಕಾಂಡದೊಳು ಜಂಗಮಕೆ
ಕೊಟ್ಟುದು ಪದಾರ್ಥರೂಪೆಂದು ಲಿಂಗಕ್ಕಿತ್ತು ಭಕ್ತನುಂಬುದೆ ಮಾರ್ಗವು
ನೆಟ್ಟನಾ ಲಿಂಗಪ್ರಸಾದಮಂ ಜಂಗಮಕೆ
ಕೊಟ್ಟಪೆನೆನಿಪ್ಪುದನುಚಿತವಲ್ಲೈ ಜಂಗಮಂ
ತುಷ್ಟಿಯಪ್ಪಂತುಂಡು ಮಿಕ್ಕುದಂ ಲಿಂಗಕರ್ಪಿಸಿಕೊಂಬುದೇ ಪ್ರಮಾಣಂ ೪೬

ಬಳಿಕಲಾ ಬ್ರಹ್ಮಾಂಡಪೌರಾಣದಲ್ಲಿ ನಿ
ರ್ಮಳ ಜಂಗಮು ಪ್ರಸಾದವನೆನಗೆ ಕೊಡುತಲ
ಗ್ಗಳಭಕ್ತನುಂಬುದೆಂದಂ ಶಿವಂ ಮತ್ತೆ ಕೇಳಖಿಳ ಪ್ರಯತ್ನದಲ್ಲಿ
ವಿಳಸಿತದ ಲಿಂಗಕಿತ್ತಾನುಂಬೆನೆಂಬುದ
ಗ್ಗಳದ ಜೈಮಿನಿಗೆ ಪೇಳಿದನು ದೂರ್ವಾಸಮುನಿ
ತಿಳಕನಂತಾ ಭಾಂಡದಲ್ಲಿರ್ದ ಸತ್ಪದಾರ್ಥಂಗಳಂ ಜಂಗಮಕ್ಕೆ ೪೭

ಸಲೆ ತೃಪ್ತಿಯಪ್ಪಂತೆ ನೀಡಿ ಮಿಕ್ಕುದ ಲಿಂಗ
ಕೊಲಿದರ್ಪಿಸುತ್ತಕೊಂಬುದು ಕೂರ್ಮಪೌರಾಣ
ದಲಘುವಚನದೊಳು ಚರಶೇಷಮಂ ಕೊಂಡವಂ ಲಿಂಗಗುರು ಜಂಗಮುವಹಂ
ಎಲೆ ನಿರಂಜನ ಶುದ್ಧನಮುಮನತ್ಯಂತ ನಿ
ರ್ಮಲಜಂಗಮು ಪ್ರಸಾದಂ ಮದರ್ಪಣವಪ್ಪು
ದಲೆ ವೀರತಂತ್ರದಪ್ರತಿಮ ಚರಶೇಷಮಂ ಶಿವಗಿತ್ತು ಭೋಗಿಸುವುದು ೪೮

ಶಕಟಸ್ಥವಾದ ಜಂಗಮುಸುಪ್ರಸಾದವೇ
ಪ್ರಕಟ ಲಿಂಗಾರ್ಪಿತಸ್ವೀಕಾರವಾಗಿ ಸಾ
ಧಕ ಬಿಬ್ಬ ಬಾಚರಸರೆಸೆಯುರೇಯಾರ್ಪಣ ಚರಪ್ರಸಾದೋಗ್ರಗರಳ
ನಿಕರಾದಿ ತತ್ಪ್ರಸಾದವನೆ ಬಸವೇಶಮೊದ
ಲಕಲಂಕಗಣಕುಲಂ ಸೇವಿಸಿದರಾದಿಯೊಳು
ಭಕುತಿಯುಂ ನಂದಿ ಬೇಡಿದನಲಾ ಬ್ರಹ್ಮಾಣಯೆಂಬುದಂ ಕೇಳ್ಕುಮಾರ ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ತತ್ತ್ವದೀಪಿಕಾಯಾಂ–

ಪ್ರಸಾದಂ ಮುಕ್ತಿಮೂಲಂ ಚ ಯತ್ಪ್ರಸಾದಂ ಶಿವಸ್ಯ ಚ
ಶಿವ ಸರ್ವಾಧಿದೇವಃಸ್ಯಾದ್ಯಥಾ ಕರ್ಮಸು ತದ್ಘನಂ ೧೯

ಮತ್ಪ್ರಾಣೋ ಜಂಗಮೋ ನಿತ್ಯಂ ಮಲ್ಲಿಂಗಂ ಜಂಗಮಸ್ತಥಾ
ಆವಯೋಸ್ತತ್ಪ್ರಸಾದಂ ತು ಭೋಗ್ಯಂ ಸ್ಯಾದಿತಿ ನಿಶ್ಚಯಂ ೨೦

ಚರೋಚ್ಛಿಷ್ಟೇನ ಮಾಂ ಕೋಪಿ ವಿನಾ ತು ಭುಜತೇ ಯದಿ
ನಾಸ್ತಿತಸ್ಯ ವಿನಿರ್ಮೋಕ್ಷಃ ಸಂಸಾರೇ ಜನ್ಮಕೋಟಿಭಿಃ ೨೧

ಪುರಾತನರ ವಚನಬಲ್ಲಿಯ ಗ್ರಂಥ–

ತಸ್ಮಾಲ್ಲಿಂಗೇ ಪ್ರಸಾದಂ ಚ ದತ್ವೋಚ್ಛಿಷ್ಟಂ ತು ಸೇವಯೇತ್
ಲಿಂಗತ್ವಂ ಚ ಗುರುತ್ವಂ ಚ ಚರಲಿಂಗತ್ವಮಾಪ್ನುಯಾತ್ ೨೨

ತಸ್ಮಾತ್ಸರ್ವಪ್ರಯತ್ನೇನ ಚರೋಚ್ಛಿಷ್ಟಂತು ಸೇವಯೇತ್
ಪ್ರಾಣಪ್ರಸಾದಮವ್ಯಕ್ತಂ ವ್ಯಕ್ತಂ ಲಿಂಗಪ್ರಸಾದಕಂ ೨೩

ಲಿಂಗ ಜಂಗಮಸಂಯುಕ್ತಂ ಪ್ರಸಾದಂ ಚೇದಖಂಡಕಂ
ಚರಾಚರಪ್ರಸಾದಾನ್ನಂ ಭೋಕ್ತಂ ತಚ್ಛೇಷಧಾರಣಾತ್ ೨೪

ಚರಾಚರಾಣಾಂಭೂತಾನಾಮಪಿ ಮುಕ್ತಿರ್ಭವೇತ್ಪ್ರಿಯೇ
ನಿರ್ಮಲತ್ವಾಚ್ಚನಿರ್ಮಾಲ್ಯಂ ನೃಣಾಂ ನೈರ್ಮಲ್ಯಕಾರಣಂ ೨೫

ನಿರ್ಮಾಲ್ಯಧಾರಣಂ ಶಂಭೋಃ ಪ್ರಸಾದೋದಕ ಸೇವನಂ
ಪ್ರಸಾದ ಭೋಜನಂ ಚೇತಿ ಪ್ರತ್ಯಕ್ಷಂ ಪಾತಕಾಪ ಹಂ ೨೬

ವೀರಾಗಮೇ–

ಪಾದೋದಕಂ ಪವಿತ್ರಂ ಚ ಭುಕ್ತಶೇಷಂ ಮಹೇಶ್ವರಿ
ನಿರ್ಮಾಲ್ಯಂ ಪರಮಾನಂದಂ ನಿರ್ಮಾಲ್ಯಂ ಶುದ್ಧ ಶೈವದಂ ೨೭

ನಿರ್ಮಾಲ್ಯಂ ಪರಮಜ್ಞಾನಂ ನಿರ್ಮಾಲ್ಯಂ ಪರಮಾಮೃತಂ
ಅನಾದಿ ಜಂಗಮಶ್ಚೈವ ಆದಿ ಲಿಂಗಸ್ಥಲಂ ಭವೇತ್ ೨೮

ಅನಾದಿ ತದ್ವಿರೋಧೇನ ಸ್ವೇಷ್ಟೋಚ್ಛಿಷ್ಟಂತು ಕಿಲ್ಬಿಷಂ

ಸ್ಕಾಂದೇ–

ವ್ರತೀನಾಂ ಚರಲಿಂಗಸ್ಯ ಪೂಜನಂ ಶ್ರೇಷ್ಠಮಕ್ಷಯಂ ೨೯
ದರ್ಶನಂ ಚಾಧಿಕಂ ವತ್ಸ ಮಯೋದಿತಮಿದಂ ಶುಭಂ
ತಸ್ಯ ಜಂಗಮಲಿಂಗಸ್ಯ ಪ್ರಸಾದಂ ಲಿಂಗಸೇವಿತಂ ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಯಾ ಪ್ರೋಕ್ತಂತು ಕರ್ತವ್ಯಂ ತಜ್ಜಲಂ ಶಿಖಿವಾಹನ
ಭಕ್ತಾನಾಂ ಸುಪ್ರಸಾದಂ ಚ ಶಿವಲಿಂಗೇ ನಿವೇದಯೇತ್ ೩೧

ತದುಚ್ಛಿಷ್ಟಂ ಪವಿತ್ರಂ ಚ ಸೇವಯೇದ್ಭಕ್ತಿಮಾನ್ನರಃ
ಮಮಾಪಿ ಚರಲಿಂಗಸ್ಯ ಸಚ್ಛೇಷಂ ಧಾರಯೇತ್ ಸದಾ ೩೨

ಸಮಾಹೃತಂ ಪರಿಸ್ಪೃಷ್ಟಂ ಯಥಾ ದೃಷ್ಟಂ ಮನೀಷಿಣಾ
ಮನೋವಾಕ್ಕಾಯ ಕರ್ಮೇಭ್ಯಶ್ಚರಲಿಂಗೇ ಸಮರ್ಪಯೇತ್ ೩೩

ತತ್ಪ್ರಸಾದಂ ಪುನರ್ಲಿಂಗೇ ದತ್ವೋಚ್ಛಿಷ್ಟಂತು ಸೇವಯೇತ್

ಕಾಳಿಕಾ ಖಂಡೇ–

ಜಂಗಮೋ ಸರ್ವವಸ್ತೂನಿ ಸಮರ್ಪ್ಯ ಸುವಿಚಾರತಃ ೩೪

ತದ್ದ್ರವ್ಯಂಚ ಪದಾರ್ಥೋಕ್ತಂ ತತ್ಪದಾರ್ಥಂ ಚ ಲಿಂಗಕೇ
ನಿವೇದಿತೇ ಪ್ರಸಾದಂಚ ಭೋಜಯೇತ್ಸತತಂ ಸುಧೀಃ ೩೫

ಲಿಂಗಾರ್ಪಿತಂ ಪ್ರಸಾದಂಚ ನದದ್ಯಜಂಗಮಾದಿಷು
ಚರಾರ್ಪಿತಪ್ರಸಾದಂಚ ದದ್ಯಂತು ಶಿವಲಿಂಗಕೇ ೩೬

ಬ್ರಹ್ಮಾಂಡ ಪೌರಾಣೇ–

ಮಮಾಪಿ ಚರಲಿಂಗಸ್ಯ ಪ್ರಸಾದಂಚ ಸಮರ್ಪಯೇತ್
ತಚ್ಛೇಷಂ ಶಿವಭಕ್ತಸ್ಯ ಭುಂಜಯಾತ್ ಸವಿಶೇಷತಃ ೩೭

ತಸ್ಮಾತ್ಸರ್ವಪ್ರಯತ್ನೇನ ಪ್ರಸಾದಂ ಶಿವಲಿಂಗಕೇ
ದತ್ವಾ ಪ್ರಸಾದಂ ಭುಂಜಾಮಿ ತಾಪಸೋತ್ತಮ ಜೈಮಿನೇ ೩೮

ಭಾಂಡಸ್ಥಂ ಚ ಪದಾರ್ಥಂಚ ತೃಪ್ತ್ಯಂತಂ ಚರಲಿಂಗಕೇ
ದತ್ವಾ ಪ್ರಸಾದಾನ್ನಮಿತಿ ಶಿವಲಿಂಗೇ ಸಮರ್ಪಯೇತ್ ೩೯

ಕೂರ್ಮಪೌರಾಣೇ–

ಲಿಂಗತ್ವ ಚ ಗುರುತ್ವಂಚ ಚರಲಿಂಗತ್ವಮಾಪ್ನುಯಾತ್
ತಸ್ಮಾತ್ಸರ್ವಪ್ರಯತ್ನೇನ ಚರೋಚ್ಛಿಷ್ಟಂ ತು ಸೇವಯೇತ್
ನಿರಂಜನಸ್ಯ ಶುದ್ಧಸ್ಯಾ ಪ್ಯನಘಸ್ಯ ಪ್ರಯತ್ನತಃ
ತಸ್ಮಾಜ್ಜಂಗಮಲಿಂಗಸ್ಯ ಪ್ರಸಾದೋಪಿ ಮಮಾರ್ಪಣಂ ೪೦

ವೀರತಂತ್ರೇ–

ಪ್ರತಿಸ್ವರೂಪ ವಿಗತಚ್ಚರಲಿಂಗೇ ಸಮರ್ಪಯೇತ್
ತತ್ಪ್ರಸಾದಂ ಸ್ವೇಷ್ಟಲಿಂಗೇ ದತ್ವಾ ತಚ್ಛೇಷಮಾಪ್ನುಯಾತ್ ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ವೃತ್ತ॥ ಬ್ರಹ್ಮಾಣಃ ಪ್ರಥಮೇಭವೇಮ ನ ವಯಂ ದೂರೇಣ ದಾಮೋದರಾಃ
ಕಾಮಾರ್ತಾಸುರ ರಾಜಸಂಪದಿ ಕುತೋ ದೇವಾಂತರೇ ಸಂಸ್ಪೃಹಾಃ
ಇಚ್ಛಾಮೋ ಭವಭಾವನೈಕರಸಿಕಗ್ರಾಹಾಃ ಶುಭಗ್ರಾಹಿಣೋ
ಗೋಹಾಟಕಸ್ಕರ ಕೂಟ ಕೀಟಿ ವಿಘಸಗ್ರಾಸಾಸ್ನಿಭಿರ್ಮಂಡಲಃ ೪೨

ಪಾದೋದಕದ ಕ್ರಮ

ಗುರುವಚನದಲ್ಲಿ ಬಹು ತೀರ್ಥಾದಿಗಳ ಫಲ
ಕ್ಕುರುತರಂ ಗುರುಪಾದತೀರ್ಥವದಱಿಂದದಂ
ಶಿರದಲ್ಲಿ ತಳಿದುಕೊಂಬುದು ಸಪ್ತಸಾಗರದೊಳುಳ್ಳ ತೀರ್ಥಂಗಳ ಫಲಂ
ವರದೇಶಿಕಾಂಘ್ರಿಜಲದೊಳ್ ಬಿಂದುವಿನೊಳು ಸಾ
ವಿರಭಾಗದೊಳಗೊಂದಱಂಶಕೆಣೆಯಿಲ್ಲವಾ
ದರಿಸಿ ಕೇಳ್ಳೆ ರಹಸ್ಯದೊಳೊರೆದ ಸದ್ಗ್ರಂಥಮಂ ಸದ್ವಿಚಾರದಿಂದ ೫೦

ಕೆಸಱಲ್ಲಿ ನೀರ ಸೂಸಲ್ಕೆ ಮಿಗಿಲಹುದಾರ್ಯ
ನೆಸೆವ ಪದಜಲವೀಂಟೆ ಪಾಪಪಂಕವದೊಣಗಿ
ನಸಿದು ಹುಡಿಯುಹುದಗ್ನಿಯೊಳು ಜಲವನೆಱೆಯೆ ಕೆಡುವುದು ಗುರುಪದಾಂಬು
ವಿಂದ ॥
ಮಿಸುಪ ಸುಜ್ಞಾನಾಗ್ನಿ ವೆಗ್ಗಳಿಕುಮುದಕದಿಂ
ಶಶಿಮುರಂ ವರ್ಧಿಸುವುದಾಚಾರ್ಯಪದ ಜಲದ
ಮಸಕದಿಂ ಸಂಸಾರವೆಂಬ ವೃಕ್ಷಂ ಕೆಡುವುದಿದು ಚಿತ್ರ ತೀರ್ಥವಣುಗ ೫೧

ಆದಿತ್ಯಪೌರಾಣದೊಳು ದೇವಲ್ಲಭನ
ಪಾದಮಂ ಪ್ರಕ್ಷಾಲನಂ ಮಾಡಿ ಮಸ್ತಕದೊ
ಳಾದರದೆ ತಳೆದುಕೊಂಬುದು ಮತ್ತೆಯತಿಥಿ ಗುರುಪದಜಲವನಾ ತೆಱದೊಳು
ಮೋದದಿಂ ಸ್ವೀಕರಿಪುದೈ ಸರ್ವಪಾಪಗಳ
ಹಾದಿಯುಂ ಪೊರ್ದದಿಹ ಸತ್ತುಚಿತ್ತುಗಳೊಳಾ
ಹ್ಲಾದದಾನಂದರೂಪಂ ಸ್ವಚ್ಛಜಲದಿನಾ ಜ್ಞಾನಪಾದಂದೊಳೆವುದು ೫೨

ಆ ಪಾದತೀರ್ಥಮಂ ಕೊಂಡವಂ ಮುಕ್ತನೈ
ಶ್ರೀಪರಮಚರಲಿಂಗತೀರ್ಥಮಂ ಪೀರ್ದಂಗೆ
ಸೋಪಾಧಿಕಂ ಪುಗದನಾದಿಜಂಗಮತೀರ್ಥಬಿಂದುಮಾತ್ರದೊಳಜಹರಿ
ಆ ಪುರಂದರಸಹಿತಲಾನು ಪುಟ್ಟುವೆನು ಚರ
ರೂಪನಂಘ್ರಿಯತೀರ್ಥಸುಪ್ರಸಾದವ ಶಿವಂ
ಗೇ ಪರಿಯೊಳಿತ್ತುಕೊಂಡೊಡೆ ರುದ್ರನಹನೆಲೈ ಕೆಂಚವೀರಾಖ್ಯಕೇಳು ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈವಾಹದಲ್ಲಿ ಚರಪದಜಲಸ್ನಾನಮುಮ
ನೋವಿ ಲಿಂಗಾಂಗಿ ಬಸವಂ ಮೊದಲ್ಮಾಡನೇ
ಪಾಪಿನಿಂದರಸಳಿಯೆ ವೇಮನಾರಾಧ್ಯರಾ ಜಂಗಮಪದಾಂಬುವಿಂದ
ಜೀವಮಂ ಕೊಡನೆ ನೀರೆಱೆಯದಬಲೆಯ ಕೈಯ
ಭೂವರಂ ಕಲಿಕಂಬನಱಿದು ಪದತೀರ್ಥಮಂ
ಸೇವಿಸಿ ಕೃತಾರ್ಥನಾಗನೆ ಲಿಂಗಕಿತ್ತು ಚರಪದಜಲವನೀಂಟು ಕುವರ ೫೪

ರಹಸ್ಯೇ–
ಸರ್ವತೀರ್ಥಾಭಿಷೇಕಾದಿ ಶುದ್ಧಿರ್ಮನಸಿಜಾಯತೇ
ಗುರೋರಂಘ್ರಿರ್ಸ್ವರುಪಜಲಾತ್ತಸ್ಮಾಚ್ಛಿರಸಿ ಧಾರ್ಯತೇ ೪೩

ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ
ಗುರುಪಾದೋದಕಂ ಪೀತ್ವಾ ಸಂಸಾರದ್ರುಮನಾಶನಂ ೪೪

ಆದಿತ್ಯಪೌರಾಣೇ–
ಪಾದೌ ಪ್ರಕ್ಷಾಲ್ಯದೇವಸ್ಯ ಕರಾಭ್ಯಾಂ ಕಮಲೇಕ್ಷಣ
ಅಭ್ಯುಕ್ಷೇದಾತ್ಮನೋಮೂರ್ಧ್ನಿ ಹ್ಯತಿಥೇಶ್ಚ ಗುರೋಸ್ತಥಾ ೪೫

ರಹಸ್ಯೇ –
ಆದಿಜಂಗಮಪಾದಾಬ್ಜ ಕ್ಷಾಲಿತಾಂಬುಕಣಾಸ್ತಥಾ
ಜಾನಯಂತಿ ಸದಾದೇವಿ ಬ್ರಹ್ಮವಿಷ್ಣು ಸುರಾದಿ ಮಾಂ ೪೬

ಕ್ಷಾಲ್ಯತೋಯಾಂಘ್ರಿನಿರ್ಮಾಲ್ಯಂ ಪ್ರಸಾದಂ ತು ಚರಸ್ಯ ಚ.
ಯೋಽಪಿ ಲಿಂಗಾರ್ಪಿತಂ ಭುಂಜೇತ್ಸರುದ್ರೋ ನಾತ್ರಸಂಶಯಃ ೪೭

ವಿಭೂತಿಯ ಲಕ್ಷಣಂ

ಸಾದರದೆ ಮತ್ತೆ ಗುರುಲಿಂಗ ಜಂಗಮಸುಪ್ರ
ಸಾದಪಾದೋದಕವೆ ಕೂಡಿ ನಲಿದಾ ಸ್ವರೂ
ಪಾದ ಭಕ್ತನ ಚಿದಂಗಂ ಭಸ್ಮವಂತದಂ ವಚನಾಂತರದೊಳುಸುರುವೆಂ
ಆದಿಯಿಲ್ಲದುದು ಕೇಡಿಲ್ಲದುದು ಮಿಗೆ ನಿತ್ಯ
ವಾದುದುಱೆ ಚೈತನ್ಯಚಿದ್ರೂಪವೃಷಭಸಂ
ಮೋದಾಂಗ ಚಿದ್ಭಸ್ಮಲಿಂಗಧಾರಣವದಂ ಪೊಗಳಲಱರಳವು ಮಗನೆ ೫೫

CC0. In Public Domain. Jangamwadi Math Collection, Varanasi

ಮೊದಲಲ್ಲಿ ಗೂಢತ್ವದಿಂದ ನಿರ್ನಾಮವಾ
ದುದು ಬಳಿಕ್ಕೆರಡಱೊಳು ಚಿತ್ಸ್ವರೂಪಂ ತೃತೀ
ಯದೊಳು ಚಿನ್ಮಯವಿಲಾಸಂ ನಾಲ್ಕಱಲ್ಲಿ ಧರಿಸುವದೆ ಮಂಗಳವಾದುದು
ಅದನೆ ಕೂರ್ತಾಪಾದಮಸ್ತಕಂಬರಲು ಪೂ
ಸಿದ ಭಕ್ತನವಯವದ ರೋಮ ರೋಮಂ ಲಿಂಗ
ದುದಯವಾತನ ಕಾಯವೇ ಲಿಂಗವೆಂದಿಡುವುದೈ ವಿಭೂತಿಯನಕ್ಕಱಿಂ ೫೬

ಆ ಕೂರ್ಮದೊಳಗೆ ಪರತತ್ತ್ವಂ ಪರಬ್ರಹ್ಮ
ವೇಕವೆಂದೆನಿಸಿ ಕೇಡಿಲ್ಲದುರುತರ ನಿಜ
ಸ್ವೀಕಾರವೆಲ್ಲಾಗಳಾನಂದವೆಯ್ದೆ ತನ್ನಿಂದ ತಾನೇ ಬೆಳಗುವ
ಆಕಾರವೆರಡಿಲ್ಲದುದು ಬಳಿಕ್ಕಂ ಪೇಳ್ವೆ
ನೈ ಕುವರ ಸಿರಿಯೊಳೊಬ್ಬುಳಿಯಾದ ನಿತ್ಯವೈ
ಜೋಕೆಯ ವಿಭೂತಿಯೆಂದೆಯ್ದೆ ಪೇಳಲ್ಪಡುವುದೈ ಮುಂದೆ ಬಿತ್ತರಿ
ಪೆನು ೫೭

ಬಳಿಕ ಜಾಬಾಲೋಪನಿಷದರ್ಥದಲ್ಲಿ ಮಂ
ಗಳ ಭಸ್ಮವೇ ಪರಂಜ್ಯೋತಿಸ್ಸ್ವರೂಪಮಂ
ತಳೆದೆಸೆವ ಶಿವನೆಂದು ಪೇಳ್ವುದೈ ಮಾನವಿಯ ಸಂಹಿತೆಯೊಳಾ ವಿಭೂತಿ
ಬೆಳಗುಗಳ ಬಳಗದಿಂದೆಸೆವ ಶಿವನೆನಿಸಿಯು
ಗ್ಗಳವಪ್ಪುದೆಂದು ಹರುಷಿಸುತ ವೇದೋನ್ನತಂ
ಗಳು ಪೇಳ್ವುವೆಂದಾ ಪುರಾಣವುಲಿವುದು ಮತ್ತೆ ಸರ್ವಾಗಮೋತ್ತರದೊಳು ೫೮

ಸಕಲ ವೇದಂಗಳಾ ಶಾಸ್ತ್ರಾಳಿ ಮಹಿಮೆಗಳ
ನಿಕರಂಗಳೊಳು ವಿಭೂತಿಯೆ ಮುಕ್ತಿಗಳನು ಸಾ
ಧಕರಿಗೀವುದು ನಿರುತವೆಂದಱಿದು ಕೀರ್ತಿಸಿ ನಮಸ್ಕಾರಮಂ ಮಾಳ್ಪರು
ಪ್ರಕಟದಿಂ ಭಸ್ಮಸುಜ್ಯೋತಿಸ್ಸ್ವರೂಪಾಯ
ಸುಕರದ ಶಿವಾಯ ಪರಮಾತ್ಮನೇ ಷಟ್ತ್ರಿಂಶ
ದಕಲಂಕತತ್ತ್ವಬೀಜಾಯ ಶಾಂತಾಯ ನಿರ್ಮಲತೇಜಸೇಯೆನುತ್ತ ೫೯

ಬಳಿಕ ಶಿವಧರ್ಮೋತ್ತರದ ವಾಕ್ಯಮಂ ಕೇಳು
ಬಿಳಿದಾದ ಭಸ್ಮದಿಂ ಲಿಂಗಕ್ಕೆ ಕೂರ್ತುನಿ
ರ್ಮಳತರಸ್ನಾನಮಂ ಮಾಡಿಯೊಂದಾನೊಂದು ವೇಳೆ ಹರುಷಿಸಿದಾತನು
ಬೆಳುದಿಂಗಳಗ್ಗಳದ ತೇಜದಿಂ ಶಿವಲೋಕ
ದೊಳು ಮೆಱೆವನಖಿಳ ಗಂಗಾಸ್ನಾನಕಧಿಕ ಸಿರಿ
ಗಳನಾ ವಿಭೂತಿ ಮೂಲೋಕಪಾವನವಪ್ಪುದೈ ಸ್ಕಾಂದದಲ್ಲಿ ಮತ್ತೆ ೬೦

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲಿಯುಂ ಭಸ್ಮದುತ್ತಮ ಮಹಾಸ್ನಾನಕ್ಕೆ
ಸಲ್ಲಲಿತ ಸತ್ಪವಿತ್ರತೆಗೆ ಧರಣಿಯೊಳು ಸರಿ
ಯಿಲ್ಲೆಂದು ವೇದವಮರರು ಮಾಡುತಿಹರು ಶಿವಧರ್ಮದೊಳು ಲೋಕಂಗಳ
ಎಲ್ಲವಂ ತತ್ತ್ರಿಪುಂಡ್ರಾತ್ಮಕ ಸದಾಶಿವಂ
ಸಲ್ಲೀಲೆಯಿಂದ ಪಾವನವನೆಯಿದಿಪನಾಸ
ಮುಲ್ಲಸದ ಸಿರಿಯು ಬೀಜದ ಭಸಿತಕೆಱಗುವರು ಸಜ್ಜನರು ಭಕ್ತಿಯಿಂದ ೬೧

ಅನ್ಯೋನ್ಯ ನಿಲಯಾಗತಕ್ಕೆ ಸತ್ಕಾರವಂ
ಮಾನ್ಯತೆಯೊಳಂತಾ ವಸಿಷ್ಠತಾಪಸರೆಸಗೆ
ಹೂನ್ಯವಗ್ಗಳಕೆ ಹೋರುತ ಸೋಲ್ತು ಮುಳಿದು ಭೂತವ ಕಲ್ಪಿಸುತ ಕೌಶಿಕಂ
ಧನ್ಯವಾಸಿಷ್ಠರಣುಗರ ಮೇಲೆ ಕಳುಪಲ್ಕ
ಘನ್ಯತೆಯೊಳುಸಿರಿಡಲ್ಕೆದಱಿ ಭಸಿತಂ ಕೊಂದು
ದನ್ಯತ್ರವಾಗಿ ಸೂಸದೆ ಧರಿಸು ಭಸಿತವಮಂ ಯಾವಂತವೆಂಬರ್ಥದಿಂ ೬೨

ವಚನಾಂತರೇ–
ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ
ಚಿದಂಗವೃಷಭಾಕಾರಂ ಚಿದ್ಭಸ್ಮಲಿಂಗಧಾರಣಂ ೪೮
ಆಪಾದ ಮಸ್ತಕಾಂತಂ ಚ ರೋಮ ರೋಮ ಭವೇಚ್ಛಿವಂ
ಸ್ವಕಾಯಮುಚ್ಯತೇ ಲಿಂಗಂ ವಿಭೂತ್ಯುದ್ಧೂಲನಾದ್ಭವೇತ್ ೪೯
ಕೂರ್ಮಪೌರಾಣೇ–
ಪರಾತ್ಪರತರಂ ತತ್ತ್ವಂ ಪರಬ್ರಹ್ಮೈಕಮವ್ಯಯಂ
ನಿತ್ಯಾನಂದಂ ಸ್ವಯಂಜ್ಯೋತಿರದ್ವಯಂ ಕಿಮತಃಪರಂ ೫೦
ಜಾಬಾಲೋಪನಿಷದಿ–
ಸ್ವಸ ಭಸ್ಮಜ್ಯೋತಿಃ ಸಯೋ ವಃ ಸ್ವಸ ಭಸ್ಮಜ್ಯೋತಿರಿತ್ಯಾದಿ
ಮಾನವೀಯೇ–
ಭಸ್ಮಜ್ಯೋತಿರ್ಭವೇದ್ಯೇನ ಶಿವಾಖ್ಯಂ ನಹಿ ಸಂಶಯಃ ೫೧
ಸರ್ವಾಗಮೋತ್ತರೇ–
ಅನಂತಾಖಿಲವೈ ವೇದಾಃ ಶಿವಶಾಸ್ತ್ರಾಣಿ ಭೂರಿಶಃ
ಅಸ್ಪೃಷ್ಟಿ ಮಹಿಮಾಭೂತಿರ್ಯದಿದಂ ಭಕ್ತಿದಂ ವಿದುಃ ೫೨
ಶಿವಧರ್ಮೋತ್ತರೇ–
ಸಿತೇನ ಭಸ್ಮನಾ ಸ್ನಾಪ್ಯ ಸಕೃಲ್ಲಿಂಗಂ ಪ್ರಮೋದತೇ
ಚಂದ್ರಾಂಶುನಿರ್ಮಲಃ ಶ್ರೀಮಾನ್ ಶಿವಲೋಕೇ ಮಹೀಯತೇ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಕಾಂದೇ–

ಭಸ್ಮಸ್ನಾನಾತ್ಪರಂ ಸ್ನಾನಂ ಪವಿತ್ರಂ ನೈವವಿದ್ಯತೇ
ಇತ್ಯುಕ್ತ್ವಾಮುನಿದೇವೇಭ್ಯಃ ಸ್ನಾತೋ ದೇವಃ ಶಿವಃಸ್ವಯಂ ೫೪

ಯಾವಂತಃ ಪತಿತಾ ಭೌಮೌ ಭಸ್ಮನಃ ಪರಮಾಣವಃ
ತಾವದ್ವರ್ಷ ಸಹಸ್ರಾಣಿ ನರೋ ಭವತಿ ಕಿಲ್ಬಿಷಂ ೫೫

ರುದ್ರಾಕ್ಷಿಯ ಲಕ್ಷಣಂ

ಈ ವಿಭೂತಿಯು ಮಹಾ ಸ್ಫುರಣೆಯೇ ರುದ್ರಾಕ್ಷಿ
ಯೈ ವಿಚಾರಿಸಲು ಕಾತ್ಯಾಯನೀಯ ಶಾಖೆಯೊಳ
ಗೋವಿ ಬಳಿಕಂ ಷಡ್ಗುಣೈಶ್ವರ್ಯಸಂಪನ್ನನಪ್ಪ ಸರ್ವೇಶ್ವರಂಗೆ
ಆ ವಿಮಲಮತಿಯಹ ಸನತ್ಕುಮಾರಂ ನಮಿಸಿ
ಭಾವಶುದ್ಧದೊಳು ಬೆಸಗೊಂಡನೆಂತೆಂದೊಡೆಲೆ
ದೇವ ರುದ್ರಾಕ್ಷಿಯುತ್ಪತ್ತಿಯನವಂ ಧರಿಸಲಪ್ಪ ಫಲವೆಂತೆಂದನು ೬೩

ಕೃಪಯೊಳುಸುರಿದನೀಶ್ವರಂ ಮಗನೆ ಕೇಳಯ್ಯ
ತ್ರಿಪುರಮಂ ನಾವುರುಹುವಲ್ಲಿ ಮೂಱಕ್ಷಿಯೊಳ
ಗಪರಿಮಿತವಪ್ಪಾಶ್ರುಬಿಂದುಗಳ ಸುರಿಯಲವು ಭೂಮಿಯೊಳು ಬೀಳಲಾಗಿ
ವಿಪುಳ ರುದ್ರಾಕ್ಷಂಗಳುತ್ಪತ್ತಿಯಾದವ್ಯೆ
ಸುಪಥವಱಿವಖಿಳರಿಗನುಗ್ರಹಾರ್ಥದೊಳೆನ್ನ
ಶಪಥಮಂ ಕೇಳವಱ ಪೆಸರು ಕೊಂಡಡೆ ಕೋಟಿ ಗೋದಾನಫಲಮೀವೆನು ೬೪

ಸಲೆ ನೋಡಿ ಮುಟ್ಟಲವಕಿಮ್ಮಡಿಯು ಮೂವಡಿಯು
ಫಲಮೀವೆನದಱಿಂದ ಮೇಲಪ್ಪ ಮಹಿಮೆ ಪೇ
ಳಲು ಶಕ್ಯವಲ್ಲೆನಗೆ ಕುವರ ಕೇಳ್ ಜಪಮಂತ್ರಧಾರಣಾವಿಧಿಯಧಿಕವ
ನಲಿದುಸುರುವೆಂ ಕೂರ್ತು ರುದ್ರಾಕ್ಷಿಯಾ ಕಲ್ಪ
ದ ಲಘುನಾಮವನುಳ್ಳ ಪವಣದಿನ್ನೆಂದು ನಿ
ರ್ಮಲ ಶಂಕರಂ ಬೆಸಸುತಿರ್ದನೆಡಬಲದೊಳೆಲ್ಲಾ ಚೋದ್ಯವೆಂದು ಪೊಗಳೇ ೬೫

ಸಕಲ ಪುಣ್ಯಕ್ಕಿದೇ ಪುಣ್ಯ ರುದ್ರಾಕ್ಷಧಾ
ರಕನೀಗ ರುದ್ರನವನೇ ಶ್ರೇಷ್ಠನಿಹಪರಾ
ಧಿಕಲೋಕದಲ್ಲಿ ಮಿಗಿಲೀ ಮಹಾರುದ್ರಾಕ್ಷಿಯುಱಿಮಲಘನಾಶವಹುದು
ಸುಕರದ ಪವಿತ್ರವಿದು ಕೇಳಯ್ಯ ನಕ್ಷತ್ರ
ನಿಕರದೊಳು ಚಂದ್ರಮಂ ಗ್ರಹತತಿಯೊಳಾ ಸೂರ್ಯ
ನಕಲಂಕದಾಯುಧಂಗಳೊಳೆಸೆವ ವಜ್ರವಾ ಮುನಿಗಳೊಳು ವರ ಕಸ್ಯಪಂ ೬೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಳಸಿತದ ಪರ್ವತಗಳೊಳು ಮಹಾಮೇರು ನದಿ
ಗಳೊಳಾ ಮಹಾದೇವಗಂಗೆ ಘನತೀರ್ಥಸಂ
ಕುಳದಲ್ಲಿ ಮೆಱೆವ ಮಣಿಕರ್ಣಿಕೆ ಸಮಸ್ತ ದೇವಸ್ತ್ರೀಯರೊಳು ಪಾರ್ವತಿ
ಬಳವೆತ್ತ ಕರಿಗಳೊಳಗೈರಾವತಂ ಪಕ್ಷಿ
ಗಳ ಮಧ್ಯದಲ್ಲಿ ಗರುಡಂ ಹರಿಬ್ರಹ್ಮಾದಿ
ಗಳ ನಡುವೆ ಸರ್ವೇಶನಖಿಳ ಮಂತ್ರಂಗಳೊಳಗಧಿಕವಹ ಪಂಚಾಕ್ಷರೀ ೬೭

ಗಣಿದಿಸಲು ಮೆಱೆವಂತೆ ಮಾಣಿಕ್ಯಮುಖ್ಯವಹ
ಮಣಿಗಳೊಳು ರುದ್ರಾಕ್ಷಿಯೇ ಮಿಗಿಲು ಮಿಗಿಲು ಕೇ
ಳಣುಗ ಬಳಿಕಾವ ಠಾವಿನೊಳಗಿರ್ದೊಡೇನಾ ಸ್ವಭಾವರುದ್ರಾಕ್ಷಿಗಳನು
ತ್ರಿಣಯನಪ್ಪನಗೆ ಪೊಗಳುವಡಗೋಚರವೆಲೈ
ಯಣಿಯರದೊಳೆಂದಾ ಸನತ್ಕುಮಾರಾಖ್ಯಕಾ
ರಣಿಕಂಗೆ ಬಿತ್ತರಿಸಿದಂ ದೇವದೇವೇಶನೆನಲದೇಂ ವರ್ಣಿಸುವೆನು ೬೮

ಮೇಲೆ ವಚನಂಗಳೊಳು ರುದ್ರಾಕ್ಷಿಯೇ ಮುಕ್ತಿ
ಮೂಲವಾ ರುದ್ರಾಕ್ಷಿಯೇ ಜ್ಞಾನರುದ್ರಾಕ್ಷಿ
ಯೇ ಲಲಿತಭಕ್ತಿರೂಪಂ ಮಹಾಬ್ರಹ್ಮವದುಕಾರಣಂ ರುದ್ರಾಕ್ಷಿಯಾ
ಲೀಲೆಯಿಂ ಧರಿಸಿದವನೇ ರುದ್ರನೆಂದು ಸೌ
ಖ್ಯಾಲಾಪದಿಂದ ಹಲಗೆಯ ದೇಶಿಕಂ ಕೂರ್ತು
ಲಾಲಿಸುವ ಕೆಂಚವೀರಾಹ್ವಯಂಗಕ್ಕಱಿಂ ಪೇಳುತಿರ್ದಂ ಕರುಣದೆ ೬೯

ವೈಷ್ಣವನ ಭಕ್ತನೊರ್ವಂ ಸತ್ತು ಕಾಲನ ಚ
ರಿಷ್ಣುದೂತರೊಳಿರ್ದು ಬಂದು ಮರ್ತ್ಯಕೆ ಗುರುವಿ
ಗುಷ್ಣೀಷವೊಂದೆ ವಂದಿಸಿ ರಜಕ ಮಸ್ತಕದ ರುದ್ರಾಕ್ಷಿಯುಗ್ಗಳವನು
ಪಾರ್ಷ್ಣಿಯಿಂ ಶಿವದೂತರೊಯಿದುದಂ ಪೇಳ್ವೆನೆನೆ
ಜಿಷ್ಣುಪದಕಗ್ಗಳಂ ಕೊರಳ ರುದ್ರಾಕ್ಷಿಯಿಂ
ಕೃಷ್ಣಶುನಕಂ ಮುಕ್ತಿವಡೆದುದೆಂದುಸುರ್ದನಾ ರುದ್ರಾಕ್ಷಿಯುಗ್ಗಳವನು ೭೦

ಕಾತ್ಯಾಯನ ಶಾಖಾಯಾಂ–

ಅಥೈವ ಭಗವಂತಂ ಸನತ್ಕುಮಾರಃ ಪಪ್ರಚ್ಛ
ಭಗವನ್ ಕಥಂ ರುದ್ರಾಕ್ಷೋತ್ಪತ್ತಿಸ್ತದ್ಧಾರಣಫಲಂ ಕಿಮಿತಿ
ಸೋವಾಚ ಭಗವಾನ್ ರುದ್ರಃ
ಪುರಾತ್ರಿಪುರವಧಾಯೋನ್ಮೀಲಿತಾಕ್ಷೋಹಂ ತೇಭ್ಯೋ ಜಲಬಿಂದವೋ
ಭೂಮೌ ಪತಿತಾಸ್ತೇ ರುದ್ರಾಕ್ಷಾ ಜಾತಾಃ ೫೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಚನಾಂತರೇ–

ರುದ್ರಾಕ್ಷಂ ಮುಕ್ತಿಮೂಲಂ ಚ ರುದ್ರಾಕ್ಷಂ ಜ್ಞಾನಮುಚ್ಯತೇ
ರುದ್ರಾಕ್ಷಂ ಭಕ್ತಿರೂಪಂ ಚ ರುದ್ರಾಕ್ಷಂ ಬ್ರಹ್ಮಮುಚ್ಯತೇ ೫೮

ವೇದ–

ಅಥ ಏವ ರುದ್ರಾಕ್ಷಧಾರಣಾದ್ರುದ್ರಾ

ಷಡಕ್ಷರ ಲಕ್ಷಣಂ

ಈ ತೆಱದೊಳಾ ತ್ರಿಪುಂಡ್ರಂ ಪಣೆಯೊಳಾ ಸುವಿ
ಖ್ಯಾತ ರುದ್ರಾಕ್ಷಮಾಲೆಯೆ ಕೊರಳೊಳೆಸೆವ ಸಂ
ಪೂತ ಭಕ್ತನ ಮುಖದೊಳಾಂ ಷಡಕ್ಷರವೆಯ್ದೆ ನೆಲೆಸಿಪ್ಪ ಕಾರಣದೊಳು
ಆತನೇ ಮಂತ್ರರೂಪಂ ತಾನದೆಂತೆನಲು
ಸಾತಿಶಯವಹ ರಹಸ್ಯಾರ್ಥಮಂ ನಲಿದು ಕೇ
ಳ್ಳೈ ತರುಣ ಎಂದು ಬಿತ್ತರಿಸಿದಂ ಗುರುವರಂ ಪರಮಸಂತೋಷದಿಂದ ೮೧

ಮೊದಲಲ್ಲಿ ಬಿಂದುವಾದುದು ಬಿಂದುವಿಂ ನಾದ
ವುದಯಿಸಿದುದಾ ನಾದದಿಂದಲಾ ಧ್ವನಿಯದೇ
ಸದಮಲ ಪರಾತ್ಪರಂ ವಿಲಸದೋಂಕಾರವದು ಪಂಚಭೂತಾತ್ಮಕವಲಾ
ಅದು ನಕಾರಂ ದಶವಿಧೇಂದ್ರಿಯ ಮಕಾರವಾ
ದುದು ಮನಃಪಂಚಕ ಶಿಕಾರವಾ ಪ್ರಾಣಪತಿ
ಯೊದವಿರ್ದ ವಾಕಾರ ದಶವಾಯುರೂಪಾ ಯಕಾರವೇ ತ್ರಿಗುಣಾತ್ಮಕಂ ೮೨

ಓಜೆಯಿಂದೀ ಭೇದವಱಿಯದವನೊಡರಿಚುವ
ಪೂಜೆಯೆಲ್ಲಂ ನಿಷ್ಫಲಂ ಷಡಕ್ಷರಮಂತ್ರ
ರಾಜಪರಮಜ್ಞಾನವದೆ ಮೋಕ್ಷ ಲಿಂಗರೂಪಂ ಶಿವನದೋಂಕಾರವೇ
ನೈಜದಿಂ ಮೊದಲದೇವಂ ಪರಕೆ ಪರವಾಸ
ಮಾಜಮಂತ್ರಜ್ಞರಿಂ ನಮಿಸಿಕೊಂಬುದು ಗುರುವ
ದೇ ಜಂಗಮಂ ಲಿಂಗವಾಪ್ರಸಾದಂ ಪರಾತ್ಪರವಾದ ಷಡ್ವರ್ಣವು ೮೩

ಅಂದವಡೆದೀ ಷಡಕ್ಷರವಿಲ್ಲದವರಿಗಂ
ಬಂಧನಂ ತನ್ಮಂತ್ರಮಂ ಮಹಾ ಸದ್ಭಕ್ತಿ
ಯಿಂದ ಜಪಿಸಲು ಮೋಕ್ಷವಹುದು ನಿಶ್ಚಯಮಾ ಷಡಕ್ಷರಂಗಳಿಗೆ ಕೂರ್ತು
ವಂದಿಸುವರೋಂಕಾರವೇ ವಿಚಾರಸಲಾದಿ
ಬಿಂದುಸಂಯುಕ್ತವೆಂದಱಿಯರಾ ಯೋಗಿಗಳು
ಮುಂದೆ ಕಾಮಂ ಮೋಕ್ಷಮುಂ ಕೊಡುವುದೆಂದು ನಮಿಸುವರಲಾ ಸತ್ಪ್ರಣವಕೆ ೮೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವದೇವೇಶ್ವರನ ರೂಪಹ ನಕಾರಕ್ಕೆ
ಭಾವಶುದ್ಧದೆ ಶಿವಗಣೇಶ ಮುನಿ ಸುರರು ಕೊ
ರ್ತೋವಿ ನಮಿಸುವರಾ ಮಕಾರಂ ಮಹಾದೇವನಾ ಮಹಾತ್ಮಂ ಮಹೇಶ
ತೀವಿದ ಮಹಾಜ್ಞಾನವೆನಿಸುವ ಪರಾಪರಂ
ಭೂವಳಯದಖಿಳಪಾತಕವಳಿವುದೆಂದರರೆ
ಕೋವಿದರು ವಂದಿಸುವರಾ ಶಿಕಾರಂ ಶಿವಂ ಶಾಂತಸ್ವರೂಪವಪ್ಪ ೭೫

ಜಗದೊಡೆಯನಖಿಳ ಲೋಕಾನುಗ್ರಹಂಗಳಿಗೆ
ಮಿಗೆ ಕಾರಣಂ ಮುಖ್ಯ ಪರಮದೈವಂ ದಲೆಂ
ದಗಣಿತರು ವಂದಿಪರು ವಾಕಾರವೀಶವಾಹನ ವೃಷಭನೆಸೆವ ಮೂರ್ತಿ
ಸೊಗಸೀವ ನಾಗಭೂಷಣ ವಾಮಶಕ್ತಿಗಾ
ವಗ ಮೆಱಗುವರು ಯಕಾರಂ ಸರ್ವತೋ ವ್ಯಾಪಿ
ಸುಗುಣಿ ಗುರುದೇವಂ ಮಹೇಶನೆಂದಾನಂದದಿಂ ನಮಿಸುವರು ಕುಮಾರ ೭೬

ಸಾನಂದನಾ ನರಕಿಗಳ್ಗೆ ಮೋಕ್ಷವನಿತ್ತು
ದೀ ನವ್ಯ ಪಂಚಾಕ್ಷರಂ ಬಳಿಕ್ಕುಪಮನ್ಯು
ವಾ ನಿಖಿಳಭೂತಗಳ ಶಾಪಂಗಳಂ ಕಳೆದ ಪಂಚಾಕ್ಷರಂ ಮಮತಿರು
ಜ್ಞಾನ ಸಂಬಂಧಿಗಳ ಮಹಿಮೆಯುಂ ಮೆಱೆದುದೈ
ಸೂನುವೇ ಮುರುಘರಿಷ್ಟವನಿತ್ತುದೆಂದಾ ಸು
ಮಾನಿ ಹಲಗೆಯ ದೇವರುಸುರ್ದರಾ ಪಂಚಾಕ್ಷರಿಯ ಮಹಿಮೆಯುಂ ಪುತ್ರಗೆ
೭೭

ರಹಸ್ಯೇ–

ಭಾಳೇ ತ್ರಿಪುಂಡ್ರಕಶ್ಚೈವಗಳೇ ರುದ್ರಾಕ್ಷಮಾಲಿಕಾ
ಮುಖೇ ಷಡಕ್ಷರೋ ಮಂತ್ರ ಸ್ಸರುದ್ರೋ ನಾತ್ರಸಂಶಯಃ ೫೮

ಓಂಕಾರಂ ಚ ಸದಾಸ್ತುತ್ಯಂ ಮಂತ್ರತತ್ವಪರಾಯಣೈಃ
ಸದ್ಗುರು ಶಿವಲಿಂಗಂ ಚ ಜಂಗಮಂ ಚ ಪ್ರಸಾದಕಂ ೫೯

ಓಂಕಾರಂ ಬಿಂದುಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ ೬೦

ನಮಂತಿ ಋಷಯೋ ದೇವಾ ನಮಂತೀಶ್ವರಸದ್ಗಣಾಃ
ನಮಂತಿ ದೇವ ದೇವೇಶಂ ನಕಾರಾಯ ನಮೋ ನಮಃ ೬೧

ಮಹಾದೇವಂ ಮಹಾತ್ಮಾನಂ ಮಹಾಜ್ಞಾನಪರಾಪರಂ
ಮಹಾಪಾಪಹರಂ ದೇವಂ ಮಕಾರಾಯ ನಮೋ ನಮಃ ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಂ ಶಾಂತಂ ಜಗನ್ನಾಥಂ ಲೋಕಾನುಗ್ರಹಕಾರಣಂ
ಶಿವಮೇಕಪರಂ ದೇವಂ ಶಿಕಾರಾಯ ನಮೋ ನಮಃ ೬೩

ವಾಹನಂ ವೃಷಭಂ ಚೈವ ವಾಸುಕೀ ಕಂಠಭೂಷಣಂ
ವಾಮಶಕ್ತಿಧರಂ ದೇವಂ ವಕಾರಾಯ ನಮೋ ನಮಃ ೬೪

ಯತ್ರ ತತ್ರಸ್ಥಿತೋ ದೇವಸ್ಸರ್ವವ್ಯಾಪೀ ಮಹೇಶ್ವರಃ
ಯೋ ಗುರುಃ ಸರ್ವದೇವಾನಾಂಯಕಾರಾಯ ನಮೋ ನಮಃ ೬೫

ಪ್ರವಿಮಲದ ವೀರಶೈವಾಮೃತಾಹ್ವಯಕೃತಿಯೊ
ಳವಿರಳದ ಗುರುಲಿಂಗಜಂಗಮಪ್ರಸಾದ
ಸವಿಶೇಷಪಾದೋದಕಂ ಭಸಿತರುದ್ರಾಕ್ಷಿ ಪಂಚಾಕ್ಷರಿಗಳೆಂಬಿವ
ವಿವರಿಸುತ ಹಲಗೆಯಾರ್ಯಂ ಕೆಂಚವೀರಾಖ್ಯ
ನವಿರತಂ ಸುಖಿಸೆ ನಂಜೇಶ್ವರಸಹಾಯದಿಂ
ದವೆ ಪೇಳ್ವ ಬೋಧೆಯಿಂ ಮಲ್ಲಣಾರ್ಯಂ ಪದನ ಮಾಡಿದಿವು ಭಕ್ತನಂಗ ೭೮

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದಹಲಗೆಯಾಚಾರ್ಯನಖಿಳಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಷಡಕ್ಷರಿಯುಮಹಿಮಾಸಮುಗ್ರತೆಯೆಂದು ಪೇಳೆ ಮೂಱನೆಯ ಸಂಧಿ ೭೯

ಅಂತು ಸಂಧಿ ೩ ಕ್ಕಂ ಪದ ೧೮೨ ಕ್ಕಂ ಗ್ರಂಥ ೭೮ ಕ್ಕಂ

ಮಂಗಳ ಮಹಾ ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8811

ಸಂಧಿ: ೪

ಸುಕರಜಂಗವುದಾ ಸ್ವರೂಪು ತಜ್ಜಂಗವುದ
ಮಕುಟದಲ್ಲಿಯು ಶೂನ್ಯದಲ್ಲಿಯಾ ಸೃಷ್ಟಿಯಂ
ಪ್ರಕಟದಿಂ ಬಿತ್ತರಿಸಿದಂ ಹಲಗೆಯಾಚಾರ್ಯನವಧರಿಸಿನಿಜನಿಷ್ಠರು

ಗುರ್ವಗ್ರ ಹರಿಯಜ ಸುಪರ್ವನತನಂದೀಶ
ದೂರ್ವಾಸಹರ್ಷಾಬ್ಧಿ ಪಾರ್ವಣಶಶಾಂಕ ಗಂ
ಧರ್ವನಾಯುಕರ್ವೋಹಿ ಪಾರ್ವಲ್ಲಭಾದಿ ವಸುಪೂರ್ವಖಚರಾಳಿನಮಿತ
ಖರ್ವದೀರ್ಘೋಪೇಂದ್ರಗರ್ವಹರ ದುರ್ಮಾರ್ಗ
ಚಾರ್ವಾಕದೂರಲಸದುರ್ವರಾಧರ ನಿಕರ
ಸಾರ್ವಭೌಮಾತ್ಮಜಾನಿರ್ವಹಣದಿಪ್ಪದನೆ ಸರ್ವಜ್ಞಶಾಂತಮಲ್ಲ ೧

ಇನ್ನು ನಿರೋಷ್ಠ್ಯದ ಪದ

ನಿರಘ ನಿರ್ಲಯ ನಿತ್ಯ ನಿಶ್ಚಯ ನಿರಾಕಾರ
ಸರಸ ಸಂಗೀತಸನ್ನುತ ಸತ್ಯಘನದಾನ
ಕರ ಶರಣಸಂಗಿ ಕಲೆಕಾಲನೀತಿಗಳಾದ್ಯ ಗಣ್ಯ ನತದುಃಖಹರಣ
ಚರನಾದ ಚಂದ್ರಸೂರ್ಯಾಗ್ನಿತ್ರಯಂಗಳೊಳ
ಗೆರಡಚ್ಚಿಯಂ ತಳೆದ ಶಂಕರನ ಶರಿರಸಾಂ
ದರ ರಕ್ಷಿಸೆಲ್ಲಾಗಳೆನ್ನಂ ಘೃಣಾನಿಧಿಯೆ ಶಾಂತನಂಜೇಶಲಿಂಗ ೨

ಇಂತು ಹಲಗೆಯ ದೇಶಿಕಂ ಕೂರ್ತು ಗುರುಲಿಂಗ
ಕಾಂತ ಜಂಗಮುಸುಪ್ರಸಾದಪಾದೋಕವ
ನಂತ ರುದ್ರಾಕ್ಷ ಭಸಿತಂ ಷಡಕ್ಷರವೆಂಟು ತನುವಾದ ಭಕ್ತನಿರವ
ತಾಂ ತಿಳುಪಲಾ ಕೆಂಚವೀರಾಹ್ವಯಂ ಕೇಳ್ದು
ಸಂತಸದೊಳಾಂ ಬದುಕಿದೆಂ ಪಿಂದೆ ಜನ್ಮಜ
ನ್ಮಾಂತರದಿನಾನೊಡರಿಚಿದ ಸುಕೃತವಿಂದು ಫಲಿಸಿತ್ತೆಂದುನಲಿದು ನುಡಿದಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘನಗುರುವೆ ತವಮೂರ್ತಿಯೆನ್ನ ಮುಖಪಂಕಜ
ಕ್ಕಿನನ ತೇಜಕ್ಕೆ ಮಿಗಿಲಾಯಿತ್ತು ನಿಮ್ಮ ಪದ
ವನರುಹವನೆನ್ನ ನಯನಂಗಳೆಂದೆನಿಸುವಲರ್ವಕ್ಕಿಗಳ್ದಣಿಯುಂಡವು
ವಿನುತ ವಾಕ್ಯಾಮೃತದ ಪೆರ್ಮಳೆಯ ಮುಂಬನಿಯ
ಮನವೆಂಬ ಜಾತಕಕ್ಕೆಱೆದು ರೋಮಾಳಿಯೆಂ
ದೆನಿಪ ಸಸ್ಯಾದಿಗಳ್ನಲವೇಱಲುಸುರೆಂದನತಿಭಕ್ತಿಯಿಂದ ಶಿಷ್ಯಂ ೪

ಆ ನುಡಿಗೆ ಸಂತಸಂಬಟ್ಟು ಕೇಳ್ಮೈ ಮಗನೆ
ನೀನೆನ್ನ ಸತ್ಕೃಪೆಗೆ ಪಾತ್ರನಾದ್ಯೆ ಬಳಿ
ಕ್ಕೇನು ಸಂದೆಗಮಿಲ್ಲವೆಂದು ಹಲಗೆಯ ದೇಶಿಕಂ ಮನದೊಳುತ್ಸವಿಸುತ
ಜ್ಞಾನಿ ನಂಜುಂಡಮೂರ್ತಿಯ ಮುಖವ ನೋಡಿ ಬಳಿ
ಕಾನಂದದಿಂದ ಪೇಳಲ್ತೊಡಗಿದಂ ಪಾಲ
ಸೋನೆ ಸಕ್ಕರೆಯ ಪೆರ್ಮಳೆಗಳೇಕೀ ಬೋಧಿಯಿದಿರೊಳೆಂಬಂದದಿಂದ ೫

ಪಿಂತೆ ಪೇಳ್ದೆಂಟಂಗವೇಕರೂಪಾಗಿರ್ಪು
ದಂತದೇ ಭಕ್ತಿ ಕೇಳ್ಮೈ ಮಗನೆ ಭಾವಿಸುವೊ
ಡೆಂತೆಂದೊಡಾ ಭಕ್ತಿಯವಿರಳವಖಂಡಿತಾದ್ವಯವನುಪಮಾನಂದವೆ
ತಾಂ ತೀವಿದಮೃತರಸವೇ ಭಕ್ತಿಯಾ ಭಕ್ತಿ
ಯಂತದೇಲಿಂಗಂ ಮನಃ ಪ್ರಾಣಕರ ಪದಂ
ಮುಂತಾದ ಸರ್ವಾಂಗವಾದಾತನೇ ಭಕ್ತನೇಕವಾಗಿಹುದೆ ಭಕ್ತಿ ೬

ಭವವಿಲ್ಲದಾತನವನೇ ಭಕ್ತನೆಯ್ದೆ ತ
ನ್ನುವನೆ ತೋಱುವನು ತನ್ನಿಂ ಸತ್ಕ್ರಿಯಾರೂಪೊ
ಳವಿರತಂ ತನಗಭಿನ್ನತೆಯೊಳಾ ತನ್ನತ್ತಣಿಂದೆ ಭಕ್ತಿಯ ಪಸರಿಪಂ
ಪ್ರವಿಮಲದ ತನ್ನ ಮಾರ್ಗದೊಳು ತನ್ನಲ್ಲಿ ಸ
ರ್ವವನಿರಿಸುವನೆ ಭಕ್ತನಾತನಂ ನೀಂ ಕೂರ್ತು
ಕುವರ ಕೊಂಡಾಡಯ್ಯ ಭಕ್ತನೇ ಸಲಹೆಂದೆನುತ್ತ ಬೋಧಿಸಿದನಾರ್ಯಂ ೭

ಆತನೇ ನಾಮ ರೂಪು ಕ್ರಿಯಾಮಯನಪ್ಪ
ನಾತನೇ ಲಿಂಗಾಂಗ ಮಂತ್ರಾಂಗಮುಂ ಲಸ
ತ್ರೀತಿಯ ಶಿವಾಂಗ ಶಕ್ತ್ಯಂಗ ಸದ್ಬ್ರಹ್ಮಾಂಗ ಮತಿಶಯಜ್ಞಾನಾಂಗವು
ಓತಾ ಸ್ಥಲಾಂಗ ತತ್ವಾಂಗಂ ಪದಾರ್ಥಾಂಗ
ವೇ ತೆಱದೊಳುಂ ಪ್ರಸಾದಾಂಗವೆಂದೆಂಬ ವಿ
ಖ್ಯಾತ ದೃಗ್ದೃಶ್ಯಾಂಗದಿಂದ ಸರ್ವಾಚಾರ ಸಂಪನ್ನನಾಗಿಪ್ಪನೈ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನ ರೋಮಂಗಳೊಂದೊಂದು ಕುಳಿಯಲ್ಲಿ ನೋ
ಡುವೊಡೆ ಕೋಟಾನುಕೋಟಿಯು ಮಹಾಬ್ರಹ್ಮಾಂಡ
ನಿವಹಂಗಳಿಪ್ಪವಾ ಶಿವಭಕ್ತನುದರಮಧ್ಯದೊಳಾ ಚಿದಾಕಾಶವು
ಪ್ರವಿಮಲತೆಯಿಂದಿರ್ಪುದಾ ಚಿದಾಕಾಶಮ
ಧ್ಯವನೆ ನೆಲೆಯಂ ಮಾಡಿ ಚಿತ್ಪ್ರಾಣವಾಯು ಸೌ
ಖ್ಯವನಾಂತು ರಾಜಿಸುವುದದಱ ಮಧ್ಯದೊಳಾ ಚಿದಗ್ನಿ ಮೆಱೆವುತ್ತಿಪ್ಪುದು ೯

ಅಂತಹ ಚಿದಗ್ನಿಮಧ್ಯದೊಳು ಚಿದ್ರಸಜಲಂ
ಸಂತಸದೊಳಿಹುದದಱ ಮಧ್ಯದೊಳ್ ಚಿದ್ಭೂಮಿ
ತಾಂ ತಳ್ತು ಮೆಱೆವುದೀ ತತ್ವಸಮರಸಯುಕ್ತದಾ ಚಿದಂಗದ ಮಧ್ಯದ
ಮುಂತೆ ನೆಲೆ ಮಾಡಿಹುದು ಹೃತ್ಕಮಲವಾ ಕಮಲ
ದಂತರದೊಳಾ ನಾದ ಬಿಂದು ಕಲೆಯೆಂದಿನಿಪ
ಕಾಂತಸಿಂಹಾಸನವನಡರಿಪ್ಪನೇ ಜಂಗಮಂ ಕೇಳು ವರಕುಮಾರ ೧೦

ಆ ಜಂಗಮದ ಗುಣದ ನಾಮ ರೂಪ ಕ್ರೀ ಸ
ಮಾಜದಾಚಾರವಂ ನೆಟ್ಟನಱಿದಪ್ಪೆನಂ
ಬಾ ಜಗತ್ಕಾರಣದ ಮೂರ್ತಿಗಳ ವಾಙ್ಮನ ಜ್ಞಾನಕ್ಕಗೋಚರವಲಾ
ಓಜೆಯಿಂ ಕೇಳ್ಮೆ ರಹಸ್ಯದೊಳಗಂ ಮುನ್ನ
ರಾಜತಾಚಲದ ಶಿಖರದ ಮಧ್ಯದಲ್ಲಿ ಮಿಗೆ
ತೇಜಸ್ಸಿನಗ್ರಸಿಂಹಾಸನದೊಳಿರ್ದನಾ ಭಕ್ತಿಸಂಧಾನದೊಡೆಯಂ ೧೧

ಮೆಱೆವುತಿರೆ ಬಂದು ಪಾರ್ವತಿದೇವಿ ಕೂರ್ತು ತ
ನ್ನೆಱೆಯನ ಪದಾಂಬುಜಾತಕ್ಕೆ ಭಯಭಕ್ತಿಯಿಂ
ದೆಱಗಿ ಬಿನ್ನವಿಸಿದಳು ವೀರಾಗಮಪ್ರೀತೆ ಗಿರಿಜಾತೆ ಲೋಕಮಾತೇ
ಪೇಱಿದಲೆಯು ಚಿತ್ತೈಸು ಜಂಗಮದ ಮಹಿಮೆಯೋ
ತೆಱನದಂ ಬೇಱೆ ಬೇಱುಸುರಿದ್ಯೆ ಮುನ್ನ ನೀ
ನೆಱಕವಾಗಿರ್ದಪ್ಪುದದಱ ನಿಶ್ಚಯವ ಕೇಳ್ವಡೆ ದೇವ ಪೇಳೆಂದಳು ೧೨

ಆ ನುಡಿಗೆ ಶಂಕರಂ ನುಡಿದನತಿಶಯದಿಂದ
ಮಾನಿನಿಯೆ ವೀರತಂತ್ರದೊಳು ಜಂಗಮವೇ ನ
ವೀನದೀಕ್ಷಿತನಾತನಂಗದೊಳು ಭುವನಂಗಳಖಿಳ ಸಚರಾಚರಗಳೂ
ಏನೆಂಬೆನಾ ಪ್ರಕಾಶಿಸುತಿರ್ಪವೆನುತಲ
ತ್ಯಾನಂದದಿಂ ನುಡಿಯೆ ಸಂದೇಹಿಸುತ್ತ ಕಮ
ಲಾನನೆ ನಿಜೇಶಂಗೆ ಬಿನ್ನವಿಸಿದಳು ದೇವ ಮತ್ಪತಿಯೆ ಚಿತ್ತವಿಪುದು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭುವನದ ಚರಾಚರಾಖಿಳ ಹರಿಯಜೇಂದ್ರಸುರ
ನಿವಹವಾ ಜಂಗಮದ ದೇಹದದೊಳಗೆಂತಿರ್ಪ
ರವಿರತಂ ತತ್ಪ್ರಕಾರಂ ತಿಳಿಯಬಾರದಾ ಸಂದೆಗಂ ಪಱಿವಂದದೇ
ವಿವರದಿಂ ಪೇಳ್ವುದಾತನ ದೇಹದೊಳು ಮಹ
ತ್ತ್ವವನಾಂತ ಲಿಂಗವಾ ಲಿಂಗಮಧ್ಯದ ಜಗ
ತ್ರಿವಿಧವೆಂತೆಸೆವುದದಱಿರವನೆನಗುಸುರೆನಲು ನಸುನಗುತಲೀಶನೆಂದಂ ೧೪

ಮುನ್ನಲಾನಿನಿತು ಬೋಧೆಯ ಪೇಳ್ದೊಡಂ ದೇವಿ
ನಿನ್ನಲ್ಲಿ ತಿಳಿವಿಲ್ಲವಂಧಕಂಗುತ್ತಮದ
ಕನ್ನಡಿಯ ತೋಱಿದಂತಾ ನೀರ ಲಿಪಿಯಂತೆ ಶಂಖಂಮಂ ನೆಱಿ ಕಿವುಡನ
ಸನ್ನಿಧಿಯೊಳೂದಲಾ ದಸಿಗೇಳದದ ನೋಡಿ
ತಿನ್ನುತಿಪ್ಪವನ ಬಾಯೊಳಗಿಪ್ಪ ಗೆಡ್ಡೆಯೇ
ನೆನ್ನುತಿರ್ದಂ ಮೊದಲೊಳೆನಗಿನಿತನೇಕೆ ಕೊಡದಾದನೆಂಬವನಂದದೆ ೧೫

ಹರವಿಯಂ ತಲೆ ಕೆಳಗುಮಾಡುತೀ ಧರೆಯ ಮೇ
ಲಿರಿಸಿ ತತ್ಪೃಷ್ಠಭಾಗದೊಳುದಕವೆಱಿದೊಡಂ
ತಿರದೆ ತುಂಬುವುದೆ ಕೇಳೌ ನಿನಗೆ ನಾವಿನಿತುಕಾಲಮುಂ ಪೇಳ್ದ ಬೋಧೆ
ಇರದೆ ನಿಷ್ಫಲವಾದುದೆಂದು ಶಂಕರನಾಡೆ
ಗಿರಿಜೆ ಕೇಳ್ದಾಗ ನಡನಡನೆ ನಡುಗುತ್ತಲಾ
ಧರಣಿಯೊಳು ಸಾಷ್ಟಾಂಗ ದಂಡಪ್ರಣಾಮದಿಂ ವಂದಿಸುತಲೆದ್ದು ನಿಂದು ೧೬

ಕರಕಮಲಮಂ ಮುಗಿದು ದೇವ ದೇವೇಶ ಶಂ
ಕರನೆ ಕೋಟಾಕೋಟಿಯಪರಾಧವುಂಟಯ್ಯ
ಕರುಣಾಕರನೆ ನೀನೆ ಸೈರಿಸೆಂದಿರದೆ ಕೊಂಡಾಡತೊಡಗಿದಳೀಶನ
ಪರತರಸ್ವಾಮಿ ಸರ್ವಜ್ಞ ಲೋಕಾಧೀಶ
ನಿರುಪಮನೆ ನಿನ್ನ ಪಾದದ ದಾಸಿಯಾನೆನಗೆ
ವರಬೋಧೆಯಂ ಪೇಳಬೇಕೆನಲು ಶಂಕರಂ ನಸುನಗುತೆ ನುಡಿದನಾಗ ೧೭

ಅಣಿಯುರದೊಳೆಲೆ ದೇವಿ ಕೇಳು ವಾರ್ಧಿಯೊಳಿಪ್ಪ
ಮಣಲಕಱುಗಲ್ಲನೊಂದೊಂದಾಗಿ ಪಲವುದಿನ
ವೆಣಿಸಬಹುದೇಯಾತೆಱಂ ಪ್ರಾಣಲಿಂಗಿಯೊಳಗುಳ್ಳ ಮಹಿಮೆಯ ಲೇಸಿನಾ
ಗುಣವನಱಿಯಲ್ಬಾರದಂತಾಗಿಯಾತನ
ಗ್ರಣಿಯುವನ ಸೌಭಾಗ್ಯಮಂ ಕೇಳ್ವುದೌ ಕೂರ್ತು
ಚಣ ಮರಾಳಕಗಮನೆ ಏಕಾಗ್ರಚಿತ್ತದಿಂದೆನುತಲೀಶಂ ನುಡಿದನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮ ಜಂಗಮದ ದೇಹದೊಳಖಿಳ ಲೋಕಂಗ
ಳಿರುತಿರ್ಪವುರುತರ ಬ್ರಹ್ಮಾಂಡವೇ ಮಕುಟ
ವರರೆ ಗಗನಂ ಮೊಗಂ ದಿಕ್ಕುಗಳು ತೋಳುಗಳು ಚಂದ್ರಸೂರ್ಯರೆ ಕಂಗಳು
ಶರಿರವಾ ವ್ಯೋಮರೂಪೆಸೆವ ಪಾತಾಳವೇ
ಚರಣವಾ ಕರದಲ್ಲಿ ಶೂನ್ಯಲಿಂಗವನೊಲ್ದು
ಧರಿಸಿಪ್ಪನಾ ಮೇಘತತಿ ಜೆಡೆಗಳಾ ಚಂದ್ರನೇಭಸಿತವಾ ಮಹಿಮಗೆ ೧೯

ಅಕ್ಷಯದ ವೇದಂಗಳೇ ಕ್ರಿಯಾರೂಪವಾ
ನಕ್ಷತ್ರವೇ ಪುಷ್ಪನಿಚಯಂಗಳಂ ತೊಪ್ಪ
ವಕ್ಷಯಂಗೆಸೆವ ಕುಲಪರ್ವತಂ ರುದ್ರಾಕ್ಷೆ ಸಾಗರಂ ಜಲಪಾತ್ರೆಯು
ಈ ಕ್ಷಿತಿಯ ಸೃಷ್ಟಿಮಯಯವೇ ಕಂಥೆ ಕೇಳು ಕುಮು
ದಾಕ್ಷಿ ಧರೆಯೇ ಪೀಠವಂತಹೋರಾತ್ರೆಯ
ಧ್ಯಕ್ಷ ಗುಹೆಯಾ ತ್ರಿಕಾಲಜ್ಞಾನವೆಸೆವ ಸೌಭಾಗ್ಯವಾ ಮತ್ತೆ ಕೇಳು ೨೦

ಋತುಗಳಾಱುಂ ಷಟ್‌ಸ್ಥಲಂ ಶೇಷನುಡೆದಾರ
ವತಿಶಯ ಜ್ಞಾನಮುದ್ರೆಯೆ ವಾಙ್ಮಯಂ ಮಹೋ
ನ್ನತ ಮೇರುವೇ ದಂಡವೆಸೆವ ಗುಣವೇ ಪಾತ್ರೆ ಕುಲವೆ ಶಿವಕುಲವಾತಗೆ
ಸತತವಂಗದೊಳೆಸೆವ ರೋಮಂಗಳಾ ವನ
ಸ್ಪತಿಗಳೀ ಪರಿಯೊಳೊಪ್ಪುವುದೆ ಸ್ವರೂಪು ಪಾ
ರ್ವತಿ ಜಂಗಮಕ್ಕೆಂದು ಪೇಳ್ದನಾ ಶಂಕರಂ ಪರಮ ಸಂತೋಷದಿಂದ ೨೧

||ಸಾಕ್ಷಿ|| ಗುರುವಾಕ್ಯ–
ಕೈಲಾಸಶಿಖರೇ ರಮ್ಯೇ ಭಕ್ತಿ ಸಂಧಾನನಾಯಕಂ
ಪ್ರಣಮ್ಯ ಪಾರ್ವತೀ ಭಕ್ತ್ಯಾ ಶಂಕರಂ ಪರಿಪೃಚ್ಛತೇ ೧

ವೀರಾಗಮೇ– ದೇವ್ಯುವಾಚ–
ಜಂಗಮಾನಾಂ ಚ ಮಹಿಮಾಪ್ಯನ್ಯ ಶೋಭಾವತೇ ತ್ವಯಾ
ಕಿಮಿದಂ ತಸ್ಯ ಮಹಾತ್ಮ್ಯ ಜ್ಞಾತುಮಿಚ್ಛಾಮಿ ಶಂಕರ ೨

ಈಶ್ವರ ಉವಾಚ
ಶ್ರುಣುದೇವಿ ಮಹಾತಂತ್ರೇ ದೀಕ್ಷಿತೋ ಜಂಗಮಶ್ಚ ಯಃ
ತಸ್ಯ ದೇಹೇ ಸಮಸ್ತಂ ಚ ಭುವನಂ ಚ ಪ್ರಕಾಶತೇ ೩

ಈಶ್ವರ ಉವಾಚ
ಪೂರ್ವಮುಕ್ತಂ ಮಯಾ ದೇವಿ ತ್ವಂಧಸ್ಯ ದರ್ಪಣಂ ಯಥಾ
ತವ ಬುದ್ಧೇರ್ವಿಹೀನತ್ವಾಜ್ಜಲೇ ಲಿಪಿ ಸಮಂ ಭವೇತ್ ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಂಖಸ್ಯ ಪೂರಿತಂ ದೃಷ್ಟ್ವಾ ಬಧಿರಸ್ಕಂದ ಕಾಂಕ್ಷಯಾ
ದಾತವ್ಯಂ ವೇತಿ ಭವತಾ ತತ್ಸಮಂ ಕಿಲ ಪಾರ್ವತಿ ೫

ಘಟಪೃಷ್ಠೇ ಯಥಾ ತೋಯಂ ಪೂರಯಿತ್ವಾ ಯಥಾ ತಥಾ
ಸ್ತ್ರೀಣಾಂ ಬುದ್ಧಿರಿತಿ ಹ್ಯೇಷಾ ಗಚ್ಛ ಗಚ್ಛೇತಿ ಪಾರ್ವತಿ ೬

ದೇವ್ಯುವಾಚ
ಅಪರಾಧಸಹಸ್ರಾಣಿ ಕ್ಷಮಸ್ವ ಕೃಪಯಾ ಶಿವ
ಇತ್ಯುಕ್ತ್ವಾ ಪಾರ್ವತೀ ಶಂಭೋ ದೀರ್ಘದಂಡಪ್ರಣಾಮತಃ ೭

ಈಶ್ವರ ಉವಾಚ
ಬ್ರಹ್ಮಾಂಡ ಮಕುಟಂಚೈವ ವದನಂ ಗಗನಂ ಶಿವೇ
ದಿಶಃ ಸರ್ವಾಶ್ಚ ಬಾಹ್ವಾಶ್ಚ ನೇತ್ರಾ ಚಂದ್ರಾರ್ಕಸಂಜ್ಞಿತಾ ೮

ಶ್ರೀ ಪಾರ್ವತಿಯೆ ಕೇಳಿದಾ ಜಂಗಮದ ಸುಸ್ವ
ರೂಪಮಂ ಬಳಿಕಲಾ ಜಂಗಮದ ದೇಹದ ಕ-
ಲಾಪದಿಂದಪ್ಪಖಿಳ ಸೃಷ್ಟಿಯಂ ಬಿತ್ತರಿಪೆನೆಂದು ಸಂತೋಷದಿಂದ
ಮಾಪಾಜದೇವೇಂದ್ರ ಮುಖ್ಯ ಸುರನಮಿತ ಶರ
ಣೋಪಕಾರಂ ಶಾಂತಮಲ್ಲಿಕಾರ್ಜುನ ಸಚಿ
ದ್ರೂಪನೊಲವಿಂ ನುಡಿದನೆಂತೆನಲು ವೀರಾಗಮಾರ್ಥಮಂ ಪ್ರಕಟಿಸುತ್ತ ೧೧

ಹೆಟ್ಟುಗೆಯೆ ಜಂಗಮದ ಮಕುಟದೊಳು ಶೂನ್ಯಮುಱೆ
ಪುಟ್ಟಿತ್ತು ಬಳಿಕ ಶೂನ್ಯದೊಳಾ ಚಿದಂಬರಂ
ಹುಟ್ಟಿತ್ತು ತಚ್ಚಿದಂಬರದಿಂದ ಶಿವಶಕ್ತಿಯಂತಪ್ಪ ಶಿವಶಕ್ತಿಯಿಂ
ಪುಟ್ಟಿತ್ತಲಾ ಪರಾಶಕ್ತಿಯಾ ಪರೆಯಿಂದ
ನೆಟ್ಟನುದಯಿಸಿತಾದಿಶಕ್ತಿಯಾ ಶಕ್ತಿಯಿಂ
ಕಟ್ಟಳ್ಕಱಿಂದಲಿಚ್ಛಾಶಕ್ತಿ ಜನಿಸಿತದಱಿಂ ಕ್ರಿಯಾಶಕ್ತಿಯಾಯ್ತು ೧೨

ತಾನಾ ಸಹಸ್ರಾಂಶದಿಂ ಜ್ಞಾನಶಕ್ತಿಯಾ
ಜ್ಞಾನಶಕ್ತ್ಯಂಶದಿಂ ಕೋಟಿನಾದಂಗಳಂ
ತಾನಾದ ತತ್ಕ್ರಮ ಸಹಸ್ರಾಂಶದಂಶದಿಂ ಪಂಚಸಾದಾಖ್ಯಂಗಳು
ಮಾನಿನಿಯೆ ಕೇಳು ಪುಟ್ಟಿದವು ಸಾದಾಖ್ಯಂಗ
ಳಾ ನಿಶ್ಚಯದ ಸಹಸ್ರಾಂಶವಂಶಕ್ರಮವಿ
ತಾನದಿಂದೊಗೆದಂ ಮಹೇಶ್ವರಂ ತತ್ಕ್ರಮಸಹಸ್ರಾಂಶನಂಶದಲ್ಲೀ ೧೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾದರದೆ ಕೋಟಿ ಕೋಟಿಯ ಭಾಗೆಯಲ್ಲಿ ಕೂ
ರ್ತಾದವಾ ಪಂಚವಿಂಶತಿ ವಿಗ್ರಹಂಗಳು ಮ
ಹಾದೇವಿ ಕೇಳಾ ತದಂಶದೊಳು ರುದ್ರನೊಗೆದಂ ರುದ್ರನಿಂದ ವಿಷ್ಣು
ಆದನಾ ವಿಷ್ಣುವ ಸಹಸ್ರಾಂಶದಿಂ ಬೊಮ್ಮ
ನಾದನೀ ಲೋಕದ ಪಿತಾಮಹಂ ಬಳಿಕವನಿ
ನಾದವೆಲ್ಲಾ ಚರಾಚರನಿಕರವಾ ಬ್ರಹ್ಮನಿಂದ ಬಳಿಕೇನೆಂಬೆನು ೨೫

ತವೆ ಜಂಗಮಾಂಗ ಸೃಷ್ಟಿಯ ಪರಾಪರೆಯಿಂದ
ಲವನಾದನಾ ಬ್ರಹ್ಮನಕ್ಷಿಯುಗದಿಂದ ಶಶಿ
ರವಿಗಳುದಯಂಗೆಯಿದರವನ ಮುಖದಿಂ ಬ್ರಾಹ್ಮಣರ್ಭುಜದೊಳಾಕ್ಷತ್ರಿಯ
ನಿವಹವಾತನ ತೊಡೆಗಳಲ್ಲಿ ವೈಶ್ಯರುಗಳಂ
ತವನ ಪದದಿಂ ಶೂದ್ರರಾ ರೋಮಕೂಪದೊಳು
ವಿವಿಧ ಗಂಧರ್ವ ದೇವರ್ಕಳುದ್ಭವಿಸಿದರು ಬಳಿಕ ಬೊಮ್ಮನ
ಮನದೊಳು ೨೬

ಕಾಲತ್ರಯಂಗಳುಂ ಸಂಧ್ಯಾತ್ರಯಂಗಳುಂ
ಮೇಲೆ ದಿವರಾತ್ರೆಯುಂ ಮಂತ್ರ ಚಾತುರ್ವೇದ
ಜಾಲ ಯಜ್ಞಾದಿಸಿದ್ಧಿಗಳು ಬಳಿಕಾ ಜ್ಞಾನಸತ್ಕ್ರಿಯಾಸಮಯಂಗಳು
ಲೋಲಗುಣವಾ ಪುಂ ನಪುಂಸಕ ಸ್ತ್ರೀಯರುಂ
ಲಾಲಿಸುವೊಡುತ್ಪತ್ತಿಯಾ ಸ್ಥಿತಿ ಲಯಂಗಳುಂ
ಈ ಲೋಕದಖಿಳಸಸ್ಯಾಳಿ ಮೇಘಂಗಳುಂ ವಿದ್ಯಂಗಳುಂ ಬಳಿಕ್ಕ ೨೭

ಯೋಚಿಸಲು ರಸಗಳಾ ಕ್ರಿಮಿಕೀಟ ಸರ್ಪಂಗ
ಳಾ ಚತುಃಪಾದ ದ್ವಿಪಾದ ಷಟ್ಪಾದಂಗ
ಳಾಚರಣೆಗಳು ಮೃಗಾಂಡಜ ಮುದ್ವಿಜಸ್ವೇದಜಂ ಜರಾಯುಜವೆನಿಪ್ಪ
ಈ ಚತುರ್ವಿಧಯೋನಿಸಂಭವಂಗಳು ಬಳಿಕ
ಗೋಚರಿಸುವಬಲೆಯರು ಸುತರು ನಂಟರು ಸಖರು
ರೋಚಿಸುವ ಧನಧಾನ್ಯವೆಯ್ದೆಯಾ ಬ್ರಹ್ಮನಂಗದೊಳೊಗೆದವಾ
ಕ್ರಮದೊಳು ೨೮

ಇವಕೆಲ್ಲಕಂ ಮೊದಲಿಗಂ ಜಂಗಮಂ ಕಣಾ
ಕುವಲಯೇಕ್ಷಣೆ ಮಿಕ್ಕರಬೀಯರೀ ಮಾರ್ಗದು
ದ್ಭವ ವಿಧಾನವನದುನಿಮಿತ್ತ್ಯದಿಂತಿದನೆ ಗೋಪ್ಯಂ ಮಾಡಬೇಕಿಳೆಯೊಳು
ಶಿವದೀಕ್ಷೆಯಿಲ್ಲದರ್ಗುಸುರಲಾಗದು ಜಂಗ
ಮವನೆ ಪೂಜಿಸುವಧಿಕವೀ ಜಂಗಮದ ಭಜನೆ
ಭವ ಭವಂಗಳು ಕೋಟಿಯಲ್ಲಿ ದೊರಕದು ದೇವಿಯೆಂದುಪೇಳಿದನೀಶ್ವರಂ ೨೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ವೀರಾಗಮೇ–
ಮಕುಟೇ ಶೂನ್ಯಸಂಜಾತಂ ಶೂನ್ಯಾಜ್ಜ್ಞಾತಂ ಚಿದಂಬರಂ
ಚಿದಂಬರಾಚ್ಛಿವಂ, ಶಕ್ತಿಃ ಪರಾಶಕ್ತಿರಭೂತ್ತತಃ ೯

ತಸ್ಯ ತಸ್ಯ ಸಹಸ್ರಾಂಶೇ ಪಂಚಸಾದಾಖ್ಯಮುದ್ಭವಂ
ತೇಷಾಂ ಸಹಸ್ರಕಾಂಶೇತು ಮಾಹೇಶ್ವರಸಮುದ್ಭವಃ ೧೦

ತಸ್ಯ ಕೋಟಿ ಸಹಸ್ರಾಂಶೇ ವಿಗ್ರಹಃ ಪಂಚವಿಂಶತಿಃ
ತದಂಶೇ ಸಂಭವೋ ರುದ್ರ ಸ್ತಸ್ಮಾದ್ದೇವೋ ಜನಾರ್ದನಃ ೧೧

ವದನೇ ಬ್ರಾಹ್ಮಣಸ್ತಸ್ಯ ಬಾಹೌ ಚ ಕ್ಷತ್ರಿಯಸ್ತಥಾ
ಊರುಕಾಚ ವೈಶ್ಯಸಂಭೂತಃ ಪಾದೇ ಶೂದ್ರಸ್ತಥೈವ ಚ ೧೨

ಇತಿ ಸರ್ವಂ ಮಹಾದೇವಿ ಶರೀರೇ ಜಂಗಮಸ್ಯ ಚ
ಪ್ರತ್ಯಕ್ಷಮಪಿ ಗೋಪ್ತವ್ಯಮುಪದೇಶಂವಿನಾ ಉಮೇ ೧೩

ಮತ್ತೆ ನೀನಾಲಿಪುದನಾದಿ ಭಕ್ತನ ವಿಮಲ
ಚಿತ್ತಾಂಬುಜದ ಕರ್ಣಿಕೆಯ ಮಧ್ಯದೊಳಗವನು
ದಾತ್ತದಿಂ ಭಾವಿಸಲ್ಕಾ ಭಾವದೊಳು ಪೂರ್ಣವಾಗಿ ಬೆಳಗುವ ಜಂಗಮಂ
ತತ್ತದುದ್ಭವಮಾಯ್ತು ತಜ್ಜಂಗಮಂ ವಿಲಸ
ದುತ್ತಮ ಸಚಿನ್ಮಯ ಬ್ರಹ್ಮಾಂಡವೆಂಬ ಮಕು
ಟೋತ್ತರದ ಮಧ್ಯದೊಳು ನಮ೯ದೊಳನಿರ್ವಾಚ್ಯ ಶೂನ್ಯಲಿಂಗಂ
ಪುಟ್ಟಿತು ೩೦

ಶ್ರೀ ಪರಶಿವಾಗಮದೊಳಾ ಶೂನ್ಯಲಿಂಗಸ್ವ
ರೂಪ ಲಕ್ಷಣವನಾಲಿಸು ಮಗನೆ ಯೆನುತಂ ನಿ
ರೂಪಿಸಲ್ತೊಡಗಿದಂ ಹಲಗೆಯಾರ್ಯಂ ನಾಸ್ತಿ ದೇಹ ಕುಲಕರಣಂಗಳು
ಆ ಪರಿಯ ಕಾಲೇಂದ್ರಿಯಾದಿ ಸುಖವಿಲ್ಲೆಂಬು
ದೈ ಪರಿಕಿಸಲ್ಕೆಯಂತರ್ಬಾಹಿ ಶೂನ್ಯವೈ
ಯಾಪತ್ತು ದಿಕ್ಕಿಲ್ಲವಂಘ್ರಿಮುಖ್ಯಾಂಗಂಗಳಿಲ್ಲವೆಂಬುದೆ ನಿಶ್ಚಯಂ ೩೧

ತನು ಮನಂ ಭುವನ ಭೋಗಂಗಳಾ ಕಾಮವಾ
ಕನಲಿಕೆಗಳಿಲ್ಲದಾದಿಯನಾದಿರೂಪಿಲ್ಲ
ದನಘತೆಯ ನಾದ ಬಿಂದುಗಳಿಲ್ಲದಂಗವಾ ಪ್ರಾಣವಿಲ್ಲದ ಶೂನ್ಯವು
ಸನೆಯದಿಂ ತಾಯ್ತಂದೆ ಬಂಧುವೊಡಹುಟ್ಟಿದವ
ರೆನಿಪರಿಲ್ಲದ ಕುಲಛಲಂ ಶೂನ್ಯವೈ ಮತ್ತೆ
ಘನತರಪ್ರಳಯಾಗ್ನಿ ಸುಪ್ರಭೆಯ ಕೋಟಿಮಿಂಚಿನ
ಬೆಳಗನೊಳಕೊಂಡುದು ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಱ ಮೇಲಣ ಶಿಖಾಸೂಕ್ಷ್ಮ ಚಿದ್ರೂಪವ
ಗ೯ದ ಪರವು ಕಲೆ ಹೇಂಗೆ ಹಾಂಗೆ ಭಾವಂ ಭಾವ
ದೊದವಿನ ಮನಂ ಮನವು ಹೇಂಗೆ ಹಾಂಗಾ ದೃಷ್ಟಿಯಾಸ್ಥಲಂ ಜಂಗಮದೊಳು
ಉದಯವೈ ಶೂನ್ಯಲಿಂಗಂ ಸರ್ವ ಕಾರಣಾಂ
ಗದ ಲಿಂಗ ಸತ್ಪ್ರಾಣವಾತ್ಮ ಜೀವಂಗಳಂ
ಗದವೊಲಾ ಲಿಂಗವೆಂತಂತೆ ಕಾರಣರೂಪನಾದಿ ಜಂಗಮವು ಕೂರ್ತು ೩೩

ಶಿವನಲ್ಲಿಯುದು ಕಾರಣಂ ಜಂಗಮದ ರೂಪೊ
ಳವಿರತಂ ಲಿಂಗರೂಪಂ ಸಮುದ್ಭವವಲಾ
ಕುವರ ತಲ್ಲಿಂಗದಿಂದಂ ಪುಟ್ಟಿದವು ಸರ್ವತತ್ವವೆಂಬುದು ನಿಶ್ಚಯಂ
ಪ್ರವರ ವೀರಾಗಮದೆ ಶೂನ್ಯಾಂತರಾಳದೊಳು
ತವೆ ಪುಟ್ಟಿದಾದಿ ಮೂರ್ತಿಯದಲ್ಲಿಯಂತೆವೊ
ಪ್ಪವ ಪರಾಶಕ್ತಿಯುದಱಿಂ ನಾದ ಬಿಂಧುಗಳು ಜನಿಸಿದವು ಕೇಳು ಬಳಿಕ ೩೪

ಆ ನಾದ ಬಿಂದುಗಳಿನೆಸೆವ ಚೆಲ್ವಿನ ಸದಾ
ಜ್ಞಾನವೊಗೆದುದು ಬಳಿಕ್ಕಾ ಜ್ಞಾನದಿಂದಂ ನ
ವೀನದ ಶಿವೇಚ್ಛಾಸಮುದ್ಭವಂ ಮತ್ತಾ ಶಿವೇಚ್ಛೆಯಿಂ ಸಂತಸದೊಳು
ತಾನೀಶ್ವರಾತ್ಮಸಂಭವವಾದುದೌ ಸೌಖ್ಯ
ಮಾನಿನಿ ತದೀಶ್ವರಾತ್ಮಕದೆ ರುದ್ರಕ್ರಿಯಾ
ಸ್ವಾನುಭವದುದಯವದಱಿಂ ವಿಷ್ಣು ಲಕ್ಷ್ಮಿಗಳ ಜನನವವರಿಂ ಬಳಿಕ್ಕ ೩೫

ಉದಯವಾದರು ಬ್ರಹ್ಮವಾಣಿಗಳು ಮತ್ತೆ ಕೇ
ಳುದಜಲೋಚನೆಯವರ ದೆಶೆಯಿಂದ ಸೃಷ್ಟಿಯಾ
ದುದು ಕಣಾ ನಾನಾ ಪ್ರಕಾರದಿಂದೆಂದು ಶಂಕರನೊರೆದ ಸದ್ಗ್ರಂಥವಾ
ಪದಪಿಂದ ಬಿತ್ತರಿಸಿದಂ ಹಲಗೆಯಾಚಾರ್ಯ
ನಿದನೊಲ್ದು ಬರೆದೋದಿ ಕೇಳಿ ಹರುಷಂದಳೆದ
ಸದು ಹೃದಯರಿಷ್ಟಸಿದ್ಧಿಯನಿತ್ತು ಶಾಂತಮಲ್ಲೇಶ್ವರಂ ರಕ್ಷಿಸುವನು ೩೬

||ಸಾಕ್ಷಿ|| ಶಿವಾಗಮೇ–

ದೇಹಂ ನಾಸ್ತಿ ಕುಲಂ ನಾಸ್ತಿ ಕರಣಂ ಕಾಲವರ್ಜಿತಂ
ಇಂದ್ರಿಯಾದಿ ಸುಖಂ ನಾಸ್ತಿ ಶೂನ್ಯಲಿಂಗಮಿತಿಸ್ಮೃತಂ ೧೪

ತಸ್ಮಾಚ್ಛಿವ ಸಮುತ್ಪನ್ನಮಾದಿ ಜಂಗಮಮೂರ್ತಿಷು
ಶೂನ್ಯಲಿಂಗಮಿತಿ ಖ್ಯಾತಂ ಸರ್ವಕಾರಣ ರೂಪತಃ ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಾಗಮೇ–
ಸರ್ವಶೂನ್ಯಾಂತರೇ ಮಧ್ಯೇಪ್ಯಾದಿ ಮೂರ್ತಿಸಮುದ್ಭವಂ
ಆದಿಮೂರ್ತಿ ಸಮಾಖ್ಯಾತಂ ಪರಾಶಕ್ತಿ ಸಮುದ್ಭವಂ ೧೬

ವಿಷ್ಣುರ್ಲಕ್ಷ್ಮೀ ಸಮಾಖ್ಯಾತಂ ಬ್ರಹ್ಮವಾಣೀ ಸಮುದ್ಭವಂ
ಬ್ರಹ್ಮವಾಣೀ ಸಮಾಖ್ಯಾತಂ ಸರ್ವಜೀವ ಸಮುದ್ಭವಂ ೧೭

ಕಂದ ಪೇಳಿದೆವು ಕೃಪೆಯಿಂದ ಶಿವಭಕ್ತಿಯಾ
ನಂದ ವರ ವೀರಶೈವಾಮೃತದೊಳೆಯ್ದೆ ನಲ
ವಿಂದ ಜಂಗಮದಾ ಸ್ವರೂಪು ಜಂಗಮದಲ್ಲಿಯಾ ಸೃಷ್ಟಿಯಂ ಜಂಗಮಾ
ಸೌಂದರ್ಯ ಮಕುಟ ಶೂನ್ಯದ ಸೃಷ್ಟಿಯೆರಡ ನಿನ
ಗೆಂದು ಹಲಗೆಯ ದೇಶಿಕಂ ನಂಜಗುರುವರನ
ಮುಂದೆ ಕೇಳುವ ಕೆಂಚವೀರಾಖ್ಯಗೆಂದು ಪದನೆಸಗಿದಂ ಮಲ್ಲಣಾರ್ಯಂ ೩-

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಿ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಣಾ ಜಂಗಮದ ಮಕುಟಸೃಷ್ಟಿಯು ಪೇಳ್ವ ತಾಣಕ್ಕೆ ನಾಲ್ಕು ಸಂಧಿ ೩೮

ಅಂತು ಸಂಧಿ ೪ ಕ್ಕಂ ಪದ ೨೨೦ ಕ್ಕಂ ಗ್ರಂಥ ೬೫ ಕ್ಕಂ
ಮಂಗಳ ಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫

ಸಾದರ ಚಿದಂಬರ ಪ್ರಣವರೂಪಾತ್ರ್ಯಕ್ಷ
ರೋದಯ ಪ್ರಣವಾಖ್ಯ ಸೃಷ್ಟಿಯ ಷಡಾಕ್ಷರಾ
ಹ್ಲಾದರೂಪಲ್ಲಿ ಜನನಂ ಪಂಚವರ್ಣಮಯಮಂ ಪೇಳ್ದನಾಚಾರ್ಯನು

ಸೂರ್ಯಶಶಿ ಶಿಖಿನೇತ್ರ ಘೋರಭವಕಾನನಕು
ಠಾರ ನಿರ್ಮಲ ದಿವ್ಯ ತಾರಪರ್ವತನಿಜಾ
ಗಾರ ಪಿತೃಪತಿ ಮೃತ್ಯುಮಾರಹರ ದುಷ್ಕರ್ಮದೂರ ಸುಖರಸಸುಪಾರಾ
ವಾರ ನಿರುಪಮಿತಗಂಭೀರ ನಿರ್ಮಾಯ ನಿ
ರ್ವೈರ ನಿತ್ಯೋತ್ತಮೋದಾರ ಪರಶಿವ ನವ್ಯ
ಸಾರ ಸದ್ಗುಣಸದಾಚಾರ ಮೋಹದ ಚಿದಾಕಾರ ಜಯಶಾಂತಮಲ್ಲ ೧

ದೇವಲೋಕದ ಕಲ್ಪವೃಕ್ಷದಗ್ರದರಸಫ
ಲಾವಳಿಯ ನಿಚ್ಚಣಿಗೆ ದೋಂಟಿಯಿಲ್ಲದೆ ನೀಳ್ದೊ
ಡಾವ ಯತ್ನವೆನುತ್ತ ತಿಳಿದು ಮೇಲಣಗವಿಯ ಶಾಂತನಂಜೇಶನಧಿಕ
ಪಾವನದುದಾರಗುಣಮಂ ಪೊಗಳೆ ನಾಣ್ಚುತ್ತೆ
ತಾವೆ ತಲೆವಾಗಿ ಪಣ್ಗೊಯ್ವರಮರಿಯರೆನಲು
ಭೂವಳಯದಲ್ಲಿ ಕೀರ್ತಿಪರಾರು ನಿನ್ನ ಮದ್ಗುರುವೆ ಚಿನ್ಮಯದ ಕರುವೆ ೨

ಎಲೆ ಗುರುವೆ ಬಿನ್ನಪಂ ನಿಮ್ಮ ಕಾರುಣ್ಯದಿಂ
ಸುಲಭಜಂಗಮದಾ ಸ್ವರೂಪಲ್ಲಿ ಸೃಷ್ಟಿಯಂ
ಸಲೆ ಶೂನ್ಯದುತ್ಪತ್ತಿಯಂ ಕೇಳ್ದನಾಂ ಧನ್ಯನಾದೆನಾಳ್ತನದೊಳೆನ್ನ
ವೊಲು ಭಾಗ್ಯವಂತರಾರೆಂದು ಮನದುತ್ಸಹದೆ
ನಲಿವುತಿಹ ಕೆಂಚವೀರಾಖ್ಯಂಗೆ ಮೋಹದಿಂ
ಹಲಗೆಯಾರ್ಯಂ ಕೃಪೆಯೊಳೊರೆಯುತೊಡಗಿದನು ಮುಂದಣ
ಬೋಧೆಯುನ್ನತಿಯನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ ಸಚ್ಚಿದಾನಂದ ನಿತ್ಯಪರಿಪೂರ್ಣನಹ
ಪರಮ ಘನ ಶಿವಭಕ್ತನಮಲ ಹೃತ್ಕಮಲದೊಳು
ಚರಲಿಂಗದುದಯವಾ ಜಂಗಮದ ಮಕುಟಮಧ್ಯದೊಳು ನಿರುಪಮಿತಮಪ್ಪ
ಚಿರಶೂನ್ಯಲಿಂಗೋದ್ಭವಂ ಶೂನ್ಯಲಿಂಗದುರು
ತರಮಧ್ಯದೆಡೆಯೊಳು ಚಿದಂಬರೋತ್ಪತ್ತಿಯದ
ಟಿರವ ಬಿತ್ತರಿಸುವಂ ಕರತಳಾಮಳಕದಿಂದೆಂದು ತೊಡಗಿದನಾರ್ಯನು ೪

ಸುತ ಕೇಳ್ವುದೈ ಚಿದಂಬರದಾ ಸ್ವರೂಪಿನಾ
ಯತಮನುದ್ಧರಿಸುವ ವಿಚಾರವೆಂತೆನಲಾಗಿ
ಯತುಳ ಹೇಮಾದಿಯೊಳಗೊದವಿರ್ದ ಪತ್ರದಾ ಸ್ಥಲದೊಳಾ ಚೌಕಮಾಗಿ
ನುತರೇಖೆ ಹನ್ನೆರಡನಡ್ಡ ನೀಳಕ್ಕೆ ತೆಗೆ
ವುತಲವರ ತುದಿಯೊಳ್ತ್ರಿಶೂಲವಾ ಶೂಲದು
ನ್ನತದ ಮಧ್ಯಂಗಳೊಳ್ ಬರೆವುದೈ ಶ್ರೀಕಾರವೆಸೆವ ನಾಲ್ವತ್ತೆಂಟನು ೫

ಆ ರೇಖೆಯಿಪ್ಪತ್ತುನಾಲ್ಕಡ್ಡನೀಳದಿಂ
ದಾರಯ್ಯೆ ಸಾಲ್ಗೆ ಹನ್ನೊಂದು ಹನ್ನೊಂದಿಂತಿ
ದಾರಮ್ಯವಪ್ಪ ಹನ್ನೊಂದು ಸಾಲ್ಗಳಿಗೆ ಮನೆ ನೂಱಯಿಪ್ಪತ್ತುವೊಂದು
ಸೇರುವೆಯೊಳಾ ಚೌಕದೆಡೆಯಲ್ಲಿ ಮೆಱೆವುದು ಕು
ಮಾರ ಮಧ್ಯಕ್ಕೆ ಪದಿನೈದು ಮನೆ ಮನೆಗೊಂದು
ದಾರವರ್ಣಂಗಳೀ ತೆಱದಿಂದ ನೂಱಮೂವತ್ತಾಱಲಾ ಯಂತ್ರಕೆ ೬

ಮೂಡಪೊಗದಲ್ಲಿ ಕುಳಿತುದ್ಧರಿಸೆ ಮೂಲೆಗಳ
ನೋಡಲೀಶಾಗ್ನಿ ನೈಋತ್ಯವಾಯುವ್ಯಗಳ
ಗಾಡಿಯುನ್ನತ ಚತುರ್ದಿಶಿಯು ಚತುರಸ್ರಂಗಳವು ನಾಲ್ಕುವೊಂದೊಂದಕೆ
ನಾಡೆಯಿಪ್ಪತ್ತೈದು ವೈದುಮನೆ ನಾಲ್ಕಕ್ಕೆ
ಕೂಡಿ ನೂಱ್ ಪ್ರಣವವೇ ಮಧ್ಯವಂತದ
ಕ್ಕಾಡಂಬರಂ ನಾಲ್ಕು ಬೀದಿ ಮೂಡಲ್ಪಡುವಲುತ್ತರಂ ದಕ್ಷಿಣದೊಳು ೭

ನಡುವಣಾ ಸುಪ್ತಪ್ರಣವಕ್ಕೊಂದು ಮನೆ ನಾಲ್ಕು
ಕಡೆಯ ಬೀದಿಗಳೊಳೈದೈದುಮಿಪ್ಪತ್ತಲಾ
ಬಿಡದೆಯಾ ಪಂಚಪಂಚಾಕ್ಷರಿಯ ನಾಲ್ಕುಮೂಲೆಯನೂಱ ಕೂಡಲಾಗಿ
ಒಡನೆ ನೂಱಿಪ್ಪತ್ತುವೊಂದು ಮನೆ ಸರಿಯಲಾ
ನಡುವಿಪ್ಪ ಮನೆಯೊಳಗವಾಚ್ಯಸುಪ್ರಣವವದ
ನಡುವಿಟ್ಟು ವೃತ್ತತ್ರಿಪಂಚಾಕ್ಷರಂ ಮೆಱೆವವಯ್ಯ ಪರಿಭಾವಿಸುವೊಡೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒರೆಯಲು ಪ್ರಣವಕ್ಕೆ ಮೂಡಲೊಳ್ತೊಡಗಿ ನೆಱೆ
ಬರೆವುದೈ ಪದಿನೈದ ಸುಪ್ರದಕ್ಷಿಣವಾಗಿ
ಚಿರವಹ ನಮಃಶಿವಾಯಾಯವಾಶಿಮನ ಶಿವಾಯನಮ ವಿಂತು ಮೂಱು
ಪರಿಯ ಪಂಚಾಕ್ಷರತ್ರಯವನಿನ್ನೀಶಾನ್ಯ
ವರದಿಕ್ಕಿನಲ್ಲಿ ನಾಲ್ಮೂಲೆಗಿರ್ಪತ್ತೈದು
ಗುರುತರದ ಪಂಚಪಂಚಾಕ್ಷರಿಯನೈದುಪಂಙ್ತಿಗೆ ಲಿಖಿಸು ಮೊದಲು ಮೇಲೆ ೯

ಪ್ರಿಯದಿಂ ಯವಾಶಿಮನ ಶಿಮನಂ ಯವಾ ಮತ್ತೆ
ನಯವಾ ಶಿವಃಂ ವಾಶಿಮನಯ ಮನಯಂ ವಾಶಿ
ಯಯಿಃದಾದವಾ ಪ್ರಣವವಿಂತು ಮೂಡಣಬೀದಿಯಲ್ಲಿ ಬರೆವಕ್ಷರಾಳಿ
ನಯದೊಳಾ ಕ್ಷುಂ ಹ್ರೀಂಯೆನುತ್ತಲೋಂಸಾಂಕ್ಲೀಂತು
ದಯನವಗ್ನಿಯ ಪಂಚಪಂಚಾಕ್ಷರಂಗಳಂ
ಸ್ವಯಙಿಂದಲಱ ಮೇಲೆಯಂತಾ ನವಾಮಯ ಶಿಯಮಯ
ಶಿನವಾಯೆನುತ್ತ ೧೦

ಶಿನವಾಮಯಾವಾಮಯ ಶಿನಯಶಿನಂವಾಮ
ನನಘ ದಕ್ಷಿಣದೊಳಾ ಪ್ರಣವ ವಿಡಿದುನ್ನತದೊ
ಳೆನಸು ಸೌಕ್ಲೀಂ ಕ್ಷುಂ ಯೆನುತ್ತ ಹ್ರೀಂ ಓಂ ಮತ್ತೆ ನೈರುತ್ಯದಲ್ಲಿ ಮೇಲೇ
ಘನಪಂಚ ಪಂಚಾಕ್ಷರಂ ಶಿಯಮವಾನವೈ
ತನುಜ ಮತ್ತಾ ವಾನಶಿಯಮಯಮವಾನಶಿಯು
ಸನಯದಿಂ ಕೇಳು ನಶಿಯಮವಾಮವಾ ನಶಿಯವಾ ಮಧ್ಯ
ಸತ್ಪ್ರಣವದ ೧೧

ಮೇಲೆ ಪಶ್ಚಿಮದಲ್ಲಿ ಹ್ರೀಂ ಶ್ರೀಂಯೆನುತ್ತ ಸೌಂ
ಸಾಲಾಗೆ ಕ್ಲೀಂ ಕ್ಷುಂ ಯೆನುತ್ತೈದು ಬೀಜಾಕ್ಷ
ರಾಳಿ ವಾಯವ್ಯದೊಳು ಪಂಚಪಂಚಾಕ್ಷರಂ ಚತುರಸ್ರದಲ್ಲಿ ಮೇಲೆ
ಆಲಿಸಿ ನಮಃಶಿವಾಯಾ ವಾಯನಮಶಿಸೌ
ಖ್ಯಾಲಯದ ಮಶಿವಾಯನಯನಮಶಿವಾಕಣಾ
ಬಾಲಕನೆ ಕೇಳ್ಳೆ ಶಿವಾಯನಮವಾ ಮಧ್ಯಸತ್ಪ್ರಣವವಿಡಿದು ಮೇಲೆ ೧೨

ಉತ್ತರದ ಕ್ಲಿಂ ಸೌಂಯೆನುತ್ತಲಾ ಕ್ಷುಂ ಶ್ರೀಂ ಯೆ
ನುತ್ತ ಹ್ರೀಂ ಯೆಂಬುದು ಚಿದಂಬರೋದ್ಧರಣೆಯಿದೆ
ನುತ್ತೊರೆದೆವೀ ಪಂಚಪಂಚಾಕ್ಷರಂಗಳುದ್ಧರಣೆಯೊಳು ಹ್ರಸ್ವದೀರ್ಘ
ಮತ್ತಾ ವಿಸರ್ಗಬಿಂದುಗಳೆರಡ ನೋಡರುವೆ
ನುತ್ತ ಬಗೆಯಲು ಬೇಡ ಸರ್ವರಱವಂದದಿಂ
ಬಿತ್ತರಿಸಿದೆವು ಕೆಂಚವೀರಾಖ್ಯಯೆಂದರಾ ವೀರ ಹಲಗೆಯದೇವರು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಾ ಚಿದಂಬರೋದ್ಧರಣೆ ಕೇಳ್ವೈ ಸುಖ
ಸ್ವಾಂತ ನಲವಿಂ ಚಿದಂಬರದ ವರ್ಣಂಗಳೆ
ಲ್ಲಂ ತಮತಮಗೆ ಬೇಱಿ ಬೇಱೌ ಸ್ವತಂತ್ರಕರ್ತೃಗಳಾಗಿ ರಾಜಿಸುವವೈ
ಕಾಂತ ಸುಪ್ತಾಹಿರೂಪಿಂದ ವಾಚ್ಯಪ್ರಣವ
ವಂತು ಮಧ್ಯದೊಳಿರ್ಪುದದಱಿರವನೊರೆವೆನಿ
ನ್ನೆಂತೆನಲು ವಾತೂಳತಂತ್ರದರ್ಥದೊಳೆಂದು ನುಡಿಯತೊಡಗಿದ
ನಾರ್ಯನು ೧೪

ಶಿವಮಂತ್ರಘನಪರಾಯಣನಾದ ಷಣ್ಮುಖದ
ಕುವರ ಕೇಳ್ವೈ ವಿಶಾಲದೊಳೊರೆ ವೆನೆಂದಂಗ
ಭವವೈರಿ ನುಡಿಯತೊಡಗಿದನಖಿಳ ದಿವ್ಯಮಂತ್ರಂಗಳೊಳು ಮುಖ್ಯವಾಗಿ
ಅವಿರತಂ ಸತ್ಪ್ರಣವಪಂಚಕಂ ಮೆಱೆವವೀ
ಭುವಿಯೊಳಗನೇಕಕೋಟಿಗಳಪ್ಪ ಮಂತ್ರಂಗ
ಳವಕೆ ತಾಯಾಗಿಪ್ಪವಾಗ್ಜಗಪ್ರಣವವೆಂಬುದು ಹಕಾರಂ ಭಾವಿಸೆ ೧೫

ಓಂಕಾರವೇ ನಾದರೂಪಲಾ ಕೇಳು ಬಳಿ
ಕೋಂಕಾರವೇ ಪ್ರಣವವೆಂದಱಿವುದೈ ಬಳಿ
ಕ್ಕೋಂಕಾರಕಾ ಹಕಾರಂ ಪ್ರಣವಪರವಂತಕಾರವೇ ಪ್ರಣವವಿನ್ನು
ನೀಂ ಕೇಳುಕಾರಸತ್ಪ್ರಣವವೈ ವರ ನಿಷ್ಕ
ಳಂಕನೆಯುಕಾರಮುಂಮುಕಾರವೆರಡಕ್ಷರಗ
ಳಂ ಕೂಡಲಾ ಮಕಾರಂ ಪ್ರಣವವಲ್ಲಭಂ ತತ್ಪ್ರವೃತ್ತಿಯು ಮಾರ್ಗವು ೧೬

ಮುಂದಣ ನಿವೃತ್ತಿಯುಂ ಪೇಳುವೆವು ಕರುಣದಿಂ
ದಿಂದು ಕೇಳಿವಱ ಸ್ವರೂಪವತಿಗೋಪ್ಯವೈ
ಕಂದ ಮೊದಲೊಳಗುಕಾರಂ ಬಳಿಕ್ಕಿರಡಱೊಳಕಾರವಾ ಮೂಱಱಲ್ಲಿ
ಸಂದಿಪ್ಪುದಾ ಮಕಾರಂ ನಾಲ್ಕಱಲ್ಲಿಯಾ
ನಂದದೋಂಕಾರವೈದಱೊಳವಾಗ್ಜಪ್ರಣವ
ವೆಂದೆನಿಸುತಿಹ ಹಕಾರಂ ಪ್ರಣವಪಂಚಕದ ಭೇದವಿದನಱಿಕುಮಾರ ೧೭

ತಾನುಕಾರಂ ಬಿಂದುರೂಪಾಗಿ ಜಾಗ್ರದಾ
ಸ್ಥಾನದೊಳಗಿಹುದಕಾರಂ ನಾದರೂಪಾಗು
ತೇನೆಂಬೆನಾ ಸ್ವಪ್ನದಲ್ಲಿಪ್ಪುದಾ ಮಕಾರಂ ಕಲಾರೂಪವಾಗಿ
ಆ ನಿಜದ ಸುಪ್ತಿಯಲ್ಲಿಪ್ಪುದೋಂಕಾರ ಶ
ಕ್ತ್ಯಾನಂದರೂಪಾಗಿ ತುರಿಯದಲ್ಲಿಹುದಲಾ
ಸೂನುವೆಯವಾಗ್ಜವಾ ಶಿವರೂಪವಾಗಿ ತುರಿಯಾತೀತದಲ್ಲಿಪ್ಪುದು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದಱ ಬಗೆಯಂ ಕೇಳಕಾರದೊಳುಕಾರವೊಂ
ದಿದೊಡೆ ಸಿದ್ಧಿಯೊಳಾದುದೋಕಾರವದಱಲ್ಲಿ
ಪುದಿಯಲು ಮಕಾರ ಓಂಕಾರವಾದುದು ಬಳಿಕ ಮುಂದಣೋಕಾರವೆಯಿದೇ
ಅದಱೊಳಮರಲು ನಿರಂಜನವೆಂದೆನಿಪ್ಪುದಾ
ದುದು ಹಕಾರಂ ಪ್ರಾಣರೂಪವಾಚ್ಯಪ್ರಣವ
ದುದಿತಾರ್ಥವೆಂದಾ ಚಿದಂಬರದ ಮಧ್ಯದೋಂಕಾರಮಂ ಬಿತ್ತರಿಸಿದಂ ೧೯

ಅಂತವಾಚ್ಯಪ್ರಣವವೆಸೆವುದದಱುನ್ನತಿಕೆ
ಯೆಂತೆನಲು ವೇದಾದಿ ಮೂಲಸ್ವರಂಗಳಿಗೆ
ತಾಂ ತಳ್ತು ಕೀರ್ತವೆತ್ತಿಹುದು ಹದಿಮೂಱಱಿಡೆಯೊಳು ಚಂದ್ರಸೂರ್ಯಬಿಂಬ
ಕಾಂತನಾದಸ್ವರೂಪಂ ಸುಪ್ತಸರ್ಪನೆಂ
ಬಂತಿಹುದು ಮೂಱುತತ್ವಕ್ಕೆವೊದಲಾಗಿಪ್ಪ
ದಿಂತಪ್ಪ ಸತ್ಪ್ರಣವವಂ ಕುಱಿತು ಶರಣೆಂಬರ್ಕೈಕುಮಾರಕನೆ ಕೇಳು ೨೦

ಮುಂದಾ ರಹಸ್ಯದೊಳ್ಪ್ರಣವವುಳ್ಳ ನಾದ
ಬಿಂದು ಕಲೆಯೊಳು ಕೂಡಿದಾ ಷಡಕ್ಷರಿಗೆ ಮೊದ
ಲೆಂದೆನಿಪುದಾ ಪ್ರಣವವೈ ಬಳಿಕಕಾರದೊಳುಕಾರಮುಱಿನಲಿದು ಚೆಲ್ವಿಂ
ಒಂದಲೋಂಕಾಗವೆಂಬಾ ಸ್ವರವೆನುತ್ತಲಾ
ನಂದದೋಮಿತ್ಯೇಕಮಕ್ಷರಂ ಸದ್ಬ್ರಹ್ಮ
ವೆಂದು ಯೋಗಿಗಳು ನುಡಿವುತ್ತಿಪ್ಪರೈಕೇಳು ಸಂತಸದೊಳೆಂದನಾರ್ಯಂ ೨೧

ನೀ ತಿಳಿಯಕಾರವಂತೆಸೆವುಕಾರಂ ಮಹಾ
ಖ್ಯಾತಿಯ ಮಕಾರಮಿವು ಕೂಡಲಿಂತೋಮಿತಿ
ಜ್ಯೋತಿರೂಪಂ ಬಳಿಕಕಾರಮುಮುಕಾರಂ ಮಕಾರಮಂ ಪುದಿಯಲಾಗೀ
ಆ ತೆಱದೊಳೋಂಕಾರವದು ಸರ್ವಬೀಜನಾ
ಮಾತಿಶಯುವಾ ನಿನ್ನ ಸಂಬಂಧದಾ ಪ್ರಣವ
ವೇ ತಳೋದರಿ ಕೆಲವು ನನ್ನ ಸಂಬಂಧದಾ ಪ್ರಣವಂಗಳವು ಕೆಲವಲಾ ೨೨

ಭಾವಿಸಲು ಮಂತ್ರಂಗಳಿಗೆ ಶಕ್ತಿಮಯುವಲಾ
ದೇವಿಯುವು ಮತ್ತಕಾರಮುಮುಕಾರಂಮಕಾ
ರಾವಳಿಗಳೊಂದಲೋಂಕಾರವಾ ಪ್ರಣವವೆನ್ನದು ತಿಳಿವುದೌ ಬಳಿಕ್ಕಾ
ಆ ಉಕಾರಂ ಮಕಾರದೊಳಕಾರಂ ದೀರ್ಘ
ವಾವರಿಸೆ ನಿನ್ನರೂಪಾ ಪ್ರಣವವೀ ಮೂಱು
ಭಾವಕಿಯೆ ನೀನೆನ್ನ ಸಂಬಂಧವೀ ಲಿಂಗಜಂಗಮವಿದಾರ್ಬಲ್ಲರು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಮೂಱಕ್ಷರಂಗಳೊಳಪ್ಪ ಸೃಷ್ಟಿಯುಮ
ದೆಂತೆಂದೊಡುಪನಿಷದ್ವಾಕ್ಯದೊಳು ಕೇಳಯ್ಯ
ಕಾಂತಸತ್ಪ್ರಣವದಾದಿಯೊಳೆಸೆವಕಾರದೊಳಗ್ನಿರುಗ್ವೇದ ರುದ್ರ
ರಂತಲ್ಲಿ ಶೋಱಿಯುಡಗುವರಮರತತಿವೆರಸಿ
ಮುಂತೆಯಾ ಪ್ರಣವದ್ವಯಾಂಶವೆಂದೆನಿಸಿ ನೆಱೆ
ಸಂತತಂ ಮೆಱೆವುಕಾರದೊಳಂತರಿಕ್ಷಂ ಯಜುರ್ವೇದಮುಂ ಬಳಿಕ್ಕ ೨೪

ಎಸೆವೀಶ್ವರನು ದೇವತೆಯುರುದಿಸಿ ಲಯಃವಪ್ಪ
ರಸವು ಸತ್ಪ್ರಣವಮಾ ತೃತೀಯಾಂಶದಲ್ಲಿ ರಾ
ಜಿಸುತಿಹ ಮಕಾರದೊಳಗಖಿಳ ವಿದ್ಯಂಗಳೊಳು ಕೂಡಿರ್ಪ ಸಾಮವೇದ
ಮಿಸುಗುವ ಸದಾಶಿವಾಮರರೊಗೆದಡಂಗುವರು
ಲಸದುತ್ತುಮಪ್ರಣವಭಾಗವೀ ಸೃಷ್ಟಿಯುಂ
ಒಸೆದು ಕೇಳ್ದಾ ಮುಂದೆಯೋಂಕಾರರೂಪಮಂ ಬಿತ್ತರಿಪೆನ್ನೈ ಕುಮಾರ ೨೫

ಆ ರಹಸ್ಯದೊಳು ಸರ್ವೇಶ್ವರನ ಪಾದಕ್ಕೆ
ಗೌರಿ ಶರಣೆಂದು ಬಿನ್ನವಿಸಿದಳು ದೇವದೇ
ವಾರಾಧ್ಯ ಷಡ್ವರ್ಣಪರವಪ್ಪ ಸತ್ಪ್ರಣವರೂಪಮಂ ಪೇಳೆಂದೊಡೆ
ಮಾರಾರಿ ನುಡಿದನೋಕಾರವೇ ನಾದರೂ
ಪಾರಯ್ಯಲೋಂಕಾರವೇ ಬಿಂದು ರೂಪ ಓಂ
ಕಾರವೇ ವ್ಯಾಪಿಸರ್ವತ್ರವೋಂಕಾರವೇ ಶಂಕರನಗೋಪ್ಯವದನಂ ೨೬

ನೆಟ್ಟನಾ ಪ್ರಣವವಪ್ಪೋಂಕಾರಮಂ ಬರೆಯೆ
ಬಟ್ಟನೋಂಕಾರಾದಿಯೊಳು ರಾಜಿಸುತ್ತಿಪ್ಪ
ಹುಟ್ಟೀಗ ತಾರಕಾರೂಪವಾ ಹುಟ್ಟಿಂದಲಿಳಿಯುತೆಗದೆರಡೆನಿಸುತಾ
ಪುಟ್ಟಿಪ್ಪುದೇ ದಂಡಕಂ ಪೊಕ್ಕುಳೆನಿಸುತಳ
ವಟ್ಟ ಮೂಱನೆಯುದೇ ಕುಂಡಲಿಯುದರೆವೆಱಿಯು
ಕಟ್ಟೆಸಕದಿಂ ಕಡೆಯೊಳಿರ್ಪುದೇಯರ್ಧಚಂದ್ರಂ ನಾಲ್ಕನೆಯುದೆನಿಸಿತು ೨೭

ಅದಕೆ ಕೊಟ್ಟಿಹ ಸೊನ್ನೆಯೇ ದರ್ಪಣಾಕಾರ
ವಿದು ಪಂಚಮಂ ಮೇಲೆ ರೇಖೆದೆಗೆದಾಕೃತಿಯೆ
ಸದಮಲನಿರಂಜನಜ್ಯೋತಿರೂಪಂ ದೀರ್ಘವಾಱನೆಯುದ್ಯೆ ಪರಿಕಿಸೆ
ಹೃದಯುದೊಳಗಱಿಯಿದೇ ಪ್ರಣವರೂಪಂ ಕೇಳು
ಸುದತಿ ಗೋಪ್ಯವ ಮಾಡಿಕೊಳ್ಳೆಂದು ಕೂರ್ತುಪೇ
ಳಿದನೀಶನಂದು ಪಾರ್ವತಿಗೆಂದು ಬಿತ್ತರಿಸಿದಂ ಶಿಷ್ಯಗಾಚಾರ್ಯನು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ನಕಾರವೆ ತಾರಕಸ್ಥಾನವೈ ಕೇಳು
ಸೂನುವೆ ಮಕಾರವೇ ದಂಡಂ ಶಿಕಾರವೆಯು
ನೂನ ಕುಂಡಲಿಯಲಾ ವಾಕಾರವರ್ಧಚಂದ್ರಂ ಯಕಾರಂ ಬಿಂದುವೈ
ನೀನಱಿವುದೈ ಪ್ರಣವವೀ ವರ್ಣಪಂಚಕಂ
ತಾನೆಸೆವ ತಾರಕಂ ಬ್ರಹ್ಮವಾ ದಂಡಕವ
ಲಾ ನೋಡೆ ವಿಷ್ಣುಕುಂಡಲಿ ರುದ್ರನರ್ಧಚಂದ್ರಾಕಾರನೀಶ್ವರನಲಾ ೨೯

ಬಿಂದುವಿನೊಳಾ ಸದಾಶಿವನು ತೇಜೋರೂಪ
ದಿಂದಂ ಕಲಾಧಿಕದೊಳೆಸೆವ ನಿರ್ಗುಣತತಿಗೆ
ಮಂದಿರಂ ಪ್ರಣವವೇ ಸರ್ವಕಾರಣವಲಾ ದೇವಿ ಕೇಳಾ ನಲ್ವಿನಿಂ
ಮುಂದೊರೆವೆನಾ ಸರ್ವಮಂತ್ರರಾಜಂ ಮೋಹ
ದಿಂದುಮುಖಿ ಭಜಿಸಿದವರಿಷ್ಟ ಮುಕ್ತಿಗಳನಾ
ನಂದದಿಂ ಕೊಟ್ಟು ರಕ್ಷಿಸುತಿಪ್ಪುದಾವಗಂ ಸಂದೆಗಂ ಬೇಡ ನಿನಗೆ ೩೦

ಗೌರಿ ಕೇಳುಪ್ಪರಿಗೆಯುಡರಿ ತೈಲವನೆಱಿವ
ಧಾರೆಯಾ ಪ್ರಭೆಯಾಱುವರ್ಣವಮಂ ಮೀಱಿದಾ
ಕಾರದುತ್ತಮವದಱ ಸತ್ಪ್ರಭೆಯುಲಾ ಪ್ರಣವಕಧಿಕ ಘಂಟೆಯ ನುಡಿಸುತ
ಓರಂತೆ ನಿಲಿಸೆ ಘುಮ್ಮನೆಯುದಱ ಘನವಹ ಮ
ಹಾರವವದಂತೆ ಪಿಂಡಾಂಡವೊಳಜಾಂಡದೊಳು
ಪೂರವಿಪುದುತ್ತಮದ ನಾದದೋಂಕಾರವಮಂ ಬಲ್ಲರಾರೆಲೆ ವಲ್ಲಭೆ ೩೧

ವೇದವಿದರಿಂತವಾಚ್ಯಪ್ರಣವವಱಿಯಾ ಮ
ಹಾದೇವಿಯಱಿಂದ ಶಿವರೂಪಸತ್ಪ್ರಣವ
ವೋದಿ ಹೃದಯದೊಳು ನೆನೆದೊಡೆ ಸರ್ವಪಾಪವಳಿಗಖಿಳಮಂತ್ರಾಮ್ನಾಯದ
ಹಾದಿಯಿದು ಲೋಕದುತ್ಪತ್ತಿ ಸರ್ವಾಕಾರ
ವೌ ದಯಾಭರಿತೆ ಯೀ ಪ್ರಣವನಾಮಂ ಹಲವ
ನಾದರದೊಳಾ ಮಂತ್ರಲಕ್ಷಣಂಗಳನೊರೆವೆನೆಂದು ಪೇಳಲುತೊಡಗಿದಂ ೩೨

ಮುಂದೆ ಕೇಳೋಂಕಾರವಾ ಪ್ರಣವವಾ ಬ್ರಹ್ಮ
ವೆಂದು ಸುಜ್ಞಾನಂ ಶಿವಂ ಬಳಿಕಲಾತ್ಮನೊಲ
ವಿಂದ ತೇಜೋಬೀಜವಾ ನಿಷ್ಕಲಂಕಾರಕಂ ನಿಷಲಾತ್ಮಕಾಖ್ಯಾ
ಕುಂದದಿಹ ನಾದವಾ ನಾದಾದಿ ಹೃನ್ನಾದ
ವೆಂದು ವೇದಾದಿಯಾ ವೇದಭೂ ಮುಕ್ತಿಬೀ
ಜಂ ದೇವಿ ಮಂತ್ರಬೀಜಂ ವರ್ಣಬೀಜವೀ ಹದಿನೆಂಟು ಪೆಸರದಕ್ಕೇ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಲ್ಲಳೇ ಕೇಳ್ಪ್ರಣವವಾದ್ಯಂಜನಂ ಘೋಷ
ವಲ್ಲದತಿದುಸ್ತರಂ ಭಾವಿಸಲ್ಕಾರೇಫೆ
ಯಿಲ್ಲದದು ತಾಲುಕಂಠಾನುನಾಸಿಕಯೋಗದಿಂದ ನುಡಿಯಲ್ಬಾರದು
ಸಲ್ಲಲಿತದಕ್ಷರಂ ತಿಳಿಯಲಂತೋಂಕಾರ
ದಲ್ಲಿ ವೇದಂಗಳುಂ ಸ್ವರನಿಕರವಾ ಸರ್ವ
ವೆಲ್ಲವುಂ ಮೂಱುಲೋಕಂ ಚರಾಚರವೆಯ್ದೆ ಹುಟ್ಟಿದವು ಕೇಳು ಗೌರಿ ೩೪

ನಳಿನಾಕ್ಷಿಯೋಂಕಾರವೆಯ್ದೆ ಸರ್ವವನೊಲ್ದು
ಬಳಸಿಪುದದಾಗಿನ್ನು ಬೇಱೆ ಮಂತ್ರಂಗಳಿ
ಲ್ಲಳಿಕುಂತಳೆಯೆ ಪರಬ್ರಹ್ಮವಾ ಪ್ರಣವವಾ ಪರಮಪದವೆನಿಸಿರ್ಪುದು
ತಿಳಿಯಲದು ತಾನೆ ಶಿವನದ್ವಿತೀಯುನ
ಗ್ಗಳವಪ್ಪ ಪರಮಾತ್ಮನೆಂದೆನಿಪುದಾಯುದ
ಱಿೊಳು ನಾದವುದಿಸಿತಾ ನಾದದಿಂ ಬಿಂದುವಾ ಬಿಂದುವಿಂ ಕಲೆಯಾದುದು ೩೫

ಆ ಕಲೆಯೊಳುದ್ಭವಿಸಿತಾ ಶಕ್ತಿಶಕ್ತಿಯಿಂ
ನೀ ಕೇಳು ಸಂವಿತ್ತು ಸಂವಿತ್ತಿನಿಂದ ವ
ಸ್ತೋಕಚಿತ್ತುವುದಿಸಿತ್ತುವದಱಿನಿಂ ತೇಜಸ್ಯುವಂತದು ಸದಾಶಿವನಲಾ
ಆ ಕರುಣೆಯಿಂದಲೀಶ್ವರನೀಶನಿಂ ರುದ್ರ
ನೌಕಾಂತೆಯಾ ಸೃಷ್ಟಿರಕ್ಷಣಪ್ರಳಯಕ್ಕೆ
ತಾ ಕಾರಣಂ ರುದ್ರನಿಂ ವಿಷ್ಣುವಿಷ್ಣುವಿಂ ಬ್ರಹ್ಮನೊಗೆದಂ ಕೇಳಿದಾ ೩೬

ಅಣೆಯುರದೊಳಾ ಬ್ರಹ್ಮನಿಂದವೀ ತ್ರೈಲೋಕ್ಯ
ಗಣನೆಯ ಚರಾಚರಂ ಪುಟ್ಟಿದವು ಸರ್ವಕಾ
ರಣವಾದುದೋಂಕಾರವೆಂದಱಿ ಮಹಾದೇವಿಯಿಲ್ಲಿಗೆ ಚಿದಂಬರವನು
ಪ್ರಣವದುತ್ಪತ್ತಿ ಮೂಱಕ್ಷರದ ಸೃಷ್ಟಿಯುಂ
ಪ್ರಣವನಾಮಂಗಳಂ ಬಳಿಕವೀ ಸೃಷ್ಟಿಪ
ತ್ಪ್ರಣವದಿಂದಾದುದೆಂಬುದನೊರೆದೆನೆಂದು ಮಿಗೆ ಪೇಳ್ದನೀಶಂ ಕುಮಾರ ೩೭

||ಸಾಕ್ಷಿ|| ವಾತೂಲೇ–

ವಕ್ಷ್ಯೇಽಹಂತೇ ಸಮಾಸೇನ ಶಿವಮಂತ್ರಪರಾಯಣ
ಸಪ್ತಕೋಟೀಷು ಮಂತ್ರೇಷು ಮುಖ್ಯಂ ಪ್ರಣವಪಂಚಕಂ ೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನೇಕ ಕೋಟಿ ಮಂತ್ರಾಣಾಂ । ಮಾತೃಸ್ಥಾನಮಿತೀರಿತಂ
ಅವಾಗ್ಜಂಪ್ರಣವ ವಿಂದ್ಯಾ। ದೋಂಕಾರಂನಾದರೂಪಕಂ ೨

ಓಂಕಾರಂ ಪ್ರಣವೆಂವಿಂದ್ಯಾದ್ಧಕಾರಂ ಪ್ರಣವಂ ಪರಂ
ಅಕಾರಂ ಪ್ರಣವೇ ವಿಂದ್ಯಾದುಕಾರಂ ಪ್ರಣವಂ ತಥಾ ೩

ಅಕಾರೋಕಾರಸಂಯೋಗಾ ನ್ಮಕಾರ ಪ್ರಣವಂ ತಥಾ
ಏತತ್ಪ್ರವೃತ್ತಿಮಾರ್ಗೇಣ ಪ್ರೋಕ್ತಂ ಪ್ರಣವಪಂಚಕಂ ೪

ನಿವೃತ್ತಿರ್ವಕ್ಷ್ಯತೇ ತೇಷಾಂಸ್ವರೂಪಮಹಿಗೋಪಿತಂ
ಉಕಾರಂ ಪ್ರಥಮಂ ವಿಂದ್ಯಾದಕಾರಂತು ದ್ವಿತೀಯಕಂ ೫

ತೃತೀಯಂತು ಮಕಾರಸ್ಯಾದೋಂಕಾರಂತು ಚತುರ್ಥಕಂ
ಅವಾಗ್ಜಂ ಪಂಚಮಂ ವಿದ್ಯಾತ್ ಪಂಚಪ್ರಣವಭೇದಕಂ ೬

ಉಕಾರಂ ಬಿಂದುರೂಪೇಣ ಜಾಗ್ರತ್ಸ್ಥಾನೇ ನಿವೇಶಯೇತ್
ಅಕಾರಂ ನಾದರೂಪೇಣ ಸ್ವಪ್ನಸ್ಥಾನೇ ನಿವೇಶಯೇತ್ ೭

ಕಲಾರೂಪಂ ಮಕಾರಂಚ ಸುಪ್ತಿಸ್ಥಾನೇ ವಿನಿಕ್ಷಿಪೇತ್
ಓಂಕಾರಂ ಶಕ್ತಿರೂಪೇಣ ತುರ್ಯಸ್ಥಾನೇ ನಿವೇಶಯೇತ್ ೮

ಅವಾಗ್ಜಂ ಶಿವರೂಪೇಣ ತೂರ್ಯಾತೀತೇ ವಿನಿಕ್ಷಿಪೇತ್
॥ಉಪೇಂದ್ರವಜ್ರವೃತ್ತ॥ ವೇದಾದಿಮೂಲಂ ಪ್ರಥಿತಂ ಸ್ವರಾಣಾಂ
ತ್ರಯೋದಶಸ್ಥಂ ಶಶಿಸೂರ್ಯಬಿಂಬಂ
ನಾದಾತ್ಮಕಂ ಸುಪ್ತ ಭುಜಂಗರೂಪಂ
ತ್ರಿತತ್ವಮೂಲಂ ಪ್ರಣವಂ ನಮಾಮಿ ೯

॥ರಹಸ್ಯೇ॥ ಆದೌಷಡಕ್ಷರಸ್ಯಾಸ್ಯ ಪ್ರಣವಃ ಪೂರ್ವರೂಪಕಃ ೧೦
ಪ್ರಣವಸ್ಯಾಸ್ಯ ಕಥ್ಯಂತೇ ನಾದಬಿಂದು ಕಳಾಯುಜಃ
ಅಕಾರೋಕಾರಸಂಯೋಗಾದೋಕಾರಸ್ವರಮುಚ್ಯತೇ ೧೧

ಓಮಿತ್ಯೇಕಾಕ್ಷರಂ ಬ್ರಹ್ಮವದಂತೇ ಸರ್ವಯೋಗಿನಃ
ಅಕಾರೇಚ ಉಕಾರೇಚ ಮಕಾರೇಚ ತೃತೀಯಕಂ ೧೨

ಇದಮೇಕಸಮುತ್ಪನ್ನಮೋಮಿತಿ ಜ್ಯೋತಿರೂಪಕಂ
ಅಕಾರೇಣಪ್ಯುಕಾರೇಣ ಮಕಾರೇಣತುಸೂತ್ರತಃ ೧೩

ಕೃತಸಂಧೌ ಸಮಾಖ್ಯಾತಮೋಂಕಾರಃ ಸರ್ವಬೀಜಕಂ
ತ್ವದೀಯಂಪ್ರಣವಂ ಕಿಂಚಿನ್ಮದೀಯಂ ಪ್ರಣವಂತ ಥಾ ೧೪

ದ್ವಿತೀಯಂ ದೇವಿ ಮಂತ್ರಾಣಾಂ ಶಕ್ತಿಭೂತಂ ನಸಂಶಯಃ
ಅಕಾರೋಕಾರಮಕಾರ ಮದೀಯ ಪ್ರಣವಸ್ಥಿತಃ ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಕಾರಶ್ಚ ಮಕಾರಶ್ಚಾಪ್ಯಕಾರಶ್ಚ ಕ್ರಮೇಣವೈ

ಉಪನಿಷದಿ–

ಅಗ್ನಿಶ್ಚಋಗ್ವೇದಾ ಭವತಿ ಓಂರುದ್ರೋದೇವತಾಃ
ಅಕಾರೇಚ ಲಯಂಪ್ರಾಪ್ತೇಪ್ರಥಮೇ ಪ್ರಣವಾಂಶಿಕೈಃ ೧೬

ಅಂತರಿಕ್ಷೇ ಯಜುರ್ವೇದೋಭವತಿ ಓಂ ಈಶ್ವರೋದೇವತಾ
ಉಕಾರೇಚ ಲಯಂ ಪ್ರಾಪ್ತೇದ್ವಿತೀಯೇಪ್ರಣವಾಂಶಿಕೈಃ ೧೭

ವಿದ್ಯೇಷು ಸಾಮವೇದೋಭವತಿ ಓಂ ಸದಾಶಿವೋ ದೇವತಾ
ಮಕಾರೇಚ ಲಯಂಪ್ರಾಪ್ತೇ ತೃತೀಯೇ ಪ್ರಣವಾಂಶಿಕೈಃ ॥

॥ರಹಸ್ಯೇ॥

ಪ್ರಣಮ್ಯ ದೇವದೇವಂತಂ ಶಿವಂ ಸರ್ವಮೂಮಾಬ್ರವೀತ್ ೧೮

ಸಮಾ ಚಕ್ಷೇತಿ ಸೋಂಕಾರಂಮಂತ್ರಷಡ್ವರ್ಣಕಂ ಪರಂ
ಓಂಕಾರಂ ನಾದರೂಪಂಚ ಓಂಕಾರಂ ಬಿಂದುರೂಪಕಂ ೧೯

ಓಂಕಾರಂ ವ್ಯಾಪಿಸರ್ವತ್ರ ಓಂಕಾರಂ ಗೋಪ್ಯಮಾನನಂ
ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡಉಚ್ಯತೇ ೨೦

ತೃತೀಯಂ ಕುಂಡಲಾಕಾರಂ ಚತುರ್ಥಂಚಾರ್ಧಚಂದ್ರಕಂ
ಪಂಚಮಂ ದರ್ಪಣಾಕಾರಂ ಷಷ್ಟಂಜ್ಯೋತಿಃಸ್ವರೂಪಕಂ ೨೧

ಇತಿಪ್ರಣವರೂಪಂಸ್ಯಾ ದೇತದ್ಗೋಪ್ಯಂ ವರಾನನೇ
ನಕಾರಂ ತಾರಕಸ್ಥಾನಂ ಮಕಾರದಂಡ ಉಚ್ಯತೇ ೨೨

ಶಿಕಾರಂ ಕುಂಡಲಾಕಾರಂ ವಕಾರಶ್ಚಾರ್ಧಚಂದ್ರಕಂ
ಯಕಾರಂ ಬಿಂದುರೂಪಂಚ ಪ್ರಣವಂ ಪಂಚವರ್ಣಕಂ ೨೩

ತಾರಕೇಸ್ಮಿನ್‌ಸ್ಥಿತೋಬ್ರಹ್ಮ ದಂಡೇವೈವಿಷ್ಣುರುಚ್ಯತೇ
ರುದ್ರಶ್ಚ ಕುಂಡಲಾಕಾರೇ ಚಾರ್ಧಚಂದ್ರೇ ತದೀಶ್ವರಃ ೨೪

ಬಿಂದೌ ಸದಾಶಿವಃ ಸಂಸ್ಥಃ ತೇಜೋರೂಪಂ ಕಳಾಪದೇ
ಏತದ್ಗುಣಾಶ್ರಯಂ ದೇವಿ ಪ್ರಣವಂಸರ್ವಕಾರಣಂ ೨೫

ಶ್ರುಣುದೇವಿ ಮಹಾಮಂತ್ರಂ ಸರ್ವಮಂತ್ರೇಶ್ವರಂ ವರಂ
ಭಜದ್ಭ್ಯೋಮುಕ್ತಿದಂ ಸಾಕ್ಷಾನ್ಮುಕ್ತಿದಂಚನಸಂಶಯಃ ೨೬

ತೈಲಧಾರಾ ಯಥಾಚಿಹ್ನಂ ದೀರ್ಘಘಂಟಾನಿನಾದವತ್
ಅವಾಚ್ಯಂ ಪ್ರಣವಸ್ಯಾಗ್ರಂ ಯಸ್ಸವೇತ್ತಿ ಸವೇದವಿತ್ ೨೭

ತಸ್ಮಾದುಚ್ಚಾರಣಾತ್ಸ್ವಯ್ಯಕ್ರಣವಸ್ಯ ಶಿವಾತ್ಮನಃ
ಪಾತಕಾನಿ ಹಿ ನಶ್ಯಸಂತಿಹೃದಿಧ್ಯಾತೇ ಪರೇ ಶಿವೇ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರಸ್ಯಾಸ್ಯಾದಿದೋಂಕಾರ ಶ್ಛಂದಸಾಮಿವ ಶೋಭನೇ
ಯೇನೇದಂ ಜಗದುತ್ಪನ್ನ ಮಸ್ಮಿನ್‌ರೂಪಾನುಸಾರಿಣಾ ೨೯

ನಾಮಾನ್ಯುದ್ಧಾರತಾಪ್ಯತ್ರ ತತಸ್ತನ್ಮಂತ್ರಲಕ್ಷಣಂ ॥
ಓಂಕಾರಂ ಪ್ರಣವಶ್ಚೈವ ಬ್ರಹ್ಮಜ್ಞಾನ ಶಿವಾತ್ಮಕೌ ೩೦

ತೇಜೋಬೀಜಂ ನಿಷ್ಕಲಸ್ಯತಾರಕಂ ನಿಷ್ಕಲಾತ್ಮಕಂ
ನಾದೋ ನಾದಾದಿಹೃನ್ನಾದೋ ವೇದಾದಿರ್ವೇದಭೂರಪಿ ೩೧

ಮುಕ್ತಿಬೀಜಂ ಮಂತ್ರಬೀಜಂ ವರ್ಣಬೀಜಂ ಮಹೇಶ್ವರಿ
ಅಷ್ಟಾದಶಪ್ರಭೇದಾನಿ ನಾಮಾನಿ ಪ್ರಣವಸ್ಯವೈ ೩೨

ಅವ್ಯಂಜನಮಘೋಷಂ ಸ್ಯಾದುಸ್ತರಾರೇಫವರ್ಜಿತಂ
ನತಾಲುಕಕಂಠಾನುನಾಸಿ ಕೋಷ್ಟಜಂ ಚಾಕ್ಷರಂ ತಥಾ ೩೩

ಓಂಕಾರಪ್ರಭವಾವೇದಾ ಓಂಕಾರಪ್ರಭವಾಸ್ಸ್ವರಾಃ
ಓಂಕಾರತ್ಪ್ರಭವಂಸ್ಸರ್ವಂ ತ್ರೈಲೋಕ್ಯಂ ಸಚರಾಚರಂ ೩೪

ಸರ್ವವ್ಯಾಪಕವೋಂಕಾರಂ ಮಂತ್ರಾನ್ಯತ್ರ ನ ಶೋಭಯೇತ್
ಪ್ರಣವೋ ಹಿ ಪರಬ್ರಹ್ಮಪ್ರಣವಂ ಪರಮಂಪದಂ ೩೫

ಸಾಕ್ಷಾತ್ಪರಶಿವೋಯೋ ಓಮಿತ್ಯುಕ್ತಕೋದ್ವಿತೀಯಕಃ
ಸಂಖ್ಯಾತಃಪರಮಾತ್ಮೇತಿ ತಸ್ಮಾನ್ನಾದ ಸಮುದ್ಧಿತಃ ೩೬

ನಾದಾದುತ್ಪದ್ಯತೇ ಬಿಂದುರ್ಬಿಂದೋರ್ಯಾ ಜಾಯತೇ ಕಳಾ
ಕಳಾಯಾಂ ಜಾಯತೇ ಶಕ್ತಿ ಸ್ವಯಾಸಂವಿತ್ಪ್ರಜಾಯತೇ ೩೭

ಸಂವಿದಾಜಾಯತೇ ಚಿತ್ಸಂತಸ್ತಾತ್ತೇಜಃ ಪ್ರಜಾಯತೇ
ತದ್ವೈಸದಾಶಿವಃ ಪ್ರೋಕ್ತಂ ತಸ್ಮಾದೀಶ್ವರಸಂಭವಃ ೩೮

ಈಶ್ವರಾಜ್ಜಾಯತೇರುದ್ರಃ ಸೃಷ್ಟಿವ್ಯಾಪಾರಕೋ ಹರಃ
ರುದ್ರಾತ್ಪ್ರಜಾಯತೇ ವಿಷ್ಣುರ್ವಿಷ್ಣೋಃ ಬ್ರಹ್ಮಾಪ್ರಜಾಯತೇ ೩೯

ಬ್ರಹ್ಮಣಾಜಾಯತೇದೇವಿ ಜಗತ್ಸರ್ವಂ ಚರಾಚರಂ
ಏತದ್ದೇವಿ ಮಯಾಪ್ರೋಕ್ತಂ ಪ್ರಣವಸ್ಸರ್ವದೇವತಾ ೪೦

ಎಲೆ ಕೆಂಚವೀರಾಖ್ಯಕೇಳಾ ಚಿದಂಬರಾ
ಮಲವಿಶೇಷಪ್ರಣವರುದ್ಭವತ್ರ್ಯಕ್ಷರೋ
ಜ್ವಲಸೃಷ್ಟಿಯಾ ಪ್ರಣವನಾಮಸೃಷ್ಟಿಗಳನಿನ್ನಾ ಷಡಕ್ಷರಭೇದವಾ
ನೆಲೆಯನಾ ಸೃಷ್ಟಿಯುಂ ತಿಳುಪುವೆಂ ಕೇಳೆಂದು
ಹಲಗೆಯಾರ್ಯಂ ನುಡಿಯತೊಡಗಿದಂ ಪಾಲ್ಸರಿಯ
ವೊಲುಸೊಂಪನಿಂಪನೊಳಕೊಂಡ ತಂಗಾಳಿಯಂದದೊಳದೇಂ ವಣ್ಣಿಸುವೆನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದಾ ರಹಸ್ಯದೊಳು ಕೇಳಯ್ಯ ಸತ್ಪ್ರಣವ
ವೊಂದಿನ ಷಡಕ್ಷರಿಯು ದಿವ್ಯವಿದ್ಯಂ ಜಪಾ
ನಂದರೂಪಂ ಸಜ್ಜನರ್ಗೆ ಚಾತುರ್ವರ್ಗ ಮೋಕ್ಷಮಂ ಕೊಡುವುದಾಗಿ
ಎಂದೆನಿಪುದೋಂಕಾರಮಂ ಪಿಂಗಿದೈದಕ್ಷ
ರಂ ದೇವಿ ಕೇಳು ಕೀರ್ತಿಯು ಮಹಾಜ್ಞಾನಿಯೆನೆ
ಸಂದ ಪಂಚಾಕ್ಷರಂ ಭಜಿಪುದೌ ತನ್ನಿಷ್ಟಸಿದ್ಧಿಗಂತಾ ಪ್ರಣವವಾ ೩೯

ಓಪಳೇ ಕೇಳು ಪಂಚಾಕ್ಷರಿಯೆ ತಾಂಪ್ರಣವ
ರೂಪವದು ನಿತ್ಯಂ ಓಂಕಾರಕ್ಕೆ ಬೇಱಿಲ್ಲ
ವೌ ಪರಮಸುಖವೀವ ಮಂತ್ರವಖಿಳವ್ಯಾಪಿಯೆಂದುಃ ಜಪಿಸುವರಾರ್ಯರು
ರೂಪಿಸಲು ಸಕಲಮಂತ್ರಕ್ಕೆ ಭೂಷಣವೆಂದು
ಭೂಪವಿತ್ರರ್ನೆರೆದು ಕೀರ್ತಿಸುವರೆಂದನಾ
ಶ್ರೀಪಾರ್ವತಿಯ ನಯನಕುಮುದಂಗಳಲರಿಸುವ ನಸುನಗೆಯ
ಮೊಗಚಂದಿರಂ ೪೦

ಮೊದಲಲ್ಲಿ ಸತ್ಪ್ರಣವವೆರಡಱೊಳು ಮೂಱಱೊಳು
ಸುದತಿ ನಮಃ ಶಬ್ದವಾ ನಾಲ್ಕಱಲ್ಲಿ ನೋ
ಡಿದೊಡೆವಾಂತದ ಶಕಾರಕ್ಕೆ ಮೂಱನೆಯಿಕಾರಸ್ವರಂ ಬೆರೆದೆಸೆವುದು
ಆದು ಶಿಕಾರಂ ನಾಲ್ಕುವುಂ ತದವಕಾರ ದೀ
ರ್ಘದೊಳೆಸೆವುದೈದು ಪಂಚಾಕ್ಷರಿಯೊಳೈದೆನಿಸು
ವುದು ಯಕಾರಂ ಪ್ರಣವಸಹಿತೋಂ ನಮಃ ಶಿವಾಯಾ ಯಿದು
ಷಡಕ್ಷರವಲ್ಲೆ ೪೧

ಧಾಂತದ ನಕಾರವಾ ಭಾಂತದ ಮಕಾರಮುಱಿ
ವಾಂತದ ಶಕಾರಕ್ಕೆ ಮೂಱನೆಯಿಕಾರಸ್ವ
ರಂ ತಳ್ತು ಕೂಡಿದ ಶಿಕಾರವಾ ಲಾಂತದ ವಕಾರ ಪಕ್ಷಸ್ವರದೊಳು
ಆಂತು ಕೂಡಿರ್ಪ ವಾಕಾರವಲ್ಲಿಂ ಮುಂದೆ
ಮಾಂತದ ಯಕಾರ ವೈಕಾರಾಂತದೋಂಕಾರ
ವಿಂತಪ್ಪ ಮಂತ್ರದಾದಿಯೊಳಿರ್ದುದೋಂ ನಮಶಿವಾಯಯೆಂಬಾಱಕ್ಕರಂ ೪೨

ಮೇಗೆ ಕೇಳೀ ಷಡಕ್ಷರಿ ವೇದ ಶಾಸ್ತ್ರಪರ
ಮಾಗಮಂಗಳೊಳಧಿಕನಖಿಲ ಮಂತ್ರಂಗಳನು
ರಾಗದಿಂದಿವಱೊಳಾಶ್ರಯಿಸಿಪ್ಪವವಱಿಷ್ಟಸಿದ್ಧಿಯಂ ಬೇಱ ಬೇಱಿ
ಸಾಗಿಸಿಕೊಡುತ್ತಿಪ್ಪವದುವೆ ಸಿದ್ಧಿಯನೀವು
ದಾಗಿ ಶೈವಾಗ್ರಮಂತ್ರಾಧಿಕ ಷಡಕ್ಷರಿಯ
ಲಾ ಗೌರಿ ಕೈಯೊಳಡಗಿರ್ದ ಚಿಂತಾರತ್ನದಂತಿಪ್ಪ ಫಲವೀವುದು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಾಗಿಯಧಿಕವೆಂದಱಿ ಮೋಕ್ಷವೀವ ನಿ
ಶ್ಚಿಂತಮಂತ್ರಾಧಿಪ ಷಡಕ್ಷರಿ ಷಡಂಗದಿಂ
ದಂ ತರುಣಿ ಪಟ್ಟಿತ್ತು ಷಷ್ಠಮಬ್ರಹ್ಮಮಯಮಾ ಮಹತ್ತೆಂದೆನಿಪುದು
ಕಾಂತೆಯೆನ್ನಿಂದನ್ಯವಾಗದಾ ಲೇಸೆನಿಸಿ
ಚಿಂತನೀಯಂ ಕಣಾ ಮುಕ್ತಿರೂಪೆಂದು ನೀಂ
ಶಾಂತಶುದ್ಧದೊಳಱಿವುದೆಂದು ಪೇಳಿದನೀಶನೆಲೆ ಕುಮಾರಕನೆ ಕೇಳು ೪೪

ಓಮಿತಿಯೆನಿಪ್ಪುದಂತೆಸೆವ ಪರಮಾತ್ಮನ ಮ
ಹಾಮಹೇಶನ ನಿಜಾಂಗಂ ವಿಚಾರಿಸಲಾಗಿ
ಭಾಮಿನಿಯೆ ಸದ್ಯಾದಿಮುಖವೆಂದು ಕೀರ್ತಿವೆತ್ತುದು ಕಣಾ ಪರಿಭಾವಿಸೇ
ಸಾಮರ್ಥ್ಯವಪ್ಪ ಪಂಚಬ್ರಹ್ಮಮಯವಿದೆಂ
ದಾ ಮೋಹದಿಂ ಪೇಳ್ದನೋಂಕಾರವೇ ತಿಳಿಯೆ
ಕೋಮಲೆ ಷಡಂಗಸದ್ಬ್ರಹ್ಮಲಕ್ಷಣವೆಂದನೈ ಕುಮಾರಕನೆ ಕೇಳು ೪೫

ದೇವಿ ನಲವಿಂ ಕೇಳುತಿರ್ದಳಾಬೌದಾದ
ವಾವವೆನಲೋಂಕಾರವಾದಿಯಯಕಾರಾಂತ
ವೇ ವಿಮಲವೆನಿಸುವಧಿದೈವಮಂತ್ರಾಧಿಕಷಡಕ್ಷರಂ ವರ್ಣವಾಱು
ಓವಿ ಬೀಜಂಗಳಾಱೌ ತತ್ವವಾಱು ಪರಿ
ಭಾವಿಸುವೊಡುತ್ತರದ ವಾತೂಳತಂತ್ರದೊಳ
ಗಾ ವಿವರಮಂ ಪೇಳ್ವೆವೆಂದು ಬಿತ್ತರಿಸಿದಂ ಭಕ್ತಜನಸುರಭೂರುಹಂ ೪೬

ತರುಣಿ ಕೇಳಾಯಕಾರಂ ವಿಚಾರಿಸಲಾಗಿ
ಪರಿಪೂರ್ಣವದು ಬಳಿಕವಾಕಾರವೇ ನಿತ್ಯ
ಒರೆವೊಡಾನಂದವೇ ಶಿಕಾರಂ ಮಕಾರವೇ ಚಿದ್ರೂಪವಾ ನಕಾರಂ
ಪರಿಕಿಸಲು ಸದ್ರೂಪವಾ ಪ್ರಣಮವೆ ತಳೋ
ದರಿ ಮಿಶ್ರಮೆಂದಾ ಷಡಕ್ಷರಿಯ ಬಗೆಯ ಬಿ
ತ್ತರಿಸಿದಂ ಯೋಗಿಗಳ ಹೃದಯವೆಂಬರಮನೆಯ ತೇಜದುನ್ನತರಾಜನು ೪೭

ಪರವಾಯಕಾಗವಾ ಗೂಢವೇ ವಾಕಾರ
ವಿರೆ ಶರೀರಸ್ಥಂ ಶಿಕಾರಂ ಮಕಾರವುರು
ತರದ ಲಿಂಗಕ್ಷೇತ್ರವಂತನಾದಿಯೆ ನಕಾರಂಗಳಿವನೆಯ್ದೆ ತನ್ನಾ
ಇರವಿನೊಳು ಕೂಡಿಕೊಂಡೀ ಪಂಚಸಜ್ಞೆಯಿಂ
ನಿರುಪಮ ಮಹಾಸಂಜ್ಞೆತಾನಾಗಿ ಸತ್ಪ್ರಣವ
ವರರೆ ಸದ್ಭಕ್ತಹೃನ್ನಿಲಯದೊಳು ಕೂರ್ತು ಹೆಜ್ಜೊಡರಾಗಿ ಬೆಳಗುತಿಹುದು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಯಕಾರಂ ಪರಾಶಕ್ತಿ ವಾಕಾರವೇ
ನ್ಯಾಯದಿಂದೆಸೆವಾದಿಶಕ್ತಿಯಾ ನೈರ್ಮಲ್ಯ
ಕಾಯಳೇ ಕೇಳಾ ಶಿಕಾರವಿಚ್ಛಾಶಕ್ತಿಯಾ ಮಕಾರಂ ಜ್ಞಾನವು
ಓರದಿಂ ನಕಾರಂ ಕ್ರಿಯಾಶಕ್ತಿ ನಿ
ರ್ಮಾಯದೋಂಕಾರವೇ ಚಿಚ್ಛಕ್ತಿಯೆಂದು ನಿರ
ಪಾಯ ನಿರ್ಗುಣ ನಿಷ್ಕಳಂಕನೊರೆವುತ್ತಿರ್ದನೈ ಕುಮಾರಕನೆ ಕೇಳು ೪೯

ಮಾದೇವಿಕೇಳಾ ಯಕಾರವೇಕರ್ತೃ ಶಿವ
ಸಾದಾಖ್ಯವೆಸೆವ ವಾಕಾರವೆಯಮೂರ್ತಿಯಹ
ಸಾದಾಖ್ಯವಾ ಶಿಕಾರಂ ಮೂರ್ತಿಸಾದಾಖ್ಯವಾ ಮಕಾರಾಗ್ರಕರ್ತೃ
ಸಾದಾಖ್ಯವಾ ನಕಾರಂ ಕರ್ಮಸಾದಾಖ್ಯ
ವಾ ದೇವಿಯೀ ಪಂಚಸಾದಾಖ್ಯಮಂ ಕೂಡಿ
ಭೇದವಿಲ್ಲದೆ ಮಹಾಸಾದಾಖ್ಯವಾದುದಂತಾ ಪ್ರಣವಮವಾನಂದದಿಂ ೫೦

ಸುದತಿ ಕೇಳೀಶಾನ್ಯವಕ್ತ್ರಂ ಯಕಾರಮೆ
ನ್ನಿರ್ದವನೆಯು ನೀಂ ವಾಕಾರವೇ ತತ್ಪುರುಷ
ವದನಂ ಶಿಕಾರವಂತೆಸೆವ ಘೋರಾಸ್ಯಂ ಮಕಾರವೇ ವಾಮದೇವ
ವದನಂ ನಕಾರವಂತೆಸೆವ ಸದ್ಯೋಜಾತ
ವದನವಾ ಪ್ರಣವವಿಂತಿವನೆಯ್ದೆ ತನ್ನಲ್ಲಿ
ಪುದಿದುಕೊಂಡಿಪ್ಪುದಾ ಗೋಪ್ಯಮುಖವೆಂದನಮರರಮಕುಟಮಣಿ
ಚರಣನು ೫೧

ಜ್ಞಾನವೇ ಪ್ರಣವಬೀಜಂ ನಕಾರಂ ಕೇಳು
ಮಾನಿನಿ ಸದಾಚಾರವಾ ಮಕಾರಂ ಗುರು
ಸ್ವಾನುಭಾವದ ಬೀಜವಾ ಶಿಕಾರಂ ಕರ್ತೃ ಶಿವಲಿಂಗವೆಂದೆನಿಪುದು
ನೀನೆಯಱಿ ವಾಕಾರವೆಸೆವ ಚರಬೀಜವಂ
ತಾ ನಿಯತವೆನಿಸುವ ಯಕಾರಂ ಪ್ರಸಾದವೀ
ಯಾನಂದ ಬೀಜಾಕ್ಷರಂಗಳಿರವಂ ತಿಳಿಯೆ ದುರ್ಲಭಂ ಕಮಲಾನನೇ ೫೨

ಶರಣನೆ ಯಕಾರವಂತೆಸೆವ ವಾಕಾರವೇ
ನಿರುಪಮ ಪ್ರಾಣಲಿಂಗಿಯಲಾ ವಿಚಾರಿಸಲು
ಪರಮಪ್ರಸಾದಿಯೇ ಶಿಕಾರವೊಪ್ಪುವ ಮಕಾರಂ ಮಹೇಶ್ವರನೆಂದಱಿ
ಗಿರಿಜೆ ಕೇಳಾ ನಕಾರಂ ಭಕ್ತನಾ ಪ್ರಣವ
ಉರುತರೈಕ್ಯಸ್ಥಲಂ ನಾಡೆ ಷಡ್ವರ್ಣಂಗ
ಳಿರವಧಿಕಗೋಪ್ಯವೆಂದಱಿ ವರಾನನೆಯೆಂದು ಪೇಳ್ವವಖಿಳಕೊಡೆಯನು ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಸೆವ ಸುಜ್ಞಾನಹಸ್ತಂ ಯಕಾರಂ ಕಣಾ
ಮಿಸುಪ ಸುಮನೋಹಸ್ತವಧಿಕ ವಾಕಾರವಂ
ನಸುವಪ್ಪ ವನಿತೆ ನಿರಹಂಕಾರವೇ ಶಿಕಾರಂ ಮಕಾರಂ ಭಾವಿಸೇ
ಪೊಸತಾ ಸುಬುದ್ಧಿಹಸ್ತಂ ನಕಾರಂ ವಿಚಾ
ರಿಸೆ ಸುಚಿತ್ತಂಗಳಿವನೊಳಕೊಂಡ ಸತ್ಪ್ರಣವ
ವಸಮುಸದ್ಭಾವಹಸ್ತಂ ತಿಳಿಯೆ ಭಾವಾದಿ ಷಡುಹಸ್ತವರ್ಣವಟಿಯೊ ೫೪

ಉರುತರರಹಸ್ಯದೊಳಗೋಂಕಾರವೇ ಕಣಾ
ಪರಶಿವಂ ಬಳಿಕಾ ಯಕಾರವೆ ಸದಾಶಿವಂ
ಪರಿಕಿಸಲು ವಾಕಾರವೀಶಂ ಶಿಕಾರವೇ ರುದ್ರಂ ಮಕಾರವೆರಡು
ವರ ಬಿಂದುವಿಂ ವಿಷ್ಣುವಾ ನಕಾರಂ ಕೇಳು
ತರುಣಿಯಾ ಬ್ರಹ್ಮನಿವನಾ ಸೃಷ್ಟಿಯಿರದಱಿವ
ಪರವಿಲೋಮಂ ಕೇಳೆನುತ್ತಲೊರೆದಂ ತನ್ನ ಮನದನ್ನೆಗಾ ಶಂಕರಂ ೫೫

ನಾರಿ ವರ್ಣಾತೀತವಪ್ಪದೋಂಕಾರಂ ಯ
ಕಾರವಾ ಸ್ಫಟಿಕವರ್ಣಂ ಬಳಿಕವಾಕಾರ
ವಾರಯ್ಯಲಾ ಬಿಳಿದಲಾ ಶಿಕಾರಂ ನೀಲವರ್ಣಂ ಮಕಾರವಲ್ಲೀ
ಶ್ರೀರತ್ನಸಂಕಾಶವಾ ನಕಾರಂ ಪೀತ
ವೌ ರಮಣಿ ಅಂಕಾರಸರ್ವಾಕ್ಷರಂ ಕಣಾ
ಗೌರಿ ಸರ್ವಕ್ಕೆ ಕಾರಣವಲಾ ಪ್ರಣವವೆಂದೊರೆದನಾ ಸರ್ವೇಶ್ವರಂ ೫೬

ವ್ಯೋಮಬೀಜಂ ಯಕಾರಂ ತಿಳಿಯೆ ವಾಕಾರ
ವಾ ಮಹಾವಾಯುಬೀಜಂ ಶಿಕಾರಂ ಕೇಳು
ಭಾಮೆಯದು ವಹ್ನಿಬೀಜಂ ಮಕಾರಂ ವಾರಿಬೀಜವಂತಾ ನಕಾರಂ
ಭೂಮಿಬೀಜಂಗಳಿವಱಿಂ ಲೋಕದುದ್ಭವಂ
ತಾಮರಸನೇತ್ರೆ ಕೇಳಾ ಪ್ರಣಮವೇ ಸರ್ವ
ಸಾಮರ್ಥ್ಯತತ್ವಾತ್ಮಕಂ ಪರಶಿವಂ ಕೇಳೆನುತ್ತಗಜೆಗೊರೆದನೀಶಂ ೫೭

ಗೌರಿಯೆ ಯಕಾರವೀಶ್ವರತತ್ವವೆಸೆವ ವಾ
ಕಾರವೆ ಮಹೇಶ್ವರಂ ಕೇಳಾ ಶಿಕಾರವಂ
ತಾ ರಮ್ಯವಪ್ಪ ಶಿವತತ್ವಂ ಮಕಾರವೆ ಮಿಸುಪ ವಿದ್ಯಾತತ್ವವು
ಆರಯ್ಯಲಾ ನಕಾರಮದಾತ್ಮತತ್ವಂ ವಿ
ಚಾರಿಸಲು ಸರ್ವತತ್ವಾತ್ಮಕಂ ಪ್ರಣಮವೆಂ
ದೋರಂತೆ ಬಿತ್ತರಿಸಿದಂ ಗಣಂಗಳ ಮನೋಹರುಷವಾರಿಧಿಚಂದ್ರನು ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂಕಾರವೇ ಕೇವಲ ಜ್ಞಾನವೆಲೆ ನಾರಿ
ಯಂಕಿಸೆ ಯಕಾರವೇ ವೇದಸಾಹಸ್ರಂ ಶು
ಭಾಂಕೆ ವಾಕಾರವೆಯಥರ್ವಣಂ ಮಿಗೆ ಶಿಕಾರಂ ಸಾಮವೇದವಲ್ಲಿ
ನೀಂ ಕೇಳ್ವುದಾ ಮಕಾರಂ ಯಜುರ್ವೇದವೆಲೆ
ಪಂಕಜಾನನೆಯೆ ರುಗ್ವೇದಂ ನಕಾರವಮದ
ಱಂ ಕೋಟಿವೇದಕಂ ತಂದೆಯೆಂದೆನಿಪುದು ಷಡಕ್ಷರಂ ಸಂತಸದೊಳು ೪೯

ವೇದಂಗಳಾ ಸ್ವರಂಗಳು ಮಂತ್ರತತಿಗಳಿಂ
ತಾದರ ಪ್ರಣವದೊಳಗುದ್ಭವಿಸಿದವು ಕಣಾ
ಮಾದೇವಿಯೋಂಕಾರವೇ ಕೇಳು ಪರಮೇಶ್ವರಂ ಪರಾತ್ಪರವಂತದು
ಆದಿ ಓಂಕಾರಂ ಯಕಾರಾಂತ ಮಂತ್ರವೇ
ವೋದದಿಂ ಕೀರ್ತಿವೆತ್ತುದು ಷಡಕ್ಷರ ಶಿವಾ
ಹ್ಲಾದ ಸುಜ್ಞಾನ ಶಿವರೂಪ ಶಿವನಾಮವಾ ಸರ್ವಸಿದ್ಧಿಯ ಮಾಳ್ಪುದು ೬೦

ಶಾಂತನಾ ಸರ್ವಲೋಕದೊಳು ಸತ್ಕೀರ್ತಿಯುಮ
ನಾಂತುದು ಷಡಕ್ಷರಂ ಕೇಳು ಮನ್ಮೋಹನದ
ಕಾಂತೆಯಾ ಪಂಚಭೂತಂ ಸರ್ವವಾ ಪಂಚತನ್ಮಾತ್ರೆ ಪಂಚೇಂದ್ರಿಯ
ಸಂತತಿಯುಮಾ ಪಂಚಕರ್ಮೇಂದ್ರಿಯಂಗಳುಂ
ಮುಂತೆ ಪಂಚಬ್ರಹ್ಮ ಪಂಚಸತ್ಕೃತ್ಯಂಗ
ಳಿಂತು ಸಹಕಾರಿಗಳು ಬೋಧ್ಯಂಗಳೈದುವರ್ಣಂಗಳೀ ಪಂಚಾಕ್ಷರಂ ೬೧

ಈ ತೆಱದೊಳೈದೈದುಮಾಗಿ ವೆಗ್ಗಳದೊಳಾ
ಖ್ಯಾತಿವಡೆದಖಿಳ ವಸ್ತುಗಳು ಪಂಚಾಕ್ಷರ
ಜ್ಯೋತಿಯೊಳಗಿಪ್ಪವು ಶಿವೇಶ್ವರ ಪರಾತ್ಮಾದಿಕ್ಷುನಾಮಧೇಯಂಗಳೆಯ್ದೆ
ಸಾತಿಶಯದಿಂದಗೋಚರವಾ ಮುಮುಕ್ಷು ಹೃ
ತ್ಪ್ರೀತಮುಪಮಾತೀತವುನ್ನತಧ್ಯಾನವೆಂ
ದೋತು ಪೇಳಲುಪಡುವುದತಿಸತ್ಯ ಮುಕ್ತಿಯುಂ ಕೊಡುವುದಿದು ಕೇಳು
ಗಿರಿಜೆ ೬೨

ನೆನೆಯಲಿದನಭ್ಯಾಸಯೋಗವಂ ಮಾಡುತಿಹ
ಮನುಜಂಗೆ ಮುಕ್ತಿಯಹುದಿಹದಲ್ಲಿ ರುದ್ರನವ
ನಿನಿಯಳೇ ರಹಸ್ಯವಿದು ಮಿಗಿಲು ಗೋಪ್ಯವ ಮಾಡಬೇಕಾದುದೆಲೆ ವಲ್ಲಭೇ
ಘನ ಶಿವಾಗಮದಲ್ಲಿ ವರ್ತಿಸದ ಮಿಗೆ ದಂಭ
ನೆನಿಪ ವಿಷಯಾಂಧಂಗೆ ಸಂಚಲಂಗಜ ದುಷ್ಟ
ಜನಕಾವ್ರತಭ್ರಷ್ಟಸಂತತಿಗೆ ನಾಡೆ ದುಷ್ಟಾಹಾರಿಗಾ ದುಃಖಿಗೇ ೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೊಡವಿಯೊಳಗನ್ಯದೈವಕ್ಕೆಱಗುವರ್ಗಳಿಗೆ
ನುಡಿಯದಿಹುದೀ ಶಾಸ್ತ್ರಮಂ ಪೇಳದೀ ಸಿದ್ಧಿ
ಕೆಡುವುದು ಗಿರೀಂದ್ರಜೆ ಗೋಪ್ಯಮಂ ಮಾಡಬೇಕಿದಃ ನಿಜಂ ಮುಂದೆ ಕೇಳು
ಮೃಡಭಕ್ತರಿಗೆ ಸದ್ದೈವರ್ಗೆ ನಿಯತಾತ್ಮರ್ಗೆ
ದೃಢವಾದ ಸದವೃತರ್ಗೆ ಸತ್ಯಾತ್ಮರ್ಗೆ
ಕೊಡುವುದಾ ಮುಕ್ತಿಕಾಂತಾಭಿಲಾಷರ್ಗೆಂದು ಮತ್ತೆ ನುಡಿದಂ ಶಂಕರಂ ೭೪

ಲಿಂಗನಿಷ್ಠರಿಗೆ ನಿತ್ಯರಿಗಖಿಳವಾದ ವಿ
ದ್ಯಂಗಳಂ ಮಂತ್ರಾಂತರಂಗಳಂ ಬಿಟ್ಟರ್ಗೆ
ಸಾಂಗದ ಸದಾಚಾರಮಂ ಪ್ರತಿಷ್ಠಿಸುವರ್ಗೆಯಾ ಷಡಾಕ್ಷರಮಂತ್ರವಾ
ಪಿಂಗದಿಹ ಶೈವರ್ಗೆ ಪೇಳ್ವುದೌ ವರ ಸರ್ವ
ಮಂಗಲೆಯೆ ಮಂತ್ರಮಂಡನವಿದಖಿಳೇಷ್ಟದ
ರ್ಥಂಗಳಂ ಕೊಡುವುದೆಂದುಸುರಿದಂ ಸರ್ವೇಶನಾ ನಗಾಧಿಪನಣುಗಿಗೆ ೭೫

||ಸಾಕ್ಷಿ|| ರಹಸ್ಯೇ–

ವಿದ್ಯಾ ಷಡಕ್ಷರೀಪ್ರಣವೇನ ಸಮನ್ವಿತಾ
ಜಪ್ಯಾಯದಾತ್ಮಭಿರ್ನಿತ್ಯಂ ಚತುರ್ವರ್ಗಫಲಪ್ರದಾ ೪೧

ಆದೌತು ಪ್ರಣವಂ ವಿಂದ್ಯಾ ನ್ನಮಶಬ್ದಂ ದ್ವಿತೀಯಕಂ
ತೃತೀಯಂ ಸ್ವರಸಂಯುಕ್ತಂ ಯವರ್ಣೇ ಪಂಚಮಾಕ್ಷರಂ ೪೨

ಲಾಂತಂ ಪಕ್ಷಸ್ವರೂಪೇತಂ ವಾಂತಂ ಮಂತ್ರಮಿತಿ ಕ್ರಮಾತ್
ಧಾಂತಂ ಭಾಂತವಾಂತಂತು ತೃತೀಯಸ್ವರ ಭೂಷಿತಂ ೪೩

ಅತ ಓಂಕಾರಸಂಪ್ರೋಕ್ತಂ ಷಡಂಗಂ ಬ್ರಹ್ಮಲಕ್ಷಣಂ
ಓಂಕಾರಾದಿ ಯಕಾರಾಂತಂ ಮಂತ್ರಮೇತತ್ ಷಡಕ್ಷರಂ ೪೪

ತದ್ಯಥಾ ಉತ್ತರವಾತೂಲೇ–

ಯಕಾರಂ ಪರಿಪೂರ್ಣತ್ವಂ ವಾಕಾರಂ ನಿತ್ಯಮೇವಚ
ಆನಂದಂಚ ಶಿಕಾರಶ್ಚ ಮಕಾರಂ ಚಿತ್ಸ್ವರೂಪಕಂ ೪೫

ನಕಾರಂ ಸತ್ಸ್ವರೂಪಂಚ ಪ್ರಣವಂ ಮಿಶ್ರರೂಪಕಂ
ಯಕಾರಂ ಪರಸಂಜ್ಞಂಚ ವಾಕಾರಂ ರೂಢಮೇವಚ ೪೬

ಶರೀರಸ್ಥಂ ಶಿಕಾರಶ್ಚ ಲಿಂಗಕ್ಷೇತ್ರಮಕಾರಕಂ
ನಾರ್ನಂಚಾನಾದಿ ರೂಪಂ ಚ ಓಂಕಾರಂಚ ಮಹತ್ಸ್ಮೃತಂ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂಕಾರ ಮೈಕ್ಯರೂಪಂಚ ಯಕಾರಂ ಶರಣಸ್ತಥಾ
ವಾಕಾರ ಪ್ರಾಣಲಿಂಗೀಚ ಶಿಕಾರಂಚ ಪ್ರಸಾದಿಕಂ ೪೮

ಮಕಾರಂ ಚ ಮಹೇಶಸ್ಯ ನಕಾರಂ ಭಕ್ತಮೇವ ಚ
ಷಟ್‌ಸ್ಥಲಂ ಚ ಷಡ್ವರ್ಣಂತು ಇತಿ ಗೋಪ್ಯಂ ವರಾನನೇ ೪೯

ರಹಸ್ಯೇ–

ಓಂಕಾರಃಸ್ಯಾತ್ ಪರಶಿವೋ ಯಕಾರಸ್ತು ಸದಾಶಿವಃ
ಸ್ಯಾದೀಶ್ವರೋಽಯಂ ವಾಕಾರಃ ಶಿಕಾರೋ ರುದ್ರ ಉಚ್ಯತೇ ೫೦

ವಿಷ್ಣುರ್ಮಾನಂ ಸದ್ವಿಬಿಂದು ಬ್ರಹ್ಮಾನಾರ್ನಮಿತಿಕ್ರಮಾತ್
ಸೃಷ್ಟಿಮಾರ್ಗೇ ಕೋ ಜಾನೀಯ ಜಪ್ಯಮೇವಂ ವಿಲೋಮತಃ ೫೧

ಷಡಕ್ಷರಸ್ಯ ಮಂತ್ರಸ್ಯ ಶೈವಸ್ಯ ಪರಿಕೀರ್ತಿತಃ
ಮಂತ್ರಮಂಡನ ವಿಖ್ಯಾತಂ ಕಲ್ಪಸಂಕಲ್ಪಿತಾರ್ಥದಂ ೫೨

ವರಚಿದಂಬರ ಮಹಾಪ್ರಣವಸ್ವರೂಪವುರು
ತರ ಮಹಾ ತ್ರ್ಯಕ್ಷರೋತ್ಪತ್ತಿಯಾ ಪ್ರಣವಸೌಂ
ದರನಾಮಮಾ ಪ್ರಣವಸೃಷ್ಟಿಯಾಅಕ್ಕರದ ರೂಪವಲ್ಲಿಯ ಸೃಷ್ಟಿಯಾ
ಪರಮಪಂಚಾಕ್ಷರಿಯಮೆಂದೆನುತ ನಂಜುಂಡ
ಚರಪತಿಯ ಮುಂದೆ ತತ್ಕೆಂಚವೀರಾಖ್ಯಂಗೆ
ಗುರು ಹಲಗೆಯಾರ್ಯನೊರೆದುದ ಪದನ ಮಾಡಿದಂ ಶ್ರೀಮಲ್ಲಣಾ
ಚಾರ್ಯನೂ ೬೬

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಲಸತ್ಪ್ರಣವಸೃಷ್ಟಿಯ ಷಡಕ್ಷರಿ ಪಂಚವರ್ಣವೆನಿಪಯಿದು ಸಂಧಿ ೬೭

ಅಂತು ಸಂಧಿ ೫ಕ್ಕಂ ಪದನು ೨೮೭ ಕ್ಕಂ ಗ್ರಂಥ ೧೪೭ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ : ೬

ಸಾದರದೆ ಶಿವಶಕ್ತಿಯಾ ಪರಾಶಕ್ತಿಯಿ
ನ್ನಾದಿಯಿಚ್ಛಾಕ್ರೀಯಜ್ಞಾನ ಶಕ್ತಿಗಳಸಂ
ಮೋದದಿಂ ಸೃಷ್ಟಿಪುದನಾದಿ ಬಾವನ್ನಮೂರ್ತಿಗಳಿರವನೊರೆದನಾರ್ಯಂ॥

ಶೂಲಡಮರುಗಹಸ್ತ ಕಾಲಸಂಹರಶಸ್ತ
ನೀಲಗಳ ನಿರ್ಮಾಯ ಶೈಲಜಾಂಕಿತಕಾಯ
ಬಾಲಪಾವಕನೇತ್ರ ಶೀಲ ಜನನುತಿ ಪಾತ್ರ ಮೀಲಬಿಲಸಖ್ಯಮುಖ್ಯಾ
ಸ್ಥೂಲ ದುಷ್ಟಾರಿಸವ್ಯಾಲಸುಪರಿಷ್ಕಾರಿ
ಕೋಲ ಹರಿಲೀಲ ಘನಮೂಲಸಂಹಾರ ಕು
ದ್ದಾಲಶಮಿತೋದ್ಗರಜ್ವಾಲಗುಣಲೋಲ ಮಾಂ ಪಾಲ ಜಯಶಾಂತಮಲ್ಲ ೧

ನಿನ್ನ ವಚನಕ್ಕೆಯಾ ಸ್ವರ್ಗಸ್ಥವಾಯ್ತುಮರ್ದು
ನಿನ್ನ ಕೋಪಕ್ಕೆ ನೀರ್ವೊಕ್ಕುದಾ ವಡಬಾಗ್ನಿ
ನಿನ್ನ ಶಾಂತಿಗೆ ಭಯದೊಳಾ ಬಟ್ಟಬಯಲಲ್ಲಿ ತೊಳಲುತಿರ್ದಂ ಚಂದ್ರಮಂ
ನಿನ್ನ ಕೀರ್ತಿಗೆ ಶುಭ್ರವಸ್ತುಗಳೊಳಾ ಕಾಳಿ
ಮಂ ನೆಲಸಿತೆಂದು ಕೊಂಡಾಡೆ ರಾಜಿಸುವ ಸಂ
ಪನ್ನ ಮೇಲಣಗವಿಯ ಶಾಂತನಂಜೇಶ ಜಯ ಜಯ ದಿವ್ಯ ಸುಪ್ರಕಾಶ ೨

ಗುರುವೆ ನಿನ್ನಯ ವಚನದೊಂದು ಸವಿಗಳ್ಕಿಯಾ
ಸುರಲೋಕಮಂ ಪೊಕ್ಕುದಮರ್ದು ಮೆಳೆಯಲ್ಲಿ ಮೈ
ಗರೆದತ್ತು ಜೇಂಗೊಡಂ ಪುಲ್ಲೊದಕೆವೋಯ್ತು ರಸದಾಳಿ ಗರ್ದೆಯನೊಂದಿತು
ಶರಧಿಯ್ಯೈದಂ ದಾಂಟಿ ನಿಂದುದಾ ಪಾಲ್ಗಡಲು
ಪರಮದೇಶಿಕ ಜನ್ಮ ಜನ್ಮಾಂತರಂಗಳೊಳ
ಗರರೆಯಾನೇಂ ಧನ್ಯನೋಯೆಂದು ಕೀರ್ತಿಸಿದನಾ ಕೆಂಚವೀರಾಪ್ಪಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಕೀರ್ತಿಸಿ ಚಿದಂಬರಮಹಾಪ್ರಣವರೂ
ಪಂ ತತ್ರಿಯಾಕ್ಷರೋತ್ಪತ್ತಿಯಾ ಪ್ರಣವನಾ
ಮಾಂತರದಿನಾ ಸೃಷ್ಟಿಮಿಗೆ ಷಡಕ್ಷರರೂಪವಾ ನಿರ್ಮಿತಂ ಸರ್ವವು
ಕಾಂತ ಪಂಚಾಕ್ಷರವೆನಿಪ್ಪುದಂ ತಿಳುಪಿದಿರಿ
ಮುಂತೆನಗೆ ಬೋಧೆಯುಂ ಪೇಳಬೇಕೆಂದ ನಿ
ಶ್ಚಿಂತ ನಿಜ ಕೆಂಚವೀರಾಖ್ಯಂಗೆ ನುಡಿದರಾ ವೀರಹಲಗೆಯದೇವರು ೪

ಘನಸಚ್ಚಿದಾನಂದ ನಿತ್ಯಪರಿಪೂರ್ಣ ಪಾ
ವನ ಲಸದ್ಬ್ರಹ್ಮವಾ ಭಕ್ತನಂತಾ ಭಕ್ತ
ನನಘ ಹೃದಯದೊಳು ಜಂಗಮವಲಾ ಜಂಗಮದ ಮುಕುಟದೊಳು ಶೂನ್ಯಲಿಂಗ
ತನುಜಕೇಳಾ ಶೂನ್ಯದಿಂ ಚಿದಂಬರವಾದು
ದೆನಿಸಿತು ಚಿದಂಬರದೊಳೆಸೆವ ಶಿವಶಕ್ತಿಗಳ
ಜನನವದಱಿಂದಪ್ಪ ಭೇದಮಂ ಬಿತ್ತರಿಪೆನೆಲೆ ಮೋಕ್ಷಮಾರ್ಗಿ ಕೇಳಾ ೫

ವರ ಶಿವಾಗಮದಲ್ಲಿ ಶಂಕರಂ ಪೇಳ್ದನೆಲೆ
ಗಿರಿಜೆ ಕೇಳಾ ಗೋಪ್ಯವಖಿಳಲೋಕಂಗಳೊಳ
ಗರರೆ ದುರ್ಲಭವಲಾ ಬ್ರಹ್ಮಾಂಡದುದ್ಭವದ ಭೇದಮಂ ಪೇಳ್ವೆ ನಾನು
ಪರಶಿವಂ ಬ್ರಹ್ಮವೆಂದೆಯ್ದೆ ಪೇಳುವುದು ಸುರು
ಚಿರ ಶಕ್ತಿಯಂಗವಾ ಶಿವಶಕ್ತಿಯೋಗವೀ
ಧರೆಯ ಸೃಷ್ಟಿಗೆ ಕಾರಣಂ ಕಣಾ ನಿಜವೆಂದನೀಶ ದಿವ್ಯಪ್ರಕಾಶ ೬

ಹಿರಿದಿಂಗೆ ಹಿರಿದಾದ ಕಥನದಿಂ ಬ್ರಹ್ಮವೆಂ
ದಿರದೆ ಪೇಳಿಸಿಕೊಂಬುದದುಕಾರಣಂ ಬ್ರಹ್ಮ
ದಿರವನುಸುರುವೆನದೆಂತಾ ಬ್ರಹ್ಮವಾಱು ತೆಱನಾದುದದನುದ್ಧರಿಸುವ
ಪರಿಯ ಕೇಳೇಳು ರೇಖೆಯ ಮೇಲಣಿಂ ಕೆಳಗು
ವರೆ ತೆಗೆಯಲವು ನೀಳವಡ್ಡರೇಖೆಯು ನೆಳೆಯೆ
ತರುಣ ನೀಂ ತೆಗೆದು ತೋಡಿದೊಡೆಯಾಱಾಱು ಮನೆ ಕೂಡಿ
ಮೂವತ್ತಾಱಿಲ್ಲೈ ೭

ಬಳಿಕ ನೀಳದ ರೇಖೆಗಳನುದ್ದವಂ ಮಾಡ
ಲೆಳಸಿ ಮತ್ತಾಱಾಱುಮನೆಯ ಪಂಙ್ತಿಯ ಮೇಲೆ
ನಿಳಯುವಹವಾ ಬ್ರಹ್ಮವಾಱಕ್ಕೆಯಡ್ಡರೇಖೆಗಳನುನ್ನತವನೆಸಗಿ
ವಿಲಸದಿಂ ಬಲದ ಭಾಗದೊಳು ಮತ್ತೊಂದುವ
ಗ್ಗಳರೇಖೆದೆಗೆಯೆ ನೀಳಕ್ಕೆ ಪನ್ನೆರಡು ಮನೆ
ಗಳು ಕಡೆಯೊಳಾಱು ಶಕ್ತಿಗಳೇಱೆಯವಱಂಗವಾಱ ಬರೆವುದು ಕುಮಾರಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಱಾಱು ಮನೆಯ ಮೇಲಿಪ್ಪ ಷಡ್ಬ್ರಹ್ಮಮುಂ
ನೀಱೆ ಕೇಳಾ ಪರಂ ವಿಜ್ಞಾನವೆಸಕದಿಂ
ತೋಱುತಿಪ್ಪಾನಂದಮುಂ ಕಲಾಪಿಂಡಮೂರ್ತಿಬ್ರಹ್ಮವೆಂಬ ಪೆಸರ
ಆಱು ತೆಱದಾ ಬ್ರಹ್ಮಮಂ ಕೇಳಿದಾ ಬಳಿ
ಕ್ಕಾಱಾಱು ತೆಱನಲಾ ಪ್ರತ್ಯೇಕವದನೆ ನಲ
ವೇಱೆ ಪೇಳ್ವೆಂ ಮೇಲಣಾ ಬ್ರಹ್ಮದಿಂದಿಳಿದ ಪಙ್ತಿಗಳ ನೋಡು ಮೊದಲು ೯

ಶಿವನುಮಾ ಕ್ಷೇತ್ರಜ್ಞ ಕರ್ತಾರಭಾವಮುಂ
ತವೆ ಮಹಾ ಚೈತನ್ಯವಂತರವೆನಿಪ್ಪುವಿಂ
ತಿವು ಷಡ್ವಿಧಂಗೂಡಿಯಾ ಪರಬ್ರಹ್ಮವಾವೊಂದು ಮನೆಗೊಪ್ಪುವೆರಡು
ಭವನದ ಸದಾಶಿವನುಮಾಕಾಶ ಶಬ್ದಮೊ
ಪ್ಪುವ ವಿಲಸಿತಜ್ಞಾನಮುಂ ಶ್ರೋತ್ರವಾಕ್ಕುಗ
ಳ್ಕುವರ ಕೇಳಾಱೆಕೊಂದಿ ವಿಜ್ಞಾನವೆಂಬ ಸದ್ಬ್ರಹ್ಮವಾದುದು ಬಳಿಕ್ಕ ೧೦

ಅವಱಂತೆ ಮೇಲಣೆಂ ಕೆಳಗಿಳಿದ ಪಙ್ತಿಯೊಳು
ಕುವರ ಕೇಳೀಶ್ವರಂ ವಾಯುವಾ ಸ್ಪರುಶವಾ
ತವೆ ಮನಂ ತ್ವಕ್ಪಾಣಿಯಾಱೆಕೊಂದಿದಾನಂದ ಸದ್ಬ್ರಹ್ಮವಾಯ್ತು ಮೂಱು
ಭವನಕ್ಕೆ ಬಳಿಕ ರುದ್ರಂ ವಹ್ನಿರೂಪಮೊ
ಪ್ಪುವನಾಂತಹಂಕಾರನೇತ್ರಪಾದಂಗಳಾ
ಱಿವು ಕೂಡಲಾ ಕಲಾಬ್ರಹ್ಮವೆಂದಱಿ ನಾಲ್ಕು ಮನೆಯಲ್ಲಿ ಮುಂದೆ ಕೇಳು ೧೧

ಎಸೆವೈದನೆಯ ಮನೆಯ ವಿಷ್ಣುವಂತಾ ಜಲಂ
ರಸ ಬುದ್ಧಿ ಜಿಹ್ವೆಯಾ ಗುಹ್ಯವಾಱೆಕೊಂದಿ ಸಂ
ತಸದೆ ಪಿಂಡಬ್ರಹ್ಮವಾದುದಾಱನೆಯ ಮನೆಯೊಳ್ ಬ್ರಹ್ಮವಾ ಭೂಮಿಯಾ
ಮಿಸುಪ ಗಂಧಂ ಚಿತ್ತವಾ ಘ್ರಾಣ ಗುದವಾಱು
ಪೆಸರಾದುದಾ ಮೂರ್ತಿಸದ್ಬ್ರಹ್ಮವಿನ್ನು ನಾ
ನುಸುರುವೆಂ ಬ್ರಹ್ಮವಾಱಕ್ಕೆ ಶಕ್ತಿಗಳಾಱು ತತ್ವಕಾರಣವಾದವಂ ೧೨

ಎಲೆ ಬಳಿಕ ಚಿಚ್ಛಕ್ತಿಯಾ ಪರಾಶಕ್ತಿ ನಿ
ರ್ಮಲದಾದಿಶಕ್ತಿಯಿಚ್ಛಾಶಕ್ತಿ ಸುಜ್ಞಾನ
ದ ಲಘುಕ್ರಿಯಾಶಕ್ತಿಯಾಱನಾ ಮೇಲಣೆಂ ತಳದೊಳಾ ಪಙ್ತಿವಿಡಿದು
ಬಲದಲ್ಲಿ ಮುನ್ನ ಮಾಡಿದ ಕಡೆಯ ಸಾಲೊಳಂ
ನಲಿದು ಬರೆಯುದರಿಚ್ಛೆಯಾ ಶಕ್ತಿಯಂಗವಂ
ಸುಲಭದಿಂದಾಱನುಸುರುವೆನಾ ತೆಱಂ ನೋಡೆನುತ್ತ ಪೇಳಿದನೀಶನು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಂಗದಿಂದಾ ಶಿವಾಂಗಂ ಮಿಸುಗುತಿರ್ಪಭೂ
ತಾಂಗ ಯೋಗಾಂಗ ಕಾಮಾಂಗ ವಿದ್ಯಾಂಗ ಕ
ರ್ಮಾಂಗಂಗಳೆಂದಾ ಷಡಂಗಂಗಳಾವವೀ ತೆಱನಡ್ಡಸಾಲಮನೆಯಾ
ಮಂಗಲೆ ನಿರೀಕ್ಷಿಸಾ ಬ್ರಹ್ಮನಾ ವಿಷ್ಣು ರು
ದ್ರಂಗಳುಂ ಯೆ ಈಶ್ವರ ಸದಾಶಿವಂ ಶಿವರಾ ಶಿ
ವಾಂಗವಾರಾಶಿವಾಂಗಕ್ಕೆ ಚಿಚ್ಛಕ್ತಿಕಾರಣವೊಂದು ಮನೆಗಾದುದು ೧೪

ಧರೆ ಜಲಾನಲವನಿಲನಾಗಸಂಕ್ಷೇತ್ರಜ್ಞ
ನಿರದಾಱು ಭೂತಾಂಗವಿದಕಂ ಪರಾಶಕ್ತಿ
ಪರಮ ಕಾರಣವೆರಡು ಮನೆಯಾದುದಾ ಗಂಧರಸರೂಪವಾ ಪರಿಸನಾ
ವರ ಶಬ್ದಕರ್ತಾರರೀಯಾಱು ಕೂಡಿ ಸುರು
ಚಿರದ ಯೋಗಾಂಗವಾ ಯೋಗಾಂಗಕಂ ಕೇಳು
ಗಿರಿಜೆಯುಂತಾದಿಶಕ್ತಿಯೆ ಕಾರಣಂ ಕಣಾ ಮೂಱಡ್ಡಸಾಲ್ಮನೆಗಳ್ಗೆ ೧೫

ಚಿತ್ತವಾ ಬುದ್ಧಿಯದಹಂಕಾರಮುಂಮನವು
ದುತ್ತಮಜ್ಞಾನಭಾವಂಗಳಾಱೆಯ್ದೆ ಕೇ
ಳುತ್ತ ತಿಳಿಕಾಮಾಂಗವಿದಕವಿಚ್ಛಾಶಕ್ತಿಕಾರಣಂ ಮನೆ ನಾಲ್ಕಲಾ
ಮತ್ತೆಯಾ ಘ್ರಾಣ ಜಿಹ್ವಾ ನೇತ್ರತ್ವಕ್ಶ್ರೋತ್ರ
ವೆತ್ತ ಚೇತನವಾಱು ವಿದ್ಯಾಂಗವಿಂತಿದುಮೆ
ನುತ್ತಱಿಯಿದಕ್ಕೆಯಾ ಜ್ಞಾನಶಕ್ತಿಯೆ ಕಾರಣಂ ಮನೆಗಳೈದಿಲ್ಲಿಗೆ ೧೬

ಪಾಯು ಗುಹ್ಯಂ ಪಾದ ಹಸ್ತವಾಗಂತರಂ
ಈಯಾಱು ಕರ್ಮಾಂಗವಿದಕೆ ಕಾರಣವಲಾ
ನ್ಯಾಯಂ ಕ್ರಿಯಾಶಕ್ತಿ ಆಱುಮನೆ ಮುಗಿದವಿಲ್ಲಿಗೆ ಕೇಳು ಚಿತ್ತುತೊಡಗೀ
ಒಯ್ಯಾರದಿಂ ಕ್ರಿಯಾಶಕ್ತಿಯಾಱೀ ಸೃಷ್ಟಿ
ಯಾಯತವನೆಸಗುವವಲಾ ಪರಬ್ರಹ್ಮವೊದ
ಲೀಯಧಿಕಮೂರ್ತಿಕಡೆಯಾದಾಱು ಸದ್ಬ್ರಹ್ಮವಿರದೆ ಸಂಹಾರಿಸುವವು ೧೭

ಅದುಕಾರಣಂ ಬ್ರಹ್ಮವೇ ಶಕ್ತಿಮಯುವಲಾ
ಸುದತಿ ಶಕ್ತಿಯೆ ತಿಳವೊಡಾ ಬ್ರಹ್ಮಮಯುವಿದೇ
ವಿದಿತಂ ಶಿವಬ್ರಹ್ಮಶಕ್ತಿಯಂಗಂ ಕೂಡೆ ಬ್ರಹ್ಮಾಂಗವೆಂದೆನಿಪುದು
ಸದಮಲದ ಶಕ್ತಿವರ್ಗಂ ಬ್ರಹ್ಮವರ್ಗವಱು
ಹಿದೆವು ಲೋಕಂಗಳೊಳಗರಿದು ಸಾರಕೆ ಸಾರ
ವಿದು ಮಹಾಬ್ರಹ್ಮಾಂಗಿಯಹ ದೇವಿಯೆಂದು ಪೇಳಿದನು ಲೋಕಾರಾಧ್ಯನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಗೆ ಕೇಳ್ವೈ ಶಿವಾಂಗಾದಿ ಪಾಯ್ವಂಗಾಂತ
ವಾಗಿ ಮೂವತ್ತಾಱು ಶಕ್ತಿತತ್ವಂಗಳನು
ರಾಗದಿಂದಂ ಸೃಷ್ಟಿಮಾರ್ಗವಿವು ಪಾಯ್ವಂಗವಾದಿಯು ಶಿವಾಂಗಾಂತವೆ
ಆಗಲಾ ಬ್ರಹ್ಮಾಂಗವೆಯ್ದೆ ಮೂವತ್ತಾಱಿ
ಲೈ ಗರುವ ಸಂಹಾರಮಾರ್ಗವವು ತಾನೆಯೆಂ
ದಾ ಗಣನೆಯಂ ಕರತಳಾಮಳಕದಿಂದ ಬರೆದಿಪ್ಪ ಯಂತ್ರದೊಳು ನೋಡ್ವೈ ೧೯

ಶಿವ ಸದಾಶಿವರೀಶರುದ್ರವಿಷ್ಣುಬ್ರಹ್ಮ
ರವಿರತಂ ಕ್ಷೇತ್ರಜ್ಞನಾಕಾಶವಾಯ್ವಗ್ನಿ
ತವೆ ಜಲಾವನಿ ಮತ್ತೆ ಕರ್ತಾರ ಶಬ್ದಸ್ಪರುಶ ರೂಪು ರಸ ಗಂಧವು
ಕುವರ ಭಾವ ಜ್ಞಾನ ಮನವಹಂ ಬುದ್ಧಿ ಚಿ
ತ್ತವೆ ಚೇತನಶ್ರೋತ್ರವಾ ತ್ವಙ್ಮಯಂ ಜಿಹ್ವೆ
ಸುವಿಮಲಘ್ರಾಣ ವಿದ್ಯಾಂಗಾಂತರಂ ವಾಕ್ಕರಾಂಘ್ರಿ ಗುಹ್ಯಂ ಪಾಯುವೈ ೨೦

ಪಾಯು ನಾಸಾಚಿತ್ತ ಗಂಧಭೂಬ್ರಹ್ಮಗು
ಹ್ಯಾಯುತದ ಜಿಹ್ವೆಯಾ ಬುದ್ಧಿರಸ ಜಲವಿಷ್ಣು
ವೊಯ್ಯಾರದಿಂ ಪಾದಲೋಚನಾಹಂಕಾರ ರೂಪಾಗ್ನಿರುದ್ರಪಾಣಿ
ನ್ಯಾಯದಿಂ ತ್ವಙ್ಮನಂ ಸ್ಪರ್ಶವಾನಿಲನೀಶ
ನಾಯಧಿಕವಾಕ್ಶ್ರುತಿಜ್ಞಾನ ಶಬ್ದಾಕಾಶ
ದಾಯಾಸದಂತರಂ ಚೇತನಂ ಭಾವಕರ್ತಾರ ಕ್ಷೇತ್ರಜ್ಞರಿವರೂ ೨೧

ಶಿವಮುಖ್ಯರಧಿದೇವತೆಗಳಾಱು ತತ್ವವೆನಿ
ಸುವ ಮಹಾಕ್ಷೇತ್ರಜ್ಞನಾದಿಯಾಱಕ್ಕೆ ಕೇಳು
ಕುವರ ಕರ್ತಾರಾದಿ ವಿಷಯಂಗಳಾಱು ಭಾವಾದಿಕರಣಂಗಳಾಱು
ತವೆ ಚೇತನಾದಿಂದ್ರಿಯಂಗಳಾಱಂತರಾ
ದಿ ವಿಶೇಷ ಕರ್ಮೇಂದ್ರಿಯಂಗಳಾಱೀಱು ನೀ
ನಿವನೊಂದುಗೂಡೆ ಮೂವತ್ತಾಱು ತತ್ವ ಶಕ್ತ್ಯಂಗವಾ ಸೃಷ್ಟಿಮಾರ್ಗಂ ೨೨

ಆ ಪಾಯುವಾದಿಯಾ ಬ್ರಹ್ಮಾಂಗವಾಱಿಲಾ
ವೋಪ ಗುಹ್ಯಾದಿ ವಿಷ್ಣ್ವಂತವಾಱಕ್ಕೆ ತಿಳಿಯ
ಲಾ ಪಾದವಾದಿ ರುದ್ರಾಂತವಾಱಕ್ಕೆ ಪಾಣಿಯಾದೀಶ್ವರಾಂತವಾಱು
ಕೂಪವಾಗಾದಿಯ ಸದಾಶಿವಾಂತಂಗಳಾ
ಱಕ್ಕೆಪೇಳಲಂತರಾದಿಯ ಶಿವಾಂತಂಗಳಾ
ಱೀ ಪರಿಯೊಳಾಱೀಱು ಕೂಡಿ ಮೂವತ್ತಾಱು ನಿಯತಿಯಾ ಬ್ರಹ್ಮಾಂಗವೈ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ||

ಪರಂ ವಿಜ್ಞಾನಮಾನಂದಂ ಕಲಾಪಿಂಡ ಸ್ತಥೈವ ಚ
ಮೂರ್ತಿಬ್ರಹ್ಮತಥಾ ಷಟ್ಕಂ ಬ್ರಹ್ಮಭೇದ ಮುದಾಹೃತಂ ೧

ಏಕಮೇವಮಿದಂ ಬ್ರಹ್ಮ ಯುಕ್ತಂ ಷಟ್‌ತತ್ತ್ವಮೇವಚ
ಷಟ್ಕಷಟ್ಕಪ್ರಕಾರೇಣ ಷಟ್ತ್ರಿಂಶತ್ತತ್ತ್ವಮುದ್ಭವಂ ೨

ಶಿವಂ ಕ್ಷೇತ್ರಜ್ಞ ಕರ್ತಾರಂ ಭಾವಂ ಚೈತನ್ಯಮಂತರಂ
ಏವಂ ತು ಷಡ್ವಿಧಂ ಪ್ರೋಕ್ತಂ ಪರಬ್ರಹ್ಮಚ ಕಥ್ಯತೇ ೩

ಬ್ರಹ್ಮವರ್ಗಮಿದಂ ಪ್ರೋಕ್ತಂ ಶಕ್ತಿವರ್ಗಮಥಶ್ರುಣು
ಶಕ್ತೀರ್ಯುತ್‌ಷ್ಷಡ್ವಿಧಂ ಚೈವ ಸರ್ವತತ್ತ್ವಸ್ಯ ಕಾರಣಂ ೪

ಚಿಚ್ಛಕ್ತಿಶ್ಚಪರಾಶಕ್ತಿರಾದಿ ಶಕ್ತಿಸ್ತಥೈವ ಚ
ಇಚ್ಛಾಜ್ಞಾನಕ್ರಿಯಾಶ್ಚೈವ ಶಕೇಯಾಃ ಷ್ಷಡ್ವಿಧಾಃ ಸ್ಮೃತಾಃ ೫

ಶಿವಾಂಗಂ ಚೈವ ಭೂತಾಂಗಂ ಯೋಗಾಂಗಂ ಚೈವಕಾಮದಂ
ವಿದ್ಯಾಂಗಂ ಚೈವ ಕರ್ಮಾಂಗಂ ಷಡಂಗಂ ಚೇತಿಕಥ್ಯತೇ ೬

ಶಕ್ತಿವರ್ಗಮಿದಂ ಪ್ರೋಕ್ತಂ ಬ್ರಹ್ಮವರ್ಗಮಿದಂ ಶ್ರುಣು
ಬ್ರಹ್ಮಾಂಗೀ ಜ್ಞಾನವಾನ್ ದೇವಿ ತದ್ಬ್ರಹ್ಮಯೇನಕಥ್ಯತೇ ೭

ವರ್ಣಿಸುವೆನ್ನೈ ಸಚ್ಚಿದಾನಂದ ನಿತ್ಯಪರಿ
ಪೂರ್ಣಸದ್ಬ್ರಹ್ಮವೇ ಭಕ್ತನಾ ಭಕ್ತಹೃ
ತ್ಕಿರ್ಣನಾಗಿಹನು ಜಂಗಮವವನ ಮಕುಟದೊಳು ಶೂನ್ಯಲಿಂಗಂ ಪುಟ್ಟಿತು
ಸ್ವನಿರಾಕರಣನೇ ಶೂನ್ಯದಿಂದೊಗೆದುದಾ
ಕರ್ಣಿಸೆ ಚಿದಂಬರಂ ತಚ್ಚಿದಂಬರದಿಂದ
ಹರ್ನಿಶಂ ತಿಳಿಯಯ್ಯ ಶಿವಶಕ್ತಿಯೊಗೆದವಾ ಶಿವಶಕ್ತಿ ಸೃಷ್ಟಿಯಾಯ್ತು ೨೪

ಇನ್ನಾ ಪರಾಶಕ್ತಿಯುದಱಿಂದಲಾದಿಯೆಂ
ಬುನ್ನತದ ಶಕ್ತಿಯಿಂತಾದಿಶಕ್ತಿಯಿನಾಯ್ತು
ನನ್ನಿಯಿಂದೊಪ್ಪುವಿಚ್ಛಾಶಕ್ತಿಯಾ ಶಕ್ತಿಯಿಂ ಕ್ರಿಯಾಶಕ್ತಿಯಾಯ್ತು
ಸನ್ನಿಹಿತವಾ ಕ್ರಿಯಾಶಕ್ತಿಯ ಸಹಸ್ರಾಂಕ
ದಿಂನಾಡೆಯಾ ಜ್ಞಾನಶಕ್ತಿಯೈಕ್ರಮದೆ ಸಂ
ಪನ್ನಶಕ್ತಿಗಳು ತಮ ತಮಗೆ ಸೃಷ್ಟಿಸುತಿಪ್ಪ ಬಗೆಯ ಕೇಳೈ ಕುಮಾರ ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲಲ್ಲಿ ಮಕುಟದಲ್ಲಿಯು ಸೃಷ್ಟಿ ಶೂನ್ಯದಿಂ
ದೊದವಿತೆರಡನೆಯದೆನಿಸುವ ಸೃಷ್ಟಿ ಮೂಱಱೊಳ
ಗದು ಚಿದಂಬರದಲ್ಲಿ ಸೃಷ್ಟಿ ಶಿವಶಕ್ತಿಯೊಳು ನಾಲ್ಕನೆಯ ಸೃಷ್ಟಿಯಿನ್ನು
ಸದಮಲನೆ ಕೇಳ್ಳೆ ಪರಾಶಕ್ತಿಯಾದಿಯೆನಿ
ಸಿದ ಲಸದ್ಜ್ಞಾನಶಕ್ತಿಯುದಂತವಾದೈದ
ಱ:ದಿತಸೃಷ್ಟಿಯ ಭೇದವಂ ಪೇಳ್ವೆನೆಂದು ತೊಡಗಿದನು ಹಲಗೆಯ ದೇಶಿಕಂ ೨೬

ತಂದೆ ಕೇಳ್ಳೆದಕ್ಕೆ ಮೊದಲಹ ಪರಾಶಕ್ತಿ
ಯಿಂದಪ್ಪ ಸೃಷ್ಟಿಯಂ ವಚನಂಗಳಲ್ಲಿಯಾ
ನಂದದಿಂದಾ ಪರಾಶಕ್ತಿಯ ದಶಾಂಶದಿಂದೀಶ್ವರಂ ಸಂಭವಿಸಿದಂ
ಮುಂದೆ ಮತ್ತೀಶನಿಂದಂ ಸದಾಶಿವನಾತ
ನಿಂದಾ ಮಹೇಶ್ವರ ಮಹೇಶನಿಂ ತ್ರಿಗುಣದೊಳ
ಗೊಂದಿರ್ದ ರುದ್ರನುದಯಂ ರುದ್ರನಿಂ ದ್ವಿಗುಣಯುತ ವಿಷ್ಣು ಸಂಜನಿಸಿದಂ ೨೭

ಆ ವಿಷ್ಣುವಿಂ ರಜೋಗುಣಯುತಬ್ರಹ್ಮನು
ದ್ಭಾವವಾ ಬ್ರಹ್ಮನಿಂದಂ ಚರಾಚರದುದಯ
ವೈ ವಿಶೇಷಜ್ಞ ಮುಂದೊರೆವೆನಿಂತಾದ ಶಕ್ತಿಯೊಳಾದ ಸೃಷ್ಟಿಯಿರವ
ಪಾವನಚರಿತ್ರ ಸಂತತಮತ್ಯಪಾಪಾತ್ರ
ದೇವ ಜಂಗಮವಮೋಹಿ ಶರಣಸಂಕುಲಸೋಹಿ
ಭಾವಶುದ್ಧದ ಕಂದ ನಿರುಪಮಾನಂದ ಕೇಳ್ಳೆ ಕೆಂಚವೀರಾಪ್ಪಯ ೨೮

||ಸಾಕ್ಷಿ|| ವಚನಾಂತರೇ–
ಪರಾಶಕ್ತಿರ್ದಶಾಂಶೇನ ಈಶ್ವರಸ್ಯ ಸಮುದ್ಭವಃ
ತಸ್ಮಾತ್ ಸದಾಶಿವಃ ಪ್ರೋಕ್ತಃ ತದ್ವೈಮಾಹೇಶ್ವರಃ ಸ್ಮೃತಃ ೮

ಮಾಹೇಶ್ವರ ಸಮಾಖ್ಯಾತಂ ರುದ್ರಂತ್ರಿಗುಣಸಂಯುತಂ
ಜನಿತಂ ದ್ವಿಗುಣಂ ಯುಕ್ತಂ ತೇನ ವಿಷ್ಣುಃ ಪ್ರಜಾಯತೇ ೯

ತದ್ವಿಷ್ಣೋರ್ಜಾಯತೇ ಬ್ರಹ್ಮಾ ರಜೋಗುಣಯುತೋಭವೇತ್
ಬ್ರಹ್ಮಣಾ ಜಾಯತೇ ದೇವಿ ಜಗತ್ಸ್ಥಾವರ ಜಂಗಮಂ ೧೦

ಆದಿಶಕ್ತಿಯ ದಶಾಂಶದೊಳಾ ಸದಾಶಿವನು
ಮಾದನವನಿಂ ರುದ್ರಕೋಟಿಯುವರಿಂ ಬಳಿ
ಕ್ಕಾದರಾ ವಿಷ್ಣುಕೋಟಿಗಳುಮವರಿಂ ಬ್ರಹ್ಮಕೋಟಿಗಳು ಪುಟ್ಟಿದರಲಾ
ಸಾದರದೊಳಖಿಳಜೀವರ ಬೇಱಬೇಱೆಸಂ
ಮೋದದಿಂ ಪುಟ್ಟಿಸಿದರವರಾದಿಶಕ್ತಿಯಿಂ
ದಾದುದೀ ಸೃಷ್ಟಿ ತತ್ಕ್ರಮದಿಂದಲೆಂದು ಬಿತ್ತರಿಸಿದಂ ಗುರುರಾಯನು ೨೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ||
ಆದಿಶಕ್ತಿರ್ದಶಾಂಶೇನ ಸದಾಶಿವ ಸಮುದ್ಭವಂ
ಸದಾಶಿವಸಮಾಖ್ಯಾತಂ ರುದ್ರಕೋಟಿ ಸಮುದ್ಭವಂ ೧೧

ಮುದದೊಳಿಚ್ಛಾಶಕ್ತಿಯಿಂದಪ್ಪ ಸೃಷ್ಟಿಯಂ
ಚದುರಕೇಳಿಚ್ಛಾದಶಾಂಶದಿಂ ಮಾಹೇಶ
ನುದಯವಾತಂಗೆ ದಶಭುಜವೈದು ಮೊಗವಕ್ಷಿಪದಿನೈದು ಪಾದವೆರಡು
ಸದಮಲಸ್ಫಟಿಕಪ್ರಕಾಶದಿಂದೆಸೆವ ಸೌ
ಖ್ಯದ ಸರ್ವಲಕ್ಷಣದ ಸಂಪನ್ನನವನ ವದ
ನದೊಳು ಮತ್ತಾ ಪಂಚಭೂತಂಗಳುದಿಸಿದವು ತರುವಾಯಿನಜಾಕುಮಾರ ೩೦

ಆ ಮಹೇಶ್ವರನ ಹತ್ತನೆಯ ಭಾಗದೊಳಾ ಮ
ಹಾಮಹಿಮ ರುದ್ರನುದಯಂಗೈದನವನಿಂದ
ಸಾಮರ್ಥ್ಯವಿಷ್ಣು ಜನಿಸಿದನಾತನಿಂ ಬ್ರಹ್ಮನುದಿಸಿದಂ ಬ್ರಹ್ಮನಿಂದ
ಭೂಮಿಯ ಚರಾಚರಂಗಳು ಪುಟ್ಟಿದವು ಕಣಾ
ಸೀ ಮುದದೊಳೊಪ್ಪುವಿಚ್ಛಾಶಕ್ತಿಯಿಂಬಲ
ಪ್ಪೀ ಮೇಲೆನಿಪ್ಪ ಸೃಷ್ಟಿಯ ಪೇಳ್ವೆವೈ ಮುಂದೆ ಕೇಳ್ಯೆ ಮದೀಯ ಮೋಹಿ ೩೧

||ಸಾಕ್ಷಿ|| ಇಚ್ಛಾಶಕ್ತಿದಶಾಂಶೇನ ಮಾಹೇಶ್ವರ ಸಮುದ್ಭವಂ
ಪಂಚವಕ್ತ್ರಂ ದಶಭುಜಂ ದಶಪಂಚಕಲೋಚನಂ ೧೨
ದ್ವಿಪಾದಂ ಸ್ಫಟಿಕಾಭಂಚ ಸರ್ವಲಕ್ಷಣಸಂಯುತಂ

ನಿಯತಕ್ರಿಯಾಶಕ್ತಿಯಿಂದಪ್ಪ ನವ್ಯಸೃ
ಷ್ಟಿಯ ಕೇಳ್ವುದಾ ಕ್ರಿಯಾಶಕ್ತಿಯ ದಶಾಂಶದಿಂ
ಸ್ವಯಮಪ್ಪ ರುದ್ರನುದಯಂಗೆಯ್ದನಾ ರುದ್ರನಿಂ ವಿಷ್ಣು ಸಂಭವಿಸಿದಂ
ಪ್ರಿಯದೊಳಾ ವಿಷ್ಣುವಿಂ ಬ್ರಹ್ಮನಾ ಬ್ರಹ್ಮನಿಂ
ದಯುತ ಕೋಟಾಕೋಟಿಯಹ ಚರಾಚರದುದಯ
ವಯನಾದಿಗಳು ಕೇಳೆನುತ್ತೊರೆವುತಿರ್ದನಣುಗಂಗೆ ದೇಶಿಕವಲ್ಲಭಂ ೩೨

||ಸಾಕ್ಷಿ||
ಕ್ರಿಯಾಶಕ್ತಿದಶಾಂಶೇನ ರುದ್ರಮೂರ್ತಿಃ ಪ್ರಜಾಯತೇ ೧೩
ರುದ್ರೇಣ ಸಂಭವೋ ವಿಷ್ಣುರ್ವಿಷ್ಣೋರ್ಬ್ರಹ್ಮಸಮುದ್ಭವಃ
ಬ್ರಹ್ಮಣೋ ಜಾಯತೇ ದೇವಿ ಸರ್ವಜೀವಚರಾಚರಂ ೧೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಶಕ್ತಿಯೊಳಪ್ಪ ಸೃಷ್ಟಿಯಂ ಕೇಳ್ವುದಾ
ಜ್ಞಾನಶಕ್ತಿಯ ದಶಾಂಶದೊಳು ರುದ್ರೋದ್ಭವಂ
ಜ್ಞಾನಮಯರುದ್ರಂಗೆ ಪಂಚಮುಖವೀರೈದುಭುಜವಕ್ಷಿ ಪದಿನೈದಲಾ
ಏನೆಂಬೆನೈ ಪಾದವೆರಡು ಶುದ್ಧಸ್ಫಟಿಕ
ದಾ ನಿಜಚ್ಛಾಯೆಯೈ ಪಂಚಭೂತಾದಿಗಳು
ಮಾನನಿಧಿರುದ್ರವಕ್ತ್ರದೊಳು ಸಂಭವಿಸಿದವು ಬಳಿಕಲಾ ರುದ್ರನಿಂದ ೩೩

ಒಗೆದನಂತಾ ವಿಷ್ಣು ವಿಷ್ಣುವಿಂದಂ ಕೇಳು
ಮಗನೆ ಬೊಮ್ಮಂ ಪುಟ್ಟಿದಂ ಬೊಮ್ಮನಿಂದವೀ
ಜಗದ ಸಚರಾಚರಂಗಳು ಪುಟ್ಟಿದವು ಕಣಾ ಬೇಱಿಬೇಱಿಂತಿವೆಲ್ಲ
ಬಗೆವೊಡಂತಾದಿಜಂಗಮದಿಂದ ಪುಟ್ಟಿದವು
ಸೊಗಸಿಂದಲೆಂದಾಗಮಾರ್ಥಮಂ ಬಿತ್ತರಿಸಿ
ಸುಗುಣಿಯುಹ ಕೆಂಚವೀರಾಖ್ಯಂಗೆ ತಿಳಿಪಿದರು ವೀರಹಲಗೆಯ ದೇವರು ೩೪

||ಸಾಕ್ಷಿ||
ಜ್ಞಾನಶಕ್ತಿದಶಾಂಶೇನ ಜಾಯತೇ ರುದ್ರ ಏವಚ
ತದ್ರುದ್ರಸ್ಯ ಮುಖಂ ಪಂಚ ನೇತ್ರಪಂಚದಶ ಸ್ಮೃತಂ ೧೫
ಪಾದದ್ವಯಂ ದಶಭುಜಂ ಶುದ್ಧಸ್ಫಟಿಕವರ್ಣಕಂ
ಪಂಚಭೂತಾದಿ ಸರ್ವಾಣಿ ತಸ್ಯರುದ್ರಮುಖೇ ಪ್ರಸುಃ ೧೬
ರುದ್ರಾತ್ಪ್ರಜಾಯತೇ ವಿಷ್ಣುಸ್ತೇನ ಬ್ರಹ್ಮಾಪ್ರಜಾಯತೇ
ತದ್ಬ್ರಹ್ಮಾಜ್ಜಾಯತೇ ಸರ್ವಂ ಚರಾಚರಮಿದಂ ಶ್ರುಣು ೧೭
ಇತಿ ಸರ್ವಾಣಿ ಜಾತಾನಿ ಆದಿಜಂಗಮವಿಗ್ರಹೇ

ವರಭಕ್ತಜಂಗಮದ ಮಕುಟಶೂನ್ಯಂ ಚಿದಂ
ಬರವೆಸೆವ ಶಿವಶಕ್ತಿಯಾ ಪರಾದಿಚ್ಛೆಯು
ತ್ಕರ ಮಹಾ ಕ್ರೀ ಜ್ಞಾನಶಕ್ತಿಯೊಳೆಸೆವ ಸೃಷ್ಟಿಯ ಕೇಳಿದಾ ಬಳಿಕ್ಕಾ
ಒರೆವೆನಾ ಜ್ಞಾನಶಕ್ತಿಯ ಸಹಸ್ರಾಂಶದಿಂ
ದುರುಕೋಟಿನಾದ ಉದ್ಭವಿಸಿದವು ನಾದಸೌಂ
ದರ ನಾಮರೂಪು ಸುಸ್ಥಾನಂಗಳಂ ಪೇಳ್ವೆನೇತೆಱದೊಳೆನಲು ಕೇಳು ೩೫

ಮೇಗೆ ಕಾಮಿಕವಾದಿಯೆನಿಸಿ ವಾತೂಳಾಂತ
ದಾಗಮಂ ಋಕ್ಕು ಮೊದಲಾದ ವೇದಂಗಳನು
ರಾಗದಿಂ ಮನ್ವಂತ್ರವಾದಿ ವರ್ಮಾಂತ ಶಾಸ್ತ್ರಂಗಳೊಳು ಲೈಂಗ್ಯವಾದಿ
ಯಾಗಿ ಕೈವರ್ತಾಂತ ಪೌರಾಣದಲ್ಲಿ ತೆಗೆ
ದೀ ಗುರುತ್ವದ ಮಹಿಮೆಯಂ ತಿಳಿದು ಸೇರಿಸಿದ
ಯೋಗಶಾಸ್ತ್ರದೊಳು ನಾದದ ಬಗೆಯ ಬಿತ್ತರಿಪೆನೈ ಕುಮಾರಕನೆ ಕೇಳು ೩೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾದವೇ ಲಿಂಗ ಗುರು ಸತ್ಪ್ರಣವರೂಪಲಾ
ಸಾದಾಖ್ಯವಂತದಂ ತಿಳುಪುವೆಂ ಯೋಗದಾ
ಹ್ಲಾದವಮಾನಸ ಕೇಳ್ವುದೈದುತೆಱನಯ್ಯ ಪರಮಾತ್ಮನೆನಿಪೀಶನುಸುರ್ದಂ
ನಾದಂ ಸುನಾದಂ ಮಹಾನಾದವಂತೆಸೆವ
ನಾದಾಗ್ರಣಿಯೊಳಮಲನಾದಾಂತವೆಂದಧಿಕ
ಭೇದಮಂ ತಿಳುಪುವೆಂ ಕೇಳೆಂದನೀಶ್ವರಂ ಯೋಗದಿಚ್ಛೆಯ ಸುತಂಗೆ ೩೭

ಇವಱ ಲಕ್ಷಣವನುಸುರುವೆನು ನಿಶ್ಚಲ ಕೇಳು
ತವೆ ಬಿಂದುಮಧ್ಯದೊಳಗಿರ್ಪುದೇ ನಾದವೈ
ಸುವಿಚಾರ ನಾದಮಧ್ಯದ ಬಿಂದುವೇ ಸುನಾದಂ ಕಲಾಮಧ್ಯದಲ್ಲಿ
ಅವಿರತಂ ನೆಲಸಿರ್ಪುದದೆ ಮಹಾನಾದವೈ
ಕುವರನೇ ನಾದಶಕ್ತಿಯ ಮಧ್ಯದಲ್ಲಿಯೊ
ಪ್ಪುವುದು ನಾದಾಗ್ರಣಿಯುದಖಿಲ ಪೂರ್ಣದ ಭಾವವರರೆ ನಾದಾಂತವಾಯ್ತು ೩೮

ಈ ನಾದಸಂಧಾನವೆಸೆವ ಶಿವಯೋಗಿಯ
ತ್ಯಾನಂದಹೃದಯದೊಳಗಿಹುದೆಲೈ ಪರಿಕಿಸಲು
ಸೂನುವೇ ಸರ್ವಪೂರ್ಣಸ್ವರೂಪವನು ಪೇಳುವೆನು ಗೋಪ್ಯವನೆ ಮಾಡು
ನೀನೆಂದು ನುಡಿಯಲೀಶನ ವಾಕ್ಯಮಂ ಕೇಳಿ
ಮಾನನಿಧಿ ಸರ್ವೇಶ್ವರಂ ಕೃಪೆಯೊಳುಸುರಿದಂ
ತೀ ನಾದವೆನ್ನ ಹೃದಯದೊಳಿರಲೆನುತ್ತ ಕೀರ್ತಿಸಿದನಂತಾ ಶಿಷ್ಯನು ೩೯

ಸ್ಮರಿಸೆ ಕೇಡಿಲ್ಲದುದು ಸರ್ವಗಂ ತಾಂ ಪರಾ
ತ್ಪರತರಂ ಸೂಕ್ಷ್ಮನೆನಿಸುವ ಶಿವಂ ಕೇವಲಂ
ನಿರುಪಮಜ್ಞಾನದಾನಂದಮಯವಾ ನಿಜಂ ತಿಳಿವೊಡುಪಮಾತೀತವು
ಅರರೆ ಮುವತ್ತಾಱು ತತ್ವಮಂ ಮೀಱಿ ನೆನೆ
ವರ ಹೃದಯ ಸಂತೋಷಿಯಚಲನೆನಿಸಿದ ನಿರಂ
ತರವಾದಿಯಂತವಿಲ್ಲದ ನಾದವಾವುದದು ಯೆನ್ನ ಮನದೊಳು ನೆಲೆಸಲಿ ೪೦

ಜೀವಚೈತನ್ಯ ನೈರ್ಮಲ್ಯತತ್ವಂಬ್ರಹ್ಮ
ದಾ ವಿಮಲ ರೂಪಾವಗಂ ನೆಲಸಲೆನ್ನ ಸ
ದ್ಭಾವದೊಳಗಣುರೇಣುತೃಣಕಾಷ್ಠ ಸರ್ವಚೈತನ್ಯ ಚೇತನವಾದುದು
ಓವಿ ಶಿವನಖಿಲಮಂ ವ್ಯಾಪಿಸಿಹ ಶುದ್ಧನಂ
ತಾ ವಿಶೇಷಾಖಿಲಮುಖಂ ಸಕಲತತ್ವಾಶ್ರ
ಯಾ ವಿರಳನಾದ ಸರ್ವಜ್ಞರೂಪೆಂದು ಮಿಗೆ ನೆನೆದು ವಂದಿಸಿ ಬಾಳ್ವುದು ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರರೆ ಯೆಂಬತ್ತುನಾಲ್ಕುಂ ಲಕ್ಷ ಜೀವಕ್ಕೆ
ಪರಮ ಚೈತನ್ಯರೂಪಂ ಪರಾತ್ಪರನಾದ
ಪರಶಿವನುಮಕ್ಷರಾತ್ಮಕರೂಪ ವೇದ ಶಾಸ್ತ್ರಾಗಮ ಸ್ಮೃತಿರೂಪವು
ವರ ಪುರಾಣಾದಿ ಮಂತ್ರವ್ಯಾಪಿ ನಾದವಾ
ಸ್ವರಸಪ್ತಮಂ ವಿದ್ಯವಾದ್ಯಕ್ಕೆ ನಾದವೇ
ಹರಣವಾ ದೇವಿ ಸೂಕ್ಷ್ಮಂ ಗೋಪ್ಯಮಂ ಮಾಡಿಕೊಳ್ಳೆಂದನಾ ಶಂಕರಂ ೪೨

॥ಸಾಕ್ಷಿ॥ ಯೋಗಶಾಸ್ತ್ರೇ– ಈಶ್ವರ ಉವಾಚ

ನಾದೋ ಲಿಂಗಮಯಃ ಪ್ರೋಕ್ತೋ ನಾದೋ ಗುರುಮಯಸ್ತಥಾ
ನಾದಃಪ್ರಣವರೂಪಸ್ಸ್ಯಾನ್ನಾದಃ ಸಾದಾಖ್ಯರೂಪಕಃ ೧೮
ನಾದಸ್ವರೂಪ ವಕ್ಷ್ಯೋಹಂ ಶೃಣು ಯೋಗಪರಾಯಣ
ನಾದಃ ಪಂಚವಿಧಃ ಪ್ರೋಕ್ತಃ ಶಿವೇನ ಪರಮಾತ್ಮನಾ ೧೯
ನಾದಸ್ತಥಾ ಸುನಾದಶ್ಚ ಮಹಾನಾದಸ್ತಥಾ ಪರಃ
ನಾದಾಗ್ರಣೀಶ್ಚ ನಾದಾಂತ ಇತಿ ಪಂಚವಿಧಃ ಸ್ಮೃತಃ ೨೦

॥ಶಾರ್ದೂಲ ವಿ. ವೃ.॥ ನಿತ್ಯಂ ಸರ್ವಗತಂ ಪರಾತ್ಪರತರಂ ಸೂಕ್ಷ್ಮಂ ಶಿವಂ ಕೇವಲಂ
ಜ್ಞಾನಾನಂದಮಯಂ ನಿಜಂ ತ್ವನುಪಮಂ ಷಟ್ತ್ರಿಂಶತತ್ವಾಧಿಕಂ
ಯದ್ಧ್ಯಾನಂ ಹೃದಯ ಪ್ರಮೇಯಮಚಲಂತ್ವಾದ್ಯಂತ ಶೂನ್ಯಂ ಸದಾ
ತನ್ಮೇ ನಿರ್ಮಲಮಧ್ಯತೋಽಸ್ತು ಹೃದಯೇ ನಾದಂ ಶಿವಂ ಕೇವಲಂ ೨೧
ಚತುರಾಸೀತಿ ಲಕ್ಷಂತು ಜೀವಂ ಚೈತನ್ಯರೂಪಕಂ
ಪರಾತ್ಪರತರಂ ಚೈವ। ನಾದಂ ಪರಶಿವಂ ತಥಾ ೨೨

ಬಳಿಕ ಭಕ್ತಂ ಜಂಗಮಂ ಮಕುಟಶೂನ್ಯ ನಿ
ರ್ಮಳ ಚಿದಂಬರವೆಸೆವ ಶಿವಶಕ್ತಿಪರೆಯಾದಿ
ಯೆಳಸುವಿಚ್ಛಾ ಕ್ರಿಯಾಜ್ಞಾನನಾದ ಸ್ವರೂಪಂಗಳಂ ಪೇಳ್ವೆವೀಗ
ಘಳಿಲನಾ ಪಂಚಸಾದಾಖ್ಯಂಗಳೆಯ್ದೆ ತ
ನ್ಮೊಳು ತಾವು ಸಹಿತಲೈವತ್ತೆರಡು ಮೂರ್ತಿಕಲೆ
ಗಳುಮಾದ ದಿವ್ಯಸ್ವರೂಪಮಂ ಬಿತ್ತರಿಪೆನೆಲೆ ಕುಮಾರಕನೆ ಕೇಳು ೪೩

ಸಾದಾಖ್ಯಮೀಶ್ವರಂ ಮಾಹೇಶ ರುದ್ರರಿಂ
ತಾದಿತ್ರಯಾಮಯಂ ದೀಕ್ಷಾವಿಧಾನದೊಳ
ಗೋದಲೈವತ್ತೆರಡು ಕಲೆಗಳಂ ಬಿತ್ತರಿಪೆನಯ್ಯ ಸಾದಾಖ್ಯಂಗಳು
ಐದೀಶ್ವರಾಷ್ಟಕಂ ಪಂಚವಿಂಶತಿಯಪ್ಪ
ಭೇದವಾ ಮಾಹೇಶ್ವರಂ ರುದ್ರರೇಕಾದ
ಶೋದಿತರುಮಾತ್ರಯಾಮಯಮೂರ್ತಿಗಳು ಮೂಱು ಕೂಡಲೈವತ್ತೆರಡಲ್ಲೈ ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನಮೂರ್ತಿಯುಮೂರ್ತಿ ಕರ್ತೃ ಕರ್ಮಂಗಳೆಂ
ಬಿವು ಪಂಚಸಾದಾಖ್ಯವಧಿದೈವವೇ ಧರೆಗೆ
ಭವನುದಕಕಂ ಶರ್ವನಗ್ನಿಗಂ ರುದ್ರನನಿಲಂಗೆ ಭೀಮಂ ನಭಕ್ಕೆ
ವಿವರಿಸೆ ಮಹಾದೇವನಂತು ಸೂರ್ಯಂಗುಗ್ರ
ನವಿರತಂ ಚಂದ್ರಂಗೆ ಸೋಮನಾತ್ಮಂಗೆ ಕೇ
ಳ್ಕುವರ ಪಶುಪತಿಯಷ್ಟಮೂರ್ತಿಯಿಂತಾದನೀಶಂ ಮುಂದೆ ಕೇಳೊರೆವೆನು ೪೫

ಆಲಿಸಲು ಶರ್ವ ಶಿವನು ಉಕ ಮಹಾದೇವನಾ
ನೀಲಕಂಠಂ ವೃಷಧ್ವಜನೊಪ್ಪುವೀಶಾನ
ನೈ ಲಲಿತ ಶಂಕರಂ ಭೀಮಂ ಪಿನಾಕಿಯಾ ಚಂದ್ರಶೇಖರ ಕಪರ್ದಿ
ಮೇಲಾ ವಿರೂಪಾಕ್ಷ ವಾಮದೇವಂ ಮೃಡಂ
ಬಾಲಕನೆ ಭೂತೇಶ ಶೂಲಿ ಸರ್ವಜ್ಞನೌ
ಖ್ಯಾಲಯು ಸ್ಥಾಣು ಪಾರ್ವತಿ ಮೋಹಿಯಾ ಮಹಾಕಾಳಂ ಮಹಾ
ದೀರ್ಘನು ೪೬

ಆರರೆ ತಾಂಡವರೂಪ ಗಂಗಾಧರಂ ಗಣೇ
ಶ್ವರ ಗಜಧ್ವಂಸಿ ಯಿಪ್ಪತ್ತೈದಲ್ಯೆ ಮಹೇ
ಶ್ವರ ಭೇದವಾ ಶಿವಮಹೇಶ್ವರಂ ರುದ್ರರಾ ಶ್ರೀಕಂಠ ಶಂಭುವಲ್ಲಿ
ಒರೆಯಲೀಶ್ವರ ಮಹಾದೇವ ಪಶುಪತಿಗಳಂ
ತುರು ನೀಲಕಂಠಂ ವೃಷಧ್ವಜಂ ಭಾವಿಸಲು
ಪರಮನೈಕಾದಶ ಮರುದ್ರರೆಂದಱಿ ಕೆಂಚವೀರಾಖ್ಯ ನೀಂ ಮುದದೊಳು ೪೭

ಭವನೆಂಬ ನಾಮವೇ ಸೃಷ್ಟಿಕಾರಣದೊಳಾ
ಯ್ತುವಿರತಂ ಮೃಡನೆಂಬ ಪೆಸರು ರಕ್ಷಾರ್ಥದಿಂ
ಕುವರ ಹರನೆಂಬುದೇ ಸಂಹಾರರೂಪದಿಂದಾದುದೀ ಮೂಱು ಭೇದ
ವಿವರಿಸಿದೊಡಾ ತ್ರಯಾವಯ ಭೇದದಿಂದಲೀ
ಭುವಿಯೊಳೈವತ್ತೆರಡು ಸಾದಾಖ್ಯದೊಳು ಕೂಡಿ
ಸವಿಶೇಷದಿಂದೆಸೆವವೆಂದು ಬಿತ್ತರಿಸಿದರ್ವೀರ ಹಲಗೆಯ ದೇವರು ೪೮

॥ಸಾಕ್ಷಿ॥ ದೀಕ್ಷಾವಿಧಾನೇ–

ಸಾದಾಖ್ಯಂ ಈಶ್ವರಂ ಚೈವ ಮಾಹೇಶಂ ರುದ್ರಮೇವಚ
ತ್ರಯಾವಯಂಚ ಮೂರ್ತಿಂಚ ಭಾವಾನ್ನಾದ್ಯಂ ಚ ತತ್ಕಲಾ ೨೩

ಸಾದಾಖ್ಯಂ ಪಂಚಕಂ ಚೈವ ಈಶ್ವರಂ ಚಾಷ್ಟಕಂ ತಥಾ
ಪಂಚವಿಂಶತಿ ಮಾಹೇಶಂ ರುದ್ರಮೇಕಾದಶಸ್ಮೃತಂ ೨೪

ತ್ರಿಮೂರ್ತಿರಂಗತ್ರಿತಯಂ ಭಾವಾನ್ನಾದಿತಿ ಮೂರ್ತಿತಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ಶ್ರುತಿ॥
ಪೃಥ್ವ್ಯೇಭವಃ ಅಪಾಂಶರ್ವ:
ಆಗ್ನೇ ರುದ್ರಃ ವಾಯೋರ್ಭೀಮಃ
ಆಕಾಶಸ್ಯ ಮಹಾದೇವ ಸ್ಸೂರ್ಯಸ್ಯ ಉಗ್ರಃ ೨೫
ಚಂದ್ರಸ್ಯ ಸೋಮಃ ಆತ್ಮನಃ ಪಶುಪತಿರಿತಿ
ಸೃಷ್ಟಿಕಾರಣರೂಪಂಚ ಭಾವಾಖ್ಯಂಚ ಇತಿ ಸ್ಮೃತಂ
ರಕ್ಷಣಾರ್ಥಂ ಮೃಡಾಖ್ಯಂ ಚ ಸಂಹಾರಕಾರಣಂ ಹರಃ ೨೬

ಶಿವಶಕ್ತಿಯಾ ಪರಾದಿಚ್ಛಾ ಕ್ರಿಯಾ ಜ್ಞಾನ
ವವಿಕಲದ ನಾದವವಟಿಂದಾದ ಸೃಷ್ಟಿಗಳ
ಸವಿನಯದ ಬಾವನ್ನಮೂರ್ತಿಗಳ ಭೇದಮಂ ನಂಜುಂಡಮೂರ್ತಿ ನೋಡೆ
ವಿವರಿಸಿದನಾ ಹಲಗೆಯಾರ್ಯನಾ ಜ್ಞಾನದೊಳು
ತವಕಿಯಹ ಕೆಂಚವೀರಾಖ್ಯಂಗೆನುತ್ತೀಶ
ಕವಿ ಮಲ್ಲಣಾರ್ಯನೀ ಪದನ ಮಾಡಿದನಕ್ಕಟಿಂ ಶಾಂತಗುರು ಮೆಚ್ಚಲು ೪೯

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ನೋಡೆ ಬಾವನ್ನಮೂರ್ತಿಯಂ ಪೇಳ್ದನೆಂಬೆಡೆಗೆ ಷಟ್ಸಂಧಿಯಾಯ್ತು ೫೦

ಅಂತು ಸಂಧಿ ೬ಕ್ಕಂ ಪದನು ೩೩೭ ಕ್ಕಂ ಗ್ರಂಥ ೧೭೩ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೭

ಮಾಹೇಶಮೂರ್ತಿಭೇದಂ ಸೃಷ್ಟಿಯವನಿಂದ
ಲಾಹ ರುದ್ರೋತ್ಪತ್ತಿರೂಪನಿರ್ಮಿತವಲ್ಲಿ
ಬೇಹ ವಿಷ್ಣುವಿನುದಯದಿರವಂ ಸೃಜಿಸುವಂದಮಂ ದೇಶಿಕಂ ಪೇಳ್ದನು

ತೊಱೆಯ ಜೆಡೆದಲೆಯಲ್ಲಿ ಪೆಱೆಯ ಪೆರ್ವಾವುಗಿವಿ
ಯೆಱಕವೊಪ್ಪುವ ಪಣೆಯ ಮಿಱುಗುವಗ್ಗಿಯ ಕೊರಲ
ಕಱೆಯ್ಯೈದುವೊಗದ ಬಳಿಕುಱೀವೆಲರುದಿನಿಕಳರ ತಱಿಗೊಡಲಿ ಕುಣಿಪ ನೇಣು
ತಱುವಾಯು ಕೊಂಕಿ ಬಾಳ್ತೆಱಿಸೂಳನಂಬುಗೆಯ
ನೆಱೆಕಿಚ್ಚು ಘಂಟೆ ಪತ್ತೆಱಿಸೊಳೆಸೆವ ಕೈಯಱೆಯು
ಸಱಿಮಿಂಡಿ ಕಾಲ್ಗಣ್ಣ ಮೆಱೆವೆತ್ತನೇಱಿದೆಮ್ಮೆಱೆಯ ಪೊರೆ ಶಾಂತಮಲ್ಲ ೧

ಶ್ರೀ ಪಂಚಕಲ್ಪವೃಕ್ಷಂಗಳ್ಳೆವೆರಲು ನಿ
ರ್ವ್ಯಾಪಾರ ಚಿಂತಾಸುರತ್ನವಂಗೈಯೆಂದು
ಭೂಪರಂ ಪೊಗಳುವರ್ಕವಿಗಳಂತಲ್ತು ಪಂಚಾಕ್ಷರಾಂಗುಲಿ ಪಂಚಕಂ
ಆ ಪರಮ ಸುಪ್ರಣವ ಮಧ್ಯಹಸ್ತಸ್ಥಲದ
ಸೋಪಾಧಿರಹಿತಲಿಂಗವನಿತ್ತು ಶಿಷ್ಯರ ಸ
ದಾ ಪಾಲಿಸುವ ಶಾಂತನಂಜುಂಡಗುರುಮೂರ್ತಿಜಯ ದಿಶಾಭರಿತಕೀರ್ತಿ ೨

ಘನನಿಷ್ಕಲವೆ ತುಪ್ಪ ಘಟ್ಟಿಯಾದಂತಿಷ್ಟ
ವೆನಿಸಿ ತದ್ರೂಪಾಗಿ ಮೂಱಾಱು ಷಟ್ತ್ರಿಂಶ
ವೆನಿಸಿಯಿನ್ನೂಱಹದಿನಾರು ತಱುವಾಯಂಗ ಹಸ್ತಮುಖ ಶಕ್ತಿಭಕ್ತಿ
ಯೆನೆ ಪದಾರ್ಥಂ ಶೇಷವಱಿದೊಂದಿಸಿದ ತೃಪ್ತಿ
ಯೆನಿಸಿದಂಗಾದಿಯಾದಾ ಷಟ್‌ಸ್ಥಲಬ್ರಹ್ಮ
ಚಿನುಮಯನೆ ಗುರು ಹಲಗೆಯಾಚಾರ್ಯ ಶರಣೆಂದನಾ ಕೆಂಚವೀರಾಹ್ವಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುವೆ ಕರುಣಿಸು ಸಚ್ಚಿದಾನಂದವಮುಂ ನಿತ್ಯ
ಪರಿಪೂರ್ಣ ಭಕ್ತಹೃದಯದ ಜಂಗಮದ ಮಕುಟ
ದಿರವಿನೊಳು ಶೂನ್ಯವದಱಿಳು ಚಿದಂಬರವಲ್ಲಿ ಶಿವಶಕ್ತಿಪರೆಯಾದಿಯ
ವರ ಪಂಚಶಕ್ತಿರೂಪಂ ಸೃಷ್ಟಿನಾದಸುರು
ಚಿರದ ಸಾದಾಖ್ಯವಿಂತಿವಱ ಸಂಭವತತಿಯ
ನೊರೆದಿರಿಲ್ಲಿಂ ಮೇಲೆ ಬೋಧಿಸೆನೆ ಕಂದಂಗೆ ನುಡಿದನಾ ಹಲಗೆಯಾರ್ಯಂ ೪

ಎಲೆ ಕೆಂಚವೀರಾಖ್ಯ ಪಂಚಸಾದಾಖ್ಯದ
ಗ್ಗಲದಗ್ರಸಾದಾಖ್ಯದಲ್ಲಿ ಮಾಹೇಶ್ವರಂ
ಸುಲಭವೆನೆ ಪುಟ್ಟಲಾತನ ಕೋಟಿಭಾಗೆಯೊಳು ಪಂಚವಿಂಶತಿ ವಿಗ್ರಹಂ
ಒಲಿದವಂತಾ ಮಹೇಶ್ವರನೊಳಗನಂತವುಂ
ಗಲಸೃಷ್ಟಿಯಾದವಾತನ ರೂಪಭೇದಮಂ
ನಲಿದು ಪೇಳುವೆನದೆಂತೆನೆ ವಚನದಲ್ಲಿ ಪೇಳ್ದುದು ವೇದವೆಂತೆಂದೊಡೆ ೫

ವಿವೇಳ್ವೆನಾ ಮಹೇಶನ ರೂಪಮಂ ಶಿರಂ
ಸಾವಿರಂ ಕಿವಿ ಮೂಗು ಬಾಯ್ಮೊಗಂ ಕಣ್ಕೈಗ
ಳೋವಿ ಕಾಲುಗಳನಂತಂ ಭೂಮಿ ವಿಶ್ವಮಂ ಬಳಸಿಪ್ಪುದಾತನಂಗಂ
ಆವವಂ ಬಗೆವ ರೂಪಿಗೆ ಹತ್ತುಬೆರಲುದ್ದ
ವಾವರಿಸೆ ಮೀಱಿ ಬೆಳೆದೆಸೆವವನನಂತ ಪುರು
ಷಾವಳಿಯ ತನ್ನಂತರಂ ಪುಟ್ಟಿಸುವನೆಲ್ಲೈ ಬಳಕಾತನೆಂತೆಂದೊಡೆ ೬

ಪರಿಕಿಸಲುದ ಜ್ಞುಖನುಮುದಯುಮುಖನಾ ವಿರಾ
ಟ್ಪುರುಷನೊರ್ವಂ ವಿರಾಜಂ ಸಹಸ್ರಂ ಶೀರ್ಷ
ಪುರುಷನೊರ್ವಂ ಬಳಿಕನಾದಿಪುರುಷಂ ವೇದಪುರುಷರಂತೊಬ್ಬೊಬ್ಬರು
ಪುರುಷತ್ರಿಪಾದ ನೂರ್ಧ್ವನು ಮಾದಿಯೆಂದೆನಿಪ
ಪುರುಷಂ ವಿಯುತ್ಪುರುಷನುಂ ತದ್ವಿಯುತ್ಪುರುಷ
ಪುರುಷಪುರುಷಾಂತರಾಂತರವಿಲ್ಲದಿಹ ಪುರುಷರಱಿದು ನುತಿಸುವನಾವನು ೭

ಜ್ಯೋತಿರ್ಮಯನೆ ಪರಬ್ರಹ್ಮನೇ ಬಳಿಕಲೇ
ಕಾತರ್ಯುಯನೇ ನಿನಗೆ ವಂದಿಸುವೆನೆಂಬರ್ರೈ
ಪ್ರೀತಿಯಿಂ ಮತ್ತೆ ವೇದಾದಿ ನಾದಾತೀತ ಪರಮ ನಿರವಯನೆ ನೀನು
ಖ್ಯಾತನೈ ವಿಶ್ವಧನ ನಾಕಸುರಪತಿ ಮನುಜ
ಭೂತಳ ಗವಾದಿಗಳ ಗೆಲಿದಚ್ಯುತಾಗ್ರಣಿಯ
ಲಾ ತಿಳಿಸು ಸಂವೇದ್ಯನೇಚಿದಂಶಂ ವೇದ್ಯನೇ ನಿರ್ವಿಕಲ್ಪನೆ ಜಯಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರಹಂಕರಣ ನಿರಾಕಾರವೋಂಕಾರನೇ
ವರಗುಣಾತೀತನೇ ಯವ್ಯಕ್ತನೇ ನಿನಗೆ
ಸರಿಯಾರು ತಿಳಿಯೆ ಮೂವತ್ತಾಱು ತತ್ವಪ್ರಭಾಪಟಲದೊಳು ಬೆಳಗುವ
ಉರುತರದ ಬೆಳಗಿನೊಳಗಣ ಬೆಳಗು ನೀನೆಂದು
ಪರಿಕಿಸಿದನಾದೊಡಾತನೆ ಮುಕ್ತನೆಂದು ಸ
ದ್ಗುರು ಮಹೇಶ್ವರನಂಶಭೇದದಿಂದಾ ಮೂರ್ತಿಗಳ ಮಹಿಮೆಯಂ ಪೇಳ್ದನು ೯

ಒಯ್ಯಾರದಿಂ ನಿತ್ಯನಿಷ್ಕಾಯ ಪರಿಪೂರ್ಣ
ಮಾಯಾವಿದೂರ ಪರಮಾನಂದನೆನಿಪ ನಿ
ರ್ಮಾಯನೆ ಮಹೇಶನಲ್ಲಿಯು ಚಿತ್ರಭಾಪಟಲವೆನಿಸಿ ರಾಜಿಸುವಾ ಪ್ರಭು
ರಾಯನಂ ಕಾಣುತ್ತ ಚೆನ್ನಬಸವೇಶನೇ
ಸ್ವಾಯತ್ತದಿಂದ ಕೊಂಡಾಡಿದಾ ಶ್ರುತಿಗಳ ನಿ
ಕಾಯದರ್ಥದ ಪದಂಗಳ ಬರೆವೆ ನಾಂ ಕಂಠಸರಕಮರ್ದ ರನ್ನದಂತೆ ೧೦

ವೇದಾದಿ ವೇದಗಳಿಗುಪಮೆಗುಪಮಾತೀತ
ನಾದಿ ಮಧ್ಯಾಂತದಿಂದತ್ತಣತ್ತಣ ಘನವು
ಸಾಧಕರ ಸತ್ವರಜ ತಮ ದೇವತೆಗಳ ಗೋಚರಕಗೋಚರ ತತ್ವವು
ಭೇದಾದಿ ಭೇದ ಬ್ರಹ್ಮಾಂಡಕೋಟಿಗಳು ರೋ
ಮಾದಿಗಳೊಳಡಕವಾಗಿಹವು ಸಚರಾಚರವ
ನಾಲಿ ಲೋಕಾಲೋಕವೆಲ್ಲ ಲೀಲಾಸೂತ್ರಮಾತ್ರದೊಳಗಿಹವು ಶಿವನ ೧೧

ದೆಶೆ ಶ್ರೋತ್ರದಲಿ ನೇತ್ರದಲಿ ರವಿ ಮನಸ್ಸಿನೊಳು
ಶಶಿ ಪ್ರಾಣದಲಿ ವಾಯುಃವನಲ ಮುಖದಲಿ ಶಿರದ
ವಿಸರದಲಿ ತೆತ್ತೀಸಕೋಟಿದೇವತೆಗಳಭ್ಯಂತರವು ನಾಭಿಯಲ್ಲಿ
ವಸುಧೆ ಪದತಳದಲ್ಲಿ ಪ್ರಪದದಲಿ ಶಕ್ರನಜ
ನೆಸೆವ ಜಂಘೆಯಲಿ ಭುಜದಲಿ ವಿಷ್ಣು ರುದ್ರ ಮುಖ
ವಿಸರುಹದೊಳಖಿಳ ಜಗ ಜಠರದಲಿ ಜನಿತ ನಿಜಲಿಂಗಾಂಗ ಮಹಿಮೆಯಲ್ಲಿ ೧೨

ಉಪಮೆಗುಪಮಾನಮನು ದೇವತಾದಿಗಳೆಲ್ಲ
ಜಪ ತಪ ಮಹಾದಿವ್ಯಮಂತ್ರಧ್ಯಾನಗಳಿಂದ
ಅಪರಿಮಿತಸೇವನಾರತರಾಗಿ ನಿಮ್ಮ ಪದನುತಿಯಿಂ ಕೃತಾರ್ಥರಾಗಿ
ತೃಪತಿಪಟ್ಟಿರ್ಪರಲ್ಲದೆ ನಿಶ್ಚಯದ ಮಹಿಮೆ
ಯಪರಾಪರಂ ಪರಮಗಮ್ಯ ಭಾವಾತೀತ
ವಿಪುಳಜ್ಯೋತಿರ್ಲಿಂಗ ವಿಶ್ವತೋಮುಖನಮುಖ ಘನಗಾಬ ಘನವಾವುದು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನು ಮುನೀಶ್ವರ ವೇದಶಾಸ್ತ್ರ ಶ್ರುತಿಸ್ಮೃತಿಯೆಲ್ಲ
ತನತನಗೆ ಹೊಗಳುತಿರುತಿಹವು ಶಿವಘನತೆಯಂ
ಘನತರಂ ತರಗಾಣದತ್ಯತಿಷ್ಠದ್ದಶಾಂಗುಲನೆಂದು ವೊಱಲುತಿಹವು
ಎನಲಾ ಘನವದಾವ ದರುಶನಾಗಮ ತರ್ಕ
ದನುಮತಕಸಾಧ್ಯ ಲಿಂಗದ ಮಹಾತ್ಮೆಗೆ ಕಡೆಯ
ನೆಣಿಸಲಿಲ್ಲಾಗಿ ಪ್ರಣವಾದಿ ಪಂಚಾಕ್ಷರಿಯೊಳಡಕವಾಗಿಹುದೆ ಸತ್ಯ ೧೪

ನಿತ್ಯನನನಿತ್ಯದೇವತೆಗಳಱಿಯಲ್ಕಳವೆ
ಸತ್ತು ಚಿತ್ತಾನಂದ ಶಿವನನುಭವಾದಿ ಭಾ
ವೋತ್ತಮರ ಭಾವಕಾರಣ ಕರದೊಳಮೃತಕರಕಿರಣ ಸಮ್ಯಗ್ಜ್ಯೋತಿಯ
ಬಿತ್ತರಿಸಿ ತೊಳತೊಳಗುವತ್ಯಂತ ನಿರವಯದ
ಮತ್ತೆ ಸಚ್ಚಿತ್ಸುಖಗಳ ನಿರಂಜನದ ನಿರ್ಮಲದ
ನಿತ್ಯಕೂಡಲಚೆನ್ನಸಂಗನಂಗವನು ಪ್ರಭುಲಿಂಗದಲ್ಲಿಯೆ ಕಂಡೆನು ೧೫

॥ಶೃತಿ॥

ಸಹಸ್ರ ಶೀರ್ಷಾಪುರುಷಸ್ಸಹಸ್ರಾಕ್ಷಸ್ಸಹಸ್ರಪಾತ್
ಸಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲ ೧

ಪೂರ್ವವೇದಂ ಸರ್ವೇಯಂ ಭೂತ ಯಚ್ಚ ಭವ್ಯಂ
ಉದನ್ಮುಖೈಕಶ್ಚ ಉದಯಮುಖೈಕಶ್ಚ ವಿರಾಟ್ಪುರುಷಶ್ಚೈಕಃ ೨

ವಿರಾಜಂ ಸಹಸ್ರ ಶೀರ್ಷಾಶ್ಚಾನಾದಿ ಪುರುಷೋ ವೇದಪುರುಷೋ
ಜ್ಯೋತಿಪುರುಷಸ್ತ್ರೀಪಾದೂರ್ಧ್ವಶ್ಚಾದಿಪುರುಷೋ ವಿಯುತ್ಪುರುಷಸ್ತದ್ವಿಯು
ತ್ಪುರುಷಃ ೩

ಪುರುಷಾತ್ಪುರುಷಾಪುರುಷಾನ್ಯೈವಪುರುಷೋ ಜ್ಯೋತಿರ್ಮಯಃ
ಯೇ ಕಾತೂರ್ಯ ಪರಬ್ರಹ್ಮಾ ತಸ್ಮೈನಮಸ್ತೆ ೪

ವೇದನಾದಾತೀತ ತೂರ್ಯಪರಮೋ ನಿರವಯಃ
ವಿಶ್ವಜಿತ್ ಧನಜಿತಃ ಸ್ವರ್ಜಿತ್ಸುತ್ರಾಮಜಿತಃ ೫

ವ್ರಜಿತಶ್ಚೋರ್ವರಾಜಿತಃ ಗೋಜಿತಶ್ಚಾಚ್ಯುತಃ
ಸುಸಂವೇದ್ಯಶ್ಚಿದಂಶಂ ವೇಷ್ಟಂ ನಿರ್ವಿಕಲ್ಪಂ ನಿರಾಹಂ ೬

ನಿರಾಕಾರವೋಂಕಾರಃ ಗುಣಾತೀತಮವ್ಯಕ್ತಂ
ಷಟ್ತ್ರಿಂಶತ್ಪ್ರಭಾಪಟಲೇ ಪ್ರಭಾಯಾಂ ಪ್ರಭಾಯಾಂ ಪ್ರಶ್ಚೇತಿ ೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತಂ ಶ್ರುತಿ–
ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂರಾಜನ್ಯ ಕೃತ್ತತಃ
ಊರೂತದಸ್ಯಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ೮

ಮತ್ತೆಯಂತಾ ರುದ್ರನಲ್ಲಿಯಾ ಸೃಷ್ಟಿಯಂ
ಬಿತ್ತರಿಪೆ ಹಿಂದೆ ಹೇಳಿದ ನಿಜ ಮಹೇಶನ
ತ್ಯುತ್ತಮದ ಪಂಚವಿಂಶತಿ ಮೂರ್ತಿಗಳ ಕಡೆಯ ಮೂರ್ತಿಯೊಳು
ರುದ್ರನೊಗೆದಂ
ತತ್ತದಾ ರುದ್ರಸ್ವರೂಪನವನಿಂದಾದು
ದಾತ್ತ ತತ್ವಂಗಳುತ್ಪತ್ತಿಯೆಂತೆನಲಾಗಿ
ಮತ್ತನಯ ಕೇಳಾಗಮಾಂತರದೊಳೆಂದು ಹಲಗೆಯ ದೇಶಿಕಂ ನುಡಿದನು ೧೬

ನೀ ಕೇಳ್ವುದಯ್ಯ ರುದ್ರಸ್ವರೂಪಂ ಮೊದಲೊ
ಳೇಕವಕ್ತ್ರಂ ಜಟಾಬಂಧ ತ್ರಿಣೇತ್ರವಾ
ಜೋಕೆಯ ಚತುರ್ಬಾಹು ತತ್ರಿಶೂಲಂ ಡಮರು ಹಸ್ತಂಗಳೆರಡರಲ್ಲಿ
ಆ ಕೈಗಳೆರಡಭಯವರದವೀ ನಾಲ್ಕಪ್ಪ
ವೈ ಕುಮಾರಾ ಪಾದವೆರಡು ಪದ್ಮಾಸನ ಮ
ಹಾಕಾಂತಿಯೆಸೆವ ಶುದ್ಧಸ್ಫಟಿಕವರ್ಣದಿಂ ತಳತಳಿಸಿ ಪೊಳೆವುತಿರ್ಪ ೧೭

ಏನೆಂಬೆನತ್ಯುತ್ತಮಂ ಒಡೆದ ದಿವ್ಯಗಂ
ಧಾನುಲೇಪಂ ದಿವ್ಯಪುಷ್ಪಮಾಲಾರಚಿತ
ನಾನಾ ವಿಭೂಷಣಾಂಬರದ ಸಿಂಗರದೊಳೊಪ್ಪುತ್ತಿರ್ಪುದುಮೆಯೆ ಕೇಳು
ತಾನನಾದಿಯ ರುದ್ರಮೂರ್ತಿ ಸೃಷ್ಟಿಸ್ಥಿತಿಯ
ಹಾನಿಗಳನೊಡರಿಚುವ ರುದ್ರನೊಡನಖಿಳ ತ
ತ್ವಾನೀಕದುದಯವೆಂದೀಶನೊರೆದಂದದಿಂ ತಿಳಿಯಯ್ಯ ರುದ್ರರೂಪಂ ೧೮

ಮತ್ತೆಯಂತಾ ರುದ್ರನಲ್ಲಿಯಹ ಸೃಷ್ಟಿಯಂ
ಬಿತ್ತರಿಪೆ ಹಿಂದೆ ಪೇಳ್ದಾ ನಿಜ ಮಹೇಶನ
ತ್ಯುತ್ತಮದ ಪಂಚವಿಂಶತಿ ಮೂರ್ತಿಗಳ ಕಡೆಯ ಮೂರ್ತಿಯೊಳು
ರುದ್ರನೊಗೆದಂ
ತತ್ತದಾ ರುದ್ರನಿಂದಾದ ತತ್ವಂಗಳು
ತ್ಪತ್ತಿಯೆಂತೆನೆ ಕೆಂಚವೀರಾಪ್ಪಯಾ ಕೇಳೆ
ನುತ್ತ ಹಲಗೆಯ ದೇವರುಸುರತೊಡಗಿದರಾಗಮಾಂತರದೊಳೆಂತೆಂದೊಡೆ ೧೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲೆಯು ವಿದ್ಯಾರಾಗವಾ ಕಾಲನಿಯತಿಯು
ಜ್ವಲಭಾವಕಂ ಬೋಧಕೇಶ್ವರಸದಾಶಿವಾ
ಮಲಶಕ್ತಿ ಶಿವನಿಂತು ಹನ್ನೊಂದು ತತ್ವವಾ ರುದ್ರನಿಂದೊಗೆದವವಱ
ಸಲೆ ಮಿಶ್ರವರ್ಗದಿಂ ಬೇಱೆ ಬೇಱಾಗಿ ಸ
ಲ್ಲಲಿತದಿನನಿತ್ಯಕೈವತ್ತೆರಡು ತತ್ವಂಗ
ಳಲಘುಮತಿ ಕೇಳಾದೊಡವಱ ಬಗೆಯೆಂತೆನಲು ವಿವರದಿಂ ಬಿತ್ತರಿಪೆನು ೨೦

ಕಲೆಗಳೈದಂತವಿದ್ಯಂಗಳೈದೈರಾಗ
ವೆಲೆಲೆ ಮೂಱಾ ಕಾಲಮುಂ ಮೂಱು ನಿಯತಿಯಾ
ಅಲಘುಭಾವಕದಲ್ಲಿ ಹತ್ತು ಬೋಧಕವೆರಡು ಕೇಳೀಶ್ವರಂ ಮೂಱಲಾ
ಸಲೆ ಸದಾಶಿವನೈದು ಶಕ್ತಿಯೈದಾ ಶಿವೋ
ಜ್ವಲವೈದು ಕೂಡಲೈವತ್ತೆರಡು ತತ್ವವೈ
ನಲಿದು ಬಿತ್ತರಿಪೆ ನಾನವಱ ಭೇದಂಗಳಂ ಬೇಱೆಬೇಱೆಂತೆಂದೊಡೆ ೨೧

ಮುಂತೆಣಿಸಿನೋಡಯ್ಯ ಶಾಂತ್ಯತೀತಂ ಕೂಡೆ
ಶಾಂತಿ ವಿದ್ಯಾಪ್ರತಿಷ್ಠಾ ನಿವೃತ್ತಿಗಳೈದು
ಮಿಂತಿವು ಕಲಾತತ್ವವಿನ್ನು ತನುವಜ್ಞಾನ ಮೋಹಾಮಯಾನೃತಾಳಿ
ಇಂತೈದ ವಿದ್ಯತತ್ವಂ ಸರ್ವವಶಿವಾಶ್ರಿ
ತಂ ತನಯು ರಾಗಂ ವಿರಾಗ ಸಮರಾಗಂಗ
ಳಿಂದು ಮೂಱಾ ರಾಗತತ್ವಂಗಳಿನ್ನು ಕೇಳೈ ಕಾಲತತ್ವಂಗಳ ೨೨

ಭೂತ ವಿಂತೀ ವರ್ತಮಾನಂ ಭವಿಷ್ಯನ್ಮ
ಹಾತಿಶಯಕಾಲತ್ರಯುಂ ಬಳಿಕಮಾಯುಷ್ಯ
ಮಾ ತೆಱದ ಕರ್ಮವಿತ್ತಂ ವಿದ್ಯವಾಗಿ ಧನಸುಖವಾಱು ನಿಯತಿತತ್ವಂ
ಓತು ರತಿ ಹಾಸ ಶೋಕ ಕ್ರೋಧ ಮುತ್ಸಹಂ
ನೀ ತಿಳಿಯೆ ಭಯ ಜುಗುಪ್ಸಾ ವಿಸ್ಮಯಂ ವೀರ
ವೈ ತನಯು ಕರುಣವಿಂತಿವು ಹತ್ತು ಭಾವಕಂ ಮಾಯೆ ನಿರ್ಮಾಯೆಯೆರಡು ೨೩

ಇವು ಬೋಧಕಂ ಕಣಾ ಸತ್ವಂರಜ ಸ್ತಮಂ
ತ್ರಿವಿಧವೀಶ್ವರತತ್ವವೈ ಶಿವಾಮೂರ್ತಿಯೊ
ಪ್ಪುವ ಮೂರ್ತಿ ಕರ್ತೃ ಕರ್ಮಂಗಳೈದಾ ಸದಾಶಿವತತ್ವವಯ್ಯ ಮುಂದೆ
ತವೆ ಪರಾದೀಚ್ಛೆಯಾ ಜ್ಞಾನಕ್ರಿಯಾಶಕ್ತಿ
ವಿವರಿಸುವೊಡೈದುಮಾ ಶಕ್ತಿತತ್ವಂ ಕಣಾ
ಶಿವತತ್ವವೈದಲಾ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣಂಗಳು ೨೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಮಲಮತಿ ಲಾಲಿಸೈವತ್ತೆರಡು ತತ್ವವೀ
ಕ್ರಮದಿಂದ ಪುಟ್ಟಿದವು ರುದ್ರತತ್ವದೊಳುಪ
ಕ್ರಮಿಸಿಯಂತಾ ರುದ್ರನಿಂ ವಿಷ್ಣು ಜನಿಸಿದಂ ತಿಳಿಯಲಂತಾ ವಿಷ್ಣುವಾ
ಕಮನೀಯ ರೂಪವವನಿಂ ಸೃಷ್ಟಿಯುಪ್ಪದಂ
ಮಮತೆಯಿಂ ಬಿತ್ತರಿಪೆನೆಂದು ಹಲಗೆಯ ಗುರೂ
ತ್ತಮನೊಲ್ದು ಕೆಂಚವೀರಾಖ್ಯಂಗೆ ನುಡಿದನಾನಂದರಸವೊಸರುವಂತೆ ೨೫

||ಸಾಕ್ಷಿ|| ಶಿವಾಗಮಾಂತರೇ–
ಏಕ ವಕ್ತ್ರಂ ಜಟಾಬಂಧಂ ತ್ರಿಣೇತ್ರಂ ಚ ಚತುರ್ಭುಜಂ
ತ್ರಿಶೂಲಂ ಡಮರುಶ್ಚೈವ ಹಸ್ತದ್ವಯ ಧೃತೇ ತಥಾ ೯
ಕಲಾ ವಿದ್ಯಾ ಚ ರಾಗಶ್ಚ ಕಾಲೋ ನಿಯತಿರೇವಚ
ಭಾವಕೋ ಬೋಧಕಶ್ಚೈವ ಈಶ್ವರಶ್ಚ ಸದಾಶಿವಃ ೧೦
ಶಕ್ತಿಶ್ಚ ಶಿವಮಿತ್ಯುಕ್ತಂ ತತ್ವಮೇಕಾದಶಸ್ಮೃತಂ
ತಸ್ಯ ಮಿಶ್ರಸ್ಯವರ್ಗೇಣ ಭಾವನ್ನಾದಿಸು ಭೇದತಃ ೧೧

ನೀನೊಲಿದು ಲಾಲಿಸೈ ಮುಂದಿನ್ನು ಮಿಗೆ ಸಚ್ಚಿ
ದಾನಂದ ನಿತ್ಯ ಪರಿಪೂರ್ಣ ಭಕ್ತನ ಹೃದಯ
ವೇ ನಿವಾಸಂ ಜಂಗಮಕ್ಕೆ ಜಂಗಮದ ಮಕುಟದೊಳೆಸೆವ ಶೂನ್ಯಲಿಂಗ
ಆ ನವ್ಯ ಶೂನ್ಯಲಿಂಗದೊಳಾ ಚಿದಂಬರಂ
ತಾನಲ್ಲಿ ಶಿವ ಶಕ್ತಿಯುಲ್ಲಿ ಪರೆಯಾದೀಯಾ
ಜ್ಞಾನಶಕ್ತ್ಯಂತವೆನಿಸುವ ಪಂಚಶಕ್ತಿಯಾ ಜ್ಞಾನಶಕ್ತಿಯೊಳು ನಾದ ೨೬

ಹುಟ್ಟಿತಂತಾ ನಾದದಿಂ ಪಂಚಸಾದಾಖ್ಯ
ಒಟ್ಟಜೆಯೊಳೊಗೆದವವಱವಱಂಶಭೇದಕಳ
ವಟ್ಟೊಗೆದನಾ ಮಹೇಶ್ವರನಲ್ಲಿ ರುದ್ರನಾ ರುದ್ರನಿಂ ವಿಷ್ಣುವೊಗೆದಂ
ಕಟ್ಟಿಕ್ಕಱಣುಗ ಕೇಳವನಾ ಸ್ವರೂಪಮಂ
ನೆಟ್ಟನವನಿಂದಷ್ಟಸೃಷ್ಟಿಯಂ ನೀಂ ಮನಂ
ನಟ್ಟು ಕೇಳೊರೆವೆನೆಂದಾ ದೇಶಿಕಂ ನುಡಿದನಾ ವಿಷ್ಣುವಿನ ಘನತೆಯ ೨೭

ಶೈವಪೌರಾಣದೊಳು ಮಿಗೆ ರಾಜಿಸುತ್ತಮಿ
ರ್ಪಾ ವಾಯುವೀಯ ಸಂಹಿತೆಯೊಳಜ್ಞಾನಿ ರಾ
ಜೀವ ಲೋಚನನಲ್ಲ ಪರವಿಷ್ಣುವಿನ ರೂಪವೆಂತೆನಲು ಬಿತ್ತರಿಪೆನು
ಆವಗಂ ಶ್ರೋತ್ರಪಾತ್ರಂ ಕಾಂತಿವೆತ್ತ ದಿ
ವ್ಯಾಮಯುಂ ದೇವಮುನಿಗಣ ಸಕಲ ಗಂಧರ್ವ
ಸೇವಿತಂ ಸರ್ವಾಂಗಲೇಪನದ ಭಸಿತ ತ್ರಿಪುಂಡ್ರದಿಂ ಸೌಖ್ಯವಾದ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಡೆಯ ಮಕುಟದ ಕರ್ಣಕುಂಡಲದ ರುದ್ರಾಕ್ಷಿ
ದೊಡಿಗೆ ವದನದ ಶಾಂತಿರಸವಾ ಕರಸ್ಥಲದ
ನಡುವೆ ರಾಜಿಸುವಿಂದ್ರನೀಲ ಶಿವಲಿಂಗಮಂ ಪೂಜಿಸುತ ನಿಷ್ಠೆಯಿಂದ
ಪಿಡಿದಕ್ಷಮಾಲೆ ಜಿಹ್ವೆಯೊಳು ಪಂಚಾಕ್ಷರಿಯು
ನುಡಿವುತ್ತ ಹೃದಯದೊಳಗಾ ಲಿಂಗರೂಪಮಂ
ಮಡಗಿ ಜಾನಿಸುತಿರ್ಪನ್ನೆ ವಿಷ್ಣುವೆಂದು ಬಿತ್ತರಿಸಿದಂ ಗುರುರಾಯನು ೨೯

ಗುರು ಕರುಣದಿಂದ ಗುರುವಾದಂತೆ ಜಂಗಮದ
ಪರಿಯಾಯದಿಂದೊಗೆದ ವಿಷ್ಣುವಿನ ಮಹಿಮೆಯುರು
ತರವಲಾ ಹೇಳುವೊಡೆ ಕೇಳುವೊಡೆ ದುರ್ಲಭಂ ವಿಶ್ವದೊಳು ಪೂರ್ಣಮಾಗೆ
ಎರವಿಲ್ಲದೊಳಗು ಹೊರಗಿರ್ದು ರಕ್ಷಿಪನಲಾ
ಪರಿಕಿಸಲ್ವಿಷ್ಣುಮಯಮೀ ಜಗತ್ತೆಂಬ ಬಂ
ಧುರವೇದ ದಾಸು ಪ್ರಮಾಣವದಱಿಂ ವಿಷ್ಣುವಧಿಕನ್ನೆ ಪರಿಭಾವಿಸೆ ೩೦

ಆ ವಿಷ್ಣುವಿನ ಮಸ್ತಕದೊಳೆಸೆವ ಪಂಚಭೂ
ತಾವಳಿಗಳುದಯಿಸಿದವವನ ಮುಖದಲ್ಲಿ ಮಿಗೆ
ದೇವಾಸುರಾದಿ ದಶದಿಕ್ಕುಗಳು ಪುಟ್ಟಿದವು ಬಳಿಕವನ ಜಠರದಲ್ಲಿ
ಈ ವಿಶ್ವ ಲೋಕಂಗಳಾದಿತ್ಯ ಚಂದ್ರರಿಂ
ದ್ರಾವಳಿಗಳಖಿಳ ಮನು ಮುನಿ ಚರಾಚರಮಪ್ಪ
ಜೀವಜಾಲಂಗಳೊಗೆದವು ವಿಷ್ಣುವಂಗವೆ ಜಗನ್ಮಯಂ ಕೇಳು ದೇವಿ ೩೧

ಒಯ್ಯಾರದಿಂದೆಸೆವನಾದಿಜಂಗಮ ಸಂಪ್ರ
ದಾಯ ತತ್ತ್ವಕ್ರಮದ ಸೃಷ್ಟಿಭೇದಂಗಳಂ
ನ್ಯಾಯದಿಂ ಕೇಳು ಶೂನ್ಯಾದಿಯಿಂ ವಿಷ್ಣು ಕಡೆಯಾದವಂ ಬಿತ್ತರಿಸಿದೆಂ
ಈ ಯುವನಿಯಲ್ಲಿದ ಮಹಾ ಗೋಪ್ಯಮಂ ಮಾಡು
ಪಾಯದಿಂ ಮೂಱು ಲೋಕದೊಳು ದುರ್ಲಭವಂಬು
ಜಾಯತೇಕ್ಷಣೆ ಸಾರಕಿದು ಸಾರವೆಂದು ಬಿತ್ತರಿಸಿದಂ ಸರ್ವೇಶನು ೩೨

||ಸಾಕ್ಷಿ|| ಶೈವೇ ವಾಯುವೀಯ ಸಂಹಿತಾಯಾಂ–
ಸಂಸ್ತೂಯಮಾನೋ ದೀಪ್ತಾಂಗೈರ್ದೇವೈರ್ಮುನಿಗಣೈಸ್ತಥಾ
ಧೃತತ್ರಿಪುಂಡ್ರಕೋ ದಿವ್ಯೈ ರುದ್ರಾಕ್ಷೈಶ್ಚ ವಿಭೂಷಿತಃ ೧೨

ಸ ಶುಭೇ ಸತತಂ ವಿಷ್ಣುರ್ಭಸ್ಮದಿಗ್ಧತನೂಲತಃ
ತ್ರಿಪುಂಡ್ರಾಂಕಿತಸರ್ವಾಂಗೋ ಜಟಾಮಂಡಲ ಮಂಡನಃ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದ್ರನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ
ವಿಷ್ಣುತ್ವಂ ಪ್ರಾಪ್ಯತೇ ತೇನ ಸಾದ್ಭುತೈಕಂ ಸನಾತನಃ ೧೪

ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ತೋ ನಾರಾಯಣ ಸ್ತಥಾ ೧೫
ವಿಷ್ಣು ಮಾಯಮಿದಂ ಜಗತ್

ಮೃಡಮೂರ್ತಿ ಹಲಗೆಯಾರ್ಯರ್ಗಂ ಕೃಪಾಮೃತರಸದ
ಕಡಲ ಕಾಲುವೆಯು ಮೇಲ್ವರಿಸೆ ಭೋರೆಂದು ಪರಿ
ದಡರಿ ಶಿಷ್ಯನ ಕರ್ಣಕೋಟೀರದೊಳಪೊಕ್ಕು ಹಾರವಿಸೆ ಹೃದಯದಲ್ಲಿ
ಮಡುಗಟ್ಟಿ ಕಂಗಳೊಳಗಾನಂದರಸವಾಗಿ
ಯೊಡಲ ರೋಮಾಂಚನದ ಸಸಿ ಬೆಳೆಯೆ ಮುಗಿದ ಕೈ
ಯೊಡನೆ ಹೂವಾಗೆ ಸದ್ಭಕ್ತಿರಸವೆಂಬ ತನಿವಣ್ಣು ಸೊಗಸಿಂ ಮೆಱೆದುದು ೩೩

ಆ ಫಲವನಾಚಾರ್ಯರ್ಗರ್ಪಿಸಿ ಮಹಾ ಜಂಗ
ಮೋಪಭೋಗದೊಳು ಭೋಗಿಸಿ ಲಿಂಗವೆರಸಿ ಮ
ತ್ತೋಪ ಶಿಷ್ಯಂಗೀಯೆ ಸವಿದಾ ಪ್ರಸಾದದಿಂ ಪರಿತುಷ್ಟಿವಡೆಯಲಾಗಿ
ನೀ ಪರಮ ನಿಷ್ಠನೈ ಮುನ್ನ ಕೃಪೆಯಿಂದ ನಿನ
ಗಾಂ ಪೇಳ್ದ ಬೋಧೆಯಂ ಮರಳಿ ನೀಂ ಪೇಳೆನಲು
ಕೂಪ ನಂಜುಂಡದೇವರು ಮೆಚ್ಚುವಂದದಿಂ ಕೆಂಚವೀರಾಖ್ಯನುಸುರ್ದಂ ೩೪

ಗುರುವೆ ಮೊದಲಾ ಸಚ್ಚಿದಾನಂದಮುಂ ನಿತ್ಯಂ
ಪರಿಪೂರ್ಣ ಭಕ್ತನೇ ಗುರುಲಿಂಗ ಜಂಗಮಂ
ಪರಮಪ್ರಸಾದ ಪಾದೋದಕ ವಿಭೂತಿ ರುದ್ರಾಕ್ಷಂ ಷಡಕ್ಷರಿಗಳೇ
ಪರಿವಿಡಿಯೊಳೆಂಟುತನುವೊಂದಾದವವನ ಬಂ
ಧುರ ರೋಮಕೂಪ ಕೂಪಂಗಳೊಳು ಕೋಟಿ ಸುರು
ಚಿರದ ಚಿದ್ಬ್ರಹ್ಮಾಂಡವಿಪ್ಪವೆನಲಾ ಭಕ್ತನಂ ಪೊಗಳಲೆನ್ನ ವಶವೇ ೩೫

ಅಂತಪ್ಪ ಭಕ್ತಹೃದಯದೊಳಿರ್ಪ ಜಂಗಮವ
ದೆಂತೆನಲು ಬ್ರಹ್ಮಾಂಡವೇ ಮಕುಟವಾನನಂ
ತಾಂ ತೀವಿದಾಕಾಶವಖಿಳ ದಿಗ್ಭುಜವಿತತಿ ನೇತ್ರ ಶಶಿ ಸೂರ್ಯ[ರಂಗಂ]
ಅಂತರಿಕ್ಷಂ ಪಾದವೆಸೆವ ಪಾತಾಳಂ ಕ
ರಾಂತರದೊಳಾ ಶೂನ್ಯಲಿಂಗವಖಿಲಾವಯ ನಿ
ತಾಂತಭೂಷಣನ ಮಹಿಮೆಯ ಪೇಳೆ ಕಿಂಚಿಜ್ಞನಪ್ಪೆನಗೆ ಶಕ್ಯವಹುದೆ ೩೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಂಗಮದ ಮಕುಟದೊಳು ಶೂನ್ಯವಂತಲ್ಲಿ ನವ
ಲಿಂಗ ಉದ್ಭವಿಸಲದಱಿಂ ಕೋಟಿಸೃಷ್ಟಿಗಳು
ವಂಗಣದೊಳಾದುವಾ ಶೂನ್ಯಲಿಂಗದೊಳಾ ಚಿದಂಬರಂ ಪುಟ್ಟಲಲ್ಲಿ
ಕಂಗೊಳಿಪ ಸತ್ಪ್ರಣವಪಂಚಕ ಷಡಕ್ಷರಿಗ
ಳಿಂಗಿತದೊಳವಱಿಂದನೇಕ ಸೃಷ್ಟಿಗಳಾದು
ದಂ ಗುರುವೆ ಪೇಳ್ವೆನೆಂದೊಡೆ ತೊದಲ್ನುಡಿಯ ಬಾಲಕನೆನಗೆ ಶಕ್ಯವಹುದೇ ೩೭

ಶಿವಶಕ್ತಿಯಾಱಾಱು ಭೇದದಿಂದನ್ಯೋನ್ಯ
ವಿವರದಿಂದೊಂದಿ ಸೃಷ್ಟಿಯ ಮಾಡುತೊಪ್ಪಿರ
ಲ್ಕವಱೇಕಭಾವದೊಳಗಾ ಪರಾಶಕ್ತಿಯುದಯಿಸಿ ಸೃಷ್ಟಿಯಂ ಮಾಡಲು
ತವೆ ಪರಾಶಕ್ತಿಯಿಂದೊಗೆದಾದಿಶಕ್ತಿ ಬಹು
ಭುವನಸೃಷ್ಟಿಗೆ ಕಾರಣಂ ಬಳಿಕ ಮವಱೊಳು
ದ್ಭವಿಸಿದಿಚ್ಛಾಶಕ್ತಿ ತಾನಖಿಲಮಂ ಸೃಜಿಸಲದಱಂಶದಿಂದ ಕೂರ್ತು ೩೮

ತಾನಾ ಕ್ರಿಯಾಶಕ್ತಿಯೊಗೆದು ಸೃಷ್ಟಿಸತೊಡಗ
ಲಾ ನೈಜಶಕ್ತಿಯ ಸಹಸ್ರಾಂಶದಿಂದಲಾ
ಜ್ಞಾನಶಕ್ತಿಯ ಜನನವದಱಖಿಲ ಸೃಷ್ಟಿಯದಱಂಶಂ ಸಹಸ್ರದಲ್ಲಿ
ಆ ನಾದಕೋಟಿಗಳು ತಮ್ಮ ತಮ್ಮಯ ಸಹ
ಸ್ರಾನುಕೂಲಾಂಶದಿಂದೊಗೆದವಱ ರೂಪಮಂ
ನಾನಱಿಯಬಲ್ಲೆನೇ ಗುರುವೆ ಗಗನೋನ್ನತದ ನೆಲೆಯನಱಿವುದೆ ಟಿಟ್ಟಿಭಂ ೩೯

ಕಡೆಯ ನಾದದ ಸಹಸ್ರಾಂಶದೊಳು ಕೂರ್ಪಿನಿಂ
ದೆಡೆವಿಡದೆ ಪಂಚಸಾದಾಖ್ಯಂಗಳೊಂದೊಂದ
ಱೊಡನೆ ಸಾವಿರ ಭಾಗೆ ಭಾಗೆಯಿಂದೊಗೆದಾ ಕಲಾಮೂರ್ತಿಯಾಗಿ ತಮ್ಮ
ಒಡಗೂಡೆ ಗಣನೆಗೈವತ್ತೆರಡು ರೂಪಾಗಿ
ನಡೆಸುವವು ಸೃಷ್ಟಿಯಂ ಬಳಿಕಂತ್ಯಸಾದಾಖ್ಯ
ದೊಡಲಸಾವಿರಭಾಗೆಯೊಳು ಮಹೇಶ್ವರನುದಿಸಿ ಸೃಜಿಸತೊಡಗಿದನಖಿಳವಂ ೪೦

ಅವನ ಕೋಟ್ಯಂಶದೊಳು ಪಂಚವಿಂಶತಿಮೂರ್ತಿ
ಸಿವಹಂಗಳೊಗೆದವಂತವಱ ಕಡೆಯಂಶಸಂ
ಭವನಾದನಾ ರುದ್ರನಖಿಲಮಂ ನಿರ್ಮಿಸುತಲವನನಂತಾಂಶದಲ್ಲಿ
ತವೆ ವಿಷ್ಣುವುದಿಸಿ ಸೃಷ್ಟಿಯ ಮಾಡತೊಡಗಲಂ
ತವನ ಕೋಟ್ಯಂಶದೊಳು ನಲವಿನಿಂ ಬ್ರಹ್ಮನು
ದ್ಭವಿಸಿ ಸೃಷ್ಟಿಯ ಮಾಳ್ಪ ಭೇದಮಂ ನಾಂ ಬಲ್ಲೆನೇ ಗುರುವೆ ಚಿತ್ತವಿಪುದು ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಹಲಗೆಯ ದೇಶಿಕಂ ತನಗೆ ಮೊದಲು ಪೇ
ಳ್ದಂದವುಮನಱಿದಱಿಯದಂತೆ ಪೇಳಲು ಕೇಳ್ದು
ಮಂದಹಾಸದೊಳು ನಂಜುಂಡಮೂರ್ತಿಯ ನೋಡಿ ಕೆಂಚವೀರಾಹ್ವಯಂಗೆ
ಸಂದೆಗಂ ಬೇಡ ತತ್ವಾರ್ಥನಿಶ್ಚಯವಾಯ್ತು
ಕಂದನಿವನೇಂ ಧನ್ಯನೋಯೆಂದು ಗುರುನುಡಿದು
ಮುಂದೆ ಲಿಂಗದೊಳಪ್ಪ ಸೃಷ್ಟಿಯಂ ಮಲ್ಲಣಾರ್ಯನ ಪದನ ಮಾಡವೇಳ್ದಂ ೪೨

ಇದು ವೀರಶೈವ ಷಟ್‌ಸ್ಥಲವಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರಿ ಚಿತ್ಸಿಯಾ
ಪ್ರದ ಹಲಗೆಯಾ ಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಲಿಂಗಸೃಷ್ಟಿಯಂ ಗುರುಪೇಳತೊಡಗಿದನೆನಿಪ್ಪಲ್ಲಿಗೇಳು ಸಂಧೀ ೪೩

ಅಂತು ಸಂಧಿ ೭ಕ್ಕಂ ಪದನು ೩೮೦ ಕ್ಕಂ ಗ್ರಂಥ ೧೮೮ ಕ್ಕಂ
ಮಂಗಳಮಹಾ
ಶ್ರೀಶ್ರೀಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ : ೮

ಲಿಂಗವೆಯನಾದಿ ಭಕ್ತಾಂಗ ಶಿವನಱುದೆಱದ
ಸಂಗತಿಯ ಬಿತ್ತರಿಸುತಂ ಬಳಿಕ ಮೂರ್ತ್ಯಾದಿ
ಕಂಗಳಂ ನಿರವಿಸುವೆನೆಂದನಂದಾ ಹಲಗೆಯಾರ್ಯ ಚಿತ್ಕಮಲಸೂರ್ಯ

ದೇವೋಮಮೋಷ್ಟಸಿದ್ಧಿಂ ದಿಶತು ತನ್ಮಹಾ
ದೇವಂ ಭಜೇ ಕೃತಾರ್ಥೋಹಂ ಸದಾ ದಿವ್ಯ
ದೇವೇನ ದೇವಾಯ ತೇನವೋ ದೇವಾದನಂತ ತತ್ವಜ್ಞಾನ್ಯಹಂ
ದೇವಸ್ಯ ಸಂಬಂಧ ಮಾನಸೋಹಂ ನಿತ್ಯ
ದೇವೇ ಮಮೇಂದ್ರಿಯಾಣೀತಿಮತ್ವಾ ಸರ್ವ
ದೇವ ಮಾಂ ರಕ್ಷ ಗುರುಶಾಂತಮಲ್ಲೇತ್ಯಹಂ ವಕ್ಷ್ಯೇ ಪುನಃ ಪುನರ್ವೈ ೧

(ಇದು ಸಪ್ತವಿಭಕ್ತಿಯ ಪದ)

ಶರಣಾಬ್ಜ ಭಾಸ್ಕರಸಚಿತ್ಕುಮುದ ಹಿಮಕರ
ಸ್ಫುರಿತ ನತಸುರಭೂಜ ಪತಿನುತ ಬುಧಸಮಾಜ
ಗುರುವೆ ಪುಣ್ಯದ ಕರುವೆ ವರಕವಿಸ್ತೋತ್ರಸನ್ಮಂದಹಾಸಾಸ್ಯಚಿತ್ರ
ಚರತಮಪ್ರಖ್ಯಾತ ವೃಷಕೇತು ಸುಟನೀತ
ಪರಮ ಮೇಲಣಗವಿಯ ಶಾಂತನಂಜೇಶ ಬಂ
ಧುರ ಧರ್ಮಕೋಶ ನೀನೇ ಮೇಗು ಚಾಗು ಶರಣಾಗು ಸತ್ಕೀರ್ತಿಮೂರ್ತಿ ೨

ಗುರುವೆ ಭಕ್ತರ ಕಲ್ಪತರುವೆ ಪರಶಿವತತ್ವ
ವರವೆ ಮುಕ್ತಿಯ ಸುಮಂದಿರವೆ ಮಿಗೆ ಸುಜ್ಞಾನ
ಶಿರವೆ ತತ್ವಾತತ್ವಪರವೆ ಶರಣರ್ಗೀವ ವರವೆ ಘನಕೃತನಿಶ್ಚಯ
ಕರವೆ ಸನ್ಮಾರ್ಗಕ್ಕೆ ನೆರವೆ ಚಿನ್ಮಯವಪ್ಪ
ಚಿರವೆ ನೆನೆವರ ಪಾಪಹರವೆ ಶಿವನಹ ಷಡ
ಕ್ಷರವೆ ಸುಸ್ಥಳಕರಾಗರವೆ ಭ್ರೂಮಧ್ಯಸುಸ್ಥಿರವೆ ಹೃಚ್ಚರವೆ ಶಿವನೆ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಗುರುವೆ ಹಿಂದೆ ನೀನೆನಗೆ ಪೇಳಿದ ಮಹಾ
ಸುಲಲಿತದ ಭಕ್ತಸುಪ್ರಾಣವೆಂದೆನಿಪ ನಿ
ರ್ಮಲದ ಜಂಗಮದಿಂದಲಾದ ಸೃಷ್ಟಿಯು ಕೇಳಿ ದೇವ ದಣ್ಣನೆ ದಣಿದೆನು
ಸುಲಭದೇಶಿಕ ಮುಂದೆಯಾ ಭಕ್ತನಂಗವಾ
ದ ಲಘುಲಿಂಗದ ಸೃಷ್ಟಿಯಂ ಪೇಳಲುಜ್ಜುಗಿಪ
ಹಲಗೆಯಾರ್ಯನೆ ನಾಂಕೃತಾರ್ಥನಪ್ಪಂತದೆಂತೆನೆ ನುಡಿದನಾಚಾರ್ಯನು ೪

ಆದೊಡೆಲೆ ಕೆಂಚವೀರಾಹ್ವಯಾ ಮುಂದಿನ್ನ
ನಾದಿ ಸದ್ಭಕ್ತನಂಗವೆ ಲಿಂಗ ಲಿಂಗದಿಂ
ದಾದ ಸೃಷ್ಟಿಯು ಕೇಳು ಲಿಂಗವೇ ಶಿವಶಕ್ತಿ ಶಿವಶಕ್ತಿಯಿಂ ನಿಷ್ಕಲ
ವಾದ ತತ್ವಂ ಸಕಲ ನಿಷ್ಕಲವದದಱಿಂದ
ಲಾದುದದಱಿಂ ಸಕಲತತ್ವವೀ ಮೂಱು ನಿ
ರ್ಭೇದವಾಯಾಮೂರ್ತಿ ಮೂರ್ತಿಯಿಂದಾದ ತತ್ವಂಗಳೆಂತೆನೆ ಪೇಳ್ವೆನು ೫

ಕೇಳಯ್ಯ ವಚನಾಂತರಂಗಳಾ ಗ್ರಂಥಂಗ
ಳಾಳಾಪಮಂ ಲಿಂಗವೇಪರಶಿವಂ ಕಣಾ
ಮೇಳದಿಂದಾ ಲಿಂಗವೇ ಶಕ್ತಿಸಂಯುತವದೇ ಪರಾಶಕ್ತಿಯುಹುದು
ಪೇಳಲಂತಪ್ಪ ಶಿವಶಕ್ತಿಗಳು ಭಕ್ತನ ಮಹಾ
ಲಲಿತದಂಗವಂತೆಸೆವನಾದಿಯ ಭಕ್ತ
ಲೋಲನಂಗಂ ಲಿಂಗವಂತದೇ ಪರಶಿವಂ ತಚ್ಛಿವಂ ಶಕ್ತಿಯುಕ್ತಂ ೬

ಅವಿರತಂ ಬೇಱಿಲ್ಲದೊಂದಿಪ್ಪವೈ ಮತ್ತೆ
ಶಿವನು ಪರಶಿವ ಶಕ್ತಿಯೇ ಪರಾಶಕ್ತಿಯಿಂ
ತಿವಱ ಕೂಟವೆ ಲೋಕದುತ್ಪತ್ತಿ ಕಾರಣಂ ಶಿವ ಪರಾಶಕ್ತಿಯೆರಡು
ಭುವನದೊಳು ಸರ್ವಕಾರಣದೊಳೊಂದಿಹವಲಾ
ಶಿವನಿಲ್ಲದಾ ಶಕ್ತಿಯಿಲ್ಲ ಶಕ್ತಿಯ ತೊಲಗಿ
ಶಿವನಿಲ್ಲ ಪುಷ್ಪಗಂಧಂ ಮಾರುತಾಂಬರಂಗಳ ತೆಱಂ ಪರಿಭಾವಿಸೆ ೭

ನೀ ತಿಳಿಯಲಾ ಸ್ವಯಂಜ್ಯೋತಿ ಚೈತನ್ಯಂ ಮ
ಹಾ ತತ್ವಮಾಲಾಧರಾಂಕಿತ ಪರಾಶಕ್ತಿ
ಗೋತು ಕೂಡಿಹ ಲೋಕದುತ್ಪತ್ತಿಕಾರಣಂ ನಿತ್ಯ ನಿರ್ಮಲ ಸತ್ಯಕಂ
ಖ್ಯಾತಕಾರಣ ಕಾರಣಂ ಸರ್ವತತ್ವಾಲ
ಯಾತಿಶಯದಾಲಯಸ್ಥಾನ ಶಿವಶಕ್ತಿಯಂ
ದೀ ತೆಱನದಪ್ರಮಾಣಂ ಬಳಿಕಭೇದ್ಯವಾ ತರ್ಕಕ್ಕೆ ಸಿಲ್ಕದಿಹುದು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕ ಗೋಚರಿಸದುದು ಶಿವಶಕ್ತಿಯಯ್ಯ ನಿ
ರ್ಮಳವಾದ ಶಿವಶಕ್ತಿಯಾಗಿಹುದು ಶಿವತತ್ವ
ವಳವಟ್ಟ ಶಿವನೆ ನಿಷ್ಕಳವದಱ ಭೇದವಂ ಕ್ರಮದಿಂದ ಬಿತ್ತರಿಪೆನು
ಎಳಸಿ ಚಿಚ್ಛಕ್ತಿಬೇಱಿಲ್ಲದಂತೆಸೆವ ಶಿವ
ನೊಳು ಕೂಡಿ ರಾಜಿಪುದು ಶಿವತತ್ವವೀ ತೆಱಂ
ತಿಳಿದು ಪೇಳುವೆನಿನ್ನು ವಾತೂಳತಂತ್ರದೊಳು ಷಣ್ಮುಖಂಗೀಶನೊರೆದಂ ೯

ಶಿವನಣುಗಷಣ್ಮುಖಂಗೊರೆದನಾ ತತ್ವವೇ
ತ್ರಿವಿಧವೆಂದಱಿಯದಱ ಭೇದವಂ ಕೇಳಯ್ಯ
ಶಿವ ಸದಾಶಿವ ಮಹೇಶ್ವರರಿನಿತು ಮೂಱಱೊಳು ಶಿವತತ್ವವೇ ನಿಷ್ಕಲಂ
ತವೆ ಸಕಲ ನಿಷ್ಕಲಂ ತಾನೆನಿಪುದೈ ಸದಾ
ಶಿವತತ್ವವಾ ಸಕಲವೇ ಮಹೇಶಂ ಮೊದಲ
ಶಿವತತ್ವವೊಂದಾ ಸದಾಶಿವಂ ಪಂಚಕಂ ಸಾಕಾರದಾ ಮಹೇಶಂ ೧೦

ಓವಿ ಯಿಪ್ಪತ್ತೈದು ಭೇದವೈ ಕೇಳಿಂತು
ಮೂವತ್ತುವೊಂದು ತತ್ವಂ ಕಣಾ ಕೇಳುಸ
ದ್ಭಾಪಿ ಶಿವನಾ ಪರಾತ್ಪರ ಸೂಕ್ಷ್ಮ ನಿತ್ಯಂಗಳಾ ಸರ್ವಗತಮವ್ಯಯಂ
ಏವೇಳ್ವನಂತನಿಂದಿತಮನೌಪಮ್ಯಮೆಂ
ದಾ ವಿಶೇಷದೊಳಪ್ರಮಾಣಮುಮನಾಮಯಂ
ಈ ವಿವರದಿಂ ಹತ್ತು ಪೆಸರಾದವಯ್ಯ ಶಿವತತ್ವಕವರರ್ಥವಿನ್ನು ೧೧

ಒರೆವೆವೈ ಶುದ್ಧತ್ವದಿಂದ ಶಿವನೆಂದಾಯ್ತು
ಪರಕೆ ಪರವೆನಿಪರ್ಥದಿಂ ಪರಾತ್ಪರವದಂ
ಬರಕತೀತತೆಯಿಂದ ಸೂಕ್ಷ್ಮವಾ ಕಾರಣಕೆ ಕಾರಣತ್ವದೊಳೆ ನಿತ್ಯಂ
ಆರರೆ ಸರ್ವವ್ಯಾಪಿಯೆನೆ ಸರ್ವಗತವದೀ
ಪರಿಯೊಳಕ್ಷೀಣದಿಂದಲವ್ಯಯನಮಲ
ತರದಿಂದನಿಂದಿತಂ ಸರಿಯಿಲ್ಲದುದಱಿಂದ ನೌಪಮ್ಯವೆಂದೆನಿಪುದು ೧೨

ಪವಣಿಲ್ಲದಿಹುದಱಿಂದಪ್ರಮಾಣಂ ಕೇಳು
ಕುವರ ಗುಣದೋಷರಹಿತತೆಯಿಂದನಾಮಯಂ
ಶಿವರೂಪವೀ ಹತ್ತುನಾಮ ನಿರ್ವಚನಮಾ ಶಿವನೇ ಮಹಾಲಿಂಗವು
ತವೆ ಮಹತ್‌ಸಂಜ್ಞೆಯಂ ಪಂಚಸಂಜ್ಞೆಯನುಳ್ಳು
ದವಿರತಂ ಸರ್ವತತ್ವಕ್ಕೆ ಕಾರಣವದೊ
ಪ್ಪುವುದುಮಖಿಳಾರ್ಣವಲಯಾನಾಮೆನಿಪ್ಪ ಲಿಂಗಂ ಮುಖ್ಯವೆನಿಸುತಿರ್ಪ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಗೂಢವಾ ಶರೀರಸ್ಥಲಿಂಗ ಕ್ಷೇತ್ರ
ಉರುತರಾನಾದಿಯೀಶ್ವರ ತೇಜವಿಂತೈದು
ಪರಿಯ ಸಂಜ್ಞೆಯನುಳ್ಳುದಾ ಮಹಾಲಿಂಗವೈ ವಚನಾರ್ಥವಿಂತೈದಕಂ
ಧರೆ ವೇದವಾ ಜಗತ್ಪಂಚ ವಿಂಶತಿಮೂರ್ತಿ
ಪರಿಯಾಯವೀಶ್ವರ ಸದಾಶಿವರ ಜನನಾದಿ
ಯುರುತರವದಾದ ಕಾರಣದಿಂದ ಮೊದಲು ಪರವೆಂಬ ಸಂಜ್ಞೆಯು
ದಾದುದು ೧೪

ಅನವಧಿಬ್ರಹ್ಮಾಂಡಕೋಟಿಯೊಳು ಪರಿಪೂರ್ಣ
ವೆನಿಸಿದ ಚರಾಚರವವಕ್ಕೆ ಬೀಜಂ ಸೂಕ್ಷ್ಮ
ವೆನಿಸಿ ನಿರ್ಭೇದ್ಯ ನಿರವಯ ನಿಷ್ಕಲಂ ಜಗಕೆ ಪರಮಕಾರಣವೆ ಗೂಢಂ
ತನುಜ ಅಂತಲ್ಲಿ ಶಿವಶಕ್ತಿ ಸಚರಾಚರಂ
ವನಿತೆಯಾ ಪುಂನಪುಂಸಕನಾಮವಾ ಪ್ರವ
ರ್ತನೆಗಳಂ ತಾನುಂಟುಮಾಡಿ ತೋರ್ಪುದೆಮಿಗೆ ಶರೀರಸ್ಥವಾ ಲಿಂಗಕಂ ೧೫

ತನ್ನೊಳಾ ಮಾಯೆಯುದಱಿಂ ಮೋಹವದಱಿಂದ
ಮುನ್ನತಪ್ರಾಪಂಚ ಮೊದವಿಸುತ ತಾನದಕ
ಭಿನ್ನ ಭೂಮಿಕೆಯಾಗಿ ತಾನೆನ್ನದಿಹುದೆ ಲಿಂಗಕ್ಷೇತ್ರವಯ್ಯವೇದ
ಸನ್ನುತ ಜಗದ್ಧರಾ ಪಂಚವಿಂಶತಿಗಳಾ
ಸನ್ನಮೂರ್ತಿಗಳೀಶನಾ ಸದಾಶಿವಲಾದಿ
ಯಿನ್ನಾಡೆಯುತ್ಪತ್ತಿಲಿರ್ಪುದೆಯನಾದಿಯೀ ಪಂಚಲಕ್ಷಣ ಲಿಂಗವೈ ೧೬

ಇವು ಶಿವನ ಲಕ್ಷಣಂ ಸರ್ವತತ್ವಂಗಳು
ಧ್ಭವಲೋಕದುತ್ಪತ್ತಿಕಾರಣಂ ಯೋಗಿಗಳ
ಸವಿಲಾಸದುಪಕಾರಕೋಸುಗಂ ತನ್ನಿಚ್ಛೆಯಿಂ ಶಿವನ ನೆನೆಯಲಾಗೀ
ಆವನ ಚಿಂತಾಶಕ್ತಿತೇಜದ ಸಹಸ್ರಾಂಶ
ದವಿಮಲ ಪರಾಶಕ್ತಿಯಾ ಸಹಸ್ರಾಂಶಭವ
ಸುವಿಚಾರದಿಂದಾದಿಶಕ್ತಿಯಾಕೆಯ ಸಹಸ್ರಾಂಶದಿಂದಿಚ್ಛೆಯಾಯ್ತು ೧೭

ಆ ನಾರಿಯುರುಸಹಸ್ರಾಂಶದಿಂದಾದಳಾ
ಜ್ಞಾನಮಯಶಕ್ತಿಯಾಕೆಯ ಸಹಸ್ರಾಂಶದಿನ
ನೂನ ಕ್ರಿಯಾಶಕ್ತಿಯಾಯ್ತಲಾ ಪಂಚಶಕ್ತಿಯರಿಂತು ನಿಷ್ಕಲ ಕಣಾ
ಏನೆಂಬೆನೀ ಶಕ್ತಿಯರೊಳನನ್ಯದ ಶಿವಂ
ಗಾನಂದದಿಂದ ನಿಷ್ಕಲನಾಮವಾಯ್ತಲಾ
ನೀನಱಿವೊಡಿಂತಿದೇ ಶಿವಸೃಷ್ಟಿಯೆಂದು ಪೇಳ್ದಂ ಹಲಗೆಯಾಚಾರ್ಯನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ವಚನಾಂತರೇ-

ಲಿಂಗಂ ಪರಶಿವಂ ಪ್ರೋಕ್ತಂ ತಲ್ಲಿಂಗಂ ಶಕ್ತಿಸಂಯುತಂ
ತಚ್ಛಕ್ತಿಶ್ಚ ಪರಾಶಕ್ತಿಃ ತದ್ವೈಭಕ್ತಾಂಗಮುಚ್ಯತೇ ೧

ಅನಾದಿ ಭಕ್ತಸ್ಯಾಂಗಂ ಚ ಲಿಂಗಂಸ್ಯಾತ್ತುಪರಂ ಶಿವಂ
ತಚ್ಛಿವಂ ಶಕ್ತಿಸಂಯುಕ್ತ ಮನ್ಯೋನ್ಯಂಚೈವ ಸರ್ವದಾ ೨

ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತ ಶ್ಶಿವಃ
ಪುಷ್ಪ ಗಂಧಾವಿವಾನ್ಯೋನ್ಯಂ ಮಾರುತಾಂಬರಯೋರಿವ ೩

ಸ್ವಯಂಜ್ಯೋತಿಶ್ಚ ಚೈತನ್ಯಂ ತತ್ವಮಾಲಾಧರಾಂಕಿತಂ
ಪರಶಕ್ತಿಸಮಾಯೋಗಂ ಜಗತ್ಸೃಷ್ಟ್ಯರ್ಥಕಾರಣಂ ೪

ಶಿವಶಕ್ತಿಸಮಾಖ್ಯಾತಂ ಶಿವತತ್ವಸಮುದ್ಭವಂ
ತಚ್ಛಿವಂ ನಿಷ್ಕಲಂ ಚೈವ ತದ್ಭೇದಂ ವರ್ಣ್ಯತೇಕ್ರಮಾತ್ ೫

||ವಾತೂಳ ತಂತ್ರೆ|| ಈಶ್ವರ ಉವಾಚ-

ತತ್ತ್ವಂ ತು ತ್ರಿವಿಧಂ ಜ್ಞೇಯಂ ತದ್ಭೇದಂ ಶ್ರುಣು ಷಣ್ಮುಖ
ಶಿವಂ ಸದಾಶಿವಂ ಚೈವ ಮಾಹೇಶಂ ತ್ರಿವಿಧಂ ಸ್ಮೃತಂ ೬

ಶಿವತತ್ತ್ವಂ ಮಹಾಸೇನ ನಿಷ್ಕಲಂ ಚೇತಿಕೀರ್ತಿತಂ
ಸಕಲಂ ನಿಷ್ಕಲಂ ಚೈವ ಸದಾಶಿವಮಿಹೋಚ್ಯತೇ ೭

ಮಾಹೇಶಂ ಸಕಲಂ ವಿಂದ್ಯಾ ತ್ರಿವಿಧಾಸ್ತೇಭವತಿ ವೈ
ಶಿವಮೇಕಂ ವಿಜಾನೀಯಾತ್ಸಾದಾಖ್ಯಂಪಂಚಧಾ ಭವೇತ್ ೮

ಮಾಹೇಶಂ ತು ಮಹಾಸೇನ ಪಂಚವಿಂಶತಿ ಭೇದಕಂ
ಏತೇಷಾಂ ತತ್ತ್ವಸಂಯುಕ್ತ ಮೇಕತ್ರಿಂಶದಿತಿ ಸ್ಮೃತಂ ೯

ಶಿವಂ ಪರಾಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಂ
ಅನಿಂದಿತಮನೌಪಮ್ಯ ಪ್ರಮಾಣಮನಾಮಯಂ ೧೦

ಶಿವಸೃಷ್ಟಿಯಿದು ಮುಂದೆ ಶಕ್ತಿಸೃಷ್ಟಿಯನು ಪೇ
ಳುವೆವೆರಡರೇಕತ್ವಕಪ್ಪುದಾ ಹರಣಮಂ
ಕುವರ ಕೇಳಂತದಕಥರ್ವಣದ ವೇದದರ್ಥವನೊರೆವೆನೆಂತೆಂದೊಡೆ
ಸವಿಲಾಸಪರತತ್ವವೆಂಬ ಹೆಸರಿಂದಲೊ
ಪ್ಪುವ ಲಸದ್ಬ್ರಹ್ಮವೆಂದೆಯ್ದೆ ನುಡಿಯಿಸಿಕೊಂಬ
ಶಿವನೊರ್ವನೇ ರುದ್ರನೈ ಸೂಕ್ಷ್ಮವೆಂಬ ಹೆಸರುಳ್ಳ ಶಿವನೀಶನನು ೧೪

CC0. In Public Domain. Jangamwadi Math Collection, Varanasi

ಆ ನಿತ್ಯನೆಂಬ ಹೆಸರಿಂದ ರಾಜಿಸುವ ಶಿವ
ನೇ ನವ್ಯಭಗವಾನುವೆನಿಸಿಕೊಂಬವ ಕಣಾ
ಸೂನುವೇ ಸರ್ವಗತನೆಂಬ ಹೆಸರುಳ್ಳ ಶಿವನೇ ಮಹೇಶ್ವರನೆನಿಪನ್ಯೆ
ಏನೆಂಬೆನಯ್ಯ ಯಾದ್ಯಭಿಧಾನವುಳ್ಳ ಶಿವ
ನೇ ನಿಜಮಹಾದೇವನೆನಿಸಿಕೊಂಬಂ ಕಣಾ
ತಾನಿವಾದಿಯ ಬಹುಶ್ರುತಿಗಳ್ಪ್ರಸಿದ್ಧವಾಗಿಹವೆಂದು ತಿಳಿ ಕುಮಾರ ೨೦

ಮತ್ತೆ ವಾತೂಳದೊಳಗಾ ಸದಾಶಿವತತ್ವ
ದುತ್ತಮವಿಲಾಸವಂ ಕೇಳಯ್ಯ ವಿವರದಿಂ
ಮತ್ತನಯ ಯೋಗಿಗಳ ಯತಿವರರ ಸುಜ್ಞಾನಿಗಳ ಮಂತ್ರಸಂಪನ್ನರ
ಚಿತ್ತಶುದ್ಧಧ್ಯಾನನೈರ್ಮಲ್ಯ ಪೂಜಾನಿ
ಮಿತ್ತದಿಂ ಸಕಲ ನಿಷ್ಕಲ ರೂಪವಾಯ್ತೆಂದು
ಬಿತ್ತರಿಸುತಿರ್ದನಾ ವೀರಹಲಗೆಯ ದೇಶಿಕಂ ಶಿವಜ್ಞಾನಶಾಸಕಂ ೨೧

ಆದರ ರೂಪೇ ವಿಲಾಸತೆಯ ಸಾದಾಖ್ಯವೆಂ
ಬುದು ಬಳಿಕ ಸಾದಾಖ್ಯವೈದವಱ ಲಕ್ಷಣದ
ಹದನ ಕೇಳಾ ಬಿಂದು ನಾದಸ್ವರೂಪಂಗಳಾಗಿ ರಾಜಿಸುತೊಪ್ಪುವ
ಅದು ಪರಾಶಕ್ತ್ಯಾದಿ ಶಕ್ತಿಗಳ ದೆಸೆಯಿಂದ
ಲುದಯವಾ ಸಾದಾಖ್ಯತತ್ವಂಗಳಿಗೆ ನಿನ್ನ
ಹೃದಯಶುದ್ಧದೆ ಕೇಳು ಮೊದಲು ಶಿವಸಾದಾಖ್ಯವಂತಮೂರ್ತಕವೆರಡೆಲ್ಲೈ ೨೨

ಮೂಱನೆಯದಾ ಮೂರ್ತಿಸಾದಾಖ್ಯ ನಾಲ್ಕಕ್ಕೆ
ತೋಱಿಹುದು ಕರ್ತೃಸಾದಾಖ್ಯವೈದಕ್ಕೆ ನಲ
ವೇಱಿಪ್ಪ ಕರ್ಮಸಾದಾಖ್ಯವಿಂತೀ ಪಂಚಸಾದಾಖ್ಯವವಱ ಮೂರ್ತಿ
ಸಾರೆ ತತ್ವಮದಿಂ ಸದಾಶಿವೇಶಂ ಚಿತ್ತ
ವೂರಿಯಾ ಬ್ರಹ್ಮೇಶ ನೀಶ್ವರೇಶಾನರೆಲೆ
ಗಾರು ಬುದ್ಧಿಯ ಹೊದ್ದದುತ್ತಮನೆ ಕೇಳಯ್ಯ ನೀಂ ತತ್ವಭೇದಂಗಳ ೨೩

ಆ ನಿಷ್ಕಲದ ತತ್ವಶಿವತತ್ವವೆನಿಸಿಹುದು
ತಾನೆ ಶಿವಸಾದಾಖ್ಯವೆನಿಸಿಕೊಂಬುದು ಕಣ್ಯೆ
ಜ್ಞಾನಿ ಶಿವಸಾದಾಖ್ಯವೇ ಸದಾಶಿವಮೂರ್ತಿಯೆಂದಱಿಯಲೇ ತಕ್ಕಂದು
ತಾನಂತಮೂರ್ತಿಸಾದಾಖ್ಯವೀಶಂ ಕಣಾ
ಸೂನುವೇ ಮೂರ್ತಿಸಾದಾಖ್ಯವೇ ಬ್ರಹ್ಮೇಶ
ಸ್ಸೃ ಸೃಜ ಕರ್ತೃಸಾದಾಖ್ಯವೀಶ್ವರ ಕರ್ಮಸಾದಾಖ್ಯವೀಶಾನವೈ ೨೪

Digitization by eGangotri and Sarayu Trust. Funding by MoE-IKS

ಈ ಪ್ರಕಾರದೊಳಲಾ ಭಾವಿಸುವೊಡೆರಡೆನಿಸು
ವಾ ಪ್ರಕಟಪರಕೆ ಪರವಾ ಸೂಕ್ಷ್ಮಕಂ ಸೂಕ್ಷ್ಮ
ವೈ ಪ್ರೇಮದಣುಗನೇ ಸ್ಥೂಲಕ್ಕತಿಸ್ಥೂಲವಾ ಶಿವಾದಿಯ ಲಕ್ಷಣಂ
ಕ್ಷಿಪ್ರದಿಂ ಪಂಚತತ್ವಂಗಳೊಳು ಮಿಗಿಲೆನಿಪ
ಸುಪ್ರಸಿದ್ಧವನೀಗಳೊರವೆನೆಂದಾ ನಂದಿ
ತ ಪ್ರಭೆಯು ಮುಖರಸದ ಹಲಗೆಯೊರ್ಯಂ ನುಡಿವುತಿರ್ದನುತ್ಸಾಹದಿಂದ ೨೫

ಏವೇಳ್ವೆ ತತ್ವವೆಂದಾ ಮೂರ್ತಿಯೆಂದಾ ಪ್ರ
ಭಾವದಿಂದೀ ಮೂಱು ತೆಱಂನಲ್ಲೈ ಶಿವನೆಂದೊ
ಡಾ ವಿಶೇಷದ ತತ್ವವೈ ಮೂರ್ತಿಯೆನೆ ಸದಾಶಿವನೆರಡರೊಬ್ಬುಳಿತೆಯಾ
ಭಾವದಿಂ ಭಾವವೈ ಭಾವವೇ ಸಾದಾಖ್ಯ
ವೈ ವರಕುಮಾರ ನಿಷ್ಕಲವೆ ತತ್ವಂ ಸಕಲ
ವೇ ವಿಚಾರಿಸೆ ಮೂರ್ತಿ ಸಕಲನಿಷ್ಕಲಂಯೋಗವೇ ಪ್ರಭಾವಂ ನಿಶ್ಚಯಂ ೨೬

ಅವಱೊಳಗೆ ದೇಹಿಯೆ ನಿಷ್ಕಲಂ ದೇಹವೇ
ತವೆ ಸಕಲ ವೈ ದೇಹಿದೇಹಸಂಬಂಧವೊ
ಪ್ಪುವ ರೂಪವಖಿಳರಾ ಧ್ಯಾನಪೂಜಾನಿಮಿತ್ತಂ ಸಕಲ ನಿಷ್ಕಲವದು
ಕುವರ ತತ್ವಾತಿಶಯದಿಂ ಸರ್ವಕರ್ಮಮಂ
ಭುವನದೊಳಗಾಚರಿಪುದೀಯರ್ಥದೊಳು ಕಂಜ
ಭವನುಸುರ್ದಂದವೆಂತೆನಲಾಗಿ ಬಿತ್ತರಿಪೆನೆಂದನಾ ಗುರುರಾಯನು ೨೭

ಅದು ಮೂಱುರೂಪಲಾ ಸ್ಥೂಲಸೂಕ್ಷ್ಮಂಗಳೆಂ
ದೊದವಿದ ಪರಾಪರವೆನುತ್ತಲೆಂದಾ ಚತು
ರ್ವದನನನುಸುರಿದನು ನಾಂ ಮೊದಲಾದ ದೇವರ್ಕಳಿಂದ ಕಾಣಿಸಿಕೊಂಬುದು
ಸದಮಲಸ್ಥೂಲವಾ ಯೋಗೀಶರಿಂದ ತೋ
ರ್ಪುದು ಸೂಕ್ಷ್ಮವಾ ಪರಾತ್ಪರತತ್ವವೇ ನಿತ್ಯ
ದುದಿತ ಸುಜ್ಞಾನಸದಾನಂದಮವ್ಯಯಮೆನಿಸಿಕೊಂಬುದಂತಾ ತತ್ವವು ೨೮

ಕಾಣಿಸುವುದಾ ನಿಷ್ಠೆಯುಳ್ಳ ಸದ್ಭಕ್ತರಿಂ
ದೂಣೆಯಂ ಪೊರ್ದದಿಹ ಗುರುದೈವವುಂಟೆಂಬ
ಜಾಣರೆನಿಸುವ ಷಟ್‌ಸ್ಥಲವ್ರತದ ನಿಷ್ಠರಿಂ ತತ್ವತ್ರಯಂಗಳಿಂತು
ಮೇಣು ವಾತೂಳದೊಳು ಪಂಚಸಾದಾಖ್ಯಸು
ಶ್ರೇಣಿ ತತ್ವಂಗಳುದ್ಭವಗಳಂ ಬೇಱೆ ಬೇ
ಱಣತಿಗೊಡುತ್ತಿರ್ದನವರ ರೂಪಂ ವರ್ಣಮುಂ ಷಣ್ಮುಖಂಗೀಶನು ೨೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತರುಣ ಕೇಳಾ ಶಾಂತ್ಯತೀತೆಯೆ ಪರಾಶಕ್ತಿ
ಪರಿಯಾಯವಾಚಕಂ ಕೇಳದರ ಹತ್ತಂಶ
ದಿರವಿನಿಂದಾಯ್ತು ಶುದ್ಧತ್ವದಿಂದೆಸೆವ ಶಿವಸಾದಾಖ್ಯವದು ಭಾವಿಸೆ
ವರ ಶುದ್ಧಸುಪ್ರಸಾದ ಪ್ರಕಟ ಮಂತ್ರಮಯ
ದುರುತರದ ಶಿವತತ್ವವಾಕಾಶಮಂ ಮೀಱ
ತಿರದೆ ತೋಱುವ ರೂಪವಪ್ಪುದಾಗಿಯು ತೇಜವೇ ರೂಪವಪ್ಪುದೆಂದು ೩೦

ನೆನೆಯಿಸಿಕೊಳುತ್ತಿರ್ಪುದದು ಬಳಿಕ ಹೇಂಗೆಯೆಂ
ದೆನೆ ಗಗನ ಮೇಘವೃಂದದೊಳು ಥಳಥಳಿಪ ಮಿಂ
ಚಿನರೂಪವೆಹಗೆ ತೋಱುತ್ತಲಡಗುತ್ತಲಿಹುದಂತಖಿಳ ಜೀವತತಿಯ
ಘನ ವಾಙ್ಮನೋಭಾವದೊಳು ತೋಱಿಯಡಗುತ್ತ
ಲನಿತಡಗಿ ತೋಱುತೆಲ್ಲಾ ದೆಶೆಗಳಲ್ಲಿ ತಾ
ನೆನಿಸಿರ್ಪುದಾವುದುಂಟಾ ಪ್ರಸಾದದ ಮಂತ್ರಮಹದಾದಿತತ್ವಂಗಳ ೩೧

ನೆಲೆಯಾದ ಶಿವತತ್ವವೆಂದು ಹೇಳಿಸಿಕೊಂಬು
ದೊಲಿದು ಕೇಳಿಂತು ಶಿವತತ್ವಮಂ ಪೇಳಿದೆವು
ನಲಿದಿನ್ನಮೂರ್ತಿತತ್ವವನೊರೆವೆನೆಂದು ಕರುಣಾದೃಷ್ಟಿಯಿಂದ ವೀರ
ಹಲಗೆಯಾರ್ಯಂ ನುಡಿಯೆ ಸಂತೋಷದಿಂದ ಕರ
ನಲಿನಮಂ ಮುಗಿಯುಲಾ ಕೆಂಚವೀರಾಖ್ಯನ
ಗ್ಗಲದ ನಂಜುಂಡಮೂರ್ತಿಯು ನೋಡಿ ಬಿತ್ತರಿಸತೊಡಗಿದನದೆಂತೆಂದೊಡೆ ೩೨

||ಸಾಕ್ಷಿ|| ಶಿವಸೃಷ್ಟಿರಿಯಂ ಪ್ರೋಕ್ತಾ ಶಕ್ತೀನಾಂ ಸೃಷ್ಟಿರುಚ್ಯತೇ
ದ್ವಯೋರೇಕತ್ವಸ್ಯೋದಾಹರಣಂ ೧೧

ಅಥರ್ವಣವೇದೇ ತತ್ಪರಂ ಬ್ರಹ್ಮವೈ ಸ ಏಕೋರುದ್ರಸ್ಯ ಈಶಾನಸ್ಯ ಭಗವಾನ್
ಸ ಮಹೇಶ್ವರಸ್ಯ ಮಹಾದೇವ ಇತಿ ೧೨

ಇನ್ನು ಸದಾಶಿವತತ್ವದ ವಿಲಾಸ–
ಯೋಗಿನಾಂ ಚ ಯತೀನಾಂ ಚ ಜ್ಞಾನಿನಾಂ ಮಂತ್ರಿಣಾಂ ತಥಾ
ಧ್ಯಾನಪೂಜಾನಿಮಿತ್ತಾಯ ಸಕಲಂ ನಿಷ್ಕಲಂ ಭವೇತ್ ೧೩

ತದ್ರೂಪಂ ಹಿ ಸಮಾಸೇನ ಸಾದಾಖ್ಯಮಿತಿ ಕೀರ್ತಿತಂ
ಸಾದಾಖ್ಯಂ ಪಂಚಧಾ ಪ್ರೋಕ್ತಂ ತೇಷಾಂ ಲಕ್ಷಣಮುಚ್ಯತೇ ೧೪

ಪರಾಶಕ್ತ್ಯಾದಿ ಶಕ್ತ್ಯೈಶ್ಚ ಸಾದಾಖ್ಯಸ್ಯ ಸಮುದ್ಭವಃ
ಪ್ರಥಮಂ ಶಿವಸಾದಾಖ್ಯಮಮೂರ್ತಂತು ದ್ವಿತೀಯಕಂ ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೃತೀಯಂ ಮೂರ್ತಿಸಾದಾಖ್ಯಂ ಚತುರ್ಥಂ ಕರ್ತೃನಾಮಕಂ
ಪಂಚಮಂ ಕರ್ಮಸಾದಾಖ್ಯಂ ಪಂಚಸಾದಾಖ್ಯಮುಚ್ಯತೇ ೧೬

ಸದಾಶಿವಸ್ತದೀಶಶ್ಚ ಬ್ರಹ್ಮೇಶ ಈಶ್ವರಸ್ಮೃತಃ
ಈಶಾನಶ್ಚೇತಿ ಪಂಚೈವ ತತ್ತ್ವಭೇದಃ ಪ್ರಕೀರ್ತಿತಾಃ ೧೭

ಶಿವಂ ಸದಾಶಿವಂ ಜ್ಞೇಯಮಮೂರ್ತಂಚೇಶಮುಚ್ಯತೇ
ಮೂರ್ತಂ ಬ್ರಹ್ಮೇತಿ ವಿಜ್ಞೇಯಂ ಕರ್ತಾ ಚೈವೇಶ್ವರಸ್ಮೃತಃ ೧೮
ಕರ್ಮೇಶಾನ ಇತಿ ಪ್ರೋಕ್ತ ಇತ್ಯೇವಂ ಹಿ ದ್ವಿಧಾಸ್ಮೃತಾಃ
ನಿಷ್ಕಲಂ ತತ್ತ್ವಮಿತ್ಯುಕ್ತಂ ಸಕಲಂ ಮೂರ್ತಿರುಚ್ಯತೇ ೧೯
ಸಕಲಂ ನಿಷ್ಕಲಂ ಚೈವ ಪ್ರಭಾವಮಿತಿ ಕೀರ್ತಿತಂ
ದೇಹೀ ನಿಷ್ಕಲಮಿತ್ಯುಕ್ತಂ ದೇಹಂ ಸಕಲಮುಚ್ಯತೇ ೨೦
ದೇಹಿದೇಹಸ್ಯ ಸಂಬಂಧ ಮೇವರೂಪಮಿತಿಸ್ಮೃತಂ
ಸರ್ವೇಷಾಂ ಧ್ಯಾನಪೂಜಾರ್ಥಂ ಸಕಲಂ ನಿಷ್ಕಲಂ ಭವೇತ್ ೨೧
ಅಸ್ಮಿನ್ನರ್ಥೇ ಬ್ರಹ್ಮೋವಾಚ॥
ತದೀಯಂ ತ್ರಿವಿಧಂ ರೂಪಂ ಸ್ಥೂಲಂ ಸೂಕ್ಷ್ಮಂತತಃ ಪರಂ
ಅಸ್ಮದಾದ್ಯಮರೈರ್ದೃಶ್ಯಂ ಸ್ಥೂಲಂ ಸೂಕ್ಷ್ಮಂ ಚ ಯೋಗಿಭಿಃ ೨೨
ತತಃ ಪರಂತು ಯನ್ನಿತ್ಯಂ ಜ್ಞಾನಮಾನಂದಮವ್ಯಯಂ
ತನ್ನಿಷ್ಠೈಸ್ತತ್ಪರೈರ್ಭಕ್ತೈರ್ದೃಶ್ಯಂ ತದ್ವ್ರತಮಾಸ್ತಿಕೈಃ ೨೩
ವಾತೂಲೇ- ಪಂಚಸಾದಾಖ್ಯ ತತ್ವಾನಾಮುದ್ಭವಂ ಹಿ ಪೃಥಕ್ ಪೃಥಕ್
ತೇಷಾಂ ರೂಪಂಚ ವರ್ಣಂಚ ಸಮಾಸಾಚ್ಛೃಣು ಷಣ್ಮುಖ ೨೪
ಶಾಂತ್ಯತೀತಾ ಪರಾಶಕ್ತಿಸ್ತಸ್ಯಾಃ ಪರ್ಯಾಯವಾಚಕಃ
ಪರಾಶಕ್ತಿದಶಾಂಶೇನ ಶಿವಸಾದಾಖ್ಯಮುದ್ಭವಂ ೨೫
ಪರಾಶಕ್ತ್ಯುದ್ಭವತ್ವಾಚ್ಚ ಶುದ್ಧತ್ವಾಚ್ಛಿವಮುಚ್ಯತೇ॥
ಪ್ರಸಾದಂ ಸೂಕ್ಷ್ಮರೂಪಂ ಚ ಜ್ಯೋತೀರೂಪಮಿತಿಸ್ಮೃತಂ ೨೬
ವಿದ್ಯುದ್ರೂಪಮಿವಾಕಾಶೇ ಪ್ರತ್ಯಕ್ಷಂ ಸರ್ವತೋಮುಖಂ
ಶಿವತತ್ತ್ವಮಿದಂ ಪ್ರೋಕ್ತಂ ತತ್ತ್ವಾನಾಮಖಿಲಾಲಯಂ ೨೭
ಶಿವಸಾದಾಖ್ಯಮಿತ್ಯುಕ್ತ ಮಮೂರ್ತಂ ತು ತತಃ ಶೃಣು ೨೮

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲ ಷಟ್‌ಸ್ಥಲಿ ಹಲಿಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚ ವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಿ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಪೇಳ್ದ ಶಿವತತ್ವಮುಮನಮೂರ್ತಿಯ ಪೇಳತೊಡಗಿದೆಂಟನೆಯ ಸಂಧಿ ೩೪

ಅಂತು ಸಂಧಿ ೮ ಕ್ಕಂ ಪದನು ೪೧೪ ಕ್ಕಂ ಗ್ರಂಥ ೨೧೫ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೯

ನಿಷ್ಕಲದ ದಶಪಂಚಕದ ಮುಂದೆನಿಪ ಸಕಲ
ನಿಷ್ಕಲಂ ನಡುವೆನಿಪ ಶಕ್ತಿಸಾದಾಖ್ಯವೆಲೆ
ನಿಷ್ಕಪಟಿ ಮೂರ್ತಿಪಂಚಕಯುತ ಸದಾಶಿವಸುತತ್ವವಂ ಬಿತ್ತರಿಸುವೆಂ॥

ಶಾಂತಕುಂಭಾದ್ರಿಚಾಪಾಗ್ರದೊಳು ನಿರ್ಜರ
ವ್ರಾತವದಱಡಿಗೊಪ್ಪಿನಲ್ಲಿ ನಾಗರ್ಕಳಿರೆ
ವಾತಾಶಿಸಿಂಜನಿಗೆ ವಿಷ್ಣುಶರವಂ ಪೂಡಿ ಸೆಳೆಯಲೆರಡಿದಿರಾಗಲು
ಪಾತಾಳಲೋಕದವರಂ ಸ್ವರ್ಗಲೋಕದರ
ಮಾತನಾಡಿಸಿ ಚಿತ್ರವೆನೆ ರಕ್ಕಸರ ಪೊಳಲ
ಖಾತಿಯಿಂ ಸುಟ್ಟು ಲೋಕಂಗಳಂ ಪೊರೆದ ವಿಖ್ಯಾತ ಜಯಶಾಂತಮಲ್ಲ ೧

ಭೋಗಣ್ಣ ಕಣ್ಣಪ್ಪ ಬೊಮ್ಮಯ್ಯ ಸಿರಿಯಾಳ
ರಾಗಾರದೊಳಗುಣೆ ಹಲಾಯುಧಾದಿಯ ನಿಷ್ಠ
ರಾಗವಾತೀತ ಶಂಕರನ ಜಱಿಯಲ್ಕೆ ಕೈಲಾಸದಿಂದಿಳಿದು ಬಂದು
ಮೇಗಣ ಗವಿಯ ಶಾಂತನಂಜೇಶ್ವರಂ ತಾನೆ
ಯಾಗಿ ನಿಷ್ಕಪಟ ಸುಪವಿತ್ರ ಶಿವಮಾಹೇಶ
ವಾಗಾರ್ಥಸಂಗ್ರಹ್ಯಕಾರುಣ್ಯರೂಪಾದನಿದಕೆ ಶಪಥವನೆ ಮಾಳ್ಪೆಂ ೨

ಆ ನಿಷ್ಕಲದ ಶಕ್ತಿಯೆನಿಪಾದಿಶಕ್ತಿಯೇ
ತಾನೆಸೆವ ಶಾಂತಿಕಲೆಯೆನಿಸಿಕೊಂಬುದು ಕಣಾ
ಜ್ಞಾನಿಯಂತಾದಿಶಕ್ತಿಯ ದಶಾಂಶದೊಳಂತಮೂರ್ತಿಸಾದಾಖ್ಯವೊಗೆದು
ತಾನಮೂರ್ತಂ ಕಲಾಹೀನವಾ ರೂಪವೇ
ಸ್ವಾನುಭವಲಿಂಗವಾಯ್ತಾ ಕೋಟಿ ಸೂರ್ಯಪ್ರ
ಭಾನವ್ಯಸಂಜ್ಯೋತಿಸುಸ್ತಂಭದಾಕಾರದಿಂದ ಮೆಱೆವುತ್ತಿರ್ಪುದು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಿಮಲ ಶಿವಲಿಂಗದೊಳಗೆ ಘೃತಕಾಠಿಣ್ಯ
ಭಾವದಿಂದೆಸದಿರ್ಪ ಮೂರ್ತಿ ಗಗನಾದಿಗಳೊ
ಳೋವಿ ಸಂಭೂತವಾದಾಮೂರ್ತಿಯಲ್ಲದುದು ಮಿಗೆ ಚಕ್ಷುರಾದೀಂದ್ರಿಯ
ಸೇವೆಯಿಂದಱಿಯಬಾರದುದಗೋಚರದ ತೇ
ಜೋವಿಕಾಸದ ಲಿಂಗವೇ ಪಂಚಸಾದಾಖ್ಯ
ದೀ ವಿವರದಲ್ಲಿ ಮೂಲಸ್ತಂಭವೆಂದು ಹೇಳಿಸಿಕೊಂಬುದೈ ಕುಮಾರ ೪

ಸುಕರ ವಿಮಲಜ್ಯೋತಿರಾಕಾರ ಲಿಂಗದಿಂ
ಸಕಲ ಪ್ರಪಂಚಂಗಳೊಗೆದು ಮೂಲಸ್ತಂಭ
ದ ಕುಟಿಲದ ಲಿಂಗದೊಳಗಡಗುತ್ತಮಿರ್ಪವೆಂದೆಯ್ದೆ ಪೇಳಲ್ಪಟ್ಟುದು
ಅಕಲಂಕವೆನಿಸಿರ್ದಮೂರ್ತಿಸಾದಾಖ್ಯಮಂ
ಪ್ರಕಟಿಸಿದೆವೈ ಮುಂದೆ ಮೂರ್ತಿಸಾದಾಖ್ಯಮಂ
ಸಕಲ ಭಕ್ತರು ಪೊಗಳೆ ಬಿತ್ತರಿಪೆವಾನಂದದಿಂದ ಕೇಳೈ ಕುಮಾರ ೫

||ಸಾಕ್ಷಿ|| ಶಾಂತಿಶ್ಚೈವಾದಿಶಕ್ತಿಶ್ಚ ತಸ್ಯಾಃ ಪರ್ಯಾಯವಾಚಕಃ
ಆದಿಶಕ್ತಿದಶಾಂಶೇನಹ್ಯಮೂರ್ತಂ ಚ ಸಮುದ್ಭವಂ ೧

ಆದಿಶಕ್ತೇರಮೂರ್ತತ್ವಾದಮೂರ್ತಂ ಚೇತಿ ಕೀರ್ತಿತಂ
ಅಮೂರ್ತಂ ತತ್ಕಲಾಹೀನಂ ತದ್ರೂಪಂ ಲಿಂಗಮುದ್ಭವಂ ೨

ಶಿವನ ನಿಷ್ಕಲೆಯೆನಿಸಿ ರಾಜಿಪಿಚ್ಛಾಶಕ್ತಿ
ಕುವರ ವಿದ್ಯಾಕಲೆಯೆನಿಪ್ಪ ಪರಿಯಾಯನಾ
ಮವನೆ ಪಡೆದಾನಂದದಿಂ ಮನೋಹರವಾಗಿ ಮೆಱೆವುದಿಚ್ಛಾಶಕ್ತಿಯ
ಪ್ರವಿಮಲದಶಾಂಶದೊಳು ಮೂರ್ತಿಸಾದಾಖ್ಯವು
ದ್ಭವಿಸಿತ್ತು ಕೇಳಯ್ಯ ಸಂತೋಷದೊಡವೆರೆದ
ವಿವರದಿಂದೆಂದು ತತ್ಕ್ರಮದಿಂದ ಬಿತ್ತರಿಸತೊಡಗಿದಂ ಗುರುರಾಯನು ೬

ಆದೊಡಿಚ್ಛಾಶಕ್ತಿಗುಣದಿಂದಲೀ ಮೂರ್ತಿ
ಸಾದಾಖ್ಯವೈ ಮೂರ್ತಿಯಹುದಱಿಂ ವಿದ್ಯೆಯೊಳು
ವೇದಿಸಿದ ರೂಪಾಯ್ತು ವುರಿವಗ್ನಿಯಂತೆಸೆವ ಲಿಂಗವೆನೆ ರಾಜಿಸಿದುದು
ಆ ದಿವ್ಯಲಿಂಗಚತುರಂಶದೊಳು ವದನವೊಂ
ದಾದ ಮುಕ್ಕಣ್ಣ ಕಾಂತಿಯನುಳ್ಳ ಸರ್ವಾವ
ಯಾದಿಗಳ ಸಿಂಗರದ ಮೂರ್ತಿಯೊಳಕೊಂಡ ಲಿಂಗಂ ಮೆಱೆವುದೈ
ಕುಮಾರ ೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ಜ್ವಾಲಾಗ್ನಿಸದೃಶಃ ಪ್ರಖ್ಯೈದಿವ್ಯಲಿಂಗಾಕೃತಿರ್ಭವೇತ್
ತಸ್ಯಾರ್ಧಾರ್ಧ್ವೈಕಭಾಗೇ ತು ಏಕವಕ್ತ್ರಸಮನ್ವಿತಂ ೩

ತ್ರಿಣೇತ್ರಂ ಚಾರುವದನಂ ಸರ್ವಾವಯುವಸಂಯುತಂ
ಏವಮೇಕಾನನೋಪೇತಂ ದಿವ್ಯ ಲಿಂಗಾಕೃತಿರ್ಭವೇತ್ ೪

ಆ ನಿಷ್ಕಲಜ್ಞಾನಶಕ್ತಿಪ್ರತಿಷ್ಠಾಕ
ಲಾನಾಮಿಯಾಯ್ತು ಪರಿಯಾಯದಿಂದಂತಹ
ಜ್ಞಾನಶಕ್ತಿಯ ದಶಾಂಶದೊಳು ಸಂಭವಿಸಿತ್ತಲಾ ಕರ್ತೃಸಾದಾಖ್ಯವು
ಏನೆಂಬೆನೈ ಲಸದ್‌ಜ್ಞಾನಶಕ್ತಿಗೆ ಜಗವ
ನಾನಂದದಿಂದ ನಿರ್ಮಿಸುವುದೇ ನಿಜವಲಾ
ತಾನದುನಿಮಿತ್ತದಿಂ ಕರ್ತೃಸಾದಾಖ್ಯವೆಂದೆನಿಸಿಕೊಂಬುದು ಕುಮಾರ ೮

ಅದುವೆ ಶುದ್ಧಸ್ಫಟಿಕಸಂಕಾಶವಾಗಿ ತೋ
ರ್ಪುದಟಿಂದ ಪಳುಕಿನಂದದ ದಿವ್ಯಲಿಂಗವೆಸೆ
ವುದು ದೀರ್ಘವಾ ಸ್ಥೂಲವಾಗಿಪ್ಪುದಂತದಱ ಮಧ್ಯದೊಳು ಥಳಥಳಿಸುತ
ಮುದದಿಂದಮಿರ್ಪುದಂತಾ ಮೆಱೆವ ಲಿಂಗಮ
ಧ್ಯದೊಳೀಶ್ವರಂ ಸರ್ವಕಾರಣಂ ಶಿರವೈದು
ವದನವೇ ನಾಲ್ಕು ಹನ್ನೆರಡುಕಣ್ಣು ನಾಲ್ಕುಮುಖ ನಾಲ್ಕು ವರ್ಣಂಗಳು ೯

ಕಿವಿಗಳೆಂಟಾ ಹಸ್ತವೆಂಟು ಪಾದಂಗಳೆರ
ಡವಿರತಂ ಸರ್ವಲಕ್ಷಣದೊಳೊಪ್ಪಿಹುದು ಶೂ
ಲವನೆಸೆವ ಪರಶು ಖಡ್ಗಾಭಯುವನಾಂತ ದಕ್ಷಿಣಹಸ್ತತತಿ ವಾಮದ
ಸವಿಶೇಷಪಾಶ ನಾಗಂ ಘಂಟೆ ವರದಹ
ಸ್ತವು ಸರ್ವಲಕ್ಷಣಾಭರಣದೀಶ್ವರನು ಮೊ
ಪ್ಪುವ ಕರ್ತೃಲಿಂಗವೇ ಕರ್ತೃಸಾದಾಖ್ಯವೈ ಕರ್ಮಸಾದಾಖ್ಯವಿನ್ನು ೧೦

||ಸಾಕ್ಷಿ|| ಜ್ಞಾನಂ ಚೈವ ಪ್ರತಿಷ್ಠಾ ಚ ತಸ್ಯಾಃಪರ್ಯಾಯವಾಚಕಃ
ಜ್ಞಾನಶಕ್ತಿದಶಾಂಶೇನ ಕರ್ತೃಸಾದಾಖ್ಯಮುದ್ಭವಂ ೫

ಜ್ಞಾನಕರ್ತೃ ಸ್ವಭಾವತ್ವಾತ್ಕರ್ತೃನಾಮೇತಿ ಕೀರ್ತಿತಂ
ಜ್ಞಾನಂ ಹಿ ಶುದ್ಧಭಾವತ್ವಾತ್ ಸ್ಫಟಿಕಾಭಾಸಮುಚ್ಯತೆ ೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ನಿಷ್ಕಲಕ್ರಿಯಾಶಕ್ತಿಯೇ ಬಳಿಕ ಕೇ
ಳೈ ನಿವೃತ್ತಿಯೆನಿಪ್ಪ ಕಲೆಯಾಯ್ತು ಪರಿಯಾಯ
ದಾ ನಾಮಧೇಯುವಹುದಾ ದಶಾಂಶದೊಳಾದುದೈ ಕರ್ಮಸಾದಾಖ್ಯವು
ತಾನದುನಿಮಿತ್ತಂ ಕರ್ಮವೆಂದೆನಿಸುವ ಭಿ
ಧಾನದಿಂ ಲಿಂಗಮಂತ್ರಜ್ಞಾನದಲ್ಲಿ ಸುವಿ
ಧಾನಾರ್ಥದಿಂದವೀ ಪಂಚಸಾದಾಖ್ಯಮುಖವಾದ ಲಿಂಗದ ಸಮಸ್ತ ೧೧

ವರ ತತ್ವಜನ್ಮಸುಸ್ಥಲವಾದ ಪೀಠದುರು
ತರದಾ ಪ್ರಕಾರದಿಂ ಕರ್ಮಸಾದಾಖ್ಯಸೌಂ
ದರದ ಲಕ್ಷಣವಾ ಪ್ರಸಿದ್ಧವಾಗಿರ್ಪುದೈ ನಾದವೇ ಲಿಂಗವಾಯ್ತು
ಸ್ಥಿರಬಿಂದುವೇ ಪೀಠವಾ ನಾದಬಿಂದುಗಳ
ಬೆರಕೆಯಾದಾ ರೂಪು ಲಿಂಗದಾಕಾರವೆಂ
ದುರುತರಪ್ರೇಮದಿಂದಱಿಯೆಂದು ಬಿತ್ತರಿಸಿದಂ ಷಣ್ಮುಖಂಗೀಶನು ೧೨

ಸುತನೆ ಕೇಳಯ್ಯ ಶಿವತತ್ವವನುಪಾಧಿಯೊಳು
ಪತಿಪದಾರ್ಥವ ಹೇಳುವಲ್ಲಿ ಲಯಭೋಗವು
ನ್ನತದೊಳೆಸೆವಧಿಕಾರವೆಂಬಾತ್ರಿತತ್ವಭೇದವೆ ಬಿಂದುವೆಂದಱಿವುದು
ಅತಿಶಯದ ಬಿಂದುವೆನಿಸುವ ಪರಾಶಕ್ತಿಯೇ
ನುತಜಗಜ್ಜನ್ಮಸ್ಥಲೀ ಕುಂಡಲಿನಿಯೆಂಬ
ಸತಿಯೆಂದು ತಿಳಿ ಬಿಂದುರೂಪಖಿಳಮಂತ್ರ ಜನ್ಮಸ್ಥಾನಪೀಠವಹುದು ೧೩

ಆದರಿಸೆ ಕರ್ತೃಮೂರ್ತಿಯುಮೂರ್ತಿಯಧಿಕ ಶಿವ
ಸಾದಾಖ್ಯವೆಂಬ ನಾಲ್ಕುಂ ವಿಚಾರಿಸೆ ಬಱಿಯು
ನಾದ ವಿಲಸದ್ಬ್ರಹ್ಮವಾ ಬ್ರಹ್ಮವಾದ ಶಿವತತ್ವವೇ ಶಿವಲಿಂಗವೈ
ವೋದದಿಂ ಜ್ಞಾನಮಿಚ್ಛಾಶಕ್ತಿಗಳು ಬಳಿ
ಕ್ಯಾದಿಶಕ್ತಿಯು ಪರಾಶಕ್ತಿ ನಾಲ್ಕುಂ ಪೀಠ
ವಾದವೈ ಮಂತ್ರಜಾತದೊಳು ಪೇಳ್ದಾ ಪೀಠಲಿಂಗಪ್ರಕಾರದಿಂದ ೧೪

ಲೋಕದುತ್ಪತ್ತಿ ಪ್ರಯೋಜನಂಗಳಿಗೆ ತಾ
ನೇ ಕಾರಣದ ತತ್ವವಾಯ್ತೆಹಗೆ ಶಿವಶಕ್ತಿ
ಯೇಕತೆಯು ತತ್ವವೇ ಕರ್ಮಸಾದಾಖ್ಯಂ ಪರಾಶಕ್ತಿಯಾ ಮಧ್ಯದಾ
ಜೋಕೆಯೊಳು ನಾದಮಯ ಶಿವತತ್ವವದಱೊಳಗ
ನೇಕ ಶಿವಮೂರ್ತಿಭೇದಂಗಳಿಹವವಱೊಳಿಹು
ದೈ ಕುವರ ಶಿವಶಕ್ತಿಯುತಲಿಂಗದಲ್ಲಿ ಮಂತ್ರಾಕಾರ ಶಿವನಿಪ್ಪನೈ ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವಮಹಾಶಕ್ತಿಗಳ ಕೂಟ ಶಿವಲಿಂಗ
ಉರುತರದ ಶಿವಶಕ್ತಿ ಸಂಭೂತವಾದಖಿಳ
ವರತತ್ವರೂಪವೀ ಶಿವಲಿಂಗ ಮಹದಾದಿ ಸರ್ವತತ್ವಾಸ್ಪದವಿದು
ನಿರುತವೆಂದಾ ಲಿಂಗತತ್ವಜ್ಞರೞ್ವರ್ಪೈ
ಪರಮ ಶಿವಲಿಂಗದಿಂ ಸ್ಥಾವರಂ ಜಂಗಮೋ
ತ್ಕರರೂಪವಾದೀ ಜಗತ್ತತ್ತ್ವವುದಯಿಸುತ್ತಿಹುದು ಕೇಳೈ ಕುಮಾರಾ ೧೬

ಅದಱಿಂದ ಶಿವಲಿಂಗವೇ ಕರ್ಮರೂಪವಾ
ದುದು ವಿಶೇಷತೆಯಿಂದವಂತಪ್ಪ ಶಿವಲಿಂಗ
ದುದಯದೊಳು ಲೋಕದುದ್ಭವವಹುದು ಕರ್ಮಾಂತದೊಳು ಜಗತ್ಸಂಹಾರವೈ
ಇದು ಕರ್ಮರೂಪವಹ ಲಿಂಗತತ್ವಂ ಲೋಕ
ದುದಯ ರಕ್ಷಾಸಂಹರಂಗೆಯಿವುದಾ ಶಿವಾ
ದ್ಯುದಿತ ಕರ್ಮಾಂತಸಾದಾಖ್ಯಪಂಚಕವಿಸ್ನು ಕರ್ಮಸಾದಾಖ್ಯವೊರೆವೆಂ ೧೭

||ಸಾಕ್ಷಿ|| ನಿವೃತ್ತಿಃಸ್ಯಾತ್ಕ್ರಿಯಾಶಕ್ತಿಸ್ತಸ್ಯಾಃ ಪರ್ಯಾಯವಾಚಕಃ
ಕ್ರಿಯಾಶಕ್ತಿದಶಾಂಶೇನ ಕರ್ಮಸಾದಾಖ್ಯಮುದ್ಭವಂ ೭

ಪ್ರಿಯದೊಳಿಲೆ ಸೇನಾಧಿಪತಿಯೆ ತತ್ವಕ್ರಮಾ
ಶ್ರಯವನೊರೆವೆಂ ಕೇಳ್ವುದಯ್ಯ ಶಿವಸಾದಾಖ್ಯ
ನಿಯತಂ ವಿಶೇಷಿಸುತ ಶಿವತತ್ವರೂಪನಾಶ್ರಯಿಸಿಹುದಮೂರ್ತಿಯೆಂಬ
ಸ್ವಯವಾದ ಸಾದಾಖ್ಯವೆಸೆವ ಶಿವಮುಖ್ಯವಾ
ಶ್ರಯಿಸಿಹುದು ಮೂರ್ತಿಸಾದಾಖ್ಯವಂತೆಸೆವ ಮೂ
ರ್ತಿಯ ಮುಖ್ಯವಾಶ್ರಯಿಸಿ ರಾಜಿಪುದು ಹಿಂದಣಂದಾ ಕರ್ತೃಸಾದಾಖ್ಯವು ೧೮

ಅದು ಮೂರ್ತಿಸಾದಾಖ್ಯಮುಖ್ಯವಾಶ್ರಯಿಸಿ ಮೆಱೆ
ವುದು ಕರ್ಮಸಾದಾಖ್ಯರೂಪವಾ ಪೂರ್ವದಂ
ದದೊಳೆಯ್ದೆ ತತ್ತ್ವಮದ ಕರ್ತೃಸಾದಾಖ್ಯಮುಖ್ಯವನಾಶ್ರಯಿಸಿ ಮೆಱೆವುದು
ಮೊದಲಿಂದಲೊಂದೊಂದು ವೊಂದೆರಡು ವೊಂದು ಮೂ
ರೊದವಿದೊಂದಾ ನಾಲ್ಕುವೊಂದೈದು ತಾನಾಗಿ
ಮುದದೊಳೊಂದೊಂದು ತತ್ವಂಗಳಾಶ್ರಯಿಸಿಹವು ಕೇಳಯ್ಯ ವರಕುಮಾರ ೧೯

ಆದುಕಾರಣಂ ಕರ್ಮಸಾದಾಖ್ಯರೂಪವ
ಗ್ಗದ ಕರ್ತೃಸಾದಾಖ್ಯವಾದಿ ಶಿವಸಾದಾಖ್ಯ
ತುದಿಯಾದ ಪಂಚತತ್ವಾಶ್ರಯವೆಲ್ಲ ಕರ್ಮಸಾದಾಖ್ಯವೇ ಸಮಸ್ತ
ವಿದಿತ ತತ್ವಂಗಳಾಕಾರವೆಂದಱಿ ಶಿವಂ
ಮೊದಲವನಿಪರಿಯಂತವಾದ ತತ್ವಂಗಳಿಗೆ
ಸದಮಲಾಧಾರವಾಶ್ರಯವಾದುದೆಂದು ತಿಳಿದಿಪ್ಪುದೈ ವರಕುಮಾರ ೨೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಕರ್ಮಸಾದಾಖ್ಯವೇ ಕೂರ್ತು ಶಿವದೇಹ
ಸಾಕಾರವೈ ಪಿಂಡಶಬ್ದನಿರ್ವಚನವಮಂ
ನೀ ಕೇಳು ನಾನಾರ್ಥವದು ನಿಷ್ಕಲದ ತತ್ವವೇ ಪರವೆನುತ್ತವಾಯು
ತಾ ಕೂಡೆ ಪಿಂಡವೆಂದಾ ಯೋಗಿಗಳ ವಚನ
ವೈ ಕುವರ ಬಳಿಕಂತತೀತಕಾಲೇಯೆನುತ
ಜೋಕೆಯಿಂ ಮೃತ್ಪಿಂಡರೂಪವಮಾ ಕುಂಭೇ ವ್ಯವಸ್ಥಿತಮೆನಿಪ್ಪಂದದೆ ೨೧

ಕಳೆದುಹೋಹಾ ಕಾಲದೊಳು ಮಣ್ಣುಮುದ್ದೆಯ
ಗ್ಗಳರೂಪವಾ ಕುಂಭದೊಳಗಿಪ್ಪದೆಂದು ಭೂ
ತಳದಲ್ಲಿ ಕಾಲವಾದಿಗಳ ನುಡಿ ಪಂಚಾತ್ಮಕಮುಭೂತ್ತು ಪಿಂಡವೆಂದು
ಬಳಿಕವಾ ಧಾತುಬದ್ಧಗುಣಾತ್ಮಕಮುಮೆಂದು
ಎಳಸಿಯಾ ಸಪ್ತಧಾತುಗಳಿಂದ ಕಟ್ಟುವಡೆ
ದಳವಟ್ಟ ಗುಣರೂಪನುಳ್ಳ ವರ ಪಂಚಭೂತಸ್ವರೂಪಾದ ಪಿಂಡ ೨೨

ಎಂದು ಪೇಳ್ವಾ ಸೃಷ್ಟಿವಾಚಕದೊಳವಯುವಕೆ
ಸಂದುದಾ ಪಿಂಡನಾಮಂ ಬಳಿಕ ತಸ್ಮಾತ್ತು
ಯೆಂದುವೈ ಕರ್ಮಸಾದಾಖ್ಯಮಂ ಪಿಂಡರೂಪಮುದಾಹೃತಮುಮೆನುತ್ತಾ
ಹೆಂದದಾ ಗ್ರಂಥದರ್ಥವನು ನೀ ತಿಳಿಯಯ್ಯ
ಕಂದಯೆನುತದಱ ಬಗೆಯುಂ ಘೃಣಾನಿಧಿಯಾದ
ತಂದೆ ಗುರುರೂಪನಾ ಶಿಷ್ಯಂಗೆ ಸಂತೋಷದಿಂ ನುಡಿದನೆಂತೆಂದೊಡೆ ೨೩

ಇಂತೆಂಬ ಕರ್ಮಸಾದಾಖ್ಯವೇ ಪಿಂಡನಾ
ಮಾಂತರಕೆ ತಕ್ಕುದದಱಿಂದ ಶಿವಲಿಂಗವಾ
ಗಂತಿರುತ ಶಿವಲಿಂಗಮಧ್ಯದೊಳಗಿರ್ದುದಾ ಶಿವಪರಾಶಕ್ತಿ ಲೇಸು
ಸಂತತಿಗಳಾ ಶಾಂತ್ಯತೀತಾದಿ ಕಳೆಗಳೊಳು
ಮುಂತೆ ಕೂಡಿರ್ದ ಸಾದಾಖ್ಯದಿಂ ಕೂಡಿರ್ದ
ಕಾಂತಶಿವಲಿಂಗದಿಂ ಪಿಂಡವಾದಾ ವಿಮಲ ಸಾದಾಖ್ಯಭೇದವುಳ್ಳ ೨೪

ಶಿವನ ದಿವ್ಯಾವಯಂ ಕರ್ಮಸಾದಾಖ್ಯರೂ
ಪವಿದೆಂದು ಪೇಳ್ವುದೈ ತಚ್ಛಿವಮಯಂ ಪಿಂಡ
ಮುವಿಶೇಷ ಸರ್ವತತ್ವಾಲಯುವದಿದುವೆಂಬ ಕಾರಣಂ ಮೆಱೆವ ಪಿಂಡ
ಶಿವರೂಪವಖಿಳ ತತ್ವಂಗಳಾಶ್ರಯುವಲಾ
ಕುವರ ಕೇಳಿದುಕಾರಣಂ ಪಿಂಡಶಬ್ದಕೊ
ಪ್ಪುವ ಮಹಾನಿರ್ವಚನವಮಂ ನಿನಗೆ ಪೇಳಿದೆವು ತಿಳಿಯೆಂದನಾಚಾರ್ಯನು ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತೆಸೆವ ಪಂಚಮೂರ್ತಿಸ್ವರೂಪಾದ ಸ
ತ್ಕಾಂತವರ ಕರ್ಮಸಾದಾಖ್ಯವೈದುಂ ತತ್ವ
ಸಂತತಿಯ ರೂಪಹುದು ಮೂರ್ತಿಯುಳ್ಳ ಸದಾಶಿವಮುಖ್ಯ ತತ್ವಂಗಳ
ತಿಂಥಿಣಿಯ ದೇಹಭೇದಂ ಗುಣಂ ಪಂಚಮುಖ
ದಿಂ ತಳ್ತು ಕೂಡಿ ರಾಜಿಸುವುದಾಯಾ ಶಿವನ
ನಂತವಿಂತಿವು ಮೂರ್ತಿಕಾರಣ ಮಹೇಶ್ವರನ ಸೋಮಧರನಾದಿಯಪ್ಪ ೨೬

ವರಪಂಚವಿಂಶತಿ ಮಹಾತತ್ವಸಂತತಿಯ
ನಿರುಪಮ ಪ್ರಾದುರ್ಭವೇತಿ ಶಿವಲಿಂಗದೊಳು
ತರವಿಡಿದನಂತಸುಜ್ಞಾನರೂಪಾದ ಕಾರಣಕೆ ಕಾರಣವೆನಿಸಿದ
ಪರಿವಿಡಿಯ ಸಕಲ ನಿಷ್ಕಲರೂಪವಾದ ಸುರು
ಚಿರದ ಕರ್ಮೇಶನೆನಿಸುವ ಮಹಾದೇವಾಂಘ್ರಿ
ಚರಣಸರಸಿಜವನೇ ಧ್ಯಾನಿಸುವುದೆಂದು ನಿರವಿಸುತಿರ್ದನಾಚಾರ್ಯನು ೨೭

ವಿಳಸದಿಪ್ಪತ್ತೈದೆನಿಪ್ಪ ಲೀಲಾಮೂರ್ತಿ
ಗಳ ಮಧ್ಯದಲ್ಲಿರ್ದ ಶಿವತತ್ವವೇ ಸೌಖ್ಯ
ಕಳವಟ್ಟ ಸಕಲತತ್ವಂ ಬಳಿಕನಂತ ಲೀಲಾಮೂರ್ತಿನಿವಹದಿಂದ
ಕಳೆದುಬಿಟ್ಟಾ ಪರಾತ್ಪರತತ್ವವೆಯ್ದೆ ನಿ
ಷ್ಕಳತತ್ವವಯ್ಯ ಪರಮೇಶ್ವರನ ಲೀಲೆಯು
ಗ್ಗಳಮೂರ್ತಿಯಂತಪ್ಪ ಪರಮೇಶ್ವರನ ಪರಾಶಕ್ತಿಯುರುಲೇಶದಿಂದ ೨೮

ಒಗೆದ ವರಶಾಂತ್ಯತೀತಾದಿಯ ಕಲಾದಿ ಭೇ
ದಗಳುಳ್ಳ ಧಾತುವರ್ಣವೆ ಪಿಂಡವೆಂದು ತಿಳಿ
ಮಗನೆ ಶಿವತಂತ್ರದೊಳಭಿಜ್ಞಪುರುಷಂ ಷಟ್ಕಲಾದಿಗಳ ಹೃದಯಾದಿಯ
ಬಗೆಯಲಸ್ತ್ರಾಂತವಾದವು ಶಿವಾಂಗಂಗಳೊಳು
ಮಿಗೆ ಕಲ್ಪಿಪಂ ಬಹು ಶಿವಾಂಗಪೂರ್ಣೀಕೃತದ
ಸೊಗಸೆಂದು ಸರ್ವಾವಯಂಗಳೊಳು ಕೂಡಿದುದೆನುತ್ತಱಿದಿರ್ಕೈ ಕುಮಾರ ೨೯

ಕಂದ ಕೇಳಯ್ಯ ಶಿವತತ್ವದ ನೆನಹುಮಾತ್ರ
ದಿಂದ ಕಲೆಗಳೊಳು ಕೂಡಿದ ರೂಪಧರಿಸಿದಾ
ನಂದಮೂರ್ತಿಯನುಳ್ಳುದಹುದಲಾ ಧ್ಯಾನಯೋಗಿಗಳ ನೆನಹಿಗೆ ತೋಱದ
ಅಂದು ನಿಷ್ಕಲಶಕ್ತಿಯನೆ ಕೂಡಿ ಮೆಱೆವುದದ
ಱಿಂದ ಕರ್ಮೇಶತತ್ವವು ಸಕಲ ನಿಷ್ಕಲಮು
ಮೆಂದೆನಿಸುವೆರಡು ಲಕ್ಷಣಮಾಗಿರಾರಾಜಿಸುತ್ತಿರ್ಪುವೆಂದು ತಿಳಿಯೈ ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊಹಿಸುವೊಡಾ ಸವೀರ್ಯಂ ತಿಳಿವೊಡದುವೆ ನಿ
ರ್ದೇಹವಾ ಮಾಂಸಾಸ್ಥಿರುಧಿರವಿಲ್ಲದುದಲಾ
ಆಹ ಕರ್ಮೇಶತತ್ವದ ಸಕಲ ನಿಷ್ಕಲತ್ವವು ಗಗನದಲ್ಲಿ ಹೊಳೆವ
ರೂಹಿನಿಂದ್ರನ ಚಾಪದಂತೆ ಕನ್ನಡಿಯಲ್ಲಿ
ಮೋಹಿಸುವ ರೂಪಿನಂತಮಲ ಸುಜ್ಞಾನಿಗಳ
ಬೇಹ ಹೃದಯಾಕಾಶದಲ್ಲಿ ಸುಧ್ಯಾನದರ್ಪಣದಲ್ಲಿ ತೋಱುತಿಹುದು ೩೧

ಈ ರೂಪನೀ ಪ್ರಕಾರದೊಳು ಮನಸಿನೊಳಿಡು
ತ್ತಾರೈದು ಸಂಬಂಧಿಸಲು ಸಕಲ ನಿಷ್ಕಲದ
ಚಾರುದ್ವಿರೂಪವಿಹುದಯ್ಯ ಕರ್ಮೇಶತತ್ವದ ಸಕಲ ನಿಷ್ಕಲವನು
ಆರೈದು ನಿರವಿಸಿದೆವಿನ್ನಂಗಭೇದಮಂ
ಕಾರುಣ್ಯದಿಂದ ವಿಸ್ತರಿಸುವೆವು ಕೇಳ್ಕೈ ಕು
ಮಾರಯೆಂದಾ ಹಲಗೆಯಾಚಾರ್ಯನೊರೆವುತಿರ್ದಂ ಕೆಂಚವೀರಾಖ್ಯಗೆ ೩೨

||ಸಾಕ್ಷಿ|| ಶಿವಸಾದಾಖ್ಯವೈಶೇಷೇ ಶಿವರೂಪಂ ಸಮಾಶ್ರಿತಂ
ಅಮೂರ್ತಂ ತು ಮಹಾಸೇನ ಶಿವಸಾದಾಖ್ಯಮಾಶ್ರಿತಂ ೮

ಪಿಂಡಸ್ಥಂ ಪಿಂಡಮಧ್ಯಸ್ಥಂ ಪಿಂಡೇನ ತು ಘಟೀಕೃತಂ
ಪಿಂಡೇನ ಪಿಂಡಿತಂ ಪಿಂಡಂ ಪಿಂಡರೂಪಮುದಾಹೃತಂ ೯

ಏವಂ ಲಿಂಗೇತು ಕರ್ಮೇಶಂ ಧ್ಯಾಯೇತ್ ಸಕಲನಿಷ್ಕಲಂ
ದೇಹಸ್ಥಂ ಸಕಲಂ ಜ್ಞೇಯಂ ನಿಷ್ಕಲಂ ದೇಹವರ್ಜಿತಂ ೧೦

ಸವೀರ್ಯಂ ವೈ ಚ ನಿರ್ದೇಹಂ ಮಾಂಸಾಸ್ಥಿರುಧಿರಂ ನ ಚ
ಇಂದ್ರಚಾಪಮಿವಾಕಾಶೇ ದರ್ಪಣೇ ಪ್ರತಿಬಿಂಬವತ್ ೧೧

ಪಿಂಗದೀ ಧ್ಯಾನಲಕ್ಷಣವನುಸುರಿದೆವು ನಿನ
ಗಂಗಭೇದವನಿನ್ನು ಪೇಳುವೆವು ನಾಲ್ಕು ಭೇ
ದಂಗಳೈ ಷಣ್ಮುಖನೆಯಂಗಪ್ರತ್ಯಂಗ ಸಾಂಗೋಪಾಂಗವೆಂಬವವಱ
ಪಾಂಗನಱಿಯಾ ಶಿರೋವಕ್ತ್ರಹೃದಯಂಗಳೇ
ಯಂಗವೈನಡುಕೊರಳ್ತೊಳ್ನಾಭಿಗುಹ್ಯೋದ
ರಂಗಳಕ್ಷಿಘ್ರಾಣಕರ್ಣ ಹಸ್ತಾಂಗುಲಿಗಳೂರುಗಳು ಜಾನುಜಂಘೇ ೩೩

ಇವು ಕಣಾ ಪ್ರತ್ಯಂಗವಾ ಮೂರ್ತಿಯುಳ್ಳ ಗುಣ
ನಿವಹರೂಪವೆ ಸಾಂಗವಯ್ಯ ಗುಣಭಿನ್ನವೀ
ವಿವರವಿನ್ನಾ ಗುಣವನೊರೆವೆವೈ ತ್ರಿಗುಣಕರ್ತೃಪ್ರತಾಪದೊಳು ಮೆಱೆವ
ಪ್ರವರ ದುರ್ಭೇದ್ಯಮುಮನುಗ್ರಹವಿಧಿರ್ಮಾಯೆ
ಯುಱು ವಿವರ್ಣವರ್ಣಸಂಹಾರವೀ ಹತ್ತು ಪೇ
ಳ್ದವು ಕಣಾಪ್ರತಿಭಿನ್ನನಾಮವಿನ್ನಿವಱ ಲಕ್ಷಣವನಾಂ ಮುಂದೊರೆವೆನು ೩೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರಿಗುಣವೇ ಶೂಲ ಕರ್ತೃವೆ ಪರಶು ಸುಪ್ರತಾ
ಪಗಳಧಿಕ ಖಡ್ಗಮುಮಭೇದ್ಯವೇ ವಜ್ರವೈ
ಮಗನೇ ಅನುಗ್ರಹಮುಮಭಯಮಾ ವಿಧಿ ನಾಗಮಾ ಪಾಶವೇ ಮಾಯೆಯೈ
ಮಿಗೆ ವಿವರ್ಣಾಂಕುಶಂ ವರ್ಣವೇ ಘಂಟೆಯೀ
ಜಗದ ಸಂಹಾರವೇಯಗ್ನಿಯಾ ಮೂರ್ತಿಹ
ಸ್ತಗಳು ಹತ್ತಕ್ಕೆಯುಳವಟ್ಟ ಗುಣರೂಪಸಾಂಗಂಗಳೆಂದಱಿ ಕುಮಾರ ೩೫

ಅರರೆ ವಸ್ತ್ರೋಪವೀತಂ ಮಾಲ್ಯಗಂಧಮಾ
ಭರಣಮಾವರಿಸಿದವುಪಾಂಗವಿವು ಕೇಳ್ದಂಗ
ದಿರವಿನ್ನು ತದ್ರೂಪವೆಸೆವ ಕುಂದೇಂದುಮಾ ಪಳುಕಿನಂತೆಸೆವ ಕಾಂತಿ
ವರ ಜಟಾಮಕುಟಂ ಶಿರಸ್ಸೈದು ಪಂಚಮುಖ
ಶಿರವೊಂದು ಮುಖಕೆ ಮೂಱಱ ಗಣನೆಯಲ್ಲಿ ಸಿಂ
ಗರದ ಪದಿನೈದು ಕಣ್ಣಾ ಹತ್ತುಭುಜವೆರಡು ಪಾದ ಪದ್ಮಾಸನದೊಳು ೩೬

ಸ್ಥಿರವಾಗಿ ಶೂಲಮಾ ಪರಶು ಖಡ್ಗಂ ವಜ್ರ
ವಿರದಭಯಮೈದುಹಸ್ತಂ ದಕ್ಷಿಣಂ ವಾಮ
ಕರ ನಾಗ ಪಾಶಾಂಕುಶಂ ಘಂಟೆಯಗ್ನಿಯಿಂ ಸರ್ವಲಕ್ಷದೊಳೊಪ್ಪಿ
ಪರಮ ದಿವ್ಯಾಭರಣ ವಸ್ತ್ರಭೂಷಿತರೂಪು
ವೆರಸಿ ತನ್ನಂ ನೆನೆಯೆ ಧರ್ಮಕಾಮ್ಯಾರ್ಥಮಂ
ಕರುಣಿಸುವನಿಂತಿದೇ ಧ್ಯಾನರೂಪಂ ವಿಶೇಷವನಿನ್ನು ಬಿತ್ತರಿಪೆವೈ ೩೭

ಆದೊಡಾಲಿಸು ಮಗನೆ ಪೂರ್ವಮುಖವೇ ಕರ್ಮ
ಸಾದಾಖ್ಯಮಾ ದಕ್ಷಿಣಾನನಂ ನೆರೆಕರ್ತೃ
ಸಾದಾಖ್ಯಮಾ ಪಶ್ಚಿಮಂ ಮೂರ್ತಿಸಾದಾಖ್ಯವುತ್ತರಾಶೆಯೊಳಮೂರ್ತಿ
ಸಾದಾಖ್ಯವೂರ್ಧ್ವಶಿವಸಾದಾಖ್ಯವೆಂದು ತಿಳಿ
ಯೈದಲಾ ಕರ್ಮಸಾದಾಖ್ಯವಾದಿಯ ಮೂರ್ತಿ
ಸಾದಾಖ್ಯವಂತ್ಯದಾ ಮೂರು ಕರ್ಮಾಭಿಧಾನಂ ತಿಳಿವುದೈ ಕುಮಾರಾ ೩೮

ಪೂರ್ವಮುಖವೇ ಮೂಡಲಾಗಿ ರಾಜಿಪುದು ನಿ
ರ್ಗರ್ವಿ ಪಶ್ಚಿಮಮುಖವ ಪಡುವಲೀಕ್ಷಿಸುತಿಹುದ
ಲರ್ವ ದಕ್ಷಿಣಮುಖವೆ ತೆಂಕಲಭಿಮುಖವಲಾ ಬಡಗಲೆಸೆವುತ್ತರಮುಖಂ
ಪಾರ್ವತೀಸುತನೆ ಕೇಳೂರ್ಧ್ವಮುಖಕಂ ಮಿಗಿಲು
ಗುರ್ವಿನಿಂದುಂಟಲ್ಲೈ ಮೂಲಮಂತ್ರದೊಳೊಂದಿ
ಪರ್ವಿದತಿಶಯಮಖಿಳ ವದನಂಗಳೊಳಗೆ ಮೇಲಣಮೊಗಕ್ಕೆಂದು ತಿಳಿಯ ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒದವಿ ಪೂಜಾಕ್ರಿಯಾಸಂಪನ್ನನುತ್ಕೃಷ್ಟ
ವದನವಂ ಜಾನಿಸುತ್ತಾ ಕರ್ತೃಸಾದಾಖ್ಯ
ಸದಮಲಾನನದಂತೆ ಪೂಜಿಸುವದಿಂತು ವಿಧಿವತ್ತಾಗಿ ನೆನೆದರ್ಚಿಸಿ
ಅದಱ ಕಡೆಯಲ್ಲಿ ಮೊದಲಂತುಗೆಯ್ವುದು ಕಣಾ
ಅದುಕಾರಣಾಖಿಲ ಪ್ರಾಸಾದ ಮಂತ್ರದಂ
ದದೊಳು ಬಹುಕಾರಣಂಗಳಿಗೆ ಕಾರಣ ಸದಾಶಿವತತ್ತ್ವವೆಂದಱಿವುದು ೪೦

ಅನುನಯದೊಳೀಪರಿಯ ನಿಷ್ಕಲಬ್ರಹ್ಮವೆಂ
ದೆನಿಪ ಶಿವತತ್ತ್ವವೇ ಸಕಲನಿಷ್ಕಲರೂಪ
ದನುಪಮಸದಾಶಿವಮಹಾತತ್ತ್ವವಾಯ್ತೆಂದು ನಿಶ್ಚೈಸಬೇಹುದಿಂತು
ಘನಕರ್ಮರೂಪವೇ ಸಾದಾಖ್ಯತತ್ತ್ವವೆಂ
ದೆನಿಸಿಕೊಂಬುದು ಸುಪ್ರಸಿದ್ಧ ಸಿದ್ಧವದಱಿಂ ಭಕ್ತ
ಜನಕೆ ಸತ್ಕರ್ಮರೂಪವೆ ವಜ್ರಪಂಜರವೆನುತ್ತ ತಿಳಿಯೈ ಕುಮಾರ ೪೧

ಆ ವಾಹನಾದಿ ಕ್ರಿಯಾವಿಧಾನಂಗಳೇ
ತಾವೆಯ್ದಿ ಕರ್ಮವದು ಸುಸ್ಥಾಪನಾದಿಗಳ
ನೇ ವಿಮಲಕರ್ಮರೂಪೆಂದು ಮಾಡೈ ಲಿಂಗದಲ್ಲಿಯಾದೊಡೆ ಶುದ್ಧದ
ಠಾವಿನೊಳು ಲಿಂಗಚಕ್ರೋದ್ಧರಣೆಗಳೊಳಾದೊ
ಡೋವಿ ತನ್ನಯ ಹೃದಯದೊಳಗಾದೊಡಂ ನೆನೆದು
ಭಾವಕ್ರಿಯಾಪೂಜೆಯಿಂ ಸದಾಶಿವನ ವಿಧಿಯಿಂ ಸ್ಥಾಪಿಸೈ ಬಳಿಕ್ಕ ೪೨

ಆವಾಹನಂ ಸ್ಥಾಪನಂ ಸನ್ನಿಧಾನಂಗ
ಳೋವಿಪ್ಪ ಸನ್ನಿರೋಧಂಗಳೆಂಬೀ ನಾಲ್ಕು
ನಾವು ಬಿತ್ತರಿಪೆವು ಶಿವಧ್ಯಾನಪರವಪ್ಪ ಶಿವಭಕ್ತನೆಯ್ದೆ ತನ್ನ
ಭಾವದೊಳು ಸುಜ್ಞಾನರೂಪಾದ ತತ್ತ್ವವನೆ
ಸಾವಧಾನದೊಳಾಕರುಷಿಸಲಾವಾಹನದ
ಲೈ ವತ್ಸನವನ ಹೃದಯದೊಳೀಶಮೂರ್ತಿಯಂ ಮಡಗಲಾ ಸ್ಥಾಪನವೆಲೈ ೪೩

ತನಗೆ ಪರಮೇಶ್ವರನ ಸನ್ನಿಧಿಯ ಭಾವವೇ
ಘನಸನ್ನಿಧಾನವೆನಿಕುಂ ಶಿವನೊಳುಂ ತನ್ನ
ಮನವನೇ ಬಂಧಿಪುದು ಸನ್ನಿರೋಧಂ ಕಣಾ ಕರ್ತೃಸಾದಾಖ್ಯಾದಿಯ
ಘನತರದ ನಾಲ್ಕು ಸಾದಾಖ್ಯ ಸಂಸ್ಥಾಪನೆಗ
ಳನೆ ಮಾಡಲಾಗದೈ ಷಣ್ಮುಖಾ ಯೋಗೀಂದ್ರ
ಜನ ಮಾಂತ್ರಿಕರ್ಗೆಯಾ ಸ್ತೋತ್ರಪ್ರಸನ್ನಕಾರಣವಿಂತು ಹಿಂದೆ ಪೇಳ್ದ ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡು ಲಕ್ಷಣದೊಡನೆ ಕೂಡಿರ್ದುದೇ ಕೇಳು
ತರುಣನೇ ಕರ್ಮಸಾದಾಖ್ಯವೆಂದಾವಿಂದು
ನಿರವಿಶಿದೆವಯ್ಯ ಶಿವಸಾದಾಖ್ಯವಾದಿಯಾ ಕರ್ಮಸಾದಾಖ್ಯವಂತ್ಯ
ವರ ಪಂಚಸಾದಾಖ್ಯತತ್ವವಮಂ ಕ್ರಮದೆ ಬಿ
ತ್ತರಿಸಿದೆವು ಮುಂದಾ ಮಹೇಶತತ್ವವನು ನಿನ,
ಗೊರೆವೆನೈ ಕೇಳೆಂದು ಷಣ್ಮುಖಂಗೀಶ್ವರಂ ನುಡಿದನಾನಂದದಿಂದ ೪೫

ಶಿವತತ್ವಭೇದಂಗಳೆಯ್ದೆ ಮೂವತ್ತೊಂದು
ಮವಱೊಳಾ ಶಿವತತ್ವವೊಂದು ಮತ್ತಂ ಸದಾ
ಶಿವತತ್ವವೈದಾಱಿಲಾ ಕೂಡಿ ವಾತೂಳದಲ್ಲಿ ವಚನಾರ್ಥದಲ್ಲಿ
ಶಿವಲಿಂಗತತ್ವವೈದಿಂತು ಹನ್ನೊಂದಲಾ
ತವೆ ಮಹೇಶ್ವರನಿಗಿಪ್ಪತ್ತೈದನಿನ್ನು ಪೇ
ಳುವೆವು ಮೂವತ್ತಾಱು ತತ್ವವಾದವು ಕಣಾ ಶಿವತತ್ವವೆಂದನಾರ್ಯಂ ೪೬

ಸೌಥಿಲ್ಯ ಹಲಗೆಯ ಗುರುವಮೂಲ್ಯ ವಾಕ್ಪ್ರಸವಚಯ
ಮಾಲ್ಯಮಂ ಕುಡೆ ಲಿಂಗವೌಲ್ಯಗ್ರದೊಳ್ತಳೆದು
ತೌಲ್ಯದಿಗ್ಭರಿತಧಾವಲ್ಯಮಯಸತ್ಕೀರ್ತಿವಲ್ಯವನಿಯೊಳು ಪಸರಿಸೆ
ಕಲ್ಯಧಿಕಗುಣಹೃದಯ ಶಲ್ಯವೆನೆ ವರಸುಧಾ
ಕುಲ್ಯಮೆಂಬಿನ ಸುಗುಣಶಾಲ್ಯಮಲಕವಿತೆಯಂ
ಶೂಲ್ಯಧಿಕ ಶರಣಜನಲಾಲ್ಯವೆಂಬುದದಿಂ ಮಲ್ಲಣಾರ್ಯಂ ಪೇಳ್ದನು ೪೭

ಹಲಗೆಯಾರ್ಯಂ ಸುಖದ ನೆಲೆಗೆ ಶೌರ್ಯಂ ಮಿಳ್ತು
ವುಲಿಗೆ ದೂರಂ ಸಚಿತ್ಕಲೆಗೆ ಸಾರಂ ಪರರ
ಕೊಲೆಗೆ ನಿಲ್ಕಂ ಹುಸಿಯ ಬಲೆಗೆ ಸಿಲ್ಕಂ ಪಾಪಶಿಲೆಗೆ ಪವಿ ನಿಜದನುಭವಿ
ಕಲಿಗೆ ವಿರಸಂ ನತರ ಸಲಿಗೆಯುರಸಂ ಕರ್ಮ
ಮಲೆಗೆ ಹವಿ ಮರವೆಗತ್ತಲೆಗೆ ರವಿಯುಱುವೆಂಬ
ತಲೆಗೆ ಪರವಹ ತನುವಿನಲೆಗೆ ಹೊಗದಿಹ ಮಹದನುಡಿಗೆ ಸದ್ಗುಣದ
ಹೊಲಿಗೆ ೪೮

ಇದನೋದಿ ಕೇಳಿದೊಡೆ ಗುರುಪೂಜೆ ಗುರುವರನ
ಪದದ ಜ್ಞಾನಂ ಲಿಂಗಲಕ್ಷಣಂ ಲಿಂಗಾಂಗ
ದೊದವು ಜಂಗಮವೋಹವಱಿವಾ ಪದಾರ್ಥಾರ್ಪಣಪ್ರಸಾದದ ಸಿದ್ಧಿಯು
ಪುದಿದ ಪ್ರಸಾದಾಂಗ ವಿಜ್ಞಾನ್ವದಿಯೈಕತ್ವ
ದೊದವು ಗುರುಲಿಂಗಜಂಗಮದೇಕಭಾವ ಸ
ಮ್ಮದಿತಪ್ರಸಾದವಿವನೊಳಕೊಂಡ ಷಟ್ಸ್ಥಲಬ್ರಹ್ಮಸ್ವರೂಪರಹರು ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರುಪಮಾನಾದಿಭಕ್ತಾಂಗವೇ ಲಿಂಗವಾ
ಪರತತ್ವ ಶಿವಶಕ್ತಿರೂಪ ನಿಷ್ಕಲ ಸಕಲ
ದುರುನಿಷ್ಕಲಂ ಸಕಲವೀ ಮೂಱಱೊಳು ಮೊದಲ ನಿಷ್ಕಲದ ದಶನಾಮವು
ವರಪಂಚಸಂಜ್ಞೆ ನಡುವಣ ಸಕಲ ನಿಷ್ಕಲ
ಕ್ಕುರು ಶಕ್ತಿಸಾದಾಖ್ಯಮೂರ್ತಿಪಂಚಕತತಿಯು
ನೊರೆದೆವೈ ನಿನಗೀಗಳಿಲ್ಲಿಂದ ಮುಂದಣ ಮಹೇಶನಂ ಪೇಳ್ವೆವಿನ್ನು ೫೦

||ಸಾಕ್ಷಿ|| ಅಂಗಭೇದಂ ಮಹಾಸೇನ ಚತುರ್ಭಿರ್ಭೇದಮುಚ್ಯತೇ
ಅಂಗಪ್ರತ್ಯಂಗಸಾಂಗಂಚ ಉಪಾಂಗ ಚತುರೋಭವೇತ್ ೧೨

||ವೃತ್ತ|| ಆವಾಹನಂ ಸ್ವಾತ್ಮನಿ ಚಿತ್ಪ್ರಕಾಶಂ ತತ್ರಸ್ಥಿತಿಸ್ಥಾಪನಮೀಶ್ವರಸ್ಯ
ಸಾನ್ನಿಧ್ಯಮಾತೇಶ್ವರಸನ್ನಿಧಾನಂ ಸಂರೋಧನಂ ಸ್ವಸ್ತ್ಯಶಿವೇ ನಿರೋಧಃ ೧೩

||ಗ್ರಂಥ|| ಕರ್ತೃತ್ವಾದಿ ಚತುರ್ಣಾಂತು ಸ್ಥಾಪನಂ ಚ ನಕಾರಯೇತ್
ಯೋಗಿನಾಂ ಮಂತ್ರಿಣಾಂ ಚೈವ ಸ್ತುತಿಮಾತ್ರಂ ಭವೇದ್ಗುಹ ೧೪

ಇತ್ಯೇತೈರ್ಲಕ್ಷಣೈರ್ಯುಕ್ತಂ ಕರ್ಮಸಾದಾಖ್ಯಮುಚ್ಯತೇ
ಶಿವಾದಿ ಕರ್ಮಪರ್ಯಂತಂ ಕರ್ಮಣ್ಯೈವ ಪ್ರಕೀರ್ತಿತಂ
ಸಾದಾಖ್ಯಲಕ್ಷಣಂ ಪ್ರೋಕ್ತಂ ಮಾಹೇಶಂ ಶೃಣು ಷಣ್ಮುಖ ೧೫

ಭೂಲೋಕಪಾವನಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲ್ಯಣಾರ್ಯಂ
ಶೀಲಷಟ್‌ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತುಪದನಂ ಮಾಡಿದಂ ೫೧

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಪಂಚಸಾದಾಖ್ಯಮಂ ಪೇಳನೆಂಬ ತಾಣಕ್ಕೆಯೊಂಭತ್ತು ಸಂಧಿ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ಪರಮಷಟ್‌ಸ್ಥಲಬ್ರಹ್ಮಿಗಳ ವೀರಶೈ
ವದ ಮಾರ್ಗದುನ್ನತ ಜ್ಞಾನಿಗಳ ನೈರ್ಮಲ್ಯ
ಹೃದಯನಿಶ್ಚಯತತ್ವಸಂಪನ್ನ ಹಲಗೆಯಾರ್ಯಂ ಕೆಂಚವೀರಾಖ್ಯಗೆ
ಪದಪಿಂದ ನಂಜುಂಡದೇವರೊಪ್ಪುವ ತೆಱದೊ
ಳುದಿತ ವರವೀರಶೈವಾಮೃತಾಖ್ಯಾನವೆಂ
ಬುದನುಸುರಲಿದರಲ್ಲಿ ಮೊದಲೊಂದು ಕಾಂಡಸಂಪೂರ್ಣಮಾದುದು

ಪೆಂಪಿನಿಂ ೫೩

ಅಂತೂಕಾಂಡ ೧ ಅಂತು ಸಂಧಿ ೯ ಕ್ಕಂ ಪದನು ೪೬೬ ಕ್ಕಂ ಗ್ರಂಥ ೨೩೦ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಂಡಃ ೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೦

ಮಾಹೇಶ್ವರನ ಲೀಲಾಕಥೆಗಳು
ಪ್ರಥಮಂ ಸೋಮಧಾರೀಚ ಎಂಬರ್ಥಕ್ಕೆ ಕಥೆ

ಚಂದ್ರಧರಲೀಲೆ

ಕಾರಣಮಹೇಶಂಗೆ ಮೊದಲಲೀಲೆಯು ಸೋಮ
ಧಾರವಾ ಕ್ರಮದೊಳುಮಯಾಸಹಿತವೆಸೆವ ವೃಕ್ಷ
ಭಾರೂಢತಾಂಡವಂ ಗಿರಿಜಾವಿವಾಹವಿಂತೈದ ನಾಂ ಬಿತ್ತರಿಪೆನು||

ಬಾಳ್ದಧಿಕದಂಧಕನ ತೂಳ್ದನಂ ಮನವೊಲ್ದು
ಕೇಳ್ದರಿಷ್ಟಾರ್ಥಮಂ ಪೇಳ್ದವರ ನೈಜಮನ
ದೊಳ್ದಯಂ ಪುಟ್ಟೆ ಕೃಪೆದಾಳ್ದನಂ ಹಾಕಕದ ಕಾಳ್ದಾರಿಯುಊದದಕ್ಕೆ
ಮುಳ್ದರಿಮಹೀಧ್ರಮಂ ಹೋಳ್ದನ ಗಜಾಸುರನ
ಸೀಳ್ದನಂ ಪಾರ್ವತಿಯ ತೋಳ್ದಲೆಯ ಸೊಬಗನೆ
ಮ್ಮಾಳ್ದನೆನಿಸುವ ಶಾಂತಮಲ್ಲೇಶನಡಿಗಳ್ಗೆ ಬಿಳ್ದಾನು ಕೀರ್ತಿಸುವೆನು ೧

ರಾಜಮಣಿಮಕುಟನಖರಾಂಶು ಮಿಶ್ರಿತಪದಂ
ಭೋಜ ಚಿದ್ರತ್ನ ಪ್ರಭಾಶಕ್ತಿಯುಕ್ತ ಘನ
ತೇಜ ಕಲಿಯುಗಪದಚತುಷ್ಟಯ ಸದಾಶಿವ ಮಹಾಧರ್ಮ ಶಿಷ್ಯಪ್ರದ
ವ್ಯಾಜನೃತ್ಯಸ್ಥಲಕೂಲಾಲಕೃತ ಹೃದಯ ನೀ
ರೇಜ ಕುಂಭಜದರ್ಶಕಲ್ಯಾಣ ಪರ್ವತಸ
ಮಾಜವಲ್ಲಭ ಕಕುದ್ಗಿರಿಯ ಮೇಲಣ ಗವಿಯ ಶಾಂತನಂಜೇಶ್ವರ ಜಯಾ ೨

ಶಿವ ಸದಾಶಿವ ಮಹೇಶ್ವರತತ್ವವೇ ಕ್ರಮಾ
ನಿವಹದಿಂದಾತ್ಮ ಸತ್ಪ್ರಾಣ ಕಾಯಂ ಬಳಿ
ಕ್ಕಿವು ಮುಂತೆ ಪರಮಾಂತರಾದಿ ಜೀವಾತ್ಮರಾ ಪ್ರಾಜ್ಞ ತೈಜಸ ವಿಶ್ವರು
ತವೆ ಕಾರಣಂ ಸೂಕ್ಷ್ಮವಾ ಸ್ಥೂಲತನು ಸುಷು
ಪ್ತಿ ವಿಶೇಷದಾ ಸ್ವಪ್ನ ಜಾಗ್ರಂ ಶಿವಾದಿನಿ
ತ್ರಿವಿಧಾದಿಕಾರಣ ಚಿದಾನಂದ ಜಂಗಮಸ್ವಾಮಿ ಜಯ ಹಲಗೆಯಾರ್ಯ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳಯ್ಯ ಕೆಂಚವೀರಾಹ್ವಯಾ ಮಿಸುಪ ವಾ
ತೂಳಾಗಮಾರ್ಥದಿಂ ಶಿವ ಸದಾಶಿವರಿರವ
ಪೇಳಿದೆವು ಮುಂದಿನ್ನು ಮಾಹೇಶತತ್ವಮಂ ಬಿತ್ತರಿಪೆವೆಂತೆಂದೊಡೆ
ಆಳೋಚಿಸಲು ಕರ್ಮಸಾದಾಖ್ಯವೆನಿಸುವ ಕೃ
ಪಾಳುವಹ ದಿವ್ಯಲಿಂಗದ ಸಹಸ್ರಾಂಶದಿಂ
ಸ್ಥೂಳವೆನಿಸುವ ಮಹೇಶ್ವರತತ್ವವಾದುದೆಂದನು ಹಲಗೆಯಾಚಾರ್ಯನು ೪

ಸುತ ಸಕಲಲೋಕಂಗಳಧಿಕ ಸೃಷ್ಟಿಯ ಮಹಾ
ಸ್ಥಿತಿ ಲಯಂಗಳ ಮಾಳ್ಪುದಾ ಮಹೇಶ್ವರತತ್ವ
ವತಿಶಯ ಕಣಾ ಪಂಚವಿಂಶತಿ ವಿಭೇದವಾ ಮೂರ್ತಿ ಇಪ್ಪತ್ತೈದಲ್ಲೈ
ಕೃತ ಚಂದ್ರಧರಮುಖ್ಯವಾ ಮಹಾಲಿಂಗವಂ
ತ್ಯತೆಯಾದನಂತ ರೂಪುಳ್ಳ ಚಿಹ್ನಂಗಳೊ
ಪ್ಪುತಮಿರ್ಪ ಲೀಲಾಧರಂ ಪಲವು ತಾಣದೊಳು ಬಹು ವಾಹನಂಗಳಿಂದ ೫

ಸಲೆ ಮೂರ್ತಿಗೊಂಡಿರ್ಪುದಾ ನಾಟ್ಯರೂಪಿಂದ
ಚೆಲುವಿಕೆಯನುಳ್ಳುದಗಣಿತರೂಪಮಂ ಪಡೆದು
ಸಲುವ ದೇವತೆಗಳೊಳಗಧಿಕದೇವತ್ವಮುಳ್ಳುದು ಜಟಾಮುಕುಟಮುಳ್ಳ
ಸುಲಲಿತದ ಮುಖವೊಂದು ಮುಕ್ಕಣ್ಣು ತೊಟ್ಟ ಮಂ
ಗಲವೆನಿಸುವಾಭರಣವೆಸೆವ ಪದ್ಮಾಸನೋ
ಜ್ವಲವಿದೇ ಮಾಹೇಶರೂಪಿನ್ನು ರೂಪಭೇದಂಗಳಂ ಬಿತ್ತರಿಪೆನು ೬

ಒಂದೆಲ್ಲೈ ಸೋಮಧಾರತೆಯೆರಡಱಲ್ಲಿಯಾ
ನಂದದೊಳುಮಾಸಮೇತಂ ಮೂಱರೊಳು ಕೇಳು
ಕಂದ ವೃಷಭಾರೂಢವೈ ನಾಲ್ಕಱಲ್ಲಿ ನೃತ್ಯಂ ಬಳಿಕ್ಕೈದಱಲ್ಲಿ
ಇಂದುಮುಖಿಗಿರಿಜೆಯ ವಿವಾಹವಾಱಕ್ಕೆ ಭಿ
ಕ್ಷಾಂ ದೇಹಿಯೆಂಬುದೇಳಕ್ಕೆಚ್ಚ ಕಾಮನಂ
ಕೊಂದುರುಪಿದುದು ಕಣಾ ಬಳಿಕಲೆಂಟಕ್ಕೆ ಕಾಲನ ದಹನವೆಂದಱಿವುದು ೭

ನವಮದೊಳಗಾ ತ್ರಿಪುರಸಂಹರಂ ಹತ್ತಕ್ಕೆ
ಕುವರ ಕೇಳಾ ಜಲಂಧರನ ಕೊಂದುದು ಕಣಾ
ವಿವರಿಸಲು ಹನ್ನೊಂದಱಲ್ಲಿ ಬೊಮ್ಮನ ಶಿರವನರಿದುದಾ ಹನ್ನೆರಡಕಂ
ಪ್ರವರ ವೀರೋದ್ಭವಂ ಹದಿಮೂಱಱೊಳು ಹರಿಯು
ನವಗಡಿಸಿ ಕೊಂದುದಾ ಪದಿನಾಲ್ಕಱಲ್ಲಿ ಶಂ
ಭುವಿನರ್ಧನಾರೀಶ್ವರತ್ವವಾ ಪದಿನೈದಱಲ್ಲಿಯು ಕಿರಾತತ್ವವು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹದಿನಾಱಱಲ್ಲಿ ಕಂಕಾಳಧರ ಲೀಲೆಯೈ
ಪದಿನೇಳಱಲ್ಲಿ ಚಂಡಾನುಗ್ರಹಂ ಕಣಾ
ಹದಿನೆಂಟಱಲ್ಲಿ ವಿಷಸಂಹಾರವಾ ವಿಷ್ಣುಗಾ ಶಂಖ ಚಕ್ರಂಗಳ
ಪದೆದೀಶನಿತ್ತುದೇ ಲೀಲೆ ಹತ್ತೊಂಬತ್ತು
ಮದಗಜಾನನಗಣೇಶಂಗೆ ಬೋಧೆಯನೆ ಪೇ
ಳ್ದುದು ಬಳಿಕ್ಕಿಪ್ಪತ್ತಲ್ಯೆ ಸ್ಕಂದನುತ್ಪತ್ತಿಯೆನಿಪುದಿಪ್ಪತ್ತೊಂದಲ್ಯೆ ೯

ಏಕಪಾದದ ಲೀಲೆ ಯಿಪ್ಪತ್ತೆರಡಱಲ್ಲಿ
ಜೋಕೆಯ ಸುಖಾವಹವದಿಪ್ಪತ್ತುಮೂಱು ಕೇ
ಳ್ಯೆ ಕುವರ ದಕ್ಷಿಣಾಮೂರ್ತಿ ಇಪ್ಪತ್ತುನಾಲ್ಕು ಮಹಾಲಿಂಗೋದ್ಭವ
ಶ್ರೀಕರದ ಇಪ್ಪತ್ತುಅಯಿದು ಲೀಲಾಮಾತ್ರ
ವ್ಯೆ ಕಥೆಗಳಂ ಕ್ರಮದೊಳೊರೆವೆ ಸಂಕೋಚದಿಂ
ಸ್ವೀಕರಿಸು ಮದ್ವಾಕ್ಯಮಂ ಕೆಂಚವೀರಾಹ್ವಯಾ ಯೆಂದನಾಚಾರ್ಯನು ೧೦

||ಸಾಕ್ಷಿ|| ಕರ್ಮೇಶಸ್ಯ ಸಹಸ್ರಾಂಶಾನ್ಮಹೇಶಸ್ಯ ಸಮುದ್ಭವಂ
ಮಾಹೇಶಂ ಸಕಲಂ ವಿದ್ಯಾಚ್ಛೃಷ್ಟಿಸ್ಥಿತಿಲಯಾವಹಂ ೧

ಪಂಚವಿಂಶತಿ ಭೇದೈಸ್ತು ತನ್ಮೂರ್ತೌ ಪಂಚವಿಂಶತಿಃ
ನಾನಾರೂಪಧರಂ ದೇವಂ ನಾನಾರೂಪಸಮನ್ವಿತಂ ೨

ಜಟಾಮಕುಟಸಂಯುಕ್ತಮೇಕವಕ್ತ್ರಂ ತ್ರಿಣೇತ್ರಕಂ
ಸರ್ವಾಭರಣಸಂಯುಕ್ತಮೇಕಪದ್ಮಾಸನಸ್ಥಿತಂ ೩

ಮಾಹೇಶರೂಪಮೇವೋಕ್ತಂ ರೂಪಭೇದಮಥೋಚ್ಯತೇ
ಪ್ರಥಮಂ ಸೋಮಧಾರೀಚ ದ್ವಿತೀಯಮುಮಯಾಸಹ
ತೃತೀಯಂ ತು ವೃಷಾರೂಢಂ ಚತುರ್ಥಂ ನೃತ್ಯಕೋಪಮಂ ೪

ವೈವಾಹಂ ಪಂಚಮಂ ವಿದ್ಯಾತ್ ಷಷ್ಠಂ ಭಿಕ್ಷಾಟಣಂಭವೇತ್
ಕಾಮಾರಿಂ ಸಪ್ತಮಂ ವಿದ್ಯಾತ್ಕಾಲಾರಿ ಚಾಷ್ಟಮಂ ಭವೇತ್ ೫

ನವಮಂ ತ್ರಿಪುರಾರಿಸ್ಯಾಜ್ಜಲಂಧರವಧಂ ದಶ
ಏಕಾದಶಮಜಾರಿಸ್ಯಾದ್ದ್ವಾದಶಂ ವೀರಭದ್ರಕಂ ೬

ತ್ರಯೋದಶಂ ಹರಿಧ್ವಂಸಿ ಚಾರ್ಧನಾರೀಚತುರ್ದಶಂ
ಪಂಚಾದಶಂ ಕಿರಾತಂಸ್ಯಾತ್ಕಂಕಾಳೀ ಷೋಡಶಂ ಭವೇತ್ ೭

ಚಂಡೇಶಾನುಗ್ರಹಂ ಚೈವ ತಥಾಸಪ್ತದಶಂ ಭವೇತ್
ವಿಷಾಪಹರಣಂ ಚೈವ ಅಷ್ಟಾದಶಮಿತಿಸ್ಮೃತಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಕ್ರದಾನಸ್ವರೂಪಂ ತು ಏಕೋನವಿಂಶತಿಸ್ಮೃತಂ
ವಿಘ್ನಪ್ರಸಾದ ವಿಂಶತ್ಸ್ಯಾದುಮಾಸ್ಕಂದೈಕವಿಂಶತಿಃ ೯

ದ್ವಾವಿಂಶತ್ಯೇಕಪಾದಂ ಸ್ಯಾತ್ತ್ರಯೋವಿಂಶತ್ಸುಖಾವಹಂ
ದಕ್ಷಿಣಾಮೂರ್ತಿರೂಪಂ ತು ಚತುರ್ವಿಂಶದಿತಿ ಸ್ಮೃತಂ ೧೦

ಲಿಂಗೋದ್ಭವಸ್ವರೂಪಂ ತು ಪಂಚವಿಂಶತ್ಪ್ರಕೀರ್ತಿತಃ
ಏತೇಮಾಹೇಶರೂಪಸ್ಯಮೂರ್ತಿಭೇದಾಃಪ್ರಕೀರ್ತಿತಾಃ ೧೧

ಪ್ರಥಮಂ ಸೋಮಧಾರೀಚಯೆಂಬರ್ಥಕ್ಕೆ ಕಥೆ–
ಆ ಮಹೇಶ್ವರನ ಮಸ್ತಕದಲ್ಲಿ ಮೆಱೆವ ಪರ
ಮಾಮೃತದ ಚಂದ್ರನುತ್ಪತ್ತಿಯಾ ಚಂದ್ರನಾ
ಸ್ತೋಮಶಕ್ತಿಗಳೆ ನಕ್ಷತ್ರ ಮಾತೃಕೆಯರಾ ಚಂದ್ರಂಗೆ ಸಂತಸದೊಳು
ವ್ಯೋಮಕೇಶನ ಶಿರಸ್ಥಾನವೇ ಜನ್ಮವಾ
ಸಾಮರ್ಥ್ಯದಾ ಸ್ಥಿತಿಗೆ ಸಂಹಾರ ಮೂಱಕ್ಕೆ
ಸೀಮೆಯಾ ಚಂದ್ರಾಮೃತತ್ವದಿಂ ಬ್ರಹ್ಮಾದಿ ನಿರ್ಜರರ ಜೀವಸ್ಥಿತಿ ೧೧

ಆ ಮಹಾ ಚಿಚ್ಚಂದ್ರ ಚಿತ್ಕಲಾಶಕ್ತಿಯರ
ನಾಮವೆಂತೆನಲಾಗಿ ಪದ್ಮಿನೀ ಚಂದ್ರಿಣೀ
ಕಾಮಿನೀಕ್ಷ್ಮಿಸೀ ಪುಷ್ಪಿಣೀ ಪ್ರಹಸಿನಿಯಹರಿಣೀತತ್ಕುಮುದಿನೀ
ಪ್ರೇಮದಭ್ಯಾಸಿನೀ ವ್ಯಾಪಿನೀ ವೇದಿನೀ
ಯಾಮಪ್ರಮೋದಿ ಮೋಹಿನಿ ವಿಕಾಸಿನಿ ವರ್ಧಿ
ನೀ ಮಹಿತಪೂರ್ಣನೀ ಪದಿನಾಱು ಶಿವ ಮನೋಭವನಾದ ನೊರ್ವಚಂದ್ರಂ ೧೨

ಅದುಕಾರಣಂ ಮಹೇಶ್ವರನಿಗಾ ಚಂದ್ರಧಾ
ರದ ಲೀಲೆಯೇ ಸ್ವಭಾವಂ ಪ್ರಥಮಲೀಲೆಯುಂ
ತದನೊರೆವೆನೆಂತೆಂದೊಡಾ ಮಹೇಶನ ಬಲದ ಭುಜದೊಳೊಗೆದಂ ಬ್ರಹ್ಮನು
ವಿದಿತವೆನಿಸುವ ವಾಮಬಾಹುವಿನೊಳಾ ವಿಷ್ಣು
ಉದಿಸಿದಂರುದ್ರರೂಪಿಂದೆ ತಾನೇತನ್ನ
ವದನದೊಳು ತೋಱಿ ರಾಜಿಸುತಿರ್ದನಯ್ಯ ಕೇಳೆಂದನಾ ಹಲಗೆಯಾರ್ಯಂ ೧೩

ಆ ಮಹೇಶ್ವರನಜನ ಕರೆದು ಸೃಷ್ಟಿಯನೆಸಗು
ಸಾಮರ್ಥ್ಯಮಂ ಕೊಟ್ಟೆನೆನೆ ಮಾನಸಾತ್ಮಜರ
ನೇಮಿಸಿದನ್ಯೈ ಕೇಳ್ವುದಾ ಸನಕನಾ ಸನಂದನನಾ ಸನತ್ಕುಮಾರಂ
ಪ್ರೇಮದ ಸನತ್ಸುಜಾತಂ ಸನಾತನರೆಂಬ
ನಾಮದ್ವೈವರನವರು ಲೋಕಮಂ ಸೃಷ್ಟಿಸಲ
ಹೋ ಮೂಢ ಗರ್ವವಹುದಾಪೊಲ್ಲೆನೆಂದೈದಿದರು ಕೂಡೆ ಜನಲೋಕಕಂ ೧೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಜನಲೋಕಕ್ಕೆ ಹೋದಬಳಿಕಂ ಜಲಜ
ಭವನ್ನೈದೆ ಚಿಂತಿಸಿದನಾ ಕಥೆಯ ಲೈಂಗ್ಯದೊಳು
ವಿವರಿಸಿದನೊಲ್ದು ನಂದೀಶಂ ಸನತ್ಕುಮಾರಂಗದೆಂತೆನಲು ಕೇಳು
ಕುವರ ಸೃಷ್ಟಿಸಲಱಿಯದಾ ಬ್ರಹ್ಮನೀಶನಂ
ವಿವಿಧಕಾಲಂ ತಪದೊಳಿರ್ದೊಲಿಸೆ ಬಂದಭೀ
ಷ್ಟವದಾವುದೈ ನಿನಗೆ ಪೇಳೆನಲು ಶಂಕರನ ಪದಕೆಱಗಿ ಬಿನ್ನವಿಸಿದಂ ೧೫

ಜೀಯ ಸನಕಾದಿಗಳ ನಿರ್ಮಿಸಿದೆನವರು ನಿ
ರ್ಮಾಯರಾದರು ಸೃಷ್ಟಿಗೆಲೆ ದೇವ ನೀನೆನ್ನ
ಕಾಯದೊಳು ಕೃಪೆಯಿಂ ಪ್ರಸನ್ನವಾಗಲುಬೇಹುದೆನಲಲವೊ ನಿನ್ನಳುವಿನ
ವಾಯುವೆನಲಾಗಲೇನೆನೆಯೆಂದು ಮೂರುತಿಯು
ಪಾಯವುಂ ಪೇಳೆ ಜಾನಿಸಲಜನ ಘಣೆಯಲ್ಲಿ
ವೋಯಾರದಿಂದ ನಿಜರೂಪುದೋಱಲ್ಬಗೆದನಾನತರಭೀಷ್ಟದಾತಂ ೧೬

ಸ್ಮರಿಸುವಜನಾಧಾರಮುಖ್ಯ ಚಕ್ರಂಗಳುರು
ತರ ಲಸದ್ಭ್ರೂಮಧ್ಯರಕ್ತವರ್ಣದ್ವಿದಳ
ಸರಸಿಜದ ಮಧ್ಯದೊಳಗಿರ್ದು ಬುಭುರ್ಗಿಲು ಥಿಣಿಥಿಟಿಲೆಂಬರಾವದೊಳಗೆ
ತರುಣ ತರಣಿಯು ಕೋಟಿತೇಜಸ್ಸು ಪೂರ್ವಭೂ
ಧರದೊಡನೆ ತೋಱುವಂತಾ ಮೂರ್ತಿಯಧಿಕ ಭೀ
ಕರವಾಗಿ ತೋಱಿದನುಮಾಮಹೇಶ್ವರನಜಾತಂ ನಿಜಸ್ವಾತಂತ್ರನು ೧೭

ಏನ ಏವ ಹಿ ರೂಪಯೆಂಬರ್ಥದಿಂದಾರು
ಜಾನಿಸಿದರಾ ತೆಱದ ರೂಪುದೋಱುವನಾ ಭ
ವಾನಿಯಧಿಪತಿಯೆಂಬ ಮಾಳ್ಕೆಯಿಂ ಬೊಮ್ಮ ನೆನೆದಂತುಗ್ರರುದ್ರನಾದಂ
ತಾನರುಣವರ್ಣನುಮ ಕಾಳಿಯಾಗಿರ್ದೊಡ
ಜ್ಞಾನಿ ಬೊಮ್ಮನ ಭಾಳವೊಡೆದಂಗವೆರಡು ಸೀ
ಳೀ ನೆಲದೊಳೆಯ್ದೆ ತೊಪ್ಪನೆಬಿದ್ದುದಸದಳವ ನೆನೆವುದನುಚಿತವೆಂದೆನೆ ೧೮

ಆದರದೊಳಾ ಕಾಳಿಯೊಡನೆ ರುದ್ರಂ ಮಿಗೆ ವಿ
ನೋದದಿಂ ಕ್ರೀಡಿಸುತನಂತಕಾಲಂಗಳಾ
ಹ್ಲಾದದಿಂದಿರೆ ಜನಿಸಿದರು ನೀಲಲೋಹಿತಂ ಮೊದಲಾದನಂತ ರುದ್ರ
ರಾದಿಯಾದವರು ಬಲವಿ ಕರಿಣಿ ಬಲಪ್ರಮಥಿ
ನೀ ದಿವ್ಯಶಕ್ತಿಯರ ಸೃಜಿಸಿ ಕಾಳಿಯನಾ ಪ್ರ
ಪ್ರಮೋದದಿಂ ತೊಡೆಯನೇಱಿಸಿಕೊಂಡು ಬೊಮ್ಮನಂಗದ ಹೋಳ್ಗಳೆರಡನೆತ್ತಿ ೧೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂದಿಕ್ಕಿಹರಣವುಂ ಕೊಡಲಜಂ ತಾನೆದ್ದು
ವಂದಿಸುತ ಜೀಯ ನಿಮ್ಮುಭಯ ಮೂರ್ತಿಗಳಿರವ
ಹಂದೆಯಾಂ ನೋಡಬಲ್ಲೆನೆಯರ್ಧನಾರೀಶನಾಗಿ ಸೊಗಸಂ ಬೀಱುತ
ಒಂದಂಗವಾಗಬೇಕೆನಲಂತು ಮೆಱೆದಿಲವೊ
ಕಂದ ನೀನೀ ರುದ್ರಗಣದೊಡನೆ ಸೃಜಿಸುಹೋ
ಗೆಂದೊಡಂಜುವೆನಯ್ಯ ನಿಮ್ಮ ಸೇವೆಯೊಳಿವದಿರಿರಲೆಂದನಾ ಬ್ರಹ್ಮನು ೨೦

ಎಂದರ್ಧನಾರೀಶ್ವರನ ಮೂರ್ತಿಯಂ ಮೋಹ
ದಿಂದ ಕೀರ್ತಿಸುತಿರ್ದನಾ ಬ್ರಹ್ಮನೆಂತೆನಲು
ಕಂದ ಕೇಳಯ್ಯ ಕಾರ್ಮೇಘದಂದದ ಕರ್ಪಿನೆಸೆವ ಕುಂತಳವನುಳ್ಳ
ಇಂದುಮುಖಿದೇವಿಯರಿಗಂ ಮಿಂಚಿನಾ ಪ್ರಭೆಯೊ
ಳೊಂದಿದ ಜಟಾಮುಕುಟದೀಶ್ವರಂಗಂ ಕೂರ್ತು
ವಂದಿಸುವೆ ನಾನೆಂದು ಶಿವೆಯ ರೂಪಂ ಶಿವನ ಮೂರ್ತಿಯುಂ ಪೊಗಳುತಿರ್ದಂ ೨೧

ಸಮವಾದ ಕಣ್ಣೆರಡನುಳ್ಳವಮ್ಮಗಂ ಕೂರ್ತು
ಸುಮನದಿಂ ಸಮವಲ್ಲದಿಹ ಮೂಱು ಕಣ್ಣನು
ಳ್ಳ ಮಹೇಶಗತಿನೃತ್ಯವಾಡಿ ಸರ್ವವನುದಯಮಂ ಮಾಡುತಿಹ ತಾಯಿಗಂ
ಅಮಿತ ತಾಂಡವದಿಂದ ಲೋಕಮಂ ಸಂಹಾರ
ಮುಮನೆಯ್ದಿಸುವ ದೇವಗಂ ಕಾಮನಂ ಸಲಹಿ
ದಮಲಗಿರಿಜಾತೆಗಂ ಕಾಮನಂಸುಟ್ಟ ಸರ್ವೇಶ್ವರಂಗಾನೆಱಗುವೆಂ ೨೨

ತವೆ ಪಾದವೆಂಬ ತಾವರೆಗೆ ಹಂಸಕನಾಮ
ದ ವಿಶೇಷ ಪಾದಕಟಕದ ದೇವಿಗಂ ಚರಣ
ಭುವನಜಕೆ ಸುರಶಿರೋಮಣಿ ನೂಪುರಾಭರಣದೀಶಗಂ ನಲವಿನಿಂದ
ಶಿವನೆಡೆಗೆ ಮೋಹಿಯಹ ದೇವಿಯರಿಗಂ ಬಳಿಕ
ಶಿವೆಯೆಡೆಗೆ ಮೋಹಿಯಾದಾ ಶಂಭುಗಂ ಮಸ್ತ
ಕವನೆಯ್ದೆ ಸಾರ್ಚಿ ವಂದಿಸುವೆನೆಂದಾ ಬ್ರಹ್ಮನೆಯ್ದೆ ಕೀರ್ತಿಸುತಿರ್ದನು ೨೩

ನವರತ್ನಕುಂಡಲದ ದೇವಿಗಂ ಪೆಡೆವಣಿಯ
ಕಿವಿವಾವುಗೊಂಚಲದ ದೇವಗಂ ಸತ್ಕಲೆಯ
ನಿವಹದಮ್ಮಂಗೆ ವಿಕಲಾರೂಪದೀಶಂಗೆಯುರೆವಿರಿದ ಕರ್ನೆಯ್ದಿಲ
ಪ್ರವರನೇತ್ರದ ದೇವಿಗಲರ್ದ ತಾವರೆಗಳಂ
ದವನಾಂತ ಕಣ್ಣ ದೇವಂಗಿಳೆಗೆ ಮಾತೆಯೆನಿ
ಸುವ ದೇವಿಗಾ ಲೋಕವೆಲ್ಲಕ್ಕೆ ತಂದೆಯೆನಿಸುವ ದೇವಗಂ ನಮಿಸುವೆ ೨೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂದಾರಮಾಲೆ ಕೊರಳೊಳಗುಳ್ಳ ಶಿವೆಗೆ ಸುರ
ವೃಂದದ ಕಪಾಲಂಗಳಾ ಕೊರಳೊಳುಳ್ಳ ಶಿವ
ಗಂ ದಿವ್ಯಪಟ್ಟವಸ್ತ್ರವನುಟ್ಟ ದೇವಿಗೆ ದಿಗಂಬರದ ಸರ್ವೇಶಗಂ
ಚಂದನಾಗರು ಕಸ್ತುರಿಯ ಪೂಸಿದಮ್ಮಗಂ
ಬೆಂದ ಮಸಣದ ಬೂದಿಯಂ ತಳೆದ ಶಿವಗೆ ಗಿರಿ
ವೃಂದದೊಡೆತನವುಳ್ಳ ಶಿವೆಗೆ ನಿಖಿಳಕ್ಕೊಡೆಯನಪ್ಪ ಶಿವಗಾಂ ನಮಿಸುವೆ ೨೫

ಎಂದರ್ಧನಾರೀಶ್ವರಸ್ತೋತ್ರಮಂ ಬ್ರಹ್ಮ
ನಂದದಿಂ ಪೇಳ್ದನಿದನಾವವಂ ಪಠಿಸುವಂ
ನಂದನರು ವಿವಿಧಾಯುರಾರೋಗ್ಯಸಂಪದಗಳಿಂ ಬಾಳ್ದು ಪರಲೋಕದ
ಇಂದುಧರಕರುಣಮಂ ಪಡೆದು ಬದುಕುವನೆಂದು
ಚಂದದಿಂ ನೆನೆದು ಕೀರ್ತಿಸಿ ದೇವ ನೀವಿನಿಬ
ರಂ ದಯದೊಳೋಲಯಿಸಿಕೊಂಬುದೆಂದಾಗ ಬಿನ್ನವಿಸಲಂತಾ ವಿಧಾತ್ರಂ ೨೬

||ಸಾಕ್ಷಿ|| ಅರ್ಧನಾರೀಶಸ್ತೋತ್ರ
ಬ್ರಹ್ಮೋವಾಚ-

ಅಂಭೋಧರಶ್ಯಾಮಲ ಕುಂತಳಾಯೈ ತಟಿತ್ಪ್ರಭಾಲಂಬಿಜಟಾಧರಾಯ
ಸಮೇಕ್ಷಣಾಯೈ ವಿಷಮೇಕ್ಷಣಾಯ ನಮಃ ಶಿವಾಯೈ ಚ ನಮಃ ಶಿವಾಯ ೧೨

ಪ್ರಪಂಚ ಸೃಷ್ಟ್ಯುನ್ಮುಖಲಾಸ್ಯದಾಯೈ ಸಮಸ್ತ ಸಂಹಾರಕತಾಂಡವಾಯ
ಕೃತಸ್ಮರಾಯೈ ವಿಕೃತಸ್ಮರಾಯ ನಮಃ ಶಿವಾಯೈ ಚ ನಮಃ ಶಿವಾಯ ೧೩

ಪಾದಾರವಿಂದಾಂಕಿತ ಹಂಸಕಾಯೈ ಪಾದಾಬ್ಜರಾಜನ್ಮಣಿನೂಪುರಾಯ
ಶಿವಪ್ರಿಯಾಯೈ ಚ ಶಿವಾಪ್ರಿಯಾಯ ನಮಃ ಶಿವಾಯೈ ಚ
ನಮಃ ಶಿವಾಯ ೧೪

ವಿಚಿತ್ರರತ್ನೋಜ್ವಲಕುಂಡಲಾಯೈ ಸ್ಫುರನ್ಮಹಾ ಪನ್ನಗ ಕುಂಡಲಾಯ
ಕಲಾಮಯಾಯೈ ವಿಕಲಾಮಯಾಯ ನಮಃ ಶಿವಾಯೈ ಚ
ನಮಃ ಶಿವಾಯ ೧೫

ವಿನಿದ್ರಿತೇಂದೀವರಲೋಚನಾಯೈ ವಿಕಾಸರಾಜೀವ ವಿಲೋಚನಾಯ
ಜಗಜ್ಜನನ್ಯೈ ಜಗದೇಕ ಪಿತ್ರೇ ನಮಃ ಶಿವಾಯೈ ಚ ನಮಃ ಶಿವಾಯ ೧೬

ಮಂದಾರಮಾಲಾಂಕಿತ ತಾಲಕಾಯೈ ಕಪಾಲ ಮಾಲಾಂಕಿತ ಶೇಖರಾಯ
ಕ್ಷೌಮಾಂಬರಾಯೈ ಚ ದಿಗಂಬರಾಯ ನಮಃ ಶಿವಾಯೈ ಚ
ನಮಃ ಶಿವಾಯ ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಶಾಂಕಗಂಧಾಂಘ್ರಿಸರೋರುಹಾಯ್ಯೈ ಛಂದಶ್ಶಿರೋಗಂಧಿಪದಾಂಬುಜಾಯ
ಘನಪ್ರಿಯಾಯ್ಯೈ ಕನಕಪ್ರಿಯಾಯ ನಮಃ ಶಿವಾಯ್ಯೈ ಚ ನಮಃ ಶಿವಾಯ ೧೮

ಕಸ್ತೂರಿಕಾ ಚಂದನ ಲೇಪಿತಾಯ್ಯೈ ಸ್ಮಶಾನ ಭಸ್ಮಾಂಕಿತ ಲೇಪನಾಯ
ಗಿರೀಶ್ವರಾಯ್ಯೈ ನಿಖಿಲೇಶ್ವರಾಯ ನಮಃ ಶಿವಾಯ್ಯೈ ಚ ನಮಃ ಶಿವಾಯ ೧೯

ಅರ್ಧನಾರೀಶ್ವರಸ್ತೋತ್ರಂ ಬ್ರಹ್ಮಣಾ ಸಮುದೀರಿತಂ
ಯಃಪಠೇತ್ ಪ್ರಿಯತೇ ಭಕ್ತ್ಯಾ ಸರ್ವಪಾಪವಿನಾಶನಂ
ತಸ್ಯ ಸಂತತಿ ವೃದ್ಧಿಶ್ಚ ಭವತ್ಯೇವ ನ ಸಂಶಯಃ ೨೦

ಮಲಹರಂ ಕೇಳ್ದು ಸತ್ಪ್ರಮಥನಾಯಕರಿಗಾ
ಬಲವಿಕರಿಣೀ ಬಲಪ್ರಮಥಿನಿಯುಂ ಮುಂತಾದ
ಲಲನೆಯರ ಸಮನಿಸುತ ದಂಪತಿಗಳಂ ಮಾಡಿ ತನ್ನನೋಲೈಸಲೆಂದು
ಸಲಹಿ ಬೊಮ್ಮನ ಕರೆದು ಸತಿಪುರುಷರಂ ಸೃಜಿಪು
ದೆಲವೊ ನೀನೀ ಪ್ರಕಾರದೊಳೆನಲು ಕೇಳ್ದಾಗ
ತಲೆಯೊಳಾಂತಾ ಶಿವನಿರೂಪಮಂ ಸೃಷ್ಟಿಸಲು ತೊಡಗಿದನದೇನೆಂಬೆನು ೨೭

ಮರಳಿ ಬೊಮ್ಮನು ಸರಸ್ವತಿಯರ್ಗಳೊಡಗೂಡಿ
ವಿರಚಿಸಿದನಾ ನವಬ್ರಹ್ಮರಂ ತಾನವಂ
ದಿರ ನಾಮವಾ ಮರೀಚಂ ಕಸ್ಯಪಂ ಭೃಗು ಪುಲಸ್ತ್ಯನಂಗಿರಸನತ್ರಿ
ಪರಿಕಿಸಲ್ಕ್ರತು ಪುಲಹ ದಕ್ಷರೊಂಬತ್ತರಂತ್ತುಮಂ ಯ್ವರಂ
ಕರೆದಜಂ ಪೇಳೆ ಸೃಷ್ಟಿಸತೊಡಗಿದರು ಸುರಾ
ಸುರ ಮನುಮುನಿವ್ರಜ ಧರಾ ಸಮುದ್ರಾದಿಗಳನಾ ನಿಮಿಷಮಾತ್ರದಲ್ಲಿ ೨೮

ಅವರೊಳಗೆ ದಕ್ಷನಾ ಸ್ತ್ರೀಸೃಷ್ಟಿಯುಂ ಮಾಡಿ
ವಿವಿಧ ದೇವರ್ಕಳ್ಗೆ ಕೊಟ್ಟು ತಪವಿರ್ದಲ್ಲಿ
ಶಿವನ ಕೃಪೆಯುಂ ಪಡೆದು ದಾಕ್ಷಾಯಣೀ ಸತೀದೇವಿಯುಂ ಶಿವಗರ್ಪಿಸಿ
ಪ್ರವರದೇವಸ್ತ್ರೀಯರಶ್ವಿನಿಯರಾದಿಯಾ
ದವರುಮಿಪ್ಪತ್ತೇಳು ಮಿಗಿಲಾಗೆ ಚಂದ್ರಂಗೆ
ಸವಿನಯದೊಳಿತ್ತು ಪಕ್ಷವನುಳಿದು ನೀನಾಳ್ವುದೆಂದನಂತಾ ದಕ್ಷನು ೨೯

ಅವರ ಪೆಸರಶ್ವಿನೀ ಭರಣಿ ಕೃತ್ತಿಕೆ ರೋಹಿ
ಣಿ ವಿಶೇಷ ಮೃಗಶಿರಾದ್ರಾರ್ ಪುನರ್ವಸು ಪುಷ್ಯ
ಯುವತಿಯಾಶ್ಲೇಷೆ ಮಘೆ ಪುಬ್ಬೆಯುತ್ತರೆ ಹಸ್ತ ಚಿತ್ತೆಯಾ ಸ್ವಾತಿ ಮುಂದೆ
ಸುವಿಶಾಖೆಯನುರಾಧೆ ಜ್ಯೇಷ್ಠೆ ಮೂಲಂ ಕೇಳು
ಕುವರ ಪೂರ್ವಾಷಾಢ ಉತ್ತರಾಷಾಢವಾ
ಶ್ರವಣಂ ಧನಿಷ್ಠೆ ಶತವೈಶಾಖೆ ಪೂರ್ವಉತ್ತರ ಭಾದ್ರಪದೆ ರೇವತಿ ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೋಹಿಣಿಯುನೊರ್ವಳನೆ ಚಂದ್ರಮಂ ಮಿಗಿಲಾದ
ಮೋಹದಿಂದಾಳುತುಳಿದವರ ಬಿಟ್ಟಿರೆ ಕೇಳು
ತಾಹ ಶಾಪಂಗೊಟ್ಟನಾ ದಕ್ಷನೆಲೆ ಚಂದ್ರ ನಿನ್ನ ಕಲೆಯೆಲ್ಲ ಸವೆದು
ಹೋಹುದಕೆ ಬಗೆದೆಯೆನೆ ಸವೆವೃತಿರ್ದವುಕಣಾ
ಬೇಹ ಸುತ ಕೇಳವರ ಪೆಸರಮೃತಮಾನಸಿ
ಗ್ರಾಹಕದ ತುಷ್ಟಿ ಪುಷ್ಟಿ ಪ್ರೀತಿ ರೇವತಿ ಹ್ರೀ ಶ್ರೀಯೊಳಾ ಕಾಂತಿಯಾ ೩೧

ಬಳಿಕಾಸದಾ ಜ್ಯೋತ್ಸ್ನೆ ಹೈಮವತಿಯಾಚ್ಛಾಯೆ
ಗಳು ಪೂರಣೀ ವಾಮೆಯೆಂಬ ಹದಿನೈದು ಕಲೆ
ಗಳು ಸವೆಯಲುಳಿದಮಾಕಲೆಯೊಂದಱಲ್ಲಿ ಶಿವನಂ ಭಜಿಸಿದಂ ಚಂದ್ರನು
ಅಳಿಕಾಕ್ಷನವನಿಗೆಂದಂ ಚಂದ್ರ ಕೇಳ್ವುದ
ಗ್ಗಳದ ಶಾಪದ ಶಕ್ತಿಯಂ ಕೊಟ್ಟೆವೈ ದೇವ
ಕುಳಕೆಮ್ಮ ವರದಿಂದ ಪೆಚ್ಚು ದಕ್ಷನ ಶಾಪದಿಂ ಬಳಿಕ ಸವೆಯೆನುತ್ತ ೩೨

ಮುದದಿಂದಮಾ ಕಲೆಯು ಧರಿಸಿದಂ ಶಿವನು ಕೇ
ಳದಱಿಂದಮಾವಾಸೆಯಾದುದಾ ದಿವಸವೈ
ಸದಮಲದ ಶಿವನ ವರದಿಂ ಶುದ್ಧ ಪಾಡ್ಯವಾದಿಯ ಪೂರ್ಣಿಮಾಂತವಾಗಿ
ಒದಗಿ ಕಲೆಗಳು ಕೂಡಿಕೊಂಬವಾ ಬಹುಳಪಾ
ಡ್ಯದ ದಿನಂ ಮೊದಲಾಗಿಯುಮವಾಸೆ ಪರಿಯಂತ
ಹದಿನೈದು ಕಲೆ ಸವೆವವಿದು ಚಂದ್ರಧರಲೀಲೆಯೈ ಪ್ರಥಮಸೋಮಧಾರಂ ೩೩

ದ್ವಿತೀಯಮುಮಯಾಸಹಂ ಎಂಬುದಕ್ಕೆ ಕಥೆ

ಉಮಾಮಹೇಶ್ವರ ಲೀಲೆ

ಪ್ರೇಮದಿಂದೆರಡನೆಯ ಲೀಲೆಯಂ ಕೇಳಯ್ಯ
ಆ ಮಹೇಶ್ವರನೆ ಜಗದುತ್ಪತ್ತಿಕಾರಣಂ
ಸೋಮನಾದಂ ಲೋಕದುದಯಕಾರಣದಿಂದುಮಾಸಮೇತನುಮಾದನು
ಈ ಮಹೇಶ್ವರನ ಸೋಮಾವತಾರಂ ಸರ್ವ
ರಾಮಣೀಯಕದ ಜನಕಾವತಾರಂ ಕೇಳ್ವು
ದೈ ಮಗನೆ ಸೋಮಾವತಾರವೇ ತಾಂ ಸೃಷ್ಟಿಮೂರ್ತಿಯಾಯ್ತೆಂತೆಂದೊಡೆ ೩೪

ಪ್ರೇಮದೊಳಕಾರಮುಮುಕಾರಂ ಮಕಾರವಿಂ
ತೀ ಮೂಱು ವರ್ಣಮಂ ಕೂಡೆ ಓಂಕಾರಮಂ
ತಾ ಮಹಾಪ್ರಣವದಾ ವ್ಯತ್ಯಸ್ತವೈ ಮೊದಲಕಾರವೇ ಕಡೆಗೆ ಪೋಗಿ
ತಾ ಮಾತ್ರೆಯೊಂದಕಾರಂಗೂಡಿಯಾ ಕಡೆಯ
ಲೈ ಮೊದಲುಕಾರ ನಡುವಾ ಮಕಾರಂ ಕಡೆಯೊ
ಳಾ ಮಾಳ್ಕೆಯಾಕಾರವೆರಡಕ್ಕರದೊಳುಮಾಶಕ್ತಿಯಾಯ್ತೈ ಕುಮಾರ ೩೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದುಕಾರಣಂ ಪ್ರಣವರೂಪಾದುಮಾಶಕ್ತಿ
ಯೊದವಿಯಾ ಬಿಂದುರೂಪಾದಾ ಕ್ರಿಯಾಶಕ್ತಿ
ಯ ದಶಾಂಶದಿಂದುಮಾಶಕ್ತಿಯಾದಳು ಕಣಾ ಕೇಳು ಶಿವಶಕ್ತಿಯೆರಡು
ಪುದಿದು ಓಂಕಾರವೊಂದೇಯಾಗಿ ರಾಜಿಪಂ
ದದೊಳಾ ಮಹೇಶ್ವರನುಮಾಶಕ್ತಿಗೂಡಿಯಾ
ದುದು ಸೋಮನಾಮುಮಂತದು ಸಕಲ ಸೃಷ್ಟಿಕಾರಣವದೆಂತೆನಲೊರೆವೆನು ೩೬

ಆ ಮಹೇಶನ ಕೋಟಿಯುಂಶದೊಳು ಪುಟ್ಟಿದರ
ಲಾ ಮಗನೆ ಕೇಳ್ ಬ್ರಹ್ಮವಿಷ್ಣುಗಳ ಸೃಷ್ಟಿಯಂ
ತಾ ಮಹಾ ಸ್ಥಿತಿ ಲಯಕ್ಕಧಿಕಾರಮೂರ್ತಿಯಾದಾ ಮಹೇಶ್ವರತತ್ವವು
ಪ್ರೇಮದೊಳುಮಾಶಕ್ತಿಯೊಳು ನಲಿದು ಕೂಡೆಯಾ
ಸೋಮಸೂರ್ಯಾಗ್ನಿ ತ್ರಿಕೋಣಸ್ಥನೇತ್ರವಾ
ದಾ ಮಹಿಮನೆಸೆದಿರ್ಪನಾ ಮಹೇಶನ ಸರ್ವದೇಹಸಂಭವವೆಂತೆನೆ ೩೭

ಅವನ ನಾಸಿಕದಲ್ಲಿ ಕೂರ್ತು ಸಂಭವಿಸಿದಂ
ಪವನಂ ಗಣೇಶ್ವರಂ ಗಳದಲ್ಲಿ ಷಣ್ಮುಖಂ
ಸವಿಶೇಷಹೃದಯುದೊಳು ನಾಭಿಯೊಳು ಸಕಲ ದೇವತೆಗಳು ಮಹೇಶನೆಸೆವಾ
ಅವಯುವದ ಬೆಮರೊಳ್ಮೈವತ್ತುಕೋಟಿಗಳುಮೆನಿ
ಸುವ ದೇವತೆಗಳುದಿಸಿದರು ಋಷಿಗಳನಿತು ಕ
ಣ್ಣೆವೆಯಿಕ್ಕುವಲ್ಲಿ ಜನಿಸಿದರು ಮತ್ತಾ ಯಜುರ್ವೇದದೊಳಗೆಂತೆಂದೊಡೆ ೩೮

ಉಮೆಯೊಡನೆ ಕೂಡಿದಾ ಸೋಮನೇ ವಾಯುಗು
ತ್ತಮ ಬುದ್ಧಿಯಾಕಾಶ ಭೂಮಿಯನಲಂ ಸೂರ್ಯ
ನಮರವಲ್ಲಭ ವಿಷ್ಣುಮುಖ್ಯರ್ಗೆ ತಂದೆಯಾದಿತ್ಯಪೌರಾಣದಲ್ಲಿ
ಕ್ರಮವಿಂತು ಜನನ ಶಿವಸಂಕಲ್ಪದುಪನಿಷ
ತ್ತುಮನಱಿಯೆಯಾ ಜಲದ ಮಧ್ಯರೇತಸ್ಸಿನಿಂ
ದಮೆಯಾದಲಸದಂಡದಲ್ಲಿ ಹರಿಯಜಮುಖ್ಯ ದೇವತೆಗಳುದಯುವಂದು ೩೯

ಕಲ್ಪದೊಳುಮಾಪತಿಯು ಮೆಯ್ಯ ಬೆಮರಿಂದಲ್ಲಿ
ಯಲ್ಪವಲ್ಲದ ಜಗತ್ಸೃಷ್ಟಿ ಸ್ಥಿತಿದ್ವಯುದ
ಮೇಲ್ಪರಿಯ ಕಜ್ಜಕ್ಕೆ ಕಾರಣದ ಕರ್ತರಾದಾ ಬ್ರಹ್ಮ ನಾರಾಯಣ
ಸಾಲ್ಪಸರವಾದ ದೇವರ ಜನನವೆಂದು ಪೇ
ಳಲ್ಪಟ್ಟುದೈ ಸ್ಕಾಂದದೊಳು ಮುಂದೆಯುವ ನೀನೆ
ಕೇಳ್ಪವಣನಱಿವಾತನ್ಯೆ ಸೂರ್ಯಪೌರಾಣದಲ್ಲಿಯರ್ಥವದೆಂತೆನೆ ೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಉಮಾಸಹಿತವಾದಾ ಮಹೇಶ್ವರನಿಂದ
ಲೀವೇಳ್ವೆನಾ ಬ್ರಹ್ಮ ವಿಷ್ಣು ಸೂರ್ಯೇಂದ್ರನಾ
ಪಾವಕಂ ವರುಣ ಯಮ ಮೊದಲಾದ ದೇವತೆಗಳಸುರರಾ ಸ್ವರ್ಗಸ್ಥರು
ತಾವೆಯ್ದೆ ಪುಟ್ಟಿದರು ಕಾಳಿಕಾಕಾಂಡದೊಳ
ಗಾ ವಿಷ್ಣುವಜ ಸುರಪರಖಿಳರಸ್ಥಿರರವರು
ದೇವನೊಬ್ಬನೆ ಮಹೇಶ್ವರನಾ ದ್ವಿತೀಯಮುಮಯಾಸಹಿತವೆನಲು ಮತ್ತೆ ೪೧

||ಸಾಕ್ಷಿ|| ಗ್ರಂಥಾಂತರೇ–
ಸೃಷ್ಟಿಕಾರಣ ಮಾಹೇಶೋ ಭವೇತ್ ಸೋಮಾವತಾರತಃ
ಉಮಾಶಕ್ತಿಯುತಸ್ತಸ್ಮಾತ್ಸೋಮನಾಮ ಪ್ರಕೀರ್ತಿತಂ ೨೧

ಆದಿತ್ಯಪೌರಾಣೇ–
ಉಮಯಾಸಹಿತಸ್ಸೋಮೋ ಸೋಮ ಇತ್ಯುಚ್ಯತೇ ಬುಧೈಃ
ಸ ಏವ ಕಾರಣಂ ನಾನ್ಯೋ ವಿಷ್ಣೋರಪಿಚ ವೈಶ್ರುತಂ ೨೨

ಉತ್ತರವಾತುಳೇ–
ಯಸ್ಯಾ ಮಾತ್ರತ್ರಯಂ ನಾಮ ವ್ಯತ್ಯಸ್ತಂ ಪ್ರಣವಾತ್ಮಕಂ
ಬಭೌ ಹ್ರಸ್ವದ್ವಯಂ ದೀರ್ಘಂ ತ್ರಿಮಾತ್ರತ್ವಾದುಮೈವಸಾ ೨೩
ಓಂಕಾರೇಷು ಸ್ಥಿತೇಚ್ಛೈವ ಶಿವಶಕ್ತಿರ್ಯಥಾ ತಥಾ
ಉಮಾಮಹೇಶ್ವರಶ್ಚೈವ ಸೋಮನಾಮ್ನಿ ಚ ಸಂಸ್ಥಿತಃ ೨೪

ಪೂರ್ವವಾತುಳೇ–
ತನ್ಮಹೇಶ್ವರಕೋಟ್ಯಂಶಾದ್ಬ್ರಹ್ಮವಿಷ್ಣುಃ ಸಮುದ್ಭವೌ
ತ್ರಿಕೋಣಮುಮಯಾ ಸಾರ್ಧಂ ಸೋಮಸೂರ್ಯಾಗ್ನಿಲೋಚನಂ ೨೫

ಯಜುರ್ವೇದೇ–
ಸೋಮಃಪವತೇ ಜನಿತಾ ಮತೀನಾಂ ಜನಿತಾ ದಿವೋ
ಜನಿತಾ ಪೃಥಿವ್ಯಾ ಜನಿತಾಗ್ನೇರ್ಜನಿತಾಸೂರ್ಯಸ್ಯ ಜನಿತೇಂದ್ರಸ್ಯ
ಜನಿತಾಥವಿಷ್ಣೋಃ ೨೬

ತಥಾದಿತ್ಯಪೌರಾಣೇ–
ಮತೀನಾಂ ಚ ದಿವಃ ಪೃಥ್ವ್ಯಾ ಅಗ್ನೇಸ್ಸೂರ್ಯಸ್ಯ ವಜ್ರಿಣಃ
ಸಾಕ್ಷಾದಪಿ ಚ ವಿಷ್ಣೋರ್ವೈಸೋಮೋಜನಯಿತೇಶ್ವರಃ ೨೭

ಶಿವಸಂಕಲ್ಪೋಪನಿಷದಿ–
ಅಂಡಂ ಹಿರಣ್ಮಯಂ ಮಧ್ಯೇ ಸಮುದ್ರಸ್ಯರುದ್ರವೀರ್ಯಪ್ರಥಮಂಬಭೂವ
ಅಂಡಾದ್ವಿಷ್ಣುಬ್ರಹ್ಮಾಜಾತವೇದಾಶ್ಚತನ್ಮೇಮನಶ್ಶಿವಸಂಕಲ್ಪಮಸ್ತು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಕಾಂದೇ–
ಮೃದಂಗಸ್ವೇದಸಂಭೂತೌ ಬ್ರಹ್ಮನಾರಾಯಣಾ ವಿಮೌ
ಸೂರ್ಯಪೌರಾಣೇ–
ಬ್ರಹ್ಮವಿಷ್ಣ್ವರ್ಕಶಕ್ರಾಗ್ನಿ ಜಲಂಧರ ಪುರೋಗಮಾಃ
ಸುರಾಸುರಾಸ್ಸಂಪ್ರಸೂತಾಸ್ತತಸ್ಸರ್ವೇ ದಿವೌಕಸಃ ೨೯

ಇತ್ಯಾದಿಕಾಳಿಕಾಖಂಡೇ–
ವಿಷ್ಣು ಸಂಜ್ಞಾ ಹ್ಯಸಂಖ್ಯಾತಾಹ್ಯಸಂಖ್ಯಾತಾಃ ಪಿತಾಮಹಾಃ
ಅಸಂಖ್ಯಾತಾಸ್ಸುರೇಂದ್ರಾದ್ಯಾ ನಿತ್ಯ ಏಕೋ ಮಹೇಶ್ವರಃ ೩೦

ವೃಷವಾಹನಂ ತೃತೀಯಂತು ವೃಷಭಾರೂಢಂ ಎಂಬುದಕ್ಕೆ ಕಥೆ

ವೃಷಭಾರೂಢಲೀಲೆ

ನೀ ಕೇಳ್ವುದೈ ಸ್ಕಂದ ಪೌರಾಣದೊಳು ಕಾಳಿ
ಕಾ ಕಾಂಡದೊಳು ಶಿವನ ಮೂಱನೆಯ ಲೀಲೆಯಂ
ಜೋಕೆಯಿಂ ಸ್ಕಂದನೊರೆದಂ ಮುನಿಯಗಸ್ತ್ಯಂಗದೆಂತೆನೆ ಮಹೇಶನೆಯ್ದೆ
ಲೋಕಸೃಷ್ಟಿಯನುಳಿದು ಸಂಹಾರಿಯಾಗಲಂ
ತಾ ಕಲ್ಪಕಲ್ಪಂಗಳಲ್ಲಿಯಖಿಳಂಗಳಂ
ತಾ ಕೂಡೆ ಪರಿಹರಿಸಿ ತನ್ನ ಸ್ವತಂತ್ರಮಂ ನೆನವುತ್ತ ತಾನೊರ್ವನೆ ೪೨

ಒಡನೆ ಕುಣಿವುತ್ತಿರ್ದೊಡಱುವತ್ತುನಾಲ್ಕುಕಲೆ
ಯೊಡತಿಯಾಗುತ್ತ ವಿಶ್ವಕ್ಕೆ ಸಾಕ್ಷಿಣಿಯಾಗಿ
ಬಿಡದಾದಿವಿದ್ಯೆಯಾದವುಮಾಮಹೇಶ್ವರೀ ನಿತ್ಯಳಾಗಿರುತಿರ್ಪಳ
ಮಡದಿಯೊಳು ವೇದಮಂತ್ರದಿ ನಿತ್ಯಭಾವಮಂ
ಪಡೆದಿರಲು ಕಾಲೆ ಎಂಬಾ ಸಂಹರದ ಶಕ್ತಿ
ಯೊಡನಾ ಮಹೇಶ್ವರಂ ಸರ್ವಮಂ ಸಂಹರಿಸಿ ತಾನೊರ್ವನೇ ನೃತ್ಯಕಂ ೪೩

ಪ್ರೀತನಾಗಿಹ ವೇಳೆಯಲ್ಲಿ ಚಂದ್ರಂ ಸೂರ್ಯ
ನಾ ತೆಱದ ಹಗಲಿರುಳು ಹರಿಯಜರು ಗಗನಾದಿ
ಭೂತಂಗಳಿಲ್ಲಗಡ ಭೌತಿಕಮಯವದಾಗಿ ತೋಱುವ ಜಗತ್ತದೆಲ್ಲಿ
ಖ್ಯಾತ ಶಂಭುವಿನ ತನುವಪ್ಪ ಧರ್ಮಂ ಬಳಿ
ಕ್ಕೀ ತೆಱದ ಸಚರಾಚರದ ನಷ್ಟಮಂ ಕಂಡು
ಭೀತಿಯಿಂ ನಾಂ ಕೆಡುವೆನೆಂದು ವೃಷರೂಪಾಗಿ ಶಿವನ ಬಂದಾಶ್ರಯಿಸಿತು ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೃಷಭರೂಪಕೆ ಷಡಂಗವಂಗಂ ಚರಣ
ವಾರಿಜಂ ನಾಲ್ಕುವೇದಂ ಪ್ರಣವವೇ ಶಿರಂ
ಚಾರುತರವಾದಕಾರ ಉಕಾರವೆರಡು ಕೋಡುಗಳು ಪಂಚಾಕ್ಷರಿ ಮುಖಂ
ಸಾರಸವನವೆ ಕಂಗಳೆರಡು ಹ್ರಸ್ವಂ ದೀರ್ಘ
ವೇ ರಮ್ಯನಾಸಿಕಂ ಗಂಧರ್ವವೇದಂ ವಿ
ಚಾರದ ಧನುರ್ವೇದವೆರಡು ಕರ್ಣಂ ರೋಮದೊಳು ಸಪ್ತಕೋಟಿಮಂತ್ರಂ ೪೫

ಬಳಿಕವಂತಾ ಸ್ಮೃತಿಪುರಾಣಂಗಳೆಂಬವೇ
ಸುಳಿ ತೀರ್ಥಜಾಲವೇ ವಾಲದಂಡಂ ಸುನಿ
ರ್ಮಳ ಪರಮಶೈವಾಗಮಂ ಪ್ರಾಣವಾದ ವೃಷಭಂ ಶಿವಂ ನೆನೆಯೆ ಪುಟ್ಟಿ
ಅಳವಿಯೊಳು ನಿಂದು ಕೀರ್ತಿಸಲೆಯ್ದೆ ರೂಪುಕಂ
ಗಳಿಗೆ ಮಂಗಳವಾಗಿ ರಾಜಿಸಲು ಸರ್ವಮಂ
ವಿಳಯವೆಯ್ದಿಸಿದ ಹರನೀಕ್ಷಿಸುತಲಾ ದಿವ್ಯ ಧರ್ಮವಿಗ್ರಹನ ನೋಡಿ ೪೬

ಈ ವೃಷಭನೆಯ್ದೆ ಲಯವಾಗಬೇಡೆಂದೆನು
ತ್ತೋವಿಯಾಜ್ಞಾಪಿಸುತ್ತಾ ವೃಷಭನಂ ಮಹಾ
ದೇವನುತ್ತಮದ ವಾಹನವಾಗಿ ಮಾಡಿಕೊಂಡಂ ಧರ್ಮಮಯರೂಪನಾ
ಆ ವೇಳೆ ನುಡಿದನೆಲೆ ವೃಷಭ ನೀಂ ಕೆಡದಂತೆ
ನಾವೇಱುವೆವು ನಿನಗೆ ಕೇಡಿಲ್ಲವೆಮ್ಮನೇ
ಪಾವನತೆಯಿಂ ಧರಿಸು ನಿನ್ನನಾಂ ಧರಿಸುತಿಹೆನ್ನೆ ಪಾವನತ್ವದಿಂದ ೪೭

ತಿಳಿಯೆ ಜಗದಾಧಾರಮೂರ್ತಿವೃಷಭೇಶಯೆ
ನ್ನೊಳು ಪುಟ್ಟಿದೈ ಬಿಗೆಯೆ ನೀನು ಶಬ್ದಬ್ರಹ್ಮ
ವಳವಟ್ಟಮೂರ್ತಿಯಾನೇಯರ್ಥಸದ್ಬ್ರಹ್ಮವಯ್ಯ ಕೇಳ್ನಿನಗೆ ಯೆನಗೆ
ಬಳಿಕಿನಿತು ಭೇದವಿಲ್ಲಯ್ಯ ರತ್ನದೊಳೆಸೆವ
ಬೆಳಗಿನಂತಧಿಕಪುಷ್ಪದೊಳಿಪ್ಪ ದಿವ್ಯಪರಿ
ಮಳದಂತೆ ದೀಪಪ್ರಕಾಶದಂತೆಂದು ನಿರವಿಸಿದಂ ಮಹಾದೇವನು ೪೮

ಎಂದು ಧರ್ಮಜ್ಞಾಪನಂಗೆಯ್ದೆ ಕಾರಣದೊ
ಳಂ ದೇವಗಿದು ನಿಜಂ ಧರ್ಮವೇ ಸದ್ಭಕ್ತಿ
ಯಿಂದಿಹುದು ಭಕ್ತಿಯಂ ತೊಲಗಿಯಾ ಬ್ರಹ್ಮಾದ್ಯರುಪಮೆಯುಹ ಶಕ್ತಿಗಳವೂ
ಎಂದುವುಂ ಶಂಭುವಂ ಧರಿಸಲಱಿಯವು ಕಣಾ
ಕಂದ ಇದಕಿನ್ನುದಾಹರಣಮಂ ಕೇಳು ಮು
ತ್ತೊಂದು ಕಲ್ಪದೊಳು ಚಕ್ರಪ್ರದಾನದ ಮೇಲಹಂಕಾರದೋಷದಿಂದ ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿ ಚಕ್ರಮಂ ನೀಗಿ ನಿರಹಂತೆಯಿಂದ ಸಾ
ಸಿರಕಮಲದಿಂ ನಿಶ್ಚಲೀಶನಡಿಯಂ ಭಜಿಸಿ
ಮರಳಿ ಚಕ್ರಂಬಡೆದಹಂಕಾರವಿನ್ನಾಗಬೇಡೆಂದು ದೈನ್ಯತ್ವದಿಂ
ಪರಮೇಶನಂ ನುತಿಸೆ ದಾಸ್ಯತ್ವಮಂ ಶಿವಂ
ನಿರವಿಸಿದನೆಲೆ ವಿಷ್ಣು ನಾಲ್ಕು ಪಾದವನುಳ್ಳ
ವರ ವೃಷಭರೂಪಿನಿಂ ಬ್ರಹ್ಮಪುತ್ರತೆಯು ಪೂಜಿತನಾಗಿ ನೀನು ಮತ್ತೆ ೫೦

ಎಮಗೆ ನೀನೆಲ್ಲಾಗಳುಂ ವಾಹನತ್ವಸಂ
ಭ್ರಮುದಾಧ್ವಜಂಗಳೊಳಗಿರವೇಳ್ಕು ತವ ಭಕ್ತಿ
ಯಮಲತೆಯು ವೇದತತ್ಪರರು ವೃಷವಾಹ ವೃಷಭಧ್ವಜ ಎನುತ್ತ ಪೊಗಳೆ
ಕ್ರಮುವದುನಿಮಿತ್ತದಿಂ ಮತ್ತೊಂದು ಕಲ್ಪದೊಳು
ಸುಮನೋವಿರೋಧಿ ದಾನವ ಪುರತ್ರಯದಹನ
ಸಮರಕ್ಕೆ ನಡೆಯಲುಜ್ಜುಗಿಸಿ ನಿರ್ಮಿಸಿದ ರಥದಲ್ಲಿ ಸರ್ವೇಶನೊಲವಿಂ ೫೧

ಅಡಿಯನೂಱಲು ವೇದ ವಾಜಿ ರವಿ ಶಶಿ ಚಕ್ರ
ದೊಡನೆ ಭೂರಥವೆಯ್ದೆ ಸರ್ವರತಿ ಚೋದ್ಯಮೆನೆ
ಹೊಡೆಗೆಡೆಯಲಾ ವಿಷ್ಣು ವೃಷಭರೂಪಿಂ ರಸಾತಳದಿಂದ ಮೇಲಕೆತ್ತಿ
ಮೃಡಗೆಱಗಿ ನಿಂದನೆನಲದಂನಿಮಿತ್ತಂ ವೃಷಭ
ನಡರಿದುತ್ತಮಲೀಲೆಯ್ಯೆ ಕಲ್ಪಕಲ್ಪದೊಳು
ನಡೆವುದು ಮಹೇಶ್ವರಂಗಂ ತೃತೀಯಂತು ವೃಷಭಾರೂಢಮೆಂದಱಿವುದೈ ೫೨

ಆ ಕಾಳಿಕಾಕಾಂಡದೊಳಗಗಸ್ತ್ಯಂಗೆ ಗೌ
ರೀಕುಮಾರಂ ವೃಷಭವಾಹನಂ ಧರಿಸಿರ್ದ
ನೇಕ ಚೋದ್ಯಂಗಳೇನೆಂಬೆಯಾ ಬಿತ್ತರಿಪೆನೆಂದನಖಿಳವನು ಹರಿಸಿ
ಏಕ ನಾನೇ ನಿತ್ಯನಜಹರಿಸುರಾಸುರರ
ನೇಕರುಮನಿತ್ಯರಾಂ ಪಾವನಂ ಬೀಜರೂ
ಪೀ ಕಲೇವರದಸ್ಥಿಗಳುಮೆಂದು ಧರಿಸಿದಂ ಶಿವ ನಿಜಸ್ವಾತಂತ್ರನು ೫೩

ಶಿರದಲ್ಲಿ ವಿಷ್ಣು ಮತ್ಸ್ಯದಮುಳ್ಳ ಪಾಂಗೆಂಬ
ಪರಿಯಿಂದ ಸುತ್ತಿ ಕೊರಳಲ್ಲಿ ಕಮಠನ ಪದಕ
ವರರೆ ಹಂದಿಯ ದಾಡೆ ಕರದಲ್ಲಿ ಬೊಮ್ಮದಲೆ ಶೂಲದೊಳು ಪೆಣನಡಿಯೊಳು
ಹರಿಯಕ್ಷಿ ಇಂತಿವಂ ತೊಟ್ಟು ಪಾವನನಾಗಿ
ಪರಮಸ್ವತಂತ್ರನಾಚರಿಪುದು ಪವಿತ್ರವಾ
ಕರಿಮುಖ್ಯವಾಹನಂ ರತ್ನಮುಖ್ಯಾಭರಣವೇನು ಸೇವ್ಯವೆ ಶಂಭುಗೆ ೫೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮೇಶ್ವರಂ ಚಿದ್ವಿಭೂತಿಯಂ ದೇಹದೊಳು
ಧರಿಸುವಂ ಕಾಮನಂ ಕಾಲನಂ ತ್ರಿಪುರಮಂ
ಹರನಾಗಿ ಸರ್ವಲೋಕಂಗಳಂ ಸುಟ್ಟುರುಹಿದಾ ವಿಭೂತಿಯುನಳ್ತಿಯಿಂ
ಶರಿರದೊಳು ಲೇಪಿಸುವನಾ ವ್ಯಾಘ್ರದನುಜನಾ
ಕರಿದೈತ್ಯನಾ ನೃಸಿಂಹರ ಕೊಂದು ಚರ್ಮವಂ
ಹರುಷದಿಂ ತಳೆದ ಸರ್ವೇಶಗೆ ನಿಕೃಷ್ಟದಾಭರಣವೇಕೈ ಮುನೀಶಾ ೫೫

ಎಂದಗಸ್ತ್ಯಂಗೆ ಷಣ್ಮುಖನೊರೆದ ಬಗೆಯುನಾ
ನಂದದಿಂ ಸೂಚನೆಯೊಳಾ ಕೆಂಗವೀರಾಖ್ಯ
ಗಂ ದೇವ ಹಲಗೆಯಾರ್ಯಂ ನಿರೂಪಿಸಲಾಗಿ ಕೇಳಿ ದಣ್ಣನೆ ದಣಿವುತ
ತಂದೆ ಇದು ವೃಷವಾಹನದ ಮೂಱು ಲೀಲೆಯೊಳು
ಬಂದ ಕಥೆಯಾಭಸಿತವಸ್ಥಿಯಿಂ ಸೃಷ್ಟಿಯಿಂ
ಇಂದುಧರ ಮಾಡುವನಲಾ ಜೀಯ ಪೇಳಿದಿರಿ ನಾಲ್ಕನೆಯ ಲೀಲೆಯೆಂತು ೫೬

ಚತುರ್ಥಂ ನೃತ್ಯಕೋಪವಂ ಎಂಬರ್ಥಕ್ಕೆ ಕಥೆ

ನಟೇಶ್ವರ ಲೀಲೆ

ಎನೆ ಕೇಳು ನಾಲ್ಕನೆಯ ಲೀಲೆ ತಾಂಡವಮನೆಲೆ
ತನುಜ ಹರನಖಿಳವಂ ದೃಷ್ಟಿಮಾತ್ರದೊಳುರುಹಿ
ಘನತರ ಪ್ರಮಥಗಣರೊಡನೆ ತಾಂಡವಮನೆಸಗುವನಾ ಸ್ವತಂತ್ರದಿಂದ
ಅನಘಭಸ್ಮವ ತಳೆದ ದೇವನಂತದುಮಲ್ಲ
ದನಿಮಿತ್ತದಿಂ ನಟಿಸತೊಡಗುವಂ ಡಮರುಗದ
ನಿನದದಿಂದಖಿಳಲೋಕಂ ವಿಲಯುವೆಯ್ದುವವು ಮತ್ತೊಂದು ಕಲ್ಪದಲ್ಲಿ ೫೭

ಒಡೆಯಲಾ ಬ್ರಹ್ಮಾಂಡ ಡಂಡವ್ಯಣಡಂಡವ್ಯಣ
ವಿಡಿದ ಡಮರು ಧ್ವಾನವಾ ಘಂಟೆಯಾರ್ಭಟಂ
ಗಡಬಡಿಸೆ ಕೂಡೆ ತಿಱ್ರನೆ ತಿರುಗೆ ಭೂಮಿಯುಂ ಹೊತ್ತಾನೆ ತಲೆಗಳೂಱಿ
ಕೆಡೆಯೆ ಪೇರುಸುರಿಗಂಬುಧಿಯ ಒಡಬಂ ನಂದೆ
ಜಡೆಯು ಹೊಯಿಲ್ಗಳಿಗಧಿಕ ದಿಕ್ಪಾಲಕರು ಬೀಳೆ
ಘುಡಿ ಘುಡಿಸಿ ತಾಂಡವಮನಾಡುವಂ ಪರಮುಸ್ವತಂತ್ರನಾನಂದದಿಂದ ೫೮

ಮತ್ತೊಂದು ಕಲ್ಪದೊಳಗಾ ಗಜಾಸುರನ ಸೀ
ಳುತ್ತ ಚರ್ಮವನುಟ್ಟು ಮಲೆತಂಧಕಾಸುರನ
ನೆತ್ತಿರ್ದ ಶೂಲದೊಳಿರಿದು ನೆಗಪಿ ಖೋ ಯೆಂದು ಬೊಬ್ಬಿಱಿದು ಹಾಯ್ಕಿ
ಒತ್ತಿಮೆಟ್ಟುತ್ತ ಕೊಂಡಿರ್ದತ್ರಿಶೂಲವಂ
ಕಿತ್ತು ಬುಬುಬೆನುತ್ತ ಬೊಬ್ಬಿಱಿಯೆ ಗಣನಿಕರವಾ
ಡುತ್ತವನ ಪೇರೆದೆಯ ಮೆಟ್ಟಿ ನಾಟ್ಯವನಾಡುತಿರ್ದನುಗ್ರಂ ಲೀಲೆಯಿಂ ೫೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓವಿ ನಂದೀಶ್ವರಂ ಮದ್ದಳೆಯ ನುಡಿಸಲಾ
ದೇವರ್ಕಳೊಡನೆಯಜ ಹರಿ ಮುಖ್ಯರೆಲೆ ಮಹಾ
ದೇವ ಜಯ ಎಂದು ಕೀರ್ತಿಸೆ ಝುಕಕು ಝುಂಕೆನಲ್ಕಾವುಜಂ ಮುರಜಂಗಳು
ತೀವಿ ದಿಂಧಿಮಿ ಧಿಮಿಕೆನುತ ದನಿ ಮಾಡಲ್ಪ
ಡಾವುಜಂಗಳು ತುತ್ತುರೆನೆ ಕಹಳೆ ವಾಸಗೊಳ
ಲಾವಗಂ ಬಿಡದುಲಿಯೆ ಬೇತಾಳರೆಯ್ದೆ ಹಾಡಲು ಕುಣಿವುತಿರ್ದನಭವಂ ೬೦

ತಟಿದಿನ ಮಹಾತ್ವರಿತದಿಂದ ಮಕುಟದ ಗಂಗೆ
ತಟಗಳಗಳಂ ಗಂಗಳಮುಮೆನಲು ಡಮರುಗಂ
ಘಟಿಸಿ ಡುಂ ಡುಮುಡುಮೆನೆ ಕಿಱ್ರಿಟಂ ಭುಭುಬುವಾಣ್ರ್ಯಣ್ರ್ಯಮೆನಲು
ಪಟುತರದ ಝಣಣರ್ಝರ್ಝಣಣ್ರೆನೆ ಘಂಟೆ ಗೆಜ್ಜೆಯು
ತ್ಕಟದೆ ಘಂ ಘಂ ಘಲಿರೆನಲು ಮಹಾಧ್ವಾನದಿಂ
ನಟಿಸುತಿರ್ದಂ ಮಹಾದೇವ ನಘವನದಾವ ಸುಜನಸಂದೋಹಭಾವ ೬೧

ಘೂತ್ಕೃತಂ ತೊಟ್ಟ ಫಣಿನೀಕದುಸುರಿಂದವಾ
ಚೀತ್ಕೃತಂ ಗರುಡರ್ಕಳುಲಿವಿನಿಂ ಝೀಕೃತಂ
ತತ್ಕಾಲದೊಳು ಸುಷಿರವಾದ್ಯದಿಂ ತಿಱಕ್ರಿಂದು ತಿರುಗಲಂಗದ ಪವನನಿಂ
ಭೀತ್ಕೃತಂ ಮಕುಟದೆಡೆಯಣ ಗಂಗೆ ಕೆದಱಲು ಝು
ಳತ್ಕೃತಂ ಪೆರ್ವನಿಗಳೆಯ್ದೆ ಪಸರಿಸುತಿರೆ ಚ
ಮತ್ಕೃತದ ನಾಟ್ಯವಾಡುತ್ತಿರ್ದನಖಿಳ ಜಗದೀಶ ದಿವ್ಯಪ್ರಕಾಶಾ ೬೨

ಜಡೆಯಲ್ಲಿ ಮಲ್ಲಿಗೆಯ ಕುಸುಮದಂತೂರ್ಧ್ವರ್ಕ್ಕೆ
ಸಿಡಿದ ಪನಿ ನಕ್ಷತ್ರವಾ ಕಂಠದೊಳು ಮುತ್ತು
ದೊಡಿಗೆ ನೆಲದಲ್ಲಿ ಸೂಸಿದವಲರಮಳೆಗಳೆಂಬಂತೆ ಮಸ್ತಕದ ಗಂಗೆ
ಯಡರ್ದ ಪನಿಗಳ ಪರೆಪಿ ನಾಟ್ಯವಾಡಲು ಕಂಡು
ಕಡುಗಲಿಯೆನಿಪ್ಪಂಧಕಾಸುರಂ ನಸುನಕ್ಕ
ಡೊಡೆಯನೀಕ್ಷಿಸಿ ಹಸನವೇಂ ಕಾರಣಂ ದೈತ್ಯ ಪೇಳೆಂದಡಾತನೆಂದಂ ೬೩

ದೇವ ಪದಿನಾಲ್ಕು ಲೋಕಂಗಳಂ ಕಳೆದು ಹಂ
ಸಾವತಾರದೊಳಜಂ ನಿಮ್ಮ ಶಿರಮಂ ಕಾಣ
ನಾ ವಿಷ್ಣು ಹಂದಿಯಾಗುತ್ತ ಪಾತಾಳದೊಳಗಱಸಿ ನಿಮ್ಮಂಘ್ರಿಯೆಂಬ
ತಾವರೆಗಳಂ ಕಾಣಲಿರಿದೆತ್ತಿದೈ ನಿನ್ನ
ಪಾವನಶಿರಂ ಕಂಡೆನೆನ್ನೆರ್ದೆಯೊಳೆಯ್ದೆ ಕುಣಿ
ವೀ ವೇಳೆ ನಿನ್ನ ಚೆನ್ನಡಿಗಂಡೆನೆಂದು ಗಹಗಹಿಸಿದಂ ಮತ್ತೆ ದನುಜಂ ೬೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನ ನುಡಿಗಂ ಮೆಚ್ಚಿ ಗಣಪದವನಿತ್ತನಾ
ಶಿವನಿದಂ ಲೈಂಗ್ಯದೊಳು ಬಹುನಾಟ್ಯವಾಡುವಂ
ಕುವರ ಕೇಳಯ್ಯ ವಾತೂಳದೊಳಗಂ ಚತುರ್ಥಂ ನೃತ್ಯಕೋಪವಂ ವೈ
ಧ್ರುವವೆಂಬ ವಾಕ್ಯದಿಂ ನಾಲ್ಕನೆಯ ಲೀಲೆಯಂ
ಸವಿನಯದೊಳುಸುರಿದೆವೆನುತ್ತ ಹಲಗೆಯ ದೇವ
ರು ವಿಲಾಸದಿಂದ ನಂಜುಂಡಮೂರ್ತಿಯ ನೋಡಿ ನುಡಿಯತೊಡಗಿದನು
ಮುಂದೆ ೬೫

ವೈವಾಹಪಂಚವಂ ವಿಂದ್ಯಾತ್ ಎಂಬರ್ಥಕ್ಕೆ ಕಥೆ

ಗಿರಿಜಾ ವಿವಾಹ

ಪರಮಗುಣಿ ಕೆಂಚವೀರಾಹ್ವಯಾ ಕೇಳಯ್ಯ
ಗಿರಿಜಾವಿವಾಹವೆನಿಪ್ಪೈದನೆಯ ಲೀಲೆಯಂ
ನಿರುಪಮಾದಿತ್ಯಪೌರಾಣದೊಳು ನೈಮಿಷಾರಣ್ಯವಾಸದ ಋಷಿಗಳು
ಉರುತರಾಸನದೊಳಿರ್ದಾ ಸೂತಮುನಿವರಗೆ
ಕರವ ಮುಗಿದಾಲಿಸಲು ಶಂಕರನ ಪಾದವಂ
ಸ್ಮರಿಸಿ ಪೇಳಲುತೊಡಗಿದಂ ಶಿವಕಥಾರಸದ ಸವಿಯನಾವಂ ಬಣ್ಣಿಪಂ ೬೬

ಕಾರುಣ್ಯದಿಂದ ಶಿವನಾ ನಂದಿಕೇಶ್ವರಂ
ಗೋರಂತೆ ಪೇಳೆ ನಂದೀಶ್ವರಂ ತನ್ನಯ ಪ
ದಾರವಿಂದದ ಶಿಷ್ಯನೆನಿಸುವ ಸನತ್ಕುಮಾರಂಗೊರೆಯಲಾತನೆಮ್ಮ
ಆರಾಧ್ಯರಪ್ಪ ವೇದವ್ಯಾಸಮುನಿಗಳಿಗ
ಪಾರಪರಿಯಿಂ ಪೇಳಲಾ ಬಾದರಾಯಣನ
ಸಾರಬೋಧೆಯ ತಿಳಿದ ಕಾರಣಂ ಮುನಿಗಳಿರ ನಿಮಗೆ ಪೇಳುವೆನೆಂದನು ೬೭

ಎಂದು ಸೂತಂ ನುಡಿಯತೊಡಗಿದಂ ಮುನಿಗಳಿರ
ಮುಂದದಕ್ಷಂ ಶಿವಗೆ ಮಾರ್ಮಲೆತು ಯಜ್ಞಮಂ
ಮುಂದೆವಾಳದೆ ಮಾಡೆಯಖಿಳ ದೇವರ ನೆರೆಯಲಾ ದಧೀಚಂ ಕಾಣುತಂ
ಇಂದುಧರನೇತಕ್ಕೆ ಬಾರನೆನೆ ಶಂಭುವಂ
ನಿಂದಿಸಲು ಶಪಿಸಿ ಕೆಲಮುನಿಗಳೊಳ್ಪೋಗೆ ನಾ
ರಂದನಗಜೆಗೆ ಶಿವಗದಂತಱುಪೆ ಜನ್ನಕ್ಕೆ ಬಂದಳಂತಾ ಭವಾನೀ ೬೮

ತಂದೆಯೆನಿಸುವ ದಕ್ಷಗಂ ಬುದ್ಧಿಯಂ ಪೇಳೆ
ನಿಂದಿಸಲು ದಕ್ಷನೀಶನನದಂ ಕೇಳುತ್ತ
ನೊಂದಗಜೆ ದೇಹವಂ ಜ್ಞಾನಾಗ್ನಿಯೊಳ್ಬೆರಸೆ ಹರನ ಭಾಳದೊಳು ಪುಟ್ಟೀ
ಬಂದು ವೀರೇಶ್ವರಂ ಸದೆದನಂತಾ ದೇವ
ವೃಂದದೊಡನಾ ದಕ್ಷನಂ ತನುವನುಳಿದು ನೆಲ
ವಿಂದ ರುದ್ರಾಣಿ ಬರುತಿರ್ದಳಾ ತಪವಿರುತ್ತಿರ್ಪ ಮೇನಕಿಯ ಬಳಿಗೆ ೬೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮೇನೆಗೊಲಿದಿಷ್ಟವೀಯೆ ರುದ್ರಾಣಿಯಾ
ಕಾಮಿನಿ ಬಳಿಕ್ಕೋಷಧಿಪ್ರಸ್ಥಪುರಕೆ ಬಂ
ದಾ ಮಹಾಗಿರಿರಾಜನೆನಿಪ ಪತಿಗಟುಪಿ ಸುಖಮಿರಲಾ ಸ್ವತಂತ್ರಮೂರ್ತಿ
ಸ್ವಾಮಿಯರ್ಧಾಂಗಿಯೂಕೆಯು ಗರ್ಭದೊಳು ಪೊಕ್ಕು
ಭೂಮಿಯೊಳು ಲಿಂಗಉದಯಿಸುವಂತೆ ಜನಿಸಿ ಬಳಿ
ಕಾ ಮಿಸುಪ ಬಾಲಲೀಲೆಯು ಕಳೆದು ವೈಭವಂಗಳೊಳು ಬಳೆವುತ್ತಿರ್ದಳು ೭೦

ಗಿರಿಜೆ ಹನ್ನೊಂದುವರುಷಪ್ರಾಯದೊಳಗಿರಲು
ಬರುತಿರ್ದ ನಾರದನ ಕಂಡು ಸಾಷ್ಟಾಂಗದಿಂ
ಗಿರಿರಾಜ ಶರಣೆಂದು ಸಿಂಹಪೀಠದೊಳಿರಿಸಿ ಬರ್ಪ ಶರ್ವಾಣಿಯೆಡೆಗೆ
ಇರದೆದ್ದು ಸಾಷ್ಟಾಂಗವೆಱಗಿ ಕೈಮುಗಿದು ಮುನಿ
ವರನೆಯ್ದೆ ಕೀರ್ತಿಸಲು ನಡುಗಿ ರಾಯಂ ಮಗಳ
ಚರಣಕ್ಕೆ ಮುನಿರಾಜ ನೀನೆಱಗಲಪ್ಪುದೇ ಯೆನಲೆಂದನಾ ತಾಪಸಂ ೭೧

ನಿನ್ನ ಮಗಳೇ ಬಿಡೈ ಕಲ್ಲೆದೆಯೊಳಾಡಿದೈ
ಪನ್ನಗಾಭರಣನರ್ಧಾಂಗಿಯೆಮ್ಮಮ್ಮನಂ
ತನ್ನ ಕುರಿತುಗ್ರತಪಮಂ ಮಾಡುವೀಶ್ವರನ ಬಳಿಯೊಳಿರಿಸೆನಲು ರಾಯಂ
ಉನ್ನತದ ಪುಷ್ಪಕದೊಳಿಟ್ಟು ದೇವಿಯುರ ಮನ
ದನ್ನೆಯರು ಜಯೆ ವಿಜಯರೊಡಗೂಡಿ ತಂದಭವ
ಸನ್ನಿಧಿಯೊಳಾ ಹೇಮಕೂಟದೊಳಗಿರಿಸಿ ಪೋದಂ ಭೂಪನತ್ತಲಿತ್ತ ೭೨

ಗೌರಿ ಸರ್ವೇಶನಂ ಭಜಿಸುತಿರಲಿತ್ತಲಾ
ತಾರಕನೊಳಂ ಕಾದಿ ಮುರಿದೋಡಿಯತ್ತಲಾ
ನಾರಾಯಣಾದಿಗಳು ಕಾಮನಂ ಕರೆಸಿ ಬೋಧಿಸಿ ಹರನ ಬಳಿಗೆ ಕಳುಪೆ
ಮಾರನೆಯ್ತರಲವನ ಬಲವ ನಂದೀಶ್ವರಂ
ದ್ವಾರದೊಳಗಿರ್ದುರುಪೆ ದೇವಿಯುರ ಕೃಪೆಯೊಳಂ
ಸಾರಿ ಬೊಬ್ಬಿಱಿದೆಚ್ಚನುಗ್ರನಂ ಕಂಡು ಹಣೆಗಣ್ದೆಱೆದನಾ ರುದ್ರನು ೭೩

ನಿಮಿಷಮಾತ್ರದೊಳು ಘುಡುಘುಡಿಸಿ ಕಾಮನ ಸುಟ್ಟು
ಅಮಮ ತುಳಿದಾ ಬೂದಿಯುಂ ಮೆಯ್ಯೊಳಂ ಪೂಸಿ
ಕಮಲಮುಖಿಯೊಳ್ನುಡಿಯದಾಗಳಂತರ್ಧಾನಕಂ ದೇವನೆಯ್ದಲಳುವ
ರಮಣಿ ರತಿಗಂ ಕೃಪೆಯನಿತ್ತು ತಪಮಂ ಮಾಡೆ
ಸುಮನಸ್ಸೆಗೊಲಿದು ನಿಜಪುರಿಗೆ ಬಾರೆನೆ ಶಿವಂಗೆ
ನಮಿಸಿ ರತಿವಲ್ಲಭನನಂಗನಪ್ಪಂತಿತ್ತ ದೇವಗೆಂದಳು ಪಾರ್ವತಿ ೭೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ನಿಮ್ಮೊಡನೆಮ್ಮ ತಂದೆಗಟುಪದೆ ಬರಲು
ಭೂವಳಯುದೊಳಗಿಂದುವೊದಲಾಗಿ ನೆರದ ವನಿ
ತಾವಳಿಗಳೆಲ್ಲ ತಮ್ಮಯ ಮನಕೆ ಬಂದ ಪುರುಷರ ಮೆಚ್ಚಿ ಪೋಪರಾಗಿ
ನೀವು ಕೈಲಾಸಕ್ಕೆ ಪೋಗಿಯೆಮ್ಮಯ್ಯನೆಡೆ
ಗಾ ವಿಶೇಷಜ್ಞಾನಿ ಮುನಿಗಳಂ ಕಳಿಪಿ ಲೋ
ಕಾವಳಿಗಳಱಿವಂದದಿಂ ಮದುವೆಯಹುದೆಂದು ನುಡಿದು ಪಿತನೂರ್ಗೆಬರಲು ೭೫

ದೇವಿಯಂತೋಷಧಿಪ್ರಸ್ಥಪುರವಂಪೊಕ್ಕ
ಡಾ ವೇಳೆಕೈಲಾಸಕೆಯಿದಿ ದೇವಂ ತಾಪ
ಸಾವಳಿಯ ಕಳಿಪಿ ಕೇಳಿಸೆ ಮುಗಿದು ಸರ್ವಗಣನಿಕರ ಸಂಭ್ರಮದೊಳೆಯ್ದೆ
ಪಾವನವಿವಾಹವಾದಂ ಕಣಾಕಲ್ಪಕ
ಲ್ಪಾವಳಿಯೊಳೀಶ್ವರಂಗೀ ತೆಱಂ ಕೆಂಚವೀ
ರಾವತಾರನೆ ಕೇಳು ವೈವಾಹಪಂಚಮಂ ವಿಂದ್ಯಾದೆನಿಪ್ಪಂದದಿ ೭೬

ಮುದದೊಳು ಮಹೇಶನಿಪ್ಪತ್ತೈದು ಲಿಲೆಯೋಳು
ವೊದಲಲ್ಲಿ ಸೋಮಧಾರಂ ಬಳಿಕ್ಕಾದ್ವಿತೀ
ಯದೊಳುಮುಮಯಾಸಹಂ ತತ್ತೃತೀಯದೊಳು ವೃಷಭಾರೂಢವಾ ಚತುರ್ಥ
ಸದಮಲದ ತಾಂಡವಂ ಗಿರಿಜಾವಿವಾಹವೆಂ
ಬುದೆ ಪಂಚಮದ ಲೀಲೆ ಇವನೊಲ್ದು ನಿನಗೆ ಪೇ
ಳಿದೆವೆಲೈಕೇಳೆಂದನಾ ಕೆಂಚವೀರಾಹ್ವಯಂಗೆ ಹಲಗೆಯ ದೇಶಿಕಂ ೭೭

ಭೂಲೋಕಪಾವನಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದೞಿವೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್‌ಸ್ಥಲಹಲಗೆಯಾಚಾರ್ಯನಾ ಶಿಷ್ಯ
ನೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೭೮

ಇದು ವೀರಶೈವಷಟ್‌ಸ್ಥಲಮಾರ್ಗಿಸದ್ಭಾವ
ಸಗನನು ವಿರಕ್ತವ್ರತಾಚಾರಿಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಣಾ ಗಿರಿಜಾವಿವಾಹದೆಡೆಗೊಂದು ಕಾಂಡದ ಮೇಲೆ ಒಂದು ಸಂಧಿ ೭೯

ಅಂತು ಸಂಧಿ ೧೫ಕ್ಕಂ ಪದನು ೭೯ಕ್ಕಂ ಗ್ರಂಥ ೩೦ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ : ೧೧

ಭಿಕ್ಷಾಟನ ಲೀಲೆ

ಭಿಕ್ಷಾಟಣದ ಲೀಲೆಗಾ ಶಿರಃಪಾತ್ರೆಯಂ
ತ್ರ್ಯಕ್ಷಂಗೆ ವಿಧಿ ಕೊಡಲ್ಬೇಕಾದ ಕಥನದಿಂ
ದಾಕ್ಷೇಪಿ ಗರ್ವಿಸಿದೊಡವನ ತಲೆಯರಿದಂ ಮುಮುಕ್ಷುಗಳಿಗಧಿನಾಥನು

ಕಾಟಕೋಟಾದಿಗಳ ನೋಟದಿಂದಂ ಸಲಹು
ತೂಟದೋಗರವಿತ್ತ ನಾಟಕದ ಪೆಣ್ಣಿಂದು
ಜೂಟ ಕೈಲಾಸದೊಳು ಮೀಟಪ್ಪ ಪದವಿತ್ತಲಾ ಠಣತ್ಕಾರರವಣಾ
ಸ್ಥಾಟನಶ್ರವಣದೊಳ್ಕೋಟದ ಸುಧರ್ಮವೃಷ
ಭಾಟನದ ರುದ್ರಗುಣಕೂಟದ ಪ್ರಳಯ ನಿ
ರ್ಘಾಟನಪ್ರಮಥಹೃತ್ಕೋಟರದ ಸಿರಿ ಮಲ್ಲಲಾಟಪದ ಶಾಂತಮಲ್ಲ ೧

ಕುಱಿಯ ಕೊಲಬೇಕೆಂದು ನುಡಿದ ಕಥದಿಂ ದನುಜ
ರೆಱೆಯುಗಳವಿಂಗೆ ಪಶುವಾಗೆ ಪೇರಡವಿಯೊಳು
ಕಿಱಿದಪ್ಪ ಸಾರಮೇಯಂಗಳಾದಜ್ಞ ವೇದದ ಶಿರಚ್ಛೇದನವನು
ನೆಱೆ ರಚಿಸಿಯುಪನಿಷದ್ವಾಕ್ಯಮಂ ಕೈವಿಡಿವು
ತುಱದೆ ಚಾತುರ್ವೋರ್ಕ್ಷದಿಂದ ಮೇಲಣ ಗವಿಯ
ನಿಱುಜಡೆಯ ನೀರನೆನಿಸುವ ಶಾಂತನಂಜೇಶ ಪರಿವುದಾನತರಘವನು ೨

ಅಣಿಯರದೊಳಾಧಾರಚಕ್ರವಾ ಸ್ವಾದಿಷ್ಟ
ಮಣಿಪೂರವಂತನಾಹತ ವಿಶುದ್ಧ್ಯಾಜ್ಞೆಯ
ಗಣನೆಯಾ ಬ್ರಹ್ಮರಂಧ್ರಂ ಶಿಖಾ ಪಶ್ಚಿಮಂ ನವಚಕ್ರವೆನಿಸುವಭವ
ಪ್ರಣಯ ಮೃಡಹರನೀಶನಾ ಸದಾಶಿವಪದ
ಗ್ರಣಿ ಶಿವಂ ಗುರುಲಿಂಗ ಜಂಗಮೈಕಂ ಭಕ್ತ
ಗುಣಿ ಚಿದಾನಂದಜಂಗಮ ಹಲಗೆಯಾಚಾರ್ಯಮೂರ್ತಿ ರಕ್ಷಿಪುದೆನ್ನನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾರ ಶಿವಮಹಿಮಾವಿಚಾರಿಯೆನಿಸುವ ಕೆಂಚ
ವೀರಾಹ್ವಯಾ ಕೇಳಿದಾ ಶಂಭುಲೀಲಾಪ್ರ
ಕಾರದಿಪ್ಪತ್ತೈದಱೊಳು ಮೊದಲೊಳೈದೆನಿಪ ಗಿರಿಜಾವಿವಾಹದಿರವ
ಆರೈದು ಮುಂದೆ ಕೇಳಯ್ಯ ವಾತೂಳದೊಳು
ಸೇರಿದಾಱನೆಯ ಲೀಲೆಯ ಮಹಾಬ್ರಹ್ಮಾಂಡ
ಪೌರಾಣದಲಿ ಭಿಕ್ಷಾಟಣವನೆಂದುಪೇಳುತಿರ್ದನಾಚಾರ್ಯನು ೪

ನಂದೀಶ್ವರಂಗಾ ಸನತ್ಕುಮಾರಂ ಬಂದು
ವಂದಿಸುತ ಕೈಮುಗಿದು ದೇವ ಮದ್ಗುರುನಾಥ
ಹಿಂದೆನ್ನ ಮಱವೆಯಂ ತೀರ್ಚಿ ಬಿತ್ತರಿಸಿದಿರಿ ಸಕಲ ಶಿವಕಥನದಿರವ
ಒಂದು ಕಥೆಯಂ ಕೇಳಲಿಚ್ಛೈಸುತಿರ್ದಪೆಂ
ತಂದೆ ಬೊಮ್ಮನ ಶಿರವನಱಿದ ಕಾರಣವೇನು
ಮುಂದೆ ಭಿಕ್ಷಾಟಣದ ಕಜ್ಜವೇನಭವಗೆನೆ ನುಡಿದನಾ ಧರ್ಮರೂಪಂ ೫

ಕೇಳೈ ಸನತ್ಕುಮಾರಾ ಮಹೇಶನ ಬಲದ
ತೋಳೆಡೆಯೊಳುದಿಸಿದಾ ಬ್ರಹ್ಮಂ ನವಬ್ರಹ್ಮ
ರೋಳಿಯಂ ಪಡೆಯಲವದಿರು ಸರ್ವಮಂ ಸೃಜಿಸಲಾಗಿ ವೈಭವದ ಲೋಕ
ಜಾಳದ ಜನಂಗಳೆಲ್ಲಾ ತನ್ನ ಪುತ್ರರೆಂ
ದಾಳೋಚಿಸುತ್ತ ಗರ್ವದೊಳಜಂ ಕೊಬ್ಬಿರ್ದ
ಕಾಳುಬುದ್ಧಿಯೊಳೊಂದುದಿನದಲ್ಲಿ ಮೇರುಪರ್ವತದಗ್ರಕೆಯಿತಂದನು ೬

ಆ ಮೇರುಪರ್ವತಾಗ್ರದೊಳು ನವರತ್ನಮಯ
ರಾಮಣೇಯಕ ಪೀಠದಲ್ಲಿ ಮಂಡಿಸಿದನು
ದ್ದಾಮಗರ್ವದೊಳಾ ಪಿತಾಮಹ ಪೇರೋಲಗಕ್ಕಾ ನವಬ್ರಹ್ಮರು
ಸಾಮರ್ಥ್ಯದಮರದಿಕ್ಪಾಲರಸುರರು ಮುನಿ
ಸ್ತೋಮ ಖಚರರು ಗರುಡ ಗಾಂಧರ್ವವರನಾಗ
ರಾ ಮನುಗಳೆಯ್ದೆ ಬರಲೊಪ್ಪಿದುದು ದುಷ್ಟನ ಸಭಾಮಂಟಪಂ ಪೆರ್ಮೆಯಿಂ ೭

ಕನಕವೆಂಬಾ ನಾಮದುನ್ಮತ್ತಫಲವನಾ
ರ್ತಿನೆ ಮರುಳ್ಗೊಂಡು ಮೈ್ಮಱಿಯರ್ಗಡಾ ಜಗದ
ಜನರಿಗೀ ತೆಱನಖಿಳ ದೇವದಾನವ ಮಾನವರ ಪಿತಾಮಹನೆನಿಸುವ
ಘನವೆನಿಸುವೊಂದು ಲಕ್ಷಾತಿಶಯ ದಿವ್ಯಯೋ
ಜನದುದ್ದವಹ ಕನಕರಾಸಿಯಗ್ರದೊಳು ಭೋಂ
ಕನೆ ಕುಳಿತು ಸರ್ವರೋಲೈಸೆ ಮೆಱೆವಜನ ಗರ್ವವನಾರು ಬಣ್ಣಿಸುವರು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೇಳೆಯಾ ನವಬ್ರಹ್ಮಮುಖ್ಯರು ಬಂದು
ಭಾವಶುದ್ಧದೊಳು ಸಾಷ್ಟಾಂಗದಿಂ ವಂದಿಸುತ
ದೇವದೇವರ ಪಿತಾಮಹ ಜೀಯ ಬಿನ್ನಪಂ ಪರತತ್ವವೆನಿಸಿಪ್ಪುದು
ಆವುದದ ಬಿತ್ತರಿಪುದೆನೆ ನಗುತ ಮುನ್ನಿದಂ
ನೀವಱಿಯಿರ್ಯೈ ಮೂಢರ್ಯೈ ವಿಚಾರಿಸಲಾಗಿ
ನಾವಲ್ಲದಿನ್ನೊಬ್ಬರಿಲ್ಲವೆಂದತಿ ಗರ್ವದಿಂದಜಂ ಕೊಬ್ಬಿ ನುಡಿದಂ ೯

ಹುಟ್ಟಿಸುವರಾನೆ ಕರ್ತಂ ಲೋಕಮಂ ಸಲಹೆ
ಕಟ್ಟೊಡೆಯ ನಾನಖಿಳಮಂ ನಿಮಿಷಮಾತ್ರದೊಳು
ಸುಟ್ಟುರುಪುವಗ್ಗದಧಿದೈವವಾನೇ ಜಗದ್ಗುರುವಾನು ಪರತತ್ವವು
ನೆಟ್ಟನಾನೇ ಪರಂಜ್ಯೋತಿ ಪರಮೈಶ್ವರ್ಯ
ಪಟ್ಟವರ್ಧನ ನಾನೆಯೆನ್ನಿಂದ ಮೇಲಿನ್ನು
ಬೊಟ್ಟಿತ್ತಿ ತೋಱಲೊಬ್ಬೊಡೆಯನಿಲ್ಲೆಂದು ಕೊರ್ಬಿಂದ ಗಹಗಹಿಸಿ
ನುಡಿದಂ ೧೦

ಯೋಗಿಗಳ ಚಿತ್ತದೊಳು ಪದವಿಟ್ಟು ನೆನಸಿಕೊಂ
ಬಾ ಗರುವನುಂ ನಾನೆಯದುಕಾರಣಂ ನನ್ನ
ಮೇಗೊಬ್ಬ ಕರ್ತನಿಲ್ಲೆಂದು ಸರ್ವೇಶನಂ ಮಱೆದಜಂ ನುಡಿಯಲಾಗಿ
ಭೂಗಗನ ದೊಳಗಧರ್ಮಂ ತೀವಿತಧಿನಾಥ
ನಾಗಿರ್ದ ಬೊಮ್ಮನಜ್ಞಾನದಿಂದುಕ್ಕಿದವು
ಸಾಗರಂಗಳು ಜಲಪ್ರಳಯವಾಗುತ್ತಿರಲು ಕಂಡು ಹರಿ ಬೆಱಗಾದನು ೧೧

ಇಳೆಯನೆಲ್ಲಂ ಪೊರೆವವಂ ನಾನಲಾ ಜಲ
ಪ್ರಳಯವ ಜನಿಂದಾಗುತಿರ್ದಪ್ಪುದೆಂದಲ್ಲಿ
ತಿಳಿದುಗ್ರದಿಂ ಬಂದು ಮುಂದಿರ್ದ ವಿಷ್ಣುವಂ ಕಂಡು ನೀನಾವಧೂರ್ತಂ
ಘಳಿಲನೆಮ್ಮಯ ಪಾದಕೆಱಗೆ ಕೈಮುಗಿಯೆ ನ
ಮ್ಮೊಳು ಗರ್ವವೇಕೆ ನಾಂ ತಂದೆಯಲ್ಲವೆ ನಿನಗೆ
ನಳಿನಲೋಚನ ಎನಲು ಬೆಡಗಿಂದ ನುಡಿವ ಬೊಮ್ಮನೊಳು ಹರಿ
ನಗುತೆಂದನು ೧೨

ಏಕೆ ಗರ್ವದೊಳುಕೆಟ್ಟಪೆ ಬೊಮ್ಮ ನಿನಗೊಡೆಯ
ನಾ ಕಣಾ ನೀಂ ಮೊದಲನಂತ ಸುರ ನರ ನಾಗ
ಲೋಕಂಗಳಖಿಳ ಜೀವರ ಪೊರೆವ ಕರ್ತೃವಾನ್ಯೈ ನಿನಗ ನನಗೆ ಕರ್ತಾ
ಶ್ರೀಕರ ಮಹಾದೇವನುಂಟೆನಲು ಗಹಗಹಿಸು
ತಾ ಕಮಲಜಂ ನುಡಿದನೆನ್ನ ಮಗನಾಗಿರ್ದು
ವೈಕುಂಠ ನನಗೆ ಬುದ್ಧಿಯ ಪೇಳುವಾ ಹೋಗೆನುತ್ತ ಘರ್ಜಿಸಿ ನುಡಿದನು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಿಯು ಮಹೇಶನೆಂದಾರು ನೀನಾರು ತೆಗೆ
ಯ್ಯ ದನುಜರಿಪುವೆಯೆನೆ ಬೊಮ್ಮ ಕೇಳಾನಲ್ಲ
ವೇದಂಗಳೇ ಪೇಳಿದಪವೆನಲು ಕರೆಯಲು ಚತುಶ್ಶ್ರುತಿಗಳೆಯಿತರುತ್ತಾ
ಮೋದದಿಂ ಪುರುಷರೂಪಾಗಿ ಕುಳ್ಳಿರ್ದು ಬಳಿ
ಕಾ ದುರಾತ್ಮಂಗೆಂದವೆಲೆ ಪಿತಾಮಹನೆ ಕೇ
ಳ್ಮಾದೇವನೇ ಮಿಗಿಲೆನುತ್ತಲ್ಲಿ ಮೊದಲು ಋಗ್ವೇದವೆಂದುದು ಪೇರ್ಮೆಯಿಂ ೧೪

ಎಹಗೆಂಬೆಯಾ ಬ್ರಹ್ಮ ಕೇಳಾವವಂ ನನ್ನ
ನಿಹಿತತ್ ಸ್ವತಂತ್ರಮಯನೆನಿಸಿ ರಾಜಿಪ ಹೃದಯ
ಕುಹರಾಂತರಾಳದೊಳ್ ಬ್ರಹ್ಮಾಂಡಕೋಟಿಗಳನಳವಡಿಸಿದವನೆ ಜಗಕಂ
ಸಹಜದಾದಿಯು ದೈವವವನಾಜ್ಞೆಯಿಂ ಜನಿಸಿ
ನಿಹಿತಪ್ರವರ್ತನೆಯೊಳಿಹವೈ ಚರಾಚರಂ
ಇಹಗಪ್ಪ ಶಿವನೀಗ ದೈವವೆಂದುದು ಮೂಱು ಬಾರಿ ಋಗ್ವೇದವಾಗ ೧೫

ಬಳಿಕಲಾ ವೇದವೇ ಪೇಳ್ವುದಾ ಕ್ರಮದಲ
ಗ್ಗಳದಾಗುಣತ್ರಯದೆ ವಿರಚಿಸುತ್ತಿರ್ದೈವ
ಗಳನವಕೆ ಕಲ್ಪಿಸುತ್ತವರ ಹೃದಯದೊಳಿರ್ದು ಚೇಷ್ಟಿಸುತವಂ ಮೀಱಿದ
ವಿಳಸಿತದ ಶಿವತತ್ವವೆನಿಸಿ ಯೋಗಿಗಳ ಹೃ
ನ್ನಳಿನಾಕರದೊಳಿರ್ಪ ರಾಜಹಂಸನುಮೆನಿಸಿ
ಘಳಿಲನೊಪ್ಪಿಹನೇ ಮಹೇಶನೆಂಗುದು ದುಷ್ಟನಂ ತಿಳಿಪುವುಜ್ಜುಗದೊಳು ೧೬

॥ಋಗ್ವೇದಶ್ರುತಿ॥ ಯಸ್ಯಾಂತಸ್ಥಾನಿ ಭೂತಾನಿ ಯಸ್ಮಾತ್ಸರ್ವಂ ಪ್ರವರ್ತತೇ
ಯಮಾಹುಸ್ತತ್ಪರಂ ತತ್ವಂ ಸದೇವಸ್ಯಾನ್ಮಹೇಶ್ವರಃ ೧

ಭಾವಶುದ್ಧದೊಳಾ ಯಜುರ್ವೇದ ವೆಂದುದಿ
ನ್ನಾವನೊಬ್ಬಾತನಂತರಿಯಾಮಿಯಾಗಿ ಪೂ
ಜಾವಳಿಗಳಂ ಕೊಳುತ್ತವರವರ ವಾಸನಾಯೋಗ್ಯವಾದಾ ಫಲಗಳಂ
ಈವುತಷ್ಟಾಂಗಯೋಗತತ್ಪರರೆಸೆವ
ಸಾವಿರೆಸಳಾ ತಾವರೆಯೊಳಿಹ ಮಹೇಶನಂ
ದೇವರ್ಕಳಾಲಿಸಲವಂ ಕರ್ತನೆಂದು ಬೋಧಿಸಿದುದು ಯಜುರ್ವೇದವು ೧೭

॥ಯಜುರ್ವೇದಶ್ರುತಿ॥ಯೋ ಯಜ್ಞೈರಖಿಲೈರೀಶೋಯೋಗೇನ್ಯೈವ
ಸಮುಚ್ಯತೇ
ಯಮಾಹುರಿಶ್ವರಂ ದೇವಂ ಸದೇವಸ್ಯಾತ್ಪಿನಾಕಧೃತ್ ೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮವೇದಂ ನುಡಿದುದಾವನಿಂದಾದೊಡಿಂ
ತೀ ಮಹಾ ಬ್ರಹ್ಮದೊಳಗಣ ಚರಾಚರವದಂ
ತಾ ಮಾಯೆಯೊಳು ಕುಲಾಲಭ್ರಮಣಚಕ್ರವೆಂಬಂತೆ ತಿರುಗದೆ ಮೆಱೆವುದು
ಆ ಮಹಿಮನೇ ತತ್ವವಿತ್ತುಗಳ ವರ ಹೃದಯ
ತಾಮರಸದಲ್ಲಿ ಮಹದಾಕಾಶರೂಪಾಗಿ
ರಾಮಣೀಯಕ ನಿರಾವರಣವಾದವನೆ ಪರತತ್ವವೆಂದಾಲಿಸುವುದು ೧೮

॥ಸಾಮವೇದ ಶ್ರುತಿ॥ ಯೇನೇದಂ ಭ್ರಾಮ್ಯತೇ ಚಕ್ರಂ ಯಥಾಕಾಸಾಂತರಂ ಮಹತ್
ಯೋಗಿಭಿರ್ವೇದ್ಯತೇ ತತ್ವಂ ಮಹಾದೇವಸ್ಸಶಂಕರಃ ೩

ಅವಗಥರ್ವಣವೇದವೆಂದುದಾ ವೇಳೆ ಪರ
ಶಿವನೆನಿಸಿಕೊಂಬವಂ ಷಡ್ಭಾವ ತತ್ಪ್ರಕೃತಿ
ಯವಿರತಂ ವೈರಿಷಡ್ವರ್ಗ ಷಡ್ಭ್ರಮೆ ಷಡೂರ್ಮೆಯಾ ಮಲತ್ರಯಕ್ಕೆ
ವಿವರಿಸಲತೀತನಾ ಪ್ರಕೃತಿಗಂ ಪರವೆನಿಸಿ
ವಿವಿಧ ಯೋಗಿಗಳ ಹೃತ್‌ಸರಸಿಜದೊಳಾವಗಂ
ತವೆ ಸಚ್ಚಿದಾನಂದರಸ ಭರಿತನೆನಿಸಿಕೊಂಬವನೇ ಮಹೇಶ್ವರನಲ್ಲೆ ೧೯

॥ಅಥರ್ವಣ ಶ್ರುತಿ॥ಯೇ ಪ್ರಪಶ್ಯಂತಿದೇವೇಶಂ ಯದಂತಂ ಯತಯಃಪರಂ
ಮಹೇಶಂ ಪುರುಷಂ ರುದ್ರಂ ಸದೇವೋ ಭಗವಾನ್‌ಭವಃ ೪

ಇಂತು ಚಾತುರ್ವೇದವಿಸ್ವರಂ ಮಿಗಿಲು ನಿ
ಶ್ಚಿಂತ ಪರತತ್ವವೆಂದೆನಲಾಗಿ ಕೇಳ್ವುತ
ತ್ಯಂತ ಹಾಸ್ಯಂ ಮಾಡಿ ನಗುತ ನುಡಿದಂ ಬೊಮ್ಮನೆನ್ನ ಬಾಯೊಳು ಹುಟ್ಟಿದ
ಅಂತವಱಿನಿಂದೆನ್ನ ಮಕ್ಕಳೀ ಶ್ರುತಿಗಳೆನು
ತಂತಕಾಂತಕನ ಜರೆವುತ್ತಿರ್ದನಾ ಪಾಪಿ
ಯೆಂತು ಮೀಱುವನವಂ ಪೂರ್ವಕರ್ಮವನೆನುತ್ತಿರ್ದನಾಚಾರ್ಯನಿತ್ತ ೨೦

ಮರಳಿ ಬೊಮ್ಮಂ ನುಡಿದನಾ ಸ್ಮರಾಂತಕನಂತೆ
ಗಿರಿಜೆಗರವೈಗೊಡುವನೇ ಯಸ್ಥಿಚರ್ಮಮಂ
ಧರಿಸಿದವನೇಂ ಶುದ್ಧನೇಯುಗ್ರಸರ್ಪನಂ ತೊಟ್ಟಾತನೇಂ ಶಾಂತನೇ
ಉರಿವ ಕಿಚ್ಚಂ ಫಣೆಯೊಳಿಟ್ಟು ಸಮತೆಯನುಳ್ಳ
ಪಿರಿಯನೆನಿಸುವನೇ ಮಸಣದ ಬೂದಿಯಂ ಪೂಸಿ
ಯರರೆ ತಾಂ ಪೂಜ್ಯನೆಂದೆನಿಸುವನೆ ವೇದವೆಲ್ಲರ ಮಾತು ಹುಸಿಯೆಂದನು ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿತಕ್ಕೆ ಸತ್ಪ್ರಣಮವೆಯ್ದೆ ಮೂರ್ತಿಯ ತಳೆದು
ಮನಸಿಜಾಂತಕನ ಮಹಿಮೆಯನೊರೆದುದೆಲೆ ಬೊಮ್ಮ
ನಿನಗಳವಿಯೇ ಶಿವನ ಘನವಱಿಯೆ ಮರುಳನೊರ್ವನು ತನ್ನ ತಾಯಿ ಬಂಜೆ
ಯೆನೆ ಸಲ್ವುದೇ ಶಿವಮಹತ್ವವಱಿಯದೆ ಜರೆದ
ಡಸಿಮಿತ್ತ ಪಾಪಂ ಶಿವೋನ್ಮೇಷನಿಮಿಷವಂ
ಬನಿತಱೊಳು ಹರಿಯಜರು ಕೋಟಿಗಳು ಮಡಿವರೈ ನೀನೇತರವನೆಂದುದು ೨೨

ಪರಿಕಿಸಲು ತನ್ನ ರಾಗೋದ್ರೇಕದಿಂ ತನ್ನ
ನಿರದೆ ನೋಡಿದೊಡೆ ತನ್ನಯ ನಿಜವೆ ತನಗೆ ಸುರು
ಚಿರವಾಗಿ ತೋಱದೈ ಮಧುಪಾನಿ ತನ್ನ ಮುಱಿವಂದದಿಂ ಕೊರ್ಬವೇಡಾ
ಪರಶಿವನ ನಿನ್ನ ಸದ್ಭಾವದಿಂ ತಿಳಿಯದೆಲೆ
ಮರುಳುಬೊಮ್ಮನೆ ಕೆಡದಿರಾ ಸಚ್ಚಿದಾನಂದ
ಪರಿಪೂರ್ಣ ನಿತ್ಯಸ್ವರೂಪಶಿವನಂ ಶಿವಾತ್ಮಕನಂ ಪರಂಜ್ಯೋತಿಯಂ ೨೩

ತಿಳಿವೆನೆನೆ ನಿನ್ನನ್ನರಪ್ಪ ಭವದು:ಖಿಗಳಿ
ಗಳವೆ ಕರ್ಮದ್ವಯದೊಳುದಿಸಿ ವಿಕಳತೆಯೊಳಿಂ
ನಳವೆ ಮುಂಗಾಣದವರಿಗೆ ಸತ್ಯವೇ ಮಹಾದೇವದೇವಾಧೀಶನು
ನಳಿನಸಂಭವ ಕೆಡದಿರೆಂದಾ ಮಹಾಪ್ರಣವ
ವಳಿಕಾಕ್ಷನಗ್ಗಳವ ಪೇಳಲಜನಱಿದುದಿ
ಲ್ಲಿಳೆಯೊಳಜ್ಞಾನಿಗಳಿಗರುಪೆ ಬಲ್ಲರೆ ಶಿವಕಥಾಮಹಿಮೆಯೇಂ ಸೂರೆಯೇ ೨೪

॥ಪ್ರಣವ ಶ್ರುತಿ॥ ನಹ್ಯೇಷ ಭಗವಾನ್ಸತ್ಯಾತ್ಸ್ವಾತ್ಮನೋ ವ್ಯತಿರಿಕ್ತಯಾ
ಕದಾಚಿದ್ರಮತೇ ರುದ್ರಸ್ತಾದೃಶೋಽಪಿ ಮಹೇಶ್ವರಃ ೫

ಅಯಂ ಸ ಭಗವಾನೀಶ ಸ್ವಯಂ ಜ್ಯೋತಿಃಸನಾತನಃ
ಸ್ವಾನಂದಭೂತಾಕಥಿತಾ ದೇವೀನಾಗಂತುಕೀ ಶಿವಾ ೬

ಮೊದಲಲ್ಲಿ ಹರಿ ಪೇಳ್ದ ದಿವ್ಯ ಬೋಧೆಯನು ಮೀ
ಱಿದನಜಂ ನಾಲ್ಕುವೇದಂ ಬಂದು ಶಿವಮಹ
ತ್ವದ ಬಗೆಯನಱುಪೆ ಜಱಿದಂ ಮಹಾಪ್ರಣವಮೊರೆದಾ ವಿಚಾರವನೊಲ್ಲದೆ
ಮದಿಸಿ ನಾನೇ ದೈವವೆಂದು ಬೊಮ್ಮಂ ನುಡಿಯು
ಲದುಭುತದೊಳವನ ಚಿತ್ತದ ಮಲಿನದಂದದಿಂ
ಪುದಿದ ಪೆರ್ಗತ್ತಲೆಯೊಳಂಬರದೊಳಾಗ ಪೊಳೆದುದು ಶಿವನ ದಿವ್ಯತೇಜಂ ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಾರು ಚಂದ್ರಧರಕೋಟಿತೇಜಸ್ಸು ಮಂಡಲಾ
ಕಾರದಿಂದೆಸೆಯಲಾ ಮಧ್ಯದೊಳು ಮೆಱೆವುವಾ
ನಾರಿಯೊಳು ರೂಪುದೋಱುತ್ತಾ ಮಹೇಶ್ವರಂ ಬೊಮ್ಮನಂ ನುಡಿಸಲಾಗಿ
ಆರ್ಪೈದು ನೋಡಿ ತನ್ನೊಳಗೆ ಬಗೆದೆಂದನಾ
ವಾರಿಜಭವಂ ಮೊಗವನೆತ್ತಿ ನೋಡುವೊಡೇನು
ಕಾರಣಂ ತನಗೆಂದು ಮೇಲೊಂದು ತಲೆಯ ಹುಟ್ಟಿಸಿಕೊಂಡನಾ ಬ್ರಹ್ಮನು ೨೬

ಆ ವೇಳೆಯೂ ಮಹೇಶ್ವರನೆಂದನೆಲವೊ ರಾ
ಜೀವಭವ ನೀನೆಮ್ಮ ಬಲದ ಭುಜದೊಳು ಹುಟ್ಟಿ
ದೇವತ್ವಮಂ ಪಡೆದು ನಮ್ಮ ಮಱೆದಾ ಯೆನಲು ಕೊಬ್ಬಿ ನುಡಿದಂ ಬೊಮ್ಮನು
ಓವಿಯನ್ಯಾಲಯನ್ಯಸ್ತ ರಕ್ಷಾಶು ನೀ
ಪ್ರಾವಾಸಿನಂ ಸುಕರ್ತಾರ ಚರಣಂ ದಶತಿ
ಈ ವಿವರದಿಂ ಘೂರ್ಮಿಸುತ್ತೊಡೆಯುನಂತರವನಱಿಯದಾರ್ಭಟಿಸುತೆಂವಂ ೨೭

ಎಲೆಲೆ ಮಾಹೇಶ್ವರಾ ಬುದ್ಧಿಯಂ ಪೇಳ್ವಲ್ಲಿ
ಸುಲಭನೇ ನೀನು ನನಗೇನಪ್ಪೆ ಮದ್ಭಾಳ
ತಲದಲ್ಲಿ ಜನಿಸಿತಿಲ್ಲಾ ನನಗೆ ನಮಿಸೆಂದು ಗಳಹಲಜ್ಞಾನಿಬೊಮ್ಮಂ
ಮಲಹರಂ ಕೇಳ್ದು ಘೂರ್ಮಿಸುವ ಕೋಪಾನಲೋ
ಜ್ವಲವೊಂದು ಭೈರವಾಕಾರವಾದಾ ಮೂರ್ತಿ
ಯಲೆದು ಬೊಬ್ಬಿಡುತುಗುರಕೊನೆಯಿಂದಲರಿದಿಟ್ಟುದಾಗಲಜಮಸ್ತಕವನು ೨೮

ಭಲರೇ ಮಹಾದೇವ ಎಂದು ಕೀರ್ತಿಸಲು ಗಣ
ಕುಲವಾ ಜಲಪ್ರಳಯವೆಯ್ದೆ ಸಮನಿಸಲಾಗಿ
ಕೆಲವು ಕಾಲಕ್ಕೆ ಬೊಮ್ಮನ ಮುಂಡದಿಂ ಪೊಣ್ಮಿ ರಕ್ತವಾರಿಧಿ ಲೋಕವ
ವಿಲಯವೆಯಿದಿಸೆ ಸರ್ವರಾಹ ಘೋಳಿಡೆ ಮಹೋ
ಜ್ವಲಭಾಳನೇತ್ರಾಗ್ನಿಯೊಳಗೊಂದು ಕಿಡಿಯುನಾ
ಮಲಹರಂ ಪ್ರೇರಿಸಲು ನೆತ್ತರೆಲ್ಲವ ಹೀರ್ದುದಾ ನಿಮಿಷಮಾತ್ರದಲ್ಲಿ ೨೯

ಈ ವಿಲಯಮಂ ಕಳೆದೆವೆಂದು ಲೋಕಂ ಪೊಗಳ
ಲೋವಿ ಕೆಲವಾನುಕಾಲಕ್ಕಜನ ಮಸ್ತಕಂ
ಭೂವಳಯದೊಳಗುರುಳ ತೊಡಗಿತ್ತು ಪತಿರಹಿತವಾಗಿರ್ಪಕಥನದಿಂದ
ಆ ವೇಳೆಯಸಿಯ ಕಲ್ಲೆಡೆಯ ಮೆಣಸಂ ಗುಂಡು
ಶೀವಿಯರೆವಂತಖಿಳ ಲೋಕವಳಿವುತ ಮಹಾ
ದೇವಂಗೆ ಮೊರೆಯಿಟ್ಟರಾ ಘಣೆಯ ಕಣ್ಗೆಡಿಯ ಕೋಟ್ಯಂಶವೊಂದ ಕಳುಪೆ ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದು ಕಪಾಲದೊಳಿರ್ದ ಮಾಂಸವೆಲ್ಲವನು ನಿಮಿ
ಷದೊಳು ಕೊಂಡುದು ಗಂಹರತ್ವವಾಯಿತ್ತಲಾ
ಮೊದಲಾ ಮಹೇಶ್ವರಂ ಭೈರವಾಕಾರದ ಮಹಾರುದ್ರನಂ ನೋಡುತ
ಸದಮಲ ಭವಾನಿಸಹಿತೀಕ್ಷಿಸೆ ಚತುರ್ಮುಖಂ
ಗೊದವಿತ್ತು ಜೀವವಮೃತಾಕ್ಷಿಯಿಂ ಬಳಿಕ ಪೊಗ
ಳಿದನೆದ್ದು ದೇವಿಯುಂ ದೇವನಂ ಬೊಮ್ಮನೆಂತೆನಲಿದೇ ಸೋಮಾಷ್ಟಕಂ ೩೧

ಶ್ರೀ ಮಹಾದೇವಾಯ ತೇ ನಮೋ ಎನುತಲಾ
ಸ್ವಾಮಿಯುಂ ದೇವ್ಯೈ ನಮೋಯೆನುತ್ತೊಲಿದಂದು
ಮಾಮಾನಿನಿಯ ತಂದೆ ತಾಯಿಗಳಿರಾ ನಿಮಗೆ ವಂದಿಸುವೆ ನಾನೆನುತ್ತ
ಪ್ರೇಮದಿಂ ಶಾಂತನಾದೀಶ್ವರಂಗೆಱಗುವೆನ
ಲಾ ಮುದದೊಳಾ ಶಾಂತಿರೂಪಾದ ಶಿವೆಗೆ ನಾ
ನೇ ಮೋಹದಿಂದ ಶರಣೆಂಬೆನೆಂದಿಬ್ಬರಂ ಪೊಗಳುತಿರ್ದಂ ಬ್ರಹ್ಮನು ೩೨

ಜೋಕೆಯೋಂಕಾರ ಸದ್ಬ್ರಹ್ಮರೂಪಂಗೆ ವಿ
ದ್ಯಾಕಲೇವರೆಯಾದ ದೇವಿಗಂ ಶರಣೆಂಬೆ
ನಾ ಕಾಲರೂಪಿಗಂ ಮಾಯಾವಿಲಾಸಿಗಂ ವಂದಿಸುವೆನಕ್ಕರಿಂದ
ಆಕಾರ್ಯಸರ್ವಯಂತ್ರೀಕೃತಂಗಂ ಕ್ಷೋಭಿ
ಕಾ ಕಾಯೆಗಂ ಮೂಲ ಸತಿರೂಪೆಯೆನಿ
ಪಾ ಕಾಂತೆಯಾದಮ್ಮಗಂ ಮಹೇಶ್ವರಮೂರ್ತಿಗೆಱಗುವೆಂ ಭಕ್ತಿಯಿಂದ ೩೩

ವಿತತ ವಿಜ್ಞಾನದೇಹವನುಳ್ಳ ದೇವಗಂ
ಸ್ಮೃತಿರೂಪೆಯೆನಿಪಮ್ಮಗಂ ರುದ್ರಗಂ ಮಹೋ
ನ್ನತಿಯಾದ ರುದ್ರಾಣಿಗಂ ಪ್ರಕೃತಿರೂಪೆಗಂ ನಾರಾಯಣಾಖ್ಯವುಳ್ಳ
ಶಿತಿಕಂಠಗಂ ಯೋಗವುಂ ಕೊಡುವ ದೇವಿಗಂ
ಪ್ರತಿರಹಿತಯೋಗಿಗಳ ಗುರುರೂಪಗಂ ಭೂತ
ತತಿಗೆ ಸಿರಿಯಂ ಕೊಡುವಗಂ ಮಹಾಯೋಗದಾಯೆಗಂ ನಮೋ ನಮೋ
ಯೆಂಬೆನು ೩೪

ಆರಯ್ಯೆ ಸಂಸಾರನಾಶಗಂ ನಾಡೆ ಸಂ
ಸಾರದುತ್ಪತ್ತಿಕಾರಣೆಗೆ ನಿತ್ಯಾನಂದ
ಕಾರಣದ ವಿಭುವಿಗಾನಂದಮೂರ್ತಿಗೆ ಕಾರ್ಯಹೀನನೆನಿಸುವ ದೇವಗಂ
ಸೇರಿ ವಿಶ್ವಪ್ರಕೃತಿರೂಪೆಯೆನಿಪಮ್ಮಗೋಂ
ಕಾರಮೂರ್ತಿಗೆ ತದಂತಸ್ಥಗಂ ವ್ಯೋಮಸಾ
ಕಾರಸಂಸ್ಥಿತಗೆಯಾ ವ್ಯೋಮಶಕ್ತಿಗೆ ನಮೋ ನಮೋ ಯೆಂದನಾ ಬ್ರಹ್ಮನು ೩೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೋಮಾಷ್ಟಕ

॥ಬ್ರಹ್ಮ್ರಉವಾಚ॥ ನಮೋ ದೇವಾಯ ಮಹತೇ ಮಹಾದೇವ್ಯೈ ನಮೋನಮಃ
ನಮಶ್ಶಿವಾಯ ಶಾಂತಾಯ ಶಿವಾಯ್ಯೈ ಶಾಂತಯೋ ನಮಃ ೭

ಓಂ ನಮೋ ಬ್ರಹ್ಮಣೇ ತುಭ್ಯಂ ವಿದ್ಯಾಯ್ಯೈ ಚ ನಮೋ ನಮಃ
ನಮೋ ನಮಸ್ತೇ ಕಾಲಾಯ ಮಾಯಾಯ್ಯೈ ಚ ನಮೋನಮಃ ೮

ನಿಯಂತ್ರೇ ಸರ್ವಕಾರ್ಯಾಣಾಂ ಕ್ಷೋಭಿಕಾಯ್ಯೈ ನಮೋಸ್ತುತೇ
ನಮೋ ಮೂಲಪ್ರಕೃತಯೇ ಮಹೇಶಾಯ ನಮೋನಮಃ ೯

ನಮೋ ವಿಜ್ಞಾನದೇಹಾಯ ಸ್ಮೃತಯೇಚ ನಮೋನಮಃ
ನಮೋ ನಮೋಸ್ತು ರುದ್ರಾಯ ರುದ್ರಾಣ್ಯೈ ಚ ನಮೋನಮಃ ೧೦

ನಮೋಸ್ತುತೇ ಪ್ರಕೃತಯೇ ನಮೋ ನಾರಾಯಣಾಯ ಚ
ಯೋಗದಾಯ್ಯೈ ನಮಸ್ತುಭ್ಯಂ ಯೋಗಿನಾಂ ಗುರುವೇನಮಃ ೧೧

ಭೂತಯೇ ಸರ್ವಭೂತಾನಾಂ ನಮೋ ಯೋಗಾರ್ದಯೇ ನಮಃ
ನಮಃ ಸಂಸಾರನಾಶಾಯ ಸಂಸಾರೋತ್ಪತ್ತಯೇ ನಮಃ ೧೨

ನಿತ್ಯಾನಂದಾಯ ವಿಭವೇ ನಮೋಸ್ತ್ವಾನಂದಮೂರ್ತಯೇ
ನಮಃಕಾರ್ಯವಿಹೀನಾಯ ವಿಶ್ವಪ್ರಕೃತಯೇ ನಮಃ ೧೩

ಓಂಕಾರ ಮೂರ್ತಯೇ ತುಭ್ಯಂ ತದಂತಸ್ಸಂಸ್ಥಿತಾಯತೇ
ನಮಸ್ತೇ ವ್ಯೋಮಸಂಸ್ಥಾಯ ವ್ಯೋಮಶಕ್ತ್ಯೈನಮೋನಮಃ ೧೪

ಇತಿ ಸೋಮಾಷ್ಟಕೇನೇಶಂ ಪ್ರಣಮ್ಯ ಸಪಿತಾಮಹಃ
ಪಪಾತ ದಂಡವದ್ಭೂಮೌ ಗಣನ್ವೈ ಶತರುದ್ರಿಯಂ ೧೫

ಇಂತು ಸೋಮಾಷ್ಟಕದೊಳೀಶನಂ ದೇವಿಯಂ
ಸಂತಸದೆ ಕೀರ್ತಿಸುತ ಶತರುದ್ರಮಂತ್ರದಿಂ
ದಂ ತನ್ನ ತಲೆಯುನರಿದಾ ಮಹಾರುದ್ರನಂ ಕೀರ್ತಿಸಲು ಶಂಭು ಮೆಚ್ಚಿ
ಅಂತಜನನಂಜಬೇಡೆಂದು ಸಂತೈಸುತ್ತ
ಮುಂತಿಹ ಮಹಾರುದ್ರನೊಡನಾ ಮಹೇಶನ
ತ್ಯಂತ ಕರುಣದೊಳು ನುಡಿದಂ ಬ್ರಹ್ಮನೆನಗಿವಂ ಹಿರಿಯ ಮಗನೆಲೆ ರುದ್ರನೆ ೩೭

ಇವನ ಕೊಲ್ಲದಿರಿವನ ಕೂಡಹಂಕರಿಸಿದಾ
ನವವೈರಿಯಜ್ಞನಿರ್ದಪನವಂ ಮೊದಲಾದ
ದಿವಿಜಾದಿಗಳ ಗರ್ವಮಂ ಮುರಿವುದೆನುತಜಾ ನಿನ್ನಿಷ್ಟವೇನೆಂದೆನೆ
ಶಿವನಡಿಗೆ ನಮಿಸಿ ಬಿನ್ನವಿಸಿದಂ ಜೀಯ ನಿ
ಮ್ಮುಮವನೆ ಜರಿದೆನ್ನರಿದ ತಲೆಯು ಬಾಯೊಳಗೆ ರ
ಕ್ತವನೆ ಕಱೆಯಿಸುವಂದದಿಂದ ಭಿಕ್ಷಾಟಣವನೆಸಗಬೇಕಭವ ಯೆಂದ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಬಿನ್ನವಿಸಿದಂ ಬೊಮ್ಮನಂದೆಲೆಲೆ ದೇ
ವೋತ್ತಮನೆ ನಿನ್ನ ದಕ್ಷಿಣಭುಜದೊಳೆಯ್ದೆ ಪು
ಟ್ಟುತ್ತೆ ಸನಕಾದಿಗಳ ಸೃಜಿಸಲವರೆಯ್ದಲು ನವಬ್ರಹ್ಮರಂ ನಿರ್ಮಿಸಿ
ತತ್ತಕಾರಣದೊಳವರಿಂದಖಿಳವಾಗೆ ಕೊ
ರ್ಬುತ್ತೆ ಕಾಳ್ಗೆಡೆದೆನ್ನ ತಲೆ ನಿನ್ನ ಹಸ್ತದೊಳಿ
ರುತ್ತಿರಲಿ ಮುಂದೆ ಗರ್ವಿಸದಂತೆಯಾಂ ಚತುರ್ಮುಖದಿಂದಲಿಹೆನೆಂದನು ೩೮

ವಾರಿಜೋದ್ಭವನ ಬಿನ್ನಪವನವಧರಿಸುತಂ
ತಾ ರುದ್ರನಂ ನೋಡಿಯೀ ಕಪಾಲವನಾಂತು
ಘೋರಭಿಕ್ಷಾಟಣವನೆಸಗೆಂದು ನೇಮಿಸುತ್ತಾ ಮಹೇಶ್ವರನಕ್ಕರಿಂ
ಗೌರಿಯೊಳು ಕೈಲಾಸಪುರವನೆಯ್ದಿದನತ್ತ
ಲೀ ರುದ್ರಮೂರ್ತಿ ಭೀಕರಕಪಾಲವನಾಂತು
ದಾರುಣದೊಳೆಯ್ದೆ ಘುಡು ಘುಡಿಪ ಗಣನಿಕರದೊಳು ನಡೆದನದನೇಂ
ಪೊಗಳುವೆಂ ೩೯

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮುಂ ಕೂರ್ತು ಪದನಂ ಮಾಡಿದಂ ೪೦

ಇದು ವೀರಶೈವ ಷಟ್‌ಸ್ಥಲ ಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಪಾತ್ರೆಯಾಂತನಾ ರುದ್ರನೆನಲೊಂದು ಕಾಂಡದ ಮೇಲೆ
ಸಂಧಿಯೆರಡು ೪೧

ಅಂತು ಸಂಧಿ ೨ ಕ್ಕಂ ಪದನು ೧೨೦ ಕ್ಕಂ ಗ್ರಂಥ ೪೫ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೨

ಹರಿ ಸುರಪ ಯಮಮೃತ್ಯುವರುಣಯಕ್ಷೇಶ ಮಂ
ದಿಮುಖ್ಯದಲ್ಲಿ ಭಿಕ್ಷಾಟಣಮನೆಸಗಿ ಗಣ
ವರರೊಳಿರ್ದಲ್ಲಿಯಂತರ್ಧಾನವೆಯ್ದಿದಂ ಲೀಲಾವಿನೋದಮೂರ್ತಿ

ಹರನ ವಿರಹದ ವನಿತೆಯೊರ್ವಳೀಕ್ಷಿಸುತಸ್ತ
ಗಿರಿಯಿನನ ಕಿಚ್ಚಿನ್ನು ಸುಡಬರುತ್ತಿದೆ ಸಖಿಯೆ
ಪರಿಕಿಸೆನಲುರಿಯಲ್ಲವೆನೆ ಹಿತವೆಯೇ ನೀನದಲ್ಲದೊಡೆ ಸದ್ವಿಪ್ರರ
ಕರದಂಜಲಿಯೊಳದಕ್ಕಿದಿರಾಗಿ ನೀರ್ದಳಿವ
ಪರಿಯಾವುದೆಂಬಳಂ ಮೂರ್ಛೆಯೊಳು ಸಂತೈಪ
ಕರುಣಾಳು ಭಿಕ್ಷಾಟಣದ ಶಾಂತಮಲ್ಲ ನೀನಲ್ಲದೀ ಲೋಕಕಿಲ್ಲ ೧

ಅಪವಿತ್ರದಜನ ತಲೆಯೋಡ ಪಿಡಿದಿಂದಿರಾ
ಧಿಪನ ಮಸ್ತಕರಕ್ತಭಿಕ್ಷಮಂ ಕೈಕೊಂಡ
ನೆಪಕೆ ಸುಜನರು ಜಟಿಯೆ ಶಿವನೆ ಮೇಲಣ ಗವಿಯು ಚರಲಿಂಗಸಂದೋಹದ
ಕೃಪೆಯ ಸಿಂಹಾಸನಾಗ್ರಣಿ ಸದಾಚಾರದಿಂ
ಸುಪವಿತ್ರರೂಪಾಗಿ ತನ್ನ ಸಾರ್ದರ ಕೃತಾ
ರ್ಥಪರ ಮಾಡಿದ ಶಾಂತನಂಜೇಶ್ವರನ ಕೀರ್ತಿಪಂ ಲೋಕಕೇಂ ಧನ್ಯನೊ ೨

ಎಲೆ ಗುರುವೆ ಸಚ್ಚಿದಾನಂದ ನಿರ್ಮಲಮೂರ್ತಿ
ಹಲಗೆಯಾಚಾರ್ಯ ಕೈಲಾಸಕ್ಕೆ ಸರ್ವಮಂ
ಗಳೆಯೊಳೀಶ್ವರನೆಯಿದಲಾ ಶಿವಾಂಶದ ಭಯಂಕರ ರುದ್ರನುರೆ ಬೊಮ್ಮನಾ
ತಲೆಯೋಡನಾಂತು ಭಿಕ್ಷಾಟಣಕೆ ನಡೆದನೆಂ
ದಲಘುದೇಶಿಕ ಪೇಳ್ದಿರಿಲ್ಲಿಂದಮೇಲಾವು
ದೊಲಿದು ನಿರವಿಪುದೆನಲು ಕೆಂಚವೀರಾಪ್ಪಯಾ ಕೇಳೆಂದು ನುಡಿದನಾರ್ಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಡ್ಗುಣ್ಯೈಶ್ವರ್ಯಸಂಪನ್ನರುದ್ರಂ ಜಗ
ದ್ರಾಡ್ಘನವಿಗ್ರಹಂ ಜಡೆಮುಡಿಯ ಘನವಿಶ್ವ
ಸ್ಸ್ರಡ್ಗರಿಮ ಮಸ್ತಕಕರಂ ಕಾಲಭೈರವಂ ನೀಲಲೋಹಿತಪೂರ್ಣನು
ತ್ರಿಷಡ್ಗೌರವಾಂಗ ಸ್ವತಂತ್ರ ದಿವ್ಯಾಮಯ ವಿ
ರಾಡ್ಗೇಹ ನಿರವಗ್ರಹಾಂಗ ಪರಿವೃತನಿಶಿತ
ಖಡ್ಗಾದಿಗಳ ಪಿಡಿದ ಗಣನಿಕರದೊಳು ನಡೆದನಾರ್ಭಟಿಸುತಾ ರುದ್ರನು ೪

ಭೂತಗಣದಿಂ ರುದ್ರಸಂದೋಹದಿಂ ಮಹಾ
ಖ್ಯಾತ ಸತ್ಪ್ರಮಥಕೋಟಿಗಳ ವಿಸರಂಗಳಿಂ
ದಾತತ ಸುರಾಸುರಾವಳಿಗಳ ಮಹಾಗರ್ವವೆಂಬ ತೀಂಟೆಯ ತೀರ್ಚುವ
ಈ ತೆಱದ ರಕ್ತಭಿಕ್ಷದ ನೆವದೊಳಾ ಪರಂ
ಜ್ಯೋತಿರ್ವಿಶ್ವಾತ್ಮ ನಿಶ್ಚೈಸಿ ಲೋಕತ್ರಯದೊ
ಳೋತು ಚರಿಸಲುತೊಡಗಿದಂ ವಿಕೃತವೇಷಿಯಂಗವ ನಿಜಪ್ರಭೆ ಮುಸುಕಲು ೫

ಶ್ರೀಮತ್ಪವಿತ್ರರುಚಿರಂ ಲೋಚನತ್ರಯ ಮ
ಹಾಮಹಿಮ ಕಾಲಾಗ್ನಿಕೋಟಿಸಂಕಾಶನುಱಿ
ಸಾಮರ್ಥ್ಯದಿಂ ಪ್ರಜ್ವಲತ್ಕೇಶಸಂಕಾಶಿದಂಷ್ಟ್ರಾಕರಾಳವದನಂ
ಆ ಮಹಾಜಲದ ನಿಸ್ವನದಿಂ ಮಹಾ ಡಮರು
ಗಾ ಮಹಿತ ನಿಸ್ವನದೊಳೊಡೆಯುಲೀ ಬ್ರಹ್ಮಾಂಡ
ಮಾ ಮುಝುರೆ ನಡೆದ ರುದ್ರನ ಮಹೋಗ್ರವನೆಯ್ದೆ ಪೊಗಳಲಳವೇ ಧರೆಯೊಳು ೬

ಪರಶುತ್ರಿಶೂಲವಾ ಪರಿಘ ಖಡ್ಗಾದಿಗಳ
ನಿರದಾಂತವರೊಳು ಕೋಟಿಗಳಿಂದ ನಡೆವ ಸೌಂ
ದರಿಯುನಂ ಸುಭಗನಂ ಕೋಟಿಕಾಮರ ಪಳಿವ ರೂಪಿನಿಂದಿರ್ಪೀಶನಂ
ಇರದೆ ಕಂಡಾಗ ವನಿತಾಜನಂ ತನತನಗೆ
ಪರಿದು ಬಳಿವಿಡಿದೆಯಿದೆ ಪಾಡುತಂ ನರ್ತಿಸು
ತ್ತರರೆ ಕೊಂಡಾಡುತೊಡನೆಯಿತರಲ್ ನಡೆದನಾ ದೇವನಘವನದಾವನು ೭

||ಸಾಕ್ಷಿ|| ಸ್ವರೂಪಗ್ರಂಥ

ಬ್ರಹ್ಮಾಂಡಪುರಾಣೇ–ತತಸ್ಸ ಭಗವಾನೀಶಃ ಕಪರ್ದೀ ನೀಲಲೋಹಿತಃ
ಗ್ರಾಹಯಾಮಾಸ ವದನಂ ಬ್ರಹ್ಮಣಃ ಕಾಲಭೈರವಃ ೧

ಸ್ವತಂತ್ರಪರಿಪೂರ್ಣಶ್ಚ ನಿರವಗ್ರಹ ವಿಗ್ರಹಃ
ಭೂತಪ್ರಮಥರುದ್ರಾಣಾಂ ಕೋಟಿಭಿಃ ಪರಿವಾರಿತಃ ೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಾನಾಂ ದಾನವಾನಾಂಚ ತದನ್ಯೇಷಾಂಚ ಮಾದ್ಯತಾಂ
ರಕ್ತಭಿಕ್ಷಾಚ್ಛಲೇನೈವ ಗರ್ವಕಂಡೂಂ ಹರಾಮ್ಯಹಂ ೩

ಇತಿ ನಿಶ್ಚಿತ್ಯ ವಿಶ್ವಾತ್ಮಾ ಚಚಾರ ಭುವನತ್ರಯಂ
ಆಸ್ಥಾಯ ವಿಕೃತಂ ವೇಷಂ ದಿವ್ಯಮಾನಂ ಸ್ವತೇಜಸಾ ೪

ಶ್ರೀ ಮತ್ಪವಿತ್ರಂ ರೂಪಂಚ ಲೋಚನತ್ರಯಸಂಯುತಂ
ಕಾಲಾಗ್ನಿಕೋಟಿಸಂಕಾಶ ಪ್ರಜ್ವಲತ್ಕೇಶಸಂಹತಿಃ ೫

ದಂಷ್ಟ್ರಾಕರಾಳವದನೋ ಮಹಾ ಜಲದನಿಸ್ವನಃ
ಮಹಾ ಡಮರುಗಧ್ವಾನದೀರ್ಣವಿಶ್ವಾಂಡಪಿಂಡಕಃ ೬

ತ್ರಿಶೂಲ ಖಡ್ಗ ಪರಶು ಪ್ರಮುಖಾಯುಧಕೋಟಿಭಿಃ
ಅಲಂಕೃತ ಮಹಾಬಾಹು ಪರಿಘ ವ್ಯೂಹಶೋಭಂ ೭

ತಂ ದೃಷ್ಟ್ವಾ ಕಾಲವದನಂ ಶಂಕರಂ ಕಾಲಭೈರವಂ
ರೂಪ ಲಾವಣ್ಯಸಂಪನ್ನಂ ನಾರೀಕುಲಮಗಾದನು ೮

ಬಿರಿದೆತ್ತಿ ಕರೆವ ಕಹಳೆಗಳಿಂದ ಚೆಲ್ವ ಚಾ
ಮರಗಳಿಂ ಸೂಳೈಪ ನಿಸ್ಸಾಳಕೋಟಿಯಿಂ
ತರತರದ ಸೀಗುರಿಗಳಿಂ ಬಟ್ಟಮುತ್ತುಗಳ ಬೆಳ್ಗೊಡೆಗಳೇಳ್ಗೆಯಿಂದ
ಕರವೆತ್ತಿ ಮುಗಿದು ಕೀರ್ತಿಸುವ ಲೋಕಾಧೀಶ
ಪುರುಷರಿಂ ಜಯರವದ ಮುನಿಗಳಿಂದಾಗ
ಭೀಕರರುದ್ರನೈತರುತ್ತಿರ್ದನತಿಶಯರೌದ್ರನಧಿಕಮಹಿಮಾಸಮುದ್ರ ೮

ಲೋಕಪದಿನಾಲ್ಕರೊಡೆಯಂ ರೌದ್ರದಿಂ ನಡೆದು
ವೈಕುಂಠಮಂ ಪೊಕ್ಕು ಹರಿಯ ಪಿರಿಯರಮನೆಯ
ನಾ ಕಾಲಭೈರವಂ ಪೊಗೆ ವಿಷ್ಣುವಂಶ ವಿಷ್ವಕ್ಸೇನನೆಂದೆನಿಪ್ಪ
ಭೀಕರ ಗದಾ ಖಡ್ಗ ಚಕ್ರ ಪದ್ಮಾಧಿಕ
ಸ್ವೀಕೃತಚತುರ್ಬಾಹು ಬಾಗಿಲೊಳ್ ತಡೆಯಲು ಪಿ
ನಾಕಿ ಘೂರ್ಮಿಸುತಂ ತ್ರಿಶೂಲದಿಂದವನನಿರಿದೆತ್ತಿಕೊಂಡೊಳಪೊಕ್ಕನು ೯

ಹರನಲ್ಲಿ ಭಿಕ್ಷಮಂ ಬೇಡುವನಿತಕ್ಕೊಳಗೆ
ಹರಿ ಮಹಾಲಕ್ಷ್ಮಿಸಹಿತಿರ್ದು ಪೊರಮಡುತಲೆ
ನ್ನರಮನೆಗೆ ಭಿಕ್ಷೆಕೆಯಿತಂದನೀಶ್ವರನೆಂದು ಚಕ್ರದಿಂ ನಿಜಭಾಳದ
ಸೆರೆಯ ಬಿಡಿಸುತ್ತ ರಕ್ತದ ಧಾರೆಯಂ ತದೀ
ಶ್ವರನ ಹಸ್ತದ ಕಪಾಲದೊಳೀಯೆ ದಿವ್ಯಸಾ
ವಿರವರುಷ ಪರಿಯಂತರಂ ಸುರಿಯೆ ಬಿಂದುಮಾತ್ರಂ ತೋಱದಡಗಿತಲ್ಲಿ ೧೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ತೆಱದೊಳಾ ರುಧಿರವೆಯ್ದೆ ಸುರಿಯಲು ವಿಷ್ಣು
ಧಾತುಗೆಟ್ಟಿಳೆಯಲ್ಲಿ ಬೀಳಲೀಕ್ಷಿಸಿ ಜಗ
ತ್ರಾತನೆನಿಸುವ ರುದ್ರನಮೃತಮಯ ದೃಷ್ಟಿಯಿಂ ನೋಡೆ ಚೇತನವೊದಗುತ
ಆ ತತುಕ್ಷಣದೊಳೇಳುತ್ತ ಸಾಷ್ಟಾಂಗದಿಂ
ದೋತು ವಂದಿಸೆ ನಸುನಗುತ್ತಲೇಳೇಳೆಂದು
ಭೂತನಾಥಂ ಹರಿಯ ಸಂತೈಸಲೆದ್ದು ಕೀರ್ತಿಸಿದನಾ ಸರ್ವೇಶನಂ ೧೧

ದೇವ ಬಿನ್ನಪವಿದೇಂ ಕಾರಣಂ ಭಿಕ್ಷಾಟ
ಣಾವತಾರಂ ನಿರೂಪಂಗೆಯ್ವುದೆನೆ ನುಡಿದ
ನಾ ವಿರೂಪಾಕ್ಷನೆಲೆ ಹರಿ ಕೇಳ್ವುದಜನಹಂ ಬ್ರಹ್ಮಯೆನಲಾಗಿ ನೀನು
ಆ ವೇದವಾ ಪ್ರಣವವೆಯ್ದೆ ಬೋಧಿಸೆ ಕೇಳ
ದಾ ವಿಗಡನೆಮ್ಮ ಜಱೆಯಲು ತಲೆಯುನರಿದು ಭಿ
ಕ್ಷಾವಿಚಾರದೊಳೀಗ ಬಂದೆವೈ ಮಱೆದೆಯಾಯೆನಲಱಿದನಾ ಮುರಾರಿ ೧೨

ಅಹುದಹುದು ಜೀಯ ನಾನೇಂ ಬಲ್ಲೆನಜ್ಞಾನಿ
ಬಹಿರಂತರಂಗದೊಳು ನಿನ್ನಯ ಕೃಪಾಮಾತ್ರ
ವೆಹಗಾಡಿಸಿದ ತೆಱದೊಳಾಡುತಿರ್ಪಾತನಲ್ಲದೆಯದೇಂ ಸ್ವಾತಂತ್ರನು
ಅಹಿಭೂಷಣಾ ರಕ್ಷಿಸೆನಲಾತನಂ ಸಲಹಿ
ಬಹಳ ಗಣನಿಕರದಾರ್ಭಟದಿಂದ ನಡೆದನಾ
ಸಹಸಿಗಂ ದೇವೇಂದ್ರನಮರಾವತಿಯ ಪುರಕ್ಕಾಗಿ ವೈಭವವೆಸೆಯಲು ೧೩

ಬರಬರಲು ಶಂಭು ವೈಭವದಿಂದಲಾಗಳಾ
ಸುರಪನಮರಾವತಿಯ ಪುರದ ಬಹಿರೋದ್ಯಾನ
ದಿರವತಿ ಮನೋಹರಂಬೆತ್ತು ರಾಜಿಸುತಿರ್ದುದದಱ ಸೊಬಗಧಿಕವಲ್ಲಿ
ಪರಿಕಿಸಲ್ಕೀಳೆ ಕಿತ್ತೀಳೆ ಮಾದಲಂ ಹಲಸು
ಸುರಹೊನ್ನೆ ತೆಂಗು ಕೌಂಗಳಳೆಂಬ ಪೆಸರಾದ
ತರುಗಳೆಲ್ಲಱ ಗುಣವನೊಳಕೊಂಡು ಕಲ್ಪವೃಕ್ಷಂಗಳಿಂ ರಾಜಿಸಿದುದು ೧೪

ವರ ನವಾಂಕುರಕಳಿಕೆ ಬಿರ್ಚುಗೊನರಾ ಕೊನ
ರ್ತರದೆ ಕೆಂದಳಿರು ತಳಿರಾ ಪಸುರ್ವಡೆದೆಲೆಗ
ಳಿರದೆ ಸಿಕ್ಕಾಸಣ್ಣನನೆಯೆಸೆವ ಬಲ್ನನೆಗಳಾ ಮೊಗ್ಗೆಯಂತರಲ್ವ
ಅರಲರಲ್ವರಲು ನಸುಮಿಡಿ ಸಿಂಪು ಸಿರ್ವಿಡಿಗ
ಳಿರದಾ ಬಳಲ್ಮಿಡಿಗಳಲ್ಲಿ ಬಲ್ಮಿಡಿ ಕಾಯ್ಗ
ಳರರೆ ನಸುದೋರೆ ದೋರೆಗಳಱುದುರೆವಣ್ಣು ತನಿವಣ್ಣೊಳಿಮ್ಮಾವೆಸೆದುದು ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಳೆ ನೆರೆ ಫಲವಾಗಿ ಭೂಮಿಯೊಳ್ಬಡಿದುದಾಂ
ಬಾಳೆಯೆನ್ನಯ ಕಂದಗಳ ನೋಡಿ ಸಲಹೆಂದು
ಮೌಳಿಯಂ ಬಾಗಿದಂದದೊಳು ತೋಱಿದವೊಲೆ ತಲೆವಾಗಿಯಿರ್ಪವಲ್ಲಿ
ಬೀಳ್ವ ಪುಷ್ಪಾಂಜಲಿಗಳೇ ಪುಷ್ಪ ಜಾಳ ಮಕರಂದವೈ
ಬೀಳುತಿಹ ಕಣ್ಣ ನೀರೆನಲು ಕೈಲೆಡೆಗೊಡುವ
ಜೋಳಿಯೆನಲೆಸೆದವಾ ಮಧ್ಯದೊಳುಪೊಕ್ಕು ಬರುತಿರ್ದನಾ ಪ್ರಮಥನಾಥಂ ೧೬

ನಗರೋಪಕಂಠವಾ ಗಜಹಯಾಭ್ಯಾಸದಿಂ
ಮಿಗೆ ಮೆಱೆವ ರಾಜಪುತ್ರರ ವೈಭವಂಗಳಿಂ
ದ ಗಣಿತದ ಪಟುಭಟನಿಕಾಯದಿಂದೊಪ್ಪುತಿರಲಲ್ಲಿಗೆ ಮಹಾದೇವನು
ಪೊಗಳಿ ಬಿರಿದೆತ್ತಿ ಕೀರ್ತಿಸುತಿಪ್ಪ ಚಂಡಕೀ
ರ್ತಿಗಳ ಪೆಂಪಿಂದಂ ಮಹಾವಾದ್ಯಘೋಷದಿಂ
ಸೊಗಸಿಂದಲೆಯಿತರುತ್ತಿರ್ದನಮರಾವತಿಯ ಪುರಿಗೆ ದನುಜರ್ಕಳರಿಗೆ ೧೭

ಬಡಜತಿಯುಗಸ್ತ್ಯಸೀಂಟಲ್ಬಗೆಯುಲಂಗ್ಯೆಯೊ
ಳಡಗಿತ್ತು ಮರಿಗಪಿಗೆಯೊಂದು ಧಿಂಕಾದತ್ತು
ಹುಡುಗನೆನಿಸುವ ಪಾರ್ವನಾ ಪರಶುರಾಮನೆಚ್ಚಂಬಿಗೊಳಗಾದುದಬ್ಧಿ
ಗಡ ಸರಿಯೆ ನನ್ನ ಘಾತಕ್ಕೆಂದು ಬಹು ತೆರೆಗ
ಳೊಡನೆ ಪಾಯ್ದುಬ್ಬುಮುಖದಿಂ ಪರಾಗದ ತಂಬು
ಲೆಡೆವಿಡದೆ ಸೂಸೆ ಜಲಪಕ್ಷಿರವದಿಂ ನಗುವವೋಲಗಳು ಮೆಱೆವುದಲ್ಲಿ ೧೮

ಕನಕಮಯಕೋಂಟೆಯಿಂ ಮಣಿದೆನೆಗಳಿಂದ ಸೊಂ
ಪಿನ ವಜ್ರಮಯಮಹಾದ್ವಾರಬಂಧಂ ಕವಾ
ಟನಿಕಾಯದಿಂ ಮಕರ ಬಿಬ್ಬಿ ಪೇರಟ್ಟಣೆಗಳಮರನಾಯಕರ ಕಾಪ್ಪಿಂ
ಇನ ಸೋಮವೀಥಿಗಳ ಸಿಂಗರದೊಳಾ ಸರ್ವ
ಜನವೈಭವಂಗಳಿಂದಂಗಡಿಗಳೇಳ್ಗೆಯಿಂ
ಮನಕೆ ಮಂಗಳವೆನಿಸುವಮರಾವತಿಯ ಪುರಕ್ಕೆಯಿತಂದ ನಮ್ಮ ರುದ್ರಂ ೧೯

ಅಳ್ಕಿ ಬೆಟ್ಟವನೇಱಿ ನೀರೊಳಗೆ ಪೊಕ್ಕು ನೆರೆ
ಕಾಳ್ಕಿಱಿಯ ಪುಲ್ಲಗ್ಚೈತಿಂದೆಂಜಲಂ ಭಂಗ
ದೋಳ್ಕೂಡಿದೆಮ್ಮನೀ ಪುರದ ಬೀದಿಯೊಳಕಟ ಕಟ್ಟಿ ತೂಗುತ್ತಿರ್ಪರು
ಕೋಳ್ಕಯ್ಯದೇವಯೆಂದುರೆ ದೂರುತಿರ್ಪೊಂದು
ಮಾಳ್ಕೆಯಿಂ ಮಾಣಿಕಂ ಮುತ್ತು ನೀಲಂ ಪಚ್ಚೆ
ಗಳ್ಕೇರಿಯಂಗಡಿಯೊಳೆಸೆಯೆ ಬರುತಿರ್ದನೀರೇಳ್ಕನಜ್ಜಗ
ದೊಡೆಯನು ೨೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುರುಷರೆಯ್ತರೆ ಬೀದಿಯಲ್ಲಿ ಮಾರ್ಪೊಳೆಯಲಾ
ಹರಿಯಾಣದಲ್ಲಿ ತೋರ್ಪಲ್ಲಿ ನಡೆವಲ್ಲಿ ಕಳಿ
ದಿರದೆಯಿದಿದಲ್ಲಿಯುತ್ಪತ್ತಿ ರಕ್ಷಣೆ ಸಂಹರಂಗಳಂ ದೇವ ನಿನ್ನ
ಕರುಣದಿಂ ಮಾಡುವವೆನಿಪ್ಪಂತೆ ರನ್ನಗಳ
ಪಿರಿಯ ಪಾತ್ರೆಯ ಪಸರವೆಸೆವ ಕೇರಿಯೊಳಖಿಳ
ಗುರುನಮಿತಜನಕಲ್ಪತರು ದೋಷಗಿರಿಮಹಾಸ್ವರು ಬರುತ್ತಿರ್ದನಲ್ಲಿ ೨೧

ತರುಣಿಯೊರ್ವಳು ತನ್ನ ಕಡೆಗಣ್ಣ ಬೆಳಗಿನಿಂ
ದಿರದೆ ಚಂಪಕಮಾಲೆ ಪಿರಿಯ ಮಲ್ಲಿಗೆಯೆಂಬ
ಪರಿಯನೊಡರಿಚಿ ಬಳಿಕ್ಕರುಣಾಧರದ ಕೆಂಪಿನಿಂದ ಬಂದುಗೆಯ ದಂಡೆ
ಯಿರವೆನಿಸಿ ನಡಃಗಣ್ಣ ಕರ್ವಳಗಿನಿಂ ಮುನ್ನ
ಪರಮ ನಿನಗಿದಿರಾದ ದುಷ್ಟ ಮನ್ಮಥನ ಪೂ
ಸರಕರಿದು ಕರಿಯ ಮಲ್ಲಿಗೆಯ ಸರವಾದುದೆಂಬಂತೆ ಪಿಡಿದೆಸೆದಳಲ್ಲಿ ೨೨

ದಿಟ್ಟಿಮೂಱರ ದೇವನಖಿಳ ವೈಭವದೊಳಾ
ಪಟ್ಟಣದೊಳೆಯಿತರುತ್ತಿರೆ ಸೇವಕರ್ಪರಿದು
ಕಟ್ಟೊಡೆಯಃ ದೇವೇಂದ್ರ ಚಿತ್ತೈಸು ಕೋಟಿಕಾಮರ ಗೆಲ್ವರೂಪಿನಿಂದ
ಇಟ್ಟಣಿಸುವಾ ಪ್ರಮಥಕುಲದಿಂದ ಕೈಯೊಳಳ
ವಟ್ಟಧಿಕತರ ಕಪಾಲಂ ಸಹಿತ ಹರಮೂರ್ತಿ
ದಿಟ್ಟನೋರ್ವಂ ಪುರವನೊಳಪೊಕ್ಕು ಬರುತಿರ್ಪನೆಲೆ ಜೀಯ ಕೇಳೆಂದರು ೨೩

ಕೇಳಿ ದೇವೇಂದ್ರನೆನ್ನೊಡೆಯನನುಪಮ ರುದ್ರ
ಭಾಳನೇತ್ರಂ ಕೂರ್ತು ಚಿತ್ತೈಸುತಿರ್ಪನವ
ನಾಳೆನ್ನ ಭಾಗ್ಯಕ್ಕೆಣೆಯಿಲ್ಲೆನುತ ಪುರವ ಸಿಂಗರಿಸವೇಳ್ದು ನಿರ್ಜರ
ಜಾಳದಿಂದಧಿಕ ನಾನಾಸಂಭ್ರಮಂಗಳಿಂ
ಮೇಳೈಸಿ ಬಂದಿದಿರ್ಗೊಳುತಿರ್ದನೀಶನಾ
ವೇಳೆ ಪುರವೀಥಿಯೊಳು ಬಪ್ಪಲ್ಲಿ ನೋಳ್ಪ ಸತಿಯರ ಸಿಂಗರಂ ಮೆಱೆದುದು ೨೪

ನವಿಲಲರ್ವಕ್ಕಿಯರೆವೆರೆ ಕರ್ವುವಿಲ್ಮೀನ್ಗ
ಳವು ಮೆಱೆವ ನೀರಜಂ ಶಂಖ ಚಂಪಕಮಾಲೆ
ನವಕನಕಘಟವಸಿತ ಸರ್ಪನಾ ಸರಸಿ ಗಿರಿ ಬಾಳೆ ಬತ್ತಳಿಕೆ ತಳಿರು
ಇವರ ಮುಡಿಕುರುಳ್ಪಣೆಯುಮಾ ಪುರ್ಬು ಕಣ್ಮೊಗಂ
ಪ್ರವಿಮಲದ ಕೊರಲು ತೋಳ್ಮೊಲೆ ಬಾಸೆ ಪೊಕ್ಕುಳೊ
ಪ್ಪುವ ಜಘನ ಊರು ಕಿಱಿದೊಡೆಯಡಿಯ ರೂಪಾಗಿ ಮೆಱೆವ ಪೆಣ್ಗಳು
ನೆರೆದುದು ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರ ನುಡಿ ಯತಿವರರ ಬಾಯ ಹುಡಿ ಭಾವಿಸ
ಲ್ಕಿವರ ಬಾಹುಗಳು ಸಜ್ಜನರ ಬೇಹುಗಳು ಬಳಿ
ಕಿವರ ಚೆಲ್ವಿನ ತುರುಬು ಸುಜ್ಞಾನಿಗಳ ಸದಾಚಾರಿಗಳ ಮನದ ಬಿರುಬು
ಇವರ ನಲ್ವಿನ ದೇಹ ಉತ್ತುಮರ ದಾಹವಿಂ
ತಿವರ ನಡೆಯುನಘರಸುಗಳಿಗಿದೇ ಕಡೆಯೆಂಬ
ಯುವತಿಯರು ಬಂದರಾ ದೇವದೇವೇಶನಂ ನೋಡೆ ತಮತಮಗೆ ಕೂಡೆ ೨೬

ಜಾಣ್ಗೆ ನೆಲೆವನೆಯೆನಿಪ ಮಱುದುಂಬಿಯಂ ಪೋಲ್ವ
ನುಣ್ಗುರುಳು ಪೆರೆವಣೆಯ ಬಟ್ಟವೊಲೆಗಳ ಮೆಯ್ಯ
ತಣ್ಗಂಪನುಳ್ಳ ನವ್ಯಾಭರಣ ವಸ್ತ್ರಲೇಪನ ಕುಸುಮದಿಂ ಕಾಮನ
ಗೆಣ್ಗೆ ಸಮವೆನಿಸುವಾರ್ಕರ್ಶಾಂತಮಾಗಿರ್ಪ
ಕಣ್ಗೆಳಗ್ಗದ ಜಾಣ್ಮೆಯೆನೆ ಪಸರಿಸಿಹ ಚೆಲ್ವ
ಪೆಣ್ಗಳೆಯಿತರುತ್ತಿರ್ದರೀಶನೆಡೆಗೇನವರು ನಾಣ್ಗಾದೆಯನಿತರವರೆ ೨೭

ದೇವ ಕೇಳೆಮ್ಮ ವೊಲೆಯೊಳಗಲ್ಲದಮಳವಚ
ನಾ ವಿಶೇಷದೊಳಿಲ್ಲ ಕರ್ಕಶಂ ನಮ್ಮ ಚರಿ
ತಾವಳಿಯೊಳಿಲ್ಲವಳಕಂಗಳೊಳಗಲ್ಲದಾ ವಕ್ರತ್ವವೆಂಬುದಭವಾ
ಓವಿ ಚಿತ್ತದೊಳಿಲ್ಲ ವಿಚಲತೆಯಪಾಂಗದೊಳ
ಗಾವಗಮದುಂಟಲ್ಲದೆಂಬಂದದಿಂದಲಾ
ಭಾವಕಿಯರೀಕ್ಷಿಸುತ್ತಿರ್ದರೀಶನ ಸುಪ್ರಕಾಶನ ವಿಯತ್ಕೇಶನಂ ೨೮

ಶೌರಿಯಜನಧಿಕಜಂಭಾರಿಗಳ ಮೋಹನಾ
ಕಾರಿಯರು ಸುಜನಸಂಹಾರಿಯರು ಕಾಮವಿ
ಸ್ತಾರಿಯರು ಯತಿನಿಕರಘೋರಿಯರು ಸೌಖ್ಯಹೃತ್ಪೂರಿಯರು ಮುನಿಹೃದ್ಧನಾ
ಚೋರಿಯರು ಕಡೆಗಣ್ಕತಾರಿಯರು ಸದ್ಗತಿಯ
ದಾರಿಯಂ ತೊಲಗಿಪಾಕಾರಿಯರು ಮದನಭರ
ಭಾರಿಯರು ತದ್ಗುಣಾಪಾರಿಯರು ಚೆಲ್ವಾದ ನಾರಿಯರು ಮೆಱೆದರಲ್ಲಿ ೨೯

ಸಾರಕುಂಕುಮ ಯಕ್ಷಕರ್ದಮಾಲೇಪವ
ಕ್ಷೋರುಹೆಯರಮಲವಸ್ತ್ರಾಭರಣಸದಲಂ
ಕಾರೆಯರು ಮಲ್ಲಿಕಾ ಜಾತಿ ಚಂಪಕಮುಖ್ಯಕಬರೀಸಮೇತ
ನಾರಿಯರು ಕೆಲಬಲದೊಳೋಲೈಸಿ ಬರುತಿರಲು
ಭೇರಿ ಮದ್ದಳೆ ಚಾಮರಂ ಛತ್ರವಾದ್ಯಗಂ
ಭೀರಶೋಭನದಿಂದಲಿದಿಗೊಂಡನೀಶನಂ ಪ್ರೇಮದಿಂದಮರೇಂದ್ರನು ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂಡಾ ಮಹಾದೇವನಡಿಗಳ್ಗೆ ಸಾಷ್ಟಾಂಗ
ದಂಡಪ್ರಣಾಮಮಂ ಮಾಡಿ ವಂದಿಸುತಲಾ
ಖಂಡಲಂ ಬಳಿಕೆದ್ದು ಕರಕಮಲಮಂ ಮುಗಿದು ಹರುಷಜಲವುಗೆ ಕಣ್ಣೊಳು
ಹಿಂಡೇಳ್ವ ಪುಳಕದಂಕುರ ಗದ್ಗದಸ್ವರಂ
ಮಂಡನದೊಳಿಲೆ ದೇವ ಬರ್ದುಕಿದೇಂ ಜೀಯಶತ
ಚಂಡಕರ ತೇಜಯೆಂದಾಗ ಕೀರ್ತಿಸಿ ಶಚಿಯ ನೋಡಿ ನುಡಿದಂ ಸುರಪನು ೩೧

ಎಲೆ ಸೊಬಗೆಯೆನಿಸುವಿಂದ್ರಾಣಿ ಕೇಳೌ ನಮ್ಮ
ಕುಲಕೋಟಿ ಪಾವನಂಬಡೆದಿತ್ತು ಶಂಭು ನಿ
ರ್ಮಲ ಪರಾತ್ಪರನಪ್ಪ ಸದಾಶಿವ ಮಹೇಶ್ವರ ದಿವ್ಯರೂಪನಡಿಯು
ಜಲ ಜಭವ ವಿಷ್ಣುಮುಖ್ಯರು ಭಜಿಸಿ ಪುಟ್ಟಿಸುವ
ಸಲಹುವಧಿಕಾರವಂ ಪಡೆದರಾ ದೇವಕುಲ
ತಿಲಕನೆಮ್ಮಾಲಯಕೆ ಕೂರ್ತು ಬಿಜಯಂಗೆಯ್ದನೆಂದನಾ ದೇವೇಂದ್ರನು ೩೨

ಇವನ ಕಣ್ಣೆವೆಯ ಚಲನಂಗಳಿಂ ಬ್ರಹ್ಮಾಂಡ
ನಿವಹಂಗಳುದಯಿಸುವವೌ ಕೂಡೆ ಬೆಳೆವವೌ
ಕುವಲಯೇಕ್ಷಣೆ ಕೇಳು ಸಂಹಾರವಪ್ಪವಿವನಿಂ ಮೇಲೆ ಪರತತ್ತ್ವವು
ಭುವನದೊಳಗಿಲ್ಲವಂತಾ ಮಹಾದೇವನೇ
ಸವಿಲಾಸದಿಂದ ಬಿಜಯಂಗೆಯ್ದನಾಂ ಕೃತಾ
ರ್ಥವಿಶೇಷನೆಂದು ಕೀರ್ತಿಸುತಿರಲು ಬಂದು ಸುರಪನ ಭವನಮಂ ಪೊಕ್ಕನು ೩೩

ಕುಂದಣದ ಕಿರಣದ ಮಿಸುಪ ಚಿಂತಾರತ್ನ
ವೃಂದದುಪ್ಪರಿಗೆಗಳ ಸುರಕುಜಂ ತೀವಿರ್ದ
ನಂದನದ ಸುರುಚೇವಣೆಯ ಪರುಷದರೆಯ ಪೀಯೂಷಸರಸಿಗಳ ದಿವ್ಯ
ಮಂಗಿರವನೊಳಪೊಕ್ಕು ದೇವದೇವೇಶನಾ
ನಂದದಿಂ ಸುರಗಣ ಮುನಿಪ್ರಕರದೊಡವೆರಸಿ
ನಿಂದಡಭವಂಗೆ ಕೈಮುಗಿದು ಬಿನ್ನವಿಸಿದಂ ದೇವೇಂದ್ರನಾನಂದಿಸಿ ೩೪

ದೇವ ಬಿನ್ನಪವೀ ಕಪಾಲವಿಡಿದೆಯ್ತಪ್ಪ
ದಾವ ಕಾರಣವೆನಲು ನಸುನಗುತ ಲೆಕ್ಕಿಸದೆ
ಪಾವನಮಹೇಶ್ವರಂ ಸುಮ್ಮನಿರೆ ಕಂಡು ಭೃಂಗೀಶ್ವರಂ ನುಡಿದನಾಗ
ಶ್ರೀ ವಿಶ್ವವಲ್ಲಭನ ಬೆಸಗೊಂಬೊಡೆಲವೊ ನೀ
ನಾವಸಾಮರ್ಥ್ಯನೈ ದೇವೇಂದ್ರ ಭಿಕ್ಷಮಂ
ಸಾವಧಾನದೊಳು ನೀಡೈ ಬೇಗವೆನಲಹುದು ಜೀಯಯೆಂದಳ್ಕಿ ಸುರಪಂ ೩೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದಾ ಯಥಾಶಕ್ತಿ ಭಿಕ್ಷಮಂ ಶಚಿಗೂಡಿ
ತಂದರ್ಪಣಂಗೆಯ್ಯೆ ತಿರಿಗಿದಂ ದೇವಗಣ
ವೃಂದದೊಡನಾ ಮಹೇಶ್ವರನಲ್ಲಿ ಶಿವವಿರಹದಿಂದಖಿಳ ಸುರಸತಿಯರು
ಮುಂದುಗೆಟ್ಟಱಿವುಗೆಟ್ಟಾಸತ್ತು ಬೇಸತ್ತು
ಕಂದಿ ಕುಂದುತ್ತ ಬೆಂಬತ್ತಿದರು ಚಿದ್ಗಗನ
ಪೆಂದೆನಿಸುವೀಶನಂ ಗಿರಿಜೆಯಧಿನಾಥನಂ ಹಳವಳಿಸಿ ಬಾಯ್ವಿಡುತ್ತ ೩೬

ಮುಡಿಸಡಿಲಿ ಬೆನ್ನನಲೆಯುತ್ತ ಮತ್ತಾ ಚೆಲ್ವ
ನುಡಿಯ ಕಾಂಚೀಧಾಮ ಕಟಿಸೂತ್ರವಳಿದು ಪೆಂ
ಪಡರ್ದ ನಿರಿ ಜಗುಳ್ದು ಮರ್ಮಸ್ಥಾನವೆಯ್ದೆ ನಸುದೋಱಿ ಮೈಮಱೆದು
ಬಾಯ
ಬಿಡುತಕ್ಕಟಾ ನಲ್ಲನೇ ಸೊಬಗನೇ ಹರಣ
ದೊಡೆಯನೇ ಕರುಣದಿಂ ಕಾಯೆಮ್ಮನೆಂದು ಬೆಂ
ಬಿಡದೆ ಬರುತಿರ್ದರಮರಾವತಿಯ ನಾರಿಯರು ತಮ ತಮಗೆ ಕಂಗೆಡುತ್ತ ೩೭

ಮಿಗೆ ಮೀಱಿ ನಡೆದನೀಶ್ವರನಿತ್ತಲತ್ತಲಾ
ನಗರದೊಳು ತಮತಮಗೆ ಕಂಗೆಟ್ಟು ವಿರಹದಿಂ
ಜಗದೀಶನಂ ಕಾಣದಳಲುತಿಪ್ಪರ ಕಂಡು ಸುಪ್ರೌಢೆಯರು ಸತಿಯರ
ಬಗೆಯ ಬಿತ್ತರಿಸತೊಡಗಿದರು ಸರ್ವೇಶನಿವ
ರಿಗೆ ಮೇಣು ವಶವಪ್ಪನೇ ವೇದವೃಂದವಾ
ವಗಮೆಯ್ದಯುಂಜುತ್ತ ಕೀರ್ತಿಸುವವೆಂದೊಡವನಾಪೊರ್ಗಳಲಳವು ೩೮

ಏವೇಳ್ವೆನಾ ಕೋಟಿಕಂದರ್ಪರಂ ಗೆಲ್ವ
ರೂಪನುಳ್ಳೀಶ್ವರಂಗೆಳಸಿದರೆ ವಶವಹನೆ
ಯಾ ಪರಾತ್ಪರನ ಹಣೆಗಣ್ಣಿಂದ ಬೆಂದಂಗಭವನಾಗಿಯುಳಿದ ಕಾಮ
ಭೂಪನಂಬಿನ ಮೊನೆಗೆ ಗುರಿಯಾದರೆಂದು ನಾ
ನಾ ಪರಿಯೊಳೋರೋರ್ವರಿರವ ಬಿತ್ತರಿಸಿದರ
ಲಾ ಪರಮ ಸುಪ್ರೌಢೆಯರು ಬಳಿಕ್ಕದರ ಬಗೆಯೆಂತೆನಲು ನಾಂ ಪೇಳ್ವೆನು ೩೯

ಇವರ ಮೆಯ್ಯೆಂಬ ತಿದಿಯಿಂದುಃಸುರು ಬಾಯ್ಬಾಯೊ
ಳವಿರತಂ ಸೂಸೆ ವಿರಹಜ್ವರದ ಕಿಚ್ಚುರಾ
ಗವನಿವರ ಬಾಯ್ದರೆಯೆ ಕೆಂಡವಾ ಮೂಗು ಮೂಗೊಲೆಯಾಗೆ ಚೆಲ್ವಪುರ್ಬು
ಅವು ಮಿಸುಗುವಿಕ್ಕುಳಾಗಲ್ ಪಿಡಿದು ತಾನಂಗ
ಭವನೆನಿಪ ಕಾರುಕಂ ಕಣ್ಣೆಂಬ ಬಾಣಮಂ
ಯುವತಿಯರ ಕಂಬನಿಗಳಿಂ ನೀರನೂಡುತಿರ್ದಪನೆಂದು ನುಡಿದರಲ್ಲಿ ೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಹಿಣಿಯುದೊರ್ವಳಿಂತೆಂದಳಾ ಸಖಿಗಕ್ಕ
ಇರದೊಂದಿನಂ ನೂರು ವರುಷವಾಗಿಹುದುಂಟೆ
ಕರದ ಬಳೆಗಳು ಬೆಳದವೇಕಾದ ನೀರ್ಗಳಂ ತುಂಬುವರೆ ಪೇರ್ಗೊಣದೊಳು
ಇರುಳು ಸೂರ್ಯಂ ತೋರ್ಪನೇ ಚಂದನಂ ಮೆಯ್ಯೊ
ಳುರಿವುದೇ ಪೇಳು ನೀಂ ಪಲವುದಿನದವಳಾನು
ತರಳೆಯೆಂದಾ ಮಹಾದೇವನಂ ಕಾಣದಕ್ಕಟ ಸುಯ್ಯು ಬಾಯ್ವಿಟ್ಟಳು ೪೧

ಮತ್ತೊರ್ವಳಿಂತೆಂದಳೆಲೆಯಕ್ಕ ಶಿವನೆನ್ನ
ಚಿತ್ತದೊಳಗಿರ್ದು ಕಾಮಾಗ್ನಿಯಿಂ ಬೇಯುನೊಸ
ರುತ್ತಿಪ್ಪ ಕಣ್ಣನೀರೊಳ್ಮುಳುಂಗಂ ಕಣ್ಣೊಳಂ ಕಟ್ಟಿದಂತಿರುತ್ತ
ಎತ್ತಣಗ್ನಿಸ್ತಂಭವಾ ಜಲಸ್ತಂಭವಾ
ದತ್ತವಂಗೆನೆ ನುಡಿದಳಾಕೆ ಪಣೆಗಣ್ಣೊಳರು
ಪುತ್ತಖಿಳಮಂ ಪ್ರಳಯಜಲಕಣವನಾಂತ ನಿತ್ಯಂಗಿದೇನರಿದೆಂದಳು ೪೨

ಪವನನಾಹಾರದಿಂ ತಳಿರ ಪೊದ್ದಿಹುದಱಿಂ
ಶಿವನ ನೆನೆವಕ್ಕರಿಂ ಕಮಲನಾಮಗಳನು
ಳ್ಳವಿಶೇಷಜಲನಿಲಯದಿಂದ ನಾಗಿಣಿಯಾಗಿ ತಪ್ಪಳಿಂದಕಿಯಾಗುತ
ಪ್ರವರಯೋಗಿಣಿಯಾಗಿಯಾ ಲಕ್ಷ್ಮಿಯಾಗಿ ಮ
ತ್ತಿವಳು ಶಂಭುವನೆ ಬಿಡದಿಟ್ಟಿಪಕ್ಷಿಯೊಳೆ ನಿಜ
ದಿವಿಜವಧುವಾಗಿ ಮೂವಿಧಿಯಲ್ಲದೈದುತೆರನಾದಳೆಂದಳು ವಿದಗ್ಧೆ ೪೩

ಎಂದು ನಾನಾ ಪ್ರಕಾರದೊಳು ಬಿತ್ತರಿಸುವದ
ಱಿಂದ ಮಿಗಿಲೆನಿಪ ವಿರಹದೊಳು ಪೊರಳಲು ಸತೀ
ವೃಂದಮಮರಾವತಿಯೊಳತ್ತ ಬಳಿಕಿತ್ತ ಸರ್ವೇಶ್ವರಂ ಸಂಭ್ರಮದೊಳು
ಮುಂದೆ ನೆಗಪಿದ ವೃಷಧ್ವಜದ ನಿಸ್ಸಾಹಣಂ
ದಾಂಧಳಂ ಧಳಮೆನಲುಘೇಯೆಂಬ ಗಣನಿಕರ
ದಿಂದ ವೈಭವವೆರಸಿ ಯಮುನ ಪಟ್ಟಣದತ್ತ ನಡೆದನಾ ನಿತ್ಯರೂಪಂ ೪೪

ಒಡನೆ ಬರುತಿರ್ಪ ಹರಿ ದೇವೇಂದ್ರ ಮುಖ್ಯರು
ಗ್ಘಡದಿಂದ ಕೀರ್ತಿಸೆ ವಿಧೂಮಗಣನಾಯಕಂ
ಕಡುಪಿನಿಂ ನೂರುಯೋಜನದ ಹರಹಿನ ಶುಭ್ರಮೌಕ್ತಿಕಛತ್ರವದಕಂ
ತೊಡಿಸಿರ್ದ ರತ್ನಮಯದಂಡವಂತದನೆಯ್ದೆ
ಪಿಡಿದು ಬರಲಾ ಭಗಘ್ನಂ ಶ್ವೇತಕೇತುಗಣ
ರೆಡಬಲಂಗಳೊಳು ವೀಜನ ಚಾಮರಂಗಳಿಂ ಸೇವಿಸಲು ನಡೆದನಭವಂ ೪೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಮರವನಿತೆಯರು ತಾಂಡವಮುಖ್ಯನೃತ್ಯವು
ತ್ತಮರೂಪಮುಖವೆನಿಸುವಂಗವಂಗಾದಿಯೆನಿ
ಪಮಲ ಸಂಚಾರಿಗಳಿಗನುಚಿತವೆ ಮೊದಲಾದ ಭಾವಂಗಳಿಂ ಗಿರಿಜೆಯು
ರಮಣನಿದಿರೊಳು ನರ್ತನಂಗೆಯ್ಯಲಧಿಕಸಂ
ಭ್ರಮದಿಂದಲಂತಕನ ರಕ್ಷಿಸಲು ಬಗೆದು ಸಂ
ಯಮನಿಯ ಪುರಕ್ಕೆ ಬಿಜಯಂಗೆಯ್ದನಧಿಕಸ್ವತಂತ್ರನಾನಂದದೀದ ೪೬

ಉಪವನಂಗಳ ಪೆಂಪಿನಿಂದ ಚೆಲ್ವಂ ತಳೆದ
ವಿಪುಳ ಕಾಸಾರಂಗಳಿಂದ ಮಣಿಗೋಂಟೆಯಿಂ
ದಪರಿಮಿತ ಸಿಂಗರದ ಗೋಪುರಂಗಳ ಮಿಸುಗುವುಪ್ಪರಿಗೆಗಳ ಸೊಬಗಿನಿಂ
ನೆಪದೊಳೆಡೆಯಾಡಿ ಪುರುಷರನೆಯ್ದೆ ಸೋಲಿಸುವ
ಚಪಲಲೋಚನೆಯರಿಂದಾ ಪುರಂ ಮೆರೆದಿರಲ್
ತ್ರಿಪುರಾರಿಯಖಿಳ ಸುರಗಣನಿಕರದೊಳು ಬಂದು ಪೊಕ್ಕನಾನಂದದಿಂದ ೪೭

ಯಮನೀಶ್ವರನ ಬರವನರಿದು ಸಂತೋಷದಿಂ
ರಮಣಿಯಾ ಛಾಯೆಯೊಳು ಪೊರಮಟ್ಟು ದಿವ್ಯಸಂ
ಭ್ರಮದೊಳಿದಿರ್ಗೊಂಡು ಸಾಷ್ಟಾಂಗದಿಂ ವಂದಿಸುತ್ತಿದ್ದು ನಿಜಹಸ್ತವೆಂಬ
ಕಮಲವಮಂ ಮುಗಿದು ಕೀರ್ತಿಸಿದನೆಲೆ ದೇವ ಜಯ
ಸುಮನೋವಿಲಾಸ ಹರಿಯಜಮುಖ್ಯರಾಣ್ಮ ಜಯ
ರಮಣೇಯ ಲೋಕಪತಿ ಮತ್ಕರ್ತ ಮದ್ಭರ್ತಯೆಂದನಾನಂದದಿಂದ ೪೮

ಮಾದೇವ ಚಿತ್ತೈಪುದಾಂ ಧರ್ಮರಾಜನಿಂ
ದಾದೆ ನಾನೇ ಧನ್ಯನೆಂದು ಕೀರ್ತಿಸುತೆ ಸಂ
ಮೋದದದೆ ಯಥಾಶಕ್ತಿ ಭಿಕ್ಷಮಂ ನೀಡಿ ಹರಿ ದೇವೇಂದ್ರರಂತೆ ಕೂಡೆ
ಪಾದಸೇವೆಯ ಮಾಡುತ್ತೈತರಲು ಬಳಿಕಲಾ
ಹ್ಲಾದದಿಂ ಸರ್ವೇಶ್ವರಂ ವಾದ್ಯಸಂಕುಳಂ
ನಾದಿಸಲುಘೇಯೆಂಬ ಗಣನಿಕರದೊಡನೆ ಮೃತ್ಯುವಿನ ಮನೆಗೆಯಿತಂದನು ೪೯

ಯಮನನುಜ್ಞೆಯೊಳು ಕೂರ್ತಾ ವಿಶ್ವಕರ್ಮನು
ತ್ತಮರನ್ನಮಯ ಹರ್ಮ್ಯ ಕೋಟೆಗಳ ಸೌಖ್ಯದಿಂ
ನಿಮಿಷದೊಳು ಶಂಭು ಮೃತ್ಯುವಿನ ಭವನಕೆ ಬರ್ಪ ದಾರಿಯೊಳು ಪರಿನಿರ್ಮಿಸೆ
ಅಮರ್ದವರಮೇಲಿರ್ದು ದಿವ್ಯಪುಷ್ಪಾಂಜಲಿಯ
ಕಮಲಮುಖಿಯರು ಮಾಡಿ ಕೀರ್ತಿಸುತ ನರ್ತಿಸಲು
ರಮಣೀಯ ಸೌರಂಭದಿಂದ ಲುಂಬಲೆಯಗೃಹಮಂ ಪೊಕ್ಕನಖಿಳದೊಡೆಯಂ ೫೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾನಾ ಗಣಂಗಳೊಡನೆಯಿತರಲು ದೇವನದ
ನಾನಂದದಿಂದ ಕಂಡಾಗಲಂತಾ ಮೃತ್ಯು
ಮಾನಿನಿ ನಿಜಾಂತರಂಗದೊಳು ಚಿಂತಿಸಿದಳೀ ಸಾಕ್ಷಾತ್ ಸರ್ವೇಶ್ವರಂ
ತಾನೆ ಬಿಜಯುಂಗೆಯ್ವುತಿರ್ಪನೊಡೆಯಂಗೆ ನಾ
ನೇನನರ್ಪಿಸುವೆನೆಂದಿದಿರುವಂದಭವಂಗೆ
ಸಾನುರಾಗದೊಳು ಸಾಷ್ಟಾಂಗದಂಡಪ್ರಣಾಮಂ ಮಾಡಿ ಬಳಿಕಲೆದ್ದು ೫೧

ಕರಕಮಲವಂ ಮುಗಿದು ದೇವ ನಿನಗಿದು ಭಿಕ್ಷೆ
ಇರದೆ ಕೈಕೊಳ್ಳೆಂದು ಹಸ್ತದಭಿನಯವೆರಸಿ
ತರುಣಿ ಕುಣಿದಳು ನೃತ್ಯಭಿಕ್ಷಕ್ಕೆ ಕೂರ್ತು ದಣ್ಣನೆ ದಣಿದು ಸರ್ವೇಶನು
ಹರುಷದಿಂ ಬಿಗಿಯಪ್ಪಿ ಮಗಳೆ ಲೇಸಾಯ್ತೆಂದು
ಕರುಣದಿಂ ಕೀರ್ತಿಸುತ್ತಿರಲಿವಳ ಭಾಗ್ಯಕ್ಕೆ
ಸರಿಯಾರೆನುತ್ತೆ ಕೊಂಡಾಡಿದುದು ಸುರಮುನಿವ್ರಾತವಾನಂದದಿಂದ ೫೨

ಆ ವೇಳೆ ಸಲುಗೆಯೊಳು ಬಿನ್ನವಿಸಿದಳು ಮಹಾ
ದೇವಂಗೆ ದೇವದೇವೇಶ ಕರುಣಾಕರನೆ
ಪಾವನಾತ್ಮಕನೆ ಪರಮ ಸ್ವತಂತ್ರಾಧೀಶ ಸಕಲ ಲೋಕಂಗಳೊಡೆಯ
ನೀವು ಭಿಕ್ಷಕ್ಕೆಂದು ಕೂರ್ತು ಬಿಜಯಂಗೆಯ್ವ
ದಾವ ಕಾರಣವೆನಲು ನಸುನಗುತ ವದನರಾ
ಜೀವವಲರಲು ನುಡಿದನಂದುಲುಂಬಲೆಯೊಡನೆ ಕೈತವದೊಳಗಜೇಶನು ೫೩

ಎಲೆ ಮಗಳೆ ಕೇಳು ಲುಂಬಲೆ ಬೊಮ್ಮನೈದನೆಯ
ತಲೆಯನರಿದೆವು ಕಣಾ ಕೋಪದಿಂದಂತವನ
ಕೊಲೆಯ ಸಂಬಂಧದಿಂದೀ ಕಪಾಲವನಾಂತು ಭಿಕ್ಷಾಟಣವನಮರರ
ನಿಲಯದೊಳು ರಚಿಸುತಿಹೆನೆನೆ ಕೇಳ್ದು ನಗುತ ಕರ
ಜಲಜವಂ ಮುಗಿದು ಬಿನ್ನವಿಸಿದಳು ಜೀಯ ನಿ
ರ್ಮಲ ನಿನ್ನ ಮಗಳೊಡನಿದೇನಣಕವೆಂದು ಕೀರ್ತಿಸುತಾಕೆಯಿಂತೆಂದಳು ೫೪

ದೇವ ನಿನ್ನಾಜ್ಞೆಯಿಂ ನಾಂ ಬ್ರಹ್ಮರಂ ಪಲವು
ಸಾವಿರವನೊಂದೊಂದು ದಿನದಲ್ಲಿ ಕೊಲ್ವೆನೆನ
ಗಾವ ಪ್ರಕಾರದಿಂ ಬ್ರಹ್ಮೇತಿಯಿಲ್ಲ ಗಡ ಪರಮಸ್ವತಂತ್ರ ನಿನಗೆ
ಈ ವಾಕ್ಯವೇಕೆ ಸುಮಹತ್ಪಾತಕಂಗಳಂ
ಭೂವಳಯದೊಳು ಮಾಡಿದವರು ನಿನ್ನಂಘ್ರಿರಾ
ಜೀವಮಂ ನೆನೆಯೆ ಮುಕ್ತಿಯನೆಯ್ದುವರ್ ಕಂಡ್ಯ ನಿನಗದೆಲ್ಲಿಯ ಪಾತಕಂ ೫೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದು ಬೇಡವಯ್ಯ ನೀನಖಿಳವುಂ ನಿನ್ನ ಭಾ
ಳದ ಪಾವಕಾಕ್ಷಿಯುಂ ತೆಗೆದು ಸುಡುವಲ್ಲಿ ಕೇಳ್
ಪದಿನಾಲ್ಕು ಲೋಕವೆಲ್ಲಂ ಬೆಂದು ಬೂದಿಯಪ್ಪಲ್ಲಿಯುಳಿದಾ ಬ್ರಹ್ಮರ
ವಧೆಯುಂಟೆ ನಿನಗೆ ಬಿಡುಬಿಡುಯಿದೆಲ್ಲಿಯ ಮಾತು
ಉದಿಸಿದಾದಿತ್ಯನಿದಿರಲಿ ನಿಲ್ವುದೇ ತಮಂ
ಸದಮಲನೆಯೆಂದು ಬಳಿಕಂ ಶಿವನ ಮುಂದೆ ಕುಣಿದಳು ಮೃತ್ಯುದೇವಿ ನಲಿದು ೫೬

ಕಂಡು ಶಿವಗಣನಿಕರವಾ ಮುನೀಶರು ಸುರರ
ತಂಡವಾನಂದಿಸುತ ಕೀರ್ತಿಸಿದರೆಲೆ ತಾಯೆ
ಖಂಡಪರಶುವಿನ ಕರುಣಂಬಡದೆಯೌ ನೀನೆನುತ ಪೊಗಳಲು ಶಂಕರಂ
ಚಂಡಕರಕೋಟಿತೇಜೋಮಯಂ ತಿರುಗಿ ಮುಂ
ಕೊಂಡು ವರುಣನ ಶುದ್ಧವತಿಯು ಪುರದತ್ತ ನಡೆ
ಗೊಂಡನಾನಂದದಿಂದಾ ಮಹಾದೇವವೈಭವವನಾರ್ ಬಣ್ಣಿಸುವರು ೫೭

ಈ ವಾರ್ತೆಯುಂ ಕೇಳ್ದು ನಲಿದೆದ್ದು ಘನಮಹಾ
ದೇವನೆನ್ನಾಣ್ಮ ಬಿಜಯಂಗೆಯ್ವುತಿರ್ದಪಂ
ಪಾವನನ ಪಾದಾಬ್ಜಮಂ ಕಂಡು ನಾಂ ಕೃತಾರ್ಥತೆವಡೆವೆನೆಂದು ಕೂರ್ತು
ಶ್ರೀವಿಭವದಿಂದಲಿದಿರೆದ್ದು ಸಾಷ್ಟಾಂಗಮಂ
ಭೂವಳಯದಲ್ಲಿ ವಿರಚಿಸಿ ವರುಣನಲ್ಲಿ ನಿಜ
ಭಾವಕಿಸಹಂ ಕೂರ್ತು ಕೀರ್ತಿಸುತ್ತಿರ್ದನಂತಾ ಸ್ತೋತ್ರವೆಂತೆಂದಡೆ ೫೮

ದೇವ ನೀನಾದಿ ನೀನೇಯನಾದಿಸ್ವರೂ
ಪಾವತಾರಂ ಸರ್ವತೋಮುಖಂ ಪ್ರಭುವಲಾ
ಗೋವಿಂದ ಕಮಲಜರಿಗೊಡೆಯನೆ ಸಹಸ್ರಾಂಶನೇಜಗನ್ಮಯನೆ ವಿಭುವೇ
ಭಾವಿಸುವೊಡಾದ್ಯಂತವಿಲ್ಲದನೆ ಸರ್ವೇಶ
ವೊವೀ ಸರ್ವಾಧಾರ ನಿನಗೆ ಶರಣೆಂಬೆನಂ
ದಾ ವರುಣನಖಿಳ ವಾದಿಗಳೊಡನೆ ಕೂರ್ತು ಕೀರ್ತಿಸುತಿರ್ದನಳ್ತಿಯಿಂದ ೫೯

ಆವವಂ ನಿತ್ಯನಕ್ಷರಮವ್ಯಯಂ ನಿಶ್ಚ
ಯಾವತಾರಂ ಪ್ರಭುವನಾದಿಪುರುಷನು ಯೆಂದು
ವೋವಿಯಾ ಪಂಚಭೂತಾಖ್ಯಂ ಮಹದ್ಭೂತವೆಸೆವಯೋನಿಜನೆನುತ್ತ
ಆವ ಕಾರಣವಿಲ್ಲದಜನಧಿಕ ಶುದ್ಧನೆಂ
ದೀ ವಿಚಾರದೊಳು ಕೀರ್ತಿಸಲಾತಗಿನ್ನೊಬ್ಬ
ದೇವನಿಲ್ಲಾತನೇ ನೀನಪ್ಪ ಪದವಿಯುಂ ಕೊಡುವ ಶಿವ ಜಯ ಯೆಂದನು ೬೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಡ್ಗುಣೈಶ್ವರ್ಯಯುತ ಸರ್ವಭಾವನ ದೇವ
ರಾಡ್ಗೂಢಯೋಗೀಶ ಪರಕೆ ಪರ ಪದನಖ
ತ್ರಿಡ್ಗೇಹದಖಿಳ ತತ್ವಕೆ ನೀನೆ ಶರಣೆಂದು ವರುಣಕೀರ್ತಿಸೆ ಬಳಿಕ್ಕ
ಈಡ್ಗೌರವಸ್ತೋತ್ರದಂತೆ ಹರಿಯಜತು ರಾ
ಷಾಡ್ಗರಿಮಕರ್ತನಂ ಕೀರ್ತಿಸಿದಳೆಲೆ ಮಹಾ
ದ್ವಿಡ್ಗಜಾಸುರಚರ್ಮವಸನ ಯೆಂದಾ ಪ್ರಚೇತಸನ ಮೋಹನದ ವನಿತೆ ೬೧

ಮುಗಿದು ಹಸ್ತವ ಭಾಳದೊಳು ಬೈತು ಪುಳಕಂಗ
ಟೊಗೆಯಲೀಶ್ವರನ ಕಾಣುತ್ತಂ ನಮೋ ನಮೋ
ಸುಗುಣಿ ಭವ ಭವ್ಯಾಯ ಸರ್ವಜ್ಞ ಮನ್ಮಹಾತ್ಮನೆ ಹರನೆ ಸೂಕ್ಷ್ಮರೂಪ
ಅಗಜೆಯಾಣ್ಮನೆ ಶರಣು ನಿನ್ನ ದರುಶನವದಾ
ವಗೆ ಪುಣ್ಯಹೀನಂಗೆ ದೊರಕೊಳ್ಳು ವೃಷಕೇತು
ಸಗರಗಳ ಪುಣ್ಯರೂಪನೆ ಶರಣು ನಿನಗೆಂದು ಕೀರ್ತಿಸಿದಳಾ ಮಾನಿನಿ ೬೨

ನಿನ್ನ ಪಾದಾಬ್ಜ ಭಕ್ತಿಯ ಕೊಡುವುದೆನಗೆ ಸಂ
ಪನ್ನ ಸರ್ವಜ್ಞ ಸರ್ವಾತ್ಮಕ ವಶೀಕೃತ ಜ
ಗನ್ನುತನೆ ದುಃಖದಧಿಕರ ನನಾಥರ ಪೊರೆಯೆ ನೀನೆ ಗತಿ ಬೇರಿಲ್ಲಲಾ
ಉನ್ನತ ವಿಷಾಶನನೆಯಲ್ಲವೇ ನಿನ್ನಮನ
ದನ್ನೆ ಗಿರಿಜಾತೆ ಲೋಕದ ಮಾತೆ ಬಹು ತಾಪ
ಮನ್ನಿವಾರಿಪಳಲಾ ವೃಷಯಾನ ಸಲಹಯ್ಯ ಸರ್ವಭೂತಾಳಿನಮಿತ ೬೩

ಅಂತಕಾಂತಕನೆ ಸರ್ವಜ್ಞ ಶಶಿಲೇಖೆಯುಂ
ನೀಂ ತಳೆದ ದೇವ ಯೆಂದಾಗ ಕೀರ್ತಿಸಿ ಪರುಷ
ಕಾಂತೆಯುರು ಸತ್ಕಾರ ಭಿಕ್ಷಮಂ ನೀಡೆ ಕೈಕೊಳಲಾಗ ಸರ್ವೇಶ್ವರಂ
ಮುಂತೆ ನಿಂದಾ ವರುಣನಂಗನೆ ಮಹೇಶನಂ
ಸಂತೋಷದಿಂದ ಪಾಡಿದಳು ಮುಖಚಂದ್ರನಿಂ
ದಂ ತಳ್ತು ಗಾನವೆಂಬಮರ್ದು ಸುರಿಯಲು ಶಂಕರಂಗೆ ಸಂತಸವನೀಯೆ ೬೪

ವರುಣನಂಗನೆಯು ಗಾನವ ಕೇಳಿ ಸಂತಸಂ
ಬೆರಸಿ ತನ್ನೊಳು ಬಂದ ಗಿರಿಜೆಯನುಚರಿಯಪ್ಪ
ವರ ಕುಬೇರನ ಸುತೆ ಸುಮಾಲಿನಿಯು ಪಾಡೆನಲು ಹರನನುಜ್ಞೆಯೊಳು ಪಾಡೆ
ಪಿರಿದು ಸೊಗಸೀಯಲಾ ಮೊದಲಾಕೆ ಲಜ್ಜಿಸಲು
ಸರಿಯಾಗಿ ಕೂಡಿ ಪಾಡಿಸಿ ಕರುಣವೀವುತಂ
ತಿರುಗಿದಂ ಬಳಿಕಲಳಕಾಪುರಕ್ಕಾಗಿ ಸಂಭ್ರಮದಿಂದ ಸರ್ವೇಶನು ೬೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ಸಾಕ್ಷಿ॥ ವರುಣದಂಪತಿಗಳ ಸ್ತೋತ್ರ

ಬ್ರಹ್ಮಾಂಡ ಪುರಾಣೇ–

ತ್ವಮಾದಿಸ್ತ್ವಮನಾದಿ ಸ್ತ್ವಂತ್ವಂ ಪ್ರಭುಃ ಸರ್ವತೋಮುಖಃ
ಅಜೇಶವಿಷ್ಣ್ವೀಶ ವಿಭೋಸಹಸ್ರಾಂಶೋ ಜಗನ್ಮಯ ೯

ಸಿಂಗರದ ನದಿಗಳಿಂದಮೃತದಗಳಿಂ ಮಿಸುಪ
ಪೊಂಗೊಂಟೆದೆನೆ ಸುಮೌಕ್ತಿಕದೆಸೆವ ದ್ವಾರಬಂ
ಧಂಗಳಿಂ ಪಲವು ಗೋಪುರ ಹರ್ಮ್ಯಸಂದೋಹದಿಂದಲಾ ಕೈಲಾಸದ
ಪಾಂಗಿನಿಂದೆಸೆದಿರ್ಪ ರಾಜರಾಜನ ನಗರ
ಕಂ ಗಣಂಗಳು ಹರಿ ಸುರಾಧೀಶರೊಲಿದಪ್ಸ
ರಾಂಗನೆಯರಿಂವಾದ್ಯಸಂಭ್ರಮದೊಳಾ ಸರ್ವಮಂಗಲೆಯ ಪತಿ ಬಂದನು ೬೬

ಪರಮೇಶನೆಯ್ತ್ತಪ್ಪುದಂ ಕೇಳಿ ಸಂತೋಷ
ವೆರಸಿ ಯಕ್ಷೇಶ್ವರಂ ಶಿವನ ಪದಭೃತ್ಯನಾ
ಪರವೀರಸಂಹಾರನೀಶ್ವರನ ಸಖನಾ ಕುಬೇರನಳಕಾಪುರವನು
ಪರಮ ಸಂಭ್ರಮದಿಂದ ಚೀನಿ ಚೀನಾಂಬರಂ
ನಿರುಪಮಿತ ನವರತ್ನ ಹೇಮದುರುಳಿಯ ಮರಂ
ವರ ಧೂಪಧೂಮ್ನ ಸೌಭಾಗ್ಯಮಯವಾಗಿ ಸಿಂಗರಿಸಿದಂ ಪೊಸತೆಂಬಿನಂ ೬೭

ಮಿಕ್ಕ ಸಂಭ್ರಮದೊಳಿದಿರ್ಗೊಂಡುಬರದೀಶನಂ
ತರ್ಕೈಸಿಕೊಂಡು ಸುಕ್ಷೇಮವಂ ಕೇಳಿದನ
ದಕ್ಕೆ ಗಣತತಿಪೊಗಳಿದರು ಶಿವನ ಕರುಣಮಂ ನಿನ್ನಂತೆ ಪಡೆಯಬೇಡ
ಮುಕ್ಕಣ್ಣಗಂ ನಂಟನ್ನೈ ನೀನೆನುತ್ತಿರ
ಲ್ಕಕ್ಕಜಿಂದಾ ಕುಬೇರನ ರಾಣಿ ಬಂದು ಮೆ
ಯ್ಯಿಕ್ಕಿ ನಸುಲಜ್ಜೆಯಿಂ ಕೆಲಸಾರೆ ನಸುನಗುತ ಬರುತಿರ್ದನೆಮ್ಮ ದೇವಂ ೬೮

ಆ ವೇಳೆ ಬರ್ಪಸರ್ವೇಶಮಸ್ತಕದಲ್ಲಿ
ಪೂವಲ್ಲಿಯಂಬುಮಿಶ್ರದ ಮಂಗಲಾಕ್ಷತೆಯ
ನಾ ವಿದಗ್ಧೆಯರು ತಳಿವುತ್ತ ನರ್ತಿಸಿ ವೀಣೆಮುಖ್ಯಮಂ ನುಡಿಸಿ ಪಾಡಿ
ದೇವನಂ ಕೀರ್ತಿಸುತ್ತಂ ನಲಿವುತಿರಲವರ
ಭಾವಮಂ ಕಂಡು ಸರ್ವೇಶಂ ಪ್ರಸನ್ನತೆಯೊ
ಳೋವಿ ರಾಜಿಸಲಭವನಗಲಲಸುವಂ ಬಿಡುವ ಮಡದಿಯರು ಬಂದರಲ್ಲಿ ೬೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮ ಸಂಭ್ರಮದಿಂದ ಶಶಿಪ್ರಭೆಯು ಯಕ್ಷಪತಿ
ಯರಮನೆಯ ಪೊಕ್ಕಲ್ಲಿ ಸಕಲ ದೇವತೆಯರಾ
ದರಿಸುತಿರೆ ಪೇರೋಲಗದೊಳಿರ್ಪದೇವದೇವನ ಪೂಜೆಯಂ ಮಾಡುತ
ವರ ಕುಬೇರನ ವನಿತೆ ಹೇಮಕುಂಭವನು ತಂ
ದಿರಿಸಿ ಕೀರ್ತಿಸಿ ಸಮೀಪದೊಳಿರಲ್ ಧನದನೆಱು
ತರುತ ಪದವಂ ತೊಳೆದು ನಿಜಮಸ್ತಕದೊಳುಪಾದೋದಕಂದಳಿದುಕೊಂಡು೭೦

ಸಕಲ ದೇವತೆಯರಾ ತೆಱದಿಂದ ತಮ್ಮ ಮ
ಸ್ತಕದಲ್ಲಿ ತಳಿದುಕೊಳುತಿರಲಾ ಕುಬೇರನು
ತ್ಸುಕದಿಂದ ನಿಜಸತಿಯು ಮೂರ್ಧ್ನಿಯೊಳ್ತಳಿಯೆ ನೋಡುತ್ತಾಕೆ ಕೋಪಿಸುತ್ತ
ಸುಕರದಿಂ ಮರಳಿ ದೇವನ ಪಾದವಂ ತೊಳೆದು
ಚಕಿತಹರಿಣಾಕ್ಷಿ ಸಂತೋಷದಿಂದಾ ಪದೋ
ದಕವನೆಸೆವುತ್ತುಮಾಂಗದೊಳು ಸಂಪ್ರೋಕ್ಷಿಸಲು ಸಂತೋಷಿಸಿದನೀಶನು ೭೧

ಆ ವೇಳೆ ದಿವ್ಯಮಂದಾರಮಾಲೆಯ ಮಹಾ
ದೇವಮಸ್ತಕದಲ್ಲಿ ವೇಷ್ಟಿಸುತ ಪರಮ ಸ
ದ್ಭಾವದೊಳು ಸತ್ಕಾರಭಿಕ್ಷಮಂ ನೀಡೆ ಕೈಕೊಂಡಾ ಕುಬೇರಪುರವ
ನೋವಿ ಪೊಱಮಟ್ಟಖಿಳ ಸುರರಾಲಯದೊಳು ಭಿ
ಕ್ಷಾವಿನೋದವ ನಟಿಸಿ ಸರ್ವಸುರರಂ ಬಿಟ್ಟು
ಪಾವನ ಮಹಾಭೈರವಂ ನಿಮಿಷಮಾತ್ರದೊಳು ಬಯಲಾದನೀಶನಭವಂ ೭೨

ಎಲೆ ನೈಮಿಷಾರಣ್ಯವಾಸಿಗಳಿರಾ ನೀವು
ಮಲಹರನ ಭಿಕ್ಷಾಟಣದ ಕಥೆಯ ಕೇಳ್ದಿರೇ
ಸುಲಭವೆಂದಾ ಸೂತಮುನಿ ನುಡಿದ ಮಾಳ್ಕೆಯಿಂ ಕೆಂಚವೀರಾಹ್ವಯಂಗೆ
ಹಲಗೆಯಾರ್ಯಂ ಕೂರ್ತು ನಂಜುಂಡಮೂರ್ತಿಮುಖ
ಜಲಜಮಂ ನೋಡಿ ನುಡಿಯಲು ಮಲ್ಲಣಾಹ್ವಯಂ
ಸುಲಲಿತದ ಪದನ ಮಾಡಿದನದಂ ಲಾಲಿಪುದು ಧರೆಯ ಸಜ್ಜನಸಮೂಹ ೭೩

ಈ ಮಾಳ್ಕೆಯಿಂ ಕಲ್ಪ ಕಲ್ಪಂಗಳೊಳಗಾ ಮ
ಹಾಮಹಿಮಗಂ ಷಷ್ಟ ಭಿಕ್ಷಾಟಣದ ಘನಕ
ಥಾಮಾತ್ರವುಂಟಲಾ ವೀರಶೈವಾಮೃತವೆನಿಪ್ಪ ಪೆಸರಾಂತೀ ಕೃತಿ
ಭೂಮಿಯೊಳು ಶಿವಭಕ್ತರಾಲಿಸಲು ಸೊಗಸೀವು
ದೈ ಮಗನೆಯಕ್ಕಱಿಂದಿದನೋದಿ ಬರೆಯಲಾ
ಶ್ರೀ ಮಹಾಶಾಂತಮಲ್ಲೇಶನಿಷ್ಟಾರ್ಥವಂ ಕೊಟ್ಟು ಭಕ್ತರ ಸಲಹುವಂ ೭೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮಂ ಕೂರ್ತುಸದನಂ ಮಾಡಿದಂ ೭೫

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನತುಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಲೀಲೆಯಾಱು ಭಿಕ್ಷಾಟಣಕೆ ಕಾಂಡಪೊಂದಱ ಮೇಲೆ ಮೂಱು ಸಂಧಿ ೭೭

ಅಂತು ಸಂಧಿ ೩ ಕ್ಕಂ ಪದನು ೧೯೭ ಕ್ಕಂ ಗ್ರಂಥ ೫೪ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೩

"ಕಾಮಾರಿ ಸಪ್ತಮಂ ವಿಂದ್ಯಾತ್" ಎಂಬರ್ಥಕ್ಕೆ ಕಥೆ.
ತಾಮರಸನೇತ್ರಾದ್ಯನುಜ್ಞೆಯಿಂ ಗಿರಿಸಾರ್ವ
ಭೌಮಾತ್ಮಜಾಸಹಾಯದಿನೆಚ್ಚೊಡಾ ಹರಂ
ಕಾಮದಹನವನೆಸಗಿದಂ ಲೀಲೆಯೋಳರೊಳು ಕೇಳೆಂದನಾಚಾರ್ಯನು

ಶ್ರೀ ಪರಮ ಘನಲಿಂಗರೂಪನಿರ್ಗುಣಸದಾ
ಕಾಪಾಲಧರಕೃಪಾಕೂಪಾರ ಹರಿನುತ
ಶ್ರೀಪಾದನಮಿತಜನತಾಪತ್ರಯಾದಿಕರಣಾಪಹಾರಣ ಮಹೇಶ
ಓಪ ಭಕ್ತವ್ರಜದ ಪಾಪಹಾ ತ್ರಿಭುವನ
ಸ್ಥಾಪನಪ್ರಜ್ಞಾನದೀಪ ನಿಜನಿಷ್ಠಶರ
ಣೋಪಕಾರಣ ಜಯ ಶ್ರೀಪರ್ವತೇಂದ್ರತನುಜಾಪತಿಯೆ ಶಾಂತಮಲ್ಲ ೧

ಭೃಂಗನಿಸೃತಪರಾಗವಿಭೂತಿ ಕಮಲಮುಕು
ಲಂಗಳೇ ರುದ್ರಾಕ್ಷಿ ರುದ್ರಜಟೆಗತಕುಸುಮ
ಲಿಂಗವರುಣಾಮ್ರಪಲ್ಲವವೆ ಕಾವಿಯು ಕಂಥೆ ಚಂದ್ರನೇ ಬೆಳ್ಗಪ್ಪರಂ
ಪೊಂಗುಮೀನ್ಪಳಯಿಗೆಯೆ ದಂಡವಬಲೆಯರ ಹೃದ
ಯಾಂಗಾಂದಿ ದೇಶದೋಳ್ ಚರಿಸೆಂದು ಕಾಮಂಗೆ
ಜಂಗಮಸ್ಥಲವಿತ್ತ ಶಾಂತನಂಜೇಶ್ವರಾಪಾಂಗವೆಮ್ಮಂ ಸಲಹಲಿ ೨

ನಿರೋಷ್ಠ ಪದ

ಕರಣಗುಣನಿರಸಸಂಹರಣ ನತಜನಲೇಖ
ಶರು ಸದಾ ಸಜ್ಜನರ ಸಿರಿ ಷಟ್‌ಸ್ಥಲಾನಂದ
ಸರಸ ನಿತ್ಯಾನಿತ್ಯದುರುತರದ ಜಾನ ಸಿಂಗರದ ನೆಲೆಯಹ ಶಾಂತಿಯ
ಕರು ಸಕಲ ಶಾಸ್ತ್ರಸಾದರಗಾತ್ರ ಚಿದ್ಘನದ
ಚರಲಿಂಗ ಘನಸುಖದ ಗುರು ತತ್ರಯಾಧಿಕ್ಯ
ದರಿವನಾನತಜನಕ್ಕೊರೆದಧಿಕ ನಿಜನಿಷ್ಠೆಯರಸ ಜಯ ಹಲಗೆಯಾರ್ಯ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದ ಕೇಳ್ಳೈ ಕೆಂಚವೀರಾಹ್ವಯಾ ನಿನಗೆ
ಯೊಂದು ಕಾಂಡದ ಮೇಲೆ ಮೂಱು ಸಂಧಿಯನೊಲ್ದು
ಹಿಂದೆ ಪೇಳಿದೆವೆಲ್ಲೈ ಮೆಱೆವಾ ಮಹೇಶ್ವರನ ಭಿಕ್ಷಾಟಣದ ಲೀಲೆಯ
ಮುಂದೆ ಕೇಳಯ್ಯ ವಾತೂಳದೊಳಗೇಳನೆಯ
ದೆಂದೆನಿಪ ಕಾಮದಹನವನೊರೆವೆವೀಗ ನಲ
ವಿಂದ ಕಾಮಾರಿ ಯೆನುತ್ತಲಾ ಸಪ್ತಮಂ ವಿಂದ್ಯಾದೆನಿಪ್ಪರ್ಥದೆ ೪

ಆದಿತ್ಯಪೌರಾಣದೊಳು ನೈಮಿಷಾರಣ್ಯ
ದಾದಿಮುನಿಗಳು ಕೇಳಲಾ ಸೂತನಾ ಕಥೆಯ
ಭೇದಮಂ ಪೇಳ್ದನೆಂತೆನೆ ಮುನ್ನ ಸೂರ್ಯಸುತ ಯಮನಿಂದ ಕೇಳ್ದಂದದೆ
ಮಾದೇವಿ ಗಿರಿರಾಜನಂಗನೆಗೆ ಸುತೆಯಾಗಿ
ಸಾದರದೊಳೀಶನಂ ಭಜಿಸೆ ಹಂಪೆಯೊಳಿತ್ತ
ಕಾದಿ ತಾರಕನೊಡನೆ ಮುಱಿದೋಡಿಬಂದು ಯೋಚಿಸಿದರಾ ಹರಿಮುಖ್ಯರು ೫

ಮೇರುವಿನ ತಪ್ಪಲೊಳಗಿರ್ದು ಬಳಿಕಲ್ಲಿಂದ
ಮಾರನೆಡೆಗಾ ಬೃಹಸ್ಪತಿಯು ಕಳುಪಲ್ಕೆ ಬಂ
ದಾ ರಮಾಕರಕಾಮನೋಲಗದ ಸೊಗಸನೀಕ್ಷಿಸುತವಂ ಮುಂದುಗೆಟ್ಟು
ನಾರಿಯರು ಮುಖ್ಯ ಸೌಂದರ್ಯಕ್ಕೆ ಬೆಱಗಾಗಿ
ಸಾರೆ ಕಂಡಾ ಮದನನೆಯ್ದಿ ಸತ್ಕರಿಸುತೇಂ
ಕಾರಣಂ ಸುರಗುರುವೆ ಬಂದೆ ಯೆನಲಾಗಿ ವಿನಯದೊಳಾತನಿಂತೆಂದನು ೬

ಕೇಳಯ್ಯ ಕಾಮಚಕ್ರೇಶ ತಾರಕನೊಡನೆ
ಕಾಳಗವ ಮಾಡಿ ಹರಿಯಜರಿಂದ್ರರಖಿಳಸುರ
ಜಾಳವೆಲ್ಲಂ ಮುಱಿದು ಕೆಟ್ಟೋಡಿಬಂದು ಮೇರುವಿನ ತಪ್ಪಲೊಳು ಸಾರಿ
ಆಳೋಚನಂಗೆಯ್ದು ಶಿವನ ತಪಮಂ ಕೆಡಿಸಿ
ಯೇಳಿಸುತ ಗಿರಿಜೆಯೋಳ್ ನೆರಪಲುದಿಸಿದ ಸುತಂ
ಖೂಳನಂ ಕೊಲ್ವನಾ ಕಾರ್ಯಕ್ಕೆ ನಿನ್ನೆಡೆಗೆ ಕಳುಪಿದರು ಎನ್ನನೆಂದ ೭

ಅದ ಕೇಳಿ ತಂದೆ ಹರಿ ಕರಸಿದನೆನುತ್ತೋಲ
ಗದ ಸಾಲೆಯಿಂದೆದ್ದು ಸಕಲ ವನಿತೆಯರೊಡನೆ
ಮದನ ಚಕ್ರೇಶನೆಯ್ತಂದು ಹರಿಮುಖ್ಯರ್ಗೆ ಕೈಮುಗಿದು ನಿಲೆ ಕಾಣುತ
ಮುದದಿಂದ ಸತ್ಕರಿಸಲೆನ್ನುವಂ ನೀವು ಕರ
ಸಿದ ಕಾರ್ಯವೇನೆನಲು ಕೇಳಯ್ಯ ಕಾಮ ನೀ
ನಘಟನಪ್ಪುದಱಿಂದಲೆನೆ ನುಡಿದನಾಗಲನಿಬರೊಳು ಮನ್ಮಥಭೂಪನು ೮

CC0. In Public Domain. Jangamwadi Math Collection, Varanasi

ಎನಗೆ ಮಾರ್ಮಲೆತು ಬದುಕುವರಾರು ಸುರನಾಗ
ಮನುಜರೊಳಗೆಂದಧಟಿನಿಂದಾಡೆ ಕೇಳಿ ಹರಿ
ವನಜಭವ ಸುರಪ ಮುಖ್ಯರು ನುಡಿದರೆಲೆ ಕಾಮ ಸತಿಯರ್ಗೆಪುರುಷರ್ಕಳು
ವನಿತೆಯರು ಗಂಡರ್ಗೆ ಸೋಲ್ವರೈಸಲೆ ಕೇಳು
ನಿನಗೆ ವಶವಪ್ಪರಾ ಸತಿಯರುಂ ಪುರುಷರುಂ
ಘನವಪ್ಪ ವೀರ ನೀನೋರ್ವನೇ ಬಿಲ್ಲಾಳು ಮೂರುಲೋಕಕ್ಕೆಂದರು ೯

ಆದಱಿಂದ ಶಿವನ ತಪಮಂ ಕೆಡಿಸವೇಳ್ಕೆನಲು
ಮದನನಿಂತೆಂದನಾ ಶರ್ವ ಸರ್ವೇಶ್ವರಂ
ಸದಮಲಂ ಲಸದೂರ್ಧ್ವರೇತಸ್ಕನವನ ಗೆಲಲಳವೆ ಲೋಕದರಂದವೆ
ಪುದಿದ ಕತ್ತಲೆ ಇನನ ಬಳಿಗೆ ಪಾವುಗಳು ಮೇ
ಘದ ಸಿಡಿಲಬಳಿಗೆ ತರಗೆಲೆ ದವಾಗ್ನಿಯ ಬಳಿಗೆ
ಯಧಟಿನಿಂದೆಯ್ದುಬಹುದೇ ತಂದೆ ಯೆನೆ ನುಡಿದನಾ ಹರಿಯುಪಾಯದಿಂದ ೧೦

ಮಗನೆ ಕೇಳಯ್ಯ ನೀನೋರ್ವನಳಿದಾದೊಡೀ
ಜಗದಖಿಳರಂ ಪಾಲಿಸೆನಲದಂ ಕೈಕೊಂಡು
ಮಿಗೆ ನುಡಿದನೆನ್ನಧಟಿಗಾರು ಸರಿ ಶಂಭು ಗಿಂಬುವನೇನು ಲೆಕ್ಕಿಸುವೆನೇ
ನಗಧರನೆ ಕೇಳೆಂದು ಭಾಷೆಯಂ ಕೊಟ್ಟು ಬಂ
ದಗಣಿತದ ಚತುರಂಗಬಲವನೀಕ್ಷಣದೊಳಿ
ಲ್ಲಿಗೆ ಬರಿಸೆನುತ್ತ ಚೈತ್ರಂಗೊರೆದು ಸನ್ನಾಹಭೇರಿಗಳು ನೆಗಳಲೆಂದ ೧೧

ತುಂಬಿಗಳ ದನಿಯೆಂಬ ನಿಸ್ಸಾಹಣಧ್ವನಿಕ
ದಂಬ ಧಾಂಧಳ ಧಳಂಧಳವೆಂಬ ರವದಲ್ಲಿ
ತುಂಬಲಾಹಾಹ ಕೇಳ್ದಲ್ಲಿ ನೆರೆದುದು ಮದನ ಭೂಮಿಪನ ಸೇನೆಯಾಗ
ಅಂಬರ ಧರಾದಿ ದಿಗ್ವಲಯದೊಳು ಕವಿದಲ್ಲಿ
ತುಂಬಿತ್ತು ಪೆರ್ಬಲಂ ಬಳಿಕಲಾ ಬನವನೇ
ನೆಂಬೆನೈ ಕೇಳಿರೇ ಮುನಿನಿಕರವೆಂದು ಬಿತ್ತರಿಸುತಿರ್ದಂ ಸೂತನು ೧೨

ಸೊನೆಮದಂ ಝೇಂಕರಿಪ ತುಂಬಿ ಮುಸುರಿದ ತುಂಬಿ
ಯೆನಿತು ಮಲ್ಲಿಗೆಯ ಬಳ್ಳಿಗಳೆ ಹೊರಜಿಗಳು ಕೊಂ
ಬೆನಿಸಿದವು ಕಿಗ್ಗೊಂಬು ಪೆರ್ಗೊಂಬು ಸುಂಡಿಲೆಲೆಗತ್ತಲೆಯ ಹೊದರಂಗವ
ದನಿ ಕೋಕಿಲಾರಾವವಾಗಿರ್ಪ ಮಾವುಗಳ
ನನಿತು ಪೇರಾನೆಗಳ ಪೌಜ ಚಿತ್ತೈಸೆಂದು
ನನೆಗಣೆಯ ರಾಯಂಗೆ ಬಿನ್ನವಿಸುತಿರ್ದಂ ವಸಂತಮಂತ್ರೀಶನಾಗ ೧೩

Digitization by eGangotri and Sarayu Trust. Funding by MoE-IKS

ಎಱಕೆಯೇ ಪಚ್ಚೆವಕ್ಕರಿಕೆ ಗಿಳಿಗುದುರೆಗಳ
ನುಱುವಂಗವೇ ಗಾಲಿ ಮೂಗು ಮೂಗೆನಲಾಗಿ
ಮೆಱೆವ ರಥವೆನಿಸುವ ರಥಾಂಗಮಂ ಕಾಲ್ನಡೆಯ ಸತಿಯರೇ ಕಾಲಾಳ್ಗಳು
ನೆಱೆಗಂಪಿನಲರಂಬ ಚತುರಂಗಸೇನೆಯಿಂ
ದುಱಿವ ಬನದಗ್ಗಳವ ತಂಗಾಳಿಯಿಂದಮುರ್ದು
ಗಱೆವಚಂದಿರನಾದಿಯಾದವರ ಬಗೆಯ ಬಿತ್ತರಿಸಿ ಪೇಳ್ದಂ ಚೈತ್ರನು ೧೪

ಆ ವೈಭವಂ ಕಂಡು ಕಾಮುಚಕ್ರೇಶ್ವರಂ
ತಾವರೆಯ ನೂಲ ಸಪುರವನುಟ್ಟು ಪಣೆಯಲ್ಲಿ
ತೀವಿ ಮಕರಂದಗಂಧದ ಬೊಟ್ಟನುಡಿಯ ಕಮಲದ ಮೊಗ್ಗೆ ಘಂಟೆಯಾಗೆ
ಏವೇಳ್ವೆ ಕರ್ವುವಿಲ್ಲಾ ತುಂಬಿದಿರುವಿಟ್ಟು
ಪೂವಿನಂಬುಗಳ ಬತ್ತಳಿಕೆಯಿಂ ತೆರ್ದಾಗ
ಮಾವೆಂಬ ಪೇರಾನೆಯೇಱಿದಂಡಂ ತೆರಳವೇಳೆಂದು ನೇಮಿಸಿದನು ೧೫

ಸಕಲ ಪರ್ವತಕೊಡೆಯನಿಳೆಯ ಪೊತ್ತಂ ದೇವ
ನಿಕರದೊಳು ಮುಖ್ಯನವನಿಯ ಸುಡುವವರ್ಧನು
ಪ್ರಕಟವಹ ನಾರಿಯೆಂಬಾ ಮೊನೆಗಳಪ್ಪ ಸಂಜೋಗದೀಶ್ವರನ ಮೇಲೆ
ಅಕಟ ಪಸುಳೆಗಳಗಿವ ಸಂಪಗೆಗೆ ಸುಗಿವ ದಿವ
ಸಕೆ ತಮ್ಮ ಮೊನೆಗೆಡುವ ಬಿಲ್ನಾರಿಯಂಬಾದ
ವಿಕಲ ಮನ್ಮಥನಿಂತು ನಡೆದು ಗೆಲ್ವನೆ ತೆಗೆಯೆನುತ್ತಿರ್ದರತಿ ಸುಜನರು ೧೬

ಅನಿತಕ್ಕೆ ಮನ್ಮಥಂ ಸೇನೆಗಂ ಕೈವೀಸೆ
ದನಿಮಾಡಿದವು ತುಂಬಿಯೆಂಬ ನಿಸ್ಸಾಹಣಂ
ವಿನುತ ಕೋಕಿಲರಾವವೆಂಬ ಹೆಗ್ಗಾಳೆಗಳು ಬಿಱಿದೆತ್ತಿ ಕರೆದವಲ್ಲಿ
ವನಿತಾಬಲಂಗಳೊದವಿತ್ತು ಬೆಳ್ಗೊಡೆಯಾಗೆ
ವನಜಾರಿ ಮುಂದೆ ಪರಿದಂ ವಾಯುಸೇವಕಂ
ಬನದೊಡೆಯನೆನಿಸುವ ವಸಂತರಾಜಂ ಸ್ಮರನನೋಲೈಸಿ ನಡೆದನಲ್ಲಿ ೧೭

ಸುಜನಸಂಹಾರಿಯೀ ಬಂದನೀ ಬಂದನಾ
ವಿಜಿತೇಂದ್ರಿಯರ ಮೃತ್ಯುವೀ ಬಂದನೀ ಬಂದ
ನಜಹರಿಸುರಾಸುರರೆನಿಪ್ಪ ಹೊಳ್ಳುಗಳ ತೂರುವ ಗಾಳಿಯೀ ಬಂದನು
ನಿಜನಿಷ್ಠರಂ ಬೆದರಿಪಧಟನೀ ಬಂದನಾ
ಕುಜನರಿಷ್ಟವನೀವ ನೀ ಬಂದನೆಂದು ಪಂ
ಕಜವೆಂಬ ಕಹಳೆಯೊಳ್ ಮೊಗವಿಟ್ಟು ಸಾರುವಳಿಗಳೊಳು ನಡೆದಂ
ಮನ್ಮಥಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಗಾಡಿಯಿಂ ಹೇಮಕೂಟಕ್ಕೆ ಕೈವೀಸ
ಲಾಗಿ ಬೊಬ್ಬಿಱಿದು ಕಾಮನ ಸೇನೆ ಮುತ್ತಲಾ
ಬಾಗಿಲೊಳಗಿಹ ಧರ್ಮರೂಪನಂದೀಶ್ವರಂ ಕಂಡು ಚಿತ್ತಂ ಕಿದಱುತೆ
ಬೇಗ ಸಂತೈಸಿಕೊಂಡಿವು ತಪಕ್ಕಂ ವಿಘ್ನ
ವೀಗೀಶ್ವರಂಗೆಂದು ಮುನಿದೀಕ್ಷಿಸುತ್ತಿರ್ದ
ನಾ ಗುರುವನೆರಡನೆಯ ಹರನಲ್ಲಿ ಕೆದರಿತ್ತು ಕಾಮಭೂಮಿಪನ ಸೇನೆ ೧೯

ತಿಳಿಗೊಳಂಗಳು ಬಱತವಾಗ ಕೆಟ್ಟೋಡಿದವು
ಗಿಳಿವಿಂಡು ಕೋಕಿಲಂ ಬೆದಱಿದವು ಮಾವು ಬನ
ದೊಳಗೆ ವ್ಯೆಗಱಿದವಾ ತುಂಬಿಗಳು ಚೆಲ್ಲವಡಿದಂತೆ ದೆಸೆದೆಸೆಗೆ ಪಾರೆ
ಅಳುಕಿ ಬಯಲಾಯಿತ್ತು ಚತುರಂಗಸೇನೆ ಬಾ
ಯಳಿದು ಮನ್ಮಥನೆಯ್ದೆ ವಿಷವಱತ ಫಣಿಯಂತೆ
ಕಳವಳಿಸಲಾ ವೇಳೆಯುವನ ಭಾಗ್ಯದೊಳು ಬರುತಿರ್ದಳಂತಾ ಭವಾನೀ ೨೦

ಗೌರಿ ಜಯೆ ವಿಜಯೆಯರೊಳಾಗ ಪುಷ್ಪಂಗಳಂ
ಸೌರಂಭದಿಂ ಕೊಂಡು ಬರ್ಪೆಡೆಯೊಳೀಕ್ಷಿಸುತ
ಮಾರನಮ್ಮನ ಪಾದಪಂಕಜಕ್ಕೆಱಗಿ ಕೈಮುಗಿಯಲಾ ಮನ್ಮಥನನು
ಆರೈದು ಬೆಸಗೊಂಡಳಾ ದೇವಿ ನೀನದೇಂ
ಕಾರಣಂ ಬಂದೆಯೆನೆ ಬಲವಾದುದೆನಗೆಂದು
ಸಾರಿ ಕೈಮುಗಿದು ಕೀರ್ತಿಸಿದನಾ ಲೋಕೈಕಮಾತೆಯಂ ಗಿರಿಜಾತೆಯಂ ೨೧

ಕಾರುಣ್ಯದಿಂ ತಾಯೆ ಚಿತ್ತೈಸು ದುಷ್ಟನಹ
ತಾರಕನೊಳಂ ಕಾದಿ ಮುಱಿದೋಡಿಬಂದು ಹರಿ
ವಾರಿಜಾಸನಮುಖ್ಯ ಸುರರೆನ್ನನೀಶ್ವರನ ತಪವನಳಿಯೆಂದು ಕಳುಪೆ
ಸಾರಿ ಮುತ್ತಲು ನಂದಿಕೇಶ್ವರನ ಕೋಪದಿಂ
ದೀರಾಯ ದಳವಳಿದು ನಾನೊರ್ಬನುಳಿದೆ ನಿ
ನ್ನಾರು ಗತಿ ನೀನಲ್ಲದೆನಗೆಂದು ಬಾಯ್ಬಿಟ್ಟನಾಗ ಮನ್ಮಥಭೂಪನು ೨೨

ಅದ ಕೇಳಿ ಸಂತಸಂಬಟ್ಟು ಸಂತೈಸಿದಳು
ಮದನನಂ ಶರ್ವಾಣಿ ಮಗನೆ ಕೇಳೈ ನಾನು
ಮೊದಲೀಶ್ವರನ ತಪಸ್ಸಂ ಬಿಡಿಸಿಯುವನೊಳಗೆ ನೆರೆಯೆ ಲವಲವಿಸುವೆನ್ನ
ಹೃದಯಕ್ಕೆ ಹರುಷಮಂ ಮಾಡಿದೈ ಬಾರೆಂದು
ಸದಮಲದ ಪುಷ್ಪಕದ ಮಱಿಯೊಳೊಡಗೊಂಡುಪುಗಿ
ಸಿದಳೀಶ್ವರನ ತಪೋವನವನಂತಾಗಲೀಕ್ಷಿಸಿದವನಾ ಶಂಭುವಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಲೀಢಮುಖ್ಯಪಾದಂ ಕುಸಿದ ವಾಮಾಂಗ
ದಾಲಿಯತಿಶಯದಿಂದ ಕಾಮಚಕ್ರೇಶ್ವರಂ
ಶೂಲಿಯಂ ಬಿಡದೆ ನೋಡಿದನಲ್ಲಿಯಱುವತ್ತು ಸಾವಿರಬ್ದಂ ತೊಲಗದೆ
ಮೇಲೆಯಾ ಪುಷ್ಪದಂತಾಹಿಳುಕುವಿಡಿದರಿಯ
ವೋಲಧಿಕ ಚಾಪಮಂ ಬಿಡದೊತ್ತಿ ದೃಷ್ಟಿಯಂ
ಕೀಲಿಸುತ ಮುಟ್ಟಿಶರಸಂಧಾನದಿಂದ ಬೊಬ್ಬಿಱಿದೆಚ್ಚನಾ ಮನ್ಮಥಂ ೨೪

ಎಸಲಲ್ಕಿಯುನ್ಮದನ ಬಾಣವಾಗಂ ತಿರುಗೆ
ಮಸೆದ ಮದನಾಸ್ತ್ರಮಂ ಬಿಡೆಹತ್ತಿರಕ್ಕೆಯ್ದಿ
ನಸಿದು ಮರಳಲು ಬಳಿಕ ಮೋಹನಕಳಂಬಮಂ ಪ್ರೇರಿಸಲು ಶಿವನಸೋಂಕಿ
ಬೆಸದೆ ಹಿಮ್ಮೆಟ್ಟಲು ವಶೀಕರಣವಂ ಬಿಟ್ಟ
ಡಸಮಲೋಚನನ ಹೊಱಗಂ ತಾಗಿ ಪಿಂಗೆ ಘೂ
ರ್ಮಿಸುತ ಸಂತಾಪಮಾರ್ಗಣವನಟ್ಟಲು ಹೃದಯಮುಂತಾಗಿ ತಾಗದಿರಲು ೨೫

ಅರವಿಂದವಂತಶೋಕಂ ಚೂತ ಮಲ್ಲಿಕೋ
ತ್ಪರ ನೀಲ ಕುಮುದಂಗಳೆರ್ದೆ ಮೊಲೆಯು ಕಣ್ದಲೆಯೊ
ಳುರು ಗುಹ್ಯಮುಖ್ಯ ಪಂಚಸ್ಥಲವನೆಯ್ದಲಾಱದೆ ತಿರುಗೆ ಕಾಮಭೂಪಂ
ಮರಳಿ ದೇವನ ನೋಡುತಿರೆ ಗಗನದಲ್ಲಿ ಸಂ
ಗರಲಂಪಟಂ ನಾರದಂ ಕೂಡೆ ಗಹಗಹಿಸಿ
ಹರನನೀ ಬಣಗುಕಾಮಂ ಗೆಲ್ವನೇ ತೆಗೆಯೆನುತ್ತ ಮೂದಲಿಸಿ ನುಡಿದಂ ೨೬

ನಾರದನ ನುಡಿಗೇಳಿ ಹೇವರಿಸಿ ಮುಳಿದಲ್ಲಿ
ಮಾರನಾ ತನ್ನ ಬಲದಲ್ಲಿ ಸೌಂದರಿಯದಿಂ
ಗೌರಿಯಿರೆ ಪಂಚಬಾಣವನೊರ್ಮೆ ತೊಟ್ಟು ಬೊಬ್ಬಿಱಿದೆಚ್ಚಡಾಗ ಶೂಲಿ
ಭೋರನೆ ಜಪಂ ಜಾಱಿಕಣ್ದೆಱಿದು ಮೋಹನಾ
ಕಾರಿಯಂ ಪಾರ್ವತಿಯ ನೋಡಿ ಕಾಮನ ಕಂಡು
ಘೋರ ಭಾಳಾಗ್ನಿಲೋಚನವ ತೆಱಿದಂ ಕೂಡೆ ಘುಡಿಘುಡಿಸಿ ಪರಿದುದಲ್ಲಿ ೨೭

ಬೆಟ್ಟಣಗಿಯಗ್ಗಳದ ಪೂಜೆಯಾ ಮನ್ಮಥಂ
ತೊಟ್ಟ ಶರಸಂಧಾನವಖಿಳ ಲೋಕಂಗಳಂ
ದಿಟ್ಟ ತಾರಕನಲೆವ ಮೊಱಿಕೂಡಿ ಮುಪ್ಪುರಿಯೊಳೀಶನಂ ಸೋಂಕೆಕಣ್ಣ
ಬಿಟ್ಟಡಾ ಭಾಳಾಗ್ನಿ ಛಿಣಿಛಿಟಲ್ ಧಗಿಲೆನು
ತ್ತಟ್ಟಿತ್ತು ನೆಱಿಸುತ್ತುಗಟ್ಟಿತ್ತು ಘೂರ್ಮಿಸುತ
ಮುಟ್ಟಿತ್ತು ತಾನಡ್ಡಗಟ್ಟಿತ್ತು ಭುಗಿಲೆಂದು ಸುಟ್ಟಿತ್ತು ಪಂಚಶರನಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉರಿದು ಕರಿಮುರುಕಿಯಾಗಿ ಬೆಂದ ನುಲಿಯಂತೆ ಬಿ
ದ್ದಿರಲೆದ್ದು ಮನ್ಮಥನ ದೇಹದಿಂ ಕೋಪದಿಂ
ಚರಣತಳದಿಂ ತುಳಿದು ಬೂದಿಯಂ ಸರ್ವಾಂಗದಲ್ಲಿ ಲೇಪಿಸುತ ಹರನು
ಗಿರಿಜೆಯಂ ಕಾಮನ ಸಹಾಯಿಯೆಂದಾಗಳಾ
ದರಿಸದಂತರ್ಧಾನಕೆಯ್ದಲಾ ವೇಳೆ ಮುನಿ
ವರರು ಕೇಳುತ ಕೌಪುಗಳ ಕಿತ್ತು ಗುಡಿಗಟ್ಟಿ ತಮತಮಗೆ ಕುಣಿದರಾಹಾ ೨೯

ಪುರುಷನಳಿವಂ ಕೇಳಿ ರತಿ ಬಂದು ಹಾ! ಯೆನ್ನ
ಹರಣದೊಡೆಯನೆ ಮನ್ಮಥಾ ಕೆಟ್ಟೆನಯ್ಯ ಹಾ!
ಪರಮ ಗುಣಯೇ ಹಾ! ಮದೀಯ ಮೋಹನರೂಪ ಹಾ! ಯೆಂದು
ಕೆಂಡದೊಳಗೆ
ಅರಲ ಹಾಯ್ಕಿದ ತೆಱದೊಳೇಳುತ್ತ ಬೀಳುತ್ತ
ಮರಳಿ ಮೊರೆಯೋ ಪಂಚಬಾಣ ಮೊರೆಯೋಯೆಂದು
ಹೊರಳುತಿರೆ ಬನದಲ್ಲಿ ಪಕ್ಷಿ ಮೃಗವೃಕ್ಷಾದಿಗಳಿಗೆ ದುಃಖಂ ತೊಡಗಿತು ೩೦

ಕಿಡಿಗಣ್ಣನಾದ ನಿಷ್ಕರುಣಿಯೆನಿಸುವ ಹರಂ
ಸುಡುವುದುಚಿತಂ ನಿನ್ನನೆಲೆ ನಿನ್ನ ಸುಗುಣವೆ
ನ್ನೊಡಲನುರುಪುತ್ತಿದೆ ಮದೀಶ ಕುಸುಮದ ಲಿಂಗವಂ ಪೂಜಿಸಿದ ಫಲವನು
ಒಡೆಯನೀಗಂ ತೋಱಿದಂ ಕೆಟ್ಟೆನಕ್ಕಟಾ
ಮಡದಿಯೆಂದಾಗ ರತಿ ಶೋಕಿಸುತ ಧರೆಯಲ್ಲಿ
ಘುಡುಘುಡನೆ ಹೊರಳಿ ಘೋಳಿಡುತಿರ್ದಳಕಟ ಪತಿಯಿಲ್ಲದಳ
ಬದುಕಾವುದು ೩೧

ಮೊಗವೆಂಬ ಚಂದಿರನ ಕೇಶವೆಂಬಾ ರಾಹು
ಗಗನದಿಂ ಪಿಡಿದೊಡನೆ ಬಿದ್ದಂತೆ ಭೂಮಿಯೊಳು
ಮಿಗೆ ಹೊರಳುತಿರ್ಪ ರತಿಯಂ ನೋಡಿ ಕರುಣದಿಂ ಪಿಡಿದೆತ್ತಿ ಸಂತೈಸುತ
ನಗಜಾತೆ ನುಡಿದಳಂದಮೃತಮಯವಚನದಿಂ
ಮಗಳೆ ಕೇಳಾನು ತಪವಿರ್ದು ನಿನ್ನರಸನಂ
ಜಗವಱಿಯೆ ಪಡೆದೀವೆನೆಂದು ನಂಬುಗೆಯಿತ್ತು ನುಡಿದಳಾ ದೇವಿಯಾಗ ೩೨

ತಾನಿರ್ದ ಠಾವಿಗೆಯ್ತಂದು ಪೂಜಿಸೆ ಬಗೆಯ
ದೀ ನೆಲನ ಬಿಟ್ಟು ಬಯಲಾದನೇ ಶಂಕರಂ
ನಾನಿರ್ದ ಠಾವಿಂಗೆ ತನ್ನನೇ ಬರಿಸುವೆನೆನುತ್ತೆಯ್ದಿ ತಪವ ಮಾಡಿ
ನಾನಾ ಪ್ರಕಾರದಿಂದೊಲಿಸಿ ರತಿಗಾ ಹರಿಯ
ಸೂನುವನನಂಗನಾಗಲ್ಕೊಡಿಸಿ ತಂದೆಯಾ
ಸ್ಥಾನಕ್ಕೆ ಪೋಗೆ ನಡೆದೀಶ್ವರಂ ಗಿರಿಜಾವಿವಾಹವಾದಂ ಕೇಳಿರೇ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಸೂತಂ ನೈಮಿಷಾರಣ್ಯದಲ್ಲಿ ಮುನಿ
ವೃಂದಕ್ಕೆ ಪೇಳ್ದ ಕಥೆಯೋಳನೆಯ ಲೀಲೆಯೈ
ಕಂದ ಕೇಳ್ಕಾಮಾರಿ ಸಪ್ತಮಂ ವಿಂದ್ಯಾದೆನಿಪ್ಪ ಮಾಳ್ಕೆಯೊಳಿಲ್ಲಿಗೆ
ಸಂದಿತ್ತು ಕಾಮದಹನಂ ಕಲ್ಪಕಲ್ಪದೊಳ
ಗಂ ದಿಟದೊಳೀ ತೆಱಂ ಕೆಂಚವೀರಾಹ್ವಯಾ
ಮುಂದಿನ್ನು ಕಾಲದಹನಂ ಕೇಳೆನುತ್ತ ನುಡಿದಂ ಹಲಗೆಯಾಚಾರ್ಯನು ೩೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸನ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಷಟ್‌ಸ್ಥಲಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೩೫

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಸಪ್ತಕಾಮದಹನದ ಲೀಲೆ ಕಾಂಡವೊಂದರ ಮೇಲೆ ನಾಲ್ಕು ಸಂಧಿ ೩೬

ಅಂತು ಸಂಧಿ ೪ಕ್ಕಂ ಪದನು ೨೩೨ಕ್ಕಂ ಗ್ರಂಥ ೫೪೪ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೪

'ಕಾಲದಹನ ಕಾಲಾರಿ ಭವೇತ್' ಎಂಬರ್ಥಕ್ಕೆ ಕಥೆ

ಪ್ರಣುತ ರಾಜಶ್ವೇತನಂ ಪಿಡಿದ ಕಾಲನಂ
ಹಣೆಗಣ್ಣೊಳುರುಪಿ ಮಾರ್ಕಂಡೇಯಗ್ರಹಣದ
ಗ್ರಣಿ ದಂಡಧರನಸೊದೆದುಟಿ ಹತಿಸಿ ಸಲಹಿದಂ ತನ್ನ ಭಕ್ತರನುಮೇಶಂ

ವಿಮಲ ಕಾತ್ಯಾಯನೀವದನಸನ್ನುತದಿವ್ಯ
ಕಮಲಾರ್ಕ ಶಶಿಜೂಟಶರಣಜನ ತಾಪಹರ
ಕಮನೀಯ ಕರುಣಾಬ್ಧಿ ಮನ್ಮಥಾರಣ್ಯವನದಾವ ಶಂಕರ ಶುಭಕರ
ರಮಣೀಯ ನುತ ಗುಹೇಕ್ಷಣ ಕುಮುದ ನವಚಂದ್ರ
ಶಮನ ಮದಹರ ಶಂಭು ಹರಿನಯನಯುತಚರಣ
ಕುಮತಿರಿಪುಸಂಹಾರ ಪರಮನೇ ಸಲಹೆನ್ನ ಶಾಂತಮಲ್ಲೇಶ ದಯದಿಂ ೧

ರಾಜರೆನಿಸಿರ್ಪ ನಿನ್ನಯ ಭಕ್ತ ನಿರ್ಮಲ
ಗಿರಿಜಗದೊಳರಿಗಳಪ್ಪವರ ಮಾರ್ಕಂಡೆ ಯುವ
ನೇ ಜಡಿವ ಮಾತ್ರದೊಳು ಖಂಡಿಸುವ ವೀರಜಂಗಮ ಹರುಷವಾರ್ಧಿಚಂದ್ರ
ತೇಜದಷ್ಟಾಂಗಭಕ್ತಿಯನುಳ್ಳ ಶಿಷ್ಯರ್ಗೆ
ನೈಜಪ್ರಸನ್ನ ಬೋಧಪ್ರದ ಮಹೀಧರಸ
ಮಾಜಕ್ಕೆ ಮೇಲಹ ಕಕುದ್ಗಿರಿಯ ಮೇಲಣ ಗವಿಯ ಶಾಂತನಂಜೇಶ್ವರಾ ೨

ಮುಂದೆ ಕೇಳ್ಳೆ ಕೆಂಚವೀರಾಪ್ಪಯಾ ಮಹಾ
ಸ್ಕಾಂದ ಪೌರಾಣದೊಳು ಶಿವರಹಸ್ಯದೊಳು ನಲ
ವಿಂದ ಜೈಮಿನಿ ಬಿನ್ನಪಂ ಗೆಯ್ಯುತಿರ್ದನಾ ದೂರ್ವಾಸಮುನಿನಾಥಗೆ
ತಂದೆ ಪೇಳಯ್ಯ ಸೀಂ ಕಾಲನಂ ಪುರಹರಂ
ಕೊಂದ ಸೌಖ್ಯದ ಕಥೆಯನಮೃತೋಪಮಾನದಿಂ
ದೆಂದು ನುಡಿಯಲು ಕೇಳಿ ತಾಪಸಂ ಪರಮಸಂತೋಷದಿಂದಿಂತೆಂದನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಾರುತರ ಧರ್ಮಶಾಸ್ತ್ರಂಗಳೆಂತಾಱುಮೇಣ್
ಪೌರಾಣವೆಯ್ದೆ ಪದಿನೆಂಟಾಗಮಂಗಳು ವಿ
ಚಾರಿಸುವೊಡಿರ್ಪತ್ತುಯೆಂಟಱೊಳು ಶಿವಮಹತ್ವವನಱಿವರಾರಿಳೆಯೊಳು
ಆರ್ಯೆದು ನೋಡಿ ಬಲ್ಲನಿತ ಬಿತ್ತರಿಪೆವೈ
ಮಾರಾರಿಯಣುಗನಾದಾ ಶ್ವೇತಸತ್ಕಥಾ
ಸಾರವಮಂ ಸಜ್ಜನವಿಚಾರವಮಂ ಸಂತೋಷಪೂರವಮಂ ಕೇಳೆಂದನು ೪

ದೂರ್ವಾಸಮುನಿ ನುಡಿದನೆಲೆಲೆ ಜೈಮಿನಿ ಕೇಳು
ಪೂರ್ವಕಥನವನು ರಾಜಶ್ವೇತನೆಂದೆನಿಸು
ವೂರ್ವಿಯಧಿನಾಥ ನೈಶ್ವರ್ಯ ಸಂಪನ್ನನತ್ಯಂತಧಾರ್ಮಿಕನನಘನು
ಸರ್ವಜ್ಞ ಶಿವಶಾಸ್ತ್ರದ್ಭಾವಯುಕ್ತ ನಿ
ಗರ್ವಿ ಶಿವಭಕ್ತಂ ದೃಢವ್ರತಂ ಸತ್ಕೀರ್ತಿ
ಪರ್ವಲಾ ಪ್ರಭುಮಂತ್ರವಿಲಸದುತ್ಸಾಹ ಶಕ್ತಿತ್ರಯಾನ್ವಿತನೆನಿಸುವಂ ೫

ವಿಜತೇಂದ್ರಿಯಂ ಶಾಂತ ನಿರ್ವಿಕಾರಂ ವಾಗ್ಮಿ
ಸುಜನ ಶಿವಸಮಯ ಪರಿಪಾಲಕಂ ಶಿವಪಾದ
ಭಜಕ ಶೈವಾಧೀಶನ ಜಡನಖಿಳಾಗಮಶ್ರವಣದಾನಾಧೀಶನು
ನಿಜಲಿಂಗನಿಷ್ಠ ರಾಜಶ್ವೇತನೋರ್ಮೆಗಜ
ಬಜೆಯನುಳಿದೇಕಾಂತದಲ್ಲಿ ಹರಪಾದವಾ
ರಿಜನರ್ಚಿಸುತಿರಲವಂಗಾಯುತೀರ್ದುದೆಂದಾ ಯಮಂ ಬಂದನಾಗ ೬

ವೃತ್ತ ರಕ್ತಾಕ್ಷಿ ವೃಶ್ಚಿಕರೋಮಸಂಕುಲಂ
ಎತ್ತಿದ ಮೊಗಕ್ಕೆಸೆವ ಕೋರದಾಡೆಗಳುಮೊ
ಪ್ಪುತ್ತಿರ್ಪ ಚೂರ್ಣಾಂಜನದ ಸಿರಿಯ ಪೋಲ್ವ ದೇಹದ ಯಮಂ ಮೃತ್ಯುಸಹಿತಂ
ಉತ್ತಮನ ಕೊರಲಲ್ಲಿ ಪಾಶಮಂ ಬೀಱಿ ತೆಗ
ವುತ್ತಿರಲು ಶಿವನ ಪೂಜೆಯ ನಿಷ್ಟನಾಗ ನುಡಿ
ವುತ್ತಿರ್ದನೆಲೆ ಕಾಲ ನೀತಿಯಂ ಮೀಱಿ ನೀ ಸೆಳೆಯದಿರು ಕೇಳೆಂದನು ೭

ಕಾಲ ಕೇಳೆನಗೀಗ ಶಿವಪೂಜೆಯಂ ಮಾಳ್ಪ
ಕಾಲವಿದು ಸರ್ವಯಜ್ಞಕ್ಕಿಂದ ಮಿಗಿಲಲಾ
ಕಾಲಕಂಠನ ಪೂಜೆಯೀ ದೇವಪೂಜೆಯಂ ಮಾಡದಾನುಣಲಿಲ್ಲವೈ
ಮೇಲೆ ಗಮನಾಗಮನ ನಿದ್ರೆ ವೈಭವ ಭೋಗ
ವಾ ಲೇಪನಾಭರಣವೆಂಬವಂ ರಚಿಸೆನೀ
ಶೂಲಿಯೇ ಬಲ್ಲನಾ ಶಿವನೆ ಯೋಗಕ್ಷೇಮಮಂ ಮಾಳ್ಪನಾನತರ್ಗೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುಕಾರಣಂ ಶಿವನ ಪೂಜೆಯಂ ನಾಂ ಮಾಳ್ಪ
ಸದಮಲದ ಕಾಲದೊಳು ನೀಂ ಬಂದು ಕೊರಲ ಕ
ಟ್ಟಿದಲಾ ಮಹೇಶನದಱಿಂ ನಿನ್ನ ಶಿಕ್ಷಿಪಂ ಕೇಳೆನಲು ಗಹಗಹಿಸುತ
ಅಧಟನಿಂತೆಂದನೆಲೆ ಭೂಪ ಕೇಳ್ನೆ ನೀನು
ಮೊದಲಹರೆಯದೊಳು ಶಿವನಂ ಪೂಜಿಸದೆ ಕಡೆಯ
ಮುದುಕನಾದಲ್ಲಿ ಹರಭಜನೆಯಂ ನೀನುಳಿವೆನೆಂದಡಾಂ ಬಿಡೆನೆಂದನು ೯

ನರನಾಯುಷಂ ನೂಱಲಾ ಬಳಿಕ್ಕದಱೊಳಗೆ
ಇರುಳುನಾಲ್ಕುಂ ಜಾವವಳಿದಂತೆ ಬಿದ್ದಿರ್ಪ
ನರೆಯಪ್ಪ ದಿನವದಱಿನಾ ಶತಾಯುಷ್ಯಂಗೆ ಬಾಳ್ವುದೈವತ್ತುವರುಷಂ
ಇರದೆ ತೊಂಬತ್ತು ಮೇಣಱುವತ್ತು ಮೂವತ್ತು
ಪರಿಕಿಸಲು ಹತ್ತೈದು ವರುಷ ತಿಂಗಳು ದಿನಂ
ಮರಣವಹುದಱಿಯಬಾರದು ಬದುಕಿನೊಳಗರ್ಥವ್ಯೆ ಕೇಳು ಭೂಪಾಲಕಾ ೧೦

ಕೆಲವು ಕಾಲದೆೊಳು ಬಾಲ್ಯಾವಸ್ಥೆಯೊಳು ನೋಡೆ
ಪಲವು ನರಕದ ಮಾಳ್ಕೆಯಾ ಯೌವನಂಗಳೊಳು
ಲಲನೆಯರ ವಿಷಯದುದ್ರೇಕದುನ್ಮದದೋಷವಾ ವೃದ್ಧನಾದ ಬಳಿಕ
ಸಲೆ ಹೋಹುದಾಲಯಂ ನಡುವೆ ರುಜೆ ಮುಳಿಸುಗಳ
ನೆಲೆಯಿಂತು ಶಿವಪೂಜೆಗಳ ಮಱೆವರಖಿಳರ್ಗ
ಳೆಲೆ ಭೂಪ ನೀಂ ಮೊದಲು ಮಾಡದೀಶನನೀಗ ಭಜಿಸೆ ಬಿಡೆ ನಾನೆಂದನು ೧೧

ಮುಂದೆ ಪೇಳ್ವೆಂ ನಾಳೆ ಮಾಳ್ಪ ಧರ್ಮವನೆ ಕೂ
ರ್ತಿಂದು ಮಾಡುವದು ಮಧ್ಯಾಹ್ನದೊಳಗೊಡರಿಚುವೆ
ನೆಂದೆಂಬ ಸತ್ಕೃತ್ಯಮಂ ಪ್ರಭಾತದೊಳೆ ಮಾಡುವುದು ಬಲ್ಲರ ಲಕ್ಷಣಂ
ಹಿಂದೆ ರಾಜ್ಯೈಶ್ವರ್ಯಮಂ ಪಲವು ವೈಭವದೊ
ಳೊಂದಿ ಭೋಗಿಸಿ ಬಳಿಕ್ಕೀ ವೃದ್ಧನಾದ ಬಳಿ
ಕಿಂದುಧರನಂ ಭಜಸುತಿರೆ ಬಿಡುವನಲ್ಲ ನಿನ್ನಂ ಶ್ವೇತ ಕೇಳೆಂದನು ೧೨

ಹೊಟ್ಟೆಯೊಳು ರಕ್ತ ಪೇಶಿಯು ಬಲಿದ ಗರ್ಭವಾ
ಪುಟ್ಟಿದರ್ಭಕ ಬಾಲ ಯೌವ್ವನ ವಯೋಧಿಕರು
ನೆಟ್ಟನತಿವೃದ್ಧರಾ ದೇವ ತಿರ್ಯಗ್ಜಾತಿಗಳು ಪಿರಿಯನರಸು ತಪಸಿ
ಕಟ್ಟಧಿಕಸುಜ್ಞಾನಿ ಮಾಂತ್ರಿಕಾದ್ಯರಿಗೆ ಮುಂ
ಕಟ್ಟಿದಾಯುಷ್ಯಪೂರ್ಣತೆಯಲ್ಲಿ ನಿಮಿಷಮುಂ
ಬಿಟ್ಟು ಪೋಗೆಂ ಹರಣಮಂ ಕೊಂಬೆನಿದು ದಿಟಂ ಭೂಪಾಲ ಕೇಳೆಂದನು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿಯಜೇಂದ್ರಾದಿಗಳು ಕೋಟಾನುಕೋಟಿಗಳು
ಮರಣವಪ್ಪರು ಕಾಲವೆಯ್ದೆ ತುಂಬಿದ ಬಳಿ
ಕ್ಕರಸ ಕೇಳೈ ಕೋಟಿ ಚಕ್ರವರ್ತಿಗಳಳಿವರೆನ್ನಿಂದಲೆಂತೆಂದಡೆ
ವರ ತೃಷ್ಣೆಯೆಂಬ ಸೂಜಿಯೊಳಿರಿಸಿಕೊಂಡಧಿಕ
ತರ ವಿಷಯವಾರಿಯಿಂ ನೆನೆದು ರಾಗದ್ವೇಷ
ದುರು ಹವಿಯೊಳಂ ಪಚನವಾಗಿ ಮೃತ್ಯುವಿನೂಟ ಕೊದಗುವರು
ಕೇಳೆಂದನು ೧೪

ಕಂಡು ಪುಣ್ಣಂ ಪಿಡಿಯಲೆಱಗುತಿಹ ಮಕ್ಷಿಕನ
ಮಂಡೂಕನೆಯ್ದೆ ತುಡುಕಲ್ಕದಂ ಪಾವು ಮುಂ
ಕೊಂಡು ಬಾಯೊಳಗಡಸಲಾ ಪಾವನೊಂದು ನವಿಲಾಕ್ರಮಿಸಲಾ ನವಿಲನು
ದಿಂಡೆಯು ಪುಳಿಂದಕಂ ಕೊಲ್ವನಿಂತಿವ ಮೊದ
ಲ್ಗೊಂಡು ಕೊಲ್ವಾತ ನಾನೇ ಕಣಾ ಕೇಳು ಭೂ
ಮಂಡಲಾಧಿಪನೆಯೆಂದಾಡುತಿರ್ದಂ ಭಕ್ತಿನಿಷ್ಠನೊಳು ಯಮಧರ್ಮನು ೧೫

ಸಾವಿರ ಪಶುವ್ರಜದೊಳಿರ್ದೊಡಂ ಕರು ತಾಯ
ನೇ ವಿಚಾರಿಸಿಕೊಂಡು ಬಪ್ಪಂದದಿಂದಂಜ
ನಾವಳಿಯೊಳೆಸೆದು ಕಾಲಪ್ರಾಪ್ತಿ ತೀರ್ದ ಮನುಜರನಱಸಿಕೊಂಡು ಬಂದು
ನಾವೆಳೆದುಕೊಂಡೆಯಿದುತೀರ್ಪವದಱಿಂ ಕೇಳು
ಭೂವರನೆ ನಿನ್ನ ಕೊಂಡೊಯಿವೆನೆನಲಾಶ್ರಾದ್ಧ
ದೇವನೊಳು ಮರಳಿ ರಾಜಶ್ವೇತನಾಡಿದಂ ಕೇಳೆಂದನಿತ್ತ ಮುನಿಪ ೧೬

ಕೀನಾಶ ಕೇಳು ಶಿವಭಕ್ತರಂ ಪಿಡಿವುದಕೆ
ನೀನಾರು ರಾಜಪುತ್ರರ ರಾಜನೇ ಶಿಕ್ಷಿ
ಪಾ ನಿಯತದಿಂದ ಶಿವಭಕ್ತರಕ್ಷಣೆಗೆ ಶಿಕ್ಷೆಗೆ ಶಂಭುವೇ ಕರ್ತನೈ
ಹಾನಿಗೊಳಗಹೆ ನೀನು ಹರಿಯಜೇಂದ್ರಾದಿ ದೇ
ವಾನೀಕವೆಯಿದೆ ಶಿವಭಕ್ತರ್ಗೆ ನಡುಗುವರೆ
ಲೈ ನಿನ್ನನೀಶ್ವರಂ ಶಿಕ್ಷಿಸದೆ ಬಿಡನಲಾ ಬದುಕಿಪೋಗೆಂದನರಸಂ ೧೭

ಶಿವನಿರೂಪಂಗಳಿಂ ಬಪ್ಪವಾದಿವ್ಯಾಧಿ
ಯವು ನಿನಗೆ ಸಂಬಂಧವಲ್ಲವೈ ಭಕ್ತರು
ತ್ಸವಕೀಶ್ವರಂ ಕರ್ತನೈ ಮುಂದುಗಾಣದೆಲೆ ಮತ್ತನೆನಿಸುವ ಕಾಲನೇ
ಅವಿಚಾರದಿಂದ ಕಣ್ಣು ಕೆಂಪು ಮಾಡೆ ನಿ
ನ್ನುವನದೇನೆಂದು ಒಲ್ಲರು ಶರಣರೆನಲು ಕೋ
ಪವನೆಯಿದೆ ತಾಳಿದಂ ಮೂಲೋಕಮಂ ನುಂಗುವಂದದಿಂ ಕೀನಾಶನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಡು ಬಿಡೈಶ್ವೇತ ನಾನೇಲೋಕಮಂ ಸೃಜಿಸಿ
ನಡೆಸಿ ಸಂಹಾರಮಂ ಮಾಡುವೆಂ ನನಗೊಬ್ಬ
ರೊಡೆಯರುಂಟೇ ಕೇಳು ನಾನೇ ಸ್ವತಂತ್ರನೈ ಪರಿಭಾವಿಸಲು ಗಂಗೆಯು
ತಡಿಯು ಮಳಲಂ ಲೆಕ್ಕಿಸಲು ಬಹುದು ಹರಿಯಜರು
ಮಡಿದರೆನ್ನಿಂದಲವರಂ ಲೆಕ್ಕಿಸಲ್ಬಾರ
ದೊಡೆಯ ನಿನಗಾನೆಂದು ಘೂರ್ಮಿಸುತನುಡಿದನಾ ಕಾಲನಳುವಿಂಗೆ ಮೂಲ ೧೯

ಮುನಿಪ ದೂರ್ವಾಸನೆಂದಂ ಕೇಳ್ವುದಯ್ಯ ಜೈ
ಮಿನಿಯೆ ಘೂರ್ಮಿಸಿ ಕಾಲನಾಹ ಪಾಶವ ಮಹೀ
ಶನ ಕೊರಲ್ಗ ಮರಿಸುತ ಬೊಬ್ಬಿಡುತ್ತಂ ಚಂದ್ರನಂ ರಾಹು ಪಿಡಿವಂದದಿಂ
ಮುನಿದೆಳೆಯಲೀಶ್ವರಧ್ಯಾನದಿಂ ಭಕ್ತನಿ
ಪ್ಪನಿತಕ್ಕೆ ಲಿಂಗದಿಂ ಪೊಱಮಟ್ಟನೀಶನ
ತ್ಯನುಪಮಂ ಜ್ಯೋತಿರ್ಮಯಂ ಕೂಡೆ ಜಗಜಗಿಸುತೇನೆಂದು ಬಣ್ಣಿಸುವೆನು ೨೦

ಕೋಟಿ ಸೂರ್ಯಪ್ರಭೆಗಳಿಂ ಸ್ಥೂಲತನುಘನಕಿ
ರೀಟ ನಿಜರೂಪದಿಂ ಘೂರ್ಮಿಸುತ್ತತಿಶಯಲ
ಲಾಟಾಗ್ನಿನೇತ್ರಮಂ ತೆಗೆಯೆ ಘುಳಿಘುಳಿಸಿ ಛಿಣಿಛಿಟಿಲೆಂದು ಕಿಚ್ಚುಗವಿಯೆ
ಧೂಟಿಸುತ ನಿಮಿಷಾರ್ಧದಿಂ ಕಾಲನಂ ಸುಟ್ಟ
ಆಟೋಪದಿಂ ಕಾಲನಂ ದಹಿಸಿ ಬಳಿಕಿಂದು
ಜೂಟನಾ ಶ್ವೇತಂಗೆ ಗಣಪದವನಿತ್ತನೈ ಮತ್ತೊಂದು ಕಲ್ಪದಲ್ಲಿ ೨೧

ಮಾರ್ಕಂಡೇಯ ಚರಿತೆ

ನೀ ಮುದದಿ ಕೇಳಯ್ಯ ಕೆಂಚವೀರಾಹ್ವಯಾ
ಸಾಮರ್ಥ್ಯಮಪ್ಪ ಮಾರ್ಕಂಡೇಯ ಪುರಾಣದೊಳು
ನೈಮಿಷಾರಣ್ಯದ ಮುನೀಶರಾ ಸೂತನ ಬೆಸಗೊಂಡರದೆಂತೆಂದಡೆ
ಶ್ರೀಮುನಿಯೆ ಬಾದರಾಯಣನಿಂದ ಕೇಳ್ದಲಾ
ಯಾ ಮೃಕಂಡುವಿನಣುಗನಪ್ಪ ಮಾರ್ಕಂಡೇಯಂ
ಗೀ ಮಾನುಷಾಂಗದಿಂ ಶಿವನಿಂದ ನಿತ್ಯತ್ವಮಂ ಪಡೆದುದೆಂತೆಂದರು ೨೨

ಸೂತನೆಂದಂ ಕೇಳಿರೈ ದಿವ್ಯಮುನಿಗಳಿರ
ಆ ತೆಱನ ಪದ್ಮಸಂಖ್ಯೆಯ ಕಲ್ಪದಿಂ ಮೊದಲ್
ಪ್ರೀತಿಯಿಂ ಯತಿ ಮೃಕಂಡುವೆನಿಪ್ಪವಂ ಕನ್ನಡಿಯು ನೋಡೆ ಫಲಿತಾಂಕುರ
ಜಾತವಾನನದೊಳಿರೆ ಚಿಂತಿಸುತ ಪತಿಪಂಕ
ಜಾತಾಕ್ಷಿ ಗುಣವತಿಯೊಳೊಡಗೂಡಿ ದಿವ್ಯತನು
ಜಾತನಂ ಪಡೆವಕ್ಕಱಿಂ ತಪಕ್ಕೆಂದು ಪೊಱಮಟ್ಟನಾ ದೃಢನಿಶ್ಚಯಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನಿವರ ಸುತರಾದುದಿಲ್ಲೀಶನಂ ಭಜಿಸಿ
ಯುನ್ನತಕುಮಾರನಂ ಪಡೆವೆನೆಂಬಕ್ಕಱಿಂ
ಸನ್ನದ್ಧನಾಗಿ ಮೂಡಣಸಮುದ್ರವನೆ ಕಾವೇರಿ ಕೂಡಿದ ಬಳಿಯೊಳು
ಮುನ್ನಲಾ ಶ್ವೇತನೆಂಬಾ ರಾಜಭಕ್ತನುರೆ
ಪನ್ನಗಾಧರನ ಭಜಿಸಿದ ತಾಣವತಿಶಯುದ
ಚೆನ್ನೊಪ್ಪುವಾ ಶ್ವೇತವೆನಿಸುವಾರಣ್ಯಯೋಜನವಲ್ಲಿಗೆಯಿತಂದನು ೨೪

ಈಕ್ಷಿಸುತ್ತಾ ಶ್ವೇತವಿಲಸದಾರಣ್ಯಕ್ಕೆ
ದಕ್ಷಿಣದೊಳಾ ಬಿಲ್ವವನವಿಪ್ಪುದತ್ಯಂತ
ಲಕ್ಷಣದೊಳಲ್ಲಿಪ್ಪ ಕಾವೇರಿಯುದಱಲ್ಲಿ ಮರಣಾಂತವಾಗಿ ಮೀಯೆ
ಮೋಕ್ಷವಲ್ಲಭನಪ್ಪನೊಮ್ಮೆ ಮಿಂದಾಂತಂಗೆ
ಲಕ್ಷಗೋವಂ ದಾನವಿತ್ತ ಫಲವಲ್ಲಿಗೆ ಮು
ಮುಕ್ಷುದಂಪತಿಗಳೆಯಿತಂದು ನಿತ್ಯಸ್ನಾನಮಂ ಮಾಡಿ ಶಿವನ ನೆನಪಿಂ ೨೫

ಬಂದು ಲಿಂಗದ ಪೂಜೆಯುಂ ಮಾಡುತಿಂತೆಸೆಯು
ಲೊಂದು ದಿವಸಂ ಮಚ್ಚಿ ಗೌರಿಸಹಿತಂ ಶಿವಂ
ನಿಂದು ನಿಜರೂಪಿನೊಳು ನಿಮಗಿಷ್ಟವೇನು ದಂಪತಿಗಳಿರಯೆನೆ ಭವಂಗೆ
ವಂದಿಸುತ ಜೀಯ ಸತ್ಪುತ್ರನಾಗಲ್ವೇಹು
ದೆಂದಾಗಮಂ ಪೇಳ್ಗು ಪುತ್ತ್ರೆಂಬ ನರಕದೊಳ
ಗೊಂದಲೀಯದೆ ತೆಗೆವ ಮಗನೋರ್ವನಾಗಬೇಕೆಂದು ಶರಣೆಂದರಾಗ ೨೬

ಆ ವಾಕ್ಯಮಂ ಕೇಳಿ ನಸುನಗುತ್ತೀಶ್ವರಂ
ದೇವಿಯ ಮೊಗಂ ನೋಡುತಂ ನುಡಿದನೆಲೆ ಮುನಿಪ
ನಾವು ನಿನಗೆ ಕೊಡುವೆವ್ಯೆ ದುರ್ಗುಣಿಗಳೆನಿಪ ದೀರ್ಘಾಯುಗಳ ಪುತ್ರರಾ
ಸಾವಿರವನಲ್ಲವೇಯತಿಸುಗುಣಿಯಲ್ಪಾಯು
ಪಾವನಾತ್ಮಕನಹ ಕುಮಾರನೊಬ್ಬನನೆ ಕೂ
ರ್ತೀವೆವೋ ಬೇಡೆನಲು ಕರಕಮಲಮಂ ಮುಗಿದು ನುಡಿದಂ
ಮೃಕಂಡುಮುನಿಪಂ ೨೭

ಜೀಯ ದುರ್ಗುಣಿಗಳಾಗಿಹ ಮಕ್ಕಳೆನಿಸುವರು
ಸಾಯಿರವದೇತಕಲ್ಪಾಯುಷ್ಯನಾದೊಡೇ
ನೀಯುವನಿಯಲ್ಲಿ ಸಜ್ಜನನಪ್ಪ ಪುತ್ರನೋರ್ವನೆ ಸಾಕು ಪಾಲಿಸೆನಲು
ಮಾಯಾರಿ ಹದಿನಾಱುವರುಷದಾಯುಷ್ಯಸ
ತ್ಕಾಯುದಣುಗನನಿತ್ತೆವೆಂದು ವರವಂ ಕೊಟ್ಟು
ಒಯ್ಯಾರದಿಂ ಲಿಂಗದೊಳು ಪೊಕ್ಕನಾ ದೇವನಘಮಹಾರಣ್ಯದಾವ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರವ ಪಡೆದಿಂತು ದಂಪತಿಗಳಾ ಸ್ಥಳದಿಂದ
ತಿರುಗಿ ತಮ್ಮಯ ಮೊದಲ ಗೇಹದೊಳು ಸುಖವಿರಲು
ಪರಮೇಶ್ವರನ ಕರುಣದಿಂ ಗರ್ಭವಂಕುರಿಸಿ ದಿನದಿನಕೆ ತಚ್ಚಿಹ್ನದೆ
ಭರವಾಗಿ ನವಮಾಸ ಪೂರ್ಣಮಾಗುತ್ತ ಸೌಂ
ದರಪುತ್ರನಂ ಪಡೆಯಲಖಿಳ ಮುನಿಗಳು ಬಂದು
ವರ ಮೃಕಂಡುವಿನ ಸುತನೀತ ಮಾರ್ಕಂಡೇಯನೆಂದು ಕೀರ್ತಿಸಿದರಾಗ ೨೯

ಶಿವವಿಧಾನದ ಜಾತಕರ್ಮಂಗಳಂ ಮಾಡಿ
ತವೆ ಬಾಲಲೀಲೆಯಂ ಕಳೆವುತ್ತ ದಿನದಿನದೊ
ಳವಿರತಂ ಸರ್ವಶಾಸ್ತ್ರಂ ಕಲಿತು ಸುಪ್ರೌಢಿ ಸದ್ಭಾವದಿಂದ ಬೆಳೆಯೆ
ಅವಗೆ ಹದಿನೈದು ವತ್ಸರವಾಗಲಂತೊಂದು
ದಿವದಲ್ಲಿ ಸುತನ ಸುಕುಮಾರತೆಯ ನೋಡುತಾ
ಯುವ ನೆನೆದು ತಂದೆ ತಾಯಿಗಳು ಹೌವನೆ ಹಾರಿ ಪರಿದು ದುಃಖಂಗೆಯಿದರು ೩೦

ಅದ ಕಂಡು ವಿಸ್ಮಯಂಗೊಂಡು ಮಾರ್ಕಂಡೇಯ
ನಿದು ನಿಮಗೆ ಮರಿಯಾದೆಯೇ ಯೆನ್ನ ನೋಡಿ ದುಃ
ಖದೊಳಳುವುದೇಕಾರಣಂ ಪೇಳಿಮೆನ್ನಾಣೆಯೆನೆ ನಡುಗಿ ನುಡಿದರಾಗ
ಸದಮಲಕುಮಾರ ಕೇಳಾ ಶಂಕರಂ ನಿನಗೆ
ಮೊದಲು ಕೊಟ್ಟಾಯುಷಂ ಹದಿನಾಱಲಾ ಕಂದ
ಪದಿನೈದು ವರುಷವಾಯಿತಿಂದಿಗಿನ್ನೊಂದು ವರುಷಕ್ಕಳಿವು ನಿನಗೆಂದರು ೩೧

ಎನೆ ನಗುತ ತಾಯಿತಂದೆಗಳಿಗಿಂತೆಂದನಾ
ತನುಜ ಮಾರ್ಕಂಡೇಯನಕಟ ನೀವಿರ್ದುಸುತ
ನೆನಿಪ ನಾನಿರ್ದು ಕೊಟ್ಟಾತನೀಶ್ವರನಿರ್ದು ವರುಷವೊಂದಿರ್ದಿದೇಕೆ
ಅಸುಗೆಟ್ಟು ಚಿಂತಿಸುವ ಕಾರಣಂ ಬೇಡವೆಂ
ದೆನುತ ಸಂತೈಸಿ ಸುಖದಿಂದಲಾ ದೇವದೇ
ವನ ಪೂಜೆಯಂ ಮಾಡುತಂ ನಿಚ್ಚಸಂತಸದೊಳಿರ್ದನಾ ನಿಜನಿಷ್ಠನು ೩೨

ಪಿಂಗದೀ ತೆಱದೊಳಿರಲಾ ತಾಯಿತಂದೆಗಳು
ತಿಂಗಳಾಱಿನ್ನು ಮಗನೇಯೆನಲ್ ಬಗೆಯದಿಹ
ನಂಗೈಸಿ ಮೂಱೆರಡು ಬಳಿಕೊಂದು ಮಾಸವೆನೆ ಲೆಕ್ಕಿಸದೆ ಸುಮ್ಮನಿರ್ಪಂ
ಹಾಂಗೆ ಮತ್ತೇಳುದಿನವೆನೆ ಕೇಳದಿಹನು ನಾ
ಳಿಂಗಳಿವು ನಿನಗೆ ಕಂದಾಯೆನಲ್ಕಾ ರಾತ್ರೆ
ಮಂಗಳೆಯ ಪತಿಯ ವಾಸಕೆ ಬಂದು ಶಿವನ ಪೂಜಿಸಲು ಸನ್ನದ್ಧನಾದಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಸಿತಮಂ ಸರ್ವಾಂಗದಲ್ಲಿ ನಲವಿಂದ ಲೇ
ಪಿಸುತ ತ್ರಿಪುಂಡ್ರಲೇಖಾಂಕಮಸ್ತಕನಾಗಿ
ಮಿಸುಪ ರುದ್ರಾಕ್ಷಿಯಾಭರಣಮಂ ತೊಟ್ಟಾಗಮಪ್ರಮಾಣಿಂದ ಹೃದಯ
ಬಿಸಜದೊಳು ಶಂಕರನ ನೆಲೆಗೊಳಿಸಿ ಜಿಂಹ್ವೆಯೊಳ
ಗಸಮ ಪಂಚಾಕ್ಷರಿಯನುಚ್ಚರಿಸಿ ಶಿವನ ಸಂ
ತಸದಿಂದ ಪೊಗಳತೊಡಗಿದನೆನ್ನ ಮೃತ್ಯುವಿನ್ನೇಗೆಯಿವುದೆಂದೆನುತ್ತ ೩೪

ಆತ ಮಾಡಿದ ಮಹಾ ಸ್ತೋತ್ರವೆಂತೆನೆ ಮಹಾ
ಖ್ಯಾತರುದ್ರನನೆಸೆವ ಪಶುಪತಿ ಸ್ಥಾಣುವಂ
ಪ್ರೀತಿಯಿಂ ನೀಲಕಂಠನನುಮಾಪತಿಯನೆನ್ನಯ ಹೃದಯದಲ್ಲಿ ನೆನೆದು
ಓತು ವಂದಿಸಿ ಪೊಗಳೆ ಮೃತ್ಯುವೇಗೆಯಿವುದೆಂ
ದಾ ತತ್‌ಕ್ಷಣದಲ್ಲಿ ಪೊಗಳತೊಡಗಿದನು ಸಂ
ಪ್ರೀತಿಯಿಂ ದೇವ ಮಾರ್ಕಂಡೇಯಂ ಯಮನಬಲವೆಲ್ಲವಂ ಗೆಲೆದಿಂಡೆಯಂ ೩೫

ಕಾಲಕಂಠಂ ಕಾಲಮೂರ್ತಿ ಕಾಲಾಗ್ನಿಯಾ
ಕಾಲನಾಶಂ ನೀಲಕಂಠಂ ವಿರೂಪಾಕ್ಷ
ಕಾಲಹರ ನಿರ್ಮಲನುಪದ್ರವವಿದೂರನಾ ವಾಮದೇವಂ ಬಳಿಕ್ಕ
ಸ್ಥೂಲದ ಮಹಾದೇವನೀ ಜಗದ್ಗುರುತರನ
ಲಾ ಲೋಕನಾಥನಡಿಗಾಂ ನಮಿಸಲೆನ್ನನಾ
ಭೀಲವೆನಿಸುವ ಮೃತ್ಯುವೇಗೆಯಿವುದೆಂದು ಕೊಂಡಾಡುತಿರ್ದಂ ಭಕ್ತಿಯಿಂ ೩೬

ದೇವದೇವನ ಜಗನ್ನಾಥನಂ ದೇವೇಶ
ನಾ ವೃಷಧ್ವಜನನಂತಾವ್ಯಯಂ ಶಾಂತನಂ
ಭಾವಿಸಲ್ಲಕ್ಷಮಾಲಾಧರಂ ಹರನನಾನಂದಪರಮನ ನಿತ್ಯನ
ಕೈವಲ್ಯವಾ ಸ್ವರ್ಗ ಮೋಕ್ಷಪ್ರದಾತೃಜನ
ನಾವಳಿ ಸ್ಥಿತಿ ಲಯಕೆ ಕಾರಣನ ನೆನೆಯಲೆನ
ಗಾ ವಿಶೇಷದ ಮೃತ್ಯುವೇಗೆಯಿವುದೆಂದು ಮಾರ್ಕಂಡೇಯನಃಟಿ ನುತಿಸಿದ ೩೭

||ಸಾಕ್ಷಿ||

ಮಾರ್ಕಂಡೇಯ ಪೌರಾಣೇ

ಮಾರ್ಕಂಡೇಯ ಸ್ತೋತ್ರ:
ರುದ್ರಂ ಪಶುಪತಿಂ ಸ್ಥಾಣುಂ ನೀಲಕಂಠಮುಮಾಪತಿಂ
ನಮಾಮಿ ಶಿರಸಾ ದೇವಂ ಕಿಂ ನೋ ಮೃತ್ಯುಃಕರಿಷ್ಯತಿ ೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲಕಂಠಂ ಕಲಾಮೂರ್ತಿಂ ಕಾಲಾಗ್ನಿಂ ಕಾಲನಾಶನಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೨

ನೀಲಕಂಠಂ ವಿರೂಪಾಕ್ಷಂ ನಿರ್ಮಲಂ ನಿರುಪಪ್ಲವಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೩

ವಾಮದೇವಂ ಮಹಾದೇವಂ ಲೋಕನಾಥಂ ಜಗದ್ಗುರುಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೪

ದೇವದೇವಂ ಜಗನ್ನಾಥಂ ದೇವೇಶಂ ವೃಷಭಧ್ವಜಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೫

ಅನಂತಮವ್ಯಯಂ ಶಾಂತಮಕ್ಷಮಾಲಾಧರಂ ಹರಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೬

ಆನಂದಂ ಪರಮಂ ನಿತ್ಯಂ ಕೈವಲ್ಯಪದಕಾರಣಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೭

ಸ್ವರ್ಗಾಪವರ್ಗದಾತಾರಂ ಸೃಷ್ಟಿ ಸ್ಥಿತ್ಯಂತಕಾರಿಣಂ
ನಮಾಮಿ ಶಿರಸಾದೇವಂ ಕಿಂನೋ ಮೃತ್ಯುಃ ಕರಿಷ್ಯತಿ ೮

ಮಾಕಂಡೇಯ ಕೃತಂ ಸ್ತೋತ್ರಂ ಯಃ ಪಠೇಚ್ಛಿವಸನ್ನಿಧೌ
ತಸ್ಯ ಮೃತ್ಯುಭಯಂ ನಾಸ್ತಿ ಸತ್ಯಮೇವ ನ ಸಂಶಯಃ ೯

ಇಂತು ಮಾರ್ಕಂಡೇಯಂ ಮಾಡಿದ ಸ್ತೋತ್ರಮಂ
ಸಂತತಂ ಪಠಿಸಲಿಷ್ಟಾರ್ಥಸಿದ್ಧಿಗಳಾಗಿ
ಸಂತತಿಗಳಭಿವೃದ್ಧಿಯಾಗಿ ಬಾಳ್ವರು ಕೇಳಿರೈ ಮುನೀಶ್ವರಿರ ಬಳಿಕ
ಅಂತಾಗಳಜ್ಞಾನಿ ಕಾಲತುಂಬಿತ್ತೆನು
ತ್ತಂತಕಂ ಬಂದು ನಿಷ್ಠನ ಕೊರಲ್ಗಟ್ಟಿ ಕಂ
ಡಂತಪ್ಪ ಯಮನ ನೀಶ್ವರ ನಂಘ್ರಿಯಿಂದೊದೆದು ಕೊಂದನಾ ನಿಮಿಷದಲ್ಲಿ ೩೮

ಧಿಮ್ಮೆಂದು ಬಿದ್ದಳಿದ ಕಾಲನಂ ಕಂಡು ಸುರ
ರೆಮ್ಮಯ್ಯಯೆಂದಖಿಳ ವಾದ್ಯಂಗಳಂ ಮೊಳಗೆ
ರ್ಝುಮ್ಮೆನಲು ದಿಗ್ದಂತಿಗಳ ಕರ್ಣದಲ್ಲಿ ದಾಂಧಳಮೆನಲು ನಿಸ್ಸಾಹಣಂ
ಕಮ್ಮರಲ ಮಳೆಗಱೆಯಲಾ ಗಣಂಗಳು ಕೂರ್ತು
ನಿಮ್ಮಡಿಯ ಕರುಣಕ್ಕೆ ಸರಿಯಾರೆನುತ್ತಿರ್ದ
ರುಮ್ಮಹದೊಳಖಿಳ ದೇವರ್ಕಳಾನಂದದಿಂ ಕೀರ್ತಿಸಿ ದರಂಡಭವನ ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ನಮೋ ನೀಲಕಂಠಾಯ ತೇ ನಮ ಎನು
ತ್ತ್ರಂ ನೈಜ ಭಕ್ತಪ್ರಿಯಾಯ ಕಾಲೋಚಿತ ಸ
ಮುನ್ನತದ ರೂಪನೇ ಕಾಲಕಾಲನೆ ಪಾಶ ಶೂಲ ವರ ಪರಶುಹಸ್ತಾ
ಸನ್ನದ್ಧಮೃತ್ಯುವಿಗೆ ಮೃತ್ಯುವೇ ಕಾಲರು
ದ್ರಂ ನೀನೆ ಸರ್ವಸಂಹಾರಿ ಪರಮಸ್ವತಂ
ತ್ರಂ ನಾಡೆ ಸರ್ವಾಧಿಕಾ ನಿನಗೆ ಶರಣೆಂಬೆವೆಂದರವರು ೪೦

ಎಸೆವ ಕಾಲವಿನೋದಿ ಭಕ್ತಿಸಂಪ್ರಾಪ್ತನೇ
ರಸಿಕನೇ ಸ್ತುತ್ಯನೇ ನಿತ್ಯನೇ ಭಕ್ತರ್ಗ
ಳಸದಳಾರ್ತಿಪ್ರಹರನೇ ಹರಿಬ್ರಹ್ಮಾದಿನಮಿತ ಸೌಂದರ್ಯಪಾದ
ಬಿಸಜನೇ ಸರ್ವ ಸಂಸ್ತುತ್ಯಸ್ವರೂಪನೇ
ಒಸೆದು ನೀನನ್ಯರಂ ಪೊಗಳದಿಹ ವದನಸಾ
ರಸ ಭಕ್ತಿವಿಜ್ಞಾನಗಮ್ಯನೇ ನಿನಗೋಸ್ಕರಂ ನಾವು ಶರಣೆಂಬೆವು ೪೧

ಲೋಕದುತ್ಪತ್ತಿ ರಕ್ಷಣ ಸಂಹರಂಗಳ್ಗೆ
ನೀ ಕಾರಣಂ ಪರಾತ್ಪರಱರನೆ ನಿನಗಾವ
ನೇಕಪರಿಯಿಂದ ವಂದಿಪೆವು ನೀಂ ಬಪ್ಪ ಪೋಪುದನಱಿಯದವರಾವಲ
ಶ್ರೀಕಂಠ ನಿನ್ನ ಮಾಯಾಮೋಹಿತರ್ಗೆ ನೀ
ನೇ ಕರುಣಮೀಯಯ್ಯ ನಿನಗೆ ಶರಣೆನುತವ
ಸ್ತೋಕವಚನಂಗಳಿಂ ಕೀರ್ತಿಸುತ್ತಿರ್ದರಾ ದೇವರ್ಕಳೊಲಿದೀಶನಂ ೪೨

॥ಸಾಕ್ಷಿ॥ ದೇವಸ್ತೋತ್ರಂ:-
ಓಂ ನಮೋ ನೀಲಕಂಠಾಯ ಸದಾ ಭಕ್ತಿಸ್ತೋತ್ರಂಪ್ರಿಯಾಯತೇ
ತತ್ತ್ವಾಲೋಚಿತ ರೂಪಾಯ ಕಾಲ ಕಾಲಾಯ ತೇ ನಮಃ ೧೦

ಅವರ ನುಡಿಗಂ ಮೆಚ್ಚಿ ಕೋಪಮಂ ಬಿಟ್ಟಲ್ಲಿ
ಶಿವನಜಾದಿಸ್ವರ್ಗವಾಸಿಗಳಿಗಭಯುವಿ
ತ್ತು ವಿಶೇಷ ಗಂಭೀರವಾಕ್ಯದಿಂತೆಂದನೆಲೆ ವಿಷ್ಣುಮುಖ್ಯರ್ಕಳು
ವಿವರದಿಂ ಕೇಳಿರೈಯಱುಹು ಮಱವೆಗಳೊಳಾ
ಪ್ರವಿಮಲದ ಮದ್ಭಕ್ತರಲ್ಲಿಯಪರಾಧಲೇ
ಶವನೆಸಗಲಾಗಿ ನಿಮಗಾನು ಶಿಕ್ಷೆಯ ಮಾಳ್ಪೆನೆಂದನಾ ಸರ್ವೇಶನು ೪೩

ಎನಗೆ ನೀವಪರಾಧಮಂ ಮಾಡೆ ತಾಳ್ವೆನೆ
ನ್ನನೆ ಬಿಡದೆ ಭಜಿಪ ಭಕ್ತರ್ಗೆಯಪರಾಧಿಯಾ
ದನಿಬರಂ ದಂಡಿಸುವೆನೆನ್ನ ಭಕ್ತರು ಮಹಾಬ್ರಹ್ಮರಿಂ ಕೋಟಿ ಮಿಗಿಲು
ಎನೆ ಕೇಳಿ ಹರಿಯಜರು ನಡುಗಿ ಶಿವನಡಿಗೆಱಗಿ
ಯನಘ ತಿಳಿದೆವು ಜೀಯ ನಿಮ್ಮ ಭಕ್ತರ ಪಾದ
ವನಜಮಂ ಕೀರ್ತಿಸುವೆವಿಂದು ಮೊದಲೆಂದು ಬಳಿಕಮರರ್ಕಳಿಂತೆಂದರು ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಕಾಲಂ ಮಡಿದನೀ ಲೋಕದೊಳಗಖಿಳ
ಜೀವರಿರೆ ತಾಳಲಾರ್ಪುದೆ ಮರಣವಿಲ್ಲದಿರ
ಲಾ ವಿಶೇಷ ಸ್ವರ್ಗ ನರಕಂಗಳಿಲ್ಲವದಱಿಂ ಯಮಂಗಸುವನಿತ್ತು
ಓವೆಂದಡಾತಂಗೆ ಹರಣಮಂ ಕೊಟ್ಟಲ್ಲಿ
ಭಾವಿಸುತ್ತಾಗ ಮಾರ್ಕಂಡೇಯ ವದನರಾ
ಜೀವಮಂ ನೋಡಿ ತರ್ಕೈಸಿ ಮುಂಡಾಡಿದಂ ಭಕ್ತಜನದಾನಂದನು ೪೫

ನಾವಿರ್ಪಪರಿಯಂತರಂ ಸುಖದೊಳಿಹುದೆಂದು
ದೇವದೇವಂ ನರಾಂಗದೊಳು ನಿತ್ಯತ್ವಮಂ
ಠೀವಿಕೊಟ್ಟಾ ತಂದೆ ತಾಯಿಗಳ ಕೈಲಾಸಪುರಕೆ ವೈಭವದೊಳೊಯ್ದು
ಆವ ಲೋಕಂ ನಿನಗೆ ಬೇಹುದಲ್ಲಿಹುದೆಂದ
ನಾ ವಿಶೇಷತೆಯ ಮಾರ್ಕಂಡಾಯುವೆಂಬರೆಂ
ದೀ ವಿಚಾರವನೊರೆದನಾ ಸೂತನಖಿಳ ಮುನಿಗಳಿಗೆ ಸಂತೋಷದಿಂದ ೪೬

ಭೂತೇಶನಖಿಳರಂ ಕಳಿಪಿ ಕೈಲಾಸಕ್ಕೆ
ತಾ ತಳರ್ದನಿದು ಕಾಲಸಂಹರಂ ಮುನಿಗಳಿರ
ಈ ತೆಱಂ ಕಲ್ಪ ಕಲ್ಪಂಗಳೊಳಗುಂಟೆಂದು ಸಂತಸದೊಳಂದು ಪೇಳ್ದಂ
ಸೂತನೆನುತಂ ಹಲಗೆಯಾರ್ಯನುನ್ನತ ಹೃದಿ
ಪ್ರೀತನೆನಿಸುವ ಕೆಂಚವೀರಾಹ್ವಯಂಗೆ ತಾ
ನೋತು ಪೇಳ್ದಂ ಸಂತಸಂಬಡಲು ನಂಜುಂಡಮೂರ್ತಿಯಾನಂದದಿಂದ ೪೭

ಭೂಲೋಕಪಾವನ ಕ ಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೪೮

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಣಾ ಮಾರ್ಕಂಡೇಯನ ಕಥೆಗೆ ಕಾಂಡವೊಂದಱ ಮೇಲೆ ಸಂಧಿಅಯ್ದಱ್

ಅಂತು ಸಂಧಿ ೫ಕ್ಕಂ ಪದ ೨೮೧ ಗ್ರಂಥ ೬೪ಕ್ಕಂ ಮಂಗಳಮಹಾ
ಶ್ರೀಶ್ರೀಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೫

ದುಷ್ಟಯಮ ಸಂಹರಣದೊಳು ಶ್ವೇತನೆಸಗಿದು
ತ್ಕೃಷ್ಟಪೂಜೆಯೊಳು ಸಮ್ಮಾರ್ಜನಾಫಲಮನು
ದ್ಭ್ರಷ್ಟವಿದಳನಹರಾಖ್ಯಂ ರಕ್ಷಿಸಿದ ಕಥೆಯನೊರೆದನಾ ಹಲಗೆಯಾರ್ಯ೯ಂ

ಮೊಳನನಿಕ್ಕಲು ಶುಂಡಿಲಂ ಗುಹಂ ವಿಘ್ನೇಶ
ನೆಳಸಿಯೊಂದೆರಡೆಂದು ಸೇನಾನಿಯೆಸೆವ ಕಂ
ಗಳನೆಣಿಸಲಾಗಿಯುವನಿಲಿಯ ಬಾಲಂಬಿಡಿಯೆ ನವಿಲ ರೆಂಕೆಗಳ ಪಿಡಿದು
ಕಿಳಲಿರ್ವರುಂ ತಾಯ್ಗೆ ಪೇಳಲಿಂತೆಸೆವ ಮ
ಕ್ಕಳ ತೋಱುವಗಜೆಯಂಬಕಕುಮುದವಲರೆ ನಗೆ
ಬೆಳಗೆಂಬ ಜೊನ್ನಮಂ ಬೀಱುವೆಮ್ಮಾಣ್ಮ ಜಯ ಜಯ ಶಾಂತಮಲ್ಲೇಶ್ವರ ೧

ಪುಂಡರೀಕಾದಿ ಕುಸುಮಂಗಳೀಶ್ವರ ಪೂಜೆ
ಪಂಡಿತಾರಾಧ್ಯರಿಂದಗ್ಗಳಂ ನಮಿತಜನ
ಮಂಡಲಿಯ ಸುಜ್ಞಾನಲೋಚನ ರಜೋಗುಣನಿವಾರಣಂ ದರ್ಶಿತಾಂಗಂ
ಅಂಡಲೆವ ಶಿಷ್ಯರಘಶೈಲವಿದಳನ ವಜ್ರ
ದಂಡ ಶಿವನಾಮಸುಪ್ರದ ಶಾಂತನಂಜೇಶ
ದಂಡಪ್ರಕಾಶನೆಂಬುತ್ತಮದ ಕೀರ್ತಿಯಬ್ಜಾಂಡದೊಳು ಪೂರ್ಣವಾಯ್ತು ೨

ವಿಟಶ್ವೇತನ ಕಥೆ

ಪ್ರೀತಿಯಿಂ ಕೆಂಚವೀರಾಪ್ಪಯ್ಯಾ ಕೇಳು ನೀ
ನೋತು ಕಾಲಧ್ವಂಸನಕ್ಕೆ ಮುಂದಾ ವಿಟ
ಶ್ವೇತನ ಚರಿತ್ರಮಂ ಮತ್ತೊಂದು ಕಲ್ಪದೊಳು ರಂಭೆಯುಮರಾವತಿಯೊಳು
ಜಾತಿಮಿಗಿಲಾ ಪುಷ್ಪದೊಳಗೆ ಪುರುಷರೊಳೆಸೆದ
ಪೀತಾಂಬರಂ ಪುರಂಗಳೊಳು ಕಾಂಚಿಯು ನಗರ
ವಾ ತಳೋದರಿಯರೊಳು ತಾನೆ ಮಿಗಿಲೆನಿಪ ವನಿತಾರತ್ನವೆಸೆದಿರ್ದಳು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಕೆ ತನ್ನೆಡೆಗೆ ಬಂದಾ ವಿಟಶ್ವೇತದುಃ
ಕಾಕನಂ ನೋಡಿ ನಸುನಕ್ಕಡವನಚ್ಚರಿಯೊ
ಳೀ ಕಾರಣಂ ಹಸನವಬಲೆಯೆನೆ ನುಡಿದಳಾ ರಂಭೆಯುವನಂಬೋಧಿಸಿ
ನೀ ಕೇಳು ಮರ್ತ್ಯದೊಳಗನ್ಯಾಯದಿಂದಿಹೆ ವಿ
ವೇಕಮುಂ ಗುರುಲಿಂಗ ಜಂಗಮ ವಿಭೂತಿ ಸು
ಪ್ರಾಕಟಫಲಾಧಿಕದ ರುದ್ರಾಕ್ಷಿಯೆಂಬವನಱಿಯೆ ಕನಸಿನಲ್ಲಿ ೪

ಅವಿಚಾರ ದುರ್ನೀತಿ ದುರ್ಮಾರ್ಗ ದುರ್ಗುಣದ
ನಿವಹವೇ ರೂಪಾಗಿ ವರ್ತಿಸುತ್ತಿರ್ದೊಡೊಂ
ದಿವಸದೊಳು ನಿನ್ನ ಮೋಹನದ ಸೂಳೆಯ ಮುಡಿಗೆ ಹೂವ ತರಲೆಂದು ಬಯಸಿ
ನೆವದೊಳನ್ಯರ ತೋಟಮಂ ಪೊಕ್ಕು ಚೌರ್ಯದಿಂ
ದವೆ ಪುಷ್ಪಮಂ ಕೊಂಡು ಬರ್ಪಲ್ಲಿ ಪೌಳಿಯಿಂ
ದವೆ ತಳಕ್ಕಿಳಿವಲ್ಲಿ ತತ್ಕರಂಡಿಗೆಯಿಂದಲೊಂದರಲು ನೆಲಕ ಬೀಳೆ ೫

ನೀ ಮರುಗಿಯುಚ್ಚಿಷ್ಟಭೂಮಿಯೊಳು ಬಿದ್ದುದಂ
ನಾ ಮೋಹಿನಿಯ ಮುಡಿಗೆ ಯೋಗ್ಯವಲ್ಲದೆ ಹೋದು
ದೇ ಮಾಣಲಿದುವೆ ಶಿವಗೆಂದಾಡಿದ್ದೈ ಶ್ವೇತನೀನಳಿಯಲಿಂದು ಕೇಳು
ಕಾಮುಕಾ ಯಮನಲ್ಲಿ ಚಿತ್ರಗುಪ್ತರ ಕೇಳಿ
ಯಾ ಮಹಾಪುಣ್ಯಕ್ಕೆ ದೇವೇಂದ್ರಪಟ್ಟವಾ
ಯ್ತೀ ಮಾಳ್ಕೆಯಿಂದೊಂದುದಿನವಜ್ಞ ನೀನಿಂದಿನೀಯಿರುಳ ಕಳೆದ ಬಳಿಕ ೬

ಘೋರನರಕದೊಳು ಹಾಯ್ಕುವರೆಂದು ನುಡಿಯಲೆಲೆ
ನಾರಿ ನಿನ್ನಯ ಸಂಗವೊಂದು ನಿಮಿಷಂ ಸಾಕ
ಲಾ ರಾಣಿ ಕೋಟಿನರಕವನುಣ್ಬೆನದಕಂಜೆನೌ ನಿನ್ನ ರತಿಸುಖವನು
ಹಾರಿಕೊಂಡಿಪ್ಪೆನೆನೆ ಕೇಳಜ್ಞ ನರಕದ ವಿ
ಚಾರವನೆನುತ್ತದಱ ಭಯವನೆಲ್ಲಂ ಪೇಳಿ
ಸಾರಸುಖವಪ್ಪೊಂದು ಬಗೆಯ ಪೇಳಿದಳವನ ಚಿತ್ತಕಹುದೆಂಬಂದದೆ ೭

ಒಂದು ಜಾವದುದ್ಯೆಸೆ ನನ್ನ ಕೂಟಂ ಕೇಳು
ಮಂದಬುದ್ಧಿಯ ಬಿಟ್ಟನಂತಯುಗಪರಿಯಂತ
ದಿಂದೆನಗೆ ಕೋಟಿಮಡಿಯುಹ ರೂಪ ಲಾವಣ್ಯಸಂಪನ್ನಗೆಳೆವೆಣ್ಗಳು
ಹೆಂದದಾನಂದದಿಂ ನಿನ್ನ ಬಿಡದುಱಿ ರಮಿಸು
ವಂದಮಂ ಮಾಡಿಕೊಡುವೆಂ ಕೇಳು ಹಿರಿಯಾಣೆ
ಎಂದೊಡಂಬಡಿಸಿ ಶಿವನಾಲಯಕ್ಕೊಡಗೊಂಡು ಬಂದಳಂತಾ ಶ್ವೇತನ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನೊಡನೆ ನುಡಿದಳಾ ರಂಭೆ ಕೇಳೈ ಶ್ವೇತ
ಶಿವನಾಲಯುದ ರಜವನೆಯ್ದೆ ಬೋಹರಿಸು ನೀಂ
ಭುವನದೊಳಗೀ ಧರ್ಮಕೆಣೆಯಿಲ್ಲವೆಂತೆನಲು ಪೂರ್ವಕಥೆಯೊಂದ ಪೇಳ್ವೆಂ
ವಿವರದಿಂದೆಂದು ನುಡಿದಳ್ಕ್ರಿಯಾಸಾರಕೊ
ಪ್ಪುವ ಕಥನವೈ ಮನುಸ್ವಾಯಂಭುವಂತರದೊ
ಳವನೀಶ ನರವರ್ಮನೆಂಬವಂ ದಿಗ್ವಿಜಯದಿಂದ ರಾಜ್ಯಂಗೆಯ್ವನು ೯

ಶರಧಿಮುದ್ರಿತಧರಣಿಯೆಲ್ಲಕ್ಕೆ ತಾನೆ ಪಿರಿ
ಯರಸಾಗಿ ಮಕುಟವರ್ಧನರು ಕೋಟಾಕೋಟಿ
ಚರಣಕ್ಕೆ ನಮಿಸುವರನಂತ ಭಂಡಾರದಿಂ ಚತುರಂಗಸೇನೆಯಿಂದ
ಹರುಷಸಪ್ತಾಂಗರಾಜ್ಯೈಶ್ವರ್ಯದಿಂದ ಸುಖ
ವಿರಲವನ ಹನ್ನೆರಡು ಸಾವಿಱಂಗನೆಯವರ್ಗೆ
ವರ ಪಟ್ಟದತಿಶಯದ ರಾಣಿಯೆಂದೆನಿಪ ವಸುದೇವಿ ರಾರಾಜಿಸುವಳು ೧೦

ಆ ರಾಣಿಯೊಂದು ದಿವಸದೊಳು ತನ್ನಿಖಿಳ ಪರಿ
ಚಾರಿಯರ ಕರೆಸಿ ಗುಪ್ತದೊಳು ರಜವಿಹ ಶಿವಾ
ಗಾರವುಂಟೇ ಪೇಳಿ ನೀವೆನೆ ಮಹಾದೇವಿ ರಾಯನೆಲ್ಲಾ ಶಿವಾಲಯಕ್ಕೆ
ಸೌರಂಭಮಂ ಮಾಡಿಕೊಂಡಿರ್ಪನೆಲೆ ತಾಯೆ
ಆರೈಸಿ ಬರ್ಪೆವೆಂದಱಿಕಂಡೆಯ್ತಂದು
ಸಾರಿಬಿತ್ತರಿಸಿದರು ಕೆಳದಿಯರು ತಾಯೆ ಯೋಜನವೆರಡರಲ್ಲಿಯೊಂದು ೧೧

ಅಡವಿಯೊಳು ಶಿವಭವನವಿರ್ಪುದೆನೆ ಕೇಳಿ ನೆಲ
ದೊಡೆಯಂಗೆ ಪೋಪ ಕಜ್ಜವನುಸುರದಲ್ಲೊಂದು
ಮೃಡಭಜನೆಗೆಂದು ಬೀಳ್ಕೊಂಡು ಪಲ್ಲಕ್ಕಿಯಂ ವೈಭವದೊಳಡರಲಾಗಿ
ಒಡನೆ ಪನ್ನೆರಡುಸಾವಿರ ಸತಿಯರಾಗಲು
ಗ್ಗಡದ ಪೊನ್ನಂದಳಂಗಳೊಳಖಿಳ ಮನ್ನೆಯರ
ಮಡದಿಯರು ಕೂಡಲೋಲೈಸಿ ಬರೆ ನಡೆದಳಾ ಶಿವಭಕ್ತೆ ನಿತ್ಯಮುಕ್ತೆ ೧೨

ಇಂದುಮುಖಿ ನೃಪನರಸಿ ಪಲ್ಲಕ್ಕಿಯೊಳು ಚೆಲ್ವಿ
ನೊಂದು ಸಮ್ಮಾರ್ಜನೆಯು ಬೈಚಿಟ್ಟುಕೊಂಡು ನಲ
ವಿಂದ ಸಂಭ್ರಮವೆರಸಿ ನಡೆತಂದು ರಜವಿಪ್ಪ ಶಿವಭವನದೆಡೆಗೆ ನಲಿದು
ಬಂದು ಪಲ್ಲಕ್ಕಿಯಿಂದಿಳಿದು ತಾನೇಕೈಯೊ
ಳಂದು ರಜಬೋಹರಿಗೆಯುಂ ಪಿಡಿದು ಕಸವನಾ
ನಂದದಿಂದುಡುಗೆ ಕಂಡಖಿಳ ನಾರಿಯರು ನಡನಡುಗಿ ಬಿನ್ನವಿಸಿದರಲಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ತಾಯೆ ಕಟ್ಟೊಡತಿ ನಿನ್ನ ತೊತ್ತಿರು ನಾವು
ಪಲವಿರಲು ನೀಂ ಬಳಲಲೇನುಕಾರಣವೆನಲು
ನಲಿದು ನುಡಿದಳು ರಾಯನರಸಿ ಕೇಳಿರಿ ಸತಿಯರಿರ ನನ್ನ ಹಿರಿಯ ಸಿರಿಯು
ಬಲುಹಿಂದೆ ನೀವು ಬಯಸಲು ಕೊಡುವೆನೇ ನಾನು
ಸುಲಭವೀ ಸೇವೆಯೆನಗೆಂದು ರಜವುಡುಗಿ ನಿ
ರ್ಮಲದೇಹದಲ್ಲಿ ಹಸ್ತದ ಶೇಷವಮಂ ಲೇಪನಂಗೆಯ್ದಳಾನಂದಿಸಿ ೧೪

ಬಳಿಕಷ್ಟವಿಧಪೂಜೆಯಖಿಳೋಪಚಾರವಮಂ
ವಿಳಸಿತ ಶಿವಂಗೊಡರಿಚುತ್ತ ಸೌಂದರ್ಯದಿಂ
ದಳದ ಸತಿಯರುಗೂಡಿ ಹಿರಿಯ ಪಲ್ಲಕ್ಕಿಯಡರುತ್ತ ವೈಭವವೆಸೆಯಲು
ಪೊಳಲ ಪೊಕ್ಕರಮನೆಯನೆಯ್ದಲಂತಾ ರಾಯ
ನೊಳು ಜೀಯ ನಮ್ಮೊಡತಿ ತಾನೆ ಕಸಕಿಲುವಿಡಿದು
ಗಳ ಗಳನೆ ಶಿವನ ಭವನದ ಕಸವನುಡುಗಿದಳೆನುತ್ತ ಪೇಳ್ದರು ಸತಿಯರು ೧೫

ನೆಟ್ಟನಾ ಮಾತುಗೇಳುತ್ತ ರಾಯಂ ನುಡಿದ
ನಟ್ಟಡವಿಯೊಳು ಶಿವನ ಭವನಕ್ಕೆ ನೀಂ ಪೋಗಿ
ಮುಟ್ಟಬಹುದೇ ಕಸಕಿಲಂ ರಜವ ನುಡುಗುವರೆ ಸಕಲ ಸಿರಿಯುಳ್ಳ ತನ್ನ
ಪಟ್ಟದಂಗನೆಯಾಗಿ ಕಾರಣವಿದೇನೆನಲು
ನಿಟ್ಟೈದೆ ನುಡಿದಳೆಲೆ ರಾಯ ಜಾತಿಸ್ಮರಣೆ
ಹುಟ್ಟದೇ ನಿನಗೆ ಕೇಳೆಂದು ಪೂರ್ವದ ಕಥೆಯ ಬಿತ್ತರಿಸಿದಳು ಮಾನಿನಿ ೧೬

ಅಣೆಯರದೆ ಕೇಳಯ್ಯ ನಮ್ಮ ಪೂರ್ವದೊಳಲಾ
ತ್ರಿಣಯನಾಲಯದಲ್ಲಿ ಮಾಡಿರ್ದ ಪುಲ್ಲಧಾ
ರಿಣೆಯಲ್ಲಿ ಮೊಲನೊಂದು ಮೇವುದವ ಭೂತಬಲಿಯನ್ನಮಂ ಕಂಡು ಕೂರ್ತು
ಉಣಲೆಂದು ಭೋರ್ಗರೆದೆಱಗೆಯಲ್ಲಿ ಮೇಘಚಾ
ರಿಣಿಯೆಂಬ ಪಕ್ಷಿಯದಱ ಱಕೆಯಿಂದಲ್ಲಿಹ
ತೃಣಲವಾದ್ಯಖಿಳ ರಜವೆಯ್ದೆ ಪಾರಲು ಕೆಲವು ಕಾಲಕ್ಕವೆರಡು ಮಡಿಯೆ ೧೭

ಯಮನ ಮುಂದೆರಡು ಜೀವಂಗಳಂ ಪರಿಕಿಸಲು
ಸುಮತಿಗಳು ಚಿತ್ರಗುಪ್ತರು ನುಡಿದರೆಲೆ ಪಿತೃ
ರಮಣ ಚಿತ್ತೈಸು ಶಿವನಾಲಯದ ಕಸವನುಡುಗಿದವೀ ಮೊಲಂ ಪಕ್ಷಿಯು
ಕ್ರಮದೊಳದಱಿಂದಲೇಕಚ್ಛತ್ರದಿಂದ ರಾ
ಜ್ಯಮನಾಳ್ವ ಸೌಭಾಗ್ಯವೆಂದು ಕಲ್ಪಿಸಿ ಕಳುಪೆ
ರಮಣೀಯವಾದ ಭೂಮಂಡಲಕ್ಕೆಯ್ತಂದು ತತ್ಪುಣ್ಯದೊದವಿನಿಂದ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮೊಲಂ ನೀನಾಗಿ ಜನಿಸಿದ್ದೆ ಭೂಪಾಳ
ನಾ ಮುನ್ನಲಾ ಮೇಘಚಾರಿಣಿಯೆನಿಪ್ಪ ಖಗ
ವೀ ಮಹಿಯೊಳೊಗೆದು ನಿನ್ನಯ ಪಟ್ಟದಬಲೆಯಾದೆನು ರಾಯ ಕೇಳೆನುತ್ತ
ಪ್ರೇಮದಿಂಧಿಕ ಜಾತಿಸ್ಮರತ್ವವನಱಿಪ
ಲಾ ಮಧುರವಚನಮಂ ಕೇಳ್ದ ಮಾತ್ರದೊಳಲ್ಲಿ
ಸಾಮರ್ಥ್ಯ ಪೂರ್ವಜನ್ಮದ ಸ್ಮರಣವಾಗಲಱಿದಿರ್ವರುಂ ಸಂತಸದೊಳು ೧೯

ಅಂದು ಮೊದಲಾಗಿ ದಂಪತಿಗಳಿರ್ವರು ಕೂಡಿ
ಇಂದುಧರನಾಲಯದ ರಜವನುಡುಗುತ್ತ ನಲ
ವಿಂದ ಶಿವಕರುಣದಿಂ ಮೋಕ್ಷವೆಯ್ದಿದರಲ್ಲೆ ಶ್ವೇತ ನೀನೀ ದೇವನ
ಮಂದಿರವ ಬೋಹರಿಸೆನುತ್ತಲಾ ರಂಭೆಯಾ
ನಂದದಿಂ ನುಡಿದು ತದ್ಭಸಿತ ರುದ್ರಾಕ್ಷಿಗಳ
ಸೌಂದರ್ಯ ಪಂಚಾಕ್ಷರಂಗಳಗ್ಗಳವ ಬಿತ್ತರಿಸಿದಳು ನಲವಿನಿಂದ ೨೦

ಅಳಿವವನ ಹಣೆಯಲ್ಲಿ ಶುನಕನಂತಾ ಮಸಣ
ದೊಳಗಿರ್ದ ಬೂದಿಯಂ ಮೆಟ್ಟಿ ಮೆಟ್ಟಲ್ಕವಂ
ಗಳಿಕಾಕ್ಷನೊಲಿದು ಗಣಪದವಿತ್ತನೊಂದು ಶುನಕನ ಕೊರಲೊಳೋರ್ವ ಶಬರಂ
ಬಳಿಕೊಂದು ರುದ್ರಾಕ್ಷಿಯಂ ಕಟ್ಟಲದು ಮಡಿಯೆ
ಘಳಿಲನೀಶ್ವರನದಕೆ ಮೋಕ್ಷಮಂ ಕೊಟ್ಟನ
ಗ್ಗಳದೇಳುಕೋಟಿ ಮಂತ್ರಕೆ ಮೂಲಮಂತ್ರವಾ ಪರಮ ಪಂಚಾಕ್ಷರಿ ಕಣಾ ೨೧

ಎಂದು ಬೋಧಿಸಿ ರಂಭೆಯಾ ಶ್ವೇತಗಾಮಾಳ್ಕೆ
ಯಿಂದ ಸದ್ವಿಧಿಯಲ್ಲಿ ಶಿವಪೂಜೆಯಂ ಮಾಡಿ
ಮುಂದೆ ಬೆಳಗಾಗೆ ಯಮದೂತರೆಯಿತಂದು ರಂಭೆಯ ಕೇಳಲವನ ಬಳಿಗೆ
ಅಂದವರ ಕಳುಪೆ ಕಾಣುತ್ತ ಶಿವಮೂರ್ತಿಯಿವ
ನೆಂದಳುಕಿ ಕೆಟ್ಟೋಡಿ ಕಾಲಗಱಿಪಲು ಕೋಪ
ದಿಂದೆದ್ದು ಘೂರ್ಮಿಸುತ ನಡೆತಂದನಲ್ಲಿ ಪದಿನಾಲ್ಕು ಲೋಕಂ ನಡುಗಲು ೨೨

ಘುಡಿಘುಡಿಸಿ ಕಾಲನಂತಾ ಶ್ವೇತಮುನಿಯ ಕೊರ
ಲೆಡೆಯಲ್ಲಿ ಪಾಶಮಂ ಹೂಡಿ ಸೆಳೆಯಲ್ಕವಂ
ಕಡುಭಕ್ತಿಯಿಂ ಶಿವನನರ್ಚಿಸುತ ತನ್ನುವಂ ಲೋಕಮಂ ಮಱೆದೊಪ್ಪಲು
ಬಿಡದಾತನೆಳೆಯೆ ಕಾಣುತ್ತ ಕೋಪಿಸುತ ಕ
ಟ್ಟೊಡೆಯನೆನಿಸುವ ಹರಂ ಘರ್ಜಿಸುತ ಶೂಲದಿಂ
ದಿಡಲಂತಕನ ಪೇರುರಂ ತಾಗೆ ತಟವುಚ್ಚಿ ಬಿದ್ದನಾ ನಿಮಿಷದಲ್ಲಿ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ವೇತಂಗೆ ಗಣಪದವಿಯುಂ ಕೊಟ್ಟು ದೇವತಾ
ವ್ರಾತಂಗಳೆಯ್ದೆ ಬಿನ್ನವಿಸಲಂತಾಕ್ಷಣಂ
ಪ್ರೇತನಾಥಂಗಸುವನಿತ್ತು ಮದ್ಭಕ್ತರತ್ತಂ ಪೋಗಬೇಡೆನುತ್ತ
ಆ ತರುಣ ಶಶಿಜೂಟನಾಡಿ ಕಳುಪಿದನು ಕೇ
ಳೈ ತನುಜ ಮತ್ತೊಂದು ಕಲ್ಪದೊಳಗೆಂದು ವಿ
ಖ್ಯಾತ ಹಲಗೆಯ ದೇಶಿಕಂ ನಿರೂಪಿಸಿದನಾ ಕೆಂಚವೀರಾಹ್ವಯಂಗೆ ೨೪

ವಿಟಶ್ವೇತನ ಕಥೆ ಸಮಾಪ್ತ

ಶ್ರೀ

ಶಿವನಾಮೋಚ್ಚಾರಣ ಮಹತ್ವವಿದಳನಕಥೆ

ವಿನುತ ಸದ್ಗುಣಿಯಪ್ಪ ಕೆಂಚವೀರಾಹ್ವಯಾ
ನಿನಗೆ ಪೇಳುವೆವು ಕೇಳೈ ಹರಂ ಮುನ್ನ ಕಾ
ಲನ ಸುಟ್ಟ ಸಂಬಂಧದಿಂದೆಸೆವ ಕಥೆಯ ಶಿವನಂಸ್ಮರಿಸಿ ಕೀರ್ತಿಸುತ್ತ
ಘನ ಕೃತಾಂತನ ಗೆಲಿದು ಶಿವಪದವ ಸಾರ್ದರೆಂ
ದೆನಲು ಶಿವಮಹಿಮೆಯುಂ ಬಣ್ಣಿಸುವನಾರು ಕೇ
ಳನುಪಮಕಥಾರಸವ ನುರದೆ ಸೈಗರೆವೆನೆಂದಂ ಹಲಗೆಯಾಚಾರ್ಯನು ೨೫

ಶಿವಧರ್ಮವೆಂಬ ಶಾಸ್ತ್ರದವಚನಮಂ ಕೇಳು
ಕುವರ ಪ್ರಭಾತಕಾಲದೊಳೆದ್ದು ಹೃದಯದೊಳ
ಗವಿರತಂ ಬಿಡದೋಂ ನಮಃ ಶಿವಾಯೆಂಬ ಮಂತ್ರವನೆಯ್ದೆ ನೆನೆಯಲಾಗಿ
ಅವನೆಯ್ದುವಂ ವಿಶೇಷದ ಪದವನೆಲೆ ಕೇಳು
ಸವಿಶೇಷದಿಂದೊಮ್ಮೆ ಯಿಮ್ಮೆ ಮೂಱುಂ ಬಾರಿ
ಸವಿನಯದೊಳಂ ಸ್ಮರಿಸಲವಗಂ ಗಣೇಶತ್ವವೆಂಬುದು ನಿಜಂ ಹರವಾಕ್ಯವು ೨೬

ಕಂದ ಕೇಳಪವಿತ್ರನಾದಡಾಗಲಿ ನಲವಿ
ನಿಂದಂ ಪವಿತ್ರನಾಗಲಿ ವಿಶೇಷಾವಸ್ಥೆ
ಯೊಂದಿದವನಾಗಲೀಶ್ವರನಂ ಸದಾ ಸ್ಮರಿಸುತಿರ್ಪವಂ ದೋಷದೊಳಗೆ
ಒಂದನೆಂಬುದು ನಿಜಂ ಕೇಳಯ್ಯ ಶಿವನ ನೆನ
ಹಿಂದ ಪಾಪದ ಪಂಜರಂ ಕೆಡುವುದೈ ಗಿರಿಯ
ವೃಂದವಾ ವಜ್ರದಿಂ ಚೂರ್ಣವಪ್ಪಂದದಿಂದೆಂದನಾಚಾರ್ಯಮೂರ್ತಿ ೨೭

ಸ್ಕಾಂದದೊಳಗಂ ಕೇಳ್ವುದೈ ಸ್ವರ್ಗದಧ್ವಕ್ಕೆ
ಮುಂದೆ ನಾನಾ ಕಂಟಕಂ ಹಲವುವಿಧ ಮಾರ್ಗ
ವೆಂದೆನಿಪುದಖಿಳ ವಿಘ್ನವನುಳ್ಳುದದಱಿಂದಸಾಧ್ಯವಂತದನೆಯ್ದಲು
ಒಂದುಪಾಯವದುಂಟು ಕಣ್ಣೆವೆಯ ಹೊಯಿವನಿತು
ಸಂದಕಾಲದೊಳ ಭವನಂ ನೆನೆಯಲಾ ನೇರ
ದಿಂದ ಸಾಖ್ಯತೆಯಿಂದ ಮೆಱೆವುದೆಂದೆನೆ ಶಿವಸ್ಮರಣೆಗೆಣೆ ಧರೆಯೊಳುಂಟೇ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘನವಪ್ಪ ಹುಸಿಯಿಂದಲಾದೊಡಂತಾ ಮಹೇ
ಶನನೊಮ್ಮೆ ಜಾನಿಸಿದಡವರನಾಮಯವದೆಂ
ದೆನಿಪ ಶಿವಲೋಕವೆಯ್ದುವರೆಲೈ ಬಳಿಕ ಶಿವಧರ್ಮಶಾಸ್ತ್ರದೊಳು ಕೇಳು
ತನುಜ ಕೂಟಂ ಕೌತುಕಂ ಲೋಭ ಭಯದಿಂದ
ಲನುಪಮನ ಕೀರ್ತಿಸಿದಡರ್ಚಿಸಿದನಾದಡಾ
ತನೆ ಗಣೇಶ್ವರನಪ್ಪನದುಕಾರಣಂ ಶಿವೋಚ್ಚಾರಣವನಿನ್ನುಸುರುವೆಂ ೯

||ಸಾಕ್ಷಿ|| ಶಿವಧರ್ಮೇ

ಯಸ್ಸ್ವಪಾಪಂ ತರತ್ಯೇವ ಪ್ರಾಣಾಂತೇ ವಾಪಿ ಸಂಸ್ಮರೇತ್
ಭಕ್ತ್ಯೋಂನಮಃ ಶಿವಾಯೇತಿ ಸಗಚ್ಛೇತ್ ಪರಮಾಂ ಗತಿಂ ೧

ಸ್ಮರಣಾದೇವ ರುದ್ರಸ್ಯ ಪಾಪಸಂಘಾತಪಂಜರಂ
ಶತಧಾ ಭೇದಮಾಯಾತಿ ಗಿರಿರ್ವಜ್ರಹತೋಯಥಾ ೨

॥ಸ್ಕಾಂದೇ॥ ಸ್ವರ್ಗಸ್ಯ ಮಾರ್ಗಾ ಬಹವಃ ಪ್ರತಿಷ್ಠಾ ಸ್ತೇಕೃಚ್ಛ್ರಸಾಧ್ಯಾಃ
ಕುಟಿಲಾಸ್ಸವಿಘ್ನಾಃ
ನಿಮೇಷಮಾತ್ರೇಣ ಮಹಾಫಲೋಯಮೃಜುಶ್ಚಪಂಥಾಸ್ಸ್ಮರಣಂಸ್ಮರಾರೇ ೩

ಸಂಪರ್ಕಾತ್ಕೌತುಕಲ್ಲೋಭಾಭಯಾದ್ವಾಯಃ ಶಿವಂ ಸ್ಮರೇತ್
ಕೀರ್ತಯೇದರ್ಚಯೇದ್ವಾಪಿ ಸೋಽಪಿ ವಂದ್ಯಗಣೋ ಭವೇತ್ ೪

ಮುದದಿಂದ ಕೇಳಯ್ಯ ನೀನು ಶಿವಧರ್ಮೋತ್ತ
ರದೊಳಾರು ಧರೆಯೊಳಜ್ಞಾನಿಗಳು ತಾವಾಗಿ
ಪದಪಿನಿಂದಿರುತಾ ಮಹೇಶ್ವರನನಾಮದುಚ್ಚರಣೆಯಂ ಮಾಡಲಾಗಿ
ಸದಮಲ ಮಹಾಮೋಕ್ಷವಪ್ಪುದೆಂದೆನಲಿನ್ನು
ಹೃದಯದೊಳು ನೆನೆದು ಪರಮಾನಂದದಿಂ ಕೀರ್ತಿ
ಸಿದನಾದಡಾತಂಗೆ ಮುಕ್ತಿಕರತಳದೊಳಿಹುದೆಂದು ಮುನಿಗಳು ನುಡಿದರೈ ೧೦

ಸ್ಕಾಂದದೊಳು ಶಿವರಹಸ್ಯದೊಳು ಕೇಳೈ ಕೂರ್ತು
ಕಂದ ನೀಂ ತ್ರಿಪುರಹರ ಶಿವನೆಯಧಿದೈವವೇ
ಎಂದು ಶಂಭೋ ತ್ರಿಣಯ ಶಂಕರಾ ರುದ್ರನೇ ಭವ ಶೂಲಪಾಣಿ ದೇವ
ತಂದೆ ಸಲಹೆನುತಾವವಂ ನುಡಿದನವನೆ ಭವ
ವೆಂದೆನಿಪ ಜಲಧಿಯೊಳು ಬೀಳನದುಕಾರಣಂ
ಕಂದರ್ಪದಹನನಂ ನೆನೆದು ಕೀರ್ತಿಸುವವನ ಭಾಗ್ಯಮಂ ಪೊಗಳಲಳವೆ ೧೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಯುತದ ಶೈವದೊಳಗೋಂ ನಮೋನೀಲಕಂ
ಠಾಯ ಯೆಂದೆನಿಪ ಪುಣ್ಯಾಕ್ಷರಾಷ್ಟಕವನೊಲಿ
ದೊಯ್ಯಾರದಿಂದಾವನೊಮ್ಮೆ ನುಡಿದಡೆ ಪಾಪದೊಳಗವಂ ಲೇಪಿಸನಲ್ಲೆ
ಶ್ರೀಯುತ ಗ್ರಂಥಾಂತರದೊಳು ಮತ್ತಂ ಕೇಳು
ಮಾಯಾರಿಯತಿಶಯ ಮಹಾದೇವಯೆಂದೆನಿ
ಪ್ಪಾಯಧಿಕ ಚತುರಕ್ಷರದ ಮಹತ್ವವ ನೊರೆವೆನೆಂದನಾ ಹಲಗೆಯಾರ್ಯಂ ೩೨

ಭವವೆಂಬ ವಾರಿಧಿಯ ದಾಂಟಿಸಲು ಹಡಗು ಸ
ಗ್ಗವನಡರೆನಿಚ್ಚಣಿಗೆ ಬದ್ಧರಂ ಮುಕ್ತರೆನಿ
ಸುವ ಮಂತ್ರವಿಳೆಯೊಳಜ್ಞಾನಾಂಧರಿಗೆ ನಯನದಿವ್ಯಾಪಥಂ ದೀನರು
ಎವಗಾರು ಗತಿಯೆಂದೊಡಾಶ್ರಯಂ ಮುಂದೆ ಪೇ
ಳುವೆವೀ ಮಹಾದೇವಯೆಂಬ ವಾಗ್ವಲ್ಲಿಯೊ
ಪ್ಪುವದೆಲ್ಲೆ ಚತುರಾಕ್ಷರಂ ಪಲ್ಲವಂ ಭಕ್ತಿಸಿಕ್ತಫಲದಿಂದಲೆಸೆವ ೩೩

ಅದು ಚತುರ್ವರ್ಗಫಲರೂಪವ್ಯೆ ಕೇಳಿನ್ನು
ಮುದದೊಳು ಮಹಾದೇವ ಯೆಂದಾವವಂ ನುಡಿವ
ನುದಿತ ಹರುಷದೊಳವನ ಬೆಂಬಳಿಯೊಳೆಯ್ದುವಂ ಸರ್ವೇಶನೆಂತೆಂದೊಡೆ
ಪದಪಿನಿಂ ಕರು ಮುಂತೆ ಪೋಗೆ ಪಶುವದಱ ಪಿಂ
ದೊದವಿಬಪ್ಪಂತಾ ಮಹಾದೇವ ಯೆಂಬ ನುಡಿ
ಯದು ಭಕ್ತಿವನಿತೆಯ ವಿವಾಹವಪ್ಪಲ್ಲಿ ವೇಳೆಗೆ ಹೊಯ್ವ ಡಂಗುರವೆಲ್ಲೆ ೩೪

ಉದಯಕಾಲದೊಳೇಳುತಂ ಮಹಾದೇವಯೆಂ
ಬುದನಾವನುಚ್ಚರಿಪನವಗೆ ಜನ್ಮಾಂತರದೊ
ಳೊದವಿರ್ದ ಪಾಪಂಗಳಳಿವವ್ಯೆ ಕೋಟಿ ಯೋ ಬ್ರಹ್ಮಹತ್ಯಾಯೆನಿಪ್ಪ
ಸದಮಲದ ವಾಕ್ಯದೊಳನಂತ ದೋಷಂಕೆಟ್ಟು
ವಿದಿತ ಮೋಕ್ಷಂ ದೊರಕುಗೀ ಮಹಾದೇವ ಯೆಂ
ಬಧಿಕವಾದೀ ಮಂತ್ರದಿಂದೆಂದು ಬಿತ್ತರಿಸಿದಂ ದೇಶಿಕಂ ಶಿಷ್ಯಗೆ ೩೫

ಆದಿತ್ಯಪೌರಾಣದೊಳು ಕೇಳ್ವುದೈಕುವರ
ಸಾದರದೊಳಾ ರುದ್ರನಂ ಕೀರ್ತಿಸಲ್ಬಗೆವ
ರೀ ಧರೆಯೊಳಾರವರ್ಗೇಳು ಜನ್ಮದ ದೋಷವಳಿಗುಂ ಪ್ರಸಂಗದಿಂದೆ
ಮೋದದಿಂ ಕೌತುಕದೊಳಾ ಭಯಾಜ್ಞಾನಂಗ
ಳಾದಿಯಾದವ ಱಿಳಂ ಹರಯೆಂದ ಮಾತ್ರದೊಳ
ನಾದಿ ಪಾಪಂಗಳೆಲ್ಲಂ ಕೆಟ್ಟು ಶಿವಲೋಕಮಂ ಸಾರ್ವರೆಂತೆಂದೊಡೆ ೩೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ಸಾಕ್ಷಿ॥ ಶಿವಧರ್ಮೋತ್ತರೇ

ನಾಮಾನಿ ಯೋ ಮಹೇಶಸ್ಯ ಗೃಹ್ಣಾತ್ಯಜ್ಞಾನತೋಽಪಿ ವಾ
ತೇಷಾಮಪಿ ಶಿವೋ ಮುಕ್ತಿಂ ದದಾತಿ ಕಿಮತಃ ಪರಂ ೫

ಸ್ಕಾಂದೇ, ಶಿವರಹಸ್ಯೇ–

ತ್ರಿಪುರಹರಾದಿ ದೇವ ಶಂಭೋ ತ್ರಿಣಯನ ಶಂಕರ ರುದ್ರ ಶೂಲಪಾಣೇ
ಭವಶರಣಮಿತಿತರಂತಿ ಯಸ್ಮಿನ್ಭವಜಲದೌನಪತಂತಿ ತೇಮನುಷ್ಯಾಃ ೬

ಶೈವೇ– ಓಂ ನಮೋ ನೀಲಕಂಠಾಯ ಇತಿ ಪುಣ್ಯಾಕ್ಷರಾಷ್ಟಕಂ
ಮಂತ್ರಮಾಹ ಸಕೃದ್ವ್ಯಾಯಃ ಪಾತಕೈಃ ಸಂ ಪ್ರಮುಚ್ಯತೇ ೭

ಗ್ರಂಥಾಂತರೇ–

ಭವಾಂಬುನಿಧಿಸಂತಾರ ಯಾನಪಾತ್ರಂ ದೃಢೀಕೃತಂ
ಸ್ವರ್ಗಾರೋಹಣ ನಿಶ್ರೇಣೀ ಮಹಾದೇವೇತಿ ಕೀರ್ತನಂ ೮

ಮಹಾದೇವೇತಿ ವಾಗ್ವಲ್ಲೀ ಚತುರಕ್ಷರ ಪಲ್ಲವಾ
ಭಕ್ತಿಸಿಕ್ತಾ ಫಲಾಸ್ತೇಷಾಂ ಚತುರ್ವರ್ಗಫಲಾನ್ಯಹೋ ೯

ಮಹಾದೇವ ಮಹಾದೇವ ಮಹಾದೇವೇತಿವಾದಿನಂ
ವತ್ಸಂ ಗೌರಿವ ಗೌರೀಶೋ ಧಾವಂತಮನುಧಾವತಿ ೧೦

ಮಹಾದೇವ ಮಹಾದೇವ ಮಹಾದೇವೇತ್ಯಯಂ ಧ್ವನಿಃ
ಸುಧೀಯೋ ಮುಕ್ತಿಕಾಂತಾಯಾಃ ಪಾಣಿಗ್ರಹಣಡಿಂಡಿಮಃ ೧೧

ಕೋಟಿ ಯೋ ಬ್ರಹ್ಮಹತ್ಯಾನಾಮಗಮ್ಯಾಗಮ ಕೋಟಿಯಃ
ಸದ್ಯಃ ಪ್ರಳಯಮಾಯಾಂತಿ ಮಹಾದೇವೇತಿ ಕೀರ್ತನಾತ್ ೧೨

ಆದಿತ್ಯಪೌರಾಣೇ–

ಕೀರ್ತಯಿಷ್ಯಂತಿ ಯೇ ರುದ್ರಂ ಸಕೃದಪ್ಯಾಶು ತೇ ನರಾಃ
ಸರ್ವಪಾಪೈಃ ಪ್ರಮುಚ್ಯಂತೇ ಸಪ್ತಜನ್ಮಕೃತೈರಪಿ ೧೩

ವಿದಳನಕಥೆ

ಆರೈದು ಮುಂದೆ ಕೇಳ್ಬೈ ಪೇಳ್ವೆವಾ ಪದ್ಮ
ಪೌರಾಣ ಶಿವರಾಘವಾಧಿಕದ ಸಂವಾದ
ದಾ ರಮ್ಯಕಥೆಯುಲ್ಲಿ ಶಂಭು ಪೇಳುತ್ತಿರ್ದನಾ ರಾಮಚಂದ್ರನೊಡನೆ
ಕಾರುಣ್ಯದಿಂದಲಾ ತ್ರೇತಾಯುಗಾಂತರದೆ
ಳಾ ರಾಜವಿದಳನೆನಿಸುವ ನಾಮದಿಂದಧಿಕ
ವೀರನಂತವನ ಪಿತನಳಿಯುಲಂತವನ ರಾಜ್ಯದ ಪಟ್ಟವಾಯ್ತು ತನಗೆ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನಗಧಿಕಪಟ್ಟವಾಗಲು ಕೊಬ್ಬುತಂ ವೃದ್ಧ
ಜನರ ವಿದ್ವಾಂಸರ್ಕಳಂ ಬಗೆಯದತಿನೀಚ
ರೆನಿಪ ವೇಶ್ಯಾಪರರ ದುರ್ಮಂತ್ರವಿದರ ದುರ್ಮಾರ್ಗಿಗಳ ಕೊಲೆಗಡಿಕರ
ವಿನಯದಿಂ ತನ್ನೆಡೆಯೊಳೊಲಿದಿರಿಸಿಕೊಂಡು ತಾ
ನನಯದಿಂದಿರಲಖಿಳ ರಾಜ್ಯವೆಲ್ಲಂ ಕೆಟ್ಟ
ದೆನಲು ದುಸ್ಸಂಗದಿಂದಾರಾರು ಕೆಡರು ಕೇಳೆಂದನಾ ಹಲಗೆಯಾರ್ಯಂ ೩೮

ಅರಿರಾಯರೆಯ್ತಂದು ರಾಜ್ಯವೆಲ್ಲಂ ಕೊಂಡು
ಧುರದೊಳೆಬ್ಬಟ್ಟಿ ಕೆಟ್ಟೋಡಿ ನೀಚರು ಸಹಿತ
ಗಿರಿವನಪ್ರಾಂತಮಂ ಸಾರಿಯಾ ವಿದಳ ಚೋರತ್ವದಿಂದಿರುತ ತನಗೆ
ಪರಿಕಿಸೆ ಸುರಾಪನೆಂಬಾ ಸಚಿವ ರಾಕ್ಷಸಂ
ಬೆರಸಿ ಹಾದಿಯಪೊಯ್ದು ಸಕಲರಂ ಕೊಂದವರ
ಪಿರಿದು ಧನವಮಂ ತಂದು ತಿಂದು ಕೊಬ್ಬುತ್ತ ನಡೆದಂ ಪಾತಕಂ ದುಷ್ಟನು ೩೯

ತುರಗ ಗೋಚಾ ಮಹಿಷಶುನಕಂಗಳಂ ತಿಂದು
ನರಮಾಂಸಮಂ ಭಕ್ಷಿಸುತ್ತಧಿಕ ಕಾಮುಕೋ
ತ್ಕರದಿಂದ ಪುರ ಪಟ್ಟಣ ಗ್ರಾಮದೊಳಗಿಪ್ಪ ರೂಪುಳ್ಳ ಪರಸತಿಯರ
ದುರುಳತನದಿಂ ಪಿಡಿದು ತಂದವರ ರಮಿಸುತ್ತ
ಕೊರಳನರಿದವರ ಮಾಂಸಂಗಳನೆ ತಿನುತಲೀ
ಪರಿಯಲ್ಲಿ ಕೋಟಾನುಕೋಟಿ ಪಾಪವನೆಸಗಿದಂ ವಿದಳನಜ್ಞಾನದಿಂದ ೪೦

ಇಂತು ಸಾವಿರ ವರುಷವಿರ್ದು ವೃದ್ಧತೆಯೊಳ
ತ್ಯಂತ ರೋಗದೊಳುಪದ್ರವದಾಗೆ ವಿದಳನಾ
ಸ್ವಾಂತವೋಹದ ಮಂತ್ರಿಗಾಹರ ಪ್ರಹರಾ ಹರಾಯೆಂದನದರ್ಥವು
ಮುಂತಖಿಳವಂ ತೆಗೆದುಕೊಳ್ಳನಿಬರಂ ಕೊಲ್ಲು
ಚಿಂತಿಸದವಂ ಕೊಂಬುದೆನುತ ಪೇಳುತ್ತಲಾ
ಭ್ರಾಂತಿನಿಂ ಸತ್ತನಂತಾಗ ಯಮುನಾಜ್ಞೆಯಿಂ ಮೃತ್ಯುವೆಯ್ತಂದುದಲ್ಲಿ ೪೧

ಸಕಲ ದೂತರುವೆರಸಿ ಬಂದು ನೇಣಿಂದ ಪಾ
ತಕನ ಸರ್ವಾಂಗವಮಂ ಕಟ್ಟಲವು ಪರಿಯಲ್ಕೆ
ಸಕುಪಿತದೊಳಖಿಳಾಯುಧಂಗಳಿಂ ದಂಡದಿಂ ಹೊಡೆಯಲವು ಮುರಿಯಲಾಗಿ
ವಿಕಲತೆಯೊಳೀಕ್ಷಿಸಲ್ಕಾ ವೇಳೆಯೊಳು ಮಹಾ
ಧಿಕನಹ ಜ್ವಾಲಾಮುಖಂ ವೀರಭದ್ರಸೇ
ವಕನೆಯ್ತರುತ್ತಿರ್ದನವನಧಟನಾರು ಬಣ್ಣಿಸುವರೀ ಮರ್ತ್ಯದಲ್ಲಿ ೪೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನ ಪೂರ್ವದ ಕಥನವೀಶಪೂಜೆಯನು ಮಾ
ಡುವ ಕಾಲದಲ್ಲಿ ಕೋಪದೊಳಿರ್ದು ಭಜಿಸಲಾ
ಶಿವನೊಲಿದು ನಿನ್ನ ದೇಹಂ ಪುರುಷರೂಪವಾ ಮೊಗವಗ್ನಿಯಂತುರಿವುತ
ಅವಿರತಂ ನೀನಿರ್ದು ಹರಭಕ್ತರಾವ ದೋ
ಷವನೆಸಗೆ ಶಿಕ್ಷಿಸಲ್ಕಾ ಯಮನವರ್ಗಂದ
ಡವರ ಬಡಿದಟ್ಟೆಂದು ಕಲ್ಪಿಸಿದ ಕಥನದಿಂ ಬಂದನೆಂತಾ ರುದ್ರನು ೪೩

ಬಂದು ರುದ್ರರುಸಹಿತಲಾ ಗಣಾಧೀಶನಿಂ
ತೆಂದನೀ ವಿದಳನಳಿವಲ್ಲಿ ಹರ ಹರ ಶಬ್ದ
ದಿಂದಲಸುವಂ ಬಿಟ್ಟನದುಕಾರಣದೊಳಿವನ ಪಾಪವೆಲ್ಲಂ ಕ್ಷಣದೊಳು
ಬೆಂದು ಪೋಯ್ತುರಳೆಗಳ ಬೆಟ್ಟದೊಳು ಕಿಡಿಯು ಬಿ
ದ್ದಂದದೊಳಗೀ ಭಕ್ತನಂ ನೀನು ಹಿಡಿವೆ ನಿ
ಲ್ಲೆಂದು ಮೃತ್ಯುವನಟ್ಟಿ ದೂತರಂ ಬಡಿದನಾಹಾ ವೀರಭದ್ರನಣುಗಂ ೪೪

ಮಿಗೆ ಮೃತ್ಯುವಂ ಶೂಲದಿಂದಲಿಱಿದೆತ್ತಿ ಪೆ
ರ್ಬೆಗಲಲ್ಲಿಯಾಂತಖಿಳ ದೂತರಂ ಬಡಿದು ನೇ
ಣುಗಳಿಂದ ಕಟ್ಟಿಸುತ್ತವರೆಲ್ಲರಂ ಪಿಡಿಸಿಕೊಂಡು ನವರತ್ನಖಚಿತ
ಅಗಣಿತಪ್ರಭೆಯು ಪುಷ್ಪಕದಲ್ಲಿ ವಿದಳನಂ
ಸುಗುಣಿಯೆಂದಿಟ್ಟುಕೊಂಡೊಯ್ದನಂತಾ ರಜತ
ನಗದಲ್ಲಿಗೆನೆ ಶಿವನ ನಾಮದ ಮಹತ್ವಮಂ ಬಣ್ಣಿಸುವರಾರಿಳೆಯೊಳು ೪೫

ಆ ರುದ್ರನೀ ವಿದಳನಂ ಮೃತ್ಯುದೂತರಂ
ವೀರಭದ್ರಂಗೊಪ್ಪಿಸುತ್ತ ಶರಣೆನಲಾತ
ನೋರಂತೆ ಶಿವನೋಲಗಕ್ಕವರನೊಯ್ದು ಬಿನ್ನವಿಸಲೀಕ್ಷಿಸಲೀಶನು
ಮಾರಹರನಂ ಕಂಡು ಶೂಲಾಗ್ರದೊಳ್ಮೃತ್ಯು
ಸಾರಹರುಷದೊಳು ಕುಣಿಯಲು ಹರಂ ಕಂಡಿದೇಂ
ಕಾರಣಂ ನರ್ತಿಸುವೆ ಎನೆ ಶಂಕರಗಂಗೆ ಬಿನ್ನವಿಸಿತ್ತು ಸಂತಸದೊಳು ೪೬

ದೇವ ನಿನ್ನವನ ಶೂಲದೊಳಿರಿಸಿಕೊಂಡು ಬಂ
ದೀ ವಿಶೇಷದ ಗುಣಾಧೀಶ ನಿನ್ನಂ ಕಂಡು
ಪಾವನತ್ವಂಬಡೆದೆನೆನೆ ಮೆಚ್ಚಿ ಮೃತ್ಯುವಂ ದೂತರಂ ಬಿಟ್ಟು ನುಡಿದಂ
ನೀವಿಂದುಮೊದಲೆಮ್ಮ ಭಕ್ತರತ್ತಂ ಪೊರ್ದ
ದೀ ವಸುಧೆಯಲ್ಲಿ ಭವಿಗಳನೆ ಶಿಕ್ಷಿಪುದೆಂದು
ಮಾವಲ್ಲಭಂ ಕಳುಪುತವರನಂತಾ ವಿದಳನಂ ನೋಡಿ ಹರುಷಿಸುತ್ತ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಣಪದವಿಯಂ ಕೊಟ್ಟನೆಂದೊಡದುಕಾರಣಂ
ತ್ರಿಣಯನಾಮವನಾವನುಚ್ಚರಿಸುತಿರ್ಪನ
ಗ್ರಣೆಯಾತನಿದುವೆ ಕಾಲಾರಿಯಷ್ಟಮವೆಂಬ ಕಾಲದಹನದ ಕಥನಕಂ
ಅಣಿಯುರದೆ ಸೇರಿತ್ತು ಶಿವಲಿಂಗದರುಶನದ
ಗುಣದಿಂದ ಸುಕುಮಾರನೆಂಬವಂ ಗಣಶಿರೋ
ಮಣಿಯಾದ ಕಥನಮಂ ಮತ್ತೊಂದು ಕಲ್ಪದೊಳಗೊರೆವೆನೈ ಮಗನೆ
ಕೇಳು ೪೮

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೪೯

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ದ ತನ್ನ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಣಾ ವಿದುಳನ ಕಥಾಂತರಕೆಯೊಂದು ಕಾಂಡದ ಮೇಲೆ
ಸಂಧಿಯಾಱು ೫೦

ಅಂತು ಸಂಧಿ ೭೭ಕ್ಕಂ ಪದನು ೩೩೧ ಗ್ರಂಥ ೭೭೭ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೬

ಸುಕುಮಾರನಧಮವನಿತಾತ್ಮಜೆಯು ರಮಿಸಿ ಪಾ
ತಕವನೊಡರಿಚಿ ಲಿಂಗದರುಶನದಿನಳಿಯೆ ಗಣ
ನಿಕರವಂತಕಭಟರ ಬಡಿಯೆ ಸಾರೂಪ್ಯಪದವಿತ್ತನೀಶ್ವರನವಂಗೆ

ನೆತ್ತಜೂಜಾಡಿ ಚಂದ್ರನ ಸೋಲ್ತು ಮನ್ಮಕುಟ
ದತ್ತಣಿಂದಿಳುಹಿಕೊಳ್ಳಾ ಗಿರಿಜೆಯೆನಲು ತೆಗೆ
ವೃತ್ತಿದ್ರೋಡೊಯ್ಯನೊಯ್ಯನೆ ಬೆಳೆವುತಿರ್ದನೇಂ ಕಾರಣವೆನಲ್ಕೆ ಸತಿಯ
ವೃತ್ತಸ್ತನಾದಿಯಂ ಕಕ್ಷಸ್ಥಲಂಗಳಂ
ಚಿತ್ತಶುದ್ಧದ ದೃಷ್ಟಿಯಿಂ ನೋಡುವಕ್ಕಜಿಂ
ಮತ್ತಾತ ಶಾಂತಮಲ್ಲೇಶನೆಂಬಾಗಳಾತನ ಪೋಲ್ವ ಯೋಗ್ಯರಾರು ೧

ದುರ್ಭಾವಿಗಳು ಶಿವನನೆಂತಕ್ಕೆ ನೋಡಲು ಪು
ನರ್ಭವವದಿಲ್ಲಂ ಗಡಾ ತ್ರಿಕಾಲದೊಳುಮಂ
ತರ್ಭಾವದಲ್ಲಿ ಬಹಿರಂಗದೊಳಗೀಕ್ಷಿಸುತ್ತಷ್ಟವಿಧ ಪೂಜೆಗಳನು
ಸ್ವಭರ್ೋಗಧೀಃಕೃತದಿನರ್ಚಿಸುವುದೆಮ್ಮಂ ನಿ
ಜಾರ್ಭಕರ ರಕ್ಷಿಪ ನಿಮಿತ್ತವೈ ನೇತ್ರರೋ
ಚಿರ್ಭವ್ಯ ಶಾಂತನಂಜೇಶ ಯಮಭಟರೆಡೆಗೆ ನಿರ್ಭಯವನಿತ್ತು ಸಲಹು ೨

ಚಾರು ಹಲಗೆಯ ಗುರುಸ್ವಾಮಿಯಪ್ಪಮದ ಲೀ
ಲಾರಚಿತ ಕಾಲಸಂಹರನ ಕಥನಕೆ ಹಿಂದೆ
ಸೇರಿದತಿನಿಷ್ಠ ರಾಜಶ್ವೇತ ಮಾರ್ಕಂಡೆಯಂ ವಿಟಶ್ವೇತರ್ಕಳ
ಸೇರುವೆಯು ನರವರ್ಮ ವಿದಳಪ್ರಸಂಗಂಗ
ಳೋರಂತೆ ನಿರವಿಸಿದಿರಿನ್ನಘವಿನಾಶಿ ಸುಕು
ಮಾರನಾಚರಣೆಯಂ ಪೇಳೆಂದನಾ ಕೆಂಚವೀರಾಪ್ಪಯಂ ಭಕ್ತಿಯಿಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುದದಿಂದ ಕೇಳಯ್ಯ ಲೈಂಗ್ಯಪೌರಾಣದೊಳ
ಗುದಯುದೊಳಗಾವನೆದ್ದಾ ದೇವದೇವೇಶ
ಪದವನಾ ಶಿವಲಿಂಗರೂಪವಂ ನೋಡಿದವನೆಯ್ದುವಂ ಶಿವಲೋಕಮಂ
ಪದಪಿನಿಂ ಮಧ್ಯಾಹ್ನದಲ್ಲಿ ಶಂಕರನನೋ
ಡಿದನಾದೊಡಂ ಯಜ್ಞಫಲವಸ್ತಮಾನ ಕಾ
ಲದೊಳಖಿಳ ಯಾಗಫಲವಮಂ ಪಡೆದು ಸರ್ವಪಾಪಂಗಳಂ ತೀರ್ಚುವನೆಲೈ ೪

ಮತ್ತಂ ಪ್ರದೋಷಕಾಲದೊಳು ಶಂಕರನ ನೋ
ಡುತ್ತ ಹರುಷಿಸಿದಾತನಾರಾದೊಡಂತವನ
ಚಿತ್ತ ವಾಚಿಕ ಕಾಯಿಕಂಗಳೊಳು ಮಾಡಿದುಪ ಪಾತಕ ಮಹಾಪಾತಕಂ
ಎತ್ತೆತ್ತಣಿಂ ಬಂದ ಕೋಟಿಪಾಪಂಗಳ ಗೆ
ಲುತ್ತಿಹಂ ಶಂಭುದರುಶನದಿಂದ ರವಿ ಬರಲು
ಕತ್ತಲೆಯ ಪಾಳೆಯಂ ತೆಗೆದೋಡುವಂತೆ ಹರೆವುದು ಕಣಾ ಮಗನೆ ಕೇಳು ೫

||ಸಾಕ್ಷಿ|| ಲೈಂಗ್ಯಪುರಾಣೇ
ಯಃ ಪ್ರಾತರ್ದೇವದೇವೇಶಂ ಶಿವಲಿಂಗಸ್ವರೂಪಿಣಂ
ಪಶ್ಯೇತ್ ಸ ಯಾತಿ ಸರ್ವಸ್ಮಾದಧಿಕಾಂಗತಿ ಮುತ್ತಮಾಂ ೧
ಮಧ್ಯಾಹ್ನೇಚ ಮಹಾದೇವಂ ದೃಷ್ಟ್ವಾಯಜ್ಞಫಲಂ ಭವೇತ್
ಸಾಯಾಹ್ನೇ ಸರ್ವಯಜ್ಞಾನಾಂ ಫಲಂ ಪ್ರಾಪ್ಯವಿಮುಚ್ಯತೇ ೨
ಪ್ರದೋಷೇ ಶಂಕರಂ ದೃಷ್ಟ್ವಾ ಸರ್ವ ಪಾಪೈಃ ಪ್ರಮುಚ್ಯತೇ
ಮಾನಸೈರ್ವಾಚಿಕೈಃ ಪಾಪೈಃ ಕಾಯಿಕೈಶ್ಚ ಮಹತ್ತರೈಃ ೩

ಸ್ಕಾಂದ ಪೌರಾಣದೊಳಗೀಶಾನಸಂಹಿತೆಯೊ
ಳಂ ದೃಢವ್ರತಿಗಳೆನಿಸುವ ಮುನೀಶ್ವರರು ನಲ
ವಿಂದಲಾ ಸೂತಪೌರಾಣಿಕಂಗಿಂತೆಂದರೆಲೆ ವಿಚಕ್ಷಣನೆ ನೀನು
ಹಿಂದೆಯಾ ಶಿವರಾತ್ರಿಯುದ್ಭವವನೆಮಗೊರೆದೆ
ಮುಂದೆಯಾ ಲಿಂಗಮಂ ನೋಡಿಯಾ ಸುಕುಮಾರ
ನೆಂದೆನಿಸುವಾ ದ್ವಿಜಂಗಂ ಮೋಕ್ಷವಾದ ಕಥನವನೆಮಗೆ ಪೇಳೆಂದರು ೬

ಎನೆ ನುಡಿದನಾ ಸೂತನಾನಂದದಿಂ ಸಕಲ
ಮುನಿಗಳಿರ ಸುಕುಮಾರಕನ ದಿವ್ಯಕಥನವಂ
ತೆನಲಾಗಿ ಭೂಮಿಯೊಳು ವಿಂಧ್ಯಪರ್ವತಕುತ್ತರದೊಳೆಸೆವುದತಿ ಪೆಂಪಿನಿಂ
ಘನವಿಪುಳ ಕೋಟೀರವೆನಿಪ ದೇಶಂ ಮಹಾ
ವಿನುತ ವೈಭವದೊಳೀರಾವತಿಯೆನಿಪ್ಪ ನದಿ
ಯನುಪಮವೆನಲ್ಕೆ ರಾರಾಜಿಸುತ್ತಿಹುದೆಲೈ ಕೆಂಚವೀರಾಖ್ಯ ಕೇಳು ೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವರ್ಸಿಷ್ಠಂ ಪುತ್ರಶೋಕದಿಂದಂ ತಾನೆ
ಸಾವೆನೆನುತಂ ಕೊರಲೊಳಾಗ ಕಲ್ಗಟ್ಟಿಕೊಂ
ಡಾವುದ್ದನದಿಯಲ್ಲಿ ಬೀಳಲದು ನೂಱು ಹೋಳಾಗಲ್ ಶತಧ್ರುವೆನಿಪ
ಪಾವನದ ನದಿ ವರ್ಸಿಷ್ಠನ ಕೊರಲ ನೇಣ ಪರಿ
ದಾವಿಪಾಟೆಂಬ ವಾಹಿನಿಗೂಡಿ ಸಿಂಧುವೆಂ
ದೀ ವಿಶೇಷದ ನದಿಯ ತೀರದೊಳು ಕುಬ್ಜಕವೆನಿಪ್ಪ ಪಟ್ಟಣವೆಸೆವುದು ೮

ಪರಪುರಂಜಯನೆಂಬ ರಾಯನಲ್ಲಿರ್ಪನತಿ
ಸಿರಿಯಿಂದಲಂತವನ ದಿವ್ಯಪ್ರಧಾನನೆನಿ
ಪುರುತರ ಬ್ರಾಹ್ಮಣಗೆ ತನುಜ ಸುಕುಮಾರನೆಂಬವನುದಿಸಿ ಮುಂಜಿಮೊದಲು
ಪಿರಿಯ ಸತ್ಕೃತ್ಯಮಂ ಮಾಡಿ ವೇದಾದಿಗಳ
ನಿರದೆ ಪಠಿಯಿಸಿ ಮಂತ್ರಜಪಮುಖ್ಯಮಂ ಕಲಿಸೆ
ದುರುಳತನದಿಂದವಂ ಬಿಟ್ಟು ಮನ್ಮಥಶಾಸ್ತ್ರಮಂ ಕಲಿತನಾ ಕುಮಾರಂ ೯

ರೂಪು ಯೌವನದಲ್ಲಿ ಸಂಪನ್ನನಾಗಿ ಮ
ತ್ತಾ ಪುರದ ಪತಿಗಳುಳ್ಳಖಿಳ ನಾರಿಯರ ತಾ
ನೇ ಪಾದರದೊಳು ರಮಿಸುತ್ತಿರಲು ಕೆಲಬರು ನಿಜಾಂಗನೆಯರಂ ವಧಿಸಲು
ಏಪರಿಯೊಳಂ ವನಿತೆಯರ ಕೊಲ್ಲಲಾರದಾ
ಭೂಪನೆಡೆಗೆಯ್ತುರುತ್ತಂ ಬ್ರಾಹ್ಮಣಶ್ವಪಚ
ರೀಪರಿಯನಂತ ಜನವೆಯ್ದಿ ಬಿನ್ನವಿಸತೊಡಗಿದರು ತಮ್ಮಯ ದುಃಖಮಂ ೧೦

ದೇವ ನಿಮ್ಮಯ ಮಂತ್ರಿಯಣುಗ ಸುಕುಮಾರನೆಂ
ಬಾ ವಿಚಕ್ಷಣ ಕಾಮಶಾಸ್ತ್ರರೂಪುಳ್ಳವಂ
ಭೂವರನೆ ಪಟ್ಟಣದೊಳಖಿಳ ಪತಿಯುಳ್ಳ ನಾರಿಯರ ರಮಿಸುತ್ತಲಹನೆ
ಆವ ತೆಱದಿಂದವನ ಶಿಕ್ಷಿಸದಿರಲ್ಕೆ ನರ
ಕಾವಳಿಯೊಳೆಯಿದೆ ಬೀಳುವೆ ನೀನೆನಲ್ಕೇಳಿ
ಯಾ ವಿಭವದಿಂ ಕೆಟ್ಟು ನಡೆವ ಸುಕುಮಾರನಂ ಕರೆದು ಝಂಕಿಸಿ ತಗುಳಿದಂ ೧೧

ಅರಸನಿಂ ತಗುಳಿಸಿಕೊಳುತ್ತ ಬಂದಾಪಾಪಿ
ಕಿರದೇಶಮಂ ಪೊಕ್ಕೊಡಲ್ಲಿರ್ದ ಜನರಿವಂ
ದುರುಳ ಪಾದರಿಗನೆಂದರೆಯಟ್ಟಲಲ್ಲಿಂದ ಹೂಣಮಂಡಲವನೆಯ್ದಿ
ಇರುತಲೊಂದಾನೊಂದು ದಿವಸದೊಳು ಬನದೆಡೆಗೆ
ಬರಲು ಸೌಂಧರ್ಯದಿಂದೊಂದು ಕೊಣನಿರೆಯಲ್ಲಿ
ಹರುಷದಿಂ ಜಲಕೇಳಿಯಂ ಮಾಡುತಿರ್ದನಾ ಸುಕುಮಾರನಾನಂದದಿಂ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೇಳೆಯೊಳು ಕೊಣಕ್ಕಂ ಹೊಲತಿ ಪರವನಿತೆ
ಹಾವಭಾವವಿಲಾಸ ವಿಭ್ರಮಂ ರೂಪಂ ವ
ಚೋವಿಕಾರವನುಳ್ಳವಳು ಮುಟ್ಟಲಂಗಂಡು ಮೀವೆನೆಂದೆಯಿತರಲ್ಕೆ
ಆ ವನಿತೆಯುಂ ಕಾಣುತನ್ಯೋನ್ಯಮೋಹದಿಂ
ದೋವಿ ಕಾಮಕ್ರೀಡೆಯುಂ ರಚಿಸಿದಂ ಭೂಮಿ
ದೇವಕುಲದಧಿಕ ಸುಕುಮಾರನನ್ಯಾಯದಿಂದಂ ಹಲವು ಸುಪ್ರೌಢಿಯಿಂ ೧೩

ರತಿಯಲ್ಲಿ ಹೊಲತಿ ದಣ್ಣನೆ ದಣಿದು ಸುಪ್ರೌಢ
ಪತಿಯಾಗು ನೀನೆನಗೆ ನಿನಗೆಯಾನೇ ಮನೆಯ
ಸತಿಯಾಗಿ ಸುಖಮಿರ್ಪೆನೆಂದಾಡಿದಾ ಶ್ವಪಚೆಯೊಳು ಕೂಡಿ ಸುಕುಮಾರನು
ಅತಿಶಯದ ಚೋರವೃತ್ತಿಯನಾಂತು ಪಥಿಕರಂ
ಹತಿಸಿ ಸರ್ವಸ್ವಮಂ ಸೆಳೆದುಕೊಂಡವಳೊಡನೆ
ನುತಹರುಷದಿಂದ ವಿವಿಧಾಹಾರಮಂ ಕೊಳುತ್ತಿರ್ದ ಮನದೊಳು ಹೇಸದೆ ೧೪

ಆ ವರಾಹಂ ಮತ್ಸ್ಯಹರಿಣ ಪಲಲಂಗಳಂ
ಗೋವಶ್ವಗಳ ಮಾಂಸಮಂ ನಾಯಿಪಿಶಿತಮಂ
ಆ ವನಿತೆಯೊಳು ಕೂಡಿ ತಿಂದು ನರರಡಗನೆಲ್ಲಾ ಕಾಲದೊಳು ಭಕ್ಷಿಸಿ
ಸಾವಿರ ಮಹಾಬ್ರಾಹ್ಮಣರ ಕೊರಲ್ಗೊಯಿವುತ್ತ
ಲಾ ವಿತ್ತಮಂ ಕೊಂಡವರ್ಗಳಾಮಿಷವನೇ
ಯೋವದೆ ತಿನುತ್ತ ಕೆಲರಧಮರೊಳು ಕೂಡಿ ವರ್ತಿಸುತಿರ್ದನೈ ಪಾತಕಂ ೧೫

ಆ ವಿಶೇಷದ ಪಾಪಿ ಸುಕುಮಾರನುತ್ತಮದ
ಗೋವುಗಳ ಶತಸಹಸ್ರಂಗಳಂ ತಿಂದನೈ
ಸಾವಿರ ಮಹಾಕಪಿಲೆಗಳ ಭಕ್ಷಿಸುತ್ತ ನಾನಾಪ್ರಕಾರದ ಸುರೆಗಳ
ಸೇವಿಸಿ ಸಮಸ್ತ ವನಿತೆಯರ ತಿನುತಧಿಕದು
ರ್ಭಾವಿ ಶಿಶುಗಳನನಂತಂಗಳಂ ಹರಿಸಿ ನಾ
ನಾವಿಧದ ಪಾತಕಂ ಮಾಡಿ ಹೊಲತಿಯೊಳು ಭೋಗಿಸಿ ನೆರೆವುತಿರ್ದನಧಮಂ ೧೬

ಆ ತರುಣಿಗಂ ಕೆಲವು ಕಾಲಕ್ಕೆ ಪಂಚಮಹ
ಪಾತಕಂಗಳೆ ಕೂಡಿ ಪುಟ್ಟುವಂದದೊಳೊಗೆದ
ರೈ ತನುಜರ್ರೈವರಾ ಹೊಲತಿಗಂ ಮತ್ತಿಹಪರಂಗಳೆರಡರೊಳು ಬಹಳ
ಪಾತಕದ ಕಾರಣದ ಕನ್ನೆಯರೊ ಪೇಳೆನಿ
ಪ್ಪೀ ತೆಱದ ಪೆಣ್ಮಕ್ಕಳೆರಡಾಗಲಾಗಿ ದು
ರ್ನೀತಸುಕುಮಾರ ಪಾತಕವ ಕೋಟಿಗಳ ಮಾಡುತ್ತ ವರ್ತಿಸುತಿರ್ದನು ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದುರುಳತನದಿಂದ ಸುಕುಮಾರನಿಂತೆಪ್ಪತ್ತು
ವರುಷಪರಿಯಂತರಂ ಹೊಲತಿಯೊಳು ಕೂಡಿ ಸುಖ
ವಿರಲವನ ಪಾತಕಸಹಾಯೆಯುಪ್ಪಾ ಶ್ವಪಚಿಯುಳಿಯಲದಕೇನೆನುತ್ತ
ಇರದೆ ತನಗಂ ಪುಟ್ಟಿದಾ ಶ್ವಪಚಿಯಣುಗಿಯುರು
ಪರಮ ಸೌಂದರ್ಯ ಯೌವನದೊಳಿರೆ ಮಕ್ಕಳನೆ
ವರಿಸಿ ಹೆಂಡಿರಮಾಡಿಕೊಂಡು ಕಾಮಕ್ರೀಡೆಯಿಂ ತುಷ್ಟಿಬಡುತಿರ್ದನು ೧೮

ಹೊಲತಿಯುರ ತನಗೆ ಹುಟ್ಟಿದ ಮಕ್ಕಳೆನಿಸಿರ್ದ
ಲಲನೆಯುರ ರಮಿಸುತ್ತ ವೇದಶಾಸ್ತ್ರಾಗಮದ
ನೆಲೆಯಲ್ಲಿ ಸಕಲ ಸೂರಿಗಳೊರೆವ ಪಾಪವೆನಿತುಂಟವೆಲ್ಲಕ್ಕಧಿಕದ
ಅಲಘುದೋಷಂಗಳಂ ಮಾಡುತ್ತ ಪಾಪಿಯೀ
ನೆಲದಲ್ಲಿ ಬಹು ಸುರಾಮಾಂಸಮಂ ಕುಡಿದು ತಿಂ
ದೆಲೆಲೆ ಸುಕುಮಾರನಿರುತಿರ್ದನವನಂ ಭೂಮಿ ಹೊರಲಳುಕಿ ಕಂಗೆಟ್ಟುದು ೧೯

ಮತ್ತೊಮ್ಮೆಯಾ ನಾಡ ಹಿರಿಯ ಪಟ್ಟಣದರಸು
ಉತ್ತಮದ ಸದ್ಬ್ರಾಹ್ಮರಧಿಕ ಮಾನ್ಯರು ವೇದ
ವಿತ್ತುಗಳಿಗಧಿಕ ಧನಮಂ ವಿಧಾನದ ದಾನದೊಳಗಿತ್ತು ಕಳುಪಲಾಗಿ
ಇತ್ತ ಸುಕುಮಾರನಱಿದಧಮರಂ ಕೆಲಬರಂ
ತತ್ತನುಜರಂ ಕೂಡಿಕೊಂಡು ಬಂದಡ್ಡಗ
ಟ್ಟುತ್ತವರ ಕೊರಲರಿದು ಕೊಂದವರು ತರುತಿರ್ಪ ವಿತ್ತಮಂ ಕಳೆದುಕೊಂಡಂ ೨೦

ಚೋರರಾ ಬ್ರಾಹ್ಮಣರ ಕೊಂದ ವಾರ್ತೆಯ ದೇಶ
ದಾ ರಾಯನಱಿದು ಕಳ್ಳರ ಮೇಲೆ ಕೆಲವು ಪರಿ
ವಾರಮಂ ಮನ್ನೆಯರ ಧಾಳಿಯಂ ಕಳುಪಲವರೆಯಿತಪ್ಪ ಕಾಲದಲ್ಲಿ
ಓರಂತೆ ಸುಕುಮಾರನೊಂದು ಗಿರಿಯುಗ್ರದೊಳ
ಗಾರಯಿದು ನೋಡಿ ಕಂಡಱಿದು ಮನದೊಳಗಂ ವಿ
ಚಾರಿಸಿದನಿದು ತಮ್ಮ ಮೇಲೆಂದು ತಿಳಿದು ದುರ್ಬುದ್ಧಿಯಂ ಬಗೆದನಾಗ ೨೧

ಬೇಡ ಹೊಲೆ ಮಾದಿಗರು ಮೊದಲಾದ ಜಾತಿಗಳು
ಕೂಡಿ ಕದ್ದವರೊಳೊರ್ವಂ ಸಿಲ್ಕಲಂತವನ
ನಾಡರಸುಗಳು ಕೊಱಿದು ಬಾಧಿಸಲು ತಮ್ಮ ತಾವೇ ಸತ್ತುಹೋಹರೈಸೆ
ಆಡರ್ಕೈ ತಮ್ಮೊಳಗಿನವರ ಬದುಕಿಸುವರೀ
ಗಾಡಿಯುಗ್ರಜಕುಲದ ಸುಕುಮಾರ ಪಾತಕಂ
ಮಾಡಿದನ್ಯಾಯಕ್ಕೆ ಸರಿಯಿಲ್ಲವೆಂತೆನಲು ಮುನಿಗಳಿರ ಕೇಳಿಯೆಂದ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಸುದಾಳಿಯು ಬಗೆಯನಾಂ ಪೇಳೆಪಾಳೆಯಂ
ತೆರಳಿ ಕಿಟ್ಟೋಡಲೆಲ್ಲಾ ಕಡೆಗೆ ಮನ್ನೆಯರು
ಪರಿದು ತಲೆಗಳ ಹೊಡೆವರಲ್ಲಿ ನಾಂ ಸಾಯಲೇಕಿವದಿರೆಲ್ಲರ ಕೊರಲನು
ಅರಿಯಲಾನೇ ಬದುಕಿಹೋಹೆನೆಂದುಜ್ಜುಗಿಸಿ
ಎರಡು ಮಕ್ಕಳ ಹೆತ್ತ ತನಗೆ ಹುಟ್ಟಿದ ತನ್ನ
ಹಿರಿಯ ಹೆಂಡತಿಯ ಬಿಟ್ಟಾ ಕಿಱಿಯ ಹೆಂಡತಿ ಹೊಲತಿವಗಳ
ಕೊಂಡು ಹೊರಟಂ ೨೩

ಅನಿತಕ್ಕೆ ದಾಳಿ ಬಂದಾ ಪಾಳೆಯವ ಮುತ್ತಿ
ತನುಜರಂ ನಂಬಿರ್ದ ಸರ್ವರಂ ಕೊಂದರೀ
ತನು ಹೊಲತಿಸಹಿತಂ ಕಿರಾತದೇಶಕ್ಕಾಗಿ ಬಂದರಣ್ಯದ ಪಳ್ಳಿಯ
ಮನೆಯೊಂದಱಲ್ಲಿರೆ ವಣಿಕ್ಪಥವೆನಿಪ್ಪ ಪ
ತ್ತನವೊಂದು ಪೆಸರುವೆತ್ತಿಹುದಲ್ಲಿ ಸಕಲರಾ
ಧನದಂಗೆ ಮಿಗಿಲಾಗಿ ಬಾಳುತಿರೆ ಹಿರಿಯ ಶಿವರಾತ್ರೆ ನಲವಿಂ ಬಂದುದು ೨೪

ಆ ಪಟ್ಟಣದ ಜನರು ನಡೆತಂದು ನಿರುಪಮ
ಶ್ರೀಪಾರ್ವತೀಶನಾಗೇಶ್ವರಂ ಪುಷ್ಪವಾ
ಟೀ ಪರಿವೃತೋನ್ನತಿಯೊಳೊಪ್ಪಿರಲು ಬಂದು ಜಾಗರಣವಿರೆ ಸಂಭ್ರಮದೊಳು
ಈ ಪಾಪಿ ಸುಕುಮಾರನಖಿಳ ಮಾಂಸವ ತಿಂದು
ಆಪನಿತು ಸುರೆಯ ಕುಡಿದಾ ಹೊಲತಿಗೆಂದು ಪು
ಷ್ಪೋಪಚಯಮಂ ಚೋರಿಸಲ್ಬಗೆದು ಬರುತಿರ್ದನಾ ಶಿವಾಲಯದ ಬಳಿಗೆ ೨೫

ಸುಕುಮಾರನೆಯ್ತುಪ್ಪ ಕಾಲದೊಳು ಶಿವಭಕ್ತ
ನಿಕರಂ ಶಿವಾಲಯದೊಳೀಶಮೂರ್ತಿಗೆ ಮಹಾ
ಧಿಕದ ನೀರಾಜನವನೆತ್ತುತಿರಲಾ ಪ್ರಭೆಯೊಳರ್ಪಿಸಿದ ದಿವ್ಯಪುಷ್ಪ
ಪ್ರಕಟರತ್ನಾಭರಣದೀಪಾನುಲೇಪವ
ಸ್ತ್ರಕದಂಬದಿಂದಲಂಕರಿಸಿ ರಾಜಿಸುವ ಪಾ
ವಕನಯನನಂ ಕಾಣುತಾ ಸಿಂಗರಕೆ ಮನದೊಳುತ್ಸವಿಸಿದಂ ಬ್ರಾಹ್ಮಣಂ ೨೬

ಉತ್ತಮದ ಲಿಂಗಮೂರ್ತಿಯ ಚೆಲ್ವ ಮನದೊಳ
ಚ್ಚೊತ್ತಿದಂತಾಗೆ ಹರುಷಿಸುತ ಹಿಂದಕ್ಕೆ ತಿರು
ಗುತ್ತೊಂದು ಹಿರಿಯ ಹಳ್ಳದೊಳು ಭೋಂಕನೆ ಬಿದ್ದು ತತ್ಕ್ಷಣದೊಳಸುವ
ಬಿಡಲು
ಮುತ್ತಿದರು ಸುಕುಮಾರನಂ ಯಮನ ಭಟರು ತೆಗೆ
ನೆತ್ತಿಯೊಳು ಕರುಳನಿರಿಯೆಳೆಯೊದೆದು ಕುಸುಕಿರಿಯೆ
ನುತ್ತ ತನತನಗೆ ಪಾಶದೊಳಲ್ಲಿ ಮೂಡೆಕಟ್ಟಂ ಕಟ್ಟಿ ಬೊಬ್ಬಿರಿದರು ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ತೃಣದಗ್ರದೊಳಗಿದ್ದು ತಲೆಯೆತ್ತಿ ಮ
ತ್ತೊಂದು ಕಡ್ಡಿಯ ಮೇಲೆ ತಲೆಯನಿಟ್ಟದಱಕೊಳಗೆ
ಯೊಂದುವಾ ಪುಲ್ಜಿಗುಳೆಯಂತಳಿವನಂಗದಂತಾ ವೃದ್ಧ ಬಾಲವನಿತೆ
ಮುಂದಾ ನಪುಂಸಕಾದ್ಯಖಿಳ ರೂಪಿನೊಳು ಮೊದ
ಲಂದದಿಂ ಯಾತನಾ ದೇಹವೆಯಿತಹುದಲ್ಲೈ
ಕಂದ ಸುಕುಮಾರನಸುವಂ ಪ್ರತಿಕಲೇವರದೊಳಾಕ್ರಮಿಸಿ ತಂದಿಟ್ಟರು ೨೮

ಇಟ್ಟವನ ಸರ್ವಾಗಮಂ ವಿಚಿತ್ರಂಗಳಿಂ
ಕಟ್ಟಿಕಾರೊಡಲ ಕೆಂಗಣ್ಣ ಪಿಡಿಮೀಸೆಗಳ
ಕಟ್ಟಸುರರೆನಿಪ ಯಮದೂತರೆಳೆಯಲ್ಬಗೆಯಲೇನೆಂಬೆನಚ್ಚರಿಯನು
ದಿಟ್ಟಿಮೂಱಿನ ಗಣಂಗಳು ಮಣಿವಿಮಾನದೊಳ
ಗಿಟ್ಟು ಸುಕುಮಾರನಂ ಕೊಂಡೊಯ್ಯುಬಗೆದು ಬೊ
ಬಿಟ್ಟುಬಂದರು ಕಣಾ ಶಿವನ ನೋಡಿದ ಮಹಿಮೆಯಂ ಪೊಗಳಲಱಿದು
ಮಗನೇ ೨೯

ಆರರೆ ಶುದ್ಧಸ್ಫಟಿಕಸಂಕಾಶಮಯ ಕಲೇ
ವರ ಸುನೇತ್ರದ ಜಟಾಜೂಟದ ಚತುರ್ಭುಜೋ
ತ್ಕರ ಮಹಾಕಾಯ ಮುದ್ಗರ ಶೂಲ ನಿಶಿತಾಂಕುಶಾಗ್ರಗದೆಗಳ ಬೀಸುತ
ಉರವಣಿಸಿ ಬಿಗಿದ ಬಿಲ್ಲಂಬುಗಳ ಪಿಡಿದು ನಿ
ಷ್ಠುರದಿಟ್ಟಿಗಳನಾಂತು ಲೌಡಿಗಳನಕ್ಕಱಿಂ
ತಿರುಪುತಿಹ ವೀರ ಶಿವದೂತರೆಯಿತಂದರಾಹಾಹ ಬೊಬ್ಬಿರಿದು ಕೂಡೆ ೩೦

ಪೊದೆದುಟ್ಟ ಪೆರ್ಬುಲಿಯ ತೊಗಲ ಕರಕರ್ಣಂಗ
ಳೆದೆ ಬೆನ್ನು ತಲೆಯಲ್ಲಿ ಭುಸ್ಸೆಂದು ವಿಷವನುಗು
ಳ್ದುದರುತಿಹ ಪೊಸರನ್ನಗದ್ಯಗರೆವ ಪೆಡೆವಣಿಯ ಪೆರ್ಬಾವುದೊಡೆದಧಟರು
ಸದಮಲ ವಿಭೂತಿಯುದ್ಧೂಳಿಸಿದ ಸರ್ವಾಂಗ
ರುದಿತತ್ರಿಪುಂಡ್ರಭಾಳಾದಿಗಳ ಸೊಬಗರ
ಗ್ಗದ ವೀರರೆನಿಪ ಶಿವದೂತರಾಹಾ ಬೊಬ್ಬಿಡುತಲ್ಲಿಗೆಯಿತಂದರು ೩೧

ನಡೆತಂದು ಶಿವದೂತರಾಗ ಸುಕುಮಾರನಂ
ಬಿಡಿ ಕಾಲನಾಳ್ಗಳಿರ ಶಿವಮೋಹಿಯೀತನು
ಗ್ಗಡದ ಸದ್ಭಕ್ತನೀತನ ಮೇಲೆ ಮೋಹಿಸುತ್ತಿರ್ಪನಖಿಳಾಧೀಶನು
ಒಡನಧಿಕಯಜ್ಞ ತಪವೆಸೆವ ದಾನಂಗಳಂ
ಪೊಡವಿಯೊಳು ಮಾಡಿದವರಾರವರ್ಗಿವ ಮಿಗಿಲು
ಮೃಡನ ಮನಸಿಂಗೆ ಚಂದೀ ನಿಷ್ಠನಂ ಪಿಡಿದು ಕೆಡದಿರಿಯೆನುತ್ತಿರ್ದರು ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ಶಿವದೂತಸ್ವರೂಪ ಗ್ರಂಥ
ಸ್ಕಾಂದೇ– ಈಶಾನಸಂಹಿತಾಯಾಂ–

ಮೃತ್ಯುನಾ ಸಹಿತಾಸ್ಸರ್ವೇ ಯಮದೂತಾ ಯಮಾಜ್ಞಯಾ
ಪಾಶಮುದ್ಗರ ಸನ್ನದ್ಧಾಃ ಖಡ್ಗ ತೋಮರ ಪಾಣಯಃ ೪

ಏತಸ್ಮಿನ್ನೇವ ಕಾಲೇತು ಶಿವದೂತಾಃ ಶಿವಾಜ್ಞಯಾ
ತಂ ನೇತುಮಾಗತಾಶ್ಶೀಘ್ರಂ ಶತಶೋಥ ಸಹಸ್ರಶಃ ೫

ಶುದ್ಧಸ್ಫಟಿಕಸಂಕಾಶಾ ಸ್ಸನೇತ್ರಾ ಸ್ಸುಕಪರ್ದಿನಃ
ಚತುರ್ಭುಜ ಮಹಾಕಾಯಾ ಶ್ಶೂಲಮುದ್ಗರಧಾರಿಣಃ ೬

ಭಸ್ಮೋದ್ಧೂಳಿತ ಸರ್ವಾಂಗಾ ಸ್ತ್ರಿಪುಂಡ್ರಾಂಕಿತ ಮಸ್ತಕಾಃ
ಏನಮೇತ್ಯ ತಥಾ ಸರ್ವೇ ದದೃಶುರ್ಯಮಕಿಂಕರಾನ್ ೭

ಓರಂತೆ ಯಮದೂತರವರ ನೀಕ್ಷಿಸುತ ನೀ
ವಾರಮಲವೇಷಿಗಳದಾರದೂತರು ತದ್ವಿ
ಚಾರಮಂ ಪೇಳಿಮೆನಲಾಗಲಿಂತೆಂದರಾವನ ಕರುಣಮಾತ್ರದಿಂದ
ಶೌರಿಯಜರೆಯಿದೆ ತಮ್ಮಯ ಪದಂಗಳ ಪಡೆದ
ರಾ ರಮಾಕರನ ಪರಮಸ್ವತಂತ್ರನ ದೇವ
ತಾರಾಧ್ಯನೆನಿಸಿಪ್ಪನವನ ದೂತರು ನಾವು ಕೇಳಿರೈ ನೀವೆಂದರು ೨೨

ಶಿವದೂತರೆಂಬವರು ನೀವಲಾ ನಿಮ್ಮ ಕಂ
ಡೆವು ನಾವಪೂರ್ವವಾಗಿಂದು ನೀವಾರು ಶಂ
ಭುವನರ್ಚಿಸುತ್ತ ನಿಜನಿಷ್ಠ ಸದ್ಭಕ್ತರುಂಟವರ ಕೊಂಡೊಯ್ಯಲಾಗಿ
ಸುವಿಶೇಷದಿಂ ಬಪ್ಪುದುಚಿತವೀ ಸುಕುಮಾರ
ನವಿಚಾರಿ ನರಕಿ ಪಾತಕ ನಿವನ ಕೊಲೆಯನೀ
ಭುವನದೊಳು ಬಣ್ಣಿಸಲ್ಬಾರದೀ ದ್ರೋಹಿಯಂ ನೀವು ನೋಡಲ್ಬಪ್ಪುದೇ ೨೪

ಎಂತಕ್ಕೆ ನೀವು ಬಿಜಯಂಗೆಯಿದಿರದಕೇನು
ಸಂತೋಷದಿಂದ ಚಿತ್ತೈಸಿ ನಮ್ಮರಸೆನಿಸು
ವಂತಕಂ ಪಾತಕನನೆಳೆದುತರಲಟ್ಟಿದಂ ನಾವು ಬಿಡೆವಿನವನಲು
ಅಂತದಂ ಕೇಳಿ ಕೋಪಿಸಿ ನುಡಿದರೆಲೆ ದೂತ
ಸಂತತಿಯೆ ನಾವು ಸುಕುಮಾರನಂ ಬಿಡೆವು ನಿ
ಮ್ಮಂ ತಲೆಯನರಿದುಬಿಸುಡುವೆವಡ್ಡಲಾಗಿ ಸಾಯದೆಬದುಕಿಹೋಗಿಯೆನಲು ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನೆ ಕೇಳಿ ಮೃತ್ಯುದೂತರ್ನುಡಿದರೀ ಪಾತ
ಕನ ಕೊಲುವಡೆಮಗೇಂ ವಿಚಾರಮೇಶಿವದೂತ
ರೆನಿಪ ನಿಮಗಿವನ ಕೊಂಡೇನು ಕಾರಣವಿಲ್ಲಿ ನೀವಾರು ಹೋಗಿಯೆನಲು
ಕನಲಿ ಶಿವಕಿಂಕರರು ಘುಡಿಘುಡಿಸಿ ಕೋಪದಿಂ
ಧನುವಿನೊಳು ಬಾಣಮಂ ತೊಡಚಿ ಬೊಬ್ಬಿರಿದೆಚ್ಚ
ಡನಿತಕ್ಕೆ ದೂತರಿದಿರಾಗಿ ಶಸ್ತ್ರಂಗಳಂ ಪಿಡಿದು ಬೊಬ್ಬಿಟ್ಟರಾಗ ೩೭

ಹರಗಣಂಗಳ್ಗೆ ಯಮದೂತರಿಗೆಯಾವೇಳೆ
ಪಿರಿದು ಕಾಳೆಗವಾಯಿತುಭಯ ಬಲದಲ್ಲಿ ಸಂ
ಗರಭೇರಿಗಳು ಮೊಳಗಿದುವು ಕೂಡೆ ನಿಸ್ಸಾಹಣಂ ದಾಂಧಳಂಧಳಯೆನೆ
ಬಿರಿದೆತ್ತಿ ಕರೆದವಾ ಪೆರ್ಗಾಳೆಗಳು ಕೂಡಿ
ಬೆರಲ ಬೊಬ್ಬೆಯ ರವದೊಳಂಬುಗಳ ತೊಡಚಿ ಭೀ
ಕರದೊಳೆಚ್ಚಾಡಿತಂದೆರಡುಬಲವೀಶದೂತರ್ಗೆ ಪಾಸಟಿಯೆ ಖಳರು ೩೭

ಕಡಿಖಂಡಮಂ ಮಾಡಿದರ್ಯಮಭಟರ್ಕಳಂ
ಬಿಡದೆ ಶಿವದೂತರವರೊಳು ಕೆಲರು ಕೆಟ್ಟೋಡಿ
ನಡುಗಿ ಕಾಲಂಗೆ ಬಿನ್ನವಿಸೆ ಕೇಳುತ್ತ ಸುಕುಮಾರಪಾತಕನ ತರಲು
ಎಡೆವಾಯಿದರೆ ಲೂಟಿಯಿಂದವರೆನುತ್ತಲ್ಲಿ
ಘುಡಿಘುಡಿಸಿ ಸಂಯಮನಿಯಲ್ಲಿ ನಿಸ್ಸಾಳಮಂ
ಹೊಡೆಯೆಂದು ಪೇಳಿ ದಾಂಧಳರವಂ ಪೊಣ್ಮೆ ನೆರೆದುದು
ಸೇನೆಯುಚ್ಚರಿಯೊಳು ೩೮

ಬಿಗಿ ಬೇಗ ಜಂಜಿಗೆಗಳಂ ಮದಗಜಂಗಳಿಗೆ
ತೆಗೆದು ವಾಜಿಗಳ ಹಕ್ಕರಿಕೆಗಳ ಹಾಯ್ಕು ತೇ
ರಿಗೆ ಸೂತ ತುರಗಂಗಳಂ ಬೇಗ ಸಂವರಿಸು ಸರ್ವಶಸ್ತ್ರಂಗಳಾಂತು
ಬಗೆಯದೆಲ್ಲಾ ಭಟರು ಬೇಗ ಹೊರವಡಿದೇವ
ನಗಣಿತಗಣಂಗಳೊಳು ಕಾಳಗವೆನಿಪ್ಪ ಮಾ
ತುಗಳಲ್ಲಿ ಕೇರಿಕೇರಿಯೊಳು ಸಡಗರಿಸಿ ನೆರೆದುದು ಚತುರ್ಬಲವಾಗಳು ೩೯

ನೆರೆದುದಾ ಸಮಯದೊಳು ಚಾತುರ್ಬಲಂ ಪಿತೃಗ
ಳರಸನೀಕ್ಷಿಸುತಲುಂಬಲೆಯೆಂಬ ಮೃತ್ಯುವಂ
ಕರೆದು ಹೋಗೈ ಸಕಲ ಮೃತ್ಯುರೋಗಂ ಸರ್ವಸೇನೆಯೊಳು ಕೂಡಿ ನೀನು
ಹರಗಣಂಗಳ ಜಯಿಸು ನಡೆಯೆಂದನೆಂತೆನಲು
ಧರೆಯೊಳುದಿರಿರ್ದ ತರಗೆಲೆಗಳೆಲ್ಲವ ಕರೆದು
ಪಿರಿಯ ದಾವಾಗ್ನಿಯಂ ಮುತ್ತಿ ಕೊಲ್ಲೆಂದಟ್ಟುವಂತಟ್ಟಿದಂ ಕಾಲನು ೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪದಹತಿಯು ಕೆಂಧೂಳಿ ದಿಗ್ಗಜಂಗಳ ಮಸ್ತ
ಕದೊಳಿಟ್ಟ ಸಿಂಧೂರವಾರಡಿಗೆ ಕೆಂಬಟ್ಟೆ
ಯೊದಕೆ ಸಗರರಗುಳಿದ ಹಳ್ಳಮಂ ಪೂಣ್ಬಂದವಾ ಸಮುದ್ರೋಪರಿಯೊಳು
ಪುದಿದ ಬಗೆಯನಿಮಿಷರನಿಮಿಷರಂ ಮಾಡುವಂ
ದದೊಳೆಯ್ದೆ ಪರಕಲಿಸಲಾಗಿ ಬೊಬ್ಬಿರಿದು ನುಡಿ
ದುದು ಯಮ ಮಹೇಶ್ವರನ ಚತುರಂಗಸೇನೆ ಮುಂದರಿಯದಜ್ಞಾನದಿಂದ ೪೧

ಮೊದಲ ಕಾಳಗದಲ್ಲಿ ಶಿವನ ಕಿಂಕರರಿಂದ
ಸದೆಯಿಸಿಕೊಳುತ್ತೋಡಿಬಪ್ಪ ಯಮಭಟರು ಕೇ
ಳಿದರು ಬೆಂಬಲವಾಗಿ ಬರುತಿಪ್ಪ ತಮ್ಮಯ ಚತುರ್ಬಲದ ಘೂರ್ಣಿತವನು
ಎದೆವಿಡಿದು ಸಂತೈಸಿಕೊಂಡರಂತಾಗ ಕೂ
ಡಿದರು ಸಾವಿನಸುಖದ್ರವ್ಯದಾಯಾದ್ಯರಂ
ತಿದಿರಾದ ರೊಳ್ಳೆಗಳ ಫೌಜು ಗರುಡರ್ಕಳೊಡ್ಡಿಂಗೆ ಮಾರ್ವಲೆವಂದದೆ ೪೨

ಜಲಧಿಗಳು ಗಗನಕ್ಕೆ ತುಳ್ಕಾಡಿದವು ದಿಶಾ
ವಳಯದದ್ರಿಗಳು ಮಾರ್ದನಿಗೊಡಲ್ದಿಗ್ದಂತಿ
ಗಳ ಕರ್ಣದಲ್ಲಿ ಝುಮ್ಮೆಡೆ ಫಣೀಶಂಗಕ್ಷಿಕರ್ಣವೆಂಬಾ ಮಾತನು
ಕಳೆವುತಾ ಶ್ರೋತ್ರಂ ರಂಧ್ರಮಂ ಮಾಳ್ಪಂತೆ
ಧಳಧಾಂಧಳಂಧಳಮೆನಿಪ್ಪ ನಿಸ್ಸಾಹಣಂ
ಮೊಳಗಿದವು ಬಲವೆರಡರಲ್ಲಿ ಶಿವದೂತರಳ್ತಿಯು ಗಣಂ ತೊಡಗಿತಾಗ ೪೩

ಬೆರಲಬೊಬ್ಬೆಗಳಿಂದ ಖೋಯೆಂದು ಬಿಲ್ಲಾಳ್ಗ
ಳುರವಣಿಸಿಯಾಲೀಢಸಮಪಾದ ಮೊದಲಾದ
ಚರಣವರ್ತನದಿಂದ ಹಿಳುಕು ಕವಲಲಗಂಬು ಬೋಳೆ ತೊಡಕುಗಳೆನಿಪ್ಪ
ಸರಳುಗಳ ಹೂಡುತೆಚ್ಚಾಡಿದರು ಶಿವಭಟರು
ದುರುಳ ಜವನಾಳುಗಳು ಗಗನದೊಳು ನಲಿದು ಸಂ
ಗರವೋಹಿ ನಾರದಂ ಮೈನವಿರು ಝುಮ್ಮೆಂಬ ಹರುಷದಿಂದೀಕ್ಷಿಸುತಿರೆ ೪೪

ಅರರೆ ಯಮದೂತರೆಚ್ಚಂಬುಗಳನಂತವರ
ಶಿರಗಳಂ ಕೂಡೆ ಕಡಿದೀಡಾಡಿದುವು ಶಿವಗಣೇ
ಶ್ವರರೆಚ್ಚ ಬಾಣಂಗಳನಿತಕ್ಕೆ ಹರಿಗೆಕಾರರು ಕವಿದರೊಗ್ಗಿನಿಂದ
ತುರಗಂಗಳೇರಿದರು ರಾವುತರು ಮಾವುತರು
ಕರಿಗಳಂ ನೂಂಕಿದರು ರಥಿಕರೆಡ್ಡೆಸೆಯಲ್ಲಿ
ಪರಿಸೆ ತೇರುಗಳ ಪೆರ್ಗಾಳಗಂ ತೊಡಗಿತ್ತು ಸಾಮಾನ್ಯರಣವೆ ಭಾಪು ೪೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡಿಘುಡಿಸಿ ಬೊಬ್ಬಿಱಿದು ಶಿವಭಟರು ಖಡ್ಗದಿಂ
ಹೊಡೆಯೆ ತಲೆಗಳು ಪರಿದು ಗಗನದಿಗ್ವಳಯಕ್ಕೆ
ಸಿಡಿಯಲೊಗುತಿಪ್ಪ ರಕ್ತದ ಧಾರೆಗಳ್ಗೆ ನಲಿದಾಡಿ ಮರುಳುಗಳು ಬಾಯ
ಬಿಡುತ ಮುಕ್ಕುಳಿಸಿ ಚಪ್ಪರಿದು ದಣಿವಂದದಿಂ
ಕುಡಿಯಲಿಱಿದರು ತಱಿದರಟ್ಟೆ ಎದ್ದಾಡಿದುವು
ಕಡುಗಲಿ ಗಣೇಶ್ವರರ ತೊಡಚಿ ಬಾಳ್ವದೆ ಯಮನ ಪಡೆಯೆಂದರಮರರ್ಕಳು
೪೬

ಚೀತ್ಕೃತಂ ಪರಿವ ತೇರ್ಗಾಲಿಗಳ ಮೊತ್ತದಿಂ
ಭೀತ್ಕೃತಂ ಪೇರಂಬುಗೞಿಗಾಳಿಯಿಂದಂ ಠ
ಣತ್ಕೃತಂ ನಂದೀಶನನುಚರಧ್ವಾನದಿಂ ಗಣಕುಲಂ ತೊಟ್ಟಹಿಗಳಿಂ
ಘೂತ್ಕೃತಂ ಮರುಳುತಂಡಕ್ಕೌತಣಂ ಮಾಳ್ಪ
ಸತ್ಕೃತಂ ತಾನೆಂಬ ಛಂದದಿಂ ನೋಡಲ್ ಚ
ಮತ್ಕೃದೊಳೆಸೆಯೆ ಬೊಬ್ಬಿಱಿದು ಕಾದುತ್ತಿರ್ದರಾಹ ಬಣ್ಣಿಪನಾವವಂ ೪೭

ತಿಱ್ರಿಂದು ತಿಱುಹಿ ಚಕ್ರಂಗಳಿಂದಿಟ್ಟರಾ
ಸಱ್ರಿಂದು ಮೆಟ್ಟಿ ಸೀಳಿದರು ಪಟುಭಟರು ದುರು
ದುಱ್ರಿಂದು ನೆತ್ತರುಗೆ ಕುಕಿಲಿಱಿದು ಭೂತಂಗಳೆಯ್ದೆ ಬಾಯೊಡ್ಡಿ ನಲಿದು
ಜುಱ್ರಿಂದು ಚಪ್ಪರಿದು ರಕ್ತಂಗಳಂ ಸುಱ್ರ
ಸುಱ್ರಿಂದು ಸುರಿದು ಆ ಖಂಡದಿಂ ದಣಿವುತ್ತ
ಘುಱ್ರಿಂದು ತೇಗಿ ಪರಸಿದವು ಶಿವದೂತರಂ ಬಾಳೆಂದು ಸಂತಸದೊಳು ೪೮

ಅನಿತಕ್ಕು ಲುಂಬಲುಂ ಮೊದಲಾದ ಮೃತ್ಯುಗಳು
ತನತನಗೆ ಹೇವರಿಸಿ ನಮ್ಮ ಬಲಮಂ ಭೂತ
ಜನಕುಪಾಹಾರವಿಕ್ಕುವ ಹರಕೆಗೆಂದು ಬಂದೆವೆ ನಾವು ನಮ್ಮ ರಾಯ
ನೆನಿಪ ಯಮನೆಡೆಗಾವ ಮೊಗದಿಂದ ಪೋಪೆವೆಂ
ದನಿಬರುಂ ಕೂಡಿ ಬೊಬ್ಬಿಱಿದು ನಿಸ್ಸಾಳಮಂ
ದನಿಮಾಡಿಸುತ್ತ ಮೂದಲಿಸಿ ಕಪಿದುದು ತಮ್ಮ ಹವಣಱಿಯದತ್ಯಧಮರು ೪೯

ಕತ್ತಲೆಯ ಪಾಳೆಯಂ ಮುಳಿದು ಸೂರ್ಯನ ಪಡೆಯ
ಮುತ್ತುವಂತಾಗಳಿದಿರಾಗೆ ಮರುಳುಗಳ ಸವಿ
ದುತ್ತಾಗ ಬಂದಿರೇ ಯೆಂದು ಘೂರ್ಮಿಸಿ ಗಣಂಗಳು ಕೂಡಿ ಕವಿಯಲಾಗಿ
ಹತ್ತೆಸಾಱುತ್ತ ಬೊಬ್ಬಿಱಿದು ಬೆಟ್ಟಂಗಳಂ
ಕಿತ್ತು ಗಣತತಿಯು ಮೇಲಿಡೆ ಕಂಡು ಪಡ ಪಡ ಯೆ
ನುತ ವಜ್ರಾಸ್ತ್ರದಿಂದಂ ಚೂರ್ಣಮಂ ಮಾಡಿ ಬಿಸುಟರಾ ಶಿವದೂತರು ೫೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕ ಶಿವಭಟರ ಪಡೆಯಂ ಮುಳುಂಗಿಸುವಂತೆ
ಜಲಧಿಗಳ ರೂಪಾಗಲಾ ಮೃತ್ಯುಗಳು ನಿಮಿಷ
ದೊಳು ವಡಬರಾಗುತ್ತ ಪಾನಮಂ ಮಾಡೆ ಮಿಕ್ಕವರು ಹುರಿಯಾಗಿ ಬಂದು
ಮುಳಿದು ಘೂರ್ಮಿಸಲು ಸಪ್ರನೆ ಸೀಳಿ ತೊವಲನುಡ
ಲುಳಿದವರು ಸಿಂಹರೂಪಾಗಿ ಪೊಣರಲ್ಕೆಯು
ಗ್ಗಳಶರಭವಿಗ್ರಹಂಗಳೊಳು ಸಂಹರಿಸಿದರು ನಿಮಿಷದೊಳು ಹರನಾಳ್ಗಳು ೫೧

ಆವಾವ ರೂಪಾದರವಕೆ ಹಗೆಯೆನಿಸುವ ಮ
ಹಾವತಾರದೊಳು ಶಿವದೂತರಾ ಯಮಭಟರ
ನಾ ವೀರದಿಂದ ಸಂಹರಿಸೆ ಖಡಿಖಂಡವಾಗುತ್ತಳಿದರನಿಬರುಳಿದು
ಜೀವಮಾತ್ರದೊಳು ಕೆಲಬರು ಕಡಿದ ತೋಳ್ತೊಡೆಗ
ಳೋವದಖಿಳಂಗದೇಟುಗಳಿಂದಲೋಡಿ ಪಿತೃ
ಭೂವರನ ಸಂಯಮನಿಯಂ ಪೊಕ್ಕರತ್ತ ಬಳಿಕಿತ್ತ ಶಂಕರನಾಳ್ಗಳು ೫೨

ಕಟ್ಟಿರ್ದ ಸುಕುಮಾರನವಯವದ ಪಾಶಮಂ
ಬಿಟ್ಟರುತ್ತಮದ ವಸ್ತ್ರಾಭರಣಮುಖ್ಯಮಂ
ಕೊಟ್ಟು ಸತ್ಕರಿಸಿ ನವರತ್ನಪ್ರಭಾಮಯದ ದಿವ್ಯಪುಷ್ಪಕದೆಡೆಯೊಳು
ಇಟ್ಟು ಪೂಮಳೆಗಳಿಂ ಧೂಪಧೂಮ್ನಂಗಳಿಂ
ಕಟ್ಟೆಸಕದಮರವಾದ್ಯಂಗಳೊಳುಘೋಯೆಂಬ
ನಿಷ್ಠರಿಂ ಶಿವಲೋಕಕಳ್ತಿಯಿಂ ಕೊಂಡೊಯಿವುತಿರ್ದರೇ ವಣ್ಣಿಸುವೆನು ೫೩

ಪವಣೆಸದ ವಿಭವದಿಂ ಶಿವಲೋಕಕೆಯ್ದುತಿ
ಪ್ಪವನಾವ ನಿಷ್ಠನೋ ಯೆಂದಖಿಳಲೋಕದವ
ರವರವರು ನಲಿನಲಿದು ಕೊಂಡಾಡೆ ಶಿವಪುರದಮಲನಂದೀಶ್ವರನ ಬಾಗಿಲ
ಸುವಿಶಾಲ ಸುಸ್ಥಲದೊಳಿಳಿದು ಪುಷ್ಪಕದಿಂದ
ಭವಹರನ ಸಭೆಯನೊಳಪೊಕ್ಕನಾ ಸುಕುಮಾರ
ನವನ ಭಾಗ್ಯವನಾರು ಪೊಗಳುವರು ಸರ್ವೇಶನೋಲಗಂ ರಾಜಿಸಿದುದು ೫೪

ನವರತ್ನಖಚಿತಸಿಂಹಾಸನದೊಳಳವಟ್ಟು
ಶಿವನರ್ಧದೇಹದಗಜಾತೆಯಿಂದೆಡದಲ್ಲಿ
ನವಕೋಟಿನಾರಾಯಣರ್ಕಳಿಂ ಬಲದೊಳಗನಂತ ಕಮಲೋದ್ಭೂತರಿಂ
ವಿವಿಧದಿಕ್ಪಾಲರಿಂ ಸಾಲೋಕ್ಯಸಾಮೀಪ್ಯ
ಸವಿಶೇಷಸಾರೂಪ್ಯಸಾಯುಜ್ಯಮುಖ್ಯರಿಂ
ಭವಹರಂ ರಾರಾಜಿಸುತ್ತಿರ್ದನಧಿಕ ಪ್ರಕಾಶನೆನಿಸುವ ಮದೀಶ ೫೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುರನಿಕರದಿಂದ ಕಿನ್ನರಸಮೂಹಂಗಳಿಂ
ಗರುಡರ ನಿಕಾಯದಿಂ ಗಂಧರ್ವತತಿಯಿಂದ
ವರ ಸಿದ್ಧರೇಳ್ಗೆಯಿಂ ಸಾಧಕರ ತರದಿಂದ ಸನ್ಮುನೀಶ್ವರಪಂಙ್ತ್ತಿಯಿಂ
ಕರಿವದನ ಷಣ್ಮುಖರ ಸೊಗಸಿನಿಂ ದಿವಿಜೆಯರ
ಸಿರಿಯಿಂದ ಭೃಂಗೀಶನರ್ತನದೆ ತುಂಬುರಾ
ದ್ಯರ ವೀಣೆಯಿಂದೆಸೆವ ಶಿವನ ಸಭೆಯಂ ಕಂಡನಾಹಾಹ ಸುಕುಮಾರನು ೪೬

ಯೋಗಿಗಳ ಹೃದಯದೊಳು ಝಗಝಗಿಪ ದೇವಿಯರು
ಸಾಗಿಸುತ ಮರ್ದಿಸುವ ಸಕಲ ಪೌರಾಣದಿ
ವ್ಯಾಗಮೋಪನಿಷತ್ತುಗಳ ಮಸ್ತಕದ ನವ್ಯರತ್ನವೆನಿಸುವ ಭಕ್ತರು
ಯೋಗಮಂ ಕಣ್ಣಮೊದಲೊಳಗಿಟ್ಟುಕೊಂಡಿಹ ಮ
ಹಾಗುರುವೆನಿಪ್ಪ ಸರ್ವೇಶನ ಪದಾಂಬುಜದ
ಮೇಗೆ ಬಿರ್ದಂ ಭಾಪು ಸುಕುಮಾರನಂತವನ ಭಾಗ್ಯಮಂ ಪೊಗಳಲಳವೆ ೪೭

ಗಿರಿಜೆಯಾಲಿಂಗನದ ತೋಳ್ಗಳಿಂದಾತನಂ
ಬರಸೆಳೆದು ತಕ್ಕೈಸಿ ಷಣ್ಮುಖನ ನೋಡುವುರು
ತರಕೃಪಾಕ್ಷಿಯೊಳು ನಡೆನೋಡಿ ದಣ್ಣನೆ ದಣಿದು ಷಟ್‌ಸ್ಥಲಬ್ರಹ್ಮರಿರವ
ಶರಣರೊಳ್ನುಡಿವ ಬಾಯೊಳ್ಪೊಗಳಿ ಸುಕುಮಾರ
ಗರಿದಪ್ಪ ಪದವಿಯಂ ಕೊಟ್ಟನ್ನುಮೊಗಮುನೀ
ಶ್ವರರಿರಾ ಕೇಳೆಂದು ಸೂತಮುನಿಯಾನಂದದಿಂ ಕೂರ್ತು ಬಿತ್ತರಿಸಿದಂ ೪೮

ಸುಕುಮಾರನೀಶನಂ ನೋಡಿದ ಬಳಿಕ್ಕ ಪಾ
ತಕಮುಮಂ ಮಾಡಲಿಲ್ಲಿಲ್ಲದುಕಾರಣಂ ಗಣಾ
ಧಿಕನಾದನೀಶ್ವರನ ಭಕ್ತನಾಗಿರ್ದವಂ ಪೂರ್ವ ದುಶ್ಚರಿತಂಗಳ
ನಿಕರಂಗಳಂ ಬಿಟ್ಟು ಸದ್ಭಾವದಿಂ ನಡೆಮು
ಲಕಲಂಕ ಶಿವನಪ್ಪನೆಂದು ಹಲಗೆಯ ಸುದೇ
ಶಿಕನೊಲ್ದು ಕೆಂಚವೀರಾಹ್ವಯಂಗೆಯ್ದೆ ಬಿತ್ತರಿಸಿದಂ ಕರುಣದಿಂದ ೪೯

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಪಟ್‌ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೫೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವಷಟ್‌ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಣಾ ಸುಕುಮಾರ ಗಣಪದಂ ಕಾಂಡವೊಂದರ ಮೇಲೆ ಸಂಧಿಯೇಳು ೬೧

ಅಂತು ಸಂಧಿ ಏಳಕ್ಕಂ ಪದ ೩೬೨ ಗ್ರಂಥ ೮೪೪ಕ್ಕಂ ಮಂಗಳ ಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೭

ಕೈಲಾಸಕೇಳ್ತಂದು ಯಮನೀಶ್ವರಂಗಾ ಗ
ಣಾಳಿಗಳ ದೂಱಿ ತಚ್ಛಿವಭಕ್ತಮಹಿಮೆಯಂ
ಪೇಳಿದಂ ಶಂಭುವಷ್ಟಮಕಾಲದಹನಕಥೆ ಪೂರ್ಣವೀ ಸಂಧಿಯಲ್ಲಿ

ಮಾಡಿ ಪೊಂಬೆಟ್ಟ ಬಿಲ್ಲಂ ವಿಷ್ಣುವೆಂಬಂಬ
ಹೂಡಲಾ ಫಣಿಯ ನಾರಿಯ ಮಾಡಿ ಮುಪ್ಪುರಿಯ
ನೋಡಿಯಾಕರ್ಣಾಂತವಾಗಿ ತೆಗೆಯಲ್ಕೆ ಮೇಲಣಕೊಪ್ಪು ದೇವಲೋಕಂ
ನಾಡೆ ಪಾತಾಳವಡಿಗೊಪ್ಪೊಂದಕೊಂದಿತಿರು
ಮೂಡಿಯಮರಾದಿಗಳ ಸುಕ್ಷೇಮತತಿಯ ಮಾ
ತಾಡಿಸುತ ಮುಪ್ಪುರಂಗಳ ಗೆಲ್ದೆ ಶರಣರೊಡನಾಡಿ ಜಯಶಾಂತಮಲ್ಲ ೧

ನಿನ್ನಂಘ್ರಿಯಂ ಭಜಿಪರಾರವರ ಕಡೆಗೆಯಾ
ಸನ್ನದ್ಧಯಮಭಟರು ಕಸವೊರಳಿ ಬರ್ಪುದೇ
ಮುನ್ನೀರುಗಿದಿರೆನಿಪ್ಪಂದದಿಂ ತೊಲಗುವರು ನಿನ್ನ ಶಿಷ್ಯರ ಮಹಿಮೆಯ
ಪನ್ನಗಾಧರನುಸುರಲಱಿಯನೆಂಬಗ್ಗಳದ
ಚಿನ್ನಿಧಿಯೆ ಮೇಲಣ ಗವಿಯ ಶಾಂತನಂಜೇಶ
ಮನ್ಮಾಥ ಗಣಯೂಥಜಯ ವೃಷವರೂಥ ಮಾಂ ಪಾಹಿಯಘದಾಹ ಶರಣು ೨

ಯಮ ಶಂಕರ ಸಂವಾದ

ಶಿವಭಕ್ತಮಹತ್ವ

ಕೇಳಯ್ಯ ಕೆಂಚವೀರಾಹ್ವಯಾ ನಿನಗಾವು
ಪೇಳುತಿಹ ಕಾಲದಹನದ ಕಥೆಯ ಸಂಬಂಧ
ದೋಳಿಯೊಳು ಸುಕುಮಾರ ಗಣಪದಪ್ರಾಪ್ತಿಯಂ ಬಿತ್ತರಿಸಿದೆವು ಬಳಿಕ್ಕಾ
ಮೇಳವಿಸಿಕೊಂಡು ಬಂದಂತಕಂ ಬಿನ್ನವಿಸೆ
ಭಾಳಾಕ್ಷನೀಶಭಕ್ತರ ಮಹತ್ವದ ಚರಿತೆ
ಯೇಳಿಗೆಯನೊರೆದ ಯಮಶಂಕರರ ಸಂವಾದವಂ ಮುಂದೆ ಪೇಳ್ವೆನೆಂದ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಲಗೆಯಾಚಾರ್ಯಂಗೆ ಕೈಗಳಂ ಮುಗಿದು ಗುರು
ತಿಲಕ ಚಿತ್ತೈಸು ಸುಕುಮಾರನಂ ಪಿಡಿದೊಯ್ವ
ಕಿಲಸದಿಂ ಬಂದ ಯಮಭಟರ ಶಿವದೂತರೆಬ್ಬಟ್ಟಿಯಾ ಸುಕುಮಾರನ
ಮಲಹರಂಗೊಪ್ಪಿಸಲು ಗಣಪದವನಿತ್ತುದಂ
ಸುಲಭದಿಂ ಬಿತ್ತರಿಸಿದಿರಿ ಮುಳಿದುಹೋದವರು
ಕಲಹದೊಳು ಭಂಗವಡೆದವರು ಬಳಿಕೇಗೆಯ್ದರೆನೆ ಕೆಂಚವೀರಾಹ್ವಯಂ ೪

ಆ ನುಡಿಗೆ ಸಂತಸಂಬಟ್ಟು ಹಲಗೆಯಮೂರ್ತಿ
ನೀನೀಗ ಕೇಳ್ವುದೆ ಲೇಸು ಸುವಿಚಾರಿಯಹ
ಸೂನುವೇ ನಿನ್ನಂತೆ ನೈಮಿಷಾರಣ್ಯದೊಳಗಿರ್ಪ ಮುನಿಗಳು ಕೇಳ್ದಡೆ
ಜ್ಞಾನಿ ಸೂತಂ ನುಡಿದನಂತೆನಲು ಕೆಟ್ಟೋಡಿ
ದಾ ನಿಖಿಲ ದೂತರಾ ಯಮನೊಳಗೆ ಮೊಱೆಯಿಟ್ಟ
ರಾನಲಳವೇ ಜೀಯ ಶಿವದೂತರುಗ್ರದಿಂ ಭಂಗವಾಯ್ತೆಮಗೆಂದರು ೫

ದೇವ ನಿಮ್ಮನಿಬರೊಳನಂತರಳಿದರು ಬಳಿಕ
ನಾವು ಭಂಗಂಬಟ್ಟು ಕೆಟ್ಟೋಡಿ ಬಂದೆವಿ
ನ್ನಾ ವೀರಗಣನಿಕರವತ್ತ ಸುಕುಮಾರನಂ ಪುಷ್ಪಕದೊಳಿಂಬಿಡುತ್ತ
ಶ್ರೀವಿಭವದಿಂದ ಶಿವಲೋಕಕ್ಕೆ ಕೊಂಡೊಯಿದ
ರೀ ವಿಧಿಗೆ ಬಂದೆವಾವೆನೆ ಕೇಳುತಾ ಶ್ರಾದ್ಧ
ದೇವನಂಗುಲಿಯ ಕೊನೆಯಂ ಮೂಗಿನಗ್ರದೊಳಗಿಟ್ಟು ಮಕುಟವನೊಲೆದನು ೬

ಆಶ್ಚರ್ಯದು ವಿಸ್ಮಯಂಬಟ್ಟು ಯಮನಲ್ಲಿ ಸುಕು
ಮಾರಕನ ಪಾಪವೇನೆನೆ ಚಿತ್ರಗುಪ್ತರವ
ಧಾರೆಂದು ಕೈಮುಗಿದು ಬಿನ್ನವಿಸಿದರ್ಜೀಯ ಮಹಿಯೊಳೀ ದುಷ್ಟಾತ್ಮನು
ಓರಂತೆ ನೆಗಳಿರ್ದ ದುಃಕರ್ಮದೊಟ್ಟಿಲಾ
ಮೇರುಮಂದಿರಕೆ ಮಿಗಿಲೆನೆ ಕೇಳಿ ಮೇಲಣ ವಿ
ಚಾರಮಂ ಕೇಳದುದ್ರೇಕದಿಂ ಪೀಠದಿಂದೆದ್ದನಾ ಪಿತೃವಲ್ಲಭಂ ೭

ಎನ್ನ ಬಲವೆಯ್ದೆ ಕಡಿಖಂಡವಾದುದು ಮಡಿದು
ದನ್ನಯುದ ಸುಕುಮಾರನಣುಮಾತ್ರ ಪುಣ್ಯಮಂ
ತನ್ನೊಳಱಿದಾಚರಿಸಿತಿಲ್ಲವಾ ಪಾಪಿಯಂ ಪುಷ್ಪಕದೊಳೊಯ್ಯಬಹುದೇ
ಇನ್ನೆನಗೆ ಮಣಿಹವೇಕೀಕಾರ್ಯವೆಲ್ಲವಂ
ಪನ್ನಗಾಭರಣಂಗೆ ದೂಱುವೆನೆನುತ್ತ ಕರ
ಣೋನ್ನತಂ ಚಿತ್ರಗುಪ್ತಂಗೂಡಿ ಶಿವಲೋಕದತ್ತಲಭಿಮುಖವಾದನು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೂಱಿ ಕೊಂಡೊಯಿವ ಕಾಲಂ ಮಹಿಗೆ ಇಪ್ಪತ್ತು
ಮೂಱು ಲಕ್ಷೋನ್ನತ ಸ್ವರ್ಗಲೋಕವನಲ್ಲಿ
ಮೀಱಿ ಮುನಿಮಂಡಲ ಮಹರ್ಲೋಕ ಸತ್ಯಲೋಕಾಶ್ಚರ್ಯಮಂ ನೋಡುತ
ಮೀಱಿಯಲ್ಲಿಂ ವಿಷ್ಣುಲೋಕವಮಂ ಕಂಡು ನಲ
ವೇಱಿ ಯುದ್ಧಕ್ಕೆಯ್ದಿ ಸಕಲ ಲೋಕಂಗಳಿಗೆ
ಮೀಱಿದಗ್ಗದ ಮಹಾ ಶಿವಲೋಕಕೆಯ್ತಂದನೆಲೆ ಮುನೀಶ್ವರಿರ ಕೇಳಿ ೯

ಪರಿಕಿಸಲು ಶಿವಲೋಕವಿಸ್ತರಂ ಮೂವತ್ತು
ಯೆರಡುಕೋಟಿಗಳಪ್ಪಯೋಜನಂ ಪರಮಸೌಂ
ದರಿಯಮಂ ಬಿತ್ತರಿಸಲಳವೇ ಸೌವರ್ಣಮಯ ರತ್ನಕಿರಣಂಗಳೆಸೆವ
ವರ ವಜ್ರವೈಢೂರ್ಯಮಯ ವಿಮಾನಂಗಳಿಂ
ಸುರವೃಕ್ಷದಡಿಯ ದಿವ್ಯಾಸನದ ಕಾರಣಿಕ
ಪುರುಷರಿಂ ರಾರಾಜಿಸುತ್ತಿರ್ದುದಲ್ಲಿಗೆಯಿತಂದನಾ ಯಮಧರ್ಮನು ೧೦

ಹಲವು ತೆಱದಾಶ್ಚರ್ಯ ಸದ್ಗುಣಗಳಿಂದಿಪ್ಪ
ಸುಲಭ ಪುರುಷರ್ಗಳಿಂದೆಸೆವ ಶಿವಪುರದ ನಿ
ರ್ಮಲತೆಯಂ ಕಂಡು ಹರುಷಿಸಿ ಕಾಲನೊಳಪೊಕ್ಕು ನೋಡುತೆಯ್ತರಲು ನಡುವೆ
ಮಲಹರನ ಪೇರೋಲಗದ ಮಂಟಪಂ ಸಮು
ಜ್ವಲತೆಯಿಂದೆಸೆದಿರ್ದುದಂತದಂ ಬಿತ್ತರಿಪೆ
ನೊಲಿದು ಕೇಳೈ ಮಗನೆಯೆಂದಮೃತವಾಕ್ಯದಿಂದಂ ನುಡಿದನಾಚಾರ್ಯನು ೧೧

ಆರಯ್ಯೆ ಸೊಗಸಿಂದ ಕೋಟಿಯೋಜನದ ವಿ
ಸ್ತಾರತೋರಣಸಮನ್ವಿತಮಪ್ಪ ಘನಚತು
ರ್ದ್ವಾರಶೋಭನದಿಂದ ನವರತ್ನಕಿರಣದಾದಿವ್ಯಪ್ರಕಾಶಂಗಳಿಂ
ಚಾರು ಮಣಿಗಣವಪ್ಪ ಮಣಿಕಟ್ಟಿನೇಳ್ಗೆಯಿಂ
ಸಾರತರಮಪ್ಪ ಧವಳಚ್ಛತ್ರದಿಂ ಸ್ತಂಭ
ದೋರಣದ ಕನಕ ಮೌಕ್ತಿಕಮುಖ್ಯದಿಂ ಸಭಾಮಂಟಪಂ ರಾಜಿಸಿದುದು ೧೨

ನಂದೀಶಭೃಂಗೀಶನಖಿಳ ಭೂತೇಶ್ವರಂ
ನಂದಿನಾಥಾದ್ಯನೇಕಾಶ್ಚರ್ಯದಿಂದಮಾ
ನಂದಿತಪ್ರಮಥರಿಂದಿಹ ಸಭಾಮಂಟಪವನೀಕ್ಷಿಸುತ್ತಾ ಕಾಲನು
ಬಂದು ಕಂಡಂ ಪೂರ್ವದಾ ದ್ವಾರದಲ್ಲಿ ನಲ
ವಿಂದ ಕಾಯ್ದಿಪ್ಪ ನಂದೀಶನಂ ಸುಜ್ಞಾನ
ಮಂದಿರನನೆರಡನೆಯ ಶಂಭು ಶುದ್ಧಸ್ಫಟಿಕಸಂಕಾಶಮಯದೇಹನಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂತಿಸರ್ವಾಂಗ ತ್ರಿಪುಂಡ್ರಲೇಖಾಂಕ ವಿ
ಖ್ಯಾತನಂ ರುದ್ರಾಕ್ಷಮಂಡನನನಧಿಕ ಸುಯ
ಶಾತರುಣಿಯಾಣ್ಮನಂ ಶೂಲವೇತ್ರಾಂಕಹಸ್ತನ ನಂದಿಯಂ ಕಾಣುತ
ಪ್ರೀತಿಯಿಂ ಸಾಷ್ಟಾಂಗವೆಱಗಿ ವಂದಿಸುತಲಾ
ಪ್ರೇತಲೋಕಾಧೀಶನೆದ್ದು ನಿಜ ಹಸ್ತಾಂಬು
ಜಾತಮಂ ಮುಗಿದು ಬಿನ್ನವಿಸುತಿರ್ದಂ ತನ್ನ ಕಾರ್ಯಮಂ ನಲವಿನಿಂದ ೧೪

ದೇವ ಬಿನ್ನಪ ನಾನು ಬಂದ ಕಾರ್ಯಂ ಮಹಾ
ದೇವನಂ ನೋಡುವಕ್ಕಱಿಂದೊಳು ನಡೆತಂದೆನಾ
ದೇವದೇವೇಶನಂಘ್ರಿಗಳ ಕಾಣಿಸು ನಿನ್ನ ಲೆಂಕ ನಾನೆಂದು ನುಡಿಯೆ
ಆ ವಚನಮಂ ಕೇಳುತೊಳಪೊಕ್ಕು ನಂದೀಶ
ನಾ ವಲ್ಲಭಂಗೆ ಕೈಮುಗಿದು ಯಮ ಚಿತ್ರಗು
ಪ್ತಾವಳಿಯೊಳೆಯ್ದಿ ಬಾಗಿಲೊಳಿಹನೆ ಜೀಯ ಬರಲೋಹೋಗಲೋಎಂದನುಗಿಹಿ

ಶಿವನಿಂಗಿತವನಱಿದು ಮರಳಿಬಂದಲ್ಲಿರ್ದ
ಜವನನೊಳಪೊಗಿಸಲಾ ಚಿತ್ರಗುಪ್ತರ್ಸಹಿತ
ಲವನೆಯ್ದಿ ಬರ್ಪಲ್ಲಿ ಕಂಡನೀಶ್ವರನ ಮುಂಗಡೆಯ ಮೂಡಣದೆಶೆಯೊಳು
ಪ್ರವಿಮಲಗಣಂಗಳಂ ನಿತ್ಯರಂ ದಿವ್ಯರೂ
ಪವನುಳ್ಳರಂ ಲಿಂಗಮೋಹಿಗಳ ನಿಷ್ಟರ್ಗ
ಳವರೊಳಗನೇಕ ಪ್ರಕಾರದಿಂದಿರ್ಪರಂ ಬೇಱಿ ಬೇಱಾನಂದದಿಂ ೧೬

ಕೆಲಬರಾ ಪಾಶುಪತರಾ ಕೆಲರು ಶೈವರಾ
ಕೆಲಬರಾ ಕಾಳಾಮುಖದ ಮಹೇಶ್ವರರು ಕೆಲ
ಕೆಲಬರಮಲಾಂಬರಾಭರಣಾನುಲೇಪಾನುಪುಷ್ಪಭೂಷಣರು ದಿವ್ಯ
ಸುಲಭಚಾತುರ್ಭುಜರು ಲೋಚನತ್ರಯರು ನಿ
ರ್ಮಲದ ಶುದ್ಧಸ್ಫಟಿಕಸಂಕಾಶರುರುಜಟಾ
ವಲಿ ಚಂದ್ರಧಾರರೀಶ್ವರಸಮಪರಾಕ್ರಮರು ಮೆಱಿದರುತ್ಸಾಹದಿಂದ ೧೭

ಭಾವಿಸಲ್ ಬ್ರಹ್ಮಾಂಡಮಾಲಾಧರರು ಮಹಾ
ದೇವಮೋಹಿಗಳು ಮೆಱಿದಿರಲವರನಾ ಜವಂ
ಭಾವಶುದ್ಧದೆ ಕಂಡು ನಮಿಸಿ ವಿಸ್ಮಯಮನೆಯ್ದುತ್ತ ಪೀಠದ ತೆಂಕಣ
ಠಾವನೀಕ್ಷಿಸಲಲಿ ಸಚರಾಚರಂಗಳ ಮ
ನೋವಿಚಾರದ ಮಾತ್ರದಿಂ ಸೃಜಿಪ ನಾಲ್ಕು ವೇ
ದಾವಳಿಯ ನಾಲ್ಮೊಗಂ ಕಮಲಾಸನಂ ಕೂರ್ತು ರಾರಾಜಿಸುತ್ತಿರ್ದನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವನಖಿಳ ಲೋಕವಮಂ ಹದಿನೆಂಟು ತೆಱದೊಳು
ಧ್ಭುವವನೆಯ್ದಿಪನಾ ಸರಸ್ವತಿಯೊಳೆಸೆವನಂ
ಜವನೀಕ್ಷಿಸಿದನು ಮತ್ತಾಂಗೀರಸಂ ವಾಮದೇವಂ ವಶಿಷ್ಠಮುಖ್ಯ
ಪ್ರವಿಮಲಮುನೀಶರಿಂ ಕಪಿಲಾದಿ ಸಿದ್ಧರಿಂ
ತವೆ ಸನಕಮುಖ್ಯರೆಂದೆನಿಪ ಯೋಗೀಶರಿಂ
ಶಿವರು ಮೊದಲಾದವರ ನೀಕ್ಷಿಸಿದನೀಶದಕ್ಷಿಣದಲ್ಲಿ ಪಿತೃವಲ್ಲಭಂ ೧೯

ಬಳಿಕ ಶಿವಸಿಂಹಾಸನದ ಪಶ್ಚಿಮದ ದಿಕ್ಕಿ
ನೊಳಗಿಹ ಮಹಾಮಾಯರೀಶ್ವರ ಸಮಾನದ
ಗ್ಗಳರು ಭೂತೇಶರಾ ಪ್ರಮಥಾಗ್ರಗಣ್ಯರು ಬಲಪ್ರಮಥಮುಖ್ಯರ್ಕಳು
ವಿಳಸಿತ ಬ್ರಾಹ್ಮಿ ಮೊದಲಾದ ಮಾತೃಕೆಯರಾ
ಬಳವಂತ ಷಣ್ಮುಖ ಮಹಾಮಾತೃಕೆಯರು ಮಂ
ಗಳ ವಹ ಸುಮಾಲಿ ಮಾಲತಿ ಮುಖ್ಯ ಪಾರ್ವತೀಮಾತೃಕೆಯರೆಸೆದಿರ್ದರು ೨೦

ಆ ಕರಾಳಿಯು ಮಹಾ ವಿಕರಾಳಿಯುಂತವರ
ಜೋಕೆಯ ಬಲಪ್ರಮಥಿನೀ ಕಾಳರಾತ್ರಿಯು
ದ್ರೇಕಪ್ರಚಂಡಾದಿ ಮಾತೃಕೆಯರೆಸೆದಿರ್ಪ ಚಂಡನಾ ಚಂಡಕೋಪಂ
ಶ್ರೀಕಾಳಭೈರವಂ ಚಂಡಾವತಂ ಮಹಾ
ನೀಕಪ್ರಚಂಡಾರ್ಚಿ ಪಾಶುಪತ ಬಾಣಾದ್ಯ
ನೇಕ ಸಂಹಾರ ಕರ್ಮಾಧಿಕರು ಮೆಱೆದಿರಾ ಶಿವನ ಪಶ್ಚಿಮದೆಸೆಯೊಳು ೨೧

ಅವರನೀಕ್ಷಿಸಿ ಯಮಮಂ ಮುಂದೆ ರಾಜಿಸುತಿರ್ಪ
ಶಿವನ ವಾಮದ ಬಡಗಲೊಪ್ಪುತಿರ್ಪಖಿಳ ಭಾ
ಗ್ಯವನುಳ್ಳರಂ ಕಂಡನಲ್ಲಿಯೆ ಗದಾ ಶಂಖ ಚಕ್ರಧರ ಪೀತವಾಸಂ
ತವೆ ಚತುರ್ಭುಜನುದಾರಾಂಗ ಕೌಸ್ತುಭದುರಂ
ನವರತ್ನ ಮಕುಟ ಕಟಕಾಂಚಿತಂ ಸರ್ವಲೋ
ಕವನೇಕವಿಂಶತಿವಿಭೇದದಿಂ ರಕ್ಷಿಸುವ ವಿಷ್ಣು ಲಕ್ಷ್ಮಿಯೊಳೆಸೆದನು ೨೨

ತವೆ ವಸುಗಳೆಂಟು ರುದ್ರರು ನಾಡೆ ಪನ್ನೊಂದು
ರವಿಗಳೇ ಹನ್ನೆರಡು ಸಿದ್ಧ ವಿದ್ಯಾಧರರು
ವಿವಿಧ ಗಂಧರ್ವರಪ್ಸರರು ಯಕ್ಷರು ಭುಜಂಗರು ಗುಹ್ಯಕರು ಸರ್ವರು
ಶಿವನ ಬಡಗಣದಿಕ್ಕಿನಲ್ಲಿರಲ್ಕಾಣುತಾ
ಜವನಳ್ತಿವಟ್ಟು ಪಾರ್ಶ್ವವನೆಯ್ದಲಲ್ಲಿಯೊ
ಪ್ಪುವ ಭಾಗ್ಯವಂತರಂ ಹರನ ಸಾರೂಪ್ಯರಂ ಕಂಡನಾನಂದದಿಂದ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದೋಕ್ತಮಾರ್ಗದ ವಿಧಾನದಿಂ ಪಾಶುಪತ
ದಾದಿ ಮಾರ್ಗೋದ್ಧರಣ ವಿಚ್ಛಿನ್ನ ಪಾಶರಸ
ದಾ ದಂಡರಹಿತರಾ ಮಾಯಾವಿದೂರರೆನಿಪಾ ಪರಾನಂದಯುತರು
ಮೋದ ಪರಮಾದ್ವೈತ ತತ್ವವಿತ್ತುಗಳು ಮಿಗೆ
ಸಾದರಾತ್ಮಾರಾಮ ತಚ್ಛಿವಾತ್ಮಕರನಾ
ಹ್ಲಾದದಿಂದಂ ನೋಡಿ ಕಂಡನಂತಾ ಮಹಾದೇವನಂ ಸದ್ಭಾವನಂ ೨೪

ಮಣಿಖಚಿತ ದಿವ್ಯಸಿಂಹಾಸನದ ಮಧ್ಯದ
ಗ್ರಣಿಯಾಗಿ ಕುಳ್ಳಿರ್ದ ಸರ್ವದೇವರದೇವ
ನಣಿಯರದೆ ಸಂಸಾರ ಸಾಗರದೊಳಿರ್ದಖಿಳರಂ ತೆಗೆದು ಪೊರೆವ ಕರುಣ
ಗುಣಿ ಸಕಲ ಲೋಕದುತ್ಪತ್ತಿ ರಕ್ಷಾ ನಿಧಾ
ರಿಣಿಯುಹ ಮಹಾದೇವಿ ಪಾರ್ವತಿಸಮೇತವಾ
ತ್ರಿಣಯನೊಪ್ಪುತ್ತಿರ್ದನಾ ಪರಂಜ್ಯೋತಿಯಂ ಕಂಡನಾ ಯಮಧರ್ಮನು ೨೫

ವರ ಕೋಟಿ ಸೂರ್ಯಪ್ರಕಾಶ ಸರ್ವಾಭರಣ
ಗರಳಕಂಧರ ಮಹಾತ್ರ್ಯಕ್ಷನಂ ಚಂದ್ರಶೇ
ಖರನ ಕಂಡಾ ಯಮಂ ದಂಡ ಮುದ್ರೆಗಳನೊಪ್ಪಿಸಿ ಪದಾಬ್ಜದೊಳು ಬಿದ್ದು
ಹೊಗಳಿ ಸಾಂಬನ ಮುಂದೆ ನಿಂದು ಸದ್ಭಕ್ತಿಯಿಂ
ಕನಕಮಲಮಂ ಮುಗಿದು ತನ್ಮೂರ್ತಿಯಂ ಹೃದಂ
ಬುರುಹದೊಳು ನೆಲೆಗೊಳಿಸಿಕೊಂಡು ಮಧುರಾಲಾಪದಿಂದ
ಕೀರ್ತಿಸತೊಡಗಿದಂ ೨೬

ಸಾಕ್ಷಾತ ಲೋಕಂಗಳೊಡೆಯಂಗೆ ಯುತ್ಪತ್ತಿ
ರಕ್ಷಾಸ್ಥಿತಿಪ್ರಳಯಕಾರಣಂಗೆಱಗುವೇಂ
ತ್ರ್ಯಕ್ಷ ಸರ್ವಂಗಂಗೆ ಭಕ್ತಿಗವ್ಯಂಗಂ ವರೇಣ್ಯಂಗೆ ಮಿಗೆ ಶಂಭುಗಂ
ಈ ಕ್ಷಿತಿಯೊಳಾವ ನೊಂದಾನೊಂದು ವೇಳೆ ಪಾ
ಪಕ್ಷಯಾರ್ಥಂ ನಿನ್ನ ಪದವನರ್ಚಿಸಿದವಗೆ
ಮೋಕ್ಷಮಂ ಕೊಡುವಾ ಸದಾಶಿವಂಗೆಱಗುವೆನೆನುತ್ತ ಕೀರ್ತಿಸ್ಃತಿರ್ದನು ೨೭

ನಿನ್ನ ಪಾದಾಂಬುಜಕ್ಕೆಱಗಿದವನಿಳೆಯಲ್ಲಿ
ಅನ್ಯಯವ ಮಾಡಿದಜ್ಞಾನಿ ಪಾತಕನಾದ
ಡಂನರಕಮಂ ಪೊರ್ದದೆಯ್ದುವಂ ಶಿವಪುರವನೊಲಿದು ನಿನ್ನಯನಾಮದ
ಉನ್ನತಿಯನೊಮ್ಮೆ ನುಡಿದರೆ ಪಾಪಿಯಾದಡಂ
ಚೆನ್ನೆಸೆವ ನಿಃಪಾಪಿಯಹನಲಾ ಸಾಕ್ಷಾತ
ಚಿನ್ನಿಧಿ ಮಹೇಶ್ವರನೆ ನಿನಗೆ ವಂದಿಸುವೆನೆಂದೆಯಿದೆ ಕೀರ್ತಿಸುತಿರ್ದನು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಮ್ಮೆ ನಿನ್ನಯ ಮೂರ್ತಿಯುಂ ನೆನೆಯೆ ಪಾಪಮಂ
ನೆಮ್ಮದುತ್ತಮ ಪುರುಷರಮಲ ಶಿವರೂಪಾಗಿ
ಯುಂ ಮಹದೊಳಿಪ್ಪಂತೆ ಮಾಳ್ಪ ಶಂಕರ ನಿನಗೆ ನಮಿಸುವೆಂ ವೇದಾಗಮ
ಸಮ್ಮತ ಪುರಾಣಂಗಳಧಿಕ ಫಲರೂಪಾದ
ಯೆಮ್ಮೊಡೆಯ ಸಕಲ ಪಾವನ ಮಹೇಶ್ವರರೂಪ
ನಿಮ್ಮಡಿಗೆ ವಂದಿಸುವೆನೆಂದು ನಾನಾಪ್ರಕಾರದೊಳು ಕೀರ್ತಿಸುತಿರ್ದನು ೨೯

ಮಣಿಲಿಂಗಮಂ ಬ್ರಹ್ಮನರ್ಚಿಸಲ್ಕಾಗಿ ರೋ
ಹಿಣಿಯೆಂಬ ನಕ್ಷತ್ರದಲ್ಲಿ ವಿದ್ಯಾಗ್ರರೂ
ಪಿಣಿಯಿಂದ ಭಜಿಸಿ ನಿಜಪದವನಲ್ತಿಯೊಳು ಪಡೆದಂ ಕೃಷ್ಣನಿಂದ್ರನೀಲ
ಪ್ರಣುತಲಿಂಗವನು ಕೂರ್ತಾ ಶ್ರವಣತಾರೆಯ
ಗ್ರಣಿಯೊಳಾ ಧ್ರುವದಿನರ್ಚಿಸುತ ವಿಷ್ಣುತ್ವಮಂ
ಅಣಿಯರದೆ ಪಡೆದಂ ಮಹೇಶ್ವರನೆ ನಿನಗೆ ವಂದಿಪೆನೆಂದು ಕೀರ್ತಿಸಿದನು ೩೦

ಅನಲನಾ ಕೃತ್ತಿಕೆಯೆಸಿಪ್ಪ ನಕ್ಷತ್ರದೊಳು
ಮನವೊಲ್ದು ಭದ್ರೆಯಿಂ ಪದ್ಮರಾಗದ ಲಿಂಗ
ವನು ಭಜಿಸಿಯಗ್ನಿತ್ವಮಂ ಪಡೆದನೈ ಸದಾಶಿವ ಬಳಿಕ ನೀಲಲಿಂಗ
ಅನಘಪೂಜೆಯ ಜ್ಯೇಷ್ಠೆಯಲ್ಲಿ ಮಿಗೆ ವಜ್ರವೆಂ
ದೆನಿಪ ವಿದ್ಯೆಯಿನರ್ಚಿಸುತ ಶಕ್ರ ನಿಂದ್ರತ್ವ
ವನು ಪಡೆದನಿತ್ಯನೆ ಸದಾಶಿವನೆ ನಿನಗೆ ವಂದಿಪೆನೆಂದು ಕೀರ್ತಿಸಿದನು ೩೧

ವಸುವಿದ್ಯೆಯಿಂ ಮಘೆಯೊಳಾನು ಮಣಿಲಿಂಗಮಂ
ಒಸೆದು ಪೂಜಿಸಿ ಯಮತ್ವಂ ಬಡೆವುತಂ ಪ್ರಾಣಿ
ವಿಸರಕ್ಕೆ ಶಿಕ್ಷೆಯಂ ಮಾಡುವಧ್ಯಕ್ಷನಾದೆಂ ಸದಾಶಿವ ಮಹೇಶ
ಎಸೆವ ಕಾರ್ಬೊನ್ನ ಲಿಂಗವನೊಲ್ದು ದೈತ್ಯರಾ
ಕ್ಷಸ ದಾನವರು ಭಜಿಸಿ ಲೋಕದೊಳಗಾರ್ಗೆ ಸೈ
ರಿಸಬಾರದಿಪ್ಪ ಸತ್ವಂಬಡೆದರಿತ್ತಾ ಸದಾಶಿವಾ ಶರಣೆಂದನು ೩೨

ಕಾಯ ಮಾನಸ ಬುದ್ಧಿಯಿಂ ನಿನ್ನ ಪಾದಮಂ
ಈಯವನಿಯಲ್ಲಿ ಭಜಿಸಿದವರ್ಗೆ ಧರ್ಮಾರ್ಥ
ಮೋಯಾರದಿಂ ಕಾಮ ಮೋಕ್ಷ ಪುರುಷಾರ್ಥ ಚಾತುಷ್ಟಯಂಗಳನಕ್ಕಱಿಂ
ಈಯುತ್ತ ರಕ್ಷಿಪನೆ ಮಹಿಮಾಸಮುದ್ರದೊಳ್
ನ್ಯಾಯದಿಂದೆಸೆವ ತೆರೆ ನೊರೆ ಬುದ್ಬುದದವೋಲ
ಜೀಯ ದೇವತೆಗಳಿಹರಂತಹ ಮಹೇಶ್ವರಾ ನಿನ್ನಡಿಗೆ ವಂದಿಸುವೆ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕನೆನಿಪನೆ ಸರ್ವಭೂತ ಹೃದ್ವಾಸನೇ
ಯಾಕಾಶದೋಪಾದಿಯಿಂ ಪ್ರಮಾಣಸಬಾರ
ದಾಕಾರದಾತ್ಮನೆ ಮಹೇಶನೇಯೊಬ್ಬನಾಗಿರ್ದು ಬಹುಜಲ ಘಟದೊಳು
ಪ್ರಾಕಟದೆ ಹೊಳೆವ ಪೂರ್ಣಮಿಯ ಚಂದ್ರನವೋಲ
ನೇಕರೂಪಾಗಿ ಭಿನ್ನಜ್ಞಾನಿಗಳಿಗೆ ತೋ
ರ್ಪಾಕೃತಿಯನುಳ್ಳ ಮಹಿಮೆಯ ಮಹೇಶ್ವರ ನಿನಗೆ ವಂದಿಸುವೆ
ನಾನೆಂದನು ೩೪

ಶ್ರೀ ವಿಶೇಷಜ್ಞಾನಿಗಳು ನಿನ್ನ ನಿಶ್ಚೈಸಿ
ಯಾವಗಂ ವಿಜ್ಞಾನರೂಪನೆಂದುಸುರುವರ
ಲಾ ವಿಭು ಮಹಾದೇವನೇ ಸದ್ವೈವಾಲಂಘ್ಯಶಾಸನಾ ತತ್ವಾರ್ಥದ
ಭಾವವಱಿವವರು ಪುರುಷಂ ಸೌಖ್ಯಮೆಂದು ಬಿಡ
ದೋವುತ ಮಹೇಶಾನ ಸರ್ವ ಲೋಕಂಗಳಿಗೆ
ಪಾವನತೆಯಿಂ ಮುಖ್ಯ ಕಾರಣನೆನುತ್ತ ಕೀರ್ತಿಪರಲಾ ನಿನಗೆಱಗುವೆಂ ೩೫

ಸರ್ವ ವೇದಾಂತವಾದಿಗಳು ನಲವಿಂ ನಿನ್ನ
ನೋರ್ವನೆಂದಾ ಬ್ರಹ್ಮಶಬ್ದದಿಂ ಕೀರ್ತಿಪರ
ಗುರ್ವಿನಿಂ ವೇದಾಂತವೇದ್ಯ ಪರಮೇಶಾನನೇ ಮಹೇಶ್ವರನೆ ಶರಣು
ಪೂರ್ವವಿಷ್ಣುವೆನುತ್ತ ನಿಖಿಳ ಸವ್ಯಾಪ್ತನೇ
ಸರ್ವಜ್ಞನುತ್ಪತ್ತಿ ರಕ್ಷಾಂತಕಾರಿಯೆಯು
ಖರ್ವನೆ ಸಮಸ್ತ ಲೋಕಂಗಳಿಗೆ ಮುಖ್ಯ ಕಾರಣನೆ ವಂದಿಪೆನೆಂದನು ೩೬

ಕಱಿಗೊರಲ ಚಿತ್ತೈಸು ಪುಷ್ಕಲಾಗಮತತ್ವ
ದಱಿಕೆಯುಳ್ಳವರು ಚತುರಾಸ್ಯನೆಂದಾವಗಂ
ನೆಱಿ ಜಗತ್ಸೃಷ್ಟಾರನೀಶಾನನೆಂದು ಕೀರ್ತಿಪ ಸದಾಶಿವನೆ ಶರಣು
ಮೆಱಿವಗ್ನಿಯೆಂದು ಸೂರ್ಯನುಮೆಂದು ವಾಯುವೆಂ
ದುಱದೆ ಕೆಲಕೆಲರು ಕೊಂಡಾಡುವರು ನಿನ್ನನೆ
ಮ್ಮೆಱಿಯನೆ ಮಹೇಶ್ವರಾ ನಿನ್ನಡಿಗೆ ವಂದಿಸುವೆನೆಂದು ಕೀರ್ತಿಸುತಿರ್ದನು ೩೭

ಶೈವರೇ ಶಿವನೆಂದು ನುಡಿವರುಳಿದವರುಗಳು
ದೇವ ನಿನ್ನಂ ಮಹೇಶ್ವರನೆಂದು ಕೀರ್ತಿಪರು
ಭಾವಶುದ್ಧದೊಳು ಪಶುಪತಿಯೆಂದು ಕೆಲರು ಕೊಂಡಾಡುವೀಶ್ವರನೆ ಶರಣು
ಆವಾವ ಘಟದೊಳಾಕಾಶವಿಪ್ಪಂತೆ ಭೂ
ತಾವಳಿಯೊಳೆಯ್ದಿ ತನ್ಮಯವಾಗಿ ತೋಱುವ ಮ
ಹಾ ವಿಭು ಸದಾಶಿವಾ ನಿನಗೆ ವಂದಿಪೆನೆಂದು ಕೀರ್ತಿಸಿದನಾ ಧರ್ಮನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಟ್ಟಿಸುವ ರಕ್ಷಿಸುವ ಸಂಹಾರವೆಯ್ದಿಸುವ
ಕಟ್ಟಧಿಕನಹ ಮಹೇಶ್ವರ ನಿಖಿಳ ಜೀವರ್ಗ
ಳೊಟ್ಟಿಲಗ್ಗದ ಪಾಪಮಂ ಕಳೆಯೆ ಶಿಕ್ಷಿಸಂದೆನಗನುಜ್ಞೆಯನೆ ಕೃಪೆಯಿಂ
ಕೊಟ್ಟು ಸಲಹುವ ದೇವ ನಿನ್ನಪಾದಕ್ಕೆ ತಲೆ
ಯಿಟ್ಟು ವಂದಿಸುವೆನೆಂದಾ ಯಮಂ ಮಿಗೆ ಮನಂ
ಮುಟ್ಟಿ ಕೀರ್ತಿಸುತ ನಿಜಕಾರ್ಯದಾದ್ಯಂತಮಂ ಹೇಳತೊಡಗಿದನಾಗಳು ೬೯

||ಸಾಕ್ಷಿ|| ಸ್ಕಾಂದೇ (ಈಶಾನಸಂಹಿತಾಯಾಂ, ಶಿವರಾತ್ರಿ ಮಹತ್ವೇ,
ಯಮ-ಶಂಕರಸಂವಾದೇ)

ಯಮೇನಕೃತಂ ಸ್ತೋತ್ರಂ-

ನಮಸ್ಸಕಲ ಲೋಕಾನಾಂ ಸ್ವರ್ಗಸ್ಥಿತ್ಯಂತಹೇತವೇ
ಸರ್ವಜ್ಞಾಯ ವರೇಣ್ಯಾಯ ಭಕ್ತಿಗಮ್ಯಾಯ ಶಂಭವೇ ೧

ಯತ್ಪಾದಂ ಸಕೃದಭ್ಯರ್ಚ್ಯ ಪಾಪಿನೋಪಿ ಗತೈನಸಃ
ಶಿವಲೋಕಂ ಪ್ರಪದ್ಯಂ ತೇ ತಂ ನಮಾಮಿ ಸದಾಶಿವಂ ೨

ಅಂದುಮೊದಲಾಗಿ ನಿನ್ನಾಜ್ಞೆಯಿಂ ಪಾತಕರ
ವೃಂದಮಂ ತಿಳಿದವರ ಪಾಪಾನುರೂಪಂಗ
ಳಿಂದ ನರಕಂಗಳೊಳು ದಂಡಿಸುತ್ತಿಹೆನು ನಿನ್ನಾಣತಿಯ ಮೀಱಿದಾನು
ಇಂದು ಸುಕುಮಾರನಿಂದಾನು ಭಂಗಿತನಾಗಿ
ನೊಂದೆನಿದಕೇಗೆಯ್ವೆನೆಂದು ನಿನಗಂ ದೂಱಿ
ಬಂದೆ ಚಿತ್ತೈಸೆಂದು ಮನದ ದುಃಖಂಗಳೆಲ್ಲಂ ಪಱಿಯೆ ಬಿನ್ನವಿಸಿದಂ ೪೦

ದೇವ ಚಿತ್ತೈಸಯ್ಯ ಸುಕುಮಾರನಖಿಳ ಜೀ
ವಾವಳಿಗಳಂ ಕೊಂದನವಱ ಗಣನೆಯನಱಿವ
ನಾವವಂ ಬಹು ವಿಪ್ರಸಂತತಿಗಳಂ ಹತಿಸಿದಂ ಕೋಟಿ ಕೋಟಿಧನಮಂ
ಓವದನ್ಯಾಯದಿಂ ಕಳವಿನಿಂ ಕೊಂಡೆಯಿದೆ
ಜೀವಿಸಿದ ಪಾಪಿ ಹೊಲತಿಯೊಳೊಂದಿ ಪುಟ್ಟಿವರು
ಪಾವಳಿಯೊಳನುಭವಿಸಿದಜ್ಞಾನಿಯವನ ದುಷ್ಕೃತ್ಯಮಂ ಪೇಳಲಳವೇ ೪೧

ಕಟ್ಟಕ್ಕಱಿಂ ಹೊಲತಿಯುಂ ರಮಿಸಿ ಮಕ್ಕಳಂ
ಹುಟ್ಟಿಸಿದನೈವರಂ ಪಂಚಪಾತಕದಂತೆ
ನೆಟ್ಟನವರೊಳು ಕೂಡಿ ಗೋಶುನಕ ಮುಖ್ಯ ಮಾಂಸಂಗಳಂ ತಿಂದು ಸುರೆಯ
ಕೆಟ್ಟು ಕುಡಿದದಕೆ ಗಡಿಯಿಲ್ಲವಳಿಗಂ ತನಗೆ
ನೆಟ್ಟನೊಗೆದರು ಹೆಣ್ಣು ಮಕ್ಕಳಿರ್ವರು ಬಳಿಕ
ದುಷ್ಟನಾ ಚಾಂಡಾಲಿಯಳಿದ ಬಳಿಕಾಚರಿಸಿದನ್ಯಾಯ ಮೆಂತೆಂದಡೆ ೪೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನಗೆ ಹುಟ್ಟಿದ ಮಕ್ಕಳೆನಿಪ ಹೊಲತಿಯರನೇ
ವನಿತೆಯರ ಮಾಡಿಕೊಂಡವನವರ ರಮಿಸಲ್ಕೆ
ಜನಿಸಿದರು ಪುತ್ರರಿರ್ವರಿಬ್ಬರೊಳು ಹಿರಿಯ ಮಗಳೆನಿಪ ಹೆಂಡತಿಗೆ ಮತ್ತೆ
ಎನಿತು ಪಾಪಂಗಳಂ ಮಾಡಿದನೆನಿಪ್ಪುದಂ
ಮನವೊಲ್ದು ಗಣಿಸಬಲ್ಲವನಾರು ಲೋಕದೊಳು
ವನಜಭವಗಳವಲ್ಲ ಪಹಿನಾಥನುಸುರಲಱಿಯಂ ದೇವ ಚಿತ್ತೈಪುದು ೪೩

ತಾರಗೆಗಳಿನಿತೆಂದು ಲೆಕ್ಕಿಸಲ್ಬಹುದಯ್ಯ
ವಾರಿಧಿಯ ತಡಿಯ ಮಳಲಂ ಗಣಿಸಬಪ್ಪುದಾ
ನೀರದಂಗಳು ಬಿಡದೆ ಕಱೆವ ಧಾರೆಗಳನೆಣಿಸಲ್ಬಹುದು ಸುಕುಮಾರನ
ಧಾರುಣಿಯೊಳೆಯ್ದೆ ಮಾಡಿದ ಪಾಪವಿನಿತೆಂದು
ಸೂರಿಗಳು ಮುನಿವರರು ದೇವರ್ಕಳಱಿಯರವ
ಧಾರವನ ದೋಷವಳಿವದಕೆ ಪ್ರಾಯಶ್ಚಿತ್ತವದು ಧರೆಯೊಳಿಲ್ಲ ದೇವ ೪೪

ಇಂತಪ್ಪ ಸುಕುಮಾರ ಪಾಪಿ ಶಿವಲೋಕಕ್ಕೆ
ದೆಂತಯ್ಯ ಬಂದನಾ ಯೋಗಿಗಳಿಗಂ ದೊರಕ
ದಂತಪ್ಪ ನಿನ್ನ ಕೃಪೆಯೇಕಾಯ್ತು ಸಕಲ ದೇವರೊಳು ಪರಮಸ್ವತಂತ್ರಾ
ಕಂತುಹರನೆಂದಖಿಳ ವೇದಂಗಳುಸುರುವವು
ಸಂತತಂ ನಿಜವಾದುದಿವನ ಕಾರಣದಿನೆಂ
ದಂತಕಂ ಬಿನ್ನವಿಸಿದಾ ಸ್ಥಿತಿಯ ಸೂತನಾ ಮುನಿನಿಕರಕಿತ್ತ ನುಡಿದಂ ೪೫

ಅಗಜಾಧಿಪತಿಗಿಂತು ಬಿನ್ನವಿಸಿ ದಂಡಮು
ದ್ರೆಗಳನೊಪ್ಪಿಸುತಲೆನಗಿಂದು ಮೊದಲಾಗಿ ಪಾ
ಪಿಗಳ ಶಿಕ್ಷಿಪ ಮಣಿಹ ಒಲ್ಲೆನೆಂದಾಡಿ ಪಾದದೊಳು ಬಿದ್ದಿರ್ದ ಯಮನಂ
ನಗುತ ಕೃಪೆಯಿಂದೆರಡು ಹಸ್ತದಿಂ ಪಿಡಿದೆತ್ತಿ
ಜಗದೀಶ್ವರಂ ಸಂತಸದೊಳು ಕಾಲನ ಚೆಲ್ವ
ಮೊಗವನೀಕ್ಷಿಸಿ ನುಡಿದನಮಲದಂತಪ್ರಭೆ ಸಮುಜ್ವಲಿಸಿ ಪರಕಲಿಸಲು ೪೬

ಎಲೆ ಕಾಲ ಕೇಳು ನೀನೆಂದಂತೆ ಪಾಪಸಂ
ಕುಲವನಾ ಸುಕುಮಾರನೆಸಗಿದಂ ಪೇಳಲು
ಜ್ವಲದೋಷಿಯಿವನಿವನ ದೋಷವೆಂಬರಳೆಯೊಟ್ಟಿಲ ಬೆಟ್ಟದಲ್ಲಿಯೊಂದು
ಸುಲಭವಗ್ನಿಯ ಕಿಡಿಯದುದುರ್ದಂದವಾಯ್ತು ನಿ
ರ್ಮಲವಪ್ಪ ಶಿವರಾತ್ರಿಯಲ್ಲಿ ಲಿಂಗಂಗಂಡ
ನೊಲಿದದಱಿನಖಿಳ ದೋಷಂ ಪೋಗಿ ಶಿವಲೋಕಕಂ ಬಂದನೆಂದನಭವಂ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಾಕ್ಯಮಂ ಕೇಳಿ ವಿಸ್ಮಯಂಬಟ್ಟಲ್ಲಿ
ವೈವಸ್ವತಂ ಬಿನ್ನಪಂ ಜೀಯ ಶಿವರಾತ್ರಿ
ಯಾ ವಿಶೇಷವನದರ ಫಲವನಾ ಸುಕುಮಾರಗಂ ಮುಕ್ತಿಯಾದ ಬಗೆಯ
ನೀ ವೊಲಿದು ಪೇಳೆನಲು ನಸುನಗುತ ನುಡಿದನಾ
ದೇವದೇವೇಶ್ವರಂ ಕೇಳಯ್ಯ ಯಮಧರ್ಮ
ಪಾವನಚರಿತ್ರಮಂ ವಿಲಸಿತಸ್ತೋತ್ರಮಂ ಸುಜ್ಞಾನಮಯ ಗೋತ್ರಮಂ ೪೮

ಅನುನಯದೊಳಾ ಮಾಘಕೃಷ್ಣದ ಚತುರ್ದಶಿಯ
ದಿನದ ರಾತ್ರೆಯೊಳು ಜಾಗರವಿರ್ದು ಸಂತಸವ
ಮನದಲ್ಲಿ ಶಿವಪೂಜೆಯಂ ಮಾಡೆ ಶಿವರಾತ್ರೆಯೆನಿಪುದದನಾಚರಿಸಿದ
ಜನಕೆಯಾ ಪ್ರಾಜಾಪತಾಯಜ್ಞ ಫಲವಪ್ಪು
ದನಘ ವೇದೋಕ್ತಸಾರಂ ಕಣಾ ಕೇಳು ಮುಂ
ದನುಪಮ ರುತದ್ವ್ರತವನಾಚರಿಸಿ ನಿಜಪದಂಗಳ ಪಡೆದರೆಂತೆಂದಡೆ ೪೯

ಆ ಸರಸಿಜೋದ್ಭವಂ ಮಾಡಿದಂ ಕೂರ್ತುವಿ
ದ್ಯಾಸಾರಮಂತ್ರದಿಂ ಭಜಿಸಿ ಶಿವರಾತ್ರಿಸುವ್ರತವ
ನಾ ಸಮರ್ಥಿಕೆಯೊಳಾ ಬ್ರಹ್ಮತ್ವಮಂ ಪಡೆದನೈ ಬಳಿಕಲಾ ಮಾಧವ
ಲೇಸಪ್ಪ ಮೃತ್ಯುಮೋಚನ ವಿದ್ಯೆಯಿಂದ ಮಹಿ
ಮಾಸಮರ್ಥತೆಯ ಶಿವರಾತ್ರೆಯಂ ನೆಱೆ ಮಾಡ
ಲೈಸಲೆ ವಿಷ್ಣುತ್ವಮಂ ಪಡೆದನೆಂದು ಬಿತ್ತರಿಸಿದಂ ಸರ್ವೇಶನು ೫೦

ಅನಘಲಿಂಗವನು ಶಿವರಾತ್ರೆಯೊಳು ಮೃತ್ಯುಮೋ
ಚನವಿದ್ಯೆದಿಂ ಭಜಿಸಿ ಮಾರ್ಕಂಡೆಯಂ ನಿತ್ಯ
ವೆನಿಪ ಪದಮಂ ಪಡೆದನಷ್ಟವಸುಗಳು ಬಳಿಕ್ಕೇಕಾದಶೀರುದ್ರರು
ಘನವಪ್ಪ ವರವೇದಸಾರಮಂತ್ರದೊಳು ಘ
ಮ್ಮನೆ ಭಜಿಸಿ ಶಿವರಾತ್ರೆಯಂ ಮಾಡಿ ನಿಜಪದವ
ನನುನಯದೆ ಪಡೆದರೆಂದಾ ಯಮಂಗೊಲಿದು ಬಿತ್ತರಿಸಿದಂ ಕರುಣದಿಂದೆ ೫೧

ಸಾರವಚನವನಾಲಿಸಯ್ಯ ಚಾಂಡಾಲಾದ್ಯ
ರೋರಂತೆ ಮಾಡಿರ್ದ ದೋಷವೆಲ್ಲಳಿವವೈ
ಮೇರುಮಂದಿರಕೆ ಸಮವಹ ಪಾಪದೊಟ್ಟಿಲಂ ಗಳಿಸಿದೀ ಸುಕುಮಾರನು
ಆರಯ್ಯೆ ಮಾಘಮಾಸದ ಕೃಷ್ಣಪಕ್ಷದೊಳು
ಸೇರಿದ ಚತುರ್ದಶಿಯ ಶಿವರಾತ್ರೆಯಲ್ಲಿ ಮಾ
ರಾರಾತಿಯಂ ವ್ರತಿಗಳರ್ಚಿಸುತಿಪ್ಪುದಂ ಕಂಡನತಿಶಯದ ಭಾಗ್ಯದಿಂದ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ ಮಗಳಾದ ಹೊಲೆವೆಂಡತಿಯನುಱಿ ರಮಿಸು
ವನ್ನೆಯಕ್ಕವಳ ಮುಡಿಗಂ ಹೂವತರಲು ಬಂ
ದುನ್ನತ ಶಿವಾಲಯದ ತೋಂಟಮಂ ಪೊಕ್ಕಲ್ಲಿ ಶಿವನಿಳಯದೊಳಗೆ ಕೂರ್ತು
ಚಿನ್ನಿಧಿಗಳಪ್ಪ ಸದ್ವ್ರತಿಗಳಾ ಶಿವರಾತ್ರೆ
ಯನ್ನಖಿಳ ವೈಭವದೊಳೆಸಗುತಿರ್ಪಧಿಕ ಸಂ
ಪನ್ನಸಂಭ್ರಮವ ಕಂಡಾಗ ಹರುಷಿಸಿದನ್ನೈ ಯಮಧರ್ಮ ಕೇಳೆಂದನು ೫೩

ಅದುಕಾರಣಂ ಸರ್ವಪಾತಕಂ ಬೆಂದುಹೋ
ದುದು ನಮ್ಮ ಗಣಪದವಿಯಾಯಿತ್ತೈ ಸುಕುಮಾರ
ಗಿದನಿನ್ನು ನೀನರಿದೆನಲ್ಬೇಡವೆಂತೆನಲು ಶಿವರಾತ್ರೆಯುತ್ಸವವನು
ಮುದದಿಂದ ಕಂಡನಂತದಱಗ್ಗಳಂ ಕೇಳು
ಪದಪಿನಿಂ ರಾಜಸೂಯಾಧ್ವರಸಹಸ್ರಕ
ಗ್ಗದ ಪುಣ್ಯವಶ್ವಮೇಧಾಯುತಂ ಕಪಿಲೆಗಳ ಕೋಟಿದಾನಕ್ಕೆ ಮಿಗಿಲು ೫೪

ಭೂಮಿದಾನಂಗಳನನಂತಮಂ ಮಾಡಿದ ಮ
ಹಾಮಹಿತ ಫಲವಲಾ ಹತ್ತುಸಾವಿರ ವರುಷ
ವೀ ಮಹಿಯೊಳುತ್ತಮತಪಂಬಟ್ಟ ಪುಣ್ಯವಾ ದಿವ್ಯ ತೀರ್ಥಂಗಳಲ್ಲಿ
ಧಾಮವಾಗಿರ್ದುದಕ್ಕಗ್ಗಳದ ಸುಕೃತವೈ
ಪ್ರೇಮದಿಂದಖಿಳ ಶಾಸ್ತ್ರದೊಳುಳ್ಳ ಮೋಕ್ಷಕ್ಕೆ
ದೇ ಮಿಗಿಲು ಸುಕುಮಾರಗೊದವಿತ್ತು ಯಮ ಕೇಳು ಮುಂದಿವನ
ಭಾಗ್ಯದೊದವ ೫೫

ತವೆ ಪುಣ್ಯಪಾಪಂಗಳಂ ಮಾಡಿ ಮರ್ತ್ಯದೊಳ
ಗವರು ಸಗ್ಗದ ದಿವ್ಯವನಿತಾದಿ ಭೋಗಮಂ
ಸವಿದು ಧರ್ಮಕ್ಷಯದ ಕಾಲದೊಳು ನಿನ್ನಾಜ್ಞೆಯಿಂ ನರಕದೊಳಗಪ್ಪರು
ಇವನಂತುಟಲ್ಲೆಮ್ಮ ಗಣಪದದೆ ಪರಮ ವೈ
ಭವದೊಳಿರ್ದಯ್ದೆ ಕಲ್ಪಾಂತಕೆ ದಧೀಚಿಪುಂ
ಗವಯತೀಶ್ವರನಪ್ಪನಯ್ಯ ಸುಕುಮಾಗಯೆಂದಂ ಯಮನೊಳಾ ಶಂಕರಂ ೫೬

ಅಲ್ಲಿ ಮಾಹೇಶ್ವರವ್ರತಿಯಾಗಿ ಮುನಿನಿಕರ
ವೆಲ್ಲಕಧಿಪತಿ ದಧೀಚಿಪ್ರವರನಾಗಿ ಸಂ
ಪುಲ್ಲ ಸುಜ್ಞಾನಮಯನಾಗಿ ಯಾಕ್ಷುಪನಿಮಿತ್ತಂ ಹೋರಿದಾ ಮಾಧವ
ತಲ್ಲಣಿಸಲೆದೆಯನೊದೆದವನ ಮೋಹದ ಲಕ್ಷ್ಮಿ
ನಿಲ್ಲಲುರದೊಳು ಮಹತ್ವಮಂ ಮೆಱೆದು ನ
ಮ್ಮಲ್ಲಿ ಸಾಯುಜ್ಯಮಂ ಪಡೆವನೆಂದಭವನೊರೆದಂ ಯಮಂ ಕೂರ್ತುಕೇಳೆ ೫೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಱಿಂದಲಿಂದು ಮೊದಲಾಗಿ ಕೇಳ್ಕೆ ಯುಮಾ
ಸದಮಲರು ನನ್ನ ಭಕ್ತರು ಮಮಸಮಾನವೆಂ
ಬುದನಱಿದು ನೀನವರ ಪೂಜೆಯಂ ಮಾಡೆಂದು ಸರ್ವೇಶ್ವರಂ ಬೆಸಸಲು
ಹೃದಯದೊಳಗಚ್ಚರಿಯುವಾಗಿ ಗಿರಿಜಾಧಿಪನ
ಪದದಲ್ಲಿ ಬಿದ್ದು ಕೈಯಂ ಮುಗಿದು ಜೀಯಪೇ
ಳಿದಿರಿ ಶಿವಭಕ್ತರ ವಿಚಾರಮಂ ಕೇಳಿದೆನೆನುತ್ತ ಮತ್ತಿಂತೆಂದನು ೫೮

ಶಿವಭಕ್ತರಾವ ಪ್ರಕಾರದವರೆಲೆ ದೇವ
ಭುವಿಯೊಳವದಿರ ನಿಷ್ಠೆಯೆಂತವರ ವರ್ತನೆಯು
ಪವಣಾವುದವರ ಬಾಹ್ಯಾಂತರದ ಲಕ್ಷಣಂಗಳ ಭೇದವೇನೆಂದೊಡೆ
ಅವನ ವಾಕ್ಯವ ಕೇಳಿ ನುಡಿದನಾ ಶಂಕರಂ
ಜವನೆ ಕೇಳೆಮ್ಮವರ ವೇಷದಿರವಂ ವಿಚಾ
ರವನೊರೆವೆವೆಂದು ಬಿತ್ತರಿಸಿದಂ ದೇವದೇವಂ ದೋಷವನದಾವನು ೫೯

ಭಸಿತಲೇಪನದ ಸರ್ವಾಂಗತ್ರಿಪುಂಡ್ರದೊ
ಳ್ಪೊಸಲಸೊಬಗರು ವಿಮಲರುದ್ರಾಕ್ಷಭೂಷಣೋ
ಲ್ಲಸಿತರು ಶಿವಾರ್ಚನಾಪರರಿವಾದಿಯ ಬಾಹ್ಯಲಕ್ಷಣದ ಸಂಪನ್ನರು
ಒಸೆದೆಮಗೆ ಸದ್ಭಕ್ತರಿವರ ಕಂಡೊಡೆ ಪಾದ
ಬಿಸಜಕ್ಕೆನಮಿಸಿನ್ನು ಪೇಳ್ವೆನಂತರ್ಲಕ್ಷ
ದೆಸಕದ ಗುಣಂಗಳುಳ್ಳೆಮ್ಮವರನೆಂದುಸುರುತಿರ್ದನಾ ಸರ್ವೇಶನು ೬೦

ಪ್ರಣವದುಚ್ಚಾರಣೆಯು ವೇದಸಾರದ ಪರಾ
ಯಣರು ಶಿವಸೂತ್ರ ಜಪದಾಸಕ್ತರಾವಗಂ
ಪ್ರಣುತ ಶತರುದ್ರೀಯ ಪಾಠಕರಥರ್ವಣಶಿಖಾವೇದಶಿರವಿಂತಿವಂ
ಅಣಿಯರದೆ ಪಡಿಸುವರು ಪೌರುಷಸುಸೂಕ್ತಮಂ
ಗಣಿಸಿಯಾ ಪಾವವಮಾನಿಯು ನೀಲರುದ್ರವಾ
ಗುಣದ ಶಿವಸಂಕಲ್ಪವಾಮದೇವಾದಿ ಶಬ್ದಮಂ ಪಠಿಸುತಿಹರು ೬೧

ಏಕಕಾಲಂ ತ್ರಿಕಾಲಂಗಳೊಳಗಾದೊಡಂ
ಶ್ರೀಕರರು ಮಧ್ಯಾಹ್ನದೊಳು ನೃತ್ಯಮಾನತ್ರ
ಯೀಕನಾಲೋಚನರುಮಾಮಹೇಶ್ವರರೂಪ ದಕ್ಷಿಣಾಮೂರ್ತಿಗಳನು
ಶೂಕಟಂಕಾದಿ ಮೃಗಧರ ನೀಲಕಂಠಸು
ಶ್ಲೋಕಪಂಚಾನನಂ ಮೊದಲಾಗಿ ರಾಜಿಸುವ
ನೇಕ ಮದ್ರೂಪುಗಳೊಳಾವುದಾನೊಂದು ವಿಗ್ರಹವನಾವನ್ನೆನೆವರು ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಪಾಪಂಗಳೊಳು ಕೂಡಿದವರಾದೊಡಂ
ತವೆ ಪೂಜ್ಯರೆನ್ನಿಂದಲೆನಲವರ ಪಾದಕಂ
ರವಿಸುತನೆ ನೀಂ ಭಕ್ತಿಯಿಂದೆಮಗೆ ವಂದಿಸುವ ತೆಱದಿಂದ ನಮಿಸು ನಿನ್ನಾ
ವಿವಿಧ ದೂತರ್ಗಳಿಗೆ ನಾವು ಬೆಸಸಿದ ಬಗೆಯೊ
ಳವಿರತಂ ಬುದ್ಧಿವೇಳೆನೆ ಕೇಳಿ ನಲ್ವಿನಿಂ
ಜವನಳ್ತಿಯಿಂದಂ ಮಹಪ್ರಸಾದಂ ಜೀಯಯೆನುತ ಕೈಕೊಂಡು ನುಡಿದಂ ೬೩

ದೇವ ಸುಕುಮಾರನ ನಿಮಿತ್ತದಿಂ ಶಿವಲೋಕ
ದೀ ವಿವಿಧ ಗಣನಿಕರಮಂ ಕಂಡೆನನುಪಮ
ಶ್ರೀ ವಿಮಲ ನಿಜಮೂರ್ತಿಯಂ ನಿರೀಕ್ಷಿಸಿ ಧನ್ಯನಾದೆನುತ್ತಮ ಭಕ್ತರ
ಪಾವನಚರಿತ್ರಮಂ ಬಹಿರಂತರಂಗದೊಳ
ಗಾವವಂ ಲೇಶಮಾತ್ರದೊಳು ತವಸಂಬಂಧಿ
ಯೇ ವಿಶ್ವಪತಿ ನೀನೆನುತ್ತಱಿದು ಶರಣೆಂಬ ಭಕ್ತಿಯಾಯ್ತೆನಗೆಂದನು ೬೪

ಎಂದು ಶಿವನಾಜ್ಞೆಯಿಂ ದಂಡ ಮುದ್ರೆಗಳನಾ
ನಂದದಿಂ ಕೈಕೊಂಡು ದೇವದೇವರ ದೇವ
ಇಂದುಮೊದಲಾಗಿ ಶಿವಭಕ್ತರಲ್ಲದರ ಶಿಕ್ಷಿಸಿ ನಿಮ್ಮ ಲಾಂಛನರ್ಗೆ
ವಂದಿಸುವೆನೆಂದು ಮಣಿಹವ ಹೊತ್ತು ಬೀಳ್ಕೊಂಡು
ಬಂದು ಸಂಯಮನಿಯಂ ಪೊಕ್ಕನಾಪುರದೊಳಾ
ನಂದದಿನಿದಿರ್ಗೊಳಲು ಪರಮ ಸಂಭ್ರಮದೊಳೆಯ್ತಂದನು ಸಭಾನಿಳಯಕಂ ೬೫

ನವರತ್ನ ಖಚಿತಸಿಂಹಾಸನದೊಳಳವಟ್ಟು
ಜವನು ಲುಂಬಲಮುಖ್ಯವಾಗಿ ರಾಜಿಸುತಿರ್ಪ
ವಿವಿಧದೂತರ ಕರೆದು ಬೆಸಸಿದಂ ನೀವಿಂದುಮೊದಲಾಗಿ ಧರಣಿಯಲ್ಲಿ
ಶಿವಭಕ್ತರಂ ಕಂಡೊಡಂ ದೂರದಿಂ ನಮಿಸಿ
ಯವರ ಸಾನ್ನಿಧ್ಯಕಂ ಹೋಗದಿರಿ ಹೋದರೆ
ಮ್ಮವರಲ್ಲ ಮೀಱಿ ಹೋದರೆ ಮಹಾದ್ರೋಹಿಗಳು ನನಗವರೆನುತ್ತ ನುಡಿದಂ
೬೬

ಇನಿತು ವಾಕ್ಯವ ಮೀಱಿ ಶಿವಭಕ್ತರಂ ಪಿಡಿವೆ
ನೆನುತ ಬಗೆದವರು ಸಂದೇಹವಿಲ್ಲದೆ ಕಡೆಯೊ
ಳೆನಗೆ ಮುನಿದವರು ಹರನಿಂದೆನಗೆ ಹಿರಿಯಾಜ್ಞೆಯುಪ್ಪುದೆನ್ನಂ ಕೆಡಿಸುವ
ಮನದಲ್ಲಿ ಹೋದವರ ಪಿಡಿತರಿಸಿ ಕಾದಕ
ಬ್ಬುನದ ಶೂಲದೊಳು ತಲೆಕೆಳಕಾಗಿ ತೆಗೆಯಿಸುವೆ
ನೆನೆ ಕೇಳಿ ನಡುಗಿ ಕೈಮುಗಿದು ಬಿನ್ನವಿಸಿದರು ದೂತರಂತಕರಾಜಗೆ ೬೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಶಿವಭಕ್ತರೆಂಬವರು ಧರೆಯೊಳು ಬಗೆವ
ಡಾವರೂಪಿಂದಿಹರೆನುತ್ತ ಬೆಸಗೊಳೆ ಭಟರು
ಪಾವನ ಮಹೇಶ್ವರಂ ತನಗುಸುರಿದಂತೆ ಶೂಲಿಯ ಭಕ್ತರಾಕಾರವ
ಶ್ರೀವಿಮಲ ಬಹಿರಂತರಂಗಚಿಹ್ನವನುಳ್ಳ
ರಾವರವದಿರ ಬಗೆಯ ಪೇಳಲವರಂ ಕಂಡ
ಡಾವು ಹೊದ್ದೆವು ದೂರದಿಂದ ವಂದಿಪೆವೆಂದರಂತಕಂಗಾ ದೂತರು ೧೮

ಎಂದೀ ಕಥಾಪ್ರಸಂಗವನೊಲ್ದು ಸೂತನಾ
ನಂದದಿಂ ನೈಮಿಷಾರಣ್ಯವಾಸದ ಮುನಿಪ
ವೃಂದಕ್ಕೆ ಬೆಸಸುತಿದು ನನ್ನ ನುಡಿಯಲ್ಲ ಪೂರ್ವದೊಳಗಜೆಗೀಶನುಸುರೆ
ಸ್ಕಂದಗಮ್ಮಂ ಪೇಳೆ ಗುಹನಾ ಸನತ್ಕುಮಾ
ರಂ ದೇವ ಪೇಳೆನಲು ಪೇಳ್ದನವನಾ ವ್ಯಾಸ
ತಂದೆಗಱುಪಿದನಾತಸನಗೊಱೆಯೆ ನಿಮಗೆ ಪೇಳಿದೆನೆಂದನಾ ಮುನೀಶ ೧೯

ಇಂತಪ್ಪ ಕಾಲದಹನದ ಕಥೆಯ ಸೇರುವೆಗ
ಳಂ ತಥ್ಯವಾಗಿ ಪೇಳಿದೆವೆಲ್ಯೆ ಕೇಳ್ದೆಯಾ
ಸಂತಸದೊಳೆಲೆ ಕೆಂಚವೀರಾಹ್ವಯಾ ಯೆನಲು ನಲಿದು ಹಲಗೆಯ ದೇಶಿಕಂ
ಚಿಂತಾಮಣಿಪ್ರವರ ಬದುಕಿದೆಂ ತಿಳಿದೆನೋ
ರಂತೆ ಕಾಲಾರಿಯಷ್ಟಮವೆಂಬ ವಾಕ್ಯಮಂ
ಕಾಂತ ನಂಜುಂಡದೇವರು ಮೆಚ್ಚೆ ಹೃದಯದೊಳು ನೆಲೆಗೊಳಿಸಿಕೊಂಡೆನೆಂದಂ೨೦

ಎಂದು ಗುರುವಂ ಪೊಗಳತೊಡಗಿದಂ ಸಚ್ಚಿದಾ
ನಂದಮಯ ನಿತ್ಯಪರಿಪೂರ್ಣ ಜಂಗಮವೆ ನೀ
ವೆಂದೆನಿಪ ಗುರುಮೂರ್ತಿ ದಿಗ್ಭರಿತಕೀರ್ತಿವಿಸ್ಫೂರ್ತಿವಿಹೃತಾನತಾರ್ತಿ
ಮಂದಸ್ಮಿತಾಜೇಯ ನಿರಘನಿರ್ಮಾಯ ಸಾ
ನಂದಚಿತ್ಕಾಯ ನಿರಪಾಯ ಹಲಗೆಯ ರಾಯ
ಕಂದನಂ ಪೊರೆದ ಗುರುವರದ ಸುರುಚಿರದಮತ್ಸ್ವಾಮಿ ಜಯಜಯಯೆಂದನು
೨೧

ಎಂದು ಗುರುವಂ ಕೆಂಚವೀರಾಹ್ವಯಂ ಮಧುರ
ದಿಂದ ಕೀರ್ತಿಸಿದಲ್ಲಿ ಕಾಲಾರಿಯಷ್ಟಮ
ಕ್ಕಂ ದೃಢದೆ ಕಲ್ಪಕಲ್ಪದೊಳು ವರ್ತಿಪ ಕಥಾಪೂರ್ಣವಾಯಿತೀ ಠಾವಿಗೆ
ಸಂದಮೃತಮಯವೆನಿಸಿ ವೆಱೆವ ಶಿವಭಕ್ತಿಯಾ
ನಂದಮಯ ವೀರಶೈವಾಮೃತಚರಿತ್ರದೊಳ
ಗಂದದಿಂ ಲೀಲೆ ಮುಗಿಯಿತ್ತು ನಾಡೆಂಟು ಸಂಧಿಗಳಿಂ ಪ್ರಸಿದ್ಧವಾಗಿ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್‌ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೭೩

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಯಮಂಗೀಶ್ವರಂ ನುಡಿದಲ್ಲಿ ಕಾಂಡವೊಂದರ ಮೇಲೆ ಸಂಧಿಯೆಂಟು ೭೪

ಅಂತು ಸಂಧಿ ೮ಕ್ಕಂ ಪದ ೪೬೬ ಗ್ರಂಥ ೮೬ಕ್ಕಂ ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೮

ತ್ರಿಪುರದಹನಕಥೆ

ತ್ರಿಪುರದಸುರರ ಬಾಧೆಗಳ್ಗಿ ಮೊಱೆಯಿಡೆ ಸುರರ
ಕುಪಿತ ಕುಂಭೋದರಂ ಒಡಿಯೆ ನಂದೀಶ್ವರಂ
ಕೃಪೆಯೊಳು ಶಿವಾಜ್ಞೆಯಿಂ ಕೈಲಾಸದಲ್ಲಿ ರಥಮಂ ನಿರ್ಮಿಸಿದನನಘಂ

ರುದ್ರಋಷಿನುತ ವೀರಭದ್ರ ವಿಶ್ವೇಶ್ವರಲ
ಸದ್ರಮ್ಯಮಹಿಮಾಸಮುದ್ರಭೂಷಿತ ನಿಖಿಲ
ಕಾದ್ರವೇಯಾನತ ದರಿದ್ರವಾರಣ ಬಹುಕ್ಷುದ್ರದಾನವಸಂಹರ
ಚಿದ್ರಸಪ್ರದ ಸಮುದ್ಯದ್ರಾಗದೇವತೋ
ಪದ್ರವವಿನಾಶ ಸಂಪದ್ರಮಾಕರ ಪಶುಪ
ತಿದ್ರವ್ಯವರಸಖ್ಯತದ್ರಾಮದೇಹಾರ್ಧ ಮದ್ರಮಣ ಶಾಂತಮಲ್ಲ ೧

ಮಿಱುಪ ಸಂಚಲವೆಂಬ ಮಿಂಚಿಲ್ಲದಾ ಜಡಂ
ತುಱುಗದಾ ದಶವಾಯು ಗುಣವಿಲ್ಲದಾರ್ಭಟಿಪ
ಬಿಱುನುಡಿಯ ಸಿಡಿಲಿಲ್ಲದಾ ಸುಪಥ ವಿಘ್ನವಿಲ್ಲೆನಿಸುತಾ ಕರುಣಾಮೃತಂ
ಗಱೆವುದೈ ನಿನ್ನ ಚಿತ್ತಂ ನಿನ್ನ ಹಸ್ತವೇ
ನೆಱೆ ಕನಕವೃಷ್ಟಿಯಂ ಸುರಿವುದೆನೆ ನಿನ್ನನೆ
ಮ್ಮೆಱೆಯ ಬಣ್ಣಿಪರಾರು ಶಾಂತನಂಜೇಶ ಜಯಜಯ ದಿವ್ಯಸುಪ್ರಕಾಶ ೨

ದುಷ್ಟಜನದೂರ ಹೃತಕಷ್ಟಸಂಸಾರ ಸನಿ
ಕೃಷ್ಟ ತಾಪಹತಮಾಯಾಷ್ಟಮದರಹಿತ ಸಂ
ತುಷ್ಟಚರಶೇಷವೃತ್ತ್ಯಷ್ಟಚಿದ್ಭೂಷ ಸತ್ಶ್ರೇಷ್ಟಸರ್ವಾಂಗಲಿಂಗ
ಸೃಷ್ಟಿಗುರುವೊಳು ರಕ್ಷೆ ಶಿಷ್ಟ ಭಕ್ತರೊಳು ಲಸ
ದಿಷ್ಟಲಯದೇಹ ತನು ಜ್ಯೇಷ್ಠದಾಸೋಹ ಭವ
ನಷ್ಟಸದ್ಭಕ್ತ ನಿಜದೃಷ್ಟಿಯೊಳ್ಮುಕ್ತಿ ಪರಿಪುಷ್ಟಿ ಜಯ ಹಲಗೆಯಾರ್ಯ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದೆಂಟನೆಯ ಕಾಲದಹನದ ಕಥಾರಸಂ
ಸಂದತ್ತು ಕಂಚವೀರಾಹ್ವಯಾ ಕೇಳ್ವೆಯ್ಯ
ಮುಂದೆ ನವಮಂ ಮಹಾತ್ರಿಪುರಾರಿಯೆನಿಸುವೊಂಬತ್ತನೆಯ ಲೀಲೆಯಿರವ
ಛಂದವೆನೆ ಬಿತ್ತರಿಸುವೆಂ ತ್ರಿಪುರದಹನಮಂ
ತಾಂ ದಿವ್ಯ ಲೈಂಗ್ಯಪೌರಾಣದೊಳು ಋಷಿಗಳಾ
ನಂದದಿಂ ಸೂತನಂ ಬೆಸಗೊಂಡರೆಂದದಂ ಹಲಗೆಯಾರ್ಯಂ ನುಡಿದನು ೪

ಎಲೆ ಸೂತಮುನಿಪ ಕೇಳಾದಿಯೊಳು ಮಯನೆಂದು
ಜಲಜಭವನಾಜ್ಞೆಯಿಂ ನಿರ್ಮಿಸಿದ ತತ್ರಿಪುರ
ದಲಘುರಾಕ್ಷಸರಖಿಳರಂ ಬಾಧಿಸಲ್ಕೇಳಿ ವೈಭವದೊಳೆಯ್ದಿ ಹರನು
ಜ್ವಲನಾಕ್ಷಿಯಿಂ ಸುಟ್ಟ ಕಥನಮಂ ಬಿತ್ತರಿಸ
ಲೊಲಿದು ಕೇಳ್ದಾವು ಕೃತಕೃತ್ಯರಹೆವೆನೆ ತನ್ನ
ಕುಲಗುರು ಮಹಾವ್ಯಾಸನಿಂ ಕೇಳಿದಂತೆ ಋಷಿಗಳೊಳು ನುಡಿದಂ ಪ್ರೌಢನು ೫

ಆರೈದು ಕೇಳಿರೈ ಮುನಿಗಳಿರ ಶೂಲಿಯ ಕು
ಮಾರ ಷಣ್ಮುಖನೆಂದು ಸರ್ವಬಲದೊಡವೆರಸಿ
ತಾರಕನ ಕೊಂದಡವನಖಿಳ ಬಾಂಧವರಳಿದರುಳಿದ ಮೂವರು ಮಕ್ಕಳು
ವೀರ ವಿದ್ಯುನ್ಮಾಲಿ ಕಮಲಾಕ್ಷನಂತವರ
ಸೇರುವೆಯ ತಾರಕಾಕ್ಷಂಗೂಡಿ ಮೂವರಾ
ವಾರಿಜಾಸನನ ಕುರಿತುಗ್ರತಪಮಂ ಮಾಡಿದರು ಮಹಾನಿಷ್ಠೆಯಿಂದ ೬

ಅವರ ತಪಸಿಂಗೆ ಮುನ್ನೀಶ್ವರಾಜ್ಞೆಯ ಜಲಜ
ಭವನೊಲ್ದು ಬಂದು ನಿಮ್ಮಿಷ್ಟವೇನನಲೆದ್ದು
ದಿವಿಜಾರಿಗಳು ನಮಿಸಿದರು ನವಬ್ರಹ್ಮಾಗ್ರಗಣ್ಯ ಕೇಳು
ಭುವನದೊಳಗಾರಿಂದಲಾದೊಡಂ ನಾವು ಮರ
ಣವನೆಯ್ದದೆಲ್ಲವಂ ಸದೆವುತ್ತಮಿರ್ಪ ವೈ
ಭವವನೀಯೆನೆ ಕೇಳಿ ನುಡಿದನಾ ಕಮಲಜಂ ದೈತ್ಯರೊಳು ನಲವಿನಿಂದ ೭

ಸರ್ವಾಮರತ್ವವೆಂಬುದು ಮಹಾ ದುರ್ಲಭಂ
ಉರ್ವಿಯೊಳು ಜಾತಸ್ಯ ಮರಣಂ ಧ್ರುವಮಿದೆಂಬ
ಖರ್ವವಾಕ್ಯಂಗಳುಂಟದರಿಂದ ಮೂರೂರು ಬೇರೆ ಬೇರಿರಲಿ ನಿಮಗೆ
ಕೊರ್ವಿನಿಂ ತ್ರಿಪುರಂಗಳೊಂದುಗೂಡಿದ ಕಾಲ
ವೊರ್ವನಾವವನೊಂದು ಬಾಣದಿಂದೆಚ್ಚಲ್ಲಿ
ಪೂರ್ವಾಮರಾಧಿಪರಿರಾ ನಿಮಗೆ ಕಡೆಗಾಲವಾಗಲೆಂದಂ ಬ್ರಹ್ಮನು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ನುಡಿದಾ ಕಮಲಭವನೆಯ್ದಲವನಾಜ್ಞೆ
ಯಿಂದ ಮಯನಂ ಕುರಿತು ತಪವಿರ್ದು ಬಿನ್ನವಿಸ
ಲಂದು ದನುಜರ್ಗೆ ಮುಪ್ಪುರಗಳಂ ನಿರ್ಮಿಸಿದನಾತನಾಕಾಶದಲ್ಲಿ
ಕುಂದಣದ ಚಿನ್ನದೂರಂತರಿಕ್ಷದೊಳು ಬಳಿ
ಕೊಂದು ಬೆಳ್ಳಿಯು ನಗರವಿಳೆಯೊಳಾ ಕಾರ್ಬೊನ್ನಿ
ನಿಂದ ಸವೆದಾ ಪಟ್ಟಣಂ ಪೆರ್ಮೆಯಿಂದೆಸೆಯೆ ರಚಿಸಿದಂ ನಿಮಿಷದೊಳಗೆ ೯

ಒಂದೊಂದು ಪಟ್ಟಣಂ ನೂಱು ಗಾವುದದಗಲ
ದಿಂದಿಹವು ತಾರಕಾಕ್ಷಂಗೆ ಚಿನ್ನದಪುರಂ
ಮುಂದೆ ಕಮಲಾಕ್ಷಂಗೆ ಬೆಳ್ಳಿಯೂರಮುಮು ವಿದ್ಯುನ್ಮಾಲಿಯೆಂಬಾತಗೆ
ಸಂದ ಕರ್ಬೊನ್ನನಗರಂ ತ್ರಿಪುರವಧಿಕಸಿರಿ
ಯಿಂದೆಸೆದವಿವು ಬೇಱೆ ಮೂಱುಲೋಕಂಗಳೋ
ಯೆಂದೆಂಬ ಮಾಳ್ಕೆಯಿಂದವರ ರಕ್ಷೆಗೆ ಮಯಂ ಕಾಯ್ದಿಪ್ಪನಲ್ಲಿ ಸತತಂ ೧೦

ಉಪವನಂ ಪೇರಗಳು ಮಣಿಗೋಂಟೆ ವಜ್ರಮಯ
ವಿಪುಲ ವಿಲಸದ್ವಾರ ಘನಕವಾಟಂಗಳಿಂ
ದಪರಿಮಿತ ರತ್ನಹರ್ಮ್ಯಂಗಳಿಂದಖಿಳ ವೈಭವದ ಹಿರಿಯರಮನೆಗಳಿಂ
ಚಪಲಾಕ್ಷಿಯರ ವೀಧಿಯಿಂ ವೀರಭಟರಿನಾ
ದ್ವಿಪರಥಾಶ್ವಂಗಳಿಂ ಸಿರಿಯ ಪೆಂಪಿಂದಮಾ
ತ್ರಿಪುರಂಗಳೊಪ್ಪಿರ್ದವಮುಮ ರಕ್ಕಸರಾಯರಲ್ಲಿ ರಾಜಿಸುತಿರ್ಪರು ೧೧

ಪರಮ ವೈಭವದೊಳಗನಂತ ರಕ್ಕಸರ ಬಲ
ವೆರಸಿ ಮರ್ತ್ಯದ ಸರ್ವರಂ ಸದೆದು ಪಾತಾಳ
ದುರಗರ್ಕಳಂ ಚಲ್ಲಬಡಿದು ಬಳಿಕಮರಾವತಿಯ ಮುತ್ತಿ ದಿಕ್ಪಾಲರ
ಪುರವನೆಲ್ಲಂ ಸೂಱೆಯಾಡಿ ಮುನಿನಿಕರಮುಂ
ಪರಿಭವಿಸಿ ಕೋಳಾಹಳಂಗೆಯ್ವುತಿರಲೆಲ್ಲ
ರಿರದೆ ಘೋಳಿಟ್ಟು ವೈಕುಂಠಕ್ಕೆ ಹೋಗಿ ಮೊಱೆಯಿಟ್ಟರು ಮಹಾವಿಷ್ಣುಗೆ ೧೨

ಎನಗೆ ವಶವಲ್ಲ ರಕ್ಕಸರು ಬಲ್ಲಿದರೆಂದು
ವನಜಭವದೇವೇಂದ್ರನೊಳಗಾದ ದೇವರ್ಕ
ಳನಿಬರಂ ಕೂಡಿಕೊಂಡಾಗ ರಜತಾದ್ರಿಯೆಡೆಗೆಯ್ದಿ ಶಿವನಂ ಪೊಗಳುತ
ಅನುಪಮನ ಕೃಪೆವಡೆದು ಕಂಡು ಬಿನ್ನವಿಸಿದರು
ದನುಜರಾ ತ್ರಿಪುರದೊಳಗಿರ್ದು ಮೂಲೋಕಮುಂ
ಘನಪರಾಕ್ರಮದೊಳಿರಿದಟ್ಟಿ ಸೂಱೆಯಕೊಳುತ್ತಿರ್ದಪರು ದೇವ ಕೇಳು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿತ್ತವಿಸು ದೇವದೇವರ್ಕಳರಸಿಯರೆಲ್ಲ
ತೊತ್ತಿರಾದರು ದನುಜರರಮನೆಗೆ ಮಿಗೆ ಬಾಧಿ
ಸುತ್ತಲೈದರೆಯುವರ ಬಾಧೆಗಳಿಗಳ್ಕಿ ನಿಮಗಂ ಮೊಱೆಯಿಡಲ್ಬಂದೆವು
ಮತ್ತೆಮಗೆ ಗತಿಯಾರು ಸಲಹೆನಲು ಶಿವನಾಲಿ
ಸುತ್ತಿರ್ಪ ಕಾಲದೊಳು ಗಿರಿಜಾತೆ ಮುನ್ನ ಮಾ
ಡಿತ್ತ ನೆನದಾ ದೇವತಾದಿಗಳ ಮೇಲಣ ವಿರೋಧದಿಂದೇಗೆಯ್ದಳು ೧೪

ಹಿಂದೀಶ್ವರನೊಳಾನು ರತಿಯೊಳಿರೆ ತಾರಕಂ
ಕೊಂದು ಕೂಗಲು ವಿಷ್ಣುಮುಖ್ಯ ನಿರ್ಜರರು ನಾ
ರಂದನಾಡಿದ ಮಾತುಗೇಳಿ ಮದ್ಗರ್ಭದೊಳು ಮಗನುದಯುವಾಗವೇಡಾ
ಎಂದು ಶಿವನಂ ಬೇಡಿಕೊಂಡ ಪಾತಕರುಗಳಿ
ವಂದಿರಂ ರಕ್ಕಸರು ಬಡಿಯಲಾ ಮೊಱೆಗೇಳ
ದಂದವುಂ ಮಾಡುವೆನೆನುತ್ತ ನೆನೆದಾ ಪೂರ್ವ ವೈರದಿಂದಾ ಭವಾನಿ ೧೫

ಎಡದ ಗದ್ದುಗೆಯೊಳಳವಟ್ಟಿರ್ದು ದೇವಿ ಮುಂ
ಗಡೆಯೊಳೊಪ್ಪುವ ಷಣ್ಮುಖನ ನೋಡಿ ಹಸ್ತದೊಳು
ವಿಡಿದಿರ್ದ ಲೀಲಾಬ್ಜದಿಂದೀಶನಂ ಮುಟ್ಟಿಯಭಿಮುಖಂ ಮಾಡಿಕೊಂಡು
ಒಡೆಯ ಚಿತ್ತೈಸು ನಿನ್ನಣುಗನಂ ನೋಡಯ್ಯ
ಕಡು ಚೆಲ್ವ ಮುದ್ದುಮೊಗದಬಳನನೆನುತ್ತಲ್ಲಿ
ನುಡಿದಳುತ್ತುಮದಮುರ್ದುಗಱೆವ ವಾಕ್ಯಂಗಳಿಂ ಗೌರಿ ನಿರ್ಮಲವಿಚಾರಿ ೧೬

ಎಲೆ ದೇವ ನೋಡಯ್ಯ ನಲವಿನಿಂ ಕ್ರೀಡಿಸುವ
ಶುಲಭನಂ ಬಾಲನಂ ಷಣ್ಮುಖನನತಿಶಯುದ
ಚೆಲುವನಂ ಬಾಲಸೂರ್ಯಪ್ರಭೆಯ ದೇಹನಂ ಸರ್ವಭೂಷಣ ಭೂಷನಂ
ವಿಲಸಿತದ ಮಣಿಮಯಕಿರೀಟದಿಂ ಪೊಂಗಡೆಯ
ದುಲುಪಿನಿಂ ವಜ್ರಕುಂಡಲದಿಂ ಸುವರ್ಣಮಯ
ದಲಘು ಕಟಕಂಗಳಿಂದೆಸೆವ ಸುಕುಮಾರನಂ ನೋಡು ನೋಡೆನುತಿರ್ದಳು ೧೭

ಉಡಿಯ ಮಣಿನೂಪುರಂಗಳಿನಮಲ ಮೌಕ್ತಿಕದ
ಗಡಣದೊಳ್ಹಾರಂಗಳೀದ ನಾನಾ ರತ್ನ
ವಿಡಿಕಿರಿದ ಮಿಗೆ ಚೆಲ್ವಿನುದರ ಬಂಧದಿನುಲಿವ ಪೊಂಗೆಜ್ಜೆಗಳ ಸೊಗಸಿನಿಂ
ಬೆಡಗಿಂದ ಪಣೆಯೊಳೆಸೆವರಳೆಲೆಯು ಸೊಬಗಿನಿಂ
ದೆಡೆವಿಡದ ಕಲ್ಪಕುಜದರೆವಿರಿದ ಪೂಗಳಂ
ಮುಡಿದ ಕೇಶದ ಕಂದನಂ ನೋಡು ಮನ್ನಾಥ ನೋಡೆನುತಿರ್ದಳು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೊಟ್ಟು ಚಿತ್ರಾಂಗಿಯಿಂದೆಸೆವನಂ ಪೂರ್ಣಮಿಯ
ಬಟ್ಟ ಚಂದಿರಗೆ ಮಿಗಿಲಾದ ಕಾಂತಿಗಳೊಳಳ
ವಟ್ಟನಂ ಶುಭ್ರಭಸಿತದ ಪಣೆಯ ಚಂದನದ ತಿಲಕನಂ ಸರ್ವಾಂಗವ
ನೆಟ್ಟನಾ ಲೇಪಿಸಿದ ಯಕ್ಷಕರ್ದಮವುಳ್ಳ
ನಿಟ್ಟನಂ ಮಿಸುಪಾಱು ಮೊಗದ ನೀಱನನಿಲ್ಲಿ
ದಿಟ್ಟಿಗಳ ಸಾಲ್ಗಳಿಂದೆಸೆವನಂ ನೋಡು ನೋಡೆಂದು ತೋಱುತ್ತಿರ್ದಳು ೧೯

ಪಣೆಯೊಳಾ ಗಂಗಾದಿಗಳು ಕೃತ್ತಿಕಾದಿಗಳು
ಗಣಿದಿ ಸಲ್ಕಾಕೃತ್ತಿಕೆಯರಾ ಸ್ವಹಾದಿಗ
ಳ್ಪ್ರಣಯದಿಂದಿಟ್ಟ ರಕ್ಷೆಗಳಿಂದ ಮೆಱೆವ ಸುಕುಮಾರನಂ ಚೆನ್ನಿಗನನು
ಗುಣಮಣಿಯು ಕಂದನಂ ನಮ್ಮ ಭಾಗ್ಯದದೊಂದು
ಕಣಿಯನಬಲನ ಮಗನ ನೋಡು ನೋಡೆಂದು ತತ್
ತ್ರಿಣಯನಂತಃಕರಣಮಂ ಸೂಱೆಗೊಂಬ ಸವಿನುಡಿಯೊಳಂಗನೆ ನುಡಿದಳು ೨೦

ಇಂತು ಸವಿನುಡಿಯಿಂದ ಕಂದನಂ ಪೊಗಳುತಿಹ
ಕಾಂತೆಯ ವಚೋವಿಲಾಸಕ್ಕೆ ಸರ್ವೇಶ್ವರಂ
ಸಂತೋಷಿಸುತ್ತ ಸುಕುಮಾರಕನ ಮೊಗಮೆಂಬ ಚಂದ್ರನೊಳಮರ್ದಪೀರ್ದು
ಮುಂತೆ ದಣಿಯದೆ ನೋಡಿ ನೋಡುತ ಸುಖಂಬಡೆವು
ತಂತಲ್ಲಿ ಮೊಱೆಯಿಡುವ ಹರಿಮುಖ್ಯವಹ ದೇವ
ಸಂತತಿಯ ಮಱೆದನೀಶ್ವರನೆನಲು ಸುತಮೋಹಕೆಣೆಯಪ್ಪ ಮೋಹವುಂಟೇ ೨೧

ಅಗಜಾವರಂ ಕಂದನಂ ಹಸ್ತವೆರಡರಿಂ
ತೆಗೆದೆತ್ತಿ ಮೈನವಿರು ರ್ಝುಮ್ಮೆನುತ್ತಿರೆ ಚೆಲ್ವ
ಮೊಗವನೀಕ್ಷಿಸಿ ಮತ್ತೆ ನೋಡಿ ದಣಿಯದೆ ನೋಡಿಯಪ್ಪಪ್ಪ ಕಂದಕಂದಾ
ಸುಗುಣ ಯೆನ್ನಯ್ಯನೇ ಬಾಳು ಬಾಳೆಂದೆದೆಯೊ
ಳಗಲದಂತಪ್ಪಿ ಮುಂಡಾಡಿ ಮುದ್ದಿಸಿ ಬಳಿಕ
ಬಿಗಿದು ತಕ್ಕೈಸಿಯಾನಂದಿಸಿದನೀಶ್ವರನ ಮೋಹಮಂ ಪೊಗಳಲಳವೇ ೨೨

ಗುಣಮಣಿಯ ಬಾಯೆಂದು ಮುದ್ದಾಡುತೊಲಿದೆದ್ದು
ಕುಣಿದಾಡತೊಡಗಿದಂ ದೇವದೇವೇಶ್ವರಂ
ಅಣಿಯರದಲೊಡನೆ ಕುಣಿದರು ಗಣಂಗಳು ಗೌರಿ ಸಕಲ ಶಕ್ತಿಯರು ಸಹಿತ
ಪ್ರಣಯದಿಂ ದರಮನೆಯ ನೊಳಪೊಕ್ಕನನಿಬರೊಳ್
ತ್ರಿಣಯನಾ ಸುತಮೋಹದಿಂ ಸುರರ್ಕಳ ಮೊಱೆಯ
ನೆಣಿಕೆಗೊಳ್ಳದೆ ಹೋದನವರಭಾಗ್ಯತೆಯಿಂದಲಿನ್ನದೇ ಪಣ್ಣಿಸುವೆನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಕರದೆ ನರ್ತಿಸುತ್ತಿರಲೀಶನೊಳು ಮೂಱು
ಲೋಕದೊಳು ನರರು ನಾಗಾಮರರು ಕುಣಿಯಲ್ಕ
ನೇಕ ಸುರದುಂದುಭಿಗಳುಲಿಯೆ ಬಹು ಪುಷ್ಪವೃಷ್ಟಿಗಳು ಭೋರ್ಗರೆದು ಸುರಿಯೆ
ಆ ಕುಮಾರನನೆತ್ತಿಕೊಂಡವನ ಮೊಗವನಾ
ಲೋಕಿಸುತ ಪುಳಕಿಸುತ ಕೀರ್ತಿಸುತ್ತರಮನೆಯ
ಜೋಕೆಯಿಂದೊಳಪೊಕ್ಕು ಮಗನ ಮುದ್ದಾಡುತಿಂತಿರ್ದನಾನಂದದಿಂದ ೨೪

ದೇವತಾಸಾಹಸ್ರ ವರುಷಪರಿಯಂತರಂ
ಭಾವಿಸುತ ಕುವರನಂ ಮುದ್ದಾಡುತಿರೆ ಮಹಾ
ದೇವನಿತ್ತಂ ಬಾಗಿಲೊಳಗಿರ್ದು ಸಂದಣಿಸಿ ಚಿಂತಿಸುತ ಚಿತ್ತದೊಳಗೆ
ದೇವರ್ಕಳಿಂತೆಂದರೆಯ್ದೆ ತಮ ತಮಗಿನ್ನು
ನಾವೇವೆವಕ್ಕಟಾ ನವನಿಧಿಯು ಪಡೆದು ಬಳಿ
ಕಾ ವಿಘಳಿಗೆಯೊಳದಂ ನೀಗಿರ್ದ ಭಾಗ್ಯ ದಾರಿದ್ರರಂತಾದೆವಯ್ಯೋ ೨೫

ಲೋಕಮಂ ಪೊರೆವ ತಾಯೇ ನಾವು ಮೊಱೆಯನಿಡು
ವಾ ಕಾಲದೊಳಗೀಶ್ವರಂ ವಿಚಾರಿಸದಂತೆ
ಯಾ ಕುಮಾರನ ತೋಱ ತಪ್ಪಿಸಿದಳೆಮ್ಮ ಕಾರ್ಯವನಕಟ ಕೆಟ್ಟೆವಿನ್ನು
ಆ ಕುಠಾರರ ಕೈಯ್ಯ ಕೊಲೆಗೆ ಸಿಲ್ಕಿದೆವೆಂದ
ನೇಕ ದೇವರ್ಕಳೊಂದೊಂದ ಚಿಂತಿಸಿ ಮಹಾ
ವ್ಯಾಕುಲವನೆಯ್ದಿ ನುಡಿವುತ್ತಿರ್ದರಾ ಸಮಯದೊಳಗದೇಂ ವರ್ಣಿಸುವೆನು ೨೬

ಕೆಟ್ಟೆವಾವೆಂಬರು ಕೆಲಬರಾವು ಪಾಪಿಗಳು
ಕಟ್ಟರೆಂಬವರರೆಬರಾವು ಕರ್ಮಿಗಳಲಾ
ದಿಟ್ಟೆ ಮೂಱರ ದೇವನಂ ಕಂಡು ಕಾಣದಜ್ಞಾನಿಗಳೆನುತ್ತ ಬಾಯ
ಬಿಟ್ಟು ಪಲುಬುವರು ಪಲರಕ್ಕಟಾ ಜಯಿಸಿದರು
ದಿಟ್ಟ ರಕ್ಕಸರು ಮಾಡಿದ ತಪದೊಳೆಂದು ಮೊಱೆ
ಯಿಟ್ಟರೊಗ್ಗೊರಳಾಗಿ ಬಿನ್ನಪವನವಧರಿಸು ದೇವಾಯೆನುತ್ತಲಾಗ ೨೭

ಅವರ ನುಡಿಯಂ ಕೇಳಿ ಬಾಗಿಲಂ ಕಾಯ್ದಿಹ
ಪ್ರವಿಮಲದ ಕುಂಭೋದರಂ ಪಿಶಾಚಿಗಳಿರಾ
ಶಿವನಕ್ಕಱಿಂ ಕುಮಾರನನೊಲ್ದು ಮುಂಡಾಡುತಿರ್ಪ ಕಾಲದೊಳು ನೀವು
ವಿವಿಧ ಪ್ರಕಾರದೊಳಮಂಗಲದ ನುಡಿಯೊಳಂ
ಎವಗಾರು ಗತಿಗೆಟ್ಟೆವೆನುತ ಪೇಚುವಿರೆಂದು
ಸವಿಶೇಷದಂಡದಿಂದಟ್ಟಿಬಡಿವುತ್ತಿರ್ದನನಿಬರಂ ಝುಂಕಿಸುತ್ತ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆನ್ನು ಮುಱಿಯಿತ್ತೆಂಬವರ್ಕೆಲರು ಬಾಸುಳ್ಗ
ಳಿನ್ನ ಮೈಯೊಳ್ಬಿದ್ದವೆಂಬವರ್ಕೆಲರು ಕೆಲ
ರಿನ್ನೇವೆವಕ್ಕಟಾಯೆಂದು ಮೋರೆಗಳು ಬೆಮರಿಡಲು ನಾಲ್ದೆಸೆಗೆ ಪರಿದು
ಎನ್ನಯ್ಯ ತಂದೆ ಕೊಲ್ಲದಿರೆಂಬವರ್ಕೆಲರು
ಅನ್ನಯವ ಮಾಡಿದೆವು ಕಾಯೆಂಬವರ್ಕೆಲರು
ನಿನ್ನ ಪಾದಕ್ಕೆ ಬೀಳುವೆವು ಬಡಿಯದಿರೆಂದು ಘೋಳಿಡುವರಂತರೆಬರು ೨೯

ಒಂದು ಹುಯಿಲಂ ಗಣೇಶ್ವರನೆಯ್ದೆ ಹೊಡೆಯಲು ಮು
ಕುಂದ ಕಮಲಜನಿಂದ್ರ ಮೊದಲಾದ ದೇವತಾ
ವೃಂದ ಮನುಮುನಿಗಳೆಲ್ಲರ ತಾಗುತಿರಲಾವ ದೆಶೆಗೋಡಲಲ್ಲಲ್ಲಿಗೆ
ಬಂದು ಬೀಳುವವು ಹುಯಿಲುಗಳು ಕಂಗೆಟ್ಟಲ್ಲಿ
ಹಿಂದಕ್ಕೆ ತಿರುಗುವನಿತಕ್ಕೆ ದನುಜರ ಭೇರಿ
ದಾಂಧಳಂ ಧಳಮೆಂದು ಮೊಳಗೆ ಕೇಳುತ್ತ ನಡನಡುಗಿದರು ದೇವರ್ಕಳು ೩೦

ಅಕ್ಕಟಾ ಹಿಂದಕ್ಕೆ ತಿರುಗಿದಡೆ ತಾರಕನ
ಮಕ್ಕಳಾರ್ಭಟವಿತ್ತು ಕುಂಭೋದರಂ ಬೆನ್ನು
ಬಿಕ್ಕನೆ ಬಿರಿಯೆ ತಾಡನಂಗೆಯ್ವ ಬಾಧೆಯೇಗೆಯ್ವೆವೆಂದಮರರೆಯ್ದೆ
ಉಕ್ಕುತಿಹ ಚಿಂತೆಯಿಂದಿಪ್ಪೆಡೆಯೊಳವರ ಭಾ
ಗ್ಯಕ್ಕೆಣೆಯೆ ಸಾಕ್ಷಾತ ಧರ್ಮಾಂಗನೆರಡನೆಯ
ಮುಕ್ಕಣ್ಣನೆನಿಪ ನಂದೀಶ್ವರಂ ಚಿತ್ತೈಸುತಿರ್ದನೇ ವಣ್ಣಿಸುವೆನು ೩೧

ಉರು ಜಟಾಮುಕುಟದಿಂ ಸರ್ವಾಂಗಲೇಪನೋ
ತ್ಕರಭಸಿತದಿಂ ತ್ರಿಪುಂಡ್ರಾಂಕ ಭಾಳಾದಿಯಿಂ
ನಿರುಪಮಿತ ರುದ್ರಾಕ್ಷಮಾಲೆಗಳಿನಮಲ ಕಟಕಂಗಳಿಂ ಮಸ್ತಕದೊಳು
ಧರಿಸಿರ್ದ ಶಿವಲಿಂಗದೇವರಿಂ ಜಿಹ್ವೆಯೊಳು
ಪರಮ ಪಂಚಾಕ್ಷರೋಚ್ಚರಣೆಯಿಂ ಹೃದಯದೊಳ
ಗೆರವಿಲ್ಲದಮಲ ಶಿವಮೂರ್ತಿಯಿಂದೆಸೆವ ನಂದೀಶ್ವರಂ ಬರುತಿರ್ದನು ೩೨

ಗಂಡಸ್ಥಲಂಗಳೆರಡರೊಳು ತಳತಳಿಸುತಿಹ
ಕುಂಡಲಂಗಳ ಕರ್ಣಯುಗಳದಿಂ ಕೊರಳಲ್ಲಿ
ಖಂಡಪರಶುಗೆ ಸಮರ್ಪಿಸಿದ ಕುಸುಮಾವಳಿಯ ಮಾಲೆಯಿಂ ಕರದೊಳೆಸೆವ
ದಂಡ ಶೂಲಾದಿಯಿಂ ಸ್ಮೇರಾನನಾಬ್ಜದಿಂ
ಮಂಡಿಸಿದ ಸುಲಿಪಲ್ಲ ಕಿರಣದಿಂ ದೇಹಪ್ರ
ಚಂಡ ತೇಜಸ್ಸಿನಿಂ ಧರ್ಮಸ್ವರೂಪನಂದೀಶನೆಯ್ತರುತಿರ್ದನು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಕಿಸಲಖಂಡೈಕ ಭಕ್ತಿ ಗುರುಭಕ್ತಿ ಮೊದ
ಲುರುತರತ್ರಿತಯುವಾ ಶ್ರದ್ಧಾದಿ ಸಮರಸೋ
ತ್ಕರವೆ ಕಡೆಯಾದಾಱು ಬಳಿಕಲಾ ಶ್ರವಣಾದಿಯಾತ್ಮಾರ್ಪಣಾಂತ ನವಮಾ
ಸ್ಥಿರ ಭಕ್ತಿ ಮತ್ತೆ ಮೂವತ್ತಾಱು ಭಕ್ತಿಸೌಂ
ದರ ದೇಹವಾಗಿ ಪರ್ವತ ಭೃಂಗಿಗಳ್ ಜ್ಞಾನ
ಪರಮ ವೈರಾಗ್ಯರವರ ಸಹೋದರಂ ಭಕ್ತ ನಂದೀಶನೆಯ್ತರುತಿರ್ದನು ೩೪

ಅಡರಿ ವೃಷಭೇಶನಂ ಕೆಲಬಲಂಗಳೊಳು ಸಾ
ಲ್ವಿಡಿದು ಸೇವಿಸುವ ಗಣನಾಥರಿಂ ಮುಂಗಡೆಯು
ಪಿಡಿದ ವೃಷಭಧ್ವಜದ ಪೆರ್ಮೆಯಿಂ ಜಯ ಜೀಯ ಭಾಪೆಂಬ ಸತ್ಪ್ರಮಥರ
ಗಡಣವಾ ಮೇಘದಂಭಃ ಕಣಾವಳಿಗಳಿಂ
ಕಡು ಮಿಗಿಲೆನಿಪ್ಪ ಬಲದಿಂದ ವೈಭವವೆಸೆಯೆ
ನಡೆದು ಬರುತಿರ್ದನಾ ನಂದೀಶನಮಲಪ್ರಕಾಶಸದ್ಧರ್ಮಕೋಶ ೩೫

ಮತ್ತೆಯಾ ನಂದೀಶ್ವರಂಗೆ ಪಿಡಿದಿಹ ಚೆಲ್ವ
ಪತ್ತಿಗೆಯ ಸೌಂದರಿಯುದಗಲಮಂ ಭಾವಿಸಲು
ಹತ್ತು ಯೋಜನವಲ್ಲಿ ಮೇಘದಿಂ ಶುಭ್ರತ್ವದಿಂ ಬಿಡದೆ ಸಾರ್ವ ಗಂಗೆ
ಯುತ್ತುಮದ ಶಿವಮಕುಟದೆಡೆಗೆ ಬಪ್ಪಂದದಿಂ
ಮುತ್ತುಗಳ ಮಾಲೆ ಶೋಭಿಸುತಿರಲು ಬಹುವಾದ್ಯ
ವೆತ್ತೆತ್ತಲುಲಿಯೆ ಸಂಭ್ರಮದಿ ನಂದೀಶ್ವರಂ ಚಿತ್ತೈಸುತಿರ್ದನಲ್ಲಿ ೩೬

ಬಿಳಿಯಾನೆಯಡರಿ ದೇವರ್ಕಳೋಲೈಸುವ
ಗ್ಗಳದಿಂದ ಬರುತಮಿರ್ಪಿಂದ್ರನಂ ಜಱೆವ ನಿ
ರ್ಮಳ ವೃಷೇಶನನೇಱಿ ಗಣನಿಕರವೆಯಿದೆ ಸೇವಿಸೆ ಬಪ್ಪ ನಂದೀಶನ
ವಿಳಸಿತದ ಮಸ್ತಕದೊಳಂ ಝೇಂಕರಿಪ ಭೃಂಗ
ಮಿಳಿತ ಸುರಕುಜಪುಷ್ಪವೃಷ್ಟಿಗಳು ಸುರಿಯಲ
ಗ್ಗಳ ದೇವವಾದ್ಯಕಹಳಾರವಂ ಕೂಡೆ ಭೋರ್ಗರೆಯೆ ನಡೆತರುತ್ತಿರ್ದನು ೩೭

ಶ್ರೀ ನಂದಿಕೇಶ್ವರನ ಕಂಡಲ್ಲಿ ದೇವಸಂ
ತಾನವಂಬುಧಿಯೊಳಂ ಮುಳುಗಿಹೋಹಂಗಾ ನ
ವೀನದ ವಹಿತ್ರವಾದಂತೆ ಕುಂಭೋದರನ ಬಡಿತದಿಂ ಮುಂದುಗೆಡುತ
ಆ ನಿಖಿಲರೊಬ್ಬುಳಿಯೊಳಂ ಧರ್ಮರೂಪನಂ
ಮಾನನಿಧಿಯಂ ಸೌಮ್ಯವದನನಂ ನಿರ್ಮಲನ
ನಾನಂದದಿಂ ಕೀರ್ತಿಸುತ್ತಿರ್ದರತಿ ಮಧುರದಿಂದಲೇ ವರ್ಣಿಸುವೆನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವಿಸೆ ನಮೋ ರುದ್ರಭಕ್ತಾಯ ರುದ್ರನಜ
ಪಾವಳಿಯೊಳತಿ ಪರಾಯಣರುದ್ರಭಕ್ತಾರ್ತಿ
ಹಾ ವಿಶೇಷಜ್ಞನಿನೇ ನಮೋ ರೌದ್ರಕರ್ಮದೊಳು ರತಿಯುಳ್ಳಾತನೆ
ಆ ವಿಮಲ ಕೂಷ್ಮಾಂಡ ಗಣನಾಯಕಾಯ ತೇ
ಪಾವನದ ಯೋಗೀಶರೊಡೆಯ ನಿನಗೋಸ್ಕರಂ
ನಾವು ವಂದಿಸಿ ಬಾಳ್ವೆವೆಂದು ಕೊಂಡಾಡಿದರು ದೇವರ್ಕಳಾನಂದಿಸಿ ೩೯

ಸರ್ವಮಂ ಕೊಡುವನೇ ರಕ್ಷಿಸುವ ಕರ್ತನೇ
ಸರ್ವಜ್ಞಮೂರ್ತಿಯೇ ಕಂಟಕನಿವಾರಣಾ
ಸರ್ವದೇವರ್ಕಳೊಡೆಯನೆ ವೇದವೇದ್ಯನೇ ವಜ್ರಿಯೇ ವಜ್ರದಂಷ್ಟ್ರ
ಖರ್ವನೇ ವಜ್ರಿಣೋ ವಜ್ರಹರನೆನಿಪನೇ
ಪರ್ವತಸಹೋದರಾ ವಜ್ರಕುಂಡಲಧರಾ
ನಿರ್ವಿಘ್ನರೂಪನೇ ವಜ್ರಿಣೋದಾರಿತಾ ನಿನಗೆ ವಂದಿಪೆವೆಂದರು ೪೦

ರಕ್ತಾಯ ರಕ್ತನೇತ್ರಾಯ ರಕ್ತಾಂಬರಾ
ರಕ್ತಿ ನಿನ್ನಯ ಪಾದದೆಡೆಯೊಳುಳ್ಳರನಘವಿ
ರಕ್ತರೆನೆ ರುದ್ರಲೋಕವನೆಯ್ದಿಪನೆ ಗಣಂಗಳ ಸೇನೆಗಧಿನಾಥನೇ
ಶಕ್ತಿರುದ್ರರ್ಗೊಡೆಯ ಸಕಲ ಭೂತಂಗಳಿಗೆ
ಯುಕ್ತಭುವನೇಶ್ವರರ್ಗಧಿಪನೇ ಪಾಶನಿ
ರ್ಮುಕ್ತನಂದೀಶ್ವರಾ ನಿನಗೋಸ್ಕರಂ ವಂದಿಸಿದೆವೆಂದು ಕೀರ್ತಿಸಿದರು ೪೧

ರುದ್ರಾಯ ತೇ ನಮೋ ಬಹು ಕಮಲಜಾಂಡಾಗ್ರ
ರುದ್ರರೆಲ್ಲಕ್ಕಧಿಪನೇ ರೌದ್ರಪಾಪಹಾ
ರುದ್ರಭಕ್ತಿಯನುಳ್ಳ ಶಿವಸೌಮ್ಯರೂಪನೇ ತುಭ್ಯಂ ನಮೋ ಯೇನುತ್ತ
ಚಿದ್ರಮಣ ನಂದಿಕೇಶ್ವರನ ನಾನಂದದು
ದ್ಯದ್ರತಿಯೊಳಜಹರೀಂದ್ರಾದಿ ದೇವರ್ಕಳುಮು
ಪದ್ರವ ನಿವಾರಣಾರ್ಥಂ ನಮಿಸಿ ಕೀರ್ತಿಸುತ್ತಂ ಬಳಿಕ್ಕಿಂತೆಂದರು ೪೨

||ಸಾಕ್ಷಿ|| ಲೈಂಗಪುರಾಣೇ ನಂದೀಶ್ವರನ ಸ್ತೋತ್ರ
ದೇವಾಃ ಉವಾಚ:

"ನಮಸ್ತೇ ರುದ್ರಭಕ್ತಾಯ ರುದ್ರಚಾಪ್ಯಪರಾಯತೇ
ರುದ್ರಭಕ್ತಾರ್ತಿನಾಶಾಯ ರೌದ್ರಕರ್ಮರತಾಯತೇ ೧

ಕೂಷ್ಮಾಂಡ ಗಣನಾಥಾಯ ಯೋಗಿನಾಂ ಪತಯೇ ನಮಃ
ಸರ್ವದಾಯ ಶರಣ್ಯಾಯ ಸರ್ವಜ್ಞಾಯಾರ್ತಿಹಾರಿಣೇ ೨

ದೇವಾನಾಂ ಪತಯೇ ಚೈವ ವೇದವೇದ್ಯಾಯತೇ ನಮಃ
ವಜ್ರಿಣೇ ವಜ್ರದಂಷ್ಟ್ರಾಯ ವಜ್ರೇ ವಜ್ರನಿವಾರಿಣೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀಯ ತಾರಕನ ಮಕ್ಕಳು ನೆಗಳುವತಿಶಯದ
ಪಾಯಕ್ಕೆ ಸುಗಿದೀಶ್ವರಂಗೆ ಬಿನ್ನವಿಸೆ ಕಾ
ತ್ಯಾಯನಿ ಕುಮಾರನಂ ತೋಱಲಾ ವೇಳೆ ನಮ್ಮಂ ಮಱೆದು ಸುತಮೋಹದಿಂ
ಮಾಯಾರಿಯರಮನೆಯನೊಳಪೊಗಲು ಬಾಗಿಲೊಳ
ಗೀಯಖಿಳ ದೇವರ್ಕಳಾವು ಮೊಱೆಯಿಡೆ ಕೇಳು
ತಾಯುಗ್ರಕುಂಭೋದರಂ ಬಡಿವುತಿರ್ದಪಂ ದೇವ ಚಿತ್ತೈಸೆಂದರು ೪೩

ಹಿಂದಕ್ಕೆ ತಿರುಗಿಯೋಡಲು ರಕ್ಕಸರ ಬಾಧೆ
ಮುಂದೀಶನರಮನೆಯ ಸಾರಕುಂಭೋದರಂ
ಕೊಂದಪಂ ನಿಃಕರುಣದಿಂದೀಗಳೆಮ್ಮ ಭಾಗ್ಯದೊಳು ನಿಮ್ಮಂಘ್ರಿಗಳನು
ತಂದೆ ಕಂಡಾವು ಬದುಕಿದೆವೆನಲು ಸಂತಯಿಸಿ
ನಂದಿಕೇಶ್ವರನನಿಬರೋಲೈಸಿ ಬರಲು ಸಾ
ನಂದದಿಂ ನಡೆತರುತ್ತಿರ್ದನಭವನ ರಾಜಮಂದಿರದ್ವಾರದೆಡೆಗೆ ೪೪

ಕಂಡು ಕುಂಭೋದರಂ ಭಕ್ತಿಯಿಂ ಸಾಷ್ಟಾಂಗ
ದಂಡಪ್ರಣಾಮಮಂ ಮಾಡಿ ಬಳಿಕೆದ್ದು ಮುಂ
ಕೊಂಡು ಧರ್ಮಸ್ವರೂಪಾ ನಿನ್ನ ಲೆಂಕ ನಾನೆಂದು ಕೀರ್ತಿಸೆ ಕಾಣುತ
ಕುಂಡಲಂಗಳ ಬೆಳಗಿನೊಳಗೆ ದಂತಪ್ರಭಾ
ಮಂಡನಂ ಪರಕಲಿಸೆ ನಸುನಗುತ ನುಡಿದನಾ
ಪಾಂಡುರಂಗದ ನಂದಿಕೇಶನಘನಾಶ ಸಂಕಾಶ ಸುಜ್ಞಾನಕೋಶಾ ೪೫

ಏಕೆ ಕುಂಭೋದರಾ ದೇವರ್ಕಳಂ ಬಡಿದೆ
ನೀ ಕರುಣೆಯಲ್ಲಲೇ ಯೆನೆ ಜೀಯ್ಯ ಶಂಭುನಿ
ರ್ವ್ಯಾಕುಲಂ ಸುತನ ಮುದ್ದಾಡುತಿಪ್ಪೆಡೆಯೊಳಿವದಿರು ಬಾಯ್ಗೆ ಬಂದಂದದೆ
ನಾ ಕೆಟ್ಟೆ ಬೆಂದೆನಯ್ಯೋ ಯೆಂದು ಪೇಚುತಿ
ಪ್ಪಾ ಕಾರಣದೊಳೆನಲು ನೀವು ಶಿವಸನ್ನಿಧಿಯ
ನೇಕಸುಖಿಗಳು ದುಃಖಮಂ ಕನಸಿನೊಳಗಱಿಯದಱಿಂದ ಕೊಂದೆಯ್ಯೆಸೇ ೪೬

ಇನ್ನಂತು ಬೇಡವ್ವೆ ಸಕಲ ದುಃಖಿಗಳುಂಟು
ಮನ್ನಿಸವರಂ ಕರುಣದಿಂದೆನಲು ಜೀಯ್ಯ ಸಂ
ಪನ್ನ ಚಿತ್ತೈಸೆಂದು ಮೊದಲಂತುಮಾಳ್ಪೆನೆಂದಾಗಳಾ ಕುಂಭೋದರಂ
ಚಿನ್ನಿಧಾನಸ್ವರೂಪದ ನಂದಿಕೇಶ್ವರಂ
ಗನ್ನಿಜಾಧೀಶಂಗೆ ಧರ್ಮರೂಪಂಗಾಗ
ಬಿನ್ನವಿಸಿ ಕೂಡಲೋಲೈಸಿ ಬರುತಿರಲಾತನೆಯಿತಂದನಳ್ತಿಯಿಂದ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತರದ ಬಾಗಿಲ್ಗೆ ನಡೆತರಲು ನಂದಿನಾ
ಥಂ ತನುವೆ ಪುರುಷರಾಕಾರವಾಸ್ಯಂ ವೃಷಭ
ನಂತೆ ಕಾಯ್ದಿರ್ದದ್ದು ಸಾಷ್ಟಾಂಗದಿಂ ನಮಿಸಿ ನಿಲಲು ವೃಷಭನನಿಳಿವುತ
ಮುಂತವನ ಕೈವಿಡಿದುಕೊಂಡು ನಂದೀಶ್ವರಂ
ಕಂತುಹರನಾತ್ಮಜನ ಮುದ್ದಾಡಿ ಕುಣಿವುತಿಹ
ಸಂತಸದ ಕಾಲದೊಳಗೊಳಪೊಕ್ಕು ನಂದಿಕೇಶ್ವರನಭವಗಂ ನಮಿಸಲು ೪೮

ಇತ್ತ ಬಾ ನಂದಿಕೇಶ್ವರ ಎಂದು ಶಂಭು ನುಡಿ
ವುತ್ತಿರಲು ಜೀಯ ರಾಕ್ಷಸರು ತತ್ತ್ರಿಪುರದೊಳಿ
ರುತ್ತಖಿಳ ದೇವರ್ಕಳಂ ಬಡಿವುತ್ತೈದಾರೆಯೆಂದು ಬಿನ್ನವಿಸೆ ಕೇಳಿ
ಚಿತ್ತಜಾಂತಕನಖಿಳ ವರುಷವಾ ಪುತ್ರನಂ
ಎತ್ತಿ ಕುಣಿದಾಡುತಿರ್ದವನೆಂದನಾಗಂ ಬ
ರುತ್ತ ಮೊಱೆಯಿಟ್ಟ ಹರಿಮುಖ್ಯರಿರ್ದಪರೇಯೆನುತ್ತಂ ವಿಚಾರಿಸಿದನು ೪೯

ಅಹುದಲಾ ರಕ್ಕಸರ ಸಂಹಾರಮಂ ಮಾಡಿ
ಬಹೆವಾವು ನಂದಿಕೇಶ್ವರ ಹೋಗು ದೇವರ ನಿ
ವಹಕಭಯವಿತ್ತಧಿಕರಥವನೊಡರಿಚಹೇಳು ವಿಶ್ವಕರ್ಮನನೆಂದೆನೆ
ಮಿಹಿರಪ್ರಕಾಶನಂದೀಶನರಮನೆಯನತಿ
ವಹಿಲದಿಂ ಹೊಱವಂಟು ಸಂತೈಸುತಮರರಂ
ಪ್ರಹರಿಸುವನೀಶನಾ ತ್ರಿಪುರಮಂ ಘನವರೂಥಂ ಬೇಗವಾಗಲೆಂದಂ ೫೦

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಷಟ್‌ಸ್ಥಲ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೫೧

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಸ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ನಂದಿ ರಥವನೊಡರಿಚಪೇಳ್ದುದೊಂದು ಕಾಂಡದ ಮೇಲೆ
ಸಂಧಿನವಮಂ ೫೨

ಅಂತು ಸಂಧಿ ೯ಕ್ಕಂ ಪದ ೫೧೮, ಗ್ರಂಥ ೪೯ಕ್ಕಂ ಮಂಗಳಮಹಾ
ಶ್ರೀಶ್ರೀಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೧೯

ನಿರ್ಮಿಸಿದ ರಥವನೇಱುತ್ತ ಚಾತುರ್ಬಲದ
ಪೆರ್ಮೆಯಿಂ ದೇವಗಣನಿಕರದೊಳು ನಡೆದು ಗಿರಿ
ಕಾರ್ಮುಕಂ ತತ್ತ್ರಿಪುರಸೀಮೆಯೊಳು ದಂಡಬಿಟ್ಟಂ ಘನವಿಲಾಸದಿಂದ

ಶರದ ಮಗನೇ ಸೂತನವನ ಬಾಯೊಳಗಾದ
ತುರಗವಾ ನಿಜನೇತ್ರವೆರಡುಗಾಲಿಗಳಗಜೆ
ಯರಸನಿನ್ನೊಗನ ತುದಿಯೊಳ್ಕುಳಿತೆ ತಿರುವಿನಗ್ರದೊಳುರುರಥವದಱ ನಡುವೆ
ಪರಮು ತೂಣೀರವಾಮಧ್ಯದೊಳು ಬಿಲ್ಲಂಬು
ನಿರುತೈಕವದಕೆ ಗುರಿ ಮೂಱೆಂದೆನಿಪ್ಪ ಮು
ಪ್ಪುರನುಂ ಗೆಲಿದ ಚಿತ್ರತರ ಶಾಂತಮಲ್ಲೇಶಮೂರ್ತಿ ದಿಗ್ಭರಿತಕೀರ್ತಿ ೧

ಆನತ ಜನಾಂತರ್ಮಯೇಂದ್ರಿಯಗ್ರಾಮಮುಂ
ತಾನನೃತವಾಕ್ಪುರವನಖಿಳ ದುಃಕ್ರೀಯುತಾ
ಜ್ಞಾನಸಂಬಂಧಪುಟಭೇದನಮನೀ ತ್ರಿಪುರಮಂ ಚಿದನಲಾಕ್ಷಿಯಿಂದ
ನೀನುರುಪುತಿಷ್ಟಸುಪ್ರಾಣ ಭಾವತ್ರಯಾ
ಸ್ವಾನುಭವಲಿಂಗಮುಂ ತೋಱಿಸಿದ ಗುರುತರ
ಸ್ಥಾನ ಮೇಲಣಗವಿಯು ಶಾಂತನಂಜೇಶ್ವರಸ್ವಾಮಿ ಮಹಿಮಾಗ್ರನಾಮಿ ೨

ತಾಂ ಬಳಿಕ ಬಿನ್ನವಿಸಿದಂ ಕೆಂಚವೀರಾಹ್ವ
ಯಂ ಬಹುಲ ಕರುಣಾಸಮುದ್ರ ಹಲಗೆಯ ಗುರುವೆ
ಯಂಬಿಕಾಪತಿಯು ನೇಮದೊಳು ನಂದೀಶ್ವರಂ ರಥವನೊಡರಿಚವೇಳ್ದನು
ಯೆಂಬ ತತ್ಕಥನದಿಂ ಮುಂದದೇನಾಯ್ತುಯ್ಯ
ಒಂಬತ್ತನೆಯ ಶಿವನ ಲೀಲೆಯೊಳಗೆನಲು ನಲ
ವಿಂ ಬಂದು ಬೇಗವಾಗಲಿ ವರೂಥಂ ಶಿವಂಗೆಂದನಾ ಧರ್ಮರೂಪಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನೆ ನಂದಿಕೇಶ್ವರನ ನೆನಹುಮಾತ್ರದೊಳು ಬಂ
ದನು ನಿಮಿಷದೊಳು ವಿಶ್ವಕರ್ಮನಂತಾ ಮಹೇ
ಶನ ಪದಧ್ಯಾನದಿಂ ನಿರ್ಮಿಸಿದನ್ಯೆ ಮಹಾರಥವನಾ ಬಲ್ದೇರಿನ
ಅನುವದೆಂತೆನೆ ಸರ್ವಲೋಕಮಯ ಸರ್ವದೇ
ವ ನಿಕಾಯಮಯ ಸರ್ವಭೂತಮಯ ಸರ್ವವೇ
ದ ನವೀನಮಯವತಿ ಸುವರ್ಣಮಯವಾಗಿ ರಾಜಿಸಿದುದುದೇಂ ಪೊಗಳುವೆಂ ೪

ಆ ರಥಕೆ ಗಾಲಿಗಳು ಬಲದಲ್ಲಿ ಸೂರ್ಯನಾ
ಚಾರು ಚಂದ್ರಮನೆಡದೊಳಾ ದಕ್ಷಿಣದ ಚಕ್ರ
ಕಾರವೆನಿಸುವ ಮೊಳೆಗಳೆಯಿದೆ ಪನ್ನೆರಡು ತರಣಿಯ ಕಲೆಗಳವರ ನಾಮ
ಆರಯ್ಯೆ ತಪನಿ ಭಾಸಿನಿ ಶೋಧಿನೀ ಶೋಷಿ
ಣೀ ರಟದ್ಭ್ರಾಮಿಣೀ ಶ್ಲೇದಿನಿ ವರೇಣ್ಯೆಯಾ
ಸಾರದಾಕರ್ಷಿಣಿ ಸುಷುಮ್ನೆಯಾ ವೃಷ್ಟಿವಹೆ ಜ್ಯೇಷ್ಠಾಹಿರಣ್ಯಾದಿಗಳು ೫

ಸೋಮಚಕ್ರಕ್ಕೆಡದೊಳಮರ್ದಾರ ಕಲೆಗಳಮೃ
ತಾಮಾನಸೀ ತುಷ್ಟಿ ಪುಷ್ಟಿ ಸಂಪ್ರೀತೆಯಂ
ತಾ ಮನೋಹರ ರೇವತಿಹ್ರೀಯೊಳಾ ಶ್ರೀಯುಕಾಂತಿಸ್ವದಾ ಜ್ಯೋತ್ಸ್ನೆಯು
ಹೈಮವತಿಯಾ ಛಾಯೆ ಸಂಪೂರಣೆಯು ಬಳಿಕ
ವಾಮೆಯು ಮಮಾನಾಮದಿಂದ ಪದಿನಾಱೆಸೆವ
ವಾ ಮಹಾದೇವನ ರಥಂ ಮೆಱೆದುದದಱ ಸಿಂಗರವನಾರ್ಬಣ್ಣಿಸುವರು ೬

ಆ ವಾಮಚಕ್ರ ಚಂದ್ರನ ಬಳಸಿ ಬಹುತಾರ
ಕಾವಳಿಗಳೆಯಿದೆ ಭೂಷಣವಾಗಿ ಮೆಱೆದವಂ
ತೋವಿ ಷಡುರುತುಗಳೆನೆ ನೇಮಿಯೆನಿಸುವ ನೆತ್ತಿವತ್ತಿಗೆಯೊಳಾ ಚಕ್ರದ
ಠಾವಿನರುಗಂ ಬಳಸಿ ರಾಜಿಸಿದವ್ಯೆ ಕೇಳು
ಭಾವಶುದ್ಧದೊಳಂತರಿಕ್ಷವಾ ಪುಷ್ಕರಾ
ಖ್ಯಾವಿಶೇಷದ ಮೂಕು ಮೆಱೆದವಾ ಬಂಡಿಗಿಂತೆಸೆಯೆ ಪರಿನಿರ್ಮಿಸಿದನು ೭

ಮಂದರಾದ್ರಿಯೆ ರಥದ ಹರುಹಾಯ್ತು ಹಾಡಗೆಯಿ
ದೆಂದೆನಿಪ ರಥದ ಒಳಗುದಯಸ್ತ ಗಿರಿಗಳೆರ
ಡುಂ ದೃಢದೆ ರಥವನಾಂತಿಪ್ಪ ಕುಱುಗಣೆಗಳ್ಯೆ ಮೇರುಸೀಮೆಯ ಬಳಸಿದ
ಗೊಂದಣದ ಕೇಸರಾಚಲವಧಿಷ್ಠಾನ ವ್ಯೆ
ಕಂದ ಲೋಕಾಲೋಕಪರ್ವತಂ ರಥದ ಬಳ
ಸಂದೆನಿಪುದಿವನತಿ ಪ್ರೌಢಿಯಿಂ ವಿಶ್ವಕರ್ಮಂ ಕೂಡೆ ನಿರ್ಮಿಸಿದನು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತಾ ರಥಾಂಗಂಗಳೆರಡರಸವೇಗವಂ
ದುತ್ತರಾಯಣ ದಕ್ಷಿಣಾಯನಂ ಗಾಲಿಗೆಸೆ
ವುತ್ತಿಪ್ಪ ತೂಬುಗಳನ್ವೈಬಳಿಕಲಂತಾ ಮುಹೂರ್ತ ಬಂಧುರವೇ ರಥ
ತತ್ತತ್ಕ್ರಮಂಗಳಿಂಗೆಸೆವ ನೆಲೆನೆಲೆಗಳ್ವೈ
ಮತ್ತನೆಯ ಹದಿನೆಂಟು ಬಾರಿಯೆವೆಗಳನಿಡುವ
ಹೊತ್ತಪ್ಪ ಕಾಷ್ಠಮಾ ಮೂವತ್ತೆನಿಪ್ಪ ಕಲೆಗಳ ನೊಗದ ಹಿಡಿತಲೆಗಳ್ವೈ ೯

ಆ ಕಾಷ್ಠೆಯೆನಿಪ ಕಾಲವೆ ರಥದ ಮುಂದೆಸೆಯ
ಮೂಕಲಾಕ್ಷಣವಚ್ಚುಗಳ ಮರಂಗಳು ಕಣಾ
ನೀ ಕೇಳ್ನಿಮೇಷವೇ ಕೆಳಗಿಪ್ಪ ಮಣಿಗಳಾಲವವೆಂದು ನುಡಿಸಿಕೊಂಬ
ಆ ಕಾಲವೀಚುಗಳು ಸಿಂಗರಂಬಡದ ಲಸ
ದಾಕಾಶವೇ ರಥದ ಮೇಲುಭಾಗಂ ಕಣಾ
ಜೋಕೆಯಿಂ ಸ್ವರ್ಗ ಮೋಕ್ಷಂಗಳೆರಡುಂ ಧ್ವಜವೆನಲ್ಕೆ ರಾಜಿಸುತಿರ್ದವು ೧೦

ಅವಕೆ ದಂಡಂ ಧರ್ಮರಾಗಂಗಳೆರಡು ಮೊ
ಪ್ಪುವ ವಿಮಲದಂಡಾಶ್ರಯುಂ ಗುಡಿಗಳೆನಿಪವ್ವೈ
ಕುವರ ಕೇಳ್ದಕ್ಷಿಣಾಗ್ನಿಯು ಗಾರ್ಹಪತ್ಯಾಗ್ನಿಯಾಹವನಿಯಾಗ್ನಿಯೆಂಬ
ಇವು ರಥದ ಬಲದ ಬಾಹಿಯೊಳು ಮೈವತ್ತೆನಿಪ
ಸವಿಶಾಲಭಾಗೆಗಳ ಸಂಧಿಯಾಗವು ಕಣಾ
ವಿವರದಿಂ ಕಾಮ್ಯಾರ್ಥವೆಂಬೆರಡು ನೊಗನ ಹುಗಿಲಾದವ್ವೈಕೇಳ್ಕುಮಾರ ೧೧

ಕುವರ ಕೇಳವ್ಯಕ್ತವೆನಿಸುವಾ ಪ್ರಕೃತಿತ
ತ್ವವೆ ಬಳಿಕಲಚ್ಚಿನ ಮರಂ ಕಣಾ ಬುದ್ಧಿವಾ
ಕ್ಯವೆ ರಥಸ್ಥಾನವಾಯಿತ್ತಹಂಕಾರವೇ ಕೋಣೆಗಳ್ತಾವಾಯ್ತು ಲ
ತವೆ ಪಂಚಭೂತಂಗಳೇ ಸ್ಥಲವವಿಂದ್ರಿಯುದ
ನಿವಹವಲ್ಲಿಯ ಭೂಷಣಂಗಳ್ವೈ ಶ್ರದ್ಧೆಯೇ
ವಿವಿಧ ಗತಿವೇದಂಗಳಲ್ಲಿ ವಾರುವಗಳಾಗಲು ಮೆಱೆದುದೀಶನ ರಥಂ ೧೨

ಪದವೆ ಭೂಷಣವಾ ಷಡಂಗವುಪಭೂಷಣಂ
ವಿದಿತಂ ಪುರಾಣವಾ ನ್ಯಾಯು ಮೀಮಾಂಸ ಧ
ರ್ಮದ ಶಾಸ್ತ್ರವಮಲ ಬಾಲಾಸನಂ ಪಟಗಳಾದವು ಸರ್ವ ಲಕ್ಷಣದೊಳು
ಸದಮಲದ ವರ್ಣಪಾಠಕ್ರಮಂ ಪದದೊಳೊ
ಪ್ಪದೆ ಮೆಱೆವ ಘಂಟೆಯಾಯ್ತಾ ಛಂದವೇ ಕ್ರಮದೊ
ಳ್ಧಟಿಗೆನಿಸಿಪ್ಪನಂತಾದಿ ಫಣಿಪಂಗಳೇ ಮಿಳಿಗಳಾದವು ತೇರಿಗೆ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಲವು ಸರ್ಪಂಗಳಾ ಬಂಧಪಾಶಂಗಳಾ
ಗಲಿಕೆಂಟುದಿಕ್ಕುಪದಿಶಂಗಳಾದವು ರ ಥ
ಕ್ಕಲಘುತರ ಪಾದಂಗಳೊಪ್ಪದಿಂ ಪುಷ್ಕಲಾವರ್ತಾದಿ ಮೇಘಂಗಳು
ಸುಲಭ ರತ್ನಾಂಕಿತಪತಾಕಂಗಳಾದವಾ
ಜಲಧಿಗಳು ನಾಲ್ಕುರಥಕಂ ಬಳಿಗಳಾಗೆ ಸರಿ
ಲಲನೆಯರು ಮಣಿಭೂಷಣದ ಚಾಮರಗ್ರಾಹಿಣಿಯರಾಗಿ ಮೆಱೆದರಲ್ಲಿ ೧೪

ಏನೆಂಬೆನಾಹವಾದಿಗಳು ಸಪ್ತಾಂಗಸೋ
ಪಾನಂಗಳಾದವಾ ಬ್ರಹ್ಮನೇ ಸಾರಥಿಯ
ಲಾ ನವ್ಯ ಸತ್ಪ್ರಣವವೇ ಪ್ರತೋದನವೆನಿಪ ಚಮ್ಮಟಿಗೆಯಾದುದವಗೆ
ತಾನೆಸೆವ ಮಂಡಲಾದ್ರಿಯೆ ಮಲಗುವಮೂಡೆಯಾ
ಮಾನಸಾಚಲಮುಖ್ಯ ಪರ್ವತಂಗಳು ರಥ
ಸ್ಥಾನಕ್ಕೆ ಹಿಂದು ಮುಂದಣ ಮೂಕು ಗಗನವೇ ಸತ್ತಿಗೆಯದಾಯಿತೊಲವಿಂ ೧೫

ಕುಲಪರ್ವತಂಗಳೇ ಪುತ್ಥಳಿಗಳಾಗೆಯುಱ
ಜ್ವಲದ ವಿಷ್ಕಂಬಪರ್ವತವೆ ಡಿಂಡಿಮವಾಗೆ
ಸುಲಭವಹ ಮೇರುಧನುವಿಗೆ ಮಹಾಶೇಷನೇ ನಾರಿಯಾ ಕಾಳರಾತ್ರಿ
ಲಲಿತಸಮ್ಮೇಳವಾಗಲು ಸರಸ್ವತಿ ಸುಮಂ
ಗಲ ಘಂಟೆಯಾದುದಾ ವಿಷ್ಣು ಬಾಣಕ್ಕೆ ಮೊನೆ
ಯಲಘುತರಕಾಲಾಗ್ನಿಯಂತನೀಕಿಗಳೆಂಬ ವಾಯುಗಳು ಗಱಿಯಾದವು ೧೬

ಈ ಪರಿಯೊಳೆಳವಟ್ಟುದವನಿರಥವಾ ಸ್ವರ್ಣ
ದಾ ಪರ್ವತವೆ ಬಿಲ್ಲು ಹರಿಯೆ ಪೇರಂಬು ಮ
ತ್ತಾ ಪದ್ಮಸಂಭವಂ ಸಾರಥಿಯುದಾಗೆ ಸಿಂಗರಿಸಿತ್ತು ತೇರೆನುತ್ತಾ
ಗೋಪ ನಂದೀಶ್ವರಂ ಬಂದು ಬಿನ್ನವಿಸಲಂ
ತಾ ಪಾರ್ವತೀವಲ್ಲಭಂ ಹರಿಯಜಾದ್ಯರೆ
ಲ್ಲಾ ಪಶುಗಳೆಂದು ಕಟ್ಟಿದ ಪಟ್ಟದರಸನಾನಂದದಿಂ ಸಿಂಗರಿಸಿದಂ ೧೭

ಪುಲಿಸಮ್ಮದುಡಿಗೆಯಂ ಮಲ್ಲಗಂಟಂ ತೆಗೆದು
ಸುಲಲಿತದ ಭಸ್ಮಾಂಗವೆಸೆವುತಿರೆ ಕೊರಲಲ್ಲಿ
ತಲೆಯ ಮಾಲೆಗಳು ಬೊಬ್ಬಿಡೆ ಫಣೀಶ್ವರನಿಂದ ಜೆಡೆಗಳಂ ಬಿಗಿದುಕಟ್ಟಿ
ಲಲನೆ ಪಾರ್ವತಿಮುಖ್ಯರೆಯಿತಂದು ಮಣಿಮಯೋ
ಜ್ವಲಮಂಗಳಾರತಿಗಳಂ ಬೆಳಗೆ ಭುಜಪೂಜೆ
ಯಲಘುಶೇಷಾಕ್ಷತಂಗಳನೆಯಿದೆ ಕೈಕೊಂಡು ಹೊಱವಂಟನರಮನೆಯನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಡಬಲದೊಳಾಪ್ತರುದ್ರಪ್ರಮಥಗಣರಿಂದ
ಬಿಡದೆ ಕೀರ್ತಿಸುತಿರ್ಪ ಪಾಠಕಸಮೂಹದಿಂ
ಹೊಡೆವ ನಾನಾವಾದ್ಯದಿಂದ ಜಯ ಜೀಯಯೆನೆ ವೃಷಭೇಶ್ವರನ ಬೆನ್ನನು
ಅಡರಿ ಭೋಂಕನೆ ಕೈಗಳಂ ಮುಗಿದ ಲೋಕಂಗ
ಳೊಡೆಯರಂ ಬಿಡದಭಯಕರದಿಂದ ಸಂತೈಸಿ
ನಡೆದನಾ ರಥವಿರ್ದ ಠಾವಿಂಗೆ ನಮ್ಮ ದೇವಂ ದುರಿತವನದಾವನು ೧೯

ನಂದಿಕೇಶನ ಬೆನ್ನ ಮೇಲಣಿಂದೀಶ್ವರಂ
ಬಂದು ಪದವಿಟ್ಟನಾ ದಿವ್ಯರಥದಲ್ಲಿ ನಲ
ವಿಂದಲೀಶನ ವರೂಥಂ ಬಳಸಿದಾ ಗಣೇಶ್ವರರಿಂದ ಮನುಮುನಿಗಳ
ಸಂದಪ್ಸರಾವಳಿಯ ನೃತ್ಯಂಗಳಿಂದಮಾ
ನಂದಿಸುತ ಕೀರ್ತಿಸುವ ಮುನಿವಲ್ಲಭರನದೇ
ನೆಂದೆಂಬೆನಾ ವೇಳೆಯಲ್ಲಿ ದೇವನ ಗುರುತ್ವಂ ತೋಱಿತಚ್ಚರಿಯನು ೨೦

ತಾಳಲಾರದೆ ದೇವನಂ ಭಾಪು ತೇರು ಪಾ
ತಾಳಕಿಳಿಯಿತ್ತು ಮುೞುಗಿದವು ಚಕ್ರಂಗಳಾ
ಮೇಳಿಸಿದ ಸಕಲೋಪಕರಣದೊಡನಾಗ ಮುಗ್ಗಿದವು ವೇದಾಶ್ವಂಗಳು
ಭಾಳಾಕ್ಷನಾಜ್ಞೆಯಿಂ ಮುನ್ನ ತಪವಿರ್ದುದೊಂ
ದೇಳಿಗೆಯಿನಾ ವಿಷ್ಣು ನಂದಿಯಂ ನೆನೆದತಿ
ಸ್ಥೂಳವೃಷರೂಪಾಗಿ ಪೊಕ್ಕು ಪೊತ್ತೆತ್ತಿದಂ ವಿಶ್ವಮಯವಪ್ಪ ರಥಮಂ ೨೧

ಸರಿಸಕ್ಕೆ ಬಂದು ನಿಂದುದು ರಥಂ ಕೂಡೆ ಪಂ
ಕರುಹಭವನ ಹ ಸೂತನಾ ವೇದವಾಜಿಗಳ
ನೆರಡುದಿಕ್ಕಿನೊಳು ಸಂತೈಸಿ ನೇರಂ ಮಾಡಿ ವಾಘೆಯುವನಳವಡಿಸುತ
ಕರದ ಚಮಱ್ಮಟಿಗೆಯಿಂ ತೆಱನಱಿದು ಮುಟ್ಟಿ ಹಾ
ಪರಿಯಿಸಿದನಾ ತ್ರಿಪುರವಿಹ ಸೀಮೆಗಾಗಿ ಭಾ
ಪುರೆ ಶಿವನ ದಂಡು ಗಂಭೀರದಿಂ ಬೊಬ್ಬಿಟ್ಟು ನಡೆದುದೇವಣ್ಣಿಸುವೆನು ೨೨

ಆ ರಕ್ಕಸರ ಮುಪ್ಪೊಳಲ್ಗಾಗಿ ಪಶುಪತಿಯ
ತೇರು ನಡೆದುದು ಕೂಡೆ ನಂದೀಶನಾದಿಯ ಮ
ಹಾರವವೆ ಸತ್ಪ್ರಮಥರಮರರುದ್ರರು ನಿರ್ಜರರು ತಮ್ಮ ನಿಜವಾಹನ
ಆ ರೂಢರಾಗಿ ಫಲಕಾಸ್ಫೋಟನಂಗೆಯಿದು
ಕೂರಲಗನುಱಿ ಜಡಿದು ಝಾಡಿಸುತ ಬಂದರಾ
ವಾರಿಧಿಗಳುರ್ಬೆದ್ದು ತಾಯಿಮಳಲ್ಗ ಬಂದವಾದುದಾ ಬಲದಾರ್ಭಟಂ ೨೩

17

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಡದೆ ದೇವರ್ಕಳಿಕ್ಕೆಲದಲ್ಲಿ ಮಝು ಭಾಪು
ಬೆಡಗು ಲೇಸಯ್ಯ ಮುರವೈರಿ ಕಂಸಧ್ವಂಸಿ
ಬಡವನೇ ನೀನೆಂದು ಪೊಗಳೆ ಪಟುಭಟರ ಕೈದುಗಳ ಬೆಳಗಿಂ ಗರುಡನ
ಅಡರಿ ಮುಂದಾ ಖಗೇಶ್ವರ ಮಹಾಧ್ವಜವದು
ಗ್ಗಡದಿಂದ ಮೆಱೆಯಲಾ ಹರಿದೇವ ದೇವೇಶ
ನೆಡವಂಕದಲ್ಲಿ ಬಿಡದೋಲೈಸಿಕೊಂಡಾಹ ನಡೆದನಾನಂದದಿಂದ ೨೪

ಹೊಂಬಣ್ಣದಂಗದ ಚತುರ್ಮುಖದ ಭಾರತಿಗ
ಳಂಬು ಪೇರಂಬಾದ ದೇವರ್ಕಳೆತ್ತೆತ್ತ
ಲುಂ ಬಿಡದೆ ಸೇವೆಯಂ ಮಾಡಿಕೊಂಡೆಯಿತರುತ್ತಿರೆ ದೇವದೇವೇಶನ
ಸಾಂಬನ ಮಹೇಶ್ವರನ ಬಲವಂಕದಲ್ಲಿ ಭೋ
ರೆಂಬ ವಾದ್ಯಂಗಳುಲಿಯಲು ಮಹಾಬ್ರಹ್ಮರಾ
ಡಂಬರದೊಳೋಲೈಸಿಕೊಂಡು ಬರೆ ನಡೆದನೀಶಂ ನಿರುಪಮ ಪ್ರಕಾಶಂ ೨೫

ಥಳಥಳಿಪ ಮೈಗಣ್ಣವೆಳಗಿನಿಂ ದಿಕ್ಪಾಲ
ಕುಳವಖಿಳ ವಾಹನಂಗಳನಡರಿ ನಾಲ್ದೆಸೆಗ
ಳೊಳು ಪರಿಯಿಪಗ್ಗಳದ ದಾಂಧಳಂ ಥಳವೆಂದು ಸೂಳೈಪ ನಿಸ್ಸಾಳ ದಿಂ
ಬಳವಂತನಮುಚಿ ಪಾಕಾಸುರರ ಕೊಂದೆಯು
ಗ್ಗಳನೆ ಭಾಪೆಂಬ ಪಾಠಕರಿಂದಲೆಮ್ಮ ಮಂ
ಗಳ ಶಿವನ ಮುಂಗಡೆಯೊಳೈರಾವತನೇಱಿ ನಿರ್ಜರರೊಳಿಂದ್ರನಡೆಗಂ ೨೬

ಶ್ರೀ ವೀರರೆನಿಪಗ್ನಿಯಮ ನಿರುತಿ ವರುಣನಂ
ತಾ ವಾಯು ಯಕ್ಷೇಶನೀಶಾನ ಮುಖ್ಯರಾ
ಪಾವನದ ಶಕ್ತಿದಂಡಂ ಕೊಂತ ಪಾಶಧ್ವಜಾಸಿ ಶೂಲಂಗಳಾಂತ
ಆವಿ ಮಹಿಷಂ ನೆರಂನೆಗಳೆರಳೆ ಹಯ ವೃಷಭ
ರೀ ವಾಹನಂಗಳಾಗಲು ದಿಗೀಶರು ಸುರರು
ಮೂವತ್ತುಮೂಱು ಕೋಟಿಗಳೊಡನೆ ಬರೆ ನಡೆದನಿಂದ್ರನೀಶನ ಬಳಿಯೊಳು ೨೭

ಧೀರರೋಮಜರು ಖಂಡೆಯುಗಳಂ ಜಡಿಯೆ ಬಳಿ
ಕಾರುಭಟೆಯಿಂದ ಬೊಬ್ಬಿಡೆ ಭಾಪು ದಕ್ಷಸಂ
ಹಾರಿ ಘನಪಂಚಮೇಢ್ರಾಸುರವಿನಾಶ ನರಸಿಂಹಮದಶರಧಿವಡಬಾ
ಆರು ಸರಿ ಎಂದು ಕೀರ್ತಿಸೆ ಪಾಠಕರು ಶಿವನ
ನೈರುತ್ಯಭಾಗದೊಳು ವೃಷಭನಂ ನಲಿದೇಱಿ
ವೀರೇಶ್ವರಂ ನಡೆದನಾಹ ಜಂಗುಳಿದೈವಗಳ ಗಂಡನೇಳ್ಗೆಯಿಂದ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಱಿ ನವಿಲಂ ಗಣಂಗಳು ಕೂಡೆ ಬೊಬ್ಬಿರಿಯೆ
ಹಾಱಿಸುತ ನಾಲ್ದೆಸೆಗೆ ದೇವದೇವನ ಕುವರ
ನೀಱನೇ ಹುಟ್ಟಿದೇಳ್ದಿನಕೆ ತಾರಕನಕೊಂದಧಟನೇ ಪೆರ್ಬಂದಿಯ
ಕೋಱದಾಡೆಯ ಕಿತ್ತ ಬಲ್ಲಹನೆ ಎಂದು ಮಿಗೆ
ಸಾಱಿ ಪಾಠಕರು ಕೀರ್ತಿಸಲು ಬರುತಿರ್ದನಂ
ದಾಱುಮೊಗದಣುಗನೀಶನ ರಥದ ವಾಯುವ್ಯದಲ್ಲಿ ಘನಸಂಭ್ರಮದೊಳು ೨೯

ಮಱಿಯಿಲಿಯನೇಱಿ ಪೆರ್ಬಾವುಗಟ್ಟಿಂದೆಸೆವ
ತೆಱಪಾದ ಡೊಳ್ಳುಹೊಟ್ಟೆಯ ಪರಶು ಪಾಶಂಗ
ಳುಱೆ ಕರದೊಳೆಸೆಯೆ ನಾಲ್ದೆಸೆಗೇಱಿ ತೋಱಿ ಸೊಬಗಿಂದೆಸೆವ ನೀಱನೆನಿಸಿ
ಮೆಱೆವದೇವನ ಹಿರಿಯಕುವರ ಬೆನವಣ್ಣನಾ
ಕಱೆಗೊರಲನಮಲರಥವದಗ್ನಿ ಭಾಗದೊಳು ಕೈ
ಪಱೆಗುಟ್ಟಿ ಕುಣಿವ ಗಣನಿಕರದೇಳ್ಗೆಯೊಳು ನಡೆದಂ ಪರ್ವತಾಕಾರನು ೩೦

ಮಾರಾರಿಯಧಿಕರಥದೀಶಾನ್ಯದಿಕ್ಕಿನೊಳು
ಸೌರಂಭಗಣನಿಕರವೋಲೈಸುತಿರೆ ವಿಮಾ
ನಾ ರೂಢನಾಗಿ ಮುರಘರೇಶಿಲಾದನ ಪುತ್ರ ಮುಖ್ಯ ಮಾಂಸವನೆ ಬಿದಿರ್ದು
ಗೌರಿಯಂ ಗೆಲಿದಲಾ ಮೂಱುಪಾದದ ಗರುವ
ವೀರಶೈವರ ಶಿರೋಮಣಿಯೆ ಭಾಪೆನೆ ಕವಿಗ
ಳೋರಂತೆ ಸಂಭ್ರಮದೆ ನಡೆದನಾ ಭೃಂಗೀಶನಭವಭಕ್ತಿಪ್ರಕಾಶ ೩೧

ಜಗದೀಶ್ವರನ ರಥವನೋಲೈಸಿ ಬಪ್ಪಾಪ್ತ
ವಿಗತವಾಸಂ ಮಹಾಕೇಶಂ ಮಹಾಜ್ವರಂ
ಸುಗು ಣಸೌವರ್ಣನಾ ಸೋಮದತ್ತಂ ಸೋಮಪೇಷಣಂ ತತ್ಪ್ರಕುಂಡಂ
ಝುಗರ್ಝುಗಿಪ ಕುಂದದಂತಂ ಕಂಪನಾಧಿಕಂ
ಬಗೆವಡಿಂದ್ರಂ ಯಮ ಮಹಾರ್ಹಭೀಮಕಶತಾ
ಕ್ಷಿಗಳಧಿಕ ಪಂಚಾಕ್ಷರೆಂಬ ಗಣಮುಖ್ಯರೋಲೈಸಿಕೊಂಡೈತಂದರು ೩೨

ಆ ಸಹಸ್ರಾಕ್ಷಂ ಮಹೋದರಂ ಶತಜಿಹ್ವ
ನಾ ಸಮರ್ಥಂ ಶತಾಕ್ಷಂ ಕಂಠಕಂಕಾದ್ರ
ವಾಸಿಯೆನಿಸುವ ಕಂಠಘಾತನ ದ್ವಿಶಿಖಂ ತ್ರಿಶಿಖ ಪಂಚಶಿಖನಾ ದ್ವಿಜಂ
ಆಸುರದ ಮುಂಡೋರ್ಧ್ವ ಮುಂಡದೀರ್ಘಾಸ್ಯನಾ
ಸಾಸಿಗಂ ತಾಂ ಪಿಶಾಚಾಸ್ಯಂ ಪಿನಾಕದೃ
ಕ್ಕೀ ಸುಲಭಗಣನಿಕರವೋಲೈಸಿ ಬರುತಿರ್ದರಾ ಸರ್ವಮಯನ ಮುಂದೆ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರುಮೊದಲಾದ ರುದ್ರಪ್ರಮಥಕೋಟಿಗಳು
ತವ ತವಗೆ ಗಜ ಹಯಮಹಾಸಿಂಹ ರಥ ವೃಷಭ
ನಿವು ಮುಖ್ಯವಾಗಿರ್ದ ವಾಹನಂಗಳನಡರಿ ಕೂಡೆ ಹಲಶಾಲ ಮುಸಲಂ
ತವೆ ಮುಸುಂಡಾದ್ರಿಕೂಟಂಗಳಂ ಪಿಡಿದಿರ್ದ
ವಿವಿಧ ಭಟನಿಕರ ಗಿರಿಸನ್ನಿಭರು ಕೂಡೆ ಬ
ಪ್ಪವರೊಳಾ ಗಣಮುಖ್ಯರೋಲೈಸಿ ನಡೆದರಾ ತ್ರಿಪುರಸಂಹರನ ಬಳಸಿ ೩೪

ಬಳಿಕಖಿಳರುದ್ರಮಯುವೆಂದೆನಿಪ ಭೂತಸಂ
ಕುಳವಲ್ಲಿ ಕಾಳರಾತ್ರಿಪ್ರಮುಖರತ್ಯುಗ್ರ
ಬಳವಂತ ಶೂಲಂ ಕಪಾಲಮಂ ಪಿಡಿದಧಿಕ ರುಂಡಮಾಲೆಗಳ ಧರಿಸಿ
ಖಳಧನುಜರಕ್ತಪಾನೇಚ್ಛಕರು ಮತ್ತರ
ಗ್ಗಳವಪ್ಪಶಕ್ತಿಯರುಗಳು ಚರ್ಮವಸನೆಯರು
ಬಳಸಿ ನಡೆದರು ಶಿವನ ಬಳಿಯೊಳು ಮಹಾಕಾಳಿ ನಿಜವನಿತೆಯಧಟನಿಂದ ೩೫

ಆ ಮಹಾಕಾಳಿಯಂ ಸಿದ್ಧಗಾಂಧರ್ವರತಿ
ಸಾಮರ್ಥ್ಯ ಮಧುಪಿಶಾಚರು ಯಕ್ಷವಿದ್ಯಾಧ
ರಾಮರರು ಫಣಿವರರು ವಂದಿಸುತ ಗಿರಿರಾಜಪುತ್ರಿ ಜಯಯೆಂದು ಪೊಗಳೆ
ಶ್ರೀಮೃಗಾಶನವಾಹಿಯಾ ದುರ್ಗಿಬಹುಭುಜ
ಸ್ತೋಮಿಯಂಕುಶ ಶೂಲಪಾಶ ಪರಶು ಪ್ರಚ
ಕ್ರಾವಿತಾಯುಧ ಶಂಖಮಂ ಪಿಡಿದು ನಡೆದಳಾ ಭಗವತಿ ವಿಳಾಸದಿಂದ ೩೬

ಆ ಮುನೀಶ್ವರ ರಾಕ್ಷಸೋರಗರು ಮಾತೃಕೆಯು
ರಾ ಮಹಾದೇವಿಯಂ ಸೇವಿಸುತ ಬರುತಿರಲ
ಹೋ ಮಹಿತ ದೇವಾಧಿದೇವ ದೇವರ ವಲ್ಲಭಂ ಸಕಲ ಪರಿವಾರದ
ಸ್ತೋಮದೊಳು ಸಂಭ್ರಮದಿ ನಡೆದನಾನಂದದಿಂ
ಮಾಮಾ ಮಹಾತಾರಕಾನೀಕಮಧ್ಯದೊಳು
ಸೋಮನೊಪ್ಪುವ ಮಾಳ್ಕೆಯಿಂದ ದೆಸೆದೆಸೆಯಲ್ಲಿ ಕೀರ್ತಿಪರ ಭಾಗ್ಯರೂಪಂ ೩೭

ಶಿವರಥದ ವಾಮಭಾಗದೊಳು ಪಾರ್ವತಿದೇವಿ
ಶಿವೆ ಸರ್ವಮಂಗಲೆ ಭವಾನಿ ಶುಭವಾಹನೋ
ತ್ಸವೆ ದೇವವನಿತಾರ್ಚಿತಾಣತ್ಯ್ರತ ಕರಾಸಕ್ತಧೂತಚಾಮರನಿಕರದಿಂ
ತವೆ ಶರನ್ಮೇಘದೊಳು ತೋರ್ಪಮಿಂಚೆಂಬಿನಂ
ದಿವಿಜಧನುವೋ ಪೇಳಿಮೆನೆ ಭಸಿತಲೇಪನದ
ಭವನದೇಹದೊಳೊಂದಿ ಕೆಂಬೆಳಗು ಪಸರಿಸಲು ಮಣಿಭೂಷಣದೊಳೆಸೆದಳು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಣಿಮಾಲೆಗಳ ಬೆಳಗಿನಿಂ ಮೇರುಕೋದಂಡ
ದಣಿಯುರದ ವರ್ಣದಿಂ ಶಿವಶುಭ್ರಕಾಯದಿಂ
ಪ್ರಣಯದಿಂ ದೇವಿಯು ಸಿತಚ್ಛತ್ರವೆಸೆದುದುದಯದೊಳನುಕ್ರಮದೆ ಕೆಂಪು
ಪ್ರಣುತ ಕನಕ ಪ್ರಕಾಶಾಮಲದ ಚಂದ್ರನೆನೆ
ಗಣಿಸಿ ಮೇಘದಿನಮರಗಂಗೆಯಿಳಿದಪುದೊ ಧಾ
ರುಣಿಗೆ ಕೆಂಬೆರಲೊಳೊಡೆವೆರೆದೆಂಬಿನಂ ಪುದಿದ ಪಲ್ಲವಂ ಮೆಱೆದಿರ್ದುದು ೩೯

ಆ ರೀತಿಯಂ ಕಂಡು ಶೌರಿಕಮಲಜ ಪಾಕ
ವೈರಿ ಸುರ ನಿಕರವೆಲೆ ನಾರಿಯರ ಭಾಗ್ಯವಿ
ಸ್ತಾರಿ ಸುಖಸಂಕಥಾಕಾರಿ ಬಹುಲೋಕದಾಧಾರಿ ನಿನ್ನಮಲಪಾದ
ವಾರಿಜವನರ್ಚಿಸಲು ಮಾರಿ ಮೃತ್ಯುಗ್ರದು
ರ್ಧಾರಿಗಳ ತೊಲಗಿಸುವ ವಾರಿನಿಧಿಸಮಕೃಪಾ
ಗಾರಿ ಶಿವನಿಷ್ಠನಿರ್ಧಾರಿ ಸಾಕ್ಷಾತವರನಾರಿ ಜಯ ಯೆನುತಿರ್ದರು ೪೦

ಗೌರಿ ಯೀತೆಱದೊಳೀಶನ ಪೊರೆಯೊಳೆಯಿತರಲು
ಶೌರಿಮುಖ್ಯರು ಹಸ್ತಕಮಲಂಗಳಂ ಮುಗಿದು
ಸೇರಿಸಿ ಕಿರೀಟದೊಳು ಕೀರ್ತಿಸಿದರಾ ಜಟಾಧರದಂಡಪಾಣಿಯಮಲ
ಸಾರಭಸ್ಮಾಂಗದೇಹರು ಮುನೀಶರು ಕುಣಿದ
ರಾ ರಮಾಕರ ಸುರರು ಖೇಚರರು ಘನಸಿದ್ಧ
ಚಾರಣಗಣಂಗಳೀಶನ ಮೇಲೆ ಸೈಗರೆದರಮಲ ಪುಷ್ಪದ ಮಳೆಯನು ೪೧

ಆ ವೇಳೆ ಹರಿಸುರ ಮುನೀಶರೆಲೆ ಹರ ನಿನ್ನ
ಭಾವದುಗ್ರದೊಳೀಕ್ಷಿಸಿದ ಮಾತ್ರದಿಂದ ಲೋ
ಕಾವಳಿಗಳೆಲ್ಲಂ ಕ್ಷಣಾರ್ಧದೊಳ್ಬೇವವೈ ಕೂರ್ತು ನೀ ನೋಡಲಾಗಿ
ಆ ವಿಘಳಿಗೆಯೊಳುದಿಸಿ ಸುಖದೊಳಿಹವೆನೆ ಪುಲ್ಲ
ಪಾವೆಯೆನಿಸುವ ಮುಪ್ಪುರಂಗಳಸುರರಗೆಲ್ವ
ಡೀ ವಿವಿಧ ಸಾಧನವದೇಕೆ ನಿನ್ನಯ ಲೀಲೆಯೆಂದು ಕೀರ್ತಿಸುತಿರ್ದರು ೪೨

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಪ್ವಯಂಗೊರೆದ ಸುವಿ
ಶಾಲವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಶಿವಂ ತ್ರಿಪುರಸೀಮೆಗೆ ಬಂದುದೊಂದು ಕಾಂಡದ ಮೇಲೆ ಸಂಧಿ
ದಶಮು ೪೪

ಅಂತು ಸಂಧಿ ೧೦ ಕ್ಕಂ ಪದ ೫೬೨ ಕ್ಕಂ ಗ್ರಂಥ ೮೯ ಕ್ಕಂ
ಮಂಗಳ ಮಹಾ ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೦

ಲೀಲಾವಿನೋದಿದಿಂದುರುಪಿ ತತ್ರಿಪುರವುವು
ನಾಲಿಯಶ್ರುಗಳಿನುದ್ಭವಿಸೆ ರುದ್ರಾಕ್ಷೆ ದೃಢ
ಶೀಲರಂ ರಕ್ಷಿಸಿದನೆಂಬಲ್ಲಿ ನವಲೀಲೆ ಸಂಪೂರ್ಣವಾಯ್ತೇಳ್ಗೆಯಿಂ

ಉರ್ವೀಧರಂಗಳೆಲ್ಲಕ್ಕಧಿಕತರವುಪ್ಪ
ಸಾರ್ವಭೌಮನ ಬಿಲ್ಲಮಾಡಿ ಫಣಿಸಂದೋಹ
ಸಾರ್ವಭೌಮನ ನಾರಿಯಾಗಿ ಕಲ್ಪಿಸಿ ನವಬ್ರಹ್ಮಾದಿಯಾದವರ್ಗೆ
ಸಾರ್ವಭೌಮನ ಸಾರಥಿಯ ಮಾಡಿ ದೇವತತಿ
ಸಾರ್ವಭೌಮನನಂಬಮಾಡಿ ತತ್ರಿಪುರಮನ
ಖರ್ವವೀರದೊಳು ಜಯಿಸಿದ ಶಾಂತಮಲ್ಲೇಶ ಜಯ ಮನೋಭವಪಿನಾಶ ೧

ಖಂಡಪರಶುವಿನ ಕೃಪೆಯಿಂ ತ್ರಿಪುರದೊಳ್ ಪಡೆದ
ಚಂಡಕೀರ್ತಿಗಳ ಮತಿಗಗ್ಗಳಂ ಗಡ ನಿನ್ನ
ಕಂಡು ಕೀರ್ತಿಸಲಳವೆ ನಿಜಕಿರಣದಿಂ ಬೆಳಗನಿತ್ತನಂ ಗೋಚರಿಸುವ
ದಂಡಿಸೊಗೆಗಂ ನುಡಿಸಿಯುವನವೋಲ್ ನುಡಿವನ್ನ
ಖಂಡಕೀರ್ತಿಯ ಶಾಂತಮಲ್ಲೇಶ ಗುಣಮಣಿಕ
ರಂಡ ಪೊಗಳಲು ಬಾಲಭಾಷೆ ಪಿತೃಗೆಂತು ಕೈಕೊಂಡಂತೆ ಪೊರೆವುದೆಮ್ಮಂ ೨

ಸ್ಥೂಲ ಸೂಕ್ಷ್ಮಾಗ್ರಕಾರಣಕರ್ಮಬಿಚ್ಛಿಖಿ
ಜ್ವಾಲಾಸುಭಸ್ಮಾಂಗನಪ್ಪ ಹಲಗೆಯ ಗುರುವೆ
ಬಾಲೇಂದುಧರನಖಿಲದೇವಚತುರ್ಬಲದೊಳೆಯಿತಂದು ತತ್ರಿಪುರಕೆ
ಕೋಲಾಹಲಧ್ವನಿಗಳಿಂಬಿಟ್ಟು ಒಳಿಕಲ್ಲಿ
ಮೇಲಾದ ಕಾರಣವನೊಲ್ದು ನಿರವಿಪುದೆಲೆ ಕೃ
ಪಾಲುವೇ ಯೆನೆ ಕೆಂಚವೀರಾಪ್ಪಯಾ ಕೇಳೆನುತ್ತಾರ್ಯನುಸುರ್ದನಲ್ಲಿ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದಾ ವಿವೇಕಿಗಳು ಕೀರ್ತಿಸುತ್ತಿರಲು ಸಾ
ನಂದದೊಡೆವೆರಸಿ ಯಾ ತ್ರಿಪುರಸೀಮೆಗೆ ಬಂದು
ನಿಂದು ಕೈವೀಸಿ ದಾಳಿಯಬಿಟ್ಟನಸುರರರ್ೂರ್ಗಳ ಮುಂಬಿಗಾಗಿ ಶಿವನು
ಕಂದ ಕೇಳಾ ವೇಳೆ ದಿಕ್ಪಾಲ ದೇವತಾ
ವೃಂದೊಡನಭವನಾಣತಿಯಿಂದ ದೇವೇಂದ್ರ
ನಂದು ಸನ್ನಾಹಭೇರಿಗಳ ನೆಗಳಿಸಿ ನಡೆದನವುವು ಬೊಬ್ಬೆಗಳುಲಿಯಲು ೪

ಸುರರ ಧಾಳಿಯ ಬಗೆಯ ಕೇಳುತ್ತ ಕೂಡೆ ಮು
ಪ್ಪುರದ ರಕ್ಕಸರಾಯರಲ್ಲಿ ಮೂಗಿನ ಮೇಲೆ
ಬೆರಲಿಟ್ಟು ತಲೆದೂಗಿ ನಮ್ಮ ಬಡಿಹೋರಿದೇವರ್ಕಳೇ ಬರ್ಪವರ್ಗಳು
ಅರಿದಿದೇಂ ಕಾಲಗುಣವೋ ಯೆಂದು ಚೋದ್ಯದಿಂ
ದಿರೆ ಕೆಲಬರೆಯಿತಂದು ಚಿತ್ತೈಸು ಜೀಯ ಬಂ
ದರು ಪುರದ ಹೊಱಕೇರಿಯಂ ಸೂಱೆಮಾಡುತಿರ್ದಪರೆಂದು ಬಿನ್ನವಿಸಲು ೫

ಹಾ! ಯೆಂದು ಗದ್ದುಗೆಯ ಹೊಯ್ದೆದ್ದು ರಕ್ಕಸರ
ರಾಯರಾ ವೀರವಿದ್ಯುನ್ಮಾಲಿಮುಖ್ಯರಂ
ತಾಯವಸರಂ ಸಮರನಿಸ್ಸಾಹಣಂಗಳಂ ಸೂಳೈಸವೇಳೆಂದೆನೆ
ಬಾಯದೆಱೆದುದೊ ಭೂಮಿ ಸಪ್ತವಾರಾಶಿಗಳು
ತಾಯುಮಳಲಂ ತೋಱುತಿರ್ದಪವೋ ಪೇಳೆನಲ
ಪಾಯುದಿಂ ದಾಂಧಳಂಧಳಮೆಂಬ ಪಿರಿಯ ರವವೆಣ್ದೆಸೆಗೆ ಪರಕಲಿಸಿತು ೬

ದಿಕ್ಕನಾ ಧ್ವನಿಗೇಳಿ ನೆಲ ಹುಳಿತ ಮಾಳ್ಕೆಯಿಂ
ರಕ್ಕಸರ ಚಾತುರ್ಬಲಂಗೂಡಿ ಸುರರ ಮೇ
ಲಿಕ್ಕಿ ಕರಿಗಳ್ಗೆ ಕರಿಗಳು ರಥಕೆ ರಥವಮುವು ತುರಗಕ್ಕೆ ತುರಗಂಗಳು
ಯಕ್ಕಟಿಗರೆಕ್ಕಟಿಗರಿಂತು ತೊಡಗಿದ ರಣದೊ
ಳುಕ್ಕುವುಗ್ರದ ಬೆರಲ ಬೊಬ್ಬೆಗಳೊಳಾಗ ಗಂ
ಟಿಕ್ಕಿತ್ತು ಪೇರ್ಗಾಳಗಂ ನಾರದಂ ಗಗನದಲ್ಲಿ ಕುಣಿದಾಡಿ ನೋಡಿ ೭

ಇಱಿದೆಚ್ಚು ಕಡಿವಲ್ಲಿ ಹೊಡೆವಲ್ಲಿ ಸೀಳ್ವಲ್ಲಿ
ದುಱದುಱನೆ ನೆತ್ತರುಗೆ ದುಡುಹೆಂಬ ದುಮ್ಮೆಂಬ
ಸಱಸಱ್ರಸಱ್ರೆಂಬ ಖಣಿಲೆಂಬ ಕಟಿಲೆಂಬ ದನಿ ಮಧುರಗಾನರಸವ
ಎಱೆದರೋ ಕರ್ಣದೊಳಗೆಂದು ನಾರದಮುನಿಪ
ನುಱೆ ಸಂತಸಂಬಡುವ ಮಾಳ್ಕೆಯಿಂ ಕಾದುವಾ
ತೆಱನೇನು ಸಾಮಾನ್ಯವೇ ಮಹಾರಾಕ್ಷಸರ ದೇವರ್ಕಳಧಿಕಯುದ್ಧಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಟ್ಟೊಡೆಯನೇ ದಂಡು ಬಂದು ನಮ್ಮಯ ಬೆನ್ನ
ಮೆಟ್ಟಿ, ಕಾಳಗಕೆಂದು ಕೈವೀಸುತಂ ಹರಿಯು
ಬಿಟ್ಟ ಬಳಿಕಿನ್ನಾವ ಭಯವೆಂದು ದೇವೇಂದ್ರನಖಿಳ ದಿಕ್ಪಾಲರ್ಗಳ
ಒಟ್ಟಜೆಯೊಳಖಿಳ ವಾದ್ಯಂಗಳಂ ಮೊಳಗಿಸು
ತ್ತುಟ್ಟಿ ಬೊಬ್ಬಿಱಿದು ದಾನವರುಗಳ ತಲೆಗಳಂ
ಕೊಟ್ಟು ದಿಗ್ಬಲಿಗಳಂ ಕೊಡುತಿರ್ದನಾಹ ಬಣ್ಣಿಪನಾವನಾ ರಣವನು ೯

ಗಡಬಡಿಸಿ ಕೆಟ್ಟೋಡುವಸುರರಂ ಕಂಡವದಿ
ರೊಡೆಯರೆನಿಸುವ ತಾರಕಾಕ್ಷ ಮೊದಲಾದವರು
ಕೊಡಿರೆಲವೊ ಸುರರ ಗೋವರ್ಗೆ ನಿಮ್ಮಪಮಾನಗಳನೆಂದು ಮೂದಲಿಸುತ
ಜಡಿದು ಖಂಡೆಯವನೆಲ್ಲರ ಕೂಡಿ ಬಂದಲ್ಲಿ
ತೊಡಗಿ ದೇವರ್ಕಳಂ ಸದೆದಟ್ಟಿ ಕೆಟ್ಟೋಡಿ
ನಡುಗೆ ದೇವೇಂದ್ರನಂತಾಗ ಮುಱಿವಲ್ಲಿ ಬೊಮ್ಮನ ಪೌಜಿನೊಳಪೊಕ್ಕನು ೧೦

ಕಂಡಾ ನವಬ್ರಹ್ಮರೊಡಗೂಡಿ ಹಂಸೆಗಳ
ತಂಡಮಂ ದೆಸೆದೆಸೆಗೆ ಪಾಱಿಸುತ್ತಲ್ಲಿ ಮುಂ
ಕೊಂಡು ಬಂದಿದಿರಾಗೆ ಬಡಪಾರ್ವರೆತ್ತ ಕಾಳಗವೆತ್ತಲೆಂದವದಿರು
ಖಂಡೆಯಂಗಳ ಜಡಿದು ಹೊಡೆಯೆ ಮಂತ್ರಾಸ್ತ್ರದಿಂ
ಖಂಡಿಸುತ್ತನಿಬರಂ ಸಂಹರಿಸಿದರು ಭಾಪು
ಮುಂಡವೆದ್ದಾಡೆಯುಂಬರದಲ್ಲಿ ಕೆಟ್ಟೋಡಿ ಕಮಲಾಕ್ಷನಂ ಸಾರ್ದರು ೧೧

ಕಾಣುತ್ತ ಬೊಬ್ಬಿಱಿದು ರಥವೇಱಿ ನಡೆದವಂ
ಗೋಣನರಿ ದೀಡಾಡೆನುತ್ತ ಖಂಡಿಸುತ ಬರೆ
ವಾಣೆಯಧಿಪರು ನಿಲ್ಲಲಾಱದಾ ಹರಿಯ ಪೌಜಿನ ಮೇಲೆ ಬೀಳಲಾಗಿ
ಮಾಣದಭಯವನಿತ್ತು ಗರುಡನಂ ಹಾಱಿಸು
ತ್ತಾಣತಿಯನಿತ್ತು ಕೈವೀಸಿ ತನ್ನವರಿಗ
ಕ್ಷೋಣಿ ರಕ್ಕಸರ ತಲೆಗಳನರಿದು ದಿಗ್ಬಲಿಯ ಕೊಟ್ಟನಂತುಗ್ರದಿಂದ ೧೨

ಮುಂದೆ ಬಿದ್ದಖಿಳ ದಾನವರನೀಕ್ಷಿಸುತಲ್ಲಿ
ಹಿಂದಾದ ಹೇಡಿ ರಕ್ಕಸರ ಮೀಸೆಗಳ ಕೊ
ಯ್ಯೆಂದು ವಿದ್ಯುನ್ಮಾಲಿ ಮೂದಲಿಸಿ ರಥವೇಱಿ ಹರಿಯೊಡನೆ ತೊಡಗಿ ಬಳಿಕ
ಒಂದು ಶಕ್ತಿಯೊಳಿಟ್ಟೊಡಾಗ ಕಿಡಿಗೆದಱಲ್ಕೆ
ತಂದುದನಿಬರ ಪೇರುರಂಗಳಂ ತಟವುಗಿಯೆ
ನಿಂದು ಕಾದುವೊಡೆ ತನಗಳವಲ್ಲದಲ್ಲಿ ಕೆಟ್ಟೋಡಿದಂ ಗರುಡಧ್ವಜಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದು ದೆಸೆದೆಸೆಗೋಡುವವಮರರ್ಕಳೊಡನೆ ಗೋ
ವಿಂದನಳ್ಕುತ ಪಲಾಯನವನೆಯ್ದುತ್ತಮಿರೆ
ನಂದಿಕೇಶಂ ಕಾಣುತಭಯವುಮಂ ಕೊಟ್ಟು ಖಂಡೆಯ ಹಲಗೆಗಳನಾನುತ
ಹೆಂದದ ಗಣಂಗಳೊಳು ನಡೆದನಿಬರೆಲ್ಲರಂ
ಕೊಂದು ದಿಗ್ಬಲಿಗೊಟ್ಟು ದನುಜಮುಖ್ಯರನು ಸ
ಬ್ರಿಂದು ಸೀಳುತ್ತ ದೆಸೆದೆಸೆಗಿಟ್ಟನಗ್ರಗಣ್ಯನೊಳವದಿರೇಂ ನಿಲ್ವರೇ ೧೪

ಆ ರುಚಿರ ನಂದೀಶನೊಳು ಗಂಗೆವಾಳುಕ ಸ
ಮಾರುದ್ರರೆಯ್ದೆ ಕವಿಯಲು ದನುಜರಾಗ ರಣ
ಭೇರಿಗಳ ಮೊಳಗಿಸುತ ಬೊಬ್ಬಿಱಿದು ಮುಸುರಲೆಣ್ದೆಸೆಯೊಳತ್ಯುಗ್ರದಿಂದ
ವೀರ ವಿದ್ಯುನ್ಮಾಲಿ ಕಮಲಲೋಚನನಧಿಕ
ತಾರಕಾಕ್ಷಾದಿಗಳು ನಿಶ್ಚೈಸಿ ಕೂಡಿ ಹೊಂ
ದೇರುಗಳನಡರೆ ಬಿಱುಗಾಳೆಗಳು ಬಿರಿದೆತ್ತಿ ಕರೆಯಲದ್ಭುತವಾದುದು ೧೫

ಗಗನವೇ ನಾಲಗೆಗಳಂ ನೀಡುವಂತೆ ಕೈ
ದುಗಳ ಬೆಳಗೆಯ್ದೆ ಪಸರಿಸೆ ಕೂಡೆ ಬೊಬ್ಬಿರಿದು
ವಿಗಡರಕ್ಕಸರು ಕವಿಯಲು ಕಂಡ ನಂದಿಕೇಶನ ಗಣಂಗಳು ಹಸ್ತದಿಂ
ನಗಕುಲಂಗಳ ಕಿತ್ತು ಕೆಡೆಕೆಡೆಯೆನುತ್ತಿಟ್ಟು
ಹೊಗರೆಸೆವ ಖಂಡೆಯಂಗಳೊಳಿರಿದು ಸೀಳುತಂ
ದಿಗುಬಲಿಯನಿತ್ತರೆಣ್ದೆಸೆಗೆ ರಕ್ತದ ಕಡಲು ಭೋರೆಂದು ಪರಕಲಿಸಲು ೧೬

ಈಕ್ಷಿಸುತ್ತಾಗ ವಿದ್ಯುನ್ಮಾಲಿ ಮೊದಲಾದ
ರಾಕ್ಷಸಮಹೀಶ್ವರರ ಕೂಡೆ ತೊಂಬತ್ತಾಱು
ಆಕ್ಷೋಹಿಣೀ ದೊರೆಗಳೇಱಿದರು ಕಾರೊಡಲ ಕೋಡಾಡೆಯ ವೀರರು
ಆ ಕ್ಷಣದೊಳೆಮ್ಮ ನಂದೀಶ್ವರನ ಕೂಡೆಯಾ
ತ್ರ್ಯಕ್ಷನಣುಗರು ಘೂರ್ಮಿಸುತ್ತ ರಣಮಂ ಪೊಗಲು
ದಕ್ಷಸಂಹಾರಿ ವೀರೇಶ್ವರಂ ನಿಮಿಷಮಾತ್ರಕ್ಕೆ ಸಂಹರಿಸಿದನಲಾ ೧೭

ಘೋರಸ್ವರೂಪಿ ದಾನವರಾಜನಾ ಶಿಂಶು
ಮಾರನೆಂಬವನುಗ್ರದಿಂ ನಂದಿಕೇಶನೊಳು
ಹೋರಿ ಬಾಯ್ದೆಱೆದು ನುಂಗಲು ಬೆಳೆಯಲವನೊಡಲು ಕೂಡೆ ಬಿಕ್ಕನೆ ಬಿರಿಯಲು
ಆರಿ ಸೀಳ್ದಾಗ ದಿಗ್ಬಲಿಗೊಟ್ಟನದ ಕಂಡು
ತಾರಕನ ಸುತರುಳಿದ ದೊರೆಗಳೊಳು ತೇರ್ಗಳಂ
ಚಾರಿವರಿಯಿಸಿ ಕಾದುತಿರೆ ಕಂಡು ಷಣ್ಮುಖಂ ಕಡಿಖಂಡಮಂ ಮಾಡಿದಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಶಮಂ ಬೀರಿ ಹಿಡಿದೆಳೆದುಕೊಂಡವದಿರಂ
ಆಸುರದ ಕೊಡಲಿಯಿಂ ಕಡಿಖಂಡಮಂ ಮಾಡೆ
ಲೇಸಯ್ಯ ಪುರಹರನ ಹಿರಿಯ ಕುವರಾ ಎಂದು ಸರ್ವ ಗಣತತಿ ಪೊಗಳಲು
ಆ ಸಮರ್ಥಿಕೆಯ ಹೊಟ್ಟೆಯ ಬೆನಕನಿಂತತಿ ವಿ
ಲಾಸದಿಂ ಸಂಹರಿಸೆ ನಿಖಿಲ ಶಕ್ತಿಯರುಗಳು
ಘಾಸಿಮಾಡುತ್ತಿರಿದು ತರಿದೊಟ್ಟಿದರು ಕೂಡೆ ಬೊಬ್ಬಿಱಿವುತೆಣ್ದೆಸೆಯೊಳು ೧೯

ಮೆಱೆಯಲೀ ತೆಱದಿಂದ ರಣವಲ್ಲಿ ಮರುಳುಗಳು
ನಿಱಿಗರುಳ ಬಗಿಬಗಿದು ನೆತ್ತ್ರರ್ಗಳಂ ಬಾಯೊ
ಳೆಱೆದು ಮುಕ್ಕುಳಿಸಿಯಾನಂದದಿಂ ಕೂಡೆ ಚಪ್ಪಱಿದು ಸವಿಸವಿದು ಸವಿದು
ಕಱೆಗೊರಲನಾಳ್ಗಳಿರ ತಂದೆಗಳಿರಾ ಬಾಯ
ಬಱನ ಬಿಡಿಸಿದಿರೆಂದು ಕೀರ್ತಿಸುತ್ತಿರ್ದವೀ
ತೆಱದಿಂದ ಕಾದಿ ತಱಹರಿಸಲಾಱದೆ ಕೂಡೆ ಕೆಟ್ಟೋಡಿದರು ದನುಜರು ೨೦

ಕೊಟ್ಟೋಡಿ ಮುಪ್ಪುರಂಗಳೊಳೆಯಿದೆ ಪೊಗುತಿರ್ದ
ರಟ್ಟಿಗಣನಾಯಕರು ಬಾಗಿಲ್ಗಳಂ ಬಲಿವು
ತಟ್ಟಳೆಗಳೇಱೆ ಪೆಟಲಂಬು ಗುಂಡುಗಳಾಂತು ರಕ್ಕಸರು ಪಲವುಕಡೆಯ
ಇಟ್ಟಣಿಸಿ ಕೋಂಟೆಗಾಳಗವನುಱೆ ಮಾಡುತಿರೆ
ಧಿಟ್ಟರೆನಿಸುವ ಗಣಂಗಳು ಶಸ್ತ್ರನಿಕರದಿಂ
ದಿಟ್ಟಿರಿದನಂತರಂ ಕೊಲುತಿರಲು ಸತ್ತು ಸಾಯದೆ ಕಾದುತಿರಲವದಿರು ೨೧

ಆ ವೇಳೆ ಸರ್ವಜ್ಞನಳ್ತಿಯಿಂದಿಂತೆಂದ
ನಾವ ಕಾರಣವಿವಂದಿರು ಕೆಟ್ಟು ಕೆಡರೆನಲು
ಗೋವಿಂದನೆಯಿತಂದು ಸಾಷ್ಟಾಂಗದಂಡಪ್ರಣಾಮದಿಂ ನಮಿಸಿ ನಿಂದು
ದೇವ ಬಿನ್ನಪವೆಂದು ಹಸ್ತಂಗಳಂ ಮುಗಿದು
ತಾವರೆಯ ಮಗನಂದು ನಿಮ್ಮನುಜ್ಞೆಯೊಳು ದನು
ಜಾವಳಿಗೆ ಕೊಟ್ಟ ವರವಧಿಕವೆಲೆ ಜೀಯ ರಕ್ಕಸರ ಪಟ್ಟಣದೊಳೀಗ ೨೨

ಸತ್ತವರ ಮೇಲಮೃತಮಂ ತಂದು ತಳಿಯಲೇ
ಳುತ್ತ ಬಂದಿದಿರಹರು ದೇವ ಪಾತಿವ್ರತೆಯ
ರುತ್ತಮ ಸ್ತ್ರೀಯರ್ಗಳುಂಟು ರಾಕ್ಷಸರಯೋಲಿಂಗಮಂ ಪೂಜಿಸುತ್ತ
ಮತ್ತಮಂ ಕಾರ್ಬೊನ್ನ ಪೆಟ್ಟಿಗೆಯೊಳಿರಿಸಿ ಸೀ
ಳುತ್ತೊಡಲ ಮಧ್ಯದೊಳಗಿಟ್ಟು ಬಾಸಣಿಸಿಕೊಂ
ಡಿತ್ತ ನಮ್ಮೊಳು ಕಾಳಗಕ್ಕೆ ಬಹರದುಕಾರಣಂ ಪುರಂ ಕೆಡದೆಂದನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ನುಡಿಯನಾಲಿಸುತ್ತಾಗ ಸರ್ವೇಶ್ವರಂ
ದಾನವಾಂತಕ ರಕ್ಕಸರನಸತ್ಯರ ಮಾಡು
ನೀನೆ ಹೋಗೆನೆ ಜೀಯ ದುರ್ಬೋಧೆಗೆನಗಾರ್ ಸಹಾಯರೆನೆ ನಾರಂದನ
ಆನನವ ನೀಕ್ಷಿಸುತ್ತಿರ್ವರುಂ ಪೋಗಿಯೆನ
ಲಾ ನಿರೂಪವನಾಂತು ಬೌದ್ಧದೇಶಿಕನಾದ
ನಾನಂದದಿಂ ವಿಷ್ಣು ಮುನಿಯಧಿಕವೃದ್ಧಮಾನ್ಯತೆಯೊಳೊಡನೆಯಿತಂದನು ೨೪

ಆಕ್ಕರಿಂದಾಚಾರ್ಯರಾಗಿ ಬಂದೀರ್ವರುಂ
ಪೊಕ್ಕರಾ ತ್ರಿಪುರಮಂ ಗಾಂಭೀರ್ಯದಿಂ ರಾಯ
ರಕ್ಕಸರ ಸಭೆಗೆ ಬರಲಿದಿರೆದ್ದು ನಮಿಸುತವರಗ್ರಗದ್ದುಗೆಯನಿಟ್ಟು
ಮಿಕ್ಕ ಸತ್ಕಾರಂಗಳಂ ಮಾಡಿ ನೀವಾವ
ದಿಕ್ಕಿನಿಂ ಬಂದಿರೇಂ ಕಾರಣವೆನಲ್ಕೆ ನಸು
ನಕ್ಕಿದಿರುಗದ್ದುಗೆಯ ನಾರದರ ಮೊಗವನೀಕ್ಷಿಸಿ ನುಡಿದನಾಗ ವಿಷ್ಣು ೨೫

ಎಲೆಲೆ ರಕ್ಕಸರಾಯರಿರ ಕೇಳಿ ನಿಮ್ಮುಮಂ
ಕೊಲಬಂದ ಗೊರವನಂ ನೀವು ಪೂಜಿಸುವಿದಱ
ನೆಲೆಯಾವುದೆನಲೀಶನೇ ದೈವವೆಂಬುದಖಿಲಾಮ್ನಾಯದೊಳು ನಿಶ್ಚಯಂ
ಸುಲಭವೆನೆ ಬಿಡಿ ಬಿಡಿಯದೇಕೆಯಾ ಮಾತೆಂದು
ಹಲವು ಯುಕ್ತಿಯೊಳು ಶಿವನಂ ಜಱೆವುತಹುದೆ ನಿ
ರ್ಮಲವೃದ್ಧಮುನಿಯೆ ಪೇಳೆನೆ ತಪ್ಪದಾಚಾರ್ಯ ನಿನ್ನ ನುಡಿ ತಥ್ಯವೆಂದಂ ೨೬

ರಾಕ್ಷಸರಿಗಾ ವಿಷ್ಣುವೀ ತೆಱದೆ ಹನ್ನೆರಡು
ಲಕ್ಷಗಣನಾ ಗ್ರಂಥದಿಂದೊರೆದು ನಾರದನ
ನೀಕ್ಷಿಸಲು ತಪ್ಪದಯ್ಯಗಳೆ ನಿಮ್ಮಯ ಮಾತೆನಲ್ಕಂಡಿರೇ ಹಿರಿಯರು
ಪಕ್ಷಪಾತವನಾಡುವರೆ ಎನಲವಂದಿರವ
ಲಕ್ಷಣದೊಳೀಶಭಕ್ತಿಯ ಬಿಟ್ಟು ಕೇಳುತಂ
ಈ ಕ್ಷಿತಿಗೆ ಲಿಂಗಂಗಳಂ ಹಾಯ್ಕಿಬಿಟ್ಟರಾ ದುರ್ಬೋಧೆಯೋಗೆಯ್ಯದು ೨೭

ಆ ಲಿಂಗವವನಿಯೊಳಗೀಗಳುಂ ನೆಱೆ ಮಹಾ
ಸ್ಥೂಲತ್ವದಿಂ ಪೂಜೆಗೊಳುತ್ತಿದವೆಲೆ ಮಗನೆ
ಈ ಲೋಕದೊಳಗೆ ದುರ್ಮಾರ್ಗಿಗಳ ಮಾತನದುಕಾರಣಂ ನೀಂ ಕೇಳದೆ
ಮೂಲ ಬೋಧೆಯೊಳಿರೆಂದಾ ಗುರುವರಂ ಪೇಳೆ
ಹೋ ಲೇಸು ತಂದೆಯೆಂದಾ ಸುತಂ ಕೈಮುಗಿದು
ಮೇಲವದಿರೇನಾದರೆನೆ ನುಡಿವುತಿರ್ದನಾ ಹಲಗೆಯಾರ್ಯಂ ಕರುಣದಿಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರೈಪುರವನೊಳಪೊಕ್ಕು ವಿಷ್ಣು ದುರ್ಬೋಧಕಂ
ಆ ಪತಿವ್ರತೆಯರಂ ಕೋಟಿಕಾಮರ ಗೆಲ್ವ
ರೂಪಿನಿಂದೇಕಾಂತದಲ್ಲಿ ಚಿತ್ತಸ್ಖಲನೆಗಳ ಮಾಡಿದಂ ಬಳಿಕ್ಕ
ಆ ಪದ್ಮಜಂ ಮಹಿಪವತ್ಸನಾಗುತ್ತ ಪೊ
ಕ್ಕಾ ಪವಿತ್ರಾಮೃತವನೆಲ್ಲವಂ ಹೀರುತಿಂ
ತೀಪರಿಯನೆಸಗಿ ಬಂದಿರ್ವರುಂ ಸರ್ವೇಶ್ವರಂಗೆ ಕೈಗಳ ಮುಗಿದರು ೨೯

ದೇವ ಚಿತ್ತೈಸು ದನುಜರ ಪುರತ್ರಯವಧ
ರ್ಮಾವಾಸವಾಯಿತ್ತವಂ ಸುಡುವ ಕಾರಣ
ಕ್ಕೀವೇಳೆಯುಚಿತವೆಂದಂಬಾದನೆಂದಿನಂತಾ ವಿಷ್ಣು ಕೂಡೆ ಬೊಮ್ಮ
ಆ ವಿಮಲ ಸೂತಭಾವದೊಳೆಸೆದು ವೇದ ತುರ
ಗಾವಳಿಯ ವಾಘೆಯಂಗಳ ಪಿಡಿದನನುವಾಗಿ
ಪಾವನ ಮಹೇಶ್ವರಂ ಮೇರುಧನುವಂ ಬಿಗಿದನಾ ಶೇಷನಾರಿಯಿಂದ ೩೦

ಮೇಲೆ ಧೂಮ್ರಾರ್ಚಿಯಾ ನೀಲರಕ್ತಂ ಕಪಿಲ
ಲಾಲಿತದ ವಿಸ್ಫುಲಿಂಗಿನಿ ಸೇರುವೆಯ ಲಪ
ಜ್ವಾಲಾ ಸುಪೂರ್ಣೆಮಾಲತಿಯದರ್ಚಿಷ್ಮಂತಿ ಹವ್ಯವಾಹಿನಿ ಬಳಿಕ್ಕ
ಸ್ಥೂಲತೆಯ ಕವ್ಯವಾಹಾರಾದ್ರಿ ದಶಕಲಾ
ಭಾಲಾಗ್ನಿ ಸಮ್ಮಿಲಿತ ಪಾಶುಪತವೇ ಮೊನೆಯ
ಲಾ ಲಲಿತ ವಿಷ್ಣುವೇ ಕೋಲಂಬನಳವಡಿಸಿದಂ ಧನುವಿನೊಳಗುಗ್ರನು ೩೧

ವಾಯು ಗರಿಯಾಗಲಾಕರ್ಣಪೂರ್ಣತೆಯೊಳಂ
ಮಾಯಾರಿ ತೆಗೆದೀಕ್ಷಿಸಿದನಲಾ ತ್ರಿಪುರಮಂ
ಓಯಾರದಿಂ ದೇವತಾಸಹಸ್ರಾಬ್ಧಪರಿಯಂತ ನಿಮಿಷಾಕ್ಷಿಯಿಂದ
ಸ್ವಾಯತದ ನಯನಾಶ್ರುಕಣವುಗಲು ರುದ್ರಾಕ್ಷೆ
ಯಾಯವಸರದೊಳೊಗೆದವೆಂದು ಗುರುವಲ್ಲಭಂ
ಕೈಯ್ಯ ಮುಗಿದಾಲಿಸುತ್ತಿಪ್ಪ ನಿಜ ಶಿಷ್ಯಂಗೆ ವಿವರದಿಂ ಬಿತ್ತರಿಸಿದಂ ೩೨

ಎಸೆವ ವಾಮದ ಸೋಮನೇತ್ರದಿಂ ರುದ್ರಾಕ್ಷಿ
ನಸುಬಿಳ್ಪಿನಿಂದ ಪದಿನಾಱು ತೆಱನೈ ಬಲದ
ದೆಸೆಯ ಸೂರ್ಯಾಕ್ಷಿಯಿಂ ಹನ್ನೆರಡು ತೆಱದ ಕೆಂಪಾದ ರುದ್ರಾಕ್ಷಿಯೊಗೆದು
ಪಸರಿಸುಗುವುಗ್ನಿನಯನದೊಳು ಕಪ್ಪಾಗಿ ರಂ
ಜಿಸುತಿಪ್ಪ ಹತ್ತು ತೆಱನಾದವೈ ರುದ್ರನ
ಕ್ಷಿಸಮುದ್ಭವಂಗಳಾದುದಱಿಂದ ರುದ್ರಾಕ್ಷಿಯೆಂಬ ಪೆಸರಾದುದಿಳೆಗೆ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಮೂವತ್ತೆಂಟು ತೆಱದ ರುದ್ರಾಕ್ಷಿಗಳು
ಕಂತುಹರನಯನಂಗಳಿಂದ ಜನಿಸಿದವಲಾ
ನೀಂ ತಿಳಿಯುವಂ ಕಂಡವಂಗೆ ಪುಣ್ಯಂ ಲಕ್ಷಮಡಿ ಮುಟ್ಟೆ ಕೋಟಿ ಫಲದ
ತಿಂಥಿಣಿಯುವಂ ಧರಿಸೆ ಶತಕೋಟಿ ಸುಕೃತಂಗ
ಳಾಂತು ರಾಜಿಪನೆಲ್ಲೈ ತದ್ವಿಧಾನಂಗಳಂ
ಸಂತಸದೊಳೊರೆವೆನ್ನೈ ನಿನಗೆ ಮುಂದಾವು ಕೇಳೀ ಕಥಾರತಿಯ ಮಗನೇ ೩೪

ಈ ಪರಿಯೊಳಾಗಶ್ರುಜಲವೊಗಲ್ಕೀಕ್ಷಿಸು
ತ್ತಾ ಪುರತ್ರಯದ ಕೀಲೊಂದಾಗಲಾ ವೇಳೆ
ಚಾಪದಿಂ ಬಾಣಮಂ ಬಿಟ್ಟು ಬೊಬ್ಬಿಱಿದನಂತಾ ನಿಮಿಷಮಾತ್ರದಲ್ಲಿ
ಭಾಪುರೇ ತ್ರಿಪುರಂಗಳುರಿದವಲ್ಲಿಂ ಮೀಱಿ
ಈ ಪದ್ಮಜಾಂಡವೆಲ್ಲವನಗ್ನಿ ಸುಡುತಿರಲು
ಕಾಪಾಲಿಯಂಘ್ರಿಗಂತಾ ಬ್ರಹ್ಮನೆಱಗಿ ಕೈಮುಗಿದು ಕೀರ್ತಿಸತೊಡಗಿದಂ ೩೫

ದೇವ ದೇವೇಶ ಪರಮೇಶ ಪ್ರಸನ್ನನಾ
ಗೋವು ಕರುಣದೊಳಖಿಳ ಲೋಕಕ್ಕೆ ಕರ್ತನೇ
ಪಾವನಾನಂದಮಂ ಕೊಡುವನೇಯಾತ್ಮತತ್ವಕ್ಕೆ ಮೇಲೆನಿಸಿ ತೋರ್ಪ
ಶ್ರೀ ವಿಭವದಧಿಕವಿದ್ಯಾತತ್ವರೂಪನೆ ಶಿ
ವಾವಯುವ ಶಿವತತ್ವಲಸದಘೋರನೆ ನಿತ್ಯ
ನೇ ವಿಶೇಷದೊಳಗಿರ್ದೀಶನೇ ನಿನಗಾನು ವಂದಿಸುವೆನೆನುತಿರ್ದನು ೩೬

ಎಸೆವ ಮಿಂಚಿನಬಳ್ಳಿಗಳ ಬಳಸಿನಿಂದ ರಾ
ಜಿಸುವನೇ ಯಗ್ನಿಪ್ರಭಾವನೆಯಂಬಿಕಾ
ಧ್ವಸಿತಾಂಗನೆ ಶ್ಯಾಮರಕ್ತವರ್ಣನೆ ನಿನ್ನೊಳಾಸಕ್ತರಾದವರ್ಗೆ
ಪೊಸತಪ್ಪ ಮುಕ್ತಿಯಂ ಕೊಡುವನೇಯುಮರನೇ
ಮಿಸುಪ ಜ್ಯೇಷ್ಠನೆ ರುದ್ರರೂಪನೇ ಕಾಮನೇ
ಎಸೆವ ವರದಾತನೇ ನಿನಗಾನು ವಂದಿಸುವೆನೆಂದು ಕೀರ್ತಿಸುತಿರ್ದನು ೩೭

ಗಗನೇಶದೇವನೇ ಸ್ವರ್ಗೇಶನೇ ಮರ್ತ್ಯ
ದಗಣಿತದ ನರಕ ಪಾತಾಳಂಗಳಾಣ್ಮನೇ
ಮಿಗೆ ಸಹಸ್ರದ ಶಿರಸ್ಸನೇ ಸಹಸ್ರಾಕ್ಷನೇ ಸಹಸ್ರಪಾದನೆ ಸರ್ವನೇ
ಪೊಗಳೆ ಪರಮೇಷ್ಠಿಯೆ ಸದಾಶಿವನೆ ಶಾಂತನೇ
ಯಗಣಿತ ಮಹೇಶನೇ ಪಿನಾಕಿಯೇ ಸರ್ವಜ್ಞ
ಸುಗುಣಿಯೆ ವರೇಣ್ಯಸದ್ಯೋಜಾತ ನಿನಗೋಸ್ಕರಂ ನಮಸ್ಕರಿಪೆನೆಂದಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರುಪಮುದಘೋರಾಯ ವಾಮದೇವಾಯ ತ
ತ್ಪುರುಷಾಯ ವಿಲಸದೀಶಾನಾಯ ತತ್ಪರಾ
ತ್ಪರದನಂತೇಶಾಯ ಸೂಕ್ಷ್ಮಾಯ ಉತ್ತಮಾಯ ನಮೋ ನಮೋಯೆನುತ್ತ
ನಿರುತ ತ್ರಿಮೂರ್ತಯೇ ನಿರ್ಮಲ ಶಿಖಂಡಿನೇ
ಉರುತರ ಶ್ರೀಕಂಠರೂಪಾಯ ದಿವ್ಯಬಂ
ಧುರತರಾನಂತಾಪನಸ್ಥಾಯ ತುಭ್ಯಂ ನಮೋ ಎಂದು ಕೀರ್ತಿಸಿದನು ೩೯

ಸಮುದನಂತಾಂತಕಾ ವಿಮಲನೆ ವಿಶಾಲನೇ
ವಿಮಲಾಂಗ ವಿಮಲಾಸನಸ್ಥ ವಿಮಲಾತ್ಮನೇ
ಕ್ರಮಯೋಗ ಪೀಠಾಂತರಸ್ಥನೇಯಾತ್ಮನೇಯಾತ್ಮರೂಪಿಯೆ ಯೋಗದ
ಯಮಿಯೋಗಿ ಹೃದಯಸ್ಥನೇ ಹುಲ್ಲ ಬತ್ತದ
ಗ್ರಿಮದ ಮೊನೆಯಂತೆ ತೋಱುವ ಬೆಳಗನುಳ್ಳನೇ
ಮಮಕರ್ತ ನಿನಗೋಸ್ಕರಂ ನಮಸ್ಕಾರವೆಂದಂ ಬ್ರಹ್ಮನತಿಭಕ್ತಿಯಿಂ ೪೦

ಮೋಹದಿಂದಂಸುಪ್ರತ್ಯಾಹಾರನೇ ಸುಪ್ರ
ತ್ಯಾಹಾರರತನೆ ಪ್ರತ್ಯಾಹಾರರತರನುಱಿ
ಬೇಹವರೆನುತ್ತಂ ಪ್ರತಿಷ್ಠಿಸುತ್ತಲ್ಲಿ ರಾಜಿಪನೆ ಧಾರಣ ಧಾರಣಾ
ಸ್ನೇಹಿ ಧಾರಣ ವಿಲಸದಭ್ಯಾಸರಿದಿರಲ್ಲಿ
ಗೇಹವಾಗಿಹನೆ ನಿನಗೋಸ್ಕರಂ ವಂದಿಪೆಂ
ಪಾಹಿಮಾಂ ಮದ್ಗುರುವೆ ಎಂದು ಬೊಮ್ಮಂ ಕೀರ್ತಿಸುತ್ತಿರ್ದನೆಮ್ಮ ಶಿವನಂ ೪೧

ಧ್ಯಾನಾಯ ತೇ ಧ್ಯಾನಗಮ್ಯಾಯ ವಿಲಸಿತ
ಧ್ಯಾನ ಪರಮಧ್ಯಾನರೂಪಾಯ ತೇ ನಮೋ
ಧ್ಯಾನಿಗಳಿಗಂ ಧ್ಯೇಯನೇ ಧ್ಯೇಯಗಮ್ಯನೇ ಧ್ಯೇಯ ಮಧ್ಯೇಯ ರೂಪ
ಮಾನಿತಧ್ಯೇಯರ್ಗೆಯುಂ ಧ್ಯೇಯನೆನಿಸುವಂ
ನೀನಲಾ ಧ್ಯೇಯ ತೇ ನಿನ್ನ ಪದಪಂಕಜ
ಕ್ಕಾನೆಱಗುವೆಂ ಕೂರ್ತೆನುತ್ತ ಕೊಂಡಾಡುತಿರ್ದಂ ಬೊಮ್ಮನತಿಭಕ್ತಿಯಿಂ ೪೨

ಶ್ರೀ ಸಮಾಧಾನಾದಿ ಗಮ್ಯಾಯ ತೇ ನಮೋ
ಶ್ರೀ ಸಮಾಧಾನಾಯತೇ ಸಮಾಧಾನ ರತ
ರಾ ಸದರ್ಥದ ನಿರ್ವಿಕಲ್ಪರೂಪನೆ ನಿನ್ನ ಪಾದಕ್ಕೆ ವಂದಿಸುವೆನು
ಈ ಸಕಲಲೋಕವೆಲ್ಲವನುದ್ಧರಿಪ ದೇವ
ನೇ ಸರ್ವರಂ ಪೊರೆವ ಕರುಣಿ ಮುಪ್ಪುರಗಳಂ
ನೀ ಸುಟ್ಟು ಜಗಪನತಿ ಮೋಹದಿಂ ರಕ್ಷಿಪುದು ದೇವ ಶರಣೆನುತಿರ್ದನು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವಂಗೆ ನಿನ್ನ ಬಗೆಯಱಿಯಬಹುದೆಲೆಲೆ ಮ
ಜ್ಜೀವ ನಿನ್ನಂ ಪೊಗಳಬಲ್ಲವರದಾರು ನಿ
ನ್ನೀ ವಿಮಲ ಪಾದಕ್ಕೆ ವಂದಿಸುವೆನ್ಯೆ ಮತ್ತ್ರತಿ ಮತ್ತ್ರರಾಗಿರ್ದರು
ದೇವ ಗಂಧರ್ವ ಸಿದ್ಧರು ನಿನಗೆ ವಂದಿಪರ
ಲಾ ವಿಭುವೆ ನಿನಗೋಸ್ಕರಂ ವಂದಿಸುವೆನೆಂದು
ತಾವರೆಯ ಮಗನೆಱಗಿ ಕೊಂಡಾಡುತಿರ್ದನಾನಂದದಿಂ ಸರ್ವೇಶನ ೪೪

ತಂದೆ ನೀನೀಕ್ಷಿಸಲ್ ತ್ರಿಪುರಂಗಳೀಕ್ಷಣಂ
ಬೆಂದವಖಿಳಂ ಕೂಡೆ ದಗ್ಧವಾಗುತ್ತ ಬಳಿ
ಕಿಂದುಮುಖಿ ಗಿರಿಜೆಯಿಂದುಳಿದವೀ ರಥವಂಬು ಬಿಲ್ಲನೆನ್ನಂ ಸಾರಥಿ
ಎಂದು ಕಲ್ಪಿಸಿಕೊಂಡೆಯ್ಯಸೆ ನಿನ್ನಯ ಲೀಲೆ
ಯಿಂದೀ ಮಹಾ ಸಾಧನಂಗಳಿಂದಂ ಫಲವ
ನೊಂದುವಂ ಕಂಡುದಿಲ್ಲೆಂದು ಸಿದ್ಧರು ಕೀರ್ತಿಸುವ ದೇವ ಶರಣೆಂದನು ೪೫

ಈ ರಥವದೇಂ ಕಾರಣಂ ದೇವ ನಿನಗೆಯಾಂ
ಸಾರಥಿಯೆ ಹರಿಯಂಬೆ ಶಕ್ರಮುಖ್ಯರು ಬಲವೆ
ಮಾರಾರಿ ನಿನಗೆ ವಂದಿಸಲಳವೆಯಖಿಳ ಪದ ಹಸ್ತ ಮಸ್ತಕವನುಳ್ಳ
ಸಾರ ಮಹಿಮಾಕರನೆ ನಿನ್ನ ಕೀರ್ತಿಪೆನೆಂಬು
ದಾರಿಗಳವೆಂದು ಚರಣಾಬ್ಜದೊಳು ಮಂಡೆಯಂ
ಸಾರಿಸಿ ಮಹಾ ಮಧುರವಚನದಿಂ ಕೀರ್ತಿಸುತ್ತಿರ್ದನಂತಾಬ್ರಹ್ಮನು ೪೬

ಎಸೆವಷ್ಟಮೂರ್ತಿ ನೀನೇಯಖಿಳಮೂರ್ತಿದೇ
ವಸಮೂಹ ರಾಕ್ಷಸರ್ಗಿಷ್ಟಸಿದ್ಧಿಯನು ಪಾ
ಲಿಸುವಾತ್ಮನುಂ ನೀನೆ ಬಳಿಕಿಷ್ಟಸಿದ್ಧಿಯೆನಗಿಷ್ಟಸಿದ್ಧಿಗಳ ಕೊಡುವ
ರಸಿಕ ನೀನಯ್ಯ ಕೊಲ್ವಂ ಕಾವನುಂ ನೀನೆ
ಪೆಸರಿಡಲ್ಬಾರದೈ ನಿನ್ನನೆಂದೆನಲು ಕೀ
ರ್ತಿಸುವಾತನಾರೆಂದು ಕೊಂಡಾಡುತಿರ್ದನಾನಂದದಿಂದಾ ಬ್ರಹ್ಮನು ೪೭

ಮಾಯಾರಿ ರುದ್ರಾಯ ಶರ್ವಾಯ ತುಭ್ಯಂ ಶಿ
ವಾಯ ತತ್ಸ್ಥೂಲಾಯ ಸೂಕ್ಷ್ಮಾಯ ತತ್ಸು ಸೂ
ಕ್ಷ್ಮಾಯ ಸೂಕ್ಷ್ಮಾರ್ಥವಿಲಸದ್ವಿಧೇತುಭ್ಯಂ ನಮೋ ನಮೋ ದೇವ ದೇವ
ಸ್ವಾಯತವಿಧಾತ್ರನೇ ಸ್ರಷ್ಟನೇ ನಿರ್ಜರನಿ
ಕಾಯಭಾಗ್ಯನೆ ನಿನ್ನ ವಿಮಲಪದವೆಂದೆಂಬ
ತೋಯಜಕ್ಕಂ ನಮಸ್ಕರಿಸುವೆನೆನುತ್ತಂ ವಿರಿಂಚಿ ಕೀರ್ತಿಸುತಿರ್ದನು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಲುವೊಡಂ ನೀನೆ ಕರ್ತಂ ಕಾಯ್ವೊಡಂ ನೀನೆ
ಸುಲಭನೇ ಜಗವನೆಲ್ಲಂ ಪೊರೆವವಂ ನೀನೆ
ವಿಲಸಿತದೊಳಖಿಳ ಸುರರಸುರರ್ಗೆ ಬುದ್ಧಿಯುಂ ಪೇಳುವಾರಾಧ್ಯ ನೀನೇ
ಒಲಿದು ಕೊಡುವಂ ನೀನೆ ರಕ್ಷಿಪಾತಂ ನೀನೆ
ಮಲಹರಾ ಮದ್ಗತಿಯದಾರಿನ್ನೆನುತ್ತ ಕರ
ಜಲಜಮಂ ಮುಗಿದು ಕೀರ್ತಿಸುತಿರ್ದನಾ ತ್ರಿಪುರಹರನನಂತಾ ಬ್ರಹ್ಮನು ೪೯

ವೇದಾಂತವೇದ್ಯಾಯ ಘನನಿರ್ಮಲಾಯ ಸ
ದ್ವೇದಾರ್ಥವಿದ್ಭಿರನಿಶಂ ಸಂಸ್ತುತಾಯ ತೇ
ವೇದಾತ್ಮರೂಪಾಯ ತುಭ್ಯಂ ನಮೋ ಭವಾಯಾಂತಾಯ ಮಧ್ಯಮಾಯ
ಸಾದರ ಸಮಧ್ಯ ಮಾಯಾದ್ಯಂತಸಂಸ್ಥಿತಾ
ಯಾದಿದೇವಾಯ ತುಭ್ಯಂ ನಮೋನಮ ಎನು
ತ್ತಾ ದಿವ್ಯಮತಿಯಿಂದ ಕೀರ್ತಿಸುತ್ತಿರ್ದನೀಶ್ವರನನಂತಾ ಬ್ರಹ್ಮನು ೫೦

ನ್ಯಾಯದಿಂದಾದ್ಯಂತ ಶೂನ್ಯಾಯ ತೇ ಸಂಸ್ಥಿ
ತಾಯ ತಚ್ಛೂನ್ಯಾಯ ಲಿಂಗಿನೇ ಲಿಂಗಿನೇ
ಸ್ವಾಯತ್ತ ಲಿಂಗಮಯ ಲಿಂಗಾಯ ವೇದಾದಿ ತನ್ಮಯಾಯೇಷ್ಟದಾತ್ರೆ
ಶ್ರೀಯಗ್ರರುದ್ರಾಯ ಮಮಶಿರೋವಿನಿಕೃಂತ
ನಾಯಾದಿದೇವಾಯ ತೇ ಯಜ್ಞಮೂರ್ತಯೇ
ಮಾಯಾರಯೇ ನಮೋ ತುಭ್ಯಂ ನಮೋ ನಮೋ ಎಂದು ಕೀರ್ತಿಸುತಿರ್ದನು ೫೧

ನಿನ್ನ ಗುರ್ಗೊನೆಯಿಂದಹಂಕರಿಸಿದಜ್ಞನ
ಪ್ಪೆನ್ನ ಮಸ್ತಕವನರಿದಧಿಕನೇ ಸುಗುಣಸಂ
ಪನ್ನನೇ ಕೊಂಡಾಡಲಳವೆ ದೇಹಿಗಳಂತೆ ಸಕಲ ದೇವರ್ಕಳೊಡನೆ
ಸನ್ನದ್ಧನಾಗಿ ಬಂದಸುರರಂ ಕೊಂದಲಾ
ಚಿನ್ನಿಧಿಯೆ ನಿರ್ಗುಣಿಯೆ ಪೊಗಳಲಿನ್ನಾವನಳ
ವೆನ್ನುತಾನಂದದಿಂ ಕೀರ್ತಿಸುತ್ತಿರ್ದನೀಶ್ವರನನಂತಾ ಬ್ರಹ್ಮನು ೫೨

ಏಕನೇ ಸ್ಥೂಲನೇ ಸೂಕ್ಷ್ಮನೆ ಸುಸೂಕ್ಷ್ಮನೇ
ಏಕಮೂರ್ತಾಯ ಸುಮುಹೂರ್ತನೇ ಎನೆ ಬಳಿ
ಕ್ಕೇಕದೃಶ್ಯಂ ವಚೋ ಎಂಬೈಕವಿಶ್ವನೇಯರಿಯಿಸಲ್ಪಟ್ಟ ಮೂರ್ತಿ
ಏಕತತ್ವಂ ಭೋದ್ಯವಿಗ್ರಹನೆ ಭಾವಿಸೆ ನಿ
ರಾಕಾರ ಸಾಕಾರ ರೂಪನೇ ಶರಣೆಂದ
ನೇಕಪ್ರಕಾರದಿಂ ಕೀರ್ತಿಸುತ್ತಿರ್ದನೀಶ್ವರನನಂತಾ ಬ್ರಹ್ಮನು ೫೩

18

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನಸಿನೊಳು ಕಂಡ ವಸ್ತುಗಳು ಜಾಗರಣದೊಳ
ಗಿನಿಸು ಕಾಣಿಸದಂತೆ ತೋಱಿ ತೋಱಿದ ದಿವ್ಯ
ತನುವಿನ ಮಹಾತ್ಮ್ಯತೆಯ ಮೂರ್ತಿ ಮೂರ್ತಿಪ್ರನಿಶ್ಚಯ ರಹಿತಸರ್ವೇಶ್ವರ
ನೆನಹು ನಿಲುಕದ ದೇವ ನೀನೆತ್ತ ನನ್ನ ನುತಿ
ಇನಿತೆತ್ತ ದೇವತೆಗಳೆತ್ತ ಕೃಪೆಯಿಂ ರಕ್ಷಿ
ಸೆನುತ ವಂದಿಸಿ ಕೀರ್ತಿಸಿದನಾ ಮಹಾದೇವನಂ ಬ್ರಹ್ಮನಾನಂದದಿಂದ ೫೪

ಈ ಮಹಾ ಸ್ತೋತ್ರಮಂ ಪಠಿಸಿದೊಡೆ ಬರೆದೊಡಂ
ಪ್ರೇಮದಿಂ ಕೀರ್ತಿಸಿದ ಮಾತ್ರದೊಳಭೀಪ್ಸಿತ
ಸ್ತೋಮಮಂ ಸರ್ವೇಶ್ವರಂ ಕೊಡುವನೆಂದು ಸೂತಂ ಪೇಳುತಿರ್ದನಿತ್ತಂ
ಆ ಮಹಾದೇವನಗಜೆಯ ಮೊಗವನೀಕ್ಷಿಸುತ
ತಾಮರಸಸಂಭವಂಗಖಿಳ ದೇವರ್ಕಳ್ಗೆ
ತಾ ಮೋಹದಿಂ ನುತಿಗೆ ಮೆಚ್ಚಿ ನಿರವಿಸುತಿರ್ದನೀಶನಾನಂದದಿಂದ ೫೫

||ಸಾಕ್ಷಿ|| ಲೈಂಗ್ಯಪುರಾಣೇ- ಬ್ರಹ್ಮೋವಾಚ
ಪ್ರಸೀದ ದೇವ ದೇವೇಶ ಪ್ರಸೀದ ಪರಮೇಶ್ವರ
ಪ್ರಸಿದ ಜಗತಾಂ ನಾಥ ಪ್ರಸೀದಾನಂದದಾವ್ಯಯಂ ೧

ಆತ್ಮತತ್ವೋಪರಿಷ್ಠಾಯ ವಿದ್ಯಾತತ್ವಾಯ ತೇ ನಮಃ
ಶಿವಾಯ ಶಿವತತ್ವಾಯ ಅಘೋರಾಯ ನಮೋನಮಃ ೨

ಎಲೆ ಬೊಮ್ಮ ಹರಿ ಸಕಲ ದೇವರ್ಕಳಿರ ಕೇಳಿ
ಒಲಿದೆವ್ಯೆ ನಿಮ್ಮ ಭಕ್ತಿಗೆಯಭೀಷ್ಟಾರ್ಥಮಂ
ಸಲಹುವೆವು ಬೇಳ್ಪುದೆನೆ ಕೈಮುಗಿದು ಕಲ್ಪಕಲ್ಪಂಗಳೊಳು ಮುಪ್ಪುರವನು
ಜ್ವಲನಾಕ್ಷಿಯಿಂದುಱುಹುವಲ್ಲಿ ನಿನ್ನಯ ರಥದೊ
ಳಲಘುಸಾರಥ್ಯಕ್ಕೆಯೋಗ್ಯನಂ ಮಾಡೆಂದು
ಜಲಜಸಂಭವನಲ್ಲಿ ಬೇಡಿಕೊಂಡಡೆ ಕೊಟ್ಟೆನೆಂದನಾ ಸರ್ವೇಶ್ವರಂ ೫೬

ಬಳಿಕಲಂಘ್ರಿಗೆ ನಮಿಸಿ ಕೈಮುಗಿದು ನಿಂದಿರ್ದು
ನಳಿನಲೋಚನನೆಂದನಾ ಕಲ್ಪ ಕಲ್ಪಂಗ
ಳೊಳು ದೇವ ನಿಮ್ಮ ರಥವೆತ್ತಿಹೊರುವಧಿಕ ಸತ್ವವನಿತ್ತು ರಕ್ಷಿಸೆನಲು
ಅಳಿಕಾಕ್ಷನವನಿಗಿಷ್ಟವ ಕೊಟ್ಟು ದೇವಸಂ
ಕುಳವನೆಲ್ಲಂ ಪೊರೆದನಾವೇಳೆ ರಕ್ಕಸರೊ
ಳುಳಿದರಿರ್ವರು ಹರಿಯ ದುರ್ಬೋಧೆಯಿಂ ಕೇಳದೀಶನಂ ನಂಬಿರ್ದರು ೫೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಳಯಾಗ್ನಿಯಿಂ ಬೆಂದ ಮುಪ್ಪುರಂಗಳೊಳು ನಿ
ರ್ಮಳ ಪುಷ್ಪದೊಟ್ಟಿಲೊಳಗಿರ್ದಂತೆ ನಿಜಹೃದಯ
ನಳಿನದೊಳಗೀಶನಂ ಸೈತಿಟ್ಟು ಕಿಡಿ ಮುಟ್ಟದಂಗ ವಸ್ತ್ರದೊಳೊಪ್ಪಿರೆ
ಬಳಿಕವರಿಗಿಷ್ಟಾರ್ಥವಿತ್ತೆಮ್ಮ ಕೀರ್ತಿಪ
ಗ್ಗಳರಪ್ಪ ಚಂಡಕೀರ್ತಿಗಳಾಗಿ ನೀವೆಂದು
ಘಳಿಲನಲ್ಲಿಂ ನಿಮಿಷದಲ್ಲಿಯಂತರ್ಧಾನವೆಯ್ದಿದಂ ಸರ್ವೇಶನು ೫೮

ಗಿರಿಜೆ ನಂದೀಶ ಗಣನಿಕರಂಗಳೊಳು ಮಹೇ
ಶ್ವರನೆಯ್ದಿದಂ ರಜತಪರ್ವತಕ್ಕಖಿಳ ದೇ
ವರು ತಮ್ಮ ತಮ್ಮ ವಾಹನವೇಱಿ ಸುಖದಿಂದ ಶಿವಪದಧ್ಯಾನಸಹಿತ
ಹರುಷದಿಂ ನಿಜಲೋಕಮಂ ಪೊಕ್ಕರೈ ಕೇಳಿ
ದಿರೆ ನೈಮಿಷಾರಣ್ಯವಾಸದೊಳಗಿಹ ಮುನೀ
ಶ್ವರರಿರಾ ನೀವೆಂದು ಬಿತ್ತರಿಸಿದಂ ಸೂತನತಿಶಯಾನಂದದಿಂದ ೫೯

ಸುಪಥ ಸನ್ಮಾರ್ಗಿಪುತ್ರಾ ಹಿಂದೆ ಕೇಳಿದ್ದೈ
ಯಪರಿಮಿತ ಶಿವನ ಮಹಿಮೆಯ ಲೀಲೆಗಳೊಳು ಪಿರಿ
ದುಪಮೆಯಿಂ ಪೇಳ್ದವಿದು ತಿಳಿವೊಡೊಂಬತ್ತನೆಯದಯ್ಯ ಭಾವಿಸಲು ನವಮಂ
ತ್ರಿಪುರಾರಿಯೆಂಬ ವಾಕ್ಯಪ್ರಮಾಣೆಂದು ನಿಜ
ತಪದಧಿಕ ಹಲಗೆಯಾರ್ಯಂ ಮಧುರವಾಚಕಂ
ಕೃಪೆಯಿಂದ ಕೆಂಚವೀರಾಖ್ಯಂಗೆ ಬಿತ್ತರಿಸಿದಂ ಮಹಾನಂದದಿಂದ ೬೦

ಇದುವಲಾ ತ್ರಿಪುರಸಂಹರಲೀಲೆಯಿಂತಿದಂ
ಪದಪಿಂದ ಬರೆದೋದಿ ಕೇಳಿ ಬಿತ್ತರಿಸೆ ಪೋಗ
ಳಿದಡಖಿಳ ಪಾಪಂಗಳಳಿದಿಹದೊಳೆಯ್ದೆ ಸೌಭಾಗ್ಯ ಸುಜ್ಞಾನಂಗಳು
ಒದವಿ ಸತ್ಕೀರ್ತಿವಿತರಣ ವೀರದಿಂ ಬಾಳ್ದು
ತುದಿಯೊಳು ಮಹಾಮೋಕ್ಷಮಪ್ಪುದಿದು ತಪ್ಪದಾ
ಮದನಾರಿಯಮಲ ವಾಕ್ಯಂ ಕಣಾ ಶಿವಮಸ್ತು ಕಲ್ಯಾಣಮಸ್ತು ಸತತಂ ೬೧

ಕಂದ ಕೇಳಾ ಕೆಂಚವೀರಾಹ್ವಯಾ ನಿನಗೆ
ಹಿಂದೆ ಕೃಪೆಯಿಂದ ಪೇಳಿದೆವು ಶಿವಭಕ್ತರಾ
ನಂದವಹ ವೀರಶೈವಾಮೃತ ಚರಿತ್ರವೆಂಬಧಿಕ ಪ್ರಬಂಧದೊಳಗೆ
ಇಂದೀ ತ್ರಿಪುರವಧೆಗೆ ಮೂಱಾದವೈ ಸಂಧಿ
ಯೆಂದು ಹಲಗೆಯ ದೇಶಿಕಂ ಪೇಳ್ದನಲ್ಲಿ ನಲ
ವಿಂದ ನಂಜುಂಡಮೂರ್ತಿಯ ಹೃದಯ ಕಮಲವಲರಲ್ಕೆ ಸಂತೋಷದಿಂದ ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯು ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಷಟ್‌ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೬೩

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ನವ ತ್ರಿಪುರಹರಪೂರ್ಣಕ್ಕೆ ಕಾಂಡವೊಂದಾ ಸಂಧಿ ಹನ್ನೊಂದಲಾ ೬೪

ಅಂತು ಸಂಧಿ ೧೧ ಕ್ಕಂ ಪದ ೬೨೬ ಗ್ರಂಥ ೯೧ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೧

ವರವನಾ ಬ್ರಹ್ಮನಿಂದಂ ಪಡೆದು ಕಟ್ಟಿಟ್ಟು
ಹರಿಯ ಕೈಲಾಸಕ್ಕೆ ದಂಡು ಬರೆ ಶೂಲಿ ನಿಜ
ಚರಣದಿಂ ಚಕ್ರಮಂ ಬರೆಯಲದು ಕೊಱಿದಿಟ್ಟುದಾ ಜಲಂಧರನ ತಲೆಯಂ

ಶ್ರೀ ಕಾಮಿನೀನಾಥ ಲೋಕಾದಿ ಪಿತ ದುಷ್ಟ
ಪಾಕಾಸುರಾರಿಮುಖ ನಾಕಾಶ್ರಯಾಧಿಪಸ
ದಾಕಾಮದಾರ್ಚಿತ ಸ್ವೀಕಾರವಲ್ಲಭ ಮಹಾಕಾಳ ನಂದಿ ವಿನುತ
ಕಾಕಾಸುರಾರಿ ಲಿಂಗಾಕಾರ ವರ ತನ್ಮ
ಹಾಕಾಂಕ್ಷಿತೇಷ್ಟದಾಸ್ತೋಕಾಮಲಾನತ
ಪ್ರಾಕಾರವದ್ರುಕ್ಷಸಾಕಾರಮೂರ್ತಿ ಸುಶ್ಲೋಕಾಗ್ರಶಾಂತಮಲ್ಲ ೧

ಕರಣಾದಿಗುಣದ ಕಾಳಿಮಮಯದ ಬಹುವರ್ಣ
ಪರಿಕಲಿತವಾದ ಸಮದಾಂಧಗಜರೂಪುದುಱು
ತರದ ಸನ್ಮಾರ್ಗಹಂಸ ವ್ರಜವನಳಱಿಸುವ ನಿಷ್ಠುರಾಳಾಪವೆಂಬ
ಹಿರಿಯ ಸಿಡಿಲುಳ್ಳ ನಿಜ ಶಿಷ್ಯರ ಮನೋಜಲಂ
ಧರವಿಘಾತನಸಜಂರ್ಝಾನಿಲ ಮಹೇಶನುಱು
ತರ ಮೌಳಿಯೆನಿಪ ಗುರುಶಾಂತನಂಜೇಶ ಸಂಕಾಶ ಜಯ ಧರ್ಮಕೋಶ ೨

ಆಚಿನೋತಿಚ ದಿವ್ಯಶಾಸ್ತ್ರಾರ್ಥಮುಱು ವಿಲಸ
ದಾಚಾರಸಂಸ್ಥಾಪ್ಯಯಿತ್ಯಧಿಕ ತತ್ಸ್ವಯಂ
ಚಾಚರತಿಯಸ್ಮಾಚ್ಚ ತತ್ಸಏವಾಚಾರ್ಯ ಇತಿ ಕಥ್ಯತೇ ಎನಿಪ್ಪಾ
ಸೂಚನೆಯೊಳಾಗಮಾರ್ಥಂಗಳಂ ಪರಕಲಿಸು
ತಾಚಾರದೊಳ್ ನತರ ನಿಲಿಸಿ ನೀಂ ಸತ್ಕೃತ್ಯ
ದಾಚರಣೆಯಿಂದ ರಾಜಿಸುತಿಪ್ಪ ಗುರು ಹಲಗೆಯಾಚಾರ್ಯ ರಕ್ಷಿಸೆಮ್ಮಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಗುರುವೆ ಸೋಮಧಾರಾದಿಯಿಂದೊಂಬತ್ತು
ಮಲಹರನ ಲೀಲೆಯಂ ಪೇಳಿದಿರಿ ಹಿಂದಾನು
ನಲಿದು ಕೇಳಿದೆನು ದಣಿಯದ ಸುಖಂ ನಿಮ್ಮ ನುಡಿ ಮೇಲೆ ನಾಂ ಬಯಸುತಿಪ್ಪ
ಸುಲಲಿತ ಜಲಂಧರವದಂ ದಶಮೆನಿಪ್ಪ ನಿ
ರ್ಮಲ ಕಥಾರಸವನಱಿ ಮತ್ಕರ್ಣಕೆನೆ ಕೂರ್ತು
ಹಲಗೆಯಾರ್ಯಂ ಕೇಳ್ವ ನಿಜಮೋಹಿ ಕೆಂಚವೀರಾಹ್ವಯಂಗಿಂತೆಂದನು ೪

ಸುತ ಕೇಳು ಶೈವಪೌರಾಣದೊಳು ಧರ್ಮಸಂ
ಹಿತೆಯಲ್ಲಿ ನಂದೀಶ್ವರಂಗೆಱಗಿ ತತ್ಪಥವೆ
ಗತಿಯಹ ನಸತ್ಕುಮಾರಂ ಕೂರ್ತು ಬೆಸಗೊಂಡನೆಲೆ ಗುರುವೆ ದುಷ್ಟತ್ವದಿಂ
ಸಿತಗನೆನಿಸುವ ಜಲಂಧರನಖಿಳದೇವಸಂ
ತತಿಯ ಸಂಹರಿಸಲಾತನ ಶಿರವನರಿದು ಪಶು
ಪತಿ ನಿಜೋರಸ್ಥಲದೊಳಂ ತಳೆದ ಗಡ ತತ್ಕಥಾವಿಸರವೆಂತೆಂದನು ೫

ಎನಲೆಲೆ ಸನತ್ಕುಮಾರಾ ಕೇಳು ಪೂರ್ವದೊಳು
ವಿನುತ ಭಾಗೀರಥಿಯ ಗಂಗೆಯೊಳು ಮಿಂದೊಂದು
ಘನತರದ ನೀರ್ಗಾಗೆ ಪಾಳ್ದೇಗುಲದ ಶಿಲಾಸ್ತಂಭದಗ್ರದೊಳೆ ನಿಂದು
ತನುವನುಱಿ ಸಾಗಿಸಿಕೊಳುತ್ತಿರಲ್ ಪ್ಯೆಯ್ಯನೀ
ರ್ವನಿ ಕೆದರಲಾ ಲಿಂಗದಂಗದೊಳ್ಬೀಳೆ ಕೆಲ
ದಿನಕದಳಿಯಲ್ ಪ್ರತಿಕಲೇವರದೊಳಂತಕನ ಮುಂದಿರಿಸಿದರು ದೂತರು ೬

ಅದ ಕಂಡು ಕಾಲನಾ ಚಿತ್ರಗುಪ್ತರ ಸೌಮ್ಯ
ವದನಮಂ ನೋಡಿ ನುಡಿದಂ ಪುಣ್ಯಪಾಪವೇ
ನಿದಕೆನಲು ಜೀಯ ಕೇಳ್ ಪಕ್ಷಿಣಾಮೆನುತ ತತ್ಕಾಕಚಾಂಡಾಲಮೆಂಬ
ಹದನಿಂದಲಾದ ಜನ್ಮದ ಜನನವಂತದಱೊ
ಳೊದವಿತ್ತು ಘನಸುಕೃತವೀ ಪ್ರಾಣಿಗೆಂತೆನಲು
ಮದನಾರಿಗಂಗಾರ್ದ್ರಜಲದಿಂದ ಮಜ್ಜನಕ್ಕೆ ಱದಂದವಾಯ್ತೆಂದನು ೭

ಲಲಿತ ಕಿಂಚಿದ್ದಳಂ ವಾಯೆನುತ್ತಂ ಮತ್ತೆ
ಚುಲಕೋದಕಂ ವಾ ಯೆನುತ್ತ ದೇವೇಂದ್ರ ಸ
ಲ್ಲಲಿತ ಲಕ್ಷ್ಮಿಮಿಯೆಂಬ ಶಿವವಾಕ್ಯವುಂಟದುನಿಮಿತ್ತವಿದು ಸರ್ವೇಶಗೆ
ಜಲವನೇ ಧರಿಸಿಯಭಿಷೇಕಮಂ ಮಾಡಿದತಿ
ಸುಲಭದಿಂದಿಂದ್ರಭೋಗಕ್ಕೆ ಮಿಗಿಲೆನೆ ದನುಜ
ಕುಲತಿಲಕನಾಗವೇಳ್ಕೆನೆ ಧರಣಿಗಟ್ಟಿದಂ ಯಮಧರ್ಮನಾ ಪ್ರಾಣಿಯಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನುಜ ಕೇಳಾ ಪ್ರಾಣಿ ಧರೆಯಲ್ಲಿ ರಾಜಿಸುವ
ದನುಜ ವೃತ್ರಾಸುರನ ಕುಲದಲ್ಲಿ ನಲವಿನಿಂ
ಜನಿಸೆ ಶುಕ್ರಾಚಾರ್ಯನೆಯ್ತಂದು ಪೂರ್ವಸಂಬಂಧವಮಂ ತಿಳಿದೀತನ
ಘನವಪ್ಪ ನಾಮಮಂ ಜಲಂಧರನೆನುತ್ತ ಕೊ
ಟ್ಟನುನಯದೊಳೆಯಿದಿದಂ ಕವಿಯುತ್ತಲಿತ್ತಿವಂ
ದಿನದಿನಕೆ ಸೊಂಪಿನಿಂದಿಂಪಿನಿಂ ಬೆಳೆವುತ್ತಲಿರ್ದನೇ ವಣ್ಣಿಸುವೆನು ೯

ನಿಯುತ ಸುಜನರ ಪದಂಗಳ ತಾಗೆ ಬೆಳೆವ ಕಾ
ರೆಯ ಮುಳ್ಳ ಮಾಳ್ಕೆಯಿಂ ಸುರನಿಕರವೆಂಬ ಪ
ಕ್ಷಿಯ ಕುಳವನುಱಿ ಹೊಡೆಯೆ ಬೆಳೆವ ಗಿಡುಗನ ಮರಿಯು ತೆಱದಿಂದ ಮೂಲೋಕದ
ಭಯಬೀಜದಂಕುರದ ಮಾಳ್ಕೆಯಿಂ ನೋಡಲತಿ
ಶಯ ಜಲಂಧರನಿಂತು ಬೆಳೆವುತಿರೆ ಬಳಿಕ ಹರಿ
ಹಯನಪ್ಪ ದೇವೇಂದ್ರನುಹ ವೃತ್ರಾಸುರನ ಮೇಲೆ ದಂಡೆತ್ತಿಬಂದಂ ೧೦

ಬಂದು ತನಗಿದಿರಾಗಿ ಕಾದಿದ ಮಹಾವೀರ
ರೆಂದೆನಿಪ ರಕ್ಕಸರ ಸದೆದು ವೃತ್ರಾಸುರನ
ಕೊಂದಂ ಮಹಾವಜ್ರದಂಡದಿಂದವನ ಪುತ್ರಾದಿ ಬಂಧುಗಳ ಸಹಿತ
ಬೆಂದವರೆಗಳೊಳೊಂದು ಕಳ್ಳವರೆ ಉಳಿವಂತೆ
ಗೊಂದಿಯೊಳಗಿರ್ದೋಡಿ ಬದುಕುತ ಜಲಂಧರಂ
ನಿಂದನತ್ಯುಗ್ರ ತಪದಿಂದವನ ಪೂರ್ವ ಸುಕೃತಂ ವ್ಯರ್ಥಮಂ ಮಾಳ್ಪದೆ ೧೧

ತಿರುಗಿದಂ ದೇವೇಂದ್ರನನಿಬರಂ ಕೊಂದೆನಂ
ದಿರದೆ ತನ್ನಯ ಪುರಕ್ಕಂ ಹಾಗಕಂ ಸಿಲ್ಕಿ
ದುರುಪತ್ರದಂತೆ ಮೆಳೆಯುಂ ಸವರಿ ಹಾದಿಯೊಳು ಬಿದ್ದ ಮುಳ್ಳಂತೆ ನೀರ
ಸುರಿಯೆ ಕೆಟ್ಟಿರ್ದನಲನೊಳಗುಳಿದ ಕಿಡಿಯಂತೆ
ಸುರನಿವಹದೆದೆಗಿಚ್ಚೆನಿಪ ಜಲಂಧರನಧಿಕ
ತರ ತಪಸ್ಸಿನೊಳಿರ್ದನ್ನೈ ಕುವರ ಕೇಳೆನುತ್ತಂ ನುಡಿದನಾಚಾರ್ಯನು ೧೨

ಆ ಜಲಂಧರನ ತಪವೆಂತೆನಲು ಪರ್ವತ ಸ
ಮಾಜದಗ್ರದ ಶಿಖರದೊಳಗಡಕೆಯುಂ ಬೈತು
ಸೂಜಿಯುಂ ಬಲಿದಲ್ಲಿ ಅಂತದಱ ಮೊನೆಯ ಮೇಲೂಱಿ ತನ್ನಂಗುಷ್ಟವಾ
ಭೂಜನಂ ನಡುಗೆ ತೋಳೆರಡನಂಬರಕೆತ್ತಿ
ನೈಜವೀರತೆಯಿಂದಲಧಿದೈವವಂ ಹೃದಂ
ಭೋಜದೊಳಗಳವಡಿಸಿ ನಿಷ್ಠೆಯೊಳೊಪ್ಪುತಿರ್ದನತ್ಯುಗ್ರದಿಂದ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾವಾನಲನ ಬಳಸಿನಿಂ ಕಾಯ್ದು ರವಿಕಾಂತ
ದಾ ವಿಶೇಷಾಗ್ನಿಯಿಂದುದರಾಗ್ನಿಯಿಂ ಬಳಿ
ಕ್ಕಾ ವಿಭಾಕರನ ತೇಜೋಗ್ನಿಯಿಂದೆಸೆವ ಘರ್ಮಾಗ್ನಿಯೀ ಪಂಚಾಗ್ನಿಯಿಂ
ಟೇವತೆಗಳೆದೆಯ ಕಿಚ್ಚೆನಿಸಿಯುಕ್ಕಿನ ಚೂರ್ಣ
ವೇ ವಿಶೇಷಾಹಾರವಾಗಿ ತಪದಲ್ಲಿ ದು
ರ್ಭಾವಿಯೆನಿಸುವ ಜಲಂಧರನಿರ್ದನಲ್ಲಿಂದ ಮೇಲದೇಂ ವರ್ಣಿಸುವೆನು ೧೪

ಹುಲಿಯುಪವಾಸವ್ರತವನಾಚರಿಸಲದಱಿಂದ
ಫಲವೇನು ಪಾರಣೆಯ ಮಾಡುವೆಡೆಯಲ್ಲಿ ಗೋ
ಕುಲವನೇ ಮುಱಿದು ತಿಂಬುದು ಕಾರಣವಲಾ ದುಷ್ಟನ ತಪಂ ಸರ್ವರ
ಕೊಲೆಗಿದೇ ಮೂಲವೆಂಬಂದದೆ ತಪೋಗ್ನಿಯು
ಜ್ವಲವಖಿಳ ಲೋಕಮಂ ಘುಳುಘುಳಿಸಿ ಸುಡುತಿರ್ದು
ದೆಲೆ ಮಗನೆ ಕೇಳೆಂದು ಬಿತ್ತರಿಸುತಿರ್ದನಾನಂದದಿಂದಾಚಾರ್ಯನು ೧೫

ಜಲಧಿಗಳು ಬರತವಿಳೆಗುದುರಿದವು ನಕ್ಷತ್ರ
ಕುಲವಖಿಳ ಪರ್ವತಂಗಳು ನಡುಗಿದವು ಕೂಡೆ
ನೆಲನೆಯಿದೆ ಕಂಪಿಸುತ್ತಮರರೆರ್ದೆ ಜರಿದುದು ಜಲಂಧರತಪೋಗ್ನಿ ಕೂಡೆ
ಜ್ವಲಿಸಿ ಲೋಕಂಗಳಂ ಸುಡುತಿರಲು ಕಾಣುತ್ತ
ಜಲಜಸಂಭವನೇಶ್ವರನನೆಯಿದೆ ನುತಿಸಿ ನಿ
ರ್ಮಲ ಜೀಯ್ಯ ಚಿತ್ತೈಸೆನುತ್ತ ದನುಜನ ಬಗೆಯನಂತಲ್ಲಿ ಬಿನ್ನವಿಸಿದಂ ೧೬

ಆತನೇನಂ ಬೇಡಿದಿಷ್ಟಾರ್ಥಮಂ ಪಂಕ
ಜಾತಸಂಭವ ನೀ ಕೊಡೈ ಮದೀಯಾಜ್ಞೆಯೆನ
ಲೋತು ಶಂಭುವ ನಿರೂಪದೊಳು ಬಂದಾ ಜಲಂಧರನಿದಿರೊಳೆಯಿದೆ ನಿಂದು
ಪ್ರೀತಿಯೊಳಜಂ ನುಡಿದನೆಲೆ ಮಗನೆ ದನುಜ ವಿ
ಖ್ಯಾತ ನಿನ್ನಿಷ್ಟವೇನ್ಯೆ ಕೊಡುವೆನೆಂದಲ್ಲಿ
ದಾತನಾಡಿದ ನುಡಿಯ ಕೇಳಿ ಕಣ್ದೆಱೆದು ಕಂಡಂ ರಕ್ಕಸಂ ಬೊಮ್ಮನ ೧೭

ಕಂಡು ಸಂತೋಷದಿಂ ಬೊಮ್ಮಂಗೆ ಸಾಷ್ಟಾಂಗ
ದಂಡಪ್ರಣಾಮಮಂ ಮಾಡಿ ಕರಮಂ ಮುಗಿದು
ಕೊಂಡು ದೇವರ ದೇವ ಮಿಗೆ ನವಬ್ರಹ್ಮರಯ್ಯನೆ ಜಗದ ಹೆತ್ತಯ್ಯನೇ
ಪುಂಡರೀಕೋದ್ಭವ ಸರಸ್ವತೀಪತಿ ಕಮಲ
ಜಾಂಡಕರ್ತಾರ ಜಯ ಜಯ ಯೆಂದು ಕೀರ್ತಿಸುತ
ಖಂಡಭಕ್ತಿಯೊಳು ತತ್ಪರನಾಗಿ ನಿಂದಿಹ ಜಲಂಧರಂಗಜನೆಂದನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವುದೈ ನಿನ್ನಭೀಷ್ಟ ಕೊಡುವೆವೈ ಬೇಡು
ಭಾವಶುದ್ಧದೊಳೆನಲು ದುಷ್ಟನಿಚ್ಛೆಯು ನಿನ್ನ
ದೇವೇಳ್ವೆನನಿಲನಾಹಾರವುಂ ಕೊಂಡೊಡಂ ಫಣಿ ವಿಷವನೇಂ ಬಿಡುವುದೇ
ಆ ವಿಕಾಸವನೆಯ್ದಿದಲೇನಹುದು ಕಾಲಕುಸು
ಮಾವಳಿಯೊಳೆಯಿದೆ ಹುಳುವಿಪ್ಪಂತೆ ಮನದ ದು
ರ್ಭಾವದೊಳಗಾ ಜಲಂಧರನಜನ ಬೇಡುತಿರ್ದಂ ವರವನೇನೆಂಬೆನು ೧೯

ಸರ್ವ ಲೋಕಂಗಳಂ ನಾನೆ ಸದೆಬಡೆದು ಮಿಗೆ
ಕೊರ್ವಿನಿಂ ಮನಕೆ ಬಂದಂತೆ ನಡೆಯುಹಣಬೇ
ಉಕೋರ್ವನಿಂದಾದೊಡಾನಳಿಯಲಿಲ್ಲದ ಪದವನಳ್ತಿಯಿಂ ಕೊಡು ಬಳಿಕ್ಕ
ಗೀರ್ವಾಣಪತಿಗಳ ಕಿರೀಟಮಣಿರಶ್ಮಿಗಳು
ಪರ್ವಿ ಪರಕಲಿಸಲೆನ್ನಯು ಪದನಖದೊಳಿನ್ನು
ಪಾರ್ವತಿಯ ಪತಿಯೊಡನೆ ಪಳಚಿ ಬೊಬ್ಬಿಡುವ ವೀರವನೆನಗೆ ಪಾಲಿಸೆಂದ ೨೦

ಆ ರಕ್ಕಸನ ಮಾತು ತನ್ನ ಕಿವಿಯೊಳು ಕಾದ
ಕೂರಂಬಿನಿಂದೆಚ್ಚಮಾಳ್ಕೆಯಾಗುತ್ತಲ್ಲ
ವಾರಿಜಭವಂ ಚಿಂತಿಸುತ್ತಕಟ ಕೆಟ್ಟವೀ ಸರ್ವ ಭುವನಂಗಳೆಲ್ಲ
ಓರಂತೆ ಕೊಡಬಾರ ನುಡಿದು ಕೊಡದಿರಬಾರ
ದೀರೇಳು ಲೋಕವೆಂಬಖಿಳ ವೃಕ್ಷಕ್ಕಾಂ ಕು
ಠಾರನಾದೆಂ ಶಿವಯೆನುತ್ತ ಕೊಡಬಗೆದನಂತಾ ರಮ್ಯನಹ ಬೊಮ್ಮನು ೨೧

ಉಟ್ಟ ತಳಿಗ್ರಾಸೆಗಳನಳವಡಿಸಿಕೊಂಡಾಗ
ಮೆಟ್ಟಿ ಮುಂದಕ್ಕಡಿಯ ತನ್ನಿದಿರಿನಲ್ಲಿ ಮರ
ಮೊಟ್ಟೆ ಕಲ್ಮೊರಡಿಗಳು ಸಿಲ್ಕದಿಹ ಸಸಿನವಾಗಿರ್ದ ಹಾದಿಯ ನೋಡುತ
ನೆಟ್ಟನೀತಗೆ ಸಿಕ್ಕೆನೆಂದು ಲವಲವಿಸುತ್ತ
ನಿಟ್ಟಿಸುತ ಕುಡಿನೋಟದಿಂದ ನಿನ್ನಿಷ್ಟವುಂ
ಕೊಟ್ಟೆಂ ಜಲಂಧರಾ ಕೊಳ್ಳೆಂದು ಕೊಡುತಜಂ ನಿಟ್ಟೋಟದಿಂದೋಡಿದಂ ೨೨

ಓಡೆ ಬೆಂಬತ್ತುತಂ ತಡೆಗಾಲ ಹೊಡೆದಲ್ಲಿ
ಕೂಡೆ ಬೊಬ್ಬಿಱಿದು ಬೊಮ್ಮನ ಸೆಱಂಗಂ ಪಿಡಿದು
ನೋಡಿ ತನಗಂ ವರವನಿತ್ತ ದೈವವನೆ ನನ್ನೊಳು ಕಾದು ನನ್ನ ತೋಳು
ಈಡಿರಿಯೆ ಪರ್ವತಂಗಳ ತೀಂಟೆಯುಡಗವೈ
ನಾಡ ಮಾತೇಕೆ ಪ್ರೋಣರೆನೆ ನಡುಗಿ ಕಮಲಜಂ
ಗಾಡಿಗೆಟ್ಟಂ ಮುನೀಶ್ವರ ಕೇಳೆನುತ್ತಲಿರ್ದಂ ನಂದಿಯಾನಂದದಿಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಱಿ ಪಾವು ಕರ್ಚೆ ಸತ್ತಿರ್ದ ಹುಲಿಗಂತೋರ್ವ
ನೆಱಕದಿಂ ಗಾರುಡದ ಮಂತ್ರದಿಂದಸುವೀಯೆ
ತೆಱೆದು ಕಣ್ಣಂ ಬಳಿಕ್ಕೆದ್ದು ತನಗಂ ಹರಣವಿತ್ತವನ ಕೊರಲಿಗಡರಿ
ಮುಱಿದು ತಿಂಬಂತೆ ತನ್ನಂ ಪೊರೆದ ನುಡಿವೆಣ್ಣ
ಎಱೆಯನಂ ಕಾದೆಂದು ಕರೆಯಲು ಜಲಂಧರಂ
ನೆಱೆ ತಿಳಿದು ಲೋಕಪಿತನಾಗ ಯುಕ್ತಿಯೊಳು ನುಡಿದಂ ಬಳಿಕ್ಕವನ ಕೂಡೆ ೨೪

ಮಿಗೆ ವಾದನಾ ಪೋಲಿಶೆಟ್ಟಿಗಪ್ಪೈಸಿದಾ
ಜಗದ ನಾಣ್ಣುಡಿಯಂತೆ ತನ್ನ ಮೇಲಣ ಕಾರ್ಯ
ದೊಗುಮಿಗೆಯನನ್ಯರ್ಗೆ ಸಾರ್ಚುವೆನೆನುತ್ತ ನುಡಿದಂ ಬೊಮ್ಮನತಿ ದೈನ್ಯದಿಂದ
ಮಗನೆ ಕೇಳ್ಮೈ ಜಲಂಧರ ನಿನ್ನ ವೀರದೇ
ಳ್ಗೆಗೆ ಕೊರತೆಯಂ ತಂದುಕೊಂಡೆಯೆನೆ ಕೇಳಿ ನಸು
ನಗುತ ನುಡಿದಂ ಪೇಳು ಪೇಳೆಂತು ಕೊರತೆ ಎನೆ ಮರಳಿ ಕಮಲಜನೆಂದನು ೨೫

ಶತವೃದ್ಧ ನಾನು ಬಡ ಪಾರ್ವನೆನ್ನಂ ಯುದ್ಧ
ದತಿಶಯಕೆ ಕರೆವುದುಚಿತವೆ ನೀಂ ಪರಾಕ್ರಮೋ
ನ್ನತನಾದೆಯಾದೊಡಾ ವೈಕುಂಠಪತಿ ದೈತ್ಯವೈರಿ ನಿಮ್ಮನ್ವಯವನು
ಹತಿಸುವಗ್ಗಳ ವಿಷ್ಣುಗಳ್ಕಿ ಎನ್ನಂ ಕರೆಯೆ
ಸತಿಜನರು ನಗರೆ ನಿನ್ನೋಲಗದೊಳೆನಲು ಪೇ
ಳುತ ಹರಿ ಮಹಾವೀರನೇ ಎಂದೊಡಹುದೆನಲು ಬಿಟ್ಟೆ ನಾ ನಿನ್ನನೆಂದ ೨೬

ಜಲಜಭವನಲ್ಲಿ ಯುಕ್ತಿಯೊಳು ತಪ್ಪಿಸಿಕೊಂಡು
ತಲೆ ದಡಹಿಕೊಳುತೊಂದು ಬೋಳಕ್ಕೆ ಬದುಕಿದೇಂ
ಕಲಿ ದನುಜನಿನ್ನು ತನ್ನಯ ಮನಕ್ಕಂ ಬಂದ ತೆಱದಿಂದ ನಡೆಯಲೆಂದು
ಒಲಿದೆಯ್ದಿದಂ ಬ್ರಹ್ಮಲೋಕಕ್ಕೆಯತ್ತಲೀ
ತ್ತಲಘುದಾನವ ಜಲಂಧರಗೊದವಿತತಿ ತಪೋ
ಜ್ವಲದಿಂದ ಪಡೆದ ಸಿರಿಯೆಂದು ಬಿತ್ತರಿಸುತಿರ್ದಂ ಸುತಗೆ ನಂದೀಶ್ವರಂ ೨೭

ಅದಿದೆನ್ನದೆಲ್ಲ ಸಂಪತ್ತಾ ಜಲಂಧರಂ
ಗೊದವಿತ್ತು ಕಲ್ಪತರುವಿನ ರಸಫಲಂಗಳಂ
ತ್ರಿದಶರ್ಕಳುಂಬರಂತುತ್ತಮರ ಸಂಪತ್ತನೆಯಿದೆ ಸುಜನರು ಭೋಗಿಸಿ
ಹೃದಯ ತುಷ್ಟಿಯ ಪಡೆವರಾ ಬೇವು ಹಣ್ಣಿಗೆ
ಯದನಱಿದು ಕಾಗೆಗಳು ನೆರೆದು ತಿಂಬಂತೆ ಕೂ
ಡಿದರವನ ಸಿರಿಯನುಣ್ಬುದಕೆ ಪೂರ್ವದ ದುಷ್ಟ ದನುಜಕುಲದವರೆಲ್ಲರು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರಾರು ಲಾಳಾಸುರನ ಮಕ್ಕಳೆಯಿತಂದ
ರಿವರು ಕೋಳಾಸುರನ ಸಂತತಿಗಳಕ್ಕಟಿಂ
ದಿವರು ಮಲ್ಲಾಸುರನ ಬಗೆಯುವದಿರಿವರು ಬಿಲ್ಲಾಸುರನ ಪೈಕದವರು
ಇವರು ಭಸ್ಮಾಸುರನ ಕುಲದವರು ಭಾವಿಸುವೊ
ಡಿವರಂಧಕಾಸುರನ ಗೋತ್ರದವರೆಂದಲ್ಲಿ
ತವತವಗೆ ಕೂಡಿತ್ತು ನೆಲ ಹುಳಿತ ಮಾಳ್ಕೆಯಿಂ ನೀಚ ರಾಕ್ಷಸರ ತಂಡ ೨೯

ಓರ್ವನೆನ್ನಯ ಬಲದ ಪದಹತಿಯೊಳಂ ಸಪ್ತ
ಪರ್ವತಂಗಳ ಚೂರ್ಣವಂ ಮಾಳ್ಪೆನೆಂದೆಂಬ
ನೋರ್ವನೆನ್ನಯ ಸೇನೆಯಿಂದಂಬುಧಿಯ ನೀರನೆಯಿದೆ ಕುಡಿಯಿಪೆನೆಂಬನು
ಓರ್ವನೆನ್ನವರಿಂದಲಿಳೆಯ ಮಣ್ಣೆಲ್ಲಮಂ
ಕೊರ್ವಿ ತಿನಿಸುವೆನೆಂಬ ನಿಂತಪ್ಪ ರಾಕ್ಷಸಾ
ಖರ್ವನಾಯಕರು ನೂಱಕ್ಷೋಹಿಣಿಗಳುಳಿದ ಪಡೆಯು ನಿನ್ನಾರೆಣಿಪರು ೩೦

ಇಂತು ಕೂಡಿದ ಸಿರಿಯ ಸೇನೆಯಿಂದಂ ದನುಜ
ಕಾಂತನೆನಿಸುವ ಜಲಂಧರನುಬ್ಬುತಂ ದೇವ
ಸಂತತಿಯ ಬೇಂಟೆಯಾಡಲ್ವೇಕು ಸನ್ನಾಹ ಭೇರಿಗಳು ನೆಗಳಲೆನಲು
ಅಂತು ಲೋಕಂಗಳೆಲ್ಲಂ ಘೋಳಿಡಲ್ಕೆ ದಿ
ಗ್ದಂತಿಗಳು ಘೀಳಿಡಲು ಸುರಪಾದಿಗಳು ಬೆದರಿ
ಚಿಂತಿಸಲು ಹಿರಿಯ ರವದಿಂದ ಮೊಳಗಿದವು ವಾದ್ಯಂಗಳಾರ್ಬಣ್ಣಿಸುವರು ೩೧

ಸಿಂಗರಿಸಿ ಪೊಂದೇರನಡರಿ ನಾಲ್ದೆಸೆಯೊಳಂ
ತುಂಗವಿಕ್ರಮ ದನುಜನಾಯಕರು ಸೇವಿಸಲು
ಕಂಗೊಳಿಸುತಿರೆ ಮಹಾಧ್ವಜವಂಬರದೊಳೆಯಿದೆ ಮೆಱೆಯೆ
ಜಯ ಜೀಯ್ಯದೈತ್ಯ
ಪುಂಗವ ಮಹಾರಾಯ ಮಝು ಭಲರೆ ಎಂಬ ರವ
ಸಂಗಡದಿ ಕವಿ ಗಮಕಿಗಳು ಕೀರ್ತಿಸಲ್ಕೆ ಚತು
ರಂಗಬಲವೋಲೈಸೆ ನಡೆದಂ ಜಲಂಧರಂ ರಾಕ್ಷಸಮಹಾರಾಜನು ೩೨

ಕ್ಷೋಣಿಯೊಳು ದುರ್ಜನನ ವೈಭವಂ ಸಜ್ಜನ
ಪ್ರಾಣಕ್ಕೆ ಕಡೆಯದೆಂತೆನೆ ಪಟ್ಟೆ ವಸ್ತ್ರವ
ಕ್ಷೀಣ ಹೇಮದ ಕಳಶವೆಸೆವ ಝಲ್ಲರಿ ಸೌರುಭದ ಪುಷ್ಪರಸದೊಳೆಯ್ದೆ
ಮಾಣದೆಯಲಂಕರಿಸಿ ಹೆಣದ ಮಾಡವನದಂ
ಕಾಣುತ್ತ ಬಂಧುಗಳು ಮೊಱೆಯಿಡುವರೈಸಲೇ
ಮೇಣುತ್ಸವಕ್ಕಿಲ್ಲದಂತಾ ಜಲಂಧರನ ಸಿರಿ ಸುಜನಬಾಧೆಯಾಯ್ತು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಟ್ಟನೆ ಜಲಂಧರಂಗಖಿಳ ವೈಭವವಾಗೆ
ಕೆಟ್ಟೋಡತೊಡಗಿತೆಲ್ಲಾ ಜಗಂ ಬೆಂಬತ್ತಿ
ಸುಟ್ಟುರುಹತೊಡಗಿದರು ರಕ್ಕಸರು ನರರ ನಾಗರ್ಕಳ ಮಹಾ ತ್ರಿದಶರ
ಪಟ್ಟಣಂಗಳನಧಿಕದಮರಾವತಿಯನಿರಿದು
ಕಟ್ಟೆಸಕದಮೃತ ಸುರವೃಕ್ಷ ಚಿಂತಾರತ್ನ
ದೊಟ್ಟಿಲ್ಗಳಂ ಸೂಱೆಯಾಡಿ ಸುರವನಿತೆಯರನೆಲ್ಲರಂ ಸೆರೆವಿಡಿದರು ೩೪

ಸುರಪನಮರಾವತಿಯ ನಿರಿದು ತೇಜೋವತಿಯ
ಪುರದಗ್ನಿಯಂ ತಗುಳಿ ಯಮನ ಸಯ್ಯಮಿನಿಯಂ
ಪರಿಭವಿಸಿ ನೈಋತ್ಯನಧಿಕ ರಕ್ಷೋವತಿಯ ಕೋಳಾಹಳಂ ಮಾಡುತ
ವರುಣನಿಹ ಶುದ್ಧವತಿಯ ಸೂಱೆಯಾಡಿಯುಱು
ತರವಪ್ಪ ವಾಯುವ್ಯನಧಿಕ ಗಂಧಾವತಿಯೊ
ಳರಿದು ತಲೆಗಳ ಕುಬೇರನ ರಾಜಧಾನಿಯಳಕಾಪುರವನೊಳಪೊಕ್ಕರು ೩೫

ಗಜಬಜಿಸಿ ಕೊಳ್ಳೆಯಾಡುತ್ತಲೀಶಾನ್ಯಂಗೆ
ನಿಜನಗರ ಕಾಂತಿಮತಿಯಂ ಭಂಗಿಸುತ್ತಲಾ
ಕುಜನ ರಾಕ್ಷಸ ಜಲಂಧರ ನಿಂತು ದಿಕ್ಪಾಲರೆಲ್ಲರೂರುಗಳ ನಿಱಿದು
ನಿಜ ನೈಮಿಷಾರಣ್ಯ ಮುಖ್ಯವೆನಿಸುವ ಮುನಿ
ವ್ರಜದಾಶ್ರಮಂಗಳ್ಗುಪದ್ರವಂ ಮಾಡಿಯಾ
ತ್ರಿಜಗವೆಲ್ಲವನಿಂತು ದುರ್ಜನಂ ಗೋಳಿಡಿಸಿ ಹಾಳುಮಾಡುತ್ತಿರ್ದನು ೩೬

ಉತ್ತುಮರಿಗೆಡರಾದ ಕಾಲದೊಳಗಧಮರ್ಗೆ
ಮತ್ತೆ ಸಂತೋಷವಹುದೆಂತೆನಲು ಹಾಲ ನೀ
ವುತ್ತಿಪ್ಪ ಧೇನುಗಳು ಹುಲ್ಲ ಬಱವಲ್ಲಿ ಸಾಯಲ್ತೊಡಗಲವಱ ಹೆಣನ
ಎತ್ತೆತ್ತಲುಂ ತಿಂದು ತಣಿದು ನಾಯಿಗಳು ಕೊ
ರ್ಬುತ್ತಿರ್ಪುವಂತೆ ಸಜ್ಜನರು ಕೆಟ್ಟೋಡುತಿರೆ
ಮತ್ತರಾಕ್ಷಸರವರ ಸರ್ವಸ್ವವೆಲ್ಲಮಂ ಕೊಳುತ ಪೆರ್ಚಿದರಿಳೆಯೊಳು ೩೭

ಬಿಡದೆ ಲೋಕಂಗಳಂ ಕೋಳಾಹಳಂ ಮಾಡಿ
ನಡೆದಾ ಜಲಂಧರಮಹಾರಾಯನೆಯ್ದಿ ಪೇ
ರ್ಪಡೆಗೂಡಿ ವೈಕುಂಠಮಂ ಮುತ್ತಿ ಕೈದುಗೊಂಡಿದಿರಾದ ದೇವರ್ಕಳ
ಕಡಿಖಂಡಮಂ ಮಾಡಿ ದಳದುಳಂಗೊಂಡು ಪುರ
ದೊಡೆಯ ಹರಿಯುರಮನೆಯೊಳಿಹ ಸಿರಿಯ ಮುಂದಲೆಯ
ಹಿಡಿದೆಳೆಯೆ ಕಂಡು ತಲ್ಲಣಿಸಿ ರಕ್ಕಸರಾಯನೊಳು ಕೃಷ್ಣನಿದಿರಾದನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬವರಮಂ ತೊಡಗಿದಾ ಕೇಶವನೊಳಂ ನುಡಿದ
ಸದಪರಿಸದಿರು ಕೃಷ್ಣ ನಿನ್ನ ಪಟ್ಟದ ರಾಣಿ
ಇವಳೆನ್ನ ರಾಜಮಂದಿರಕೆಯ್ದಿ ಸೆರೆಯಿರಲಿ ವೀರತೆಯೊಳಾನು ನೀನು
ತವಕದಿಂ ಕಾದುವೆವೆನುತ್ತಾ ಜಲಂಧರಂ
ತವೆ ಧನುವನಾಂತು ಬಿಲ್ವಡಿ ಹರಿಯೆನುತ್ತಲ್ಲಿ
ವಿವಿಧ ಬಾಣಂಗಳೆಂದೆಚ್ಚಾಡಿದರು ಭೀಂಕೃತಂ ತುಂಬೆ ದಿಕ್ತಟವನು ೩೯

ಬಳಿಕ ಖಂಡೆಯ ಹಲಗೆಗಳನಾಂತು ಕಣಿಖಟಿಲು
ಛಿಳಿ ಛಿಳಿಯೆನುತ್ತ ಕಿಡಿಗೆದಱೆ ಹೊಡೆದಾಡಿದರು
ಮುಳಿದು ತೋಮರ ಕೊಂತವೀಟಿ ಕಕ್ಕಡ ಸಬಳ ಸೆಲ್ಲೆಹಂ ಸುರಗಿಯಿಂದ
ಘುಳುಘುಳಿಸಿ ಪಿಂಡಿವಾಳಂ ಒಡಿಗೆ ದಡಿ ಪರಶು
ಗಳ ಪಿಡಿದು ಘೂರ್ಮಿಸುತ್ತಂ ಸೂಜಿ ಮೊದಲು ದ
ಬ್ಬಳವೆ ಕಡೆಯಾದ ಮೂವತ್ತೆರಡಱಿಂ ಪೋರ್ದರಾ ದನುಜಪತಿ ಹರಿಗಳು ೪೦

ನಿಲ್ಲೆಲವೊ ಹರಿಯೆ ಧರಣಿಯೊಳುಳ್ಳ ಕೈದುಗಳೊ
ಳೆಲ್ಲಱೊಳು ಕಾದಿದೆವು ಸಾಕು ನಾನುಂ ನೀನು
ಮಲ್ಲಯುದ್ಧದೊಳು ಹೋರುವೆವೆಂದು ಸನ್ನದ್ಧರಾಗಿ ಭುಜಗಳನು ಹೊಯಿದು
ಘಲ್ಲಿಸುತ್ತಿದಿರಾಗಿ ಕೈಗಳಂ ಪಿಡಿದರಾ
ಫುಲ್ಲಾಬ್ಜನಯನಂ ಜಲಂಧರರು ಸಾಮಾನ್ಯ
ರಲ್ಲವವದಿರು ಲವಣಿ ಲಾಗು ಮುರಿ ಮೊದಲಒಗೆಯಿಂದ ಹೆಣಗುತ್ತಿರ್ದರು ೪೧

ಕೂಡೆ ಹೋರಿದರಲ್ಲಿ ದಿವ್ಯ ಸಾಸಿರವರುಷ
ವಾಡಂಬರಂ ಮಿಗಲು ಮೇಲೆ ವಿಷ್ಣುವಿನ ಕೂ
ಡಾಡಿದಂ ದನುಜಪತಿ ಕೇಳೆಲವೊ ಹರಿ ಇಲಿಯ ಹಿಡಿದು ಬಿಟ್ಟೊಡನೆ ಪಿಡಿದು
ನೋಡಿ ನಾನಾ ತೆಱದೊಳಂ ಬೆಕ್ಕು ಮಿಗೆ ಚಲ್ಲ
ವಾಡುವಂತಳ್ತಿಯೊಳು ಕಾದಿದೆಂ ನಿನ್ನೊಳಂ
ಬೇಡವಿನ್ನಾಂ ನಿನಗೆ ತಕ್ಕುದಂ ಮಾಳ್ಪೆನೆಂದಾಗ ಬಗೆದೇಗೆಯ್ದನು ೪೨

ದಿಟ್ಟನಾ ಹರಿಯ ಮುಂದಲೆವಿಡಿದು ಕೆಡಪುತ್ತ
ಮೆಟ್ಟುತವನೆರ್ದೆಯನಿಳೆಯಿಂ ಬಗೆದು ಕೂಡೆ ಬೊ
ಬ್ಬಿಟ್ಟು ಪಾತಾಳದೊಳಗಿರ್ದ ಶೇಷನ ಕಿತ್ತು ಕೈಕಾಲ ಮುದುಡಿ ಮೂಡೆ
ಗಟ್ಟಿ ಕಟ್ಟುತ್ತೆಡದ ಬಲದ ಕೈಯೆರಡಱಿಂ
ನೆಟ್ಟನಮ್ಮಾಲೆಯಾಡುತ ವಿಷ್ಣುವಂ ಗಗನ
ಕಿಟ್ಟಂ ಜಲಂಧರಂ ಬೊಬ್ಬಿಱಿದು ಹದಿನಾಲ್ಕು ಲೋಕಂಗಳುಂ ನಡುಗಲು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿ ಹೋಗುತಿರ್ದನಬುಜಾಂಡಂಗಳೆಡೆಯಣುರು
ತರಲೋಕಕುಹರಂಗಳೊಳು ಸಿಕ್ಕಿ ಸಿಕ್ಕಿ ಬಂ
ಧುರವಾಯುವಶದಿಂ ತೊಡಂಕಿ ಭಂಗಂಬಡುತ್ತಿರ್ದಾ ಪ್ರದೇಶದೊಳಗೆ
ಇರಲಿತ್ತಲೀ ರಾಕ್ಷಸಂ ಮೂಱು ಲೋಕಕ್ಕೆ
ಯರಸ ತಾನೇ ಜಲಂಧರನ ಪದದಾಣೆ ಸಲು
ತಿರಲೆನುತ್ತಾಜ್ಞೆಗೆಯಿದಧಿಕ ವೈಭವದಿಂದ ತಿರುಗಿದಂ ತನ್ನ ಪುರಕೆ ೪೪

ವಾರಿಧಿಯ ಮಧ್ಯದೊಳು ಮೆಱೆವ ಸಿಂಗರದ ತ
ನ್ನಾ ರಾಜಧಾನಿಯಂ ಪೊಕ್ಕು ಚತುರಂಗಸೇ
ನಾರವ್ಯದಿಂದ ಬಾಹತ್ತರ ನಿಯೋಗದಿಂ ಹಾವಭಾವ ವಿಲಾಸದ
ನಾರಿಯರ ಕೂಟದಿಂ ಸಕಲ ದೇವತೆಯರಿಹ
ಕಾರಾಗೃಹಂಗಳಿಂದಖಿಳಮಂ ಬೆದರಿಸುತ
ವೀರನೆನಿಸುವ ಜಲಂಧರದಾನವಾಧೀಶ್ವರಂ ಸಿರಿಯೊಳೊಪ್ಪಿರ್ದನು ೪೫

ಆ ರಾಕ್ಷಸಂ ಸಿರಿಯೊಳಿರಲತ್ತಲಿತ್ತಲೀ
ನಾರದಮುನೀಶನೊಂದಾನೊಂದು ದಿನದೊಳು ವಿ
ಚಾರಿಸಿದನೊಲ್ದು ತನ್ನಯ ನಿವಾಸದೊಳಿರ್ದು ಶಿವನ ಸಲುಗೆಯ ಬಲ್ಲಹಂ
ಈರೇಳು ಭುವನಂಗಳೊಳಗೆ ಸಸಿನಿರ್ದವರ
ಹೋರಿಸಿದೊಡಲ್ಲದಿರಬಾರದಿಹ ನಿಜ ಹೃದಯ
ವಾರಿಜದೊಳಾಗ ಯೋಚಿಸಿಕೊಂಡು ಬಳಿಕ ತನ್ನೊಳಗೆ ತಾನಿಂತೆಂದನು ೪೬

ಸಂಗರದ ಬೊಬ್ಬೆಯಬ್ಬರವನಾಲಿಸದ ಕ
ರ್ಣಂಗಳೇತಕೆ ಬಾರ್ತೆ ತಲೆ ಪರಿದು ಚಿಗಿದು ಗಗ
ನಾಂಗಣದೊಳಟ್ಟೆಯೆದ್ದಾಡುತಿಹ ರಣವನಾನಂದದಿಂದದ ನೋಡದ
ಕಂಗಳೇತಕೆ ಸುಡು ಬಾಯ ಬಱ ಹರಿಯೆ ಯು
ದ್ಧಂಗಳಂ ಗಂಟಿಕ್ಕುವಂತೆ ಚಾಡಿಯ ನುಡಿವ
ಹಾಂಗಲ್ಲದಿರ್ಪ ನಾಲಗೆಗುಯ್ಯಬೆಡವೇ ಎಂದು ಸಬ್ರುನೆ ಸುಯಿದನು ೪೭

ಧನವನಾರ್ಜಿಸುವಿಚ್ಛೆಯುಳ್ಳವಂ ವ್ಯಾಪ್ತಿಯಿಂ
ಮನೆಯೊಳಿರ್ದೊಡೆ ವಿತ್ತವಪ್ಪುದೇ ಬಱಯ ಚಿಂ
ತನೆಯಿಂದ ಫಲವಾವುದುದ್ಯೋಗರಹಿತಂಗೆ ಸರ್ವಕಾರ್ಯಂ ಕೆಡುವುದು
ಎನುತಿಪ್ಪ ನೀತಿಯುಂಟದುಕಾರಣಂ ನಾವು
ದನುಜವಲ್ಲಭ ಜಲಂಧರಗೆ ಸರ್ವೇಶಂಗೆ
ಘನಯುದ್ಧಮಂನಾಲ್ಕು ಹೆಚ್ಚೆಯಂ ಬಳಲಿ ಹಣ್ಣಿವೆಂದು ಹೊಱವಂಟನುಳಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಱಿತೆದೆಯ ಬೆನ್ನ ಹತ್ತಿದ ಹೊಟ್ಟೆ ವೃದ್ಧತೆಯ
ನಿಱಿವಿಡಿದ ಸರ್ವಾಂಗದೊಳು ಭಸಿತಲೇಪನಂ
ಉಱುವಾ ತ್ರಿಪುಂಡ್ರ ರುದ್ರಾಕ್ಷಮಾಲೆಗಳುರಂ ಕರ್ಣಕುಂಡಲಯುಗ್ಮವು
ಮೆಱೆವಕ್ಷಮಾಲೆ ಕರದೊಳು ಕಮಂಡಲು ದಂಡ
ನೆಱೆ ವೀಣೆಯಂ ಬಾಱಿಸುತ ಗಾನರಸವ ಸೈ
ಗಱೆವ ನಾರದಮುನೀಶಂ ಬಂದನಾ ದನುಜರೆಱೆಯನೋಲಗದ ಬಳಿಗೆ ೪೯

ನಾರದಂ ಬರ್ಪೆಡೆಯೊಳೆಸೆದುದು ಜಲಂಧರನ
ಪೇರೋಲಗಂ ಮಕುಟವರ್ಧನರ ಪಂಕ್ತಿಯಿಂ
ವೀರಭಟರೇಳ್ಗೆಯಿಂ ಮಾಸಾಳುಗಳ ಭಾಷೆಗಳ ಮಹಾಧ್ವಾನದಿಂದ
ಚಾರು ಸಾವಂತ ಮನ್ನೆಯರ ಮಂಗಡದಿಂದ
ಪಾರದೇಶಾಧೀಶರಪ್ಪ ದಾನವರಿಂದ
ನಾರಿಯರ ಸಿಂಗರದ ಸಾಲ್ಗಳಿಂದೆಸೆದುದನಾರಯ್ಯ ಬಣ್ಣಿಸುವರು ೫೦

ಗಂಡರಿಗೆ ಗಂಡ ಮಝುಭಾಪು ಸುರಗಿರಿವಜ್ರ
ದಂಡರಿಪು ಕುಮುದಮಾರ್ತಾಂಡ ನಿಜಗುಣಮಣಿಕ
ರಂಡ ಶಾತ್ರವಶಿರಃಖಂಡ ನಿಶಿತಾಸ್ತ್ರದೋರ್ದಂಡ ಜಯ ಜೀಯ್ಯ ಎಂದು
ತಂಡ ತಂಡದ ಭಟ್ಟರೆಯ್ದೆ ಕೀರ್ತಿಸುತಿರಲು
ಚಂಡಪ್ರಭಾರತ್ನಖಚಿತ ಸಿಂಹಾಸನಾ
ಮಂಡನವೆಸಿಪ್ಪ ರಕ್ಕಸರಾಯನಿರಲೊಡಂ ಕಂಡನಾ ನಾರಂದನು ೫೧

ಘುಡುಘುಡಿಪ ಸಿಂಹಂಗಳೇಳ್ಗೆಯೆಂತಂತೆ ಬರ
ಸಿಡಿಲ ಮಂಗಡದಂತೆ ಮೊರೆವ ಹಾವುಗಳ ಪೆ
ರ್ಬಡೆಯಂತೆ ಬಂದಡರಿ ಘೂರ್ಮಿಸುತ ಕವಿವ ಭೇರುಂಡನಿವಹಂಗಳಂತೆ
ಕಡೆಗಾಲದಗ್ನಿಯ ಧಗತ್ಕೃತದ ಮಾಳ್ಕೆಯಿಂ
ದಿಡಿಕಿರಿದು ಕರದ ಖಂಡೆಯಗಳಂ ಝುಳಪಿಸು
ತ್ತಿಡೆವಿಡದೆ ನಿಂದ ರಾಕ್ಷಸಭಟರು ನಿಜನಾಥನಡಿಯ ಸೇವಿಸುತಿರ್ದರು ೫೨

ಆ ರಾಕ್ಷಸಾಧೀಶನಿಂತು ವೈಭವದಿಂದ
ಪೇರೋಲಗದೊಳೊಪ್ಪುತಿರಲು ನಿರ್ಭಯದಿಂದ
ನಾರದ ಋಷೀಶನೆಯಿತಂದು ಮಂತ್ರಾಕ್ಷತೆಯನಿತ್ತಿಷ್ಟಸಿದ್ಧಿರಸ್ತು
ಶೂರ ಸುಖಿಯಾಗೆಂದು ಹರಸಿ ವೀಣೆಯ ನುಡಿಸು
ತೋರಂತೆ ನಿಂದಿರಲ್ಕಂಡಾ ಜಲಂಧರಂ
ಕಾರಣವದೇಂ ಮುನಿಯೆ ಬಂದೆ ಎನೆ ಸುಮುಖತ್ವದಿಂ ಬಳಿಕಿಂತೆಂದನು ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದನುಜಚಕ್ರೇಶ್ವರಾ ನಿನಗೆ ಬುದ್ಧಿಯ ಪೇಳ್ವೆ
ವೆನುತ ಬಂದೆವು ಕಣಾ ನಾವೆನಲು ನಸುನಗು
ತ್ತೆನಗೆ ನೀನೇಕೆ ಬುದ್ಧಿಯ ಪೇಳ್ವೆಯೈ ಕೂರ್ತನಾದೊಡೆಲ್ಲರ ಸಲಹುವೆಂ
ಮುನಿದೆನಾದೊಡೆ ಲೋಕಮಂ ಮುಱಿದು ನುಂಗುವೆಂ
ಘನ ಪಾಪವೆಂಬಿಯಾ ಯಮನ ಹೆಂಡಿರ ತಂದು
ಮನೆದೊತ್ತು ಮಾಡಿಕೊಂಡಿರ್ಪೆನ್ನೈ ತೆಗೆ ನುಡಿಯಾರ್ಗೆ ಪಾಟಿಯೆಂದಂ ೫೪

ಆ ನುಡಿಯ ಕೇಳಿ ನಾರದಮುನಿಪನೆಂದನೆಲೆ
ದಾನವಾಧೀಶ್ವರಾ ನೀಂ ಪರಾಕ್ರಮಿಯುಹೆಯ
ದೇನು ಸಂದೇಗವಿಲ್ಲವಜಹರೀಂದ್ರಪ್ರಮುಖ ದೇವರ್ಕಳಂ ಸದೆಯಲು
ಆ ನಿಖಿಲ ದೇವಾದಿದೇವ ಪರಮೇಶನಂ
ನೀನಱಿಯೆಯಾ ಶಿವನೊಳಿದಿರಾಗಿ ಕೆಡದಿರೆಂ
ದಾನು ಬುದ್ಧಿಯ ಪೇಳಬಂದೆನ್ನೈ ನಿನಗೆನಲು ವಿಸ್ಮಯಂಬಟ್ಟನಸುರಂ ೫೫

ಹೇಳು ಹೇಳಿನ್ನೊಮ್ಮೆ ನಾರದಾ ಪೊಸತೆನ್ನ
ತೋಳಬಲಕಿದಿರಪ್ಪ ಶಿವನೆಂಬನೊರ್ವಕ
ಟ್ಟಾಳಿರ್ದಪನೆಯವನ ಪುರವಾವುದಣುಗರಾರಾಪ್ತರ್ಕಳಾರವಂಗೆ
ಮೇಳದಂಗನೆಯಾರು ಭಟರಾರು ನನ್ನೊಳಗೆ
ಕಾಳೆಗಕ್ಕೊಡರಿಚುವೊಡಾರ್ಪನೇ ಎನೆ ದನುಜ
ಕೇಳೆಂದು ಶಿವನ ಸಾಮರ್ಥಮಂ ಬಿತ್ತರಿಸತೊಡಗಿದಂ ನಾರದನು ೫೬

ರಜತಾದ್ರಿಯುಗ್ರಕೈಲಾಸವೇ ಪುರಹರನ
ನಿಜ ರಾಜಧಾನಿ ಮಹದೈಶ್ವರ್ಯವೆಸೆವ ದಿ
ಗ್ವಿಜಯತತ್ವದಿಂದ ಹದಿನಾಲ್ಕು ಲೋಕಕ್ಕರಸು ತಾನಲ್ಲದಿನ್ನೊಬ್ಬನು
ಭುಜಪರಾಕ್ರಮಿಯಿಲ್ಲವೆಂದೆನಿಸಿ ಮೆಱಿವನ್ನೈ
ನಿಜ ಕುಮಾರರ್ಕಳಾತಂಗೆಸೆವರವರ ನೀ
ರಜಸಂಭವಂ ಹೊಗಳಲಱಿದೈ ಜಲಂಧರಾ ಎಂದು ಮುನಿ ಪೇಳುತಿರ್ದಂ ೫೭

ಎಂತಕ್ಕೆ ಪಾಶದಿಂದಿಟ್ಟು ತೆಗೆಯಲ್ಕನಿ
ನ್ನಂತಪ್ಪ ದನುಜಕೋಟಾಕೋಟಿಯಂ ಕಟ್ಟಿ
ತಂ ತಂದು ಮುಂದೆ ಪಿಡಿದೊಪ್ಪಿಸುವುದದು ಬಳಿಕ ಪರಶುವಿಂ ಬೊಬ್ಬಿಱಿವುತ
ಅಂತವರ ತಲೆಯ ಕಡಿದೀಡಾಡುತಿಪ್ಪ ಬಲ
ವಂತ ಮಂದರ ಮೇರು ಸಮದೇಹಕರಿಮುಖಂ
ಕಂತುವೈರಿಯ ಹಿರಿಯ ಮಗನ್ನೈ ಜಲಂಧರಾ ಕೇಳೆಂದು ಮರಳಿ ನುಡಿದಂ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನಿಸಿದೇಳನೆಯ ದಿನದೊಳು ತಾರಕಾಸುರಂ
ನಿನಗಿಂದ ಕೋಟಿಮಡಿವೀರನಾತನ ತಲೆಯ
ಘನ ಪರಾಕ್ರಮದಿಂದ ಹೊಡೆದಿಟ್ಟು ಸೀಳಿ ದಿಗ್ಬಲಿಗೊಟ್ಟನಧಿಕ ನಗವ
ಮೊನೆಯಿಟ್ಟಿಯಿಂದಿಡುತ ಮೂಡ ಪಡುವಣ ಶರಧಿ
ಗನುನಯದಿ ಬಟ್ಟೆಯಂ ಮಾಡಿದಗ್ಗಳ ಧೀರ
ನೆನಿಪ ಷಣ್ಮುಖನಾ ಶಿವಂಗೆ ಕಿಱಿಯಣುಗಂ ಜಲಂಧರಾ ಕೇಳೆಂದನು ೫೯

ಉದಯಿಸಿದ ಮಾತ್ರದೊಳು ಸಕಳ ದೇವರ್ಕಳಂ
ಸದೆದು ದಕ್ಷನ ತಲೆಯ ಕಡಿದಿಟ್ಟನೈ ಬಳಿ
ಕ್ಕದಟಿನೊಳು ನಿನಗಿಂದ ಕೋಟಿಮಡಿ ಮಿಗಿಲಾದ ಪಂಚಮೇಢ್ರಾಸುರನನು
ಮದಿಸಿದಾ ಜ್ವಾಲಾಸುರಾದಿ ನರಸಿಂಹರಂ
ಒದೆದು ಸೀಳಿದ ವೀರಭದ್ರನೇ ಹರನ ಭಾ
ಳದೊಳೊಗೆದ ಪುತ್ರನಿರ್ದಪನೆಲೈ ಜಲಂಧರಾ ಕೇಳೆಂದು ಮುನಿ ನುಡಿದನು ೬೦

ಶ್ವಾಸಮಂ ಬಿಟ್ಟು ಘುಮ್ಮನೆ ತೆಗೆದನಾದೊಡಾ
ನಾಸಿಕದ ನಾಳದೊಳು ನಿನಗಿಂದ ಕೋಟಿಮಡಿ
ಸಾಸಿಗರೆನಿಪ್ಪ ರಕ್ಕಸನಾಯಕರು ಪೊಕ್ಕಡಂಗಿ ಮರಳ್ದು ಸುರ ಬಿಡಲು
ಐಸುದೂರದಿ ದಿಗಂತಕ್ಕೆ ಹಾರುವರಲಾ
ಆ ಸಮರ್ಥಿಕೆಯ ವೃಷಭೇಶನೇ ವಾಹನವೆ
ಲೈ ಸರ್ವದೇವಾದಿದೇವ ಚಕ್ರೇಶ್ವರಂಗೆಂದು ಪೇಳುತ್ತಿರ್ದನು ೬೧

ಬಳಿಕ ಕುಲಗಿರಿಗಳಂ ತಿಱಿಕಲ್ಲನಾಡುವ
ಗ್ಗಳರೇಳುಕಡಲನೊಕ್ಕುಡಿತೆಯಂ ಮಾಡುವತಿ
ಬಳವಂತರಾಕಾಶಮಂ ಧರಣಿಯಂ ತಾಳಮಂ ಕುಟ್ಟುವತ್ಯಧಿಕರು
ಪ್ರಳಯಾಗ್ನಿಗಧಿಕ ಕೋಪಿಗಳು ಸಾಗರದೆಡೆಯ
ಮಳಲ ಗಣನೆಗೆ ಮಿಗಿಲೆನಿಪ್ಪಧಟ ಗಣಕುಲಂ
ಒಳಸಿ ಬಿಡದೋಲೈಸಿಕೊಂಡಿರ್ಪರಭವನಂ ಕೇಳಯ್ಯ ದನುಜರಾಜ ೬೨

ಸಿಂಗರಕ್ಕಧಿದೈವವೆಂದೆನಿಪ ಗಿರಿಜಾತೆ ವಾ
ಮಾಂಗಮಂ ಸೂಱೆಗೊಂಡಾ ಮಹೇಶನ ಪಟ್ಟ
ದಂಗನಾಮಣಿ ಎನಿಸಿ ಕೋಟಾನುಕೋಟಿ ದೇವಸ್ತ್ರೀಯರೋಲೈಸಲು
ಮಂಗಲೆ ಭವಾನಿ ರಾಜಿಸೆ ಸಿರಿಯ ಪೆಂಪಿನಿಂ
ಗಂಗೆಯಂ ಧರಿಸಿಪ್ಪ ಷಡ್ಗುಣೈಶ್ವರ್ಯದೀ
ಶಂಗೆಣೆಯೆ ನೀಂ ತುಷಾರಂ ಕಣಾ ರಾಜಿಸೆ ಜಲಂಧರಾ ಕೇಳೆಂದನು ೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮಾಣು ಮೇರುಪರ್ವತದೊಡನೆ ಹೋರುವಂ
ತರರೆ ಮುರಿಯೆ ೞ್ಳಿ ಘುಡುಘುಡಿಸಿ ಗರುಡನ ಮೇಲೆ
ಬಿರುದ ಕಟ್ಟುವ ಮಾಳ್ಕೆಯಿಂದ ತಱಗೆಲೆ ಮಹಾಪ್ರಳಯಾಗ್ನಿಯುತ್ಕಟವನು
ಪರಿಭವಿಸಿ ನಂದಿಸುವೆನೆಂಬಂತೆಯಾ ಮಹೇ
ಶ್ವರನೊಳಗೆ ಮಱಿದು ಹೋರುವೆನೆನ್ನದಿರು ಸೊಕ್ಕಿ
ನರಿಯಣ್ಣನಾ ಕಟಕಮಂ ಪೊಕ್ಕ ತೆಱನಕ್ಕು ನಿನಗೆಂದನಾ ನಾರದಂ ೬೪

ಎನೆ ಕೇಳಿ ಹರುಷದಿಂ ಬಾಯ ತಂಬುಲ ಸೂಸೆ
ಮುನಿಯ ಕೈಯೊಳ್ವೊಯ್ಯುತ್ತ ಗಹಗಹಿಸಿ ಹೇಳು ಹೇ
ಳೆನಗೆ ನಿನ್ನಯ ವಚನದಮೃತಮಂ ಕರ್ಣಕೋಟರದೊಳೆಱೆದಂದವಾಯ್ತು
ಇನಿತುದಿವಸಂ ಕೇಳೆವಿಂತಪ್ಪ ಸುದ್ದಿಯಂ
ಇನಿದಪ್ಪ ಕರ್ಪುರದ ವೀಳೆಯವನೀಗ ಘ
ಮ್ಮನೆ ತಾ ಮುನೀಶ್ವರಂಗೆನುತ ಮನ್ನಿಸಿ ಬಳಿಕ್ಕಾ ದನುಜನಿಂತೆಂದನು ೬೫

ಹಱುವಿಲ್ಲದಕಟ ತೊವಲುಟ್ಟಾ ಶಿರೋಮಾಲೆ
ಮಱಿವಾವುಗಳ ತೊಟ್ಟು ತಲೆಯೋಡಿನೊಡಕಿನೊಳ
ಗೆಱಕದಿಂ ಕಂಡವರ ಮನೆಮನೆಗಳಲ್ಲಿ ತಿರಿದುಂಡೊಂದು ಬೆಟ್ಟವೇಱಿ
ಅಱಿಮರುಳುಗಳೊಳಿರ್ಪನೆನಲೆನ್ನ ಧರ್ಮದಿಂ
ಧುಱದೋರ್ವ ಭಿಕ್ಷುವಿರಲೆನುತಿರ್ದೆನಧಿಕನೇ
ಕಱಿಗೊರಲನವನೂರ ದಾಳಿಗಂ ಸನ್ನಾಹಭೇರಿಯಂ ನೆಗಳಲೆಂದಂ ೬೬

ತೊಡಗೆ ನಿಸ್ಸಾಳಗಳು ದಾಂಧಳಂ ಧಳಮೆಂಬ
ನುಡಿಗೆ ಕುಲಪರ್ವತಂಗಳು ದಿಗ್ಗಜಂಗೂಡಿ
ನಡುಗೆ ಸಾಗರವೇಳು ತಾಯ್ಮಳಲ್ಗಾಣೆಯಾ ಧ್ವನಿಯೆ ಬೋಹರಿಗೆಯಾಗಿ
ಉಡುಗೆ ಗಗನದೊಳುಳ್ಳ ನಕ್ಷತ್ರವೆಲ್ಲವುಂ
ಕಡುಗೆ ತಮತಮಗೆ ಕೊಟದ ಮನ್ನೆಯರ್ಕಳಾ
ಪಡೆಗೆ ಬೆಸನಿತ್ತು ಘೂರ್ಮಿಸಿ ಶಿವನ ಪಟ್ಟಣಕ್ಕಾಗಿ ದಂಡೆತ್ತಿ ನಡೆದಂ ೬೭

ನಡೆವುತಿರ್ದುದು ಕೂಡೆ ದಾನವರ ಪಡೆ ಭೂಮಿ
ಹುಡಿಯಾಗಿ ಕೆಂಧೂಳಿ ನೆಗೆದಲ್ಲಿ ದಶದಿಕ್ಕಿ
ನೆಡೆಗೆ ಮುಸುಱಲು ಚೂರ್ಣವಾಗೆ ಕುಲಪರ್ವತಂಗಳು ರತ್ನಮಯ ರಥವನು
ಅಡರಿ ರಕ್ಕಸರಾಯನಾ ಜಲಂಧರನಮಮ
ಮೃಡನ ಕೈಲಾಸದತ್ತಂ ತೆರಳಿದಂ ಸಾಕಿ
ದೊಡೆಯನಂ ಕಾಲ್ಗಚ್ಚಲಡರಿ ಘೂರ್ಮಿಪ ನಾಯ್ಗೆ ಕಡೆಯಾದ ನೀಚನಲ್ಲಿ ೬೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿಟ್ಟರಕ್ಕಸನ ದಂಡಿಂತು ನಡೆತರಲು ಬೊ
ಬ್ಬಿಟ್ಟು ಬಹ ಮುಂದಾಳಿಯಾರ್ಭಟಂಗಳ ಕೇಳಿ
ಕೆಟ್ಟೆವಕಟಾ ಬೇಡರಟ್ಟುಳಿಯೊಳುಳಿದ ಮುಱುವಕ್ಕಿಗಳ ಕಾಡಕಿಚ್ಚು
ಸುಟ್ಟುಱುಹುವಂತಾಯ್ತು ಗೂಳೆಯದೊಳೀ ಬೆಳ್ಳಿ
ವೆಟ್ಟ ತಪ್ಪಲೊಳಿರಲು ಹೆಮ್ಮಾರಿ ಬಂದಿತೇ
ದಿಟ್ಟಿ ಮೂಱರದೇವಶಿವಧೋ ಎನುತ್ತ ಮೊಱೆಯಿಟ್ಟೋಡಿತಮರವೃಂದ ೧೯

ನಡುಗಿತ್ತು ಕೈಲಾಸಪರ್ವತಂ ಕಳಕಳಂ
ತೊಡಗಿತ್ತು ಶಿವನ ಸಭೆಯಲ್ಲಿ ಗಣಸಂಕುಲಂ
ಕಡಗಿತ್ತು ಪತಿಯು ಬಿಗಿದಪ್ಪಿದಳ್ಗಿರಿಜಾತೆ ಕೆಟ್ಟೋಡಿ ಬಂದು ಸುರರು
ಒಡೆಯ ಚಿತ್ತೈಸಾ ಜಲಂಧರನ ಪೇರ್ಬಡೆ ಬಂದು
ಘುಡುಘುಡಿಸಿ ದಂಡುಬಿಟ್ಟಿದೆ ಬೆಟ್ಟ
ದಡಿಯಲ್ಲಿ ನೆನೆವೊಡಳವಲ್ಲ ಗಡ ನೋಡಲ್ಕೆ ಜೀಯ್ಯಕಣ್ಗೆ ಗೋಚರವಪ್ಪುದೇ ೨೦

ಆ ಸುಭಟವರ್ಗವಾರ್ಭಟಿಸಿ ಘುಳುಘುಳಿಸುತ ಮ
ಹಾಸುರರ್ ನಿಮ್ಮ ಪುತ್ರನ ವಿಘ್ನರಾಜನಂ
ಕೈಸೆಱೆಯ ಬೇಡುತ್ತೈದರೆ ಜೀಯ್ಯ ಕೆಟ್ಟೆವೆಮಗಾರು ಗತಿಯೆನಲಭಯುವ
ಶ್ರೀ ಸದಾಶಿವನಿತ್ತು ಸಂತೈಸುತಗ್ರಸಿಂ
ಹಾಸನದಿನೆದ್ದು ಗಣನಿವಹವೆಣ್ದೆಸೆಯೊಳೋ
ಲೈಸೆ ಬಿಜಯಂಗೆಯಿದು ವೈಭವದೊಳಸುರ ನಿದಿರೊಡ್ಡನೊಡರಿಚಿ ನಿಂದನು ೨೧

ಇದಿರಲ್ಲಿ ನಿಂದ ಸರ್ವೇಶ್ವರನನೀಕ್ಷಿಸುತ
ಮದಿಸಿ ನುಡಿದಂ ಜಲಂಧರನೆಲೆ ಮಹೇಶ್ವರಾ
ಅಧಟ ನೀನೆಂದಾನು ದಂಡೆತ್ತಿ ಬಂದೆನ್ನೈ ಕಾಳಗಕ್ಕನುವಾಗೆನೆ
ಮದನಾರಿ ನಸುನಗುತ್ತೆಲೆ ಜಲಂಧರ ನಿನ್ನೊ
ಳೊದಗಿ ಯುದ್ಧವ ಮಾಡಲಾರ್ಪೆವೇ ನಾವೆಂದು
ಪುದಿದ ಫಣೆಗಣ್ಣೆವೆಯ ತೆಗೆಯೆ ತನ್ಮಾತ್ರದೊಳಗಿನ್ನದೇ ವಣ್ಣಿಸುವೆನು ೨೨

ಘುಡುಘುಡಿಸಿ ನಡುಗಣ್ಣ ಕಿಡಿಯೊಂದು ವಿಸ್ಫುರಿಸಿ
ದಡಿಗರಕ್ಕಸರು ನೂಱಕ್ಷೋಣಿನಾಯಕರೊ
ಳೊಡಗೂಡುತಂತಶೇಷದೊಳಖಿಳ ಸೇನೆಯುಂ ನಿಮಿಷಮಾತ್ರಕ್ಕೆ ಸುಟ್ಟು
ಒಡನೆ ಬೂದಿಯ ರಾಸಿಯಂ ಮಾಡಲಂತವದಿ
ರೊಡೆಯನೆನಿಸುವ ಜಲಂಧರನೀಕ್ಷಿಸುತ್ತಲ್ಲಿ
ಬಿಡದೆ ಗಹಗಹಿಸಿ ಲೆಕ್ಕಿಸದೆ ನುಡಿದಂ ಮಹಾದೇವನೊಳಗತಿಗರ್ವದಿಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಮಮ ಕೇಳಯ್ಯ ಗೊರವಾ ನೀನಿದೇಂ ಪರಾ
ಕ್ರಮವವನೆಸಗಿದೆ ಯೆಂದು ಗರ್ವಿಸುವೆ ಈ ತುರಂ
ಗಮ ಗಜ ಪದಾತಿರಥ ಮುಖ್ಯ ಚತುರಂಗ ಸೇನಾಲಾಕ್ಷಸಾಧೀಶ್ವರ
ಕ್ರಮಃಸಹಾಯವನೇನು ಬಗೆವೆನೇ ತೆಗೆಯವಲ
ಸಮಿತಿಯಿದ್ದೇನು ಬೆಂದೆನೆ ರನ್ನ ತೋಳೆರಡ
ವಮರ್ದ ಖಂಡೆಯವಿಂಲು ನಿನ್ನುವಂ ನಿನ್ನ ಗಣನಾಥರಂ ಲೆಕ್ಕಿಸುವೆನೇ ೭೪

ಹರ ನಿನ್ನ ಕುವರರ್ಕಳಾ ನಂದಿ ವೀರೇಶ
ರುರುತರ ಪ್ರಮಥಗಣ ರುದ್ರರ್ಪುರಾತರೀ
ಸುರನಿಕರದೊಡನೆ ಕಾಳಗಕೇಳು ನಿಲ್ಲು ಬೇಗನುವಾಗು ನನ್ನ ಕಡೆಗೆ
ಪರಿಕಿಸಲ್ಕಸಹಾಯ ವೀರ ನಾನೋರ್ವನೇ
ಕರದ ಖಂಡೆಯ ಸಹಿತಲೀಗ ಕಾದುವೆನೆಂದು
ಮುಳಿದು ಮೀಸೆಗಳ ಬೊಬ್ಬಿಳಿದು ಭುಜವೊಯಿದಾ ಜಲಂಧರಂ
ಮಲೆತು ನಿಂದಂ ೭೫

ಮಲೆತುನಿಂದಾ ಜಲಂಧರನ ಕಾಣುತ್ತವನ
ಬಲುಹಿಂಗೆ ಸಂತೋಷಿಸುತ್ತೀಶನಿಂತೆಂದ
ನೆಲೆ ದನುಜ ನಿನ್ನಯ ಪರಾಕ್ರಮಕ್ಕೆಣೆಯಾರು ನಿನ್ನ ಸೇನೆಯನೆಮ್ಮಯ
ಜ್ವಲನಾಕ್ಷಿಯೊಳಗೊಂದು ಚಿಕ್ಕಕಿಡಿ ಸುಟ್ಟಿತೈ
ಸಲೆ ವೀರವೆಮಗಿಲ್ಲ ನಿನಗಿನ್ನುವುಂ ನಾವು
ಬಲು ಕಪ್ಪವಂ ತೆರುವೆವೆಂದು ನುಡಿದಂ ಮಹಾದೇವನಘವನದಾವನು ೭೬

ಹರನೆಯಿದಿ ತತ್ಸಮುದ್ರಪ್ರದೇಶದೊಳಲ್ಲಿ
ಬರೆದನಂಗುಷ್ಠರೇಖೆಯೊಳೊಂದು ಚಕ್ರಮಂ
ಅರಸುರಕ್ಕಸಕೇಳು ನಮ್ಮಾಯುಧಂ ಕಣಾ ನಿನಗಿದಂ ಕೊಟ್ಟೆವೆನಲು
ಕರವೆರಡಱಿಂದೆತ್ತಲಾಕಾರವಾಗಿ ನಾ
ಲ್ವೆರಲುಪರಿಯಂತರಂ ಒಂದುದಲ್ಲಿಂ ಮೇಲೆ
ಅರರೆ ದನುಜಂ ನೆಗಪಲಳಪಲ್ಲವದು ಬಾರದಿರ್ದುದೇ ವಣ್ಣಿಸುವೆನು ೭೭

ಅನಿತಕ್ಕೆ ಗಗನಮಾರ್ಗದೊಳಿರ್ದ ನಾರಂದ
ಮುನಿ ನುಡಿದನೀಶ್ವರಂ ಪಾದದೊಳ್ಬರೆದು ಘ
ಮ್ಮನೆ ಕೊಟ್ಟ ಚಕ್ರವಿದ ನೆಗಪಲಾಱದೆ ಸತ್ವಹೀನ ನೀನಂದೆನ್ನೊಳು
ಅನಘ ಶಿವನಂ ಜಱಿದಲಾ ಮದಿಸಿ ಕೊಬ್ಬಿರ್ದ
ಬಿನುಗು ರಕ್ಕಸಕುನ್ನಿ ನಿನ್ನ ಸಾಹಸವ ತೋ
ಱೆನೆ ಕೇಳಿ ಹೇವರಿಸಿ ಘುಡುಘುಡಿಸಿ ಹೃದಯದೊಳಗಾಗ ತನ್ನೊಳಗೆಂದನು ೭೮

CC0. In Public Domain. Jangamwadi Math Collection, Varanasi

ಗೊರವನಡಿಯೊಳ್ಬರೆದು ಕೊಟ್ಟ ಚಕ್ರವ ಜಲಂ
ಧರನೆತ್ತಲಾಱನೆಂದೆಂಬ ಪ್ರಖ್ಯಾತಿಯಂ
ಧರೆಯೊಳಾಂ ಹೊಱುವುದಕ್ಕಂ ಮುನ್ನ ಹೊತ್ತೆತ್ತುವೆಂ ಮಹಾ ಚಕ್ರವಿದನು
ಅರಿದಾವುದೆನಗೆಂದು ಪೇರ್ಗತ್ತನೊಡ್ಡಿಯಾ
ದುರುಳನದನೆತ್ತುತಿರೆ ನಿಮಿಷದೊಳು ಗಿಱಿಕ್ರಿಂದು
ಕೊರಲನರಿದೊಡೆಯಸುರವಲ್ಲಭನ ತಲೆ ಹರಿದು ಬಿದ್ದುದಾ ತಾಣದಲ್ಲಿ ೭೯

ಎಲೆ ಕುವರ ಕೇಳಾ ಜಲಂಧರನ ಮುಂಡದಿಂ
ತಲೆ ಹರಿದು ನೆಲಕೆ ಬೀಳ್ವನಿತಕ್ಕೆ ನಿಷ್ಠೆಯಂ
ಬಲಿದು ಶಂಕರನನುಱೆ ಭಜಿಸಿತಮುಮಾ ಶಿರಂ ಭೋದ್ಯವಾ ನಿಮಿಷದಲ್ಲಿ
ಮಲಹರಂ ಭಕ್ತರಿಷ್ಟಪ್ರದಾಯಕ ನಧಿಕ
ಸುಲಭಂ ಪ್ರಸನ್ನನಾಗುತ್ತ ನಿನ್ನಿಷ್ಟಮಂ
ನಲಿದೆಮ್ಮ ಕೇಳಸುರವಲ್ಲಭಾ ಎನಲು ತನ್ಮಸ್ತಕಂ ಕೀರ್ತಿಸಿತ್ತು ೮೦

ಎಲೆ ಮಗನೆ ಕೇಳಾ ಜಲಂಧರಂ ಮಿಗೆ ಒಂದು
ಕೊಲೆಯನಿತು ಹರನ ಮೇಲೆತ್ತಿ ಬಂದಾ ಪಾಪ
ದಲಘುತ್ವವೆನಿತು ಶಿವನಂ ನೆನೆಯೆ ಕನ್ನಡಿಯ ಮೇಲೆಯುದ್ದುರುಳುವನಿತು
ಸಲುವ ಕಾಲದೊಳು ಸರ್ವೇಶ್ವರಂ ಮೆಚ್ಚುವಂ
ಸುಲಭ ದೇವರ ದೇವನೆಂದು ಸತ್ಪುತ್ರಂಗೆ
ಹಲಗೆಯಾರ್ಯರ್ಗಂ ಪೇಳ್ದನಾವಗಂ ಪರಮೇಶ್ವರಧ್ಯಾನಮುಚಿತಮೆಂದು ೮೧

ದೇವ ದೇವರ ಗಂಡ ಪರಶಿವನೆ ಕೇಳ್ನಿನ್ನ
ಸೇವಕಂ ಬ್ರಹ್ಮನಿತ್ತೈಶ್ವರ್ಯದಿಂ ಕೊಬ್ಬಿ
ಪಾವನ ಮಹೇಶ ನಿನ್ನಯ ಮೇಲೆ ದಂಡೆತ್ತಿ ಬಂದ ಪಾತಕ ನಾನಲಾ
ನೀವೆಯೊಲಿದೆನ್ನಭೀಷ್ಟವನೀಯಲಾಗಿ ಲೋ
ಕಾವಳಿಗಳುಳಿವವೇ ಬೇಡ ನಾನೊಲ್ಲೆಂ ಸು
ಖಾ ವಿಸರವೆಲ್ಲವಂ ಕಂಡೆನುಂಡೆಂ ದಣಿದೆ ನಿನ್ನೊಂದ ಬೇಳ್ಪೆನಿನ್ನು ೮೨

ಸುಕರದ ಶಿರೋಮಾಲೆಯೊಳಗೆನ್ನ ತಲೆಯನಾ
ಯಕರತ್ನವಾಗಿ ಧರಿಸಯ್ಯ ನಿನ್ನೆದೆಯ ಮೇ
ಲಕಲಂಕ ಭಾವದಿಂದಿರ್ದು ನಿನ್ನಯ ಪದನ ಕಮಲಮಂ ನೋಡುತಿಹೆನು
ಸಕಲ ಗಣವಲ್ಲಭಾ ಎನಲಂತು ತಳೆವ ಕಾ
ಲಕೆಯುಂಬರದಿನಾಗ ತಿಱಿಕ್ರಿಂದು ತಿರುಗಿ ದೇ
ವಕಿಯ ಸುತನಾ ನಾಗಪಾಶಬಂಧದೊಳೆ ಧಿಮ್ಮೆಂದು ಮುಂದೆಸೆಗೆ ಬಿದ್ದಂ ೮೩

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೮೪

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಜಲಂಧರನ ಶಿರವರಿದಲ್ಲಿ ಕಾಂಡವೊಂದಾ ಸಂಧಿ ಹನ್ನೆರಡಲ್ಕೆ ೮೫

ಅಂತು ಸಂಧಿ ೧೨ಕ್ಕಂ ಪದ ೭೧೧ ಗ್ರಂಥ ೯೧ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೨

ರಾಗ: ಮಲಹರಿ

ಆ ಜಲಂಧರನ ತಲೆಯಱಿದ ಚಕ್ರಂ ಕ್ಷುಪ
ವ್ಯಾಜದ ದಧೀಚಿಯಂ ಮುಱಿಯೆ ಕಣ್ಣಿಂಬ ಪಂ
ಕೇಜದಿಂದರ್ಚಿಸುತ್ತೀಶನಿಂ ಮರಳಿ ಚಕ್ರಂಬಡೆದನಾ ಮಾಧವಂ॥

ಪಿಂಗಲಜಟಾಜೂಟದುಪರಿಯೊಳ್ಗಿರಿಜಾತೆ
ಯಃಂಗುಲಿಕ್ಷೇಪಮಂ ಮಾಡಲು ಕಳಲ್ದುವರೆ
ದಿಂಗಳಗಜಾಹಸ್ತಮುಕ್ತಾವಲಯ ಭಗ್ನದರ್ಧವಿಂತೆರಡು ಕೂಡಿ
ಮುಂಗಡೆಯೊಳೆಸೆಯೆ ಚಂದ್ರಂ ಚಕ್ರವಾದುದೆಲೆ
ಮಂಗಲೆಯೆ ಚೆನ್ನಾಯ್ತು ಬದುಕೆಂದು ನಸುನಗುವ
ಇಂಗಿತಂ ಸೊಗಸ ಸೈಗಱಿಯೆ ರಾಜಪ ಶಾಂತಮಲ್ಲಿಕಾರ್ಜುನ ಜಯ ಜಯ ೧

ಹಿಂದೆ ಸಾವಿರ ಕಮಲದಿಂದರ್ಚಿಸುತ್ತವಱೊ
ಳೊಂದು ಹೂ ಕುಂದೆ ಕಣ್ಣೊಂದ ಕೀಳ್ತಿಡಿಗಾ ಮು
ಕುಂದನಿತ್ತೊಡೆ ಶಿವಂ ಕೊಟ್ಟುದೊಂದೆ ಚಕ್ರವಾತಂಗದೇನು ಛೋದ್ಯಂ
ಇಂದು ಮೇಲಣ ಗವಿಯ ಶಾಂತನಂಜೇಶ್ವರಂ
ಬಂದು ಬೇಡಿದ ಭಕ್ತಸಂತತಿಗೆ ಮೊಗೆಮೊಗೆವು
ತಂ ದಣಿವ ತೆಱದಿಂದನಂತ ಚಕ್ರಂಗಳಂ ಕೊಡುವಿವಂಗೀಶನಣೆಯೇ ೨

ಸ್ವಾಮಿ ಹಲಗೆಯ ಗುರುವೆಯಾ ಜಲಂಧರಶಿರವ
ನೇ ಮಾಲೆಯೊಳಗೆರ್ದೆಯೊಳೀಶ್ವರಂ ತಳೆದನೇ
ಯಾ ಮೇಲಣಿಂ ವಿಷ್ಣು ನಾಗಪಾಶದ ಬಂಧಸಹಿತ ಬಿದ್ದನೆ ಧರೆಯೊಳು
ಶ್ರೀಮಹಾದೇವನೇಗೆಯಿಬನದಱಿಂ ಮೇಲೆ
ಕಾಮಿತಾರ್ಥಪ್ರದಾ ನಿರವಿಸಿಂದೆನಲು ಕೇ
ಳೈ ಮಗನೆ ಎಂದು ಪೇಳ್ತೊಡಗಿದಂ ಕರುಣದಿಂದಿರದೆ ದೇಶಿಕರಾಯನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀನಾಥನಿಂತು ಬೀಳಲ್ಕೊಡಿ ಶಂಕರಂ
ನೀನಾರಿದೇಂ ಕಾರಣಂ ಬಿದ್ದೆ ಎನೆ ದೇವ
ನಾನಯ್ಯ ಕೃಷ್ಣನೆಂದತಿ ದೈನ್ಯದಿಂ ನುಡಿದು ಬಿನ್ನವಿಸಿದಂ ಬಳಿಕ್ಕಾ
ತಾನೆಸೆವ ವೈಕುಂಠವಮಂ ಜಲಂಧರನಿರಿವು
ತೀ ನಾಗಪಾಶದಿಂ ಬಿಗಿದೆನ್ನನಿಡಲಾಗಿ
ನಾನಾ ನಿರೋಧದಿಂದಂಬರದೊಳಿರ್ದೀಗ ಬಿದ್ದೆನವಧರಿಸೆಂದನು ೪

ಹರಿಯು ಸಂತೈಸುತೆಂದಂ ಶಿವಂ ರಿಪುಜಲಂ
ಧರನಳಿದ ನಿನ್ನ ವೈಕುಂಠಕ್ಕೆ ಪೋಗೆನಲು
ಹರ ಮಹಾದೇವ ಚಿತ್ತೈಸಯ್ಯ ನಾನಮ್ಮನಿನ್ನೊರ್ವನೆಸಗಿ ತಪವಮಂ
ವರವ ಪಡೆದೊದೆದು ಕೊಂದಪನಿಂತು ಸರ್ವದನು
ಜರಿಗೆ ಬಡಿಹೋರಿಯಾಗಿರಲಾಱಿನಿವನ ತಲೆ
ಯರಿದ ಚಕ್ರವನಿತ್ತಡಸುರರಂ ಜಯಿಸಿ ಸುಖವಿಹೆನೆಂದನಾ ಮುರಾರಿ ೫

ಎಂದಡಾ ನುಡಿಗೇಳಿ ಸರ್ವೇಶ್ವರಂ ಕೋಟಿ
ಕಂದರ್ಪರಂ ಗೆಲ್ವರೂಪನಂತಾರ್ಕತೇ
ಜಂದಳೆದ ಚಕ್ರಮಂ ಹರಿಗೆ ಕರುಣಿಸಲಾಗಿ ಚಕ್ರಧರನೆಂಬ ಪೆಸರು
ಸಂದುದಾತಂಗಾ ಸ್ಥಲಂ ಚಕ್ರಕುಂಡನಾ
ಮಂ ದೇವತೆಗಳಱಿಯಲಾಯ್ತೆಂದು ಕರುಣದಿಂ
ನಂದೀಶ್ವರಂ ತನ್ನ ಕಂದಂ ಸನತ್ಕುಮಾರಂಗೆ ಕೃಪೆಯಿಂ ಪೇಳ್ದನು ೬

ನಂದಿಕೇಶನನಡರಿ ಸಕಲ ಗಣನಿಕರವಾ
ನಂದದಿಂದೋಲೈಸೆ ಕೈಲಾಸದರಮನೆಗೆ
ಬಂದನಾ ಸರ್ವೇಶ್ವರಂ ಕಲ್ಪಕಲ್ಪದೊಳಗೀ ತೆಱಂ ಕೇಳು ಮಗನೇ
ಸಂದಾ ಜಲಂಧರವಧಂ ದಶ ಎನಿಪ್ಪ ನುಡಿ
ಯಿಂದಲೆನುತಾ ಕೆಂಚವೀರಾಹ್ವಯಂಗೆ ಮನ
ಸಂದು ಹಲಗೆಯ ದೇಶಿಕಂ ಪೇಳ್ದನತಿಶಯ ಕೃಪಾದೃಷ್ಟಿಯಿಂ ನೋಡುತ ೭

ತಂದೆಯಾ ಚಕ್ರಮಂ ಮುಱಿದಾ ದಧೀಚಿಮುನಿ
ಯಂದೆಂಬರಾ ಕಥನವೆಂತೆನಲು ವಿಷ್ಣುವಿಂ
ಗಿಂದುಧರ ಚಕ್ರಮಂ ಮಗನೆ ಕರುಣಿಸಿ ಕೊಟ್ಟು ಕೊಡುವಾಗಲಾ ವಿಷ್ಣುಗೆ
ಇಂದುಧರನಿಂತೆಂದನೆಲೆ ಮುರಾಂತಕ ಕೇಳು
ಬಂದು ನಿನಗಿದಿರಾದ ದುಷ್ಟರಂ ಸಂಹರಿಸು
ಎಂದೆಂದು ಶಿವಭಕ್ತರೆಡೆಗೆ ಭೃತ್ಯತೆಯೊಳಿರು ನೀನೆಂದು ಬಳಿಕ ನುಡಿದಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿ ಕೇಳು ನಿನ್ನಜ್ಞತೆಯೊಳೆನ್ನ ಭಕ್ತರಂ
ಪರಿಭವಿಪೆನೆಂದೆಣಿಸಲಾಗಳೀ ಚಕ್ರದುಱು
ತರ ಸಮರ್ಥತೆ ಪೋಗಲೆಂದು ನುಡಿದಂ ವಿಷ್ಣುವಂ ಕಳುಪೆ ವೈಕುಂಠಕೆ
ಬರುತ ಸುಖವಿರ್ದನ್ಯೆ ಕೆಂಚವೀರಾಹ್ವಯಾ
ವರ ಜಲಂಧರವಧೆಯನಂತ ಕಲ್ಪಗಳೊಳೀ
ಪರಿ ಕಣಾಯೆಂದು ಹಲಗೆಯ ದೇಶಿಕಂ ಪೇಳ್ದನತಿಶಯಾನಂದದಿಂದ ೯

ಎನೆ ಕೇಳ್ದು ಕೆಂಚವೀರಾಹ್ವಯಂ ತನ್ನ ಕರ
ವನಜಮಂ ಮುಗಿದು ಬಿನ್ನವಿಸಿದಂ ಜೀಯ್ಯ ಹರಿ
ಯನುನಯದೊಳೀಶನಾಜ್ಞೆಯೊಳಿರ್ದನೇ ಮೇಣು ಶಿವಭಕ್ತವೈರದಿಂದ
ತನಗಾದ ಚಕ್ರಮಂ ನೀಗಿದನೊ ನಿರವಿಸಂ
ದೆನೆ ಮುರಾಂತಕನಾ ದಧೀಚಿಯೊಳು ಹೋರಿಯಿ
ಟ್ಟನು ಮುಱಿಯಲಾ ಚಕ್ರಮಂ ಶಂಭುವಿಂ ಪಡೆದುದಂ
ಪೇಳ್ವೆನೆಂದನಾರ್ಯಂ ೧೦

ಕ್ಷುಪ ದಧೀಚಿಗಳ ವಾದದ ಕಥೆಯನಂದು ಬಂ
ದಪರಿಮಿತ ಭಕ್ತಿಯ ಸನತ್ಕುಮಾರಂ ಕೇಳೆ
ಕೃಪೆಯಿಂದ ನಂದಿಕೇಶಂ ನಿರೂಪಿಸಿದನಾ ಲೈಂಗ್ಯದೊಳಗಾ ಬ್ರಹ್ಮನು
ವಿಪುಲತರ ಸತ್ಯಲೋಕದೊಳಿರ್ದು ಸೀನಲಾ
ನೆಪದಿಂದಲೋರ್ವನುದಯಿಸೆ ಕ್ಷುತ್ಪ್ರಕಾಶವೇ
ಕಪಟವಾ ಸಂಬಂಧದೀ ಕ್ಷುಪನೆನಿಪ್ಪ ಪೆಸರಾದುದವಗೇ ವಣ್ಣಿಪೆಂ ೧೧

ಸರಸಿಜೋದ್ಭವನಣುಗನಾ ಕ್ಷುಪಂ ನಡೆತಂದು
ಹರಿಯ ಕುಱಿತುಗ್ರತಪಮಂ ದಧೀಚಿವ್ರತಿಯ
ಪೊರೆಯ ವನದೆಡೆಯೊಳಾ ಪರ್ಣಶಾಲೆಯೊಳು ಮಾಡುತ್ತಿರಲು ವಿಷ್ಣು ಮೆಚ್ಚಿ
ಹರುಷದಿಂ ನಿನ್ನಿಷ್ಟವೇನೆನಲು ವಂದಿಸುತ
ಕರಕಮಲಮಂ ಮುಗಿದು ಜೀಯ್ಯ ಚಕ್ರೇಶನಹ
ಸಿರಿಯ ಕೊಟ್ಟೆನಗೆ ವಜ್ರಾಯುಧವ ನೀಯೆಂದಡಿತ್ತನವಗಾ ಮುರಾರಿ ೧೨

ಹರಿಯಿಂದಲಖಿಳಸಂಪತ್ತು ಪಡೆದಾ ಕ್ಷುಪಂ
ಪುರವೊಂದಱಲ್ಲಿ ರಾಜಾಲಯದೊಳಖಿಳ ಭೂ
ವರರು ಸೇವಿಸಲು ಸಪ್ತಾಂಗರಾಜೈಶ್ವರ್ಯದಿಂದ ಪರರಾಯರೆಂಬ
ಗಿರಿಗೆ ವಜ್ರಾಯುಧಂ ತಾನಾಗಿ ಮತ್ತೊಮ್ಮೆ
ವರ ದಧೀಚಿವ್ರತಿಪ ನಾಶ್ರಮಕ್ಕೆಂದಲ್ಲಿ
ತೆರಳಿದಂ ಪಟ್ಟದಾನೆಯನಡರಿ ಚತುರಂಗಸೇನೆಯೋಲೈಸಿ ಬರಲು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಕುಟವರ್ಧನರು ಕೋಟಾಕೋಟಿ ಕೆಲಬಲದೊ
ಳಕಲಂಕ ವೈಭವದೊಳೆಯಿತರಲು ಬಂದು ಪಾ
ವಕನೇತ್ರನಣುಗನೆನಿಪಾ ದಧೀಚಿವ್ರತಿಪನಾಶ್ರಮದ ಮುಂಗಡೆಯೊಳು
ಸುಕರ ಗಜಮಸ್ತಕದಿನಿಳಿದು ಕೀರ್ತಿಸಲು ಕಂ
ಚುಕಿಗಳತಿ ಸಂಭ್ರಮದೊಳೊಳಪೊಕ್ಕು ಪೂರ್ವದೊಳು
ಸುಕುಮಾರನಾಗಿರ್ದು ಲಿಂಗದರ್ಶನ ಫಲದೊಳಗ್ರತಾಪಸನಾದನಂ ೧೪

ಕಂಡು ವಿನಯವನಾಡಿ ಮುನಿಯ ಸನ್ನಿಧಿಯಲ್ಲಿ
ಮಂಡಿಸಲು ನಗುತ ಬಂದ್ಯಾ ಕ್ಷುಪಾ ವೈಭವದ
ತಂಡಮಂ ಹರಿಯಿಂದ ಪಡೆದಲಾ ನಮ್ಮಯ ಸಮೀಪದೊಳಗೆಂದೆನುತ್ತಾ
ಖಂಡ ಪರಶುವಿನಣುಗನಾಡಲಂತಾಗ ಭೂ
ಮಂಡಲಾಧೀಶ್ವರಂ ನಸುನಗುತ್ತೆಲೆ ಮುನಿಪ
ಚಂಡತರತೇಜ ಕೇಳಾನು ನೀನುಂ ನೆತ್ತವಾಡಬೇಕೆಂದು ನುಡಿದಂ ೧೫

ಇಳೆಯೊಡೆಯ ಜೂಜೆಂಬುದೀಗ ಸಪ್ತವ್ಯಸನ
ದೊಳಗಣದು ಮುನಿಗಳಿಗಯೋಗ್ಯವೆನೆಯಾಂ ಕರೆದ
ಬಳಿಕ ನೀನಾಡಬೇಕೆನಲೊಡಂಬಟ್ಟಾಡೆ ಮೊದಲಾಟದಲ್ಲಿ ಸೋಲ್ತಂ
ಬಳಿಕಲಾಡಲ್ಕೆ ಸೋಲ್ತಂ ಕ್ಷುಪಂ ಮತ್ತಲ್ಲಿ
ಬಳಿಕ ಸೋಲ್ತೇಕವಿಂಶತಿ ವಾರವಿಂತು ಸೋ
ಲ್ತಳವಳಿಯೆ ಮಧ್ಯಾಹ್ನವಾಗಲರಸನ ಮಂತ್ರಿ ಯತಿಯ ಪೊರೆಗೆಯಿತಂದನು ೧೬

ಏಕಾಂತದಲ್ಲಿ ಬಿನ್ನವಿಸಿದಂ ಭೋಜನಕಿ
ದೇ ಕಾಲವಯ್ಯ ರಾಯರು ಸೋಲ್ತು ಪೋಗಲಿ
ಲ್ಲಾ ಕಾರಣಂ ಗೆಲವನರಸಿಂಗೆ ಕೊಟ್ಟು ನೀವೆ ಸೋಲಬೇಹುದೆನಲು
ಪ್ರಾಕಟದೊಳವನ ಘರ್ಜಿಸಿ ನುಡಿದನಾ ಮುನಿ ಮ
ಹಾಕೋಪದಿಂದ ಹರಿದಾಸರ್ಗೆ ಶಿವಭಕ್ತ
ರೇಕೆ ಸೋಲ್ತಪರು ಗೆಲವಂ ಪಡೆದು ಬಾಳ್ವರಾವೆಂದನಂತಾ ದಧೀಚಿ ೧೭

ಆದ ಕೇಳ್ದು ನೆತ್ತವಂ ಬಿಟ್ಟು ನೃಪನಧಿಕಕೋ
ಪದೊಳೆಂದನೆಲೆ ಗೊರವ ನೀಂ ಶಿವನನೆನಗಿಂದ
ಮೊದಲಾಗಿ ಭಜಿಸುತಿರ್ದಕಟ ಪೃಷ್ಠದ ಹಳೆಯ ಕಪ್ಪಡಂಬೋದುದಿಲ್ಲ
ಎದೆಯಲ್ಲಿ ವಿಷ್ಣುವಂ ನೆನೆಯಲ್ಕೆ ಸಕಲ ವಿಭ
ವದೊಳಾನು ಮೆಱೆವುದಂ ಕಾಣೆಯಾ ನೀವು ಹರಿ
ಪದ ಭೃತ್ಯರಾಲಯಂಗಾವಿರೆಂದ ಜ್ಞಾನದಿಂದ ನಿಂದಿಸಿ ನುಡಿದನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಱಿಗೊರಲನಂ ನಿಂದಿಸಲ್ಬಹುದೆ ಪಾತಕಾ
ಅಱಿಮರುಳ ಎಂದು ಘೂರ್ಮಿಸುತಲಕ್ಕಿಯ ತಿಂಬ
ಕಱುವ ಬಾಯಂ ಪೊಡೆವ ಮಾಳ್ಕೆಯಿಂದಾ ಕ್ಷುಪನ ಕೆನ್ನೆಯಂ ಬಡಿಯೆ ಮುನಿಪಂ
ಬೆಱಗುವಟ್ಟಖಿಳ ರಾಜರ ಮುಂದೆಯಾ ಭಸ್ಮ
ನುಱದೆ ಮೇಲ್ವಾಯ್ದನೆಂದಾ ವಜ್ರಗದೆಯಿಂದ
ಲೆಱಗಿ ಪೊಡೆದಂ ಕೆಡೆಯೆನುತ್ತಾ ದಧೀಚಿಯಂ ಪಾತಕಂ ಮಿಗೆ ಘಾತಕಂ ೧೯

ಪೊಡೆಯಲಾ ವಜ್ರದಂಡದ ಹತಿಗೆ ದಿವ್ಯ ಮುನಿ
ಯೊಡಲು ಜಜ್ಜರಿಯಾಗಿ ನುಗ್ಗಿ ಮಯ್ಯಸ್ತಿಗಳು
ಸಿಡಿದವೆಣ್ಗಾವುದಕ್ಕಾಗಲೀಶ್ವರನ ನೆನೆದಧಿಕ ತಪದಿಂ ಮಂತ್ರವ
ಪಡೆದ ಶುಕ್ರಾಚಾರ್ಯ ಎಂದು ನೆನೆವುತ್ತಸುವ
ಬಿಡಲಾ ದಧೀಚಿ ಯಧಮುಕ್ಷುಪಂ ಪೋಗಲಾ
ಯೆಡೆಗಱದು ಭಾರ್ಗವಂ ಬಂದು ನೋಡಿದನಾ ಮುನೀಶ್ವರಕಲೇವರವನು ೨೦

ಎಲುಗಳೆಲ್ಲವನಾಯ್ದು ಸೇರಿಸುತ ಮಾಂಸವುಂ
ಬಲಿದು ತೊವಲಂ ಪೊದಿಸಿ ಶಿವಪದಧ್ಯಾನದಿಂ
ಸಲೆ ಪಡೆದ ಮೃತ್ಯುಂಜಯಾಖ್ಯಮಂತ್ರೋಚ್ಚರಣೆಯಂ ಮಾಡಲೆದ್ದನೆನಲು
ಎಲೆ ಗುರುವೆಯಾ ಶುಕ್ರಗಾ ಮಂತ್ರವೇ ತೆಱದೆ
ನೆಲೆಯಾಯ್ತುದಂ ಪೇಳ್ವುದೈ ನಂದಿಕೇಶ ಎನೆ
ನಳಿನಸಂಭವನಣುಗ ಕೇಳೈ ಸನತ್ಕುಮಾರಾ ಯೆಂದನಾ ಶಿಲಾದಿ ೨೧

ದಿವಿಜರೊಳು ಕಾದಿ ರಕ್ಕಸರು ಕೆಟ್ಟೈತಂದ
ಡವರ ಸಲಹಲು ಶುಕ್ರನಾಲೆಯೊಲೆಯುರಿಯ ಪೊ
ಣ್ಮುವ ನೆಲೆಯ ಮೂಗೊಲೆಯೊಳಿಕ್ಕಿಲದ ನಟ್ಟ ಕಂಭಗಳಡ್ಡಪಟ್ಟಿಗೆಯೊಳು
ತವೆ ಬಿಗಿದ ಸರಪಣಿಗೆ ಕಾಲ್ಗಳಂ ತೊಡಚಿ ಪಾ
ನವ ಮಾಡುತುರಿಯ ತಪವಿರೆ ಶಂಭು ಕೊಟ್ಟನಾ
ಕವಿಗೆ ಮೃತ್ಯುಂಜಯ ಮಹಾಮಂತ್ರಮಂ ಮುನಿಯೆ ಕೇಳಿನ್ನು ಬಿತ್ತರಿಪೆನು ೨೨

ಆ ರುಚಿರ ಮಂತ್ರದಿಂದೆದ್ದಾ ದಧೀಚಿಯುಮು
ರಾರಿದೇಶಿಕ ಗೆಂದನೆಲೆಲೆನೀಂ ಪ್ರಾಣೋಪ
ಕಾರಮಂ ಮಾಡಿದ್ದೈ ನಿನಗೆ ಪ್ರತ್ಯುಪಕಾರವಿಲ್ಲೆನಲು ಶುಕ್ರನೆಂದಂ
ವಾರುವಂ ಮುಗ್ಗೆ ಕಾಳಗದೊಳೆತ್ತಿದ ಬಂಟ
ನಾ ರಾಯನಳಿವ ಕಾಯ್ದಾಳುವನೆ ಸೇವಕನ
ಲಾ ರಮ್ಯಮುನಿಯೆ ಶಿವನಂ ಭಜಿಸೆನುತ್ತ ಪೇಳ್ದು ಭಾರ್ಗವಂ ಪೋದನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕವಿಯುತ್ತ ಪೋಗಲು ದಧೀಚಿ ಪಂಚಾಗ್ನಿಮ
ಧ್ಯವನೆಯಿದಿ ತಪವಿರಲ್ಬಗೆವನಿತಕೆಯಿತಂದು
ಶಿವನೆಂದನಲೆ ಮುನಿಪ ನಿನ್ನಿಷ್ಟವಾವುದೆನೆ ದುಷ್ಟನ ಜಯಿಸಲು
ಅವಯುವದೊಳೆನಗೆ ವಜ್ರಾಸ್ಥಿಯಂ ಪಾಲಿಸೆನೆ
ತವೆ ಕೊಟ್ಟೆನಿನ್ನು ಬೇಡೆನೆ ಜೀಯ್ಯ ಹೃದಯದೊಳ
ಗವಿರತಂ ನೀವಿರಿ ಮದೀಪ್ಸಿತಂಬಡೆವೆನಾನಯ್ಯ ತತ್ತತ್ಕಾಲದೆ ೨೪

ಎಂದು ಪಡೆದಾ ದಧೀಚಂ ಕ್ಷುಪನ ಪಟ್ಟಣಕೆ
ಬಂದು ಪೇರೋಲಗದೊಳಿಪ್ಪರಸನಂ ಕಂಡು
ಮುಂದುವರಿದವನ ತಲೆಯಂ ಮುಷ್ಟಿಯಿಂ ಶಿವಿಯಲಿಬ್ಭಾಗೆಯಿಂದೊಡೆಯಲು
ನೊಂದು ಬೊಬ್ಬಿಱಿದೆದ್ದು ಮುನಿಯನಾ ವಜ್ರಗದೆ
ಯಿಂದ ಪೊಡೆಯಲ್ಕದೇ ಚೂರ್ಣವಾಯ್ತುಯ್ಯ ಸಲೆ
ಒಂದು ರೋಮಂ ಕೊಂಕಿತಿಲ್ಲ ಯತಿಪತಿಗೆ ಬಳಿಕೆಂದಂ ದಧೀಚಿಮುನಿಪಂ ೨೫

ಉಱಿ ನಿನ್ನನೀಗ ಕೊಂದಡೆ ನಿನ್ನ ಭಂಗಮುಮ
ನಱಿವರಿಲ್ಲೆಂದು ಪಾದದೊಳು ನಸು ಒದೆಯಲೆಲು
ಮುಱಿದು ಬಿದ್ದಂ ಕ್ಷುಪಂ ಮುನಿ ನಿಜಾಶ್ರಮಕೆಯ್ದಲಿತ್ತಲರಸಂ ಭಜಿಸಲು
ಕಱಿವೈಯ ಹರಿ ಬಂದಿದೇನೆನೆ ದಧೀಚಿ ಈ
ತೆಱನ ಮಾಡಿದನೆಂದು ಪೂರ್ವವೈರದ ಬಗೆಯ
ನಱುಪಲೆಲೆಲೆ ಮೂಢ ಶಿವಭಕ್ತರೊಳು ವೈರವಂ ಮಾಡಿಕೊಂಬರೆ ಎಂದನು ೨೬

ಬೆಟ್ಟವಂ ನೆಮ್ಮಿ ಮೂಡೆಯನೊದೆಯ ಬಹುದೈಸೆ
ನೆಟ್ಟನಾ ಮೂಡೆಯಂ ನೆಮ್ಮಿಯೊಡೆದಾ ಗಿರಿಯ
ಬೊಟ್ಟನಿತು ತೊಲಗಿಸಲು ಬಹುದೇ ಶಿವಭಕ್ತರೊಳು ನನ್ನ ನೆಮ್ಮುಗೆಯೊಳಿದಿರು
ಪಟ್ಟು ಹೋರಲ್ಬಹುದೆ ಪಾಪಿ ದುರುಳಾಯೆಂದ
ರಟ್ಟದಿಂ ಬಿದ್ದವರ ದಡಿಯಿಂದ ಪೊಡೆವಂತೆ
ತಿಟ್ಟದಿರು ನೀಂ ಬಿನುಗು ದೈವವೆಂದಱಿಯದಾಂ ಕೆಟ್ಟೆನೆಂದಾಗ ನುಡಿದಂ ೨೭

ಆದೊಡಂ ಕೇಳು ಭೃತ್ಯಾಪರಾಧಂ ಸ್ವಾಮಿ
ನೋ ದಂಡ ಎಂಬದುಂಟದುಕಾರುಣಂ ವಿಷ್ಣು
ಕಾದಿ ಸೋಲ್ತವನ್ನೆಸೆಯೀ ಕ್ಷುಪಂ ತಾನಲ್ಲವೆನಿಸು ನೀಂ ತೊಲಗಿ ಪೋಗೆ
ಗಾದೆಯಲ್ಲೆನ್ನಸುವ ನಿನ್ನಂ ಮೇಲಂ ಬಿಡುವ
ನೈ ದೈತ್ಯವೈರಿ ಕೇಳೆನಲುಪಾಯದ ಸಾಮ
ಭೇದದಿಂ ನಿನಗವನು ಸೋಲ್ತನೆನಿಸುವೆನೆಂದೊಡಚ್ಚರಿಯೊಳರಸ ನುಡಿದಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದಾಟವಮಂ ಸೋಲ್ತೆನೆನಲೊಲ್ಲದಾ ಮುನಿಪ
ನಂದು ವೈರವ ಮಾಡಿಕೊಂಡನೈ ಸೋಲ್ತನಾ
ನೆಂದಾತನೆಂನನೆನಿಸುವ ಬಗೆಯ ಪೇಳೆನಲು ಮುನಿವೇಷದಿಂದ ಭಿಕ್ಷಾ
ಎಂದು ಪಡೆದಾ ಕ್ಷಪಗೆ ಸೋಲ್ತೆನೆಂಬಾ ಭಿಕ್ಷ
ಮಂ ದಯದೊಳೀಯೆಂದು ಮುನಿಯನಾಡಿಪೆನೆ
ಲ್ಕಂದದಕ್ಕವನೊಡಂಬಡೆ ವೃದ್ಧವೇಷಮಂ ತಾಳಿದಂ ಮಧುಸೂದನಂ ೨೯

ಶತವೃದ್ಧ ಕೊಡೆ ಕಮಂಡಲು ದರ್ಭೆಗಳನಾಂತು
ಯತಿಯ ಬಳಿಗಾ ಕ್ಷಪನ ಶಿಷ್ಯನಂ ಮಾಡಿಕೊಂ
ಡತಿಥಿವೇಷದಿ ಬಂದು ಭಿಕ್ಷಮೆನಲಱಿದು ಛೀ ತೆಗೆಯಿದೇತಕ್ಕೆ ವಿಷ್ಣು
ಕೃತಕಿ ನಿನ್ನಯ ಶಿಷ್ಯನೆಸೆವ ಹರಿಬಕೆ ಬಂದ
ಕತದಿಂದ ಕಾದವೇಳ್ಕೈಸೆ ತಿರಿವರೆಯೆನಲು
ಮತಿಗೆಟ್ಟು ಬೆಱಗಾಗಿ ಕೊಡೆ ಬಱಬಲ್ಪಿನಿಂ ಸೋಲ್ತೆನೇನೆಂದನಾಗಂ ೩೦

ಎನಲೆನ್ನ ಕೊಡೆ ಕಾದಿದ ಬಳಿಕ ನೀನೆ ಗೆ
ಲ್ದೆನಿಸೆನಲು ನಾನೆದೈವತ್ವವುಳ್ಳವನೊರ್ವ
ಮುನಿ ನೀನು ಬಡವನಂ ಕೊಲಬಹುದೆ ಎನೆ ನಿನ್ನ ಮಹಿಮೆಯಂ ತೋಱೆಂದೆನೆ
ವನಜಾಕ್ಷನುದರವಮಂ ಬಗಿದಖಿಳ ಲೋಕವಿ
ಪ್ಪನುವ ನೋಡೆಂದು ತೋಱಲು ಮುಚ್ಚಿಕೋ ಸರ್ವ
ಜನ ಕೀಟಕಾದಿಗಳೊಳೀ ತೆಱದೊಳಖಿಳವಿಹವೆಂದು ಮುನಿಪತಿ ನುಡಿದನು ೩೧

ಹೆಂದದಾಲದ ಬೀಜವಿಪ್ಪ ಕಣಜದೊಳು ತೆಗೆ
ದೊಂದ ಬಿತ್ತಲು ದೊಡ್ಡ ಮರನಹುದು ಮಿಕ್ಕವಂ
ತಂದು ಬಿತ್ತಿದೊಡಾ ಪ್ರಕಾರವಹುದೋ ಇಲ್ಲವೋ ಮಹಾಬ್ರಹ್ಮಾಂಡದ
ವೃಂದವೀ ಪಿಂಡಾಂಡದೊಳಗುಂಟೆನಲ್ಕೆನ್ನ
ಛಂದದಿಂ ನಿನ್ನುದರದಲ್ಲಿ ತೋಱಿಸೈ ಮುನಿಪ
ಯೆಂದೊಡಾಂ ನಿನ್ನ ತೆಱದಿಂದೆಯ ಸೀಳಿಕೊಂಬವನೆ ಎನುತಾ ತಾಪಸಂ ೩೨

ಕರದ ಬೆರಲೆತ್ತಲುಗುರ್ಗೊನೆಯಲ್ಲಿ ಶತಕೋಟಿ
ಹರಿಯಜಬ್ರಹ್ಮಾಂಡ ಭಾಂಡಂಗಳೊಪ್ಪುತ್ತ
ಮಿರೆ ಕಂಡು ಭಾಪೆಂದು ಪೊಗಳಿ ಕಾದುವೆನಿನ್ನು ನೀಂ ನಿರಾಯುಧನು ನಾನು
ಪರಿಭವಿಸೆನೆನಲೆನ್ನ ತನುವೆಲ್ಲ ಕೈದುವೆನೆ
ದುರುಳನಾ ಶಾರ್ಙಯೆಂಬಾ ಧನುವಿನೊಳ್ತೊಡಚಿ
ಸರಳ ಮಳೆಗಱೆಯೆ ಮುನಿಯಂಗಮಂ ಸೋಂಕೆ ಹುಡಿಯಾಗುವವು
ನಿಮಿಷದಲ್ಲಿ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕ ಕೌವೋದಕಿಯೆನಿಪ್ಪ ಗದೆಯಿಂ ಪೊಡೆಯೆ
ಘುಳಿಲನಿಕ್ಕಡಿಯಾಗೆ ನಂದಕವೆನಿಪ್ಪಧಿಕ
ಬಳವಂತ ಖಡ್ಗದಿಂ ಹೊಡೆಯಲದು ಮುಱಿಯಲಜ್ಞಾನದಿಂ ಮುನ್ನಲೀಶ
ತಿಳುಪಿದಂಗವನಱಿಯದಾ ಜಲಂಧರ ಮುಖ್ಯ
ಖಳರ ತಲೆದಱಿದ ಚಕ್ರವನೀಶಭಕ್ತಿಯು
ಗ್ಗಳದಧೀಚಿಯು ಮುನಿದಿಟ್ಟನಾ ವಿಷ್ಣುವಂತದಂ ಮುನಿ ಕಾಣುತ ೩೪

ಘುಡುಘುಡಿಸಿ ಲೋಕಮಂ ಬೆದರಿಸುತ ಬಹ ಚಕ್ರ
ಕೆಡದ ಕೈಯೊಡ್ಡಿ ಪಿಡಿದಾ ಸುದರ್ಶನವನು
ಗ್ಘಡದಧೀಚಿವ್ರತಿಪನಿಕ್ಕಯ್ಯೊಳುಂ ನುಂಗಿ ಧೂಳಿಯಂ ಮಾಡಿ ತೂಱಿ
ಬಿಡೆ ಬಳಿಕ ಹಲವು ರೂಪಾದ ಹರಿಯಂ ಕಂಡು
ಬಡಿಸಿಕೊಂಡಳಿದ ಹಾವಿನ ಮೈಯು ಹುಳುಗಳ್ಗೆ
ಪೊಡವಿಯೊಳಗಂಜುವರೆಯೆಂದೋರ್ವ ಹರಿಗಾ ದಧೀಚಿಕೋಟಿಗಳಾದನು ೩೫

ಅನಿಬರಂ ಸಂಹರಿಸಿ ನಿಜ ಹರಿಯ ಪೇರುರವ
ನನಘನೊದೆದೊಡೆ ದಧೀಚಿಯ ಪದಸ್ಥಾನವೈ
ಘನಲಕ್ಷ್ಮಿಗಾಲಯವುದಾಯ್ತು ಮಾಹೇಶ್ವರಪದಾಸಕ್ತಯೆಂಬರ್ಥದಿಂ
ಅನಿತಕಱಿದಡಿಗೆಱಗಿದಾ ವಿಷ್ಣುವಂ ಕರೆದು
ನಿನಗೀಶನಿನ್ನು ಚಕ್ರವ ಕೊಡುವನರ್ಚಿಸೆಂ
ದೆನುತ ಬೀಳ್ಕೊಟ್ಟನಾ ಕ್ಷುಪಸಹಿತಲಾ ದಧೀಚಂ ಮನೋರಾಗದಿಂದ ೩೬

||ಸಾಕ್ಷಿ|| ಮಾಹೇಶ್ವರ ಪದಾಸಕ್ತಂ ಸ್ಥಾನಂ ಭವತಿ ಸಂಪದಾಂ
ಪದಾಹತಂ ದಧೀಚೇನ ವಿಷ್ಣೋರ್ವಕ್ಷಶ್ಶ್ರಿಯಃ ಪದಂ ೧

ಇದು ಕೆಂಚವೀರಾಹ್ವಯಾ ಕ್ಷುಪ ದಧೀಚಿಗಳ
ಕದನದ ಕಥಾರಸಂ ಕೇಳಿದಾ ಮುಂದಿನ್ನು
ಮುದದಿಂ ಪುನಶ್ಚಕ್ರದಾ ಲಸತ್ಕಥನಮಂ ಪೇಳ್ವೆನೆಂದಾನಂದವು
ಒದವೆ ಹಲಗೆಯ ದೇಶಿಕಂ ಪೇಳುತಿರ್ದನೈ
ಇದನಾರು ಕೇಳಿದರಿಗಿಷ್ಟಾರ್ಥಸಿದ್ಧಿ ಸಂ
ಪದಮುಕ್ಕು ಭಕ್ತಿಮುಕ್ತಿಗಳಕ್ಕು ನಿಜಕೀರ್ತಿ ಪಸರಿಪುದು ದಿಕ್ತಟದೊಳು ೩೭

ಗುರುವೇ ಪುನಶ್ಚಕ್ರದಾನಮಂ ಶಂಭು ಮುರ
ಹರಗೆ ಕರುಣಿಸಿದ ಬಗೆಯೆಂತೆನಲು ಹಲಗೆಯಾ
ರ್ಯರು ನುಡಿದರೆಲೆ ಮಗನೆ ಕೇಳೈ ಮಹಾ ಸ್ಕಂದಪೌರಾಣದೊಳು ರಾಜಿಪ
ನಿರುಪಮೇಶಾನಸಂಹಿತೆಯಲ್ಲಿ ಷಣ್ಮುಖಂ
ವರ ಕುಂಭಜಗೊರೆದ ವಾಕ್ಯವೆಂತೆನಲಾಗಿ
ಹರಿಚಕ್ರಮಂ ನೀಗಿ ಬಂದಾ ನಿರಾಯುಧಂ ಪಾಲ್ಗಡಲೊಳಿರುತಿರ್ದನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿತಕ್ಕೆ ಲೋಕಾದಿ ಲೋಕಂಗಳೊಳು ದುಷ್ಟ
ಜನರಾಕ್ಷಸರ್ ಬ್ರಹ್ಮನಿತ್ತತಿಶಯದ ವರದಿಂದ
ತನ ತನಗೆ ಸಕಲ ದೇವರ್ಕಳಂ ಸದೆವುತಿರಲಿಂದ್ರಾದಿಗಳು ಭಯದೊಳು
ವನಜಾಕ್ಷನೆಡೆಗೆ ನಡೆತಂದು ಮೊಱೆಯಿಡಲು ಮು
ನ್ನಿನ ತೆಱದೆ ಚಕ್ರವಿಲ್ಲದೆ ಮಱುಗಿ ಸಂತೈಸು
ತನಿಬರಂ ಕಳುಪಿ ಶಿವನಂಘ್ರಿಯಂ ಪೂಜಿಸಲ್ತೊಡಗಿದಂ ಭಕ್ತಿಯಿಂದ ೩೯

ಶ್ರೀವಲ್ಲಭಂ ಮಹಾದೇವದೇವಾಂಘ್ರಿ ರಾ
ಜೀವಮಂ ನಱುಗಂಪನೆಣ್ದೆಸೆಗೆ ಬೀರುತಿಹ
ತಾವರೆಯ ಚೆಲ್ವರಲ್ಸಾವಿರಂಗಳೊಳರ್ಚಿಸುತ್ತಿರಲು ಭಕ್ತಿಯಿಂದ
ಆ ವಿಷ್ಣುವಧಿಕ ನಿಷ್ಠೆಯ ನೋಳ್ಪೆನೆಂದು ಮಾ
ದೇವನೊಂದಬ್ಜಮಂ ಕಡಮೆಯಂ ಮಾಡೆ ಕಂ
ಡಾ ವೇಳೆ ಮದ್ವ್ರತಕೆ ಭಂಗವಾಯ್ತೆಂದು ಹರಿ ನಿಶ್ಚೈಸಿಕೊಂಡನಲ್ಲಿ ೪೦

ಒಂದು ಕಣ್ಣಂ ಕಿತ್ತು ಕೂಡೆ ಸಾವಿರ ಪುಷ್ಪ
ವೆಂದು ಸರ್ವೇಶನ ಪದಕ್ಕರ್ಪಿಸಲ್ಕೆ ಕಂ
ಡೇಂದುಧರನಾಗಂ ಪ್ರಸನ್ನನಾಗುತ್ತಲಾ ಕಣ್ಗೊಟ್ಟು ಕರುಣದಿಂದ
ಅಂದು ಗಿರಿಜಾತೆಯಮ್ಮಂ ಪ್ರಣಯದಿಂ ಜಱೆಯೆ
ನೊಂದು ನೀಂ ಕೊರಲರಿದುಕೊಂಡ ಮೋಹದ ಭಕ್ತ
ಗಿಂದು ನಿನಗಿಷ್ಟಾರ್ಥವಾವುದೈ ಹರಿಯೆ ಕೇಳೆಂದನಾ ಸರ್ವೇಶ್ವರಂ ೪೧

ಎನಲಾಗ ಸಾಷ್ಟಾಂಗದಿಂದ ವಂದಿಸಿ ಹಸ್ತ
ವನಜಮಂ ಮುಗಿದು ಬಿನ್ನವಿಸಿದಂ ಜೀಯ್ಯ ಪಿಂ
ದನಯದಿಂ ನಾಂ ನಿನ್ನ ಲೆಂಕನೆಂಬುದ ಮಱೆದಹಂಕರಿಸಲೆನ್ನ ಚಕ್ರಂ
ಅನಿತಱೊಳ್ಬಯಲಾಗೆ ನಿನ್ನಡಿಯ ಭಜಿಸಿ ಘ
ಮ್ಮನೆ ಕೊಟ್ಟೆ ಇಂದು ಸರ್ವೇಶ ನಾಂ ಪಾಪಿಯಾ
ನನಘ ಸುವ್ರತಿ ದಧೀಚಿಯನಿಟ್ಟಡೆನ್ನ ಚಕ್ರಂ ಚೂರ್ಣವಾಗಿ ಪೋಯ್ತು ೪೨

ಕರುಣಿಸಲ್ವೇಕು ಚಕ್ರವನೆಂದೊಡಾಗಲೀ
ಶ್ವರನಲ್ಲಿ ಚಕ್ರಮಂ ಕೂರ್ತು ನಿರ್ಮಿಸಿದನುಱು
ತರದ ನಿಜ ನೇತ್ರತ್ರಯಂಗಳಿಂದದಱ ರೂಪೆಂತೆನಲು ಝಗಝಗಿಸುತ
ವರನಾಭಿಚಂದ್ರನಾ ಬಳಸು ರವಿಯಾದುದದ
ಱರು ಗಗ್ನಿ ಕೋಟಿಪ್ರಭಾಮಯದೊಳಿರ್ದು ಪುರ
ಹರನ ಭಜಿಸುತ್ತ ಬೆಸನೇನೆನಲದಂ ಕರದೊಳಾಂತದಂ ಸರ್ವೇಶ್ವರಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಿಡಿದು ಚಕ್ರದ ಕೂಡೆ ದೇವದೇವೇಶ್ವರಂ
ನುಡಿದನೀ ವಿಷ್ಣುವೆಮ್ಮಯ ಭಕ್ತನೀತನಂ
ಬಿಡದಿವನ ಕರದಲ್ಲಿ ನೀನಿರ್ದು ದುಷ್ಟರಂ ಸಂಹರಿಸು ಶಿವಭಕ್ತರ
ಎಡೆಗೆ ಭಯಭಕ್ತಿಯಿಂದಿಹುದೆಂದು ಕರುಣದಿಂ
ನುಡಿದಾ ಸುದರ್ಶನವನಾ ವಿಷ್ಣುಗಕ್ಕಟಿಂ
ಕೊಡೆ ದೇವ ದುಂದುಭಿಗಳೊದಱಿದವು ಮಗುಳೆ ಶಿವಗೆಱಗಿ ಹರಿ
ಕೀರ್ತಿಸಿದನು ೪೪

ಕೊಂಡಾಡಿ ಶಂಕರನನಾಗ ನಲವಿಂದ ಬೀ
ಳ್ಕೊಂಡು ಸುಖದಿಂ ಭಕ್ತರೆಡೆಗೆ ಭೃತ್ಯತೆಯೊಳಂ
ಪುಂಡರೀಕಾಕ್ಷನಿರ್ದಂ ಕಣಾ ಕೆಂಚವೀರಾಹ್ವಯಾ ನೀಂ ಕೇಳಿದ
ಮಂಡನಪ್ರಶ್ನೆಗೀ ಕಥೆಯು ಪೇಳಿದೆವಿದಾ
ದಿಂಡೆಯು ಜಲಂಧರವಧಾಕಥನವೆನುತ ಚಿ
ತ್ಪಿಂಡಂಗೆ ಹತ್ತನೆಯ ಲೀಲೆಯಿದು ಮುಗಿಯಿತ್ತು ಸಂಧಿಯೆರಡೆಂದನಾರ್ಯಂ ೪೫

ಇದು ಶಿವನ ಹತ್ತನೆಯ ಲೀಲೆಯಿದನಾವನೋ
ದಿದೊಡೆ ಕೇಳಿದೊಡೆ ಬರೆದೊಡೆ ಪರಿಸೆ ಸಂತತಂ
ಹೃದಯದೊಳು ತಿಳಿದರ್ಥಮಂ ಪೇಳ್ದೊಡಾನಂದಿಸಿದೊಡಿಹದೊಳಖಿಳ ಭೋಗ
ಒದವಿ ಸುಜ್ಞಾನ ಕೀರ್ತಿಗಳಿಂದ ಸುಖಮಿರ್ದು
ತುದಿಯಲ್ಲಿ ಮೋಕ್ಷಸಾಮ್ರಾಜ್ಯವೈದುವರು ತ
ಪ್ಪದು ಕಣಾ ಕೆಂಚವೀರಾಹ್ವಯಾಯೆಂದು ಬಿತ್ತರಿಸಿದಂ ಹಲಗೆಯಾರ್ಯಂ ೪೬

ಸೂನುವೆನಿಸುವ ಕೆಂಚವೀರಾಖ್ಯ ಶಿವಭಕ್ತಿ
ಯಾನಂದನೇ ವೀರಶೈವಾಮೃತದೊಳಧಿಕ
ಸಾನುರಾಗದೊಳು ಜಂಗಮಸೃಷ್ಟಿಮುಖ್ಯಮಂ ತಿಳುಪುತಾ ಸೋಮಧಾರೀ
ತಾನಾದಿಯಾಗಿಯೆ ಜಲಂಧರನ ವಧೆಯು ವಿ
ಜ್ಞಾನಸಂಬಂಧದ ದಧೀಚಿ ಹರಿಯುದ್ಧವಾ
ದಾನವವಿರೋಧಿ ಪುನರಪಿ ಚಕ್ರಲಬ್ಧ ಸಹಿತಂ ಪೂರ್ಣವಾಯ್ತಿಲ್ಲಿಗೆ ೪೭

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲ ಪಟ್ಟಸ್ಥಳಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವೀರಶೈವಾಮೃತಪುರಾಣಮಂ ಕೊರ್ತು ಪದನಂ ಮಾಡಿದಂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಜಲಂಧರವಧೆಗೆ ಕಾಂಡ ಒಂದರ ಮೇಲೆ ಹದಿಮೂಱು ಸಂಧಿ ೪೯

ಇದು ಪರಮ ಷಟ್‌ಸ್ಥಲಬ್ರಹ್ಮಿಗಳ ವೀರಶೈ
ವದ ಮಾರ್ಗದುನ್ನ ತಜ್ಞಾನಿಗಳ ನೈರ್ಮಲ್ಯ
ಹೃದಯನಿಶ್ಚಯತತ್ವಸಂಪನ್ನ ಹಲಗೆಯಾರ್ಯಂ ಕೆಂಚವೀರಾಖ್ಯಗೆ
ಪದಪಿಂದ ನಂಜುಂಡದೇವರೊಪ್ಪುವ ತೆಱದೊ
ಳುದಿತ ವರವೀರ ಶೈವಾಮೃತಾಖ್ಯಾನವೆಂ
ಬುದನುಸುರಲಿದರೊಳೀ ಯೆಡೆಯಲ್ಲಿ ಯೆರಡು ಕಾಂಡಂ ಪೂರ್ಣವಾಯ್ತು
ಶುಭದಿಂ ೫೦

ಅಂತು ಕಾಂಡ ೨ ಕ್ಕಂ ಸಂಧಿ ೨೨ ಕ್ಕಂ ಪದ ೧೨೬ ಗ್ರಂಥ ೩೨೨ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಂಡ: ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೩

ಬ್ರಹ್ಮಶಿರಚ್ಛೇದನ

(ಏಕಾದಶ ಮಜಾರಿಸ್ಯಾತ್ ಎಂಬ ಅರ್ಥಕ್ಕೆ ಕಥೆ)

ತನಗೊಗೆದ ಭಾರತಿಯ ಪಿಡಿದು ಬೊಮ್ಮಂ ರಮಿಸು
ವನಿತಕ್ಕೆ ಮೃಗಿಯಾಗೆ ಹರಿಣನಾದಾ ವಿಧಿಯ
ಘನ ಚಾಪ ಬಾಣದಿಂ ಶಿರ ಹರಿಯಲೆಚ್ಚನೀಶ್ವರನಿಗಿದೇಕಾದಶವಲ್ಲೆ॥

ಪಾಲ್ಗಡಲ ತೆರೆಯ ಬಂಬಲ್ಗಳಂ ಜೇಂಗೊಡನ
ಸಾಲ್ಗಳಂ ಮಿಱುಗುವಿಂಗೋಲ್ಗಳಗ್ಗಳವಾದ
ಮೇಲ್ಗಳಂ ಪರಕಲಿಪ ಕೀಲ್ಗಳಂ ತಿಳಿದವರ ನಾಲ್ಗರದರಸುವೆನಿಸುವಾ
ಒಲ್ಲಾಡಿವೆತ್ತ ಮೀಸಲ್ಗಂಪಸರಿಸುವ
ರಲ್ಗಳಿಂ ಮಿಸುಪ ಸುಲಿಪಲ್ಗಳಿಂ ಜಸವೆತ್ತ
ಜೋಲ್ಗೈಯ್ಯ ನೀವೆಮ್ಮ ಪಾಲ್ಗಕ್ಕರಿಂ ಬಹುದು ಕಾಲ್ಗಣ್ಣ ಶಾಂತಮಲ್ಲಾ ೧

ಆಕಾಶವನಿತೆ ಬೆಸಗೊಂಡಳೂರ್ಧ್ವಕ್ಕೆ ಬ
ರ್ಪಾಕೆ ನೀನಾರಾನು ಶಾಂತನಂಜೇಶನ ಯು
ಶೋಕಾಂತೆಯುಹಿಪನಂ ದಿಗ್ವರರ ಮುಟ್ಟುವೆನಲ್ಲಿ ಭಕ್ತತತಿಗೆ
ಶ್ರೀಕಾಮಿನಿಯ ಲಂಚವಿತ್ತು ಪರಮುಕ್ತಿವನಿ
ತಾಕಳತ್ರವನೆಸಗಿ ನೀಂ ಪೋಗನುತ್ತೆನ್ನ
ನೂಕಿದಂ ತನ್ಮಸಿಜೋದ್ಭೂತ ಚಂದ್ರನೆಡೆಗೆಯ್ದಿ ದೂರುವೆನೆಂದಳು ೨

ತೋಱುವೀ ಸ್ಥಲವಾಱುವಂಗವಾಱಾ ಹಸ್ತ
ವಾಱು ಸಾದಾಖ್ಯವಾಱು ಶಕ್ತಿಯಾ ಲಿಂಗ
ವಾಱು ಕಲೆಯಾಱು ಮುಖವಾಱು ಪದಾರ್ಥವಾಱೌ ಭಕ್ತಿ ಸುಪ್ರಸಾದ
ವಾಱವಿಂತೆಂಟಂಗಿಯಾರ್ಯರ ಕೃಪೆಯೊ
ಳೊಱೆದೆನ್ನಾದಿ ಮಧ್ಯಾಂತದ ಕಥಾಮೃತವ
ಬೇಱಾಗದಂತೆನ್ನ ಕರ್ನ್ನಕೋಟರಕೆ ಸೈಗಱೆದನೀ ಮಲ್ಲಣಾರ್ಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಂದೆ ಹಲಗೆಯ ಗುರೂತ್ತಮನೆ ಚಿತ್ತೈಪುದಾ
ನಂದದಿಂ ನೀಂ ಪೇಳ್ದ ದಿವ್ಯಬೋಧೆಯೊಳೆಯ್ದೆ
ಸಂದುದು ಜಲಂಧರವಧಂ ದಶಯೆನಿಪ್ಪ ಶಂಕರನ ಹತ್ತನೆಯ ಲೀಲೆ
ಹಿಂದದಂ ನಾಂ ಕೇಳಿ ಕೃತಕೃತ್ಯನಾದೆ ಹ
ನ್ನೊಂದು ಲೀಲೆಯ ಕಥೆಯ ನಿರವಿಸೆನೆ ಬಳಿಕ ಮನ
ಸಂದದಂ ಬಿತ್ತರಿಸತೊಡಗಿದಂ ಕೆಂಚವೀರಾಹ್ವಯ ಕೇಳೆನುತ್ತಾ ೪

ಸ್ಕಂದಪೌರಾಣದೊಳು ಗುಹನೆಡೆಗಗಸ್ತ್ಯಮುನಿ
ಬಂದು ವಂದಿಸಿ ದೇವದೇವಾಧಿಪತಿಯ ಹಂ
ನೊಂದನೆಯ ಲೀಲೆ ಏಕಾದಶಮಜಾರಿ ಎಂಬಾ ಕಥೆಯ ನಿರವಿಸೆನಲು
ಇಂದು ಮೌಲಿಯನಂತರಂಗದೊಳ್ಮಡಗಿ ಮುದ
ದಿಂದ ನುಡಿದಂ ಕೇಳು ತಾಪಸಾ ಬ್ರಹ್ಮನಾ
ನಂದದಿಂದಖಿಳ ಲೋಕಂಗಳಂ ಪುಟ್ಟಿಸುವ ಕಾಲದೊಳಗೇವೊಗಳ್ವೆನು ೫

ಕನ್ಯೆಯೊರ್ವಳ ನಿರ್ಮಿಸಿದನಾಗ ಬೊಮ್ಮನ
ತ್ಯುನ್ನತ ಸರಸ್ವತಿಯುವಳ್ಮನೋಹರವಾಗೆ
ಯಂನಯದೊಳವಳನೇ ರಮಿಸುವೆನೆನುತ್ತಲಜ್ಞಾನದಿಂ ಪಿಡಿಯಲಾಗಿ
ಎನ್ನಯ್ಯ ತಂದೆ ಲೋಕವನೆಯ್ದೆ ಪೆತ್ತಯ್ಯ
ನಿನ್ನ ಮಗಳೊಳು ರತಿಯನೆಸಗಲಿಚ್ಛೈಸುವರೆ
ಚೆನ್ನಾಯ್ತು ಬಿಡು ಬಿಡೆಂದಾಕೆ ಬೋಧಿಸಲದಂ ಕೇಳದಾ ಮೂರ್ಖನೆಂದಾ ೬

ಇದು ಸಮಯವಲ್ಲದುದು ಸೇರೂದೆನಿಪ್ಪ ಕಾ
ರ್ಯದ ಹದಂ ತೋಱದೆ ಕಾಮುತ್ತ್ವವೆಗ್ಗಳಿಸ
ಲದ ಬಿಡಾ ಸುರತಕನುವಾಗೆಲಗೆ ಎನೆ ತಂದೆ ನೀನಿಂತು ಮೇಱೆವಪ್ಪಿ
ಬದುಕಬಹುದೇಯೆನಲು ಮೀಱಿ ತುಡುಕುತ್ತಿರಲು
ಚದುರೆ ಕೈಯ್ಯಂ ಹಾಱಿಹೊಯ್ದು ಸ್ವೈರಿಪುದು ಕಾ
ಮದ ಕಾಟಕೀಡಾಗುವರೆ ನವ ಬ್ರಹ್ಮಾಧಿಪತಿಯೆಯನುತಿಂತೆಂದಳು ೭

ನೀರ ಕುಡಿವರು ನರರು ಬಾಯಾರಲಂತಪ್ಪ
ನೀರು ಬಾಯಾರಲೇನಂ ಪೊಯ್ದು ನಿಲಿಪರ್ಯೆ
ನೀ ರಮ್ಯಸುವಿಚಾರಿ ಛಳಿಯಾಗಲಗ್ನಿಯಿಂ ಕಾಯ್ದು ಶೀತವ ಕಳೆವರು
ಆ ರಮ್ಯದಗ್ನಿ ಛಳಿಯಿಂ ನಡುಗಲದ ಬಿಡಿಪ
ರಾರು ಕೇಳಾರಾಧ್ಯರಜ್ಞರಾಗಲ್ ಬಿಡಿಪ
ರಾರು ಲೋಕದ ತಂದೆ ಮೇಱೆಯಿಂ ಮೀಱಿ ಕೆಡಬೇಡೆಂದು ಬೋಧಿಸಿದಳು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಸಿಜೋದ್ಭವನಾಕೆ ಪೇಳಿದುದ ಮೀಱಿ ಬಂ
ದುರವಣಿಸಿ ಪಿಡಿವನಿತಕಾಕೆ ಹುಲ್ಲೆಯ ರೂಪ
ಧರಿಸಿ ನಿಟ್ಟೋಟದಿಂದೋಡುತಿರೆ ಕಾಮವೆಗ್ಗಳಿಸಿ ಬಳಿಕಾ ಬೊಮ್ಮನು
ಹರಿಣನಾಗುತ್ತ ಪಿಂದಟ್ಟಿ ತುಡುಕುತ್ತಿರಲು
ಹರನೆ ಶಿವಧೋ ಎಂದು ವಾಣಿ ಮೊಱೆಯಿಡೆ ಕೇಳಿ
ಪರಮೇಶ್ವರಂ ಶಬರರೂಪವಂ ತೊಟ್ಟು ಬಂದಡ್ಡೈಸಿದಂ ಖತಿಯೊಳು ೯

ವೇದಂ ನಾಲ್ಕುಂ ಸಾರಮೇಯಂಗಳಾಗಿ ಶಿವ
ಪಾದಾಂಕಿತಂಗಳಂ ಮೂಸಿನೋಡುತ್ತಲಾ
ಹ್ಲಾದದಿಂದಾಘ್ರಾಯಮೆನೆ ಬರುತ್ತಿರೆ ಬಿಗಿದ ಬಿಲ್ಲೊಳಂಬಂ ಹೂಡುತಾ
ಮೂದಲಿಸಿ ಸರ್ವೇಶನೆಚ್ಚನಾ ಹರಿಣ ರೂ
ಪಾದ ವಿಧಿಯಂ ಶಿರಂ ಪರಿದು ಬೀಳುತ್ತಲಾ
ಮಾದೇವನಂ ಕೀರ್ತಿಸಲ್ಕೆ ನಿಮಿಷದೊಳಂ ಪ್ರಸನ್ನನಾದಂ ದೇವನು ೧೦

||ಸಾಕ್ಷಿ|| ಆಘ್ರಾಯ ಘ್ರಾಯಮಿಂದಂತಿ ವೇದಶ್ವಾನಃ ಸನ್ಯೈಃ ಸನ್ಯೈಃ
ಯತ್ಪಥಾನಿ ಮಹಾಟವ್ಯಂ ತಂ ವಂದೇ ಶಬರೇಶ್ವರಂ ೧

ಎಲೆ ಬೊಮ್ಮ ನಿನ್ನಿಷ್ಟವೇನೆನಲು ದೇವ ನಿ
ರ್ಮಲಭಾರತಿಯನೆನ್ನ ತನುಜೆಯಿವಳಲ್ಲೆಂಬ
ವೊಲು ಬೇಱೆ ನೀಂ ನಿರ್ಮಿಸುತ್ತ ವಧುವಾಗಿ ಕರುಣಿಪುದೆಂದೊಡಂತು ಮಾಡಿ
ಲಲಿತಾಂಗಿವಾಣಿಯಂ ಕೊಡಲು ಪ್ರಾಣೇಶನೆನೆ
ಸುಲಭತೆಯೊಳೆಸೆದನೈ ಕಲ್ಪಕಲ್ಪದೊಳಿಂತು
ಸಲುವುದೇಕಾದಶಮಚಾರಿ ಎಂದೀಶ್ವರನ ಲೀಲೆಯೆನುತಾರ್ಯನೊರೆದಂ ೧೧

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜ ಭೃಂಗಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಧಿಶಿರಚ್ಛೇದನವ ತಾಣಕೆರಡು ಕಾಂಡದ ಮೇಲೆ ಸಂಧಿಯೊಂದು ೧೩

ಅಂತು ಪ್ರಥಮ ಸಂಧಿ ೧ ಕ್ಕಂ ಪದನು ೧೩ ಗ್ರಂಥ ೧ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೪

ದಕ್ಷಬ್ರಹ್ಮನ ಶಿರಚ್ಛೇದ

ಹರವಿರಹಿತದ ಯಜ್ಞಮಂ ಮಾಡೆ ದಕ್ಷಗೀ
ಶ್ವರಿ ಪೇಳೆ ಕೇಳದಿರೆ ತತ್ತನುವನುಳಿದಲ್ಲಿ
ಗಿರಿಜಾತೆಯಾದಳ್ಭವನ ಶಾಪದಿಂ ದುಷ್ಟಗಾದುದು ಪುನರ್ಜನ್ಮವು

ಕದವನಂಗುಲಿಯಿಂದೆ ತೆಗೆವನಾರಾಂ ಶೂಲಿ
ಸುದತಿ ರೋಗಿಯೆ ವೈದ್ಯನೆಡೆಗೆ ಪೋಗ್ಯೆ ಸ್ಥಾಣು
ವದು ಕೊರಡು ನುಡಿವುದೆ ನೀಲಕಂಠಂ ನವಿಲೆಕೆಗು ಪಶುಪತಿ ಕೋಡಿನಾ
ತುದಿದೋರ್ಪುದೆನೆ ನಿನ್ನ ಮನೆಗೆ ನೀರಂ ಹೊರುವ
ಹೃದಯತಾಡನಪಾತ್ರ ಪಾರ್ವತೀಪತಿನಾವು
ವಿದು ಸಹಜವೆಂದರ್ಥತನುವನಗಜೆಗೆ ಕೊಟ್ಟ ಶಾಂತಮಲ್ಲೇಶ್ವರಜಯಾ ೧

ಹರರೂಪವೇ ಪಂಡಿತಾರಾಧ್ಯರಾಗಿ ಶಿವ
ಶರಣರ್ಗೆ ಲಿಂಗಪೂಜೆಯ ಬಿಟ್ಟು ಕೈಮುಗಿಯ
ಲಿರೆ ಮೇಲೆಯಾ ಮೂರ್ತಿ ಬಂದು ಮೇಲಣ ಗವಿಯ ದಿವ್ಯಸಿಂಹಾಸನಕ್ಕೆ
ವರನಾನದಲ್ಲದಿರಲೀಶ್ವರಾರ್ಚನೆ ಭಕ್ತಿ
ಭರಿತ ಪರಮತರಹಿತ ನಿಜಮತಶಿವಾಗವೋ
ದ್ಧರಣಮುಂಟೇ ನಿನಗೆ ಶಾಂತನಂಜೇಶಗುರುರಾಯಕೃತಭಸಿತಕಾಯಾ ೨

ಗುರುವೆ ಪೇಳಿದಿರಿ ಹನ್ನೊಂದನೆಯ ಲೀಲೆಯೊಳು
ಸರಸಿಜೋದ್ಭವಶಿರಚ್ಛೇದಮಂ ಮುಂದೆ ಪ
ನ್ನೆರಡುಲೀಲೆಯೊಳೀಶ್ವರಂ ವೀರಭದ್ರರೂಪಂ ತಳೆದ ಸತ್ಕಥನವ
ನಿರವಿಸೆನೆ ಕೆಂಚವೀರಾಹ್ವಯಂಗಕ್ಕಟಿಂ
ಕರುಣದಿಂ ಹಲಗೆಯಾರ್ಯಂ ನುಡಿಯತೊಡಗಿದಂ
ತರುಣ ಕೇಳೈ ಶೈವಪೌರಾಣದೊಳು ವಾಯುವಿಯ ಸಂಹಿತೆಯ ಕಥೆಯ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನಿಗಳಾ ವಾಯುಪುರುಷನೊಳು ನುಡಿದರು ಮಾರು
ತನೆ ಪೇಳು ಪೂರ್ವದೊಳಗಜ್ಞದಕ್ಷಂ ಮಹೇ
ಶನ ನಿಂದಿಸಲ್ಕೇಳಿ ನೊಂದು ದುಷ್ಟಂಗೆ ಶಾಪವನಿತ್ತು ದಾಕ್ಷಾಯಣೀ
ಯೆನಿಪ ತನುವಂ ಬಿಟ್ಟು ಬಳಿಕ ಪಾರ್ವತಿಯಾಗೆ
ಮನುಜಾಕ್ಷುಪಾಖ್ಯನಂತರದೊಳಾ ದಕ್ಷನೊಗೆ
ದನು ಗಡಾ ತತ್ಕಥನದಾದ್ಯಂತಮೆಂತೆನಲು ನುಡಿಯತೊಡಗಿದನಲಿನು ೪

ಮುನಿಗಳಿರ ಕೇಳಿರೈ ಶಿವನ ಬಲದಲ್ಲಿ ಘ
ಮ್ಮನೆ ಪುಟ್ಟಿದ ಮಹಾದಿಬ್ರಹ್ಮನೊಂಭತ್ತು
ತನುಜರೆನಿಸುವ ನವಬ್ರಹ್ಮರೊಳು ತಾನೊಬ್ಬನಾಗಿಪ್ಪ ದಕ್ಷನಖಿಳಾ
ವನಿತೆಯರನುತ್ಪತ್ತಿಯಂ ಮಾಡಿ ದೇವರ್ಕ
ಳನಿಬರ್ಗೆ ಕೊಟ್ಟು ತನ್ನಳಿಯರಂ ಮಾಡಿಕೊಂ
ಡನು ಬಳಿಕಲುಗ್ರತಪದಿಂದಿರ್ದು ಶಿವನಂ ಪ್ರಸನ್ನಮಂ ಮಾಡಿಕೊಂಡಂ ೫

ಕಱಿಗೊರಲನಡಿಗೆ ದಕ್ಷಂ ಕೂರ್ತು ಸಾಷ್ಟಾಂಗ
ವೆಱಗಿ ವಂದಿಸುತೆದ್ದು ಕರಕಮಲಮಂ ಮುಗಿಯು
ಲುಱಿದು ನಿನ್ನಿಷ್ಟವೇನೆನೆ ಜೀಯ್ಯ ತವಸತಿ ಭವಾನಿ ಮಗಳಾಗಿ ನನಗೇ
ಎಱಕದಿಂ ನಿಮಗೆ ವಧುವೆಂದಿನಂತಾಗಬೇ
ಕೆಱಿಯಯೆನೆ ಕುಸುಮಗಂಧನ್ಯಾಯದಿಂ ತನ್ನ
ಹೆಱಿಹಿಂಗದಬಲೆಯಂ ಕರುಣಿಸಿದನಾತಂಗೆ ಸುತೆಯಾಗಲಾ ಮಹಿಮನು ೬

ಆ ದಕ್ಷಸುತೆ ಸತಿದೇವಿಯೆಂಬಾಖ್ಯದಿಂ
ಮಾದೇವಿ ಬೆಳೆದು ಶಂಕರಗೆ ವಧುವಾಗಿರ್ದ
ಳೈ ದಿವ್ಯಮುನಿಗಳಿರ ಕೇಳಿ ಬಳಿಕೊಂದು ದಿನದೊಳು ಪಲವು ಸುತೆಯರಯ್ಯ
ನಾದ ಕಾರಣದಿಂದ ಮೂವತ್ತಮೂಱುಕೋಟಿ
ಯಾದ ದೇವರ್ಕಳೆನ್ನಳಿಯರನಿಬರೊಳು ಸಂ
ಪಾದಿಸಿಕೊಳುತ್ತ ಸತ್ಕಾರಮಂ ಕೈಕೊಂಬೆನೆಂದವಂ ಪೊಱಮಟ್ಟನು ೭

ಆಡಱಿ ಪುಷ್ಪಕವ ದೇವರ್ಕಳೊಳು ವೈಭವಂ
ಬಡೆದು ಸರ್ವಾಮರರ ಪಟ್ಟಣಂಬೊಕ್ಕಲ್ಲಿ
ಪೊಡವಡುತ್ತಳಿಯಂದಿರಖಿಳ ಸತ್ಕಾರಮಂ ಮಾಡೆ ಕೈಕೊಂಡು ಬಳಿಕ
ಜಡದಕ್ಷನೊಂದು ದುರ್ಬುದ್ಧಿಯಂ ನೆನೆದನಾ
ಮೃಡನ ಸರ್ವೇಶ್ವರನ ಹರಿಯಜ ಸುರಾವಳಿಗ
ಳೊಡೆಯನ ಪುರಕ್ಕೆಯಿದಿ ಸತ್ಕರಿಸಿಕೊಂಬೆನೆಂದಂ ದುಷ್ಟನಜ್ಞತ್ವದಿಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ನಿಶ್ಚಯಿಸಿ ದಕ್ಷಂ ಬರುತ್ತಿರ್ದನಾ
ನಂದದಿಂ ಹಿಮವದ್ಗಿರಿಯ ವೈಭವದ
ಮಂದಿರದೊಳಧಿಕನವರತ್ನಸಿಂಹಾಸನದೊಳಳವಟ್ಟಸರ್ವೇಶ್ವರಂ
ಇಂದುಮುಖಿಸರ್ವಾಣಿಯೆಡದೊಳೊಪ್ಪುತ್ತಿರಲು
ಬಂದಖಿಳ ಗಣನಿಕರ ಹರಿಯಜೇಂದ್ರಾಮರರು
ವಂದಿಸುತ ಮುನಿನಿಕರ ವಾಲೈಸಲೊಪ್ಪಿದರು ಶಂಭುವಿನ ಪೇರೋಲಗಂ ೯

ಅಣೆಯುರದೊಳಲ್ಲಿಗಾ ದಕ್ಷನೆಯಿತಂದು ತ
ತ್ರಿಣಯನ ಮಹಾದೇವದುರ್ಲಭನ ವಿಲಸಿತ
ಪ್ರಣಮವಲ್ಲಭನ ಯೋಗಿಗಳ ಹೃದಯಂಗಳೊಳು ಝುಗಝುಗಿಪ ಪದಯುಗಳಕೆ
ಮಣಿದು ವಂದಿಸಲೊಲ್ಲದಧಮನಳಿಯಂದಿರೊಳ
ಗಣವನೆಂದೇ ಬಗೆದು ತಾಂ ನಮಿಸಿಕೊಳಲೆಂದು
ಬಣಗು ಮುಂಗಡೆಗೆ ಬಂದಂ ಕೆಂಡದೊಡಿಗೆಗೆಳಸುವ ದೂದಿಯೊಟ್ಟಿಲಂತೆ ೧೦

ಮಿಗೆ ವೈಭವಂಗಳಿಂದಱಿಯದಿರ್ದಂ ಸಕಲ
ಜಗದೊಡೆಯನೆನಬೇಡವಖಿಳ ರೋಮಂಗಳೊಳ
ಗೊಗೆದಳಿವಕೋಟಾನುಕೋಟಿ ಕಮಲೋದ್ಭವಾಂಡಂಗಳೊಳು ಕಡೆಗೊಂಟೊಳು
ಒಗೆದ ಹಳ್ಳಿಯು ಹೊಳ್ಳುಗಳ ಲೆಕ್ಕಿಪನೆ ದೇವ
ನಗಣಿತಮಹತ್ವರೂಪಂ ತನ್ನನಕ್ಕಟಾ
ಒಗೆಯು ನಿ ದಿರೇಳನೆಂದೀಕ್ಷಿಸುತ್ತಾ ದಕ್ಷನಿದಿರಲ್ಲಿ ನಿಂದಿರ್ದನು ೧೧

ಮಾದೇವನೆನ್ನುವಂ ಬಗೆಯುದೊಡವೆನ್ನ ಸುತೆ
ಯಾದೊಡಂ ಮನ್ನಿಸಳೆಯೆನುತ ನಿಂದಿರಲಾಗಿ
ಮಾದೇವಿ ಪತಿಯುದಾಸೀನವಮಂ ಮಾಡಿದಾತನ ಕೋಂಡು ಕೆಲಸವೆನಗೆ
ಆದುದೇನೆಂದು ರಾಯುನ ಮಕುಟಕಳೆವಟ್ಟು
ವೋದಿಸುವ ಬಟ್ಟಂ ಮುತ್ತಂದೊಗೆದ ಚಿಪ್ಪು ಬರ
ಲಾದರಿಪುದೇಯೆಂಬ ಮಾಳ್ಕೆಯಿಂ ಸುಮ್ಮನಿರೆ ನೊಂದನಂತಾ ದಕ್ಷನು ೧೨

ಮಗಳು ಮನ್ನಿಸದಿರ್ದೊಡೇನು ಪೇರೋಲಗದೊ
ಳಗಣಿತ ಸುರರ್ಕಳೆನ್ನಳಿಯಂದಿರಿವರ್ಗ್ಗಳೇಂ
ಬಗೆದೆಱಗರೇಯೆಂದು ನಿಂದಿರಲು ಶಂಕರಂಗೀ ದಕ್ಷನೇಂ ದ್ರೋಹಿಯೋ
ಜಗದೊಡೆಯನುಂ ಭವಾನಿಗಳು ಲೆಕ್ಕಿಸರು ಗಡ
ಮಿಗೆ ನುಡಿಸಲೆಮಗಾಜ್ಞೆಯುಪ್ಪುದೋಯೆಂದಲ್ಲಿ
ಯುಗದ ರಾಜೇಂದ್ರಾದಿ ದೇವರ್ಕಳುಸಿಕನಿರೆ ನೊಂದನಂತಾ ಪಾತಕಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಳಿ ಬರುತಂ ಬರುತ ಮೆಲ್ಲಮೆಲ್ಲನೆ ತಿರಿಗಿ
ತಿರಿಗಿ ನೋಡುತ್ತ ಧ್ವನಿಯಾದಡಂ ಶಂಕರಂ
ಕರಸನೇ ಎಂದೆಳಸುತಲ್ಲಿ ತನ್ನಂ ಪಾಟಿಮಾಡುವವರಿಲ್ಲದಿರಲು
ಉರವಣಿಸಿ ಬಂದು ತನ್ನಯ ಪಟ್ಟಣಂಬೊಕ್ಕು
ದುರುಳದಕ್ಷಂ ಮನದೊಳಜ್ಞಾನಮಂ ನೆನೆದು
ಹರನ ದೇವತ್ವಮಂ ತಾಂ ಮಾಡಿಕೊಳಲೆಂದು ಬಗೆದನತಿ ಮೂರ್ಖತೆಯೊಳು ೧೪

ಟಿಟ್ಟಿಭಂ ಕೋಪಿಸುತ ಭೇರುಂಡಪಟ್ಟಮಂ
ಕಟ್ಟಿಕೊಳಲೆಂದು ಬಗೆವಂತೆ ದಕ್ಷಂ ಬಳಿಕ
ಕೆಟ್ಟಿಣಿಸಿ ಯಜ್ಞಮಂ ಮಾಡುವೆನೆನುತ್ತ ಬಗೆದಾಗ ಮಂತ್ರಿಯೊಳಜುಪಲು
ಕಟ್ಟೊಡೆಯುಗಿದಿರಾಗಿ ಮಲೆವರೇ ನೀನಿನ್ನು
ಕೆಟ್ಟಪಾ ನೀನೆನ್ನುವಂ ಕೊಂದೊಡಂ ಕೊಲ್ಲು
ಬಿಟ್ಟುಕಳೆ ನೆನದ ಕಾರ್ಯವನೆನಲು ಸಚಿವನಂ ಜಱಿದನಂತಾ ಪಾತಕಂ ೧೫

ಆ ವಿಶೇಷದ ಪಾಪಿ ಹರಿಯಜೇಂದ್ರರಿಗಖಿಳ
ದೇವರ್ಕಳಿಗೆ ಖೇಚರರ್ಗೆ ಮನುಮುನಿಗಳು ದಿ
ಶಾವರರ್ಗೋಲೆಗಳನಳಿಯರ್ಗಳೆಲ್ಲರ್ಕೈತಪ್ಪದೆಂದಟ್ಟಲಾಗಿ
ಪಾವನಮಹೇಶನೆಯಿತಪ್ಪನೆಂದೇ ಬಗೆದ
ಹೋ ವಿಚಾರಿಸದೇ ನಡೆತಂದು ಕೂಡಿದರಿನ್ನ
ದೇವೊಗಳುವೆಂ ಯಜ್ಞಭೂಮಿಯೊಳು ತನತನಗೆ ಧರಣಿ ಬೆಸಲಾದಂದದೆ ೧೬

ಶತಪುಷ್ಕಲಾವರ್ತಮುಖ್ಯ ಕುಂಡಂಗಳಂ
ನುತ ಸುತ್ತ್ಯವೆಗಳನಗ್ಗಳದ ಯಜ್ಞದ್ರವ್ಯ
ತತಿಯನಾ ರುತ್ವಿಕ್ಕುಗಳನಖಿಳ ಸೋಪಸ್ಕರಂಗಳಂ ಕೂಡಿ ಬಳಿಕಾ
ಕ್ರತುವನೊಡಚಿದನಾ ಪಾಪಿ ದೇವರ್ಕಳೊಳು
ಶಿತಿಗಳಂ ಹೊಱಗಾಗಿ ತಲೆಯಿಲ್ಲದಿಹ ಮುಂಡ
ದತಿಶಯದ ಮಾಳ್ಕೆಯಿಂದಾ ವೇಳೆ ನಾರದಂ ಕಂಡು ಸಂತೋಷಿಸಿದನು ೧೭

ಬಡವನೊರ್ವಂ ನಿಧಾನವನೆಂತಕೆಯ್ತ್ತರು
ತೆಡಹಿ ಕಂಡಂದವಾಯ್ತಾಹ ಲೇಸಾಯಸಂ
ಬಡುತ ಕದನವ ಹಣ್ಣುವಿಚ್ಛೆಯೊಳು ಲವಲವಿಸುವೆನಗೆ ಕಾಳೆಗದ ಕಾರ್ಯ
ತೊಡಗುವುದನಳ್ತಿಯಿಂ ನೋಡುವೆಂ ಮೂಲೋಕ
ದೊಡತಿಯಲ್ಲಿಗೆ ಹೋಗಿ ಬಿನ್ನವಿಪೆನೆನುತಲ್ಲಿ
ನಡೆದು ಕೈಲಾಸಮಂ ಪೊಕ್ಕು ದೇವಿಗೆ ನಮಿಸಿ ಪೇಳ್ದನಾ ವೃತ್ತಾಂತವ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳಿ ದೇವಿಯರು ಶಿವವಿರಹಿತದ ಯಜ್ಞಮಂ
ಕಾಳುಬುದ್ಧಿಯೊಳು ಮಾಡುತ್ತಿರ್ದಪನೆ ಪೋಗಿ
ಪೇಳುವೆಂ ಪಾಪಿಗಾಂ ಬುದ್ಧಿಯನೆನುತ್ತ ಸರ್ವೇಶ್ವರಂಗಱುಪಿ ಬಳಿಕಾ
ಭಾಳಾಕ್ಷನಾಣತಿಯ ಪಡೆದಲ್ಲಿ ನವರತ್ನ
ಜಾಳಶೋಭಿತದಿವ್ಯ ಪುಷ್ಪಕವನಡರಿ ನಿ
ಸ್ಸಾಳಂಗಳಾದಿಯಾದಮರವಾದ್ಯಂಗಳೊದಱಲು ನೆರೆದರಮರಿಯರ್ಗಳು ೧೯

ಆ ದೇವಿಯರ ವಿಮಲ ಪುಷ್ಪಕದ ಬಗೆಯನಾ
ಮಾದೇವನಱಿವನದು ವಿಶ್ವತೋಮುಖಲಕ್ಷ
ಣಾದಿಗಳೊಳಗ್ಗಳಮನೋಹರಂ ತಪ್ತಕಾಂಚನಮಯಂ ಚಿತ್ರರತ್ನಾ
ಸಾದರಪರಿಪ್ಲುತಂ ಮುತ್ತುಗಳ ದಂಡೆಯಿಂ
ದಾ ದಿವ್ಯಪುಷ್ಪಮಾಲೆಗಳಿಂದ ರತ್ನ ನಿ
ರ್ಭೇದಸೌಖ್ಯಸ್ತಂಭಕೋಟಿಯಿಂ ವಜ್ರಕಲ್ಪಿತದ ಸೋಪಾನಂಗಳಿಂ ೨೦

ಆ ರಚಿತಪುಷ್ಪಕಂ ಮೆಱೆದುದಾ ವಿದ್ರುಮ
ದ್ವಾರ ತೋರಣಗಳಿಂ ಪರಕಲಿಸಿದಗ್ಗಳದ
ಪಾರಿಜಾತದ ಕುಸುಮಪರಿಮಳದ ಚಿತ್ರರತ್ನಾಸನದ ಸೈಪಿನಿಂದ
ಶ್ರೀರಮ್ಯ ವಜ್ರಜಾಲಾಂಕಿತಚ್ಛಿದ್ರದೊ
ಯ್ಯಾರಂಗಳಿಂದ ಮಣಿಮಯದ ನೆಲಗಟ್ಟಿನಿಂ
ಚಾರುಮಣಿದಂಡ ವೃಷಭಧ್ವಜಂಗಳ ಪೆಂಪಿನಿಂದ ರಾಜಿಸುತಿರ್ದುದು ೨೧

ನವರತ್ನಕಂಚುಕದ ವೇತ್ರಹಸ್ತದ ದಿವ್ಯ
ಶಿವಗಣಸ್ತೋಮದುತ್ತುಮದ ಬಾಗಿಲ್ಗಳಿಂ
ದವೆ ಮುರಜ ತಾಳ ಸಂಗೀತ ವೀಣಾವಾದ್ಯಪರಿಣತರ ಪೆಂಪಿನಿಂದ
ವಿವಿಧ ವೇಷಾಢ್ಯರಿಂ ಸಿಂಗರಂಬಡೆದಿರ್ದ
ಯುವತಿಯರ ಕೋಟಿಸೂರ್ಯಪ್ರಕಾಶಾಭರಣ
ನಿವಹದಿಂ ದಿಕ್ಕುಗಳ ಬೆಳಗುತೊಪ್ಪಿದುದಾ ವಿಮಾನ ಸನ್ಮಾನದಾನ ೨೨

ಆ ದಿವ್ಯಪುಷ್ಪಕವನಡರಿ ಸಂತೋಷದಿಂ
ಮಾದೇವಿ ಕೆಲಬಲಂಗಳೊಳು ರತ್ನಾಂಕಿತ ಮ
ಹಾದಂಡಮಯ ಶುಭ್ರಚಾಮರಂಗಳನೆರಡ ರುದ್ರಕಂನೆಯರಿರ್ವರು
ಸಾದರದೆ ಢಾಳಿಸಲು ದೇವಿಯರ ವದನಸಂ
ಮೋದ ಪಂಕಜಕೆ ಹಂಸದ್ವಯಂ ಪಾರುವಂ
ತಾದುದತಿ ವೈಭವದೊಳಿಂತು ತೆರಳಿದಳಾ ಭವಾನಿ ಸದ್ಗುಣವಿತಾನಿ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿಗಿಲಾದ ಬಟ್ಟಮುತ್ತಳವಟ್ಟ ಬಿಳಿಯ ಸ
ತ್ತಿಗೆಯ ಮಾಳಿನಿಯೆಂಬ ರುದ್ರವಧು ಪಿಡಿದುಬಹ
ಬಗೆಯೆಂತೆನಲ್ ಭವಾನಿಯ ವದನ ಚಂದ್ರಮನನೋಲೈಪ ತಾರಗೆಗಳಾ
ಸೊಗಸಿನಿಂ ಕೂಡಿ ಬಳಸಿರ್ದ ಪರಿವೇಷಮೆನೆ
ಝುಗಝುಗಿಸುತಲ್ಲಿ ಸತಿಯರ್ಕರೊಳು ನೆತ್ತ ಜೂ
ಜುಗಳನಾಡುತ್ತಲುಗ್ಘಡಿಪ ಕಂಚುಕಿಯರಗ್ಗಳದೊಳೆಯಿದಿದಳು ದೇವಿ ೨೪

ಸುಕರಮಣಿರತ್ನ ಕಿರಣದ ದೇವಿಯರ ಪಾ
ದುಕೆಯ ನಲವಿಂದ ಸುಯಶಾದೇವಿ ಸೇ
ವಕೆಯರೊಳು ತಾನೆ ಮಿಗಿಲೆನೆ ತನ್ನ ಬಟ್ಟಮೊಲೆಗಳಮೇಲೆ ಮಡಗಿ ನಡೆಯೆ
ಚಕಿತಲೋಚನೆಯರಂಗಿಗಳ ತಾಂಬೂಲಪೇ
ಟಿಕೆಯ ದರ್ಪಣ ತಾಲವೃಂತಂಗಳಂ ನುಡಿವ
ಶುಕಶಿಶುಗಳಂ ಯಕ್ಷಕರ್ದಮದ ಭರಣಿಗಳನಾಂತು ನಲ್ಪಿಂ ನಡೆದರು ೨೫

ಸುರಭಿಮಾಲೆಗಳನಾಭರಣಪೆಟ್ಟಿಕೆಯುನ
ತ್ಯುರುತರಾಲೇಪನದ ಭರಣಿಗಳ ಕುಸುಮಸೌಂ
ದರಭಾಜನಂಗಳಾಂತಬಲೆಯರು ಸುತ್ತಲೋಲೈಸಿಬರೆ ತಾರಕಿಗಳಾ
ಪರಿವೃತದ ಮಧ್ಯದೊಳು ಮೆಱೆದಿಹ ಶರಚ್ಚಂದ್ರ
ಗಿರದೆ ಮಿಗಿಲೆನಿಸಿ ನಡೆದಳು ದೇವನರ್ಧಾಂಗಿ
ನಿರುಪಮಚಿದಂಬುಜಪತಂಗಿ ದಿವ್ಯಾಂಗಿ ಶಂಕರವಿಲಸದಂತರಂಗಿ ೨೬

ಪೂರೈಪ ಶಂಖಂಗಳಿಂದ ಭೋರ್ಗರೆವ ಕಹ
ಳಾರವಗಳಿಂದ ನುಡಿಯಿಪ ಪಟಹನಿಕರದಿಂ
ರಾರಾಜಿಸುವ ತಾಳ ಗುರು ಲಘು ಪ್ಲುತ ಚಾಚಚ್ಚಸ್ಫುಟಾನಾದದಿಂ
ಸಾರಮುರುಜಧ್ವನಿಗಳಿಂದ ಗಾನಂಗಳೊ
ಯ್ಯಾರದಿಂ ತಳಪಗೈದುಗಳಾಂತ ಗಣನಿಕರ
ದೋರಣಂ ತಾನೆಂಟುಲಕ್ಷವೋಲೈಸಿ ಬರುತಿರೆ ನಡೆದಳಾ ಭವಾನಿ ೨೭

ಎಡಬಲದೊಳೆಯಿದೆ ಷಣ್ಮುಖ ಗಣಪರೋಲೈಸೆ
ನಡೆಯಲಾ ಸೋಮವರ್ಣಂ ಸುರಾರ್ಚಿತರಮ್ಮ
ನಡಿಯ ಸೇವಿಸುತ ಬರೆ ಪುಷ್ಪವೃಷ್ಟಿಗಳು ನಭದಿಂ ಸುರಿಯಲಮರವಾದ್ಯಂ
ನುಡಿಯೆ ಮುನಿಗಳು ಮುಂದೆ ಕುಣಿಯೆ ವೈಭವದಿಂದ
ಸಡಗರಿಸಿ ತಂದೆಯೆನಿಸುವ ದಕ್ಷನಾವಾಸ
ದೆಡೆಗೆ ಬಂದಳು ಮಹಾದೇವನರ್ಧಾಂಗಿ ಶಿವಪದಸರೋಜಾತಭೃಂಗಿ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುಡಿತೋರಣಾದಿಗಳು ಮಂಗಳಾರತಿಯು ಕ
ನ್ನಡಿ ಕಲಶ ಮುಖ್ಯಮಂ ತನತನಗೆ ನಲ್ವಿನಿಂ
ಪಿಡಿದಿದಿರ್ಗೊಂಬ ವನಿತೆಯರೇನುಮಿಲ್ಲದಿರಲೊಳಪೊಗುತ್ತಾ ದಕ್ಷನು
ಎಡೆಗೆ ಬರೆ ಪಾಪಿಯಜ್ಞಾನದಿಂ ಮೂಲೋಕ
ದೊಡತಿಯಂ ಮಗಳೆಂಬ ಭಾವದಿಂ ಕಂಡು ತ
ನ್ಮೃಡನವಮೇಗಣ ವಿರೋಧದೊಳುದಾಸೀನಮಂ ಮಾಡಿದಂ ಕೇಡಬಯಸಿ ೨೯

ಮುಂದೆ ನಿಂದಿರ್ದ ದೇವಿಯರ ಕಾಣುತ ದಕ್ಷ
ನಂದಡ್ಡಮೊಗವಿಡಲು ತನ್ಮುಖದ ಕಡೆಗಾಗ
ಬಂದು ನಿಲೆ ಮತ್ತೊಂದು ದೆಸೆಗೆ ಲಪನವನೆಯ್ದೆ ತಿರುಪಲಾ ಠಾವಿಗೆಯ್ದೆ
ಒಂದೊಂದು ದಿಕ್ಕಿನತ್ತಲ್ಮುರಿವ ಭಾವಮಂ
ತೆಂದೊಡಿಂದ್ರಾದಿಗಳಿರಾ ದ್ರೋಹಿಯಂಗದೊಳ
ಗೊಂದಿರೇಂ ಬಿಟ್ಟು ಪೋದಪೆನೆಂದು ಶಿರವೆಯ್ದೆ ಸಾಕ್ಷಿಗೆಯ್ದಂತೆಸೆದುದು ೩೦

ಅನಿತಕ್ಕೆ ದೇವಿ ತಾನೇ ನುಡಿದಳೆಲೆ ತಂದೆ
ನಿನಗಿಂತು ದುರ್ಬುದ್ಧಿಯೇಕೆ ಬಂದುದು ಸರ್ವ
ವನಜಗರ್ಭಾಂಡಂಗಳಂ ದೇಹದೊಳು ಬೈತು ಪೊರೆವಗ್ಗಳನನಾಗಮಾ
ಘನಶಾಸ್ತ್ರ ಪೌರಾಣ ವೇದಸಂತತಿಗತೀ
ತನ ಸರ್ವವಂದ್ಯನಂ ಭಜಿಸದೀ ಪಶುಗಳಂ
ದೆನಿಪಖಿಳ ದೇವರ್ಕಳಂ ಪೂಜಿಸುವರೆ ಮೂಢಾಯೆಂದಳತಿ ಕರುಣದೆ ೩೧

ಆ ನುಡಿಯ ಕೇಳಿ ಪಾತಕನೆಂದನಂದಾ ಭ
ವಾನಿಯೊಳು ನಿನಗಿಂದಲುತ್ತಮೆಯರೆನ್ನಯ ಮ
ಹಾನಂದನೆಯರು ದೇವರ್ಕಳಂಗನೆಯರಾ ಮೂವತ್ತಮೂಱುಕೋಟಿ
ಮಾನಿನಿಯರವರ ಗಂಡಂದಿರೆನ್ನಳಿಯಂದಿ
ರಾನಂದಪರರು ಮೋಹಿಗಳವರಿಗೇನೆಣೆಯೆ
ನೀನು ನಿನ್ನಯ ಗಂಡರವರ ಪತಿಗಳ್ಗೆ ಸರಿಯೇಯೆಂದು ಕಾಳ್ಗೆಡೆದನು ೩೨

ಕುಲವಳಿದವಂ ಕೋಟಿ ತೊವಲುಡಿಯನಂತಖಿಳ
ರೆಲುದೊಟ್ಟಪಾವುಗಳ ತಳೆದವಂ ಸುಡುಗಾಡು
ನೆಲೆಯಾದವಂ ವಿಷವನುಂಡು ಮರುಳುಗಳೊಳಾಡುವ ಕಿಚ್ಚುಗಣ್ಣನೊಂದು
ನೆಲೆಯಿಲ್ಲದವನವನಿಗಾಂ ನಿನ್ನ ಕೊಡಲು ನೀ
ನೊಲಿದೆಯಾ ಗುಣಹೀನನಾತನೆನ್ನೊಳು ಸೊಕ್ಕಿ
ಮಲೆತು ಗರ್ವಿಸಿದನವನಂ ಬಿಡದ ನೀನೆಲ್ಲಿಯವಳೆನಗೆ ಪೋಗೆಂದನು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದ ಪಾಪಿಯ ಮಾತ ಕೇಳುತ ಮಹಾದೇವಿ
ನೊಂದಳೀ ದ್ರೋಹಿಯಂ ನಿಮಿಷಮಾತ್ರದೊಳುರುಪಿ
ಕೊಂದಪೆಂ ತಳುವಿಲ್ಲವೀಯಧಮನಣುಗಿ ಎನಿಸುವ ಕಾಯಮಂ ಬಿಸುಟ್ಟು
ಮುಂದೊಂದು ತನುವಾಂತು ಶಿವಗೆ ವಧುವಾದಬಳಿ
ಕಂದಿಗೀ ಪಾತಕಶಿರಚ್ಛೇದವಾಗಬೇ
ಕೆಂದು ಮನದೊಳು ನೆನದು ಶಾಪಮಂ ಹಿಡಿ ಹಿಡಿ ಎನುತ್ತ ಘೂರ್ಮಿಸಿ
ನುಡಿದಳು ೩೪

ಈ ಸಭೆಯೊಳಿರ್ದವದಿರೆಲ್ಲರುಂ ಕೇಳ್ವಂತೆ
ಯಾಸಾರಿ ಕೊಡುವೆನ್ಯೆ ಶಾಪಮಂ ನನ್ನಪತಿ
ಯೇ ಸರ್ವಕರ್ತೃವಾತನ ನಿಂದಿಸಿದ ಪಾಪಿ ನೀನು ವಿದ್ಯಾಚೋರರಾ
ಭಾಸುರಗುರುದ್ರೋಹಿಗಳ ವೇದಮಂ ಶಿವನ
ದೂಷಣಂಗೈದವರ ನಾಕ್ಷಣದೊಳೇ ಕೊಲ್ವ
ದೇಸಮರ್ಥಿಕೆಯ ಶಿವಭಕ್ತಿಯಥವಾ ಕೇಳಿ ತನ್ನೊಡಲ ನಳಿಯಬೇಕು ೩೫

ಆದುಕಾರುಣಂ ನಿನ್ನ ಕೂಟಕ್ಕೆ ಬಂದವರು
ಸದಸಿಕೊಳ್ಳಲಿ ನಿನ್ನ ತಲೆ ಹೋಗಲ್ಯೆ ನಿನ್ನ
ಬದುಕು ಹಾಳಾಗಿ ನೀ ಮಾಳ್ಪ ಯಜ್ಞಂ ಕೆಟ್ಟುಹೋಗಲೆನುತಂ ಶಾಪವ
ಪೊದವಿಕೊಟ್ಟಾ ದೇವಿ ಘುಳುಘುಳಿಸುತಂ ತನ್ನ
ಹೃದಯದೊಳ್ಮೂಡಿದ ಮಹಾಜ್ವಾಲೆಯೊಳಗೆ ನಿಮಿ
ಷದೊಳು ತನುವಂ ಬಿಟ್ಟು ನಡೆದಳಾ ಹಿಮವಂತಗಿರಿಯತ್ತಲಾ ಭವಾನಿ ೩೬

ಪರಮಸ್ವತಂತ್ರೆಯೆನಿಸುವ ದೇವಿ ನಡೆದು ಹಿಮ
ಗಿರಿರಾಜನಬಲೆ ಮೇನಾದೇವಿ ಮಾಳ್ಪ ತಪ
ದುರು ನಿಷ್ಠೆಗೊಲಿದವಳ ಭಕ್ತಿಗಂ ಕೂರ್ತು ತನ್ನಿಚ್ಛೆಯಿಂ ಸುತೆಯಾಗುತ
ಇರಲತ್ತಲಿತ್ತಲೀ ಪಾತಕನ ಯಜ್ಞದೊಳ
ಗರರೆಯದ್ಭುತವಾದುದಾ ಭವಾನಿಯೆ ತನ್ನ
ಶರೀರಮಂ ಬಿಡಲು ದಕ್ಷಾದಿಗಳು ನಡುಗಿದರು ಮಂತ್ರವೆಲ್ಲಾ ಕೆಟ್ಟವು ೩೭

ಅಳಿದುದಾ ಯಜ್ಞದಾ ವಾರ್ತೆಯಂ ಕೇಳಿ ಕಡು
ಮುಳಿದು ಸರ್ವೇಶ್ವರಂ ದಕ್ಷಂಗೆ ದೇವಮುನಿ
ಕುಳಕೆ ಶಾಪವನಿತ್ತನೆಲೆಯಧಮ ನೀನು ನಿನ್ನ ಳಿಯುರಾದವರ ನಂಬಿ
ಬಳಿಕಲಧಮರ ಪೂಜಿಸುತ್ತ ನೀನೆಮ್ಮುವ
ಗ್ಗಳಿಕೆಯಂ ಮಱೆದು ದೇವಿಯ ನಿನ್ನ ಸುತೆ ಎಂದು
ತಿಳಿದು ನಿಂದಿಸಿದ ಕಾರಣದೆ ನಿನಗಪ್ಪ ಭಂಗವ ಕೇಳು ಕೇಳೆಂದನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈವಸ್ವತಾಖ್ಯ ಮನ್ವಂತರದೊಳೊಗೆದು ನೀ
ನೀ ವಿಶೇಷತೆಯೊಳಾ ಸ್ವಾಯಂಭು ಮನ್ವಂತ
ರಾವಳಿಯೊಳನ್ಯಾಯಮಂ ನೆಗಳಿದೈ ಬಳಿಕ್ಕಿನ್ನುಳಿದು ಮನುಚಾಕ್ಷುಷಾ
ನಾವಲ್ಲ ಭಾವಂತರ ಪ್ರಾಚೀನ ಬರ್ಹಿಗಾ
ಭೂವರಂ ಮಾರೀಷನಾ ಬ್ರಹ್ಮಯಜ್ಞದೊಳು
ತಾನೊಗೆವನವನಿಗಾ ಪ್ರಾಪ್ರಾಚಿತ ಸ್ವಾಹ್ವಾಯದೊಳುದಯಿಸೆಲೆ ಪಾಪಿ ದಕ್ಷಾ ೩೯

ಪ್ರಾಚೀನ ಬರ್ಹಿಗಂ ನೀಂ ಪೌತ್ರನಾಗುತಾ
ಪ್ರಾಚೇತಸೋದ್ಭವಂ ನೀನಾಗಿ ಎಂದಿಂಗ
ನಾಚಾರದಿಂದಶ್ವಮೇಧಯಜ್ಞವನೆಯ್ನೆ ನೆಗಳಲೀ ಮುನಿ ಸುರಾಳಿ
ಗಾ ಚಮತ್ಕೃತಿಯೊಳಾವೆ ಶಿಕ್ಷೆಗೈವೆವೈ
ಗೋಚರಿಸಿ ನಿನ್ನ ಶಿರವರಿವೆವೆಂದಾತಂಗೆ
ಸೂಚಿಸಿ ಮಹಾಶಾಪಮಂ ಕೊಟ್ಟನಾ ಮಹಾದೇವ ನಘವನ ದಾವನು ೪೦

ಹರನಿತ್ತ ಶಾಪಮಂ ಸ್ವಾಯಂಭುಸಂಬಂಧ
ದುರುದೇಹಮಂ ಬಿಟ್ಟು ತಾನೆ ತಚ್ಚಾಕ್ಷುಷಾಂ
ತರದೊಳ್ಪ್ರಚೇತಸೋದ್ಭವನಾಗಿ ಪುಟ್ಟಿದಂ ದಕ್ಷನೆಂದಾ ಮಾರುತಂ
ಒರೆಯಲಾ ಮುನಿಗಳಿಂತೆಂದರೊಲವಿಂ ವಾಯು
ಪುರುಷ ಕೇಳಾ ದಕ್ಷನಂ ಹರಂ ಕೂರ್ತು ಸಂ
ಹರಿಸಿದ ಕಥಾರಸವನೆಮ್ಮ ಕರ್ಣಕ್ಕೆ ಸೈಗಱೆಯೆಂದರಾನಂದದಿಂ ೪೧

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಯ್ಯಣಾರ್ಯಂ
ಶೀಲಪಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಮಂ ಕೂರ್ತು ಪದನಂ ಮಾಡಿದಂ ೪೨

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಶಿವಂ ದಕ್ಷನಂ ಶಪಿಸಿದೆಡೆ ಎರಡುಕಾಂಡದ ಮೇಲೆ ಸಂಧಿಯೆರಡು ೪೩

ಅಂತು ಸಂಧಿ ಎರಡಕ್ಕಂ ಪದ ೫೬, ಗ್ರಂಥ ೧ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೫

ಆ ಪುನರ್ಜಾತಪಾತಕ ದಕ್ಷಯಜ್ಞವಾ
ರ್ತಾಪೂರ್ಣ್ಣ ಕರ್ಣಹರ ಭಾಳಾಕ್ಷಸಂಭವ
ಶ್ರೀ ಪರಮ ವೀರಭದ್ರಂ ನಡೆದು ದುಷ್ಟರಂ ಸಂಹರಿಸಲುಜ್ಜುಗಿಸಿದಂ

ತನ್ನ ತಾನೇ ಜಾನಿಸುತ್ತ ಕೈಮುಗಿದಿರ್ದೊ
ಡಂ ನೋಡಿ ಗುಹನೆಂದ ನಮ್ಮ ಕೇಳೆಮ್ಮಯ್ಯ
ನಿನ್ನದೇಂ ಪಿಡಿದಿರ್ಪನೆಂದೊಡುತ್ತುಮ ರಸಫಲಂ ಕೊಡಿಸು ನೀನೆ ಪೋಗಿ
ನಿನ್ನ ತಂದೆಯ ಬೇಡಿಕೊಳ್ಳೆನಲ್ಕಂಜುಲಿಯ
ತನ್ನೆರಡು ಕರದೆ ಬಿಚ್ಚಲ್ಕೆ ಜಾನಂಗೆಡು
ತ್ತಂ ನೋಡಿ ಮಗನ ಮೊಗಮಂ ಗಿರಿಜೆಯೊಳ್ನಗುವ ಶಾಂತಮಲ್ಲೇಶ್ವರ
ಜಯಾ ೧

ಅರರೆ ಲಕ್ಕದಮೇಲೆ ತೊಂಭತ್ತು ಆಱು ಸಾ
ವಿರಲಿಂಗಮಂ ಸೊನ್ನಲಾಪುರದೊಳಂದು ಸೌಂ
ದರವೆನಲು ನಿಲಿಸಿ ಬಳಿಕೀ ವರ್ತಮಾನದೊಳು ದೆಶೆಯ ತೀರ್ಥಂಗಳಿಂದಾ
ಚರಲಿಂಗಮಂ ಬರಿಸಿ ಕೂರ್ತು ಮೇಲಣ ಗವಿಯೊ
ಳುರು ಸುಖಸ್ಥಾಪನಂಗೆಯ್ದು ಕೀರ್ತಿಯನಾಂತ
ಗುರುಸಿದ್ಧರಾಮೇಶಕಾರುಣ್ಯ ಶಾಂತನಂಜೇಶದೇಶಿಕವರೇಣ್ಯ ೨

ಇದು ದಕ್ಷಶಾಪಕ್ರಮಂ ಕಣಾ ಕೇಳೆಂಬು
ಮುದದಿಂದೆ ಹಲಗೆಯಾರ್ಯಂನಿರೂಪಿಸಲಾಗಿ
ಪದಪಿಂದ ಕೆಂಚವೀರಾಹ್ವಯಂ ಕೈಮುಗಿದು ದೇವ ದಕ್ಷಾಧ್ವರವನು
ಅಧಟಿಂದ ವೀರೇಶ್ವರಂ ಪೊಕ್ಕು ದುಷ್ಟನಂ
ಸದೆದುದಂ ಪೇಳೆನೆ ನಿರೂಪಿಸಿದನಂದು ಸೌ
ಖ್ಯದೊಳು ಮಾರುತನಮಲ ಮುನಿಗಳಿರ ಲಾಲಿಪುದೆನುತ್ತ ಬರ್ದಿಂ ನುಡಿದನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತೆನಲು ದಕ್ಷಸಂಬಂಧ ತನುವಂ ಬಿಟ್ಟು
ಕಂತುಹರನರ್ಧಾಂಗಿ ಪರಮಸ್ವತಂತ್ರೆ ಹಿಮ
ವಂತನ ಕುಮಾರಿಯಾಗುತ್ತ ಸಂಜನಿಸಿ ಬೆಳೆದುಗ್ರತಪದಿಂದ ತನ್ನ
ಕಾಂತಸರ್ವೇಶನ ವಿವಾಹವಾಗುತ್ತ ಗುಣ
ವಂತೆ ಪಾರ್ವತಿ ಪರಮ ಸುಖದೊಳಾ ಕೈಲಾಸ
ದಂತಃಪುರದೊಳಿರ್ದಳಖಿಳ ಗಣನಿಕರವೋಲೈಸಲಾನಂದದಿಂದ ೪

ಇಂತು ಪಲವುಂ ಕಾಲ ದೇವ ದೇವಿಯರಧಿಕ
ಸಂತಸದೆ ಕೈಲಾಸದೊಳಗಿರಲು ವೈವಸ್ವ
ತಾಂತರದೊಳೆಗೆದ ತತ್ಪ್ರಾಚೇತಸ ಸ್ವಯಂದಕ್ಷನಾ ಪೂರ್ವಶಾಪಾ
ದಿಂ ತಾನೆ ಕೂರ್ತಶ್ವಮೇಧಯಜ್ಞವನು ಹಿಮ
ವಂತಪರ್ವತದ ಹಿಂಭಾಗೆಯೊಳು ಸರ್ವಮುನಿ
ಸಂತತಿಗೆ ಸುಖವೀವ ಗಂಗಾಪ್ರವಾಹದೊತ್ತಿನೊಳು ಪರಿನಿರ್ಮಿಸಿದನು ೫

ಆ ಯಜ್ಞಕಂ ಹರೀಂದ್ರಾದಿ ದೇವರ್ಕಳ ನಿ
ಕಾಯ ಮುನಿಸಂದೋಹವೆಯ್ದೆ ನೆರೆದುದು ಲಸದ
ಪಾಯಭಾಗೆಗಳ ಭೋಗಿಗಳಾಗಿಯುಲ್ಲಿಯಂ ತೂಷ್ಮ ಪಾಯಿಗಳು ಬಳಿಕಾ
ಆಯತದ ಸೋಮಪಾಯಿಗಳಾಜ್ಯಪಾನರ
ತ್ಯಯದ ಸುರಾಪಾನರಶ್ವಿನೀದೇವರ
ಜ್ಞಿಯುತ್ತ ಪಿತೃಮುಖ್ಯರೆಯ್ದೆ ತನತನಗೆ ನೆರೆಯಿತ್ತದೇ ವಂಣಿಸುವೆನು ೬

ಪ್ರಯುತ ಘನಕುಂಡ ಮಂಡಮುರುಗ ಮಹಾವೇದಿ
ಕೆಯಿನೆಯ್ದೆ ತೆಂಕಲಾದನು ನಿಭಂ ಮೂಡಲಾ
ಶ್ರಯದಲ್ಲಿ ವರ್ತುಳಂ ಚೌಕಮಂ ವರ್ತಿಸುತ ಮುಂದೆ ಹಸುವಿಧಾನವ
ಪ್ರಿಯದಿಂ ಸದಸ್ಯ ಸುಧೆಯೂಪನೆಲೆಯಿಂದಲತಿ
ಶಯ ಮಹಾಪ್ರಾಗ್ವಾಸ ಪತ್ನಿಗಿವಾಸ ಶಾ
ಲೆಯ ಗರ್ಭ ಗರ್ಭಿತಂಗಳನೊಡರ್ಚಿದ ನಮರರಳಿವನೊಡರಿಚುವಂದದೆ ೭

ಹೊಸವೊರಂ ಸುರಗಿಗಳು ತತ್ಕಪಾಲ ಮುಲೂಖ
ಮುಸಲ ಸೂರ್ಪದ್ರವಾಜಿನತಪಾನಿಗ್ರಹಂ
ಕುಸೆ ಸೋಮ ವಾರುಣಿ ವಿಷಾಣಂ ಶಂಖಂ ಚಷಕಸಂಯುತಪರಾಸಂಧಿಯಾ
ಆಸವಂತೆಯಂಲಾದಿಯಾ ಯೂಪಗಳನೆಯ್ದೆ ಮೊದ
ವಿುಸಿ ಸಮಿಧೆಯುಜಪಶುಮಹಾರಜ್ಜುತತಿಯುಮೊದ
ವಿಸಿದನಾತ್ಮದ್ರೋಹಿ ದಕ್ಷನೆಂದೊರೆವುತಿರ್ದಂ ವಾಯು ಮುನಿನಿಕರಕೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಸೆಶಸ್ತ್ರಮಂ ಪೂಜಿಸುತರಜ್ಜುವಿಂದೆ ಬಂ
ಧಿಸುತ ಯೂಪಕಜಪಶುವ ಮೊರೆಯದಂದದೊಳು ಮ
ರ್ದಿಸಿ ಗಂಟಲಂ ಮುಱಿದು ನಾಂ ಕೊಲ್ಲೆ ನೇಣ್ಕೊಂದುದೆಂದುಪಚರಿಸಿ ಸೀಳುತ
ಬಸಿದು ನೆತ್ತರ ಕಾಸು ಖಂಡಗಳ ಕೊಯ್ದು ಸೋ
ಧಿಸುತಲಾ ಪೌರೋಡಾಸನಪ್ರಾಸನಗಳ ಮಾ
ಡಿಸು ಪಾರ್ವತಿಗೆಂಬ ಮಾತು ಹೊಲಗೇಱಿಯೊಳಗಣ ಶಬ್ದದಂತೆಸೆದುದು ೯

ಆ ವೇಳೆಯೊಳು ದಧೀಚಪ್ರತಿಮಹಾಧ್ವರ
ಕ್ಕಾವಗಂ ಪತಿಯಪ್ಪ ಶಿವನೆಯ್ದೆ ಬಂದಿರ್ಪ
ಠಾವಾವುದೆಂದು ಕಱು ಕಾಮಧೇನುವನಱಸುವಂತಱಸಿ ನೆಱೆ ಕಾಣೆನು
ಏವೆನಿದು ತಲೆಯಿಲ್ಲದಿಹ ಮುಂಡದಂತಿದೆಯು
ಹೋ ವಿಚಾರಿಸದಾನು ಬಂದೆನೆಂದೆನುತಖಿಳ
ದೇವತೆಗಳೋಲಗದೊಳಿಹ ದಕ್ಷನಂ ನೋಡಿ ಮಿಗೆ ನೊಂದು ಮುನಿ
ನುಡಿದನು ೧೦

ಎಲೆ ದಕ್ಷ ಕೇಳು ಪೂಜ್ಯರನೆಯಿದೆ ಪೂಜಿಸುತೆ
ಸಲೆ ಸದಾಪೂಜ್ಯ ಸರ್ವೇಶನಂ ಭಜಿಸದಡೆ
ಮಲಭಾಂಡರಹರೆಂಬುದಱಿಯಲಾ ಶಿವನ ಲೀಲಾಮಾತ್ರದಿಂ ಜನಿಸಿದಾ
ಜಲಜಾಕ್ಷ ಜಲಜಭವಮುಖ್ಯದೇವರು ಭೂತ
ಕುಲಪಿಶಾಚಾಂತರೀಶನ ಭಜಿಸಿ ಬಾಳ್ವರೀ
ನೆಲೆಯನಱಿಯದೆ ಕೆಟ್ಟೆಯೈ ಪಾಪಿಯೆಂದಾ ದಧೀಚಿ ಘೂರ್ಮಿಸಿ ನುಡಿದನು ೧೧

ಪ್ರಕೃತಿಪುರುಷರ್ಗೆ ಪರತತ್ವವೆಂದೆಯ್ದೆ ಮುನಿ
ನಿಕರ ಯೋಗಿಗಳು ವೇದಂಗಳಾನಂದದಿಂ
ಸುಕರ ತದ್ಬ್ರಹ್ಮಸದ ಸತ್ಪಥಂನಿದನಾದಿ ಮಧ್ಯಾಂತರಹಿತನನಘಾ
ಸಕಲ ತರ್ಕಕ್ಕತೀತನ ಸನಾಶನ ಮಹಾ
ಧಿಕ ಸೃಷ್ಟಿಯಾ ಸ್ಥಿತಿಲಯಂಗಳಿಗೆ ತಾನೆ ಕಾ
ರಕಮಹೇಶ್ವರನೆಂಬ ಬಗೆಯನಱಿಯದೆ ಕೆಟ್ಟೆಯೈ ಪಾಪಿ ಕೇಳೆಂದನು ೧೨

ಹಿಡಿ ಶಾಪಮಂ ದಕ್ಷ ವೀರೇಶ್ವರಂ ಬಂದು
ಹೊಡೆಯಲ್ಕೆ ನಿನ್ನ ತಲೆಯುಂ ನಿನ್ನ ಪಾತಕ
ಕ್ಕೊಡನೆ ನೆರೆದವರರೆಲ್ಲಂ ಭಂಗವಡಲಿ ಬಳಿಕಿಲ್ಲಿರ್ದ ಮುನಿಗಳೆಲ್ಲಾ
ಮೃಡನ ಮಱೆದನ್ಯಸಮಯಿಗಳಾಗಲ್ಕೆ ಮುಂದೆ
ಬಡಿಸಿಕೊಳ್ಳಲಿ ಜನ್ಮದೊಳಗಿರ್ದವಂದಿರಂ
ದೊಡೆಯನಡಿಯಲ್ಲಿ ನಿಷ್ಠಂ ದಧಿಚಂ ಪೋದನಾಗ ತನ್ನಾಶ್ರಮಕ್ಕೆ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರ ದಧೀಚವ್ರತಿಪನೇಳ್ಗೆಗಾಣುತ್ತಱಿದು
ಹರವಿರಹಿತಾಧ್ವರವೆನಿಪ್ಪುದಱಿಯದೆ ಬಂದೆ
ವಿರಬಾರದೀ ಶಾಪಮಂ ಹೊರುವರಾವಲ್ಲವೆಂದೆನುತಗಸ್ತ್ಯಮುನಿಪಾ
ಉರುತರ ವಶಿಷ್ಠನಾ ಭೃಗು ಗೌತುಮರ್ಗಳಾ
ಪರಿವಿಡಿಯ ನೇವಲ್ಕನುಪಮನ್ಯುಗಳು ತಾನು
ವೆರಸಿ ಪಳಾಗಲೇಳಲ್ಕೆಂಟು ಸಾವಿರಗಳೊರೋರ್ವರೊಳು ಪೋದರು ೧೪

ಆ ವಿಮಳ ಮುನಿಗಳೇಳರೊಳು ಮೈವೆತ್ತಾಱು
ಸಾವಿರಂ ಪೋದರ್ವಿಶಾಪರೆಂಭತ್ತೆಂಟು
ಸಾವಿರದೊಳಾ ದಧೀಚಿಯ ಬಗೆಯವರ್ಗಳವರುಳಿದ ಮೂವತ್ತಯೆರಡು
ಸಾವಿರವ ನೋಡಿ ನುಡಿದಂ ನಾರದಂ ಮುನ್ನ
ಲೇ ವಿಚಾರಿಸಿ ಬಹುದು ಬಂದಬಳಿಕೇಳಬಹು
ದೇ ವಸುಧೆಯೊಳಗೆನಲು ನಿಂದರನಿಬರು ಶಾಪಕೊಳಗಾಗಿಯಧ್ವರದೊಳು ೧೫

ಅನಿತಕ್ಕೆ ಸರ್ವಜ್ಞನುಂ ಭವಾನಿಗಳು ಘ
ಮ್ಮನೆ ದುಷ್ಟನಜ್ಞಾನದಿಂ ಯಜ್ಞಮಂ ಮಾಡು
ವನುವಱಿಯಾಲಾ ವೇಳೆ ದೇವಿ ಬಿನ್ನವಿಸಿದಳು ದೇವ ಪಾತಕನ ಜನ್ನಾ
ದನಿಬರಿಗೆ ಶಿಕ್ಷೆಯುಂ ಮಾಡಲಿಲ್ಲಾಯೆನ
ಲ್ಕನಲಿ ದಕ್ಷನಮೇಲೆ ಕೋಪಮಂ ತಾಳ್ದನದ
ಱನುವ ಬಣ್ಣಿಪನಾವನುಗ್ರನಂ ಸಕಲ ಸಂಸಾರ ಲೀಲಾಲೋಲನ ೧೬

ಝಳು ಝುಳಿಲು ಘುಡುಘುಡಿಲು ಥಿಳಿಥಿಟಿಲು ಧಗಧಗಿಲು
ಧಳಧಳಂ ಭುಭ್ಭುರ್ಗಿಭ್ಭುರ್ಗಿಲು ಥಿಣಿಥಿಟಿಲೆಂಬ
ಬಳವೆತ್ತ ಪಿರಿದಾರ್ಭಟಂವೊಳಗಲೆಲಲೆಲಲೆ ಜಯ ಭಲರೆ ಭಲರೆಯೆಂದು
ಕಳಕಳಿಸಿ ಗಣನಿಕರವೆಯಿದೆ ಕೀರ್ತಿಸಲೇಳು
ಜಲಧಿಯುಕ್ಕಲು ಭೂಮಿ ನಡುಗೆ ಕುಲಪರ್ವತಂ
ಗಳು ಕೆಡೆಯೆ ದಿಗ್ಗಜಂ ಘೀಳಿಡುತ್ತಿರೆ ಮೆಱೆದುದಾ ಹರನ ಕೋಪಾನಳಂ ೧೭

ಘುಡುಘುಡಿಪ ಹರನ ಹಣೆಗಣ್ಣು ಭುಗಿಲಿಡುತಲ್ಲಿ
ಕಿಡಿಗೆದಱೆ ಸಕಲಲೋಕಂ ಬೆದರಿಯುುದಯಿಸಿದ
ನೊಡನೆಯಾ ಮಧ್ಯದೊಳ್ದ್ವಾದಶಂ ಸಾಕ್ಷಾತವೀರಭದ್ರನುಮೆನಿಪ್ಪಾ
ನುಡಿಯರ್ಥರೂಪವೀಶನ ರೂಪಮುಂ ಭದ್ರೆ
ನೊಡಗೂಡಿದಾತನುತ್ತಮ ಜಗತ್ಪ್ರಖ್ಯಾತ
ನಡರಿದಸದಾತನಮಳಿನ ಸತ್ಪುರಾತನಗಣಸ್ತೋತ್ರನಧಿಕಪೂತಾ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರರೆಯುದಯಿಸಿದ ವೀರೇಶ್ವರನ ರೂಪವಾ
ಚರಣಂಗಳಾ ಸಾವಿರಂ ಲೋಚನಂಗಳಂ
ತುರುತರಸಹಸ್ರವಾವದನವೇ ದಶಶತಂ ನೂಱುಸಾವಿರ ತೋಳ್ಗಳು
ಧರಿಸಿರ್ದ ಮುದ್ಗರಂ ಶೂಲ ಟಂಕಂ ಗದಾ
ವರದೀಪ್ತಕಾರ್ಮುಕಂ ಚಕ್ರ ವಜ್ರಂ ಘೋರ
ತರನವುಮು ರಾಜಿಸುತ್ತಿರ್ದನಾ ಚಂದ್ರಾರ್ಧಭೂಷಣಕಿರೀಟದಿಂದ ೧೯

ಕೆಂಜಡೆಗಳಿಂದಲಳವಟ್ಟಿಹ ಕಿರೀಟವಾ
ಜುಂಜುನಡುನೆತ್ತಿಯೊಳು ಮಸ್ತಕದೊಳೊಪ್ಪುತಿಹ
ಮಂಜುಳದ ಶಿವಲಿಂಗದೇವರಿಂದಧಿಕ ಭಸಿತತ್ರಿಪುಂಡ್ರದ ಭಾಳದಿಂ
ರಂಜಿಸುತ್ತಿಪ್ಪ ಕಡೆಗಂಗಳ ಸಮೂಹದಿಂ
ನಂಜುಗೊರಲಿಂದ ಘೂರ್ಮಿಸುತಿಹ ಮಹಾರವ
ಕ್ಕಂಜಲೆಲ್ಲಾ ಲೋಕವರರೆ ವೀರೇಶನೊಪ್ಪಿದನಭವ ನಿದಿರೊಳಾಗಾ ೨೦

ಥಳಥಳಿಪ ಮಿಂಚಿನಂದದ ಸತ್ಪ್ರಭಾಕೇಶ
ಕುಳವಿಂದು ರವಿಗಳೆರಡಂ ಸವಿವ ಮಾಳ್ಕೆಯಿಂ
ದಳವಟ್ಟ ತೋರದಾಡೆಗಳಿಂ ಮಹತ್ತಾದ ಕುಕ್ಷಿಯಿಂ ವಿದ್ಯುತ್ಪ್ರಭಾ
ವಿಳಸಿತ ಸುಜಿಹ್ವೆಯಿಂ ಸ್ಫುರಿಸುವಧರೋಷ್ಠದಿಂ
ಜಳಧಿಯಾರ್ಭಟದಂತೆ ಮೇಘನಿರ್ಘೋಷದ
ಗ್ಗಳದಂತೆ ನುಡಿವ ನುಡಿಯಿಂ ವೀರಭದ್ರದೇವಂ ರಾಜಿಸುತಿರ್ದನು ೨೧

ಗಂಡಸ್ಥಲಂಗಳೆರಡಱಿಕೊಲೆದು ಥಳಥಳಿಪ
ಮಂಡಲೀಕೃತ ಕುಂಡಲಗಳಿಂ ರಕ್ತಾರ್ದ್ರ
ಪುಂಡರೀಕಾಜಿನದ ಚೆಲ್ವುಡಿಗೆಯಿಂ ಸುರಾಸುರರ ತಲೆಮಾಲೆಗಳೆದಾ
ಮಂಡೆಯಿಂ ಕಟಕ ಕೆಯ್ಯೂರಭೂಷಿತ ಬಾಹು
ಮಂಡನದ ವಜ್ರದರಣಂ ನೂಪುರಂಗಳಿಂ
ಗಂಡರಿಗೆ ಗಂಡನೆನಿಸುವ ವೀರಭದ್ರನಾಹಾಹ ರಾಜಿಸುತಿರ್ದನು ೨೨

ಚಾರುಕಿರಣಗಳ ದೆಶೆದೆಶೆಗೆ ಪಸರಿಪ ರತ್ನ
ಹಾರಂಗಳವ:ಳಸೌಖ್ಯದೊಳು ರಾಜಿಸುತಿರ್ಪ
ಪೇರುರದ ಚೆಲ್ವಿಂ ಮಹಾಸಿಂಹ ಶರಭ ಶಾರ್ದೂಲಧಿಂಕೃತವಿಕ್ರಮಾ
ವೀರದಿಂ ಮತ್ತಮಾತಂಗ ಗಮನಾಲಸದಿ
ನೋರಂತೆ ಶಂಖಚಾಮರ ಕುಂದಚಂದ್ರ ಸು
ಕ್ಷೀರಸಮ್ಮೃಣಾಳಸುಪ್ರಭೆಯಿಂದಲಾ ಮಹಾವೀರೇಶನೊಪ್ಪಿರ್ದನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆಗಲಿತ ಹಿಮವನ್ಮಹೀಧ್ರವೆನೆ ಶುಭ್ರತ್ವ
ದೊಡಲಿಂ ಮಹಾಜ್ವಾಲೆಗಳ ಮಾಲೆ ಬಳಿಸಿದು
ಗ್ಗಡವೆನಿಪ ತೇಜದಿಂದಂ ದೀಪ್ತ ಮೌಕ್ತಿಕಾಭರಣಂಗಳಿಂ ಕಾಲದಾ
ಕಡೆಯ ಸಿಡಿಲಂತಪ್ಪ ಧನಿಯಿಂದ ಮೆಱೆದು ಜಗ
ದೊಡೆಯಂಗೆ ವೊಳಕಾಲ್ಗಳೂಱಿ ವೀರತೆಯಿಂದ
ಪೊಡವಂಟು ಕೆಲದಲ್ಲಿ ಕೈಮುಗಿದು ರಾಜಿಸುತ್ತಿರ್ದನಾ ವೀರೇಶನು ೨೪

ಭಾಳಾಕ್ಷನುಗ್ರದಿಂ ವೀರೇಶನಂ ಪಡೆಯಲ
ಲಾಲೋಕಿಸುತ್ತ ಪಾರ್ವತಿದೇವಿಯುರು ಭದ್ರ
ಕಾಳಿಯಂ ನಿಜ ಕೋಪದಿಂ ಪೆತ್ತು ತದ್ವೀರಭದ್ರಂಗೆ ವಧುವಾಗಲು
ಮೇಳವಿಸುತೀಯೆ ದಂಪತಿಗಳು ವಿರಾಜಿಸಲು
ಕಾಳಕಂಧರನೀಕ್ಷಿಸುತ್ತಾಗ ಹರುಷವಂ
ತಾಳಿ ಕೊಂಡಾಡಿದಂ ನಿಮಗೆ ಭದ್ರತೆಯಾಗಲೆಂದಿರ್ವರಂ ಪರಸಿದಂ ೨೫

ಒಡನೆ ವೀರೇಶ್ವರಂ ಬಿನ್ನವಿಸಿದಂ ದೇವ
ಪೊಡವಿಯಂ ಬಗಿವೆನೇ ಜಲಧಿಗಳನೆಲ್ಲವಂ
ಕುಡಿವನೋ ಮೇರುಪರ್ವತವ ಕೀಳ್ತಿಡುವೆನೋ ಚಂದ್ರಸೂರ್ಯರ ಧರಣಿಗೆ
ಕೆಡಪುವೆನೊ ತಾರೆಗಳ ಗುಡಿಸುವೆನೊ ಕಿಳ್ತುನಭ
ಕಿಡುವೆನೋ ದಿಗ್ಗಜಂಗಳನಜಾಂಡಂಗಳಂ
ಬಿಡೆ ಕಂತುಕಕ್ರೀಡೆಯಾಡುವೆನೊ ಬೇಗ ಬೆಸಸೆಂದು ಹರನಂ ಕೇಳಿದಂ ೨೬

ಹರಗಿರಿಜೆಯುರುಭದ್ರಕಾಳಿಸಹಿತೆಸೆವ ಸೌಂ
ದರ ವೀರಭದ್ರನಂ ನೋಡಿ ಸಂತೋಷದಿಂ
ನಿರವಿಸಿದರೆಲೆ ಮಗನೆ ದುಷ್ಟನಂತಾಪ್ರಚೇತಸದಕ್ಷನಜ್ಞತೆಯೊಳು
ಹರಿಮುಖ್ಯರಂ ಕೂಡಿಕೊಂಡು ಪಾತಕರೆಮ್ಮ
ವಿರಹಿತದ ಯಜ್ಞಮಂ ಮಾಡುತಿರ್ದಪನು ಸಂ
ಹರಿಸು ಹೋಗೆಂದು ಸಂತೋಷದಿಂ ನುಡಿದರಾತನ ಕರ್ಣ್ಣಕಿನಿದಪ್ಪಿನಂ ೨೭

ತನಯ ಹಿಮವತ್ಪರ್ವತದ ಪೃಷ್ಠಭಾಗೆಯೊ
ಳ್ಗಿಸಿತು ಗಂಗಾದ್ವಾರದೆಡೆಯಲ್ಲಿ ರಾಜಿಸುವ
ಕನಕಲೆಯೆನಿಪ್ಪ ಮೇರುಮಂದರಸಾಮ್ಯವದಱ ಹೇಮದಶಿಖರದಾ
ಘನಸುಪ್ರದೇಶದೊಳು ಯಜ್ಞಮಂ ಮಾಡುತ್ತೈ
ದನೆ ದಕ್ಷನಲ್ಲಿ ನೀಂ ಮಾಳ್ಪ ವೀರವ ನೋಡ
ಲನಘ ಗಿರಿಸುತೆಸಹಿತ ತತ್ಸಮೀಪದೊಳಿಪ್ಪರೈಖ್ಯಾಶ್ರಯದೊಳಿರ್ಪೆವು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿರ್ದು ನಾವು ನೋಡುತ್ತಿಪ್ಪೆವೈ ನೀನು
ಖುಲ್ಲದಕ್ಷನ ಯಜ್ಞಮಂ ಹೊಕ್ಕು ಕುಜನರಂ
ಚಲ್ಲಬಡಿದಾರ್ಭಟಿಸು ಹೋಗೆಂದು ನೀನೆನುತ್ತಾತನಂ ತರ್ಕೈಸುತಾ
ಭುಲ್ಲವಿಸಿ ಕಳುಪುತಿರಲಾ ವೀರಭದ್ರನಂ
ಸಲ್ಲಲಿತ ಭದ್ರಕಾಳಿಯನೀಕ್ಷಿಸುತ್ತಂ ಮ
ಹೋಲ್ಲಾಸದಿಂ ಮುದ್ದುಗೆಯ್ದು ಪಾರ್ವತಿ ಮೋಹದಿಂದ ನುಡಿವುತ್ತಿರ್ದಳು ೨೯

ಮಗನೆ ವೀರೇಶ್ವರ ಮಹಾಬಲಪರಾಕ್ರಮಾ
ಒಗೆದೆಯ್ಯೆ ಮತ್ಪ್ರಿಯಾರ್ಥಂ ನನ್ನ ಕೋಪದಿಂ
ಮಿಗೆ ನೀನೆ ಪರಿಹರಿಸವೇಳ್ಕೆನ್ನ ಮತ್ಪ್ರಾಣವಲ್ಲಭನ ಸರ್ವೇಶನಾ
ಬಗೆಯದಧ್ವರವನೊಡರಿಚಿದ ದಕ್ಷನಂ ಕೊಂದು
ನಗೆಗೆಡೆಯ ಮಾಡುವನ ಪಕ್ಷದಿಂದಿಲ್ಲಿರ್ದ
ನಗದರಾದ್ಯಮರರಂ ಭಂಗವಂ ಕೊಳ್ಳೆಂದು ನುಡಿದಳಂತಾ ಭವಾನಿ ೩೦

ವರ ವೀರಭದ್ರನಾನುಡಿಗೇಳಿ ಪಾರ್ವತೀ
ಪರಮೇಶರಡಿಗೆ ಸಾಷ್ಟಾಂಗದಿಂ ವಂದಿಸುತ
ಕರವ ಮುಗಿದಾಗ ಬೀಳ್ಕೊಂಡುಶಿವದೂಷಕನ ನೆನೆದು ಹೃದಯದೊಳುಕೋಪಾ
ಸ್ಫುರಿಸಿ ಘೂರ್ಮಿಸಲು ವೀರೇಶ್ವರನ ರೋಮಗಳೊ
ಳರರೆ ಪಟುಭಟಗಣೇಶರು ಕೋಟಿಯೊಗೆದ
ರತ್ಯುರುತರದ ತದ್ರೋಮಜರ ಪರಾಕ್ರಮಗಳಂ ಬಣ್ಣಿಸುವರಾರಿಳೆಯೊಳು ೩೧

ರುದ್ರಾನುಭಾವರಾ ರೌದ್ರಾಧಿಕರು ಮಹಾ
ರುದ್ರಶೌರ್ಯಕ್ಕೆ ಸಮವಹ ಪರಾಕ್ರಮಿಗಳಾ
ರುದ್ರವನಿತೆಯರೊಳಾ ರೋಮಜಗಣಂಗಳಗ್ಗಳ ಶೌರ್ಯದಿಂದ ವೀರ
ಭದ್ರದೇವರ ಬಳಸಿ ಸೇವಿಸುತ್ತಿರ್ದರು
ದ್ಯದ್ರತಿಯೊಳವರದ್ಭುತಾಕಾರದಿಂದಿರ್ದ
ರದ್ರಿಜೆ ನಿರೀಕ್ಷಿಸಿ ಮಹಾಹರುಷಮಂ ತಳೆವುತಿರೆ ತೆರಳಲನುವಾದನು ೩೨

ಮಿಗೆ ವೀರಭದ್ರದೇವರ ಶಿರಸ್ಸಿಂ ಚೆಲ್ವ
ಮೊಗದಿಂದ ಕಂಠದಿಂ ಭೂಜದಿಂದ ನಾಡೆ ಹ
ಸ್ತಂಗಳಿಂದಲುರದಿಂದ ಕುಕ್ಷಿಯಿಂದಂ ನಾಭಿಯಿಂದ ಬೆನ್ನಿಂದ ಬಳಿಕಾ
ಅಗಲದಾ ಬರಿಗಳಿಂ ಪೊರವಾರ್ಗಳಿಂದಲೂ
ರುಗಳಿಂದ ಪಾದದಿಂ ಶಸ್ತ್ರಸತಿಯರು ಸಹಿತ
ಮೊಗೆದ ರೋಮಜರು ಸುತ್ತಂ ಬಳಸಲಲ್ಲಿ ವೀರಂ ತೆರಳಲನುವಾದನು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡುಘುಡಿಸಿ ದಕ್ಷಯಜ್ಞಕ್ಕಾಗಿ ದಂಡೆತ್ತಿ
ನಡೆದನಾ ವೀರೇಶ್ವರಂ ವಿಭವದಿಂದೆ ತ
ನ್ನೊಡನೆ ಬಹ ನಿಜ ಪರಾಕ್ರಮಕ್ಕೆಣೆಯೆನಿಪ್ಪ ಗಣನಿಕರವಂತಾಕಾಶವಮಂ
ಪೊಡವಿಯುಂ ಸಕಲ ದಿಕ್ಕಂ ಮುಸುಗಲೋಲೈಸಿ
ಸಡಗರದೊಳೆಯ್ತಂತರವದಿರೇಂ ಚಾವಳರೆ
ಮೃಡನ ಮಚ್ಚಿನಭಟರು ಮುಳಿದಡೆಯಜಾಂಡಮಂ ಚೆಂಡಾಡುವಗ್ಗಳೆಯರು ೩೪

ಆ ವಿಶೇಷದ ತೋಳು ಸಾವಿರವವಕ್ಕೆ ಶ
ಸ್ತ್ರಾವಳಿಯನಂತವಾ ರುದ್ರಾನುಚರರು ಶೋ
ಭಾವಹರು ರುದ್ರಂಗೆ ಸನುವೆನಿಸಿದವರು ರುದ್ರಧ್ಯಾನ ಸಂಪನ್ನರು
ಶ್ರೀ ವಿಭವದಿಂ ಶೂಲ ಶಕ್ತಿ ಟಂಕಾದಿ ಕಗ
ದಾವಳಿಯನಾಂತು ಬಳಿಕಿಡಿಗುಂಡುಗಳ್ಗೆ ಮು
ತ್ತಾ ವೀರರದ್ರಿಗಳ ಪಿಡಿದು ಘುಡುಘುಡಿಸಿ ನಡೆದರು ಶಿವಕುಮಾರನೊಡನೆ ೩೫

ಕಾಲಾಗ್ನಿರುದ್ರಸಂಕಾಶರತ್ಯುನ್ನತ
ತ್ರೈಲೋಚನರು ಜಟಾಧರರು ಗಗನವ ಕೆಡಪು
ತಾಲುವಗ್ಗಳರು ಸಿಂಹಂಗಳೇಱಿದ ಗಣರು ಕೋಟಾನುಕೋಟಿ ಸಿಡಿಲಾ
ಹೋಲುವಾರ್ಭಟೆಯ ಧನಿಯುವರು ನಿಜಮಕುಟಗಳು
ಮೇಲಣ ಮಹಾಲೋಕಮಂ ಕೆಡಹುವಂತಹ ವಿ
ಶಾಲವಿಕ್ರಮರು ವೀರೇಶನ ಪದಾಂಬುಜವನೋಲೈಸೆ ನಡೆತಂದರು ೩೬

ಆ ಗಣಂಗಳ ಮಧ್ಯದಲ್ಲಿ ವೃಷಭೇಶ್ವರನ
ಮೇಗಡಱಿ ವೀರಭದ್ರೇಶ್ವರಂ ನಡೆತಂದ
ನೈ ಗರುವ ಕೇಳು ವೃಷಭಧ್ವಜಂ ಮುಂದೆ ಸೌರಂಭದಿಂದೊಪ್ಪುತಿರಲು
ಚಾಗಿಯೆನಿಸುವ ನಂದಿಕೇಶ್ವರಂ ಮುಕ್ತಾಫ
ಲಾಗಣಿತವಹ ಶಿತಛತ್ರಚಾಮರವಿಡಿದ
ಹೋ ಗದ್ದುಗೆಯ ಪಿಂದೆಯಾ ವೃಷೇಶನ ಬೆನ್ನಡರಿವೋಲೈಸಿ ನಡೆದಂ ೩೭

ಆಯುವಸರಂ ಭಾನುಕಂಪನೊಲವಿಂ ಮಣಿನಿ
ಕಾಯಕೀರಣಶುಭ್ರಶಂಖಮಂ ಮುಂದೆ ಭುಂ
ಭೂ ಯೆಂದು ಪೂರೈಸೆ ಝೇಂಕರಿಪ ತುಂಬಿಪಿಂಡಿಂ ಪರಾಗದ ಸೊಗಸಿನಾ
ಒಯ್ಯಾರವಹ ಪುಷ್ಪವೃಷ್ಟಿಯುಂ ಕಱೆಯುಲ್ಕು
ಘೇಯೆಂಬ ರವದೊಳಾ ಮೇಘಂಗಳನುಕೂಲ
ವಾಯು ವೊಲವಿಂ ತೀಡೆ ದೇವದುಂದುಭಿಗಳುಲಿಯಲು ನಡೆದನಾ ಭದ್ರನು ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ಏತಸ್ಮಿನ್ನೇವ ಕಾಲೇತು ಜ್ಞಾತ್ವಾತತ್ಸರ್ವಮೀಶ್ವರಂ
ದಗ್ಧುಂ ದಕ್ಷಾಧ್ವರಂ ಕ್ಷಿಪ್ರಾ ದೇವಿ ದೇವ ಮ ಬೋಧಯಾತ್ ೧

ಅನಿತಕ್ಕೆ ವೀರಭದ್ರನ ಮುಂದೆ ಗಣಕುಲಂ
ನನ್ನೃತು ಮುಮುದರ್ನೆರದು ಜಹ ಸು ಜಗ ದುರ್ಜಗು
ರ್ವಿನತರಾಗುತ್ತವರು ಕುಣಿದರತಿ ಸಂತೋಷಮಂ ತಾಳ್ದರಾನಂದಿಸಿ
ಧನಿಮಾಡಿದರು ಕೂಡೆ ಗಹಗಹಿಸಿ ಸಕ್ಕರಂ
ತನಿಬರೊಬ್ಬರಿಗೊಬ್ಬರೆಯಿಡೆ ನುಡಿದರು ಹಾಡಿ
ಯನಘರೆಯಿತರುತಿರ್ದರೆನಲಾ ಮಹೋತ್ಸವವನಾರು ಬಣ್ಣಿಪರಿಳೆಯೊಳು ೩೯

ಈ ಮಾಳ್ಕೆಯಿಂದ ಗಣನಿಕರಮಧ್ಯದೊಳೊಲ್ದು
ಮಾಮಹೇಶ್ವರರು ಬಪ್ಪಂದದಿಂದಂ ದಿವ್ಯ
ಸಾಮರ್ಥ್ಯವೀರೇಶ್ವರಂ ಭದ್ರಕಾಳಿಯೊಳು ನಡೆತಂದು ದಕ್ಷಯಜ್ಞಾ
ಭೂಮಿಯುಂ ಪೊಗುತಿಪ್ಪ ವೇಳೆಯೊಳು ಪಾತಕ
ಸ್ತೋಮದೊಬ್ಬುಳಿಯಿಂದ ಯಾಗವೆಸೆದುದು ಹೆಣನ
ವೈಮಾನಸಂಬಂಧ ವಿಭವ ಮಾಪ್ತರ ದುಃಖಮಂ ಪರಪುವೇಳ್ಗೆಯಂತೆ ೪೦

ಮಿಸುನಿಗೆಲಸದ ಹಿರಿಯ ಬಾಗಿಲಿಂದಂ ಸುತ್ತ
ರಸರತ್ನ ಕಿರಣದ ಕೋಂಟೆಯಿಂದಂತಲ್ಲಿ
ಬಿಸಜಲೋಚನಮುಖ್ಯ ದೇವರ್ಕಳೇಳ್ಗೆಯಿಂ ಚಿತ್ರತರಭವನಂಗಳಿಂ
ಮಿಸುಪ ದರ್ಭಾರಜ್ಜು ಸಂಕೀರ್ಣನಿಕರಗಿಂ
ಸುಸಮಿದ್ಧ ಹುತವಹನಿನಮಲ ಕಾಂಚನ ಭಾಂಡ
ವಿಸರದಿಂದಾಗ ಮೆಱೆದುದು ಯಜ್ಞಶಾಲೆಯುಬಲೆಯರೊಲೆಬೀಳ್ವಮಾಲೆ ೪೧

ಅರರೆ ರುತ್ವಿಕ್ಕುಗಳಿನಾ ಯಜ್ಞಪಟುಗಳಿಂ
ವರ ಕರ್ನ್ನಕರ್ತೃಗಳಿನಧಿಕ ವೇದಾಢ್ಯರಿಂ
ದುರುತರದ ವಿಧಿಯಿಂದ ಮಾಡಿದ ಹುತಕ್ರಮದಿನಖಿಳದೇವಾಂಗನೆಯರಿಂ
ನೆರೆದಪ್ಸರಸ್ತ್ರೀಯರಿಂ ವೇಣು ವೀಣಾದಿ
ಸರಸವಿದ್ಯಾಸಮರ್ಥರಿನೆಸೆದುದಾಗಲ
ಧ್ವರವಲ್ಲಿಗಾಗಿ ನಡೆತಂದನಾ ವೀರಭದ್ರಂ ಧೈರ್ಯರಸಸಮುದ್ರಂ ೪೨

ಕಡೆಯ ಕಾಲದ ಮೇಘರವದಂತೆ ಘೂರ್ಮಿಸುತ
ನಡೆದು ಪೆರ್ಬಾಗಿಲ್ಗಳೊಳಪೊಗುತ್ತಾಲಿಯು
ಗ್ಗಡವಪ್ಪ ಸಿಂಹನಾದಂಗೊಟ್ಟು ಕಿಲಿಕಿಲಾರಾವವಂತಂ ಬರವನು
ಅಡರುತಿರೆ ಬೊಬ್ಬಿಟ್ಟು ವೀರಭದ್ರನ ಧನಿಗೆ
ಜಡ ದಕ್ಷಮೊದಲಾದವರು ಕೂಡೆ ಕಂಗೆಟ್ಟು
ಸಿಡಿಲ ಧನಿಯುಂ ಕೇಳ್ದ ಹಂಸಂಗಳಂತಾದರಿನ್ನೇನ ವರ್ಣಿಸುವೆನು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಟ್ಟನತಿಭೀತಿಯಿಂದಖಿಳ ದೇವಾಧೀಶ
ರುಟ್ಟುದಂ ಮಱೆದೀ ಮಹಾರ್ಭಟೆಯಿದೆತ್ತಣಿಂ
ಪುಟ್ಟಿತೆಂದುಮ್ಮಳಿಸಿ ಮೇರುವಿಭ್ಭಾಗವಾದುದೋ ಭೂಮಿ ಮೊಳಗಿ ನಡುವೆ
ಬಿಟ್ಟೆರಡು ಸೀಳಾದುದೋ ಎಂದು ನಡುಗುತಿರ
ಲಟ್ಟಹಾಸದ ವೀರಭದ್ರನೊಳಪೊಗಲು ಕಂ
ಗೆಟ್ಟಮರಮುಖ್ಯರೆಲ್ಲರು ನಡುಗೆ ಜಱೆದನಾ ಧಿಟ್ಟನಹ ವೀರೇಶ್ವರಂ ೪೪

ಏನೇನೆನುತ್ತ ತನ ತನಗೆ ಕೇಳುತ್ತಿರ್ದ
ದಾನೆವಿಂಡಂ ಕಂಡು ಸಿಂಹವೊಳಪೊಗುವಂತೆ
ನಾನಾ ಗಣಂಗಳೊಳು ಬೊಬ್ಬಿಟ್ಟು ಕೈಮಾಡತೊಡಗಿದಂ ವೀರಭದ್ರಂ
ಆನಲಮ್ಮುವರುಂಟೆ ಶಿವಸುತಂಗೆಣೆಯಾವ
ನೀ ನಗರಿ ಪಟ್ಟಣಂಗಳೊಳಂದು ಸರ್ವಜನ
ವಾನಂದವಱುತುದಕ್ಷನ ಯಜ್ಞದಲ್ಲಿ ಕಂಗೆಡುತಿರ್ದರೇ ವೊಗಳುವೆ ೪೫

ಶ್ರೀ ವೀರಭದ್ರನ ಮಹಾಧ್ವಾನಕಂ ತುಚ್ಛ
ದೇವತೆಗಳಲ್ಲಿ ಕೆಲ ಕೆಲರು ಹಮ್ಮೈಸುತ್ತ
ಜೀವಂಗಳಂ ಬಿಟ್ಟರಖಿಳ ಪರ್ವತಗಳಿಬ್ಬಗಿಯಾಗಲಾ ರವಕ್ಕೆ
ಭೂವಳಯಮೆಯ್ದೆ ಕಂಪಿಸಿತು ಮಾರುತನಳ್ಕ
ಲಾ ವಾರ್ಧಿಗಳ್ಕದಡಿದವು ತೇಜವಳಿದವಂ
ದಾ ವೀತಿಹೋತ್ರ ಸೂರ್ಯೇಂದು ಗ್ರಹಾಳಿ ನಕ್ಷತ್ರಂಗಳೇ ವಣ್ಣಿಪೆಂ ೪೬

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲ್ಯಣಾರ್ಯ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಂ ಕೊರ್ತು ಪದನಂ ಮಾಡಿದಂ ೪೭

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಸತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವೀರಭದ್ರ ಯಜ್ಞಂಬೊಕ್ಕುದೆರಡು ಕಾಂಡದಮೇಲೆ ಮೂರು ಸಂಧಿ ೪೮

ಅಂತು ಸಂಧಿ ಮೂರಕ್ಕಂ ಪದನು ೧೧೭ ಗ್ರಂಥ ೨ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೬

ಘುಡುಘುಡಿಸಿ ದುಷ್ಟಯಜ್ಞಂಬೊಕ್ಕು ನಿರ್ಜರರ
ಬಡಿದು ವೀರೇಶನಂತಾದಕ್ಷಮಸ್ತಕಂ
ಗಡಿದು ಕುಱಿದಲೆಯಿತ್ತುಮಾಮಹೇಶ್ವರರ ಕೃಪೆಯಿಂ ಪಡೆದ ನಾನಂದದೆ

ಎಲೆ ಶಿವನೆ ನಿನ್ನ ತಲೆಯಡರಿದಳ ಮನೆಗೆ ಶಶಿ
ಕಲೆಯು ಸಿಂಗರಿಸಿದಾಯೆನಲೊಂದದೈಸೆ ಮಂ
ಗಲೆ ನಿನ್ನ ಪಾದದಂಗುಲಿ ಪಂಚಕಾಂಕಿತೇಂದುಗಳ ಲೇಖಾಪಂಚಕಾ
ಸ್ಥಲ ಹಸ್ತ ಶಾಖಾ ಕುಚಾಂಕ ಘುಸೃಣದ್ವಯಾ
ಮಲಿನತೆಯ ವರ್ಣವಿಂ ನೋಡೆಂದೆನುತ ಕುಳಿ
ರ್ಮಲೆಯುರಸನಣುಗಿಯೊಳು ನುಡಿವುತಿಹ ಶಾಂತಮಲ್ಲೇಶ
ಜಯಚಿತ್ಪ್ರಕಾಶಾ ೧

ತನ್ನ ಸಮಯಾಚಾರಕಾದಯ್ಯನಂ ಕರೆವು
ತಂ ತಾನು ಶಿವನೆಂದೊಡಿದು ಶಾಂತಿಕೈತವಮಿ
ದೆನ್ನ ಮೆಲಣಗಮಿಯ ಸಿಂಹಾಸನಾಧಿಪತಿಯಾಗಿ ಸಂಹಾರಿಸುತ್ತ
ಅನ್ನಯದ ದುಷ್ಟರಂ ಜಂಗಮದ ಸುಪ್ರಸಾದಂ
ದಂ ನಿಜದ ಲಿಂಗಾರ್ಪಣಮದಾಗೆ ನಡೆದ ಸಂ
ಪನ್ನಚರ ಶಾಂತನಂಜೇಶವರಗುರುವೆ ಚಿತ್ಪರವೆ ನತಕಲ್ಪತರುವೆ ೨

ಇಂತೊಳಪೊಗುತ್ತ ವೀರೇಶ್ವರಂ ನವ್ಯನಿಜ
ಕಾಂತೆಯರು ಭದ್ರಕಾಳಿಯೊಳು ಬೊಬ್ಬಿಡುತಲ
ತ್ಯಂತರವದಿಂ ವಿಷ್ಣುಮುಖ್ಯ ದೇವರ್ಕಳಂ ನೋಡಿಯಾರ್ಬಡಿಸಿ ನುಡಿದಂ
ಭ್ರಾಂತುಗಳಿರಾ ನಿಜಸ್ವಾಮಿಯಪ್ಪೆಮ್ಮ ನೀ
ವಿಂತು ಬಗೆಯದೆ ಮಲತಿರ್ರೈ ನಿಮಿಷದಲ್ಲಿ ನಿ
ಮ್ಮಂ ತಲೆಗಳಂ ತರಿದು ಚೆಂಡಾಡದಿಹೆನೆ ಎಂದಂ ಖಡ್ಗಮಂ ಜಡಿವುತ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡುಘುಡಿಸಿ ವೀರಭದ್ರಂ ಯಜ್ಞಶಾಲೆಯಂ
ಕಿಡಿಗಣ್ಣ ತೆಗೆದು ಮುನ್ನಾ ತ್ರಿಪುರವಮಂ ಹರಂ
ಸುಡುವಂತೆ ಸುಟ್ಟು ಬೊಬ್ಬಿರಿದಲ್ಲಿ ಪರ್ವತೋದಗ್ರವಿಗ್ರಹ ಗಣಪರು
ಪಿಡಿದು ಯೂಪಸ್ತಂಭವಮಂ ಕಿತ್ತು ಮುರಿದಾಲು
ತಿಡುತಲಾ ಹೋತ್ರುವೆನಿಸಿಪ್ಪ ಪಾರ್ವರನೆಯ್ದೆ
ಹೆಡಗಯ್ಗಳಂ ಕಟ್ಟಿ ಸಾಯುದಂತೊದೆದೊದೆದು ಬಡಿದು ಭಂಗಿಸುತಿರ್ದರು ೪

ಘುಡುಘುಡಿಸಿ ಯಜ್ಞದೊಳ್ಕನಕ ಭಾಂಡಾಗಿಗಳ
ನೊಡೆದು ಪಾಲ್ಮೊಸರು ತುಪ್ಪಂ ಮಧುಗಳಂ ಚೆಲ್ಲೆ
ಕಡಲಂತೆ ಪರಕಲಿಸೆ ಲೇಹ್ಯಚೋಹ್ಯಂ ಪಾನಭಕ್ಷ್ಯಾದಿಗಳನು ತೆಗೆದು
ಇಡುತಲಂಬರಕಶ್ವಮೇಧಯಜ್ಞಕ್ಕೆಂದು
ಮುಡಗಿಕೊಂಡಿರ್ದ ಕುದುರೆಯನೊಂದ ದೆಶೆಗಟ್ಟಿ
ಮೃಡನ ನಚ್ಚಿನ ಭೂತಗಣವಿಂತು ಕೋಳಾಹಳಂಗೆಯಿವುತಿರ್ದರಲ್ಲಿ ೫

ಬಳಿಕ ಕುಂಡದೊಳು ಪ್ರಜ್ವಲಿಪ ಕೆಂಡಗಳ ನೀ
ರೊಳಗಿಡುತ ಮಣಿವೇದಿಕೆಗಳೆಲ್ಲವಂ ಕೆಡಹಿ
ಕಳಸಂಗಳಂ ನುಗ್ಗುನುರಿಮಾಡಿ ಜಾಲಾಕಾಲಂಕೃತಗೃಹಾವಳಿಗಳ
ಮುಳಿದು ಕೀಳ್ತುದಕದೊಳು ಪಾಯಿಕಿ ಕೋಳಾಹಳಂ
ಗಳ ಮಾಡುತಿರೆ ಗಣಂಗಳು ಪಾತಕವ್ರಜಂ
ಕಳವಳಿಸಿ ಕಂಗೆಟ್ಟು ನುಡಿವುತಿರ್ದರ್ತವ್ಮೊಳೇನೆಂದು ಬಣ್ಣಿಸುವೆನು ೬

ಹಾ ಕೆಟ್ಟೆನೆಲೆ ತಂದೆ ಮಗನೆ ಮಡಿದಾ ಮಾವ
ನೀ ಕಳೆದು ಹೋದೆಯಾ ತಮ್ಮ ನೀನಳಿದೆಯಾ
ಏಕಡೆಯೊಳಿಪ್ಪೆಯಣ್ಣಾ ಎಂದು ಮೊರೆಯಿಟ್ಟು ಬಾಯ್ಬಿಟ್ಟು ಕಂಗೆಡುವರು
ಆ ಕಿತ್ತಿಡುವ ಮನೆಯೊಳಜ್ಞಾನಿಗಳ ಮಹಾ
ಸ್ತ್ರೀಕದಂಬಂ ಸಿಲ್ಕಿ ಘೋಳಿಡುತ್ತೊರಲಲು ಪಿ
ನಾಕಿಯ ಗಣಂಗಳಾಶ್ರಮಿಗಳ ತಪೋಧನಾಧಮರ ಭಂಗಿಸುತಿರ್ದರು ೭

ತರಹರಿಸಿ ಕಾಳಗಕ್ಕಿದಿರಾಗಿ ಬಂದ ನಿ
ರ್ಜರರನಾ ವೀರಭದ್ರೇಶ ತನ್ನಯ ಪಲವು
ಕರದ ವಜ್ರದ ಶೂಲದಿಂ ಚಕ್ರದಿಂ ಶಕ್ತಿಯಿಂ ಪಾಶದಿಂದ ಪೊಳೆವಾ
ಉರುತರದ ಪಟ್ಟೆ ಹದಿನೊನಕೆಯಿಂ ಖಡ್ಗದಿಂ
ದರರೆ ಟಂಕದಿ ಪಿಂಡಿವಾಳದಿಂ ಕೊಡಲಿಯಿಂ
ಪರಿಪರಿದು ಸಂಹಾರಮಂ ಮಾಡುತಿರ್ದನಾ ದಿಕ್ಪಾಲಮುಖ್ಯರ್ಗಳಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಭದ್ರನ ರೋಮಸಂಭವಗಣಂಗಳಂ
ದಾರಿ ಬೊಬ್ಬಿರಿದಲ್ಲಿದಿಂದಿಂಬಿಂದೀಕ್ಷಿಪಾ
ಪಾರ ಸಕ್ಷಿಪ್ರಹಾರ್ಮಾರ್ಯ್ರೆ ತಾಂ ಪ್ರಹರಸ್ವಉತ್ಪಾಟಯಾ
ಕ್ರೂರರಂ ಛಿಂದಿಸ್ಯೈ ಭೇದಿಸ್ಯೈ ನೂಂಕು ಕೊ
ಲ್ಲೈರಟತ್ಪಾತಕರ ಸಂಹರಿಸಿ ಕಿಳ್ತಿಡೆಂ
ದೂರನಾಲ್ದೆಸೆಯೊಳಂ ಪರಿಪರಿದು ಕೋಳಾಹಳಂಗೆ ಯಿವುತ್ತಿರ್ದರಲ್ಲಿ ೯

ಸುರಪವೊದಲಾದ ದೇವರ್ಕಳಂ ಕಂಡು ಮದ
ಕರಿಯಂತೆ ವೃಷಭನಂತಾ ಸಿಂಹದಂದದಿಂ
ದುರುತರದೆ ಹರುಷಿಪರ್ಕೆಲರು ಕೋದಿಪರು ಕೆಲರಾಲುತ್ತ ನಾಲ್ದೆಸೆಯೊಳು
ಪರಿದಾಡುವರ್ಕೆಲರು ತಮಗೆ ತಾ ನುಡಿವವಂ
ದಿರು ಕೆಲರು ನಗವವರ್ಕೆಲರು ಕುಣಿವರ್ಕೆಲಂ
ಬರು ಗಣಾಡಂಬರಾನಂದಮಯವಾದುದಾ ರಣಭೂಮಿಯುಗ್ಗಳದೊಳು ೧೦

ಕೆಲಬರಾ ಮೇಘಮಂ ಬಗಿದು ನೀರ್ಗೊಂಬರಾ
ಕೆಲರು ಸೂರ್ಯನ ಸೆಳೆದು ಹಲ್ಲೆಯಂ ಮಾಳ್ಪರಾ
ಕೆಲರು ನೆಗೆದಾ ಧೃವನ ತಾದಿಪರು ಪರ್ವತಸಮಾನರಾಕಾಶದಲ್ಲಿ
ನಲಿದಾಡಿಬಂದು ನಾಗಂಗಳಂ ಪಿಡಿದು ಪೇ
ರುಲುಪಿಂದೆ ಗರುಡನೆಯ್ದುವ ತೆಱದೊಳಾ ಸುರರ
ತಲೆವಿಡಿದು ಗಗನಮಂಡಲ ದೊಳಾಡುವ ಗಣಾಡಂಬರಂ ಮೆಱೆದಿರ್ದುದು ೧೧

ಜ್ವಾಲಾಮುಖಿಂ ವೀರಭದ್ರನನುಚರನಾ ತ್ರಿ
ಶೂಲಮಂ ಪಿಡಿದುರಿವಮುಖದಿಂದ ಸಕಲಗಣ
ಜಾಲದೊಳು ಬೊಬ್ಬಿರಿದು ಸಮರಕೆಯಿತಂದು ಬಂದಿದಿರಾದ ದೇವರ್ಕಳಾ
ಆಲಿಸೀಳಿದನು ತುಳಿದನು ಹೊಸೆದನುಬ್ಬೆದ್ದು
ಲೀಲೆಯಿಂದಳಿಗಾಳಗವ ಮಾಡಿದನ್ನೆಸೆ
ಮೇಲವನೊಳಿದಿರಾಂಪರಾರಜಾಂಡಂಗಳಂ ಕೀಳ್ತಿಡುವ ಮಹಿಮನೊಳಗೆ ೧೨

ಪ್ರಳಯಕಾಲಾಗ್ನಿಯಿಂ ಪೊಗೆ ಮುಸುಗಿದಂತೆ ಯು
ಜ್ವಳ ವೀರಭದ್ರ ರೌದ್ರಾನಲನೊಳೊಂದಿಯು
ಗ್ಗಳ ಭದ್ರಕಾಳಿಯಾ ಪೂರ್ವವೈರದ ಪಾಪಿ ದಕ್ಷಗೆ ಸಹಂಬಂದರಾ
ಘಳಿಲನುಗ್ರಾಯುಧಂ ಶೂಲದೆಳಗಿರಿದೊಳುಜ್ವಳೆಯಾಗಿ ಕಿ
ಜ್ವಳೆಯಾಗಿ ಕಡಿಖಂಡವಾದ ದೇವರ್ಕಳಂ
ತುಳಿದಳಾನಂದದಿಂ ಚಾರಿವರಿದಾಡಿ ಕೊಂದಳು ಪಾತಕವ್ರಾತವ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕ ವೀರೇಶ್ವರಂ ಸುರಪನಂ ಸೂರ್ಯನಂ
ಮುಳಿದೆಡದ ಪಾದದಿಂ ಮಸ್ತಕವನೊದೆದನಾ
ತಳತಳಿಸುವಸಿಯಿಂದ ದಹನನಂ ಪಟ್ಟಿಹದಿನಾ ಕೃತಾಂತನ ಪರಿಘದಿಂ
ಘಳಿಲನಾ ನಿರುತಿಯಂ ಟಂಕದಿಂ ವಾಯುವಂ
ಮುಳಿದು ಭಂಗಿಸಿ ಮತಿಯ ಕೊಡಲೆಂದು ಬಂದು ನೀಂ
ಖಳರೆಡೆಯೊಳಿಹರೆ ಎಂದಾ ಸರಸ್ವತಿಯ ಮೂಗಂ
ಮೊಟ್ಟಮೊದಲಿಗರಿದಂ ೧೪

ಅಣಕಿಸುತ್ತಗ್ನಿಯಂ ದ್ರೋಹಿಯಾಲಯದಲ್ಲಿ
ಉಣಬಂದೆಯಾ ಎಂದು ಏಳುನಾಲಗೆಗಳಂ
ಕ್ಷಣದಲ್ಲಿ ಕಿತ್ತವನ ತೋಳೆರಡ ತರಿದಮರರವ್ವೆಯೆನಿಸಿಪ್ಪದಿತಿಯ
ಬಣಗುಗಳ ತಾಯಾಗಿ ಬಂದೆಯಾ ಎಂದು ತ
ತ್ರಿಣಯನಾಕೆಯ ಮೂಗನರಿದುಹಾಕಿದನಖಿಳ
ಗಣನಿಕರದೊಡೆಯನೆನಿಸುವ ವೀರಭದ್ರದೇವಂ ಮಹಾನಂದದಿಂದಾ ೧೫

ಸಾದರದೆ ಬಂದಗ್ನಿಯಂಗನೆಯೆನಿಪ್ಪಸ್ವಾ
ಹಾದೇವಿಯೆಡದ ಮೊಲೆದೊಟ್ಟನಾನಂದದಿಂ
ಛೇದಿಸುತ್ತಂ ಬಲದ ನಾಸಿಕದ ಹೊಳ್ಳೆಯಂ ಕೊಯ್ದು ಭಂಗಿಸಿ ಬಳಿಕ್ಕಾ
ಮೋದದ ವಿಶಾಲಾಕ್ಷಿ ತನಗೆಂದಹಂಕರಿಸ
ಲಾದುರುಳನಹ ಭಗಾದಿತ್ಯನಕ್ಷಿಗಳನಾ
ಕೋದದಿಂ ಬಿಲ್ಲ ಕೊಪ್ಪಿಂದ ತೊಳಸಿದನಲಾ ವೀರಭದ್ರಾಧೀಶನು ೧೬

ಬಿಲ್ಲ ಕೊಪ್ಪಿಂದ ಪೂಷಾದಿತ್ಯನೆಂಬವನ
ಪಲ್ಲನೆಲ್ಲವನುಗ್ಗುಗುಟ್ಟಿದಂ ವೀರನೆನ
ಲಲ್ಲಿ ಮುನಿಗಳು ನುಡಿದರೆಲೆ ವಾಯುಪುರುಷ ಹೇಳಾತಗಂತಾ ಶಿಕ್ಷೆಯು
ಎಲ್ಲಿಯದೆನಲ್ಕೇಳಿ ದಕ್ಷಯಜ್ಞವನಿಕ್ಕ
ಲಲ್ಲಿಯು ದಧೀಚಿ ಮುನಿ ಶಪಿಸೆ ಮುಖವಳಿದು ಸಭೆ
ಎಲ್ಲವು ಪರವಲ್ಲಿ ನುಡಿದನಾ ಪಾತಕಂಗಂ ಹಿತವನೇಳ್ಗೆಯಿಂದಾ ೧೭

ಟೆಂಟಣಿಸದಿರು ದಕ್ಷ ಹೋದ ಮುನಿಗಳು ನಿನಗೆ
ಕಂಟಕಂ ನೀಂ ಬಡವನೇಯುಳುಕದಿರು ನಿನ್ನ
ನಂಟರಖಿಳರು ಸಕಲಸುರರಳಿಯರೆಂದಾಡಿದದಱಿಂದ ನೀನಧಮಗೆ
ಬಂಟನಿಚ್ಛಕನೆಂದು ಪಲ್ಗಳದನ್ನೆ ಮುಳಿದು
ತುಂಟನಂ ಬರಿಯುಸಹಿತವಂ ನುಡಿವರಂ ಪೂಷ
ಗುಂಟಣಿತನಂ ಬೇಡಹೋಗೆಂಬ ನಾಣ್ನುಡಿಯಾದಾಯ್ತೆಂದನಾ ಮಾರುತಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಾಯುಪುರುಷನೊಳು ಮುನಿಗಳಿಂತೆಂದರಾ
ದೇವನಗ್ರಾತ್ಮಜಂ ವಿಘ್ನೇಶ್ವರಂ ಮಖದ
ಠಾವಿಂಗೆ ಬಂದನೆಂಬರು ಪೇಳ್ವುದಾ ಕಥೆಯುದೆಲ್ಲಿಯದೆನಲ್ಕೆ ಕೇಳಿ
ನೀವು ನಲವಿಂ ವೀರಭದ್ರವಡಬಾನಲವು
ಹಾ ವಿಶೇಷದ ಮಂತ್ರದಲ್ಲಿ ವೀರೇಶ್ವರಾ
ಶ್ರೀವಿನಾಯಕ ಭುಕ್ತಿಭಂಗ ಎಂಬಾ ಪ್ರಸಂಗದೊಳದೆಂತೆನೆ ಪೇಳ್ವೆನು ೧೯

ಮೊದಲು ಪಾತಕದಕ್ಷನಂ ಶೀಘ್ರದಲ್ಲಿ ಸೀ
ಳ್ವುದು ನೀನೆನುತ್ತ ಭೈರವಮುಖ್ಯರಂ ಕೂಡಿ
ಮದನಹರನಟ್ಟಲಾ ವಿಘ್ನೇಶ್ವರಂ ಬಂದು ಯಜ್ಞಶಾಲೆಯನು ಪೊಕ್ಕು
ಅಧಮನಂ ಕೊಲ್ವೆನೆಂದರಸುತ್ತ ಬಪ್ಪಲ್ಲಿ
ಯೊದವಿಸಿದ ಭಕ್ಷ್ಯಘೃತ ಭೋಜ್ಯಶರ್ಕರೆ ಫಲಂ
ಮೆದೆಯಂತೆ ಗಿರಿಯಂತೆ ತೊಱೆಯಂತೆ ಮೆಱೆದಿರಲು ಕಂಡನಾ ಗಜವಕ್ತ್ರನು ೨೦

ನೋಟದಿಂ ಸಂತೋಷಿಸುತ್ತ ತನ್ನಂ ಚಂದ್ರ
ಜೂಟನಟ್ಟಿದ ಕಾರ್ಯಮಂ ಮಱೆದು ಬಂದು ಸವಿ
ಯೂಟಕ್ಕೆ ಮನವಿಟ್ಟು ತುತ್ತುಗೆಯುವುತ್ತಿರ್ದಲೋಚನನಿಮೀಲನಾಗಿ
ನಾಟಿಸುತ ನಾಲಗೆಯೊಳಿರಿಸಿ ಗುಳ್ಕನೆ ನುಂಗು
ವಾಟವೇ ಗತಿಯಾಗಿಯಾ ದಕ್ಷನೆಂದವನ
ಪಾಟಿಮಾಡನು ಬಿಡದೆಯುಣುತಿರ್ದನುಣುತಿರ್ದನದನಾರು ಬಣ್ಣಿಸುವರು ೨೧

ಕರಿಮುಖನುಣುತ್ತಿಪ್ಪುದಂ ಕಂಡು ಶಂಕರನ
ಹಿರಿಯಮಗನೊಳಗಾಗಿ ಜನ್ನಕ್ಕೆ ಬಂದರಿ
ನ್ನರಿದಾವುದೆಮಗೆಂದು ದಕ್ಷಾದಿಗಳು ಕಂಡು ತಂದು ಗಡಣಿಸಲುಣುತ್ತಾ
ಇರಲನಿತಕೀ ವೀರಭದ್ರನುಗ್ರನರೌದ್ರ
ನುರಿಗಣ್ಣಿನಿಂ ಪುಟ್ಟಿ ಸಕಲ ಗಣತತಿವೆರಸಿ
ಬರುತೂರ ಮುತ್ತಿ ಕೋಳಾಹಳಂಗೆಯಿವೆಡೆಯೊಳಱಿಯದುಣುತಿರ್ದನಾತಂ ೨೨

ಚೆಕ್ಕನೆಯಿತಂದು ಘುಡುಘುಡಿಸೂತರಂ ಪೊಕ್ಕು
ನೆಕ್ಕನೆಱೆ ನಿಟಿಲು ಖಣೆ ಖಟಿಲೆನಲು ಹೊಡೆದಿಱೆವ
ದಿಕ್ಕೆಂಟು ನಡುಗೆ ಕೋಟಾಕೋಟಿನಿಸ್ಸಾಹಣಾದಿಗಳು ಕೂಡೆ ಮೊರೆವ
ಇಕ್ಕೆಲದೊಳದ್ರಿಗಳ ಪಿಡಿದು ತಾಟಿಸಿ ಹುಯ್ಯ
ಲಿಕ್ಕೆ ಘೂರ್ಮಿಪ ರವಂಗಳನು ವಿಘ್ನೇಶ್ವರಂ
ಲೆಕ್ಕಿಸದೆ ಪರಮಾನುನಾಗದಿಂದುಣುತಿರ್ದನಾ ಭೋಜನಪ್ರೀತನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆರು ನಾನೀ ಮಹಾನ್ನದ ರಾಸಿಯೆಲ್ಲಿಯದಿ
ದಾರೂರದೆಲ್ಲಿರ್ದು ಬಂದೆ ನಾನೆಂದಱಿಯ
ದೀ ರವದ ಕಾಳಗವಿದೇನು ಕೊಲ್ವವರಾರು ಮಡಿದರಾರೆಂಬ ರಣದಾ
ಕಾರಣವನಱಿಯದುಣುತಿರ್ಪ ಕಾಲದೊಳವನು
ವೀರಭದ್ರೇಶ್ವರ ಬಂದು ಘೂರ್ಮಿಸಲಾ ಮ
ಹಾರಾವಕಂ ಕೂಡೆ ತಲೆಯೆತ್ತಿನೋಡಿದಂ ಮೆಲ್ಲನಾ ವಿಘ್ನೇಶ್ವರಂ ೨೪

ಆಗ ಮೆಲ್ಲನೆ ನೆನೆದು ದಕ್ಷನಂ ಕೊಲಲೆಂದು
ನಾಗಕಂಕಣನೆನ್ನನಟ್ಟಿದಂ ನೋಡಲಿವ
ನೀಗಲವನೋ ಎಂದು ವೀರಭದ್ರೇಶ್ವರನ ಮೇಲೆ ಪಾಶವನಿಟ್ಟೊಡೆ
ರಾಗದಿಂ ಕೊಡಲಿ ಕಣ್ಣಿಗಳ ಸೆಳಕೊಂಡನನು
ರಾಗಿಸುತ ಘನಕೋಪದಿಂದ ವಿಘ್ನೇಶ್ವರನ
ಹೋ ಗರ್ಜಿಸುತ್ತಿಡುವೆನೆಂದು ತನ್ನಯ ಕೋಡ ಮುಱಿದು ಕೈಯೊಳು
ಪಿಡಿದನು ೨೫

ಜಱಿದು ವೀರೇಶ್ವರಂ ತೋಳ್ಗಳಂ ಪಿಡಿದು ಕು
ಕ್ಷಱಿಸಲೊಡನಾ ಡೊಳ್ಳುಹೊಟ್ಟೆಯಿಬ್ಬಗಿಯಾಗಿ
ನೆಱೆ ಕೊಂಡ ಕಜ್ಜಾಯಗಳು ಮಹಾದ್ಭುತದಿಂದ ಸುರಿಯೆ ವೀರೇಶನೆಮ್ಮ
ಕಱೆಗೊರಲಗೀತನೇ ಹಿರಿಯಮಗನೆಂದೆಂಬು
ದಱಿದ ಚಣದೊಳಗೆ ಪಾವೊಂದ ತೆಗೆದಲ್ಲಿ ನೆಱೆ
ಬಿಱಿದ ಕುಕ್ಷಿಯಂ ಸಸಿನೆ ಮಾಡುತಕಟ್ಟಿದಂ ಬಲಿಕೆಯುಪ್ಪಂದದೆ ೨೬

ಬಳಿಕೆರಡು ಭೂತಂಗಳಂ ಕರೆದು ಪೇಳಿದಂ
ಬಳವಂತ ಕರಿಮುಖನ ನಾರೈದುಕೊಂಡು ಪಿಂ
ದಳವಿಯೊಳು ನಾವು ಕೈಲಾಸಕ್ಕೆ ಪೋಪಲ್ಲಿ ಬಪ್ಪುದೆನುತಂ ನೇಮಿಸಿ
ಖಳಸಂಹರಂಗೆಯ್ಯ ತೊಡಗೆ ಭೂತಗಳು ತೋ
ಳ್ಗಳನೆರಡ ಪಿಡಿದು ಮೆಲ್ಲನೆ ನೆಗಹಿಕೊಂಡಲ್ಲಿ
ಬಳಲಿದೆಡೆಯುಲ್ಲಿ ನಿಲಿಸುತ್ತ ಬಿಜಯಂಗೆಯಿಸಿ ತರುತಿರ್ದವಾ ಗಣಪನಂ ೨೭

ಮುದದಿಂ ವೀರೇಶ್ವರಂ ಮುಂದೆ ನಡೆವಲ್ಲಿ
ಮೊದಲು ವಿಘ್ನೇಶ್ವರನೊಳೈತಂದ ಭೈರವಂ
ಸುದತಿಯರ ಕಾಣುತಾ ಸೂಳೆಗೇಱಿಯ ಹೊಕ್ಕಿರುತ್ತಲಾರ್ಭಟಕೆ ಹೊರಡೆ
ಅದಟವೀರೇಶ್ವರಂ ಕಾಣುತ್ತ ಘೂರ್ಮಿಸು
ತ್ತೊದೆದನಾತನತಿಗಂ ನಡು ಮುರಿಯಿತೆಂದು ಪೇ
ಳಿದನಾ ಮುನೀಶರ್ಗೆ ಕೂರ್ತು ನಿರ್ಧೂರ್ತ ಭೈರವ ಮಾನವಭಂಗವೆನಲು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂವತ್ತುಮೂಱುಕೋಟಿಗಳು ದೇವರ್ಕಳಿಗ
ಹೋ ವಿಚಾರಿಸಲಾನೆ ತಾ ಯೆಂದು ಬಪ್ಪ ವನಿ
ತಾವಳಿಯೊಳಿಪ್ಪ ದಿತಿಯಂ ಕಂಡು ಮೂಗುವೊಲೆದುದಿಗಳಂ ಬೆರಲುಗುರಿನಿಂ
ಆ ವೀರಭದ್ರದೇವರು ಚಿವುಟಿ ಚಂದ್ರನಂ
ಮಾವನಿಪ್ಪತ್ತೇಳು ಕನ್ನೆಯರ ನಿನಗಿತ್ತ
ನೇ ವಿಶೇಷಾಪ್ತನೆನುತಿಂದುವಂ ಹುಳುವ ಹೊಸೆದಂತೆ ಪಾದದೊಳೊರೆಸಿದಂ ೨೯

ಪದದಲ್ಲಿ ಚಂದ್ರಮನನೊರಸಿ ಮುಂದಕ್ಕೆ ಬ
ಪ್ಪುದ ಕಂಡು ಮುಳಿದು ತನ್ನಾರೈಕೆಯಲ್ಲಿ ಮಾ
ಡಿದ ಯಜ್ಞಕೀ ಭಂಗವಾಯ್ತೆಂದು ಹರಿಶಂಖಮಂ ಚಕ್ರಮಂ ಖಡ್ಗಮಂ
ಗದೆಗಳಂ ಪಿಡಿದು ದೇವೇಂದ್ರಾದಿದೇವರ್ಕ
ಳೊದವಿಬರಲೊಲ್ದು ಗರುಡನನೇಱಿ ವೀರೇಶ
ಗಿದಿರಾದನಖಿಳ ಜಂಬುಕ ತತಿಯೊಳಾನೆ ಸಿಂಹದ ಕೂಡೆ ಮಲೆವಂದದೆ ೩೦

ಕಂಡು ಗಹಗಹಿಸುತ್ತ ವೀರೇಶ್ವರಂ ಮುಳಿದು
ಖಂಡಿಸುವೆನೀ ವಿಷ್ಣುಮುಖ್ಯರನೆನುತ್ತಲ್ಲಿ
ಖಂಡೆಯಂಗಳ ಜಡಿಯಲಾ ವೇಳೆ ಕೋಟಿಸೂರ್ಯಪ್ರಕಾಶದ ರಥವನು
ಕೊಂಡು ಬಂದಾ ಬ್ರಹ್ಮನೀಶ್ವರಂ ಕಳುಪಿದನ
ಜಾಂಡದಲ್ಲಣ ನಿನಗೆನುತ ವೀರೇಶಂಗೆ
ಮಂಡೆಯಂಘ್ರಿಯ ಮುಟ್ಟೆನಮಿಸಿ ಬಿನ್ನವಿಸುತಿರ್ದಂ ರಥಂ ಮೆಱೆದುದಲ್ಲಿ ೩೧

ರವಿಕೋಟಿಸಂಕಾಶದಮಲ ವೃಷಭಧ್ವಜದ
ನಿವಹದಿಂದಶ್ವರತ್ನದ್ವಯಂಗಳಿನಧಿಕ
ದವಿಶಾಲ ಚಕ್ರಚಾತುಷ್ಟಯದಿನಖಿಳ ಸಿತಶಸ್ತ್ರಂಗಳೇಳ್ಗೆಯಿಂದಾ
ನವರತ್ನಕಿರಣದ ಪೊಂಗೆಲಸದಿಂದವೊ
ಪ್ಪುವ ರಥವನಾ ವೀರಭದ್ರದೇವರ್ಗಿತ್ತು
ಸವಿಲಾಸದಿಂ ನಮಿಸಿ ಬೊಮ್ಮನಂತಾ ರಥಕೆ ತಾನೆ ಸಾರಥಿಯಾದನು ೩೨

ಮುನ್ನಲಾ ತ್ರಿಪುರದಹನದೊಳಭವಗಂ ಬೊಮ್ಮ
ನುನ್ನತದ ರಥದ ಸಾರಥಿಯಾದ ಮಾಳ್ಕೆಯಿಂ
ತನ್ನಿಮಿತ್ತದೊಳು ಕೊಂಡಾಡಿದಂ ಷಡ್ಗುಣೈಶ್ವರ್ಯಸಂಪನ್ನದೇವಾ
ನಿನ್ನ ಲೀಲಾಯುದ್ಧಮಂ ನೋಡಲೆಂದು ದೇ
ವಂ ಗಿರಿಜೆ ಈರ್ವರುಂ ರೈಭ್ಯಾಶ್ರಮದೊಳಿರು
ತ್ತಿನ್ನನೀ ರಥವನಿತ್ತಟ್ಟಿದರು ನೀನಡರಿ ಖಳತತಿಯ ಸಂಹಾರಿಸು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಲದಂ ಕೈಕೊಂಡು ಭೋಂಕನಾ ರಥವೇಱಿ
ಲನಿತಕ್ಕೆ ಶುಭ್ರಶಂಖವನಲ್ಲಿಯುನ್ನತ
ಧ್ವನಿಯಾಗಿ ಪೂರಿಸುತ್ತಿರ್ದನಾ ಭಾನು ಕಂಪಂ ದೇವತತಿ ನಡುಗಲು
ಘನಮಾರ್ಗದಲ್ಲಿ ಕಿನ್ನರ ಗರುಡ ಖೇಚರ
ರ್ಮನುಮುನಿಗಳೀಕ್ಷಿಸುತ್ತಕ್ಕಟಾ ವೀರಭ
ದ್ರನೊಳಧೋಕ್ಷಜಮುಖ್ಯರಿದಿರಾಗಿ ಕೆಟ್ಟರೆನುತಿರ್ದರೇವಣ್ಣಿಸುವೆನು ೩೪

ಆ ವಿಷ್ಣು ಶಾರ್ಙಮಂ ಕೊಲೆಗೆಯಿದು ವಿಲಸಿತ
ಶ್ರೀ ವೀರಭದ್ರದೇವರು ಮುಖ್ಯವಾಗಿರ್ದ
ಪಾವನ ಗಣಾವಳಿಯಮೇಲೆ ಕರೆವುತ್ತಿರ್ದನಜ್ಞಾನದಿಂ ದಂಬನು
ಏವೇಳ್ವೆನನಿತು ಬಾಣಂಗಳಂ ಖಂಡಿಸಿ ದಿ
ಶಾವಳಿಗೆ ಪಸರಿಸಿದರ್ರೈ ಗಣೇಶ್ವರರು ವೀ
ರಾವತಾರಂ ಮೇರುಸಮಚಾಪಮಂ ಘೂರ್ಮಿಸುತ್ತ ಕೈಯೊಳು ಪಿಡಿದನು ೩೫

ಅಧಟನಾ ಬಿಲ್ಲಗೊಲೆಯೆತ್ತಿ ಜೇವಡೆಯಲ್ಕೆ
ಬೆದರಲೆಲ್ಲಾ ಲೋಕವಾ ವಿಷ್ಣುಮುಖ್ಯರ್ಗ
ಳೆದೆಯುದುರೆ ಬೆನ್ನ ಬತ್ತಳಿಕೆಯೊಳಗಿರ್ದಂಬನುಡಿಯಲ್ಕೆ ಕೈನೀಡಿದಾ
ಪದದಲ್ಲಿ ವೀರಭದ್ರೇಶ್ವರನ ತೋಳುಸೌ
ಖ್ಯದೊಳಮರರಸುವಾಯುವಂ ಕೊಂಬ ಸರ್ಪನೊ
ಪ್ಪದೊಳು ಹುತ್ತಂಬೊಗುವ ಮಾಳ್ಕೆಯಿಂದಾಹ
ಮೆಱೆವುತ್ತಿರ್ದುದೇವಣ್ಣಿಪೆಂ ೩೬

ಬಳಿಕ ಹಸ್ತವನಿಕ್ಕಿ ಬಾಣಮಂ ಪಿಡಿದು ಬ
ತ್ತಳಿಕೆಯುಂ ತೆಗೆದಲ್ಲಿ ಕಿರುವಾವ ನುಂಗುವ
ಗ್ಗಳದ ಫಣಿಯಂತಿರ್ದುದಾಹ ವೀರೇಶ್ವರನ ತೋಳು ಮತ್ತಾ ಶರವನು
ಘಳಿಲನಾ ಬಿಲ್ಲ ನಾರಿಯೊಳಮರ್ಚುತ್ತ ಬರ
ಸೆಳೆದು ಬೊಬ್ಬಿರಿದೆಸಲು ತೊಟ್ಟನಾರ್ಭಿಡಿಸಿ ಹರಿ
ಯಳಿಕಮಂ ತಾಗಿತ್ತು ಭೋಯೆಂದು ಬೊಬ್ಬಿರಿದುದಾಹ ಗಣಸಂದೋಹವು ೩೭

ಹಣೆಯು ಘಾಯದ ವಿಷ್ಣುನೊಂದು ಸಿಂಹವನೆಯಿದೆ
ಕೆಣಕುವೆತ್ತಿನ ಮುದಿಯನಂತೆ ದಿವ್ಯಾಸ್ತ್ರವಂ
ಗಣನಾಯಕನ ಮೇಲೆ ಬಿಡಲು ವೀರೇಶನಂಬೊಂದಱಿಂದಾ ಕೃಷ್ಣನಾ
ಕಣೆಗಳಂ ಕಡಿದು ಚೂರ್ಣಮಂ ಮಾಡಿ ಬಳಿಕಲ
ಗ್ರಣಿಯನಲತುಂಡೆಂದೆಂಬ ಶರದಿಂದಲಾ
ರಣದಲ್ಲಿ ಹರಿಯೆದೆಯು ತಟ ಉಚ್ಚಲೆಚ್ಚನಾಹಾಹ ಬೊಬ್ಬಿರಿದು ವೀರಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಬಾಣದುತ್ಕಟದ ಘಾಯಕ್ಕೆ ಮಾಧವನ
ಹೋ ಬಿದ್ದನಸುವುಳಿದನೆಂಬಂತುಟಾಗಲೆ
ಲ್ಲಾ ಬಾಯಬಿಟ್ಟುಕಟ ಕೆಟ್ಟೆವೆಂದಿಂದ್ರವೊದಲಾದಖಿಳ ದೇವರ್ಕಳೂ
ಏ ಬಾಳು ತಮ್ಮದೆನುತಿರಲನಿತಕೆದ್ದನ
ಲ್ಲಾ ಬೇಗದಿಂದ ವೀರೇಶ ಲೀಲಾಯುದ್ಧ
ದಾ ಬಲಾಧಿಕ ವಿಷ್ಣು ನಾರಾಯಣಾಸ್ತ್ರಮಂ ತೆಗೆದು ತೊಟ್ಟೆಚ್ಚನರರೇ ೩೯

ನಾರಾಯಣಾಸ್ತ್ರಮಂ ಕಡಿಖಂಡಮಂ ಮಾಡಿ
ವೀರೇಶನೊಂದಂಬಿನಿಂ ಹರಿಯ ಶಾರ್ಙಮೆಂ
ಬಾರಾವಧನುವನೇರಿದ ಗರುಡನೆರಡು ಪಕ್ಕವನೆಚ್ಚು ತುಂಡುಮಾಡೆ
ಆ ರಾಕ್ಷಸಾದಿ ಯಾಗದ ಬಲದೊಳಖಿಳ ಮುರ
ವೈರಿಗಳ ಪುಟ್ಟಿಸಲ್ಕನಿಬರಂ ಹಣೆಗಣ್ಣ
ಘೋರಾಗ್ನಿಯಿಂ ಸುಟ್ಟನಾ ತ್ರಿಪುರಮಂ ದಹಿಸಿದಭವನಾನಂದಮೂರ್ತಿ ೪೦

ಕೋಟಾನುಕೋಟಿ ಹರಿಗಳನೆಲ್ಲರಂ ಸುಟ್ಟ
ರಾಟೋಪದಿಂದ ನಿಜ ವಿಷ್ಣು ತನ್ನಾಯುಧಕೆ
ಮೀಟಾದ ಚಕ್ರಮಂ ತೆಗೆದಿಡುವೆನೆಂದೆತ್ತಲಾಗ ವೀರೇಶನವನಾ
ನೋಟದಿಂ ಸ್ಥಂಭಿಸಲು ಬೆಱಗುವಟ್ಟಾಗಣಕಿ
ರೀಟಪಾದಂಗೆ ಪುಲ್ಲಿವಿಡು ಮೊರೆಯೋ ಎಂಬ
ಪಾಟಿಯಿಂದಿರ್ದನಾ ಮಾಧವಂ ರಣಮುಖದೊಳಿನ್ನದೇವಣ್ಣಿಸುವೆನು ೪೧

ಅಸುವಳಿದ ಪೆಣನಂತೆ ಕಲ್ಲಂದದಿಂದಲಾ
ವಿಷದ ಪಲ್ಲುದುರಿದಹಿಯಂತೆ ಹರಿಯಿರೆ ಕಾಣು
ತಸವಸದೊಳಿಂದ್ರಾದಿ ದಿಕ್ಪಾಲರುಬುಬೆಂದು ನಿಜ ವಾಹನಂಗಳಡರಿ
ಪೊಸತೆನಲು ಸರ್ವಾಯುಧಂಗಳಂ ಪಿಡಿದು ಸುಮ
ನಸರಲ್ಲಿ ಮೂವತ್ತಮೂಱು ಕೋಟಿಗಳು ಭರ
ವಸದಿನಿದಿರಾದರಂದಖಿಳ ಜಂಬುಕ ವಿತತಿ ಸಿಂಹದೊಳು ಸೆಣಸುವಂತೆ ೪೨

ಇದಿರಾದ ದೇವರ್ಕಳಂ ಕಂಡು ವೀರೇಶ
ನಧಮರಂ ಕೊಲ್ವುದರಿದಲ್ಲೆಂದು ನೋಡೆ ಚಿ
ತ್ರದ ಬೊಂಬೆಯಂದದಿಂ ವಜ್ರಧರನೆಯ್ದೆ ಬೆಱಗಾಗಿರಲ್ಬಾಣಂಗಳಾ
ಕೆದರಿದಂ ಕೂಡೆ ಬೊಬ್ಬಿರಿದಲ್ಲಿ ದೇವನಿವ
ಹದ ಮೇಲೆ ಕವಿದವಂಬುಗಳು ಫಣಿಗಳು ಬಂದು
ಮುದುಗಪ್ಪೆಗಳ ಪಿಡಿವ ಮಾಳ್ಕೆಯಿಂ ತಾಗಿದವು ಸಕಲ ನಿರ್ಜರರನಾಗ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೋಳು ಮುರಿದರ್ಕೆಲರು ತಲೆ ಪರಿದವರ್ಕೆಲರು
ಘೋಳೆಂದು ಮೊರೆಯಿಡುವವರ್ಕೆಲರು ಧರೆಯಲ್ಲಿ
ಬೀಳುವರ್ಕೆಲರು ಘಾಯಂಗಳಿಂದೊರಲುವರ್ಕೆಲರು ನಯನಂಗಳುಡಿಯೆ
ಬೇಳಿಡುವವರ್ಕೆರು ಮಡಿವವರ್ಕೆಲಬರಾ
ಕಾಳೆಗದ ಮುಖದೊಳಿದಿರಾದ ದೇವರ್ಕಳಂ
ಕೋಳಾಹಳಂ ಮಾಡಿ ಪರಿಪರಿದು ಸಂಹರಿಸುತಿರ್ದನಾ ವೀರೇಶ್ವರಂ ೪೪

ಧರೆಯ ಬಗಿದೊಳಪೊಗಲೆಳಸುವರು ಕೆಲ ಕೆಲಂ
ಬರು ಗಗನಮಂ ನೆಗೆದು ಪೋಗಲೆಂದೂಹಿಸುವ
ರರೆಬರಾ ಮಕರಾಕರಂಗಳೊಳು ಪರಶುರಾಮನ ತೆಱದೊಳಡರಲೆಂದು
ಸ್ಮರಿಸುವರ್ಕೆಲರಿಂತು ವೀರೇಶನಸ್ತ್ರದಿಂ
ಪರಿಭಂಗವಡೆದುಟ್ಟುದಂ ಮಱೆದು ಬಿಟ್ಟ ತಲೆ
ವೆರಸಿ ದೆಶೆದೆಶೆಗೋಡೆ ಕೋಳಾಹಳಂಗೆಯಿವುತಿರ್ದನೀಶನ ಪುತ್ರನೂ ೪೫

ವೀರೇಶನಿಂತು ಖಂಡಿಸೆ ಸುರರ ರಕ್ತಘನ
ವಾರಿನಿಧಿ ಭೋರ್ಗರೆದು ಹರಿವುತಿರೆ ಬಳಿಕ ಮುಳಿ
ದಾರುತ್ತಲೊಳಪೊಕ್ಕನಾ ಯಜ್ಞಶಾಲೆಯಂ ಘೂರ್ಮಿಸುತ ಹರನ ಪುತ್ರಂ
ಹಾರುವರು ಕೆದರಿ ದೆಶೆದೆಶೆಗೋಡಲಾ ಯಜ್ಞ
ದಾರಾಧ್ಯನಾಗಿರ್ದ ಹರಿಯಾಗ ಹರಿಣನಾ
ಕಾರಮಂ ತೊಟ್ಟು ಕೆಟ್ಟೋಡಲೀಕ್ಷಿಸಿದನಾ ವೀರಭದ್ರಾಧೀಶನು ೪೬

ಹರಿಣರೂಪಿನ ಯಜ್ಞಮಸ್ತಕವನರ್ಧೇಂದು
ಶರದಿಂದ ಪರಿಯೆ ಶಂಭುಃ ಶಿವೋಯೆಂದು ತ
ಚ್ಛಿರ ವೀರಭದ್ರ ಸಾಹಸ್ರನಾಮದ ಭದ್ರೆಯಷ್ಟಕದೆ ನುತಿಸೆ ಮಚ್ಚಿ
ಆರರೆ ಕೃಷ್ಣಾಜಿನಂದಳೆದನಂದಿಂದೆಮ್ಮ
ಹರಮೂರ್ತಿಗಳಿಗೆ ಗದ್ದುಗೆಯಾದುದೆಂದು ಬಿ
ತ್ತರಿಸಿ ಮೇಲಾ ದಕ್ಷಗಾದ ಭಂಗಂಗಳಂ ಮುನಿಗಳಿರ ಕೇಳಿ ಎಂದಂ ೪೭

ಘುಡುಘುಡಿಸಿ ವೀರೇಶ್ವರಂ ದಕ್ಷನಂ ಕಂಡು
ಕೆಡೆ ಕೆಡೆ ಶಿವದ್ರೋಹಿ ಎಂದು ಘೂರ್ಮಿಸುತ ತ
ನ್ನೆಡದ ಪಾದದೊಳೊದೆದು ಕೆಡಪಿ ಮೆಟ್ಟುತ್ತ ಕುಬುಬೆಂದು ಬೊಬ್ಬಿರಿದು
ತಲೆಯಾ
ಹೊಡೆದಲ್ಲಿ ಭದ್ರಕಾಳಿಗೆ ಕೊಡಲ್ಕೊದೆದು ತ
ನ್ನಡಿಯಿಂದ ತಾಳಘಳದಂದದಿಂಟ್ಟಾಡಿ
ಕೆಡಪಿದಳು ಯಜ್ಞಕುಂಡದೊಳಾಗಲಾ ಶಿವದ್ರೋಹಿಗಾ ಕೊಲೆ ಸಾಲ್ವುದೆ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕಂತರಿಷ್ಟನೇಮಿಯು ಸೋಮನಂ ಧರ್ಮ
ವಿಳಸತ್ಪ್ರಜಾಪತಿಯು ಬಹಸುತಾಂಗೀರಸನ
ಬಳವಂತಕಾಸ್ಯಪನನೀಕ್ಷಿಸುತ ವೀರಭದ್ರೇಶ್ವರನ ಗಣನಾಥರು
ಗಳವ ಪಿಡಿದೊತ್ತಿ ತಾಡಿಸಿ ಶಿರಂಗಳ ಕೆಡಹಿ
ತುಳಿದು ಝಂಕಿಸಿ ಸಿಡಿಲ ತೆಱದಿಂದ ಘೂರ್ಮಿಸು
ತ್ತೆಳೆದೊದೆದು ದೂಷಕಸಹಾಯಿಗಳಿರಾ ಎಂದು ಕೂಡೆ ಭಂಗಿಸುತಿರ್ದರು ೪೯

ಅಱಿಯಟ್ಟಿ ಭೂತಂಗಳವರ ಸತಿಪುತ್ರರಂ
ಸೆಱಿಗಳಂ ಪಿಡಿವುತ್ತ ಯೂಪಕಂಭಂಗಳಂ
ಮುಱಿದಿಟ್ಟು ಕಳಸಂಗಳೊಡೆದು ವೇದಿಕೆಗಳಂ ದರಿಗೆಡಹಿ ತೋರಣಗಳಾ
ಪಱಿದಿಟ್ಟು ಕೆದರಿ ಯಜ್ಞದ್ರವ್ಯವೆಲ್ಲವಂ
ಹಱಿಹಂಚಮಾಡಿಯಲ್ಲಿಯ ಸುರಮುನಿವ್ರಜವ
ನುಱಿ ಭಂಗಿಸುತ್ತ ನಾಲ್ದೆಸೆಯಲ್ಲಿ ಪರಿಪರಿದು ಕೋಳಾಹಳಂಗೆಯ್ದವು ೫೦

ಅಳಿದ ಪತಿಪುತ್ರಾದಿ ಬಂಧುಗಳ ಕಂಡು ವೆ
ಗ್ಗಳವಪ್ಪ ವಕ್ಷಸ್ಥಲ ತಾಡನಾದಿಗಳಿಂದ
ಲಳುವ ವನಿತಾನಿಕರವೆಯ್ದೆ ದೆಶೆದೆಶೆಗೋಡೆ ಬಳಿಕ ಶೂನ್ಯಾರಣ್ಯದಾ
ನಿಳಯುವೆನಿಸಿತ್ತು ಪಾತಕನಧ್ವರಂ ಕೂಡೆ
ನಳಿನ ಸಂಜಾತ ಸಾರಥಿಯಾದ ಸಲುಗೆಯಿಂ
ಬಳವಂತ ವೀರೇಶನಂಘ್ರಿಗೆಱಗುತ್ತ ಕೈಮುಗಿದು ಕೀರ್ತಿಸುತಿರ್ದನು ೫೧

ಶ್ರೀಕರ ಮಹಾವೀರಭದ್ರೇಶದೇವ ತಾ
ನೀಕವೆಲ್ಲಂ ಭಂಗವಡೆಯಿತ್ತು ಕೊಲೆಯಿನ್ನು
ಸಾಕು ಕರುಣಂಗೆಯಿವುದೆನಲಜನ ಬಿನ್ನಪವ ಕೈಕೊಂಡು ಶಾಂತನಾಗೆ
ಆ ಕಾಲದಲ್ಲಿ ಸುರಸಂದೋಹವಂತಾ ಪಿ
ನಾಕಿ ವೀರೇಶ್ವರಂಗಷ್ಟಾಂಗವೆಱಗಿಯು
ಸ್ತೋತ್ರೀಕ ಸೂತ್ರಂಗಳಿಂದಂ ಕೀರ್ತಿಸುತ್ತಿರ್ದರಿನ್ನದೇಂ ವರ್ಣಿಸುವೆನು ೫೨

ಆಯತದ ದೇವಾಯ ಶರಣು ಶರಣು ನಮಃಶಿ
ವಾಯ ರುದ್ರಾಯ ಯಜ್ಞಾರಿ ತ್ರಿಶೂಲಿನೇ
ಕಾಯಜಾಂತಕ ರುದ್ರನೇಕ ರುದ್ರರಿಗೆ ಪತಿಯೇ ರುದ್ರಮೂರ್ತಿ ಸರ್ವಾ
ಜೀಯ್ಯ ಕಾಲಾಂಗಾಪಹಾರಿಣೇ ರುದ್ರರೂ
ಪಾಯ ದೇವಾದಿಗಳ ಶಿರಗಳಂ ತಱಿದ ಭ
ರ್ಗಾಯ ದಕ್ಷಾರಿಯೇ ನಿನಗೋಸ್ಕರಂ ನಮಸ್ಕಾರವೆಂದೆನುತ್ತಿರ್ದರು ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾತಕವೆನಿಪ್ಪ ದಕ್ಷನ ಸಂಗದಿಂದಲಾ
ವೀ ತೆಱದೆ ಭಂಗವಡೆದೆವು ನಿನ್ನ ಹಸ್ತದ ನಿ
ಶಾಂತಹಸ್ತಸ್ಪರ್ಶದಿಂ ಕೃತಾರ್ಥತೆವಡೆದೆವಿನ್ನು ರಕ್ಷಿಸು ಕರುಣದಿಂ
ಭೂತೇಶ ನೀನೆ ಗತಿ ಎಂದು ಕೀರ್ತಿಸುತಿರೆ ಕೃ
ಪಾತಿಶಯದಿಂದವರ ಶಿವನ ಸನ್ನಿಧಿಗೆ ವಿ
ಖ್ಯಾತನೊಯ್ವುತ್ತಿರ್ಪ ಕಾಲದೊಳಗಂಬರದ ಮಧ್ಯದೊಳು ಶಿವನೆಸೆದನು ೫೮

ಗಣನಿಕರವೆರಸಿಯಂಬರದಲ್ಲಿ ರಾಜಿಪಾ
ತ್ರಿಣಯನಂ ಕಂಡತಿ ಪ್ರೀತಿ ಭೀತಿಗಳು ಸಂ
ದಣಿಸೆ ವಂದಿಸಿ ಕೀರ್ತಿಸುತ್ತಿರ್ಪರಂ ನೋಡಿ ಶಂಕರಂ ಪಾರ್ವತಿಯನು
ಪ್ರಣಯದಿಂ ನೋಡಿ ನುಡಿದಂ ಕೇಳಿ ದೇವತಾ
ಗ್ರಣಿಗಳಿರ ನೀವಂಜಬೇಡಿನ್ನು ಕೊಲ್ಲನೆ
ಮ್ಮಣುಗೆ ವೀರೇಶನೆಂದಾಗ ನಿರವಿಸಲು ಸಂತೈಸಿಕೊಂಡರು ವಿಬುಧರು ೫೫

ಬದುಕಿದೆವು ಶಿವಕೃಪೆಯ ಪಡೆದೆವೆಂದಮರರೆಂ
ಬುದ ಕೇಳುತಾ ಬ್ರಹ್ಮನಾ ಮಹಾಶಂಕರನ
ಪದಕೆಱಗಿ ಬಿನ್ನವಿಸಿದಂ ದೇವ ನಿಮ್ಮಾಜ್ಞೆಯಿಂ ಕೃತಾರ್ಥತೆವಡೆದರು
ಸದಮಲನೆ ಎನೆ ಪುತ್ರವಾತ್ಸಲ್ಯದಿಂದಜನ
ವದನವಮಂ ನೋಡಿ ಮನ್ನಿಸಿದೆವೈ ನಿನ್ನ ವಾ
ಕ್ಯದೊಳೆಂದು ನುಡಿದವರ್ಗಸುವಿತ್ತು ಮುನ್ನಿನಂತಿರೆ ಕೂರ್ತು ರಕ್ಷಿಸಿದನು ೫೬

ಆ ವೇಳೆ ಛಿನ್ನ ಭಿನ್ನಾಂಗಭಂಗಿತರಾದ
ದೇವೇಂದ್ರ ಮುಖ್ಯ ನಿರ್ಜರರಾ ಸರಸ್ವತಿ
ದೇವಿಮುಖ್ಯಾಂಗನೆಯರೆಯಿದೆ ಸೌಂದರತನುಗಳಂ ಪಡೆದು ಮುನ್ನಿನಂತೆ
ಶ್ರೀ ವಿಮಲ ಶಂಕರಂಗೆಱಗೆ ಮುದುವೋತನ ನಿ
ಜಾವಯವನಖಿಳ ವಿಪ್ರರು ತಿನಲ್ಕುಳಿದ ತಲೆ
ಯೇ ವಿಶೇಷದ ತಲೆಯದಾಗಲಮರಿಚಿ ದಕ್ಷಗಸುವಿತ್ತನಾ ದೇವನು ೫೭

ಪಡೆದು ಮುದುವೋತುದಲೆಯುಂ ದಕ್ಷನಾಗ ನಡ
ನಡುಗುತಂ ಸಾಷ್ಟಾಂಗವೆಱಗಿ ವಂದಿಸುತೆದ್ದು
ಮೃಡನ ಕೀರ್ತಿಸುತಿರ್ದನಲ್ಲಿ ಕೈಮುಗಿದಂಗವೇ ಪುರುಷರೂಪ ನಾಭಿ
ಯೆಡೆಯಿಂದಲೊಗೆವ ಶಬ್ದದ್ರವ್ಯ ಕಾರ್ಯವು
ಗ್ಗಡದ ಸಂಸ್ತವವಾ ಶಿರಚ್ಛಾಗಮುಯುವಾಗೆ
ಬಿಡದೆ ಸರ್ವೇಶ್ವರಾ ಸಲಹೆನ್ನನೆಂಬುದೆಮೆಮೆ ಎನುತ್ತ ನುಡಿದ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಗೆ ನೀವೇ ಗತಿ ಸದಾಶಿವಂ ಶಂಭು ಮೇ
ಯನಘನೇ ಮೆಯಶ್ಚಮೇ ಪ್ರಿಯಶ್ಚಮೇ
ಯೆನುಕಾಮಮೇ ಸೋಮಮೆ ಭದ್ರಮೇ ಮಹಾಶಯಶ್ಶ್ರೇಯಶ್ಚಮೇ ವಶ್ಯಮೇ
ಘನ ಯಶಾಮೇ ಭಾಗ್ಯಮೇ ದ್ರವಿಣಮೇ ಯಂತ್ರ
ದನುವೆ ಮೇ ಡುತ್ತಮೇ ಕ್ಷೇಮಮೇ ಧೃತಿಯೆ ಮೇ
ಸನಯದಿಂ ವಿಶ್ವಚ್ಚಮೆ ಎನುತ್ತ ಕೀರ್ತಿಸುತ್ತಿರ್ದನಾ ದಕ್ಷನೂ ೫೯

ಮೇ ಮೇ ಮಹಾಶ್ವಮೇ ಸಂದಿಶ್ಚಮೇಚ್ಛಾತ್ರಮೇ
ಮೇ ಮೇ ಸುಸೂಕ್ಷ್ಮ ಮೇ ಮೇ ಪ್ರಸೂಕ್ಷ್ಮಾತ್ರಶ್ಚಮೇ
ಮೇ ಮೇ ಶಿರಶ್ಚ ಮೇ ಮೇ ಮೆಲಯಶಮೆ ಮೇರುತೋ ಮೇ ಮೃತಶ್ಚಾ
ಮೇ ಮೇ ಮಹಾಯುಕ್ಷ ಯಾಶ್ಚಮೇ ಮೇಮೆಯಾ
ನಾ ಮಯನೆ ಜೀವಾತ್ಮ ದೀರ್ಘಾಯು ಯುಕ್ತಶ್ಚ
ಮೇ ಮೇ ಯನಾಮಿತ್ರ ಮೇ ರಕ್ಷ ಎಂದು ಕೀರ್ತಿಸುತಿರ್ದನಾ ದಕ್ಷನು ೬೦

ಮೇ ಮೇ ಯನಾಮಿತ್ರ ಮೇ ಮೇ ಭಯಶ್ಚಮೇ
ಮೇ ಮೇ ಸಖಂ ಚ ಮೇ ಶಯನಂ ಚ ಮೇ ಸಖಾ
ಮೇ ಮೇ ಸುಧೀನ ಮೇ ಸದೆದೊಂ ಸಹವದಗ್ರಣಿಯೆ ಸಹನೋ ಭವದ್ದೇವನೇ
ಸ್ವಾಮಿಸಹಕಾ ಭವತ್ಸಹಧಿರ್ಯಕರವಾವ
ಹೇಮದೀಶ್ವರನೆ ತೇಜಸ್ವಿನಾವಮಧಿಕಾಸ್ತು
ಮೇ ಮೇ ಮದೀಶ ಮಾವಿದ್ವಿಷಾವ್ಹೈ ಶಾಂತಿ ಶಾಂತಿ ಎಂದುಱಿ ಪೊಗಳಿದಾ ೬೧

ಒಡೆಯ ನಿನ್ನಂಘ್ರಿಯಂ ಮಱಿದಜ್ಞತೆಯೊಳಾನು
ತೊಡಗಿದೆಂ ಜನ್ನಮಂ ಸಲಹೆಂದು ದಕ್ಷನಾ
ಮೃಡನ ಕೀರ್ತಿಸುತಿರಲು ಸಲುಗೆಯಜನೆಱಗಿ ಕಾಣಿಸೆ ವಿಷ್ಣು ಮೊದಲಮರರಾ
ಪಡೆಯೆಲ್ಲ ವಂದಿಸುತ ಕೊಂಡಾಡುತಿರೆ ಶಿವಂ
ಮಡದಿ ಪಾರ್ವತಿವೆರಸಿ ವೀರಭದ್ರನನು ಸೆಳ
ದುಡುಗದಪ್ಪುತ ಭದ್ರಕಾಳಿಸಹಿತಂ ಮನ್ನಿಸಿದರತಿ ಪ್ರೀತಿಯಿಂದ ೬೨

॥ಗ್ರಂಥ॥ಶ್ರೀ॥ ಓಂ ಸಂಚಮೇ ಮಯಶ್ಚಮೇ ಪ್ರಿಯಂಚಮೇ
ನುಕಾಮಯಶ್ಚಮೇ
ಸೋಮಶ್ಚಮೇ ಭದ್ರಂಚ ಮೇ ಶ್ರೇಯಂಚಮೇ ವಸ್ಯಶ್ಚಮೇ
ಯಶಶ್ಚಮೇ ಭಗಶ್ಚಮೇ ದ್ರವಿಣಂಚಮೇ
ಯಂತ್ರಾಂಚ ಮೇ ದತ್ತಂಚ ಮೇ ಕ್ಷೇಮಶ್ಚಮೇ ಧೃತಿಶ್ಚಮೇ
ವಿಶ್ವಂಚಮೇ ಮಹಾಶ್ವಮೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂವಿಶ್ಚಮೇ ಜ್ಞಾತ್ರಂಚಮೇ ಸೂಕ್ಷ್ಮಂಚ ಮೇ ಪ್ರಸೂಕ್ಷ್ಮಂಚಮೇ
ಶಿವಂಚಮೇ ಲಯಶ್ಚಮೇ
ರುತಂಚಮೇ ಆಯುಷ್ಯಂಚಮೇ ನಾಮಯಶ್ಚಮೇ ಜೀವಾತ್ಮಶ್ಚಮೇ
ಮದ್ವಕ್ಷಂಚಮೇ
ದೀರ್ಘಾಯುತ್ವಂಚ ಮೇ ಅನಾಮಿತ್ರಂಚ ಮೇ ಭಯಂಚಮೇ
ಸುಖಂಚಮೇ ಶಯನಂಚಮೇ
ಸುಷಾಚ ಮೇ ಸುದಿನಂಚ ಮೇ ಓಂ ಶಾಂತಿ ಶಾಂತಿರಸ್ತು ॥

ಕರವ ಮುಗಿದಿರ್ಪ ವೀರೇಶನಂ ಬಿಗಿಯಪ್ಪಿ
ಪರಮೇಶನೆಯಿದೆ ಮೂರ್ಧ್ನಿಘ್ರಾಣಮಂ ಮಾಡಿ
ಕರಭಯಾತುರ ದಕ್ಷಗಭಯವಿತ್ತೆಲವೊ ನೀ ನೀ ವೀರಭದ್ರೇಶನಾ
ಚರಣದೋಲಗದೊಳಿಹುದೆಂದು ನಿರವಿಸಿ ಬಳಿಕ
ಹರಿಮುಖ್ಯ ದೇವರ್ಕಳಂ ನಿಜಾಶ್ರಯಕಟ್ಟಿ
ಹರುಷದಿಂ ಗಣನಿಕರವೆರಸಿ ಕೈಲಾಸಪೊಕ್ಕು ಸುಖಮಿರ್ದನಭವಂ ೬೩

ಮುನಿಗಳಿರ ಕೇಳಿರೈ ಹರಿಯೆ ಪೂಜಾರುಹಂ
ಘನವೆನಿಸುವಶ್ವಮೇಧಾಯಜ್ಞವಿಂದ್ರಾದ್ಯ
ರನುನಯದೆ ಭಾಗೆಗೊಂಬವರು ರುತ್ವಿಕ್ಕುಗಳು ತಾಪಸರು ಬಹುವಿಧಾನ
ಇನಿತು ಸತ್ಕೃತ್ಯವಾ ಯಜಮಾನ ದಕ್ಷಮೂ
ಢನಿಗಳಿದುಪೋಯ್ತು ಶಿವ ವಿರಹಿತಮದಾಗಲೆಂ
ದೆನೆ ನೀವು ಶಿವಕೃತ್ಯವಲ್ಲದುದ ಬಿಟ್ಟು ಶಿವನಂ ಭಜಿಪುದೆಂದ ನಲವಿಂ ೬೪

ಸಾದರದೊಳಾಲಿಸ್ವೈಯ್ಯ ವೀರಭದ್ರ ತ
ದ್ವಾದಶಾರೂಪಲೀಲಾಕಥನವೆಂದು ಸಂ
ಮೋದದಿಂ ಹಲಗೆಯಾರ್ಯ ಬೆಸಸಲೆಲೆ ಗುರುವೆ ಕೇಳಿ ಚರಿತಾರ್ಥನಾದೆ
ಆದಿಯಿಂ ಕಲ್ಪ ಕಲ್ಪದೊಳಿಂತಲಾ ವೀರ
ನಾ ದೈತ್ಯಹರನೃಸಿಂಹನ ಕೊಂದ ಸತ್ಕಥೆಯ
ಭೇದಮಂ ತಿಳುಪಬೇಕೆಂದು ಕೈಮುಗಿದಿರ್ದನಾ ಕೆಂಚವೀರಾಹ್ವಯಂ ೬೫

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸನ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಯ್ಯಣಾರ್ಯ್ಯಂ
ಶೀಲ ಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಪ್ವಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೊರ್ತು ಪದನಂ ಮಾಡಿದಂ ೬೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತ ವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾದುದು
ದುದು ದಕ್ಷಸಂಹಾರವೆನಲಲ್ಲಿಗೆರಡು ಕಾಂಡದ ಮೇಲೆ ಸಂಧಿ ನಾಲ್ಕು ೬೭

ಅಂತು ಸಂಧಿ ೪ ಕ್ಕಂ ಪದನು ೧೮೪ ಗ್ರಂಥ ೩ ಕ್ಕಂ ದಕ್ಷಾಧ್ವರ ಸಮಾಪ್ತ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೭

ವೀರೇಶ್ವರನು ನರಸಿಂಹನಿಗೆ ಶಂಖುಕರ್ಣನ ಕಥೆಯಂ ಹೇಳುವುದು

ದನುಜರಂ ಕೊಂದ ನರಸಿಂಹನಿರ್ದಲ್ಲಿಗೀ
ಶನ ನೇಮದಿಂ ಬಂದು ವೀರೇಶ್ವರಂ ಬುದ್ಧಿ
ಯನೆ ಪೇಳ್ದು ಜಱಿದು ಬಹು ಕಥೆಯೊಡನೆ ಶಂಖುಕರ್ಣನ ಕಥನಮಂ ಪೇಳ್ದನು

ಅಮರ್ದುಂಬರೆಲರುಣಿಗಳಿದಿರಾಗಿ ಮಾತಾಡೆ
ರಮಣಿಗಂಗೆಗೆ ತನ್ನ ತೊಡವಿತ್ತನಾಣ್ಮನೆಂ
ದುಮೆ ಕಿನಿಸೆ ಮೆಯ್ಗ್ಗಂಣ ಸವುದೆದಿನಿಜವ ನಿರುಳಡೆಗಮುಂನೀರಾಣ್ಮರು
ಕಮುಗಾಳಿಪೊಮ್ಮನೆಯನೆತ್ತೇಱಿಗಳು ತಳಕೆ
ನಿಮಿರ್ದು ಮೇಲಕ್ಕಾಡೆ ರಕ್ಕಸರ ಮುಪ್ಪೊಳಲ
ನಿಮಿಷದೊಳು ಚುರ್ಚಿ ಸಬ್ಬರ ಪೊರೆದ ಶಾಂತಮಲ್ಲಯ್ಯ ಪರಿರಕ್ಷಿಸೆಮ್ಮ ೧

ಪಂಕಮಂ ಪೊರ್ದದಾ ಜಡದ ಸಂಬಂಧವಿನಿ
ತಂ ಕೂಡದಾ ಮಧುವ್ರತಪಾತ್ರವಾಗದೆ ಕ
ಲಂಕದೊಳಾಕರಂಗಳ್ಕದಾ ನೀರ್ವೊಗದ ನಿನ್ನ ಸಿರಿಯಡಿದಾವರೆ
ಮುಂ ಕನತ್ಪುಣ್ಯದ ಜಡಸ್ವರೂಪದ ವಿವೇ
ಕಾಂಕ ನಿರ್ಮಲ ಮೋಕ್ಷ ವೀರಶೈವರ ಹರುಷ
ಸಂಕಲಿತವಾಯ್ತಲಾ ಶಾಂತನಂಜೇಶ ಜಯ ಜಯ ದಿವ್ಯ ಸುಪ್ರಕಾಶಾ ೨

ಎಂದ ಬಿನ್ನಪವನವಧರಿಸಿ ಗುರು ಪೇಳ್ದನಾ
ಸ್ಕಂದ ಪೌರಾಣದೊಳು ಕಾಳಿಕಾಕಾಂಡದೊಳ
ಗಂದೆಸೆವ ನೈಮಿಷಾರಣ್ಯಕ್ಕೆ ಬಾದರಾಯಣನ ಶಿಷ್ಯಪ್ರೌಢನು
ಬಂದಡಾ ಮುನಿಗಳಿದಿರೆದ್ದು ಸದ್ಭಕ್ತಿಯಿಂ
ವಂದಿಸಿ ಮಹಾ ಪೀಠವಿತ್ತು ಸತ್ಕರಿಸಿ ನಯ
ದಿಂದ ಬಿನ್ನಪವೆಂದು ಬೆಸಗೊಳುತ್ತಿರ್ದನಾ ಸೂತಪೌರಾಣೀಕನಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಮುನೀಶ್ವರ ಮುನ್ನ ಸರ್ವೇಶ್ವರಂ ಮಹೋ
ಜ್ವಲಶರಭರೂಪನೇಂ ಕಾರಣಂ ತಳೆದನ್ನೈ
ಮಲತಜ್ಞರಾರೆಂದು ಬೆಸಗೊಳಲು ದರಹಸಿತಮುಖನಾಗುತಾ ಸೂತನು
ನಲಿದು ಬಿತ್ತರಿಸತೊಡಗಿದನೀ ಕಥಾರಸಂ
ಸುಲಭವಲ್ಲನ್ಯರ್ಗೆ ಸರ್ವ ಪಾತಕಹರಂ
ಭಲರೆ ಕೇಳಿದಿರಲಾ ಕೃತಕೃತ್ಯರೈ ನೀವೆನುತ್ತ ಮತ್ತಿಂತೆಂದನು ೪

ಇದು ಎನ್ನ ಮಾತೈಸಲೆಯೆಂದು ನೀವು ಬಗೆ
ಯದಿರೆಂದು ಸರ್ವೇಶ್ವರಂ ನಂದಿಕೇಶಂಗೆ
ಮುದದಿಂದ ಬಿತ್ತರಿಸಿದಾ ಗ್ರಂಥಮಂ ಶಿಷ್ಯನೆನಿಸುವ ಸನತ್ಕುಮಾರಂ
ಪದಕೆಱಗಿ ಕೇಳ್ದದಾ ಶೈಲಾದಿಯಿಂದು ಪೇ
ಳಿದನಜಸುತಂ ವ್ಯಾಸಗೊರೆದನಂತಾ ಮುನಿಯ
ವದನದಿಂ ನಾಂ ಕೇಳ್ದೆನದಱಿಂದಲಿದು ಶಿವನ ನುಡಿ ಎಂದು ನಂಬಿ ಕೇಳಿ ೫

ಪ್ರಕಟಿಸುವೆನೈ ಮುನ್ನ ದಾನವಾಧಿಪ ಹಿರ
ಣ್ಯಕಶಿಪುವೆನಿಪ್ಪವಂ ಸೂಚ್ಯಗ್ರದೊಳು ಮಹಾ
ಧಿಕ ತಪವನೆಸಗಿದನನಂತ ವತ್ಸರದಲ್ಲಿಗಾ ಬ್ರಹ್ಮನೆಯ್ದಿದೆ ಬಂದು
ಅಕಟ ಬಳಲಿದೆಯಲಾ ನಿನ್ನಿಷ್ಟವೇನೆನಲು
ಸುಕರವೆನಲೆದ್ದು ವಂದಿಸಿ ಮಹೈಶ್ವರ್ಯವಿ
ತ್ತಕಲಂಕ ನೀನೆನ್ನ ಪೊರೆಯಿನ್ನು ಬೇಡುವೆಂ ಸುಖದೊಳಾಂ ಬಾಳ್ವಬಗೆಯ ೬

ಇರುಳಾನು ಸಾಯಲಿಲ್ಲೈ ಹಗಲು ಮಡಿಯದಾ
ನರರಿಂದ ಪಂಚತ್ವವೆಯ್ದದದಾ ಮೃಗದಿಂದ
ಮರಣವಾಗದ ಮನೆಯು ಹೊಱಗಳಿಯದೊಳಗೆ ಮೃತವಾಗದಾಯುಧಗಳಿಂದಾ
ಧರೆಯಲ್ಲಿ ಕಾಲಮಂ ಮಾಡದಾಗಸದೊಳುರು
ತರವಿಲಯ ವೆಯ್ದದಂತುತ್ತಮದ ಪದವಿಯಂ
ಕರುಣಿಸೆಂದಾ ವರಂಬಡೆದನಾ ರಕ್ಕಸಂ ಲೋಕಮಂ ಭಂಗಿಸುವೊಡೆ ೭

ಆ ರಾಕ್ಷಸಂ ವರಂಬಡೆದು ಲೋಕಗಳ ಸಂ
ಹಾರಮಾಡುತಿರೆ ಸರ್ವಜನರೆಯ್ದಿತಂದು
ಮಾರಮಥನಂಗೆ ಮೊರೆಯಿಡೆ ಹರಿಯು ಕರೆದು ನೀಂ ಪೋಗವನ ಕೊಂದು ಸರ್ವಾ
ಧಾರುಣಿಯು ಜನರ ಪೊರೆ ಎನೆ ಜೀಯ್ಯೆಯೆಂದು ಪದ
ವಾರಿಜಕ್ಕೆಱಗಿ ಬೀಳ್ಕೊಂಡು ಬಂದಜನಿತ್ತು
ದಾರ ವರದಿಂ ಕೊಬ್ಬಿದಸುರನಂ ಕೊಲೆಕಂಭದಿಂದೊಗೆದನಾ ಮುರಾರಿ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನರನಲ್ಲ ಮೃಗವಲ್ಲವರ್ಧಸಿಂಹಾಂಗವಾ
ಪುರುಷಾಂಗವರ್ಧವಿರುಳಲ್ಲ ಹಗಲಲ್ಲರ್ಧ
ತರಣಿ ಮುಳುಗುವ ಕಾಲ ಒಳಗಲ್ಲ ಹೊಱಗಲ್ಲ ಮನೆಯ ಹೊಸತಿಲ ಮೇಲಲಾ
ಧರೆಯಲ್ಲ ಗಗನವಲ್ಲಂ ತೊಡೆಯ ಮೇಲೆಯ
ತ್ಯುರುತರಾಯುಧವಲ್ಲ ಕೂರುಗುರ್ಗಳಿಂದಲಾ
ದುರುಳನುದರವ ಸೀಳಿ ರಕ್ತಮಂ ಕುಡಿದು ಕೊಬ್ಬಿದನಲಾ ನರಸಿಂಹನೂ ೯

ಆ ರಕ್ಕಸನ ರುಧಿರಮಂ ಕುಡಿದು ಕೊಬ್ಬಿ ಮುರ
ವೈರಿ ಶಿವನಂ ಮಱೆದು ಘೂರ್ಮಿಸುತ ಜಗವ ಸಂ
ಹಾರಮಂ ಮಾಡತೊಡಗಿದನಾ ಮಹಾದಾನವಂಗೆ ನೂರ್ಮಡಿ ಎಂಬಿನಂ
ವಾರಿಜಭವಾದಿ ಲೋಕದ ಜನರು ಬಂದಲ್ಲಿ
ಗೌರಿಸಹಿತಂ ಮಂದರಾದ್ರಿಯೆಡೆಯೊಳಗಿಪ್ಪ
ಮಾರಾರಿಯಂ ಕಂಡು ಮೊರೆಯಿಡಲು ಬಳಿಕಜಂ ನಮಿಸಿ ಕೀರ್ತಿಸುತಿರ್ದನೂ ೧೦

ಕಾಲಾರಿರುದ್ರ ಸರ್ವೇಶ್ವರನೆ ಶಂಕರನೆ
ಶೂಲಿಯುಗ್ರನೆ ಸರ್ವ ದುಷ್ಟಹರನೇ ನಮೋ
ವ್ಯಾಲಧರ ಕಾಲಕೂಟಂ ಸುಡುವ ಕಾಲದೊಳಗೆಮ್ಮ ರಕ್ಷಿಸಿದೊಡೆಯನೇ
ಶ್ರೀಲೋಲನೆಮ್ಮಿಬ್ಬರಧಿಕ ಗರ್ವವ ಬಿಡಿಸಿ
ಪಾಲಿಸುವ ಕರ್ತನೇ ನಿನ್ನ ಲೆಂಕರನು ಕೂ
ರ್ತಾಲೋಕನಂಗೆಯಿವುದೆಂದು ಕೊಂಡಾಡಿ ಬಿನ್ನವಿಸುತಿರ್ದಂ ಕಮಲಜಂ ೧೧

ನೀನಳ್ತಿಯಿಂದ ನುಡಿಸಲು ನುಡಿವ ಗಿಳಿಯವೊ
ಲಾನುಮಾ ವಿಷ್ಣುಮೊದಲಾದವಂದಿರು ಬಳಿ
ಕ್ಕೇನೆಂಬೆನೈಯ್ಯ ನೀಂ ಕಣ್ದೆಱೆದೊಡೆಮ್ಮುದಯ ನಿನ್ನ ಕಣ್ಣಂ ಮುಚ್ಚಿದಾ
ಆ ನಿಮಿಷದೊಳಗೆಮ್ಮ ವಿಲಯವಿದು ನಿಶ್ಚಯಂ
ದಾನವರ ರಕ್ತಮಂ ಕುಡಿದು ಕೊಬ್ಬಿಂ ವಿಷ್ಣು
ವಾನ್ನೃಸಿಂಹತೆಯಿಂದ ಲೋಕಮಂ ಕೊಲುತೈದನೈಯ್ಯ ಚಿತ್ತೈಸೆಂದನು ೧೨

ಆ ನೃಸಿಂಹಾಂಗಮಂ ಸಂಹರಿಸಿ ಲೋಕಮಂ
ನೀನೆ ರಕ್ಷಿಸಬೇಹುದೆಂದು ಬಿನ್ನವಿಸಲದ
ನಾನಂದದಿಂ ಕೇಳುತಂ ಹರಂ ನೆನೆದನಾ ವೀರಭದ್ರೇಶ್ವರನನು
ಏನೆಂಬೆನಾಕ್ಷಣದೊಳೆಯಿತಂದು ಶಂಕರಸ
ಭಾನಿಳಯದೊಡ್ಡೋಲಗದ ಮುಂದೆ ನಿಂದನ
ಲ್ಲಾ ನಲಿದು ಕೇಳಿರೈ ಮುನಿಗಳಿರ ಎಂದು ಬಿತ್ತರಿಸುತಿರ್ದಂ ಸೂತನು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಟ್ಟಹಾಸಂಗೆಯಿವುತಿಪ್ಪ ಗಣರಿಂದಲಡಿ
ಯಿಟ್ಟತ್ತಲಿತ್ತ ನೆಗೆವುತ್ತಿಪ್ಪವರ್ಗಳಿಂ
ಕಟ್ಟಧಿಕ ನರಸಿಂಹನುಗ್ರತೆಗೆ ಕೋಟಿಮಡಿಯಾದ ವೀರರ್ಕಳಿಂದ
ನೆಟ್ಟನೆಲ್ಲಾ ಕಡೆಗೆ ಪರಿದಾಡುವರ್ಗಳಿಂ
ಬೆಟ್ಟಂಗಳಂ ಚೆಂಡನಲ್ಪಿಡಿವ ಪಟುಭಟರ
ನಟ್ಟನಡುವಧಟ ವೀರೇಶ್ವರಂ ಮೆಱಿದನಳವಟ್ಟ ರೌದ್ರತೆಯೆಸಕದಿ ೧೪

ಪ್ರಳಯಕಾಲದ ಕಿಚ್ಚಿನಂತೆಸೆವ ಮೂಱುಕಂ
ಗಳಿನಧಿಕವಪ್ಪ ಹೆಗಲಲ್ಲಿ ಜೋಲುತ್ತಿಪ್ಪ
ವಿಳಸಿತ ಜಟಾಮಕುಟದಿಂಗಳಛ್ಛಾಯೆಂದು ಮಂಡಿತದೆ ಕಟವಾಯೊಳು
ಎಳೆವೆರೆಗಳೆರಡ ತಂದಮರಿಚಿದ ತೆಱದಿಂದ
ಲಳವಟ್ಟ ಕೂರ್ಪುಳ್ಳ ಕೋಱದಾಡೆಗಳಿನ
ಗ್ಗಳನಾದ ಖಂಡಳಧನುಮಖಂಡಸದ್ಭ್ರೂಲತಾಯುಗ್ಮದಿಂ ಬಳಿಕ್ಕಾ ೧೫

ಒಡನಾ ಮಹಾಪ್ರಚಂಡೋಗ್ರಹೂಂಕಾರದಿಂ
ಬಿಡದಖಿಳ ದಿಕ್ಕ ಬಧಿರತೆಯನೆಯಿದಿಸುತಿರ್ಪ
ಬೆಡಗಿನಿಂ ನೀಲಮೇಘಾಂಜನಾಕಾರದಿಂದಂ ಬೃಹದ್ಭುಜಯುಗಳದಿಂ
ಅಡಿಗಡಿಗೆ ಘಂಟೆಯುಂ ಡಮರುಗಂಗಳನೆಯಿದೆ
ನುಡಿಸುತ್ತ ಹೊಳೆವಾ ತ್ರಿಶೂಲಮಂ ತಿರುಪುತೆ
ನ್ನೊಡೆಯಂಗೆ ಸುತ ವೀರಭದ್ರೇಶನೆಱಗಿಯಾರ್ಭಡಿಸಿ ಬಿನ್ನವಿಸುತಿರ್ದಂ ೧೬

ಹರನೆ ಚಿತ್ತೈಸುದಿರ್ದಂತಿರುತ್ತೆನ್ನುವಂ
ಸ್ಮರಿಸಿದುದದೇಂ ಕಾರಣಂ ಬೆಸಸು ಬೇಗವಾ
ನುರವಣಿಸಿ ಕೋಳಾಹಳಂಗೆಯಿವೆನೆಂದು ಬಿಡದಾರ್ಭಡಿಸಿ ಕೇಳುತಿರಲು
ಮರಳಿ ನುಡಿದಂ ದೇವನೆಲೆ ಮಗನೆ ಹರಿ ಕೊಬ್ಬಿ
ನರಸಿಂಹವೇಷದಿಂದಖಿಳರಂ ಮುಳಿದು ಸಂ
ಹರಿಸುತಿರ್ದಪಕಂಡ್ಯ ತದ್ವಿಲಯಕಾರಣಂ ನೆನೆದವೆನುತಿಂತೆಂದನು ೧೭

ಬೇಗದಿಂ ವೀರಭದ್ರಾ ದುಷ್ಟನೆಡೆಗೆ ನೀಂ
ಪೋಗಿ ಬೋಧಿಸು ಕೇಳದಿರಲೆಮ್ಮ ರೌದ್ರದ ಮ
ಹಾಗರಿಮೆಯುಂ ತೋಱಿಯಜ್ಞನಂ ಶಿಕ್ಷಿಸುವೊಡಾವಗೂಪಾರೂಪನು
ರಾಗದಿಂ ತಳೆದು ಘೂರ್ಮಿಸುತಲಾತನ ಶಿರೋ
ಭಾಗವಮಂ ಪರಿದು ಚರ್ಮವನುಗಿದು ತಂದು ನೀ
ನೀಗ ಕೊಡು ನಡೆ ಎಂದು ಬೀಳುಕೊಟ್ಟಂ ಭರ್ಗನುಗ್ರನಾಭೀಳವಾರ್ಗಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ನಿರಪಿಸಿದೊಡೆ ಮಹಾಪ್ರಸಾದಂ ಜೀಯ್ಯ
ಕಂತುಮರ್ದನ ಎನುತ ವೀರಭದ್ರೇಶ್ವರನ
ನಂತ ಗಣನಿಕರ ಸಹಿತಂ ನಾರಸಿಂಹನಿಪ್ಪೆಡೆಗೆ ನಡೆತಪ್ಪಾಗಳು
ಶಾಂತರೂಪಂ ತಾಳಿ ಬರಲೆಸೆದನಾ ವಿಷ್ಣು
ಪಿಂತಸುರನುಗ್ರರುಧಿರಂಗೊಂಡು ಕೊಬ್ಬಿನಿಂ
ದಂ ತನ್ನದೇಹಮಂ ತಾನಱಿಯದಾರ್ಭಡಿಸುತಿರ್ದನೇ ವರ್ಣ್ಣಿಸುವೆನು ೧೯

ಕರಿಗಳಂ ಪಿಂಗಾಲುವಿಡಿದುಬ್ಬಿ ತಿಱಿಕ್ಕಿಂದು
ತಿರುಪುತಂಬರಕಿಟ್ಟು ಭುಜದ ತೀಂಟೆಗಳಿಂದ
ಗಿರಿಗಳಂ ಬಿಡದುದ್ದಿ ಕೆಡಪಿ ಹಿಡಿದೆತ್ತಿ ಗುರಿಮಾಡಿ ಕೆಲ ಪರ್ವತವನು
ಸರಿಸದಿಂ ದಿಡುತ ಕಲಕುತ್ತ ಸಾಗರಗಳಂ
ಪರಿದಾಡುತಿಪ್ಪ ನರಸಿಂಹನಂ ಕಂಡನಾ
ಪರಮ ವೀರೇಶನಘನಾಶ ರೌದ್ರದ ಕೋಶನುದ್ಯತ್ಪ್ರಕಾಶಧೀಶಾ ೨೦

ಬಂದು ಕಂಡಾ ವೀರಭದ್ರೇಶ ನುಡಿದಂ ಮು
ಕುಂದ ಕೇಳಯ್ಯ ನಿನ್ನಂತಪ್ಪ ಗರುವರಿ
ಲ್ಲಂ ದಯಾಪರ ನೀನು ಲೋಕಂಗಳೆಲ್ಲವಂ ರಕ್ಷಿಪಂ ನೀನೆನುತ್ತ
ತಂದೆ ಮಗನಿಗೆ ಕೂರ್ತು ಬುದ್ಧಿಯಂ ಪೇಳುತಿ
ಪ್ಪಂದದಿಂ ವಿನಯಪೂರ್ವಕವಾಗಿ ಸತ್ಕರಿಸಿ
ಪಿಂದೆ ನೀಂ ಸರ್ವರ್ಗೆ ಹಿತವ ಮಾಡಿದ ಬಗೆಯ ಮಱೆದೆಯಾ ಕೇಳೆಂದನೂ ೨೧

ತಮನೆಂಬ ರಾಕ್ಷಸಂ ವೇದಮಂ ಕದ್ದೊಯ್ಯ
ಲೆಮಗೆ ಸರ್ವರು ಬಿನ್ನವಿಸೆ ನಿನ್ನನಟ್ಟಲ
ಗ್ರಿಮದ ಮೀನಾಗಿಯಧಮನ ಕೊಂದು ವೇದಮಂ ತಂದಿತ್ತ ಹಿತವ ನೀನು
ಅಮಮ ವಿಲಯದೊಳಳಿದ ಭೂಮಿಯಂ ಕೂರ್ಮರೂ
ಪಮನಾಂತು ಬೆನ್ನಿನಿಂ ಪೊತ್ತೆತ್ತಿ ರಕ್ಷಿಸಿದ
ಸುಮತಿ ನೀನೀ ಧರೆಯ ಜನರ ಬಾಧಿಪುದುಚಿತವೇ ವಿಷ್ಣು ಕೇಳೆಂದನು ೨೨

ಧರಣಿಯಂ ಮತ್ತೊಬ್ಬ ರಕ್ಕಸಂ ತಟ್ಟಿಯಂ
ಸುರುಳುವಂದದೆ ಸುರುಳಿ ಪಾತಾಳಕೊಯ್ದಂದು
ನಿರವಿಸಿದೊಡೆಮ್ಮಾಜ್ಞೆಯಿಂ ಪೋಗಿ ಕಾದಿ ನಾನಾ ಪ್ರಕಾರದೊಳು ಮತ್ತಾ
ನರಕಾಸುರನ ವರಾಹತ್ವದಿಂ ನೀನೆ ಸಂ
ಹರಿಸಿ ಭೂಮಿಯನೆಂದಿನಂದದಿಂದಂ ತಂದು
ಹರಹಿ ಜನರಿಗೆ ಹಬ್ಬವೆನೆ ನೆಗಳಿದುತ್ತಮಾ ನೀಂ ಧರೆಗೆ ಮುನಿಯಬಹುದೇ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರನ ನೆನೆನೆನೆದು ಮೊರೆಯಿಟ್ಟಳುತ್ತಿರಲಧಿಕ
ಕರುಣಿ ಕರುಣಂ ಪುಟ್ಟಿಯಾ ಸಮಾಧಿಯೊಳಿರು
ತ್ತಿರುತ ಲಾಲಿಸುತ ಲಾಲಿಸಿ ಮೆಲ್ಲಮೆಲ್ಲನಾ ಧ್ಯಾನವೇ ಸಡಿಲಿ ಸಡಿಲಿ
ಬರುತಿಪ್ಪ ಭೇದಮಂ ತಿಳಿವುತಾ ರಂಭೆಯುರು
ತರ ಶೋಕದಲ್ಲಿ ಗಾನಂಗೂಡಿ ಪಾಡಿದಳು
ಪರಮೇಶನಂ ತನ್ನಿರೋಧಸುಖದಿಂದ ಘಮ್ಮನೆ ಕಂಗಳಂ ತೆಱೆದನು ೪೪

ಆಕೆಯುಂ ಕಂಡನಾ ಶಂಕುಕರ್ನ್ನಂ ಬಳಿ
ಕ್ಕೇಕಾಂತವಖಿಳಕಾಲದ ತಪಸಿ ಇವಳು ರಂ
ಭಾ ಕಾಂತೆ ರೂಪು ಯೌವ್ವನಭರಿತ ಮೋಹಿನಿ ಬಳಿಕ್ಕ ಹಾಡುತ ನೃತ್ಯವ
ಜೋಕೆಯಿಂ ತೋಱುತಿದ್ರುವರೆ ಕಂಡು ಕಾಮಿಸಿದ
ನಾ ಕಾಮನಂ ಗೆಲ್ದಮುನಿಪ ಸತಿಯುರ ಬಡುವ
ದೇಕಾಗದವರತ್ಯಪೂರ್ವವೆಂಬುದನಱುವಂತೆದ್ದನಾ ಸಮರ್ಥನು ೪೫

ಧಾರಿಣಿಯೊಳಂ ಬಿದಿರ ಸಿಗುರೊಂದ ನುಡಿವರದ
ನಾರಿಯೆಂದಾ ನಾಮಮಾತ್ರಕ್ಕೆಯೊಣಮರಂ
ಸೇರಿಯಿಕ್ಕಡೆಯಲ್ಲಿ ಬಾಗುತಿಪ್ಪುದು ಗಡಾ ನಱುಜವ್ವನದ ಸೊಕ್ಕಿನಾ
ತೋಱಿ ಕುಚದಬಲೆ ಏಕಾಂತದೊಳಗಿರೆ ಬಿಡುವ
ರಾರಿಳೆಯೊಳರಿದೆಂಬುದಂ ಪೇಳುವಂತೆದ್ದ
ನಾ ರಂಭೆಯಂ ತುಡುಕಿ ಹಿಡಿವುತಿರ್ದಂ ಶಂಕುಕರ್ನ್ನನಾಸ್ವಾದ್ಯಪರ್ನಾ ೪೬

ಬಾಲೆಯುಂ ತುಡುಕಿ ಪಿಡಿಯಲ್ಬಂದ ಪುಷ್ಪಕದ
ಮೇಲೆ ಬಿದ್ದವಳು ನಿಮಿಷಕ್ಕೆ ಸಗ್ಗಕೆ ಪೋದ
ವೇಲೆಯೊಳಗಧಿಕ ಕಾಮೋದ್ರೇಕದಿಂ ಪೊರಳುತಿರ್ದನಾ ಶಂಕುಕರ್ನ್ನಾ
ಆಲೋಕಸಂತತಿಯು ತೊಳಲಿ ಬರುತಿಪ್ಪವನ
ಮಾಲಿಯೇಱಿದ ಗರೋತ್ಮನಱಿಕ್ಕೆ ನೆಳಲಾಗೆ
ಮೇಲೀತನಾರೆಂದು ನೋಡೆ ಕಂಡಂಜಿ ಕೈಮುಗಿದನಾ ಹರಿ ಮುನಿಪಗೆ ೪೭

ಬಿಡದಾನು ಮೇಲೆ ಪೋದಪನೆಂದು
ಕೊಡುವನೋ ಮುನಿ ಎಂದು ನಿಂದಲ್ಲಿ ಗಡಗಡನೆ
ನಡುಗುತಿರೆ ಶಂಕುಕರ್ನ್ನಂ ನುಡಿದನುಳ್ಳುದಕ್ಕೆಮ್ಮ ಚಿತ್ತದ ಬಲ್ಮೆಯು
ಸಡಿಲಿತ್ತು ಸಂದೇಹವೇಕೆಂದು ನಿಶ್ಚೈಸಿ
ಜಡಜಲೋಚನರಂಭೆಯುಂ ಸಗ್ಗದಿಂದ ನೀ
ನೊಡಗೊಂಡು ಬೇಗ ಬಾಯೆನೆ ಹಸಾದಂ ಜೀಯ್ಯೆಯೆಂದನಾ ಕಮಲಾಕ್ಷನು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಿಷ್ಣು ನಿಮಿಷದೊಳು ಸಗ್ಗಕ್ಕೆ ಬರಲಾಗಿ
ದೇವೇಂದ್ರನಿದಿರೆದ್ದು ವಂದಿಸುತ್ತೆಲೆಲೆ ರಾ
ಜೀವಲೋಚನ ನಿನ್ನ ಭೃತ್ಯ ನಾನೆನ್ನ ಕರೆಯಿಸಿಕೊಳ್ಳದಿಲ್ಲಿತನಕಾ
ನೀವು ಚಿತ್ತೈಸಬಹುದೇಯೆನಲು ಸುರಪ ಕೇ
ಳೈ ವಿಶೇಷಾಗ್ರಗಣ್ಯರು ಸಕಲ ಶಿವನ ಭ
ಕ್ತಾವಳಿಗಳವರ ಬೆಸದಿಂ ಬಂದೆನೆನಲದೇಂ ಕಾರಣ ನಿರವಿಸೆಂದ ೪೯

ಘಳಿಲನೀ ರಂಭೆಯಂ ಕರೆದುಕೊಂಡೀಗ ಬಾ
ನಳಿನಾಕ್ಷಯೆಂದೆನ್ನನಟ್ಟಿದಂ ಮುನಿ ಕೂರ್ತು
ತಳುವಲೇಗೆಯಿವನೋಯೆನಲಿದಕ್ಕಿನಿತೇಕೆನುತ್ತ ರಂಭೆಯನಿಂದ್ರನೂ
ಕಳುಪಲೊಂದೇ ಪುಷ್ಪಕದೊಳೆಯಿತರುತ್ತಲ
ಗ್ಗಳವೆನಿಸುವೇಕಾಂತವಾಗಲಾ ರಂಭೆಯಂ
ಸೆಳೆದಪ್ಪಿ ಚುಂಬಿಸಿ ಕುಚಗ್ರಹಣಮುಖ್ಯ ಕಲೆಯಿಂ ವಿಷ್ಣು ನೆರದನಾಗ ೫೦

ಪುರುಷೈಕ ವಿಷ್ಣು ವನಿತೆಯರೊಳಾ ರಂಭೆಯನೆ
ಸುರತದಗ್ಗಳವೆಸಗಿ ಮುನಿಯ ಮುಂದಕ್ಕೆ ತಂ
ದಿರಿಸೆ ತಚ್ಛಿನ್ನಮಂ ಕಂಡೆಲವೊ ನಡುವೆ ಬಳಸಿದೆಯಾಯೆನುತ್ತ ಕೇಳೆ
ಕರವ ಮುಗಿದುಂಟುಂಟು ಜೀಯ್ಯಕಸವುಡುಗಲ್ಕೆ
ಕರಸಿದನೊ ಮುನಿ ಎಂದು ಯೇಕಾಂತವಾಗೆ ತೊ
ತ್ತಿರು ತೊಂಡರೊಂದುವುದು ಸಹಜವೆಂಬಂತೆ ಕೂಡಿದೆನೆಂದನಾ ಮುರಾರಿ ೫೧

ಎನೆ ಕೇಳ್ದು ಶಂಕುಕರ್ನ್ನಂ ತಪಂಗೆಟ್ಟುದೀ
ತನು ನಡುವೆ ಬಳಸಿದನೆನುತ್ತ ಹೇಹಂಬಟ್ಟು
ಮನವಳುಪಿದಪರಾಧಕೀಶನಂ ಭಜಿಸುವೆನೆನುತ್ತಲಂತಾ ವಿಷ್ಣುವಾ
ಮುನಿ ಕೆಡಹಿ ಮೆಟ್ಟಿ ತಲೆಗೂದಲಂ ತರದು ಬಿ
ಟ್ಟನು ಮುಂಜಿಕೇಶಿಯಾತಂ ನೀನಲಾ ದುಷ್ಟ
ದನುಜರಿಪು ನರಸಿಂಹ್ವ ನಿನ್ನ ಭಂಗಕ್ಕವಧಿಯೇ ಯೆಂದನುಗ್ರರೂಪಂ ೫೨

||ಸಾಕ್ಷಿ|| ಶ್ಲೋಕ॥ ಶಂಕುಕರ್ನ್ನಗಣೇನಾಪಿ ಛಿನ್ನಂತೇ ಕೇಶಸಂಚಯಾಃ ೨

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹ್ವಾಸ
ನಾಲಂಕೃತದ ಶಾಂತ ನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯ್ಯಂ
ಶೀಲಪಟ್ಟ್‌ಸ್ಥಲಿ ಹಲಗೆಯಂಚಾರ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲವೊ ನರಸಿಂಹ ದಕ್ಷನಯಜ್ಞದೊಳ್ ನೀನು
ಮಲೆಯೆ ನಿನ್ನಯ ಶಿರವನಱಿದುದಂ ಮಱಿದೆಯಾ
ಸಲೆ ಮಹಾಪ್ರಕೃತಿರೂಪ್ಪೆ ನೀನು ನಿನಗೆ ಪತಿ ರುದ್ರನೆಂಬುದ ಮಱಿದೆಯಾ
ಜಲಜಭವನುಂ ನೀನು ದೈವತ್ವಕೊಬ್ಬೊಬ್ಬ
ರುಲಿದು ಪೋರಲ್ಕೆ ತನ್ನುದರದೊಳು ತುಂಬಿಹವು
ಪಲವು ಲೋಕಗಳೆಂದೊಡಾ ಬ್ರಹ್ಮನುದರವುಂ ನೀ ಪೊಕ್ಕೆಯ್ಯೆ ಮಾಧವಾ ೩೪

ಅಜನುದರದೊಳು ದಿವ್ಯವರುಷಸಾಹಸ್ರ ನೀ
ರಜನಯನ ನೀನಿರಲ್ಕಾ ನವದ್ವಾರವುಂ
ಭುಜಬಲಂ ವಿಧಿ ಒಲಿದು ಕೊಂಡೊಡುಬ್ಬಸದಿಂದೆ ನೀಂ ಪೊಱಡಲನುಗೂಡದೆ
ಭಜಿಸೆಯಾತಂ ಗುದವನೇ ತೆಱಪುಗೊಡಲಧೋ
ಕ್ಷಜನಾಗಿ ನೀಂ ಪುಟ್ಟಿದಧವುತೆಯ ಮಱಿದೆಯಾ
ರಜತಾದ್ರಿಯೊಡೆಯ-ನೊಳು ನಿನಗಹಂಕಾರವೇ ಕೇಳ್ದಿವ್ಯವರುಷಮೆನಲು ೩೫

||ಸಾಕ್ಷಿ|| ಶ್ಲೋಕ|| ದಿವ್ಯವರುಷಸಹಸ್ರಾಂತೇ ಜಠರಾಂತಸ್ಯ ಧೀಮತಃ
ಅಧೋದ್ವಾರಾದ್ವಿನಿಷ್ಕ್ರಾಂತೊಹ್ಯಧೋಕ್ಷಜಭವಾಮ್ಯಹಂ ೧

ಬಳಿಕ ನಿನ್ನುದರದೊಳಗಜನೆಯ್ದೆ ಪೊಕ್ಕಡ
ಗ್ಗಳಮಪ್ಪ ನಾಭಿದೇಶವನೆ ತೆಱಪಂ ಕೊಡಲು
ನಳಿನಸಂಭವನಾಗಿ ನಿನ್ನ ಪೊಕ್ಕುಳತಾವರೆಯೊಳೊಗೆದನಾ ಬ್ರಹ್ಮನು
ಘಳಿಲನವನುಗ್ರತಪದಿಂ ಶಿವನ ಭಜಿಸುತೆ
ನ್ನಳಿಕದೊಳು ನೀಂ ಪ್ರಸನ್ನತೆಯಾಗಬೇಕೆಂದೊ
ಡಳಿವೆ ನೀನೆನೆ ಸತ್ತೊಡಂ ಸಾವೆನೆನಲಲ್ಲಿ ತೋಱಿದಿಂ ನಿಜರೂಪನು ೩೬

ಭ್ರೂಮಧ್ಯದೊಳಗಭವನಂ ನೆನೆವುತಿರ್ದನಾ
ತಾಮರಸ ಸಂಭವಂ ತಾನನಿತಱಲ್ಲಿಯಾ
ಶ್ರೀಮಹಾದೇವಂಪ್ರಸನ್ನನಾಗಲ್ಕೆರಡು ಹೋಳಾಗಿಯಾ ಬ್ರಹ್ಮನೂ
ಭೂಮಿಯೊಳು ಬೀಳೆ ಬಲವಿಕರಿಣಿ ಬಲಪ್ರಮಥ
ನಾವಿಗಳ ಲೀಲೆಗಳ ನೋಡುತೀಶ್ವರನಿರಲಿ
ಕಾಮೇಲೆ ಬಿನ್ನವಿಸಲಜನಸುವನಿತ್ತುದಂ ಮಱಿದೆಯಾ ನಾರಸಿಂಹಾ ೩೭

ವೀರೇಶನೆನಿಪನಾರೆಂದೊಡಾನಾ ಮಹಾ
ಭೈರವ ಮಹೇಶ್ವರನ ದೇವದೇವಾಧಿಪನ
ಮಾರಾರಿಯುಂಶವಾನ್ಯೆ ವಿನಯದಿಂದ ಪೇಳಿದೊಡೆಮ್ಮ ವಚನಂಗಳ
ಆರಯ್ಯದೆಲವೊ ನೀಂ ಪೋಱಿದಡೆ ನಿನ್ನ ಸಂ
ಹಾರವುಂ ಮಾಡುವೆಂ ರಕ್ಕಸನ ರಕ್ತದಾ
ಹಾರ ಬಲದಿಂ ಕೊಬ್ಬಿ ನುಡಿದು ಕೆಡಬೇಡ ಸಾರಿದೆನೆಂದನಾ ರುದ್ರನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಪುಲ ಬೋಧಾಮೃತವನೆಱೆದೆವೈ ನಿನಗೆ ನೀ
ನುಪಕಾರಮಂ ಮಾಡಿದರ್ಗೆ ದುರ್ಜನನಿಕರ
ವಪಕಾರಮಂ ಮಾಳ್ಪರೆಂತೆನಲು ಹಾಲೆಱೆಯೆ ಫಣಿ ವಿಷವ ಬಿಡದಂದದೆ
ಕುಪಿತನಾಗುತ್ತಿಹೆ ಕುಲಾಲಚಕ್ರದ ತೆಱದೊ
ಳಪರಿಮಿತ ಜನನಂಗಳೊಳ್ ಬಪ್ಪವಂ ನೀನು
ಚಪಲ ಕೇಳುತ್ಪತ್ತಿಯಾ ಸ್ಥಿತಿಲಯಂಗಳಿಲ್ಲದ ಶಿವಗೆ ನೀನು ಸರಿಯೇ ೩೯

ಮೀನಾಗಿ ಕೊಬ್ಬಿರ್ದ ನಿನ್ನ ಕೊಲಲಾಗಿ ನೀಂ
ಧ್ಯಾನಿಸಿ ಮಹೇಶನಂ ಸ್ತೋತ್ರಮಂ ಮಾಡಲೀ
ಶಾನನಂದಾ ನಿನ್ನ ಮತ್ಸ್ಯಾಂಗಮಂ ಶಿರೋವೇಷ್ಟನವ ಮಾಡಿದನಲಾ
ಆ ನಿಖಿಲ ವಾರಿಧಿಗಳಂ ಕಲಂಕುವ ದುಷ್ಟ
ಮಾನಸದ ಕಮಠನಂ ಕೊಂದೊಡನೆಯುರದಲ್ಲಿ
ಸಾನುರಾಗದೆ ಪದಕವಾಗಿ ನೀಂ ಭಜಿಸೆ ಧರಿಸಿದನಭವನದ ಮಱೆದೆಯಾ ೪೦

ಧಾರುಣಿಯ ಜನರನುಗ್ರತ್ವದಿಂದ ಪಂದಿಯಾ
ಕಾರಮಂ ತಳೆದು ಪರಿದಾಡಿ ಘೂರ್ಮಿಸುತ ಸಂ
ಹಾರವಂ ಮಾಡುತಿರಲಖಿಳರಂದು ಮೊಱೆಯಿಡೆ ಕೇಳುತಾ ಮಹೇಶಂ
ತಾರಕಾರಿಯ ಕಳುಪೆ ಬಂದವಂ ಮುಳಿದು ಭಾ
ಗೀರಥಿಯ ತೀರದೊಳು ನಿನ್ನ ತಲೆಯೊಡೆದು ಬಳಿ
ಕಾರಿ ಕೋಡಂ ಕಿತ್ತು ಶಿವಗಿತ್ತನದು ಶಿವನ ಹಸ್ತದೊಳಗದೆ ಮಱೆದೆಯಾ ೪೧

ಬಳಿಕ ಕೇಳೆಲವೊ ದೇವೇಂದ್ರನೋಲಗದಲ್ಲಿ
ನಳಿನಮುಖಿಯರು ರಂಭೆಯೂರ್ವಸಿಯರೊಬ್ಬೊಬ್ಬ
ರಳವಿಯೊಳು ಪೋರಿ ವನಿತಾಪ್ರಪಂಚಕ್ಕೆ ಘನವಾನು ತಾನೆಂದು ಪೊಣರೆ
ಘಳಿಲನಾ ನಾರದಂ ನುಡಿದನಾ ವೇಳೆ ನಿ
ಮ್ಮೊಳು ನೀವು ಹೋಱಲೇಕಾ ಶಂಕುಕರ್ಣ್ನನ
ಗ್ಗಳವಪ್ಪ ತಪವನಾವಳು ಕೆಡಿಸಿದವಳೆ ಪಿರಿಗಿಲೆಂದನಾ ಕಲಹಪ್ರಿಯಂ ೪೨

ಎಂದಡೂರ್ವಸಿಯು ಗೆಲಿದಪೆನೆನುತ್ತಾ ರಂಭೆ
ಬಂದಳಾ ಶಂಕುಕರ್ಣ್ನನ ಬಳಿಗೆಯಾ ಮುನಿಪ
ನಿಂದುಧರನಂ ಚಿತ್ತಪದ್ಮದೊಳ್ಬೈತು ತನ್ನಂ ತಾನೆ ಮಱೆದಿರಲ್ಕೆ
ಒಂದುಪಾಯುವ ನೆನೆದು ಕರುಣೆಗಳು ಯತಿಗಳಾಂ
ಮುಂದಳಲು ಕಣ್ದೆಱೆವರೆಂದು ಮೊರೆಯೋ ಶಿವನೆ
ತಂದೆ ಸರ್ವೇಶ್ವರಾ ಗತಿಯಾರೆನುತ್ತ ಘೋಳಟ್ಟಳಂತಾ ಮಾನಿನಿ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೂರ್ವಾಸಮುನಿ ಕೊಟ್ಟ ಶಾಪದಿಂದಂ ಬಳಿ
ಕ್ಕುರ್ವಿಯೊಳಗಂ ಹಿರಣ್ಯಕಶಿಪುವೆನಲ್ಪುಟ್ಟಿ
ಗರ್ವದಿಂದಖಿಳಮಂ ಸಂಹರಿಸುತಿರೆ ಕೇಳಿ ಕರೆದಾವು ನಿನ್ನ ಕಳುಪೆ
ಕೊರ್ವಿದಸುರನ ಹತಿಸೆ ನರಸಿಂಹರೂಪಾದ
ಪೂರ್ವದ ಕೃಪಾಕರಾ ನೀನಿಂತು ಕೊಲ್ವರೇ
ಸರ್ವರಂ ಶಾಂತಿರೂಪಾಗೆಂದು ಬೋಧಿಸುತ್ತಿರ್ದನಾ ವೀರೇಶ್ವರಂ ೨೪

ಆ ಮಹಾರಾಕ್ಷಸ ಬಲೀಂದ್ರ ತಪದಿಂ ಪಡೆದು
ಭೂಮಂಡಲವನಾಳುತಂ ವೀರದಿಂ ನಡೆಯೆ
ವಾಮನಾಕಾರದಿಂದಂ ಪೋಗಿ ಮೂಱಡಿಯ ಭೂದಾನವಮಂ ಬೇಡುತ
ನೀ ಮುದದೆ ಬೆಳೆದಾ ತ್ರಿವಿಕ್ರಮಾಹ್ವಯನಾಗಿ
ಆ ಮದಿಸಿದಾತನಂ ಕೊಂದುದಂ ಮಱೆದೆಯಾ
ನೀ ಮೋಹದವನೆಮಗೆಯದುಕಾರಣಂ ಶಾಂತನಾಗೆಂದು ಬೋಧಿಸಿದನು ೨೫

ಈ ವಿಧದೊಳಾರು ಲೋಕಕ್ಕೆ ಹಿತಮಂ ನೆನೆವ
ರಾವೇಳೆಯೊಂದೊಂದು ರೂಪಮಂ ತಳೆದವರ
ನೇ ವಿದಾರಿಸಿ ಸರ್ವರಂ ಪೊರೆವಮಂ ಕಣಾ ನೀನೀಶನಡಿಗಕ್ಕಱಿಂ
ಪೋವಿ ಕಣ್ಣಂ ಕೀಳುತರ್ಪಿಸಿದ ಸದ್ಭಕ್ತಿ
ಭಾವಶುದ್ಧನು ನಾವು ನಿರವಿಸಲ್ಕಕಟರಾ
ಜೀವಲೋಚನ ಮೀಱಬಹುದೆ ಕೇಳೆಂದು ವೀರೇಶನೊಡಬಡಿಸುತಿರ್ದಂ ೨೬

ಗಿರಿಸುತೆಯ ನಾಸಿಕಾಗ್ರದ ಮೂಗುತಿಯ ಮುತ್ತ
ನುರು ವಾಮದೇವಾಸ್ಯದಿಂ ಕನಕವರ್ಣ್ನವೆನಿ
ಸಿರೆ ಶಿವನ ದೇವಿ ನಿಂದಿಸೆ ನಿನ್ನ ಕೊರಲ ನಿನ್ನುಗುರಿಂದಲರಿದುಕೊಳಲು
ಪರಮೇಶನಸುವಿತ್ತು ಮೋಹದಿಂ ನಿನ್ನ ಸ
ತ್ಕರಿಸಿ ಮಾಹೇಶ್ವರಂ ನೀನೆಂದು ಮನ್ನಿಸಿದ
ಪರಿಯ ಮಱೆದಾ ನಮ್ಮ ಮಾತು ಗೇಳೆಂದು ಬೋಧಿಸಿದನಾ ವೀರೇಶ್ವರಂ ೨೭

ಶಿರದಲ್ಲಿ ಪೊತ್ತೈಣ್ಣೆಯೆಱೆದು ನೇರವ ಮಾಡೆ
ಕುರುಳುಗಳು ಮತ್ತೆ ಕೊಂಕುವ ಮಾಳ್ಕೆಯಿಂದೆ ಸ
ಕ್ಕರೆಯ ಕೊಳಲಾ ಶ್ಲೇಷ್ಮರೋಗಮತಿಶಯಮಪ್ಪ ಮಾಳ್ಕೆಯಿಂ ನಿಂಬವೃಕ್ಷ
ಪರಮಾಮೃತವನೆಱೆದೊಡಂ ಕಯ್ಪು ಬಿಡದಂತೆ
ನಿರಘವೀರೇಶ್ವರಂ ಬೋಧಿಸುತ್ತಿರ್ದೊಡಾ
ನರಸಿಂಹನಜ್ಞಾನದಿಂ ಕೊಬ್ಬಿ ಗಳಹಿದಂ ಶ್ರೀ ವೀರಭದ್ರನೊಡನೆ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಭದ್ರೇಶ್ವರನ ಬೋಧೆಯಂ ಕೇಳದಾ
ನಾರಸಿಂಹಂ ಕೊಬ್ಬಿ ಭಾಸ್ಕಳಂಗೆಡೆದು ನೀ
ನಾರದೆಲ್ಲಿಂದ ಬಂದೆ ಯೆನಗೆ ನೀನೇನು ಬುದ್ಧಿಯ ಪೇಳ್ವೆಯ್ಯೆ ಮುನಿದಡೆ
ಧಾರುಣಿಯನೊಂದು ತುತ್ತಾಗಿ ನುಂಗಿದಪೆನೊಲಿ
ದಾರಯ್ಯಲಖಿಳಮಂ ಪಾಲಿಸುವೆ ನಿನ್ನಯ ವಿ
ಚಾರವಾರಿಗೆ ಬಾರ್ತ್ತೆ ಪೋಗು ಪೋಗೆಂದು ಜಱೆವುತ್ತಿರ್ದನಾ ನೃಸಿಂಹಂ ೨೯

ಹುಟ್ಟಿಸುವೊಡಾನೆ ಕರ್ತಂ ಲೋಕವೆಲ್ಲವಂ
ನೆಟ್ಟನಾನಂದದಿಂದಂ ರಕ್ಷಿಪಂ ನಾನೆ
ಕಟ್ಟಕಡೆಯಲ್ಲಿ ಸಂಹಾರವಮಂ ಮಾಡುವಾತಂ ಕಣಾ ನಾನೆ ಧರೆಗೆ
ಕಟ್ಟರಸುದೈವ ನಾನೇ ಎಂದು ಗಹಗಹಿಸು
ತಟ್ಟಹಾಸದೊಳಾಡುತಿಪ್ಪ ನರಸಿಂಹ್ವನಂ
ದಿಟ್ಟ ವೀರೇಶ್ವರಂ ಕಂಡು ನಸುನಗುತಿರಲ್ಕಿಂತೆಂದನಾ ಮಾಧವಂ ೩೦

ನಾನೇ ಕಣಾ ದೈವವೆನ್ನ ಹೊಕ್ಕುಳೊಳೊಗೆದ
ನಾನಳಿನಸಂಭವಂ ತದ್ಬ್ರಹ್ಮನಳಿಕದಿಂ
ದಾನವ್ಯರುದ್ರನುದ್ಭವಿಸಿದಂ ರಾಜಸಂ ಸಾತ್ವಿಕಂ ತಾಮಸಗಳ
ಆ ನಿಖಿಳದುತ್ಪತ್ತಿಯುಂ ರಕ್ಷಣಂ ಬಳಿಕ
ಹಾನಿಗಳ ಕಲ್ಪಿಸಿದವಂ ನಾನೆನುತ್ತಲ
ಜ್ಞಾನದಿಂ ಶಿವನಿಂದೆವೆರಸಿ ಗಳಹುತ್ತಿರ್ದನಾ ನೃಸಿಂಹಂ ಕೊರ್ಬಿನಿಂ ೩೧

ಏವಂನಿಹಂ ತಾಮುಹನಿಶಮುಂ ತತ್ಪರಂ
ದೈವತಂ ನಾಸ್ತಿ ವಿಶ್ವಾಧಿಕಸ್ವಾತಂತ್ರ
ನೈ ವಿಚಾರಿಸೆ ಕರ್ತನುಂ ಭರ್ತನುಂ ಹರ್ತನುಂ ನಾನೆ ಮತ್ತೋಪವಂ
ಆವನೈ ತಾಳ್ವ ಮಾಮೇವ ಶರಣಂ ವ್ರಜೇತ್
ಆವಿಷ್ಣು ಬಾಯ್ಬುಳಿವ ಮಾತಿನಿಂ ಗಳಹಿದಂ
ಶ್ರೀವೀರಭದ್ರನಃ ಕರುಣಾಂಬುರಸಮುಯಸಮುದ್ರನನಘನ ರೌದ್ರನ ೩೨

ನರಸಿಂಹನಾಡಿದನ್ಯಾಯವಮಂ ಕೇಳುತ್ತ
ವರ ವೀರಭದ್ರೇಶ್ವರಂ ನಿರೂಪಿಸಿದನೆಲೆ
ದುರುಳ ಕೇಳೈ ಮನ್ನಿಸಲ್ಕುಲಿವುತಿರ್ದಪ್ಪೆ ನಿನ್ನನೀ ಕ್ಷಣಮಾತ್ರಕೆ
ಪೊರಸುವೆಂ ತಳುವಿಲ್ಲವೈ ಹಿಂದೆ ನೀನಿಂತು
ಹರನೊಡನೆ ಮಾರ್ಮಲೆಯಲವತಾರಗಳೊಳು ಸಂ
ಹರಿಸಿದನಲಾಶೂಲಿ ಎಂದವಂ ಬಿತ್ತರಿಸುತಿರ್ದನಾ ಶಿವರೂಪನು ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವೀರಪತಿಹರಿಯಜರವಲ್ಲಿಗೆರಡು ಕಾಂಡದ ಮೇಲೆ ಸಂಧಿ ಅಯಿದು ೫೪

ಅಂತು ಸಂಧಿ ೫೪ಂ ಪದನು ೨೫೭೮ ಗ್ರಂಥ ೫೪ಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೮

ನರಸಿಂಹಸಂಹಾರ-ಶರಭೇಶ್ವರ ಲೀಲೆ

ಕೂರ್ತು ಬೋಧಿಸೆ ಕೇಳದಿಪ್ಪ ನರಹರಿಯ ನಿಜ
ಕರ್ತುಸಿಯುಮದೊಳು ಸಂಹರಿಸಿ ಬಂದಾ ಶರಭ
ಮೂರ್ತಿ ಶಿವನಂ ಕಂಡನಖಿಳ ಲೋಕದ ಭಾಗ್ಯನಿಧಿ ತದ್ಗುಣಸ್ತೋತ್ರನು

ನೀರಂಧ್ರ ಸದ್ಘನಪಯೋಧರಾಪಾವನೆ ಸ
ರೋರುಹಾನನೆ ಯಮೃತವಾಚಿವಜ್ಜೀವನಾ
ಧಾರೆಯೆಂದಗಜೆಯುಂ ಪೊಗಳೆ ಕೇಳ್ದಲೆ ಧೂರ್ತ ನಿನ್ನ ತಲೆಯುಡರ್ದ ಹಲವೂ
ದಾರಿಯ ಕುಲೀನೆಯಾ ಪಾತಕರನೊಳಕೊಂಬ
ನಾರಿಯುಂ ನೆವದಿಂ ಪೆಸರ್ಗೊಂಡೆಯೆನಲವಳ
ನೇರಮಣಿ ನಿನಗೆಱಗಿಸುವೆನೆಂದು ಶರಣೆಂದ ಶಾಂತಮಲ್ಲೇಶ್ವರ ಜಯಾ ೧

ವಾರಣಾಸಿಗಳುಳ್ಳ ದನುಕೋಟಿಗಳು ಬಹು
ದ್ವಾರವತೀಪಟ್ಟಣಂಗಳನಾಳ್ವ ಬದರಿ
ಲ್ವೇರುತರ ಕುಚದ ಕಾಂಚೀದಾಮುವನಿತಾದಿ ಮಹದೈಶ್ವರಿಯದರಸರು
ಆ ರಾಜ್ಯರಾಜ್ಯದಿಂ ಬಂದು ಕಂಭದ ತೀರ್ಥ
ದೀ ರಮ್ಯತರ ಕಕುದ್ಗಿರಿಯ ಮೇಲಣ ಗವಿಯು
ದಾರಿ ಗುರುಶಾಂತನಂಜೇಶ್ವರನ ಪಾದಮುಂ ಕಂಡು ಸುಖದಿಂ ಬಾಳ್ವರು ೨

ಭಿಕ್ಷಾಟಣದೊಳು ವಿಶ್ವಕ್ಸೇನರೂಪಕಮು
ಲಾಕ್ಷ ನಿನ್ನಂ ಶೂಲದಿಂದಿಱಿದನಱಿಯೆಯಾ
ದಕ್ಷನೊಳು ಯಜ್ಞರೂಪದೊಳಿರಲು ನಿನ್ನ ಮಸ್ತಕವ ನಾವೆ ಹೊಡೆದುದಾ
ಆ ಕ್ಷಣದೆ ಮಱೆದೆಯಾ ನಿನ್ನ ಸುತಸೃಷ್ಟಿಯು
ಧ್ಯಕ್ಷನೆಂದಜ್ಞಾನದೀ ಮಱೆದು ನುಡಿಯಲ್ತು
ಯಕ್ಷನಾ ವಿಧಿಯ ಹೆದ್ದಲೆಯನುಗುರಿಂದರಿದ ಬಗೆಯು ತಿಳಿಯೆಲವೊ
ಮೂರ್ಖಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಡೆ ಭೋಂಕೆನಲಿಳಿದು ಪಿಡಿದೆತ್ತಿ ತೆಗೆದು ಚೆಂ
ಡಾಡುವಂತಿಟ್ಟು ಘೂರ್ಮಿಸುತೂರ್ಧ್ವಲೋಕಕೀ
ಡಾಡಿದಂತೆಯಿದಿ ಬೀಳ್ವನ ಗದೆಯ ತುದಿಯಿಂದಲಾಂತು ಚಿಮ್ಮುತ್ತ ಬಳಿಕಾ
ರೂಢಿಸಿದ ವಜ್ರಮಯ ಪಕ್ಷಾಗ್ರದೊಡ್ಡಿ ಬಳಿ
ಕಾಡಂಬರದೆ ಕುನುಂಗುತ ನಿಮಿರ್ದುಜಿರ್ದಲ್ಲಿ
ಜಿರ್ೋರಾಡಿ ಕಾಡಿ ಕೈದುಗಳ ಮೊನೆಮೊನೆಯೊಡ್ಡಿ ಲೀಲೆಯಿಂ
ಕೊಲುತಿರ್ದನು ೨೨

ಲೆಕ್ಕವಿಲ್ಲದ ಕೈಗಳಿಂ ನೃಸಿಂಹನ ಪಿಡಿದು
ಕುಕ್ಕುರಿಸಿ ಭೂಮಿಯೊಳಗೆತ್ತಿಹಾಯ್ಕುತ್ತಲ್ಲಿ
ನೆಕ್ಕು ನೆರಿ ನಿಟಿಲ ನೆಲುಗಳ್ಮುರಿಯಲೆದೆಯ ಮೆಟ್ಟುತ್ತ ಪದತಳದೊಳೊದೆದು
ಅಕ್ಕಕ್ಕು ಮಣಿಕಾಲು ಕಣಕಾಲು ಮೊಳಕೈಯ್ಯೊ
ಳಿಕ್ಕಿ ತಿವಿದೆಱಗಿ ಪಿಡಿದಪ್ಪಳಿಸಿದಂ ಭಾಪು
ಮುಕ್ಕಣ್ಣಶರಭನೆಲ್ಲಾ ಸುರರು ಜಯ ಜೀಯ್ಯ ಎಂದು ಕೀರ್ತಿಸುತಿರ್ದರು ೨೩

ಕಱ್ರನೆ ಕರಂಗಿ ಭಂಗಂಬಡುವನಂ ಪಿಡಿದು
ತಿಱ್ರಿಂದು ತಿರುಹುತ್ತ ಮುದುಡಿಯಾಕಾಶಕ್ಕೆ
ಬಿಱ್ರಿಂದೆಡುತ್ತ ಬಿರ್ದವನೆದೆಯ ಮೆಟ್ಟಿ ಬೊಬ್ಬಿರಿದು ಪೇರಲಗಿನಲ್ಲಿ
ಸಱ್ರಿಂದು ಸೀಳಿ ರಕ್ಕಸನ ರಕ್ತವ ಕುಡಿದು
ಘಱ್ರಿಂದು ತೇಗಿದವನೊಡಲಿಂದಲಲ್ಲಿ ಜುರು
ಜುಱ್ರಿನುತ ನೆತ್ತರ್ತಟಿಲ್ತಟಿ ಎನುತ್ತ ಸುರಿಯಲು ಭಂಗಿಸಿದನಧಿಕನು ೨೪

ಮೇಲ್ಗೆಯಿದು ಕುಡಿದ ದನುಜನ ರಕ್ತವೆಲ್ಲವುಗೆ
ಪಲ್ಗಿರಿದು ಭಯದಿಂದ ಶರಭದೇವರ ಚೆಲ್ವ
ಕಾಲ್ಗೆಱಗಿ ಕೈಮುಗಿದು ಮದವುಡುಗಿ ಒಡೆಯನೆಂದಱಿದು ಜಯ ಜೀಯ್ಯ ಎಂದು
ಸಾಲ್ಗೊಂಡ ದೇವರೆಲ್ಲಂ ನೋಡುತಿರೆ ಮೊದಲ
ವೋಲ್ ಗರುವತನವಾಗಿ ಪೊಗಳತೊಡಗಿದನಲಾ
ನಾಲ್ಗಯ್ಯನಹ ವಿಷ್ಣು ಮೃದುಮಧುರವಹ
ಮಹಾಸ್ತೋತ್ರದಿಂದೇವೊಗಳುವೆ ೨೫

ಶ್ರೀಯೂಣ್ಮಾನಾ ನಮೋ ರುದ್ರಾಯ ವಿಪುಳ ರೌ
ದ್ರಾಯ ಎನುತಂ ಮಹೋಗ್ರಾಸಾಯ ಜಿಷ್ಣುವೆ
ಸ್ವಾಯತೋಗ್ರಾಯ ಭೀಮಾಯ ಕೃದ್ಧಾಯ ಮನ್ಯವೆ ದೇವದೇವನೆ ನಮೋ
ಕಾಯಜಾಂತಕನೇ ಭವಾಯ ಶಂಕರನೆ ಸ
ರ್ವಾಯ ಸಶಿವಾಯ ಕಾಲಾಯ ತೇ ಕಾಲ ಕಾ
ಲಾಯತೇ ತನ್ಮಹಾ ಕಾಲಾಯ ಮೃತ್ಯುವೇ ಎಂದು ವೀರನ ಪೊಗಳಿದಾ ೨೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಾಯ ವೀರಭದ್ರಾಯ ವಿಲಸಕ್ಷಯ
ದ್ವೀರಾಯ ಶೂಲಿನೆ ಶ್ರೀ ಮಹಾದೇವಾಯ
ಚಾರುಮಹತೇ ಪಶೂನಾಂ ಮಹಾಪತಯೇ ನಮೋ ನಮೋ ಸರ್ವೇಶ್ವರಾ
ಆರಯ್ಯಲೇಕಾಯ ನೀಲಕಂಠಾಯತೇ
ಪ್ರೇರಕ ಶ್ರೀಕಂಠನೇ ಮತ್ಪಿನಾಕಿನೇ
ಗೌರಿಯರಸನೆ ಯನಂತಾಯ ಸೂಕ್ಷ್ಮಾಯ ನಮ ಎಂದು ಕೀರ್ತಿಸುತಿರ್ದನು ೨೭

ಹರಮೃತ್ಯುವೇ ಪರಾಪರವೆ ಪರಮೇಶ ತ
ತ್ಪರತರಾಯ ನಮಃ ಪರಾಪರಾಯ ನಮಸ್ಸ
ದುರು ಸುವಿಶ್ವಾಯತೇ ವಿಶ್ವಮೂರ್ತಿಯೇ ನಮಸ್ತೇ ಎಂದು ಕೀರ್ತಿಸುತ್ತಾ
ಹರಿಕಳತ್ರಾಯ ವಿಷ್ಣುಕ್ಷೇತ್ರಭಾನವೇ
ಸರಸ ಕೈವರ್ತಾಯ ತೇ ಕಿರಾತಾಯ ತೇ
ಗುರುವೇ ಮಹಾವ್ಯಾಧರೂಪಿಣಿಯೇ ಎಂದು ನರಸಿಂಹ್ವನಭವನ ಪೊಗಳಿದಾ ೨೮

ವರಶಾಶ್ವತನೆ ಭೈರವಾ ಶರಣ್ಯನೆ ಮಹೋ
ತ್ಕರ ಭೈರವಾವಯನೆ ನರಸಿಂಹ್ವರೂಪ ಸಂ
ಹರನೆ ಕಾಮಾಂತಕ ಪುರಾರಿಯೆ ಪಾಶಹರನೇ ವಿಷ್ಣುಮಾಯಾರಿಯೆ
ಉರುತರತ್ರ್ಯಂಬಕತ್ರ್ಯಕ್ಷ ಶಿಪಿವಿಷ್ಟಾಯ
ಗುರುಮೀಢುಷೇಚ ಮೃತ್ಯುಂಜಯನೆ ಸರ್ವಜ್ಞ
ಪರತರ ಮಖಾರಿಯೆ ನಿನಗೋಸ್ಕರಂ ನಮಸ್ಕಾರವೆಂದುಱಿ ಪೊಗಳಿದಾ ೨೯

ಪ್ರೀತಿಯ ವರೇಣ್ಯನೇ ಖಷೋಲ್ಕಾಯತೇ ವಹ್ನಿ
ರೇತಸೇ ಪ್ರಾಣಾಯ ಜೀವಾಯ ಸತ್ಪ್ರಾಣ
ದಾತತತ್ಪ್ರಾಣ ಮುಮಃಪ್ರಾಣಪ್ರವರ್ತಿನೇ ತೇ ನಮೋ ದೇವ ದೇವಾ
ಖ್ಯಾತ ತತ್ತ್ರಿಗುಣಾಯತೇ ತ್ರಿಶೂಲಾಯತೇ
ಸಾತಿಶಯವಹ ಗುಣಾತೀತಾಯ ಯೋಗಿನೇ
ಸ್ವಾತಂತ್ರ್ಯಮೂರ್ತಿ ನಿನಗೆಱಗುವೆಂ ನಾನೆಂದನಾ ನೃಸಿಂಹಂ ಭಕ್ತಿಯಿಂ ೩೦

ಆಯತದೆ ಸಂಸಾರಯಂತ್ರವಾಹಾಯಾಮ
ಹಾಯಂತ್ರವರ್ತಿನೇ ಚಿದ್ವ್ಯೋಮ ಸೂರ್ಯಾಯ
ತೇ ಯಧಿಕಮೂರ್ತಿ ವೈಚಿತ್ರತರಹೇತವೆ ವರದಾವಿಕಾರಾಯ ತೇ
ಈ ಯವನಿಯಖಿಳ ಕಾರಣಹೇತವೇ ನಮೋ
ಧ್ಯೇಯನೇ ಕಪಾಲಿನೇ ಸರ್ವವಿಲಸತ್ಕರಾ
ಳಾಯ ಪತಯೇ ಪುಣ್ಯಕೀರ್ತಯೇ ನಮ ಎಂದು ಕೀರ್ತಿಸಿದನಾ ನೃಸಿಂಹಂ ೩೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತಿ ತೀಕ್ಷ್ಣವಹ ಕೋಱೆದಾಡೆಗಳ ಚಂಚುವಿಂ
ನುತ ಕಾಳಕಂಠದಿಂ ವಜ್ರಮಯನಖಮಹಾ
ದ್ಯುತಿಕೊಡೆ ಪಸರಿಸೆ ಮಹಾಪುಚ್ಛವಖಿಳ ಲೋಕಂಗಳಂ ಬಳಸುತಾಡೆ
ಕ್ಷಿತಿಯಲ್ಲಿ ಮೆಟ್ಟಿದಡಿ ನಾಲ್ಕಗ್ನಿಯಂತೆ ಉ
ನ್ನತದಲ್ಲಿ ಮೆಱೆವ ಪಾದಂ ನಾಲ್ಕಱಿಂದಲೂ
ರ್ಜಿತ ಶರಭದೇವನ್ನೊಪ್ಪುತ್ತಿರ್ದನಖಿಳ ಲೋಕದ ಜನರು ನಮಿಸಿ ಪೊಗಳೆ ೧೪

ಕಾರ್ಮುಗಿಲಸಮದೇಹದಿಂದ ಹೂಂಕಾರದಿಂ
ಘೂರ್ಮಿಸಲಜಾಂಡವೊಡೆವಂತಾಗಲುತ್ಕಟದೆ
ಘರ್ಮಜಲವಂಗದೊಳು ತೋಱಲಧರೋಷ್ಟಂಗಳೆಯ್ದೆ ಮಿಡಿವುತ್ತ ಮೆಱೆಯೆ
ಪೆರ್ಮೆಯಿಂದೆಸೆವ ಶರಭನ ಮಹಾರಾವಕ್ಕೆ
ಭರ್ಮಾದ್ರಿಮುಖ್ಯ ಪರ್ವತವಳ್ಕುತಿರೆ ತನ್ನ
ವರ್ಮವಱಿವಖಿಳ ಗಣನಿಕರಂಗಳೆಯ್ದೆ ಕೊಂಡಾಡೆ ವೀರಂ ಮೆಱೆದನು ೧೫

ಶರಭಸಾಳುವದಲ್ಲಿ ಚಂದ್ರಾರ್ಕವಹ್ನಿಯಾ
ಸ್ಫುರಿಪಕ್ಷಿಕುಲಿಶನಖ ಚಂಚೂಗ್ರಜಿಂಹ್ವೆಯುರು
ತರ ಕಾಳಿ ದುರ್ಗಿಗಳು ಪಕ್ಷಹೃದಯಂ ಭೈರವಂ ಜಠರವೇ ಬಾಡಬಂ
ಅಡಿ ಎಂಟಕೆರಡೆರಡಲಾ ವ್ಯಾಧಿ ಮೃತ್ಯುಗಳು
ವರ ವಾಯುವೇಗವಂತಖಿಳ ಶತ್ರುಗಳ ಸಂ
ಹರಿಪುಗ್ರಮೂರ್ತಿ ಕಲ್ಪಾವಳಿಗಳೊಳ್ಮೆಱೆವ ವೀರನೊಪ್ಪುತ್ತಿರ್ದನು ೧೬

॥ಸಾಕ್ಷಿ॥ಶ್ಲೋಕ॥ ಸಹಸ್ರಬಾಹುರ್ಜಟಿಲ ಶ್ಚಂದ್ರಾರ್ಧಕೃತ ಶೇಖರಃ
ಮೃಗಸ್ತ್ವರ್ಧಶರೀರೇಣ ಪಕ್ಷಾಭ್ಯಾಂ ಚಂಚುನಾದಿಭಿಃ ೧

ಅತಿತೀಕ್ಷ್ಣಮಹಾದಂಷ್ಟ್ರೋ ವಜ್ರತುಲ್ಯನಖಾಯುಧಃ
ಕಂಠೇ ಕಾಳೋ ಮಹಾಪುಚ್ಛ ಶ್ಚತುಷ್ಪದ್ವಹ್ನಿ ಸಂನಿಭಃ ೨

ಅಧೋಗತ ಚತುಷ್ಪಾದ ಉಪರಿಷ್ಟಾಚ್ಚತುಃ ಪದಃ
ಯುಗಾಂತೋದ್ಯತ ಜೀಮೂತ ಭೀಮಗಂಭೀರ ನಿಃಸ್ವನಃ ೩

ಸಮುಸತ್ತ್ವಪ್ರವೃತ್ತಾಗ್ನಿ ವ್ಯಾವೃತ್ತನಯನತ್ರಯಃ
ಸ್ಪಷ್ಟದಂಷ್ಟ್ರಾಧರೋಷ್ಠಶ್ಚ ಹೂಂಕಾರಮುಖರೋ ಹರಃ ೪

ಶರಭಸಾಳುವದರಲ್ಲಿ–ಸೃಗ್ಧರಾವೃತ್ತ

ಚಂದ್ರಾರ್ಕೋವಹ್ನಿದೃಷ್ಟಿಃ ಕುಲಿಶವರ ನಖಶ್ಚಂ ಚುರತ್ಯುಗ್ರಜಿಹ್ವ
ಕಾಳೀ ದುರ್ಗಾಚಪಕ್ಷಾ ಹೃದಯ ಜಠರಗೌ ಭೈರವೋ ವಾಡಬಾಗ್ನಿಃ
ಊರೌಚ ವ್ಯಾಧಿಮೃತ್ಯುಃ ಶರಭವರಧರಶ್ಚಂಡವಾತಾತಿವೇಗಂ
ಸಂಹರ್ತೇಸವಶತ್ರುಸ್ಸಜಯತು ಶರಭಸ್ಸಾಳುವಃ ಪಕ್ಷಿರಾಜಃ ೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಂಡರಿಗೆ ಗಂಡನೆನಿಸುವ ಶರಭಮೂರ್ತಿಯಂ
ಕಂಡು ಸುರ ಮನುಮುನಿಗಳಳ್ಕಿ ನುಡಿದರು ಮಹೋ
ದ್ದಂಡ ನೀ ನರಸಿಂಹನಂ ಕೊಂದು ಬಳಿಕಲೆಂಮೆಲ್ಲರಂ ರಕ್ಷಿಸುವನೋ
ದಿಂಡೆಯನ ಹತಿಸಿ ಬಳಿಕಾವೆಲ್ಲ ಸಹಿತೀಯು
ಜಾಂಡವಮಂ ಕಿತ್ತು ಕರದಿಂದ ಪಿಡಿದಿಟ್ಟು ಹೊಡೆ
ಚೆಂಡಾಡಿ ಸಂಹರಿಪನೋ ಮಹಾದೇವ ಹರಹರ ಎಂದು ಕಂಪಿಸಿದರು ೧೭

ಘುಳುಘುಳಿಪ ಶರಭಮೂರ್ತಿಯ ಮಹಾತೇಜದ
ಗ್ಗಳವನಂತಾರ್ಕಪ್ರಭಾಮಯದೊಳಿರೆ ಮಿಂಚು
ಬುಳುವಿನಂತಾದುದಾ ನರಸಿಂಹನಿರವು ಘುಡುಘುಡಿಸುತಿಹ ಸಿಡಿಲ ಧನಿಗೆ
ಅಳುಕಿ ಭಯದಿಂದ ಮೇಲಂ ನೋಡಲಂಜುತಿಹ
ಕಳಹಂಸೆಯಂತಾದ ಹರಿಯು ಕಾಣುತ್ತಹೋ
ಯಿಳಿದನಾಕಾಶದಿಂ ಸುರರ ಜಯ ಜಯ ಮಹಾರಾವದಿಂದುಗ್ರಮೂರ್ತಿ ೧೮

ಘುಡು ಘುಡಿಸುತಾಕಾಶದಿಂದಿಳಿದನಮ್ಮಮ್ಮ
ಬಿಡದಲೆವ ಪಕ್ಷಸಂಚಾರಪವನಂಗಳು
ಗ್ಗಡಕೆ ತರಗೆಲೆಯಂತೆ ಹಾಱಿ ಪರ್ವತನಿಚಯವರರೆ ಮಝ-ಭಾಪು ನಿನ್ನಾ
ಅಡಿಯೆ ಗತಿಯೆನಲಖಿಳ ಲೋಕವಂತಾಗಳಾ
ರ್ಭಡಿಸುತ್ತ ಹೂಂಕಾರದಿಂದಾ ನೃಸಿಂಹ್ಯನಂ
ಹೊಡದೆತ್ತಿ ಱಿಕ್ಕಿಯಿಂದೌಂಚಿ ಪಾರಿದನಹೋ ಧ್ರುವಮಂಡಲಕ್ಕೆ ವೀರಂ ೧೯

ಏನೆಂಬೆನಾ ನೃಸಿಂಹ್ವನನಿರುಂಕುತ್ತಲು
ಡ್ಡೀನ ಸಂಡೀನ ಖಗಗತಿಯಿಂದ ಪಾಱಿ ಸುರ
ಸೇನೆ ಜಯ ಜೀಯ್ಯ ಮಝು ಭಾಪೆನಲು ಹಾಯ್ಕುತ್ತ ನೆಲಕೆ ಬೀಳ್ವುದಕೆ ಮುನ್ನಾ
ಆನುತಾಚಂಚುವಿಂದಂ ಕದ್ರುಕಿ ಕೊಡಹುತ್ತ
ನಾನಾ ಪ್ರಕಾರದಿಂ ಭಂಗಿಸುತ್ತಿರ್ದನಂ
ತಾ ನಾರಸಿಂಹ್ವನಂ ವೀರನತಿಧೀರ ಸಾಕಾರರೌದ್ರಾಪೂರನು ೨೦

ಸಾಕಾರಶರಭನಾ ಪಕ್ಷದ್ವಯಂಗಳಿಂ
ದೌಕಿದುರ್ಜನನ ಭಂಗಿಸುತಲಂತಾ ಭುವ
ರ್ಲೋಕವಾ ಸತ್ಯಲೋಕಂ ತಪರ್ಲೋಕದೆಡೆಗೊಯ್ದು ಕೊಡಹುತ ಪಾಱಿ
ಏಕಡೆಯೊಳಮರರವಿಮಾನವಾ ತಾರಕಾ
ನೀಕವಾ ಪಕ್ಷಹತಿಗೆಣ್ದೆಸೆಗೆ ಪಾಱುತಿರೆ
ಹಾಕಿದಂ ಭೂತಳಕ್ಕಾನೃಸಿಂಹ್ವನ ಧಿಮ್ಮೆನಲ್ಬಿದ್ದನಿಳೆ ನಡುಗಲು ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನ್ನ ಮಗನೆನಿಪ ಕಾಮಂ ಬಂದು ಶಂಭುವಂ
ನಿನ್ನನುಜ್ಞೆಯೊಳೆಸಲು ಹರನುರುಪುತಿಪ್ಪಲ್ಲಿ
ನಿನ್ನ ನೀನಱಿದೆಯಾ ಸತ್ತಿದ್ದಯಾ ಕಾಯ್ದುಕೊಳಲಿಲ್ಲವೆ ಬಳಿಕ್ಕಾ
ಅನ್ನಯದೊಳಿದಿರಾಗಿಯಾ ದಧೀಚಿಯು ಕೂಡೆ
ಸನ್ನಾಹವಮಂ ಮಾಡಿ ಚಕ್ರದಿಂದಿಡಲಾಗಿ
ಛಿನ್ನ ಛಿನ್ನಂ ಮಾಡಿ ಬಿಟ್ಟುದಂ ಮಱಿದೆಯಾ ಶಿವನ ಭಕ್ತರ ಬಲ್ಮೆಯಾ ೪

ದಾನವಾಂತಕನೆ ಪಾಲ್ಗಡಲಲ್ಲಿ ಪುಟ್ಟಿರ್ದ
ಡಾನಂದದಿಂದ ಪೊಗದುಪವುನ್ಯುಕೊಂಬಲ್ಲಿ
ನೀನವನ ಗಂಟಲೊಳು ಸಿಕ್ಕಿ ಕೇಕರಿಸಿಯುಗುಳಲ್ಕ್ಯೇಷ್ಮದೊಳ್ಪುದುಂಗಿ
ನಾನಾ ನಿರೋಧದಿಂ ಪೊರಳುತಿರೆ ಮುನಿ ಕಂಡು
ನೀನಾರೆನಲ್ಕೆ ಕರುಣಂ ಪುಟ್ಟುವಂದದಿಂ
ನಾನ್ಯೈಯ್ಯಕೃಷ್ಣನೆಂದತಿ ದೈನ್ಯದಿಂ ನುಡಿದುದಂ ಮಱಿದೆಯಾಯೆಂದನು ೫

ನೀನಾದಿ ಹುಲುಕಡೆಯಾದ ಜೀವರ್ಕಳುಮು
ಹಾನಿಧಿ ಮಹೇಶ್ವರನ ಶಕ್ತಿಯಾಜ್ಞೆಯೊಳಿಪ್ಪ
ರೈ ನಳಿನಲೋಚನಾ ತಚ್ಛಕ್ತಿಯುಱಿಯೆ ತದ್ವಿಷ್ಣೋಃ ಪರಮಿದೆಂಬುದಾ
ಸಾನುರಾಗದೆ ಯಃ ಪ್ರಪಶ್ಯಂತಿ ಸೂರಯೋ
ಧ್ಯಾನಾತಿಗಮ್ಯನೆಂಬುದಂ ಬಳಿಕಲ
ಜ್ಞಾನದಿಂ ನೀನಱಿಯೆಯಾ ನಾರಸಿಂಹಯೆನುತಿರ್ದನಾ ವೀರಭದ್ರಂ ೬

ಅವ್ಯಯನನಗ್ರಗಣ್ಯನ ಮಹಾದ್ಯವಾಪು
ಥುವ್ಯಯೆನುತ್ತಿಂದ್ರ ಯಮ ವರುಣ ಚಂದ್ರರಾ
ಭವ್ಯಲೋಕಾವಳಿಯ ನಿರ್ಮಿಸಿದನ್ನೈ ನೀನು ಕಾಲಾನುಕಾಲಕಾಲ
ಸೇವ್ಯನಾ ಸ್ಥಿರಧನ್ವನಾ ಕ್ಷಯದ್ವೀರನಾ
ನವ್ಯ ಮೃತ್ಯೋರ್ಮೃತ್ಯುವೆಂದುವೇದಂ ಬಿಡದೆ
ಸವ್ಯಾಪಸವ್ಯದಿಂ ಬಲವಂದು ಪೊಗಳುತಿಪ್ಪುದನಱಿಯೆಯಾ ನೃಸಿಂಹ ೭

ಭೃಗುಮುನೀಶ್ವರನಿತ್ತ ಶಾಪದಿಂದಂ ನೀನು
ಮಿಗೆ ನಾರಸಿಂಹರೂಪದೊಳಿಂತು ಕೊಬ್ಬಿದ್ಯೆ
ನಗಧರಾ ಕರ್ಮಾನುಸಾರಿಯ್ಯೆ ಬುದ್ಧಿ ನೀನೇಗೆಯಿವೆನಾವೀನರ
ಮೃಗರಾಜರೂಪದಿಂ ವಜ್ರದಿಂ ಪೊಡೆಯೆ ವೃ
ಕ್ಷಗಳೆಂತು ಪುಡಿಯಪ್ಪವಂತು ಸಂಹರಿಸಿ ಕರು
ಳುಗಳ ಕಿತ್ತಿಡುವೆ ನಿನ್ನುವನೆಂದನಾ ವೀರಭದ್ರನಾಲಿಸಿ ಮುನಿಪರು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಭದ್ರೇಶ್ವರನ ವಾಕ್ಯಮಂ ಕೇಳುತಾ
ನಾರಸಿಂಹಂ ಘೂರ್ಮಿಸುತ್ತೆಂದನಿಲ್ಲಿ ನೀ
ನಾರು ನಿನ್ನಂ ಕಳಿಪಿದವರಾರು ಬಲ್ಮೆಯಂ ನುಡಿದು ನೀನೆನ್ನಿದಿರೊಳು
ಓರಂತೆ ಬದುಕುವೈ ಕಿಟ್ಟೋಡಿ ದೆಸೆದೆಸೆಯ
ಸೇರಿ ಜೀವಿಪೆ ಯೆನ್ನುವಂ ಶರಣ್ಬೊಗುವೆನು
ತ್ತಾರಿ ಬೊಬ್ಬಿರಿದನಜ್ಞಾನಿಯಧಿ ಪಾಂಘ್ರಿ ಖಾದನಸಾರಮೇಯದಂತೆ ೯

ಘುಡುಘುಡಿಸಿ ನಾರಸಿಂಹಂ ವೀರಭದ್ರನಂ
ಪಿಡಿಯಲೆಂದನುಗೆಯ್ವ ಮಾತ್ರಕ್ಕೆ ಬಯಲಾಗ
ಲೊಡೆಯನನಿತಕ್ಕೆಯಜಸುರಪಾದಿ ನಿರ್ಜರರು ಮನುಮುನಿಗಳಾ ಖಚರರೂ
ಮೃಡಮೂರ್ತಿ ದುಷ್ಟನುಗ್ರಕೆ ಮಾಯವಾದನಿ
ನ್ನೆಡೆಯೊಳೆಮ್ಮಂ ಕಾಯ್ವರಾರುಂಟು ನಾವೆಲ್ಲ
ಮಡಿದೆವೀ ಹರಿಯಿಂದಲೆಂದು ಬೆಬ್ಬಳಿಸುತಿಪ್ಪಾಗಲಿನ್ನೇವೊಗಳ್ವೆನು ೧೦

ಅಳುಕಿ ಸರ್ವರು ನಡುಗುತಿರ್ಪ ಕಾಲದೊಳು ನಿ
ರ್ಮಳ ವೀರಭದ್ರತೇಜಂ ಗಗನತಳದಲ್ಲಿ
ಹೊಳದುದಾಹಾ ತಾಮ್ರ ರಜತ ಕನಕಾದಿ ರತ್ನಚ್ಛವಿಗಳಂ ಮೀಱಿದಾ
ಎಳೆಮಿಂಚು ತಾರೆ ಶಶಿ ಸೂರ್ಯಾಗ್ನಿ ಸತ್ಪ್ರಭಾ
ಕುಳಕಿಂದ ಕೋಟಾನುಕೋಟಿಯೆಂದೆನಿಸಿಪ್ಪ
ಬೆಳಗು ತೋಱುತ್ತಿರಲು ನೋಡಿದರು ನಿಖಿಳ ದೇವರ್ಕಳತ್ಯದ್ಭುತದೊಳು ೧೧

ಪರಮ ತೇಜಪ್ರಭಾಮಯನಾಗಿ ಗಗನಮಂ
ದಿರದಲ್ಲಿ ತೋಱುತಿಪ್ಪ ಮಧ್ಯದಲ್ಲಿ ನರ
ಹರಿಯ ಸಂಹಾರಕ್ಕೆ ಕಾರಣವೆನಿಪ್ಪುಗ್ರತರವಪ್ಪ ರೌದ್ರಾಂಗದಾ
ಶರಭರೂಪಂ ತೊಟ್ಟನಾ ಮಹಾಮೂರ್ತಿಯಂ
ಪರಿಕಿಸುವನಾವನೆ ನೆವವನಾವ ನೋಡುವರು
ಧರೆಯೊಳಾರೆನಲು ಘುಡುಘುಡಿಸುತ್ತ ಮೆಱೆದುದಾಕಾರವೆಂತೆನೆ ಪೇಳ್ವೆನು ೧೨

ದೇವರ್ಕಳಳ್ಕಿ ಜಯಶಬ್ದದಿಂದಂ ಘೂರ್ಮಿ
ಪಾ ವೀರಭದ್ರನಂ ಪೊಗಳುತಿರಲಾ ತೋಳು
ಸಾವಿರಂಗಳು ಖಡ್ಗ ಹಲಗೆ ಖೇಟಕಮುಖ್ಯದಾಯುಧ ಜಟಾಜೂಟವು
ಶ್ರೀ ವಿಮಲ ಚಂದ್ರಾರ್ಧಶೇಖರಂ ಮೃಗರೂಪ
ದಾ ವಿಶೇಷಾಂಗಾರ್ಧವರ್ಧವೆ ಪಕ್ಷಿರೂ
ಪಾ ವಿಯತ್ತಳದಲ್ಲಿ ಪಕ್ಷದ್ವಯಂಗಳ ಪಟತ್ಕಾರರವವೆಸೆಯಲು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಯುವೋಘಾಗ್ನಿನೇತ್ರಾಯ ಲಕುಲೀಶ್ವ
ರಾಯ ಶಂಭವೆದಂಡಿ ಸುಭಿಪಿಕ್ತಮ್ಮಾಯುಚಂ
ಡಾಯ ಸನ್ಮೇಘವಾಹಾಯ ಸದ್ಘೋರತರ ರೂಪಿಣೇ ದೇವಾಯತೇ
ಶ್ರೀಯುಮಾಪತಯೇ ಸದವ್ಯಕ್ತವರವಿಶೋ
ಕಾಯಸ್ಥಿರಾಯತೇ ಸ್ಥಿರದನ್ವನೇ ಸ್ಥಾಣು
ವೇಯಮಲ ಕೃತ್ತಿವಾಸಾಯ ನುತಪಂಚಾರ್ಥಹೇತವೆ ನವೊ ಎಂದನು ೩೨

ವಿರಚಾಯಲಸದೇಕ ಪಾದಾಯ ಚಂದ್ರಾರ್ಧ
ವರವೌಳಿಯಧ್ವರಾಧಿಪನೆ ವಚಸಾಂಪತಯೆ
ಪರವು ಯೋಗೀಶಾಯ ಸತ್ಯಾಯ ನಿತ್ಯಾಯ ಪರಮಾತ್ಮನೇ ನವುಸ್ತೇ
ನಿರಘ ಸರ್ವಾತ್ಮಸರ್ವೇಶ್ವರೈಕದ್ವಿತ್ರಿ
ವರ ಚತುಃ ಪಂಚಕೃತ್ವಸ್ತೇ ನವೋಸ್ತು ಶಂ
ಕರ ಶತಸಹಸ್ರಾಯುತಪ್ರಯುತ ವಾರಂ ನವೋಸ್ತೆಂದನಾ ನೃಸಿಂಹಂ ೩೩

ಯತಿಗಳಿರ ಕೇಳಿ ನರಸಿಂಹನ್ವನಾನಾಮಾಷ್ಟ
ಶತದಿಂದಲಮೃತವುಯದಿಂ ಶರಭದೇವನಂ
ನುತಿಸಿ ಬೇಡಿದನೆನಗೆ ಯಾವಾಗಲಜ್ಞಾನವಾದಾದ ಕಾಲದಲ್ಲಿ
ಹತಶಿಕ್ಷೆಯಿಂದೆನ್ನ ಸಲಹೆಂದು ಬಿನ್ನವಿಸಿ
ಶಿತಿಕಂಠ ಮಚ್ಚರ್ಮ ಶಿರಗಳಂ ಕೈಕೊಂಡು
ಕೃತಕೃತ್ಯನಂ ಮಾಡೆನುತ್ತಲಪರಾಧದಿಂದಸುವಳಿದನಾ ನೃಸಿಂಹಂ ೩೪

||ಸಾಕ್ಷಿ|| ನವೋ ರುದ್ರಾಯ ರೌದ್ರಾಯ ಮಹಾಗ್ರಾಸಾಯ ಜಿಷ್ಣವೇ
ನವೋ ಉಗ್ರಾಯ ಭೀಮಾಯ ನಮಃ ಕೃದ್ಧಾಯ ಮನ್ಯವೇ ೬

ನವೋ ಭವಾಯ ಶರ್ವಾಯ ಶಂಕರಾಯ ಶಿವಾಯ ತೇ
ಕಾಲಾಯ ಕಾಲಕಾಲಾಯ ಮಹಾಕಾಲಾಯ ಮೃತ್ಯವೇ ೭

ವೀರಾಯ ವೀರಭದ್ರಾಯ ಕ್ಷಯದ್ವೀರಾಯ ಶೂಲಿನೇ
ಮಹಾದೇವಾಯ ಮಹತೇ ಪಶೂನಾಂ ಪತಯೇ ನಮಃ ೮

ಏಕಾಯ ನೀಲಕಂಠಾಯ ಶ್ರೀಕಂಠಾಯ ಪಿನಾಕಿನೇ
ನವೋಽನಂತಾಯ ಸೂಕ್ಷ್ಮಾಯ ನಮಸ್ತೇ ಮೃತ್ಯುಮೃತ್ಯವೇ ೯

ಪರಾಯ ಪರಮೇಶಾಯ ಪರಾತ್ಪರತರಾಯತೇ
ಪರಾಪರಾಯ ವಿಶ್ವಾಯ ನಮಸ್ತೇ ವಿಶ್ವಮೂರ್ತಯೇ ೧೦

ನವೋ ವಿಷ್ಣುಕಳತ್ರಾಯ ವಿಷ್ಣುಕ್ಷೇತ್ರಾಯ ಭಾನವೇ
ಕೈವರ್ತಾಯ ಕಿರಾತಾಯ ಮಹಾವ್ಯಾಧಾಯ ಶಾಶ್ವತೇ ೧೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೈರವಾಯ ಶರಣ್ಯಾಯ ಮಹಾಭೈರವರೂಪಿಣೇ
ನಮೋ ನೃಸಿಂಹಸಂಹರ್ತ್ರೇ ಕಾಮಕಾಲಪುರಾರಯೇ ೧೨

ನಮಃ ಪೌಶೌಘ ಸಂಹರ್ತ್ರೇ ವಿಷ್ಣುಮಾಯಾಂತಕಾರಿಣೇ
ತ್ರ್ಯಂಬಕಾಯ ತ್ರಿಯಕ್ಷಾಯ ಶಿಪಿವಿಷ್ಟಾಯಮಿಡುಷೇ ೧೩

ಮೃತ್ಯುಂಜಯಾಯ ಸರ್ವಾಯ ಸರ್ವಗಾಯ ಮುಖಾರಯೇ
ಖಷೋಲ್ಕಾಯ ವರೇಣ್ಯಾಯ ನಮಸ್ತೇ ವಹ್ನಿರೇತಸೇ ೧೪

ಮಹಾಪ್ರಾಣಾಯ ಜೀವಾಯ ಪ್ರಾಣಾಪಾನಪರಿವರ್ತಿನೇ
ತ್ರಿಗುಣಾಯ ತ್ರಿಶೂಲಾಯ ಗುಣಾತೀತಾಯ ಯೋಗಿನೆ ೧೫

ಸಂಸಾರಯಂತ್ರವಾಹಾಯ ಮಹಾಯಂತ್ರ ಪರಿವರ್ತಿನೇ
ನಮಶ್ಚಿದ್ವ್ಯೋಮಸೂರ್ಯಾಯ ಮೂರ್ತಿವೈಚಿತ್ರಹೇತವೇ ೧೬

ವರದಾಯ ವಿಕಾರಾಯ ಸರ್ವಕಾರಣಹೇತವೇ
ಕಪಾಲಿನೇ ಕರಾಳಾಯ ಪತಯೇ ಪುಣ್ಯಕೀರ್ತಯೇ ೧೭

ಅಮೋಘಾಯಾಗ್ನಿನೇತ್ರಾಯ ಲಕುಲೀಶಾಯ ಶಂಭವೇ
ಭಿಷಕ್ತಮಾಯ ಚಂಡಾಯ ದಂಡಿನೇ ಘೋರರೂಪಿಣೇ ೧೮

ಮೇಘವಾಹಾಯ ದೇವಾಯ ಪಾರ್ವತೀ ಪತಯೇ ನಮಃ
ಅವ್ಯಕ್ತಾಯ ವಿಶೋಕಾಯ ಸ್ಥಿರಾಯ ಸ್ಥಿರಧನ್ವನೇ ೧೯

ಸ್ಥಾಣವೇ ಕೃತ್ತಿವಾಸಾಯ ನಮಃ ಪಂಚಾರ್ಥಹೇತವೇ
ವಿರಜಾಯೈಕ ಪಾದಾಯ ನಮಶ್ಚಂದ್ರಾರ್ಧಮೌಳಯೇ ೨೦

ನಮಸ್ತೇಧ್ವರರಾಜಾಯ ವಚಸಾಂ ಪತಯೇ ನಮಃ
ಯೋಗೀಶ್ವರಾಯ ನಿತ್ಯಾಯ ಸತ್ಯಾಯ ಪರಮಾತ್ಮನೇ ೨೧

ಸರ್ವಾತ್ಮನೇ ನಮಸ್ತುಭ್ಯಂ ನಮಸ್ಸರ್ವೇಶ್ವರಾಯತೇ
ಏಕದ್ವಿತ್ರಿಚತುಃಪಂಚಕೃತ್ವ ಸ್ತೇಸ್ತು ನಮೋನಮಃ ೨೨

ದಶಕೃತ್ವಂ ಶತಕೃತ್ವಂ ಆಸಹಸ್ರಂ ನಮೋನಮಃ
ನಮೋ ಪರಿಮಿತಕೃತ್ವೋ ನಂತಕೃತ್ವೋ ನಮೋನಮಃ ೨೩

ನಮೋನಮಃ ಪುನರ್ಭೂಯೋ ನಮೋ ಭೂಯೋ ನಮೋನಮಃ
ಸೂತಃ ನಾಮಾಷ್ಟಕೇಶತೇನೈವ ಸ್ತುತ್ವಾಮೃತ ಮಖಿಯೇನ ಚ ೨೪

ಪುನಸ್ತಂಪ್ರಾರ್ಥಯಾಮಾಸ ನೃಸಿಂಹಂಶರಭೇಶ್ವರಂ ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವೇಳೆಯಾ ಬ್ರಹ್ಮಮುಖ್ಯದೇವರ್ಕಳಾ
ಶ್ರೀವೀರಭದ್ರನಂ ಕೀರ್ತಿಸುತ್ತಿರ್ದರೆಲೆ
ದೇವ ವಿಲಸನ್ಮೇಘದಿಂದಖಿಳ ವೃಕ್ಷಸಸ್ಯಾದಿಗಳು ಬದುಕುವಂತೆ
ಆವಗಂ ನಿನ್ನ ಕಾರುಣ್ಯದಿಂದುಳಿದೆವಿಂ
ದೀ ವಿಶೇಷದ ಕುಜನ ನರಸಿಂಹನಂ ಕೊಂದ
ಲಾ ವಿಭುವೆ ಎಂದುಸಾಷ್ಟಾಂಗದಿಂದಂ ನಮಿಸಿ ಜಯ ಎಂದು ಕೀರ್ತಿಸಿದರು ೩೫

ಎಲೆದೇವ ಪಂಚಭೂತಪ್ರಕಾರದೊಳಗೆಮ್ಮ
ನಲೆವುತಿಹ ಮೃತ್ಯುಬಾಧೆಗಳೆಲ್ಲವಂ ಕಳೆದು
ಸಲದೆಹಿಯಲಾ ಬ್ರಹ್ಮವಾದಿಗಳು ನಿನ್ನ ನವ್ಯಕ್ತಂ ಪರಂ ವ್ಯೋಮವು
ಕಲೆಗತೀತಂ ಸದಾಶಿವನೆಂದು ಷಡ್ಗುಣದ
ಬಲುಸಿರಿಯನುಳ್ಳ ನಿನ್ನಂ ಕೀರ್ತಿಸುವರು ನಿ
ರ್ಮಲದೇವ ನರಸಿಂಹನಂ ಕೊಂದು ನಮ್ಮ ರಕ್ಷಿಸಿದೆ ಎಂದರು ವಿಬುಧರು ೩೬

ಪರಮೇಶ್ವರಾ ನಾವು ಕಿಂಚಿಜ್ಞರಯ್ಯ ನಿ
ನ್ನುರುಮಹಿಮೆಯಂ ಬಲ್ಲೆವೇ ರೂಪು ಲಾವಣ್ಯ
ಪುರುಷನಂ ಜಾತ್ಯಂಧೆಯಾದ ವಧುವಱೀವಳೇ ಎಲಯ ವಿಲಯಂಗಳಲ್ಲಿ
ಪೊರೆವುತಿಪ್ಪೇಕಾದಶಾಗ್ರರುದ್ರಾಧಿಪಾ
ಕರುಣಿ ಚಿತ್ತೈಸೀ ಪ್ರಕಾರದವತಾರದೊಳು
ಹರಿಮುಖ್ಯರಜ್ಞಾನದಿಂ ಕೊಬ್ಬೆ ಶಿಕ್ಷಿಸುತ ಸಲಹುವಾಣ್ಮನೆಯೆಂದರು ೩೭

ದೇವ ನಿನ್ನಂಘ್ರಿಯಱಿಯದೆ ನಿನ್ನ ಮಾಯೆಯಿಂ
ದೀ ವಿಶೇಷದ ರತ್ನಮಂ ಗುಂಜಿಯೆಂಬಂತೆ
ಪಾವನ ಮಹೇಶ್ವರಾ ನಿನ್ನನುಳಿದವರಸರಿಯೆಂದು ಬಗೆದಪರಾಧಕೆ
ಆವಗಂ ಗುಱಿಯಪ್ಪ ಪಾಪಿಗಳಿನೆಮ್ಮಂ ಕೃ
ಪಾವಲೋಕನದಿ ನೀಕ್ಷಿಸಿ ಸೈರಿಸೆಂದು ರಾ
ಜೀವಭವಮುಖ್ಯದೇವರು ವೀರಭದ್ರಮೂರ್ತಿಯ ಕೀರ್ತಿಸುತ್ತಿದ್ದರು ೩೮

ಪರಮೇಶಮೂರ್ತಿ ನೀಂ ವೀರಮುಂ ಭದ್ರಂಗ
ಳೆರಡು ಕೂಡಿದ ವೀರಭದ್ರಾಖ್ಯ ಬಳಿಕಿಲ್ಲಿ
ನರಸಿಂಹನಂ ಕೊಲಲು ಪಕ್ಷಿಮೃಗರೂಪಾಗಿ ದುಷ್ಟನಂ ಸಂಹರಿಸಿದಾ
ಉರು ಕೋಪಮಂ ಬಿಟ್ಟು ನಿನ್ನಡಿಯೆ ಗತಿ ಎಂದು
ಶರಣುವೊಕ್ಕರ ಕರುಣದಿಂದ ಸಲಹೆಂದು ಪಂ
ಕರುಹಮುಖ್ಯ ನಿರ್ಜರರು ಶರಭಾಧೀಶ್ವರಂಗೆಱಗಿ ಕೀರ್ತಿಸಿದರು ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘೋರರೂಪೊಂದು ಶಿವರುಪೊಂದಲಾ ನಿನಗೆ
ವೀರಭದ್ರೇಶ್ವರಾ ಬಹುವಿಧಗಳೆರಡು ಬಗೆ
ಘೋರರೂಪಿನೊಳು ರವಿ ವಿಷ್ಣು ಪಾವಕರು ಸಾರ್ದಿಹರಲಾ ದೇವ ದೇವ
ಘೋರವಲ್ಲದ ಶಿವಾಂಗದೊಳಮರ್ದು ಮೆಱೆವವಾ
ವಾರಿಧರ್ಮೇಂದುಗಳು ತಚ್ಛಾಂತಿಯಿಂದೆಮ್ಮ
ನಾರೈದು ಸಲಹೆಂದಜಾದಿ ದೇವರ್ಕಳೋರಂತೆ ಕೀರ್ತಿಸುತಿರ್ದರು ೪೦

ರಾಜಿಸುವ ದೇವ ಚಿತ್ತೈಸುನಿನ್ನಯದೊಂದು
ತೇಜಸ್ಸು ಸಕಲಮಂ ಗರ್ಭೀಕರಿಸಿ ಪೊರೆವು
ದೈ ಜಗದ್ಗುರುವೆ ನಿಂನಿಂದೊಗೆದರಜ ಹರೀಂದ್ರಾದಿರವಿಶಶಿಯಧ್ವರಾ
ಭೋಜನಾಖಿಳರದು ನಿಮಿತ್ತದಿಂ ಪೊರೆವುದೈ
ವ್ಯಾಜದಿಂದೆಂದು ಶರಭೇಶ್ವರನ ಚರಣಸರ
ಸೀಜಕ್ಕೆ ಸಾಷ್ಟಾಂಗವೆಱಗಿಯನಿಬರು ಕೀರ್ತಿಸುತಿರ್ದರೇಳ್ಗೆಯಿಂದ ೪೧

ಪರಮೇಶ್ವರಾ ಬ್ರಹ್ಮನಂ ಸುರಪನಂ ಮದದ
ಹರಿಯನಾ ಯಮಮುಖ್ಯರಂ ಸುರಾಸುರರನಿ
ನ್ನುರುಮಾಯೆಯಿಂ ಮಱೆದು ಗರ್ವಿಸಿದ ಕಾಲದೊಳು
ಹರಿಸುತಿಹೆಯದುಕಾರಣಂ
ಹರನೆಂಬ ನಾಮ ನಿನಗಾದುದಿಂದೀ ಮಲೆತ
ನರಸಿಂಹ್ವನಜ್ಞಾನದಿಂದಿರಲು ನೀನು ಸಂ
ಹರಿಸಿದೆಯಲಾ ಶರಣುವೊಕ್ಕೆಮ್ಮ ರಕ್ಷಿಸೆಂದನಿಬರುಂ ಕೀರ್ತಿಸಿದರು ೪೨

ಚೆನ್ನಾಗಿ ಕೇಳಿರೈಯತಿಗಳಿರ ಬಳಿಕ ಪ್ರ
ಸನ್ನನಾದಂ ದೇವತಾಸ್ತುತ್ಯ ಸಕೃಪಾ
ಸನ್ನ ನಿಜ ಭಕ್ತಿವತ್ಸಲನಮರತತಿಗಭಯಸಹಿತಿಷ್ಟ ಸಿದ್ಧಿಯಿತ್ತು
ಪನ್ನಳಿನಕೆಱಗಿರ್ದ ಸುರಮುನೀಂದ್ರರಿಗೆ ಕೃಪೆ
ಯಿನ್ನಿರೂಪಿಸಿದನಾ ವೀರಭದ್ರೇಶ್ವರನು
ತನ್ನ ಕರುಣದೊಳಮರ್ದುಗಱೆವ ಸವಿನುಡಿಯಿಂದಲನಿಬರುಂ
ಸಂತೋಷಿಸೆ ೪೩

ಈ ವಿಷ್ಣುನರಸಿಂಹ್ಯನಾಮಿ ಬಲಯುತನಖಿಳ
ಭೂವಳಯಸಂಹಾರ ಭೀಷಣನಲಾ ಮಹಾ
ದೇವನಂಶದರಾವು ತಚ್ಛಿವನಿರೂಪದಿಂ ಬಂದು ನಿಮ್ಮಂ ಪೊರೆಯಲು
ನಾವವನ ಸಂಹರಿಸಿದೆವು ಶರಭರೂಪಿಂದ
ದಾವ ಭಯವುಮಂ ಬೇಡ ನಿಮಗೆಂದು ಪೇಳುತಾ
ಶ್ರೀವೀರಭದ್ರೇಶನನಿತರೊಳು ಶಿವ ಶಿವ ಮಹಾದೇವ ಬಯಲಾದನು ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಲಾಗಿ ಸಾಕ್ಷಾತ ಶಿವನಂಗದೊರೆಳ್ಬಿದ
ನೆಯುತಮಹಿಮಾಮೂರ್ತಿಯಂದುಮೊದಲಾಗಿ ತ
ನ್ನಯದೇಹದಲ್ಲಿ ನರಸಿಂಹ್ಯಚರ್ಮವನೆ ವಸನವ ಮಾಡಿಯುವನ ತಲೆಯಾ
ಸ್ವಯ ಶಿರೋಮಾಲೆಯೊಳು ನಾಯಕತ್ವದೊಳು ನಿ
ಶ್ಚಯದೆ ಧರಿಸಿದನಲಾ ದೇವತತಿಗಳು ನಿಜಾ
ಶ್ರಯಗಳ್ಗೆ ಪೋದರೆಂದಾ ಸೂತಮುನಿ ಪೇಳುತಿರ್ದನಾ ತಾಪಸರ್ಗೆ ೪೫

ಶೂಲಾಯುಧಾಯ ಸುರವೃಂದ ನಿರ್ಮಲ ಮೌಳಿ
ಮಾಲಾಯ ಲೀಲಾಯಮಾನ ಚರಣಾಂಭೋಜ
ಲೋಲಪದಪಲ್ಲವಾಯಾಧೀಶ ಹೇಳಾವಲೇಪ ನರಸಿಂಹ್ವರಂ ಹೋ
ಲೀಲಾಪಹಾರ ಶರಭಾಕೃತೇ ತೇನಮೋ
ಸ್ಥೂಲಮಹಿಮಾರೂಪ ನಿನ್ನಡಿಗೆನುತ್ತಿದಿ
ವ್ಯಾಲಾಪದಿಂದಾಗ ಸೂತನಾ ಮುನಿಗಳಿದಿರಿನೊಳು ಶರಭನ ಪೊಗಳಿದಾ ೪೬

ಆನಂದದಿಂದಲೀ ಮಹೇಶ ಶರಭೇಶ್ವರಾ
ಖ್ಯಾನಮಂ ಶಿವಭಕ್ತರಲ್ಲದಾಚರಿಸುವ
ಜ್ಞಾನಿಗಳಿಗುಸುರಲಾಗದು ಸದಾಶಿವಭಕ್ತತತಿಗೆ ಧೀರವ್ರಜಕ್ಕೆ
ಆ ನಿಯತ ಮಾಹೇಶ್ವರರ್ಗೆ ಪೇಳರೇ ನೀವು
ತಾನವರು ಕೇಳಿ ಪಠಿಸಲು ವೇದಸಮ್ಮತವ
ಲಾ ನಿಜದೊಳಿದು ಪುಣ್ಯಮಯದುಃಖ ಪಾಪಹರ
ಶಿವಲೋಕಸೋಪಾನವು ೪೭

ಬಯಸಿದಿಷ್ಟಾರ್ಥಮಂ ಕೊಡುವುದಿದು ನಾಡೆ ಧರ
ಣಿಯೊಳು ವಿದ್ವಾಂಸ್ನುಗಳು ವಿಲಸಧೃಡವ್ರತಾ
ಶ್ರಯಭಕ್ತರಿದ ಮಂಗಳಾರ್ಥದಿಂ ಪಠಿಸಿ ಪಡೆವರು ವಾಂಛಿತೈಶ್ವರ್ಯಮಂ
ನಿಯುತವೆಂದಾ ಸೂತನಾನಂದದಿಂದ ಮುನಿ
ಚಯಕೆ ತನ್ನೈಮಿಷಾರಣ್ಯದೊಳಗೊರೆಯೆ ನಿ
ಶ್ಚಯದಿಂದ ಕೇಳಿ ಪರಮಾನಂದ ಪರರಾಗಿಯಾರ್ಯನಂ ಕೀರ್ತಿಸಿದರು ೪೮

ಅಂದುಮೊದಲಾಗಿ ಸುವ್ರತ ಮಾರ್ಗರಾಗಿ ನಲ
ವಿಂದಲಾ ಸೂತ ಪೌರಾಣಿಕಗೆ ಭಕ್ತಿಯಿಂ
ವಂದಿಸಿ ಮುನೀಶ್ವರರು ನಿಜವಾಸಗಳಿಗೆ ಪೋದರು ಕಣಾ ಸಂತಸದೊಳು
ಕಂದ ಕೇಳಾ ಕೆಂಚ ವೀರಾಹ್ವಯಾ ಕಲ್ಪ
ವೊಂದೊಂದರೊಳಗಿಂತನಂತ ಶರಭೇಶನಾ
ನಂದಲೀಲೆಗಳೆಂದು ಹಲಗೆಯಾರ್ಯ್ಯಂ ಪೇಳ್ದನಖಿಳ ಭಕ್ತರು ಪೊಗಳಲೂ ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಱಮೇಲಣ ಗವಿಯ ಸಿಂಹ್ವಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯ್ಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೫೦

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಶರಭಲೀಲೆಮುಗಿಯಿತ್ತೆಂದೊಡೆರಡು ಕಾಂಡದ ಮೇಲೆ ಸಂಧಿ ಆರು ೫೧

ಅಂತು ಸಂಧಿ ೬ ಕ್ಕಂ, ಪದ ೨೪೮ ಗ್ರಂಥ ೩೦ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೨೯

ದಧೀತಿ ಮುನಿಯು ದಂಪತಿಗಳಂ ಪೊರೆದ ಕಥೆ

ಯತಿಶಾಪದಿಂದ ನೊಣನಾಗಿರ್ದಳಿವುತರುಂ
ಧತಿಯಿಂದ ಬದುಕಿ ಮಡಿದಾ ಕರುಣೆಗಂ
ಸ್ಮಿತೆಯ ಭಕ್ತಿಗೆ ಹರಣವಿತ್ತಾ ದಧೀಚಿಮುನಿ ದಂಪತಿಗಳಂ ಪೊರೆದನು

ಶ್ರೀಪಾಜಸುರಪ ಸುರನತಮಕುಟರತ್ನಪ್ರ
ಭಾಪಟಲ ಮೌಕ್ತಿಕಚ್ಛವಿ ನೀಲಮಣಿರುಚಿ
ವ್ಯಾಪಾರ ಮರುಣಾಮರಾಪಗಾಕಾಳಿಂದಿ ಸಂಗಮನದಿಯೊಳುದಿಸಿದ
ಆ ಪದ್ಮಯುಗದಂತೆ ರಾಜಪ ತವಾಂಘ್ರಿರ
ಜೋಪರೀಕಲಿತಮೆನಿಸಿ ಮದ್ಭಾಳತಳಕೆಸೆವ
ಸೈಪನೊದವಿಪುದೈಯ್ಯ ಶಾಂತಮಲ್ಲೇಶ್ವರಾ ಶರಣಹೃದಯನಿಕಸ್ವರಾ ೧

ಕ್ಷಿಪ್ರದೆ ವಿವೇಕವೃಕ್ಷಂಗಳಂ ಮುಱಿವ ಮೃದು
ಸುಪ್ರಮಥ ಹೃದಯಕಾರ್ಪಾಸಮಂ ಪಾರಿಸುವ
ತಿಪ್ರಕರುಷಾಜ್ಞಾನರೋಗಿಗಳಮಾಡುವ ನಿಜಾನತರ ಸಂಚಲಿಸುವಾ
ಕುಪ್ರತರ್ಕ್ಯದ ವಾಯುಗುಣವನೆಬ್ಬಟ್ಟಿ ಲಿಂ
ಗಪ್ರಾಣಿಗಳುಮೆನಿಸಿ ಪೊರೆವ ಗುರು ಮೇಲಣಗ
ವಿ ಪ್ರವರ ಶಾಂತನಂಜುಂಡ ಚಿನ್ಮಯಪಿಂಡ ಜಯ ಸುಗುಣಮಣಿಕರಂಡಾ ೨

ಆರಾಧ್ಯಮೂರ್ತಿ ಹಲಗೆಯ ಗುರುವೆ ಬಿನ್ನಪಂ
ವೀರೇಶ್ವರಂ ದಕ್ಷಯಜ್ಞಮಂ ಸಂಹರಿಸಿ
ನಾರಸಿಂಹನಂ ಕೊಂದು ತಚ್ಚರ್ಮಮಂ ಪೊದೆದು ನರಹರಿಯ ತಲೆಯ ತನ್ನಾ
ಚಾರು ಶಿಖರಕೆ ಕೀರ್ತಿಮುಖವ ರಚಿಸಿದ ಬಗೆಯ
ಕಾರುಣ್ಯದಿಂ ಪೇಳ್ದಿರಾ ವೀರಭದ್ರನಾ
ರಾರ ಕೊಂದಾರ ಸಲಹಿದ ಕಥೆಯ ಪೇಳೆಂದನಾ ಕೆಂಚವೀರಾಪ್ಪಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನೆ ಪೇಳುತಿರ್ದನಾಚಾರ್ಯವರ್ಧನಮೂರ್ತಿ
ತನಯು ಕೇಳೈ ಪದ್ಮಪೌರಾಣದಲ್ಲಿ ಘ
ಮ್ಮನೆ ರಾಮನಾಶ್ರಯಕೆ ಶಂಕರಂ ನೆಱಿಶಂಭು ಭಟ್ಟನೆಂಬಾ ನಾಮದಿಂ
ಸನಯದಿಂ ಚಿತ್ತೈಸಲಾ ರಾಘವಂ ಮಹೇ
ಶನ ಪಾದಕೆಱಗಿ ಸೇವಿಸೆ ಪೇಳ್ದ ಕಥನವೇ
ಘನತರದ ಶಿವರಾಘವಾಖ್ಯಸಂವಾದದಲ್ಲಿಯ ಕಥೆಯ ಕೇಳೆಂದನು ೪

ಬರೆ ಶಂಭುಭಟ್ಟನಡಿಗಾ ರಾಮಚಂದ್ರಮಂ
ಶಿರವೊಗ್ಗಿ ನಮಿಸಿ ಶಿವಭಕ್ತಿಯುಗ್ಗಳಿಸುತಿರೆ
ಪಿರಿಯ ಗದ್ದುಗೆಯಿಟ್ಟು ಮೂರ್ತಿಗೊಳಿಸುತ್ತ ಪದಮಂ ತೊಳೆದು ತತ್ತೀರ್ಥವಾ
ಧರಿಸಿ ಬಿನ್ನಪ ಜೀಯ್ಯ ಜನ್ಮಾಂತರಂಗಳಿಂ
ಪೊರೆದಿರೆಮ್ಮಂ ಕೃಪಾಧಿಕದಿಂ ವಿಭೂತಿಯುರು
ತರ ಮಹತ್ವವನೊಱೆದು ಪಾಲಿಪುದು ನಿನ್ನ ಭೃತ್ಯನನೆಂದನಾ ರಾಘವಂ ೫

ಕ್ಷತ್ರಿಯನೆ ಕೇಳು ಜಮದಗ್ನೇಶ್ಚ ಕಸ್ಯಪ
ಸ್ಯತ್ರಿಯಾಯುಷಮಗಸ್ತ್ಯಸ್ಯ ತ್ರಿಯಾಯುಷಪ
ವಿತ್ರ ಯದ್ದೇವತಾನಾಂ ತ್ರಿಯಾಯುಷಮೆಂಬ ವೇದಾರ್ಥದೊಂದು ಕಥೆಯ
ಚಿತ್ರವೆನೆ ನಿನಗೆ ಬಿತ್ತರಿಸುವೆವದಕ್ಕೆ ನೀಂ
ಪಾತ್ರನೈ ರಾಘವಾ ಎಂದಾಗ ತೊಡಗಿದಂ
ಗೋತ್ರಪುತ್ರೀ ವಿಮಲ ನೇತ್ರನೈರ್ಮಲ್ಯಶತಪತ್ರವೈಕಾಸಮಿತ್ರಂ ೬

ಚಿಕ್ಕನಱುಪುವೆವೈಯ್ಯ ಮುನ್ನೋರ್ವಮುನಿಪ ಸಂ
ಮ್ಯಕ್ಕಾದ ಸನ್ಮಾರ್ಗಸಂಪನ್ನನಾತಂಗೆ
ಸುಕ್ಕಂಗುರುಳ ಸತಿಯರೊಪ್ಪುವರು ನೂರ್ವರನಿಬರಿಗೆಯೋರೋರ್ವರನಿತು
ಮಕ್ಕಳಾದರು ಶತವವಂದಿರೊಳಗಂ ಪಿರಿಯ
ಳಕ್ಕರಣುಗಂ ಕರುಣೆಯೆನಿಪವಂ ಮೆಱೆವುತಿರೆ
ದಿಕ್ಕನವನಖಿಳ ಶಾಸ್ತ್ರಾಮ್ನಾಯ ಪರಿಣತೆಯೊಳೆಸದನೈ ಕೇಳು ಭೂಪಾ ೭

ಆ ಕರುಣೆಯಂ ಕಂಡು ಮಿಕ್ಕ ಪುತ್ರರು ವಿರೋ
ಧಾಕಲಿತರಾಗಿ ದಾಯಾದ್ಯಸಂಬಂಧದಿನ
ನೇಕ ಪರಿಯಿಂ ಕೊಲ್ವೆವೆಂದು ಯೋಚಿಸುತಿರಲು ಬಳಿಕೊಮ್ಮೆ ನೃಪನ ಕಾಣ್ಬ
ಜೋಕೆಯಿಂ ಮುನಿಗಳೆಯಿತರುತಲಾ ಭೂಪಂಗಿ
ದೇ ಕಾಣ್ಕೆಯೆಂದೊಂದು ಜಂಭೀರ ಫಲವ ತರು
ತಾ ಕಾಲವೊದವೆ ಸಂಧ್ಯಾವಂದನಂಗಳಂ ಮಾಡಲುದ್ಯೋಗಿಸಿದರು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಸನವಿಸರಂಗಳಂ ತೆಗೆದು ಕೆಲದೊಳಗಿರಿಸಿ
ಮಿಸುಪ ನಿಂಬಿಯು ಹಣ್ಣನವಱ ಮೇಲಿಟ್ಟು ಸಂ
ತಸದೆ ದೋತ್ರಂ ಸಹಿತಲಾ ಮುಖ್ಯತಾಪಸಂ ಸ್ನಾನಮಂ ಮಾಡುತಿರಲು
ವಸುಧೇಶಗಂ ತನ್ನ ದಾಯಾದ್ಯರೆಯಿದೆ ಮು
ರ್ದಿಸುವೆವೆನ್ನುವನೆನುತ್ತಿರ್ದಪರೆನುತ್ತಱುಪ
ಲಸವಸದೆ ಕರುಣೆ ಬರುತಿರ್ದು ಕಂಡಾ ಫಲವನೆತ್ತಿ ವಾಸಿಸಿದನಾಗ ೯

ಆಗ ಕಂಡಾ ಮುಖ್ಯ ತಾಪಸಂ ಮುಳಿದು ಭೂ
ಭಾಗದೊಡೆಯುಂಗೀವ ಮೀಸಲಳಿಯದ ಪಣ್ಣ
ನೇಗೆಯ್ದು ಮೂಸಿದೆಯದಪ್ಪಿ ಹಿಡಿ ಶಾಪಮಂ ನೊಣನಾಗು ನೀನೆಂದೆನೆ
ರಾಗವರತೆನಗಿಲ್ಲಯದೆಂದು ಬಂದೆಱಗಿ
ಕೈಗಳಂ ಮುಗಿದಯ್ಯ ಮಚ್ಛಾಪವೆಂದಿಂಗೆ
ಪೋಗೂದೆನಲ್ಕೆಯಾ ಮುಖ್ಯಮುನಿ ಕೊಟ್ಟಂ ವಿಶಾಪವಂ ಕರುಣದಿಂದಾ ೧೦

ಕರುಣೆ ಕೇಳ್ಕೆ ನೂಱುವರುಷವಾ ನೊಣನಾಗಿ
ಧರೆಯೊಳಿರ್ದಾ ದಧೀಚಿಯ ಕಂಡೆಯಾದೊಡಂ
ಪರಿಹರಿಪುದೀ ಶಾಪವೆನಲಾಕ್ಷಣಂ ಬಂದು ಸತಿ ಶುಚಿ ಸ್ಮಿತೆಗಱುಪುತಾ
ಆರರೆ ಮಕ್ಷುಕರೂಪನಪ್ಪೆನೆನೆ ಕೇಳ್ದಾಕೆ
ಪಿರಿಯ ದನಿಯಿಂದತ್ತು ದಾಯಾದ್ಯಬಾಧೆಯಂ
ಪರಿಹರಿಪೆನೆಂದೆಯಿದಲೀ ಜನ್ಮವಾದುದಾಣ್ಮಂಗೆಂದು ಚಿಂತಿಸಿದಳು ೧೧

ಆನಿತಕ್ಕೆ ನೋಡನೋಡಲು ಕರುಣೆಯುರೆ ತನ್ನ
ತನುತಗ್ಗಿ ಕಿಱಿದಾಗಿ ಪಕ್ಷದ್ವಯಂಗಳುಂ
ಜನಿಸಿ ಕಾಲಾಱಿೊಗೆದು ಗೃಹದ ಮಕ್ಷುಕನಾಗಿ ವರ್ತಿಸುತ್ತಿರಲು ಕಂಡು
ವನಿತೆ ಬೆದ ಬೆದ ಬೆಂದು ಮೊಱೆಯಿಟ್ಟು ಕುಱುಹಿಡು
ತ್ತಿನಿಯ ನೀ ನೊಣನಹುದೆನುತ್ತ ಪಾಲ್ತುಪ್ಪಂಗ
ಳಿನಿಸನಿತ್ತಿತ್ತೋವುತಧಿಕ ಸುಯಿಧಾನದಿಂ ರಕ್ಷಿಸುತ್ತಿರ್ದಳಬಲೆ ೧೨

ಕುಜನದಾಯಾದ್ಯರೀ ವಾರ್ತೆಯಂ ಕೇಳುತ್ತ
ಭುಜವೊಯ್ದು ಕರುಣೆಯಂ ನಾವು ಕೊಂದಪೆವೆಂದು
ಗಜಬಜಿಸುತಿರೆ ತಾನೆ ನೊಣನಾದನೇ ನೂಱುವರುಷದಿಂ ಮೇಲೀತನು
ಸುಜನನೆನಿಸುವ ದಧೀಚಿಯ ಕೃಪೆಯ ಪಡೆದಡವ
ನಿಜ ಬಲಂ ನಮ್ಮ ಸಂಹರಿಪನೆಂದಿರದಹೋ
ತ್ಯಜಿಸಬೇಕೀ ಮಕ್ಷುಕಾಸುವನೆನುತ್ತಲುಜ್ಜುಗಿಸಿದರು ಪಾಪಾತ್ಮರೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದನಿಬರುಂ ಕಟಾಹದೊಳು ತೈಲವ ತುಂಬಿ
ತಂದಿರಿಸಿ ಸರ್ವ ಮುಕ್ಷಿಕಗಳೆಲ್ಲವ ಸೋಹಿ
ತಂದದಱೊಳಗೆ ಕೆಡಹಲವರೊಳಗೆ ಕರುಣಿ ನೋಣನಾಗಿರ್ದವಂ ಮಡಿಯಲು
ಸಂದುದೆಮ್ಮಯ ಛಲವೆನುತ್ತ ಕುಜನರ್ಪೋಗ
ಲಿಂದುಮುಖಿಯಾ ಶುಚಿಸ್ಮಿತೆ ಕಂಡು ಹಾ ಪುರುಷ
ಯಿಂದಳಿದೆಯಾಯೆಂದು ಶೋಕಾಗ್ನಿಯೊಳ್ಮೂಡಿ ಮುಳುಗಿ
ಘೋಳಿಡುತಿರ್ದಳು ೧೪

ಹಾ ಪುರುಷ ಹಾ ಮನೋವಲ್ಲಭನೆ ಸದ್ಗುಣಿಯೆ
ಏಪರಿಯೊಳಾಂ ಹರಣವಿಡಿದಿಳೆಯೊಳಿರ್ಪೆನ್ನೈ
ಭೂಪನಲ್ಲನೆ ಮುಕ್ಷಿಕಾಕಾರಿ ನಿನ್ನ ಸೇವೆಯೊಳಾನಿರಲ್ಕೆ ನಿನ್ನಾ
ಪಾಪಿಗಳು ಕೊಂದರೆ ಶಿವಧೋ ಎನುತ್ತಂ ಪ್ರ
ಳಾಪಿಸುತ ಘೋಳಿಡುತ್ತಿರ್ದಳಂತಲ್ಲಿ ನಾ
ನಾಪರಿಯೊಳೊಱಲಿ ಬಾಯಿಬಿಟ್ಟಳಲಿ ಬಿದ್ದು ಹೊರಳುತ್ತಿರ್ದಳಾ ಮಾನಿನೀ ೧೫

ಸತಿಯರೊಳಗಧಿಕಗುಣಿಯೆಂದೆನಿಸುತಿಹ ಪತಿ
ವ್ರತೆಯಪ್ಪ ತಾಯೆ ನಿರ್ಮಲಚಿತ್ತೆ ಎನಿಪರುಂ
ಧತಿದೇವಿ ನೀನೆ ಗತಿ ನಿನ್ನ ಪಾದಸ್ಮರಣೆಯಿಂದೆನ್ನ ವರನಲ್ಲದೆ
ಕ್ಷಿತಿಯೊಳನ್ಯರನಱಿಯದಿಹುದು ನಿಜವಾದಡೂ
ರ್ಜಿತೆ ನೀ ಪ್ರಸನ್ನವಾಗೆನಲಾ ಮಹಾಧ್ವನಿಯ
ಕೃತಕರುಣದಿಂ ಕೇಳ್ದಳಾ ವಶಿಷ್ಟನ ರಾಣಿ ಸತ್ಯ ನೈರ್ಮಲ್ಯವಾಣೀ ೧೬

ಎನ್ನುವಂ ನೆನೆದಾ ಶುಚಿಸ್ಮಿತೆಯುಳುತ್ತಿರ್ಪ
ಳಿನ್ನಾಕೆಗಾ ನೊಲಿವೆನೆಂದು ನಡೆತರುತಂ ಪ್ರ
ಸನ್ನೆಯಾದಳು ಕೂರ್ತರುಂಧತಿ ಮಹಾಸೌಂದರಾಂಗಿ ಪತಿಭಕ್ತೆಯಾಗ
ಸಾನ್ನಿಧ್ಯದಲ್ಲಿ ಕಂಡಾ ಕರುಣೆಯುಂಗನೆ ಮ
ಹೋನ್ನತದ ಭಕ್ತಿಯಿಂ ಸಾಷ್ಟಾಂಗದಿಂ ನಮಿಸಿ
ಪನ್ನಳಿನದೊಳು ಬಿದ್ದು ಘೋಳಿಡುತ ಕೊಂಡಾಡತೊಡಗಿದಳು ಭಕ್ತಿಯಿಂದ ೧೭

ತಾಯೇ ವಶಿಷ್ಟದೇವನ ರಾಣಿವಾಸವೆ
ಈಯುವನಿಯೊಳಗಾರು ರುಷಿಗಳಂಗನೆಯರ
ನ್ಯಾಯಕ್ಕೆ ಪಕ್ಕಾಗುವಲ್ಲಿಯುಗ್ನಿಯ ಕಾಯುಲೊಲ್ಲದುತ್ತಮೆಯೆ ನಿನ್ನ
ಸ್ವಾಯತ್ತ ಪಾತಿವ್ರತತ್ವಕ್ಕೆ ಸರಿಯಾರು
ಕಾಯಬೇಕೆನ್ನ ವಲ್ಲಭನಸುವನಿತ್ತೆಂದು
ಬಾಯುಳಿಯಲಾ ಶುಚಿಸ್ಮಿತೆಗರುಂಧತಿ ಕರುಣಿಸುತ್ತಭಯುವಮಂ ಕೊಟ್ಟಳು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ತರುಣಿ ಕರುಣಿವಮುಕ್ಷುಕಸಬವ ತೆಗೆದಾ ಪು
ನೀತೆ ಎನಿಸುವ ವಶಿಷ್ಟನ ರಾಣಿಯುಂತಾಗ
ಳೋತೋಂ ನಮಃಶಿವಾಯೆಂಬಾ ಷಡಾಕ್ಷರವನುಚ್ಚರಿಸುತಂ ನಿರ್ಮಲಾ
ಭೂತಿಯುಂ ಸತ್ಪರಂಜ್ಯೋತಿಯುಂ ನಿರುಪಮ
ಖ್ಯಾತಿಯುಂ ಸಂಹೃತಾರಾತಿಯುಂ ಶಂಭು ಸಂ
ಗಾತಿಯುಂ ಸರ್ವಜ್ಞಜಾತಿಯುಂ ತಳಿದಳಾ ಪ್ರೀತಿಯುಂ ಪರಕಲಿಸುತಾ ೧೯

ವರಭಸಿತಮುಂ ತಳಿದ ಮಾತ್ರದಿಂದೆದ್ದಾಗ
ಕರುಣಿಮಕ್ಷಿಕವಲ್ಲಿ ಕಂಡರುಂಧತಿಯ ಪದ
ಸರಸಿಜಕ್ಕೆಱಗಲು ಶುಚಿಸ್ಮಿತೆಯು ಬರಸೆಳೆದು ತರ್ಕೈಸಿ ನಿನ್ನ ಪೋಲ್ವ
ಪರಮ ಪಾತಿವ್ರತೆಯರುಂಟೆಯೆಂದಾಗಸ
ತ್ಕರಿಸಿ ನಿಜವಾಸಕೆ ಇದಿದಳು ವಾಶಿಷ್ಠಮುನಿ
ಯರಸಿ ನಿರ್ಮಲಗುಣದ ಸರಿಸಿ ಸದ್ಗುಣಿ ಪತಿಯುವರಿಸಿ ಸುಖದಿಂದಿರ್ದಳು ೨೦

ನೀಱೆಯೆನಿಸುವ ಶುಚಿಸ್ಮಿತೆಯಿತ್ತ ವರನೆದ್ದು
ಹಾಱಿ ನಲಿದಾಡುತಿರೆ ಪತಿಮುಕ್ಷುಕಂಗೆ ನಲ
ವೇಱಿಪಾಲ್ತುಪ್ಪ ಮಧುರಂಗಳಂ ಕೊಟ್ಟು ಸತ್ಕರಿಸಿ ರಕ್ಷಿಸುತಿರಲ್ಕೆ
ನೂಱು ವರುಷಂ ತುಂಬಲಾ ದಧೀಚಿಯು ಕಾಣ
ದೀಱೂಢಿಯಲ್ಲಿ ಮಡಿಯಲ್ಕಾ ನೋಣಂ ವನಿತೆ
ಮೋಱೆಯುಂ ಬಡಿದುಕೊಂಡಿಳೆಯಲ್ಲಿ ಕೆಡೆದು
ಘೋಳಿಟ್ಟೊರಲಿಯುಳುತಿರ್ದಳು ೨೧

ಎಲೆ ದಧೀಚಿಪ್ರತಿಪ ಮದ್ವರಂ ನಿನ್ನ ಪದ
ನಲಿನಮುಂ ನೂಱುವರುಷಾಂತರದೆ ಕಾಣದಾ
ವಿಲಯುವೆ ಇದಿದನಕ್ಕಟಾ ಕರುಣಿ ಶಿವಮೋಹಿ ನೀನೆ ಗತಿ ಎಂದಳುತಿರೆ
ಅಲಘುಮುನಿವರ ದಕ್ಷಯಜ್ಞಶಾಪಪ್ರದೋ
ಜ್ವಲಮೂರ್ತಿಯಾ ಶುಚಿಸ್ಮಿತೆಯ ಪತಿಭಕ್ತಿಗಂ
ದೊಲಿದು ಸನ್ನಿಧಿಯಾಗಿ ನಿಂದು ರಾರಾಜಿಸುತಿರ್ದನೇವಣ್ಣಿಸುವೆನು ೨೨

ವಿಳಸಿತದ ಕೆಂಜೆಡೆಯು ಕರ್ನ್ನಕುಂಡಲದ ನಿ
ರ್ಮಲಭಸಿತ ಸರ್ವಾಂಗ ತತ್ರಿಪುಂಡ್ರಾವಳಿಯ
ಥಳಿಥಳಿಪ ಸುಲಿಪಲ್ಲ ನಗೆಮೊಗದ ನೀಳಬವರಿಯ ಗಡ್ಡದಗ್ರಗಣ್ಯ
ಯೆಳಲಿಟ್ಟ ಯಜ್ಞಸೂತ್ರದ ದಂಡ ಸಿತಕಮಂ
ಡಲವಜಿನ ಕಾಷಾಯಧೋತ್ರಕೊಡೆ ಪದದಲ್ಲಿ
ಪಳುಕುವಾವುಗೆಯು ರುದ್ರಾಕ್ಷಿದೊಡಿಗೆಯು ಮಸ್ತಕದ ಲಿಂಗದಯ್ಯನೆಸೆದಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ದಧೀಚಿಯು ಕಂಡು ಸಾಷ್ಟಾಂಗದಿಂ ನಮಿಸಿ
ಪಾದದೊಳ್ಬಿದ್ದು ಘೋಳಿಟ್ಟೊಱಲತೊಡಗಿದಳೆ
ಲೆ ದೇವ ಗತಿಯಾರು ನೀನಲ್ಲದೆನ್ನಪತಿ ನಿನ್ನಂಘ್ರಿಯಂ ಕಾಣದೆ
ಹೋದನಾ ಸಗ್ಗಕ್ಕೆ ನಿಮ್ಮ ಚರಣದ ಭೃತ್ಯ
ನಾದವಂಗಸುವೀವುದೆನಲವಳ ಮತಿಗೆಯಾ
ಹ್ಲಾದಿಸುತ ಸತಿಯ ತೊಡೆಯಲ್ಲಿಪ್ಪ ಮಕ್ಷಿಕನ ಸಬವನೀಕ್ಷಿಸಿ ಯತೀಶ ೨೪

ಘಳಿಲನಂತಾ ಪೆಣದ ಮೇಲೆ ಭಸಿತವನೆತ್ತಿ
ತಳಿದನಾ ಶಿವಮಂತ್ರಸಹಿತವಂತಾಗಲಸು
ದಳೆದು ಮಕ್ಷಿಕರೂಪು ನಿಮಿಷದೊಳ್ಪೋಗೆ ಮುನ್ನಿನ ನರಾಕೃತಿಯ ಕರುಣಿ
ಇಳೆಯಲ್ಲಿ ಸತಿಸಹಿತಲಾ ಮುನೀಶ್ವರನ ಪದ
ನಳಿನಕ್ಕೆ ನಮಿಸಿ ಕೊಂಡಾಡಲಿರ್ವರನೆತ್ತಿ
ಬಳಲಿದಿರೆನುತ್ತ ಸತ್ಕರಿಸಿದಂ ಮುನಿನಾಥಧೃತಧರ್ಮ್ಮವೃಷವರೂಪಾ ೨೫

ಆ ಶುಚಿಸ್ಮಿತೆ ಕರಂಗಳ ಮುಗಿವುತಂತಾ ಮು
ನೀಶಂಗೆ ಬಿನ್ನವಿಸಿದಳು ದೇವ ಸದ್ಧರ್ಮ
ಕೋಶ ಮತ್ಪತಿಯ ದುಃಕೃತ ಶಾಪಮಂ ಕಳೆದು ಪಾಲಿಸಿದ ಗುರುಮೂರ್ತಿಯೇ
ಆಶಾವಿದೂರ ಮಹಿಮಾರಸಸಮಗ್ರವಾ
ರಾಸಿಯೇ ಮದ್ಗೃಹದೊಳಾರೋಗಿಸುತ ಮಿಕ್ಕ
ಶೇಷದಿಂ ಸುಪ್ರಸಾದವ ಕೊಟ್ಟು ಸಲಹೆಂದು ಬಿನ್ನವಿಸೆ ಕೈಕೊಂಡನು ೨೬

ಕೊಡೆ ಬಹು ಶಾಕಪಾಕಂಗಳಂ ಸಂತಸದೆ
ಮಾಡಿ ಲಿಂಗಾರ್ಚನೆಗೆಯೊಡರಿಚುತ ಭಕ್ತಿಯಿಂ
ನೀಡಿದಳು ಕೂರ್ತಾ ಶುಚಿಸ್ಮಿತೆ ಮುನೀಶ್ವರಂ ತನ್ನದೇವಂಗರ್ಪಿಸಿ
ನಾಡೆ ಲಿಂಗಪ್ರಸಾದವ ಸವಿಯಲುಳಿದುದಂ
ಗಾಡಿಯಿಂ ಸತಿಪತಿಗಳಿರ್ವರುಂ ಕೊಂಡು ಕೊಂ
ಡಾಡಿ ಗದ್ದುಗೆಯೊಳೊಪ್ಪುವ ದಧೀಚಿಗೆ ಬಿನ್ನಪಂಗೆ ಇದರಾನಂದಿಸಿ ೨೭

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿ ಪಂಕಜಭೃಂಗ ಮಲ್ಲ್ಯಣಾರ್ಯಂ
ಶೀಲಪಟ್ಟಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‍ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೀ ಪೇಳ್ದೀ ವೀರಶೈವಾಮೃತದೊಳಗಾ
ದುದು ಕರುಣೆಶಾಪದ ಮೋಕ್ಷದ ತಾಣಕೆರಡು ಕಾಂಡದ ಮೇಲೆ ಸಂಧಿ ಏಳು ೨೯

ಅಂತು ಸಂಧಿ ೭ ಕ್ಕಂ ಪದನು ೩೧೮ ಗ್ರಂಥ ೩೦ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೦

ಜ್ವಾಲವ್ಯಾಲ ಪಂಚವೇಢ್ರಾಸುರರ ಸಂಹಾರದ ಕಥೆ

ಜ್ವಲನಾಹಿ ಪಂಚವೇಢ್ರರ ಕೊಂದು ಮುನಿಯುಮರ
ಕುಲ ವೇದಪುರುಷರ್ಗೆಯಾತ್ರಿಯಾಯುಷಮಹೋ
ಜ್ವಲಭಸಿತದಿಂದಸುವನಿತ್ತು ಶಿವನಿಂ ನುತಿಸಿಕೊಂಡನಾ ವೀರಭದ್ರಂ

ನಾನಾ ಮಹೇಶ್ವರಜ್ಞಾನಾತಿಶಯ ದಿವ್ಯ
ಗಾನಾಹಿಪತಿ ವಿಲಸದಾನಾರದೇಷ್ಟದನ
ವೀಣಾಂಗ ಹರಿಯುಮರ ಸೇನಾಧಿಪಾಜ ದಿವಿಭೂನಾಥ ಸುಪ್ರಸನ್ನಾ
ಮೌನಾದಿ ಸಂಯಮಿವಿತಾನಾರ್ಚಿತಾಂಘ್ರಿಸಮು
ಹಾ ನಾಕ ದಿವ್ಯಪ್ರಸೂನಾಸ್ತ್ರವೈರಿಚಿ
ನ್ಮಾನಸಾಮಳಹೃದಿ ಸ್ಥಾನಾಗ್ರಜಯ ವಿಜಿತಮೀನಾಂಕ ಶಾಂತಮಲ್ಲಾ ೧

ತಾಪತ್ರಯಾಗ್ನಿಯಂ ಭಂಗಿಸುತ ದುಷ್ಟದು
ರ್ವ್ಯಾಪಾರಸರ್ಪನಂ ಮೆಟ್ಟಿ ಸೀಳಿಟ್ಟು ಮ
ತ್ತಾ ಪಿತೃಪನೆಂದೆನಿಪ ದಡಿಗರಕ್ಕಸನ ದೇಹವನಿಬ್ಬಗಿಯುಮಾಡುತಾ
ಶ್ರೀಪಾವನದ ಭಸಿತವಿತ್ತು ಶಿಷ್ಯಾಳಿಯ ಮಹಾ
ಹಾಪಾವನವನೆ ಇದಿಸಿದ ಗುರುಸ್ವಾಮಿಚಿ
ತ್ಕೂಪಾರನಪ್ಪ ಮೇಲಣಗವಿಯ ಶಾಂತನಂಜೇಶ ಜಯ ಧರ್ಮಕೋಶಾ ೨

ದೇವ ಬಿನ್ನಪವನವಧರಿಸಿ ಕೃಪೆಯಿಂ ಮಹಾ
ಶ್ರೀ ವಿಭೂತಿಯ ಮಹತ್ವವನೆನಲು ಕೇಳು ರಾ
ಜೀವಲೋಚನೆಯೆ ತ್ರಿಯಾಯುಷ ವೆನುತ್ತ ಜಮದಗ್ನೀ ಎನಿಪ್ಪ ಬಗೆಯಾ
ಆ ವಿವರಕೊಂದು ಕಥೆಯಿಂ ನಿನಗೆ ಪೇಳುವೆಂ
ಭಾವಶುದ್ಧದೊಳು ಲಾಲಿಪುದೆಂದು ನುಡಿದನ್ಯೆ
ಪಾವನ ದಧೀಚಿಯೆಂದಾ ಶಂಭುಭಟ್ಟನೊರೆವುತ್ತಿರ್ದನಾ ರಾಮುಗೆ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಮದಗ್ನಿ ಕಸ್ಯಪ ಸುರಾಳಿಯಾಂ ಮೊದಲಾಗಿ
ನಿಮಿರ್ದಗ್ನಿ ಸರ್ಪರಾಕ್ಷಸರಿಂದಲಳಿದೆವೈ
ನಿಮಿಷಮಾತ್ರದೊಳು ಹರಣಂಗಳಂ ಮೂಱುಬಾರಿತ್ತನಾ ವೀರೇಶ್ವರಂ
ಕ್ರಮದಿಂದಲಾ ಕಥೆಯ ಕೇಳೆಂದೆನುತ್ತಲು
ತ್ತುಮದ ದಧೀಚವ್ರತಿ ವಿಲಾಸದಿಂದುಸುರಿದಂ
ಸುಮನಸ್ಸಿನಿಂ ಶುಚಿಸ್ಮಿತೆ ಸದ್ವಿಚಾರದಿಂ ಕೇಳುತಿರ್ದಳು ಭಕ್ತಿಯಿಂ ೪

ವಾರಿಧಿಯ ಮಧ್ಯದೊಳಗಿಹುದೊಂದು ಪರ್ವತಂ
ಪಾರಿಜಾತಂ ಮುಖ್ಯವಾದ ವೈಭವಗಳಿಂ
ರಾರಾಜಿಸುತ್ತಿರ್ಪುದದು ಮಹಾವಿಷ್ಣುವಿನ ಲೀಲಾವಿಲಾಸದುರ್ಗಂ
ವೀರಭದ್ರೇಶನಲ್ಲಿಗೆ ಬಂದು ನಲವಿಂ ವಿ
ಹಾರಿಸುತ್ತಿರಲು ಜಮದಗ್ನಿ ಕಸ್ಯಪನು ದನು
ರಿಗಳು ನಾಂ ಸಹಿತ್ಯ ಹರುಷದಿಂದಾ ಗಿರಿಯನೇಱಿ ಬರವರಲು ಮುಂದೆ ೫

ಆಕಸ್ಮಿಕದೊಳೊಂದು ವಹ್ನಿ ತೋಱುತ್ತಿರಲ
ನೇಕರಾವೆಯ್ದೆ ನೋಡುತ್ತ ನೋಡುತ್ತಿರ
ಲ್ಕಾ ಕಾಲದಲ್ಲಿ ಮುಸುಕಿತ್ತು ಛಿಣಛಿಟಿಲೆಂದು ಸುಟ್ಟದಂದೆಮ್ಮೆಲರಂ
ಏಕಾಕಿ ವೀರಭದ್ರೇಶ್ವರಂ ದುರ್ಗಂಧ
ವೇಕಿ ದೆಲ್ಲಿಯದೆಂದು ಪರಿಕಿಸುತ್ತಿರಲು ಹಾ
ಹಾ ಕೆಟ್ಟೆವಭವ ಸರ್ವೇಶ್ವರಾ ನೀಲಕಂಠಾ ಎಂಬ ದನಿಗೇಳಿದಾ ೬

ಬಂದು ವೀರೇಶ್ವರಂ ನೋಡಲಾವೆಲ್ಲರುಂ
ಬೆಂದ ನುಲಿಯಾಕಾರದಿಂ ಹಸ್ತಪಾದ ಜಡೆ
ಯಂದದಿಂ ಬೂದಿಯಾಗಿರೆ ಕಂಡು ಘೂರ್ಮಿಸಲು ಬಯಲಾಗಿಯಾ ಮಹಾಗ್ನಿ
ಒಂದನಿತು ದೂರದೊಳಗತ್ಯದ್ಭುತದೊಳು ಭುಗಿ
ಲೆಂದುರಿವುತಿರೆ ನೋಡಿ ಮುಳಿದು ರೌದ್ರಂ ಶಿಖಿಯ
ಸಂದೇಹವಿಲ್ಲದಾಂ ನುಂಗುವೆನೆನುತ್ತಲುಜ್ಜುಗಿಸಲಾ ಕಾಲದಲ್ಲಿ ೭

ಭಾರತಿ ಬರುತ್ತ ಸಾಷ್ಟಾಂಗದಿಂದಂನಮಿಸಿ
ವೀರೇಶ್ವರಂಗೆ ಬಿನ್ನವಿಸಿದಳು ದೇವ ಕೇ
ಳೀ ರಭಸದಗ್ನಿಯಂ ನಂದಿಸುವೆನೆಂದು ಶತಯೋಜನನೆನಿಪ್ಪ ದನುಜಂ
ಆರಿ ತನ್ನಯ ಬಲಂ ಸಹಿತ ಬರಲೆಲ್ಲರಂ
ಘೋರಾನಲಂ ನಿಮಿಷಮಾತ್ರದೊಳು ಸುಟ್ಟುದಂ
ತಾ ರಾಕ್ಷಸತ್ರಯಂಗಳ ಸೇನೆಸಹಿತಲೀ ವಹ್ನಿ ದಗ್ಧವ ಮಾಡಿತು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಱಿಂದಲೀ ಮಹಾಜ್ವಾಲೆಯುಂ ನೀವು ನುಂ
ಗಿದಪೆನೆಂಬುದು ಬೇಡವೆನೆ ಕೇಳಿ ಘೂರ್ಮಿಸು
ತ್ತೊದವಿ ನುಡಿದಂ ಬಿಡೌ ನಮಗದೇಂ ಗಣ್ಯಮೆ ಎಂದು ಕೋಪಿಸಲು ವಾಣಿ
ಹೆದಱಿ ಹಣೆಯೊಳ್ಪ್ರಳಯವಹ್ನಿ ಘುಡುಘುಡಿಸುತಿ
ಪ್ಪಧಟ ನಿಮ್ಮಡಿಗೆ ಮಲೆವವರಾರೆನುತ್ತ ಭಯ
ಒದವೆ ಬಿನ್ನವಿಸುತ್ತ ಮೆಲ್ಲಮೆಲ್ಲನೆ ಸರಿದು ಬಯಲಾದಳಾ ಭಾರತಿ ೯

ಮೂದಲಿಸಿದಂತಾಗೆ ಭಾರತಿಯ ನುಡಿ ಮಹಾ
ನಾದದಿಂದುಬ್ಬಿ ಬೊಬ್ಬಿರಿದದಕೆ ಕೋಟಿಮಡಿ
ಯಾದುಗ್ರರೂಪಮಂ ಧರಿಸಿಯಾ ಜ್ವಾಲೆಯುಂ ನಿಮಿಷಕ್ಕೆ ನುಂಗಲಾಗಿ
ಹೋದುದದು ಗರ್ಭದೊಳಡಂಗಿಯುಳಿದವರನಾ
ಹ್ಲಾದದಿಂ ಭಸಿತಮಂ ತಳಿದೆಬ್ಬಿಸಲ್ಕದೊಂ
ದಾದುದಂತಾ ತ್ರಿಯಾಯುಷದೊಳೆಂದಾ ದಧೀಚಂ ಮರಳಿ ನುಡಿವುತಿರ್ದಂ ೧೦

ಜ್ವಾಲಾಸುರಸಂಹಾರ ಸಮಾಪ್ತಂ

ಶ್ರೀವ್ಯಾಳಾಸುರಸಂಹಾರದ ಕಥೆ

ಮರಳಿಯುಸುಬಂದಾವು ದೇವರ್ಕಳೆಲ್ಲರಾ
ವರ ವೀರಭದ್ರಂಗೆ ವಂದಿಸುತೆ ಬೀಳ್ಕೊಂಡು
ಬರುತಿರಲು ಮುಂದೆಯಾ ಪರ್ವತಪ್ರಾಂತ್ಯದೊಳಗೊಂದುಗ್ರತರದ ದುಷ್ಟ
ಉರಗನಾಕಸ್ಮಿಕಂ ಬಂದು ಬಾಯಂ ಬಿಡಲು
ಧರೆ ಗಗನ ದಿಕ್ಕೆಂಟಱಗಲಕ್ಕೆ ತೆಱಪುಗೊ
ಟ್ಟಿರಲಾವು ಬಟ್ಟೆಯೆಂದೊಳಪೊಗಲು ಬಾಯ್ಮುಚ್ಚಿ ನಿಮಿಷದೊಳಗಂ
ನುಂಗಿತು ೧೧

ಉರಗನುದರದೊಳಿಳಿದು ಹೋಗುತಾವೆಲ್ಲರುಂ
ಹರದು ಹಾ ದೇವ ಶಿವಧೋ ಎಂದು ಮೊರೆಯಿಡು
ತ್ತಿರಲದಂ ಕೇಳಿ ವೀರೇಶ್ವರಂ ಘುಮ್ಮನೆಯಿತಂದು ಕಂಡಾ ಫಣಿಯನು
ಉರವಣಿಸಿ ಬಿಡುಬಿಡೆಂದೆಱಗಿ ಪದದಿಂದೊದೆಯ
ಲುರಿದೆದ್ದು ವಿಷವನುಗುಳಲ್ಬಗಿಲೆನುತ್ತಲಾ
ವರಿಸಲದ ಬಗೆಯದಾಭ್ರ್ಬುಡಿಸಿ ಹಿಡಿದನಿತಕಾ ಸರ್ಪ ಬಯಲಾಗಿ ಬಳಿಕಾ ೧೨

ಆಗಲಾ ಮೇಘರೂಪಾಗಿ ಘುಡುಘುಡಿಸಲನು
ರಾಗಿಸುತ ವೀರಭದ್ರಂ ಚಂಡವಾಯು ತಾ
ನಾಗಿ ಬೀಸಲ್ಕೆ ಬಯಲಾಗಿಯುರಗಂ ಪರ್ವತಾಕಾರವಾಗಿ ಬಂದು
ತಾಗಲಾ ರೌದ್ರನುರು ವಜ್ರಮಯವಹ ದಂಡ
ವಾಗಿ ಚೂರ್ಣಂ ಮಾಡಲಾ ಭೋಗಿ ಮಹಿಷರೂ
ಪಾಗಲಾ ರುದ್ರಹುಲಿಯಾಗಿ ಗಂಟಲ ಮುಱಿಯಲದುಬಳಿಕ
ಘೂರ್ಮಿಸುತ್ತಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮದದಾನೆಯಾಗಿ ಬಂದಾರ್ಭಡಿಸಿ ಪಿಡಿವನಿತ
ಕೊದಗಿ ವೀರೇಶ್ವರಂ ಸಿಂಹವಾಗುತ್ತಲಂ
ತದಱ ಮಸ್ತಕವನಿಬ್ಬಗಿಯಾಗಿ ಸೀಳಲುರಗಂ ಬಳಿಕ್ಕುಗ್ರಪಂಚ
ವದನನಾಗಲು ಶರಭನಾಗಿ ರುದ್ರಂ ಸೀಳ
ಲದಿರದಹಿತಂ ಶರಭನಾಗಿ ಭೇರುಂಡರೂ
ಪದಿನುರವ ಸಱಿಸ್ರಿಂದು ಸೀಳಲದು ಕಾಳರಕ್ಕಸನಾಗಿ ಬೊಬ್ಬಿಟ್ಟುದು ೧೪

ಪಿಡಿದು ಖಂಡೆಯವನಾ ವೀರಭದ್ರೇಶ್ವರನ
ಒಡನೆ ಬೊಬ್ಬಿಟ್ಟು ಹಳಚಲು ಕಂಡು ಬಂದು ತರ್ಕೈಸಿ
ಕೆಡಹಿ ಮೆಟ್ಟುತ್ತ ಕೇಶಾಕೇಶಿ ಬಳಿಕ ದಂತಾದಂತಿಯೆಂದೆನಿಪ್ಪಾ
ಬೆಡಗಿನಿಂದೆಸೆವ ಮುಷ್ಟಾಮುಷ್ಟಿ ಯಿಂ ಪೋರೆ
ಪೊಡವಿ ಕಂಪಿಸೆ ಸಮುದ್ರಂ ತುಳುಕೆ ಗಿರಿಕುಲಂ
ನಡುಗಲಾ ವೀರಭದ್ರಂ ಕೃತಕಫಣಿಗಳಿರ್ವರು ಭಾಪು ಕಾದಿದರಲಾ ೧೫

ನೆಟ್ಟನಾ ಫಣಿಪ ಬಹುವೇಷಂಗಳೆಲ್ಲವಂ
ಬಿಟ್ಟುಗ್ರಸರ್ಪನಾಗುತ್ತೆಂದಿನಂತೆ ಬಾಯಿ
ವಿಟ್ಟು ಘೂರ್ಮಿಸಿ ಚಂದ್ರಸೂರ್ಯರಂ ಹೆಡೆಯಿಂದ ಹೊಡೆದು ಭುಗಿಲಿಡುತ ಕಾದೆ
ಕಟ್ಟಧಿಕ ವೀರನಾ ಸುರರ ಸಾವಿರವರುಷ
ವಟ್ಟಾಸುರದೆ ಹೆಣಗಿಯೊದೆದದಱ ತಳದುಟಿಯ
ಮೆಟ್ಟಿ ಮೇಲ್ಭಾಗವಿಡಿದರರೆ ಸಱಿಸ್ರಿನೆ ಸೀಳುತಿಟ್ಟನಿಕ್ಕಡೆಗೆ ಭಲರೇ ೧೬

ಉರಗನುದರದೊಳು ವಿಷವಡಿಸಿ ಜೀವಂಗಳೆದ
ಸುರರು ಮುನಿಮುಖ್ಯರುವೆಲ್ಲರುಂ ವೀರೇಶ
ಕರುಣದಿಂ ಭಸಿತಮಂ ತಳಿದು ಶಿವಮಂತ್ರದಿಂದೆಬ್ಬಿಸಲ್ಕೆದ್ದಾತನ
ಚರಣದೊಳು ಬಿದ್ದು ಕೃಪೆಯುಂ ಪಡೆದು ಬದುಕಿದೆವು
ವರ ಶುಚಿಸ್ಮಿತೆ ಕೇಳ್ತ್ರಿಯಾಯುಷದೊಳಿದು ಒಂದು
ಮರಣಮಂ ಗೆಲ್ವ ಬಗೆಯೌ ಭೂತಿಯಿಂದೆಂದನಾ ದಧಿಚಪ್ರತಿಪನು ೧೭

ಎರಡು ವೇಳೆಯೊಳು ಬದುಕಿದೆವಾವು ಮುನಿದೇವ
ಪುರುಷರಾ ದೇವರ್ಕಳೆಲ್ಲರ್ಗೆ ಭಸಿತದುರು
ತರದಿಂದಲಾ ತ್ರಿಯಾಯುಷದೊಳಿನ್ನೊಂದು ಕಂಟಕವ ಕೇಳಾ ಕರುಣೆಯಾ
ತರುಣಿಯೋ ಪಂಚಮೇಢ್ರಾಸುರನ ಕಥೆಯುನೆಂ
ದೊರೆವುತಿರ್ದಂ ವೀರಭದ್ರನ ಪರಾಕ್ರಮವ
ನರಸ ಕೇಳೆಂದು ಪೇಳುತ್ತಿರ್ದನಾ ಶಂಭುಭಟ್ಟನಾ ರಾಘವಂಗೆ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಾಳಾಸಂಹಾರಂ ಸಂಪೂರ್ಣಂ

ಪಂಚಮೇಢ್ರಾಸುರನ ಸಂಹಾರಂ

ಇಂತುರಗನಿಂದಳಿದು ಬದುಕಿದಾವೆಲ್ಲರುಂ
ಕಂತುಹರನೆಡೆಗೆ ಪೋದಪೆವೆಂದು ಬರೆ ಕರುಣಿ
ಕಾಂತೆಕೇಳವ್ವ ಮತ್ತೊಂದು ಕೇಡಂ ಬಾಲಿ ಸುಗ್ರೀವರೊಂದು ಕಥೆಯಾ
ಹೊಂತಕಾರಂ ಪಂಚಮೇಢ್ರನೆಂದೆಂಬಸುರ
ಸಂತಾನದೊಡೆಯು ನೊಂದೆಸೆಯು ಹಾಣಾಹಾಣಿ
ಯಿಂ ತಳ್ತು ಕಾದುತಿರ್ದರು ಕಂಡೆವಾ ದನುಜನಾಕಾರವೆಂತೆಂದೊಡೆ ೧೯

ಹದಿನಾಱು ಬಿಟ್ಟ ಕೆಂಜುರಿಗಂಗಳಂತವಗೆ
ವದನವೆಂಟೀರಾಱು ತೋಳು ಷೋಡಶಕರ್ಣ
ವದುಭುತದ ಕೆಮ್ಮೀಸೆ ಕೋಱದಾಡೆಗಳೆಂಟು ಮೂಗು ಚೂರ್ಣಾಂಜನವನು
ಪುದಿದ ಗಿರಿಯಂತುನ್ನತಾಂಗವಾತಂಗಾಱು
ಪದವೈದು ಮೇಢ್ರ ದಶವೃಷಣ ಹನ್ನೆರಡು ಗಾ
ವುದಬಂದರ ವಿಶಾಲದಾ ರಕ್ಕಸಂ ಘೂರ್ಮಿಸುತ್ತ ಕಾದುತ್ತಿರ್ದನು ೨೦

ಬಾಲಿ ರಾಕ್ಷಸರ ಯುದ್ಧಂಗಾಣುತಿನ್ನಾವ
ಮೂಲೆಗಳಿಗೆಯ್ದುವೆವೆನುತ್ತ ಯೋಚಿಸಿಕೊಂಡು
ಕೋಲರೂಪದೊಳಖಿಳ ಪರ್ವ್ವತ ಸಮುದ್ರಸಹಿತೀ ಧರೆಯು ಹರಿ ನೆಗುಹುವ
ಕಾಲದೊಳಗಾವರಾಹಂಗಾವ ಸತ್ವವಾ
ಲೀಲೆಗಿಮ್ಮಡಿ ಬಲಂ ಸುಗ್ರೀವನಗ್ರಜಂ
ಸೋಲುವನೆ ರಕ್ಕಸಂಗೆಮಗೆ ಭಯವೇಕೆಂದು ನೋಡುತಿರ್ದೆವು ಬೆದರದೆ ೨೧

ದೂರ್ವಾಸಮುನಿ ಕೊಟ್ಟ ಶಾಪದಿಂದಂದು ಸು
ಪರ್ವನಾಥನ ವೈಭವಂ ಪೋಗಲಾಗಿಯಾ
ಸರ್ವಜ್ಞಗೆಱಗಿ ಕೃಪೆಯುಂ ಪಡೆದು ಪಾಲ್ಗಡಲ ಭಾಂಡದೊಳಿಡುತ ಮಂಧರಾ
ಪರ್ವತವ ನಖಿಳ ದೇವಾಸುರರದೆಂದೆಸೆಯೊ
ಳೊರ್ವನೇ ಬಾಲಿಯೊಂದೆಸೆಯಲ್ಲಿ ಪಿಡಿವುತಾ
ದರ್ವೀಕರನನಮೃತಮಥನಮುಂ ಮಾಳ್ಪ ನಿನಗಂಜನೆನ್ರತಂ ನಿಂದೆವು ೨೨

ಹಲವು ಕಾಲಂ ಕಾದುತಾ ದನುಜನೆಂದನಂ
ದಲವೊ ಕೇಳೈ ಬಾಲಿಯುಳ್ಳಿಗಾಳಗವೈಸೆ
ಬಲುಮೆಯೆ ನನ್ನೊಡನೆ ನೋಡು ನಿನ್ನವನ ಸುಗ್ರೀವನನೆನುತ್ತ ಪಿಡಿದು
ಕೆಲವು ಕೈಯ್ಯಗ್ರಜನೊಳಂ ಕಾದು ತನುಜನಂ
ಸಲೆ ಪಿಡಿದು ಹಿಸುಕಿಯಣ್ಣಂ ನೋಡುತಿರೆ ಮುದುಡಿ
ಬಲು ಪಂಚಮೇಢ್ರನಾ ಬಾಯೊಳಗಿಡುತ್ತ ಹೊಣಕಿಸುತ ಗುಳ್ಕನೆ ನುಂಗಿದ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಜನಂ ನುಂಗಿದೆಯಲಾ ಗರ್ವದಿಂಧಮ
ದನುಜ ಎನುತಂ ಘೂರ್ಮಿಸುತ್ತ ಧಟಿನಿಂ ಕಾದ
ಲೆನಗಿದಿರೆ ನೀನೆಂದು ಬಾಲಿಯಂ ಪಿಡಿದೆಲುವ ನೆಗ್ಗಿ ಮುದ್ದೆಯನು ಮಾಡಿ
ಘನಬಲಂ ಪಂಚಮೇಢ್ರಂ ನುಂಗೆ ಕಂಡು ಘ
ಮ್ಮನೆ ನಡುಗಿ ಭೂವಗ್ನಿ ಸರ್ಪರಿಂದುಳಿದೆ
ವನುಮಾನವಿಲ್ಲಿಂನು ಸತ್ತೆವೆಂದಕಟ ಜೆಸೆದೆಸೆಗೆ ಕೆಟ್ಟೋಡಿದೆವಲಾ ೨೪

ಅಕ್ಕಟಾ ನಾವು ಕೆಟ್ಟೋಡುತಿರಲಾ ದಡಿಗ
ರಕ್ಕಸಂ ತನ್ನಷ್ಟಬಾಹುಗಳ ನೀಡಿದಂ
ದಿಕ್ಕಂಟಕಿಳೆ ಗಗನಕೆರಡಹಾಸುತ್ತೆತ್ತಿದಂ ಪಿಡಿವುತಾಗಲೆರಡು
ಮಿಕ್ಕಕೈಯ್ಯಂ ಮುದುಡಿ ಮುದುಡಿ ತನ್ನಯ ಬಾಯೊ
ಳಿಕ್ಕಿಕೊಂಡೆಲ್ಲರಂ ನುಂಗುತಿರಲಾವು ಮೊಱೆ
ಯಿಕ್ಕಿದೆವು ಶಿವಧೋ ಎನುತ್ತಲಾ ವೀರಭದ್ರಂಗೆ ಕರುಣಸಮುದ್ರಗೆ ೨೫

ಮೊಱೆಯ ಕೇಳುತ್ತಲೆಯಿತಂದು ವೀರೇಶ್ವರಂ
ಮಱಿದು ದೇವಾಸುರ ಮುನೀಶರಂ ನುಂಗಿ ನೀ
ರಱಕೆಯಾಗಲು ವಾರಿಧಿಯ ಕುಡಿದು ಕೊಬ್ಬಿ ನಿದ್ರೆಯೊಳಿಪ್ಪ ದನುಜಕುಲದಾ
ಎಱೆಯನಂ ನೋಡಿಯೈವತ್ತುಗಾವುದದ ಪೇ
ರಱೆಯ ಬೆಟ್ಟವನೊಂದ ಕಿತ್ತು ಕೈಯ್ಯೊಳು ನೆಗಪಿ
ಯಱೆಯುಟ್ಟಿ ಕೆಡೆ ಕೆಡೆ ಎಲೋ ರಕ್ಕಸಾ ಎನುತ ಲಾಲ್ದಿಟ್ಟನು ೨೬

ಗಿರಿಯಾಗ ಗಿಱಿಸ್ಸಿಂದು ತಿರುಗುತಂ ಭರದಿಂದ
ಬರುತಲಸುರನ ಬೆನ್ನ ಮೇಲೆ ಧಿಮ್ಮನೆ ಬೀಳೆ
ಸುರವೈರಿಯದೆ ಸತ್ತನೆಂದು ಖೇಚರರುಲಿಯುತ್ತಲೆಂದಱುಯದಧಿಕಾ
ತರನಿದ್ರೆಯಿಂದಿರುತದಾವಸಣ್ಣವ ಬೆರಣೆ
ಮುರಿಯನೆನ್ನಯ ಬೆನ್ನ ಮೇಲೆ ಮಡಗಿದನೆಂದು
ಬೆರಲ ತುದಿಯಿಂ ಮಿಡಿಯಲದು ದಿಗಂತಕೆ ಪಾರಿಪೋಯಿತು
ತಱಗೆಲೆಯಂದದೆ ೨೭

ವಿಸ್ಮಯಂಬಟ್ಟು ವೀರೇಶ್ವರಂ ನೋಡುತ್ತ
ಸಸ್ಮಿತಾನನನಾಗಿ ಭಲ ಭಲರೆ ರಕ್ಕಸನೆ
ಅಸ್ಮದೀಯಾಟೋಪಮಂ ಬಗೆಯದಿರ್ಪೆಯಾ ಎನುತ ಮತ್ತೊಂದು ಗಿರಿಯಾ
ತಸ್ಮೈಸಮುತ್ಪಾಯ ಘೂರ್ಮಿಸುತ್ತಂ ದೇವ
ಘಸ್ಮರನನಿಡಲು ತಲೆಯೊಂದುಡಿದು ಬೀಳಲ್ಕ
ಪಸ್ಮಾರರೂಪನಾ ಪಂಚಮೇಢ್ರಂ ಸಪ್ತಶಿರವೆರಸಿಯಾಲುತೆದ್ದಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವನಾವ ವೀರನೆನ್ನಯದೊಂದು ತಲೆಯ ಪರಿ
ದಪನೆನುತ ನಗುತಿಪ್ಪ ರಕ್ಕಸನ ರಕ್ತವೀ
ಯವನಿಯೊಳು ಬೀಳೆ ಹನಿ ಹನಿಗೆ ಸಾವಿರ ಕೋಟಿ ದನುಜರಿವನಂತಪ್ಪರೂ
ಭುವನದೊಳು ಹುಟ್ಟುವರೆನುತ್ತಲಾ ಶಿರದ ರ
ಕ್ತವ ನಿಜ ಕರೋಟಿಮಾಲಾವಳಿಯ ತನುವಿನೊಳ
ಗವಗವಿಸಿಕೊಂಡು ವೀರೇಶ್ವರಂ ಬೊಬ್ಬಿರಿದು ನುಡಿದನಾ ದುಷ್ಟನೊಳಗೆ ೨೯

ಎಲೆಯಧಮ ದೇವಮುನಿಗಳನುಂಗಿ ಕೊಬ್ಬಿದಾ
ಮಲಹರಾಂಶನ ವೀರಭದ್ರನೆಂದಱಿಯೆಯಾ
ಹುಲುರಕ್ಕಸಾ ಎನಲು ಸಂತಸಂಬಟ್ಟು ನುಡಿದಂ ಪಂಚಮೇಢ್ರನಲ್ಲಿ
ಭಲರೆ ಲೇಸಾಯ್ತೆನ್ನ ಭುಜದ ತಿಂಟೆಯು ಕಳೆವೆ
ನೆಲಗಳೀರೇಳರೊಳಗಿದಿರಪ್ಪೆನೆಂದೆಂಬ
ಕಲಿಗಳಿಲ್ಲೆಂದು ನೀನೋರ್ವನಂ ಕಂಡೆನೆನಗಾಯ್ತು ಹೆಬ್ಬಬ್ಬವೆಂದಾ ೩೦

ಯೆಂದು ಸಂತೋಷಿಸುತ್ತಾ ರಾಕ್ಷಸಾಧಿಪಂ
ಮುಂದಿರಿಸಿಕೊಂಡಿಪ್ಪ ಖಂಡೆಯಂಗಳು ಬಗೆವೊ
ಡೊಂದು ಗಾವುದದಗಲವೈವತ್ತು ಗಾವುದದ ನೀಳವಿಂತೆರಡರೊಳಗೆ
ಒಂದು ಖಂಡೆಯವ ನೀ ಕೊಳ್ಳೆನುತ ವೀರಂಗೆ
ತಂದುಕೊಟ್ಟಂದು ಬೊಬ್ಬಿಱಿದು ಭುಜವೊಯ್ದು ತಾ
ನೊಂದು ಖಡ್ಗವ ಪಿಡಿದ ನಿರ್ವರುಂ ಹಳಚಿದರು ಶಿವಶಿವಾ ಪೊಗಳಲಳವೇ ೩೧

ಪಂಚಮೇಢ್ರನು ವೀರಭದ್ರರಿರ್ವರ ಯುದ್ಧ
ಮಂ ಚತುರ್ದಶಭುವನದಲ್ಲಿ ಪೊಗಳಲ್ಕಳವೆ
ತಾಂ ಚಮತ್ಕೃತಿಯ ಖಡ್ಗದ ಖಣಿಲು ಖಟಿಲೆಂಬ ರವವೊಗೆಯೆ ಕಿಡಿಗೆದಱುತಾ
ಮಿಂಚಿನಂದದೆ ಹೊಳೆವುತುಭಯ ಶಸ್ತ್ರಂಗಳು ಪ
ಳಂಚಲು ಬು ಬೆಂದು ಬೊಬ್ಬಿಱಿದು ಕಾದಿದರಲಾ
ಅಂಚೆನಡೆಯಳೆ ಕೇಳೆನುತ್ತ ಬಿತ್ತರಿಸುತಿರ್ದ್ದಂ ದಧೀಚಿವ್ರತಿಪನೂ ೩೨

ವೀರನನುಪಮ ಸುಖಾಕಾರ ಮಹಿಮಾಮಯ ಶ
ರೀರ ರೌದ್ರೋಗ್ರ ಸಂಚಾರ ಲೋಕಸ್ತೋತ್ರ
ಶೂರ ನಖರಾಗ್ನಿ ಮಸ್ಫಾರ ಚರಣಾಧಿಕ ಸ್ವೈರ ಗಂಭೀರ ಪಾರಾ
ವಾರನಂದಾ ಪುಣ್ಯದೂರನಂ ಸುಜನಸಂ
ಹಾರನಂ ದುರ್ಗುಣಾಘೋರನಂ ದುಷ್ಕೃತಾ
ಗಾರನಂ ಸದ್ಧರ್ಮಚೋರನಂ ನಿರಯಾಗ್ನಿತೀರನಂ ಮುಳಿದು ಹೊಡೆದಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಱತೆಗೆದು ಹಾಯ್ವ ತಗರೆಲ್ಲಿಯವು ಬಿಡು ಬಳಿ
ಕೈಱಗಿಯಾರ್ಭಡಿಪ ಸಿಡಿಲೆಂಬ ಮಾತೇಕೆಯಾ
ಬಿಱುಘಾಳಿಸುಳಿವ ಸುಳುಹೇತಱದು ವರವೀರಭದ್ರನು ಮಹಾದನುಜರಾ
ಯೆಱತಿಯರಿರ್ವರು ಕಾದುತಿಪ್ಪ ಕಾಳಗವ ನಿ
ನ್ನಱವನಾವಂ ಬಗೆವನಾವ ಲೆಕ್ಕಿಪನಾವ
ನೆಱೆಯಟ್ಟಿ ಭುಗಿಲಿಡುವ ಕೋಪದಿಂದಾಹ ಬೊಬ್ಬಿಱದು
ಪೊಣರುತ್ತಿರ್ದ್ದರು ೩೪

ನೋಡಿದರು ವಿಕಟಾವಲೋಕನದೆ ಕೂಡೆ ನಲಿ
ದಾಡಿದರು ಖಂಡೆಯಂಗಳ ಜಡಿದು ಮಂಡಿಗಳ
ಹೂಡಿದರು ಖಣಿಖಟಿಲು ನಿಟಿನಿಟಿಲೆನಿಪ್ಪ ಧನಿ ಪರಕಲಿಸೆ ವೀರಂಗಳಾ
ಆಡಿದರು ಬಳಿಕಲೋರೋರ್ವರಿರವಿಗೆ ಕಱಿ
ಕೋಡಿದರು ವರ್ಮಂಗಳಂ ತವ್ಮೊಳಗ್ಗಳಿಸೆ
ಬೇಡಿದರು ಪಂಚಮೇಢ್ರಂ ವೀರರೆಯ್ದೆ ಹೊಡೆದಾಡಿದರು ಧರೆ ನಡುಗಲೂ ೩೫

ತಾವಿರ್ವರುಂ ಕೂಡಿ ಕಾದುತಿರ್ದರು ಮಹಾ
ದೇವರ್ಕಳಬ್ದ ಪರಿಯಂತರಂ ಬಳಿಕಲಾ
ಶ್ರೀ ವೀರಭದ್ರನಾ ಪಂಚಮೇಢ್ರರು ಖಂಡೆಯಂಗಳಂ ಪಿಡಿದು ಬಳಿಕಾ
ಆ ವಿಯತ್ತಳದಲ್ಲಿ ನಾರದಂ ನೋಡುತಿರ
ಲೇ ವೇಳುವೆಂ ಗದೆಗಳಂ ಕೊಂಡು ಬೊಬ್ಬಿಱದ
ರೋವೊ ಬಣ್ಣಿಪನಾವನಿಳೆ ಕಮಠ ಗಜಗಳಳುಕಲು ಧರಣಿ ಹುಡಿಯಾಗಲೂ ೩೬

ಗದೆಯಲ್ಲಿ ಹೊಡೆದಾಡಿ ವರುಷಪರಿಯಂತರಂ
ಹೆದರದಿರ್ವರು ಮತ್ತೆ ಮತ್ತೆ ಕಾದುತ ಬಳಲಿ
ಎದೆಯ ಬೆಮರೂದಿಕೊಂಡೊಡನೆ ಸಂತೈಸಿಕೊಂಡಡಿಗಡಿಗೆ ಬೊಬ್ಬಿಱವುತಾ
ಅಧಟರೀ ತೆಱದಿಂದ ಹೋರಿಯಂತವ ಬಿಸುಟು
ವೊದರಿ ಸುರಗಿಗಳಕೊಂಡಾಲಿ ಇರಿದಾಡತೊಡ
ಗಿದರವದಿರಗ್ಗಳದ ವೀರಮಂ ಪೊಗಳಲಾ ಫಣಿಪಗಳವಲ್ಲೆಂಬಿನಂ ೩೭

ಸುರಗಿಯಿಂದಿರಿದಾಡಿ ವರುಷಪರಿಯಂತರಂ
ಮರಳಿಯವ ಬಿಸುಟು ಭುಜಯುದ್ಧಮಂ ತೊಡಗಿದರು
ಧುರಧೀರರಾಹ ಬರಸಿಡಿಲು ಪರ್ವತದ ಶಿಖರಂಗಳಂ ತಾಗುವಂತೆ
ಅರರೆ ಹೋ ಮುಡುಹು ಮುಡುಹುಗಳಿಂದ ತಾಗಿದರು
ಧರಣಿ ಹುಡಿಯಾಗೆ ಸಾಗರದ ತಾಯಿಮಳಲೇಳೆ
ಕರದ ಮುಷ್ಟಿಗಳಿಂದ ತಿವಿದಾಡತೊಡಗಿದರು ವತ್ಸರದಮೇಲಿರ್ವರೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಡನೆ ದಂಡೆಗಳ ನೋಡುತ್ತಲ್ಲಿ ಕಯ್ಗಳಂ
ಪಿಡಿದು ಬಂಧಾಬಂಧಿಯುರರೆ ಮುಷ್ಟಾಮುಷ್ಟಿ
ಬೆಡಗಿನಿಂದೊದಗಿದಂತಾದಂತಿ ಬಳಿಕ ಕೇಶಾಕೇಶಿ ಹೊಳಹು ಬಳುಕು
ಅಡಗೆಡಗೆ ಉಳಿಲವಣೆ ಲಾಗು ಬಿಗುಹೆಂದೆಂಬ
ತೊಡಕುಗಾಳೆಗವ ತೊಡಗಿದರೊಂದು ವತ್ಸರಂ
ಕಡುಗಂಗಳಂ ಮತ್ತೆ ತೆಗೆದುಕೊಂಡರು ಚತುರ್ದಶಭುವನವಳ್ಕುತಿರಲು ೩೯

ಘುಡಿ ಘುಡಿಸಿ ಕಾದುತಿರ್ದರು ಬಳಿಕ ವೀರೇಶ
ನುಡಿದನಲೆ ರಕ್ಕಸಾ ನಿನ್ನ ತಲೆಯುಂ ನಾನು
ಕಡಿವೆನ್ನೈ ಮೊದಲು ಗಾವುದನೂಱಱಳತೆಯದ್ರಿಯನೊಂದನಿಟ್ಟೀಗಳೂ
ಒಡನೆ ನೋಡೆನ್ನ ಸಾಮಾರ್ಥ್ಯವನೆನುತ್ತಾಲ್ದು
ಹೊಡೆಯೆ ಮತ್ತೆರಡು ತಲ ಕತ್ತರಿಸಿ ನೆಲದಲ್ಲಿ
ಕೆಡೆಯದಂತಾ ರಕ್ತಸಹಿತಂಗದೊಳಗಡಂಗಿಸಿಕೊಂಡನಾ ರೌದ್ರನೂ ೪೦

ಪರಿಯಲಾ ಮೂಱು ತಲೆಯ್ಯೈದು ತಲೆಸಹಿತ ಬೊ
ಬ್ಬಿಱಿದೆದ್ದು ಪಂಚಮೇಢ್ರಂ ಭಾಪು ಖಡ್ಗದಿಂ
ದೆಱಗಿದಂ ವೀರಭದ್ರೇಶ್ವರನ ಕಿಬ್ಬರಿಯುನಾ ರುಧಿರವಿಳೆಯೊಳೊಗಲು
ನೆಱಿ ವೀರರಗಣಿತಂ ಪುಟ್ಟುವರೆನುತ್ತ ಬಾ
ಯ್ದೆಱಿದು ಪೀರಿದನಸುರನಿರ್ವರುಂ ಮತ್ತೆ ಮೈ
ಮಱಿದೊರಗಿದಂತಿರ್ದು ಕುಬುಬೆಂದು ಕೂಡೆ
ಘೂರ್ಮಿಸುತೆದ್ದರೇವೊಗಳುವೆ ೪೧

ಘುಡಿಘುಡಿಸಿ ವೀರಭದ್ರಂ ಪಂಚಮೇಢ್ರನೊಳು
ನುಡಿದನಲೆ ರಾಕ್ಷಸಾಧಮ ನಿನ್ನ ಕೂಡಾವು
ಹಿಡಿದುಕಾದುವದಳ್ತಿಗಾಳಗವಲ್ಲೈ ಬಳಿಕಲಿಂನು ನೋಡೆಂದುಗ್ರನೂ
ಅಡರಿಬೆಳೆದಂ ಭೂಮಿಯಾದಿ ಸತ್ಯಲೋಕ
ಗಡೆಯಾಗಿಯತಳವಿತಳಾದಿ ಕೂರ್ಮಾಂತವಾ
ಮುಡಿಯುಡಿಗಳೀಯಜಾಂಡಂ ತುಂಬೆ ದೇಹವಾಗಲು ಮೆಱಿದನಾ ರೌದ್ರನೂ ೪೨

ಕೂಡೆ ಬೊಬ್ಬಿಱಿಪು ಪಿಡಿದಾ ಪಂಚಮೇಢ್ರನಂ
ನೋಡಿ ಕೌಂಕುಳೊಳವಚಿ ಸೆಳೆಬವನ ಖಡ್ಗಮಂ
ದಾಡೆಯೊಳಗಿಟ್ಟಗಿದುಪಾಯ್ಕಿ ಕುಕಿಲಿಱಿದು ರಕ್ಕಸನ ಕೆಡಹುತ್ತಲಲ್ಲಿ
ನಾಡೆ ತಲೆಯ್ಯೈದನೊಂದೇ ಬಾರಿ ಹೊಡೆದು ಬಳಿ
ಕೀಡಾಡಿ ದಿಗ್ಬಲಿಯ ಕೊಟ್ಟನದ ಕಂಡು ನಲಿ
ದಾಡಿಯಂಬರದೊಳಿರ್ದಮುಮು ನಾರದನೆಯ್ದಿದಂ ಬೇಗ ಶಿವನ ಸಭೆಗೆ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಲಿದ ಶರೀರದಿಂ ಬೆಮರುವನಿಯುಂಗದ
ಗ್ಗಳ ನಾರದಂ ಪೋಗಿ ಕೈಲಾಸದಲ್ಲಿ ನಿ
ರ್ಮಳ ಶಿವನ ಪಾದಕ್ಕೆ ಸಾಷ್ಟಾಂಗವೆಱಗಿ ವಂದಿಸುತೆದ್ದು ತನ್ನ ಹಸ್ತಾ
ನಳಿನಮಂ ಮುಗಿದು ಬಿನ್ನಪ ಜೀಯ್ಯ ತವ ಬಾಳ
ತಳದಿಂದಲುದಿಸಿದಗ್ಗ್ರಣಿ ವೀರಭದ್ದ್ರಮಂ
ಗಳಮೂರ್ತಿ ಮಾಡಿದ ಪರಾಕ್ರಮವನವಧರಿಪುದೆಂದಲ್ಲಿ ಬಿತ್ತರಿಸಿದಾ ೪೪

ವಾರಿಧಿಯ ಮಧ್ಯದ ಮಹಾಪರ್ವತಾಂತದೊಳು
ದಾರ ಮುನಿ ದೇವರ್ಕಳಂ ದಹಿಸಿ ನುಂಗಿದ ಮಹೋ
ಹೋರುದಹನಜ್ವಾಲೆಯಹಿಗಳಂ ಸಂಹರಿಸಿಯುವದಿರಂ ಸಲಹಿ ಬಳಿಕಾ
ಕ್ರೂರನಹ ಪಂಚಮೇಢ್ರಂ ಮುರಳೆಯುವದಿರಂ
ಓರಂತೆ ತಿನಲಾಗಿ ಕಾದಿ ಸಂಹರಿಸಿದಂ
ವೀರೇಶನಾ ದನುಜನಂ ಮಗನನೀಕ್ಷಿಸೈ ಗೌರಿದೇವಿಯರುಸಹಿತ ೪೫

ಎನೆ ಕೇಳ್ದು ಸಂತಸಂಬಟ್ಟು ನಂದಿಯನೇಱಿ
ವನಿತೆ ಗಿರಿಜಾದೇವಿಸಹಿತಲಾ ಪ್ರಮಥಗಣ
ವನಜಾಕ್ಷ ವಿಧಿಮುಖ್ಯ ದೇವತಾನಿಕರ ವೋಲೈಸಿ ಬರಲೆಯಿತರುತ್ತಾ
ಮುನಿ ಮುಂದೆ ಬಂದು ತೋಱಲು ಕಂಡನಾ ತನ್ನ
ತನುಜನಂ ಹರುಷಮುಖವನಜನಂ ರುದ್ರನಂ
ಘನಪರಾಕ್ರಮರಸಸಮುದ್ರನಂ ರೌದ್ರನಂ ಭದ್ರನಂ ಭಯವಿಚ್ಛಿದ್ರನಂ ೪೬

ಮಗನ ಕಾಣುತ್ತ ಗದ್ಗದವೆರಸಿ ಹರುಷಾಶ್ರು
ವೊಗೆವುತಿರೆ ದೇವದೇವಂ ವೀರಭದ್ರನಂ
ಬಿಗಿಯಪ್ಪಿ ಮುದ್ದಾಡಿ ದೇವಿಯರು ಸಹಿತ ಮೂರ್ಧ್ನಿಘ್ರಾಣಮಂ ಮಾಡಲು
ಮಿಗೆ ಮಹಾಪ್ರಮಥರುದ್ರರು ಕೂಡೆ ಕೀರ್ತಿಸಲು
ನಗಧರಾಜೇಂದ್ರಾದಿ ದೇವರ್ಕಳಡಿಗೆಱಗಿ
ಪೊಗಳತೊಡಗಿದರು ಜಯ ಜಯ ವೀರಭದ್ರ ಕರುಣಾರಸಸಮುದ್ರ ಎನುತಾ ೪೭

ಆ ಮಾಧವ ಬ್ರಹ್ಮರಿಬ್ಬರುಂ ವೀರಂಗೆ
ಕೈಮುಗಿದು ಕೊಂಡಾಡಿ ಬಿನ್ನವಿಸತೊಡಗಿದರು
ನೀ ಮಾಡಿದೀ ಪರಾಕ್ರಮಕೆ ಸರಿಯಾರೈಯ್ಯ ದಕ್ಷಸಂಹಾರಮೂರ್ತಿ
ಈ ಮೂರ್ಖ ಪಂಚಮೇಢ್ರಂ ಮುಂನಲೊಡರಿಚಿದ
ಸಾಮಾರ್ಥ್ಯಮೆಂತೆಂದಡವಧರಿಸೆನುತ್ತನಾ
ನಾ ಮಧುರವಚನದಿಂ ಪೊಗಳಿ ಬಿತ್ತರಿಸತೊಡಗಿದರದಂತೆನೆ ಪೇಳ್ವೆನು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದಕೀ ಪಂಚಮೇಢ್ರಾ ಸುಹ ಮಿಗೆ ಕೊಬ್ಬಿ
ನಿಂದಖಿಳ ಲೋಕಮಂ ಬಾಧಿಸುತ್ತಿರಲಾಗಿ
ಯಂದು ಹರಿಯಜಸುರಪ ಮುಖ್ಯದಿಕ್ಪಾಲರಮರ್ಕಳೆಲ್ಲಾ ಕೂಡುತಾ
ಒಂದಾಗಿ ಕಾದಲೆಂಮೆಲ್ಲರಂ ಬಗೆಯದಿರೆ
ನೊಂದು ಮೂದಲಿಸಿಕೊಂಡಾವೆಲ್ಲರೀತನಂ
ಕೊಂದು ಹಾಯ್ಕುತ್ತ ಬದುಕಿದೆವೆಂದು ಹರುಷದಿಂ ನಿಜವಾಸಗಳಿಗೆಯ್ದಲೂ ೪೯

ಆ ವೇಳೆ ಬಂದು ಶುಕ್ರಾಚಾರ್ಯ್ಯನಾತಂಗೆ
ಜೀವಮಂ ಮೃತ್ಯುಂಜಯಾಖ್ಯಮಂತ್ರದಿನೀಯ್ಯ
ಲೇವೊಗಳುವೆಂ ಬಳಿಕ್ಕೆದ್ದು ನಾಲ್ದೆಸೆಯ ನೋಡುತ್ತಲವುಡಂ ಕಚ್ಚುತಾ
ದೇವರ್ಕಳಂ ಕಾಣದಿದಿರೊಳಿರ್ದಯ್ಯನಂ
ಭಾವಶುದ್ಧದೆ ಕಂಡು ವಂದಿಸುತ್ತಂಘ್ರಿರಾ
ಜೀವಕ್ಕೆ ಎದ್ದು ಕೈಮುಗಿದು ಕೊಂಡಾಡಿ ಬಿನ್ನವಿಸಿದಂ ಪಂಚಮೇಢ್ರಂ ೫೦

ಜೀಯ ನಿನ್ನಯ ಶಿಷ್ಯನಪ್ಪೆನ್ನೊಳಿದಿರಾಗಿ
ಈ ಯಮರತತಿ ಕಾದಿ ಕೊಂದರಾ ನೀಚನಹ
ತೋಯಜೋದ್ಭವನಿತ್ತ ವರದಿಂದಲಿಂತಾದೆನಯ್ಯ ನಿನ್ನ ಕರುಣದಿಂದಾ
ಈಯಲೆನ್ನಯ ಹರಣವೀಗ ಬಂದುದು ಮುನ್ನ
ಲೇವೊಗಳುವೆಂ ಯಮನ ದೆಸೆಯಿಂದ ಮಡಿಯಲಂ
ದಾಯವಸರಂ ಬಂದು ಹರಣವಿತ್ತಂತಾದುದಾ ಕಥನವೆಂತೆಂದೊಡೆ ೫೧

ಯಮನೊಳಾಂ ಯುದ್ಧಮಂ ತೊಡಗಲಂತಾ ಮೃತ್ಯು
ಸಮಿತಿದೂತರುವೆರಸಿ ಕೋಣನಂ ಬಿಗಿದೇಱ
ಯಮಮು ಕಾದಲ್ಕವನ ಪಿಡಿದಾನು ನುಂಗಲವನೆನ್ನ ಕುಕ್ಷಿಯೊಳು ಬೆಳೆಯೆ
ನಿಮಿಷದೊಳಗೆರಡು ಸೀಳಾಗಿ ನಾನಳಿದಂದು
ಮಮತೆಯಿಂ ನೀವಲ್ಲಿ ಕೂರ್ತುಬಂದೆನ್ನ ಜೀ
ವಮನಿತ್ತ ಮಾಳ್ಕೆಯಿಂದಿಂದೆನ್ನ ಪೊರೆದಿರೆಂದನು ಶುಕ್ರಗಾ ದನುಜನೂ ೫೨

ಶುಕ್ರನೊಳು ಪಂಚಮೇಢ್ರಂ ನುಡಿದ ಕಥನಮಂ
ಚಕ್ರಿಮೊದಲಾದವರು ವೀರಭದ್ರೇಶ್ವರಗು
ಪಕ್ರಮಿಸಿ ಕೇಳ್ದ ಕಥೆಯಂ ಶುಚಿಸ್ಮಿತೆಗಾ ದಧೀಚಿಯೊರೆದೊಂದಂದದಾ
ಈ ಕ್ರಮವ ಶಂಭುಭಟ್ಟಂ ರಾಮಚಂದ್ರನಹ
ಚಕ್ರವರ್ತಿಗೆ ಬಿತ್ತರಿಪ ಬಗೆಯನುಸುರಿದಂ
ಶಕ್ರಪದವಮಂ ಬಗೆಯದಿಹ ಹಲಗೆಯಾಚಾರ್ಯ ಕೆಂಚವೀರಾಹ್ವಯಂಗೆ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಗುರು ಶುಕ್ರನೊಳು ಮರಳಿ ಬಿನ್ನವಿಸಿದಂ
ಹಿಂದೆಯಾ ಬ್ರಹ್ಮನಿಂ ನೀಚವರಮಂ ಪಡೆದ
ಛಂದವಲ್ಲುಗ್ರತಪಮಂ ಮಾಳ್ಪನಲ್ಲಿ ಹರಿಯಾದೊಡಾಗಲಿ ಕಮಲದಾ
ಕಂದನಾಗಲಿ ರುದ್ರನಾಗಲಾರಾದೊಡಾ
ನಿಂದು ಬಯಸಿದ ಪದವ ಕೊಟ್ಟವನೆ ದೈವವೆನ
ಗೆಂದು ನಿಶ್ಚೈಸಿ ಪೇಳಲ್ಕಂತೆ ಮಾಡೆಂದನಾ ಕವಿ ಸುಖಾಂಬುಜರವಿ ೫೪

ಗುರುನಿರೂಪವ ಪಡೆದು ಬಂದು ಲೋಹದ ಕಂಭ
ವೆರಡನಿಕ್ಕಡೆಯಲ್ಲಿ ನಟ್ಟಡ್ಡ ಪಟ್ಟಿಗೆಯ
ಪರಿರಚಿಸಿಯಂತಲ್ಲಿ ಕಬ್ಬೊನ್ನ ಸರಪಣಿಯ ಕಟ್ಟಿಯಾ ಕೊಂಕಿಯೆಡೆಗೆ
ಚರಣವೆರಡರ ಹಿಮ್ಮಡಿಯ ಸೀಳಿ ಸಿಕ್ಕಿಸುತ
ಲಿರದೆ ತಲೆಕೆಳಗಾಗಿ ಯುರಿ ವಗ್ನಿಯಾಹುತಿಯ
ಭರದಿಂದ ಕೊಂಡುಗ್ರತಪವ ಮಾಡುತ್ತಿರ್ದನಾ ದುಷ್ಟಪಂಚಮೇಢ್ರಂ ೫೫

ಸಲೆ ದೈವವೊಂದ ಕುಱಿಯದೆ ಪಂಚಮೇಢ್ರನಾ
ಹಲವು ದೈವಂಗಳಂ ಕುಱಿತು ತಪಮಂ ಮಾಡ
ಲೊಲಿವ ದೈವಗಳಿಲ್ಲದಿರೆ ದಿವ್ಯಸಾಹಸ್ರವರುಷದಿಂ ಮೇಲೆಯೊಂದು
ತಲೆಯರಿದು ರುದ್ರಾಯ ತೇ ಯಹೋ ಸ್ವಾಹೇತಿ
ಛಲದಿಂದಲಿತ್ತೊಡಂ ಶಿವನೊಲಿಯದಿರಲಾಗಿ
ಬಲುಪಿನಿಂ ಮತ್ತೊಂದು ಮಸ್ತಕವ ಕಡಿದನಲನಲ್ಲಿ ಹಾಯ್ಕಿದನುಗ್ರದಿಂ ೫೬

ಮರಳಿಯುಂ ಹರನೊಲಿಯದಿರೆ ಪಂಚಮೇಢ್ರನುರು
ತರ ತಪೋಜ್ವಾಲೆಯಿಂ ಭುಗಿಲಿಟ್ಟು ಲೋಕಂಗ
ಳುರಿವುತಿರೆ ಮತ್ತೊಂದು ಮತ್ತೊಂದು ತಲೆಯಿಂತು ನಾಲ್ಕು ತಲೆಯರಿದರ್ಪಿಸಿ
ಸುರವೈರಿಯೈದನೆಯ ತಲೆಯ ಖಂಡಿಸುವಾಗ
ಧರೆಯ ಮೊಱೆಯಿಂ ಕೇಳಿ ಬಂದನಂತಾಗ ಪುರ
ಹರನಾತಗಂ ಸುಪ್ರಸನ್ನನಾಗುತ್ತ ನಿನ್ನಿಷ್ಟವೇನೆಂದು ಕೇಳ್ದಂ ೫೭

ಯೆನೆ ದೇವನಡಿಗೆ ಸಾಷ್ಟಾಂಗದಿಂ ನಮಿಸಿ ಕರ
ವನಜಮಂ ಮುಗಿದು ಬಿನ್ನವಿಸಿದಂ ಜೀಯ್ಯಮು
ನ್ನೆನಗೆ ಕಮಲಜನಿತ್ತ ವರದಿಂದ ಸಾಮರ್ಥ್ಯವಾಯ್ತಿಲ್ಲೆಂತೆಂದೊಡೆ
ಮುನಿದಾನು ನುಂಗೆ ಬೆಳೆದುದರವಂ ಬಗಿದು ಘ
ಮ್ಮನೆ ಪೇಳ್ದನಾತೂಣನಖಿಳ ದೇವರು ಕೊಂದ
ರನಘ ನಮ್ಮಾರ್ಯನಿಂದಸುವಡೆದೆನಾಗಿ ನಾನಿನ್ನು ಬೇಡುವೆನೊಂದನು ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುರರ ಸುರದ್ರಿವಾರಾಸಿವೊದಲಾಗಿರ್ದ
ಧರೆಯೊಳೇನೇನ ನಾ ನುಂಗಿದಾಕ್ಷಣ ಒಡಲೊ
ಳಿರದೆ ಪರಿದಗ್ಧವಾಗಲಿ ಬಳಿಕಜಾಂಡದೊಳಗೆನಗೆ ಸಮಬಲರಿಲ್ಲದಾ
ಸಿರಿಯು ಕೊಡಬೇಹುದೆಂದೆನಲೆಲವೊ ಜಾತಸ್ಯ
ಮರಣವೆಂಬದು ತಪ್ಪದದು ಕಾರಣಂ ನಿನ್ನ
ಶರೀರವಳಿವಂದಮಂ ಕೇಳೆಂದು ಪಂಚವೋಥ್ರಂಗೀಶ ನಿರವಿಸಿದನೂ ೫೯

ಬದುಕು ನೀನಖಿಳ ವೈಭವದಿಂದ ರಾಕ್ಷಸಾ
ತುದಿಯಲ್ಲಿ ಮರಣವೆಂತೆನೆ ಭಾಳನೇತ್ರದಿಂ
ದುದಿಸಿದೆನ್ನಯ ಪುತ್ರನೆಂದೆನಲು ಫಡ ಫಡಾ ಸಂಹಾರನೇತ್ರದಿಂದಾ
ಉದಯಿಸುವನಾರೆನಗೆ ವಿಲಯವಿಲ್ಲೆಂದು ಬಗೆ
ದುದಿತ ಸಂತಸದೊಳಿರ್ದಾತನಂ ನೀನೆ ಕೊಂ
ದುದು ಲೇಸು ವೀರೇಶನಾವುಳಿದೆವೆಂದು ಹರಿಯಜರು ಕೀರ್ತಿಸುತಿರ್ದರು ೬೦

ಸುರನಿಕರವಿಂತು ಕೀರ್ತಿಸೆ ವೀರಭದ್ರನಂ
ಪರಮೇಶ್ವರಂ ತೆಗೆದು ತಕ್ಕೈಸಿ ಮುಂಡಾಡಿ
ಗಿರಿಜೆ ಗಣನಿಕರಸಹಿತೆಯ್ದಿದಂ ಕೈಲಾಸಕಿತ್ತ ಹರಿಯಜರಿದಿರೊಳು
ಪರಮರೌದ್ರಂ ಪಂಚವೋಥ್ರನುದರವ ಸೀಳಿ
ವರ ಮುನಿ ಸುರಾಳಿಗಳು ಬಾಲಿಸುಗ್ರೀವರ್ಗ
ಳುರಿದು ಬೆಂದಿರ್ದವರ ಮೇಲೆ ಭಸಿತವ ತಳಿದು ನಿಮಿಷದೊಳು ಹರಣವಿತ್ತು ೬೧

ಹರಣಮಂ ಪಡೆದಾವು ಕೊಂಡಾಡುತಿರಲಲ್ಲಿ
ಹರಿಯಜಾಂದ್ರಿಗಳಿಗೆಮಗೆ ಜಮದಗ್ನಿ ಗುರು
ತರಕಸ್ಯಪಾದಿಗಳಿಗಾ ವೇದಪುರುಷರಿನಿತಕ್ಕೆ ಭಸಿತದ ಮಂತ್ರವಾ
ವೊರೆದನಾ ವೀರಭದ್ರೇಶ್ವರ ತಿಳಿದೆನದ
ಕರುಣೆಯಿಂಗನೆ ಶುಚಿಸ್ಮಿತಿಯೆ ಕೇಳೆಂದು ಬಿ
ತ್ತರಿಸಿದ ದಧೀಚಿ ಎಂದಾ ಶಂಭುಭಟ್ಟಂ ಪೇಳ್ದಂ ರಾಮಚಂದ್ರನೊಡನೆ ೬೨

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಟಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲ್ಯಾರ್ಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯನಾಶಿಷ್ಯ
ಮೌಳಿಮಣಿ ಕಿಂಚವೀರಾಂಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಂ ಕೂರ್ತು ಪದನಂ ಮಾಡಿದಂ ೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀವೀರಶೈವಾಮೃತದೊಳಗಾ
ದುದು ಪಂಚಮೋಢ್ರಸಂಹಾರದೆಡೆಗೆರಡು ಕಾಂಡದ ಮೇಲೆ ಸಂಧಿ ಎಂಟು ೬೪

ಅಂತು ಸಂಧಿ ೮ ಕ್ಕಂ ಗ್ರಂಥ ೩೦ ವಚನ ೩೮೨ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೧

ಶಂಕರಾನಂದ ಪ್ರಾಣದಾನ ಹನುಮದಿಷ್ಟಲಿಂಗಪ್ರದಾನ ಕಥೆ

ಶುಕ್ರ ಶಿಷ್ಯಂ ಸುಪೂರ್ಣ್ಣಂ ಶಂಕರಾನಂದ
ನಾಕ್ರಮಿಸಿ ಹೊಡೆಯಲಸುವಂ ಕೊಡಿಸಿ ಹನುಮ ಪೀ
ಠಕ್ರಮಕೆ ಶಿವನಿರೂಪದೊಳುರಿದ ಲೋಕಮಂ ಪೊರೆದನಾ ವೀರೇಶ್ವರಂ

ಜಗದೇಕವೀರನೆಂದೆಂಬ ಬಿರಿದುಳ್ಳನೇ
ಮಗನ ವಾಹನಕೆ ನಿನ್ನುಂಗುರಂ ವ್ಯಾಘ್ರಪಾ
ದಿಗೆ ನಿನ್ನ ಕೈಯ್ಯುರತಿ ನಿನ್ನಂಶಗಣದುಗ್ಗ್ರಕಂ ನಿನ್ನ ಕೊರಲ ಪಚ್ಚಂ
ಅಗಿದು ಕಲಿಕಾಮದೇವಂಗೆ ನಿನ್ನಡಿದಾವ
ರೆಗಳೊಡ್ಡಿಯಾನತರ ಹೃದಯ ಸರಸಿಯೊಳು ಹು
ತ್ತುಗಳೇಱಿ ಹುಲ್ಗಚ್ಚಿ ಪಲ್ಗಿರಿದು ನೀರ್ವೊಕ್ಕವೇಕಯ್ಯ ಶಾಂತಮಲ್ಲಾ ೧

ವೈರಾಗ್ಯಸಂಪನ್ನ ಶಿಷ್ಯರಂ ರಕ್ಷಿಸುತ
ಚಾರು ಶಿವಲಿಂಗಕ್ಕೆ ಸಕಲ ಭಕ್ತಾವಳಿಗೆ
ಧಾರಿಣಿಗೆ ಸರ್ವಭೂತಹಿತಾರ್ಥವಾಗಿ ದಿವ್ಯಾನ್ನಸುಪ್ರದನಾದನೆ
ವೀರಶೈವೋದ್ಧರಣ ನ ಶಿವೇನ ಶಕ್ತಿರ್ವಿ
ನಾ ರಮ್ಯದಾಗಮಾಚಾರ್ಯ ಮೇಲಣ ಗವಿಯ
ಧೀರನೇ ಶಾಂತನಂಜೇಶದೇಶಿಕಚಕ್ರವರ್ತಿ ವಿಸ್ಫೂರ್ತಿ ಶರಣೂ ೨

ಆ ರಾಮಚಂದ್ರನಾ ಶಂಭುಭಟ್ಟನ ಪಾದ
ನೀರೇಜಕೆಱಗಿ ಕೈಮುಗಿದು ಬಿನ್ನವಿಸಿದಂ
ವೀರೇಶ್ವರಂ ಜ್ವಲನ ಸರ್ಪನಾ ಪಂಚಮೋಢ್ರರ ಕೊಂದು ಮಡಿದವದಿರಾ
ಶ್ರೀ ರಮ್ಯಭಸಿತದಿಂದೆತ್ತಿದ ಮಹಾ ಕಥೆಯ
ನೋರಂತೆ ಕೇಳಿ ಕೃತಕೃತ್ಯನಾದೆಂ ಮನ್ಮ
ನೋರಥಂ ಕೈಸಾರ್ದುದಿಂದೊಂದು ಕಥನಮಂ ಬಿತ್ತರಿಸಬೇಕೆಂದನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಹನುಮಾವಿನ ಕರದ ಲಿಂಗದ ಪೀಠ
ವಾವ ಕಾರಣದಿಂದ ಬಯಲಾದುದಂತದಂ
ಶ್ರೀ ವೀರಭದ್ರದೇವರು ತನ್ನಿಮಿತ್ತದಿಂದಖಿಳಮಂ ಸುಟ್ಟುರುಹುತಾ
ಪಾವನದ ಶಕ್ತಿಯಂ ತಂದೆಂತು ಕೊಟ್ಟಂ ಕೃ
ಪಾವರನೆಯಾದ್ಯಂತ ಶುದ್ಧವೆನ ಲೆನಗರುಪಿ
ನೀವು ರಕ್ಷಿಸಬೇಹುದೆಂದ ರಾಘವನೊಳಿಂತೆಂದನಾ ಶಂಭುಭಟ್ಟಂ ೪

ಸುಕರವಂ ಕೇಳು ರಾಘವ ಧರಣಿಯೊಳ್ತ್ರಿಯಂ
ಬಕವೆಂಬ ಪರ್ವತಂ ಸಿಂಗಂಗಳೇಳ್ಗೆಯಿಂ
ಪ್ರಕಟತರ ಪುಣ್ಯವೃಕ್ಷಂಗಳಿಂ ರತ್ನಮಯಖಣಿಗಳಿಂ ದಿವ್ಯೌಷಧಾ
ನಿಕರದಿಂ ನಿರ್ಜರಂಗಳ ಸೈಪಿನಿಂದಲ
ತ್ರ್ಯಕುಟಿಲ ಮುನೀಶರಿಂ ಪಾವನ ಸ್ಥಲಗಳಿಂ
ಸಕಲ ವೈಭವದಿಂದ ಮೆಱೆದುದದಱಗ್ಗಳವನಿಳೆಯೊಳಾವಂ ಬಣ್ಣಿಪಂ ೫

ಹರನಂತೆ ಗಂಗಾಧರತ್ವದಿಂದಂ ಮತ್ತೆ
ಹರಿಯ ಧೈರ್ಯ್ಯತೆಯಂತೆ ಕರಿಯ ರೇಖೆಗಳನು
ಳ್ಳಿರಳೆಗಳಿನಜನಂತೆ ಕಮಲಜಾಹ್ವಯಗಳಿಂದಿಂದ್ರನಂದದೆ ಪಾಱುವಾ
ಬರುಹಿಗಳ ಪಿಚ್ಛಾಂಗದಿಂ ಸೂಳೆಗೇಱಿಯಂ
ತುರುತರ ಭುಜಂಗನಿಕರಂಗಳಿಂದಾ ಮಹಾ
ಗಿರಿ ಮೆಱೆದುದೈ ಸುಖದ ಸರಿ ಮುನೀಶ್ವರರ ಹರವರಿ ದೋಷಗುಣಕರ್ತರೀ ೬

ಆ ಮಹಾ ಪರ್ವತಪ್ರಾಂತದುತ್ತುಮವನಂ
ರಾಮಣೀಯಕ ತರುಗಳಿಂ ಗುಲ್ಮನಿಕರದಿಂ
ಸೋಮಾದಿ ವಲ್ಲಿಗಳಿನಖಿಳ ತೃಣನಿಚಯದಿಂ ಜೇನ್ನೆಯ್ಯ ತಂದಲ್ಗಳಿಂ
ಸಾಮಾರ್ಥ್ಯಮೃಗಸಮೂಹಂಗಳಿಂದಂ ಖಗ
ಸ್ತೋಮದಿಂ ಶಬರಾಲಯಂಗಳಿಂ ಖೇಚರ
ಪ್ರೇಮದಂಪತಿಗಳಿಂ ಮುನಿನಿಕರದಿಂ ಕೀರ್ತಿಯಾಂತು ರಾಜಿಸುತಿರ್ದುದು ೭

ಖ್ಯಾತಿಮಿಗಿಲಾ ಮಹಾಗಿರಿಯಿಂದಲುದ್ಭವಿಸಿ
ಗೌತಮನ ತಪಸಿಗೀಶ್ವರನಿತ್ತೊಡೆಯಿತಂದು
ಗೌತಮಿ ಎನಿಪ್ಪ ನದಿ ರಾರಾಜಿಸುತ್ತಿರ್ಪುದಾ ನದಿಯ ತೀರದಲ್ಲಿ
ಸಾತಿಶಯ ಸೌಭಾಗ್ಯದಿಂ ಮುನಿಸಮೂಹದಿಂ
ದೋತು ಪಠಿಸುವ ವೇದಘೋಷಂಗಳಿಂದಲಾ
ಗೌತಮಮಹಾಯತೀಶ್ವರನಿಪ್ಪನಾನಂದದಿಂದ ಶಿವನಂ ಭಜಿಸುತಾ ೮

CC0. In Public Domain. Jangamwadi Math Collection, Varanasi

ಆ ಗೌತಮನ ಶಿವಾರ್ಚನೆಯು ವೈಭವಗಳಿಂ
ರಾಗದಿಂ ಮಾಡುತಿಪ್ಪತಿಥಿ ಸತ್ಕಾರಮಂ
ಶ್ರೀಗುರು ಪದಧ್ಯಾನದಕ್ಕರಂ ಸುವ್ರತಾಚಾರಂಗಳಂ ಕಾಣುತ
ಬೇಗದಿಂ ನಾರದಂ ಮರ್ತ್ಯದಿಂದಿಳಿತಂದು
ನಾಗಲೋಕದ ಪೋಗುತ್ತಾ ಮಹಾ ಪ್ರಹ್ಲಾದ
ಚಾಗಿ ಬಲಿ ಮುಚುಕುಂದ ಮುಖ್ಯದನುಜಾಧೀಶ್ವರರ್ಗ್ಗೆ ಕೊಂಡಾಡಿ ಪೇಳ್ವಂ ೯

ನಾರದನ ವಾಕ್ಯಮಂ ಕೇಳುತಾ ಪಾತಾಳ
ಭೂರಮಣರಖಿಳ ರಾಕ್ಷಸರ ನಿಕರವೆರಸಿ ತ
ಮ್ಮಾರಾಧ್ಯನಹ ಶುಕ್ರನೆಡೆಗೆ ಬಂದೆಱಗಿ ಬಿನ್ನವಿಸಿ ಬಿಜಯಂಗೆಯಿವುದು
ಧಾರಿಣಿಯು ಗೌತಮಾಶ್ರಯಕೆನುತ್ತಾತನ ಪ
ದಾರವಿಂದದ ಬಳಿಯೊಳೆಯ್ತಂದು ಕಂಡರಾ
ಚಾರುತರದಕ್ಷಪಾದನ ತಪೋಭೂಮಿಯಂ ಸಂಯಮೀಜನಸ್ತೋಮಿಯಂ ೧೦

ಮುಂದೆ ಪರಿದಕ್ಷಪಾದಂಗೆ ನಾರದಮುನಿಪ
ನೆಂದನೆಲೆ ಗೌತಮಾ ಪಾತಾಳರಾಕ್ಷಸರ
ವೃಂದಸಹಿತಾ ಶುಕ್ರನೆಯ್ತಿತರುತ್ತಿರ್ದ್ದಪಂ ನಿನ್ನ ನಿಷ್ಠೆಯು ಭಕ್ತಿಯಾ
ಛಂದಮಂ ನೋಡುವಳ್ತಿಯೊಳೆನಲು ಕೇಳುತಾ
ನಂದಿಸುತ ಭಾರ್ಗವಂ ಶಿವಮಂತ್ರನಿಷ್ಠನವ
ನಿಂದ ದೀಕ್ಷೆಯ ಕೊಂಡ ದನುಜರ್ಗಳೀಶಪೂಜೆಯ ನಿಷ್ಠರೆನುತೆದ್ದನೂ ೧೧

ಮದನಾರಿಯಂ ಭಕ್ತಿಯಿಂದ ಪೂಜಿಸುತ ಲೋ
ಹದ ಪೆಟ್ಟಿಗೆಯೊಳಿಟ್ಟು ಮುದ್ರಿಸುತ ತಮ್ಮತ
ಮ್ಮೆದೆಯನಿಬ್ಬಗಿಯಾಗಿ ಸೀಳ್ದಲ್ಲಿ ಬಯಿತು ಬಾಪಣಿಸಿಕೊಂಡಿರ್ದು ಬಳಿಕಾ
ಹೃದಯದಿಂ ತೆಗೆದರ್ಚಿಪುದು ಶುಕ್ರಶಿಷ್ಯರ್ಗ
ಳದುಕಾರಣಂ ನಿಷ್ಠರವರೆಂದು ಮೋಹದಿಂ
ದಿದಿರುಬಂದವರ ಗುರುಸಹವಾಗಿ ಗೌತಮಂ ವಿನಯದಿಂ ಸತ್ಕರಿಸಿದಾ ೧೨

ಪ್ರೀತಿಯಿಂದಾ ಶುಕ್ರಸಹಿತ ರಾಕ್ಷಸರೆಲ್ಲ
ಗೌತಮಗೆ ವಂದಿಸಲು ವಿನಯದಿಂದೊಡಗೊಂಡು
ತಾ ತಂದು ನಿಜ ತಪೋವನದೆಡೆಯೊಳವರ ವೃದ್ಧಾನುಕ್ರಮಂಗಳಿಂದಾ
ಓತು ಕುಳ್ಳಿರಿಸಿ ಯರ್ಘ್ಯೋದಕಾದ್ಯಖಿಳ ವಿ
ಖ್ಯಾತ ವಸ್ತುಗಳ ನೊದವಿಸಿಕೊಟ್ಟು ಶಿವನ ಪೂ
ಜಾತಿಶಯಮಂ ಮಾಡಿಸುತ್ತಿರ್ದ್ದನಕ್ಷಪಾದಂ ನೋಡಿ ಹರುಷಿಸುತ್ತಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೇಳೆ ಶುಕ್ರಶಿಷ್ಯಾದಿಗಳು ಸಹವಾಗಿ
ದೇವಪೂಜೆಯ ಮಾಡುವರ್ಘ್ಯಪಾದ್ಯಾಚಮಾ
ನಾವಳಿ ಸ್ನಾನದರ್ಪಣ ಧೂಪ ದೀಪ ಚಾಮರವಾತಪತ್ರ ಜಪ್ಯ
ಶ್ರೀ ವಿಶೇಷಸ್ತೋತ್ರ ವಂದನಾ ಗೀತಂ ಮ
ಹಾವಾದ್ಯಗಳು ಮೊರವುತಿರೆ ಸುಪ್ರದಕ್ಷಿಣದಿ
ನೇ ವೊಗಳುವೆಂ ನೃತ್ಯವಾಡಿ ಗೌತಮ ಷೋಡಶೋಪಚಾರವನೆಸಗಿದಂ ೧೪

ರುಷ್ಯಗ್ರಗಣ್ಯಗೌತಮ:ನಿಂತು ಕುಣಿಯೆ ನಿಜ
ಶಿಷ್ಯನೆನಿಸುವ ಶಂಕರಾನಂದನಮಲಗುಣ
ತೋಷ್ಯಖಿಳ ಸುಖದುಃಖ ಬಂಧಮೋಕ್ಷಂ ಸ್ವರ್ಗನರಕ ವೆಂದದನಱಿಯದಾ
ಮಷ್ಯಮಲ ಮೌಕ್ತಿಕಾಂಗಾರ ಮೇಘೋಪಲಾ
ದಿಷ್ಯನಲ್ಲದ ಮಹಾಜ್ಞಾನ ಪರಿಪೂರ್ಣ ಚಿ
ದ್ಭಾಷ್ಯಾಗ್ರಗಣ್ಯನೆಯಿತಂದಂ ನಿಕೃಷ್ಟಮಯಯವೇಷ್ಯಖಿಲರೆಯಿಬೆ ನೋಡೆ ೧೫

ಪುಲಿ ಪಾವು ಸೊಕ್ಕಾನೆ ನರ ಸುರೋರಗ ಮುಖ್ಯ
ಪಲವು ವೇಷಂಗಳಂ ಸ್ವೇಚ್ಛೆಯಿಂದಂ ತೊಡುವ
ನಲಘುಪೂರ್ಣ್ಣಜ್ಞಾನಿ ಚಿತ್ತನಿರ್ಮಳನಖಿಳ ವಿಕಟಾಂಗಿ ಕೆದಱಿದಲೆಯಿಂ
ವೊಲೆದ ನಡು ಮೊಱಗಾಲು ಮುದುಡುಗಿವಿ ಬೀಟೆಗೈ
ಸಲೆ ಕೀಸುವಲ್ಲು ಕೆಂಮ್ಮೀಸೆ ಭೀಭತ್ಸರಸ
ಬಲಿದು ಪುರುಷಾಕಾರವಾದಂತೆ ಶಂಕರಾನಂದನೆಯಿತಂದು ನಿಂದಂ ೧೬

ಈ ವೇಷದಿಂ ಬಂದ ಶಂಕರಾನಂದನಂ
ಓವಿ ನೋಡುತ ಗೌತಮಂ ಶಿಷ್ಯನೆಂದೆಂಬ
ಭಾವವಿಲ್ಲದೆಯತಿಥಿಮೂರ್ತಿ ದಿವ್ಯಜ್ಞಾನಿಯೆಂದೆದ್ದು ವಂದಿಸುತ್ತಾ
ಶ್ರೀ ವಿಲಸಪೀಠದೊಳು ಕುಳ್ಳಿರಿಸಿ ಚರಣರಾ
ಜೀವಮಂ ತೊಳೆಯಲಾತಂ ತಾನು ಗುರುವೆಂಬು
ದಾವಬಗೆಯಱಿಯದಾ ಪರಿಪೂರ್ಣ್ಣಚಿತ್ತನಿರುತಿರ್ದನಾ ಗದ್ದುಗೆಯೊಳು ೧೭

ಅದಕಂಡು ಶುಕ್ರಶಿಷ್ಯರ್ವಿಸ್ಮಯಂ ಬಟ್ಟು
ಹೆದರದಿವನಾಚಾರ್ಯ್ಯ ಪೀಠದೊಳು ಕುಳ್ಳಿರ್ದ
ಮದವ ನೋಡೀ ನೀಚವೇಷದಿಂ ಹೇಸದಿದಿರೆದ್ದು ಗದ್ದುಗೆಯೊಳಿಟ್ಟು
ಪದವ ತೊಳೆಯಲ್ಬಹುದೆ ಗೌತಮನೆನುತ್ತಮಾ
ಣದೆ ನೋಡಿ ನೋಡಿ ಕೊಳ್ಗುದಿಗೊಂಡು ತಮ ತಮ್ಮ
ಹೃದಯದೊಳು ಯೋಚಿಸುವ ಭಾವಮಂ ಲಿಂಗಾಂಗಿಯಕ್ಷಪಾದಂ ತಿಳಿದನು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೆಡೆಯಾಗಲಾ ವೇಳೆ ಶಂಕರಾತ್ಮನದೊಂದು
ದೃಢವ ತೋಱುವೆನು ಸಂದೇಹವಟ್ಟರ್ಗೆಂದು
ಮುಡದಿಗಾ ತೆಱನ ಗೌತಮನಲ್ಲಿ ಯೋಚಿಸಲಹಲ್ಯೆ ಸುಪ್ರೌಢಿಯುಳ್ಳಾ
ಕಡುಕುಶಲೆ ಸರ್ವಪ್ರಪಂಚಮಂ ತಿಳಿದವಳು
ಷಡುರಸಾಂನಂಗಳಂ ಪಂಙ್ತಿ ಪಂಙ್ತಿಯೊಳೆಯ್ದೆ
ಗಡಣಿಸುವ ಕಾಲದೊಳು ತಂದು ನೀಡುತ್ತಿರ್ದ್ದಳೇನೆಂಬೆನದ್ಭುತವನು ೧೯

ಶಂಕರಾತ್ಮಗೆ ಪಾಯಸ ಪಂಚಭಕ್ಷ್ಯಂಗ
ಳಂ ಕೆಂಡ ಮುಳ್ಳೊಡ್ಡು ಗೊಣೆಕಲ್ಲು ಕಿಱುದಸಿಗ
ಳಂ ಕೂಡೆ ಗಡಣಿಸಲು ಸರ್ವರೀಶಂಗೆಯರ್ಪಿಸುವುದಕ್ಕಂ ಮುನ್ನವೇ
ಮುಂ ಕೊಂಡು ಪರಮಾವಧೂತನಾರೋಗಿಸುವು
ದಂ ಕೇಳ್ವನಾರು ಪರಮಾನಂದ ಕಲ್ಮುಳ್ಗ
ಳಂ ಕೂಡೆ ಸರಿಯಾಗಿ ಕಲಸಿಕೊಂಡೀಶಭಾವದೊಳುಂಡನಾನಂದದೆ ೨೦

ಅದ ಕಂಡು ಶುಕ್ರಶಿಷ್ಯರ್ಗಳೆಲ್ಲರು ತಮ್ಮ
ಹೃದಯದೊಳು ಸಂತಸಂಬಟ್ಟಡೀ ಮಾಳ್ಕೆಯಿ
ಲ್ಲದವಂಗೆ ಪರಮ ವೈರಾಗ್ಯವಳವಡುವುದೇಯೆಂದು ಕೀರ್ತಿಸುತಿರಲ್ಕೆ
ಮುದದಿಂದ ಶಂಕರಾನಂದನೆದ್ದಾಗ ಬೇ
ಗದೊಳು ಮಿಳಿ ಕೆಪ್ಪರ್ಕತ್ತಿಗಳುಳಿಯುನಾಂತು ನಿಮಿ
ಷದೊಳು ಮಾದಿಗಬರಿಜನಾಂತು ನಡದಂ ಪಂತಿಯಲ್ಲಿ ಬಳಕೇವೊಗಳುವೆ ೨೧

ಅಲ್ಲಿ ಶುಕ್ರನ ಶಿಷ್ಯನಹ ಸುಪೂರ್ಣ್ಣಂ ಮನಸಿ
ನುಲ್ಲಾಸದಿಂದ ಶಿವಪೂಜೆಯಂ ಮಾಡುತಿ
ಪ್ಪಲ್ಲಿ ಬಂಡೆಯುವ ಮುಂದಿರಿಸಿಕೊಂಡೀಶಭಜನೆಯೊಳಡ್ಡವಾಯ್ದು ಭವಿಯಾ
ಕೊಲ್ಲಬೇಕೆಂಬ ನಿಯುಮದ ವೀರ ನಿಜ ಹೃದಯ
ದಲ್ಲಿ ಕಾರ್ಬೊಂನ್ನ ಪಟ್ಟಿಗೆಯ ಲಿಂಗವನು ತೆಗೆ
ದಲ್ಲಿ ಪೀಠದೊಳಿರಿಸಿ ನಿಷ್ಠೆಯಿಂ ಪೂಜಿಸುತ್ತಿರ್ದನಾ ವೇಳೆಯೊಳಗೆ ೨೨

ಮಿಗೆ ಪೂರ್ಣಸುಜ್ಞಾನಿ ಶಂಕರಾತ್ಮಕನು ಮಾ
ದಿಗರೂಪಿನಿಂ ಸುಳಿದು ಲಿಂಗಮಂ ನೋಳ್ಪ ದೃ
ಷ್ಟಿಗೆಯುಡ್ಡಲಾಗಲು ಸುಪೂರ್ಣಸುಗ್ರದೊಳು ಮಹಿಮಾರೂಪನೆಂದಱಿಯದೇ
ನೆಗಪಿ ಖಡ್ಗವ ಶಂಕರಾನಂದಯೋಗಿಯಂ
ಭುಗಿಲೆಂಬ ಕೋಪದಿಂ ಪೊಡದನಾಹಾಹ ತುಂ
ಡುಗಳೆರಡು ಧಿಮುಧಿಮ್ಮೆನಿಳೆಯುಲ್ಲಿ ಬೀಳಲದ್ಭುತವಾದುದೇವೊಗಳುವೆ ೨೩

26

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಂಕರಾನಂದನಳಿದುದ ಕಂಡು ಗೌತಮಂ
ಭೋಂಕನೆ ಮಹಾದೇವ ಶಿವಭಕ್ತ ಮಡಿದನೇ
ನಾಂ ಕೂಡೆ ಹರಣಮಂ ಬಿಡುವೆನೆಂಬನಿತಕ್ಕೆ ಶುಕ್ರನಱಿದೆದ್ದು ಬಂದು
ಶಂಕಿಸುತಲೇಗೆಯಿವೆನಱಿಯದಿಂದೆನ್ನ ಶಿ
ಷ್ಯಂ ಕೊಂದನುತ್ತುಮಜ್ಞಾನಿಯಂ ನೀಂ ಜೀವ
ಮಂ ಕಳವೆನೆನಬೇಡವೆನಗೆ ಶಿವನಿತ್ತ ಮೃತ್ಯುಂಜಯದ ಮಂತ್ರವುಂಟು ೨೪

ಅದಱಿಂದ ಶಂಕರಾನಂದಂಗೆ ನಾನು ನಿಮಿ
ಷದೊಳಸುವನೀವೆನೆನಲಲ್ಲಿ ಪರಿಯಂತರಂ
ಬದುಕುವುದುಪಾಧಿಯಲ್ಲವೆ ಶುಕ್ರ ಕೇಳೆನುತ್ತಾಕ್ಷಣದೊಳಾ ಗೌತಮಂ
ಪದಪಿಂದಲಸುವ ಬಿಡೆ ಕೂಡಿ ಕವಿಯಸುವಳಿಯ
ಲಿದು ಗುರುವಿನಾಚರಣೆಯೆಮಗೆಲ್ಲಕೆಂದೆನು
ತ್ತಥಟಿನ ಸುಪೂರ್ನ್ನ ಮುಂತಾದ ದನುಜರು ನಿಷ್ಠೆಯಿಂದ ಹರಣವ
ಬಿಟ್ಟರೂ ೨೫

ವರ ಗೌತಮನ ಶಿಷ್ಯರೆಲ್ಲರಾ ಶುಕ್ರಶಿಷ್ಯರು ಕೂಡೆ
ಷ್ಯರು ಕೂಡೆಯಳಿಯಲೊರ್ವಳೆಯಹಲ್ಯಾದೇವಿ
ತರುಣಿಯುಳಿದತಿಶೋಕದಿಂ ವೀರಭದ್ರನಂ ನೆನೆದಡಾಕ್ಷಣದೊಳೆಯಿದಿ
ಬರಲು ಸಾಷ್ಟಾಂಗದಿಂ ನಮಿಸಿ ಕೀರ್ತಿಸಲು ಸೌಂ
ದರಿ ಕೇಳು ದುಃಖಿಸಲು ಬೇಡವೌ ನಾಂ ಪೋಗಿ
ಕರದುತಹೆನೀಶ್ವರನನೆನುತ ಕೈಲಾಸಕೆಯಿತಂದನಾ ನಂದಾ ರೌದ್ರನೂ ೨೬

ಬಂದಾ ಯಥಾಸ್ಥಿತಿಯನರುಪಲಾ ಸರ್ವೇಶ
ರಂ ದಯದೊಳಾ ಪ್ರಮಥ ರುದ್ರಗಣನಿಕರಂ ಮು
ಕುಂದನಜ ಸುರಪ ದಿಕ್ಪಾಲರಾ ಹನುಮಾನ್ನು ಸಕಲ ನಿರ್ಜ್ಜರಮುನಿಗಳಾ
ವೃಂದಸಹಿತೆಯಿತರಲಹಲ್ಯೆ ಸದ್ಭಕ್ತಿಯಿಂ
ವಂದಿಸಲು ಗೌತಮನ ನಿಷ್ಠೆಗಂ ಮೆಚ್ಚಿ ತರು
ಣೇಂದುಶೇಖರನು ಯೋಚಿಸಿ ಮೊದಲೊಳಾರಸುವ ನೀವೆನೆನುತಂ
ನೆನೆದನೂ ೨೭

ಮೊದಲಳಿದವಂ ಶಂಕರಾನಂದನಾತಂಗೆ
ಮುದದಿಂದಲಸುವೀವೆನೆಂದು ಕೊಡಲಾಗ ನಿಮಿ
ಷದೊಳಕ್ಷಪಾದನಾತನನಿಜಾಂತೇ ವಾಸಿಗಳು ಶುಕ್ರನಾ ಶುಕ್ರನಾ
ಪದಭಕ್ತನಹ ಸುಪೂರ್ನ್ನಾದಿ ದನುಜರು ಹರಣ
ಮೊದವಿ ಕೀರ್ತಿಸೆ ಗೌತಮಂ ಬಂದು ಶಿವನ ಚರ
ಣದ ಮೇಲೆ ಬಿದ್ದು ಪೊಗಳುತ್ತಿರ್ದ್ದನಾ ವೇಳೆಯೊಳಗದೇ ವಂಣಿಸುವೆನು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕಾಲವೆರಡುತುಂಡೊಂದಿಯಸುವಡದ ನಿ
ಷ್ಠಾಕಲಿತ ಶಂಕರಾನಂದನೆದ್ದಲ್ಲಿ ನಾ
ನೇಕಳಿದೆನೆತ್ತಿದವರಾರೆಂಬುದಱಿಯದೀಶ್ವರಗಣಂಗಳ ಬಗೆಯದೇ
ಶ್ರೀಕಂದ ಗುರುವ ಲೆಕ್ಕಿಸದೆ ನಾನಾ ದೇಶೆಯೊ
ಳಾಕಸ್ಮಿಕದೆ ಕೀರ್ತಿಪರ್ಗ್ಗಳ ವಿಚಾರಿಸದ
ಹೋ ಕೂಡೆ ಹೊಱವಂಟು ಹೋಗುತಿರೆ ಸರ್ವರಚ್ಚರಿವಟ್ಟರವನ ಬಗೆಗೆ ೨೯

ಬಳಿಕಲೀಶ್ವರನೆಂದನಾ ಗೌತಮಂಗೆ ನಿ
ರ್ಮಳ ಚಿತ್ತ ನಿರುಪಾಧಿಕಾ ನಿನಗೆ ಮೆಚ್ಚಿದೆಂ
ಎಳಸಿದುದನೀವೆನ್ನೈ ಬೇಡೆನಲು ದೇವದೇವಾಧೀಶ ಶಿವಭಕ್ತರೂ
ಅಳಿದ ಮಾತ್ರದೊಳುಪಾಧಿಯ ಹೊದ್ದದೆನ್ನಸುವ
ನಳಿವೀ ದೃಢವ್ರತವು ತಪ್ಪದಂದದೊಳಿಹ
ಗ್ಗಳವನೇ ಕೊಡು ಮರಳಿ ಮರಳಿ ನಿನ್ನಂ ಬೇಳ್ಪೆನೆನಗಿದೇ ಸಾಕೆಂದನೂ ೩೦

ಅದಕೆ ಸಂತಸವಟ್ಟು ಕೊಟ್ಟೆನ್ನೈ ಗೌತಮಾ
ಸದಮಳನೆ ಮತ್ತೊಂದು ಭೋಗವಂ ನೀನು ಬಯ
ಸದೆ ನನ್ನ ಭಕ್ತರಿಗೆ ಪ್ರಾಣವಾಗಿಪ್ಪುದಂ ವರಿಸಿದೆಯಲಾ ನಿಷ್ಠನೇ
ಯಿದಕೆ ನೀನಿನ್ನೊಂದು ವರವ ಬೇಡೆನಲು ವೋ
ಹದೊಳೀ ಮಹಾ ಪ್ರಮಥಮುಖ್ಯರೊಳು ನನ್ನ ಗೇ
ಹದೊಳು ನಲಿದಾರೋಗಿಸಲ್ವೇಹುದೆನಲಾಗಿ ಕೈಕೊಂಡನಾ ಶಂಕರಂ ೩೧

ಪಾಕಂಗಳಂ ಕೂರ್ತಹಲ್ಯೆಯೊಡರಿಚುತಿರಲು
ಮಾಕಾಂತನಖಿಳ ಗಣ ಹರಿಯಜರು ಸಹಿತಲಾ
ಶ್ರೀಕರದ ಗೌತಮಾಶ್ರಯದುಪವನಕ್ಕೆ ಬಿಜಯಂಗೆಯ್ದು ಜಲಕೇಳಿಯಾ
ಸ್ವೀಕರಿಸಿ ವಸ್ತ್ರಾದ್ಯಲಂಕಾರಭರಿತದಿ
ವ್ಯಾಕಾರನೊಲ್ದು ಶಿವಲಿಂಗ ಪೂಜೆಯನೆಸಗಿ
ಲೋಕಾಧಿನಾಥನೋಲೈಸುತಿಹ ಪರಮ ವೈಭವವನಾರ್ಬಣ್ಣಿಸುವರೂ ೩೨

ರಾರಾಜಿಸುತ್ತೀಶನಿರ್ದೋಡಂಬರದಲ್ಲಿ
ನಾರದಂ ವೀಣೆಯಂ ಬಾರಿಸುತ ಲಳಿತೆಯ ಮ
ಹಾ ರಾಗಮಂ ಪಾಡೆ ಕಂಬಳಾಶ್ವತರು ಕೂಡದನೆತ್ತಿಕೊಂಡು ಪಾಡೆ
ಮಾರಾರಿ ತಾಂ ಪಾಡೆ ಕೂಡೆ ಹನುಮಂ ಚಿದಾ
ಕಾರನೀಶ್ವರನ ಚಿತ್ತವ ಸೂಱೆಗೊಂಬಂತೆ
ತಾರ ಮಂದ್ರಂ ಮಧ್ಯ ಮುಂತಾದ ಸುಸ್ವರಂ ಪಸರಿಸುತ್ತಿರೆ ಪಾಡಿದಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಱಗಿತೋ ಜೇನ್ನೆಯ್ಯ ತಂದಲಾ ಶರ್ಕರೆಯ
ಮಿಱುಪ ಮಳೆ ಭೋರೆಂದು ಸುಱಿದುದೋ ನಾಡೆ ಸೈ
ಗಱೆದುದೋ ಸಗ್ಗದಮರ್ದಿನ ಕೊಳಂ ಮೇಲ್ವಾಯ್ದು ಮಿಸುಪ
ಚಿಲುಪಾಲ್ಕೆನೆಗಳುಂ
ನೆಱೆ ಧಾಱೆ ಇಟ್ಟವೊ ತಣ್ಪು ನುಣ್ಪಿಂದ ಪೆ
ಣ್ಮಱಿದುಂಬಿ ಇಂಚರಂ ಸುಳಿದುದೋ ಎಂಬಂತೆ
ಪೆಱೆದಲೆಯನೀಶನಲ್ಲಾಡೆ ಹನುಮಂ ಹಾಡಿ ಮೆಱೆದನಾ ತಾಣದಲ್ಲಿ ೩೪

ಪರಮೇಶ್ವರಂ ಸಂತಸಂಬಟ್ಟು ಹತ್ತಿರಕೆ
ಕರೆದು ಹನುಮನ ಮರಳಿ ಮರಳಿ ಪಾಡೆಂದೆನಲು
ಹರುಷದಿಂ ಗಾನಾಮೃತವನೇ ಸಯಿಗಱೆವುತಿರೆ ಕಿವಿಗುಡಿಕಿಯಿಂದೀಂಟುತಾ
ಇರಲಿತ್ತ ಗೌತಮಂ ಬಂದು ವಂದಿಸಿ ನಿಂದು
ಕರಕಮಲಮಂ ಮುಗಿದು ನೈವೇದ್ಯವಾಯಿತು ಮಂ
ದಿರಕೆ ಚಿತ್ತೈಸಬೇಕೆನೆಗೇಯರಸದ ಸುಖಮಂ ನಿಲಿಸಲಾರದಭವಂ ೩೫

ಅರರೆ ವೃಷಭನ ಭೋಂಕನೇಱಿಯಾ ಪವನಜನ
ಕರದೆಮ್ಮ ಮುಂದಿಲ್ಲಿ ಪಾಡುತ್ತ ನಂದಿಕೇ
ಶ್ವರನ ಬೆನ್ನಡರಿ ಯೆನ್ನಂ ಕೇಳಿಸನೆ ಹನುಮ ನಡುಗಿ ಕೈಮುಗಿದೆಂದನು
ಪರಮೇಶನೇ ಪರಂಜ್ಯೋತಿ ನಿರ್ಮಳ ನಿತ್ಯ
ಕರುಣಾಳು ವೇದಪೌರಾಣಾಗಮಾತೀತ
ಹರಿಯಜರು ಪದ ಮಸ್ತಕಂಗಳಂ ಕಾಣದ ಮಹಾಮಹಿಮ ಸರ್ವಜ್ಞನೇ ೩೬

ನಿರವಿಸುವರೇ ದೇವ ನೀನಿಂತು ನಂದಿಕೇ
ಶ್ವರನನ್ಯನೇ ನಿನಗೆ ನಿನ್ನ ಧರ್ಮವ ಪುದಿದು
ಕರುವಾದ ಮೂರ್ತಿ ಸತ್ಪ್ರಣಮ ವೇದಾಗಮ ಪುರಾಣ ವಿಗ್ರಹರೂಪನು
ಹರಿಯಜಾದ್ಯಮರರಾ ಪ್ರಳಯದೊಳಗಿಂತಿವನ
ಚರಣಮಂ ಪಿಡಿದು ಬದುಕಿದರೆನಲು ಭಾಪು ಬಿ
ತ್ತರಿಸಲಳವೇ ನಿನ್ನ ವಾಹನವನೆಂದು ಕೀರ್ತಿಸಿದನಾ ಹನುಮಂತನೂ ೩೭

ಶಿಪಿವಿಷ್ಟ ಚಿತ್ತಯಿಪುದೈಯ್ಯ ನಾಂ ಕಾನನದ
ಕಪಿಯಲಾ ಸಾಕ್ಷಾತ ವೃಷಭರಾಜನೆ ಮಮಾ
ಧಿಪನಮ್ಮನಲ್ಲಿಗಾಂ ಬಾರೆನಿನ್ನೊಂದು ಬಿನ್ನಪವನವಧರಿಸು ದೇವಾ
ಕೃಪೆಯಿಂದಲೆನ್ನ ಬೆನ್ನೇಱಿ ಚಿತ್ತೈಪುದೈ
ನೆಪದಿಂದ ನಾಂ ಬದುಕಬೇಕೆನಲ್ಕಡರಿಸು
ತ್ತಪರಿಮಿತಗಣನಿಕರ ಹರಿಮುಖ್ಯರೋಲೈಸೆ ನಡದನಾಹಾ ದೇವನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಯುವಸರಂ ಹನುಮನಾನಂದದಿಂ ದಿವ್ಯ
ಗೇಯರಸಮಂ ಕರೆವುತಿರೆ ಕೇಳಿ ಪಾಡುವನ
ಬಾಯ ಕುಣಿವನ ಕಾಲ ನೋಡಬೇಕೆಂಬಂತೆ ಕುಸಿದು ನೋಡುತ್ತ ಕೇಳೆ
ಹಾಯೆನ್ನ ದೇವನಪ್ಪೀಶ್ವರನ ಮಸ್ತಕಂ
ನೋಯದೇ ಯೆಂದು ಕೊರಲಂ ತಿರುಪುತಂತೊರೆದು
ವಾಯುಪುತ್ರಂ ನಲಿದು ಶಿವನತ್ತ ಮುಖವಾಗಿ ಮತ್ತೆ ಮಿಗಿಲೆನೆ ಪಾಡಿದಂ ೩೯

ನಡೆದು ವೈಭವದಿಂದ ಗೌತಮನ ಮನೆಯ ಮುಂ
ಗಡೆಯಲ್ಲಿ ಪವನಜನನಿಳಿದಲ್ಲಿ ಸರ್ವೇಶ
ನಡಿಯೂಱಲಾ ಹನುಮನೆರಡು ಕೈಗಳನೊಗ್ಗಿ ಕಪಿವರನ ತಲೆಯ ಕಿವಿಯಾ
ಒಡನೆ ಮುಖಮಂ ಪಾದ ಸೋಂಕಲವತರಿಸಲಾ
ಜಡಜಭವದಿಪ್ಪ್ನಮುಖ್ಯರು ಕಂಡು ಸಂತಸದೊ
ಳೆಡೆವಿಡದೆ ಭಾಪುರೇಯಂಜನೇಯಂ ಸುಕೃತಿ ಎಂದು ಕೀರ್ತಿಸುತಿರ್ದರು ೪೦

ಹರಿ ಸಪ್ತಪಾತಾಳಮಂ ಹಂದಿಯಾಗಿಳಿದು
ಚರಣಮಂ ಕಾಣದಿಹನಾ ಶಿವನ ಪದವಿವನ
ಶರಿರವೆಲ್ಲಂ ಸೋಂಕಿತೀ ಹನುಮ ಸುಕತಿಯೆಂದಮರಗಣತತಿ ಪೊಗಳಲು
ಪರಮ ವೈಭವದೊಳೊಳಪೊಕ್ಕು ಸಂಭ್ರಮದೆ ಸೌಂ
ದರಲಿಂಗಪೂಜೆಯಂ ರಚಿಸಿ ಗೌತಮನೆಸಗು
ವುರುತರ ಮಹೋಪಚಾರಂಗಳಂ ಕೈಕೊಂಡನೀಶ ವಿಮಲ ಪ್ರಕಾಶ ೪೧

ಗಣನಿಕರಸಹಿತಲಾರೋಗಿಸುವ ಕಾಲದೊಳು
ತ್ರಿಣಯನಿದಿರಲ್ಲಿ ಹರಿಯಜಮುಖ್ಯದೇವರ್ಕ
ಳುಣುತಿರಲು ಸರ್ವಸಂಭ್ರಮದಿಂದ ಭೋಜನಂಗೈದು ದೇವಾಧಿದೇವಂ
ಅಣಿಯರದೆ ಕರ್ಪೂರ ತಾಂಬೂಲಮಂ ಮಹಾ
ಪ್ರಣಮರೂಪಂ ತಳದು ಪೇರೋಲಗದೊಳು ಚಿ
ನ್ಮಣಿ ಮುಕ್ತಿಕಣಿತರಗ್ರಣಿ ಮಹಾಪ್ರಮಥತಿಂತಿಣಿಯೆಳೊಪ್ಪುತ್ತಿರ್ದನೂ ೪೨

ಆ ವೇಳೆ ಹನುಮಂತನೊಲ್ದು ನೆನದಂ ತನ್ನ
ದೇವಪೂಜೆಯ ಕಾಲವಾಯ್ತೆಂದು ನಿಶ್ಚೈಸಿ
ದೇವ ಬಿನ್ನಪವೆನ್ನ ಲಿಂಗಪೂಜೆಗೆ ಪೋಪೆನೆನಲೀಶನಿಂತೆಂದನೂ
ನಾವೆ ಸಾನ್ನಿಧ್ಯಮಾಗಿರೆ ಬೇರೆ ನಿನಗೊಂದು
ದೇವಪೂಜೆಯದೇಕೆ ಬೇಡೆನಲು ನಿಂದದೇ
ಭಾವದೊಳು ಹೊಳದು ಪೊಱಪೊಣ್ಮ ಸೈರಿಸಲಾರದೆದ್ದು ಮತ್ತೆನುತಿರ್ದನು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಜದೊಂದಂ ಬಿನ್ನಪಂ ಮಾಳ್ಪೆನೆಲೆ ದೇವ
ನಂಜುಗೊರಲನೆ ನೀನೆ ಕೊರ್ತುಳ ಶಿವಪೂಜೆಯಂ
ರಂಜನೆಯೊಳೆಸಗಿದೆಯೆಲಾ ಜೀಯ್ಯ ಎನ್ನನೇತಕೆ ಬೇಡವೆಂದಿರೆನಲೂ
ನಾಂ ಜಗತ್ರಯದೊಳ್ ಸ್ವತಂತ್ರನದು ಬೇಡೆಂದು
ಮುಂಜ ಕೇಶಾದಿಗಳ ತೆಱದಿಂದಲಿಹುದೆನಲು
ಮಂಜುವೆಟ್ಟಣುಗಿಯುರಸನೆ ಗುರುನಿರೂಪವದಱಿಂ ಪೋಪೆ ನಾನೆಂದನೂ ೪೪

ಗುರುನಿರೂಪಣೆ ಎಮ್ಮ ನುಡಿಯಿಂದ ಮಿಗಿಲಾವು
ದೊರೆಯೆನಲು ನೀಂ ಮುನಿದೊಡಂ ಕಾಯಲಾರ್ಪನಾ
ಗುರು ಬಳಿಕ್ಕಾ ಗುರುವೆ ಮುನಿಯೆ ನಿನಗೆನ್ನುವಂ ಕಾಯಲಳವಲ್ಲವಾಗಿ
ವರಲಿಂಗಪೂಜೆಗೆಯಿದುವೆನೆನಲು ಬೇಡವೆನೆ
ಕರವ ಮುಗಿದಿನ್ನು ನೀಂ ಕಳುಪಲುಂ ಪೋಪೆನೀ
ಶ್ವರನೇ ನೀಂ ಕಳುಪದಿರಲುಂ ಪೋಪೆನೆನುತ ಭೋಂಕೆನಲೆದ್ದು ಪೋದನಲ್ಲಿ ೪೫

ಕಂಡಿರೇ ಹನುಮಂತನಲ್ಲಿ ಗುರುನಿಷ್ಠೆಕಱಿ
ಗೊಂಡಿರ್ದ ಬಗೆಯನೆಂದಾ ಶಿವಂ ನಿರ್ಜರ
ತಂಡಕೊರದೆಮ್ಮಾಜ್ಞೆಯಂ ಮೀಱಿದವಗಲ್ಪ ಶಿಕ್ಷೆಯಂ ಮಾಳ್ಪೆನೆಂದು
ಖಂಡೇಂದುಧರನಲ್ಲಿ ನೆನೆಯೆ ಶಿವಪೂಜೆಯಂ
ಮಂಡಿಸಿರೆ ಹನುಮಾನು ಮಾಳ್ಪಲ್ಲಿ ಲಿಂಗವುಂ
ಕಂಡನಾ ಪೀಠ ಬಯಲಾಗಿರಲು ನೋಡಿ ನಿಶ್ಚೈಸಿ ಮುಂ ತನ್ನಸುವಿಗೆ ೪೬

ಆ ವೇಳೆ ವೀರಭದ್ರಂ ಭೋಂಕನೆಯ್ತಂದ
ಹೋ ವಿಚಾರಿಸದಳಿವರೇ ಲಿಂಗಪೀಠವುಂ
ನಾವು ತಂದಿತ್ತಪೆವು ಹನುಮ ಎನೆ ವಂದನಂಗೆಯಿದು ಕರವಂ ಮುಗಿವುತಾ
ದೇವ ನಾನಲ್ಲಿಪರಿಯಂತಂಸುವಿಡಿದಿಹುದ
ದಾವ ನಿಜ ನಿಷ್ಠೆ ಎನೆ ಕೇಳಯ್ಯ ನಿನ್ನ ಪೂ
ಜಾವಸರಕಿನ್ನು ತ್ರಿಘಳಿಗೆಯುಂಟಲ್ಲಿತನಕಂ ಹರಣವಿಡಿದಿರೆಂದಾ ೪೭

ನುಡಿದಿಂತು ವೀರೇಶ್ವರಂ ತನ್ನ ನಡುವಣೆಯ
ಕಿಡಿಗಣ್ಣಿಗಂ ಬೆಸನನಿತ್ತನೀ ಲೋಕಗಳ
ಸುಡುವಲ್ಲಿ ಯಿವನ ಲಿಂಗದ ಪೀಠವುಂ ಸೌಖ್ಯದಿಂ ತಂದು ಕೊಡುವುದೆನಲು
ಘುಡಿ ಘುಡಿಸಿ ಕಿಚ್ಚುಗಣ್ಣುಡಿಮೀಱಿ ಲೋಕವುಂ
ಸುಡುತಿರೆ ಜನರ್ಲೋಕದಲ್ಲಿ ಸನಕಾದಿಗಳು
ನಡುಗುತ್ತ ಕಾಲಪ್ರಳಯವೇನುಕಾರಣ ಎನುತ್ತ ಶಿವನಂ ನೆನೆದರೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಗೌತಮಾಶ್ರಮಕೆ ನಡೆತಂದು ಸನಕಾದಿ
ಯೋಗಿಗಳು ಶಂಕರಗೆ ನಮಿಸಿ ಬಿಂನ್ನಪ ಜೀಯ್ಯ
ಭೋಗಿಭೂಷಣ ಕೇಳ ಕಾಲಪ್ರಳಯವಾಗಿ ಹದಿನಾಲ್ಕು ಉರಿದೂ
ಹೋಗುತ್ತೈದವೆಯುಂದಡರಿದು ವೀರೇಶನಿಂ
ದಾಗಲಾರ್ಪುದೆನುತ್ತ ನೆನೆದ ಮಾತ್ರಕೆ ಬಂದು
ಕೈಗಳಂ ಮುಗಿದಿರ್ದ್ದ ವೀರಭದ್ರನೊಳು ನಸುನಗುತೆಂದನಾ ಭರ್ಗನೂ ೪೯

ಏನಕಾಲಪ್ರಳಯವುಂ ಮಾಳ್ಪರೇ ವೀರ
ನೀನೆನಲು ದೇವ ಹನುಮನ ಲಿಂಗಪೀಠವನು
ಮಾನವಿಲ್ಲದೆ ಪೋಗಲಾಶನಂ ರಕ್ಷಿಸುವ ಕರುಣದಿಂ ಸುಟ್ಟೆನೆನಲು
ಏನೇನು ಹೇಳೊಬ್ಬನಂ ಸಲುಹೆ ಸರ್ವವುಂ
ನೀನುರುಪುವುದು ಧರ್ಮವೇ ಎಂದು ತನ್ನ ಸುತ
ನಾನನವ ನೋಡಿ ನಸುನಗುತ ನುಡಿಯಲು ರೌದ್ರಮೂರ್ತಿ
ಕೈಮುಗಿದೆಂದನೂ ೫೦

ನೆಟ್ಟನೊರ್ವ್ವಂ ಲಿಂಗನಿಷ್ಠನೇ ಬದುಕುವುದು
ಕಟ್ಟಧಿಕವಲ್ಲದೀ ಲೋಕ ಬದುಕಿದೊಡೇನು
ಸುಟ್ಟುರುಪಿ ಹೋದರೇನೆನೆ ನಗುತಲವನ ಲಿಂಗದ ಪೀಠವುಂ ತೊಲಗಿಸಿ
ಕೊಟ್ಟೆನಿಂತೀಗಲದೆ ನೋಡಲಿಯೆನಲ್ಕೆಯಳ
ವಟ್ಟು ಹನುಮನ ಲಿಂಗಸಜ್ಜೆಯೊಳ್ಪೀಠವಿರೆ
ದಿಟ್ಟಿಮೂಱಿಂಗೆಱಗಿ ಹನುಮಂತ ಕೀರ್ತಿಸುತ್ತಿರ್ದನಾ ವೇಳೆಯಲ್ಲಿ ೫೧

ಸುಮನಸ್ಸಿನಿಂದೀಶನಿಂತೆಂದನೀಗ ಲೋ
ಕಮುಮೆಲ್ಲವುಂ ಬೆಂದವೆಂತೆನೆ ಯಥಾಚಪೂ
ರ್ವಮು ಕಲ್ಪವೆಂಬಂತೆ ಕರುಣಿಸಿದ ಮಾತ್ರದೊಳಗೆಂದಿನಂತೀ ಲೋಕವೂ
ಅಮಮ ರಾಜಿಸುತಿರಲು ಶಂಕರಂ ಬಳಿಕ ಗೌ
ತಮನ ಪರಸುತ್ತಲ್ಲಿಂ ತೆರಳಿ ದೇವಗಣ
ಸಮಿತಿಸಹಿತಂ ಕೂರ್ತು ಕೈಲಾಸಕೆಯಿದಿ ವೈಭವದಿಂದ ಶಿವನೊಪ್ಪಿದಾ ೫೨

ಪೇಳಿದೆವಜಾರಿ ಹನ್ನೊಂದು ಲೀಲೆಯ ಮೇಲೆ
ಭಾಳಾಕ್ಷನಾ ದಕ್ಷಗಂ ಶಾಪವಿತ್ತುದ ಛ
ಡಾಳ ವೀರನ ಜನನಮುಂ ಬಳಿಕ ದಕ್ಷಾಧ್ವರಧ್ವಂಸಮುನೃಸಿಂಹಾ
ನೇಳಿಗೆಯ ಸಂಹರಿಪ ಶರಭಮೂರ್ತಿಯನಾ ಕೃ
ಪಾಳು ಕರುಣೆಯ ಕಥೆಯನಗ್ನಿಯಹಿ ಪಂಚಮೇ
ಘ್ರಾಳೋಕ ಸಂಹಾರಮುಂ ಹನಮಲಿಂಗಪೀಠಪ್ರಮನೊರದೆವೆಂದಂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಾದಶಂ ವೀರಭದ್ರಕಮೆನಿಪ್ಪರ್ಥದಿಂ
ದಾದ ಹನ್ನೆರಡನೆಯ ಲೀಲೆಯೊಂದಕ್ಕೆ ತಾ
ನಾದುದೆಂಟೈ ಸಂಧಿ ವೇದಸಮ್ಮತದ ಪೌರಾಣಾರ್ಥದೀ ಕಥೆಯನು
ಪೋದಿದೊಡೆ ಬರದೊಡಾಲಿಸಿದೊಡಂ ಕೊಂಡಾಡೆ
ಮಾದೇವನಿಹ ಲೋಕದಖಿಳ ಭೋಗಂಗಳಂ
ಸಾದರದೆ ಪರಲೋಕದುತ್ತಮದ ಮೋಕ್ಷಸಂಸಿದ್ಧಿಯಂ ಪಾಲಿಸುವನೂ ೫೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಿಕಾರ್ಯ್ಯಂ
ಶೀಲಪಟ್ಟಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೫೫

ಇದು ವೀರಶೈವಪಟ್ಟಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಹನುಮಲಿಂಗಪೀಠಪ್ರದಕೆ ಕಾಂಡವೆರಡಱ ಮೇಲೆ ಸಂಧಿ ನವಮಂ ೫೬

ಅಂತು ಸಂಧಿ ೯ಕ್ಕಂ ಪದನು ೪೩೮ಕ್ಕಂ ಗ್ರಂಥ ೩೦ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೨

ವಿಷ್ಣು ದಶಾವತಾರ ಶಾಪನಿರೂಪಣ ಕಥೆ
ತ್ರಯೋದಶಂ ಹರಿಧ್ವಂಸಲ ಎಂಬುದಕ್ಕೆ ಕಥೆ

ಧುರದೊಳೋಡಿದ ದನುಜರಂ ತಗುಳಿ ಮುನಿಸತಿಯು
ಹರಿ ಚಕ್ರದಿಂದಿಡೆ ದಶಾವತಾರವ ಶಪಿಸೆ ವರಭೃಗು ದಶವ
ತಾರವಂ ಹರಿಪೆನೆಂದು ವಿಷ್ಣುವ ಕಳಿಪಿದಂ ಶಂಕರಂ

ಶ್ರೀವನಿತೆಯಧಿಪ ರಾಜೀವಸಂಭವ ಸಕಲ
ದೇವಪತಿಮಕುಟಪ್ರಭಾವರನತಾಂಘ್ರಿನಖ
ತಾವಕಾಮಲಚರಣಸೇವಕೇಷ್ಟಪ್ರದ ಸದಾವರದ ಸೌಖ್ಯರೂಪಾ
ವೈವಸ್ವತಾದ್ರಿಪವಿ ಭಾವಭವಗರ್ವರಸ
ಜೀವನಿಧಿಬಾಡಬ ಉಮಾವಲ್ಲಭಾಸರ್ಪ್ಪ
ಗಾವರಪ್ರಿಯ ಘನಸುಖಾವರನೆ ಜಯ ಜಯತು ಪಾವನನೆ ಶಾಂತಮಲ್ಲಾ ೧

ದಶವಿಧೇಂದ್ರಿಯದ ದುರ್ಗುಣತತಿಯ ಸಂಹರಿಸಿ
ದಶವಾಯುಗಳ ಚೇಷ್ಟೆಯಂ ಪೊರ್ದಲೀಯ್ಯದಾ
ದಶವಿಧದ ಪಾದೋದಕ ಪ್ರಸಾದಕ್ರಮಂಗಳನಱುಪಿ ಶಿಷ್ಯಾಳಿಗೆ
ದಶದಿಕ್ಕಿನಲ್ಲಿ ಪಸರಿಸಿದ ಕೀರ್ತಿಯನುಳ್ಳ
ಸಶಿವಸ್ವರೂಪ ಮೇಲಣ ಗವಿಯ ಸುಜ್ಞಾನ
ಕುಶಲಕ್ರಿಯಾಭರಿತ ಶಾಂತನಂಜೇಶ್ವರಾಚಾರ್ಯ್ಯ ಜಯ ವಿಜಯ ಶೌರ್ಯ್ಯಾ ೨

ಎಲೆಲೆ ಸುಜ್ಞಾನಗುರುಮೂರ್ತಿ ಷಟ್‌ಸ್ಥಲಮಾರ್ಗಿ
ಹಲಗೆಯಾಚಾರ್ಯ್ಯ ಹನ್ನೆರಡನೆಯ ವೀರೇಶ
ನಲಘುಲೀಲೆಯ ಕೇಳಿ ಕೃತಕೃತ್ಯನಾದೆ ನಿನ್ನೆಲೆ ದೇವ ಹದಿಮೂಱರಾ
ನೆಲೆಗಾವ ಕಥೆ ಎಂದು ಕೆಂಚವೀರಾಖ್ಯನು
ಜ್ವಲಭಕ್ತಿಯಿಂ ಕೇಳೆ ನಂಜುಂಡಪತಿಯ ಮುಖ
ಜಲಜವಂ ನೋಡಿ ನುಡಿದಂ ಮಲ್ಲಣಾರ್ಯ್ಯ ಬರೆಯೆಂದನಂತಾ ದೇಶಿಕಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುಣಮಣಿಯೆ ಕೇಳ್ವುದಾ ಸ್ಕಂದ ಪೌರಾಣದ
ಗ್ರಣಿ ಕಾಳಿಕಾಕಾಂಡದಲ್ಲಿಯನಿಲಾದನಂ
ತೃಣಬಿಂದುಮುನಿ ಕೂರ್ತು ಬೆಸಗೊಂಡೊಡಾತಂಗೆ ಬಿತ್ತರಿಸಿದಂ ಕೃಪೆಯೊಳು
ತ್ರಿಣಯತ್ರಯೋದಶದ ಲೀಲೆಯಾ ಭೃಗು ಸುದು
ರ್ಗುಣಿ ಹರಿಗೆ ಶಾಪಮಂ ಕೊಟ್ಟ ಕಥೆಯಂ ಕೇಳ್ವ
ದಣುಗ ಎಂದೊರೆದನಾ ಹಲಗೆಯಾರ್ಯ್ಯಂ ಸುಹಿತಕಾರ್ಯವಿಧಿ
ಶೌರ್ಯ ಹಾರ್ಯ್ಯಂ ೪

ಬನವನಾ ಕೋಕಿಲಂ ಜಕ್ಕವಕ್ಕಿಗಳು ಬಿ
ಣ್ಪಿನ ಪಗಲ ಪೂಗೊಂಚಲಂ ತುಂಬಿ ಚಂದ್ರನಂ
ವನಧಿಯಾ ಬಂಧಕರಿಮಲೆಯಂ ವಿಯೋಗದಂಗನೆ ತನ್ನ ವಲ್ಲಭನನೂ
ಅನುದಿನಂ ಬಯಸುವಂದದೊಳಮರಲೋಕದೊಳು
ಘನವಾಸಿಯಾಗಿರ್ದ ನಾರದಮುನೀಶ್ವರಂ
ನೆನದು ಬಯಸುತ್ತಿರ್ದನತಿಶಯದ ಕಾಳಗವಸುರಸುರರೂಳಿಗವನೂ ೫

ಆವನೋರ್ವಂ ಧನವನಾರ್ಜಿಸುವೆನೆಂಬವಂ
ತಾವೊಲಿದು ಮನೆಯೊಳಿರಲಪ್ಪುದೇ ತನುಮನಂ
ಭಾವಿಕಂ ಕಾಯಿಕಂಗಳನೆಯ್ದೆ ಬಳಲಿಸಲ್ವೇಳ್ಕೆಂಬ ಮಾಳ್ಕೆಯಿಂದಾ
ನಾವೆ ನಾಲ್ಕೆರಡು ಹಜ್ಜೆಯ ಬಳಲಿಯಸುರತತಿ
ದೇವರ್ಕಳಿಗೆ ಕಾಳಗಂಗಳ ನೆಗಳ್ವೆವೆಂ
ದಾ ವಿಗಡನಾರದಂ ಪಾತಾಳಲೋಕಕ್ಕೆ ಬಂದನಾನಂದದಿಂದೆ ೬

ಬಂದಲ್ಲಿ ಜಂಭನು ಹಯಗ್ರೀವನಧಿಕ ಮುಚು
ಕುಂದ ಬಲಿ ಮುಖ್ಯದಱುವತ್ತಾಱುಕೋಟಿಯುಹ
ವೃಂದಾರಕಾರಿ ರಾಕ್ಷಸರು ಪೇರೋಲಗಂಗೊಟ್ಟಿರ್ಪಕಾಲದಲ್ಲಿ
ಸೌಂದರಿಯವೃದ್ಧಶಿವವೇಷದೊಡವೆರಸಿ ನಾ
ರಂದನೆಯ್ತರೆ ಕಂಡು ರಕ್ಕಸರು ನಲಿವುತಿದಿ
ರ್ವಂದು ನಮಿಸುತ್ತ ಬಿಜಯಂಗೆಯ್ಸುತಗ್ರಗದ್ದುಗೆ ಇಟ್ಟು ಕಾಲ್ತೊಳೆದರೂ ೭

ಚಾರು ಸಕಲೋಪಚಾರಂಗಳಂ ರಚಿಸಿ ಕರ
ವಾರಿಜಂಗಳ ಮುಗಿದು ನಾರಂದಮುನಿಯೆ ನೀಂ
ಕಾರುಣ್ಯದಿಂ ಚಿತ್ತೈಸಿದಿರಿ ನಾವು ಮಾಡುವ ಸೇವೆ ಯಾವುದೆನಲು
ಕಾರಣವದೊಂದಿಲ್ಲವ ಸುರಾಗ್ರಗಣ್ಯರ ವಿ
ಚಾರಸುಖವೆಮ್ಮದದಱಿಂ ಬಂದೆವೆನಲವರು
ಸೌರಂಭದಿಂದ ಬಱುಕಿದೆವೆಂದು ಕೀರ್ತಿಸುತ್ತಿರ್ದ್ದರಾ ವೇಳೆಯಲ್ಲಿ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಿ ಸುಪ್ರೀತನೆ ಸುಯ್ದು ಮುನಿಪನೊಡನಾ ದನುಜ
ರಾಡಿದರದೇನು ಕಾರಣಂ ಚಿಂತೆ ನಿಮಗೆನಲು
ಗಾಡಿಯಿಂ ನಾರದಂ ನುಡಿದನಕ್ಕಟ ಕಶ್ಯಪಬ್ರಂಹ್ಮಪಾಪಿಯಿಂತೂ
ಮಾಡಿದಂ ನಿಮಗೆನಲು ದೇವ ಕೇಳೆಮ್ಮಯ್ಯ
ನಾಡೆ ಸರ್ವೈಶ್ವರ್ಯವಿತ್ತನೆಲೆ ಮುನಿನಾಥ
ನೋಡೆಂದು ತಮ್ಮ ಸಿರಿಯಂ ತೋಱಿ ಪೇಳುತಿರ್ದರು ರಾಕ್ಷಸಾಧೀಶರೂ ೯

ಪಾತಾಳಲೋಕದೊಳಗರಸುತನಮಂ ಸುರೆಯು
ಸಾತಿಶಯ ವಾರ್ಧಿಯಂ ಮಾಂಸದೊಟ್ಟಿಲ್ಗಳಂ
ಪೂತ ಸರ್ಪಾಕ್ಷಿಗಳ ರಾಸಿಯಿಂ ದನುಜಸೌಂದರಿಯರಂ ಕೊಟ್ಟನೆನಲು
ಏತಕಿವು ಧೀ ತೆಗೆ ಸುರಾವಳಿಯ ಸಂಪದವ
ನಾ ತಳೋದರಿಯರಮೃತದ ಸೊಗಸ ಕಲ್ಪಭೂ
ಜಾತವತಿಶಯರತ್ನತತಿಯ ಸಿರಿಯುಳ್ಳ ಸುರರಿಗೆ ಸರಿಯೆ ನೀವೆಂದನು ೧೦

ತನ್ನ ಕಿಱಿಯರಸಿಯಣುಗರ್ಕಳಿಂದವದಿರಂ
ಚೆಂನುಮಾಡಿದನಲಾ ಹಿರಿಯದಿತಿಯೊಲ್ಲದಳಿ
ಗಂ ನೀವು ಜನಿಸಲಧಮತೆಯ ವಸ್ತುವನಿತ್ತನೈ ಪಕ್ಷಪಾತಕನಲೈ
ಮುನ್ನ ಮವನಾ ದಿವ್ಯ ದಾಯಾದ್ಯರೆಲ್ಲರಂ
ಬೆನ್ನಬಡಿದೀಳ್ಕೊಳಲಾರಿರೇ ನೀವೆಂದ
ನುನ್ನತದ ಕಲಹಪ್ರಿಯಂ ದನುಜರೆಲ್ಲರ್ಗೆ ತಿಮಿರಮಂ ಪುಟ್ಟುವಂತೆ ೧೧

ಅಹುದೆ ಸುರೆಗಿಂದಮೃತವಧಿಕವೇ ಮುನಿಯೆ ಯೆನೆ
ಗಹಗಹಿಸಿ ನಿಮ್ಮ ವಸ್ತುಗಳೆಲ್ಲವಧಮವೈ
ಸಹಸಿಗರು ನೀವು ಜಡಿದೀಳ್ಕೊಂಬುದೆನುತವರ ಹೊಱಬೀಡ ಬಿಡಿಸಿ ಬಳಿಕಾ
ಮಹಿಗೆಯಿದಿಯಲ್ಲಿಂದ ದೇವಲೋಕಕ್ಕೆ ಯತಿ
ನಹಿಲದಿಂ ಬರುತಲಮರಾವತಿಯಲಿಂದ್ರನು
ತ್ಸಹದೋಲಗದೊಳಿಹ ಸಭಾಮಂಟಪಂ ಬೊಕ್ಕನತಿಶಯದ ದುಗುಡವೆರಸಿ ೧೨

ಭಾನುಪ್ರಕಾಶ ಸಿಂಹಾಸನದೊಳಿಂದ್ರನಿ
ರ್ದಾ ನಾರದನ ಕಾಣುತಖಿಳ ದಿಕ್ಪಾಲಸುರ
ಸೇನೆ ಸಹಿತಿದಿರೆದ್ದು ಸತ್ಕರಿಸಿ ಸುಱತ್ರಿಂದು ಸುಯ್ದು ಕುಳ್ಳಿರ್ದ ಮುನಿಯಾ
ಏನು ಕಾರಣವೆನಲು ದುಃಖಮಂ ತೋಱಿ ಮನ
ದಾನಂದವೆರಸಿ ನುಡಿದಂ ಸುರರ ಸುಖವೆ ಸುಖ
ವೀನಾಕಿಗಳ ಬಾಧೆಯೆ ಯೆಮ್ಮ ಬಾಧೆಯಕಟಾ ಎನುತ್ತಂ ನುಡಿದನೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವ ಶಿವಾ ಪಾತಾಳಲೋಕಕ್ಕೆ ಹೋಗಿ ಕಂ
ಡೆವು ದನುಜರೆಲ್ಲರಾ ದಾಯಾದ್ಯವಿಷಯದಿಂ
ನವ ಸುಧಾರಸನಿಮಿತ್ತಂ ನಿಮ್ಮ ಕೂಡೆ ಕಾಳಗಕೆನುತ್ತೀಗ ತೆರಳಿ
ಕವಿದು ಬರುತಿರ್ದಪ್ಪರದ ಕಂಡು ಕಂದಿ ಕುಂ
ದುವ ಮನದೊಳೆಯಿತಂದೆವಕ್ಕಟಾ ಸುರತತಿಗೆ
ತವಿಲೆಡರು ಬಡತನವಕೀರ್ತಿಯಿಲ್ಲದುದಿಂತುಟಾಯ್ತೆಂದು ನೊಂದೆವೆಂದು ೧೪

ಇನ್ನು ಸುರೆಗುಡುಹಿಗಳವರ್ನೀವು ಪೀಯೂಷ
ದುನ್ನತದ ಪಾನವುಳ್ಳಮರರವರೆಯ್ತರಲು
ಬೆನ್ನನೆ ಬಡಿಸಿಕೊಂಡೆಯ್ದುವರದೈಸಲೇ ಸಕಲಶರೀರಸಂಧಾನದಿಂ
ಸನ್ನದ್ಧರಾಗಿಪ್ಪುದೆಂದು ನಿರವಿಸುತಲಾ
ತನ್ನಾಶ್ರಮಂಬೊಕ್ಕು ತತ್ಕಾಲಕೀಕ್ಷಿಸುವ
ಪನ್ನತಿಕೆಯಿಂದ ನಾರದನಿರ್ದನಿತ್ತಲಾಳೋಚಿಸಿದರಾ ತ್ರಿದಶರೂ ೧೫

ಸರವುತಿಂದ್ರಾದಿಗಳು ವಿಧಿಯಲ್ಲಿಗೆಯಿತಂದು
ಹಿರಿಯಣ್ಣನೆಮಗೆ ನೀನಾ ರಕ್ಕಸರ ದಂಡು
ಬರುತಿಪ್ಪುದಿದಕೇನು ಕಜ್ಜವೆನಲಾತನಿಂದ್ರಂಗೆಂದನಲ್ಲಿ ನಿನಗೆ
ಹರಿ ಕಿಱಿಯನಾದೊಡೇಂ ಬುದ್ಧಿಯುಳ್ಳನೆ ಮಿಗಿಲು
ಪರಿಕಿಸಲು ವೇಳ್ಕೆನುತ್ತನಿಬರುಂ ಕೂಡಿ ಬಂ
ದೊರದರಾ ಕಾರ್ಯಮಂ ವಿಷ್ಣುವೊಡನಾತನಿಂತೆಂದನಾ ದೇವತತಿಗೆ ೧೬

ಒಟ್ಟಾಗಿ ನೀವೆಲ್ಲರುಂ ಸದಸಿಕೊಂಬುದಿದು
ನೆಟ್ಟನೇಂ ಗರುವಿಕೆಯೆ ಮಧ್ಯಸ್ಥನೆಂದೆನ್ನ
ಕಟ್ಟಧಿಕನಂ ಮಾಡಿಕೊಂಡು ನೀವೀರ್ವರುಂ ನ್ಯಾಯಮಂ ಕೇಳಲಾನು
ಕೆಟ್ಟು ನುಡಿವೆಂ ನಿಮ್ಮ ಕಡೆಗೆನುತ್ತಾ ಸುರರ
ನಟ್ಟಲನಿತಕ್ಕೆ ಪಾತಾಳದಿಂ ಕೂಡೆ ಬೊ
ಬ್ಬಿಟ್ಟು ಬಂದುದು ಮಸ್ಸುರೆ ರಕ್ಕಸರ ದಂಡು ಸುರಪಟ್ಟಣದ ಸೀಮೆಗಾಗಿ ೧೭

ಘುಡಿಘುಡಿಸಿ ದಂಡು ಬಿಟ್ಟಟ್ಟಿದರು ದೂತರಂ
ಕೊಡಹೇಳು ಸುರರನುಳ್ಳಮೃತಾದಿಗಳನೆನಲು
ನುಡಿದನಿಂದ್ರಂ ವಿಷ್ಣು ಹಿರಿಯಂ ಸಮಾನ ಸನ್ಮಧ್ಯಸ್ಥನಿತ್ತಂಡಕೆ
ಕಡುಗರುವನಾತನೆಂದಂತೆ ಕೇಳುವೆವೆಂದು
ಜಡಜಾಕ್ಷನಂ ಕರಸಲವನೆಯ್ದಿ ಬಂದೆರಡು
ಕಡೆಯ ಸುರರಸುರರಂ ನೋಡಿ ಮತ್ತಿಂತೆಂದನತಿ ಸಹಜ ಎಂಬಂದದೆ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವರ್ಕಳೇನಿರ್ದೈ ಕಶ್ಯಪಬ್ರಹ್ಮಂಗೆ
ನೀವೊಗೆದು ರಾಕ್ಷಸರದೇಂ ಪುಟ್ಟಿತಿಲ್ಲವೆಯು
ದಾವ ಕಾರಣವಮೃತಸೇವನೆಗಯೋಗ್ಯರೇಯುವರು ನೀವಿತ್ತಂಡಕೆ
ನಾವೆ ಭಾಗೆಯೊಳೆರವೆವೆಂದೆರಡು ಪಂಙ್ತಿಯೊಳ
ಗಾ ವಿಗಡ ರಕ್ಕಸರ ಸುರರ ಕುಳ್ಳಿರಿಸಿ ರಾ
ಜೀವಲೋಚನನಲ್ಲಿ ಕೃತಕದಿಂ ಮಾಡಿಸಿದನಜನಿಂದೆ ಕಳಸವೊಂದಾ ೧೯

ಪೇಳಲೇನಾಗಿಂಡಿಯೈವತ್ತುಕೋಟಿಯ ವಿ
ಶಾಳಯೋಜನವೆಡೆಗೆ ಗೋಡೆಯಂತದಕೆರಡು
ಜೂಳಿಯೊಂದೇ ಬಾಯದೊಂದು ಕಡೆಗಮೃತ ಒಂದೆಸೆಗೆ ಸುರೆಯಂ ತುಂಬುತಾ
ಸ್ಥೂಳ ಕಳಸವನೆತ್ತಿ ಮಧ್ಯಸ್ಥರಾವೆಂದು
ಕಾಳು ನುಡಿಯಂ ನುಡಿದು ಸುರರಿಗಮರ್ದಂ ರಕ್ಕ
ಸಾಳಿಗಾ ಸುರೆಯ ನೆಱೆವೃತ್ತಿರ್ದ್ದನಿತ್ತಂಡಕಂ ತಾನೆ ಸರಿ ಎಂಬಿನಂ ೨೦

ಸುರೆಯ ಕುಡಿದಸುರರೆಲ್ಲ ಮೂರ್ಛೆಯೋಗುತಿರ
ಲುರು ಸುಧಾಪಾನದಿಂದೇವತತಿ ನಲಿವುತಿ
ಪ್ಪಿರವ ಕಂಡೊರ್ವ ರಕ್ಕಸನೆದ್ದು ದೇವತಾಪಂಙ್ತಿಯೊಳು ಕುಳಿತು ದೇವಾ
ಪುರುಷನಡ್ಡಂಗಯ್ಯೊಳಮೃತಮಂ ಕೊಂಬೆಡೆಗೆ
ಬರುತ ಮೊಳಗೈಯ್ಯೆಡೆಗೆ ಬಾಯೊಗ್ಗಿ ಬೀಳ್ವಮರ್ದ
ನರರೆ ಕೊಳುತಿರೆ ಚಂದ್ರ ಸೂರ್ಯರಱುಪಿದರು ಹರಿಯರಿದವನ ಕಂಡು ನುಡಿದಂ
೨೧

ಎನೆಲವೊ ರಾಕ್ಷಸ ಶ್ರೇಷ್ಠವಹ ದನುಜರ್ಗೆ
ಹೀನವಮಂ ಮಾಡಿ ಸುರರೆಂಜಲಂ ಕುಡಿದಲಾ
ನೀನೆನುತ್ತವನ ತಲೆಯೊಡೆದನಸುರರ್ಗಾಪ್ತನೆಂಬಂದದಿಂ ಕೃಷ್ಣನು
ಏನೆಂಬೆ ತಲೆ ಮುಂಡವೆರಡು ಬೇಱೊಗದಲ್ಲಿ
ತಾನಾದವ್ವೆ ರಾಹು ಕೇತುಗಳು ಚಂದ್ರಂಗೆ
ಭಾನುಗೆ ವಿರೋಧಿಯಾದವು ನುಡಿದುದಮೃತಸಂಯುಕ್ತಶಿರಪಾ ಕೃಷ್ಣಗೆ ೨೨

ಹರಿಯೆ ಕೃತಕದೊಳು ಸುರರಿಗೆ ಸುರೆಯುನಮೃತಮಂ
ಸುರನಿಕರಕೆರವು ತಿರ್ದ್ದಪೆಯೆಲ್ಶೆ ಗಿಂಡಿಯಂ
ತಿರುಪಿ ಜೂಳಿಗಳ ಪಲ್ಲಟಮಾಡಿ ನೀನೆರವುದೆನೆ ಕೇಳಿ ದನುಜರ್ಕಳೂ
ಹರ ಹರಾ ಪಾಪಿ ನೀ ಮಧ್ಯಸ್ಥನೆಂಬುತೀ
ಪರಿ ಮಾಳ್ಪರೇ ಎಂದಡಹುದು ರಕ್ಕಸರಿ
ಗರಿಯಲ್ಲವೇ ನಾನೆ ಮಾಡಿದೆನೆನಲ್ಕೆ ಘುಡಿಘುಡಿಸುತೆದ್ದರು ದನುಜರು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೊಡಗಿತ್ತು ಕಾಳಗಂ ದೇವ ರಾಕ್ಷಸಕುಲಕೆ
ಘುಡಿಘುಡಿಸಿ ಕರಿತುರಗರಥ ಭಟಾವಳಿಗಳಿಂ
ಹೊಡೆವ ರಣಭೇರಿಯಿಂ ಬೊಬ್ಬೆಯುಬ್ಬರಗಳಿಂ ಖಣಿ ಖಟಿಲು ಮಡುಹೆಂದೆನೆ
ಕಡಿದಾಡುತಿರ್ದೊಡಾಕಾಶದೊಳು ನಾರದಂ
ಜಿಡೆಗೆದಱಿ ಱಿಂಗಣಂಗುಣಿದತ್ರ್ತಿಯಿಂದದಕೆ
ಪಡಿಯಿಲ್ಲೆನುತ್ತ ನಲಿದಾಡುತಿರೆ ಕಾದಿದರಾ ಭಾಪು ಪೊಗಳಲಳವೇ ೨೪

ಸೀಳಿಟ್ಟು ಕಡಿಖಂಡವಮಂ ಮಾಡಲೆದ್ದ ಪದ
ಧೂಳಿ ಲೋಕಂಗಳೆಲ್ಲಂ ಮುಸುರಿತೇನು ಬಡ
ಗಾಳಗವೆ ರಾಕ್ಷಸರು ದೇವರ್ಕಳುಭಯ ಬಲವೆನಲವರಿಗಾರ್ಸಮಾನಂ
ಹೇಳಲೇನಿಂತು ದೇವತೆಗಳಸಹಸ್ರವರು
ಪಾಳಿಪರಿಯಂತರಂ ಕಾದಿ ಮುಱಿದೋಡಿತಾ
ಭೀಳ ರಾಕ್ಷಸರ ಪಡೆ ತಮ್ಮ ಗುರು ಶುಕ್ರನಿರ್ದಾಶ್ರಮಕೆ ಭೀತಿಯಿಂದಾ ೨೫

ಇಂತುಕೆಟ್ಟೋಡಿಬಂದ ಸುರರಂ ದೈತ್ಯಗುರು
ಸಂತೈಸಿ ನೀವಿದೇನುಕಾರಣಂ ಮುರಿದಿರೆನೆ
ಪಂತವೇಗುವುದು ಗುರುವೇ ಮಡಿದೊಡೆಮ್ಮ ಕಡೆಯಲ್ಲಿ ಬಳಿಕೇಳಲಿಲ್ಲ
ಅಂತಮರರಳಿಯಲಮೃತದಲೆಬ್ಬಿಸುವರಲಾ
ಕಂತುಹರನೇ ಬಲ್ಲನಿದನೆನಲು ನೀವಂಜ
ಲೆಂತಳವೆ ಮೃತ್ಯುಂಜಯುದ ದಿವ್ಯಮಂತ್ರಮಂ ಶಿವನಿಂದೆ ಪಡೆವೆನೆಂದಂ ೨೬

ತಾನೆಯ್ದೆ ತಪವಿರ್ದು ಪಡೆವೆನೆನಲೀ ಹೊಟ್ಟೆ
ಬೇನೆಯಂ ಕಳಿದು ತಲೆ ಸಿಡಿಯೆಂಬ ನಾಣ್ನುಡಿಯ
ಲಾನಾಳೆ ಸುರರ ದಂಡೆಮ್ಮ ಬೆಂಬತ್ತಿಬಡಿದಪರಾವು ಸತ್ತಬಳಿಕಾ
ನೀನರ್ಚಿಸಿದ ಮಂತ್ರದಿಂದೇನು ಫಲವೆನಲ
ಹೋನಡುಗಬೇಡವೆಮ್ಮಯ್ಯ ಭೃಗ್ವಾಶ್ರಮ
ಸ್ಥಾನದೊಳು ತಪಸಿಗಳು ನೀವಾಗಿರಲ್ನರಾತಂಕವೆಂದಟ್ಟಿಪೋದಂ ೨೭

ಭಯಬೇಡವೆಂದಸುರರಂ ಕಳುಪಿ ಶುಕ್ರನಾ
ಲೆಯುಗಿಚ್ಚ ಹಿಂನೊಲೆಯು ಮೂಗೊಲೆಯು ಮುಂದೆರಡು
ನಿಯುತದುಂನತದ ಕಂಬಂಗಳಂ ನಟ್ಟಡ್ಡಪಟ್ಟಿಗೆಗೆ ಸರಪಳಿಯನೂ
ರಯದಿಂದ ಬಿಗಿದು ಕಾಲ್ಗಳ ತೊಡಚಿ ತಲೆಕೆಳಕಿ
ಲಯುಱತಾಬ್ದಪರಿಯಂತರಂ ಹೊಗೆಯ ಪಾನದಿಂ
ಸ್ವಯ ಶಿವನ ಪದಭಕ್ತಿಯಿಂದ ತಪವಿರ್ದನಾ ಶುಕ್ರನಾ ಸುರರ ವಕ್ರಾ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕವಿಯುತ್ತಲುಗ್ರತಪವಿರ್ದ್ದನಾ ಕಾಲದೊಳು
ದಿವಿಜರೊಳು ಹರಿಯಂದನೆಲೆ ಪಾಪಿಗಳಿರ ನೀ
ವವಿಚಾರಿಗಳೆ ದನುಜಗುರು ಹೊಗೆಯ ಪಾನಮಂ ಮಾಡಿ ಭಜಿಸುತ್ತೈದನೆ
ಶಿವನಿಂದಲಿಂನು ಮೃತ್ಯುಂಜಯದ ಮಂತ್ರಮಂ
ತವೆ ಪಡದುಬಂದಬಳಿಕ ಸುರಕುಲವೆಂಮಳವೆ
ಯವರನಿಂತೀಗಲೇ ಸದೆಯಬೇಕೆಂದಾಡಿದಂಡೆತ್ತಿ ಬರುತಿರ್ದ್ದರೂ ೨೯

ಸುರರ ಭೇರಿಯ ಧ್ವನಿಯ ಮುಂಬಲದ ಬೊಬ್ಬೆಯಂ
ಕರ ಭಯಾತುರರಾದ ರಾಕ್ಷಸರು ಕೇಳ್ದು ಕಂ
ಡರವರಿಸದೋಡಿ ಮೊರೆಯೋ ಭೃಗುಮುನೀಶ್ವರಾ ದೇವರ್ಕ್ಕಳೆಂಮ ತಳೆಯಾ
ಅರಿವುತಿರ್ದ್ದರೆ ಕಾವುದೆನಲವಂ ಹೃದಯಪಂ
ಕರುಹದೊಳಗಿಪ್ಪೀಶ್ವರಧ್ಯಾನದಿಂದಲೀಯ
ದಿರಲಾಗ ಕಂಡು ಮುನಿಪತ್ನಿ ದಿವ್ಯಾದೇವಿ ಕರುಣದಿಂದಾರ್ಭೈದಳು ೩೦

ಓಡುವಸುರರ ನಿದಿರೊಳೆಯಿತಪ್ಪ ಸುರತತಿಯ
ಗಾಡಮಂ ಕಂಡು ಮುನಿಪತ್ನಿ ಹೋ ನಿಲ್ಲೆನು
ತ್ತಾಡೆ ಮುಂದೆಯಿತಪ್ಪ ಚೂಣೆಯಮರರು ಬರದ ಚಿತ್ರದಂತಿರ್ದ್ದರೂ
ನಾಡೆ ಮುಂಬಪ್ಪಮರಪತಿಯಾನೆ ಮರದಿಂದ
ಮಾಡಿದಂತಿಪ್ಪನಂ ಸ್ತಂಬಿಸಿದಳದ ಕಾಣು
ತಾಡಿದಂ ಹಿಂದೆ ಬಹ ಹರಿಗಿಂದ್ರನಿವಳ ಚಕ್ರದೊಳಿಡ್ಯೆ ಬೇಗೆಂದನೂ ೩೧

ತಳುವಿದೊಡೆ ನಿಂನ ಹಸ್ತಸ್ತಂಭಮಂ ಮಾಳ್ಪ
ಳೆಳೆಯುಳಿವಳೆಂದಂ ಮಾತಂ ಕೇಳುತಜ್ಞಾನಿ
ಮುಳಿದಿಟ್ಟನುಗ್ರ ಚಕ್ರದೊಳು ಹರಿಯಾ ಚಕ್ರವವಳ ತಲೆಯಂ ಪರಿಯಲೂ
ಘಳಿಲನಾಗಸಕೇಳುತಾ ಶಿರಂ ತಿರುಗಿ ನಿ
ರ್ಮಳ ಮುನಿಯ ಮುಂಗಡೆ ನಮಃ ಶಿವಾಯಾಯೆಂದು
ಯಿಳೆಗುದುರೆ ಶಿವಭಕ್ತವಧೆಯೆಂದು ಭೃಗುಮುನೀಶ್ವರನಲ್ಲಿ ಕಣ್ದೆರೆದನು ೩೨

ಅಟ್ಟೆಯಂ ರಣಮಯದ ರಕ್ತಮಂ ಮುಂದೆ ಬಾ
ಯ್ವಿಟ್ಟೋನ್ನಮಃ ಶಿವಾಯಾಯೆಂಬುತಿಹ ತಂನ
ಹೆಟ್ಟುಗೆಯ ತಲೆಯ ಮೊರೆಯಿಟ್ಟ ಭಯಮಂ ಕೆಳ್ವರಕ್ಕಸರನಂತವದಿರ
ಅಟ್ಟುವಮರರ ನೋಡಿ ದೇವರ್ಕ್ಕಳೆಲ್ಲರಂ
ಸುಟ್ಟುರುಹಿ ಬೂದಿಯಂ ಮಾಡಿ ಹಣೆಗಂ ಬೊಟ್ಟ
ನಿಟ್ಟುಕೊಳಬಗೆದನಾ ಕಪಿಲಮುನಿಯಂದದಿಂ ಭೃಗುದೇವನತಿ ಸುಭಾವಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾತಕೆಲ್ಲರ ಕೊಲುವ ಕಾರಣವೆನುತ್ತಿಟ್ಟ
ಪಾತಕಂ ಹೆಂಗೊಲೆಯು ಕರ್ಮಿ ಯಾವನೊ ಬೇಗ
ನೈತಪ್ಪುದೆನಲಿದಿರೆ ನಿಂದ ಹರಿಯುಂ ಕಾಣುತಾ ಭೃಗುಮುನೀಶನಲ್ಲಿ
ಸಾತಿಶಯ ಶಾಪಮಂ ಹಿಡಿ ಹಿಡಿ ಎನುತ್ತಲ್ಲಿ
ಘಾತಿಸದೆ ನುಡಿದಂ ದಶಾವತಾರಂಗಳಂ
ಪೂತಮಾನಸನಿತ್ತನತಿಶಯನ್ಯಾಯದಿಂದಿನ್ನದೇಂ ವರ್ಣಿಸುವೆನೂ ೩೪

ಧರ್ಮದೂರನೆ ಹರಿಯೆ ಕೇಳೆಲವೊ ನೀ ಮತ್ಸ್ಯ
ಕೂರ್ಮ ಕಿಟಿ ನರಸಿಂಹವಾಮನಾದಿಯ ರಾಮ
ದುರ್ಮನದ ರಾಮರಾಮಾದಿ ಬುದ್ಧಂ ಕಲಿಕೆ ಎಂಬ ದಶಜನ್ಮದೊಳಗೆ
ವರ್ಮರಹಿತನೆ ಜನಿಸು ನೀನೆಂದು ಭೃಗುವರಂ
ಘೂರ್ಮಿಸುತ ಶಾಪಮಂ ಕೊಟ್ಟು ನುಡಿವಲ್ಲಿ ದೇ
ವರ್ಮನದೊಳಳ್ಕಲಪರಾಧಿ ವಿಷ್ಣುಗೆ ಮರಳಿ ನುಡಿದನಂತಾ ನಿಷ್ಠನೂ ೩೫

ಎಲೆ ವಿಷ್ಣು ಮೀನಾಗಿ ಪೇರಾವೆಯಾಗಿ ನೀ
ಪಲಲಮಂ ರಕ್ತಮಂ ಕೀವನುಱಿ ತಿಂದು ಕುಡಿ
ನೆಲದಲ್ಲಿ ಪೇರ್ಪಂದಿಯಾಗಿಹದಿನೆಂಟು ಜಾತಿಗಳಧಮರೆಯಿದೆ ಬಿಟ್ಟಾ
ಮಲವದುಂ ಹಳದಾಗಿ ನಾಱುತ ಹುಳಿತು ವಿಲಿ
ವಿಲಿಯೆಂಬುದಂ ನಿಂನ ನಾಲಗೆಯ ಕೊನೆಯಿಂದ
ನಲಿದು ತಿನ್ನೈಪಾಪಿ ನೀ ಮಾಡಿದಿಂತಪ್ಪ ಪಾತಕದ ದೆಶೆಯೊಳೆಂದಂ ೩೬

ನಿಂನನರ್ಚಿಸುವೇಕದಂಡಿ ತ್ರಿದಂಡಿಗಳು
ಮುಂನವೇ ಪಾಷಾಂಡರಾಗಿ ನರಕದೊಳಿಳಿಯ
ಲಿಂನಿವರ ಹಣೆಯ ಹೊಲೆಬೊಟ್ಟನಾವಂ ನೋಡಿದರೆ ಪಾಪವಾಗಲದಕೆ
ಇಂನು ಪ್ರಾಯಶ್ಚಿತ್ತ ಉತ್ತಮ ವಿಭೂತಿಧರ
ನಂ ನೋಡೆ ಶುದ್ಧವಾಗಲಿಯುವನ ಕಾಣದಿ
ಪ್ಪಂನೆಗಂ ಪಂಚಾಕ್ಷರಿಯ ಜಪಿಸಲಾ ದೋಷವಳಿಯಲೆಂದನು ನಿಷ್ಠನೂ ೩೭

ಆರು ನಿಂನೇಕದಂಡಿ ತ್ರಿದಂಡಿಗಳೆಂಬ
ನಾರಕಿಗಳಂ ಕಂಡು ನಮಿಸಿದವನಂತವರಿ
ಗೋರಂತೆಯಶನವಿಕ್ಕಿದವನತಿ ಭಕ್ತಿಯಿಂ ನುಡಿದವಂ ಯಮಪುರದೊಳು
ಘೋರ ನರಕವನುಂಡು ಕ್ರಿಮಿಕೀಟ ಜನ್ಮದೊಳು
ಪಾರವಿಲ್ಲದೆ ತೊಳಲಲೆಂದು ಭೃಗುನುಡಿಯಲಾ
ಈರೇಳು ಜಗವೆದ್ದು ನಡುಗಿತ್ತು ನಿಷ್ಠನ ವಚೋವಿಲಾಸಕ್ಕೆ ಸರಿಯೇ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏನೆಂಬೆನೈ ನಿಂನ ಭಕ್ತಿಯಿಂದರ್ಚಿಸುವ
ಮಾನವರು ತಮಗೆ ನಿಜದೈವವೇ ನೀನಾದ
ಮೀನನೇ ತಿನಲಿ ನಿಂನವತಾರದಾವೆಯಂ ಭಕ್ಷಿಸಲಿ ನೀನೆಯಾದಾ
ಕಾನನದ ಹಂದಿಯಂ ನಾಯಿ ತಿಂದುಳಿದುದನೆ
ನಾನಾ ತೆಱದ ಶಾಕಮಂ ಮಾಡಿ ತಿನಲೆಲವೊ
ನೀನೆಂನ ಪೂಜಿಪರ ಬಾಯ ತುತ್ತಾಗೆಂದು ಶಪಿಸಿದಂ ಭೃಗುದೇವನೂ ೩೯

ಶಾಪ ಗ್ರಂಥಂಗಳು: ಮತ್ಸ್ಯಃ ಕೂರ್ಮ ವರಾಹಶ್ಚ ನಾರಸಿಂಹಶ್ಚ ವಾಮನಃ
ರಾಮೋ ರಾಮಶ್ಚ ರಾಮಶ್ಚ ಬುದ್ಧಶ್ಚ ಕಲಿಕಾಹ್ವಯಃ ೧

ಮತ್ಸ್ಯಕಚ್ಛಪರೂಪೇಣ ಮಾಂಸಾಸೃಕ್ಸ್ವಾಯ ಭುಗ್ಭವಃ
ತಥಾ ಸೂಕರರೂಪೇಣ ಜಗದ್ವಿಕ್ಷಯಂ ಕುರು ೨

ಏಕದಂಡಿ ತ್ರಿದಂಡ್ಯಾದ್ಯಾಯೇಚ ಭಕ್ತಾ ಹರೇಸ್ತ್ವಯಿ
ತೇದ್ಯ ಪಾಷಂಡಿನಸ್ಸಂತು ದೃಷ್ಟ್ಯಾಚ ನರಕಪ್ರದಾಃ ೩
ಊರ್ಧ್ವಪುಂಡ್ರಧರಂ ವಿಪ್ರಸ್ಸಕೃದ್ದೃಷ್ಟ್ವೋ ಪ್ರಮಾದತಃ
ಭೂತೇರ್ನಿರೀಕ್ಷಣಾಚ್ಛುದ್ಧಿಃ ಪಂಚಾಕ್ಷರಂ ಜಪೇತ್ ೪

ಏತಾನ್ ಭೋಜಯಿಷ್ಯಂತಿ ಸಂಭಾಷಂ ತೇ ನಮಂತಿವಾ
ತೇ ಪಿಯಾಸ್ಯಂತಿ ನರಕಂ ಯಾವದಾಭೂತ ಸಂಪ್ಲವಂ ೫

ಮತ್ಸ್ಯಕೂರ್ಮವರಾಹಾಶ್ಚ ಭಕ್ಷಯಿಷ್ಯಂತಿ ಮಾನವಾಃ ೬

ಇಂನು ಮುಂದಿರಲು ಭಸ್ಮವ ಮಾಳ್ಪೆನೈ ಹರಿಯೆ
ನಿಂನನೆಂದಾರ್ಭಡಿಸಲಳ್ಕಿ ಸರಿದಂ ವಿಷ್ಣು
ತಂನ ವಧುವಪ್ಪ ದಿವ್ಯಾದೇವಿಯಟ್ಟಿಯೊಳಮುರಿಚುತಲಾ ತಲೆಯುನೂ
ಉಂನತದ ಪಂಚಾಕ್ಷರ ಸ್ಮರಣಯುತಭಸಿತ
ಮಂ ನಾಡೆ ತಳಿದೆಬ್ಬಿಸಿದನಲಾ ಭೃಗುವರಂ
ತಂ ನಿಮಿತ್ತದಿ ಮಂದರಾದ್ರಿಗೆಯಿತಂದನಾ ಹರಿಯಿತ್ತಲರವರಿಸುತಾ ೪೦

ದಿವ್ಯ ಸುರಪಕ್ಷಿ ಸುರವೃಕ್ಷ ಚಿಂತಾರತ್ನ
ಮವ್ಯಯಾಮೃತದ ಸರಸಿಗಳಾದಿಯಾದಧಿಕ
ಸೇವ್ಯವೆನಿಸುವ ಮಂದರಾದ್ರಿಯಂ ಪೊಕ್ಕುಹರಿ ಶಂಕರಸ್ಮರಣೆಯಿಂದೆ
ಭವ್ಯತರತಪದಿಂದೆ ದೇಹಮಂ ಶೋಷಿಸುತೆ
ನವ್ಯ ತ್ರಿಕೋಟಿವತ್ಸರದಲ್ಲಿ ನೆಲಸಿದಂ
ಸವ್ಯಾಕುಲಂ ವಿಷ್ಣು ಮಾಹೇಶ್ವರದ್ರೋಹದಿಂ ಬಂದ ಶಾಪದಿಂದೆ ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಂಕಿಸುತ್ತಂ ತಪದೊಳಾ ವಿಷ್ಣುವಿರಲು ಸಾ
ಲಂಕಾಯನಾತ್ಮಜ ಶಿಲಾದ ಸುಕುಮಾರ ಧ
ರ್ಮ್ಮಾಂಕಿತಂ ನಂದೀಶನೀಶ್ವರಂಗರುಪಿದಂ ನಾರಾಯಣನ ತಪಸ್ಯಂ
ತಾಂ ಕೂಡೆ ಗಣನಿಕರ ಸೇವಿಸಲ್ಬಂದುವಿನ
ಯಾಂಕುರದ ವಚನದಿಂದೆಲೆ ಹರಿಯಿದೇನೆನ
ಲ್ಭೋಂಕನೆದ್ದಾಗ ಕಣ್ದೆಱೆದು ಸಾಷ್ಟಾಂಗದಂಡಪ್ರಣಾಮಂ ಮಾಡಿದಾ ೪೨

ದೇವ ಜಯ ಸರ್ವೇಶ ರಕ್ಷಿಪುದು ನೀವೆನು
ತಾ ವಿಷ್ಣು ಕೀರ್ತಿಸುತೆ ಕೈಮುಗಿದು ನಿಂದಿರ್ದ್ದೊ
ಡಾವುದೈ ನಿನ್ನ ಭೀಷ್ಟಂ ಕೇಳ್ವುದೆನೆ ಜೀಯ್ಯ ಸರ್ವಾಪರಾಧಿ ನಾನು
ಶ್ರೀವಿಮಲ ಭೃಗುಸತಿಯ ಮಸ್ತಕವನರಿಯಲು ದ
ಶಾವತಾರದ ಶಾಪವಿತ್ತೆನ್ನ ವರ್ಗ ನರ
ಕಾವಳಿಯ ನೇಮಿಸಿದನಾ ನಿಷ್ಠ ನಿನಕೆ ಪರಿಹರವ ಕರುಣಿಪುದೆಂದನೂ ೪೩

ಎನ್ನ ಭಕ್ತರ್ಗಳಿತ್ತಾಜ್ಞೆಯಂ ಕಳಿಯಲ್ಕ
ದೆನ್ನ ವಶವಲ್ಲವೈ ಹರಿ ಕೇಳ್ನಿರಂತರಂ
ಎನ್ನವರ ಹಿಂದೆ ಬಳಿವಿಡಿದೆಯಿದುತಿರ್ಪ್ಪೆಂ ದಶಾವತಾರದೊಳು ಪುಟ್ಟಿ
ನಿನ್ನನಾ ಜನ್ಮ ಜನ್ಮಂಗಳೊಳು ಸಂಹರಿಸಿ
ಮುನ್ನಿನಂತುತ್ತಮ ದೇಹಮಂ ಕೊಡುವೆನೆಂದು ನುಡಿ
ದಂ ನಾಡೆ ಸರ್ವೇಶನತಿಧರ್ಮ್ಮಕೋಶ ಕೀನಾಶಹರ ಸುಪ್ರಕಾಶಾ ೪೪

ಏಕದಂಡಿ ತ್ರಿದಂಡಿಗಳಾದಿಯಾಗಿರ್ಪ್ಪ
ನೇಕ ವೈಷ್ಣವರಿಗಂ ಶಾಪವಿತ್ತಂ ಕಥಾ
ಶ್ರೀಕರದ ಭೃಗುನಿಷ್ಠನದಕೆ ಪರಿಹರವ ಕೇಳ್ಪೆಯ್ಯವಂದರುಗಳೆನ್ನಾ
ಯೇಕಾಲ ವರ್ಚಿಪರ ಕಂಡು ವಂದಿಸಿ ಭಜಿಸ
ಲಾ ಕಷ್ಟದೋಷಂಗಳಳಿದು ನಿಜಪದವಪ್ಪ
ವೈಕುಂಠಭೋಗವವರ್ಗಾಗಲೆಂದೊರೆದನಾ ದೇವನಧಿಕಪ್ರಭಾವಾ ೪೫

ನಿನ್ನೇಕದಂಡಿ ಮೊದಲಾದವರು ಭಕ್ತಿಗಳ
ನೆನ್ನವರದಾರ್ಗ್ಗೆ ಮಾಡಲ್ಬೇಹುದೆನೆ ಪೇಳ್ವೆ
ನಿನ್ನಾ ದಧೀಚಿಯಾಚ್ಯವನಾತ್ಮಜಂ ಬ್ರಹ್ಮಚಾರಿಯ್ಯೆ ವರ ಗೌತಮಾ
ಉನ್ನತ ಗೃಹಸ್ಥಾಶ್ರಮಸ್ಥನೈ ಕುಂಭಜಂ
ಸನ್ನುತದ ಸುಗುಣಿ ವಾನಪ್ರಸ್ಥನೈ ಭಿಕ್ಷು
ಕಂ ನಾಡೆ ದೂರ್ವಾಸನಿಂತು ಚತುರಾಶ್ರಮಿಗಳೆನ್ನಲ್ಲಿ ಭಕ್ತಿಪರರೂ ೪೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಶೈವರನ್ವಯದ ದೀಕ್ಷೆಗಳ ಪಡದ ವಿ
ಶ್ವಾಸಿಗಳುಮೆನ್ನವರವರ್ಗೆ ನಿನ್ನವದಿರು ಸ
ದಾ ಸೇವೆಗೆಯ್ದು ಕೃತಕೃತ್ಯರಾಗಲಿಯದಲ್ತೆಮ್ಮ ನಾಮೋಚ್ಚರಣದ
ಲೇಸೆನಿಸುವೆಮ್ಮ ಪಾದಸ್ಮರಣೆಯುಳ್ಳರ್ಗ
ಹೋ ಶರಣೆನಲ್ಕೆ ಸುಕೃತಿಗಳಾಗಲೆಂದಾ ಗೆ
ಣೇಶರೊಡವೆರಸುತಂತರ್ಧಾನವೆಯ್ದಿದಂ ದೇವನಧಿಕ ಪ್ರಭಾವಂ ೪೭

ಅನಿತಕ್ಕೆ ಸುಶ್ವೇತ ಪರ್ವತವ ಪೋಲ್ವ ಗರು
ಡನನಡರಿಯಾ ಕ್ಷೀರವಾರ್ಧಿಯುತ್ತರದೊಳ
ತ್ಯನುಪಮಿತ ವೈಭವದ ವೈಕುಂಠಕೆಯಿತರಲು ಗುಡಿ ತೋರಣಂಗಟ್ಟುತಾ
ಘನವಿಭವದಿಂದಲಿದಿರ್ಗೊಂಬವರ್ಗಿಂತೆಂದ
ನೆನಗೇಕೆ ಮೀನಾವೆ ಪಂದಿಯುಪ್ಪಾತಗೆಂ
ದೆನುತನಿಬರಂ ಕರದು ತನಗಾದ ಭಂಗಮಂ ಪೇಳಿ ಹರಿಯಿಂತೆಂದನೂ ೪೮

ಇನ್ನು ಕೇಳಿರೆ ವೈಷ್ಣವರ್ಕಳೆಲ್ಲರು ಶಿವಂ
ಮನ್ನಿಸುತಲೆನಗೊರೆದ ವಾಕ್ಯಮಂ ಭಸ್ಮಧರ
ರಂ ನೆಱೆ ಜಟಾವಲ್ಕಲಾಂಕಿತರು ಹರನಾಮಸಂಸ್ಮರಣ ಸಂಪನ್ನರು
ಸನ್ನಹಿತರುಳಿದಭವಲಾಂಛನವ ಕಂಡಲ್ಲಿ
ಮನ್ನಿಸಿ ನಮಸ್ಕರಿಸಿದವನೆನ್ನ ಮೋಹಿಯುವ
ನಂ ನಯುದೊಳವರ ನಿಂದಿಸಿತಾನೆನ್ನ ಹಗೆ ಎಂದು ಬಳಿಕಿಂತೆಂದನೂ ೪೯

ಇಂದು ಮೊದಲಾಗಿ ಕೇಳಿರೇ ಎನ್ನ ವಾಕ್ಯಮಂ
ಸಂದೆಗಂ ಬೇಡವೈ ಶಿವಭಕ್ತರಾಗಿರ್ದ್
ವಂದಿರು ಸದಾಚಾರ ಸಂಪನ್ನರಾಗಲನ್ಯಾಯ ಮಾರ್ಗಿಗಳಾಗಲಿ
ಯೆಂದೆಂದಿಗವರಿಗಾ ನಾಳೆನಗವರ್ಕೆತ್ತ
ರೆಂದು ತಿಳಿಯಿರೆ ಸತ್ಯವಿದು ನಿಜಂ ಭಾಷೆಯುನ
ಗಂದೇಕದಂಡಿ ತ್ರಿದಂಡಿಗಳು ಕೇಳುತಿರೆ ತೋಷದಿಂ ಹರಿ ನುಡಿದನೂ ೫೦

ಲೀಲೆಯಿಂದಿಪ್ಪ ಶಿವಭಕ್ತರಂ ನಿಂದಿಸಲು
ಕಾಲುಮೇಲಾಗಿ ತಲೆ ಕೆಳಗಾಗಿ ನರಕದ ವಿ
ಶಾಲ ಕೂಪದೊಳು ಬೀಳುವರದುನಿಮಿತ್ತದಿಂದಂಜಿರೈ ಭಕ್ತತತಿಗೆ
ಮೇಲೆನ್ನಲೇಕಾದಶಿವ್ರತವ ರುದ್ರಾಕ್ಷ
ಪಾಲುಗಳ ಹನ್ನೊಂದ ಕುರಿತು ಮಾಡಲ್ಕವಗೆ
ಸಾಲೋಕ್ಯಮುಖ್ಯ ಪದವಿಯ ಕೊಡುವೆನೆಂದು ಸಾರಿದನನಿಬರಿಗೆ ಕೃಷ್ಣನೂ ೫೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ಸಾಕ್ಷಿ॥ ದಂಡೋಪವೀತ ಕೌಪೀನ ಜಟಾವಲ್ಕಲ ಲಕ್ಷಣೈಃ
ಲಕ್ಷಿತಾಯುತಯಶ್ಶೈವಾಃ ಶೇಷಾಯೇ ನಾಮಧಾರಕಾಃ ೭

ಆದ್ಯಪ್ರಭೃತಿ ಶೃಣ್ವಂತು ಭ್ರಮಂತಿ ಮಮ ಘೋಷಣಂ
ಸುವ್ರತೋ ದುರ್ವಿನೀತೋವಾ ಶಿವಭಕ್ತಃ ಪ್ರಭುರ್ಮಮ ೮

ಭಸ್ಮಾದಿಗ್ಧಾನ್ಯತೀನ್ಮೋಹಾದೇ ನಿಂದಂತಿಮನಾಗಪಿ
ಅಧೋಮುಖೋರ್ಧ್ವ ಪಾದಾಸ್ತೇ ಯಾಸ್ಯಂತಿ ನರಕಾರ್ಣವಂ ೯

ಏಕಾದಶಾನಾಂ ರುದ್ರಾಣಾಂ ಪ್ರೀತ್ಯರ್ಥಂಚ ಮಯಾ ಸಹ
ನಿತ್ಯಂ ಪಕ್ಷದ್ವಯೇ ಭಕ್ತ್ಯಾ ಕುರ್ವಂತ್ಯೇಕಾದಶೀ ವ್ರತಂ ೧೦

ಇಂತೆಂದು ಸರ್ವರಿಗೆ ಬೋಧಿಸುತ್ತ ವಿಷ್ಣು ಬಳಿ
ಕಂ ತನ್ನ ಜನನಂಗಳಿಗೆ ಪೋದನೈ ಕೇಳು
ಸಂತಸದೊಳಿಲೆ ತೃಣಬಿಂದು ಮುನಿಪಾ ಯೆನುತ್ತನಿಲಾದೆನೊರೆದನೆಂದು
ಕಾಂತ ಹಲಗೆಯ ದೇಶಿಕಂ ಕೆಂಚವೀರಾಖ್ಯ
ಗಂ ತಿಳಿವ ತೆಱದಿಂದ ಬಿತ್ತರಿಸಿ ಕೈಮುಗಿದು
ಮುಂತೆ ಹರಿಯುದಯ ಸಂಹಾರಂಗಳಂ ಬೆಸಸು ಗುರುವೆಯೆಂದಂ ನಿಷ್ಠನೂ ೫೨

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವೆನಿದರ ಮೇಲಣ ಗವಿಯ ಸಿಂಹಾ
ನಾಲಂಕೃತ ಶಾಂತನಂಜೇಶ್ವರಾಂಘ್ರಿಪಂಕಜ ಭೃಂಗ ಮಲ್ಲಣಾರ್ಯನಂ
ಶೀಲ ಷಟಸ್ಥಲ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಂಹ್ವಯೆಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೫೩

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಷ್ಣು ಶಾಪದ ನಿರೂಪಣಕೆ ಕಾಂಡವೆರಡರ ಮೇಲೆ ಸಂಧಿ ದಶಮಂ ೫೪

ಅಂತು ಸಂಧಿ ೧೦ ಕ್ಕಂ ಪದ ೪೯೨ ಗ್ರಂಥ ೪೫೫ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೩

ಮತ್ಸ್ಯಾದಿ ದಶಾವತಾರ ಸಂಹರಣ ಕಥೆ

ಮತ್ಸ್ಯಾದಿಯೆನಿಸುವ ದಶಾವತಾರಂಗಳೊಳು
ಕೃತ್ಸ್ನ ಹರಿ ಬಂದು ಭಂಗಂ ಬಡುತಿರಲ್ಕೆ ಸಂ
ಪತ್ಸೌಖ್ಯಲೀಲಾಸಮಗ್ರಸರ್ವೇಶ್ವರಂ ಸಂಹರಿಸಿ ರಕ್ಷಿಸಿದನು

ಸಿರಿಯಾಣ್ಮ ಪೊಮ್ಮನೆಯರಿಕ್ಕಡೆಯೊಳೋಲೈಪ
ದೊರೆ ನೀನು ದೊಡ್ಡಿಯವರೊಡೆಯ ನೀಂ ಬಡತನದ
ತಿರಿಯಲೇತಕೆ ಬಂದೆ ಎನೆ ಬನಿತೆ ಪೇರ್ವೊಲೆಯ ದಿಮ್ಮಿತಹ ಪೊರರ್ವಾಗಳಾ
ನೆರೆಯುಳ್ಳಂ ನಿನ್ನ ಮಧ್ಯಂ ಕೃಶ ವಿದಾಗಿರ್ದ್ದ
ಪರಿಯೆಂತುಟಾದುದೆಮಗೆಂದು ಮಾರ್ನುಡಿವ ಸೌಂ
ದರದ ಭಿಕ್ಷಾಟಣದ ಲೀಲಾವಿನೋದಿ ಜಯ ಜಯ ಶಾಂತಮಲ್ಲೇಶ್ವರಾ ೧

ವರ ಮತ್ಸ್ಯರೇಖೋರ್ಧ್ವರೇಖ ಕೂರ್ಮಾಂಘ್ರಿನಖ
ನರಹರಿಮಹೀಶನುತ ವಾಮದೇವಾಂಗಾಘ
ತರುಪರಶ್ವಥಲಸಚ್ಛ್ರೀರಾಮಣೀಯ್ಯ ಸದ್ಭಕ್ತಿಮಯಕಾಮಪಾಲಾ
ಚಿರಸುಪ್ರಬುದ್ಧ ಕಲಿ ಕಾಲಸಂಹರಶರಣ
ಸರಸೀರುಹಾರ್ಕ್ಕ ಮೇಲಣ ಗವಿಯ ಸೌಭಾಗ್ಯ
ಚರಲಿಂಗದಾನಂದರೂಪ ಜಯ ಶಾಂತನಂಜೇಶ ಸಕಲಾಪದೀಪಾ ೨

ಎಂದಡೆಲೆ ಕೆಂಚವೀರಾಹ್ವಯಾ ಕೇಳೆನು
ತ್ತಂದು ಹಲಗೆಯ ದೇಶಿಕಂ ಪೇಳತೊಡಗಿದಂ
ಸ್ಕಂದಪೌರಾಣದೊಳು ಕಾಳಿಕಾಕಾಂಡದೊಳಗಗಸ್ತ್ಯನಂತಾ ಗುಹಂಗೆ
ವಂದಿಸುತ್ತೀಶ್ವರಂ ಹರಿಯಜನನಂಗಳಂ
ಕೊಂದಸ್ಥಿಚರ್ಮಂಗಳಂ ಧರಿಸಿದಾ ಕಥಾ
ನಂದಮಂ ಬಿತ್ತರಿಪುದೆನಲೊರೆದನೆಂದು ಪೇಳ್ದಂ ಹಲಗೆಯಾಚಾರ್ಯನೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಮನೆಂಬ ರಕ್ಕಸಂ ವೇದಂಗಳಂ ಕದ್ದು
ಕುಮತಿಯಂಬುಧಿಯ ಬಟ್ಟೆಯೊಳೆಯಿದಿ ಪಾತಾಳ
ಮುಮನಲ್ಲಿ ಹೊಕ್ಕಿರಲು ಹವ್ಯಕವ್ಯಗಳಳಿದತಿಕ್ಷಾಮದಿಂದೆ ಲೋಕಂ
ಭ್ರಮೆಗೊಂಡು ಮೊರೆಯಿಡಲು ಕೇಳ್ದೀಶನಾಗ ವಿ
ಷ್ಣುಮನಟ್ಟಲಾಗಿ ತತ್ಪೂರ್ವಶಾಪದಿನಲ್ಲಿ
ಯಮುಮು ಮೀನಾಗಿಯವನಂ ಕೊಂದು ಶ್ರುತಿಗಳಂ ಶಿವನ ಪಟ್ಟಣಕಟ್ಟಿದಂ ೪

ಬಳಿಕಲಾ ವಿಷ್ಣುವಗ್ಗಳದ ಮೀನಾದನಾ
ಜಳಧಿಯೊಳು ನೂಱು ಯೋಜನದ ತಿಮಿಯಂ ತಿಮಿಂ
ಗಿಳನೆಂಬುದಾ ಮೀನ ನುಂಗುವುದು ತತ್ತಿಮಿಂಗಿಳನ ನುಂಗುವ ಕಾರಣಂ
ನಳಿನಾಕ್ಷನಾ ತಿಮಿಂಗಿಳಗಿಳನು ತಾನಾಗಿ
ಜಲಧಿಯೇಳಂ ಕಲಂಕುವ ಮಹಾಪ್ರಳಯದಿಂ
ದಿಳೆಯೆಲ್ಲಮುಂ ಮಡಿವುತಿರದೆ ಮೊಱೆಯಿಟ್ಟುದಾ ಶಂಕರಂಗತಿ ಘೋಷದೆ ೫

ಸಕಲ ಜನರಾ ಜಲಪ್ರಳಯವಾಗಲ್ಕೆ ಪಾ
ವಕನಯನಗಂದು ಮೊಱೆಯಿಡೆ ಮೇರು ಮಂದರಾ
ಧಿಕದುಭಯಪಕ್ಷದತ್ಯಧಿಕ ಚಂಚುವಿನ ತೀಕ್ಷ್ಣಾಂಘ್ರಿಗಳ ರೌದ್ರಮಯದಾ
ಬಕರುದ್ರನಾಗಿ ಪ್ರಳಯಕಾಲಾಂಬುದದ
ವಿಕಟ ಘೋಷಣದಿಂದ ಘುಡಿಘುಡಿಸುತೆಱಗಿದಂ
ಸುಕುಪಿತದೆ ಮತ್ಸ್ಯಾವತಾರನಂ ಹೊಡೆದೆತ್ತಿ ಪಾಯ್ದನಾಗಸವಟ್ಟೆಗೆ ೬

ಗಾಱೌಗಲುಡ್ಡೀನ ಸಂಡೀನಗತಿಯಿಂದ
ಪಾಱಿಯಾ ಧ್ರುವಮಂಡಲಕ್ಕೆಯ್ಟ್ಟು ಬೀಳ್ವಾಗ
ಲಾಱೇಳುಸೂಳು ಪದದಿಂದ ನಿಮಿರ್ದೊದದು ಧಿಮ್ಮನೆ ನೆಲಕೆ ಕೆಡಪಿ ಚಂಚೊ
ಊಱ ಇಬ್ಬಗಿಮಾಡಿ ನೆಱೆನಿಟಿಲೆನಲ್ಮುರಿದು
ವೋಱೆಯಂ ಪದನಖದ ಹತಿಯಿಂದ ಘಾತಿಸುತ
ಮೂಱುಕಣ್ಣ ಭವನಾ ಮತ್ಸ್ಯಾವತಾರನೆರ್ದೆ ಡೋಱುಗಳವೊಲು ಕೊಂದನೂ ೭

ಮದವುಡುಗಿ ಮತ್ಸ್ಯಾವತಾರನಾ ಶಂಕರನ
ನೆದೆಯೊಳಿಟ್ಟಾಗ ಕೀರ್ತಿಸಲು ಬಕರುದ್ದ್ರನ
ಗ್ಗದ ವಿಷ್ಣುಗೊಲಿದಿಷ್ಟವೇನೆನಲು ಜೀಯ್ಯಕೇಳೆನ್ನ ದೀರ್ಘಾಂಗಾಸ್ಥಿಯಾ
ಪುದುಗಿದ ಕಳೇವರವನಱೆ ಶಿರೋವೇಷ್ಟನ
ತ್ವದೊಳು ತಳೆಯೆನಲಂತುಮಾಡಿ ಸಲಹಿದನಲ್ತೆ
ಮದನಾರಿಗಿದು ಮತ್ಸ್ಯಸಂಹರಂ ಕಲ್ಪಕಲ್ಪಂಗಳೊಳಗೆಂದನಾರ್ಯ್ಯಂ ೮

ಮತ್ಸ್ಯಾವತಾರ ಸಮಾಪ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೂರ್ಮಸಂಹಾರ

ಕೂರ್ಮಾವತಾರ ವೆಂತಾದುದೆನೆ ಕೇಳೈಯ್ಯ
ಧರ್ಮಿಷ್ಠ ದುರ್ವಾಸಮುನಿಯಿತ್ತ ಶಾಪದಿಂ
ಶರ್ವವಳಿದೈಶ್ವರ್ಯವಮಂ ನೀಗಿ ದೇವೇಂದ್ರನಮರಾಸುರರ ಕೂಡುತ್ತ
ಉರ್ವಿಯಗ್ಗಳದ ಪಾಲ್ಗಡಲ ಕಡವೆಡೆಯೊಳಗ
ವರ್ಮಂದರಂ ಮುಳುಗಿದಪುದೆಂದು ಭಜಿಸೆ ಸ
ತ್ಕರ್ಮಕ್ಕೆ ತಾನೆಯಾಧಾರವಾದಂ ವಿಷ್ಣು ಸಾಮರ್ಥ್ಯ ನಿಮಿತ ಜಿಷ್ಣು ೯

ಕಡೆವ ಮಂದರಕೆ ತಾನಾಧಾರವಾದ ಸಿರಿ
ಯೊಡೆಯ ನಂತಮೃತ ಮಥನಂ ಮುಗಿಯೆ ಪೇರಾವೆ
ಕಡು ಕೊಬ್ಬಿಯಖಿಳ ಜಲಚರವೆಲ್ಲವಂ ನುಂಗಿಯಬ್ಧಿಯ ಕಲಂಕಲಾಗಿ
ಕಡಲಮೇಲಿಯು ಮೀಟೆ ಪೆರ್ದೆಗಳುರುಳುತಿರೆ
ಪೊಡವಿಯುಂ ವೊಗೆಯಲಖಿಳರು ಕೂಡೆ ಶಿವಗೆ ವೊರೆ
ಇಡಲಾಗಿ ಕೂರ್ಮಾವತಾರವಮಂ ಸಂಹರಿಸಲುಜ್ಜುಗಿಸಿದಂ ದೇವನೂ ೧೦

ಮುಂಕೊಂಡು ಕಲ್ಪಾಂತರದೊಳಾ ತ್ರಿವಿಕ್ರಮನ
ಕಂಕಾಳವಮಂ ಮುರಿದು ಯಷ್ಟಿಯುಂ ಮಾಡಿ ಹರಿ
ಯಂಕಿತದ ಶೇಷನೇ ನೇಣಾಗೆ ನರಸಿಂಹ್ವಕರನಖರವೆಯ್ದು ದಕ್ಕೆ
ಕೊಂಕಿಯಾದಿವರಾಹ ಮಾಂಸವೆರೆಯಾಗಿರಲು
ಭೋಂಕನೇಕಾರ್ಣ್ಣವದೊಳಾಡುತಿಹ ಕೂರ್ಮಾಂಕ
ನಂಕನುದ್ವೇಗದಿಂ ತೆಗದಾದಿಭೈರವಂ ಸಂಹಾರವಮಂ ಮಾಡಿದಂ ೧೧

ಆ ವೇಳೆ ಕೂರ್ಮನೀಶಸ್ತೋತ್ರವಮಂ ಮಾಡ
ಲಾವು ಮೆಚ್ಚಿದೆವು ಬೇಡೆನಲಭವ ಕೇಳೆನ್ನ
ಪಾವನ ಶರೀರವಮಂ ನಿನ್ನಂಗದೊಳ್ಧರಿಸಿ ರಕ್ಷಿಸಲ್ಬೇಕೆಂದೆನೆ
ಶ್ರೀ ವಿಶ್ವನಾಥನಾವೆಯು ಖಪ್ಪರವನುಗಿದು
ಪಾವಿನೊಳು ಕೋದುರಕೆ ಪದಕವಮಂ ಮಾಡಿದನ
ಲಾ ವಿಶೇಷದ ಕಲ್ಪ ಕಲ್ಪದೊಳಗಿಂತು ತಾಳುವ ಕೂರ್ಮಸಂಹಾರವೈ ೧೨

ಕೂರ್ಮಾವತಾರ ಸಮಾಪ್ತ

ವರಾಹಸಂಹಾರ ಕಥೆ

ಶ್ರೀ ವರಾಹಾವತಾರದ ಕಥೆಯ ಕೇಳೈಯ್ಯ
ಮಾವರಂ ಕೊಬ್ಬಿದ ಹಿರಣ್ಯಾಕ್ಷನಂ ಕೊಲಲು
ದೇವ ದೇವನ ನೇಮದಿಂದೆಯಿದೆ ಪಂದಿಯಾಗುತ್ತ ಸಂಹರಿಸೆ ಬಳಿಕಾ
ಈ ವಸುಧೆಯೆಲ್ಲವಂ ಪರ್ವತ ಸಮುದ್ರ ಸಹಿತ
ತಾ ವಿಗಡ ನರಕಾಸುರಂ ಸುರುಳಿ ತಟ್ಟಿಯುಂ
ತೋವಿ ಕಂಕುಳೊಳಿಟ್ಟು ಪಾತಾಳಲೋಕವಮಂ ಪೊಕ್ಕನಂತಾ ಧೂರ್ತನೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾದೇವನಾಜ್ಞೆಯಿಂ ವಿಷ್ಣು ಪಾತಾಳಕ್ಕೆ
ಹೋದನಲ್ಲಿರ್ದ ನರಕಾಸುರನ ಕಂಡಲ್ಲಿ
ಕಾದಿ ಬತ್ತೀಸಾಯುಧಂಗಳೊಳು ಚಕ್ರಮಂ ತಿರುಪಿಡುವ ಮಾತ್ರದಲ್ಲಿ
ಆ ದುರಾತ್ಮಂ ನರಕಮಯರಾಸಿಯಾಗುವಂ
ಭೇದಿಸುವೊಡನುವಲ್ಲದಿರೆ ತಿರುಗುವನಿತಕ್ಕೆ
ಕೈದುಗೊಂಡೊಡನೆ ಬೊಬ್ಬಿರಿದು ಯುದ್ಧಕ್ಕೆಂದು ಮರಳಿ ಕರೆವಂ ರಕ್ಕಸಂ ೧೪

ಆಗ ಬೇಸತ್ತು ಹರಿಯುವನ ಕೊಲ್ವಡೆ ನರಕ
ವಾಗಿಪ್ಪನಾ ಮಹಾ ದುಷ್ಟನಂ ಸಂಹರಿಪ
ಡೇಗೆಯ್ವೆನೆಂದು ಧರ್ಮ್ಮನೆ ಹಂದಿಯಾಗಿ ಮಂಡಿಸಿ ಬಾಲವಲುಗೆ ಮಲೆವಂ
ಬೇಗದಿಂ ನಾಲಗೆಯ ಕೊನೆಯಿಂ ಕರ್ದುಂಕಿ ಸವಿ
ದಾಗ ಚಪ್ಪರಿದು ಸಂಹರಿಸಿದನಲಾ ವಿಷ್ಣು
ಚಾಗೆಂದು ಸಕಳ ಲೋಕಂ ಪೊಗಳೆ ಪಾತಾಳದಿಂ ಭೂಮಿಗೆಯ್ತಂದನೂ ೧೫

ಧರಣಿಯುಂ ತಂದೆಂದಿನಂದದಿಂದೀ ಜಗಕೆ
ಪರಕಲಿಸಿ ನೊಂದಜನರೆಲ್ಲರಂ ಸಂತೈಸಿ
ನಗಕಾಸುರನ ಮಿಕ್ಕ ಕರುಳ ರಾಸಿಯೊಳೋಕುಳಿಯನಾಡಿಸಿದನನಿಬರಾ
ಹರಿಯ ಲೆಂಕರುಗಳಿಂಡೆಯ ಹಬ್ಬವೆಂದಾಡು
ವರು ಬಹಳ ದೀಪಗಳನಳ್ತಿಯಿಂದಂ ಬೆಳಗು
ತಿರಲು ದೀವಳಿಗೆಯಾದುದು ಕಣಾ ಬಳಿಕ ಕೊಬ್ಬಿದುದಾ ವರಾಹಾಂಗವೂ ೧೬

ಧಾರುಣಿಯುನೆಯ್ದೆ ಮುಸುಡಿಂದಿರಿದು ತೋಡುತ್ತ
ವಾರಿಧಿಯ ಕಟ್ಟೆಗಳನೊಡೆದು ಗೂಱಾಡುತ್ತ
ಮೇರುವಂ ಪಾಯ್ದು ನಡುಗಿಸುತಖಿಳ ಜೀವರಂ ತೊಳ್ತಳಂದುಳಿದುಬ್ಬುತಾ
ವಾರಾಹನಿಂತು ಕೋಳಾಹಳಂ ಮಾಡಿ ಭಾ
ಗೀರತಿಯ ತೀರದೊಳಗಿರಲಖಿಳರೆಯ್ತಂದು
ಮಾರಾರಿಗೆಯಿದೆ ಮೊಱೆಯಿಡಲಾಗ ಷಣ್ಮುಖನ ಕರೆದು ಕಳುಹಿದನೀಶನೂ ೧೭

ಮದನಾರಿಯಾಜ್ಞೆಯಿಂದಾ ತಾರಕಾರತಿ
ಯದುಭುತದ ರೂಪಿನಿಂ ಬಂದು ಹಂದಿಯ ತಲೆಯ
ನೊದೆದು ಕೆಡಪುತ್ತದಱ ಕೋಱದಾಡೆಯ ತಂದು ಶಂಕರಂಗೊಪ್ಪಿಸಲ್ಕೆ
ಅದನು ಕೂರ್ಮನ ಖಪ್ಪರದ ಪದಕೊತ್ತಿನೊಳ
ಗೆದೆಗೆ ಭೂಷಣವಾಗಿ ಕಟ್ಟಿಕೊಂಡಾಗಲೊ
ಪ್ಪಿದ ನೀಶನಿಂತಲಾ ಕಲ್ಪ ಕಲ್ಪಂಗಳೊಳು ವಾರಾಹಸಂಹಾರವೂ ೧೮

ವಾರಾಹಸಂಹಾರ ಸಮಾಪ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾರಸಿಂಹ ವಾಮನ ಪರಶುರಾಮ ಸಂಹಾರ

ವರ ಹಿರಣ್ಯಕಶಿಪುವ ಕೊಂದು ಸಟ್ರನೆ ಸೀಳಿ
ನರಸಿಂಹ್ವನವನೆ ರುಧಿರವ ಕುಡಿದು ಕೊಬ್ಬುತಿರೆ
ಶರಭರೂಪದೆ ಕೊಂದು ಶಿರವನಾ ಚರ್ಮವುಂ ಕೈಕೊಂಡನಾ ರುದ್ರನೂ
ಮರಳಿ ವಾಮ ತ್ರಿವಿಕ್ರಮರೂಪ ಸಂಹರಿಸಿ
ಯುುರುತರದ ಕಂಕಾಣಮುಂ ಧರಿಸಿದಂ ಮಹೇ
ಶ್ವರನಿಂತು ಕಲ್ಪ ಕಲ್ಪಂಗಳೊಳು ವಿಷ್ಣು ಸಂಹಾರವುಂ ಮಾಡುತಿರ್ಪಂ ೧೯

ಮತ್ತೆ ಕೇಳ್ಳೈ ಪರಶುರಾಮುಸಂಹಾರವನು
ದಾತ್ತ ಜಮದಗ್ನಿಯಂಗನೆ ರೇಣುಕಾದೇವಿ
ತತ್ತರುಣಿ ಜಾರೆಯಾಗಿರಲು ಮನೆಯೊಳಗಿರಿಸಿ ಪೋಪಲ್ಲಿ ನಂಬದವಳಾ
ನೆತ್ತಿಯೊಳಗಗ್ನಿಮಂತ್ರದ ಹಸ್ತವಿಡುತಲುರು
ಪುತ್ತ ಬೂದಿಯನೊಂದು ಪಾತ್ರೆಯೊಳು ಸ್ಥೈತಿರಿಸಿ
ಚಿತ್ತಶುದ್ಧದೆ ನಿತ್ಯಕೃತ್ಯಂಗಳಂ ಮಾಡಿ ಮಧ್ಯಾಹ್ನಕೆಯ್ತುಪ್ಪನೂ ೨೦

ಮರಳಿ ಮಂತ್ರೋದಕವ ತಳಿದವಳನೆಬ್ಬಿಸುತ
ಪರಿಚರಿಯುಮುಂ ಮಾಡಿಸುತ್ತಿಂತು ಕೆಲವು ದಿನ
ವಿರಲಾಕೆಯೊಮ್ಮೆ ಪತಿಸೇವೆಯುಂ ಮಾಡಿ ಮಚ್ಚಿಸಿ ಬೇಡಿಕೊಂಡಳೊಂದಾ
ಉರುಪಿ ಬೂದಿಯು ಮಾಳ್ಪ ಜಲದಿಂದ ಪುಟ್ಟಿಸುವ
ಎರಡು ಮಂತ್ರಂಗಳಂ ಪೇಳೆಂದು ಕಲಿತಾಕೆ
ಬರೆದೆರಡು ಚೀಟನಾ ಪಾಣ್ಬನೆಯಿತಪ್ಪೆಡೆಯೊಳಿರಿಸಿದಳು ಚೋರಾಧಿಕೆ ೨೧

ಮಱುದಿನಂ ಸುಟ್ಟು ಬೂದಿಯುನಿರಿಸುತಾ ಮುನಿಗ
ಳೆಱೆಯನೆಯ್ದಲು ನಿಚ್ಚ ನಿಚ್ಚ ಭಸ್ಮದ ಮುಂದೆ
ಮೊಱೆಯಿಡುತ್ತತ್ತತ್ತು ಪೋಪ ಪಾಣ್ಬಂ ಕಂಡನಾ ಪತ್ರವೆರಡನವಱಾ
ತೆಱನಱಿದು ನೀರ ಮಂತ್ರಿಸಿ ತಳಿವುತೆಬ್ಬಿಸುತ
ನಿಱುಗುಱುಳ ನೀರೆಯೊಳು ಸುರತದಿಂ ಸುಖಿಸುತ
ಕ್ಕಱನೆಸಗಿ ತನ್ಮಂತ್ರದಿಂದುರುಹಿ ಮರಳಿ ಬೂದಿಯನೆಂದಿನಂತಿರಿಸುವಂ ೨೨

ಈ ಪರಿಯೊಳಿವರ ಸುರತಂ ನಡೆವುತಿರಲೊಮ್ಮೆ
ತಾಪಸಂ ಜಪಮಾಲೆಯುಂ ಮಱೆದು ಹೋದ ನಂ
ತಾ ಪೊತ್ತು ತಿರಿಗಿ ಬಪ್ಪಾಗಲೆಬ್ಬಿಸಿ ಪಾಣ್ಬನಿಬ್ಬರುಂ ರಮಿಸುತಿರಲು
ಕೋಪದಿಂ ನೋಡುತವನಂ ಕೊಲ್ಲದಿದಕೆ ನಾ
ನೇಪರಿಯ ಮಾಳ್ಪೆನೆಂದಣಿಮಾಖ್ಯ ಮಂತ್ರದಿಂ
ದಾ ಪೆಣ್ಣ ಕಿಱಿಯ ರೂಪಂ ಮಾಡುತಾಪೋಪಣೋದಕದೊಳುರೆ
ನುಂಗುವಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದಿಸಂದದೆ ಪೋಗಿ ಸತ್ಕೃತ್ಯಮಂ ಮಾಡಿ
ಬಂದವಳನುಗುಳಿ ಸೇವೆಯ ಕೊಳುತ್ತಿರಲು ಮ
ತ್ತೊಂದು ದಿನವಣಿಮಾಖ್ಯ ಗರಿಮಾಖ್ಯ ಮಂತ್ರಂಗಳೆರಡ ಕಲಿತಾ ಸೌಂದರಿ
ಬಂದಲ್ಲಿ ಪರ್ಣಶಾಲೆಯ ಮುಂದೆ ಮೋಹದಿಂ
ನಿಂದು ಪಾಣ್ಬನ ತಲೆಗೆ ಕೈಯಿಟ್ಟು ಮಂತ್ರಿಸು
ತ್ತಂದು ಕಿಱಿದಂ ಮಾಡುತಾತನಂ ನುಂಗಿಕೊಂಡಳು ರಾಣಿ ವಿಗತಘೋಣಿ ೨೪

ಮುನಿಯ ಗರ್ಭದೊಳವನನುಗುಳಿಕೊಂಡಂತಾಗ
ವನಿತೆಯಾ ಪಾಣ್ಬರಿರ್ವರು ತಕ್ಕ ರೂಪಾಗಿ
ಮನಸಿಜಸುಖಾಂಬುರಾಸಿಯೊಳು ಮುಳಿಗಾಡಿಯಾತನನಿರಿಸಿಯಾಕೆ ಪೊಱಟು
ಘನಸೇವೆಯಂ ಮಾಡಿ ಮರಳಿ ಪೊಕ್ಕಲ್ಲಿ ಜಾ
ರನ ಕೂಟದಿಂದಿಂತು ಕಾಲಮಂ ಕಳಿವುತಿ
ಪ್ಪನಿತಕುತ್ತುಮನೋರ್ವ ತಾಪಸಂ ತದ್ಭೇದವಱಿದಬಳಿಕೇಗೆಯ್ದನೊ ೨೫

ಜಮದಗ್ನಿಗಾರೋಗಣೆಯೆ ಹೇಳಿ ಬಂದೊಡಾ
ಕ್ರಮದಿಂದ ನಾಲ್ಕು ಗದ್ದುಗೆಯನಿಡುತೆಡೆ ಮಾಡೆ
ಯಮಮ ನುಡಿದಂ ಮುನಿ ಯಿದಾರಾರ್ಗೆನಲ್ಕೆಯಾ ಪ್ರೌಢ ತಾಪಸಿ ನುಡಿದನು
ಎಮಗೊಂದು ನಿಮಗೊಂದು ನಿಮ್ಮ ಗರ್ಭದೊಳಿಪ್ಪ
ರಮಣಿಗೊಂದವಳೊಡಲೊಳಿಪ್ಪಯ್ಯಗೊಂದೆನಲು
ಕುಮತಿ ಬಳಿಕಿಲ್ಲಿ ಪೊಕ್ಕಿಪ್ಪನೇ ಹಾಯೆಂದು ಸತಿಯನುಗುಳಿದನಾಕ್ಷಣಂ ೨೬

ಮಗುಳೆಯಾ ಪ್ರೌಢತಾಪಸನೆಂದನೆಲೆ ತಾಯೆ
ಉಗುಳಿ ನಿಮ್ಮಯ ಗರ್ಭದೊಳಿಪ್ಪರ್ಧ ಪುರುಷನಂ
ಸುಗುಣಿ ನೀ ಪುಣ್ಯಸ್ತ್ರೀಯೆನಲಾಕೆಯುವನನುಗುಳಲ್ಕಂಡು ಬೆಱಗಾಗುವ
ಮುಗುದ ಜಮದಗ್ನಿಗಿಂತೆಂದನಾ ತಾಪಸಂ
ಜಗದೊಳಗೆ ವನಿತೆಯರ ಕಾವೆನೆಂಬವನೆ ಮರು
ಳುಗಳಿಗರಸಲ್ತೆ ತೆಗೆಯೆನೆ ನಾಣ್ಚಿಬಿಟ್ಟನಂದಾರ್ಯೆವ ಸಂದೇಹವಾ ೨೭

ಆಯವಸರದೊಳಾಕೆ ನುಡಿದಳಾ ಪುರುಷಂಗೆ
ಧೀಯುತಂ ನಿನ್ನಗ್ರ ಕೋಪಮಂ ಬಿಡಬೇಹು
ದೀಯವನಿಯೊಳು ಶಾಂತನಾಗಿಪ್ಪುದೆನಲು ತೆಗದಿಟ್ಟನಂದಾ ಕ್ರೋಧವಾ
ತೋಯನಿಧಿಯೊಳಗೆ ವಡಬಾಗ್ನಿಯಾಯ್ತುದು ಮುನಿಗ
ಳಾಯುಧಂ ತತ್ಕ್ರೋಧವದು ಪೋಗೆ ಖಳರಿಂದ
ಪಾಯಮಪ್ಪುದು ಕೇಳು ಪರಶುರಾಮನ ತಂದೆ ಜಮದಗ್ನಿಗೆಂತೆಂದೊಡೆ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಮದಗ್ನಿಯಾಶ್ರಮಕೆ ಕಾರ್ತಿವೀರ್ಯಾಖ್ಯ ಭೂ
ರಮಣನೆಂಬತ್ತೆಂಟು ಪದ್ಮ ನಾಯಕರು ವಿ
ಕ್ಕಮಿತಮನುಜರ ಲೆಕ್ಕಿಸಲ್ಬಾರದನಿಬರೊಡವೆರಸಿ ಬರೆ ಸತ್ಕರಿಸುತಾ
ರಮಣಿ ರೇಣುಕದೇವಿಗೊರೆದಲ್ಲಿ ಕಾಮಧೇ
ನುಮನಾಗ ಬರಿಸಿಯುವರಿಷ್ಟಾರ್ಥದನ್ನ ವಿ
ತ್ತ ಮಹಾತ್ಮನತಿಶಯುವನಱಿಯದಜ್ಞಾನಿಗಳು ಮಾಡಿದುದನೇನೆಂಬೆನು ೨೯

ಈ ಪಶುವಿರಲ್ಕೆಮಗೆ ಕೂಳಪಾಳಯವೇಕೆ
ಭೂಪ ಚಿತ್ತೈಸೆಂದದಂ ಕೊಂಡು ಪೋಗುತಿರ್ಪಾ
ರ್ಪಾ ಪೊತ್ತು ಬಯಲಾಗೆ ಮುನಿಯ ತಲೆಯಂ ಹೊಡದು ಧೇನುವಿನ ಕಂಠದಲ್ಲಿ
ಆ ಪಾತಕರು ಕಟ್ಟಿ ಪೋಗೆ ಶಾಂಭವಪುರ
ಕ್ಕಾ ಪಶು ಮಹಾವಿಷ್ಣು ಮುನಿಸತಿಗೆ ಪುಟ್ಟಿರುತ
ಲಾ ಪವಿತ್ರಾಂಗನೆಗೆ ನುಡಿದನಾ ಪರಶುರಾಮಂ ಭೂಪಕುಲ ಭೀಮನು ೩೦

ತಂದೆಯುಳುವಿಂಗಳಲಬೇಡವೆಲೆ ತಾಯೆ ನೀ
ನೆಂದು ಸಂತೈಸಿ ಜಮದಗ್ನಿಯ ಮಹಾಶಿರವ
ತಂದು ಶಿವಮಂತ್ರದಿಂ ಸಂಬಂಧಮಂ ಮಾಡಿ ಕಿದಱುಜಡೆ ಪರಶುಸಹಿತಾ
ಬಂದಲ್ಲಿ ಕಾರ್ತಿವೀರ್ಯ್ಯಾರ್ಜುನಂ ಸಹವಾಗಿ
ಮುಂದೆ ಯೆಲ್ಲಾ ಕ್ಷತ್ರಿಯಾಧಮರ ನಿಪ್ಪತ್ತ
ವೊಂದು ಸೂಳ್ಸಂಹಾರಮಂ ಮಾಡಿದಂತಾಯವಕ್ಷಸ್ಥರವಗಣನೆಯಿಂ ೩೧

ಬಳಿಕ ತದ್ವಿಷ್ಣುವಂಶದೊಳೊಗೆದ ರಾಘವಂ
ವಿಳಸಿತದ ಬಿಲ್ಲ ಧನಿ ಮಾಡಲಲ್ಲಿಗೆ ಹೋಗಿ
ಮುಳಿದಾಡಲಾ ವಸಿಷ್ಟಂ ಪೇಳೆ ನಿರ್ಭೇದಮಂ ತೊಟ್ಟ ಬಾಣಕೆಂತು
ಇಳೆ ಸಗ್ಗದೊಳಗಾವುದೆನೆ ದಿವಿಯನೊಲ್ಲೆನಂ
ದುಳಿದುಬಂದಾ ಪರಶುರಾಮನಿರುತಿರಲು ಭೂ
ತಳಪತಿಗಳೆಲ್ಲರಾ ಬ್ರಾಹ್ಮಣಾವಳಿಗೆ ನಿರವಿಸಿ ಕಳಿಹಿದರು ಕೃತಕದಿಂ ೩೨

ಎಲೆ ಪರಶುರಾಮ ಚಕ್ರೇಶ್ವರಾಮುನಿಪತಿಯೆ
ನೆಲನೇಕೆ ನಿಮಗೆಮಗೆ ಧಾರೆಯಂ ಕೊಡುವುದಂ
ದೊಲಿದು ಪಡೆದಲ್ಲಿ ಮರುದಿನವೆಮ್ಮ ಭೂಮಿಯೊಳಗಿರಬೇಡ ಪೋಪುದೆನಲು
ಜಲಧಿಯಂ ಬೇಡಿಕೊಂಡಂ ತಾಣವಂ ತನಗೆ
ಬಲುವಿಡಿದು ತೆಗೆದೆಚ್ಚ ಮಾತ್ರದಿಂ ಕೊಡುವುದೆನ
ಲೊಲಿದಿತ್ತೆನೈ ದೇವ ಎನಲಾ ಸಮುದ್ರರಾಜಂ ಸುರಪನೆಯ್ತಂದನೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಧಿರಾಜನೆ ಕೆಟ್ಟೆಲಾ ಬಾಣಮಂ ತೊಟ್ಟು
ಪರಶುರಾಮಾಧಿಪಂ ತೆಗೆದೆಚ್ಚನಾದೊಡಿ
ನ್ನಿರವಿಲ್ಲ ನಿನಗಕಟ ನಾನೆ ಪರಿಹರಿಪೆನೆಂದಂತಾಗ ದೇವೇಂದ್ರನೂ
ವರಧನುವನಾ ಯಜ್ಞನೆಡೆಯ ಪೂಜಿಸಲದಟ
ತಿರುವನೊರಲೆಗಳಾಗಿ ಕಡಿದಿರಿಸಲೆಸುವಾಗ
ಹರಿಯ ಶಿರವರಿದುಕೊಂಡೆಯ್ದಿತ್ತು ಗಗನಕ್ಕೆಯಂಬು ಹತ್ತಿರೆ ಬಿದ್ದುದೂ ೩೪

ಅನಿತು ಭೂಮಿಯ ಸಮುದ್ರಂ ಬಿಟ್ಟುಕೊಡಲಲ್ಲಿ
ಗನೆಯದಿಂ ಹಾರುವರು ಬಂದು ನೆಲನಾಗಿರ್ದು
ದೆನಿತುಂಟದೆಮ್ಮದೆನೆ ಮೇಲೆಕೆಯ್ದಲು ರಾಘವನ ಬಾಣಬಾಧೆಯೆಂದು
ವನಧಿಯೊಳು ಮಡಿದನಾ ಪರಶುರಾಮಂ ಬಲೀಂ
ದ್ರನ ಕಟ್ಟಿದಾ ಪಾಪವಿಂತಾಯ್ತು ಕಲ್ಪಕ
ಲ್ಪ ನಿಕಾಯದೊಳಗಿಂತು ಕೇಳೆಂದು ಹಲಗೆಯಾರ್ಯ್ಯಂ ಪೇಳ್ದ ಹರುಷದಿಂದೆ ೩೫

ಪರಶುರಾಮಾವತಾರ ಸಂಹಾರ ಸಮಾಪ್ತ

ರಾಮ ಸಂಹಾರ ಕಥೆ

ಅೂಢಿಯೊಳು ರಾಮಕಥೆಯಂ ಪೇಳ್ವುದೆಂತೆನಲು
ಚೌಡಲಯ್ಯಂ ತಂದೆ ತಾಯಿ ಮುಡುಬುಗಳಿಗತಿ
ಗಾಡಿಯ ಕಮಂಡಲೋದಕವ ಮೊಗವೆಡೆಯೊಳಾ ದಶರಥನೆಸಲ್ಕೆವೃದ್ಧ
ರಾಡಿದರು ಸಾವಲ್ಲಿ ನಿನ್ನ ಮಕ್ಕಳ ಕಾಣ
ಬೇಡೆನಲ್ಕರುವತ್ತುಸಾವಿರಬ್ದದ ಬರಡ
ಗೀಡಾದುದೀ ಶಾಪವೆನಗೆ ಮಕ್ಕಳ ವರವೆನುತ್ತ ಸುಖದಿಂದಿರ್ದನೂ ೩೬

ಉರುತರದಯೋದಿಯೊಳು ದಶರಥಮಹೀಶನಿರೆ
ವರಭವಿಷ್ಯತ್ಪುರಾಣವನಲ್ಲಿ ಕೇಳಿ ದಶ
ಶಿರನಲ್ಲಿ ಲಂಕೆಯಿಂದಂ ವಿಭೀಷಣನ ರಾಮನ ತಂದೆಯಂ ಕೊಲ್ವಡೆ
ನಿರವಿಸುತ್ತಿಟ್ಟೆ ತಪ್ಪಿದ ಬಳಿಕ ಪಡೆದನಾ
ಹರಿಯಂಶರಾಘವನ ಲಕ್ಷ್ಮಣಂ ಸಹವಾಗಿ
ಭರತ ಶತ್ರುಘ್ನಾದಿಗಳನಿಂತು ಪುತ್ರಚಾತುಷ್ಟಯಮನಾ ಭೂಪನು ೩೭

ಆ ಕೌಶಿಕನ ಬೆಂಬಲದೊಳೆಯ್ದಿ ಬಾಲ್ಯದೊಳ
ನೇಕ ಪ್ರತಾಪಮಂ ಮಾಡಿ ರಾಮಂ ಬಳಿಕ
ಕೈಕೇಯಿಗಯ್ಯಂ ಕೊಟ್ಟ ಭಾಷೆಗಾ ಭರತಂಗೆ ನಾಡನೊಪ್ಪಿಸುತಡವಿಗೆ
ಆ ಕನ್ನಿಕೆಯ ಸಹಿತ ಬಂದು ಹೊಮ್ಮಿಗದ ಪಿಂ
ದಾಕರಿಸಿ ಪೋಗೆ ರಾವಣ ಸೀತೆಯಂ ಪಿಡಿದು
ನೂಕಿ ನಿಜಮಂದಿರಂ ಬೋಗೆ ಸತಿವಿಯೋಗದಿಂ ಕಳವಳಿಸಿದಂ ರಾಘವಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಮನಂಗನೆಯ ರಾಕ್ಷಸರೊಯ್ವ ಕರ್ಮಕಿಂ
ತೀ ಮಹಿಯೊಳಿಲೆ ಹಲಗೆಯಾಚಾರ್ಯ್ಯ ಪೇಳೆನಲು
ಹೈಮಗನೆ ಕೆಂಚವೀರಾಹ್ವಯಾ ಕೇಳದಱ ಪೂರ್ವಕಥೆ ಎಂತೆಂದೊಡೆ
ಭೂಮಿಪತಿಯಂಬರೀಷಂ ಕೂರ್ತು ದೂರ್ವಾಸ
ಸಾಮಾರ್ಥ್ಯಗಂ ಭಿಕ್ಷವಿಕ್ಕೆ ಬಳಿಕೇಕಾದ
ಶೀಮಹಿತದೌಪಾಸನಂಗಳೀವುತ ದ್ವಾದಶಿಯ ಪಾರಣೆಯ ಕಾಲಕೆ ೩೯

ಅಧಟಮುನಿ ಬಾರದಿರೆ ವಿಧಿ ತಪ್ಪುಗೆಂದೆನು
ತ್ತುದಕವಿನಿತಂ ಕೊಂಬ ಮಾತ್ರಕ್ಕೆ ಯತಿ ಬಂದು
ಗದಱಿ ನೀನೆನಮಗೆಮೊದಲುಂಡಲಾ ಎಂದು ಘೂರ್ಮಿಸಲವಂ ತದ್ವಿಷ್ಣುಗೆ
ಹೆದಱಿ ಮೊಱೆಯಿಡಲಾಗಿ ಚಕ್ರಮಂ ಕಳುಪಲಂ
ತದಕೆ ಕಾಳಿಮದ ಶಾಪವನೀವು ತೆಲೆರಾಯ
ಹದನೇನು ನಿನಗೆನಲು ನಡನಡುಗಿ ಪಾದಕ್ಕೆ ಬಿದ್ದು ದೈನ್ಯಂಬಟ್ಟನು ೪೦

ಪೊಡಪೇಶನಿಂತೆಂದನೀ ದೋಷಮಂ ಕಳಿದು
ಕೊಡಬೇಕು ದೇವ ಎನೆ ನೃಪ ನಿನ್ನ ನಂದನೆಯ
ಕಡುಚೆಲ್ವೆಯಂ ತಪಸ್ವಿಗಳಿಗೀ ಎನಲಾಗಿಯಲ್ಲಿ ಪರ್ವತ ನಾರದಾ
ರೆಡೆಯಲ್ಲಿ ತಂದು ಮುಂದಿಟ್ಟರ್ಪಿಸುತ್ತೆಯ್ದೆ
ಬಿಡದಣ್ಣತಮ್ಮಂದಿರಿರ್ವರುಂ ಜಾನದೊಳ
ಗೆಡವಿಡದಿರುತ್ತಲ್ಲಿ ನಾರದಂ ಕಣ್ದೆಱದು ಕಂಡನಾ ಕನ್ನಿಕೆಯನು ೪೧

ಆದರಿಸಿ ನಾರದಂ ಪರ್ವತಮುನೀಶಗಾ
ಹ್ಲಾದದಿಂತೆಂದನಣ್ಣ ಕಂಡಿರೆ ನಿಮ್ಮ
ನಾದಿನಿಯನೆನಲವಂ ನೋಡಿ ಕಾಮಿಸಿ ನುಡಿದನೆಲೆ ತಮ್ಮ ನಿಮ್ಮತ್ತಿಗೆ
ಯಾದಪ್ಪಳವಳೆನಲು ನನಗೆ ತನಗೆಂದು ದಾ
ಯಾದಿಗಳು ಕೂಡೆ ಹೊಡೆದಾಡಿಯಾ ದಾರುವನ
ದಾದಿಯ ಮುನೀಶ್ವರರ ಮುಂದಕ್ಕೆ ಬಂದರೈ ನ್ಯಾಯಮಂ ಕೇಳಲೆಂದು ೪೨

ಅಣ್ಣನಿರ್ದಂತೆ ತಮ್ಮಗೆ ಮದುವೆ ಸಲ್ಲುವದೆ
ತಿಣ್ಣವಿಲ್ಲದೆ ಪೇಳಿ ಎಂಬನಾ ಪರ್ವತಂ
ಕಣ್ಣಿಂದ ನೋಡಿ ತಮ್ಮನ ಸತಿಯ ಸೆಳೆದುಕೊಂಬುದು ಮತವೆ ಎನೆನಾರದಂ
ಹೆಣ್ಣು ಹೊನ್ನುಗಳವಳ ಕಂತಿದ್ದಲೆಮ್ಮಱಿವು
ಮಣ್ಣಾಯ್ತು ಸಂಸಾರಿಗಳ ಕೇಳಿ ಕೊಳ್ಳೀಯೆಂ
ದುಣ್ಣದವರೂರತ್ತ ಕಳುಪೆ ಸಗ್ಗಂ ಬೊಗುತ ವೈಕುಂಠಕೆಯ್ತಂದರೂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿಯು ಕಂಡೀ ವನಿತೆಯಾರ್ಗೆ ವಧುವಾಗಬೇ
ಕೊರೆಯೆಂದೊಡಾ ವಿಷ್ಣು ನಾರಿಯಾವನ ಬಯಸಿ
ವರಿಸಿದಪನೆಂಬಿಚ್ಛೆಯಾದುದವನೆ ಸತಿಗೆ ಪತಿ ಎಂದು ನುಡಿದಿರ್ವರಾ
ಉರುತರ ಶೃಂಗಾರವಾಗಿ ಬಹುದೆಂದಲ್ಲಿ
ನಿರವಿಸಲು ಬಂದರಾ ತೋಱಿಯ ತಡಿಗಾ ಮುನೀ
ಶ್ವರರಿರ್ವರೆಂದುವುಂ ಸಿಂಗರಿಸಿಕೊಂಡಱಿಯದಯ್ಯಗಳದೇಗೆಯ್ದರೂ ೪೪

ನಾರಸೀರೆಯನೊಗೆದುಕೊಂಡು ಜಡೆ ಗಡ್ಡಗಳ
ನೋರಂತೆ ಮಣ್ಣನಿಟ್ಟೊರಸಿ ತೊಳತೊಳದು ಬಳಿ
ಕಾರಯ್ಯ ಹಲ್ಲ ಹಾವಸಿಗಳಂ ಮಳಲಿಕ್ಕುತುದ್ದುದ್ದಿ ಮುಡಿಯ ಕಟ್ಟಿ
ಆರಣ್ಯದದ್ರುಗಂತಿಗಳ ತಳಿರ ಮುಡಿದು ಸಿಂ
ಗಾರವಿದು ತಮಗೆಂದು ರಚಿಸಿದರು ಮುನಿಗಳೀ
ನಾರಿಯಂ ಮಿಸುಪಲಂಕಾರದಿಂ ಸಿಂಗರಿಸಿದಂ ವಿಷ್ಣುವರ ಮನೆಯೊಳು ೪೫

ಒಲಿದಿಟ್ಟ ಗದ್ದುಗೆಯ ಮೇಲೆ ಹರಿ ಸಿಂಗರಿಸಿ
ನಲವಿನಿಂ ಕುಳಿತು ತಾಂ ಕುಳ್ಳಿರಿಸುತಂ ತನ್ನ
ಬಲದಲ್ಲಿ ನಾರದನನೆಡದಲ್ಲಿ ಪರ್ವತನ ನಡುವೆನಳನಳಿಸಿ ಮೆಱೆದು
ಎಲೆ ಮುನೀಶ್ವರಿರಿರಾ ಸಾಮಾರ್ಥ್ಯರೈ ನೀವು
ಲಲನೆಯಾರಂ ಬಯಸಲಾತನೇ ಪತಿಯಲಾ
ಸಲೆ ತಪ್ಪದಂತಿರ್ವರುಂ ಭಾಷೆಗೊಡಿ ಎಂದು ಶಪಥಮಂ ಮಾಡಿಸಿದನು. ೪೬

ಆಗಲಾ ವನಿತೆಯುಂ ಕರೆದು ಮಾತಾಡಿಸಿದ
ನಾ ಗರುಡವಾಹನಂ ಸಾಲಾಗಿ ಕೈದೋಱಿ
ಹೀಗಾರು ಬೇಕೆಂದು ಬಲದ ನಾರದನೆಡನ ಪರ್ವತಂ ತಾನು ಸಹಿತಾ
ರಾಗದಿಂ ನುಡಿಯೆ ಮೂವರ ತೋಱಿದಂತಾಗ
ಲಾಗಿ ಮುನಿಗಳ ಬಿಟ್ಟು ನಡುವಿರ್ದ ನೀಂ ಪುರುಷ
ನಾಗಬೇಕೆಂದು ಹರಿಯುಂ ತೋಱಿಲಾ ಮುನಿಗಳಂ ನೋಡುತೆಂದನಾತಂ ೪೭

ಆರನಿವಳೊಪ್ಪಿದಳವಂ ಪುರುಷನೆಂದಿರಿ
ನಾರಿ ಎನ್ನಂ ಬಯಸಿದಳು ವನಿತೆ ಎಂದು ಮುರ
ವೈರಿ ಮುನಿಗಳಿಗಾಡಿಯುರ ಮನೆಗೆ ಕಳಿಪಿದಂ ಸತಿಯು ವರಿಸುವ ತವಕದೆ
ನಾರದಂ ಪರ್ವತಂ ತಾವಿರ್ವರುಂ ನೋಡಿ
ಹೋರಿ ನಾವಿರ್ವರುಂ ನ್ಯಾಯಕ್ಕೆ ಬರಲೆಂದು
ವಾರಿಜಾನನೆಯನೀ ನಿಳ್ಕೊಂಡೆ ಎಂದು ಘುಡಿಘುಡಿಸಿ ಶಾಪವನಿತ್ತರೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನ್ನಿಕೆಯುದೆವುಗಾದುದಿಲ್ಲ ತಪವಳಿಯಿತ್ತು
ಅನ್ನೆಯವ ಮಾಡಿದ್ಯೆ ಕೇಳು ಹರಿಯಿದಱಿಂದ
ಲಿನ್ನೊಂದು ಜನ್ಮದೊಳು ರಾಮಾವತಾರವಾದೆಡೆಯೊಳಂತಾ ರಾವಣಂ
ನಿನ್ನ ವನಿತೆಯುನೆಳದು ಕೊಂಡೊಯ್ಯಲೆಂದಾಡಿ
ಮುನ್ನಿನಂದದೊಳೆ ತಪವಿರ್ದಾಱದವರದಱಿಂದ
ಪನ್ನತಿಕೆಯಿಂದ ಸೀತೆಯನೊಯ್ದನಸುರನೆಂದಾಡಿದಂ ಹಲಗೆಯಾರ್ಯ್ಯಂ ೪೯

ಬಳಿಕಲಾ ಬಾಲಿಯಂ ಕೊಂದು ಹನುಮಾನುವಂ
ಕಳುಪಿ ಲಂಕೆಯ ಸುಡಿಸಿ ಕಪಿಕಟಕಸಹವಾಗಿ
ಬಳವಂತ ನೀಲನಿಂ ಸೇತುವಂ ಕಟ್ಟಿಸುತ ನಡದು ಪಟ್ಟಣವ ಮುತ್ತಿ
ಘಳಿಲನುಗ್ರದಿ ಕಾದಿ ಇಂದ್ರಜಿತುವಿಂ ರಾಮ
ನೊಳಗಾಗಿ ಮಡಿದೊಡಾ ಜಾಂಬವಂ ಹನುಮರ
ಗ್ಗಳದ ಮರುಜೇವಣಿಯ ತಂದೆಬ್ಬಿಸಿದ ಬಳಿಕ ಮರಳಿ ಯುದ್ಧಂಗೆಯ್ದರೂ ೫೦

ಆಯವಸರದೊಳಲ್ಲಿ ರಾಮರಾವಳರುಗಳ
ಜೇಯ ಸಮರದೊಳು ವರ್ಮಂಗಳಂ ಪೇಳ್ದಧಿಕ
ದಾಯತಿಕೆಯಿಂ ಕಾಮವಲ್ಲಿಯಾ ನಿಜವನೊರೆದಂ ರಾವಣಂ ಬಳಿಕ್ಕಾ
ನ್ಯಾಯಮಂ ತಪ್ಪಿ ಪೇಳಿದನಧಮ ರಾಮನಾ
ಮ್ನಾಯಸಾಹಸ್ರವರಿವಾ ದನುಜನಂ ಕೊಂದ
ಪಾಯದಿಂ ಬ್ರಹ್ಮೇತಿ ಹೊಱಗೊಳಗೆ ಮುಸುಕಿತ್ತು ತೆಱಹಿಲ್ಲದಾ ರಾಮನಂ ೫೧

ಲಿಂಗಪ್ರತಿಷ್ಠೆಯಂ ಮಾಡಬೇಕೆಂದಖಿಳ
ಲಿಂಗಂಗಳಂ ತರಲು ಹನುಮಂತನಂ ಕಾಶಿ
ಗಂ ಗಾಡಿಯಿಂ ಕಳುಪೆ ರೋಮ ರೋಮಂಗಳೊಳು ಲಿಂಗಮಂ ಕಟ್ಟಿ ರೋಮಾ
ಲಿಂಗಿಯೆಂಬಾ ನಾಮವಾಯಿತಾ ಹನುಮಂಗೆ
ಸಾಂಗ ತತ್ಕಾಲವಾಗಲು ಮಳಲೊಳಾ ಮಹಾ
ಲಿಂಗಪ್ರತಿಷ್ಠೆಯಂ ಮಾಡಿದಂ ರಾಮ ನುತನಾಮ ಜಗದುದ್ದಾಮನೂ ೫೨

ಮಳಲಗುಡ್ಡೆಯನೇಕೆ ಭಜಿಸಿದಪೆ ದೇವ ಎನೆ
ಯಳಿಕಾಕ್ಷನ್ಯೆ ಹನುಮ ಎನಲೆನ್ನ ಲಿಂಗಕ್ಕೆ
ಕಳುಪಿ ನೀನಿಂತು ಮಾಳ್ಪರೆ ಎಂದು ಬಾಲದಿಂ ಸುತ್ತಿ ಲಿಂಗವ ಕೀಳಲು
ಅಳವಲ್ಲದಲ್ಲಿಂದಲುರುಳಿ ದೂರಕೆ ಬೀಳೆ
ಬಳಿಕ ಸಂತೈಸಿ ಲಿಂಗದ ಭಜನೆಯಿಂದೆ ತ
ನ್ನೊಳಗಿರ್ದ ಪಾತಕಂ ಹೆಱಹಿಂಗಿತಾ ತಾಣದಲ್ಲಿ ಕಾಣಿಸುತಿರ್ಪುದೂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾವಣಂ ಬ್ರಹ್ಮೇತಿ ರಾಮನಂ ಬಿಟ್ಟಿರ್ದ
ತಾವಿನೊಳಗೀಗಳುಂ ಕಾಣಿಸುತ್ತದೆಯಲಾ
ವ್ಪೋವಿ ಸೇತುವಿನ ರಾಮೇಶನಂ ಬೀಳ್ಕೊಂಡು ರಾಘವಂ ಬರುತಿರಲ್ಕೆ
ಸಾವಿರ ಶಿರೋಹಸ್ತಗಳ ರೂಪನಾಂತು ಪಿಂ
ದಾವರಿಸಿ ಪಾತಕಂ ಬರುತಿರ್ದುದಾ ಹನುಮ
ದೇವನುಂನತರೂಪಿನಿಂ ಬೆಳೆಯಲವನ ಮಱೆಯೊಳಗಡಗಿ ಬರುತಿರ್ದನೂ ೫೪

ಬರುತಲಾ ರಾಮನಾ ವಾಲ್ಮೀಕಿಯಾಶ್ರಮಾಂ
ತರದಲ್ಲಿ ಹನುಮ ರೋಮಂಗಳೊಳು ಕಟ್ಟಿರ್ದ
ಪರಮ ಲಿಂಗಂಗಳನನಂತಮಂ ರಾಮೇಶ ಲಕ್ಷ್ಮಣೇಶನುಮೆನಿಪ್ಪಾ
ಉರುತರದ ನಾಮಂಗಳಿಂ ಪ್ರತಿಷ್ಠೆಯ ಮಾಡೆ
ಧರೆ ಗಗನದುನ್ನತದೊಳೆಯ್ದುವಾ ಬ್ರಹ್ಮೇತಿ
ಯರರೆ ಬಿದ್ದಾವನಿಯೆನಿಪ್ಪ ತಾಣದೊಳಲಾ ಬ್ರಹ್ಮೇತಿಯರೆ ಎನಿಸಿತು ೫೫

ಆವನಿಯೊಳೀಗಳುಂ ದೃಷ್ಟವಾಗದೆ ರಾಮ
ಭೂವರಂ ಬಳಿಕಂತರಂಗಪಾಪವನು ತಲೆ
ಕಾವೇರಿಯೆಡೆಯಲ್ಲಿ ಕಳೆ ಎಂದು ವಾಲ್ಮೀಕಿ ನಿರವಿಸುತ ಕಳುಹಲಾಗಿ
ಗೋವನೊಂದಂ ಶಿಲೆಯೊಳೊಡರಿಚಿಯುದಱ ಬಾಯ
ನಾ ವೇಳೆ ಪೊಕ್ಕು ನಾಣ್ದಾಣದೊಳು ಪೊಱಟು ದೋ
ಷಾವಳಿಯ ಕಳಿದಲ್ಲಿ ಲಿಂಗಪ್ರತಿಷ್ಠೆಯಂ ರಚಿಸಿ ಪೂಜೆಯ ಮಾಡಿದಂ ೫೬

ಈ ವಸುಧೆಯೊಳು ರಾಮನಾಥಪುರವೆಂದು ತಲೆ
ಕಾವೇರಿಯೆಡೆಯಲ್ಲಿ ರಾಮೇಶ್ವರಂ ಕಲ್ಲ
ಗೋವಿರ್ದುದೆ ದೃಷ್ಟವಾ ಸ್ಥೂಲಪಾತಕಂ ಪೋದಬಳಿಕಾ ಸೂಕ್ಷ್ಮವಾ
ವಾವರಿಸಿದಜ್ಞಾನಮಂ ಕಳೆಯೆ ಸಿರಿಗಿರಿಗೆ
ಭೂವರಂ ರಾಮನೆಯ್ತಪ್ಪಲ್ಲಿ ಲಿಂಗಮಯ
ವೀ ವಿಮಲಪರ್ವತಂ ನಾಂ ಮೆಟ್ಟಲಮ್ಮೆನೆಂದಾಗ ಮತ್ತೇಗೆಯ್ದನೂ ೫೭

ಹನುಮವಾಲಾಗ್ರಮಂ ಮೆಟ್ಟಿಯಾ ಮಲ್ಲಿಕಾ
ರ್ಜುನದರ್ಶನಂ ಮಾಡಿ ಪಾತಾಳಗಂಗೆಯೊಳ
ಗನಘಮಪ್ಪಾ ಸ್ನಾನಮಂ ರಚಿಸಿ ರಾಮನಂತಾಗ ಪಾಪವಿನಾಶನಿ
ಎನಿಪ ಲಿಂಗಪ್ರತಿಷ್ಠೆಯ ಮಾಡಿ ಪೂಜಿಸುತ
ದನುಜಸಂಬಂಧದಾ ಬ್ರಹ್ಮೇತಿಯಂ ಕಳಿದು
ಮುನಿ ರೋಮಜಂಗೆಱಗಿ ನಿರ್ದೋಷದುನ್ನತದ ಪುಣ್ಯಫಲವೀಯೆಂದನೂ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ರೋಮಜಂ ನಿರೂಪಿಸಿದನೆಲೆ ಭೂಪ ಕೇ
ಳ್ವೀರಶೈವೋಪದೇಶದಿನಲ್ಲದಿಲ್ಲವೈ
ಚಾರು ನಿರ್ದೋಷಮೋಕ್ಷಮದೆಂದು ದೀಕ್ಷೆಯಂ ಕರುಣಿಸುತ ಕಳುಪಲಾಗಿ
ಧಾರುಣಿಯೊಳೆಸೆವ ಲೇಪಾಕ್ಷಿಯೊಳು ವಾಮಕರ
ದಾ ರಮ್ಯಲಿಂಗವಾ ಬಲಗೆಯ್ಯ ಜಪಸರದೊ
ಳಾ ರಾಮನೀಗಳುಂ ಲೋಕವೆಲ್ಲಱಿವಂತೆ ರಾಜಿಸುತ್ತೈದನೆಯಲಾ ೫೯

ಈ ತೆಱದೊಳಲ್ಲಲ್ಲಿ ರಾಮನಿಂತೀಶಪೂ
ಜಾತಿಶಯಮಂ ಮಾಡಿ ಬಳಿಕಯೋಧಿಯ ಪೊಕ್ಕು
ಭೂತಳದ ಗುಪ್ತಚರರಿಂದೊರ್ವ ತಿಲಘಾತವಾರ್ತೆಯಂ ಕೇಳ್ದು ಬಳಿಕಾ
ಸೀತೆಯಂ ವಧಿಸೆಂದು ನಿರವಿಸುತ ಲಕ್ಷ್ಮಣನ
ನೇ ತಾನೆ ನೆವವಿಟ್ಟುಕೊಂಡು ಜಲದೊಳಗಳಿದ
ವೈತಥ್ಯದಿಂ ಕಲ್ಪಕಲ್ಪದೊಳು ರಾಮಕಥೆ ಎಂದನಾ ಹಲಗೆಯಾರ್ಯ್ಯಂ ೬೦
ರಾಮಸಂಹಾರ ಕಥೆ ಸಮಾಪ್ತ

ಬಲಭದ್ರಸಂಹಾರ ಕಥೆ

ಹಲಗೆಯಾಚಾರ್ಯ್ಯ ರಾಮಕಥೆಯಿಂ ಮುಂದೆ
ಬಲಭದ್ರರಾಮನೇಗೆಯ್ದನೆನೆ ಯಾದವರ
ಕುಲದಲ್ಲಿ ಹುಟ್ಟಿಯಾ ವರುಣನಟ್ಟಿದ ವಾರುಣಿಯ ಪಾನಮಂ ಮಾಡುತಾ
ಸಲೆ ಕೃಷ್ಣನುಂ ಕುಮಾರರ್ಕಳೆಲ್ಲರು ಸಹಿತ
ನೆಲೆಗೆಟ್ಟು ಮದಿಸಿದರಪಾಯಮಾದುದು ಪೂರ್ವ
ಫಲವಾವುದೆನಲು ದೂರ್ವಾಸಮುನಿಪನ ಕಥೆಯನೊರೆವೆನೆನುತಾರ್ಯ್ಯ
ನುಡಿದಂ ೬೧

ದೂರ್ವಾಸಮುನಿಯನಾಗತಮನುಸುರುತ್ತಿರಲು
ಗರ್ವದಿಂ ಯಾದವಕುಮಾರರ್ಕಳೆಲ್ಲರಂ
ದೊರ್ವ ಪುರುಷಂಗೆ ಹೆಣ್ಣುಡಿಗೆಯುಡಿಸುತ್ತಲೊನಕೆಯ ತುಂಡನಾ
ಪೊಡೆಯೊಳು
ಸರ್ವಸಮ್ಮತದೊಳಳವಡಿಸಿ ಹೊಡವಡಿಸುತೀ
ಉರ್ವಿಯೊಳಗೀಕೆ ಗರ್ಭಿಣಿ ಏನ ಪೆತ್ತಪಳು
ಪರ್ವತೋಪಮದ ಗಂಭೀರಮುನಿ ಪೇಳೆಂದು ಕಟಯಿಂ ಬೆಸಗೊಂಡರು ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃತ್ರಿಮದ ಕಟಕಿಯೋ ನಮ್ಮೊಳಗೆ ನಿಮ್ಮ ಭೂ
ಪೋತ್ತಮರ ಕುಲವ ಸಂಹರಿಸುವೊನಕೆಯು ತುಂಡ
ಹೆತ್ತಪಳೆನುತ್ತ ನುಡಿಯಲು ನಗುತಲಾ ತೆಱನ ಬಲಭದ್ರಗಱುಪಲಾಗಿ
ಮತ್ತೆ ಕೃಷ್ಣಾದಿಗಳು ಕೆಟ್ಟೆವೆನಲದನು ತೇ
ವುತ್ತ ನದಿಯೊಳು ಕಲಸೆಗೇಕಾಗುತಲ್ಲಿ ಪು
ಟ್ಟಿತ್ತುಳಿದ ಬಳೆಯು ಕಬ್ಬುನವಿನಿತನೊಂದಧಿಕ ಮೀನು ನುಂಗಿತ್ತು ಬಳಿಕಾ ೬೩

ಜರಕನೆಂಬಾ ಬೇಡನಾ ಮೀನ ಪಿಡಿದು ಸೀ
ಳ್ದು ರುತರದ ಕಬ್ಬೊನ್ನ ತೆಗೆದಂಬಿನಗ್ರಕ್ಕೆ
ಕರವೆಸೆಯೆ ಮಾಡಿಸಿದನಾ ಶಂಕರಂ ಕೃಷ್ಣಾವತಾರಮಂ ಕೆಡಿಸಲಾಯ್ತು
ಇರದೊಗೆದ ಗೇಕುಳದ ದಂಟ ಕೀಳ್ತೀ ಮಹೀ
ಶ್ವರಪುತ್ರರೆರಡು ಭಾಗೆಯೊಳವಾಯುಧವೆಂದು
ಕರದೊಳಾಂತಲ್ಲಿ ನಾರಳ ದಂಟನೇ ಕುದುರೆಯೆಂದೇರಿದರು ಬಿನದದೆ ೬೪

ಅವೆ ಕುದುರೆಯಾಗಿ ಪರಿದಾಡಿದವು ಕೀಳ್ತ ಗೇ
ಕವು ಪಿರಿಯ ಬಲ್ಲೆ ಹಗಲಾಗಲೋರೋರ್ವರಂ
ಕವಿದಿಟ್ಟರೆದೆಯು ತಟ್ಟುರ್ಚೆ ಬೆನ್ನೊಳು ಮೂಡಿಯನಿಬರುಂ ಮರಣವೆಯ್ದೆ
ಭುವನದೊಳು ಬಲಭದ್ರರಾಮನಂತಲ್ಲಿ ವಿಲ
ಯವನೆಯ್ದಿ ಸರ್ಪನಾದಂ ಮುಂದೆ ಬುದ್ಧನಾ
ದವತಾರವಂ ಕೇಳು ಕೆಂಚವೀರಾಹ್ವಯಾ ಎನುತುಸುರ್ದನಾಚಾರ್ಯನೂ ೬೫

ಬಲಭದ್ರರಾಮಾವತಾರ ಸಮಾಪ್ತ

ಬುದ್ಧಸಂಹಾರ ಕಥೆ

ಆರೈದು ಕೇಳೈಯ್ಯ ಬುದ್ಧನಂ ಘನಲೈಂಗ್ಯ
ಪೌರಾಣದೊಳು ಶಿವಂ ತ್ರಿಪುರಕ್ಕೆ ಕಳುಪಲಂ
ತಾ ರಾಕ್ಷಸರ್ಗೆ ದುರ್ಬೋಧೆಯುಂ ಬೋಧಿಸಿದನಾ ವೇದಬಾಹ್ಯ ಮತವಾ
ಕ್ರೂರತೆಯು ವೇದಬಾಹ್ಯತೆಯುದೇ ಪಾಷಾಂಡ
ವೈರಚಿತ ಪಾಷಾಂಡವೀಗ ಮಾಯಾವಾದ
ವೀರಸೆಗದೇ ಶೂನ್ಯವಾದವಂತದು ಶುಷ್ಕತರ್ಕವಾ ಮತದ ವಿವರಾ ೬೬

ಬಳಿಕ ಋಗ್ವೇದಾದ್ಯಥರ್ವಣಾಂತಂಗಳ
ಗ್ಗಳ ವೇದವಂತು ತಚ್ಛಿರೋರುದ್ರವಾದಿ ನಿ
ರ್ಮಳ ಮೌಂಡಿಕಾಹ್ವಯಾಂತೋಪ ನಿಷದಾದಿಗಳು ಕಾಮಿಕಾದಿಗಳು ತೊಡಗಿ
ವಿಳಸಿತದ ವಾತೂಳವವಧಿಯಪ್ಪಾಗಮಂ
ಗಳು ಮತ್ತೆ ಮನ್ವಾದಿ ವಾಶಿಷ್ಠವಂತ್ಯವೆನಿ
ಸಿಳೆಯಲ್ಲಿ ಧರ್ಮಶಾಸ್ತ್ರಂಗಳಾ ಬ್ರಹ್ಮಾದಿಯಾಗಿಯಾ ಬ್ರಹ್ಮಾಂಡವೆ ೬೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಧಿಯಪ್ಪಾ ಪುರಾಣಂಗಳಂ ಮೀಱಿ ಮಾ
ಡುವ ಬಲ್ಮೆಯಿಲ್ಲದಜ್ಞಾನದಿಂ ರಕ್ಕಸರ
ಶಿವಪೂಜೆಯಂ ಕೆಡಿಸಿ ಪಾತಕರ ಮಾಡಿದಾ ಬವುದ್ಧನಾಚರಿಸುತಿರಲು
ಭುವಿಯಲ್ಲಿ ಹರನವಂ ಬುದ್ಧಿಯೇ ದೈವವೆಂ
ಬ ವಿಚಾರಸಹಿತಿರಲ್ಸಂಹಾರಗಳನು ಮಾ
ಡುವನಿಂತು ಕಲ್ಪಕಲ್ಪಂಗಳೊಳು ಕಲಿಕೆಯವತಾರವೆಂತೆನೆ ಪೇಳ್ವೆನು ೬೮

ಬೌದ್ಧಾವತಾರ ಸಮಾಪ್ತ

ಕಲಿಕೆಸಂಹಾರ ಮೊದಲಾ ವಿಷ್ಣುವಿನ ಮಾನಭಂಗ ಕಥೆ

ಆ ವಿಷ್ಣುವೇ ಕಲಿಕೆಯಾಗಿ ಸತ್ಯಂ ಧರ್ಮ
ಶೈವ ಸನ್ಮಾರ್ಗಂ ಸದಾಚಾರತತಿಯದು
ಭರ್ಾವದಿಂ ಮಸುರಿಸುತ್ತನೃತವಳಿಪಂ ಧರ್ಮಂ ಬಳಿಕನಾಚಾರವಾ
ಈ ವಸುಧೆಯಲ್ಲಿ ಪಸರಿಸೆಯವರವರ್ಗಳಾ
ಪ್ರಾವರ್ತನೆಯೊಳೀಶನಾಣತಿಯ ಯಮನ ಶಿ
ಕ್ಷಾವಳಿಯೊಳಳಿವುದಕೆ ಕಲ್ಪ ಕಲ್ಪದೊಳು ಕಲಿಕೆಯ ಮಹಾ ಸಂಹಾರವೈ ೬೯

ಆರಯ್ಯೆ ವಿಷ್ಣು ಶಿವನಂ ಭಜಿಸಿದೆಡೆಗಳೀ
ಧಾರುಣಿಯೊಳುಂಟನಂತಂ ಪೇಳ್ವೆನೈಯ್ಯ ದ್ರಾ
ಕ್ಷಾರಾಮದಲ್ಲಿ ಭೀಮೇಶ್ವರಂ ದ್ವಾರಾವತಿಯೊಳು ಗೋವಿಂದೇಶ್ವರಂ
ವಾರಣಾಶಿಯೊಳು ವಿಶ್ವೇಶ್ವರಂ ಲಂಕೆಯೊಳು
ದಾರವಹ ಮತ್ಸಕೇಶ್ವರನಲ್ಲಿ ಕೂರ್ಮಗಿರಿ
ಯಾರಯ್ಯಲಲ್ಲಿ ಕೂರ್ಮೇಶ್ವರಂ ಗಯದಲ್ಲಿ ಮಿಸುಪ ವಾರಾಹೇಶ್ವರಂ ೭೦

ಚಾರುಸಿರಿಗಿರಿಯೊತ್ತಿನಾಭಳಸ್ಥಾನದೊಳು
ನಾರಸಿಂಹೇಶಂ ತ್ರಿಚಕ್ರಿಕಾಪುರದಲ್ಲಿ
ರಾರಾಜಿಸುವ ವಾಮನೇಶ್ವರಂ ಮುಕುಳಕುಳದೊಳು ಪರಶುರಾಮೇಶ್ವರಂ
ಧಾರುಣಿಯೊಳೆಲ್ಲ ರಾಮೇಶ್ವರವನಂತ ತ
ದ್ವಾರಾವತಿಯೊಳು ಬಲಭದ್ರೇಶನೈ ಬಳಿ
ಕ್ಕಾ ರಾಮಗಿರಿಯಲ್ಲಿ ಬೌದ್ಧೇಶ್ವರಂ ಕಾಂಡವಾದ್ರಿಯೊಳು ಹರಿ ಭಜಿಸಿದಾ ೭೧

ಕಲಿಕೇಶ್ವರಂ ತನ್ನ ನಿಜ ಸಜ್ಜೆಯೊಳು ಸಮು
ಜ್ವಲದಿಂದ್ರನೀಲಲಿಂಗವನಿಂತು ಪೂಜಿಸುತ
ಸುಲಭವೆನಿಸಿಷ್ಟಾರ್ಥವಮಂ ಪಡೆದನಾ ವಿಷ್ಣು ಮತ್ಸ್ಯಕೇಶ್ವರನಾದಿಯಾ
ಅಲಘುಲಿಂಗಂಗಳಾ ಹರಿಗೆ ಬೋಧಿಸಲಾಗಿ
ಸಲೆ ಮತ್ಸ್ಯಕೂರ್ಮವಾರಾಹ ಪೌರಾಣಂಗ
ಳೆಲೆಲೆ ಧರೆಯೊಳಗೆ ಪರಕಲಿಸಿದವಲ್ಲೈ ಕೇಳೆನುತ್ತ ಮತ್ತಿಂತೆಂದನು ೭೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತುಮಲ್ಲದೆ ವಿಷ್ಣು ಭಂಗಗಳ ಕೇಳಿನ್ನು
ಕಾಂತು ವಸುದೇವನಾ ದೇವಕಿಗೆ ಪುಟ್ಟಿ ಬಳಿ
ಕಂತೊಂದು ಗಾರ್ದಭನ ಕೃಪೆಯಿಂದ ಬದುಕಿ ಗೊಲ್ಲರ ಹಳ್ಳಿಗೀಡಾಗುತಾ
ಮುಂತೆ ಬೆಣ್ಣೆಯು ಕದ್ದು ಹಾದರಿಗನಾಗಿ ಬಳಿ
ಕಂ ತಾನೆ ಪಾಂಡವರಿಗಾಳಾಗಿ ಭೀಷ್ಮಾದ್ಯ
ರಿಂ ತದಸಿಕೊಂಡು ಜರಕನ ಬಾಣದಿಂದಳಿದನಾ ಕೃಷ್ಣನಂತಲ್ಲದೆ ೭೩

ಆಯುತ್ರಿಯಂಗನೆಗೆ ಪುಟ್ಟಿ ತದ್ವಿಷ್ಣುವಾ
ತ್ರೇಯನೆನೆಸಿದನದಿತಿಗಿಂದ್ರಾನುಜಾಖ್ಯದಿಂ
ದೀಯುವನಿಯಲ್ಲಿ ಜನಿಸಿದನು ಬೋವಿತಿಯಲ್ಲಿಯಾ ವ್ಯಾಸನಾಮದಿಂದ
ಆಯುತದೊಳೊಗೆದು ಮುನಿಗಳು ಸಕಳದೈವದೊಳ
ಗಾಯಧಿಕ ದೈವವಿನ್ನಾವುದೆನೆ ವಿಷ್ಣು ತಾ
ನೇಯುಗ್ರಗಣ್ಯದೈವಮುದೆಂದೊಡವರು ಶಪಥವ ಮಾಡಬೇಕೆಂದರೂ ೭೪

ಯತ್ಪರಮು ಕಾಶಿಯೊಳಗನ್ಯದೈವಂ ಕೇಶ
ವಾತ್ಪರಮೆನುತ್ತ್ಯೈಯ್ಯಂ ನೀಡಲಾಕ್ಷಣವೆ
ಮತ್ಪಶುಪನಂದಿವ:ಹಕಾಳರಾ ವ್ಯಾಸಭುಜವೆರಡ ಕೀಳ್ತೊಯ್ದು ಶಿವನಾ
ತತ್ಪಾದಕರ್ಪಿಸಲವಂ ಮೋಟನಾಗುತ ಮು
ರುತ್ಪತಿಗಳೀಕ್ಷಿಸಲು ವಿಷ್ಣುವಂ ಕೀರ್ತಿಸಲು
ಚಿತ್ಪರಮು ಶಿವನಭೃತ್ಯಂ ಕೇಶವಂ ಬಂದು ನುಡಿದನಂತಾ ಮುನಿಪಗೆ ೭೫

ಈ ಶಿವದ್ರೋಹವಂ ಮಾಡಬೇಹುದೆಯುಹೋ
ವ್ಯಾಸಾ ಮತಿಭ್ರಷ್ಟಯಜ್ಞಕ್ಕೆ ಕರ್ತನಾ
ವಾಸವಂ ಸೃಷ್ಟಿಕರ್ತಂ ಬ್ರಹ್ಮನಹಮೇವ ತಜ್ಜಗತ್ಕರ್ತೃವಪ್ಪೆ
ನೈ ಸಹಜವಗ್ರಪದವಿನ್ನು ಮಮಕರ್ತಾಮ
ಹೇಶಯೆಂಬಾ ವಾಕ್ಯಮಂ ವಿಷ್ಣು ನುಡಿಯಲು ಮು
ನೀಶನಾ ವಿಷ್ಣುವಂ ತೃಣಕೆ ಕಡೆಯೆಂದು ಶಿವಭಕ್ತನಾಗುತ್ತೆಂದನೂ ೭೬

||ಸಾಕ್ಷಿ|| ॥ಶ್ಲೋಕ॥ ಅಹೋವ್ಯಾಸ ಮತಿಭ್ರಷ್ಟ ಕಿಂ ದೋಷ ಮಮದೀಯತೇ
ಯಜ್ಞಕರ್ತಾಚ ಸೃಷ್ಟಿಕರ್ತಾಚ ವಾಕ್ಪತಿಃ
ಅಹಮೇವ ಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ ೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಕೇಳೆನ್ನೆರಡು ತೋಳುಗಳ ನಿನ್ನಯ ಮಹಾ
ವಾಸದೆಡೆಯಲ್ಲಿ ನಿಮ್ಮಯ ಗಣೋತ್ಸವದ
ಠಾವಿನೊಳಗಂ ಧ್ವಜಪತಾಕೆಗಳುಮಾಗಿರಲ್ವೇಳ್ಕೆಂದು ಬಿನ್ನವಿಸಲು
ಶೈವಮುನಿಯಿಷ್ಟಪಂ ಸಲಿಸಿದನಲಾ ಬಳಿಕ
ಲಾ ವಾರಿಜೋದ್ಭವನ ಗುದದೊಳಗಧೋಕ್ಷಜಾ
ಖ್ಯಾವಳಿಯೊಳೊಗೆದಂ ಜಲಂಧರನನಾಗಪಾಶದೊಳು ಕಟ್ಟಿಸಿಕೊಂಡನು ೭೭

ಹರನ ಪಾದದ ರೇಖೆಯಿಂದಾದ ಚಕ್ರಮಂ
ಹರಿ ಪಡೆದನಂತಲ್ಲದಾ ಕ್ಷುಪನಿಮಿತ್ತದಿಂ
ವರ ದಧೀಚಿಯು ಚಕ್ರದಿಂದಿಟ್ಟೊಡಾತನಾ ಚಕ್ರಮಂ ಮುರಿದು ಬಿಸುಟಂ
ಮರಳಿ ಸಾವಿರ ಕಮಲದಿಂದರ್ಚಿಸುತ್ತೊಂದು
ಸರಸಿಜಂ ಕಡಮೆಯಾಗಲು ಕಣ್ಣ ಕಿತ್ತು ಶಂ
ಕರನ ಪಾದಕ್ಕಿತ್ತು ನಯನಚಕ್ರಂಬಡೆದನಾ ಪುಂಡರೀಕಾಕ್ಷನೂ ೭೮

ಉಪಮನ್ಯುಮುನಿಗೆಯಾ ವಿಷ್ಣು ಶಿಷ್ಯತ್ವದಿಂ
ದುಪಚಾರ ಷೋಡಶಂಗಳಿನರ್ಚಿಸುತ್ತಲಾ
ವಿಪುಲತರದಿಂದ್ರನೀಲದ ಲಿಂಗಮಂ ಪಡದು ಸೆಜ್ಜೆಯೊಳು ಪೂಜಿಸುತ್ತಾ
ತ್ರಿಪುರಾರಿಯಂ ಮೋಘರೂಪದಿಂ ಭಜಿಸುತ್ತ
ಸುಪಥದಿಂ ಸಾಂಬನೆಂಬಾ ಮಗನ ಪಡದನಾ
ಕುಪಿತ ಭೃಗುವಿಂದೊದಸಿಕೊಂಡುದೇ ಶ್ರೀವತ್ಸವೆನಿಸಿತಾ ಹರಿಯೆದೆಯೊಳು ೭೯

ದ್ವಾರಿಕಾಪುರಿಯಲ್ಲಿ ಕೃಷ್ಣನರಮನೆಯಲ್ಲಿ
ಯಾ ರುಕ್ಮಿಣಿಯ ಕೂಡೆ ಸುರತದಿಂದಿಪ್ಪೆಡೆಯೊ
ಳೋರಂತೆ ದೂರ್ವಾಸಮುನಿಪ ಬಿಜಯಂಗಯ್ಯಲಲ್ಲಿ ಬಾಗಿಲ್ಕಾಯ್ವರೂ
ವಾರಿಸಲವಂದಿರಂ ಶಪಿಸಿಯೊಳಪೊಕ್ಕೊಡಾ
ನಾರಿಯೊಡವೆರಸಿ ಕೃಷ್ಣಂ ದಿಗಂಬರನಾಗಿ
ಸಾರಿ ಪಾದದ್ವಯಕ್ಕೀರ್ವರುಂ ಬಿದ್ದು ನಮಿಸಲ್ಕೆ ನೋಡಿದ ಮುನಿಪನೂ ೮೦

ಏನಿರ್ವ ಬತ್ತಲೆಯ ಭಂಡರಾಗುತ್ತೆಮಗೆ
ಮಾನಗೇಡಿಗಳಾಗಿ ವಂದಿಸಿದಿರೆಂದತಿ
ಧ್ಯಾನದಿಂ ಬಯಿದು ಹರಿಯೆದೆಯನೊದೆಯಲ್ಕೆ ಕಪ್ಪಾಗೆ ಪಾದಕ್ಕೆನಮಿಸಿ
ಮಾನನಿಧಿ ನಿನ್ನ ಚರಣಸ್ಪರ್ಶದಿಂದನಾ
ನೇ ನಿಜಕೃತಾರ್ಥತೆಯನೆಯ್ದಿದೆನೆನಲ್ಕೆಲವೊ
ನಾನೆಯ್ತರಲು ನಿನ್ನ ಬಾಗಿಲೊಳು ತಡಹೆ ಶಾಪವನೀಗ ಹಿಡಿಯೆಂದನು ೮೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕಳ್ಕಿ ಯೆಲೆ ದೇವ ಶಾಪಕಂಜುವೆನು ನೀ
ವಿದಕೀಗಳೊಂದು ಶಿಕ್ಷೆಯ ಮಾಡಿಬಿಟ್ಟೆನ್ನ
ಬದುಕಿಸುವುದೆನಲಂತುಗೆಯ್ವೆವೈ ನೀವಿಬ್ಬರುಂ ದಿಗಂಬರದೆ ಬನ್ನಿ
ಮುದದೊಳೆಂದಿರ್ವರಂ ತಂದು ಸಿಂಗರಿಸಿರ್ದ
ಸದಮಲದ ರಥದ ನೊಗನಿಕ್ಕಡೆಗೆ ಬಗ್ಗಿಸು
ತ್ತುಧಟನಿಬ್ಬರನಾಗ ಹೂಡಿ ತೇರಲ್ಲಿ ಕುಳ್ಳಿರ್ದವಂದಿರ ಹೊಡೆದನು ೮೨

ಆ ರಾಯ ರಾವುತರ ಮಂಡಳಿಕ ಮನ್ನೆಯರ
ಕೇರಿಯೊಳು ರಾಜನಾಗಿರ್ದಕೃಷ್ಣನನವನ
ನಾರಿಯುಂ ಬತ್ತಲೆಯೊಳೆಯ್ದೆ ಬಾಗಿಸಿ ಕಟ್ಟಿ ಹೊಡದು ತಿರಿಗಿಸುತ ಬಂದೂ
ಶ್ರೀರಮಣನಾಶ್ರಯುಂ ಬೊಕ್ಕವರ ಬಿಟ್ಟಲ್ಲಿ
ಚಾರುತರದುಪಚಾರತತಿಯ ಕೈಕೊಂಡ ನೀ
ಧೀರಮುನಿರಾಜ ಘನತೇಜನಾನತ ಕಲ್ಪಭೂಜನತಿಶಯ ನೈಜನೂ ೮೩

ಜರಕನಂಬಿನೊಳು ಕೃಷ್ಣಂ ಮಡಿಯೆ ಫಲ್ಗುನಂ
ಇರದೆ ವಿಷ್ಣುವಿನ ಹೆಣನಂ ಸುಡುವ ಕಾಲದೊಳು
ತರುಣಿ ರುಕ್ಮಿಣಿ ಸತ್ಯಭಾಮಾದಿಗಳನು ಸಹಗಮನಮಂ ಮಾಡಿಪಲ್ಲಿ
ದುರುಳ ಬೇಡರು ನೆರದು ಹರಿಯ ಹದಿನಾಱು ಸಾ
ವಿರ ವನಿತೆಯರನೆಳವ ಕಾಲದೊಳಗರ್ಜುನಂ
ಪರಿಹರಿಸಲಾಱದೊಪ್ಪಿಸಿ ಬಳಿಕಲವಗೆ ಪಿತೃಕಾರ್ಯಂಗಳಂ ಮಾಡಿದಂ ೮೪

ಎರಳೆಯಾದಾ ಹರಿಯ ಪೆರ್ದಲೆಯುನರಿದು ಬಳಿ
ಕುರುತರದ ಯಜ್ಞಮಸ್ತಕವನಂತಾಗ ಕ
ತ್ತರಿಸಿದಂ ವೀರೇಶನಜಹರಿಗಳಿರ್ವರುಂ ಸರಿಮಿಗಿಲ್ಲೆಂದು ಪೊರೆ
ಉರಿಲಿಂಗವಾಗಲಡಿಮುಡಿಗಳಂ ಹರಿ ಬೊಮ್ಮ
ರಿರದಱಿಸಿ ಕಾಣದಾದರು ವಿಷ್ಣು ಪುತ್ರನಾ
ಸ್ಮರನೀಶನನು ಕೆಣಕಿ ಉರಿದಂಗಭವನಾದನೀಶನಗ್ಗಳಕೆ ಸರಿಯೇ ೮೫

ಈ ಕ್ಷಿತಿಯೊಳಶ್ವಿನಿಗಳಾದಿಯೊಳಗಾ ಮೂಲ
ನಕ್ಷತ್ರದೊಳು ಪುಟ್ಟಿ ಮೂಲನೆಂಬಾ ಪೆಸರ
ಧೋಕ್ಷಜಂಗಾದುದಾ ಜ್ಯೋತಿಶಾಸ್ತ್ರಂ ಪುಸಿಗುಮೆಂದಡವಿಯಲ್ಲಿ ಹರಿಯಾ
ಆ ಕ್ಷಣದೆ ಬಿಸುಡಲಲ್ಲಿಯೆ ಶೋಕಿಸಿರ್ಪ ಕಮ
ಲಾಕ್ಷನಂ ಭೂದೇವಿ ಸಾಕಿ ಭೂತಾಂತನಂ
ಬಕ್ಷಯುದ ಪೆಸರಿತ್ತು ಭೂಚಕ್ರಿ ತನ್ನರೂಪಂ ಮುಡುಹಿನೊಳು ಸುಡಿಸುತಾ ೮೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಧರ್ಮವಾ ಶಿವಾಗಮಪೂಜೆ ಮುಖ್ಯದಿಂ
ಸ ವಿಶೇಷನಂ ಮಾಡಲಾ ಪೂಜೆಗೆಯ್ದು ಶಂ
ಭುವ ಪಾದವಂ ಮುಟ್ಟಿ ಶಿವನಾ ಪುರಾಣಪುರುಷರ ಕರೆದು ವಿಷ್ಣು ಪಾಪಂ
ತವಿಸುವೀ ಎಂತೆನಲ್ಕವರು ನುಡಿದರಾ
ವಿವರವಂ ವೇದೋಕ್ತದೊಳ್ಮೂಲನಕ್ಷತ್ರ
ಸುವಿಚಾರವೆಂದೀಶ ಸೀಮೆಯಿಂದಲ್ಲದೀತನ ಪಾಪವಳಿಯದೆನಲೂ ೮೭

॥ವೇದಶ್ರುತಿ॥ ಓಂ ಮೂಲ ನಕ್ಷತ್ರಸ್ಯ ಬಹುಪಾತಕಂ ವಿನರೆ ಜನನಿ ಕರಾಣಾಂ
ಪಾಪಂ ಪರ್ವತಂ ಸ್ಥೂಲಶರೀರಿಣಾಂ ಶಿವದಾಸೋಹ ಶಿವೆ
ದೇಶಾಧೀಶ್ವರಾಯ ಪಾಪಂ ಸಂಹರಾಮಿತಿ ೨

ಮತ್ತಾ ಪುರಾಣಂಗಳಿಂದ ಹರಿ ದೀಕ್ಷೆವಡೆ
ವುತ್ತ ದೋಷಂಗಳಂ ಕಳಿದಾ ಪುರಾಣ ಪುರು
ಷೋತ್ತಮನೆನಿಪ್ಪ ನಾಮಂಬಡದು ಶಿವಪಾದರಕ್ಷೆಯಂ ಮಸ್ತಕದೊಳು
ಹೊತ್ತು ಭೂತಂಗಳಿಗೆ ಹೆದರಿ ಶಂಖವನು ಪಿಡಿ
ವುತ್ತ ದುರಿತಂಗಳಿಗೆ ಅಳ್ಕಿ ನಾಮವನು ಧರಿ
ಸುತ್ತಲಾ ಪ್ರಳಯಂಗಳಿಗೆ ಸುಗಿದು ವೇಷಮಂ ಹರಿ ತೊಟ್ಟು ರಾಜಿಸಿದನೂ ೮೮

ಡಡಿಗ ರಕ್ಕಸರಿಗಂಜುತ್ತಲಾ ಚಕ್ರಮಂ
ಪಿಡಿದು ಶಿವದಾಸೋಹಿ ಎಂದು ಕಸಕಿಲ್ವಿಡಿದು
ಮೃಡನ ರಾಜಾಂಗಣದ ರಜವುಡುಗಿ ತಣ್ಣೀರ ಕಾಂತಿಯಿಂ ನೀರ ತಳಿದು
ಬಿಡದೆ ಎಪ್ಪತ್ತೇಳುಲಕ್ಷ ವರುಷಂ ದೇವ
ನಡಿಯು ಸೇವೆಯು ಮಾಡಿ ಮೆಚ್ಚಿಸುತ್ತಂ ಮತ್ತೆ
ಪಡದನಾ ಗರುಡವಾಹನ ಲಕ್ಷ್ಮಿಸತಿಯನಾ ಕ್ಷೀರವಾರ್ಧಿಯ ಜಲವನೂ ೮೯

ಶಿವನೆಡದ ಗದ್ದುಗೆಯ ಪಡದನಾ ವಿಷ್ಣು ಶಂ
ಭುವ ಲೆಂಕನ್ನೆ ಸಲೆ ದೈವವೆಂತಹನು ವೈ
ಷ್ಣವರೆಯ್ದು ಹೊತ್ತಿರ್ದ ವೇಷವೇ ಶಿವನ ದಾಸತ್ವಮಂ ಸೂಚಿಸುವುದು
ತವೆ ತಂದೆ ತಾಯ ಶುಕ್ಲಶ್ರೋಣಿತಂಗಳಿಂ
ಬಿವಟಲ್ಲಿ ಪುಟ್ಟಿದರು ದೇವರೇ ಸಂದೇಹ
ವವಿಚಾರದಾಭ್ರಮೆಗಳಲ್ಲಿ ಸಿಲುಕಿದವಂದಿರೇಂ ದೇವರೇ ಬಳಿಕ್ಕಾ ೯೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತ್ತಂದೆ ತಾಯಿಗಳ ಹುಟ್ಟಿಸಿದರಾರೆಂದ
ಹೋ ತಿಳಿಯಿರೇ ಹಿಂದೆ ಸಂದಾ ಯುಗಂಗಳಿಂ
ಖ್ಯಾತಿಯಿಂ ಶತಕೋಟಿ ಸಂಖ್ಯೆಗಳ ಮೇಲೇಳುನೂಱ ಎಪ್ಪತ್ತೆನಿಪ್ಪಾ
ಸಾತಿಶಯಸಾಹಸ್ರಯುಗವೆಂದು ತಿಳಿವುದಾ
ಜಾತನವಕೋಟಿನಾರಾಯಣರು ಮಡಿದರೈ
ಶ್ರೌತಾರ್ಥದಿಂದ ಶತಕೋಟಿಗಣನಾ ಬ್ರಹ್ಮರಳಿದರೆಂಬುದು ನಿಶ್ಚಯಾ ೯೧

ಉಳಿದವವಂದಿರ ಮಹಾಪ್ರಳಯಮಂ ಪೇಳಲಾ
ರಳವು ನಿತ್ಯಂ ನಿಷ್ಕಳಂಕ ನಿರ್ಮಾಯ ನಿ
ರ್ಮಳನೊಬ್ಬನುಳಿದಿಪ್ಪನೈ ಕಲ್ಪಕಲ್ಪದೊಳು ವಿಷ್ಣುಸಂಹಾರವಿಂತು
ತಿಳಿವುಳ್ಳ ಕೆಂಚವೀರಾಹ್ವಯಾ ಕೇಳ್ವುದು
ಜ್ವಳ ತತ್ರಯೋದಶ ಹರಿಧ್ವಂಸ ಎಂಬ ಕಥೆ
ಯುಳವಡುವ ಮಾಳ್ಕೆಯಿಂ ಪೇಳ್ವೆವೆಂದಂ ಹಲಗೆಯರ್ಯ್ಯನಘತಿಮಿರಸೂರ್ಯ ೯೨

ಈ ಮಹಾದೇವತ್ರಯೋದಶದ ಲೀಲೆಯುಹ
ದಾವೋದರ ಧ್ವಂಸನದ ಕಥೆ ಸಮಾಪ್ತಿಯಾ
ಯ್ತೈ ಮನೋಹರವೆನಿಪ ವೀರಶೈವಾಮೃತದ ವೇದಪೌರಾಣಾರ್ಥದಾ
ಆ ಮಿಸುಪಿದಕ್ಕೆರಡು ಸಂಧಿ ಇದ ಬರದೋದೆ
ಸಾಮಾರ್ಥ್ಯದಿಂದರ್ಥಮಂ ಪೇಳ್ವ ಭಕ್ತರ್ಗೆ
ಭೂಮಿಯೊಳಗಿಷ್ಟಾರ್ಥಸಿದ್ಧಿ ಪರಮೋಕ್ಷಸೌಭಾಗ್ಯಮಪ್ಪುದು ನಿಶ್ಚಯಂ ೯೩

ಭೂಲೋಕ ಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೯೪

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದಿ ವೀರಶೈವಾಮೃತದೊಳಗಾ
ದುದು ವಿಷ್ಣುಭಂಗವೆನೆ ಕಾಂಡವೆರಡರ ಮೇಲೆ ನಡದ ಹನ್ನೊಂದುಸಂಧಿ ೯೫

ಅಂತು ಸಂಧಿ ೧೧ ಕ್ಕಂ ಪದನು ೫೮೭ ಕ್ಕಂ ಗ್ರಂಥ ೪೭ ಕ್ಕಂ ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೪

ಅರ್ಧನಾರೀಶ್ವರ ಲೀಲೆ

ಕ್ಷೀರಾಬ್ಧಿಶಯನ ಹರಿಯೆಯ್ತಂದಜದ್ವಯು
ಪೋರ್ಗರೆ ಯುಗಳಾಸ್ತ್ರದುರಿಯಿಂ ತವಿಸಲೆಂದರ್ಧ
ನಾರೀಶನಾಗಿ ರಾಜಿಸಿದಂ ಚತುರ್ದಶಮಹಾಲೀಲೆಯೊಳು ಶಂಕರಂ

ಹರ ಶಬ್ದ ಉತ್ಕರುಷ ಪದವದೆಂತೆಂದೊಡಘ
ಹರನಾದನಾ ಪಾಪಸಂಹರತೆಯಿಂ ಕಾಮ
ಹರನೆನಿಸಿದಂ ಮಾರನಂ ಕೊಂದ ಕತದಿನಾ ತ್ರಿಪುರಮಂ ಸುಡಲಾಪುರ
ಹರನೆನಿಸಿದಂ ಯಮನ ಕೊಂದುದಱಿನಾ ಕಾಲ
ಹರನಾಗಿ ಮೆಱೆವನಾ ಹರಿಯ ಕೊಂದುದಱಿಂದೆ
ಹರಿಹರನೆನಿಪ್ಪ ಪೆಸರಿಂದೆಸೆವ ಶಾಂತಮಲ್ಲೇಶ ಜಯ ಸುಪ್ರಕಾಶಾ ೧

ಶೃಂಗಾರವೀರದಗ್ಗಳದಿಂದೆ ಸತ್ಕೃಪಾ
ಪಾಂಗದಿಂ ರೌದ್ರಾಕ್ಷಿಯಿಂ ಜಗದ್ರಕ್ಷ ತಾ
ಸಂಗತದೆ ದುಷ್ಟಸಂಹರತೆಯಿಂ ರಾಜ್ಞಿರಾಜಾನತಪದಾಬ್ಜದಿಂದಾ
ಕಂಗೊಳಿಪ ಶಿವಸಮಯ ಪರಸಮಯದಗ್ಗಳಕೆ
ಮಾಂಗಲ್ಯರೌದ್ರನೆನಿಪರ್ಧನಾರೀಶ್ವರನ
ಪಾಂಗಿಂ ವಿರಾಜಿಸುತ್ತಿರ್ಪ ಮೇಲಣ ಗವಿಯ ಶಾಂತನಂಜೇಶ್ವರ ಜಯಾ ೨

ಕೇಳಿಕೃತಕೃತ್ಯನಾದಂ ಹರಿಧ್ವಂಸಮಂ
ಭಾಳಾಕ್ಷನಪರಾವತಾರ ಹಲಗೆಯ ಗುರುವೆ
ಪೇಳಬೇಕರ್ಧನಾರೀ ಚತುರ್ದಶವೆಂಬ ಹದಿನಾಲ್ಕನೆಯ ಲೀಲೆಯಾ
ವ್ಯಾಳಧರನೆಂತು ನಟಿಸಿದನೆಂಬ ಕೆಂಚವೀ
ರಾಳಾಪಮಂ ಕೇಳಿ ನಂಜುಂಡದೇಶಿಕನ
ನಾಳೋಕಿಸುತ್ತಲ್ಲಿ ತೀವ್ರ ಶಿವಕವಿ ಮಲ್ಲಣಾರ್ಯ್ಯರ್ಬರೆಯೆಂದನಾಗಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರಮರ್ದನ ಪವಿತ್ರಾಲಾಪವಹ ಲೈಂಗ್ಯ
ಪೌರಾಣದೊಳಗಾ ಸನತ್ಕುಮಾರಂ ನಮಿಸು
ತಾರಾಧ್ಯಮೂರ್ತಿ ದ್ವಿತೀಯ ಶಂಭುವೆ ನಂದಿಕೇಶ್ವರಾ ನಿಮ್ಮ ಚರಣ
ವಾರಿಜದ ಭೃತ್ಯಂಗೆ ನಿರವಿಸುವುದೊಲಿದರ್ಧ
ನಾರಿ ಎನಿಸಿದನೇನು ಕಾರಣಂ ಶಂಭುವೆನೆ
ಕಾರುಣ್ಯದಿಂ ನಿರೂಪಿಸಿದನಾ ಕಥೆಯ ದಿಗ್ಭಿತ್ತಿಧವಳಿತದ ಸೊದೆಯಾ ೪

ಕ್ಷೀರಾಬ್ಧಿಯಲ್ಲಿ ಹರಿ ಮಲಗಿರಲ್ಕಲ್ಲಿಗಾ
ವಾರಿಜೋದ್ಭವನೆಯ್ದಿ ಕಂಡು ನುಡಿದಂ ನೀನ
ದಾರ್ಯೆ ಜಗತ್ಪಿತನನೆನ್ನ ಕಂಡೇಳೆ ಶರಣೆನ್ನ ಎಂದಾಡಲಾಗಿ
ನಾರಾಯಣಂ ಕೋಪಿಸುತ್ತೆಂದ ನೀ ಸಕಲ
ಧಾರುಣಿಯ ರಕ್ಷಿಸುವ ನಾಂ ನಿನಗೆ ತಂದೆ ಎಂ
ದೋರಂತೆ ಎನಗೆ ನೀಂ ನಮಿಸದಿಹೆ ಬೊಮ್ಮಾ ಎನುತ್ತ ಘುಡಿಘುಡಿಸುತೆದ್ದಂ ೫

ಹಿಡಿದರಿರ್ವರು ಕಾಳಗವನಲ್ಲಿ ಹರಿಯಜರು
ವೊಡನೆ ಬಂದೊದಗಿತು ನವಬ್ರಹ್ಮರಾದಿ ಪೇ
ರ್ಪಡೆಯಜಂಗಾ ವಿಷ್ಣುಗಖಿಲದೇವರ್ಕಳೆಯ್ತಂದರಾ ಬೆಂಬಲಕ್ಕೆ
ಹೊಡೆವ ಭೇರಿಯ ಬೊಬ್ಬೆಯಬ್ಬರಂ ಬ್ರಹ್ಮಾಂಡ
ದೆಡೆಯ ತುಂಬಲು ಕಾದಿತುಭಯಬಲವಂತಲ್ಲಿ
ಕಿಡಿಗೆದಱುವಾಯುಧಂಗಳ ಬೆಳಗಿನಿಂದದ್ಭುತಂ ತೋಱಿತಖಿಳ ಜಗಕೆ ೬

ಕಣಿಖಟಿಲು ನಿಱೆನಿಟಿಲೆನಿಪ್ಪ ರವದಿಂದಹೋ
ಹಣಿದವಾಡುವ ಖಂಡೆಯಂಗಳಿಂದುಭಯ ಬಲ
ವಣದು ಕಾದುತ್ತಿರಲು ದೇವತಾಶ್ರೇಷ್ಠರಿಬ್ಬರ ಕಾಳಗದೊಳೀಜಗಂ
ತೃಣದ ಮೆದೆಯಂ ಕಿಚ್ಚು ಹೊತ್ತಿದಂತಾಯ್ತೆಂದು
ಮಣಿದರಳ್ಕಿದರು ಸುಗಿದರು ಚಿಂತಿಸಿದರಲಾ
ಕ್ಷಣ ವಿರಲ್ಬಾರದೆಂದಖಿಳ ಲೋಕದ ಜನಂ ಸಂತಾಪಸಂಯುತಮನಂ ೭

ಉಭಯಬಲವಿಂತು ಕಾದುತ್ತಿರಲ್ಕಾವೇಳೆ
ವಿಭುಗಳಜಹರಿಗಳಿರ್ವರು ತಮ್ಮೊಳಿದಿರಾಗಿ
ಸುಭಟಾಗ್ರಗಣ್ಯರಾ ನಿಜ ಧನುಗಳಂ ಬಿಗಿದು ಕುಬುಬೆಂದು ಬೊಬ್ಬಿಡುತ್ತಾ
ರಭಸದಿಂ ಬಿಲ್ಲ ಜೇವಡೆಗೆಯ್ಯಲಖಿಳರತಿ
ಸಭಯಮಾನಸರಾಗಲೆಚ್ಚಾಡುತಿರ್ದರೀ
ತ್ರಿಭುವನಂ ನಡುಗಲವರೇಂ ಜಾವಳರೆ ಲೋಕಮಂ ಪತ್ತು ರಕ್ಷಿಸುವರು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಡಿಯಿಟ್ಟರಾ ಲೀಢ ಮುಖ್ಯ ಪಂಚಸ್ಥಾನ
ದೆಡೆಯಲ್ಲಿ ಬೆರಳ ಬೊಬ್ಬೆಗಳಿಂದ ಘುಡಿಘುಡಿಸು
ತೊಡನೆಚ್ಚರೆಚ್ಚ ಬಾಣಂಗಳಂ ಕಡಿದರೊಬ್ಬೊಬ್ಬರಾ ದಿವ್ಯ ಶರವಾ
ಬಿಡದೆ ಬಿಡಲೊಂದೊಂದ ನುಂಗಿ ನುಂಗಿದವು ಬಳಿ
ಕೆಡೆವಿಡದೆ ಝೋಂಕೃತಂ ಭೀಂಕೃತಂ ಭೂಂತ್ಕೃತಂ
ಹೊಡಕರಿಸಿ ಕಾದಿದರು ಹರಿಯಜರು ಖಂಡಿತ ನಿಜೋನ್ಮತ್ತ್ಯಕಲ್ಪ ಕುಜರೂ ೯

ಮಾಣದಿರ್ವರು ದಿವ್ಯ ವರುಷಪರಿಯಂತವ
ಕ್ಷೀಣಯುದ್ಧಂ ಮಾಡಿ ಕಡೆಯಲ್ಲಿ ಬೊಬ್ಬಿರಿವು
ತೂಣಯುಗಂಡೆಯಾ ನೀನೆನುತ್ತೋರೋರ್ವರಾಡಿ ಹರಿಯುಜರು ತಮ್ಮ
ತೂಣೀರದಿಂದುಗಿದು ಪಾಶುಪತವೆಂದೆನಿಪ
ಬಾಣಂಗಳಂ ಮುನ್ನ ಶಿವನಿತ್ತ ತನ್ಮಹಾ
ಪ್ರಾಣಮಂತ್ರಂಗಳಿಂದಭಿಮಂತ್ರಿಸುತ್ತ ಕುಕಿಲಿರಿದೆಚ್ಚರೊಬ್ಬೊಬ್ಬರು ೧೦

ಬಿಡದೆಚ್ಚಡಾ ಪಾಶುಪತ ಬಾಣವೆರಡಲ್ಲಿ
ಘುಡಿಘುಡಿಸಿ ಘೂರ್ಮಿಸುತ್ತೆಣ್ದೆಶೆಗಳೊಳಗೆಯ್ದಿ
ಕಿಡಿಗೆದಱುತೊಂದೊಂದು ತಾಗಿದವು ಸಾಮಾನ್ಯವೇ ಹರಂ ಕೊಟ್ಟನವರ್ಗೆ
ಪೊಡವಿಯೊಳಗೊಂದಕೊಂದೇಂ ಸೋಲ್ವವೇ ಲೋಕ
ದೊಡೆಯನೊರ್ವನೆ ಬಲ್ಲನವರ ಬಲ್ಮೆಯ ಜಗಂ
ನಡನಡುಗಲಾರ್ಭಡಿಸಿ ಕಾದತೊಡಗಿದವವರ ಶೌರ್ಯಮಂ ಪೇಳ್ವನಾವಂ ೧೧

ಪೊಡಕರಿಸಿದುಗ್ರಶರದುರಿಯ ಬಂಬಲ್ಗಳಿಂ
ಕಡಲೇಳರುಬಕ ಚೊಯ್ಯೆಂದಿಂಗುತಂ ಕೂಡೆ
ಹುಡಿಯಾದವಾಗಸದ ನಕ್ಷತ್ರ ಉದ್ರಿದವಾ ಕುಲನಗಂ ಸೀಳಿ ಸೆಕ್ಕೆ
ಸಿಡಿದವಾಗಸಕೆ ಧರೆ ಬೂದಿಯಾದುದು ಬಳಿ
ಕ್ಕಡಿಯ ಪಾತಾಳಗಜ ಫಣಿ ಕಮಠಗಳು ಬೆಂದು
ಬಿಡದೆ ಘೋಳಿಟ್ಟು ಮೂಗೂರಿ ಕೆಡೆಯಲು ಕಾದುತಿರ್ದವಾ ಯುಗ್ಮಬಾಣಂ ೧೨

ತಾನಿಟ್ಟ ಬೇತಾಳ ತನ್ನನೆ ನುಂಗಿತೆಂ
ಬೀ ನಾಡನುಡಿಯಂತೆ ಹರಿಯುಜರು ತಾವೆಚ್ಚ
ನೂನ ಬಾಣಂಗಳುಗ್ರಕ್ಕೆ ಹೆದರುತ್ತೆಮಗೆ ಬಂದುದು ಮಹಾಪ್ರಳಯವೂ
ಏನಿದೆತ್ತಣ ಯುದ್ಧವಾದುದೆಮ್ಮೀರ್ವರ್ಗೆ
ಹಾನಿಯಳಿವಾಯ್ತೆಂದು ಹೊಗಳತೊಡಗಿದರಲ್ಲಿ
ನಾನಾ ರಸಪ್ರಮಾಣಂದ ಶಂಕರನ ಶಶಿಧರನನಾ ಸರ್ವೇಶನಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ನಿರೋಷ್ಠ॥

ಚರಣತಳದರ್ಚಕರ ಸಲಹಿ ನೀನಖಿಳ ನಿ
ರ್ಜರತತಿಯ ಕಾಯ್ದ ಶಂಕರ ಚಂದ್ರಧರ ಕಾಲ
ಹರ ಶಾರ್ಙ ಕಂಕಾಳಧರ ಸಕಲ ಜಗದೀಶ ಸರಸಕಾರಣ ಗಾತ್ರನೇ
ಚಿರ ಸಕಲ ನಿಷ್ಕಲ ಚಿದಾನಂದ ಶಾಂತಸಂ
ಗರ ಜಯದ ನುತಶಾಸ್ತ್ರಚಯ ದಯಾಧಿಕ ನೀನೆ
ಶರಣಾಗೆನುತ್ತಾಗ ಕೀರ್ತಿಸಿದರೀಶನಂಘ್ರಿಗಳ ಹರಿಯಜರಾಕ್ಷಣಾ ೧೪

ಧಾತ್ರ ಹರಿಗಳು ಭಕ್ತಿಯಿಂ ಮಾಡುವತಿಶಯ
ಸ್ತೋತ್ರಕ್ಕೆ ಸಂತುಷ್ಟನಾಗಿ ಶಂಕರನಧಿಕ
ಚಿತ್ರವೆನೆ ಪಾಶುಪತ ಬಾಣವೆರಡರ ಮಧ್ಯದಲ್ಲಿ ಲಿಂಗಾಕಾರದೆ
ನೇತ್ರತ್ರಯಂ ಪ್ರಸನ್ನಾಕೃತಿಯ ತಳೆಯಲಾ
ಶತ್ರುಮಯ ಬಾಣಂಗಳೆರಡು ಶಿವಪಾದಶತ
ಪತ್ರದೊಳಗಡಗಿದವು ತೊಳಗುತಿರ್ದನು ಕೋಟಿ ಮಿತ್ರತೇಜೋಗ್ರಮೂರ್ತಿ ೧೫

ಎಳೆಮಿಂಚಿದಲ್ಲ ತಾರಾವಳಿಯ ಬೆಳಗಲ್ಲ
ತಿಳಿಜೊನ್ನವಲ್ಲ ವಹ್ನಿಜ್ವಾಲೆಯಲ್ಲ ಉ
ಜ್ವಳ ತೇಜಸ್ಸಿದಲ್ಲವತಿಶಯ ಥೋದ್ಯವಾಶ್ಚರ್ಯವತ್ಯಧಿಕವೂ
ತಿಳಿವೆವೆನೆ ಲಿಂಗೋದ್ಭವಾಕಾರವೀಗಲೆ
ಮ್ಮಳವೆ ಜಯ ಜಯ ಎಂದು ಕೀರ್ತಿಸುತ್ತಿರ್ದರಾ
ನಳಿನಾಕ್ಷ ಪರಮೇಷ್ಠಿಗಳು ಈಶಪದನಳಿನಸಂತುಷ್ಟಿಗಳು ಮೋಹದಿಂ ೧೬

ತೊಳತೊಳಗುತಿಹ ಲಿಂಗದೊಳು ದಿವ್ಯ ಮೂರ್ತಿಯಂ
ನಳಿನಾಕ್ಷ ವಿಧಿಗಳೀಕ್ಷಿಸುವಲ್ಲಿ ಸಕಲ ಜಗ
ದಳಿವನಾ ಪ್ರತಿಸೃಷ್ಟಿಯಂ ಮಾಳ್ಪ ಕಾರಣದ ಪರಮಲೀಲಾಲೋಲನು
ವಿಳಸಿತವಿದೆಂಬಂತೆ ತೋಱಿದಂ ಸರ್ವೇಶ
ನುಳಿದವರು ಪೊಗಳಲಳವಲ್ಲ ಜಗದಂಬಿಕೆಯೊ
ಳಳವಟ್ಟಲಸದರ್ಧನಾರೀಶ ಗತದೋಷನತ್ಯಧಿಕ ಧರ್ಮಕೋಶಾ ೧೭

ಶ್ರೀಕರ ದೊಳರ್ಧನಾರೀಶತ್ವವಧಿಕಪುರು
ಷಾಕಾರವೇ ಬಲದೊಳೆಡದಲ್ಲಿ ಮಿಸುಪ ಮೈ
ನಾಕೇಶ್ವರಿಯ ಮಹಾಸ್ತ್ರೀರೂಪವೆರಡೊಂದಿ ಮೆಱೆದನಿನ್ನೆಂತೆಂದೊಡೆ
ಆ ಕಲಾಮಾತ್ರಚಂದ್ರಂ ಮಲ್ಲಿಗೆಯ ದಂಡೆ
ನಾಕವಾಹಿನಿಯಲ್ಲಿ ಮೌಕ್ತಿಕದ ಸೂಸಕಂ
ಪ್ರಾಕಟದಿ ಕೆಂಜೆಡೆಯ ಸುಳಿಗುರುಳ ಪೆರ್ಮುಡಿಯ ಚೆಲ್ವುರಾರಾಜಿಸಿದುದೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಣೆಗಣ್ಣು ಕತ್ತರಿಯ ಬೊಟ್ಟು ಶಶಿ ರವಿ ನಯನ
ವಣೆಯುರದ ಚೆಲ್ಲೆಗಂಗಳು ಗೇಯುರಸವಾಂತ
ಫಣಿಕುಂಡಲದ ರತ್ನಕಿರಣದ ಪೊನ್ನೋಲೆ ಸುಲಿಪಲ್ಲು ಕೆಂಬಲ್ಗಳೊ
ಆಣೆಯುರದ ಕಜಿಕೆಗೊರಲು ರನ್ನದಾರಿಯ ಬಿಣ್ಪು
ಪೆಣನಾಂತ ಶೂಲಾದಿಗಳು ಬಳಿಕ ಲೀಲಾಬ್ಜ
ಗಣನಾರಿ ಶಯನವ್ಯಗುಣಗಣನೆಯುಳವಟ್ಟ ಮೂರ್ತಿ ರಾಜಿಸುತಿರ್ದುದೊ ೧೯

ಮುಸಣಬೂದಿಯು ದೇಹವಗರು ಕುಂಕುಮು ಗಂಧ
ಮಿಸುಪ ಕಸ್ತೂರಿಕಾ ಲೇಪನಂ ಪುಲಿದೊವಲ
ವಸನವಾ ದಿವ್ಯಾಂಬರಂ ಹರಿಯ ನೇತ್ರಾಕ್ಷಿ ಕಿರಣಮಯುನಖರಚರಣಾ
ಎಸವರ್ಧನಾರೀಶ್ವರತ್ವದಿಂದಿಂತು ರಾ
ಜಿಸುತಲಾ ಸ್ತೋತ್ರಮಂ ಮಾಳ್ಪ ಹರಿಯಜರ ಪಾ
ಲಿಸಿ ಸಕಲ ಲೋಕಕ್ಕೆ ಸುಖವನೊಲಿದಿತ್ತ ಸರ್ವೇಶನಮಲ ಪ್ರಕಾಶಾ ೨೦

ಎಂದು ಹಲಗೆಯ ದೇಶಿಕಂ ಕೂರ್ತು ಪೇಳಲಾ
ನಂದದಿಂ ಕೆಂಚವೀರಾಹ್ವಯಂ ಕೈಮುಗಿದು
ಹಿಂದರ್ಧನಾರೀಚತುರ್ದಶಂ ಕಲ್ಪಕಲ್ಪದೊಳೆಂದಿರೆನಗಳ್ತಿಯಿಂ
ಮುಂದೆ ಪಂಚಾದಶ ಕಿರಾತವೆಂಬುದನಕ್ಕ
ಱಿಂದೊರೆಯಬೇಕೆಂದು ಕೈಮುಗಿದು ಕೇಳಲಾ
ಮಂದಹಾಸದೊಳೊರೆಯುತೊಡಗಿದಂ ಗುರುಮೂರ್ತಿಯಖಿಳ ದಿಗ್ಭರಿತಕೀರ್ತಿ ೨೧

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜ ಭೃಂಗ ಮಲ್ಲ್ಯಣಾರ್ಯ್ಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯನಾಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೨೨

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಮಿಸುಗುವರ್ಧನಾರೀಶತ್ವಕೆರಡುಕಾಂಡವು ಸಂಧಿಗಳ್ ದ್ವಾದಶಂ ೨೩

ಅಂತು ಸಂಧಿ ೧೨ ಕ್ಕಂ ಪದನು ೬೧೦ ಕ್ಕಂ ಗ್ರಂಥ ೪೭ ಕ್ಕಂ ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೫

ಕಿರಾತರುದ್ರಲೀಲೆಯು ಕಥೆ
(ಪಂಚದಶ ಕಿರಾತಂಸ್ಯಾತ್ ಎಂಬರ್ಥಕ್ಕೆ ಕಥೆ)

ಶ್ರೀ ರುದ್ರದಲ್ಲಿ ವಿಮಲಧ್ಯಾಸರೂಪಪ್ಪ
ಕಾರಣ ಕಿರಾತರುದ್ರಾಂಗಗಿಂ ಶಂಕರಂ
ರಾರಾಜಿಸಿದ ಕಥೆಯು ಬಿತ್ತರಿಪೆನಾದಿಯ ಪುರಾಣತತಿ ಪೇಳ್ದಂದದಿಂ

ನವಿಲಂತೆ ರಾಜಿಸುವ ಕೇಶಗಿಂದೊಳ್ಳೆರಲೆ
ಯವೊಲಿಪ್ಪ ನಯನಂಗಳಿಂದ ಮದದಾನೆದಲೆ
ಗಿವು ಸರಿ ಎನಿಪ್ಪ ಕುಚದಿಂದ ಸಿಂಗಂಬೊಲು ವಿರಾಜಿಸುವ ಚೆಲ್ವನಡುವಿಂ
ಅವಯುವದ ಕಾಂತಾರ ಮೃಗಸಮೂಹದೊಳೆಸೆವ
ಶಿವೆಯು ಬೇಟವೆ ಬೇಂಟೆಯಾಗಿ ಕಣ್ಗೋಲ್ಗದಿರ
ನವಿರತಂ ಸೈಗರೆವ ಶಾಂತಮಲ್ಲೇಶ ಜಯು ಶಬರಹರಗಣನಿವೇಶಾ ೧

ಅರಿವರ್ಗವೆಂಬ ಖಡ್ಗಿಯುನಿರಿದು ಯಮನೆಂಬ
ಕರಡಿಯುಂ ಬಡಿದಿಂದ್ರಿಯುಂಗಳೆಂಬೆರಲೆಯುಂ
ಪರಿಭವಿಸಿ ದುಷ್ಟಮದವೆಂಬ ಮದದಾನೆಗಳ ಪೆರ್ದಲೆಯು ಸೀಳ್ದಿಡುತ್ತಾ
ಪರಮಾಘಮೃಗಯಾ ಕಿರಾತರುದ್ರನ ಪೋಲ್ವ
ಗುರುಸಿದ್ಧರಾಮೇಶ ಕರಕಮಲಜಾತ ಬಂ
ಧುರದ ಮೇಲಣ ಗವಿಯು ಶಾಂತನಂಜೇಶ್ವರಾ ಜಯುಜಯುತು ದಿವ್ಯಕಾಯಾ ೨

ಶ್ರೀ ಪದ್ಮ ಪೌರಾಣದುಪರಿಭಾಗದೊಳು ದ
ಕ್ಷಾಪರಾಧಿಯ ಯಜ್ಞದೊಳು ವಿಷ್ಣು ಕೀರ್ತಿಸಿದ
ನಾ ಪಶುಪನಂ ಫಲ್ಗುನ ಸ್ತುತಿಸು ಸಂತುಷ್ಟ ಎಂಬರ್ಥದೊಂದು ಕಥೆಯಾ
ತಾ ಪರಮ ಸತ್ಪ್ರೇಮದಿಂ ಕೇಳಲೊಲಿದುರೆ ನಿ
ರೂಪಿಸುವೆವೆಂದು ತೊಡಗಿದನೆಲೆಲೆ ಮಲ್ಲಶ್ಯಣಾ
ಯ್ಯಾರ್ಯ ಪದನ ಮಾಡೆಂದನಾ ಹಲಗೆಯಾಚಾರ್ಯನವುಲ ಚಿತ್ಕಂಜಸೂರ್ಯಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದ್ರಕೀಲಾದಿಯ ವನಪ್ರಾಂತದೆಡೆಯೊಳಾ
ಚಂದ್ರಧರನಂಘ್ರಿಗಳನರ್ಜುನಂ ಭಜಿಸಲು ಮು
ನೀಂದ್ರರಾ ರಾಜಋಷಿಯುಗ್ರದ ತಪೋನಿಷ್ಠೆಗಳುಕಿ ಶಿವನೆಡೆಗೆ ಬಂದು
ಸಾಂದ್ರವಹ ಭಕ್ತಿಯಿಂ ನಮಿಸಿ ಬಿನ್ನೈಸಲ್ಕೆ
ರುಂದ್ರಕಾರುಣ್ಯದಿಂದಱಿದವನ ಸಲಹೆ ಶಬ
ರೇಂದ್ರರೂಪಂ ಧರಿಸಿದಂ ಸಕಲ ಗಣನಿಕರಸಹಿತಲೇವಣ್ಣಿಸುವೆನು ೪

ಶ್ರೀ ಪರಮ ಶಬರವೇಷಂದಳೆದು ರಾಜಿಸುವು
ನೂಪಸ್ವರೂಪವೆಂತೆಂದೊಡಾ ಶ್ರೀರುದ್ರ
ದಾ ಪರಮ ಭಾಷ್ಯಮೂರ್ತಿಧ್ಯಾನಮುತ್ತಮ ಶ್ಲೋಕಾರ್ಥದಿಂ ಪೇಳ್ವೆನೂ
ರೂಪು ಯೌವನದಲ್ಲಿ ಸಂಪನ್ನ ಚಿನ್ಮೂರ್ತಿ
ಸೋಪಾಧಿರಹಿತ ಪ್ರಭಾಮಂಡಲಸ್ಥನಂ
ತೋಪಶೋಕೆಯ ಮಿಸುಪ ಸುರಹೊನ್ನೆಗಳ ಪುಷ್ಪವೆಸಟವಾ ಮಸ್ತಕದೊಳು ೫

ಇಪ್ಪತ್ತಏಳು ನಕ್ಷತ್ರಂಗಳಾ ದೇವ
ಗೊಪ್ಪಿದವು ನವಿಲ ತತ್ತಿಗಳಾಗಿ ಶಿರಸಿಂಗೆ
ಕಪ್ಪಳಿದ ನಿರ್ಮಳದ ಪೂರ್ಣ್ಣಚಂದ್ರಂಗೆ ಸಮವಾದ ಮುಖದಿಂದೋರೆಯಿಂ
ದಿಪ್ಪ ಮುಕುಟಂ ವ್ಯಾಘ್ರ ಹರಿ ಚರ್ಮವಸ್ತ್ರಂಗ
ಳಪ್ಪ ಸಿಂಗಾರಂಗಳಿಂ ವಿರಾಜಿಸಿದನಾ
ಮುಪ್ಪುರವ ಸುಟ್ಟ ಧೃತಶೂಲಿಯಂಕಿತ ಕಾಲಿಹೃತಬಾಲಿನಮಿತಲೀಲಿ ೬

ಎಡದ ಪೆಗಲಲ್ಲಿ ಬಳಿಕೆಳಲಿಟ್ಟೊಡಾ ಬಲದ
ಕಡೆಯಲ್ಲಿ ಬಲದ ಹೆಗಲಲ್ಲಿಕ್ಕಲಾಗಿ ಎಡ
ದೊಡಲಲ್ಲಿ ಸವ್ಯಾಪಸವ್ಯದಿಂದೆಸವ ಕಕ್ಕೆಯು ಪುಷ್ಪಮಾಲಾಳಿಯಿಂ
ಕಡವದುತ್ತುಮ ಕುಸುಮಮಾಲೆ ಪೊಕ್ಕುಳನಲೆಯ
ಲಡಿಮುಡಿಗಳವಧಿಯಾದಂಗಮಂ ನೆಱೆ ನೋಡಿ
ದೊಡೆ ಮಿತ್ರಶತ್ರುಗಳಿಗಧಿಕ ಶೋಭನಮೀವ ಮೂರ್ತಿ ಎನೆ ರಾಜಿಸಿದನೂ ೭

ಗೌರಿ ಶಾಬರಿಯಾಗಿ ವನದ ಕುಸುಮಗಳಲಂ
ಕಾರದಿಂ ಶಿವನೆಡೆಯೊಳೊಪ್ಪಿದಳು ಶಿವೆಯಂಗ
ವೇ ರಾಮಣೀಯ್ಯ ನೀಲದ ಕನ್ನಡಿಯ ಮಾಳ್ಕೆಯಿಂದೆ ಥಳಥಳಿಸುತಿರಲು
ಆರಣ್ಯದಖಿಳ ವಸ್ತುಗಳಲ್ಲಿ ತೋರ್ಪಂತೆ
ರಾರಾಜಿಸಿದಳಾ ಮಹಾದೇವಿ ತತ್ಕರದೊ
ಳೋರಂತೆ ಬೀಗಿದ ಬಿಲ್ಲಂಬುಗಳ ಪಿಡಿದು ದೇವನ ಕಣ್ಗೆ ಶೋಭಿಸಲ್ಕೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಳಿಯುರು ದಕ್ಷಿಣದ ಹೆಗಲೊಳೀಶ್ವರ ನಡೆದ
ತೊಳರಿನಿಸುತ್ತಲಾನಂದಿಸಿ ಸುಗಂಧಪು
ಷ್ಪಾಳಿಯಂ ಕರದಲ್ಲಿ ಪಿಡಿದು ವಾಸಿಸುತೆಳೆಯ ತಳಿರ್ದೊಂಗಲಂ ಪಿಡಿವುತಾ
ಮೇಳದಿಂ ಮೆಲ್ಲ ಮೆಲ್ಲನೆ ಬೀಸಿಕೊಳುತವಾ
ಭೀಳದುಗ್ರದ ಗಣಂಗಳು ಶಬರವೇಷವಂ
ತಾಳಿ ಬಿಡದೋಲೈಸಿ ಬರಲು ಪೊಱಮಟ್ಟನಾ ಬೇಂಟೆಯುಜ್ಜುಗದೊಳೀಶಂ ೯

ಬಳಿಕ ಪಣ್ಮುಖ ಗಣಪತೀಶ್ವರಕುಮಾರರಂ
ದೆಳೆವೇಡರಾಗಿ ಸಿಂಗರಿಸಿ ಪೊಱಮಟ್ಟರ
ಗ್ಗಳ ನಂದಿ ವೀರಭದ್ರಾದಿಗಳ ತತಿ ಶಂಬರತ್ವದಿಂ ಧನುಗಳಾಂತು
ಬಳಸಿ ಬರೆ ಹರಿಯಜಾದ್ಯಖಿಳ ದೇವರ್ಕಳಾ
ಗಳೆ ನಿಕೃಷ್ಟಾತ್ಮ ಶಾಬರರಾಗಲಾ ಶಕ್ತಿ
ಗಳು ಸಿರಿ ಸರಸ್ವತಿಯುರೆಯ್ದೆ ಬೇಡಿತಿಯರಾಗುತ ಶಿವೆಯನೋಲೈಸಲೂ ೧೦

ವ್ಯಕ್ತವೆನಿಸುವ ಶಬರವೇಷವಂ ತಳೆದಾದಿ
ಮುಕ್ತನೆಡಬಲದೊಳೊಪ್ಪಿದವು ಚರಣಭ್ಯೂಹ
ಸೂಕ್ತಿಯೊಳು ವೇದಂಗಳೇ ಪುರುಷರೂಪಾದವವರ ಮೂರ್ತಿಸ್ವರೂಪಂ
ರಕ್ತಿಯಿಂ ಬಿತ್ತರಿಪೆ ನಾ ಮೊದಲು ಋಗ್ವೇದ
ಯುಕ್ತಿಸಲು ಶುಭ್ರಾಂಗ ವತ್ರಿಮುನಿಗೋತ್ರ ಗಾ
ಯತ್ರಿಛಂದಬ್ರಹ್ಮನಧಿಪನದು ಬಿಳಿಯ ನಾಯಾಗಿ ರಾಜಿಸುತಿರ್ದುದು ೧೧

ಆ ಯಜುರ್ವೇದ ಸ್ವರೂಪವಂತಂಬುಜದ
ಳಾಯತಾಂಬಕ ಉಳ್ಳಿಗಡ್ಡ ಮುಂಗುಱುಮೀಸೆ
ಯ್ಯೆಯಂಗವೇ ತಾಂಬ್ರವರ್ನ ಭಾರದ್ವಾಜಗೋತ್ರ ತ್ರಿಷ್ಟುಪ್ಛಂದವೂ
ಶ್ರೀಯಾಣ್ಮನಧಿದೈವವಾಗಿರ್ದುದದು ಕೆಂಚ
ನಾಯಾಗಿ ರಾಜಿಸಿದುದಾ ಸಾಮವೇದದ ವಿ
ಡಾಯವೆಂತೆನಲಾಗಿ ಬಿತ್ತರಿಪೆ ಸೂಕ್ತಿಪ್ರಮಾಣದಿಂದೆಂತೆಂದೊಡೆ ೧೨

ಶ್ವೇತ ಕೃಷ್ಣಾಂಗವಾ ಕಾಶ್ಯಪನ ಗೋತ್ರ ವಿ
ಖ್ಯಾತ ಜಗತಿಛಂದವಧಿದೈವವೀಶ್ವರಂ
ಪೂತ ಧವಲಶೃಂಗವೆರಡದೇ ಮೈಲನಾಯಾಯಿತಥರ್ವಣವೇದವು
ಸಾತಿಶಯ ನೀಲಾಂಗವೈಖಾನಗೋತ್ರವಧಿ
ಕಾತತದನುಷ್ಟುಪ್ಛಂದ ಐಂದ್ರಾಧಿಪನ
ದೇತಳ್ತುಕಾಳನಾಯಾಯ್ತು ವೇದಂ ಶುನಕನಾಗಿ ಶಿವನೊಳ್ಪಿಂದವೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕನಂತಾನ್ಯೆ ಮಹಾವೇದವೆಂಬ ನಿ
ರ್ಮಳ ವಾಕ್ಯದಿಂದಲಾ ಶ್ರುತಿಗಳೆಲ್ಲಾ ನಾಯಿ
ಗಳ ರೂಪನಾಂತು ಶಿವನಡಿಯಿಟ್ಟ ಠಾವನುಟಿಕೆ ಮೂಸಿನೋಡುತ ನೋಡುತಾ
ಎಳಸಿ ಬಂದವು ಕಣಾ ಈ ಶಬರರುದ್ರನು
ಜ್ವಳದಿಂದ್ರಕೀಲವನದಲ್ಲಿ ಪೊಗುವಾಗಲ
ಗ್ಗಳವೆಯ್ದೆ ಘೂರ್ಮಿಸುತಿಹಾ ಬೊಬ್ಬೆಯಲ್ಲ ಶಬ್ದಬ್ರಹ್ಮಯವಾದುದೂ ೧೪

ಆಗವು ಪುರಾಣ ತರ್ಕಂ ಶಾಸ್ತ್ರಮುಟ್ಕಸೊ
ಪ್ಪಾಗೆ ಜಪ ಯಜ್ಞಾದಿಗಳೆ ಬಲೆಗಳಾ ವ್ರತದ
ಯೋಗ ಸರಳುಗಳನಾ ಶ್ರವಣ ಮನನದ ಬೀಸುವಲೆಯು ಶಾಂಭವಮುದ್ರೆಯಾ
ರಾಗಮಯವರಂ ಕವಣೆಗಳ ಪಾಶಪಶುಬಂಧ
ವಾಗಿಪ್ಪ ಬೋಳೆಯಂಬುಗಳ ನವ ಭಕ್ತಿ ದೀ
ಹಾಗತ ವ್ಯಾಘ್ರಗಳ ಗಣ ಶಬರರೆಯ್ದಿದರು ಭವಮೃಗಂಗಳ ಬೇಂಟೆಗೆ ೧೫

||ಸಾಕ್ಷಿ|| ಶ್ಲೋಕ ರೂಪಯೌವನ ಸಂಪನ್ನೋ ಮೂರ್ತಿಮಂಡನದೇವತಾ
ಪುಷ್ಪಿತಾಶೋಕ ಪುನ್ನಾಗ ಸಹಕಾರ ಶಿರೋಪಮಃ ೧

ಸಪ್ತವಿಂಶತಿ ನಕ್ಷತ್ರ ಮಯೂರಕೃತ ಶೇಖರಃ
ಅಕಲಂಕ ಶರತ್ಪೂರ್ಣ ಚಂದ್ರಬಿಂಬನಿಭಾನನಃ ೨

ಪ್ರಾಂತಬದ್ಧಕಪರ್ದಾಂಕೋ ವಶಾನಶ್ಚರ್ಮಕೋಮಲಂ
ಸವ್ಯಾಪಸವ್ಯ ವಿಧೃತಕೃತ ಮಾಲಾವಿಭೂಷಿತಃ ೩

ಧಾರಾಕದಂಬ ಪುಂಜೇನ ನಾಭಿದೇಶಪ್ರಲಂಬಿನಾ
ಆಜಂಘಂಪ್ರೇಕ್ಷಣೀಯೇನ ಪ್ರೇಕ್ಷಣೀಯೋಪಿ ಶತ್ರುಣಾ ೪

ಭಾರ್ಯಾಯಾ ಚಾರು ಸರ್ವಾಂಗಿ ವನ್ಯಾಲಂಕಾರ ಭೂಷಿತಾಃ
ಆದರ್ಶಮೂರ್ತಿಃ ಶೋಭಾನಾಂ ವನ್ಯಾನಾಮಿವ ನಿರ್ಮಲಂ ೫

ತಸ್ಯ ಹಸ್ತೇ ಧನುರ್ಧೃತ್ವಾ ಶರಮೇಕಂ ಚ ನಿರ್ಮಲಂ
ದ್ವಿತೀಯಂಚ ಸಮಾಲಂಬ್ಯ ಶಿಷ್ಟಂ ವಾಮೇನ ಬಾಹುನಾ ೬

ಸುಗಂಧಪುಷ್ಪಸ್ತಬಕ ಮಾಘ್ರಾಯಾಘ್ರಾಯ ಪಾಣಿನಾ
ವೀಜಮಾನೋ ಮಂದಮಂದಂ ನವ ಪಲ್ಲವ ಶಾಖಯಾ ೭

ಗಚ್ಛದ್ಭಿರಗ್ರತೋ ದೂತೈಃ ಸ್ವವೇಷೈರ್ಗಣಪುಂಗವೈಃ
ಸಮಾಹೃತೋ ಬಾಲಕೈಶ್ಚ ಸ್ವಭಿಷ್ಟೋಪಿ ಮನೋಹರೈಃ ೮

ಆಗಚ್ಛದರ್ಭಕೋಧ್ಯೇಯಃ ಕಿರಾತವಪುರೀಶ್ವರಃ
ಆಘ್ರಾಯಾ ಘ್ರಾಯವಿಂದಂತಿ ವೇದಶ್ವಾನೇನ ಶನೈಃ ಶನೈಃ ೯

ಯತ್ಪಥಾನಿ ಮಹಾಟವ್ಯಾಂತಂ ವಂದೇ ಶಬರೇಶ್ವರಂ ೧೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಳಾಕ್ಷನಂದದೆ ಶಿವಾಯುಕ್ತದಿಂ ಸ್ವರ್ಣ
ಶೈಲವಂತಾ ಕನಕಮಯದಿಂದಲಂತಾ ಸು
ರಾಲಯದ ತೆಱದಿಂದಲಮೃತಾತಿಶಯದಿಂದೆ ನಂದಭೂಪಾಸ್ಥಾನ ದಾ
ವೋಲು ಬಾಣಪ್ರವರದಿಂ ಸ್ವಯಂವರದ ಭೂ
ಪಾಲಕರ ಪುರದಂತೆ ರಾಜಮಯವೆನಿಪಿಂದ್ರ
ಕೀಲ ಪರ್ವತದುಪಾಂತಾಟಪಿ ವಿರಾಜಿಸಿದುದತಿಶಯದ ಸೊಬಗಿನಿಂದಾ ೧೬

ನಾನಾ ತೆಱದ ವೃಕ್ಷಪಂಙ್ತಿಯಿಂದಂ ಲತಾ
ಸ್ಥಾನಂಗಳಿಂ ಗುಲ್ಮಸಂದೋಹದಿಂ ಮೃಗವಿ
ತಾನದಿಂ ಪಕ್ಷಿಸಂಕುಳದಿಂದನಂತ ಗಿರಿಗಳಿನಖಿಳ ಸರ್ಪಂಗಳಿಂ
ಧ್ಯಾನಸಂಯುಕ್ತ ತಪಸಿಗಳಿಂದ ತತ್ಸೇವೆ
ಯೇ ನಿರತವಾಗಿಯುಳ್ತಿಯನವಗೋದಯಿಸುವ
ವಾನರಂಗಳಿನೊಪ್ಪಿತಾ ವನಂ ಸಂಯುಕ್ತಜೀವನಂ ಶಿವಪಾವನಂ ೧೭

ಇಡು ಜೇನಿನೊಳ್ಕಿಚ್ಚನಾ ಮರೆಯು ಬರುತಲಿ
ಪ್ಪೆಡೆಯ ಸರುವಂ ಕಟ್ಟು ಉಗುರು ತುಪ್ಪುಳ ಗಳಿ
ಟ್ಟಡಿಗುರುಹನಾರೈವುದಖಿಳ ಶುನಕಂಗಳಂ ಬಿಟ್ಟು ಸೂಚಿಸೆ ಬಲೆಗಳಾ
ಬಿಡದೆ ಕಾಯ್ದಿರಿ ಪಕ್ಕಿಗಳನೆಬ್ಬಿಸುತ್ತಲು
ಗ್ಗಡದ ಸಾಳುವಗಳಂ ಬಿಟ್ಟು ಭಂಡಿಯ ಹುಲಿಯ
ನಡಯಿಸುವುದೆಂದು ಬೊಬ್ಬಿಱಿವ ಗಣಶಬರ ಘೋಷಣವಡವಿಯಂ
ತುಂಬಿತೂ ೧೮

ಅರುಣೋಪಲಾಗ್ರದೊಳು ಹರಿಗಣನಿರಲಾ ಹುಲ್ಲೆ
ಪರಿಕಿಸುತ ಬೇಡರಿಕ್ಕಿದ ಕಿಚ್ಚಿನೊಳ್ತನ್ನ
ಪುರುಷನೀಕ್ಷಣದಲ್ಲಿ ಸಿಲ್ಕಿದನೆನುತ್ತ ಹಮ್ಮೈಸಿ ಬೀಳಲ್ಪಾಣುತೆ
ಸರಳುಕೊಂಡಳಿದಳೆನ್ನ ಬಳೆಯಾನಂತನಳ
ಚರಣದೆಡೆಯೊಳು ಬಿದ್ದು ಸಾವೆನೆಂದೆಯ್ತರಲು
ಹರಿಣೆ ಕಂಡಾನಂದದಿಂದೆದ್ದುದೆನೆ ಮೋಹದಿರದವನಾವಂ ಬಣ್ಣಿಪಂ ೧೯

ಎಲ್ಲಾ ತೆಱದ ಬೇಂಟೆಗಳನಾಡುತೀಶ್ವರಂ
ಮೆಲ್ಲ ಮೆಲ್ಲನೆ ತಪಸ್ವಿಗಳ ತಾಣಕ್ಕೆ ಬರ
ಲಲ್ಲಿ ಪದ ಒಂದಸಿಳೆಗೂಱಿ ಒಂದಂ ನೆಗಪಿ ವಾಯುಧಾರಣೆಗಳಿಂದಾ
ಬಿಲ್ಲಂಬು ಕಟ್ಟಿದಲಗಿಂ ವ್ರತಾಗ್ರದೊಳು ಹೃ
ತ್ಫುಲ್ಲಕಮಲದೊಳೀಶ್ವರಧ್ಯಾನಿಪಾರ್ಥನಿ
ರ್ಪಲ್ಲಿಗಾರ್ಭಡಿಪ ಬೇಡರ ಬೊಬ್ಬಿಸಹಿತಲೆಯ್ತಂದನಾ ಶಬರಮೂರ್ತಿ ೨೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಕದಾನವನೆಂಬವಂ ಹಂದಿಯಾಗಿ ಬಂ
ದಾ ಕಾಲದೊಳು ಶಿವನನುಜ್ಞೆಯೊಳು ಸುಳಿಯಲ್ಕ
ನೇಕ ಶಬರಾಳಿಯಾರ್ಭಡಿಸುತ್ತಲದದೆ ಕುನ್ನಿಗಳ ಬಿಡಿ ಬಿಡಿ ಎನುತ್ತಾ
ನೂಕಿತ್ತು ನಾಲ್ದೆಶೆಗೆ ಬೊಬ್ಬೆಯುಬ್ಬರದಿಂ ಪಿ
ನಾಕಿ ಕಂಡಾ ಕರ್ಣಪೂರ್ಣದಂಬಂ ಪೂಡಿ
ಜೋಕೆಯಿಂದೆಸವ ಶರಸಂಧಾನದಿಂದ ತೆಗದೆಸಲು ತೊಟ್ಟನೆ ತಾಗಿತು ೨೧

ಕೂಡೆ ತಾಗಿದ ಬಾಣಸಹ ವಾಯುವೇಗದಿಂ
ದೋಡುತಿರ್ದುದು ಮುಂದೆ ಸರ್ವಗೆ ಸಿಕ್ಕದಾ
ಕ್ರೋಡನಂ ಕಾಣುತ ತಪೋಧ್ಯಾನವಂ ಬಿಟ್ಟು ಪಾರ್ಥನಾ ಬಿಲ್ಲಂಬನು
ಹೂಡಿ ಕೆಡೆಯೆಂದೆಚ್ಚದಾ ಹಂದಿಯುರದಲ್ಲಿ
ಮೂಡಿ ಘೋಳಿಟ್ಟು ಬಿದ್ದುದು ಭಲರೆಯಾಕ್ಷತ್ರಿ
ಯಾಡಂಬರವ ಬಣ್ಣಸುವರಳವೆ ತಪದೊಳೆಂದುದು ಸಕಲ ಗಣಶಬರರೂ ೨೨

ಕಾಣುತೀಶ್ವರನೆಂದನೀ ಪಂದಿ ನಾವೆಚ್ಚ
ಬಾಣದಿಂದಂ ಬಿದ್ದುದಿರತವೆಮ್ಮದು ನಾವ
ದೂಣೆಯುದ ಭಟರೆ ತೆಗಯಿರೇ ವರಾಹನನೆನಲು ನುಡಿದನಂತಾ ಪಾರ್ಥನೂ
ಮಾಣದೆನ್ನಂಬಿಂದಲಳಿದುದೆನಲಂತಾಗ
ತೂಣನಂ ಕೊಂದಾತ ನೆಮ್ಮದೆನಲಾಗಲ
ಕ್ಷೀಣಬಲರಿರ್ವರ್ಗೆ ಯುದ್ಧವಾದುದು ಗೆಲವಿಗೇನೆಂಬೆನದ್ಭುತವನು ೨೩

ಘುಡಿ ಘುಡಿಸುತಿರ್ವರುಂ ಕಾಳೆಗಕೆ ಬಿಲ್ಲ ಜೇ
ವಡೆದರಾಲಿದರು ತೊಟ್ಟೆಚ್ಚರಂಬಂ ಬಿಂದ
ಕಡಿದರಾ ದಿವ್ಯಾಸ್ತ್ರದಿಂದೆಸಲ್ಕೀಶ್ವರಂ ನುಂಗಿದಂ ಬಳಿಕರ್ಜುನಂ
ಹೊಡದನಾ ಬಿಲ್ಲಿಂದಲೀ ದೇವನಾ ಧನುವ
ಪಿಡಿದಲ್ಲಿ ಸೆಳೆದುಕೊಳಲ್ಕಂದಡಾಯುಧದಿಂದೆ
ಮೃಡನ ಹೊಯ್ದಾಲಿಲಂತದ ನೀಳ್ದುಕೊಂಡನೀಶಂ ಫಲ್ಗುನಂ ಬಳಿಕ್ಕಾ ೨೪

ಭುಜ ಯುದ್ಧಕೆಂದು ಸನ್ನದ್ಧನಾಗಲು ಪಾರ್ಥ
ನಜರಾಮರಂ ಕೂಡೆ ಬೊಬ್ಬಿರಿದು ಪಿಡಿಯೆ ಗಜ
ಭಜಿಸಲಂತಖಿಳರಾವೇಳ ಹೋರಿದರು ನಾನಾ ಪ್ರಕಾರಂಗಳಿಂದೆ
ನಿಜ ಸತ್ವದಿಂದರ್ಜುನಂ ಕಾದಲೀಶ್ವರಂ
ಮರುಘುರೇ ಎನ್ನುತ್ತ ಕೈಯ್ಯೆತ್ತಿ ಮೆಲ್ಲನೆ ತಿವಿಯೆ
ಗಜವಂಟಿದಾ ಬಾಳೆಯಂತಾದನರ್ಜುನಂ ಶಂಕರಂ ಮರುಗುತಿರ್ದಂ ೨೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಿಂತಿಸಿದನಾಗ ನಾನಾಪ್ರಕಾರಂಗಳಿಂ
ದಂತಲ್ಲಿ ಮಳಲಲಿಂಗವ ಮಾಡಿಯರ್ಚಿಸು
ತ್ತಂ ತಾನೆ ಕೂಡೆ ಬೊಬ್ಬಿಱಿದೆದ್ದು ಫಲ್ಗುನಂ ಶಂಭುವಂ ಕಾಳೆಗಕ್ಕೆ
ಪಿಂತಣಂತಲ್ಲ ಬಾ ಎಂದು ಕರವುತ್ತಿರ
ಲ್ಕಂತಲ್ಲಿ ಲಿಂಗಮಂ ಪೂಜಿಸಿದ ಪುಷ್ಪವೋ
ರಂತೆ ಶಬರನ ಮಸ್ತಕದೊಳಿರಲು ಶಿವನೆಂದು ಭೋಂಕನಱಿದಂ ಪಾರ್ಥನೂ ೨೬

ಹರಿನಯನ ಪೂಜಿತಪದಾಬ್ಜನೊಳಗಕಟ ಸಂ
ಗರವನೆಸಗಿದೆನಲಾ ಪಾಪಿಯಾನೆಂದು ಸಂ
ಸ್ಮರಿಸಿ ನಾನಾ ಪ್ರಕಾರಗಳಿಂದರ್ಜುನಂ ಮರುಗುತಿರಲಾ ಶಂಕರಂ
ಚರಣಕ್ಕೆ ಬಿದ್ದವನ ಶಿರವ ಪಿಡಿದೆತ್ತಿ ಸ
ತ್ಕರಿಸಿ ಪೂರ್ವದೊಳು ನರನಾರಾಯಣರ್ಗಳೀ
ರ್ವರು ನೀವು ಭಕ್ತರೆಮಗೀ ಜನ್ಮದೊಳಗಾದಿರ್ಪೆ ಪಾರ್ಥ ಕೃಷ್ಣರ್ಗಳೂ ೨೭

ಕೃತಪುಣ್ಯರವರೊಳಗೆ ನರ ನೀನು ನಿನ್ನಿಷ್ಟ
ದತಿಶಯವ ಪೇಳೆನಲು ದೇವ ಕರುಣಿಸು ಪಾಶು
ಪತ ಶರವನೆನಲಾಗಳಿತ್ತನೀಶ್ವರನಿದರ ಬಳುವಳಿಯಲಾ ಪಾರ್ವತೀ
ಶತಯಜ್ಞನಜಹರಿಗಳಾದಿಯಾಗಿರ್ದ ದೇ
ವತೆಗಳಿತ್ತರು ಬಳಿಕೊಂದೊಂದು ಬಾಣಮಂ
ಕ್ಷಿತಿಪರಂ ಜಯಿಸುವಲ್ಪಾರ್ಥಕ್ಕೆ ಪಡದೆಯ್ಯೆಸಲೆ ಕಲಂಬವನೆಂದನೂ ೨೮

ಈಗಳೀ ಶರದಿಂದ ಯುದ್ಧಮಂ ಗೆಲಿದು ಭೂ
ಭಾಗದೊಡೆತನವ ಪಡೆಯ್ಯೆ ಮುಂದೆ ಕಣ್ಣಪ್ಪ
ನಾಗು ನೀಂ ನಾರಾಯಣಾನ್ವಯದ ಕೃಷ್ಣನಾ ಕಾಳಹಸ್ತೀಶನಡಿಯಾ
ವಿಗಳುಂ ಪೂಜಿಸುವ ಶಿವಗೋಚರಾಖ್ಯೆವಿ
ಪ್ರಾಗಮಾಧಿಪನಪ್ಪನೈ ನಿಮ್ಮ ನಿಷ್ಠೆಗೊಲಿ
ದಾಗಳೀ ಪಾರ್ಥ ಸಿದ್ಧಿಯ ಪುರಾತನನ ಮಾಡುವೆನೆಂದನಾ ಶಂಕರಂ ೨೯

ಆಯುತದ ಮೊದಲ ಜನ್ಮದೊಳೆಸವ ನರನು ನಾ
ರಾಯಣರು ಬಳಿಕ ಪಾರ್ಥ ಕೃಷ್ಣರೆನಿಪರಿಂ
ತೀಯವನಿಯಾ ಜನ್ಮದೊಳು ಕೃತಾರ್ಥತೆಯಿಂದಮಿನ್ನು ಮುಂದಣ ಜನ್ಮಕೆ
ಸ್ವಾಯತ್ತ ಕಣ್ಣಪ್ಪ ತಾಪಸಿಗಳೆನಿಪಿರೆಂ
ದಾಯವಸರದೊಳರ್ಜುನನ ಬೀಳುಕೊಟ್ಟನಾ
ಮಾಯಾರಿ ಕಲ್ಪಕಲ್ಪದೊಳು ಪಂಚಾದಶ ಕಿರಾತತತ್ವಮೆಂದಾದುದು ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯ್ಯಂ
ಶೀಲಪಟ್ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವೀರಶೈವಾಮೃತ ಪುರಾಣಮಂ ಕೂರ್ತುಪದನಂ ಮಾಡಿದಂ ೩೧

ಇದು ವೀರಶೈವಪಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಸತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಲ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಪಾರ್ಥಶರಸುಪ್ರದಕ್ಕೆರಡು ಕಾಂಡದಿಂ ಮೇಲೆ ಹದಿಮೂಱು ಸಂಧಿ ೩೨

ಅಂತು ಸಂಧಿ ೧೩ ಕ್ಕಂ ಪದನು ೬೪೨ ಕ್ಕಂ ಗ್ರಂಥ ೫೭ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೬

ಕಂಕಾಳಧರಲೀಲೆ

ಬಲಿಯ ಭೂದಾನಮಂ ಬೇಡಿ ಬೆಳದಜ್ಞಾನಿ
ನಳಿನಾಕ್ಷನಂ ಕೆಡಪಿ ಮುರಿದವನ ಬೆನ್ನನಿ
ಟ್ಟೆಲುವನಾ ಕಂಕಾಳದಂಡವೆನೆ ಕರದಲ್ಲಿ ಪಿಡಿದನಾ ಸರ್ವೇಶ್ವರಂ

ದಗ್ಧಕರ್ಪೂರದಂತೆಲ್ಲಾ ಜನಂಗಳೊಳ್
ಸ್ನಿಗ್ಧಮೆನೆ ಪಸರಿಸುವ ಕಾಮಾರಿಯುಗ್ನಿ ಕರ
ರುಗ್ಧವಲಿಮೋಸ್ರತ್ರಿಯಕ್ಷನೆ ವಿರೂಪಾಕ್ಷ ವಿಶ್ವಪತಿದೇವತಾಸ್ಥಿ
ಸ್ರಗ್ಧರಾಧಿಕ ನಿತ್ಯ ನಿರ್ಲೇಪನ್ಯೆಜಸ
ವ್ಯಗ್ಧನಾಧಿಪ ಸಖ ಸದಾನಂದ ಧೃತವಾಯು
ಭೃಗ್ಧರಾಧರಸುತಾಧಿಪ ಶಾಂತಮಲ್ಲ ಶುಭವಾಗ್ಧನ್ಯಮೂರ್ತಿ ಶರಣೂ ೧

ವಾಮದೀರ್ಘಸ್ವರೂಪಾಗಿ ಬಾಧಿಸುತಖಿಳ
ಭೂಮಿಯ ಜನಂಗಳಂ ಸಂತತಂಜ್ಞಾನಿಯಹ
ದಾಮೋದರಂ ಜಗದ್ರಕ್ಷಕಂ ಗಡ ಕುಂದು ಪೆಚ್ಚಿಲ್ಲದಗ್ರಗಣ್ಯಂ
ನಾಮ ಪಾವನ ಹಸ್ತದಿಂ ಪಡದು ಶಿ
ಪ್ಯಾಮಳಿನ ರಕ್ಷಕಂ ನೀನಾಗಿ ರಾಜಿಪ್ಪೆ
ಸ್ವಾಮಿ ಮೇಲಣ ಗವಿಯ ಶಾಂತನಂಜೇಶ ಗುರುರಾಯ ನಿನಗೆಣೆಯೆ ಜೀಯಾ ೨

ಕೇಳಿದಾ ಕೆಂಚವೀರಾಪ್ಪಯಾ ನೀಂ ಕೂರ್ತು
ಭಾಳಾಕ್ಷಪಂಚದಶಲೀಲೆಯಂ ಮುಂದೆ ಕಂ
ಕಾಳಧರವೆಂಬುದದು ಪದಿನಾಱುಮವರಾದಿ ತೊಡಗಿ ನಿನಗಾನಂದದೆ
ಪೇಳುವೆವು ಶಿವಕಥಾರಸಶರಧಿಯೊಳು ನಿನ್ನ
ನಾಳಿ ಮುಳಿಗಿಸುವೆವೆಂದಾಡಿದಂ ಮಾಯೆಯಂ
ಕೋಲಾಹಳಂಗೆಯ್ದು ಹಲಗೆಯಾರ್ಯ್ಯಂ ಶಂಭುಕಾರ್ಯ ವಿನುತಾದಿಧೌರ್ಯ್ಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಕಂದ ಪೌರಾಣದೊಳು ಕಾಳಿಕಾ ಕಾಂಡದೊಳ
ಗಂದು ಸೂತಂ ನೈಮಿಷಾರಣ್ಯವಾಸಿಮುನಿ
ವೃಂದದೆಡೆಗೆಯ್ತರಲು ಕಾಣುತ್ತಲಖಿಳ ತಾಪಸರು ಭಕ್ತಿಯಿಂದೆ
ವಂದಿಸುತಲಗ್ರಗದ್ದುಗೆಯನಿಟ್ಟತಿವಿನಯ
ದಿಂದ ಸತ್ಕರಿಸಿ ವಾಮತ್ರಿವಿಕ್ರಮರೂಪ
ನಿಂದುಧಗನೆಂತು ಸಂಹರಿಸಿದನದಂ ನಿರೂಪಂಗೆಯ್ಯಬೇಕೆಂದರೂ ೪

ಎನೆ ಕೇಳಿರೈ ಬಲೀಂದ್ರನು ರಾಕ್ಷಸಾಧೀಶ
ನನಿಶಮುಂ ಸರ್ವಧರಣಿಯನಾಳುತಿರ್ಪರಸು
ತನವಾವಗಂ ಸಕಲಜನರು ತನ್ನಂತೆ ಸುಖವಿಪ್ಪುದಂ ಬ್ರಹ್ಮನಿಂದೆ
ಘನತಪಸ್ಸಿಂ ಪಡದು ದಿಗ್ವಿಜಯವಾಗಿರ್ದು
ಮನದೊಳೊಲಿದಖಿಳ ಯಜ್ಞಪ್ರಯತ್ನಂಗಳಂ
ನೆನದು ವಿರಚಿಸುತಿಪ್ಪ ಭಾವಮಂ ತಿಳಿದನಾ ವಿಷ್ಣು ಸಂವಿನುತ ಜಿಷ್ಣು ೫

ಈತನೊಡರಿಪ ಧರ್ಮಯಜ್ಞಾದಿಯಿಂದೆ ಪುರ
ಹೂತ ವಿಧಿಯಾಂ ಮುಖ್ಯ ದೇವತಾಪದವಿವಂ
ಗೋತು ಸೇರುಗುಮೆಮಗೆ ದಾರಿದ್ರಮುಪ್ಪುದಿವನಂ ಕೆಡಿಸ ಬೇಕೆನುತ್ತಾ
ಪೀತಾಂಬರಂ ವೃದ್ಧ ವಾಮನದ್ವಿಜನಾಗು
ತಾತನಿರ್ದೆಡೆಗೆಂದು ಬರುತಿರ್ದನಹುದಲಾ
ಭೂತಳದೊಳಾರು ಯಾಚಿಸುವರಂ ನತಿ ಗುಡ್ಡವಾಗಿಪ್ಪುದೆಂದಱುಪಲು ೬

ಆ ವಿಷ್ಣುವಿಂತು ವಾಮನ ವಿಪ್ರನಾಗಿ ಬ
ಪ್ಪಾವೇಳೆ ಮನ್ನೆಯರ ಮಕುಟವರ್ಧನರ ಬಹು
ಭೂವರರ ಕಳಕಳದೊಳೈವತ್ತು ಗಾವುದಂ ಬಳಸೆ ಪೇರೋಲಗದೊಳು
ಶ್ರೀವಿಭವದಿಂದಿಹ ಬಲೀಂದ್ರನಂ ಕಂಡು ಸಂ
ಭಾವಿಸುತ್ತಾಗಲಾಶೀರ್ವಾದಮಂ ಮಾಡ
ಲಾ ವೀರನಾಲಿಸುತ್ತಾತನಂ ಹತ್ತಿರಕೆ ಕರಸಿದಂ ವಿನಯದಿಂದೆ ೭

ಏನ ಬಯಸಿದೆ ಇಷ್ಟವಾವುದಳ್ಕದೆ ಪೇಳು
ನೀನೆನಲು ಕೇಳ್ವೆನೆ ಕೇಳು ನಂಬಲೆ ನಂಬು
ಹಾನಿ ಇಲ್ಲವೆ ಇಲ್ಲ ಕೊಡುವೆಯಾ ಕೊಟ್ಟಪೆಂ ನಿಶ್ಚಯವೆ ನಿಶ್ಚಯಕಣಾ
ಭಾನು ಬೆಳದಿಂಗಳಂ ಕರವುದೆ ಶಿಲಾಲಿಖಿತ
ವೇನು ಜಲಲಿಪಿಯಂತೆ ಕೆಡುವುದೇ ಎಂದನಾ
ಭೂನಾಥ ವಿಪ್ರನಂತೆಯ್ದೆ ತನ್ನೊಳು ನೆನದುಬಂದ ಕೃತಕವನಱಿಯದೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದೊರ್ವ ಪಾರ್ವಂ ಕುಟುಂಬ ಸಹಿತೊಲ್ದು ಬರು
ತೊಂದಗ್ರಹಾರದೊಳಿರುತ್ತೆಹೆಬ್ಬಾರುವನ
ಮಂದಿರದೊಳಖಿಳ ವಿಪ್ರರ ಭೋಜನದ ಕಾಲದಲ್ಲಿ ತನ್ನಂ ಕರೆಯಲು
ಬಂದು ಕುಳ್ಳಿರ್ದುರ್ಣ್ಣದಿರಲೇತಕೆಂದೆನಲ
ವಂದಿರೆಲ್ಲಾ ಕೇಳೆ ನುಡಿದನಾ ಬ್ರಾಹ್ಮಣಂ
ಇಂದು ಭೂಕ್ಷೇತ್ರವೃತ್ತಿಯನೇನುವಂ ಬೇಳ್ಪುದಿಲ್ಲಲ್ಪವೊರವೆನೆಂದಾ ೯

ಆಯವಸರದೊಳೇನು ಬೇಕೆನಲು ಯಜಮಾನ
ನೀಯಾಲಯದ ಗೋಡೆಯಲ್ಲಿ ಸುಣ್ಣವ ಬೆರಲೊ
ಳೊಯಾರದಿಂ ಬರದ ಮಾತ್ರವಮಂ ಕೊಡುವುದೆಂದಾಗ ಧಾರೆಯ ಪಡವುತ
ನ್ನ್ಯಾಯವೆನ್ನ ಯ ಸೀಮೆ ಎಂದು ದಸಿಯಂ ಬಲಿದು
ನಾಯೊಂದ ಸತ್ತುದಂ ತಂದು ನಾಱಲು ನಾತ
ಕಾ ಯುವತಿಯರು ಸಹಿತವಂ ಪೊಱಡೆ ಮಾಳಿಗೆಯ ಹೊಕ್ಕುಕೊಂಡಂಧೂರ್ತನೂ ೧೦

ಮತ್ತಾವನಜ್ಞಾನಿಗಳಿಗೆ ಕೃಪೆಯಿಂ ದಾನ
ವಿತ್ತೊಡವನಂ ಕೆಡಿಪರೆಂಬ ನಾಣ್ನುಡಿಯಱಿಯ
ದುತ್ತಮ ಬಲೀಂದ್ರನಾ ಯಾಚಕನನೇನ ಬಯಸಿದೆ ಎಂದೊಡಾಂ ತೊಳಸಿಯಾ
ಬಿತ್ತುವಡೆ ಮೂಱು ಹಜ್ಜೆಯನಳವ ಧರೆಯನಿತ
ನಿತ್ತೆ ಸಾಕೆನಲು ಗಹಗಹಿಸುತೇನ್ನಂ ಕೇಳ್ದ
ವೃತ್ತಸಾಗರ ಸಪ್ತದಿಳೆಯನಾಳ್ವೆನಗಿದೇನರಿದಿನ್ನು ಬೇಡೆಂದನೂ ೧೧

ಇನ್ನಾವುದುಂ ಬೇಡವೆನಗಿಂತು ಧರೆ ಸಾಕು
ನಿನ್ನಯ ಮನಃಶುದ್ಧದಿಂ ಧಾರೆಯಂ ಕೊಡುವು
ದೆನ್ನಲಾತಂ ನಿಕೃಷ್ಟಾವನಿಗೆ ಧಾರೆ ಏಕೆನೆ ಮಾರ್ಗ ತಪ್ಪಬಹುದೇ
ಮನ್ನಣೆಯೊಳೀ ಎನಲು ಗಿಂಡಿಯುದಕವನೆತ್ತಿ
ಸನ್ನಹಿತನೆರವಾಗಲಾ ಶುಕ್ರನೆಯ್ತಂದು
ತನ್ನ ಶಿಷ್ಯಂ ಕೆಡುವೆನೆಂದು ಜೋಳಿಗೆ ಮೊಗವನಿಟ್ಟೊಳಗೆ ಪೊಕ್ಕಿರ್ದನೂ ೧೨

ಅಱಿದು ವಾಮನ ವಿಪ್ರನುದಕವೀ ಜೋಳಿಯಿಂ
ಪೊಱಮಡದೆನುತ್ತ ದರ್ಭೆಯ ಹುಲ್ಲಿನಗ್ರದಿಂ
ದಿಱಿಯಲಾ ಶುಕ್ರನೊಂದಕ್ಷಿ ಪೋಯ್ತಾಗಲಾ ಬಲೀಂದ್ರಂ ಧಾರೆಯಾ
ಎಱೆದನದ ಕೈಕೊಂಡನಾ ಕೃತಕ ವಿಷ್ಣುವ
ಕ್ಕಱಿಕೊಳಾಗ ಬೆಳದನೆರಡಡಿಗಾದುದಕ್ಕಟಾ
ತೆಱಬಲ್ಲವಿನ್ನೊಂದು ಹೆಜ್ಜೆಗೀ ಧರೆ ಎಂದು ಮರುಗಿದಂ ರಾಕ್ಷಸೇಶಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಕ್ರಮುವೆನಲ್ಕೆ ಚರಣಕೆ ನಾಮವಾ ಮೂಱು
ವಿಕ್ರಮಂ ಬೇಡಿದುದಱಿಂದೆ ವಿಷ್ಣು ವಿಗಾತ್ರಿ
ವಿಕ್ರಮಾಧಿಕ ನಾಮವಾದುದಱಿಂದವಂ ಸಾಮಾರ್ಥ್ಯನೆಂದೆಂಬರು
ಅಕ್ರಮವನಱಿಯರಾ ವೈಷ್ಣವರದೆಂತೆನಲು
ಚಕ್ರಿ ಏನಗ್ಗಳನೆಯಣಿಮಾಪದಂ ಮಹೋ
ಪಕ್ರಮದ ಗರಿಮಾಪದಂಗಳೆರಡಷ್ಟಮಹದೈಶ್ವರ್ಯದೊಳಗಧಿಕವೈ ೧೪

ಮೈರಾವಣಂ ರಾಮಲಕ್ಷ್ಮಣರನೊಯ್ದಲ್ಲಿ
ಮಾರುತಿ ರಸಾತಳಕ್ಕಿಳಿವಲ್ಲಿ ಬಂದೊಂದು
ವಾರಿಜದ ನಾಳದೊಳಗಿಳಿದು ತಂದಂ ಕಿಱಿಯ ರೂಪಿಗಿದು ಸಾಕ್ಷಿ ಬಳಿಕಾ
ಧಾರುಣೀಧರಗಳಂ ಕೀಳ್ದನಾ ಬಾಲದೊಳ
ಗೋರಂತೆ ಪಿಂದೋರ್ವ ಕಪಿಗಿಂತಲಾ ವಿಷ್ಣು
ಗೀ ರಸೆ ಪದತ್ರಯಕೆ ಸಾಲದೆಂಬುದು ಮಹಿಮೆಯಲ್ಲ ಗರಿಮಾ ಪದವಲ್ಲೈ ೧೫

ಆದಱಿಂ ಮಹತ್ವವಲ್ಲಂತಾ ತ್ರಿವಿಕ್ರಮಮಂ
ಮುದದಿಂ ಬಲೀಂದ್ರನೊಡನಿಂತೆಂದನಿಳೆ ಎರಡು
ಪದಕಾದುದಿನ್ನೊಂದು ಹಜ್ಜೆ ಎನ್ನಯ ದಾನಭೂಮಿಯಂ ಕೊಡುವುದೆನಲು
ಇದಕೆ ಹಿಮ್ಮೆಟ್ಟಿದಪನೆ ಬೀಳ್ವೆನಾನೆನ್ನ
ಎದೆಯ ಮೆಟ್ಟೆಂದನಾ ಸತ್ಯನಿಧಿ ನುಡಿಬು ತ
ಪ್ಪದ ಗರುವನಾ ಪಾತಕಕ್ಕಳ್ಕದುಜ್ಜುಗಿಸಿದಂ ಮೆಟ್ಟಲೆಂದು ವಿಷ್ಣು ೧೬

ಎಂದೂರ್ಧ್ವಮುಖನಾಗುತಂ ವಿಷ್ಣುವಿದಿರಲ್ಲಿ
ಬಂದಡ್ಡಬಿದ್ದಂ ಬಲೀಂದ್ರನಾ ಹರಿ ಬಳಿಕ
ಸಂದೇಹವಿಲ್ಲದೆದೆಯಂ ಮೆಟ್ಟಿ ಪಾತಾಳಕಿಳಿದನಾ ರಾಕ್ಷಸೇಶಂ
ಒಂದು ಬಲಗಾಲನೆತ್ತಿದನಲ್ಲಿ ದೈತ್ಯಾರಿ
ಯುಂದು ಗಗನಕ್ಕದೆಯ್ತುಗುತಿರ್ದುದಾಗಳೇ
ನೆಂದು ಬಣ್ಣಿಪೆನಖಿಳ ಲೋಕಂಗಳಂ ಕೆಡಿಸುತನಿಬರಂ ಬೆದರಿಸುತ್ತಾ ೧೭

ಸುರಪನಾ ವಜ್ರಾಯುಧದೊಳೆಱಗಿದಂ ವಹ್ನಿ
ಕರದ ಶಕ್ತಿಯೊಳಿರಿದನಾ ಯಮಂ ದಂಡದಿಂ
ಪರಿಭವಿಸಿದಂ ನಿರುತಿ ಕೊಂತದಿಂ ಬಡಿದನಾ ವರುಣ ಪಾಶದಿ ಕಟ್ಟಿದಾ
ಮರುತನಾ ಧ್ವಜದಿಂದೆ ತಿವಿದಂ ಕುಬೇರನಾ
ಕರದ ಖಡ್ಗದೆ ಹೊಡದನೀಶಾನ್ಯನಾ ಶೂಲ
ದುರುತರದ ಮೊನೆಯಿಂದೆ ಘಾತಿಸಿಜದವನೆಲ್ಲವಂ ಮೀಱಿತವನ ಕಾಲೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕಾಲು ಭೂಲೋಕವಮಂ ಭುವರ್ಲೋಕವಮಂ
ನಾಕವಮಂ ತತ್ತ್ರಪೋಲೋಕಾದಿಗಳ್ಗೆ ಬರ
ಲಾಕೆವಾಳರು ಹೊಡದು ಬಡಿದಿರಿದೊಡಂ ಲೆಕ್ಕಿಸದೆ ಮೀಱಬಂದು ಸತ್ಯ
ಲೋಕದೆಡೆಗೆಯ್ತಂದಡಲ್ಲಿ ತಪವಿರುತಿರ್ದ
ನಾ ಕಮಲಸಂಜಾತನವನಧೋಭಾಗವಮಂ
ನೂಕಿ ನೆಗಪಿತಂಘ್ರಿಯಾ ಬ್ರಹ್ಮನೇಂ ಕಾರಣಂ ವ್ರತದೊಳಿರ್ದನೆನಲು ೧೯

ಗಿರಿಜಾವಿವಾಹದೊಳು ತೆಱೆಯ ಮಱೆಯಲ್ಲಿ ಶಾಂ
ಕರಿಯಿರ್ದ ಪಾದವಮಂ ನೀಡೆ ಹರಿ ತೊಳೆವಲ್ಲಿ
ಸರಸಿಜೋದ್ಭವನುದಕವೆಱವುತಾ ಚರಣಸೌಂದರಿಯದಗ್ಗಳವ ಕಂಡು
ನರಕಿ ಕಾಮಿಸಲುಃ ವೀರ್ಯ್ಯಸ್ಖಲನವಾದಲ್ಲಿ
ಪರಿಗಣಿಸಲಳವಲ್ಲದಖಿಳ ಬೊಮ್ಮರು ಪುಟ್ಟಿ
ತಿರೆ ಕಾಲಬೆರಲಿಂದೆ ಹೊಸಹೊಸದು ಕೊಲುತಿರ್ಪನನಿಬರಂ ತತ್ಪಾತಕಂ ೨೦

ಕಾಲಿಂದೆ ಹೊಸದೊಸದು ಕೊಲಲುಳಿದವಂದಿರಾ
ವಾಲಖಿಲ್ಯಾದಿಗಳೆನಿಪ್ಪರಾ ನವಕೋಟಿ
ಜಾಲವುಳಿದಾ ವೇಳೆಯುಱದು ಶಂಕರನಾಜ್ಞೆಯಿದು ಕಾಲವಲ್ಲವೆಂದು
ಮೇಲಂದನೆಲೆಲೆಯುಜ ನೀನೆ ಶುಚಿಯಾಗಿಪ್ಪೆ
ಯ್ಯೆ ಲೇಸು ಮಾಡಿಕೊಳ್ಳೋಗಾ ಕಮಂಡಲದ
ಕೀಲಾಲವೇ ನಿನಗೆ ಶಸ್ತ್ರವೆಂದಟ್ಟಿದಂದಿಂದಿರ್ದನಲ್ಲಿ ಬೊಮ್ಮಾ ೨೧

ಉಱೆ ತಪದೊಳಿರ್ದ ಬೊಮ್ಮನ ತ್ರಿಕಸ್ಥಲ
ನೆಱೆ ಹರಿಯ ಕಾಲು ತಾಗುತ್ತ ಮೇಲಕೆಯೆತ್ತೆ
ಯೞಿಯಟ್ಟುತಿಂತಿದಾವನ ಬಿನುಗು ಕಾಲೆಂದು ಜಲವ ತೆಗದಭಿಮಂತ್ರಿಸಿ
ಕಱೆಗೊರಲನಂ ನೆನವುತಿಟ್ಟಡಂತಾ ವಾರಿ
ಮಿಱುಪ ಶಸ್ತ್ರಮದಾಗಿ ತಾಗೆ ವಿಷ್ಣುವ ಕಾಲು
ಮುರಿದು ಬಿದ್ದುದು ಬೀಳುತಖಿಳ ಲೋಕಂಗಳಂಬೆದರಿಸಿದುದಾರ್ಭಟೆಯೊಳು ೨೨

ವಾರಿಜೋದ್ಭವನೊಂದು ಹಸ್ತದಿಂ ತೆಗದಿಟ್ಟ
ನೀರದಿಪ್ಪತ್ತೆಂಟು ಕೋಟಿಯೋಜನದಿಂದ
ಧಾರೆಯಾಗಿಳೆಗೆ ಸುರಿಯಿತ್ತದಕೆ ಹರಿಯ ಕಾಲೊಳು ಗಂಗೆ ಜನಿಸಿತೆಂದೂ
ಧಾರಿಣಿಯು ಮೂಢ ಪರಸಮಯಿಗಳು ಬಗುಳುವರು
ಕಾರಣವನಱಿಯದಧಮರು ದುರ್ವಿನೀತರಾ
ನಾರಕಿಗಳವರಾ ವಿಚಾರವೆಂತೆನೆ ನಿಘಂಟುಪ್ರಮಾಣದೊಳೊರವೆನು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ಷಿತಿಯೊಳಂತವರ ಸಿಂಹಾವ್ಯಯದೊಳಂಸ್ಮರೇ
ವತು ಪುನರ್ವೈವೇತಿ ಯವಧಾರಣೆಯದೆಂಬ
ಮತದಿಂದವೈ ಎಂಬ ವರ್ಣವೆ ಮೊದಲಾದುದ್ವೈ ಬಳಿಕ್ಕಂತಲ್ಲಿಯಾ
ಸ್ಥಿತಿಯಕುಂಠೋಮಂದ ಎಂಬ ತತ್ಕ್ರಿಯೆ ಎಂದೆ
ನುತಮಿರ್ಪುದೇ ವೈ ಎನಿಪ್ಪ ಶಬ್ದಂ ಮುಂದ
ಣತಿಶಯದ ಕುಂಠಶಬ್ದಂ ಕೂಡೆ ವೈಕುಂಠವೆಂದಾದುದರ್ಥವೂ ೨೪

ಮುದದೆ ವೈ ಎಂಬುದೇ ನಿಶ್ಚಯಂ ಕುಂಠವೆಂ
ಬುದೆ ತತ್ಕ್ರಿಯಾಹಾನಿ ವೈಕುಂಠ ಎನಲಾಗಿ
ಮದನಪಿತನೇ ಕಾಲುಮುರಿದ ಕುಂಠನೆನಿಪ್ಪಪೆಸರು ಲೋಕಪ್ರಸಿದ್ಧಂ
ಅದಱಿಂದಲವನ ಪಾದಸ್ತಂಭವಾಗೆ ಮೆಱೆ
ದುದು ಮೇಘದಲ್ಲಿ ನೆಲದೊಳಗೊಂದು ಕಾಲಿರ
ಲ್ಕದು ಬಗಟೆಗೋಳವುಲ ಹೆಟ್ಟಿದಂತಾಗಿರ್ದನಾ ಪರಿ ನಿರೋಧದಿಂದಾ ೨೫

ನಲಿನಾಕ್ಷನಂಘ್ರಿಯನಜಂ ಮುರಿದನೆಂಬುದಕೆ
ಸಲೆ ಪದ್ಮಪೌರಾಣದಾ ಗ್ರಂಥದೊಳು ಕಮಂ
ಡಲು ಜಲಶ್ರೇಣ್ಯಾಹರೇಶ್ಚರಣ ಭಿನ್ನಕೃತ್ಯೂರ್ಧ್ವಲೋಕಹಿತಾರ್ಥಕೆಂ
ದುಲಿವ ವೇದಾರ್ಥವುಂಟದಱಿಂದ ಬಹಕಾಲ
ಜಲಜಸಂಭವ ಮುರಿಯಲಿಟ್ಟನೆಂಬುದೇ ತಥ್ಯ
ವಲೆಯವನ ಕಾಲನಾ ಕಾರದೊಳದೇ ಪಾಟಿಮಾಡಿಕೊಂಡೇಂ ತೊಳದನೇ ೨೬

||ಸಾಕ್ಷಿ|| ಕಮಂಡಲು ಜಲಶ್ರೇಣ್ಯಾ ಹರೇಶ್ಚರಣ ಭಿನ್ನಕೃತ್
ಊರ್ಧ್ವಲೋಕಹಿತಾರ್ಥಾಯಾ ಪದ್ಮಯೋನಿಃ ಪಿತಾಮಹಃ ೧

ಹರಿಯ ಕಾಲಿಂ ಗಂಗೆಯುದಿಸಿತೆಂಬಜ್ಞಜನ
ಕೊರವೆನಂತಲ್ಲಿ ದೃಷ್ಟ ಪ್ರತ್ಯಯಂಗಳಂ
ವರ ಭೃಗುಮುನೀಶ್ವರನ ಶಾಪದಿಂ ಮತ್ಸ್ಯಾವತಾರದಾ ಬಿನುಗು ಮೀನೂ
ಹೊರಳಿ ಹುಡಿಯೊಳು ಹುಟ್ಟಿತೇಜಲದೊಳಲ್ಲವೇ
ಉರು ತರದ ಕಮಠಂ ಸಮುದ್ರಮಂ ಬಿಟ್ಟೇನು
ಮೊರಡಿಯೊಳಗಿರ್ದುದೇ ವಾಮನಂಘ್ರಿಯೊಳೊಗೆದುದೆನೆ ಮೊದಲು ಜಲವಿಲ್ಲವೆ ೨೭

ನಾರಾಯಣಂಗೆ ಬಲಿ ಭೂದಾನವಂ ಕೊಟ್ಟು
ಧಾರೆ ಎಱೆವಾ ಕಮಂಡಲ ಜಲಂ ಮೊದಲಲ್ಲ
ವೇ ರಸೆಯೊಳಂಗವಂ ತಳೆದಿರ್ದ ಹರಿಯ ತನು ಧರೆ ಜಲಾನಲ ಮಾರುತಂ
ತಾರಾಪಥೇಂದು ರವಿಯಾತ್ಮನೆಂಟಂಗವೋ
ಆರಯ್ಯಲೇಳಂಗದಿಂದಪ್ಪುರಹಿತ ಪದ
ವೋ ರಮ್ಯವಪ್ಪಂತೆ ನೋಡೆಯಾ ಹರಿಯ ಕಾಲಿಂದೊಗೆದುದೆಂದಾಡಲಿ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಱಿಂದ ಹರಿಯು ಕಾಲಿಂ ಗಂಗೆ ಹುಟ್ಟಿತೆಂ
ಬುದನಾವ ಬಗುಳಿದಾತನ ಬಾಯೊಳಂ ಹುಳುಗ
ಳುದುರುವವು ನರಕದಲ್ಲಿಹ ಕಿಸುಕುಳಂಗಳಂ ತಂದು ಯಮನೃಪನ ಭಟರು
ಪದೆದು ಹಳೆಗೆಱಹುಗಾಲಿಂದವಂದಿರ ಬಾಯ
ನೊದೆದು ಮೊರೆಯಿಡೆ ಬಾಯಬಿಟ್ಟಾಗಲೆರದೆರದು
ಸದವರೆಂಬುದೆ ತಥ್ಯವಂತಾಗಿ ಪಾತಕರ ನುಡಿಗಳಂ ಕೇಳಬಹುದೇ ೨೯

ಮಿಗೆ ಮೋಘದೆಡೆಯಲ್ಲಿ ಮುರಿದ ಕಾಲಿಳೆಯೊಳಂ
ದಗಲವಾಗಿರ್ದ ಕಾಲೆರಡಂಟಿದಾಗ ಹರಿ
ಬಗಟುಗೋಳವ ಹಟ್ಟಿದಂತಿರ್ದಕಾಲದೊಳಗಾ ವಿಷ್ಣುಪದದೆಡೆಯೊಳು
ಜಗದ ಜೀವರು ಮಡಿವುತವರು ಮೊರೆಯಿಡಲಾಗಿ
ಭೃಗುಶಾಪದೊಳು ಕರುಣದಿಂ ಕೊಲ್ವೆನೆಂದು ಕೃ
ಷ್ಣಗೆ ಮುನ್ನ ನುಡಿದ ಭಾಷೆಗೆ ಬಂದನಾ ಮಹಾದೇವನಘವನದಾವನೂ ೩೦

ಘೋಳಿಡುವ ಜನರ ಸಂತೈಸಿ ರೌದ್ರಾಂಗಮಂ
ತಾಳಿಬಂದಾ ದಡಿಗರೂಪಿನಿಂದಿಹ ಹರಿಯು
ಮೇಳೆಯುಂ ಒಡಿದೊತ್ತಿಯೊದೆದಲುವನೆಗ್ಗಲಾ ಕಾಲದೊಳು ಪೊಗಳೆ ವಿಷ್ಣು
ಕೇಳಿ ನಿನ್ನಿಷ್ಟವೇನೆನಲೆನ್ನ ಹತಿಸೀಗ
ಭಾಳಾಕ್ಷ ಬೆನ್ನೆಲುವ ಮುರಿದು ಹಸ್ತದೊಳು ಕಂ
ಕಾಳವೆಂದದ ಧರಿಸಬೇಕೆನಲು ಕೊಂದು ಕಂಕಾಳಧರನಾದನೀಶಂ ೩೧

ಇದುಕಣಾ ಕಂಕಾಳಧರಲೀಲೆ ಕಲ್ಪಕ
ಲ್ಪದೊಳಿಂತು ರಾಜಿಪುದಲ್ಲೈ ಕೆಂಚವೀರಾಖ್ಯ
ಪದಪಿನಿಂ ವೀರಶೈವಾಮೃತದೊಳಾಮ್ನಾಯ ಸಂಮತದೊಳಾವೊರದೆವು
ಮುದದಿಂದಲಿದನಾವನೋದಿಕೇಳಿದವರ್ಗೆ
ಸದಮಲಾಚಾರ ಸನ್ಮಾರ್ಗಸುಜ್ಞಾನಂ
ಲೊದಗಿಪದೊಳುಂ ಭೋಗ ಪರದಲ್ಲಿ ಮೋಕ್ಷಸಾಮ್ರಾಜ್ಯಸಂಪದಮಪ್ಪುದೂ ೩೨

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯ್ಯಂ
ಶೀಲಪಟ್ಟಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಪ್ಪಯ್ಯಂಗೊರೆದ ಸುವಿ
ಶಾಲ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕಿಯಾ
ಪ್ರದಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಷ್ಣುಕಂಕಾಳಧರವೆರಡುಕಾಂಡದಿಂ ಮೇಲೆ ಹದಿನಾಲ್ಕು ಸಂಧಿ ೩೪

ಅಂತು ಸಂಧಿ ೧೪ ಕ್ಕಂ ಪದನು ೬೭೬ ಕ್ಕಂ ಗ್ರಂಥ ೫೪೮ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೭

ಚಂಡೇಶಾನುಗ್ರಹ

'ಚಂಡೇಶಾನುಗ್ರಹಶ್ಚೈವ ತಥಾಸಪ್ತದಶಂ ಭವೇತ್' ಎಂಬರ್ಥಕ್ಕೆ ಕಥೆ

ಆವುಗಳ ಪಾಲಕರ ದರ್ಶಿಸುತ್ತಿರೆ ಲಿಂಗ
ದೇವನಂ ಮುಳಿದೊದೆದ ಪಿತೃಪಾತಕಾಂಘ್ರಿಗಳ
ನೇ ವಿದಾರಿಸೆ ಮಚ್ಚಿ ಚಂಡೇಶ್ವರಂಗೆ ಗಣಪದವಿಯಂ ಕೊಟ್ಟನಭವಂ

ರುಗ್ಯಜುಸ್ಸಾಮಸನ್ಮೃಗ್ಯ ಬಹುಶಾಸ್ತ್ರಕುಲ
ವಾಗ್ಯತ್ನದುರ್ಲಭ ಸುಯೋಗ್ಯ ಜನರಕ್ಷ ದಶ
ದಿಗ್ಯತೋ ವಿಸ್ತರತ್ಯಾಗ್ಯಖಿಳ ಸುಪ್ರದವಿರಾಗ್ಯಧಿಕಧರಣಿಪಾಲಾ
ಬೋಗ್ಯಗ್ರಭೂಷ ಸಮ್ಯಗ್ಯತಿ ಹೃದಿಸ್ಥಿತಸ್ರ
ದೃಗ್ಯಜ್ಞಪತಿ ಲೋಕಭುಗ್ಯಮಪ್ರಹರ ಚಿ
ದ್ರುಗ್ಯುಕ್ತ ರಾಕ್ಷಸಾಶ್ರುಗ್ಯ ಜನಪಿಹೃತಮದ್ಭಾಗ್ಯಜಯುಶಾಂತಮಲ್ಲಾ ೧

ಧ್ಯಾನಲಿಂಗಕ್ಕೆ ಪಂಚಾಕ್ಷರಿಯೆನಿಪ ಕಾಮ
ಧೇನುವಿನ ಗುರುಲಿಂಗಜಂಗಮಪ್ರಾಸಾದ
ವೇ ನಿಜಸ್ತನವೆನಿಸಿದಧಿಕ ಮಹಿಮಾಮೃತಂಗಱದಾದಿಲಿಖಿತಕರ್ಮಾ
ಸ್ಥಾನಿ ಕಂಟಕ ಜಗತ್ಪಿತನ ಖಂಡಿಸಿ ಕರನ
ವೀನ ಸೃಷ್ಟಿಯನೆಸಗಿ ಶಿಷ್ಯರಂ ಪೊರೆದ ಸು
ಜ್ಞಾನಿ ಮೇಲಣ ಗವಿಯ ಶಾಂತನಂಜೇಶ ಚಿದ್ರವಿಯ ಚರಣಕ್ಕೆಱಗುವೆ ೨

ವಾಗ್ರುಚಿರಮಂ ಕೇಳ್ವುದೈಯ್ಯ ಚಂಡೇಶ್ವರಾ
ನುಗ್ರಹಂ ಸಪ್ತದಶಲೀಲಾಕಥಾರಸಸ
ಮಗ್ರಮಂ ಶಿವಭಕ್ತರೇ ಶಿವಮಹತ್ವಕಾಸ್ಪದ ಪಂಚವಿಂಶತಿಗಳಾ
ವಿಗ್ರಹೋತ್ಸವರೂಪರಱುವತ್ತು ಮೂವರೊಳ
ಗಗ್ರಗಣ್ಯನುಮಾಗಮಾರ್ಥಕಳವಟ್ಟ ನುತ
ದಿಗ್ರಮಣ ಚಂಡೇಶ್ವರಾನುಗ್ರಹದ ಕಥೆಯ ಕೇಳೆಂದನಾ ಚಾರ್ಯನೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೇಳಲೇನೀ ಧರೆಯ ಭರತಕಾಂಡದ ಭಾಗ್ಯ
ದೇಳಿಗೆಯೊಳಧಿಕ ಸಂಪತ್ತಿನಿಂ ವೈಭವದೆ
ಭಾಳಾಕ್ಷಗದು ಸೆಜ್ಜೆವನೆಯೆನಿಸಿ ಸಿರಿಯಿಂದ ಕೀರ್ತಿಯಂ ತಳೆದಿರ್ಪುದೂ
ಚೋಳದೇಶದೊಳಲ್ಲಿ ಸಕಲ ಪುರಕಧಿಕವೆಂ
ಬಾಳಾಪದಿಂದ ನಲ್ಲೂರೆಂಬ ಪಟ್ಟಣಂ
ಕೇಳಿದೊಡೆ ಕರ್ಣಾಮೃತಂ ಕಂಡೊಡದಱ ಸುಖಕೆಣೆಯಿಲ್ಲವೆನಲೆಸದುದು ೪

ಕೃತಪುಣ್ಯರಿರ್ಪ ಪುರದೊಳಗೊರ್ವ ಪಾರ್ವನ
ಚ್ಯುತಭಟ್ಟನೆಂಬ ಪೆಸರಿಂದಿಪ್ಪನಾತಂಗೆ
ಸತಿ ಸುಗುಣೆ ಸಾವಿತ್ರಿಯೆನಿಸುವಭಿಧಾನದಿಂದಿರ್ಪಳರವದಿರ ಭೌಷೆಯು
ಚತುರಾನನಂ ಪೊಗಳಲಳವಲ್ಲದಿಹ ಗೃಹ
ಸ್ಥಿತಿಯ ಬಿಣ್ಪಂದಿರುತ ಕೂರ್ತಧಿಕಪುಣ್ಯದಂ
ಪತಿಗಳಾ ಸುತರಿಲ್ಲವೆಂದು ಚಿಂತಿಸುತಲ್ಲಿ ರಾಣಿ ಪುರುಷನೊಳೆಂದಳು ೫

ವಲ್ಲಭನೆ ಚಿತ್ತೈಪುದಯ್ಯ ಬಿನ್ನಪವ ಸುತ
ರಿಲ್ಲದವರಿಗೆ ನಾಸ್ತಿ ಪರಲೋಕವೆಂಬುದಂ
ಬಲ್ಲಿರಿದಱಿಂ ನೀವು ದೇವತಾಭಜನೆಯಿಂ ಕುವರನಂ ಪಡೆವ ಬುದ್ಧಿ
ಇಲ್ಲಲಾ ಮಕ್ಕಳಾಡದನಂಗಣಂ ನಾಡ
ಹುಲ್ಲು ಗಿಡಮರಗಳಿಪ್ಪಡವಿಗಿಂದ ಕೀ
ಳಲ್ಲವೇ ಬಾಲನಂ ಪಡೆದೆತ್ತಿ ಮುದ್ದಾಡುವರಿಗೆ ಸರಿಯಾರೆಂದಳು ೬

ಮೆಲ್ಲನೆ ಮಲಂಗಿಪ್ಪ ಚೆಲ್ವಮಗನಂ ನೋಡಿ
ಉಲ್ಲಾಸದಿಂದಾತನಳ್ಕೆಯುಂ ಜಕ್ಕುಲಿಸು
ವಲ್ಲಿಯಾ ಸುತನೆಯ್ದೆ ನೆಗದೊದೆಯಲವನ ಚಂದಳಿರಡಿ ತೊಡರ್ಚಿಕೊರಲಾ
ಅಲ್ಲಿ ಬಿಡದೆಳಲಿಟ್ಟಡಾಳ್ಕೆಸುತಿಹ ಹಾರ
ವೆಲ್ಲವುಂ ಸಂತೋಷದಿಂ ಪರಿದು ಪಸರಿಸಲು
ಜಲ್ಲೆಂದು ಕೆದಱಿಪ್ಪ ಬಟ್ಟಮುತ್ತುಗಳಾಯ್ವ ಭಾಗ್ಯವೆನಗೆಂದಪ್ಪುದೊ ೭

ಎಂದು ಪತಿಯೊಳು ನುಡಿವುತೆಮ್ಮೂರೊಳತಿ ಮಹಿಮೆ
ಯಿಂದ ಸರ್ವರ್ಗಭೀಷ್ಟವನಿತ್ತು ನೆರೆ ಪಾಲಿ
ಪಿಂದುಮೌಳಿಯ ಹಿರಿಯ ಪುತ್ರನಾ ವಿಘ್ನೇಶ್ವರಂ ಗಜಾನನ ಸದ್ಗುಣಿ
ಸೌಂದರ್ಯನಿಧಿಯಾತನಂ ಭಜಿಸಿ ಸುತನನಾ
ನಂದದಿಂ ಪಡೆಯುವೇಳ್ಕೆನುತ ದಂಪತಿಗಳುಱಿ
ಬಂದರತಿ ವೈಭವದೆ ಬಂದು ವಿಪ್ರರುಸಹಿತಲಾ ಪಿಳ್ಳೆಯರ ಭವನಕೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕಲೋಪಚಾರ ವೈಭವದಿವ್ಯಪೂಜೆಯುಂ
ಸುಕರವೆನೆ ಮಾಡಿ ಬಹು ಭಕ್ಷ್ಯಭೋಜ್ಯಂ ಫಲಾ
ಧಿಕವಸ್ತುಗಳನೆಯ್ದೆ ಗಡಣಿಸಿದರಾ ದಕ್ಷಯಜ್ಞಾದಿಗಳೊಳೀತನು
ಪ್ರಕಟ ಭೋಜನವೋಹಿ ಎಂದರ್ಪಿಸುತ್ತಲ
ತ್ಯಕಳಂಕ ಮೂರ್ತಿಗೆ ಬಳಿಕ್ಕವರ್ಕೊಡೆ ಪಾ
ವಕನಯನನಗ್ರಸುತಗೆಯ್ದೆ ಬಿನ್ನೈಸಿದರು ಭಯಭಕ್ತಿಯುಗ್ಗಳದೊಳು ೯

ಚಾರು ಶಂಕರಪುತ್ರ ಜಯಜಯತು ಭವಕುಜಕು
ಠಾರ ನಿನ್ನಂಶಸಂಭವನೆನಿಪ ಮಹಿಮೆಯು ಕು
ಮಾರನಂ ಪಾಲಿಸುವದೆಂದು ಕೈಮುಗಿಯಲತಿ ಕರುಣದಿಂದಾ ವನಿತೆಗೆ
ವಾರಣಾಸ್ಯಂ ತನ್ನ ಕೊಡಲಿಯಗ್ರದೊಳು ಪೂ
ಜಾರಚಿತಮಾಗಿರ್ದ ಪುಷ್ಪಮಂ ಕರುಣಿಸ
ಲ್ಕಾರಾಣಿ ಸರ್ವಬಂಧುಗಳು ಜಯಜಯಯೆನಲು ಕೊಂಡಳಂತಾ ಪಿಂಡವಾ ೧೦

ದಂಡಪಿಳ್ಳೆಯರೆಂಬ ಶಿವನಗ್ರಸುತನ ಬೀ
ಳ್ಕೊಂಡು ದಂಪತಿಗಳೆಯ್ತಂದು ಸುಖವಿರಲಾಗಿ
ಪುಂಡರೀಕಾಕ್ಷಿಗುತ್ತುಮದ ಕಾರಣಿಕಗರ್ಭಂ ಮೊಳತುದುತ್ಸಹದೊಳು
ಕಂಡಖಿಳ ಬಾಂಧವರು ಸಂತೋಷಿಸಲ್ಕೆ ಮುಂ
ಕೊಂಡು ಗರ್ಭಾದಾನ ಸುಪ್ರಮೋದಗಳು ಭೂ
ಮಂಡಲದೊಳಯ್ದೆ ಷೋಡಶಕರ್ಮ ವೈಭವಂಗಳನೆಸಗುತಿರ್ದರಾಗಾ ೧೧

ಸಕಲಧರ್ಮಪ್ರಶಂಸೆಯುನು ತತ್ಕಾಲಕಾ
ಲಕೆ ಮಾಡುತಿರೆ ಪೂರ್ಣವಾಗಲಾ ಗರ್ಭದ
ತ್ಯಕುಟಿಲದ ಸುಕುಮಾರನುದಯಿಸಿದನಖಿಳ ಬಾಂಧವರು ಸಂತೋಷಿಸಲ್ಕೆ
ಪ್ರಕಟವಹ ಜಾತಕರ್ಮಂಗಳಂ ಮಾಡಿ ಪಾ
ವಕನಯನಸುತವಿಘ್ನರಾಜನಾಮವ ಬಲಾ
ಧಿಕನಪ್ಪ ಚಂಡೇಶಪಿಳ್ಳೆ ಎಂದಿಟ್ಟರತಿಶಯಃ ವೈಭವವೆಸೆಯಲೂ ೧೨

ವರ ಬಾಲಲೀಲೆಗಳ ವೈಭವಂಗಳನಲ್ಲಿ
ವಿರಚಿಸುತ್ತಿರೆ ಬೆಳೆದನಲ್ಲಿ ಸುಕುಮಾರನೊಂ
ದೆರಡು ಮೂಱುಂ ನಾಲ್ಕು ವೈದಾಱು ವರುಷಪರಿಯಂತರಂ ಸಂತೋಷದೆ
ಇರೆ ಕುಮಾರಂ ಪುಟ್ಟಿದುದು ಮೊದಲು ತಂದೆಯುಪ
ಧರಣೀಸುರನ ಭಾಷೆಯೆಲ್ಲವಂದಂದಿಂಗೆ
ಯರೆಯಾಗಿ ಬರುತಿರ್ದುದೀತನಲಿ ದುಷ್ಪುತ್ರನೆನುತಿರ್ದರಖಿಳ ಜನರೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುತ್ರನೊಗೆದುದು ಮೊದಲು ಬಹು ಫಲವನೀವ ಸು
ಕ್ಷೇತ್ರವೆಲ್ಲಂ ಬೆಳೆಯುದಕಟ ಹಾಳಾದವು ಪ
ವಿತ್ರ ಗೋವುಗಳೆಲ್ಲ ಮಡಿದವಶ್ವಾದಿಗಳು ಮರಣಂಗಳಂ ಪಡದವು
ಚಿತ್ರವೆನೆ ವೃತ್ತಿ ವಾಟಿಕೆಗಳೆಲ್ಲೊಣಗಿದವು
ಮಿತ್ರನಂದದೆ ಗೆಯಿಸಿದಪೆನೆಂದು ಬಗೆವುತಾ
ಶ್ರೋತ್ರಿಯಂ ಸಾಲಮಂ ತೆಗತೆಗದು ರುಣಿಯಾದನಂತುಮಲ್ಲದೆ ಬಳಿಕ್ಕಾ ೧೪

ಆ ರುಣದವರ್ಗೆ ವೃತ್ತಿಕ್ಷೇತ್ರಮಂ ತನ್ನ
ನಾರಿಯು ಕೊರಲ್ದಾಲಿಯೆಲ್ಲವಂ ಮಾರಲತಿ
ದಾರಿದ್ರದಿಂ ನವೆವ ವಿಪ್ರನಂ ಕಂಡು ನುಡಿದರು ಬಾಂಧವರ್ಗಳೆಲ್ಲಾ
ಧಾರುಣಿಯೊಳೆಲಲೆಯಚ್ಯುತಭಟ್ಟರೇ ನೆಱೆ ವಿ
ಚಾರಿಗಳು ನೀವು ದುಃಪುತ್ರನೊಗೆದಂ ನೀಂ ಕು
ಮಾರನಂ ವರ್ಜಿಸಿದೊಡುಳಿವೆಯಲ್ಲದೊಡೆ ನಿಮ್ಮನ್ವಯಂ ಕೆಡುಗೆಂದರೂ ೧೫

ಧನವಳಿದೊಡೇನು ಧಾನ್ಯಂ ಪೋದಡೇನು ಮಿ
ಕ್ಕಿನ ವೃತ್ತಿ ಸುಕ್ಷೇತ್ರಮಂ ಮಾಱೆ ಕಡೆಗೆನ್ನ
ವನಿತೆಯುಂ ನಾಂ ಸತ್ತಡೇನು ಚೆಲ್ವಣುಗನಂ ಬಿಡೆ ಬಿಡೆನೆನುತ್ತ ತನ್ನಾ
ತನಯಂ ರಕ್ಷಿಸುತ್ತಾ ದಂಪತಿಗಳು ತಾ
ವೆನಿತೆನಿತು ಉಪವಾಸವಿರುತಿರುತಮಿರ್ಪುದಂ
ಸನಯದಿಂದಱಿದಲ್ಲಿ ತಂದೆ ತಾಯಿಗಳೊಡನೆ ನುಡಿದನಾ ದಂಡಪಿಳ್ಳೆ ೧೬

ಮಱುಗಬೇಡೆಲೆ ತಂದೆ ನಾನಿರ್ದ ಬಳಿಕ ನೀಂ
ಕಱುಗಳಂ ಕೂಡಿಕೊಡು ಕಾವೆ ನಾನೆಂದೊಡ
ಕ್ಕರಸುತನ ನುಡಿಗೇಳಿ ಮಾತೃಪಿತೃಗಳು ವಕ್ಕಟಾ ಎಂದು ಕಣ್ಣನೀರಾ
ಕಱಿದೆಲಲೆ ಮುದ್ದುಮಗನೇ ನಾವು ನಿನ್ನನಿಂ
ತಱಿದಱಿದು ನೀಚತೆಯ ಮಾಳ್ಪವೆ ಎಂದೆನಲು
ಕಱೆಗೊರಲನಾಜ್ಞೆ ಸುಖದುಃಖಂಗಳಿದಕೆ ಚಿಂತಿಸಬೇಡವೆಂದನಾತಂ ೧೭

ನಳಚಕ್ರವರ್ತಿ ಸತಿ ಉಳಿದು ದಾರಿದ್ರ್ಯದಿಂ
ತೊಳಲನೇ ಅಡವಿಗೀಡಾಗನೇ ರಾಮನು
ಜ್ವಳ ಹರಿಶ್ಚಂದ್ರನಾ ಸುಡುಗಾಡಕಾಯನೇ ಪಾಂಡುಪುತ್ರರ್ಗಳೆಲ್ಲಾ
ನಿಳಯನಿಳಯಂಗಳೊಳು ತಾಯಿ ತಿರಿದನ್ನಮಂ
ಕೊಳುತ ಜೀವಿಸರೆ ನೀನೇಕೆ ಚಿಂತಿಸಿದಪ್ಪೆ
ತಿಳಿವುಳ್ಳ ತಂದೆ ಎಲ್ಲಿರಿಗಱುಪು ಕಱುಗಳಂ ಕೂಡಿಕೊಡು ಕಾಯ್ವೆನೆಂದಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂದನಾಡಿದ ನುಡಿಗೆ ಸಂತೋಷಿಸುತ್ತಲಾ
ತಂದೆ ಮರುದಿವಸವನಿಬರಿಗಱುಪಿ ಕಱುಗಳಂ
ತಂದಲ್ಲಿ ಕೂಡಿಕೊಟ್ಟಲೆ ಮಗನೆ ಯವಧಾನವೆಂದೂರ ಹೊರಟು ಬಂದೂ
ಹಿಂದೆ ಕಱುಗಾಯ್ವ ಮಕ್ಕಳುಗಳ್ಗೆ ಯತಿ ವಿನಯ
ದಿಂದ ನುಡಿದಪ್ಪೈಸುತ್ತೈವತ್ತು ಕಱುಗಳೊಳ
ಗೊಂದುಳಿಯದಂದದಿಂದಾರಯ್ದು ಕೊಂದು ಬಾಯೆಂದು ಕಳಿಹಿದನ್ಯೈಯ್ಯನೂ ೧೯

ಒಂದೊಂದು ಬಳ್ಳ ಬತ್ತವನು ಕಱುಕಱುವಿಂಗ
ವಂದಿರೊಂದೊಂದು ತಿಂಗಳಿಗೀವೃತಿರ್ದೊಡಾ
ತಂದೆ ತಾಯ್ಗಳು ದಿನಕ್ಕೊಪ್ಪತ್ತಿನೂಟಮಂ ಕಂಡು ಸಂತೋಷದಿಂದಾ
ಕಂದಂಗೆ ದಣಿಯಲೂಡುತ್ತ ಕೆಲದಿನದೊಳೀ
ಚಂದದಿಂ ನಡೆಯೆ ಕಱುಗಾಯ್ವೆಡೆಗೆ ಸಾಮರ್ಥ್ಯ
ಒಂದಿ ಪಿತನೊಳು ನುಡಿದನಾ ಸುತಂ ಮತ್ತೊಂದು ದಿನದೊಳೇ
ವಣ್ಣಿಸುವೆನು ೨೦

ಕಱುಗಾಳಂ ಕಾಯ್ವದೆನಗೇನು ದೊಡ್ಡಿತು ತಂದೆ
ಕಱಿವ ಪಶುಗಳ ನೂಱು ಕೂಡಿಕೊಡು ತನಗೆನಲು
ನೆಱೆ ಸಂತಸಂಬಡುತ್ತವರವರಿಗಱುಪಿ ಕೂಡಿದನು ಗೋವುಗಳನೆಲ್ಲಾ
ಅಱಿದು ಕಾಯ್ತುರುತಿರಲು ವಶುವಿಗೊಕ್ಕಳವೆಂದು
ಕುಱುತವರು ಭತ್ತಮಂ ಕೊಡುತಿರಲು ಪಸಿದಿಹುದು
ಪಱಿದೆರಡು ಪೊತ್ತಿನೂಟವ ಕಂಡು ತಂದೆತಾಯಿಗಳು ಸಂತೋಷಿಸುವರು ೨೧

ಇತ್ತಲೀ ಪಶುಗಳಂ ಹೊಡೆದುತಂದಾಗ ಸುಕೃ
ತೋತ್ತಮಂ ಪೊಲದಲ್ಲಿ ಬಿಟ್ಟು ಎಲ್ಲವಮೇಯಿ
ಸುತ್ತಿರ್ದು ಪೂರ್ವಸಂಸ್ಕಾರದಿಂದೊಂದಱಿವು ತೋಱಿತಾ ಸತ್ಪುತ್ರಗೆ
ಚಿತ್ತಜಾರಿಯ ಭಜನೆಯಂ ಕೂರ್ತು ಮಾಡುವೆನೆ
ನುತ್ತ ಗೋವಂ ಬಿಟ್ಟು ಶಿವನಿಳಯಕೆಯ್ದುವಡೆ
ಹೊತ್ತಿಲ್ಲವೆಂದು ಚಿಂತಿಸುತಲಾ ಚಂಡೇಶಪಿಳ್ಳೆ ಬಳಿಕೀಗೆಯ್ದನೂ ೨೨

ನಳನಳಿಪ ಮಾಮರಂಗಳ ಸಾಲ್ಗಳಿಂದ ಪೆ
ಬ್ಬೊಳೆಯ ಸೌಂದರ್ಯಮಂ ಬೀಱುತ್ತ ಚೆಲ್ವಾದ
ಪುಳಿನಸ್ಥಲಕ್ಕೆಯಿದಿ ನಿಷ್ಠೆಯಿಂದಂ ಮಳಲಲಿಂಗಮಂ ಕೂರ್ತು ಮಾಡಿ
ಬಳಿಕಲಾ ಲಿಂಗಕ್ಕೆ ನದಿಯುದಕಮಂ ನೊನ್ನೆ
ಯೊಳು ತಂದು ಬಹುಜಲವನೆಱೆಯುದಾ ಕರದಿಂದ
ತಳಿದು ಮಜ್ಜನವನೆಸಗುತ್ತಿಹಂ ಚಂಡೇಶನತಿಶಯದ ಧರ್ಮಕೋಶಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಲ್ವಾದಿ ಗಂಧಂಗಳಂ ತೆಗದು ತೇದುತಂ
ದೊಲ್ವನಿತನರ್ಪಿಸುತ್ತೆ ಕೈಕಕ್ಕೆಗಳರೆಯು
ರಲ್ವಡವಿಯೊಳ್ಮಲ್ಲಿಗೆಗಳ ಪೂವಿಂ ಪೂಜಿಸುತ್ತ ಗುಗ್ಗುಳ ಮುಖ್ಯವ
ಸಲ್ವ ವಸ್ತುಗಳಿಂದು ಧೂಪಿಸುತ್ತಂ ಮತ್ತೆ
ಪುಲ್ವತ್ತಿಯಿಂದಾರತಿಯ ಬೆಳಗಿ ನೀವುತ್ತೊ
ರಲ್ವಮನದಿಂದ ನೈವೇದ್ಯಕ್ಕೆ ಸಂಕಲ್ಪಿಸುತ್ತ ಗೋವುಗಳ ಕರೆವಂ ೨೪

ಗೋವುಗಳಿರಾ ತಾಯಿಗಳಿರ ಮೋಹದಿ ಬನ್ನಿ
ದೇವನಭಿಷೇಕಕ್ಕೆ ಪಾಲ್ಗರೆವಿರೆಂಬನಿತ
ಕೀ ವಸುಧೆಯಲ್ಲಿ ಗೆಯಿತಂದ ಕಾರಣಿಕ ಪಶುಗಳು ಕೇಳುತಾ ದನಿಯನು
ತಾವೊಂದುಗೂಡಿ ಬಂದೆಡಗಲಸುತೊಂದೊಂದು
ಪಾವನ ಕ್ಷೀರಮಂ ಭೋರ್ಗರೆದು ಕಱೆವುತಿ
ಪ್ಪಾವೇಳೆ ಸಂತಸಂಬಟ್ಟು ನೋಡಿದನಾಗ ಚಂಡೇಶ್ವರಂ ನಲಿವುತಾ ೨೫

ಅನುರಾಗತಾಂಬೂಲವಿತ್ತು ಸಂತೋಷಿಸುವ
ನನಘನಾ ಚಂಡೇಶ ಶಿವನ ಭಕ್ತಿಗೆ ಕೂರ್ತು
ಮನವೊಲಿದು ತಲ್ಲಿಂಗದಲ್ಲಿ ಶಿವತೇಜಸ್ಸಮುಗ್ರವಾಗುತ್ತೆ ಮೆಱೆವಂ
ಅನವರತ ನೋಡಲ ಶರೀರಾದಿ ಸಂಬಂಧ
ಎನುತಾ ಪರಾತ್ಪರತರಃ ಶಿವಮೆಂದೆನುತ್ತಮು
ತ್ತನಿಯುಕ್ತ ಭಾವೈಃ ಸ್ವಭಕ್ತ್ಯೈಶ್ಚ ಮೂರ್ತಿ ಮಾನೆಂಬರ್ಥವೆಂತೆಂದೊಡೆ ೨೬

ದೇಹವಿಲ್ಲದ ಶಿವಂ ಪರಕೆ ಪರವಾಗಿಹ ಮ
ಹಾಹಿಕಟಕಂ ಶಿವಂ ತಾನಲ್ಲದಿಳೆಯಲ್ಲಿ
ಬೇಹ ವಸ್ತುಗಳಿಲ್ಲವಂತಿಪ್ಪ ನಿರ್ಮಲೋತ್ತಮಚಿತ್ತರಾಗಿ ಮೆಱೆವ
ಸ್ನೇಹಿಗಳದಾರುಂಟವಂದಿರಂ ರೂಪಾಗಿ
ಊಹಿಸಲು ಪೂಜೆಯುಂ ಕೊಂಬನೆಂಬಾ ಶ್ರುತಿಸ
ಮೂಹ ಭಾಷಣೆಯಂತೆ ಚಂಡೇಶಗಂ ಲಿಂಗಮೂರ್ತಿಯಾಗೆಸದಿರ್ದನೂ ೨೭

ಶ್ರೀ ಪರಾತ್ಪರನ ತಿಳಿಯಲ್ಕೇನ ಏನ ಹಿ
ರೂಪೇಣ ಸಾಧಕಃ ಸಂಸ್ಮರೇಣಸ್ತಥಾ
ಲಾಪದಿಂ ತಸ್ಯ ತನ್ಮಯತಾಂ ಸ ಯಾತಿ ಚಿಂತಾಮಣಿರಿವೇಶ್ವರ ಎನೆ
ಆ ಪರಿಯ ವೇದಾರ್ಥಮಪ್ಪ ಪೌರಾಣಾದಿ ನಿ
ರೂಪದಿಂ ಚಂಡೇಶನರ್ಚಿಸುತ್ತಿರ್ದನಂ
ತಾ ಪಾರ್ವತೀಶನಂ ಮನ್ಮಥವಿನಾಶನಂ ಮಸ್ತಕಧೃತಭೇಶನಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವ ರೂಪಿಂದ ಸದ್ಭಕ್ತಿಯಿಂ ಜಾನಿಸುವ
ನಾವನವನಿಷ್ಟ ಮಪ್ಪಾ ರೂಪಿನಿಂ ಮಹಾ
ದೇವನೊಪ್ಪುತ್ತ ಪೂಜಾನಿಧಾನಂಗಳಂ ಕೈಕೊಂಡು ತದ್ಭಕ್ತನಾ
ಪಾವನಂ ಮಾಡುವೆನೆನಿಪ್ಪ ಮಾಳ್ಕೆಯನೀಶ
ನೋವಿಯಾ ಮಳಲಲಿಂಗದೊಳು ಚಂಡೇಶ್ವರನ
ಸೇವೆಯಂ ಕೈಕೊಂಬನಾ ಶೂಲಿ ನಮಿತ ವನಮಾಲಿಯನಲಾಕ್ಷಿಭಾಲೀ ೨೯

||ಸಾಕ್ಷಿ|| ಅಶರೀರಾದಿ ಸಂಬಂಧಃ ಪರಾತ್ಪರಃ ಶಿವಃ
ಅನನ್ಯಭಾವೈರತ್ಯುಚ್ಚೈಃಸ್ಸ್ವಭಕ್ತೈರೇವ ಮೂರ್ತಿಮಾನ್ ೧

ಏನ ಏನ ಹಿ ರೂಪೇಣ ಸಾಧಕಃ ಸಂಸ್ಮರೇಸ್ತಥಾ
ತಸ್ಯ ತನ್ಮಯತಾಂ ಯಾತಿ ಚಿಂತಾಮಣಿರಿವೇಶ್ವರಃ ೨

ಅನವರತವಿಂತು ಶಿವಪೂಜೆಯಂ ಮಾಡುತ್ತ
ಇನನಸ್ತಮಯದ ಕಾಲದೊಳು ಹೊಡತಂದೂರ
ನನುನಯದಿ ಕೂಡಿ ನಿಚ್ಚಂ ಕಾವುತೀ ಪ್ರಕಾರದೊಳು ಲಿಂಗದ ಪೂಜೆಯ
ಮನವೊಸೆದು ಮಾಡುತ್ತ ಚಂಡೇಶನಿರ್ದನಿ
ಪ್ಪಿನೆಗಮಿತ್ತಲು ಪಶುವಿನೊಡೆಯರಾ ಪಾಲೊಳೊಂ
ದಿನಿಸಿಲ್ಲ ಕಱಿಯಲ್ಕಿದೇನೆಂದು ನೋಡುತ್ತ ಮತ್ತೊಂದು ದಿವಸದಲ್ಲಿ ೩೦

ನಾನಾ ಜನಂಗಳೆಯ್ತುರುತಲಚ್ಯುತಭಟ್ಟ
ರೇ ನಿಮ್ಮ ಮಗನೆಮ್ಮ ಜೀವಧನಮಂ ಕಾವು
ದೇನು ವಿಪರೀತ ಒಕ್ಕುಡಿತೆ ಪಾಲಾಗದಿರ್ದಪುವು ಪಶುಗಳು ಕಱಿಯುವು
ತಾನಾವುಗಳು ನಮಗೆ ಪಾಲು ನಿಮಗಾಯ್ತುಲಾ
ಹಾನಿಯೇ ನಿಮ್ಮವನ ಕಾಹಿನ್ನು ಬೇಡೆನಲು
ಮೌನದಿಂದಿರ್ದು ಬಳಿಕನಿಬರಿಗೆ ವಿನಿಯಮಂ ನುಡಿದನಂತಾ ಪಾರ್ವನೂ ೩೧

ಇಂದೊಂದು ದಿನಕೆ ಸೈರಿಸಲು ನಾಳಿನ ದಿನದೊ
ಳೆಂದಿನಂದದೆ ಕಱಿಯುದಿರ್ದವಾದೊಡಮೆನ್ನ
ನಂದನನ ಕಾಹ ಬಿಡಿಸೂದು ನೀವೆಂದವಂದಿರಿಗೆ ಕೈಮುಗಿದು ಪಾರ್ವಂ
ಬಂದಿರುಳಿನಲ್ಲಿ ಮಗನಂ ಕರೆದು ನುಡಿದನೆಲೆ
ಕಂದಯ್ಯ ಪಸಿವಡಸಿ ಸಾವುತಿರ್ದಕಟ ನಿ
ನ್ನಿಂದ ಜೀವಿಸಿದೆವೀಗೇಕಿಂತುಟಾಯ್ತೆಂದು ನುಡಿದನಚ್ಯುತಭಟ್ಟನೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತುಱುಗಳಂ ಕಾಯುವ್ವತಿಹೆ ಪಶುಗಳೊಕ್ಕುಡಿತೆಯಂ
ಕಱೆಯುವು ಗಡಾ ಹಾಲನೇನ ಮಾಡುವೆ ಎನಗೆ
ನೆಱೆ ಪೇಳೆನಲು ಮಾಳ್ಪ ಶಿವಕಾರ್ಯದುನ್ನತಿಯು ಜೀವಿಯೆನಿಪೀ ತಂದೆಗೆ
ಅಱುವುದು ಮಾರ್ಗವಲ್ಲೆಂದು ಮೌನದೊಳಿರಲು
ಮಱುಗಿಯಚ್ಯುತ ಭಟ್ಟನವುಡುಗಡಿವುತ್ತಲಾ
ಮಱುದಿನಂ ನೋಳ್ಪೆನೀತನ ಬಗೆಯ ನಾರೈದೆನುತ್ತ ನಿಶ್ಚೈಸಿರ್ದನೂ ೩೨

ಅಂದಿನಿರುಳಂ ಕಳಿದು ಬೆಳಗಾಗಲಾಗಿ ತ
ನ್ನಂದನಂ ತಾನೆಂದಿನಂತೆ ತುಱುಗಳ ಹೊಡೆದು
ತಂದುಬಿಟ್ಟವು ಮೇವುತಿರಲು ಸೈಕತಲಿಂಗಮಂ ಭಕ್ತಿಯಿಂದರ್ಚಿಸಿ
ಚಂದ ಚಂದದ ಗೋವುಗಳ ಹೆಸರಹಿಡಿವುತಾ
ನಂದದಿಂ ಕರೆಯಲವು ಬಂದು ಬಳಿಕೆಡಗಲಿಸಿ
ನಿಂದು ಕಱೆವುತ್ತಿರಲು ಹಿಂದುಗೊಂಡೆಯಿತರುತಿರಲು ತಂದೆಯೆನಿಸುವ
ಪಾರ್ವನೂ ೩೪

ಹೃದಯದೊಳಗತಿಶಯ ವ್ಯಾಕುಳತೆಯಿಂದ ಬಂ
ದಿದಱ ಬಗೆಯಂ ನೋಳ್ಪೆನೆಂದೊಂದು ಮಱನೇಱ
ಸದಮಲ ಮಹಾಲಿಂಗ ಮಸ್ತಕದೊಳಾವುಗಳು ಪಾಲ್ಗಳಂ ಕಱೆವುತಿರಲು
ಅಧಮನೆಯಿತಂದು ಜಱೆವುತ ಮಗನ ಕೊಲ್ಲಲಾ
ಅದೆ ನಿನ್ನ ಲಿಂಗವೆಯಿದೇನೆಂದು ಕೋಪದಿಂ
ದೊದೆದನಾ ಸ್ವಾಮಿಯಂ ಕೆಱಹುಗಾಲಿಂದಲಾ ಪಾತಕಂ ನೆಱೆಘಾತಕಂ ೩೫

ಕಂಡು ಹರ ಹರ ಮಹಾದೇವ ಎಂದಾಗಲಾ
ಚಂಡೇಶ್ವರಂ ನೋಡಿ ತಂದೆಯೆಯಿವಂ ನರಕ
ಕೊಂಡದೊಳು ಮುಳುಗುವಚ್ಚೊನಿ ಈತನ ತಲೆಯ
ಹೊಡೆಯಬಹುದಿರಿಯಬಹುದು
ಖಂಡಪರಶುವಿನ ವಾಕ್ಯಂ ದ್ರೋಹಿಗಳ ತಲೆಯ
ಖಂಡಿಪುದು ತಾಯ್ತಂದೆಯೊಡ ಹುಟ್ಟಿದವರು ಮುಂ
ಕೊಂಡಾವನಾಗಲಾ ಮಾತರಃ ಪಿತರಶ್ಚಶುಭ್ರಾತರೋ ಎನುತಿರೇ ೩೬

||ಸಾಕ್ಷಿ|| ಮಾತರಃ ಪಿತರಶ್ಚೈವ ಭ್ರಾತರೋ ಬಾಂಧವಸ್ತಥಾ
ಶಿವಕಾರ್ಯೇಷು ವಕ್ರಸ್ಥಾಹಂತವ್ಯಾ ಶಂಭುಶಾಸನಾತ್ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿಗೆ ತಂದೆಯೆನಿಪ ಪಾತಕನ ತಲೆಯಂ ಹೊಡದು
ಬಗೆಯು ಬೇಕೆದೆಯನೆಂದಾಯುಧವನಱಿಸುತಿರೆ
ನಗಜಾಧಿಪಂ ಮಳಲಲಿಂಗದೊಳಗಿಂ ಫಣೇಂದ್ರೋರು ಕಂಕಣದ ಕೈಯ್ಯ
ನೆಗಪಿ ನೀಡುತ್ತ ಚಂಡೇಶ್ವರಾ ನಿಷ್ಠನೇ
ಮಗನೆ ನಿನಗೀ ಕೊಡಲಿಯಿದೆಕೊಳ್ಳೆನುತ್ತ ಕೊಡೆ
ರಘುಗರಘುಗಿಪ ಬೆಳಗಿನಿಂ ಮೆಱದುದಾ ಕೊಡಲಿ ಸತ್ಕೀರ್ತಿಪಸರಿಸಲು ಪಡಲಿ ೩೭

ಘುಡಿಘುಡಿಸುತೆಯ್ದಿ ಪಿತನೆನಿಪ ವಿಪ್ರನ ಶಿರವ
ಹೊಡದನಾ ಕೊಡಲಿಯಿಂ ತಲೆ ಮುಂಡವೆರಡಲ್ಲಿ
ದುಡುಹು ದುಮ್ಮೆಂದು ಬಿದ್ದವು ಬಳಿಕಲೀಶ್ವರನನಪ್ಪಿ ಮುಂಡಾಡಿ ದೇವ
ಮೃಡನೆ ಪಾತಕನಿಂತು ಮಾಡಿದನು ಮೆ
ಲ್ಲಡಿಯುಗುರ್ಗಳಖಿಳ ಬೊಮ್ಮಾಂಡಂಗಳಿವುದಂ
ಪಡೆಯೆ ಕೇಳೀ ಪಾರ್ವನೆಂಬ ಹುಳುವಂ ಕೊಂದೊಡೇನಾದುದೆಂದು ನೊಂದಂ ೩೮

ಮಱುಗುತಿಹ ಚಂಡೇಶ್ವರನ ಭಕ್ತಿಗಂ ಮೆಚ್ಚಿ
ಪೆಱೆಯ ಜಡೆಮುಡಿಯೆ ಗಂಗೆಯು ಕರ್ಣದಲ್ಲಿ ಕದ್ರು
ಗಱಿವಹಿಯ ಕುಂಡಲದ ಹಣೆಗಣ್ಣ ಪಂಚಮುಖವೀರೈದು ಭುಜದ ಕೊರಲಾ
ಕಱೆಯ ಫಣಿ ಪವಿ ಪರಶು ಪಾಶಾಂಕುಶಾಸಿಗಳು
ಮಿಱುಪ ಶೂಲಾಭಯಾನಲಘಂಟೆಯುರಮೈಯ್ಯ
ಸಱಿಮಿಂಡಿತೊವಲುಡಿಯ ಕಾಲ್ಗಣ್ಣ ನಂದಿಯೇಱದ ಶಿವಂ
ಮೆಱೆದಿರ್ದನೂ ೩೯

ಪನ್ನಗಾಭರಣನಿಂತತಿ ಮೋಹದಿಂದಂ ಪ್ರ
ಸನ್ನನಾಗಲು ಕಂಡು ಚಂಡೇಶ್ವರಂ ನಲಿದು
ತನ್ನಕ್ಷಿಯಲ್ಲಿ ದಿವ್ಯಾನಂದ ಜಲ ವಂಗದಲ್ಲಿ ಪುಳಕೋದ್ಗಮಗಳೂ
ಉನ್ನತದ ಕಂಠದೊಳು ಗದ್ಗದಿಕೆ ಸಹಿತ ಶಿವ
ಪನ್ನಳಿನದೊಳ್ಬಿದ್ದು ಹೊರಳೆ ತೆಗದಪ್ಪುತ್ತ
ನಿನ್ನಿಷ್ಟವೇನು ಮಗನೇ ಬೇಡನಲ್ಕೆ ಕೈಮುಗಿದಾತನಿಂತೆಂದನೂ ೪೦

ದೇವ ಹರಿಯಜರು ವಾದಿಸಿ ನಿಮ್ಮ ಪದ ಮಸ್ತ
ಕಾವಳಿಯ ಕಂಡುದಿಲ್ಲತ್ರಿ ಮುಖ್ಯರು ವೇದ
ಪಾವನಸ್ತೋತ್ರದಿಂ ಭಜಿಸಿ ನಿಮ್ಮಯ ನಿಜವನಱದುದಿಲ್ಲಕ್ಷ ಪಾದಾ
ಪ್ರಾವರ್ತಕಾತಿಶಯ ತಾರ್ಕಿಕರು ನಿಮ್ಮ ನೆಲೆ
ಯಾವಿಧವೆನಿಪ್ಪುದಂ ತಿಳಿದುದಿಲ್ಲಾನೋರ್ವ
ಜೀವಿಯೆನಗೆಲೆ ಜೀಯ್ಯ ನೀನೆ ಸಾನ್ನಿಧ್ಯದೊಳಗಿರಲೇನ ಬೇಳ್ಪೆನಿನ್ನು ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗ್ರಗಣ್ಯಸ್ವಾಮಿ ನಿನ್ನೀಸ್ವರೂಪಂ ಸ
ಮಗ್ರತೆಯೊಳರ್ಚಿಸುತ್ತಿರ್ಪ ಪದವೀಯ್ಯೆನಲ
ನುಗ್ರಹವನೊಲ್ದು ಚಂಡೇಶಂಗೆ ತಾನೆ ಗುರುವಾಗಿ ಕರುಣಿಸಿ ಬೋಧಿಸೀ
ದಿಗ್ರಮಣನುತ ಶಂಭು ಸಕಲಗಣತತಿವೆರಸಿ
ವಾಗ್ರಮ್ಯದಿಂದ ಸತ್ಕರಿಸೆ ತವ ಪಿತನೆನಿಸಿ
ದಾಗ್ರಾಮ್ಯನಿಳಿಯಬಹುದೇ ನರಕದೊಳಗೆಂದವಂಗಸುವನಿತ್ತನೀಶಂ ೪೨

ದಿವ್ಯಪ್ರಸಾದವಂ ಕರುಣಿಸುತ ಮುಂಡಾಡಿ
ನವ್ಯ ಮಣಿಮಯ ಪುಷ್ಪಕದೊಳು ಚಂಡೇಶನಂ
ಸೇವ್ಯವೆನೆ ಕುಳ್ಳಿರಿಸಿ ಕುಸುಮವೃಷ್ಟಿಗಳಿಂದ ಧೂಪಧೂಮ್ರಂಗಳಿಂದ
ಭವ್ಯ ಸುರದುಂದುಭಿಗಳಿಂದುಘೇಯೆಂಬ ಶಿವ
ಕವ್ಯಖಿಳದಿಂ ದಖಿಳಲೋಕದ ಜನಂ ನಮಿಸ
ಲವ್ಯಯಂ ಕೈಲಾಸಕಾತನಂ ಕೊಂಡೊಯ್ದನಧಿಕ ಸಂಭ್ರಮದೊಳಗಾ ೪೩

ಆತನಂ ಕೊಂಡೊಯ್ವ ಕಾಲದೊಳು ಚಂಡೇಶ
ನೋತು ಕಾಯ್ವಲ್ಲಿ ಬಂದೀಶ್ವರಂ ತನಗೆ ಮೋ
ಹಾತಿಶಯದಿಂ ಪಾಲ ಕಱೆದ ಕಾರಣಕ ನಿಜಗೋವುಗಳ ಕೈಲಾಸಕೆ
ಪ್ರೀತಿಯಿಂ ಕೊಂಡೊಯ್ದನಾ ಪಾರ್ವತೀಪತಿಯಪ್ಪ
ಭೂತೇಶನದ ಕಂಡು ಸರ್ವಲೋಕದ ಜನ
ವ್ರಾತವಂತಲ್ಲಿ ಕೀರ್ತಿಸಿದರಾ ಸಜ್ಜನರ ಸಂಗಕೆಣೆಯಾವುದೆಂದೂ ೪೪

ನಂದೀಶ್ವರನ ಬಾಗಿಲಲ್ಲಿ ಪುಷ್ಪಕವಿಳಿದು
ವಂದಿಸುತ ನಡೆತಂದು ಚಂಡೇಶ್ವರಂ ತನಗೆ
ಮುಂದೆಯ್ದಿ ಸಿಂಹಾಸನಾಸೀನನಾದ ಸರ್ವೇಶ್ವರನನೋಲೈಸುತಾ
ನಿಂದ ನಿಷ್ಠನನಪ್ಪಿ ತೆಗೆದು ಮುಂಡಾಡುತಾ
ನಂದಿಸುತಲಿವನ ನಿಷ್ಠೆಯ ಭಾವಮಂ ನಲ್ವಿ
ನಿಂದುಧರನಳ್ತಿಯಿಂ ಕೊಂಡಾಡಿ ದೇವಿಯರ ಕೂಡೆ ಕೀರ್ತಿಸಿ ಬಳಿಕ್ಕಾ ೪೫

ನಂದೀಶ್ವರಾ ನೋಡಿದಾ ವೀರಭದ್ರನೀ
ನಿಂದಿವನ ನಿಷ್ಠೆಯಂ ಕಂಡಾ ಗಣೇಶ್ವರರ
ವೃಂದವೀಕ್ಷಿಸಿದಿರೇ ವಿಘ್ನೇಶ ಗುಹರು ಪರಿಕಿಸಿದಿರೇ ನಮ್ಮ ಕೂರ್ತು
ತಂದೆ ಸದ್ಬ್ರಾಹ್ಮಣನ ತಲೆಯನಿಕ್ಕಡಿಮಾಡಿ
ವಂದಿಸುತ ನಮ್ಮನಜ್ಞಾನಿಯಂಟಿದನೆಂದು
ನೊಂದು ಕೀರ್ತಿಪ ಭಕ್ತರುಂಟೇ ಯೆನುತ್ತ ಕೊಂಡಾಡಿದಂ ಸರ್ವೇಶನು ೪೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂಡೇಶ್ವರಾನಗ್ರಹಂ ಸಪ್ತದಶವೆಂಬ
ಮಂಡನದ ಶಿವನ ಹದಿನೇಳು ಲೀಲೆಯ ಕಥೋ
ದ್ದಂಡ ಭಕ್ತಿಯ ಕೇಳಿದಾ ಎಂದು ಹಲಗೆಯಾರ್ಯಂ ಕೊರ್ತು ತನ್ನಯ ಕೃಪಾ
ಪಿಂಡವಹ ಕೆಂಚವೀರಾಖ್ಯಂಗೆ ನಲಿದು ಮುಂ
ಕೊಂಡು ಪೇಳ್ದ ಕಲ್ಪ ಕಲ್ಪದೊಳಗಿಂತೆಂದು
ಖಂಡೇಂದುಧರ ಮಹಿಮೆಯುಂ ಮುಗಿದುದಿಲ್ಲಿಗಿದು
ಮುಂದದೇನೆನಲೊರವೆಸು ೪೭

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೊರ್ತುಪದನಂ ಮಾಡಿದಂ ೪೮

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಸ್ಪದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಚಂಡೇಶ್ವರಾನುಗ್ರಹಕ್ಕೆರಡು ಕಾಂಡಂ ಸಂಧಿ ಹದಿನೈದಲಾ ೪೯

ಅಂತು ಸಂಧಿ ೧೫ಕ್ಕಂ ಪದನು ೭೫ಕ್ಕಂ ಗ್ರಂಥ ೬೧ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೩೮

ವಿಷಧರಲೀಲೆ

ವಿಷಾಪಹರಣಂ ಚೈವ ಮಷ್ಟಾದಶಮಿತಿಸ್ಮೃತಂ
ಎಂಬುದಕ್ಕೆ ಕಥೆ

ಸುರರಸುರರಮೃತಮಥನಂಗೆಯ್ಯೆ ಫಣಿಯುಗುಳೆ
ಗರಳವನಿಬರ ಸುಡಲ್ಕವರ ಮೊಱೆಗೇಳಿ ಶಂ
ಕರನದಂ ಕೊರಲೊಳಂ ತಳೆದೊಪ್ಪಿದಂ ಕೂರ್ತು ಲೀಲೆ ಹದಿನೆಂಟಱಲ್ಲಿ

ಮಾರಾರಿ ಎನಿಸಬಹುದೇ ಎಂದು ನಿನ್ನಯ ಶ
ರೀರದರ್ಧವನೀಳ್ದುಕೊಂಡನುಜೆ ಗಂಗೆಗೆ ಬಿ
ಡಾರಮಂ ಕೊಟ್ಟು ಜೆಡೆಯಂ ಮಿಕ್ಕ ದಕ್ಷಿಣದ ಭಾಗಮಂ ಸೂಱೆಗೊಳ್ಳಲು
ಪ್ರಾರಂಭಿಸಿದಳೋ ಮಹಾಕಾಳಿ ಎಂಬಂದದಿಂ
ರಾರಾಜಿಸುವ ನೀಲಕಂಠದಿಂದೆಸದಿರ್ದು
ದಾರಿ ಜಯ ಶಾಂತಮಲ್ಲೇಶದಿಕ್ಪೂರ್ತಿ ಸತ್ಕೀರ್ತಿ ಗಣಚಕ್ರವರ್ತಿ ೧

ಕಂಜಭವಕಲ್ಪನಾ ಕರ್ಮರಸವೆಂದೆಂಬ
ನಂಜಹರಿಮಾಯಾರಸಪ್ರವಾಹದ ಹಿರಿಯ
ನಂಜ ವೈಕಾರರಸಶಿಷ್ಯತನುಕಮಳಜಾಂಡಾ ಪೂರ್ಣವೆಂದೆನಿಸಿದಾ
ನಂಜಿಬಹುಲಾಜ್ಞಾ ಜ್ಞಾನರಸಭರಿತವಾಗಿರ್ಪ
ನಂಜ ಶಾಂತಿಯ ಮಾಡಿದಮೃತಮಯ ಗುರುಶಾಂತ
ನಂಜದೇಶಿಕಜಗದವೇಶಿಕವನಳದೆಯಯ್ಯ ಜಯಚಿಚ್ಛಾಸಕಾ ೨

ಬಾಲನೆನ್ನಯ ಬಿನ್ನಪವನವಧರಿಪುದು ಗುರು
ಲೋಲ ಚಂಡೇಶ್ವರಾನುಗ್ರಹದ ಹದಿನೇಳು
ಲೀಲೆಯಂ ಕೇಳಿ ಕೃತಕೃತ್ಯನಾದೇಂ ದೇವ ಸರ್ವತತ್ವಾಧೀಶನಾ
ನೀಲಕಂಠತ್ವದವಿಷಾಪಹರಣಾಷ್ಟದಶ
ದಾಲಲಿತಕಥನವೆಂತೆಂದು ಬೆಸಗೊಳಲು ನೀ
ನಾಲಿಸಾ ಕೆಂಚವೀರಾಹ್ವಯಾ ಎಂದು ಬಿತ್ತರಿಸಿದಂ ಹಲಗೆಯಾರ್ಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೈವಪೌರಾಣದೊಳು ಧರ್ಮಸಂಹಿತೆಯಲ್ಲಿ
ಭಾವಶುದ್ಧದೆ ವಂದಿಸುತ್ತಲಾ ನಂದೀಶ
ದೇವನ ಪದಾಬ್ಜಕೆ ಸನತ್ಕುಮಾರಂ ಬಿನ್ನಪಂಗೆಯ್ದನೆಲೆಲೆ ಗುರುವೆ
ಶ್ರೀ ವಿಶ್ವನಾಥನೊಲ್ದಧಿಕ ವಿಷಮಂ ಕಂಠ
ಕಾವ ಕಾರಣದಿಂದ ಧರಿಸಿದಂ ತತ್ಕಥೆಯ
ಪಾವನಾರಾಧ್ಯ ನಿರವಿಪುದೆನಲವಂಗೊರೆದನೈ ಕಂದ ಕೇಳೆಂದನೂ ೪

ನಿರವಿಸುವೆನಾಲಿಸು ಸನತ್ಕುಮಾರಾ ಮುನ್ನ
ಶಿವನೋಲಗಕ್ಕೆಯ್ದಿ ದೂರ್ವಾಸಮುನಿವರಂ
ಸುವಿಮಲಸ್ತೋತ್ರಮಂ ಮಾಡಿ ಬೀಳ್ಕೊಂಬಲ್ಲಿ ಪಾರ್ವತಿಯದೋರ್ವ ದೇವ
ಯುವತಿ ತನಗೀಯಲದ ಶಿವಗರ್ಪಿಸುತ್ತ ಧರಿ
ಸುವ ಕಾಲಕಾ ಯತಿಯಃ ಕಂಡು ಮೋಹದೊಳೀಯೈ
ತವೆ ಜಗನ್ಮಾತೆ ಶರಣಾಗು ಬದುಕಿದೆನೆಂದು ಕೈಕೊಂಡನಾ ಮಾಲೆಯಾ ೫

ಮುಂಕೊಂಡು ಮಂದಾರಮಾಲಾ ಪ್ರಸಾದಮಂ
ಶಂಕರಾಂಶದ ಮುನೀಶಂ ಕೊಂಡು ಬರುತಿರಲು
ಝೇಂಕರಿಸಿ ತುಂಬಿವಿಂಡೆಯ್ದಿ ಮುಸುಱಲು ನೀಲಪಟವ ಮುಸುಕಿಟ್ಟು ಬಪ್ಪಾ
ಅಂಕಿತವ ದಾಗುತಿರಲಾ ಕಾಲದೊಳಗೆ ನಿ
ಶ್ಯಂಕದೇವೇಂದ್ರವೀಶ್ವರನನೋಲೈಸಲ್ಕೆ
ಭೋಂಕನಿದಿರಾಗಿ ಬರುತಿರ್ದನಾತನ ವೈಭವಂ ಕಣ್ಗೆ ಸೊಗಸಾದುದು ೬

ಐರಾವತವನೇಱಿ ವಜ್ರ ಮೌಕ್ತಿಕರತ್ನ
ಕೀರಣದ ಮಕುಟದಿಂ ಕಂಠಾಭರಣ ಸುಕೇ
ಯೂರ ಪಾದಾಲಂಕೃತದೆ ದಿವ್ಯ ವಸ್ತ್ರಮಾಲ್ಯನುಲೇಪನ ಒಪ್ಪುವಾ
ಸಾರವೆನಿಸುವ ನಿರ್ಮಲಾಕಾರಮಪ್ಪ ಶೃಂ
ಗಾರದಿಂ ಚತುರಂಗಬಲದ ಸಂದಣಿಯು ಗಂ
ಭೀರ ವಾದ್ಯಂಗಳುಲಿಯುಲು ಬರುತಿರ್ದನಂದಿಂದ್ರನನಿಮಿಷಚಂದ್ರನೂ ೭

ಪಿರಿಯ ತಗರಾಗ್ರ ಮಹಿಷಂ ನರಂ ಮಕರವಾ
ಹರಿಣ ಹಯ ವೃಷಭಂಗಳೇಱಿ ಶಕ್ತಿಯುಃ ದಂಡ
ವರ ಕೊಂತ ಪಾಶಧ್ವಜಂ ಖಡ್ಗಶೂಲಂಗಳಾಂತು ಶಿಖಿ ಯಮ ರಾಕ್ಷಸಾ
ವರುಣ ಮಾರುತ ಯಕ್ಷಪತಿ ರುದ್ರರೆನಿಪ ದಿ
ಗ್ವರರು ಬಿಡದೋಲೈಸಿ ಬರಲು ವಜ್ರಾಯುಧದ
ಗರುವ ನೀವೆಡೆಗಮರತರುವ ಪೋಲ್ವಾತನೈತರುವಕ್ಕಱಿಸದಿರ್ದುದು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೆರ್ವೆಳಗು ಪಸರಿಸುವ ಖಂಡೆಯದ ಪಟುಭಟರ
ಗುರ್ವಿನಿಂ ಕೀರ್ತಿಸುವ ಮಾಗಧರಿನಾ ರಂಭೆ
ಯೂರ್ವಶಿ ತಿಲೋತ್ತಮೆಯರಾದಿಯಾದಖಿಳ ದೇವಸ್ತ್ರೀಯರಂದಣಗಳೂ
ಸರ್ವಸಂಭ್ರಮದಿಂದಲೋಲೈಸಿ ಬರುತಿರ್ಪ
ಗೀರ್ವಾಣಪತಿಯ ವೈಭವವನೀಕ್ಷಿಸುತಾಗ
ದೂರ್ವಾಸಮುನಿ ಕಂಡು ಸಂತೋಷಿಸುತ್ತ ಕೃಪೆಮಾಡಲೆಂದನುಗೆಯ್ದನೂ ೯

ದೇವಿಯರು ಪಾಲಿಸಿದ ಮಂದಾರಮಾಲೆಯುಮ
ನೀವೆನಿವಗೆಂದು ಕರುಣದೊಳು ಹತ್ತಿರಕೆ ಬರೆ
ದೇವೇಂದ್ರನಾ ವಾಹನವಳಿಯನಳ್ಕಿ ಶರಣೆನ್ನನಾ ಮುನಿಯ ಕಂಡು
ಆ ವಿವರಮಂ ನೋಡಿ ತಾಳಿಕೊಂಡೆಲೆ ಸುರಪ
ಪಾವನದ ಮಂದಾರ ಮಾಲೆಯಂ ನಿನಗೆ ಕೊ
ಳ್ಳೀವೆನೆನೆ ಗರ್ವದೊಳುದಾಸೀನದಿಂ ತೆಗೆದುಕೊಂಡನಂಕುಶದ ತುದಿಯಿಂ ೧೦

ಸದಮಲದ ಮಂದಾರಮಾಲೆಯನವಜ್ಞೆಯಿಂ
ಮದಗಜದ ಕುಂಭಸ್ಥಲಾಗ್ರಕ್ಕೆ ಪಾಯ್ಕಲಂ
ತದು ಮಸ್ತಕವನಲುಗಲಿಳೆಗೆ ಬೀಳಲ್ಕೆ ಕರಿ ಹಯ ರಥ ಪದಾತಿಬಲದಾ
ಪದಹತಿಯೊಳಿನಿಸಿನಿಸದಾಗಿ ಪರಿಪಡಲು ಕಂ
ಡೊದವಿ ಕೋಪಿಸಿದನಾ ದೂರ್ವಾಸಮುನಿ ಎನಗೆ
ಮದನಾರಿಯಂಗನೆ ಜಗನ್ಮಾತೆ ಇತ್ತುದಂ ಕೆಡಿಸಿದಾ ಎಂದು ಮುಳಿದಂ ೧೧

ರೂಪು ಯೌವ್ವನದ ಮಹದೈಶ್ವರ್ಯಬಹು
ತಾಪತಿಯೆನಿಪ್ಪ ಗರ್ವದೊಳೆಲವೊ ದೇವೇಂದ್ರ
ಪಾಪಿ ನೀಂ ಶಿವನ ನಿರ್ಮಾಲ್ಯಮಂ ಗಜದ ಕುಂಭಕಿಟ್ಟು ತುಳಿಯಿಸಿದಲ್ಲೆ
ಶಾಪಮಂ ಹಿಡಿ ಹಿಡಿ ಎನುತ್ತ ದೂರ್ವಾಸಮುನಿ
ಕೋಪಿಸಿದನಖಿಳ ಸಂಪದವಳಿದು ನಿಮಿಷಕ್ಕೆ
ಪೋಪುದೈ ದಾರಿದ್ರವಡಸಿ ನೀಭ್ರಷ್ಟನಾಗೆಂದು ಘೂರ್ಮಿಸಿ ನುಡಿದನೂ ೧೨

ಧಿಟ್ಟ ದೇವೇಂದ್ರ ನಿನ್ನೈಶ್ವರ್ಯವೆಲ್ಲವಂ
ಕೆಟ್ಟು ನೀರೊಳು ನೆಱಿಯಲೆಂದುಗ್ರಶಾಪಮಂ
ಕೊಟ್ಟ ಮಾತ್ರದೊಳವನ ಸಕಲ ಭೋಗದ್ರವ್ಯಗಳ ಕಿಳ್ತು ಸಾಗರದೊಳು
ಇಟ್ಟಂತುಟಾಗಿ ಪುರುಷಾಮೃತ ಸುರತ್ನಂಗ
ಳೊಟ್ಟು ದೀವ್ಯಸ್ತ್ರೀಯರ ಮರದುಘ ಸಂಗವಾ
ಕಟ್ಟಧಿಕದೈರಾವತಾದಿ ಸಂಪದವುಡುಗಿಹೋದುದಾ ನಿಮಿಷದಲ್ಲಿ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಮ್ಯವಪ್ಪ ಭೋಗಂಗಳಳಿದಾ ದಟ್ಟ
ದಾರಿದ್ರವಾಗಲು ಬೃಹಸ್ಪತಿಯು ಕೂಡಿಯಕ
ಟಾ ರಜತ ಪರ್ವತಕ್ಕೆಯ್ತರಲು ಸಿರಿ ಹೋದುದೆನಲಾತನಿಂತೆಂದನು
ಕಾರುಕರ ತಿದಿ ಸುಯ್ಯೆ ಪಂಚಲೋಹಂ ಕರಗಿ
ನೀರಪ್ಪವುತ್ತುಮರ ಕೋಧದಶ್ವಾಸದಿಂ
ದಾರಯ್ಯೆ ತಪ್ಪುಮಾಡಿದೆರ ಸಂಸತ್ತು ಬೇಯದೆ ಮಾಣ್ಬುದೇ ಎಂದನೂ ೧೪

ಇದಕಿನ್ನು ಭಯಭಕ್ತಿಯಿಂದಲಾ ಮುನಿವರನ
ಪದಕಮಲಕೆಱಗಿ ಕೃಪೆಯಂ ಪಡೆಯಲೀವನ
ಭ್ಯುದಯಮಂ ಸಜ್ಜನರ ಕೊಪವದು ಪುಲ್ಗಿಚ್ಚು ಮುಳಿದು ಸಾಗರದನೀರಾ
ಪದೆದು ಹೀರುವ ವಡಬನಂತೆ ದೇವೇಂದ್ರಕೇ
ಳಧಮರೇ ಪ್ರಾಣಕ್ಕೆ ತೊಡುವರುತ್ತಮರು ನಿಮಿ
ಪದೊಳು ತಿಳಿದೊಲ್ವರೆಂದೊರೆದನಾ ಗುರುವಂತದಂ ಕೇಳಿ ದೇವೇಂದ್ರನೂ ೧೫

ನಡನಡುಗುತೆಯ್ತಂದು ಭೀತಿಯಿಂ ದೂರ್ವಾಸ
ಮೃಡಮೂರ್ತಿ ಸರ್ವಾಪರಾಧಿಯಾಂ ದೇವ ನಿ
ಮ್ಮಡಿ ಇತ್ತ ಮಂದಾರಮಾಲೆಯನುದಾಸೀನಮಂ ಮಾಡಿ ಪಿಡಿದಧ ಮನೂ
ಬಿಡದೆ ಸಿರಿ ಬರಲು ಮೊಳಕಾಲೊಡ್ಡಿದಂತೆಂದು
ಪೊಡವಿಯಾಡುವ ಮಾತಿಗೀಡಾಗಿ ನಿನ್ನ ಕೃಪೆ
ವಡೆಯಲಱಿಯದ ಪಾಪಿಯಾನೆನ್ನ ಸಲಹೆಂದು ಕೀರ್ತಿಸಿದನಾ ಸುರಪನೂ ೧೬

ಮದವನೀವೈಶ್ವರ್ಯವೆಂಬುದದು ಕಂಣಪಟ
ಲದ ರೋಗವಾ ನೃಪನ ಮುಂದಿರ್ದೊಡೊಮ್ಮೆ ಕಂ
ಡಿದಿರೊಳಿರಲುಂ ಮತ್ತೆ ಕಾಣನಂತದಕೆ ದಾರಿದ್ರ್ಯಾಂಜನವನೆಚ್ಚಲು
ಸದಮಲತೆಯಪ್ಪವಾತನ ಕಂಗಳಾ ತೆಱದೊ
ಳೊದವಿದ ವಿಶೇಷಭಕ್ತಿಯೊಳು ಮತ್ತಂ ಮುನಿಯ
ಪದಕೆಱಗಿ ಬಿನ್ನವಿಸುತಿರ್ದನಾ ಭಾಷೆ ಹೋದುದಱಿಂದ ದೇವೇಂದ್ರನು ೧೭

ಎಲೆಲೆ ದಾರಿದ್ರ್ಯವೇ ನಿನ್ನ ಕುರಿತಾಂ ಮಹೋ
ಜ್ವಲಭಕ್ತಿಯಿಂದ ವಂದಿಸುವೆನೇಂ ಕಾರಣಂ
ಸಲೆ ನಿನ್ನ ಸುಪ್ರಸನ್ನತೆಯಿಂದದೃಶ್ಯಕರಣದ ಸಿದ್ಧನಾದೆನಲ್ಲಾ
ಪಲವು ಭೂಮಿಪ ಫೌಜಿಂಗೆ ನಾಂ ಪೋಗಲಾ
ನೊಲಿದೆಲ್ಲರಂ ಕಾಬೆನೆನ್ನನೊರ್ವಂ ಕಾಣ
ನಲೆಯಂದನೋರ್ವನಾ ಮಾಳ್ಕೆಯಿಂದಾರಿದ್ರ್ಯವಾರ ಕೀಳಂ ಮಾಡದೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಪರಿಯೊಳಖಿಳ ಸಂಪತ್ತಳಿದ ಕಾರಣಂ
ತಾಪಸೋತ್ತಮಗೆಱಗಿ ದೇವ ರಕ್ಷಿಪುದೆನಲು
ಕೋಪಮಂ ಬಿಟ್ಟು ಕರುಣಿಸಿ ನುಡಿದನಲೆಲೆ ದೇವೇಂದ್ರ ಕೇಳ್ನಿನ್ನ ಭಾಪೆ
ಆ ಪಾಲಸಾಗರದೊಳದೆಯದಂ ಕಡೆಯಲ್ಕೆ
ರೂಪಿಸುವುದಲ್ಲಿ ನಿಮ್ಮೈಶ್ವರ್ಯವೆಂದುಱೆ ನಿ
ರೂಪೆ ಹಸಾದವೆಂದಾ ಯತಿಯು ಬೀಳ್ಕೊಂಡು ಬಂದನಂತಾ ಸುರಪನೂ ೧೯

ದೇವೇಂದ್ರನಾ ಮುನಿಯು ಬೀಳ್ಕೊಂಡು ಬಳಿಕಲಸು
ರಾವಳಿಯ ಮುಂದಕ್ಕೆ ಬಂದು ಬಿನ್ನವಿಸಿದಂ
ತಾ ವೆರಡುವೈಕವಾ ಕಶ್ಯಪನ ಪುತ್ರರೆಮ್ಮೆಡರ ನಿರದಾಂತುಕೊಳ್ಳಿ
ನೀವೆನಲವರ್ನುಡಿದರೀತನಾಡಲ್ಮಾಳ್ಪ
ದಾವುದುಂಟದನುಸುರು ನಿರ್ಜರಾಧೀಶ ಎನೆ
ಪಾವನ ಯತಿಶ್ರೇಷ್ಠಶಾಪದಿಂದಳಿದ ಸಿರಿಯಂ ಪಡೆಯಬೇಕೆಂದನೂ ೨೦

ಎಂದ ಮಾತಂ ಕೇಳಿಯಾವತೆಱನೆನಲವರಿ
ಗಿಂದಿರಂ ನುಡಿದನಾ ಪಾಲ್ಗಡಲ ಕಡೆಯಲ್ಕೆ
ಮುಂದೆ ನಡೆಯಲ್ಬೇಕು ನೀವೆನಲದಕ್ಕೊಡಂಬಟ್ಟು ರಕ್ಕಸರು ಬರಲು
ಒಂದುಗೂಡಿತ್ತು ನಿರ್ಜರರ ಪೂರ್ವಾಮರರ
ಗೊಂದಣಂ ತಮ್ಮೊಳು ವಿಚಾರಿಸಿದರತಿ ಮೋಹ
ದಿಂದ ಸಾಧನಗಳಂ ದೊರಕಿಸುತ್ತಿರ್ದರಾನಂದದಿಂದೇವಣ್ಣಿಪೇಂ ೨೧

ಮಂದರಾದ್ರಿಯ ಮಂತಮಾಡಿದರು ಶೇಷನಂ
ಛಂದದಿಂ ಕಡೆವ ನೇಣೆಂದು ಕಲ್ಪಿಸಿದರಾ
ಹಿಂದಣವತಾರಭೇದದ ವಿಷ್ಣು ಕಮಠರೂಪಾಗಿಯಾ ಮಂತನಾಂತು
ನಿಂದನಾ ವೇಳೆಯೊಳಗಸುರ ಸುರರಿಕ್ಕಡೆಗೆ
ಬಂದು ತಲೆ ಬಾಲೆರಡರಗ್ರವ ಪಿಡಿದು
ಸಂದೇಹವಿಲ್ಲದಾಬ್ರಹ್ಮಮೂಲಸ್ತಂಭದಾದಿಯಿಂದಂ ಕಡೆದರೂ ೨೨

ಕಡೆದರುಱೆ ದಿಧಿಲು ಬುದ್ಬುಧಿಲೆಂಬ ರವದಿಂದ
ಸಿಡಿಯಲೆಣ್ದೆಶೆಗೆಯಾ ಕ್ಷೀರಬಿಂದುಗಳಲ್ಲಿ
ಪಡೆದರ್ಯೈರಾವತವನುಚ್ಚೈಃಶ್ರವಾಗ್ರವನಿತಾನಿಕರ ಚಿಂತಾಮಣಿ
ಉಡುಪ ನಕ್ಷತ್ರಾಮೃತಾಃಖಿಳ ಸುವಸ್ತುಗಳ
ಬಿಡದೆ ಹಿಂದಣ ತಮ್ಮ ವೈಭವಂಗಳವೆಲ್ಲ
ವೆಡವಿಡದೆ ಹುಟ್ಟೆ ಮತ್ತೊಂದರಾಶೆಯೊಳು ಮುಂಕೊಂಡು ಕಡದರು
ಕಡದರು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಪೂರ್ವನಿರ್ಜರರು ಸುರರು ಕಡವುತ್ತಿರಲು
ಕೋಪಿಸಿದನಾ ಮಹಾಶೇಷನೆನ್ನಂ ಸುರಪ
ನೋಪಂತೆ ಬೋಧಿಸುತ ಬೇಡಿಕೊಳಲೆಯ್ತಂದೊಡೀ ಗಿರಿಯ ಸುತ್ತಿ ಬಾಲಾ
ಆ ಪೆಡೆಯ ಪಿಡಿದು ಕೆಡೆಯಲ್ಕೆಲುಗಳುಂ ನೆಗ್ಗ
ಲೀ ಪರಿಯ ತಮ್ಮ ಸಿರಿ ಬರಲೆನ್ನ ಬಿಡದೆ ನಾ
ನಾ ಪರಿಯ ಬಾಧಿಸುತ್ತಿಹರೆಂದು ಘುಡಿ ಘುಡಿಸಿ ಕಾಳಕೂಟವನುಗುಳಿದಂ ೨೪

ಉಗುಳಲಂತಾ ವಿಷಂ ಕಡಲನೂರ್ಮುಡಿಯಾಗಿ
ಭುಗಿಭುಗಿಲೆನುತ್ತ ಪರಿದಡರಿ ಸುಡುತೀ ಧರಾ
ಗಗನ ದಿಗ್ಭರಿತವಾಗುತ್ತ ಸುಡುತಿರಲಾಗಿ ತಱಹರಿಸಲಾಱದಲ್ಲಿ
ನಗವೈರಿಮುಖ್ಯ ದೇವಾಸುರರು ಕೆಟ್ಟೋಡಿ
ಧಿಗಿಧಿಗಿಲೆನಲ್ಕೆದೆಯೊಳುರಿ ಮಹೋಗ್ರತೆಯಿಂದ
ತಗುಳಿ ಸುಡುತಿರ್ದುದವರಂ ಬಳಿಕ್ಕವರ ಭಂಗಗಳನದನೇವಣ್ಣಿಪೆಂ ೨೫

ಅಟ್ಟಿ ಸುಡುತಿಹ ವಿಷಾನಲದಿಂದವಂದಿರ್ಗ
ಳುಟ್ಟು ಹೊದದಂಬರಂಗಳು ಬಳಿಕ್ಕಂತವರು
ತೊಟ್ಟಕಂ ಚುಕಿ ಮುಖ್ಯವಾದವೆಲ್ಲಂ ಕರದ ಶಸ್ತ್ರಂಗಳಿರದೆ ಬೆಂದೂ
ಕೆಟ್ಟೆವಾವೆಂದು ಸುರದಾನವರೊಳೊಬ್ಬೊಬ್ಬ
ರಟ್ಟಾಸುರದಿ ನುಡಿದು ಕರಿಮುರಿಗಳಾದರಾ
ಬೆಟ್ಟಬೇಗೆಗೆ ಸಿಲ್ಕಿದಖಿಳ ಖಗ ಮೃಗಲತಾವೃಕ್ಷಂಗಳೆಂಬಂದದೆ ೨೬

ಮುಂದಲೆಗಳಾ ಮುಖಂ ತೋಳು ಕೈಕಾಲ್ಗಳಾ
ಹಿಂದು ಮುಂದಣ ಭಾಗಗಳ್ಬರಿಗಳೆಲ್ಲವುಂ
ಬೆಂದು ಹಾ ಹಾ ಎನುತ ಭೂಷಹಾರಂ ಪರಿದು ಸೂಸಿಬಿದ್ದೊಡದು ದೇಹಾ
ದಿಂದ ಸೂಸುವ ರಕ್ತವಂಣ ತಮ್ಮಾಭಾವ
ತಂದೆ ಮೈದುನ ಕೆಟ್ಟೆವಕ್ಕಟಾ ಇನ್ನುಳಿಯೆ
ವೆಂದು ಘೋಳಿಡುತ ಬಿಡದೋಡಿಬರುತಿರ್ದರಾ ದೇವರ್ಕಳಸುರರಾಗಾ ೨೭

ಯಹಗಿನ್ನು ಗತಿಯಾರೆನುತ್ತ ಬಂದಾ ಪಿತಾ
ಮಹನ ಬಳಿಗೆಯ್ದಿ ಬಿನ್ನವಿಸಲೆಂದನು ಗೆಯ್ವು
ತಿಹ ಕಾಲದೊಳು ವಿಷಂ ಘುಡಿಘುಡಿಸುತ್ತೆಯ್ತರಲು ಕಂಡು ಬೊಮ್ಮಂಗರುಡಗೆ
ಅಹಿ ಬೆದರುವಂದದಿಂ ಕೆಟ್ಟೋಡಲಿವನೊಡೆಯ
ನಹನೆಂದು ಬಪ್ಪಲ್ಲಿ ನಮಗಿಂದ ಭೀರು ವಿಷ
ದಹನಕ್ಕೆ ಕಡಿದ ಬಳ್ಳಿಯ ಹಿಡಿದು ಬಾವಿಯೊಳು ಬಿದ್ದಂತುಟಾಯ್ತೆಂದರೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಿಟ್ಟೋಡುತವರೆಲ್ಲ ನುಡಿದರಾ ಬೊಮ್ಮನೊಳು
ಕಟ್ಟೊಡೆಯು ನೀನೆಂದು ಬರಲು ನಮ್ಮೆಲ್ಲರಂ
ಬಿಟ್ಟೋಡುವಂತಾದುದಕಟ ರಕ್ಷಿಪ ದೈವವಿನ್ನಾರೆನುತ್ತಲೆಲ್ಲಾ
ಒಟ್ಟಾಗಿ ಹರಿ ಇದ್ದ ತಾಣಕ್ಕೆ ಬಂದು ಮೊಱೆ
ಯಿಟ್ಟು ಬಿನ್ನೈಸುವನಿತಕ್ಕೆ ಭುಗಿಲಿಡುತ ಹಿಂ
ದಟ್ಟಿ ಕಮಲಜನ ಸುಡುತಿರಲು ಗಡಗಡನೆ ನಡುಗುತ್ತ ಹರಿಗಿಂತೆಂದನು ೨೯

ಏನೆಂಬೆನೆಲೆ ಹರಿಯೆ ಭಾವಿಸಲು ಸರ್ವಪ್ರ
ಧಾನಮೂರ್ತಿಯೆ ವಾಮದೇವನೆ ಸಕಲವರ
ದಾನಿ ಪೂರ್ವಾಮರಾಮರರು ಸಹಿತಾವಳಿವ ಕಾಲಕ್ಕೆ ರಕ್ಷಿಸುವೊಡೆ
ನೀನಲ್ಲದನ್ಯತ್ರವಿಲ್ಲೆಮಗೆನಲ್ಕೆ ಕೇ
ಳ್ದೇನಾದುದೊ ಎನುತ್ತಂ ಪಿತಾಮಹನ ದೈ
ನ್ಯಾನನವನೀಕ್ಷಿಸುತ ನುಡಿದನಾ ವಿಷ್ಣು ವಿಕೃತಾಂಗಿಗಳ ಪರಿಕಿಸುತ್ತಾ ೩೦

ಏಕೆ ಬಂದುದು ಬಾಧೆಯಲೆ ಬೊಮ್ಮಕೇಳಖಿಳ
ಲೋಕಮಂ ನೀಂ ಪುಟ್ಟಿಸಲ್ನಾನೆ ಪೊರೆವುತಿ
ಪ್ಪಾಕಾರ್ಯವೇನಾದುದೆನೆ ಕೇಳ್ದುದಿಲ್ಲಾ ಸುರಾಸುರರು ದೇವೇಂದ್ರನಾ
ಸ್ತೋಕವೈಭವವನೊದಗಿಸಲಮೃತಮಥನಮನ
ನೇಕಪ್ರಕಾರದಿಂ ಮಾಡುತಿಪ್ಪೆಡೆಯೊಳ್ಪೃ
ಥಾಕುಪತಿ ವಿಷವುಗುಳಲಾಗಿ ಪಿಂದಟ್ಟಿ ಬರುತಿದೆ ವಿಷ್ಣು ಚಿತ್ತೈಸೆನೆ ೩೧

ಆ ವಚನಮಂ ಕೇಳುತಂ ಬೊಮ್ಮನೊಡನೆ ಬಳಿ
ಕಾ ವಿಷ್ಣುವಿಂತೆಂದನೆಲೆ ಪಿತಾಮಹನೆ ನೀಂ
ದೈವವೆಂದಜ್ಞತೆಯೊಳಿಪ್ಪಲ್ಲಿ ಎನಗಹಂಕಾರ ಉಱೆಸಂಭವಿಪುದು
ಆವ ಕಾರಣದಿಂ ವಿಚಾರಿಸಲ್ಕಂ ಮಹಾ
ದೇವನಖಿಳರಿಗಿಷ್ಟವೀವನೆಂಬಾ ಬಗೆಯ
ನೀವುಸುರಬೇಕು ಕೇಳುವೆನೆನಲು ಹರಿಯೊಡನೆ ನುಡಿದನಂತಾ ಬ್ರಹ್ಮನೂ ೩೨

ಸರ್ವರ ಮತಿಪ್ರಮಾಣಿಂದ ವರ್ತಿಸುತಿರ್ಪ
ಪಾರ್ವತೀಪತಿಯ ಮಹಿಮೆಯನಱಿಯಲಾ ಸಕಲ
ಕೋರ್ವನೇ ಕರ್ತನೆನಿಸುವ ದೇವನಿಳೆಯಾದಿಯಾಗಿ ಶಿವತತ್ತ್ವವವಧೀ
ಗುರ್ವಗ್ರ ಛತ್ತೀಸ ತತ್ವದೊಳು ರಾಜಿಸು
ತ್ತುರ್ವಿಯೊಳಗಣುವಿಗಣುವಾ ಮಹತ್ತಿಗೆ ಮಹ
ತ್ತಿರ್ವರಿಲ್ಲೆನಿಸುವದ್ವಯರೂಪನಿರವನಾಂ ಬಣ್ಣಿಸುವೊಡಳವೆ ಎಂದಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಪ್ಪತ್ತನೆಯ ತತ್ವವೇ ಪ್ರಾಣವಾಯುವಾ
ಗಿಪ್ಪುದದನೆ ದೈವವೆಂಬರಾ ಯೋಗಿಗಳು
ಇಪ್ಪತ್ತೈದನೆಯ ತತ್ವವದು ಜೀವಾತ್ಮನದನಾ ಸನತ್ಕುಮಾರಂ
ಒಪ್ಪವೆನಲಾಚರಿಪನೆನ್ನ ಮನ ಒಂದಿಪ್ಪು
ದಿಪ್ಪತ್ತಆಱೆನಿಸುವಂತರಾತ್ಮನೊಳಲಾ
ಇಪ್ಪತ್ತ ಏಳನೆಯ ಪರಮಾತ್ಮನೊಳು ನಿಮ್ಮ ಮನವಿಪ್ಪುದಯ್ಯ ಹರಿಯೇ ೩೪

ಬಳಿಕಲಿಪ್ಪತ್ತೆಂಟನೆಯ ನಿರ್ಮಲಾತ್ಮನೊಳ
ಗೆಳವಟ್ಟು ರಾಜಿಸುವ ರುದ್ರಸ್ವರೂಪನಂ
ಗ್ಗಳನತಿಶಯಾನಂದನಚಲನಂತಾ ಸ್ವೇಚ್ಛೆಯಿಂದ ವಿಗ್ರಹವನಾಂತ
ಅಳಿಕಾಕ್ಷನಾತನಾಜ್ಞೆಯವರ್ಯೆ ನಾವಿರ್ವ
ರುಳಿದ ದಾನವ ದೇವ ಮಾನುಷ್ಯರೆಮ್ಮಾಜ್ಞೆ
ಯೊಳಗಿರ್ಪರ್ಯೆಸಲೇಯಾತನೇ ಯೋಗಿ ಯೋಗಿಶ್ವರಂ ಭಾವಿಸಲ್ಕೆ ೩೫

ವಿಲಸಿತದ ಬೀಜವೆನಿಪಾ ವಾರಣಾವಳಿಗ
ಳೊಳು ಕೂರ್ತು ರಕ್ಷಿಸುವನ್ಯೆ ತನಗೆ ಕಾರಣಂ
ಗಳುಮಿಲ್ಲದಾ ಮಹೇಶ್ವರಸಚ್ಚಿದಾನಂದ ನಿತ್ಯಪರಿಪೂರ್ಣನೆನಿಪಾ
ಬಳವಂತನಂದು ನಿನ್ನೆನ್ನ ಬಹುಕಂಟಂಕಂ
ಗಳನಳಿದ ಪರತರ ಬ್ರಹ್ಮಸ್ವರೂಪನಡಿ
ಗಳ ಕಂಡು ವಿಷದ ಬಾಧೆಯ ನಾವು ಪರಿಹರಿಸಿಕೊಳಬೇಹುದಯ್ಯ ಹರಿಯೆ ೩೬

ಮಾಣದಾ ಕೈಲಾಸವಾಸಿಯುಂ ನೆಱೆ ಬಹು
ಪ್ರಾಣಿಗಳ ಕಂಟಕಂಗಳನೆಯ್ದೆ ಪರಿಹರಿಪ
ಜಾಣನಂ ಕಂಡು ಕೊಂಡಾಡಲಾ ಕರುಣಾಳು ನಮ್ಮೆಲ್ಲರಂ ಸುಡುತ್ತಾ
ಕೇಣದಿಂ ಬಪ್ಪ ವಿಷಸಾಗರದಿನುದ್ಧರಿಪ
ನೇಣಧರಧರನೆಮ್ಮ ಜೀವವುಳಿವುದು ಕಣಾ
ಕ್ಷೀಣಹರಿಕೇಳೆಂದು ನುಡಿದಂ ಪಿತಾಮಹಂ ಯುಕ್ತಿಯಿಂ ದುಃಖಾಪಹಂ ೩೭

ಆ ವಿಧಿಯ ನುಡಿಯ ಕೇಳುತ್ತಹುದೆನುತ್ತೆ ಹರಿ
ದೇವೇಂದ್ರ ದಿಕ್ಪಾಲ ನಿರ್ಜರಾಸುರ ಮುನಿಗ
ಳೋದಿ ಸರ್ವಜ್ಞನಂ ಶಂಕರನ ಸುಖಕರನ ಸಚ್ಚಿದಾನಂದಾತ್ಮನಾ
ಭಾವದೊಳು ನೆನನೆನದು ಕೀರ್ತಿಸುತ ಕೊಂಡಾಡ
ಲಾ ವಿಷಾನಲವಟ್ಟಿ ಸುಡುತ ಬರುತಿರ್ದುದಿ
ನ್ನೇ ವೊಗಳುವೆಂ ಶಾಂತಿಯಾಗುತಿರ್ದುದು ಶಿವಸ್ಮರಣೆಗೆಯುಂಟೆ ಭಾಪೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುರನಿಕರಮಂ ಶಿವಸ್ಮರಣೆಗಿಂದಂ ಮುನ್ನ
ಉರುಪುತ್ತ ಬಂದ ವಿಷದಿಂದಲೇನಾದುದೆನೆ
ಹರಿ ಮೊದಲು ಕೆಂಜು ಹೊಂಬಣ್ಣ ಒಂದಿದವರ್ನ್ನದಾತನೇ ಕೃಷ್ಣನಾದಂ
ಪರಿಕಿಸಲು ರಕ್ತಗೌರಂ ಹರೇರ್ವರ್ಣವೆಂ
ಬುರುತರಾರ್ಥದೆ ಮತ್ತೆ ಹಿಮವಟ್ಟಲಂದದಿಂ
ದಿರುತಿರ್ಪ ದೇವೇಂದ್ರನನ್ಯವರ್ನ್ನವುದಾದನೆಂದು ಶಕ್ರಸ್ಯ ಎನಲು ೩೯

||ಸಾಕ್ಷಿ|| ರಕ್ತಗೌರಂಹರೇರ್ವರ್ಣಂ ಕೃಷ್ಣಮಾ ಸಿದ್ಧಿಶೇಷತಃ
ಶಕ್ರಸ್ಯಹಿಮವರ್ನ್ನಾಭಂ ತಥಾನ್ಯೆಷಾಂ ಮಹಾತ್ಮನಾ ೧

ಅಸುರ ಸುರ ಮನು ಮುನಿಗಳೆಲ್ಲರೊಂದೊಂದು ವ
ರ್ನ್ನಸಮೇತರಪ್ಪರು ವಿವರ್ನ್ನವಾದರು ಬಳಿಕ
ಬಿಸಜಸಂಭವನ ನುಡಿಯಂ ಕೇಳಿ ವಿಷ್ಣು ಮೊದಲಾದ ದೇವರ್ಕಳೆಲ್ಲಾ
ಹಸನಾಯ್ತು ಶಂಕರಸ್ಮರಣೆಯಿಂ ನಾವೆಲ್ಲ
ವಸೆದೆಯ್ದಬೇಕು ಕೈಲಾಸಕೆಂದೆನುತಲಸ
ವಸದೆ ಬರುತಿರ್ದರನಿಬರು ಕೂಡಿಯಾವೇಳೆಯೇನೆಂಬೆನಗ್ಗಳವನೂ ೪೦

ಗರುಡನಂ ಹರಿಯಡರ್ದಂ ಪುಷ್ಪಕವನು ಪಂ
ಕರುಹಭವನೇಱಿದಂ ಪೇವೇಂದ್ರಮುಖ್ಯರಾ
ಕರಿವರಾದಿಯ ವಾಹನಂಗಳೊಳಗಳವಟ್ಟರುಳಿದ ನಿರ್ಜರರಸುರರೂ
ವರ ಮುನಿಗಳೆಯ್ದೆ ತತ್ತತ್ಯಮದೊಳೊಂದಾಗಿ
ಬರುತಿರಲು ಮುಂದೆ ಮೆಱೆದುದು ಮಹಾಕೈಲಾಸ
ಗಿರಿ ಮೋಕ್ಷಮಯದ ಹರವರಿ ಸುಖಾಮೃತರಸದ ಸರಿಪಾಶಕುಲಕರ್ತರೀ ೪೧

ಆ ಹರಿಯಜಾದಿದೇವರ್ಕಳಾ ದಾನವ
ವ್ಯೂಹ ಮುನಿಗಳು ಶಿವನ ಪರ್ವತವ ಕಂಡು ನಿಜ
ವಾಹನಂಗಳನಿಳಿದು ಸಾಷ್ಟಾಂಗದಂಡಪ್ರಣಾಮದಿಂದಂ ನಮಿಸುತಾ
ಓಹೋ ಮಹಾದೇವ ಎಂದು ಕೊಂಡಾಡುತ್ತ
ಸಾಹಸದೆ ಗಿರಿಯನಡರುತ್ತಿರ್ದರಾ ಶಿವನ
ಗೇಹವೆನಿಸುವ ಭೂಧರಂ ಮೆಱೆದುದಾಧರಂ ಸಂತೋಷಮಯಗೋಧರಂ ೪೨

ಸಕಲ ದುರಿತಂಗಳಂ ಕೆಡಿಪುದಂತಾತ್ಮವಿದ
ರಕಲಂಕ ಸಂತೋಷದೊಟ್ಟು ಭೃಂಗೀಶಗಣ
ನಿಕರಸುಖದಾಗರಂ ಗಾಂಧರ್ವಗಾನಮಯ ಸರ್ವೇಶಪಾದಾಂಕಿತಾ
ಸುಕರ ಮೋಕ್ಷಪ್ರದಂ ಶರಭ ಸಿಂಹೇಶ ಕಿಟ
ವೃಕಮುಖ್ಯ ಮೃಗಸಮೂಹಂಗಳಿಂ ದಿವ್ಯಸೌ
ಖ್ಯಕರಮುನಿವರ್ಗದಿಂ ನವ್ಯ ಕಾಸಾರಂಗಳಿಂವೆ ರಾಜಿಸುತಿರ್ದುದೂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನಕಶೃಂಗಂಗಳಿಂ ರತ್ನಶಿಖರಂಗಳಿಂ
ವಿನುತ ರಾಜತಶಿರೋದೇಶಂಗಳಿಂ ಗಜಾ
ನನ ಕರಪ್ರಹರ ಭಗ್ನಾವನೀರುಹನಿಕರದಿಂ ವಿನಾಯಕನಭಯದಿಂ
ತನತನಗೆ ಕೆಟ್ಟೋಡುವಖಿಳ ಹಸ್ತಿವ್ರಜದಿ
ನನವರತಗ್ರುಹಶಸ್ತ್ರಹತಮೃಗಗಳಿಂ ಷಡಾ
ನನಪದಕ್ಕೆಱಗುತಿಹ ಪಕ್ಷಿವೃಂದಂಗಳಿಂ ಮೆಱದುದಾ ಪರ್ವತೇಂದ್ರಂ ೪೪

ಗಿರಿಜಾಪದಸ್ಪರ್ಶದಿವ್ಯಸ್ಥಲಂಗಳಿಂ
ವರ ಪಾರ್ವತೀ ಸತ್ಯಪಾನಯುನಕುಮುದ ಭೂ
ಧರಸುತಾನನಸುಸಂಪನ್ನವಿಕಸನಕಮಲ ತತ್ಕುಚೋದ್ವೃತ್ತಸೌಖ್ಯಾ
ಕರುಣಮಯ ಚಕ್ರವಾಕಾಕೀರ್ಣಮೇನಕಾ
ತರುಣೀಸಮುದ್ಭೂತ ದೇಹಕಾಂತಿಘ್ರಾಣ
ಪರಿವೃತಜಲಾಪೂರ್ಣ್ಣಕವ್ಯಕಾಸಾರಂಗಳಿಂ ವಿರಾಜಿಸುತಿರ್ದುದು ೪೫

ಮೇರುಭೂಧರದ ಮಧ್ಯಪ್ರದೇಶದೊಳಲ್ಲಿ
ರಾರಾಜಿಸುತ್ತಿಹುದು ಕೈಲಾಸಪರ್ವತಂ
ಓರಂತೆಯದಱಗ್ರದಲ್ಲಿ ಸೌಂದರಿಯದಿಂ ಮೆಱವುದೀಶನ ಪಟ್ಟಣಂ
ಆರಯ್ಯಲದಱ ಪೂರ್ವಾಶೆಯೊಳಗುಪವನಂ
ಕಾರಂಡ ಚಕ್ರವಾಕಾದಿ ಜಲವಿಹಗಕುಲ
ಸಾರಫಲಕುಸುಮಪ್ರತಾನದಿಂದೊಪ್ಪುತಿಪ್ಪದು ಪೊಗಳಲಾವನಳವೊ ೪೬

||ಸಾಕ್ಷಿ|| ಕೈಲಾಸಂ ಮೇರು ಮಧ್ಯಸ್ಥಮವಶ್ಯಂ ಶಂಕರಂ ಪುರಂ ೨

ಆ ವನಾಂತದೊಳೆಸವ ನಗರೋಪಕಂಠಪ್ರ
ಭಾವಹದ ಪೂರ್ವವಿಲಸತ್ಪುರದ್ವಾರದೆಡೆ
ಗಾ ವಿಷ್ಣುಮುಖ್ಯ ಸುರಮುನಿದಾನವರ್ಕಳೆಯ್ತಂದೊಳಗೆ ಪುಗುತರುತ್ತಾ
ಪಾವನದ ತದ್ಗೋಪುರಂ ಕೋಟಿ ಸೂರ್ಯ ಪ್ರ
ಭಾವಲಯ ಕೋಟಿಕಳಸಂಗಳಿಂ ಝಗಝಗಿಸು
ತಾವಗಂ ತಾನಪರ ರಜತಪರ್ವತವೆನಿಸೆ ನೋಡಿದರು ಸಂಭ್ರಮದೊಳು ೪೭

ನಗರೋಪಕಂಠದೊಳು ಶಂಖ ಚಕ್ರಮನಾಂತು
ಮಿಗೆ ಲಕ್ಷ್ಮಿಯುರದವರು ವಾಣಿ ನಿಜಜಿಹ್ವೆಯೊಳ
ಗಗಲದ ಚತುರ್ಮುಖರು ಸಚಿಸಮೇತಸಹಸ್ರಲೋಚನಾಂಗದ ಗರುವರೂ
ಅಗಣಿತರು ಹರಿಯಜೇಂದ್ರಾದಿಗಳನೇಕ ಕೊ
ಟಿಗಳು ಸುರದಾನವ ಮುನಿಶರಿರೆ ಕಂಡರಾ
ದಿಗಿಲಿಡುವ ವಿಷದಿಂದ ಬೆಂದುಳಿದು ಬಂದನಿಬರೇನೆಂದು ಬಣ್ಣಿಸುವೆನು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಡೆಯಾಡುತಿಪ್ಪ ಗಜ ಹಯ ರಥ ಪದಾತಿಗಳಿ
ಗಡಿಯಿಡುವ ಪದವಖಿಳಸಂಪದಕೆ ನೆಲೆಯಾದ
ವ್ಮಡಪುರದ್ವಾರಪ್ರದೇಶದಿಂದೊಳಗೆ ಪೊಕ್ಕೀಕ್ಷಿಸಲ್ಕಲ್ಲಿ ಪಙ್ತಿ
ವಿಡಿದಿಪ್ಪ ಚೆಂಬೊನ್ನ ಕಱುವಾಡದಿಂದವಂ
ತುಡುವರ ಸಹಸ್ರ ಕೋಟಿಪ್ರಭೆಯನೊಳಕೊಂಡ
ಸಡಗರದ ಹರ್ಮ್ಯಂಗಳಿಂ ಸೋಮಸೂರ್ಯವೀಥಿಗಳು ರಾಜಿಸುತಿರ್ದವೂ ೪೯

ಪರಿಖಾಮೃತಾಕಲಿತ ಕನಕಸುಪ್ರಾಕಾರ
ವಿರಚಿತ ಸುರತ್ನಾಗ್ರಕೇಸರಸ ಮೌಕ್ತಿಕೋ
ತ್ಕರ ವಜ್ರಬಂಧದಾದ್ವಾರವಟ್ಟದ ಬಹಿರ್ದ್ವಾರದಿಂದಾಗಲೊಳಗೆ
ಬರುತಿರ್ದರಾಗಲಾ ಬೊಮ್ಮಮುಂತಾದವಂ
ದಿರು ಬಳಿಕ್ಕದಱೊಳಗುವಾಗಿಲೊಪ್ಪುತ್ತಿರ್ದು
ದರರೆ ಮದ್ದಳೆ ಕಾಳೆ ಮೊದಲಾದ ಮೊರಹಿಂದಲಗ್ಗಳರಿನೆಸದಿರ್ದುದು ೫೦

ಆಯತರ ನಟರ ಗಾಯಕರ ವಿಃಸುಪಪ್ಸರ
ಸ್ತ್ರೀಯರ ಮಹಾನಾಟ್ಯದಿಂ ರುದ್ರಗಣರಿಂದ
ಜೇಯನಿಷ್ಠುರ ಪಙ್ತಿಯಿಂದಲಾ ಬಾಗಿಲೆಸದುದು ಮಹಾ ಸಂಭ್ರಮದೊಳು
ಓಯಾರದಿಂ ಕಾದ ಚಿನ್ನಕ್ಕೆ ಸಮ ಮಹಾ
ಚ್ಛಾಯದುತ್ತಮ ಕೋಟಿ ಚಿಂತಾಮಣಿವ್ರಜ
ವ್ಯೂಹಕಿರಣದ ತೋರಣಂ ಮೆಱೆಯಲೀಕ್ಷಿಸಿದರಾ ಹರಿಪ್ರಮುಖರ್ಕಳೂ ೫೧

ಎರಡನೆಯ ಬಾಗಿಲತಿ ವೈಭವಂಗಳೊಳೆಸವು
ತಿರೆ ಪಿಂದೆ ಸಕಲಲೋಕಸ್ತ್ರೀಯರಲ್ಲಿ ಸಿಂ
ಗರಸೊಬಗನೆಳ್ಳನಿತನೀಳ್ದುಕೊಂಡಾ ತಿಲೋತ್ತಮೆಯನಜನೊಡರಿಚಿದನಾ
ಪರಿಯಲ್ಲದೀ ಪಟ್ಟಣದ ಕೋಟಿ ಕೋಟ್ಯಂಶ
ವಿರಲದಱೊಳಣು ಕೋಟಿಯೊಳಗೊಂದು ಲವವನೀ
ಳ್ದಿರದೀಯ್ಯಲಾ ಸೌಂದರಿಯುಮೆಯ್ದೆ ಪದಿನಾಲ್ಕುಲೋಕಕ್ಕೆ ದಣಿಯಲಾಯ್ತು ೫೨

ಎಂದು ಕೊಂಡಾಡುತೊಳಪೊಕ್ಕು ನೋಡುತ್ತಿರಲು
ಮುಂದೆ ವಿಭ್ರಾಜಿಸಿತಸಂಖ್ಯಾತ ಕೇತನಗ
ಳಿಂದಾ ಧ್ವಜಂಗಳಿಂದಖಿಲ ಗಂಧರ್ವರಾಕ್ಷಸ ಕಿನ್ನರೌಘಂಗಳಿಂ
ಮುಂದೆಸವ ಗರುಡ ಪಂನೆಗ ಸಿದ್ಧಚಾರಣರ
ವೃಂದಂಗಳಿಂ ಬಹುಗಣಾಳಿಯು ನಿಕೇತನಗ
ಳಂದದಿಂ ರತ್ನಸೋಪಾನ ಕಲ್ಪದ್ರುಮಾಕೀರ್ಣಂಗಳಿಂದೆಸದವು ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕಲ ಗಣಸಂದೋಹದಾಲಯಂಗಳ ನೋಡಿ
ಸುಕರದಿಂದಂತರಂತರದ ಪೆರ್ಬಾಗಿಲೊಳ
ಪ್ರಕಟೀಕರಿಪ ವೈಭವಂಗಳಂ ನೋಡುತ್ತ ಬರಬರಲು ಮುಂದೆ ರತ್ನಾ
ಮುಕುರ ತೋರಣಗಳಿಂ ಮೌಕ್ತಿಕಸ್ತಂಭಗಳಿ
ನಕುಟಿಲಗಣಾಕೀರ್ಣ್ಣದಿಂದೊಪ್ಪುತಿರ್ದನಾ
ಲಕುಲೀಶನೆಂಬ ಗಣನಾಥನೀಶ್ವರನೆ ತಾನಾದಯ್ಯನಾನಂದದೆ ೫೪

ಅವನೆಡದ ಭಾಗದೊಳು ವಿಷ್ಣುಕೋಟಿಗಳು ಜಯ
ಶಿವಮೂರ್ತಿ ಎಂದು ಕೀರ್ತಿಸುತಿರ್ದರಾ ಜಲಜ
ಭವರು ಶತಕೋಟಿಗಳು ಬಲದಲ್ಲಿ ವೇದನಾದಂಗಳಿಂದುಲಿವುತಿರಲೂ
ದಿವಿಜರಾಜರ್ಕಳು ಸಹಸ್ರಕೋಟಿಗಳು ಶಾಂ
ಭವಮೂರ್ತಿ ನೀಂ ರಕ್ಷಿಸೆಂದು ವಂದಿಸಲು ಬೆಂ
ದವರು ಹರಿಮುಖ್ಯರೀಕ್ಷಿಸಿ ನಾಣ್ಚಿದರು ತಮ್ಮ ಭಂಗಂಗಳಂ ನೆನವುತಾ ೫೫

ಅಂತಪ್ಪ ಲಕುಲೀಶ್ವರನ ಮಹಾಸಭೆಯನೋ
ರಂತೆ ನೋಡುತ್ತ ವಂದಿಸುತ ಬರುತಿರೆ ಮುಂದ
ಳಂತರದೊಳಖಿಳ ರತ್ನಸ್ತಂಭಕೋಟಿಗಳಿನಮಲಮಹಿಮಾ ಶಿವಗಣಾ
ಸಂತತಿಗಳಿಂದುಲಿವ ವೇದನಾದಂಗಳಿಂ
ಕಂತುಹರ ಮೂರ್ತಿ ಎಂದೆನಿಪೇಕರುದ್ರನ
ತ್ಯಂತ ವೈಭವದಿಂದೆ ರಾಜಿಸುತ್ತಿರಲು ಹರಿಮುಖ್ಯರ್ಗಳೀಕ್ಷಿಸಿದರು ೫೬

ಹರಿಯಜರು ತಮ್ಮೊಳು ವಿಚಾರಿಸುತ ನುಡಿದರೀ
ಶ್ವರಮೂರ್ತಿ ಎನಿಪೇಕರುದ್ರನತಿಶಯವಶಂ
ಕರದಕ್ಷಿಣಾಸ್ಯವಿವನೀತಂಗೆ ನಮ್ಮ ಕಾರ್ಯಂಗಳಂ ಬಿನ್ನವಿಸಲು
ಅರುಹರೇ ನಾವೆಂದು ಯೋಚಿಸುತ ತತ್ತೇಜ
ದಿರವಿಂಗೆಯುಳ್ಕಿಯಾ ಸಭೆಗೆ ಸಾಷ್ಟಾಂಗದಿಂ
ಶರಣೆಂದು ತದ್ರುದ್ರನಂ ಪೊಗಳಿ ಮುಂದೊಳಗೆ ಪೊಕ್ಕು ನಡೆತರುತಿರ್ದರೂ ೫೭

ಮೂಱನೆಯ ಬಾಗಿಲಂ ಕಳಿದು ನಡೆತರುತಿರಲು
ನೀಱರೆನಿಸುವ ಪುರಜನಂಗಳೀಕ್ಷಿಸಿ ಬೆಂದು
ಗಾಱಾದರಂ ನೋಡಿ ನೀವಾರಿದೇಂ ಕಾರಣಂ ದಗ್ಧವಸ್ತ್ರಾಸ್ತ್ರರು
ಮೋಱೆ ತಲೆಗಳು ಬೆಂದವೇಂ ಕಾರಣಂ ನೀವು
ದೂಱಕೊಂಡೆಯ್ತಂದಿರೇ ಎಂದು ಕೇಳುತಿರೆ
ಮಾಱುತ್ತರವನೀಯುದೆಯ್ತುರುತಿರ್ದರಳ್ಕಿಂ ಬಂದ ಹರಿಮುಖ್ಯರೂ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಾತುರ್ಥಪಂಚವಮಂ ಷಷ್ಟಸಪ್ತಾಷ್ಟನವ
ಸಾತಿಶಯದಶಮ ಮೇಕಾದಶೋತ್ತಮಪುರ
ವ್ರಾತಮಂ ಬಳಿಕಲಂತಲ್ಲಿಪ್ಪನೇಕವೆಂದೆನಿಪ ಸಿಂಗರದೇಳ್ಗೆಯಾ
ಪೀತಾಂಬರಾದಿ ದೇವರ್ಕಳೀಕ್ಷಿಸಿ ವಿಸ್ಮ
ಯಾತುರ್ತಾವಾಗಿ ಬರಬರಲ್ಕಂಡರು ಮಹಾ
ಹಾತೇಜದಿಂದೀಶನರಮನೆಯನೊಳಕೊಂಡ ರಾಜ ಧಾನಿಯನಳ್ಕಱಿಂ ೫೯

ಅಲ್ಲಿಯುಪವನ ಹಂಸ ಕಾರಂಡ ಚಕ್ರಂಗ
ಳುಲ್ಲಾಸಮಂ ರತ್ನಮಯ ವಿಮಾನಂಗಳಿಂ
ಸಲ್ಲಲಿತಮಾದಜಾಂಡಂಗಳಿಂದೆಯ್ತಂದು ತತ್ಪುಪ್ಪಕಂಗಳಿಳಿದು
ವಲ್ಲಭನ ಶಾಸ್ತ್ರಸನ್ನುತನ ದೇವೇಶ್ವರನ
ಮೆಲ್ಲಡಿಯನೋಲೈಸುವುಜ್ಜುಗದೆ ವಿಕಸಿತೋ
ತ್ಫುಲ್ಲಮುಖರಾಗಿ ಬಂದೊಳಪೊಗುವ ರುದ್ರರಂ ಕಂಡರಾ ಹರಿಮುಖ್ಯರೂ ೬೦

ಆ ರಾಜಧಾನಿಯೊಳಪೊಕ್ಕು ನಡೆತಂದರಾ
ನಾರಾಯಣಾದಿಗಳು ಸಾಕ್ಷಾತ ಶಂಭುವಿ
ಪ್ಪಾ ರಮ್ಯವಾದ ಪಟ್ಟಣದ ಸಿಂಗರವನುಱೆ ಬಿತ್ತರಿಸೆಫಣಿರಾಜಗೆ
ಓರಂತೆಯಳವಲ್ಲವೈಯ್ಯ ಗಣಮುಖ್ಯರಾ
ಗಾರಂಗಳಗ್ರಮಣಿ ಹರ್ಮ್ಯಸಂಕುಳಮಧ್ಯ
ಚಾರು ಸೌಂದರಮಹಾದೇವನರಮನೆಯೊಪ್ಪುತಿರ್ದುದದ ಪೇಳಲಳವೇ ೬೧

ವೇದ ಚಾತುಷ್ಟಯದ್ವಾರಗೋಪುರಗಳಿಂ
ದಾದಿಪಂಚಾಕ್ಷರಿಯ ಸೌಂದರಾಂತಃಪುರಂ
ಮಾದೇವನೊಪ್ಪುತಿರಲಾ ಮುಖ್ಯಮಪ್ಪ ಬಾಗಿಲರತ್ನಪೀಠದಲ್ಲಿ
ಸಾದರದೆ ಗಣಕೋಟಿ ಸೇವಿಸಲ್ಮೆಱವ ಶೈ
ಲಾದಿ ಎನಿಸುವ ನಂದಿಕೇಶ್ವರನ ಕಾಣುತ್ತ
ಪಾದಕ್ಕೆ ಸಾಷ್ಟಾಂಗವೆಱಗಿ ವಂದಿಸಿದರಾ ಹರಿಮುಖ್ಯರುಘೆ ಎನುತ್ತಾ ೬೨

ಜಯ ಜಯ ಎನುತ್ತೆದ್ದು ಕೈಗಳಂ ಮುಗಿದು ನಿ
ಶ್ಚಯಂ ಕೃಪಾಮೂರ್ತಿಯೇ ಎರಡನೆಯ ಶಂಭುವೇ
ಸ್ವಯಧರ್ಮರೂಪ ಶರಣಾಗೆಂದು ಕೀರ್ತಿಸುವ ಹರಿಮುಖ್ಯರಂ ಕಾಣುತಾ
ಸ್ಮಯಮುಖಾಂಬುಜದಿಂದ ನೋಡಿ ನುಡಿದಂ ನಂದಿ
ದಯದಿಂದಿದೇನಿರ್ಪೆ ದಗ್ಧಾಂಗರಾದ ನಿ
ರ್ನ್ನಯಮಸುರೀಗಮೆನೆ ಬದುಕಿದೆವೆನುತ್ತ ಬಿನ್ನೈಸಲುದ್ಯುತರಾದರೂ ೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ದೂರ್ವಾಸಮುನಿ ಕೊಟ್ಟ ಶಾಪದಿನಳಿದ
ದೇವೇಂದ್ರನೈಶ್ವರ್ಯಮಂ ಪಡೆಯಲೆಂದಖಿಳ
ದೇವ ದಾನವರಮೃತಮಥನಮಂ ಮಾಡಲುದ್ಭವಿಸಿದುತ್ಕಟದ ಗರಳಾ
ತೀವಿ ಕಸ್ತೂರಿಕಾಂಜನಭೃಂಗವಸಿತವಿಂ
ತಾವದೆಣೆಯಲ್ತೆಂಬ ಕಪ್ಪಿಂ ಮಹಾಪ್ರಳಯ
ದಾ ವಿಶ್ವಸಂಹಾರದಾ ರುದ್ರಭಾಳಾಗ್ನಿಯಂತೆ ಸುಡುತೆಯ್ತಂದುದು ೬೪

ಪರಿದಟ್ಟಿಕೊಡೆ ಭುರ್ಭುಗಿಲೆಂದು ನಡೆತಪ್ಪ
ಗರಳವೆಮ್ಮಂ ಸುಟ್ಟುದೆಲೆ ದೇವ ಚಿತ್ತೈಸು
ಹರಿ ರಕ್ತಗೌರಾಂಗನಾದನುಳಿದವರು ವಿಭ್ರಾಂತರಾದೆವು ಬಳಿಕ್ಕಾ
ಅರೆಬೆಂದು ಬದುಕಿದೆಮ್ಮಂತಿರೆ ಕೊಲ್ವನೆಂ
ದುರವಣಿಸಿ ಪಿಂದೆ ಬರುತಿದೆ ನಂದಿಕೇಶ್ವರಾ
ಶರಣಾಗು ನೀನೆ ಗತಿ ಎಂದು ಮೊಱೆಯಿಟ್ಟರಾ ದೇವರ್ಕಳೊಬ್ಬುಳಿಯೊಳು ೬೫

ಹರಿಮುಖ್ಯರಾದ ದೇವರ್ಕಳಾ ನಂದಿಕೇ
ಶ್ವರಗಿಂತು ಮೊಱೆಯಿಡಲು ಕೇಳಿ ಸಂತೈಸುತ್ತ
ನಿರವಿಸಿದನೆಲೆ ದೇವ ಮುನಿಗಳಿರ ನೀವಂಜಬೇಡೆಂದು ನುಡಿವುತೆದ್ದೂ
ಸ್ಮರಹರನ ಪಿರಿಯೋಲಗಕ್ಕೆಯ್ದಿ ಬಿನ್ನಪಂ
ಕರುಣಾಸಮುದ್ರ ಚಿತ್ತೈಸಖಿಳ ನಿರ್ಜರರು
ಸುರಮುನಿಗಳೆಯ್ತಂದು ಬಾಗಿಲೊಳಗೈದರೆಲೆ ಜೀಯ್ಯ ಕೃಪೆಮಾಡೆಂದನೂ ೬೬

ಎನಲೀಶ್ವರಂ ಸೌಂಜ್ಞೆಯಿಂದ ಕರೆ ಎನಲಾಗಿ
ಯನಿಬರಂ ತಂದೊಳಗೆ ಪೊಗಿಸಲಾ ನಂದೀಶ
ದನುಜಾದಿಯಜಸುರಪ ದೇವಾಸುರಾಖಿಳ ಮುನೀಶ್ವರರು ಸಂದಣಿಸುತಾ
ವಿನುತ ಪ್ರಕಾಶದ ಸಭಾಮಂಟಪಸ್ಥವೆಂ
ದೆನಿಪಧಿಕ ನವರತ್ನಖಚಿತ ಸಿಂಹಾಸನದ
ಘನದ ಗದ್ದುಗೆಯಗ್ರ ದೊಳ್ಮೆಱೆವ ಸರ್ವೇಶ್ವರನ ಕಂಡರಾನಂದದೆ ೬೭

ಮಂಡಿಸಿದ ಸಿಂಹಾಸನಾಸೀನ ನಂ ಕೋಟಿ
ಚಂಡಪ್ರಕಾಶನಂ ಸರ್ವೇಶನಂ ಮಹೋ
ದ್ದಂಡಗಣಸಂದೋಹಪರಿವೃತನ ನೀಕ್ಷಿಸುತ್ತಾನಂದ ಭರಿತರಾಗಿ
ಖಂಡ ಪರಶುವೆ ಜಯ ಜಯಾ ಎಂದು ಸಾಷ್ಟಾಂಗ
ದಂಡಪ್ರಣಾಮಮಂ ಮಾಡಿದರು ವಿಧಿಯಲ್ಲಿ
ಕೊಂಡಾಡತೊಡಗಿದಂ ಪಾರ್ವತೀಪತಿಯನತಿ ಮೃದು ಮಧುರ ಭಾವದಿಂದ ೬೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ದೇವ ಪ್ರಸನ್ನತೆಯಾಗು ಪರಮೇಶ
ಈ ವಸುಧೆ ಪದಿನಾಲ್ಕುಕೊಡೆಯ ದಿವ್ಯಾನಂದ
ವೀವ ಸಾವಿರ ಶಿರೋನಯನ ಪಾದಂ ಸರ್ವ ಪರಮೇಷ್ಠಿ ಎಂದೆನಿಪನೇ
ಆವಗಂ ಮಂಗಲನೆ ಶಾಂತನೆಮ್ಮಂ ಬಿಡದ
ಪಾವನನೆ ಸರ್ವಜ್ಞ ರಕ್ಷಿಪನೆ ಶರಣ ತೇ
ಜೋವಿಕಾಸಾಗ್ರ ಸದ್ಯೋಜಾತನೇಯ ಘೋರನೇ ವಾಮದೇವ ಶರಣು ೬೯

ನೀನಧಿಕ ತತ್ಪುರುಷಮೂರ್ತಿಯೇ ಬಳಿಕಲೀ
ಶಾನನಾಗಿರ್ದ ನಿನಗೆಱಗುವೆನನಂತೇಶ
ನೇ ನಮ್ಮ ಸೂಕ್ಷ್ಮನೇ ಯುತ್ತುಮನೆ ಏಕಾಕ್ಷನೇ ಏಕರುದ್ರನೆ ಸದಾ
ಮಾನಿ ತ್ರಿಮೂರ್ತಿರೂಪನೆ ಮಹಾ ಶ್ರೀಕಂಠ
ನೇ ನಮೋ ಶಿಖಂಡಿನೆಯನಂತಾಸನ ಸ್ಥಿತನ
ನೂನದಾನಂತನೇ ಯಂತಕಾರಾತಿ ನಿನ್ನಂಘ್ರಿಗಾಂ ವಂದಿಸುವೆನು ೭೦

ವಿಮಲನೇ ವೀತರಾಗನೆ ನಿನಗೆ ನಮಿಸುವೆಂ
ಸುಮಹ ಶಿವಯೋಗಪೀಠದೊಳಿಪ್ಪನೇಯೋಗಿ
ರಮಣನೇ ಯೋಗಿಗಳ ಹೃದಯದೊಳ್ನೆಲಸಿದನೆ ಯೋಗಂಗಳೆಯುದ್ಭವಾ
ಅಮಿತಪರ ಪರಮೇಶ ಗುಣಗಳಿಗತೀತನು
ತ್ತಮನೆಯಾತ್ಮತ್ರಯಕೆ ಮೇಲೆ ತೋರ್ಪ ತ್ರಿಗುಣಿ
ಸುಮಹನ್ಮಹಾಮಕುಟವುಳ್ಳನೇ ದೇಹಮಧ್ಯಸ್ಥನೇ ನಿನಗೆ ಶರಣೂ ೭೧

ಮೂಲನಾಭಿಸ್ಥಿತನೆ ಕಂಠ ಮುಖ ನಾಸಾಗ್ರ
ಲೋಲನೆ ನಿಟಿಲ ಭ್ರೂಮಧ್ಯಸ್ಥನೇ ಶಿವವಿ
ಶಾಲ ಚಿಚ್ಚಂದ್ರ ಮಧ್ಯಸ್ಥನೇ ಶಿವನ ಶಿವತತ್ವ ವಿದ್ಯಾತತ್ವನೇ
ಲೀಲಾತ್ಮ ತತ್ವಸ್ವರೂಪನೇ ನಿರ್ಬೀಜ
ನೇ ಲಸದ್ಬೀಜಿಯೇ ಬೀಜದುತ್ಪತ್ತಿಗಂ
ತಾಲಯನೆ ನಿನಗೋಸ್ಕರಂ ನಾನು ವಂದಿಸುವೆನೆಂದಜಂ ಕೀರ್ತಿಸಿದನು ೭೨

||ಸಾಕ್ಷಿ|| ಪ್ರಸೀದ ದೇವದೇವೇಶ ಪ್ರಸೀದ ಪರಮೇಶ್ವರ ಪ್ರಸೀದ ಜಗತಾಂ
ನಾಥ ಪ್ರಸೀದಾನಂದಾವ್ಯಯ ೩
ಸಹಸ್ರ ಶೀರ್ಷಸೇತುಭ್ಯಂ ಸಹಸ್ರಾಕ್ಷಾಯತೇ ನಮಃ ನಮಸ್ಸಾಹಸ್ರ ಪಾದಾಯ
ಶರ್ವಾಯ ಪರಮೇಷ್ಠಿನೇ ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಜಂ ಶ್ರೀಮನ್ಮಹಾದೇವನಂ ಕೀರ್ತಿಸಿ
ಸಂತೋಷದಿಂ ಸ್ತೋತ್ರಮಂ ಮಾಡುತಿದಿರಲ್ಲಿ
ನಿಂತು ಕರಕಮಲಮಂ ಮುಗಿದು ಬಿನ್ನವಿಸಿದಂ ಜೀಯ್ಯ ವಿಷವುದಿಸಿ ದೇವಾ
ಸಂತಾನಮಂ ತಗುಳ್ದರೆಯಟ್ಟೆ ಘೂರ್ಮಿಸಿಯು
ಗಾಂತಾಗ್ನಿಯೆನಲು ಸಚರಾಚರವನುರುಪುತ್ತ
ಲಂತದೆಲ್ಲಾ ಲೋಕಮಂ ನುಂಗುತಿರ್ದಪ್ಪುದೈಯ್ಯ ಚಿತ್ತೈಸೆಂದನೂ ೭೩

ಕಂದರ್ಪಹರನೆ ಹರಿ ದೇವೇಂದ್ರ ದೇವತಾ
ವೃಂದವಸುರರು ಸಿದ್ಧಚಾರಣರು ತಾಪಸರ
ವೃಂದಮಂ ಸುಟ್ಟುರುಪುತೆಯ್ತುರುತ್ತಿರ್ಪುದಿದಕೆ ನೀನೇ ಗತಿಮತಿಯಲಾ
ತಂದೆ ತಾಯನ್ಯತ್ರವಿಲ್ಲೆಮಗೆನಲ್ಕೆಪೂ
ರ್ನ್ನೇಂದುಧರನ ಜನ ನುಡಿಯಂ ಕೇಳಿ ಮಿಗೆ ಕರುಣ
ದಿಂದ ನೀವಂಜದಿರಿಯೆಂದ ಭಯ ವಿತ್ತನಾನಂದದಿಂದತವರ್ಗೆ ೭೪

ಘುಳಿಘುಳಿಸಿ ಲೋಕಂಗಳಂ ಸುಡುವ ವಿಷವನ
ಗ್ಗಳನೀಶ್ವರಂ ನೆನದ ಮಾತ್ರಕ್ಕೆ ಮುಂದೆಯಾ
ಪ್ರಳಯಾಗ್ನಿಯಂದದಿಂ ಬಂದು ಘೂರ್ಮಿಸಿ ಕಾಳಮೇಘ ನಿಷದಂಜನಾದ್ರಿ
ಸುಳಿದಂತೆಯಾರ್ಭಡಿಸಲಲ್ಲಿ ಹಸ್ತವನೊಡ್ಡ
ಲಳವಟ್ಟು ಕರಕಮಲದೊಳು ತುಂಬಿಯಿರ್ದಂತೆ
ಪೊಳವುತಿರ್ದುದು ವಿಷ್ಣು ಮುಖ್ಯರೀಕ್ಷಿಸೆ ಮಹೋಜ್ವಲವಾಗಿ
ಘೋರಗರಳಂ ೭೫

ಮೃಡನ ಕರದೊಳಗಡಂಗಿರ್ದ ವಿಷಮಂ ಕಂಡು
ಹೊಡದವಾ ದೇವದುಂದುಭಿ ಪುಷ್ಪವೃಷ್ಟಿಗಳು
ಬಿಡೆ ಕಱದವಖಿಳ ದೇವರ್ಕಳಾನಂದಿಸಿದರಾ ಮುನೀಶ್ವರರು ತಮ್ಮ
ಜಡೆಗಳಂ ಕೆದಱಿ ಹಸ್ತದ ದಂಡಗಳನಲುಗು
ತಡಿಗಡಿಗೆ ಕುಣಿದರಂತಾ ಕಾಲದಲ್ಲಿ ಹರಿ
ಯೊಡವೆರಸಿಯಾ ಬ್ರಹ್ಮನೆಱಗಿ ಕೈಮುಗಿದು ಬಿನ್ನೈಸಿದಂ ಸರ್ವೇಶಗೆ ೭೬

ಪೊಂಗಿ ಮೃದು ಮಧುರ ವಚನಂಗಳಿಂ ಹಸ್ತಕಮ
ಲಂಗಳಂ ಮುಗಿದು ನೀನೇ ಮಹಾವಿಷವಿದಂ
ನುಂಗಬೇಕಲ್ಲದೊಡೆ ಮರಳಿ ಲೋಕಪ್ರಳಯವಹುದೈಯ್ಯ ಎನಲೀಶ್ವರಂ
ಹಾಂಗೆ ಮಾಡುವೆನೆಂದು ಪೀಯೂಷಮಂ ಕೊಂಬ
ಪಾಂಗಿನಿಂ ಸ್ವೀಕರಿಸಲದು ಗಳದೊಳಿರ್ದು ನೆಱಿ
ಹೊಂಗಿ ಹೊಡಕರಿಸಿ ಡಾಳಿಸುತಿರ್ಪುದದಕೆ ಕೀರ್ತಿಸಿದರನಿಬರು ಭಕ್ತಿಯಿಂ ೭೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಲಕಂಠಾಭಿಧಾನಂ ಶಿವಂಗಾಯ್ತು ಸುರ
ಜಾಲಮಂ ಬೀಳ್ಕೊಟ್ಟು ಸುಖವಿರ್ದನೀಶ್ವರಂ
ಲಾಲಿಸಿದೆಯಾ ನೀಂ ಸನತ್ಕುಮಾರಾ ಎಂದು ನಂದೀಶ್ವರಂ ಪೇಳ್ದುದಾ
ಈ ಲೋಕದೊಳು ಹಲಗೆಯಾಚಾರ್ಯನೊಲ್ದತಿ ವಿ
ಶಾಲಭಕ್ತಿಯು ಕೆಂಚವೀರಾಖ್ಯ ಹದಿನೆಂಟು
ಲೀಲೆಯಂ ಕೇಳಿದಾ ಕಲ್ಪಕಲ್ಪದೊಳೆಂದು ಬಿತ್ತರಿಸಿದಂ ಕೃಪೆಯೊಳು ೭೮

ಹದಿನೆಂಟನೆಯ ಲೀಲೆ ಮುಗಿದುದೀ ತಾಣಕ್ಕೆ
ಇದನಾರು ಬರದೋದಿ ಕೇಳ ವಿಸ್ತರಿಸಿದರಿ
ಗೊದಗುವುದು ಶಿವಭಕ್ತಿ ಸುಜ್ಞಾನವಖಿಳಕಂಟಕ ಹರವವಿಹದ ಭೋಗಾ
ಸದಮಲದ ಪರಮೋಕ್ಷ ಮಪ್ಪುದಿದನಳ್ತಿಯಿಂ
ಪದನ ಮಾಡಿದೆನಿಲ್ಲಿ ಲಕ್ಷಣವನಱಿಯದುಸು
ರಿದೆನೆನಲ್ವೇಡವಱಿಕೆಯೊಳಿಟ್ಟೆನಯ್ಯ ಶಿವಮಸ್ತು ಕಲ್ಯಾಣಮಸ್ತು ೭೯

ಭೂಲೋಕ ಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜ ಭೃಂಗ ಮಲ್ಲಣಾರ್ಯಂ
ಶೀಲಪಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೮೦

ಇದು ವೀರಶೈವ ಷಟ್ಸ್ಥಲ ಮಾರ್ಗಿಸದ್ಭಾವ
ಸದನ ಸುವಿರಕ್ತ ವ್ರತಾಚಾರ ಸತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳಮಾಹೇಶ್ವರಹಿತಾರ್ಥದಿಂ ಕೇಳ್ವತ್ತನ್ನ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಷಧರತ್ವಕ್ಕೆ ಕಾಂಡವೆರಡರ ಮೇಲೆ ಸಂಧಿ ಹದಿನಾರಾದುದು ೮೧

ಅಂತು ೧೬ ಕ್ಕಂ, ಪದನು ೮೦೬ ಕ್ಕಂ ಗ್ರಂಥ ೭೫ ಕ್ಕಂ
ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೯

ಚಕ್ರದಾನಸ್ವರೂಪಂ ತು ಏಕೋನ ವಿಂಶತಿ ಸ್ಮೃತಂ ಎಂಬರ್ಥಕ್ಕೆ ಕಥೆ

ನೆಟ್ಟನಾ ಹರಿಯಜರು ಬಾಲಭಾವದಿ ಹೋರೆ
ನಿಟ್ಟಿಸುತ್ತಂ ಲಿಂಗರೂಪಾಗಿ ತನ್ನುತಿಗೆ
ಕೊಟ್ಟನೊಲಿದಾ ಶಂಖ ಚಕ್ರಮಂ ಕೃಷ್ಣಂಗೆ ಬೊಮ್ಮನಂ ಪೊರೆದನಭವಂ

ಗಂಗೆಯೊಳು ನೆರದೆಯಾ ನೀನೆಂದೊಡಿಲ್ಲೆಂದ
ನಂಗಾರಿ ಸತ್ಯಮಂ ಮಾಳ್ಪೆನೆಂದಿಂಗಳವು
ನಂಗೈಯ್ಯೊಳಾಂತದನೊಪ್ಪೆನೆನೆ ಪಿರಿಯುರಗಮಂ ಪಿಡಿಯಲದ ಜಱೆಯುಲು
ಲಿಂಗನೆಯೆ ನಿನ್ನುರದ ಬಟ್ಟಮೊಲೆಯೇಕನಕ
ಲಿಂಗವೆಂದದ ಪಿಡಿದುಕೊಂಬಡಿದು ಬಳಿನೀರ
ಪಾಂಗೆನುತ್ತಧರಮಂ ಪೀರ್ದರ್ಪ್ಪಿ ಸೊಗಸುವಡದಾ ಶಾಂತಮಲ್ಲ ಶರಣು ೧

ಭಕ್ತರ ಪಿತಾಮಹ ಪರಬ್ರಹ್ಮರೂಪ ಸು
ವ್ಯಕ್ತಾಂಗ ಚಕ್ರಧರ ಯಮಮುಖಾಸುರವೈರಿ
ರಿಕ್ತ ಶಿಷ್ಯಾಳಿಗಳ ಕರಕಮಲದೊಳ್ಪಡೆದು ರಕ್ಷಿಸುವಭವಮೃಡಾಂಗಿ
ಶಕ್ತ ಜಗದುತ್ಪತ್ತಿರಕ್ಷಣಪ್ರೇರಕೋ
ದ್ಯುಕ್ತರುದ್ರಾಧೀಶ ಮೇಲಣಗವಿಯನಾದಿ
ಮುಕ್ತ ಜಯ ಶಾಂತನಂಜೇಶ ಮಮಹೃದ್ವರ್ತಿಯಖಿಲ ದಿಗ್ಭರಿತಕೀರ್ತಿ ೨

ಹದಿನೆಂಟನೆಯ ಕಥೆಯ ಕೇಳಿದಾ ನೀಂ ಮುಂದೆ
ಮುದದೊಳಾ ಚಕ್ರದಾನ ಸ್ವರೂಪಂತುವೆಂ
ದುದಿತಾರ್ಥಕಳವಟ್ಟು ಮೆಱೆವ ಹತ್ತೊಂಬತ್ತನೆಯ ಲೀಲೆಯಂ ಪೇಳ್ವೆನು
ಸದಮಲನೆ ಕೆಂಚವೀರಾಖ್ಯಯಾ ತಿಳಿವುದ
ಭ್ಯುದಯದಿಂದೆನುತ ನಂಜುಂಡಮೂರ್ತಿಯ ದಿವ್ಯ
ವದನಮಂ ನೋಡಿ ಹಲಗೆಯ ದೇಶಿಕಂ ಮಲ್ಲಣಾರ್ಯಸಹಿತಂ ನುಡಿದನು ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀನಾಲಿಸೈ ಸ್ಕಂದಪೌರಾಣದೊಳಗದೀ
ಶಾನ ಸಂಹಿತೆಯಲ್ಲಿ ಶಂಕರಕುಮಾರಕ ಷ
ಡಾನನಂಗೆಱಗಿ ಕೈಮುಗಿದು ಬಿನ್ನವಿಸಿದಂ ದೇವಸರ್ವೇಶನಿಂದ
ದಾನವಾರಾತಿಯಾ ಶಂಖ ಚಕ್ರಂಗಳನ
ದೇನು ಕಾರಣದಿಂದ ಪಡದನೆಂದೆಂಬಾ ನ
ವೀನ ಪ್ರಸಂಗಮಂ ಬಿತ್ತರಿಪುದೆಂದಗಸ್ತ್ಯಂ ಭಕ್ತಿಯಿಂ ಕೇಳ್ದನು ೪

ಕುಂಭಜನ ಬಿನ್ನಪವನವಧರಿಸಿಯಧಿಕ ಸೌ
ರಂಭದಿಂ ನುಡಿದನಾ ಷಣ್ಮುಖನಗಸ್ತ್ಯಕೇ
ಳ್ಬುಂಭೂಂ ಎನಿಪ್ಪ ಶಂಖವನಧಿಕ ಚಕ್ರಮಂ ವಿಷ್ಣು ಭಜಿಸಲ್ಕೆ ಕೊಟ್ಟಂ
ಶಂಭುವೆಂಬೀ ಕಥೆ ಸಮಸ್ತ ವೇದಕ್ಕೆ ವಿ
ಶ್ವಂಭರೆಯೊಳತಿ ಗೋಪ್ಯವೆನಿಪನರ್ಘ್ಯಂ ಕಣಾ
ಶುಂಭನ್ಮಹಾಮಂಗಲಂ ಬಳಿಕಲದಱಾದಿಯಾದ ನುಡಿಯೆಂತೆಂದೊಡೆ ೫

ವಿಳಸನ್ಮಹಾದೇವ ಪರಮ ಸ್ವತಂತ್ರ ನಿ
ರ್ಮಳನೊಮ್ಮೆ ಸರ್ವಲೋಕಾವಳಿಯನೆಲ್ಲವಂ
ಪ್ರಳಯಮೆಯ್ದಿಸೆ ತಮೋಭರಿತವಾದುದು ಜಗಂ ಹರಿಯಜೇಂದ್ರಾದ್ಯಮರರೂ
ನಳಿನಸಖಚಂದ್ರದಿಗ್ಭೂಮಿಲೋಕಂಗಳೆ
ಲ್ಲಳಿದ ಕತ್ತಲೆಯೊಳಾ ಪರಮಾತ್ಮ ಶಿವಪದಂ
ಬಳಿಕಲಾ ಸ್ವಪ್ರಕೃತಿಯೊಳಗವಷ್ಟಂಭಿಸಿದನಲ್ಲಿ ತತ್ಕ್ಷೋಭೆಯಿಂದೆ ೬

ಘನಜಲಪ್ರಳಯದೊಳಗಾ ನಿಜ ಪ್ರಕೃತಿಯೊಳು
ಜನಿಸಿದರು ಹರಿಯಜರು ಕತ್ತಲೆಯೊಳಾ ಬಾಲ
ರೆನಿಪರಿರ್ವರು ಶಿವನನಱಿಯದಜ್ಞಾನದಿಂದಾ ವಿಲಯಸಲಿಲದೊಳಗೆ
ಮನವಾರೆ ಮುಳುಗುತ್ತೇಳುತ್ತಲರ್ಭಕರು ನಿಜ
ಜನನಿಯಂ ಕಾಣದಂತಳುಕಿ ನಡುಗುತ್ತಲಿ
ಪ್ಪನಿತಕೀಶ್ವರನಿರ್ವರೊಬ್ಬೊಬ್ಬರಂ ಕಾಣಲೆಂದು ಬೆಳಗಂ ಮಾಡಿದಂ ೭

ಆಳುತಿರ್ದರೀರ್ವರಂ ಕಂಡು ಶಂಕರನವ
ರ್ಗಳಿಗೆ ಕಿಂಚಿಜ್ಞಾನಮಂ ಕೊಡಲು ಹರಿಯಜರು
ಬಳಿಕ ಭುಜಬಲವಂತರಾಗಿ ದುರಹಂಕಾರರಾಗುತಾ ಬಾಲ್ಯದಲ್ಲಿ
ಎಳಸಿ ನೋಡಿದರೊಬ್ಬರೊಬ್ಬರಂ ಕಂಡು ಕಡು
ಮುಳಿದು ಕೋಪಂಗಳಿಂ ಕಂಗಳುಱಿ ಕೆಂಪೇಱಿ
ಘುಳಿಘುಳಿಸಿ ಕೇಳತೊಡಗಿದರು ನೀನಾರು ತಾನಾರೆನುತ್ತೊರ್ರೋರ್ವರೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುಡಿದರಂತಲ್ಲಿ ನಾನೇ ಕರ್ತ ಲೋಕವಂ
ಪಡವುದಕೆ ರಕ್ಷಿಸುವುದಕ್ಕೆ ಮುಳಿದೆಲ್ಲವಂ
ಸುಡುವುದಕ್ಕೆನಲೊಬ್ಬನೆಲವು ಬಿಡು ನೀನೆನ್ನ ಬಂಟನೈ ನಿನಗೆ ನಾನು
ಒಡೆಯನೆನೆ ಮರಳಿಯುವನಲ್ಲ ತೆಗೆಯೈನಾನೆ
ಬಿಡ ಕರ್ತ ನೀನಾದಿಯಾದವಂ ಪುಟ್ಟಿಸಲು
ನಡಸಲಂತಳಿಯಲಿನ್ನಾವನೆಂದಾಡಿ ಹರಿಯಜರು ಹೋರುತ್ತಿರ್ದರೂ ೯

ಹೋರಿದರು ಭುಜವೊಯ್ದು ಘುಡಿಘುಡಿಸುತೆದ್ದು ಬಿಡ
ದಾರಿದರು ಕರದ ಮುಷ್ಟಿಗಳಿಂದ ತಿವಿದರಾ
ಪೇರುರಂಗಳ ಬಳಿಕ ತಲೆಗಳಂ ಬೆನ್ನುಗಳ ನಳ್ಳೆಗಳನುಱೆಪಸರಿಸಿ
ಓರೋರ್ವರಾ ಬೆನ್ಗಳೆದೆಗಳಂ ಹೊಡಹೊಡದು
ಪಾರಿ ಹಿಂದೆಗದು ತಲೆತಲೆಗಳಿಂ ಪಾಯ್ದರಾ
ವಾರಿಜಾಕ್ಷಾಜರ್ಕಳಾರ್ಭಡಿಸಿ ಕುಬ್ಬಿರಿದು ಪುಟನೆಗದು ಕುಕಿಲಿಱಿದರು ೧೦

ಆಗ ಹೆರತೆಗದೋರೆಯಲ್ಲಿ ಭುಜಭುಜದಿಂದ
ತಾಗಿದರು ಕಾಲ್ಗಳಂ ನೆಗನೆಗಪಿ ಪೇರೆದೆಯು
ಚಾಗು ಚಾಗೆನುತೊದ್ದರೊದ್ದರೊಡನೊಡನೆ ಮೂದಲಿಸಿ ಬಯ್ವುತ ಬಯ್ವುತ
ಕೂಗಿ ಕೈಗಳಂ ಪಿಡಿದು ಕೆಡಹಿದರು ತಳಗು ಮೇ
ಲಾಗಿ ತಿವಿದಾಡಿದರು ಮತ್ತೆದ್ದು ಹೊಡಹೊಡದು
ಹೀಗೆ ದೇವತೆಗಳ ಸಹಸ್ರವರುಷಂ ಕಾದುತಿರ್ದರಂತಜಹರಿಗಳು ೧೧

ಆ ದಿವ್ಯವರುಷಪರಿಯಂತರಂ ಹರಿಯಜರು
ಕಾದಿಯಾ ಪ್ರಳಯೋದಕದ ಮೇಲೆ ನಿಸ್ಸತ್ವ
ರಾದವರು ಕಂಗೆಟ್ಟು ಬಿದ್ದು ಪಲಕೆಲವು ದಿನವಿರಲಱಿದು ಕರುಣದಿಂದಾ
ಮಾದೇವನಿರ್ವರ್ಗೆ ಸತ್ವಂಗಳಂ ಕೊಟ್ಟು
ಸಾದರದೊಳೆಬ್ಬಿಸುತ್ತವರ ಮಧ್ಯದೊಳು ಲಿಂ
ಗೋದಯಂ ತಾನಾದ ನೀಶನಮಲಿನ ಧರ್ಮಕೋಶ ದಿವ್ಯಪ್ರಕಾಶಾ ೧೨

ಸ್ಥೂಲ ಮೈಶ್ವರ್ಯಮಿನ ಸಹಸ್ರಕೋಟಿ ಪ್ರಭಾ
ಶಾಲಿ ಕಲ್ಮಷರಹಿತನಾದಿ ಮಧ್ಯಾಂತರಹಿ
ತಾಲಯ ಮಹಾದ್ಯುತಿ ಎನಿಪ್ಪ ಲಿಂಗಂ ನಲಿದು ಝಗಝಗಿಸಿ ಬೆಳಗುತಿರಲು
ಬಾಲಭಾವದೊಳಿರ್ದು ಕಮಲಸಂಭೂತ ವನ
ಮಾಲಿಗಳು ಕಂಡಿದೇನೆಂದು ತತ್ತೇಜಸ್ಸ
ನಾಲೋಕಿಸುತ ಭೀತಿಯಿಂದ ಕಣ್ಮುಚ್ಚಿ ನಡನಡುಗಿ ಮೂರ್ಛಿತರಾದರು ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕಲಾ ಹರಿಯಜರು ಮೆಲ್ಲನೆಚ್ಚತ್ತು ಕಂ
ಗಳ ತೆಗೆದು ತಲ್ಲಿಂಗದಾದಿಯಂ ಮಧ್ಯಮಂ
ಬಳಸಿರ್ದ ಸುಪ್ರಭಾಚಕ್ರಮಂ ಮಸ್ತಕಾಂತಂಗಳಂ ನೋಡಿ ನೋಡಿ
ತಿಳಿಯಲಱಯದೆ ತಮ್ಮೊಳೊಬ್ಬೊಬ್ಬರುದ್ಧತೆಯು
ನುಳಿದು ಶಾಂತತ್ವದಿಂದನ್ಯೋನ್ಯ ತನ್ಮುಖಂ
ಗಳ ನೋಡಿ ತಲ್ಲಿಂಗದೆಡೆಯಲ್ಲಿ ಸದ್ಭಕ್ತಿ ಪುಟ್ಟುತಿರಲಿಂತೆಂದರೂ ೧೪

ವಿನಯದಿಂ ಒಬ್ಬೊಬ್ಬರೆಯ್ದಿ ಮಾತಾಡಿದರು
ಘನತರದ ಲಿಂಗವಿದು ನಮ್ಮ ದೃಷ್ಟಿಗಳ ಘ
ಮ್ಮನೆ ಸೆಳೆದುಕೊಂಬ ಬೆಳಗಿಂತಪ್ಪ ಕರ್ತೃವುದಯಂಗೆಯ್ಯಲಾ ತಮಸ್ಸೂ
ಇನಿಸಿಲ್ಲದಡಗಿತಿನಿತುಂಕಾಲಮುಂ ವೃಥಾ
ನಿನಗೆ ನನಗಾದುದು ಮಹಾಯುದ್ಧಮಿರ್ಬಗೆಗೆ
ಇನಕೋಟಿ ತೇಜಸಮುಗ್ರನೆಮ್ಮಜ್ಞಾನಮಂ ಕಳೆದನೆಂದರಾಗಾ ೧೫

ಇಂತು ತಾಮಿರ್ವರುಂ ಮಾತಾಡಿ ಲಿಂಗದಾ
ದ್ಯಂತವಹ ಪಾದಮಂ ಮಸ್ತಕಂಗಳನಂತ
ನಂತಕಾಲದೊಳಱಸಿಯಜಹರಿಗಳೆಯ್ದಲಾಱದೆ ಮರಳಿಯೋರೋರ್ವರೂ
ಅಂತುಕಾರಣ ಯಥಾರ್ಥಂಗಳಂ ನುಡಿದು ತ
ತ್ಕಂತುಹರಮೂರ್ತಿಯಂ ತೇಜಸ್ಸ್ವವರ್ತಿಯಂ
ಕಾಂತ ವಿಗತಾರ್ಥಿಯಂ ಕೊಂಡಾಡಿ ಕೀರ್ತಿಸಿದರಾನಂದರಸವೊಸರಲು ೧೬

ಪ್ರವಿಮಲೋದ್ಭವಲಿಂಗಮೂರ್ತಿಯ ಹರಿಬ್ರಹ್ಮ
ರವರಿರ್ವರೊಂದಾಗಿ ಕೊಂಡಾಡತೊಡಗಿದರು
ಶಿವಲಿಂಗಕೋಸ್ಕರಂ ವಂದಿಸುವೆವಾ ಶುದ್ಧಲಿಂಗಕ್ಕೆಸೈತೆಱಗುವೆಂ
ತವೆ ಬುದ್ಧಲಿಂಗವೇ ಜ್ಞಾನಲಿಂಗವೆ ಮಹೋ
ತ್ಸವದ ಸದ್ಯೋಜಾತವಿಜ್ಞಾನಮಪ್ಪ ಲಿಂ
ಗವೆ ಬ್ರಹ್ಮಲಿಂಗವೇ ಜ್ಞಪ್ತಿಲಿಂಗವೆ ನಿನ್ನ ಪದಕೆಱಗಿ ಬದುಕುತಿಹೆವು ೧೭

ಆಲಿಸಲು ಸತ್ವಲಿಂಗಂ ರಜೋಲಿಂಗಂ ತ
ಮೋ ಲಿಂಗಮಾ ಪ್ರಕೃತಿಲಿಂಗ ಪ್ರಧಾನಮಾ
ಯಾ ಲಿಂಗ ನಿರ್ಗುಣ ಸಗುಣಲಿಂಗ ಚೈತನ್ಯಲಿಂಗಂ ಮಹಾಲಿಂಗಕಂ
ಮೇಲೆಯಾ ಚಿತ್ತಲಿಂಗಂ ಬುದ್ಧ್ಯಹಂಕಾರ
ದಾ ಲಿಂಗವೈಕಾರಲಿಂಗ ತಾಮಸಲಿಂಗ
ವಾ ಲಾಲ್ಯಶಬ್ದಲಿಂಗಾಕಾಶಲಿಂಗವಾ ಸ್ವರ್ಲಿಂಗಕೆಱಗುತಿಹೆವು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಂಗದಿಂ ವಾಯುಲಿಂಗಂ ದೀಪಲಿಂಗಾಗ್ನಿ
ಲಿಂಗ ರಸ ಜಲಗಂಧಲಿಂಗಮಂತಾ ಭೂಮಿ
ಲಿಂಗವಾ ಪ್ರಾಣಲಿಂಗಂ ಸುಜಿಹ್ವಾಚಕ್ಷುವಾ ಲಿಂಗತ್ವಲ್ಲಿಂಗಕಂ
ಲಿಂಗವಾ ಶ್ರೋತ್ರಲಿಂಗೋಪಸ್ಥಲಿಂಗವಾ
ನಂಗ ಮದಹರಣ ಲಿಂಗಂ ಪಾಯುಲಿಂಗವಾ
ಲಿಂಗಮುತ್ಸರ್ಗಲಿಂಗಂ ಪಾದಲಿಂಗ ಗತಿಲಿಂಗಕೆಱಗುವೆವೆಂದರು ೧೯

ಲಿಂಗವಾಪಾಣಿ ನುತಿಲಿಂಗ ವಾಗ್ಲಿಂಗಂ ಸು
ಲಿಂಗ ವಚೋಲಿಂಗ ಶಕ್ತಿಲಿಂಗಂ ತತ್ವ
ಲಿಂಗಂ ನವೋಲಿಂಗವಾ ಬ್ರಹ್ಮಲಿಂಗವಾ ವಿಷ್ಣುಲಿಂಗಂ ಸರುದ್ರಾ
ಲಿಂಗ ತ್ರಿಶಕ್ತಿಲಿಂಗಂ ತ್ರ್ಯಗ್ನಿಲಿಂಗಂ ಸು
ಲಿಂಗ ತ್ರ್ಯಕ್ಷರಲಿಂಗವಾ ತ್ರಯೀ ಲಿಂಗವಾ
ಲಿಂಗ ಹೇಮದ ಲಿಂಗವಾತ್ಮಲಿಂಗಂ ರಶ್ಮಿಲಿಂಗವಾ ಜ್ಯೋತಿಲಿಂಗಂ ೨೦

ಲಿಂಗವಾ ಭಾಗ್ಯಲಿಂಗಂ ಧನಂ ಲಿಂಗವಾ
ಲಿಂಗ ಲೋಕಂ ಲಿಂಗವಾ ಶಿಲಾ ಲಿಂಗಂ ಸು
ಲಿಂಗ ಸೂತ್ರಂ ಲಿಂಗ ಫಲ ಲಿಂಗ ರಸಲಿಂಗವಾ ಭಿಷಗ್ಲಿಂಗಾಯುಧಂ
ಲಿಂಗಂ ಸುಯುದ್ಧ ಲಿಂಗಂ ವೇದ ಲಿಂಗವಾ
ಲಿಂಗಾಂಗಲಿಂಗವಾ ವರ್ಣಲಿಂಗಂ ಧರ್ಮ
ಲಿಂಗವಾಶ್ರಮಲಿಂಗ ಕೋಶ ಲಿಂಗಂ ವಜ್ರಲಿಂಗವಾ ಕರ್ಮಲಿಂಗಂ ೨೧

ಸಾಂಗದಿಂ ತರ್ಕಲಿಂಗಂ ಲೋಕಲಿಂಗ ಯ
ಕ್ಷಾಂಗಲಿಂಗಂ ರಕ್ಷಲಿಂಗ ಗುಹ್ಯಕಲಿಂಗ
ಲಿಂಗವಾ ಭೂತಲಿಂಗಂ ಕಿನ್ನರಂ ಲಿಂಗವಲ್ಲಿ ಕೂಷ್ಮಾಂಡಲಿಂಗಂ
ಲಿಂಗ ಕಿಂ ಪುರುಷ ಮಯ ಲಿಂಗ ವೇತಾಳಕ ಸು
ಲಿಂಗ ಗಂಧರ್ವಲಿಂಗಂ ಸಿದ್ಧಲಿಂಗವಾ
ಲಿಂಗ ವಿದ್ಯಾಧರಂ ಲಿಂಗದೇವ ಋಷಿಲಿಂಗಕ್ಕೆ ವಂದಿಪೆವೆಂದರು ೨೨

ಲಿಂಗಬ್ರಹ್ಮ ಋಷಿಲಿಂಗಂ ರಾಜಋಷಿಲಿಂಗ
ಲಿಂಗಯೋಗಂ ಲಿಂಗ ಪಕ್ಷಿಲಿಂಗಂ ಗರ್ಭ
ಲಿಂಗ ನಕ್ಷತ್ರಲಿಂಗಂ ಮನುಷ್ಯಲಿಂಗ ವಿಪ್ರ ಲಿಂಗಂ ಕ್ಷತ್ರಿಯಾ
ಲಿಂಗ ವೈಶ್ಯಂ ಲಿಂಗ ಶೂದ್ರ ಲಿಂಗಾಂತ್ಯಜಾ
ಲಿಂಗಂ ಜರಾಯುಜಂ ನರ ಲಿಂಗ ಪಶು ಲಿಂಗ
ಹಾಂಗೆ ಮೃಗಲಿಂಗ ಉದ್ಭಿಜಲಿಂಗ ವೃಕ್ಷಲಿಂಗಾಂಡಜಂ ಪಕ್ಷಿಲಿಂಗಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂಗಲ ಸ್ವೇದ ಲಿಂಗಂ ಕ್ರಿಮಿ ಲಿಂಗ ಬ್ರ
ಹ್ಮಾಂಗ ಲಿಂಗಂ ಕ್ರಿಯಾ ಲಿಂಗ ತೀರ್ಥ ಸುಲಿಂಗ
ಸಾಂಗ ಸುಕ್ಷೇತ್ರ ಲಿಂಗಂ ಕೃಚ್ಛ್ರಲಿಂಗಂ ತಪೋ ಲಿಂಗ ದಾನಲಿಂಗಂ
ಹಾಂಗೆಯಾ ಹೋಮ ಲಿಂಗಂ ಸು ಪೂಜಾ ಲಿಂಗ
ಲಿಂಗವಾ ಜಪ ಲಿಂಗವಾ ಪ್ರಣಾಮಮಂ ಧ್ಯಾನ
ಲಿಂಗ ಮಂತ್ರಂ ಲಿಂಗ ತಂತ್ರ ಲಿಂಗಕ್ಕೆ ವಂದಿಸುವೆವೆಂದೆನುತಿರ್ದರೂ ೨೪

ಲಿಂಗದೀಕ್ಷಾ ಲಿಂಗದಕ್ಷಿಣಾ ಲಿಂಗ ಕ್ರೂ
ರಾಂಗಲಿಂಗಂ ಸೌಮ್ಯಲಿಂಗವಂತಾ ಸ್ಥೂಲ
ಲಿಂಗ ಸೂಕ್ಷ್ಮಂ ಲಿಂಗ ರಾಗ ಲಿಂಗ ದ್ವೇಷಲಿಂಗವಾ ಲೋಭ ಲಿಂಗಂ
ಲಿಂಗವಾ ಕ್ರೋಧ ಲಿಂಗಂ ಮತ್ಸರಂ ದಿವ್ಯ
ಲಿಂಗ ಶೋಕಾನಾದಿ ಲಿಂಗಂ ರಸತ್ಪಿಪಾ
ಸಾಂಗ ಲಿಂಗಂ ಕ್ಷುಧಾ ಲಿಂಗ ತೀಕ್ಷ್ಣಂ ಲಿಂಗವಾ ತೃಷಾ ಲಿಂಗ ಶರಣೂ ೨೫

ದನುಲಿಂಗ ಶಮಲಿಂಗ ಶಾಂತಲಿಂಗಂ ಜ್ಞಪ್ತಿ
ಎನಿಪ ಲಿಂಗವಲಿಂಗ ಮುಂ ವಿಲಿಂಗಂ ಸುಲಿಂ
ಗ ನವೀನ ಸರ್ವಲಿಂಗಂ ಸ ಸರ್ವಾಯ ಲಿಂಗಂ ಭೂತ ಲಿಂಗವಲ್ಲೀ
ಅನಘ ಸರ್ವೇಶಲಿಂಗಂ ಶಾಂತಲಂಗಂ ಘ
ಮ್ಮನೆಯುಮಾಕಾಂತ ಲಿಂಗಂ ಸುಸರ್ವಜ್ಞಲಿಂ
ಗನ ಪಾದಕಾವು ವಂದಿಸುವೆವೆಂದೆನುತಿರ್ದರಜಹರಿಗಳಾನಂದದೆ ೨೬

ಲಿಂಗಂ ವಿಶಿಷ್ಟಮತ್ತಂ ವಿಚಾರಿಸೆ ಸರ್ವ
ಮಾಂಗಲ್ಯವೀವ ಲಿಂಗಂ ಭಕ್ತಕರುಣೆಯುಹ
ಲಿಂಗವೇ ನಿನಗೋಸ್ಕರಂ ನಮಸ್ಕಾರಮಂ ಮಾಡುವೆವು ಭಕ್ತಿಯಿಂದಾ
ಪಿಂಗದೆಲೆ ದೇವ ನಿನ್ನಯ ಲೆಂಕರಾವೀರ್ವ
ರಿಂಗೆ ನಿನ್ನೀ ಸ್ವರೂಪಮಂ ತೋಱಿ ಪಾಲಿಪುದು
ಲಿಂಗಮಧ್ಯದೊಳೆಂದು ನಮಿಸಿ ಕೀರ್ತಿಸುತಿರ್ದರಜಹರಿಗಳಂತಾಗಳು ೨೭

||ಸಾಕ್ಷಿ|| ಸ್ತೋತ್ರಂಗಳು–ಬ್ರಹ್ಮ ವಿಷ್ಣೂ ಊಚತುಃ
ನಮೋಸ್ತು ಶಿವಲಿಂಗಾಯ ಶುದ್ಧಲಿಂಗಾಯ ತೇನಮಃ
ನಮೋಸ್ತು ಬುದ್ಧಲಿಂಗಾಯ ಜ್ಞಾನಲಿಂಗಾಯತೇ ನಮಃ ೧
ನಮೋ ವಿಜ್ಞಾನಲಿಂಗಾಯ ಜ್ಯೋತಿರ್ಲಿಂಗಾಯತೇ ನಮಃ
ನಮೋಸ್ತು ಬ್ರಹ್ಮಲಿಂಗಾಯ ಜ್ಞಪ್ತಿಲಿಂಗಾಯತೇ ನಮಃ ೨
ಸರ್ವ ಲಿಂಗಾಯ ಸರ್ವಾಯ ಸರ್ವಭೂತಾಯತೇ ನಮಃ
ಸರ್ವೇಶ್ವರಾಯ ಶಾಂತಾಯ ಉಮಾಕಾಂತಾಯ ಮೀಡುಷೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಹರಿಯಜರೀರ್ವರುಂ ನುತಿಸುತಿರಲಾಗಿ
ಯಂತವರ ಸದ್ಭಕ್ತಿಗಂ ಮೆಚ್ಚಿಯಂಬಿಕಾ
ಕಾಂತನಾ ಲಿಂಗಮಧ್ಯದೊಳು ಸೌಂದರರೂಪಿನಿಂ ತೋಱಿದಂ ನಿಜವನೂ
ಅಂತದೆಂತೆನೆ ಸೂಕ್ಷ್ಮ ನಿರ್ಮಲಂ ಶುದ್ಧ ಶಶಿ
ಕಾಂತಪ್ರಭಾಮಯಂ ತಾನಾಗಿ ಸರ್ವಾಂಗ
ನಂತಭೂತಸ್ಥಂ ಸಮಸ್ತ ಭೂತಗಳ ಹೃದ್ಗುಹೆಯ ಮನೆಯ ಭವನೆಸೆದಂ ೨೮

ಸರ್ವಪರಿಪೂರ್ಣಂ ಸದಾ ಶಾಂತನಹ ಶಿವಂ
ನಿರ್ವಹಣನಮೃತಸ್ವರೂಪಂ ಪರಂ ದಿವ್ಯ
ಪರ್ವತಸುತಾಧಿಪಂ ಸುಪ್ರಸನ್ನತೆಯಿಂದ ಮೆಱವುತಿರಲಾಗಿ ಕಂಡು
ಪರ್ವಿ ಪರಕಲಿಪ ಪುಳಕಂಗಳಿಂದಜಹರಿಗ
ಳಿರ್ವರುಂ ಸಾಷ್ಟಾಂಗದಂಡಪ್ರಣಾಮದಿಂ
ಗರ್ವವಿರಹಿತರಾಗಿ ನಮಿಸಿ ಮತ್ತಂ ನಮಿಸಿ ಬಿಡದೆ ಕೀರ್ತಿಸುತಿರ್ದರೂ ೨೯

ಆ ಪಿತಾಮಹ ವಿಷ್ಣುಗಳ ಭಕ್ತಿಗಧಿಕ ತೇ
ಜೋಪರಿತಮಾಗಿರ್ದು ಲಿಂಗದೊಳಗಂ ಮತ್ತೆ
ರೂ ಪುದೋಱಿದನು ತೋಳ್ನಾಲ್ಕುದಾರಂಗವಾ ತರಣಿಶತಕೋಟಿಪ್ರಭಂ
ಸೋಪಾಧಿರಹಿತನಾನಾಮಣಿಸಮಾಕೀರ್ಣ
ನೇಪಥ್ಯನಧಿಕಬಹುಲಕ್ಷಣ ಸುಲಕ್ಷಿತಂ
ಏ ಪೇಳ್ವೆನತಿಸೌಮ್ಯನತಿ ಮನೋಹರ ಮುಖಾಂಭೋರುಹಂ ರಾಜಿಸಿದನೂ ೩೦

ವಿಲಸಿತದ ನಯನತ್ರಯಂ ಕೂಡೆ ನೆಗಪಿರ್ದ
ಬಲದ ಹಸ್ತದ ಕೊಡಲಿಯುಂ ಪಟ್ಟಯುತಶಾಸ್ತ್ರ
ದಲಘು ಪದ್ಧರುಷನಮಯಪ್ರಭಂ ವೇದ ನಾಲ್ಕುಂ ಪಾದ ಚೌಪಷ್ಟಿಯಾ
ಸುಲಲಿತದ ಸತ್ಕಲಾಮಯನೆಡದ ಹಸ್ತಮಂ
ಸಲಿ ನೆಗಪಿ ಮೃಗವನುಱೆ ಪಿಡಿದಿರ್ದ ಚೆಲ್ವಿನಿಂ
ದೊಲಿದಾ ಬಹಿರ್ಮುಖನೆನಲ್ಕೆ ಚೆನ್ನಾಗಿ ತೋಱಲ್ಪಟ್ಟ ಮೊಗದೊಳೆಸದಂ ೩೧

ಎಡದ ತೊಡೆಯೊಳು ಮಹಾ ಮಾಯಾಂಗಿದೇವಿಯ
ಮ್ಮೊಡತಿಯಂ ನಿಜ ವಾಮಹಸ್ತದಿಂ ದೃಢವಾಗಿ
ಬಿಡದಿಯುವರ್ದಪ್ಪಿ ಕುಚಮಂ ಪಿಡಿಯಲೊಲಿದು ಚುಂಬಿಸುವ ಲವಲವಿಕೆಯಿಂದಂ
ಹೊಡವಂಟು ಬೇಡುವರ್ಗಂ ಸುಧರ್ಮಾರ್ಥವು
ಗ್ಗಡದ ಕಾಮಾಗ್ರಮೋಕ್ಷಂಗಳಂ ನಲ್ಮೆನಿಂ
ಕೊಡುವ ದಕ್ಷಿಣ ವರದ ಹಸ್ತದಿಂದೊಪ್ಪಿರ್ದನಭವನತ್ಯಂತ ವಿಭವಂ ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಲಸಿತದ ಶಾಂತಪ್ರಭಾವಮಯದ ವರ ಚಂದ್ರ
ಕಲೆಯೊಪ್ಪುತಿಹ ಜಟಾಮುಕುಟದಿಂದಂ ತನ್ನ
ಬಲದ ಹಸ್ತದೊಳಂ ಮನಮರ್ದು ವಲ್ಲಭನ ಬಿಗಿಯುಪ್ಪಿಕೊಂಡಿರುತಲೆಡದಾ
ಲಲಿತ ಕರದಲ್ಲಿ ಪಿಡಿದಿರ್ದ ಲೀಲಾಂಬುಜವ
ನಲುಗಿಸುವ ದೇವಿಯುರ ನಯನವೆಂಬಳಿಗಳು
ಜ್ವಳ ಶಿವನ ಮುಖವೆಂಬ ತಾವರೆಯೊಳೆಯ್ದಿ ಸುಳಿಸುಳಿದಾಡಲೊಪ್ಪುತಿರ್ದಂ ೩೩

ರಮಣೀಯದೊಳಗಧಿಕ ರಮಣೀಯವಾಗಿರ್ದ
ರಮಣಿಯ ಮುಖಾಂಭೋಜದಲ್ಲಿ ಸುಳಿವುತ್ತಿರ್ಪ
ರಮಣನೆನಿಸುವ ಶಿವನ ನೇತ್ರಭೃಂಗಂಗಳೊಪ್ಪಿದವು ಬಳಿಕಾ ದೇವಿಯಾ
ವಿಮಲವಹ ದೇಹಕಾಂತಿಯ ದಿವ್ಯಪರಿಮಲವ
ಸುಮನೋಹರಂ ಮಿಗಲು ಚುಂಬಿಸುತ್ತಧಿಕ ಸೌ
ಖ್ಯಮನೆಯ್ದಿ ಪಡವ ತನ್ನೇತ್ರಾಳಿಗಳಿನೆಸವನೀಶನಮಲಪ್ರಕಾಶಂ ೩೪

ಅರುಣ ತರುಣಂ ಶಾಂತನಧಿಕ ಕರುಣಾಕರನು
ಮರುಣಾಂಬುಜಾಸೀನ ರಮಣೀಯ್ಯುಮೆನಲೊಪ್ಪು
ವರುಣಾಗ್ರ ದಿವ್ಯಾಂಗನುತ್ತಮಂ ಲಿಂಗಮಧ್ಯದೊಳಿಂತು ನೆಱೆ ತೋಱಿದಂ
ಶರಣವತ್ಸಲನಾ ಮಹಾಮೂರ್ತಿಯಂ ಲಿಂಗ
ದುರುತರದ ಗರ್ಭದೊಳಗಂ ಕಂಡು ಸಾಷ್ಟಾಂಗ
ವೆರಸಿ ವಂದಿಸುತ ಮತ್ತಂ ನಮಿಸುತಿರ್ದರಾ ಹರಿಯಜರು ಭಕ್ತಿಯಿಂದೆ ೩೫

||ಸಾಕ್ಷಿ|| ಕ್ಷಮಸ್ವ ದರ್ಶಯಾತ್ಮಾನಂ ಪಾಹಿ ಚಾಸ್ಮಾನನ ವ್ರತಾನ್
ಏಕಸ್ಮಾನ್ ಚ ಪರಂ ರೂಪಂ ಯದ್ಯತ್ಪರತರಂ ತವ ೧
ವಿಭೋದರ್ಶಯ ದೇವೇಶ ಸಾಕಾರಂ ಪರಮೇಶ್ವರ
ಇತಿ ಸ್ತುತೋ ಲಿಂಗಮೂರ್ತಿ ರ್ಭಗವಾನ್ ಪರಮೇಶ್ವರಃ ೨
ದೇವಯೋರ್ದರ್ಶಯಾಮಾಸ ಸ್ವರೂಪಮಮಲಂ ಪರಂ
ಲಿಂಗಮಧ್ಯೇ ತತೋರೂಪಂ ಜ್ಯೋತಿರ್ಮಾತ್ರಮನೌಪಮಂ ೩
ಸುಸೂಕ್ಷ್ಮಂ ನಿರ್ಮಲಂ ಶುದ್ಧಂ ಸ್ಫಟಿಕ ಜ್ಯೋತಿ ಸಂನಿಭಂ
ಸರ್ವೇಶಂ ಸರ್ವಭೂತಸ್ಥಂ ಸರ್ವಭೂತ ಗುಹಾಶ್ರಯಂ ೪
ಸರ್ವರೂಪಂ ಸದಾಶಾಂತಂ ಶಿವಾಖ್ಯಮಮೃತಂ ಪರಂ
ತಂ ದೃಷ್ಟ್ವಾ ಪರಮಂ ರೂಪಂ ಶಿವಸ್ಯ ಪರಮಾತ್ಮನಃ ೫
ಪ್ರಣಾಮಂ ಚಕ್ರತುರ್ಭಕ್ತ್ಯಾ ಬ್ರಹ್ಮ ವಿಷ್ಣೂ ಪುನಃ ಪುನಃ
ತತಃ ಪರಂ ಮಹಾ ರೂಪಂ ಲಿಂಗ ಮಧ್ಯೇ ವ್ಯವಸ್ಥಿತಂ ೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತುರ್ಬಾಹುಮುದಾರಾಂಗಂ ಸೂರ್ಯಕೋಟಿ ಸಮಪ್ರಭಂ
ನಾನಾಮಣಿಸಮಾಕೀರ್ಣಂ ನಾನಾ ಲಕ್ಷಣ ಲಕ್ಷಿತಂ ೭
ಸೌಮ್ಯಂ ಸು ಸೌಮ್ಯವದನಂ ತ್ರಿಣೇತ್ರಂ ಸುಮನೋಹರಂ
ಊರ್ಧ್ವ ದಕ್ಷಿಣ ಹಸ್ತೇನ ಭಿಭ್ರಾಣಂ ಪರಶುಂ ಶಿವಂ ೮
ಸಾರಷಟ್ಕಯುತಂ ಶಾಸ್ತ್ರಂ ಷಡ್ದರ್ಶನ ಮಯಂ ಶುಭಂ
ವಾಮಕಾಂಗಾಂ ಶಿವಾಂ ಮಾಯಾ ಶಕ್ತಿ ತಾಂ ವಾಮಬಾಹುನಾ ೯
ದೃಢಮಾಶ್ಲಿಷ್ಯ ತದ್ವಾಮ ಕುಚಚುಂಬನ ತತ್ಪರಂ ೧೦

ಶುಚಿಗಳಾಗಿಂತು ವಂದಿಸಿ ಪಿತಾಮಹಮುಂಜ
ಕಚದಿವ್ಯರೇಳದಿರಲಾ ಮೇಘಗಂಭೀರ
ವಚನದಿಂದೀಶ್ವರಂ ದಶನದೀಧಿತೆ ದೆಶೆಯ ಬೆಳಗೆ ಕರುಣದೊಳು ನುಡಿದಂ
ಅಚಲಾತ್ಮಜಾಧೀಶನೇಳಿರೈ ದೇವತಾ
ಪ್ರಚಯಮುಖ್ಯರು ನೀವೆನುತ್ತ ಸತ್ಕರಿಸಿದಂ
ವಿಚಕಿಲೇಂದುಪ್ರಭಾಧಿಕೃತಾಂಗಂ ಭಕ್ತರಪ್ಪ ಹರಿಯಜರ ಕೂಡೆ ೩೬

ನೀವು ಮಾಡಿದ ಮಹಾಸ್ತೋತ್ರಕ್ಕೆ ಮೆಚ್ಚಿದೆವು
ನಾವು ನಿಮ್ಮಿಷ್ಟಾರ್ಥಮಂ ಬೇಡಿಕೊಳ್ಳಿಯೊ
ಲ್ದೀವೆನೆಂದೀಶ್ವರಂ ನುಡಿಯಲಾ ಹರಿಯಜರು ಮರಳಿ ವಂದಿಸುತ ತಮ್ಮ
ಪಾವನ ಕರಂಗಳಂ ಮುಗಿದು ಬಿನ್ನವಿಸಿದರು
ದೇವ ದೇವಾಧೀಶ ಜನ್ಮಜನ್ಮಂಗಳೊಳ
ಗಾವಾವ ಪರಿಯಿಂದ ನಿನ್ನ ಪಾದದ ಭಕ್ತಿಯಂ ಕೊಟ್ಟು ಸಲಹೆಂದರೂ ೩೭

ಎಳಸಿದುದು ನಿನ್ನ ಪಾದದ ಭಕ್ತಿಯುಂ ಮಹೋ
ಜ್ವಳವೆನಿಸುವೆಮ್ಮಮ್ಮ ಜಗದಮ್ಮನಾದ ನಿ
ರ್ಮಳ ಮಹಾದೇವಿಯರ ಪಾದಾಬ್ಜದೆಡೆಯ ಭಕ್ತಿಯ ಕೊಡುವುದೆರಡು ತೆಱದ
ವಿಳಸಿತದ ಭಕ್ತಿ ಎಂದೆಂದಿಂಗೆ ಕೆಡದಂತೆ
ಅಳಿಕಾಕ್ಷ ನೀಂ ಕರುಣಿಸೆನಲಿನ್ನುವುಂ ಮೆಚ್ಚು
ಗಳ ಬೇಡಿ ನೀವೆನಲು ಮರಳಿ ಕೈಮುಗಿದೊಡೆಯನಂಘ್ರಿಗವರಿಂತೆಂದರೂ ೩೮

ದೇವ ಚಿತ್ತೈಪುದೆರಡನೆಯ ವರವಾವುದೆನೆ
ಯಾವು ಮಾಡಿದ ಮಹಾಸ್ತೋತ್ರವಿದನಿಳೆಯೊಳಿ
ನ್ನಾವನೋದಿದೊಡವಂಗಾಯುಷಂ ಶ್ರೀಯುಮಾರೋಗ್ಯ ಬುದ್ಧಿ ಜ್ಞಾನಮಂ
ಶೈವಸಂಪನ್ನತ್ವ ಯಜ್ಞ ಜಪ ದಾನ ತೀ
ರ್ಥಾವಳೀ ಫಲಮನಂತವರಿಗೀಯ್ಯೆಯ್ಯ ತೇ
ಜೋ ವಿಶೇಷದೆ ಪಾಲಿಸೆಂದು ಬಿನ್ನವಿಸಿ ಮತ್ತಂ ನುಡಿದರಲ್ಲಿಯಿಂದೆ ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಪೂಜಾಕಾಲದೊಳಗಾವ ಶಿವ ಮಹಾ
ಸ್ತವವನೋದಿದೊಡೆ ಹಿಂದಣ ಫಲಂಗಳಿಸಧಿಕ
ದ ವಿಶಾಲದಿಷ್ಟಾರ್ಥಮಂ ಕೊಡುವುದಯ್ಯ ನಿನ್ನಿದಿರೊಳಾರೇನ ಬಯಸೀ
ಅವಿರತಂ ಭಜಿಸೆ ದಣಿವಂತೆ ಪಾಲಿಪುದೈಯ್ಯ
ಭುವಿಯಲ್ಲಿ ನಿಷ್ಕಾಮರಾಗಿಯೋದಿದೊಡೆನಿ
ನ್ನುವನೆ ಕೊಡು ದೇವ ನಾವಿಂತಿದಂ ಬೇಡಿದೆವೆನುತ್ತ ಬಿನ್ನೈಸಿದರಲ್ಲೈ ೪೦

ಎಂದ ಬಿನ್ನಪವನವಧರಿಸಿ ಸರ್ವೇಶ್ವರಂ
ಸಂದೆಗಂ ಬೇಡಂ ಪಿತಾಮಹಾ ದಿವ್ಯ ಗೋ
ವಿಂದರಿರ್ವರು ಕೇಳಿ ನೀವೆನ್ನ ಭೃತ್ಯರಾಗೀ ಭವಭವಾಂತರದೊಳು
ಇಂದು ಮಾಡಿದ ಮಹಾಸ್ತೋತ್ರಪಾಠಕನೆಮ್ಮ
ಮಂದಿರಂ ಸ್ವೇಚ್ಛಾನುಲೋಕದೊಳು ಸುಖಿಸುತಿರ
ಲೆಂದು ಕರುಣಿಸಿದನಾ ದೇವಾಗ್ರಗಣ್ಯನಮಳಿನ ಪುಣ್ಯನಹವರೇಣ್ಯ ೪೧

ಓತು ನಿಮ್ಮಿಂದಾದ ಸಂಸ್ತೋತ್ರಮಂ ಪಠಿಸಿ
ದಾತಂಗೆ ಯಕ್ಷ ರಾಕ್ಷಸ ಭಯಂಗಳು ಮಹಾ
ಭೂತ ವೇತಾಳರಟ್ಟುಳಿಯಧಿಕ ಋಣ ರುಜಾಬಾಧೆ ರಾಜಾದಿ ಭಯವೂ
ಏತೆಱದೊಳಂ ಪೊರ್ದದಿರಲುದಯ ಸಂಜೆಯೊಳು
ಪ್ರೀತಿಯಿಂ ಭಜಿಸಿದಾತನೆ ನನ್ನ ನಿಜಭಕ್ತ
ನೈ ತಪ್ಪದೆಂದು ನಿರವಿಸಿ ಬಳಿಕ್ಕಜ ಹರಿಗಳೊಳು ನುಡಿದನಾ ಮಹೇಶಂ ೪೨

ಎಲೆ ಯಜಾ ನೀಂ ಲೋಕಮಂ ಸೃಷ್ಟಿಸೈ ವಿಷ್ಣು
ಸಲಹು ನೀನಖಿಳ ಲೋಕದ ಜನರನೆಲ್ಲರಂ
ಸಲೆ ಶಕ್ತಿಯಂ ಕೊಟ್ಟೆವೀರ್ವರ್ಗೆ ನಿಮಗಂಬಿಕಾ ತ್ರ್ಯಂಬಕಾಖ್ಯರಾವೂ
ಒಲಿದಹೆವು ತಂದೆ ತಾಯಿಗಳು ನೀವೀರ್ವರುಂ
ಸುಲಭದಿಂ ಲೋಕವೆಲ್ಲಕೆ ಪಿತರರಾಗಿ ಎಂ
ದು ಲಸನ್ಮಹಾಮೋಹದಿಂ ನಿರೂಪಿಸಿದನಾ ಮೃಡನಧಿಕ ಶಂಭುವಜಡಾ ೪೩

ಈ ಲಿಂಗದೊಳ್ತೋಱದೆಮ್ಮ ಸ್ವರೂಪಮಂ
ಲಾಲಿಸುತ ಹೃದಯದೊಳಗಂ ಜಾನಿಸಿದನಾದೊಡಾ
ಡಾ ಲಲಿತದಾಯುರಾರೋಗ್ಯಮಹದೈಶ್ವರ್ಯಮಂತಲ್ತು ಭಕ್ತಿಮುಕ್ತಿ
ಶ್ರೀ ಲಲಿತ ಶುಭ್ರ ಯಶಮಪ್ಪುದೈ ತಪ್ಪದೆಲೆ
ಕೀಲಾಲಜೋದ್ಭವಾ ನೀಂ ದೇವ ಮಾನುಷ್ಯ
ಜಾಲ ರಾಕ್ಷಸ ಸರ್ವರಂ ಸೃಜಿಸಿ ನಿನ್ನ ಭಜಿಸಿದರಿಷ್ಟವೀಯೆಂದನೂ ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕಮಂ ರಕ್ಷಿಸುವ ಸಾಮರ್ಥ್ಯಮಂ ಕೊಟ್ಟೆ
ವೈ ಕಮಳಲೋಚನಾ ಎನಲಭವ ಚಿತ್ತೈಸು
ಬೇಕಾದ ಫಲವ ಭಜಕರ್ಗೀಯೆನುತ್ತ ಬೊಮ್ಮಂಗೆ ನಿರವಿಸಿದಿರೀಗಾ
ನಾಕಪತಿ ವೈರಿಗಳು ವಿಧಿಯ ಭಜಿಸುತ ಪಡೆದ
ನೇಕರಂ ಸದೆವರವರಂ ಗೆಲ್ಲಲೆಂತೆಲೆ ಪಿ
ನಾಕಿಯೆ ನಿರಾಯುಧಂಗೆನೆಲಾಗಿ ವಿಷ್ಣುಗಂ ಕರುಣದಿಂ ನುಡಿದನೀಶಂ ೪೫

ನೀನಿದಕ್ಕೇಕೆ ಚಿಂತಿಸಿದಪ್ಪೆ ವಿಷ್ಣು ಕೇ
ಳಾನೀವೆ ನಿನಗೆ ದಿವ್ಯಾಯುಧವನೆಂದು
ತಾನೊಂದು ಚಕ್ರಮಂ ನಿರ್ಮಿಸಿದನೆಂತೆಂದೊಡೇಕಾಗ್ರಚಿತ್ತದಿಂದಾ
ಧ್ಯಾನಿಸಿದ ಮಾತ್ರದೊಳು ಮುಂದೆ ಬಂದೊಪ್ಪಿದುದ
ನೂನದ ಸಹಸ್ರಾರ್ಕತೇಜದಿಂದಂ ಪ್ರಭಾ
ಖ್ಯಾನ ರವಿಶಶಿಯನಲನೇತ್ರದಿಂ ರಾಜಿಸಿದುದೇನೆಂದು ಬಣ್ಣಿಸುವೆನೂ ೪೬

ಆ ಮಹಾಚಕ್ರರಾಜಂ ಪುರುಷರೂಪಿಂದೆ
ಮಾಮಾ ವಿರಾಜಿಸುವನಗ್ನಿರವಿಶಶಿತೇಜ
ವೀ ಮೂಱಱೊಬ್ಬುಳಿಯ ಕಾಂತಿಯುತ್ಯುಗ್ರರೂಪಂ ಲಸಜ್ಞಾನಾಯುಧಂ
ಪ್ರೇಮ ಸದ್ಭಕ್ತಪಂಜರವಾ ತದಗ್ರದೊಳು
ಸಾಮರ್ಥ್ಯಶಿರವಧೋಭಾಗದೊಳು ಪದವಾಗಿ
ಈ ಮಾಳ್ಕೆಯಿಂದಿರ್ದು ಯುದ್ಧಕಾಲದೊಳಾ ಸುದರ್ಶನಂ ತಾನಪ್ಪದೂ ೪೭

ಬೆಳಗ ಪಸರಿಸುತಿರ್ಪ ಚಕ್ರದಾ ನಾಭಿಯಲಿ
ಬಳಸಿಪ್ಪನಾ ಚಂದ್ರನಿನನದಂ ಸುತ್ತಿರ್ಪ
ನೆಳಸಿಹಂತದ ಱೌಪ್ರದೇಶದೊಳಗಗ್ನಿ ಪರಿವೇಷ್ಟಿಸಿ ವಿರಾಜಿಸುವನು
ವಿಳಸಿತದ ಬಹು ಬಾಹುಗಳ ಸುದರ್ಶನರಾಜ
ನಳವಟ್ಟುಬಂದು ಶಿವನಿದಿರಲ್ಲಿ ನಿಜಹಸ್ತ
ನಳಿನಮಂ ಮುಗಿದಾನು ದೇವ ಮಾಡುವ ಸೇವೆ ವಿನೆಂದು ಬಿನ್ನವಿಸಿದಂ ೪೮

ಸಾರಿ ಬಿನ್ನವಿಸುತಿರೆ ಶಂಕರಂ ಕಾಣುತ್ತ
ಬಾರೆಲವೊ ಚಕ್ರರಾಜಾ ಎಂದು ನಿಜ ಹಸ್ತ
ವಾರಿಜದೊಳದ ಪರಿಗ್ರಹಿಸಿ ಹರಿಯುಂ ಕರೆದು ಕೃಪೆಯಿಂದ ಪಾಲಿಸಲ್ಕೆ
ನಾರಾಯಣಂ ಹಸಾದಂ ಜೀಯ್ಯ ಬದುಕಿದೆನು
ದಾರಿ ಜಯ ಎಂದು ಕೀರ್ತಿಸಿ ನುತಿಸಿಕೊಂಡನಾ
ಸಾರಿ ದಕ್ಷಿಣಹಸ್ತದೊಳಗದಂ ಪಿಡಿದನಾತನ ಭಾಗ್ಯಕಾರ್ಸಮಾನಂ ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಖಂಡಪರಶುವಿನ ಸಂಬಂಧ ಚಕ್ರದೊಳು ಮುಂ
ಕೊಂಡುದಯವಾಯಿತ್ತು ಗದೆಯದೆಂತೆನೆ ಜಗವ
ನಂಡಲೆವ ದೈತ್ಯರಂ ಭೀಷಣಾಕಾರದಿಂ ಸಂಹರಿಸುವುಗ್ರಮೂರ್ತಿ
ತಂಡ ತಂಡದ ರತ್ನ ಮಾಣಿಕ್ಯ ಮೌಕ್ತಿಕಾ
ಮಂಡನದೆ ಷಡ್ಧಾರೆಯಂಗನಾ ರೂಪಿನಿಂ
ಪುಂಡರೀಕಾಕ್ಷಂಗೆ ಸೇರಿತ್ತು ಶಿವನಾಜ್ಞೆಯಿಂದದೇಂ ವಣ್ಣಿಸುವೆನು ೫೦

ಆ ಗದೆಯನೆಡದ ಹಸ್ತದೊಳು ಹರಿ ಮಹಾ
ಶ್ರೀ ಗೌರಿಯಂಘ್ರಿಗೆ ನಮಸ್ಕಾರಮಂ ಮಾಡ
ಲಾಗಿ ಶಿವನೆಡದೊಡೆಯೊಳೊಪ್ಪುವ ಜಗನ್ಮಾತೆಯಾ ಪರಾತ್ಪರೆ ಭವಾನೀ
ನಾಗಭೂಷಣನನುಜ್ಞೆಯೊಳು ನಿಜಮುಖದಿಂದ
ಲಾಗ ಪಡದಳು ಶಶಿ ಪ್ರಭೆ ಸರ್ವದೇವಮಯ
ರಾಗಾದಿರಹಿತ ರಿಪುಸಂಹಾರ ಶಂಕರಾ ಜನನಧಿಕವಹತೇಜನಾ ೫೧

ಆ ಮಹಾದೇವಿ ಕೊಟ್ಟಳು ಶಂಖರಾಜನಂ
ದಾಮೋದರಂಗೆ ಮತ್ತಂ ನಿಜಾಂಬಕದಿಂದ
ಹೇಮಕಮಲವ ಪಡದಳಾ ರಮಾಲಯಸೌರುಭಾಂಗ ವಾರಿಜಮುನೀಯ್ಯೆ
ಆ ಮಾಧವಂ ಮರಳಿ ಬಿನ್ನವಿಸಿದಂ ತಾಯೆ
ನೀ ಮೋಹದಿಂದೆತ್ತಿ ಕೈಗಳೆರಡಾಯುಧಂ
ಸಾಮರ್ಥ್ಯರೂಪ ನಾಲ್ಕಂ ಪಿಡಿವದೆಂತೆನಲು ನಸುನಗುತ್ತಂ ಭವಾನೀ ೫೨

ಹರಿಗೆ ಮತ್ತೆರಡು ಹಸ್ತಂಗಳಂ ಕೊಟ್ಟಳೀ
ಶ್ವರನರಸಿ ನಾಗಯ್ಯನಾದನಂದಾ ವಿಷ್ಣು
ಧರಿಸಿದಂ ಬಲದ ಕಡೆಯಲ್ಲಿ ಶಂಖವನದಟ ಒತ್ತಿನೊಳು ಶಂಭುವಿತ್ತಾ
ವರ ಚಕ್ರವಿರಲೆಡದ ಕೈಯ್ಯೊಳಾಗದೆ ವಾಮ
ಕರವಂತ್ಯವಾಗಿರ್ದುದದಱಲ್ಲಿ ಕಮಲವೊ
ಪ್ಪಿರೆ ನಮಸ್ಕರಿಸಿ ಕೊಂಡಾಡುತಿರ್ದಂ ಮಹಾದೇವನಂ ಸರ್ವಾಣಿಯುಂ ೫೩

ವರ ಶಂಖಮುಂ ಚಕ್ರಮುಂ ಗದೆಯು ಕಮಲಮುಂ
ಪರಿವಿಡಿಯೊಳಾಂತು ನಿಂದಿರಲು ನೋಡುತ್ತಲೀ
ಶ್ವರನೆಂದನೆಲೆ ವಿಷ್ಣು ನೀ ಜಯಸು ದೈತ್ಯರಂ ಕೇಳಜಾ ನಿನಗೆ ನಾವೂ
ಕರುಣಿಸಿದ ಸಾಮರ್ಥ್ಯದಿಂ ಸೃಷ್ಟಿಯುಂ ಮಾಡು
ಸುರವಲ್ಲಭರು ನೀವು ಸುಖಿಯಾಗಿ ಎಂದು ಶಂ
ಕರನಲ್ಲಿ ನಿಮಿಷಕಂತರ್ಧಾನವೆಯ್ದಿದಂ ಗಂಧರ್ವನಗರದಂತೇ ೫೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಗಯ್ಯ ಬೊಮ್ಮರಾ ಶಂಭುವಂತರ್ಧಾನ
ವಾಗೆ ಕಂಡತಿ ದುಃಖದಿಂ ಮಱುಗಿ ಶೂಲಿಯುಂ
ಶ್ರೀ ಗೌರಿಯುಂ ಕೀರ್ತಿಸುತ್ತಲೆಯ್ದಿದರು ಭವಸಿತ್ತ ಮಣಿಹವನು ಕೊರ್ತು
ಚಾಗುರೇ ಶಿವಕಥೆಯು ಕೇಳಿದಾ ಕುಂಭಜಾ
ನೀ ಗರುವನಾದೆ ಎಂದೊರೆದನಂತಳ್ತಿಯಿಂ
ದಾ ಗುಹಂ ಸ್ಕಂದಪೌರಾಣದೀಶಾನಸಂಹಿತೆಯೊಳು ಸಮಾಪ್ತಿಯಾಯ್ತು ೫೫

ಶ್ರೀ ಕರದ ಕೆಂಚವೀರಾಹ್ವಯಾ ಶಿವಕಥೆಯ
ನೀ ಕೇಳಿದಾ ಎಂದು ಹಲಗೆಯಾಚಾರ್ಯಂ ವಿ
ವೇಕಿ ನುಡಿದಂ ಬಳಿಕ್ಕೀ ಸುಪ್ರಬಂಧಮಂ ಭಕ್ತಿಯಿಂದಾಲಿಸಲ್ಕೆ
ಲೋಕದೊಳನಂತರ್ಗೆ ಆಯುರಾರೋಗ್ಯ ಸೌ
ಖ್ಯಾಕಲಿತ ಸುಜ್ಞಾನ ಮುಖ್ಯದಿಹಭೋಗವಾ
ಸ್ವೀಕೃತ ಪರಮೋಕ್ಷವಹುದೆಂಬುದಿದು ನಿಶ್ಚಯಂ ತಥ್ಯಸುಪ್ರಮಾಣಂ ೫೬

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯನಾ ಪದಪದ್ಮ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರವೀರಶೈವಾಮೃತಪುರಾಣಮಂ ಕೊರ್ತು ಪದನಂ
ಮಾಡಿದಂ ೫೭

ಇದು ವೀರಶೈವ ಷಟ್ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಷ್ಣುಚಕ್ರದಾನಕ್ಕೆರಡು ಕಾಂಡದಿಂ ಮೇಲೆ ಹದಿನೇಳು ಸಂಧಿ ೫೮

ಅಂತು ಸಂಧಿ ೧೭ ಕ್ಕಂ ಪದನು ೮೭೪ ಕ್ಕಂ ಗ್ರಂಥ ೭೫ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೦

ವಿನಾಯಕಂಗೆ ಬೋಧಾಪ್ರಸಾದವ ಕೊಟ್ಟ ಲೀಲೆ

ವಿಘ್ನಪ್ರಸಾದವಿಂ ಸತ್ಯೈತ್ ಎಂಬರ್ಥಕ್ಕೆ ಕಥೆ

ನಿಜ ಮಹತ್ವದೊಳು ಸಂಭವಿಸಿ ಮಿಗೆ ರಾಜಿಸುವ
ಗಜವದನ ವಿಘ್ನರಾಜಂಗೆ ಸರ್ವೇಶ್ವರಂ
ಸುಜನರಿಷ್ಟಾರ್ಥವೆನಿಪ್ಪತ್ತನೆಯ ಲೀಲೆಯಲ್ಲಿ ಬೋಧೆಯನುಸುರ್ದನೂ
ಶ್ರೀವಿನಾಯಕನೆಂಬ ಪೆಸರಿಗಳಱುವ ಪೊಡೆಯ
ಪಾವು ಪಾವಿನ ಪೆಡೆಯ ಕೆಂಗದಿರ್ಗುಡಿ ಎಂಬ
ದೀವಿಗೆಯ ತುದಿಯೋಗೆಗಳಿಕ್ಕಡೆಗೆಯುಡರ್ದಂದದಿಂದಿಪ್ಪ ಮದಧಾರೆಯಾ
ಓವಿ ಮದಧಾರೆಗಳ್ಕಾಳಿಂಗ ನಾಗನಂ
ದೇ ವಿಶೇಷದ ಭಯಂಗೊಂಡು ಬೆಱಿದಿಲಿಯನು
ಳ್ಳಾ ವಿಘ್ನರಾಜನಂ ಶಿವೆಗೆ ತೋಱಿಸಿ ನಗುವ ಶಾಂತ ಮಲ್ಲೇಶ್ವರ ಜಯಾ ೧
ಆಚಾರ ಮುಖದಿಂದ ಗುರು ಸಮರ್ಪಣೆಗಳಂ
ವಾಚಾಮತೀತಮೆನೆಯರ್ಪಿಸುವ ಬಳಸಿಮೆಱ
ವಾ ಚಾರು ವಾಗ್ವಿಶೇಷದ ಜಟಾಕುಂಡಲಿಗಳಪ್ಪಾಗಮಾರ್ಥಂಗಳಾ
ಸೂಚಿಸುವ ಮಾಹೇಶನೀಗಳಿಂದಂ ಸವ್ಯ
ಸಾಚಿಧಿಕ್ಕೃತವೀರಜಂಗಮಾನತಖರ
ವೀಚಿ ಪದ ಶಾಂತನಂಜುಂಡ ಗುರುವೇ ಜಯಾರ್ತ್ಥಿವ್ರಾತ ಕಲ್ಪತರುವೇ ೨
ಸಾಂಬನ ಮಹಾಮಹಿಮೆಯೊಳಗೀಗ ಕೂರ್ತು ಹ
ತ್ತೊಂಬತ್ತನೆಯ ಕಥೆಯ ಕೇಳಿದಾ ಮುಂದೆ ನೀ
ನಿಂಬಿನಿಂ ವಾತೂಲದೊಳಗೆ ವಿಘ್ನಪ್ರಸಾದಾದ್ವಿಂಶತಿ ಎನಿಪ್ಪಾ
ಅಂಬಿಕಾಪತಿಲೀಲೆಯಿಪ್ಪತ್ತರಧಿಕ ಹೇ
ರಂಬಂಗೆ ಬೋಧಿಸಿದ ಸುಪ್ರಸಂಗವನೀಗ
ತುಂಬುವೆನು ನಿನ್ನ ಕರ್ಣದೊಳು ಕೇಳೆಲೆ ಕಂದ ಎಂದನಾ ಹಲಗೆಯಾರ್ಯ್ಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂರ್ವವಾತೂಲದೊಳಗಂ ಗಣೇಶಸ್ತು ಎನೆ
ಗುರ್ವಿನಿಂದಂ ಗಳೋದ್ಭವ ಎನಿಪ್ಪರ್ಥದಿನ
ಖರ್ವ ಶಿವನಾ ಸದಾಶಿವನಪ್ಪ ಮಾಹೇಶ್ವರನ ಕೊರಲೊಳಾನಂದದೆ
ಸರ್ವೇಶ್ವರನ ಪುತ್ರನಾಗಿ ವಿಘ್ನೇಶ್ವರಂ
ಪರ್ವಿ ಪಸರಿಸುವ ಕೀರ್ತಿಯೊಳು ಸಂಜನಿಸಿದಂ
ಗೀರ್ವಾಣಪದ ಮಕುಟ ಮಣಿಕಿರಣಯುತನಖರಚರಣಪ್ರಭಾವರಣನೂ ೪

ತೇಜದಿಂ ಹಿರಿಯ ಮಗನೆನಿಸಿದಂ ವಿಘ್ನೇಶ
ನಾ ಜಗತ್ಪತಿಯೊಳಂ ಷಣ್ಮುಖಂ ಸುಹ್ಯಯಾ
ತ್ಸಂಜಾತನೆಂಬರ್ಥದಿಂ ಪುಟ್ಟಿದಂ ಗುಹಂ ಕಿಱಿಯಣುಗನೆನಲೆಸದನು
ಓಜೆಯಿಂದೀರ್ವರೀಶ್ವರನ ಮುಂದಾಡಲಂ
ಭೋಜಾಂಡವೊಂದಱಧಿಪತಿಯೊರ್ವರುದ್ರಂ ವಿ
ರಾಜಿಸುವ ಚೂತಫಲವೊಂದನೀಶಂಗೆ ಕಾಣ್ಕೆಯನಿತ್ತು ಬಿದ್ದು ನಮಿಸಿ ೫

ಏಳುತ್ತ ಕೈಮುಗಿದು ನಿಂದ ರುದ್ರನನಲ್ಲಿ
ಭಾಳಾಂಬಕಂ ಕೃಪೆಯೊಳೀಕ್ಷಿಸಿದನಾ ಫಲವ
ಕೇಳಿದಂ ತನಗೆಂದು ವಿಘ್ನೇಶನಂತದಂ ಷಣ್ಮುಖಂ ತನಗೀಯೆನೆ
ಬೇಳರೀರ್ವರು ಬೇಡುತಿರ್ದಪರೆನುತ್ತೀಶ
ನಾಳೋಚಿಸಿದನಾರ್ಗೆ ಕೊಡುವೆವೆಂದಾಗ ದಿ
ವ್ಯಾಳಾಪದಿಂ ನುಡಿದನಖಿಳ ಗಣನಾಥರಾನಂದಿಸುತ ಕೇಳುತಿರಲೂ ೬

ಆರಜಾಂಡಚನೆಲ್ಲವಂ ಬಳಸಿ ಬಂದಾತು
ಮಾರಂಗೆ ಕೊಡುವೆನೆನೆ ಷಣ್ಮುಖಂ ಮನದೊಳಗೆ
ಹಾರೈಸಿ ನುಡಿದನಣ್ಣಂ ದೊಡ್ಡಹೊಟ್ಟೆಯುತಿ ಭಾಂದಸಂ ಪರಿಕಿಸಲ್ಕೆ
ಭಾರಿಯುಂಗಂ ಗಿರಿಕವಾಹನಂ ತನಗಳವೆ
ಧಾರುಣಿಗಳಂ ಸುತ್ತಲೆಂದೆದ್ದು ಶಿವನ ಪದ
ವಾರಿಜಕ್ಕೆಱಗಿಯಾ ಮುಂದೆ ಬಂದೀಳ್ಕೊಂಬೆನೀ ಪಣ್ಣನೆಂದು ನಲಿದಂ ೭

ಏಱಿದಂ ಹಿರಿಯ ನವಿಲಂ ಶೀಘ್ರದಲ್ಲಿ ಮಿಗೆ
ಹಾಱಿಸುತಜಾಂಡಮಂ ತಿರುಗಿ ಬರುತಿರ್ದನಂ
ತಾಱಮೊಗದಾತನನಿತಕ್ಕೆ ಯೋಚಿಸಿಕೊಂಡು ವಿಘ್ನರಾಜಂ ಯುಕ್ತಿಯಿಂ
ಮೂಱುಕಣ್ಣ ಭವನಂ ಸುತ್ತಿಬಂದೆಲೆ ತಂದೆ
ಮಾಱುತ್ತರವನೀಯ್ಯಬೇಡ ಕೊಡು ಫಲವನೆನೆ
ನೀಱೆ ಗಿರಿಜೆಯು ಮೊಗವ ನೋಡಿ ನಸುನಗುತ ಕೊಟ್ಟ ರಸವೊಸರ್ವ ಪಣ್ಣಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದುಧರನಾ ಪಣ್ಣ ವಿಘ್ನರಾಜನ ಕರದೊ
ಳಂದೀವ ಮಾತ್ರಕ್ಕಜಾಂಡಮಂ ತಿರುಗುತ್ತ
ಬಂದು ಶೀಘ್ರದೊಳು ಕೈಯ್ಯಾನಲದನಾಗಳೆ ವೀಘ್ನೇಶ್ವರಂಗಿತ್ತವು
ಕಂದ ಎನೆ ಬಳಸಿ ಧಾವತಿಗೊಂಡ ನಾನಿರಲು
ಮುಂದೆ ದೊಡ್ಡ ಹೊಟ್ಟೆಯ ಡೊಳ್ಳಿನಿಂದೇಱಲಾಱದಂ
ಗಿಂದಿತ್ತು ನಿನ್ನ ಭಾಷೆಯನಳಿದುಕೊಂಬರೇ ತಂದೆ ಎಂದಂ ಷಣ್ಮುಖಂ ೯

ಆ ನುಡಿಯನಾಲಿಸುತ್ತಾ ಪಣ್ಣ ನಿಮ್ಮಣ್ಣ
ನೇನು ಕಾರಣದಿಂದ ಕೈಕೊಂಡನೆಂಬುದಂ
ನೀನೆ ಕೇಳೆನೆ ಕೇಳ್ದ ತಮ್ಮನೊಡನಿಂತೆಂದನಂಬುಜಭವಾಂಡಕೋಟಿ
ಸ್ಥಾನವೆನಿಸುವ ಪೊಡೆಯ ಶಂಕರನನಾ ಬಳಸು
ತಾನೆ ಮೊದಲೊಡ್ಡೆ ಹಸ್ತವನಿತ್ತನೀ ಫಲವ
ಸೇನಾನಿ ಕೇಳೆಂದು ವಿಘ್ನರಾಜಂ ನುಡಿಯೆ ಗಣನಿಕರವಹುದೆಂದರೂ ೧೦

ಮೃಡನಗ್ರಪುತ್ರ ಯಥಾರ್ಥದಿಂದಂ ಕೂರ್ತು
ನುಡಿಯಲಂತಾ ವಾಕ್ಯಕಂ ಸಂತಸಂಬಟ್ಟು
ಪಿಡಿದೆತ್ತಿ ತಕ್ಕೈಸಿ ಮುಂಡಾಡಿ ಬಳಿಕಲಿನ್ನೇನಿಷ್ಟವಸ್ತುವದನು
ಕೊಡುವೆನ್ನೆ ಬೇಡೆನಲು ದೇವ ಕೇಳೆನಗೆ ನಿ
ಮ್ಮಡಿಯ ಮಹಿಮೆಯ ವೇದ ಶಾಸ್ತ್ರಪೌರಾಣಂಗ
ಳೊಡೆಯ ಬೋಧಿಸಬೇಹುದೆನಲು ನಸುನಗುತೆ ಪೇಳಲ್ತೊಡಗಿದಂ ಕುವರಗೆ ೧೧

ಕಂದ ಕೇಳಾವಾವವೆನೆ ಶಿಕ್ಷೆಯಾ ಜ್ಯೋತಿಷಂ
ಛಂದವಾ ವ್ಯಾಕರಣಮುಂ ನಿರುಕ್ತಿಯುಮದಱೊ
ಳೊಂದಿದ ನಿಘಂಟಿವು ಷಡಂಗವಿವನೊಳಕೊಂಡ ರುಗ್ಯಜುಸ್ಸಾಮವವಱಾ
ಮುಂದಃಣಾಥರ್ವಮೀ ನಾಲ್ಕು ವೇದಂಗಳೊಳು
ಹಿಂದಣಾರುಂ ಕೂಡಿ ಹತ್ತು ತೆಱನೆನಿಸುವವ
ಱಂದಮಂ ಕೇಳೆಂದು ಬಿತ್ತರಿಸುತಿರ್ದನಾದ್ಯಂತ ಶುದ್ಧತೆಯೊಳೀಶಂ ೧೨

ಮೀಮಾಂಸಕ ನ್ಯಾಯ ಶಂಕರಮಹಾಮಹಿಮೆ
ಯಾವೋದಮಪ್ಪ ಪೌರಾಣಂಗಳುಂ ಬಳಿಕ
ಸಾಮರ್ಥ್ಯ ಧರ್ಮಶಾಸ್ತ್ರಂಗಳುಂ ಪದಿನಾಲ್ಕು ವಿದ್ಯೆವೆನಿಸುವವು ಮತ್ತೆ
ಪ್ರೇಮದಾಯುರ್ವೇದಮುಂ ಧನುರ್ವೇದಮುಂ
ರಾಮಣೀಯಕದ ಗಂಧರ್ವವೇದಂಗಳ
ಸ್ತೋಮಾರ್ಥಶಾಸ್ತ್ರಂಗಳಿಂತೆಲ್ಲವುಂ ಕೂಡಿಯಷ್ಟಾದಶಾಖ್ಯವಿದ್ಯಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಗಿನ್ನು ಮಗನೆ ಕೇಳೈಯ್ಯುವಿಸ್ತರಿಸಿದಪೆ
ವಾಗಮಂಗಳುಕಾಮಿಕಂ ಯೋಗಜಂ ಚಿಂತ್ಯ
ಮಾ ಗುರುತ್ವದ ಕಾರಣಂತ್ವಜಿತಮಾ ದೀಪ್ತ ಸೂಕ್ಷ್ಮಸಾಹಸ್ರಂಗಳೂ
ರಾಗದಿಂದಂಶುಮಾಸ್ಸುಪ್ರಭೇದಕ ವಿಜಯ
ವಾಗೆ ನಿಶ್ವಾಸವಾ ಸ್ವಾಯಂಭುವಾನಲವ
ಲೈಗಣಪ ವೀರಕೌರವ ಮಕುಟ ವಿಮಲ ಚಂದ್ರಜ್ಞಾನಬಿಂಬಂಗಳೂ ೧೪

ಅಂತಲಾ ಪ್ರೋದ್ಗೀತ ಲಲಿತಸಿದ್ಧಂಗಳ್ಮೆ
ಸಂತಾನ ಪಾರಮೇಶ್ವರ ಕಿರಣ ವಾತೂಲ
ವಿಂತೊಪ್ಪುವಷ್ಟಾದಶಾಗಮಂಗಳು ಬಳಿಕ್ಕುಪನಿಷತ್ತುಗಳ ಪೇಳ್ವೆ
ಎಂತೆಂದೆನಲ್ಕೆಯಾ ಶ್ರೀರುದ್ರಭಾಷ್ಯಳಂ
ಮುಂತೆಯಾ ಶ್ವೇತಾಶ್ವತರವು ಬೃಹದಾರಣ್ಯ
ದಂತದೊಳು ಮಾಧ್ಯಂದಿನಾಂಗೀರಸಕದೊಳಾ ಬ್ರಹ್ಮಬಿಂದುಗಳು ಬಳಿಕಾ ೧೫

ಪಂಚಬ್ರಹ್ಮಾತ್ಮಕವು ಭಾಗ ಕಾತ್ಯಾಯನಮು
ದಂಚಿತದ ಶುಕ್ಲ ಕಾಲಾಗ್ನಿರುದ್ರಕಪಾಲ
ಮುಂ ಚಮತ್ಕೃತಿಯು ಶಾಪೀಯಗಾಲವಮು ವಾಜಸನೀಯ ಜಾಬಾಲವು
ಅಂಚಿತದ ಕೈನೇಷಹಂಸ ಪವಮಾನಂಪ್ರ
ಪಂಚರಹಿತನೆ ಕೇಳು ಕೈವಲ್ಯಬೋಧಾಯ
ನಂ ಚಾರುತರದ ಶಿವಸಂಕಲ್ಪನಾರಾಯಣಂ ಕಾಂಡವಂಬಳಿಕ್ಕಾ ೧೬

ಆ ಯಥರ್ವಣ ಶಿರಃ ಪಿಪ್ಪಲೀಯಸೌತ್ರೈ
ಮೋಯರದ ವಾರ್ತಾಂತಮೇಯ ಪೌಂಡಂದುಂದು
ಭೀಯಕದ ದಂಡಿ ಲಾಂಗುಲಿಯು ಮಾಂಡೂಕ ಪಾರಾಕ್ರಮಂ ತರುವಾಯೊಳು
ನೀಯಾಲಿಸೈ ಸೂಕರಾವಧೇಕಮುಮಭಿ
ಪ್ರಾಯ ಪರಮಾವಧೇಕರಣ ವಿದ್ಯವರಾಹ
ವೈಯಲ್ಲಿ ಭೈಜ್ಯಾವ ಚರಕಂ ಹಿರಣ್ಯಕೇಶಿಧ್ಯೇಯ ಶುಕ್ರೇಯ ವೈ ೧೭

ಆಯಾನನಂ ಸುಯಾರ್ಥಾವೇಯ ಮಲ್ಲಿ ವೈ
ಣೇಯ ವೈಧೇಯ ಚರ್ಚಕವಲಾ ಶ್ರಾವಣಸು
ರಾಯಣೇಯಂ ಸುಮೈತ್ರೇಯಣೇಯ ರಮಾಕರದೊಳಃ ಸಾಮತ್ವರಿತವ
ಓಯರದಿ ಕೇಳು ನೀಂ ಸಾಂಖ್ಯಾಯನಿಯ ಭಾಗು
ರಾಯಣೇಯಂ ಶೌನಕೇಯ ಈಶಾವಾಸ್ಯ
ವಾಯುತದಿನರಿ ನಿರಾಲಂಬ ಛಾಂದೋಗ್ಯ ಮೊದಲಾದುಪನಿಷತ್ತುಗಳಿವು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀ ತಿಳಿವುದೈ ಶಾಸ್ತ್ರಮನ್ವಂತ್ರವಿಷ್ಣು ಹಾ
ರೀತವಾ ಯಾಜ್ಞವಲ್ಕ್ಯೇಶನಾಂಗೀರಸ ಪು
ನೀತನೇ ಯಾಮಾಪಮಾಸ್ತಂಬ ಸಂವರ್ತಕಾತ್ಯಾಯನ ಬೃಹಸ್ಪತಿ
ಸಾತಿಶಯ ಪಾರಾಶರ ವ್ಯಾಸ ಶಂಖಲಿಖಿ
ತಾತೆಱದ ದಕ್ಷಗೌತಮವವದಱತರುವಾಯ
ಶಾತಾತಪ ವಶಿಷ್ಟಧರ್ಮಶಾಸ್ತ್ರಂಗಳೀ ಸ್ಮೃತಿಗಳೇ ಕೋನವಿಂಶಂ ೧೯

ಒಂದುವೊದಲಾ ಬಹ್ಮಪಾದ್ಮವೈಷ್ಣವ ಶೈವ
ದಿಂದಲಾ ಭಾಗವತ ನಾರದೀಯಂ ಕಣಾ
ಮುಂದೆ ಮಾರ್ಕಂಡೇಯ ಮಾಗ್ನೇಯಮುಂ ಭವಿಷ್ಯದ ಬ್ರಹ್ಮಕೈವರ್ತವು
ಚಂದದೀಕ್ರಮದಿಂದ ಲೈಂಗ್ಯವಾರಾಹ ವಾ
ಸ್ಕಂದ ವಾಮನ ಕೂರ್ಮ ಮತ್ಸ್ಯಗಾರುಡವದ
ಲ್ಲಿಂದಲಾ ಬ್ರಹ್ಮಾಂಡವೆಣಿಸೆ ಹದಿನೆಂಟು ಪೌರಾಣಂಗಳಂ ಪೇಳ್ದನೂ ೨೦

ಸಾಂಗದಿಂದಷ್ಟಾದಶಾಗ್ರವೆಂದೆನಿಪ ವಿ
ದ್ಯಂಗಳಿಂ ಕಾಮಿಕಾದ್ಯುರುತರದ ವಾತೂಲ
ಮಾಂಗಲ್ಯ ದಿವ್ಯಾಗಮಂಗಳಂ ಶ್ರೀರುದ್ರ ಭಾಷ್ಕಳಾದಿಯ ಮೌಂಡಿಕಾ
ಹಿಂಗುಪನಿಷತ್ತುಗಳ ಮನ್ವಂತ್ರಮುಖ್ಯಶಾ
ಸ್ತ್ರಂಗಳಂ ಬ್ರಾಹ್ಮ್ಯಾದಿ ಪೌರಾಣವೆಲ್ಲವಂ
ಮಂಗಲೆಯ ಪತಿ ಗಣಪಸಂಸ್ಮರಣಮಾತ್ರಕ್ಕೆ ಬಪ್ಪಂತೆ ಕರುಣಿಸಿದನೂ ೨೧

ಎಲೆ ಗಣಪ ನಿನ್ನರ್ಚಿಸಿ ಭಜಿಸಿದರ್ಗೆ ನಿ
ರ್ಮಲಮತಿಯ ನೀನೆ ಕೊಡುತ್ತ ಶಾಸ್ತ್ರಾಗಮಾ
ವಳಿಯನಭ್ಯಸಿಪರು ನಿನ್ನ ನೆನೆದೊಡೆ ಮತಿಯನಿತ್ತು ಪಾಲಿಪುದವರನೂ
ಸಲೆ ಗಣಂಗಳಿಗೆ ನೀ ಮುಖ್ಯನಪ್ಪುದಱಿಂದ
ನಲಿದು ಗಣಪಾಭಿಧೇಯಂ ನಿನಗೆನುತ್ತಲಾ
ಮಲಹರಂ ಕರುಣಿಸಿದನಾತಂಗೆ ಸಜ್ಜನಪ್ರೀತಂಗೆ ನಿಜಸುತಂಗೆ ೨೨

ದಿಟ್ಟಿಮೂಱಱ ದೇವನೀಯ್ಯಲಂತಾ ಶಿವನ
ಹೆಟ್ಟುಗೆಯ ತನ್ನ ನಿಜಮಾತೆ ಗಿರಿಜಾತೆಯಂ
ನೆಟ್ಟನೀಕ್ಷಿಸೆ ಕಿಱಿಯ ಮಗನಪ್ಪ ಷಣ್ಮುಖಂ ಲಲಿತಾಂಗಿ ವೀರಾಗ್ರಣೀ
ಅಟ್ಟೆ ದುಷ್ಟರ ಸದೆವ ಕಂದನವನೀ ಹಿರಿಯು
ಹೊಟ್ಟೆಯಾತಂ ರಿಪುಗಳಂ ಜಯಸಬೇಕೆಂದು
ಕೊಟ್ಟಳಾ ಪಾಶಮಂ ಪರಶುಮಂ ಸರ್ವಾಣಿ ದಾನಗುಣಭರಿತ ಪಾಣೀ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನಿದಾಗ ರಿಪುವಾವ ಲೋಕದೊಳಗಿರ್ದೊಡವ
ರನು ಪಾಶದಿಂದಿಡಲು ಕಟ್ಟಿ ಮುಂದಕೆ ಹಾಯ್ಕು
ಲನಿಬರಂ ಕೊಡಲಿಯಿಂ ತಱಿದು ಸಂಹಾರಮಂ ಮಾಡುವಂ ಗಣನಾಥನೂ
ತನಗಮ್ಮ ಕೊಟ್ಟವರವಿದ್ದು ವಾಲೆಯಕಾರ
ತನವ ಮಾಡಲು ಹೊಟ್ಟೆ ಭಾರವೆಂದಿತ್ತಳೆಂ
ದೆನುತ ಸರ್ವರು ಹೊಗಳೆ ಮೆಱೆವ ವೀರಂ ವಿಘ್ನರಾಜನತ್ಯಧಿಕತೇಜ ೨೪

ಈ ಕಥೆಯೊಳೀ ಗಣಪನುದ್ಭವಂ ಶಂಕರ
ಶ್ರೀಕಂಠದೊಳಗಲಾ ಮತ್ತೊಂದು ಕಲ್ಪದೊಳ
ಗಾ ಕಮಲಮುಖಿ ಭವಾನಿಯೊಳೀಶ್ವರಂ ಮಂದರಾದ್ರಿಯೊಳ್ಕ್ರೀಡಿಸುತ್ತಾ
ಪ್ರಾಕಟದ ಪರಮಸ್ವತಂತ್ರನತಿಶಯ ಮೃಗಾ
ನೀಕ ಪಕ್ಷಿಪ್ರಜಾದ್ಯಖಿಳರೂಪಿನೊಳು ಮೈ
ನಾಕಿ ಗಿರಿಜೆಯೊಳು ನೆನವುತ್ತಿರ್ದನಾನಂದದಿಂದ ಲೀಲಾಲೋಲನು ೨೫

ಗಜಗಜೀರೂಪದಿಂ ಪರಮೇಶ ಪಾರ್ವತಿಗ
ಳಜಡರಾನಂದದಿಂ ನೆರೆವುತ್ತ ಲೀಲೆಯಿಂ
ಸೃಜಿಸಬೇಕೋರ್ವ ಕುವರನನೆಂದು ನೆನೆದ ಮಾತ್ರಕ್ಕೆ ಮಾನಸಪುತ್ರನೂ
ಗಜಮುಖಂ ಸಂಭವಿಸಿದಂ ನಿಮಿಷದಲ್ಲಿಯಂ
ಗಜವೈರಿಗಾತನೀಶ್ವರನಣುಗನೆಂದಾದಿ
ಸುಜನರೊರೆವಾ ಪ್ರಮಾಣಿಂದ ವಿಘ್ನೇಶ್ವರೋತ್ಪತ್ತಿ ಕಲ್ಪದೊಳುಂಟಲ್ತೆ ೨೬

ಕೇಳ್ವೆಯ್ಯ ನೀಂ ಸ್ಕಂದಪೌರಾಣದೊಳು ಮತ್ತೆ
ಕಾಳಿಕಾ ಕಾಂಡದೊಳಗಸ್ತ್ಯಮುನಿಪತಿ ಕೂರ್ತು
ಭಾಳಾಂಬಕನ ಪುತ್ರನಾದ ಷಣ್ಮುಖನ ಕಾಣುತ್ತ ಪೊಡಮಟ್ಟುಸಿಂದೂ
ಕೋಳಾಹಳಂಗೆಯ್ವ ಗಜದನುಜನಂ ಕೊಂದು
ಸೀಳಿಯಾತನ ಚರ್ಮಮಂ ಹರಂ ಪೊದೆದುದಂ
ಪೇಳ್ವೆಯ್ಯ ಶಿವಕುಮಾರಾ ಎನಲು ಬಿತ್ತರಿಸಿದಾ ಪ್ರಮಾಣೆಂತೆಂದೊಡೆ ೨೭

ಮತ್ತೊಂದು ಕಲ್ಪದೊಳು ತಪದಿಂದ ಲೋಕಮಂ
ಪೆತ್ತ ಬೊಮ್ಮನನೋಲಸಿ ಪಡೆದು ವೈಭವವನತಿ
ಮತ್ತನಾಗಿಹ ಗಜಾಸುರನಿಳೆಯು ಜನರ ಸಂಹಾರಂಗಳಂ ಮಾಡಲು
ಮೊತ್ತಗೊಂಡಖಿಳ ಲೋಕದ ಜನಾವಳಿ ಮೊಱೆಯಿ
ಡುತ್ತಿರಲು ಸಕಲಗಣದೇವತತಿ ಸಹಿತ ದಂ
ಡೆತ್ತಿ ಹೋದಂ ವರ ಪಿನಾಕಿ ಕೋಪಾಲೋಕಿ ವೇತಾಳತತಿಯುನೀಕೀ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರಾರಿ ದಂಡೆತ್ತಿ ಬರ್ಪಕಾಲದೊಳಿತ್ತ
ವಾರಣಾಸಿಗೆ ಬರುತ್ತಿರ್ದ ಮಹಿಷಾಸುರಕು
ಮಾರನೆನಿಸುವ ಗಜಾಸುರನಾತನಾರ್ಭಟವನೀಕ್ಷಿಸುತ್ತಲ್ಲಿ ನೆರೆದಾ
ಸಾರ ಮುನಿಗಳು ಕೆಟ್ಟೆವಕ್ಕಟಾ ಎಮ್ಮ ಸಂ
ಹಾರಮಂ ಮಾಡುತಿರ್ದಪನು ರಕ್ಕಸನಹೋ
ಕಾರುಣ್ಯದಿಂ ಕಾಯಬೇಕೆಂಬ ಕಾಲಕ್ಕೆ ಬಂದೊದವಿದಂ ಶಂಕರಂ ೨೯

ನಡೆತಂದು ಲೀಲೆಯಿಂದಂ ಗಜಾಸುರನ ಪೆ
ರ್ಬಡೆಯೊಳಗೆ ಭೂತಗಣರಂ ಬಿಟ್ಟು ಕಾದಿಸುತ
ಹೊಡೆವ ವಾದ್ಯಂಗಳಿಂ ಬೆರಳ ಬೊಬ್ಬೆಗಳಿಂದ ಖಣಿಖಟಿಲು ನಿಟಿಲಿಸಿಟಿಲೆನೆ
ಸಿಡಿಯಲಸುರರ ತಲೆಗಳೀ ತೆಱದೆ ಯುದ್ಧದು
ಗ್ಗಡವನಾ ದಿವ್ಯಸಾಹಸ್ರ ವರುಷಂ ನೋಡಿ
ಕಿಡಿಗಣ್ಣ ತೆಗದನಿಬರಂ ಸುಡಲು ಕರಿದನುಜನೊರ್ವನೆ ತಾನುಳಿದನು ೩೦

ಮತ್ತನೆನಿಸುವ ಗಜಾಸುರನುದ್ದವೀಗ ವೊಂ
ಬತ್ತು ಸಾವಿರ ಯೋಜನ ಪ್ರಮಾಣಂ ಗವಾ
ಸುತ್ತಲುಂ ನವ ನವ ಸಹಸ್ರವೆನಿಸುವ ಗಾವುದಂ ವೃಕ್ಷಸಿವಹ ಸಹಿತ
ಕಿತ್ತು ಪರ್ವತದ ಕೋಡುಗಳಂ ದಿಗಂತಕ್ಕೆ
ಡುತ್ತುಪರಿ ಲೋಕಂಗಳಂ ಕಿರೀಟವನಲುಗಿ
ಸುತ್ತ ಕೆಡಪುವನಖಿಳ ನಕ್ಷತ್ರ ಸಹಿತನೆನಲಿನ್ನೇನ ಬಣ್ಣಿಸುವೆನು ೩೧

ಮುಸಕದಿಂದಾ ದನುಜನೆಯ್ದೆ ಮೂಗಿಂದ ಪೇ
ರುಸುರ ಬಿಡೆ ಸಪ್ತವಾರ್ಧಿಗಳೆಲ್ಲವುಂ ಕದಡಿ
ನೆಸದು ತಾಯ್ಮಳಲು ಕಲ್ಲೋಲ ಮಾಲೆಗಳಿಂದ ಕುದಿದವಡಿಯಿಂದ ನೆಲನಾ
ಅಸುರನಂತೆಯ್ದೆ ಘಾತಿಸಿ ಕಮಠ ಸರ್ಪ ರಾ
ಜ ಸಮೇತದಿಗ್ದಂತಿ ಕುಲಗಿರಿಗಳೆಲ್ಲ ಕಂ
ಪಿಸಲು ಬಂದಿದಿರಾದನಾ ನಿರ್ಜರಾರಾತಿ ಭೀಷಣಾರ್ಭಟೆಯ ಸೂತಿ ೩೨

ಮೂದಲಿಸುತಾ ಗಜಾಸುರನೆಂದನೆಲೆ ಗೊರವ
ಕಾದೆನ್ನೊಳೆನಲಾಗಿಯಧಿಕ ಲೀಲಾಲೋಲ
ನಾದ ಸರ್ವೇಶ್ವರಂ ತಾನಳ್ತಿಗಾಳಗವ ಮಾಡಿ ಪಲ ಕೆಲವು ದಿವಸಾ
ಆ ದುರಾತ್ಮನ ಕೊಲ್ವೆನೆಂದು ಬಗೆದನು ಕಾಣಾ
ಮಾದೇವಗಲ್ಲದುಳಿದರ್ಗಳವೆ ಕೇಳೈಯ್ಯ
ಸಾದರದೊಳಾ ದುಷ್ಟನಂದು ವರವಂಬಡೆವ ಕಾಲದೊಳಗೆಂತೆಂದೊಡೆ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವ ಪುರುಷರ ಕೈಯೊಳಾದಡೆಂದೆಂದಿಂಗೆ
ಸಾವನೆಯ್ದದ ತೆಱನ ಪಡೆದು ತಮ್ಮಯ್ಯನಾ
ದೇವಿಯರ ಕೈಯಿಂದ ಮಡಿದನಾ ಮಹಿಷಾಸುರನ ಪುತ್ರನಾಗಿ ತಾನೂ
ಭಾವಿಸಿದನಬಲೆಯರು ಪುರುಷರಾರಾದೊಡಾ
ಕಾವನಂಡಲೆಗೆ ಸಿಲ್ಕಿದರಿಂದ ಸಾಯೆನಂ
ದಾ ವೈರಿಯಂ ಕೊಲ್ವೊಡಂಗಜನ ಗೆಲ್ದ ಹರಗಲ್ಲದುಳಿದವರಿಗಳವೆ ೩೪

ಅದುಕಾರಣಂ ಮಹಾದೇವನಂದೆಯ್ದೆ ತನ
ಗಿದಿರಾದ ರಕ್ಕಸನನಾ ತ್ರಿಶೂಲವ ಜಡಿವು
ತೊದೆದು ಕೆಡಪುತ್ತಿಱಿದು ನೆಗಪಿದಂ ಸತ್ತಿಗೆಯ ತೆಱನಾಗಳಖಿಳ ಲೋಕಾ
ಅಧಮನಂಗದ ಕಪ್ಪಿನಿಂದ ಕತ್ತಲೆಯಾಯ್ತು
ವಿಧಿತ ರವಿ ಶಶಿ ತಾರೆಗಳು ಮಱಸಿಹೋದವನೆ
ಮದನವೈರಿಯ ಪರಾಕ್ರಮಕೆ ಸರಿಯಾರು ಕೇಳೆಂದನಾ ಶಿವಕುಮಾರಂ ೩೫

ಶೂಲಾಗ್ರದೊಳಗಿರ್ದ ಕರಿದನುಜಪುಂಗವಂ
ಭಾಳಾಕ್ಷನಂ ಕೀರ್ತಿಸುತ್ತ ಬಿನ್ನವಿಸಿದಂ
ಲೀಲಾಸಮಗ್ರಾತಿ ಶೂಲಪಾಣಿಯೆ ಸರ್ವದೇವೇಶ ಕಾಮಂತಕಾ
ಸ್ಥೂಲಮಹಿಮಾ ನಿನ್ನ ನೆಲೆಯ ನಾಂ ಬಲ್ಲೆನೆ
ಬಾಲಕಂ ತ್ರಿಪುರಾರಿಯೇತವ ಕರಾಗ್ರದಿಂ
ಹೋಲಿಸುವ ಮರಣವಪ್ಪೀ ಭಾಗ್ಯವಾದುದಾಂ ಬದುಕಿದೆನೆನುತ್ತ ನುಡಿದಂ ೩೬

ಏಕ ನೀನ್ಯೆಯದ್ವಿತೀಯ ನೀಂ ಪದಿನಾಲ್ಕು
ಲೋಕಾಧಿನಾಥನ್ಯೆ ಕಾಲಂಗಳಿಂದಳಿಯ
ಬೇಕಲಾ ಮೃತ್ಯುವಿಂ ಸಕಲರದುಕಾರಣಂ ನಿನ್ನ ಶೂಲಾಗ್ರದಲ್ಲಿ
ಸ್ವೀಕರಿಸಿಕೊಂಡ ನಾನೇಂ ಭಾಗ್ಯನೋ ಎಂದ
ನೇಕ ಪ್ರಕಾರದಿಂ ಕೀರ್ತಿಸುತಿರಲ್ಕಾ ಪಿ
ನಾಕಿ ನಸುನಗುತಾ ಗಜಾಸುರಂಗಲ್ಲಿ ಮಧುರಾಲಾಪದಿಂ ನುಡಿದನೂ ೩೭

॥ಸಾಕ್ಷಿ॥ ತ್ರಿಶೂಲಪಾಣೇ ದೇವೇಶ ಜಾನೇತ್ವಾಂ ಸ್ಮರಹಾರಿಣಂ
ತವ ಹಸ್ತಾನ್ಮಮ ವಧಶ್ರೇಯಾನೇವ ಪುರಾಂತಕಾ ೧

ಎಲೆ ಗಜಾಸುರ ನಿನ್ನ ದಿವ್ಯಸನ್ನುತಿಗೆ ನಾ
ವೊಲಿದೆವೈ ಬಹುಪರಾಕ್ರಮರಸ ಸಮಗ್ರನೆ
ಸುಲಭವೆನಲೀವೆವೈ ನಿನ್ನಿಷ್ಟವೆನಿಸಿದಂತಪ್ಪ ವರವಂ ಬೆಡೆನೆ
ನಲಿನಲಿದು ಸಂತೋಷದಿಂದಾಗ ತನ್ನ ಕರ
ನಲಿನವಂ ಮುಗಿದು ಬಿನ್ನವಿಸಿದಂ ಜೀಯ್ಯ ಮಂ
ಗಲಮೂರ್ತಿ ನಾ ಮಾಡಿದಜ್ಞಾನ ಕೋಟಿಗಿದು ಶಿಕ್ಷೆಯೇ ಕೃಪೆಯೆಂದನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ನೀನೊಲಿದು ಬೇಡೆಂದೊಡಿನ್ನಾನೊರವು
ದಾವುದೆಲೆ ಶಿವ ದಿಗಂಬರ ಮೂರ್ತಿಕರುಣಾಳು
ಪಾವನನೆ ಎನ್ನ ಚರ್ಮಂ ತ್ವತ್ರಿಶೂಲದಿಂದಧಿಕದ ಪವಿತ್ರವಾಯ್ತು
ನೀ ವೊಲಿದೆ ಪೊದೆಯಲ್ಪ್ರಮಾಣಂ ಸುಖಸ್ಪರ್ಶ
ವಾವಗಂ ನೆಱೆ ಸುಗಂಧಂ ಕೋಮಲತೆಯಾಗಿ
ಭಾವಿಸುತ ವಸ್ತ್ರಮಂ ಮಾಡಿಕೊಂಡೆನ್ನ ರಕ್ಷಿಪುದು ಸರ್ವಜ್ಞ ಎಂದಂ ೩೯

ಪಂಚಾಗ್ನಿ ಮಧ್ಯದೊಳಗುಗ್ರತಪಮಂ ಮಾಡಿ
ಪಂಚಾಕ್ಷರೀ ರೂಪ ನಿನ್ನ ಭಜಿಸುತ್ತಲೆಲೆ
ಪಂಚೇಷುನಾಶ ತವ ಕಾರುಣ್ಯಮಂ ಪಡೆಯಲಱಿಯರಾ ಸೂರಿಜನರು
ಕುಂಚಿತನು ನಾನು ನಿನ್ನೊಡನೆಯಜ್ಞಾನದಿಂ
ದಂ ಚಮತ್ಕೃತಿಯಿಂದ ಕಾದಿ ಮಿಗಿಲಪ್ಪ ವರ
ವಂ ಚಾಗುರೇ ಪಡದೆ ಯೆನಗೆ ಸರಿಯಾರೆಂದು ನಲಿದನಂತಾ ದನುಜನೂ ೪೦

ನರಸಿಂಹ ಚರ್ಮವಂದಾದುದಾ ಕುಪ್ಪಸಂ
ಉರುತರ ವ್ಯಾಘ್ರಾಸುರಾ ಜಿನಂ ಕಟಿಯಲ್ಲಿ
ಪರಿವೃತ್ತದಧೋರ್ರು ಕಂದಲಾದುದು ಬಳಿಕ್ಕೀ ಗಜಾಸುರನ ಕೃತ್ತೀ
ಅರರೆ ಹೊದೆಯಲ್ಕಾದುದೆಂದು ಸರ್ವರು ಪೊಗಳು
ತಿರಲದಂ ಸ್ವೀಕರಿಸಿಯಾತನಂ ರಕ್ಷಿಸಿದ
ನುರುತರದಗಸ್ತ್ಯ ಕೇಳೆಂದು ಬಿತ್ತರಿಸಿದಂ ಕಾರ್ತಿಕೇಯಂ ಹರುಷದೆ ೪೧

ಮೃಡನಿಂತು ತದ್ಗಜಾಸುರನ ಚರ್ಮಂಬೊದೆದು
ಕಡಿದವನ ಶಿರವನಾ ಲೀಲೆಯಿಂದಂ ಕೂರ್ತು
ಪಿಡಿದು ಮೋಹದ ವನಿತೆ ಪಾರ್ವತಿಗೆ ತೋಱಬೇಕೆಂದು ಬರುತಿರ್ದನಿತ್ತಾ
ಮಡದಿ ಗಿರಿಜಾತೆ ಪತಿ ದಂಡುಪೋದಾದಿನಂ
ತೊಡಗಿ ಮೀಯದೆ ಸುಮ್ಮನಿರ್ದು ಬಹಳಾರ್ಭಟದೆ
ಹೊಡವ ನಿಸ್ಸಾಹಣಧ್ವನಿಗಳಂ ಕೇಳಿ ಸಂತೋಷಿಸಿದಳಾ ಭವಾನೀ ೪೨

ತಿರಿಗಿದಂ ಮತ್ಪತಿ ಮಹೇಶನಾ ದುಷ್ಟಸಂ
ಹರತೆಯಂ ಮಾಡಿ ಕೈಲಾಸಕ್ಕೆ ಸಂತಸದಿ
ಬರುತಿರ್ಪನೆಂದೆದ್ದು ಜಳಕಕ್ಕೆ ಸನ್ನರ್ಧೆಯಾಗೆ ಜಯ ವಿಜಯರ್ಕಳೂ
ಪರಿಮಲದ ಚೂರ್ಣ್ಣದಿಂ ಮೈದಿಗುರನಿಕ್ಕಿಯಾ
ಶರೀರದಿಂ ತೆಗೆದ ಕಾಳಿಮವನುಂಡೆಯ ಮಾಡೆ
ಕರದಲ್ಲಿ ನೀಳ್ಕೊಂಡು ದೇವಿಯರು ರಚಿಸಿದರು ನಿಜಕುಮಾರಕನೆಂಬಿನಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕುಮಾರಕಗೆ ಕೃಪೆಯಿಂ ಹರಣವಿತ್ತು ಮೂ
ಲೋಕಮಂ ಪೆತ್ತ ಪಾರ್ವತಿ ಬಾಗಿಲಲ್ಲಿರಿಸಿ
ಜೋಕೆಯಿಂ ಕಾಯ್ದಿರೈ ಮಗನೆ ಎನಲಾತ ವಿಘ್ನೇಶನಾಗಿರುತಿರಲ್ಕೆ
ಈ ಕಡೆಯೊಳಭವನತಿ ವೈಭವದೊಳೆಯ್ತಂದು
ನಾಕಿವಾಸಿಗಳು ಜಯ ಯೆನೆ ನಂದಿಯಿಂದಾ ಪಿ
ನಾಕಿ ಇಳಿದಧಿಕ ಮಣಿಪಾದುಕೆಗಳಂ ಮೆಟ್ಟಿಯರಮನೆಗೆ ಬರುತಿರ್ದನೂ ೪೪

ಒಳಪೊಕು, ಬಪ್ಪ ಶಿವನಂ ತಂದೆ ಎಂದಱಿಯ
ದೊಳಗೆ ಪೋಗದಿರು ನಿಲ್ಲೆಮ್ಮಮ್ಮನಹ ಗೌರಿ
ಜಳಕಮಂ ಮಾಡುತಿರ್ದಪಳೆಂದು ಶಿವನ ರ್‍ಷುಂಕಿಸೆ ನಖಾಗ್ರದೊಳು ಶಿರವಾ
ಘಳಿಲನೆ ಚಿವುಂಟಿಯಾಗಸಕಿಟ್ಟು ಬಱಲಿತ್ತ
ಕೆಳದಿಯರು ಬಂದರುಪೆ ಬೇಗದಿಂ ವಸ್ತ್ರವಂ
ಸೆಳದುಟ್ಟು ತಕ್ಕ ಶೃಂಗಾರದಿಂದಾ ರತಿಯನಾಂತಿದಿರುವಂದಳಲ್ಲಿ ೪೫

ಒಗುಮಿಗೆಯ ಹರುಷದಿಂ ಕೆಳದಿಯರು ಸಹವಾಗಿ
ನಗಜಾತೆ ಬಂದು ಶಿವಗಾರತಿಯನೆತ್ತಿ ನಸು
ನಗುತ ಶಂಕರನೊಳಾನಂದದಿಂದಂ ನುಡಿದಳೆಲೆ ದೇವ ಕೇಳು ನಿನ್ನಾ
ಉಗುರಿಂದ ಚಿವುಟಿಸಿಕೊಳುತ್ತಿಳಿದನೇ ಹಿರಿಯ
ನಗದಂತೆ ರಾಜಿಸುವ ಕರಿದೈತ್ಯನೀ ನಖಾ
ಗ್ರಗತ ರಕ್ತಕ್ಕೆ ಕಾರಣವಾವುದೆಂದಳಾ ದೇವಿ ಸದ್ಭಾವಿಯಾಗಾ ೪೬

ಆ ದನುಜನಂ ಪರಾಕ್ರಮದಿಂದ ಮೋಹರಿಸಿ
ಕಾದಿ ಶೂಲದೊಳಿಟ್ಟುಕೊಂಡು ಬಳಿಕೀ ಶಿರವ
ಮಾದೇವಿ ತಂದೆವು ಕಣಾ ಬಾಗಿಲೊಳಗೀಗಲೋರ್ವನೆಮ್ಮಂ ತಡೆಯಲೂ
ಮೂದಲಿಸೆ ತಲೆಯ ಚಿವುಟಿಟ್ಟೆವೆನಲಕಟ ಚೆ
ನ್ನಾದುದವನೆನ್ನ ಮಗನೆನೆ ಘಮ್ಮನಾ ಶಿವಂ
ಸಾದರದೆ ಮುಂಡದೊಳು ತಂದ ಮದಕರಿಯ ತಲೆಯಂ ಸಾರ್ಚಿಜೀವವಿತ್ತಂ ೪೭

ಅದುಕಾರಣದೊಳಿಂತು ವಿಘ್ನೇಶನಧಿಕಗಜ
ವದನನಾದಂ ಕಣಾ ಕಲ್ಪಕಲ್ಪದೊಳಿಂತು
ಸದಮಲದ ಹೇರಂಬನುದ್ಭವಂ ಕೇಳೆಂದು ಕೆಂಚವೀರಾಹ್ವಯಂಗೆ
ವಿದಿತ ಹಲಗೆಯ ದೇಶಿಕಂ ಪೇಳಿ ಹರುಷಿಸುತ
ಪದೆದು ವಿಘ್ನೇಶಪ್ರಸಾದ ವಿಂಶತಿ ಸುಖ
ಪ್ರದ ಎಂಬುದಂ ತಿಳಿದೆನಿನ್ನು ಬಿನ್ನಪವೆಂದು ನಲ್ವಿನಿಂ ಕೈಮುಗಿದನೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೀಲೆ ಇಪ್ಪತ್ತು ಪೇಳ್ದವು ಕಣಾ ಸದ್ಭಕ್ತಿ
ಶೀಲನೇ ಕೇಳ್ಮಗಿದುದೆರಡನೆಯ ಕಾಂಡಂ ವಿ
ಶಾಲ ವೇದಾಗಮ ಪುರಾಣಾರ್ಥ ವೀರಶೈವಾಮೃತದೊಳಿದನೋದಲು
ಲಾಲಿಸಲು ಕೊಂಡಾಡಲಖಿಳ ಸಂಪತ್ತು ಸೌ
ಖ್ಯಾಲಾಪವಪ್ಪುದಿಹದೊಳು ಭೋಗವಳವಟ್ಟು
ಸಾಲೋಕ್ಯಮುಖ್ಯಪದವಹುದು ಪರದೊಳಗೆ ಶಿವಮಸ್ತು ಮಾಂಗಲ್ಯಮಸ್ತು ೪೯

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲೈಣಾರ್ಯಂ
ಶೀಲಷಟ್ಸ್ಥಲ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಂ ಕೂರ್ತು ಪದನಂ ಮಾಡಿದಂ ೫೦

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಸತ್ಕ್ರಿಯಾ
ಪ್ರದಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಘ್ನರಾಜಪ್ರಸಾದವೆರಡೈ ಕಾಂಡ ಸಂಧಿಗಳು ಹದಿನೆಂಟಲ್ಲೈ ೫೧

ಅಂತು ಸಂಧಿ ೧೮ ಕ್ಕಂ ಪದನು ೯೧೫ ಕ್ಕಂ ಗ್ರಂಥ ೭೬ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೧

ಉಮಾ ಸ್ಕಂದೋತ್ಪತ್ತಿ

ಉಮಾಸ್ಕಂದ್ಯೈಕವಿಂಶತಿ ಎಂಬರ್ಥಕ್ಕೆ ಕಥೆ

ಪಾವಕಂ ನಿರ್ಜರರನುಜ್ಞೆಯಿಂ ಗಿರಿಯಡರಿ
ದೇವಿಯುರ ಸಿಂಹಭಯದಿಂ ತಿರುಗೆ ಹರಿಮುಖ್ಯ
ರಾ ವಿಶ್ವನಾಥನಂ ಭಜಿಸಿಯುಮ್ಮನೊಳಣುಗನೊಗೆಯಬೇಡೆಂದರಂದೂ

ಸದ್ಭಕ್ತಸಂಕುಲ ಸುಹೃದ್ಭವ್ಯ ಹೃದಯ ವಿ
ದ್ಯುದ್ಭಾಸು ಗುರುಕರಸಮುದ್ಭವ ಮಹೇಶ ತವ
ಪದ್ಭರಣರಕ್ಷ ವಿನಮದ್ಭಗೀರಥ ಭೂಮರುದ್ವ್ಯೋಗವತಿ ಸುಪ್ರದಾ
ಚಿದ್ಭೇಶಯುಕ್ತ ಚಂಚದ್ಭಾವ್ಯ ಮಕುಟ ಸಂ
ಪದ್ಭಕ್ತಿದಾನತ ವಿಪದ್ಭಿನ್ನ ದೇವಸುವಿ
ಯದ್ಭರಿತಕೇಶವಿಲಸದ್ಭೀರು ವರದ ಜಯ ಮದ್ಭಾಗ್ಯ ಶಾಂತಮಲ್ಲಾ ೧

ಆ ಜಯಾಸತಿಯು ಭುಜದೊಳು ತಳೆವುತಂ ಹೃದಂ
ಭೋಜದೊಳು ಶಾಂತಿವನಿತೆಯನುರದೊಳಾ ಮುಕ್ತಿ
ತೇಜೋಂಗನೆಯ ಮುಖದೊಳುದಯತರುಣಿಯನೆರವುತಮರ ಶಿಷ್ಯರ್ಗೆ ಗರ್ಭಾ
ರಾಜಿಸುವ ವೀರ್ಯ್ಯಪ್ರದಾತೃಕ ವಿಂಶತಿ
ವ್ಯಾಜಪಿತರರ ಪೊರೆದ ಮೇಲಣ ಗವಿಯ ದಿವ್ಯ
ನೈಜ ಗುರು ಶಾಂತನಂಜೇಶ ಶರಣಾಗು ಮೂಲೋಕಕ್ಕೆ ನೀನೆ ಮೇಗೂ ೨

ಸಂಶಯಂ ಪರಿಹರಿಸುವಂತೆ ಪೇಳಿದಿರಿ ಸ
ದ್ವಂಶವೆನಿಸುವ ಗುರುವೆ ವಿಘ್ನೇಶ್ವರನ ಕಥನ
ವಂ ಶೋಭೆಯುಪ್ಪಂತೆ ಮುಗಿದುದಿಪ್ಪತ್ತನೆಯ ಲೀಲೆಯಂತಾ ದೇವನಾ
ಅಂಶ ಷಣ್ಮುಖನ ಕಥೆಯಂತುಮಾಸ್ಕಂದ್ಯೈಕ
ವಿಂಶತಿ ಎನಿಪ್ಪುದರ ಮೊದಲಿನಿಂದ ನಿರವಿಸೆನು
ತಂ ಶಂಭುವೆನಿಪ ಹಲಗೆಯ ದೇಶಿಕನ ಕೇಳೆ ಕೆಂಚವೀರಾಖ್ಯಗೆಂದಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೈ ಮಗನೆ ಕೇಳ್ವೈಯ್ಯ ವಿಸ್ತರಿಪೆನ್ವೈ ಮಹಾ
ಸಾಮರ್ಥ್ಯ ಕಥೆಯುನಾದಿತ್ಯ ಪೌರಾಣದೊಳು
ನೈಮಿಷಾರಣ್ಯದ ಮುನೀಶ್ವರರು ಗದ್ದುಗೆಯೊಳಳವಟ್ಟ ಸೂತಮುನಿಗೆ
ಕೈಮುಗಿದು ಕೇಳಿದೆವು ಗಿರಿಜಾವಿವಾಹಮಂ
ಶ್ರೀ ಮಹಾದೇವನಿಂ ಗುಹನುದಯವಾದುದಂ
ನೇಮಿಸಿ ನಿರೂಪಿಸೆನಲಾಗಿಯಮೃತೋಪಮಾನದೊಳು ಪೇಳುತ್ತಿರ್ದನೂ ೪

ಗಿರಿಜಾವಿವಾಹವಾಗುತ್ತಲಾ ಕೈಲಾಸ
ದರಮನೆಯ ಪೊಕ್ಕು ಸುಖದಿಂ ಕೂರ್ತಿರ್ದಶಂ
ಕರನನಧಿಕಲೀಲಾಸ್ವತಂತ್ರನಲ್ಲಿಂದ ಪೊಱಮಟ್ಟು ಬಳಿಕಾ ಮಂದರಾ
ಧರಣೀಧರಕ್ಕೆ ಬರಲಾ ಮಹಾದೇವಿಯೊಳು
ಹರುಷದಿಂ ಕ್ರೀಡಿಸುವ ತವಕದಿಂದಿಪ್ಪಲ್ಲಿ
ಎರವಿಲ್ಲದೀಶ್ವರನ ಬಿಡದ ಗಣ ತತಿ ಕೂಡೆ ಬಂದು ರಾಜಿಸುತಿರ್ದರೂ ೫

ಹರಿಮುಖರು ಶರಭಮುಖದರು ಮಹಾವ್ಯಾಘ್ರಬಂ
ಧುರ ಲಪನರೆಸೆವ ಗೃಧ್ರಾಸ್ಯರಾನಂದಿಸುವ
ಕರಿವದನರತಿಶಯ ಮೃಗಾನನರು ಲಸದುಷ್ಟ್ರತುಂಡವೆನಿಸುವರು ಕೂಡೆ
ಇರದೆಯಾ ಬಿಳಿಯ ರೇಖೆಯನುಳ್ಳ ಸಾರಂಗ
ನರಿ ತೋಳ ನಿಲಿ ಬೆಕ್ಕು ಪಾವು ಮುಂಗುಲಿ ಮೊಸಳೆ
ಪಿರಿಯುವಿನ್ನಾನವಿಲಮುಖವಧಿಕಗಣನಿಕರವೆಯ್ದಿದ್ದತ್ತು ಶಿವನ ಕೂಡೆ ೬

ಗಿಳಿಯ ಗೂಗೆಯು ಕೊಕ್ಕರೆಯು ಕ್ರೋಡಗಳ ಕುದುರೆ
ಗಳ ತೆಱದ ಮುಖದ ಗಣಕುಲ ಜರಾಮರಣತತಿ
ಗಳು ಹೊದ್ದದರು ನಿತ್ಯತೃಪ್ತರು ನಿರಾತಂಕರಾ ಕಾಲಸಂಹರಣರೂ
ವಿಳಸಿತದ ಪರಿಗಣನೆಯಿಲ್ಲದವರಗ್ರಮಂ
ಗಳರು ಪರಮಸ್ವತಂತ್ರರು ಸುತ್ತಲೋಲೈಪ
ನಿಳಯದೊಳು ದೇವಿಯರ ರತಿಸುಖವನಾನಂದಿಸುತ್ತಿರ್ದನೀಶಂ ೭

ದೇವನಿಕರದ ಹಿತಕ್ಕೋಸ್ಕರಂ ಶಂಕರಂ
ದೇವಿಯರ ಕೂಡಾ ರತಿಕ್ರೀಡೆಯಂ ರಚಿಸು
ತೋವಿಯಾ ದಿವ್ಯಸಾಹಸ್ರ ವರುಷಂಗಳಂ ಕಳವುತಿರೆ ಕಾಮಿಯಲ್ಲುತ್ತು
ಆ ವಿಶೇಷದ ಧೂರ್ತನಹ ತಾರಕನ ವಧಿಸೆ
ಪಾವನದ ಷಣ್ಮುಖನ ತನ್ನ ರೇತಸ್ಸಿಲು
ದ್ಭಾವಿಸಲ್ಕೆಂದೆಂಬ ಭಾವದಿಂದಲ್ಲದವನೇನುಳಿದರಂದದವನೇ ೮

CC0. In Public Domain. Jangamwadi Math Collection, Varanasi

ಅರಸಿಲ್ಲದಿಹ ರಾಜ್ಯದಂತಾಗೆ ತಾರಕಾ
ಸುರನ ಬಹುಬಾಧೆಯುಂತಲ್ಲದುತ್ಪಾತವಂ
ಕುರಿಸಿದವು ಸುಖವೇ ಸ್ವರೂಪವಾದೀಶ್ವರಂ ಬಗೆಯದಿಪ್ಪಾ ಕಾರಣಂ
ಧರೆಯಲ್ಲಿಯುಖಿಳ ಭೂತಂಗಳಲ್ಲಲ್ಲಿ ಗುರು
ತರದಾ ಸ್ವತಂತ್ರದಿಂ ಬಾಧಿಸುತ್ತಿರ್ದವಾ
ಪರಿಯು ವಿಸ್ತರಿಪೆನಾಲಿಪುದು ಮುನಿಗಳಿರಾಯೆನುತ್ತ ನುಡಿದಂ ಸೂತನೂ ೯

ಕಱೆದವಾ ರುಧಿರಾಸ್ಥಿ ಮಳೆಗಳಲ್ಲಲ್ಲಿ
ನೆಱೆ ವಾಯುಗಳು ಬೀಸಲಾಗಿ ಚರಿಸಿದವು ಧರೆ
ಉಱುವ ಪರ್ವತಗಳಾ ಮೇಘಂಗಳಾರ್ಭಡಿಸಲಾ ಪ್ರಳಯಕಾಲದೊಳಗೆ
ಕಱುಗೊರಲನುನ್ನತದ ಡಮರುಗದ ನಿನದವೆನ
ಲಱೆಯಟ್ಟಿ ಸರ್ವ ಸುರಮುನಿಗಳಸುಗಳ ಬಿಡುವ
ತೆಱನಾಗಲುತ್ಪಾತವಾಗುತಿರ್ದವು ಕಣಾ ಯತಿಗಳಿರ ಬಳಿಕ ಕೇಳೀ ೧೦

ದೇವತೆಗಳಾಕಾಶಮಾರ್ಗದೊಳು ಪೋಗುತಿರ
ಲಾ ವಿಮಾನಂಗಳಿಳೆಗುರುಳಿ ಕೆಡವುತ್ತಿರ್ದ
ವಾ ವಿಯತ್ತಳದಿಂದ ಘುಳುಘುಳು ಜ್ವಾಲೆಯಿಂದುಳ್ಕುಗಳು ಬಿದ್ದವಲ್ಲೀ
ಪಾವಕೋತ್ಕೃಷ್ಟದರ್ಚಿಗಳಿಂದ ದೆಸೆದೆಸೆಯೊ
ಳಾವರಿಸಿ ಧೂಮಕೇತುಗಳು ಮೂಡಿದವು ದಿ
ಗ್ದಾವಾನಲಂ ಪರ್ವಿ ಚಿಮಿಚಿಮಿಸಿ ಸುಡುತಿರ್ದುದಖಿಳ ಜೀವಾದಿಗಳನೂ ೧೧

ಪ್ರಳಯ ಕಾಲದೊಳಖಿಳ ಜೀವ ಜಾಲಕ್ಕೆ ಕಂ
ಗೊಳಿಪ ಸುಖವುಂಟೆಯಾ ತೆಱದೆ ನಾನಾ ವಿಧಂ
ಗಳಿನೆಯ್ದೆ ಮೂಱುಲೋಕಂಗಳ ಜನಂ ಕೆಟ್ಟೆವೆಂದು ಘೋಳಿಡುತಿರ್ದರೂ
ಬಳಿಕ ವೇದಂಗಳುದ್ಭಾಷಣಂ ಕೆಟ್ಟವ
ಗ್ಗಳದ ಜಪಹೋಮ ತಪಮಂತ್ರಸಾಮರ್ಥ್ಯಂಗ
ಳಳಿದವಿಂತೊಡೆಯನ ವಿಚಾರವಿಲ್ಲದ ಕಾರಣಂ ಭಯಂಕರವಾದುದೂ ೧೨

ನಡುಗುತಿರ್ದುದು ಮೂಱುಲೋಕವಾ ಕಾಲದೊಳು
ಜಡಜಸಂಭವನಖಿಳಂತಾ ಲಕ್ಷ್ಮಿ
ಯೊಡೆಯು ದೇವೇಂದ್ರ ದಿಕ್ಪಾಲ ನಿರ್ಜರಸಮಿತಿ ಕಂಪಿಸುತ್ತಿರಲಾಱದೆ
ಪೊಡವಿಗಿಳಿದಂದು ಯೋಚಿಸುತಿರ್ದರಿಂದ್ರನಿ
ನ್ನೊಡೆಯರಾರೆಮ್ಮ ರಕ್ಷಿಪರೆಂದು ದೇವರ್ಕ
ಳೊಡಗೂಡಿ ನುಡಿವ ಕಾಲಕ್ಕೆ ಬಿಜಯಂಗೆಯ್ದನಲ್ಲಿಯಿಂದಾ ನಾರದಂ ೧೩

Digitization by eGangotri and Sarayu Trust. Funding by MoE-IKS

ಬರುತಿಪ್ಪ ನಾರದಮುನೀಶನಂ ಕಂಡೆದ್ದು
ಸುರನಿಕರಸಹಿತ ವಂದಿಸುತಗ್ರಗದ್ದುಗೆಯೊ
ಳಿರಿಸಿ ಪದಮಂ ತೊಳೆದು ಸರ್ವಸತ್ಕಾರಮಂ ಮಾಡಿ ಕೈಮುಗಿದು ನಿಂದೂ
ಶರಣಾಗು ಮುನಿಪತಿಯಿದೇನು ಕಾರಣದಿಂದ
ಲುರುತರೋತ್ಪಾತಂಗಳಾಗುತಿರ್ದಪವೆಮಗೆ
ತರಹರಿಸಬಾರದಿರ್ದಪುದೆಂದು ಬಿನ್ನವಿಸಿದಂ ಭಕ್ತಿಯಿಂದಲಿಂದ್ರಂ ೧೪

ಆರಿಂದ ಪರಿಹರಿಪೆಮ್ಮ ಬಾಧೆಗಳಿವಂ
ಬಾರಿಸುವ ಸಾಮರ್ಥ್ಯರಾರು ಲೋಕಂಗಳ ವಿ
ಚಾರತೆಗೆ ಕರ್ತರಿಲ್ಲವೆ ಮಹೋತ್ಪಾತಂಗಳಿಂದೆಯ್ದೆ ಘೋಳಿಡುತದೆ
ಸಾರ ಮುನಿಪತಿ ನೀಂ ತ್ರಿಕಾಲವಱಿವಗ್ಗಳನು
ದಾರಿ ನೀಂ ಕರುಣಿಪುದು ಸುಖವಪ್ಪ ತೆಱನನೆನೆ
ನಾರದಂ ನಸುಗುಉತ ದೇವೇಂದ್ರ ನೀಂ ಕೇಳೆನುತ್ತ ನಿರವಿಸಿದನಾಗಾ ೧೫

ಕೇಳಿಂದ್ರ ಸರ್ವೇಶ್ವರಂ ಮಹಾ ಸ್ವಾತಂತ್ರ್ಯ
ಭಾಳಾಕ್ಷನುಮೆಯೊಡನೆ ಸಂತೋಷದಿಂದ ರತಿ
ಕೇಳಿಯಂ ನಟಿಸುತಿರ್ದಪನೊಡೆಯನಿಲ್ಲದೀ ಹದಿನಾಲ್ಕು ಲೋಕವೆಲ್ಲಾ
ಘೋಳಿಡುತ್ತಿರ್ದಪರಾರು ಸುರನಿಕರವೆಲ್ಲ ನೀ
ವಾಲೋಚಿಸುತ್ತ ಶಿವಕೂಟವಿಘ್ನಂ ಮಾಡೆ
ಬಾಳುವಿರಿ ನೀವಿಂತು ಗೆಯ್ಯದೊಡೆ ಕೆಡುವಿರೆಂದೆನುತಿರ್ದನಾ ನಾರದಂ ೧೬

ಶಿವನ ರತಿಗೆಯ್ದೆ ವಿಘ್ನ ಮಾಡದಿರ್ದೊಡೆಲೆ
ದಿವಿಜಪತಿ ನಿಮಗೀಗಲಾದ ಕಂಟಕವೇನು
ಲವದನಿತಲೇ ಮುಂದೆ ಬಹುಬಾಧೆಯಂ ಬಣ್ಣಿಸುವರಾರು ಶರ್ವಾಣಿಯಾ
ಪ್ರವಿಮಲದ ಗರ್ಭದಿಂದಂ ಸತ್ಕುಮಾರನು
ದ್ಭವವಾಗೆ ಕೇಳು ನೀಂ ವಿಷ್ಣುವಂತಾ ಜಲಜ
ಭವ ಮುಖ್ಯದೇವರಂ ಸಂಹಾರಮಂ ಮಾಳ್ಪನೈ ನೀವು ಕೆಡುವಿರೆಂದಾ ೧೭

ಎಂದು ನಿರವಿಸಿ ಬಳಿಕ್ಕಲ್ಲಿಂದಲಾಗ ನಾ
ರಂದನೆಯ್ದಿದನು ಬಳಿಕಿತ್ತಲಾ ದೇವೇಂದ್ರ
ನೊಂದು ಕಂಟಕವನಳಿಯಲ್ಕೆ ಯೋಚಿಸಲಾಗಿ ಹೆಗ್ಗೇಡು ಸುರನಿಕರಕೆ
ಮುಂದೆ ಬರ್ಪುದು ಗಡಾ ಕೇಳ್ವೆನಿದನೆಂದು ಸುರ
ವೃಂದದೊಳು ನಡೆತಂದು ಕಂಡನಂತಾಗ ಗೋ
ವಿಂದನಂ ತತ್ಕಥನಂ ಪೇಳಲಾ ವಿಷ್ಣು ಮರಳಿ ನುಡಿದಂ ಸುರಪಗೆ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಹಾದೇವನಾ ರತಿಸುಖದೊಳಿರ್ದೊಡಂ
ಕಾಮಿಯಲ್ತೆಲ್ಲಾ ಸುರಾವಳಿಗಳಂ ಕಾಯು
ಲಾ ಮಹೇಶ್ವರನಗ್ರಸಂಗಮದೊಳಿರ್ದಪಂ ಪರಮ ಸ್ವತಂತ್ರಪೂರ್ಣ್ಣ
ಕಾಮಿನೀ ವಿಶ್ವಾತ್ಮಹಿತಕಾರಿ ತ್ರಿಭುವನ
ಸ್ವಾಮಿಯಾತನ ವೀರ್ಯ್ಯದಿಂದೊಗೆವ ಸತ್ಪುತ್ರ
ನಾ ಮೂಢ ತಾರಕನ ಕೊಲ್ವನೆಂದಾಗ ಬಿತ್ತರಿಸಿದಂ ಲಕ್ಷ್ಮೀಪತೀ ೧೯

ಗೌರಿಯುದರದೊಳು ಸಂಭವಿಸಲತ್ಯುಗ್ರದ ಕು
ಮಾರನೆಮ್ಮೆಲ್ಲರಂ ಸಂಹರಿಪ ಗಡ ಮಹಾ
ಸೌರಂಭದತಿಶಯದ ಶಿವನ ರೇತಸ್ಯನಿನ್ನಾನುವ ಸಮರ್ಥರಾರು
ಆರೆಯ್ವವೆಂದಿಂದ್ರನಾ ವಿಷ್ಣು ಬಳಿಕಲಾ
ವಾರಿಜಭವಾದಿಗಳು ಯೋಚಿಸುತ್ತಿರ್ದರೀ
ಧಾರಿಣಿಯೊಳಗ್ನಿಯಲ್ಲದೆ ಮಿಕ್ಕವರ್ಗಾಗದೆಂದು ನಿಶ್ಚೈಸಿದರಲಾ ೨೦

ಅಗ್ನಿಪುರುಷನ ಕೂಡೆ ವಿಷ್ಣು ನುಡಿದನು ಲೋಕ
ಭಗ್ನವಾಗುತ್ತಿಪ್ಪುದೀಶ್ವರಂ ದೇವಿಯೊಳು
ನಗ್ನ ಕೂಟದೊಳಿರ್ಪನುತ್ಪಾತಕೋಟಿಗಳು ಸಂಭವಿಸುತಿವೆ ಜಗದೊಳು
ದಿಗ್ನಾಗತತಿ ಬೆದಱುತಿವೆ ಬಳಿಕ್ಕಾಮಿಂದ್ರ
ವಾಗ್ನಿತಂಬಿನಿಯಧಿಪರೆಲ್ಲರಂ ಸಲಹಲ್ಕೆ
ರುಗ್ನವ್ಯತೇಜಸ್ಸನುಗ್ರ ನೀನಲ್ಲದಿಲ್ಲೆಂದು ಬೋಧಿಸುತಿರ್ದನೂ ೨೧

ಎಲೆ ವಹ್ನಿ ನೀಂ ಪೋಗಿಯಾ ಶಿವಂ ತನ್ನ ನಿಜ
ಲಲನೆಯೊಳು ಕೂಡುವ ವಿಚಾರಕ್ಕೆ ವಿಘ್ನಮಂ
ಸಲೆ ಮಾಡೆ ಹಿತವಪ್ಪುದಲ್ಲದೊಡೆ ದೇವತೆಗಳೆಲ್ಲರ್ಗೆ ಕೇಡಪ್ಪುದು
ನಲಿದು ಪೋಗೆನಲಾಗಿ ಸುರರು ನೀವೆನ್ನನಾ
ಮಲಹರಂ ರತಿಕೇಳಿಯೊಳಗಿಪ್ಪ ಕಾಲದೊಳ
ಗೊಲಿದು ಪೋಗೆಂಬುದುಚಿತವೆ ಎಂದು ಮರಳಿ ವೀತಿಹೋತ್ರನಾಗಾ ೨೨

ನೀನಱಿಯಲಾ ಕೃಷ್ಣ ಧಾರುಣೀತಳದೊಳಾ
ಧ್ಯಾನವಮಂ ಮಾಳ್ಪಾತನೆಡೆಗೆ ಮಂತ್ರವ ಯೋಚಿ
ಪಾ ನೆಲೆಗೆ ಭೋಜನಂಗೆಯ್ವಲ್ಲಿ ಕಾರ್ಯ್ಯಂಗಳಾಳೋಚನಾತಿಶಯದಾ
ಸ್ಥಾನಕ್ಕೆಯಾ ಸ್ತ್ರೀಸಮೇತವಾಗಿರುತಿಪ್ಪ
ಮಾನವನ ಬಳಿಗೆ ಹೋಗಲ್ಬಾರದೆಂದೊಡಾ
ಜ್ಞಾನನಿಧಿಸರ್ವೇಶ್ವರನ ರತಿಕ್ರೀಡೆಯೆಡೆಗಾನೆಂತು ಹೋಗಬಹುದು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವರ್ಕಳೆಲ್ಲ ನೀವತಿ ಜಾಣರ್ರೈ ಹಿಂದೆ
ಯಾ ವಿಶ್ವವಲ್ಲಭಂ ತಪದೊಳಿಪ್ಪೆಡೆಗೆಯಾ
ಕಾವನಂ ಕಳಿಹಿ ಕೊಲಿಸಿದ ಗರುವರಿಂದು ಸರ್ವೇಶ್ವರಂ ಸಾಮರ್ಥ್ಯನೂ
ದೇವಿಯರ ಕೂಟದೊಳಗಿರ್ದಡೆಗೆ ಪೋಗಲ್ಕೆ
ಸಾವ ನಾನೇಂ ಕಡನ ತೆಗೆದು ತರಬೇಕೆ ಕೇ
ಳಾವ ಕಾರಣದಿಂದಲಾಂ ಪೋಗೆನೆನಗಿದಂ ಪೇಳಬೇಡೆಂದನಗ್ನೀ ೨೪

ಎನಗಿದಂ ಪೇಳಲಹುದೇ ವಿಷ್ಣು ಮೂಲೋಕ
ಜನನಿಯುವಿವಸ್ತ್ರೆಯಾಗಿರ್ದಮ್ಮನಂ ನಾನು
ಮನವಳ್ಕದೆಂತು ನೋಡುವೆನ್ನೈಯ್ಯ ಜಗದೊಳು ವಿಚಾರಿಸಲ್ಕಾಗಿ ಕೃಷ್ಣಾ
ಜನರ ಗೇಹಕೆ ಪೋಗಬಾರದು ಗಡಾ ಮಹೇಶ್ವ
ರನ ರತಿಕ್ರೀಡೆಯೆಡೆಗಾಂ ಪೋಗಿನೆನಲಾಗಿ
ದನುಜಾರಿಯಧಿಕಭಯದಿಂದಗ್ನಿಯೊಡನೆ ನುಡಿದಂ ವಿನಯ ವಚನಂಗಳಾ ೨೫

ನೀನಱಿಯಲಾ ವಹ್ನಿನಿನ್ನ ಕಾರಣಕಾದ
ಹಾನಿಯಂ ನಿನ್ನ ಕೇಡೆನಬೇಕಲಾ ತತ್ಪ
ರಾನುಕೂಲದ ಬಾಧೆ ಎನಿತು ಭೂಷಣವಲ್ತೆ ತೇಜಸ್ಸಮಗ್ರ ನೀನೂ
ಜ್ಞಾನಿ ಶಿವಸನ್ನಿಧಿಗೆ ಪೋಗಬಹುದೆಂತೆನಲು
ಮಾನನಿಧಿಯೇ ಸರ್ವರತಿಕಾಲದಲ್ಲಿ ದೀ
ಪಾನನದಿನಿಪ್ಪೆಯಾಗಿದು ನಿನಗೆ ನಿಂದೆಯಲ್ಲೆಂದನಂತಾ ಮುರಾರಿ ೨೬

ಇನ್ನೊಂದ ಕೇಳು ವೈಶ್ವಾನರಾ ರತಿ ಗುಣಂ
ನಿನ್ನದಲ್ತೆ ಪೋಗಲದು ನಿನಗೆ ನಿಂದೆಯು
ಲ್ಲಂ ನೋಡು ಬಳಿಕ ಪಚನಕ್ಕೆ ನೀನಿಲ್ಲದಿರೆ ಸರ್ವರ್ಗೆಗತಿಯದಾರೂ
ಅನ್ನಮಂ ಗರ್ಭದೊಳಗಂ ಪುನಃಪಾಕಮುಮ
ನಿನ್ನಾರು ಮಾಡುವರು ರಾತ್ರಿಯಂಧತೆಯೊಳಗೆ
ನಿನ್ನ ತೇಜಸ್ಸಿಲ್ಲದೊಡೆ ಕಾಣ್ಬರಾರು ನಿನ್ನಿಂದಧಿಕರಿಲ್ಲೆಂದನೂ ೨೭

ಸರ್ವಕಾಲದೊಳು ಸೂರ್ಯನ ನೀಕ್ಷಿಸಲ್ಕಾಗಿ
ಸರ್ವಜನದಘವಳಿವುದೆಂಬಂದದಿಂದ ನಿ
ನ್ನೋರ್ವನಂ ಮೊಗಂ ಚಂದ್ರನಂ ಪೋಲ್ವಕಾಂತಿ ಕುಂಡಲಸಮಾಲಂಕೃತಾಢ್ಯಂ
ಉರ್ವಿಯೊಳಗಾವನೀಕ್ಷಿಸಲವಂ ಪಾವನಂ
ಗುರ್ವಧಿಕ ನೀಂ ಪೋಗಬೇಕು ನೀ ಯೋಗ್ಯನೈ
ಪಾರ್ವತೀಪತಿಯ ಸನ್ನಿಧಿಗೆಂದು ಮೃದುಮಧುರದಿಂ ವಿಷ್ಣು ಬೋಧಿಸಿದನು ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಿಷ್ಣು ಕಮಲಸಂಜಾತನಿಂದ್ರಂ ಸಕಲ
ದೇವತೆಗಳೆಯ್ದಿ ಮೃದುಮಾಧುರ್ಯವಚನದಿಂ
ಪಾವಕಸ್ತೋತ್ರಮಂ ಮಾಡುತಿರ್ದರು ತಮೋಹರ ಮಹಾಹಾರಿಯೆನಿಪಾ
ಶ್ರೀ ವಿಭವನೇ ಸ್ವಹಾದೇವಿಯಾಣ್ಮನೆ ನಿನಗೆ
ಯಾವು ವಂದಿಸುವೆವೈ ಹವ್ಯವಾಹನನೆ ಸ
ದ್ಭಾವಿಯೇ ಸಪ್ತಾರ್ಚಿಯೇ ಚಿತ್ರಭಾನುವೆ ಮಹಾಪ್ರಕಾಶಾ ಎಂದರೂ ೨೯

ಅನಲಾಗ್ನಿಯಗ್ನಿಮುಖ ಸರ್ವಗತ ಜಯ ಜಯಾ
ಘನ ವಿಭಾವಸು ಮಹಾಭಾಷ್ಯ ವೇದಾರ್ಥ ಸಂ
ವಿನುತ ನೀನೇಶರಣೆನುತ್ತಲ್ಲಿ ದೇವರ್ಕಳನಿಬರುಂ ಕೀರ್ತಿಸುತ್ತಾ
ಮನಸಿಜನ ತೆಱದಿಂದ ಪರಹಿತಾರ್ಥಕ್ಕೆ ಮಡಿ
ಎನುತ ನಿನ್ನಂ ಕಳುಪಲಿಲ್ಲ ಸುಖದುಃಖಂಗ
ಳೆನಿತುಂಟವೆಲ್ಲವಂ ನಾವೊಡನೆ ಅನುಭವಿಪೆವೆಂದರಾ ಹರಿ ಮುಖ್ಯರೂ ೩೦

ಎಂದು ನಾನಾ ಪ್ರಕಾರದೊಳಜಂ ಸುರರಪ ಗೋ
ವಿಂದಾದಿ ದೇವರ್ಕಳೆಯ್ದಿ ಕೀರ್ತಿಸುತಿರಲು
ಸಂದೆಗಮನಳಿದಗ್ನಿಯಿದರ ಮೇಲಿನ್ನಳಿವು ಮೊದಲಾದ ದುಃಖಂಗಳಾ
ಒಂದನೆಣಿಸೂದು ಮತವಲ್ಲೆಂದು ದೇವತಾ
ವೃಂದಮಂ ಬಲಗೊಂಡು ಮಿಗೆ ಭಕ್ತಿಯಿಂದಾಗ
ವಂದಿಸುತ ಬೀಳ್ಕೊಂಡನೆನಲು ಪಲವರ ಬಾಧೆಗೊಳಗಾಗದಿರ್ಪನಾದಂ ೩೧

ಅಂದಖಿಳ ದೇವತಾನುಜ್ಞೆಯಿಂದಂ ವಹ್ನಿ
ಮಂದರಾಚಲಕಾಗಿ ಶೀಘ್ರದಿಂದಾಗಳೈ
ತಂದು ಬಾಗಿಲೊಳು ಶಿವತೇಜಸ್ಸಿನಿಂ ವಿಷ್ಣುಂ ಮುಖ್ಯದೇವರ್ಕಳಿಂದಾ
ವಂದಿಸಿಕೊಳುತ್ತಿರ್ಪ ಹರದರುಷನಾರ್ಥಿ ಜನ
ವೃಂದಸಂಸ್ತೋತ್ರಪಾತ್ರನನಗ್ರಸಾಕ್ಷಾತ
ನಂದೀಶನಂ ಕಂಡನಾ ಬಾಗಿಲಲ್ಲಿ ಕಾಪಾಗಿರ್ದ ಘನಮೂರ್ತಿಯಾ ೩೨

ವನಚರಾಕೃತಿಯ ವಕ್ತ್ರಂ ವಜ್ರದಂಡಮಂ
ಘನ ಹಸ್ತದಿಂದಾಂತು ನೆಗಪಿರ್ದವಂ ಶೂಲ
ವನು ಪಿಡಿದು ರಾಜಿಪ ಪರಾಕ್ರಮಿ ಸಹಸ್ರಸೂರ್ಯಪ್ರಕಾಶಂ ಸೌಖ್ಯನೂ
ಮನಸಿ ಚಾರಿಗೆ ಭೇದವಿಲ್ಲದ ಮಹಾಮಹಿಮ
ನನಘನಾ ಬಾಗಿಲೊಳು ರಾಜಿಸುತ್ತಿರಲು ಕಂ
ಡನಲನತಿ ಭಯದಿಂದೆ ಯೋಚಿಸಿದನಿವನ ಕಾಪಿನೊಳೆಂತು ಪೋಪೆನೆಂದೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈಕ್ಷಿಸಿದನಾ ಬಾಗಿಲೊಳಗಿಪ್ಪನಂ ಸರ್ವ
ಭಕ್ಷಿಯೆನಿಪಗ್ನಿಯಿನ್ನೇಗೆಯ್ವೆ ನೀ ಗಣಾ
ಧ್ಯಕ್ಷನಂದೀಶನಾಜ್ಞೆಯು ಮೀಱಿ ಪೋಗಲರಿದೆಂಬಾಗ ಗಿರಿಜಾತೆಯಾ
ಅಕ್ಷಿಗಳ್ತ್ರಿಯು ನೀವ ಕಾರಣದೊಳಾಡುತಿಹ
ಪಕ್ಷಿಗಳನಂತವಿರಲವಱೊಳಗೆಯಗ್ನಿಯಂ
ತಾಕ್ಷಣದೊಳೆ ಹಂಸೆಯಾಗಿ ಬಾಗಿಲ್ಗಳಿದು ಬಂದೊಳಗೆ ಪೊಕ್ಕನಲ್ಲಿ ೩೪

ಆ ರಮಾಕರವಹ್ನಿ ನಂದಿ ಕಾಯ್ವಾ ಮಹಾ
ದ್ವಾರವಮಂ ಕಳಿದೊಳಗೆ ಬರುತಿಪ್ಪ ಕಾಲದೊಳು
ಗೌರಿಯುಡರುವ ವಾಹನಂ ಸಿಂಹವಿರ್ದುದಾ ಮುಂಗಡೆಯೊಳದ್ಭುತದೊಳು
ಚಾರುತರವಾಲದಂಡದ ಶೋಭೆಯಿಂದ ಗೋ
ಕ್ಷೀರ ಧವಲಾಕಾರದಿಂದಲು ಜ್ವಲ್ಯಮಾ
ನೋರುತರ ನಯನಂಗಳಿಂ ಚಂದ್ರಕೋಟಿಪ್ರಭಾಮಯ
ದೊಳೊಪ್ಪಿರ್ದುದೂ ೩೫

ಮುಂಕೊಂಡು ಪಸರಿಸುವ ಖೇಚರಪ್ರಚಯದಿಂ
ಹೂಂಕಾರರವದಿಂದಲಾ ದಾನವಾಳಿಗೆ ಭ
ಯಂಕರವ ಪುಟ್ಟಿಸುತ ಸಂಹಾರವಮಂ ಮಾಳ್ಪರೌದ್ರದಿಂದಾಗ ದೇವಾ
ಸಂಕುಳವನಾರೈದು ರಕ್ಷಿಸುವ ಬಲ್ಮೆಯಿಂ
ದಂ ಕೂಡೆ ಘೂರ್ಮಿಸಲು ಬಧಿರೀಕೃತಾಖಿಲದಿ
ಶಾಂಕದಿಂದೊಪ್ಪಿದುದು ಮೃಗರಾಜನಾ ಮಹಾತೇಜನುಗ್ರದ ಸಮಾಜಾ ೩೬

ಆ ಮಹಾಸಿಂಹರಾಜನ ವಿಶೇಷಧ್ವನಿಗೆ
ಸಾಮರ್ಥ್ಯರೂಪಿಂಗೆ ಮುಂದಕ್ಕೆ ಪೋಗಲಳ
ವೇ ಮರುಳರೆಯಾನಮ್ಮನೆಂದು ಹಿಂದಕ್ಕೆ ತಿರಿಗಿದನಗ್ನಿಯತಿಭೀತಿಯಿಂ
ಶ್ರೀ ಮೇರುವಿನ ತಪ್ಪಲೊಳಗಿಪ್ಪ ಹರಿಸುರ ಪಿ
ತಾಮಹಾದ್ಯರ ಸಮೀಪಕ್ಕಾಗಿ ಬರುತಿರ
ಲ್ಕಾ ಮಾಧವಾದಿಗಳು ಬಪ್ಪನಲನಾನನವನಾಗಳೀಕ್ಷಿಸುತಿರ್ದರೂ ೩೭

ಅನಲನಂ ಕಾಣುತ್ತ ಹರಿಮುಖ್ಯರಲ್ಲಿ ಘ
ಮ್ಮನೆ ಕೇಳ್ದರೇನಯ್ಯ ವಹ್ನಿ ನೀಂ ಪೋದಲ್ಲಿ
ಮನಸಿಜಾಂತಕನ ಕಂಡಾ ಕಾರ್ಯವೇನಾಯ್ತು ಶೀಘ್ರದಿಂ ಪೇಳೆಂದೆನೆ
ಅನಿಬರ್ಗೆ ನುಡಿದನಾ ಜಾತವೇದಂ ನಾನು
ಘನವೇಗದಿಂ ಪೋಗಿ ಮಂದರಾದ್ರಿಯ ಬಾಗಿ
ಲನು ಪೊಗುವ ಕಾಲದೊಳು ಕಾಯ್ದಿರ್ದನಾ ಪ್ಲವಂಗಾನನದೆ ನಂದೀಶ್ವರಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತನಂ ಕಾಣುತ್ತಲಿನ್ನೊಳಗೆ ಪೊಗುವಡಿ
ನ್ನೇತೆಱನೆನುತ್ತ ಹಂಸಾಕಾರವಮಂ ತೊಟ್ಟು
ಭೂತೇಶನಂ ಕಾಣ್ಬತವಕದಿಂದಂ ಪೋಗೆ ದೇವಿಯರ ಘನವಾಹನಾ
ಸಾತಿಶಯ ಸಿಂಹವದ್ಭುತರೂಪಿನಿಂದಿರ್ದು
ನೂತನಾರ್ಭಟೆಯಿಂದ ಘೂರ್ಮಿಸುವ ಧ್ವನಿಗೇಳಿ
ಭೀತಿಯಿಂದಂ ತಿರುಗಿ ಬಂದೆನೀಶನ ಕಂಡುದಿಲ್ಲೆಂದನಾ ಕೃಶಾನೂ ೩೯

ಯೋಚಿಸುವುದಿನ್ನು ಮುಂದಣ ಕಾರ್ಯಮಂ ನಿನಗೆ
ಗೋಚರಿಸಿತಿಲ್ಲ ವೀಶ್ವರನೆಂದೊಡನಿಬರಾ
ಲೋಚನೆಯ ಮಾಡಿದರು ಶಂಭುವಂ ಸಾನ್ನಿಧ್ಯಕೆಯ್ದಿ ಕೀರ್ತಿಸುವೆವೆಂದು
ಆ ಚತುರ್ಮುಖನಿಂದ್ರ ದಿಕ್ಪಾಲ ಸುರಗಣಂ
ಶ್ರೀ ಚಕ್ರಧರಮುಖ್ಯರೆಯ್ತಂದು ವರಮಂದರಾ
ರಾಚಲವನೆಯ್ದಿ ಸರ್ವರು ಕೂಡಿ ಶಿವನ ಕೊಂಡಾಡತೊಡಗಿದರಕಱಿಂ ೪೦

ಶ್ರೀಯುಭವ ಚಿತ್ತೈಪುದೋಂ ನಮೋ ಪರಮೇಶ್ವ
ರಾಯ ತ್ರಿಣೇತ್ರ ತ್ರಿಶೂಲಿನೇ ಘನ ವಿರೂ
ಪಾಯುಸ್ವರೂಪಾಯ ಪಂಚವದನಾಯ ತ್ರಿಮೂರ್ತಯೇ ನೀಲಕಂಠಾ
ಸ್ವಾಯತ್ತಮಹಿಮಾಯ ವಿಶ್ವಾಯ ಮಂಡಲೇ
ಶಾಯತೇ ವಿಶ್ವನಾಥಾಯ ವಿಶ್ವೇಶ್ವರಾ
ಮಾಯಾತ್ಮರೂಪಿಣೇ ಯುಗ್ರಕಾಲಜ್ಞಾಯತೇ ನಮಃ ಎನುತ್ತಿರ್ದರೂ ೪೧

ದಕ್ಷಮುಖಮಂ ಕೆಡಿಸಿದಾತನೇ ಯಂಧಕನ
ಶಿಕ್ಷಿಸಿದ ಮಹಿಮನೇ ಈಶನೆಯನೀಶನೇ
ರಕ್ಷಿಪನೆಯಂತನೆಯನಂತನೇ ನೀನಲ್ಲದಾರು ಗತಿ ಎಮಗೆ ದೇವಾ
ಸಾಕ್ಷಾದ್ವ್ಯಯಾವ್ಯಯನೆ ಜನ್ಮಾನ ಜನ್ಮನೆ
ಓಕ್ಷರನೆ ದೇವ ನಿತ್ಯಾನಿತ್ಯನೇ ಧರ್ಮ
ದಕ್ಷಯನೆ ಧರ್ಮರೂಪನೆ ನಿನಗೆ ವಂದಿಸುವೆವೆಂದು ಕೀರ್ತಿಸುತಿರ್ದರೂ ೪೨

ಗುರುವ ಗುರುಬೀಜನೇ ನಿರ್ಬೀಜನೇ ಕಾಲನುರು
ತರದ ಕಾಲನೇ ಬಲ್ಲವನ ಬಲ್ಲನೆ ಪ್ರಾಣ
ವಿರದೆಯಪ್ರಾಣನೇ ಸರ್ವಕ್ಕೆ ಸಾಕ್ಷಿ ಬಳಿಕಂತ ಸಾಕ್ಷಿ ಸ್ವರೂಪಾ
ಇರದೆ ಶಾಶ್ತ್ರಾಶಾಸ್ತ್ರನೇ ವಿರೂಪಾಕ್ಷ ಬಂ
ಧುರನೆಯಧ್ರುವ ಮಧ್ರುವ ಸ್ವರೂಪನೆ ಸರ್ವ
ನರ ಮುಖ್ಯ ಸಂಸಾರಿ ನೀನೆ ಸಂಸಾರಿಯೆಂದಾವು ವಂದಿಪೆವೆಂದರು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂತಾದಿಗಳ ರಕ್ಷಿಪನೆ ಬಳಿಕ ಸಲಹದಿ
ಪ್ಪಾತನೇ ಲೋಕಕ್ಕೆ ಜೀವನೆಯು ಜೀವನೇ
ಸಾತಿಶಯದೇಹಿಗಳ ಸುಖವ ಮಾಳ್ಪನೆ ಬಳಿಕ ದುಃಖಂಗಳಂ ಮಾಳ್ಪನೇ
ಏತೆಱದೊಳಂ ರುದ್ರನಾಗಿರ್ಪ ರುದ್ರನೇ
ಪ್ರೀತಿಯಿಂದಂ ಭಯಂಕರರೂಪನೇ ಗಣ
ವ್ರಾತಸೇವ್ಯನೆ ದೇವತಾನಾಂ ಮಹಾದೇವನೇ ಶರಣೆನುತ್ತಿರ್ದರಾರೂ ೪೪

ನಿನಗಿಂ ಮಹಾನುಗಳು ಬೇಱಿಲ್ಲ ವಿಲ್ಲವೆಂ
ದೆನಿಪನೇ ಕಾಮನುಂ ನೀನೆನಿಷ್ಕಾಮನೇ
ಯನಘನೇ ಜಯಾ ಜಯಾಂಗನೇ ನೀಂ ಪುರಾಣಪುರುಷನೆ ಪುರಾಣನವಿದ್ಯತೇ
ಘನ ಸರ್ಪಯಜ್ಞೋಪವೀತನೆ ಸರೋಜಾಂತ
ದನುಪಮನೆ ದೇವ ನೀಲಗ್ರೀವನೇ ನಮೋ
ವಿನುತ ಶಿತಿಕಂಠಾಯತೇ ನಮೋನಮ ಎನ್ನುತ್ತಿರ್ದರಾ ದೇವರ್ಕಳು ೪೫

ಶ್ರೀಕಪಾಲಂ ಪಾಶದಂಡಮಂ ಪಿಡಿದಸುರ
ನೀಕವಲ್ಲಭನೆ ನಾರಾಯಣಸ್ತುತಿ ಪಾತ್ರ
ನೇಕನಧ್ವರವಿಲ್ಲಸದೂರ್ಧ್ವಮಾರ್ಗವನೆಯ್ದಿಪನೆ ಉರ್ಧ್ವರೇತಸ್ಕನೇ
ಸ್ವೀಕೃತಕ್ರೋಧೀನ ವೀತರಾಗಾಯ ಸು
ಶ್ಲೋಕ ಗಜಚರ್ಮಾವಕುಂಠಿನೇ ಜಯಸರ್ವ
ಲೋಕಪಿತಮಸ್ತಕವನರಿದಾತಗೋಸ್ಕರಂ ವಂದಿಸುವೆವೆನುತಿರ್ದರಾರೂ ೪೬

ತಪ್ತಕಾಂಚನಸನ್ನಿಭನೆ ಚಂದ್ರಶಾಂತನೇ
ಯಾಪ್ತನೇ ವೀರನೇ ಕಮಂಡಲುಕರಾಗ್ರನೇ
ವ್ಯಾಪ್ತನೇ ಸುಪ್ರಚಂಡನೆ ದೇವನೇ ಚಂಡಕೋಪವುಳ್ಳವನೆ ಶರಣಾ
ಗುಪ್ತನೇ ವರೇಣ್ಯನೆ ಶರಣ್ಯನೆ ಸರ್ವವಿ
ಜ್ಞಪ್ತನೇ ಬ್ರಹ್ಮಲಸದಂಬಿಕಾಪತಿಯೆ ಸು
ದ್ರುಪ್ತರಾದೆಮ್ಮ ರಕ್ಷಿಪುದೆಂದು ಕೀರ್ತಿಸುತ್ತಿರ್ದರಾ ದೇವರ್ಕಳೂ ೪೭

ಸರ್ವರಿಗನುಗ್ರಹವ ಮಾಡುತಿಹ ಕರ್ತನೇ
ಗುರ್ವಧಿಕ ಸುಜ್ಞಾನಮಂ ಕೊಡುವ ಮೂರ್ತಿಯೇ
ಪಾರ್ವತೀಪತಿಯೆ ಸಂಸಾರಮಂ ಕೆಡಿಪನೇ ಯಣಿಮಾದಿ ಸುಪ್ರದಾತಾ
ಪೂರ್ವಾಗ್ರಸಾಮಾದಿ ಸಂಸ್ಥನೆ ತದಂತರದೊ
ಳುರ್ವಿ ಪಸರಿಪರವಾಂಗನೆ ಮಹಾದೇವನೇ
ಗರ್ವಸಂಹಾರಿಶಕ್ತಿತ್ರಯ ವಿನಾಶ ಶಕ್ತಿತ್ರಯಾಯುತಗ್ರಗಣ್ಯಾ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಕ್ತಿತ್ರಯಾತ್ಮರೂಪಾಯ ತೇ ದೇವ ವರ
ಶಕ್ತಿತ್ರಯಾಧರಾಯ ಸ್ವತಂತ್ರಾಧೀಶ
ಶಕ್ತಿಯುಳ್ಳಾತನೇ ನಿನಗೋಸ್ಕರಂ ನಮಸ್ಕಾರವಮಂ ಮಾಡುತಿಹೆವು
ಯುಕ್ತಿಸಲು ಘನವಿಷಘ್ನಾಯ ವಿಜಯಾಯ ಸಂ
ಸಕ್ತ ಹರಿಕೇಶಾಯ ಯೋಗೀಶ್ವರಾಯ ಸವಿ
ರಕ್ತಾಯುತೇಯಾತ್ರಿದಂಡಿನೇ ನಮ ಎಂದು ಕೀರ್ತಿಸಿದರಮರರ್ಕಳೂ ೪೯

ವರಹರೀಶಾಯಾ ಪ್ರಮೇಯಾಯ ದೇವ ಬಂ
ಧುರ ಕುಂಡಲೀಶಾಯ ಚಕ್ರಿಣೇ ದಿವ್ಯ ಶಂ
ಕರ ಬಂಧುರಹಿತಾಯ ನಾಥಾಯ ವಿಲಸದಾನಂದ ಸಮ್ಯಗ್ಧಾರಿಣೇ
ಪರಮ ಗಾಯತ್ರೀ ನಾಥಾಯ ಗಾಯತ್ರಿ ಉರು
ತರದ ಹೃದಯಾಯ ಗಾಯತ್ರಿ ಗೋಪ್ತಾಯ ಸೌಂ
ದರದಗಾಯತ್ರ್ಯಾಯ ತೇ ನಮ ಎನುತ್ತ ಕೀರ್ತಿಸಿದರಾ ಹರಿಮುಖ್ಯರೂ ೫೦

||ಸಾಕ್ಷಿ|| ಓಂ ನಮಃ ಪರಮೇಶಾಯ ತ್ರಿಣೇತ್ರಾಯ ತ್ರಿಶೂಲಿನೇ
ವಿರೂಪಾಯ ಸ್ವರೂಪಾಯ ಪಂಚಾಸ್ಯಾಯ ತ್ರಿಮೂರ್ತಯೇ ೧

ನೀಲಕಂಠಾಯ ವಿಶ್ವಾಯ ಮಂಡಲೇಶಾಯತೇ ನಮಃ
ವಿಶ್ವನಾಥಾಯ ವಿಶ್ವಾಯ ವಿಶ್ವೇಶಾಯಾತ್ಮರೂಪಿಣೇ ೨

ನಮಃ ಪ್ರಚಂಡದೇವಾಯ ಚಂಡಕ್ರೋಧಾಯುತೇ ನಮಃ
ವರೇಣ್ಯಾಯ ಶರಣ್ಯಾಯ ಬ್ರಾಹ್ಮಣ್ಯಾಯಾಂಬಿಕಾಪತೇ ೩

ಇಂತುಹರಿಮುಖ್ಯರ್ಗಳೀ ಸ್ತೋತ್ರವಮಂ ಮಾಡಿ
ಕಂತುಹರನಂ ಕೀರ್ತಿಸಿದರಲಾ ಧರೆಯಲ್ಲಿ
ಮುಂತಾವನೀ ಸ್ತವವ ಪಠಿಸಿದೊಡೆ ನಲಿದು ಯಾವಜ್ಜೀವಪರಿಯಂತರಾ
ನಂತ ಪಾಪಂಗಳಂ ಮಾಡಿರ್ದಪಳಿದು ನಿ
ಶ್ಚಿಂತರಾಗಿರ್ದು ಪರಲೋಕಸುಖಮಂ ಪಡೆದು
ಸಂತಸದೊಳಿಹರೆಂಬುದಿದಱ ಫಲವೈಯ್ಯ ಮುನಿಗಳಿರ ಎಂದಂ ಸೂತನು ೫೧

ಈ ಪರಿಯೊಳಖಿಳ ದೇವರ್ಕಳತಿ ಭಕ್ತಿಯಿಂ
ಕಾಪಾಲಿಯಂ ಸ್ತೋತ್ರವಂ ಮಾಡುತಿರೆ ಮೆಚ್ಚಿ
ರೂಪುದೋಱಿದನು ಸರ್ವೇಶ್ವರ ಸದಾಶಿವಂ ಸದ್ಭಕ್ತರಿಷ್ಟಪ್ರದಂ
ಆ ಪಿತಾಮಹಮುಖ್ಯರಂ ನೋಡಿ ನುಡಿದನಂ
ಬಾ ಪತೀಶ್ವರನಿಷ್ಟವಾವುದೈ ಬೇಳ್ಪುದೆನೆ
ಸೌಪರ್ಣ್ಯವಾಹನಾದಿಗಳು ಕೈಮುಗಿದು ಬಿನ್ನವಿಸಿದರು ಭಕ್ತಿಯಿಂದಾ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಬಿನ್ನಪವೈಯ್ಯ ನಿಮ್ಮಡಿಯು ಬೇಳ್ಪವರ
ವಾವುದೆನಲಾಗಿ ಅವಧರಿಸುವುದು ಪಾರ್ವತಿ
ದೇವಿಯರ ಗರ್ಭದಿಂದಂ ಕುಮಾರಕನುದಯವಾಗಬೇಡೆಂದೆನಲ್ಕೆ
ಆ ವಿವರಮಂ ಕೇಳಿ ಶಂಭುವೆಂದಂ ದಿವ್ಯ
ಸಾವಿರಬ್ದಂ ಕ್ರೀಡಿಸಿದ ಮಹಾರೇತಸ್ಸ
ನೋವಿ ತಾಂ ಬಿಡಬೇಕು ಹೊಱಗೆಬಿಡೆ ನಿಮ್ಮೆಲ್ಲರಂ ಪ್ರಳಯಮಂ
ಮಾಳ್ಪುದು ೫೩

ಎನೆ ಕೇಳ್ದು ನಡನಡುಗಿ ಹರಿಯಜೇಂದ್ರಾದಿಗಳು
ಘನತರೋತ್ಪಾತಭಯದಿಂದಿರಲು ನಾರಂದ
ಮುನಿ ಬಂದು ದೇವಿಯರ ಗರ್ಭದೊಳು ಸುತನೊಗೆದನಾದೊಡೆಲ್ಲಾ ಲೋಕವಾ
ಇನಿತುಳಿಯದಂತೆ ಬಱಿಕೆಯ್ವನೆನೆ ನಾವಳಿಯ
ದನುವಾಗಬೇಕೆಂದು ಬೇಡಿದೊಡೆ ಶಿವ ವೀರ್ಯ
ವನಿಬರೆಮ್ಮಂ ಸುಟ್ಟು ಮಡಿಸುವುದು ಗಡ ಕೆಟ್ಟೆವೆಂದು ತಮ್ಮೊಳು ನುಡಿದರು ೫೪

ಆ ಕಾಲದೊಳಗಗ್ನಿ ನುಡಿದನಾ ದೇವತಾ
ನೀಕಕ್ಕೆ ಮೊದಲೆನ್ನ ಬೋಧಿಸುತ ಪೇಳ್ದಾ ಪಿ
ನಾಕಿಯಲ್ಲಿಗೆ ಕಳಿಪಿದಿರಿ ನೀವು ನಾನಳ್ಕಿ ತಿರುಗಿದೆನಲಾ ಬಳಿಕ್ಕಾ
ಈ ಕಪಾಲಿಯ ಮಹಾರೇತಸ್ಸನಾಂ ಕೊಂಚಿ
ನಾಕವಾಸಿಗಳಂಜಬೇಡವೆಂದವರಿಗೆ ವಿ
ವೇಕದಿಂ ನುಡಿ-ಭಯವಿತ್ತನಾಜಾತವೇದಂ ಸುಸನ್ನರ್ಥನಾದಂ ೫೫

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತ ಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೫೬

ಇದು ವೀರಶೈವಷಟ್ಸ್ಥಲಮಾರ್ಗಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಸುರಶಿವಪ್ರಸನ್ನತೆಗೆರಡು ಕಾಂಡಮುಂ ಸಂಧಿ ಹತ್ತೊಂಬತ್ತಲಾ ೫೭

ಅಂತು ಸಂಧಿ ೧೯ ಕ್ಕಂ ಪದನು ೯೭೨ ಕ್ಕಂ ಗ್ರಂಥ ೭೯ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೨

ಷಣ್ಮುಖೋತ್ಪತ್ತಿ ಕಥೆ

ಹರನ ವೀರ್ಯ್ಯವುನಗ್ನಿ ಕೊಂಡೊಡಮರಾವಳಿಗೆ
ಪುರುಷಗರ್ಭವುದಾಗೆಯುದ್ಗಾರಿಸಲ್ಕೆಯಾ
ಶರವಣದೊಳುದ್ಭವಿಸಿ ಷಣ್ಮುಖಂ ಬಾಲಲೀಲೆಯೊಳು ನಟಿಸುತ್ತಿರ್ದನೂ

ಎಲೆ ದೇವ ಬೆಟ್ಟದಂತಪ್ಪ ದಿಮ್ಮಿದನಣುಗಿ
ಸಲುಗೆಯಾಗಿರ್ದವಳನೆನ್ನನೊತ್ತಿದೆ ಎಡದ
ಕೆಲಕೆ ಜಡ ನೀಚಮಾರ್ಗಿಯ ಕಿಱಿಯ ಮೊಹದಂಗನೆಯೆಂದು ತಂದು ನಿನ್ನಾ
ತಲೆಯನೇಱಿಸಿಕೊಂಡೆಯೆಂನಲವಳ ನಿನ್ನ ಪದ
ಜಲಜಕ್ಕೆ ಶರಣೆನಿಪೆನಗಜೆಯೆಂದವಳಿದಱಿ
ಹೊಲಬಱಿಯದಂತೆ ನೀನಡಿಗೆಱಗಿ ತಿಳಿಪಿದ್ಯೆ ಶಾಂತಮಲ್ಲೇಶ್ವರ ಜಯಾ ೧

ಶ್ರೀ ಷಡಕ್ಷರಿಯೆ ಮುಖವಾದ ಚಿಚ್ಛಕ್ತಿಧರ
ರೋಷಿ ಪರವಾದಿ ಪರ್ವತದಾದಿ ಪರಮಪರಿ
ತೋಷಮಯ ನೀಲಕಂಠಾ ಶ್ರಿತಯಶಸ್ಕಂದ ನವ್ಯತಾರಕ ವಿಭೇದೀ
ವೈಷಮ್ಯರಾಜೇಂದ್ರ ಘನ ಪರಾಕ್ರಮಸುವಿಜಿ
ಗೀಷು ಸದ್ವೀರ ಜಂಗಮ ಸುಸೇನಾಧೀಶ
ಭಾಷಾಪವಿತ್ರ ಮೇಲಣ ಗವಿಯ ಶಾಂತನಂಜೇಶ ಜಯ ಸುಪ್ರಕಾಶಾ ೨

ಶ್ರೀಯುಮಾಪತಿಯೆಡೆಗೆ ಬಂದಗ್ನಿ ಬಿನ್ನಪಂ
ಜೀಯ್ಯ ನಿನ್ನಯ ವೀರ್ಯವುಂ ಸರ್ವನಿರ್ಜರ ನಿ
ಕಾಯಕ್ಕೆ ಬೇಱಿ ಬೇಱೆಱಿವ ಕಾರಣವೇನು ನಾನೊರ್ವನವರೆಲ್ಲರಾ
ಪಾಯಕ್ಕೆ ಗುರಿಯಾದವಂ ದೇವ ಕೃಪೆಯಿಂದ
ಲೀಯಮೃತಕಧಿಕವೆನಿಸುವ ವೀರ್ಯಭಿಕ್ಷವುಂ
ತೋಯಾರದಿಂ ಕೊಂಬೆನೆಂದೆರಡು ಕಯ್ಯಪಸರಿಸುತಲಂಜಲಿಯ ನಾಂತಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಿಂಗದನಲಂ ನಿಜಾಂಜುಲಿಯುನಾನುತ್ತಿರಲು
ಮಂಗಲೆಯೊಳಾ ದಿವ್ಯಸಾಹಸ್ರವರುಷಪರಿ
ಸಂಗಸುಖತುಷ್ಟನಾದೂರ್ಧ್ವರೇತಸ್ಸಂ ಸ್ವತಂತ್ರಲೀಲಂ ತನ್ನಯಾ
ಲಿಂಗಮಂ ಪೊರಮಡಿಸಿದಂ ಚಂದ್ರಬಿಂಬಸಮ
ದಂಗಿಯಾಜಾತಿ ನೀಲೋತ್ಪಲಾಮೋದದ ಸು
ರಂಗವೆನಿಸುವ ಶುಕ್ಲವಂಬಿಡಲ್ಕಾಂತಗ್ನಿ ಕೊಂಡಂ ಯಥೇಷ್ಟವಾಗಿ ೪

ರವಿಕೋಟಿ ತೇಜಸ್ಸನುಳ್ಳ ರೇತಸ್ಸನಾ
ಹವಿಭುಜ್ತಹಹಾ ಪಾನವಮಂ ಮಾಡಿಯುಷ್ಣಸಂ
ಭವಿಸಿ ಪಾತಾಳಲೋಕಾವಧಿಯ ಸಪ್ತ ಸಾಗರಗಳಂ ತಿರುಗಿ ತಿರುಗಿ
ಕವಿದು ಬಿದ್ದೇಳಲಾಱದೆ ಸುಯ್ಯುತಿರಲಗ್ನಿ
ಶಿವನಲ್ಲಿ ಬಯಲಾಗಿ ಪೋಗಿ ಮೋಹದ ರಾಣಿ
ಶಿವೆಗೆಯಾದ್ಯಂತಶುದ್ಧತೆಯಿಂದಲೆಲ್ಲವಂ ನಸುನಗುತ್ತ ಬಿತ್ತರಿಸಿದಂ ೫

ದೇವಿ ಕೇಳಾ ವಿಷ್ಣುವಾ ಪಿತಾಮಹಮುಖ್ಯ
ದೇವರ್ಕಳೆಮ್ಮ ಕೀರ್ತಿಸೆ ರೂಪುದೋಱಿ ನಿಮ
ಗಾವುದಭಿಮತವಮರರಿರ ಬೇಡಿ ಎನಲಾಗಿ ಗೌರಿಯುದರದೊಳಾತ್ಮಜಂ
ಆವಪರಿಯಿಂ ಪುಟ್ಟಬೇಡವೆನೆ ರೇತಸ್ಸು
ತೀವಿ ಪಸರಿಸಿ ನಿಮ್ಮ ಸುಡುವುದೆನಲಗ್ನಿ ಬಂ
ದೀವುದೆನಲವನ ಕೈಯೊಳಗೆಱೆಯೆ ಕೊಂಡನೌ ಹೊಱಗೆಹೋಯ್ತೆಂದನೀಶಂ ೬

ಅನಲನೀಂಟಲ್ಕಮರತತಿಗಾಗಲವರು ಬಿಡ
ಲನಿತು ಶರವಣದಲ್ಲಿ ಘಟ್ಟಿಗೊಂಡಾಸ್ಕಂದ
ನೆನಿಪ ಸೇನಾನಿ ತಾರಕವೈರಿ ಎಂದೆನಿಪ ಮುಖ್ಯಾಭಿಧಾನಂಗಳಾ
ತನಯ ಷಣ್ಮುಖನಪ್ಪನೌ ಕುಮಾರಕನವಂ
ನಿನಗೆನಲು ಘುಡಿಘುಡಿಸಿ ದೇವರ್ಕಳೆಲ್ಲರ್ಗೆ
ಮುನಿದು ಶಾಪವನಿತ್ತಳಂತಾ ಭವಾನಿ ಸುಜ್ಞಾನೀ ಶಿವಮೋಹಗಾನೀ ೭

ತಿಳಿದೀಶನೋಳ್ಕ್ರೀಡೆಯಿಂ ರಚಿಸಿ ಕೂರ್ತು ನಿ
ರ್ಮಳ ಗರ್ಭವಾಗಿ ಮಹದುತ್ಸಾಹವಮಂ ನೆಗಳಿ
ಬಳಿಕ ಪುತ್ರನ ಪಡೆದು ನೋಡಿ ಸಂತೋಷದಿಂ ಮುದ್ದಾಡಿ ನಾಂ ಸುಖಿಸಲೂ
ಎಳಸುವೆನ್ನಯ ಪೊಡೆಯೊಳಂ ಪುತ್ರನಾಗದಂ
ತಳಿಕಾಕ್ಷ ವರವನೀಯ್ದೆಂದಮರತತಿ ಕುಕ್ಷಿ
ಯೊಳಗೆಂದಿಗೆಂದಿಗುಂ ಮಕ್ಕಳಾಗಲ್ವೇಡವೆಂದು ಶಾಪಿಸಿದಳಗಜೇ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ದೇವಿಯರ ಶಾಪದಿಂದಂ ಸುರಾವಳಿಗೆ
ಸಾದರದ ಯಜ್ಞದಿಂದಂ ಮಂತ್ರಮಯ ಹೃದಾ
ಮೋದದಿಂ ಪುತ್ರರುದ್ಭವಿಪರಲ್ಲದೆಯವರ ಸತಿಯರುದರದೊಳು ಸುತರೂ
ಆದುದೆಂದೂ ಇಲ್ಲವಾಯ್ತಲಾ ಮುನಿಗಳಿರ
ಮಾದೇವಿ ಬಳಿಕಗ್ನಿ ಹಂಸರೂಪಿಂ ಬಂದು
ಹೋದುದಂ ಕೇಳ್ದು ಕೋಪಿಸುತ ನಂದೀಶನೊಡನೆಂದಳತಿ ಮುಳಿಸಿನಿಂದಾ ೯

ಎಲೆ ನಂದಿ ನೀನುಪೇಕ್ಷಿಸಿ ಬಿಟ್ಟಲಾ ನಮ್ಮ
ನಿಲಯಾಂತರಾಳಮಂ ಪುಗಲೆನುತ್ತತಿಶಯ
ಜ್ವಲನ ಪುರುಷನ ವಿವಸ್ತ್ರದೊಳು ನಾನಾಪ್ರಕಾರದೊಳು ಶಿವನೊಳು ಕೂಡುವಾ
ನೆಲೆಯ ಕಾಣಿಸಲೆಂದು ಬಗೆದೆಯದಱಿಂದ ಭೂ
ತಲದಲ್ಲಿ ಮಾನುಷತ್ವಂ ಬಡೆವುದೆನಲಾಗಿ
ಕುಲಿಶದಿಂ ತಾಡಿಸಿದ ಗಿರಿಯಂತುಟಾದನಾ ಶೈಲಾದಿ ಶಾಪದಿಂದಾ ೧೦

ಆ ಮಾತುಗೇಳಿ ನಡನಡುಗುತ್ತ ಬಂದಂದು
ಮಾಮಹೇಶ್ವರರ ಪಾದಕ್ಕೆಱಗಿ ದೈನ್ಯದಿಂ
ಶ್ರೀ ಮಹಾದೇವಾ ಜಗನ್ಮಾತೆಯಾನಾರ್ಪನೇ ಮರ್ತ್ಯದೊಳು ಪುಟ್ಟಲೂ
ಪ್ರೇಮದಣುಗಂಗಿಂತು ಮಾಳ್ಪರೇ ಎನಲಾಗಿ
ಸಾಮರ್ಥ್ಯರೂಪರಾಡಿದರು ನೀಂ ಗುರುವಾಗಿ
ಭೂಮಿಯಂ ಪಾವನಂ ಮಾಳ್ಪೆಹೋಗೈ ನಿನಗೆ ಶಾಪವೆಲ್ಲಿಯದೆಂದರು ೧೧

ಮುನಿಗಳಿರ ಕೇಳಿರೈ ನಂದಿಗಾ ತೆಱನಾ
ಯ್ತನಲನೆಲ್ಲಾ ನಿರ್ಜರರ್ಗಾಗಿ ತಾನೋರ್ವ
ನನಿತು ಶಿವವೀರ್ಯಮಂ ಕೊಳಲಾಗಿ ದೇವರ್ಕಳವನ ಸುಖದುಃಖಗಳಿಗೇ
ಅನಿಬರುಂ ಕೂಡೆ ಭೋಗಿಪೆವೆಂದು ಮುನ್ನಾಡಿ
ದನಿತು ಕಾರಣದಿಂದಲದುವಲ್ಲದಗ್ನಿಮುಖ
ರೆನಿಪ ಕಾರಣದಿಂದ ವಿಷ್ಣುಮುಖ್ಯಾಮರರ್ಗಾದುದಾ ಪುರುಷಗರ್ಭಂ ೧೨

ಆ ವಿಷ್ಣು ಪರಮೇಷ್ಠಿ ಪಾಕಶಾಸನಮುಖ್ಯ
ದೇವರ್ಕಳೆಲ್ಲರ್ಗೆ ಪುರುಷಗರ್ಭಂಗಳು ಮ
ಹಾ ವಿಸ್ಮಯಮಿದೆಂಬ ಮಾಳ್ಕೆಯಿಂದಾಗಲಾ ಗಡ್ಡ ಮೀಸೆಗಳುದುರಲೂ
ತೀವಿ ಕುಕ್ಷಿಗಳುಬ್ಬಿಯುವದಿರ್ದೈವತ್ತೆಂಟು
ಸಾವಿರಬ್ದಂ ಬಳಲಿ ಬೆಂಡಾಗಿ ಕೆಟ್ಟೆವೆಂ
ದಾ ವಿಶ್ವನಾಥನಂಘ್ರಿಯನೆಯ್ದಿ ಕಂಡು ಕೀರ್ತಿಸಿ ಬಿನ್ನಪಂಗೆಯ್ದರೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾರಕನ ಬಾಧೆಗಾ ಲೋಕದುತ್ಪಾತಂಗ
ಳಾರಃಭಟೆಯುಳ್ಕಿಂಗೆಯಲ್ಲಲ್ಲಿ ಮೈಗರೆದು
ಸಾರಿ ಗಂಹರ ಗುಹೆಗಳಂ ಜೀವವಿಡಿದಿರ್ದವೆಲೆ ದೇವ ಪುರುಷಗರ್ಭಂ
ಆರು ಕೇಳ್ದೊಡೆ ಹಾಸ್ಯವಪ್ಪಂತುಂಟಾದವೆಲೆ
ಕಾರುಣ್ಯಮೂರ್ತಿ ಸತಿಯರ ಮಾಳ್ಕೆಯಿಂದ ಹೆಱ
ಬಾರದತಿಶಯದ ನೋವಂ ತಾಳಲಾಱೆವಕಟಾ ಸ್ವಾಮಿಯವಧರಿಪುದೂ ೧೪

ಪರಮೇಶ್ವರಾ ನಿನ್ನ ರೇತಸ್ಸನಗ್ನಿಯುರು
ತರಪಾನಮಂ ಮಾಡಲವನ ಮುಖರಾವು ನಿ
ರ್ಜರರಪ್ಪ ಕಾರಣದೊಳೆಮಗೆ ದುರ್ಭರ ಪುರುಷ ಗರ್ಭವಾಗೀ ಕೋಟಲೆ
ಪಿರಿದು ಪಾತಕಗಳಂ ಮಾಡಿ ಯಾತನೆಯಲ್ಲಿ
ನರಕಿಗಳು ಬೇವ ಬಾಧೆಗೆ ಕೋಟಿಮಡಿಯಿಂದ
ತರಹರಿಸಲಾಱೆವಕಟಾ ಕೃಪಾಕರ ರಕ್ಷಿಸೆಂದು ಮೊಱೆಯಿಡುತಿರ್ದರೂ ೧೫

ಆ ನಿರ್ಜರರ ಬಿನ್ನಪಂಗೇಳಿ ಶಂಭು ಕರು
ಣಾನನದ ಮುಗುಳುನಗೆಯಿಂ ನಿರೂಪಿಸಿದನೆಲೆ
ದಾನವಾರಾತಿ ಮುಖ್ಯಾಮರರು ಕೇಳಿರೈ ದೇವಿಯರ ಗರ್ಭದಿಂದಾ
ಸೂನುವಾಗದ ವರವ ಬೇಡಿದಿರಿ ನೀವದಱ
ನೀ ನಿರೋಧಂ ಬಂದುದಳ್ಕದಿರಿ ಪರಿಹರಿಪೆ
ವೈ ನಿಮ್ಮ ಬಾಧೆಗಳನೆಲ್ಲವಂ ನಿಶ್ಚಯದೊಳೆಂದು ನಿರವಿಸಿದನೀಶಂ ೧೬

ಮೇರುವಿಂಗುತ್ತರದಿಶಾಭಾಗದಲ್ಲಿಪ್ಪ
ದಾರಯ್ಯೆ ಶರದಾನವೆಂಬ ವನವಲ್ಲಿ ಸಂ
ಸ್ಕಾರಿತದ ಶರವಣವೆನಿಪ್ಪ ಕೊಳದಲ್ಲಿ ನೀವಗ್ನಿಮುಂತಾಗಿ ದೈತ್ಯಾ
ವೈರಿಗಳು ಪೋಗಿ ಕೊಂಡೆಮ್ಮ ರೇತಸ್ಸನು
ದ್ಗಾರಿಸುವುದೆನಲಲ್ಲಿಗನಿಬರೆಯ್ದುದ್ಧತ ಗರ್ಭ
ಭಾರಮಂ ಕಳೆದುಕೊಂಡರು ಸರ್ವರಾಗಲೊಬ್ಬುಳಿಯಾದುದಾ ಶುಕ್ಲವೂ ೧೭

ಅನಿತು ಶಿವವೀರ್ಯ್ಯದೊಬ್ಬುಳಿಯು ಬೆಳಗಿಂದ ಕಾಂ
ಚನವರ್ನ್ನವಾದುದಾ ಮೇರು ತರು ಗುಲ್ಮ ತೃಣ
ಜನಿತ ಜೀವವ್ರಾತಸಿದ್ಧ ಸಾಧ್ಯರು ತಾಪಸೌಘಮಾ ಹೇಮಾಭದಿಂ
ಕನದಮಲ ತೇಜದಿಂದೆಸೆದರಂತಾ ಮಹೇ
ಶನುಮಗ್ರಗಣ್ಯಪಿಂಗಳನೆಂಬ ಗಣವರನ
ದನುಜಾರಿಗಳ ಭಯನಿವಾರಣಾರ್ಥದೆ ಕಾಪನಿಟ್ಟನಲ್ಲಿಗೆ ಮೋಹದಿಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಳಿಕಲಾ ವಿಷ್ಣುಮುಖ್ಯರು ಗರ್ಭಭಾರವಮಂ
ಕಳೆದುಕೊಂಡರು ಮೊದಲು ಕೊಂಡ ಕಾರುಣದೊಳಾ
ಜ್ವಳನಂಗೆ ಯುದ್ಗಾರಿಸಿದೊಡಾ ಮಹಾ ಬಾಧೆ ಪಿಂಗದೇಳುತ ಬೀಳುತಾ
ಆಳಲಿ ಮೊಱೆಯಿಡುತಂ ನುಡಿದಂ ವಹ್ನಿಯಕ್ಕಟಾ
ನಳಿನಾಕ್ಷ ಪಾಪಿಗಳಿರಾ ಸುರರು ವೀರ್ಯ್ಯವಮಂ
ಕೊಳುತುಗುಳಿ ದಿವ್ಯಾಂಗರಾದಿರಾನೋರ್ವನೇ ದುಃಖಿಕ್ಕೆ ಪಕ್ಕಾದೆನು ೧೯

ಮೂಗುವಟ್ಟಿರಲಹುದೆ ಎನ್ನ ಸುಖದುಃಖಕ್ಕೆ
ಭಾಗೆವಂತರು ನೀವಲಾ ಮಱದಿರೆ ಎನ
ಲ್ಯಾಗಿಯಾ ಹರಿ ಬಂದು ಸಂತೈಸಿ ನುಡಿದನಾ ವಹ್ನಿಯೊಳಗೆಲೆ ಕೃಶಾನೂ
ನೀ ಗರುವನಪ್ಪೆಯ್ಯ ತರಹರಿಸು ಬೇನೆಯಂ
ನೀಗೆ ಸುಖಮಂ ಪಡೆವ ಮಾಳ್ಕೆಯಂ ಮಾಳ್ಪೆ ನೀ
ನೀಗ ಕೇಳೆಂದು ಬೋಧಿಸಿ ನುಡಿದನಾ ಹೃಷಿಕೇಶಸುರಾಳಿ ನಾಶಂ ೨೦

ಆಪ್ತವೈಶ್ವಾನರಾ ಕೇಳೈಯ್ಯ ಶುಭನದಿಗೆ
ಸಪ್ತರುಷಿಯರ ಸತಿಯರೆಯ್ತುಪ್ಪರಂತಲ್ಲಿ
ತಪ್ತ ತವ ತೇಜಸ್ಸಮಗ್ರದಿಂದುರಿಯಲವರಾಮಾಘಶೀತಕಳ್ಕೀ
ವ್ಯಾಪ್ತಿಯಿಂದಂ ನಿನ್ನಂ ಸೋಂಕಲಾ ಗರ್ಭವೆ
ಕ್ಲುಪ್ತವೆನಲಲ್ಲಿಗೈದುವವಲ್ಯೆ ಕೇಳೆನ್ನ
ಗುಪ್ತ ವಚನವವೆಂದು ನುಡಿದನಾ ಕಮಲಾಕ್ಷನತ್ಯಧಿಕವಹ್ನಿಪಕ್ಷಾ ೨೧

ನುಡಿಯೆ ಹರಿಯಾಜ್ಞೆಯಿಂದವದಿರೆಯ್ತುಪ್ಪನದಿ
ಎಡೆಗೆ ಬಂದುರಿವುತಿರೆ ತನ್ಮರೀಚ್ಯಾದಿಗಳ
ಮಡದಿಯರು ಹಿಮಕಳ್ಕಿಯುಹಹಯೆನುತಂ ಕಿಚ್ಚ ಕಾಯ್ದರಾರ್ವರು ಬಳಿಕ್ಕಾ
ಒಡನೆ ಬಂದಾ ವಶಿಷ್ಠನ ರಾಣಿಯೊಲ್ಲದಿರೆ
ನುಡಿದರಾ ಷಟ್ಕೃತ್ತಿಕೆಯರರುಂಧತಿ ಕೇಳು
ಕಡಮೆಯಪ್ಪರೆ ನಮ್ಮೊಳುಳಿವರೇ ನೀನಗ್ನಿಯಂ ಕಾಯೆಯೇಕೆಂದರೂ ೨೨

ಮರಳಿ ವಾಶಿಷ್ಟನಂಗನೆ ಕೂರ್ತು ನುಡಿದಳನಿ
ಬರಿಗೆ ವಲ್ಲಭನ ಲಿಂಗಾರ್ಚನಾ ಭೋಜನೋ
ತ್ಕರ ಪಚನಕಾಲದೊಳು ತನ್ನಿಮಿತ್ತಂ ಸಾರೆ ನಿರ್ದೋಷವಹ್ನಿಯುಪ್ಪೀ
ಉರುಸುಖಂಬಡುವುದೇನುಚಿತವೆಯಲ್ಲಿ ಪರ
ಪುರುಷನಲ್ತೇ ಎಂದು ನುಡಿದುಬಿಟ್ಟಳು ಕಣಾ
ಧರೆಯೊಳದುಕಾರುಣವರುಂಧತಿಯೆ ಘನ ಪತಿವ್ರತೆ ಎನೆ ಪೆಸರ್ವಡೆದಳೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಳಲಲ್ಲಿ ಹರವಿಯಂ ಮಾಡಿ ಮಂಜಿನ ನೀರ
ನಳವಡಿಸಿ ತುಂಬಿ ತನ್ನಯ ಮಸ್ತಕಸ್ಥಳ
ಕ್ಕೆಳೆವಾವುಗಳ ಸಿಂಬಿಯಂ ಮಾಡಿಕೊಂಡೆಂದಿನಂತೆಪೊತ್ತೆಯ್ದಿ ತನ್ನಾ
ನಿಳಯಮಂ ಪೊಕ್ಕು ವಾಶಿಷ್ಟಂಗೆ ಸೇವೆಯಂ
ಘಳಿಲನೊಡರಿಚಿದಳಾ ವಹ್ನಿಯಂ ಕಾದ ಪೆಂ
ಗಳಿಗೆ ಪಾತಿವ್ರತ್ಯವಳಿದುದಾ ಸಮಯದೊಳಗಿನ್ನೇನ ಬಣ್ಣಿಸುವೆನು ೨೪

ಕಮಲಮುಖಿಯರು ಸಿಕತಭಾಂಡಮಂ ಮಾಡಲಾ
ಕ್ರಮವಳಿವುತೊಡೆದು ಮಣಲೆತ್ತೆತ್ತ ಕೆದಱುವುದು
ಹಿಮದುದಕವಿನಿತು ಬಾರದು ಪಿಡಿಯ ಪೋಗಲಹಿಗಳು ಮೊರದು ಭುಸ್ಸೆನುತ್ತಾ
ರಮಣಿಯರ ತಗುಳುತಿರೆ ಭಯದಿಂ ಬಪ್ಪರಂ
ಸುಮತಿ ಷಣ್ಮುನಿಗಳೀಕ್ಷಿಸಿ ವಶಿಷ್ಠಾಂಗನೆಯ
ಸಮಕೆ ಬಾರದೆ ನೀವು ಜಾರೆಯರೆನುತ್ತ ತಗುಳಿದರಾ ನಿಮಿಷದಲ್ಲಿ ೨೫

ನಿಜಪತಿಗಳಿಂದವಜ್ಞೆಯನಾಂತು ಬರುತಿಪ್ಪ
ಗಜಗಮನೆಯರು ಮುನ್ನ ವಹ್ನಿಯಂ ಕಾಯಲಾ
ಭಜನೆಯಿಂ ಗರ್ಭವುದ್ಭವಿಸಲಾ ಜಾತವೇದಂಗಿಳಿದುದಾ ದುರ್ಭರಂ
ಅಜಮುಖ್ಯರೊಳು ಸುಖದೊಳಿರ್ದನವನಿತ್ತ ನೀ
ರಜಮುಖಿಯರಳ್ಕಿ ಹಿಮರಾಣಿ ಹಿಮವನ್ಮಹೀ
ಧ್ರಜೆಯ ಪಾದಾಬ್ಜದೆಡೆಗೆಯ್ತರುತ್ತಿರ್ದರಾ ಷಟ್ಕೃತ್ತಿಕೆಯರೇಳ್ಗೆಯಿಂ ೨೬

ಬಂದಾ ಮಹಾದೇವಿಯಂಘ್ರಿಗಂ ಸಾಷ್ಟಾಂಗ
ವಂದನಂ ಮಾಡಿ ಕೈಮುಗಿಯೆ ನೀವಾರದೇ
ನೆಂದು ಬೆಸಗೊಳೆ ಜಗನ್ಮಾತೆ ಜಯ ಬಿನ್ನಪವನವಧರಿಪುದೆಂದು ತಮ್ಮಾ
ಹಿಂದಾದ ಕಾರ್ಯಂಗಳೆಲ್ಲವಂ ಬಿತ್ತರಿಸೆ
ತಾಂ ದಯಾನಿಧಿಯಾಗಿ ನುಡಿದಳಂಜದಿರಿ ನೀ
ವಿಂದುಮುಖಿಯರು ನಿಮ್ಮ ದುಃಖಮಂ ಪರಿಹರಿಪೆನೆನುತಲಂತಾ ಭವಾನೀ ೨೭

ಅದಿರದಿರಿ ಹಿಂದೆ ಗರ್ಭಾಗ್ರಹದ ಭಾಧೆಯಿಂ
ಮದನಾರಿಯಾಜ್ಞೆಯಿಂದುದ್ಧಾರಿಸಿದರಲಾ
ತ್ರಿದಶರಾ ಸರವಣದೊಳಳ್ಳಿಗಳ ಸೀಳಿನಿಂ ಮೊದಲೊಳಳವಟ್ಟಬೀಜಾ
ದೊದವನೆಲ್ಲವನಿಲ್ಲಿಯೊಂದುಗೂಡುತ್ತ ಪು
ಟ್ಟಿದ ಮತ್ಕುಮಾರಂಗೆ ಮೊಲೆಗೊಟ್ಟು ಕೂರ್ತುಪೊರೆ
ವುದು ನೀವೆನುತ್ತ ಬೀಳ್ಕೊಟ್ಟಳಾ ಗಿರಿಜಾತೆಯಖಿಳ ಲೋಕಕ್ಕೆ ಮಾತೆ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿಟ್ಟಿ ಮೂಱಿನ ರಾಣಿಯಾಜ್ಞೆಯಿಂದಾಗಲಾ
ಹೆಟ್ಟುಗೆಯರೆಯಿತೆಂದು ಶಿವೆ ಪೇಳ್ದ ಮಾಳ್ಪಳ್ಕೆಯಿಂ
ನೆಟ್ಟನಾ ರೇತಸ್ಸ ನೀಳ್ವಾಱು ಪೊಂಗೋವೆಯೊಳ್ತೀವಿ ತಂದಲ್ಲಿಯೇ
ಬಿಟ್ಟರಾ ಪಿಂಗಳನ ಕಾಪಿನೀಶನ ವೀರ್ಯ್ಯ
ದೊಟ್ಟಿನೊಳು ದಿವ್ಯ ಸಾಹಸ್ರ ವರುಷದೊಳದೆ
ಘಟ್ಟಿಯಾದುದು ಗೆಣಸಿನಂದದಿಂದಱನಾ ಸ್ಕಂದನಾಮನದಾದುದೂ ೨೯

ದೇವರ್ಕಳೆಲ್ಲರುದ್ಗಾರಿಸಿದುದಂಗವಾ
ಯ್ತಾ ವನಿತೆಯರ್ಗಳಾಱೊಬ್ಬಳಿಸಿದಾ ಬೀಜ
ವೋವಿ ಷಣ್ಮಸ್ತಕಾಕಾರವಾದವು ಬಳಿಕ ದಿವ್ಯಸಾಹಸ್ರ ವರುಷಾ
ಆ ವೇಳೆ ಘುಳಿಘುಳಿಸಿಯೊದೆದು ಪಾತಾಳವಂ
ಜೀವನದೊಳದ್ಭುತ ಧ್ವನಿ ಕೂಡೆ ಪೊಣ್ಮೆ ನೆಗ
ದಾ ವಿಯತ್ತಳಕೆ ಲಂಘಿಸುತುದಯವಾದನಾ ಶಿವನ ಮೋಹದ ಕುಮಾರಂ ೩೦

ಷಟ್ಕೃತ್ತಿಯರು ಮೊಲೆಗೊಟ್ಟರಾ ದೇವಕುಲ
ರಾಟ್ಕುಮನವದನವಾರಕ್ಕೆಯಾ ಬಾಲ್ಯವೆ
ದಿಟ್ಮಾದಿಗಳ್ಗೆಯುಂನತ ಭಯಂದೋಱುತಿರೆ ಸಕಲಗಿರಿ ಕಂಪಿಸಿದವೂ
ತ್ರಿವಿಟ್ಕನದ್ದೇವನಿರವಂ ಕಂಡು ಭಾಪುರೆ ವಿ
ರಾಟ್ಕುಮಾರಕ ನಿನಗದರಾರ್ ಸರಿಯೆನುತ ಕಾಷ್ಟ
ತಟ್ಕಾಕಶಲಾಧೀಶಮಯ ಮುಖ್ಯರೆಯಿದೆ ಜಯ ಜಯ ಎಂದು ಕೀರ್ತಿಸಿದೂ ೩೧

ಇನಕೋಟಿ ತೇಜಸ್ಸಮುಗ್ರ ಶಿವವೀರ್ಯವಂ
ದನಲಮುಖದೊಳ್ಪ್ರವೇಶಿಸಿದ ಕಥದಿಂದಿದಂ
ಜನಿಸಲಂತಗ್ನಿಭೂವೆಂಬ ಪೆಸ್ಸರಾದುದು ಹವಿರ್ಭಾಗವಪ್ಪ ದೇವಾ
ಜನದ ಸಂಬಂಧದಿಂ ಬಾಹುಲೆಯಾಖ್ಯವಾಯಿ
ತನಘ ಕೇಳ್ವೆ ತನ್ನದಿ ಜನಿತವಾಗಲಾ
ತನೆ ಕೀರ್ತಿಯಂ ತಳೆದು ರಾರಾಜಿಸುತ್ತ ಶರವಣಭವಾಭಿದನಾದನೂ ೩೨

ಆ ಮಹಾನದಿಯ ಮಡುವಿನ ಗಂಹರಾಂತರಂ
ಧಾಮವಾಗಲ್ಬೆಳೆದ ಕಾರಣದೊಳಗೆ ಗುಹ
ನಾಮವಾದುದು ಕಣಾ ಷಟ್ಕೃತ್ತಿಕೆಯರು ಮೊಲೆಗೊಟ್ಟು ಸಲಹಿದ ನೆವದೊಳು
ಪ್ರೇಮದೊಳವಂ ಕಾರ್ತಿಕೇಯನಾದಂ ವದನ
ತಾಮರಸವಾಱಾಗೆ ಷಣ್ಮುಖಾಹ್ವಯನಲ್ಟೆ
ಯಾ ಮೃಡಾಣಿಯ ಮೋಹಸಂಬಂಧದಿಂದೊಗೆದ ಪಾರ್ವತೀನಂದನನಲಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರಾರಿ ಗೀತನಾತ್ಮಜನಾಗಿ ಪುಟ್ಟಲು ಕು
ಮಾರನೆಂಬಭಿಧಾನವಾಯಿತ್ತು ದಿವ್ಯ ತೇ
ಜೋರುತರ ಕಾಂತಿಯಗ್ಗಳದ ಬಾಲನನೀಕ್ಷಿಸುತ್ತ ಪಿಂಗಳಗಣೇಶಂ
ಆ ರಾಜತಾದ್ರಿಯಲ್ಲಿಗೆ ಶೀಘ್ರದಿಂ ಬಂದು
ಗೌರಿಯರಸನ ಕಂಡು ಸಾಷ್ಟಾಂಗದಿಂ ನಮಿಸಿ
ಸಾರೆ ಕೈಮುಗಿದೊಸಗೆ ಜೀಯ ಬಿನ್ನಪವೆಂದು ನುಡಿದನಾನಂದದಿಂದೆ ೩೪

ಮದನಾರಿ ನಿನ್ನಾಜ್ಞೆಯಿಂದ ಕಾಯ್ದಿರ್ದನಿಂ
ದುದಯವಾದಂ ಸತ್ಕುಮಾರಕಂ ಶರವಣದ
ನದಿಯಿಂದಲೊಪ್ಪುತೈದನೆಯಾಱು ಮೊಗದಿಂದ ಹನ್ನೆರಡು ತೋಳ್ಗಳಿಂದಾ
ಹದಿನೆಂಟು ಕಣ್ಣಿಂದ ಕೋಟಿ ಸೂರ್ಯಪ್ರಕಾ
ಶ ದಿನಮಲ ಸೌಂದರಿಯದಿಂ ನಿರೀಕ್ಷಣ ಸುಖ
ಪ್ರದನಾದ ತತ್ಪುತ್ರನಂ ನೋಡವೇಳ್ಕೆಂದು ಪಿಂಗಳಂ ಬಿನ್ನವಿಸಿದಂ ೩೫

ಆ ನವ್ಯವಚನಮಂ ಕೇಳ್ದು ಮೋಹನದ ಗಿರಿ
ಜಾನನವ ನೀಕ್ಷಿಸುತ್ತಂ ಶಂಭುವಾಗ ಪರ
ಮಾನಂದವುಣ್ಮೆ ನುಡಿದಂ ವರಾರೋಹೆ ಸೌಂದರಿ ಕೇಳು ನಿನ್ನ ಪುತ್ರಾ
ತಾನೊಗೆದು ಮೇರು ಸಾನ್ನಿಧ್ಯದೊಳು ನಿನ್ನಿಷ್ಟ
ವೇನಲಿದು ರೂಪಾಗಿ ಕನಕಾವ ಭಾಸದಿಂ
ಮಾನಸೋತ್ತಮ ರಾಜಹಂಸನೊಪ್ಪುತ್ತಿಹಂ ಗಡ ಪೋಪವೇಳೆಂದನೂ ೩೬

ಆಱುಮೊಗದಣುಗನಂ ನೋಡಬೇಕೆಂದೆದ್ದು
ನೀಱೆ ಗಿರಿಜಾತೆ ನಲಿವುತ್ತೆ ಶಿವನೊಳು ನಂದಿ
ಯೇಱಿ ವೈಭವದಿಂದ ನಡೆತರುತ್ತಿರಲು ಮೇರುವಿನುತ್ತರಾಶೆಯಲ್ಲೀ
ಬೀಱುತಿಹ ಕೋಟಿಸೂರ್ಯಪ್ರಭೆಯ ಪುತ್ರನಂ
ಮೂಱು ಕಣ್ಣಾಣ್ಮನಕ್ಕಱು ಪಸರಿಸುತ್ತಿರಲು
ತೋಱಿದಂ ನಿಜಸತಿಗೆ ಪಾರ್ವತಿಗೆ ಲೋಕಕ್ಕೆ ಗತಿಗೆಯ್ವುತ್ತುಮಾಯುವತಿಗೆ ೩೭

ಆನಂದವುಣ್ಮಲೀಕ್ಷಿಸುತ ತೆಗೆದೆತ್ತುತ ಷ
ಡಾನನವನವಮರ್ದುರದೊಳಪ್ಪಿ ಸರ್ವೇಶ್ವರಂ
ಮಾನಿನಿಯ ಕೈಯಲ್ಲಿ ಕೊಡಲು ತರ್ಕೈಸಿ ಮುಂಡಾಡಿ ತೊಡೆಯಲಿರಿಸುತಾ
ಸಾನುರಾಗದ ಪುಳಕವುಣ್ಮುತಿರೆ ಚುಂಬುಂಬ
ಮಾನೆಯಾಗುತ್ತ ಕಲಹಂಸಭಾಷಿಣಿ ತನ್ನ
ಸೂನುವಂ ನೋಡಿದಳು ಮರಳಿ ಮಾತಾಡಿದಳು ಪಾಡಿದಳು
ಜೋಗುಳೆಯನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಲೆ ಕುಮಾರಂ ದೇವಿಯುರ ತೊಡೆಯ ಮೇಲಿರ್ದು
ತಿಲ ಕಾಲ ಕಂಗಳಂ ಮುದ್ದಿಸುತ ಶಿವಗಳದ
ತಲೆಯ ಮಾಲೆಗಳ ಪಿಡಿವುತ್ತ ತಳತಳಿಸುತಿಹ ಪಿತನ ಮಸ್ತಕದ ಚಂದ್ರಾ
ಕಳೆಯಿನೀಳ್ಕೊಳಲೆಂದು ಬಗೆದು ಕೈಯ್ಯಂ ನೀಡಿ
ನಿಲಿಕಿಸುತ ಗದ್ಗುಗಱ್ವಿ ಪೆಡೆವಣೆಯ ಪಾವನಂ
ಗುಲಿಯಿಂದ ತಿವಿದು ಭುಸ್ಸೆಂದೇಳೆ ನೋಡಿ ನಗುತೊಪ್ಪಿದಂ ವರಕುಮಾರಂ ೩೯

ಧನು ಬಾಣ ಶಕ್ತಿಗಳ ಕೊಟ್ಟು ಸರ್ವೇಶ್ವರಂ
ತನುಜನಂ ಕ್ರೀಡಿಸುತ್ತಿಹುದೆನುತ್ತಲ್ಲಿರಿಸಿ
ವನಿತೆಯೊಡಗೂಡಿ ಕೈಲಾಸಕ್ಕೆ ಚಿತ್ತೈಸಲಿತ್ತಲೀ ಶಿವಕುಮಾರಂ
ದಿನವೈದಱಲ್ಲಿ ಸುಸ್ನಾನಮಂ ಮಾಡಿ ಘ
ಮ್ಮನೆ ಚರಿಸತೊಡಗಿದಂ ನೆಱಿಚರಾಚರಜಂತು
ವೆನಿಪವಂ ಸಂಹಾರಂ ಮಾಡುತಿರ್ದನಾ ಬಾಲನತಿ ಲೀಲಲೋಲಂ ೪೦

ಗಿರಿಯ ಶೃಂಗಂಗಳಂ ಮೆಟ್ಟಿ ತಿರ್ರನೆ ಕೂಡೆ
ತಿರುಗೆ ಭೂರೇಣು ಸಮಚೂರ್ಣವಾದವು ಬಳಿ
ಕ್ಕುರುತರದ ಸಿಂಹಂಗಳಂ ಪಿಡಿದು ಮೇಲಡರಿ ದೂವಾಳಿಯಂ ಮಾಳ್ಪನೂ
ಎರಡಾನೆಗಳ ಶುಂಡಿಲಂ ಪಿಡಿದು ಸಮ್ಮುಖದೊ
ಳಿರಿಸಿ ಕುಂಭಸ್ಥಲಂಗಳ ತಾಡಿಪಂ ಕಣಾ
ಸರಿಯಾರು ಬಾಲಲೀಲೆಯ ಕುಮಾರಂಗೆ ಧೀರಂಗೆ ಮೂಜಗದೊಳು ೪೧

ಮಿಗೆ ಲೀಲೆಯಿಂದ ಭೂಮಿಯ ಮೆಟ್ಟಿ ಹರುಷದಿಂ
ಗಗನಕ್ಕೆಯುಡರಿ ಬೊಬ್ಬಿಱಿದು ಭೋಂಕನೆ ಕೂಡೆ
ನೆಗೆದು ಚರಿಸುತ ಖೇಚರರ ವಿಮಾನಂಗಳಂ ಪಾದದಿಂದೊದೆದು ಕೆಡಹೀ
ನಗತತಿಗಳಂ ತಾಗಿ ಚೂರ್ಣವಾಗದ ಮುನ್ನ
ನಗುತಲಿಳಿದೆಡಗೈಯ್ಯೊಳೆತ್ತಿ ಬಳಿಕಿಟ್ಟು ಮೆ
ಲ್ಲಗೆ ಪೋಗಿ ಎಂದು ಮಾತಾಡುತಂ ಪಾರ್ವತೀನಂದನಂ ವಾಕ್ಚಂದನಂ ೪೨

ಮರಳಿ ಭೂಮಿಯೊಳು ಪರಿದಾಡೆ ಪಾತಾಳಕ್ಕೆ
ಜರಿಯಲಿಳೆಯಂತಲ್ಲದತಿ ಹರುಷದಿಂ
ತಿರಿಗಿಯೂರ್ದ್ಧ್ವಂ ನೆಗೆದು ಚಂದ್ರಮಂಡಲ ಸೂರ್ಯಮಂಡಲಗಳನು ತನ್ನಾ
ಎರಡು ಕರದಿಂ ಪಿಡಿದು ತಾಳವಂ ಬಾರಿಸುತ
ತಿರುಪ ಕಟ್ಟುವನಂತರಿಕ್ಷದೊಳು ನಕ್ಷತ್ರ
ವಿರದಿಳೆಗೆ ಕೆದಱಿ ಬೀಳಲು ಬಾಲಲೀಲೆಯಂ ನಟಿಸುವಂ ವರ ಕುಮಾರಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇರು ಪರ್ವತದ ಲಸದುತ್ತರಶೃಂಗಮಂ
ಬೇರುಸಹಿತಂ ಕಿತ್ತು ತಂದು ತೆಂಕಣ ದೆಶೆಗೆ
ಸೇರಿಸುತ ಸಪ್ತಕುಲಪರ್ವತಂಗಳನೊಮ್ಮೆಯಂಗೈಯ್ಯೊಳಾಂತುಕೊಂಡು
ಓರಂತೆ ಶಿಲಾಕಲ್ಲನಾಡುತೆಲ್ಲವ ಕೆದಱಿ
ವಾರಿಧಿಗೆ ಬೀಳಲುದಕವ ಚೆಲ್ಲಿಯುವನಾಯ್ದು
ಧಾರುಣಿಯೊಳಲ್ಲಲ್ಲಿ ಮಡಗಿ ಗಹಗಹಿಸುವಂ ಬಾಲಲೀಲೆಯ ಕುಮಾರಂ ೪೪

ಸರ್ವೇಶ್ವರನ ಕುಮಾರಂ ತನ್ನ ಕೈಯ್ಯೊಳಿಹ
ಪೇರ್ವಿಲ್ಲೊಳಂಬ ಹೂಡುತ್ತೆಚ್ಚಡಾ ಕ್ರೌಂಚ
ಪರ್ವತಂ ವಿರಳವಾದುದು ಬಳಿಕ್ಕಾ ದ್ವಾರದೊಳು ಪೊಕ್ಕು ಹಂಸಂಗಳೂ
ಸರ್ವಕಾಲದೊಳು ಚರಿಸುತ್ತಿಪ್ಪವೈ ಕೇಳು
ಪಾರ್ವತೀ ಪುತ್ರನಾಡುವ ಬಾಲಲೀಲೆಯೆನ
ಗೋರ್ವಂಗಳವೆ ಪೇಳಲಾ ದ್ವಿಸಹಸ್ರ ಜಿಂಹ್ವಾಹಿ ಕೋಟಿಗಳಿಗರಿದೂ ೪೫

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್‌ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೪೬

ಇದು ವೀರಶೈವ ಷಟ್ಸ್ಥಲ ಮಾರ್ಗ ಸದ್ಭಾವ
ಸದನ ಸುವಿರಕ್ತ ವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಷಣ್ಮುಖನ ಲೀಲೆಗೆರಡು ಕಾಂಡಂಗಳಿಂ ಮೇಲೆ ಇಪ್ಪತ್ತು ಸಂಧಿ ೪೭

ಅಂತು ಸಂಧಿ ೨೦ಕ್ಕಂ ಪದನು ೧೦೧೯ ಗ್ರಂಥ ೭೯ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೩

ಧುರದೊಳಿಂದ್ರನ ಜಯಿಸಿ ಸೇನಾಪಯಾಗಿ ನಿ
ರ್ಜರರ ಬಾಧಾರೂಪನಪ್ಪ ತಾರಕನ ಸಂ
ಹರಿಸಿದಂ ಗುಹನಾದುದೇಕವಿಂಶತಿಲೀಲೆ ಮಿಸುಪ ಶಿವತತ್ವಮಾಲೇ

ಜಡೆಯಮೇಲಿರ್ದ ನೀನಾರೆಲಗೆಯಕ್ಕ
ಕಡು ಮೋಹದಿಂ ನಿನ್ನ ಪತಿ ಯೆನ್ನ ತಂದನೆನೆ
ಮೃಡಧೂರ್ತ ಪೇಳಂತುಟಹುದೆ ಯೆನೆ ಲೋಕವೆಲ್ಲಂ ಪ್ರಳಯಮಂ ಮಾಡುತಾ
ಜಡವನಿತೆಯಂ ಸೆಱೆಯನಿಟ್ಟೆವೆನೆ ಕಾಮುಕನ
ನುಡಿ ಪಾಟಯಲ್ಲೆಂಬವಳ ತಲೆಯ ಮೇಲಗಜೆ
ಯಡಿಯ ತಂದಿಟ್ಟು ಬಿನದಿಪ ಶಾಂತಮಲ್ಲಜಯ ಕೊಡುವುದೆಮಗಮದುರ್ಗ
ಸೊಲ್ಲಾ ೧

ಶ್ರೀವಿತರಣಾಢ್ಯಸುರತರುವಿಂ ವಚೋಮೃತ
ಪ್ರಾವೀಣತೆಯ ನಿರ್ಜರಾಗ್ರ ಶಿಷ್ಯರ್ಗಳಿಂ
ಭಾವಶುದ್ಧಾನಿಮಿಷದೃಷ್ಟಿ ಶಿವಲಿಂಗಪಾವನ ತಾಪಸವ್ರಾತದಿಂ
ವೋವಿ ಭಕ್ತರ್ಗೆ ಚಿಂತಾರತ್ನದಂತಿಪ್ಪ
ವೀವ ಭೋಗಾಧಿಕದೆ ಶಾಂತನಂಜೇಶ್ವರಂ
ದೇವೇಂದ್ರನಂ ಜರೆವನೆಂಬ ಸತ್ಕೀರ್ತಿ ಪಸರಿಸಿದುದೆಣ್ದಿಕ್ಕಿನಲ್ಲೀ ೨

ಈ ತೆಱದ ಬಾಲಲೀಲೆಯೊಳಾ ಕುಮಾರಕಂ
ಘಾತಿಸಲು ತರಹರಿಸದಾ ಚರಾಚರಸರ್ವ
ಭೂತಾಳಿ ಬಂದು ದೇವೇಂದ್ರನೆಡೆಗಾತಂಗೆ ತತ್ಸಮಿತಿ ನುಡಿದುದಾಗಾ
ಏತಕ್ಕೆ ನೀಂ ಸುಮ್ಮನಿರ್ದಪ್ಪೆಯಯ್ಯಪುರು
ಹೂತ ಕೇಳೊಬ್ಬ ಬಾಲಂ ಕೊಬ್ಬಿನಿಂದೀ ಮ
ಹೀತಳವ ಭಂಗಿಸುತೆ ನಿನ್ನ ಲೋಕವನೆಯಿದೆ ಸಂಹರಿಸುತಿರ್ದಪ್ಪನೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನ್ನಯ ಪರಾಕ್ರಮಕ್ಕಿಂದ ಸತ್ವಕ್ಕಿಂದ
ವಂ ನಾಡೆ ಶತಗುಣಾಧಿಕನಲ್ತೆಲೋಕವೆ
ಲ್ಲಂ ನಡುಗುತಿರ್ದಪ್ಪುದಾತನಂ ತವ ಶೌರ್ಯದಿಂದ ಸಂಹರಿಪುದೀಗಾ
ಮುನ್ನಲತಿಶಿಶುವೆಂದು ನಿಂದೆಯಂ ಮಾಡೆ ನಿನ
ಗಿನ್ನೆಲ್ಲಿಯದು ಸಗ್ಗದರಸುತನವೆನಲಾಗಿ
ತನ್ನ ಮಕುಟವನೊಲೆದು ನುಡಿದನಾ ದೇವೇಂದ್ರನಾ ಚರಾಚರರ ಕೂಡೆ ೪

ಎಲೆಲೆ ಕಷ್ಟವನಿಂತು ನುಡಿವರೇ ಬಾಲನಂ
ಕೊಲಲಪ್ಪುದೇ ಕೊಂದೊಡಂ ಧರ್ಮವಳಿವುದೈ
ನೆಲೆಗೊಂಬುದೈ ಪಾಪವರ್ಜಿಸಿದ ಕೀರ್ತಿಯೆಲ್ಲಂ ಕೆಟ್ಟು ಬಱಿದಪ್ಪುದೈ
ಪಲವು ಸದ್ಧರ್ಮಶಾಸ್ತ್ರಂಗಳರ್ಥಂಗಳಂ
ನಲಿದು ಪೇಳ್ವಂ ಕೂರ್ತು ನೀವೆಂದ ನುಡಿಯುಮಂ
ಗಲವದೆಂತೆನಲಾಗಿ ಕೇಳಿರೈಯೆಂದನಾ ದೇವೇಂದ್ರನಮರಚಂದ್ರಾ ೫

ಉರುಮುನಿಪ್ರೋಕ್ತಪೌರಾಣಾರ್ಥವಧಿಕದಾ
ತುರಭೀತನಾ ಮುಱಿದ ಚಿತ್ತನೊಳಪೊಕ್ಕವಂ
ಶರಣಾಗತಂ ನಾರಿ ಬಾಲನಂಧಂ ಪಂಗುರಾ ಪ್ರಲಪಿತಂಮದಾದ್ಯಂ
ವರನಿಲ್ಲದಂ ಬ್ರಾಹ್ಮಣಂ ಪತಿತ ನೋಡುವಂ
ಸ್ಮರಪೀಡಿತಂ ನಿರಾಯುಧನಜ್ಞದೀನರಾ
ಜರೆಯುಡಸಿದಂ ಹರೋಚ್ಚಾರಿಯಾಶ್ರಿತಮುಕ್ತಕೇಶಿ ಮತ್ತಂ ಸುಪ್ತನೂ ೬

ನೀರ ಪೊಕ್ಕರನಿವರ ಕೊಲಬಾರದೆಂದೆಂಬ
ಪೌರಾಣವುಂಟಲಾ ಮೀಱಿ ಕೊಂದಾತಂಗೆ
ನಾರಕಂ ಚಂದ್ರಾರ್ಕರುಳ್ಳನ್ನೆಗಂ ತಪ್ಪದೆಂಬುದಿದು ಪರಮಾರ್ಥವೈ
ವಾರಣಂ ಗರ್ಭದೊಳಗಿದ್ದಲ್ಲಿ ತಾಂ ಬಲೋ
ತ್ಕಾರಮಂ ಮಾಳ್ಪುದೇಯಂತರ್ಭಕನ ಕೊಲ್ವ
ಕಾರಣಂ ನನಗೆ ಬೇಡಾತನಂ ಶರಣುವೊಗಿರೈಚರಾಚರರು ನೀವೂ ೭

ಎನಲಾ ಚರಾಚರವ್ರಾತಭೂತಂ ತಮ್ಮ
ಮನದಲ್ಲಿ ನೊಂದು ದೇವೇಂದ್ರಗೆಂದರು ಲೇಖ
ಜನಪತಿಯೆ ದುಷ್ಟನಂ ಸಂಹರಿಪುದೆಂದು ಬಣ್ಣಿಸೆ ನೀತಿಗಳ ನೋಡೀ
ಇನಿಬರಂ ತಗುಳುವುದು ಲೇಸವಂ ಬಾಲ ಗಡ
ಹನನವಂ ಮಾಳ್ಪುದನುಚಿತ ಕಂಡ ನೀಂ ಭೀತ
ನೆನಬಾರದೇ ಭ್ರೂಣಹತ್ಯವೆಂಬೀ ಮಾತು ಕೈತವವದೆಂತೆಂದೊಡೆ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿಗೆ ನಿನ್ನ ಪೊಡೆಯೊಳರ್ಭಕನಪ್ಪ ಗರ್ಭಮಂ
ತೆಗೆದು ನೀರೊಳು ಬಿಸುಡುವಲ್ಲಿಯಾ ಭ್ರೂಣಹತಿ
ಯೊಗೆದುದಿಲ್ಲಂ ಗಡಾ ಪ್ರತ್ಯಕ್ಷ ಸರ್ವರಂ ಬಾಧಿಸುವ ದುಷ್ಟಬಾಲಂ
ಮಗುವು ಕೊಲ್ವುದು ದೋಷವೆಂಬೈ ಕುರೂಪಿಯೀ
ಜಗದೊಳ್ಪತಿವ್ರತಾಧಿಕೆ ರೋಗಿ ದೇವತಾ
ಳಿಗೆ ಭಕ್ತನಂತಪ್ಪಶಕ್ತನಿಂ ಸಾಧುವೆಂಬವೊಲು ಧರ್ಮವನಾಡುವೈ ೯

ಬಿಡು ಬಿಡೈ ನೀಂ ಕುಲಿಶಧರ ವೀರನೆಂದೆಂಬ
ನುಡಿಯನಿನ್ನಿಂದು ಮೊದಲಾಗಿ ಶೌರ್ಯವನಿನ್ನು
ಗಡಬಡಿಸಬೇಡ ನಿನ್ನಂತಪ್ಪ ಕೋಟಿದೇವೇಂದ್ರರಾ ಬಾಲಕನನೂ
ಅಡಸಿ ಮುತ್ತುತ್ತ ಯುದ್ಧವನೆಸಗಲೆಲ್ಲರುಂ
ಮಡಿವಿರೈಸಲೆಯು ವನಧೋರೋಮದೊಳಗೊಂದ
ನಡಸಿ ಕೀಳ್ವಗ್ಗಳತೆಯಿಲ್ಲ ನೀನಾರು ರಣವಾರುಸಿಕನಿಹುದೆಂದರೂ ೧೦

ನುಡಿದಾ ಚರಾಚರರ ವಾಕ್ಯಮಂ ಕೇಳಿ ಘುಡಿ
ಘುಡಿಸುತ್ತ ಕೆಂಪೇಱಿ ಮೋರೆ ರೋಮುಗಳು ಕಾ
ರಿಡೆ ಪಣೆಯೊಳಾ ಸ್ವೇದವುಣ್ಮೆ ಹಸ್ತಂ ನಡುಗೆ ವಜ್ರಾಯುಧಮನುನೆಗಪೀ
ಜಡಿದು ಸಿಡಿಲಂತೆ ಘೂರ್ಮಿಸಿ ಚರಿಪ ಮೀಸೆಯುಂ
ಕಡಿದು ಕೋಪಾಗ್ನಿ ರೂಪಾದಂದದಿಂ ದೇವ
ರೊಡೆಯನಾ ಕಾಲದೊಳು ಸಮರಸನ್ನಾಹ ಭೇರಿಯ ಮೊಳಗವೇಳೆಂದನೂ ೧೧

ಹೊಡೆದವರ್ಬುದ ಕೋಟಿ ನಿಸ್ಸಾಹಣಂ ಕೇಳಿ
ಪಡೆ ನೆರೆದುದೆಣ್ದೆಶೆಯ ದಿಕ್ಪಾಲರಾಯುಧಂ
ಬಿಡಿದು ನಿಜವಾಹನಂಗಳನೇಱಿ ಚತುರಂಗಬಲದೊಡನೆ ಮುಂದೆಶೆಯೊಳು
ಇಡಿಕಿಱಿಯೆ ಸಿಂಗರಿಸಿ ಕುಂದ ಚಂದನತತಿಯ
ಗಡಣಕಗ್ಗಳ ಶುಭ್ರದೈರಾವತವನಲ್ಲಿ
ಪಿಡಿಯೆ ಭೋಂಕಿನಲೇಱಿದಂ ಚತುರ್ದಂತನಂ ದೇವೇಂದ್ರನೇಳ್ಗೆಯಿಂದಾ ೧೨

ಜಯ ಜಯತು ವರಶಚಿಯ ಗಂಡರಂಭೆಯ ಮಿಂಡ
ಜಯ ವೈರಿಕುಮುದ ಮಾರ್ತಾಂಡ ಘನದೋರ್ದಂಡ
ಜಯ ಜಯತು ಸತ್ಕೀರ್ತಿಪೂರ್ತಿಕಮಲಭವಾಂಡ ರಾಕ್ಷಸವ್ರಾತಖಂಡಾ
ಜಯ ಜಯತು ವೃತ್ತಸಂಹಾರ ವಿಲಸಿತ ಸೂರ
ಜಯ ಜಯತು ಮೋಹನಾಕಾರ ಸದ್ಗಂಭೀರ
ಜಯಯೆಂದು ಕೀರ್ತಿಸುವ ವಂದಿಗಳೊಳೆಯಿತಂದನರರೆ ಸುರರಾಜ ತೇಜಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುರರು ಜಡಿವಾಯುಧಂಗಳ ಬೆಳಗಿನಿಂದ ಕಿಂ
ನರರು ಧೂವಾಳಿಪ ತುರಂಗಂಗಳೇಳ್ಗೆಯಿಂ
ಗರುಡರಗ್ಗಳಮಪ್ಪ ರಥತತಿಯ ಚೀತ್ಕಾರದಿಂದ ಸಿದ್ಧರ ವಾರಣಾ
ಪರಿಕರಧ್ವನಿಗಳಿಂ ನಡೆದನಾ ಬಾಲನಿಹ
ಶರವಣದ ತೀರಕ್ಕೆ ಕದಳಿಯಾ ಶಾಕಿನಿಯ
ಪರಿವಾರ ಸಹಿತ ಮದದಾನೆಯಂ ಮುತ್ತಲೆಯಿತಂದನಾ ದೇವೇಂದ್ರನೂ ೧೪

ಆನಕವಿಯನ್ಮಂಡಲಾಚ್ಛಾದ್ಯೈಸಂಸ್ತೂತ್ರಿಯ
ಮಾನದ ಚರಾಚರಂಗಳಿನೆಯ್ದೆಧೋಧೂಯ
ಮಾನಾಚ್ಛಸಿತಚಾಮರೈಶ್ಚಜೆಗಿಯ ಮಾನಸ್ತುವಂದಿಭಿರಿತ್ಯಹೋ
ನಾನಾ ಪ್ರಕಾರದಿಂ ಪರಿಕಿಸಲು ಪೀಪಿಯಾ
ಮಾನಶ್ಚ ಸುರಸುಂದರೀಭೀರಿತ್ಯರ್ಥದಿನ
ನೂನ ಕಾಮಾತುರಾಭಿಶ್ಚೇತಿ ವೈಭವದಿನಿಂದ್ರನೈತರುತಿರ್ದನೂ ೧೫

ನಾಕವಲ್ಲಭನಿಂತು ಪರಮ ವೈಭವದಿಂದ
ಲಾ ಕುಮಾರಕನಿರ್ದ ತಾಣಕ್ಕೆ ಬಂದು ಸು
ಶ್ಲೋಕನಂ ಕೋಟಿ ಸೂರ್ಯಪ್ರಕಾಶನಂ ಮೇರುವಿಂದಗ್ಗಳಿಕೆಯಾ
ಸ್ವೀಕರಿಪ ಧೈರ್ಯನಂ ಷಣ್ಮುಖನನೀಕ್ಷಿಸು
ತ್ತಾ ಕಾಲದಲ್ಲಿ ನಾರಂದಮುನಿಪನನತಿ
ವ್ಯಾಕುಲಂ ಮನದೊಳಿರೆ ಬೆಸಗೊಂಡನಾ ಸುನಾಶೀರನಾನಯಶರೀರಾ ೧೬

ನಾರಂದನಿಂತೆಂದನೆಲೆಲೆ ಸುರರಾಜ ಕೇ
ಳೈ ರುದ್ರವೀರ್ಯಮಂ ನೀವು ಶರವಣದಲು
ದ್ಧಾರಿಸಲದೇ ಸ್ಕಂದಮಯವಾಗಿ ದಿವ್ಯಸಾಹಸ್ರವರುಷೋಪರಿಯೊಳು
ಆ ರಮ್ಯಕರ ಪುತ್ರನಪ್ಪ ಕಾಲದೊಳುರದೆ
ಮೇರು ಮುಖ್ಯಂಗಳಾ ತೇಜದಿಂ ಸ್ವರ್ಣದಾ
ಕಾರವಾದವು ಬಳಿಕಲುದ್ಭವಿಸಿದಂ ಕುಮಾರಂ ಮಹಾವಿಜಿತಶೂರಂ ೧೭

ವನಿತೆಯರು ಕೃತ್ತಿಕೆಯರವಗೆ ಮೊಲೆಗೊಡೆ ಷಡಾ
ನನನೆಯಿದೆ ಬೆಳೆವುತಿರ್ದಾ ಜನಿಸಿದೀ ನಾಲ್ಕು
ದಿನದೊಳಾಕಾರವಾಗುತ್ತೈದು ದಿವಸದೊಳು ಸರ್ವಾವಯವಗಳಾಗೆ
ದಿನವಾಱಱೊಳಗೀ ಪರಾಕ್ರಮಾಗ್ರಣಿಯಾಗು
ತಿನಿಬರಂ ಬಾಲಲೀಲೆಯೊಳು ಭಂಗಿಸಿದ ನೈ
ದಿನವೇಳಕಿನ್ನು ದುಷ್ಟನು ಕೊಂದು ನಿಮ್ಮೆಲ್ಲರಂ ಸಲಹಿದಪನೆಂದನೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುನಿಮಿತ್ತಂ ಕೋಟಿ ಸೂರ್ಯಪ್ರಕಾಶನ
ಪ್ಪಧಟ ಷಣ್ಮುಖನ ಕಂಡತಿಭಕ್ತಿಯಿಂದಿವನ
ಪದದಲ್ಲಿ ಬಿದ್ದು ಕಾರುಣ್ಯಮಂ ಪಡೆವುದೈ ಮಾರ್ಮಲೆಯೆ ನಿನ್ನನಾತಂ
ಸದೆವನನೆ ಹೀಹಾಳಿಸಿದ ಮಾಳ್ಕೆಯಾಗಲಾ
ಕದನಮೋಹಿಯ ಮಾತುಗೇಳಿ ಘೂರ್ಮಿಸಿ ಕುವರ
ಗಿದಿರಾಗಿ ಚತುರಂಗಬಲವೆರಸಿ ತಾಗಿದಂ ಕಾಳಗವನಾ ಸುರಪನೂ ೧೯

ಎಡಬಲದ ಸುರನಾಯಕರ್ಗೆ ಕೈವೀಸಿ ಪೆ
ರ್ಬಡೆಗೂಡಿ ಸನ್ನಾಹ ಭೇರಿಗಳು ಮೊಳಗಲಾ
ರ್ಭಡಿಸಿ ದಾಂಧಳಮೆಂಬ ನಿಸ್ಸಾಳಕೋಟಿಧ್ವನಿಮಾಡೆ ಬಿರಿದೆತ್ತಿ ಕಹಳೇ
ತೊಡೆಯೊಳೊದಱುವ ಹರಿಗೆಯಹಹರವ ಬ್ಲಿಲ್ಲ ಜೇ
ವಡೆಯ ರವ ಬೆರಲ ಬೊಬ್ಬೆಗಳಿಂದ ಕಾಳಗಂ
ತೊಡಗಿದಂ ದೇವೇಂದ್ರನೈರಾವತವ ನೂಂಕಿ ವಜ್ರಮಂ ಜಡಿದಾಲುತಾ ೨೦

ಅಱೆಯಟ್ಟಿ ಕರಿಹಯ ರಥವ್ರಜಂ ನಾಲ್ದೆಶೆಗೆ
ಯುಱುಬಿಯಾರ್ಭಡಿಸಿ ಕಪಿದಾರಣವನೆತ್ತಲಂ
ದಱಿಯದಿದ್ದಿದ್ದು ಮೆಲ್ಲನೆ ಕಂಡು ನಗುತಮೆನ್ನಳ್ತಿಗಿದು ತರವೆ ಯೆಂದಂ
ಅಱುಮೊಗಂ ಫೂತ್ಕರಿಸಲಾಗಿ ಸುರಸೇನೆಯಾ
ತಱಗೆಲೆಯ ತೆಱದಿಂದ ಪಾರೆ ದೆಶೆದೆಶೆಗೆಯುವ
ರೆಱಿಯ ದೇವೇಂದ್ರನಾ ವಜ್ರಾಯುಧವ ಜಡಿದು ನೂಂಕಿದಂ ೩ಔದಂತನಾ ೨೧

ಅಱುಮೊಗಂ ಘೂರ್ಮಿಸುತ್ತಿದಿರಾಗೆ ಕಂಡಿಂದ್ರ
ನಿಱಿವಾಳನೇ ಬೇಹಿಗಟ್ಟಿದಂತೆಯಿದೆ ತನ
ಗುಱಿವ ವಜ್ರಾಯುಧವನಾಲ್ದು ತಿಱುಪುತ್ತಿಟ್ಟನಾಗಲಾ ಗುಹನ ಮೇಲೆ
ಕಱಿಕಂಠನಣುಗನಂತಾಗಲವನಂಗಮಂ
ತಱಗುಹುಲ್ಲಿನ ತುಂಡು ಸೋಂಕಿದಂತಾಗಲದ
ನಱಿಯನೇನೆಂದು ಸುಕುಮಾರನಾನಂದದಿಂಧನುವಿಗಂಬಂ ತೊಡಚಿದಂ ೨೨

ತೊಟ್ಟು ಬಾಣವನಾಗ ಬೊಬ್ಬಿಱಿದು ಷಣ್ಮುಖಂ
ಬಿಟ್ಟನಂತಾಶರಂ ಶುಭ್ರದಂತಿಯ ಹಣೆಯ
ನಟ್ಟನಡುವಂ ತಾಗಲೊದಱಿ ಕೈಕಾಲ ಘೀಳಿಟ್ಟು ಕೆಡೆದತ್ತು ಬಳಿಯಾ
ಬೆಟ್ಟದಂತಾ ಸುರೇಂದ್ರ ಧ್ವಜ ಪತಾಕೆಗಳ
ನಟ್ಟಸುರದೆ ಕಡಿದು ಬಿಸುಟನಿಂದ್ರನ ವನಿತೆ
ಯಿಟ್ಟೋಲೆಯಂ ತೆಗೆವ ಮಾಳ್ಕೆಯಂಬೊಂದ ಹೂಡಿದನಾ ಶಿವಾತ್ಮಜಾತಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಿತ್ಯಸಮುಬಾಣದಿಂದೆಸೆಯೆ ಪೇರೆದೆಯ
ಕೋದುದಹಿಸಾಮ್ಯಬಾಣದೊಳು ತನ್ಮಕುಟಮಂ
ಭೇದಿಸಿದನಿಂದ್ರನಂತಲ್ಲಿ ಮೂರ್ಛಿತನಾದನಗ್ನಿಯುಂ ಶರವೊಂದಱಿಂ
ಐದು ಬಾಣಂಗಳಿಂ ಯಮರಾಜನಂ ಕೆಡಪಿ
ಕಾದುತಿಹ ನೈರುತ್ಯನಂ ಹತ್ತು ಶರದಿನಾ
ಮಾದೇವರಣುಗನೆಚ್ಚಂ ಬಾಲಲೀಲೆಯಿಂದಲ್ಲದಿವರೊಳಗೆ ರಣವೇ ೨೪

ಹದಿನೈದು ಶರದಿಂದ ವರುಣನಂ ನಿಮಿಷದೊಳು
ಸದೆದು ಬಳಿಕಿಪ್ಪತ್ತು ಮಾರ್ಗಣದೆ ಮಾರುತನ
ಎದೆಯ ಡೋರುಂಗಳೆದು ರವಿಯುನಾ ದಶಪಂಚಸತ್ಕಲಂಬದಿನೆಸುತ್ತಾ
ಇದಿರಾದ ಯಕ್ಷೇಶನಂ ಕಂಡು ಲೀಲೆಯಿಂ
ಮದನಾರಿಯಣುಗನಾ ಮೂವತ್ತು ಪತ್ರಿಯಿಂ
ಪದೆದೆಚ್ಚನೀಶಾನ್ಯನಂ ಶತೇಷುಪ್ರಹರಣಂ ಗೆಯ್ದು ಬೊಬ್ಬಿರಿದನೂ ೨೫

ಬಳಿಕಲಂತಿಂದ್ರನಂತಾಗ ಮೆಲ್ಲನೆ ಮೂರ್ಛೆ
ತಿಳಿದೆದ್ದು ಕೆಲಬಲದ ಮನ್ನೆಯರ ಮೂದಲಿಸಿ
ಯಳವಿಗಿಡೆ ನೂಱಿದು ಬಾಣದಿಂದೆಸಲು ಪಲ್ಗಿರಿದು ಬಿದ್ದಂ ನೆಲದೊಳೂ
ಘುಳಿಘುಳಿಸುತಿಪ್ಪ ಮೂವತ್ತೈದು ಶರದಿಂದ
ಉಳಿದ ಪರಿವಾರಮಂ ತೆಗೆದೆಚ್ಚನಿಂತಿವದಿ
ರೊಳಗೆ ನಿಜಯುದ್ಧವೆಯಲ್ತಲ್ತು ಷಣ್ಮುಖಂಗಿದು ಬಾಲಲೀಲೆಯ್ಕೆಸೇ ೨೬

ವಸುಗಳಾ ಸಿದ್ಧಸಾಧ್ಯರು ಕೂಡೆ ಷಣ್ಮುಖನ
ಮುಸುರಲಾ ನೂಱು ಶರದಿಂದೆಚ್ಚಮಾತ್ರದೊಳ
ಗಸುಗಳೆವ ತೆಱನಾಗಿ ಬಿದ್ದರಂತುಳಿದ ಸುರನಿಕರವದಿರುತ್ತ ಪತ್ತೂ
ದೆಶೆಗೆ ಕೆಟ್ಟೋಡಿದರು ಬಳಿಕಲಾ ದೇವೇಂದ್ರ
ಗುಸುರಿನಿತು ತುಂಬಲಾ ಚೇತರಿಸಿದಮರರೊಳ
ಗ ಸವಸದೆ ಕೂಡಿ ಮತ್ತಂ ಶಿವಕುಮಾರನೊಳು ಕಾಳಗಕ್ಕುಜ್ಜುಗಿಸಿದಂ ೨೭

ಆ ವೇಳೆಯಲ್ಲಿ ಯೋಹೋ ಯೆನುತ್ತಲಾ
ದೇವಮಂತ್ರೀಶ್ವರಂ ಬಂದು ನುಡಿದಂ ಬೇಗಂ
ಶ್ರೀ ವಿಶ್ವನಾಥನ ಕುಮಾರನೊಳು ಯುದ್ಧವೆ ತಿಳಿವಿನಿತು ನಿನಗಿಲ್ಲಲೈ
ಪಾವನಚರಿತ್ರ ಷಣ್ಮುಖನ ಶರಣುಂಬೊಗಲು
ಕಾವನೈ ನಿನ್ನನಿಂತೀ ಚರಾಚರತತಿಯು
ನಾವ ಕಂಟಕವಿಲ್ಲದಾಳುವ್ಯೆ ಸಗ್ಗಮಂ ಗುಹನ ಕೃಪೆವಡೆಯೆಂದನೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಲು ಘಮ್ಮನೆ ತಿಳಿದು ದೇವೇಂದ್ರನಂತಾಗ
ಮನಶುದ್ಧವಾಗಿ ಬಂದಾ ಷಣ್ಮುಖನ ಪಾದ
ವನಜಕ್ಕೆ ಸಾಷ್ಟಾಂಗದಂಡಪ್ರಣಾಮದಿಂ ನಮಿಸಿ ಜಯ ಶಂಭುಪುತ್ರಾ
ನಿನಗೆ ನಾನಪರಾಧಿಯಾದೆನಜ್ಞಾನಿಯೆನ
ಗನಿಶಮಭಯಮನಿತ್ತು ಕಾಯಿ ಕರುಣಾಕರಾ
ಘನಪರಾಕ್ರಮಿ ದವಾನಳನೊಳಿದಿರೆ ಶುಷ್ಕಪರ್ಣದಂತಾವೆಂದನೂ ೨೯

ದೇವ ಜಯ ಷಣ್ಮುಖಾ ಕ್ರೌಂಚಧಾರಣ ಪಾರ್ವ
ತೀ ವರಕುಮಾರ ಗುಹ ಸರ್ವಾಪರಾಧಿಯಾಂ
ಕಾವುದೆನ್ನುವನೆಂದು ಕೀರ್ತಿಸುತ್ತಿರಲು ಸುರಪತಿಯಮರ್ದುನುಡಿಗೆ ಮೆಚ್ಚಿ
ಆವುದೈ ನಿನ್ನಿಷ್ಟಮಪ್ಪವರವೀವೆನೆನೆ
ಪಾವನಾತ್ಮಕನಡಿಗೆ ಮತ್ತೆ ಸಾಷ್ಟಾಂಗದಿಂ
ದಾ ವಜ್ರಿ ನಮಿಸಿ ಕೈಮುಗಿದು ಭಯಭಕ್ತಿಯಿಂದಂ ಕೂರ್ತು ಬಿನ್ನವಿಸಿದಂ ೩೦

ಆ ನಿನ್ನ ಲೆಂಕನೈ ನೀ ಸ್ವರ್ಗರಾಜ್ಯಸಹ
ಸೇನಾನಿಪತಿಯಾಗಬೇಕೆನಲು ನಸುನಗುತಿ
ದೇನು ವರವಂ ಬೇಡಿದೈ ಸುರಪ ಹರಿಯಜಾದ್ಯರ ನಿನ್ನ ಸಂಪದವನೂ
ನಾನೊಲ್ಲೆನೆನಲಿಂದ್ರನಳ್ಳಿಯಾ ಶಂಕರ
ಧ್ಯಾನಮಂ ಮಾಡುತಿರೆ ಸರ್ವೇಶ್ವರಂ ಸತಿ ಭ
ವಾನಿ ಸಹಿತಾ ಪುತ್ರನಂ ಮರಳಿ ನೋಡುವಕ್ಕಱೊಳಲ್ಲಿಗೆಯಿತಂದರೂ ೩೧

ತಾಯಿತಂದೆಗಳ ಕಾಣುತ್ತಲಾ ಷಣ್ಮುಖಂ
ಹಾಯೆಂದು ಹರುಷದಿಂ ವಂದಿಸಲು ಶಂಭು ಕಾ
ತ್ಯಾಯನಿಯುರಾಲಿಂಗಿಸುತ್ತ ತೊಡೆಯಲ್ಲಿ ಕುಳ್ಳಿರಿಸಿ ಚಂಡಿಕೆಯ ಪಿಡಿದೂ
ಬಾಯಲ್ಲಿ ಬಾಯಿಟ್ಟು ಮುದ್ದಾಡಿ ಮನ್ನಿಸ
ಲ್ಕಾಯವಸರದೊಳಿಂದ್ರನೆಯಿದೆ ವಂದಿಸುತೆದ್ದು
ಮಾಯಾರಿ ಬಿನ್ನಪವನವಧರಿಪುದೆಂದನಿನ್ನೇನೆಂದು ಬಣ್ಣಿಸುವೆನೂ ೩೨

ಶ್ರೀ ಗೌರಿಯಮ್ಮ ಸರ್ವೇಶ್ವರಯ್ಯಂಗಳಿಗೆ
ಕೈಗಳಂ ಮುಗಿದು ಬಿನ್ನಪವೈಯ್ಯ ಮತ್ಸೇನೆ
ಗೀ ಗುಹಂ ಕರ್ತೃವಪ್ಪಂತೆ ನಿರವಿಸಬೇಕು ನೀವೆನಲು ಶಂಭು ಕರೆದೂ
ನೀ ಗರುವನೈ ಕುವರ ಸುರರ ಸೇನಾಧಿಪತಿ
ಯಾಗಯ್ಯಾಯೆನಲೊಲ್ಲೆನಾ ಪದವನೆನಲಾ ವಿ
ರಾಗಿ ಷಣ್ಮುಖನೊಡನೆ ನುಡಿದನಾ ನಂದೀಶನಪರಿಮಿತಧರ್ಮಕೋಶಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾರ್ವತೀದೇವಿಯರ ಮೋಹದ ಕುಮಾರಕೇ
ಸರ್ವ ಜಗದೀಶ್ವರನ ಸಿರಿಯಲ್ಲ ನಿನ್ನದು ಸು
ಪರ್ವಾಧಿಪನ ಸೇನೆಗೊಡೆಯನಾಗೆಂಬುದಕ್ಕೇನು ಕಾರಣವೆಂದೊಡೇ
ಪೂರ್ವ ಕಥೆಯೊಂದ ಬಿತ್ತರಿಸುವೆಂ ಶಿವನಂದು
ಗರ್ವಿಪಂಧಕನ ತುಳಿದಿತ್ತನೈ ಗಣಪದವ
ನೋರ್ವ ಸುತನಾ ದನುಜನನ್ವಯಕ್ಕುಳಿದನಾ ತಾರಕಂ ಮಿಗೆ ಘೋರಕಂ ೩೪

ಅಂಧಕಾಸುರನ ಸುಕುಮಾರನೆನಿಸುವ ತಾರಕ
ಕಂ ಧರಾವಳಯದ ಕಕುದ್ಗಿರಿಯ ದಕ್ಷಿಣದೊ
ಳಂ ಧೂತಪಾಪಸಂಕುಲ ಭವಿಷ್ಯಚ್ಛೀಲಲೋಲೇಶ್ವಸತ್ಪರ್ವತಾ
ಕಂಧರದೊಳಾ ಸೂಚಿಯುಗ್ರದೊಳು ಪದವೂರಿ
ಯಿಂಧನಾನಲ ಸುಪ್ರವೇಶನಾ ಹೃದಯದೊಳು
ಸಂಧಾನಿಸುತ್ತಿಷ್ಟವಿತ್ತಾತನೇ ದೈವವೆಂದು ತಪದಿಂದಿರ್ದನೂ ೩೫

ಕ್ರಮದಿಂ ವಿಚಾರಿಸಲ್ಕಾಗಿ ಯತ್ತನ್ಮಮಃ
ಕಮಪಿ ಶುಶ್ರುಮದೇವತಾಭ್ಯಾಮೆನಿಪ್ಪರ್ಥ
ಮುಮನೆಯ್ದೆ ತಿಳಿಯಲು ನಮಸ್ಕಾರಕುಳಿದ ದೇವವ್ರಾತಮುಱುಹಮಲ್ಲಂ
ಮಮ ಕರ್ತೃ ಶಿವನ ಹೊರೆಕಾಱರೆನಲರ್ಪಿಪರು
ಕಮಲಾಕ್ಷಮುಖ್ಯರಾ ಚೋರರಿಳ್ಕೊಂಡ ಮಕು
ಟಮನುಳಿದವರ್ಧರಿಸಬಾರದಾ ರಾಯನಲ್ಲದೆ ಎಂಬ ಮಾಳ್ಕೆಯಿಂದಾ ೩೬

ಆರುಗ್ರತಪವಿಪ್ಪರದು ಶಿವನನೆಯಿದುವುದು
ತಾರಕನ ನಿಷ್ಠೆಗೀಶ್ವರನೊಲಿದು ಬಂದಲ್ಲಿ
ಸಾರಿ ತಾನೇ ಕೊಡುವುದುಚಿತವಲ್ಲೀತಂಗೆನುತ್ತಲಜನಂ ಕಳುಪಲೂ
ವಾರಿಜಾಸುತನ ಸುರಗಂ ಪ್ರಸನ್ನನುಮಾಗಿ
ವೋರಂತೆ ಇಷ್ಟವೇನೈ ದನುಜ ಯೆನಲೆದ್ದು
ದಾರಿ ಬೊಮ್ಮನ ಕಂಡು ಸಾಷ್ಟಾಂಗವೆಱಗಿ ವಂದಿಸುತಾಗ ಕೈಮುಗಿದನೂ ೩೭

ಸಾರ ಮೃದುವಚನದಿಂ ಕೊಂಡಾಡಿಯಸುರನೀ
ಧಾರಿಣಿಗೆ ನೀ ಪಿತಾಮಹನಲಾ ನನ್ನಿಷ್ಟ
ವಾರೈದು ಕರುಣಿಸಲ್ಬಂದೆಯಾದೊಡೆ ಪಾಲಿಸೆನಗಧಿಕ ಸಂಪದವನೂ
ನಾರಾಯಣಾದಿಗಳ ಸದೆವ ಬಲ್ಪಂ ಕೊಡುವು
ದಾರಿಂದಲೆಂದೆಂದಿಗಾಂ ಸಾಯದಂತೆಯು
ದ್ದಾರಿಪುದೆನಲ್ಕೆ ನಸುನಗುತ ನುಡಿದಂ ಬ್ರಹ್ಮನಾ ದುಷ್ಟ ದಾನವಂಗೇ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಾಮರತ್ವವೆಂಬುದು ಭಾವಿಸಲ್ಕೀಶ
ನೋರ್ವಗಲ್ಲದೆಯಾರ್ಗವಿಲ್ಲವೈಭಾವಿಸ
ಲ್ಪೂರ್ವಾಮರೇಶ್ವರಾ ಜಾತಸ್ಯ ಮರಣಂ ಧ್ರುವಂ ಎಂಬುದಿದು ತಪ್ಪದೈ
ಗರ್ವವಿಲ್ಲದೆ ಪೇಳ್ವೆ ನಾನು ಹರಿಯುಂ ಮಿಗೆಸು
ಪರ್ವನಾಥಾದಿಗಳನಂತರಳಿದೆವು ಕಣಾ
ಗುರ್ವಗ್ರವಚನವಱಿಯಾ ವಿಷ್ಣು ಸಂಜ್ಞಾ ಎನಿಪ್ಪ ಸುಶ್ಲೋಕಾರ್ಥಮಂ ೩೯

||ಸಾಕ್ಷಿ|| ವಿಷ್ಣು ಸಂಜ್ಞಾ ಹ್ಯಸಂಖ್ಯಾತಾ ಅಸಂಖ್ಯಾತಾಃ ಪಿತಾಮಹಾಃ
ಅಸಂಖ್ಯಾತಾಸ್ಸುರೇಂದ್ರಾಶ್ಚ ನಿತ್ಯ ಏಕೋ ಮಹೇಶ್ವರಃ ೧

ಅದು ಕಾರಣಂ ಹುಟ್ಟಿದವರೆಲ್ಲವಳಿಯಬೇ
ಹು ೨ು ತನ್ನಿಮಿತ್ತದಿಂ ನಿನಗಾವ ಮರಣವೆಂ
ಬುದನೆ ಕೇಳ್ಳೈ ಎನಲು ಯೋಚಿಸಿದನಾ ತಾರಕಂ ಮುಹೂರ್ತಾವಧಿಯೊಳೂ
ಬೆದಕಿ ಕಂಡಂ ಹಿಂದೆ ತಪವಿರ್ದರಾರು ಬೇ
ಡಿದ ವರವನಾಗ ಬಿನ್ನವಿಸಿದಂ ಕೇಳು ಕಮ
ಲದ ಕುಲಶಿರೋಮಣಿಯೆ ಸದ್ಗುಣಿಯೆ ದೇವತಾಗ್ರಣಿಯೆಯೆಂದಾ ದಾನವಂ ೪೦

ಶಿವನ ರೇತಸ್ಸನಮರರು ಕೊಂಡು ನದಿಯಲ್ಲಿ
ಯವರೆಲ್ಲರುಂ ವಾಂತಿಯಂ ಮಾಡಲಲ್ಲಿಯು
ದ್ಭವಿಸಿ ಮುಖವಾಱೂಗಿ ಪುಟ್ಟಿರ್ದಪುತ್ರನಿಂದ್ರಂಗೆ ಸೇನಾನಿಯಾಗೀ
ದಿವಸವೇಳಱ ಹರೆಯದಿಂದ ನಡೆತರುತನು
ನ್ನುವಂ ಕೊಂದೊಡಾನಳಿವೆನೆನಲಂತೆ ಮರಣವೈ
ದಿವಿಜಾರಿ ಸಕಲ ಭೋಗವ ಭೋಗಿಸೆಂದು ವರವಿತ್ತನಾ ಕಮಲಾಸನಂ ೪೧

ವನಜೋದ್ಭವಂ ವರವನೀಯಲಾ ಕಾಲದೊಳು
ದನುಜಾಧಿರಾಜನಿಂತೆಂದನೀಶನ ವೀರ್ಯ
ವನು ಸುರರದೇಕೆ ಕೊಂಡಪರು ಕೊಂಡೇತಕುದ್ಗಾರಿಪರದೇಕೆ ಪುತ್ರಾ
ನೆನಿಪನಾ ಶಿವಕುಮಾರಕನಾಗಿ ದೇವೇಂದ್ರ
ಗನಿಮಿತ್ತ ಸೇನಾನಿಯಪ್ಪನೆಂದೆಂದಿಗಾ
ನನಿಬರಂ ಸದೆವೆನ್ನೈ ಸಲೆ ಸಾಯೆನೆಂದು ಭುಜವೊಯ್ದುಕೊಂಡಂ ದೈತ್ಯನೂ ೪೨

ಉಲ್ಲಾಸದಿಂದಲಾ ತಾರಕಂ ತಾಂ ಕೋಡು
ಗಲ್ಲ ಮೇಲುಗ್ರತಪವಂ ಮಾಡಲಾತಂಗೆ
ಫುಲ್ಲಾಬ್ಜ ಪುತ್ರನಿಂ ವರವ ಕೊಡಿಸಲ್ಬಂದು ನೆಲಸಿದಾ ಸರ್ವೇಶ್ವರಂ
ಸಲ್ಲಲಿತದಾಗಿರಿಯ ತಾರಕಾಚಲವೆಂಬ
ರೆಲ್ಲರಾ ಲಿಂಗಕ್ಕೆ ದೇಶಭಾಷೆಯೊಳಾಯ್ತು
ಕಲ್ಲೇಶಲಿಂಗವೆಂದಲ್ಲಿ ರಚಿಸಿದ ಪಟ್ಟಣಕ್ಕೆ ಕಲ್ಲೇಹನಾಮಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರವ ಪಡೆದಲ್ಲಿಂದ ಬಂದು ತಾರಕನೇಳು
ಶರಧಿಗಳ ಮಧ್ಯದೊಳು ಪಟ್ಟಣಂಗಟ್ಟಿದಂ
ಹರಕುಮಾರಾಕೇಳು ನಿಮ್ಮಮ್ಮನಂ ಕುರಿತು ತಪದೊಳೀಶ್ವರನಿರಲ್ಕೇ
ಉರವಣಿಸಿ ಮೂಲೋಕಮಂ ಬಾಧಿಸುತ್ತಿರಲು
ಹರಿಯಜೇಂದ್ರಾದಿ ನಿರ್ಜರರು ಕಾದಲು ಸದೆದು
ಪರಿಭವಿಸಿದಂ ಕಣಾ ಪೇಳಲಳವೇ ದೇವತಾಳಿಗಳ ಭಂಗಂಗಳಾ ೪೪

ಆ ದೇವತಾಳಿಗಳ ಕಳುಹೆ ಕಾಮನ ಕೊಂದು
ಮಾದೇವಿಗೊಲಿದು ರತಿಪತಿಗಸುವನಿತ್ತು ಸಂ
ಮೋದದಿಂ ಗಿರಿಜಾವಿವಾಹವಾಗುತ ಮಂದರಾದ್ರಿಯೊಳು ಕ್ರೀಡಿಸುತಿರೇ
ಆ ದುರಾತ್ಮಂ ತಾರಕಂ ಮರಳಿ ಕೊಬ್ಬಲಾ
ಸಾದರದ ಶಿವನ ವೀರ್ಯಕೆ ಘಟ್ಟಿಗೊಂಡು ನೀ
ನಾದ ಪಾರ್ವತಿಯಣುಗ ಕೇಳೈಯ್ಯ ನಿನ್ನ ಮಹಿಮೆಯ ಪೊಗಳಲಾರಿಗಳವೂ ೪೫

ಆ ನಿಮಿತ್ತಂ ಶಿವಕುಮಾರಕಾ ಕೇಳೈಯ್ಯ
ನೀನೀಶ್ವರಂಗೆ ಮೋಹದ ಕಂದನೈ ನಿನಗೆ
ಹಾನಿಯಲ್ಲದು ಬಳಿಕ್ಕಂತಲ್ಲದಾ ದನುಜನಳಿಯುನದಱಿಂದಿಂದ್ರಗೇ
ಸೇನಾನಿಯಾಗೆಂದು ನಂದೀಶ್ವರಂ ಪೇಳ
ಲಾ ನುಡಿಯೆ ತಪ್ಪದಂತಾಗೆಂದ ನೀಶ್ವರಂ
ಮೇನಕಾತ್ಮಜೆ ಮಗನೆಯುಂತು ಮಾಡೆಂದಳಾ ಕುವರಗಮರಪ್ರವರಗೇ ೪೬

ಅಷ್ಟವಸುಗಳು ಸಪ್ತಋಷಿಗಳಾ ಹದಿನಾಲ್ಕು
ಶಿಷ್ಟಮುನಿಗಳು ನವಬ್ರಹ್ಮರಂತಾಗಲು
ತ್ರ್ಯಷ್ಟ ರುದ್ರರು ಸರ್ವರೆಯಿದೆ ನವರತ್ನಮಯ ಸಿಂಹಾಸನವ ನಿಕ್ಕುತಾ
ದೃಷ್ಟಿಪೂರ್ವಕದೊಳಗುಮಾಮಹೇಶ್ವರರು ಸಂ
ಶಿಷ್ಟದಿಂದೀಕ್ಷಿಸುತ್ತಿರೆ ಖೇಚರರು ಪುಷ್ಪ
ವೃಷ್ಟಿಯನುಃ ಘೇ ಎಂದು ಕಱೆವುತ್ತಲಿರೆ ಪಟ್ಟಗಟ್ಟಿದರು ಷಣ್ಮುಖಂಗೇ ೪೭

ಹರಕುಮಾರಂಗೆ ಪಟ್ಟಂಗಟ್ಟೆ ತಾರಕನ
ಪುರದೊಳಿಳ್ತಿಳೆ ಕಂಪಿಸಿತ್ತು ಹಗಲಲ್ಲಿಯುುರು
ತರದ ನಕ್ಷತ್ರಂಗಳೊಗೆದವಾ ಕೆಱೆಗಳುಕ್ಕಿದವು ದಿಗ್ವಳಯವೆಲ್ಲಾ
ಉರುತರಾಗ್ನಿಜ್ವಾಲೆಗಳನೆಯ್ದೆ ಕಾಱಿದವು
ಅರಿದ ತಲೆಗಳು ಬಿದ್ದವಂತಕಂ ತನ್ನ ಭೀ
ಕರರೂಪುದೋಱಿದಂ ಕೆಂಧೂಳಿ ಮುಸಗಿತ್ತು ದನುಜನಳಿವಿಂಗಾಗಳೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಟ್ಟಲದ್ಭುತವಿಂತು ತಾರಕಂ ಬೆಕ್ಕಸಂ
ಬಟ್ಟಿದೇಂ ಕಾರಣವೆನುತ್ತಷ್ಪದಿಗ್ವಲಯ
ಕಟ್ಟಿರ್ದ ಗುಪ್ತಚರರಂ ವಿಚಾರಿಸುತಿಪ್ಪಕಾಲದೊಳಗೀ ಷಣ್ಮುಖಂ
ಪುಟ್ಟಿದುದನಿಂದ್ರನಂ ಜಯಸಿದುದ ಸೇನಾನಿ
ಪಟ್ಟಕ್ಕೆ ಕುಳಿತುದಂ ಕೇಳಿ ಘುಡಿ ಘುಡಿಸುತ್ತ
ಕುಟ್ಟಿಹೇಳೋ ಡಂಗುರವನೆಂದು ಹೊಱಬೀಡಬಿಟ್ಟನಾ ದನುಜೇಂದ್ರನೂ ೪೯

ಘುಳುಘುಳಿಪ ಚತುರಂಗಸೇನೆಯಿಂದಾಗ ದಾಂ
ಧಳವೆಂಬ ಕೋಟಿ ನಿಸ್ಸಾಹಣಧ್ವನಿಗಳಿಂ
ಕುಳಿಕನಂ ಪೆರ್ಬುಲಿಗಳಂ ಸೊಕ್ಕಿದಾನೆಗಳ ಸಿಂಹನಂ ಭೇರುಂಡನಂ
ಪಳಿವ ಪಟುಭಟರಿಂದೆ ಬರುತಿರ್ಪ ತಾರಕನ
ಬಳವಱಿದು ದೇವಲೋಕದೊಳು ಹರಿಯಜರವದಿ
ರೊಳಗಿಂದ್ರ ಮುಖ್ಯ ದಿಕ್ಪಾಲದೇವರ್ಕಳಿದಿರಾಗಿ ಪೌಜೊಡ್ಡಿದರಲ್ಲೆ ೫೦

ಪೊಡೆವ ನಿರ್ಜರರ ಭೇರಿಯ ಕೇಳಿ ರಕ್ಕಸರ
ಪೊಡೆಯ ಮಕುಟವನಲುಗಿಯಕ್ಕಟಾ ಸುರರೆನ್ನ
ಬಡಿಹೋರಿಗಳು ಮಿವಂದಿರು ಮಳ್ಕದಿದಿರೊಡ್ಡನೊಡ್ಡುವರೆ ಭಲರೆ ಎನುತಾ
ಜಡಿದು ಖಡ್ಗವ ಬೆರಲ ಬೊಬ್ಬೆಯಿಂದಂ ತನ್ನ
ಪಡೆಗೆ ಕೈವೀಸಿ ಬಹುವಾದ್ಯಂಗಳುಲಿಯಲಾ
ರ್ಭಡಿಸಿ ತಾಗಿದನಲಾ ಕೋಳಾಹಳಂಗೆಯ್ದು ತಾರಕಂ ಮಿಗೆ ನಾರಕಂ ೫೧

ಆಯುವಸರಂ ತಾರಕನ ದನಿಯ ಕೇಳಿ ಸುರ
ನಾಯಕರು ಕೆಟ್ಟೋಡಿ ಬಂದು ನಡನಡುಗುತ್ತ
ಜೀಯ ಬಿನ್ನಪವೆಂದು ನಮ್ಮೆಲ್ಲರಂ ಸಾಯಸದೆ ಬಡಿದ ಬಲುರಕ್ಕಸಾ
ನಾಯೆಂಮು ತಲೆಯನರಿದೀಡಾಡಿದಪೆನೆನು
ತ್ತೀಯವಸರಂ ಬರುತ್ತಿರ್ದಪಂ ಕೃಪೆಯಿಂದ
ಕಾಯಬೇಕೆಂದರಾ ಹರಿಮುಖ್ಯರಾ ಶಿವಕುಮಾರಗತ್ಯತಿ ಧೀರಗೇ ೫೨

ನೆಟ್ಟನಾ ಮಾತುಗೇಳುತ್ತೆದ್ದು ಕೈಯ್ಯೊಳಳ
ವಟ್ಟ ಧನುವಿಂಗಗ್ನಿಬಾಣಮಂ ತೊಡಚಿ ಬೊ
ಬ್ಬಿಟ್ಟಿದಿರುವಪ್ಪ ತಾರಕನ ಸೇನೆಯನೆಚ್ಚು ತದ್ಬಾಣದಿಂ ನಿಮಿಷಕೇ
ಸುಟ್ಟನಧಮನ ಬಲವನರಸು ರಕ್ಕಸನನಂ
ದಿಟ್ಟಿಸುತ್ತಿದಿರಾಗೆ ದೇವಿಯರು ಕೃಪೆಯಿಂದ
ಕೊಟ್ಟ ಶಕ್ತಿಯ ತಿರುಹಿ ಕೂಡೆ ಬೊಬ್ಬಿಟ್ಟು ಬಳಿಕಿಟ್ಟನಾ ಹರಕುಮಾರಂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡಿಘುಡಿಸಿ ಶಕ್ತಿಯಿಂ ಷಣ್ಮುಖಂ ತಾರಕನ
ನಿಡಲಿದೆಯ ಕೊಟಿದು ಪೋದುದು ದಿಗಂತಕ್ಕಾಗಿ
ದಡಿಗರಕ್ಕಸರಾಯನಲ್ಲಿ ಭೇಳೆಂದು ಬಿದ್ದಳಿದನಾ ನಿಮಿಷದೊಳಗೇ
ಹೊಡೆದವಾಗಳೆ ದೇವದುಂದುಭಿಗಳಾಲೋಕ
ದೊಡೆಯರೆಲೆ ಶಿವಪುತ್ರ ಶರಣು ಶರಣೆನುತಿರಲು
ವೃಡ ಭವಾನಿಗಳು ತನಯುನನಪ್ಪಿ ಕೊಂಡಾಡಿದರು ಗಣಾಧಿಪರು ಸಹಿತಂ ೫೪

ಅಖಿಳ ಲೋಕಾಧಿಪರು ಕೊಂಡಾಡಲಾಗಿ ಷ
ಣ್ಮುಖನುಮಾಮಹೇಶ್ವರರ ಶೋಣಮಯಪಾದ
ನಖಚಂದ್ರಕಿರಣಸಂತೃಪ್ತ ಸುಚಕೋರನಾಗುತ್ತಿರಲು ಮುದ್ದಾಡುತಾ
ಮಖವೈರಿ ವಿಘ್ನೇಶ್ವರಾ ತಾರಕಾರಿಗಳು
ಸುಖದಿಂದ ಮುಂದಿರಲು ರಾರಾಜಿಸಿದನಲಾ
ನಿಖಿಲವಲ್ಲಭ ಶಾಂತಮಲ್ಲಿಕಾರ್ಜುನನಗಜೆಯೊಳು ಪರಮ ಸಂತೋಷದಿಂ ೫೫

ಮುದದಿಂದ ಕೈಲಾಸದಲ್ಲಿ ಸುಖವಿರ್ದನಾ
ಮದನಾರಿಯೆಂಬಲ್ಲಿಗೀ ಕಥೆ ಸಮಾಪ್ತಿಯಾ
ದುದು ಕಣಾ ಮುನಿಗಳಿರ ಕೇಳಿರೆ ಎಂದು ಸೂತಂ ಪೇಳಿದಾ ಕಥನಮಂ
ಹೃದಯಶುದ್ಧದಿ ಕೆಂಚವೀರಾಖ್ಯ ತಿಳಿದೆಯಾ
ಇದ ಕೇಳಲಿಷ್ಟಾರ್ಥವಪ್ಪುದೈದಿಲ್ಲಿಗಂ
ತೊದವಿರ್ದ ಸಂಧಿ ಮೂಟಿಪ್ಪತ್ತವೊಂದು ಮಹಿಮಾ ಪೂರ್ಣವಾಯಿತೇಳ್ಗೆಯಿಂ ೫೬

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತಸಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೫೭

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿಕ್ಕಿರಿಯಾ
ಪ್ರದಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ತಾರಕನ ವಧೆಗೆ ಕಾಂಡವೆರಡರ ಮೇಲೆ ಸಂಧಿ ಇಪ್ಪತ್ತೊಂದಲಾ ೫೮

ಅಂತು ಸಂಧಿ ೨೧ಕ್ಕಂ, ಪದನು ೧೦೭೭ ಕ್ಕಂ, ಗ್ರಂಥ ೮೦ಕ್ಕಂ ಮಂಗಳಂ ಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೪

ಗಂಗಾಧರ ಲೀಲೆ

ಏಕಪಾದದ ಲೀಲೆಯಲ್ಲಿ ಹರಿಯಜರಧಿಪ
ನಾಕನದ್ರುದ್ರನೊಲವಿಂದಂ ನಿಜಾಕ್ಷಿಜ
ಪ್ರಾಕಟೋದಕ ವಿಲಯಮಂ ಬಿಡಿಸಿ ತನ್ನ ಮಸ್ತಕದೊಳಿಟ್ಟಂ ಗಂಗೆಯಾ

ಅದ್ವಯ ಸದಾಶಿವ ಸುಹೃದ್ವಾಙ್ಮಹೇಶ ವಿಲ
ಸದ್ವಾಯು ಭುಗ್ಭೂಷ ಚಿದ್ವನಿತೆಯಾಣ್ಮ ಚಂ
ಚದ್ವಲಯಹಸ್ತ ಸಂಪದ್ವಲ್ಲಭಾ ವೇದಸದ್ವಚನ ದುರ್ಲಭಾಂಗಾ
ತದ್ವಸುಮತೀವಾರ್ಮಹದ್ವಹ್ನಿಯಾಶುಗವಿ
ಯದ್ವನಜವೈರಿ ಭಾಸ್ವದ್ವರಾತ್ಮಾಧಿಪಕ
ನದ್ವಾಕ್ಯ ಹರಿ ಮುಖ ಮರುದ್ವಂದ್ಯ ರಕ್ಷಿಪುದು ಮದ್ವರನೆ ಶಾಂತಮಲ್ಲೀ ೧

ಆ ನೀಚಮಾರ್ಗೆಯೆನಿಸಿದ ಕರ್ಮಗುಣಕಮಠ
ಮೀನಾದಿಗಳ ತನ್ನೊಳೊಳಕೊಳ್ಳದಧಿಕ ಪಾ
ಪಾನೀಕದವರು ಬಂದವಗಾಹನಂ ಮಾಡದುತ್ತುಮದ ಮಾರ್ಗಸುಜನಾ
ಸ್ಥಾನವೆನಿಪಾನಂದ ಜಲಮಗ್ನ ಶರಣಸಂ
ತಾನ ಸತ್ಕೀರ್ತಿಪ್ರವಾಹ ಮೂಲದಲಸ
ದ್ಜ್ಞಾನರಸಮಂ ತಳೆದ ಶಾಂತನಂಜೇಶ್ವರಂಗೆಣೆಯೆ ಗಂಗಾಧರೇಶಂ ೨

'ದ್ವಾವಿಂಶತೀ ಏಕಪಾದಶ್ಚ ಎಂಬ ಲೀ
ಲಾವಹಂ ಶಂಭುಗೇಂ ಕಾರಣಂ ಬಂದುದುಮ
ದಾವ ಪೌರಾಣಪ್ರಸಂಗದೊಳಗೆಲೆ ಗರುವೆ ಎನೆ ಕೆಂಚವೀರಾಖ್ಯಗೇ
ಪಾವನದ ಹಲಗೆಯಾರ್ಯಂ ನುಡಿದನಣುಗ ಕೇಳ್
ಶೈವ ಪೌರಾಣದೊಳು ನಂದೀಶ್ವರಂ ತನ್ನ
ಸೇವಕ ಸನತ್ಕುಮಾರಂಗೆ ಪೇಳ್ದರುದ್ರ ಕೋಟಿಸಂಹಿತೆಯರ್ಥಮಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮಸ್ವತಂತ್ರನೀಶ್ವರನಾದಿಮಾಯೆಯುರು
ತರದುಪಾಧಿಯ ಲಸದ್ವ್ಯವಹಾರದಿಂದಲೀ
ಧರೆಯಾದಿ ಪಂಚಭೂತಂಗಳಂ ನಿರ್ಮಿಸುತ್ತಂ ಮಹಾಬ್ರಹ್ಮಾಂಡಮಂ
ಪರಿಕಲ್ಪಿಸುತ್ತಾ ಮಹೇಶ್ವರಂ ತನ್ನ ಸೌಂ
ದರ ದಕ್ಷಿಣಾಂಗದೊಳಗಜನ ಪುಟ್ಟಿಸಿ ಭೂಮಿ
ಗಿರದವನನಧಿ ದೈವಮಂ ಮಾಡಿದಾ ಧರೆಗೆಯಾಧಾರಂವಾದುದಕಮಂ ೪

ಉದಕಕ್ಕೆಯಧಿ ದೈವವಾಗಬೇಕೆಂದು ವಾ
ಮದೊಳು ಹರಿಯಂ ಪುಟ್ಟಿಸಿದನಭವನಾಗಳೀ
ಸದಮಲ ಸಮಸ್ತ ಸೃಷ್ಟಿಗೆಯುಜನಕಲ್ಪಿಸುತ್ತಾ ಹುಟ್ಟಿದೀ ಲೋಕಮಂ
ಪದೆದು ರಕ್ಷಿಪುದೆಂದು ವಿಷ್ಣುಗಂ ನಿರವಿಸುತ
ಮದಿಸಿದಖಿಳರ ಸಂಹರಕ್ಕಂ ಸ್ವತಂತ್ರನ
ಗ್ಗದರುದ್ರ ರೂಪನಾಗುತ್ತಗ್ನಿಯಧಿಪನಖಿಳಂಗಳಂ ಸಂಹರಿಪನೂ ೫

ವಾಯುಗೀಶ್ವರನಾಗಸಕ್ಕಂ ಸದಾಶಿವಂ
ಸ್ವಾಯತ್ತದಿಂದೀನ್ಮಪಮೂರ್ತಿಗೆ ಕರ್ತ
ನೈಯಧಿಕದಾ ಸದಾಶಿವಸರ್ವಕೊಡೆಯನೆನಲಾ ಬ್ರಹ್ಮಜಂ ನುಡಿದನೂ
ಜೇಯ ವಿಧಿ ವಿಷ್ಣು ರುದ್ರೇಶ್ವರ ಸದಾಶಿವರು
ವೋಯಾರದಿಂದ್ಯೆವರೊಂದಾಗಿ ನುಡಿಸಿಕೊಳು
ತಾಯಧೋಕ್ಷಜ ಕಮಲಭವ ಭೃತ್ಯರಗ್ರ ಮೂರ್ತಿತ್ರಯಾಧಿಪರದೆಂತೂ ೬

ಎನೆ ನಂದಿ ನುಡಿದನೈ ಕೇಳೈ ಕುಮಾರಕಾ
ವನಜಾಕ್ಷ ವಿಧಿಗಳೇ ಭೃತ್ಯರವರಿಗೆ ಕರ್ತು
ವೆನಿಪನಾ ರುದ್ರನೀಶ್ವರ ಸದಾಶಿವರು ಮೂಱಿಂಗವೇಕಂ ಪೇಳ್ವೆನೂ
ನಗದೆಂತೆನೆ ಮಣ್ಣನುದಕಮಂ ಮೇಲಕ್ಕೆ
ಸನಯದಿಂ ಚೆಲ್ಲಲ್ಕಧೋಮಾರ್ಗಕಿಳಿವವ
ಕನುನಯದೊಳಧಿಪರಜ ಹರಿಗಳಿರ್ವರು ನಿಕೃಷ್ಟರು ಕಣಾ ಪರಿಭಾವಿಸೇ ೭

ಜ್ವಲಿಸುತುರಿವುತ್ತಿಪ್ಪ ವಹ್ನಿಯಂ ಬಲ್ಪಿನಿಂ
ತಲೆ ಕೆಣಕುಮಾಡಲೂರ್ಧ್ವಕ್ಕೆಯಿದುತಿಹುದು ಭೂ
ಜಲಕಣದ ಪೊಳ್ಕೆಯೊಳಧೋಮುಖಕೆ ಬಾರದಾ ತೆಱದೆ ಧರೆಗಧಿಪಧಾತಾ
ನಲನು ದಕದಜಹರಿಗಳೇ ನೀಚಮಾರ್ಗಿಗಳು
ಮಲಹರಂ ರುದ್ರನುಪರಿಯ ತತ್ವವಪ್ಪನೈ
ನಲಿನಭವ ನಲಿನಾಕ್ಷರೆಯ್ದೆ ಬಂಟರು ಶಂಭು ಒಡೆಯನೆಂಬುದೇ ನಿಶ್ಚಯಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದಂಗವಾ ದೇವರೇಕವೆಂದಾಡುತಿಹ
ಮಂದೆವಾಳದ ವಾದಿಗಳಿಗೆ ಖಂಡನವ ಕೇ
ಳೊಂದಂಗದೊಳಗಧೋನಾಳ ಶಿಶ್ನಸ್ಥಲಂ ನಾಭಿ ಹೃದ್ಗಳಮುಖ್ಯಕೇ
ಸಂದಿರ್ಪಜರಜ ವಿಷ್ಣು ರುದ್ರರೀಶ್ವರರ ವೞಿಕೊ
ಳೊಂದಿದ ಸದಾಶಿವನಲಾ ಕರ್ತುಗಳು ಬಳಿ
ಕ್ಕೊಂದಾದಿಯಾಗಿ ನೋಡಲು ಭೃತ್ಯರೀರ್ವರವರಿಗೆ ತತ್ರಯಾಂಗಿ ಕರ್ತೂ ೯

ಆ ಪಿತಾಮಹ ಹರಿಗಳೀರ್ವರುಂ ಭೃತ್ಯರಾ
ಕಾಪಾಲಿ ರುದ್ರನೇಕರ್ತುವಲ್ಲದೆ ಸಮಾ
ಲಾಪ ಮಂಗಳಹುವವರಂ ಬಾಯ ಒಡಿದಂತೆ ದೃಷ್ಟವಮಂ ಪೇಳ್ವೆನಿನ್ನೂ
ಸ್ಥಾಪಿಸಿದ ದೇಹದೊಳು ಗುದವದನವೆರಡಲ್ಲ
ದೇಪರಿಯೊಳೆರಡನೊಂದಾಗಿ ಕಾಬನೆ ಯಥಾ
ಸ್ಯಾಪಾನಯೋಸ್ಸಾಮ್ಯವೆಂದೆನಲ್ ಛಿದ್ರತ್ವವೆಂಬ ಪ್ರಮಾಣನಿಂದಾ ೧೦

||ಸಾಕ್ಷಿ|| ಯಥಾ ಸ್ಯಾಪಾನಯೋಸ್ಸಾಮ್ಯಂ ಛಿದ್ರತ್ವಂ ನೈವವಿದ್ಯತೇ
ತಥಾ ವಿಷ್ಣ್ವಾದಿ ಬುದ್ಧಿಶ್ಚ ರುದ್ರಂ ಸಾಮ್ಯಂ ನ ವಿದ್ಯತೇ ೧

ತನ್ನಧೋನಾಳವಮಂ ಬಾಯ ಸರಿಯೆಂದು ಕಾ
ಣ್ಬಂ ನಳಿನಲೋಚನಾದಿಗಳ ಶಿವಗೆಣೆಯೆಂದು
ಕುನ್ನಿಯಂದದೆ ನುಡಿದನ್ಯೆ ಸಲೆರುದ್ರನೊಡೆಯಂ ಹರಿಯಜರ್ಭೃತ್ಯರೂ
ಮುನ್ನಲಾ ವಿಧಿ ವಿಷ್ಣುಗಳು ಶಿವಗೆ ಭಕ್ತಿಯಿಂ
ಬಿನ್ನವಿಸಿ ಶುಕವಪ್ಪವೇತಿ ವಿಶ್ವೇಶ್ವರಾ
ನಿನ್ನಡಿಯ ಲೆಂಕರೆಮ್ಮುದಯ ಮರಣಂ ನಿಮ್ಮ ಕಣ್ದೆಱೆದು ಮುಚ್ಚುವನಿತ್ತೈ ೧೧

||ಸಾಕ್ಷಿ|| ಶುಕವತ್ತವ ವಿಶ್ವೇಶ ಕ್ರೀಡಾಯಾಂ ಕೇವಲಂ ವಯಂ
ತವೋನ್ಮೇಷ ನಿಮೇಷಾಭ್ಯಾಮುಸ್ಮಾಕಂ ಪ್ರಳಯೋದಯಾ ೨

ಎಂದೊಡದಱಿಂ ಭೃತ್ಯರೈ ಹರಿಯಜರ್ಕಳಿಂ
ನೊಂದು ದೃಷ್ಟಂ ಮರಣವಾಗೆ ಧರೆ ಜಲವೆರಡ
ನೊಂದಿಹುದು ಪೆಣನದಜ ಹರಿಗಳವಲಾ ರುದ್ರಮುಖ್ಯರಾಧೀನದನಲಾ
ಮಂದಾನಿಲಾಕಾಶವೆಯ್ದೆ ತೊಲಗಲ್ಕೆಕುಣ
ಪಂಧರೆಯೊಳುರೆ ಕೊಳೆತು ಹುಳಿತು ಕೆಡುವುದು ಕಣಾ
ಇಂದುಧರನೇ ಕರ್ತುವ್ಯೆ ನಿಕೃಷ್ಟರು ಹರಿಯಜರ್ಕಳೆಂಬುದನು ತಿಳಿಯೈ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕದೊಳಗೊಂದಂಗವೆಂದು ಹರಿಹರರಿರ್ವ
ರೇಕರೆಂಬರು ಕೆಲಂಬರು ಪುಲ್ಕಸರ್ಕಳಾ
ಲೋಕಿಸರಲಾ ತ್ರಿಪುರಹರ ಮುಖ್ಯನಾಮದಂದದೊಳು ಕೊಬ್ಬಿದ ವಿಷ್ಣುವಾ
ಆ ಕಾಲದಲ್ಲಿ ಸಂಹಾರವಮಂ ಮಾಳ್ಪಂ ಪಿ
ನಾಕಿಯಾ ಹರಿಯ ಕೊಂದುದಱಿಂದ ಹರಿಹರನ
ಲೈ ಕೇಳು ಶಿವನೊಡೆಯನಾ ಕೃಷ್ಣ ವಿಧಿಗಳೇ ಭೃತ್ಯರೆಂಬುದು ನಿಶ್ಚಯಂ ೧೩

ಹರಿಹರವೆನಿಪ್ಪ ತಾಣದೊಳು ಶಿವವಿಷ್ಣುಗಳು
ಬೆರೆದೊಂದು ದೇಹದೊಳಗಿಪ್ಪರದು ಕಾರಣದೊ
ಳೆರಪಿಲ್ಲವೇಕವೆಂದೆಂಬಜ್ಞಗಾರ್ದಭಂಗಳ ನುಡಿಯ ಪಾನವಾಯ್ಗೇ
ಸರಿಯದಱ ಪೂರ್ವಕಥೆ ಎಂತೆನೆ ಗುಹಾಸುರಂ
ಸರಸಿಜೋದ್ಭವನ ಕುರಿತುಗ್ರತಪಮಂ ಮಾಡಿ
ಪಿರಿಗಪ್ಪಸಿರಿಯಂ ಪರಾಕ್ರಮಂಗಳ ಪಡೆವ ಕಾಲದೊಳಗಸುರನೆಂದಂ ೧೪

ಧರಣಿಯೊಳಗಾರಿಂದಲಾದೊಡಂ ಸಾಯದಿಹ
ವರವ ನೀಯೆನಲಜಂ ನುಡಿದನೆಲೆ ಜಾತಸ್ಯ
ಮರಣವೆಂಬುದು ತಪ್ಪದಸ್ಮಾದಿಗಳಿಗಸುರಾ ನೀನದೆಂತಪ್ಪನಿಂ
ಮರಣವಹನೆಂಬುದಂ ಬೇಡಿಕೊಳ್ಳೆನಲಾಗಿ
ಹರಿಹರಾಂಗದ ಮೂರ್ತಿಯಿಂದಳಿವೆನೆಂದು ಪಡೆ
ದುರವಣಿಸಿ ಲೋಕಮಂ ಹಾಳುಮಾಡುತ್ತ ಘೋಳಿಡಿಸುತಿರ್ದಂ ರಕ್ಕಸಂ ೧೫

ಸರ್ವರಿಗಶಕ್ಯವಾಗಿರಲು ಹರಿಯೈತಂದು
ಪಾರ್ವತೀಶ್ವರಗೆ ವಂದಿಸಿದೆದೇವ ರಕ್ಕಸನ
ಗರ್ವಮಂ ಮುಱಿವುದು ನಿಮಿತ್ತದಿಂ ನಿನ್ನ ಪುರುಷಾಕೃತಿಯೊಳರ್ಧವೀಯೆ
ಉರ್ವಿಯೊಳಗದಕೆ ನಾಂ ಸ್ತ್ರೀಯರೂಪಾಗಲಂ
ತಿರ್ವರೊಂದಾದಂತುಟಾದಪುದು ಪಾಲಿಪುದು
ಗುರ್ವಗ್ರಗಣ್ಯಯೆಂದಾಗಿ ಬಿನ್ನೈಸಿದಂ ದೇವನಡಿಗಾ ಮಾಧವಂ ೧೬

ನೆಟ್ಟನೆ ಮಹಾರಾಯನುಡುಗೊರೆಯ ಹಚ್ಚಡದೊ
ಳಿಟ್ಟಭಯಹಸ್ತವಂ ಕಳುಪುವಂದದೊಳು ಮಿಗೆ
ಕಟ್ಟಕ್ಕಱಿಂ ಚಿತ್ರಪಟದಲ್ಲಿ ರೂಪ ಬರೆದಿನೆಯನೊಲ್ಮೆಯ ವನಿತೆಗೇ
ಅಟ್ಟಲವನಪ್ಪಿಯವಳುಱೆ ಸುಖಿಸುವಂದದಿಂ
ಕೊಟ್ಟನೀಶ್ವರನಲ್ಲಿ ನಿಜರೂಪಪತಿಯಾಗಿ
ಹೆಟ್ಟಿಗೆಯ ರೂಪನಾಂತಾ ವಿಷ್ಣು ದನುಜನಂ ಕೊಲಲು ಹರಿಹರ
ಮೂರ್ತಿಯೈ ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೊಡವಿಯೊಳು ರಾಯ ರಾಯರಗಂಡನೆದೆಂದು
ನುಡಿದು ಪೊಗಳಿಸಿಕೊಂಬ ನೃಪಗೆ ಹೆಂಬೇಡಿಯೆನೆ
ಮಡದಿಯಿಂದದೊಳಿರ್ಪರಾಜಂ ಸಮಾನವೇಯಗ್ರ ಪುರುಷಾಂಗಚಿಹ್ನಾ
ಒಡನೆ ಹೆಣ್ಣಾಗಿ ತಪದಿಂ ಲೆಂಕನಾಗುತ್ತ
ಪಡೆದ ಹರಿಹರರ ಭಿನ್ನತೆಯೆಂಬವರ ಬಾಯೊ
ಳಿಡಿಕಿಱುವ ಹುಡಿವೊಯ್ದು ಮಡದಿಂದ ಘಟ್ಟಿಸದೆ ಬಿಡುವುದೇ
ನಮ್ಮ ಕೋಪಾ ೧೮

ಶ್ರೀಲೋಲಗೀಶ್ವರಭಿನ್ನವೆಂದೆಂಬ ವಾ
ಚಾಲನೀಚರ ಬಿನುಗುಬಾಯಲ್ಲಿ ಥಳಥಳನೆ
ಬಾಲವುಳು ಸುರಿವವೈ ತಥ್ಯವದುಕಾರಣಂ ತದ್ಭೇದವಮಂ ತಿಳಿಯದೇ
ಮೇಲೆ ಹರಿಯಜರುದ್ರರೀಶ್ವರ ಸದಾಶಿವರ
ಸಾಲಿಟ್ಟು ನುಡಿದೇಕವೆಂದವನೆ ಪುಲ್ಕಸಂ
ಲೋಲ ರುದ್ರೇಶ್ವರ ಸದಾಶಿವಾಂಗನೆ ಕರ್ತು ವಿಷ್ಣು ವಿಧಿಗಳು ಭೃತ್ಯರ್ಕೆ ೧೯

ಅದುಕಾರಣಂ ಶಂಭು ತನ್ನ ಬಲದೆಡದಲ್ಲಿ
ಯುದಜಸಂಭವ ವಿಷ್ಣುಗಳ ಪುಟ್ಟಿಸಿದನಲಾ
ಮೊದಲವರು ತದ್ಭೂಮಿಜಲಕಧಿಪರಾಗಿ ಲೋಕಾದಿಲೋಕವನೆಲ್ಲವಾ
ಉದಯವಂ ಮಾಡಿದ ಬ್ರಹ್ಮನಭವಾಜ್ಞೆಯಿಂ
ದೊದವಿ ರಕ್ಷಿಸುತಿಪ್ಪನಾ ಕೇಶವಂ ಸ್ವತಂ
ತ್ರದ ಮೂರ್ತಿಗಳೆಯಿವರು ಶಿವನ ಲೆಂಕರು ಕಣಾ ತಿಳಿದೆಯಾ ಮತ್ತೆಕೇಳೂ ೨೦

ಮುಂತೆಯಾ ಜನಗಳೀ ವ್ಯವಹಾರಮಂ ಪಗಲ
ನಂತ ಪರಿಯಿಂ ಮಾಡಿ ರಾತ್ರಿಯೊಳು ನಿದ್ರೆಯಿಂ
ದಂ ತಳ್ತು ಕಳೆವಂತೆ ಹಲವು ಬಗೆಯಿಂ ಸೃಜಸಿ ರಕ್ಷಿಪೀ ವಿಧಿಯ ಹರಿಯಾ
ಎಂತು ಸಂಹರಿಸಿದನೆನಲ್ಕಜನನಾ ವಿಷ್ಣು
ವಂತರಾಳದೊಳಡಂಗಿಸಿಯವನ ತನ್ನಂಶ
ದಿಂ ತಾನೆಯಾದ ರುದ್ರನೊಳು ಲೀಯ್ಯವನೆಸಗಿದಂ ಕಣ್ಯೆ ಸರ್ವೇಶ್ವರಂ ೨೧

ಹುಟ್ಟಿಸಿದ ರಕ್ಷಿಸಿದ ಜಗಮನೀಕ್ಷಿಸುತಲಾ
ನಟ್ಟನಡುಹಣೆಗಣ್ಣನಾ ಸ್ವತಂತ್ರಂಗೆಯುದು
ಸುಟ್ಟುರುಪಿ ಬೂದಿಯಂ ಮಾಡಿ ಸರ್ವರು ಸತ್ತುಠಾವಿನೊಳು ತಾನೋರ್ವನೇ
ಕಟ್ಟಧಿಕನಿರ್ದನದುಕಾರಣಂ ಸುಡುಗಾಡ
ನೆಟ್ಟನಾನಂದದಿಂ ಕಾಯಿದುಕೊಂಡಿರುತಿಹಂ
ದಿಟ್ಟಿ ಮೂಱಿರ ದೇವನೆಂಬರೆಲ್ಲಾ ಜನಂ ಶಂಭುಗಂತದು ಭೂಷಣಂ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಿಶ್ವನಾಥನೋರ್ವನೆ ಕರ್ತೃ ಹರಿಮುಖ್ಯ
ದೇವತಾದಿಗಳನಿತ್ಯರುಗಳೆಂದೆನಲಾಗಿ
ಸಾವವರುಳಿದಿರ್ಪವಂ ಶಂಭುವದುಕಾರಣಂ ಜರಾಮರಣದೂರಂ
ಪಾವನ ಮಹೇಶ್ವರಾ ಭಸಿತಮಂ ಕೊರ್ತು ಸ
ರ್ವಾವಯುವದಲ್ಲಿ ಲೇಪಿಸಲು ಭಸ್ಮಾಂಗಿ ಎಂ
ಬಾ ವಿಶೇಷದ ನಾಮದಿಂದೆಸೆವನಾ ಶೂಲಿಯತಿಶಯ ಕಪಾಲಮಾಲೀ ೨೩

ಏನುವೇನೂ ಇಲ್ಲದಾ ಮಹಾ ಶಂಕರಂ
ತಾನೋರ್ವನೆಯಿರಲ್ಕಾದಿವಸ್ತುವೆನಿಪಭಿ
ಧಾನವಾದುದುಕಣಾ ತಾನಲ್ಲದಾರುವಿಲ್ಲದ ಕಥದೊಳೇಕನಾಮಂ
ಆ ನಗಜೆಯಾಣ್ಮಗಾದುದುಕಣಾ ತನ್ನಿಂದ
ತಾನೆಯಾದುದರಿಂ ಸ್ವಯಂಭುವೆಂಬಾಖ್ಯವಿ
ನ್ನಾ ನಿಖಿಲಮಂ ಕೊರ್ತು ಸಂಹಾರಮಂ ಮಾಡೆ ಹರನೆಂಬ ಹೆಸರಾದುದ್ಯೆ ೨೪

ಆ ಶಿವನು ತನ್ನ ಪರಮಾನಂದ ಮೂರ್ತಿಗಳ
ಸಾಸಿಗಳೆನಿಪ್ಪ ಗಣಸಂಕುಳದ ಮುಂದತಿ ವಿ
ಲಾಸದಿಂ ತಾಂಡವಾಡಂಬರವನೆಸಗಿದಂ ಲೀಲಾಸ್ವತಂತ್ರನಭವಂ
ಭಾಸುರಸ್ವಚ್ಛಂದ ಸಂಪನ್ನನಾನಂದ
ವಾಸ ಪರಮಾನಂದಮೇದುರಂ ಪರತರಾ
ಕಾಶಮಧ್ಯಸ್ಥವೆನಿಪಾತ್ಮ ತಕ್ತ್ಯೈಮೃಶಪ್ಲವಮಾದುದೇನೆಂಬೆನೂ ೨೫

ಅನಘನೆನಿಸುತ್ತಿಪ್ಪ ಪಾರನಸಮಂ ದೇವ
ವಿನುತನಾ ತಾಂಡವಾಡಂಬರದ ಬಿಣ್ಪಿನಿಂ
ಜನಿಸಿತ್ತು ಮೌಕ್ತಿಕದ ಮಾಳ್ಕೆಯಿಂ ಘರ್ಮಜಲ ಬಿಂದು ಹೊಳಹೊಳೆದು ಬಳಿಕಾ
ಘನತರದ ಕಡೆಯಿಲ್ಲ ಸಮವಿಲ್ಲದಂತದಂ
ಸನಯದಿಂ ಶಿರದಲ್ಲಿ ತಳೆದನಾ ಗಣಕುಲೇ
ಶನು ತನ್ನಿಮಿತ್ತದಿಂ ಗಂಗಾಧರಾಖ್ಯನಾದನು ಕಣಾ ಕೇಳು ಕುವರಾ ೨೬

||ಸಾಕ್ಷಿ|| ಅತಸ್ವಚ್ಛಂದಸಂಪನ್ನಂ ಪರಮಾನಂದ ಮೇದುರಂ
ಪರಮಾಕಾಶ ಮಧ್ಯಸ್ಥ ಮಾತ್ಮಶಕ್ತ್ಯೈಮೃತಪ್ಲವಂ
ಅಪಾರನಸಮಂದೇವೋ ಭಭಾರಾ ಶಿರಸಾಹರಃ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಗನಕ್ಕೆ ನಾಮವಾಗಂ ಕಣಾಕಾಶದೊಳು
ಮಿಗೆಗಾಮಿಯಾಗಿ ಪರಿವುದಱಿಂದ ಗಾಕ್ಷರಂ
ಸೊಗಯಿಸುವ ಗಂಗಾಭಿಧಾನವಾದುದು ಕಣಾ ಕೂಡಿಯಾ ತತ್ವವಱಿವಾ
ಸುಗುಣಿಗಳು ತನ್ನಿರುಕ್ತಿಯೊಳು ಪೇಳುವರದಱ
ಬಗೆಯನಱಿಯಂತಪ್ಪ ಗಂಗೆಯಂ ಧರಿಸಲಾ
ವಗಮೆಯ್ದೆ ಗಂಗಾಧರಾಖ್ಯನೀಶ್ವರನೆಂದು ಮತ್ತೆಪೇಳುತ್ತಿರ್ದನೂ ೨೭

ಶ್ರೀಪರಂಜ್ಯೋತಿಯಧಿಕನನಾ ಮಹಾಜ್ವಲನ
ರೂಪನಖಿಲಕ್ಕೆ ಕರ್ತನ ಹರನನಧಿಕತಾ
ರಾಪಥಾಮಲಕೇಶನಗ್ರಗಣ್ಯನ ತಾಂಡವಾತಿಶಯದಿಂದದರ್ಧ್ವವಾ
ವ್ಯಾಪಿಸಿದುದುಮಾಮೂರ್ತಿ ಶಿವನಂಗದೊಳಗಡಗಿ
ಯಾ ಪರಾತ್ಪರನ ಶಿರದೊಳಗಾತ್ಮ ಶಕ್ತಿ ಪ್ಲ
ವಾ ಪವಿತ್ರತೆಯಾಗಲದನೀಶ್ವರಂ ಧರಿಸಲಾಗಿ ಗಂಗಾಧರನಲ್ಲೆ ೨೮

ಉದಕಮಂ ಪುಟ್ಟಿಸಿದನೀಶ್ವರಂ ನಿಜ ಮಸ್ತ
ಕದಿನಖಿಳಜಲಕಣಂಗಳು ತಾಂಡವದಿನೆಯ್ದೆ
ಕೆದಱಿ ನಿತ್ಯಾನಂದಶಕ್ತಿಯಿಂ ಪರಮ ಸುಖಮಯವಿರ್ಯ್ಯಮಂ ಶಂಕರಂ
ಸದಮಲದ ಸಲಿಲದೊಳು ಬಿಡಲಂಡವಾಗಲಂ
ತದಱೊಳಜಹರಿದೇವ ದಾನವಗು ಮಾನುಷ್ಯ
ರುದಯಿಸಿದರಖಿಳಜಂತುಗಳದು ನಿಮಿತ್ತಂ ಜಗತ್ಪಿತಂ ಶಿವನಾದನೂ ೨೯

||ಸಾಕ್ಷಿ|| ಗಗನಂಗಮಿತಿ ಪ್ರೋಕ್ತಂ ಗಾಮಿನೀ ಗೇಹಕಥ್ಯತೇ ೪
ಗಗನೇ ಗಮನಾದ್ಗಂಗಾ ನಿರುಕ್ತಾತತ್ವವೇದಿಭಿಃ
ಮಹಾಜ್ವಲನರೂಪಸ್ಯ ಹರಸ್ಯ ಶಿರಸಿಃ ಪ್ರಭೋ ೫
ಜ್ವಾಲಾಭಿರ್ವ್ಯೋಮಕೇಶಸ್ಯ ವಿಲೀನಾಸಾ ಸ್ವಯಂ ಶಿವಾ
ಮಹಾನಂದಾಮೃತಪ್ಲಾವಸ್ತೇನ ಗಂಗಾಧರೋಹರಃ ೬
ಆಪ ಏವಸಸರ್ಜಾದೌ ತಾಸುವೀರ್ಯ್ಯಮಪಾಸೃಜತ್
ತದಂಡಮಭವದ್ದೇವಂ ವಿಶ್ವಸ್ಯಾಯತನಂ ಮಹತ್ ೭

ಮತ್ತಾ ಸನತ್ಕುಮಾರಂ ನಂದಿಕೇಶ್ವರ ಗು
ರೂತ್ತಮಗೆ ಬಿನ್ನವಿಸಿದಂ ಜೀಯ್ಯ ಗಂಗೆಯ
ತ್ಯುತ್ತಮದೊಳಂ ಬಳಿಕ್ಕಾವ ತಱದಿಂದುದಯಿಸಿತ್ತದ ಶಿವಂ ಶಿರದೊಳೂ
ಹೊತ್ತನಾ ಕಥೆಯು ನಿರವಿಸುದೆನಲು ಕೂಡೆ ಪೇ
ಳುತ್ತಿರ್ದನಾ ಶಿಲಾದಾತ್ಮಜಂ ಕರುಣದಿಂ
ಮತ್ತಾತ ಶಂಭು ಪಾಮನ್ಮಾತೆ ಗೌರಿಗೊರೆದಾ ಕಥನ ಮೆಂತೆಂದೊಡೇ ೩೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಲಸಿತಾಗಮಭಾಗೆ ಎನಿಸುವಾ ಸ್ವಚ್ಛಂದ
ಲಲಿತಭೈರವಿಯೞಲ್ಲಿ ಕೈಲಾಸಪುರದ ನಿ
ರ್ಮಲ ಸಭಾಮಂಟಪದ ನವರತ್ನ ಸಿಂಹಾಸನದೊಳಿರ್ಪ ಸರ್ವೇಶಗೇ
ನಲಿದು ದೇವಿಯರು ವಂದಿಸಿ ಗಂಗೆ ಯುದ್ಭವದ
ನೆಲೆಯ ಕೇಳಲು ಹಿಂದನಂತಕಲ್ಪದ ಕಥೆಯ
ಲಲನೆಗಹುದದೆಂಬಿನಂ ತಿಳುಪಿದಾ ಕಥನವೆಂತೆನಲಾಗಿ ಬಿತ್ತರಿಪೆನೂ ೩೧

ಪೂರ್ವದೊಳು ಸಿಂಹಾಸನಾಸೀನನಾಗಿರ್ದ
ಸರ್ವೇಶ್ವರನ ಹಿಂದೆ ಬಂದು ಮೋಹಿನಿಯಪ್ಪ
ಪಾರ್ವತೀದೇವಿ ನಿಜಹಸ್ತದಿಂ ಶಂಕರನ ನಯನನಂಗಳಂ ಲೀಲೆಯಿಂ
ಊರ್ವಿ ಮುಚ್ಚಲು ದೇವಿಯರ ಕೈಗಳೆರಡನಾ
ಗುರ್ವಗ್ರಗಣ್ಯನಪಹರಿಸಲಾಱದೆ ತನ್ನ
ಖರ್ವ ಭಾಳಾಕ್ಷಿಯಂ ತೆಗೆಯೆ ಘುಡಿ ಘುಡಿಸಿ ಪಸರಿಸಿದುದು
ಮಹಾಗ್ನಿಯಾಗಾ ೩೨

ಕುಡಿಯಿಟ್ಟು ಪರಿದು ಹರಭಾಳಾಂಬಕಾನಲಂ
ಘುಡಿಘುಡಿಸಿ ಹಿಮವನ್ಮಹಾ ಪರ್ವತಾಧಿಪನ
ಸುಡುತಿರಲು ದೇವಿಯರಿದೆಮ್ಮಯ್ಯಗಕಟ ಸಂಕಟವಾದುದೆಂದು ಮಱುಗೀ
ನುಡಿದಳಾ ಹರಗಿದೇಂ ಕಾರಣಂ ಶಿವ ನಿನ್ನ
ನಡುಗಣ್ಣ ತೆಗೆದೆಯೆನ್ನಯ ತಂದೆ ಬೆಂದಪಂ
ಒಡೆಯ ನಿರವಿಪುದೆನಲು ನಸುನಗುತ ಪೇಳ್ದನಂದೀಶನಮಲ ಪ್ರಕಾಶಾ ೩೩

ಎಲೆ ದೇವಿ ಕೇಳು ಮೋಹಿನಿಯೇ ಮತ್ಪ್ರಾಣೇಶಿ
ನಲಿದು ನೀಂ ಕಣ್ಣ ಮುಚ್ಚಿದೆ ಚಂದ್ರಸೂರ್ಯರಿಂ
ಸಲುವವ್ ದಿವರಾತ್ರೆಗಳು ನೀನವಂ ಭಾಷಣಿಸೆ ನಿಮಿಷವ್ವೈಸೆ ನಿನಗೇ
ಸಲೆ ಜಗಕ್ಕನಿತುಕಾಲದೊಳಖಿಳಯುಗಕೋಟಿ
ಸಲುವವು ಕಣಾ ಬಳಿಕ್ಕನಿತುದಿನವೆಯ್ದೆ ಕ
ತ್ತಲೆಯಾಗಲಾ ಪ್ರಳಯವಪ್ಪುದೆಂದಱಿದು ಯೋಚಿಸಿದೆವೌ ಸುಂದರಾಂಗೀ ೩೪

ಉನ್ನತ ಪ್ರಾಣವಲ್ಲಭೆಯೆ ಕೇಳ್ನಾಂ ಕೂರ್ತು
ನಿನ್ನ ಕೈಯ್ಯಂ ತೆಗೆಯಲಾಱದಳ್ಕಿಂದ ನೆನ
ದಿನ್ನೀ ಜಗಕ್ಕೆ ಬೆಳಗಂ ಬೀಱಿ ಹಣೆಗಣ್ಣ ತೆಱಿದೆನೆನಲಾ ಮಹೇಶಂ
ಚೆನ್ನಾಯ್ತು ನಮ್ಮ ತಂದೆಯ ಸುಡುವುದೆನಲಾಗಿ
ಪನ್ನಗಾಧರನಾಕ್ಷಣಂ ಮುಚ್ಚಿಕೊಂಡನ್ನೆ
ಭಾಳಾಕ್ಷಿಯಂ ನಿನ್ನಾಣೆ ಭಯವಿಲ್ಲ ನಿನ್ನಯ್ಯಗೆಂದನೀಶಂ ೩೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ನುಡಿಯ ಕೇಳುತಂ ಬಿನ್ನವಿಸಿದಳು ಶಿವೆ ಭ
ವಾನಿ ಚಿನ್ಮಯ ನಿನ್ನ ತತ್ಪ್ರಭಾವವೆ ಸಾಲ
ದೆ ನಯನವಮಂ ತೆಱೆಯಲೇಕೆ ಮಿಸುಗುವ ನಿಮ್ಮ ಸುಲಿಪಲ್ಲ ಕಾಂತಿ ಶೈತ್ಯಾ
ಭಾನು ಕೋಟಿ ಪ್ರಭೆಗೆ ಮಿಗಿಲಲ್ಲವೇ ಎಂದು
ಸಾನುರಾಗದಿ ನುಡಿಯಲಬಲೆಯಂಗುಲಿ ಸೋಂಕಿ
ದಾನಂದದಿಂದ ಹರುಷಾಶ್ರುಗಳು ಜನಿಸಿದವು ಶಂಕರಾಕ್ಷಿದ್ವಯದೊಳೂ ೩೬

ಶ್ರುತಿ ಬಿಂದು ಮುದ್ಧರಿತೇಕ್ಷಣಾದೆನಲು
ನುತ ಭವಾನಿಯ ಬೆರಲ್ಗಳೀರೈದಱಿಲ್ಲಿಯುಂ
ನತ ದಶಸ್ಯಾಂಗುಲಿಯೆನಲು ಹತ್ತು ಹನಿಗಳಾಗಿರ್ದವವು ಸೌಖ್ಯದಿಂದಾ
ಕ್ಷಿತಿಯೊಳುಪಪಾತಜಲಬಿಂದವಯೆನುತ್ತಿರಲು
ಸುತ ಕೇಳು ಬೀಳಲವು ದಶಗಂಗೆಯಾದವೂ
ರ್ಜಿತ ಪವಿತ್ರತೆಗಳಂ ಕೇಳೆಂದು ನುಡಿವುತಿರ್ದಂ ನಂದಿಯಾನಂದದೇ ೩೭

ಆ ಮಹಾದೇವ ನಯನೋದ್ಭವದ ಗಂಗೆಗಳ
ನಾಮವೆಂತೆನಲಾಗಿ ಹತ್ತನಭಿವರ್ಣಿಪೆಂ
ಶ್ರೀ ಮಹಾದೇವನಂ ಭಜಿಸಿ ಹರಿ ವೈಷ್ಣವಿ ಎನಿಪ್ಪ ಗಂಗೆಯನು ತನ್ನಾ
ಸೀಮೆಯಹ ವೈಕುಂಠಕೊಯ್ದನಭವನನಾ ಪಿ
ತಾ ಮಹಂ ಬೇಡಿ ನಿಜಲೋಕಕ್ಕೆ ಕೊಂಡೊಯ್ದ
ನೈ ಮಗನೆ ಯದ್ಬ್ರಾಹ್ಮಿಯೆಂದೆಂಬ ಗಂಗೆಯುಂ ಶಂಕರನ ಪೊಗಳುತಿಂದ್ರ ೩೮

ಮಂದಾಕಿನಿಯೆನಿಪ್ಪ ಗಂಗೆಯುಂ ಕೂರ್ತು ನಿಜ
ಮಂದಿರಕ್ಕೊಯ್ದನಂತಲ್ಲಿ ಭೋಗಾವತಿಯ
ಮುಂದೆ ಕುದ್ದಾಲೆಯಾ ಬ್ರಹ್ಮೋಕ್ತಿಭೋಗ್ಯೆಯಾ ಸುರಸೆ ಸೇನಾಸಿ ಬಳಿಕಾ
ಚಂದದಿಂದಂ ಪ್ರವಾಹೆ ಎನಿಪ್ಪವೇಳುನದಿ
ಯಿಂದುಧರನಿಂದುದ್ಭವಿಸಿ ಪರಿದವವು ಕೂಡೆ
ತಾಂ ದಶಮಹಾಗಂಗೆಗಳು ತನ್ಮಹತ್ವಮಂ ಪೇಳಲಳವೇ ಧರೆಯೊಳೂ ೩೯

ಏಳು ಗಂಗೆಗಳು ಘುಳಿಘುಳಿಸುತ್ತ ಪರಿದವು ಭ
ಡಾಳಿಸುತ್ತ ಚರಚರಸಿಂಧುಗಳ ಮೀಱಿ ಬಳಿ
ಕೇಳಿಗೆಯೊಳೆಯಿದೆ ದಳವೇಱಿ ಕಳೆಯೇಱಿ ಪರಿವುತ್ತ ಮೊಱೆವುತ್ತ ಮತ್ತೇ
ಮೇಳವಿಸಿ ಪೆಚ್ಚುತ್ತ ಹತ್ತುತ್ತ ಹಬ್ಬುತ್ತ
ಲಾಲೋಕಿಸಲ್ಬಯವನೀವುತ್ತ ಕೊಬ್ಬುತ್ತ
ಹೇಳಲಳವೇ ಕೂರ್ತು ಸುಳಿವುತ್ತ ಸೂಸುತ್ತ ಮರಳುತ್ತ ಮಿಗೆ ಹೊರಳುತಾ ೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಲಿವುತ್ತ ತೆರೆಗಳಭ್ರಾವನಿಯೊಳಾಗ ತುಂ
ಬಲು ನೊರೆಗಳೆಸೆವುತ್ತ ಕೂಲಮಂ ಘರಿಷಿಸು
ತ್ತಲಿವುತ್ತ ಬುದ್ಬುದಂಗಳು ಜನಿಸುತುಬ್ಬುತಾಸೀದ್ಗೀರ್ನವೆನಲು ವೇದಂ
ಸಲೆ ದಿಕ್ತಟಂ ವಿಯತ್ತಟ ಜಗತ್ತಟವೆಂದೆ
ನಲು ಚರಾಚರನಿಷಿಕ್ತಂ ಭುವನ ಭೂಚರಾ
ವಲಿಯುತ್ತ ತೇಂಕಾಡುತೆಯಿದುವುರವಣೆಯ ಕಂಡಜಹರೀಂದ್ರರು
ನಡುಗುತಾ ೪೧

ನುಡಿದರೊಬ್ಬೊಬ್ಬರತ್ಯಾಶ್ಚರ್ಯದಿಂದ ಸುರ
ರೊಡೆಯರಾ ಪೂರವಂತದು ಜಲಾಚರನದು
ಗ್ಗಡನವೆ ಗಂಗಾಜಲದಿ ಬಪ್ಪವೇನು ಕುಲಗಿರಿಗಳೇ ಪೆರ್ದೆರೆಯಲಾ
ಅಡಸಿ ತೋಱುವವೇ ತಾರಕಿಗಳೇ ಅಲ್ಲ
ಸಿಡಿವ ಜಲಬಿಂದುಗಳು ಬಳಿಕಿವು ಶರನ್ಮೇಘ
ದೆಡೆಯಾಟವಲ್ಲಲೇ ನೊರೆಗಳೊಬ್ಬುಳಿ ಎನುತ ನಡುಗಿ ಮತ್ತೇಂ ಬಗೆದರೂ ೪೨

ಅವು ಕುಭೃತ್ಕಮಠಂಗಳೇ ಹೊಳೆವ ಜಲಶಂಖ
ನಿವಹಂಗಳಿವು ಭುಜಗವಲಯುಗಳೆಯುಲ್ತು ವಾ
ಪ್ರವಿಮಲಾವರ್ತನೋದಕಮವೇಂ ದಿಗ್ಗಜಂಗಳೆ ಬುದ್ಬುದವ್ರಾತವೈ
ಇವು ತಾಂ ಗ್ರಹಂಗಳೇ ತಳೆದಜರದಂಡಂಗ
ಳವರು ತದ್ದೈತ್ಯರೇ ಕ್ರೀಡಿಪಾ ಪ್ರಮಥಕುಲ
ವಿವರು ದಿಕ್ಪಾಲರೇ ಬ್ರಹ್ಮಾಂಡಧಾರಿಗಳೆನುತ್ತ ನೋಡುತ್ತಿರ್ದರೂ ೪೩

ಬಂದುದು ಜಲಪ್ರಳಯುವೆನುತ ಹರಿಯಜಮುಖ್ಯ
ವೃಂದಾರಕರ್ನಡುಗಿ ಶಿವನ ಪೊಗಳುತ್ತಿರ್ದ
ರಿಂದುಧರಜಗದಾದಿ ಪುರಭೇದಿ ಕಾಮಾರಿ ಕಾಲಾರಿ ವಿಷಭಕ್ಷನೇ
ಕುಂದದಾ ಕಾಮಿತ ಫಲಾಧ್ಯಕ್ಷನೇ ದಕ್ಷ
ನೆಂದೆನಿಪ ವಿಪಿನಕ್ಕೆ ದಾವನೇ ಮಹಾದೇವ
ಮುಂದುಗೆಡುವೆಮ್ಮನೀ ವಿಳಯೋದಕದೆ ಮಡಿಯದಂತೆ ರಕ್ಷಿಪುದೆಂದರೂ ೪೪

ಎನುತಲಾ ವಿಷ್ಣುಮುಖ್ಯಾಮರರು ಮೊರೆಯಿಡ
ಲ್ಕನಿಬರಿಗೆ ಕೂರ್ತಭಯವಿತ್ತು ಸರ್ವೇಶ್ವರಂ
ಸನಯದಿಂ ಶ್ರುತಿಗುಹ್ಯತಜ್ಜಟಾಜೂಟಾಗ್ರಧಾರಿಣಾ ಎಂಬರ್ಥದೇ
ಘನವೆನಿಸುವರ್ನವಾರ್ಕೀರ್ಣಾಬ್ಜಜಾಂಡ ಸೌ
ಖ್ಯನಿಕಾಯ ಪರಿಪೂರ್ಣ ಸಮುದೀರ್ಣ ಪೂರ್ಣತಾ
ದ್ಯನುಪಮಹಾರ್ಣವಾಕಾರಸಮುದಾತ್ತ ಸಂವರ್ತಮಯ ಜಲಪೂರಮಂ ೪೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ತುಂಗಮಕುಟ ಪಟುಘಟಜಟಾಗ್ರದಿಂ
ದುತ್ತಮಂ ತನ್ನೊಂದು ರೋಮದಗ್ರದ ಮೊನೆಯೊ
ಳೆತ್ತಿಯಾ ತುಹಿನಕಣವೊಂದಧರಿಯಿಸುವಂತೆ ಧರಿಸಿದಂ ಕರುಣಾಗ್ರಣೀ
ಸುತ್ತಣಮರರು ಜಯ ಮಹಾದೇವ ನಮ್ಮ ಬೆಂ
ಬತ್ತಿಸುಡುತಿಹ ವಿಷವನಂದು ಪರಿಹರಿಸಿ ಕರು
ಣಾತ್ಮ ಕರುಣದೊಳು ಪೊರೆದಂತೆ ರಕ್ಷಿಸಿದೆ ಬದುಕಿದೆವೆಂದು ಕೀರ್ತಿಸಿದರೂ ೪೬

ದೇವ ತವನೇತ್ರಸಂಭವ ಜಗನ್ಮಾತಾ ಕ
ರಾವಲಂಬಸ್ಪರ್ಶನೋದಕ ಕಣೋದ್ಭೂತ
ಪಾವನದ ಗಂಗಾತ್ರಯಂಗಳಂ ಪಾಲಿಸಿ ಮದೀಯ ಲೋಕಗಳೆಲ್ಲಮಂ
ಆವಗಂ ರಕ್ಷಿಸಿದೆಯಾ ಪ್ರಕಾರದೊಳಿಂನು
ಭೂವಳಯಕೊಂದು ನದಿಯಂ ಕೊಟ್ಟು ಪೊರೆವುದೆನ
ಲಾ ವಿಷ್ಣುಮುಖ್ಯ ವಿಜ್ಞಾಪನಂ ಗೇಳಿದಂ ಶೂಲಿ ಕರಧೃತ ಕಪಾಲೀ ೪೭

ಭೂಲೋಕ ಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೪೮

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಶಂಭು ಗಂಗಾಧರಣಕೆರಡು ಕಾಂಡವಿಪ್ಪತ್ತೆರಡು ಸಂಧಿಗಳಲಾ ೪೯

ಅಂತು ಸಂಧಿ ೨೨ಕ್ಕಂ ಪದನು ೧೧೨೬ಕ್ಕಂ ಗ್ರಂಥ ೮೭ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೫

ಭಗೀರಥನು ಭೂಲೋಕಕ್ಕೆ ದೇವಗಂಗೆಯಂ ತಂದ ಕಥೆ

ಹರನ ಮಕುಟದ ಗಂಗೆ ಭೂತಳಕೆ ಬಂದು ತ
ನ್ನರಪ ಸಗರಾತ್ಮಜರು ಮಡಿಯಲು ಭಗೀರಥಂ
ತರೆ ಮೂಱು ಲೋಕಪಾವನೆಯುದಿಸಿತಮರವಾಹಿನಿ ಧರಾತಳವಮೋಹಿನೀ

ವೈತರಣಿಮುಖ್ಯ ಬಹುಪಾತಕಾಗ್ರಿಮ ಘನಮ
ಹೀತಳ ಧರಾಳಿ ನಿರ್ಘಾತನಪವಿಪ್ರಮಥ
ನೂತನಮಹಿಷ್ಠ ಸುಪುರಾತನಾಭೀಷ್ಟಪ್ರದಾತರುಣಶಶಿಶೇಖರಾ
ವಾತಸಖಚಂದ್ರಮದ್ಯೋತಶಿಖಿನೇತ್ರ ವಿ
ಖ್ಯಾತಸುಕುಮಾರಕಾ ಶ್ವೇತವಿದಳಾದ್ಯಘ
ವ್ರಾತಸಂಹರಣ ಸಂಪೂತ ರಕ್ಷಿಸು ಮಮಪ್ರೀತ ಗುರುಶಾಂತಮಲ್ಲಾ ೧

ಭರ್ಗಮಸ್ತಕದ ಗಂಗೆಯ ಮೂಱುಲೋಕಕ್ಕೆ
ಮಾರ್ಗವೆನೆ ತಂದನಂದಾ ಭಗೀರಥನಿಂದ
ನರ್ಗಳೇಷ್ಟಪ್ರಾಣಭಾವಲಿಂಗಕ್ಕೆ ಸುಕ್ರೀಮನಶ್ಶಿನ್ಮಾತ್ರದಾ
ವಾರ್ಗೋಚರಿಪ್ಪಂತೆಕೆಱಿಗಳನೂಡರ್ಚಿದ ನಿ
ಸರ್ಗಜಲ ನಿಜಕೀರ್ತಿಯಂದದೆಣ್ದೆಶೆಗಳೊಳು
ಭೋರ್ಗರೆವ ಸೈಪನೊಡರಿಚಿದ ಮೇಲಣ ಗವಿಯ ಶಾಂತನಂಜೇಶ್ವರ ಜಯಾ ೨

ಇತ್ತಲೀ ಶಿಷ್ಯಂ ಸನತ್ಕುಮಾರಂ ಗುರುಕುಲೋ
ತ್ತಮಗೆ ನಂದಿಕೇಶಂಗೆ ಬಿನ್ನವಿಸಿದನು
ದಾತ್ತ ದೇಶಕನೆ ಶಿವನಯನದಿಂ ಗಂಗೆಯೊಗೆವುದಕೆ ಮುನ್ನಖಿಳ ಲೋಕಾ
ದ್ಯೊತ್ತೊತ್ತೆಯೊಳು ನೀರ್ಗಳಿಲ್ಲದಿರೆ ಜನರುಗಳು
ಮತ್ತೇನ ಕೊಂಡು ಬದುಕಿಹರ್ಯ್ಯಯ್ಯ ಎನೆ ನಸುನ
ಗುತ್ತ ನುಡಿದಂ ಶಿಲಾದನ ಪುತ್ರ ಸುಪವಿತ್ರದಾತ್ರನುತ ಹಸ್ತವೇತ್ರಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೫

ಭಗೀರಥನು ಭೂಲೋಕಕ್ಕೆ ದೇವಗಂಗೆಯಂ ತಂದ ಕಥೆ

ಹರನ ಮಕುಟದ ಗಂಗೆ ಭೂತಳಕೆ ಬಂದು ತ
ನ್ನರಪ ಸಗರಾತ್ಮಜರು ಮಡಿಯಲು ಭಗೀರಥಂ
ತರೆ ಮೂಱು ಲೋಕಪಾವನೆಯುದಿಸಿತಮರವಾಹಿನಿ ಧರಾತಳಮೋಹಿನೀ

ವೈತರಣಿಮುಖ್ಯ ಬಹುಪಾತಕಾಗ್ರಿಮ ಘನಮ
ಹೀತಳ ಧರಾಳಿ ನಿರ್ಘಾತನಪವಿಪ್ರಮಥ
ನೂತನಮಹಿಷ್ಠ ಸುಪುರಾತನಾಭೀಷ್ಟಪ್ರದಾತರುಣಶಶಿಶೇಖರಾ
ವಾತಸಖಚಂದ್ರಮದ್ಯೋತಶಿಖಿನೇತ್ರ ವಿ
ಖ್ಯಾತಸುಕುಮಾರಕಾ ಶ್ವೇತವಿದಳಾದ್ಯಘ
ವ್ರಾತಸಂಹರಣ ಸಂಪೂತ ರಕ್ಷಿಸು ಮಮಪ್ರೀತ ಗುರುಶಾಂತಮಲ್ಲಾ ೧

ಭರ್ಗಮಸ್ತಕದ ಗಂಗೆಯು ಮೂಱುಲೋಕಕ್ಕೆ
ಮಾರ್ಗವೆನೆ ತಂದನಂದಾ ಭಗೀರಥನಿಂದ
ನರ್ಗಳೇಷ್ಟಪ್ರಾಣಭಾವಲಿಂಗಕ್ಕೆ ಸುಕ್ರೀಮನಶ್ಚಿನ್ಮಾತ್ರದಾ
ವಾರ್ಗೋಚರಿಪ್ಪಂತೆಕೆಱೆಗಳನೊಡರ್ಚಿದ ನಿ
ಸರ್ಗಜಲ ನಿಜಕೀರ್ತಿಯಂದದೆಣ್ದೆಶೆಗಳೊಳು
ಭೋರ್ಗರೆವ ಸೈಪನೊಡರಿಚಿದ ಮೇಲಣ ಗವಿಯ ಶಾಂತನಂಜೇಶ್ವರ ಜಯಾ ೨

ಇತ್ತಲೀ ಶಿಷ್ಯಂ ಸನತ್ಕುಮಾರಂ ಗುರುಕುಲೋ
ತ್ತಮಗೆ ನಂದಿಕೇಶಂಗೆ ಬಿನ್ನವಿಸಿದನು
ದಾತ್ತ ದೇಶಕನೆ ಶಿವನಯನದಿಂ ಗಂಗೆಯೊಗೆವುದಕೆ ಮುನ್ನಖಿಳ ಲೋಕಾ
ದೊತ್ತೊತ್ತೆಯೊಳು ನೀರ್ಗಳಿಲ್ಲದಿರೆ ಜನರುಗಳು
ಮತ್ತೇನ ಕೊಂಡು ಬದುಕಿಹರ್ಯಯ್ಯ ಎನೆ ನಸುನ
ಗುತ್ತ ನುಡಿದಂ ಶಿಲಾದನ ಪುತ್ರ ಸುಪವಿತ್ರದಾತ್ರನುತ ಹಸ್ತವೇತ್ರಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏನ ಕೇಳಿದೆಯೈ ಸಮಸ್ತ ಸೃಷ್ಟಿಯು ಮುನ್ನ
ಲಾನೊರೆವ ಕಾಲದೊಳು ಶಿವಪಂಚಮುಖದಿಂ ನ
ವೀನ ಧರೆ ಜಲವಾದಿ ಪಂಚಭೂತಂಗಳುದ್ಭವವಾದುದೇ ತಥ್ಯವೈ
ಭೂನುತೆ ಪವಿತ್ರಗಂಗೆಯು ಪಾಲಿಸೆಂದರಂ
ದಾನಗಧರಾದಿವಿರ್ಜರರೆಂದು ನುಡಿದನಂ
ದಾ ನಂದಿಕೇಶನಘನಾಶ ಧರ್ಮದ ಕೋಶನಗ್ರತರವಹ ವಹ ಮದೀಶಾ ೪

ನೆಟ್ಟನಾ ಪರಶಿವಂ ತನ್ನಂಶರುದ್ರನಿಂ
ಪುಟ್ಟಿಸಿದನಾ ಶಬ್ದಮಂ ಸ್ಪರ್ಶಗೂಪಮಂ
ಕಟ್ಟಧಿಕ ರಸವನಾ ಗಂಧಮಂ ತಚ್ಛಬ್ದದಿಂ ಗಗನವಾಸ್ಪರುಶದಿಂ
ಪುಟ್ಟಿಸಿದ ನನಿಲನಿಂ ರೂಪದಿಂ ವಹ್ನಿಯಳ
ವಟ್ಟರಸದಿಂದುಕಮಂ ಪ್ರಸಿದ್ಧತೆಯಿಂದ
ಪುಟ್ಟಿಸಿದನಾ ಗಂಧದಿಂ ಧರೆಯನೆನಲುದಕವಿಲ್ಲವೆನ್ನದಿರು ಕುವರಾ ೫

ಮುನ್ನನಾದಿಯೊಳೇನು ಮಿಲ್ಲದಿಹ ಕಾಲದೊಳು
ತನ್ನ ಲೀಲೆಯೊಳೀಶನಾತ್ಮನಂ ಪುಟ್ಟಿಸುತ
ಸನ್ನಹಿತದಾತ್ಮನಿಂದಾಕಾಶವಾ ಗಗನದಿಂ ವಾಯುವಾ ಮರುತನಿಂ
ಉನ್ನತಾಗ್ನಿಯನನಲನಿಂದುದಕವುದಿಸಿತದ
ಱಿನ್ನೆಲಂ ಪುಟ್ಟಿತೆಂಬಾ ಸೃಷ್ಟಿಯಿರುತಿರಲು
ನಿನ್ನ ಮನವಱಿದಿರ್ದು ಕೇಳ್ವರೆ ಸನತ್ಕುಮಾರಾ ವಿನುತ ಸದ್ವಿಚಾರಾ ೬

ಆ ಮಹಾ ನಿಜದ ಘನತತ್ವದಿಂದಾದಿಯುಂ
ಪ್ರೇಮದೊಳನಾದಿ ತತ್ವಂಗಳೆರಡೊಬ್ಬುಳಾ
ದಾಮೂರ್ತಿಯಧಿಕ ಮನಭಾವ ಸುಜ್ಞಾನವೆಂಬೀ ತ್ರಯಂಗಳಿನೇಳ್ಗೆಯಿಂ
ಸಾಮರ್ಥ್ಯಮೆನಿಪಕಾರ ಮುಕಾರ ಮಕಾರ
ವೀ ಮೂಱು ಕೂಡಿದೋಂಕಾರವಂತಾದುದು ಕ
ಣಾ ಮಗನೆಯಾ ಪ್ರಣವಮದಾ ನಾದಮಯದಿಂದ ಗಗನವಾದುದು ನಲ್ವಿನಿಂ ೭

ಆಗಲಾ ನಾದವುಂ ಬಿಂದು ಕಲೆಗಳುಮಾದ
ವೈ ಗರುವ ತದ್ಗಗನ ಶಬ್ದಮಥನಂಗಳಿಂ
ಬೇಗದಿಂ ವಾಯು ಸಂಸ್ಫುರಿಸಲಂತಲ್ಲಿ ಗಮನಾಗಮನ ನಾಮರೂಪಾ
ಆಗಳಾದವು ವಾಯು ಸಂಸ್ಪರುಶ ಶಬ್ದದಿಂ
ದಾಗಲಾ ವಿಕೃತಿಯಿಂ ರೂಪಿನಾ ಕುರುಹಿನಿಂ
ರಾಗದಿಂ ವಹ್ನಿ ಸಂಜನಿಸಿತ್ತು ವಲ್ಲಿಯಾದವು ದೃಷ್ಟನಷ್ಟಂಗಳೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಕರದಾ ತೇಜದುರುತರರೂಪಿನಾದತ
ತ್ಪ್ರಕೃತಿಯಿಂದುದಯಿಸಿದಪ್ಪು ತತ್ವಂ ಮಹಾ
ಧಿಕರಸಮಾತ್ರಸದ್ವಿಷಯನಾಗುತ್ತ ಜಲಬಿಂದುವಾ ಭಿನ್ನರುಚಿಯಾ
ಪ್ರಕಟಮಯವಾದವಾ ಜಲದಿಂದ ಶಬ್ದವಾ
ದಕುಟಿಲಾಕೃತಿಯಧರಿಯಿಸುತುದಿಸಿತಾ ಪೃಥ್ವಿ
ಯಕಲಂಕತತ್ವವದಱೊಳನಂತ ಸಚರಾಚರಂಗಳಂತುದಯಿಸಿದವೂ ೯

ಬಳಿಕಲುತ್ಪತ್ತಿಯಾ ಸ್ಥಿತಿಲಯದ ಕಾರಣಂ
ಗಳುಮಾದವೆನಲಾಗಿ ಯುದಕವಾಧಾರ
ನಳಿನಜಾಂಡಕ್ಕೆ ನೆಲನಾದಿ ಜಲವುಂಟೆಂಬುದೇ ಪ್ರಮಾಣ್ಯೆ ಕುಮಾರಾ
ಘಳಿಲನಱಿದಾ ಕೇಳಿದೊಂದು ಕಲ್ಪದೊಳು ನಿ
ರ್ಮಳ ಶಿವನ ನಯನವಂ ಬಿನದದಿಂ ದೇವಿ ಕೈ
ಗಳಿನೆಯ್ದಿ ಮುಚ್ಚಲುದಿಸಿದವು ದಶಗಂಗೆ ಎಂದಱಿ ಸದ್ವಿಚಾರದಿಂದಾ ೧೦

ಶ್ರೀಯುಮಾದೇವಿಪತಿನಯನಸಂಭವಗಂಗೆ
ಯೆ ಯಾದಿ ಎನೆ ಪೂರ್ವದುದಕದುದಯವನುಸುರ್ದೆ
ವೈಯನಾಚಾರದಿಂದಧಮರಾ ವಿಷ್ಣುಕಾಲಿಂ ಪುಟ್ಟಿತೆಂದು ಹುಳಿತಾ
ನಾಯಂತೆ ಕೆಟ್ಟುಬಗುಳುವ ಕುನ್ನಿಗಳ ಬೆಂದ
ಬಾಯನಾ ಪುಲ್ಕಸರ ಹಳೆಗೆಱಹಿನಿಂ ಹೊಡಸಿ
ಛೀಯೆಂಬ ಕಿಸುಕುಳವನಾ ಯಮನ ಭಟರಿಂದಲೆಱಿಸಲಳಲಿಂ ಪೋಪುದೇ ೧೧

ಸಂದೆಗಂ ಹರಿಯಿತ್ತು ಜೀಯ್ಯ ಬಳಿಕಾಸುರರ
ವೃಂದವಾಡಿದ ಬಿನ್ನಪಕ್ಕೆ ಬಳಿಕೇಗೆಯ್ದು
ನಿಂದುಧರ ಎನಲಾಗಿ ಕೇಳ್ಕುವರ ಶಂಭುಮಸ್ತಕದ ಗಂಗೆಯ ಪರಿಯಿಸೇ
ಒಂದುಗೂಡುತ ಬಿಡಲ್ ಬ್ರಹ್ಮಾಂಡವಳಿವುದದ
ಱಿಂದೊಂದು ಜೆಡೆದುದಿಯ ರೋಮಾಗ್ರದಿಂ ಕೊಡುವೆ
ನೆಂದು ಬಳಿಕುಜ್ಜುಗಿಸಿದಂ ಕಣಾ ಮದ್ವಾಹಿ ಗಿರಿಜಾಮುಖಾಬ್ಜವೋಹೀ ೧೨

ವರ ಜಟಾಮಾರ್ಗದಿಂದವೆ ಧರಿಸಿದೊಡೆ ಹೋಗಿ
ಸುರಭೂಧರಾಗ್ರದಿಂದವೆ ಚತುರ್ಮುಖವಾಗಿ
ಪರಿವಿಡಿಯ ತತ್ಕುಧರ ಪೂರ್ವ ದಕ್ಷಿಣ ಪಶ್ಚಿಮೋತ್ತರಾಗ್ರಾಭಿಮುಖದಿಂ
ಧರೆಗಳಿದು ನದಿಗಳಾದವು ಕಣಾ ಬಳಿಕ ಸಾ
ಗರದಲ್ಲಿ ಕೂಡಿದವು ನಾಲ್ಕು ಗಂಗೆಗಳ ಬಂ
ಧುರ ನಾಮವೆಂತೆನಲು ಬಿತ್ತರಿಸುವೆಂ ಕೇಳೆನುತ್ತಿರ್ದನಾ ಶಿಲಾದಿ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂರ್ವದಿಕ್ಕಿನೊಳಂ ಸಿತಾ ನದಿ ಕಣಾ ಕೇಳ
ಖರ್ವ ಪಶ್ಚಿಮದಲ್ಲಿ ನಂದೆ ಎನಿಸುವದು ಗಂ
ಧರ್ವನಾಥನ ದೆಸೆಯೊಳಾ ರುದ್ರಸೋಮೆ ದಕ್ಷಿಣದೊಳು ಸುದಕ್ಷಿಯಿಂತೂ
ವಾರ್ವರಾವಮಂ ಗಂಗೆಗಳು ನಾಲ್ಕೆಪರಿದವೈ
ಗರ್ವವಿರಹಿತ ಕೇಳ್ಪವಿತ್ರವೆನಿಸಿದವಲಾ
ಸರ್ವ ಸುಧಿಗಳು ಶಂಭುನಯನಸಂಭವ ಗಂಗೆ ದಿವ್ಯವಾಹಿನಿಗಳಾನಂದದೇ ೧೪

ಶ್ರುತಿ ತಾಂ ಸ್ಮರಂತಿ ಚ ಭವಂತಿ ಚ ಎನುತ್ತಿರಲ್
ಶ್ರುತಿ ಪಾವನಾನಿ ಸರ್ವಾಣಿದ ಎನುತ್ತಿರೆ
ಶ್ರುತಿ ಸರ್ವಪಾಪಾದುಪಾಹತಿಯೆನುತಿರಲ್ಕಖಿಳ ದೋಷಗಳನಳಿದೂ
ಕೃತಪುಣ್ಯರಂ ಮಾಡಿ ಸರ್ವರಂ ಪೊರೆಯಲಾ
ಯಿತು ಕಣಾ ತದ್ವಾರಿ ಸಗ್ಗದೊಳು ಮರ್ತ್ಯದೊಳು
ಶಿತಿಕಂಠಮಸ್ತಕದ ಗಂಗಾಪಯೋಬಿಂದುಶೀಕರದ ಕೋಟ್ಯಂಶದಿಂ ೧೫

ಕುವರ ಕೇಳಿದೆಯಾ ಸನತ್ಕುಮಾರಾಯೆನ
ಲ್ಕವನೆಱಗಿ ಕೈಮುಗಿದು ಗುರುವೆ ಬಿನ್ನಪವೈಯ್ಯ
ಶಿವನ ಮಸ್ತಕದಲ್ಲಿ ರಾಜಿಸುವ ಗಂಗೆಯೆಂದೇಂ ಕಾರಣಂ ಬಂದುದೂ
ಭುವಿಯಲ್ಲಿ ನೋಡೆ ಭಾಗೀರಥಿಯೆನಿಪ್ಪನಾ
ಮವನಾಂತು ಕಾಶಿಯೊಳಗೀಗಳೊಪ್ಪುತ್ತಿಹುದು
ತವೆಯುದಱ ಮೂಲಕಥೆ ಎಂತೆನಲು ನುಡಿದಂ ಶಿಲಾದಿಗಂಭೀರನಾದೀ ೧೬

ಕೇಳು ಪಟ್ಟಚಕ್ರವರ್ತಿಗಳೊಳಗೆ ಸಗರಭೂ
ಪಾಳನೊಪ್ಪುವನಾತಗಂಗನೆಯರೀರ್ವರಾ
ಭಾಳಾಕ್ಷನಪರಾವತಾರನೆನಿಸುವ ವಶಿಷ್ಟನಶಿಷ್ಯಳಾ ಹಿರಿಯಳೂ
ಹೇಳಲರಿದಪ್ಪ ವಿಶ್ವಾಮಿತ್ರಮುನಿಪತಿ ಕೃ
ಪಾಳುವಿನ ಕರುಣಮಂ ಪಡೆದ ಮಗಳೆನಿಪಳಾ
ನೀಳಾಳಕಾತಿಶಯ ಸೌಭಾಗ್ಯ ಸಂಪನ್ನೆಯಾ ನೃಪನ ಕಿಱಿಯರಾಣೀ ೧೭

ಅವರೀರ್ವರುಂ ಸುಖದೊಳಿಪ್ಪ ಕಾಲದೊಳೋರ್ವೆ
ಶಿವಮೂರ್ತಿ ವಾಶಿಷ್ಟಮುನಿಪ ಬಿಜಯಂಗೆಯ್ಯ
ಲವರ ಪಾದಾಬ್ಜಕ್ಕೆ ನಿಜಶಿಷ್ಯಳಾ ಸಗರನಗ್ರಸತಿ ಸಾಷ್ಟಾಂಗದಿಂ
ಭುವಿಯಲ್ಲಿ ನಮಿಸಿ ಬಿಜಯಂ ಗೆಯ್ಸಿ ತಂದು ಚರ
ಣವನಳ್ತಿಯಿಂ ತೊಳೆದು ಪೂಜಿಸುತ ಹರುಷದಿಂ
ವಿವಿಧಸತ್ಕಾರಮಂ ಮಾಡಿದೊಡೆ ನುಡಿದನಾ ಮುನಿರಾಜನಮಳತೇಜಾ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಮಗಳೆ ನಿನ್ನಿಷ್ಟವಾವುದೆಂದೆನಲಾಗಿ
ಕುಲಗುರುವೆ ಚಿತ್ತೈಪುದೆನ್ನ ಸಾಪತ್ನಿಯು
ಜ್ವಲದ ವಿಶ್ವಾಮಿತ್ರನಣುಗಿ ಯತಿನಿಷ್ಠುರಾಲಾಪೆಯುವಳಿಗೆ ಪುಟ್ಟುವಾ
ಬಲುಮಕ್ಕಳೆಲ್ಲರ್ಗೆ ಮಿಗಿಲಾಗಬೇಕು ನಿ
ಮ್ಮಲಘು ಶಾಂತಿಯು ಕೃಪೆಯು ಪುತ್ರನಂ ನಾನೊಲ್ಲೆ
ಸಲೆ ಮಹಾ ದುರ್ಜನಕುಮಾರನಂ ಕೊಟ್ಟು ರಕ್ಷಿಪುದೆಂದಳಾ ಮಾನಿನೀ ೧೯

ಅಂತಾಗಲೆಂದು ಕರುಣಿಸಿ ಪೋದನಲ್ಲಿ ಮುನಿ
ಸಂತಾನದೊಡೆಯನಿತ್ತಂ ಸಗರನೃಪನಗ್ರ
ಕಾಂತೆ ಗರ್ಭಿಣಿಯಾಗಿ ಪಡೆದಳತಿಶಯ ಪರಾಕ್ರಮಿಸುತನನಂತಮಂಗೆ
ಸಂತೋಷದಿಂದಲಜಗರನೆಂದು ರಿಪು ಶಿರ
ಸ್ಕೃಂತನೆನಿಸುವ ಕರೆದು ಸುಖಮಿರಲು ಮಿಗೆ
ತಾಂ ತಳ್ತು ಬೆಳೆದನಾ ಸುಕುಮಾರ ಮೋಹನಾಕಾರ ದೃಢಹೃದಯಸಾರಾ ೨೦

ಅನಿತಕ್ಕೆಯಾ ಸಗರನೃಪನ ಕಿಱಿಯರಸಿ ನಿಜ
ಮನದೊಳಗೆ ದುಃಖಮಂ ತಾಳಿ ಸಾಪತ್ನಿಗಂ
ಜನಿಸಿದಂ ಸುಕುಮಾರನೆಂದು ಸಿಡಿಮಿಡಿಗೊಂಡು ತನ್ನ ಗುರುವಹ ಕೌಶಿಕಾ
ಮುನಿಯ ಪಾದವನಧಿಕ ಭಕ್ತಿಯಿಂದಂ ಕೂರ್ತು
ನೆನೆಯಲೆಯಿತಂದನಾ ಕ್ಷಣದಲ್ಲಿ ಮುನ್ನ ಬೊ
ಮ್ಮನೊಳು ವಾದಿಸಿದ ಮಹಾಪ್ರತಿಸೃಷ್ಟಿಯಂ ಮಾಡಿದಗ್ರ ವಿಶ್ವಾಮಿತ್ರನೂ ೨೧

ಕಂಡು ನಿಜ ದೇಶಿಕನನಾ ವನಿತೆ ಸಾಷ್ಟಾಂಗ
ದಂಡಪ್ರಣಾಮಮಂ ಮಾಡಿ ವಂದಿಸುತ್ತಿದ್ದು
ಕೊಂಡಾಡಿ ಕೂರ್ತುಬಿಜಯಂಗೆಯ್ಸಿ ತಂದಗ್ರಗದ್ದುಗೆಯೊಳಿರಿಸಿ ನಲಿದೂ
ಪುಂಡರೀಕಾಕ್ಷಿ ಪದಮಂ ತೊಳೆದು ತೀರ್ಥಮಂ
ಮುಂಡೆಯೊಳು ತಳೆದುಳಿದ ಸತ್ಕರಮಂ ಮಾಡಿ
ಖಂಡೇಂದುಧರಮೂರ್ತಿ ನಿಮ್ಮ ದರುಶನದೊಳು ಕೃತಾರ್ಥೆಯಾನೆಂದಳಾಗಾ ೨೨

ಮುಗಿದ ಹಸ್ತಂಗಳಿಂ ಮುಂದೆ ನಿಂದಿರ್ದೊಡಾ
ಸಗರಭೂಪತಿಯ ಕಿಱಿಯರಸಿಯಂ ನೋಡಿ ನಸು
ನಗುತ ನುಡಿದಂ ಮುನೀಶ್ವರನು ಸುಲಿಪಲ್ವೆಳಗು ದೆಸೆಗಳಂ ಧವಳಿಸುತಿರೆ
ಮಗಳೆ ನೀನೆಮ್ಮುಮಂ ನೆನೆದ ಕಾರಣವೇನು
ಸುಗುಣೆ ಪೇಳೆನಲಾಗಿ ದೇವ ಕೇಳೆನ್ನಸವ
ತಿಗೆ ಪರಕ್ರಾಮೀಪುತ್ರನಾದವಳೇಂ ಭಾಗ್ಯವಂತೆಯೊ ಮಝು ಭಾಪುರೇ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೃಡಮೂರ್ತಿ ವಾಶಿಷ್ಟಮುನಿಯ ಕಾರುಣ್ಯಮಂ
ಪಡೆದಕ್ಕಗಾದಂ ಪರಾಕ್ರಮೀಕುಮಾರಕಂ
ಬಡ ಗುರುವಿನಣುಗಿ ನಾನೇನಭಾಗ್ಯಳೊ ಪುತ್ರರಿಲ್ಲವೆನಲಾ ಕೌಶಿಕಂ
ಘುಡಿಘುಡಿಸಿ ಮೀಸೆಗಳ್ಕುಣಿಯೆ ಕೋಪದೊಳಾಗ
ನುಡಿದನಲೆ ತರಳ ಮಗಳೇ ನಮ್ಮ ಬಗೆಯು ಸುರ
ರೊಡೆಯರೆಲ್ಲರ್ಬಲ್ಲರೈಸೆ ನೀನೇನಱಿವೆ ಎಂದನಾ ಯತಿರಾಯನೂ ೨೪

ಸುರಪನೈಶ್ವರ್ಯವೀಯೆಂದಾ ತ್ರಿಶಂಖಭೂ
ವರನು ವಾಸಿಷ್ಟನಂ ಕೇಳೆ ಕೊಡದಿರೆ ಬಿಟ್ಟು
ಬರುತೆಮ್ಮ ಶಿಷ್ಯನಾಗಲು ಲೇಖನವನಟ್ಟೆ ಸಗ್ಗಕ್ಕೆಯಾಪಟ್ಟಕೇ
ಅರಸಪ್ಪ ದೇವೇಂದ್ರನಂ ಮಾಡೆ ಸುರಮುನೀ
ಶ್ವರರು ಬಲ್ಪಿಂ ನೂಂಕಲಾಗಿಯಾ ಪ್ರತಿಸುರೇ
ಶ್ವರನ ಮಾಡಿದೆವಖಿಳ ಸಂಪತ್ತನಿತ್ತು ಕೇಳಱಿಯೆಯಾ ಎಮ್ಮ ಬಗೆಯಂ ೨೫

ಆ ವಸಿಷ್ಟಂ ನಿನ್ನ ಸವತಿಗೊಬ್ಬಣುಗನಂ
ವೋಲಿ ಕೊಟ್ಟಂ ಗಡಾ ಬಿಡು ಬಿಡೆಂದಱುವತ್ತು
ಸಾವಿರಕುಮಾರರಂ ನಿನಗೊಮ್ಮೆಯೇ ಕೊಟ್ಟೆನೆಂದು ಪಾಲಿಸಿಪೋದನೂ
ಆ ವಿಮಳಮುನಿ ಸಗರನೃಪತಿಕಿಱಿಯರಸಿಗೆ ಮ
ಹಾ ವಿಭವದಿಂ ಗರ್ಭವಾಗಿಯಾ ತೆಱದಿಂದ
ಲೇ ವರ ಸುಪುತ್ರರಂ ಪಡೆದು ರಾರಾಜಿಸಿದಳಾ ರಾಣಿ ಸದ್ಧರ್ಮವಾಣೀ ೨೬

ಆಱುವತ್ತು ಸಾವಿರ ಕುಮಾರಕರು ದಿನದಿನಕ
ಳರ್ವ ಬಳವಿಯೊಳಿರುತ್ತಿರೆ ಸಗರನಗ್ರಸತಿ
ಯೋರ್ವ ಸುತನಜಗರಂ ಹದಿನಾಲ್ಕು ವರುಷದವನಾಗೆ ಪರಿಣಯುವೆನೆಸಗೀ
ಊರ್ವೀಶ್ವರಂ ರಕ್ಷಿಸುತ್ತಿರಲವಂ ತಾನೇ
ಕೊರ್ವಿಪುರಜನರನೆಳೆದೊಯ್ದು ನೀರೊಳಗಲುಬಿ
ಸರ್ವಸತ್ವದೊಳು ಪೆರ್ಗಲ್ಲ ಮೇಲೊಗೆದು ಹರಡುತ ಕೊಲುತ್ತಿರ್ದನಿಂತೂ ೨೭

ಅಱೆಯು ಮೇಲೊಗೆದೊಗೆದು ಕೊಲುತಿರಲು ಪುರಜನಂ
ಮೊಱೆಯಿಟ್ಟರಾ ಸಗರ ಚಕ್ರೇಶ್ವರಂಗೆಯಾ
ತೆಱನಱಿಪುತಾಗ ಜ್ಞಾನೇಶ್ವರಾಖ್ಯ ಮತವೆಂಬುದಂ ತೆಗೆಸಿನೋಡಿ
ಪೊಱಮಡಿಸಲಜಗರನನವನ ಮೋಹದ ವನಿತೆ
ನಿಱಿಗುರುಳ ನೀರೆ ಬಸುಱಾಗಿರ್ದವಳು ಪಡೆದ
ಳುಱುವ ಪುತ್ರನ ನೊರ್ವನಂಶುಮಾನೆಂದೆಂಬ ಪೆಸರಿತ್ತನಾ ಸಗರನೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಲಿಸಲು ಮುಂನ ಸದ್ಧರ್ಮದಿಂದಾಚರಿಸಿ
ಭೂಲೋಲರಾ ಬಾಲ್ಯದಲ್ಲಿ ವಿದ್ಯಂಗಲಿತು
ಮೇಲೆ ಯೌವನದಲ್ಲಿ ರಾಜ್ಯಮಂ ಪಾಲಿಸುತ್ತಯಿವತ್ತು ವರುಷದಿಂದಾ
ಮೇಲೆ ಯಜ್ಞವನೆಸಗಿ ಹಿರಿಯ ತಪದಿಂದಿರ್ದು
ಮೇಲೆ ಯೋಗದಿನಸುವನಳಿದು ರವಿಮಂಡಲ ವಿ
ಶಾಲಮಧ್ಯವನು ವಿರಳಂ ಮಾಡಿ ಪರಲೋಕಕಂ ಗಮನಿಸುವರೂ ೨೯

ಪರಿವಿಡಿಯೊಳಿಂತು ಸದ್ಧರ್ಮದಿಂ ನಡೆದ ಭೂ
ವರಸಗರಚಕ್ರೇಶ್ವರಂಗೆಯುಂತೈವತ್ತು
ವರುಷದಧಿಕಪ್ರಾಯವಾಗೆ ಯುವರಾಜ ಪಟ್ಟಂಗಟ್ಟಲೆಂದೆನುತ್ತಾ
ಸ್ಮರಿಸಿತೊಂಭತ್ತವೊಂಭತ್ತಶ್ವಮೇಧೆ ಎನಿ
ಪುರುತರಾಧ್ವರವಾದವಿನ್ನೊಂದು ಯಜ್ಞಕ್ಕೆ
ಹಿರಿಯ ಕುದುರೆಯ ತಾರೆನುತ್ತ ತರಿಸಿದನಲಾ ಭೂಪನಧಿಕ ಪ್ರತಾಪ ೩೦

ಮುನ್ನವೇ ಸಲ್ಲಕ್ಷಣಾಶ್ವಮುಱಿಗಾಣ್ಬಾಗ
ಹೊನ್ನ ಹರಿವಾಣದಿಂದಾಂತಶ್ವರತ್ನಮಂ
ಮನ್ನಿಸುತ ರಕ್ಷಿಸುತ ಹದಿನೆಂಟು ತಿಂಗಳಾ ಕತ್ತಲೆಯೊಳೆಯ್ದೆ ಕಟ್ಟೀ
ಸನ್ನಹಿತ ಸದ್ವಿಧಾನದೊಳದಂ ಬಿಟ್ಟು ಪರಿ
ವನ್ನಬರ ಹಜ್ಜೆಹಜ್ಜೆಗೆ ವಿತ್ತಮಂ ಸುರಿದ
ವನ್ನಾಡೆ ಕೊಡುವಶ್ವಮೇಧಯಜ್ಞವ ಮಾಡಲುಜ್ಜುಗಿಸಿದಂ ಭೂಪನೂ ೩೧

ಆ ಕುದುರೆಯುಂ ಸಲಹುತಿಪ್ಪ ಕಾಲದೊಳಿತ್ತ
ನಾಕದೊಳು ದೇವೇಂದ್ರನಿರ್ದು ಯೋಚಿಸಿ ಸಗರ
ಭೂಕಾಂತನೆಯ್ದೆ ತೊಂಭತ್ತವೊಂಭತ್ತಯಜ್ಞಂಗಳಂ ಮುಗಿದನಿನ್ನೂ
ಏಕಾಧ್ವರದೊಳೆನ್ನ ಪಟ್ಟವವಗಹುದೆಂದು
ವಾಕರಿಪುವಾ ಚಿತ್ರವರ್ಮನೆಂಬನ ಕರೆದು
ನೀ ಕದ್ದುಕೊಂಡು ಬಾ ಯಾಗದಶ್ವವನೆಂದು ಕಳಿಸಿದಂ ನಿಜಭೃತ್ಯನಂ ೩೨

ಆ ತುರಂಗವನು ಕದ್ದಾ ಚಿತ್ರವರ್ಮನಂ
ದೋತು ಸಗ್ಗದೊಳಿರಿಸಿಕೊಂಡಿರ್ದ ಕಾಲದೊಳು
ಭೂತಳೇಶಂ ಸಗರ ನೆಡೆಗೆಯ್ದಿಯಶ್ವರಕ್ಷಕರು ಬಯಲಾಯಿತು ತುರಗಾ
ಏತೆಱನೊ ಕಾಣಬಾರದು ಜೀಯ್ಯ ಎನಲೀ ಮ
ಹೀತಳದೊಳೆಸೆವ ಸಪ್ತದ್ವೀಪದೊಳಗೆ ನಿ
ರ್ಭೀತಿಯಿಂದೊಯ್ವರಿಲ್ಲದು ದೇವಲೋಕಕ್ಕೆ ಪೋದುದೆಂದಱಿದನರಸಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನ್ನ ಕುದುರೆಯು ಕಳುವರಿಲ್ಲವೀ ಮರ್ತ್ಯದೊಳ
ಗಿನ್ನು ಸಗ್ಗಕೆ ದಾಳಿಯಂ ಪೋಗಿ ನೀವೆಂದು
ತನ್ನಯ ಕುಮಾರಱುವತ್ತು ಸಾವಿರಕೆ ನಿರವಿಸಲವರು ನೃಪನ ನುಡಿಗೇ
ಮುನ್ನ ಪ್ರಯಾಣ ಭೇರಿಯ ಹೊಯ್ಯ್ಹೇಳೆಂದು
ಸನ್ನರ್ಧರಾಗೆ ನೆರೆದುದು ಚಾತುರಂಗಬರಿ
ವಿನ್ನಾವನಭಿವರ್ಣಿಸುವನು ಫಣಿ ಗಜ ಕಮಠರಳ್ಕಿ ತಲೆಗೊಡಹುವಿನೆಗಂ ೩೪

ಹದಿನೆಂಟು ಡೊಳ್ಳೆ ಪರಿವಾರವಾರ್ಭಡಿಸಿ ಕೊ
ಡಿದುದಲ್ಲಿ ಸಗರ ಚಕ್ರೇಶ್ವರ ಕುಮಾರರ
ಗ್ಗದ ಚೆಲ್ವ ಪೊಂದೇರ್ಗಳಂ ಬಳಸಿ ಘುಡಿಘುಡಿಸಿ ಪರಮ ಸಂತೋಷದಿಂದಾ
ಹೆದಱಿ ದಿಕ್ಪಾಲಕರು ತಾಯ್ಮಳಲುಗಾಣಲಂ
ದುದಧಿ ದಾಂಧಳವೆಂದೆನಿಪ್ಪ ನಿಸ್ಸಾಹಣಗ
ಳೊದಱಿದವು ಕೋಟಾನುಕೋಟಿ ಪದ್ಮಂಗಳಾ ಡೊಳ್ಳೆಯೆಂತೆನೆ ಪೇಳ್ವೆನೊ ೩೫

ಹನ್ನೆರಡು ಹಿರಿಯಾನೆಗಳ ತೊವಲ ಸುಗಿದಾ ಮ
ಹೋನ್ನತದ ತಿದಿಯನೊಂದಂ ಮಾಡಿ ಕಂಭವೆರ
ಡನ್ನಿಲಿಸಿ ಯುದ್ಧದೊಳಗಡ್ಡಪಟ್ಟಿಗೆಯೊಳದ ಕಟ್ಟಿ ಮಳಿವಿರದನಿತಾ
ಮುನ್ನವದನಿರಿಸಿಯಾ ಸ್ಥಲದಲ್ಲಿ ಪೋಗುತಿಹ
ಮನ್ನೆಯರ ಬಲದ ಪದಹತಿಧೂಳಿ ನೆಗೆದದಱಿಕೊ
ಳುನ್ನಱಿಯೆ ತುಂಬಿತೆಂದೆನಲೊಂದು ಡೊಳ್ಳಿಯೆಂಬರು ಲೆಕ್ಕಿಸುವೊಡೆವಶವೇ ೩೬

ಈ ಪರಿಯ ಗಣನೆಯೊಳು ಹದಿನೆಂಟು ಡೊಳ್ಳೆಯಾ
ಭೂಪಸುಕುಮಾರರಂ ಸೇವಿಸುತ ಬರಲವರು
ಕೋಪದಿಂ ದಿವ್ಯಾಸ್ತ್ರವಂ ಹಿಡಿಯಲೊಂದ ತುಡೆ ಹತ್ತು ಬಿಡೆ ಸಾಹಸ್ರವೂ
ಆಪಥದೊಳಯುತ ಪ್ರಯುತಕೋಟಿ ಪದನಿಧಿನಿ
ರೂಪಿಸುವರಾರೆನಿಸುವವಂಬುಗಳೆ ಸಗ್ಗಕ್ಕೆ
ಸೋಪಾನವಾಗಲದನಡರಿ ಘುಡಿಘುಡಿಸುತ್ತ ನಡೆದರುತ್ತರಪಥದೊಳು ೩೭

ಆ ನಿಖಿಳ ಲೋಕದ ಜನಂ ನಡುಗುತಿರೆ ಸಗರ
ಸೇನೆಯಾರ್ಭಟಕೆ ಸಗ್ಗದ ಸೀಮೆಗಾಗಿ ಬರೆ
ನಾನಾ ಮಹಾವಾದ್ಯದಬ್ಬರವ ನಾಲಿಸುತ್ತಿಂದ್ರನೇನೆಂದು ಕೇಳೇ
ತಾನೊರ್ವನೆಯಿದಿ ಪರಿತಂದೆಲೆಲೆ ಜೀಯ್ಯನರ
ಭೂನಾಥರೆಮ್ಮ ಲೋಕಕೆ ದಂಡು ಬಂದರೆನ
ಲಾ ನಾಕವಲ್ಲಭಂ ಚಿತ್ರವರ್ಮನ ಕರೆದು ನುಡಿದನಾ ಸಮಯದಲ್ಲೀ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಕದೊಳು ತುರಗವಿರಲೀ ಬಂದ ಸೇನೆಯುದ
ನಾಕರಿಸಿ ಕೊಂಡೊಯ್ವರೊಯ್ದು ನೀಂ ಪಾತಾಳ
ಲೋಕಕ್ಕೆಯಲ್ಲಿರಿಸಿಕೊಂಡಿಪ್ಪುದೆನಲಾತಸಿಳೆಗಿಳಿದು ಬಲಮಾರ್ಗದಿಂ
ಆ ಕುದುರೆಯಂ ಕೊಂಡುಹೋಗಿ ಫಣಿಪನ ಮಹಾ
ಶ್ರೀಕರದ ಭೋಗಾವತಿಯ ಪಟ್ಟಣಂಬೊಕ್ಕು
ಪಾಕಶಾಸನನಾಳು ನಾನೆಂದು ತತ್ಕಥನಮಂ ಪೇಳುತಿರ್ದನಲ್ಲೀ ೩೯

ಇತ್ತಲೀ ಸಗರನ ಕುಮಾರರ ಮಹಾಸೇನೆ
ಮುತ್ತಿತಮರಾವತಿಯ ಬೊಬ್ಬಿರಿದು ಬಹುವಾದ್ಯ
ವೆತ್ತೆತ್ತಲುಂ ಮೊಳಗೆ ಕುದುರೆಯನು ನಮಗೊಪ್ಪಿಸುವುದು ನೀವಲ್ಲದಿರಲೂ
ಪತ್ತಿಕೋಂಟೆಯನೂಱ ಸೂರೆಯಂ ಕೊಂಬೆವೆನೆ
ಮತ್ತಾಗಲಟ್ಟಿದಂ ದೇವೇಂದ್ರನಾ ಚರರ
ನಿತ್ತಲಾ ವಾರುವನ ತರಲಿಲ್ಲ ಸಗ್ಗಮಂ ಶೋಧನೆಯ ಕೊಡುವೆನೆಂದಂ ೪೦

ತುರಗವಂತಾ ಸ್ವರ್ಗದೊಳಗಿಲ್ಲವೆಂಬುದೇ
ನಿರುತವೆಂದಱಿದಾ ಕುಮಾರಕರು ಸೇನೆಯೊಳು
ತಿರುಗಿ ಸಗ್ಗದೊಳಿಲ್ಲ ಕುದುರೆ ಎಲೆ ಜೀಯ್ಯ ಎಂದಾಡಲಾ ಸಗರಭೂಪಂ
ಮರಳಿ ನುಡಿದಂ ನಾಕದೊಳಗಿಲ್ಲದಿರಲು ಫಣಿ
ವರನ ಲೋಕದೊಳಿಹುದು ಪಾತಾಳಕಂ ಪೋಗಿ
ತರಬೇಹುದಾ ಮಹಾವಾಜಿಯನೆನಲು ಹಸಾದಂ ಜೀಯ್ಯ ಎಂದರಾಗಾ ೪೧

ಪಾತಾಳಲೋಕಕ್ಕೆ ದಂಡೆಂದು ಭೇರಿಗಳು
ಸಾತಿಶಯದಿಂದೊದಱೆ ನೆರೆದ ಸೇನೆಯೊಳಾಗ
ಭೂತಳೇಶನ ಕುಮಾರರು ತೆರಳಿ ಬಟ್ಟೆಯಿನ್ನಾವೆಡಯೆನುತ್ತ ನೆರೆದೂ
ವೋತು ಪರ್ವತಗಳೊಳು ಬಿಲಮಾರ್ಗವುಂಟೆಂದ
ಲಾ ತಿಳಿವು ತವಱೊಳಿಯಲ್ಲಿನಿತು ಕಾಲವಹು
ದೀ ತಳ್ತ ಸೇನೆಗೆಂದೆನುತ ಯೋಚಿಸಿಕೊಂಡು ನುಡಿದರಾ ವೇಳೆಯಲ್ಲೀ ೪೨

ಇನ್ನೇನು ಸಂದೆಗಂ ಧರೆಯ ಮಣ್ಣನಿತಿನಿತ
ತಿನ್ನಿರೈ ಪಾತಾಳ ಪರಿಯಂತವೆನಲಾಗಿ
ಮನ್ನೆಯರು ಮಕುಟವರ್ಧನರು ಸಹಿತಿಳೆಯ ವಿರಳಂ ಮಾಡಿ ಪೆರ್ಬಟ್ಟೆಯಿಂ
ಪನ್ನತಿಕೆಯಿಂದಿಳಿದರಾ ಸಗರರಚಿತ ಪದ
ವನ್ನಾಡೆ ಸಾಗರವೆನುತ್ತಿಹುದು ಲೋಕವೈ
ಪನ್ನಗಾಧಿಪನ ಪುರಕಾಗಿ ನಡೆದುದು ಸೇನೆಯಾ ವೀರರಸದ ಸೋನೇ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡಿಘುಡಿಸಿ ಭೋಗಾವತಿಯ ಮುತ್ತಲಾ ಫಣಿಗ
ಳೊಡೆಯನಾಲಿಸಿ ಧರೆಯ ಮನುಜರೀ ಪಾತಾಳ
ದೆಡೆಗೆ ಬಪ್ಪಾಗಳಾವೇಂ ಸದರವೋ ಎನುತ ಘೂರ್ಮಿಸುತ ಭೇರಿಗಳನೂ
ಹೊಡೆಯ ಹೇಳೋಯೆನುತ್ತರ್ಧಫಣಿಯಾ ಮೇಲು
ಗಡೆಯ ಪುರುಷಾಕೃತಿಯ ನಾಗರ್ಕಳಾ ಕೈದು
ವಿಡಿದು ಬಂದಿದಿರಾದರಾ ಸಗರಭಟರೊಳಾ ಕೀರ್ತಿವನಿತೆಯ ವಿಟರೊಳೂ ೪೪

ಪುರವ ಹೊಱವಂಟು ಫೌಜಿಕ್ಕಿ ಘುಡಿಘುಡಿಸುತ್ತ
ಕರಿಗೆ ಕರಿ ಹಯಕೆ ಹಯ ರಥಕೆ ರಥ ಭಟರಿಗ
ತ್ಯುರುತರದ ಭಟರಿದಿರ್ಚ್ಚುತ ಬೆರಲ ಬೊಬ್ಬೆಯಿಂದಖಿಳ ವಾದ್ಯಂಗಳೊದಱೀ
ಕರದ ಖಂಡೆಯದ ಖಣಿ ಖಟಿಲು ನಿಱಿ ನಿಟಿಲೆಂಬ
ಪಿರಿದೂ ರವವೆಣ್ದೆಸೆಯ ತುಂಬೆ ಕಾದಿದುದು ಸಗ
ರರ ಸೇನೆ ಫಣಿಪವಾಹಿನಿಗಳೆನಲಾ ಯುದ್ಧದಿರವನಾವಂ ಬಣ್ಣಿಪಂ ೪೫

ಉಭಯ ಬಲವಿಂತು ಕಾದುತ್ತಿರಲು ಬೊಬ್ಬಿರಿದು
ರಭಸದಿಂ ಮೇಲ್ವಾಯ್ದು ಬಪ್ಪ ಫಣಿ ಸಂಕುಲದ
ವಿಭವವಂ ನೋಡಿ ಸಗರನ ಕುಮಾರರು ಗರುಡಬಾಣಂಗಳಂ ಬಿಡಲ್ಕೇ
ನಭದಿಂದ ವೈನತೇಯಂಗಳಾರ್ಭಡಿಸುತ್ತ
ಶುಭರೂಪವಾಗಿ ತುಡುಕಿದವು ನಿಮಿಷದೊಳು ನಾ
ಡೆ ಭುಜಂಗರಂ ಬಳಿಕ್ಕವನೀಕ್ಷಿಸುತ್ತ ಮುಱಿದೋಡಿ ಪುರವಂ ಪೊಕ್ಕರೂ ೪೬

ಸುರಪನಮರಾವತಿಯ ಮುತ್ತಿದೆವು ದೇವೇಂದ್ರ
ನಿರದಳ್ಕಿ ಸಗ್ಗವಂ ಶೋಧನೆಯ ಕೊಟ್ಟೆಮ್ಮ
ತುರಗವಿಲ್ಲನಲಾಗಿ ಬಿಟ್ಟು ಬಂದೆವು ನಿಮ್ಮ ಪಟ್ಟಣದೊಳಿಪ್ಪದೆಮ್ಮಾ
ಹಿರಿಯಶ್ವವಂತದಂ ಕಳ್ಳನಂ ತಂದಿತ್ತು
ಹರಣವಂ ನೀವುಳುಹಿಕೊಳ್ಳಿಯಂತಲ್ಲವೇ
ಪುರವನಿಂತೀಗ ಸೂರೆಯ ಬಿಟ್ಟು ನಿಮ್ಮೆಲ್ಲರಂ ತಲೆಯನರಿವೆವೆನಲೂ ೪೭

ಎಂದ ಮಾತಂ ಕೇಳಿ ಚಿತ್ರವರ್ಮನ ಕರೆದು
ಬಂದು ನೀನವರ ತುರಗಂಬೆರಸಿ ನಮ್ಮ ಪುರ
ಮಂದಿರಂ ಬೊಗಲು ಸಗರರ ದಂಡು ಮುತ್ತಿ ತಮ್ಮಯ ಪಟ್ಟಣವನೀಕ್ಷಣಾ
ದಿಂದ ಸೂರೆಯನಾಡಿದಪರಿದಕೆ ಗತಿಯೇನು
ಹಿಂದೆ ಹೊಕ್ಕನನೊಪ್ಪಿಸಲ್ಬಾರದೆಲ್ಲರುಂ
ಸಂದೇಹವಿಲ್ಲದಳಿಯಲ್ಬೇಹುದೆನೆ ಸುರಪಸೇವಕಂ ಮರಳಿ ನುಡಿದಂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟೆಂಟಣಿಸಬೇಡವೆನ್ನು ವನವಂದಿರಿಗೆ ಮನ
ವಂಟಿ ತೋಱುತೊಪ್ಪಗೊಡಿಯದೃಶ್ಯಾಕರಣ
ವುಂಟೆನಗೆ ನಿಮಿಷಮಾತ್ರಕೆ ತಪ್ಪಿ ಪೋಪೆನೆಂದಾಡಲಾ ಫಣಿರಾಜನೂ
ನಂಟನವನೆಮ್ಮೂರ ಪೊಕ್ಕನಾರ್ಭಟೆಯಿಂದ
ಎಂಟುದಿಕ್ಕಂ ಮುತ್ತಿ ರಾವಳಿಸಿ ಮುಳಿದವ್ಮ
ಗಂಟಲಂ ಕೊಱೆಯಬೇಡೀಕ್ಷಣದೊಳೊಪ್ಪಿಸುವೆವೆಂದು ಮಾತಾಡಿಸಿದರೂ ೪೯

ಆಗಲಾ ತುರಗವೇಱುತ ಚಿತ್ರವರ್ಮನಾ
ಬಾಗಿಲಂ ಪೊರಡಲದೆವೊಪ್ಪಿಸಿದೆನೆಂದಾಡ
ಲಾಗಿ ಕಂಡಾ ಭೂಪರಾರ್ಭಡಿಸಿ ಪಿಡಿವೆವೆಂಬನಿತಕ್ಕೆ ಬಯಲಾಗುತಾ
ಹೋಗಿಯಶ್ವವನಗ್ರತಪವಿರ್ದ ಕಪಿಲಮುನಿ
ಪಾಗಾರಮಂ ಪೊಕ್ಕು ತಾಪಸನ ಪಿಂದೆ ಚೆ
ನ್ನಾಗಿ ಕುದುರೆಯ ಕಟ್ಟಿ ಸಗ್ಗಕ್ಕೆ ಪೋದನಾ ಚೋರನತ್ಯಧಿಕ ಧೀರಾ ೫೦

ಮುತ್ತಿಗೆಯ ತೆಗೆದು ಫಣಿರಾಜನಗರಂ ಬಿಟ್ಟು
ಮತ್ತರಸಿದರು ದಿಕ್ಕು ದಿಕ್ಕಿನೊಳು ತುರಗಮಂ
ಉತ್ತುಮದ ಕಪಿಲಮುನಿಯಾಶ್ರಮಕೆ ಬರಲಲ್ಲಿ ಕುದುರೆಯಂ ಕಂಡು ಪಿಡಿದೂ
ಮತ್ತರೀ ಮುನಿ ಈಗ ಕದ್ದು ತಂದಾತನೆಯೆ
ನುತ್ತ ಬಗೆದಾ ಶಿವಧ್ಯಾನದೊಳಗಿರುತಿಪ್ಪ
ಚಿತ್ತಶುದ್ಧನ ಮಹಾಸಾಮರ್ಥ್ಯವಲ್ಲಭವನನೀಕ್ಷಿಸುತ್ತೇಗೆಯ್ದರೂ ೫೧

ಇಂದೀ ಮುನೀಶನೆ ಕಳ್ಳನೀ ಯತಿ ಕದ್ದು
ತಂದ ಕುದುರೆಯನವಂ ಸಹಿತ ಕೊಂಡೊಯ್ದೆಮ್ಮ
ತಂದೆಯೆಡೆಗೊಪ್ಪಿಸುವೆವೆನುತಲಾರ್ಭಡಿಸಿ ಪಿಡಿಯಲ್ಕೆನುತ್ತವಗಡಿಸಲೂ
ಕಂದೆಱೆದು ಕಂಡನಾ ತುರಗಮಂ ಘೂರ್ಮಿಸುವ
ಮಂದೆವಾಳರನಾಗಲಾ ಕಪಿಲಮುನಿ ಮುಳಿಸಿ
ನಿಂದ ಘುಡಿಘುಡಿಸಿ ಕೋಪಿಸಿದನಂತಾ ಯತಿಯ ಸಾಮರ್ಥ್ಯವಿನ್ನೆಂತುಟೋ ೫೨

ನಿಟ್ಟುಸುರಿನಿಂದ ಘೂರ್ಮಿಸಲು ಪೇಱುರಿಯಾಗ
ಲಟ್ಟಿ ಮುಸುರಿತು ಮಹಾಪ್ರಳಯಾಗ್ನಿಯಂದದಿಂ
ಕಟ್ಟಧಿಕ ಸಗರನಱುವತ್ತು ಸಾವಿರ ಪುತ್ರರಂ ಬಳಿಕ್ಕವರ ಸೇನೇ
ಒಟ್ಟಜೆಯ ಹದಿನೆಂಟು ಡೊಳ್ಳೆಯಂ ನಿಮಿಷಕ್ಕೆ
ಸುಟ್ಟುರುಪಿಯಾ ಬೂದಿಯಂ ಹಣೆಯೊಳಂ ಬೊಟ್ಟ
ನಿಟ್ಟುಕೊಂಡಂ ನಿರಾಯಾಸದಲ್ಲಿ ಕಣ್ಮುಚ್ಚಿ ಮರಳಿ ಧ್ಯಾನದೊಳಿರ್ದನೂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನಿಪನ ಪರಾಕ್ರಮನಾರು ಬಣ್ಣಿಸಬಪ್ಪ
ದೆನಿತು ಬಲವೆನಿತು ಸೇನಾತಿಶಯವಿದರ್ೊಡೇ
ನನಯುಮಂ ಮಾಡಿದರು ಕೆಡುವುದಕ್ಕೇನು ಸಂದೆಗವೆಂಬ ಮಾಳ್ಕೆಯಿಂದಾ
ಅನಿಬರುಂ ಬೆಂದು ಪೋಗಲು ಸಗರಭೂಮಿಪಂ
ನೆನೆದು ಚಿಂತಿಸಿದನಾ ಪಾತಾಳಕಂ ತುರಗ
ವನು ತರಲ್ಪೋದ ದಂಡಿಸೊಳೊರ್ವರುಂ ತಿರಿಗಿತಿಲ್ಲವೆಂದಾಕ್ಷಣದೊಳೂ ೫೪

ಅರಸನಾ ಸಗರಚಕ್ರೇಶ್ವರಂ ನೆಱೆ ತನ್ನ
ಹಿರಿಯ ಮಗನಜಗರನ ಪುತ್ರನೆಂದೆನಿಸುವುರು
ತರದಂಶುಮಾನುವಂ ಕರೆದು ಪೋಗೆಲೆ ಮಗನೆ ನಿಮ್ಮ ಚಿಕ್ಕಪ್ಪನವರೂ
ತುರಗಮಂ ತರಲೆಂದು ಪಾತಾಳಲೋಕಕ್ಕೆ
ತೆರಳಿಪೋದವರ ದಂಡೇನಾದುದೆಂಬುದಂ
ಪರಿಕಿಸುತ ಬಾಯೆನ್ನುತ್ತಟ್ಟಲೆಯಿತಂದಂ ಕುಮಾರನತ್ಯಧಿಕ ಧೀರಾ ೫೫

ದಂಡೆಲ್ಲಿ ಪೋದುದೆಂದಾತನಱಸುತ್ತ ಮುಂ
ಕೊಂಡುಬರುತಂ ದಿಗ್ಗಜಂಗಳಂ ನೆಱೆ ಕೇಳಿ
ಕೊಂಡು ಬರುತಾ ಸೇನೆಯಿಳಿದ ತಾಣವನಱವುತೊಳಪೊಕ್ಕು ಪಾತಾಳವಾ
ಖಂಡೇಂದುಧರರೂಪನಾ ಕಪಿಲಮುನಿವರನ
ಕಂಡು ವಂದಿಸಿ ನುತಿಸುತಿರೆ ಯತಿಪ ಕಣ್ದೆಱೆಯೆ
ಮಂಡೆಯುಂ ತತ್ತಾಪಸನ ಪಾದಕಿಳಿಹಿ ವಂದಿಸಿದನಂದಂಶುಮಾನೂ ೫೬

ನೀನಾರಿದೇಕಿಲ್ಲಿಗೈತಂದೆ ಎನಲೆಲೆ ಕೃಪಾನಿಧಿಯೆ ನಾಂ
ಪಾ ನಿಧಿಯೆ ನಾಂ ಸಗರ ಭೂಪತಿಯ ಮೊಮ್ಮಗನ
ದೇನುಕಾರಣವೆನಲ್ಕೆಮ್ಮ ಚಿಕ್ಕಪಂದಿರಱುವತ್ತುಸಾವಿರಗಳೂ
ಸೇನೆ ಸಹಿತೆಯಿತಂದರೆಲೆ ದೇವ ಬಲ್ಲಿರೇ
ಏನಾದರವರೆನಲು ನಗುತಲಿಂದೆಂಮುಂಮು
ಹಾನಿರೋಧಂಗೆಯ್ಯಲೆಲ್ಲರಂ ಮಿಗೆ ಸುಟ್ಟು ಬೊಟ್ಟಿಟ್ಟುಕೊಂಡೆವಲ್ಲೈ ೫೭

ಎನೆ ಕೇಳಿಯುಂತಂಶುಮಾನು ನುಡಿದಂ ಜೀಯ್ಯ
ಜನವಱೆಯೆ ಕಮ್ಮಾರರ ತಿದಿ ಸುಯ್ಯಲಾಗಿ ಘ
ಮ್ಮನೆ ಪಂಚಲೋಹಂಗಳೆಲ್ಲವುಂ ಬೇವವೆನೆ ಸಾಕ್ಷಾತ ಶಿವನೆನಿಸುವಾ
ನಿನಗೆ ಮುನಿದವರು ಸಾವುದಕೆ ಸಂದೆಹವೆ
ಚಿನುಮಯನೆ ಲೋಕಪಾವನನೆ ಕಾರುಣ್ಯನಿಧಿ
ಯನಯಕ್ಕೆ ತಕ್ಕಶಿಕ್ಷೆಯು ಮವರಿಗಾಯ್ತೆಂದು ನುಡಿದನಾ ವೇಳೆಯಲ್ಲೀ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಣಮಿಸುತಂಶುಮಾನುವಿನ ನುಡಿಗಾ ಮುನೀ
ಶ್ವರ ನುಡಿದನೆಲೆ ನಮ್ಮ ಮುಱಿಿಯೊಕ್ಕ ಕಾರಣಂ
ಸುರಪತಿಯು ಪಟ್ಟವೆಂದಿನ ತೆಱದೊಳಿರಲಿ ನಿಮ್ಮಯ ತುರಗವಂಕೊಂಡು ೧೯ಂ
ತ್ವರಿತದಿಂ ಪೋಗೆಂದು ಕೊಡೆ ಜೀಯ್ಯ ನಮ್ಮ ಪಿತ
ರರು ನಿಮ್ಮ ಬಾಧಿಸುತ ದುರ್ಮರಣದಿಂದ ಮಡಿ
ದರಿಗೆಯಾ ದೋಷ ಪರಿಹಾರಕ್ಕೆ ಗತಿಯು ನಿರವಿಪುದೆಂದು ಪೊಡಮಟ್ಟನೂ ೫೯

ಅವನೊಳಾ ಮುನಿನಾಥನಿಂತೆದನೆಲೆ ಮಗನೆ
ಯಿವರ ದೋಷಂ ಪರಿದು ಸಗ್ಗಕ್ಕೆ ಪೊಗುವುದಕೆ
ಶಿವನ ಮಸ್ತಕದ ಗಂಗೆಯುಂ ತಂದಿವಂದಿರಳಿದೆಡೆಯೊಳಂ ಪರಿಯಿಸಲ್ಕೆ
ತವೆ ಮೋಕ್ಷವಾಗಲ್ಕೆ ಪೋಗೆಂದು ಕಳುಪಲಾ
ಪ್ರವಿಮಲದ ಮುನಿಗೆಱಗಿ ತುರಗಸಹಿತಂ ಬರು
ತವನೀಶನಸಗರನ ಪಿತಾಮಹನ ಬಳಿಗೆ ನಡೆತಂದು ವಂದಿಸಿ ಪೇಳ್ದನೂ ೬೦

ಉರಗರಾಜನ ಕೂಡೆಯುವರು ಕಾದಿದುದನಾ
ತುರಗಸಹಿತಾ ಸುರಪನಾಳು ಕೆಟ್ಟೋಡಿ ಮುನಿ
ವರನ ಮುಱಿಿಯೊಳು ಕಟ್ಟಿ ಪೋದುದ ಕುಮಾರರಾ ಯತಿಯು ಬಾಧಿಸಲು ಸುಟ್ಟಾ
ಪರಿಯನಲ್ಲಿಗೆ ತಾನು ಪೋದುದ ಋಷೀಶ್ವರನ
ಕರುಣವಂ ಪಡೆದುದನವಂ ವಾರುವನನಿತ್ತು
ಮರಣವಾದವರ ಪಾಪಂಗಳೆವ ಬಗೆಯ ನೃಪನೊಳು ಪೇಳ್ದನಂಶುಮಾನೂ ೬೧

ಕೇಳಿದಂ ಸಗರಭೂಪಾಲಕಂ ತನ್ನ ಸುತ
ರಾಳುಸಹಿತಂ ಮಡಿದ ವಾರ್ತೆಯುಂ ತುರಗ ಯು
ಜ್ಞಾಳಾಪವಿನ್ನೇಕೆ ಮಡಿದವರ ದುಷ್ಕೃತಂಗಳೆದು ಸಗ್ಗವನೆಯ್ದಿಪಾ
ಆಳೋಚನವೆ ಮುಖ್ಯವೆಂದು ತಿಳಿದಂತಲ್ಲಿ
ತೋಳಬಲವುಳ್ಳ ಮೊಮ್ಮಗನಂಶುಮಾನುಗಾ
ಪೀಳಿಗೆಯ ಪಟ್ಟಮಂ ಕಟ್ಟಿ ಗಂಗೆಯ ತಪ್ಪೆನೆಂದು ತಪಸಿಗೆ ಪೋದನೂ ೬೨

ನೃಪನು ರಾಜ್ಯವನಾಳ್ದು ದೈವತ್ತು ವರುಷವಾ
ತಪದೊಳಾ ತೆಱದೆ ಪಂಚಾಶತ್ಸುವತ್ಸರಂ
ವಿಪುಳ ವಿಗ್ರಹದೊಳಿರ್ದಳಿಯಲಾ ಸಗರನದ ಕೇಳ್ದಂಶು ಮಾನವಾಗಾ
ಅಪರಿಮಿತ ವೈಭವಕೆ ತನ್ನ ಸುತ ಕಟ್ಟರಾ
ಧಿಪಗೆ ಪಟ್ಟಂಗಟ್ಟಿ ತಾಂ ಬಂದು ಸದ್ವ್ರತದೊ
ಳುಪವಿಃಸಲ್ಬಾರದಂತಿರ್ದನಾ ಪಿತೃಗಳಂಸಗ್ಗ ವೆಯಿದಿಸುವೆನೆಂದೂ ೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತನಯಿವತ್ತು ವರುಷದ ಮೇಲೆ ಮಡಿಯಲಾ
ಭೂತಳಾಧಿಪನು ಖಟ್ವರನಲ್ಲಿ ತನ್ನ ತನು
ಜಾತನೆನಿಸುವ ದಿಳೀಪಂಗೆ ಪಟ್ಟಂಗಟ್ಟಿ ತಪದೊಳಿರ್ದಳಿಯಲಾಗೀ
ಸಾತಿಶಯುದಾ ದಿಳೀಪಂ ನಿಜಕುಮಾರ ವಿ
ಖ್ಯಾತನೆನಿಸುವ ಭಗೀರಥೆ ರಾಜ್ಯಾಭಿಷೇ
ಕಾತಿಶಯದಖಿಳ ವಿಭವನೊಪ್ಪುಗೊಟ್ಟುಪೋದಂ ಪಿತರರಳಿದಲ್ಲಿಗೇ ೬೪

ಶಿವನೊಲಿಯದಾ ದಿಳಿಂಪಂ ಮಡಿಯಲಂತವನ
ಕುವರಂ ಭಗೀರಥಂ ತನ್ನ ಸುಕುಮಾರಂಗೆ
ಸವಿಶೇಷಪಟ್ಟವುಂ ಕಟ್ಟಿ ನಾನಾಚಾರ ಮಾಳ್ಕೆಯಲ್ಲಿಂದುಗ್ರದಾ
ವಿವಿಧ ಪಂಚಾಗ್ನಿ ಮಧ್ಯದೊಳು ತಪವಿರಲಾಗಿ
ಭುವನಾಧಿಪರ ಪೀಳಿಗೆಗಳ ಸತ್ಕೃತ್ಯದಿಂ
ತವಿಲಾಗಿ ಬಂದುದಾ ಸಗರರೆಸಗಿದ ಕರ್ಮವಿನ್ನದೇಂ ವರ್ಣಿಸುವೆನೂ ೬೫

ಆ ಭಗೀರಥನುಗ್ರತಪಕೆ ಸನ್ನಿಧಿಯಾಗಿ
ಹೋ ಭಲರೆ ಎಂದು ಸರ್ವೇಶಂ ಪ್ರಸನ್ನತೆಯೊ
ಳಾ ಭೂಪಗೊಲಿದು ನಿನ್ನಿಷ್ಟವೇನೆನಲಾಗಿ ಸಾಷ್ಟಾಂಗವೆಱಗಿ ನಮಿಸೀ
ಶೋಭನಮಹೇಶ್ವರಾ ಮತ್ಪಿತರರೆಯ್ದೆ ನಿಜ
ಸೌಭಾಗ್ಯವುಂ ಬಿಟ್ಟು ನಿನ್ನ ಭಜನೆಯೊಳಳಿದ
ರೈಭವಾನೀಶ ನಿನ್ನಯ ಲೆಂಕ ನಾನೆನಗೆ ಕೃಪೆಯಾದೆಯಾನೆ ಸುಕೃತೀ ೬೬

ಜೀಯ್ಯ ಬಿನ್ನಪವೈಯ್ಯ ನಮ್ಮ ಪಿತರರ್ಕಳು ಮ
ಹಾಯತೀಶ್ವರ ಕಪಿಲನುಗ್ರದಿಂ ಮಡಿದರ
ನ್ಯಾಯದಿಂದವರ ದುರ್ಮರಣ ದೋಷಿಗಳ ಕೃತಕೃತ್ಯರಂ ಮಾಳ್ಪುದಕ್ಕೇ
ಮಾಯಾರಿ ನಿನ್ನ ಮಸ್ತಕದ ಗಂಗೆಯನಿತ್ತು
ಕಾಯಬೇಕೆಂದೊಡಾಗಲಿ ಎಂದನೀಶನಾ
ರಾಯಂಗೆ ಪರಿಹೃತಾಪಾಯಂಗೆ ನಿರ್ಮಲಾಜೇಯಂಗೆ ಸಂತಸದೊಳೂ ೬೭

ಮತ್ತೊಂದು ಬಿನ್ನಪವನವಧರಿಸು ಬಿಡದೆಮ್ಮ
ಹೆತ್ತಯ್ಯಗಳು ತಪದೊಳಿರ್ದು ನೀನೊಲಿಯದಿರೆ
ಸತ್ತು ಸತ್ತೇ ಹೋದರೈಸೆ ನಿಜ ಸಿದ್ಧಿಯಾಯಿತ್ತಿಲ್ಲವೆಂದೆನಗೆ ಕೊಟ್ಟಾ
ಉತ್ತಮದ ಗಂಗಾಜಲಸ್ಪರ್ಶದಿಂದಲಿ
ಪ್ಪತ್ತೊಂದು ತಲೆಯಲ್ಲಿ ಬಂದ ದೋಷಂಗಳಳಿ
ವುತ್ತಿರಲಿ ನರರಿಗಂತಪ್ಪ ಮಹಿಮೆಯು ನದಿಗೆ ಪಾಲಿಸುತ ಕೊಡುವುದೆಂದೂ ೬೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಾಗಲ್ಕೆ ಕೊಟ್ಟೆವೆನಲಾಗಿ ಕೈಮುಗಿದು
ಕಂತುಹರ ಚಿತ್ತೈಪುದಿನ್ನೊಂದು ಬಿನ್ನಪವ
ನೆಂತಕ್ಕೆ ನೀನೊಲಿದ ಕಾಲದೊಳಗಾಂ ಬೇಡಿಕೊಳಬಹುದೆಲೆ ಶಂಕರಾ
ತಾಂ ತಳ್ತು ದೇವಲೋಕಕ್ಕೆ ಮರ್ತ್ಯಕ್ಕಂತ
ನಂತನಾಳುತ್ತಿರ್ಪ ಪಾತಾಳಕೊಂದೊಂದು
ಕಾಂತಿಮಯ ಗಂಗಾತ್ರಿಗಾಮಿನಿಗಳಾಗಬೇಕೆನಲೀಶ್ವರಂ ಕೃಪೆಯೊಳೂ ೧೯

ಕೊಟ್ಟನಾ ತೆಱದಿಂದಲಿಳೆಗೆ ತಪ್ಪಾ ಗಂಗೆ
ನೆಟ್ಟನೀಶ್ವರನ ಮಸ್ತಕದಿಂದಲಿಳಿತರುತ
ದಿಟ್ಟಿ ಮೂಱನ ಹಣೆಯ ಭಸಿತದೊಳಗಿಂಗಿಹೋಯಿತ್ತದಂ ಕಂಡು ಭೂಪಂ
ಕೆಟ್ಟನಿನ್ನೇವನೆನುತಂ ಶಂಕರಗೆ ತಪಂ
ಬಟ್ಟನಾ ಹನ್ನೆರಡು ಸಾವಿರಬ್ದಂಬರಂ
ಕಟ್ಟಧಿಕ ಧರಣೀಶನಾತರಿಗೆ ಮರಳಿ ಜಗದೀಶಂ ಪ್ರಸನ್ನನಾದಂ ೨೦

ಮರಳಿ ತಪವೇತಕ್ಕೆರಾಯ ನಿನಗೆನಲಾಗಿ
ಪರಮೇಶ್ವರಾ ನಿನ್ನ ಕೃಪೆಯಿಂದಲಾಂ ಹಿಂದ
ಣರಸುಗಳ ತೆಱದಿಂದ ನೂಱು ನೂಱೀ ವರುಷದೊಳು ಸಾಯದಂತಾದುದೇ
ಹರುಷಂ ಶರೀರಮಾದ್ಯಂ ಧರ್ಮಶಾಸನೋ
ತ್ಕರವೆಂಬ ಮಾಳ್ಕೆಯಿಂ ನಿನ್ನಂಘ್ರಿಯಂ ಕಂಡೆ
ಕರುಣಾಕರಾ ಕೂರ್ತು ನೀ ಪಾಲಿಸಿದ ಗಂಗೆ ನಿನ್ನ ಭಸಿತದೊಳಡಗಿತೂ ೨೧

ಆ ಗಂಗೆಯಂ ಮರಳಿ ಪಾಲಿಪುದು ನನಗೆನಲು
ನಾಗಭೂಷಣನಲ್ಲಿ ಯಂಗುಷ್ಠ ತರ್ಜನೀ
ಭಾಗಮುಸ ಭಸ್ಮಾಸಮಾದಾಯ ಎಂಬಂತಿರಂಗುಷ್ಠ ತರ್ಜನಿಗಳಾ
ಯೋಗದಿಂ ಪಿಡಿದೆತ್ತಿ ಹಿಂಡೆ ನದಿಯಾಯ್ತು ಭೂ
ಭಾಗದೆ ನಖಾಗ್ರದಿಂದಂ ಪತತು ಭೂಮಿಗೆನ
ಲಾಗಿಯಾ ಭಸ್ಮವರ್ಣಂ ತತೋಜಲಮೆನಲು ರಾಜಿಸಿದುದೇವೊಗಳುವೆಂ ೨೨

ಶ್ರೀಕರದ ಭಸಿತವರ್ಣದ ಮಹಾನದಿಯಾ ಪಿ
ನಾಕಿಗುತ್ತಮ ರಾಜಧಾನಿಯೆಂದೆನಿಸುತಿ
ಪ್ಪಾ ಕಾಶಿಗೆಯಿದೆ ಜೀವನ್ಮುಕ್ತಿ ಸುಕ್ಷೇತ್ರವಲ್ಲಿಗೆ ಭಗೀರಥನೃಪಾ
ತಾ ಕೂಡೆ ತರಲು ಭಾಗೀರಥಿಯುದಾಯಿತ್ತು
ನಾಕಕ್ಕೆ ಪೋದ ವಾಹಿನಿಯು ಪೆಸರೀಗ ಮಂ
ದಾಕಿನಿಯುದರರೆ ಪಾತಾಳಕ್ಕೆ ನಡೆದ ಗಂಗೆಯೆ ಕಣಾ ಭೋಗಾವತೀ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕಾಲದೊಳು ಸುರರು ಪೊಗಳಿದರು ಸುಕೃತ ಪರಿ
ಪಾಕಿನೀ ಸುಮಹತ್ವತಾಕಿನೀ ನಿಕೃತಬಹು
ಢಾಕಿನೀ ನಿರ್ಧೂತ ಶಾಕಿನೀ ಭಕ್ತಾವಲೋಕಿನೀ ವರ ಪಟುಸುಧಾ
ಸೇಕಿನೀ ದಿಕ್ತಟಾಶೋಕಿನೀ ಧೃತಚಕ್ರ
ವಾಕಿನೀ ಪರಿಪೂತನಾಕಿನೀ ಪಾಪಲುಂ
ಟಾಕಿನಿ ಸುರಭಿದವಲೋಕಿನೀ ಪೂರ್ವಮಂದಾಕಿನೀ ಎನುತಿರ್ದರೂ ೭೪

ಈ ಪರಿಯೊಳೆಯಿತರುತಿರ್ದುದಾ ನದಿಯಿತ್ತ
ಲಾ ಪಾವನಾಗ್ರಮುನಿ ಜಹ್ನುಯಜ್ಞವ ಮಾಡಿ
ಕಾಪಾಲಿಯಂ ಭಜಿಸುತಿರಲು ಹನ್ನೆರಡು ಸಾವಿರ ವರುಷವಪ್ಪೆಡೆಯೊಳೂ
ಕಾಪಟ್ಯರಹಿತ್ಯರಹಿತನೊಳು ತಚ್ಛಿಷ್ಯರೆಂದರೆಲೆ
ಸೋಪಾಧಿರಹಿತ ಗುರುವೇ ಭಗೀರಥನೆಂಬ
ಭೂಪ ತಪ್ಪೀನದಿ ಮದೀಯ ಯಜ್ಞದ ಕಿಚ್ಚ ಕೆಡಿಸಿ ಪರಿದಪುದೆಂದರೂ ೭೫

ಆ ನುಡಿಯ ಕೇಳಿ ಬರಲದಕೇನೆನುತ್ತಲಾ
ಜ್ಞಾನನಿಧಿ ಜಹ್ನು ಕೈಯ್ಯೊಡ್ಡಿ ಬಟ್ಟೆಯೊಳು ಬ
ಪ್ಪಾ ನದಿಯನೆಲ್ಲಮಂ ತಡೆದು ತನ್ನಯ ಬಲದ ಹಸ್ತದೊಳಗಳವಡಿಸುತಾ
ಪಾನವಮಂ ಮಾಡಿಕೊಂಡಂ ಪೋದುದಾ ಗಂಗೆ
ಯಾ ನರೇಶ್ವರನೀಕ್ಷಿಸುತ್ತಕ್ಕಟಾ ಎನಗೆ
ಹಾನಿಯಾಯ್ತಾಯಸಂಬಟ್ಟು ತಂದುದು ಪೋದುದೆನುತರಸನೆಯ್ತಂದನೂ ೭೬

ಮತ್ತೆ ಹನ್ನೆರಡು ಸಾವಿರ ವರುಷವಾ ಮಹಾ
ಕೃತ್ತಿವಾಸನ ಕುಱಿತು ತಪವಿರಲು ನಿಜವ ತೋ
ಱುತ್ತಲೇನೈರಾಜ ಮರಳಿ ತಪವೆನಲಾಗಿ ಜೀಯ್ಯ ನೀಂ ಕೊಟ್ಟನದಿಯಾ
ಎತ್ತಿ ಪಾನಂ ಮಾಡಿದನು ಜಹ್ನುವದನೆ ಕೂ
ರ್ತಿತ್ತು ರಕ್ಷಿಪುದೆನ್ನನೆನಲು ಮದ್ಭಕ್ತರ
ತ್ಯುತ್ತಮರು ತೆಗೆದುದಂ ಕೊಡಲಱಿಯೆವವರನೆ ಭಜಿಸಿ ಪಡೆಯಿನ್ನೆಂದನೂ ೭೭

ಮರಳೆ ಜಹ್ನುವ ಕುಱಿತು ತಪವಿರ್ದನಲ್ಲಿ ಪ
ನ್ನೆರಡುಸಾವಿರವರುಷವಾ ಭಗೀರಥಗೆ ಮುನಿ
ವರನೊಲಿದು ನಿನ್ನಿಷ್ಟವೇನರಸ ಎನೆ ಜೀಯ್ಯ ನೀಂ ಕೊಂಡ ಮದ್ಗಂಗೆಯಾ
ಕರುಣಿಪುದು ಮರಳಿ ಎನಲಾ ಜಾನುವೆಡೆಯಲ್ಲಿ
ವಿರಳವಮಂ ಮಾಡಿಕೊಟ್ಟಂ ನದಿಯನಾ ಮಹೇ
ಶ್ವರನೆನಲು ಶಿವನಿತ್ತುದಂ ತೆಗೆದು ಮರಳಿಕೊಡುವೀಶಭಕ್ತರೆ ಮುಖ್ಯವೈ ೭೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಜಹ್ನುಸಂಬಂಧದಿಂದ ಜಾಹ್ನವಿ ಎಂಬು
ದೇ ಜಗತ್ಪ್ರಖ್ಯಾತವೈ ಭಗೀರಥನೆಂಬ
ರಾಜನಾರ್ಜಿಸಲಾಗಿ ಭಾಗೀರತಿಪ್ರಚುರವಾಗಿ ಸಗರರ ಮುಕ್ತಿಗೇ
ಯೋಜಿಸಿ ಸಮುದ್ರಮಂ ಕೂಡೆ ಸಾಗರವಾದು
ದೈ ಜಗತಿಗಂತಾ ಭಗೀರಥ ಸುಯತ್ನ ತ
ತ್ತೇಜದಿಂದೀ ಕಥೆ ಸಮಾಪ್ತಿಯಾದುದು ಕಣಾ ಮುಂದೆ ನೀಂ ಕೇಳೆಂದನೂ ೭೯

ಮತ್ತೆ ಕೇಳೈ ಗೌತಮಾಲಯದೊಳುಂಡು ಹೋ
ಗುತ್ತ ಹಾರುವರು ಗೋವಧೆಯು ಹಾಯ್ಕೆ ತನ್ನಿ
ಮಿತ್ತದಿಂ ಭಜಿಸಲೀಶ್ವರನು ಕರುಣಿ ಜಟಾಜೂಟದಿಂ ಪಾಲಿಸಲ್ಕೇ
ಉತ್ತಮದ ಗೌತಮಿ ಎನಿಪ್ಪ ನದಿ ಧರಣಿಗೆ ಬರ
ಲುತ್ತ ಗೋದಾವರಿಯೆನಿಪ್ಪ ನಾಮವನು ತಳೆ
ದತ್ತಲಾ ಸಕಲ ಪಾವನಿ ಮಹಾವಾಹಿನಿಯದಾದುದೈ ಕೇಳು ಕುವರಾ ೮೦

ಗಂಗೋತ್ಪತ್ತಿ ಸಮಾಪ್ತ

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ್ಯಂ
ಶೀಲ ಷಟ್ಸ್ಥಲಿ ಹಲಗಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೊರ್ತು ಪದನಂ ಮಾಡಿದಂ ೮೧

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಭಗೀರಥನ ಕಥೆಗೆರಡು ಕಾಂಡದ ಮೇಲೆ ಸಂಧಿ ಇಪ್ಪತ್ತಮೂರು ೮೨

ಅಂತು ಸಂಧಿ ೨೩ ಕ್ಕಂ ಪದನು ೧೨೦೮ಕ್ಕಂ ಗ್ರಂಥ ೮೭ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೬

ವಿಷ್ಣುಪಾದೋದ್ಭವ ಗಂಗಾನಿರಸನ ಕಥೆ

ಹರಿಪದೋದ್ಭವ ಗಂಗೆಯೆಂಬಧಮಜನವಾಕ್ಯ
ನಿರಸನಂ ಯುಗಧರ್ಮದಿಂದ ವೃಷಭೇಶ್ವರನ
ಚರಣೈಕಪಾದದಿಪ್ಪತ್ತೆರಡು ಲೀಲಾ ಕಥಾಪೂರ್ಣವೆನೆ ಪೇಳ್ವೆನೂ

ಋಜುವಾದ ಚಕ್ರವಾದೆಂತು ದಿಕ್ಕಿನ ಬಟ್ಟೆ
ನಿಜಪುರಂಬೊಗುವಂತೆ ನೇರ ಡೊಂಕಿನ ನದೀ
ವ್ರಜವರ್ಣವಪ್ರವೇಶಮುಮಪ್ಪವೋಲ್ ತ್ರಯಾಯೋಗ ಸಾಂಖ್ಯಂ ಪಶುಪತೀ
ಕುಜನಾ ಸುರಾರಿಮತ ದೇವತಾಭ್ಯರ್ಚನಾ
ಭಜನಾ ಫಲಂ ನಿಮ್ಮನೆಯಿದುವುದು ಮಕುಟ ಚೋ
ರಜನಾಹೃತಾವನೀಶ್ವರ ಮಸ್ತಕಾರ್ಪಣವೆನಿಪ ಶಾಂತಮಲ್ಲ ಶರಣೂ ೧

ಧರ್ಮಾರ್ಥಕಾಮದೊಳು ಮೋಕ್ಷವತಿಶಯವೆಂಬ
ಮರ್ಮದಿಂ ಸಾಲೋಕ್ಯವಾದಿಯೊಳು ಸಾಯುಜ್ಯ
ಪೆರ್ಮೆಯಪ್ಪಂತೆ ಗುರುಲಿಂಗ ಜಂಗಮದೊಳ್ ಪ್ರಸಾದವಗ್ಗಳವೆನಿಪ್ಪಾ
ಶರ್ಮದಿಂ ಸಿಂಹಾಸನಾಧಿಪತಿ ಶೀಲ ಸ
ತ್ಕರ್ಮ ಸುಪಥಾಧೀಶನಾದ ಮೇಲಣ ಗವಿಯ
ಕೂರ್ಮೆಯ ಚರಾಧಿಪತಿ ಶಾಂತನಂಜೇಶ ಜಯಜಯ ದಿವ್ಯ ಸುಪ್ರಕಾಶಾ ೨

ಮಿಗೆ ಬಹುವಿಧಂಗಳಿಂ ಶಿವನಿಂ ಮಹಾಗಂಗೆ
ಯೊಗೆದ ಕಾರಣವೇ ಪ್ರಸಿದ್ಧವಾಗಿರುತಿರಲು
ಜಗದೊಳಗೆ ವಿಷ್ಣುವಿನ ಕಾಲಿಂದ ಗಂಗೆಯು ಹುಟ್ಟಿತ್ತೆಂದು ಕೆಲರಧಮರೂ
ಬಗುಳುವರುತತ್ತ್ವಪ್ರಕಾರ ವಾದಿಗಳ ಮಾ
ತುಗಳ ತತ್ಖಂಡನಂಗಳನೊರೆವೆನೆಂತೆನಲ್
ಭೃಗು ಮುನೀಶ್ವರನಿತ್ತ ಶಾಪದಿಂ ಹಲವು ಜನ್ಮದೊಳಗಂತಾ ಮಾಧವಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುಡಿವರಾ ವೈಷ್ಣವರು ಬಲಿಯು ದಾನವ ಬೇಡಿ
ಯಡಿಯುನಾ ವಾಮ ತ್ರಿವಿಕ್ರಮಂ ತಾ ನೆಗಪಿ
ದೊಡೆ ಹರಿಯ ಕಾಲಿಂದ ಹುಟ್ಟಿತೆಂಬರುವಂತದಲ್ಲದಾ ಬ್ರಹ್ಮನೆಯ್ದೀ
ಹಿಡಿದಿಹ ಕಮಂಡಲೋಕದಿಂದ ತೊಳೆದನೆಂ
ದಡಿಗಡಿಗೆ ಪೇಳ್ವರುವುದಲ್ಲಿ ಕಾಲ್ವಾಗಿ-
ವೊಡೆಯಲ್ಕಜಾಂಡವಾ ಬಹಿರಾವರಣಜಲಂ ಸುರಿಯಿತೆಂದು ಸುರುತಿಹರೂ ೪

ಸುರಿವ ಗಂಗೆಯನಮರರೆಯ್ದ್ದಿ ಕೀರ್ತಿಸೆ ಶಿವಂ
ಧರಿಸಿಗಂ ಮಸ್ತಕದೊಳೆಂದೂಳ್ವಧಮ ಕು
ಕ್ಕುರನಂತೆ ಯೀ ಮೂಱು ನುಡಿಗಳಿಗೆ ಖಂಡನವನಹುದೆಂಬ ಮಾಳ್ಕೆಯಿಂದಾ
ಒರೆವೆನಾ ಹರಿಯ ಕಾಲಿಂದಲೇ ಹುಟ್ಟಿತೆನೆ
ಧರೆ ಜಲಾನಲ ಮುಖ್ಯವಷ್ಟತನುವಿಂದಾಯ್ತು
ಚರಣವಾ ಮಾಧವಂಗಾ ಕಾಲೊಳೇ ಜನಿಸಿತೆಂದು ಮತ್ತಂ ನುಡಿವೊಡೇ ೫

ಪದವನಜ ತೊಳೆದನೆಂದೊಂದು ಮಾತಂ ನುಡಿವ
ರದಕದೇ ಖಂಡನಂ ತತ್ಕಮಂಡಲದಲ್ಲಿ
ಮೊದಲುದಕವಿರಲಾಗ ಹರಿಯ ಕಾಲಿಂ ಹುಟ್ಟಿತೆಂಬುದೆ ಶತಾಬದ್ಧವೂ
ಅದು ಬೇಡವಾದಿ ಮತ್ಸ್ಯಂಕುಂಭಜಂ ಸಮು
ದ್ರದ ಜಲವನಂಜಲಿಯೊಳೆತ್ತಿಸಿಲ್ಕಿರ್ದನೆಂ
ಬುದು ತಥ್ಯವರರೆ ಗಂಡೂಷಿಯತಿ ಪಂಕಜೇಯತಿ ಶ್ರೀಪತೀಯೆಂಬಿನಂ ೬

||ಸಾಕ್ಷಿ|| ಶ್ಲೋ॥ ಗಂಡೂಷೀಯತಿ ಪಂಕಜೀಯತಿ ಫಣಿಭೃಂಗೀಯತಿಃ
ಶ್ರೀಪತಿ ೧

ಭಾಗೀರತಿಯು ತೀರದೊಳು ವಿಷ್ಣು ಹಂದಿಯುಂ
ಆ ಗುಹಂ ಕೊಂದನದ್ಯಾಪಿ ಎಂದೆನುತಿರ
ಲ್ಕಾಗಿ ತತ್ಸೂಕರಾರೋಹ ಗಂಗಾ ತಟೀಸಂಸ್ಥಿತ ಎನಿಪ್ಪರ್ಥದಿಂ
ಮೇಗಪ್ಪವಾಮನಿಗೀವೇಂ ಪೂರ್ವವಲ್ಲವೆ
ಚಾಗಿ ಬಲಿ ಧಾರೆಯೆಱೆದಾ ಜಲಂ ಮುನ್ನಲಾ
ಹೀಗೆ ಯಾ ಹರಿಯ ಕಾಲಿಂದಲೇ ಹುಟ್ಟಿತೆಂಬುದಬದ್ಧವಾಗಿ ಹೋಯ್ತು ೭

||ಸಾಕ್ಷಿ|| ಶ್ಲೋ॥ಕ ಅದ್ಯಾಪಿ ಸೂಕರಾರೋಹ । ಸ್ವಗಂಗಾ ತಟಿಸಂಸ್ಥಿತಃ
ಸ್ಕಂದಶ್ಚ ಸಂಹೃತಶ್ಚೈವ । ವರಾಹಾಖ್ಯೋಮೃತಾಹಶೇಃ ೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಳೆಗೆಯಾ ಬಹಿರಾವರಣ ಜಲಂ ಹರಿಯ ಕಾ
ಲ್ಪಿಳಿಲನಲೆಯುಲೊಡೆದು ಸುರಿವುದಕದಿಂ ಜಲ
ಪ್ರಳಯುವಾಗಲು ಸುರರು ಕೀರ್ತಿಸಲು ಮಸ್ತಕದೊಳೀಶ್ವರಂ ತಳೆದನೆಂದೂ
ಹುಳಿತ ನಾಯಿಗಳು ಬಗಳುವರದಕೆ ಖಂಡನಂ
ಆಳಿಕಾಕ್ಷನಾ ಸ್ವತಂತ್ರಂ ತನ್ನ ಪಂಚಮುಖ
ದೊಳು ಧರಾಂಬುಗಳಾದಿ ಪಂಚಭೂತಂಗಳಂ ನಿರ್ಮಿಸಿದನಾ ಜಲದೊಳೂ ೮

ನಳಿನಜಾಂಡವ ಪುಟ್ಟಿಸುತ್ತಿರಿಸಿಯಾ ಮಧ್ಯ
ದೊಳು ಮತ್ತೆ ಬೊಮ್ಮನಂ ಸೃಜಿಯಿಸಿದ ನೀಶ್ವರಂ
ಇಳೆಗಧಿಪನಂ ಮಾಡಿದಂ ಮತ್ತೆ ವಿಷ್ಣುವಂ ಹುಟ್ಟಿಸುತ್ತಂತಾದಿಯಾ
ಜಳಕಧೀಶನನೀಶ್ವರಂ ಮಾಡಿದಂ ನಿಜಂ
ಬಳಿಕ ಹುಟ್ಟಿದನ ಕಾಲಿಂದಾದುದೇ ಬಿಡ
ಗ್ಗಳದ ಬಹಿರಾವರಣ ಜಲಗಂಗೆಯುದಿಲ್ಲುಸಿದುದೆಯುಬದ್ಧಂ ೯

||ಸಾಕ್ಷಿ|| ||ಶ್ಲೋಕ||ಅಧಿಷ್ಮ ಶಕ್ತಿಭೇದೇನ ಪಂಚಭೂತ ಸಮುದ್ಭವಂ ಅನಲಾ
ಪೋಧರಾಯೋಗೇತತ್ರವಾಂಡ ಪ್ರಜಾಯತೇ ೩
ಶಿವಸ್ಯ ದಕ್ಷಿಣೇ ಬ್ರಹ್ಮಾವಾಮೇ ವಿಷ್ಣು ರ್ಪ್ರಜಾಯತೇ ಸೃಷ್ಟಿಕರ್ತಾ
ಭವೇದ್ಬ್ರಹ್ಮಾಸ್ಥಿತಿಕರ್ತಾಚ ಮಾಧವಃ ೪

ನೆಱೆ ಬರುತ್ತಿರ್ಪಾತ್ರಿವಿಕ್ರಮನ ಹೆಗ್ಗಾಲೆ
ಮುಱಿವಂತೆಯುುದಕದಿಂದಿಟ್ಟನಜನೆಂಬುದೆ
ಯುುಱಿವ ಪೌರಾಣಪ್ರಮಾಣ ಕಮಂಡಲು ಜಲಶ್ರೇಣ್ಯಾ ಹರೇಶ್ಚರಣವೂ
ನೆಱೆ ಮಹಚ್ಛಿನ್ನಕೃತ್ತೆಂತ್ತುಬರ್ಥದಿಂದಲಾ
ಅಱಿಮರುಳುಗಳ ಮಾತು ಗೆಲ್ವುದೇ ಪಾತಕಂ
ಕಱಿಗೊರಲನಂ ನಿಂದಿಸುತ್ತವರು ನರಕಕ್ಕೆ ನಡೆವ ಲವಲವಿಕೆಯ್ಯೆಸೇ ೧೦

||ಸಾಕ್ಷಿ|| ||ಶ್ಲೋಕ|| ಕಮಂಡಲುಜಲಶ್ರೇಣ್ಯಾ ಹರೇಶ್ಚರಣ ಛಿನ್ಕೃತ್
ಊರ್ಧ್ವಲೋಕಹಿತಾರ್ಥಾಯ ಪದ್ಮಯೋನಿಃ ಪಿತಾಮಹಃ ೫

ನರಸಿಂಹಬಿಲದೊಳು ನರಸಿಂಹನಿರ್ದುಬಂ
ಧುರ ಮಲ್ಲಿಕಾಕುಂಡ ಪಾತಾಳಗಂಗೆ ಸುರು
ಚಿರದ ಮಂದಾಕಿನೀ ಮುಖ್ಯ ತೀರ್ಥಸ್ನಾನಮಂ ಮಾಳ್ಪುದೆಂದೆಂದೇ
ನಿರುತವೆನಲಿದು ಮೊದಲೊ ಅದು ಮೊದಲೊ ಬಿಡು ತನ್ನ
ಚರಣಮಂ ತೊಳೆದುದಕಮಂ ಕುಡಿವನೇ ವಿಷ್ಣು
ಪರಿಕಿಸಲು ಮಜ್ಜನಕೆ ಭೋಜನಕೆಯಾ ಕ್ಲಪ್ತವಾದ ಕಾಲ್ನೀರಪ್ಪುದೇ ೧೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿಯ ಕಾಲ್ತೊಳೆದ ನೀರಲ್ಲದೊಡೆ ವಿಸುಪಶಂ
ಕರನ ಕಣ್ಣೀರಧಿಕವೇ ಎಂದು ನುಡಿವುತಿಹ
ನರಕಿಗಳ ಮಾತಬದ್ಧಂ ಶಿವನ ಕಣ್ಣೀರು ತ್ರಿಪುರದಹನದಲ್ಲೀ
ಇರದೇ ಯುನ್ಮೀಲಿತಾಕ್ಷೋಹಂತೆ ಜಲಬಿಂದು
ಪರಮ ಪಾವನವಲಾ ಲಕ್ಷಂಚ ದರ್ಶನಾ
ತ್ಪರುಪನಂ ಕೋಟಿ ಎಂಬರ್ಥದಿಂದ ಭವನೇತ್ರೋದಕಂ ಮುಖ್ಯ ಮತ್ತೇ ೧೨

||ಸಾಕ್ಷಿ|| ||ಶ್ಲೋಕ|| ಕಾತ್ಯಾಯನ ಶಾಖಾಯಾಂ ತ್ರಿಪುರವಧಾಯೋನ್ಮೀಲಿತಾ
ಕ್ಷೋಹಂ ತೇಭ್ಯೋ ಜಲಬಿಂದವೋ ಪತಿತಾಸ್ತೇ ರುದ್ರಾಕ್ಷಾಜಾತಿ ಇತಿ ೬

ಲಕ್ಷಂ ತದ್ದರ್ಶನಾತ್ಪುಣ್ಯಂ ಕೋಟಿ ಸಂಸ್ಪರ್ಶನಾದಪಿ
ದಶಕೋಟಿ ಶತಂ ಪುಣ್ಯಂ ಧಾರಣಾಲ್ಲಭತೇ ನರಃ ೭

ಅಂತು ರುದ್ರಾಕ್ಷಿಗಳನೆಯಿದೆ ವೇದಾಧಾರ
ಯಂತಿಯೆನಲಾಮ್ನಾಯವೆಯಿದೆ ಧರಿಸಿದವಲಾ
ಮುಂತೆ ಶುಭ್ರಿತ್ರಿಪುಂಡ್ರಾಣಿಯೆನಲಾ ವ್ಯಾಸನೊಲ್ದು ಭೂಷಿತನಾಗನೇ
ಕಾಂತರುದ್ರಾಕ್ಷವಲಯಂ ಎನಲ್ಕಾ ವಿಷ್ಣು
ತಾಂ ತಳೆಯನೇ ಪವಿತ್ರಂ ದಿವ್ಯ ರುದ್ರಾಕ್ಷ
ಮಂತಕಾರಿಯ ನಯನ ಸಂಭವಂಗಳ್ಗೆ ಸರಿಯುಂಟೆ ಮೂಲೋಕದೊಳಗೇ ೧೩

||ಸಾಕ್ಷಿ|| ||ಶ್ಲೋಕ|| ಶುಭ್ರತ್ರಿಪುಂಡ್ರಾಣಿ ಶುಭಾನಿ ತಿರ್ಯಗ್ರಕ್ಷಾಭಿರುದ್ಧೂಳಿತ ಸರ್ವಗಾತ್ರಃ
ರುದ್ರಾಕ್ಷಮಾಲಾ ವಿಮಲಾಶ್ಚ ಭಿಭ್ರಾತ್ತಾದ್ವಗ್ವಿಧೈಶ್ಶಿಷ್ಯ ಗಣೈರ್ಮುನೀಂದ್ರಃ ೮

ಧೃತತ್ರಿಪುಂಡ್ರಕೋ ದಿವ್ಯೈ ರುದ್ರಾಕ್ಷೈಶ್ಚ ವಿಭೂಷಿತಃ
ಶುಶುಭೇ ಸತತಂ ವಿಷ್ಣು ರ್ಭಸ್ಮದಿಗ್ಧ ತನೂಲತಃ ೯

ತನ್ನ ಕಣ್ಣೀರ ತಾನೇ ಕೊಂಬುದುಚಿತವೇ
ಪನ್ನಗಾಧರಗೆಂದು ಕೆಟ್ಟು ಬಗುಳುವ ಹುಳಿತ
ಕುನ್ನಿಗಳಿಂ ಪೇಳ್ವೆನಾಯಧೋಕ್ಷಜ ಮುಖ್ಯರಂತ ಧಮುಮಯುದೇಹನೆ
ಮುನ್ನೆಲಾ ಜರಕನೆಚ್ಚಂಬಿನೆಡೆಯಿಂ ರಕ್ತ
ವುನ್ನತದೆ ಸುರಿಯಲರ್ಜುನ ಸುಡಲ್ಕಾತಂತೆ
ಅನ್ನಯದ ಬೊಮ್ಮಶಿರವುರುಳಿ ನಾರ್ವಂದದೇ ಪಾವನದ ಶಿವನ ದೇಹಾ ೧೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಲೆ ಸುವೀರ್ಯಂ ನಾಸ್ತಿ ನಿರ್ದೇಹವೆನಲಾಗಿ
ಯೆಲು ನೆತ್ತರಾ ಮಾಂಸ ವಿಲ್ಲ ಸುರಧನುವೆಂಬ
ವೊಲು ದರ್ಪಣಪ್ರತಿಚ್ಛಾಯೆಯಂತಧಿಕ ಘೃತಕಾಠಿಣ್ಯದಂತೊಪ್ಪುವಾ
ಚೆಲುವಂಗನಾ ಸಚ್ಚಿದಾನಂದ ಲಕ್ಷಣಂ
ಮಲಹರಂಗನ್ಯವಿಲ್ಲಂ ಸರ್ವರೂಪು ನಿ
ರ್ಮಲದ ರೂಪೋ ಭಾವನೋನಾಸ್ತಿ ಯದೃಶ್ಯ ತದ್ವಿನಶ್ಯತಿಯೆಂದೆನೇ ೧೫

ಆ ನಿರಾಕಾರ ಸಾಕಾರಾಂಗಮಹಿಮನೇ
ನೀ ನಾರಾಯಣ ಮುಖ್ಯರಂತೆ ನಿಂದ್ಯಂಗನೇ
ಜ್ಞಾನಮಯಃ ನವನ ಸದ್ಯೋಜಾತ ಮುಖ್ಯ ಮುಖದಿಂದಲಾ ಜಲದುದಯವೈ
ತಾನೇ ಪಂಚಬ್ರಹ್ಮಮಯವೆನಲು ಪಂಚ ಭೂ
ತಾ ನಿಜವೆನಲ್ಕೆ ಸರ್ವಾಂಗೋತ್ತಮಾಂಗ
ದೀ ನವ್ಯ ಗಂಗೆ ಪಾವನ ಜಲಂ ಪುಟ್ಟಿದುದು ಶಂಕರಗೆ ಯೋಗ್ಯವಲ್ತೇ ೧೬

ಸರ್ವಮಯ ಪಾವನಾಂಗನ ದೇಹದಿಂದೊಗೆದ
ವಾರ್ವಸ್ತು ಮುಖ್ಯಂ ಪವಿತ್ರ ನೀಶಂಗಲಾ
ಸಾರ್ವವು ಪೃಥಿವ್ಯಾಂಚಯಾನಿ ತೀರ್ಥಾನಿ ಎನೆ ಲಿಂಗಮೂಲೆ ಎನುತ್ತಿರೇ
ಉರ್ವಿಯಂಗುಷ್ಟಾಗ್ರದೊಳಗಷ್ಟ ಷಷ್ಠಿಮಯ
ಗುರ್ವಧಿಕ ತೀರ್ಥವೀಶನ ಪಾದದಿಂದುದಿಸಿ
ಪಾರ್ವತೀ ಪತಿಗೆ ವೇದೋಕ್ತದಿಂ ಸಲ್ವವದಱಿಂ ಯೋಗ್ಯವೆಂಬಱಿವುದೂ ೧೭

||ಸಾಕ್ಷಿ|| ||ಶ್ಲೋಕ|| ಸವೀರ್ಯಂ ನಾಸ್ತಿ ನಿರ್ದೇಹಂ ಮಾಂಸಾಸ್ಥಿರುಧಿರಂ ನಚ
ಇಂದ್ರ ಚಾಪಮಿವಾಕಾಶೇ ದರ್ಪಣೇ ಪ್ರತಿಬಿಂಬವತ್ ೧೦

ಘೃತಕಾಠಿಣ್ಯವನ್ಮೂರ್ತಿ ಸಚ್ಚಿದಾನಂದಲಕ್ಷಣಃ
ಶಿವಾದನ್ಯ ದ್ಧಿನ್ನೈವಾಸ್ತಿ ಶಿವ ಏವ ಹಿ ಸಾರ್ವದಾ ೧೧

ಅದೃಶ್ಯೇ ಭಾವನೋ ನಾಸ್ತಿ ಯದ್ದೃಶ್ಯಂ ತದ್ವಿನಶ್ಯತಿ
ದೃಶ್ಯಾದೃಶ್ಯೇ ಪೂ ತತ್ವೇ ತಥಾ ಶಿವಂ ಸದಾಭ್ಯಸೇತ್ ೧೨

ಸದ್ಯೋಜಾತಾದ್ಭವೇದ್ಭೂಮಿರ್ವಾಮ ದೇವಾದ್ಭವೇಜ್ಜಲಂ
ಅಘೋರಾದ್ವಹ್ನಿರಿತ್ಯುಕ್ತಂ ತತ್ಪುರುಷಾದ್ವಾಯುರುಚ್ಯತೇ ೧೩

ಈಶಾನಾದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್
ಪಂಚಭೂತಮಯಂ ಸರ್ವಂ ಶಿವವಕ್ತ್ರಾತ್ಸಮುದ್ಭವಂ ೧೪

ಪೃಥ ವ್ಯಾಂ ಯಾನಿ ತೀರ್ಥಾನಿ ಲಿಂಗಮೂಲೇ ವಸಂತಿ ವೈ
ಅಂಗುಷ್ಠಾಗ್ರೇಚಾಷ್ಟಷಷ್ಠಿ ತೀರ್ಥಾನಿ ಚ ವಸಂತಿ ವೈ ೧೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಜೆಯಿಂ ವ್ಯಾಸನೆಂದಂ ನಾಡೆ ಸರ್ವಸ್ಯ
ಪೂಜಾರ್ಹಮಿಹ ಎನುತ್ತುತ್ತಮಾಂಗಂ ಎನಲು
ನೈಜದಿಂ ಸರ್ವಾಂಗ ಮುತ್ತುಮಾಂಗಂ ಲಿಂಗಮಾ ವಿಶ್ವತಶ್ಚಕ್ಷುವೆಂ
ಬಾಜಗನ್ಮಯನಲಾ ಪಾವನಶರೀರಂ
ಭೋಜಾಕ್ಷಮುಖ್ಯರಂ ತಥಮಾಂಗವಿಲ್ಲದಿಹ
ನೈಜ ಪಾವನ ಶಿವನ ನಯನೋದಕಂ ಸೇವ್ಯವೆಂದಱಿವುದಿನ್ನೂ ಕೇಳೂ ೧೮

||ಸಾಕ್ಷಿ|| ||ಶ್ರುತಿ|| ಓಂ ವಿಶ್ವತಶ್ಚಕ್ಷುರುತ ವಿಶ್ವತೋಬಾಹು ರುತ
ವಿಶ್ವತೋಮುಖೋ
ವಿಶ್ವತಃ ಪಾತ್ ವಿಶ್ವಾಧಿಕೋ ರುದ್ರೋ ವಿಶ್ವಾತ್ಮನ ವಿಶ್ವತೇಜಸ ಇತಿ ೧೬
ವ್ಯಾಸಃ ಸರ್ವಸ್ಯ ಪೂಜಾರ್ಹಮಿಹೋತ್ತಮಾಂಗಂ ಸಂಪೂಜ್ಯತೇ ಲಿಂಗವರಂ
ಹರಸ್ಯ
ಅನೇನ ಪರ್ಯಾಪ್ತ ಮತೀವ ಮೂಢಾಃ ಪ್ರಭುರ್ಯ್ಯದೇವೇಚ್ಛತಿ
ತತ್ಕರೋತಿ ೧೭

ಪ್ರೇಮದಿ ಭಗೀರಥಂ ತರಲು ಭಾಗೀರಥೀ
ನಾಮ ನದಿಯಾದಂತೆ ಜಹ್ನುನಿರ್ಗತ ಜಾಹ್ನ
ವೀ ಮಹಿತವಾಹಿನೀಯೆನಿಪ್ಪಂತೆ ಗೌತಮಂಗೋತು ಗೌತಮಿಯೆನಿಪ್ಪಾ
ನಾಮಿಯಾದಂತೆ ವಿಷ್ಣುವಿನ ಕಾಲಿಂ ಪುಟ್ಟಿ
ಭೂಮಿಯೊಳು ಪರಿದಿರ್ದ ಹರಿಚರಣಜಾಹ್ನವೀ
ನಾಮ ಗಂಗಾಪ್ರವಾಹಮದುಂಟೆ ನೈಘಂಟು ಕರವಚೋಕ್ತಿಗಳೊಳುಂಟೇ ೧೯

ಶಿವನ ಮಸ್ತಕದಲ್ಲಿಯಾದಿಗಂಗಾ ಸಮು
ದ್ಭವಧಾರಣತ್ವವಂತಪ್ಪುದೀ ಗಂಗೆಯೊಳ
ಗವಿರತ ಸಹಸ್ರಾಂಶ ಬಿಂದುವಿಂದಾ ದೇವಗಂಗೆಯಾ ದೇವಗಂಗೆ
ಯ ವಿಶೇಷ ಕೋಟ್ಯಂಶ ಕಣದಿಂದಲಬ್ಧಿಯಾ
ದವು ಸರ್ವಕಂ ಮರಳಿ ಮೇಘ ಗರ್ಭಂಬೊಕ್ಕು
ಭುವಿಗಿಳಿದ ಮಳೆಯ ಸಾರದೊಳಖಿಳ ಪರ್ವತೋದ್ಭವ ನದಿಗಳಗಣಿತವಲಾ ೨೦

||ಸಾಕ್ಷಿ|| ||ಶ್ಲೋಕ|| ಏವಂ ಧೃತಾ ಮಹಾಗಂಗಾ ಕದಾಚಿಚ್ಚಾದ್ವಯಾ ವಿಭೋಃ
ಜಟಾಪಟಲ ರಂಧ್ರಾಂತರ್ನಿಸೃತಾಭಿರ್ಮಹೇಶ್ವರೀ ೧೮
ಸಹಸ್ರ ಕೋಟಿಧಾರಾಬಿರ ಭೀಷ್ಟೈಶ್ಚೈವತಂ ಶಿವಂ
ಪ್ರಣಮ್ಯ ಪುರತಸ್ಥಿತ್ವಾ ನತ್ವಾ ಸಂಪೂಜ್ಯ ಭೂರಿಶಃ ೧೯
ಅತೀವ ಮುದಿತಾದೇವಿ ಬಭಾಷೆ ಶಂಕರೇಣಚ ಶಂಕರಃ
ತಂ ಹಿ ಮೇ ಸರ್ವಶಕ್ತಿ ನಾಂ ಪರಮಾನಂದದಾಯಿನೀ ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಚ್ಛಕ್ತಿಕೋಟಿಕೋಟ್ಯಂಶಾ ತ್ಕಾಪಿಶಕ್ತಿರ್ವಿನಿಶ್ರುತಾಃ
ಪ್ರವರ್ತತಾಂ ಬ್ರಹ್ಮಲೋಕೇ ನದೀರೂಪೇಣ ಭಾವಿನೀ ೨೧

ಸರ್ವೇಷಾಮೆ ವಕಲ್ಯಾಣೀ ವ್ಯೋಮಮಂ ಗಂಗೇತಿ ಸಂಜ್ಞಿತಾ।
ಏವಮುಕ್ತಾ ಮಹೇಶೇನ ಮಹಾಗಂಗಾ ಮಹೇಶ್ವರೀ ೨೨

ಸೃಷ್ಟಿಕಾಲೇ ತಥಾ ಕೃತ್ವಾ ಪುನರ್ಲೀನಾ ತಥಾ ವಿಭೋಃ
ತಸ್ಯಾಸುತೋ ವ್ಯೋಮಗಂಗಾ ಮಹಾಕಲ್ಲೋಲ ಫೇನಿಲಾ ೨೩

ಸ್ವಕೀಯೈಶ್ಶೀಕರೈರ್ವಿಷ್ವಕ್ ಸಮುದ್ರಾಂಶ್ಚ ನದಾಂನದೀ
ಕೋಟಿಸಸ್ರೃಷ್ಟವತ್ಯೇವ ಮಂಡಾಂತರ್ಬಹಿರನ್ಯಯಾಃ ೨೪

ಮೇರು ಮಂದರ ಕೈಲಾಸ ಪ್ರಭೃತಿಷ್ವತಿ ಸರ್ವಶಃ
ಭೂಭಾಗೇಷು ಚ ಪುಣ್ಯೇಷು ವನೇಷ್ವತಿ ಮಹಾಸ್ವನಾ ೨೫

ದಿಕ್ಷು ಸರ್ವಾಸು ಸರ್ವಾಂಶ್ಚ ಸಾಗರಾನ್ಪರ್ಯಪೂರಯತ್
ಏವಂ ಸಂವ್ಯಸ್ಥಿತೋದೇವೋ ಗಂಗಾಮಾಲೋಕ್ಯ ಸುಂದರೀಂ ೨೬

ವ್ಯಾಜಹಾರ ಮಹಾಗಂಗಾ ಪ್ರಸವಾಮ ವ ತಾರಿತಾಂ
ಪರ್ವತಪ್ರಸೃತಾಪುತ್ರೀ ತ್ರಿಮಾರ್ಗಾಭವಸುವ್ರತೇ ೨೭

ಭೂಮ್ಯಂತರಿಕ್ಷಸ್ಸ್ವರ್ಗೇಷು ಸರ್ವಜ್ಯೈಕೈಕಪಾವನಿ
ಇತಿವ್ಯಾಹೃತ್ಯ ಭಗವಾನ್ಪಾರ್ವತ್ಯಾಸಹಶಂಕರಃ ೨೮

ಪರ್ವತಾಗ್ರೇಷು ಸರ್ವೇಷು ರಮೇಗಂಗಾಂವಿಲೋಕಯನ್
ತಥಾ ಪ್ರಭೃತಿಗಂಗಾಸೌ ತ್ರಿಮಾರ್ಗೇಪ್ರಕೀರ್ತ್ಯತೇ ೨೯

ಉಪಗಂಗಾಶ್ಚಕೋಟ್ಯಯೋಸ್ಯಾನಹಸ್ರಶಃ
ಉಪಗಂಗಾಸಮೀಪಸ್ಥಾಂಅನುಗಂಗಾಸ್ತುತಾಸ್ಮೃತಾಃ ೩೦

ಗಂಗಾಮುಪ್ರವಿಷ್ಟಾಯಾ ಸರ್ವಗಂಗಾ ಇತಿಸ್ಮೃತಾಃ ೩೧

ದೇವಗಂಗೆಯು ನಾಮತತಿಯೊಳು ವಿಚಾರಿಸ
ಲ್ಕಾವುದುದಿಸಿತು ಹರಿಯ ಕಾಲೊಳಗೆ ಮಂದಾಕಿನಿ
ನೀ ವಿಮಲಗಂಗೆಯೋಕೃಷ್ಣಪರಿಪಾಕಿನಿಯೊ ಪರಿಕಿಸೆ ವಿಯದ್ಗಂಗೆಂಯೋ
ಆ ವಿಷ್ಣು ಪದಗಂಗೆಯೋ ಸ್ವರ್ನದಿಯೊ ಪೆಸ
ರ್ಭಾವಿಸಲು ವೈಕುಂಠಪುರನದಿಯೊ ಸುರದೀರ್ಘಿ
ಕಾವಿಶೇಷಾಖ್ಯೆಯೋ ಭೋಗವತಿದೀರ್ಘಿಕೆಯೊ ನೃಪುಂಟುಕಾರ್ಥದಿಂದಾ ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುದದಿಂದಲಮರಸಿಂಹದೊಳು ಗಂಗಾವಿಷ್ಣು
ಪದಿ ಜಹ್ನುತನಯಾಚ ಸುರನಿಮ್ನಗಾ ಎನಿ
ಪ್ಪುದಱಿಂದ ಹರಿಪದೋದ್ಭವೆ ಗಂಗೆಯೆಂಬೊಡಾ ನೈಘಂಟುಕಾರ್ಥದಿಂದಾ
ಅದಱ ಭೇದವನಱಿಯದುಸುರುವರು ಬುಧಜನದ
ಹೃದಯಕಹುದೆಂಬಂದದಿಂದಲಾ ವ್ಯಾಕರಣ
ಮುದಿತಾರ್ಥದಿಂದ ಬಿತ್ತರಿಪೆನು ಯಥಾರ್ಥದಿಂ ನಿರ್ವಿಘ್ನದಿಂ ಕೇಳ್ದೊಡೇ ೨೨

ಅ ವಿಷ್ಣುಪದಸಮದ್ಭುವಗಂಗೆ ಎಂಬೊಡಿ
ನ್ನಾವೆಡೆಯೊಳಿರ್ದಪುದು ಧಾತು ವಿಷ್ಣುವಿನ ಡಿಗೆ
ಭಾವಿಸಲ್ಕಾಗಿ ಯೌಗಿಕಯುಕ್ತಿಯಿಂ ವಿಷ್ಣುಪದನಾಮವಾಕಾಶಕೇ
ಆ ವಿಯದ್ವರ್ಗದ ವಿಯದ್ವಿಷ್ಣುಪದವೆಂಬು
ದೇ ವಿಚಾರಿಸೆ ಗಗನವಾಕಾಶಸಂಬಂಧ
ವೇ ವಿಮಲ ಗಂಗೆಯದಱಿಂ ವಿಷ್ಣುಪದನಾಮವಾಯಿತ್ತು ಸುರಗಂಗೆಗೆ ೨೩

ಮಿಗೆ ವಿಷ್ಣುಪದವೆಂಬ ನಾಮಂಪ್ರಸಿದ್ಧದಿಂ
ಗಗನಕ್ಕೆಯುಂಟು ಹರಿಯಡಿಗುಂಟು ಸಾಮ್ಯದಿಂ
ಬಗೆಯೆ ಹರಿಶಬ್ದವಾ ವಿಷ್ಣುಗಂ ಕಪ್ಪೆಗೆರಡಕ್ಕಿರಲು ಹರಿಕಪ್ಪೆಯೇ
ಸೊಗಸುವಾಕಾಶಸಂಬಂಧದಿಂ ಗಂಗೆಗಂ
ಜಗದೊಳಗೆ ವಿಷ್ಣುಪದಿಯಾಯ್ತೆಂಬುದು ನಿಜಂ
ಬಗಳುವರು ವಿಷ್ಣುಪದಸಂಬಂಧೆ ವಿಷ್ಣುಪದಿಗಂಗೆಯೆಂದಧಮರ್ಕಳೂ ೨೪

ದೇಹವುಳ್ಳವರ ತತ್ಸಂಬಂಧನಾಮದಿಂ
ದೇಹಿಗಳುವೆಂಬರಾಗ್ರಹವುಳ್ಳ ನಾರಿಯುಂ
ಊಹಿಸಲು ಗೃಹಿಣಿಯೆಂಬಂದದಿಂದಾಗಲಾ ವಿಷ್ಣುಪದವುಳ್ಳಗಂಗಾ
ವಾಹಿನಿಯೆ ವಿಷ್ಣುಪದಿಯಾಯ್ತುತತ್ವಾರ್ಥದಿಂ
ದಾ ಹರಿಯ ಪದಸಂಬಂಧದಿಂ ವಿಷ್ಣುಪದಿ
ಯೇ ಹುಸಿಯುಲಾ ಮೊದಲು ಗಗನದುದಯಂ ಬಳಿಕ ವಿಷ್ಣುವಿನ
ಜನನವಲ್ಲೈ ೨೫

ಆಕಾಶಕಂ ವಿಷ್ಣುಪದವೆಂಬ ನಾಮವಿ
ನ್ನೇಕಾದುದೆನೆ ವಿಪುಲವ್ಯಾಪ್ತಿಧಾತ್ವರ್ಥದಿಂ
ಶ್ರೀಕರದ ಶಿವತತ್ವವಾದಿಭೂಮ್ಯಂತಘಟಘಟಕುಡ್ಯದೊಳಗು ಹೊಱಗೇ
ಏ ಕೀಕೃತವ್ಯಾಪ್ತಿಯಿಂದಿಪ್ಪುದಾಗಿಯಾ
ವ್ಯಾಕರಣಸಿದ್ಧಿಯಿಂ ವಿಷ್ಣುಪದವಾಯ್ತುಲಾ
ನೀ ಕೇಳು ಗಗನಕ್ಕೆ ಇನ್ನು ಹರಿಪದಕೆಯಾ ವಿಷ್ಣುಪದವೆಂತಾಯ್ತೆನೇ ೨೬

||ಸಾಕ್ಷಿ|| ಶ್ರುತಿ ಈಶತತ್ವಾದಿ ಭೂಮ್ಯಂತ ಸವಿರಾದಿಘಟಾನಿ ಚ ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುದಿದು ತಸ್ಮಾದ್ವಿಷ್ಣು ರುದ್ರಾಹುತಾ ಎನಲು
ಮುದದಿಂದಹೋರಣೀಯಾನ್ಮೃತ್ತೆಂಬರ್ಥ
ದೊದಪಿಂ ಜಗದ್ವ್ಯಾಪ್ತನೀಶ್ವರಗೆಯಾವಿಷ್ಣುನಾಮಂಪ್ರಸಿದ್ಧವಾಯ್ತು
ಮದನಾರಿಗಂ ಗಗನಕಂ ವಿಷ್ಣುಶಬ್ದವೆ
ವಿದಿತವಾ ಹರಿಗೆಯನ್ವರ್ಥದಿಂದೆಯಿದೆ ಬಂ
ದುದು ಕಣಾ ವಿಷ್ಣುಶಬ್ದಂ ಪ್ರಕ್ರಿಯಾವಿಚಾರದೊಳದಂ ಬಿತ್ತರಿಪೆನೂ ೨೭

ಪಂಚವಿಂಶತಿತನು ಮುರಾರಿಗುಂಟಾಗಿಯಾ
ಪಂಚವಿಶ್ವತಿ ತತ್ತ್ವದೊಳಗಲಾ ವ್ಯಾಪಕಂ
ಪಂಚಮುಖನಂತೆ ಸರ್ವವ್ಯಾಪ್ತಿಯಿಂ ವಿಷ್ಣುವಾದನೆಯಲ್ತು ಬಳಿಕಾ
ಸಂಚುಲವಿಪಕ್ಷಿರಿತಿಗತಿಶ್ಚೈವ ಎನೆ
ಹಿಂಚೆ ತಸ್ಮಾದ್ವಿಷ್ಣುರಿತ್ಯುದಾಹೃತಮೆನ
ಲ್ಕಂ ಚಾರು ಹರಿ ಪಕ್ಷಿಗಮನನಾದುದಱಿಂದ ಎಷ್ಣುನಾಮಂ ಬಂದುದೂ ೨೮
||ಸಾಕ್ಷಿ|| ಶ್ಲೋಕ || ವಿಃ ಪಕ್ಷಿಷ್ಣುರ್ಗತಿಶ್ಚೈವ ಸ್ಮಾದ್ವಿಷ್ಣುರುದಾಹೃತಃ ೩೩

ಆದಱಿಂದಲಾಕಾಶಸಂಬಂಧದಿಂ ವಿಷ್ಣು
ಪದಿಯೆಂಬ ನಾಮವಾ ಗಂಗೆಗಾಯ್ತೆಸಲೇ
ಮದನಪಿತನಂಘ್ರಿಯಂ ವಿಷ್ಣುಪದಿಯಾಯ್ತೆಂಬಮಾತೇ ಶತಾಬದ್ಧವೈ
ಮೊದಲೊಳಾ ಭಾಗೀರಥಿ ಪ್ರಮುಖಗಂಗೆಗಳಿ
ಗುದಿತ ಸೂತ್ರಾರ್ಥದಿಂ ವಿಷ್ಣುಪದಿ ಎಂದುಂಟೆ
ಮದಿಸಿ ಕಾಳ್ಗೆಡೆವವಂದಿರ ಬಾಯ್ಗಳಲ್ಲಿ ವಿಲಿವಿಲಿನುದರವೇ ಹುಳಗಳೂ ೨೯

ಗನ್ನಾಮವೇ ಗಗನ ಕಂ ಗಾಯೆನಿಪ್ಪುದೆ
ಸನ್ನಹಿತ ಗಗನಕ್ಕೆ ನಭದಲ್ಲಿ ಚರಿಸಲಾ
ಯ್ತುನ್ನತದ ಗಂಗಾಯೆನಿಪ್ಪ ಶಬ್ದಂ ಮತ್ತೆ ಗೋ ಶಬ್ದವೇ ಗಗನಕೇ
ಚೆನ್ನಾಯ್ತು ನಾಕಪಶುಗಳಾದಡೇನು ಸೌ
ಖ್ಯೋನ್ನತ್ಯಗೋಭ್ಯಾಮಮತೀತ ಗಂಗಾ ಎಂಬ
ತನ್ನಿಮಿತ್ತದ ವಿಶ್ರುತದ ಭಾಷ್ಯದರ್ಥ ನೇತ್ರೋದ್ಭವಾ ಯೆಂಬಂದದೇ ೩೦

ಹರಿಯ ಕಾಲೊಳಗುದಯಿಸಿತು ಗಂಗೆಯೆಂದೊಂದು
ವರ ವೇದಸೂಕ್ತಿ ಭಾಷ್ಯೋಕ್ತಿಯಾ ವ್ಯಾಕರಣ
ಚಿರಧಾತುಸೂತ್ರೋಕ್ತಿಯಲ್ಲಿ ವೈಯ್ಯಾಕರಣರಹುದೆಂಬ ಮಾಳ್ಕೆಯಿಂದಾ
ಬರೆಯಬೇಕಲ್ಲದಾ ಕಾಳ್ಗೆಡೆಯಲೇತಕ್ಕೆ
ಮರಳಿಯಜನಾ ವಿಷ್ಣುವಿನ ಕಾಲತೊಳೆಯಲೀ
ಧರೆಯಲ್ಲಿ ಉದಕಮಯವಾಯ್ತೆಂದು ಗಳಹುವರ ಬಾಯಬಡಿದಂತು
ಸುರುವೆಂ ೩೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಜನೊಂದು ಕಡೆಯಿಂದಲೇ ಹೊಕ್ಕು ತಂದನೆನೆ
ನಿಜಗಂಗೆ ಮಣನ್ನೊಂಟು ತನ್ನ ತಾಂ ಕೂರ್ತು ಪಂ
ಕಜನೇತ್ರನಡಿಯಿರ್ದ ಠಾವಿಗೆಯ್ತುಂದುದೆನೆ ಪೂರ್ವವಂತಾ ಗಂಗೆಯ್ಕೆ
ಭಜಿಸಲ್ಕಮಂಡಲೋದಕದಿಂದ ತೊಳೆದನೆನೆ
ಕುಜನ ಕೇಳದು ಮೊದಲೊಳಿರ್ದುದಾಲಿಪುದು ಗಜ
ಬಜೆಯನುಳಿದಲ್ಪೋದಕಂ ಜಲಪ್ರಳಯವಾಯ್ತೆಂಬೊಡಂತದು ವಿರುದ್ಧಂ ೩೨

ಬೇಱೊಂದಜಾಂಡದೊಳಗಿರ್ದಂತಜಲದಿಂದ
ಲಾ ರೂಢಿಯಿಂದೆಱೆದನೆಂಬೊಡದನಾಂತಿರ್ದ
ನೀರನಾರ್ಕೆ ಕಾಲ ತೊಳೆದವಂ ಕೂರ್ತ್ತುತೊಳೆಯಿಸಿಕೊಂಡ ಹಂಸೆ ಗರುಡಾ
ರೇಱಿದವರೀರ್ವರುಂ ಜಲದಲ್ಲಿ ಮುಳುಗುವರೆ
ಮೂಱುಕಣ್ಣನ ವಾಹನಂ ಜಲಪ್ರಳಯದೊಳು
ಗಾಱಿದ ಹರಿಮುಖ್ಯರಂ ಪೊರೆದನೆಂಬುದೇ ಪೂರ್ವಕಥೆ ಇದತಿಳಿಯಿರೇ ೩೩

ಹರಿಯ ಕಾಲೊಳು ಗಂಗೆ ವುದಯಿಸಿತೆನಿಪ್ಪುದೇ
ನರಕಿಗಳ ನುಡಿಯುದಂತಿರಲಖಿಳ ಭೂತಗಳು
ಹರನಾಜ್ಞೆ ಯಿಂದಲ್ಲದಾಚರಿಸವಾಶಿವನ ಭಕ್ತರ ಮಹತ್ವಂಗಳಾ
ಒರೆವೆವ್ಯೆಗಿರಿಕಂತುಕಾಟನಂ ಕೂಡೆ ಸಾ
ಗರ ಪಾಯಿವಡಭಾಗ್ನಿ ತಿಲಕರಂತವರ ಸಾ
ಸಿರ ದಂಶ ಸಾಮರ್ಥ್ಯಮುಂಟೇ ಮಾಧವಗೆ ದೊಡ್ಡಿತುಮಾಡಲೇಕವನನೂ ೩೪

ಒಂದಜಾಂಡಸ್ಥಿತಿಯನ್ನೆಸಲೇ ಶಿವನಾಜ್ಞೆ
ಯಿಂದ ನಡೆಸುವನಲಾ ಗಣನಿಕರದಂತೆಗೋ
ವಿಂದನೇಂ ಸಾಮರ್ಥ್ಯನೇ ಬಹುಬ್ರಹ್ಮಾಂಡಲೆಯಂ ಕೊರಲೊಳಿಡುತಾ
ಇಂದು ರವಿಗಳನು ತಾಳವ ಕುಟ್ಟುವರು ಪಾದ
ದಿಂದೇಳುಸಾಗರದ ಕಟ್ಟೆಗಳನೊಡೆದು ಬಳಿ
ಕೆಂದಿನಂದದೆ ಚರಣದಿಂದ ಕಟ್ಟುವ ಗಣಂಗಳಿಗೆ ಸರಿಯಹನೆ ವಿಷ್ಣು ೩೫

ಪ್ರಳಯಾಗ್ನಿಯಲ್ಲಿ ಹರಿಮುಖ್ಯರಾದವರೆಲ್ಲ
ರಳಿವರಾ ಸ್ಥೂಲವಹ್ನಿಯನೆ ಹಲಗೆಯು ಮಾಡು
ತಳವಡಿಪನೆಡದ ಕರದಿಂದೋರ್ವ ಗಣವರಂ ತದ್ವಿಲಯ ಜಲದೆ ವಿಷ್ಣು
ಅಳಿವಾಗ ಸಾಗರಾಪೋಷಣಂಗೊಂಡವನ
ನುಳುಹುವಂ ಕರುಣದಿಂದಿಂತಪ್ಪ ನೀಚನಾ
ನಳಿನನಾಭನ ಹರಿಯ ಕಾಲಿಂದ ಗಂಗೆ ಹುಟ್ಟಿತ್ತೆನಲು ಬಾಯಿಹುಳಿಯದೇ ೩೬

CC0. In Public Domain. Jangamwadi Math Collection, Varanasi

ಘಳಿಲನುಪಮನ್ಯು ಸಾಗರದ ಪಾಲ್ಗೊಳಿಗಂಟ
ಲೊಳು ಸಿಕ್ಕಿಕೇಕರಿಸಿಯುಗಿಯೆ ಹರಿ ತಾಂ ಕರಿಯು
ಹುಳುವಿನಂತಾ ಶ್ಲೇಷ್ಮದೊಳು ಹೊರಳಿ ನಾನಯ್ಯಕೃಷ್ಣನೆಂಬಾಗನೀರಾ
ಬಳವಂತನಾಗಿ ಮೈಯ್ಯೊಳಗೆ ಹುಟ್ಟಿಸಿಕೊಂಡು
ತೊಳೆದುಕೊಳದಧಮನಪ್ಪನ ಹುಳಿತ ಬೆಂದ ಕಾ
ಲೊಳು ಗಂಗೆ ಹುಟ್ಟಿತೆಂಬರ ನಾಲಗೆಯನು ನೂರ್ಸೀಳಾಗಿ ಸೀಳಬೇಡಾ ೩೭

ಹಣೆಗಣ್ಣತೆಗೆದಾ ಪ್ರಳಯರುದ್ರಮಹಿಮೆಯು
ಗ್ರಣಿ ಸಕಲಲೋಕಮಂ ವಿಷ್ಣುಸಹಿತಂ ಹುಲ್ಲ
ಬಣವೆಯಂ ಸುಡುವಂತೆ ಸುಡುವಾಗ ನೀರಹುಟ್ಟಿಸಿಕೊಂಡು ಕೆಡಿಸಿ ತನ್ನಾ
ಕ್ಷಣಿಕಜೀವವನುಳುಹಿಕೊಳ್ವರೇ ರಕ್ಕಸರು
ಹಣೆದವಾಡುತ ಬಡಿದು ತನ್ನ ಹೆಂಡಿರನೆಳೆವು
ತಣಿಯುರದೊಳಪ್ಪುವೆಡೆಯೊಳು ಜಲವ ನಿರ್ಮಿಸುತ್ತವರ ಮುಳುಗಿಸಿದುದುಂಟೇ
೩೮

ಹರಿಯು ಕಾಲಂ ಬ್ರಹ್ಮನರ್ಚಿಸಲ್ತೊಳೆದನೆಂ
ಬರು ಪಾಪಿಗಳದಲ್ತು ಗಿರಿಜಾವಿವಾಹದೊಳ
ಗಿರದಕೃತ್ಯತೆಯಿಂದ ವೀರ್ಯಸ್ಖಲನಮಾಗೆ ಶಿವನಱಿದು ಕಳುಹಲಾಗೀ
ಪರಮ ತೀರ್ಥವ ಮಿಂದು ತತ್ಕಮಂಡಲಜಲವ
ಹರನೀಯೆ ತಪವಿರ್ದ ವಿಧಿಯು ಗುದದಿಂ ಬೆಳೆದ
ಮುರವೈರಿಯಡಿಯೆತ್ತಲಾ ಜಲದೊಳಿಟ್ಟು ಮುಱಿದಂ ಖಡ್ಗವೆಂದೆಂಬಿನಂ ೩೯

ಉದಕವಾಯುಧವಾದ ತಾಣವುಂಟೇ ಎನಲು
ಮದಿಸಿರ್ದ ಮಹಿಷಾಸುರನ ದೇವಿ ಕೊಲ್ವಲ್ಲಿ
ಸದಮಲಜಲಾಸ್ತ್ರದಿಂ ಹತಿಸಳೇ ಮೃತ್ಯುವಂ ಮಾರ್ಕಂಡೆಯಂ ಗಲಲ್ಕೇ
ವಿದಿತ ಮಂತ್ರಿತ ಜಲದೊಳ್ಳೆ ಬಳಿಕ್ಕುಪಮನ್ಯು
ಮೊದಲಾದವರ್ಗೆವಾರಿಯೇ ವಜ್ರಖಡ್ಗವಾ
ದುದು ಬಳಿಕ್ಕಂತಾ ತ್ರಿವಿಕ್ರಮನ ಕಾಲ ಮಂತ್ರಾಂಬುವಿಂದಿಟ್ಟು ಮುಱಿದಂ ೪೦

ಅಜನಿಂತು ಹರಿಯ ಕಾಲಂ ಸ್ತಂಭಿಸಲ್ಪರ್ವ
ತಜೆಯಪತಿಯಾತ್ರಿವಿಕ್ರಮನ ಬೆನ್ನಲುವನಾ
ದ್ವಿಜರಾಜಮಸ್ತಕಂ ತಲೆವೆರಸಿ ಕೀಳ್ತ ಕಥೆಯಂತಪ್ಪಿ ಬೊಗಳಿ ಗಂಗೇ
ಕುಜನ ವಿಷ್ಣುವಿನ ಕಾಲಿಂ ಹುಟ್ಟಿತೆನಲು ಸೂ
ರ್ಯಜನಧಿಕದೂತರಿಂದೆಳತರಿಸಿಯಂತವರ
ನಿಜ ನರಕದಲ್ಲಿ ಬಾಧಿಪನೆಂಬುದೇ ತಥ್ಯ ಉಳಿದ ಮಾತೆಲ್ಲ ಮಿಥ್ಯಾ ೪೧

Digitization by eGangotri and Sarayu Trust. Funding by MoE-IKS

ಬಿಡದೆಯಾಮ್ನಾಯ ಪೌರಾಣಾಗಮಾದಿಯೊಳು
ಮೃಡನೆ ಕರ್ತಂ ವಿಷ್ಣು ಭೃತ್ಯನೆಂಬುದಿ ನಿಜಂ
ಒಡೆಯನಾದಾ ಶಿವನ ಪಾದಾಂಬುವಂ ಭೃತ್ಯನೆನಿಪ ಹರಿ ಸೇವಿಸುವುದೂ
ಪೊಡವಿಯೊಳು ತಥ್ಯವಾ ಹರಿಯ ಕಾಲಿಂ ಹುಟ್ಟಿ
ದೊಡೆ ಛೀ ಯೆನಿಸಿಕೊಳ್ಳದೇ ಜಲಂ ಪಾವನತೆ
ವೊಡೆದುದೀಶಾಂಗಸಂಭವವೆಂಬುದೇ ಪ್ರಸಿದ್ಧಂ ಮಿಕ್ಕ ನುಡಿಯಬದ್ಧಂ ೪೨

ಈ ಪ್ರಕಾರದೊಳಿರ್ದ ಪರಮ ಸ್ವತಂತ್ರಕಂ
ಕ್ಷಿಪ್ರದಿಂ ಸ್ವೇಚ್ಛಾಸುವಿಗ್ರಹಂ ತಾನಾಗಿ
ಸುಪ್ರಬೋಧಾಲೀಲೆಯಿಂ ಜಗತ್ತಂ ನಿರ್ಮಿಸುತ್ತಾ ಜಗಂಗಳೆಲ್ಲಾ
ಕುಪ್ರತರ್ಕದೊಳು ಕೆಟ್ಟಪುದೆಂದು ಕೃಪೆಯಿಂದ
ಸುಪ್ರಸಿದ್ಧದಿ ತನ್ನನಱಿವುದಕೆ ತನ್ನ ವಿಮ
ಲಪ್ರಸನ್ನಸ್ವರೂಪಂ ಪ್ರಕಟಿಸಿದನದೆಂತೆನಲಾಗಿ ಬಿತ್ತರಿಪೆನೂ ೪೩

ತನ್ನ ನಿಜವಱಿವುದಕ್ಕಾವುದು ವಿಚಾರವೆನೆ
ತನ್ನ ಸ್ವರೂಪಿನಿಂದಲ್ಲದಱಿಯಲ್ಬಾರ
ದಿನ್ನದೆಂತೆನಲಾಗಿ ದೀಪಸುಪ್ರಭೆಯಿಂದ ದೀಪಮಂ ಕಾಣ್ಬಂದದೇ
ಉನ್ನತದ ರವಿಕಿರಣದಿಂ ರವಿಯ ಕಾಣ್ಬಂತೆ
ತನ್ನಱಿವುದಲ್ಲದೈ ಶಿವನನಱಿದಪೆನೆನಲು
ಸನ್ನಹಿತ ಶಿವನ ನೈಜಸ್ವರೂಪಂಗಳಿಂದಱಿವುದುಮವಾವವೆನಲೂ ೪೪

ಪರಮಸದ್ಗುಣಸದಾಚಾರ ಸನ್ಮಾರ್ಗವ
ತ್ಯುರುತರದ ಸುಜ್ಞಾನ ಸದ್ಭಕ್ತಿ ಸದ್ಧರ್ಮ
ಕರವಿವೇ ರೂಪಾದವಂ ಶಿವಗನನ್ಯವಾದಾ ವೃಷಭನೆಂತೆಂದೊಡೇ
ಉರುತರದ ಗುಣಗುಣಿನ್ಯಾಯವಾ ಶಬ್ದಾರ್ಥ
ವೆರಪಿಲ್ಲದಂತೆಯಾ ಧರ್ಮಧರ್ಮಿಗಳಿರ್ವ
ರಿರದೇಕವೆಂಬಂತೆಯಾ ಧರ್ಮರೂಪವೃಷಭನ ಮಹಾ ಸನ್ಮಾರ್ಗವೇ ೪೫

ಕೃತಿಯುಗದೊಳೆಲ್ಲವುಂ ವರ್ತಿಸಿತು ತ್ರೇತೆಯೊಳ
ಗತಿಶಯದ ಮೂಱುಪಾದಂ ಧರ್ಮವಾಗಿ ವಸು
ಮತಿಯ ರಕ್ಷಿಸಿತು ತದ್ದ್ವಾಪರದೊಳಗೆ ಎರಡು ಪಾದವಾಗಿರ್ದಖಿಳರಾ
ಸತತಂ ಪೊರೆದ:ದಾ ಕಲಿಯುಗದೊಳೇಕಪಾ
ದತೆಯಿಂದ ಪಾಲಿಸಿದುದೆನಲೇಕಪಾದದು
ನ್ನತಿ ಲೀಲೆಯಱಿವುದೈ ದ್ವಾವಿಂಶತೀ ಏಕಪಾದಾಷ್ಟ ಎಂಬರ್ಥದಿಂ ೪೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುಕಾರಣಂ ಪೂರ್ವವೃಷಭನೇ ಕಲಿಯುಗದೊ
ಳುದಿತ ಬಸವಾಭಿಧಾನವನೆಯ್ದಿ ನಡೆಯಲಾ
ದುದು ನಿಜದ ಸಾಧ್ಯವಾ ಬಸವರಾಜನ ಬೆಂಬಲದ ಶರಣಸಂಕುಲಕ್ಕೀ
ಸದಮಲತೆ ವಶವಾಯಿತಾ ಬಸವಮಾರ್ಗದಿಂ
ದೊದವಿತಾನೀಗಳುಂ ನಡೆಯಲ್ಕೆಯಾ ಮಹ
ತ್ವದ ಬಿಣ್ಪದಪ್ಪುದಲ್ಲದೊಡೊಂದು ಪಾದ ಧರ್ಮದ ಬಗೆಯ ಪೊರ್ದಲರಿದೂಳೀ

ಆ ಶಿವನ ನಿಜ ಸುಸ್ವರೂಪುಗಳು ಭಾವಿಸಲು
ಲೇಸಾಗಿಯೂ ಸ್ವರೂಪದೊಳು ತಪ್ಪದೆ ನಡೆವ
ಭಾಸುರದ ಶರಣರಿಗೆಯಾವಾವಯುಗದೊಳೊಂದೇ ಪ್ರಮಾಣಿಂದಱಿವುದೂ
ಐಸಲೇಯನ್ಯಮಾರ್ಗಿಗಳಿಗಲ್ಪಜ್ಞರಿಗೆ
ಯಾ ಸಕರ್ಮಕ್ಷಯರಿಗೈದೆ ಬಹುಭಿನ್ನರಿಗ
ಹೋ ಸರ್ವರಿಗೆ ಪಲವು ಮಾರ್ಗದಿಂ ತೋಱುವುದು ಶಿವನ
ಧರ್ಮಸ್ವರೂಪೂ ೪೮

ಇದು ಲಸದ್ವಾವಿಂಶತಿಯು ಏಕಪಾದವೆಂ
ಬುದು ಮಹಲ್ಲೀಲೆಯೈ ವೇದಶಾಸ್ತ್ರಾಗಮಾ
ರ್ಥದ ಸಾರದಿಂದ ವಿಸ್ತರಿಸಿರ್ದು ಸುವ್ಯಕ್ತವಾಗಿ ಸಂತಸದೆ ಮೆಱೆದೂ
ಪುದಿದು ಸಂಪೂರ್ಣವಾದವು ಕೆಂಚವೀರಾಖ್ಯ
ಹೃದಯ ಶುದ್ಧದೆ ಕೇಳಿದಾ ಎಂದು ಪೇಳ್ದನ
ಗ್ಗದ ಹಲಗೆಯಾರ್ಯ್ಯನಿದನಾಲಿಸಲ್ಕಿಹ ಭೋಗ ಪರಮೋಕ್ಷ
ಸಿದ್ಧಿಯಹುದೂ ೪೯

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯ್ಯಂ
ಶೀಲ ಪಟ್ಟಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂ ಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೊರ್ತುಪದನಂ ಮಾಡಿದಂ ೫೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಲಸದೇಕಪಾದಕ್ಕೆರಡು ಕಾಂಡಂ ಮೇಲೆ ಇಪ್ಪತ್ನಾಲ್ಕು ಸಂಧೀ ೫೧

ಇದು ಪರಮ ಷಟ್ಸ್ಥಲಬ್ರಹ್ಮಿಗಳ ವೀರಶೈ
ವದ ಮಾರ್ಗದುನ್ನತಜ್ಞಾನಿಗಳ ನೈರ್ಮಲ್ಯ
ಹೃದಯ ನಿಶ್ಚಯತತ್ತ್ವಸಂಪನ್ನ ಹಲಗೆಯಾರ್ಯ್ಯಂ ಕಂಚವೀರಾಖ್ಯಗೇ
ಪದಪಿಂದ ನಂಜುಂಡದೇವರೊಪ್ಪುವ ತೆಱದೊ
ಳುದಿತ ವರವೀರಶೈವಾಮೃತಾಖ್ಯಾನವೆಂ
ಬುದನರವಿಸಿದರೊಳೀಯೆಡೆಯಲ್ಲಿ ಮೂಱುಕಾಂಡಂ ಪೂರ್ಣವಾಯ್ತು
ಶುಭದಿಂ ೫೨

ಅಂತು ಕಾಂಡ ೩ ಕ್ಕಂ ಸಂಧಿ ೨೪ ಕ್ಕಂ ಪದ ೧೨೫೫ ಕ್ಕಂ ಗ್ರಂಥ ೧೨೦ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಂಡಃ ೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೭

ಅನ್ನದಾನದ ಮಹಿಮೆಯ ಕಥೆ

ಉನ್ನತದ ಗೌತಮನ ಗೃಹದೊಳುಂಡಿರ್ದು ಬರ
ನಂ ನೀಗಿ ಪೋಪೆವೆಂದೆಂಬ ವಿಪ್ರಾವಳಿಗೆ
ಯನ್ನದಾನದ ಕಥೆಯು ಪೇಳಿದಂ ಶಾಂಡಿಲ್ಯನೆಂಬ ಮುನಿ ಸೌಖ್ಯದಿಂದಾ

ವದನಪಂಚಕವಿಹೃತ ಮದನಯತಿಹೃತ್ಕಂಜ
ಸದನ ಲೋಕಾಕ್ಷಿ ಬಹುರದನನಾಶನ ನರೇ
ಷ್ಟದ ನರಕಹರಜನ್ಮಗದನಗಸ್ವರು ಮಹತ್ಸದನವಧಿಗುಣಸಮುದ್ರಾ
ಉದನಭಶ್ಚಂದ್ರಕಮರುದನಲಜ್ಯಾತ್ಮಪವಿ
ಮದನ ಯಮಗೌ ವಿಧುಂತುದ ನತಯತೀಶ ವೃಷ
ಪದನಮ್ರಚಿರಚಿತ್ಸುಖದ ನವ್ಯಭಾಗ್ಯಸುಪ್ರದ ಜಯತು ಶಾಂತಮಲ್ಲಾ ೧

ಶ್ರೀರತ್ನದೀಪದಂದದೆ ಪಾತ್ರಮಂ ಸ್ನೇಹ
ದಾರ್ಢ್ಯಕೆಯಂ ದಶಾಗ್ರಿಮಮಂ ವಿಚಾರಿಸದೆ
ಧಾರುಣಿಯ ಭೂತಹಿತದನ್ನದಾನವನೆಸಗಿ ಮೇಲಣ ಗವಿಯೊಳುತ್ತಮಾ
ಚಾರುಲಿಂಗದ ಸೇವೆಯಂ ನಡೆಸಿ ಸತ್ಪಾತ್ರ
ಸಾರ ಶರಣಾವಳಿಯ ತೃಪ್ತಿಪ್ರಸಾದಸುಖ
ಸೌರಂಭಮಂ ನೆಗಳ್ವ ಸಂಪನ್ನನಾದ ಗುರುಶಾಂತನಂಜೇಶ್ವರ ಜಯಾ ೨

ವಿಹಿತ ಸುಜ್ಞಾನಿ ಹಲಗೆಯ ದೇಶಿಕಾಸುಖಾ
ವಹಮೂರ್ತಿಯಧಿಕ ಕಥೆಯಂ ನಿರೂಪಿಸು ಕಾಮ
ದಹನಕಾರಣನೆ ಎಂದೆನೆ ಕೇಳು ಕೆಂಚವೀರಾಹ್ವಯಾ ಗುಣಿಯೆ ದಿವ್ಯಾ
ವಹ ಘನವರಾಹಪೌರಾಣದುಪರಿಯ ಭಾಗೆ
ಮಹಿಯೊಳದಱಲ್ಲಿ ಹರಿಯಾ ಕುಂಭಜಂಗೆ ಮಿಗೆ
ಸಹಜದಿಂ ಪೇಳ್ದ ಕಥೆಯಂ ವಿಚಾರತೆಯಿಂದೆನುತ್ತ ನುಡಿದಂ ದೇಶಿಕಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೇೞಿದಲೆಯುನಣುಗನಾ ಗೌತಮಂ ಸನ್ಮುನಿಗ
ಳೆೞೆಯಂ ನಿಜಾಶ್ರಯದೊಳಿರುತಿರುತ ಶಿವನಿಷ್ಠೆ
ಕೞಿಗೊಂಡು ತತ್ತ್ರಿಕಾಲೋಚಿತಜ್ಞಾನಿ ತಾನಪ್ಪ ಕಥದಿಂದ ಮುಂದೇ
ಬೞಿನಯಿದು ವರುಷಕ್ಕೆ ಬಪ್ಪುದೆಂದೆಂಬ ಬಗೆ
ಯೞಿದು ಲೋಕಹಿತಾರ್ಥವಾಗಿ ನಲವಿಂ ಶಿವನ
ಕುೞಿತುಗ್ರತಪವನೆಸಗಿದ ನಕ್ಷಪಾದ ಶುಭನಾದ ಸಂಸ್ಕರಿತವೇದಾ ೪

ಆತನ ತಪೋನಿಷ್ಠೆಗೊಲಿದು ಸರ್ವೇಶ್ವರಂ
ಪ್ರೀತಿಯಿಂದಂ ಸುಪ್ರಸನ್ನನಾಗುತ್ತೆಲೆಲೆ
ಗೌತಮಾ ನಿನ್ನಿಷ್ಟವೇನೆಂದೊಡೆದ್ದು ಸಾಷ್ಟಾಂಗದಿಂ ನಮಿಸಿ ನಿಂದೂ
ಸಾತಿಶಯಸಂಸ್ತೋತ್ರಮಂ ಮಾಡುತೆಲೆದೇವ
ಶೀತನಗಜಾಮಾತ ನಾನಾವ ಬೀಜಮಂ
ಭೂತಳದೊಳೆಯ್ದೆ ಬಿತ್ತಿದೊಡಾಗಳೇ ಬೆಳೆವ ಮಾಳ್ಕೆಯಂ ಕರುಣಿಸೆಂದಂ ೫

ಎನಲು ಸರ್ವೇಶ್ವರಂ ಕರುಣಿಸಿದ ನೀಂ ಧರೆಯೊ
ಳೆನಿತು ಬೀಜವ ಬಿತ್ತಲಾಕ್ಷಣದೊಳಂಕುರಿಸಿ
ಘನ ಪರ್ಣನಾಳಕಣಿಶಾದಿ ಫಳವಾಗಲ್ಕೆ ಮಳೆಯು ಹಂಗಿಲ್ಲದೊಂದೇ
ದಿನದಲ್ಲಿ ಧಾನ್ಯವಾಗಲಿಯೆಂದು ಪಾಲಿಸಿದ
ನನಘನೀ ಪರಿಯಿಂದ ಗೌತಮಂ ಸುಖದೊಳಿ
ರ್ಪನಿತಕ್ಕೈದಾದುದವಧಿಯೊಳು ಬರುತಿರ್ದುದಾ ಕ್ಷಾಮ ಮರಣಕ್ಕೆನೇಮಾ ೬

ಕಾಲಕಾಲದೊಳು ಮಳೆಗಳು ಹೊಯ್ಯದಿರಲಾ ವಿ
ಶಾಲವಹ ಕೆೞೆಗಳೆಲ್ಲಂ ಬತ್ತಿಯೂಷ್ಣಂ ಭ
ಡಾಳಿಸಲು ತರುಗಳೆಲೆಯುದುರಿ ಶೋಷಿಸಿ ಫಲಂಗಳು ಕೆಡುತ್ತಂತಾ ತೃಣಾ
ಜಾಲವೆಲ್ಲೊಣಗಿ ಬೇಗೆಯೊಳಡವಿ ಬೆಂದು ಮೃಗ
ಜಾಲ ಪಕ್ಷಿವ್ರಾತವೆಲ್ಲವಳಿಯಲು ಮಹಾ
ಭೀಲವೆನೆ ಬಂದುದಾ ಹೆಬ್ಬರಂ ಸರ್ವಜನಕಾಸರಂ ಪುಟ್ಟಿಸುತ್ತಾ ೭

ಬೆಳೆಯಾಗದಿರಲಾಗಿ ಧಾನ್ಯವಿಕ್ರಯವಿಲ್ಲ
ದಳಲುತಿರ್ದರು ಸರ್ವರಹುದಲಾ ಜೀವ ದನ
ಗಳು ಮುನ್ನ ಧನವಲ್ಲದನವರ್ಘ ಧನವಾ ಮಹಾಧನಂ ಧಾನ್ಯವೆಂದೂ
ಇಳೆಯಲ್ಲಿ ಸೂರಿಗಳು ಪೇಳ್ವರದುಕಾರಣಂ
ಘಳಿಸಿದರ್ಥಾಢ್ಯರೆಲ್ಲ ಉಪಾಸರಾಗಿ ಬಂ
ದೆಳಸಿ ಧಾನ್ಯಾಧಿಪರ ಬಾಗಿಲಂ ಕಾಯ್ವುತಿರ್ದರು ನೀತಿ ಹುಸಿಯದಪ್ಪದೇ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘಳಿಸಿ ಧಾನ್ಯಂಗಳಂ ತುಂಬಿಕೊಂಡಿರ್ದರುಂ
ಮಳವಿಲ್ಲದಾ ಸುಖದಿನುಣಲೀಸದವದಿರಂ
ಯಿಳೆಯಾಣ್ಮರಿಳ್ಕೊಂಡು ನಿಜಸೇನೆಗಿಕ್ಕಿಕ್ಕಿಯಂತುಮಲ್ಲದೆ ಧೂರ್ತರೂ
ಸೆಳೆದುಕೊಂಡಲ್ಲಲ್ಲಿ ಸೂಱೆಯಾಡುತ್ತಿರಲು
ಬೆಳೆ ಕೆಟ್ಟು ಕಾಲದೊಳಗುಳ್ಳವರುವಿಲ್ಲದವ
ರ್ಗಳು ಕೂಡೆ ನವೆಯಲಾ ಬರನೆಯ್ದೆ ಕೊಂದುಃ ಕೂಗುತ್ತಿರ್ದುದಖಿಳ ಜನರಾ ೯

ಸೊಪ್ಪು ಕಾಯಿಗಳ ಕುಱುಹಂ ಕಾಬರಾರಿಳೆಯೊ
ಳಿಪ್ಪ ಬಲ್ಗಡ್ಡೆ ಗೆಣಸುಗಳಗದು ಹೋದವ
ಲ್ಲಿಪ್ಪಖಿಳ ಜೀವಜಂತುಗಳನಧಮರು ಪಿಡಿದು ತಿನುತಿಹರು ಬಾಳಗೊಡದೇ
ಒಪ್ಪಚ್ಚಿ ನೀರು ದೊರಕದು ಕುಡಿವೆನೆಂದೊಡಿಂ
ತಪ್ಪ ಬಱದೊಳಗಲ್ಲಿ ದಾರುವನದಾಶ್ರಮಿಗ
ಳಪ್ಪ ಸದ್ಬ್ರಾಹ್ಮಣ ತಪಸ್ವಿಗಳು ಪಲವುಪಾವಾಸದಿಂದಂ ಕೆಟ್ಟರೂ ೧೦

ಏತೆಱದೊಳಶನವಮಂ ಪಡೆಯುದಾ ಬ್ರಾಹ್ಮಣ
ವ್ರಾತವೆಲ್ಲಂ ಮಱುಗಿ ಕಂಗೆಟ್ಟು ತಿಳಿದರಾ
ಗೌತಮಂ ಮನ್ಮುನೀಶ್ವರರೊಳಗ್ಗಳನವಂ ಶಂಭುವಿಂ ಮಳೆಯಿಲ್ಲದೇ
ಸಾತಿಶಯ ಫಲಧಾನ್ಯವಪ್ಪ ವರವಂ ಪಡೆದ
ನಾತನೇ ಗತಿ ಮಹಾಕ್ಷಾಮದೊಳಗೆಮಗೆಂದು
ಮಾತಾಡಿಕೊಂಡು ತಮ್ಮೊಳು ಪುತ್ರಮಿತ್ರಸಂಕುಳವೆರಸಿ ಹೊಱವಂಟರೂ ೧೧

ಹೊಱವಂಟು ಗೌತಮಾಶ್ರಮಕಾಗಿ ಬರುತಿರಲು
ಬಱನೆಂಬ ಬಾಧೆಯಂ ಕನಸಿನೊಳಗೊಂದಿನಿತ
ನಱಿಯದಾ ಲಸದಕ್ಷಪಾದನನಿವಾಸಿಗಳು ಪರಮ ಸುಖದಿಂದಮಿರ್ಪಾ
ಎಱಕದಾ ಭೂಮಿಗೆಯ್ತುರುತಿರ್ದುದಾ ಬರನ
ನಱಿದು ನಡೆದಿದಿರುವಂದಾಕ್ಷಣದೊಳಾ ಮುನಿಗ
ಳೆಱೆಯನಾ ತಾಪಸರ ಸತ್ಕರಿಸಿದಂ ನಮಸ್ಕಾರಾದಿ ವಿನಯದಿಂದಾ ೧೨

ಬೇಱೆ ಬೇಱವರವರಿಗಾಶ್ರಯುವಕೊಟ್ಟು ನಲ
ವೇಱಿ ತತ್ತತ್ಕಾಲದಲ್ಲಿ ದಿವ್ಯಾನ್ನಮುಮ
ನಾಱುತೆಱದುತ್ತಮ ರಸಾಯನಂಗಳನಖಿಳಶಾಕಪಕ್ವಾನಂಗಳಾ
ಮೂಱುವೇಳೆಯೊಳು ಕಲ್ಪಿಸಿಕೊಟ್ಟು ನಡೆಸುತ್ತ
ಜಾಱದಾ ಮೋಹಮಂ ಗೌತಮಂ ನೆಱೆ ಚಿತ್ತ
ವೂರಿ ಮಾಡುತ್ತಿರ್ದನಧಿಕಸತ್ಕಾರಮಂ ಸಂತಸದೊಳೇನೆಂಬೆನೂ ೧೩

CC0. In Public Domain. Jangamwadi Math Collection, Varanasi

ಸದಮಲರ ಸತ್ಕಾರವೆಂತೆನಲು ಕಬ್ಬಿನಾ
ತುದಿಯಿಂದ ತಾಳುವನಕಂ ಮೆದ್ದುಕೊಂಡು ಬರ
ಲದು ಗೆಣ್ಣುಗೆಣ್ಣಿಂಗೆ ಮಿಗಿಲೆನಿಸಿದಿನಿದೀವುದಂತೆ ಸಜ್ಜನರ ಮೋಹಾ
ಅಥವಃರಾಪ್ತರು ಬರಲು ಸಂತಯಿಸುತಿಪ್ಪರಾ
ಮೊದಲದಿನ ವೀಕ್ಷುವಂ ತಾಳಿಂದ ಸವಿಯುಲ
ಗ್ರದ ಪರ್ವಸರ್ವದೊಳು ರುಚಿಗೆಟ್ಟು ಹೂದಾಳೆಯಂತಪ್ಪಲಾ ಭಾವಿಸೇ ೧೪

ಅದುಕಾರಣಂ ಗೌತಮಂ ಸಜ್ಜನಂ ವಿಮಲ
ಹೃದಯನಪ್ಪುದಱಿಂದಲಾ ಬ್ರಹ್ಮಋಷಿಗಳ್ಗೆ
ಮುದದಿಂದ ವಿಮಲಾನ್ನಪಾನಂಗಳಿಂದ ಸತ್ಕರಿಸಿ ಸದ್ಗೋಷ್ಠಿಯಿಂದಾ
ಪಡೆದ ಸತ್ಫಲವೃಕ್ಷಕಾಸಾರದಿಂ ನಿಚ್ಚ
ಲೊದಗುವ ಸಮಸ್ತ ಧಾನ್ಯದ ಬೆಳಸಿನಾಶ್ರಮದೊ
ಳುದಿತ ಹರುಷದೊಳು ಸಂತಯಿಸಿಕೊಂಡಿರ್ದನಾ ಪ್ರಿಯವಚನಮಂ ಬೀರುತಾ ೧೫

ಧರೆಯುಖಿಳ ಜೀವರೆಲ್ಲರು ಬಱದ ಬಾಧೆಯಿಂ
ಮರಣವೆಯ್ದುವರರ್ಧಜೀವದಿಂದಿರ್ಪವರು
ಪರಿಶುಷ್ಕರಾದವಂದಿರುಗಳಿಂದೀರಾಱು ವರುಷಪರಿಯಂತವಾಗೇ
ವರ ಗೌತಮಾಶ್ರಯಂ ಬೊಕ್ಕವಂದಿರುಗಳಾ
ಪರಮ ಹರುಷದೊಳಾ ಮಹಾಕ್ಷಾಮವೆಂದಱಿಯ
ದಿರುತಿರ್ದರೆಂದೆನಲು ಭಾಪುರೇಯಕ್ಷಪಾದನ ಧರ್ಮಕಾರ್ಸಮಾನಂ ೧೬

ಬಱದಲ್ಲಿ ಅನ್ನಮಂ ನೀಡಿ ಸಂತಯಿಸಿದವ
ನುಱಿ ಸುಭಿಕ್ಷದ ಕಾಲದಲ್ಲಿ ಧನಮಂ ಕೊಟ್ಟು
ನೆಱಿ ಸುಖಂಬಡಿಸಿದವನರ್ನಿಕರವಟ್ಟೆಬರೆ ಭಯದಿಂದ ಬಪ್ಪಾರ್ತನಾ
ಎಱಕದಿಂ ಹಿಂದಿಕ್ಕಿಕೊಂಡ ಹಿಂದಿಕ್ಕಿಕೊಂಡ ಸದ್ರಕ್ಷಕಂ
ಬಱಿಯ ಮಾತೇಂ ಮೂವರಾಸ್ವರ್ಗಮುಖ್ಯರಿಂ
ದೆಱಗಿಸಿಕೊಳುತ್ತ ಸುಖಭೋಗದಿಂದಿಹರು ಗೌತಮಗೆ ಸರಿಯಾರ್ ಧರೆಯೊಳು
೧೭

ಬಳಿಕ ಹನ್ನೆರಡು ವರುಷದಮೇಲೆಯಾ ಬಱಿಂ
ತಿಳಿಯಿತ್ತು ಕಾಲಕಾಲಂಗಳೊಳಗೆಯ್ದೆ ಪೆ
ರ್ಮಳೆಗಳತಿಶಯವಾಗಿ ಕಱೆದವಾ ವೃಕ್ಷ ಫಲ ತೃಣವೃದ್ಧಿಯಾಗಿ ಧಾನ್ಯಾ
ಬೆಳೆದವರ್ಗಂ ಪೆಚ್ಚೆಸರ್ವಶಾಂತಿಗಳಾಗ
ಲುಳಿದ ಧರಣಿಯ ಜೀವರೆಲ್ಲ ಸಂತೋಷಿಸಲು
ವಿಳಸಿತದೊಳಾದುದಾ ಶುಭಕಾಲ ಸಂತಸದ ಮೂಲವತಿಶಯದ ಲೀಲಾ ೧೮

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

ಆ ವಿಶೇಷದ ಬಱಿದ ಕಾಲದೊಳು ಸುಖದಿಂದ
ಜೀವಿಸಿದರಾ ಪುತ್ರ ಮಿತ್ರರೊಳಗೆಂಭತ್ತು
ಸಾವಿರ ಮುನೀಶ್ವರರು ಶುಭಕಾಲ ಹೋಗಲೆಳಸಿದರು ತಮ್ಮಾಶ್ರಯಕ್ಕೀ
ಆವಾಗ ಪೋಪೆವೆಂದೆಂಬ ಮನವಾಗಿರಲು
ತಾವು ತಮ್ಮೊಳು ವಿಚಾರಿಸಿಕೊಂಡು ನುಡಿದರಿ
ನ್ನೇವೆವು ನಿಜಾಲಯೇಚ್ಛೆಗಳಾಗುತಿವೆವೆನುತ್ತಾಲೋಚನಂಗೆಯ್ದರೂ ೧೯

ಏಕಚಕ್ರಾಖ್ಯನಗರದೋಳಿರ್ಪ ಪಾರ್ವರಾ
ಬಾಕನೆನಿಸುವ ಬಕಾಸುರಗೆ ಬಂಡಿಯ ಕೂಳ
ಸಾಕೆಂಬ ಮಾಳ್ಕೆಯಿಂದಿನ ದಿನಕ್ಕೊಬ್ಬ ಮಾನುಷನಂತವಗೆ ಕೊಟ್ಟೂ
ನೂಕಿದರು ದಿನವನವನಂ ಭೀಮ ಕೊಂದನ್ಯೆ
ಸೇ ಕೆಟ್ಟು ಬದುಕಬೇಕೆಂದು ಹೊರಟವರಲ್ಲ
ಲಾ ಕೇಳು ಜನ್ಮಭೂಮಿಯನುಳಿದು ಬಾಳ್ವರಾರ್ರೈ ಮುನಿಗಳೆಳಸಿದರಲಾ ೨೦

ನಮ್ಮಾಶ್ರಯಕೆ ಪೋಪವೆಂದನಿಬರಾಡುತಿರೆ
ಘಮ್ಮನಂತಲ್ಲಿ ಕೆಲವರು ನುಡಿದರೀಗಲೀ
ತಂ ಮಹಾತ್ಮಂ ಗೌತಮಂ ಬಱಿದ ಕಾಲದೊಳು ಹನ್ನೆರಡುವರುಷಪೊರೆದಾ
ಸಮ್ಮಾನಿ ಈತಂಗೆ ಹೇಳಿ ಕಳುಹಿಸಿಕೊಳದೆ
ಸುಮ್ಮನೆ ಪೋಪುದನುಚಿತವೆಂದು ನುಡಿವುತಂ
ತಮ್ಮೊಳಗೆ ತಾವು ಯೋಚಿಸುತಿರ್ದರಾಗಲಾ ಬ್ರಾಹ್ಮಣರು ಪರಿಭಾವಿಸೇ ೨೧

ನಂಟರಿಂದಧಿಕ ಮೋಹದೊಳು ಸತ್ಕರಿಸುತಂ
ಗೆಂಟಾಗದಕ್ಕಱಿಂ ಸಲಹಿ ತನ್ನಯ ಮನ
ಸ್ಸಂಟಿದೀ ಗೌತಮಗೆ ಪೇಳಿ ಕಳುಹಿಸಿಕೊಳಲುಬೇಕೆಂಬೊಡಾತನೀಗಾ
ಉಂಟು ದಿವ್ಯಾನ್ನವುಂಬೊಡೆ ಬಳಿಕ್ಕಾವಾಸ
ಉಂಟು ಶೋಭನದಿಂದ ಸದ್ಗೋಷ್ಠಿ ನಿಮಗೆಲ್ಲ
ಮುಂಟೇಕೆ ಪೋದಪ್ಪಿರೆಂಬನದಱಿಂದಲಱುಪದೇ ಪೋಗಬೇಕೆಂದರೂ ೨೨

ಎನಲನಿಬರೊಳಗತಿ ವಿವೇಕಿಯಾ ಶಾಂಡಿಲ್ಯ
ಮುನಿಯೆಂಬವಂ ನುಡಿದನನ್ನದಾನದ ಫಲವ
ನಿನಿತೆಂದು ಕಲ್ಪಿಸಲ್ಬಹುದೆಯೊಂದೆರಡು ದಿನವಲ್ಲ ಹನ್ನೆರಡು ವರುಷಾ
ಘನತರ ಕ್ಷಾಮದೊಳು ಪೊರೆದ ಗೌತಮನ ಸ
ನ್ಮನಕೆ ಸರಿಯಾರವನ ಧರ್ಮಮಂ ಪೊಗಳಲಱಿ
ಏನಿಪುದದಱಿಂ ಪೂರ್ವಕಥೆಯೊಂದ ಪೇಳ್ವೆನೆಂದಾ ಗುಣಾಗ್ರಣಿ ನುಡಿದನೂ ೨೩

Digitization by eGangotri and Sarayu Trust. Funding by MoE-IKS

ನೆಟ್ಟನಾ ಧರ್ಮಪಾಲಕ ನಗರವೆಂದೆಂಬ
ಪಟ್ಟಣದೊಳರಸಾಗಿ ವೈಭವಂ ಪಸರಿಸಲು
ಕಟ್ಟಧಿಕಚತುರಂಗಸೇನೆಯಿಂ ಸಕಲ ಭಂಡಾರದಿಂದಾಪ್ತಜನರಿಂ
ನಿಟ್ಟಯಿದೆಯರ್ಗಳೆನಿಪಂಗನಾ ನಿಕರದಿಂ
ಬೆಟ್ಟದಂದದ ಧೈರ್ಯದಿಂ ರಿಪುಗಳಂ ಗೆಲಿದು
ಮುಟ್ಟೆ ಸತ್ಕೀರ್ತಿ ದಶದಿಕ್ಕಿನೊಳು ಸತ್ಯನಿಧಿಯೆಂಬ ಭೂಪಂ ಮೆಱೆವನೂ ೨೪

ವೀರ ವಿತರಣ ವಿನಯದಿಂದ ರಾಜ್ಯವನಾಳು
ತಾ ರಾಯನೆಸೆವ ಷೋಡಶಮಹಾದಾನವಂ
ಸಾರಸಂಪತ್ಕರವೆನಲ್ಮಾಡಿಮಾಡುತ್ತ ಮತ್ತೊಂದು ದಿವಸದಲ್ಲಿ
ಕಾರಣವಿದೇನೆನ್ನ ಸಕಲವಿತ್ತಂ ಸವೆವು
ತಾರಾಧನೆಗಳ ಮಾಡಿದ ಫಲಕೆ ಮಿಗಿಲಾವು
ದೋರಂತೆಯೆಂದಾ ಪುರೋಹಿತರ ಕರೆದು ಕೇಳಿದನಾ ಮಹಾಭೂಪನೂ ೨೫

ವೇದ ಪೌರಾಣಾಗಮಾರ್ಥಂಗಳಂ ಬಲ್ಲ
ಭೂದೇವರೆಯಿತಂದರಲ್ಲಿ ಮುನ್ನೊಱವರಿ
ಗಾದಿಯಗ್ಗಣಿಯಪ್ಪ ಹಿರಿಯನೆನಿಸುವ ದೇವದತ್ತ ಮುಂತಾದವರನೂ
ಸಾದರದೆ ಸತ್ಕರಿಸಿ ಕೇಳಿದಂ ಭೂಪಾಲ
ನೀದಾನಸಂಕುಳವನಾಂ ನಿಚ್ಚ ಮಾಡಲೇ
ನಾದುದೆಲ್ಲಕ್ಕೆ ಮಿಗಿಲಹ ಧರ್ಮವಾವುದೆನೆ ನುಡಿದರಾ ವಿದ್ವಾಂಸರೂ ೨೬

ಪರ್ಮಮಂ ಬೆಸಗೊಂಡೆಯೈ ಭೂಪ ಕೇಳು ಶಿವ
ಧರ್ಮೋತ್ತರಾಖ್ಯಶಾಸ್ತ್ರಾರ್ಥಮಂ ಪೇಳ್ವೆವೈ
ನಿರ್ಮಲ ಮನೋನಿಧಿಯೆ ಸರ್ವದಾನಕ್ಕನ್ನದಾನವೇ ಮಿಗಿಲೆನಿಪುದು
ಕೂರ್ಮೆಯಿಂದುಂಡಾಗಲೇ ಹಿತವನೀವುದೈ
ನೂರ್ಮಡಿಯ ಬಲವಿತ್ತು ಪುಷ್ಟಿಯಂ ಮಾಳ್ಪುದುರೆ
ಕರ್ಮವಿರಹಿತನೆ ಕೇಳನ್ನದಾನಕ್ಕೆ ಸರಿಯಿಲ್ಲವೈ ಹಿಂದೆ ಮುಂದೇ ೨೭

ಪರಿಕಿಸಲ್ಕನ್ನದಿಂದಂ ಸಕಲ ಭೂತಂಗ
ಳಿರದೆ ಜೀವಿಸುತಿಪ್ಪರಶನವಿಲ್ಲದಿರಲ್ಕೆ
ಮರಣವೆಯ್ದುವರಲ್ತೆ ರಕ್ತ ಮಾಂಸಂ ವಶಾ ಶುಕ್ಲಂಗಳಂಗದಿಂದೇ
ಇರದೆ ವರ್ಧಿಸುತಿಹವು ತದ್ವೀರ್ಯದಿಂದಲೆ
ಲ್ಲರು ಪುಟ್ಟುತಿಪ್ಪರದುಕಾರಣಂ ಭೂಪ ಕೇ
ಳ್ಧರಣಿಯೆಲ್ಲಂನಮಯುವದಱಿಂದಲನ್ನದಾನಕ್ಕೆ ಸಮವಿಲ್ಲ ಕೇಳೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಮ ರತ್ನಾಶ್ವಂಗಳುರು ಭದ್ರ ಹಸ್ತಿಗಳು
ಕಾಮಿನಿಯು ರಾಸ್ಯಜ್ಮ್ರಹಾಚಂದನಂಗಳಿಂ
ಭೂಮಿಯೊಳು ಭೋಗಿಸುವವರ್ಗೆ ಮೊದಲುಂಡ ಬಳಿಕಲ್ಲದಿಂತಿವು ಸೇವ್ಯವೇ
ಆ ಮೂಲವಾದನ್ನದಾನಕ್ಕೆ ಸರಿಯಾಗ
ವೈ ಮಹೀಪಾಲ ಸರ್ವವನಿತ್ತ ಫಲದಿಂದ
ಸಾಮರ್ಥ್ಯದನ್ನದಾನಂ ಮಿಗಿಲು ಮಿಗಿಲೆಂದು ನುಡಿವುತಿರ್ದರು ವೃದ್ಧರೂ ೨೯

ವಿಲಸಿತದ ನವರತ್ನ ವನಿತಾದಿ ವಸ್ತುಗಳು
ಕೆಲಬರ್ಗೆ ಬೇಕು ಕೆಲರವಱ ಭೋಗವನಱಿಯ
ರಲೆ ಗರ್ಭದೊಳಗಿರ್ದ ಶಿಶು ತಾಯಿ ಕೊಂಡನ್ನರಸದಿಂದ ಜೀವಿಸುವುದೂ
ಸಲೆ ಪುಟ್ಟಿದಣುಗರಾ ಯೌವ್ವನರು ವೃದ್ಧರು
ಜ್ವಲ ದೇವ ದಾನವರು ತಾಪಸರು ತಮ್ಮ ತ
ಮ್ಮೆಲಘುತರದಾಹಾರವಂ ಕೊಳಲ್ಬೇಕದಱಿಂದನ್ನದಾನ ಮಿಗಿಲೂ ೩೦

ದೋಷವಿರಹಿತ ಕೇಳು ಸರ್ವರೋಗಕ್ಕಂ ವಿ
ಶೇಷವೀ ಕ್ಷುಧೆಯೆಂಬ ಕುತ್ತವದಕನ್ನವೆಂ
ಬೌಷಧಿಯನಿಕ್ಕಲಾಕ್ಷಣ ಮಾತ್ರದೊಳ್ ಪ್ರತಿಕಾರವೈ ಕ್ಷುಧೆಗೆ ಸಮದಾ
ವೈಷಮ್ಯ ದುಃಖವಿಲ್ಲ್ಯ ವ್ಯಾಧಿಸಮದರಿಪು
ರೋಷಕ್ಕೆ ಸಮದರಾತಿಗಳಿಲ್ಲವೈ ಸರ್ವ
ಭೂಷಣದ ಸುಖವುಂಬುದದಱಿಂದಲನ್ನದಾನಕ್ಕೆ ಸರಿಯಿಲ್ಲ ಭೂಪಾ ೩೧

ನೆಟ್ಟನನ್ನವನಿಕ್ಕಿದಾತನೇ ಪ್ರಾಣಮಂ
ಕೊಟ್ಟವಂ ಹರಣವಿತ್ತಾತನೇ ನೆಱೆಮನಂ
ಮುಟ್ಟಿ ಸರ್ವವನಿತ್ತ ದಾನಿಯದಱಿಂ ಸರ್ವದಾನಫಲವನ್ನದಾನಂ
ಕಟ್ಟಿಕ್ಕಱಿಂದಧಿಕ ಧನವ ಸವೆದೇನಾಯ್ತು
ಬೆಟ್ಟಿತಪ್ಪುದು ಪಸಿವದಂ ಬಿಡಿಸಲಘತತಿಘ
ರಟ್ಟನಿಷ್ಟಾರ್ಥವಂ ಕೊಡುವನೆಂದಾಡುತಿರ್ದರು ಪುರೋಹಿತಮಣಿಗಳೂ ೩೨

ಆವನೋರ್ವರ್ವನಿಕ್ಕಿದನ್ನಮಂ ಕೊಂಡು ಸ
ದ್ಭಾವದಿಂದುಂಡಾತನೆಯ್ದೆ ಮಾಡಿದ ಧರ್ಮ
ಮೀವ ಸುಧೆಯಲ್ಲಿ ಮೊದಲನ್ನದಾನವನಿಕ್ಕಿದವಗರ್ಧ ಮಿವಗೆರ್ಧವೈ
ಶ್ರೀವಿಮಲ ಧರ್ಮಕಾಮ್ಯಾರ್ಥ ಮೋಕ್ಷಂಗಳಿಗೆ
ಈ ವಸುಧೆಯೊಳು ದೇಹವೇ ಪರಮ ಸಾಧನಂ
ಆ ವಪುವೆಯನ್ನಪಾನದಿನುಳಿವುದದಱಿಂದ ಮಿಗಿಲೆರಡು ದಾನದ ಫಲಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀ ಕೇಳ್ವುದನ್ನದಾನದೊಳುದ ಕವೀಗ ಮೂ
ಲೋಕಕ್ಕೆ ಜೀವನಂ ಪಾವನಂ ದಿವ್ಯಾಮೃ
ತಾಕಲಿತ ಶುದ್ಧವಾ ಸರ್ವರಸದಾವಾಸ ವಾರಿಸಹಿತನ್ನವಿಕ್ಕಾ
ಬೇಕೆಂಬುದೀಗ ಸರ್ವಾಗಮಾರ್ಥಂ ಕಣಾ
ಸ್ವೀಕರಿಪುದೀ ನುಡಿಯನೆನೆ ಬುಧವ್ರಾತಮುಂ
ದೇಕಚಿತ್ತದೊಳಾಲಿಸಿದನಾ ಮಹಾರಾಯನತ್ಯಧಿಕ ಪುಣ್ಯಕಾಯಾ ೩೪

||ಸಾಕ್ಷಿ|| ಸರ್ವೇಷಾಮೇವ ದಾನೇನಾ ಮನ್ನದಾನಂ ಪರಂ ಸ್ಮೃತಂ
ಸದ್ಯಃ ಪ್ರೀತಿಕರಂ ದಿವ್ಯಂ ಬಲಪುಷ್ಟಿ ವಿವರ್ಧನಂ ೧

ಅನ್ನದಾನ ಸಮಂದಾನಂ ತ್ರಿಷು ಲೋಕೇನ ವಿದ್ಯತೇ
ಅನ್ನಾದ್ಭವಂತಿ ಭೂತಾನಿ ತದ ಭಾವೇ ವ್ರಿಯಂತಿ ಚ ೨

ರಕ್ತ ಮಾಂಸಂ ವಶಾಶುಕ್ಲಂ ಕ್ರಮಾದನ್ನಾತ್ಪ್ರವರ್ಧತೇ
ಶುಕ್ಲಾದ್ಭವಂತಿ ಭೂತಾನಿ ತಸ್ಮಾದನ್ನಮಯಂ ಜಗತ್ ೩

ಹೇಮರತ್ನಾಶ್ವನಾಗೇಂದ್ರೈ ರ್ನಾರಿಸ್ರಕ್ಚಂದನಾದಿಭಿಃ
ಸಮಸ್ತೈರತಿ ಸಂಪ್ರಾಪ್ತೇ ರ್ನರಮಂತಿ ಭುಭುಕ್ಷಿತಾಃ ೪

ಗರ್ಭಸ್ಥಾ ಜಾಯಮಾನಾಶ್ಚ ಬಾಲವೃದ್ಧಾಶ್ಚ ಮಧಮಾಃ
ಆಹಾರಮಭಿಕಾಂಕ್ಷ್ಯಂತೇ ದೇವ ದಾನವ ತಾಪಸಾಃ ೫

ಕ್ಷುಧಾ ಹಿ ಸರ್ವರೋಗಾಣಾಂ ವಾಧಿಶ್ರೇಷ್ಠತಮಸ್ಸ್ಮೃತಾಃ
ತಸ್ಯಾಂಗೌಷಧಿಲೇಪೇನ ಪ್ರತೀಕಾರಾಃ ಪ್ರಕೀರ್ತಿತಾಃ ೬

ನಾಸ್ತಿ ಕ್ಷುಧಾಸಮಂ ದುಃಖಂ ನಾಸ್ತಿ ರೋಗಕ್ಷುಧಾ ಸಮಃ
ಸಾಸ್ತ್ಯಾಹಾರಸಮಂ ಸೌಖ್ಯಂ ನಾಸ್ತಿ ಕ್ರೋಧಸಮೋ ರಿಪುಃ ೭

ಅನ್ನದಃ ಪ್ರಾಣದಃ ಪ್ರೋಕ್ತಃ ಪ್ರಾಣದಶ್ಚಾಪಿ ಸರ್ವದಃ
ತಸ್ಮಾದನ್ನಪ್ರದಾನೇನ ಸರ್ವದಾನ ಫಲಂ ಭವೇತ್ ೮

ಯಸ್ಯಾನ್ನಪಾನ ಪುಷ್ಟಾಂಗಃ ಕುರುತೇ ಧರ್ಮಸಂಚಯಂ
ಅನ್ನಪ್ರದಾತ ಸ್ತಸ್ಯಾರ್ಧಂ ಕರ್ತುರಧನ್ನ ಸಂಶಯಃ ೯

ಧರ್ಮಾರ್ಥ ಕಾಮ ಮೋಕ್ಷಾಣಾಂ ದೇಹಃ ಪರಮ ಸಾಧನಂ
ಸ್ಥಿತಿಸ್ತಸ್ಯಾನ್ನಪಾನಾಭ್ಯಾ ಮತಸ್ತತ್ಸರ್ವ ಸಾಧನಂ ೧೦

ತಸ್ಮಾದನ್ನ ಸಮಂ ದಾನಂ ನ ಭೂತಂನ ಭವಿಷತೀ
ತ್ರಯಾಣಾಮಪಿ ಲೋಕಾನಾ ಮುದಕಂ ಜೀವನಂ ಸ್ಮೃತಂ ೧೧
ಪವಿತ್ರಮಮೃತಂ ದಿವ್ಯಂ ಶುದ್ಧ ಸರ್ವರಸಾಶ್ರಯಂ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ವಾಂಸರಾಡಿದ ಮಹಾವಾಕ್ಯಮಂ ಕೇಳಿ
ಸದ್ವಂಶಭೂಮಿಪಂ ನುಡಿದನೆಲೆ ನೀವು ವಿಲ
ಸದ್ವಿವೇಕಿಗಳಿಂತು ನುಡಿವರೇ ನಿಮ್ಮ ಮಾತೆನ್ನ ಚಿತ್ತಕೆ ಬಾರದು
ಸದ್ವನಿತೆ ಭೂಮಿ ಧನಮುಖ್ಯಮಂ ಕೊಡಲು ಸಂ
ಪದ್ವರಾನ್ವಯವಿಡಿದು ಬಾಳ್ವರುಂಡಾಗಲೇ
ತದ್ವಿನಾಶವನೆಯ್ದುವನ್ನ ಮಿಗಿಲೆನಬಹುದೆ ಬೇಡವೀ ಮಾತೆಂದೆನೂ ೩೫

ಎನಗೊಪ್ಪದೀ ಬೋಧೆ ನಾನಾ ಪ್ರಕಾರದಿಂ
ಧನಮುಖ್ಯಮಂ ಕೊಡುತ್ತಿದ್ದೆನಂತಲ್ಲವೇ
ದೆನುತನ್ನದಾನವೇ ಮಿಗಿಲೆಂದು ಪೇಳಿದಿರಿ ಶಾಸ್ತ್ರಮಂ ಮೆಚ್ಚಿ ಮೂಱೂ
ದಿನದೊಳಗೆಯಂದು ಮಾಡಿದ ಕಾರಣದೊಳಿಂದು
ಘನ ಪುಣ್ಯವಾಯ್ತನ್ನದಾನದಿಂದೆಂದೆನ್ನ
ಮನಕೆ ಬಪ್ಪಂತೆ ದೃಷ್ಟಮಂ ತೋಱಿಕೊಡಿ ಎಂದನಾ ಭೂಪ ಕಾಮರೂಪಾ ೩೬

ಮೂಱುದಿನದೊಳಗೆನ್ನ ಮನಕೆ ಬರ್ಪಂದದಿಂ
ತೋಱಿಕೊಡಿ ನೀವನ್ನದಾನದ ಮಹತ್ವಮಂ
ಗಾಱಪ್ಪಿರಲ್ಲದೊಡೆ ನೀವೆಲ್ಲರೆನ್ನಾಜ್ಞೆಯಿಂದೆನಲು ನಡನಡುಗುತಾ
ಸಾಱುವಾಗಮದರ್ಥಮಂ ಪೇಳ್ವ ವೈಸಲೇ
ಯಾಱೂಢದಿಂ ದೃಷ್ಟವಾಗಬೇಕೆಂಬನೀ
ನೀಱನೆನಿಪರಸಿದಕ್ಕೇಗೆಯ್ವೆವೆಂದು ಚಿಂತಿಸಿದರಂತಾ ಪಾರ್ವರೂ ೩೭

ಮೇಣರ್ಥಚೋರತ್ವಮಶ್ವಪುಣ್ಯಂ ಮಿಗೆ ಧು
ರೀಣವಹ ಮಾರಣಂ ಹಡಗೇಱಿ ವಾರಿಧಿಯು
ತಾಣದೊಳ್ವ್ಯವಹರಿಪುದರ ಸಂಾಶ್ರಯುವೆಂಬವೈದು ಫಲಿಸಿದೊಡೆ ಸರಿಯಾ
ಕಾಣೆವೆಂದೆಂಬಂತೆ ಸಿದ್ಧಿ ಸುತ್ತಿಪ್ಪವೀ
ಕ್ಷೋಣಿಯೊಳು ವಿಪರೀತವಾಗಲಿಂತವರ್ಗಳಾ
ಪ್ರಾಣವನೆ ಕೊಂಬವೆಂಬುದೆ ತಥ್ಯವಾಯ್ತೆಂದು ಮಱುಗಿದರು ವಿದ್ವಾಂಸರೂ ೩೮

ಎನುತವರು ಚಿಂತಿಸುತ್ತಿರೆ ಮೆಲ್ಲನಾ ಮೂಱು
ದಿನದವಧಿ ಬರಲಾಗಿ ಸರ್ವರೇಗೆಯ್ವೆವೆಂ
ಬನಿತಕ್ಕೆ ದುಃಖಿಸುವ ಹಿರಿಯ ದೀಕ್ಷಿತನ ಮಗಳಯಿತಂದು ನಿಜ ಪಿತನೊಳು
ವಿನಯದಿಂ ನುಡಿದಳೀ ವ್ಯಾಪಾರವೇಕೈಯ್ಯ
ನಿನಗೆನಲು ತದ್ವ್ಯಥಾಕಥನಮಂ ವಿಸ್ತರಿಸಿ
ಜನನಾಥನಾಜ್ಞೆಯಿಂದೆನಲಾಗಿ ನುಡಿದಳಂತಾತ್ಮ ಜಾತೇ ೩೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಂದೀಶ್ವರನ ನೋಂಪಿಯಿಂದಱಿವೆನಾ ಬಗೆಯ
ನಿಂದರಸಗೆಱುಪುವೇಂ ದೇವಪೂಜೆಯ ಮಾಡಿ
ಯೆಂದಯ್ಯನಂ ತಿಳಿ ಪಿಯಾರೋಗಿಸಿದ ಬಳಿಕ ಸಿಂಗರಿಸಿಕೊಂಡು ಕೂಡೆ
ನಂದನೆ ಬರುತ್ತಿರಲು ಸರ್ವ ವಿದ್ವಾಂಸಗ್ರ್ಗ
ಳೊಂದಾಗಿ ದೇವದತ್ತಂ ಕೂಡಿ ನೃಪಸಭೆಗೆ
ಬಂದು ಪರಸುತ್ತಲುಚಿತಾಸನದೊಳನಿಬರೊಪ್ಪಿದರು ಮನದೊಳ್ನಡುಗುತಾ ೪೦

ಭೂನಾಥನಾ ವೇಳೆಯಲ್ಲಿ ಮೆಲ್ಲನೆ ನುಡಿದ
ನೇನಿ ವಿದ್ವಾಂಸರೆಲ್ಲರು ಸಮರ್ಥಿಕೆಯನ್ನ
ದಾನಫಲದೃಷ್ಟಮಂ ತಿಳಿದಿರೇ ಪೇಳಿಮೆನಲೆಮಗೇಂ ಸ್ವತಂತ್ರಮುಂಟೇ
ನಾನಾ ಪ್ರಕಾರದಿಂ ಹಿರಿಯರೆನಿಸುವ ಮಹಾ
ಮಾನಿಗಳು ಗೇವದತ್ತಾ ಚಾರ್ಯನಿರಲೆಂದೊಡಾ
ಡಾನನವನರಸನೀಕ್ಷಿಸೆ ನುಡಿದನಾ ಭೂಸುರಾಗ್ರಣಿ ವಿವೇಕಸುಮಣೀ ೪೧

ಭುವನಾಧಿಪಾ ನೀಂ ವಿಚಾರಿ ಪೀ ಪ್ರಶ್ನೆಯಂ
ಸುವಿಚಾರದಿಂದೆನ್ನ ಮಗಳು ಪೇಳುವಳೆಂದೊ
ಡವಳ ಮುಖಮಂ ನೋಡಿ ನುಡಿದನಿಂದನ್ನದಾನದ ಮಹಿಮೆಯಂ ಪೇಳುವಾ
ಯುವತಿಯೆನಲಹುದಹುದು ಭೂಪ ಕೇಳ್ನಾನೆ ಪೇ
ಳುವೆನಱಿವೆಯಾದೊಡಾ ರೋಹಿತಾಪುರಕೆ ಪೋ
ಗವನೀಶ ಭದ್ರಾಶ್ವನೆಂಬ ನರನಾಥನವನಾಳುತಿರ್ಪ್ಪಂ ಕೀರ್ತಿಯಿಂ ೪೨

ಸುಗುಣೆಯೆನಿಪಾ ಮಹೇಶ್ವರನ ಪಟ್ಟದ ರಾಣಿ
ಮಗನೊರ್ವನಂ ಪಡೆವಳಯ್ಯ ತತ್ಕಾಲದೊಳ
ಗಗಲದಲ್ಲಿರ್ದು ಕೇಳಿದಡನ್ನದಾನದ ಮಹತ್ವಮಂ ಭೂಪ ನಿನ್ನಾ
ಬಗೆ ಮೆಚ್ಚುವಂದದಿಂ ಪೇಳ್ವುದಾ ಶಿಶುವೆನಲು
ಮಿಗೆ ವಿಸ್ಮಯಂಬಟ್ಟು ನೋಳ್ಪೆನಾನಿದನೆನು
ತ್ತೊಗುವಿಗೆಯ ಹರುಷದಿಂ ರಾಜ್ಯಕ್ಕೆ ಕಾಪಾಗಿ ಮಂತ್ರಿಯಂ ಸೈತಿರಿಸಿದಂ ೪೩

ಇರಿಸಿ ತಾನೊರ್ವನೇ ಪಟ್ಟಣವ ಹೊಱವಂಟು
ಪುರ ಪತ್ತನ ಗ್ರಾಮ ಮುಖ್ಯಂಗಳಂ ಕಳೆದು
ಬರವರಲು ಮುಂದೆ ತೋಱಿದುದೊಂದು ಹೇರಡವಿ ಭೂಮೀಶ್ವರನ ಕಣ್ಣಿಗೇ
ಪರಿಭವಾರಣ್ಯವೆಂಬಂದದಿಂದಂ ಮೇಲೆ
ಪರಿಕಿಸಲ್ತಾನೆ ಪುಣ್ಯಾರಣ್ಯವೆಂಬಂತೆ
ಯರಸನ ಮನೋವ್ಯಾಪ್ತಿರೋಗೌಷಧಕ್ಕೆ ದಿವ್ಯಾರಣ್ಯವೆಂದೆಂಬಿನಂ ೪೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಾಲಿಸಲು ವಾಟಿರಕ್ಷಕರಂದದಿಂದ ಕು
ದ್ದಾಲಂಗಳಿಂದುದು ಭಟಯ್ಯಗಳ ಪುರದೊಲಂ
ದಾ ಲಲಿತಭಲ್ಲಾತಕಿಯಿನಗ್ರಕೈಲಾಸದಂತೆ ಪಂಚಾಸ್ಯನಿಂದಾ
ಹೋಲಿಸಲು ವತ್ಸರದ ವೋಲಾಪ್ಪವಂಗದಿಂ
ಮೇಲಪ್ಪ ಚಂದ್ರನಂದದೆ ಘೃಷ್ಟಿಮಯವಾಗಿ
ಭೂಲೋಲನೆಯಿತಪ್ಪ ದಾರಿಯ ವಿಶೇಷ ಕಾಂತಾರವೊಪ್ಪುತ್ತಿರ್ದುದೂ ೪೫

ಭೂಕಾಂತನೀ ಪ್ರಕಾರದಿನೆಯಿತರುತ್ತಿರ
ಲ್ಕಾ ಕಾಲದಲ್ಲಿ ಪೇರಡವಿಯೊಳಗಿರ್ಪನಂ
ತಾ ಕಾಳಮೇಘನೆಂಬತಿಶಯ ಕಿರಾತನಾ ಜನ್ಮದಿಂ ತೊಡಗಿ ಜೀವಾ
ನೇ ಕಂಗಳಂ ಸರ್ವ ಮೃಗಗಳಂ ನರರ ತಾ
ನೀ ಕೊಂದು ಕೈಯ್ಯಾರೆ ತಿನುತಿರ್ಪ ಪಾತಕಂ
ಜೋಕೆಯಿಂದಿರ್ಪ ಕಾವಿಂಗರಸನೆಯಿತರಲು ಕಂಡನಂತಾ ಶಬರನೂ ೪೬

ಕಂಡು ಭೂಪಾಳನಂ ಕಾಳಮೇಘಂ ಹಿಡಿದು
ಕೊಂಡು ಸಂತಸದೊಳಿಂದಂ ನೃಮಾಂಸಂ ಪಲವ
ನುಂಡುಂಡು ಬಲ್ಲೆನಿಂತಪ್ಪ ಕೋಮಲದೇಹಿ ಸೌಕುಮಾರ್ಯ್ಯನನಱಿಯೆನೂ
ಖಂಡವಂ ಸವಿಯಬೇಕಿತನನೆನುತ್ತಲೊಡ
ಗೊಂಡು ಬಂದಾತನಂ ಕಟ್ಟಿ ಬೇಡಂ ತನ್ನ
ಪುಂಡರೀಕಾಕ್ಷಿಯ ವಶಕ್ಕೆ ಕೊಟ್ಟಿವನ ಕೊಂದಟ್ಟಿರಿಸ ಹೇಳಿ ಪೋದಂ ೪೭

ಪೋದನಾ ಬೇಡನತ್ತಂ ನೃಪಂ ನಾ ಧರ್ಮ
ದಾದಿಯಱಿದಪೆನೆಂದು ಪೋಪಕಾಲದೊಳಿಂತು
ಟಾದುದೇ ಶಿವ ಶಿವಾ ದುರ್ಮರಣವೆನಗೆ ಶಾಸ್ತ್ರಾರ್ಥದಿಂದಂ ಬೋಧಿಪಾ
ವೇದವಿತ್ತುಗಳ ಮುನ್ನೊಱ ಶಿಕ್ಷಿಪೆನೆಂದೆ
ನಾ ದುಷ್ಕೃತಂ ಕೈಯ್ಯ ಮೇಲೆ ತೋಱತ್ತೆಂದು
ವೋದವಱಿಪ್ಪಕಾಲದೊಳಿತ್ತಲೀಕ್ಷಿಸಿದಳಾ ಶಬರಿ ನೀಲಕಬರೀ ೪೮

ಮುನಿಯೆ ಪುರುಷರ ಹರಣಮಂ ಕೊಂಬುದಕ್ಕೆ ಘ
ಮ್ಮನೆ ಕರುಣಿಸಲ್ಕೆ ಜೀವಂಗಳಂ ಕಾಯಲಂ
ಗನೆಯಲ್ಲದೆ ಧರೆಯೊಳಿಲ್ಲವದು ಕಾರಣಂ ರಾಯನಂ ನೋಡಿ ಶಬರೀ
ಇನಿತು ಕೋಮಲದೇಹಿ ಯಾವ ದೇಶದ ನೃಪನೊ
ಯಿನಿಯ ಕೊಲವೇಳ್ದೊಡಂ ರಕ್ಷಿಸುವೆನೆಂದಿರಿಸಿ
ಮನೆಯಲ್ಲಿ ಮುನ್ನಲಿದ್ದುದಿತ್ತುಮುದ ವಿಶಿತದಿಂ ಶಾಕಂಗಳಂ ಸವೆದಳೂ ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಡಲ್ಲಿ ಬೇಂಟೆಯಾಡುತ್ತ ಬಳಲುತ ಬಂದ
ಬೇಡಂಗೆ ನಾನಾಪ್ರಕಾರ ಶಾಕಂಗಳಂ
ಮಾಡಿ ಗಡಣಿಸಲೆಂದಿನಂತೆ ತನ್ನೊಡನೆಯಾನಂದದಿಂದುಂಬುದಕ್ಕೀ
ಗಾಡಿಕಾರ್ತಿಯು ಕರೆಯುಲೊಲ್ಲದೋಸರಿಸಿ ನಸು
ನೋಡುತ್ತ ನಿಲೆ ಕಂಡಿದೇನು ಕಾರಣವೆಂದು
ಹೇಡಿಗೊಂಡಂ ಸತಿಗೆ ಮುಳಿಸಾದುದೆಂದಾ ಪುಳಿಂದ ವಿಗತಾನಂದನೂ ೫೦

ಮದಸೊಕ್ಕಿದಾನೆಗಳ ಕುಂಭಸ್ಥಳಂಗಳಂ
ಒದೆದು ಘರ್ಜಿಸಿ ಸುಂಡಿಲಂ ಹಿಡಿವ ವೀರರುಂ
ಟಢಟಿನಿಂ ಘೂರ್ಮಿಸುವ ಸಿಂಹಂಗಳಂ ಸಾರ್ದು ಮುಂಗಾಲ್ಗಳಂ ತುಡುಕುತಾ
ಅದಿರದವನಿಯೊಳಪ್ಪಳಿಸಿ ಬೊಬ್ಬಿಱಿವ ಭಟರು
ಹೆದಱಿ ಸತಿಯುಗ್ಗ್ರಯುಂಡಿಸಿಕೊಂಡು ಪಲ್ಗಿರಿದು
ಪದಕೆಱಗಿ ಬೇಡಿಕೊಂಬರು ಕಣಾ ಕೇಳಂತು ನಡುಗಿದಂ ಕಾಳಮೇಘಂ ೫೧

ಮಿಗೆ ಶಬರನೋರ್ವನನ್ಯಾಂಗನೆಯು ರಮಿಸಿ ಮೈ
ಯುಗುರ್ಗಲೆಗಳಂಗದೊಳಗಿರಲು ನಿಜ ಸತಿ ಮುಳಿದು
ಬಗೆಯುದಱಿಯುಟ್ಟುವಳೊಯಿದ ಮರಸೆ ಯುಕ್ತಿಯೇನೆಂದೊಂದು ಹೆಬ್ಬುಲಿಯುನೂ
ತಗುಳಿ ಪಿಡಿದೌಂಕಿ ಕಂಕುಳೊಳಿರಿಕಿಕೊಂಡು ವನಿ
ತೆಗೆ ಪುಲಿಯ ನಖಹತಿಯೆನಿಪ್ಪಂತು ಗೆಯ್ವನೆನೆ
ಜಗದೊಳಾ ವ್ಯಾಘ್ರಕಗ್ಗಳ ವೀರರಬಲೆಯುರಿಗಳ್ಕಿ ಕಾಲ್ಗೆಱಗುವರಲ್ತೆ ೫೨

ಈ ತೆಱದೊಳಾ ಕಾಳಮೇಘನುಂ ಬಾಗಲಾ
ಪ್ರೀತಿಯಂಗನೆಯೊಡನುಣಲ್ಬಾರದಿರೆ ನಡುಗಿ
ಭೀತಿಯಿಂದುಂಡು ಮೆಲ್ಲನೆ ನುಡಿದನತಿದೈನ್ಯವಚನ ಮೃದುಮಧುರದಿಂದಾ
ತಾ ತಳ್ತು ಮಾಡಿದಪರಾಧವಾವುದು ಸರೋ
ಜಾತಕ್ಷಿ ನಿನ್ನ ಕೃಪೆಯಂ ಪಡೆವೆನುಸುರೆನ
ಲ್ಕಾ ತರುಣಿ ನುಡಿದಳಾ ಪುರುಷಂಗೆ ನಯನರುಚಿಗೆದಱಲು ಬೆಡಂಗಿನಿಂದಾ ೫೩

ಎಲೆ ಮನೋಹರ ಕೇಳು ಪೇಳುವೊಡೆ ಮತ್ತೊಂದು
ಕೆಲಸವಲ್ಲಾಗ ಪಿಡಿದೆನ್ನ ವಶಕಿತ್ತ ಸ
ಲ್ಲಲಿತದೇಹದ ಮನುಜನೆನ್ನವೊಡವುಟ್ಟಿದವನು ತಂಗೆ ತಂಗಿ ನಾನೂ
ಕೊಲಲೊಲ್ಲದುಳಿಪಿದಂ ಮನ್ನಿಸೆನ್ನಯ ಮಾತ
ತಲೆಗಾಯಬೇಕವನನೆಂದು ಸತಿ ನುಡಿಯೆ ಹೋ
ಬಲುಗಾರ್ಯರ್ಮವೆಂದಿರ್ದನೇಗಲೆನ್ನೆರ್ದೆ ತಣ್ಣಗಾಯ್ತೆಂದು ತಡಹಿಕೊಂಡಂ ೫೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಟ್ಟಿಗೆಯೆ ನೀಂ ಕೇಳ್ದಿಯಾದೊಡೆನ್ನಯ ತಲೆಯ
ಕುಟ್ಟಿಯಾದಡೆ ಕೊಡುವೆನಿಂತಿದೇನರಿದವನ
ಬಿಟ್ಟನೀಗಳೆ ಕಳುಪಲಾಗಿ ಘೋರಾರಣ್ಯವಾ ಕ್ರೂರ ಮೃಗಗಳುಂಟೂ
ನಟ್ಟಿರುಳು ಪೋಗಲೀಸವು ತಿಂಬವೀತನಂ
ನೆಟ್ಟನಾರೈದುಕೊಂಡಿರ್ದಿರುಳ ಕಳಿದಿನಂ
ಹುಟ್ಟಿದಾಗಳೆ ಕಳುಹಿಕೊಡುವೆನೆಂದಾ ಕಾಳಮೇಘನಾಡಿದನಬಲೆಗೇ ೫೫

ಅದನೊಡಂಬಟ್ಟಳಂಗನೆ ದಂಪತಿಗಳೆಮ್ಮ
ಸದನದೊಳಗನ್ನಪಾನವಕೊಂಬನಲ್ಲಿವಂ
ಸದುಹೃದಯನುಪವಾಸವಿರಲುಚಿತವಲ್ಲೆಂದು ಯೋಚಿಸುತ ಮನೆಯೊಳಿರ್ದಾ
ಬಿದಿರಕ್ಕಿಸೊಲ್ಲಗೆಯ ಕೊಡಲಾ ಮಹೀಶನ
ಭ್ಯುದಯದಿಂ ವೇಣುಪರ್ಣದೊಳು ಪಾಕವನು ಮಾಡಿ
ಡಿದೊಡ್ಡೈದು ತುತ್ತಾದುದದನೀಶಗಿತ್ತು ಭೋಗಿಸಿದಂ ವಿಧಾನದಿಂದಾ ೫೬

ಇಲ್ಲಿರ್ದೊಡೀತಂಗೆ ಮೃಗಬಾಧೆಯಹವೆಂದು
ನಲ್ಲನುಂ ನಲ್ಲಳುಂ ಕೂಡಿಯುದ್ದಿಯದೊಂದು
ಕಲ್ಲನೇಱಿಸಿ ತಕ್ಕ ಶಯ್ಯುಮಂ ಕೊಟ್ಟು ಪವಡಿಪುದೆಂದು ಸಂತಯಿಸುತಾ
ಬಿಲ್ಲ ಪಿಡಿದಿರ್ವರುಂ ಕಾಯ್ದುಕೊಂಡೆಯಿದೆ ಮೃಗ
ವೆಲ್ಲಿ ಬರಲಱಿಯುಟ್ಟುತಿರೆ ಬೆಳಗನೆಯ ಜಾವ
ದಲ್ಲಿಯಾ ಶಬರ ಶಬರಿಯರು ಮಱಿದೊರಗಿದರು ನೃಪನಲ್ಲಿ ನಿದ್ರೆಗೆಯ್ದಂ ೫೭

ಪಟ್ಟಿರ್ದ ಕಾಲದೊಳಗೊಂದು ಹೆಬ್ಬುಲಿಯೆದೆಯ
ಮೆಟ್ಟಿ ಬೇಡನ ಕೊರಲ ಕಚ್ಚಿ ರಕ್ತವ ಕುಡಿದು
ನೆಟ್ಟನೆಯ್ದಿತು ಶಬರಿ ಎಚ್ಚತ್ತು ರಣಮಯದೊಳಳಿದ ಪುರುಷನ ಕಾಣುತಾ
ಕೆಟ್ಟೆ ಹೋ ಎಂದೊರಲುತಿರಲೆದ್ದು ಭೂಭುಜಂ
ನಿಟ್ಟಿಸುತ್ತಕಟ ಶಿವ ಶಿವ ಎಂದು ಮಱುಗಿ ಕಂ
ಗೆಟ್ಟು ನೋಡುತ್ತಿನಂ ಮೂಡೆ ಮುಂದಿರ್ದ ಬೇಡತಿಯೊಡನೆ ನೃಪನೆಂದನೂ ೫೮

ತಂಗಿ ಕೇಳೆನ್ನ ಹರಣವ ಕಾಯ್ದ ನಿನ್ನ ಪುರು
ಷಂಗಿಂತುಟಾದುದು ಶಿವಾಧೀನವಾನೀ ಜ
ನಂಗಳೊಳಗೊಬ್ಬ ಸಾಮಾನ್ಯನಲ್ಲೊಂದು ಸಾವಿರ ಯೋಜನದ ರಾಜ್ಯವಾ
ಪಿಂಗದಾಳುವ ನೃಪಂ ನಿನಗಣ್ಣನಾನಾಗಿ
ಯಂ ಗನೆಯರೆಲ್ಲರಂ ನಿನ್ನ ವಶವಂ ಮಾಡಿ
ಮಾಂಗಲ್ಯದಿಂ ಪೊರೆವೆನೆನ್ನ ಪಟ್ಟಣಕ್ಕೆ ಬಾಯೆಂದನಾ ಭೂಪಾಲನೂ ೫೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿ ಬೇಡಿತಿ ನುಡಿದಳಗ್ರಜಾ ಸುಗುಣೆ ಭೂ
ವಲ್ಲಭಾ ಕೇಳೈಯ್ಯ ತೇರು ಪರಿಕಿಸೆ ಗಾಲಿ
ಯಿಲ್ಲದೊಡೆ ಪರಿವುದೇ ತಂತಿಯಿಲ್ಲದೆ ವೀಣೆ ನುಡಿವುದೇ ನಿಜ ಪುರುಷನೂ
ಇಲ್ಲದಂಗನೆ ಎಸೆವಳೇ ಬೇಡ ನಾಂ ತನುವ
ನೊಲ್ಲೆನೆಂದಾಣ್ಮನೊಳು ಸಹಗಮನವಮಂ ಮಾಡೆ
ಮೆಲ್ಲನಾ ತಾಣದಿಂ ಪೊಱಮಟ್ಟು ಕಾಂತಾರಮಂ ಕಳೆದು ಬಂದನರಸಂ ೬೦

ಬರುತ ಬರುತೆಡವಟ್ಟೆಯಲ್ಲಿ ಭೂಪಂಗೆ ನಾ
ಲ್ಕೆರಡು ಮಾಸಂಗಳಾಗಲು ಮೇಲೆ ರೋಹಿತಾ
ಪುರವ ಪೊಕ್ಕಗಲಾ ಭದ್ರಾಶ್ವನೃಪನ ಕಂಡಾ ಸತ್ಯನಿಧಿ ಎನಿಪ್ಪಾ
ಧರಣಿಪಂ ಸಂನ್ಯಾಸಿ ವೇಷದಿಂದಾತಂಗೆ
ಪರಸಿ ಮಂತ್ರಾಕ್ಷತೆಯನೀಯ್ಯೆ ಕಂಡೆಲ್ಲಿಂದ
ಬರವು ನಿಮಗೇಂ ಕಾರಣಂ ನಾವು ಮಾಳ್ಪುದೇನೆಂದನಾ ಭೂಪಾಲನೂ ೬೧

ಆ ನುಡಿಯು ಕೇಳಿ ಸಂನ್ಯಾಸವೇಷಂದಳೆದ
ಭೂನಾಥನಿಂತೆಂದನೆಲೆ ಭೂಪ ಕೇಳ್ನಿನ್ನ
ನೇನವಸ್ತುವ ಬೇಡಿ ಬಂದವರ ನಾವಲ್ಲವಯ್ಯ ಪಟ್ಟದಾ
ಮಾನಿನಿ ಪತಿವ್ರತಾನಿಧಿ ಗರ್ಭವಾಗಿರ್ಪ
ಳಾ ನಾರಿ ಗಂಡು ಮಗನಂ ಪಡೆವಳುದಿಸಿದಾ
ಸ್ಥಾನದೊಳಗಾ ವೇಳೆ ಯೆನಗೆ ತೋಱಾ ಶಿಶುವ ನಿದು ನಾನು ಬೇಳ್ಪುದೆಂದಾ ೬೨

ಎಂದ ಮಾತಂ ಕೇಳುತಿದು ಚೋದ್ಯಮದ್ರಾಜ
ಮಂದಿರದ ಕಾರ್ಯಮಂ ಪೇಳುತಿರ್ದಪನಿವಂ
ಮುಂದಕ್ಕೆ ಪುಟ್ಟೂದು ಗಂಡುಮಗುವೆಂದುಸುರುತಿಪ್ಪನೀ ಸದ್ಬ್ರಾಹ್ಮಣಂ
ಸಂದೇಹವಿಲ್ಲ ಕಾರಣಿಕನೆಂದರಸ ನಾ
ನಂದದಿಂಗ್ರಾಸ ವಾಸಂಗಳಂ ಕಲ್ಪಿಸು
ತ್ತಂದಯಾನಿಧಿಯ ನಾರಯಿಕೆಯುಂ ಮಾಡಿಕೊಂಡಿರ್ದನಾ ಪುರದಾಣ್ಮನೂ ೬೩

ಮತ್ತೆ ನಾಲ್ಕೆರಡು ತಿಂಗಳ ಮೇಲೆಯಾ ನೃಪಕು
ಲೋತ್ತಮನ ಪಟ್ಟದಂಗನೆಗೆಯಾ ಗರ್ಭ ಬಲಿ
ವುತ್ತ ನವಮಾಸ ಪೂರ್ಣತೆಯಾಗಿ ಸುಮುಹೂರ್ತದೊಳ್ ಕುಮಾರಕನುದಯಿಸೇ
ಚಿತ್ತ ಸಂತೋಷದಿಂ ಸಂನ್ಯಾಸಿವೇಷಮಂ
ಪೊತ್ತಾತನಂ ಕರೆದುಕೊಂಡು ಪುರದರಸನಾ
ಹೆತ್ತ ಸತಿಯಿಹ ಸೂತಿಕಾಲಯಕ್ಕಾಗಿ ನಡೆತರುತಿರ್ದನರ್ತಿಯಿಂದಾ ೬೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಸರೀರ್ವರು ಬರಲು ಸೂತಿಕಾಗೃಹದಲ್ಲಿ
ತೆರೆಯನಿಟ್ಟರು ವನಿತೆಯರು ಬಳಿಕ್ಕದಟಿ ಹ
ತ್ತಿರೆ ಗದ್ದುಗೆಯ ನಿಕ್ಕಲಲ್ಲಿ ಮಂಡಿಸಿದರುಭಯಾವನೀಶ್ವರರಲ್ಲಿಗೇ
ಇರದಾಂತ ಹೊನ್ನಹರಿವಾಣಸಹಿತಂ ತಂದು
ವರ ಸುತನನವರ ಮುಂದಿರಿಸೆ ಹೊಕ್ಕುಳ ಬಳ್ಳಿ
ವೆರಸಿ ಮುಸುಕಿದ ಮಾಸು ಸಹಿತಿರ್ದುದಾ ಶಿಶು ಬಳಿಕ್ಕಲೇ ವಣ್ಣಿಸುವೆನೂ ೬೫

ಆ ನರೇಶನ ಪುತ್ರನಪ್ಪ ಶಿಶು ಮುಸುಕಿರ್ದ
ನೂನವಾದಾ ಮಾಸನೆರಡು ಕೈಯ್ಯಿಂ ನೂಂಕಿ
ತಾನೆದ್ದು ಹರಿಯಾಣದೊಳು ಕುಳಿತು ಕಣ್ದೆಱೆದು ನುಡಿಯಿತ್ತು ನಸುನಗುತ್ತಾ
ಏನ್ಯೆಯ್ಯ ಸತ್ಯನಿಧಿಭೂಮೀಶ್ವರಾ ಕೂರ್ತು
ನೀನಿಲ್ಲಿಗೆಯಿತಂದೆಯ್ಯೆ ಪುರೋಹಿತನಣುಗಿ
ಯೇ ನಿನ್ನ ನನ್ನ ಬಳಿಗನ್ನದಾನದ ಫಲವನೆಱಿಯಲೆಂದಟ್ಟಿದವಳೂ ೬೬

ಅನ್ನದಾನದ ಫಲವ ಕಂಡೆಯಾ ಮರಳಿ ಪೋ
ಗಿನ್ನು ನೀನೆನಲಾಗಿಯಾಗ ಹುಟ್ಟಿದ ಸುತಂ
ಪನ್ನತಿಕೆಯಿಂದೆದ್ದು ನುಡಿದುದಂ ಕಂಡೆನಾ ದಾನಫಲಮಂ ಕಾಣೆನೂ
ನಿನ್ನ ಮುಖದಿಂದಱಿವೆ ತಿಳಿಯ ಪೇಳೆನಲಾಗಿ
ಉನ್ನತಾಶ್ಚರಿಯವೆನೆ ನುಡಿದನಾ ಬಾಲಕಂ
ತನ್ನ ಪಿತನಂ ತೋಱಿ ಸಂನ್ಯಾಸವೇಷದ ನೃಪಾಲನೊಡನಿಂತೆಂದನೂ ೬೭

ಕೇಳೆನ್ನ ತಂದೆಯೀತಂ ಪಿರಿಯ ಪೊಪಿಂದ
ಲಾಳುವ ಧರಾವಳಯವಧಿಕ ಸಂಪತ್ತೆನಿಸು
ವೇಳುನೂರ್ಗಾವುದಂ ನಾನೆ ಹಿರಿಯಣುಗನೀ ಪಟ್ಟಣಕೆ ಕರ್ತುವಾಗೀ
ಬಾಳಲೆಂದುದಿಸಿದೆನ್ನಯ ಪೂರ್ವವೆಂತೆಂದೊ
ಡಾಳೋಚನೆಯದೇಕೆ ನೀಂ ಬಪ್ಪ ದಾರಿಯೊಳು
ಪೇಳಲರಿದೆನಿಪರಣ್ಯದಲಿ ನಿನಗಾದ ಬಾಧೆಯ ಬಲ್ಲೆಯಾ ಎಂದನೂ ೬೮

ಕಾಕಬೇಡಂ ನಿನ್ನ ಪಿಡಿದು ತಿಂದಪನೆಂದೊ
ಡಾ ಕಾಂತೆ ಬಿಡಿಸಿ ರಾತ್ರಿಯೊಳಿರಿಸಿಕೊಂಡಿರು
ತ್ತಾ ಕಾಲದೊಳಗೆ ಬಿದಿರಕ್ಕಿಸೊಲ್ಲಗೆಯ ನಿನಗೀಯ್ಯಲಟ್ಟುಂಡೆಯುಲ್ಲಾ
ಭೀಕರದ ಹುಲಿಯುವನ ಮುಱಿದ್ದಂ ಬಲ್ಲೆಯಾ
ಭೂಕಾಂತ ಕೇಳವನ ಪಾಪಕ್ಕೆ ಗತಿ ಇಲ್ಲ
ದಾ ಕಾಳವೇಷನೇ ನಾನಾಗಿ ಹುಟ್ಟಿ ಸಿರಿಯಂ ಭೋಗಿಸುವೆನೆಂದನೂ ೬೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿನಗೆ ಸೊಲ್ಲಗೆಯಕ್ಕಿಯನ್ನವಿಕ್ಕಿದ ಕಥದೊ
ಳೆನಿತು ಪಾಪಂಗಳಂ ಹಿಂದೆಯಾಂ ಮಾಡಿದೇಂ
ಅನಿತು ದೋಷಂಗಳೆಲ್ಲ ಕೆಟ್ಟು ಪಟ್ಟದರಸನಾದೆನ್ನೆ ಭೂಪಾಲಕಾ
ವನಿತೆಯೆನ್ನೊಳ್ನುಡಿದಳದ ಬಲ್ಲೆಯಾ ತವಾಂ
ಗನೆಯೆ ಬಸುಱಿೊಳಗಾಕೆ ಪುಟ್ಟಿಸುತೆಯಾಗಿ ಬಳಿ
ಕೆನಗೆ ವಲ್ಲಭೆಯಪ್ಪಳೆಂದಬಳಿಕನ್ನದಾನದ ಫಲಂ ಮಿಗಿಲಱಿದೆಯಾ ೭೦

ತುರಗಶತ ಗೋಸಹಸ್ರಂ ಭೂರಿದಾನವಾ
ವರ ಕನಕ ರಜತಪಾತ್ರಪ್ರದಂ ಬಳಿಕ ಸಾ
ಗರದವಧಿ ಭೂದಾನವಂತುಭಯಕುಲಶುದ್ಧವಪ್ಪ ಕನ್ಯಾಕೋಟಿಯಾ
ಪರಿಣಯುವ ಮಾಡಿದಾ ಫಲವನ್ನದಾನಕ್ಕೆ
ಸರಿಯಲ್ಲ ಸರಿಯಲ್ಲವೆಂದು ವೃತ್ತವನೋದಿ
ಹರಿಯಾಣದೊಳು ಮುನ್ನಿನಂತೆ ಬಿದ್ದಳುತಿರ್ದುದಾ ಶಿಶು ಮಹಾಶ್ಚರಿಯದಿಂ೭೧

||ಸಾಕ್ಷಿ|| ಕರಿತುರಗಸಹಸ್ರಂ ಗೋಕುಲಂ ಭೂರಿದಾನಂ
ಕನಕರಚಿತಪಾತ್ರಂ ಮೇದಿನೀಸಾಗರಾಂತಂ ೧೩

ಉಭಯಕುಲವಿಶುದ್ಧಂ ಕೋಟಿಕನ್ಯಾಪ್ರದಾನಂ
ನಹಿ ನಹಿ ಸಮದಾನಂ ಅನ್ನದಾನಂ ಪ್ರಧಾನಂ ೧೪

ಅದ ಕೇಳಿಯಂತಾಗ ಭದ್ರಾಶ್ವಭೂಪನಾ
ಹೃದಯದೊಳು ಸಂತೋಷಿಸುತ್ತಲಚ್ಚರಿವಟ್ಟು
ಸದಮಲನೆ ಸತ್ಯನಿಧಿ ಭೂಪನೇ ನಿನಗಾವು ಭೃತ್ಯರಾಗಿರುತಿರ್ಪೆವೂ
ಚದುರ ನಿನ್ನಯ ಪೆಸರ ಮಱಸಿ ಸಂನ್ಯಾಸವೇ
ಕ್ಷದೊಳಿಪ್ಪರೇ ಎನುತ್ತೆದ್ದು ಸಾಷ್ಟಾಂಗದಿಂ
ಪದ ಕೆಱಗಿ ನಮಿಸಿ ಕೀರ್ತಿಸುತಿರ್ದರಖಿಳರೀಕ್ಷಿಸುತ ವಿಸ್ಮಯವಾದರೂ ೭೨

ಅರಸನಂ ಸತ್ಕರಿಸಿಕೊಂಡಿರ್ದು ರೋಹಿತಾ
ಪುರದ ನೃಪನಖಿಳ ವೈಭವದಿಂ ಸುಖಾಸನಾ
ದ್ಯುರುಭೋಗ ಸಹಿತಲೋಲೈಸಿ ಬಂದವನ ಪಟ್ಟಣದೊಳಿರಿಸುತ ತಿರುಗಿದಂ
ಮರಳಿಯಾ ಶಬರಿ ಧರ್ಮಿಷ್ಠಭೂಮೀಶ್ವರನ
ವರ ಸತಿಯ ಗರ್ಭದೊಳು ಪುಟ್ಟಿಯಾ ಕಾರಣಿಕ
ತರುಣಂಗೆ ಮದುವೆಯಾಗುತ್ತಸುಖಮಿರ್ದರೆಂಬುದು ಪೂರ್ವಪುಣ್ಯಕಥನಾ ೭೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಶಾಂಡಿಲ್ಯಮುನಿ ಧರ್ಮಿಷ್ಠಗೌತಮನ
ಮಂದಿರದೊಳಿರ್ದ ವಿಪ್ರತತಿಗೊರೆದು ಕೇಳ್ದಿರೇ
ಎಂದು ಸೊಲ್ಲಗೆಯುಕ್ಕಿಯುನ್ನದಾನದ ಪಲದಿನರಸನಾದಂ ಬೇಡನೂ
ಹೆಂದದ ಮಹಾಕ್ಷಾಮದೊಳಗೆಮ್ಮುಮಂ ಸಲಹಿ
ಮುಂದಿಟ್ಟುಕೊಂಡಿರ್ದ ಗೌತಮಗೆ ಸರಿಯಾರ
ವಂ ದಯಾನಿಧಿಯಾತ ಕಳಿಪಿದಡೆ ಪೋಪವಲ್ಲದೊಡೆ ಬೇಡೆಂದನಾರ್ಯ್ಯಂ ೬೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಙ್ಘ್ರಿಪಂಕಜಭೃಂಗ ಮಲ್ಲಣಾರ್ಯ್ಯಂ
ಶೀಲ ಷಟ್ಸ್ಥಲಿಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೬೫

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಥೆಯ ಶಾಂಡಿಲ್ಯನೊರೆದೆಡೆಗೆ ಮೂಱುಕಾಂಡದಮೇಲೆ
ಸಂಧಿಯೊಂದು ೬೬

ಅಂತು ಸಂಧಿ ೧ ಕ್ಕಂ, ಪದನು ೬೬ ಕ್ಕಂ ಗ್ರಂಥ ೧೪ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೮

ಗೌತಮ ಋಷಿಯಿಂ ವಿಪ್ರರು ಶಾಪವಂ ಪಡೆದ ಕಥೆ

ನಿಷ್ಕಾರಣದ ವಧೆಯು ಹೊರಿಸಿ ಪಾರ್ವರು ಶುಭಮ
ನಸ್ಕಗೌತಮನೀಯ್ಯೆ ಶಾಪಮುಂ ತಚ್ಛಕ್ತಿ
ದುಷ್ಕರವುನಱಿದು ಶಿವನಾಜ್ಞೆಯಿಂದವರ್ಗೆ ದುರ್ಬೋಧಿಸಲು ಹರಿ
ಹೊರಟನೂ

ಕರದ ಬೆರಲಿಂ ಗಂಗೆಯುಂ ಜಕ್ಕುಲಿಸಲಾಸ್ಯ
ಸರಸಿಜದ ರೇಣುಗವಿದೆಂ ನಗೆಯ ತಂಬುಲಂ
ಸುರಿದುದೆನ್ನಯ ಮೇಲೆ ಧೂರ್ತಯೆನೆ ಸಿದ್ಧನಾಂ ಫಣಿಯೊಲೆಯ ಕಿಚ್ಚಿನಲ್ಲೀ
ಉರುಜಟಾಭಾಂಡಸ್ಥಚಂದ್ರರಸದಿಂದಟ್ಟ
ನಿರುತ ಸೋಮಾನಲದ ಸಿಂಧೂರವೆಂದಾಡಿ
ಗಿರಿಜೆಯೊಳು ನಿನ್ನ ತಪ್ಪಂ ಕಳೆದುಕೊಂಡು ಬಿನದಿಪ ಶಾಂತಮಲ್ಲೇಶ ಶರಣೂ ೧

ಈ ಧರೆಯೊಳೆಯ್ದು ರಿಪುನಿಕರಶಾಪಾದಪಿ ಶ
ರಾದಪಿ ನಿವಾರಣನೆ ಶಿಷ್ಯಹೃತ್ಕಮಲ ಮಂ
ವಾದಿಜನರಿಂ ರೇಣುಕೊರಗಿಸದೆಯುದಱ ಪರಿಮಳವನೀಂಟುತ್ತ ಬಳಿಕಾ
ಭೇದಿಸುವ ಚಿನ್ಮಧ್ರುವ್ರತರೂಪ ವಿಮಲಪ್ರ
ಮೋದ ಮೇಲಣ ಗವಿಯ ಶಾಂತನಂಜೇಶ್ವರಾ
ಹ್ಲಾದಮಯ ಗುರುವೆ ದೋಷಾದ್ರಿದಳನಸ್ವರುವೆ ಜಯ ಶರಣ ಕಲ್ಪತರುವೇ ೨

ಈ ಕಥೆಯೊಳನ್ನದಾನದ ಫಲವ ಕೇಳಿದರ
ನೇಕ ವಿಪ್ರರು ಬಳಿಕ್ಕಂ ಭ್ರಷ್ಟರಾಗುತ್ತ
ಏಕಾಲಮಿಪ್ಪಲ್ಲಿ ಗೌತಮನ ಬಾಳುವೆಯ ಬಂಟರೇನಾವು ಪೋಗಾ
ಬೇಕೆಂದೊಡಾತ ಸತ್ಕಾರದಿಂ ತಡೆದಪಂ
ಆಕೆವಾಳಂ ಗೌತಮನ ಮೇಲೆ ಗೋವಧೆಯ
ಹಾಕಿ ಪಾತಕವೆಂದು ಹೊಱಗಿಕ್ಕಿಕೊಂಡು ಹೋಪುದೆ ಮತಂ ನಮಗೆಂದರೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೇಳೆಯಲ್ಲಿ ಕೃತಕದ ಪಶುವ ನೊಡರಿಚುವೊ
ಡಾವ ಕಾರಣವೆಂದು ಪಾರ್ವರೇಕಾಂತವಹ
ಠಾವಿನೊಳು ಯಜ್ಞಮಂ ಬೇಳಿ ಭಜಿಸಿದರಗ್ನಿ ಪುರುಷನಂ ಭಕ್ತಿಯಿಂದಾ
ಆ ವಹ್ನಿ ಬಂದು ನಿಮ್ಮಿಷ್ಟವೇನೆಂದೊಡಂ
ತಾವೊಂದ ನಿರ್ಮಿಸಿಕೊಡುತ್ತದೇ ಹೊಲದಲ್ಲಿ
ಸಾವಂತೆ ಮಾಡಿ ಗೌತಮನ ಮೇಲಾ ವಧೆಯ ಹಾಯ್ಕಬೇಕೆಮ್ಮಿಷ್ಟವೂ ೪

ಎನಲಗ್ನಿ ನುಡಿದನಾ ನಿಷ್ಕಪಟಿ ಗೌತಮಗೆ
ಮುನಿದ ನಾನಲ್ಲ ನಿಮಗೊಲಿದ ಕಾರಣದಿಂದ
ವನಿಮಿತ್ತ ಒಂದು ತೃಣಪಶುವನೊಡರಿಚಲದಱ ದೇಹದೊಳು ಜೀವರೂಪಿಂ
ದಿನಿತು ಹೊತ್ತಿರ್ದವಂ ಮುಟ್ಟೆ ಬೀಳೆಂದು ಬೀ
ಳ್ವೆನು ಕಣಾ ನಾನ ಮಾಡಿದವನಲ್ಲಿವಾ ಕರ್ಮ
ದನಿತು ನಿಮ್ಮದು ಮುನಿಗಳಿರ ಎಂದು ನುಡಿದು ಬಯಲಾದನಂತಾ ಕೃಶಾನೂ ೫

ಆ ವೇಳೆಯಲ್ಲಿ ಕೃತಕದ ಪಶುವನಾ ಭೂಮಿ
ದೇವರೆಲ್ಲರು ಕೂಡಿ ರಚಿಸಿಯಾತನ ಪೊಲದ
ಠಾವಿನೊಳಗಿರಿಸಿದರು ಕೃಶವಾಗಿ ಬೆನ್ನಸ್ಥಿ ಹೊರಟು ತೊವಲೆಲ್ಲ ಸುಗಿದೂ
ಜೀವ ದಡದಡಿಸುತ್ತ ನಾಣ್ಗದೆ ಗೌತಮನ
ಗೋವೆಂಬರಂತೆ ಪೊಲದೊಳಗೆರಡು ಕಾಲು ಹೊಱ
ಗಾವಿನಂಘ್ರಿಗಳೆರಡಿರಲ್ಕಕ್ಷಪಾದನೆಯ್ತುರುತ ಕಂಡುರೆ ಮುಱುಗಿದಂ ೬

ಕಾಳು ಬುದ್ಧಿಗಳು ರಚಿಸಿದ ಬಗೆಯುನಲ್ಲಿ ಕರು
ಣಾಳು ಗೌತಮುನಱಿಯದೊಂದು ದರ್ಭೆಯ ಹುಲ್ಲ
ಸೀಳಿ ಹದಿನಾಱುಭಾಗೆಯೊಳೊಂದು ಹಿಡಿದು ಬಱದೊಳು ನವೆದ ಪಶು
ಹೊಲದೊಳೂ
ಏಳಿಗೆಯೊಳೆಯ್ದೆ ಮೇಯಲಿ ಎಂದು ಮುಟ್ಟಲದು
ಬೇಳಿಟ್ಟು ಬಿದ್ದು ಮಡಿದುದು ಶಿವಶಿವಾ ಎಂದು
ಭಾಳಲೋಚನನಣುಗನಲ್ಲಿ ಚಿಂತಿಸುತಿಪ್ಪ ಕಾಲದೊಳಗೇಂ ವಂಶಪೇಂ ೭

ಗೌತಮುಂ ಬಡಪಶುವ ಕೊಂದನೀ ಗೋವಧೆಯ
ಪಾತಕನ ಮನೆಯೊಳನ್ನವನುಣ್ಣ ಬಾರದೆಮು
ಗೇತೆಱದೊಳೆಂದು ಹೋಽಡಲು ಪಾರ್ವರೆಲ್ಲರಾ ತಮ್ಮ ತಮ್ಮಾಶ್ರಯಕ್ಕೆ
ಪ್ರೀತಿಯಿಂದಾ ಕಾಲದಲ್ಲಿ ನಡುಗುತ್ತನ್ನ
ದಾತನುತ್ತಮ ನಕ್ಷಪಾದನಾ ಬ್ರಾಹ್ಮಣ
ವ್ರಾತಕ್ಕೆ ಬಂದಡ್ಡಲಾಗಿ ವಂದಿಸುತ ಕೈಮುಗಿದು ಬಿನ್ನವಿಸುತಿರ್ದಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಪರಮ ಸದ್ಬ್ರಾಹ್ಮಣರ್ಕಳೆಲ್ಲಂ ಕೇಳಿ
ಯಾ ಪಶುವ ಹೊರಡಿಸಲ್ಕೆಂದಾನು ಬಂದುದಿ
ಲ್ಲಿ ಪರಿಯೊಳಂ ಮೇಯಲೆಂದು ಮುಟ್ಟಲ್ಕೆ ಬಿದ್ದಳಿದುದದು ತಿಳಿಯಲೆನ್ನಾ
ಪಾಪವ್ಯೈಸಲೆ ಬಂದುದೆನಗೆ ಗೋವಧೆಯಾ ವಿ
ಶಾಪವೇನಾ ದೋಷವೆಂತಳಿವುದೆನುತ ಸ
ಲ್ಲಾಪದಿಂ ಬಿನ್ನವಿಸುತಿಪ್ಪ ಗೌತಮನ ಕೂಡೆಂದರಂತಾ ಪಾರ್ವರೂ ೯

ಬಡಪರಿಯೊಳಾ ಪಾಪವಳಿಯದೈ ಶಂಕರನ
ಜಡೆಯ ಮೇಲಣ ಗಂಗೆಯಂ ತಂದು ನೀ ಕೊಲ
ಲ್ಮಡಿದ ಗೋವಿನ ಮೇಲೆ ಪಸರಿಸುತ್ತದಱ ಹರಣಂ ಬಡೆದ ಕಾಲದಲ್ಲೀ
ಬಿಡಲಿ ನಿನ್ನಯ ಗೋವಧಾದೋಷವೆನುತಲವ
ಗಡದಾ ಪ್ರತೀಕಾರವಂ ಪೇಳಿ ಹಾರುವರು
ನಡೆದರು ನಿಜಾಶ್ರಯಕ್ಕಿತ್ತ ಗೌತಮನುಗ್ರತಪಕೆ ಸನ್ನದ್ಧನಾದಂ ೧೦

ವಧ್ಯಗೋವಿನ ಹರಣವಂ ಪಡೆಯೆ ಗಿರಿಗಳೊಳ
ಗಧ್ಯಕ್ಷದಾ ತ್ರಿಯಂಬಕ ಪರ್ವತಾಗ್ರದೊಳು
ಬೋಧ್ಯನಾ ಸೂಜಿಗಳ ನಟ್ಟಗ್ರದಂಗುಷ್ಠವೂರಿಯಾ ಪಂಚಾಗ್ನಿಯಾ
ಮಧ್ಯದೊಳು ಮಾಳ್ಪ ತಪಕುಜ್ಜುಗಿಸುತಿರೆ ಕರುಣ
ನಿಧ್ಯಮಲ ಶಂಕರಂ ರೂಪುದೋಱುತ್ತ ನಿ
ರ್ಬಾಧ್ಯ ಕೇಳೈಯ್ಯ ಗೌತಮನೆ ನಿನ್ನಿಷ್ಟಾರ್ಥಸಿದ್ಧಿಯೇನೀವೆನೆಂದಂ ೧೧

ನಿಧನರಹಿತನೆ ಕೇಳ್ವೊಡೆನ್ನಾಶ್ರಯದೊಳಿದ್ದು
ಬುಧರೊಡರ್ಚಿದ ಕಾರಣದೊಳಾದುದಯ್ಯ ಗೋ
ವಧೆಯುದಂ ಕಳೆಯುವೇಳ್ಕೆಂದು ಸಾಷ್ಟಾಂಗದಿಂ ನಮಿಸಿ ಕೈಮುಗಿದು ಕರುಣಾ
ನಿಧಿಯೆ ನಿನ್ನಯ ಜಟಾಮಕುಟದೊಳಗಣ ಗಂಗೆ
ಯಧಿಕ ಪಾವನಿಮಾನೆಯುಂ ಕರುಣಿಸೆಂದೊಡಾ
ಸುಧೆಯ ಪಳಿವಮಲ ವಾಕ್ಯದಿ ನುಡಿದನಾ ಮಹಾದೇವನಾನತರ ಜೀವಾ ೧೨

ಗೌತಮಾ ನಿನಗೆ ಕೊಟ್ಟೆವು ಕಣಾ ಕೇಳ್ನಿನ್ನ
ಮಾತೆಯೆನಿಸುವ ಗಂಗೆಯಂ ಕೊಂಡು ಪೋಪುದೆನೆ
ಭೂತೇಶನಡಿಗಳ್ಗೆ ಮರಳಿ ಬಿನ್ನವಿಸಿದಂ ನಿಷ್ಠನೆನಿಪಕ್ಷಪಾದಂ
ಭೂತಳದೊಳಾ ಗೋವಧಾದೋಷಿಗಳ್ಗೆಯಾ
ಪಾತಕಂ ನಾನಾ ಪ್ರಕಾರದಿಂ ಬಿಡದೆ ಯೀ
ಪ್ರೇತಪತಿಯಾಜ್ಞೆಯಿಂ ನರಕದಿಂ ಬೇವುತಿಪ್ಪರು ಮಹಾಪ್ರಳಯುತನಕಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತಪ್ಪ ಗೋವಧಾದ್ಯಖಿಲ ದೋಷಿಗಳವರ
ಸಂತತಿಗಳಿಪ್ಪತ್ತವೊಂದು ತಲೆಯೊಳಗೋರ್ವ
ನಾಂ ತಂದ ಗಂಗೆಯ ಜಲಸ್ಪರ್ಶನಂ ಮಾಡಲಾಗಿ ಪಿತೃತತಿದೋಷದಾ
ಪಂಕ್ತಿಗಳು ಹರಿದು ಮೋಕ್ಷವನೆಯ್ದುಲವರೆಲ್ಲ
ವಿಂತಪ್ಪ ಮಹಿಮೆಯಂ ನದಿಗೆ ಕೊಟ್ಟಾ ನದಿಯ
ಕಂತುಮರ್ದನ ಬಳಿಕ್ಕೆನಗೆ ಪಾಲಿಪುದೆಂದನಾ ಗೌತಮಂ ಭಕ್ತಿಯಿಂ ೧೪

ಆ ಮಾತುಗೇಳಿ ಸರ್ವೇಶ್ವರಂ ಗೌತಮ
ಪ್ರೇಮಿ ನಿಜ ಮಸ್ತಕದ ಗಂಗೆಯೊಳು ಬಳಿಕೊಂದು
ರೋಮದಗ್ರವನದ್ದಿತೆಗೆದು ಕೊಟ್ಟಂ ಬಿಂದುಮಾತ್ರಮಂ ಕರುಣದಿಂದಾ
ಶ್ರೀ ಮಹಾದೇವನೇ ಬಲ್ಲನದು ನದಿಯಾಗಿ
ಭೂಮಿಯೊಳು ಪರಿದು ಪಸರಿಸಿತು ಪರಪುರುಷಾರ್ಥಿ
ಯಾ ಮರ್ಷುರೆ ಸರಿಯಾವನಕ್ಷಪಾದಂಗೆಂದು ಕೀರ್ತಿಸಿದರಮರರ್ಕಳೂ ೧೫

ಆ ವಿಶೇಷದ ಗೌತಮಂ ತಂದ ಕಾರಣಂ
ಭೂವಳಯದಲ್ಲಿ ಗೌತಮಿ ಎಂಬ ಪೆಸರಾಗಿ
ಪಾವನಂ ಮಾಡಿ ಪರಿಯಿತ್ತಲಾ ಪರಮ ಸೌಂದರಿಯಂ ಸುಖವನಿತ್ತೂ
ಗೋವಿಗಾ ನದಿ ಸೋಂಕೆ ಹರಣವೊದವಲ್ಕೆ ಗೋ
ದಾವರಿಯೆನಿಪ್ಪ ನಾಮಂ ಕಲ್ಪಿಸಿತು ಕಣಾ
ಭಾವಿಸಲ್ಕುಭಯಾಭಿಧಾನದಿಂದೆಸೆದುದಾ ಗಂಗೆ ವಿಮಲಾಂತರಂಗೇ ೧೬

ಆ ಪರಮಗಂಗೆಯಂ ತಂದು ಗೌತಮನಾಗ
ಕಾಪಟ್ಯರಹಿತನಂದಲ್ಲಿ ಯೋಚಿಸಿದನೀ
ಪಾಪಮಂ ಪಾರ್ವರು ವೃಥಾ ಕಲ್ಪಿಸಿದರಧಮರಜ್ಞಾನಿಗಳಿಗೆ ನಾನೂ
ಶಾಪಮಂ ಮರಳಿ ಕೊಟ್ಟಪೆನೆಂದು ನುಡಿದನದ
ನೇ ಪರಿ ಯೆನಲು ಕೇಳು ಕೆಂಚವೀರಾಖ್ಯಯೆಂ
ದಾ ಪರಮಗುರು ಹಲಗೆಯಾರ್ಯ್ಯನೊರೆದಂ ನಿಷ್ಠೆ ನುಡಿದ
ನುಡಿಯೆಂತೆಂದೊಡೆ ೧೭

ಅರಿಯಿಸಿಕೊಳ್ಳೈ ತಲೆಯನೆಂದು ಹೇಳೂದಾವು
ದರಮನೆಗೆ ನೀನಿಳಿಯಬೀಳೆನಲು ಸಾಲದೆ
ಶಿರಸು ತಾನೇ ಹೋಹುದಕ್ಕೆಯವಶಕುನವೇಯದು ಕಾರಣಂ ಶಿವಂಗೇ
ಹರಿ ಮುಖ್ಯ ದೇವರೇ ಮಿಗಿಲೆಂದು ನುಡಿವುತ್ತ
ನರಕದೊಳು ಮುಳುಗಿರ್ಪೈ ಪಾರ್ವರಿರ ನೀವೆಂದು
ಪರಿ ಪರಿಯ ಶಾಪಮಂ ಮತ್ತೆ ಕೊಡುತಿರ್ದನಾ ಗೌತಮಂ
ಮುನಿಪೋತ್ತಮಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದಮಂತ್ರಿತ ವಿಭೂತಿಯು ನೊಲ್ಲದಾ ಭ್ರಾಂತ
ರಾದವರೆನಿಪ್ಪಪಖ್ಯಾತಿಯಂ ಪಡೆಯಿರ್ದೈ
ಮೇದಿನಿಯೊಳಧರ್ಮರ್ಗೆಯಧಮವರ್ತನರಾಗಿರ್ದೈ ಗೋಪಿಯಂಗಮಲಿನಾ
ವೇ ದಿವ್ಯಫಲವೆಂದೆನುತ್ತಿಟ್ಟುಕೊಂಡು ಬಂ
ದಾದಿಲಿಂಗವ ಮುಟ್ಟಲೈಕವಿಂಶತಿಕುಲದೊ
ಳೈದಿರ್ದೈ ನರಕದೊಳಗೆಲೆ ವಿಪ್ರಪುಲ್ಕಸರಿರಾ ಎಂದು ಶಪಿಸುತಿರ್ದಂ ೧೯

ಮೇಲೆಯಾ ಊರ್ಧ್ವಪುಂಡ್ರಂ ವರ್ತುಳಂ ಬಳಿಕ
ಶೂಲವಾ ಚತುರಶ್ರಮಂ ಹಣೆಯೊಳಿಡುತ ಪಾ
ಪಾಲಯರು ನೀವಾಗಿರ್ದೈ ತದಾಕಾಶ ಶಸ್ತ್ರಂಗಳಿಂ ಯಮನ ಭಟರೂ
ಕಾಲಿಂದಲೆದೆಯ ಮೆಟ್ಟುತ್ತ ಬಾಧಿಸುತಿರಲಿ
ಭೂಲೋಲರಿಂದಧಮದಾನಮಂ ಕೊಂಡು ಪಾ
ಪಾಲಾಪದಿಂ ನರಕವೆಯಿದಿರ್ದೈ ನೀವೆಂದು ಶಪಿಸಿದಂ ವರ ಗೌತಮಂ ೨೦

ಸ್ವಸ್ತ್ರೀಯ ಸಂಗದೊಳರೋಚಕಂ ಜನಿಸುತ ಪ
ರಸ್ತ್ರೀಯ ಕೂಟಂಗಳಲ್ಲಿ ಲವಲವಿಸುತ್ತ
ನಿಸ್ತ್ರಿಂಶಯಮನಭಟರಿಂ ತಪ್ತಲೋಹವನಿತಾಪರಿಷ್ವಂ ಗರಾಗೀ
ಶಾಸ್ತ್ರಪೌರಾಣವಂ ಹೊಱುವ ಕತ್ತೆಗಳಿರಾ
ಭಸ್ತ್ರೀಘೃತಪ್ರೀತಿಯಧಮರಿರ ದೋಷದಿಂ
ಕಸ್ತ್ರಾತನಪ್ಪನೈ ನಿಮ್ಮನುದ್ಧರಿಸಲ್ಕೆನುತ್ತ ಶಾಪವನಿತ್ತನೂ ೨೧

ನಾನಾ ನಿಕೃಷ್ಟತರದಧಮ ವಸ್ತುಗಳನುರೆ
ಭೂನಾಥರಲ್ಲಿ ದುರ್ಬೋಧೆಯಂ ಬೋಧಿಸುತ
ದಾನವಂ ಕೈಕೊಳ್ಳಿರ್ದೈ ಸುರೆಯ ಮಾಂಸಂಗಳಂ ಬಳಿಕ ಮಿಡುಕುತಿರ್ಪಾ
ಮೀನ ಗುದಿಗಳ ಮಾರಿ ನರಕಕ್ಕೆ ಪೋಗಿರ್ದೈ
ಜ್ಞಾನಮಯ ತೀರ್ಥಕ್ಕೆ ಹೋಗಿ ಬಂದಾ ಫಲಕೆ
ತಾನಿಷ್ಟು ಹೊನ್ನೆಂದು ಕಲ್ಪಿಸುತ ಮಾರಿರ್ದೈ ಬ್ರಾಹ್ಮಣಾಧಮರು ನೀವೂ ೨೨

ದೇವತಾಪ್ರತಿಮೆಗಳ ಪಂಚಲೋಹದಿನೆಸಗಿ
ನೀವವಂ ಪೂಜಿಸುತ ದಾರಿದ್ರವಾಗಲವ
ನೇ ವಿಕ್ರಯಂ ಮಾಡಿ ನರಕಕ್ಕೆ ಪೋಗಿರ್ದೈ ಬಂಧುಗಳ ಮಾರಿಕೊಂಡು
ನೀವಧಮರಾಗಿರ್ದೈ ಯಾದಿತ್ಯಪೌರಾಣ
ದಾವಾಕ್ಯದೊಳಗಧಾರ್ಮಿಕರನಾಚಾರರೆನಿ
ಸೀ ವಸುಧೆಯೊಳ್ ಕ್ರೂರರಾಗುತ್ತ ನೀವು ಶೂದ್ರರ ಯಾಚಿಸಿರೆ ಕಲಿಯೊಳು ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಪದ ಫಲ ಯಜ್ಞದಿಂದೊದವಿದ ಸುಧರ್ಮಂಗ
ಳಪರಿಮಿತವಮಂ ಮಾಱಿಕೊಂಡು ನರಕದೊಳಿಳಿಯೆ
ಸುಪಥಪ್ರದಾಗ್ರಿಮ ಮಹಾದೇವ ಸಂಸಾರಮೋಚಕನ ಶಿವಭಕ್ತರಾ
ಕುಪಿತ ದುರ್ಮಾರ್ಗದಿಂ ಕಲಿಯುಗದೊಳೆಯಿದೆ ನಿಂ
ದಿಪರು ನೀವಾಗಿ ನಿರಯದೊಳು ಮುಳುಗಿರೇ ಎಂದು
ಕಪಟಿಗಳಿಗೆಯ್ದೆ ಶಾಪವನೀವುತಿರ್ದನಾ ಗೌತಮಂ ಮಿಗೆ ಸೌತ್ತಮಂ ೨೪

ಆರ್ಯೈಯ್ಯೆ ಲೈಂಗ್ಯದೊಳು ಧಾರ್ಮಿಕರು ಬಳಿಕನಾ
ಚಾರಿಗಳು ಕೋಪಿಗಳು ಮಪ್ಪಲ್ಪಚಿತ್ತರಾ
ಘೋರತರಲುಬದ್ಧರಾಗಲಿ ಹುಸಿಗರಾಗಲಿ ಎಂಬ ವಾಕ್ಯಾರ್ಥದಿಂದಾ
ಹಾರುವರು ನೀವು ನರಕಿಗಳಾಗಿರ್ಪೈ ಬಳಿಕ
ಸೌರಾಂತರಾಳಿಕಂ ಪಾಷಂಡಿಗಳು ಮಹಾ
ಕ್ರೂರರಹ ಪಂಚರಾತ್ರೀಕರಾಗಿರೆ ಎಂದು ಗೌತಮಂ ಶಾಪವಿತ್ತಂ ೨೫

ಓರ್ವನೇ ಗುರುವಾಗಿ ವೇದಮಂ ಪೇಳೆ ಮ
ತ್ತೋರ್ವನೇ ಶಿಷ್ಯನಾಗುತ ಕೇಳಿದಾತನಾ
ಗುರ್ವಧಿಕನಂ ಬಗೆಯದಾ ವೇದದರ್ಥಮಂ ತಿಳಿಯದಾ ಪೇಳ್ದಾತನೂ
ಓರ್ವರೋರ್ವರ್ಗೆ ವಿರಸಂಗಳಾಗಲ್ಕೆ ಬಳಿ
ಕೀರ್ವರುಂ ಪಠಿಸಿದಾ ಶ್ರುತಿ ಸುರಾಭಾಂಡಗತ
ವಾರ್ವಿಶೇಷತೆಯುಂತುಟಾಗಲ್ಕೆ ನಿಮಗೆನುತ ಶಾಪವಿತ್ತಂ ಗೌತಮಂ ೨೬

ವೇದನಾಲ್ಕಂ ಪಠಿಸಿ ಬಳಿಕ ಸರ್ವೇಶ್ವರನ
ಪಾದಭಕ್ತಿಗೆ ದೂರರಾದ ನಿಮಗಾವನೀ
ಮೇದಿನಿಯೊಳನ್ನಪಾನವನಿಕ್ಕಿದಾತಂಗೆ ನರಕವಂತೂರ್ಧ್ವಪುಂಡ್ರಾ
ನಾದನ ಮೊಗಂ ನೋಡಿದಂ ಭೂತಿಯಂ ಧರಿಸಿ
ದಾ ದಯಾನಿಧಿಯ ಕಾಣುವುದಲ್ಲದೊಡೆ ಮೂಲ
ವಾದ ಪಂಚಾಕ್ಷರಿಯ ಜಪಿಸಬೇಕಲ್ಲದೊಡೆ ದೋಷಪವಗಾಗಲೆಂದಾ ೨೭

ಮಾನವಪುರಾಣದೊಳು ಶಂಖಚಕ್ರಾದಿಗಳ
ನಾನಾ ವಿಧಾಯುಧಂಗಳ ರೂಪನಂಗದೊಳು
ಹೀನತೆಯನೆಯ್ದೆ ಬರೆದವನು ಬರೆಯಿಸಿಕೊಂಬವಂ ಸುಟ್ಟವಂ ಬೆಂದವಂ
ತಾನವಂದಿರ ಕೂಡೆ ಸಂಭಾವಿಸಲ್ಬಾರ
ದಾನನವ ನೋಡಲಾಗದು ಹೊರಡಿಸಲ್ಬೇಕು
ಭೂನಾಥರಲ್ಲದೊಡೆ ದೋಷವೆಂಬಂತೆ ನೀವಾಗಿರ್ಪೈ ವಿಪ್ರರೆಂದಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಿಚಾರಿಗಳಿರ ಕೇಳಿರೆ ಬಿಳಿಕ ಯಜ್ಞವೈ
ಭವ ಕಾಂಡದಲ್ಲಿಯಾವಾತನಂಗದೊಳು ನೆರೆ
ವಿವಿಧ ಮುದ್ರೆಗಳಿಂದ ಸುಟ್ಟ ರೇಖೆಗಳಿರ್ದೊಡಾ ವಿಪ್ರವೇದಶಾಸ್ತ್ರ
ಅವಕೆಲ್ಲಕಂ ದೂರನಂತರಾಳಕನುವೈ
ಷ್ಣವನು ವೈದಿಕನು ಪಾಷಂಡಿಯಾ ಪಾಂಚರಾ
ತ್ರವಿಧಾನರೆಂಬವರು ನೀವಾಗಿ ಪಾಪದೊಳಗಿಳಿಯಿರೆಂದಂ ಗೌತಮಂ ೨೯

ಜ್ಞಾನವಾಚಾರವಿಲ್ಲದೆ ಸರ್ವವಿದ್ಯವಂ
ಮಾನಿತದ ಯಜನ ಯಾಜನವಧ್ಯಯನವಮಂ ನ
ವೀನದಧ್ಯಾಪನವುಮಂ ದಾನವುಂ ಪ್ರತಿಗ್ರಹದ ಷಟ್ಕರ್ಮಂಗಳಾ
ತಾನಱಿದಿರಲ್ಕೇನು ದುಷ್ಟಚಾಂಡಾಲ ಭಾಂ
ಡಾನೀಕದೊಳಗಿರ್ದ ಭಾಗೀರಥೀ ಜಲವ
ಲಾ ನಾಡೆ ಪರಿಕಿಸಲ್ಕಂತಾಗಿರ್ಪ ವಿಪ್ರರಿರ ಯೆಂದನಾ ಗೌತಮಂ ೩೦

ನಾರಕಿಗಳಿರ ಕೇಳಿರೆ ಬೌದ್ಧರಲ್ಲಿ ಬಳಿ
ಕಾರುಹತರಲ್ಲಿಯಾ ಪಂಚರಾತ್ರಿಕರಲ್ಲಿ
ಸೇರುವೆಯ ವೈದಿಕರೊಳಾ ಶಕ್ತರಲ್ಲಿ ದೀಕ್ಷೆಯ ಪಡೆಯಿನೀವೆನುತ್ತಾ
ಹಾರುವರಿಗಾ ಶಾಪವಿತ್ತನಾ ಗೌತಮಂ
ಸಾರ ಸದ್ಭಕ್ತಿ ಸಂಪನ್ನನೆಂಬಾಗಲೀ
ಧಾರುಣೀತಳದೊಳಗಪಾತ್ರದಾನಂ ಹೊಲ್ಲವೆಂಬುದಂ ತಿಳಿ ಕುಮಾರಾ ೩೧

||ಸಾಕ್ಷಿ|| ವಿಷ್ಣ್ವಾದಿ ದೇವತಾಸ್ಸರ್ವೇ ವಿಶಿಷ್ಟಾಶ್ಶಂಕರಾದಪಿ
ಭ್ರಾಂತಿ ವಿಜ್ಞಾನಸಂಪನ್ನಾ ಭವೇಯುರ್ಬ್ರಾಹ್ಮಣಾಧಮಾಃ ೧

ವಿಭೂತಿಧಾರಣೇ ಭಸ್ಮ ಗುಂಠನೇ ವೇದಮಂತ್ರಿತೇ
ಭವೇಯುರ್ವಿಮುಖಾಯೂಯಂ ಸರ್ವದಾ ಬ್ರಾಹ್ಮಣಾಧಮಾಃ ೨

ಗೋಪೀ ಮಲಿನಧಾರೀತು ಶಿವಂ ಸ್ಪೃಶತಿಯೋದ್ವಿಜಃ
ಸಸ್ವೈಕವಿಂಶತೀಕುಲಸ್ಸೋ ಯಂ ನರಕಂ ವ್ರಜೇತ್ ೩

ಊರ್ಧ್ವಪುಂಡ್ರಂಚಶೂಲಂಚ ವರ್ತುಳಂ ಚತುರಶ್ರಕಂ
ಲಲಾಟೇ ಧಾರಯಿಷ್ಯಂತಿ ಮನುಷ್ಯಾಃ ಪಾಪಕರ್ಮಿಣಃ ೪

ತದಾಕಾರೇಣ ಶಸ್ತ್ರೇಣ ಪೀಡ್ಯಂತೇ ಯಮಕಿಂಕರೈಃ
ಸ್ವದಾರಾಗಮನೇಚೈವ ಪರದಾರಾಭಿಮರ್ಶನೇ
ಭವೇಯುರುನ್ಮುಖಾಯೂಯಂ ಸರ್ವದಾ ಬ್ರಾಹ್ಮಣಾಧಮಾಃ ೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತುರ್ವೇದಧರೋ ವಿಪ್ರೋ ಶಿವಭಕ್ತಿ ವಿವರ್ಜಿತಃ
ವೇದಭಾರಭರಾಕ್ರಾಂತ ಸ್ಸವೈಬ್ರಾಹ್ಮಣಗಾರ್ದಭಃ ೬

ಮತ್ಸ್ಯವಿಕ್ರಯಿಣಸ್ತದ್ವನ್ ಮಾಂಸವಿಕ್ರಯಿಣಸ್ತಥಾ
ಸುರಾವಿಕ್ರಯಿಣಸ್ತದ್ವ ದ್ಭವೇಯು ಬ್ರಾಹ್ಮಣಾಧಮಾಃ ೭

ತೀರ್ಥವಿಕ್ರಯಿಣಸ್ತದ್ವ ದ್ದೇವ ವಿಕ್ರಯಿಣಸ್ತಥಾ
ಬಂಧುವಿಕ್ರಯಿಣಸ್ತದ್ವ ದ್ಭವೇಯು ಬ್ರಾಹ್ಮಣಾಧಮಾಃ ೮

ಅಧಾರ್ಮಿಕಾಃ ಕ್ರೂರಸತ್ತ್ವಾ ಅನಾಚಾರಾಲ್ಪಚೇತಸಃ
ಯಸ್ಮಿನ್‌ಕಲೌ ಭವಿಷ್ಯಂತಿ ಬ್ರಾಹ್ಮಣಾಶೂದ್ರಯಾಚಕಾಃ ೯

ತಪೋ ಯಜ್ಞ ಫಲಾನಾಂ ಚ ವಿಕ್ರಯಿತಾರೋ ದ್ವಿಜಾಧಮಾಃ ೧೦

ವಿನಿಂದಂತಿ ಮಹಾದೇವಂ ಸಂಸಾರಾನ್ಮೋಚಕಂ ಪರಂ
ಮದ್ಭಕ್ತಾಂಶ್ಚ ಮಹಾತ್ಮಾನೋ ಬ್ರಾಹ್ಮಣಾಶ್ಚ ಕಲೌಯುಗೇ ೧೧

ಲೈಂಗೇ॥ ಅಧಾರ್ಮಿಕಾಸ್ತ್ವನಾಚಾರಾ ಮಹಾಕೋಪಾಲ್ಪಚೇತಸಃ
ಅನೃತಂ ಭ್ರುವಂತಿ ವೈಲು ಬ್ಧಾಲೇಶ್ಶೈರ್ಜಾತಾಶ್ಚಯ್ಗಿಃ ಪ್ರಜಾಃ ೧೨

ಗೃಹೀತ್ವಾ ವೇದನಂ ಯಸ್ತು ಯೋಧ್ಯಾಪಯತಿ ಮೂಢ ಧೀಃ
ಅಧೀತೋ ಯೋ ಹಿತಾರ್ಥತ್ವಾ ತ್ತಾವುಭೌಪಾಪಿ ನೌಸ್ಮೃತೌ ೧೩

ತಯೋರ್ಮುಖಾಗತಾ ವೇದಾ ವಿನಿಂದ್ಯಾಸ್ಸರ್ವಕರ್ಮಸು ೧೪

ಸುರಾಭಾಂಡ ಗತಂ ತೋಯಂ ಯಥಾ ಭವತಿನಿಂದಿತಂ ೧೫

ಚತುರ್ವೇದಧರೋ ವಿಪ್ರೋ ಶಿವಭಕ್ತಿ ವಿವರ್ಜಿತಃ
ತಸ್ಯ ಭೋಜನ ದಾನೇನ ದಾತಾ ಚ ನರಕಂ ವ್ರಜೇತ್ ೧೬

ಮಾನವಪುರಾಣೇ॥ ಆಯುಧೈಶ್ಶಂಖಚಕ್ರಾದ್ಯೈರ್ನದಹೇಚ್ಚ ಕದಾಚನ
ದಗ್ಧಾಂಗ ಲಿಖಿತಾಂಗಾಶ್ಚ ನ ಸಂಭಾಷ್ಯಾದ್ವಿಜಾತಯಃ ೧೭

ನ ದರ್ಶನೀಯಾಸ್ತಾನ್ರಾಜಾ ದೇಶಾಚ್ಛೀಘ್ರಂ ಪ್ರವಾಸಯೇತ್ ೧೮

ಯಜ್ಞವೈಭವಖಂಡೇ॥ ಕಸ್ಯ ಚಿಲ್ಲಾಂಛಿತೋಮರ್ತ್ಯೋ ನ ಸಾಕ್ಷೀ
ಸರ್ವದಾ ಭವೇತ್
ಶ್ರೌತಸ್ಮಾರ್ತ ಸದಾಚಾರ್ಯೆ ನಾರ್ಧಿಕಾರೀ ಚಲಾಂಛಕಃ ೧೯

ಜ್ಞಾನಸ್ವಾಚಾರಹೀನೇಷು ಸರ್ವವಿದ್ಯಾ ಸಮನ್ವಿತಃ
ದುಷ್ಟಚಾಂಡಾಲಭಾಂಡೇಷು ಭಾಗೀರಥೀ ಜಲಂ ಯಥಾ ೨೦

ಬೌದ್ಧೇ ಚಾರುಹತೇ ಚೈವ ಪಾಂಚರಾತ್ರೇಚ ವೈದಿಕೇ
ಶಾಕ್ತೇಚ ದೀಕ್ಷಿತಾ ಯೂಯಂ ಸರ್ವದಾ ಬ್ರಾಹ್ಮಣಾಧಮಾಃ ೨೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತು ಶಪಿಸಿದ ಗೌತಮನ ಶಾಪಶಕ್ತಿಯೋ
ರಂತೆ ಬಹುಮುಖವಾಗಿ ಕೋರದಾಡೆಗಳಿಂದ
ನಂತಭುಜವಾಗಿ ಕಾರ್ಮೇಘಾಂಜನಕ್ಕೆ ಸಮವಾಗಿ ಕಿಡಿಗಳನುಗುಳುತಾ
ಭ್ರಾಂತರಪ್ಪಜ್ಞ ಮುನಿಗಳ ತಾಣಕೆಯ್ದಿ ಬಳಿ
ಕಂತವರ ಘುಡಿಘುಡಿಸಿ ಘೂರ್ಮಿಸಲ್ಕಾ ವಿಪ್ರ
ತಿಂತಿಣಿಯಿದೇನೆನುತ್ತೀಕ್ಷಿಸುತ ನಡನಡುಗುತಿರ್ದರೇವಣ್ಣಿಸುವೆನೂ ೩೨

ಘುಡಿಘುಡಿಪ ರೂಪಕಂಡಳ್ಕಿ ಮುನಿಗಳು ಭೀತಿ
ವಡೆದು ಶಿವಶಿವ ಶಂಕರಾ ಮಹಾದೇವಯೆ
ಮ್ಮೆಡರ ಪರಿಹರಿಸೆನುತ್ತಿರ್ದು ಸಂತೈಸಿಕೊಂಡರರೇ ನೀನಾರೆಂದೆನೇ
ಜಡವಿಪ್ರರಿರ ನಿಷ್ಕಪಟಿ ಗೌತಮಂಗೆ ನೀ
ವೊಡರಿಚಿದಿರಜ್ಞಾನದಿಂದ ಗೋವಧೆಯದಂ
ಮೃಡನಿಂದ ಕಳೆದಾತ ನಿಮಗೆ ಕೊಟ್ಟರು ಶಾಪಶಕ್ತಿಯಾನೆಂದುದಾಗ ೩೩

ಸಡಿ ಘಡಾ ಬಡ ಗೌತಮನ ಶಾಪಶಕ್ತಿಯೆಮ
ಗೆಡರ ಮಾಳ್ಪುದು ಗಡಾ ನಾವಂಜೆವೆಂದೆನುತ
ಮೃಡನ ಮೂರ್ತಿಧ್ಯಾನದಿಂದಲಾ ಶ್ರೀರುದ್ರ ಮುಖ್ಯ ಶಿವಮಂತ್ರದಿಂದಾ
ದೃಢವಾಗಿರಲ್ಕೆ ಮುಟ್ಟದೆ ಘೂರ್ಮಿಸುತ್ತ ಮುಂ
ಗಡೆಯೊಳಿರೆ ಶಿವನಱಿವುತಜ್ಞಾನಿಗಳು ಮುನ್ನ
ಲೊಡರಿಚಿದರೆನ್ನ ಭಕ್ತನ ಮೇಲೆ ದುಷ್ಕೃತವನೆಂದವಂದಿರಿಗೆ ಮುಳಿದಂ ೩೪

ಸಂತಂಗೆ ಮುನಿದವನ ಶಾಪಶಕ್ತಿಯಭೀತಿ
ಯಿಂತಾವು ನೆನವುತಿರ್ದಪರೆನ್ನನವನ ನುಡಿ
ಯಂ ತಪ್ಪಿಸಲ್ಬಹುದೆ ಯಜ್ಞಾನಿಗಳ ಗೌತಮಂ ಶಪಿಸಿದವೊಲಾಗಲೀ
ಅಂತವರ ಬಹು ದರ್ಶನಂಗಳಂ ಮಾಳ್ಪೊಡೆ
ಮ್ಮಂತಸ್ಥರಪ್ಪ ಗಣತತಿಯಿಂದಲಾಗದಾ
ಕಂತುಪಿತ ಹರಿಯುಲ್ಲವರಿಗೆ ಜ್ಞಾನಮಂ ಬೋಧಿಸುವರಿಲ್ಲೆಂದನೂ ೩೫

ನೆಱಿ ನೀಚರಿಂದಪ್ಪ ಕಾರ್ಯಗಳ ಸಜ್ಜನಿಕೆ
ಯೆಱಿಯರಿಂದಾಗವೆಂತೆಂದೊಡಂದೆಮ್ಮೆಯಂ
ಕಱಿಯೆ ತೌಡಿಕ್ಕಿದೊಳ ಸೊರಹ ನೀವುದು ಮಕ್ಕದಕ್ಕಧಿಕ ತರವೆನುತಲೊಂದು
ಮೊಱವಲ್ಲಿ ಕರ್ಪುರವನಿರಿಸೆ ಮೆಱಿವುದೇ ಲಕ್ಷ್ಮಿ
ಎಱಿಯನಲ್ಲದೆ ಗಣಂಗಳ ಕೈಯೊಳಾಗದೆಂ
ದುಱಿ ಶಿವಂ ನಿಶ್ಚಯಿಸಿ ಕರೆಸಿದಂ ಹರಿಯುನಜ್ಞಾನದಾ ಹರವರಿಯನೂ ೩೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ವಿಷ್ಣು ಕೇಳು ಗೌತಮಗೆ ನಿಷ್ಕಾರಣಂ
ಸಲೆ ಮುನಿದ ಪಾತಕರು ದಾರುವನವೇ ತಮಗೆ
ನೆಲೆಯಾಗಿರುತ್ತೈದರಕ್ಷಪಾದನ ಶಾಪಶಕ್ತಿ ಬಂದಾರ್ಭಟಿಸಲೂ
ಮಲಹರಾ ಗತಿ ಎಂದು ನಮ್ಮ ನೆನಪಿನದೊಂದು
ಬಲದೊಳಿರ್ದಪರವಂದಿರ ಚಿತ್ತವೆಲ್ಲವಂ
ಚಲಿಯಿಸುತ ಮದ್ಭಕ್ತಿಯಂ ಬಿಡಿಸಿ ಅನ್ಯದರುಶನಿಗಳಂ ಮಾಡೆಂದನೂ ೩೭

ಶ್ರೀವಿಷ್ಣು ಕೇಳವರ ದುರ್ಮಾರ್ಗಿಗಳ ಮಾಡ
ಲಾವನಿಂದಾಗದೈ ಸೀಂ ಪೋಗಿಯಾ ಶಕ್ತಿ
ಯಾವರ್ತಿಸುವ ಮಾಳ್ಕೆಯಂ ಮಾಳ್ಪುದೆನೆ ಜೀಯ್ಯ ನಾನಜ್ಞತೆಯ ಬೋಧಿಸೇ
ಭೂವಳಯದೊಳು ಮೆಱೆವುದೇ ದ್ರೋಹವಾಗದೇ
ಏವೆನೆನಲಾತ ನೀಶ್ವರ ನಂಜಬೇಡವೈ
ನಾವಿರ್ದು ನಿರವಿಸಿದ ಬಳಿಕಲೇತಕ್ಕೆ ಸಂದೇಗವೆಯ್ದು ನೀನೆಂದನೂ ೩೮

ಎಂದಾ ನಿರೂಪಮಂ ಕೇಳುತ್ತಲಾಗ ಗೋ
ವಿಂದನೆಱಗುತ್ತ ಕೈಮುಗಿದು ಬಿನ್ನವಿಸಿದಂ
ಹಿಂದೆಯಾ ತ್ರಿಪುರದವರಂ ನಿನ್ನ ಭಜನೆಯಂ ಬಿಡಿಸೆಂದು ನೀವು ಕಳಿಪೇ
ಅಂದವರಿಗಜ್ಞಾನವಂ ಪೇಳ್ದೆನಾಗನಾ
ರಂದಸಹವಾಗಿ ನಾನಾಪರಿಯೊಳೀಗ ನೀ
ವೆಂದಂತೆ ಮಾಳ್ಪೆನಲೆ ದೇವ ಲೆಂಕಂಗೆ ಮಾರುತ್ತರವೆ ಪೋಪೆಸೆಂದಾ ೩೯

ಭೂಲೋಕ ಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸದಱಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೪೦

ಇದು ವೀರಶೈವ ಷಟಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ವಿಷ್ಣು ಶಿವನಾಜ್ಞೆಯಾಂತನೆನೆ ಮೂಱು ಕಾಂಡದ ಮೇಲೆ ಸಂಧಿ
ಎರಡೂ ೪೧

ಅಂತು ಸಂಧಿ ೨ ಕ್ಕಂ ಪದನು ೧೧೭ ಕ್ಕಂ ಗ್ರಂಥ ೩೫ ಕ್ಕಂ ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೪೯

ಪಂಚಭೂತ ಸೂರ್ಯಚಂದ್ರರು ದೈವವೆಂಬರಂ ಗೆದ್ದ ಕಥೆ

ಹರಿಯು ದುರ್ಬೋಧೆಯಂ ಕೇಳ್ದಜ್ಞರಾಡಿದಾ
ಧರೆ ಜಲಾನಲ ವಾಯುವಾಕಾಶ ಸೂರ್ಯಚಂ
ದ್ರರು ದೈವವೆಂಬ ವಾದಿಗಳ ಕೋಳಾಹಾಳವಮಂ ಮಾಡಿದಂ ಗೌತಮಂ

ಶ್ರೀವಾರಿಜಾಕ್ಷ ವಿಧಿದೇವಾಧಿನಾಥನಾ
ಕಾವಾಸನುತ ವಿಮಲಶೈವಾಗ್ರಗಣ್ಯ ಶಿವ
ಜೈವಾತೃಕಾ ಜೂಟ ಭಾವಾನತೇಷ್ಟ ಸುಖಜೀವಾರ್ಯ ದುರಿತಶರಧೀ
ನಾ ವಾಮಲಾಂಗಯುವ ನೈವಾಗಿತೇಶಗದ
ದಾವಾಗ್ನಿ ಸತ್ಪುಣ್ಯವೈ ವಾಕ್ಪತೀಶಪತಿ
ಯಾವಾಪ ಸಂಸ್ತೋತ್ರಸೇವಾನುಸುಖ ವಿಷಗ್ರೀವಾಢ್ಯ ಶಾಂತಮಲ್ಲಾ ೧

ಶಿವಭಕ್ತಸಸ್ಯಾಳಿ ಭೂಗುರುಪದಾಬ್ಜ ಹೃ
ನ್ನವ ಜೀವನ ಪ್ರಸಾದಾಗ್ನಿರೇಚಕಪೂರ
ಕವಿಧಾನ ಶಿಷ್ಯವಿಲ ಸಚ್ಚಿದಾಕಾಶತೇಜೋಭರಿತ ದಿವ್ಯ ಶಾಂತೀ
ಸವಿಲಾಸ ಚಿಚ್ಚಂದ್ರನಪ್ಪ ಮೇಲಣ ದಿವ್ಯ
ಗವಿಯ ಗುರುಶಾಂತನಂಜೇಶ್ವರ ಸ್ವಾಮಿಶಾಂ
ಭವಮತಪ್ರೇಮಿ ಮಹಿಮಾರಥದ ನೇಮಿ ನಿಷ್ಕಾಮಿ ಚರಹರುಷನಾಮೀ ೨

ಎನುತಲೀಶ್ವರನ ಪಾದಕ್ಕೆ ಸಾಷ್ಟಾಂಗವಂ
ದನೆಯ ಮಾಡುತ್ತಿದ್ದು ಕೈಮುಗಿದು ಬೀಳ್ಕೊಂಡ
ಘನತರವ ದೇಹಸೌಂದರಿಯ ಶೃಂಗಾರದಿಂದೊಂದು ಘಟಿಯಾನೆಯುಲ್ಲೀ
ವಿನುತ ಪುಸ್ತಕವ ಹೊರಿಸಿಕೊಂಡು ದುರ್ಬೋಧೆ
ಯನು ಬೋಧಿಪಾಚಾರ್ಯ ವಿಷ್ಣುವಂತಾ ದಾರು
ವನದ ಮಧ್ಯಕೆ ಬಂದು ಮಣಿಪೀಠದಲ್ಲಿ ಕುಳ್ಳಿರ್ದಂ ಬೆಡಗಿನಿಂದಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುತಸುಮಣಿ ಪೀಠಸ್ಥಿತಂ ಹರಿ ಸಂಪ್ರೇಕ್ಷ
ಯತಯತ್ನಮೂಚಿರೇ ಯತ್ನೇನ ತತ್ವಂಕ
ಇತಿ ಮುನೀನಾಂ ಚ ತೇಷಾಂ ವಚಶ್ರುತ್ವಾಥ ಪುನರಭ್ರವೀದುಪೇಂದ್ರೋ
ಮತಿಮಾನ್ವಿಶೇಷೇಣ ಯುಷ್ಮಾನ್ವಿಬೋಧಿತುಂ
ಕ್ಷಿತಿತಲೇ ಇತಿ ತಸ್ಯ ತದ್ವಚನ ಪ್ರಾಮಾಣ್ಯ
ಸಿತಿಕಂಠ ಪದ ಭಕ್ತಿ ಸೇವಕಾನಾಂಸದಸ್ಮಾಕಮಿತಿ ಕಿಂ ಸರಾಗೈಃ ೪

ಆ ರುಚಿರ ಸಿಂಹಾಸನದೊಳಿರ್ದ ವಿಷ್ಣುವಂ
ದಾರುವನದಾಶ್ರಮದ ಮುನಿಗಳೀಕ್ಷಿಸುತ ನೀ
ನಾರೇಂ ನಿಮಿತ್ತದಿಂದಿಲ್ಲಿ ಬಂದಿಪ್ಪೆಯೆನೆ ನುಡಿದನಾ ಮಧುಸೂದನಂ
ಆರೈದು ಕೇಳಲೊಬ್ಬಾಚಾರ್ಯನೈ ನಾನು
ಓರಂತೆ ನಿಮ್ಮರಿವದೇನು ನಿಮ್ಮಯ ದೈವ
ವಾರೆಂದು ಭಜಿಸುವಿರಿ ಪೇಳಿ ಎನೆ ಪೇಳ್ದರಾ ಮುನಿಗಳಾ ಹರಿಯ ಕೂಡೇ ೫

ನೀನಾಲಿಸೆಮ್ಮರವನಿಂದೇಕ ಏವರು
ದ್ರೋ ನದ್ವಿತೀಯಾಯಂ ತಸ್ಥೇ ಎನಿಪ್ಪರ್ಥ
ದಾ ನವ್ಯ ಸರ್ವೇಶನೊಬ್ಬನೇ ದೈವಮೆರಡಿಲ್ಲದ ಪ್ರತಿಮನಾಗೀ
ತಾನಿರ್ಪನಾತನೇ ಕರ್ತೃವೆಂದಾಚರಿಸಿ
ನಾನಾ ಪ್ರಕಾರದಿಂದರ್ಚಿಸುವೆವೆನಲಾಗಿ
ತಾ ನಕ್ಕನಾಕ್ಷಣ ಕೃತಕದಾಚಾರ್ಯನಾಗಿರ್ದ ವಿಷ್ಣುವಾ ಮುನಿಗಳಿದಿರೇ ೬

||ಸಾಕ್ಷಿ|| ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ ೧

ಮತ್ತಮೀಪದೊಳು ನುಡಿವರೆ ಯಚ್ಚ ಕಿಂಚಿಜ್ಜ
ಗತ್ಸರ್ವವೆಂಬರ್ಥದಿಂದ ಜಗದೊಳಹೊರಗೆ
ತತ್ಸರ್ವಮೆಂಬ ಬಗೆಯಿಂದಿಪ್ಪವಂ ವಿಷ್ಣು ಮಾಯಾಮಯಂ ಜಗತ್ತೂ
ಚಿತ್ಸಾಧನದೊಳರಿಯಿರೆ ಜಗನ್ಮಾಯಾ ಲ
ಸತ್ಸೌಖ್ಯನಾದ ಹರಿಯಿರೆ ಶಿವಂ ದೈವವೆ ವಿ
ಯತ್ಸಾಧ್ಯಮೇ ಹಿಡಿಯಲದ ಬಿಡಾ ಶಿವನೇಕೆ ವಿಷ್ಣುವೇ ದೈವವೆಂದಂ ೭

||ಸಾಕ್ಷಿ|| ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಪಿ ವಾ
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ತೋನಾರಾಯಣ ಸ್ಥಿತಃ ೨
ವಿಷ್ಣು ಮಾಯಾಮಿದಂ ಜಗತ್ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಕ್ಷಪಾತಕದೊಳುಸುರಿದನಂದು ಹನ್ನೆರಡು
ಲಕ್ಷ ಸುಶ್ಲೋಕಂಗಳಿಂದ ಕೇಳುತ್ತಲವ
ಲಕ್ಷಣೆಗಳಾಗಿ ಶಿವಮಹಿಮೆಯಂ ಮಱೆದು ವೈಷ್ಣವರಾದರಲ್ಲಿ ಪಲರೂ
ಪಕ್ಷಿವಾಹನನಾ ಪ್ರದೇಶದಿಂ ಬರುತ ಬೇ
ಱೌಕ್ಷ ಮಾಸ್ಥಲವೊಂದಱಲ್ಲಿರಲ್ಮೀನಾರೆ
ನಲ್ಕ್ಷುದ್ರಬುದ್ಧಿಯಿಂ ನುಡಿದನಾನೀಗ ಬೌದ್ಧಾಚಾರ್ಯನೆಂದು ಕೃಷ್ಣಂ ೮

ಆ ಲೈಂಗದೊಳು ಮಾಯಿ ಮಾಯಾಮಯಂ ಎನು
ತ್ತಾ ಲಕ್ಷಷೋಡಶಗ್ರಂಥಂಗಳಿಂದ ವನ
ಮಾಲಿ ಬೋಧಿಸಿ ಕೆಲರ ಬೌದ್ಧರಮಾಡಿದಂ ಮತ್ತೆಯರೆಬರೊಳೆಂದನೂ
ಆಲಿಸೆಯಹಿಂಸಾಯೆನುತ್ತ ಪರಮೋಧರ್ಮ
ವೇ ಲೇಸೆನಿಪ್ಪರ್ಥದಾ ಧರ್ಮಶಾಸ್ತ್ರದೆ ತ
ದಾಲಯದವಂದಿರಂ ಜೈನರಂ ಮಾಡಿದಂ ಗ್ರಂಥವಾ ದಶಲಕ್ಷದಿಂ ೯

||ಸಾಕ್ಷಿ|| ಮಾಯಿ ಮಾಯಾಮಯಂ ಶಾಸ್ತ್ರಂ ಗ್ರಂಥ ಷೋಡಶಲಕ್ಷಕಂ
ಅಹಿಂಸಾ ಪರಮೋಧರ್ಮಃ ೪

ಆಯವಸರದೊಳೊಂದು ಠಾವಿನೊಳು ಮತ್ತೆ ಲೋ
ಕಾಯತಿಕನಾಗಿ ನುಡಿದಂ ವಿಷ್ಣು ಮುನಿಗಳಿರ
ಯೀಯವನಿಯೊಳು ಪುಣ್ಯ ಪಾಪ ಪರಲೋಕಂಗಳಿಲ್ಲ ದೇಹವೇ ಯಾತ್ಮನೈ
ನ್ಯಾಯದಿಂ ದಗ್ಧ ತೃಣವಿನ್ನು ಪುಟ್ಟುವುದೆ ಸುಖ
ವೇ ಯಗ್ರಪದವಲಾ ಮರಣವೇ ಮುಕ್ತಿಯೆಂ
ದಾ ಯತಿಗಳಿಗೆ ಪೇಳಿ ಚಾರ್ವಾಕರಂ ಮಾಡಿ ಹರಿ ಬಳಿಕ್ಕೊಂದೆಡೆಯೊಳೂ ೧೦

ಯತಿಗಳಿರ ಕೇಳಿ ಸಾಂಖ್ಯವೇ ಮುಖ್ಯ ವೇದ ಸ
ನ್ಮತತತ್ರಿಗುಣದಿಂದಲಾ ಲೋಕಸಂಭವ
ಸ್ಥಿತಿಲಯಾದಿಗಳಪ್ಪವಿದನಾಚರಿಪುದೆಂದು ಸಾಂಖ್ಯರಂ ಮಾಡಿ ಕೆಲರಾ
ನುತಕಾಲವಶಸರ್ವ ನಿಜತತ್ವನಿತ್ಯವೆಂ
ದತಿಶಯದ ಕಾಲವಾದಿಗಳ ಕೆಲರಂ ಮಾಡಿ
ಶಿತಿಗಳನ ಭಕ್ತಿಯಂ ಬಿಡಿಸಿಕೊಂಡಿಂತು ಬರುತಿರ್ದನಾಕೃತಕಿ ವಿಷ್ಣು ೧೧

ಆ ಮುನಿಗಳಿಗೆ ಕರ್ಮವೇ ದೈವವೈಸು
ಕರ್ಮಾಮಿತ ಸುಮುಕ್ತಿಯಿದು ಕರ್ಮನರಕಂ ತಿಳಿಯು
ರೈ ಮತ್ತೆ ಶಿವನೆಂಬ ದೈವವೆಲ್ಲಿಯದು ಪುಸಿ ಪುಸಿಯುಱಿಯಿರೈ ಜ್ಯೋತಿಯಾ
ಷ್ಟೋಮೇನ ತತ್ಸ್ವರ್ಗಕಾಮೋಯು ಜೇತ್ತೆಂಬು
ದೈ ಮತಂ ಎಂದು ದುರ್ಬೋಧೆಯಿಂ ಕೆಡಿಸಿದನ
ಲಾ ಮುರಾಂತಕನರೆಬರಂ ತಿರುಗಿ ಬರುತಿರ್ದನಾ ದಾರುವನದೆಡೆಯೊಳೂ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದವೇ ತತ್ಸ್ವಯಂಭುಗಳೆಂದು ಕೆಲಬರಾ
ವೈದಿಕರ ಮಾಡಿದಂ ಹರಿಬಳಿಕ ತನಗೆ ತಾ
ನೇ ದೈವವೈಸೆ ಶಿವನಿಲ್ಲವೆಂದಾ ನಿರೀಶ್ವರರನರೆಬರ ಮಾಡಿದಂ
ಸಾದರದೊಳಾತ್ಮನೇ ದೈವವೈಸಲೆ ಮತ್ತೆ
ಮಾದೇವನೆಂದೆಲ್ಲಿಯುವನೆನುತ್ತೇಕಾತ್ಮ
ವಾದಿಗಳ ಮಾಡಿದಂ ದಾರುವನವಾಸಿಗಳನಲ್ಲಿ ದುರ್ಬೋಧೆಯಿಂದಾ ೧೩

ಸರ್ವಕಾಧಾರವಪ್ಪುದಱಿಂದ ದೈವ ವೀ
ಯುರ್ವಿಜೀವನವಾಗಿಯುುದಕದಾಪಚನದಿನ
ಲರ್ವಕತದಿಂದಗ್ನಿ ಯಾ ಜಗತ್ಪ್ರಾಣನನಿಲಂ ಪೂರ್ಣತೆಯೊಳು ಗಗನಂ
ಗುರ್ವಗ್ರವಸ್ತು ರೂಪಾತ್ಮನಾ ಶಾಂತಿಯಿಂ
ಪಾರ್ವಣಶಶಾಂಕನಾ ತೇಜದಿಂದಿನನೈಸು
ಸರ್ವಾಧಿಪತಿ ಶಂಭುವೆನ್ನದಿರಿಯುಷ್ಟತನುಗಳೆ ದೈವವೆಂದಱಿಯಿರೈ ೧೪

ಎಂದಿಂತು ಪಲವು ಮತವಮಂ ಕಲ್ಪಿಸುತ ಬಳಿಕ
ವಂದಿರಂ ಬಹುದೈವದರುಶನಂ ಮಾಡಿಯ
ಲ್ಲಿಂದ ತಿರುಗುತ್ತೀಶನೆಡೆಗೆ ಬಂದಾ ದಾರುವನ ನಿವಾಸಿಗಳೆಲ್ಲರೂ
ಯಿಂದುಧರ ನಿಮ್ಮಭಕ್ತಿಯು ಬಿಟ್ಟರೆಂದು ಗೋ
ವಿಂದನೆಱಗುತ್ತ ಬಿಂನವಿಸಿದನಲಾ ಕೇಳು
ಕಂದ ಗೌತಮಶಾಪಶಕ್ತಿಯಾವರಿಸಿತಜ್ಞಾನಿಹಾರುವರ ನಿತ್ತಾ ೧೫

ನಾನಾಪ್ರಕಾರ ದರುಶನಿಗಳಾಗುತ್ತ ಪರ
ಮಾನಂದಮಯ ಶಿವನ ಮಱೆದು ವಿಪ್ರರುಗಳ
ಜ್ಞಾನಿಗಳು ತಾವಾಗಿ ಹರನಿಂದೆಗೆಯ್ದು ಕಲಿಯುಗದೊಳುದ್ಭವಿಸಿ ಕೆಲರೂ
ಹೀನವರ್ತನರಾದರೈ ಗೌತಮನ ಶಾಪ
ವೇನ ಮಾಡಿತ್ತು ಬಳಿಕಂತಿರದೆಯಧಮರು ನ
ವೀನ ಶಂಕರಭಕ್ತರೊಡನೆ ವಾದಿಸಿ ಕಾಳ್ಗೆಡೆವುತಿರ್ದರಲ್ಲಲ್ಲಿಗೇ ೧೬

ಆ ಕಾಲದಲ್ಲಿ ಗೌತಮನಿತ್ತ ಹದಿನಾಲ್ಕು
ಲೋಕಕ್ಕೆಯಖಿಳಜಾಂಡಕೆ ಕರ್ತು ಪರಶಿವಂ
ಏಕನದ್ವಯನಪ್ರಮೇಯನಲ್ಲದೆ ದೈವವಿಲ್ಲ ಶಿವಮತವೇ ಮುಖ್ಯ
ಶ್ರೀ ಕಾಮಿನೀಶಾದಿಗಳು ಕಾಲ ಕರ್ಮ ಬಾ
ದ್ಧಾ ಕಲಿತಮತಗಳೆಂಬವಬದ್ಧವೆಂದು ಧೈ
ರ್ಯಾಕೀರ್ಣನಾಗುತಂ ಟೆಕ್ಕೆಯವನೆತ್ತಿ ಸಾಱಿಸಿದನೀ ಭೂತಳದೊಳು ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಾರ್ತೆಯಂ ಕೇಳಿ ದಾರುವನದಲ್ಲಿಯಾ
ಗೋವಿಂದನಿಂದ ದುರ್ಬೋಧೆಯಂ ಕೇಳ್ದವಿ
ಪ್ರಾವಳಿಗಳೆಲ್ಲರೊಬ್ಬುಳಿಯಾಗಿ ಬಂದರಂತಾ ಗೌತಮಾಶ್ರಯಕ್ಕೀ
ಶ್ರೀ ವಿಲಸದಕ್ಷಪಾದಂ ಕೇಳಿಯಖಿಳ ದು
ರ್ಭಾವಿಗಳ ಬರವು ಲೇಸವರ ಮತವಿಪಿನಕ್ಕೆ
ದಾವಾಗ್ನಿಯಾನೆಂದು ನಿಶ್ಚಯಿಸಿ ವಾದಕ್ಕೆ ಕುಳ್ಳಿರ್ದನೇಳ್ಗೆಯಿಂದಾ ೧೮

ಏವೇಳ್ವೆನಿಷ್ಟಗಿದಿರಾಗಿ ನಾಲ್ವತ್ತೆಂಟು
ಸಾವಿರಧರ್ಮರು ಬಹುಮತಪ್ರಜ್ಞರಧಿಕದು
ರ್ಭಾವಿಗಳು ಕುಳ್ಳಿರಲು ಕಂಡು ಗೌತಮನು ಗಹಗಹಿಸಿ ನುಡಿದಂ ಬಳಿಕ್ಕಾ
ಶೈವಮಾರ್ಗಭ್ರಷ್ಟರೆಯಿತಂದಿರೇ ವಾದ
ಕೀ ವಸುಧೆಯಲ್ಲಿ ಪರಿಕಿಸಲಾಗಿ ನಿಮ್ಮೊನಿಮ್ಮೊಳಗೆ
ನೀವು ಸೇರುವೆಗಳೇ ಎಂದು ತತ್ತತ್ಕ್ರಮಂಗಳೊಳೆ ಬೆಸಗೊಳುತಿರ್ದನೂ ೧೯

ಕೀರ್ತಿಪರಗೌತಮಂ ಮೊದಲು ತೊಡಗಿದನಷ್ಟ
ಮೂರ್ತಿವಾದವರೊಳಿಳೆ ದೈವವೆಂಬವನ
ಕೂರ್ತು ಬೆಸಗೊಂಡನೆಲೆ ನಿನ್ನ ಮತವಾವುದಾ ಭೂಮಿಯತಿಶಯದಲೋಕಾ
ವಾರ್ತೆಯಲ್ಲದೆ ತತ್ಪ್ರಮಾಣಮಂ ಪೇಳೆನ
ಲ್ಕಾರ್ತಿಸ್ವರೂಪರಾಡಿದರಲ್ಲಿ ಸರ್ವಪ್ರ
ವರ್ತಿಸಕಲಾಧಾರ ಧೈರ್ಯ ಸರ್ವತ್ರ ಜೀವಸ್ವರೂಪೆಂದರಾಗಾ ೨೦

ಎಲೆ ಭೂಮಿಯೇ ದೈವವೆಂಬ ವಾದಿಯೆ ನಿನ್ನ
ನೆಲೆಯ ನಾನು ಸುರುವೆಂ ಧರೆ ಸರ್ವಕಾಧಾರ
ವಲಘು ಸುಪ್ರಾಣಿಗಳಿಗಂನವೆನಿತಲ್ಲಿ ಬೆಳೆಯದೊಡೆ ಜಗವೆಂಬು ದಿಲ್ಲಂ
ಸುಲಲಿತದ ಬಹುಧಾನ ತೃಣ ಗುಲ್ಮ ಲತೆ ವೃಕ್ಷ
ಕುಲವಿಲ್ಲದೊಡೆ ಸರ್ವಜೀವಗಳು ಮುನ್ನವಿ
ಲ್ಲಲೆ ಪುಣ್ಯಸುಕ್ಷೇತ್ರಗಳ ಮೆಟ್ಟಿ ನೋಡಿದೊಡೆ ಫಲವೀವವೆಂಬೆಯಲ್ಲಾ ೨೧

ಭೂಮಿಗುಣ ವಸ್ಥಿ ಮಾಂಸ ತ್ವಚಂ ನಾಡಿಯಾ
ರೋಮಾದಿ ಪಂಚಕಂ ತನ್ನಿಮಿತ್ತದೊಳೆ ಧರೆ
ಯಾ ಮಹಾದೈವವೆಂದೆಂಬೆಯಾ ವಾದಿ ಕೇಳದಕೆ ಖಂಡನೆಯನೊರೆವೆಂ
ಆ ಮಹಿಯೆ ದೈವವಾದೊಡೆ ವಿಲಯವಪ್ಪುದೆ
ಸಾಮರ್ಥ್ಯದನುಜಪದಹತಿಯಿಂದ ನೋವುದೆ
ಯಾಮಲಲೋಕೋಚ್ಛಿಷ್ಟಕಾಸ್ಪದಂ ತಪ್ಪದೆ ತಮಮಂ ಸುರುಳಿ
ಪಾತಾಳಕೊಯ್ಯೆ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಿಶ್ವನಾಥನ ನಿರೂಪದಿಂ ಹರಿ ವರಾ
ಹಾವತಾರದೆ ದುಷ್ಟನಂ ಕೊಂದು ನೆಲೆಯಲ್ಲಿ
ಈ ವಸುಧೆಯಂ ನಿಲಿಸಿದಂ ಕೊಂಡು ಹೋದ ದನುಜಂ ದೈವವೋ ಬಳಿಕ್ಕಾ
ಆ ವಿಷ್ಣು ದೈವವೋ ಮೊದಲು ನಿರವಿಸಿದ ಲೋ
ಕಾವಳಿಗೆ ಕರ್ತುವಾದೀಶ್ವರಂ ದೈವವೋ
ಭಾವಿಸದೆ ಧರಣಿಯೇ ದೈವವೆಂದೆಂಬ ನಿನ್ನಯ ಮಾತು ಹಾಯ್ಕಿತೆಂದಂ ೨೩

ನುತ ಭೂಮಿಕಂಪನಂ ಗಿರಿ ಕಂತುಕಾಟನಂ
ಕ್ಷಿತಿವಿಯತ್ತಳನರೆಂದೆಂಬ ಗಣಮುಖ್ಯರಿಂ
ದತಿ ಬಾಧೆವಡೆವುದೇ ಬಿಡಾ ದೈವವಲ್ಲಿ ಸದ್ಯೋಜಾತವದನದಿಂದಾ
ಶಿತಿಕಂಠನೇ ಪಡೆದ ಕರ್ತುಪೃಥ್ವ್ಯಾಶ್ಚದೈ
ವತವಲಾ ಬ್ರಹ್ಮನೀಶಾಜ್ಞೆಯಿಂದದರಿನುಂ
ನತದೊಡೆಯ ನಭವನಲ್ಲದೆ ಧರಣಿಯಲ್ಲ ನಿನ್ನಯ ಮಾತ ತೆಗೆಯೆಂದನೂ ೨೪

ಧರೆಯಧಿಕವೆಂದವನ ಮುರಿದ ಬಳಿಕಪ್ಪುಉರು
ತರ ದೈವವೆಂಬ ಜಡವಾದಿ ಗೌತಮನ ಕೂ
ಡರರೆ ನುಡಿದಂ ಸರ್ವಜೀವನಂ ಷಡ್ರಸದ ರೂಪಿನಿಂದೀ ಲೋಕದಾ
ನರಮುಖ್ಯರಿಗೆ ಸಪ್ತಧಾತುಮಯುವಾಗಿರ್ಪ
ಶರಿರವಪ್ಪುದು ತಾನೆಯರ್ಘ್ಯಪಾದ್ಯಾಚಮನ
ವರ ಮಜ್ಜನಾದಿ ಭೋಜನ ಶುಚಿತ್ವಕ್ಕೆ ತಾನೇಯಲಾ ಬಳಿಕ ಕೇಳೂ ೨೫

ನುತ ಸರ್ವಧಾನ್ಯವಾ ತರು ಗುಲ್ಮ ತೃಣಕುಲಂ
ಲತೆ ಮುಖ್ಯವಾದವಪ್ಪಿಲ್ಲದೊಡೆ ಬೆಳೆಯುವು
ನ್ನತ ಪಂಚಕೋಶಮಯುವೀ ದಿವ್ಯದೇಹಮೆಂಬರ್ಥದಿಂದಂ ಬಳಿಕ್ಕಾ
ವಿತತ ದೇಹಸ್ಸೋನ್ನಮಯವೆಂಬ ಕಾರಣ
ಸ್ಥಿತಿಯಿಂದ ಸರ್ವಜೀವಮಯಂ ಚ ಆಪ ಎನೆ
ಮತಿವಂತರಱಿಯೆ ಜೀವನವೆನಿಸಿದುದಕವೆಲೆಗೌತಮಾ ಮತ್ತೆ ಕೇಳೂ ೨೬

ಆದೊಡಂ ಕೇಳು ಲಾಲಾ ಮೂತ್ರ ಮುಂತಾದ
ಸ್ವೇದ ಶುಕ್ಲಂ ಶ್ರೋಣಿತಂಗಳೇ ಜಲದ ಗುಣ
ವಾದುದಲ್ತೇ ದಿವ್ಯತೀರ್ಥಂಗಳಖಿಳ ಮುಕ್ತಿಯ ಕೊಡುವುದೇನಿಲ್ಲವೇ
ಸಾದರದೊಳದುಕಾರಣಂಗಳಿಂ ನೋಡೆ ಸೌ
ಖ್ಯೋದಕಂ ತವೆ ದೈವವೆನಲಾಗಿ ನಗುತಲಾ
ಹ್ಲಾದದಿಂ ಗೌತಮಂ ತದ್ರೋಹಿಯಂ ಖಂಡಿಸುವ ವಾಕ್ಯಮಂ ನುಡಿದನೂ ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿಗೆಯುಪ್ಪು ದೈವವಾದೊಡೆ ಶಿವಂ ನೊಸಲ ಕಂ
ಣ್ದೆಗೆದಲ್ಲಿಯುಂ ನಾಟ್ಯಕೆಯ್ದು ನಿಂದಲ್ಲಿಯುಂ
ನಗೆ ನಕ್ಕ ತಾಣದೊಳಗಂ ಜಗತ್ಪ್ರಳಯುವಪ್ಪಲ್ಲಿ ನೀರೆಲ್ಲಿರ್ದುದೈ
ಸುಗುರು ಕಾಲಾಗ್ನಿರುದ್ರಂಗಾ ಶಿವಧ್ಯಾನ
ಮುಗಿದು ನೋಳ್ಪಲ್ಲಿಯಾ ಬ್ರಹ್ಮಾಂಡವೆಲ್ಲವುಂ
ಧಿಗಿಲಿಟ್ಟು ಬೇವಾಗ ಉದಕವೇನಾದುದೈ ಕೇಳಧಮ ಎಂದನಾರ್ಯ್ಯಂ ೨೮

ಬಳಿಕ ಶಂಕರನಾಜ್ಞೆಯಿಂದೆ ದೇವೇಂದ್ರಂಗೆ
ಮಳೆಯೆಲ್ಲವುಂ ವಶಂ ಗಂಗಾಧರಾಖ್ಯವ
ಗ್ಗಳದೀಶ್ವರಂಗೆಯಾ ವಾಮದೇವಾದ್ಯವೆ ಜಲಮೆಂಬ ವಾಕ್ಯಮುಂಟೂ
ವಿಲಸಿತಜಲೇ ವಿಷ್ಣು ದೈವತೆ ಎನಿಪ್ಪರ್ಥ
ದೊಳು ಸಾಗರಾಪೋಷಣಾಖ್ಯಗಣನಿವಹನಾಗಿ
ಜಳಕೆ ಹುಟ್ಟಿದ ತಾಣವಧಿದೈವವಾಗಿಹುದು ದೈವವೆ ತೆಗೆ ಎಂದನೂ ೨೯

ತ್ರಿಣಯನಿಷ್ಠನೊಳಗ್ನಿಯೇ ದೈವವೆಂದೆಂಬ
ಬಣಗು ನುಡಿದಂ ವಹ್ನಿಯಿಲ್ಲದೊಡೆ ಜಗದೊಳ
ಟ್ಟಣಲಿಲ್ಲವಿರುಳೇನುವಂ ಕಾಣಲಿಲ್ಲಂ ಕ್ಷುಧಾ ತೃಷಾದಿಗಳು ನಿದ್ರೆ
ಅಣೆಯುರದೊಳಾಲಸ್ಯ ಸಂಗಮಂಗಳು ಪಂಚ
ಗುಣವಗ್ನಿಗೆಂದೆಂಬ ವಾಕ್ಯಾರ್ಥದಿಂದಲ
ಗ್ರಣಿ ಯಜ್ಞಕರ್ತುಂ ಹವಿಸ್ಸ್ಮೃತವೆನಿಪ್ಪ ಬಗೆಯಿಂದಧಿಕವೈ ಬಳಿಕ್ಕಾ ೩೦

ಅಗ್ನಿ ಭುಗ್ದೇವತಾ ಸೃಷ್ಟಿ ಎಂಬರ್ಥದಿಂ
ವಾಗ್ನವ್ಯ ಯಜ್ಞೇನ ಸುಸ್ವರ್ಗಭೋಗವ
ತ್ತ್ರಗ್ನಿಶ್ಚ ಸರ್ವಕಾರಣಮೆಂಬ ವಾಕ್ಯದಿಂ ದೇವರ್ಕಳಿಗೆ ತೃಪ್ತಿಯಾ
ಅಗ್ನಿ ಮಾಡುವನಲಾ ಜನ್ಮದಿಂದಂ ಸ್ವರ್ಗ
ರುಗ್ನಿಚಿತಪದವಲ್ತೆ ಸರ್ವಕಾರಣ ರೂಪ
ನಗ್ನಿಯೇ ಬ್ರಾಹ್ಮಣಾನಾಮಗ್ನಿ ಗುರುವೆಂಬುದಱಿ ನೀಂ ವಹ್ನಿ ದೈವಂ ೩೧

ತ್ರಿಜಗದೊಳಗಗ್ನಿಯೇ ದೈವವೆಂದಾಡುತಿಹ
ಕುಜನಂಗೆ ಗೌತಮಂ ನುಡಿದನಾ ಶಿವನಲಿಂ
ಗಜವೀರ್ಯ್ಯಮಂ ಕೊಂಡು ಬಳಲುವನೆ ಸರ್ವಮಂ ತಿಂಬನೇ ಭಗ್ನಯಜ್ಞಾ
ಭುಜ ಸಪ್ತಜಿಂಹ್ವಾರಸನ ಸಂಹರನುಮೆಂಬ
ವಿಜಯ ದಕ್ಷಾಧ್ವರದೊಳಾ ವೀರಭದ್ರರು
ದ್ರಜನಿಂದಲೇಳು ನಾಲಗೆಗಳಂ ಕೀಳಿಸಿಕೊಂಡಾ ತೋಳುಕಡಿವಡೆವನೇ ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಣಿಯುರದೊಳಾ ಯಕ್ಷರುದ್ರನಂದಿರಿಸಿದಾ
ತೃಣವನುರುಪಲ್ಯಾಱದಲ್ಲಿ ಲಘುವಾಗನೆ
ಗಣಮುಖ್ಯ ವಡಬಾಗ್ನಿ ತಿಲಕನಬ್ಧಿಯು ಕುಡಿವ ವಡಬಾಗ್ನಿಯಂ ತನ್ನಯಾ
ಪಣೆಯಲ್ಲಿ ಬೊಟ್ಟನೆಡನೇ ಪ್ರಮಥಕುಲದೊಳ
ಗ್ರಣಿ ಮಹಾಪ್ರಳಯಾಗ್ನಿ ಖೇಳನನ ಕಯ್ಯೊಳಾ
ಕ್ಷಣದಲ್ಲಿ ಹಲಗೆಯಾಗನೆ ವೀತಿ ಹೋತ್ರನೇತರ ದೈವವೈ ನಿಕೃಷ್ಟಾ ೩೩

ವಿನುತಿಸಲ್ಕಂತಘೋರಾದ್ವಹ್ನಿರಿತ್ಯುಕ್ತ
ವೆನೆ ಶಿವನ ಘೋರ ಮುಖದಿಂದ ಪುಟ್ಟಿದನಲಾ
ಅನಲಂ ತಥಾ ರುದ್ರಮೆನೆ ಹುತಾಶನಮೆನಲು ರುದ್ರನಧಿದೈವವಗೇ
ವಿನುತಾನ್ನಮಯ ಲಿಂಗಮೆನಲನ್ನಲಿಂಗಮಂ
ದಿನ ದಿನದೊಳರ್ಚಿಸುವನಂ ದೈವವೆಂಬ ನಿ
ನ್ನನಿತು ನುಡಿಯೆಲ್ಲಂ ನಿರರ್ಥಕಂ ತೆಗೆ ಎಂದು ಧಿಕ್ಕರಿಸಿದಂ ಗೌತಮಃ ೩೪

ಮಾಣದಾ ವಾಯುವೇ ದೈವವೆನುತಿರ್ದನಾ
ಕ್ಷೀಣಮತಿಯತಿ ನಿಷ್ಠನೊಳಗೆ ವಾಯುರ್ಜಗ
ತ್ಪ್ರಾಣ ಎಂಬರ್ಥದಿಂ ಎಲ್ಲಕ್ಕೆ ಜೀವವಾತಂ ವಾಯುವಿಲ್ಲದಿರಲೂ
ಕ್ಷೋಣಿಯೊಳಗೂಷ್ಣದಿಂ ಬಾಳ್ವರಾರೈನೆಱಿಧು
ರೀಣದಿಂ ವಾಯುಧಾರಣ ಸುಯೋಗೇನ ಸ
ತ್ಪ್ರಾಣ ನಿತ್ಯತ್ವಗಸುಸಂಭವತಿ ಎನಲು ಯೋಗಿಗಳಱಿಹಿಗಿದು ಮುಖ್ಯವೈ ೩೫

ಗುರ್ವಿನಿಂದಂ ಸ್ವರಾಭ್ಯಾಸಂ ಕೃತಂ ಚೈವ
ಸರ್ವಜ್ಞತಾಮವಾಪ್ನೋತಿ ಎಂಬರ್ಥದಿನ
ಲರ್ವಸುಸ್ವರ ಶಾಸ್ತ್ರವಱಿದಗ್ರಣ್ಯರಪ್ಪರು ಕಣಾ ಪರಿಭಾವಿಸೇ
ಊರ್ವಿಯೊಳು ದಶವಾಯುರೂಪೆನ್ನ ದೇಹಮೆನೆ
ಪೂರ್ವ ವಚನಂ ಚರಂತಿ ಎನಲ್ಕೆ ಚರಿಸುಗುಂ
ನಿರ್ವ್ಯಾಪ್ತಿಯಿಂದಲಱಿಯಾ ಸದಾಗತಿ ಮುಖ್ಯವೆಂದು ನುಡಿವುತ್ತಿರ್ದನೂ ೩೬

ವಾವನಂ ವಲ್ಗನಂ ಕುಂಚನಂ ಪ್ರಸರಣಮು
ಮಾ ವಿಯೋಗಂ ಪರಿವ ಪಾಱುವ ಸುಳಿವ ಕೂಡು
ವಾ ವಿಶೇಷದಿನಗಲುವೈದುವಾಯುವಿನ ಗುಣ ತೀವ್ರಗತಿ ಮಂದಗಮನಾ
ಓವಿ ಚೇತರಿಪ ಕಂಗಳ ಮುಚ್ಚಿ ತೆರೆಯಿಸುವ
ಗಾವರದೆ ಹಾಡಿಸುವ ನುಡಿಸುವ ನಳಿಯಿಪೀ
ವ್ಯಾವಹಾರಿಕವೆಲ್ಲ ಪವನನಿಂದಕ್ಕುಮದಱಿಂದ ವಾಯುವೇ ದೈವವೈ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಯುವೇ ದೈವವೆಂಬಾತನಂ ಖಂಡಿಸಿದು
ಪಾಯುವೆಂತೆನೆ ಗಂಧ ದುರ್ಗಂಧಪೆಯುಮುಮು
ಪೇಯು ಮುಂತಾದ ಮುಮನಾವ್ರತದ ಮಾಡಿಕೊಂಡಿಪ್ಪುದೇ ದನುಜರ್ಕಳಿಂ
ಈಯುವೆನಿಯಲ್ಲಿ ಭಂಗಂ ಬಿಡುವುದೇ ದಕ್ಷ
ನೋಯಾರದಿಂ ಸಮೆದ ಯಜ್ಞದೊಳ್ಪ್ರಸಲದಿಂ
ನೋಯೆ ತಿವಿಯಿಸಿಕೊಂಡು ತೊಡೆಯು ಮುರಿವುದೆ ಯಕ್ಷರುದ್ರನಿಂ
ಲಘುವಪ್ಪುದೇ ೩೮

ಮೇಲೆಯಾ ಸರ್ಪಗುಣಸಪ್ಪುದೇ ವಾಯು ದಿ
ಕ್ಪಾಲರೊಳಗೊಬ್ಬನಾಗಿರ್ದಿಂದ್ರ ಹರಿ ವಿಧಿಯು
ನೋಲಱಿಪನೇ ಚಲನೆಯುಳ್ಳವಂ ನಿಶ್ಚಲಮಹೇಶಂಗೆ ಸರಿಯಪ್ಪನೇ
ಆ ಲಾಲಿತಾಕಾಶದೊಳಗಡಗಿಹುದೆ ಶಿವಾ
ಲೋಲ ತತ್ಪುರುಷಾನ್ಮಹಾವಾಯು ತತ್ಪ್ರಾಣ
ನಾಲಿಸು ಸಮುತ್ಪನ್ನಮೀಶ್ವರನೆ ಪವನಗಧಿದೈವವೆಂಬುದನಱಿಯೆಯಾ ೩೯

ಹಿತ್ತಾಳೆಯುರಿಲಿಂಗವಂತಾಗಿಯೊಗೆದರಾ
ವುತ್ತಮದೊಳೆಧಿದೈವವುಳ್ಳದದು ದೈವವ
ಲ್ಲತ್ತೇಳೆನುತ್ತವನ ಗೌತಮಂ ಮುಱಿಯೇ ಬಳಿಕಾಕಾಶದೈವವೆಂಬಾ
ಮತ್ತೆನಾಡುವ ಮಾತದೆಂತೆನಲು ಬಯಲಾಗಿ
ಗುತ್ತ ಹಿಡಿತಕೆ ಬಾರದಖಿಳ ಸವ್ಯವಹಾರ
ದತ್ತಲಾಗದು ಮಿಕ್ಕ ತತ್ವಂಗಳಿಗೆ ತಾನೆಯಾಶ್ರಯಂ ಪರಿಭಾವಿಸೇ ೪೦

ಉತ್ತಮದ ಶಬ್ದಮಯುವಾ ಶಬ್ದದಿಂದಲಾ
ಗುತ್ತಿಪ್ಪವಖಿಲಾಗಮಾಮ್ನಾಯ ಶಾಸ್ತ್ರಗಳ
ವೊತ್ತ ರಾಗದ್ವೇಷ ಭಯ ಲಜ್ಜೆ ಮೋಹಂಗಳಾಕಾಶಗುಣವೆಂಬುದೈ
ಎತ್ತೆತ್ತಲಾಕಾಶವೀಗ ಮಹದಾಕಾಶ
ವತ್ತ ಪೂರ್ಣತೆಯೊಳಿಪ್ಪುದು ಕಣಾ ಕೇಳ್ನಿನ್ನ
ಚಿತ್ತವಱಿವಂತಾಗಸಂ ದೈವವೆಂದ ವಾದಿಗೆ ನುಡಿದನಾ ಗೌತಮಂ ೪೧

ಆಕಾಶವೇ ದೈವವಾದೊಡೆ ಯುಪೇಯುಪೇ
ಯಾಕಲಿತ ಗಂಧ ದುರ್ಗಂಧಂ ಸುಕರ್ಮವಾ
ನೈಕೃಷ್ಟ ದುಷ್ಕರ್ಮ ಮುಂತಾದವಕ್ಕೆಯಾಶ್ರಯವಾಗಿ ಯೊಳಕೊಳ್ಳುತಾ
ಆಕಾಶ ಧೂಮ್ರ: ವರ್ಣಂ ಚ ಎನೆ ನಾಮರೂ
ಪಾಕಾಶವಾದುದೇ ದೈವವೇ ತಿಳಿವುದೈ
ಕಾಕನೇ ವ್ಯೋಮಕ್ಕತೀತ ಶಿವನೆಂದ ಬಳಿಕೆಂತಂಬರಂ ದೈವವೈ ೪೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯೋಮ ವಾವ್ಯೋಮಾ ವಿವರ್ಜಿತ ಮಣೋರಣೀ
ಯಾ ಮಹನ್ಮಹದೆಂಬ ಸೂಕ್ಷ್ಮಾಚ್ಚ ಸೂಕ್ಷ್ಮವೆನೆ
ನೈಮಿತ್ತ್ಯ ಸರ್ವಪೂರ್ನ್ನಂಬರಂ ಶಿವನೆಂಬ ಬಗೆಯನಱಿ ಎಲವೊ ತತ್ವಾ
ನಾವಧಿಕ ಶಿವನ ಧೀಶಾನಾಚ್ಚ ಗಗನ ಎನೆ
ಸಾಮರ್ಥ್ಯ ಪಂಚಮಬ್ರಹ್ಮಮಯಜಗದೆಂಬ
ಈ ಮಾಳ್ಕೆಯಾ ಪಂಚಭೂತಶಿವವಕ್ತ್ರಾತ್ಸಮುದ್ಭವ ಎನುತ್ತಿರಲ್ಕೇ ೪೩

ಆಕಾಶಕಂ ಸದಾಶಿವನೆಯಧಿದೈವ ತಾ
ಪ್ರಾಕಟಂ ತೋಱಿ ಹುಟ್ಟಿದ ಠಾವದಧಿಪರಿರ
ಲೇಕೆ ತಾಂ ದೈವವಹುದೈ ಭ್ರಷ್ಟನುಡಿಯಬೇಡೆಂದವನ ಮುಱಿದ ಮಹಿಮಾ
ಸ್ತೋಕ ಗೌತಮನೊಡನೆ ಸೂರ್ಯನೇ ದೈವವೆಂ
ಬಾ ಕಾಕನುಸುರ ತೊಡಗಿದನು ಕೇಳೈ ತರಣಿ
ಯೇ ಕರ್ಮ ಸಾಕ್ಷಿಸ್ವರೂಪನಾಗಿಪ್ಪನೈ ಜಗದ ಹೆಗ್ಗಣ್ಣಾತನೂ ೪೪

ಆವನ ಕಿರಣಂಗಳಿಂ ಮಳೆಹುಯ್ಯದಿರ್ದೊಡೀ
ಭುವನದೊಳಗಖಿಳ ಜೀವಂಗಳಿಲ್ಲಂ ಕಣಾ
ರವಿ ಸರ್ವಗತನೆಂಬುದಕ್ಕೆ ಚಿತ್ರಂ ದೇವ ಎಂಬಾ ಶ್ರುತಿ ಪ್ರಮಾಣಂ
ತವೆ ಸರ್ವವಿನನಿಂದ ಬಲಿಯಣವದಿಲ್ಲ ದಿ
ರ್ದವಸರಂ ಜಗವೆಂಬುದಿಲ್ಲಂ ತ್ರಿಸಂಧ್ಯಂಗ
ಳವಿರತಂ ಹಗಲಿರುಳು ಘಳಿಗೆ ಜಾವಂ ಮುಖ್ಯವಿಲ್ಲೆಂಬುದದು ನಿಶ್ಚಯಂ ೪೫

॥ಸಾಕ್ಷಿ॥ ಚಿತ್ರಂ ದೇವಾನಾ ಮುದಗಾದನಿಕಂ ಚಕ್ಷುಮಿತ್ತ್ರಸ್ಯವರುಣಸ್ಯಾಗ್ರೇ
ಆಪ್ರೋದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯಆತಃ ಪಿತರಸ್ತುಸಶ್ಚ ಇತಿ ೫

ಅದುಕಾರಣಂ ಸೂರ್ಯನೇ ದೈವವೆಂದವನ
ವದನವಮಂ ತಾಡಿಪಂದದೆ ಗೌತಮಾಖ್ಯನಾ
ಡಿದನಿನಂ ದೈವವಾದೊಡೆ ಕೇತುವೆಂಬಾ ಗ್ರಹಂ ನುಂಗಲೊಳಗಪ್ಪನೇ
ಪದವೂರಿ ನಿಲೆ ಕಾಲಮಂ ಕಾಣದಾವಗಂ
ಮದನಾರಿಯಿಪ್ಪ ಮೇರುವ ತಿರಿಗಿ ಬಪ್ಪನೇ
ಯುದರ ಹೊಯ್ದಂ ವೀರಭದ್ರನಾ ಪೂಷದಂತವನೆಂಬುದಕ್ಕೆ ವೇದಂ ೪೬

॥ಸಾಕ್ಷಿ॥ ತಸ್ಮಾತ್ಪೂಷೋ ಪ್ರವಿಷ್ಟಭಾಗೋದಂತಕೋಹಿತಂ ದೇವಾ
ಅಬ್ರುವನ್‌ದ್ವಿಧಾ ಆಯುಮರ್ಥಪರಿತ್ರಯೋವಾ ಆಯುಮಭೂದಿತಿ ೬
ತಥಾದಿತ್ಯಪೌರಾಣೇ

ಪೂಷೋ ದಶನಲೇಖಾಂಶ್ಚ ದೀಪ್ತ ಮುಕ್ತಾವಳೀಮಿವ
ಜಘಾನದನುಷಃ ಕೋಟ್ಯೋ ಭದ್ರಃ ಪರಮ ವೇಗವಾನ್ ೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಕಲಕೇಳ್ಸೈ ಪ್ರಮಥನೋರ್ವನಾ ಸೂರ್ಯ ಖೇ
ಟಕನೆಂಬವಂ ಹರಿಗೆಯಾಗಿ ಹಿಡಿಯನೆ ಗಣಾ
ಧಿಕ ಭಾನುಕಂಪನನಂದಂ ಭಂಗವಡೆಯನೇ ಸುಕೇಶಿಯ ವಿರೋಧದಿಂದಂ
ಅಕಟ ನೆಲದೊಳು ತಾಳ ಹಣ್ಣಂತೆ ಬಿದ್ದುರುಳಿ
ಸುಕರ ಕಾಶಿಯೊಳು ಬಾಲಾರ್ಕೇಶ ಲಿಂಗಮಂ
ಪ್ರಕಟದಿಂ ಭಜಿಸನೇ ರವಿ ತಾಮ್ರಲಿಂಗಮಂ ನಿಚ್ಚ ಪೂಜಿಸುತಿರ್ಪನೂ ೪೭

ಸಲೆ ದಕ್ಷಿಣಾಕ್ಷಿ ರವಿ ಎಂಬಂರ್ಥದಿಂ ಶಿವನ
ಬಲದ ಕಣ್ಣಾಗಿ ಚಕ್ಷುಸ್ಸ್ಯಾರ್ಥಜಾಯತ ಸು
ವಿಲಸದುತ್ಪತ್ತಿಯಾಗನೆ ಹರನ ಕಣ್ಣಿಂದ ಮತ್ತೆಯದಿತಿಗೆ ಪುಟ್ಟುತಾ
ಮಲಹರನನುಜ್ಞೆಯಿಂದಿರ್ಪಾತ ದೈವವೇ
ನಳಿನಸಖನಧಿಕ ಘಂಟಾಕರ್ಣನಿಂ ಕುಷ್ಟ
ನೆಲಸಿಯಾತನ ಕೃಪೆಯ ಪಡೆದನದಱಿಂ ದೈವವಲ್ಲವೆಂದವನ ಮುಱಿದಂ ೪೮

ತರಣಿಯೇ ದೈವವೆಂದೆಂಬ ವಾದಿಯನು ಸುರು
ಚಿರಗೌತಮನು ಮುಱಿಯಲಿನ್ನು ನಾನಿರ್ಪನೆನು
ತಿರದೆ ಚಂದ್ರನೆ ದೈವವೆಂಬಾತನಿಂತೆಂದ ನಕ್ಷಪಾದಾ ಕೇಳ್ವುದೈ
ಕಿರಣಂಗಳಿಂದಿಂದು ಶಶಿಗಳಂ ಬೆಳೆಯಿಸುವ
ನರರೆ ಸಸ್ಯಾಧಿಪತಯೇಶ್ಚಂದ್ರ ಎನೆ ಸುಸೌಂ
ದರದೆ ಚಂದ್ರೋ ಎನುತಂ ಶಾಂತಿ ಸಂಭವಂ ಎನಲಾತನೇ ವರೇಣ್ಯಂ ೪೯

ನಕ್ಷತ್ರಕನ್ನಿಕಾಪತಯೇಶ್ಚ ಎನುತಿರಲು
ನಕ್ಷತ್ರ ಸಪ್ತವಿಂಶಕ ಚಂದ್ರಸತಿಯರಾ
ನಕ್ಷತ್ರದಿಂದ ಮಳೆಕಱಿವವಾ ಜ್ಯೋತಿಷಂ ಲಗ್ನಂ ಶುಭಾಶುಭಗಳೂ
ಈಕ್ಷಿತಿ ವ್ಯವಹಾರವೆಲ್ಲವಂತಾದವಾ
ಸಾಕ್ಷಾತ ದಿವ್ಯಾಮೃತಾಂಶುಗಳಿನೇಳ್ಗೆಯಿಂ
ರಕ್ಷೆಯಾಗುತ್ತಖಿಳ ಧಾನ್ಯಂಗಳಪ್ಪವವಱಿಂ ಜನಂ ಜೀವಿಪುದಲ್ತೆ ೫೦

ಪರಿಕಿಸಲ್ಕಖಿಲೌಷಧಿಗಳಪ್ಪವದಱಿಂದ
ಪರಿಹರಿಪವೈ ಸಕಲರೋಗಂಗಳಂತಾಗಿ
ಧರಣಿಯೊಳು ಚಂದ್ರನೇ ದೈವವೆಂದೆಂಬ ವಾದಿಯ ನೋಡಿ ನಸುನಗುತ್ತಾ
ವರ ಗೌತಮಂ ನುಡಿದನಾ ಚಂದ್ರದೈವವೆನೆ
ತರುಣಿಯರ ಕಥದಿಂದ ದಕ್ಷಶಾಪಂ ಬಂದು
ಶರಿರವೆಲ್ಲಂ ಸವೆದು ನವೆವನೇಯಂತುಮಲ್ಲದೆ ಕೇಳು ಮತ್ತೆ ಪೇಳ್ವೆಂ ೫೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುರಪನೈಶ್ವರ್ಯವಾ ಮುನಿಶಾಪದಿಂ ಪೋಗ
ಲಿರದೊಡನೆ ಚಂದ್ರಮಂ ತಾಂ ಪೋಗಿ ನೀರಲ್ಲಿ
ನೆರೆದಮೃತಮಥನದೊಳು ಮರಳಿ ಹುಟ್ಟುವನೆ ದಕ್ಷನ ಯಜ್ಞಶಾಲೆಯಲ್ಲೀ
ವರ ವೀರಭದ್ರದೇವರ ಪಾದಹತಿಯಿಂದ
ಧರೆಯಲ್ಲಿ ಪುಳುವಿನಂತೊರಸಿಕೊಂಬನೆ ರಾಹು
ಪರಿದಡರಿ ಪಿಡಿಯಲೊಳಗಪ್ಪನೇ ಸೋಮ ಕಂಪನಭಯದಿ ನಡುಗುತಿಹನೇ ೫೨

ಓಜೆಯಿಂ ವಾಮನೇತ್ರಂ ಚಂದ್ರಮಾ ಎನಲು
ನೈಜವೇದಂ ಚಂದ್ರಮಾ ಎನುತ ಮತ್ತೆ ಮನ
ಸಾಜಾತ ಎಂಬರ್ಥದಿಂ ಶಿವನ ಕಣ್ಣಾಗಿ ಭವನ ಮನದಿಂ ಪುಟ್ಟಿತಾ
ಪೂಜೆಯಂ ಮಾಳ್ಪನಾ ಮೌಕ್ತಿಕದ ಲಿಂಗವಂ
ಈ ಜಗದೊಳದುಕಾರಣಂ ವಾದಿ ಕೇಳು ಸರ
ಸೀಜಾತವೈರಿಯಂ ದೈವವೆನಬೇಡವೆಂದೊಗವಿ ನುಡಿದಂ ಗೌತಮಂ ೫೩

ಭೂಲೋಕಪಾವನಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃಪುರಾಣಮಂ ಕೂರ್ತು ಪದನಂ ಮಾಡಿದಂ ೫೪

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಚಂದ್ರ ದೈವವೆನೆ ಖಂಡಿಸಲ್ಕೊಮ್ಮಱು ಕಾಂಡದ ಮೇಲೆ ಸಂಧಿ
ಮೂಱು ೫೫

ಅಂತು ಸಂಧಿ ೩ ಕ್ಕಂ ಪದನು ೧೭೨ ಕ್ಕಂ ಗ್ರಂಥ ೪೨ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೦

ಆತ್ಮದೈವವಾದಿ ನಿರೀಶ್ವರವಾದಿಗಳಂ ಗೌತಮನು ಗೆದ್ದ ಕಥೆ

ಆಯಾತ್ಮನೇ ದೈವವೆಂದೆಂಬನ ನಿರೀಶ್ವರನ
ಬಾಯಾರಿ ವೇದಸ್ವಯಂಭು ಜಗವೇ ನಿತ್ಯ
ವೀಯಧಿಕವೆಂದು ವಾದಿಪರ ವಿಖ್ಯಾತಮಂ ಮುಱಿದನಂತಾ ಗೌತಮಂ

ಶ್ರೀ ಗಾರ್ಗ್ಯ ಮುನಿವಂದ್ಯಭೋಗಾದಿರಹಿತ ಮಹಿ
ಮಾಗಾರ ಮಾಹೇಶರೋಗಾಂಬುಜೇಂದು ಸು
ತ್ಯಾಗಾಬ್ಧಿ ಸರ್ವೇಶ ನಾಗಾಜಿನಾಂಬರನೆ ಯಾಗಾದಿನಾಥ ವಿನುತಾ
ವೈಗಾನಸುಪ್ರೀತ ಯೋಗಾರ್ಚನೇಷ್ಟನೇ
ರಾಗಾಮಲಖ್ಯಾತಭಾಗಾಜ್ಯಮಸ್ತಕನೆ
ವಾಗಾಪ್ತವರನೆ ಸುಖಪೂಗಾಖಿಲಾಗ್ರಮಹಿಮಾಗಾತ್ರ ಶಾಂತಮಲ್ಲಾ ೧

ಜೀವಾಂತರಾತ್ಮ ಪರಮಾತ್ಮ ಚೇತನರೂಪ
ಪಾವನ ಚತುರ್ದಶಧರಾಜನಾಧೀಶ ವೇ
ದಾವಳೀ ಮಸ್ತಕನ್ಯಸ್ತಪಾದಾಂಬುಜಾ ನಿತ್ಯ ಲೋಕಾವಳಿಗಳಾ
ಆವಗಂ ರಕ್ಷಿಸುವ ನಿತ್ಯ ಮಹಿಮೆಯನುಳ್ಳ
ದೇವಾಧಿದೇವನಪರಾಂಗ ಮೇಲಣಗವಿ
ಪ್ರಾವರಚರಾನಂದ ಮೂರ್ತಿಯಹ ಶಾಂತನಂಜೇಶ ಜಯ ಶುಭ್ರಕೀರ್ತೀ ೨

ಆ ವಾದಿಯಂ ಮುರಿದನಂತರಂ ಬಳಿಕಾತ್ಮ
ನೇ ವಸ್ತುವೆಂಬಾತನಲ್ಲಿ ನುಡಿದಂ ಗೌತ
ಮಾ ವಿವೇಕದಿ ಕೇಳ್ವುದಾತ್ಮನಿಲ್ಲದೊಡೆ ಕರ್ಮೇಂದ್ರಿಯಾಜ್ಞಾನೇಂದ್ರಿಯಾ
ಆವವುಂಟವು ತಮ್ಮ ತಮ್ಮ ವಿಷಯಾಧಿಕ
ವ್ಯಾವಹಾರಿಕ ವಿಷಯವಱಿದಾಚರಿಸಲಱಿಯ
ವೈ ವಸುಧೆಯೊಳಗದೆಂತೆನೆ ಪಂಚಭೂತಮಯದೇಹವೆಂಬಾ ಗೃಹಕ್ಕೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೋತ್ರವಂತೊಪ್ಪುವಾ ತ್ವಕ್ಕು ಬಳಿಕಂ ಕೇಳು
ನೇತ್ರ ಜಿಂಹ್ವಾಘ್ರಾಣವೆಂಬಾಗ ವಾಕ್ಷಿಯೊಳು
ಚಿತ್ರವೆನೆ ಶಬ್ದಸ್ಪರುಷರೂಪು ರಸ ಗಂಧವೆನಿಪ ಸದ್ರವ್ಯಂಗಳಂ
ಶತ್ರುವೇ ಜ್ಞಾನಮನಬುದ್ಧಿ ಚಿತ್ತವಹಂಕೃ
ತಿತ್ರಪಾರಹಿತ ಕರದಿಂ ಗ್ರಹಿಸಿ ಮತ್ತೆ ಘನ
ಗಾತ್ರನೆ ಸಮಾನವಾ ವ್ಯಾನ ಮುಮುದಾನ ಮುಮಪಾನಮಂತಾ ಪ್ರಾಣವೂ ೪

ಇಂತಪ್ಪ ವಾಯುಗಳ ಚೇತನದ ಸತ್ವದಿಂ
ದೆಂತಕ್ಕೆ ವಾಕ್ಪಾಣಿ ಪಾದ ಗುಂಹ್ಯಂ ಪಾಯು
ಮುಂತಾದ ಕರ್ಮೇಂದ್ರಿಯಂಗಳ ವ್ಯವಹಾರದಿಂದ ಭೋಗಾದಿ ಭೋಗಾ
ದಂತಮುಮನಱಿವನದುಕಾರಣಂ ಗೃಹದೊಳೋ
ರಂತಿರ್ದವಂಗೆಯಾ ಮನೆಯು ಬೇಱಾಗಿ ತೋ
ರ್ಪಂತೆ ಮನವಾದಿ ವಾಯ್ವಂತದಿಪ್ಪತ್ತನಾಲ್ಕುಂ ತತ್ವಕಾತ ಬೇಱೆ ೫

ಇವಕೆಲ್ಲಕಾತ್ಮನೇ ಕರ್ತುವಹ ಪೂರ್ಣ್ಣನೆನಿ
ಸುವನಲೇ ಹಲವಾತ್ಮನಾಗಿಹನು ಸುಪ್ರಭಾ
ವ ವಿಳಾಸಮಯನಾಗಿರುತ್ತಿಹನದಕ್ಕೆನಲ್ ಜ್ಞಾನರೂಪಾದ ಕಥದಿಂ
ಅವಿರತಂ ಜ್ಞಾನಾತ್ಮನೆಂದೊಡಂ ಬೇಱಿಲ್ಲ
ತವೆಯದು ನಿಮಿತ್ತ್ಯವಿದಱಿಂದ ಮೇಲೇನು ವಿ
ಲ್ಲ ವಿಶೇಷಯದೃಷ್ಟ ತನ್ನಷ್ಟವೆಂಬರ್ಥದಿಂದಲಾತ್ಮನೇ ದೈವವೈ ೬

ಗೌತಮಾ ಕೇಳೆಂದು ನುಡಿದಾತ್ಮವಾದಿಯನ
ದೇ ತೆಱದಿ ನಕ್ಷಪಾದಂ ಖಂಡಿಸಿದನೆನಲು
ಪಾತಕಾ ಕೇಳೆಂದು ನುಡಿದ ನೆಲೆಯಾತ್ಮವೇ ದೈವವೇ ತನುವನುಳಿದೂ
ಮಾತನಾಡಿದಪನೇ ದೇಹವಳಿದಪುದೆಂಬೆ
ಯಾ ತಳ್ತವೃಕ್ಷಮಂತರಿಯಲಲ್ಲಿಯ ಬೀಜ
ವೇ ತರುವನುಂಟುಮಾಡುವುದಲಾ ಭ್ರಷ್ಟವಾದಿಯೆ ಮುಂದೆ ಕೇಳೆಂದನೂ ೭

ಅದಱಿಂದೆಯಾ ಸ್ಥೂಲತನು ಪೋದಡೇನ, ಸೂ
ಕ್ಷ್ಮದ ದೇಹಕೆಂದುವುಂ ಕೇಡಿಲ್ಲ ಸರ್ಪನಂ
ಪುದಿದಿರ್ದ ಸೋಲೆಯುಂ ಹೆರೆಗಳೆದೊಡೇನು ತತ್ಫಣಿ ಸಾವುದೆ ಬಳಿಕ್ಕಾ
ಪದಪಿನಿಂ ಬೇಱೊಂದು ವಾಕ್ಯವೈ ತದ್ಭೂಮಿ
ಉದಕಮುಂ ಕೂಡಿ ದೇಹಂ ವಹ್ನಿ ವಾಯುವ
ಗ್ಗದ ನಭಂಗಳ ಕೂಟವೇ ಜೀವವೈ ಬಳಿಕದೆಂತೆನಲು ಬಿತ್ತರಿಪೆನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಣವಾದಾಗ ಊಷ್ಣಮದಿಲ್ಲ ಉಸುರಿಲ್ಲ
ವರರೆ ಶಬ್ದಮದಿಲ್ಲ ತತ್ವಂಗಳೊಬ್ಬುಳಿಕೆ
ಯುರುತರಾತ್ಮನು ಕಣಾ ಎನ್ನದೇಹಂ ನಾನು ಯೆನಗೆಯೆಂಬವನಾತ್ಮನೂ
ನಿರುತನಲ್ಲಾಯಂಬೆಯಾದೊಡೆಹಗೆಂಬುದೇ
ವರ ಶಬ್ದವೈಜ್ಞಾನವೇಯಾತ್ಮನೆಂಬೆಯಾ
ಕರಣದೊಳಗೊಂದಾತ್ಮನಿಂದ ತತ್ವಂಗಳೆಲ್ಲಾ ಬಳಿಕ್ಕೊಗೆದವೆನಲೂ ೯

ಆಯಾತ್ಮನಾರಿಂದ ಹುಟ್ಟಿತೆಂಬುದ ಬಲ್ಲೆ
ಯಾಯಿಧಮ ಕೇಳಾತ್ಮಮೊದಲಾದ ತತ್ವವಾ
ಕಾಯಜಾಂತಕನ ದೇಹದೊಳು ಹುಟ್ಟಿದವು ಲಸದಾತ್ಮಂಗೆಯಾತ್ಮನಾಗೀ
ಮಾಯಾರಿಯುಱುಪಲಱಿದಪನ್ನೆಸೆಯಾತ್ಮನದ
ಱಿೞೀಯಾರಮುಮನಱಿಯನದುಹೇಂಗೆ ಯೆಂಬೆಯಾ
ನ್ಯಾಯದಿಂದಲೆ ಮೂಢ ನೀನಱಿಯದೊಡೆ ನಿನಗೆ ಪೇಳ್ವೆನಾನಹುದೆಂಬಿನಂ ೧೦

ಮಱೆದಿರ್ದ ಕಾಲದೊಳು ನಿದ್ರೆಗೆಯಿದಿರ್ದಲ್ಲಿ
ಯುಱಿಸನ್ನಿವಿಕಳನಾಗಿರ್ದಲ್ಲಿ ಮೂರ್ಛೆಯಿಂ
ದೊಱಗಿರ್ದವೇಳೆಯೊಳಗುದ್ಯೋಗ ಪರನಾದ ಸಮಯದೊಳಗಂ ಕರೆದೊಡಂ
ಅಱಿಯಟ್ಟಿ ಬೈದೊಡಂ ಫಣಿ ಮೇಲೆಹರಿದೊಡೆ
ನಱಿವನೇ ಹೇಂಗೆ ಸಮಸ್ತ ವಸ್ತುವ ಕೂಡಿ
ನೆಱೆ ಪದಾರ್ಥಮದೊಂದುವಪಱೊಳಗೆ ತೋರ್ಪರುಚಿಯದು ದೇಹ
ದೇಹಿಗಳದ್ವೈ ೧೧

ಆದ ಮಾಡಿದವನೋರ್ವನುಂಟಾದ ಕಾರಣ
ತ್ವದೊಳೀಶನುಂಟಾ ಪದಾರ್ಥಕ್ಕೆ ಚೈತನ್ಯ
ದೊದವಿಲ್ಲವೆಂಬೆಯಾ ಪೇಳ್ವೆನದಕಂ ದೃಷ್ಟಮಂ ಬಳಿಕಯಸ್ಕಾಂತವೂ
ಮುದದಿಂದ ಚೈತನ್ಯವುಂಟಾದಡೇನು ಕೇ
ಳಧಮನೇ ಪಿಡಿವಾತನಿಲ್ಲದೊಡೆ ಸೂಜಿಯಂ
ಪದೆದು ಬಂದಂಟೂದೆಯದು ಕಾರಣದೊಳು ತತ್ವದ ಕೂಟವೇಯಾತ್ಮನೂ ೧೨

ಬಳಿಕಲದು ಹೇಗೆಂಬೆಯಾ ಒಬ್ಬನೆಯ್ತ್ತರ
ಲ್ಕಳವಿಯೊಳಗೊಬ್ಬಾತ್ಮನೆಯ್ದೆ ಬರುತಿಹನೆಂಬ
ರುಳಿದ ದೇಹವೆ ಬರುತ್ತದೆಯೆಂಬರೇಯದುನಿಮಿತ್ತ್ಯದಿಂ ದೇಹದೇಹೀ
ಗಳು ಬೀಜವೃಕ್ಷದಾ ನ್ಯಾಯವಾತ್ಮಂಗೆ ತನು
ಗಳ ಬಿಡುವುದೇಹಕ್ಕೆಯಾತ್ಮನೆಂದುಂ ಬಿಡದು
ತಿಳಿವಿಲ್ಲಲಾ ನಿನಗೆ ಯಿನ್ನೊಂದು ದೃಷ್ಟಮಂ ಪೇಳ್ವೆನ್ನೆ ಮೂಢ ಕೇಳೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನಸ ಕಾಬಾಗಲಾವೆಡೆಯೊಳಿರುತಿರ್ದೊಡೀ
ತನುಸಹಿತವಿಹರುಮದುವಲ್ಲ ಸತ್ತವದಿರಾ
ಘನತರ ಸ್ವಪ್ನದೊಳಗೆನಸುವುಂ ತೋಱಲೆಂದಿನ ದೇಹದಿಂದಲ್ಲದೇ
ತನ ತನಗೆ ಬೇಱೊಂದು ರೂಪಿಂದ ಬರ್ಪರೇ
ಬಿನುಗಾದ ಬುದ್ಧಿಯವನೇ ದೇಹವುಳಿದು ಜೀ
ವನು ಪೋಪಕಾಲದೊಳಗಂ ಕಾಣಬಾರದೆಂದೆಂಬೆಯಾ ಕೇಳದಕ್ಕೇ ೧೪

ಅನಲ ಮರುದಾಕಾಶವೆಂಬ ಮೂಱುಂ ಕೂಡಿ
ಯನಿಲರೂಪಿಂದ ತಾ ಮಾಡಿದ ಸುಕರ್ಮವಾ
ಘನತರದ ದುಷ್ಕರ್ಮದಿಂದೊದವಿದಾ ಯಾತನಾ ದೇಹದೊಳಗೆ ಪೊಕ್ಕು
ಅನುಪಮ ಸುಕರ್ಮ ದುಷ್ಕರ್ಮಂಗಳುಂಬನ್ಯೆ
ಸನಯದಿಂದದುಕಾರಣಂ ದೇಹಮಂ ತೊಡಿಸ
ಲನುನಯದಿ ಬಿಸುಡುವುದಕಂ ಕರ್ಮಭೋಗಂಗಳುಣಿಸೂದಕಂ ಬಳಿಕ್ಕಾ ೧೫

ತೀರಿಸುವುದಿವಕೆಲ್ಲಕುಂಟಲಾ ಶಿವನ ತ
ತ್ಪ್ರೇರಣೆಯೊಳಲ್ಲದೆ ತಾನೊಂದನಱಿಯದಿಹ
ಕಾರಣಂ ಬಿನುಗಾದ ಜೀವನುರೆ ತನ್ನ ತಾನೇಯುಱಿಯದಿದು ನಿಮಿತ್ತಾ
ನಾರಕದ ಬಟ್ಟೆಗೆಯ್ದುವ ಬುದ್ಧಿಯುಳ್ಳ ದುಃ
ಕ್ರೂರಕರ್ಮಿಯೇ ಯಾತ್ಮನೇ ದೈವವಲ್ಲೆಂದು
ಮಾರಾರಿಯಣುಗನಹ ಗೌತಮಂ ಮುರಿದನಾ ವಾದಿಯಂ ಭಲರೆಯೆನಲೂ ೧೬

ಜಡವೆನಿಸುವಾತ್ಮವಾದಿಯನು ಖಂಡಿಸಲಾಗಿ
ನುಡಿದನಂತಾ ನಿರೀಶ್ವರವಾದಿ ಶಿವಸಿಷ್ಟ
ನೊಡನೆ ಶಿವನೆಂಬೊಂದು ದೈವವೆಲ್ಲಿಯದು ಗೌತಮ ಕೇಳು ಶಿವನೆಂಬುದಾ
ಬಿಡುವ್ಷದ್ಯೆ ಷಡುವರ್ನ್ನದೊಳಗೊಂದು ವರ್ನ್ನವೆಂ
ಬೊಂದೆ ಬಳಿಕಯದೃಷ್ಟವೆಂಬುದೇ ನಷ್ಟಪ್ಪೆ
ಕಡೆಗದು ನಿರಾಕಾರವೆನಲು ಕಣ್ಣಿಂಗೆ ಕಾಣಿಸದು ಬಳಿಕಾ ಮಹೇಶಂ ೧೭

ಸಾಕಾರವಾಗಿಯಾದೊಡೆ ದೇಹಮಂ ತೊಡಿಸಿ
ಯಾ ಕಲೇವರವನೇ ಬಿಡಿಸುವನು ನೆಱಿಸುಕ
ರ್ಮಾಕಲಿತದುಃಕರ್ಮಮಂ ಸ್ವರ್ಗನರಕದೊಳಗುಣಿಸುವನು ತೀರಿಸುವನೂ
ಶ್ರೀಕಂಠನೆಂಬೆಯಾ ದೇಹವೊಂದಂ ತಂದು
ಬೇಕೆನಿಸುವಾತ್ಮನೊಂದಂ ತಂದು ತೊಡಿಸಿದುದ
ನೀ ಕಂಡೆಯಾ ಮರಣಕಾಲದೊಳು ಹೇಳಿಯಾತಂ ಕೊಂಡು ಹೋದುದುಂಟೇ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನರಕದೊಳು ನವೆವುದಂ ಸ್ವರ್ಗದೊಳು ಭೋಗಿಪುದ
ನಿರದೆ ನೀ ಕಂಡೆಯೋ ಕಂಡುಬಂದವರು ನಿನ
ಗೊರೆದರೋ ತಥಾಪಿ ಶಿವನೇ ಮಾಳ್ಪನೆಂದೊಡವಗೇನು ಸಂಕಟವವಂಗೇ
ಹರನಿಗೀ ಜೀವನೇನಣ್ಣನೋ ತಮ್ಮನೋ
ಪರಿಕಿಸಲು ನಂಟನೋ ಯೇನಹನು ಪೋಗಲದ
ನರರೆ ನೀ ಕಂಡೆಯೋ ಶಾಸ್ತ್ರಂಗಳೆಯ್ದೆ ಪೇಳಿದವೆಂದಡದು ಸಟೆಯಲ್ಲೆ ೧೯

ಆ ನಿಖಿಲ ಶಾಸ್ತ್ರಾಗಮಾಮ್ನಾಯವೆಂಬವಂ
ತಾನೊರೆದಗಡ ಶಿವಂ ಶಂಭು ಪೇಳ್ವಾಗಳೀಂ
ನೀ ನಲ್ಲಿರುತ್ತ ಕಂಡೆಯೋ ಮೇಣು ಕಂಡವರು ಬಂದು ನಿನ್ನೊಳು ಪೇಳ್ದರೋ
ಏನು ಸಟೆಯಂ ಪೇಳ್ವೆಯದುಕಾರಣದೊಳೀಗ
ನಾನೇ ಮಹಾವಸ್ತುವೆನಗೊಬ್ಬ ಕರ್ತನುಂ
ಟೇ ನಮ್ಮ ದೇಹಮಂ ತೊಡಿಸಿ ಬಿಡಿಸುವರಿಲ್ಲವೆನಗೆ ನಾನೇ ದೈವವೈ ೨೦

ಆರೈಯಲಾ ಸುಕರ್ಮಂ ಬಳಿಕ ದುಃಕರ್ಮ
ದೋರಣಂಗಳನೆಯ್ದೆ ಮಾಡುವುದಕುಂಬುದಕೆ
ತೀರಿಸೂದಕ್ಕೆ ಹಿಡಿವುದಕೆ ಬಿಡುವುದಕೀ ದಾದಿಗೆ ನಾನೇ ಕರ್ತನೈಸೇ
ಧಾರುಣಿಯೊಳಿನ್ನೊಬ್ಬನಿಲ್ಲವೈ ಕೇಳ್ವುದದು
ಕಾರಣಂ ನಿನ್ನ ಶಿವನೆಂಬುದಂ ಶಾಸ್ತ್ರಮನ
ದಾರು ಕಂಡರು ಸಟೆಯೆನುತ್ತ ಗಳಹಿದ ವಾದಿಯೊಳು ಗೌತಮಂ ನುಡಿದನೂ ೨೧

ಎಲೆ ನಿರೀಶ್ವರವಾದಿಯೇ ಕೇಳು ತವ ಭಾಳ
ತಳದಲ್ಲಿ ಸಂಚಿತ ಪ್ರಾರಬ್ಧವಾಗಾಮಿ
ಯಲಘುಕರ್ಮತ್ರಯವನೊಲ್ದು ಬರೆದವರಾರು ಒಲ್ಲೆಯಾ ನೀಂಹುಟ್ಟುವಾ
ನೆಲೆಯಲ್ಲಿ ನೀ ಹೊಕ್ಕಿಯೋ ಬೇಱೆಯೊರ್ಬರು
ಜ್ವಲವಾಗಿ ತಂದಿರಿಸಿದವರುಂಟೊ ನಿನ್ನ ಪಿತ
ನೊಲಿದು ತಂದನೊ ತಾಯಿ ತಂದಳೋ ಮೂಢ ಕೇಳೆಂದೆನುತ್ತಂ ನುಡಿದನೂ ೨೨

ಆದುವಲ್ಲದೀ ದೇಹಮಂ ನಾನೇ ಮಾಡಿಯುಱೆ
ಪದಪಿನಿಂದಂ ತೊಟ್ಟುಕೊಂಡೆನೆಂದೆಂಬೆಯಾ
ಮೊದಲಲ್ಲಿ ಯಾವ ತನುವಂ ತಳೆದು ನೀನಿರ್ದೆಯಾ ಕಳೇವರದ ನೀನೇ
ಪದೆದು ಕಲ್ಪಿಸಿಕೊಂಡೆನೆಂಬೆಯಾದೊಡೆ ಮತ್ತೆ
ಇದಿರಿಟ್ಟು ಬೇಱೊಂದು ನಿಗ್ರಹಂದಳೆಯುಲಿ
ಲ್ಲದನು ನೀ ಗರ್ಭದೊಳಗಿಪ್ಪಲ್ಲಿ ತಾಯ್ತಂದೆಯಱಿವರೇ ನೀ ಪೇಳ್ವೆಯಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲಿಯುವರ್ಶೈ ತಾಯಿ ತಂದೆಗಳು ನಾನೇ ಸ
ಮುಲ್ಲಾಸದವನೆನಲು ಒಪ್ಪ ಕಂಟಕ ರುಜೆಯು
ತಲ್ಲಣದನಿಷ್ಟಗಳನಱಿವೆಯಾ ಕೇಳದುನಿಮಿತ್ತದೆ ನಿರೀಶವಾದೀ
ಖುಲ್ಲ ನೀನೇ ಮಹಾಬ್ರಹ್ಮವೆನೆ ವೇದ ಶಾ
ಸ್ತ್ರೋಲ್ಲಸಿತ ಶಂಭು ಸಟೆಯೆಂಬೆಯಾ ತಪವವನಿ
ಯಲ್ಲಿ ತನ್ನಂತೂಟ ಮುನ್ನಿನಂತೆಂಬ ನಾಣ್ನುಡಿಗೆ ನೀಂ ಗುರಿಯಾದಲ್ಲೈ ೨೪

ಅಶನಮಂತಿನುತಲಾ ವ್ಯಸನಕ್ಕೆ ಹರಿದು ಮಿಗೆ
ವಿಷಯುವೆಂದೆಂಬ ಹಿರಿವೊಲಕೆ ನಿನ್ನಲ್ಲಿ ಘೂ
ರ್ಮಿಸುವ ಪಂಚೇಂದ್ರಿಯಂಗಳು ಕೂಡೆ ನಾಯಾಗಿ ಹರಿದು ಹರಿತಿಂದು ಬಗುಳೀ
ಹೊಸನಾಯು ಡೋಣಿಯೊಳು ನೀನುಂಡು ನಾಯ್ಸಾವ
ನಸವಸದೊಳೆಯ್ದು ವದ್ವೈತಿಯೆಂದೆನಿಪ ಪು
ಲ್ಕಸ ನಿನಗದೇಕೆ ಬೊಮ್ಮದ ಮಾತು ಗಳಹಬೇಡೆಂದು ನುಡಿದಂ ಗೌತಮಂ ೨೫

ಹರಿಯುಜರಹಂಕಾರದಿಂದೇವರೆಂದೀರ್ವ
ದಿರದೆ ಕಿಟಿ ಗೃದ್ಧಂಗಳಾದುದಂ ತಿಳಿಯೆಯಾ
ಸರಸೀಜೋದ್ಭವಸುತ ಸನತ್ಕುಮಾರನುಮಹಂಬ್ರಹ್ಮವೆಂದೊಂಟೆಯಾದಾ
ಪರಿಯಂ ವಿಚಾರಿಸಿದುದಿಲ್ಲವೇಯದಱಿನಿಂ
ದುರುತರದ ಕರ್ತನುಂ ಭರ್ತನುಂ ಹರ್ತನುಂ
ಪರಮೇಶನಲ್ಲದುಂಟೇ ನಿಂದು ಕೊಲಲು ಕಾಯಲು ಪಾತಕಾ ಕೇಳ್ವುದೈ ೨೬

ಅದಕೆಯಾ ತ್ವಂ ವಿಶ್ವಕರ್ತಾ ಎನಿಪ್ಪರ್ಥ
ದೊದವಿನಿಂ ಶಿವನೆ ನೀನೇ ಕರ್ತನಿನಗಿಲ್ಲ
ಸದಮಲ ಧರಾವಳಯರಕ್ಷಕಂ ಶಿಕ್ಷಕಂ ನೀನೆ ನಿನ್ನಂ ರಕ್ಷಿಪಾ
ಅದಟರುಂಟೇ ದೇವ ನೀನಖಿಳ ಸಂಹರಂ
ಪದೆದು ನಿನ್ನಂ ಗೆಲ್ವರಿಲ್ಲಲಾ ಸ್ವಾಮಿಯೆನು
ತೊದವಿಯಾ ಹರಿಯುಜರುಮುನ್ನ ಸರ್ವೇಶ್ವರನ ಕೀರ್ತಿಸಿದದುಂಮಱಿದೆಯಾ ೨೭

||ಸಾಕ್ಷಿ|| ತ್ವಂ ವಿಶ್ವಕರ್ತಾ ತವ ನಾಸ್ತಿ ಕರ್ತಾ ತ್ವಂವಿಶ್ವಭರ್ತಾ ತವನಾಸ್ತಿ ಭರ್ತಾ ೧
ತ್ವಂ ವಿಶ್ವಹರ್ತಾ ತವ ನಾಸ್ತಿ ಹರ್ತಾ ತ್ವಂ ವಿಶ್ವನಾಥಾ ತವ ನಾಸ್ತಿನಾಥಾ ೨

ಬಳಿಕನೀಶ್ವರವಾದವೆಂಬುದು ಮಸತ್ಯಮೆಂ
ದಿಳೆಯಲ್ಲಿಯುಪ್ರತಿಷ್ಠಿತವೆಂದು ನೆಱಿಸೂರಿ
ಗಳು ನುಡಿವರದುಕಾರಣಂ ಶಿವನನಿಲ್ಲೆಂದು ಬೊಮ್ಮವೆ ತಾವೆಯೆಂಬಾ
ಮಲದೇಹಿಗಳ ದೂತರಿಂ ಹಿಡಿದು ಕೆಡಹಿಸುತ
ಘಳಿಲನವದಿರ ಬಾಯೊಳುರೆ ಹುಡಿಯ ಹೊಯ್ಸಿ ಮಡ
ಗಳಲೊದೆಸಿ ನರಕದೊಳು ಹಾಯ್ಕಿಸುವನಂತಕಂ ಕೇಳೆಂದನಾ ಗೌತಮಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಯಮಂ ಶಿವನನುಜ್ಞೆಯೊಳೆಯ್ದೆ ವಿಲಸ
ದಾಮ್ನಾಯಂಗಳುಸುರಿದಂದದೆ ಮಾಳ್ಪೆನೆಂದೆನಲು
ಬಾಯಾಲಿಯಪ್ಪಧಮನೋರ್ವನೆಂದಂ ಗೌತಮಾ ವೇದವೇ ದೈವವೈ
ಮಾಯಾರಿ ದೈವವಲ್ಲೆಂದು ವಾದಕ್ಕೆಯಾ
ನಾಯಡ್ಡಬಂದು ನುಡಿಯಲ್ತೊಡಗಿದಂ ಕಣಾ
ಶ್ರೀಯುಮಲಕುಂಭಜಾ ಕೇಳೆಂದು ಕಾರ್ತಿಕೇಯಂ ನುಡಿವುತಿರ್ದನಿತ್ತಾ ೨೯

ವೇದವೇ ದೈವವೈ ಗೌತಮಾ ಕೇಳಿನ್ನು
ವೇದೇನ ಎನೆ ಸರ್ವಕರ್ಮಣಾ ಸಂಭವತಿ
ಸಾದರದೊಳೆಂಬಂತೆ ವೇದಸ್ವಯಂಭುರಿತ್ಯುಕ್ತಮೆಂಬರ್ಥದಿಂದಂ
ವೇದೇನ ಸರ್ವಶಾಸ್ತ್ರಾಣಾಮೆನಲ್ಕೆಯಾ
ವೇದವೇ ನಿತ್ಯ ಸತ್ಯಂ ಮುಕ್ತಿಸುಪ್ರದಂ
ವೇದವೇ ಮಿಸುಪ ಜೀವನ್ಮುಕ್ತಿವೇದೇನ ತತ್ಪರಂ ನಾಸ್ತಿ ಎನಲೂ ೩೦

ಅದುಕಾರಣಂ ವೇದ ಹೇಳಿದಾ ವ್ಯವಹಾರ
ದೊದವಿನಿಂ ನುಡಿಯಲಾಯಾ ಸುಖಂ ಭೋಗ ಪು
ಣ್ಯದ ಫಲಂಗಳ ಕೊಡುವುದಾಗಿ ಸರ್ವಕ್ಕೆ ವೇದವೇ ಕರ್ತುವಾ ವೇದವೇ
ಮೊದಲಲಾ ವೇದವೇ ದೈವವೆಂದೆಂಬವನ
ವದನವೆಂದೆನಿಪ ವಾದ್ಯದ ಕುಡುಹೆನಿಪ್ಪ ಸೌ
ಖ್ಯದ ವಾಕ್ಯಮಂ ನುಡಿಯುತೊಡಗಿದಂ ಗೌತಮಂ ವೈದಿಕಂ ನಡನಡುಗಲೂ ೩೧

ಕಾಳುಬುದ್ಧಿಗಳಿರಾ ವೇದವೇ ದೈವವೆಂ
ದಾಳಾಪನಂಗೆಯ್ದಿಪಿರದಕೆ ಖಂಡನೆಯು ನಾಂ
ಪೇಳುವೆಂ ಲಸದಾದಿ ಸಿದ್ಧಾಂತವಿದುವೆ ವೇದಂ ತಾ ಸ್ವಯಂಭುವಲ್ಲಂ
ಭಾಳಾಕ್ಷ ಶಿವನಂದು ಪೇಳ್ದ ಸದ್ವಾಕ್ಯಮಂ
ಕೇಳಿರೇ ಭವನಿಂದಲಾದ ಮೂವತ್ತಾಱು
ಮೇಳಿಸಿದ ತತ್ವವಾಕಾಶವೆಂದೆನಿಪುದಂತಱ ಬಗೆಯಂ ಪೇಳ್ವೆನೂ ೩೨

ಆಕಾಶದಿಂದಾದ ಶಬ್ದವಿಷಯಂ ನಿತ್ಯ
ವೇಕಪ್ಪುದುಸುರಿರೇ ಪಂಚಭೂತಂಗಳೊಳ
ಗೇಕ ಭೂತಂ ವಿಷಯವಾ ಶಬ್ದ ತಚ್ಛಬ್ದಸಂಬಂಧವಹ ವೇದಕೇ
ಲೋಕದೊಳು ನಿತ್ಯವುಂಟೆ ಹೇಳಿರೆಯಧಮ
ಕಾಕರಿರ ವೇದ ಸ್ವಯಂಭುವೆಂದೆಂಬಿರಿಯ
ನೇಕ ಪಾತಕರಿರಾ ಪ್ರಳಯಕಾಲದೊಳಳಿವವೀ ವೇದಮುಖ್ಯ ವಿದ್ಯಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಜಗತ್ಸೃಷ್ಟಿಕಾಲದೊಳಾದಿಕರ್ತುರ್ಜನಿ
ವ್ಯಾರ್ಜಸ್ವತಂತ್ರನಿಂ ಸೃಷ್ಟಿ ಸ್ಥಿತಿ ಪ್ರಹರ
ವೇ ಜಲಕ್ಕನೆ ಶಂಭುವಿಂದಾದವೆಂಬುದಂ ಕೇಳಿರೇ ಮತ್ತೆ ಪೇಳ್ವೆಂ
ಯೋಜಿಸಲ್ಚರಣಸದ್ಬ್ರಹ್ಮಸೂತ್ರದೊಳುಸಾರ್ದ
ನೈಜವಾಕ್ಯಮಂ ಕೇಳಿ ರುಗ್ವೇದಕಂ ಪೇಳ್ವೆ
ನೈಜಾಡ್ಯದೇಹವೇ ರುರುವರ್ನ್ನವತ್ರಿಗೋತ್ರಂ ಬಳಿಕ್ಕೆಂತೆಂದೊಡೆ ೩೪

ಗಾಯತ್ರಿಯೇ ಛಂದವಧಿದೈವವಾದವಂ
ತೋಯಜೋದ್ಭವನಾ ಯಜುರ್ವೇದಕುಸುರುವೆಂ
ವೋಯಾರದಿಂದಬ್ಜದಳದಾಯತಾಕ್ಷಿಕುಂಚಿತ ಚಿಬುಕಮುಂ ಬಳಿಕ್ಕಾ
ಸ್ವಾಯತ್ತಮಪ್ಪ ಮುಂಗುರುಮಿಸೆ ತಾಮ್ರಮಯ
ಕಾಯ ಭಾರದ್ವಾಜಗೋತ್ರ ತ್ರಿಷ್ಟುಪ್‌ಛಂದ
ವಾಯ ಮುಕುಲಾಧೀಶ ವಿಷ್ಣುವಧಿದೈವವಿನ್ನು ಸಾಮವೇದಕು ಪುರ್ವೆಂ ೩೫

ದೇಹವಾ ಶ್ವೇತವರ್ಣಂ ಕಾಸ್ಯಪನ ಗೋತ್ರ
ಊಹಿಸಲ್ಕೊಡೆ ಜಗತಿಚ್ಛಂದವಧಿದೈವ
ವೈ ಹರುಷಿ ಈಶ್ವರಂ ಧವಳಶೃಂಗದ್ವಯಂ ಬಳಿಕಥರ್ವಣವೇದಕೇ
ಅಹ ತನುಕೃಷ್ಣವರ್ಣಂ ಗೋತ್ರವೈಖಾನ
ವೈಹಸದನುಷ್ಟುಪ್ಪೆನಿಪುದೈ ತಾಂ ಛಂದ
ವೈಹರಿಹಯಂ ತಾನದಕ್ಕೆಯಧಿದೈವವೆಂಬುದನಱಿಯೆಯಾ ಪುಲಸ್ತ್ಯಾ ೩೬

ಇಂತು ವೇದಂಗಳಿಗೆಯಂಗ ವರ್ನ್ನಂ ಗೋತ್ರ
ಮುಂ ತಳ್ತ ಸಚ್ಛಂದವಧಿದೇವತೆಗಳಿರಲ್
ಭ್ರಾಂತರಿರ ತಮಗೆ ತಾಂ ವಾದವೆಂದಾಡಬಹುದೇ ಬಾಯ್ಗೆ ಬಂದಂದದೇ
ಸಂತತಂ ನಿತ್ಯವೆಂದೆಂಬಿರಾದೊಡೆ ಬಳಿಕ
ನಂತ ಲಯುಗಮನ ಸ್ಥಿತಿ ಪ್ರಮುಖವುಂಟೆಲೊ
ತಂತುಮಾತ್ರಾವನೀಸುರ ಪುಲ್ಕಸರ್ಗಳಿರ ಎಂದು ನುಡಿದಂ ಗೌತಮಂ ೩೭

ಬಳಿಕಥಮನಿಂತೆಂದನೆಲೆ ಗೌತಮಾ ಜಗ
ತ್ಪ್ರಳಯದೊಳಗೆಮ್ಮ ವೇದಂಗಳೆಲ್ಲಂ ಮುನ್ನ
ಅಳಿವವೆಂದೆಂಬೆಯಾ ಜಗಕ ನಿತ್ಯತೆಯಿಲ್ಲದಿರುತಿರಲ್ಕಾ ವೇದಕೇ
ವಿಳಯವುಂಟೇ ಎನಲ್ಕಕ್ಷಪಾದಂ ನುಡಿದ
ಬಳ ವೇದ ಶಾಸ್ತ್ರಪೌರಾಣಾಗ ಮಾರ್ಥಂಗ
ಳವಲ್ಲ ಸೂರಿಗಳನೊಳಕೊಂಡ ಜಗವೆ ನಿತ್ಯಂ ದಲೆಂಬೊಡೆ ಕೇಳಿರೈ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆಱಿ ಜಗಂ ನಿತ್ಯವೆಂಬುದ ನಿಮ್ಮ ಬುದ್ಧಿಯಿಂ
ದಱಿದಿರೋ ನೀವಳಿಯದುಳಿದಿರ್ದ್ದ ನೋಡಿ ಕಂ
ಡಱಿದಿರೊಯೆನಲು ವೇದಾದಿಶಾಸ್ತ್ರಪ್ರಮಾಣಂಗಳಿಂದಱಿದೆವೆನಲೂ
ಉಱೆಯಾತ್ಮ ದೃಷ್ಟಿಯಿಂದಱಿದಿರೋ ನೇತ್ರದಿಂ
ದಱಿದಿರೋ ಎಂದೊಡಾತ್ಮದೃಷ್ಟಿನೇತ್ರವೆಂ
ಬಱಿವಿನಿಂದಱಿದೆವೆನೆ ನಿಮ್ಮಱಿವಿನಿಂದಱಿದೆವೆನೆ ನಿಮ್ಮ ನೀವಱಿಯಿರ್ಪೆ ೩೯

ನಿಮ್ಮ ನೀವಱಿಯದವರೀ ಸಕಲ ಜಗದಾದಿ
ಯಂ ಮುದದೊಳಿಂದಱಿದಿರೆನಲು ಸುಜ್ಞಾನಕ್ಕೆ
ಸಮ್ಮತದ ಸಾಧನವೆನಿಪ್ಪ ಶಾಸ್ತ್ರಾದಿಗಳಿಗಾ ಜ್ಞಾನ ದಿವ್ಯಾಗಮಾ
ಉಮ್ಮಹದ ಸುಪ್ರಮಾಣದ ನೇತ್ರದಿಂದಱಿದೆ
ವಾಂಮಹಾನಿತ್ಯತೆಯುನೆನಲು ನಿಮಗೆಲ್ಲಿಯದು
ಸಮ್ಮತಜ್ಞಾನೇಂದ್ರಿಯದ ಸಾಧನಾಕ್ಷಗಳು ಶಿವನ ನಯನಾಂಶುವಪ್ಪಾ ೪೦

ರವಿಚಂದ್ರವಹ್ನಿಗಳ ತೇಜಸ್ಸಿನಿಂದಲ್ಲ
ದವನಿಯೊಳು ನಿಮ್ಮ ಕಣ್ಣದ್ದೊಡೇಂ ಕಾಬಿರೇ
ಯವಿಗಳಿಗ ಜಾತ್ಯಂಧರ್ಪೆ ನೀವು ನಿಮಗೆಲ್ಲಿಯದು ದೃಷ್ಟಿವಾಳತನವೂ
ಪ್ರವಿಮಲದ ಮತಿವಂತರೆನಿಸುತಿಹ ದೇವತೆಗ
ಳವರು ಕಂಡಱಿಯರೆನೆ ಮತಿವಿಕಳರ್ಪೆ ನೀವು
ತವೆ ಕಾಣ್ಬರೇ ಬಳಿಕ ಜಗದಾಗುಹೋಗುಗಳ ನೋಡಿ ನೀವಱಿದೆವೆನಲೂ ೪೧

ಜಗವನಾದಿಯದು ನೀವೇ ಮೊನ್ನೆನವರಲಾ
ಮಿಗೆ ಬಳಿಕ ಸಾಮಾನ್ಯ ಮನುಜರಾಗಿರುತಿರ್ದು
ಜಗದಾಗುಹೋಗುಗಳ ನೋಡಿ ಕಂಡಱಿದೆವೆನೆ ನಿಮಗಾಗದದುಕಾರಣಾ
ಜಗದ ನಿರ್ಮಾಣಕಂ ಜಗದತಿಭ್ರಮಣ ಲೀ
ಲೆಗಳಲ್ಲಿ ಲೋಲ ಜಗದಲ್ಲಿಯಂತರಿಯಾಮಿ
ಜಗದುರುಪ್ರೇರಕನದೊಬ್ಬನೇಯಱಿವನ್ಯೆ ನಿಮಗೆಯಱಿವಿಲ್ಲೆಂದನೂ ೪೨

ವೇದಶಾಸ್ತ್ರಾಗಮಗಳಿಂ ಪ್ರಮಾಣಿಸುತ ತ
ದ್ಭೇದಮಂ ತಿಳಿದೆವೆನೆ ನಿಮಗಾ ಶ್ರುತಿಪ್ರಮಾ
ಣಾದಿಯೊಂದನೆಯದೆಲ್ಲಿಯದು ಜಗತಾಂಚ ಪತಯೇ ನಮ ಎನಲ್ಕಾಶ್ರುತೀ
ಸಾದರದೊಳದುಕಾರಣಂ ಶಾಸ್ತ್ರಪೌರಾಣ
ವೇದಂಗಳಿಂದ ನಿಮಗೇನುವಾಗದು ಕಣಾ
ವೇದಭಾರದ ಗಾರ್ದಭರ್ಕಳಹಿರಲ್ಲದವರೋಳ್ಪರಿಯಲೇಂ ಯೋಗ್ಯಮೇ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೃತಿವಚನಮಂ ತಿಳಿಯಿರೇ ಶಿವೋ ಮಾಮೇವ
ಪಿತರಾ ಎನುತ್ತಿರಲು ಶಂಭುವಂತಾಮ್ನಾಯು
ವತಿಶಯದ ತಂದೆ ತಾಯಾಗಿರಲು ಜಗವೆಲ್ಲಕೊಡೆಯನಾಗಿರಲು ಮತ್ತೇ
ಶೃತಿ ಪಿತಾ ಎನೆ ತದಸ್ಯಾ ಮಾಯೆನುತ್ತಿರಲ್
ಶೃತಿಶಂಕರಂ ತಂದೆ ತಾವು ಸುತರೆನುತಿರಲು
ಮತಿಹೀನರಿರ ವೇದವೇ ಸ್ವಯಂಭುಗಳು ಜಗವೇ ನಿತ್ಯವೆಂದೆಂಬಿರೈ ೪೪

ಪರಿಕಿಸಲು ಪೂರ್ವದೊಳು ತಿಳಿಯಲಂತಾ ವೇದ
ಪುರುಷರುಂ ಶಾಂಭವ್ರತಿಗಳುಂ ಪಾಶುಪತ
ದುರುತರದಭೀಷ್ಟರುಂ ದಿವ್ಯ ಶಿವಸಿದ್ಧಾಂತ ಭಕ್ತಿನಿಷ್ಠಾವಧಾನಾ
ಪರಿಣತರು ನೋಡಿ ವೇದಾಧಾರಯಂತಿ ಎನು
ತಿರಲು ರುದ್ರಾಕ್ಷಧಾರಣ ಚತುರ್ವಿಧಶೀಲ
ಪರರಿಗದು ಮುಖ್ಯಂ ತ್ರಿಯಾಯುಷಂ ಎನಲು
ಜಮದಗ್ನೇಃತ್ರಿಯಾಯುಷಮೆನೇ ೪೫

ಆಯುತದ ತರುವಾಯೊಳಂ ಕಸ್ಯಪಸ್ಯತ್ರಿ
ಯಾಯುಷಮಗಸ್ತ್ಯಸ್ಯ ತತ್ರಿಯಾಯುಷವೆನ
ಲ್ಕೀಯವನಿಯಲ್ಲಿ ಯದ್ದೇವತಾನಾಂ ತ್ರಿಯಾಯುಷವೆಂದೆನುತ್ತಮತ್ತೇ
ಸ್ವಾಯತ್ತದಿಂ ವಿಚಾರಿಸೆ ವೇದ ಕಂತು ತ
ನ್ಮೇಯುಸ್ತುತತ್ರಿಯಾಯುಷಮೆನಲು ತದ್ಭಸ್ಮ
ಕಾಯಾವಲಿಪ್ತ ತ್ರಿಪುಂಡ್ರಾಂಕಿತದ ನಿಷ್ಠರಾಗಿರರೆಯಿಂತವರ್ಗಳೂ ೪೬

ವೇದಾಶ್ಚ ಕಾಮಯಂತೀ ತದಶ್ನಾಮಿಯೆನ
ಲಾದಿ ಶಿವಚರಣ ದಿವ್ಯೋದಕಂ ಶಂಭು ಪ್ರ
ಸಾದಭೋಗಾವಧಾನಿಗಳು ತಾವೇ ಎಂದು ಪೇಳುತ್ತಿರಲ್ಕೆ ಮತ್ತೇ
ವೇದಶಾಸ್ತ್ರಾಗಮುಂ ಪಂಚಾಕ್ಷರೀ ಸುಮಂ
ತ್ರೋದಯದೊಳುದಯ ಸ್ಥಿತಿಪ್ರಹರವೆನುತಿರಲು
ವೇದಂಸ್ವಯಂಭುವಿಂತೀ ಜಗಂ ನಿತ್ಯವೆಂದೆಂತೆನಲ್ಬಪ್ಪುದೀಗಾ ೪೭

ಅದುಕಾರಣಂ ಜಗಂಗಳನೆಯ್ದೆ ಲೀಲೆಯಿಂ
ಮದನಹರ ತಾನೇ ಸ್ವಯಂಭುವೆನಿಸುತ ಪುಟ್ಟಿ
ಸದಮಲದ ಮೃಡನಾಮದಿಂದೆಯ್ದೆ ರಕ್ಷಿಪಂ ಹರನಾಗಿ ಸಂಹರಿಪನೂ
ವಿದಿತ ತ್ರಿಲೀಲಾರಹಿತನಾಗಿ ಶಿವನೆನಿಪ
ನಿದಕೆ ವೇದಂ ಬಳಿಕ್ಕಾದಿದೇವಾಶ್ಚ ಎಂ
ಬುದು ಕಣಾ ಶಾಸ್ತ್ರಾಣಿ ಎನೆ ವರಂ ಪಂಚಾಕ್ಷರೇ ಸ್ಥಿತಾ ಎಂದುದಾಗೀ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಯಿಸುವ ರಕ್ಷಿಸುವ ಸಂಹರಿಪ ಭವವ್ಮೃಡಾ
ಸ್ಕದವರಾಹ್ವಯುದ ಶಿವನಿರೆ ನೀವುವೇದವೇ
ವಿದಿತಸ್ವಯಂಭು ಜಗವೇ ನಿತ್ಯವೆನಲಾಗದಕೆಯಾ ಶ್ರುತಿಯು ಪೇಳ್ವಿಂ
ಸದಮಲದ ಸೋಮೇಶ್ಚಪವತೇ ಎನುತ್ತಮಿ
ರ್ಪುದು ಕಣಾ ಜನಿತಾ ಮತೀನಾಂ ದಿವೋಯೆನು
ತ್ತುದಿತ ಜನಿತಾಚ ಪೃಥ್ವ್ಯಾಶ್ಚ ಜನಿತಾಗ್ನೇಶ್ಚ ಜನಿತಾ ಎನಲ್ಕೆ ಮತ್ತೇ ೪೯

ಅನುನಯುದೊಳಂ ವಿಚಾರಿಸಲಾಗಿ ಸೂರ್ಯಸ್ಯ
ಜನಿತಾ ಚ ಯಿಂದ್ರಸ್ಯಜನಿತೋಥ ವಿಷ್ಣುವೆಂ
ದೆನಲು ತತ್ಪಥಯೋ ಭವಂತಿ ಎನೆ ವೇದಾಶ್ಚ ದೇವತಾಂ ಸೃಷ್ಟಿ ಎನಲೂ
ತನತನಗೆ ವೇದಂಗಳೀಶಸಿಂದಂ ತಮಗೆ
ವಿನುತೋದಯ ಸ್ಥಿತಿಗಳುಂ ವಿಲಯುವೆನುತಿರ
ಲ್ಕಿನಿತು ಬಗೆಯಿಂ ಜಗತ್ಸೃಷ್ಟಿ ಸ್ಥಿತಿ ಪ್ರಹರಕಾರಣಂ ಸರ್ವಜ್ಞನೂ ೫೦

ಶ್ಲೋಕಾಗ್ರಗಣ್ಯ ಸರ್ವೇಶ್ವರಂ ಸರ್ವಕೃ
ತ್ಯೆಕ ಏವೋ ರುದ್ರ ಎನೆ ನ ದ್ವಿತೀಯಾಯ
ಸಾಕಾರತಸ್ಥೇ ಎನುತ್ತಿರಲ್ಕೊಬ್ಬನೇ ಶಿವನೆರಡನೆಯ ದೈವವೂ
ಲೋಕದೊಳಗಿಲ್ಲವೆಂದಱಿಯಿರೇ ವಯಿದಿಕರಿ
ರಾ ಕನದ್ವೇದಂಗಳಾ ಸ್ವಯಂಭುಗಳಲ್ಲ
ವೈಕಪರ್ದಿಯ ಶಿಶುಗಳೀ ಜಗಂ ನಿತ್ಯವಲ್ಲೀಶ್ವರಾಜ್ಞಾವರ್ತಿಯೈ ೫೧

ಅಹಗಾಗಲದಕೇನು ವೈದಿಕಾಚರಣೆಯೊಳು
ವಿಹರಿಪಾ ವ್ರತಿಗಳಿಗೆ ಸಾಧನಂಗಳುವೆನಿಸು
ತಿಹ ಲಸದ್ವೇದಮಂತ್ರಂಗಳೇ ದೈವವೆನಲಾಗದಾ ವೇದಂಗಳೂ
ಮಹಿಯೊಳಗೆ ತಾಪಕೊಳಗಪ್ಪವೇ ದೈತ್ಯನಾ
ಗ್ರಹಿಸಿ ನುಂಗುವನೆ ಪಕ್ಷೀಶ್ವರನ ಹಸ್ತಕೊಳ
ಗಹವೇ ಮುನೀಶನಿಂದಳಿದು ಬಳಿಕಂ ವ್ಯಾಸನಿಂ ಪ್ರತಿಷ್ಠಿತವಪ್ಪವೇ ೫೨

ಶುನಕನಪ್ಪವೆ ವೇದ ದೈವವಾಗಲ್ ತಮ್ಮ
ವನಜೋದ್ಭವನ ಶಿರಂ ಪೋಪಾಗಲೇಗೆಯ್ದು
ವನಿಶಮುಂ ತನ್ನನಾಶ್ರಯಿಸಿರ್ದ ದಕ್ಷಮಸ್ತಕವನರಿಯಲ್ಕಾಯ್ದುವೇ
ಜನದ ಕವಿತೆಗೆ ಶಿಲ್ಕುಗೇ ಬಳಿಕ್ಕಾಘ್ರಾಯು
ಎನುತಲಾಘ್ರಾಯು ವಿಂದಂತಿ ವೆಂದಶ್ವಾನ
ಎನಲಾ ಸ್ವಯಂಭು ನಿತ್ಯಂ ಶಂಭು ಉಳಿದರಲ್ಲೆಂಬರ್ರೈ ವೈದಿಕರಲೈ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಱಿಂದ ವೇದಂ ಸ್ವಯಂಭು ಜಗವೇ ನಿತ್ಯ
ಮಿದು ತಥ್ಯವೆಂಬನಾಚಾರಯುಕ್ತಿಯ ಬಿಟ್ಟು
ಮದನಹರನೇ ದೈವವೆಂದಱಿದು ನಾವೀಗ ಪೇಳ್ದ ವಾಕ್ಯವನು ತಿಳಿದೂ
ಬದುಕು ನೀನಲ್ಲದೊಡೆ ಕೇಳೆಲವೊ ನಿನ್ನ ಕ
ರ್ಮದ ಫಲಂ ಹೇಂಗಿರ್ದುದಹಗಾಗೆನುತ್ತಲಾ
ಡಿದನು ಗೌತಮ ಮುನೀಶ್ವರನು ಸುಜ್ಞಾನ ಸೌಂಧರನು ಬಹುದಾನಕರನೂ ೫೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯರ್ಣಂ
ಶೀಲ ಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೫೫

ಇದು ವೀರಶೈವ ಷಟ್ಸ್ಥಲ ಮಾರ್ಗ ಸದ್ಭಾವ
ಸದನ ಸುವಿರಕ್ತವ್ರತಾಚಾರ ಸತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ವೀ ವೀರಶೈವಾಮೃತ ಪುರಾಣದೊಳಗಾ
ದುದು ವೇದದೈವತಾಖಂಡನೆಗೆ ಮೂಱು ಕಾಂಡದ ಮೇಲೆ ಸಂಧಿ ನಾಲ್ಕು ೫೬

ಅಂತು ಸಂಧಿ ೪ ಕ್ಕಂ ಪದನು ೨೨೮ ಕ್ಕಂ ಗ್ರಂಥ ೪೪ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೧

ಕರ್ಮವಾದಿ ಕಾಲದೈವವಾದಿಗಳಂ ಗೌತಮಋಷಿಯು ಜಯಿಸಿದ ಕಥೆ

ದುರ್ಮತಿಗಳಾಗಿ ಹರಿಬೋಧೆಯಿಂದಂ ಕೆಟ್ಟ
ಕರ್ಮವಾದಿಯ ಮುರಿದು ಕಾಲದೈವವೆಂ
ಬರ್ಮಾತನಾಡೆ ಭಂಗಿಸಿದನಾ ಗೌತಮ ಮುನೀಂದ್ರರಿಪುಕಮಲ ಚಂದ್ರಾ

ನರ್ಮದಾದ್ಯತಿಶಯದ ನಿರ್ಮಲನ ದೇವತಾ
ವಾರ್ಮಕುಟಪದ ಭಜಕ ಶರ್ಮಪ್ರದೈಕ ಶಿವ
ಧರ್ಮಲಸದಿಡುಗುಡಿಯ ಪೆರ್ಮಾಡಿ ರಕ್ಷಗಜಚರ್ಮ ಸೌಂದರಿಯ ವಸನಾ
ಕೂರ್ಮಮುಖ ಪೌರಾಣ ವರ್ಮಜ್ಞ ಹರಿಬಾಣ
ಭರ್ಮಾದ್ರಿಕೋದಂಡ ದುರ್ಮತಿರಟ್ಟತ್ರಿಪುರ
ಘರ್ಮಕಾಸಾರ ಚಾತುರ್ಮಹಾಶ್ರುತಿಪ ಜಯ ಕರ್ಮಹರ ಶಾಂತಮಲ್ಲಾ ೧

ಪೂರ್ವಕರ್ಮದೊಳು ನರಕದೊಳಿರ್ದವರ ರಜತ
ಪರ್ವತಕೆ ಪಂಚಾಕ್ಷರೋಚ್ಚರಣೆಯಿಂದಟ್ಟಿ
ಸರ್ವಜ್ಞನಾದ ಸಾನಂದನೆನಲಾ ಶತಾಯುರ್ವೈ ಪುರುಷ ಎನಿಪ್ಪಾ
ಅರ್ವ ವೇದವ ಜರೆದ ಸಕಳೇಶ ಮಾದರಸ
ರುರ್ವಿಗೀಗಳ್ಬಂದರೆಂದೆಂಬ ಮಹಿಮೆಯಂ
ತೋರ್ವ ಮೇಲಣ ಗವಿಯ ಶಾಂತನಂಜೇಶ್ವರಾಚಾರ್ಯ ಜಯ ವಿಜಯ
ಶೌರ್ಯಾ ೨

ಕರ್ಮವೆಂತಿರ್ದುದಂತಾಗೆಲವೊ ನೀನೆನಲು
ಕರ್ಮವಾದಿಯದಂ ಪರಿಗ್ರಹಿಸಿ ನುಡಿದನಾ
ಕರ್ಮರಹಿತನ ಕೂಡೆ ಗೌತಮಾ ಕೇಳು ತನ್ಮತದಾ ಸ್ವರೂಪನೊರೆವೆಂ
ಕರ್ಮಣಾ ಸರ್ವಪ್ರಜಾಯತೇ ಎನಲಾಗಿ
ಕರ್ಮದಿಂ ಸರ್ವವುಂ ಪುಟ್ಟುವುದು ಮತ್ತೆ ಕೇ
ಳ್ಕರ್ಮಾನುಗುಣ್ಯ ದೇಹಂ ಚ ದೇಹೇನ ಸರ್ವಂ ಸಾಧನಂ ಎನುತಿರೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಷ್ಟವಲ್ಲದ ಕರ್ಮದಿಂದೆ ದೇಹವನೆತ್ತಿ
ಶಿಷ್ಟವಹ ತನುವಿನಿಂದಾ ಬಹು ವ್ಯವಹಾರ
ದಷ್ಟ ಮಾಡುವನಲಾ ನೀಂ ಕೇಳದಕ್ಕೆ ವೇದ ಪ್ರಮಾಣಂತೆನಲ್ ಜ್ಯೋ
ತಿಷ್ಟೋಮದಿಂ ಸ್ವರ್ಗಕಾಮೋಯ ಜೇತ್ತೆಂದ
ನುಷ್ಠಿಸುವ ಶೃತ್ಯರ್ಥವುಂಟದೇಂ ಭಾವಿಸೆ ನಿ
ಕೃಷ್ಟವೇ ಯಜ್ಞಮಂ ಮಾಡೆ ಭೋಗವನುಂಬನಂತಲ್ಲದೇ ಬಳಿಕ್ಕಾ ೪

ತಪದ ಲಸದುದ್ಯೋಗ ಕರ್ಮಕ್ಕೆ ತಕ್ಕ ಫಲ
ವ ಪರಮಿತವೇನೇನ ಮಾಡಿದಡೆಯಂತದಕೆ
ಸುಪದ ಫಲವಂ ಕೊಡುವ ಕಾರಣಂ ಕರ್ಮವೇ ದೈವವೆಂದಾಡಲಾಗೀ
ತ್ರಿಪುರಾರಿಯಣುಗನಾ ಗೌತಮಂ ಕೇಳುತ್ತ
ಲಪಹಾಸ್ಯಮಂ ಮಾಡಿ ನುಡಿದನೆಲೆ ವಾದಿ ನೀಂ
ಕಪಟಿ ನಿನ್ನಯ ಮತಾದ್ರಿಗೆ ವಜ್ರದಂಡವೆನಿಸುವ ನುಡಿಯ ಕೇಳೆಂದನೂ ೫

ಕರ್ಮವೇ ದೈವವೆಂದೆಂಬ ವಾದಿಯೆ ಕೇಳು
ಕರ್ಮದಿಂ ದೇಹಮಂ ನೀಂ ತೊಟ್ಟೆನೆಂಬೆಯಾ
ಕರ್ಮವನದೇತಱಿಂ ನೀಂ ಮಾಡಿದ್ಯೆಯದಂ ತನುವಿಂದ ಮಾಡಿದೆನೆನೆ
ಪೆರ್ಮೆಯಿಂದಾ ಶರೀರಕ್ಕಾವ ದೇಹದಿಂ
ಕರ್ಮಮಂ ಮುನ್ನ ನೀಂ ಮಾಡಿದ್ಯೆ ತಿಳಿಯಲಾ
ವರ್ಮವಂ ಬೀಜವೃಕ್ಷ ನ್ಯಾಯದಿಂ ಹೇಳಬಾರದದನೇನೆಂಬೆಯಾ ೬

ತನ್ನ ತಾ ಬೀಜಮಂ ಬಿತ್ತಿಕೊಂಬುದೆ ಹೇಳ
ಯಿನ್ನದೇಂ ತಾಂ ಬಿದ್ದು ಹುಟ್ಟಿತೆಂದೆಂಬೆಯಾ
ಅನ್ನಯದ ವಾದಿಯೆ ನೆಲನು ನೀರಿಲ್ಲದುದು ಹೇಂಗುದಯಿಪುದು ಬೆಳೆವುದ್ಯೆ
ನಿನ್ನ ನೀನಂತೆ ಕರ್ಮವ ಮಾಡುವತಿಶಯದ
ನನ್ನಿಯುಂಟೇ ನಿನಗೆ ಶಿವನು ಶಕ್ತಿ ಪ್ರೇರ
ಣೋನ್ನತದಿನಗ್ಗಳದ ತತ್ವಗಳಧಿಷ್ಠಾನದಿಂ ಸೂತ್ರಧಾರಿಯಾಗೀ ೭

ಮಾಡಿಸಲು ನೀಂ ಮಾಳ್ಪೆಯಲ್ಲದೇ ನಿನ್ನ ನೀಂ
ಮಾಡಲಱಿಯ್ಯೆ ಮತ್ತೆ ಕೇಳ್ಪಿಶಾಚಿಗಳಿರಾ
ಮಾಡುವೆವು ಕರ್ಮಮಂ ದೇಹದಿಂದೆಂಬಿರಾದೊಡೆ ತನುವದೇತಱಿಂದಾ
ಗಾಡಿಯಿಂದಿಪ್ಪುದೆಂಬುದನಱಿದಿರಾದೊಡ
ತ್ಯಾಡಂಬರದೊಳೆ ದೇಹಸ್ಯೋಂನಮಯವೆನು
ತ್ತಾಡುವಾ ವೇದಪ್ರಮಾಣದಿಂದನ್ನೋದಕಂಗಳೆರಡಿಲ್ಲದಿರಲೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವ ಬಗೆಯಿಂ ಕರ್ಮವಂ ಮಾಡಬಾರದೈ
ಭಾವಿಸುವೊಡೀಯನ್ನಪಾನಂಗಳೆರಡುವಂ
ನೀವು ಹುಟ್ಟಿಸಿದಿರೋ ನಿಮ್ಮ ಕರ್ಮಂ ಜನನವಂ ಮಾಡಿತೊ ಬಳಿಕ್ಕಾ
ಆವ ತೆಱನುಸುರಿರೈ ನೀವುಂಬ ಭುಕ್ತಿಯವು
ನಾವಗಂ ನೀವಿರಲ್ಕಾಧಾರವಾಗಿರ್ದ
ಭೂವಳಯವಂ ಮತ್ತೆಯುಟ್ಟುಂಬ ವಹ್ನಿಯಂ ನಿಮ್ಮ ನಯನದ ಮಾತ್ರಕಾ ೯

ರವಿಶಶಿಗಳೆರಡುವಂ ನೀವು ಮಾಡಿದಿರೊ ಮೇ
ಣವನಿಯೊಳು ನಿಮ್ಮ ಕರ್ಮವದೇನು ಮಾಡಿತೊ
ಅವಿಚಾರಿಗಳಿರ ಮತ್ತಂ ಕ್ರಿಯಾ ಕರ್ಮವೇ ದೈವವೆಂದುರದೆ ಮತ್ತೀ
ತವೆ ತಾನು ಮಾಡಿರ್ದ ಕರ್ಮಫಲವೀಗಲನು
ಭವಿಸುವೊಡೆ ತನಗೆ ಕಾರಣವೆಂದು ಕರ್ಮಕ್ಕೆ
ಯವಿರತಂ ಕರ್ತೃತ್ವಮುಂಟುಮಾಡುವ ಮಾತು ಸಲ್ಲದಧಮರಿರ ಕೇಳೀ ೧೦

ಆದೊಡಾ ಕರ್ಮವೇ ಶರೀರದಿಂದನುಭವಿಸ
ಲಾದುದೊ ಶರೀರವಾ ಕರ್ಮದಿಂದುಣ್ಬುದೋ
ಸಾದರದೊಳಲ್ಲವೇಯಾ ತನುಗೆ ಕರ್ಮವೆಯನಾದಿಯಾಗಿರುತಿರ್ಪುದೋ
ಗಾದೆಯೇಂ ಕರ್ಮಕ್ಕೆಯಾ ಕಲೇವರವೇನ
ನಾದಿಯೋಕರ್ಮಕಾರ್ಯಂಗಳೆರಡೊಮ್ಮೆಯೋ
ವೋದದಿಂದೆಯ್ದೆ ಜೀವಾತ್ಮನನವೆಯ್ದುಪವೊ ಎಂದು ಶಂಕಿಪರು ಕೆಲರೂ ೧೧

ಅದಕೆ ಖಂಡನೆಯೆಂತೆನಲ್ ಕರ್ಮವಾವಗಂ
ವಿದಿತದಿನಚೇತನಲಕ್ಷ್ಯನಿರ್ಗುಣವಾಗಿ
ಒದವಿ ಕಾಣಿಸಿಕೊಂಡು ಮಾಡುವಾತನನೆಹಂಗೆಯ್ದುವುದು ಪೇಳು ನೀನೂ
ಮದ ಮುಖನೆ ಕೇಳ ಕರ್ತೃನು ಕಣಾ ಜೀವಾತ್ಮ
ನುದಿತ ಕರ್ಮಾಧೀನನಾಗಿ ವರ್ತಿಸುತಿರ್ಪ
ನಿದುಕಾರಣಂ ಕರ್ಮಫಲವನೆಹಗೆಯ್ದುವಂ ಬಿಡು ಬಿಡಾ ಮುಂದೆ ಕೇಳೂ ೧೨

ಮತ್ತೆಯಿನ್ನಾವನಪರಾಧವಂ ಮಾಡಿದ ನಿ
ಮಿತ್ತದಿಂದಾ ಪುರುಷನಪರಾಧಕಂ ತಕ್ಕು
ದಾತ್ತ ಶಿಕ್ಷೆಯ ತನಗೆ ತಾನೇನುಮಾಡಿಕೊಂಬನೊ ಬಳಿಕ್ಕಪರಾಧವೇ
ಒತ್ತಿ ಸಂಕಲೆಯಾಗಿ ಬಾಧಿಪುದೊ ಬಿಡು ಕರ್ಮಿ
ಮತ್ತನಂ ಬಡಿವುದಕೆ ಕರ್ತನೆಂದೆನಿಸುವ ನೃ
ಪೋತ್ತಮಂ ಬೇಱೊಬ್ಬನುಂಟಲಾ ಕೇಳಹಂಗಾ ಕರ್ಮಗಂ ಬಳಿಕ್ಕಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ಮವುಂ ಸಂಘಟಿಸುವುದಕೆ ಪರಿಭಾವಿಸಲು
ಕರ್ಮದಾಧೀನವುನನಲ್ಲದವನಾಗಿ ನಿ
ಷ್ಕರ್ಮಸ್ವತಂತ್ರ ಸರ್ವೇಶ್ವರಂ ಸರ್ವಗತನೆನಿಪ ಶಿವನುಂಟಹುದಱಿಂ
ಕರ್ಮಕ್ಕೆಯುಂ ಕರ್ಮಿಗಂ ಕರ್ತೃತನವಿಲ್ಲ
ಒರ್ಮೆಯುಂ ಕೇಳಲವೊ ವಾದಿಯಜ್ಞಾನಿಯೆ
ದುರ್ಮತನೆ ಮತ್ತೆಯಾ ಪೂರ್ವಮೀಮಾಂಸಮುಂ ಹೇಳು ಒಬ್ಬುಳಿಯ ಕರ್ಮಂ ೧೪

ಬೇಱೆ ಬೇಱುಸುರುತಿಪ್ಪವು ಕಣಾ ಪರಿಕಿಸುವೊ
ಡಾಱು ತೆಱನಂತವಾದವು ಕೇಳು ದುಷ್ಟನೇ
ಗಾಡೌದ ಬುದ್ಧಿಯವನೇ ಪೂರ್ಣಿಮಾಮವಾಸೆಯು ಕಾಲ ಪಿತೃಕಾರ್ಯವಾ
ವೂಱಿಮಾಡಲ್ಬೇಹುದಾದಕಾರಣದೆ ನಲ
ವೇಱಿಯೊಂದಾನೊಂದು ಸಂಸ್ಕಾರಮುಂ ಘಟಿಸಿ
ತೋಱುತಿಹುದಾ ಮಹಾಸಂಸ್ಕಾರರೂಪ ಯಜನಾದಿ ಷಟ್ಕರ್ಮಂಗಳೈ ೧೫

ಅವಪೂರ್ವವಾಗಿಹವು ಬೇಱೊಂದು ಬಗೆಯಿಂದ
ತವೆಯಪೂರ್ವಮಪೂರ್ವಮುಂ ಪುಟ್ಟಿಸುತ್ತಲಿ
ಪ್ಪವು ಕಣಾ ಉತ್ಕೃಷ್ಟವಾದಪೂರ್ವಂಗಳಿಂ ಮಾಡಲುಳ್ಳಾ ಫಲಾಂತ್ಯ
ದವು ಬಳಿಕದೇ ದೈವವೆಂದು ಕಾಣಲ್ಬಾರ
ದು ವಿಚಾರಿಸಲ್ಕರ್ಮವೆಂದು ಮೂಱುಂ ತೆಱಂ
ಅವಱಿಂದ ದೇಹಾಂತರಂ ಮತ್ತೆ ಲೋಕಾಂತರಂ ಬಳಿಕ ದೇಶಾಂತರಂ ೧೬

ಕಾಲಾಂತರಂಗಳೆಲ್ಲಿಯದುವಾತಂಗೆ ನೆಱೆ
ಲಾಲಿಸುವೊಡನುಭವಿಸಬೇಕಾದ ಫಲಂಗಳಂ
ಮೇಲೀವುತಿರ್ಪುದೆಂಬಾ ವಚನವೇ ವ್ಯರ್ಥವೈ ಕೇಳದದೆಂತೆಂದೊಡೇ
ಸ್ಥೂಲ ಜಡರೂಪಾದ ಕರ್ಮವುಂ ವಿಚಾರಿಸೆ ವಿ
ಶಾಲ ದೇಹಾಂತರಾದಿಗಳಲ್ಲಿ ಫಲವೀಯ್ಯ
ಲೀ ಲೋಕದೊಳು ಸಮರ್ಥಿಕೆಯಿಲ್ಲದಿರ್ಪ ಕತದೊಳು ವಿಚಾರಿಸೆಬಳಿಕ್ಕಾ ೧೭

ಒಡೆಯನುಂ ತೊಲಗಿಸುವ ಕರ್ಮವೇ ಫಲಗಳಂ
ಕೊಡುವುದೆಂದೆಂಬೆಯಾ ಜೈನ ಬೌದ್ಧಂ ಭಾಟ್ಟ
ರೆಡೆವಿಡದೆಯಿವರಾದಿ ಕರ್ಮವಾದಿಗಳ ಜಪ ತಪ ಧರ್ಮ ದಾನಂಗಳೂ
ಕೆಡುವವೈ ಸಲೆಯವರ್ಗೆ ಪರಮೋಕ್ಷವೀವವೇ
ಬಿಡು ಪುಷ್ಟಿಯಾಗಬೇಕೆಂದುಂಡ ಭೋಜನಂ
ಮಡಿಯಿಸುತ್ತಿಹುದಜೀರ್ಣತೆಯಿಂದದಾಗಿ ಕರ್ಮಂ ದೈವವೆನ್ನಬೇಡೈ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೋಜನವ ಮಾಡಿದಾಗಳೆ ಮರಣವಿಲ್ಲಲಾ
ನೈಜ ಸಂತೋಷಿಯುಹನೆಂಬೆಯಾಯಿಹಿಗಾಗ
ಲೀ ಜಗದೊಳಾ ಕೆಟ್ಟ ಕರ್ಮವೆಯ್ದಿತ್ತುಂಡುದರೊಳು ಸಿಕ್ಕಿರ್ದನ್ನವೂ
ತೇಜವಳಿದಧಿಕ ವಿಷವಹುದಲಾ ಪುಷ್ಟಿಯುಂ
ವ್ಯಾಜದಿಂ ತೊಲಗಿಸುತ್ತಂ ಮರಣವೆಯ್ದಿಸದೆ
ಸಾಜದಿಂದಿದುಕಾರಣಂ ಸರ್ವಗತನಾದ ಶಿವನು ತತ್ತತ್ಕರ್ಮಕೇ ೧೯

ಅನುಗುಣದ ಫಲವ ಕೊಡುವಾತನಿಹಿಂಗಾಗಿರಲು
ಜನವೞಿಯೆ ಕರ್ಮಕ್ಕೆ ಕರ್ತೃತ್ವವೆಲ್ಲಿಯುದು
ಘನಮೂಢ ಕೇಳು ಮತ್ತಂ ದೃಷ್ಟಮಂ ಸರಳು ಬಿಲುಗಾಱ ನಿಲ್ಲದಿರಲೂ
ತನಗೆ ತಾನೇ ಹೋಗಿ ಗುಱಿಯನೇಂ ತಾಗುವುದೆ
ಯನಘ ಶಿವನಾಜ್ಞೆಯಿಲ್ಲದೇ ಕರ್ಮಿಗಾ ಕರ್ಮ
ವೆನಿತಾದೊಡೆಯ್ದುವುದೆ ಬಿಡು ಸುಫಲ ದುಷ್ಫಲಂಗಳ ಕರ್ಮವೇಂ
ಕೊಡುವುದೇ ೨೦

ಸಿತಗನೇ ಮುಂದೆ ಕೇಳ್ವೈ ವಾಯುವೀಯ ಸಂ
ಹಿತೆಯೊಳಗನೀಶನಜ್ಞಂ ಕೂಡೆ ಜೀವವೆನಿ
ಸುತಲಿಳೆಯೊಳೆಯ್ದೆ ಮಾಡಿದ ಸುಕರ್ಮದ ದುಷ್ಕೃತಂಗಳ ಫಲಂಗಳಿಂದಾ
ಅತಿಶಯ ಸ್ವರ್ಗ ನರಕಂಗಳೆಯ್ದುವವೆನಲು
ಕೃತಕರ್ಮಿ ಮರಳಿ ನುಡಿದಂ ಗೌತಮಾ ಕೇಳು
ರತಿಯಿಂದನಾ ಭುಕ್ತಮೆನುತಲಾ ಕ್ಷೀಯತೇ ಕರ್ಮ ಎಂಬರ್ಥದಿಂದಾ ೨೧

ಕಲ್ಪಕೋಟಿಗಳಿಂದ ಹರಿಯುವ್ವೆ ಮಾಡಿದಾ
ಸ್ವಲ್ಪಾದಿಕರ್ಮವನುಭುಜಿಸದೆ ಶುಭಾಶುಭದ
ಮೆಲ್ಪುಗಳೆನಲ್ನಗುತ ನುಡಿದನಂದಕ್ಷಪಾದಂ ಕೇಳು ಕರ್ಮವಾದೀ
ಬಲ್ಪುಳ್ಳ ದಕ್ಷಯಜ್ಞಂ ಶಿವವಿರಹಿತವಾ
ಗಲ್ಪಾಳನೆಯಿದಿತ್ತು ವಿಪ್ರನಂ ತಂದೆಯ ಕೊ
ರಲ್ಪರಿಯೆ ಮೋಕ್ಷವಾದುತ್ತಲಾ ಚಂಡೇಶ್ವರಂಗೆ ಪರಿಭಾವಿಸುವೊಡೇ ೨೨

ಕ್ರೂರನೆನಿಸುವ ಕರ್ಮವಾದಿ ನುಡಿದಂ ಬಳಿಕ
ಲಾರಾರುಮೇನೇನುಮಾದೊಡಾಗಲಿ ಮಿಗೆ ಶ
ರೀರಿಗಳು ಮಾಡಿದಾಕರ್ಮವುಂಡಲ್ಲದಳಿಯದೆನಲ್ಕೆ ನುಡಿದನಾರ್ಯಂ
ಧಾರುಣಿಯ ಜೀವರ್ಗೆ ಕರ್ಮವುಂಟೆಂಬುದವಿ
ಚಾರಿಸುವೊಡಂಬಟ್ಟೈವೈ ಶಿವಗೆ ಶಂಕರ ಪ
ದಾರಾಧಕರ್ಗೆ ಕರ್ಮದ ಫಲಂ ಪೊರ್ದವೆಂಬುದು ನಿಶ್ಚಯಂ ಪೇಳ್ವೆನೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುಣ್ಯಮಲ ಮನ್ನಿಮಿತ್ತಂ ಕೃತಂ ಪಾಪಂ ಸು
ಪುಣ್ಯಂ ತದಪಿ ಜಾಯತೇ ಎನಿಪ್ಪರ್ಥಾಗ್ರ
ಗಣ್ಯತೆಯೊಳೀಶ್ವರಂಗಾಗಿ ಮಾಡಿದ ದೋಷವೇ ಸುಕೃತ ಶಿವವಿರಹಿತಾ
ವಾಣ್ಯಮೃತಸತ್ಫಲಂ ದುಷ್ಫಲವನೀವುದು ವ
ರೇಣ್ಯನಾಡಿದ ಮಹಾಶ್ಲೋಕಾರ್ಥವುಂಟು ದು
ರ್ಗುಣ್ಯಧಿಕ ಕೇಳೆಂದು ನುಡಿದನಂದಕ್ಷಪಾದಂ ವೇದಮಯ ಸುನಾದಂ ೨೪

||ಸಾಕ್ಷಿ|| ಮನ್ನಿಮಿತ್ತ ಕೃತಂ ಪಾಪಂ ಪುಣ್ಯಂ ತದಪಿ ಜಾಯತೇ
ಮಾಮನಾದೃತ್ಯ ಪುಣ್ಯಂ ವಾ ಪಾಪಂ ತದಪಿ ಜಾಯತೇ ೧

ಮಾರಾರಿಯಂ ಕುರಿತು ಮಾಡೆ ದುಷ್ಕೃತವನೇ
ಧಾರುಣಿಯು ಜನವೀಶನೊಪ್ಪಿದ ಪುರಾತನರ
ದಾರೆನಲು ತಂದೆ ಸದ್ಬ್ರಾಹ್ಮಣಂ ಕಾಲೊಳಭವನನಲ್ಲಿಯಂಟಲಾಗೀ
ಆರಿ ತಲೆಯಂ ತರಿದು ಕೈಲಾಸಕೆಯ್ದನೇ ಕು
ಮಾರನಂ ಕೊಂದು ಶೂಲಿಗೆ ನೀಡುತೇರೇಳು
ಕೇರಿಯ ಜನಂ ಸತಿಸುತರ್ವೆರಸಿ ಶಿವಪುರಕ್ಕೆಯ್ದನೇ ಸಿರಿಯಾಳನೂ ೨೫

ಕೇಳು ಗರ್ಭಿಣಿ ಪಟ್ಟದಂಗನೆಯ ಪೊಡೆಯನುಱೆ
ಸೀಳಿಯರ್ಭಕನ ತಲೆಯರಿದೀಶನಂ ವೀರ
ಚೋಳನೆಯ್ದನೆ ರಥದ ಗಾಲಿಯೆಡೆಗಡ್ಡಹಾಕಿತ್ತು ಕುಮಾರನ ನರೇಂದ್ರಾ
ಚೋಳನೆಯ್ದನೆ ಶಂಭುವಂ ಬಳಿಕ ಕಲಿಕಂಭ
ಚೋಳನಂಗನೆಯ ಕಯ್ಯಂ ಕಡಿದು ಪಿಡಿದು ಶಿವ
ಕೈಲಾಸವಡರಿದನಲಾ ಹರನಿಮಿತ್ಯ ದುಷ್ಕರ್ಮವೇ ಸತ್ಕರ್ಮವೈ ೨೬

ಪರಮ ಸದ್ಬ್ರಾಹ್ಮಣನನಪಶಬ್ದಿಯಂ ಕೊಲು
ತ್ತರಿಯುಮಂ ಹರನ ಗರ್ಭಾಂತರವನೆಯಿದನೇ
ತರುಣನಂ ನಿಜಕುಮಾರನ ತಲೆಯನೊಡೆದು ನಿಂಬಕ್ಕನಭವನ ಗೆಲ್ದಳೂ
ವರ ತಿರುಜ್ಞಾನಸಂಬಂಧಿ ಶೂಲದೊಳು ಜೈ
ನರ ತೆಗೆಸನೇ ದುಷ್ಟ ಪೌರಾಣಿಕನ ಶಿವನ
ಶರಣ ಕಕ್ಕೈಯ್ಯನಾ ಸಬಳದಿಂದಿರಿದನಿವರಿಗೆ ಕರ್ಮವೇಗೆಯ್ದುದೈ ೨೭

ಆರ್ವೋರ್ವಿರಾಜಾನ ಮಧ್ವರಸ್ಯಸರುದ್ರ
ದೇವಯೆನಲಿಂದ್ರಾಯ ಲಸದು ಪೇಂದ್ರಾಯ ಸ್ವ
ಹಾ ವಿಶೇಷವೆನಲ್ಕೆ ಬರ್ಪುದೇ ಪ್ರಥಮಾಹುತಿಯೊಳದಱಿನಾ ದಕ್ಷನೂ
ಏ ವಿಧಿಗೆ ಬಂದನದನಱಿಯೆಯಾ ಶಿವವಿರಹಿ
ತಾವಲಂಬನರಿಗೈಸಲೆ ಕರ್ಮವಪ್ಪುದೈ
ಶೈವನಿಷ್ಠರ್ಗೆ ಕರ್ಮಂ ಪೊರ್ದವಾ ವಿಷ್ಣುಮುಖ್ಯರ್ಗೆ ಕರ್ಮವುಂಟೈ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತೆನಲು ಭೃಗುಸತಿಯ ಶಿರವರಿದ ಕರ್ಮದಿಂ
ದಂ ತಳ್ತು ಹಂದಿಯಾಗುತ್ತ ಲೋಕದ ವಿಷ್ಟೆ
ಯಂ ತಿನ್ನನೇ ವಿಷ್ಣು ಬಾಲಿಯಂ ಕೊಂದ ಪಾಪದೆ ಕೃಷ್ಣನಾದಾಗಳಾ
ಹೊಂತಕಾಱನ ಜರಕನಂಬಿನಿಂ ಮಡಿಯನೇ
ಪಿಂತೆಯಾ ಬಲಿಯ ಕಟ್ಟಿದ ದೋಷದಿಂ ಪಾವಿ
ನಿಂ ತಜ್ಜಲಂಧರಂ ಮೂಡೆಗಟ್ಟಂ ಕಟ್ಟಿಯಾಕಾಶಕಿಟ್ಟನಲ್ಲಾ ೨೯

ಕೌರವರ ಕೊಲಿಸಿದಜ್ಞಾನವಾ ಯಾದವ ಕು
ಮಾರರೆಲ್ಲರನು ಸಂಹಾರಮಂ ಮಾಡಿತ್ತೈ
ನಾರದನ ಪರ್ವತದ ವನಿತೆಯಂ ಸೆಳೆದುಕೊಂಡಾ ದೋಷದಿಂ ಸೀತೆಯಾ
ಆ ರಾವಣಂ ಕೊಂಡುಪೋಗನೆ ಗೊಲ್ಲಿತಿಯ
ರೋರಣದೊಳೆಯ್ದೆ ಹಾದರವಾಡಲಾ ಹರಿಯ
ನಾರಿಯರು ಹದಿನಾಱುಸಾವಿರವನೆಳೆದು ಬೇಡರು ಸುರತಮಂ ನೆಗಳರೇ ೩೦

ಹುಸಿಯ ನುಡಿದಾ ಬ್ರಹ್ಮನೆಯ್ದೆ ಹದ್ದಾದನಾ
ರುಷಿಯ ಮೋಹಿನಿಗಳಿಪಿ ಮೆಯ್ಯೆಲ್ಲ ಭಗವಾದ
ನೆಸೆವಿಂದ್ರ ನೀಶವಿರಹಿತದ ಕುಂಟಣಿತನದ ಮಾತಿನಿಂ ಪೂಷದಂತಾ
ವಿಸರಂಗಳುದಿರಿದವು ತೊನಚಿಯಂ ಕೊಂದ ಪಾ
ಪ ಸಮೇತ ಮಾಂಡವ್ಯನಾ ಶೂಲದೊಳು ಬೀಳ್ದ
ವಸುಧೀಶನಳನಾದಿಕರ್ಮದಿಂ ಸತಿಯನಗಲುತ್ತ ಭಂಗಂಬಟ್ಟನೈ ೩೧

ಶಿವನ ತಪಮಂ ಕೆಡಿಸಿದಾ ಕರ್ಮವಂಗಜನ
ತವೆ ಸುಟ್ಟುದೀಶಭಕ್ತರ ಮೇಲೆ ಮುನಿಯಲಾ
ಜವನೆಯ್ದೆ ಮಡಿಯನೇ ಪಿರಿದಾಶೆಯಿಂದ ನಾಗಾರ್ಜುನಂ ತಲೆಗೊಟ್ಟನೈ
ಯುವತಿಯಂ ಬಿಟ್ಟು ಕತದಿಂದ ತಪನಳಿದಸುರ
ಗವನಯ್ಯನಾಗನೇ ಪೌಲಸ್ತ್ಯನೆಂಬಾತ
ನಿವರುಮೊದಲಾದವರ್ಗಂ ಕರ್ಮವೈಸಲೆ ಹರಭಕ್ತಕುಲಕಿಲ್ಲವೈ ೩೨

ಆ ಕರ್ಮವೇಂ ಸ್ವತಂತ್ರವೊ ಪಾರತಂತ್ರವೋ
ಜೋಕೆಯಿಂದಾವ ಬಗೆಯೆಂದೆಮ್ಮವಂ ವಾದಿ
ನೀ ಕೇಳುವಾ ಪೇಳ್ವೆನೀಶ್ವರಾಣತಿಯಿಲ್ಲವಾ ಕರ್ಮಿಯಂ ಕರ್ಮವೂ
ಲೋಕದೊಳಗೆಯಿದವೈ ಸತ್ಕರ್ಮ ದುಷ್ಕರ್ಮ
ದಾಕಾರವರಿದಾ ಮಹಾ ಸ್ವರ್ಗ ನರಕಮಂ
ನಾಕಾಧಿಪತಿಯಮರ ಮುಖದಿಂದ ಸುಖದುಃಖಕೀಡುಮಾಡುವನೀಶ್ವರಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಂತ್ರವಾಹಕನೀಶ್ವರಂ ಕರ್ಮಕಂ ತಾಂ ಸ್ವ
ತಂತ್ರವೆಂದೂವಿಲ್ಲವೈ ಮತ್ತೆ ಕೇಳು ಶಿವ
ಮಂತ್ರಸ್ವರೂಪಭಕ್ತರ್ಗೆ ಪೊರ್ದದು ಕರ್ಮವೆಂದು ನಿರವಿಸೆ ಗೌತಮಂ
ಅಂತ್ರದೊಬ್ಬುಳಿಯ ಕೊರ್ಬಿನ ವಾದಿ ಕೂಡೆ ನುಡಿ
ದಂ ತ್ರಿಲೋಚನನಜನ ಮಸ್ತಕವನರಿದ ಕ
ರ್ಮಂತ್ರ ಪಾರಹಿತನಂ ಮಾಡಿ ತಿರಿಯಿಸದೆ ಎಂದೊಳ್ದನಧಮಾಗ್ರಗಣ್ಯಂ ೩೪

ಮಾಯಾರಿಗಾದುದಾ ಬ್ರಹ್ಮೇತಿಯೆಂದೆಂಬ
ನಾಯ ಬಾಯಂ ದಂಡದಿಂದಿರಿವ ಮಾಳ್ಕೆಯಿಂ
ದಾಯಧಿಕ ಗೌತಮಂ ನುಡಿದನದಕಂ ಖಂಡನೆಗಳಂ ತಲೆಯನರಿಯಲೂ
ಆಯಾ ಪ್ರಕಾರವಾಗಲ್ಬೇಕು ತಿರಿವುದೇ
ನೋಯಾರವೇ ತದ್ವಿಚಾರಮಂ ಪೇಳ್ವೆನೈ
ನ್ಯಾಯದೂರಾ ಕೇಳೆನುತ್ತಕ್ಷಪಾದನೆಂದಂ ಶಿವಾಭೇದನಾದಂ ೩೫

ಮೇರುವಾಗ್ರದೊಳಖಿಳರೆಯ್ದೆ ವಂದಿಸುತಲೆಲೆ
ವಾರಿಜೋದ್ಭವನೆ ಪರತತ್ವವೇನೆಂದೆನಲು
ಮಾರಾರಿಯಂ ಮಱೆದಹಂ ಬ್ರಹ್ಮವೆಂಬ ಕರ್ವದೊಳು ಮತ್ತಾಗವೇಡಾ
ಪೌರುಷರ ಜರೆದ ಕರ್ಮದಿನಾ ಮಹಾಪ್ರಣವ
ಚಾರುವಚನಂಗಳಂ ಹಳಿದ ಕರ್ಮದಿನೀಶ
ನೋಡಂತೆ ನಿರವಿಸಲ್ಕಿದಿರು ಮಾತಂ ನುಡಿದ ದುಷ್ಕರ್ಮದೇಳ್ಗೆಯಿಂದಂ ೩೬

ಆ ಕರ್ಮಕಂ ಕರ್ತೃವಾದ ಸರ್ವೇಶ್ವರಂ
ಕಾಕನಾದಾ ಬ್ರಹ್ಮಶಿರವನುಗುರಿಂದರಿದ
ನೈ ಕೇಳು ತಪ್ಪು ಮಾಡಿದರಂ ಮಹಾರಾಜರೆಯ್ದೆ ಶಿಕ್ಷಿಸಬೇಹುದೈ
ಆ ಕಾಲದೊಳಗೆ ಸೋಮಾಷ್ಟಕದೊಳೀಶನ ಮ
ಹಾ ಕಾಂತೆಯಂ ಪೊಗಳಿ ಮೆಚ್ಚಿಸಲು ಕೇಳಜಾ
ಬೇಕಾದ ನಿನ್ನಿಷ್ಟಸಿದ್ಧಿಯೇನೆನಲು ಚತುರಾನನಂ ನುಡಿದನಾಗಾ ೩೭

ನಿನ್ನಿದಿರೊಳುತ್ತರವನಾಡಿದಜ್ಞಾನಿಯ
ಪ್ಪನ್ನ ತಲೆಯಂ ಪಿಡಿವುತೀ ಬಾಯೊಳೇಗಳುಂ
ತನ್ನಿಮಿತ್ತದೊಳಖಿಳ ರಕ್ತಮಂ ಪೊಯ್ಯಬೇಕೆನಲದಂ ಕೈಯ್ಯಲಾಂತೂ
ಪನ್ನಗಾಧರಗದೇ ದೋಷವೆಯದಲ್ಲದಾ
ಜನ್ನದೊಳು ದಕ್ಷಯಜ್ಞನ ತಲೆಯ ಕಡಿದಂದು
ನಿನ್ನ ಕರ್ಮಂ ಶಂಭುವಪರಸ್ಫಿಜಾಘ್ರಾತವಂ ಮಾಡಿತೇ ದುರಾತ್ಮಾ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾದಿಯೇ ಕೇಳಜಂ ಬ್ರಾಹ್ಮಣಂ ತಾನಲ್ಲ
ವಾದಿ ರುದ್ರಾಂಗವೆಂಬಾಗಮಾರ್ಥದೆ ಕೇಳು
ಮಾದೇವನೇ ನಿಜ ಮುಖೋದಯಂ ಬ್ರಾಹ್ಮಣಂ ತದ್ಭುಜದೊಳುದಿಸಿ ವಿಷ್ಣು
ವಾದನಾ ಕ್ಷತ್ರಿಯಂ ಮೇಲೂರುವಿಂದೊಗೆದ
ನೈದಾತನೇ ವೈಶ್ಯನಂಘ್ರಿಯಿಂದೊಕ್ಕಲಿಗ
ನಾದನಾ ದೇವೇಂದ್ರನಾ ವೈಶ್ಯವಿಧಿಯ ತಲೆಯರಿಯಲೇಂ ಬ್ರಹ್ಮೇತಿಯೇ ೬೯

||ಸಾಕ್ಷಿ|| ಆದಿರುದ್ರಾಂಗ ಉತ್ಪತ್ತಿರ್ಮುಖೇ ಬ್ರಾಹ್ಮಣ ಈಶ್ವರಃ
ವಿಷ್ಣುಕ್ಷತ್ರಿಯ ಇತ್ಯಾಹುರ್ಬಾಹುದೇಶೇ ವ್ಯವಸ್ಥಿತಃ ೨
ವೈಶ್ಯಸ್ತು ಬ್ರಹ್ಮ ಇತ್ಯಾಹುಃ ಊರುದೇಶೇ ವ್ಯವಸ್ಥಿತಃ
ಶೂದ್ರಃ ಸುರಪ ನಿತ್ಯಾಹುಃ ಪಾದದೇಶೇ ವ್ಯವಸ್ಥಿತಃ ೩

ಮರುಳೆ ಕೇಳಾ ವೈಶ್ಯನಹ ಪಿತಾಮಹನೊಂದು
ಶಿರವರಿದನೈಸಲೇ ಸತ್ತುದಿಲ್ಲೆಂದು ಸರ
ಸೀರುಹಭವನಾ ನಾಲ್ಕು ಮುಖದಿಂದಿರುತ್ತೈದನೀಗಳಾ ಬ್ರಹ್ಮವಧೆಯಾ
ಹರನನೆಯ್ದುವುದೆ ಯುಪಪಾತಕಂ ಕೋಟಿಗಳ
ಪರಿಮಿತಬ್ರಹ್ಮಹತಿಯಯುತವಾ ಶಿವಭಕ್ತ
ದರುಷನದೊಳಳಿವವೈ ಸಾಕ್ಷಾತ ಶಂಭುಗಾ ಬ್ರಹ್ಮೇತಿಯೆಂತಪ್ಪುದೈ ೪೦

||ಸಾಕ್ಷಿ|| ಉಪಪಾತಶ ಕೋಟಿನಾಂ ಬ್ರಹ್ಮಹತ್ಯಶತಾನಿ ಚ
ದಹತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್ ೪

ಕೋಟಿಯೋ ಬ್ರಹ್ಮಹತ್ಯಾನಾಗಮ್ಯಾಗ
ಮಾಟನಂಗಳು ಮೆನಲ್ಕಂತು ತದ್ಬ್ರಹ್ಮೇತಿ
ಮೀಟಪ್ಪ ದೋಷಂಗಳೀಶ್ವರನನಾಮದಿಂದಳಿದವೆಂದಾ ಸ್ಕಂದದಾ
ಮಾಡಿದೊಳು ಶಿವರಹಸ್ಯದ ಖಾಂಡದೊಳಗುಟಿಕಿ ಲ
ಲಾಟಲೋಚನನ ಮಹಿಮೆಯು ಪೇಳುತಿರಲಿಂದು
ಜೂಟಂಗೆ ಬ್ರಹ್ಮಹತಿ ಎಂಬವರ ನಾಲಗೆಯ ಸೀಳದೇ ಇರಬಪ್ಪುದೇ ೪೧

"ಸಾಕ್ಷಿ" ಕೋಟಿಯೋ ಬ್ರಹ್ಮಹತ್ಯಾನಾ ಗಮ್ಯಾಗಮನ ಕೋಟಯಃ
ಸದ್ಯಃ ಪ್ರಳಯ ಮಾಯಾಂತಿ ಮಹಾದೇವಸ್ಯ ಕೀರ್ತನಾತ್ ೫

ರೂಪಿಸಲು ಬ್ರಹ್ಮಪಂಚಬ್ರಹ್ಮವೆನಲು ಬ್ರ
ಹ್ಮಾಪಾಪಕಾಶಿನಿಯೆನಲು ಶಿವಲಿಂಗದ ಮು
ಖೋಪದರುಷನದಿಂದವಾ ಮಹಾಬ್ರಹ್ಮೇತಿವಳಿವವೆನಲಾ ಶಿವಂಗೇ
ಏ ಪರಿಯೊಳಾದುದೈ ಬ್ರಹ್ಮೇತಿ ಬಿಡುಬಿಡಾ
ಪಾಪಿಯೇ ಶಿವನು ಭಾಳಾಕ್ಷಿಯಂ ತೆಗೆದೊಡಾ
ವ್ಯಾಪಿಸಿದ ವಹ್ನಿಯೊಳ್ಬ್ರಾಹ್ಮಣರನಂತವಳಿಯಲ್ ಬ್ರಹ್ಮಹತಿಯಾದುದೇ ೪೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಮೇಶನೆಂದು ಹರಿಯಾ ಮಹಾಬ್ರಹ್ಮೇಶ
ನಾಮದಿಂ ವಿಧಿ ಬಳಿಕ್ಕಿಂದ್ರೇಶನೆಂದು ಸು
ತ್ರಾಮನರ್ಕೇಶನೆಂದಾ ತರಣಿ ಬಾದರಾಯಣನು ತದ್ವ್ಯಾಸೇಶ್ವರಾ
ಸ್ವಾಮಿಯಂ ಪೂಜಿಸುತ್ತಿಂತಖಿಳರೆಯ್ದೆ ಕ
ರ್ಮಾಮಯವ ಕಳಿದಂತೆ ಹರನಲ್ಲಿಯಾದೊಡೀ
ಭೂಮಿಯೊಳಗಂ ಶಿವೇಶ್ವರನೆಂದೆನುತ್ತರ್ಚಿಸಿದುದುಂಟೆ ಹೇಳಧಮನೇ ೪೩

ಮಲಹರನನಾ ಹರನ ಭಕ್ತದರುಷನದಿಂದ
ಸುಲಲಿತದ ಪುಣ್ಯವೈ ಬ್ರಹ್ಮೇತಿಯುಳಿವವೈ
ಹುಲುನುಡಿಯ ವಾದಿ ಕೇಳಾ ಶಿವಗೆ ಶಿವನ ಭಕ್ತರಿಗೆ ಕರ್ಮವೆಂಬ ಮಾತೂ
ಮೊಲದ ಕೋಡೆಂಬಂದದಿಂದಱಿದು ಬದುಕಿ ನೀ
ನೆಲವೊ ನೀನದ ತಿಳಿಯಲಱಿಯೆಯಾ ಬಳಿಕ ಲೀ
ನೆಲದಲ್ಲಿ ಕಾಲಕಲ್ಪನೆಯುಂತುಟಂತಾಗೆನುತ್ತ ನುಡಿದಂ ಗೌತಮಂ ೪೪

ವಾದಿಕಾಲ ಪ್ರಮಾಣಂ ಕೆಡೆಂದಾ ಕರ್ಮ
ವಾದಿಯಂ ಮುರಿದೊಡಾ ಸಮಯದೊಳಗಂ ಕಾಲ
ವಾದಿ ನುಡಿದಂ ಗೌತಮಾ ಕೇಳು ಕಾಲವಾದಸ್ವರೂಪಂ ಪೇಳ್ವೆನೂ
ಧರೆಯೊಳಾರು ಮಾಡಿದ ಮಹಾ ಕರ್ಮದ ಫ
ಲೋದಯಂಗಳನು ತತ್ತತ್ಕಾಲದೊಳಗುಂಬ
ನೈ ದಿಟಂ ಸತ್ತಡಂ ಕಾಲಾಂತರದೊಳುಂಬನಾಗಿ ಕಾಲಂ ದೈವವೈ ೪೫

ಅದು ಹೇಂಗೆ ಎಂಬೆಯಾ ಕರ್ಮಮಂ ಕೂರ್ತು ಮಾ
ಡಿದ ಕಾಲವುಂಬಕಾಲಂತಿರ್ವಕಾಲವ
ಭ್ಯುದಯ ಸತ್ಕರ್ಮವೈತಹಕಾಲವದನುಣ್ಬ ಕಾಲಂ ವಿಚಾರಿಸಲ್ಕೇ
ಆದಱಿಲ್ಲಿಯೇ ಮಗ್ನವಹ ಕಾಲವೃಱಿತ ಹುಟ್ಟು
ವುದಕೆ ಬಹಕಾಲವಾ ಗರ್ಭವಾದಾಕಾಲ
ಉದಯವಾದಾಕಾಲವೆಯ್ದೆ ಹಸುಮಗನಾದ ಕಾಲವಾ ಪ್ರಾಯವಪ್ಪಾ ೪೬

ಕಾಲವಾ ಮುಪ್ಪಾದ ಕಾಲ ರೋಗಂ ಬಂದ
ಕಾಲ ಸತ್ತಾಕಾಲವದುಮಲ್ಲದೆಯು ಮತ್ತೆ
ಕಾಲವಶವೀ ಜಗದ್ವ್ಯವಹಾರವೆಲ್ಲವುನ್ಮಿಷ ನಿಮಿಷವೈದೆ ಚಿಟುಕೂ
ಮೇಲೆ ಘಳಿಗೆ ವಿಘಳಿಗೆ ಜಾವಮುದಯಂ ಮಧ್ಯ
ಕಾಲವಸ್ತಮಯ ರಾತ್ರೀ ದಿನಂ ಪಕ್ಷಮಾ
ಸಾ ಲಲಿತ ವರುಷ ಸಂವತ್ಸರ ಯುಗಂ ಕಲ್ಪ ಕಲ್ಪಂಗಳಿಂ ಬಳಿಕ್ಕಾ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂತ ಭವಿಷ್ಯತ್ಸುವರ್ತಮಾನಾದಿಗಳಿ
ವೇ ತೆಱದೊಳಂ ಕಾಲದೊಳಗುಮದುವಲ್ಲದಾ
ಸಾತಿಶಯ ಸುಸ್ವರ್ಗನರಕ ಪುಣ್ಯಂ ಪಾಪ ಶುಭವಶುಭಲಗ್ನವಿಘ್ನಾ
ಖ್ಯಾತಮಪ್ಪಾ ಕಾರ್ಯಕಾರಣ ನವಗ್ರಹ ಬ
ಲಾತಿಶಯ ಸೋಮ ಸೂರ್ಯಗ್ರಹಣ ಸಂಕ್ರಾಂತಿ
ಯಾ ತಾರಕಾಚರಣ ಯೋಗ ಕರಣಂ ದಿವಿಗಳಾರಾಸಿಯುಂ ಬಳಿಕ್ಕಾ ೪೮

ಉತ್ತಮಂ ಮಧ್ಯಮಾಧಮುಗಳಿವು ಮೊದಲಾದು
ದಾತ್ತ ಸರ್ವ ವ್ಯವಹಾರಂಗಳೆಲ್ಲವುಂ
ತತ್ತನ್ಮಯದ ಕಾಲದೊಳಗಲ್ಲದೇ ಬೇಱೆ ತೋಱುವಂತದು ಕಾರುಣಾ
ಮತ್ತಿನ್ನು ಬೇಱೊಂದು ಕರ್ತುವಿಲ್ಲಂ ಕಣಾ
ಚಿತ್ತಶುದ್ಧದೆ ನೋಡು ಕಾಲವೇ ದೈವವೆನೆ
ಮತ್ತನೆನಿಸುವ ಕಾಲವಾದಿಯಂ ನೋಡಿ ಖಂಡನೆಯ ನೊರೆದಂ ಗೌತಮಂ ೪೯

ಕಾಲವೇ ದೈವವೆಂದೆಂಬೆಯಾದೊಡೆ ಕೇಳು
ಕಾಲವಾದಿಯೆ ಕಾಲವಚಿರವುಮ ನಿತ್ಯವೈ
ಕಾಲವೇ ನಿರ್ಗುಣವಚೇತನಂ ನಿಷ್ಫಲಮಕಾಯವಾ ಕ್ಷಣಭಂಗುರಂ
ಕಾಲಕ್ಕದಾಗಿ ಕರ್ತೃತ್ವವೆಲ್ಲಿಯದು ಹೇ
ಳೈ ಲೋಕದೊಳಗೆ ಕುಂಬರನ ಚಕ್ರಂ ಕೂರ್ತು
ಕೋಲಿಂ ಕುಲಾಲನೆ ತಿರಿಗಿಸಲ್ತಿರುಗುವುದೊ ತನ್ನಂ ತಾ ತಿರುಗುತಿಹುದೋ ೫೦

ಅದುಕಾರುಣಂ ಕೇಳು ತನ್ನ ತಾಂ ತಿರುಗಲಱ
ಯದು ಕಣಾ ಹೀಂಗೀಶ್ವರಂ ತಾನದೆಂತು ತಿರು
ಗದೆ ಕಾಲಚಕ್ರಮಂ ತಿರಿಗಿಸುವನೆಂತೆನೆ ನಿಜಾಧಾರಶಕ್ತಿಶಿಲೆಯಾ
ಮುದದಿಂದ ಕೆಳಗಿರಿಸಿ ಮೇರುವೆಂಬಾ ಮೊಳೆಯ
ನದಱಲ್ಲಿ ಕೀಲಿಸುತ್ತಂ ನಿಜಾಜ್ಞಾಗ್ರಹ
ಸ್ಥದಿನೆಯ್ದೆ ಸೂರ್ಯನೆಂದೆಂಬ ದಂಡವ ಹಿಡಿದು ತಿರಿಗಿಸುವನಾ ಶಂಕರಂ ೫೧

ಆತನೆಂತಪ್ಪನೆನಲಾ ಸ್ವತಃಸಿದ್ಧಂ ಪು
ನೀತ ಸ್ವಭಾವಾನಲಾಕಾರ ಸುಸ್ಥಿರತ
ರಾತಿಶಯ ನಿತ್ಯಪ್ರಮಾಣಾನುಪಮನ ಚಲಿತನೆ ಕೂರ್ತು ತಾಂ ತಿರುಗದೇ
ಖ್ಯಾತವಹ ಕಾಲಚಕ್ರವನೆಯ್ದೆ ತಿರಿಗಿಪಂ
ಸಾತಿಶಯದಿಂ ಸ್ವಲೀಲಾಕಾರಣತ್ವದಿಂ
ಭೂತೇಶ ಕರ್ಮಚಕ್ರದಿನಖಿಳ ಜೀವರಂ ತಿರಿಗಿಸುವನೆಂತೆಂದೊಡೇ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಯೆಯೆಂಬಾ ಚಕ್ರದಲ್ಲಿ ಘಟವೆಂದೆಂಬ
ಕಾಯದೊಳು ನೀರೆಂಬ ಜೀವಮಂ ತುಂಬಿಯು
ತ್ಯಾಯಸ ಮಹಾಮಾಯೆಯೆನಿಸುವಾಧಾರದಿಂದಾಗ್ರಸೂತ್ರಧಾರೀ
ಆಯ ಮಲಜಲದೊಳಗೆ ಹೊಳೆವ ಚಂದ್ರಮನಂತೆ
ಈಯಖಿಳ ಜಗವನುಟಿಕಿ ಹೊದ್ದಿಹೊದ್ದದೆ ಭವಾ
ಖ್ಯಾಯತದೆ ರಾಟಾಳವ ತಿರಿಗಿಸುತ್ತಿಹನು ಮಾಯಾತೀತವಪ್ಪ ಶಿವನೂ ೫೩

ವಿಶ್ವಾಧಿಕಂ ವಿಶ್ವಕರ್ತೃವೆಂದೆನಿಸುತಿಹ
ವಿಶ್ವಚೇತನ ಕಪಟನಾಟಕಂ ಸೂತ್ರಧರ
ವಿಶ್ವಪತಿಯಿರುತಿರಲು ಸುರರು ಕಿನ್ನರರು ಗರುಡರು ಸಿದ್ಧ ವಿದ್ಯಾಧರಾ
ಅಶ್ವಮುಖ ಸುರಪ ಹರಿಯಾ ಪ್ರಜಾಪತಿದಾನ
ವೇಶ್ವರ ಮುನಿವ್ರಾತ ಮನುಜ ಖಗ ಮೃಗಸಹಿತ
ಪಶ್ವಾದಿಗಳು ಪಿಪೀಲಿಕ ಜೀವರಾಯುಷ್ಯವೆಂದೆನಿಸುವಾ ರಾಸಿಯಾ ೫೪

ಯುಗ ಕಲ್ಪ ತತ್ಪರಾಯನ ರುತುಗಳೆಯ್ದೆ ಮಾ
ಸಗಳು ಪಕ್ಷಾದಿ ದಿವರಾತ್ರಿ ಜಾವಂ ಮುಹೂ
ರ್ತಗಳು ಮತ್ತಾಕ್ಷಣಂ ನಿಮಿಷವೆಂಬಾಗಿದ್ದನಂ ಸೊಲ್ಲಗೆಯುದರವನಾ
ಮಿಗೆ ಮಾನ ಬಳ್ಳವಿಬ್ಬಳಕೊಳಗವಲ್ಲಿ ಖಂ
ಡುಗವೆಂಬ ಗಣನೆಯುಳತೆಗಳಿನಳೆವುತ್ತಿಪ್ಪ
ಬಗೆಯುಟಿವ ಸಕಲ ಸದ್ಬ್ರಹ್ಮಾಂಡವಿತತಿಗೊರ್ವನೆ ಕರ್ತೃನಖಿಳೇಶ್ವರಂ ೫೫

ಆತನೇ ನಿತ್ಯ ಸತ್ಯಂ ನೈಜರೂಪ ಕಾ
ಲಾತೀತನವ್ಯಯಾಕ್ಷಯ ಸದಾನಂದ ವಿ
ಖ್ಯಾತ ಪರಮೇಶ್ವರ ಪರಬ್ರಹ್ಮವತಿಶಯಬ್ರಹ್ಮೇಶ್ವರಾಕುಟಿಲನೂ
ಆತತ ಮಹಾಕಾಲ ಕಾಲಾತ್ಮಕಂ ನತ
ಪ್ರೀತನಂತಖಿಲ ಕಾಲಾಶ್ರಯನು ದಿವ್ಯಸಂ
ಪೂತ ಕಾಲೇಚ್ಛಕ ಸ್ಥಿರ ಚರ ಸ್ಥಾಣುವಾ ಕಾಲಚೈತನ್ಯರೂಪಂ ೫೬

ಸದಮಲನೆನಿಪ್ಪ ಕಾಲಕೃತಾಂತ ಮುಕ್ತಿಸು
ಪ್ರದನಿರಲ್ಕಾ ಶಿವನ ಶಾಸನಾಧಿಕಶಕ್ತಿ
ಯದಟಿ ಕಾಲವೆ ಕಾಲವಪ್ಪುದಿನ್ನುಕಾಲಕೆಂದುವುಂ ಕರ್ತೃತ್ವವೂ
ಬೆದಕಲಿಲ್ಲಂತಿರಲ್ ಪೇಳುವೆಂ ವೇದವಾ
ಕ್ಯದ ಶತಾಯುರ್ವೈ ಪುರುಷಯೆನಲ್ಕೀಕಾಲ
ದೊದವದೇಂ ಮೀಟಿನಡೆಯುರೆ ನಮ್ಮಶರಣರವರಾರಾರೆನಲ್ಪೇಳ್ವೆನೂ ೫೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಳಸಿತ ಮೃಕಂಡುವಿನ ಸುತನು ಮಾರ್ಕಂಡೇಯು
ಮಳಿಯರಾಜಂ ಶ್ವೇತ ಮಾದಿರಾಜಯ್ಯಮಡಿ
ವಳ ಮಾಚಿತಂದೆ ರೇವಣಸಿದ್ಧದೇಶಿಕರು ಕಾಲಂಗಳಂ ಮೀರರೇ
ಬಳಿಕಲಾ ಮಾದರಸನೆಯ್ದಿ ತನ್ನಯ ಶಿಷ್ಯ
ನಳಿಯಲಾತಂಗೆ ಹರಣವನೀಯನೇಯೋರ್ವ
ಳೆಳೆವೆಣ್ಣು ಸಾಯಲಸುವೀಯನೇ ಮುಸುಡಿ ಚೌಡೈಯ್ಯನಖಿಳರುಪೊಗಳಲೂ ೫೮

ಬೆಲಿದೇವಿಯರ ವ್ಯಾಮನಾರಾಧ್ಯರಂದು ಭೂ
ತಲನಾಥನಿಂ ಸತ್ತೊಡಸುವೀಯ್ಯನೇ
ಸಲೆ ಸಪ್ತವಾಸರದ ಗೋಪಿಬಾಲನ ಪೆಣಕೆ ಹರಣಮಂ ಕೊಟ್ಟನಲ್ಲಾ
ಕಲಿ ಕದಿರೆರೇಮಯ್ಯನಾ ವೀರಷೋಡಶಂ
ಗೊಲಿದು ಜೀವವನಿತ್ತನೈ ಮೊಱಿನ ವೇಮಯ್ಯ
ನೆಲೆ ಮಾದಿ ಕೇಳವರು ಕಾಲವಶರೇ ಕಾಲಮಂ ಮೀಱಿದವರಲ್ಲವೆ? ೫೯

ತಮಗರ್ಪಿಸಲ್ಕಳಿದ ಪದುಮಮುಖಿಯೆಂದೆಂಬ
ರಮಣಿಗೊಂಭತ್ತು ವರುಷದ ಮೇಲೆ ಕೂರ್ತು ಹರ
ಣಮನೀಯನೇ ತಿರುಜ್ಞಾನಸಂಬಂಧಿದೇವರು ಮೊಸಳೆ ನುಂಗಲಾಗೀ
ನಮಮ ನಂಬ್ಯಣ್ಣನಾ ತನ್ನ ಹೆಸರಾತ್ಮಜನ
ಯಮನ ದಾಡೆಯ ನೀಳ್ದು ತಾರನೇ ಜೈನರಾ
ಕ್ರಮಿಸಿ ಕೊಂದಾ ಸಮಾಧಿಯ ಸುತಂಗಸುಗೊಡನೆ ಕೋವೂರ
ಬೊಮ್ಮಯ್ಯನೂ ೬೦

ರಕ್ಕಸಬ್ರಹ್ಮಯ್ಯನೆಂಬಾತನಾಲಯಂ
ಬೊಕ್ಕ ಚರಲಿಂಗಂಗಳಳಿಯಲೀರಾಱೌನಿಸಿ
ರಕ್ಕಿಸುವನೊಮ್ಮೆಕೊಡನೇ ಇಂತು ಕೂಡೆ ಕಾಲನ ಬಾಯನೊದೆದವರ್ಗಳಾ
ಲೆಕ್ಕಿಸಲು ಬಾರದದಱಿಂ ಕಾಲವೆಲ್ಲವಂ
ಮಿಕ್ಕು ಮೀಱುವರೆಮ್ಮ ಶರಣರೆಂದೆಯ್ದಿ ಸ
ಮ್ಯಕ್ಕಾಗಿ ನುಡಿದನಾ ಗೌತಮಶ್ರೇಷ್ಠನಾ ಭ್ರಷ್ಟಮತಹರ ವಿಶಿಷ್ಟಾ ೬೧

ಕುಹಕಿ ಕೇಳೈಬಳಿಕ ನಿನ್ನಕಾಲವೆ ಕರ್ತೃ
ವಹಡೆ ತನಿಚ್ಛೆಯಿಂದಿರಬೇಡವೇ ಮಹಾ
ಮಹಿಮೆಯಿಂ ಲುಂಪಂತಿ ದೈವಲಿಖಿತಾನಿಯೆನೆ ಕಾಲಕಲ್ಪಿತದಹಣೆಯೊ
ಳಿಹ ಬರೆಹಮಂ ದೇಶಿಕಂ ತೊಡೆದುದಿಲ್ಲವೇ
ಸಹಜದಿಂದದುಕಾರಣಂ ಕಾಲವೇ ದೈವ
ವಹ ಬಗೆಯುದೆಂತು ತೆಗೆಯೈ ತತ್ವನಿರ್ಣಯದೊಳೊರೆವೆನೈ ಮುಂದೆ
ಕೇಳೂ ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲಾಂತಕನ ಕಾರ್ಯದಿಂದಾದ ಷಟ್ತ್ರಿಂಶ
ದಾ ಲೆಕ್ಕವೆನಿಸುತಿಹ ತತ್ವಂಗಳೊಳಗೆ ಕೇ
ಳ್ಕಾಲತತ್ವಂ ತಿಳಿಯಲಿಪ್ಪತ್ತ ಏಳನೆಯದೆನಿಪುದಾ ಕಾಲತತ್ವಂ
ಮೇಲಿಪ್ಪ ತತ್ವಂಗಳೆಯಿದಲಱಿಯುವು ಕಣಾ
ಸಾಲಾಗಿಯುವನೆಯ್ದೆ ಬಿತ್ತರಿಪೆನೆಂದತಿ ವಿ
ಶಾಲಮತಿ ಗೌತಮಂ ನುಡಿದನಾ ಧೃತಿಮಹೋನ್ನತಿ ಶಿವಾಕೃತಿ ಸುವ್ರತೀ ೬೩

ಧರಣಿ ಜಲ ವಹ್ನಿ ಮಾರುತ ಗಗನಮುಂ ಗಂಧ
ಮುರುತರದ ರಸರೂಪವಾ ಸ್ಪರ್ಶಶಬ್ದ ಬಂ
ಧುರದ ವಾಕ್ಪಾಣಿ ಪಾದೋಪಸ್ಥವಾಯುವಾಘ್ರಾಣಜಿಂಹ್ವಾಕ್ಷಿ ಬಳಿಕಾ
ಪರಿಯೊಳಾ ತ್ವಕ್‌ಶ್ರುತಿಗಳಿನ್ನು ಚಿತ್ತಮು
ತ್ಕರ ಬುದ್ಧಿಯಂತಹಂಕೃತಿ ಮನಂ ಸಹವಾಗಿ
ಯರರೆ ಯಿಪ್ಪತ್ತನಾಲ್ಕೆಂದು ಭಾವಿಸಲಶುದ್ಧ ತತ್ವಂಗಳಕ್ಕುಂ ೬೪

ಬಪ್ಪವಾ ತರುವಾಯ ಪುರುಷನಿಯತಿಯ ಮುಂದೆ
ಇಪ್ಪತ್ತಏಳನೆಯದಾ ಕಾಲತತ್ವವನ
ಲಿಪ್ಪುದಱಿಂ ಮೇಲೆ ರಾಗ ವಿದ್ಯಾಕಲಾ ಮಾಯೆಯಿಂದೇಳು ತತ್ವಂ
ತಪ್ಪದಾ ನಾಮ ಶುದ್ಧಾಶುದ್ಧವೈಯುಪರಿ
ಯಪ್ಪವಾ ಶುದ್ಧವಿದ್ಯೇಶ್ವರಸದಾಶಿವರೆ
ನಿಪ್ಪ ತಚ್ಛಕ್ತಿಶಿವರೈದು ಶುದ್ಧಂ ತಿಳಿಯೆ ತತ್ವಮೂವತ್ತಾಱಲೈ ೬೫

ಕೇಳು ಮೂವತ್ತಾಱು ತತ್ವದೊಳಗಿಪ್ಪತ್ತ
ಏಳನೆಯದಾ ಕಾಲತತ್ವವೈ ತನ್ನಿಂದ
ಕೀಳಾದ ತತ್ವವಿಪ್ಪತ್ತಾಱನಱಿವುದೈ ತನಗುಪರಿಯಾಗಿ ತೋರ್ಪಾ
ಓಳಿಯೊಂಭತ್ತು ತತ್ವವನಱಿಯದೈ ಕಣಾ
ಖೂಳ ಕಾಲಾತೀತವವಱೊಳಗೆ ರಾಗ ವಿ
ದ್ಯಾಳಾಪವಾ ಕಲಾ ಮಾಯೆ ಶುದ್ಧಾಶುದ್ಧವೀ ನಾಲ್ಕು ತತ್ವಂಗಳೂ ೬೬

ಇವು ನೋಡಲಾಗಿ ಕಾಲಾತೀತವೆಂಬಲ್ಲಿ
ಯಿವನೆಲ್ಲವಂ ಪ್ರೇರಿಸುತ್ತ ರಾಜಿಪ ಮೇಲ
ಣವು ಶುದ್ಧವಿದ್ಯೇಶ್ವರಂ ಸದಾಶಿವಶಕ್ತಿ ಶಿವನೆಂಬ ಪಂಚತತ್ವದಾ
ಅವನದೆಂತೆಯಿದೂದು ಕಾಲತತ್ವಂ ಕೇಳ್ವ
ದವಿರೂಪ ಶುದ್ಧ ದೈವಕ್ಕೆ ಮೂಲಾಧಾರ
ದವಿಶೇಷವಹ ಮಹಾಮಾಯೆಯೆ ಕಾರಣಂ ತನ್ಮಹಾಮಾಯೆಗಿನ್ನೂ ೬೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣನಲಾ ಮಹೇಶ್ವರನಾ ಮಹೇಶಂಗೆ
ಕಾರಣನುಮೀಶ್ವರಂ ಬಳಿಕಲಂತೀಶ್ವರಗೆ
ಕಾರಣಂ ತಾಂ ಸದಾಶಿವನಾ ಸದಾಶಿವಂ ಸರ್ವಕಾರಣ ಕರ್ತನೂ
ಆರಯ್ಯಲಾ ಕಾಲವಾದಿ ನಿನ್ನಯ ಕಾಲ
ವೇ ರಸೆಯೊಳಿಪ್ಪತ್ತ ಏಳನೆಯ ತತ್ವದೊಳು
ಮಾರಾರಿಯಾಜ್ಞೆಯಿಂ ಹೊಳೆದು ತೋರುತ್ತಲ್ಲಿಯೆ ಬಳಿಕ ಲಯವಪ್ಪುದೈ ೬೮

ಅದುಕಾರಣಂ ಕಾಲವೇದೈವವೆಂದು ನೀಂ
ಮದಿಸಿ ನುಡಿವಜ್ಞಾನದಾ ಭ್ರಾಂತಿಯಂ ಬಿಟ್ಟು
ಮದನಾರಿಯಪ್ಪ ಕಾಲಾಂತಕಂ ಶಿವನೊಬ್ಬನಲ್ಲದಿನ್ನಿಲ್ಲವೆಂದೂ
ಬದುಕಂ ನಂಬದೊಡೆಯಾ ತ್ರಿಗುಣಸ್ವರೂಪನೆನಿ
ಸಿದ ಶರೀರೇಂದ್ರಿಯ ಮನಃಪ್ರಾಣಮಯ ವಿಕಾ
ರದೊಳು ಬಿದ್ದುಱಿ ಸಾಯೆನುತ್ತಲಾ ಕಾಲವಾದವನು ಮುಱಿದಂ ಗೌತಮಂ ೬೯

ಭೂಲೋಕ ಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವೀರಶೈವಾಮೃತ ಪುರಾಣವಂ ಕೂರ್ತುಪದನಂ ಮಾಡಿದಂ ೭೦

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಕಾಲವಾದಮಂ ಖಂಡಿಸಲು ಮೂಱು ಕಾಂಡದ ಮೇಲೆ ಐದೂ ೭೧

ಅಂತು ಸಂಧಿ ೫ ಕ್ಕಂ ಪದನು ೨೯ ಕ್ಕಂ ಗ್ರಂಥ ೪೯ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೨

ಗೌತಮನು ಮಾಯಾತ್ರಿಗುಣವಾದಿಯನ್ನು ಕರ್ಮಯೋಗಿಯನ್ನು ಜಯಿಸಿದ ಕಥೆ

ಇರದೆ ಮಾಯಾ ತ್ರಿಗುಣಸಾಂಖ್ಯವಾದಿಯನಲ್ಲಿ
ನೆರೆ ಕರ್ಮಯೋಗಿಯಂ ತತ್ತ್ವಮತವನೆತ್ತಿ
ಮುರಿದು ನಿಲಿಸಿದನಲಾ ಗೌತಮವ್ರತಿ ಶಿವಾಸ್ತಿಕ್ಯಪ್ರಭಾವೋನ್ನತೀ

ತರಣಿ ಶಶಿ ಶಿಖಿಲೋಚನಂಗಳಿಂ ಗೋತ್ರಂಗ
ಳಿರದಿಂದುಕಾಂತಶಿಲೆಗಳು ಕಾಮಮುಖ್ಯರಂ
ತರರೆ ಸಿಡಿವವು ಕರಗುವವು ಬೇವರದನಱಿಯದೆನ್ನ ಮಗಳಂ ಗಿರಿಜೆಯಾ
ಪರಿಕಿಸದೆ ಕೊಟ್ಟಂದು ಮೀಗಳಾಂ ನಡುಗುವೆಂ
ವರ ಜಹ್ನುಮುನಿಪ ನಿನ್ನಯ ಸುತೆಯು ಗಂಗೆಯಂ
ಗುರುಶಾಂತಮಲ್ಲೇಶ್ವರಂಗೆ ನೀಂ ಕೊಡಬಹುದೆಯೆಂದನಂದಚಲರಾಜಂ ೧

ಮಾಯೆಯಂ ಜ್ಞಾನಶಕ್ತಿಯ ಮಾಡಿಯಾ ತ್ರಿಗುಣ
ಕಾಯುಮುಮನಿಷ್ಟ ಸುಪ್ರಾಣಭಾವ ಸುಲಿಂಗ
ವೇಯೆಡೆಗೊಳಿಪ್ಪಂತೆ ಸಾಂಖ್ಯನಾಗಾದ್ಯಪತ್ರಯ ಪುಷ್ಪವೆಂದೆನಿಪ್ಪಾ
ಓಯಾರಮಂ ರಚಿಸಿ ನಿಷ್ಕರ್ಮ ಶಿವಯೋಗವೇ
ವೇ ಯತ್ನವೆಂದು ಶಿಷ್ಯರ ಪೊರೆದು ಬೋಧಿಸುವ
ರಾಯ ಮೇಲಣ ಗವಿಯ ಶಾಂತನಂಜೇಶಗುರುವೇ ಶರಣು ಪರಕೆ ಪರವೇ ೨

ನುತಗೌತಮಂ ಕಾಲವಾದಮಂ ಮುರಿಯಲು
ದ್ಧತದೆ ಮಾಯಾ ಸ್ವರೂಪಾದ ತತ್ರಿಗುಣಾತ್ಮ
ಯುತತತ್ವಸಂಚಯಮನೆತ್ತಿಕೊಂಡಾ ಸಾಂಖ್ಯನುಡಿದನಂದೆನ್ನ ಸಾಂಖಾ
ಮತವ ಕೇಳಕ್ಷಪಾದಾ ವೇದಸಮ್ಮತಮು
ಮತಿಶಯದ ಮುಕ್ತಿಗದು ಕಾರಣಮದೆಂತೆನಲ್
ಕ್ಷಿತಿಯೊಳಂ ಸರ್ವಾಶ್ರಯಸ್ಥಾನವ್ಯೆಯ್ಯ ಸರ್ವೋತ್ಪತ್ತಿಕಾರಣವಹಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಯಾದಿಯಾದ ಮೂವತ್ತೊಂದು ತತ್ವದೊಳ
ಗೋಯಾರದಿಂ ಮಾಯೆ ಕಲೆ ಕಾಲ ನೇತಿರಾ
ಗಾಯುತದ ಪುರುಷಪ್ರಕೃತಿ ಎನಿಸುಪೇಳು ತತ್ವಸ್ವರೂಪಾಗಿಪ್ಪದಾ
ಮಾಯೆಯಿಂ ತ್ರಿಗುಣಂಗಳಾ ತ್ರಿಗುಣದಿಂದಲಿಂ
ನೀಯುವನಿಯುಖಿಲ ಸೃಷ್ಟಿ ಸ್ಥಿತಿ ಲಯಂಗಳಾ
ಮಾಯೆಯುರುತರ ಕಾರ್ಯಮಪ್ಪ ಇಪ್ಪತ್ತನಾಲ್ಕನಿಸುತಿಹ ತತ್ವಂಗಳೇ ೪

ದೇಹವಾಗಿಹವು ಕೇಳ್ಪರಿಕಿಪೊಡವಾದವೆಂ
ದೂಹಿಪೊಡೆ ಕರ್ಮೇಂದ್ರಿಯಂ ಪಂಚವಿಷಯದ ಸ
ಮೂಹವದರಲ್ಲಿಯಾ ಜ್ಞಾನೇಂದ್ರಿಯಂಗಳೈದಾ ಪಂಚಮಂ ಸುಗಂಧಾ
ವಾಹಂಗಳಾಕರಣ ನಾಲ್ಕೆಲ್ಲವಂ ಕೂಡ
ಲಾಹಾ ಚತುರ್ವಿಂಶತೀ ಪ್ರಕಾರದ ತತ್ವ
ಕೀ ಹರುಷಮಯದ ತತ್ತ್ರಿಗುಣಕ್ಕೆ ಮಾಯೆಗಂ ಪುರುಷನೆಂಬಾತನೆ ಪರಂ ೫

ಆಯಾತ್ಮನೇ ನಾನು ನನ್ನಿಂದ ಮೇಲೆ ಪರ
ವೇ ಇಲ್ಲ ಶಿವನೆಂಬುದೀ ತತ್ವದೊಳಗ
ದೇ ಯಾತನೆಲ್ಲಿಯುವನದು ಹೇಂಗೆನಲ್ಕೆ ದೃಷ್ಟಂಗಳಂ ಪೇಳ್ವೆನಿನ್ನೂ
ಓಯಾರದಿಂ ಬಾಷ್ಪವೆಲ್ಲಿರ್ದುದಂತಲ್ಲ
ಯೇಯನಲನಾ ಮೇಘವೆಲ್ಲಿರ್ದುದಲ್ಲಿಯೇ
ತೋಯುವಂತೀ ಜಗವದೆಲ್ಲಿರ್ದುದಲ್ಲಿ ಶಿವನ್ಯೆ ಬೇಱೆ ಶಿವನೆಲ್ಲಿದಂ ೬

ಅದು ಕಾರಣಂ ಶಿವಂ ಬೇಱಿಲ್ಲವೈ ತಥ್ಯ
ವದಱಿಂದಲಾ ಸ್ವರ್ಗ ನರಕ ಪುಣ್ಯಂ ಪಾಪ
ಒದವಿರ್ದ ಬಂಧ ಮೋಕ್ಷ ಮುಖ್ಯವಾದ ಕರ್ಮಂಗಳಂ ಕೊಡುವಾತನೂ
ಹದನಱಿದು ತೆಗೆವಾತ ನಿನ್ನೊಬ್ಬನಿಲ್ಲವೆಂ
ಬುದು ನಿಜಂ ಕೇಳಿವಱೊಳಾತ್ಮನೇ ವಸ್ತುತ
ತ್ವದ ರೂಪಿನೊಳಗೀಶನಲ್ಲದೇ ಬೇಱೆ ಶಂಭುವನಱಿಯಱಿಯಲಿಲ್ಲಾ ೭

ಆ ಕಾರಣದೊಳು ನಾನೇ ಪರಂ ತಥ್ಯವೈ
ನೀ ಕೇಳಿದೆನ್ನ ಮತವೆಂದ ಸಾಂಖ್ಯಂಗಾ ಪಿ
ನಾಕಿಯಣುಗಂಗೌತಮಂ ನುಡಿವುತಿರ್ದನಾ ಖಂಡನೆಯ ಕೇಳು ದುಷ್ಟಾ
ಕಾಕನೇ ನಿನ್ನ ಮತ ವೇದಸನ್ಮವು ಸೌ
ಖ್ಯಾಕರದ ಮುಕ್ತಿಕಾರಣ ಮಾಯೆಯಿಂದಾದ
ಜೋಕೆಯಾ ತ್ರಿಗುಣಂಗಳೊಂದಿ ಜಗವುಂಟು ಗುಣರಹಿತ ಜಗವಿಲ್ಲೆಂಬೆಯಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಱಿಂದ ಜಗದಾದಿಯಂ ಪೇಳ್ದಪೆಂ ಕೇಳಿ
ಬದುಕು ತತ್ವಂಗಳೆಲ್ಲಕ್ಕೆ ಮಿಗಿಲೆನಿಸುವ
ಗಗ್ರದ ಸುಪರ ಶಿವತತ್ವವೇ ತನ್ನ ಲೀಲೆಯಿಂದಂ ಸದಾಶಿವನೆನಿಸಿತು
ಮುದದಿಂ ಸದಾಶಿವನೆ ತಾನೀಶ್ವರಂ ಕಣಾ
ವಿದಿತದಿಂದೀಶ್ವರಂ ತಾನೆಯಷ್ಟಪ್ರಕಾ
ರದೊಳಿರ್ಪನೆಂತೆಂದೊಡವರ ತರುವಾಯ ನಾಮಪ್ರಕಾರವನೊರೆವೆನು ೯

ಭವ ಸರ್ವರುದ್ರ ಭೀಮಂ ಮಹಾದೇವನೆನಿ
ಸುವ ವಿಲಸದುಗ್ರಸೋಮಂ ಪಶುಪತಿ ಪ್ರಮುಖ
ರಿವಱ ಮೂರ್ತಿಗಳಾಗಿಯೂ ಪೃಥ್ವಿಯಪ್ಪು ತೇಜಂ ವಾಯು ನಭ ರವಿ ಶಶೀ
ತವೆಯಾತ್ಮನೆಂಬಷ್ಟತನುಮೂರ್ತಿತತಿ ಕಾರ
ಣವೆಯಾಗಿ ತಾನೆ ಚೈತನ್ಯಾಶ್ರಯಸ್ಥಾನ
ದವ ಮತ್ತೆ ಮೊದಲಾ ಸದಾಶಿವ ಸುತತ್ವಗಳಧಿಷ್ಠಾನಶಕ್ತಿನಿಚಯಾ ೧೦

ವಾಗಿರ್ಪ ಕರ್ಮಸಾದಾಖ್ಯವಪ್ಪೀಶಾನ
ನಾ ಗರುವನುರುಬಿಂದುಶಕ್ತಿಯಿಂದಂ ಕೂರ್ತು
ರಾಗದಿ ಮಹಾಮಾಯೆಯಂ ಪುಟ್ಟಿಸುತ್ತಲೀಶ್ವರನು ತಾನೇ ಬಳಿಕ್ಕಾ
ಆಗಿನಿಂ ಸರ್ವಶೀಲಾಧರ ಮಹೇಶನಾ
ಮಾಗಮ್ಯದಿಂದಲಾ ಮಾಯೆಗಂ ಚೈತನ್ಯ
ನಾಗಿಯಂತದಱಿಂ ಸಮಸ್ತ ತತ್ವಂಗಳಂ ಪುಟ್ಟಿಸುವನಿದು ನಿಶ್ಚಯಂ ೧೧

ಎನೆ ವಾದಿ ನುಡಿದನೀಶ್ವರನೇಕೆ ಪುಟ್ಟಿಸಲು
ಜನಿತಕ್ಕೆ ಮಾಯೆಯಾಗದೆಯೆನಲ್ಕದಕೆ ಖಂ
ಡನವೆಂತೆನಲ್ಮಾಯೆಯಱಿಯದದು ಚೈತನ್ಯವೇಕಱಿಯುದೆಂದೆಂಬೆಯಾ
ನಿನಗೆ ದೃಷ್ಟವನೊರೆವೆನ್ಯ ಸೂಜಿಕಲ್ಲು ತಾ
ನಿನಿತು ಚೈತನ್ಯವುಂಟೆಂದೊಡಾ ಸೂಚಿಯೇಂ
ತನಗೆ ತಾನೇ ಹೋಗಿ ಹಿಡಿವುದೇ ಹಿಡಿವುದಕೆ ಬೇಱೊಬ್ಬನುಂಟೆಂಬಿನಂ ೧೨

ಹಿಡಿವಾತನಂತೀಶ್ವರಂ ಕಲ್ಲಿನಂದದಿಂ
ಜಡನಾದ ಮಾಯೆಯಾ ಕಲ್ಲುಹಿಡಿದಾ ಸೂಜಿ
ಬಿಡದಲ್ಲಿ ತಾನೆ ಸಾಣೆಯ ಪುಡಿಯ ಪಿಡಿವಂತೆಯಾ ಮಹಾಮಾಯೆಯಿಂದಾ
ಜಡನಾದ ಶಿವತತ್ವಸಂಕುಲಮದೋ ಮಾಯೆ
ಯುಡುಗದೆ ವಿಕಾರಿಸುವವದುಮಲ್ಲದಿನ್ನೊಂದು
ನುಡಿಯು ದೃಷ್ಟವ ಕೇಳೆನುತ್ತಕ್ಷಪಾದನುಸುರುತ್ತಿರ್ದನಾ ಸಾಂಖ್ಯಗೇ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಚೈತನ್ಯದಿಂದಾತ್ಮನಂತಾತ್ಮನಿಂ
ದವೆಯಲಾ ಪ್ರಾಣವಾ ಪ್ರಾಣ ಚೈತನ್ಯದಿಂ
ದವೆ ಮನಂ ಮೊದಲಾದ ತತ್ವಂಗಳೆಲ್ಲವುಂ ವ್ಯವಹರಿಪುವೀ ತೆಱದೊಳೂ
ತವೆ ಜಾಡ್ಯಮಾಯೆ ಹುಟ್ಟಿಸಲಱಿಯದದಱಿನುದು
ಭವಿಸಿದಾ ಪ್ರಕೃತಿಯಿಂದಂ ಗುಣತ್ರಯಗಳಾ
ದವು ಗುಣತ್ರಯದಿನಾ ಸೃಷ್ಟಿ ಸ್ಥಿತಿ ಪ್ರಹರವೀ ಜಗತ್ತಿಂಗೆಂಬೆಯಾ ೧೪

ಇವಕೆಲ್ಲಕಂ ಮೂಲವಾದಾ ಮಹಾಮಾಯೆ
ತವೆ ಮಾಡಲಱಿಯದೆಂಬಾಗಲೀ ತ್ರಿಗುಣಂಗ
ಳಿವು ಮಾಡಬಲ್ಲವೇಯದು ಬೇಡವಾ ಪ್ರಳಯಕಾಲದೊಳಗುಳಿದಿರ್ದುದೇ
ದಿವಿಜಾಧಿಪರ ಲೋಕವಾ ತ್ರಿಗುಣವೆನಿಸಿಕೊಂ
ವು ಕಣಾ ಸ್ವರ್ಗದೊಳಗದು ಬೇಡ ಜಗವುಂಟೆ
ಶಿವನುಂಟು ಜಗವಿಲ್ಲದಿರಲೀಶನಿಲ್ಲವೆಂದೆಂಬೆಯಾ ಕೇಳಿದಕ್ಕೇ ೧೫

ಮೂಲ ಕಾರಣನಾದ ಶಿವನಿಂದ ಪುಟ್ಟಿತಿಂ
ತೀ ಲೋಕದೊಳಗೀಶ ನಡಕವೆನಬಪ್ಪುದೇ
ಯಾ ಲಲಿತ ಜಗವಿರಲು ಹರನಿಪ್ಪನೆಂಬೆಯಾ ದೃಷ್ಟವಂ ಕೇಳದಕ್ಕೇ
ಮೇಲೆ ಹೊಗೆಯಿದ್ದಲ್ಲಿಯನಲನಿರಬೇಕೆಂಬೆ
ಯಾ ಲೇಸು ತಿಪ್ಪೆಯೊಳು ನೀರಲ್ಲಿ ಬೆಟ್ಟದೊಳು
ಸಾಲಿಟ್ಟಹೋ ಧೂಮ್ರ ತೋಱದೊಡೆಯಲ್ಲಿಯುಂಟೇಯಗ್ನಿ ಕೇಳು
ಮೂಢಾ ೧೬

ಯೋಚಿಸುವೊಡಂ ನೀರಿನಂತೆ ತೋಱುತ್ತಿಹ ಮ
ರೀಚಿಕಾಜಲವದೇಂ ನಿಜಮೆ ಮುಗಿಲಿದ್ದಲ್ಲಿ
ಯಾಚರಿಪುದುದಕವೆನಲಬ್ಧಿಯೊಳು ನೀರ್ದೆಗೆಯಲೆಯ್ದುವಾ ಮೇಘದೊಳಗೆ
ಗೋಚರಿಪುದೇ ಸಲಿಲ ಒಬ್ಬನಂ ಪೋಲ್ತೊಬ್ಬ
ನಾಚರಣೆಯಿಂದಿರಲ್ಕೀತನೇನಾತನೇ
ನೀಚ ಕೇಳಾ ಜಗತ್ಪ್ರಳಯದೊಳಗೀಶ್ವರಂ ಕೆಟ್ಟು ಬಳಿಕುದ್ಭವಿಪನೇ ೧೭

ರೂಪಿಸಲು ಮತ್ತೆ ಕೇಳ್ವೆ ನುಡಿವೆನೀ ಜಗ
ದ್ರೂಪವೆನಿಸುತ್ತಿಪ್ಪ ಶುದ್ಧತತ್ವಂಗಳನು
ಓಪತತ್ರಿಗುಣಂಗಳಂ ಬಳಿಕ್ಕೆಸೆವ ಶುದ್ಧಾಶುದ್ಧ ತತ್ವದೊಳಗೇ
ಸ್ಥಾಪಿಸಿದಧೋಮಾಯೆಯುಮನದಂ ಪ್ರೇರಿಸುವ
ಕಾಪಟ್ಯರಹಿತವ ಶುದ್ಧತತ್ವಂಗಳಂ
ಏ ಪೇಳ್ವೆನದಕೆ ಕಾರಣವಾವ ತನ್ಮಹಾಮಾಯೆಯುನು ನೆಱೆಹುಟ್ಟಿಪಾ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಕ್ಷಿಸುವ ಸಂಹರಿಪ ಮರಳಿ ಸೃಜಿಸುವ ಲೀಲೆ
ಯ ಕ್ಷಯುದ ರೂಪನಹ ಶಿವನು ಫಲಪದಗಳಂ
ಮೋಕ್ಷಮಂ ಕೊಡುವುದಕ್ಕೊಡೆಯಂ ಮಹಾದೇವನಾ ಜಗಪ್ರೇರಕನಲಾ
ಈ ಕ್ಷೋಣಿಯಲ್ಲಿಯಂತರಿಯಾಮಿ ಪಾಲಕಂ
ಅಕ್ಷಯಂ ಲೋಕಕಾಧಾರಂ ಜಗದ ಯಂತ್ರ
ಪಕ್ಷವಾಹಕ ಜಗತ್ಸೂತ್ರಧಾರಂ ಸಾಂಬನಾ ಮಹೇಶ್ವರನೆನಿಸುವಾ ೧೯

ಶಿವನೊಬ್ಬನೇ ಮುಕ್ತಿಯಂ ಕೊಡುವನಲ್ಲದೇ
ತವ ಮತಂ ಮುಕ್ತಿಯಂ ಕೂರ್ತೀವುದೆಂ ನೋಡೀ
ಭುವಿಯಲ್ಲಿ ಜಪತಪ ಧ್ಯಾನ ಕ್ರಿಯಾ ವರ್ತನಂಗಳಿಂನೇಕೆ ಮತ್ತೇ
ಪ್ರವಿಮಲದ ಕಪಿಲ ಶುಕವಾವು ದೇವಾದಿಯಾ
ದ ವಿಶೇಷ ಯೋಗಿಗಳು ನಿನ್ನ ಬಿಸುಗೆನಿಸುತಿ
ರ್ಪವಿಚಾರ ಸಾಂಖ್ಯಮತವಿಡಿದು ನಡೆದರೆ ಕೇಳು ಮತ್ತೆಯುಂ ಬಿತ್ತರಿಪೆನೂ ೨೦

ನುಡಿಯಲಾ ನಿನ್ನ ಮತವೆರಡಾಗಿ ತೋರ್ಪುದೈ
ಜಡ ತತ್ವದೊಳಗೆ ಶಿವನುಂಟೆಂಬ ಕಾರಣಂ
ಪೊಡವಿಯೊಳಗೆಯ್ದೆ ಸೇಶ್ವರಸಾಂಖ್ಯವೆಂದು ಜಗವಲ್ಲದೇ ಮತ್ತೇನುವಂ
ನುಡಿಯಲಿಲ್ಲೆಂಬುದಱಿನಾ ನಿರೀಶ್ವರಸಾಂಖ್ಯ
ವೆಡೆವಿಡದಿರುತ್ತಿರ್ಪುದಾ ನಿರೀಶ್ವರಸಾಂಖ್ಯ
ವಿಡಿದು ಮುಕ್ತಿಯು ಪಡೆವೆನೆನೆ ಶಶ ವಿಷಾಣ ಗಗನಾರವಿಂದದ ತೆಱನಲಾ ೨೧

ಯುಕ್ತಿಸಲ್ಕಾಗಿ ಸೇಶ್ವರಸಾಂಖ್ಯದೊಳಗೆ ತಾಂ
ಮುಕ್ತಿಯುಂಟೆಂಬೆಯಾ ಭಾವಿಸಲ್ಕಾಗಿ ಕಪಿ
ಲೋಕ್ತ ಮಾರ್ಗದೊಳಿಲ್ಲವೆಂಬುದೇ ಸಹಜವೆಂತೆನಲಾಗಿ ನಾ ಸತ್ತೆನೂ
ವ್ಯಕ್ತದಿಂದೆಂಬ ಪೆಣನುಂಟೆ ಚಂದನದ ತರು
ರಕ್ತಿಯಿಂ ತನ್ನ ಗುಣವುಂ ಪೇಳ್ವುದೇ ಬಿಡು ದು
ರುಕ್ತಿಯಿಂ ಮಾನುಷ್ಯಯುಕ್ತವಾದುದು ಮೋಕ್ಷಮಂ ಕೊಡುವುದೇ ಬಳಿಕ್ಕಾ ೨೨

ಶಾಂಡಿಲ್ಯನಾಂಗಿರಸನಾ ವ್ಯಾಸರೆಯ್ದೆ ಪಾ
ಷಾಂಡ ಮತಮುಂ ಮಾಡಿದರು ಮುಕ್ತಿಗೇನು ಮುಂ
ಕೊಂಡು ಮುಕ್ತಿಗೆ ಯೋಗ್ಯವಾದವೆಯುದಱಿನಿಂ ಸರ್ವಜ್ಞ ಸರ್ವೇಶ್ವರಾ
ಖಂಡಿತದ ಸರ್ವಕೃತ್ಸರ್ವಾಂತರಾಮಿ ಶಶಿ
ಖಂಡಭೂಷನ ಶಿವನ ನತಿಗಳೆಯುಬಲ್ಲುದೆ
ಲಂಡ ಕೇಳ್ನಿನ್ನ ಚಿಟುಮಿಟಿ ಬಿನುಗುವಾದವೀ ತರ್ಕಯುಕ್ತಿಗಳು ಬಳಿಕಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ಷಿಪ್ರದಿಂದತರ್ಕ್ಯನನೆಯ್ದಲಾರ್ಪುದೆ
ಈ ಪ್ರಮಾಣ ಪ್ರಮಾಣನನೇಂ ಪ್ರಮಾಣಿಪುದೆ
ಕು ಪ್ರಬೋಧೆಯು ನಿನ್ನ ಹಲವಭೇದವಭೇದ್ಯನನೆಯಿದೆ ಭೇದಿಸುವುದೇ
ಭೂ ಪ್ರಚುರ ನಿನ್ನ ಖಂಡಿತಯುಕ್ತಿ ಎಂಬುದಂ
ತ ಪ್ರಮೇಯಾಖಂಡಿತನನದೆಯಿದುವುದೆ ಸ
ರ್ವ ಪ್ರಯತ್ನದೊಳಗೀ ವ್ಯವಹಾರವಾಗಚಲಿತೇಶ್ವರನನೇಂ ಕಾಣ್ಬುದೇ ೨೪

ಎಲವೊ ನಿನ್ನಯ ಮತಂ ವೇದಸನ್ಮತವೆನು
ತ್ತುಲಿವುತಿಹೆಯಧಮ ಕೇಳತ್ಯತ್ತಿಷ್ಠದ್ದಶಾಂ
ಗುಲವೆನಲ್ಕುಳಿದವದಿರಾ ಜ್ಞಾನಕಿಂ ಹತ್ತುಬೆರಲು ಮಿಗಿಲೆನುತಿರ್ಪುದೂ
ನಲಿದಾ ಶಿವೌಚ ಜಗತಾಂ ಚ ಪಿತರೌ ಎಂಬು
ದಲೆಯದಾಗೀಶ್ವರನುಮಾಕಾಂತೆಯುಗ್ಗಳಿ
ಸಲೆ ಸರ್ವಲೋಕಕ್ಕೆ ತಂದೆ ತಾಯಿಗಳಲಾ ನೀಂ ಮೂಢನದ ಬಲ್ಲೆಯಾ ೨೫

ಆದಿಕರ್ತಾ ಕವಿಃಸಾಕ್ಷಾದ್ದೆನುತ್ತಿರಲು
ವೇದದಿಂದಾ ಶೂಲಪಾಣಿರಿತಿ ಎಂಬುದ್ಯೆ
ವೇದ ಮತವೆಯ್ದೆ ಕಕ್ಷಾಣಾಂ ಚ ಪತಯೇ ನಮೋ ಎನುತ್ತಿರಲು ಶಿವನೇ
ಸಾದರದ ಕವಿಯಾಗಿಯಾಮ್ನಾಯಮಂ ಮಾಡ
ಲೋದುವರಜಾದ್ಯರೈಸಲೆ ಕರ್ತ್ತನಾದವಂ
ಮಾದೇವನೆ ಕಣಾ ತಚ್ಛಿವನ ವಾಕ್ಯದಂತರವ ನೀನೇಂ ಬಲ್ಲೆಯೈ ೨೬

ಆನಂದಮಯ ವೇದವೆಂದುದ್ಯೆ ಮತ್ತೆ ಈ
ಶಾನಶ್ಚ ಸರ್ವವಿದ್ಯಾನಾಮೆನುತ್ತಿರ
ಲ್ಕಾ ನಮ್ಮ ಶಿವನಿಂದಱಿಯೆಮೈಸಲೆ ನಿನ್ನ ನೀನಱಿವೆನೆಂದೆಂಬೆಯಾ
ನೀನಿತ್ತಲೊಂದು ಹುಳುವದು ಕಾರಣಂ ಶಿವ
ಧ್ಯಾನದಿಂದಱಿವುದದು ಮೋಕ್ಷವೆಯಿದಿದುದೆ ದಿಟ
ವೈ ನರಾಧಮ ಶಂಭುವಂ ಬಿಟ್ಟು ತಮ್ಮ ತಾವೆ ಮುಕ್ತಿಗೇಂ ಪೋದರೇ ೨೭

ಶುಷ್ಕತರ್ಕದೊಳು ಬಾಧಿಪೆನೆಂಬೆಯಾದೊಡಂ
ತಷ್ಕರಣಮಲಿನ ಕೇಳ್ನಿನ್ನ ದೋಷಮಯುವಹ
ಪುಷ್ಕಲಿತನ್ಯೆ ದೃಷ್ಟವಮಂ ಮೀಱುತಿಹ ನಷ್ಟವಿಲ್ಲವಿಂತೀ ಪ್ರಮಾಣಂ
ಕಷ್ಕೋಪಿ ಜಾನಾತಿ ತತ್ಪ್ರಭಾಧಿಃಕೃತ ತ
ಮಷ್ಕೃತ ಇತಿ ಪ್ರಕಾರದೊಳು ಪರಿಕಿಸಲಾಗಿ
ನಿಷ್ಕಪಟ ಸತ್ಯಮಂ ಮೀಱುವೆನೆನಿಪ್ಪ ಷತ್ಯಂಗಳುಂಟೇ ಧರೆಯೊಳೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಮೀಱುವ ಮಾಯೆಯಿಲ್ಲ ನಿತ್ಯಮನಿತ್ಯ
ವವನೆಯ್ದೆ ಬಾಧಿಸಲ್ಕಱಿಯದೆ ವಾದಿ ನೀಂ
ತವೆ ವಿಚಾರಿಸಲು ತದ್ವಿಷ್ಣೋಃಶ್ಚ ಪರಮಂ ಪದಂ ಸದಾ ಪಶ್ಯಂತಿ ವೈ
ವಿವಿಧ ಸೂರಯ ಎಂದು ಮತ್ತೆಯಾ ಸೂರಯೋ
ವ್ಯವಹಾರದಿಂ ಯತ್ರ ಪಶ್ಯಂತಿ ಎನುತಿರ
ಲ್ಕವಿರತಂ ಕೂಡೆ ತದ್ವಿಷ್ಣೋಃಶ್ಚ ಪರಮಂ ಪದಂ ಎಂದು ಸಾರುತಿರಲೂ ೨೯

ಮಂಜುಲದೊಳುಸುರುವುದಲ್ಲೈ ವಿಷ್ಣು ಮಾಯಾವಿ
ದಂ ಜಗತ್ತೆಂದು ನುಡಿದಾ ವಿಷ್ಣುವಖಿಳಕ್ಕೆ
ರಂಜನೆಯೊಳಂ ಪರಮೆನುತ್ತಲಾ ವಿಷ್ಣುಮಾಯೆಯೆ ಈ ಜಗತ್ತೆನುತ್ತಾ
ಅಂಜದೋದುವ ವೇದವುಂಟೆಂದು ನುಡಿದೆಯಾ
ನೀ ಜಾಡ್ಯನಱಿಯೆಯ್ಯೆ ವಿಷ್ಣುವಿನ ಶಿರವಳಿದು
ದಂ ಜನ್ನದೊಳಗೆ ಯಜ್ಞಸ್ಯಚ ಶಿರಃ ಸವಿಂದಂತಿ ಎಂದುಸುರುತಿರಲೂ ೩೦

ಸೋಮಶ್ಚ ಪವತೇ ಎನುತ್ತ ಜನಿತಾ ಎನ
ಲ್ಕಾ ಮಹಾ ವೇದವಾ ವಿಷ್ಣುವೊದಲಾದವಂ
ಶ್ರೀಮಹಾದೇವನಿಂ ಹುಟ್ಟುವರೆನಲ್ಕೆ ಮುಮುಕರ್ತಾ ಮಹೇಶ್ವರ ಎನೆ
ಆ ಮಾಧವಂ ಕೇಳು ಬಳಿಕ ಶಿವಭಕ್ತಸ್ಯ
ಮಾಮುಗ್ರ ರಕ್ಷಸ್ಯ ಭೃತ್ಯೋಹವೆಂದನ್ಯೆ
ಸಾಮರ್ಥ್ಯ ವಿಷ್ಣುವಿಂದರರೆ ಯುತ್ತರಕಕ್ಷಿ ಶಿವತತ್ವವಿದು ನಿಶ್ಚಯಂ ೩೧

ಅದಱಿನೇಕಾನೇಕವಾ ಸ್ಥೂಲ ಸೂಕ್ಷ್ಮವ
ಭ್ಯುದಯ ಪರಮೇಶನಖಿಳ ನಿರ್ಜರರಕ್ಷ
ವಿದಿತ ಬಹು ಸಕಲಕ್ಕೆ ಯಂತ್ರ ತಂತ್ರಾದಿ ವಾಹಕನಪ್ಪ ಶಿವನೆ ನಿತ್ಯಂ
ಅದಿದೆನ್ನದಾ ಬ್ರಹ್ಮವೊದಲಾದ ಪಿಪಿಲಿಕಾಂ
ತದ ಜೀವವೆಲ್ಲವುಂ ಪ್ರಳಯಕೊಳಗೀಶ್ವರಂ
ಮದನಾರಿಯಾ ವಿಲಯಮುಂ ಪೊರ್ದದಿಪ್ಪನತ್ಯಧಿಕ ಸ್ವತಂತ್ರ ಮೂರ್ತಿ ೩೨

ನೀನಿನಿತಱೊಳು ನಿಲ್ಲದಿನ್ನುಂ ಶರೀರಯು
ಕ್ತಾನಾಂ ಚ ಮರಣಂ ತು ಸತ್ಯಮೀರಿತವೆಂದು
ದಾ ನವ್ಯದೇಹಯುಕ್ತರ್ಗಳಿವು ಶಿವನೆಂತು ನಿತ್ಯವಹನೆಂದೆಂಬೆಯಾ
ಈ ನಿಖಿಲರವಯವಂಗಳ ತೆಱದೊಳೀಶ್ವರ ಕೃ
ಪಾನಿಧಿಯ ತನು ಸಾಮ್ಯವಾಗದ ಭವನ ಘನವ
ನಾನಂದದಿಂ ಪೊಗಳಲೇಕಥಮು ಕಾಳ್ಗೆಡೆಯ ಬೇಡ ವಿಂನಾಂ ಪೇಳ್ವೆನೂ ೩೩

43

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನದೆಂತೆನಲಾಗಿ ಬಿತ್ತರಿಸುವೆಂ ಸವೀ
ರ್ಯಂ ನಾಸ್ತಿ ನಿರ್ದೇಹಮೆಂದು ಮಾಂಸಾಸ್ಥಿರುಧಿ
ರಂ ನ ಚೇದಿಂದ್ರಚಾಪಮಿವ ಆಕಾಶೇ ಚ ದರ್ಪಣೇ ಪ್ರತಿಬಿಂಬವ
ತ್ತೆನ್ನೆ ಘೃತ ಕಾಠಿಣ್ಯವನ್ಮೂರ್ತಿ ಎನುತಲಾ
ಸನ್ಮತದ ಸಚ್ಚಿದಾನಂದ ನೀ ಲಕ್ಷಣವೆಂದು
ಪನ್ನಗಾಧರಗನ್ಯವಿಲ್ಲ ಶಿವ ಏವ ಹಿ ಎನಲ್ಸರ್ವದಾ ಎನುತಿರೇ ೩೪

ಕಾಣಬಾರದದು ಭಾವಕ್ಕೆ ನೆಲಸದು ಕಣಾ
ಕಾಣಿಸಿಕೊಳುತ್ತಿಹುದು ನಶ್ಯ ಎಂಬುದು ನಿಜಂ
ಕಾಣಿಸುತ ಕಾಣಿಸದ ತತ್ವಸೇವನೆಯನೇ ಸದಾಭ್ಯಾಸವನೆ ಮಾಳ್ಪುದೂ
ಜಾಣರೆಂಬಂತೆಸವ ಶಿವನ ನಿಲವಱಿವುದಕೆ
ಘೋಣವಿರಹಿತ ಸಾಂಖ್ಯ ನೀನೆತ್ತ ಬಲ್ಲೆಯೈ
ಮಾಣು ನಿನ್ನಯ ವಾದಮಂ ದೇಹಿಗಳ ತೆಱದೊಳಳಿವನೇ ನಿತ್ಯನಭವಂ ೩೫

||ಸಾಕ್ಷಿ|| ಸವೀರ್ಯಂ ನಾಸ್ತಿ ನಿರ್ದೇಹಂ ಮಾಂಸಾ ಸ್ಥಿರುಧಿರಂ ನಚ
ಇಂದ್ರಚಾಪಮಿವಾಕಾಶೇ ದರ್ಪಣೇ ಪ್ರತಿಬಿಂಬವತ್ ೧

ಘೃತಕಾಠಿಣ್ಯವನ್ಮೂರ್ತೀ ಸಚ್ಚಿದಾನಂದ ಲಕ್ಷಣಃ
ಶಿವಾದನ್ಯಶ್ಚನೈವಾಸ್ತಿ ಶಿವ ಏವ ಹಿ ಸಾ ಸದಾ ೨

ಅರೂಪೋ ಭಾವನೋ ನಾಸ್ತಿ ಯದ್ದೃಶಂಚ ವಿನಶ್ಯತೀ
ದೃಶ್ಯಾದೃಶ್ಯೇ ರೂಪತತ್ವೇ ತಥಾ ಸೇವಾಂ ಸದಾಭ್ಯಸೇತ್ ೩

ಕವಡೆಯಂ ಕಟ್ಟಣಿಯ ಲೋಹಕ್ಕೆ ಚಿನ್ನಕ್ಕೆ
ಸವವೆಂದು ತೂಗೆ ಸರಿಯಪ್ಪವೇ ಮೇಣ್ಸರ್ವ
ರವಯವದ ಪಾಂಗಿನಂತೀಶ್ವರನ ಶರೀರವಿರಲುಳಿದರಂತಪವಿತ್ರನೇ
ತವೆಯನಿತ್ಯನೆಯಂತ್ಥಣೋರಣೀಯಾನ್ಮಹಾ
ನ್ವಿವರದಿಂದಿರ್ಪ ಪರಮ ಸ್ವತಂತ್ರನು ಮುಳಿ
ದವರಂತೆ ತಿಳಿವರೇ ಸಾಂಖ್ಯಾ ಎನುತ್ತ ನುಡಿದಂ ಗೌತಮಂ ನಿಷ್ಠುರಂ ೩೬

ಮತ್ತೆ ಕೇಳಾ ಶಿವನದೆಂತಪ್ಪನೆನಲೇಕೆ
ನುತ್ತಮದ ಪರಮ ಪರಮಾತ್ಮ ಪರಮೇಶ್ವರನು
ದಾತ್ತನು ಪರಬ್ರಹ್ಮನಾ ಪರಂಜ್ಯೋತಿಯತಿಶಯ ಪರಾತ್ಪರನೂರ್ಧ್ವನೂ
ಚಿತ್ತಧಿಕ ನಿರತಿಶಯನೇಕಾತ್ಮವೆಂಬಿವೆಯೆ
ನುತ್ತಾತನೀಶಂಗೆ ಸಹಜ ನಾಮಂಗಳೈ
ಕೃತ್ರಿಮದ ವಾದಿ ಕೇಳೆಂದ ಗೌತಮನೊಡನೆ ನುಡಿದನಂತಾ ಸಾಂಖ್ಯನೂ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಳಸಿತದೊಳಿಂತಪ್ಪ ಶಿವನಾದೊಡೇನು ಜಗ
ದೊಳಗೆ ಹುದುಗಲು ಶಿವತ್ವಕೆ ಹಾನಿಯುಲ್ಲವೇ
ತಿಳಿಯೆನಲದಕ್ಕೆ ಖಂಡವನ ಕೇಳ್ ಬೆಂಕಿ ಡೊಂಕುವುದೆ ಯಡುಗಬ್ಬಲ್ಲದೇ
ನಳಿನರಿಪು ಹೊನಲಲ್ಲಿ ಹೋಹನೇಯಾಗಸಂ
ಘಳಿಲನಿಕ್ಕಡಿಯುಹುದೆ ಹಾಂಗೆ ಜಗವುಂ ಹೊದ್ದಿ
ಬಳಿಕ ಹೊದ್ದದೆ ಪೂರ್ಣನೆಂಬಂತೆ ಪ್ರತ್ಯಕ್ಷನೆಂಬಂದದಿಂ ಬಳಿಕ್ಕಾ ೩೮

ಅನುನಯದೆ ಸರ್ವಗತನೆಂಬಂತೆ ಮೃಚ್ಚೂರ್ಣ
ವನು ಹೊದ್ದದಿಪ್ಪ ವಾಯುವಿನಂತೆ ಸರ್ವರೊಳ
ಗನವರತಮಿರನು ನಿರ್ಮಲನು ಮಲದೇಹಿಗಳೊಳಿಪ್ಪನೇ ಪರಿಕಿಸಲ್ಕೇ
ಸನಯದಿಂ ದೇಹಾಂದ್ರಿಯಾದಿ ವಿರಹಿತನು ತ
ತ್ತನುವಿಂದ್ರಿಯಂಗಳುಳ್ಳವರೊಳಿಹನೆ ನಿರ್ಗು
ಣನು ಸಗುಣರೊಳಗಿಪ್ಪನೇ ಶುದ್ಧನಂತಶುದ್ಧರೊಳಿಪ್ಪನೆ ನೋಳ್ಪೊಡೇ ೩೯

ಮಹಿಯೊಳಗೆ ಸಚ್ಚಿದಾತ್ಮಕನ ಸತ್ತಿನೊಳದೇ
ನಿಹನೆಯಾ ಸರ್ವ ಚೇತನನ ಚೈತನ್ಯರೊಳ
ಗಿಹನೆ ಪರಮಾನಂದನಾ ದುಃಖಿಗಳೊಳಿಹನೆ ನಿಜಬೋಧನಹ ಬುದ್ಧನೂ
ಬಹುಲಾ ಪ್ರಬುದ್ಧರೊಳಗಿಹನೆ ನಿತ್ಯಾತ್ಮಕಂ
ಕುಹಕಿಗಳೆನಿಪ್ಪ ನಿತ್ಯಾತ್ಮರೊಳು ಬೇಱಿಲ್ಲ
ದಿಹನೆ ಸತ್ಯಾತ್ಮಕನ ಸತ್ಯರೊಳಗಿಪ್ಪನೇ ಶಾಶ್ವತನ ಶಾಶ್ವಿತ್ತರೊಳೂ ೪೦

ಬೆರಸಿಹನೆ ಈಶ್ವರನನ ನೀಶ್ವರರೊಳಿಪ್ಪನೇ
ಪರಿಕಿಸಲ್ಕಚಲಿತನು ಚಲಿತರೊಳಗಿರ್ಪನೇ
ಒರೆಯಲ್ಕತರ್ಕ್ಯನಾ ಶುಷ್ಕತರ್ಕಿಗಳೊಳಿರ್ಪನೇ ಜನನ ಮರಣ ರಹಿತಾ
ನಿರುಪಮನು ಸಾವು ಹುಟ್ಟುಗಳುಳ್ಳವರೊಳಿಹನೆ
ಧರೆಯೊಳದುಕಾರಣಂ ಶಿವನು ಮತ್ತೆಂತಪ್ಪ
ವರವನೆನೆ ಶುದ್ಧ ಬುದ್ಧಂ ನಿರುತನುಱಿ ನಿರಂಜನನ ಗಣಿತ ಪ್ರಮೇಯಂ ೪೧

ತಮೆಯುಪ್ರಮಾಣನುಮಲಕ್ಷನಾರೂಢನಹ
ಶಿವನ ಸುಜ್ಞಾನಾನುಭವಯೋಗದಿಂದಱಿವು
ತಮೆಯುವಾದಿಂದ್ರಿಯಂಗಳನು ಧಿಃಕ್ಕರಿಸಲಱಿಯದೆ ಸದಾ ತ್ರಿಗುಣಾತ್ಮಕಾ
ಸವಿಶೇಷ ಮಾಯೆಯುಂ ನಿತ್ಯವೆನಬೇಡವೈ
ಸುವಿಚಾರಿಯೋಗಿಗಳು ಮಾಯಾವಿನೀತಸು
ಪ್ರವರ ತತ್ವೇಂದ್ರಿಯಂಗಳನು ನೀ ಹರನ ಬೆರಸದಿರೆಂದು ಮುರಿದನವನಂ ೪೨

ಸಾಂಖ್ಯಮತ ನಿರಸನ ಸಮಾಪ್ತ ಶ್ರೀ ಇನ್ನು ಕರ್ಮಯೋಗ ನಿರಸನಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಕರದ ಗೌತಮಂ ಸಾಂಖ್ಯನಂ ಮುರಿಯಲಂ
ದಾ ಕಾಲದೊಳು ಯೋಗ ವಧಿಕವೆಂದೆನೆ ಕೇಳಿ
ಯಾ ಕರ್ಮಯೋಗಿಯಂದಿದಿರಾಗಿ ಯಕ್ಷಪಾದನೊಳೆಂದನೆಂತೆಂದೊಡೇ
ನೀ ಕೇಳು ಹಠಯೋಗ ಲಯಯೋಗ ಮಂತ್ರಯೋ
ಗಾ ಕಲಿತ ಲಂಬಿಕಾಯೋಗ ಯಮಯೋಗವಾ
ಸ್ವೀಕೃತದ ನಿಯಮಯೋಗಾಸನದ ಯೋಗವಾ ಪ್ರಾಣಾಸುಯಾಮ
ಯೋಗಾ ೪೩

ಆ ಸುಪ್ರತ್ಯಾಹಾರಯೋಗವಾ ಧ್ಯಾನಯೋ
ಗಾ ಸುಮ ಸುಧಾರಣಾಧಿಕ ಯೋಗಮುಂ ಬಳಿ
ಕ್ಕಾ ಸಮಾಧಿ ಎನಿಪ್ಪ ಯೋಗವಾ ಪವನ ಯೋಗಂಗಳೆಂಬಿವರೊಳೆಯ್ದೆ
ನಾ ಸಾದಿಸುವ ವಿವರವೆಂತೆನಲ್ಕೀಳಮುಂ
ಭಾಸುರದ ಪಿಂಗಳದೊಳಿರ್ದ ವಾಯುವ ಕಟ್ಟಿ
ಯೋಸರಿಸದಿಪ್ಪ ಪದ್ಮಾಸನದೊಳೆಯ್ದೆ ಕುಳ್ಳಿರ್ದುಗಳ ಸಂಕೋಚವೂ ೪೪

ನಯನಬಂಧಂ ಮಾಡಿ ಒಡ್ಯಾಣ ಬಂಧವಾ
ಸ್ವಯ ವಿಲಸಿತಾಧಾರಬಂಧಮಂ ಬಲಿದು ನಿ
ಶ್ಚಯದೆ ಕುಂಭಿಸಿದ ಶದ್ವಾಯುಬಂಧನದಿಂದೆ ಯಾಡೆಯಂತರ್ಲಕ್ಷದಾ
ಪ್ರಯುತೇಕ್ಷಣದಿನಿರಲ್ಕಣುಮಾತ್ರವಹ ಸುಪ್ರ
ಭೆಯ ಕಾಣದಿರೆ ತಾಳಿ ಧೌತಿ ಮೊದಲಾದ ನಿ
ರ್ಣಯದಿಂದ ದೇಹಶೋಧನೆಗಳಂ ಮಾಡಿ ಪ್ರತ್ಯಾಹಾರದೊಳಗಿರುತ್ತಾ ೪೫

ಸಕಲ ಯೋಗದ್ರವ್ಯಸಾಧನದಿನಾವಗಂ
ಪ್ರಕಟ ಹಿಮ ವಾಯು ಸೂರ್ಯಪ್ರಭೆಯ ಸೋಂಕದೆಯ
ಧಿಕದ ಬದ್ಧಾಸನ ಮಂಡುಕಾಸನ ಮಯೂರಾಸನಂ ಮತ್ಸೇಂದ್ರನಾ
ಸುಕರದಾಸನ ಕುಕ್ಕುಟಾಸನ ಹನುಮನಂತ
ನಕಲಂಕದಾಸನಂ ಏಕಪಾದಾಸನಂ
ಯುಕುತಿಯಿಂದೆಸೆವ ಕೂರ್ಮಾಸನಂ ಸಿದ್ಧಾಸನಂ ಬಳಿಕ ಪದ್ಮಾಸನಾ ೪೬

ಇವು ಮುಖ್ಯವಾದ ಸರ್ವಕ್ರಮಂಗಳಿನೆಯ್ದೆ
ಪವನಬಂಧಂಗಳಂ ಮಾಡಿ ರಕ್ಷಿಸಿನೋಡಿ
ರವಿಚಂದ್ರ ಮಂಡಲಂಗಳು ನಾಡೆ ನಕ್ಷತ್ರಮಂಡಲಂ ಶಿಖಿಮಂಡಲಂ
ತವೆ ಸುಪ್ರಕಾಶಮಂಡಲ ದೀಪದೀಪ್ತಿಯೊ
ಪ್ಪುವ ವಿಲಸದೇಕತಾರಾಷಣ್ಮೇ ಮುದ್ರೆ
ಯವಿರತಂ ಖೇಚರೀಮುದ್ರೆಯಾ ತಾರಕಂ ಬ್ರಹ್ಮಹಂಸೋಚ್ಚಾರಣಂ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಯತದೊಳೊಪ್ಪುವನುಸಂಧಾನವೆಯ್ದೆ ಪ್ರಾ
ಣಾಯಾಮವಿವು ಮುಖ್ಯವಾದವರಿನಿಂ ಪೀತ
ವಾಯತ ಶ್ವೇತಂ ಕಪೋತ ಮಾಂಜಿಷ್ಠ ಧೂಮ್ರಂಗಳೆಳೆಮಿಂಚಿನಂತೆ
ನ್ಯಾಯದಿಂ ಹರಿತ ಗೌರಸ್ಫಟಿಕವಂಜನಂ
ಶ್ರೀಯಧಿಕ ಬಾಲರವಿ ರತ್ನಸುಪ್ರಭೆಯುಂ ಮತ್ತ
ತ್ತಾಯದ್ರ್ಧ ಸುಪ್ರಕಾಶಾದಿ ಪ್ರಕಾಶಮಧ್ಯಪ್ರಭೆಗಳೂರ್ಧ್ವಪ್ರಭೇ ೪೮

ಇವರಿಂದಲಱಿದು ಗುದ ಬಂಧನ ವಿಶೇಷದಿಂ
ದವೆ ಕೂರ್ತು ಮಡತಾಡನಾಕುಂಚನತ್ವದಿಂ
ಪವನನುಮಧೋಮಾರ್ಗಿಯಾಗಿದೂರ್ಧ್ವಮುಖವಾಗೆಯಾಗವುನ ವಪ್ಪಾ
ಪವನನಂ ಬಂಧಿಸುತ ಬಂಧನತ್ರಯಂಗಳೊ
ಪ್ಪುವ ಮಹಾಸಂಧಾನದಿಂದಲಿಂತಾ ಪ್ರಾಣ
ಪವನನೊಳು ಮೂಲಾಗ್ನಿ ಬೆರಸೆಯುದಱಿಕೊಳವವಪುದುಗಿ ಕುಂಭಿಸಿದ ಬಲ್ಪಿಂ ೪೯

ಆ ಪವನನೆಯಿದೆ ಪಶ್ಚಿಮದಂಡ ಸುಪ್ರವೇ
ಶಾಪರೀತನಾಗಿಯಾ ಗ್ರಂಥಿ ವಿಚ್ಛಿಂನಮಂ
ಓಪಂತೆ ಮಾಡಿಯಂತೂರ್ಧ್ವಗಾಮಿಯ ಮಾಡಿ ನಿಲಿಸಿ ತನ್ನಿಚ್ಛೆಯಂಗಾ
ರೂಪನಾಗಿಪ್ಪನದುಕಾರಣಂ ಸಾಧಕನಿ
ಗಾ ಪರಮ ಸರ್ವಸಿದ್ಧಿಗಳಪ್ಪವಿಂತಪ್ಪ
ದೇ ಪವಿತ್ರದ ಯೋಗ ನಿತ್ಯವೆಂದವಗೆ ಖಂಡನೆಯನೊರೆದಂ ಗೌತಮಂ ೫೦

ಎಲೆ ಯೋಗವೇ ನಿತ್ಯವೆಂದಜ್ಞತೆಯೊಳು ಕೆ
ಟ್ಟಲಿವುತಿಹ ಕರ್ಮಿಯೇ ಕೇಳು ಹಠಯೋಗವೆಸೆ
ವಲಘು ಲಯಯೋಗವಾಸನಯೋಗ ಮಂತ್ರಯೋಗಾದಿ ಕಾಪಾಲಿ ಮತವೈ
ಸಲೆ ಭೈರವಾರ್ಚನೆಯದಲ್ಲದೇಂ ನೆಱೆ ಪರಿಕಿ
ಸಲಿಕದೇಂ ಶಿವಮಾರ್ಗವೇ ಲಂಬಿಕಾಯೋಗ
ಒಲಿದದೇ ನಿತ್ಯವೆಂದೆಂಬೆಯಾ ಕೇಳ್ನಿತ್ಯವಲ್ಲವೆಂತೆನೆ ಪೇಳ್ವೆನೂ ೫೧

ಮಿದುಳಿನತಿಶಯದ ಕಿಸುಕುಳದಲ್ಲಿಯಮೃತವಿ
ಪ್ಪುದೆ ದೇಹಶೋಧನಗಳಿಂದಿರ್ಪುದೆಂಬೆಯಾ
ಗುದಿಗೆಯಿಂ ಹುತ್ತಮಂ ಬಡಿಯಲೊಳಗಣ ಪಾವು ಸಾವುದೇ ಶುನಕಚರ್ಮಂ
ಅದನು ಭಾಗೀರಥಿಯ ಜಲದಲ್ಲಿ ತೊಳೆಯಲ
ಪ್ಪುದೆ ಶುದ್ಧ ಕಲ್ಲ ಹಳ್ಳದೊಳುಂಟೆ ಚಲಮೆ ಕಾ
ಣ್ಬುದೆ ಗೂಗೆ ರವಿಯ ಹೊಲೆಯಂ ವಿಪ್ರನಪ್ಪನೆ ಮುಂದೆ ಕೇಳ್ಬಿತ್ತರಿಪೆನೂ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನಧಿಷ್ಠಾನಶಕ್ತಿಯದಪ್ಪ ಪರಶಕ್ತಿ
ಸವಿಶೇಷ ಪರಬಿಂದುಕುಟಿಲೆಯೆಂದೆಂಬ ನಾ
ಮವನುಳ್ಳ ತನ್ಮಹಾಮಾಯೆ ಹುಟ್ಟಿತ್ತು ಬಳಿಕಾ ಮಾಯೆಯಿಂದೇಳ್ಗೆಯಿಂ
ಪ್ರವರ ಮೂವತ್ತಾಱು ತತ್ವಂಗಳುದಯವಾ
ದವು ಮಹಾಮಾಯೆಗಂ ಮಲವೆಂಬ ನಾಮವೆ
ಭುವಿಯೊಳ್ಪ್ರಸಿದ್ಧವಾ ಮಲತತ್ವವಹ ದೇಹಮಂ ತೊಟ್ಟಿರಲ್ಕೆ ಮತ್ತೆ ೫೩

ಅದು ಶುದ್ಧವಪ್ಪುದೇ ಶುದ್ಧವಸ್ತ್ರಂಗಳಂ
ಪುದಿದ ಮಲಿನಂ ಕೂರ್ತು ತೊಳೆಯಲ್ಕೆ ಪೋಪುದ
ಲ್ಲದೆ ಮಲದೊಳೇ ಸವೆದ ಕಪ್ಪಡಂ ಪ್ರಕ್ಷಾಲಿಸಲ್ಪೋಗಿ ಶುಚಿಯಪ್ಪುದೇ
ಅಧಮ ಕೇಳ್ಕೆಸಱಲ್ಲಿ ಮುಳುಗಿದನ ತೊಳೆಯೆ ದೇ
ಹದ ಕಾಂತಿ ಮುನ್ನಿನಂತಪ್ಪುದಲ್ಲದೆ ಮಣ್ಣೊ
ಳೊದವಿ ರಚಿಸಿದ ಪುತ್ಥಳಿಯ ತೊಳೆಯೆ ಜಂಬಾಲವಿಲ್ಲದುತ್ತಮವಪ್ಪುದೇ ೫೪

ತೊಳೆತೊಳೆಯಲಿದ್ದಿಲೇಂ ಸವೆಸವೆವುದಲ್ಲದದು
ಬಿಳಿದಪ್ಪುದೇಯದುನಿಮಿತ್ತದಿಂದಂ ದೇಹ
ಗಳ ಶೋಧನೆಗಳಿಂದ ಶುದ್ಧವಾಗದು ಮತ್ತೆ ವಾಯುಬಂಧನಗಳಿಂದಾ
ವಿಳಸಿತದ ಕಾಲಾಂತರಂ ಬದುಕುವರು ಸಿದ್ಧಿಗಳ
ಫಲವ ಪಡೆವರೆಂದೆಂಬೆಯಾದೊಡೆ ಕೇಳು
ಮಳಭಾಂಡದೇಹಿಯುಹ ಕರ್ಮಯೋಗಿಯೆಯೆನುತ್ತಂ ನುಡಿದನಾ ಗೌತಮಂ ೫೫

ಕ್ಷುಧೆಯು ಕಿಚ್ಚಿಂಗಯ್ಯ ತಿನ್ನಲಾ ಹಸಿವು ಪೋ
ಪುದೆಯೆಲವೊ ಕಾಲಾಂತರಂ ನಿತ್ಯವಿಹೆನೆಂದು
ಮದಿಸಿ ನುಡಿವಾ ಕೃಷಿಕನಾ ಕೆಲವು ಕಾಲವಾ ಬೀಜವಮಂ ಮೂಡೆಯೊಳಗೇ
ಪುದುಗಿಕೊಂಡಿರ್ದೊಡೇಂ ಮತ್ತೆ ಭೂಮಿಯೊಳು ಬಿ
ತ್ತಿದೊಡೆ ಜಲಮಿಶ್ರದಿಂ ಪುಟ್ಟದೇಯಗ್ನಿ ಮು
ಟ್ಟಿದ ಧಾನ್ಯದಂತಪ್ಪುದೇ ನಿನ್ನ ಸಿದ್ಧಿಗಳ ನಿನ್ನು ಪೇಳುವೆನು ಕೇಳೂ ೫೬

ಪರಿಕಿಸಲ್ಕಂಜನಾಸಿದ್ಧಿ ಘುಟಿಕಾಸಿದ್ಧಿ
ಶರಿರಸಿದ್ಧಿಯು ರಸದ ಸಿದ್ಧಿ ಬಳಿಕೆಯ್ದೆಯುರು
ತರದ ಪರಕಾಯಪ್ರವೇಶ ದೂರದೃಷ್ಟಿ ದೂರಶ್ರವಣವುಂಮತ್ತೇ
ಅರರೆ ಬಿತ್ತರಿಸುವೆಂ ಕೇಳ್ ತ್ರಿಕಾಲಜ್ಞಾನ
ವಿರದಪ್ಪಮಹಸಿದ್ಧಿ ನಿತ್ಯವೆನೆ ಕಾಪಾಲಿ
ಕರುಮಪ್ಪ ನವನಾಥಸಿದ್ಧರಾಚರಿಪ ಮಾರ್ಗಂ ನಿತ್ಯ ಮುಕ್ತಿಗಹವೇ ೫೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವನಾಥಸಿದ್ಧರೊಳಗಂತೊಬ್ಬನಾದೊಡೇಂ
ಶಿವನೊಳಗೆ ಬೆರೆದು ಪರಮೋಕ್ಷವೆಯಿದುದುಂಟೆ
ಯ ವಿಚಾರಿ ಕೇಳಿನ್ನು ದೃಷ್ಟಂಗಳಂ ಪಿಶಾಚಿಗೃಹಂಗಳ ನೋಳ್ಪೊಡೇ
ಅವಕೆ ಪರಕಾಯಪ್ರವೇಶಂಗಳುಂಟಲಾ
ವಿವಿಧ ರೂಪುಗಳಾಗಿ ಜಗದೊಳಲ್ಲಲ್ಲಿ ತೋ
ಱವೆಯೊಂದು ಭೂತಮಂ ಭಜಿಸಿದವನೇಂ ಪೇಳನೇತ್ರಿಕಾಲಜ್ಞಾನಮಂ ೫೮

ಆದ ಭಜಿಸಿದನೆ ದೂರದೃಷ್ಟಿ ದೂರಶ್ರವಣ
ವಿದಿತಂಗಳಱಿಯನೇ ಮತ್ತೆ ಘುಟಿಕಾಸಿದ್ಧಿ
ಪದದಲ್ಲಿ ನಿಂದ ನಾಗಾರ್ಜುನನ ತಲೆಯನಾ ವಿಷ್ಣು ಪರಿದೀಡಾಡನೇ
ಮದಿಸಿದಂಜನಸಿದ್ಧರಾದಿ ಕುಟಿಲರ್ಗಳಂ
ಮದನಾರಿ ಸಮರೂಪ ರೇವಣಾ ಸಿದ್ಧೇಶ
ನೊದವಿ ಕೋಳಾಹಳಂಗೆಯ್ಯನೇ ಸಕಲ ಸಿದ್ಧರಿಗೊಡೆಯನೆಂದೆನಿಸುವಾ ೫೯

ಗೋರಕ್ಷನಲ್ಲಮನ ಕೃಪೆಯಿಂದಲಗ್ನಿಕ
ಪೂರ್ಣರಯೋಗದ ಮಾಳ್ಕೆಯಾಗನೆಯದಲ್ಲದಿ
ನ್ನಾರಯ್ಯಲೊಳಗೆಯಾಂ ವಸ್ತುವಂ ಕಾಣ್ಬೆನೆಂದೆಂಬೆಯಾ ಅದಕೆ ದೃಷ್ಟಂ
ಚಾರು ಪಿಂಡಾಂಡಯೋರೈಕ್ಯಮೆಂದೆಂಬಂತೆ
ಪೋರಲೇಂ ಸ್ಥೂಲ ಸದ್ಬ್ರಹ್ಮಾಂಡದೊಳಗಣಾ
ಕಾರ ಸದ್ರವ್ಯಗಳು ಪಿಂಡಾಂಡದೊಳಗುಂಟದೆಂತೆನಲು ಬಿತ್ತರಿಪೆನೂ ೬೦

ಪಂಚಭೂತಂಗಳೆಂದೈದು ವರ್ಣಂ ಕಣಾ
ಕುಂಚಿತನೆ ದಶವಾಯುಗಳು ಹತ್ತು ವರ್ಣಂಗ
ಳಂಚಿತ ನವಗ್ರಹಗಳೊಂದೊಂದು ಮೂಱು ನಕ್ಷತ್ರಂಗಳೊಡಗೂಡುತಾ
ತಾಂ ಚಮತ್ಕೃತಿಯೊಳಿಪ್ಪತ್ತೇಳನೊಳಕೊಂಡು
ಹಿಂಚು ಮುಂಚಾಗಿಹವು ನದಿ ಸಪ್ತಕುಲಪರ್ವ
ತಂ ಚಾರು ಮೇರು ವಾರಿಧಿ ಲೋಕವಿಪ್ಪವಾ ಪಿಂಡಾಂಡದೊಳಗೆ ಮತ್ತೆ ೬೧

ಹಲವಾಸನಂಗಳಿಂ ಕುಳಿತು ಬಲ್ಪಿಂದ ನೆ
ಟ್ಟೆಲುಗಳಂ ಮುರಿವುತಾ ಬಟ್ಟಬಯಲಂ ನೋಡಿ
ಪಲುಬಿ ಕುಕ್ಕುಟ ಕೇಕಿ ಮಂಡೂಕ ಕಪಿ ಮುಖ್ಯವಾದಾ ಸ್ವರೂಪಿನಿಂದಾ
ಬಲಿದು ಮಂಡಿಸುವುದೇ ದ್ರೋಹ ಮಲ್ಲವೆ ಕಷ್ಟ
ಮಲದೇಹದಲ್ಲಿ ನಿರ್ಮಲ ಶಿವನ ಬೆಳಗುಂಟೆ
ಎಲೆ ರಕ್ತ ಪಿತ್ತ ಶುಕ್ಲಂ ಕೃಷ್ಣ ಸರ್ವವರ್ಣಜ್ಞಾನವೆಯಿದದೀಶಂ ೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ನ ರಕ್ತಂ ನಚ ಮಾಪೀತಂ ನ ಶುಕ್ಲಂ ಕೃಷ್ಣಮೇವಚ
ಸರ್ವ ವರ್ಣೈರ್ವಿನಿರ್ಮುಕ್ತೋ ಜ್ಞಾನಾತೀತಂ ಪರಂ ಶಿವಂ ೪

ನಿರ್ಮಾಯಿಕಂ ನಿನ್ನ ಮಾಯಾಂಗದೊಳಗಿಹನೆ
ಕರ್ಮಯೋಗಿಯೆ ಕೀವಿನಧಿಕ ಕುಂಡದೊಳೆಯಿದೆ
ಕೂರ್ಮೆಯಿಂದೆಸೆವ ತುಪ್ಪದ ಗಲ್ಲೆಯುಂಟೆ ರಕ್ತದ ಧಾರೆಯಲ್ಲಿ ಪಾಲೂ
ಒರ್ಮೆಯುಂ ಲೋಱುಗೆಯದುಕಾರಣಂ ನಿನ್ನ
ದುರ್ಮಲದ ದೇಹದೊಳು ವಸ್ತುವಂ ಕಂಡೆನೆನೆ
ಕೂರ್ಮನಂಗದ ರೋಮದಂತಿಲ್ಲವೆಂಬುದೇ ನಿಶ್ಚಯಂ ಕೇಳು ವಾದೀ ೭೩

ಶಿವನು ಪರಿಪೂರ್ಣಂ ಗಡಾ ದೇಹದೆಡೆಯೊಳಿ
ಲ್ಲವೆಯೆಂಬೆಯಾ ಚಂದ್ರ ಸೂರ್ಯಕಿರಣಂಗಳೀ
ಯವನಿಯೊಳು ಪರಿಪೂರ್ಣವಾಗಿರ್ದೊಡೇನು ರವಿ ಶಶಿಕಾಂತಶಿಲೆಯೊಳುರಿದೂ
ದ್ರವಿಸುವಂತುಳಿದ ಕಲ್ಲೊಳು ತೋರ್ಕುಮೇ ಸದಾ
ಭವಭಕ್ತರೊಳು ಪೂರ್ಣವಾಗಿಪ್ಪನಲ್ಲದೀ
ಭುವಿಯೊಳುಳಿದವರೊಳಂತಿಲ್ಲವೆಂಬುದೆ ನಿಶ್ಚಯಂ ಕಣಾ ಕೇಳುವಾದೀ ೭೪

ಬಹಳ ಯೋಗದ ಬಲ್ಮೆಯಿಂ ಸದಾ ಕ್ಷುತ್ತೃಷಾ
ರಹಿತರಾಗಿರ್ಪರಂತದೃಷ್ಟಿ ಸಂಪನ್ನ
ರಹರೆಂಬೆಯಾಕಾರಮುಂಬನಿಯ ಕೊಂಡು ವರುಷಾಂತರಂತಾ ಚಾತಕಾ
ವಿಹಗವಿರದೇ ಚಂದ್ರಕಿರಣಮಂ ಸ್ವೀಕರಿಸು
ತಿಹುದಲೇ ಚಕೋರನಾ ಪವನನಾಹಾರದಿಂ
ದಹಿ ಬಾಳದೇ ಕೆಂಡಮಂ ನುಂಗಿಯುಂಗಾರಕಾಹಾರಿಪಕ್ಷಿಯಿರದೇ ೭೫

ಮೀನಱಿಯ ಕೊಂಡು ಮಱಿಯಂ ನೋಡೆ ದಣಿಯವೇ
ಯಾ ನವ್ಯಕೂರ್ಮನಾಹಾರಮಂ ಕೊಳುತಲಾ
ಧ್ಯಾನದಿಂ ಶಿಶುವ ತೃಪ್ತಿಯನೆಯಿದಿಸದೆ ಪಕ್ಷಿ ಮೇದುಬಂದಾ ತತ್ತಿಯಾ
ಸೂನುಗಳ ಮೇಲೆ ಱಕ್ಕೆಗಳ ಹೊದಿಸಲ್ಬಳೆಯ
ವೇ ನಾಡೆ ಭಾವಲಿಂಗೂರ್ಧ್ವದೃಷ್ಟಿಗಳಿಂದ
ಲಾ ನಿಖಿಲಮಂ ಕಾಣದೇ ಕರಿಯದೊಳಗು ಹೊಱಗೇನುಳ್ಳವಂ ತಿಳಿಯದೇ ೭೬

ಒಂದು ಕಣ್ಣೊಳಗೊಂದು ಹೊಱಗಾಗಿ ಕಾಗೆಯಾ
ನಂದದಿಂ ಕಾಣದೇ ಹಗಲಿರಳು ಬೆಕ್ಕು ಮುದ
ದಿಂದೀಕ್ಷಿಸುತ್ತಱಿಯದೇ ಬೇರ ಮೂಸಿ ಕೊಂಬಿನ ಹಣ್ಣ ನಿರುಹೆ ತಿಳಿದೂ
ತಿಂದು ಜೀವಿಸದೆ ವಾಯಸನು ಗೋತ್ರದ ಗುಣಗ
ಳಂ ಧರೆಯೊಳಱಿಯದೇ ಬೀದಿಯೊಳು ನಾಯ್ಕೆಡೆದು
ಹಿಂದೇಳು ಮುಂದೇಳು ಜನ್ಮಗಳನರಿದೆದ್ದು ತಲೆಗೊಡಹಿ ಮಱಿದೆಯ್ದದೇ ೭೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಳಿಗೆಯ ಗುಪ್ತದೊಳು ಮಱಸಿಕೊಂಡಿರ್ದೊಡೇಂ
ಕೋಳಿ ಸೂರ್ಯೋದಯಕ್ಕಿಂ ಕೂಗದಿಹುದೆ ಪಾ
ಪಾತಾಳಮಂ ಕಣ್ಣಿಂದ ಕಾಣದೇ ಗೋಸುಂಬೆ ಪಾಡ್ಯದೊಳು ಚಂದ್ರಕಲೆಯಾ
ಆಳೋಕಿಸದೆ ಸುರಭಿ ನಕಲಿಯೆಂಬಾ ಪೆಸರ
ತಾಳಿರ್ದ ಗಿಡುವನೆಂಟುತ್ತ ಮುಂಗುರಿ ಮಹಾ
ವ್ಯಾಳ ವಿಷಮಂ ಕಳೆಯದೇ ಹಂಸೆ ಪಾಲುನೀರಂ ಬೇರುಮಾಳ್ಪುದಲ್ಲಾ ೬೮

ಮತ್ತದಲ್ಲದೆ ದಿವ್ಯ ಮೂಲಿಕೆಗಳಂ ಮಿಸುಗು
ವುತ್ತುಮದ ಕಲ್ಪಂಗಳಂ ಕೊಂಡ ಬಲ್ಮೆಯೊಳು
ದಾತ್ತದಿನದೃಶ್ಯಾಕರಣ ಶರಿರಸಿದ್ಧಿ ಖೇಚರಗಮನ ಮುಖ್ಯವಾದಾ
ತತ್ತತ್ಕ್ರಮಂಗಳಂ ಸಾಧಿಸರೆಯದುಮಲ್ಲ
ದೆತ್ತೆತ್ತಲುಂ ಬೆಳಗುತಿಹ ಶರೀರಪ್ರಭೆಯ
ಹೊತ್ತೆನೆನೆ ಮಿಂಚುಪುಳು ಪುಲ್ಮಳಲು ಕಡ್ಡಿಗಳು ಬೆಳಗಿ ತೋಱದೊಡಧಿಕವೇ
೬೯

ರವಿ ಚಂದ್ರ ವಹ್ನಿಗಳತಿ ಪ್ರಭೆಯೊಳಿರ್ದೊಡೇಂ
ಶಿವನ ಪೂಜಿಸಟ ಕತದಿಂ ಸೇವ್ಯಮಾದರೇ
ಯವಿಚಾರಿಮಲಭಾಂಡದೊಳಗೀಶನಂ ಕಾಣ್ಬೆನೆಂಬಜ್ಞತೆಯನು ಬಿಟ್ಟೂ
ಪ್ರವಿಮಲ ಹರಧ್ಯಾನ ಪೂಜೆಗಳಿನೆಯಿದೆ ಶಾಂ
ಭವಿಯೋಗಿಯಾಗೆಂದೆವ್ವೆ ನೀನದಕ್ಕೆ ಈ
ಯುವಯುವವದ್ಯೈಸಲೆಯೆಂಬೆಯಾ ಕೇಳದಕೆ ದೃಷ್ಟಮಂ ಬಿತ್ತರಿಪೆನೂ ೭೦

ಚಾರು ಶಾಂಭವಯೋಗಿಗಳು ಕೂರ್ತು ತಮ್ಮಯ ಶ
ರೀರವನನಾದಿಯಿಂ ಚಿತ್ಸ್ವರೂಪೆನುತಿಹರು
ಮಾರಾರಿಗಂಗವೆಂದೆನಿಪಧಿಷ್ಠಾನವೆಂಬರು ತನ್ನೊಳಿದ್ದಾತ್ಮನೇ
ಗೌರಿಯಧಿಪತಿಯೆಂಬರಾ ಪ್ರಣವಮಂ ಪ್ರಣವ
ಸಾರವೆಂಬರು ಕೇಳಿ ಹೀಂಗೆ ಪೂರ್ಣಜ್ಞಾನ
ದಾರ್ಢ್ಯಕೆಯಿಂ ಖಂಡಿತವದಿಲ್ಲದೊಳಹೊಱಗುಮಿಲ್ಲದೆ ಕಾಣ್ಬರಾಗೀ ೭೧

ವಿತತ ಶಾಂಭವಯೋಗಮುದ್ರೆಯೊಳಗೆಯ್ದೆ ತ
ದ್ಗತನಾಗೆನಲ್ಕಧಮನೆಂದನಾ ಶಾಂಭವೋ
ನ್ನತಯೋಗಿಗಳ್ಗಿಯಖಿಳರ್ಗೇನು ಬೇಱೆಬೇಱಂಗಂಗಳುಂಟೆಯೊಂದೇ
ಕ್ಷಿತಿಯೊಳೆನಲದಕೆ ಖಂಡನವ ಕೇಳ್ಕೈಕಪಿಲೆ
ಯತಿಶಯಕ್ಷೀರವಾ ನಾಯ ಹಾಲಂ ನೋಡೆ
ಸಿತವರ್ಣವಾದೊಡೆರಡಕೆ ಸಮಾನವೆ ಕಪ್ಪೆ ಹರಿಯೆನಲು ವಿಷ್ಣುಗೆಣೆಯೇ ೭೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುವಲ್ಲದೆಯಿದೆ ಮಲದೇಹಿಯಾಗಿರ್ದವಂ
ವಿದಿತ ಶಾಂಭವಯೋಗಿಯಾಗಲಿಲ್ಲವೆಯೆಂದೊ
ಡದಕೆಯಂತಾ ಕೆೞಕಿಯೊಳೆರಡು ಬಟ್ಟಲೊಳು ನೀರಂ ಮೊಗದು ತಂದಿರಿಸುತಾ
ಸದಮಲವೆನಿಪ್ಪ ಗಾರುಡಮಂತ್ರದಿಂದಲ
ಭ್ಯುದಯದಿಂ ಮಂತ್ರಿಸಿದೊಡದು ಕರಿದು ಕೆಂಪಾಯ್ತೆ
ಯುದಕವೆರಡುಂ ಸರಿಯೊಳಿಪ್ಪವಾ ಮಂತ್ರೋದಕದಿ ವಿಷಂ ಹರವಂದದೇ ೭೩

ಆ ಮಂತ್ರಿತೋದಕಚ್ಛಾಯದಲ್ಲಿರ್ದಗಿರಿ
ಈ ಮಹಿಯೊಳೇಂ ಸಮರ್ಥಿಕೆಯ ತೋಱಿದುದುಂಟೆ
ನೀ ಮೂಢನ್ಯೆ ನಿನ್ನ ದೇಹವಾ ದಿವ್ಯ ಶಾಂಭವಯೋಗಿಯಂಗದಂತೇ
ಸಾಮರ್ಥ್ಯತನುವೆ ತೆಗೆ ಸದ್ಭಾವಯುಕ್ತದೆ
ವ್ಯೋಮಮಾರ್ಗದಿಂ ಬದುಕೆನಲ್ಕಮಲಗುಣವಳಿವು
ದೇ ಮಾಳ್ಕೆಯಿೀ ಪಂಚಭೂತಾಂಗಕೆಂದೆಂಬೆಯಾ ಕೇಳು ದೃಷ್ಟಾಂತಮಂ ೭೪

ಆ ಪಂಚಲೋಹಂಗಳಂ ಚಿನ್ನಮಂ ಮಾಡ
ಲೇಪರಿಯೊಳವರೊಳಿರ್ದಾ ಮಲಂಗಳ ಕಳೆದ
ಹೋ ಪರಿ ಸಮಂ ಮುಟ್ಟಿಪರೆ ಕಡಜನ್ಯದೆ ತನ್ನಂಗದಂದದೊಳು ಮಾಡೇ
ಆ ಪುಳುವಿನೊಳಗಣ ಕಲಂಕದೇಂ ಕಳೆದುದೇ
ಸೋಪಾಧಿರಹಿತ ಶಾಂಭವಯೋಗಿಯಾಗಲಾ
ಶ್ರೀ ಪರಮ ಗುರುಬೋಧೆಯಾದಾಕ್ಷಣಂ ಕಣಾ ಯತ್ನದಿಂ ಮಾಡಲಿಲ್ಲಾ ೭೫

ಅದು ಕಾರಣಂ ದೇಹವೇ ಶಕ್ತಿಯಾತ್ಮನೇ
ಮದನಾರಿಯಿಂದ್ರಿಯಂಗಳ ಕಲೆಗಳುಸುರೆಯು
ಗ್ಗದ ಮಹಾಪ್ರಣವವಾ ಕರಣಂಗಳೇ ಶಿವಂಗುಪಕರಣವಾಗಿ ನಲ್ವಿಂ
ಮುದದಿಂದ ಪರಿಕಿಸಲ್ಕಾಗಿ ಸೋಹಂ ಎಂಬ
ಪದವನುೞಿ ಮೀಱಿಯಾ ಭ್ರೂಮಧ್ಯಮೇರುಸ್ಥ
ಲದಸದುತ್ತರದೊಳಾಡುವ ಸಚ್ಚಿದಾತ್ಮಕಂ ನಿತ್ಯಪರಿಪೂರ್ಣಯೋಗೀ ೭೬

ಇಂತಪ್ಪ ದಿವ್ಯಶಾಂಭವಯೋಗಿಯಾಗಿ ಬದು
ಕಂತದಲ್ಲದೊಡೆ ನೀನು ಚಾರ್ವಾಕನಾಗೆಂದು
ಹೊಂತಕಾಱಂ ಕರ್ಮಯೋಗಿಯಂ ಮುರಿಯಲದ ಕೈಕೊಂಡು ಗೌತಮನೊಳೂ
ಭ್ರಾಂತ ಚಾರ್ವಾಕನಂದಿದಿರಾಗಿ ನುಡಿದನೋ
ರಂತೆ ಮೇಘಂ ಚಂಡವಾಯುವಂ ತಡವುತ್ತ
ಪಿಂತು ಮಾಡುವೆನೆಂಬ ಮಾಳ್ಕೆಯಿಂದರರೆ ಲೋಕಾಯತಿಕನೆಂದನಾಗಾ ೭೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದರ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರ ವೀರಶೈವಾಮೃತಪುರಾಣಂ ಕೂರ್ತು ಪದನಂ ಮಾಡಿದಂ ೭೮

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಕರ್ಮಯೋಗನಿರಸನದೆಡೆಗೆ ಮೂಱುಕಾಂಡದ ಮೇಲೆ ಸಂಧಿಯಾರೂ ೭೯

ಅಂತು ಸಂಧಿ ೬ ಕ್ಕಂ ಪದನು ೩೭೮ ಕ್ಕಂ ಗ್ರಂಥ ೫೪ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೩

ಗೌತಮ ಮುನಿಯು ಚಾರ್ವಾಕ ಬೌದ್ಧ ಜೈನಮತಗಳಂ ಜಯಿಸುವಿಕೆ

ಚಾರ್ವಾಕವಾದವಂ ಖಂಡಿಸುತ್ತಂ ಬೌದ್ಧ
ಗರ್ವಿ ಜೈನರ ಮತಂಗಳನೆತ್ತಿ ಜಯುವನೇ
ನಿರ್ವಹಿಸಿಯವರ ಭಂಗದ ಕಥೆಗಳಂ ಪೇಳಲುಜ್ಜುಗಿಸಿದಂ ಗೌತಮಂ

ಒಂದು ಕೈಯೊಳಗಿರ್ದುದದಟಿ ಧಸಿಗೇಳುತಂ
ತೊಂದು ಕೈಯೊಳಗಿರ್ದುದೆಳಸಿ ಕೇಳುತ್ತಿರ
ಲ್ಕೊಂದು ಕೈಯೊಳಗಿರ್ದುದಂ ಕಂಡು ಹಿರಿಯ ಮಗನದ ಬಿಸುಡೆನುತ್ತ ಪೇಳೇ
ಒಂದು ಕೈಯೊಳಗಿರ್ದುದಾನತರ ಭವಗಹನ
ಮಂ ದಹಿಸಿ ವರದಾಭಯಾದಿಯುಹ ದಶಹಸ್ತ
ದಿಂದ ರಾಜಿಪ ಶಾಂತಮಲ್ಲಿಕಾರ್ಜುನಲಿಂಗ ಜಯ ಮನ್ಮಖಾಬ್ಜ ಭೃಂಗಾ ೧

ಪರಲೋಕವಿಲ್ಲೆಂಬ ಚಾರ್ವಾಕರೆಂದೆನಿಪ
ಗಿರಿಯಶನಿ ಬುದ್ಧಿಯೇ ದೈವವೆಂದೆಂಬ ಬೌ
ದ್ಧರೆನಿಪ್ಪ ಕಾನನಕೆ ದಾವಾಗ್ನಿ ಜೈನಮತವೆಂಬ ತಾವರೆಯ ಕೀಳ್ವಾತ್ತ
ಕರಿಯೆನಿಸಿ ಪಾಪಭೀತತೆಯಂ ಶಿವಾಣತಿಯ
ವರ ವೇದಮಾರ್ಗವೆನಿಸುವ ವೀರಶೈವಮಂ
ಪರಕಲಿಪ ಶಾಂತನಂಜೇಶ ಗುರುರಾಯ ಮೇಲಣ ಗವಿಯ ವರನಿಕಾಯ ೨

ಶ್ರುತಿ ವಿರುದ್ಧದ ನಾಸ್ತಿಕಂ ಮುನ್ನಲಾ ಬೃಹ
ಸ್ಪತಿಯಿಂದಲಾದ ನಂ ಸಮ್ಮುಖವೆ ಚಾರ್ವಾಕ
ಮತವೆನ್ನದು ಕೇಳು ಗೌತಮಾ ಎಂದು ನುಡಿದಂ ದೇಹವೇಯಾತ್ಮನೂ
ವಿತತಾತ್ಮನೇ ದೇಹವಾ ದೇಹದೊಳಗೆಯಾ
ಪ್ರತಿಯಾತ್ಮನುಂಟೆಯಿಲ್ಲಂ ಹಂಗೆನಲ್ಕೆಯು
ನ್ನತದೇಹಮಂ ಸೀಳಿ ಛಿನ್ನಭಿನ್ನಂ ಮಾಡಿದೊಡೆಯಾತ್ಮರೂಪಿಪ್ಪುದೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌರಕೃಷ್ಣಶ್ಯಾಮ ದೀರ್ಘಹ್ರಸ್ವಾದಿಯಾ
ಕಾರದಿಂದಾತ್ಮನಿಹನೇಯದುನಿಮಿತ್ತದೆ ಶ
ರೀರಕ್ಕೆಯಾತ್ಮಂಗೇ ಭೇದವಿಲ್ಲಾಗಿ ದೇಹವೇಯಾತ್ಮನೈ ಬಳಿಕ್ಕಾ
ಧಾರಿಣಿ ಜಲಾನಲಾನಿಲಗಳಾ ಪರಮಾಣು
ಓರಣಂಗಳೆ ದೇಹವಂತಪ್ಪ ದೇಹವೆ ಮ
ಹೋರುತರದಗ್ನಿಯಿಂ ಸುಡೆ ಮರಳಿ ಹುಟ್ಟಲಿಲ್ಲೆಂಬುದೇ ತಥ್ಯವಿನ್ನೂ ೪

ಮುಂದಿನ್ನು ಜನನವಿಲ್ಲಾಗಿ ಮರಣವೆ ಮುಕ್ತಿ
ಯೆಂದೆಂಬ ದೃಷ್ಟವೇ ನಿಶ್ಚಯಂ ದೃಷ್ಟಕ್ಕೆ
ದೊಂದು ವೇಳೆಯು ಬಾರದಿಪ್ಪ ದೃಷ್ಟವೇ ಮಿಥ್ಯವಿದುಕಾರಣದೊಳೇಸಸುಖಂ
ಸಂದೇಹವಿಲ್ಲವಾ ಸರ್ಗವೇ ದುಃಖವೇ
ಕೊಂದು ಕೂಗುವ ನರಕವೈಸಲೇ ಪರಲೋಕ
ವೆಂದೆಂದುಮಿಲ್ಲವಂತಾಗಿ ಬೇಱಿನ್ನೊಂದು ದೈವವೆಂಬುದೇ ಹುಸಿಯಲ್ತೈ ೫

ಸುಕೃತ ದುಃಕೃತ ಮಹಾಸ್ವರ್ಗ ನರಕಾದಿಗಳು
ಮಕಲಂಕ ಮೋಕ್ಷಂಗಳೆಂಬವಿಲ್ಲಾಗಂತ
ದಕೆ ಕರ್ತೃವಪ್ಪೊಂದು ದೈವವೆಂದಿಲ್ಲವಿಂತೀ ಜಗತ್ತೆಲ್ಲ ಮಿಥ್ಯೇ
ಪ್ರಕಟ ಜನನಸ್ಥಿತಿ ಮೃತಕ್ಕೊಡೆಯರಿಲ್ಲವೈ
ಸುಕರನರನೇ ನರನೆನಲ್ಪುಟ್ಟುವಂ ಕಣಾ
ಚಕಿತಲೋಚನೆ ನಾರಿಯಾ ನಾರಿಯಾಗಿ ಪುಟ್ಟುವನಾ ಶಿಖಂಡಿ ಬಳಿಕಾ ೬

ತಾನಾ ಶಿಖಂಡಿಯಾಗಿಯೆ ಪುಟ್ಟುವಂ ಬಳಿಕ
ತಾನುಂಟೆ ಮೂಱು ಲೋಕಂಗಳುಂಟೈ ಮತ್ತೆ
ತಾನಿಲ್ಲದಿರೆ ಮೂಱೆಲೋಕವೆಂಬುದೆ ಇಲ್ಲವೆಂಬ ನಾಣ್ನುಡಿಯನಿಂತೂ
ನೀನಱಿಯೆಯಾ ಬೇಱೆದೈವವಿನ್ನೆಲ್ಲಿಯದು
ಆನೆ ಮೊದಲಿರುಹೆ ಕಡೆಯಾದ ಜೀವಂಗಳಿಂ
ತೇನೇನು ಮೊದಲಂತೆಯೇ ಪುಟ್ಟುವವು ಬಳಿಕ್ಕದಕೆ ಕೇಳ್ದೃಷ್ಟಾಂತಮಂ ೭

ಹದಿನೆಂಟು ಧಾನ್ಯವಾ ವೃಕ್ಷತೃಣಗುಲ್ಮವ
ಗ್ರದ ಲತಾ ಬೀಜಂಗಳಂ ಬಿತ್ತಲಾಗಿಯದ
ಱವಱಂತೆ ಪುಟ್ಟುವವವೆಲ್ಲಾ ನಿರೂಪೋ ಸ್ವರೂಪೂ ವಿಚಾರಿಸಲ್ಕೆ
ಇದು ನನ್ನಮತವಲಾ ಎಂದು ಚಾರ್ವಾಕನಾ
ಡಿದ ನುಡಿಗೆ ನಸುನಗುತ ನುಡಿದನಾ ನಾಸ್ತಿಕನ
ವದನವಂ ಜರಠ ಸೋಪಾನದ್ವಿಶೇಷತಾದನವೆಂಬಿನಂ ಗೌತಮಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೈವಹೀನನೆ ಕೇಳು ವೃಕ್ಷಮುಖ್ಯೋದ್ಭಿದಂ
ಭಾವಿಸಲ್ಕೃಮಿಕೀಟವಾ ಸ್ವೇದಜಂ ವಿಹಂ
ಗಾವಳಿ ಮುಖಾಂಡಜ ನರಾದಿಯುಜರಾಯುಜಂಗಳು ಚತುರ್ವಿಧದೊಳಿಂತೂ
ಭೂವಳಯದೊಳಗೆ ಯೆಂಭತ್ತನಾಲ್ಕುಂ ಲಕ್ಷ
ಜೀವಯೊನಿಯೊಳೊಗೆದು ಬಂದವಂ ನೀನಲಾ
ನಾವು ಸರ್ವರು ಮೆಚ್ಚುವಂತೆ ಮುರಿವೆವು ನಿನ್ನ ವಾದಮಂ ಕೇಳೆಂದನೂ ೯

ಆದೊಡೆಯುಬದ್ಧ ನಿನ್ನಯು ಮತಂ ಭಾವಿಸಲು
ವೇದಾದಿಯಾದಾದಿ ಮಾರ್ಗವರ್ತನೆಯೆನಿಪ
ಸಾದರ ಶ್ರೌತವಾ ಸ್ಮಾರ್ತವರ್ತಕರಿಂ ಬಹಿಷ್ಕರಿಸಿಕೊಂಬುದಾಗಿ
ಈ ಧರೆಯೊಳೆಯಿದೆ ನಾಸ್ತಿಕವೆನಿಸಿಕೊಂಬೆಯ್ಯೆ
ನೀ ದೈವಹೀನನ್ಯೆ ಲೋಕದೊಳಗಾ ಜನರು
ಗಾದೆಯೊಳು ಚಾರ್ವಾಕನಾಗಿ ನುಡಿಯದಿರು ಛೀ ತೆಗೆಯೆಂಬುದೇ ದೃಷ್ಟವ್ಯೆ ೧೦

ಮತ್ತೆಯಾ ದೇಹವೇಯಾತ್ಮನಂಬೆಯಾ
ಸತ್ತ ಹೆಣನೊಳು ಚೇತನಂಗಳಂತಷ್ಕರಣ
ವೃತ್ತಿಯೊಳು ಜ್ಞಾನಕರ್ಮೇಂದ್ರಿಯಂಗಳು ಮಹಾವ್ಯೆಕಾರಚೇಷ್ಟೆಯಿಲ್ಲಾ
ತತ್ತ್ರಪ್ರಕಾರದಿಂದಲ್ಲಿರಲ್ಬೇಕಿನಿತು
ಹೊತ್ತಿರಲ್ಕಾತು ಕೊಳೆವುತ ಹುಳಿವುದಂತದು ನಿ
ಮಿತ್ತದಿಂ ನಿನ್ನ ನುಡಿಯೆ ಶಶಾಬದ್ಧವೆಂಬುದು ಲೋಕದೃಷ್ಟವಲ್ಲೆ ೧೧

ಇನ್ನು ಕೇಳೈ ಸುಷುಪ್ತಾವಸ್ಥೆಗಂಕಾರ
ಣೋನ್ನತವದಾದಾ ಮಹಾ ಸ್ಥೂಲಸೂಕ್ಷ್ಮವಾ
ಸನ್ನುತದ ಕಾರಣವೆನಿಪ್ಪಾ ತನುತ್ರಯಂಗಳ ಲಸದ್ವ್ಯಾಪಕತೆಯಿಂ
ಮುನ್ನ ಜಾಗ್ರಾವಸ್ಥೆಯೊಳು ಬಳಲಿ ವಿಶ್ವನೆನಿ
ಪನ್ನಾಡೆಯಾತ್ಮನೇ ತನಗೆ ವಿಶ್ರಾಂತಿ ಸ್ಥ
ಲಂ ನಿಜವೆನಿಪ ಸೂಕ್ಷ್ಮತನುವನೆಯ್ದುತ್ತ ಜಾಗ್ರವಸ್ಥೆಯಧಿಕಮಪ್ಪಾ ೧೨

ಸಂಸರ್ಗವಾಸನಾ ತನ್ಮಯದ ಸಂಸ್ಕಾರ
ದಿಂ ಸೂಕ್ಷ್ಮತನುವಿನೊಳ್ವ್ಯಾಪಿಸುತ್ತಾವ್ಯಾಪ
ಕಂ ಸಹಜಮಾಗಲದಱಿಂದಲಾ ಸ್ವಪ್ನದಾವಸ್ಥೆಯುಮನನುಭವಿಸುತಾ
ತಾಂ ಸೇರಿ ಮತ್ತೆಯಾ ಸ್ವಪ್ನದಿನದೃಷ್ಟಪೂ
ರ್ವಂ ಸೌಖ್ಯವೆನಿಪ ಪೂರ್ಣಂ ತಾನಹಾಶ್ಚರ್ಯ
ಮುಂ ಸರಸವೆನಿಸುವಾ ಸ್ವಪ್ನಂಗಳಂ ಕಂಡು ಬಳಲಿತೈಜಸವೆನಿಸುತಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನಗೆ ವಿಶ್ರಾಂತಿಮಯಮಪ್ಪ ಸುಸ್ಥಾನವೆಂ
ದೆನಿಪ ಕರಣಂಗಳಿಗೆಯೊಂದೇ ಮುಖಕ್ಕೆ ತಾ
ನನುನಯದೆ ಕಾರಣವೆನಿಪ್ಪ ಕಾರಣ ತನುವನೆಯಿದಿಯಾತ್ಮನ ಚೇತನಾ
ಘನತರದ ಚೈತನ್ಯದೊಳಗೆಯಂತರ್ಬಾಹ್ಯ
ಸನಯ ತತ್ಕರಣ ಚೈತನ್ಯಂಗಳಡಗಿಯ
ತ್ಯನುಪಮಜ್ಞಾನಾಂಶವುಂ ಸುಷುಪ್ತಿಯೆನಿಪ್ಪ ತತ್ವದೊಳಡಂಗಿ ಬಳಿಕಾ ೧೪

ನಿರುಪಮ ಪ್ರಜ್ಞನಾಗುತ ಲಸತ್ಪ್ರಾಜ್ಞನೆನಿ
ಸಿರುತೀ ತನುತ್ರಯಂಗಳಿಗೆಯೊಬ್ಬನೆಯಾದ
ನಿರುತಾತ್ಮ ಸುಸ್ವಲೀಲಾ ಸುಚೈತನ್ಯಚೇತನವಲಾ ಪ್ರಾಣವಾಯುೂ
ವರ ನಾಮವಾಗಿಯಾ ನಾಸಿಕಾರಂಧ್ರದಿಂ
ದರಲಿ ಸೂಸುತ ಮರಳಿಯೊಳ ಪೊಕ್ಕು ನಿಟಿಲತಟ
ಸರಸಭ್ರೂಮಧ್ಯಮಂ ಮುಟ್ಟಿಯತ್ನಸನ್ನಿಧಿಯಿಂದ ಹೊಱಸೂಸುತಾ ೧೫

ಇಹುದಾಗಿಯೊಂದವಸ್ಥೆಗೆಯೊಂದವಸ್ಥೆಯಂ
ತಹಿತ ವಿಪರೀತವೈಕಾರಗುಣವಿಡಿದು ಮ
ತ್ತಹಹ ವಿಶ್ವಂತೈಜಸಂ ಪ್ರಾಜ್ಞರೆಂಬ ಭಿನ್ನಸ್ವರೂಪಾದುದಲ್ಲಾ
ಸಹಜದೊಂದೇಯಾದ ಚೈತನ್ಯವೇ ಮಹೋ
ತ್ಸಹ ಮೂಲ ಚೇತನವದಾತ್ಮ ಸ್ಫುರಣೆಯೆನಿಪ
ನಿಹಿತ ತಚ್ಚೇತನ ಪ್ರಾಣ ಜೀವಾತ್ಮತಾ ವಿಪರೀತಭಾವವೆಯಿದೇ ೧೬

ಆಯುವಸ್ಥಾತ್ರಯುವನನುಭವಿಪ ಜೀವಾತ್ಮ
ನೇಯಾಗಿರುತ್ತಿಪ್ಪುದಾಗಿ ಯಿಂತೀದೇಹ
ವೇಯಾತ್ಮನಲ್ಲವೆಂಬುದೆ ಸಿದ್ಧವೆಂತೆನಲು ಮುಂದೆ ಚಾರ್ವಾಕ ಕೇಳೂ
ನ್ಯಾಯದಿಂದಾವನೊಬ್ಬ ಚಕ್ರಿಯ ಮಹಾ
ಜ್ಯಾಯುಕ್ತವಹ ಧನುರ್ಧರರೀರ್ವರೇ ದೃಷ್ಟ
ವೈಯದೆಂತೆನೆ ಚಕ್ರಿಚಕ್ರಮಂ ಪಿಡಿದ ದಂಡದೊಳದಂ ತಿರುಪಿ ಬಿಡಲೂ ೧೭

ಆತನುರುತರಶಕ್ತಿಯಿಂ ಭ್ರಮಿಸಿದಂತಪ್ಪ
ಚೈತನ್ಯಚಕ್ರಿಯಂ ಕೂರ್ತುದೇನೆಯಿದುವುದೆ
ಮಾತೇನು ಚಕ್ರಿಯಾಜ್ಞೆಯೊಳ್ದೆ ತಿರುಗಿದಾ ಭ್ರಮಣವಲ್ಲಾಡುವಂತೇ
ಓತು ಬಿಲ್ಲಾಳೆಚ್ಚ ಬಾಣವಾತನ ಶಕ್ತಿ
ಯೇ ತಳ್ತುಕಿಱಿದು ದೂರದೊಳೆಯಿದೆ ಬಿದ್ದೊಡಾ
ಪ್ರೀತಿಯ ಧನುರ್ಧರನ ಶರಪತಿತವಪ್ಪ ಬಗೆಯೆಯ್ದಿದಂದದೊಳು ಕೂರ್ತು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆರಯ್ಯಲಾತ್ಮನ ಪ್ರೇರಕರ ನೇಳ್ಗೆಯಿಂ
ಪ್ರೇರಿಸುವುದಾಗಿ ವರಸದಸತ್ಸವಸ್ತುಗಳ
ವಾರವ್ಯದಾತ್ಮನಲ್ಲೆನಬಾರದಾಗಿಯಾ ಜೀವಾತ್ಮನಂಗದಿಂದಾ
ಓರಂತೆ ತೊಲಗೆಯಾ ತನುವೆ ಭಾವಿಸೆ ವ್ಯತಶ
ರೀರವೆನಿಸಿಹುದಾಗಿಯಾತ್ಮನೇ ತನುವಲ್ಲ
ವೈ ರಸೆಯೊಳಿಂದೊಡಾ ತನುರಹಿತ ಜಂತುವುಂಟೇ ಹೇಳಿಯೆಂದನಾತಂ ೧೯

ದುರುಳಂಗೆ ಕಥೆಯೊಂದ ಪೇಳಿದಂ ಮುನ್ನ ಹರಿ
ಹರ ಭಟ್ಟನೆಂಬವಂ ಸದ್ಬ್ರಾಹ್ಮಣಂ ವೇದ
ಪರಿಣತಂ ಯಜನ ಯಾಜನ ವಧ್ಯಯನವು ಬಳಿಕಧ್ಯಾಪನಂ ದಾನವೂ
ವರ ಪರಿಗ್ರಹಮುಖ್ಯವಾದವಂ ಬಿಟ್ಟು ನಿ
ಷ್ಠುರ ರೌದ್ರಕರ್ಮದೆ ಯಥೇಷ್ಟ ಮಾರ್ಗದಿ ನಡೆದು
ಮರಣವಾದಲ್ಲಿ ಇಪ್ಪತ್ತೆಂಟು ಕೋಟಿ ನರಕವನುಂಡು ಧರೆಗೆ ಬಂದೂ ೨೦

ಅಸವಸದ ಕರ್ಮದಿಂದಾತನಾ ಬ್ರಹ್ಮರಾ
ಕ್ಷಸನಾಗಿಯೊಕ್ಕಲಿಗನೊರ್ವನಂ ಹಿಡಿದು ಬೋ
ಧಿಸಿಕೊಂಡು ಮೃಷ್ಟಾನ್ನಮಂ ಲೀಲೆಯಿಂ ವೇದಮುಮನುದಾತ್ತಾನುದಾತ್ತಾ
ರಸಮಯಸ್ವರಿತಪ್ರಚಯ ಸುಸ್ವರಂಗಳಿಂ
ದೊಸೆದಂಗುಲಿಯರೇಖೆ ಚೇಷ್ಟಾಂಗುಲಿಗಳನಾ
ಪೊಸತಪ್ಪ ನಖಮುಖಗಳಿಂ ಗಣನೆಯಿಂ ಗುಣಿಸಿ ಪದಪಾಳಯಜ್ಞಕ್ರಮಾ ೨೧

ಬಳಿಕತ್ಮಹನಸೆಂಬಿನಂ ಲೋಕದಾ ಜನಂ
ಗಳು ನೋಡೆಯೊಕ್ಕಲಿಗನಂಗವೇ ನಿಜದೇಹ
ವಳವಡಲ್ಕೋಡಿದನಲಾ ಭಾಪೆನಲ್ಕೆಹರಿಹರಭಟ್ಟನದುಮಲ್ಲದೇ
ಬಳಿಕಲಿಂತಖಿಳ ಗ್ರಹಂಗಳಿಹವಾಗಿ ತನು
ವುಳಿದಾತ್ಮನುಂಟೆಂಬುದೇ ತಥ್ಯವೆಂದು ನಿ
ರ್ಮಳ ಗೌತಮಂ ಕೂರ್ತು ಚಾರ್ವಾಕರಂ ಪೇಳಿ ಪೇಳಿ ಭಂಗಿಸುತಿರ್ದನೂ ೨೨

ಅಂತಾಗಿ ತನುರಹಿತವಾಗಿಹಾತ್ಮನು ಸೂಕ್ಷ್ಮ
ಕಾಂತ ತನುವಿಡಿದು ತತ್ಪುಣ್ಯ ಪಾಪಂ ಸ್ವರ್ಗ
ವಂತ ನರಕಾದಿಗಳನನುಭಪವುದೇ ಸಿದ್ಧವಾ ಸೂಕ್ಷ್ಮತನುವಿನ ಲಯಾ
ಸಂತತಂ ಮುಕ್ತಿಗದುಕಾರಣವದಾದಿಯು
ತ್ಯಾಂತ ತತ್ಸೂಕ್ಷ್ಮತನುವಿಡಿದ ಜಗದಿಂದ ಲೋ
ಕಾಂತರವನೆಯಿದಿಯಾ ಕಾಲದಿಂ ಕಾಲಾಂತರವನೆಯಿದಿ ಮಿಗೆ ಕೂರ್ತುದಂ ೨೩

44

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಕೃತ ದುಃಕೃತವಾಸನಾದೋಷದಿಂದಂ ನ
ರಕ ತತಿಯನನುಭವಿಪನೆಂಬುದೇ ಸಿದ್ಧವೈ
ಪ್ರಕಟ ತ್ರಿಧಾವಸ್ಥೆಗಳನಱಿವನಾತ್ಮನೋ ಶರೀರವೋ ಪೇಳೆಂಬೆಯಾ
ವಿಕಟನೇ ಶರೀರವೆಂಬೊಡೆಯುವಸ್ಥೆಗಳಲ್ಲಿ
ಸುಕರದಿಂ ಕಂಡಹಂಥಾವನೇ ಪೇಳ್ವವಂ
ಯಕುಟಿಲತೆಯಾತ್ಮನೇ ನಲ್ಲವೆಯುದಾಗಿ ದೇಹವನೆಯಿದೆ ಬಡಿಯಲಿಲ್ಲಾ ೨೪

ಘನತರದೊಳದು ಹೇಂಗೆಯೆಂಬೆಯಾ ಬರಿಯುಕ
ಬ್ಬುನವನೇ ಬಡಿಯುದೇಯಗ್ನಿ ಸಂಪರ್ಕದಿಂ
ದೆನಬೇಕಲ್ಲೈ ಕೂಡಿ ಬಡಿವ ಕಮ್ಮರನೊರ್ವನುಂಟೆಂಬ ಮಾಳ್ಕೆಯಿಂದಾ
ಅನಘ ಶಿವನೊಬ್ಬನುಂಟೈ ಮತ್ತೆ ಕಾಣ್ಬವಂ
ಎನಿತು ಕಾಣಿಸಿಕೊಂಬುದಂ ತನಗೆ ಭಿನ್ನವೆಂ
ದೆನುತ ಕಾಣ್ಬಂತೆಯಂತಾತ್ಮನುಂ ದೇಹಮುಂ ಬೇಱೆಂದು ನೀಂ ತಿಳಿವುದೈ ೨೫

ಇವನೆಲ್ಲವಂ ಹುಟ್ಟಿಪಂ ರಕ್ಷಿಪಂ ಮಹಾ
ದ್ವಿವಿಧ ಕರ್ಮಂಗಳಂ ಕೂರ್ತುಣಿಸೆ ಸಂಹರಿಸ
ಲವಯುವಮನೆಯಿದೆ ತುಡಿಸಲ್ಕೆ ಶಿವನುಂಟೆಂಬುದಕ್ಕೆ ಧರ್ಮಾಧರ್ಮವೂ
ವಿವಿಧ ಶಾಸ್ತ್ರಂಗಳುಮನೇಕವುಂಟಿ ಹೀಗೆಂದು
ವಿವರದಿಂದಱಿವುದೈ ದೇಹಾರವಾದಿಯೆ ನಿ
ಸುವನೆ ಚಾರ್ವಾಕ ನೀನೆ ಶೂನ್ಯವಾದಿಯಹ ಬೌದ್ಧನಾಗೆಂದು ಮುರಿದಂ ೨೬

ಚಾರ್ವಾಕನಿರಸನ ಸಮಾಪ್ತಶ್ರೀ ಇನ್ನು ಬೌದ್ಧವಾದ ನಿರಸನ

ಅನಿತಕ್ಕೆ ಬಂದಡ್ಡಲಾದನಂತಾ ಬೌದ್ಧ
ಮುನಿ ಎನ್ನ ಮತವನಾಲಿಸು ಗೌತಮಾ ಶಿವಂ
ನಿನಗೊಬ್ಬ ದೈವವೇ ಬಿಡುಬಿಡಾ ಬುದ್ಧಿಯೇ ದೈವವಿನ್ನೀಶನೆಂದೂ
ಮನದಲ್ಲಿ ಕಲ್ಪಿಸಿಕೊಳಲ್ಕಾದನ್ಯೆಸಲೆ
ಘನಪುಣ್ಯ ಪಾಪವಾ ಸ್ವರ್ಗನರಕಂಗಳೆಂ
ಬೆನಿಪವಂ ತನ್ನ ಬುದ್ಧಿಯೊಳೆ ಸಂಕಲ್ಪಿಸಿದನದಱಿಂದ ಬುದ್ಧಿದೈವಂ ೨೭

ಸಲೆ ಬುದ್ಧಿಯೇ ದೈವವೆಂಬ ವಾದಿಯು ಕೂಡೆ
ನಲಿದು ನುಡಿದಂ ಗೌತಮುಂ ತಥ್ಯವೆಂಬಿನಂ
ಎಲೆ ಬೌದ್ಧ ನಿನ್ನ ಮತವೇ ವೇದಬಾಹ್ಯವಾಗಿಪ್ಪ ಖಾಷಂಡ ಮಾರ್ಗಂ
ಆಲಘು ಪಾಷಾಂಡಮತವೆನಲುಃ ಮಾಯಾವಾದ
ವಲೆ ಪರಿಕಿಸಲ್ಕೆ ಮಾಯಾವಾದವೆಂಬುದರ
ನೆಲೆ ಶೂನ್ಯವಾದವಾ ಶೂನ್ಯವಾದವೆ ಶುಷ್ಕತರ್ಕವೆಂಬುದು ನಿಶ್ಚಯಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಮತಂ ಪಿಡಿದು ವಾದಕೆ ಬಂದ ನಿನ್ನ ಸ
ತ್ಪ್ರಾಮಾಣ್ಯಕಂ ಪ್ರಮೇಯವದೇನು ಪೇಳ್ವುದೈ
ಸಾಮರ್ಥ್ಯವೇದಚಾತುಷ್ಟಯಂ ಹದಿನೆಂಟು ಪೌರಾಣವಾಗಮಗಳೆ
ಮಾಮರಿಷಿರೆ ಇಪ್ಪತ್ತಯೆಂಟುಪನಿಷತ್ತುಗಳು
ನಾಮವಿಡಿದೆಸೆವ ಮೂವತ್ತೆರಡು ಷೋಡಶ ಮ
ಹಾಮಹಿಮ ಶಾಸ್ತ್ರಂಗಳೆನಿಪ ವಿದ್ಯಾಕೋಶಮಯವೆನಿಸಿ ರಾಜಿಸುತಿಹಾ ೨೯

ಆಯುತದ ಸುಪ್ರಮಾಣಗಳನತಿಗಳೆವಾ ಪ್ರ
ಮೇಯವಾವುದು ನಿನಗದಿಲ್ಲವಾಗಿಯೆ ನಿನ್ನ
ಧೀಯೆನಿಸಿಕೊಂಬ ನಿನ್ನೀ ಪ್ರಮಾಣೆಲ್ಲಿಗುಂ ಸಲ್ಲದಿದುಕಾರಣದೊಳೂ
ನ್ಯಾಯವೇ ನಿನ್ನ ಮತವೆಂಬುದೇ ಜಡಮತಂ
ಈಯವನಿಯೊಳು ಪಾಶಬದ್ಧವಾ ಪಾಶಬ
ದ್ಧಾಯತವೆ ದುಃಖಗಳಿಗಾಶ್ರಯಂ ದುಃಖಾಶ್ರಯಂ ನರಕಹೇತುವೆನಿಕುಂ ೩೦

ನರಕಕ್ಕೆ ಕಾರಣವದಾದ ಮಾನಸವಾಕ್ಕು
ವರ ಕಾಯಿಕಾಗ್ರಕರಣಂಗಳಿಂದುದ್ಭವಿಪ
ಪಿರಿಯ ದೋಷಂಗಳೊಳು ಮಗ್ನವಾಗುತ್ತ ಜೀವಂಗೆ ವಿಪರೀತಭಾವಂ
ಸ್ಫುರಿಸುವುದೆನಿಪ್ಪುದೇ ಸಿದ್ಧವದಱಿಂ ಪಾಪ
ಭರಿತ ನಿನ್ನಯ ಬುದ್ಧಿಯಾ ಕ್ಷಣಿಕ ವೀಕ್ಷಣಿಕ
ತರಬುದ್ಧಿಯಿಂದೆಣಿಪ ಮನ ಮನನ ಮನನೀಯವೆಂಬವಕ್ಕರ್ಥವಿನ್ನೂ ೩೧

ಮನವೆನಲು ಮಾನಸಂ ಮನನವೆಂದೊಡೆ ಮನದ
ನೆನಹು ಮನನೀಯ್ಯವೆಂದೊಡೆ ಬಳಿಕ ಮನದಿಂದ
ನೆನೆಯಿಸಿಕೊಳಲ್ತಕ್ಕ ವಸ್ತುವಿನ್ನಾವುದನಲಾ ಪ್ರಥಮದೊಳೆಗೊಬ್ಬನೇ
ಎನುತಣೆಸುವೈಯೊಬ್ಬನಂ ಬಿಡುತ ಮತ್ತಿಬ್ಬ
ರೆನುತೆಣಿಸುವೈ ಬಳಿಕ್ಕಿರ್ಬರ ಬಿಡುತ ಮೂವ
ರೆನುತಣಿಪೆಯಯ್ಯ ನಿನ್ನಿಂದಲಾ ಮೂವರುಂ ಪುಸಿಯಾಗಿ ಹೋದರಲ್ಲಾ ೩೨

ಕೇಳಿಂತು ಯೆಲೆ ನಿನ್ನ ಬುದ್ಧಿಯೆಂದೆಂಬುದೇ
ಮೇಳವಿಸಿ ಬಂದ ನದಿಯುಭಯ ತಟಮಂ ಕೊಱೆದು
ಬೀಳುವಂತಾರಣ್ಯದೊಳಗಿರ್ದ ಕಿರ್ಚು ಮುಂದುರಿವುತ್ತ ಪೋಗಲಾಗಿ
ಹೇಳಲೇಂ ಹಿಂದಾರಿ ಪೋದಂತುಟಾದುದೈ
ಖೂಳ ಕೇಳಕ್ಷರದ ಪಂಙ್ತಿಯಂ ಬರೆವುತಂ
ಬಾಳರ್ಕಳೋದುತಂ ಪೋಗೆ ಹಿಂದೋರ್ವನವನುಡುಗಿ ಬಿಟ್ಟಂತಾಯಿತಲ್ತೆ ೩೩

CC0. In Public Domain. Jangamwadi Math Collection, Varanasi

ನಿನಗೊದಗುವಾ ಮುಕ್ತಿ ಸೌಖ್ಯವೆಂದೆಂಬುದೇ
ಘನ ಬೀಜವೃಕ್ಷಕುಸುಮಾಗ್ರಫಲ ಪಕ್ಷಘೆ
ಮ್ಮನೆ ಮತ್ತೆ ಬೀಜವೃಕ್ಷನ್ಯಾಯದಂತಾಯ್ತು ಮುಂದೆಯಾತ್ಮನು ಮುಕ್ತಿಯಾ
ನೆನೆದು ನಿಶ್ಚೈಸಲ್ಕೆ ಹಿಂದೆಯಾ ಬುದ್ಧಿಯೊ
ಯ್ಯನೆ ಕೂರ್ತು ಸಂಚಲಿಸದಂತಾಯಿತಲ್ತೆ ಕ್ಷಣಿಕ
ವೆನಿಪ ಯುಕ್ತಿಗಳಿಂದಲಪವರ್ಗಸಂಪ್ರಾಪ್ತಿ ನಿನಗೆಲ್ಲಿಯದು ಬೌದ್ಧನೇ ೩೪

ಆದೊಡಂ ಕೇಳು ನಿನ್ನಯ ವಿನಾಶಭ್ರಷ್ಟ
ದೋದುಗಳು ಗಣನೆಗೆಯಿತರೆ ಸಂಶ್ರವಾಶ್ರವಗ
ಳಾದಿಯಲ್ಲದೆ ಮೋಕ್ಷಸಿದ್ಧಿಗಾಶ್ರಯವಲ್ಲವಿನ್ನು ಕೇಳ್ನಿನ್ನ ದೈವಂ
ಸಾದರದೆ ಬುದ್ಧನೋ ಅರುಹನೋ ಪೇಳ್ಬುದ್ಧ
ನಾದೊಡಂ ಕೃತಯುಗದೊಳಾ ತಾರಕಾತ್ಮಜರು
ಮಾದೇವನೋಳ್ಮಲೆತು ತತ್ತ್ರಿಪುರಮಂ ಬಲಿದುಕೊಂಡು ಜಗಮಂಕೆಡಿಸಲೂ ೩೫

ಶಿವನತ್ತಿಬಂದು ಯುದ್ಧವ ಮಾಡೆ ರಾಕ್ಷಸರು
ತವತವಗೆ ಕಾದಿ ಮುರಿದೋಡಿದರು ಕೂರ್ತು ಲಿಂ
ಗವನು ಪೂಜಿಸಿ ಬಲ್ಮೆವಡಿದು ಬರಲೀಶ್ವರಂ ವಿಷ್ಣುವಂ ಕಳುಪಲಾಗೀ
ಅವರಿಗಂ ದುರ್ಬೋಧೆಯಂ ಬೋಧಿಸುತ್ತ ಶಂ
ಭುವ ಪೂಜೆಯಂ ಬಿಡಿಸಿ ಮೆಯಿಕೆಟ್ಟ ಬೌದ್ಧನೇ
ಭುವಿಯಲ್ಲಿ ನಿನಗಧಿಕ ದೈವ ವವನೆಂಬೆಯಾ ಛೀ ಯೆನಿಸಿಕೊಂಬನಾತಂ ೩೬

ಅರುಹನೇ ದೈವವೆಂದೆಂಬೆಯಾ ಕೇಳದಱ
ಪರಿಯನಾ ಶಾಲಿವಾಹನಶಕಕ್ಕೆಯಿನೂಱ
ಎರಡುವರುಷಕ್ಕತ್ತಲಾ ನಾಭಿರಾಜನೆಂಬಾ ಭೂಮಿಪನ ಪಟ್ಟದಾ
ಅರಸಿ ಮರುತಾದೇವಿಗೊಗೆದು ಜಿನನಾಮದಿಂ
ದಿರುತೊಮ್ಮೆ ತೋಹುವೆಂಟೆಗೆ ಪೋಗಿ ನದಿಯೆಡೆಗೆ
ಬರಲೊಂದು ವೃಷಭನುದಕಾರ್ಥದಿಂ ತಾನು
ಮುಂಗತ್ತಲೆಯೊಳದಿನಱಿಯದೆ ೩೭

ತುಡುತಂಬನಾ ಕರ್ಣಪೂರದಿಂ ಏಃಗೆಯಂದು
ಬಿಡಲಾಗಿ ವೃಷಭನೆದೆಯಂ ತಾಗಿ ನಿಮಿಷಕ್ಕೆ
ಮಡಿಯಲೀಕ್ಷಿಸಿ ಬಸವನೆಂದಱಿದು ಮಱುಗಿಯುಗ್ಗಳದೋಷವಾದುದೆಂದೂ
ಮಡಗಿಯಲ್ಲಿಗೆ ಕಾಪಿನಾಳನಂತೂರ್ಗೆ ಬಂ
ದೊಡನೆ ಪೌರಾಣಿಕರ ಬೆಸಗೊಂಡನಾ ವೊದ
ಲ್ದೊಡಗಿ ನಾನಾ ಪ್ರಕಾರದ ದೋಷಗಳಿಗೆಯೂ ಪ್ರಾಯಶ್ಚಿತಂಗಳಿರವಂ ೩೮

Digitization by eGangotri and Sarayu Trust. Funding by MoE-IKS

ಶ್ರುತಿ ಶಾಸ್ತ್ರ ಪೌರಾಣ ದಿವ್ಯಾಗಮಾಳಿಯೊಳು
ಮತಿವಂತರಖಿಲ ದೋಷಕ್ಕೆ ನಿರುಹರಣೆಯಂ
ಕೃತಪುಣ್ಯಮಪ್ಪಂತೆ ಪೇಳ್ವಲ್ಲಿ ವೃಷಭವಧೆಯಂ ಮಾಡಲಾ ದೋಷಮಂ
ಅತಿಗಳೆವ ಬಗೆಗೆಯಾಳುದ್ದ ಚಪ್ಪರವನಿ
ಕ್ಕುತಲದಱ ಮೇಲೆ ಬಸವನನಿರಿಸಿ ಕೂಡೆ ಸು
ವ್ರತದಿಂದಲದಱಡಿಯೊಳೆಯ್ದೆ ಪಾಲಾಸಪತ್ರಂಗಳಂ ಪಚ್ಚವಡಿಸೀ ೩೯

ಅದಱ ಮೇಲೆಯ್ದೆ ಪದ್ಮಾಸನದೊಳಿರ್ದು ಸೌ
ಖ್ಯದೊಳೊಪ್ಪುವಾಜ್ಞಾ ಸುಚಕ್ರದೊಳು ಮನವ ಮನ
ದುದಯಮಂ ನಿಲಿಸಿ ಹೃತ್ಕಮಲಕರ್ನಿಕೆಯ ಕುಹರದೊಳಿರಿಸಿ ಪರಮಾತ್ಮನಾ
ಸದಮಲ ಪ್ರಣವಮಂ ಪಠಿಸುತ್ತ ಕಂಗಳ ಮು
ಗಿದು ವೃಷಭನಧಿಕ ವ್ರಣಾದಿದುರ್ಗಂಧಕಳು
ಕದೆ ಪಕ್ಷಮಾತ್ರವಿರಲಾ ಮರ್ತ್ಯಗಪ್ಪುದಾ ಸಿದ್ಧಲೋಕಪ್ರಾಪ್ತಿಯುೞ ೪೦

ಎನಲು ಪೌರಾಣಿಕರ ವಾಕ್ಯಂಗಳಂ ಕೇಳಿ
ಯನಿತು ಪ್ರಕಾರಮಂ ಮಾಡಿಯಂತಾ ವೃಷೇ
ಶನ ಚರ್ಮಮಂ ತಟ್ಟಮಾಡಿ ಬಾಲಮಂ ಕುಂಚಮಂ ಮಾಡಿಕೊಂಡೂ
ಘನ ಬೃಹದ್ಬೀಜಮಂ ಗುಂಡಿಗೆಯ ಮಾಡಿ ಘ
ಮ್ಮನೆ ಯಥೋಕ್ತಾಸನವನಿಟ್ಟಣೆಯ ಕೆಳಗೆ
ಯನುಪಮ ವ್ರತದಿಂ೧ರುತ್ತಿರ್ದನರುಹನಾ ಪಾತಕಂ ಪೋಪನ್ನೆಗಂ ೪೧

ಆವರ ಸಂತತಿಗಳೆಲ್ಲಾ ಇದೇ ವೇಷವೆನು
ತವೆ ಪರಮ ಪದವನೆಯಿದಿದರುಹ ಮತ ಬೌದ್ಧ
ರಿವರಾರೊಳು ನಿನ್ನ ದೈವವಾರೈ ಹೇಳಿದಾದಿಜಿನನೆಂದೆಂಬೆಯಾ
ತವೇ ವೇದಬಾಹ್ಯವೀ ಮತವದೇ ಹುಸಿಸಲ್ಲ
ದವು ಕಣಾ ನಿನ್ನ ನುಡಿಯೆ ಶೈವವೆಂದೆಂಬ
ರವಿಕಿರಣದುದಯದೊಳು ಸಂಚರಿಪ ಖದ್ಯೋತತತಿಯತಿ ನಿಕೃಷ್ಟವಲ್ಲೈ ೪೨

ಕಂಗಟ್ಟು ನುಡಿಯದಿರಿ ನಿಮ್ಮ ಪಂಚಾಣುವ್ರ
ತಂಗಳೆನಿಸುವ ಕೊಲೆಯುದನೃತ ಚೋರತೆ ಪಾದ
ರಂಗಳತಿಕಾಂಕ್ಷೆಯುಂಬೈದು ಮತ್ತಾದುಂಬರದ ಫಲಂ ಗಿಣ್ಣ ಜೇನೂ
ಹೀಂಗೆಯಾದ್ರವ್ಯದೋಕ್ಷತ್ರಯಾಖ್ಯದ ಸುವ್ರ
ತಂಗಳಂ ನೀವು ಚರಿಸುವೆವೆಂಬಿರಾದೊಡಾ
ಪಾಂಗು ನಿಮ್ಮೊಳಗುಂಟೆನಿಪ್ಪುದಂ ತೋಱುವೆನೆನುತ್ತ ನುಡಿದಂ ಗೌತಮಂ ೪೩

CC0. In Public Domain. Jangamwadi Math Collection, Varanasi

ಕೊಲೆಯುಲ್ಲವೇ ವರ ಶಿವಾಗಮಜ್ಞರ ಸುನಿ
ರ್ಮಲ ಹೃದಯುವುಂ ನೋಯಿಪುದು ಹುಸಿಯಲ್ಲವೇ
ಮಲಹರನನಿಲ್ಲೆಂಬ ಮಾತು ಕಳವಲ್ಲವೇ ಆದಿಯೊಳಗಿಲ್ಲದಿರ್ಪಾ
ಸಲೆ ವೇದಬಾಹ್ಯದರುಶನವಿಡಿದು ನಡೆವುದು
ಜ್ವಲ ಹಾದರವಲ್ಲವೇ ನಿತ್ಯಶೈವನಾ
ದಲಘುಸದ್ವರ್ತನೆಯೆನಿಪ ಮುಕ್ತಿಕಾಂತೆಯುಂ ನೆರೆಯಲ್ಕೊಲ್ಲದೆ ಚೌರ್ಯದಿಂ ೪೪

ಪಾಷಂಡಮತವೆಂಬ ವಿದ್ಯಾಗ್ರರಂಡೆಯುಂ
ದೋಷವೆನ್ನದೆ ನೆರೆವುದತಿ ಕಾಂಕ್ಷೆಯಲ್ಲವೇ
ಭಾಷಿಸುವ ವೇದ ಶಾಸ್ತ್ರಾಗಮಂಗಳ ಮೀಱಿ ಮುಕ್ತಿಯುಂ ಪಡೆವೆನೆಂಬಾ
ವೈಷಮ್ಯಯುಕ್ತಿಯಧಮವಲ್ಲವೇಯಜ್ಞಾನ
ದೋಷಮಿಥ್ಯದ ವಾದ ಮತ್ತತ್ವವೆಂಬುದುಮ
ಶೇಷವಹ ಗಿಂಣನಲ್ಲವೆಯನ್ನಪಾನಂಗಳವರ ಪೂರ್ವಾಶ್ರಯಗಳಾ ೪೫

ಕಳೆದು ಪರಮೇಶ್ವರಂಗರ್ಪಣೆಯ ಮಾಡದೇ
ಕೊಳುವುದಿನ್ನಾಲಿಸಿರೆ ಪೇಳ್ದ ಔದುಂಬರದ
ಫಳವಲಾ ಓಷಧೀ ನಾಂತು ಪತಯೇ ನಮುಯೆನಿಪ್ಪ ಮಂತ್ರದ ಸೌಖ್ಯಮಂ
ತಿಳಿದು ಮಂತ್ರಾರ್ಥದಿಂ ನಡೆಯದೇ ಭುಂಜಿಸ
ಗ್ಗಳದಂನಸಿಕ್ತಕ ಬಳಂಗಳೆಂಬವು ಕೇಳಿ
ಫಳಿಲನಂತೆಸೆವ ಪಂಚಾಣುವ್ರತಭ್ರಷ್ಟರಿರ ತದ್ರ್ವತಾಪಸರರ್ಕೆ ೪೬

ನೀವು ಮತ್ತಂ ಕೇಳಿ ಕರ್ನಾಟ ದೇಶದೊಳು
ಶ್ರಾವಕ ಕ್ಷಪಣಕರು ಕೊಲಲಾಗದೆಂಬರಂ
ತಾ ವಿದಿತಮಪ್ಪ ಜಿನಸಿಂಹಣದೊಳಂ ಪರರು ಕೊಂದುದಂ ತಿನಲು ದೋಷಾ
ವಾವುದೂಯಿಲ್ಲವೆಂದೆಂಬರಿರ್ವರ್ಗೆ ವಾ
ದಾವಳಿಗಳುಂಟವರು ಸತ್ತುದಂ ಮಣ್ಣು ಸರಿ
ಯಾ ವಸುಧೆಯೊಳಗೆಂದು ನುಡಿವರಾ ಪ್ರಕ್ಷಿಪ್ತಮಪ್ಪ ತದ್ಗ್ರಂಥಗಳಾ ೪೭

ತಿನ್ನಬಹುದೆಂತೆಂದು ಪೇಳೆ ಮಾಂಸಸ್ಯ ಮರ
ಣಂ ನಾಸ್ತಿ ನಾಸ್ತಿ ಮಾಂಸಸ್ಯ ವೇದನೆಯೆನಿ
ಪ್ಪಂ ನೆಗಂ ನಿರ್ದೋಷವೆಂದು ಸಿಂಹಣದ ಬೌದ್ಧರಿಗೆ ಕರ್ನಾಟದವರೂ
ತಂ ನಿಂದೆಯಾಗಿ ನುಡಿಯುತ್ತಿಹರು ಗೂದಸ್ಯ
ಎಂನೆ ಕೇಳ್ಪಿಶಿತದಂತಾ ಮಲಕೆ ಮರಣವಿ
ಲ್ಲಂ ನೋಯಲಿಲ್ಲವಂತಪ್ಪಮೇಧ್ಯವನು ಬೌದ್ಧರ್ಗಳೇಕೊಲ್ಲರೆಂದೂ ೪೮

Digitization by eGangotri and Sarayu Trust. Funding by MoE-IKS

ಬೌದ್ಧರ ಗ್ರಂಥ

ಮಾಂಸಸ್ಯ ಮರಣಂ ನಾಸ್ತಿ ನಾಸ್ತಿ ಮಾಂಸಸ್ಯ ವೇದನಾ
ವೇದವಾ ಮರಣಾ ಭಾವೇ ಕೋ ದೋಷಿ ಮಾಂಸಭಕ್ಷಣಾತ್ ೧

ಇದಕ್ಕೆ ಶ್ರಾವಕರ ನಿಂದಿಸಿದ ಪ್ರತ್ಯುತ್ತರಗ್ರಂಥ

ಗೂದಸ್ಯ ಮರಣಂ ನಾಸ್ತಿ ನಾಸ್ತಿ ಗೂಧಸ್ಯ ವೇದನಾ
ವೇದನಾ ಮರಣಾ ಭಾವೇ ಕೋದೋಷೋ ಗೂಧ ಭಕ್ಷಣಾತ್ ೨

ನೆಟ್ಟನಾ ಬೌದ್ಧರಾ ಶ್ರಾವಕರುಕೂಡೆಯುರೆ
ಯಟ್ಟಿ ನುಡಿವರು ಸರ್ವಜನರೆಲ್ಲ ಬತ್ತಲೆ
ಹುಟ್ಟಿ ಜಿನರೂಪಾಗಿ ಬಳಿಕ ನಾನಾಪ್ರಕಾರದ ವೇಷವುಂ ತಳೆವರೂ
ಮೊಟ್ಟಮೊದಲೆಮ್ಮ ದರುಷನವೆಂಬ ಜೈನರೀ
ತಟ್ಟನೇತಕೆ ಹೊದಿವಿರೆಂದಾಡಿದರ ಬಾಯ
ಕುಟ್ಟಿದಂತಾ ಜೈನರೆಯಿದೆ ಸಿಂಹಣದವರ ನುಡಿವ ನುಡಿವರಿನ್ನೆಂತೆಂದೊಡೇ ೪೯

ಅರರೆ ಸಿಂಹಣದವರಿರಾ ನಿಜಾನ್ವಯವೀಗ
ಲೆರಡಾಗೆ ನೀವರೆಬರಾವುಕೆಲರಾದವೀ
ಧರೆಯಲ್ಲಿ ಸತ್ತುದಂ ಮಣ್ಣಸರಿಯೆಂದು ನೀವೆಯಿದೆ ತಿನತೊಡಗಲಾಗೀ
ವರ ತಪಸ್ಸಿಂ ಸ್ಥೂಲಮುಪ್ಪಶೇಷಸ್ಸು ಸ
ತ್ತಿರೆ ಮೃತ್ಸಮಾನವೆಂದೆಂಮ್ಮುಡಿಗೆ ಪಾಯ್ದು ತಿಂ
ಬರು ಕಣಾ ನೀವೆಂದು ಭೀತಿಯಿಂ ತಟ್ಟ ಮಱೆಯ ಕೊಂಡಿಹೆವೆಂಬರೂ ೫೦

ಆರ್ಯೆಯ್ಯೆ ದರುಶನಂ ಧರ್ಮವ್ರತಂ ನಿಯಮ
ಊರಿಗೊಂದುಂಟೆ ದರುಷನವು ನಾಡಿಂಗೊಂದು
ಚಾರು ಧರ್ಮವೆ ದೇಶಕೊಂದು ಸುವ್ರತವೆ ಲೋಕಕ್ಕೊಂದು ನಿಯಮವುಂಟೇ
ಧಾರುಣಿಯೊಳಿಲ್ಲ ಒಂದೇ ದರುಷನಂ
ಸಾರ ಧರ್ಮವ್ರತಂ ನಿಯಮವೆರಡೆಂಬುದವಿ
ಚಾರಿಸಲು ತಥ್ಯವಲ್ಲಂ ಮಿಥ್ಯೆಯನ್ಯಾಯಮಂ ಕಂಡು ಸೈರಿಸುವರೇ ೫೧

ಎಂದೆಂದು ವುಂಟಾಗಿ ತೋಱುತಿಹ ಶಿವನ ನಿ
ಲ್ಲೆಂದಿಲ್ಲದಾ ಜಿನನನುಂಟೆಂಬುದೇ ಹೊಲೆಯ
ರಂದದ ಮಹಾನೃತವಲಾ ಇದುನಿಮಿತ್ತದಿಂದಸ್ತಿಕಶ್ಚಿತ್ಸ್ವತಸ್ಸೀ
ದ್ಧಂದಲೆಂದೆನಲಾಗಿ ಬುದ್ಧನೆಂತುಂ ಪೋದ
ಪಂದಶಮದವತಾರವೆಲ್ಲವುಂ ಕ್ಷಣಿಕವುದ
ಱಿಂದನಿತ್ಯಾಂಗರಾದುದಱಿಂದ ನಿತ್ಯದೇವತೆಗಳುಱಿ ಸಂಬಂಧದಾ ೫೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮಹಾಭಗ್ನ ಕರ್ಮವ್ರತಂಗಳುಮೆಯಿದೆ
ಸಾಮಾನ್ಯವಾಗಿ ಯಿದುಕಾರಣಂ ಬೌದ್ಧರ್ಗೆ ಹೋ
ಹೋ ಮುಕ್ತಿಯೆಂಬುದೇ ಮೋಲನ ಕೋಡಂತದಲ್ಲದೆ ಬುದ್ಧರಾ ಕ್ಷಪಣಕಾ
ಪಾಮರರು ವಸ್ತುವೇ ಶೂನ್ಯವೆಂದೆನುತಿಹ
ಲಾ ಮತ್ತೆ ಚೌವೀಸ ತೀರ್ಥಕರೆನುತ್ತಿಹರು
ಭೂಮಿಯೊಳು ಕಾಲತ್ರಯಂಗಳಿಂದೆಪ್ಪತ್ತಯೆರಡೆಂದು ನುಡಿವುತಿಹರೂ ೫೩

ಎಸೆವುತಿರಲಿಂತಿವರು ಶೂನ್ಯವೆನಬಹುದೆ ಹೆ
ಬ್ಬುಸಿಯ ಕೇಳಲ್ಬಾರದಿಂತು ದೈವಂ ತಮಗೆ
ಯ ಸವಸದೆ ಶೂನ್ಯವಾದಡೆ ಶವುಂ ದಮೆ ಬಳಿಕಷ್ಟಾಂಗಯುಕ್ತಾ
ಅಸಮತಮಯೋಗಕರ್ಮಂಗಳಿಗೆ ಫಲವೀವ
ಸಸಮರ್ಥನಾರು ತಾವೊಡರಿಚುವ ಸತ್ಕರ್ಮ
ವಿಸರಕ್ಕೆ ತತ್ಫಲ ಪ್ರದದೈವವಾರು ಬಳಿಕುತ್ಪತ್ತಿಯಾ ಸ್ಥಿತಿಲಯಾ ೫೪

ಇವಕಾರು ಕರ್ತರಂತಹಗಾಗಿಯುಂ ಸದೋ
ದ್ಭವ ಮಹಾ ಸ್ಥಿತಿ ಹರಣ ಕಾರಣಕ್ಕಂ ಕಾರ
ಣವು ತಾನೆಯಲ್ಲದುದು ದೈವವೇ ಯಿನ್ನು ತತ್ವಾಂತರಂಗಳೊಳು ನೋಡೇ
ವಿವಿಧ ಷಟ್ತ್ರಿಂಶತ್ಪ್ರಕಾರದೊಳು ಶೂನ್ಯ ತ
ತ್ವವು ತಿಳಿಯಲೊಂದುಂಟೆ ಶೂನ್ಯವೆನಿಸುವದು ದೈ
ವವೆಯಲ್ಲವೆಂಬುದೇ ಸಿದ್ಧವೈ ವಾದಿ ಕೇಳೆಂದು ಮತ್ತಿಂತೆಂದನೂ ೫೫

ಏನೆಂಬೆ ನಿಶ್ಶೂನ್ಯವೇ ದೈವವೆಂಬುದದು
ತಾನೆ ಶೂನ್ಯಂ ಕಣಾಯಿದು ಕಾರಣದೆ ದೈವ
ಹೀನರಿಗೆ ದೈವವೇ ಮುನ್ನಿಲ್ಲವೆಂದ ಮಾತಿಂಗವಂ ಮರಳಿ ನುಡಿದಂ
ನೀನಿಲ್ಲವೆಂದ ಮಾತೇ ಶೂನ್ಯವೆಂದೊಡಾ
ಜ್ಞಾನಿ ನುಡಿದಂ ಶೂನ್ಯವೇ ನಿನ್ನದೈವವದ
ಜೈನ ನೀನೇ ಕೊಂದೆಯಾಗಿ ದೈವದ್ರೋಹಿ ತೆಗೆ ನಿನ್ನ ಮಾತದೇಕೆ? ೫೬

ಆದಿಯೊಳು ಜಿನನೆಂಬ ದೈವವೆಂಬುದೇಯಿಲ್ಲ
ವೇದದೊಳು ಹುಸಿಯಿಲ್ಲವೆಂಬ ಮಾತಂ ಬಿಡು
ತ್ತಾದಿಯೊಳು ಶಿವನಿಲ್ಲ ವೇದದೊಳು ದಿಟವಿಲ್ಲವೆಂದು ಕಾಳ್ಗೆಡೆವೆಯಾಗೀ
ಆದಿಯುಂ ತಪ್ಪಿ ನುಡಿದೈ ನಿನ್ನ ಮಾತು ಸಟೆ
ಯಾದುದಲ್ಲಾ ನೀನು ವೇದಾದಿ ವಿದ್ಯೆಗಂ
ಭೇದವಹ ಬಾಹ್ಯದರುಶನವ ಪಿಡಿದಾಚರಿಪುದೇ ತಸ್ಕರತ್ವವಲ್ಲಾ ೫೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಲಲಿತದ ವಿದ್ಯಾಂಗನಾಭಿದೇಯುದೊಳೆಸೆವ
ಕುಲವಧುವ ರಮಿಸದೆ ಕುಮತ ಮಾರ್ಗಗಳೆಂಬ
ಹಲರನುರುಳುವ ಜಾರೆಯಂ ಕೂಡುವುದು ಹಾದರವಲ್ಲವೇ
ಸಲೆ ಪೇದವಿದ್ಯಾದಿ ಎನಿಸುತಿಹ ಕಲ್ಪತರು
ಫಲದ ಸುಸ್ವಾದುವಂ ಸವಿಯದಜ್ಞಾನಮಯ
ದಲಘುಸುರೆಯಂ ಮಾಂಸಮಂ ಕೊಂಬುದೇಯಭಕ್ಷಣವಪೇಯುಗಳಲ್ಲೈ ೫೮

ಇತಿ ಪಂಚವಿಧ ಮಹಾದ್ರೋಹಿಗಳಿಗಂ ಪರಮ
ಗತಿಯಿಲ್ಲವಾಗಿಯುವರು ದಯಹೀನರುಂ
ನತ ಸತ್ಯಹೀನರತಿಶಯ ಧರ್ಮರಹಿತರಾಚಾರವಿರಹಿತರು ಮತ್ತೇ
ಅತಿಶಯದನಾಹಾರಿಗಳಿಗೆಯೀಪ್ರತ್ಯಕ್ಷ
ಕೃತನರಕವಿಹದಲ್ಲಿ ಪರವದೆಲ್ಲಿಯದಿನ್ನು
ಸತತ ಶಿವತತ್ವಬೋಧೇಕ್ಷುರಸವುಳಿದು ತಟಿಗಂ ತಿಂಬ ಕುಟಿಯ ಕುಲಕೇ ೫೯

ಈ ವಿಚಾರದ ಬೌದ್ಧ ಜೈನ ಚಾರ್ವಾಕ ಮಾ
ಯಾವಾದಿ ಮೊದಲಾದ ದರುಶನಭ್ರಾಂತಿಗಳು
ಶೈವವೆಂದೆಂಬ ಭದ್ರೇಭಪದದಂಕಿತದೊಳಡಗಿದವು ಮತ್ತೆ ಕೇಳೂ
ಆವನಂಗಜವಟ್ಟಿಕೊಂಡು ಕೂಡೆಯ್ತರಲು
ಸಾವುದುಚಿತಂ ಬಸದಿಯಂ ಪುಗಲ್ಬಾರದಿ
ನ್ನೇವೇಳ್ವೆನಾಲಯುವನೀಕ್ಷಿಸಲ್ಕಾ ಸಚೇಲಸ್ನಾನವೈ ದ್ವಿಜಂಗೇ ೬೦

ಅಧಮನೆನಿಸುವ ಬೌದ್ಧನೆಸೆವ ಮಾಯಾಮಯದ
ಹದಿನಾಟುಲಕ್ಷ ತದ್ಗ್ರಂಥಂಗಳಂ ಮಹಾ
ಭ್ಯುದಯ ಶಾಸ್ತ್ರಾಮ್ನಾಯರಹಿತವೆನಲುಸುರಿದಂ ಸ್ವರ್ಗ ನರಕಂಗಳೆಂದೂ
ತುದಿಯುಲನುಭವಲೋಕವಿಲ್ಲ ವಿಜ್ಞಾನಬಲ
ದೊದವಿನಿಂ ಸಾಕ್ಷಾತ್ಸುರೇಂದ್ರನಹರೆಂಬ ಬೆ
ಟ್ಟದ ಕಪಿಗಳೀಕ್ಷಣದಿನಂಗಶುದ್ಧಿಯ ಮಾಡಬೇಕೆಂಬುದೇ ನಿಶ್ಚಯಂ ೬೧

||ಸಾಕ್ಷಿ||ಯೇಜೈನಾದ್ಯಾಹಸ್ತಿಪಾದೇಪದಾನೀಸಲ್ಲೀಯಂತೇಲಸರ್ವತೋದ್ಭವಾನಿ
ಏವಂ ಧರ್ಮಾಸರ್ವಧರ್ಮೇತಿಸರ್ವೇ ಸಲ್ಲೀಯಂತೇ ನಾತ್ರಚಿತ್ರಂಮುನೀಂದ್ರಾಃ

ಹಸ್ತಿನಾ ಹನ್ಯಮಾನೋಪಿ ನವಿಶೇಪಶ್ಚ ಜಿನಾಲಯಂ
ವಿಪ್ರೋಜಿನಾಲಯಂ ದೃಷ್ಟ್ವಾ ಸಚೇಲ ಸ್ನಾನಮಾಚರೇತ್ ೪

ಮಾಯಿ ಮಾಯಾ ಮಯಂ ಶಾಸ್ತ್ರಂ ಗ್ರಂಥಂ ಷೋಡಶಲಕ್ಷಕಂ
ಶ್ರೌತ ಸ್ಮಾರ್ತವಿರುದ್ಧಂ ಚ ವರ್ಣಾಶ್ರಮ ವಿವರ್ಜಿತಂ ೫

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಹೈವ ಸ್ವರ್ಗನರಕಂ ಪ್ರತ್ಯಯಂ ನಾನ್ಯಥಾ ಪುನಃ
ವಿಜ್ಞಾನಸ್ಯ ಬಲೇನೈವ ಖಲು ಸಾಕ್ಷಾತ್ಪುರಂಧರಂ ೬

ಶಾಲಾವಕ್ರ್ತೀ ದೇಹಃಪ್ರಾಯ ಶ್ಚಿತ್ತಾನ್ಯೋ ಹಾಭಿಮಾನಿನಃ ೭

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಪಟ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಂಗೊರೆದ ಸುವಿ
ಶಾಲ ವೀರಶೈವಾಮೃತಪುರಾಣಮಂ ಕೊರ್ತುಪದನಂ ಮಾಡಿದಂ ೬೨

ಇದು ವೀರಶೈವಪಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಜೈನಭಂಗಕಥೆ ವೇಳ್ವಿಡೆಗೆ ಮೂಱುಕಾಂಡದಮೇಲೆ ಸಂಧಿ ಏಳೂ ೬೩

ಅಂತು ಸಂಧಿ ೭ ಕ್ಕಂ ಪದನು ೪೪೧ಕ್ಕಂ ಗ್ರಂಥ ೬೦ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೪

ಗೌತಮಮುನಿಯು ಜೈನರೇ ಶಿವಭಕ್ತರಾಗಿ ಶಿವಕೃಪೆಯಂ ಪಡೆದುದಂ ಪೇಳ್ದ ಕಥೆ

ಪ್ರೇಮಿ ದೇವರದಾಸ ಕೋವೂರ ಬ್ರಹ್ಮಯ್ಯ
ನೊಳು ರಾಮಯ್ಯನಾದಯ್ಯವಾಗೀಶ ನಮಿತಂಡಿ
ಸಾಮರ್ಥ್ಯಸಾಂಖ್ಯ ಶಿವಪಾದಿಗೆ ಗುಹೋದಯ ಶಿವಪ್ರಸನ್ನತೆಯನೊರೆವೆಂ

ವಾಮಭಾಗದ ಗಿರಿಜೆ ಶಿವನ ಮುಖಮಂ ನೋಡೆ
ರಾಮಣೀಯ್ಯಕದ ಮಿಂಚೆಂದಳ್ಕಿ ಕಿವಿಯಪಾ
ವಾ ಮೇಲಕಡರೆ ತಲೆ ಚಂದಿರಂ ಭಯದಲ್ಲಿ ಗಂಗೆಯೆಡೆಗೆಯ್ದೆ ಕಂಡೂ
ಸೋಮನಂ ಪೆಚ್ಚಿ ಮೊರೆಯಲ್ಕಾವಳೆನೆ ಶಿರೋ
ವ್ಯೋವರಾವಮದೆಂದು ದೇವಿಯಾಲಿಂಗನ
ಪ್ರೇಮತುಷ್ಟಿಯನೆಸಗಿದ್ದೈ ಶಾಂತಮಲ್ಲೇಶ ಜಯ ದಿವ್ಯ ಸುಪ್ರಕಾಶಾ ೧

ಧರೆಯ ಪಾವನವ ಮಾಡಲು ನೀನೆ ತಳೆವುತ್ತೆ
ಯುರಿನಯನಕುದಮಂ ಹೃದಯಕಗ್ನಿಯ ಭಯಮ
ಚರಣಕ್ಕೆ ವಾಯುಮಂ ನಿನ್ನ ಗೆಲ್ದಪೆನೆಂಬುದಕ್ಕೆಯಿಂತಾಕಾಶಮಂ
ಪರಿವಿಡಿಯೊಳೊಂದು ಭೂತವನಾಂತು ನಾಲ್ಕನಾ
ಹರದೂಷಕರ್ಗಿತ್ತ ದೇವ ಮೇಲಣ ಗವಿಯ
ಗುರುಶಾಂತನಂಜುಂಡಮೂರ್ತಿ ವಿಲಸತ್ಕೀರ್ತಿ ಚರಚಕ್ರವರ್ತಿ ಶರಣೂ ೨

ಇದು ಕಾರಣಂ ನಿಮ್ಮ ದೈವಮತ ತದ್ವ್ರತಂ
ಪುದಿದಿರ್ಪ ಯುಕ್ತಿ ಮೋಕ್ಷಂಗಳೆಂಬೆಲ್ಲವುಂ
ಸದೆ ಹುಲ್ಲಿಗಂ ಕೀಳುಬಿದ್ದವೈ ಶಿವನೇ ದೈವ ಶಿವಸುವ್ರತಾ
ಅದು ಮಹಾವ್ರತ ಶಿವಜ್ಞಾನವೇ ಜ್ಞಾನವ
ಗ್ರದೊಳು ಶಿವಶಾಸ್ತ್ರವೇ ಶಾಸ್ತ್ರವೆಂಬುದು ನಿಜಂ
ವಿದಿತವಿಂತಪ್ಪುದೇ ಶ್ರುತವಿನ್ನು ದೃಷ್ಟಮಂ ಕೇಳೆಂದು ಬಿತ್ತರಿಸಿದಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಱಿದಿರೇ ನಿಮ್ಮ ಭಂಗಂಗಳಂದಾ ಪೊಯ್ಲೆ
ಚೆಱುವೆಂಬ ಪುರದ ದಾಸೈಯ್ಯಂಗೆ ವಾದದಿಂ
ಮುಱಿದು ಘಟಸರ್ಪನಂ ನೀವು ತೆಗೆಯಿಸೆ ಮಡಕೆಯೇ ಪೀಠವಹಿಯೇ ಲಿಂಗಂ
ನೆಱೆವುತ್ತರೇಶನಾಗಲ್ಕೆಯೇಳ್ನೂಱು ನೀಂ
ಮೆಱೆಯನಾಲಯಗಳಂ ಕೀಳ್ವಲ್ಲಿ ನಿಮ್ಮಸುರ
ದಱತು ಸತ್ತಿರ್ದಿರೇ ಬಾಯ್ಬಡಿಕ ಜೈನ ಬೌದ್ಧಾಧಮರಿರಾ ಎಂದನೂ ೪

ನೆಟ್ಟನಾ ಕೋವೂರ ಬೊಮ್ಮಯ್ಯನೊಳು ಚಂದಿ
ಶೆಟ್ಟಿಯೆಂಬಧಮಜೈನಂ ವಾದಿಸಲ್ಮರನ
ಸುಟ್ಟರಾ ಜೈನರು ಕುಮಂತ್ರದಿಂದದನೆಂದಿನಂತೆ ಪಡೆದೇಳುನೂಱು
ಕಟ್ಟಧಿಕ ಬಸದಿಯೊಳು ಶಿವನ ನಿಲಿಸಿದುದಿಲ್ಲ
ಕೆಟ್ಟ ಹೊಲೆಯರ ಗುಡಿಲೊಳಧಿಕರಿರ ಎಂಬಂತೆ
ಕುಟ್ಟ ಮುಱವುತ ನಿಮ್ಮ ಜಿನನ ರೂಪೆಲ್ಲವಂ ಮೆಟ್ಟುಗಲ್ಗಳ ಮಾಡನೇ ೫

ನಾರದನ ಬಿನ್ನಪವನವಧರಿಸುತುಗ್ರನಾ
ವೀರೇಶನಂ ಕಳುಪೆ ನೆವದಿಂದಲಾದಿಯೊಳು
ಧಾರುಣಿಯೊಳಾ ಲಿಂಗವುದಿಸುವಂದದೊಳುದಿಸಿ ಬೆಳೆದು ಹುಲಿಗೆಱೆಯರಸನಾ
ಕಾರುಣ್ಯದಿಂದಬ್ಬಲೂರಿಗಂ ದೇಕಾಂತ
ದಾರಾಮತಂದೆ ನಡೆತಂದೂರ ಪೊಕ್ಕುಬರು
ತಾರುಹತರೇ ಮಯವದಾಗಿರಲು ನಾಲ್ದೆಸೆಯ ನೋಡುತಿರಲಾ ಶರಣನೂ ೬

ಮೃಡನಾಗ ಶಿವಭಕ್ತವೇಷದಿಂದಂ ಸುಳಿಯೆ
ನಡೆನೋಡಿ ಬೊಬ್ಬುಲಿಗಳೊಳು ಕಲ್ಪವೃಕ್ಷದಂ
ತೊಡೆಯನ ಮಹಾಲಾಂಛನಾಂಕಿತನ ಕಂಡೆನೆಂದೆಱಗಿ ಶರಣಾರ್ಥಿ ಎನಲೂ
ಕೊಡುತ ಭಸಿತವ ನೆಮ್ಮವಾಸ ಬ್ರಹ್ಮೇಶ್ವರನ
ಗುಡಿಯಲ್ಲಿಗಂ ಬನ್ನಿ ರಾಮತಂದೆಗಳೆ ಎನೆ
ನಡೆತಂದು ಪುಗಲು ಬಯಲಾಗಲಾ ಭಕ್ತ ನೀಕ್ಷಿಸಲು ಪಾಳಾಗಿರ್ದುದೂ ೭

ಮಱುಗಿ ರಾತ್ರಿಯ ಕಳೆದು ಶಿವನತ್ತ ಕಾಲಾಗಿ
ಮುಱಿದು ಹೂಟದ ಹೆಣನ ಮಾಳ್ಕೆಯಿಂದಿಪ್ಪನಂ
ಅಱೆಯಟ್ಟಿ ಹೊಲೆಸವಣ ಹುಳಿತ ಕಾಲ್ದೆಗೆಯೆನಲವಂ ಮೂದಲಿಸಿ ಶಿರವನೂ
ಪಱಿದು ಪಡೆಯೆನೆ ನಿನ್ನ ಸಮಯಮಂ ಬರಿಸೆಂದು
ಕುಱಿಯ ಪೋಲ್ವನ ತಗುಳಿ ದೇಗುಲವ ಪೂಜಾರಿ
ಯೆಱೆಯನಿಂ ಸಿಂಗರಿಸಿ ಪುರದರಸಮುಖ್ಯ ಜೈನರೊಳು ವಾದಕೆ ನಿಂದನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವೇಳೆ ಹುಲಿಗೆಱೆಯ ಹೊನ್ನಿತಂದೆಗಳು ಸ
ದ್ಭಾವಿಯೆನಿಪ್ಪೆಚಿ ತಂದೆಗಳು ಬಾಗಿಯ ಕಂಬ
ದೇವಯ್ಯ ಜಂಬೂರ ಮಹಾಕಾಳತಂದೆಯಂತಣ್ಣಿಗೆಱೆಯಮೃತನಾಥಾ
ದೇವರಪ್ಪಣ್ಣಂಗಳುಂ ಬಳಿಕ್ಕಗ್ಗಲೆಯ
ದೇವರಸ ಕಲಿನಾಥ ಭೀಮೈಯ್ಯನೊಳಗಾದ
ಭೂವಳಯದಖಿಳ ಮಾಹೇಶ್ವರರು ನೆರೆಯೆ ಭಾಷಾಪತ್ರಮಂ ಕೊಳುತ್ತಾ ೯

ಇಂದುಧರನಾಲಯದೊಳಖಿಳ ಮಾಹೇಶ್ವರರ
ಮುಂದೆಯಾ ವೀರಶೃಂಗಾರದಿಂದಳವಟ್ಟು
ನಿಂದು ಬುಬುಬೋಯೆನುತ್ತೆಡದ ಕರದಿಂ ಲಿಂಗಮಸ್ತಕದ ಶಿಖಿಯ ಪಿಡಿದೂ
ಕಂದರಕೆ ದಕ್ಷಿಣದ ಹಸ್ತದಲಗಂ ಜಡಿವು
ತೊಂದಿಸುತ ಬೊಬ್ಬಿರಿದು ಘುರಿ ಘುರಿಲನರಿದಟ್ಟಿ
ಯಿಂದ ತಲೆ ತೊಲಗಿ ಬೊಬ್ಬಿಡಲು ಜಯ ಜಯ ಉಘೇ ಯೆಂದರೆಲ್ಲಾ
ಶರಣರೂ ೧೦

ಹೊನ್ನಿತಂದೆಗಳಲ್ಲಿ ರಾಮತಂದೆಯ ಶಿರವ
ರನ್ನದ ಮಹಾಪಾತ್ರೆಯೊಳಗಿಟ್ಟು ಹೊತ್ತು ನಡೆ
ವನ್ನಗ ಮಹಾವೀರಭಟರು ಭಸ್ಮೋದ್ಧೂಳರೆಸೆವ ಜಡೆಯಧಟರ್ಕಳೂ
ಉನ್ನತದ ಭುಜನಿರೀಕ್ಷಣರಲಗ ಜಡಿದು ಭೋ
ಯೆನ್ನುತಾರ್ಭಡಿಸಿ ಬೊಬ್ಬಿರಿದೋಡನೆ ಬರುತಿರಲು
ಪನ್ನೆರಡುಸಾವಿರಂ ದೇಹಕ್ಕೆ ಕಾಪಿರಲು ನಡೆದರಿತ್ತಂ ಶರಣರೂ ೧೧

ಆ ವೀರಭಟರು ಬೊಬ್ಬಿರಿದು ಘುಡಿಘುಡಿಸುತ್ತ
ಭೂವಳಯದಖಿಳ ಶಿವಪುರಗಳೆಂ ತಿರುಗುತವು
ನೋವೇಗಗಿಂ ಬಂದು ಶಿರವ ಪಡೆವನಿತಕ್ಕೆ ಸಂಜೆಯಾಯ್ತನಲಧಮರೂ
ಆ ವೇಳೆಯಗ್ಗಲೆಯದೇವರಸರಿದು ಮೂಱು
ಜಾವವೆನುತಂ ಬೆರಲ ಮೇಲಕೆತ್ತಲು ನೆಗೆವು
ತಾ ವಿಭಾಕರನಿರಲು ಮೂಱುಜಾವದ ದೇವರಾದರಂತಾ ಶರಣನೂ ೧೨

ನಿಂದೇಳುದಿನವಾದುದಱೆದಾಗಳಾ ರಾಮ
ತಂದೆಯಹುದೇ ನೋಡಿ ಪಾತಕರಿರಾ ಎನುತ
ಲಂದು ತಾನೇ ಶಿರವನಟ್ಟೆಯೊಳಗಮರಿಸಲ್ಕೋರೆಯಾಗಿರಲು ಬಳಿಕಾ
ಹೆಂದಧಮರ ತಲೆಗಳಂ ತರಿದು ಕೊಡೆ ಶರ
ಣೆಂದರಂ ಕಾಯ್ದು ಬಸದಿಗಳ ಕಿತ್ತುದ ಕೇಳಿ
ಹಿಂದ ನೀವಱಿಯಿರೇ ಯೆಂದನಾ ಗೌತಮಂ ವಾದಿಗಳು ನಡನಡುಗಲೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಯ್ಯಗಂ ಮಾವನೆನಿಪ ಪಾರಿಸಶೆಟ್ಟಿ
ಮೊದಲಿಸಲುಪವಾಸ ದಿಂದಿರ್ದು ಪದ್ಮಾವ
ತೀದೇವಿಗಳುಪಿ ತಿಂಗಳು ಬಾಧೆಯಿಂ ನಡೆದು ಸೌರಾಷ್ಟ್ರಸೋಮೇಶನಾ
ವಾದಿಗಳ ಹುಲಿಗೆಱೆಯ ಬಸದಿಯೊಳಿರಿಸಿ
ಕಾದಿ ಕಣ್ಣಾಲು ಬಂದವರು ಸಹಿತಧಮರಂ
ಸಾಧಿಸಿದ ನಿಮ್ಮ ದೈವ ಗಳ ಭಂಗಂಗಳಂ ಕೇಳ್ದಱಿಯಿರೆಯೆಂದನೂ ೧೪

ರಾವಣನ ರಕ್ಷಿಸಲು ಶಿವಮಂತ್ರಮಂ ಜಪಿಸ
ಲಾ ವಿಶ್ವಪತಿ ಶಪಿಸಲುದಿಸಿ ಜೈನರ್ಗೆ ಗುರು
ದೇವನಾಗೆಂಭತ್ತುವರುಷವಿರ್ದಾಶೂಲೆಗಳ್ಕಿಯಗ್ರಜೆಗೆಱಗುತೇ
ಪಾವನದ ಗುರುದೀಕ್ಷೆಯಂ ಪಡೆದು ನಿಜ ಶಿಷ್ಯ
ರೇ ವಿಶೇಷದ ಬಾಧೆಯಂ ಮಾಡೆ ಜಯಿಸಿಯುವ
ರೇ ವಂದಿಸಲು ಜಿನರ ಮುಱಿದು ಬಸದಿಗಳನೊಡೆಯುನೆ ಮಹಾವಾಗೀಶನೂ ೧೫

ಜಾತ್ಯಂಧನಾಗಿ ಶಂಕರಗೆ ಬಾವಿಯನಗುಳೆ
ಮತ್ಯಧಿಕನಾಗಿ ಗುಳಿಯೊಳಗೊಂದು ಹೊಱಗೊಂದು
ವತ್ಯುಗ್ರಗುಂಠವುಂ ಬಲಿದು ರಜ್ಜಂ ಕಟ್ಟಿ ಮಣ್ಣ ಸೂಸಲು ಕಾಣುತಾ
ಅತ್ಯಧಮಜೈನರದ ಪಱಿಯೆ ಕಂಗಳನು ಪಾ
ರ್ವತ್ಯಧಿಪನಿಂ ಪಡೆದು ಪಾತಕರ ಕಂಗಳನ
ಸತ್ಯರಾಗಲ್ಕೆಡಿಸಿ ನಮಿ ತಂಡಿ ನಿಮ್ಮ ದೈವಂಗಳಂ ಮುಱಿದಿಟ್ಟನೂ ೧೬

ತೊಂಡಮಂಡಲದಲ್ಲಿ ಜೈನರ್ಗೆ ಮಗನಾಗಿ
ಖಂಡಪರಶುವನರ್ಚಿಸುವೆನೆಂದು ನೇಮಮಂ
ಕೊಂಡು ಲಿಂಗವ ಮೂಱು ಕಲ್ಲಿಂದ ಲಿಡುತರ್ಚಿಸುತ್ತ ತೋಱಿ ಬರಲುಣ್ಣದೇ
ಕೋಡಾಡುತಿರ್ದು ನೀರ್ದಗೆಯೆ ಪೇರ್ಗಲ್ಲೆತ್ತಿ
ಮಂಡೆಗಂ ಹಾಯ್ಕುವನಿತಕೆ ಸಾಂಖ್ಯಗೊಲಿಯಲಾ
ಚಂಡತೇಜಂ ಮೆಚ್ಚಲಲ್ಲಿ ನಿಮ್ಮಯ ಕುಲವ ನಿಶ್ಶೇಷಮಂ ಮಾಡನೇ ೧೭

ಎಲೆ ಜೈನ ಕೇಳಾ ತಿರುಜ್ಞಾನಸಂಬಂಧಿ
ಮಲೆತ ನಿಮ್ಮಯ ಗುರುಗಳೆನಿಸುತಿಹ ಸವಣರಂ
ಪಲಬರಂ ಶೂಲಂಗಳೊಳು ತೆಗಸಿದಾ ಕಥೆಯ ಪೂರ್ವವೆಂತೆನಲು ಪೇಳ್ವೆಂ
ಜಲಜಸಂಭವನಲ್ಲಿ ಷಣ್ಮುಖನನೋದೆಂದು
ಮಲಹರಂ ನಿರವಿಸೆ ಹಸಾದವೆಂದಾ ಬ್ರಹ್ಮ
ನೊಲಿದು ಪಠಣಾರದೊಳಗೆಯೋಂಕಾರಮಂ ಬರೆವನಿತಕೀಶಪುತ್ರಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈವಿಡಿವುಶಿದಱರ್ಥಮಂ ಪೇಳೆನಲ್ಕೆನಿನ
ಗೀ ವಿಚಾರವದೇಕೆ ಪೇಳಿದಂತೋದೆನ
ಲ್ಯಾವಱಿಯದವರೆ ಯೆನುತಾ ಕಶಾದಂಡದಿಂ ಬ್ರಹ್ಮನಂ ಹೊಡೆಯಲಾಗೀ
ಆ ವಿರೂಪಾಕ್ಷಸುತನೆಂದಳ್ಕಿ ಹನ್ನೆರಡು
ಸಾವಿರ ಶ್ಲೋಕಾರ್ಥದಿಂ ಪ್ರಣಮದರ್ಥಮುಮ
ನಾ ವಾಕ್ಪತಿ ಪ್ರಚುರವಾಗಿ ಬಿತ್ತರಿಸೆ ಕೇಳುತ್ತ ಹಾಸ್ಯಂಗೆಯಿದನೂ ೧೯

ಜಡಮತಿಯೆ ನೀನೆನ್ನನೋದಿಸಲ್ತಕ್ಕವನೆ
ಬಿಡುಬಿಡೆಂದಲ್ಲಿಂದಲೆದ್ದು ಪಿತನೆನಿಪ ಶಿವ
ನಡಿಯ ಮುಂಬಿಗೆ ಬರಲು ಪಿಂದೆ ಬಂದಾ ಬ್ರಹ್ಮನಾ ಸ್ಥಿತಿಯನರುಹಲಾಗೀ
ಒಡನೆ ಕಮಲಜ ಕೇಳು ಪನ್ನೆರಡುಲಕ್ಷದು
ಗ್ಗಡವೆನಿಸಿದಾ ಗ್ರಂಥವೈಪ್ರಣವವೆನಲಾಗಿ
ಮೃಡನೆ ನಾಂ ಬಲ್ಲುದಿದು ನಿರವಿಸೆನಲೀಶ್ವರಂ ಬಿತ್ತರಿಸಿದಂ ಕೃಪೆಯೊಳೂ ೨೦

ಪೇಳೆ ಹನ್ನೆರಡುಲಕ್ಷಗ್ರಂಥಮಂ ಶಿವಂ
ಕೇಳಿ ಚರಿತಾರ್ಥರಾದೆವು ತವಕುಮಾರನಿಂ
ಭಾಳಾಕ್ಷ ಯೆನಲು ಗಣನಿಕರ ವೀಶ್ವರನಂದನೆಲೆಲೆ ನೀವಾರು ಪೊಗಳೇ
ಏಳಿಗೆಯದಲ್ಲೆನ್ನ ಮಗನೊಪ್ಪಬೇಕೆನ
ಲ್ನಾಳೋಕಿಸಲ್ಕುಡಿದನಾ ಗುಹಂ ತದ್ಬ್ರಹ್ಮ
ನಾಳಾಪಮಂ ಜರೆಯಲೇಕಲ್ಪಮಂ ಮಾಡಿದಿರೆ ದೇವ ನೀವೆಂದನೂ ೨೧

ಮತ್ತೆನಿತು ನೀ ಬಲ್ಲುದುಸುರೆನಲು ತಂದೆ ಕೇ
ಳುತ್ತಮಪ್ರಣಮಕ್ಕೆ ಹನ್ನೆರಡು ಕೋಟಿ ಸುಮ
ಹತ್ತರಗ್ರಂಥವುಂಟೆನಲೆನ್ನ ಬಾಯಿಂದ ಹೊರಡದಿವಗಾವ ತೆಱದಿಂ
ತತ್ತತ್ಪ್ರಕಾರಮಂ ತಿಳಿದನೆಂದುಱಿಯೋಚಿ
ಸುತ್ತಸರ್ವಜ್ಞನಱಿದಂ ಹಿಂದೆ ಕೋಟಿಯುಗ
ದತ್ತಲಂಬಿಕೆಗೆ ಪೇಳಲ್ಕೆಂದು ಬಗೆದು ಸಾಗರದ ಮಧ್ಯಕ್ಕೆ ಬಂದೂ ೨೨

ಜಲಚರಪ್ರಾಣಿಗಳ ಹೊಱವಡಿಸುತಂ ಮಹಾ
ಜ್ವಲಿತ ವಡಬಾನಳನ ಮಧ್ಯದೊಳಗಿರ್ದು ನಿಜ
ಲಲನೆಗೀಶ್ವರನೊರೆವ ಕಾಲದೊಳು ದೇವಿಯುರ ಮುಡಿಯ ಪುಷ್ಪದೊಳಡಂಗೀ
ಸಲೆ ತುಂಬಿಯಾಗಿ ಕೇಳ್ದಂ ಕುವರನೆಂದಱದ
ಬಲೆಯೊಳಾನೇಕಾಂತವಿರ್ದಲ್ಲಿ ಚೌರ್ಯದಿಂ
ದೊಲಿದಿರಲ್ಬಹುದೆಯೆಂದೆಂಬ ಕೋಪದೊಳು ನುಡಿದಂ
ಕುಮಾರನೊಳೀಶನೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಖುಲ್ಲ ಕೇಳ್ಪನ್ನೆರಡುಕೋಟಿ ಸದ್ಗ್ರಂಥದಿಂ
ಸಲ್ಲಲಿತದಾ ಪ್ರಣಮದರ್ಥಮಂ ನೀಂ ಪೇಳ
ಬಲ್ಲೆಯಾಯೆಂದೊಡಹುದಹುದು ನಾಂ ಬಲ್ಲೆನೆನೆ ಪೇಳೆನಲು ಶಿವನಣುಗನೂ
ಅಲ್ಲಿ ನುಡಿದಂ ನಿರವಿಸಲ್ಕೆ ಗುರುವಾಗಲಾ
ಮೆಲ್ಲನಾಲಿಸುವನೇ ಶಿಷ್ಯನೈ ಶಂಕರಾ
ಉಲ್ಲಸಿತ ಗದ್ದುಗೆಯನಿಳಿ ನೀನು ಮೇಲಿರ್ದು ಬೋಧಿಪೇಂನಿನ್ನನೆಂದಂ ೨೪

ಆ ವಚನಮಂ ಕೇಳಿ ಕೋಪಿಸುತ ಹದಿನಾಱು
ಸಾವಿರ ಭುವಂಗಳೊಳು ಪುಟ್ಟೆಂದು ಶಪಿಸಲಿಂ
ನಾ ವೇಳೆ ಶಿವಗಾಪ್ತರಾದಾ ತ್ರಿಸಾಹಸ್ರಗಣನಿಕರವಿಂತೆಂದರೂ
ದೇವ ಕುವರನ ಮತಿಗೆ ಪರಿಣಮಿಸದಿಂತು ಜ
ನ್ಮಾವಳಿಯ ಶಾಪಮಂ ಕೊಡುವರೇ ಯೆನಲಾಗಿ
ಭಾವಜಹರಂ ಕೋಪಿಸುತ್ತೆಮ್ಮ ಗದ್ದುಗೆಯನಿಳಿ ಎಂದನೀ ದುಷ್ಟನೂ ೨೫

ಇವನಿಗೆ ಸಹಾಯುಮಂ ನುಡಿದ ನೀವೆಲ್ಲರುಂ
ಭುವನದೊಳಗಂತೆ ಪುಟ್ಟುವದೆನಲು ತಜ್ಜನ್ಮ
ನಿವಹವೆಮಗಾಗಲಿ ಕುಮಾರನೊಂದೇಬಾರಿ ಪುಟ್ಟಿ ಪದಿನಾಱುಸಾವಿರಾ
ಸವಿಲಾಸತಿರುಪಾಟನೋದಲೊಂದೊಂದಕ್ಕೆ
ಭವ ಭವಂ ಸರಿಯಾಗಲೊಪ್ಪುಗೊಳಬೇಕೆನಲು
ತವಿಸಿ ಕೋಪವ ಶಂಭು ನಸುನಗುತ ನುಡಿದನಾ ಗಣತತಿಗೆ ಸಂತೋಷದಿಂ ೨೬

ಎನ್ನವರಿಗಂ ಶಾಪವೇಕೆ ಧರೆಗಾಚಾರ್ಯ
ಸನ್ನದ್ಧರಿಲ್ಲವೇಣಾಂಧರರು ನೀವಾಗಿ
ಯೆನ್ನುತ ಗಣಂಗಳಂ ಕಳುಪಿ ಬೊಮ್ಮನ ಕರೆದು ನುಡಿದನಾ ಸರ್ವೇಶ್ವರಂ
ಮುನ್ನವೇ ನೀಂ ಪೋಗಬೇಕಾದ ಕಥನದಿಂ
ದಂ ನಾಡೆ ವಾಗೀಶನಾಗೆಂದು ಕಳುಪಿದಂ
ತನ್ನ ಕುವರನ ತಿರುಜ್ಞಾನಸಂಬಂಧಿನಾಮದೊಳುದಿಸು ಮಗನೆ ಎಂದು ೨೭

ಮಗನಂ ತುರುಂಬಿನೊಳಗಿಟ್ಟುಕೊಂಡಿರ್ದಳಾ
ನಗಜಾತೆ ತಚ್ಛೇಷ ಪಾಂಡ್ಯನಂಗನೆಗೆ ನೀ
ನೊಗೆ ಪುತ್ರಿಯಾಗಿ ನಾವೇ ಪರಿಗ್ರಹಿಸುವೆವು ನಿನ್ನನೆಂದೀಶನಾಡೇ
ಜಗಕನಿಬರುಂ ಬಂದರಾಯಾ ಪ್ರಕಾರದಿಂ
ಮಿಗೆ ಗುಹಂ ಚೀಯಾಳಿಯಲ್ಲಿ ಶಿವಪಾದಹೃದ
ಯಗೆ ಪುತ್ರನಾದನೇಂ ಕಾರಣವೆನಲ್ಕಾಗಿ ಬಿತ್ತರಿಪೆನಿನ್ನು ಕೇಳೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಪಾದ ಹೃದಯನೆಂಬಾ ಬ್ರಾಹ್ಮಣೋತ್ತಮಂ
ಭುವನದೊಳು ಜೈನಮತವೆಲ್ಲವಂ ಭಂಗಿಸುವ
ಕುವರನಾಗಲ್ಬೇಕೆನುತ್ತ ನಿಜ ಪುರಸಮೀಪದ ಭೂಧರಾಗ್ರದಲ್ಲೀ
ತವೆ ಪ್ರಿಯನಾಚಿಯೆಂಬಾ ಮಹಾಶಕ್ತಿಸಹಿ
ತವಿರಳಂ ದ್ರೋಣೇಶನೆಂಬ ಪೆಸರಿಂದಿಪ್ಪ
ಭವನಕ್ಕೆ ಬಂದನಾ ಸತಿ ಭಾಗ್ಯವತಿ ವೆರಸಿ ಭಜಿಸಿದಂ ಸರ್ವೇಶನಂ ೨೯

ಆ ನವ್ಯ ಶಿವಕೃಪೆಯೊಳಂ ಪಡೆದನಾ ತಿರು
ಜ್ಞಾನಸಂಬಂಧಿಯಂ ಮೂಱುವರುಷಾಂತರದ
ಸೂನುವಂ ಕೊಳನ ತಡಿಯೊಳಗಿರಿಸಿ ಯಘಮರ್ಷಣಸ್ನಾನಮಂ ಬ್ರಾಹ್ಮಣಂ
ಧಾನ್ಯದಿಂದೊಡರಿಚಲು ತತ್ಕಾಲದೊಳಗಂ ವಿ
ಮಾಸ್ಥ ಶಂಭುವಾಣತಿಯಿಂದ ನಡೆತಂದು
ಮೇನಕಾತ್ಮಜೆ ನಿಜಕುಮಾರಂಗೆ ದೀಕ್ಷೆಯುಂ ಮಾಡಿ ಮೊಲೆಯಂ ಕೊಟ್ಟಳೂ ೩೦

ಮಱುಗಿರ್ದ ಪಿತನೆದ್ದು ಕೇಳಲೀಶನ ತೋಱಿ
ಘಳಿಲನೀಕ್ಷಿಸುತಂದುಮಾಮಹೇಶ್ವರರಪದ
ನಳಿನಕ್ಕೆ ನಮಿಸಿ ಹರುಷಿಸಿ ಶಿವನ ತಳೆದ ನಂದಿಯ ತೇಱಿದೊಳಾ ನಿಷ್ಮನೂ
ನಿಳಯಕ್ಕೆ ಮಗನ ಪೊತ್ತೆಯಿತಂದು ಸತಿಗಱುಪಿ
ಬಳಿಕ ಬಂದಾ ತಿರುಕೊಳಕ್ಕಾವ ಪುರದ ನಿ
ರ್ಮಳ ಶಿವನ ಕೈತಾಳದಿಂ ಪಾಡೆ ಕೆಂಪಾಗೆ ಹಸ್ತವ ನಿರೀಕ್ಷಿಸುತ್ತಾ ೩೧

ಪ್ರಿಯದಿಂದ ಕೊಟ್ಟಳಾ ದೇವಿಯರು ಪಂಚಾಕ್ಷ
ರಿಯ ಲಿಖಿಸಿದಾ ಪೊನ್ನ ತಾಳಮಂ ಕೈಕೊಂಡು
ನಯನಾಶ್ರುವಗ್ಗಳಿಸೆ ಪಾಡುತಿರೆ ಶಿವನ ಪಿಳ್ಳೆಯನಾಯಿನಾರು ಬಳಿಕಾ
ಸ್ವಯ ತಿರುಜ್ಞಾನ ಸಂಬಂಧಿಯುಂ ತೊಡೆಯ ಪಿ
ಳ್ಳೆಯರೆಂಬ ಪೆಸರನೀಯಲ್ಕೆ ಗುಹನಾಗತ
ತ್ರಯನಾಮದಿಂದೊಪ್ಪುತ್ತಿರ್ದನಾ ತೇಜಸ್ಸಮಗ್ರನಾನಂದದಿಂದಾ ೩೨

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಪಟ್ಟಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್ಸ್ಥಲಮಾರ್ಗ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಗುಹಂಗೀಶಪ್ರಶನ್ನತೆಗೆ ಮೂಱುಕಾಂಡದ ಮೇಲೆ ಸಂಧಿಯೆಂಟೂ ೩೪

ಅಂತು ಸಂಧಿ ೮ಕ್ಕಂ, ಪದನು ೪೭೩ಕ್ಕಂ, ಗ್ರಂಥ ೬೧ಕ್ಕಂ
ಮಂಗಳ ಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೫

ತಿರುಜ್ಞಾನ ಸಂಬಂಧಿ ಎಂಬ ಒಡೆಯ ಪಿಳ್ಳೆಯರ ಕಥೆ

ಕೆಸಱನೊಣಗಿಸಿ ಸಿರಿಯ ಪಡೆದು ರುಜೆಯಾ ಕ್ಷಾಮ
ದೆಸಕವಿಲ್ಲೆನಿಸಿ ಯಸ್ಥಿಯ ಸಲಹಿ ವಾಗೀಶ
ಗೊಸೆದು ಶೂದ್ರನ ಪೊರೆದು ಕೂನಪಾಂಡ್ಯನ ರಕ್ಷಿಸಿದನೊಡೆಯಪಿಳ್ಳೆಯರೂ

ಸ್ಥಾಣು ನೀಂ ಮೂಲವಿಲ್ಲದನಪರ್ಣೆಯೆ ನಿನ್ನ
ರಾಣಿ ಪುತ್ರಂ ವಿಶಾಖಂ ಕೊರಡು ಬೇರಿಲ್ಲ
ಮೇಣೆಲೆಗಳಾ ಕೊಂಬುವಿಲ್ಲದನ್ಯರು ತಿರಿದು ತಂದಿತ್ತ ಕಮಲರ್ಗಳಿಂ
ಊಣೆಯಂ ಬೊಗದಂತೆ ಸಾರಫಲಮಂ ಕೊಡುವ
ಜಾಣ ಸುರತರುಶಾಂತಮಲ್ಲಿಕಾರ್ಜುನ ಮಮ
ತ್ರಾಣ ತಾಪತ್ರಯದ ಘರ್ಮಮಂ ಕೆಡಿಸಿ ಶಾಂತಿಯ ತಂಬೆಲರ ಪಸರಿಸೂ ೧

ಪರವಾದಿನೃಪರು ನಿನಗಳರಿಕೆಟ್ಟೋಡೆ ತ
ತ್ತರುಣಿಯರು ನಿಜಕುಚದ ಕಾಠಿಣ್ಯಮಂ ತಮ್ಮ
ಚರಣಕ್ಕೆ ನಡುವಿನಲ್ಪತೆಯನಾ ಪೊರವಾರ್ಗೆನಯನ ಜಳಧಾರೆಗಳನೂ
ಎರಡು ಕಟವಾಯೊಳಗೆ ತೆಳ್ವಸುರ ಬಗೆಯನುರು
ತರದ ಕಚಭಾರಕ್ಕೆ ಮಾಡದದಱಿಂ ಬಿದಿಯ
ಶಿರ ಹೋಯಿತೆಂದವನ ಬಯಿವರೆಲೆ ಶಾಂತನಂಜೇಶ ಜಯ ಸುಪ್ರಕಾಶಾ ೨

ತಿರುವಂಗಪಳ್ಳಿಗಂ ಪೆತ್ತಪ್ಪನೆಂದೆಂಬ
ಶರಣನೊಡಗೊಂಡು ಪೋಪಾಗ ಹಾದಿಯೊಳಿರ್ದ
ಹಿರಿಯ ಕೆಸರಾಕಂದವಾಗಿಳಿಯಲಖಿಳ ಶರಣರು ಪೋಗಬಾರದಿರಲೂ
ಹರನ ಪಾಡಲ್ಕೆ ಕಂಡರಿಗೆ ಭವಪಂಕವೀ
ಪರಿಯಿಂದ ಬಯಲಾಗುವಂತಿಳಿದು ಬಟ್ಟೆಯೇ
ಸರಿಸವಾಗಲು ನಡೆದು ಪುರವ ಪೊಕ್ಕಲ್ಲಿ ಪೂಜೆಯ ಕೊಂಡನೊಡೆಯ ಪಿಳ್ಳೆ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚೀಯಾಳಿಗಂ ಬಂದು ಸುಖದಿಂದಲಿರೆ ಪಿಳ್ಳೆ
ನಾಯಿನಾರಲ್ಲಿಗೇಳ್ತಂದನಾ ಮೋಹದಿಂ
ಶ್ರೀಯುಮಲ ತಿರುನೀಲಕಂಠಪಾಣರು ನಮಸ್ಕರಿಸಲಿರ್ವರು ಬಳಿಕ್ಕಾ
ಓಯೂರದಿಂದ ಪೊನ್ನಾಂಬಲಕೆ ಬರೆ ಮುನ್ನ
ಮಾಯಾರಿಯಾಜ್ಞೆಯಿಂ ನಡೆತಂದ ತಿಲ್ಲೆಮೂ
ವಾಯಿಯರು ರಂಗಮಂಟಪದೊಳಿರಲುಭಯ ಶರಣರು ವಂದನಂಗೆಯ್ಯಲೂ ೪

ಅವರು ಮನ್ನಿಸದಿರಲು ಸುಸ್ವಭಾವದೊಳು ತ
ಚ್ಛಿವಗೇಱಿ ಕಿರುನೀಲಕಂಠಪಾಣರು ಪುರಕೆ
ಸವಿಲಾಸದಿಂದ ಬಂದಿರಲ್ಕೀಶನಱಿದೆನ್ನ ಕುವರನಂ ಸರ್ವರಲ್ಲಾ
ಸ್ತವನವಂ ಮಾಡಿ ವಂದಿಸುವಂತೆ ಮಾಳ್ಪೆನೆಂ
ದು ವಿಶೇಷದಿಂ ಛತ್ರ ಚಾಮರ ವ್ಯಜನ ಮೊ
ಪ್ಪುವ ಕನಕದಂದಳಂ ಮೌಕ್ತಿಕದ ಪುಷ್ಪಕಂ ವಾದ್ಯ ಮುಖ್ಯಂಗಳಟ್ಟೇ ೫

ಪಿತನ ಪೆಗಲಿಂದಿಳಿದು ಪೊನ್ನಂಬಳವನಡರಿ
ಯತಿಶಯದ ಮೌಕ್ತಿಕಚ್ಛತ್ರಕಹಳಾರವಂ
ಸಿತ ಚಾಮರೋದ್ಧೂತ ವಂದಿ ಜನ ಸಂಸ್ತೋತ್ರದಿಂದ ನಿಜ ಪುರವ ಪೊಗಲೂ
ಶಿತಿಕಂಠನುಱು ನಿಜಕುಮಾರ ಪಟ್ಟಂಗಟ್ಟಿ
ಲತಿಶಯದ ದೇಶಾಂತರಂ ಮಾಡುತಿರ್ದನು
ನ್ನತಕೊಂಗುದೇಶದೊಳಗಲ್ಲಿ ತಿರುಚೆಂಗಾಡೆನಿಪ್ಪ ಪುರವರಕೆ ಬಂದೂ ೬

ಆಗಳಲ್ಲಿಯ ಲಿಂಗಸೇವಕರು ತತ್ಪುರದ
ರೋಗದಿಂ ನವೆವುತಿರಲೀ ವ್ಯಾಧಿಯೆಂದೆಂದಿ
ಗಾಗ ಬೇಡೀಯೂರ್ಗೆನುತ್ತ ನಿರವಿಸಿ ಮತ್ತೆ ತಿರುಕಾನಕಾವೆನಿಪ್ಪಾ
ನಾಗಭೂಷಣನ ಪುರವಂ ಪೊಕ್ಕು ಮೇರುವದು
ರಾಗಿಸುವ ಕೈಲಾಸ ಮಂದರಂ ಪಾತಾಳ
ವಾಗಲಲ್ಲಿಯೆ ಶಂಭು ತೋಱಿಸಲು ಕಂಡನಂದೊಡೆಯ ಪಿಳ್ಳೆಯರಳ್ತಿಯಿಂ ೭

ತೆರಳಿ ತಿರುವಾಡ ತೊರೆ ಎಂಬೂರ್ಗೆ ಬಂದಲ್ಲಿ
ಶರಣಸೇವೆಗೆ ವಿತ್ತವಿಲ್ಲವೆನಲಾ ಪಿತಂ
ಹರನ ಪಾಡುತ್ತಲಕ್ಷಯುದ ಮಿಸುನಿಯ ಘಟ್ಟಿಯುಂ ಪಡೆದು ಬಳಿಕ ಬಂದೂ
ತಿರುವಿಳಮಳಲೆಯೆಂಬ ಪಟ್ಟಣಕೆ ಬಂದಲ್ಲಿ
ಹಿರಿಯ ಬರನಾಗೆ ಭಕ್ತರ ಪೊರೆದು ಜೈನರೆ
ಲ್ಲರು ಶಂಭು ವೇಷವಂ ಪಡೆಯೆ ರಕ್ಷಿಸಿ ಮಳೆಯ ಕಱೆಸಿ ಮಹಿಮೆಯ
ಮೆಱೆದನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಜಧಾನಿಯು ಸಮುತ್ತುಂಗ ಚೋಳಂಗೆ ಶಿವ
ತೇಜ ದೀಕ್ಷೆಯನೀಯ್ಯಲೆರಡುಸಾವಿರ ಜಿನ
ವ್ಯಾಜಮಂ ಮಾಡೆ ಮುಱಿದವರನುಪದೇಶಿಸುತ ತಕ್ಕಲೂರಿಂಗೆ ಬಂದೂ
ನೈಜ ಶಿವನ್ಯೆಸರಾತ್ಮಜೆ ತನ್ನ ಪೆಸರಿನಂ
ಭೋಜಮುಖಿ ಬಾಲ್ಯದಿಂ ಮಡಿದಸ್ಥಿಯಾಗಿರಲ
ಹೋ ಜಗಂ ಪೊಗಳೆ ತನುವಂ ರಚಿಸಿ ಹರಣಮಂ ಕೊಟ್ಟನಂದೊಡೆಯಪಿಳ್ಳೈ ೯

ತೆರಳಿಯಲ್ಲಿಂದ ಪಾಂಚೀರಾಮವೆಂದೆಂಬ
ಪುರಕೆ ಬಂದಾ ನಾಡಚೋಳನಣುಗಿಯು ಪಿಡಿದ
ಹಿರಿಯ ವೊಲೆನಾಗರಂ ಬಿಡಿಸಿ ಜೈನರೊಳು ವಾದಿಸಿ ಗೆಲಿದವಂದಿರೆಲ್ಲಾ
ಚರಣಮಂ ಭಜಿಪ ನಿಜ ಶಿಷ್ಯರಾಗಲ್ಕತ್ತ
ಬರುತ ತಿರುವಾರೂರ ಬಟ್ಟೆಯೊಳು ಕಾವೇರಿ
ಎರಡು ಕಡೆ ತುಂಬಿ ಪಱಿಯಲ್ಕದಱ ಮೇಲೆ ಶಿಷ್ಯರು ಸಹಿತ ನಡೆದುಪೋದಂ ೧೦

ಮೃಡನಣುಗನಲ್ಲಿ ವಾಗೀಶನಂ ಕಂಡಾತ
ನೊಡನೆ ವೈಭವದಿಂದ ಬರುತ ಕೂರ್ತಾಗ ತಿರು
ಮಡಕಡಕ್ಕೆಂಬ ಪುರಕೆಯ್ತುಂದನಲ್ಲಿ ಮುನ್ನಾ ವೇದಪುರುಷರೆಲ್ಲಾ
ನಡೆತಂದು ಪೂಜಿಸುತ್ತಾರು ತೆಗೆಯದ ತೆಱದೆ
ಹಡಿಗೆತ್ತುವಿರ್ಪ ತದ್ಬ್ರಹ್ಮೇಶನಾಲಯದ
ಯೆಡೆಗೆ ಬಂದೊಡೆಯಪಿಳ್ಳೈಯರೊಡನೆ ತಿರುವಾಕರೀಶ್ವರಂ ಬಿನ್ನವಿಸಿದಂ ೧೧

ಈ ಕದವ ನೀವೆ ತೆಗೆಯಿಸಬಹುದೆಂದೊಡಾ
ಶ್ರೀಕರದ ಪೊಂದಾಳಮಂ ತೆಗೆದು ತಿರುಪಾಟ
ನೇಕಮಂ ಪಾಡಲ್ಕವಾಟವಂ ತೆಱೆಯಲಾ ಬ್ರಹ್ಮೇಶ್ವರನನರ್ಚಿಸೀ
ಆ ಕಾಲ ಒಡೆಯ ಪಿಳ್ಳೈಯರೆಂದರಲ್ಲಿ ತಿರು
ವಾಕರೀಶ್ವರಗಪ್ಪರೇ ನಿಮ್ಮ ಹರೆಯವೆನಿ
ತೇ ಕಾಲವಾಯ್ತು ನಿಮ್ಮಯ ಜನನವೆನಗಿಂದಿಗೆರಡುವತ್ಸರವಾಯಿತೂ ೧೨

ಕೇಳಿಯುಶ್ಚರಿವಟ್ಟು ಶತವೃದ್ಧರಿಂತೆಂದು
ಪೇಳುವರೆ ಯೆನಲೆಂದನಿಳೆಯಲ್ಲಿ ಪೇಶಾದ
ನಾಳೆಲ್ಲ ಪೆಱನಾದ ದಿನ ವೀಶನಂ ನೆನೆಯದಿಹದಿನಂ ಬಂಜೆದಿನವೂ
ಭಾಳಾಕ್ಷ ನಿಜರೂಪನೆಂದೆನಿಪ ಗುರುಕರಿಕ
ಡಾಳು ವರಹಸ್ತದಿಂದೊಗೆದೆರಡುವರುಷವೆಂ
ದಾಳಾಪಿಸಲ್ಕೆ ಸಂತಸವಟ್ಟುತಿರಿಗಿ ಬಾಗಿಲ ಹೊರಟರೀರ್ವರಾಗಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾವು ತೆಗೆಯಿಸಿದ ಬಾಗಿಲನಪ್ಪರೇ ಕೂರ್ತು
ನೀವು ಹೂಡಿಪುದೆನಲು ತಿರುವಾಕರೀಶ್ವರಂ
ಭಾವಶುದ್ಧದೊಳು ತಿರುಪಾಟಹತ್ತಂ ಪಾಡೆ ಮರಳಿ ಹಡಿಗೆತ್ತನೀಶಂ
ಆ ವೇಳೆ ಹೊಂದಾಳವಮಂ ಮಡಗಿ ವಂದಿಸುತ
ದೇವ ನೀವಭವನ ಕುಮಾರನಪ್ಪುದಱಿಂದ
ಲಾ ಒಂದು ಪಾಡಿನೊಳಗೊಲಿದು ಕದವಮಂ ತೆಱೆದನಾಗಲೀ ಬ್ರಹ್ಮೇಶ್ವರಂ ೧೪

ನೋಡಲಾನೆಂತಪ್ಪ ಜಡಮತಿಯೊ ಮಿಗೆ ಹತ್ತು
ಪಾಡುತನಕಂ ಸುಮ್ಮನಿರ್ದೀಶನೊಲಿದನೆಂ
ದಾಡಿದಯ್ಯಂಗೆ ಪಿಳ್ಳೆಯನಾರು ನುಡಿದಪ್ಪರೇ ಕೇಳಿ ವಾಗೀಶ್ವರಾ
ಪಾಡಲಾನತಿ ನಿಷ್ಠುರವದಾಗೆ ಕೇಳದೀ ಹೂಡಿರ್ದ
ಹಡಿಯು ತೆಱೆದಂ ನಿಮ್ಮ ಸೊಗಸಪ್ಪ
ಪಾಡ ಹತ್ತಂ ಮೋಹದಿಂ ಕೇಳಿ ಮೋಹರಿಸಿಕೊಂಡನೀ ಕದವನೀಶಂ ೧೫

ಎನುತಲೋರೋರ್ವರುಂ ಕೊಂಡಾಡುತಲ್ಲಿಂದ
ವಿನಯದಿಂ ಪೋಱಮಟ್ಟು ಪುರಪಟ್ಟಣಗ್ರಾಮ
ಜನನಿಕರವೆಯಿದೆ ಗುಡಿ ತೋರಣದೊಳಿದಿರ್ಗೊಂಬ ಭಕ್ತಿಯುಂ ಕೈಕೊಳುತ್ತಾ
ಮನವೊಲ್ದು ತಿರುವಾನಕಾಲೆಂಬ ಪೊಳಲೊಳಾ
ಜಿನಮುನಿಗಳೊಡನೆ ವಾದಿಸೆಯುವರು ಸೋಲ್ತು ಪದ
ವಿನತರಾಗಲ್ಕೆ ಚರ್ಮಾವುಗೆಯ ಸೇವೆಯುಂ ಕೊಟ್ಟವರ ರಕ್ಷಿಸಿದನೂ ೧೬

ಇತ್ತಲೊಂದೂರ ಗೌಡಂ ಪೆಣ್ಣ ಗೇಳನುಱೆ
ಪೆತ್ತಣುಗಿ ಪಿರಿಯಳೊಂಭತ್ತು ವರುಷದೊಳಿಪ್ಪ
ಮತ್ತೊರ್ವ ಶೂದ್ರನಮಗಂ ಬಂದು ಮನೆಯಳಿಯತನಕಗ್ರಸುತೆಯು ಕೂರ್ತು
ಚಿತ್ತಶುದ್ಧದೆ ಮೂಱುವರುಷಗಯಿವನಿತಕ್ಕೆ
ಮತ್ತೊರ್ವ ಚಾತುರ್ಥಗಾತ್ಮಜೆಯು ಕೇಳಲೊಲಿ
ದಿತ್ತನವಳಂ ಸಂಭ್ರಮದೆ ಮದುವೆಯುಂ ಮಾಡಿ ಮಗಳಮಾಗಳ್ಕಳುಪುತಾ ೧೭

ತನಗೀವ ಪೆಣ್ಣ ಪರರಿಗೆ ಕೊಟ್ಟನೆಂದವಂ
ಮುನಿದು ಕೊಟ್ಟಗೆಯ ಮೂಲೆಯೊಳಿರ್ದನಂ ಕರೆದು
ನಿನಗಿತ್ತಳಂ ಮದುವೆಯುಂ ಮಾಡಿಕೊಂಡನೆಂಬುದು ಬೇಡವಂತಾಕೆಯಾ
ಅನುಜೆಯಂ ಕೊಟ್ಟೆನೆಂದುಣಿಸಿ ನಂಬಿಸುತ ಮಱು
ದಿನವಟ್ಟಿ ಕೆಲಸಮಂ ಕೊಂಬನಂತವಳನೊ
ರ್ವನು ಕೇಳೆ ಕೊಡುವನಾ ಮೂಱುವರುಷಕ್ಕೆ ಮತ್ತೊಬ್ಬಳಂ ಕೊಡುವೆನೆಂದಂ
೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಾಬುಮಕ್ಕಳಂ ಕೊಡಲು ಪದಿನೆಂಟುವರು
ಷಾಂತರಂ ಗೆಯ್ದನೆಲ್ಲರ್ಗೆ ಕಿಱಿಯಳನೀವೆ
ಚಿಂತಿಸದಿರೆಂದಿರಿಸಿಕೊಂಡಿರ್ದುಕಡೆಯೊಳೊರ್ವಂ ಗೌಡನಾತ್ಮಜಂಗೇ
ಅಂತವಳ ಕೇಳೆ ಸಂದೇಹವಿಲ್ಲದೆ ಕೊಟ್ಟು
ಸಂತಸದೆ ಮದುವೆಯಂ ಮಾಳ್ಪ ಕಾಲದೊಳವಳು
ಚಿಂತಿಸಿದಳಲ್ಲಿ ತಮ್ಮಪ್ಪನಂ ಪೋಲ್ವ ಭಾಸರು ಜಗದೊಳಿಲ್ಲೆನುತ್ತಾ ೧೯

ಆಕೆಯಾತನೆ ಗಂಡನೆಂದು ನಿಶ್ಚೈಸುತ್ತ
ನೇಕ ಸಂಭ್ರಮವಾಗುತಿರ್ಪ ಕಾಲದೊಳು ತ
ತ್ಪಾಕಿನೆತ್ತಿನ ಕೊಟ್ಟಗೆಯ ಮೂಲೆಗೆಯ್ತಂದು ತೊಡೆಯ ತಟ್ಟುತ್ತೆಬ್ಬಿಸೀ
ಏಕೆ ನೀಂ ಬಂದೆ ಕೈಗೂಡು ಪೋಗೆನಲಾಗಿ
ಸಾಕವನನೊಲ್ಲೆ ನೀನೆ ಗಂಡನೆನೆ ಮಾವ
ನೇಕೆ ನಿನ್ನಂ ಕೊಡುವನಾತನಿತ್ತವನೆಡೆಗೆ ಪೋಗು ನಾನೇವೆನೆಂದಂ ೨೦

ನಾಡ ಮಾತೇಕೆಯವನೇಗೆಯ್ವನೀಗಲೆ
ದ್ದೋಡಿಹೋಗುವನೆನುತ್ತಿರ್ವರುಂ ಪೊಱಮಟ್ಟು
ನೀಡಿಲ್ಲದೆಯ್ತಂದರಿತ್ತ ಮದವನಿಗೆಯಂ ದಿಕ್ಕುದಿಕ್ಕಿನೊಳಱಸುತಾ
ನೋಡಿ ಕೊಟ್ಟಗೆಗೊಳವನಂ ಕಾಣದಿರ್ಪಲ್ಲಿ
ಯಾಡಿದರು ತನತನಗೆ ಲೇಸಾಯ್ತು ಭಾಸನೀ
ಗೌಡನವಳೇ ಪತಿವ್ರತೆಯವನ ಕೊಂಡೊಯ್ದಳೆಂದು ಸಂತೋಷಿಸಿದರೂ ೨೧

ಇರುಳಯಿದು ಗಾವುದಂ ನಡೆದು ಬೆಳಗಪ್ಪಲ್ಲಿ
ತರುಣಿಯೊಳು ನುಡಿದನಾತಂ ನಿದ್ರೆಯಲ್ಲಿ ತರ
ಹರಿಸಬಾರದು ನಡೆವೊಡೆನೆ ಕುಳಿತು ಸತಿತೊಡೆಯಮೇಲೆ ಪತಿ ಮಸ್ತಕವನೂ
ಇರಿಸಿಕೊಂಡಿಪ್ಪಲ್ಲಿ ಪುತ್ತದಲ್ಲಿಂ ಪೊಱಟು
ಹಿರಿಯುರಗನೊಕ್ಕಲಿಗನಂ ಕಡಿಯಲವನಲ್ಲಿ
ಮರಣವಾಗಲ್ಕೆ ಸೂರ್ಯೋದಯದ ಕಾಲದೊಳು ಕಂಡಳಾತಂ ಸತ್ತುದಾ ೨೨

ಅವಳು ಮೊಱೆಯಿಟ್ಟು ಘೋಳಿಡುವ ದುಃಖಕ್ಕೆನ್ನು
ಹವಣಿಸಲ್ಬಪ್ಪುದೇ ತಂದೆತಾಯ್ಗಳಿಗಲ್ಲಿ
ಯಿವನಿಂತು ಮಡಿದನೆಂದೊರಲುತಿಹ ಕಾಲದೊಳಗಾ ದಾರಿಯೊಳ್ಮೊಳಗುವಾ
ವಿವಿಧ ವಾದ್ಯಂಗಳೆತ್ತಿದ ಸತ್ತಿಗೆಗಳು ಚ
ಲ್ಲುವ ಚಾಮರಂಗಳಿಂ ಬಿರಿದೆತ್ತಿ ಕರೆವುತಿಹ
ನವ ಸುವರ್ಣದ ಕಹಳೆಗಳ ಸಂಭ್ರಮದೊಳು ಬರುತಿರ್ದನಾ ಶಿವಕುಮಾರಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂಕುಡಿಯೊಳೆಯ್ತರುತ್ತಿರ್ಪ ಶಿಷ್ಯರ್ಗಳೆ
ಲ್ಲಂ ಕಂಡು ನೀವಾರು ತಾಯೆ ಪೆಣನೇಕೀತ
ನೇಂ ಕಾರಣಂ ಸತ್ತನೆನಲಾದಿವೃತ್ತಾಂತವಮಂ ಪೇಳಲಾಕೆಯುವರೂ
ತಾಂ ಕೇಳಿ ಹರುಷಿಸುತ ನಿನ್ನ ಪಾತಿವ್ರತ್ಯ
ವಮಂ ಕುರಿತು ಚಿತ್ತೈಸಿದಂ ತಾಯೆ ಗುರುಮೂರ್ತಿ
ಶಂಕರಾತ್ಮಜಗೆ ವಂದಿಪುದೆನಲು ಬಂದಡ್ಡಬಿದ್ದು ಕೀರ್ತಿಸುತಿರ್ದಳೂ ೨೪

ಘನದೇವ ನೀನೆ ಗತಿ ಎಂದು ಮೊಱೆಯಿಡುತಿರಲು
ತನ ತನಗೆ ಶಿಷ್ಯರೆಲ್ಲರು ಪೂರ್ವಕಥನವೊಂ
ದಿನಿಸುಳಿಯದಂತೆ ಬಿನ್ನವಿಸಲಲ್ಲಿಯೆ ನಿಂದು ಶಿವಶರಣಹಸ್ತಾರ್ಪಿತಾ
ವೆನಿಪ ಭಸಿತವ ತಳಿಯಲೆದ್ದವಂ ಗುರುಪಾದ
ವನಜಕೆಱಗಲ್ಕಿರ್ವರಿಗೆ ದೀಕ್ಷೆಯಿತ್ತು ಘ
ಮ್ಮನೆ ನೆರೆದ ಸಕಲ ವೈಭವದೆ ಮದುವೆಯ ಮಾಡಿದಂ ಸೇಸೆಯಿಟ್ಟು ಹರಸೀ ೨೫

ಪರಿಗತಾಬ್ದಂಗಳಲ್ಲದೆ ಬಳಿಕ್ಕಂ ನೂಱು
ವರುಷದಾಯುಷ್ಯಮುಮನಿತ್ತು ದಂಪತಿಗಳ್ಗೆ
ಹರೆಯುಮಂ ಬಹಳ ಸಿರಿಯುಂ ಕೊಟ್ಟು ಮುಂದಕ್ಕೆ ನಡೆದನಾ ಶಿವಕುಮಾರಂ
ಹರುಷದಿಂ ಪೆಣ್ಣಾ ಕಟಾಕ್ಷ್ಯಪುರಕೆಯ್ತಂದು
ಚರಲಿಂಗಮಂ ತೊತ್ತಿನಣುಗನೆಂದಬಲೆಯುಂ
ಕರವನಾ ಕಲಿಕಂಭನರಿದಿರ್ದ ಕಾಲದೊಳು ಹಸ್ತಮಂ ಕೊಟ್ಟು ಪೊರೆದಂ ೨೬

ಮತ್ತೊಂದು ಪುರಕೆ ಬರ್ಪಲ್ಲಿ ಜೈನರು ನೆರೆದು
ಕೃತ್ತಿವಾಸನ ಆಲಯದ ಕದವನಂತಲ್ಲಿ
ಕೆತ್ತರಿಸೆ ನಿಮಿಷಕ್ಕೆ ತೆಗೆಸಿ ಬಸದಿಗಳ ಹಡಿಯುಂ ಹೂಡಿಸಲ್ಕೆಯುವರೂ
ಎತ್ತಿಬರೆ ಬಡಿದಟ್ಟಲೋಡಿ ದೆಸೆದೆಸೆಗಾಗ
ಹತ್ತಿರದ ಪಟ್ಟಣಂ ಮಧುರಾಪುರಕೆ ತಮ್ಮ
ತೆತ್ತಿಗರು ಹಿರಿಯ ಸವಣರ್ಗಳಿಗೆ ಮೊಱೆಯಿಟ್ಟರಾದ ಭಂಗವನೆಲ್ಲವಂ ೨೭

ಹದಿನೆಂಟು ಸಾಹಸ್ರ ಹಿರಿಯ ಮಲಧಾರಿಗಳು
ಬೆದಬೆದನೆ ಬೇವುತಿಪ್ಪಾ ಕಾಲದೊಳು ಕಹಳೆ
ಯೊದರೆ ಜೈನಾಬ್ಧಿವಾಡಬನೆಂದು ಬಿರಿದೆತ್ತಿ ಶಿವದೂಷಕವ್ರಾತದಾ
ವದನವಮಂ ಪೊಯ್ಯುವಂದದೆ ವಾದ್ಯವೆಣ್ದೆಸೆಯೊ
ಳದಿದೆನ್ನದಾರ್ಭಡಿಸೆ ಬಂದು ಮಧುರೆಯ ಪೊಳಲ
ಮದಗಜದ ಹಿಂಡ ಸಿಂಹಂ ಪೊಗುವ ಮಾಳ್ಕೆಯಿಂ ಹೊಕ್ಕನಾ ಶಿವಕುಮಾರಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರಣೀಶನುತ್ತ್ಮಂ ಗಚೋಳಸುತೆ ಮಂಗಯು
ಕ್ಕರಸಿ ಪಾಂಡ್ಯನ ರಾಣಿಯಾಗಿರ್ದುವಮಂ ಕೇಳ್ದು
ಗುರುವಿನ ಮಹತ್ವಮಂ ಪತಿಯೊಡನೆ ಪೇಳಿ ಮಾತ್ರೀಶ್ವರ ಕುಲಚ್ಚರಿಯಗೇ
ನಿರವಿಸಲವಂ ಬಂದು ನಮಿಸಿ ಪಿಳ್ಳೆಯು ನಾರ
ಚರಣಕ್ಕೆ ಶಿವಗೇಹದಲ್ಲಿ ಬೀಡಾರಮಂ
ವಿರಚಿಸಿ ಸಮಸ್ತ ವಸ್ತುವನಿತ್ತು ಸತ್ಕರಿಸಲಾ ಸಮಯದಲಿ ಬಳಿಕ್ಕಾ ೨೯

ಎಲೆಲೆ ಶೈವಾಚಾರ್ಯನೆಮ್ಮೂರ ಪೊಕ್ಕನೆಂ
ದುಲಿದು ಸವಣರು ಕೂಡೆ ನೆರೆಯಿತ್ತು ತನತನಗೆ
ನೆಲ ಹುಳಿತ ಮಾಳ್ಕೆಯಿಂ ಪಾಂಡ್ಯಭೂಪಾಲನಲ್ಲಿಗೆ ಬಂದು ಶಿವಬಾಲನಂ
ನಿಲಲೀಸಬೇಡ ಹೊಱವಡಿಪುದೆಲೆ ರಾಜನೀ
ನೊಲಿದೆಮ್ಮ ಶಿಷ್ಯನಾದುದಕಿದೇ ನಮ್ಮಿಷ್ಟ
ಫಲವೆನಲು ನುಡಿದನಾ ರಾಜ ಬುಧಜನಕಲ್ಪಭೂಜ ಸದ್ಗುಣಸಮಾಜಾ ೩೦

ಖಂಡೇಂದುಧರಸಮಯಿಯಾತನನಯದೊಳು ಮಂ
ಕೊಂಡು ಹೊರಡಿಸಬಾರದದು ಮಲ್ಲಚೋಳಭೂ
ಮಂಡಲಾಧಿಪನ ಗುರುವಂತೆಯತಿರೇಕಮಾ ಮಾಡಲಾತನ ಶಿಷ್ಯನೂ
ದಂಡೆತ್ತಿಬಂದೊಡೆಮ್ಮಳವೆ ನೀವಾರ್ಯನೊಳು
ತಂಡ ಜಲ್ಪಾದಿ ವಾದಂಗಳಿಂ ಪೋರ್ವುದೆನೆ
ಹಿಂಡು ಸವಣಱು ವಾದಿಸುತ ಸೋಲ್ತರಾ ತಿರುಜ್ಞಾನಸಂಬಂಧಿಯೊಡನೇ ೩೧

ಸೋಲ್ತವಂದಿರು ರಾತ್ರಿಯೊಳು ಶಿವಾಲಯದೊಳಗಿ
ರಲ್ತರುಣ ಗುರು ಭಕ್ತರೊಡವೆರಸಿ ಕುನ್ನಿಗಳ
ಪೋಲ್ತ ಸವಣರು ಕಿಚ್ಚನಿಕ್ಕಲಳ್ಕುತಲಗ್ನಿ ಬಂದು ಕೈಮುಗಿದು ಶಿವನಾ
ಪೋಲ್ತಾನೆಯಾದಯ್ಯಗೆಱಗಿ ಬಿನ್ನವಿಸಲು ಕ
ನಲ್ತು ಸುಡಬಂದೆಯಾ ನಿನ್ನ ಮೂಗರಿವೆನಂ
ತಲ್ತೆಂದು ಕಾಯ್ದವೆನೆ ಕೊಡು ಬೆಸನಜೀಯ ಪಾತಕರ ಕೊಲ್ವುದಕೆಂದನೂ ೩೨

ಅವನಿಪನ ದೇಹದೊಳ್ ಜ್ವರವಾಗಿ ಪೋಗೆನಲು
ಪವನಸಖನಾಗಲಿ ಹಸಾದವೆನುತಂ ಬರು
ತ್ತವರ ಗೇಹಂಗಳಂ ದಗ್ಧಮಂ ಮಾಡುತ್ತ ರಾಜನಂ ಪತ್ತಲಾಗೀ
ಭುವನದೊಳಗಂ ಬೀಳುತೇಳುತ್ತಿರಲ್ಬಂದು
ಸವಣರರುಹಂ ತಾಣ ಎಂದು ಮಂತ್ರಿಸಲಾಗಿ
ತವೆ ಪರಿಯದಿರಲು ಬಿಜಯಂಗೆಯ್ಸಿ ತಂದಳಾ ರಾಣಿ ಗುರುವಲ್ಲಭನನೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಡದ ಭಾಗವನಿತ್ತು ಜೈನರ್ಗೆ ಬಲವನಾ
ಮೃಡಸುತಂ ತನ್ನದೆಂದಾಗ ಮಂತ್ರಿಸಿದೊಡಿ
ಮ್ಮಡಿಯಾದುದವರ ಕಡೆ ದಕ್ಷಿಣಂ ಶ್ವೈತ್ಯವಾಗಲ್ಲಾಳದಾ ಭೂಮಿಪಂ
ಅಡಿಗೆಱಗಿ ಕೀರ್ತಿಸಲು ಭಸ್ಮಮಂ ತಳಿದು ಪೊಜ
ಮಡಿಸಲಧಮರು ಮರಳಿ ನೃಪನ ಕೂನಂ ನೀನು
ಬಿಡಿಸಲಾವೇ ಸೋಲ್ತೆವೆನಲದಂ ಮಾಣಿಸಿದನಾರ್ಯ್ಯನಘತಿಮಿರ ಸೂರ್ಯ್ಯ ೩೪

ಬಳಿಕಲಿನ್ನೊಂದುಂಟು ಶಿವಲಿಖಿತ ಮಂತ್ರಮಂ
ವಿಳಸಿತದ ಜಿನಲಿಖಿತಮಂ ದಹನದೊಳ್ಪಾಯಿಕ
ಲುಳಿದೊಡವರದೇ ಗೆಲವು ಬೆಂದೊಡೆಮ್ಮದು ಸೋಲವೆಂದಧಮರಾಡಲಾಗೀ
ಘಳಿಲನಗ್ನಿಯೊಳೆರಡು ಪತ್ರಮಂ ಮಡಗಲಾ
ಗಳೆ ಬೆಂದುದಾ ಸವಣರೋಲೆಯುನಲನೊಳಾಗ
ನಳನಳಿಸಂತಿರ್ದೊಡೀಶ್ವರಲೇಖನಂ ಭಾಪೆನಲ್ಕಖಿಳ ಜನರು ಕೂರ್ತು ೩೫

ಮುನ್ನವಾದದೆ ಸೋಲ್ತಿರಗ್ನಿಯಿಕ್ಕುತ ನೀವು
ಬನ್ನವಡೆದಿರಿ ನೃಪನ ರಾಗಮಂ ಮಾಣಿಸುವೆ
ವೆನ್ನುತಂ ಪರಿಭವಕ್ಕೊಳಗಾದಿರಾ ಕೂನ ಬಿಡಿಸೆಂದಿರದ ತೋಱಗಿಸೇ
ಅನ್ನಯದೆ ಪತ್ರಮಂ ಸುಟ್ಟು ಕಂಗೆಟ್ಟಿರೈ
ಕುನ್ನಿಗಳಿರಾ ಮೇಲೆ ಕಾರ್ಯ್ಯವೇನೆನಲಾಗಿ
ಇನ್ನೊಂದು ವಾದವುಂಟೆಂದು ಗಳಹಿದರಾಗ ಜೈನರಪಹೃತಮಾನರೂ ೩೬

ಮದನ ಹರಪತ್ರಮಂ ಜಿನಲಿಖಿತಮಂ ಕರೆಯು
ನುದಕವುಬ್ಬುತೆ ಪರಿವ ಕಾವೇರಿಯೊಳು ಪಾಯ್ಕು
ಲಿದಿರೇಱಿ ನಿಮ್ಮ ಪತ್ರಂ ತಮ್ಮ ಲಿಖಿತವೀ ನೀರಲ್ಲಿ ಪೋದಬಳಿಕಾ
ಹದಿನೆಂಟುಸಾಹಸ್ರ ಸುಪ್ರಭಾತಪ್ತ ಶೂ
ಲದೊಳೊಂದು ಘಳಿಗೆ ಯೊಳಗೇಱಬೇಳ್ವೆವಾವೆಂದು
ವಿದಿತ ಭಾಷಾಪತ್ರಮಂ ಕೊಟ್ಟರಧಮಯುಕ್ತಿಯು ಬೌದ್ಧರೇವಣ್ಣಪೇಂ ೩೭

ಹಾಂಗೆಯಾ ಪತ್ರಯುಗಮಂ ಸರ್ವರೀಕ್ಷಿಸಲು
ಮಾಂಗಲ್ಯಕಾವೇರಿಯೊಳು ಬಿಡಲು ಜೈನಲಿಖಿ
ತಂ ಗಾಡಿಯೊಳು ಪೋಯ್ತು ನೀರ ಬೆಂಬಳಿಯಿಂದ ಪರಿಕಿಸಲು ಶಿವನಾಮವೇ
ಗಂಗೆಗಿದಿರೇಱಿ ಮೂಗಾವುದಂ ನೋಡುತ ಜ
ನಂಗಳಚ್ಚರಿವಡಲು ತಿರುವೈದಿಕಾಪುರದ
ಲಿಂಗಪೀಠದೊಳಿರ್ದುದಾ ಮಹಾಲೇಖನಂ ಮಹಿಮೆಯಂ ಪೊಗಳಲಳವೇ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದ ಕಂಡು ತನ್ನ ಕೂನಳಿದ ಸೌಂದರ ಪಾಂಡ್ಯ
ನುದಿತ ಹರುಷದೊಳೊಡೆಯು ಪಿಳ್ಳೆಯರ ಮಾಂಗಲ್ಯ
ಪದಪದ್ಮಕೆಱಗಿ ಸತಿ ಮಂಗಯಕ್ಕರಸಿಯರುಸಹವಾಗಿ ಗುರುದೀಕ್ಷೆಯಂ
ಮದನ ಹರಭಕ್ತರೆಲ್ಲ ಪೊಗಳೆ ಪಡೆದು ಪ
ತ್ರದ ಮಹಿಮೆಯಂ ನೋಡಿ ಜೈನರಂ ಶೂಲಗಳ
ತುದಿಯಲ್ಲಿ ತೆಗೆಸಲುಜ್ಜುಗಿಸಿದಂ ದೇಶಿಕಾಣತಿಯಿಂದಲಾ ಭೂಪನೂ ೩೯

ಆ ವೇಳೆಯಲ್ಲಿ ಶಿವಪುತ್ರನೋಳ್ ಕ್ಷಪಣಕರು
ತಾವು ನುಡಿದರು ನೆನದುಕೊಂಡಿಹ ಕುಯುಕ್ತಿಯಂ
ಶೈವ ದೇಶಿಕ ಕೇಳು ರಾಜ ನಿಮ್ಮಯ ಶಿಷ್ಯನಾದನನ್ಯಾಯದಿಂದಾ
ನೀವು ಕೊಂದರೆ ಕೊಲ್ಲಿರೇ ನ್ಯಾಯದಿಂದಲಾ
ಪಾವ ತೆಱದಿಂ ಸಾಯಲಿಲ್ಲವೆಂತೆನಲಾಗಿ
ಭೂವರನ ಕೈಯ್ಯೊಳಿರ್ದೆಮ್ಮ ಭಾಷಾಪತ್ರಮಂ ನೋಡಿ ಕೊಲಿಯೆಂದರೂ ೪೦

ಅದನೋಡಲಾವೆಲ್ಲರುಂ ಕಾದ ಮೊನೆಗಬ್ಬು
ನದ ಕೂಲದೊಳಗೊಂದು ಘಳಿಗೆಯೊಳಗಳಿವೆಂ
ಬುದೆ ಜೈನವಾಕ್ಯವಿನ್ನೊಂದು ಘಳಿಗೆಯು ಮೇಲೆ ಸಾಯಲಿಲ್ಲೊಂದು ಘಳಿಗೇ
ಇದಱೊಳಗೆ ಮರವಾದಿಯಾದವರೊಳಳಿಯಲಿ
ಲ್ಲದುವೆ ಸತ್ಯಂ ನಮ್ಮ ಲಿಖಿತಾರ್ಥವೆಂದೆನಲು
ಹೃದಯದೊಳಗಾ ತಿರುಜ್ಞಾನಸಂಬಂಧಿದೇವರು ಯೋಚಿಸುತ್ತಿರ್ದರೂ ೪೧

ಹದಿನೆಂಟುಸಾಹಸ್ರ ತಪ್ತಲೋಹದ ಶೂಲ
ವೊದಗಲಱಿಯುವು ಘಳಿಗೆಯೊಳಗಕಟ ಪಾತಕರು
ಬದುಕುವರಲಾ ಎನಿಪ್ಪನಿತಕೆ ಕುಲಚ್ಚರೆಯುರೆಯ್ದೆ ಹನ್ನೆರಡು ವರುಷಾ
ಮೊದಲೊಳೇ ಕಬ್ಬುನದ ಶೂಲಮಂ ದಿನಕೊಂದ
ನುದಿತ ಹರುಷದೊಳು ಮಾಡಿಸುತ ನೆಲಮಾಳಿಗೆಯ
ಸದನದೊಳಗಿರಿಸಿಕೊಂಡಿರ್ದವಂ ತತ್ಕಾಲದಲ್ಲಿ ತೆಗೆಯಿಸಿ ತರುತ್ತಾ ೪೨

ವಾದದೆಡೆಗೆಯ್ದದನಿತಕ್ಕೆ ತಿದಿಗಳನಿಡಿಸಿ
ಮೋದದಿಂ ಕಾಸಿಸಲ್ಕಳಿಗೆಯೊಳು ಕೆಂಗಲಿಸಿ
ಕಾದಿರ್ದ ಹದಿನೆಂಟುಸಾವಿರ ಮಹಾಲೋಹಶೂಲಂಗಳಂ ನಡೆಸುತಾ
ಮಾದೇವನಣುಗನೆಡೆಗೆಯ್ದಿ ಕೈಮುಗಿದು ಮಱೆ
ಯಾದ ತೆಱೆಯಂತೆಗೆದು ತಪ್ತ ಶೂಲಗಳೆಲ್ಲ
ಕಾದವೆಲೆ ಜೀಯ್ಯ ಭಿನ್ನಪವೆಂದು ತೋಱೆ ಸಂತೋಷಿಸಿದನಾಚಾರ್ಯನೂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಡಿಹಿಡಿದು ತರಿಸಿ ಸವಣರ ಘಳಿಗೆಯೊಳಗಾಗಿ
ಪೊಡವೀಶನಾಳಿಂದ ಶೂಲಕ್ಕೆ ತೆಗೆಸುತಿರೆ
ಜಡೆಗೆದಱಿ ನಾರದಂ ಗಗನದೊಳು ಱಿಂಗಣಂಗುಣಿವುತಿರೆ ಶಿವಭಕ್ತರಾ
ಅಡಿಗೆಱಗಿದಧಮರ ಶಿವನಾಮವಂ ಸ್ಮರಿಸಿದರ
ಮೃಡಭಕ್ತರಪ್ಪೆವೆಂಬರ ಭಸಿತವಿಟ್ಟವರ
ಬಿಡುತುಳಿದ ಜೈನರಂ ಯಮನ ಪಟ್ಟಣಕಟ್ಟಿದಂ ಶಿವಕುಮಾರನಲ್ಲೀ ೪೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯು ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲ ಷಟ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತುಪದನಂ ಮಾಡಿದಂ ೪೫

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಜೈನ ಶೂಲದೆಡೆಗಾ ಮೂಱು ಕಾಂಡದಿಂ ಮೇಲೆಯೊಂಬತ್ತು
ಸಂಧೀ ೪೬

ಅಂತು ಸಂಧಿ ೯ ಕ್ಕಂ ಪದನು ೫೨೧ ಕ್ಕಂ ಗ್ರಂಥ ೬೦ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೬

ಪಿಳ್ಳೈಯನಾರು ಶಿವಲೋಕಕ್ಕೈದಿದ ಕಥೆ

ಆ ಕುಲಚ್ಚರೆಯಾರ ಕಥನದಿಂದಂ ಮುಂದ
ನೇಕ ಮಹಿಮೆಯ ಮೆಱೆದು ವೈವಾಹದಲ್ಲಿ ಸು
ಶ್ಲೋಕ ಪಿಳ್ಳೈಯನಾರು ಶಿವನ ಕೈಲಾಸಕೆಯ್ದಿದನೆಲ್ಲರೊಡಗೂಡುತಾ

ಪರಮೇಶನಿಂ ಕಪಟನಿದ್ರೆಯಿಂದಿರಲೆದ್ದು
ಗಿರಿಜೆ ಮೆಲ್ಲನೆ ಬಂದು ಚುಂಬಿಸುತ್ತಲ್ಲಿಯುಂ
ಕುರಿಪ ಪುಳಕಂಗಳಂ ಕಂಡು ನಾಣ್ಚುತ್ತ ತಲೆವಾಗಿದಳ ನಸುನೋಡುತಾ
ಪರಿವಿಡಿಯೊಳೊಯ್ಯನೊಯ್ಯನೆ ನೆನೆದೊಳಂಟುತ್ತ
ಬರಸೆಳೆದು ತಕ್ಕೈಸುತಂ ಸುಖಂಬಡೆದ ಶಂ
ಕರ ಶಾಂತ ಮಲ್ಲಿಕಾರ್ಜುನಲಿಂಗ ಜಯ ಕೃಪಾಪಾಂಗ ವಿಮಲಾಂತರಂಗಾ ೧

ಜ್ಞಾನಶಕ್ತಿಯೊಳಿಟ್ಟ ಚಿತ್ತದಿಂ ಭಕ್ತಸಂ
ತಾನದರ್ಚನೆಯ ಕೈಕೊಂಬ ಪೆಂಪಿಂ ಚಿನ್ಮ
ಯಾನುಕೂಲೆಯೊಳೆ ಸಂಮೇಳದಿಂ ದಿಕ್ಕುದಿಕ್ಕಿಂಗೆ ನಡೆತಂದಂಘ್ರಿಗೇ
ಆನತರುಮಾದ ನೃಪವರ್ಗದಿಂ ರಾಜಿಸುವ
ಮಾನನಿಧಿಯಪ್ಪ ಮೇಲಣ ಗವಿಯ ದಿವ್ಯ ಸು
ಸ್ಥಾನ ಚರಲಿಂಗ ಸುಖರೂಪ ಜಯ ಶಾಂತನಂಜೇಶ ಸದ್ಗುಣಕಲಾಪಾ ೨

ಆ ವೇಳೆಯಾ ಕುಲಚ್ಚರೆಯರಂ ನೋಡುತ್ತ
ಭಾವಶುದ್ಧದೆ ಮೆಚ್ಚಿದಂ ಶಿವಕುಮಾರ ನಿ
ನ್ನಾವುದೈ ನಿನ್ನಿಷ್ಟವೆನೆ ಜೀಯ್ಯ ಚಿತ್ತೈಸಿದೊಂದು ಕಾರ್ಯವನೆ ಕುಱಿತೂ
ಭೂವರನ ಮಂತ್ರಿಯಾಗಿರ್ದೆ ಗುರುವೇ ಎನ್ನ
ಸೇವೆ ಸಂದಿತ್ತೆನಗೆ ನಿರ್ವಾಣದೀಕ್ಷೆಯಂ
ನೀವು ಪಾಲಿಪುದೆಂದು ಕೈಕೊಂಡನಾ ತ್ರಿಕಾಲೋಚಿತಜ್ಞಾನಿಯಾಗಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತರುಣಿಯರ ನಂದನರ ಬಂಧುಗಳ ಚತುರಂಗ
ಪರಿವಾರವಾಭರಣ ವಸ್ತ್ರಂಗಳಂ ಬಿಟ್ಟು
ಗುರುಕೃಪೆಯೊಳಿರ್ದನತ್ಯಧಿಕ ತಪದಿಂ ಕೀರ್ತಿಯೊಳು ರಾಜಿಪ ಸೌರುಭಾ
ಪುರದೊಳೊಂದೇಕಾಂತದಲ್ಲಿ ಪದ್ಮಾಸನದೊ
ಳುರುತರ ಷಡಾಧಾರಚಕ್ರಂಗಳಂ ಬಲಿದು
ಶಿರನ ಚಿತ್ಕಲೆಯು ಬೆಳಗಿನೊಳಿರ್ದನಾ ಕುಲಚ್ಚರಿಯನೀಶ್ವರನ ಮಱಿಯಾ ೪

ಆನಂದಜಲವಕ್ಷಿಗಳೊಳುಗಲು ಮುಖದಲ್ಲಿ
ತಾನಿಳಿದ ಧಾರೆಯಿಂ ಡೋರುಗಳೆಯಲು ಮೊಗಂ
ನಾನಾ ಪ್ರಕಾರದಿಂ ಕಾರ ಮುಂಬನಿಯೆಂದು ಚಾತಕಂ ಬೀಳ್ವಶ್ರುವುಂ
ಆನಂದದಿಂ ಸೇವಿಸಲ್ಕಿರ್ದನೆಂದೊಡಾ
ಧ್ಯಾನವುಂ ಪೊಗಳಲಳವೇ ಕುಲಚ್ಚರೆಯರೀ
ಶಾನವಿಗ್ರಹವೆಂದು ಕೀರ್ತಿಸಿ ನಮಸ್ಕರಿಸುತಿರ್ದರಖಿಳರು ಭಕ್ತಿಯಿಂ ೫

ಆಯುತದೊಳಾ ಚೇರ ಚೋಳ ಪಾಂಡ್ಯರು ಮುಖ್ಯ
ರಾಯರಾಯರು ಬಂದು ಕಾಯಿದಿರುತ್ತ ನಮಃ ಶಿ
ವಾಯ ಎಂಬಾ ಮಂತ್ರರಾಜನಂ ಪಠಿಸಲ್ಕೆ ಲವಲವಿಸಿ ಘೋಷದಿಂದಾ
ಬಾಯ ತೆಱೆದಾಗ ಷಡ್ರಸದನ್ನಮುಂ ತಂದು
ಜೀಯ್ಯ ಕೈಕೊಂಬುದೆಂದರ್ಚಿಸುವರಂತಲ್ಲಿ
ಯೀಯವನಿಯಖಿಲರಾನಂದದಿಂ ಕೀರ್ತಿಸುತ್ತಿರ್ದರೇ ವರ್ಣಿಸುವೆನೂ ೬

ಆ ಪುರದೊಳುಂ ಶಿವಪ್ರಿಯನಾಚಿ ಎಂದೆನಿ
ಪ್ಪಾ ಪೆಣ್ಣು ತಾನೊರ್ವವೇಶಿಯಾತ್ಮಜೆಯಾಗಿ
ಕಾಪಾಲಿಯಂ ಪುಟ್ಟಿದೇಳು ವರುಷಂ ತೊಡಗಿ ಬೇಡಿದಳೀಶನಂ
ನೀ ಪುರುಷನಾಗಬೇಕೆಂದು ಪಂಚಮುವರುಷ
ವೇ ಪೊತ್ತು ಭಜಿಸಲಾ ಪ್ರಥಮರುತು ಸಂಭವಿಸ
ಲೋಪಬಂಧುಗಳು ತತ್ಸಂಭ್ರಮಂಗಳ ಮಾಡೆ ಮಿಂದು ಶುಚಿಯಾಗಿ ಬಳಿಕಾ ೭

ಕಱೆಗೊರಲನಾಲಯಕೆ ಬಂದು ವಂದಿಸಿ ನಿಂದು
ನಿಱಿಗುರುಳ ನೀರೆ ನೀನೆ ಗಂಡನಾಗೆನು
ತ್ತಱಿಕೆಯಿಂ ಭಜಿಸಿದೇಂ ಹನ್ನೆರಡು ವರುಷದವಳಾದೆ ಸುಕುಮಾರಿಯೆನ್ನಾ
ನಱುಜವ್ವನಂ ವ್ಯರ್ಥವಾಗಿ ಪೋಗುತ್ತಿಪ್ಪು
ದೆಱೆಯು ನೀನೇ ಬಲ್ಲೆಯೆಂಬ ನುಡಿಯುಮರ್ದಾ ಸೈ
ಗಱೆದಂತುಟಾದುದಾ ಶಿವನ ಕರ್ಣದ್ವಯದೊಳಾನಂದ ವುಕ್ಕುತಿರಲೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಯದಿಂದಲೆಯ್ತರುತ್ತಿರ್ದಳಂತಾ ಶಿವ
ಪ್ರಿಯನಾಚಿಯಾ ಕುಲಚ್ಚೆರೆಯರಿಹ ಪಥದಲ್ಲಿ
ನಿಯತ ಶಿವಯೋಗಿಯಂತಾಗಳೆ ಕಣ್ದೆಱೆದು ಕಂಡನಂತಾ ನಾರಿಯಾ
ನಯನಂಗಳಾಗ ಬಿಟ್ವಂತನುವಿಷತ್ವದಿಂ
ಸ್ವಯವಾಗಿರಲ್ಕೆಯಾವೇಳೆಯೊಳು ಭೂಭುಜ
ಪ್ರಿಯಭಕ್ತರೆಯಿತಂದು ಸಾಷ್ಟಾಂಗದಿಂ ನಮಿಸಿದರು ವಿರಕ್ತಾಧೀಶಗೇ ೯

ಸ್ವಾಮಿಯೆಂದಿನ ತೆಱದೊಳಲ್ಲ ನಯನಂಗಳಂ
ಶ್ರೀ ಮಹಾದೇವ ತೆಱೆದುದು ಕೃಪೆಯೊಳೆವ್ಮೊಡನ
ದೇ ಮಾತನಾದೊಡಂ ನಿರವಿಸಿರೆಯೆಂದು ಪಾರ್ದಿರ್ಪಕಾಲದೊಳು ಮುನಿಪಂ
ಹೈ ಮಕ್ಕಳಿರ ಸೂಳೆಯಣುಗಿಗೆಳಸಿದೆವು ನೀ
ವಾ ಮಾನಿನಿಯ ಬಳಿಗೆ ಕಳುಪಬೇಕೆವ್ಮ್ಮ ನೆನೆ
ಮಾ ಮಱುಳರೆ ಬದುಕಿದೆವಲಾ ವಿಗೆ ಮಹಾಪ್ರಸಾದಂ ಜೀಯ್ಯ
ಯೆನುತಿರ್ದರೂ ೧೦

ಪರಶಿವಂ ನಿಷ್ಕಲತ್ವದೊಳಿರ್ಪ ಕಾಲದೊಳು
ಚರಣಮಂ ಭಜಿಸಲಹುದೇ ಸದಾಶಿವನಾಗಿ
ಗಿರಿಜಾಸಮೇತನಾದಲ್ಲಿ ಗೋಚರಿಪನದುಕಾರಣ ಕುಲಚ್ಚರೆಯರೂ
ಗುರುಮೂರ್ತಿಯೆಮ್ಮಮ್ಮನಂ ಬಯಸಿದುದು ನಮ್ಮ
ಪಿರಿದು ಸೌಭಾಗ್ಯವೆಂದೆಯ್ತಂದು ಸತಿಯ ಮಂ
ದಿರಕೆ ದೊರೆಗಳು ಭಕ್ತರೆಯ್ದೆ ವಂದಿಸಿ ಬಿನ್ನಪಂಗೆಯ್ದರೇಳ್ಗೆಯಿಂದೇ ೧೧

ತಾಯೆ ನೀವೆಮ್ಮಾಣ್ಮರಹ ಕುಲಚ್ಚರೆಯ ಗುರು
ರಾಯಂಗೆ ರಾಣಿಯರು ನಮ್ಮಮ್ಮನಾಗಿರ್ದು
ಕಾಯಬೇಕೆಮ್ಮನೆನೆ ಶಿವನೆ ಪತಿಯಾಗಬೇಕೆಂದು ಭಜಿಯಿಸುವೆನೆನಲೂ
ಈಯುವನಿಯೊಳಗೆ ಶಿವನೆಂದಾ ಕುಲಚ್ಚೆರೆಯ
ಮಾಯಾರಿಯೆಂದಾರು ತತ್ಕುಲಚ್ಚರೆಯರಿಗ
ಹೋಯುವತಿಯಾಗೆ ನಿಮ್ಮಯ ತಪದ ಸಿದ್ಧಿಯೆಂದರು ಭಕ್ತರಾನಂದಿಸೀ ೧೨

ಸುಜನಕೇಳಾ ಭಕ್ತರಾಡಿರ್ದ ವಾಕ್ಯವೇ
ನಿಜವದಂತೆನಲಾಗಿ ಕೈಲಾಸದೊಳಗೆ ಮು
ನ್ನಜಗುಹ ಪ್ರಣವಮಾದವನೆಸಗಲೀಶ್ವರಂ ಬೋಧೆಯಂ ಕೇಳಲಾಗೀ
ನಿಜ ಗದ್ದುಗೆಯನಿಳಿಯದೀಶಾಂಶನಪ್ಪನ
ಗ್ರಜನಹ ಕುಲಚ್ಚೆರೆಯರೊಡೆಯ ಪಿಳ್ಳೆಯಂ ಸೌ
ಖ್ಯವಾಕ್ಯಸಂತುಷ್ಟವಹ ಕಾರಣದೊಳಭಿನ್ನತೆಯನುಸುರಿದರು ತಥ್ಯಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಡದವದಿರಾ ಶಿವಪ್ರಿಯನಾಚಿಯರ ನೊಡಂ
ಬಡಿಸಿ ಗುರುವಂ ವಪನ ಸುಸ್ನಾನವಸ್ತ್ರಂಗ
ಳೆಡೆವಿಡದ ಕುಸುಮಾನುಲೇಪನಾಭರಣ ತಾಂಬೂಲ ಮುಖ್ಯಂಗಳಿಂದಾ
ಒಡನೆ ಪೊನ್ನಂದಳದೊಳಿರಿಸಿ ನಾಲ್ದೆಸೆಯಲ್ಲಿ
ಹೊಡೆವ ವಾದ್ಯಂಗನಾತತಿ ಕಳಶಕನ್ನಡಿಯ
ಗುಡಿಯ ತೋರಣದ ಸಂಭ್ರಮಂಗಳಿಂದೆಯಿದೆ ಬಿಜಯಂಗೆಯಿಸಿದರು
ನಿಳಯಕೇ ೧೪

ಗಾಡಿಕಾತಿಗೆ ನಮಿಸಿ ಗುರುವನೊಪ್ಪಿಸಿಕೊಡು
ತ್ತಾಡಂಬರದೆ ತಿರುಗೆ ಜಳಕ ದೇವಾರ್ಚನೆಯ
ಮಾಡಿ ಮಂಚಕ್ಕೆ ಚಿತ್ತೈಸುತ ಕುಲಚ್ಚೆರೆಯರಾ ರಾತ್ರಿಯೊಳಗೆ ತಮ್ಮಾ
ನೋಡಿ ಮುಂದಿಹ ಶಿವಪ್ರಿಯ ನಾಚಿಯರ ಕೂರ್ತು
ನೋಡಿ ತಮ್ಮಯ ಕರಸ್ಥಲದೊಳಿಹ ಲಿಂಗಮಂ
ನೋಡಿ ತಮ್ಮೊಳು ತಾವು ಬೆಱಗಾಗಿ ನುಡಿದರಾ
ಗುರುಮೂರ್ತಿಯಚ್ಚರಿಯೊಳೂ ೧೫

ಪೂರ್ವದೊಳು ಯವ್ವನಪ್ರಾಯದೊಳಗಾ ರಂಭೆ
ಯೂರ್ವಸಿಯರಂ ಜಱಿವ ನಲ್ವೆಂಡಿರಂ ಕೂಡೆ
ಸರ್ವ ಸಂಪತ್ತನಾ ಪುಲ್ಗೆ ಸಮವೆಂದು ಬಿಟ್ಟವರಾವಿದೇಂ ಕಾರಣಂ
ಓರ್ವಳಿವಳಿಗೆ ವೃದ್ಧರಾದ ಕಾಲದೊಳೊಲಿದ
ಲರ್ವ ಬಗೆಯೇಕೆಂದು ಯೋಚಿಸಿಕೊಳುತ್ತಲಾ
ಗುರ್ವಗ್ರಗಣ್ಯಂ ಕುಲಚ್ಚರಿಯದೇವರಿದ್ದಿದ್ದು ಘಮ್ಮನೆ ತಿಳಿದರೂ ೧೬

ವದನಕಮಲಂ ವಿಕಾಸವನೆಯಿದಲಾಹಹಾ
ಇದು ನಮ್ಮ ಶಿವಲಿಂಗದೇವರಾಟವೆನುತ್ತ
ಮುದದಿಂದ ನುಡಿದನಾ ಕರದ ಲಿಂಗದ ಕೂಡೆಯೆಲೆಲೆ ಶಿವನೆ ನಿನ್ನನೂ
ಪದಪಿನಿಂದೀಯಮ್ಮನರ್ಚಿಸಲು ನೀ ಒಲಿದ
ಹದಕೆ ನೀವೇ ಗಂಡನಾಗಿ ಬಂದೀ ಕಾಯ
ಹೃದಯಮಂ ದಣಿಯಿಸುವ ಕೂಟಮಂ ಕೂಡಬೇಕಲ್ಲದೆ ವೃಥಾ ಬರುತ್ತಾ ೧೭

ಸಾದರದೆ ಶರಣಕರಣವೆ ನಿಮ್ಮ ಕರಣವೆಂ
ದಾದರಿಸಿ ಮತ್ಕರಣದಲ್ಲಿ ಬಂದಾ ಬಡ
ಪ್ರಾದೇಶಿಯಮ್ಮನೇತಕ್ಕೆ ಕಾಡುವೆಯಮ್ಮನಾಯ್ತು ನೀನಾಯ್ತೆನುತ್ತಾ
ಆ ದಿವ್ಯ ಕರದ ಲಿಂಗವನು ಮಂಚದೊಳಿರಿಸಿ
ಹೋದನಾತಂ ಕೋಟಿ ಕಂದರ್ಪರೂಪಿಂದ
ಮಾದೇವನಬಲೆಯೊಳು ಬೆಳಗನ್ನೆಗಂ ನಲಿದು ನೆರೆದಂ ಯಥೇಷ್ಟಮಾಗೀ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರುಳ ಕಳೆದಾ ಮಹಾ ಬ್ರಾಹ್ಮೀ ಮುಹೂರ್ತದೊಳು
ಬರುತಂ ಕುಲಚ್ಚೈರಿಯರವಳ ಬಾಗಿಲೊಳಿರ್ದು
ಕರೆದನೆಲೆ ಲಿಂಗದೇವರೆ ಶಿವಾರ್ಚನೆಯು ಕಾಲಂ ಬನ್ನಿ ನೀವೆನಲ್ಕೇ
ತರುಣಿ ಕೇಳೆಮ್ಮ ಭಕ್ತಂ ಕರೆವನೆಂದೇಳ್ವ
ಪರಮನ ಸೆರಂಗುವಿಡಿದಾಡಿದಳು ನೀನೆನ್ನ
ಪುರುಷನಲ್ಲಿಗೆ ಹೋಗಲೀಸುವೆನೆ ಎಂದು ಬಲ್ಪಿಂದ ಕುಳ್ಳಿರಿಸಿಕೊಳಲು ೧೯

ಕರೆವುತಿರಲೇಕೆ ಚಿತ್ತೈಸಿರಮ್ಮನ ಬಿಟ್ಟು
ಬರಲಾರಿರೋ ಲಿಂಗಪೀಠಶಿವಶಕ್ತಿಯುರು
ತರ ಪಗ್ರಹವನರ್ಚಿಪಂಗಮ್ಮನೊಳು ನೆರೆವ ಕಾಲದೊಳು ಬಾರೆನೆಂದೂ
ಇರದಿರಿ ಎನುತ್ತ ಶರಣಾರ್ಥಿಯೆನುತೊಳಪೊಕ್ಕು
ಹರನೆ ಬಾಯೆಂದೊಡೇಳ್ವನಿತಕ್ಕೆಯಾಕೆಯುಂ
ಬರದಂಚಲಂಬಿಡಿದು ಕುಳ್ಳಿರಿಸಿಕೊಂಡುಯತಿವನಿತೆಯರು ಹೋರಿದರಲಾ ೨೦

ಈಯಮ್ಮನೀಚೆ ತೂನಲ್ಕೀಚೆ ಬೀಳ್ವನಿ
ನ್ನಾಯತಿಪನತ್ತಲೆಳೆಯಲ್ಕಲ್ಲಿ ಹೊಡಗೆಡೆದು
ಮಾಯಾರಿಯಳ್ತಿಗಂ ಸಂಸಾರವಮಂ ಮಾಡಿಕೊಂಡೊಡೀ ವಿಧಿಯಾದುದೂ
ಪ್ರಾಯುಸವನುಳಿದು ಲಿಂಗಾಕಾರವಾಗುತಿ
ರ್ಪಾಯವಸರದೊಳಬಲೆ ನುಡಿದಳೀರೂಪಳಿಯು
ಲಾಯುಸಂಖ್ಯಾತಗಣರಾಣಿಯೆಂದಿಟ್ಟಳಾ ರಾಣಿ ನೈರ್ಮಲ್ಯವಾಣೀ ೨೧

ನಾರಿ ಲಿಂಗಾಕಾರವಾದ ಶಿವನೊಳ್ತನ್ನ
ಕಾರಣಕ್ಕನುವಲ್ಲವೆಂದಾಣೆಯಿಟ್ಟು ನೀ
ನಾರಗಂಡನ ಲೂಟಿಯಿಂದೊಡೆಯರೇ ಕಿತ್ತುಕೊಂಡು ಹೋದಪ್ಪೆಯೆನಲೂ
ಈ ರಾತ್ರಿಯೊಳು ಪುರುಷನಂ ಮಾಡಿಕೊಂಡು ನೀಂ
ಹೋರಿ ಕೊಡದಿರೆ ಗುರುಪ್ರದಲಿಂಗಮಂ ಬಿಡೆನ
ಲಾ ರಸೆಯೊಳೆಂಬನಿತಕಲ್ಲಿ ಭಕ್ತರ್ಕೆಲರು ಬಂದು ನೆರೆದಿಂತೆಂದರೂ ೨೨

ಈ ವಳಕ ತಿದ್ದಲೆಮ್ಮಳವಲ್ಲವಾ ತಿಲ್ಲ
ಮೂವಾಯಿಲರ ಬಳಿಗೆ ಹೋಗಬೇಕೆನಲಾಗಿ
ದೇವ ನೆಡದಂಬರದ ತುದಿಯು ಪಿಡಿದಳು ರಾಣಿ ದಕ್ಷಣಾಂಶುಕದಗ್ರಮಂ
ಶ್ರೀ ವಿಮಲ ಯತಿ ಪರಿಗ್ರಹಿಸಿದಂ ಬಂದೆಲ್ಲ
ರಾ ವಿಭುಗಳಪ್ಪ ಪೊನ್ನಾಂಬಲಿಕ್ಕೆಯಿಂತಂದು
ತಾವೆಲ್ಲರಡ್ಡಬಿದ್ದರು ಭಕ್ತರಬಲೆ ಮುನಿ ಸಹವಾಗಿ ಭಕ್ತಿಯಿಂದಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಗಣಂಗಳು ಕೂಡಿ ಬೆಸಗೊಂಡರಾಗ ಲಿಂ
ಗಿವರಾರು ಪುಣ್ಯವೇಹಣ್ಣಾದ ತೆಱದೊಳೊ
ಪ್ಪುವ ಪಿರಿಯರೆಂದೆನೆ ಕುಲಚ್ಚರೆಯರೆನೆ ನಿಸ್ಪೃಹಾಗ್ರಗಣ್ಯರ ಕಂಡೆವೂ
ನಿವಗೆ ಶರಣಾರ್ಥಿ ಕೂರ್ತಿತ್ತ್ರ ಚಿತ್ತೈಸಿ ಭ
ಕ್ತಿ ವಿಲಾಸಿನಿಯದಾರೆನಲ್ ಶಿವಪ್ರಿಯನಾಚಿ
ಸುವಿವೇಕಿಯೆನೆ ಕೇಳ್ದು ಬಲ್ಲೆವತಿದಾಸೋಹಿ ಎನುತ ಮತ್ತಿಂತೆಂದರೂ ೨೪

ಅತಿಶಯದ ವಿಟವೇಷಸೌಂದರ್ಯದಿಂ ನಖ
ಕ್ಷತ ಮಹಾದಂತಕ್ಷತಾಳಿಯಿಂದುಭಯಸ
ನ್ಮತರೂಪರಾರೆಂದು ಕೇಳೆ ಸಾಕ್ಷಾತ ಪೊನ್ನಾಂಬಲೇಶ್ವರನೆ ತಾನೇ
ಶಿತಿಕಂಠನೀ ಕುಲಚ್ಚರೆಯರ್ಗೆ ಲಿಂಗವೀ
ಸತಿಗೊಲಿದು ಕೂಡಿದೊಡೆಯುಭಯ ವಾದಕೆ ನೀವೆ
ಗತಿಯೆಂದಹೋ ನ್ಯಾಯ ಮಂ ಕೇಳಬಂದರೆಂದಾಡಿದರು ತದ್ಭಕ್ತರೂ ೨೫

ಅಹಹ ಶಿವನೀ ಸೂಳೆಯೊಳ್ಳೆರೆವುದೆಂತೆನಗೆ
ಸಹಜವೆಂತಮಗೆ ಪೋಟಧ್ಯಾಯವೇಯೆನಲು
ಬಹವು ಅದಕೇನಿರ್ಕೆ ನ್ಯಾಯಮಂ ಪೇಳಿ ನೀವೆಂದು ಕೈನೆಗಪಿ ಪೇಳೇ
ಗಹಗಹಿಸಿ ನುಡಿದರಮ್ಮಾ ಕಾರ್ಯವೇಂ ನಿಮಗೆ
ನಿಹಿತಮಂ ಪೇಳಿಯೆನಲೀತನ ಸೆಱಂಗುಮಂ
ಮಹಿಯಲ್ಲಿ ಬಿಡುವಾಗ ಹರಣಮಂ ಮುನ್ನ ಬಿಟ್ಟಲ್ಲದೆ ಬಿಡೆನೆಂದಳೊ ೨೬

ಹಿರಿಯರೇ ನಿಮ್ಮ ಬಗೆಯೇನೇನು ನೋಡಿಕೊ
ಳ್ಳಿರುಳು ಗಂಡನ ಮಾಡಿಕೊಂಡವಳಿಗಿಂತು ಗಡ
ಗುರುವಿತ್ತ ಲಿಂಗಮಂ ಬಿಡುವಲ್ಲಿ ಜೀವವಳಿಯಲ್ಬಹುದು ಬಾರದೆಂಬಾ
ಇರವ ನೀವೆ ನೋಡಿಕೊಳ್ಳಿ ಯೆನಲಿರ್ವರ್ಗೆ
ಹರಣದೆಡೆಯಣ ವಾಕ್ಯವೆಂದು ಯೋಚಿಸಲು ಮೂ
ವರನತ್ತ ತೊಲಗಿಸುತಲಾಳೋಡನಂಗೈದು ನಿಶ್ಚೈಸಿದರು ಶರಣರೂ ೨೭

ಒಡನೆ ಕರೆಯಿಸಿ ವನಿತೆಯಂ ಕೇಳಿದರು ನಾವು
ನುಡಿದ ವಾಕ್ಯವ ಮೀಱಬೇಡವೆನೆ ಗಂಡನಂ
ಬಿಡು ಎಂಬ ಮಾತುನುಳಿದೇನ ನಿರಪಿಸೆ ಕೇಳ್ವೆನೈಯ್ಯ ನಾನೆಂದಳಾಕೇ
ಒಡೆಯರೇ ನಿಮಗೆಂತುಟೆನಲೆನ್ನ ಲಿಂಗಮಂ
ಬಿಡಿ ಎಂಬ ಮಾತೊಂದ ಕೇಳೆ ನಾಂ ಹರಣಮಂ
ಬಿಡವೇಳ್ಕೊಡಂ ಕೇಳ್ವೆನೆನಲಿರ್ವರುಂ ನಿಷ್ಠರೆಂದು ಬಳಿಕಿಂತೆಂದರೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏನಯ್ಯ ತಾಟು ಹೋಟಿನ ದೇವ ನಿನ್ನ ಮಾ
ತೇನೆನಲು ಹೀಗಾದೊಡಿವಳ ಭೋಗಿಸುತಿಹಂ
ಹಾನಿಯಾಗದ ಹಾಗೆಯಯ್ಯಂಗೆ ದೇವರಾಗರ್ಚಿಸಿಕೊಳುವೆನೆಂದೆನೇ
ಆ ನಿಖಿಲರುಂ ನಕ್ಕು ನುಡಿದರಮ್ಮಾ ನೀವ
ದೇನು ಕಾರಣವಾಗಿ ಕಾಲಮಂ ಕಳೆವಿರೆನೆ
ಸಾನುರಾಗದೆ ನುಡಿದಳುದಯಿಂ ತೊಡಗಿ ಸೂರ್ಯಾಸ್ತಮಯ
ಪರಿಯಂತರಂ ೨೯

ಶರಣದಾಸೋಹಮಂ ಮಾಡಿ ರಾತ್ರಿಯೊಳೆನ್ನ
ಪುರುಷನ ರತಿಕ್ರೀಡೆಯೊಳಗಿಪ್ಪೆನೆನಲಾಗಿ
ಮರಳಿಯೊಡೆಯರೆ ನಿಮ್ಮ ಬಗೆಯ ಪೇಳೆನಲು ಸುರ್ಯೋದಯಂ ತೊಡಗಿ
ಶಿವನಾ
ಇರುಳು ಪರಿಯಂತರಂ ಪೂಜಿಸುತ್ತಂ ಸಜ್ಜೆ
ಯರಮನೆಯೊಳಿರಿಸಿ ಜಪಸರವಿಡಿದು ಮಂತ್ರಮಂ
ಸ್ಮರಿಸಿ ಬೆಳಗಾಗೆ ಮತ್ತರ್ಚಿಪುದು ನಿತ್ಯನೇಮಂ ಹಿತಂ ತಮಗೆಂದನೂ ೩೦

ಘಳಿಲನಾಲಿಸಿ ನಿಂತೆಂದನಿನ್ನೇನು
ಬೆಳಕು ಹರಿಯಿತ್ತೆಂದು ಶಿವನಿರ್ದೊಡೇಂ ಸೋಹ
ದೊಳು ಕೂಡಲಿಲ್ಲವೈಯ್ಯಂ ಪೂಜಿಸಲಿ ಸಂಜೆವರವಯ್ಯನೀವಿರುಳೊಳೂ
ಕಳುಪಿಯಮ್ಮನ ಮನೆಗೆ ಸಜ್ಜೆಯದು ಜಪಿಸುತಿರಿ
ಬಳಿಕ ಪೂಜಿಸಿ ಇರುಳೊಳಂಮಂಗೆ ಗಂಡನ
ಗ್ಗಳದ ಹಗಲೊಳಗಯ್ಯಗಂ ಲಿಂಗವಹನಿರ್ವರುಂ ಸಾಯಬೇಡೆಂದರೂ ೩೧

ಆಚಾರ್ಯಮೂರ್ತಿಗಳು ಸಹಜದಿಂ ನಿರವಿಸಿದ
ಸೂಚನೆಯ ಕೇಳಿ ಬಂದರರೆ ನಿಜ ಪುರಿಗಾಗಿ
ಯಾ ಚದುರೆಯಾ ಕುಲಚ್ಚೆರೆಯರಿಂ ಭೋಗಮಂ ಪೂಜೆಗಳಕೈಕೊಳುತ್ತಾ
ವಾಚಾಮತೀತನೊಪ್ಪುತ್ತಿರಲು ಶಿವಸುತಂ
ಯೋಚಿಸುತ ಪೊನ್ನಾಂಬಲಕ್ಕಾಗಿ ಚಿತ್ತೈಸಿ
ಗೋಚರಿಸಿದಾಕ್ಷಣಂ ಕಾಣುತಿದಿರೆದ್ದರಾ ತಿಲ್ಲವೇಲಾಂಧರಾಗಾ ೩೨

ಇದಿರೆದ್ದು ಸಾಷ್ಟಾಂಗವೆಱಗಿ ತಚ್ಛಿವಸುತನ
ಪದಕಮಲಕೆಱಗಿ ವಂದಿಸಿ ತಂದು ಶಂಖಫಲ
ಕದ ಮೇಲೆ ಕುಳ್ಳಿರ್ದ ಕಾಲದೊಳು ಗದ್ದುಗೆಯೊಳಿರ್ದ ಪಿಳ್ಳೆಯನಾರ್ಗಳಾ
ಪದದೆಡೆಗೆಯಾ ಶಿವಪ್ರಿಯನಾಚಿಯರು ಸಹಿತ
ಹುದಿಗಿನೀಶ್ವರನ ಮುಂದಿಟ್ಟುಕೊಂಡೆಯ್ತಂದ
ನುದಿತ ಹರುಷದೊಳಾ ಕುಲಚ್ಚರೆಯನೆಱಗಿ ಸಾಷ್ಟಾಂಗದಿಂ ಶರಣೆಂದನೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಡೆಯ ಪಿಳ್ಳೆಯರ ಗದ್ದುಗೆಯ ಕೆಲದೊಳಗಿರ್ದು
ಮೃಡರೂಪನಾ ಕುಲಚ್ಚೆರೆಯರ ನಿರೂಪಮಂ
ಕೊಡು ಜೀಯ್ಯಯೆನಲಾ ತಿರುಜ್ಞಾನಸಂಬಂಧಿ ಷೋಡಶಸಹಸ್ರಮಪ್ಪಾ
ಕಡು ಚಲ್ವತಿರುಪಾಟನೊರೆಯೆ ಲಾಲಿಸಿದನು
ಗಡಿಸಿದರು ಸರ್ವಮಾಹೇಶರಲ್ಲಿಂ ತೆರಳಿ
ನಡೆತಂದನಾ ತಿರುಜ್ಞಾನಸಂಬಂಧಿ ಗುರುಪೊದಿಮಂಗೆ ಎಂಬ ಪುರಕೇ ೩೪

ಪರವಾದಿ ಪುತ್ತನಂದಿಯೆನಿಪ್ಪ ಜಿನನೃಪಂ
ಪರಿವಾರ ಸಹಿತಡ್ಡಗಟ್ಟಿ ಮುಂದೆಯಿದುತಿಹ
ಬಿರುದ ತಡೆಯಲು ತಿರುಜ್ಞಾನಸಂಬಂಧಿದೇವರು ಮೇಘಕಾಜ್ಞಾಪಿಸೇ
ಪಿರಿಯ ಸಿಡಿಲೆಣಗಿಯೆಲ್ಲರ ಹೊಡೆಯೆ ತಲೆ ಹರಿದು
ಕರಿ ತುರಗ ನರರು ಸಹಿತಾ ಪುತ್ತನಂದಿಮು
ಖ್ಯರ ಮುಂಡವೆಯಿದೆ ತಿರುಗುತ್ತಿರಲು ನುಡಿದರರೆಬರು ಗುರುವಿನಡಿಗೆ
ನಮಿಸೀ ೩೫

ಮಲೆತು ವಾದಿಸಿದವರ ಗೆಲದೆಯಾ ಸಿಡಿಲಿಂದ
ಕೊಲುವುದನುಚಿತವೆನಲು ಮರಳಿ ಹರಣವನೀಯ್ಯೆ
ಸಲೆ ಭಕ್ತರಾದರೆಲ್ಲರು ಪುತ್ತನುದಿಯೊಲ್ಲದಿರೆ ಮತ್ತಾಸಿಡಿಲಿಗೇ
ಒಲಿದು ನಿರವಿಸೆ ಹೊಡೆಯಲಾ ಭೂಪನಳಿಯೆ ತ
ತ್ಕುಲವೆಲ್ಲ ಶಿಷ್ಯರಾಗಲು ವಿರಾಟ್ಟಾಣಪುರ
ದಲಘು ಶಿವನಂ ಮರುಳುಗಳು ಸಹಿತ ನಾಟ್ಯವಾಡಿಸಿನೋಡಿದಂ
ಹರುಷದೇ ೩೬

ಮತ್ತೆಯಾ ತೊಂಡಮಂಡಲದಲ್ಲಿ ಮಿಸುಪತಿರು
ವತ್ತಿಯೂರಲ್ಲಿ ಮುನ್ನೊರ್ವ ಮುನಿಯಿಂ ಕಾಲ
ನೆತ್ತಿ ದೇವೆಂದ್ರನೊದೆಯಲು ಕಲ್ಲಪನೆಯಾಗೆನುತ್ತವಗೆ ಶಾಪವೀಯ್ಯೇ
ಹತ್ತೆಸಾರ್ದೆಯಿದೆ ವಂದಿಸೆ ಶಿವಕುಮಾರನಿಂ
ಹೊತ್ತ ಜನ್ಮಂ ಪೋಗಲೆಂದ ತಾಣಕಂ ಬ
ರುತ್ತ ವಾದಿಸಿ ಜೈನರಂ ಮುರಿಯಲವರು ತದ್ದೃಷ್ಟವಂ ತೋರಿಂದೆನೇ ೩೭

ಕಲ್ಲಪನೆಯಂ ಹೆಣ್ಣುಪನೆಮಾಡಿ ಜೈನರ್ಗ
ಳೆಲ್ಲರಂ ಶೂಲಕ್ಕೆ ತೆಗೆಸಿ ದೇವೇಂದ್ರಂಗೆ
ಸಲ್ಲಲಿತ ಶಾಪಮೋಕ್ಷವನಿತ್ತು ಕಾಂಚಿಯೊಳು ವಂದಿಸುತ ಗುಡಿಯ ವಿಷ್ಣೂ
ನಿಲ್ಲದಿಬ್ಬಗಿಯಾಗಿ ಶಿವಲಿಂಗವುದ್ಭವಿಸ
ಲೆಲ್ಲರುಂ ಕೊಂಡಾಡೆ ಶಿವಭವನವಾದುದಂ
ತಲ್ಲಿಂದಲಾ ತೊಂಡಮಂಡಲದ ಬಸದಿಗಳ ಹರನಿಳಯಮಂ ಮಾಡಿದಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗಲಾ ಶಿವಭವನವಾಗಿರ್ದ ತಾಣಕ್ಕೆ
ನಾಗಾವುದದೊಳಿರ್ದ ತೊಟಿಯನಲ್ಲಿಗೆ ತಂದು
ಬೇಗದಿಂ ಮುಂದಕ್ಕೆ ಬಪ್ಪಲ್ಲಿಯುಪ್ಪಲಾದಾ ಗಿರಿಯನಲ್ಲಿ ಎರಡೂ
ಭಾಗವಮಂ ಮಾಡಿಯಾ ಶಿವಲಿಂಗದರುಷನವು
ಮಾಗಿ ಬಳಿಕಂ ತಿರುಕುಳಕ್ಕುಂದಪುರದ ವಿಭು
ವಾಗಿರ್ದ ನಂಬಿಯಾಂಡಾನಂಬಿ ತನ್ನ ಮಗಳಂ ಗುರುವಿಗೀವೆನೆಂದಂ ೩೯

ಆಯುವಸರದೊಳು ಶಿವನಾಜ್ಞೆಯಿಂ ವನಿತೆಯಂ
ಸ್ವಾಯತ್ತ ಪರಿಣಯನ ಮಪ್ಪೆನೆನಲೊಡನಾಗ
ರಾಯರಾಯರು ಕೂಡೆ ಬರಲು ನಡೆತಂದು ವೈಭವದಿಂದ ಕೂರ್ತು ಪಿಳ್ಳೈ
ನಾಯಿನಾರಾರಾನಂದದಿಂದ ಬಿನ್ನವಿಸಿದಂ
ಚೀಯಾಳಿಯಾಣ್ಮಂಗೆ ತಚ್ಛಿವನಿರೂಪದಿಂ
ಶ್ರೀಯುಮಲವೈವಾಹದುತ್ಸವಂ ನೆಗಳಿತ್ತು ಬಣ್ಣಿಸುವರಾರಿಳೆಯೊಳೂ ೪೦

ಆ ನಾರಿಯಾರೆನಲು ಪೂರ್ವಸತಿಯಹ ದೇವ
ಸೇನೆಯಾ ಕನ್ನಿಕೆ ವಿವಾಹದುತ್ಸಹದೊಳು ಮ
ಹಾ ನಾಗವಲ್ಲಿಯಂ ಮೆಟಿವಲ್ಲಿ ಶಿವನುದರವಂ ತೆಟಿಯಲಾಕ್ಷಣದೊಳೂ
ನಾನಾ ಪ್ರಕಾರದಿಂ ಕೈಲಾಸದಿಂ ಬಂದ
ಭೂನಿಧಿಯ ಶರಣರೆಲ್ಲರು ಸಹಿತ ಪುಗುತಿರ್ದ
ರೇನೆಂಬೆನದ ಕಾಣುತೆಲ್ಲಾ ಜನಂ ಬೆವಟಿದೆಸೆನೆಸೆಗೆ ಕೆಟ್ಟೋಡಿತೂ ೪೧

ತನ್ನ ಮದುವೆಗೆ ಬಂದರೆಯ್ದೆ ಕೆಟ್ಟೋಡುತ್ತ
ಮುನ್ನಿನಂದದೆ ಭವವನುಣಬಹುದೆ ಧರ್ಮಸಂ
ಪನ್ನಯೆನಲಾಗ ನಂದೀಶ್ವರಂ ದೆಸೆದೆಸೆಗೆ ಹಸ್ತವುಂ ನೀಡಿ ಪಿಡಿದೂ
ತನ್ನಿಮಿತ್ತಂ ಶಿವನ ಗರ್ಭವಮಂ ಕೂಡಿದಂ
ಕುನ್ನಿ ಜೈನರಿರ ನಿಮ್ಮಂ ಬಡಿವ ಕಥನವಮಂ
ಚೆನ್ನಾಗಿ ಕೇಳಿರೇ ಎಂದು ಗೌತಮನೆೞರೆವುತಿರ್ದನಾ ವಾದಿಗಳಿಗೇ ೪೨

ಆ ಕುಲಚ್ಚೆರೆಯರಾ ಪಾಂಡ್ಯಭೂಭುಜನ ತಿರು
ವಾಕರೀಶಂ ತಿಲ್ಲಮೂವಾಯಿರರು ಸಹಿತವಾ
ಗೇಕವಾ ಶಂಭುಗರ್ಭಂ ಪೊಕ್ಕು ಕೈಲಾಸಕೆಯ್ದಿದರು ಸಂಭ್ರಮದೊಳೂ
ಶ್ರೀಕರತಿರುಜ್ಞಾನಸಂಬಂಧಿಗಳ ಕಥೆಯ
ನಾಕರ್ಣಿಸಿದರಿಗಿಹಭೋಗ ಪರಮೋಕ್ಷವಹು
ದೈ ಕಣಾ ಕೆಂಚವೀರಾಹ್ವಯಾ ನಿಜವೆಂದು ನುಡಿವನಾ ಹಲಗೆಯಾರ್ಯ್ಯಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕ ಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ್ಯಂ
ಶೀಲ ಷಟ್ಸ್ಥಲಿ ಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೊರ್ತು ಪದನಂ ಮಾಡಿದಂ ೪೪

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಪಿಳ್ಳೆನಾರಕಥನಕೆ ಮೂಱುಕಾಂಡದಿಂ ಮೇಲೆ ಸಂಧಿಗಳು ಹತ್ತೂ ೪೫

ಅಂತು ಸಂಧಿ ೧೦ ಕ್ಕಂ ಪದನು ೫೬೬ ಕ್ಕಂ ಗ್ರಂಥ ೬೦ ಕ್ಕಂ
ಮಂಗಳಾಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೭

ಗೌತಮನು ಕಾಪಾಲಿಕಾದಿ ವಾದಿಗಳಂ ಜಯಿಸಿದ ಕಥೆ

ಜೈನಮತಮಂ ನಿಲಿಸಿ ಬಳಿಕ ಕಾಪಾಲಿಕನ
ನಾ ನೀಲಪಟಭಾಟ್ಟ ನಯ್ಯಾಯಿಕಾಧಿಕ
ಸ್ಥಾನಮೀಮಾಂಸರಂ ಮತವೆತ್ತಿಗೌತಮಂ ಮುಱಿದನಂದವರ ಜಱಿದಂ

ಜಗವನುತ್ಪತ್ತಿ ಮಾಡುವ ಬಲದ ನಯನನಾ
ಖಗನೆಡದೊಳಮೃತಕಿರಣಂಗಳಿಂ ಸರ್ವರ
ಕ್ಷೆಗೆ ಕಾರಣದ ಚಂದ್ರನಾಗಿರಲು ಲೋಕಮಂ ಸುಟ್ಟುರುಪುವಗ್ಗಿ ಗಣ್ಣಿಂ
ತೆಗೆಯದಿರಲಲರ್ದಿರದೆ ಸಂಕೋಚವಾಗದುಱಿ
ಮುಗುಳು ನಗೆಯಿಂದೆ ರಾಜಿಸುವ ನಿನ್ನಯ ಚೆಲ್ವ
ಮೊಗದಾವರೆಯ ತುಂಬಿಗಳ ಮಾಳ್ಪುದೆನ್ನಚ್ಚಿಗಳ ಕೂರ್ತುಶಾಂತಮಲ್ಲಾ ೧

ಬೆಳ್ಮೊಗದ ಪೆಣ್ಗಳ ಶಿರೋಮೌಕ್ತಿಕಂಬೊಲೆಸೆ
ವಳ್ಮಗಳೆ ನೀನಾರು ಶಾಂತನಂಜೇಶ್ವರನ
ಬಾಳ್ಮೆವೆಳೆಯಾಂ ಮೂಱುಲೋಕಮಂ ಬಸುಱೊಳಿಟ್ಟುದಱಿಂದಲಾ ಗರ್ಭಿಣೀ
ಕೇಳ್ಮಹಾದೇವ ಜಂಗಮ ಸುಪ್ರಸಾದೇಚ್ಛೆ
ಗಳ್ಮಿಗಿಲೆನುತ್ತ ಶಾಂಭವಲೋಕದಲ್ಲಿ ನುಡಿ
ದಳ್ಮರುಳೆ ಜಸವೆಣ್ಣು ಸಿದ್ಧರಾಮೇಶಕರದೊಳು ಮೂಡಿದಗ್ರಗಣ್ಯಾ ೨

ಆ ತಿರುಜ್ಞಾನಸಂಬಂಧಿಯೊಳು ಜೈನರುಱಿ
ಸೋತುದೇ ನ್ಯಾಯವೆನುತೆಯಿದೆ ನಿಡುವಾರಂ ನಿ
ಶಾತಶೂಲದೊಳು ತೆಗೆಸಿದನಲಾ ಸಾಂಖ್ಯನೀಶನ ಕಲ್ಲೊಳಿಡುತ ಶಿವನಾ
ಪ್ರೀತಿಯಿಂದೊಲಿಸಿ ನಿಮ್ಮಯ ಸವಣರೆಲ್ಲರಾ
ಭೂತಳದೆ ನಿರ್ಮೂಲಮಪ್ಪಂತೆ ಮಾಡನೇ
ಖ್ಯಾತವೈಜಪ್ಣೆಯ ಮಹತ್ವ ನಿಮ್ಮೆಲ್ಲರಂ ಬಡಿತಕ್ಕೆ ಹಾಯ್ಕಿತಲ್ಲಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮಿನಂದಿ ಮೊದಲಾದವರ್ಗಳಾ ನಿಮ್ಮಸಮ
ಯಮನೆಯ್ದಿ ಕೋಳಾಹಳಂಗೆಯ್ದುವರ್ಗೆ ಲೆ
ಕ್ಕಮದಿಲ್ಲವದು ದೃಷ್ಟವನುಮಾನಮುಂ ಕೇಳಿಧರೆಯಾತ್ಮಂ ತದಾ
ಕ್ರಮದ ತನುಗಳ ನೆಱೆಯನಂತ ತದ್ಬ್ರಹ್ಮಾಂಡ
ಸಮಿತಿಗಳು ಹದಿನಾಲ್ಕು ಭುವನ ಭವನಂಗಳು
ತ್ತುಮ ಹರಿಬ್ರಹ್ಮೇಂದ್ರರಮರಾಸುರಾಳಿ ಕಿನ್ನರ ಕಿಂಪುರುಷಮುಖ್ಯರೂ ೪

ಗರುಡ ಗಂಧರ್ವರಾ ಸಿದ್ಧವಿದ್ಯಾಧರರು
ನರನಾರಿ ನಾಕಖಗ ಮೃಗ ಪಿಪೀಲಿಕಮುಖ್ಯ
ಕರಿಯವಧಿ ಜೀವಿಗಳು ವೃಕ್ಷಲತೆ ಪರ್ವತಾಂಬೋನಿಧಿ ಚರಾಚರಗಳೂ
ನರಕವಾ ಸ್ವರ್ಗ ಬಂಧಂ ಮೋಕ್ಷಕಾಲವ
ತ್ಯರುಕಲ್ಪಿತಂ ಕರ್ಮಸಂಧಾನವಾದಿಗಳು
ವರ ಕರ್ತೃವಿಲ್ಲದಾಗದೆನಿಪ್ಪುದನುಮಾನವೆಂದು ನುಡಿದಂ ೫

ಇವು ಮೊದಲೆನಿಪ್ಪುವಂ ಹುಟ್ಟಿಸುವ ರಕ್ಷಿಸುವ
ತವಿಸುವ ಬಳಿಕ್ಕಲುತ್ಪತ್ತಿಯಂ ಕೂರ್ತು ಮಾ
ಡುವ ಸರ್ವಶಕ್ತ್ಯಧಿಕ ಸರ್ವೇಶ ಸರ್ವಜ್ಞ ಸರ್ವಾತ್ಮಚೈತನ್ಯನೂ
ಪ್ರವಿಮಲದ ಸರ್ವರಂತರ್ಯಾಮಿರಧಿಕರು
ತ್ಸವಸೂತ್ರಯಂತ್ರವಾಹಕನು ಲೀಲಾಲೋಲ
ನವನೆ ತತ್ಪ್ರೇರಕತ್ವದ ಶಕ್ತಿಯಿಂದಖಿಳಮಂ ರಚಿಸದಿರಲು ಮತ್ತೇ ೬

ಆವು ಬಳಿಕ ತಮ್ಮ ತಾವಹವೆ ಇವಕೆ ಕರ್ತು
ಶಿವನುಂಟೆದಕ್ಕೆ ಪತ್ರವ ಬರೆಯಿಸೈ ಬೌದ್ಧ
ಅವಿಚಾರಿ ಸರ್ವಪ್ರಮಾಣೆ ನೀಂ ಗೆಲ್ದು ತೋಱುವೆನೆನ್ನ ಶಿರವನರಿದೂ
ಭುವನದೊಳು ಮರಳಿ ಪಡೆವೆಂ ನುಡಿಸಿ ಕೊಡುವೆನಾ
ರವಿಯನಾ ಪ್ರತಿವಾದಿಗಳ ನೀಗಡಸಿ ತೋ
ಱುವೆನಭವನುಂಟೆಂದು ಮೂಱುಲೋಕಕ್ಕೆ ತರ್ಜನಿಯನೆತ್ತಿದೆನು ಮತ್ತೇ ೭

ಮುಡಿಗೆಯಂ ಹಾಯ್ಕಿದೆಂ ಬಂದಂಜದೆನ್ನೊಳಗೆ
ನುಡಿಯಲಾ ರ್ಪವರುಂಟೆ ನಿಮ್ಮ ಕೂಡಿಂದು ನಾಂ
ನುಡಿದ ದೋಷಕ್ಕೆ ಶಿವಗಣಕುಲವನೆನೆವೇಂ ಸಹಸ್ರ ಪಂಚಾಕ್ಷರಿಯನೂ
ನುಡಿದು ಜಪಿಸುವೆನು ರುದ್ರಪ್ರಮಥಭಕ್ತರ್ಗ
ಳಡಿಯ ನಾಂ ಸ್ಮರಿಪೆನೆಂಬಾಗ ನೀವೆಂತಪ್ಪ
ಜಡದೋಷಿಗಳೊ ಜೈನರಿರ ಎಂದು ವಾದಮಂ ಮುಱಿದನಂದಾ ಗೌತಮಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದಿವಿಡಿದಾ ಜೈನನಂ ಮುಱಿಯೆ ಕಾಪಾಲಿ
ವಾದಕ್ಕೆ ಸನ್ನದ್ಧವಾಗಿ ಗೌತಮನೊಡನೆ
ಮೊದಲಿಸಿ ನುಡಿದನೆನ್ನಯ ಮತಂ ಕಾಪಾಲವದು ವೇದಸಮ್ಮತವಲ್ಲೆ
ಸಾದರ ಸ್ವಚ್ಛಂದ ಲಲಿತ ಭೈರವಯಾಗ
ಮೋದಿತವಲ್ಲೆ ಎಮ್ಮ ಮಾರ್ಗವೆಂದಂ ಮಹಾ
ನಾದದಿಂ ಗೌತಮನ ಕೂಡೆ ಮಾತಾಡೆ ನೆಱೆನೋಡೆಯದು ತಾನೆಂತೆನೇ ೯

ವೇದಪಿಂಡೇ ಭೂ ಎನುತ್ತ ಆಪೋವಹ್ನಿ
ಸಾದರದೆ ಕೌಱರ್ಕಸೋಮಕಳೆಯೆನಲ್ಕೆಯಾ
ಹ್ಲಾದಾಗಮಂ ಕೂಡೆ ಷಟ್ಚಕ್ರ ಎನುತಿರಲು ಪಿಂಡದೊಳು ಜಲಾಗ್ನೀ
ಮೋದದಿಂ ವಾಯು ಗಗನೇಂದು ಸೂರ್ಯಾತ್ಮರಿ ಹ
ರೈ ದೇಹದಲ್ಲಿಯಂತಾಱು ಚಕ್ರದೊಳು ಸಂ
ಪಾದಿತದ ವಸ್ತು ಭೈರವನಲ್ಲದಿಲ್ಲವೆಂಬುದು ನಿಶ್ಚಯಂ ಮನ್ಮತಂ ೧೦

||ಸಾಕ್ಷಿ|| ಪಿಂಡೇಭೂ ಆಪೋವಹ್ನಿ ಕೌಱರ್ಕದಸೋಮಾವಾತ್ಮಕಳೇವರೇ
ಸಿದ್ಧತ್ವಾಚ್ಚಕ್ರೇಷಟ್ ಸಂಧಿಸಮುದಿತಂ ಮಹದಿತಿಃ ೧

||ಶ್ಲೋಕ|| ಷಟ್ಚಕ್ರಾದಿ ಭವೇದ್ವಸ್ತು ಸ್ವರೂಪಂ ಛಾಯಮಾತ್ಮನಃ
ಇತ್ಯಾಸ್ತೇ ಭೈರವಾನ್ಯಸ್ತು ವಸ್ತುನಾತ್ರ್ಯೈವ ಸಂಶಯಃ ೨

ಎಂದ ಕಾಪಾಲಿಕನ ಕೂಡೆ ನುಡಿದಂ ಮಹಾ
ನಂದದಿಂ ಗೌತಮಂ ಕೇಳೆಲವೊ ನಿನ್ನದೈ
ವಂ ಧರೆಯೊಳೆರಡು ಬಗೆಎಂಬೆಯದಱೊಳನಾದಿ ಭೈರವಂ ತಾನೆ ಸಾಕ್ಷಾ
ದಿಂದುಧರನಾ ಬ್ರಹ್ಮಶಿರವನರಿದಗ್ರಗ
ಣ್ಯಂ ದೇವತಾಧೀಶ ಪರಮ ಸ್ವತಂತ್ರ ಭಿ
ಕ್ಷಾಂ ದೇಹಿ ಎಂದು ಲೀಲೆಯೊಳು ತಿರಿಗಿದ ಮಹಿಮನವಗೆ ನೀವೇನಪ್ಪಿರೈ ೧೧

ಅವನನೇ ದೈವವೆಂದಾಚರಿಪುದೊಳ್ಳೊಡಾ
ಪ್ರವಿಮಲ ವಿಭೂತಿ ರುದ್ರಾಕ್ಷಿ ಜೆಡೆ ಹೃದಯದೊಳು
ಶಿವಪದಧ್ಯಾನಂ ಕ್ರಿಯಾಲಿಂಗ ಪೂಜೆ ಶತರುದ್ರಜಪವಾ ಲಿಂಗಕೇ
ಅವಿರತಂ ಶ್ರೀರುದ್ರ ದಿವ್ಯಾಭಿಷೇಕದುತ್ಸವ
ತ್ಸವ ನಿಷ್ಠೆಯಿಂದ ಸನಕಾದಿಗಳಯೋಗದಿಂ
ದವೆ ಮೋಕ್ಷವೆಯಿದಬೇಕಾದಿ ಭೈರವಗೆ ನೀನೇನಹ್ಯೆಯಧಮ ಮಾರ್ಗಿ ೧೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರದೊಳು ಕಪಾಲವಂ ಪಿಡಿದಾದಿಭೈರವಂ
ತಿರುಗಿದಂ ಭಿಕ್ಷಾಟಣಕ್ಕಂತುಟೆಂಬೆಯಾ
ನರಕಿ ನಿನ್ನಂತೆ ಕ್ಷುಧಾನಿಮಿತ್ತಂ ಪೋದನೇಯ ಹಂಕೃತಿಯ ವಿಧಿಯಾ
ಶಿರವನರಿದಂ ತನ್ನ ಪರಮಸ್ವತಂತ್ರತೆಯ
ಪರಕಲಿಸೆಯಾ ಬ್ರಹ್ಮನೆಯ್ದೆ ಸೋಮಾಷ್ಟಕ
ಸ್ಮರಣೆಯಿಂ ಭಜಿಸೆ ಹಸ್ತದೊಳಾಂತನಾ ಕಪಾಲವನತಿ ವಿಲಾಸದಿಂದಾ ೧೩

ದುರುಳತನದಿಂ ನುಡಿದ ವಿಧಿ ತನ್ನ ಬಾಯೊಳಖಿ
ಳರರಕ್ತಮಂ ಪೊಯ್ಯಬೇಕೆಂದು ಬೇಡಿಕೊಳೆ
ಹರಿಮುಖ್ಯದೇವರ್ಕಳಾಲಯಂಬೊಕ್ಕವರ ಗರ್ವಮಂ ಪರಿಹರಿಸುತಃ
ತಿರಿಗಿಯಂತರ್ಧಾನಕೆಯಿದಿದ ಮಹೇಶನುರು
ತರದಾಱು ಲೀಲೆಯ ಮಹಾದೇವನೆತ್ತಲ್ಯೆ
ಸುರೆಗುಡಿಹಿಜೋಗಿಗಳು ನೀವೆತ್ತಲೆಂದು ನುಡಿವುತ್ತಿರ್ದನಾ ಗೌತಮಂ ೧೪

ಅಂತುಮಲ್ಲದೆ ಮಹಾಬ್ರಹ್ಮಾಂಡಕೋಟಿಗಳ
ಸಂತತಿಯ ರೋಮಕೂಪದೊಳಾಂತ ಶಿವಲೋಕ
ವಂತದಱ ಬಾಗಿಲೆಂಟಂ ಕಾಯ್ವ ಭೈರವರ ಭೃತ್ಯರಾವೆಂದೆಂಬಿರೇ
ಅಂತವರ ನಾಮಶಕ್ತಿಗಳಾಯುಧಂಗಳೋ
ರಂತೆ ಶಂಕರಭಕ್ತರವರು ಪಾವನರೂಪ
ರಂ ತಿಳಿಯಬಲ್ಲಿರೇಯಜ್ಞಾನಿಗಳಿರಯೆಂದೊರೆವುತಿರ್ದಂ ಗೌತಮಂ ೧೫

ಮೂಡಲು ಮಹಾಭೈರವಂ ಶಿಖಿಯೊಳಾರುರುವ
ದಾಡಂಬರದ ಯಮನೊಳಾ ಚಂಡನೈನಿರುತಿ
ಗೀಡಾದವಂ ಕ್ರೋಧಭೈರವಂ ವರುಣನೆಡೆಯಲ್ಲಿಯುನ್ಮತ್ತಾಖ್ಯನೂ
ನಾಡೆ ವಾಯುವಿನೊಳು ಕಪಾಲಿ ಬಡಗಲೊಳು ಭೀ
ಷ್ಮಾಡಂಬರಾಖ್ಯನೀಶಾನಿನೊಳು ಸಂಹಾರರಂ
ನೋಡಲಿಷ್ಟಾರ್ಥವೀ ವಿಶ್ವಭಕ್ತರ್ಗಳವರಿಗೆ ನಿಮ್ಮ ದೈವ ಸರಿಯೇ ೧೬

ಶಿವನಂಗವಾದಾದಿ ಭೈರವಂ ನಿನ್ನ ದೈ
ವವೆಯಲ್ತು ತನ್ಮಾರ್ಗವಿನಿತಿಲ್ಲವಾಗಿ ಶಾಂ
ಭವಲೋಕದಷ್ಟದಿಕ್ಕಂ ಕಾಯ್ವ ಭೈರವರೊಳೊರ್ವನೆಂದೂಹಿಸುವೆಯಾ
ಅವರು ಶಿವಭಕ್ತಿಸಂಪನ್ನರಂತಪ್ಪೆಯಾ
ಭವಿಯೆ ನೀನಪರ ಭೈರವಭೃತ್ಯನವನ ಕಥ
ನವ ಕೇಳೆನುತ್ತ ಬಿತ್ತರಿಸುತಿರ್ದಂ ಗೌತಮಂ ತಾನದೆಂತೆಂದೊಡೆ ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಶೃಂಗಪರ್ವತದ ಜಮದಗ್ನಿಯಾಶ್ರಮ
ಕ್ಕತಿಶಯದ ವಾಯುವ್ಯದಲ್ಲಿ ಭಸ್ಮಾಸುರಂ
ಶಿತಿಕಂಠನಂ ಕುಱಿತು ಮಹದುಗ್ರತರ ತಪಂಗೆಯ್ಯಲಾ ಸರ್ವೇಶ್ವರಂ
ಅತಿ ಕರುಣದಿಂ ಬಂದು ನಿನ್ನಿಷ್ಟವೇನೆನಲು
ನುತಿ ಸುತ್ತ ಸಾಷ್ಟಾಂಗದಿಂ ನಮಿಸಿ ಕೈಯ್ಯಮುಗಿ
ವುತ ರಾಕ್ಷಸಂ ಬೇಡುತಿರ್ದನನ್ಯಾಯದಿಂದೇನೆಂದು ಬಣ್ಣಿಸುವೆನೂ ೧೮

ಹಗನೆ ಮಹದೈಶ್ವರ್ಯವಂ ಕರುಣಿಸುವುದೆನಗೆ
ಉರಿಯ ಹಸ್ತವ ಪಾಲಿಸಾವವನ ತಲೆಯ ಮೇ
ಲಿರಿಸಲಾತಂ ಬೆಂದು ಪೋಪಂತೆ ಮಾಡೆಂದು ಪಡೆದು ಸಂಪತ್ತಿನಿಂದಾ
ಇರುತಲರಿಯಾದವಂದಿರ ಮಸ್ತಕವ ಮುಟ್ಟಿ
ಮರಣವೆಯಿದಿಸುತಿರ್ದ ರಾಕ್ಷಸಾಧಮನು ತ
ತ್ಕರವನೀಶನ ಶಿರಸ್ಸಿಂಗಿಡುವೆನೆಂದು ಕೊರ್ಪಿಂ ನಡೆದು ಬರುತಿರ್ದನೂ ೧೯

ತಾನೆ ವರವಂ ಕೊಟ್ಟು ಕೊಲಬಾರದೆಂದಲ್ಲಿ
ದಾನವಾರಾತಿಯಂ ನಿಜ ಭೃತ್ಯನಂ ಕರೆದು
ನೀ ನಧಮನಂ ಯುಕ್ತಿಯಿಂ ಕೊಂದು ಬಾ ಎನೆ ಹಸಾದವೆಂದಾ ಮಾಧವಂ
ಮಾನಿನಿಯ ರೂಪಾಗಿಯಿದಿರುವರಲವನಳು
ಲಾ ನಾಡಿದಂತೆ ಪಾತ್ರವನೆಸಗೆ ವಧುವಪ್ಪೆ
ನೈ ನಿನಗೆನುತ್ತ ಕೈಯ್ಯಂ ತಲೆಯೊಳಿಟ್ಟು ತಿಱ್ರನೆ ತಿರಿಗಿದಂಕೃಷ್ಣನೂ ೨೦

ನಗಧರನ ತೆಱದಿಂದ ಮಂಡೆಯೊಳು ಕೈಯಿಟ್ಟು
ವಿಗಡ ರಕ್ಕಸನು ತಿಱ್ರನೆ ತಿರುಗಲಾಗಿ ಭು
ರ್ಭುಗಿಲನುರಿದಂ ರಾಕ್ಷಸಂ ಹರಿಗದೇ ವಿಶಿಷ್ಟತೆಯೆಂದು ಶಿವನಿಂದೆಯಂ
ಬಗುಳುವರು ಕೆಲಬರಧಮರು ರಾಜನಾಜ್ಞೆಯಿಂ
ಜಗದಲ್ಲಿ ವೈರಿಯಂ ಬಂಟನೇ ಗೆಲ್ದೊಡೆಡೆ
ಯಗೆ ಸಮರ್ಥನೆಯಾತ ನೀಶನಾಣತಿಯೊಳೆಸಗಿದನೆಂಬುದೇ ನಿಶ್ಚಯಂ ೨೧

ಅದಕೆ ಪೂರ್ವಶ್ಲೋಕವಶ್ಯೀಕೃತಂ ಯೆಂಬ
ವಿದಿತಾರ್ಥದಿಂದೀಶನಾ ಚತುರ್ವೇದಮಂ
ಕುದುರೆಗಳ ಮಾಡಿದಂ ತ್ರಿಪುರಸಂಹರದಲ್ಲಿ ಶುನಕಂಗಳೆನೆ ಕಲ್ಪಿಸೀ
ಸದಮಲ ಕಿರಾತನಾದಂ ಹರಿಯನಂಬ ಮಾ
ಡಿದನಸುರಶೂರ ಸುಡರೂದವಿ ಭಸ್ಮಾಸುರನ
ಸದೆವಲ್ಲಿ ವನಿತೆಯನೆ ಮಾಡಿದಂ ಪರಮಸ್ವತಂತ್ರನೆಂಬುದೇ ನಿಶ್ಚಯಂ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

||ಸಾಕ್ಷಿ|| ಅಶ್ವೀಕೃತಶ್ವೀಕೃತ ವೇದ ರಾಶಿ ರಸ್ತ್ರೀಕೃತಸ್ತ್ರೀಕೃತ ದಾನವಾರಿಃ
ಅಸ್ವೀಕೃತ ಸ್ವೀಕೃತ ದುಷ್ಟ ಶಿಷ್ಟಃ ಪಾಯಾತ್ಸವೋ ದೈವತ ಸಾರ್ವಭೌವಾ ೩

ಚಕ್ರಪಾಣಿಯು ರಂಗನಾಥ ನಾವಾದಕ್ಕು
ಪಕ್ರಮಿಸಿ ಪಾಲ್ಕುರಿಕೆ ಸೋಮನಾಥಗೆ ಸೋಲ್ತು
ತಿಕ್ರಮಿಸಿ ಪರ್ವತಕೆ ಸತ್ತಿಗೆಯ ಮಱಿಯ ಹಿಡಿಯಿಸೆ ಕಣ್ಣು ಪೋಗಲಾಗೀ
ಚಕ್ರಿಯಿಂ ಕೇಳಿಯುವವನಂ ಬಿಟ್ಟು ಶಿವನ ಪಾ
ದಾಕ್ರಾಂತನಾಗಿ ತದುಜ್ಞೆಯಿಂ ಕಣ್ಪಡೆದು
ವಕ್ರಮಂ ಗೆಲಿದು ಸೋಮೇಶಸುತನಣುಗನಾದಂ ಪೇಳ್ವುದೀ ಗ್ರಂಥವೈ ೨೩

ಇಂತು ರಾಕ್ಷಸನ ಕೊಂದೆಯಿತಂದ ವಿಷ್ಣುವೇ
ಕಾಂತೆಯಾಗುತ್ತೆನ್ನ ನೆರೆಯೆಂದು ಕೀರ್ತಿಸಲ
ನಂತ ಪರಿಯೊಳು ಮೆಚ್ಚಿ ಶಂಭು ತರ್ಕಯಿಸಲಾ ಬೆಮರ ಬಿಂದುವದಾಗಲೂ
ಅಂತು ಹರಿಯಂಗದೊಳು ಭೈರವಂ ಜನಿಸಿದಂ
ತಾಂ ತಳೆವನೇ ನಿಮ್ಮ ದೈವವೆಂದೆಂಬಿರೈ
ಭ್ರಾಂತರಿರ ಲಸದಾದಿ ಬೈರವ ಮಹಾಮೂರ್ತಿಗವನೇಂ ಸಮಾನವಹನೇ ೨೪

ಶಿವನಿಂದ ಪುಟ್ಟಿದವನೇ ದೈವವೆಂಬೆಯಾ
ಭುವನಾಧಿಪಂ ಸಕೃಚ್ಛೇಟೆಯಿಂ ಸಂಸ್ಪರ್ಶ
ನವನೆಸಗಲುದಯಿಸಿದವಂ ಪಟ್ಟಕೇಂ ಯೋಗ್ಯನೆ ದೇವಿಯರ ಕೂಟದಿಂ
ಸ್ರವಿಸಿರ್ದ ಬಿಂದುವಿಂದೊಗೆದ ಷಣ್ಮುಖನ ಪೋ
ಲುವನೆ ನೀಚರ್ಗಧಿಪನಾಗಿರ್ದ ನಿಮ್ಮ ಭೈ
ರವನಾದಿ ಭೈರವಂಗೇನು ಸಂಬಂಧವೆಂದಂ ಗೌತಮಂ ನಲ್ವಿನಿಂ ೨೫

ಅದುಮಲ್ಲದಾ ವಜ್ರಿಯುಮರಿಗಳೆನುತ್ತಮೇ
ದ್ಯದ ಮೂತ್ರದನ್ನಪಾನಂಗಳೊಳೆ ಜೀವಿಪಿರಿ
ವಿದಿತ ಸುರೆಯಿಂ ಕುಡಿದು ನಾಯ್ನರಿಯ ಮಾಂಸಮಂ ತಿಂಬ ನೀಚರು ನೀವಲಾ
ಮದನಾರಿಯಪ್ಪಾದಿ ಭೈರವಂಗಂ ನಿಮಗೆ
ಯಧಮರಿರ ಸಂಬಂಧವೇನು ಕುಟಿಲತೆಯು ವಿ
ದ್ಯದೊಳಂ ಮಹಾಭಂಗವೆಯಿದೆ ನಿಮ್ಮವರಿಗಾದುದನಱಿಯಿರೇ ಪರಿಕಿಸೇ ೨೬

ಅಱಿದಱಿಯದರಸನಿಂ ಕೋಟಲೆಂಡನಂದೊಡೆದ
ಕೆಱಿಯಲ್ಲಿ ಹೂಣಿಸಿಕೊಳನೆಯುಗ್ನಿಯಿಂದಳಿದು
ಮಱಿಹುಟ್ಟ ಕಾಣದಿರ್ದಪನಲಾ ವ್ಯಾಳಿನಾಗಾರ್ಜುನಂ ತನ್ನ ತಲೆಯಾ
ಉಱುವ ಚಕ್ರಕ್ಕೇ ಬಲಿಗೊಡನೆಯಾ ಸೊನ್ನಲಿಗೆ
ಯೆಱೆಯನಿಂದಱಿಬೇಯನೇ ಖಪ್ಪರಂ ತಾಂ ಕೆ
ಸಱೊಳದ್ದನೇ ರತ್ನಘೋಷನೆಲೆ ನಿಮ್ಮ ಮತವೇತಕ್ಕೆ ಬಾರ್ತೆಯೆಂದಂ ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲಾಂತರಂ ಬದುಕಿದಪೆವೆಂಬಿರ್ರೈ ಕೊಂಡ
ಮೂಲಿಕೆಯ ಸತ್ವವೈಸಲೆ ಭೈರವಂಗೆ ವಾ
ಚಾಳ ಕೇಳಲ್ಪ ಸಾಮರ್ಥ್ಯವಿರಲೇನಾದಿ ಭೈರವನೆಯಾತ ನಿನ್ನೂ
ಈ ಲೋಕದಲ್ಲಿ ಸುರೆಯಂ ಕೊಂಡುದೇ ಮುಕ್ತಿ
ಯೈ ಲೇಸೆನಿಪ್ಪಿರ್ರೈ ಬಯ್ಯೈ ಕಳ್ಗುಡುಹಿ ತಿ
ನ್ಪೇಲನೆಂಬುದಕೆ ಗುಱಿಯಾದ ಜೋಗಿಗಳಿರಾ ಛೀ ಯೆಂದು
ಮುಱಿದನವರಂ ೨೮

ಸ್ಥೂಲ ಮಹಿಮಾಧಿಪಂ ಗೌತಮಂ ತಾನೆ ಕ
ಪಾಲಿಯಂ ಮುಱಿಯಲಾ ವೇಳೆ ಬಂದಿದಿರಾಗಿ
ನೀಲಪಟನಿಂತೆಂದನೆನ್ನ ಮತಕಧಿಪನೇ ಕಾಮನವನಿಲ್ಲದಿರಲೂ
ಈ ಲೋಕದಲ್ಲಿಯುತ್ಪತ್ತಿಯಿಲ್ಲಂ ಕಣಾ
ಕಾಲನೆಸಲಿಕ್ಕಡೆಯ ಮಾಳ್ಪರ್ರೈ ಬಿಲ್ಲಾಳ್ಗ
ಳೀಲಸನ್ಮನ್ಮದನ ಬಾಣದಿಂ ಬೇಱಾದರೊಂದಪ್ಪರಿದು ನಿಶ್ಚಯಂ ೨೯

ವನಿತೆಯರು ಪುರುಷರ್ಗೆ ಸೋಲ್ವರಾ ಪುರುಷರೇ
ವನಿತೆಯರ್ಗೊಲಿವರ್ರೈಸಲೆ ಕಾಮಗೊಲಿವರಾ
ವನಿತೆಯರು ಪುರುಷರಿನ್ನಾರು ಬಯಸುವ ಬಯಕೆಗಂ ಕಾಮನಾಮುಮಲ್ತೇ
ಅನಘ ಶಿವ ಹರಿಯಜಾದ್ಯಮರರ್ಕಳಿಳೆಯಲ್ಲಿ
ಮನು ಮುನಿಗಳಾದಿಯಾದವರು ಕಾಮನ ಶರದ
ಮೊನೆಗೆ ಗುಱಿಯಪ್ಪರದಱಿಂದವಗೆ ಮಿಗಿಲಾದ ದೈವವಿನ್ನಿಲ್ಲೆಂದನೂ ೩೦

ಕಾಮನೇ ದೈವವೆಂದೆಂಬ ವಾದಿಯ ಕೂಡೆ
ಯಾ ಮಹಾ ಗೌತಮಂ ನುಡಿದನಜ್ಞಾನಿ ಕೇ
ಳೈ ಮೊದಲು ಮನ್ಮಥಂ ಜನನಕ್ಕೆ ಕರ್ತೃವೆಂದೆಂಬ ಮಾತೇಯ ಬದ್ಧಂ
ಆ ಮುಕುಂದನ ಪುತ್ರನಲ್ಲವೇ ಮನಸಿಜಂ
ದಾಮೋದರಂ ರುದ್ರನಿಂದ ಹುಟ್ಟನೆಯಾತ
ನಾ ಮಹೇಶ್ವರನಿಂದಲೊಗೆಯನೆಯಾ ಸದಾಶಿವನಿಂದವಂ ಜನಿಸನೇ ೩೧

ಅವರು ತಾಂ ಕಾಮವಿಲ್ಲದೆ ಪುಟ್ಟಿಸುವರೆ ಕಾ
ಮವೆ ಮುಖ್ಯವೆಂದೆಂಬೆಯಾ ಪೂರ್ಣ್ಣಕಾಮಂಗೆ
ಶಿವನಾಜ್ಞೆಯಿಂ ವಿಷ್ಣುಗೊಗೆದವಂ ಸರಿಯಪ್ಪನೇ ಹರನನೆಸಲು ಹಣೆಯಾ
ಹವಿಭುಗ್ಮಹಾ ನೇತ್ರದಿಂದಲ್ಲಿ ಸುಡನೆ ತ
ದ್ಯುವತಿ ಶೋಕಿಸೆ ದೇವಿಯರು ಬಿನ್ನವಿಸಲಂಗ
ಭವನ ಮಾಡಿದನಲಾ ಪರಮ ಸ್ವತಂತ್ರನೀ ಕಾಮನೇತರ ದೈವವೈ ೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಲ್ಲಾಳಿನೊಳು ಕಾಮನಂಗನೆಯು ಪುರುಷನ ಸ
ಮುಲ್ಲಾಸದಿಂ ಕೂಡುವಂತೆ ಸವನೆಂಬೆಯಾ
ಫುಲ್ಲನಾಭಂ ಲಕ್ಷ್ಮಿಯುಂ ಕೂಡುವಾಗಲೆಲ್ಲಿದ್ದೆಚ್ಚನವಬದ್ಧವೈ
ಅಲ್ಲಿ ಪುರುಷರು ಸತಿಯರಿರ್ವರುಂ ಸೋಲ್ವರೆನೆ
ಸಲ್ಲಲಿತಶುಕ ಸಿದ್ಧರಾಮರೇಂ ಸೋಲ್ತರೆನೆ
ನಲ್ಲವೆಣ್ಮಹದೇವಿಯಾ ಕಿನ್ನರಂಗೆ ಕಾಮನ ಸುಟ್ಟುದಂ ತೋಱಳೇ ೩೩

ಹರಿಯಜಾದ್ಯರ ಬಿಡಾ ಪರಮ ಸ್ವತಂತ್ರ ಶಂ
ಕರನನವರೊಳು ಕೂಡಿ ನುಡಿವರೇ ಸ್ಮರನ ಸು
ಟ್ಟುರುಪಿದಂ ಮರಳಿಯಂಗಜನಾಗಿ ಕಲ್ಪಿಸಿದನಾತನಲುತ್ಪತ್ತಿಲಿಯಕೇ
ಪರಮೇಶ್ವರಂ ಕಾರಣಂ ಕಣಾ ಮಿಕ್ಕರಂ
ತೆರಡಂಗಮಲ್ತುನಶಿವೇನ ಶಿವೇನ ಎಂಬರ್ಥದಿಂ
ದರವಿಲ್ಲದಾ ಶಕ್ತಿಯೊಳ್ಕೂಡುವೂರ್ಧ್ವರೇತಸ್ಸಗೆಣೆಯಿಲ್ಲ ತೆಗೆಯ್ಯೈ ೩೪

||ಸಾಕ್ಷಿ|| ನ ಶಿವೇನ ವಿನಾ ಶಕ್ತಿ ರ್ನ ಶಕ್ತಿರಹಿತಃ ಶಿವಃ
ಪುಷ್ಪಗಂಧಂ ವಿನಾನ್ಯೋನ್ಯಂ ಮಾರುತಾಂಬರಯೋರಿವ ೪

ನೀಲಪಟನಂ ಮುಱಿದು ಭಾಟ್ಟನಂ ನುಡಿಸಿದಂ
ಮೇಲೆ ಕೇಳ್ವೈ ನಿನ್ನ ಕರ್ಮಬದ್ಧದ್ವೇಷ
ದಾಲಾಪವಮಂ ಬಿಟ್ಟು ಸದ್ಧರ್ಮ ಸತ್ಕರ್ಮದಲ್ಲಿ ನಡೆ ಎಂದು ಮುಱಿದಂ
ಈ ಲೋಕದೊಳ್ಪ್ರಭಾಕರಂ ಪಲವು ಬೆಳಗಂ ಹೃ
ದಾಲಯದೊಳಿಟ್ಟನೆಂಬುದಬದ್ಧವೀಶ್ವರ ಮ
ಹಾ ಲಲಿತ ತೇಜಸ್ಸನೇ ಧ್ಯಾನವಮಂ ಮಾಡೆನುತ್ತವನ ನಿಲಿಸಿ ಮತ್ತಂ ೩೫

ಎಲೆಲೆ ನೈಯ್ಯಾಯಿಕಾ ವಾದಿಗಳೊಳೇಕೆ ನೀಂ
ನಲಿದು ಬಂದನ್ಯಾಯಮಂ ನುಡಿವೆಯಿದು ಬೇಡ
ಸಲೆ ನಿನ್ನ ಸಹಜವಾದಾ ನ್ಯಾಯಮಂ ನುಡಿ ಎನುತ್ತ ಭಾಟ್ಟಪ್ರಭೇದಾ
ನೆಲೆಯಾದ ಮೀಮಾಂಸಕಾ ನಿನ್ನ ಮತದ ಕಥೆ
ಯಲಘುಪ್ರಸಂಗಮಂ ಕೇಳು ಭಟ್ಟಾಚಾರ್ಯ್ಯ
ಮಲಹರನ ಭಕ್ತನಿಳೆಯೊಳಖಿಳ ವಾದಂಗಳಂ ಮುಱಿದುಕೊಂಡು ಬಪ್ಪಂ ೩೬

ಆವನುಂಟೆಂದ ವಸ್ತುವನಿಲ್ಲವೆಂದು ಮುಱಿ
ದೀ ವಸುಧೆಯೊಳು ನಾಸ್ತಿ ಎನುತಂ ಮ
ಹಾ ವಾದಿಗಳ ಗೆಲ್ದುಕೊಂಡು ಬರಲೊರ್ವ ಭೂಪಾಲಕನ ಚಾವಡಿಯೊಳೂ
ಪ್ರಾವೀಣ ವಿದ್ವಾಂಸರ್ಯ್ರೈನೂಱಿರುತ್ತಲಾ
ಶೈವ ಸಂಪನ್ನ ಬುಧನತಿಶಯದ ವಿಮಲವಾ
ರ್ತಾ ವಿಶೇಷವನಾಲಿಸುತ್ತ ತಮ್ಮೊಳಗೆ ಯೋಚಿಸಿಕೊಂಡರನಿಬರಾಗಾ ೩೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತಿಶಯುವೆನಿಪ್ಪ ಭಟ್ಟಾಚಾರ್ಯನೆಯಿತಹಂ
ಕ್ಷಿತಿಪನೆಡೆಗೆವನ ಕೂಡಾವು ತರ್ಕಿಸುತಾವ
ಮತಮಂ ಪ್ರತಿಷ್ಠಿಸಿದೊಡದನೇ ಯುಬದ್ಧವೆಂದಾಕ್ಷಣದೊಳೇ ಮುಱಿದಪಂ
ಮತಿವಂತನಂ ಗೆಲುವ ತೆಱನಾವುದೆಂದು ಸ
ನ್ಮತವಾಗಿ ಶಿವನುಂಟೆನುತ್ತಂ ಪ್ರತಿಷ್ಠಿಸಲು
ಶಿತಿಕಂಠಭಕ್ತನಿಲ್ಲೆನ್ನನೀ ತೆಱದಿಂದ ಮುಱಿವೆವೆಂದೂಹಿಸಿದರೂ ೩೮

ಬಹಳ ವಿದ್ವಾಂಸರೀ ತೆಱದಿಂದ ನಿಶ್ಚೈಯಿಸು
ತಿಹ ಕಾಲದೊಳಗಿತ್ತ ವಾದಿಕೋಳಾಹಳನ
ಕಹಳೆಗಳು ಬಿರಿದೆತ್ತಿ ಕರೆಯೆ ನಾನಾ ವಾದ್ಯವಾರ್ಭಡಿಸುತುಲಿಯಲಾಗೀ
ವಿಹಿತತಾರ್ಕಿಕರು ಚಾಮರಗಳಂ ಢಾಳಿನಲು
ಪ್ರಹಸಿತಂ ಬಂದು ಪೊನ್ನಂದಳವನಿಳಿವು ತು
ತ್ಸಹದ ಮಣಿಪಾದುಕಂಗಳನು ವೇದಾಢ್ಯರಿಡೆ ಮೆಟ್ಟಿ ನಡೆದೊಳಪೊಕ್ಕನೂ ೩೯

ಅರಸನ ಸಭಾಂತರಂಬೊಕ್ಕು ಭಟ್ಟಾಚಾರ್ಯ್ಯ
ನುರುತರಾಶೀರ್ವಾದಮಂ ಮಾಡಿ ಭೂಪನಂ
ಪರಸಿ ತಂದಿಟ್ಟ ಮಣಿಪೀಠದೊಳು ಕುಳ್ಳಿರ್ದು ವಿದ್ವಾಂಸರಂ ನೋಡುತಾ
ಹರುಷದಿಂ ನುಡಿವುತಿರ್ದಂ ಭೋ ಮಹಾನ್ಕವೀ
ಶ್ವರವೃಂದ ಯುಷ್ಮನ್ಮತಂ ಕಿಮಿತಿ ಎಂದೆನು
ತ್ತರರೆ ಬೆಸಗೊಂಡನಾ ಶೈವಾರ್ಯ್ಯನರಿತಿಮಿರಸೂರ್ಯ ಸದ್ವಿಜಕಾರ್ಯ್ಯ ೪೦

ಶ್ರೀಕಂಠಭಕ್ತನೊಳು ವಾದಿಗಳು ನುಡಿದರ
ಸ್ಮಾಕಂ ಮತಂ ವಿಚಾರಾನ್ಯಥಾ ನಾಸ್ತಿ ಸು
ಶ್ಲೋಕ ನಿರುಪಮ ಶಿವೋಸ್ತೀತಿ ನಿಶ್ಚಯವಿದಂ ಖಂಡನಂ ಕುರುಯೆನುತ್ತಾ
ಕಾಕರೆಲ್ಲಂ ನುಡಿಯುಲೆಮ್ಮ ಮತಮಂ ಕೊಂಡ
ಹೋ ಕಲುಷವಾದಿಗಳು ನುಡಿಯಲಿಲ್ಲೆನ್ನೇಪಿ
ನಾಕಿಯನೆನಲ್ಕೆನಗೆ ಸೋಲವಾದಪುದಧಮ ಸಮಯಿಗಳು ಗೆಲ್ವರೆಂದಂ ೪೧

ಶುದ್ಧತತ್ವಾಧಿಪತಿ ಶಿವನೆನಗೆ ಕರ್ತು ತ
ದ್ರುದ್ಧಮಾರ್ಗದೊಳಾನು ಬಂಟನದುಕಾರಣಂ
ಸದ್ಧರ್ಮಿ ಶಿವನನಾನಾಡಬಡಿಸಿಕೊಂಬೆನೀ ನೀಚವಾದಿಗಳನೆಲ್ಲಾ
ತದ್ಧರಾಧಿಪನ ಮುಂಬಿಲಿ ಮುಱಿವೆನೆಂದು ಸ
ನ್ನದ್ಧನಾಗುತ್ತ ಯುಷ್ಮಚ್ಛಿವೋಸ್ತೀತಿತರ
ಬದ್ಧೋ ಭವತಿ ಎಂದು ಬಳಿಕಲಿತ್ತಂ ನಾಸ್ತಿ ನಾಸ್ತಿ ಎಂದುಲಿದು ನುಡಿದಂ ೪೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಲುಮೆಯು ಕವೀಶನವನಾಡದೊಡೆ ಪೋಪುದೈ
ಸಲೆ ತೊಟ್ಟು ನುಡಿಯಲಿದಿರಹರಾರು ಸೋಲ್ತರಾ
ಕಲಹಕಿದಿರಾದವರು ಶಿವನಿಲ್ಲದಿರುತಿರ್ಪ ಪೂರ್ವಮೀಮಾಂಸದಿಂದಂ
ಗೆಲಿದವರ ಬಿರಿದನೀಳ್ಕೊಂಡು ಬಂದಾಗ ನಿಜ
ನಿಲಯದೊಳು ಲಿಂಗಪೂಜೆಯ ಮಾಡೆ ನೋಳ್ಪಲ್ಲಿ
ಮಲಹರಂಪೆಜ್ಜೆಯೊಳಗಿಲ್ಲ ಬಯಲಾಗಲೀಕ್ಷಿಸುತ ಭಟ್ಟಾಚಾರ್ಯ್ಯನೂ ೪೩

ಕಡುಪಿನಿಂದಿದಿರಾದ ವಾದಿಗಳ ನಾಂ ಗೆಲ್ದೆ
ಗಡ ಬೆರಳ ಬಿದಿರ್ದುದಕವಾ ಹರಿದ ಪೂವಿಂದ
ಲಡಿಯಲರ್ಚಿಸಲಿಂದ್ರಪದವೀವ ಮುಗ್ಧ ಶಿವನಂ ಗೆಲುವುದರಿದೆ ಎನುತಂ
ನುಡಿದನೆಲೆ ಶಂಕರಾ ನೀನಜಾಂಡಂಗಳಿಗೆ
ಒಡೆಯನೇ ಪರಮಸ್ವತಂತ್ರನೇ ಯಲ್ಲಲ್ಲ
ಬಿಡು ಬಿಡಾ ನಿನ್ನ ಕರ್ತೃತ್ವವಿನ್ನೇತಕೆ ಪರಾಧೀನನಾದಾತಗೇ ೪೪

ನಾನಿತ್ತಲೊಂದು ಹುಳುವಿಲ್ಲೆಂದ ಮಾತ್ರಕ್ಕೆ
ನೀನೆ ಬಯಲಾದೆಯೆನ್ನಾಜ್ಞೆಯುವನ್ಯಸಲೆಯು
ದೇನು ಸ್ವತಂತ್ರವೆನಬೇಡೆಂಬ ಮಾತ್ರಕೊಡೆತನ ತಪ್ಪುಗೆಂದು ಒಂದೂ
ಆ ನೈಜ ಸೆಜ್ಜೆಯೊಳು ನೆಲಸಿರ್ದ ಶಿವನ ತೆಗೆ
ದಾನಂದದಿಂ ನೋಡೆ ನಿನ್ನಯ ಮಹತ್ವಮಂ
ಶ್ರೀನಾಥ ಮುಖ್ಯರ್ಗಳರಿಯರೆಂದಾಗ ಕೀರ್ತಿಸಿದನಾ ಶಿವನಿಷ್ಠನೂ ೪೫

ಆ ಮಹಿಮ್ನ ಸ್ತೋತ್ರಮಂ ಮಾಡಿ ವಾದಿಗಳ
ಸಾಮರ್ಥ್ಯ ಶಿವನಿಲ್ಲವೆಂದು ಮುಳಿದುಟಿ ಪೂರ್ವ
ಮೀಮಾಂಸವದನೆ ಕೆಲರಧಮರಾಚರಿಪರುಳಿದವರು ಖಂಡಿಸುವೊಡರಿದೂ
ಭೂಮಿಯೊಳಗೆಂದದಂ ಮುಳಿಯಲೆಂದುತ್ತರದ
ಮಿಮಾಂಸವಮಂ ಪೇಳ್ದನಾ ಪೂರ್ವವಂ ಬಿಟ್ಟು
ಮೀಮಾಂಸ ನೀನುತ್ತರವನಾಚರಿಪುದೆಂದು ನುಡಿದು ಮುಳಿದಂ ಗೌತಮಂ ೪೬

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಟಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಂ ಕೂರ್ತು ಪದನಂ ಮಾಡಿದಂ ೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತಮ್ಪುರಾಣದೊಳಗಾ
ದುದು ಸುಮೀಮಾಂಸಖಂಡನೆ ಮೂಱುಕಾಂಡದಿಂ ಮೇಲೆ ಹನ್ನೊಂದು
ಸಂಧೀ ೪೮

ಅಂತು ಸಂಧಿ ೧೧ ಕ್ಕಂ ಪದನು ೬೧೪ ಕ್ಕಂ ಗ್ರಂಥ೬೪ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೮

ಶಿವನು ಶಂಭುಭಟ್ಟನಾಮದಿಂ ಗೌತಮನಂ ಮೆಚ್ಚಿಸಿದ ಕಥೆ

ಹರಿ ಸೋಲ್ತು ಬಂದಱಿಪೆ ಶಿವ ಶಂಭುಭಟ್ಟನೆಂ
ಬುರುನಾಮದಿಂ ಗೌತಮು ಮೆಱಿಸೆ ನಂದಿಮುನಿ
ವರರಂ ಶಿವಾಜ್ಞೆಯಿಂದಂ ಸುಖಾವಹಮೂರ್ತಿಯಾಗಿ ಬೋಧಿಸತೊಡಗಿದಂ

ಮೊಲೆಯೊಳಮುರ್ದ್ದಾರದಾಂತಂಗಳೊಳು ಪೂಸಿರ್ದ
ಮಲಯಜದ ತೆಱದಿಂದೆ ಕಚದಲ್ಲಿ ಮಿಸುಪ ನಿ
ರ್ಮಲದ ಬೆಳ್ದಿಳಿಪೂವಿನಂತೆ ಕಟಿತಟದಲ್ಲಿ ರಾಜಿಸುವ ಶುಚಿವಸ್ತ್ರದಾ
ಪೊಲು ನಖರಕಿರಣಮಾನಮ್ರಾಮರಾಂಗನಾ
ಕುಲಕಿತ್ತ ಮಾಳ್ಕೆಯಂಪ್ರಿಯ ದೇವಿಯರ ದೃಷ್ಟಿ
ಯೊಲಿಯದೀಕ್ಷಿಪ ಶಾಂತಮಲ್ಲಿಕಾರ್ಜುನಲಿಂಗ ಜಯ ಜಯ ಮನ್ಮುಖಾಬ್ಜ
ಭೃಂಗಾ ೧

ನಿಹಿತರಕ್ಷಾವಯು ದಯಾಭರಿತ ಶುಭಜಟಾ
ನಿಹವದ ಕೃಪಾಕಟಾಕ್ಷದ ದಿವ್ಯಸೌಂದರ
ಪ್ರಹಸಿತ ಮುಖಾಂಬುಜದ ಘನದಾನಲಿಖಿತ ಲಿಖಿತಸತ್ಪುಸ್ತಕಂಬೊಲುಹಸ್ತದಾ
ಮಹಿಮಾಗ್ರ ಶಿಷ್ಯಜ್ಞತಾಕುಮುದಸಂದೋಹ
ಮಿಹಿರಪ್ರಭಾ ಚರಾಧೀಶ ನಿರ್ಮಲ ಸುಖಾ
ವಹಮೂರ್ತಿರೂಪಸಮವರ್ತಿಹರ ಶಾಂತನಂಜೇಶಗುರುಚಿತ್ತ್ರಪೂರ್ತಿ ೨

ಆಯತದ ಮೀಮಾಂಸವೈಶೇಷಿಕಾಗ್ರನೈ
ಯ್ಯಾಯಿಕಂ ಸಾಂಖ್ಯಪಾತಂಜಲಂ ವೇದಾಂತಿ
ಈ ಯಾಱು ವೈದಿಕವನುಳ್ಳ ವೇದಾಂತಿ ನಿನ್ನಯ ನಿರೀಶ್ವರವಾದವಾ
ಧೀ ಯೆಂದು ಬಿಟ್ಟು ಸೇಶ್ವರವಾದದೊಳು ನಿಂದು
ಓಯಾರದಿಂ ನಿತ್ಯಪದಮುಕ್ತಿಯಂ ಪಡೆವು
ದೈಯಧಿಕ ವೈಶೇಷಿಕಾ ನೀನು ಶಿವನಲ್ಲದಿಲ್ಲವೆಂದೆಯಿದೇಳ್ಗೆಯಿಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧ್ವಜವನೆತ್ತ್ಯ ಧ್ವಜಸ್ತಂಭವಮಂ ಸ್ಥಾಪಿಸೈ
ಕುಜನ ಶಾಕ್ತೇಯು ನಿನ್ನಯು ಶಕ್ತಿಯೇ ದೈವ
ವಜಡವೆಂಬಜ್ಞಾನವಮಂ ಬಿಟ್ಟು ಶಿವನೊಬ್ಬನೇ ದೈವವೆಂದರಿವುತಾ
ನಿಜದಿಂದ ಬದುಕಿದೆಂದು ಪೇಳುತಾ ಗೌತಮಮಾ
ಗ್ರಜನು ಗಾಣಾಪತ್ಯನಂ ನೋಡಿ ವಕ್ತ್ರವಾ
ರಿಜವಲರಲಾಗಿ ನುಡಿವುತ್ತಿರ್ದನಾಗಲಿನ್ನೇನೆಂದು ಬಣ್ಣಿಸುವೆನೂ ೪

ಎಲೆಲೆ ಗಾಣಾಪತ್ಯ ನಿನ್ನ ಮತವೆಂಬುದೇ
ಮಲದೋಷಕರ್ಮಪಾಶಂಗಳೆಂದೆಂಬವುಳಿ
ಯಲು ಸರ್ವವೂ ನಿತ್ಯವಸ್ತುವೆಂದೆಂಬುದಂ ಬಿಟ್ಟು ಶಿವನೇ ನಿತ್ಯನೂ
ಸಲೆ ಸರ್ವವೆಲ್ಲನಿತ್ಯತೆಯೆಂದು ತಿಳಿದು ಒದು
ಕೊಲಿದು ಮಾಯಾವಾದಿ ವಾಯೆಯೇದೈವವೆನೆ
ನೆಲದಲ್ಲಿ ದೂಷ್ಯವದಱಿಂ ಶಂಭುವೇ ಸ್ವಾಮಿಯೆಂದಱಿದು ನಡೆ ಎಂದನೂ ೫

ಇಂತಖಿಳ ವಾದಿಗಳು ಸಾಮರ್ಥ್ಯದಿಂ ನುಡಿವ
ನಂತ ಮತವೆಂಬ ಗಿರಿಗಂ ವಜ್ರವಾಗಿ ನಿ
ಶ್ಚಿಂತ ಗೌತಮನು ಕೋಳಾಹಳಂ ಮಾಡಲಾ ವಿಷ್ಣು ಬೋಧೆಯೊಳು ಕಲ್ತಾ
ಪಂತದಿಂ ಬಂದ ವಾದಿಗಳು ಮುರಿದಾಗ ವಿಷ
ದಂತ ಮುಱಿದಹಿಯಂತೆ ತಮ್ಮ ಬರಿಕೈಪರಿದ
ದಂತಿಗಳ ಮಾಳ್ಕೆಯಿಂ ಭಂಗಮಂ ಪಡೆವುತ್ತ ಹೋದರು ನಿಜಾಶ್ರಯಕ್ಕೇ ೬

ಮುನಿಪ ಗೌತಮನೊಳಗೆ ವಾದಿಸುತ ಸೋಲ್ತು ಘ
ಮ್ಮನೆ ತಾರ್ಕಿಕರ್ಗಳೆಲ್ಲುರ್ಕುಗುಂದುತದಾರು
ವನವ ಪೊಕ್ಕಲ್ಲಿ ಚಿಂತಿಸಿ ನೆನೆದರಾದಿಯೊಳು ತಮಗೆ ದುರ್ಬೋಧೆಯೊರೆದಾ
ವನಜಾಂಬಕನಱಿದು ಬಂದು ಹರಿ ಮುಂದೆ ನಿಲ
ಲನಿಬರುಂ ವಂದಿಸುತ ನಿನ್ನ ಬೋಧೆಯು ಕೇಳಿ
ಮನದೆಗೋಡೆಮಗಾದ ಭಂಗಮಂ ಬಿತ್ತರಿಸಲಳವೆ ಎನುತಂ ನುಡಿದರೂ ೭

ಹಿಂದೆ ಮೂವತ್ತಾಱು ತತ್ವಂಗಳೊಂದಕೊಂ
ದೊಂದು ಮತದಖಿಳ ದರುಶನಮಾರ್ಗರಾವೆಲ್ಲ
ರೊಂದಾಗಿ ಪೋಗಿ ವಾದಿಸಿದೊಡೆಮ್ಮಯ ವಾಕ್ಯವೆಂಬ ಮುಡಕೆಗಳಡಿಕಿಲಾ
ಒಂದು ದಡೆಯಿಂ ಹೊಡೆದು ಚೂರ್ಣಂಗಳಂ ಮಾಡು
ವಂದದಿಂ ಗೌತಮಂ ಕೋಳಾಹಳಂಗೆಯ್ದ
ನೆಂದು ವಿಷ್ಣುವಿಗೆ ಪೇಳಲು ಕೇಳಿ ನುಡಿದನನಿಬರ ಕೂಡೆ ನಲವಿನಿಂದಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಜದಿರಿ ಬಂದು ನಾನೇ ಗೌತಮನೀಗ
ಭಂಜಿಸುವೆನೆಂದು ವಿದ್ವಾಂಸನಾಗುತ್ತಲಾ
ಕಂಜಾಂಬಕಂ ವೈಷ್ಣವಾಚಾರ್ಯ್ಯನೆಂಬ ನಾಮದೊಳೊಂದು ಘಟಿಯೆನಿಸುವಾ
ಕುಂಜರಂಗಳ ಮೇಲೆ ಪುಸ್ತಕವ ಹೇರಿಸು
ತ್ತಂ ಜಯಧ್ವಾನದಿಂ ಪಲ್ಲಕ್ಕಿಯೇಱಿಯತಿ
ರಂಜನೆಯ ವೈಭವದ ವಾದ್ಯಕಹಳಾರವದೆ ಬಹುಜನಂ ಸಹಿತ ಬಂದೂ ೯

ಬಂದಲ್ಲಿ ಗೌತಮಾಶ್ರಯದಲ್ಲಿ ಸದ್ಬುಧರ
ವೃಂದಸಹಿತಂ ಪೀಠದಲ್ಲಿ ಕುಳ್ಳಿರ್ದಡಾ
ಚಂದಮಂ ಕೇಳಿ ಬರುತಾ ವೈಷ್ಣವಾಚಾರ್ಯ್ಯನಿದಿರ ಸಿಂಹಾಸನದೊಳೂ
ಇಂದುಧರನಿಷ್ಠನಾನಂದದಿಂದಳವಡ
ಲ್ಕೊಂದೊಂದು ದುಃಪ್ರಶ್ನೆಯಂ ಮಾಡಿ ವಾದಿಸೆ ಮು
ಕುಂದನವನೆಲ್ಲವಂ ನಿಮಿಷಕ್ಕೆ ನಿಗ್ರಹವ ಮಾಡಿದಂ ಮುನಿಪುಂಗವಂ ೧೦

ಬಳಿಕ ನುಡಿದಂ ಗೌತಮಂ ವೈಷ್ಣವಾಚಾರ್ಯ್ಯ
ಖಳರಪ್ಪ ಮುನಿಗಳೊಡನೆಯ್ತಂದೆಯ್ಯೆ ನಿಮ್ಮ
ಬಳವಂತರೆನಿಪ ತಾಪಸರ ಪರಿಭವಗಳಂ ನಿಮ್ಮ ಮತದಧಿಕದೈವಾ
ನಳಿನಾಕ್ಷಗಾದ ಭಂಗಂಗಳಂ ನಿನಗೀಗ
ತಿಳುಪುವೆಂ ಮೂಱು ಯುಗದೊಳಗಮೃತಸಾರದ
ಗ್ಗಳಮಂ ವೃಷಾರ್ಕನಾ ರುದ್ರಂಗೆ ಪೇಳ್ದ ವೇದಾರ್ಥದೊಳದೆಂತೆಂದರೆ ೧೧

ಶ್ರೀ ವೈಷ್ಣವಾಚಾರ್ಯ್ಯ ಕೇಳದಂತೆನಲನಂ
ತಾ ವೈಮಹಾವೇದವೆನಲು ಬಹುಲಾಮ್ನಾಯ
ದಾ ವಿಶೇಷಂಗಳೊಳು ರುಗ್ಯಜುಸ್ಸಾಮಮುಮಥರ್ವಣಂ ಭೋಗಾತ್ಮವೂ
ಜೀವಾತ್ಮನಂತರಾತ್ಮಾ ವಿರಾತ್ಮಂ ಮತ್ತೆ
ಭಾವಿಸಲು ನಿತ್ಯಾತ್ಮವೆಂಬ ಪೆಸರುಳ್ಳವಿಂ
ತೀ ಒಂಭತ್ತುವೈಶೃತಿಗಳವರಲ್ಲಿ ಶಿವಮಹತ್ವಂ ಪೇಳ್ವುದೆಂತೆಂದೊಡೆ ೧೨

ವದಿಸಿ ಶಿವಗೆಣೆಯುಪ್ಪ ದೈವವುಂಟೆನುತಿಪ್ಪೆ
ಯದನೆಲ್ಲಿ ಕಂಡೆಯ್ಯೆ ಹರಿಭಜಕಯತಿಗಳೆ
ಹದಿನೇಳು ಜನ್ಮದಿಂ ಮೇಲೆ ನರಕಂಬಡೆವ ಚಾಂಡಾಲವಳವಡುವುದೈ
ಸದಮಲ ಸುಕೇಶಿಯಿಂ ಸೂರ್ಯ್ಯನಾರಾಯಣಂ
ಹೆದರಿ ಬಿದ್ದಂ ತಾಳಹಣ್ಣಂತೆ ಕುಷ್ಟದೇ
ಹದೊಳು ಘಂಟಾಕರ್ನ್ನ ನಿನ್ನವಯನೇ ಮತ್ತೆ ಕೇಳು ಹರಿಭಂಗಂಗಳಾ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿದೈವವೆಂದಾ ವೃಷಾರ್ಕನೊಳು ನಿಮ್ಮ ರುಷಿ
ಯರು ವಾದಿಸಲ್ಕೆ ದೃಷ್ಟಪ್ರತ್ಯಯಂಗಳಿಂ
ಪರಿಭವಂಬಡೆದು ಮೊದಲಾಡಿದಂತಾ ನಾಯಮಾಂಸಗಳಂ ತಿಂದರೂ
ಅರರೆಯಂತದಕೆ ಶ್ರುತಿ ಓಂ ಸತ್ಯಸಾಪೇಯ
ನಿರುತದಿಂ ಶ್ವಾಪಲಲ ಭಕ್ಷಣವೆಸಿಪ್ಪುದಂ
ಪರಿಕಿಸಿದುದಿಲ್ಲವೆಯೆಂದು ನುಡಿದಂ ಗೌತಮಾರ್ಯ್ಯನಘತಿಮಿರಸೂರ್ಯ್ಯಾ ೧೪

||ಸಾಕ್ಷಿ|| ಓಂ ಸತ್ಯಂ ಸತ್ಯೇ ಚಾಪೇಯಂ ಶ್ವಾಪಲಲಂತ್ಯೆ ಭಕ್ಷಿತಮಿತಿ ೧

ಅಂಡಜೋದ್ಭವನೊಡನೆ ವಾದಿಸಲು ವಿಷ್ಣುವಂ
ಹುಂಡನಾಯಾಗೆಂದವಂ ಶಪಿಸಲದಱಿಂದ
ಹಿಂಡಾದ ಹರಿಭಜಕರೀಶ್ವರನ ಭಕ್ತರೊಳು ಹೋರಿ ನಾಯಿಃಂ ವೇದವಾ
ಮಂಡಳಾಧಿಪನ ಮುಂದೋದಿಪೆನೆನುತ್ತಾಡಿ
ಕೊಂಡು ಬಂದದ ನಿಲಿಸೆ ಗಳ್ಳಿಕ್ಕೆಹರಿಮಹೋ
ದ್ದಂಡವಹ ಶುನಕವಾಗುತ್ತೋದಿದಂ ಪೂರ್ವಕಥನದಿಂದದ ಮಱಿದೆಯಾ ೧೫

ಹರಿ ಮಿಗಿಲೆನುತ್ತ ವೈಷ್ಣವರೊಂದು ಖರ್ವವೀ
ಶ್ವರಭಕ್ತನೊಳು ಹೋರುವರೆಲ್ಲರೊಂದು ದೆಸೆ
ವರ ವೃಷಾರ್ಕನ ಕಟಿಯಧೋರೋಮ ಒಂದೆಸೆಯೊಳಿರಿಸಿ ತೂಗಲ್ಕೆಯದಱೌ
ಸರಿಗೆ ಬಾರದೆ ಹೋದನ್ಯೆ ನಾನೆ ದೈವವೆಂ
ದಿರದಾಡಲಾ ವೃಷಾರ್ಕಂ ಕೃಷ್ಣನಂ ಮೆಟ್ಟು
ತುವರ ಸೀಳುತ್ತ ಕರುಳಂಕಿತ್ತು ಬಳಿಕವಂ ನುತಿಸೆ ಸಲಹಿದನಱಿಯೆಯಾ ೧೬

||ಸಾಕ್ಷಿ|| ನಾನ್ಯಥಾ ತಿಥಿಹೀನಾನಾಂ ಸ್ಥಾಪಯೇ ವಿಪ್ರಕರ್ಮಸು
ನ ದೇವೋ ನ ತ ಚಾಂಡಾಲೀ ಭಾವಯಂ ನಾಸ್ತಿ ಭಾವುತಃ ೨

ಮತ್ತಂಡಜೋದ್ಭವನ ಮುಂದೆಯಾ ಹರಿ ಮಿಗಿಲೆ
ನುತ್ತಿರಲವಂದಿರಿಗೆ ಶಾಪವೀಯಲ್ಕಾತನೆ
ಹೊತ್ತುಕೊಳಲಾ ವಿಷ್ಣುವಂ ಸೀಳ್ವಮಾತ್ರಕೆಱಗಲು ವೃಷಾರ್ಕಮುನಿನಿಂದಂ
ಉತ್ತುಮದ ದೂರ್ವಾಸಶಾಪದಿಂ ಬಾಲಿಯಂ
ತತ್ತೆಚ್ಚರಾಮಾವತಾರ ನಿಂ ಜರಕಂ ಬಿ
ಡುತ್ತಿರ್ದ ಬಾಣದಿಂ ಮಡಿ ಎಂದು ಶಪಿಸೆ ಮಡಿದಾಕೃಷ್ಣನೇನಧಿಕಮೋ ೧೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರನ ಮುಂದುದಯ ಕಾಲದೊಳು ಗಾರ್ಘ್ಯನಕೂಡೆ
ಹರಿ ತಾನೆ ದೈವವೆಂದಾಡಲು ವೃಷಾರ್ಕನವ
ನುರವ ಸೀಳ್ದಿಲುವ ಮುಳಿದಪೆನೆನುತ್ತೆಯಿತರಲು ನಡುಗಿದವ್ಮಾಯ್ಯ ಎಂದೂ
ಕರವೆರಡರಿಂ ಪಿಡಿದು ತನ್ನ ಬಾಯೊಳು ಯತಿಯ
ಹಿರಿಯ ಶೇಷಸ್ಸನಿಟ್ಟುಂಡನೆನೆ ನಾಣ್ನುಡಿಯ
ವರು ಬಱಿಯ ಮಾತನಾಡುವರಲೇ ಕೃಷ್ಣನಂತಿಂತು ಭಂಗಂಬಡುವರೇ ೧೮

ಈ ಪರಿಯ ಭಂಗದಿಂ ನಾಣ್ಗೆಟ್ಟು ವಿಷ್ಣು ತಾ
ನೇ ಪರಿಯ ದೈವವೈ ತೆಗೆ ನಿನ್ನ ವಾದದಾ
ಲಾಪವಾರ್ನಿನಾರು ಪೋಗೆಲವೊ ವೈಷ್ಣವಾಚಾರ್ಯ್ಯನೆಂಬೀ ನಾವುದಾ
ಪಾಪಿಯೆನೆ ಮಾರ್ನುಡಿಯ ನುಡಿಯದತಿ ಮೌನದಿಂ
ದಾ ಪೊತ್ತಿರಲ್ಕವನ ಕಂಡು ಗೌತಮ ಸಭೆಯ
ತಾಪಸರು ಘೊಳ್ಳೆಂದು ನಗಲು ಕಂಗೆಟ್ಟು ತಲೆವಾಗಿ ನೆಲನಂ ಬರೆದನೂ ೧೯

ಈ ತೆಱದೆ ವಾದದಿಂ ಮುಱಿದು ಭಂಗಿತನಾಗಿ
ಗೌತಮಾಶ್ರಯದಿಂದ ತಿರುಗಿದಂ ಚಿಂತಿಸುತ
ಪೀತಾಂಬರಂ ರಜತಪರ್ವತಕ್ಕಗ್ರ ಕೈಲಾಸದ ಸಭಾಸ್ಥಲದೊಳೂ
ಸಾತಿಶಯ ಸಿಂಹಾಸನದೊಳಖಿಳ ದೇವತಾ
ವ್ರಾತಗಣನಿಕರ ಮುನಿಸಂಕುಲಂ ಸೇವಿಪ ಪು
ನೀತ ಶಂಕರನ ಕಾಣುತ್ತ ಸಾಷ್ಟಾಂಗದಂಡಪ್ರಣಾಮಂಗೆಯಿದನೂ ೨೦

ಬಳಿಕೆದ್ದು ಸಾತ್ವಿಕ್ಯಚಿಹ್ನದಿಂ ತನ್ನ ಕರ
ನಳಿನಂಗಳಂ ಮುಗಿದು ನಿಂದಿರ್ದ ವಿಷ್ಣುವಂ
ಘಳಿಲನೀಕ್ಷಿಸುತಲೇನೈ ಹರಿಯೆ ನೀಂ ಬಂದ ಕಾರಣವದಾವುದೆನಲೂ
ಪ್ರಳಯವಿರಹಿತದೇವನ ಮಿತ ಜನರಂ ಕಾವ
ಸುಳುಹು ಪಾವನಮೂರ್ತಿ ದಶದಿಗ್ಭರಿತಕೀರ್ತಿ
ಯಳವಲ್ಲದಪ್ರತಿಮಲಿಂಗ ಕರುಣಾಪಾಂಗ ಜಯ ಜಯ ಎನುತ್ತ ನುಡಿದಂ ೨೧

ಜೀಯ್ಯ ಗೌತಮನ ಮನೆಯಲ್ಲಿ ಬರನೊಳಗುಂಡು
ಕಾಯಮಂ ರಕ್ಷಿಸಿಕೊಳುತ್ತವನ ಮೇಲೆಯ
ನ್ಯಾಯದಿಂ ಗೋವಧೆಯ ಹೊರಿಸಿ ಪಾರ್ವರು ನಿಮ್ಮನಾತನರ್ಚಿಸೆ ಗಂಗೆಯಾ
ಈಯ್ಯಲವರಂ ನಿಷ್ಠನುಱಿ ಶಪಿಸಿದಂತುಗೆ
ಯ್ಯಯ್ಯನುತ್ತೆನ್ನನಟ್ಟಲ್ಕೆನ್ನ ಬೋಧೆಯಿಂ
ದಾ ಯತಿಗಳಾತನೊಳು ವಾದಿಸುತ ಸೋಲಲಾನೇ ಪೋದೆನಾತನೆಡೆಗೇ ೨೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲೊಳಾ ಧರೆ ಜಲಾನಲ ವಾಯು ಗಗನ ಕುಮು
ದದ ಮಿತ್ರ ಮಿತ್ರಾತ್ಮರೆಂಬಷ್ಟಮೂರ್ತಿವಾ
ದದೊಳು ತರ್ಕಿಸಿ ನಿರೀಶ್ವರವೇದವಾದಂ ಜಗಂ ನಿತ್ಯದಾ ಕರ್ಮದಾ
ಹದನನಾ ಕಾಲಮಾಯಾವಾದ ಸಾಂಖ್ಯಯೋ
ಗದ ಮಾತು ಚಾರ್ವಾಕ ಬೌದ್ಧ ಜೈನರ್ಕಳಾ
ತುದಿಯ ಕಾಪಾಲಿಕಂ ನೀಲಪಟ ಭಾಟ್ಟಮುಖ್ಯಂಗಳಿಂ ತರ್ಕಿಸಿದೆನೂ ೨೩

ಇವನೆಲ್ಲವಂ ಮುಱಿಯೆ ಗೌತಮಂ ನಾನು ವೈ
ಷ್ಣವದಲ್ಲಿ ತರ್ಕಿಸಲು ಕೋಳಾಹಳಂಗೆಯ್ಯ
ಲವನಿಂದಲಾಂ ಭಂಗವಟ್ಟಿಲ್ಲಿಗೆಯ್ತಂದೆನೆಂದು ಬಿನ್ನವಿಸೆ ವಿಷ್ಣು
ಶಿವನಲ್ಲಿ ನಸುನಗುತ್ತಂ ಜಬೇಡಾವೆ ಬ
ಪ್ಪೆವು ಕಣಾ ನಾವವನ ವಾದಮಂ ಗೆಲ್ವೆವೆನು
ತವೆ ನುಡಿದನಾಹ ಸರ್ವಜ್ಞನಾ ಭಕ್ತನಂ ಮೆಱೆಯಬೇಕೆಂಬಳ್ತಿಯಿಂ ೨೪

ಸ್ಥೂಲೋನ್ನತಾಜಾನುಬಾಹು ಸಲ್ಲಕ್ಷಣವಿ
ಶಾಲ ವಕ್ಷದ ಮೇಲ್ಮುಲಾ ಪೈರಣೆಸುವ
ನ್ನಾಲಂಕೃತದ ರತ್ನಭೂಷಣದ ಮುಖದ ತಾಂಬೂಲ ಪ್ರಸನ್ನದಿಂದಾ
ಆ ಲೋಕನ ಪ್ರೌಢಿಯಿಂದ ವಿದ್ವಾಂಸರ್ಗೆ
ಮೂಲಿಗಂ ತಾನಾಗಿ ಶಂಭುಭಟ್ಟಾಭಿಧಾ
ನಾಲಾಪದೇಳ್ಗೆಯಿಂ ಪೊಱಮಟ್ಟು ವೈಭವದೊಳಡರಿದಂ ಪಲ್ಲಕ್ಕಿಯಂ ೨೫

ಎಡಬಲದೊಳಖಿಳ ಗಣನಿಕರ ಮುನಿಸಂಕುಲಂ
ಬೆಡಗಿನಿಂದ ವಿದ್ವಾಂಸರಾಗಿ ಪೊನ್ನಂದಳವ
ನಡರಿ ಕೋಟಾಕೋಟಿಯೋಲೈಸಿ ಬರುತಿರಲು ದೇವನಿಕರಂಗಳೆಲ್ಲಂ
ಬಿಡದೆ ಸೇವಕರಾಗಿ ಕೀರ್ತಿಸುತ ಬರಲು ಹಿಂ
ಗಡೆಯಲ್ಲಿ ಹನ್ನೆರಡು ಘಟೆಯಾನೆಗಳ ಮೇಲೆ
ಯಡಿಕಿಹೇರಿದ ಪುಸ್ತಕಂಗಳಿಂ ಶಂಕರಂ ನಡೆದ ನೇವಣ್ಣಿಸುವೆನೂ ೨೬

ಧರೆ ನಡುಗೆ ನಿಸ್ಸಾಳಕೋಟಿ ಭೇರಿಗಳು ಸಾ
ಗರದ ತಾಯಿಮಳಲುಗಾಣೆಸಲಾರ್ಭಡಿಸುತಿರಲು
ಬಿರಿದೆತ್ತಿ ಕರೆವ ಕಹಳಾನಾದವೆಣ್ದೆಸೆಯ ತುಂಬಿ ಜಯ ಜೀಯ್ಯವಾದೀ
ಕರಿಸಿಂಹ ಮಝು ಭಾಪೆನುತಿರ್ಪ ವಂದಿಗಳ
ಕರವೇತ್ರಧಾರಕರ ಸಂದೋಹದಿಂದ ಶಂ
ಕರನಖಿಳಭಕ್ತಸುಖಕರ ಚಂದ್ರಧರ ವೇದವರನವಮು ನಡೆತಂದನೂ ೨೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ತೆಱದ ವೈಭವದ ವಿದ್ವಾಂಸರಾಣ್ಮನಾ
ಗೌತಮಾಶ್ರಕೆ ನಡೆತಂದು ಪವನಸ್ಥಲದೊ
ಳೋತಿಟ್ಟ ಸಿಂಹಾಸನ ಜಯ ಜೀಯ್ಯ ಮಝು ಭಾಪೆನುತ್ತಿರೆ ಮಂಡಿಸೀ
ಮಾತುಗಾಱಿಕೆಯಿಂದಲವರಿವರ ಸೋಲಿಸಿದ
ಗೌತಮನ ಬರಹೇಳೊ ಶಂಭುಭಟ್ಟನ ಕೂಡೆ
ಗೌತಮುಗದೇಂ ಬಲ್ಮೆ ಬೇಗ ಕರೆಯೆಂದನಾ ಸರ್ವಬುಧನಿಕರದೊಡೆಯಂ ೨೮

ತವೆ ಶಂಭು ಭಟ್ಟಸಂಬಧಿಕ ವಿದ್ವಾಂಸ ಪುಂ
ಗವನೋರ್ವನೆಯ್ತಂದು ವಾದಕ್ಕೆ ಕುಳಿತನೆಂ
ದವಸರದವರ್ಪೇಳೆ ನಸುನಗುತ್ತಂ ಗೌತಮಂ ನುಡಿದನೆನ್ನ ಕೂಡೇ
ಶಿವನಿಲ್ಲವೆಂಬಾತನೈಸಲೇಬಪ್ಪ ನಿಂ
ದವನಾರದಾದೊಡಾ ವಾದಮಂ ಮುಱಿವೆನೆಂ
ದು ವಿಶೇಷ ವೈಭವದೊಳೆಯಿತರುತ್ತಿದಿರೆ ಮಣಿ ಪೀಠದೊಳು ಕುಳ್ಳಿರ್ದನೂ ೨೯

ಅತಿಶಯದ ವೈಭವದೊಳೊಪ್ಪಿರ್ದ ಗೌತಮನ
ಸ್ಮಿತವದನಮಂ ನೋಡಿ ಶಂಭುಬಟ್ಟಂ ಮಹೋ
ನ್ನತಿಯಿಂದೆ ಮಾಡಿದಂ ಪ್ರಶ್ನೆಯಂ ಭೋ ಗೌತಮಾ ತವ ಮತಂ ಕಿಂ ವದಾ
ಇತಿ ವಚಶ್ಶ್ರುತ್ವಾದ ಪುನರಾಹ ಗೌತಮಂ
ಶತಕೋಟಿ ಕಮಲಜಾಂಡೇಷು ಸಶಿವೋಸ್ತಿನಿ
ಶ್ಚಿತಖಂಡನಂ ಕುರು ಎನುತ್ತ ನುಡಿಯಲು ಕೇಳಿ ನುಡಿದನಾ ಸರ್ವೇಶ್ವರಂ ೩೦

ಬಿಡದಾ ಪ್ರಮಾಣ ಪ್ರಮೇಯ ಸಂಶಯ ಮುಖ್ಯ
ದೊಡನೆಸೆವ ಪದಿನಾಱು ತೆಱದ ವಾದಂಗಳೊಳು
ನುಡಿದನಾ ಪ್ರಶ್ನೆಯಂ ಕಟಕಿಯಿಂ ಶಬ್ದಚ್ಛಲತ್ವದೆ ಶಿವೋಸ್ತಿ ಕಿಂ ಕಿಂ
ಒಡನೆಯಂತಾಗೆ ನದ್ಯಸ್ತಿಯೆಂಬರ್ಥವೇ
ಇಡಿಕಿಱಿದ ಮಳಲು ತೊಱೆಯೊಳಗುಂಟೆನುತ ಕವಿಗ
ಳೊಡೆಯನಹ ಶಂಭುಭಟ್ಟಂ ವಚಿಸಲಾಗಿ ಕೇಳುತ್ತ ನಕ್ಕಂ ಗೌತಮಂ ೩೧

ನಿಲ್ಲಲೇ ಶಂಭುಭಟ್ಟಾ ಶಿವಶ್ಚೇತಿ ತ
ತ್ಪುಲ್ಲಿಂಗವಾಗಿ ನಾಂ ನುಡಿದುದಂ ನಿಲಿಸಿ ನದಿ
ಯಲ್ಲಿ ಮಳಲುಂಟೆಂದೆಯಯ್ಯ ಶಿವಮಿತಿ ಸಿಕತಕಂ ನಪುಂಸಕಲಿಂಗವೈ
ಮಲ್ಲಿಕಾರ್ಜುನ ಶಿವಂ ಪುರುಷಾಧಿಪಂ ಕಣಾ
ಸಲ್ಲೀಲೆಯಿಂ ತುಂಗಭದ್ರಾದಿ ವಾಹಿನಿಗ
ಳಲ್ಲಿ ಸುವಿರೂಪಾಕ್ಷಮುಖ್ಯ ಶಿವನುಂಟೈಸಲೇ ನಿನ್ನನುಡಿಯೇಯುಬದ್ಧಂ ೩೨

CC0. In Public Domain. Jangamwadi Math Collection, Varanasi

ಸೋಲವಾಯ್ತೇ ಶಂಭುಭಟ್ಟ ಎನೆ ನುಡಿದಂ ಕ
ಪಾಲಿಯಾ ಗೌತಮಂಗಿನ್ನಾವುದುಸುರೆನಲು
ನೀಲಕಂಠೋಸ್ತಿ ಎಂದೆನಲು ಗಿರಿಶಿಖರೋಸ್ತಿ ಎನೆ ಹರಂ ಪರ್ವತಾದೀ
ಆಲಯದೊಳಾ ಮಲ್ಲಿಕಾರ್ಜುನಂ ನಿಜವೆನು
ತ್ತಾಲಾಪಿಸಲ್ಕಕ್ಷಪಾದನಂತಾ ಶಿವಂ
ಮೇಲಾವುದೆನೆ ಮಹಾಸ್ಥಾಣುರ ಸ್ಥೀತಿ ನಷ್ಟ ನವಚನಕಭವನೆಂದಂ ೩೩

ಆಲಿಸಲರಣ್ಯದೊಳ್ಕೊರಡುಂಟೆನಲ್ಕಿಂದ್ರ
ಕೀಲದಡವಿಯೊಳರ್ಜುನಸ್ತ್ರೇಷ ಶಿವನುಂಟು ವಾ
ಚಾಲ ತ್ರಿವಾಲಭಂಗಿತ ಸಂಭುಭಟ್ಟ ಎನುತಂ ಗೌತಮಂ ಕುತಂಸ್ತ್ವಂ
ಶ್ರೀಲಲಿತವಾದಃ ಕುತಶ್ಚಯೇ ತಸ್ಮಾದ್ವಿ
ಶಾಲಸ್ಥಲಾತ್ಸಮುತ್ಥಾಯ ತವಜಲ್ಪಿತ
ಪ್ರಾಲಾಪವದನ ಸಂಚ್ಛಾದ್ಯೇಹಗಚ್ಛೇತಿ ಗರ್ಜಿಸಿಯೆ ನುಡಿದನಾಗಾ ೩೪

ನೀನಾರು ವಾದಬಾರ್ಬಾಯಿ ಮುಚ್ಚಿಕೊಳುತವೀ
ಸ್ಥಾನದಿಂದೆದ್ದು ಹೋಗೆಲೆ ಶಂಭು ಎಂ
ದಾ ನಿಷ್ಠ ಗೌತಮಂ ಮುಳಿದು ನುಡಿಯಲ್ಕೆಂದನೀಶ್ವರಂ ವಾಕ್ಯದಿಂದಾ
ಆನೇನು ಮುಳಿದವನೆ ಎನೆ ಕಣ್ಣವಿಕ್ಕೆ ತ
ತ್ಸ್ಥಾನದೊಳು ಕೈಯ್ಯಸೊಮ್ಮಾ ಕಣ್ಣ ಗತ್ತಿಯಿದೆ
ಮಾನಸಂ ಸಜ್ಜನಂ ನಾನೆಂಬ ಮಾಳ್ಕೆಯಾಯ್ತೆಲೆಲೆ ವಿದ್ವಾಂಸಯೆಂದಂ ೩೫

ಎನಲೆಂದನಾ ಶಂಭುಭಟ್ಟನೆಲೆ ಗೌತಮಾ
ನಿನಗೆ ಮತವೇನು ಶಿವನುಂಟೆಂಬುದೈಸಲೆ
ತನಗೆ ಶಿವನಿಲ್ಲವೆಂಬುದೇ ನಿಜವಿದಕ್ಕೆಯಾಂ ದೃಷ್ಟವಂ ತೋರ್ಪೆನೀಗಾ
ಮುನಿಗಳಿದಿರೊಳಗೆಂದೊಡಾವುದೆನೆ ಶಿವನಿಲ್ಲ
ವಿನಿತು ನೀ ನಿಶ್ಚಯವೆಂದು ಹಣೆಗಣ್ಣ ತೋಱಿದಡೆ
ಮಿನುಗೆ ನಗೆ ತಾಟು ಹೋಟಿನ ಹಿರಿಯ ನೀನಲಾ ಯೆಂದಾತನೇಗೆಯ್ದನೂ ೩೬

ಶಂಭುಭಟ್ಟಾ ನೀನು ಶಿವನಿಲ್ಲವಿಲ್ಲೆಂದು
ಡಂಭತ್ವದಿಂದ ಹಣೆಗಣ್ಣ ತೋಱಿದೆಯಲಾ
ಕುಂಭಿನಿಯೊಳೀಶನುಂಟೆಂದೆನುತ್ತಲೆನ್ನಂಗಾಲೊಳರಲ್ದಕ್ಷಿಯಾ
ಅಂಭಸ್ಸಮಗ್ರನೆನೆ ತೋರ್ವೆನುತಂ ತೋಱಿ
ಜಂಭಾರಿ ಹರಿಮುಖ್ಯರೆಯ್ದೆ ಕೀರ್ತಿಸುತಿರಲು
ರಂಭೆಯೂರ್ವಸಿ ಸಕಲ ಗಣನಿಕರಸಹಿತಂ ಪ್ರಸನ್ನನಾದಂ ಶಂಕರಂ ೩೭

Digitization by eGangotri and Sarayu Trust. Funding by MoE-IKS

ಇತ್ತಲೀ ಹಲಗೆಯಾಚಾರ್ಯ್ಯನಡಿಗಳ್ಗೆ ನಮಿ
ಸುತ್ತಲಾ ಕೆಂಚವೀರಾಹ್ವಯಂ ಸದ್ಭಕ್ತಿ
ವೆತ್ತು ಬಿನ್ನವಿಸಿದಂ ಜೀಯ್ಯ ವಾದಕ್ಕೆ ಧರೆಯೊಳು ಮೆಱೆದ ಶರಣಕಥೆಯಂ
ತತ್ತತ್ಯಮಂಗಳೇತಕೆ ಬಂದವೆಂದೊಡೆ ನ
ಗುತ್ತ ನುಡಿದಂ ದೇಶಿಕಂ ಕಲ್ಪ ಕಲ್ಪದೊಳು
ದಾತ್ತ ಲೀಲೆಗಳ ಕಥೆಯುಂಟೆಂಬುದಱಿಯೆಯಾ ಯೆನಲಹುದು ದೇವ
ಎಂದಂ ೩೮

ಮಾದೇವನಾ ಗೌತಮಂಗೆ ನಾವುವನಕ್ಷ
ಪಾದನೆಂದಿತ್ತೊಡಳಿಕಾಗ್ರದೊಳು ಲಿಂಗಮಂ
ಸಾದರದೆ ಧರಿಸಿ ಭಜಿಸೆಂದು ವಾದಾಗ್ರಗಣ್ಯಾದಿ ಪಟ್ಟಂಗಟ್ಟಿ ತಾ
ವೋದದಿಂ ರಕ್ಷಿಸಿದೆನೆನೆ ಗುರುವೆಯಾ ಭ್ರಷ್ಟ
ರಾದ ಘನದಾರುವನದಾಶ್ರಯಿಗಳೇನಾದ
ರೋದಿ ನಿರವಿಪುದೆನಲು ಕೆಂಚ ವೀರಾಖ್ಯಂಗೆ ನುಡಿದನಾ ಹಲಗೆಯಾರ್ಯ್ಯಂ ೩೯

||ಸಾಕ್ಷಿ|| ಅಕ್ಷಪಾದಾದಯಸ್ಸರ್ವೇ ಶಕ್ತಯಸ್ಸರ್ವದಾ ಮುದಾ
ಧಾರಯಂತ್ಯಳಿಕಾಗ್ರೇಷು ಶಿವಲಿಂಗಂ ಚ ಸಾದರಂ ೩

ಕೂರ್ತುಕೇಳಿದ ಮೊದಲ ದುರ್ಬೋಧೆಯಿಂದಧವು
ವರ್ತನೆಯೊಳಾ ಮುನಿಗಳಾಚರಿಸುತಿರಲು ಋಷಿ
ಕರ್ತರೆನಿಸುವ ವಶಿಷ್ಠಾತ್ರಿಜಮದಗ್ನಿ ಮುಖಯತಿಗಳೀಶನ ಭಜಿಸಲೂ
ಆರ್ತತ್ವವೇನೆನುತ್ತಂ ಕರುಣದಿಂದ ಸಮ
ವರ್ತಿ ಹರನೊಲಿದವರಿಗಿಷ್ಟವೇನದನು ಪರಿ
ಪೂರ್ತಿಯಂ ಮಾಡಿ ಪಾಲಿಸುವೆನೆನೆ ಮರಳಿ ವಂದಿಸುತ ಬಿನ್ನಪವೆಂದರೂ ೪೦

ಜೀಯ್ಯ ನಿಃಕಪಟಿ ಗೌತಮನ ಮೇಲಿಟ್ಟರ
ನ್ಯಾಯಮಂ ಹೊರಿಸಿ ಶಾಪಂಬಡೆದ ಮುನಿಗಳಿಂ
ತೀಯುವನಿಯಲ್ಲಿ ಷಡ್ಡರುಶನಿಗಳಾಗಿ ಕೆಡುತಿರ್ದಪರು ಕರುಣದಿಂದಾ
ಆ ಯತಿಗಳಂ ಪಾಲಿಸುವುದೆನಲು ನಸುನಗುತ
ಕಾಯಜಾರಾತಿಯಂತೇ ಮಾಳ್ಪೆನೆಂದವರ
ನೋಯಾರದಿಂದ ಬೀಳ್ಕೊಟ್ಟನೀಶಂ ಧರ್ಮಕೋಶನಜ್ಞಾನನಾಶಂ ೪೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿಹಿರಕೋಟಿಪ್ರಕಾಶಂ ನಂದಿಕೇಶನಂ
ಸುಹಿತತ್ವದಿಂ ಕರೆದು ಧರ್ಮಸ್ವರೂಪ ವಿ
ಗ್ರಹನೇ ದ್ವಿತೀಯ ಶಂಭುವೆ ಕೇಳು ಗೌತಮನ ಮೇಲೆ ಕಪಟವನೆಸಗಿದಾ
ಅಹಿತವಹ ದಾರುವನದವರು ಶಾಪಂಬಡೆದು
ಬಹುದರುಷನಿಗಳಾದರವರಂ ನೀಂ ಸುಖಾ
ವಹಮೂರ್ತಿಯಾಗಿ ಬೋಧಿಪುದೆಂದು ಬೀಳ್ಕೊಟ್ಟನಭವನತ್ಯಧಿಕವಿಭವಾ ೪೨

ಆ ಸದಾಶಿವನಿರೂಪದೊಳು ನಂದೀಶ್ವರಂ
ಭಾಸುರದ ದಾರುವನದೆಡೆಗೆ ಬಂದಿಟ್ಟ ಸಿಂ
ಹಾಸನದೊಳಾ ಮುನೀಶ್ವರರ ಮಧ್ಯದೊಳೊಪ್ಪುತಿಹ ಸುಖಾವಹಮೂರ್ತಿಯಾ
ಲೇಸೆನಿಪ ದೇಹ ವೇಷಪ್ರಮಾಣೆಂತೆನಲು
ನೀ ಸಾದರದೆ ಕೇಳು ಪೇಳುವೆನೆನುತ್ತನಂ
ತಾ ಸಾಗರದ ಜಲವ ನೊಕ್ಕುಡಿತೆಯಂ ಮಾಡಿದವನೊಳೆಂದಂ ಕೃಷ್ಣನೂ ೪೩

ಎಸೆವ ಕೆಂಜೆಡೆಯ ಮಕುಟಂ ಕರ್ನ್ನಕುಂಡಲಗ
ಳಸಮಪ್ರಭಾವಂಗಳಿಂ ಮೂಱು ಕಂಗಳಿಂ
ಮಿಸುಪೇಕಮುಖವಲ್ಲಿ ತಳತಳಿಪ ಸುಲಿಪಲ್ಗಳಿಂ ನೀಳಬವರಿಗಡ್ಡಂ
ನಸುನಗೆಯ ಮೊಗದ ಲೇಪಿಸಿದ ಭಸ್ಮಾಂಗದಿಂ
ಪೊಸತಪ್ಪ ತತ್ರಿಪುಂಡ್ರಂಗಳಿಂದಂ ದಿವ್ಯ
ವಸನದಿಂದೆಡದ ಹಸ್ತದೊಳಧಿಕ ಪುಸ್ತಕಂಬಿಡಿದು ಮತ್ತಂ ಮೆಱೆದನೂ ೪೪

ಅಭಿನಯಿಪ ಬಲದ ಹಸ್ತದ ಮಕುಟದೆಡೆಯಲ್ಲಿ
ಶುಭಲಿಂಗಮಂ ಧರಿಸಿಕೊಂಡು ಪದ್ಮಾಸನದ
ವಿಭವದಿಂ ಮೂರ್ತಿಗೊಂಡಿಹ ಸುಖಾವಹಮೂರ್ತಿಯಂ ಕಂಡು ಸಂತೋಷವೂ
ಪ್ರಭವಿಸಲು ಮುನಿಗಳಷ್ಟಾಂಗದಿಂ ವಂದಿಸುತ
ನಭವದಿರುವಂತೆ ಜಯ ಜಯ ಚಾಂಗು ಬೊಲ್ಲೆಂಬ
ರಭಸದಿಂ ಕೀರ್ತಿಸುತ್ತಾಗ ಬಿನ್ನವಿಸಿದರು ತಮ್ಮ ಮನದಿಷ್ಟಂಗಳಂ ೪೫

ಎಲೆ ಸುಖಾವಹಮೂರ್ತಿಗುರುವೆ ನಾವಜ್ಞಾನ
ಬಲದೆ ಗೌತಮಂ ಕೊಟ್ಟ ಶಾಪಂಗಳಿಂ
ಪಲವು ದರುಷನಿಗಳಾಗುತ್ತಕಟ ದುರ್ಮಾರ್ಗದಿಂದ ವರ್ತಿಸಿ ಕೆಟ್ಟೆವೂ
ನಲಿದೆಮ್ಮ ಮುನಿಮುಖ್ಯರರ್ಚಿಸುತ ನಿಮ್ಮನಿ
ರ್ಮಲ ಮೂರ್ತಿಯಂ ನಮಗೆ ತೋಱಿಸಿದಿರಾಗಿನ್ನು
ಸಲಹೈಯ್ಯ ದಿವ್ಯಬೋಧೆಯನೆಮಗೆ ಪೇಳೆಂದುದಾ ತಾಪಸವ್ರಾತವೂ ೪೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯ್ಯಂ
ಶೀಲ ಷಟ್ಸ್ಥಲಿಹಲಗೆಯಾಚಾರ್ಯ್ಯನಾ ಶಿಷ್ಯ
ಮೌಳಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೪೭

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಸುಖಾವಹಮೂರ್ತಿಯೆಡೆಗಿಲ್ಲಿ ಮೂಱುಕಾಂಡಂ ಸಂಧಿ ಹನ್ನೆರಡಲಾ ೪೮

ಅಂತು ಸಂಧಿ ೧೨ ಕ್ಕಂ ಪದನು ೬೬೨ ಕ್ಕಂ ಗ್ರಂಥ ೭೭ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೫೯

ಸುಖಾವಹ ಮೂರ್ತಿಯು ಮುನಿಗಳಿಗೆ ಭೂಗೋಳವನರುಹಿದ ಕಥೆ

ಭುವನಕೋಶದೊಳು ಪಾತಾಳ ಜಲನಿಧಿಗಳಾ
ನವಖಂಡಪೃಥ್ವಿಯಾದ್ಯಾಪಾರವಲ್ಲಿಯೊ
ಪ್ಪುವ ಗಿರಿಗಳವರೊಳಗೆ ವಿಷ್ಕಂಭಪರ್ವತಾವಧಿಯಾಗಿ ಬಿತ್ತರಿಸುವೆಂ

ನರಿಯ ಕುದುರೆಯ ಮಾಡಿದ್ಯೆ ಕುದುರೆಗಳ ಪಿಂದೆ
ಪರಿವ ನಾಯ್ಗಳ ಮಾಡಿನಾಯನಂತಾ ಗಣೇ
ಶ್ವರನ ಮಾಡಿದೆ ಸಲದಿಯಂ ರಾಯನಂ ಮಾಡಿ ರಾಯನಂ ಕಸನುಡುಗುವಾ
ಪರಿಯ ಮಾಡುತ್ತ ಪಲ್ಲಕಿಯಿಂದಿಳಿಯದನ
ಹರಿಯಿಃಸುತ ತಪಸಿಯಂ ಸೂಳೆಮನೆಗಟ್ಟುವೆಲೆ
ಹಿರಿಯ ನಿನ್ನಯ ಚೇಷ್ಟೆಯಂ ಬಲ್ಲರಾರು ಪೇಳ್ಯೆಶಾಂತಮಲ್ಲೇಶ್ವರಾ ೧

ಸಪ್ತವ್ಯಸನಗುಣಂಗಳ ಲಿಂಗಗುಣವೆನಿಸಿ
ಸಪ್ತಸೋಪಾನಭಕ್ತಿಯ ಜಂಕಮಕ್ಕೆಸಗಿ
ಸಪ್ತಲಾ ಸಿತಸಸ್ಮಿತಾವನಾಂಭೋಜನಾಗುತ್ತ ಸಪ್ತಾಶ್ವತೇಜಾ
ಕ್ಲಪ್ತನೆಂದೆನಿಸಿ ಜಾಗರಣ ಸುಸ್ವಪ್ನಂ ಸು
ಷುಪ್ತಿಯೊಳುಃ ಲಿಂಗ ಜಂಗಮ ಗುರುಸ್ವಾಮಿ ಸು
ವ್ಯಾಪ್ತ ಮೇಲಣಗವಿಯ ಶಾಂತನಂಜೇಶ್ವರಮುಮಾಪ್ತಾರ್ಯ್ಯಮೂರ್ತಿ
ಶರಣೂ ೨

ಎಂದ ಮುನಿಗಳ ಬಿನ್ನಪವನಾಲಿಸುತ್ತಲಾ
ನಂದಿಕೇಶ್ವರ ಸುಃಖಾವಹಮೂರ್ತಿ ಬಳಿಕಲಾ
ನಂದದಿಂ ಪೇಳ್ದನಾ ಮೊದಲ ಬೋಧೆಯೊಳೆಸೆವ ಭುವನಕೋಶವದೆಂತೆನೇ
ಪಿಂದೆ ಕಾಮಿಕದೊಳು ಮೃಗೇಂದ್ರತಂತ್ರದೊಳೀಶ
ನಿಂದುಮುಖಿ ಗಿರಿಜೆಗೊರೆದುದ ನಿಂದ್ರನುಸುರ್ದನೊಲ
ವಿಂದ ಭಾರದ್ವಾಜಗಾಯರ್ಥ ಲಿಂಗಪೌರಾಣದೊಳಗುಂಟು ಬಳಿಕಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಲಿದು ಸರ್ವೇಶಂ ಮತಂಗಾದಿ ಮುನಿವರರಿ
ಗೊಲಿದೊರೆದ ಪಾರಮೇಶ್ವರತಂತ್ರದಲ್ಲಿ ಮ
ತ್ತ ಲಘುತರವೆನಿಸುವಾ ಸ್ವಚ್ಛಂದಲಲಿತ ಭೈರವಿಯೆನಿಸುವಾಗಮಾದೀ
ವಿಲಸತ್ಪ್ರಸಂಗದೊಳಗಣ ಭುವನ ಕೋಶಮಂ
ಎಲೆ ದಾರುವನವಾಸಿಗಳಿರ ನಿಮಗೊರೆವೆ ನಿ
ರ್ಮಲಚಿತ್ತದಿಂ ಕೇಳ್ವುದೆಂದನಂದಾ ಸುಖಾವಹಮೂರ್ತಿ ವಿನುತ ಕೀರ್ತೀ ೪

ಕೇಳಿರೈ ದಾರುವನವಾಸಿಗಳು ಮೊದಲೊಳೀ
ರೇಳು ಲೋಕವನು ಗರ್ಭೀಕರಿಸಿಕೊಂಡಿಪ್ಪ
ಮೇಳದಾ ಬ್ರಹ್ಮಾಂಡ ಸೃಷ್ಟಿಯಂ ನಿಲಿಸದೇಕದ್ವಯನಗೋಚರಶಿವಂ
ಪೇಳಲೇಂ ನಾದ ಬಿಂದುಗಳಮೃತಕಳೆಯೊಳ್ಚ
ಡಾಳ ಚಿಚ್ಛಕ್ತಿಯೆಸೆವಮೃತಕಲೆಯಿಂದಲಾ
ಭಾಳಾಕ್ಷನೆಯ್ದೆ ತನ್ನಾಜ್ಞೆಯಿಂ ಬೇರಲಾ ಪ್ರಕೃತಿ ವಿಕರಿಸಿದುದಾಗಾ ೫

ಅದಱಿಂ ಮಹತ್ವಮುಮಹಂಕೃತಿಯು ತರುವಾಯೊ
ಳೊದಗಿ ತೈಜಸ ತಾಮಸಾದಿವೈಕಾರಿಕದಿ
ನು ದಿಸಿದರು ದೇವತೆಗಳೆಂತೆನಲು ಭವನ ತೈಜಸದ ದಕ್ಷಿಣಭುಜದೊಳೂ
ವಿದಿತದ ರಜೋಗುಣದೊಳಾ ಬ್ರಹ್ಮನೊಗೆದನ
ಗ್ಗದ ವಾಮದೊಳು ಸಾತ್ವಿಕದಿನಾದನಾ ವಿಷ್ಣು
ಪದೆದು ನಿಜ ಭಾಳದೆ ತಮೋಸ್ವತಂತ್ರಸ್ವಯಾರುದ್ರಜನನಂ ಬಳಿಕ್ಕಾ ೬

ವೈಕಾರಿಕದೆ ಶಬ್ದವಾ ಸ್ಪರ್ಶ ರೂಪು ರಸ
ಪಾಕನದ್ಗಂಧವಾ ಕ್ರಮದಿಂದಲುದಯವಂ
ತಾಕಾಶ ವಾಯು ಶಿಖಿ ಜಲಧರೆಗಳಾದವೀಶಾನುಚರವಿಧಿಯಾಜ್ಞೆಯಿಂ
ಜೋಕೆಯಿಂ ಗಗನವೇ ತೆಱಪಾಗೆ ಮಧ್ಯದೊಳು
ಭೂಕ ಬಂಧಾಗ್ನಿಗಳ್ಕೂಡಿ ದಂಡವೊಂದಾಯ್ತು
ಲಾ ಕೇಳದೈವತ್ತುಕೋಟಿ ಗಾವುದದಳತೆಯಿಂದಿಪ್ಪುದದನು ಬಳಸೀ ೭

ಅಂಡವೈವತ್ತು ಕೋಟಿಯು ಗಾವುದದೊಳಿಹುದು
ಕಂಡಜಲವದ ಬಳಸಿಯ್ಯೆನೂಱು ಕೋಟಿಯೊಳ
ಖಂಡೋದಕಂ ಬಳಿಕ್ಕದ ಬಳಸಿ ಯ್ಯೆದರ್ಬುದದೊಳಗ್ನಿಯದನು ಬಳಸೀ
ಕೊಂಡೈದು ನಿರ್ಬುದದೊಳಂ ವಾಯುವದ ಬಳಸಿ
ಕೊಂಡೈದು ಕರ್ಬದೊಳಗಾಕಾಶವದಬಳಸಿ
ಕೊಂಡಾ ಮಹಾಕರ್ಬವೈದಹಂಕಾರವಂತದ ಬಳಸಿಯ್ಯೆದು ಪದ್ಮಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮಹತ್ವಂ ಬಳಿಕ್ಕದ ಬಳಸಿಯುವ್ಯಕ್ತ
ವಾ ಮಹಾ ಪದ್ಮವೈದೈವತ್ತು ಕೋಟಿಯಿಂ
ದಾ ಮಡಿಯೆ ಹತ್ತು ಹತ್ತಾಗಿ ಸಪ್ತಾವರಣವೆಲ್ಲಕ್ಕೆ ಕೂಡಲಾಗೀ
ಪ್ರೇಮಿಯೈವತ್ತೈದು ಪದ್ಮವೈವತ್ತೈದು
ರಾಮಣೇಯ್ಯಕ ಕರ್ಬವೈವತ್ತೈದರ್ಬು
ದ ಮಹಾಮಿಶ್ರವೈನೂಱುಆಯಿವತ್ತುಕೋಟಿ ಗಾವುದವಿನ್ನು
ಮೊದಲಂಡದಾ ೯

ಐನೂಱುಕೋಟಿಗಾವುದದುದಕವದಬಳಸಿ
ಏನೆಂಬೆನೈ ಹತ್ತು ಹತ್ತು ಮಡಿ ಶಿಖಿಮರುತ
ವಾ ನಭೋಹಂಕೃತಿಯುದನು ಮಹತ್ವಾವ್ಯಕ್ತವೆಂಬ ಸಪ್ತಾವರಣದಿಂ
ತಾನೀಶನಾಧಾರದಿಂದೊಪ್ಪುವಂಡವನ
ನೂನ ಶಿವನಾಜ್ಞೆಯಿಂ ಬ್ರಹ್ಮನೊಡೆಯಲ್ಕಾಗಿ
ಯಾ ನಾಮವೆಯ್ದೆಯಾ ಬ್ರಹ್ಮಾಂಡವೆಂದಾದುದೆನೆ ಮುನಿಗಳಿಂತೆಂದರೂ ೧೦

ಎಲೆ ದೇವ ವಿಲಸಿತಬ್ರಹ್ಮಾಂಡಖಂಡನಿ
ರ್ಮಲದಡಿಯ ಭಾಗ ಕೊಪ್ಪರಿಗೆಗೇನಾದಿಯೆನೆ
ಜಲದಲ್ಲಿ ಮುಳುಗದಂತಾವೆಯುದಱುಗ ಮೆಟ್ಟಿತ್ತಷ್ಟದಿಗ್ಗಜಗಳೂ
ನಿಲಲವಱ ಕೊರಲ ಸುತ್ತಂ ಬಳಸಿ ಬಿಗಿವುತ್ತ
ತಲೆ ಸಾವಿರಂಗಳಿಂ ಹೊತ್ತಿಪ್ಪುದಂಡಮಂ
ಬಲವಂತನಹ ಮಹಾಶೇಷನೆನುತಾರ್ಯ್ಯನವರ್ಗೆನುತಿರ್ದನಿನ್ನು ಕೇಳಿ ೧೧

ಎರಡು ಹೋಳಾದಡಿಯ ಕೊಪ್ಪರಿಗೆಯೊಳಗಿರ್ಪ
ವಿರದೇಳು ಪಾತಾಳವಾ ಮುಚ್ಚುಳಂತೆ ಮೇ
ಲಿರುತಿರ್ಪುದದಱಿಳಾಱುಂ ಸ್ವರ್ಗವಿನ್ನಡಿಯೊಳಿಪ್ಪ ಲೋಕಗಳನೊರೆವೆಂ
ತರದಿನಾ ಬ್ರಹ್ಮಾಂಡದಡಿಯೋಡಿನಿಂ ಮೇಲೆ
ಯುರು ಹೇಮಭೂಮಿ ಯೋಜನವೊಂದು ಕೋಟಿಯ
ಲ್ಲಿರುತಿರ್ಪನಂಬುಜಾಂಡಾಧೀಶನಪ್ಪ ಕಾಲಾಗ್ನಿರುದ್ರಾಗ್ರಗಣ್ಯಾ ೧೨

ಪ್ರಳಯ ಕಾಲದ ಸೂರ್ಯ್ಯಕೋಟಿ ಘನದೇಹದ
ಗ್ಗಳದ ತೇಜಸ್ಸಿನಿಂ ತನ್ನಂದದಿಂ ಮಹೋ
ಜ್ವಳದಖಿಳ ಗಣನಿಕರಪ್ಪೋಲೈಸಲೆಸೆವನಾತನ ತನುಪ್ರಭೆಯುನ್ನತಂ
ಘುಳುಘುಳಿಸಿ ಯೋಜನಂ ದಶಕೋಟಿ ಗಣನೆಯಿಂ
ಬಳದಿರ್ಪುದಗ್ರದೊಳಗೈದು ಯೋಜನ ಕೋಟಿ
ಗಳೊಳು ಧೂಮಂ ಮುಸುಕಿಕೊಂಡಿಹುದು ಸಹಜದಿಂ ಸಂಹಾರಕಾಲದಲ್ಲೀ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತನಾರ್ಭಟಿಸುತಂ ಬಳೆಯೆ ಮಸ್ತಕವೇಳು
ಪಾತಾಳಮಂ ಕಳೆದು ಮೇರುಮಧ್ಯದೊಳಿಹುದು
ಪೂತುರೇ ಮುನಿದು ನೋಡಲ್ಕಜಾಂಡಂ ಕೂಡೆ ಸಂಹಾರವಾಗಿ ಪೋಕುಂ
ಆ ತರಣಿ ದಾವಾಗ್ನಿ ವಾಡಬಂ ಸಿಡಿಲು ವಿ
ಖ್ಯಾತ ರುದ್ರನ ಭಾಳನೇತ್ರ ತತ್ಪ್ರಳಯಾಗ್ನಿ
ಈತನಾಕಾರವಾಯ್ತೆನೆ ರೌದ್ರಗಣ ನಿಕರ ವೋಲ್ಯೈಸಲೆಸೆವುತಿರ್ಪಂ ೧೪

ಕಾಲಾಗ್ನಿಭುವನವಿಂತಿಹುದವನ ಲೋಕದಿಂ
ಮೇಲೆಸೆವುದಾ ಯಮನ ನರಕ ಮಂಡಲ ವಿಹ ವಿ
ಶಾಲವಾ ಮೂವತ್ತುಕೋಟಯುಂ ಬಳಿಕೆರಡು ಲಕ್ಷಯೋಜನದಗಲದಿಂ
ಆಲಿಸಲು ನರಕಯಾತನೆಯೊಳಾ ಲೋಕದಾ
ಸ್ಥೂಲಾದಿ ಪಾತಕಂಗಳನೊರೆವೆನೈಯ್ಯಯತಿ
ಜಾಲವೇ ಮುಂದೆ ಶಿವಧರ್ಮೋತ್ತರದೊಳಾಗಮದೊಳೆಂದು ಗುರು
ನುಡಿದನೂ ೧೫

ಆ ವಿವಿಧ ನರಕಮಂಡಲದಿಂದ ಮೇಲೆಯಾ
ಮೂವತ್ತಮೂಱು ಸಾಸಿರ ಗಾವುದದ ಬಯಲ
ಲಾ ವಿಹಿತವದಱ ಮೇಲವನಿ ತೊಂಭತ್ತು ಲಕ್ಷದ ಯೋಜನದ ದಟ್ಟದಿಂ
ತೀವಿರ್ಪುದದಱಿಕೊಳೆಂಭತ್ತೈದುವರೆಲಕ್ಷ
ಗಾವುದಮಯುಃ ಕಾಂತ ಮುಂತದಱ ತುದಿಯಲ್ಲಿ
ಯೇ ವಿಶೇಷದ ಸುವರ್ಣ್ಣದ ಭೂಮಿ ನಾಲ್ಕುವರೆಲಕ್ಷ
ಯೋಜನದೊಳಿಹುದೂ ೧೬

ಮಂಡಿಸಿದ ತದ್ಭುವನವೀಗ ಭಾವಿಸಲು ಕೂ
ಷ್ಮಾಂಡ ಗಣವರನದಾತಂ ಪರಾಕ್ರಮದಿಂದ
ದಂಡಪಾಣಿಯ ಮೇಲಣಧಿಕಾರಿ ಧನು ಶರ ಕೃಪಾಣ ಫಲಕಂಗಳಾಂತೂ
ಚಂಡಕರ ಕೋಟಿ ತೇಜದೊಳಿರ್ಪನಲ್ಲಿಯಾ
ಮಂಡಲದ ಮೇಲೆ ನವ ಸಾಹಸ್ರಯೋಜನದಿ
ನಂಡದೊಳಗಣ ಮಹಾತಳ ಲೋಕವಿಪ್ಪುದದನೇನೆಂದು ಬಣ್ಣಿಸುವೆನೂ ೧೭

ಇರದೆಯಂತಾ ಮಹಾತಳದಗಲವೀಗ ಬಂ
ಧುರದಿಂದ ಹತ್ತುಕೋಟಿಯ ಹರಹು ಹತ್ತುಸಾ
ವಿರಯೋಜನೋನ್ನತಂ ಮೇಲಾರಸಾತಳತಳಾತಳದಗ್ಗ ದ ಸುತಳವೂ
ವರ ನಿತಳ ವಿತಳವತಳಂಗಳೇಳಕ್ಕೆ ಈ
ಪರಿಯಗಲವುನ್ನತಂ ವರ್ಣ್ಣಫಣಿಗಳನಸುರ
ವರರರ್ಚಿಸುವ ಲಿಂಗ ಮುಖ್ಯಮಂ ತಱುವಾಯೊಳೊರೆವೆನೆಂದಂ ದೇಶಿಕಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಮಹಾತಾಳ ಹೇಮವರ್ಣ್ನ ರತ್ನದ ಹರ್ಮ್ಯ
ವಾ ಮಹಾಶೇಷನರಸೆಯ್ದೆ ಮುಚುಕುಂದ ಬಲಿ
ನಾಮು ರಾಕ್ಷಸರಲ್ಲಿಗಂ ಶಿವಂ ದೈವ ಉನ್ನತರಸಾತಳ ಲೋಕವೂ
ಆ ಮಹಿಯೆ ಬಿಳ್ಪು ವಾಸುಗಿ ಸುಪರ್ಣ್ನರು ದೇವ
ನೇ ಮಹಾಶಂಭು ಮೇಲಣ ತಳಾತಳವರ್ಣ್ನ
ವೇ ಮಳಲವೊಲಾ ವಿಕಟ ಹಿರಣ್ಯಾಕ್ಷ ನರಕಾಸುರಂ ಶಂಕರನಲಾ ೧೯

ಸ್ವಾಮಿಯುನ್ನತ ಸುತಳ ಪೀತ ಪಕ್ಷಿಕ ಕಾಲ
ನೇಮಿಗಳು ನೀಲಕಂಠಂ ಕೇಳು ಪವಳದಂ
ತಾ ಮೇಲೆ ನಿತಳವಾ ಪ್ರಹ್ಲಾದ ತಾರಕಾದಿಗಳಗ್ನಿ ಮುಖಿನಂತಕಂ
ಪ್ರೇಮದೊಳುಮಾಪತಿಯುದೂರ್ದ್ಧ್ವಕ್ಕೆ ವಿತಳವಾ
ಭೂಮಿ ಬಿಳಿದಸುರಕಂಪಕನೆಸೆವ ಸರ್ವೇಶ
ನೈ ಮತ್ತೆಯತಳದಡಿ ವಿತಳದಗ್ರದೊಳೊಂದು ನೆಲೆ ವಿರಾಜಿಸುತಿರ್ದುದೂ ೨೦

ಅದು ಕೋಟಿಯೆರಡು ಸಹಿತೆಂಭತ್ತುಯೆಂಟು ಲ
ಕ್ಷದ ಯೋಜನದ ದಟ್ಟವಾ ಭೂಮಿ ಮಿಸುನಿಯಂ
ದದ ತೇಜದಿಂದ ಸಾವಿರ ಯೋಜನದ ಗುಹೆಯುದೊಂದು ಮೆಱೆದಿಪ್ಪುದಲ್ಲೀ
ವಿದಿತ ನವರತ್ನ ಸಿಂಹಾಸನದೊಳಳವಟ್ಟು
ಮುದದಿಂದ ಹಾಟಕೇಶ್ವರನೆಂಬ ಗಣವರಂ
ಸದಮಲದ ನಿಜದೇಹಕಾಂತಿಯು ಗಣಂಗಳೋಲೈಸಲೊಪ್ಪುತ್ತಿರ್ಪನೂ ೨೧

ಎಲೆ ಮಗನೆ ಕೇಳೊಂದು ಕೋಟಿ ಕಾಮರ ಗೆಲ್ವ
ಮಲಹರಂ ಸಿಂಧೂಬಲ್ಲಳನಿಹಃಪ್ಪಗೆಯಾಂಡ
ರೊಲಿದಲ್ಲಿ ಸೂಳೆ ನಿಂಬಿಯು ಬಳಿಗೆ ಬಂದ ಸುರಸತಿಯರಂ ಮರುಳುಮಾಡೀ
ದಲಘು ಭಿಕ್ಷಾಟಣದ ಸರ್ವೇಶ್ವರನ ಪೋಲ್ವ
ಶುಲಭನಾ ಹಾಟಕೇಶ್ವರನಖಿಳ ದೇವಗಣ
ಕುಲ ವಿಮಾನಂಗಳೋಲೈಸಿ ಬರಲಿರ್ಪನಾ ಸಿಂಗರವ ಪೊಗಳಲಳವೇ ೨೨

ಸುರರು ಸಿದ್ಧರು ಸಾಧ್ಯರಾ ಭಗಿನಿಯರು ಮಿಸುಗು
ವುರು ಮಾತೃದೇವತೆಯರಾ ಯೋಗಯೋಗಿಣಿಯ
ರರಿದೆನಿಪ ವಿವಿಧ ವಸ್ತುಗಳು ನೆಲಸಿರ್ಪ್ಪವಾ ಗಂಧರ್ವಕಾಮಿನಿಯರೂ
ಪರಿಪರಿಯ ಭೋಗದಿಚ್ಛೆಯುವರಿಷ್ಟಾರ್ಥಮಂ
ಕರುಣಿಸುತ್ತಾ ಗಣೇಶ್ವರನಿಪ್ಪನದಱ ಮೇ
ಲುರುತರದ ದಶಸಹಸ್ರೋನ್ನತದೊಳತಳಲೋಕಂ ವಿರಾಜಿಸುತಿರ್ಪುದೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಲವರ್ಣ್ಣಂ ಹಯಗ್ರೀವನುರುನಮುಚಿಯಾ
ಭೀಲವಹ ಶಂಖುಕರ್ಣ್ಣರು ಭಜಿಸುತಿಹ ಲಿಂಗ
ನೀಲಕಂಠಂ ಮೆಱೆದನಧಿಕ ವೈಭವದಿಂದಲಿಂತೊಪ್ಪುತಿಪ್ಪ ತಳದಾ
ಮೇಲೆಯಾ ಹತ್ತು ಸಾವಿರ ಯೋಜನೋನ್ನತದ
ಭೂಲೋಕಮಂ ದ್ವೀಪಮಂ ನೃಪರ ಶರಧಿಯಂ
ಶ್ರೀಲಲಿತದಾಹಾರ ಮೇರುಪರ್ವತ ಮುಖ್ಯವಾದವಂ ಬಿತ್ತರಿಪೆನೂ ೨೪

ಆರರೆಯಾ ಬ್ರಹ್ಮಾಂಡದಡಿಯ ಖರ್ಪರದೋಡಿ
ನರುಗದಱ ದಟ್ಟವಂತೊಂದು ಕೋಟಿಯ ಮೇಲೆ
ಪರಿಕಿಸಲ್ಕೆಪ್ಪತ್ತಯೇಳು ಲಕ್ಷಂ ಗಾವುದಂಗಳದ ಱೊಳವಳೆಯಂದಾ
ಪರಿಗಣನಯಧಿಕ ಲೋಕಾಲೋಕವೆಂದೆಂಬ
ಗಿರಿಯವಧಿಯಾಗಿ ಮೂಕೋರ್ಟಿಯುಂ ಮೇಲೆ ಬಂ
ಧುರದ ನಾಲ್ವತ್ತೆಂಟು ಲಕ್ಷಯೋಜನ ಮಾತ್ರ ಮಾಧಕಾರದೊಳಿರ್ಪುದೂ ೨೫

ಪೇಳಲಾ ಬ್ರಹ್ಮಾಂಡದೋಡಿನೊಳವಳಯದ ಏ
ಶಾಲದೊಳಗೊಂದು ಕೋಟಿಯ ಮೇಲೆ ಯಿಪ್ಪತ್ತ
ಯೇಳು ಲಕ್ಷದ ಪವಣೊಳಿಪ್ಪುದಾ ಗರ್ಭೋದಕದ ಶರಧಿಯಲ್ಲಿ ಕಮಠಾ
ಶೈಳಸದೃಶಂ ತಿಮಿತಿಮಿಂಗಿಳಂ ಬಲಮುರಿಯ
ಮೇಳವದ ಶಂಖ ಗಿರಿಸಮಶಕ್ತಿಯಿಂ ಪ್ರಳಯ
ಕಾಳಮೇಘದ ದನಿಯ ಪೆರ್ದೆರೆಗಳಿಂದೆಸೆವುದದಱ ಒಳವಳಯದಲ್ಲೀ ೨೬

ಹತ್ತು ಕೋಟಿಯ ಮೇಲೆ ಹದಿನಾಱು ಲಕ್ಷವೆನಿ
ಪುತ್ತಮದೊಳೆಸೆವ ಲೋಕಾಲೋಕ ಪರ್ವತವು
ದಾತ್ತವಾ ಗಿರಿಯ ತುದಿಯೊಳಗೊಂದು ಗಾಲಿ ಮೇರುವಿನ ಮೇಲೊಂದು ಶಂಖಂ
ಸುತ್ತಿ ಬರುತಿರ್ಪುದಾ ದಿನಮಣಿಯ ತೆಱವಲ್ಲಿ
ತತ್ತದ್ದಿಶಾಂತರದ ದಿಕ್ಪಾಲರುಗಳು ಮೆಱೆ
ವುತ್ತಿರ್ಪರದಱ ಒಳವಳಯದೊಳು ಸೌವರ್ಣ್ಣಭೂಮಿ ರಾಜಿಸುತಿರ್ಪುದೂ ೨೭

ಆ ರುಚಿರ ಸೌವರ್ಣ್ಣಭೂಮಿ ದಶಕೋಟಿಯುಂ
ಈರೆಂಟು ಲಕ್ಷಯೋಜನವ ಮೀರರಿಪ್ಪರದ
ಱೋರಣದೊಳರುವತ್ತುನಾಲ್ಕು ಮೂವತ್ತೆರಡು ಹದಿನಾಱು ಯೆಂಟು ನಾಲ್ಕು
ಈರೊಂದು ಲಕ್ಷಗಾವುದದಲ್ಲಿ ಜಲ ದುಗ್ಧ
ಚಾರು ದಧಿ ಸರ್ಪಿಮಧುವಿಕ್ಷುಲವಣಗಳೆಂಬ
ವಾರಿಧಿಗಳೇಳು ಬಳಸಿರ್ದಡೆಯ ಧರಣಿ ಸಪ್ತದ್ವೀಪವೆಂದೆನಿಪವೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಪುಷ್ಕರಂ ಶಾಕವಾ ಕ್ರೌಂಚ ಕುಶವು ಶಾ
ಲ್ಮಲಿಯುಹೋ ಪ್ಲಕ್ಷ ಜಂಬೂದ್ವೀಪ ವಿಂತಿವಱ
ನೆಲದ ವರ್ನ್ಣಂ ಬಿಳಿದು ಕೆಂಪು ಕಪಿಲಂ ನೀಲವಾ ಶ್ವೇತರಕ್ತಚಿತ್ರಾ
ಸಲೆ ಲಿಂಗ ಸೋಮೇಶ ವಿಶ್ವೇಶನಾ ಸ್ಥಾಣು
ಒಲು ರುದ್ರ ಭೀಮೇಶ್ವರಂ ಹರಂ ಭಾವಿಸ
ಲ್ಪಲವು ನಾಮಂಗಳಾ ಪುಷ್ಕರಾದಿಗಳೇಳಕೞನೃಪರ ತತ್ಕ್ರಮದೊಳೂ ೨೯

ಖ್ಯಾತಸವನಂ ಭವ್ಯನಾ ಲಸದ್ಯುತಿಮತಂ
ಜ್ಯೋತಿಷ್ಮತನು ಮಗ್ನಿಬಾಹು ಮೇಧಾವಿ ವಿ
ಖ್ಯಾತನಗ್ನೀಂದ್ರರೇಳಾ ಪ್ರಿಯವ್ರತನ ಸುತರು ಬಳಿಕ ಜಂಬೂದ್ವೀಪದಾ
ರೀತಿಯಂ ಪೇಳ್ವೆನಗ್ನೀಂದ್ರನಾತ್ಮಜವೃಷಭ
ನಾತಗೋತ್ತಾನಪಾದ ನೆನಿಪ್ಪ ನಾಮವವ
ಗೋತು ಪುಟ್ಟಿದ ಮಕ್ಕಳೊಂಭತ್ತುಕೊಂದು ಲಕ್ಷವನಿಯಂ ಹಂಚಿತ್ತನೂ ೩೦

ಅವರ ನಾಮಂ ಭರತ ಕಿಂಪುರುಷ ಹರಿಮೇರು
ವವನಿಪನಿಳಾವೃತಂ ರಮ್ಯಕ ಹಿರಣ್ಮಯು
ಪ್ರವರ ಕುರು ಭದ್ರಾಶ್ವಕೇತು ಮಾಲ್ಯರುಗಳೊಂಭತಕ್ಕೆ ಹಂಚಿಕೊಟ್ಟಾ
ವಿವರವಾ ಹಿಮಹೇಮ ಶಿಖರಿ ನೈಷದ ನೀಲ
ದವನಿಧರವಾ ಶ್ವೇತಶೃಂಗವಾ ಮಾಲ್ಯವಾನ್
ತವೆ ಗಂಧಮಾದನಾಹ್ವಯುದೆಂಟು ಗಿರಿ ಮೆರೆಯಾ ಖಂಡಗಳನೊರೆವೆನೂ ೩೧

ಬಳಸಿರ್ದ ಲವಣವಾರ್ಧಿಯೆ ಬಿಲ್ಲು ಹೆದೆಯಂತೆ
ಬಿಳಿದಾಗಿ ಮೂಡಪಡುವಣ ಶರಧಿಗಾಂತ ಹಿಮ
ಕುಳನಗಂ ನಡುವೆ ದಶಸಾಹಸ್ರಯೋಜನಂ ಭರತಖಾಂಡಂ ಮೇರುಗೇ
ಎಳಸಿ ತೆಂಕಲೊಳಿಪ್ಪುದಾ ಚಿತ್ರಧರೆಯು ಕಲಿಯು
ಬಳವಲ್ಲಿಯನ್ಯಾಯ ಕಪಟ ಬಹುದರುಷನಂ
ಗಳ ಭಜನೆಯುದಱಿನವರಾಯುಷ್ಯವಲ್ಪವಾಗುತ್ತ ನೂರ್ವರುಷವಾಯ್ತೂ ೩೨

ಎಳಸಿ ಭರತದೊಳು ಮಾಡಿದ ಪುಣ್ಯಪಾಪಂಗ
ಳುಳಿದ ಧರೆಯಲ್ಲಿ ಭೋಗಿಪರ್ಸೆಸೆ ಮತ್ತಲ್ಲಿ
ಘಳಿಸಲಿಲ್ಲದರಿನಿಲ್ಲಿಯೇ ಮಾಡಿಕೊಂಬುದಾ ಬುದ್ಧಿಯುಳ್ಳವರಕ್ಕಱಿಂ
ಬಳಿಕ ಹಿಮಗಿರಿಯಗಲ ಸಾಸಿರವದುದ್ದಮು
ಜ್ವಳದೆರಡುಮಡಿ ಗಾವುದಂ ಸುರರು ಕೂರ್ತಸಿ
ರ್ಮಳ ಶಿವನ ಪಾರ್ವತೀಪತಿಯೆಂದು ಭಜಿಸುವರು ಸೌಭಾಗ್ಯಮಯ
ದೊಳಿಹುದೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಗಿರಿಯೊಳೊಗೆದು ದಕ್ಷಿಣದಲ್ಲಿ ಪರಿದು ತ
ದ್ಭಾಗೀರಥೀಗಂಗೆ ಲೋಕಪಾವನೆಯಾಗಿ
ಸಾಗರವ ಕೂಡಿತ್ತು ತತ್ರ್ಯಂಬಕಗಿರಿಯೊಳುದಿಸಿತಂದಾ ಗೌತಮೀ
ಮೇಗೆಯಾ ಸೌಮ್ಯಗಿರಿಯಿಂ ಕೃಷ್ಣವೇಣಿ ಭೂ
ಭಾಗದೊಳ್ಮೆರೆದುದಾ ವೇದಪರ್ವತದಿಂದ
ರಾಗಿಸುವ ತುಂಗಭದ್ರೆಗಳು ನೀಲಾದ್ರಿಯಿಂ ಕಾವೇರಿಯುತ್ಪತ್ತಿಯೂ ೩೪

ಬಹು ಪರ್ವತಂಗಳಿಂದುದಿಸಿರ್ದ ನದನದೀ
ನಿವಹಂಗಳಂ ಬಲ್ಲರಾರ್ವುಹಾ ಪರ್ವತಂ
ಸಹಜ ಕಾಶೀ ಗಯಾಧಿಕಕಃದ್ಗಿರಿಹಿಮದ ಕೇತಾರರಾಮೇಶ್ವರಾ
ನಿಯುತ ಕಾಳಾಸ್ತಿ ಕಾಂಚಿಯು ಹಂಪೆ ಮೊದಲಾದ
ವಿಹವು ದಿವ್ಯಸ್ಥಾನವಾ ಹಿಮಾದ್ರಿಯ ಬಡಗ
ಲೆಹಗೆ ಕಿಂಪುರುಷ ವರುಷಂ ಪಟ್ಟೆಯಂತೆರಡು ಸಾಗರಾವಧಿಯೊಳಿಹುದೂ ೩೫

ಸೀತಧರೆ ನವಸಹಸ್ರದ ಹರಹು ಹೇಮಾಂಗ
ರಾತಾಣದವರಿಗತ್ತಿಯ ಹಣ್ಗಳಾಹಾರ
ಓತೆಸೆವ ಸಾಹಸ್ರವರುಷದಾಯುಷ್ಯ ಉತ್ತರ ಹೇಮ ಶಿಖರಿಯವಧೀ
ಆ ತುದಿ ಸಹಸ್ರಯೋಜನದರ್ಧವೇ ಹರಹ
ಲಾ ತಿಳಿದು ಶಿವನನೀಶಾನನೆಂದಾ ಸುರ
ವ್ರಾತವರ್ಚಿಪುದದರ ಬಡಗಲಾ ಹರಿವರುಷ ನವಸಹಸ್ರದ ಯೋಜನಾ ೩೬

ರಜತವರ್ಣದ ಮನುಜರಿಕ್ಷುರಸ ಪಾನದಿಂ
ನಿಜದಾಯು ಸಾಹಸ್ರವೀಶಾನನಂ ಕೂರ್ತು
ಭಜಿಪರುರುತರದ ನಿಷದಾದ್ರಿಯಾ ಮೂಱು ಪರ್ವತವೆರಡು ವರ್ಷಂಗಳೂ
ಅಜಕಲ್ಪನೆಯೊಳು ಮೂಡಣ ಪಡುವಣಬ್ಧಿಗಡಿ
ಕುಜಮುಖ್ಯವಾ ಹೇಮವರ್ಣವದರುತ್ತರ
ವ್ರಜಸೌಖ್ಯಮಪ್ಪಿಳಾ ವೃತ ಮೇರುವಿಹ ವರುಷಮಂ ಬಣ್ಣಿಸುವನಾವವಂ ೩೭

ಹದಿನಾಱುಸಾಹಸ್ರಯೋಜನಂ ಮೇರುವಿನ
ವಿದಿತದೋಳಧಿಷ್ಠಾನವಾಯ್ತು ನವಸಾಹಸ್ರ
ದೊದವು ನಾಲ್ದೆಶೆಗೆ ಮೂಡಲು ಮಾಲ್ಯವಾನ್ತೆಂಕಲಾ ನಿಷದಗಿರಿ ಪಡುವಲೂ
ಸದಮಲದ ಗಂಧಮಾದನ ನಗಂ ಬಳಿಕುತ್ತ
ರದೊಳು ನೀಲಾದ್ರಿ ಜಂಭೂ ಫಲಾಶನದಿಂದೆ
ಹದಿಮೂಱು ಸಾಹಸ್ರವರುಷಾಯು ಹೇಮಾಂಗಿಗಳು ಭಜಿಪರೀಶ್ವರನನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀಲಾಚಲಂ ಹರಹು ಹತ್ತುಸಾವಿರವದೇ
ಮೇಲುದ್ದಸಾವಿರಂ ತತ್ತ್ರಯಾಚಲ ವರುಷ
ವಾಲಿಸಲ್ಕೂಡ ಪಡುವಣಶರಧಿಯವಧಿರಮ್ಯಕವರುಷ ನವಸಹಸ್ರಂ
ನೀಲಾಂಗಿಗಳು ವಟಫಲಾಹಾರಿಗಳು ಕುಜಂ
ನೀಲವೀರೈದು ಸಾವಿರವರುಷದಾಯುಷಂ
ಕಾಲಹರನಂ ದೇವದೇವನೆಂದರ್ಚಿಪರು ಬಡಗಲಾ ಶ್ವೇತಕುಧರಂ ೩೯

ಅಗಲ ಉದ್ದಂ ಸಾವಿರಂ ಮಹೇಶ್ವರನಂಘ್ರಿ
ಯುಗವನಮರರು ಭಜಿಪುರುತ್ತರ ಹಿರಣ್ಮಯಾ
ಖ್ಯಗೆ ಸೇರಿದವನಿ ನವಸಾಹಸ್ರವವರು ಕಿತ್ತೀಳೆಗಳ ಫಲವ ಮೆಲಿದೂ
ಮಿಗೆ ಧವಳರಾಗಿ ದಶಸಾಹಸ್ರವರುಷದಾ
ಯುಗಳಿನೊಪ್ಪುವರು ಬಡಗಲು ಶೃಂಗಪರ್ವತಂ
ಜಗದಲ್ಲಿ ಸಾವಿರದ ಹರಹುನ್ನತಂ ರುದ್ರನಂ ಸುರರು ಕೀರ್ತಿಸುವರೂ ೪೦

ಪರಿಕಿಸಲ್ಕದರುತ್ತರದ ನವಸಹಸ್ರವಾ
ಕುರುಭೂಮಿ ಕದ್ದಾಳ ಕುಸುಮವರ್ಣಂ ಬಡಗ
ಲುರು ಲವಣವಾರ್ಧಿಗಡಿ ಭರತಖಾಂಡದ ತೆಱದೆ ಬಿಲ್ಲಂತೆ ರಾಜಿಸೂದೂ
ಪರಮಾಯು ಹದಿಮೂಱು ಸಾವಿರಂ ಬಡವರಾ
ತರುಗಳಿಂ ಕಾಮಿತಫಲಾಂನಮಂ ಕೊರ್ಳುಸ
ರ್ವರು ರುದ್ರನಂ ಭಜಿಪರಾ ಲವಣವಾರ್ಧಿಯುತ್ತರದೆಡೆಯ ಭೂಮಿಯಲ್ಲಿ ೪೧

ಅರರೆ ಚಂದ್ರದ್ವೀಪ ಭದ್ರಾಕರದ್ವೀಪ
ವೆರಡು ಚಂದ್ರಾಕೃತಿಯ ಕನ್ನೆಯಿದ್ದದಲಲರಂತೆ
ದೊರೆವಡದವಲ್ಲಿ ಕ್ಷುಪಾನರಸವಾತ್ರಯೋದಶಸಹಸ್ರಾಯುಷ್ಯರೂ
ವರ ರುದ್ರನಂ ಜೋತ್ಸ್ನೆಯಾಂಗಿಗಳು ಭಜಿಪರಿ
ನ್ನುರು ಮೇರು ಮಧ್ಯಾಭಿವರ್ಣನೆಯು ಮಾಡುವೆಂ
ಪರಿಕಿಸಲಿಳಾವೃತದ ಮೂಡಲಿಹ ಮಾಲ್ಯವಾನ್ ದಶಸಹಸ್ರೋನ್ನತವಲಾ ೪೨

ದಟ್ಟವಂತೆರಡು ಸಾವಿರ ಗಾವುದಂ ಬಳಿಕ
ಮುಟ್ಟೆ ತೆಂಕಲು ಬಡಗಲಾ ನಿಷವನಿಲವೆನೆ
ಬೆಟ್ಟಗಳ ಮೂವತ್ತನಾಲ್ಕುಸಾವಿರ ಯೋಜನದೊಳಿರ್ಪುದಗ್ರದಲ್ಲೀ
ನೆಟ್ಟನಾ ಪರಶಿವನ ಭಜಿಪರಾ ಮೂಡಲಳ
ವಟ್ಟ ಮೂವತ್ತಮೂಱುಸಹಸ್ರದವನಿ ನೀ
ರೊಟ್ಟಲವಧಿಯೊಳಿಹುದು ಭದ್ರಾಶ್ವನರಸು ಚಂದ್ರಾತಪಚ್ಛವಿಯ ನರರೂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಚಂದ್ರಾತಪವನಿಳೆಯುತ್ತಿಪ್ಪರಾ
ಶಿವನಂ ಮಹಾದೇವನೆಂದು ದಶಸಾಹಸ್ರ
ದವಧಿಯಾಯುವಿನಲ್ಲಿ ಕರ್ನಯ್ದಿಲಶನದಿಂದಿರ್ಪರಂತಾ ಮೇರುಗೆ
ತವೆ ಪಶ್ಚಿಮದೊಳಿರ್ಪ ಗಂಧಮಾದನನಗಂ
ವಿವರದಿಂದುತ್ತರಕೆ ದಕ್ಷಿಣಕೆ ನೀಲನಗ
ವವಧಿ ನಿಷಧಾದ್ರಿಯಿಂ ಮೂವತ್ತುನಾಲ್ಕುಸಾಹಸ್ರಯೋಜನ ಮೆಸೆವುದೂ ೪೪

ಆ ತುದಿಯೊಳುಗ್ರನಂ ಭಜಿಪರಾ ಪಶ್ಚಿಮದ
ಕೇತುಮಾಲ್ಯವನಿಯ ಪಡುವಣಂಬುಧಿಯವಧಿ
ಯಾ ತತ್ರ್ರಯ ತ್ರಿಂಶದಗ್ರಸಾಹಸ್ರಯೋಜನವಲ್ಲಿ ಕನ್ನೈರ್ಯದಿಲಾ
ರೀತಿಯು ವರೂಟ ಹಲಸಿನಹಂಣು ದಶಸಹ
ಸ್ರಾತಿಶಯ ದಾಯುವ್ವೆ ಪೇಳ್ವೆನಾಂ ಕುಲಗಿರಿ
ವ್ರಾತಮಂ ಭದ್ರಾಶ್ವದೊಳು ದೇವಕೂಟಜಠರಾದಿ ಇಪ್ಪ[illegible]ಆಯಿದೂ ೪೫

ಸಾವಿರದೊಳಿಪ್ಪಗಲ ವೊಂದುಸಾವಿರದುದ್ಧ
ವೇ ವಿಚಾರಿಸೆ ಮೂಱು ಮಡಿ ಬಾಲಸೂರ್ಯಂಗ
ರೋವಿ ಭಜಿಸುವರಾ ತ್ರಿಣೇತ್ರನಂ ಹರಿವರುಷವ್ವೆದ್ಯೆದು ಸಾಹಸ್ರದಾ
ತಾವಿನೊಳು ಮೂಱುಸಾವಿರದಗಲವಂತಾಱು
ಸಾವಿರದವುದಯವಾ ರಜತಗಿರಿ ಹದಿನಾಱು
ಸಾವಿರದ ಹರಹಲ್ಲಿ ಭಜಿಪರು ಮಹಾದೇವನೆಂದು ಸುರರೀಶ್ವರನನೂ ೪೬

ಕೇತುಮಾಲ್ಯದ ಪಂಚವಿಂಶತಿ ಸಹಸ್ರವಿ
ಖ್ಯಾತಯೋಜನದಲ್ಲಿ ಪಾರಿಯಾತ್ರಾದಿ ಪರಿ
ಪೂತ ತ್ರಿಸಾಹಸ್ರದಗಲವಿಮ್ಮಡಿಯುದ್ಧವಾ ಪಚ್ಚೆಯಾಕಾರವೂ
ಆ ತುದಿಯೊಳೀಶನಂ ಭಜಿಪರಾ ದೇವತಾ
ವ್ರಾತವಿನ್ನಾ ರಮ್ಯಕದೊಳಯಿದುವಯಿದು ಸಂ
ಜಾತೆ ಸಾಹಸ್ರದೊಳು ಶೃಂಗಚಾರುಣವು ಮೂಱುಸಿರಂದ್ವಿಗುಣೋನ್ನತಂ ೪೭

ಕುಂಕುಮದ ರಾಗದವರಭವನಂ ಭಜಿಪರ್ಮೆ
ನೀಂ ಮೇರುವಿನಿಳಾವೃತ ಮೂಡಲೊಳ
ಗಂ ಕನಕಮಯಮಂದರಾಚಲಂ ನಾಲ್ಕುವರೆಸಾವಿರದ ಸೀಮೆಯಲ್ಲೀ
ತಾಂ ಕೂಡಿ ಮೂಱುಸಾವಿರದಗಲ ನಾಲ್ಕುಮಡಿ
ಯಿಂ ಕಣಾ ವುದಯವಗ್ರದೊಳಿಪ್ಪ ಕಡವವೆಂ
ಬಂಕಿತದ ವೃಕ್ಷಂ ಸಹಸ್ರೋನ್ನತದ ವಿಶಾಲದೊಳಿಪ್ಪುದಿಂನು ಕೇಳೂ ೪೮

CC0. In Public Domain. Jangamwadi Math Collection, Varanasi

ಚೈತ್ರರಥವನವೊಂದು ಸಾದಸ್ರಯೋಜನ ಪ
ವಿತ್ರವದ ಱೊತ್ತಿನೊಳಗರುಣೋದಕದ ಸರಸಿ
ಚಿತ್ರವೆನಲೈನೂಱು ಗಾವುದದೊಳಿಹುದಮರರರ್ಚಿಪರು ತತ್ಪುರುಷನಂ
ಆ ತ್ರಿಣಯನುಮೆಯೊಳಂ ಕ್ರಿಡಿಸುವನಿಂತು ಸುರ
ಧಾತ್ರೀಧರಕೆ ತೆಂಕಲರರೆ ವಿಷ್ಕಂಭಗಿರಿ
ಘಾತ್ರಿಸಿದ ನಾಲ್ಕುವರೆ ಗಾವುದದೊಳಿಪ್ಪುದೈ ಮೂಱುಸಾವಿರದ ಗಱಿಪ್ಪೂ ೪೯

ಅದಕೆ ನಾಲ್ಮಡಿಯುದ್ದವಲ್ಲಿ ಜಂಬೂವೃಕ್ಷ
ಮುದಯುವಗಲಂ ಸಹಸ್ರದೊಳಿಪ್ಪುದದಱೊಳಂ
ಮದದಾನೆಯುಂ ಪೋಲ್ವ ಪಣ್ಣುಗಳು ಬಿರ್ದ್ದೊಡೆದು ರಸವಲ್ಲಿ ಪರಿಯಲಾಗೀ
ಅದು ಪಡುವಲಾಗಿ ಜಂಬೂನದಾಂಹ್ವದೊಳೆಸೆ
ದುದು ಕೇಳ್ವುದೈಯ್ಯ ಜಂಬೂದ್ವೀಪವಾಯ್ತುಲಾ
ತ್ರಿದಶರಾ ಭದ್ರೆಯೆಂಬಾ ನದಿಯೊಳರ್ಚಿಪರಘೋರೇಶನಂ ಭಕ್ತಿಯಿಂ ೫೦

ಅನಘ ಕೇಳೈ ಮತ್ತೆ ಗಂಧಮಾದನವೆಂಬ
ವನಯೋಜನಂ ಸಹಸ್ರಂ ಸರಸಿಯೈದುನೂಱ
ದೆನಿಪ ಗಾವುದದಲ್ಲಿ ಸೌಂದರ್ಯಮಪ್ಪಶುಭ್ರಾಬ್ಧಂಗಳೊಪ್ಪಿರ್ಪವೂ
ವಿನುತಸುರಘೋರಮೂರ್ತಿಯುಂ ವೀರಭದ್ರಾದ್ಯ
ರನವರತಮರ್ಚಿಪರು ಮತ್ತೆಯಂತಾ ಮೇರು
ವಿನ ಪಡುವಲಲ್ಲಿ ನಾಲ್ಕುವರೆಸಾವಿರದೊಳೊಂದಿಹುದು ವಿಷ್ಕಂಭಶೈಲಂ ೫೧

ಮೂಱುಸಾವಿರದಗಲವದಱ ನಾಲ್ಮಡಿಯಾಗಿ
ತೋಱಿರ್ಪುದುರ್ಧ್ವವರ್ಧಂ ಪಿಂಗಳಚ್ಛಾಯೆ
ಯಾಱೂಢವರ್ಧವಾ ಸೋಮನಂಗದ ಕಾಂತಿಯುರುಳಿಯೊಂದೊಪ್ಪಿರ್ಪುದೂ
ನೂಱುಹತ್ತಾಱುಸಾವಿರದಗಲವುದ್ದ ವೈ
ನೂಱುಗಾವುದ ಸರಸಿ ಸುರಭಿ ನದಿಯಲ್ಲಿ ಮನ
ಮೂಱಿಸದ್ಯೋಜಾತನಂ ಸುರರು ವೈಭ್ರಾಜವೆಂಬ ವನದೊಳ್ಭಜಿಪರೂ ೫೨

ಸುರಗಿರಿಗೆ ಬಡಗಲೊಪ್ಪುವುದೊಂದು ವಿಷ್ಕಂಬ
ಗಿರಿ ನಾಲ್ಕುವರೆ ಸಾವಿರದೊಳು ಮೂಱ್ಸಾವಿರದ
ಹರಹದಱ ನಾಲ್ಕು ಮಡಿಯುದ್ದವಾಲಂ ಸಹಸ್ರೋನ್ನತಿಯೊಳಿಪ್ಪುದಲ್ಲಿ
ಪರಿವ ನದಿ ಸುಮನೆ ನಂದನವೆಂಬ ವನವು ಸಾ
ವಿರವಲಾ ಕುಂಕುಮಚ್ಛಾಯಾಂಬುವಿಂದೊಂದು
ಸರಸಿಯೈನೂಱುಗಾವುದವಲ್ಲಿ ವಾಮ ದೇವನ ಸುರರು ಕೀತಿಸುವರೂ ೫೩

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯಂ
ಶೀಲಪಟ್ಟನಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತುಪದನಂ ಮಾಡಿದಂ ೫೪

ಇದು ವೀರಶೈವಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಸತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಮೇರುವಂ ಪೇಳ್ವೆನೆಂಬಲ್ಲಿ ಮೂಱು ಕಾಂಡವು ಸಂಧಿ
ಹದಿಮೂಱಲಾ ೫೫

ಅಂತು ಸಂಧಿ ೧೩ಕ್ಕಂ, ಪದನು ೭೧೭ಕ್ಕಂ ಗ್ರಂಥ ೬೭ಕ್ಕಂ
ಮಂಗಳ ಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೦

ಸುಖಾವಹಮೂರ್ತಿಯು ಮುನಿಗಳಿಗೆ ಮೇರುಪ್ರದೇಶಾದಿಗಳನ್ನು ತಿಳಿಸುವಿಕೆ

ಮೇರುವಿನ ದೆಸೆಯ ಪಟ್ಟಣಂಗಳಂ ಮೇಘಂಗ
ಳೋರಣಮುನಾ ದೇವಗಂಗೆಯುಂ ಝಗಝಗಿಪ
ಸೂರ ಲೋಕಾವಧಿಯ ಬಿತ್ತರಿಸಿದಂ ಸುಖಾವಹಮೂರ್ತಿ ತಾಪಸರ್ಗೆ

ಚರಣವೇ ವೇದಂಗಳಾ ಪ್ರಣವೇ ದಿವ್ಯ
ಶಿರವಾ ಷಡಂಗವಂಗಂ ಶಿವಾಗಮಚಿತ್ತ
ಮುರುತರಾಂಡಂ ತೀರ್ಥವೃಂದವಾ ರೋಮಾಳಿ ದೇವತೆಗಳುಪನಿಷತ್ತೊ
ವರ ಕಕುಲ್ಲೋಕಂಗಳೇ ತನ್ನ ಕುಕ್ಷಿಯೊಳು
ಭರಿತಮಾಗಿರ್ಪ ಧರ್ಮಸ್ವರೂಪದ ವೃಷೇ
ಶ್ವರ ವಾಹನವನ್ನುಳ್ಳವನೆ ಶರಣು ಶಾಂತಮಲ್ಲಯ್ಯ ಮಮಹೃದಯಶಯ್ಯಾ ೧

ರವಿಕೋಟಿತೇಜ ಸುಕಲಾಢ್ಯ ಮಂಗಳಮೂರ್ತಿ
ವಿವಿಧ ಬುಧಸನ್ನುತಗುರೂತ್ತಮ ವಿಶೇಷನುತ
ಕವಿನಿಕರ ಮಂದಸ್ಮಿತಾನನಾಂಭೋಜಚಿದ್ಯೋಗಿ ವೃಷಕೇತುರೂಪಾ
ತವ ಪದಾನತಜನಕ್ಕೂರ್ಧ್ವಲೋಕದ ಭೋಗ
ನಿವಹವಂ ಪಾಲಿಸುವ ಮೇಲಣ ಗವಿಯ ದಿವ್ಯ
ಭವನ ಚರಲಿಂಗಸುಖಪೂರ್ಯ ಜಯಶಾಂತನಂಜಾರ್ಯ ಸತ್ಕಮಲಸೂರ್ಯಾ ೨

ಆ ನಾಲ್ಕು ವಿಷ್ಕಂಭಗಿರಿಯ ನಡುವಾ ಮೇರು
ತಾನೊಪ್ಪುತಿಹುದದಱ ಗಣನೆ ರೇಣೆಂಟೊಂದೆ
ಮಾನವಾ ರೋಮವೆಂಟಂ ಕೂಡಲೊಂದು ಜವೆ ಜವೆಯೆಂಟಂನೊಂದಿಸಿದೊಡೆ
ತಾನಂಗುಲಂಪನ್ನೆರಡು ಗೇಣು ಗೇಣೆರಡು
ತಾನೊಂದು ಮೊಳ ಮೆರಡು ಮೊಳವೆ ದಂಡಂ ಕಣಾ
ತಾನೆರಡು ದಂಡವೇ ಪುರುಷಪ್ರಮಾಣವದು ಮೂರು ಮಾರಿಚ್ಛಾಸಿರಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದಯೋಜನ ಯುಗಕ್ರೋಶ ಗವ್ಯೂತಿಯಂ
ತಾದ ಗವ್ಯೂತಿ ನಾಲ್ಕೆಂಟುಸಾವಿರ ಪಾರ
ದೇ ದೃಢದ ಗಾವುದವದೇ ಗಣನೆಯಿಂದ ಹದಿನಾಱುಸಾವಿರದ ನಡಿಗೇ
ಮೇದಿನಿಯ ಮೇಗಣೆಂದೆಂಬತ್ತು ನಾಲ್ಸಹ
ಸ್ರೋದಯಂ ಕೂಡಿ ಮೇರುವದೊಂದು ಲಕ್ಷವ
ಗ್ರೋದಿತ ವಿಶಾಲವಾ ಬತ್ತೀಸಸಾಹಸ್ರವಿಸ್ತರಂ ಸುರಪರ್ವತಂ ೪

ಮೂಡಗಡೆ ಪದ್ಮರಾಗಂ ಶಿಖಿಯ ದಿಕ್ಕಿನೊಳು
ನೋಡೆಯಾಪ್ಪಾರುಣಂ ಯಮನಲ್ಲಿ ನೀಲವಾ
ರೂಢಿಸಿದ ನಿರುತಿಯೊಳು ಕೃಷ್ಣವಾವರುಣನೊಳು ವಸು ಪುಷ್ಯರಾಗದಲ್ಲಿ
ಕೂಡೆ ವಾಯುವಿನಲ್ಲಿ ಪಚ್ಚೆ ಬಡಗಲು ಪವಳ
ಪಾಡಂಬರೀಶಾನನೊಳು ಶುಭ್ರವಾಗಿ ಕೊಂ
ಡಾಡಲಱೆದೆನಿಪಂತೆ ರಾಗಿಸುತಿರ್ಪುದಾ ಚಾರುತರಮಪ್ಪ ಮೇರೂ ೫

ಕನಕ ಪುಷ್ಪದ ತೆಱದೆ ನೆಗಪಿರ್ದ ಕಹಳೆಯೆಂ
ದೆನಿಪಂತೆ ರಾಜಿಪುದು ಮೇರು ನವರತ್ನಮಯ
ವನುನಯದೊಳಿಳಿಯಿಂದ ಪಂಚವಿಂಶತಿ ಸಹಸ್ರಾಗ್ರಯೋಜನದೊಳೊಂದೂ
ವಿನುತ ಕಂಕಣವುಂಟದೇಕಸಾಹಸ್ರಯೋ
ಜನದ ಹರಹಾ ಮೂಱುಸಾವಿರದದಟ್ಟ ವೈ
ದನುಜಾಮರರು ಗರುಡ ಗಾಂಧರ್ವರಲ್ಲಿ ನಲವಿಂ ಕ್ರೀಡಿಸುತ್ತಿಪ್ಪರೂ ೬

ಆ ಕಂಕಣದ ಮೇಲೆ ಪಂಚವಿಂಶತಿ ಸಹ
ಸ್ರಾಕಲಿತಯೋಜನಾಂತದೊಳೊಂದು ಕಂಕಣಂ
ಜೋಕೆಯಿಂ ನವನಾಥ ಸಿದ್ಧರಾ ಖೇಚರರು ಮುನುಮುನಿವ್ರಾತವೆಲ್ಲಾ
ಶ್ರೀಕಂಠನಂ ಭಜಿಸುತಿಪ್ಪರಲ್ಲಿಂ ಮೇಲ
ಹೋಕಂಕಣವದೊಂದು ಚಕ್ರವಾಟಾಖ್ಯ ನಿ
ರ್ವ್ಯಾಕುಲದೊಳಿಪ್ಪತ್ತಱಿಯಿದು ಸಾವಿರದಲ್ಲಿ ರಾರಾಜಿಸುತ್ತಿರ್ಪುದೂ ೭

ಅದಱ ದಟ್ಟಂ ಮೂಱು ಸಾವಿರಂ ಮೇಲೆಯಾ
ಹದಿನೆಂಟು ಸಾವಿರದ ಹರಹಲ್ಲಿಯೆಂಟು ಸೌ
ಸೌಖ್ಯದ ಶೃಂಗಪರ್ವತಂ ನವಸಹಸ್ರದೊಳೆಂಟು ದೆಸೆಯಲ್ಲಿ ಮೆಱೆದಿಪ್ಪವು೦
ಸದಮಲತ್ವದೆ ರಾಜಿಪಾ ಮೂಱನೆಯ ಕಂಕ
ಣದ ಮೇಲೆಯೊಂಭತ್ತುಸಾವಿರಂ ಮೇರುವಿನ
ತುದಿ ವಿರಾಜಿಪುದು ಕೂಡೆಂಭತ್ತು ನಾಲ್ಕುಸಾವಿರದುನ್ನತಂ ತಪ್ಪದೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮೇರುವಿನ ಮೇಲೆಯಾ ಶೃಂಗಗಿರಿಯೆಂಟು
ಸಾಮರ್ಥ್ಯದಿಕ್ಪಾಲಕರ ಪಟ್ಟಣಂಗಳಭಿ
ರಾಮುವೆನಿಸಿಹವಲ್ಲಿಯೊಂದೊಂದು ನವಸಹಸ್ರಂ ಚತುರತೆಯೊಳಿರ್ಪವೂ
ಶ್ರೀ ಮಹಾಮೃತಭೋಜನಂ ಸುರಕುಜಂ ದೇವ
ಕಾಮಿನಿಯರಾನಂದದಿಂದ ನವರತ್ನಪ್ರ
ಭಾಮಯ ಪರಿಷ್ಕಾರದಿಂದ ನಿಶ್ಚಿಂತಭೋಗದೊಳಮರರಲ್ಲಿಪ್ಪರೂ ೯

ದೇವೇಂದ್ರನಮರಾವತಿಯ ಪುರಂ ಸ್ಫಟಿಕಪ್ರ
ಭಾವಹದ ಕೋಂಟೆ ನವರತ್ನದುಪ್ಪರಿಗೆಯಮ
ರಾವಳಿಗಳೋಲೈಸಿ ಶುಭ್ರಮಾತಂಗದಿಂ ರತ್ನಲಿಂಗದ ಭಜನೆಯಿಂ
ಆವಗಂ ಮೂಡಲಿಂದ್ರಂ ಮೆಱೆವನಗ್ನಿತೇ
ಜೋವತಿಯ ಪುರವದಕೆ ಕರ್ಬೊನ್ನ ಕೋಟೆಯಾ
ಠಾವಿನೊಳಗಂನಲಿಂಗದ ಭಜನೆಯಿಂ ಭಕ್ತಿಧರ ಹವ್ಯವಾಹನಿರ್ಪಂ ೧೦

ಅಮಮ ಪಚ್ಚೆಯ ಕೋಂಟೆಯುಪ್ಪಸಂಯಮನಿಯೊಳು
ಯಮದಂಡಧರ ಮಹಿಷ ವಾಹನಂ ಮೃತ್ಯುಗಳ
ಸಮಿತಿದೂತ ವ್ಯಾಧಿಸಂದೋಹವೋಲೈಸೆ ತೆಂಕಲೊಳು ಮೆಱೆದಿರ್ಪನೂ
ಕ್ರಮದಿ ಸೀಸದ ಕೋಂಟೆಯೆಸೆವ ಕೃಷ್ಣಾವತಿಯೊ
ಳಮರ್ದು ನರವಾಹನಂ ಕುಂತಧರನಾ ನಿರುತಿ
ಸುಮನಸ್ಸಿನಿಂ ಲಿಂಗಮಂ ಭಜಿಸಿ ರಾಕ್ಷಸರು ಸೇವಿಸಲೆಸೆವನೂ ೧೧

ವರುಣಂಗೆ ಶುದ್ಧಾವತಿಯ ಪುರಂ ರಜತದಿಂ
ವಿರಚಿಸಿದ ಕೋಂಟೆ ನೆಗಳೇಱಿ ಪಾಶವನಾನು
ತುರುರತ್ನಲಿಂಗಭಜನೆಯೊಳವಂ ಜಲದೇವತೆಯರು ಭಜಿಸಲು ಮೆಱೆವನೂ
ಮರುತನಾ ವಸುಕೋಂಟೆಯಿಂದೆಸೆವ ಗಂಧವತಿ
ಪುರದಲ್ಲಿ ಹಿತ್ತಳೆಯ ಲಿಂಗಭಜನೆಯೊಳೇಱಿ
ಯೆರಲೆಯಂ ಧ್ವಜವನೆ ಪಿಡಿದಖಿಳ ದೇವತೆಗಳೋಲೈಸಲೆಸೆವನಿನ್ನೂ ೧೨

ಹರಸಖಕುಬೇರನಾ ಪವಳಕೋಂಟೆಗಳ ಸೌಂ
ದರಿಯದಳಕಾಪುರದೊಳಾ ಸುವರ್ಣದ ಲಿಂಗ
ಚರಣಭಜನೆಯೊಳು ಖಡ್ಗವನಾಂತು ತುರಗವಾಹನ ಯಕ್ಷಪತಿ ಮೆಱೆವನೂ
ಅರರೆ ಪಳುಕಿನ ಕೋಂಟೆಗಳಯಶೋವತಿಯಲ್ಲಿ
ವರ ವಿಭೂತಿಯಲಿಂಗಭಜನೆಯಿಂದಂ ಶೂಲ
ಕರ ವೃಷಭವಾಹನಂ ಗಣನಿಕರವೋಲೈಸಲೀಶಾನ್ಯನೊಪ್ಪಿರ್ಪನೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಟು ಪುರವಿಂತು ರಾಜಿಪವಾ ಪಥಕ್ಕಾದ
ಕೋಂಟೆಗಳಿಗನ್ಯತ್ರವಸ್ತುಗಳ ತೆನೆಗಳಿಂ
ಟೆಂಟಣಿಸದಿವಱ ಮಧ್ಯದೊಳಿನ್ನು ಮೆಱೆವವಿಪ್ಪತ್ತಾಱು ಪಟ್ಟಣಗಳೂ
ಅಂಟಿಪ್ಪ ಸಂಪದಂಗಳನಲ್ಲಿಯುವರು ಸಿರಿ
ಕಂಠನಂ ಭಜಿಪುದಂ ತನ್ನಗರದೊಳಗಿಪ್ಪ
ಬಂಟಾಳ್ಗಳಂ ಸುರಪನೂರಾಗಿಯಾಗಿ ಬಿತ್ತರಿಸುವೆನದೆಂತೆಂದೊಡೇ ೧೪

ಸುರಪನೂರ್ಗಂ ದಕ್ಷಿಣದೊಳಪ್ಸರರ್ಗೆಸೌಂ
ಸೌಂದರ ಕಾಮವತಿಯಾದಿಶಾಭಾಗದಲ್ಲಿ ಭಾ
ಸುರ ಸಿದ್ಧರಿಗೆ ಕೂರ್ತು ಸೌವರ್ನಿಯಾದಿತ್ಯರಿಗೆ ಯಂಶುಪತಿ ಪಟ್ಟಣಂ
ಕರವೆಸೆವ ಸಾಧ್ಯರಿಗೆ ಕುಸುಮಾವತಿ ವಾಮ
ಪುರವಿಂದ್ರಗಿಂತು ನಾಲ್ಕಾದವಿನ್ನಗ್ನಿಗಂ
ವಿರಚಿಪೆಂ ತದ್ವಹ್ನಿಪಶ್ಚಿಮದೊಳಂ ರೈವತೀ ಕರ್ಮಾದಿಗೇ ೧೫

ಆ ದಿವ್ಯ ನಗರವೆರಡೈ ಯಮುನ ಪಶ್ಚಿಮದೊ
ಳಾದ ಪುರವಾ ಮಾತೃದೇವತೆಯರಿಗೆ ಲಸ
ನ್ಮೋದದಿಂದಾ ಮಾತುನಂದೆ ರುದ್ರರಿಗೆ ರೋಹಿತೆ ಎಂಬ ಪಟ್ಟಣವಲಾ
ಮೋದದೇಕಾದಶಮಹಾರುದ್ರರಿಂಗೆಯಾ
ಹ್ಲಾದಗುಣವತಿಯಿಂತು ಮೂಱು ಪುರಿಗಳು ಮೆಱೆವ
ವಾ ದಂಡಧರಗಿನ್ನು ನೈರುತ್ಯಗಂ ಮೂಡಲಲ್ಲಿ ಶೋಭನವಮಯದೊಳೂ ೧

ಯೋಚಿಸಲ್ಕಾ ಸುಕರ್ಮಾಹ್ವಯಂದಳೆದಿಹ ಪಿ
ಶಾಚರ್ಗೆ ಪಿಂಗಳೆಯುದುತ್ತರದ ಕೃಷ್ಣಾವ
ತೀಚಾರುತರ ಸುಖಾವತಿ ಬಳಿಕ ಗಾಂಧಾರಿ ನಾಲ್ಕೂರು ನೈರುತ್ಯಗೇ
ರೋಚಿಮಯುವರುಣ ದಕ್ಷಿಣಸಿದ್ಧಸೇನೆಯೆಂ
ಬಾಚರಣೆಯೂರು ಭೂತಂಗಳ್ಗೆ ನಾಡೆ ತದು
ದೀಚಿದಿಕ್ಕಿನೊಳು ವಸುಗಳ್ಗೆಯಾ ಹೇಮಸಂಜ್ಞಾಪುರಂ ರಾಜಿಸುವುದೂ ೧೭

ಮತ್ತೆ ವಿದ್ಯಾಧರರಿಗಂ ಸಿದ್ಧವತಿ ಪೆಂಪು
ವೆತ್ತ ಮೂಱೂರು ಪಾಶಿಗೆ ವಾಯು ದಕ್ಷಿಣದ
ತತ್ತಳದ ಕಿನ್ನರರ ಸಿದ್ಧಿಯೊಂದೇ ಕುಬೇರನ ಪೂರ್ವದೆಶೆಯೊಳಿನ್ನೂ
ಚಿತ್ತಶುದ್ಧದ ಚಿತ್ರರಥಗೆ ಗಾಂಧರ್ವೆಯೆಂ
ಬುತ್ತುಮದ ಪುರವಲ್ಲಿ ಶಾರದಾದೇವಿ ಹಾ
ಡುತ್ತಿಪ್ಪಳದಱ ಪೂರ್ವದೊಳು ತುಂಬುರ ನಾರದರ್ಗೆ ಚಿತ್ರಿಯೆಂಬ
ಪುರವೈ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಕುಬೇರಂಗೆ ಪಶ್ಚಿಮದಲ್ಲಿ ಗುಹ್ಯಕಾ
ಸ್ತೋಕರಿಗೆಯಾ ಪ್ರಮದೆಯುಂ ಚಿತ್ರಮತಿಗಳ್ಮೆ
ಜೋಕೆಯ ಸುಕರ್ಮದೇವತೆಗಳಿಗೆ ಮೂಡಲೊಳು ಶುಭ್ರೈಯ್ಯೆದು ಪುರಿಯಕ್ಷಗೇ
ಶ್ರೀಕರೇಶಾನ ಪಶ್ಚಿಮದೊಳ್ ಸರಸಿ ಪುಷ್ಪ
ದಾಕಾರನಾ ಶಂಖಚಕ್ರ ಗದೆ ಬಿಲ್ಲಾಂತು
ವೈಕುಂಠಪೀತವಾಸಂ ನೆಲಸಿದುತ್ತಮ ಹೃಷೀಕೇಶಪುರವೆಸೆವುದೂ ೧೯

ಆ ವಿಲಸದೀಶಾನ್ಯದಕ್ಷಿಣದೊಳಂ ಬ್ರಹ್ಮ
ನೋವಿ ನೆಲಸಿರ್ದ ಪದ್ಮಾವತೀ ಪುರವಲಾ
ಭಾವಿಸಲ್ಕದಱ ತೆಂಕಲೊಳಶ್ವಿನೀದೇವತೆಗಳು ಧನ್ವಂತ್ರಿಮುಖ್ಯಾ
ರೋವಿ ನೆಲಸಿದ ಕಾಮಶುಖೆಮೂಱು ವೀಶಾನ್ಯ
ದೇವಂಗೆ ಮತ್ತಿಂದ್ರಗುತ್ತರ ಮಹಾಮೇಘ
ಯಾ ವಿಘ್ನರಾಜರೀಶಾಂಗುಷ್ಠ ಜಾಸುರಾದಿಗಳು ಶತಕೋಟಿಯಿಹವೂ ೨೦

ಈಯೊಂದು ಸಹಿತಿಂದ್ರಗೈದಗ್ನಿಯೆರಡು ಮೂ
ಱಾ ಯಮಗೆ ನಿರುತಿಗಂ ನಾಲ್ಕು ವರುಣಗೆ ಮೂಱು
ವಾಯುಗೊಂದಾ ಕುಬೇರಂಗೈದದೀಶಾನ್ಯಗಂ ಮೂಱು ಕೂಡಲಾಗೀ
ಆಯೂರು ಷಡ್ವಿಂಶತಿಗಳಾದವ್ವೆ ಭಾಗ
ಧೇಯ ಕೇಳಿನ್ನು ಮೇರುವಿನ ಮಧ್ಯದ ಸೊಬಗ
ನೇಯೊಗಳುವೆಂ ಕೆಂಚವೀರಾಖ್ಯಯೆಂದು ಹಲಗೆಯ ದೇಶಿಕಂ ನುಡಿದನೂ ೨೧

ಆ ಮೇರುಪರ್ವತದ ಮೇಲೀಶ್ವರನ ಪುರಂ
ಸೋಮ ಸೂರ್ಯಯುತಪ್ರಭೆಯಿಂದ ಮೆಱೆದುದ
ಲ್ಲಾ ಮಹಾಮೃತದ ಪರಿಖಾರತ್ನಮಯಕೋಂಟೆ ಮೌಕ್ತಿಕದ ತೆನೆಗಳಿಂದಾ
ಶ್ರೀಮತ್ಪರಮ ಪರುಷದಾ ಸೀಯ್ಯಧರರಿಂದ
ಮಾಮುರ್ಝರೆ ಕಾಯ್ದುದೇವವ್ರಾತದೇಳ್ಗೆಯಿಂ
ಸಾಮಾದಿ ವೇದಕಳವಲ್ಲೆನಲು ಮೆಱೆದುದಾಸ್ಥಾನವತಿಶಯ ನವೀನಾ ೨೨

ಪರಮ ಸೌಭಾಗ್ಯಮೇರುವಿನ ಮೇಲತಿಶುಭಾ
ಕರವಾಗಿ ತೇಜದಿಂ ಜ್ಯೋತಿಷ್ಕವೆಂದೆಂಬ
ಗಿರಿಯದೀರೇಳು ಸಾಸಿರ ಗಾವುದದೊಳು ತಳತಳಿಸಿ ರಾಜಿಸುತಿರ್ಪುದೂ
ಕರಮೆಸೆವುತಾ ನಿರುತಿಯಾದಿಯಾಯೀಶನುರು
ತರ ವಿಲಸದಭಿಮುಖದ ಚಿನ್ಮಯದ ಬೆಳಗಿನಿಂ
ದರಮನೆ ಶಿವಂಗೆ ರಾಜಿಸುವುದಾ ಸುತ್ತ ಗಣತತಿಯ ವಾಸಂ ಮೆಱೆದುದೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೂಲ ಡಮುರುಗವಜಕಪಾಲಕರರುದ್ರರಾ
ಜ್ವಾಲಾಂಗರಗ್ಗಳದಜಾಂಡಮಂ ಚೆಂಡಾಡು
ವಾ ಲಸದ್ಗಣವರರು ನಲವಿ ನಿಂ ಜ್ಯೋತಿಷ್ಪದರಮನೆಯೊಳೀಶ್ವರನನೂ
ಸಾಲೋಕ್ಯಮುಖ್ಯರಾ ಮನು ಮುನೀಶ್ವರದೇವ
ಜಾಲವಪ್ಸರ ಮುಖ್ಯರಾನಂದದಿಂದೆ ಬಿಡ
ದೋಲೈಸೆ ಶಂಕರಂ ರಾರಾಜಿಸುತ್ತಿರ್ಪನಲ್ಲಿ ವೈಭವವೆಸೆಯಲೂ ೨೪

ಗಿರಿಜೆ ಕಣ್ಮುಚ್ಚಲು ದಶಾಂಗುಲದೊಳಶ್ರುಗಳು
ಸುರಿಯಲಜಹರಿಸುರಪರಿಗೆ ಮೂಱು ಗಂಗೆಯಂ
ಕರುಣಿಸುತ್ತೇಳು ಗಂಗೆಗಳು ಜಗಮಂ ಮೊಗೆಯಲಖಿಳರುರೆ ಕೀರ್ತಿಸಿದೊಡೇ
ಶಿರದಲ್ಲಿ ಧರಿಸಿ ಸಕಲರು ಬೇಡೆ ರೋಮದುರು
ತರದಗ್ರದಿಂ ತೆಗೆದು ಕೊಡೆ ದೇವಗಂಗೆಯೆನಿ
ಸಿರದೆ ಧರೆಯಂ ಸಲಹಲೆಂದಿಳಿದು ಮೇರು ಮಧ್ಯಕ್ಕೆ ಬಂದುದು ಪಾವನೀ ೨೫

ತಾನಿಳಿದು ಮೇರುವಿನ ಪೂರ್ವಭಾಗೆಯೊಳುದಿಸಿ
ತಾ ನದಿಯಲಾ ದಕ್ಷಿಣದೊಳಂ ಸುಪಕ್ಷಿಯಂ
ತಾನಂದೆ ಪಡುವಲಾ ಭದ್ರನಾಮೆಯೆ ಬಡಗಲೊಳಗಿಳಿದು ಭೋರ್ಗರೆವುತಾ
ಆನಗಂಗಳನಿಬ್ಬಗಿಯ ಮಾಡಿಕೊಂಡು ಲೋ
ಕಾನುಕೂಲದೊಳು ಸಾಗರವ ಕೂಡಿದವಲ್ಲೈ
ಸೂನುವೇ ಮೇಲಣರ್ಧಾಂಡ ಲೋಕಂಗಳಂ ಬಿತ್ತರಿಪೆನೆಂದನಾರ್ಯಂ ೨೬

ಧಾರುಣಿಯ ಪೃಷ್ಠದಿಂ ಲಕ್ಷಯೋಜನದಲ್ಲಿ
ಸೂರನೊಪ್ಪುವ ಭವರ್ಲೋಕವೆಸೆದಿಪ್ಪುದಂ
ತಾರಯ್ಯ ಹತ್ತುಸಾವಿರ ಹತ್ತುಸಾವಿರದ ಯೋಜನಕೆಯೊಂದುವೊಂದೂ
ಮಾರುತಂಗಳು ನಲವಿನಿಂದಿಪ್ಪವವು ಮಾಳ್ಪ
ಕಾರಿಯಂಗಳನು ಲೇಸಾಗಿ ಬಿತ್ತರಿಪೆ ನಿಂ
ನಾರಯ್ಯ ಮೊದಲ ವಾಯುವಿನೊಳಂತರ್ಭಾವ ಮೇಘಂಗಳಂ ಪೇಳ್ವೆನೂ ೨೭

ಅವನಿಯಿಂ ಮೇಲೆಯ್ವತ್ತುಗಾವುದಮಪ್ಪ
ಪವಣಲ್ಲಿ ತನ್ವಾಯೆನಿಪ್ಪನಿಲ ನಿಳೆಯಲ್ಲಿ
ವಿವಿಧೌಷಧಿಗಳಂ ವಿಚಿತ್ರವೆಯ್ದಿಸುತಿಹುದಲಾ ದಿವಾ ಹಂಸನೆಂಬಾ
ಪವನನೀ ಧರಣಿಯುಂ ವ್ಯಾಪಿಸುತ್ತಾಸ್ಯಾಯು
ನವನೆಯ್ದೆ ಸರ್ವರ್ಗೆ ತಾನೆ ಕೊಡುವುದು ಸುಖಾ
ಹವವ ನೆಯ್ದಿಸುವುದಾ ದನುಜರ್ಗೆ ಪಕ್ಷಿಗಳಿಗಾ ಶೀಘ್ರಗಮನವೀವಾ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತದಿಂದವಕ್ಕೆಯಾ ಗೃದ್ಧಹರನಾಮವಾ
ಯಿತು ಕಣಾ ಮತ್ತಾಪ್ರಚೇತಸನೊಳೊಗೆದ ಮಾ
ರುತನಾ ಪ್ರಚೇತಸನೆನಪ್ಪುದೊಂದಾನೊಂದು ವೇಳೆ ಬೀಸುತ್ತ ವೃಕ್ಷಾ
ತತಿಯ ನಾಶವನೆಯ್ದಿಸುತ್ತಿಹುದದಗ್ನಿವಿ
ಶ್ರಿತವಾಗಿ ಗೃಹಗಳಂ ಸುಡುವುದದು ವಾರಿನಿಧಿ
ಗತನಪ್ಪ ವಾಡಬನೊಳೊಂದಿ ನೀರ್ಗಿಚ್ಚುವಮಂ ಕೆಡಲೀಯದೊಪ್ಪಿರ್ಪುದೂ ೨೯

ಅನಘ ಕೇಳ್ಬಳಿಕ ಶತಯೋಜನಾಂತದೊಳು ಸೇ
ಚನಿಯೆಂಬ ವಾಯುಸಂಬಂಧದಿಂದಲ್ಲಿ ಮಿಂ
ಚಿನ ಮಾಳ್ಕೆಯಿಂ ಮೂಕಮೇಘನಾಮಾಭ್ರವೊಂದಿಹುದದಿಳಿದಾ ಕ್ರೋಶದಾ
ಅನಿತಕ್ಕೆ ಬಂದುದಕಮಂ ವೃಷ್ಟಿಯೆನಿಸಿ ಮೆ
ಲ್ಲನೆ ಬಿಡುತ್ತಿಹುದು ಮತ್ತಲ್ಲಿಗಂ ನೂಱು ಯೋ
ಜನದಲ್ಲ ಸತ್ವವಹವೆಂಬ ಮೇಘಂಗಳಿರ್ದೆಸಗುವವು ದುರ್ದಿನವನೂ ೩೦

ಬಳಿಕಲವು ಮಂಡೂಕವಾ ಮತ್ಸ್ಯಕೂರ್ಮಾದಿ
ಗಳ ಕರೆವುತಿರ್ಪವಲ್ಲಿಂ ಮೇಲೆಯೈವತ್ತ
ರಳವಿಯುನ್ನತ ಯೋಜನದೊಳಿಹುದವೋಘನೆಂಬಾ ವಾಯುಮೆಱೆದಿರ್ಪುದೂ
ತಿಳಿಯುದಱ ಮೇಲೆ ರೋಗದವೆಂಬ ಮೇಘಾಳಿ
ಗಳು ಚರಿಸುತಿರ್ದು ಧರೆಗಂತಾ ವಿಷೋದಕಂ
ಗಳ ಕರೆವುತಿರ್ಪುವಲ್ಲಿಂ ಮೇಲೆಯೈವತ್ತುಗಾವುದದ ಹವಣಿನಲ್ಲೀ ೩೧

ಸಲೆಯುಮೋಘವೆನಿಪ್ಪ ವಾಯುವಿನ ಮೇಲೆಯುಂ
ದೊಲಿದು ಮಾರಕವೆಂಬ ಮೇಘವಿರ್ದಾ ಪ್ರಾಣಿ
ಕುಲಕೆ ಮರಣವನೆಯ್ದಿಸುವವು ಮೇಲಯಿವತ್ತುಗಾವುದದ ಹವಣಿನಲ್ಲೀ
ನೆಲಸಿರ್ದ ವಜ್ರಾಂಗನೆಂಬ ಮರುತನ ಮೇಲೆ
ಫಲಕಾಹ್ವಯದ ಮೇಘವಿರ್ದು ಫಲವೃದ್ಧಿಗಂ
ಜಲವನೊಲವಿಂ ಕರೆವುದಲ್ಲಿಂದ ಮೇಲಾ ಶತಾರ್ಧಯೋಜನದೆಡೆಯೊಳೂ ೩೨

ವಾಯುವೇದ್ಯುತನೆಂಬ ನಾಮದಿಂದಿರಲಲ್ಲಿ
ಯೋಯೂರದಿಂದ ವೈದ್ಯುತಮೆಂಬ ಮೇಘದ ನಿ
ಕಾಯಂಗಳಿರಲು ತತ್ವವನಸಂಘಟ್ಟದಿಂದೊಗೆದುದಾ ಮೇಘಧ್ವನೀ
ಸ್ವಾಯತ್ತದಲ್ಲಿಂ ಶತಾರ್ಧರೈವತನಾಮ
ಧೇಯಾನಿಲನೊಳಿರ್ದು ಪುಷ್ಟಿವಹ ಮೇಘಂ
ಶೀಯವನಿಯಖಿಳರ್ಗೆ ಪುಷ್ಟಿಯಂ ಮಾಳ್ಪವಲ್ಲಿಂದಲೈವತ್ತೊಪ್ಪವಾ ೩೩

CC0. In Public Domain. Jangamwadi Math Collection, Varanasi

ಮೇಗೆ ಸಂವರ್ತವೆಂಬಾ ವಾಯುವಂತಲ್ಲಿ
ರೋಗದವೆನಿಪ್ಪ ಮೇಘಂಗಳಿರ್ದಲ್ಲಿಂದ
ರೋಗೋದಕಂಗಳಂ ಕಱಿವವಲ್ಲಿಂದಲೈವತ್ತು ಗಾವುದದೆಡೆಯೊಳೂ
ಆಗಲೀ ಸಂವರ್ತವಾಯುವದಱಿಡೆಯಲ್ಲಿ
ರಾಗದಿಂ ಕ್ರೋಧೋದಕಂಭ್ರವಿರ್ದಖಿಳರಂ
ರೋಗದಿಂ ಕ್ರೋಧಯುದ್ಧಂಗಳಿಱಿಸುತ ರಾಕ್ಷಸರ ಸಂಹರಿಪವೂ ೩೪

ನುತಮೇಘವಂತಮೇಘಂ ಸುವಜ್ರಾಂಗವೈ
ದ್ಯುತ ರೈವತಂ ಸುಸಂವರ್ತಂ ವಿಸಂವರ್ತ
ತತಿಯೇಳರಲ್ಲಿಪ್ಪ ವಸ್ತುಗಳ ಪೇಳ್ವೆನಾದಿಯೊಳಿಪ್ಪಮೇಘಾನಿಲಾ
ಯತನದೊಳು ಚಂಡವಿಗ್ರಹ ಪಿಶಾಚಾಖ್ಯರುಂ
ನತರು ಮೂವತ್ತುಸಾವಿರಕೋಟಿ ಕೂಡಿಪಾ
ರ್ವತಿಯ ಸುತ ಷಣ್ಮುಖನ ಭಜಿಸುತಿಹರಿನ್ನಮೇಘಾಖ್ಯವಾಯುವಿನೆಡೆಯೊಳೂ ೩೫

ನಾಟಿಸುತ ಶಿವನಿಂದ ಪುಟ್ಟಿರ್ದ ಮೂವತ್ತು
ಕೋಟಿಸಾವಿರ ವಿನಾಯಕರಿರ್ದುಧರಣಿಯೊಳ
ಗಾಟವಿಕರಾದ ದುರ್ಮಾರ್ಗಿಗಳ ಸತ್ಕರ್ಮಫಲವನಪಹರಿಸುತಿರಲೂ
ಮೀಟಾದ ವಜ್ರಾಂಗವೆಂಬ ವಾಯುವಿನೊಳು
ದ್ಘಾಟ ಭಿನ್ನಾಂಜನಚ್ಛಾಯ ಸತ್ಕ್ರೂರತೆಯ
ಕೋಟಾನುಕೋಟಿಗಳ್ನಾಪರರೆನಿಪ್ಪವೀರರುಗಳಲ್ಲಿಹರವರೊಳೂ ೩೬

ನಲವಿಂ ಸ್ಮಶಾನವೇತಾಳಸಾಧನರಾದ
ಬಲವಂತರಿಪ್ಪರಾ ವೈದ್ಯುತಾಹ್ವಯವುಪ್ಪ
ನಿಲನೊಳಿಂದ್ರಾಜ್ಞೆಯಿಂದಪ್ಸರರು ಮಿಹರಲ್ಲಿ ಕಂಮರಿಯೊಳಗ್ನಿಯಲ್ಲೀ
ಜಲದಲ್ಲಿ ಸಂಗ್ರಾಮ ಗೋಗ್ರಹಣದಲ್ಲಿ ನಿ
ಶ್ಚಲವೀರದಲ್ಲಿ ಮರಣವನೆಯಿದಿದವರ ಸುರ
ಲಲನೆಯರು ರಮಿಸೆ ಬಹು ವೈಭವದೊಳವರು ಮೆಱಿದಿರ್ಪರಲ್ಲಿಂದ ಮೇಲೇ ೩೭

ರೈವತಮೆನಿಪ್ಪ ವಾಯುವಿನೊಳು ಮಹಾಸಿದ್ಧ
ರೋವಿ ನಲಸಿಹರಿಳೆಯೊಳಾ ಮಂತ್ರಪಾದುಕಾ
ಭಾವಿತಾಂಜನಲಸದ್ಘುಟಿಕಾದಿ ಸಿದ್ಧಿಗಳಸಾಧಿಸಿದ ಸಾಮರ್ಥರಾ
ಸೇವಿಸುವರಧಿಕ ವೈಭವದಿಂದಲವರಿನ್ನ
ದೇವೇಳ್ವೆ ಸಂವರ್ತವೆಂಬ ವಾಯುವಿನೊಳು ಶು
ಭಾವಹದ ಮುನ್ನೂಱುಕೋಟಿ ವಿದ್ಯಾಧರರು ಪರಮವಿಭವದೊಳಿರ್ಪರೂ ೩೮

Digitization by eGangotri and Sarayu Trust. Funding by MoE-IKS

ಬಳಿಕಂ ವಿಸಂವರ್ತವೆಂಬ ವಾಯುವಿನೊಳ
ಗ್ಗಳದ ಧೂಮ್ರಜ್ಯೋತಿ ಸಲಿಲಂಗಳೊಂದಿದ
ಗ್ಗಳದ ಶಾಪಾಗ್ನೇಯ ಮೇಘಂಗಳಿಹವಂತೆಯಲ್ಲಿಯಾ ವಿದ್ಯಾಧರಾ
ಕುಳವಧಿಕ ವೀಣಾದಿ ವಾದನದ ಪಕ್ಷಿಸಂ
ಕುಳ ಕಾಮರೂಪಿಗಳು ರಾಜಿಪರು ಮೇಲೆ ಮಂ
ಗಳಮಯದ ಮೂಱು ಯೋಜನದ ತಾಣದೊಳು ದುರ್ಜಯನೆಂಬ
ವಾಯುವಿಹುದೂ ೩೯

ಅಲ್ಲಿ ಬೊಮ್ಮನ ಮಹಾನಿಶ್ವಾಸದಿಂದೊಗೆದು
ಸಲ್ಲಲಿತಂ ಬ್ರಹ್ಮಜಗಳೆಂಬ ಮೇಘಂಗ
ಳುಲ್ಲಾಸದಿಂದಿಹವು ಬಳಿಕಲ್ಲಿ ಸುರಪನಗ್ಗಳ ದುರ್ಜಯಾಖ್ಯವೆಂಬಾ
ಪ್ರೋಲ್ಲಸದ್ದಶಕೋಟಿಯಭ್ರಂಗಳಿರ್ಪವಾ
ಫುಲ್ಲಾಬ್ಜಸಂಭವಂಗಂ ಪುಟ್ಟಿಯಾಕಾಶ
ದಲ್ಲಿ ಕೀರ್ತಿಯನಾಂತ ಪುಷ್ಕಲಾವರ್ತನಾಮದ ವಾರಿಧರವಿರ್ಪವೂ ೪೦

ಮೇಲೆಯಂತಪರಾಹ್ವಯದೊಳೊಪ್ಪುವ ವಾಯು
ಲೀಲೆಯಿಂ ಸುರಪಖಂಡಿತಗೋತ್ರಹತಪಕ್ಷ
ಜಾಲಮಂ ತಾಳ್ದು ವರ್ತಿಸುವುದಂತಲ್ಲಿ ಗಗನಕ್ರೀಡರೆಂದೆನಿಸುವಾ
ಸ್ಥೂಲ ಶತಕೋಟಿ ಗಂಧರ್ವರೊಪ್ಪುವರುನ್ನ
ತಾಲಯದುವಾಹನೆಂಬನಿಲನೊಳು ಚರಿಸುತಿಹ
ವಾಲೇಖರಸುವಿನೊಳು ಜನಿಸಿರ್ದ ಜೀಮೂತವೆಂದೆಂಬ ಮೇಘಂಗಳೂ ೪೧

ಜೀಮೂತರೆಂಬ ವಿದ್ಯಾಧರರುಹತ್ತತಿ
ಪ್ರೇಮದಿಂದಿಹರಲ್ಲಿ ರವಿಪವಾಯುಹಮೆನಿ
ಪ್ಪಾ ಮಾರುತನೊಳು ತದ್ದ್ರೋಣಾಖ್ಯದಭ್ರಂಗಳಿಹವೀಶನಾಜ್ಞೆಯಿಂದಾ
ತಾ ಮುಂನ ಹುಟ್ಟಿದಾ ದ್ರೋಣರೊಪ್ಪುವರಲೈ
ಯಾ ಮೇಲೆ ಪರಿವಹನೆನಿಪ್ಪವಾಯುವಿನಲ್ಲಿ
ಯಾ ಮೇಘಸಂವರ್ತವಿಪ್ಪವಂತಾದಿ ಮಾರುತಮಾರ್ಗದಲ್ಲಿ ನಲಪಿಂ ೪೨

ಆ ಮೇಘವುಂ ಮೇಘಚಾರಿಸಿದ್ಧರುಗಳಿಹ
ರೈ ಮೇಲೆಯಾ ದ್ವಿತೀಯ್ಯಾನಿಲನ ಮಾರ್ಗದೊಳ್
ಪ್ರೇಮದಿಂದಗ್ನಿಕನ್ನಿಕೆಯರೆಂದೆಂಬ ಮಾತೃಕೆಯರುಂ ಸುಗುಣಮಯದಾ
ಸಾಮಾರ್ಥ್ಯಸಿದ್ಧರುನ್ನತ ಭೋಗದೇಳ್ಗೆಯಿಂ
ಮಾಮಣಿ.ರೆ ರುದ್ರಕನ್ನಿಕೆಯರೊಳ್ಕ್ರೀಡಿಸುತ
ರಾಮಣೀಯ್ಯದಿಂದಲಿಪ್ಪರಂತೆರಡನೆಯ ವಾಯುವಿನ ಬಟ್ಟೆಯಲ್ಲೀ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನಿಲತ್ರಿತಯಮಾರ್ಗದೊಳು ಸಿದ್ಧಚಾರಣೌ
ಖ್ಯ ನಿಕಾಯವಿಹುದು ನಾಲ್ಕನೆಯ ಮಾರುತಮಾರ್ಗ
ದನಿತರೊಳು ನಾರಾಚ ಚಾಪಚಕ್ರಾಸಿತ್ರಿಶೂಲಶಕ್ತಿಗಳನಾಂತಾ
ಘನದೇವತೆಯರಿಪ್ಪರೈದನೆಯ ವಾಯುಪದ
ವೆನಿಪಲ್ಲಿ ಅಯಿರಾವತಾದಿ ದಿಗ್ದಂತಿಗಳು
ಮನುನಯದೆ ತಂತಮ್ಮ ದೆಶೆಯೊಳಿಹವಾಱನೆಯ ತಾಣದೆಲರ್ವಟ್ಟೆಯಲ್ಲೀ ೪೪

ಆ ಪಕ್ಷಿರಾಜನಹ ಗರುಡನೊಪ್ಪುತಿಪ್ಪ
ನೈ ಪೇಳಲೇಳನೆಯ ವಾಯುಮಾರ್ಗದೊಳಂ ಸು
ರಾಪಗೆ ಮಹಾದೇವಗಂಗೆಯಾಕಾಶವೆಂದೆಂಬ ಲಿಂಗದ ಶಿರವನೂ
ಆ ಪರಿಷ್ಕೃತಪುಷ್ಪಮಾಲೆ ಬಳಸಿದ ತೆಱದಿ
ಪಾಪನಾಶನಿವೃತ್ತಮಾರ್ಗದಿಂ ಸುರಸಿದ್ಧ
ತಾಪಸಾದ್ಯಖಿಳರಾನಂದದಿಂದೋಲೈಸಲಿಪ್ಪಳೇಂವಣ್ಣಿಸುವೆನೂ ೪೫

ವೈಡೂರ್ಯನಾಳಸೌವರ್ಣಪತ್ರದ ಮಿಸುಪ
ರೂಢಿಸಿದ ತತ್ಪದ್ಮರಾಗಕೇಸರದ ವಿಮ
ಲಾಡಂಬರದ ಸುಗಂಧದ ಮಹಾಛತ್ರದಂತೆಸೆವ ಕಮಲಂಗಳಿಂದಾ
ಕೂಡೆ ಬಂದೋಲೈಪ ವೈಮಾನಿಕರ್ಗಳಿಂ
ನಾಡೆ ವೇಲಾವನದ ಪುಷ್ಪಫಲಚಯದಿಂದ
ನೋಡಲಲವೇ ಭಾಪೆನಲ್ಮೆಱೆದಳಾ ಗಂಗೆ ತುಂಗೆ ವಿಮಲಾಂತರಂಗೇ ೪೬

ಶತಕೋಟಿ ಯೋಜನವಿಶಾಲಪರಿವೃತ್ತಿಯಿಂ
ದತಿದೋಷಮುಸ್ತಕವನರಿವ ಚಕ್ರದ ತೆಱದೊ
ಳತುಳ ಯೋಗಿಗಳ ಸುಜ್ಞಾನಚಂದ್ರನ ಬಳಸಿಕೊಂಡಿರ್ದ ಪರಿವೇಷದಾ
ಸ್ಥಿತಿಯಂತೆ ಗಗನವೆಂದೆಂಬ ಪರಶಕ್ತಿಯೂ
ರ್ಜಿತ ಭಾಳದೆಸೆವ ಮುತ್ತಿನ ಬೊಟ್ಟಿನಂತೆ ಶೋ
ಭಿತೆಯಾದಳಾ ದೇವವಾಹಿನಿ ಘನಾಘದಾಹಿನಿ ಮಹಾಶಿವಮೋಹಿನೀ ೪೭

ಅಷ್ಟಾನಿಲಾಧ್ವದೊಳು ನಂದೀಶ್ವರಂ ಮಹಾ
ಶಿಷ್ಟಂ ಸಪತ್ನೀಕನಾಗಿ ಗಣರೋಲೈಸೆ
ತುಷ್ಟಮಾನಸನಾಗಿ ರಾಜಿಸುವನೊಂಭತ್ತನೆಯ ವಾಯುಮಾರ್ಗದಲ್ಲೀ
ಶ್ರೇಷ್ಠಸಾಮರ್ಥ್ಯನಾ ಬ್ರಹ್ಮಶಕ್ತಿಯೊಳೊಂದೆ
ತುಷ್ಟನಾಗುತ ದಕ್ಷನಿಹನು ದಶಮಾಗುತ
ದೃಷ್ಟಾಧ್ವದಲ್ಲಿ ರಂಜಿಸುವವರ ಸಂಭ್ರಮವ ನೇನೆಂದು ಬಣ್ಣಿಸುವೆನೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧಾತಾಧ್ರುವ ಸ್ತದಾ ಸೋಮನಾಪೋನಿಲಂ
ಖ್ಯಾತಾನಲಂ ಪ್ರತ್ಯುಷಂ ಪ್ರಭಾವರ್ಗಳೆಂ
ಬೀ ತೆಱದೊಳೆಸೆವಷ್ಟವಸುಗಳಾ ವೀರಭದ್ರಂ ಶಂಭು ಗಿರಿಶನಲ್ಲೀ
ನೀತಿಯಜನೇಕಪಾದನು ಮಹಿರ್ಬುಧ್ನಸಂ
ಪೂತಂ ಪಿನಾಕಿ ಭುವನಾಧಿಪ ದಿಶಾಪತಿ
ಪ್ರೀತ ಪಶುಪತಿಯೆನಿಪ ಹನ್ನೊಂದು ರುದ್ರರೆಸೆದಿರ್ಪರಾ ತಾಣದಲ್ಲೀ ೪೯

ಉನ್ನತದ ಹಂಸನುಂ ತ್ವಷ್ಟಂಬಕಂ ಮಿತ್ರ
ನುಂ ನಾಡೆಯಾ ವಿವಸ್ವದ್ವಿಷ್ಣು ಪೂಷನುಂ
ಸನ್ನುತದ ವರುಣ ನರಿಯಮನು ಪರ್ಜನ್ಯಹರನೆಯ್ದೆ ಮಂದಾತ್ರು ಶುಕ್ರಂ
ಪನ್ನೆರಡು ಸೂರ್ಯಾತ್ಮನಾದಿತ್ಯನಿರ್ಪನ್ನೈ
ತನ್ನ ರಥಪತಿಕರವದೆಂತೆನಲು ಬಿತ್ತರಿಪೆ
ಪನ್ನತಿಯ ಸರ್ವದೇವಸ್ಸಮನ್ವಿತವು ಕಣಾ ಯಜ್ಞವೇ ತಚ್ಚಕ್ರವೂ ೫೦

ಸಪ್ತಸ್ವರಂಗಳೇ ಹೂಂಕಾರ ವಾಜಿಗಳು
ಕ್ಲುಪ್ತ ಸರ್ಪಂಗಳೇ ಹಗ್ಗವಾ ವರುಣನೇ
ಯಾಪ್ತಸಾರಥಿ ಸತ್ಯವೇ ಹಂಚಲಾ ದಿವ್ಯಕಾಲಚಕ್ರದ ರಥವನೂ
ಸುಪ್ತಿಯಿಲ್ಲದೆಯಡರಿ ತಿರುಗುತ್ತಲಿಹನಲಾ
ಗುಪ್ತ ಸುಪ್ರಕಟವೆನಿಸುವನುಭಯಪಕ್ಷದೊ
ಳ್ವ್ಯಾಪ್ತಕಿರಣಗ್ರಾವದಿಂ ಸೂರ್ಯ್ಯ ತೇಜಸ್ಸಪೂರ್ಯ್ಯ ಜಗದಖಿಳಕಾರ್ಯ್ಯಾ ೫೧

ತೇಜದಾದಿತ್ಯ ವಿಗ್ರಹವೆ ನವ ಸಾಹಸ್ರ
ಯೋಜನಂ ತದ್ಬಿಂಬವೆಯ್ದೆ ಮೂರ್ಮಡಿಯಲಾ
ಯೋಜಿಸಲ್ಕೂಡಿ ಮೂವತ್ತಾಱುಸಾವಿರ ಪ್ರಭೆವೆತ್ತವಾಗಿ ಸೂರ್ಯ್ಯಂ
ನೈಜ ತಾಮ್ರದ ಲಿಂಗಮಂ ದೇವಗಂಗೆಯಂ
ಭೋಜದಿಂ ಪೂಜಿಸಿ ಭುವರ್ಲೋಕರಕ್ಷಣೆಗೆ
ಭಾಜನಂ ತಾನಾಗಿ ಮೆಱೆದಿನಾ ತರಣಿ ಕಣ್ಕಾಲ್ಗೆ ಹರವರಿಯ ಸರಣೀ ೫೨

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ್ಯಂ
ಶೀಲಪಟ್ಟಸ್ಥಲಿಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಂ ಕೂರ್ತು ಪದನಂ ಮಾಡಿದಂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದಿ ಪೇಳ್ದೀ ವೀರಶೈವಾಮೃತದೊಳಗಾ
ದುದು ಸೂರ್ಯ್ಯಲೋಕವಮಂ ಪೇಳುವೆಡೆ ಮೂಱುಕಾಂಡಂ ಸಂಧಿ
ಹದಿನಾಲ್ಕಲಾ ೫೪

ಅಂತು ಸಂಧಿ ೧೪ ಕ್ಕಂ ಪದನು ೭೭೧ ಕ್ಕಂ ಗ್ರಂಥ ೬೭ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೧

ಸುಖಾವಹಮೂರ್ತಿಯು ಮುನಿಗಳಿಗೆ ಊರ್ಧ್ವಲೋಕಂಗಳಂ ಪೇಳುವಿಕೆ

ತರಣಿಯ ಭುವರ್ಲೋಕ ಮುಖ್ಯೋರ್ಧ್ವ ಷಡ್ಲೋಕ
ದಿರವಿನಂಭ್ರಾವ ಮಂಡಲಂಗಳ ರುದ್ರ
ವರ ರಕ್ಷಿತಾಜಾಂಡ ವರ್ಣನಾ ಪೂರ್ಣಮಂ ಬಿತ್ತರಿಪೆನಕ್ಕರಿಂದೇ

ಆವವನ ಮನೆಯು ನೀರೊಟ್ಟಿಲಾವವನಣುಗ
ನೀ ವಸುಧೆಯಲ್ಲಿ ಬಿಲ್ಲಾಳೆನಿಸಿಕೊಂಡ ನಿ
ನ್ನಾವವನ ಸತಿ ಲೋಕದೈಶ್ವರ್ಯರೂಪೆ ಯಿನ್ನಾವವನ ವರವಾಹನಂ
ದೇವೇಂದ್ರವಜ್ರಮನೆಟಂಕೆಯೊಳಡಂಗಿಸುತ
ದಾವವಂ ಸುರನಿಕರಪೂಜ್ಯನೆಂದೆನಿಸಿಪ್ಪ
ನಾ ವಿಷ್ಣುಲೋಚನಪದಾಲಂಕೃತಾಗ್ರ ಮಜ್ಜೀವಜಯುಶಾಂತಮಲ್ಲಾ ೧

ಅಜಸೃಷ್ಟಿಯಾದವಂದಿರ ಮತ್ತೆ ಹಸ್ತವಾ
ರಿಜದಲ್ಲಿ ಪುಟ್ಟಿಸುತ ವಿಷ್ಣುರಕ್ಷಣೆಯವರ
ನಿಜದಿಂದ ಪಾಲಿಸುತ ರುದ್ರಸಂಹರದ ವರಜೀವಭಾವವನು ಬಿಡಿಸೀ
ಸುಜನ ಚಿದ್ಬ್ರಹ್ಮಾಂಡಮಪ್ಪೀ ಕಕುದ್ಗಿರಿ
ವ್ರಜಮಹತ್ತಿನ ಮೋಹಿಯಪ್ಪ ಮೇಲಣಗವಿಯ
ಭಜಕ ಸುರತರುಶಾಂತನಂಜುಂಡ ಶರಣಾಗು ರಿಪುಶೈಲವಜ್ರದಂಡಾ ೨

ಭೂತಳದೊಳೇಕಲಕ್ಷದೊಳಾ ಭುವರ್ಲೋಕ
ದಾ ತರಣಿ ತಾಮ್ರಲಿಂಗವನರ್ಚಿಪಂ ಸುಸಂ
ಪ್ರೀತಿಯಿಂದೆರಡು ಲಕ್ಷದೊಳು ಚಂದ್ರಂ ಮೌಕ್ತಿಕದ ಲಿಂಗಮಂ ಭಜಿಪನೂ
ಓತಾ ತ್ರಿಲಕ್ಷನಕ್ಷತ್ರ ಮಂಡಲದಲ್ಲಿ
ಪೂತ ಬಹುವರ್ಣಲಿಂಗವನು ಸೇವಿಪರು ವಿ
ಖ್ಯಾತರಂತಯಿದು ಲಕ್ಷದೊಳು ಮುತ್ತಿನ ಲಿಂಗಮಂ ಬುಧಂ ಪೂಜಿಸುವನೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಿಗೇಳು ಲಕ್ಷದೊಳು ಸೂರ್ಯನುಮಯಪ್ಪಾಂತ
ಸುಹಿತಲಿಂಗವನರ್ಚಿಪಂ ಮಂಗಳಂ ಮಹೋ
ತ್ಸಹದೊಳೊಂಭತ್ತು ಲಕ್ಷಗಳಲ್ಲಿಯಾ ಪ್ರವಾಳದ ಲಿಂಗವಮಂ ಭಜಿಸುವಂ
ಸಹಜದ ಬೃಹಸ್ಪತಿ ಸುಮಾಣಿಕ್ಯ ಸುಪ್ರಭಾ
ವಹ ಲಿಂಗವಮಂ ಯಜಿಪನಾ ತ್ರಯೋದಶದೊಳಂ
ನಿಹಿತದಿಂ ಶನಿ ತಾಮ್ರಲಿಂಗವಮಂ ಸದ್ಭಕ್ತಿಯಿಂದ ಪೂಜಿಸುತಿರ್ಪನೂ ೪

ಧರೆಗೆ ಹದಿನಯಿದು ಲಕ್ಷಾಂತರಂಗಳೊಳೆಯ್ದಿ
ಚರಿಸುವ ನವಗ್ರಹಂಗಳುಮಷ್ಟವಸುಗಳೆ
ಲ್ಲರು ಬಳಿಕ್ಕಿಪ್ಪತ್ತಯೆಂಟುಯೋಜನ ಮಾನ ಸಂಪನ್ನರಾ ಸೂರ್ಯನಾ
ಪರಮ ತೇಜಸ್ಸಿಂಗೆ ಸಮವಾಗಿ ರಾಜಿಸುವ
ಪುರುಷರಂಗಚ್ಚವಿ ವಿಮಾನಂಗಳೊಪ್ಪುವವು
ಪರಿಕಿಸೆ ಭುವರ್ಲೋಕದಧಿಪ ಭಾಸ್ಕರನ ಸಂಬಂಧವಿವು ಮೇಲೆ ಕೇಳೀ ೫

ಆ ಭುವರ್ಲೋಕದಿಂ ಮೇಲೆ ಎಂಭತ್ತಯಿದು
ಶೋಭನ ಸುಲಕ್ಷಯೋಜನದೊಳಾ ಸ್ವರ್ಲೋಕ
ವೈಭವವನಾರು ಬಣ್ಣಿಪರಲ್ಲಿಯಾ ಧ್ರುವಂ ಮಿಸುಪ ನೀಲದ ಲಿಂಗಮಂ
ಶ್ರೀ ಭಕ್ತಿಯಿಂ ಭಜಿಸಿ ಭುವಿಗೆ ಮೇಟಿಯವೊಲು ಮ
ಹಾ ಭಾಸದಿಂದಿಹಂ ಭರತಾದಿ ನವಖಂಡ
ದಾ ಭೂಮಿಯರಸರನುಜಂ ಶಿವಕೃಪಾಲಬ್ಧನತಿಶಯದ ವಿಹೃತಲುಬ್ಧಾ ೬

ಕ್ಷೋಣಿಯೊಳು ಭರತಖಾಂಡದೊಳು ಧರ್ಮಂಗಳಂ
ಮಾಣದಾಚರಿಸಿದವರಾ ಸ್ವರ್ಗವೆಂದೆಂಬ
ತಾಣದೊಳು ಸರ್ವ ಭೋಗಂಗಳಂ ಭೋಗಿಸುತ್ತಿರ್ದು ಮತ್ತಾ ಪುಣ್ಯವೂ
ಕ್ಷೀಣವಾಗಲ್ಕೆ ಧರೆಗೆಯಿದಿ ಮತಂ ಫಳಿಸಿ
ಮೇಣೆಸೆವ ದಿವಿಗೆಯಿದಿ ಊಟಳದವೋಲ್ತಿರಿಗಿ
ಏಣ ಧರಧರ ಸೇವೆಯಧಿಕದಿಂದಲ್ಲಿಂದ ಶಿವಲೋಕವಮಂ ಪಡೆವರೂ ೭

ಧ್ರುವಮಂಡಲದ ಮೇಲೆ ಎರಡುಕೋಟಿಯೊಳಿಹುದು
ತವೆ ಮಹರ್ಲೋಕವಲ್ಲಿಂದ್ರಾದಿ ದೇವರೊ
ಪ್ಪುವರು ಮತ್ತಾ ಮೃಕಂಡುವಿನಣುಗನಾದ ಮಾರ್ಕಂಡೇಯನತಿ ಭಕ್ತಿಯಿಂ
ಶಿವನನಾ ಸ್ಥಾಣುನಾಮದಿನರ್ಚಿಸುತ್ತ ಮುನಿ
ನಿವಹದಿಂ ನಿತ್ಯತ್ವದಿಂದ ರಾಜಿಪನಲಾ
ತವೆ ಮಹರ್ಲೋಕದಿಂ ಮೇಲೆಂಟುಕೋಟಿ ಯೋಜನದಲ್ಲಿ ಮೆಱೆದಿಪ್ಪುದೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಜನರ್ಲೋಕದೊಳಗಂ ವಶಿಷ್ಠಾದಿ ಮುನಿ
ರಾಜರಾ ಕುಶಲಿಂಗಮಂ ಭಜಿಸುತಿಹರಲಾ
ಯೋಜಿಸಲ್ಕಲ್ಲಿಂದ ಮೇಲೆ ಹನ್ನೆರಡು ಕೋಟಿಯೊಳಾ ತಪರ್ಲೋಕವೂ
ತೇಜಸನ ಕಂಸನಂದನ ಸನಾತನನು ಬಳಿ
ಕೋಜೆಯು ಸನತ್ಕುಮಾರ ಸನತ್ಸುಜಾತರಂ
ಭೋಜಸಂಭವಪುತ್ರರಾ ಸದಾಶಿವನ ಭಜಿಸುತ್ತಿರ್ಪರಲ್ಲಿ ಮೇಲೆ ೯

ಹದಿನಾಱುಕೋಟಿ ಯೋಜನದಲ್ಲಿ ಸತ್ಯಲೋ
ಕದೊಳಿಪ್ಪನಾ ಬ್ರಹ್ಮನುರು ಶಿಲಾಲಿಂಗಮಂ
ಮುದದಿಂದ ಪೂಜಿಸುವನಲ್ಲಿ ವೇದಂಗಳಾ ಮೂರ್ತಿಮತ್ತಾಗಿರ್ಪವೂ
ವಿದಿತ ಗಾಯತ್ರಿಯುಮ ಮರೀಚಿ ಕಸ್ಯಪ ಭೃಗುಸು
ಹೃದಯಂ ಪುಲಸ್ತ್ಯನಾಂಗೀರಸಂ ಕ್ರತುಕ್ರಮ
ಪ್ರದ ಪುಲಹ ದಕ್ಷನೆಂಬಾ ನವಬ್ರಹ್ಮರೊಪ್ಪುವರಲ್ಲಿ ಸಂತೋಷದೇ ೧೦

ಆ ಸತ್ಯಲೋಕದಿಂ ಮೇಲೆ ನಾಲ್ಕೋಟಿಯೊಳು
ಸಾಸಿಗಂ ವಿಷ್ಣುವಿನ ಲೋಕವೊಪ್ಪುತಿಪ್ಪ
ದೋಸರಿಸದೇಕದಂಡಿ ತ್ರಿದಂಡಿಗಳೊಳಗೆ ನೀಲಲಿಂಗವನರ್ಚಿಸೀ
ಶ್ರೀಸಹಿತ ಹದಿನಾಲ್ಕು ಲೋಕವಂ ಶಂಭುವಿನ
ಶಾಸನದೆ ಸಲಹುತ್ತಲೊಪ್ಪುವಂ ಹರಿಯಲ್ಲಿ
ಯಾ ಸುಲೋಕದ ಮೇಲೆಯಾಱುಕೋಟಿಯೊಳು ರಾಜಿಸುವುದಾ ರುದ್ರ
ಲೋಕಂ ೧೧

ಶ್ರೀ ವಿಮಾನಂಗಳಿಂ ವಿಲಸಿತದ ಹರ್ಮ್ಯಪ್ರ
ಭಾವಭವದಿಂದೆ ಸರ್ವರ್ತುಕ ಫಲಪದಶು
ಭಾವಹವನಂಗಳಿಂದಖಿಳ ದೇವವ್ರಾತ ದಿವ್ಯಗಂಧರ್ವನಿಕರಾ
ಸೇವಿಸಲು ಬ್ರಹ್ಮಾಂಡಕಂ ಕಳಶವೆಂಬಂತೆ
ಯೋವಿ ರಾಜಿಪುದು ವರವರ್ಣಿನಿವರೇಣ್ಯೆಯಂ
ತಾವರಿಪ್ಪಾ ವರದೆಯಾಗರಿಷ್ಟಾವರಾರೋಹಿ ವರಸುತಿಯೆನಿಸುವಾ ೧೨

ಗಂಗೆಯೇಳೊಪ್ಪುತಿಹವಲ್ಲಿ ನೂಱೈಸಿರದ
ಳಂಗಳವಕಿಂದ್ರನೀಲದನಾಳ ಯೋಜನದ
ಶಾಂಗದ ವಿಶಾಲಂಗಳೆಲ್ಲಾಗ ದೆಸೆದೆಸೆಗೆ ಪರಿಮಳಂಗಳ ಬೀರುತಾ
ಮಾಂಗಲ್ಯದಿಂದಿಹವು ಹದಿನಾಲ್ಕು ಜಗದಿಳೆಯ
ಪೆಂಗಳಿಗೆ ತಮ್ಮ ಕೋಟ್ಯಂಶದಣುವಪ್ಪ ಚೆ
ಲ್ವಂಗಳಂ ಕೊಟ್ಟುಂಟುಮಾಡುತಿಹ ರುದ್ರವನಿತೆಯರನಂತಂ ಮೆಱೆವರೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮಾರ್ಥ್ಯರುದ್ರಪುರುಷರು ಭಾಳನೇತ್ರಶೋ
ಭಾಮಯದ ದಶಹಸ್ತವಸ್ತಿಮಾಲಾಧರ
ಶ್ರೀ ಮಹಾದೇವ ಸಾಕಾರರು ಜರಾಮರಣದೂರರಾನಂದಪರರೂ
ದಾಮೋದರರಾಜ ಸುರಪಾದಿಗಳ ರಕ್ಷಿಸುವ
ಕಾಮಿತಾರ್ಥಪ್ರದರು ಮೆಱೆವರಾ ಲೋಕದೋಳ್
ಮಾ ಮಝರೆ ಸೌಂದರ್ಯದರಮನೆಯೊಳಿರ್ಪನೀಶ್ವರನಖಿಳರಂ ಸಲಹುತಾ ೧೪

ಮಂಡಿತದೊಳಾ ರುದ್ರಲೋಕದಿಂದಂ ಮೇಲೆ
ದಂಡಪಾಣಿಯೆನಿಪ್ಪ ರುದ್ರಭವನಂ ಮಹಾ
ಚಂಡತೇಜಸ್ಸಿನಿಂದಿರ್ಪನಾತಂ ತನ್ನ ದಂಡದಿಂ ಮುಟ್ಟಲಾಗೀ
ಪುಂಡರೀಕೋದ್ಭವಾಂಡದೊಳು ಬಾಳ್ದರು ಮುನಿದು
ದಿಂಡೆಯರ ಬಡಿಯೆ ಸಂಹಾರವಹರೆಂದೆಂಬ
ಖಂಡವೈಭವದೊಳಿಹನಲ್ಲಿಗಾ ಬ್ರಹ್ಮಾಂಡಕಾರ್ಯಂ ಸಮಾಪ್ತಿಯಾಯ್ತು ೧೫

ಮುಗಿದುದಾ ಬ್ರಹ್ಮಾಂಡಭಾಂಡದೊಳವಳೆಯ ವಿ
ಲ್ಲಿಗೆ ಮೇಲೆಯಾ ಮಹಾಂಡದ ಬಹಿರ್ವಲಯಮಂ
ಮಿಗೆ ರಕ್ಷಿಸುತ್ತಿಪ್ಪ ಶತರುದ್ರರೆಸೆವರಂತವರ ಪೆಸರಾವವೆನಲೂ
ಸುಗುಣೆಯಾ ಕ್ಷಿತಿಭೃತ್ತು ಸರ್ವತೋಮುಖನದಾ
ವಗಮೆಯ್ದೆ ಯುಗ್ರಾಶನುಂ ಧೈರ್ಯನಾಮನಾ
ಬಗೆಯ ವೃಷಧ್ವೃದ್ವೃಷಂ ಪಾತಾಳಪತಿ ವೀರಭದ್ರ ಪಾಲಕರುದ್ರರೂ ೧೬

ಇವರೊಳಗನಂತ ರುದ್ರಸಹಿತ ದಶರುದ್ರ
ರವಿರತಂ ತೇಜದಿಂ ವಿಷ್ಣುವಂ ರಕ್ಷಿಸುತ
ಸವಿಲಾಸದಿಂದಲಾ ಬ್ರಹ್ಮಾಂಡದೆಡೆಯಲ್ಲಿ ವಿಭವದಿಂದಿಪ್ಪರಿನ್ನೂ
ಪ್ರವಿಮಲ ತ್ರಿದಶೇಶ್ವರಂ ಪಿನಾಕಿಯು ಶಾಶ್ರು
ತವೆಯವ್ಯೆಯಂ ವಿಭೂತಿಪ್ರಮುದ್ರ್ಧಕ ವಜ್ರ
ದವಯವರು ರುದ್ರ ಭದ್ರಂ ರುದ್ರಜಯರುದ್ರನಾ ಕಪಾಲಿಗಳು ಹತ್ತು ೧೭

ಸಕಲ ರುದ್ರರು ಸೇವಿಸಲು ಶಂಭುವಾಜ್ಞೆಯಿಂ
ಸುಕರ ದೇವೇಂದ್ರನಂ ರಕ್ಷಿಸುತ ಮೂಡಲಿಹ
ರಕಲಂಕರುಱೆ ಮತ್ತೆಯಾ ಕ್ಷಯಾಂತಕನು ಭಸ್ಮಾಂತಕಜ್ವಲನು ಬಭ್ರೂ
ಪ್ರಕಟಿತದ ಹರರುದ್ರನಸಮತೇಜಂ ಪಿಂಗ
ಳಕಖಾದರುದ್ರರು ಹುತಾಕಾಗ್ನಿರುದ್ರರೆಂ
ಬಕುಟಿಲದ ದಶರುದ್ರರಖಿಳ ಸೇನೆಯೊಳಗ್ನಿಯಿಂ ಸಲಹುತಿಪ್ಪರಲ್ಲೀ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತಾ ವಿಯೋಕ್ತ್ರ್ಯ ಸಂಯೋಕ್ತ್ರ್ಯಧರ್ಮಪತಿಯಾ
ತತ್ತಿಂದಧರ್ಮಪತಿ ಕಾಲರುದ್ರಂ ಕರ್ತೃ
ದಾತ್ತದ ವಿದಾತ್ಯ ಸಂಮೃತ್ಯುಹರ ಕಾಲರುದ್ರಾದಿ ದಶಯಮನಾಣ್ಮರೂ
ತತ್ತದಂಷ್ಟ್ರಂ ಲೋಹಿತಂ ಧೂಮಂ ವಿರುಪಾಕ್ಷ
ನತ್ತೂರ್ಧ್ವಶೇಷಂ ಭಯಾಂತಕಂ ಕ್ರೂರದೃ
ಕ್ಕಿತ್ತಲೀ ಚಕ್ರಹಂ ತು ಮರಣ ಮಹಾರುದ್ರದಶನಿಋತಿ ಪಾಲಕರಲಾ ೧೯

ಭೀಷಣಂ ಜ್ವಾಲಾಂತಕಂ ವಡಬಮುಖದೀರ್ಘ
ಭೂಷ ಬಾಹುಜಯು ಭದ್ರಶ್ವೇತಮಹಬಲಸು
ತೋಷಾತಿಬಲನು ಬಲರುದ್ರಪಾಶಕರು ದಶರಾ ವರುಣನಂ ಪೊರೆವರೂ
ದ್ವೇಷಾಭ್ರಕೇತು ಪಂಚಂ ಪಂಚರುದ್ರರ್ವಿ
ಶೇಷಕ್ಷಯಾಂತ ಪಂಚಾಂತಕಂ ಸೂಕ್ಷ್ಮಪರಿ
ತೋಷಪ್ರವೃತರಿಂತು ಲಘು ಶೀಘ್ರ ದಶರುದ್ರರಾ ವಾಯುರಕ್ಷಕರಲಾ ೨೦

ಚಿರಕಾಮರೂಪಪ್ರಸಾದಿಪ್ರಪಂಚದೃ
ಕ್ಸ್ವರಲಕ್ಷ ಸೌಮ್ಯಾಂಗಿ ಧನ್ಯರೂಪಾಗ್ರಿಜಟಿ
ಯುರುನಿಧಿಯು ಘನರತ್ನಧಾರಿ ದಶರುದ್ರರು ಕುಬೇರನಂ ಪಾಲಿಸುವರೂ
ಪರಮ ಸುಖದುಃಖಕರ ವಿದ್ಯಾವಿಧಾಯಕೋ
ತ್ಕರಬಲಿಪ್ರಿಯಭೂತಪಾಲ ಪಿಂಗಳ ವೇದ
ಕರಿವೇದಚೇಷ್ಟಿ ಸರ್ವಜ್ಞ ವಿದ್ಯಾಪಸುಜ್ಞಾನಿದಶರೀಶಪರರೂ ೨೧

ಶ್ರೀ ವಿಚಕ್ಷಣ ವಿವಿಷ್ಣಂ ನಭೋ ರುದ್ರನಾ
ವೈವಾಹ ಸಂವಾಹ ಸುರಪೂಜ್ಯನಾ ತ್ರ್ಯಕ್ಷ
ಜೀವಂ ಗಣಾಧ್ಯಕ್ಷ ವಿಭುಶಂಭುವೆಂಬ ರುದ್ರರು ಹತ್ತಜಾಂಡಘಟದಾ
ಆ ವಿಶೇಷಾಗ್ರದೊಳಗಿಹರು ಶತರುದ್ರರೀ
ತಾವಿಗಾಯ್ತುವರು ದಶದಿಕ್ಕಿನೊಳು ಸಕಲರು
ದ್ರಾವಳಿಗಳೆಯ್ದ ಯೋಲೈಸೆ ಶಿವನಾಜ್ಞೆಯಿಂ ಕಾಯ್ವರಬ್ಜಭವಾಂಡವಾ ೨೨

ಎಲ್ಲಕ್ಕೆ ಮೇಲೆ ವೀರೇಶ್ವರಂ ಆ ಶಾಂತ
ಮಲ್ಲಿಕಾರ್ಜುನನಾಜ್ಞೆಯಿಂದ ಶತರುದ್ರರ್ಗೆ
ಸಲ್ಲಲಿತವಾದಜಾಂಡಾಂತರಾಳದ ಭುವನಪತಿಗಳಿಗೆ ಕರ್ತನಾಗೀ
ಉಲ್ಲಾಸದತಿ ರೌದ್ರರೂಪದಿಂ ಧನು ಶರಂ
ಪ್ರೋಲ್ಲಸದ ಪಲಕಾಸಿಗಳನಾಂತು ರಾಜಿಪಂ
ನಲ್ಲಳಹ ಭದ್ರಕಾಳಿಯು ಮೋಹಿ ವಿಧೃತವಿನುತಾಹಿ ಬಹುದೋಷದಾಹೀ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧೀರ ಜಂಗುಳಿ ದೈವಗಳ ಗಂಡ ದಕ್ಷಯ
ಜ್ಞೋರು ಮಸ್ತಕಖಂಡ ಪಂಚಮೇಢ್ರಾಸುರ ಮ
ಹಾರಭಸ ಕುಮುದಮಾರ್ತಾಂಡ ನರಸಿಂಹ್ವ ಮದಗಿರಿ ವಿದಳ ವಜ್ರದಂಡಾ
ಚಾರುತರ ಘನರೌದ್ರ ಖಂಡಿತ ಮಹಾ ಕ್ಷುದ್ರ
ಸಾರ ಸುಗುಣಸಮುದ್ರ ತದ್ವಶೀಕರರುದ್ರ
ಸೂರಸೇವಿತ ವೀರಭದ್ರ ಜಯಯೆಂದು ಕೀರ್ತಿಪರಲ್ಲಿ ವರನಿಷ್ಠರೂ ೨೪

ಕಡಲನೊಕ್ಕುಡಿತೆಯಂ ಮಾಡುವರು ವಾರಿಧಿಗ
ಳೆಡೆದಿಟ್ಟನೊಡದೊಂದುಗೂಡುವರು ಕುಲಗಿರಿಯ
ಪಿಡಿದು ಚೆಂಡಾಡುವರು ವಡಬನಂ ತೆಗೆದು ನೊಸಲಲ್ಲಿ ತಿಲಕವನಿಡುವರೂ
ಘುಡಿ ಘುಡಿಪ ಘನ ವೀರ ಕೋಟಿಯೋಲೈಸುತಿರ
ಲಡಿಯ ನೆನೆವವರುಗಳಿಗಿಷ್ಟಾರ್ಥಸಿದ್ಧಿಯಂ
ಕೊಡುತಲೊಪ್ಪಿದನಲಾ ಬ್ರಹ್ಮಾಂಡದಗ್ರದೊಳ್ ಶ್ರೀ ವೀರಭದ್ರೇಶ್ವರಾ ೨೫

ಎಂದಿಂತು ಭುವನಕೋಶದ ಬಗೆಯನತಿ ಕರುಣ
ದಿಂದಗ್ಗ್ರಗದ್ದುಗೆಯೊಳಿಹ ಸುಖಾವಹಮೂರ್ತಿ
ವಂದಿಸುತ ಬೆಸಗೊಂಬ ದಾರುವನವಾಸಿ ಮುನಿಗಳಿಗೊರೆದ ಸತ್ಕಥನಮಂ
ಮುಂದೆ ಕೈಮುಗಿದು ಕೇಳುವ ಕೆಂಚವೀರಾಖ್ಯ
ಗಂ ದಯದೊಳಾ ಹಲಗೆಯಾಚಾರ್ಯನುಱೆ ಪೇಳ್ದ
ದಂ ದೇವಭಾಷಾದಿಯುಭಯ ಶಿವಕವಿ ಪದನಮಾಡಿದಂ ಮಲ್ಲಣಾರ್ಯಂ ೨೬

ಸ್ವಾಮಿ ಹಲಗೆಯ ಗುರುವೆ ಬಿತ್ತರಿಸಿದಿರಿ ಸಕಲ
ಭೂಮಿಗಳನೊಳಕೊಂಡಜಾಂಡಮಂ ಕೇಳಿದೆಂ
ಈ ಮಹಾಂಡವಿದೊಂದೊ ಯಿನ್ನು ಕೆಲವುಂಟೊ ಪೇಳೆನೆ ಕೆಂಚವೀರಾಖ್ಯಗೇ
ಹೈಮಗನೆ ಕೇಳ್ದೆಯ್ಯೆ ಪ್ರಶ್ನೆಯಹುದೊಂದೇ ತ
ಕೈ ಮಹೇಶ್ವರನಾಜ್ಞೆಯಿಂದ ಹಲವಂಡವುಂ
ಟೈ ಮದೀಯ್ಯಾಮಲಿನ ವಾಕ್ಯಮಂ ಕೇಳೆಂದು ನುಡಿದನಾಚಾರ್ಯಮೂರ್ತಿ೨೭

ಶಿವನ ಬಲದಲ್ಲಿ ಹುಟ್ಟಿದ ವಿಧಿಗೆ ಜನಿಸಿದರು
ನವ ಮಹಾಬ್ರಹ್ಮರವರೊಳು ಕಸ್ಯಪಂಗಾದ
ಯುವತಿಯರು ಸುಸಬ್ರಹ್ಮಜೆಯರಾ ಬ್ರುಹತಿಯದಿತಿ ದಿತಿ ಕದ್ರುವೈ
ಅವಳನುಜೆ ವಿನುತಾ ಪ್ರಭಾ ಕುಮುದಿನಿ ಶವರ್ನ್ನೆ
ತವೆ ಕಾಳದಂಡಿ ಮೇಘಾದಂಡಿ ಧಾತುಪ್ರ
ಭೆ ವಿಶೇಷ ಕುಸುಮಾವತಿಯು ಸುಪಾರ್ವಂದಿ ಎಂಬಬಲೆಯರು
ಪದಿಮೂಱಲ್ಲೈ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹದಿಮೂಱಿಕಾದ ಮಕ್ಕಳ ವಿವರವೆಂತೆನಲು
ಮೊದಲೊಳಾಬ್ರುಹತಿಗಯಿವತ್ತಾಱು ಕೋಟಿ ಲೆ
ಕ್ಕದ ದೈತ್ಯರದಿಗಿಂದ್ರಾದಿ ತ್ರಯತ್ರಿಂಶದಮರ ಸೂರ್ಯಾದಿ ಜನನಂ
ತದ ನಂತರದೊಳು ದಿತಿಯಲ್ಲಿಯಮೃತಂ ಚಂದ್ರ
ರುದಿತ ನಕ್ಷತ್ರಾಳಿಯಾ ಕದ್ರುವಿನೊಳು ಹು
ಟ್ಟಿದ ಮಹಾಶೇಷ ಘೂತ್ಕಾರ ನವನಾಗ ಮುಖ್ಯಂಗಳಿಂತಾದವಿನ್ನೂ ೨೯

ವಿನತೆಯೊಳು ಸೌದಾಮಿನೀ ವಜ್ರನಿರ್ಘೋಷ
ವೆನಿಪುದರುಣಂ ಸುವರ್ಣ ಪ್ರಭಾದೇವಿಯೊಳು
ಜನನವಾಭರಣ ನವರತ್ನಾದಿಗಳು ಕುಮುದಿನಿಯೊಳು ದಶದಿಗ್ಗಜಗಳೂ
ವನ ಮೃಗಂ ಸ್ವರ್ಣಪ್ರಭೆಯು ಗರ್ಭಸಂಜಾತ
ವಿನುತಾಷ್ಟಲೋಹ ಪಾಷಾಣ ಪರುಷಂಗಳಾ
ಘನದ ಚಿಂತಾರತ್ನವಾ ದಂಡಿಯೊಳು ಸಪ್ತಋಷಿ ಮುಖ್ಯ ತಾಪಸಿಗಳೂ ೩೦

ಹತ್ತನೆಯ ಮೇಘದಂಡಿಯೊಳು ಮೇಘಾಳಿ ಪು
ಟ್ಟಿತ್ತಲಾ ಧಾತುಪ್ರಭೆಯೊಳಾ ಮಹಾ ಕೂರ್ಮ
ತತ್ತ್ವೋಯಜ ಪ್ರಾಣಿ ಕುಸುಮಾವತಿಯೊಳು ಸುರಧೇನು ಸುರವೃಕ್ಷಂಗಳೂ
ಮತ್ತೆ ಪಾರ್ವಂದಿಯೊಳು ಪರ್ವತವ್ರಾತವೊಗ
ಯಿತ್ತು ಕಸ್ಯಪನ ವನಿತೆಯರು ಹದಿಮೂಱಿಂತು
ಪೆತ್ತ ವಸ್ತುಗಳಿನ್ನು ತದ್ವನಿತೆಯರ ವಿಚಾರದೊಳಗೆದವಾವವೆನಲೂ ೩೧

ಅವರ ಮಲಸಂಬಂಧದಿಂ ಕ್ಷುದ್ರ ತತ್ಕ್ರಿಮಿಯ
ನಿವಹ ಕೀಟಕ ಸಕಲ ಜೀವಂಗಳೆಲ್ಲವು
ದ್ಭವಿಸಿದವು ತದ್ವನಿತೆಯರ ಚಿತ್ತದೊಳು ಕಾಲಭೀತಿಗಳು ಜನಿಸಿದವಲಾ
ಯುವತಿಯರ ಮಧ್ಯದೊಳು ಶಿಷ್ಟದುಷ್ಟಗ್ರಹ
ಪ್ರವರ ದೇವಗ್ರಹಂ ನಾಗಗ್ರಹಂ ಯಕ್ಷ
ಸವಿಶೇಷ ಸದ್ಗ್ರಹಂ ರಾಕ್ಷಸಗ್ರಹ ಸಿದ್ಧಗಂಧರ್ವವಿಲಸದ್ಗ್ರಹಂ ೩೨

ಸೇರುವೆಯೊಳಂ ಪಿಶಾಚಂ ಪ್ರೇತರಂಗಳಿಂ
ಬಾರಭಸುದುಷ್ಟ ಪ್ರದುಷ್ಟ ಭೂತಾದಿಗಳು
ಧಾರುಣಿಯೊಳೆಯ್ದೆ ದೈತ್ಯೋಪದ್ರವ ಕ್ಷುದ್ರ ಮುಖ್ಯವಾ ಮರುಳ ತಂಡಂ
ಆರುಭಟೆಯಾ ಬ್ರಹ್ಮರಾಕ್ಷಸೋಗ್ರಂ ನಿಗ್ರ
ಹೋರು ಭೂತಂ ಶಾಕಿನೀ ಢಾಕಿನೀ ಸ್ತೋಮ
ವಾರಸಭ್ರಾಂತ ವಿಭ್ರಾಂತಂ ವಿಕಾರಗ್ರಹಾಳಿ ಬೇತಾಳನಲ್ಲೀ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವು ಮುಖ್ಯವಾದಖಿಳ ದುಷ್ಟಸುಷ್ಟಾಗ್ರ ದೇ
ವವಿಕಾರ ದುರ್ವಿಕಾರ ಪ್ರಾಣ ತತಿಯ ಸಂ
ಭವಕಾರಣಂ ಕಶ್ಯಪಬ್ರಹ್ಮನವನಾ ಪಿತಾಮಹನೊಳಂ ಜನಿಸಿದಂ
ಶಿವನೆಲ್ಲಕಂ ಪರಮ ಕಾರಣಂ ಸರ್ವಪತಿ
ಯುವೆಯುಚಲನದನೋಟದಿಂದಜಾಂಡಂ ಕೋಟಿ
ಪವಣಿಸಲ್ಬಾರದೆನೆ ಪುಟ್ಟಿ ವರ್ಧಿಸಿ ಲಯವನೆಯ್ದುವವು ನಿಶ್ಚಯದೊಳೂ ೩೪

ಪರಮ ಸ್ವತಂತ್ರ ಶಿವಭೃತ್ಯನಜನಿಂ ಕೆಲವು
ಪರಿಯಜಾಂಡಂಗಳುದಯಿಸಿ ಮೆಱೆವವರೊಳಗೆ
ವಿರಚಿಸುವನೇಕಾಂಡವಮಂ ಮೊದಲೋಳಾ ದ್ವೀಪಸಿಂಧು ಬಹುಲೋಕಂಗಳಾ
ಪರಿವೇಷ್ಟಿಸಿರ್ದಂಡವೈದ್ವೈದು ಕೋಟಿಗಳು
ನಿರುತೋನ್ನತದೊಳೊಂದು ಕೋಟಿಯೋಜನವಪ್ಪ
ಧರೆಯೂರ್ಧ್ವದಾಕಾಶವಿಪ್ಪತ್ತನಾಲ್ಕು ಕೋಟಿ ಪ್ರಮಾಣದೊಳಿಪ್ಪುದೂ ೩೫

ವಿಲಸಿತತ್ರಿಸ್ಥಾನಮೇಕಂ ಶತಾರ್ಧಕೋ
ಟಿ ಲಸತ್ಪ್ರಮಾಣ ತದ್ಭೂಮಿ ಸಂಯುಕ್ತವಹ
ಜಲಮಧ್ಯಮಪ್ಪಜಾಂಡಾಧಾರ ಮೆಂತೆನಲು ನೀರಮೇಲೊಪ್ಪುತಿರ್ಪಾ
ಬಲವನ್ಮಹಾ ಕಮಠನಂಗಸಂಶ್ರಯದಪ್ಪ
ಕುಲಗಜಂ ತಳೆದು ರಾಜಿಸುತಿಪ್ಪ ವಾಜಿಗಳ
ಶುಲಭಿ ಕಂಠಾವೃತ ಮಹಾಶೇಷನಾಂತಿರ್ಪನಾ ಸ್ಫಟಾಸಾಹಸ್ರದಿಂ ೩೬

ವಾರಿಜಭವಾಂಡವಿಂದ್ರಾಗ್ನಿಯುಮನಾ ನಿರುತಿ
ವಾರಿಧೀಶ್ವರ ಪವನ ಯಕ್ಷನೀಶಾನ್ಯದೊಳ
ಗೈರಾವತಂ ಪುಂಡರೀಕ ವಾಮನ ಕುಮುದಮಂಜನಂ ಪುಷ್ಪದಂತಾ
ಸಾರ ತರ ಸಾರ್ವಭೌಮಂ ಸುಪ್ರತೀಕವಾ
ಧಾರವಾಗಿಪ್ಪವೈ ನಿಜ ವಿಗ್ರಹಾಧಿಕಾ
ಧಾರದೊಳು ಶೇಷಾಂಗ ಕಂದಪರಿವೃತ್ತವಾಲಿಸು ಮುಂದೆ ಸತ್ಕುಮಾರಾ ೩೭

ಸುರಪಾದಿಗಳವಿ ದಿಕ್ಕಾದಿಯೀ ಕ್ರಮದಿಂದ
ಉರುಗನಾಯಕರನಂತಂ ತಕ್ಷಕಂಗಳಾ
ಪರಿವಿಡಿಯ ವಾಸುಗೀಶಂಖ ಪಾಲಂ ಪದ್ಮಕರ್ಕೋಟಕಂ ಕೌಂಡನೂ
ಉರುತರೇಶಾನೇಂದ್ರ ಮಧ್ಯದೊಳ್ ಶಾಮಾಹಿ
ತರುಣ ಕೇಳಷ್ಟಕುಲನಾಗಂಗಳಲ್ಲಿ ಸರ
ಸಿರುಹಗರ್ಭಾಂಡಕಾಧಾರವಾಗಿರ್ಪವಿನ್ನಪರ ಭೇದವನೊರೆವೆನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿರಿಯ ದಿಗ್ದಂತಿಗಳ ಭೋಜನದ ಕಾಲದೊಳ
ಗುರಗಂಗಳೆಂಟು ಹೊತ್ತಿಪ್ಪವಂತಾ ಫಣೀ
ಶ್ವರರಾಹುತಿಯ ಸಮಯದಲ್ಲಿ ಯಾನೆಗಳು ತಾಳ್ದಿಪ್ಪವಿಭವಹರಾಜರಾ
ವರ ಭುಕ್ತಿವೇಳೆಯೊಳಗಾ ಮಹಾಶೇಷನೇ
ಧರಿಸಿಪ್ಪನಂತಲ್ಲದೇಕಮಠರಿಂತು ತ
ತ್ಪರಿಯಾಯ ವಿಶ್ರಮದೊಳೆಸೆವರಿವರಿನ್ನುಳಿದ ಜಾಂಡಂಗಳಿರವೆಂತೆನೇ ೩೯

ಇವಕೆಲ್ಲಕಾಧಾರವಾಗಿಪ್ಪುದಾವುದೆನೆ
ಶಿವನ ಲಸದಾಧಾರ ಶಕ್ತಿ ಮೂಲಗ್ರಂಥಿ
ತವೆಯಜಾಂಡದ ಗರ್ಭದಲ್ಲಿ ಹದಿನಾಲ್ಕುಲೋಕಂ ಕುಹರವೆಸೆದಿರ್ಪವೂ
ಪ್ರವಿಮಲವಿರಾಡ್ರೂಪನಂಘ್ರಿಯಿಂ ಕಮಠನಂ
ಗವನಂಟಿಯಾ ಮಕುಟವೇ ಕಮಲಜಾಂಡದಿಂ
ದವೆ ನೋಡೆ ಹತ್ತು ಬೆರಲುದ್ದದಿಂದತ್ಯತಿಷ್ಠಾರ್ದಶಾಂಗುಲನೆನಿಪನೂ ೪೦

ಆ ವಿಶ್ವಪತಿಯಾಜ್ಞೆಯಿಂ ಮನೀಷಂ ಸಕಲ
ಭೂವಲಯಕಾಧಾರವಾಗಿಪ್ಪನಾಮಿಯುಂ
ಭಾವಿಸಲು ಹರಿರೂಪನೈತ್ವಪ್ಪುವುತ್ಪತ್ತಿ ಕಾರಣಂ ಬ್ರಹ್ಮನೆನಿಕುಂ
ತೀವಿದೀ ಸಕಲ ದಕ್ಷಕನಾ ಮಹೇಂದ್ರನೈ
ಯಾ ವಿಭಾಕರ ರೂಪಕಂ ಸ್ವರ್ಣಕಾರಿಯಿಂ
ತೈವರಾಧೀನದಿಂದಿಪ್ಪವೈ ಪಲವಜಾಂಡಂಗಳಿನ್ನೆಂತೆಂದೊಡೇ ೪೧

ಆ ಮಧ್ಯವೆನಿಸಿಪ್ಪಜಾಂಡ ಬಹಿರಾಂಡಂಗ
ಳೈ ಮಗನೆಯಂಡಾಂಡವಲ್ಲಿ ತದ್ಬ್ರಹ್ಮಾಂಡ
ನಾಮ ಚಕ್ರಾಕೃತಿತ್ರಯ ವಿಶಾಲಂಪುಪಂಚಾಶತ್ಸುಕೋಟಿಮಾನಂ
ಈ ಮಾಳ್ಕೆ ಬಾಹ್ಯಸಕ್ಷೋಬಸಂಖ್ಯಾಧಿಕ ವ
ಲೈ ಮತ್ತೆ ವಟಫಲೋಪಮಲಸದ್ಬ್ರಹ್ಮಾಂಡ
ವೈ ಮಹಾಂಡಂ ಮಹಾಬ್ರಹ್ಮಾಂಡವಾ ಪರಾಂಡಂ ಪರಬ್ರಹ್ಮಾಂಡವೈ ೪೨

ಭೈರವಾಂಡಂ ಕುಕ್ಕುಟಾಂಡವಂತಾತ್ರಯೀ
ಕಾರಲಕ್ಷಣಮಹಾಬ್ರಹ್ಮಾಂಡಗರ್ಭಸ್ವ
ದೋರಣದೊಳಾ ನವಬ್ರಹ್ಮಾಂಡಸಂಭವಂ ಪರಿಯಾಯದಿಂದ ಕೂರ್ತು
ಆರೈಯ್ಯಲಂತಸಂಖ್ಯಾತವತ್ತಿಯ ಹಣ್ಣ
ಳೋರಣ ಪರಾತ್ಪರಾಂತದ ನಿರ್ಣಯಂ ಕೇಳ್ಕು
ಮಾರ ವಟಫಲದಂದದಿಂ ಕಪಿತ್ಥದ ಫಲದ ಮಾಳ್ಕೆಯಾಂಡಂಗಳೆಸೆಗುಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಗನೆ ಕೇಳೀ ಕ್ಷೋಭಸಂಖ್ಯಾಂಡದೊಳು ಹಿಂದೆ
ಸುಗುಣ ನಿನಗಾವೊರೆದ ಹದಿನಾಲ್ಕು ಜಗದೊಳಾ
ವಗಮಿರ್ಪ ವಸ್ತುವೆನಿತನಿತರಿಂದೊಪ್ಪುವವನಂತ ಶಿವಮಹಿಮೆಯೆಂಬಾ
ಸೊಗಸಿನತ್ತಿಯ ಮರದ ಹಣ್ಣೊಳಗೆ ಘುಂಘುರಾ
ದಿಗಳಂತೆ ಹರಿಯಜಾದ್ಯಖಿಲ ಜೀವರ್ಕಳಿನೆ
ಮಿಗೆ ರೋಮಕೂಪದೊಳಜಾಂಡಕೋಟಿಗಳ ಶಿವಲೋಕವಂ ಬಿತ್ತರಿಪೆನೂ ೪೪

||ಸಾಕ್ಷಿ|| ಕಾಲೋಯಂ ಭೂತಮಶಕ ಘುಂಘುರಾವನ್ನಪಾತಿನಾಂ
ಬ್ರಹ್ಮಾಂಡೌದುಂಬರೌಘಾನಾಂಬ್ರುಹತ್ಪಾದಪತಾಂಗತಃ ೧

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ೯ಂ
ಶೀಲಪಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೂರ್ತು ಪದನಂ ಮಾಡಿದಂ ೪೫

ಇದು ವೀರಶೈವ ಷಟ್ಸ್ಥಲ ಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರಚಿತ್ಕ್ರಿಯಾ
ಪ್ರದಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಭುವನಕೋಶ ಮುಗಿದೆಡೆ ಮೂಱುಕಾಂಡದಿಂ ಮೇಲೆ ಹದಿನೈದು
ಸಂಧೀ ೪೬

ಅಂತು ಸಂಧಿ ೧೫ ಕ್ಕಂ ಪದನು ೮೧೭ ಕ್ಕಂ ಗ್ರಂಥ ೭೮ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೨

ಶಿವಲೋಕವಿಸ್ತಾರಾದಿಯಂ ಪೇಳುವಿಕೆ

ಶಂಭು ಶಿವಲೋಕ ಸೌಂದರಿಯ ಮಂಗಣ ಕೃತಾ
ರಂಭಸೇವೆಯನಲ್ಲಿ ರಾಜಿಸುವ ಸರ್ವ ಸೌ
ರಂಭವಮಂ ಕೆಂಚವೀರಾಹ್ವಯಂಗೊರೆದರಾ ವೀರ ಹಲಗೆಯ ದೇವರು

ನಾನಾ ಮಹೇಶ್ವರ ಜ್ಞಾನಾತಿಶಯ ದಿವ್ಯ
ಗಾನಾಹಿಪತಿ ವಿಲಸದಾ ನಾರದೇಷ್ಟದನ
ವೀನಾಂಗ ಹರಿಯಮರ ಸೇನಾಧಿಪಾಜದಿವಿ ಭೂನಾಥ ಸುಪ್ರಸನ್ನಾ
ಮೌನಾದಿ ಸಂಯಮಿ ವಿತಾನಾರ್ಚಿತಾಂಘ್ರಿಸುಮ
ಹಾನಾಕ ದಿವ್ಯಪ್ರಸೂನಾಸ್ತ್ರವೈರಿ ಚಿ
ನ್ಮಾನಾಮಳಿತ ಹೃದಿಸ್ಥಾನಾಗ್ರ ಜಯಪಿಜಿತ ಮೀನಾಂಕಶಾಂತಮಲ್ಲಾ ೧

ಜ್ಞಾನವಿಲಸತ್ಪಿಂಡ ಸುಗುಣರತ್ನಕರಂಡ
ಗಾನಸಂಪೂರ್ಣ ಸುಸ್ನೀಕೃತೋತ್ತಮಕರ್ಣ
ಮಾನನಿಧಿ ಬಹುದಿಶಾವಧಿ ಸುಖಿದ ಸರಿ ಕಕುದ್ಗಿರಿಯ ಮೇಲಣಸದ್ಗುಹಾ
ಸ್ಥಾನಸಿಂಹಾಸನಾಸೀನ ಸತ್ಕೀರ್ತಿಯ ನ
ವೀನ ಗುರುಸಿದ್ಧರಾಮೇಶ ಪ್ರಕಾಶಕರ
ಕಾನಕಾಂಬುಜಜಾತ ಶಾಂತನಂಜೇಶ ವಿಖ್ಯಾತ ಜಯ ಜಯ ಪುನೀತಾ ೨

ಶಿವನ ಲೋಕಾಸ್ಥಾನಮಂ ಪೇಳತೊಡಗುವೇಂ
ಕುವರ ಮುಂದಾಯಜಾಂಡದೊಳುಳ್ಳ ಯುಗಕಾಲ
ವವರ ಪವಣವು ವರ್ತಿಸುತ್ತ ನಿಂದಾ ಪ್ರಕಾರಂ ದೈವವಲ್ಲಿ ಯಾಳ್ದಾ
ಅವನೀಶರಾಕ್ರಮಾಯುಷ್ಯಂಗಳೆಲ್ಲವಂ
ವಿವರಿಸುವೆವೈ ಮುಂದೆ ಕೆಂಚವೀರಾಹ್ವಯಾ
ಸವಿಲಾಸದಿಂ ಕೇಳನುತ್ತ ಬಿತ್ತರಿಸಿದಂ ಹಲಗೆಯಾರ್ಯಂ ಕರುಣದಿಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೀಟಪ್ಪ ಸುತ ಕೇಳು ಶಿವಪುರಾಣದ ರುದ್ರ
ಕೋಟಿಸಂಹಿತೆಯೊಳಂ ನಂದೀಶ್ವರಂ ನಿಜ ಕಿ
ರೀಟವಮಂ ತನ್ನ ಪಾದಕ್ಕೆ ಸಾರ್ಚುತ್ತೆಱಗಿ ನಮಿಸಿ ಬಳಿ ಕೇಳ್ದು ನಿಂದೂ
ನೋಟದಿಂದುದಯಿಸುವ ಕರುಣಮಂ ತನ್ನ ಹೃ
ತ್ಕೋಟರದೊಳಂ ಪಾರಿನಿಂದ ಜಸುತಂಗೆ ಚಿ
ತ್ಕೂಟನೆನಿಸುವ ಶಿವನ ಲೋಕಸಭೆಯಂ ಪೇಳತೊಡಗಿದಂ ಧರ್ಮರೂಪಂ ೪

ಕೇಳ್ಳೈ ಸನತ್ಕುಮಾರಾ ನಾವು ನಿನಗೊಲ್ದು
ಪೇಳಿರ್ದಜಾಂಡದಿಂ ಮೇಲೆ ಶಿವಲೋಕದ ವಿ
ಶಾಲದುನ್ನತವೆ ಮೂವತ್ತೆರಡುಕೋಟಿ ಗಾವುದವದಂ ವೇದಶಾಸ್ತ್ರ
ಜಾಳವಱಿಯವು ತರ್ಕ ತಂತ್ರಕ್ಕೆ ದುರ್ಲಭಂ
ಸ್ಥೂಳವೆನಿಪಾದಿಸಿದ್ಧಾಂತಂ ಸಮಸ್ತ ಭುವ
ನಾಳಿಗಾಧಾರವಾಗುತ ಲತಾಕಂದದಂತೆಸೆವುದೆಂದೊರೆವುತಿರ್ದಂ ೫

ಜ್ಯೋತಿರ್ಮಯದ ಕೊಂಟೆಯೆಸೆವ ಶಿವಲೋಕಕ್ಕೆ
ಸಾತಿಶಯದೆಂಟು ಬಾಗಿಲ್ಗಳೊಪ್ಪುವವಂ
ಪ್ರೀತಿಯಿಂ ಕಾಯ್ದಿರ್ಪರಷ್ಟಭೈರವರಿಂದ್ರ ಮುಖ್ಯಾಷ್ಟಸದ್ವಾರಮಂ
ಭೂತೇಶನಾಜ್ಞೆಯಿಂದಿರ್ಪರಂತವರನಾ
ಮಾತಿಶಯ ವರ್ಣಾಯುದಂ ತಜ್ಜನಾಳಿ ತ
ತ್ಪ್ರೀತಿಶಕ್ತಿಗಳು ವಾಹನ ಜಲಂಗಳನೊರೆವೆನೆಲ್ಲರ್ಗೆ ಮುಕ್ಕಣ್ಣಲಾ ೬

ಪುತ್ರ ಕೇಳ್ಳೈ ಮೂಡಲೊಳು ಮಹಾಭೈರವಂ
ನೇತ್ರತ್ರಯಂ ದಂಡವುಂ ಕಮಂಡಲುವಿಡಿದು
ಗಾತ್ರಾರುಣಂ ಹಂಸವಾಹನಂ ಬ್ರಹ್ಮಿಯೇ ಶಕ್ತಿಯೇಳ್ಕೋಟಿಭಟರೂ
ಚಿತ್ರಭಾನುವಿನಲ್ಲಿ ರುರುಭೈರವಂ ಸ್ವರ್ಣ
ಗಾತ್ರ ಶೂಲಂ ಡಮರು ಖಡ್ಗ ಖಟ್ವಾಂಗ ತ
ದ್ಗಾತ್ರಾಷ್ಟದಶಕೋಟಿ ತನ್ನಂತೆ ಮಾಹೇಶ್ವರಿಯೊಳಜನನೇಱು ಕಾಯ್ವಂ ೭

ಯಮನಲ್ಲಿ ಚಂಡಭೈರವನರುಣವರ್ಣೆ ಗಿಳಿ
ಯಮಮು ವಜ್ರಂ ಶಕ್ತಿ ಶೂಲದ ಚತುರ್ಭುಜಂ
ಸುಮಹನ್ಮಯೂರವಾಹನ ಶಕ್ತಿ ಕಾಮಾರಿ ಭಟರೈದುಕೋಟಿಯುವಗೇ
ಕ್ರಮದಿ ನೈರುತಿ ಕ್ರೋಧ ಭೈರವಂ ಸ್ವರ್ಣದಂ
ಗಮನುಳ್ಳ ಶಂಖ ಚಕ್ರಂ ಗದೆಯುಮಾಶಾರ್ಙ್ಗ
ವಮರೆ ಗರುಡನನೇರಿ ವೈಷ್ಣವಿಯೊಳೈದು ಕೋಟಿಗಳು ಸೇವಿಸಲೆಸೆದನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರುಣನೊಳಗುನ್ಮತ್ತ ಭೈರವಂ ನೀಲಾಂಗಿ
ಯುರು ಶಂಖ ಹಲಖೇಟ ಮುಸಲ ಮಹಿಷನನೇರಿ
ತರುಣಿ ವಾರಾಹಿಯೊಳಗರುಕೋಟಿ ತನ್ನನ್ನರೋಲೈಸಲಲ್ಲಿ ಕಾಯ್ವಂ
ಮರುತನ ಕಪಾಲಿ ಭೈರವನು ಮಾಣಿಕ್ಯಾಂಗಿ
ಶರವಜ್ರಧನು ಶಕ್ತಿ ಗಜವೇರಿಯಿಂದ್ರಾಣಿ
ವೆರಸಿ ಮೂರ್ಕೋಟಿ ಭೈರವರು ಸೇವಿಸಲು ತದ್ದೆಸೆಯನಾರಯ್ವುತಿರ್ಪಂ ೯

ಬಡಗಲೊಳು ಭೀಷಣಾಖ್ಯಂ ಧೂಮ್ರವರ್ಣದಿಂ
ಪಿಡಿದ ಶೂಲಂ ಡಮರು ಘಂಟೆ ಕಾಪಾಲದಿಂ
ದಡರಿ ಕಾಗೆಯನು ಚಾಮುಂಡಿಯೊಳು ಹನ್ನೆರಡು ಕೋಟಿಯೋಲೈಸಲೆಸೆವಂ
ಬಿಡದೀಶನಲ್ಲಿ ಸಂಹಾರನಾ ಸ್ವರ್ಣಾಂಗಿ
ಖಡುಗ ಗದೆ ಖೇಟ ಫಲಕದಿನಿಲಿಯನೇಱಿಯಾ
ಮಡದಿಯೆ ಮಹಾಕಾಳಿ ಭಟರೆಂಟುಕೋಟಿ ಸೇವಿಸಲಲ್ಲಿ ಕಾಯ್ದಿರ್ಪನೂ ೧೦

ಇಂತಷ್ಟ ಮದ್ವಾರದಲ್ಲಿ ಭೈರವರು ತ
ಮ್ಮಂತಪ್ಪ ಭಟರು ಸಹಿತಂ ಸೇವಿಸಲು ಪುರವ
ನಂತ ವಿಭವಪ್ರಕಾಶದ ಹರ್ಮ್ಯನಿಚಯ ಗಣಕುಲಗೃಹಾನೀಕಂಗಳಾ
ತಿಂತಿಣಿಯ ರವಿಸೋಮವೀಧಿಗಳು ಮೆಱೆವವಾ
ಕಂತುಹರನಾಜ್ಞೆಯಿಂ ಕೇರಿಗೋರ್ವರು ಮುಖ್ಯ
ರಂತಲ್ಲಿ ಮಹಿಮಾ ಸಮಗ್ರರಿಹರಾ ಮಧ್ಯದಲ್ಲಿ ಶಂಕರನರಮನೇ ೧೧

ರವಿಕೋಟಿ ತೇಜದಿಂ ಮಣಿಗೃಹಾನೀಕದಿಂ
ನವರತ್ನಸುಪ್ರಭಾ ಪ್ರಾಕಾರದಿಂದಲಾ
ಶಿವನ ರಾಜಾಲಯಂ ಮೆಱೆವು ದಿಪ್ಪತ್ತೈದುಕೋಟಿಗಾವುದದಗಲದಿಂ
ತವೆ ನಾಲ್ಕು ಗೋಪುರಂ ವೇದಮಯವಾಗಿರ್ಪ
ವವರಗಲವೊಂದು ಲಕ್ಷಂ ಯೋಜನಂಗಳೊ
ಪ್ಪುವವರ್ಣವಾ ಗಣಂಗಳ ಮುಖ್ಯರಂ ಪೇಳ್ವೆನೆಂದನಂದಾಚಾರ್ಯನೂ ೧೨

ಸುರಪ ಯಮ ವರುಣ ಯಕ್ಷರ ದಿಕ್ಕಿನಲ್ಲಿ ಬಂ
ಧುರದ ರುಗ್ಯಜುವಲ್ಲಿ ಸಾಮಮುಮಥರ್ವಣಂ
ವರ ಶುಭ್ರ ನೀಲ ಸಿತ ಪೀತವರ್ಣಂ ಮಹಾಕೂಷ್ಮಾಂಡಗಣ ರೋಮಜಾ
ರುರು ರುದ್ರ ಸತ್ರುಮಥರಗಣಿತದ ನಂದಿಕೇ
ಶ್ವರ ವೀರಭದ್ರರಾ ನೀಲಲೋಹಿತನಾವು
ದುರು ಮಹಾಕಾಳರಲ್ಲಲ್ಲಿ ವೇತ್ರಂಗಳಂ ಪಿಡಿದು ಕಾಯುತ್ತಿರ್ಪರೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ವರಗ್ಗಳರಿಂತು ಕಾಯ್ದಿಪ್ಪರೆಯ್ದೆ ಬಾ
ಗಿಲ್ವರಂ ತನ್ಮಧ್ಯದಲ್ಲಿ ಗಿರಿರಾಜಸುತೆ
ಚೆಲ್ವೆಯೊಡಗೂಡಿಯಾ ಜ್ಯೋತಿರ್ಮಯದ ಭವನದಲ್ಲಿ ಶಂಕರನಿರ್ಪನೂ
ಸಲ್ವ ಮುನಿ ಕೇಳೆನಲು ದೇವ ಶಿವನೋಲಗವ
ನೊಲ್ವ ಸಲುಗೆಯ ಗಣಂಗಳ ತೇಜವೆಂತವರು
ನಿಲ್ವ ತಾಣಂಗಳಂ ನಿರವಿಸೆನೆ ನುಡಿದನಾ ನಂದಿಕೇಶ್ವನಲ್ತಿಯಿಂ ೧೪

ಶತಲಕ್ಷಯೋಜನದ ಹರುಹು ಚಿತ್ರಪ್ರಭಾ
ವತೆಯೊಳೊಪ್ಪುವುದೀಶ್ವರನ ಸಭಾಮಂಟಪೋ
ನ್ನತಿಯನೇ ವಂಣಿಪೆಂ ತತ್ತೇಜದೆಡೆಯೊಳರವಾವುವೆಡೆವಣಿಗದಿರ್ಗಳೂ
ನುತ ಸೂರ್ಯನಿದಿರ ಖದ್ಯೋತದಂತಿಂದ್ರಾಣಿ
ತತಿಯಿಕ್ಷಿಸಲ್ಕಱಿಯುವಂತಜಾಂಡಾಳಿಯಾ
ಪ್ರತಿಬಿಂಬಿತೇಭದರ್ಪದಣಂದದಿಂದಿಂದು ರವಿರುಚಿಯು ಕೀಳ್ಪಡಿಪುದೂ ೧೫

ಆ ಮಧ್ಯಸಿಂಹಾಸನಂ ಲಕ್ಷಯೋಜನಾ
ಯಾಮದಿಂದೆಂಟು ಪಾದಂಗಳೊಪ್ಪುವವಿಂದ್ರ
ನಾ ಮರುತಸಖಯಮಂ ನಿರುತಿ ವರುಣಾನಿಲ ಕುಬೇರರೀಶಾನ್ಯಾಶೆಯಾ
ಧಾಮಾಂಘ್ರಿಯಾ ಕ್ರಮಂಗಳಿನಧರ್ಮಂಭೂತ
ವೇ ಮೂರ್ತಿ ಧರ್ಮವೃಷವಿಜ್ಞಾನ ವಿಕಟತನು
ವಾ ಮಹಾಜ್ಞಾನವೇ ಶಾಂತಿರೂಪಾದವೈ ರಾಗವೇ ಘೋರರೂಪೈ ೧೬

ವೈರಾಗ್ಯವಾನೆಯುಂತಂತನೈಶ್ವರ್ಯಂ ವಿ
ಕಾರದಿಂದೈಶ್ವರ್ಯವೇ ಸಿಂಹದಂತೆಂಟು
ಗೌರಿಯರಸನ ಪೀಠಕಿಂದ್ರಾದಿಯಷ್ಟಪದದೊಳಗಮರ್ದು ರಾಜಿಸುವುವೂ
ಆ ರುಚಿರ ಮಧ್ಯದೊಳು ಶೇಷನಾಳಾಷ್ಟದಳ
ವಾರಿ ಜಕ್ಕಣಿಮಾದಿಯೆಂಟೆಸಳಿನಲ್ಲಿಯಾ
ಚಾರು ವಾಮಾದಿ ನವಶಕ್ತಿ ಸೂರ್ಯಾಗ್ನೀಂದು ಕರ್ನಿಕೆ ವಿರಾಜಿಸುವುದೂ ೧೭

ಆ ಕರ್ನಿಕೆಯೊಳು ಶುದ್ಧಸ್ಫಟಿಕ ಸುಪ್ರಭಾ
ಶ್ರೀಕರೇಶಾನನಾ ಪಂಚದಶನಯನದಿಂ
ಜೋಕಯೆಡದ್ಯೈದು ಕರದೊಳು ನಾಗಪಾಶಘಂಟಾಗ್ನಿಯಭಯಂ ಪಂಚಕಂ
ಈ ಕಡೆಯೋಳಾ ಶೂಲ ವಜ್ರ ಖಡ್ಗಂ ಪರಶು
ಬೇಕಾದವರಿಗಭಯವೈ ಗೈಬಲಂಗಳೊಳ
ಲಾ ಕೇಳ್ವುದಾ ಸದಾಶಿವನವ್ಯ ಸದಾಖ್ಯತತ್ವವಂತಾ ಮೂರ್ತಿಯೈ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಯಜ್ಞಸೂತ್ರ ಕುಂಡಲ ಕಟಕ ಹಾರಮುರೆ
ಕೇಯೂರವಂಗುಲೀಯಕಕಟಿಗುಣಾಹಿ ಭೂ
ಷಾಯುತದ ಸಿಂಹ ಗಜಚರ್ಮಾಂಶುವಗ್ರೇಂದ್ರಯಮ ವರುಣ ಯಕ್ಷೇಶ್ವರಾ
ಮಾಯಾರಿಯಾಸ್ಯವೀಶಾನ್ಯ ತತ್ಪುರುಷವಂ
ತಾಯಘೋರಾಸ್ಯ ಸದ್ಯೋಜಾತ ವಾಮದೇ
ವಾಯತ್ತ ದಿಕ್ಕಿನೊಳು ಪಂಚ ತನ್ನಾಮಧೇಯರು ಕೀರ್ತಿಸುತ್ತಿರ್ಪರೂ ೧೯

ಕ್ರಮದಿನೀಶಾನಾದಿ ಪಂಚಮೂರ್ತಿಗಳಿಗು
ತ್ತಮವರ್ಣವೇ ಪ್ರವಾಳೋದಯಾರ್ಕಾಂಜನದ
ಸಮವಿಂದು ಕುಂಕುಮಾಸ್ಯದ ಪಂಚಮುಖರು ಓಂ ಹ್ರೌಂಚಯನಮಃಶಿವಾ
ಸುಮಹದೋಂ ಹ್ರೈಂವಾಯನಮ ಶಿವೋಂ ಹ್ರೂಂ ಶಿವಯ
ನಮ ಓಂ ಹ್ರೇಮ ಶಿವಾಯನಂ ಕಣಾ ಓಂ ಹ್ರಾಂಚ
ನಮಃ ಶಿವಾಯಯೆನುತ್ತ ಪಂಚವಿಲಸದ್ಬ್ರಹ್ಮಮಂತ್ರದಿಂ ಕೀರ್ತಿಸುವರೂ ೨೦

ಈ ಪಂಚಮೂರ್ತಿಗಳು ಬಿಡದೆ ಕೀರ್ತಿಸುತಿರ್ಪ
ರಾ ಪದ್ಮ ಮಧ್ಯಗತ ಶಿವನ ವಾಮಾಂಗದೊಳ
ಗಾ ಪಾರ್ವತೀದೇವಿಯರ್ಧಾಸನದೊಳೊಪ್ಪಿ ದಿವ್ಯರತ್ನಾಭರಣದಿಂ
ಆ ಪುತ್ರ ಗುಹಗಣಪರಂ ಮುದ್ದಿಸುತ್ತೀಶ
ರೂಪಮಂ ನೋಡುತ್ತ ಲೀಲಾಬ್ಜಮಂ ಪಿಡಿದು
ಭಾಪೆಂದು ಮಂತ್ರಶಕ್ತಿಯರು ಕೊಂಡಾಡುತಿರೆ ರಾರಾಜಿಸುತ್ತಿರ್ದಳೂ ೨೧

ಗರುಡ ಗಂಧರ್ವರಪ್ಸರ ಸತಿಯರಲ್ಲಿ ತುಂ
ಬುರ ನಾರದರ ಗಾನತೂರ್ಯತ್ರಯಂಗಳಿಂ
ಪರಮೇಶ್ವರಂ ಮೆರೆವನಾ ಮೂಡಗಡೆಯಲಾ ಭೃಂಗಿ ಮಹಕಾಳರ್ಕಳೂ
ಪರಿವಿಡಿಯೊಳೊಬ್ಬೊಬ್ಬರೆಂಟರ್ಬುದಾಗ್ರಗಣ
ವರರ ವರ ಹಿಂದಿರ್ಪ ವಿಶ್ವನು ಕಿರೀಟಿಯೆಂ
ಬರಿಗೇಳುವೇಳು ಪದ್ಮಂ ಭೀಮಗಣದವರ ಹಿಂದೆ ಘಂಟಾಕಾಲಗೇ ೨೨

ಗಣವರರು ಶಂಖ ಸಾವಿರವವರ ಹಿಂದೆಯು
ಗ್ರಣಿ ಸುಘಂಟಾಕರ್ಣ ಸುರಘೋಷರಿಗೆ ಭೃತ್ಯ
ರಣೆಯುರದೆ ನಾಲ್ಕು ನಾಲ್ಕುಂ ಪದ್ಮವವರೊತ್ತಿನೊಳು ದಂಡಿಯೆಂಬವಂಗೇ
ಗಣಕುಲಂ ಹತ್ತುಸಾವಿರಕೋಟಿಯೈ ರುದ್ರ
ಗಣವೆಸೆವ ನಾನೂರು ಪದ್ಮಕ್ಕೆ ವೃಷಕೇತು
ಗಣನೊಡೆಯನಿನ್ನು ಮೂವತ್ತು ಪದ್ಮಕ್ಕಾಣ್ಮ ನೀಶಾನನವನ ಹಿಂದೇ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರು ಹನ್ನೊಂದು ಮುಖ್ಯರಿಗೆಲ್ಲವುಂ ಕೂಡಿ
ಶಿವಗಣಂ ಶಂಖ ಸಾವಿರವು ನಾಲ್ಕುಂ ಕ್ಷೋಣಿ
ಅವರೊಳೈವತ್ತೆರಡು ಪದ್ಮವುಂ ಮೂವತ್ತನಾಲ್ಕರ್ಬುದಂ ಗಣಕುಲಾ
ಅವಿರತಂ ಸೇವಿಸುವರಾ ಮೂಡಲಲ್ಲಿಂದ
ಭವನ ಬಲದೊಳ್ಬ್ರಹ್ಮನಾ ಚತುರ್ಮುಖದಿಂದ
ಸವಿಲಾಸರುದ್ರಸಾಹಸ್ರನಾಮದೆ ಶೈವಮಂತ್ರಂಗಳಂ ಜಪಿಸುತಾ ೨೪

ದಿವ್ಯ ಯೋಗಿಗಳಾದಿ ಋಷಿಯರ ಸಮೂಹದಿಂ
ಭವ್ಯವೆನೆ ಮೂರ್ತಿವತ್ತಾದ ವೇದಂಗಳಿಂ
ಸೇವ್ಯನಾದೀಶನಂ ಭಜಿಸುತಂ ಬ್ರಹ್ಮನಾತನೊತ್ತಿನೊಳಗಣಿತಾ
ನವ್ಯ ರೋಮಜರೆಂಬ ಗಣಕೊಡೆಯರಾಗಿ ಸಂ
ಭಾವ್ಯದಿಂ ಕಾಲಾಗ್ನಿರುದ್ರನುಂ ವೀರೇಶ
ರವ್ಯಯನನೋಲೈಸುತಿಪ್ಪರವರೊತ್ತಿನೊಳು ಹತ್ತು ಪದ್ಮಕ್ಕೊಡೆಯರೂ ೨೫

ಆ ಪಿನಾಕಿಯ ಕಾಲಕಂಠರೆಂಬೀರ್ವರ
ಲ್ಲಾ ಪುತ್ರ ಕೇಳಾಱುವಾಱು ಪದ್ಮಕ್ಕೊಡೆಯ
ರೇ ಪೇಳ್ವೆನೈ ಕರಾಳಾಂಘ್ರಿಯಂತಾ ಕರಾಳ ಸುಕೇಶನಾ ಕರಾಳಾ
ಶ್ರೀ ಪವಿತ್ರಾನನ ಕರಾಳ ಜಿಂಘ್ವದೊಳು ಮು
ತ್ತಾ ಪರಿಕರಾಳ ನೇತ್ರಂ ಕರಾಳ ಶ್ರವಣ
ನೋಪಾ ಕರಾಳರಾತ್ರರು ಪಿಂದೆ ಹನ್ನೆರಡ ಪದ್ಮಗಣಕುಲಕೊಡೆಯನೂ ೨೬

ಮುಂಡಮಾಲಾಧೀಶನೈದು ಪದ್ಮಕ್ಕೊಡೆಯು
ಖಂಡಾ ತ್ರಿಶೂಲಿಯಾ ಸಪ್ತಾರ್ಬುದಕ್ಕೆ ಪತಿ
ಖಂಡೇಂದುಧರಭಜಕ ವಿಶ್ವಮಾಲಾಧಿಪಂ ಹತ್ತರ್ಬುದಕ್ಕೆ ನಾಥಂ
ಅಂಡಾಧಿನಾಥನೆಂದೆನಿಪ ಕಾಲಾಂತಕಂ
ತಂಡದಿಂ ತನ್ನ ಸಮವೀರೈದು ಶಂಖವು
ದ್ದಂಡಗಣವೋಲೈಸಲಿಪ್ಪನಾ ಲಕುಲೀಶನಂತವನ ಹತ್ತಿರದೊಳೂ ೨೭

ಆ ಮಯೂರಾನನಂಗಱುವತ್ತು ಪದ್ಮ ಸಂ
ಸ್ತೋಮದ ಗಣಂಗಳಿಂತೀಶ್ವರನ ಬಲದಲ್ಲಿ
ಸಾಮಾರ್ಥ್ಯರಿಪ್ಪರಾ ಮುಖ್ಯಗಣವಿಂತು ಹದಿನೆಂಟವರ ಸಮಭೃತ್ಯರೂ
ಪ್ರೇಮದಿಂ ಹತ್ತು ಶಂಖಂ ಕೋಟಿ ಪದ್ಮವಂತಾ
ತಾ ಮೂವತ್ತೊಂಭತ್ತೇಳರ್ಬುದಗಣಂಗಳಾ
ರೋಮಜರಸಂಖ್ಯಾತರೋಲೈಸಲೀಶ್ವರನ ದಕ್ಷಿಣಂ ರಾಜಿಸಿದುದೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಪಶ್ಚಿಮದೊತ್ತಿನಲ್ಲಿ ಪಾಶುಪತಾಸ್ತ್ರ
ವವಿರತಂ ಮೂರ್ತಿಮತ್ತಾಗಿ ಕರಮಂ ಮುಗಿವು
ತವೆ ಭಜಿಸುತಿಹುದಾ ಸಮೀಪದೊಳು ದಂಡಧಾರಂ ದಂಡಪಾದಕಾಖ್ಯಂ
ಪ್ರವರನಾ ದಂಡಬಾಹು ಪ್ರಚಂಡಂ ಬಳಿ
ಕ್ಕವನೊತ್ತಿನೊಳ್ ಪ್ರಚಂಡಾರ್ಚಿ ಪ್ರಚಂಡಕರ
ರಿವರೊರ್ವರೊರ್ವರೊಂಭತ್ತರ್ಬುದಕ್ಕೊಡೆಯರಾಗಿಪ್ಪರವರ ಹಿಂದೇ ೨೯

ವರ ಬಲಪ್ರಮಥ ಬಲವಿಕರಣ ಸುಮಾಲನ
ತ್ಯರು ಸರ್ವಭೂತದಮನಂ ಮನೋನ್ಮನನರಿಂ
ಬರಸಂಖ್ಯಾಬಲಕಧಿಪರ್ಯೈಯ್ಯ ನಿಜ ನಾಮಶಕ್ತಿಗಳಿಂ ವಿರಾಜಿಸುವರೂ
ಚಿರದ ಹನ್ನೊಂದು ಮುಖ್ಯರ್ಗಳೈವತ್ತ ನಾ
ಲ್ವರ ಗಣನೆಯರ್ಬುದಗಣಂಗಳಂತಾ ಮಿಕ್ಕ
ವರು ಗಣಿಸಲಳವಲ್ಲವೆನೆ ಶಿವನ ಪಡುವಣೋಲಗವಿಂತು ಮೆರೆದಿರ್ಪುದೂ ೩೦

ಇನ್ನೀಶನಾಮದುತ್ತರದಲ್ಲಿ ವಿಷ್ಣು ಸಂ
ಪನ್ನ ಮೇಘಚ್ಛಾಯೆಯಿಂ ಚತುರ್ಭುಜದಲ್ಲಿ
ಸನ್ನುತದ ಶಂಖಚಕ್ರಂ ಗದಾ ಶಾರ್ಙದಿಂ ಶ್ರೀವತ್ಸಕೌಸ್ತುಭಗಳಿಂ
ಚೆಸ್ನಪ್ಪ ಪೀತಾಂಬರದೆ ಮಕರ ಕುಂಡಲದೆ
ತನ್ನಾಥನಂ ಶಿವಸಹಸ್ರನಾಮಂಗಳಿಂ
ದಂ ನುತಿಗಳಂ. ಮಾಡಿ ಮಾಹೇಶ್ವರತ್ವದಿಂದೋಲಯಿಸುತೊಪ್ಪಿರ್ಪನೂ ೩೧

ಅವನೊತ್ತಿನೊಳಗಿಂದ್ರ ಹವಿಯಮಾಸುರವರುಣ
ಪವನ ಯಕ್ಷೇಶಾನರಷ್ಟದಿಕ್ಪತಿಗಳೊ
ಪ್ಪುವ ವೀರಭದ್ರ ಶಂಭುರ್ಗಿರಿಶರಜನೇಕಪಾದಹಿರ್ಬುಧ್ನ ಹರನೂ
ಭುವನಾಧಿಪತಿ ಪಿನಾಕಿಯು ವಿಶಾಂಪತಿ ಪಶುಪ
ತಿ ವಿಶೇಷರುದ್ರರೇಕಾದಶರಲ್ಲೈ ಪಿಂದೆ
ರವಿಗಳಾ ಹಂಸನುಂ ಸ್ತ್ವಷ್ಟಾಂಬಕಂ ಮಿತ್ರನಾ ವಿವಸ್ವದ್ವಿಷ್ಣುವೈ ೩೨

ಪೂಷ ವರುಣಾರಿ ಯಮ ಪರ್ಜನ್ಯಹರ ದಿವ್ಯ
ವೇಷ ಮಾಂಧಾತ್ರು ಶುಕ್ರರುಗಳೀ ಹನ್ನೆರಡು
ಭೂಷಣಾದಿತ್ಯರಿನ್ನಾ ಧಾತೃಧ್ರುವಸೋಮ ಆಪೋನಿಲಾನಲರೊಳೂ
ಈಷಾಪ್ರಭಾವನೊಳು ಸೇರುವೆಯೊಳಾ ಸುಪ್ರ
ತ್ಯೂಷಾಷ್ಟವಸುಗಳಿಂನಾ ಪ್ರಭಾ ಸಂ ಪುಷ್ಕ
ರಾಷಾಢ ದಂಡಿ ಮುಂಡ್ಯಾಮರೇಶನ್ಯೈಮಿಷರು ವರುಣದೇವತೆಯರೇಳೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಲೋಕ ಶಿವನ ಸಭೆ ಮುಗಿಯಿತ್ತು ಕೇಳಿದಿರೆ
ವಿವಿಧ ಮುನಿಗಳಿರ ಬರದಲ್ಲಿಯಾ ಗೌತಮನ
ಭವನದೊಳಗುಂಡಿದ್ದುರ್ಗೋವಧೆಯು ನಿಷ್ಕಾರಣದೊಳವನ ಮೇಲೆ ಹಾಯ್ಕೀ
ಅವನಿಂದ ಶಾಪವಡೆದನ್ಯ ಸಮಯಿಗಳಾದ
ನಿವಗಖಿಳ ದೋಷ ಹರವಂತೆ ಪೇಳಿದೆನೆಂದು
ಕುವರನೆನಿಪಜಸುತಗೆ ನಂದಿಯೊರೆದುದನೆಂದನಾ ಸುಖಾವಹ ಸುಮೂರ್ತೀ ೩೪

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸು
ವಿಶಾಲ ವೀರಶೈವಾಮೃತ ಪುರಾಣಂ ಕೂರ್ತು ಪದನಂ ಮಾಡಿದಂ ೩೫

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಶಿವನ ಲೋಕವರ್ಣನೆ ಮೂಱುಕಾಂಡದಿಂ ಮೇಲೆ ಹದಿನಾಱು ಸಂಧೀ ೩೬

ಅಂತು ಸಂಧಿ ೧೬ ಕ್ಕಂ ಪದನು ೮೫೩ ಕ್ಕಂ ಗ್ರಂಥ ೭೮ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೩

ಧರ್ಮಾಧರ್ಮ ಸ್ವರೂಪಂಗಳಂ ಪೇಳುವಿಕೆ

ಧರ್ಮಸ್ವರೂಪ ಹಲಗೆಯ ದೇವರೆಸೆವ ಶಿವ
ಧರ್ಮೋತ್ತರದೊಳು ರಾಜಿಸುವ ಧರ್ಮಾಧರ್ಮ
ವರ್ಮವಮಂ ಬಿತ್ತರಿಸಿದಂ ಕೆಂಚವೀರಾಹ್ವಯಂಗೆ ಸುಜನರು ಮೆಚ್ಚಲೂ

ನೆಲದಳೆದನಣುಗನೊಳಕೊಂಡಲ್ಲಿ ಪುಟ್ಟಿದನ
ತಲೆಯೊಳಿಂಬಿಟ್ಟಾತನಳಿಯನಂ ಚುರ್ಚಿಮೆ
ಯ್ಗೊಲಿದಣ್ಮನಿಟ್ಟವನ ಪೆತ್ತಾಕೆಯಾಣ್ಮನೊಳ್ಪೊಡೆಯಲ್ಲಿ ಸೈಪುವಡೆದಾ
ಅಲರೊಳೊಗೆದನ ಶಿರವನಾಂತು ಕೈಯ್ಯಲ್ಲಿ ಹಿಮ
ದಲೆಯ ಬಿಡುಗಣ್ಣರಂ ಜತಿಗಳಂ ಪಿತುವಿಯಂ
ಸಲಹಿ ರಾಜಿಪ ಶಾಂತಮಲ್ಲಿಕಾರ್ಜುನಲಿಂಗ ಜಯ ಮನ್ಮನೋಬ್ಜ ಭೃಂಗಾ ೧

ಕಾಕತಾಳೀನ್ಯಾಯವೆನೆ ಘುಣಾಕ್ಷರದಂತೆ
ಯಾ ಕಣ್ಗುರುಡನೊಂದು ಲಾವುಗೆಯ ಪಿಡಿದವೊಲ
ನೇಕ ಭವದಲ್ಲಿ ತಿರುಗುತ ಬಂದು ಮನುಜಜನ್ಮಂಬಡೆದು ಶರಣುವೊಕ್ಕು
ಸ್ತೋಕಪುಣ್ಯರ್ಗೆ ಧರ್ಮಾಧರ್ಮವಮಂ ನಱಿವಿ
ವೇಕದಿಂ ತಿಳಿಪಿ ರಕ್ಷಿಸಿದ ಮೋಲಣ ಗವಿಯ
ಸಾಕರ ಶಿವಮೂರ್ತಿ ಶಾಂತನಂಜೇಶ ಚರಕುಲಚಕ್ರವರ್ತಿ ಶರಣೂ ೨

ದೇವ ಹಲಗೆಯ ಗುರುವೆ ಭುವನಕೋಶವನು ಶೋ
ಭಾವಹದ ಶಿವಲೋಕ ವೀಶ್ವರಾಸ್ಥಾನವಮಂ
ಶ್ರೀ ವಿಮಲವಹ ಸುಖಾವಹಮೂರ್ತಿ ದಾರುವನವಾಸಿಗಳಿಗೊರೆದ ಕಥೆಯಾ
ನೀವು ನಿರವಿಸೆ ಕೇಳಿ ಕೃತಕೃತ್ಯನಾದೆ ನಿ
ನ್ನೋವಿ ಧರ್ಮಾಧರ್ಮ ನರಕೆಯಾತನೆ ಪಿಂಡ
ದಾವಿಲಸದಧಿಕ ಸಂಸಾರ ಹೇಹವನೊರೆಯೆನಲ್ಕೆಂಚವೀರಾಹ್ವಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಬಿನ್ನಪಕ್ಕೆ ಸಂತಸವಟ್ಟು ಮಗನೆ ಕೇ
ಳೈ ಬಹುಮುನೀಶ್ವರರ್ತ್ತತ್ಸುಖಾವಹಮೂರ್ತಿ
ಯೇ ಬಯಸಿದಿಷ್ಟಸಿದ್ಧಿಪ್ರದನೆ ಪೇಳೆಂದು ನೀಂ ಕೇಳಿದಂದದಿಂದಾ
ಏಂಬಣ್ಣಪೇಂ ಕೇಳೆ ಚಿದ್ರಸದ ಪೇರ್ಗೆ‍ಱೆಯು
ತೂಬನೆತ್ತಿದ ತೆಱದೆ ನುಡಿದನಜ್ಞಾನವ್ಯಗ
ಶಾಬರೋಪಮ ಸುಪ್ರಸಂಗಮಂ ವಿಮಲಾಂತರಂಗಮಂ ಸತ್ತುಂಗಮಂ ೪

ಶಿವಧರ್ಮದುತ್ತರದೊಳಂದಗಸ್ತ್ಯಂ ಬಂದು
ಶಿವನಣುಗನಂ ಜ್ಞಾನಶಕ್ತಿಯಂ ಧರಿಸಿರ್ದ
ಶಿವಮಯನನಾ ಶಾಂತನಂ ತಾರಕನ ಕೊಂದ ವೀರನಂ ಷಣ್ಮುಖನನೂ
ತವೆ ಕಂಡು ವಂದಿಸುತೆ ಬೆಸಗೊಂಡನತಿಶಯೋ
ತ್ಸವದಿಂದ ಮೊದಲು ಧರ್ಮಾಧರ್ಮವೆಂಬವಂ
ವಿವರದಿಂ ಪೇಳೆನುತ್ತತಿಶಯದ ಭಕ್ತಿಯಿಂ ಬಿನ್ನಪಂಗೆಯ್ಯುತಿರ್ದಂ ೫

ಗುರುವೆ ಧರ್ಮಾಧರ್ಮಭೇದಸಾಧನಗತಿಯ
ನಿರವಿಸೆನೆ ಷಣ್ಮುಖಂ ತನ್ಮಹೇಶ್ವರನನ
ತ್ಯರುತರ ಸ್ವರ್ಗಾಪವರ್ಗಫಲಮಂ ಕೊಡುವ ನರಕಾಬ್ಧಿಯಂ ದಾಂಟಿಪಾ
ಪರಮನಂ ಮನದಲ್ಲಿ ಜಾನಿಸುತ್ತಾರೇನ
ನಿರದೆ ಕೇಳಲ್ಕಱೆಯೆನೆನ್ನದುಸುರುವ ಪಚಿ
ದ್ವರನೊರೆವುತಿರ್ದನುಮಗಸ್ತ್ಯಂಗೆ ಸವಿಲಾಸದಿಂದದೇಂ ವಣ್ಣಿಸುವೆನೂ ೬

ವರ ಪುರಾಣಂ ಭಾರತಂ ವೇದಶಾಸ್ತ್ರಂಗ
ಳಿರವಿನೊಳನಂತ ಧರ್ಮಂಗಳುಂಟವನೆಯ್ದೆ
ವಿರಚಿಸುವೆವೆನೆ ಕೇಳ್ವೊಡಲ್ಪಾಯುಷಂ ಕಣಾ ಸರ್ವಮಂ ಕಲಿವೆನೆನಲೂ
ಚಿರದಾಯುವಾದೊಡಂ ಶಾಸ್ತ್ರಾರ್ಥಮಂ ಕಂಡ
ವರು ಧರೆಯೊಳಿಲ್ಲವದಱಿಂದಲಕ್ಷರಮಾತ್ರ
ಪರಲೋಕಸಾಧನವನಱಿದು ಬಿಡುವುದು ಶಾಸ್ತ್ರಜಾಲಮಂ ಸಜ್ಜನರ್ಗಳೂ ೭

ಅವರೊಳಗೆ ಶಿವಶಾಸ್ತ್ರಮಂ ಕೇಳ್ವ ಫಲವ ನಾಂ
ವಿವರಿಸುವೆನ್ನೈ ರತ್ನಮಂ ತುಂಬಿದಧಿಕಮ
ಪ್ಪವನಿಯಂ ಮೂಱು ಸೂಳೊಳೆ ದಾನಮಂ ಮಾಡಿದಾ ಫಲಂ ಸುಜ್ಞಾನದಾ
ಪ್ರವಿಮಲಗ್ರಂಥಾರ್ಥಮಂ ಕೇಳ್ವ ಫಲಕೆಯಿಂ
ತಿವನು ಸರಿಯೆನ ಬಾರದೆಂದೆನಲ್ಕೀಗಾಲಿ
ಸುವ ನಿನ್ನ ಭಾಗ್ಯಕೆಣೆಯಿಲ್ಲೆಂದು ನುಡಿದನಾ ಷಣ್ಮುಖಂ ಸಂತಸದೊಳು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲಲ್ಲಿ ಧರ್ಮಸಂಬಂಧಮಂ ಬಿತ್ತರಿಪೆ
ಮೊದವಿರ್ದ ಹಿಂಸೆ ಸತ್ಯಂ ಕ್ಷಮೆಯು ಮಾ ಲಜ್ಜೆ
ಸದಮಲಶ್ರದ್ಧೆಯಿಂದ್ರಿಯನಿಗ್ರಹಂ ದಾನಮಾ ವಿದ್ಯೆಯುಂ ತಪಸ್ಸು
ಹೃದಯದೊಳು ಶಿವನ ನೆನಹೆಂಬಹತ್ತಿವರಸಂ
ಪದದ ಸೇರುವೆಯೊಳು ಸುಧರ್ಮವೆನಿಪವು ಬಳಿ
ಕ್ಕೊದವಿದಾ ಸ್ಥೂಲ ಸೂಕ್ಷ್ಮಂ ಸುಸೂಕ್ಷ್ಮಂಗಳೆಂಬಾ ಪಾತಕಂಗಳುಂಟೂ ೯

ಮಾನಸದೊಳಂ ನಾಲ್ಕು ವಾಚಕದೊಳಂ ನಾಲ್ಕು
ನಾನೆಸೆವ ಕಾಯಕದೊಳಂ ನಾಲ್ಕು ಹನ್ನೆರಡ
ಲಾ ನೋಡೆ ಪರಸ್ತ್ರೀಯ ಕೂಡಿಹೆನೆಂಬುದನ್ಯರರ್ಥವ ಸೀಳ್ವೆನೂ
ಆನೆಂಬ ಪರರ ಕೊಂದಪೆನೆಂಬ ಪರರ ಕಾ
ರ್ಯಾನೀಕಕಾನುಂ ಕಂಟಕವಪ್ಪೆನೆಂಬುದಿಂ
ತೀ ನಾಲ್ಕು ನೆನೆದಪ್ಪ ಪಾಪಂಗಳಿನ್ನು ನುಡಿದಪ್ಪ ದೋಷವನೊರೆವೆನೂ ೧೦

ಅತ್ತಿತ್ತಳಜ್ಞಾನ ಭಾಷೆ ಸತ್ಯಂಗಳಾ
ಉತ್ತಮರಿಗಪ್ರಿಯದ ವಾಕ್ಯಮಂ ಕೊಂಡೆಯಂ
ತತ್ತತ್ಪ್ರಕಾರದಿಂ ನುಡಿದಪ್ಪ ದೋಷವೀ ನಾಲ್ಕು ಕಾಯಿಕವೆಂದೆನೇ
ಮತ್ತೆ ತಿನಬಾರದೊಡವೆಯ ತಿಂಬುದನ್ಯಸತಿ
ಯತ್ತಲೊಂದುವುದು ಕೈಯ್ಯಾರೆ ಕೊಲುವುದು ಪರರ
ವಿತ್ತಮಂ ಸೆಳೆದುಕೊಂಬೀ ನಾಲ್ಕು ತಾಂಮಾಡಿದುದು ಮಾಡಿಸಿತು ಮಾನಸಂ ೧೧

ಒರೆಯಲೀ ತೆಱದ ಮಾನಸ ವಾಚಕಂ ಮೇಣು
ಪಿರಿದಪ್ಪ ಕಾಯಕಗಳಿಂದು ಮೂದೆಱನಾದು
ದಿರದವಕ್ಕೊಂದೊಂದಕ್ಕೈದೆ ನಾಲ್ಕುಂ ಭೇದಮಾಗಿ ಹನ್ನೆರಡಾದವೂ
ಚರಿತದೆ ಸುಸೂಕ್ಷ್ಮ ಸೂಕ್ಷ್ಮಂ ಸ್ಥೂಲವೆಂಬವಿರು
ತಿರಲು ಬಳಿಕಾ ಸ್ಥೂಲ ಪಾಪದುನ್ನತಿಯ ವಿ
ಸ್ತರಿಸುವೆಂ ಕೇಳುದೆಂದುಸುರ್ದನಾ ಗುರುರಾಯನೊಲ್ಮೆಯಿಂ ತತ್ಶಿಷ್ಯಗೇ ೧೨

ಯತ್ಪರಮ ಸಂಸಾರವಾರ್ಧಿಯಂ ದಾಂಟಿಸುವ
ತತ್ಪವಿತ್ರೇಶನಂ ನಿಂದಿಸುವವಂದಿರಾ
ಪತ್ಪರಿಹರಿತ ಶಿವಜ್ಞಾನಮಂ ಬೋಧಿಸುವ ಗುರುವ ಜರೆವಧಮರ್ಕಳೂ
ಚಿತ್ಪಾವನದೊಳು ಸರ್ವಾರ್ಥಸಾಧಕಮಪ್ಪ
ಹೃತ್ಸೂನ ಶಾಸ್ತ್ರನಿಂದಕರು ಭಾವಿಸಲು ಸುಮ
ಹತ್ಪಾತಕಿಗಳೆಂದು ಪೇಳುತಿರ್ದಂ ಷಣ್ಮುಖಂ ಪಿಂಗಳೇಶ್ವರಸಖಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನಿಂದೆ ಗುರುನಿಂದೆ ಸುಜ್ಞಾನಶಾಸ್ತ್ರನಿಂ
ದೆ ವಿಶೇಷ ಶಿವನೊಡನೆ ಗುರುವಿನರ್ಥಂ ಪುಸ್ತ
ಕವನಾವನಪಹರಿಪರವರು ಸುಮಹತ್ಪಾತಕಿಗಳಿಧಿಕ ದೋಷವಾಱೂ
ಇವರ ಸೇರುವೆಯು ಪಾತಕಗಳಂ ಕ್ರಮದಿಂದೆ
ವಿವರಿಸುವೆನೆಂದು ಕೇಳುವ ಕುಂಭಜಂಗೆಯಾ
ಶಿವಕುಮಾರಂ ಪೇಳ್ದನೆಂದು ನುಡಿದಂ ಸುಖಾವಹಮೂರ್ತಿ ಮುನಿನಿಕರಕೇ ೧೪

ಪೂಜೆಯಂ ಮಾಡಿರ್ದ ಶಂಕರನ ಕಾಣುತ್ತ
ಓಜೆಯಿಂ ವಂದಿಸದವಂ ತನ್ನ ವರಹೃದಾಂ
ಭೋಜದೊಳು ಸಂತೋಷಮಂ ಮಾಡದವ ನರ್ಚಿಸದವನಾ ನುತಿಸದವನೂ
ಸ್ವಜದೇವಾಲಯದೊಳೆಯಿದೆ ನಿಃಶ್ಯಂಕೆಯಿಂ
ರಾಜಿಸದೆ ಪರಿಹಾಸವಾಸ್ಫೋಟವನಿತಾ ಸ
ಮಾಜ ಚೇಷ್ಟಾದಿಗಳ ಮಾಡುವವರಾರಿವರು ಶಿವನಿಂದಕರು ಬಳಿಕ್ಕಾ ೧೫

ಸರ್ವಕಾಲದೊಳಾ ಶಿವಸ್ಥಾನಗಳ್ಗೆಯಾ
ಸರ್ವಸಂಸ್ಕಾರಪೂಜೆಯ ಮಾಡದಿರ್ದವಂ
ಪಾರ್ವತೀಪತಿಗುರು ಶಿವಾಗಮಂಗಳನೊಂದುಗಾಣದಾ ಭೇದವೆಂದೂ
ಕೊರ್ವಿ ನುಡಿವವನಾ ಶಿವಾಚಾರಮಂ ಬಿಟ್ಟು
ಗರ್ವಿ ಶಿವಭಕ್ತರಂ ನಿಂದಿಸುವವಂದಿರೀ
ಯುರ್ವಿಯೊಳು ಶಿವನಿಂದಕರು ಕಣಾ ಮುಂದೆ ಗುರುನಿಂದೆಯಂ
ಬಿತ್ತರಿಪೆನೂ ೧೬

ಗುರುಪೂಜೆಯಂ ಮಾಡದಾ ಶಿವಾಗಮಂಗಳಂ
ಭರದಿಂದ ಕೇಳುವಂ ದೇಶಿಕನ ಪಾದಪಂ
ಕರುಹಸೇವೆಗಳ ಮಾಡದವನಾ ಗುರುನಿರೂಪಂಗಳಂ ಭಕ್ತಿಯಿಂದಾ
ಕರವ ಮುಗಿದಾಲಿಸದವಂ ಸಂತಸಂಬಡದೆ
ಗುರುವಿನೊಳು ಹುಸಿಯ ನುಡಿವವನು ತನಗಂ ಪೇಳೆ
ಗುರು ಉದಾಸೀನದಿಂದಾ ಸೇವೆಯಂ ಪರರಿಗುಸುರಿದಜ್ಞಾನಿ ಬಳಿಕಾ ೧೭

ರುಜೆಯಾದ ಗುರುವನಾರಯ್ಯದವನಂತರಿ
ವ್ರಜದ ಬಾಧೆಗೆ ಸಿಕ್ಕಿದಾರ್ಯನ ವಿಚಾರಿಸದ
ಕುಜನನಾ ಗುರುವನ್ಯದೇಶಕ್ಕೆ ಪೋಗಿರ್ದಕಾಲದೊಳು ಶುಭವಾರ್ತೆಯಾ
ನಿಜವನಾಲಿಸಿ ಪರಾಮರಿಸದಿಪ್ಪರ ಗುರುತ
ನುಜ ವನಿತೆ ಬಂಧುಗಳುದಾಸೀನಮಂ ಮಾಡೆ
ಯುಜಕಲ್ಪಕಧಿಕ ಗುರುನಿಂದಾ ಮಹಾದೋಷವೆಂದನಾ ಗುರುರಾಯನೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಲೆ ಶಿವಜ್ಞಾನ ಶಾಸ್ತ್ರದ ಪುಸ್ತಕಂಗಳಂ
ನಲಿದು ಪೂಜಿಸದೆ ಬರೆದೋದಿದೊಡೆಯುನ್ನಯದೊ
ಳುಲಿದು ಪೇಳ್ದೊಡೆ ಕೇಳ್ದೊಡಾ ಲೋಭದಿಂ ಮಾರಿಕೊಂಡೊಡೆಯಸಂಸ್ಕಾರದಾ
ಸ್ಥಲದಲ್ಲಿ ಬೈತೊಡಂತಾ ಪ್ರಸಂಗದೊಳು ದು
ರ್ವಲದನ್ಯಭಾಷೆಯಾಡಲು ಸಮರ್ಥಿಕೆಯಿಂದ
ನಿಲಿಸೆಯಶುಚಿ ಸ್ಥಾನದೊಳ್ಕೇಳಿ ಪೇಳಲು ಶಿವಜ್ಞಾನನಿಂದೆಯಹುದೂ ೧೯

ಉನ್ನತಬ್ರಹ್ಮಹತಿಯಂ ಮಾಡಿ ಸುರೆಗೊಂಡು
ಮನ್ನಿಸದೆ ಪರರರ್ಥಕಳುಪಿ ಗುರುಸತಿಯೊಳಗ
ಭಿನ್ನದಿಂ ನೆರೆವವನು ಭಾವಿಸೆ ಮಹಾಪಾತಕರುಗಳಿವರೊಡನಾಡುವಂ
ಮುನ್ನವೇ ಪಂಚಮಹಾಪಾತಕನೆನಿಪ್ಪನ್ಕೆ
ಇನ್ನೈದರೊಳಗೆಯೊಂದೊಂಕ್ಕವರ ಬಗೆಗೆ
ಳಂ ನಯದ ದೋಷಮಂ ಕೇಳೆಂದು ಶಿಖಿವಾಹನಂ ನಲಿದು ಪೇಳುತಿರ್ದ್ದಂ ೨೦

ಇವರೊಳಗೆಯಾ ಬ್ರಹ್ಮಹತ್ಯಂಗಳೆಂತೆನಲು
ತವೆ ಗೋವುಗಳು ಜಲಾರ್ಥದಿ ಪೋಗೆ ತಡೆದವಂ
ಭುವನದೊಳು ಪರದೋಷಗಳನರಸಿ ತಿಳಿದರಸಿನೊಳು
ಕೊಂಡೆಯುವನುಸುರ್ದವಂ
ಅವಿಚಾರದುಬ್ಬೆಗಳ ಸುದ್ದಿಗಳನುರೆ ಹುಟ್ಟಿ
ಸುವರಲಾ ಕೇಳಿನ್ನು ಸುರೆಗುಡಿಹಿಗಳ ಪಯಿಕ
ದವರ ಪೇಳುವೆನೆಂದುಸುರಿದನಂದಾ ಸುಖಾವಹಮೂರ್ತಿ ವಿಮಲ ಕೀರ್ತಿ ೨೧

ಶಿವಶಾಸ್ತ್ರಮಂ ಕೇಳಿ ಇಂತದ್ವೈಸಲೆಯೆಂದು
ತವೆ ಬಿಟ್ಟವಂ ಶಂಭುಭಕ್ತರೊಳಗಪ್ರಿಯುವ
ನವಿಚಾರದಿಂ ಮಾಡಿದವನ ಭಕ್ಷಣಭಕ್ಷಣಂಗಳಂ ಭಕ್ಷಿಸಿದವಂ
ತವೆ ಪಂಚಯಜ್ಞಾದಿ ಸತ್ಕೃತ್ಯತತಿಯ ಬಿ
ಟ್ಟವನು ಪಿತೃಮಾತೃಗಳ ರಕ್ಷಿಸದವಂ ಸಾಕ್ಷಿ
ಯವೀಚಾರದಿಂ ತಪ್ಪಿ ನುಡಿದವಂ ಸ್ನೇಹದಿಂದಿರ್ದುಕೊಂದಾತನಿನ್ನೂ ೨೨

ವನದಲ್ಲಿ ನಿರಪರಾಧಿಗಳಾದ ಜೀವಮಂ
ಹನನವಂ ಮಾಡಿದವನಾ ಗೋವುಗಳ ಬಟ್ಟೆ
ಯನಿತರೊಳಗೂರು ಮೆದೆಗಳೊಳು ಕಿಚ್ಚಿಕ್ಕುವವರಿನಿತುಸುರೆಗುಡುಹಿಗಳಲಾ
ಧನಚೋರರಾರೆನಲುದಿನ ಸರ್ವದ್ರವ್ಯ
ವನು ಸೆಳೆದುಕೊಂಡವಂ ಪರವನಿತೆಗಜ ವಾಜಿ
ಘನ ಗೋವು ಭೂಮಿ ರನ್ನಂ ಸುವರ್ಣಂ ಧಾನ್ಯವಾ ಚಂದನಾಗರುಗಳಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕತ್ತುರಿಯು ಕರ್ಪೂರಗಗಳ ಪಟ್ಟವಸ್ತ್ರಮಂ
ಯೆತ್ತಾನು ಕೈಸಾರಲಪಹರಿಸಿಕೊಂಡವಂ
ತತ್ತತ್ಪ್ರಕಾರದಿಂದವರು ರುಕ್ಮಸ್ತ್ರೇಯರೆಂದು ತಿಳಿವುದು ನಲ್ಮೆಯಿಂ
ಮತ್ತೆಯಾ ಗುರುತಲ್ಪವೆಂಬ ದೋಷಂಗಳಂ
ಬಿತ್ತರಿಪೆನಾನವರ ಸದೃಶಮಂ ನೋಡದಾ
ವಿತ್ತಾಭಿಲಾಷೆಯಿಂ ಕನ್ಯೆಯಂ ಕೊಟ್ಟವಂ ಪರಸತಿಯ ಕೂಡಿದವನೂ ೨೪

ಪರಿಪಕ್ವ ಯೌವ್ವನೆಯುದಲ್ಲದಿರ್ಪಳ ಬಲಾ
ತ್ಕರಿಸಿ ನೆರೆದವನಂತ್ಯಜಸ್ತ್ರೀಯನಕ್ಕಱಿಂ
ವರಿಸಿದವನಾ ಸವರ್ಣದ ಸತಿಯ ಕೂಡಿದಡೆ ಗುರುತಲ್ಪವೆಂಬ ದೋಷಂ
ಇರದಾ ಮಹಾಪಾತಕಿಗಳಸಮುಪಾಪಿಗಳು
ಧರೆಯೊಳುಂಟವರಿಗನುಸರಣೆಯಿಂದಿಹರು ಕೆಲ
ಬರು ಬಳಿಕಲುಪಪಾತಕಂಗಳ್ಗೆ ಕೇಳೆಂದು ಪೇಳೆಂದು ಗುರುರಾಯನೂ ೨೫

ಬಡವರೆಂದವರಾಶ್ರಯಂಗಳಂ ನಾಡೆ ಬ
ಗ್ಗಡೆಯುತನದಿಂದಲೀಳ್ಕೊಂಡವಂ ಪರಚೇಟಿ
ಯೊಡನೆ ಭೃತ್ಯರು ಧಾನ್ಯಮುಖ್ಯಮುಮನನ್ಯಾಯದಿಂದಲಾಗ್ರಹಿಸಿಕೊಂಡೂ
ಪೊಡವಿಯೊಳು ಬದುಕುವವನತಿ ವಿಷಮಬುದ್ಧಿಯಿಂ
ನಡೆವವಂ ಮತ್ಸರಂಗಳ ಮಾಡುವಂ ದೈನ್ಯ
ದೊಡವೆರಸಿ ಬಾಳ್ವವಂ ಸಾಧುಕನ್ಯಾದೂಷಣಂಗಳಂ ಮಾಡುವವನೂ ೨೬

ಸುತರು ನಂಟರು ಕಳತ್ರಂ ಸಾಕಿದೊಡೆಯ
ತ್ಯತಿಶಯ ತಪಸ್ವಿಗಳು ಸತ್ಪುರುಷರುನ್ನತಾ
ಶ್ರಿತರ ಬಿಟ್ಟವನು ಗೋಬ್ರಾಹ್ಮಣ ಸ್ತ್ರೀ ಶೂದ್ರರಾರನಾದೊಡೆ ನಿರರ್ಥದಿಂ
ಹತಿಸಿದವನೀಶ್ವರಾಲಯದ ತರುಗಳ ಪುಷ್ಪ
ಕೃತಗುಲ್ಮಮಂ ಕಡಿದನಾ ತಟಾಕೋತ್ತಮೋ
ನ್ನತದೇರಿಯಂ ಕೆಡಿಸಿದವನಿವರ ತರುವಾಯ ಪಾತಕರ ಬಿತ್ತರಿಸುವೆಂ ೨೭

ಜನ್ನವಾರಾಮಂ ತಟಾಕಂಗಳಂ ಸತಿಯ
ರಂ ನಾಡೆ ಸುತರ ಮಾರಿದವನಾ ತೀರ್ಥಕ್ಕೆ
ಸನ್ನದ್ಧನಾಗಿ ಪೋದಾ ಫಲವನೇ ಮಾರಿಯಾವ್ರತವ ಮಾರಿದವನೂ
ತನ್ನ ಸತಿ ಗಳಿಸಿದರ್ಥದೊಳು ನೆಱೆ ಬಾಳ್ವನ
ತ್ಯುನ್ನತ ಸ್ತ್ರೀಗೆ ವಶಗತನಾಗಿ ನಡೆವನಂ
ತನ್ನಯದೊಳಾ ಸತಿಯ ಸಲಹದವನುಱೆ ಸುರೆಯ ಕುಡಿದವಳ
ನೆರೆದಾತನೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುಣವನೀಳ್ಕೊಂಡು ಕೊಡದಾತನಾ ಧಾನ್ಯಮಂ
ಗಣಿಸಿ ಕೂಡುತ್ತದಱ ವೃದ್ಧಿಯಂ ಬಯಸಿ ಧಾ
ರಣೆಯು ತಗ್ಗಂ ಹಾರುವವನು ನಿಂದಿತನಾದವನೊಳು ದಾಸಂಗೊಂಬವಂ
ಅಣೆಯುರದೆ ಮಾಱದಿಪ್ಪಾ ವಸ್ತುಗಳ ಕೆಲರ
ನಣಕಿಸುತ ಸಿಕ್ಕಿಸುವವಂ ಬಳಿಕ್ಕಧಿಕ ಮಾ
ರಣ ವಿಷಾಧಿಕಯಂತ್ರಮಂ ಮಾಡುವಾತನುಚ್ಚಾಟನಂಗಳನೆಸಗುವಂ ೨೯

ಮೂಲಿ ಕರ್ಮಂಗಳಂ ದ್ವೇಷಣಂಗಳ ಮಾಡಿ
ಶೀಲವಂ ಬಿಟ್ಟವಂ ಧರ್ಮವಿನಿತಿಲ್ಲದಾ
ಲೋಲತರದಾರಂಭಮಂ ಮಾಡುವಾತ್ಮಾರ್ಥಿಯಾ ಶಿವಪುರಾಣಂಗಳಾ
ಲೀಲೆಯಿಂದೋದುತ್ತ ಲೋದಿದೊಡೆಯೆಮಗಿನಿತು
ಕೂಲಿ ಬೇಕೆಂಬವಂ ಧನವಿನಿತನಿತ್ತಪೆವು
ಸಾಲದೇಯೋದಿಯೆಂಬವ ನನ್ಯ ಶಾಸ್ತ್ರಂಗಳಂ ಪಠಿಸಿ ನಡೆವಾತನೂ ೩೦

ಬಯಲಿಗಾ ಶುಷ್ಕ ತರ್ಕಂಗಳಂ ಮಾಡುವಂ
ಸ್ವಯಮಪ್ಪ ಸತ್ಕರ್ಮಮಂ ಬಿಟ್ಟು ನಡೆವವಂ
ಸ್ಮಯದಿಂದ ಪರಲೋಕವಿಲ್ಲೆಂಬ ಪಾತಕನುಮುಂಟಿಲ್ಲವೆಂದುಹಾರೀ
ನಿಯತವಂ ಬಿಟ್ಟವಂ ಪರ್ವದೊಳು ದಿವದಲ್ಲಿ
ರಯದಿಂ ವಿಯೋಗಿಯೊಳು ಪಶುಯೋನಿಯಲ್ಲಿ ಕೇ
ಳಿಯ ಜಲದೊಳಾ ರಜಸ್ವಲೆಯಲ್ಲಿ ವಿಷಯದಿಂ ಸಂಗವಂ ಮಾಡಿದವನೂ ೩೧

ಸ್ತ್ರೀಪುತ್ರ ಮಿತ್ರಸುಪ್ರೀತಿಯುವರಾಶೆಗಳ
ನೇಪರಿಯೊಳಂ ಸಲಿಸದವನಾ ಜನಂಗಳಿಗೆ
ಕಾಪಟ್ಯಹಿತದಲಪ್ರಿಯಗಳಂ ನುಡಿವವಂ ಕ್ರೂರನಾ ಸಮಯಭೇದೀ
ಪಾಪಿಯಾ ದೇವತಾರಥತತಿಯ ಮುರಿದವಂ
ಆ ಪಂಙ್ತಿಯೊಂದರೊಳಗುಣುತಲಜ್ಞಾನದಿಂ
ದಾ ಪಾಕಭೇದಂಗಳಂ ಮಾಡಿದಾ ಪುರುಷಸತಿಯರುಪಪಾತಕಿಗಳೂ ೩೨

ಉಪಪಾತಕಂಗಳಂತರ್ಭಾವಮಪ್ಪನಿತ
ನುಪಮಿಸಲ್ ಕ್ಷುದ್ರ ಪಾಪಂಗಳೆಂತೆನಲಾಗಿ
ತಪಸಿಯಂತಾ ಗೋವು ವಿಪ್ರಕನ್ಯಾಸ್ವಾಮಿಮಿತ್ರ ಕಾರ್ಯಂಗಳಲ್ಲೀ
ನೆಪದಿಂದ ವಿಘ್ನಮಂ ಮಾಡಿದವನನ್ಯರಿಗೆ
ಯುಪರಿಮಿತವಸ್ತುವುಂಟೆಂದು ಕೊಂಡಿಸಿವರಾ
ಸ್ವಪಥದಿಂ ನಡೆವ ಸತಿಯಂ ಪುರುಷರಂ ನಿಂದೆಯಂ ನುಡಿದ ತದ್ರೋಹರೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೋವುಗಳ ಹಟ್ಟಿಯೊಳಗಗ್ನಿಯೊಳು ಜಲದಲ್ಲಿ
ಯೀ ವಿಶೇಷದ ಬೀದಿಯಲ್ಲಿ ವೃಕ್ಷದ ನೆಳಲೊ
ಳೋವಿ ಗಿರಿಯಲ್ಲಿ ಪುಷ್ಪದ ತೋಂಟದಲ್ಲಿ ಮಲಮೂತ್ರಂಗಳಂ ಬಿಟ್ಟವಂ
ಆ ವೇಶಿಯರೊಳಾವಗಂ ಕ್ರೀಡಿಸುತ್ತ ಸ
ದ್ಭಾವದೊಳು ನಡೆದವಂ ಪರರೊಳುಂಟಾದ ದೋ
ಷಾವಳಿಗಳನೆ ವಿಚಾರಿಸುವವಂ ಬಟ್ಟೆಯೊಳು ಹಳ್ಳಂಗಳಂ ತೋಡುತಾ ೩೪

ಇಟ್ಟಿಗೆಗಳಂ ಕಲ್ಲು ಮುಳ್ಗಳಂ ದಸಿಗಳಂ
ಕಟ್ಟಿಗೆಯ ಸೀಬುಗಳ ಹರಡಿ ನಡೆವರ ಕಾಲ್ಗೆ
ಬಟ್ಟೆಯೊಳು ಕಂಟಕಂಗಳ ಮಾಡಿದಾತನನ್ಯರ ಸೀಮೆಗಳನೊತ್ತಿದಂ
ನೆಟ್ಟನಾ ಕೂಟ ಸಾಕ್ಷಿಗಳ ನುಡಿದಾತನಳ
ವಟ್ಟ ಬೆವಹಾರದೊಳು ಜೂಜಿನೊಳು ವಳಕಿನೊಳು
ಕಟ್ಟದೆ ಸಹಾಯ ಸೂಚನೆಗಳಂ ಪರಪಕ್ಷಮಂ ಮಾಡಿದನು ಬಳಿಕ್ಕಾ ೩೫

ತನ್ನ ಭೃತ್ಯರೊಳು ನಿರ್ದಯವಾಗಿ ನಡೆದವಂ
ಉನ್ನತದ ಗೋವುಗಳ ಮೇಯಬಿಡದವ ಕಟ್ಟಿ
ಯನ್ನಯದೊಳಿರಿಸಿಕೊಂಡಿರ್ದವಂ ಮಿಥ್ಯದಿಂ ಪೇಳ್ವವರ ಕೊಂಡೆಯವನೂ
ಚನ್ನಾಗಿ ತಿಳಿದನ್ಯಾಯಮಂ ಮಾಡುವಂ
ಸನ್ನುತದ ಯತಿಯಾಗಿ ನಡೆವುತಿರ್ದವ ಬಿಟ್ಟು
ಕನ್ನೆಯಂ ಬಯಸುವಂ ಪೇಳ್ದಾಪ್ತರೇಕಾಂತ ವಚನಮಂ ದೂರುವವನೂ ೩೬

ಗೋವುಗಳ ಬಡಿವವನವಂ ಕೆಟ್ಟ ನುಡಿಯಿಂದ
ಬೈವವಂ ಬಡವಾದುದಂ ಕಂಡಿದೆಂದಿಂಗೆ
ಸಾವುದೋ ಇದರಿಂದ ಫಲವೇನೆನುತ್ತ ನುಡಿವಾತನುನ್ನತದ ಹೇರಾ
ಆವಾಗ ಹೇರಿ ಕಾಡುವವನೊಂದೂವರೆಯ
ಜಾವದಿಂ ಮೇಲೆ ಕಟ್ಟಿರ್ದಾರ ಬಿಡದವಂ
ಭಾವಿಸಲ್ ಕ್ಷುಧೆರೋಗವಮಂ ವಿಚಾರಿಸದಾತನೇ ಗೋವ ಕೊಂದವನಲಾ ೩೭

ಬಂಜೆಯಾಗಿರ್ದಾವುಗಳ ಹೇರಿದಾತ ನಿ
ನ್ನಂಜದೆತ್ತುಗಳ ಹಿಡಿಕುಗಳ ಬಡಿದರು ನರಕ
ಪುಂಜದೊಳು ಬೀಳ್ವರಾ ಬ್ರಾಹ್ಮಣಂ ತಾನಾಗಿ ನೀಚಸೇವೆಯ ಮಾಡುವಂ
ರಂಜಿಸುವ ಪಾಪನಿರತರುಕ್ರೂರ ಹಿಂಸ ಕರು
ಭಂಜಿಸುವ ದುರ್ವಾಕ್ಯಮಂ ನುಡಿವರನ್ಯಾಯ
ದಿಂ ಜರಾ ಪಿತೃಮಾತೃಗಳ ಬಾಲಾತಿಥಿಗಳ ನಾಶ್ರಿತರ ಬಿಟ್ಟುಂಡಾತನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ ಕುರಿತೆಯ್ತಂದೊಡತಿಥಿಯಂ ಸತ್ಕರಿಸ
ದನ್ನಾಡೆಯಂತನಾಥರನು ಕಲೆಗುಂದಿದವ
ರಂ ನೋವ ರೋಗಿಗಳ ಬಾಲರಂ ಹೆಳವರಂ ಕಂಡು ಕರುಣಂದೋರದಾ
ಅನ್ನಯದವಂ ಬ್ರಾಹ್ಮಣಂ ಕ್ಷತ್ರಿಯರ ತೆಱದೆ
ಸನ್ನದ್ಧದಿಂ ಕೈದು ಪಿಡಿದು ವೈಶ್ಯರು ಶೂದ್ರ
ರನ್ನರಾದವರಿವರು ನಾರಕಿಗಳೆಂದು ಬಿತ್ತರಿಸಿದಂ ಗುರುರಾಯನೂ ೩೯

ಆರಾರು ಸನ್ಮಾರ್ಗವರ್ತನೆಯ ಬಿಟ್ಟನಾ
ಚಾರಪರ ದುರ್ವರ್ತನೆಯೊಳೆಯ್ದಿ ನಡೆದವರು
ನಾರಕಿಗಳವರಾವ ನೋರ್ವ್ವರಸಿಸಿಳಿಯೊಳಾ ಕಳ್ಳ ಹಾದರಿಗರುಂಟೊ
ಆರೈದು ಶೀಕ್ಷಿಸದೆ ಸಜ್ಜನಾವಳಿಯನವಿ
ಚಾರದಿಂ ಖಳರೆಂದು ಬಾಧೆಬಡಿಸುತ್ತಿಹಂ
ಧಾರಿಣಿಯ ಜನರ ದಂಡಂಗಳನ್ಯಾಯದಿಂ ಭಂಗಿಸುತ್ತಿರ್ಪ ನೃಪನೂ ೪೦

ನಿಂದೆಯಾಗಿದ್ದವನ ದಾನವಂ ಕೊಂಡವಂ
ಒಂದಿನಿತು ಪರರ ಬೆಲ್ಲಂ ಕರ್ಬು ಮೇಲೋಗ
ರಂ ದಧಿ ಮಹಾ ಮೂಲವಾ ಕಂಬಲಂ ನೂಲಸೀರೆ ಪಟ್ಟೆಳಿದ ಸರಿಯಾ
ಸಂದಿಸಿದ ವಸ್ತ್ರಂಗಳರುವೆಯೆಂದವ ಕದ್ದು
ಗಂಧವುಂ ಕುಸುಮವುಂ ಧಾನ್ಯವುಂ ಹಾಯುಗ
ಲ್ಲಂದೃಢದ ಪಾದರಕ್ಷೆಗಳಿವು ಮರಂಗಳಿನಿತ್ಯೆಸೆಂದು ಚೋರಿಸಿದವಂ ೪೧

ಕೊಡೆ ಬಂಡಿ ಚಾಪೆ ಸುಪ್ಪತ್ತಿಗೆಗಳಾ ತಾಮ್ರ
ದೊಡವೆ ಕರ್ಬೊನ್ನು ಸೀಸಂ ತವರವಂ ಕ
ವಡೆ ಶಂಖವೆಸೆವಾ ಗೃಹೋಪಕರಣಂಗಳೇನೇನಾಗಲಿಂತನ್ನರಾ
ಒಡವೆಗಳನೊಂದು ಸಾಸವೆಯನಿತನೆಯ್ದಿ ಕಯಿ
ಲೆಡೆಯನಪಹರಿಸಿಕೊಂಡವನು ಕದ್ದಾತನಾ
ಪೊಡವಿಪಂ ತಾನಾಗಿಯನ್ಯಾಯದಿಂದ ನೀಳ್ಕೊಂಡವರು ನರಕಿಗಳಲಾ ೪೨

ಇವು ಮೊದಲೆನಲ್ಕೆ ಮಾನಸ ವಾಚಕಂ ಕಾಯ
ಕವು ಮುಖ್ಯಕರಣದೊಳಗಾ ಸ್ಥೂಲಸೂಕ್ಷ್ಮಾದಿ
ನಿವಹ ಪಾಪಂಗಳಂ ಮಾಡಿದವರಾ ಯಮನ ಲೋಕಕ್ಕೆಯಾತನಾಖ್ಯಾ
ಅವಯುವದೊಳೆಯ್ದಬೇಕ್ಕೆ ನಾಗ ನರ ಲೋಕ
ದಿವಿಯುವರು ಗಜ ಪಿಪೀಲಿಕ ಮುಖ್ಯಜೀವಿಗಳು
ಮವಿರತಂ ಕಾಲಾಗ್ನಿಗೊಳಗಾಗಬೇಕೆಂದು ಪೇಳಿದಂ ತಾರಕಾರೀ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿದೆವು ಮಗನೆ ಧರ್ಮಾಧರ್ಮವಿಂತಿವಂ
ಕೇಳಿದಾ ಕೆಂಚವೀರಾಹ್ವಯಾಯೆನಲಾಗಿ
ಭಾಳನೇತ್ರಪ್ರತಿಮಮೂರ್ತಿ ಹಲಗೆಯ ಗುರುವೆ ನರಕಯಾತನೆಯ ಕಥೆಯಾ
ಆಳಾಪಿಸೆನೆ ಸುಖಾವಹಮೂರ್ತಿ ನುಡಿದುದಂ
ಕೋಳಾಹಳದ ನಿರಯಭೂಮಿಯುಂ ಪಾತಕಗ
ಳೋಳಿಯುಂ ತತ್ಪ್ರಕಾರಮುಂ ಬಿತ್ತರಿಪೆನೆಂದನಾ ಗುರುರಾಯನೂ ೪೪

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಟಿ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲ್ಯಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುಪಿ
ಶಾಲ ವರ ವೀರಶೈವಾಮೃತಪುರಾಣಂ ಕೂರ್ತುಪದನಂ ಮಾಡಿದಂ ೪೫

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದ ವೀರಶೈವಾಮೃತದೊಳಗಾ
ದುದು ಸುಧರ್ಮಾಧರ್ಮದೆಡೆ ಮೂಱುಕಾಂಡದಿಂ ಮೇಲೆ ಹದಿನೇಳು
ಸಂಧೀ ೪೬

ಅಂತು ಸಂಧಿ ೧೭ ಕ್ಕಂ ಪದನು ೮೯೯ ಕ್ಕಂ ಗ್ರಂಥ ೬೮ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೪

ಸುಖಾವಹಮೂರ್ತಿಯು ಪುಣ್ಯಪಾಪಿಗಳ ಸತ್ಕಾರಬಂಧನಗಳಂ ತಿಳಿಸುವಿಕೆ

ಪುಣ್ಯಪಾಪಿಗಳ ಸತ್ಕಾರಬಂಧನವ
ಪೋಪ ಬಟ್ಟೆಗಳ ಶಾಂತಿಯು ರೌದ್ರಮಂ ಯಮನ
ರೂಪಿನುಗ್ರವ ಚಿತ್ರಗುಪ್ತ ನಿಷ್ಠುರ ವಚನಮಂ ಕೊರ್ತುಬಿತ್ತರಿಸುವೇಂ

ಮಾರ್ಕಂಡೆಯಂ ನಿನ್ನ ಮಱಿಯೊಕ್ಕು ಭಜಿಸುತಿರೆ
ಮಾರ್ಕಂಡೆಯುವನಾಂತು ಬರುತಿರ್ಪ ಕಾಲನಂ
ಮಾರ್ಕಂಡಮಾತ್ರದಿಂ ಪಾದದಿಂದೊದೆದು ರಕ್ಷಿಸಿ ಬಳಿಕ್ಕಾ ಶ್ವೇತನಾ
ಕರ್ಕಶದೆ ಪಿಡಿಯಲಾ ಯಮನ ಶೂಲದೊಳಿಡೆ ಸು
ರಕರ್ೂಡೆ ಕೊಂಡಾಡೆ ಮೆಱಿದ ಹರ ವಹ್ನಿ ಚಂ
ದ್ರಾರ್ಕಲೋಚನ ಶಾಂತಮಲ್ಲಯ್ಯ ಜಯ ಜಯತು ಶರಣಹೃತ್ಕಮಲಶಯ್ಯಾ ೧

ಮಾನಸದ ವಾಚಕದ ಕಾಯಿಕದ ಪಾಪಮಂ
ಧ್ಯಾನ ಶಿವಮಂತ್ರ ದಾಸೋಹಂಗಳಿಂ ಕಳೆವು
ತಾನಂದಮಯರೆನಿಸುತಂತಾ ತ್ರಿಕರಣದೊಳು ಶುದ್ಧರಂ ಮಾಡಿ ಕೃಪೆಯಿಂ
ಆನತರ ಧರ್ಮಸ್ವರೂಪರೆನೆ ನೆಗಳುತ ನ
ವೀನ ದೇಶಿಕಚಕ್ರವರ್ತಿ ವಿಲಸತ್ಪೂರ್ತಿ
ಭಾನುಕೋಟಿ ಪ್ರಭಾಮೂರ್ತಿಯಹ ಶಾಂತನಂಜೇಶಜಯ ದೋಷನಾಶಾ ೨

ನರಕಯಾತನೆ

ಮೃಡ ಕುಮಾರಕ ನಿರೂಪಿಸು ನರಕಯಾತನೆಯ
ನೊಡನೆ ಕೇಳುವೆನೆಂದೆನುತ್ತ ಕೈಗಳ ಮುಗಿದು
ಕೊಡನಮುಗನಾಗ ಬಿನ್ನವಿಸಲಾನಂದದಿಂ ಸ್ವಾಮಿಯು ಕುಮಾರನೊಲ್ದು
ನುಡಿದನಾಲಿಪುದಗಸ್ತ್ಯ ನಿರಯಭಯವ ನೀ
ಪೊಡವಿಯೊಳ್ಕೇಳ್ದವರು ದುರ್ಮಾರ್ಗದುಂ ಬಿಟ್ಟು
ನಡೆಯಬೇಕುತ್ತಮಚರಿತ್ರದೊಳಗೆಂದನಿನ್ನಾ ವಿವರವೆಂತೆಂದೊಡೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಡಜ ಜರಾಯುಜೋದ್ಭಿಜ ಮಹಾಸ್ವೇದಜದ
ಹಿಂಡುಗಳು ಗರ್ಭದೊಳಗಿದ್ದ ಶಿಶುಗಳು ಧರಾ
ಮಂಡಲದೊಳುದಯಿಸಿದ ಶಿಶು ಬಾಲ ಯೌವ್ವನರು ನಡುಹರೆಯದರು ಮುದಿಯರು
ಗಂಡಹೆಂಡಿರು ನಪುಂಸಕರು ಮೊದಲಾದವರು
ದಂಡಪಾಣಿಯ ಲೋಕಕೆಯ್ದು ಬೇಕೈ ಮತ್ತೆ
ಖಂಡಪರಶುವಿನೂರ್ಗೆ ಪೋಪರಾ ಕಾಲಪುರದಿಂಗೂರ್ಧ್ವದಿಂದವೆ ಪೋಪರೂ ೪

ಚಿತ್ರಗುಪ್ತಾದಿಗಳು ಯಮನೋಲಗದೊಳಿರ್ದು
ಧಾತ್ರಿಯೊಳು ನರರು ಮಾಡಿದ ಶುಭಾಶುಭ ತತಿಯ
ಸೂತ್ರಿಸಿದ ಮಾಳ್ಕೆಯಿಂ ಬಿತ್ತರಿಪರಲ್ಲಿಗೆಯ್ದುವ ಬಟ್ಟೆಯೆರಡುಂಟಲ್ಲೈ
ನೇತ್ರಾದಿ ದೋಷಂಗಳಂ ಮಾಡಿದರ್ಗಂ ಪ
ವಿತ್ರ ಪುಣ್ಯಾತ್ಮರ್ಗೆ ಬೇಱಿ ಬೇಱಿನೆ ಶಂಭು
ಪುತ್ರ ನಿರವಿಸು ಮೊದಲು ಧರ್ಮಿಗಳು ಪೋಪಹಾದಿಯನೆಂದನಾ ಕುಂಭಜಂ ೫

ಅಲ್ಲಿ ಪುಣ್ಯಾತ್ಮರೆಯ್ದುವ ಬಟ್ಟೆಯೆಂತೆನಲು
ಸೊಲ್ಲುವೆಂ ದೇವಾಲಯಂಗಳಂ ಯತಿಗಳಿಗೆ
ಸಲ್ಲಲಿತ ಗೇಹಮನನಾಥರ್ಗೆ ನಿಳಯಂಗಳಂ ಕಟ್ಟಿಕೊಟ್ಟವರ್ಗಳೂ
ಸಲ್ಲಲಿತ ಗೃಹರಾಜನೆನಿಪ್ಪುವರಿಗೆಯಡರಿ
ಚೆಲ್ಲೆಗಣ್ಣ ಬಲೆಯರು ಸೇವಿಸಲು ವಿಭವದಿಂ
ಎಲ್ಲಾ ಜನಂ ನೋಡಿ ಕೊಂಡಾಡುತಿರೆ ನಡೆವರ್ಬೈ ಕೇಳಿ ತಾಪಸಾಳೀ ೬

ಸಾಲ್ಮರನನಿಟ್ಟವರಿಗಾ ವೃಕ್ಷವೇ ಕೊಡೆ
ನಲ್ಮೆಯಿಂದೋಲೈಸಿಕೊಂಡು ಮಣಿಸತ್ತಿಗೆಯ
ಪೋಲ್ಮೆರ್ಪುರೆ ನಡೆವರಾ ಪುಷ್ಪವಾಟಿಗಳನೊಡರಿಚಿದವರು ಪುಷ್ಪಕದೊಳು
ಬಲ್ಮೆಯಿಂ ಪೋಪರಾ ಗುರುಸೇವೆಗಳನು ಕಾ
ದಲ್ಮೆಯಿಂ ಮಾಡಿದವರಾಗ ಸರ್ವರು ಭಾಪೆ
ನಲ್ಮಹಾ ವೈಭವಂಗಳೊಳೆಯ್ದುತಿರ್ಪರೆಲ್ಲಾ ಲೋಕವಾನಂದಿಸೇ ೭

ಪಾದಶೌಚಂಗಳಂ ಮಾಡಿದರು ಶೀತವಹ
ಹಾದಿಯೊಳು ಸುಖದೊಳೆಯ್ದುವರು ಚರಣಾಭ್ಯಂಗ
ನೋದಿತರು ವಾರುವನಡರಿ ಪೋಪರು ದಿವ್ಯವಸ್ತ್ರಮಂ ಪೊದೆದು ವಸ್ತ್ರಾ
ದಾ ದಾನಮಂ ಮಾಡಿದವರು ಗೋವಂ ಕೊಟ್ಟ
ಸಾದರರು ಸರ್ವ ಕಾಮಿವುಳ್ಳರಾಗಿ ಯಾ
ಹ್ಲಾದದಿಂ ಸತ್ತಿಗೆಯನಿತ್ತವರಿಗಾ ಮೇಘವೋಲೈಸೆ ನಡೆವುತಿಹರೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದಣಂ ಗಜ ರಥ ಮುಖಾದಿವಸ್ತುಗಳಿತ್ತ
ವಂದಿರಾ ದಿವ್ಯ ಪುಷ್ಪಕದಿಂದಲೆಯ್ದುವರು
ಕುಂದಣದ ಚಿನ್ನವಾ ಮಣಿಯಿತ್ತವರು ಕನಕಶಿಖರಿಮಣಿ ಪರ್ವತವನೂ
ಸೌಂದರ್ಯದಿಂದೇಱಿ ನಡೆವರಾ ಬೆಳ್ಳಿಯಂ
ಗೊಂದಣದನಡ್ವಾಹಮಂ ಕೊಟ್ಟವರ್ಗಳಾ
ನಂದದಿಂ ದಿವ್ಯವಾಹನವೇಱಿ ನಡೆವರಾ ತಾಣದೊಳಗೇ ವಣಿಪೇಂ ೯

ಒಂದಿನಿತು ಭೂಮಿಯಂ ಕೊಟ್ಟವಂ ಬಯಸಿದುದ
ಸಂದೇಹವಿಲ್ಲದುಱಿ ಭೋಗಿಸುತ ಪೋಪನೈ
ಮುಂದೆಯತಿಥಿಯ ಗೃಹಕೆ ಕರೆದಾತನೆಯ್ದುವಂ ಸದ್ಗೃಹದ ಹಾದಿಯಲ್ಲೀ
ಚಂದದಾಸನಶಯ್ಯೆಗಳನೀಯಲಾಗಿ ಮುದ
ದಿಂದ ಮೃದುತಳದಲ್ಲಿ ಕುಳ್ಳಿರುತ ಮಲಗುತ್ತ
ವಂದಿರೆಯ್ದುವರು ದೆಸೆಯಂ ಬೆಳಗುತೆಯ್ದುವರು ದೀಪಮಂ ಕೊಟ್ಟವರ್ಗಳೂ ೧೦

ರೋಗಿಗಳಿಗವುಷಧಂಗಳ ಕೊಟ್ಟವರು ಮಹಾ
ಭೋಗದೆ ನಿರಾಮಯರು ತಾವಾಗಿ ಪೋಪರನು
ರಾಗಿಸುತ್ತಂನದಾನವನಿಕ್ಕಿದವರ ಭಾಗ್ಯವನು ಬಣ್ಣಿಪನಾವವಂ
ಶ್ರೀಗುರುವೆ ಬಲ್ಲನೆಲ್ಲಾ ವೈಭವಂ ಬೆರಸಿ
ಚಾಗೆಲ್ಕುದಕವೆಱೆದವರೀರ್ವರೀ ಮಹೀ
ಭಾಗದೊಳು ಮುಖ್ಯರಱಿಂದವರು ಪೋಪ ಸೌಭಾಗ್ಯಮಂ ಪೊಗಳಲಱಿದೂ ೧೧

ಅನ್ನಪಾನಾಶ್ವಗೋ ವಸ್ತ್ರಶಯ್ಯಾ ಛತ್ರ
ಉನ್ನತಾಶನವೆಂಟು ಯಮಲೋಕಕುಚಿತವದ
ಱನ್ನಾಡೆ ದಾನವಂ ಮಾಡಬೇಕೈ ಕೇಳು ಧರೆಯೊಳಾವಾವ ಸುಖವಾ
ಸನ್ನಹಿತದಿಂದತಿ ಗೊಡರಿಚಿದುದೇ ಕಟ್ಟಿ
ದನ್ನವಾಗಲ್ಕೆ ಸುಖದಿಂ ಪೋಪರೆನೆ ಮುನೀ
ಶನ್ನುಡಿದನೆಲೆ ಶಿವಕುಮಾರ ಕೇಳಿಬೆನಿನ್ನು ಪಾಪಿಗಳಿಗೆಂತೆಂದನೂ ೧೨

ಬಳಿಕ ನುಡಿದಂ ಷಣ್ಮುಖಂ ಕೇಳಗಸ್ತ್ಯಮುನಿ
ತಿಳಿಕನೇ ಪುಣ್ಯಾತ್ಮರಿಗೆ ಯಮನ ಶಯ್ಯಮ ನೀ
ಪೊಳಲತಿ ಸಮೀಪವೆಂಬಂತೆ ತೋರ್ಪುದು ಕಣಾ ಪಾಪಿಗಳು ಪೋಪ ಬಟ್ಟೆ
ಗಳ ಬಿತ್ತರಿಪೆನೆಂದೊಡಾ ಬಾಧೆಯುಂ ಕೇಳ
ಲಳವಲ್ಲ ಹಾದಿಯೆಂಭತ್ತಾಱು ಸಾವಿರಗ
ಳಳವಿಗಾವುದವಲ್ಲಿ ಬಟ್ಟೆಯೊಳಗಣ ಭಯಂಕರವನಿನ್ನೇವೊಗಳ್ವೆನೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊನೆ ಮೇಲೆ ತೋರ್ಪಮುಳ್ಳುಗಳಿಂದಕಿಱುಗಲ್ಲ
ಳನಲೋಪಮಾನದಿಂದಲಗುಳ ಬಾಯ್ವಾರೆ
ಯೆನಿಪ ನೀಳ್ಗಲ್ಲಳಿಂದೂರುಗರ್ಭೀಕೃತದ ಪಸರಿಂದ ಮುಳ್ಳುಗುಜುರು
ಘನವಪ್ಪ ಪೇರಡವಿಯಿಂ ಲೋಹಸೂಚಿಗಳ
ಮೊನೆಯ ಪೋಲುತ ಮುಸುಕಿಕೊಂಡಿರ್ದ ದರ್ಭೆಯಿಂ
ಮನಕೆ ಭೀತಿಯನಿವ ಘಾತಸಂಕುಚಿತಾದ್ರಿ ತಟಪಥಂ ಭಯದಿನೆಸೆಗುಂ ೧೪

ಕೆಲವೆಡೆಯೊಳಂ ಕೆಂಡಗಳ ರಾಸಿಗಳು ಮಹಾ
ಜ್ವಲಿಸುತಿರಲಲ್ಲಿ ನಡೆವುತ ಬೇವುದುಂ ತಪ್ಪ
ದೆಲೆಲೆ ಸಾಯಲ್ಕಿಲ್ಲವಲ್ಲಿ ನಡೆವುತ ನಡೆವುತಿಳಿಯೆ ತಾಂ ಮುಳಿಗಿ ಪೋಪಾ
ನೆಲದ ಮಱಿಗುಳಿಗಳಿಂ ಕಠಿಣವೆನಿಸುವ ಲೋಷ್ಟ
ಕುಲದಿಂದ ಕಾದ ಮಳಲಿಂದ ಬಲಿದಿಹ ಶೂಕ
ದಲಘುವೆನಿಸುವ ದಸಿಗಳಿಂದೆಸೆವ ದಾರಿಯೊಳು ಪಾಪಿಗಳು ನಡೆಯಬೇಕೂ ೧೫

ಬಿದಿರ ಹಿಂಡಿಲು ಮುಳ್ಳು ಗುಜುರಿನಿಟ್ಟಣದೊಳ
ಗ್ಗದ ಕಾಳಗತ್ತಲೆಯೊಳಂ ಪೋಗಬೇಕಲಾ
ಅದಱಲ್ಲಿ ಮುಸುರಿ ಸುಡುತಿರೆ ದಾವಶಿಖಿ ಬೇವುತಿರ್ದ ಜೀವಂ ಪೋಗದೂ
ತದನಂತರದೊಳು ಕೆಂಗಲಿಸಿ ಕಾದಿರ್ಪ ಲೋ
ಹದ ನೆಲಂ ಬಿದ್ದೆದ್ದು ಕರಿಯುರಿಯದಾಗಲಂ
ಗದ ನೋವು ಬಿಡದೆ ಬೇವುತ ಸಾಯೆದೆಯ್ದುಬೇಕೈಯ್ಯ ಪಾಪಿಗಳಕ್ಕಟಾ ೧೬

ಪಿರಿಯ ಕಲ್ಗಳು ಕಾದಿರಲ್ಕೆಡಹಿಬೀಳುತ್ತ
ಬರವರಲ್ಮಳಲೊಳಾಕಂಠಾಂತವಿಳಿಯಲು
ವರೆಯಲ್ಲಿ ಮತ್ತೆ ಕಾದುದಕದಗ್ಗದ ಮಡುವಿನೊಳ್ಪೊಕ್ಕುಮಯ್ಯಸಂಮ್ಮಂ
ಇರದೆ ಸುಲಿಯಲು ನೋವುದೈಜೀವ ಪೋಗದೈ
ಪರಿಕಿಸಲು ಕೆಲವು ತಾವಿನೊಳು ಘೂತ್ಕಾರದಿಂ
ದುರಗ ಹೆಡೆಯಿಂ ಹೊಯ್ದು ಕಚ್ಚಲಳಿಯದೆ ವಿಷದೊಳಂ ಬೇವುತಂ
ನಡೆವರೂ ೧೭

ದಾರುಣ ಮಹಾಸಿಂಹವಾರ್ಭಡಿಸಿ ಬಪ್ಪವೈ
ಘೋರವೆನಿಸುವ ಹುಲಿಗಳೆಯಿತಂದು ಕೊರಲ ಕಡಿ
ದೋರಂತೆ ರಕ್ತಮಂ ಕುಡಿದೊಡಂ ಸಾಯಲಿಲ್ಲಾ ಘಾಯುವಡಗಿ ಬಳಿಕಾ
ದಾರಿಯೊಳು ನಡೆವರಂತಲ್ಲಿ ಮತ್ತೊಂದೆಡೆ ವಿ
ಕಾರಿ ಮುನಮುಕ್ಷಿ ಕಂಗಳು ಮಯ್ಯ ನೆತ್ತರಂ
ಹೀರಲಂಗವ ಮುಸುರಿಕೊಂಡಿಂತು ನಡೆವರಾ ಕ್ರೂರಕರ್ಮಿಗಳು ಮತ್ತೆ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಿಗುಳಿಗಳು ಬಂದು ಕಲವೆಡೆಯಲ್ಲಿ ಮೈನೆತ್ತ
ರುಗಳ ಕುಡಿವವು ಬಳಿಕ ಹೆಬ್ಬಾವುಗಳು ಸುತ್ತಿ
ಬಿಗಿದು ಕೊರಲಂ ಮುರಿವವಾ ಮತ್ತಮಾತಂಗವೆಯ್ತಂದು ಶುಂಡಿಲಿಂದಾ
ತೆಗೆದು ಮೇಲಕ್ಕಿಟ್ಟು ಬೀಳ್ವವರನಾನೆ ಕೊಂ
ಬುಗಳೆಡೆಗಳಿಂ ಬೆನ್ನ ತಟವುಚ್ಚುತಂ ನೆತ್ತ
ರುಗೆ ನೋವರ್ೈ ಸಲೆ ಸಾಯಲಿಲ್ಲದೆ ನಡೆವರಯ್ಯ ಪಾಪಿಗಳು ಸಂತತಂ ೧೯

ಈಡಿರಿವುತಂ ಬಟ್ಟೆಗಳನಲ್ಲಿ ಪರ್ವೊನೆಯ
ಕೋಡುಗಳಿನುಗ್ರ ವೃಷಭಂಗಳಿದಿರೊಳು ಬಂದು
ಕಾಡುವವು ಹಿರಿಯ ಕೊಂಬಿನ ಮಹಿಷಸಂಕುಲಂ ಪೊಯ್ವ ಬಟ್ಟೆಗಳು ಬಂದೂ
ನಾಡೆ ಕೊರಲಂ ಕಚ್ಚಿಯೊದರುವವು ನಿಶಿಯೊಳಂ
ತಾ ಡಾಕಿನೀ ಶಾಕಿನೀ ಮರುಳುಗಳು ಕೋರ
ದಾಡೆಗಳ ಬೇತಾಳರಿದಿರಲ್ಲಿ ಬಂದು ಘೂರ್ಮಿಸಿ ಹೊಡೆದು ಕೆಡಹುತಿಹರೂ ೨೦

ಕ್ಷಯ ಪಾಂಡು ಶೂಲೆ ಮೂಲವ್ಯಾಧಿಯಾ ಜ್ವರಂ
ಭಯಮಪ್ಪ ಹೊಟ್ಟೆಬೇನೆಯಾದಿಯಾಗಿ ರುಜೆ
ರಯದಿಂದ ಕಾಡುತಿರ್ದುಂ ನಡೆಯಬೇಕೈ ಮಹಾ ಧೂಳಿಮಿಶ್ರ ವಾಯೂ
ಸ್ವಯ ಜಿಂಹ್ವೆ ನಾಸಿಕಂಗಳ ಮುಸುಂಕಲ್ಕಾಶಿ
ಲೆಯ ಮಳೆಗಳೆರಗಿ ತಾಡಿಸೆ ಸಾಯಲಿಲ್ಲವ
ನ್ನಯದೆ ನೋವುತ್ತ ಪಾಪಿಗಳಕ್ಕಟಾ ನಡೆಯಬೇಕು ಮತ್ತೆಂತೆಂದೊಡೇ ೨೧

ಮಿಂಚುತ್ತಲುಳ್ಕುಗಳು ಬಿದ್ದು ಸಿಡಿಲೆಱಗುತ್ತ
ವೇಂ ಚಮತ್ಕಾರಮೊ ಕಡಿತಲೆ ಕಠಾರಿಗಳು
ತಾಂ ಚೂರಿ ದಸನಿ ಜವದಾಡೆ ಮೊದಲಾದಾಯುಧದ ಮಳೆಗಳಂಗಂಗಳಾ
ಹಂಚುಹರಿಯಂ ಮಾಡಿ ತಾಗಿದೇರೊಳು ಮತ್ತೆ
ಮುಂಚಿ ಲವಣೋದಕದ ಮಳೆಕರೆವುದವುಕೀನು
ತಂ ಚಾರಿವರಿಯೆ ಹುಳುವಲ್ಲಿ ಛಳಿ ಘಾಳಿ ತೀಡಲು ನೋವುತಂ ನಡೆವರೂ ೨೨

ಇಂತಪ್ಪ ಬಟ್ಟೆಯೊಳಗುಂಡುಂಡು ಕೊಲಿಸಿಕೊಳು
ತಂ ತಾವೆ ನಡೆದಪ್ಪರೇನಿಟ್ಟ ಪಾಶಗಳಿ
ನಂತ ಕುಡಿಯಲ್ಕೆಯೊಕ್ಕುಡಿತೆ ನೀರುಂಟೆಯಾ ಮಾತೇಕೆ ನಿರ್ಜಲವಲಾ
ಎಂತಕ್ಕೆ ವಿಶ್ರಮಿಸ ಸ್ಥಲವುಂಟೆಯಿಲ್ಲ ಬಳಿ
ಕಂತವಂ ಸರ್ವದುಃಖಕ್ಕೆ ನೆಲೆವನೆಯೆನಿಸು
ವಂತಕನ ಪುರದ ಬಟ್ಟೆಯೊಳು ಪೋಪರ ಬಾಧೆಯಂ ನೆನೆಯಬಹುದೆಯಕಟಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾರಿಯಿಂತಪ್ಪ ಭಯವಾದೊಡೇನೈ ಸದಾ
ಸ್ವೈರತ್ವದಿಂ ನಡೆವರೇ ಯಕಟ ಯಮಭಟರ
ಘೋರವಮಂ ನೆನೆದವಂದಿರಿಗೆ ಭಯಮಂ ಬೀರುತಿದೆ ಮಹಾರೌದ್ರಾಂಗರೂ
ಕ್ರೂರಕರ್ಮಿಗಳುನ್ನತರು ರಕ್ತನೇತ್ರರಾ
ಪೇರುರದ ಬೆಳೆದ ಭುಜಗಳ ಭಯಂಕರರೂಪ
ರಾರಯ್ಯೆ ಹಿಡಿಮೀಸೆಗಳ ದುಷ್ಟ ಕೈದುಗಳ ಭಟರು ಬಡಿವುತ ಬಪ್ಪರೂ ೨೪

ಪ್ರೇತದಂದದ ದೇಹವುಡಲರುವೆಯಿನಿತುಂಟೆ
ಏತತ್ಸಮಸ್ತಲಗ್ನಂಗಳೆದೆ ಕೊರಲು ಮ
ತ್ತಾ ತುಟಿಗಳೊಣಗೆ ಬಡವಾದಂಗದಿಂ ಕ್ಷುಧಾಪೀಡಿತಂ ಚಳಿಗಳಿಂದಾ
ಭೀತನೈ ತಾನೊಬ್ಬನೇ ತನ್ನ ಬಡಿವ ಯಮ
ದೂತರಲ್ಲದೆ ಸುತರು ಸತಿಯರೊಡಹುಟ್ಟಿದರು
ಮಾತಪಿತರುಗಳು ತಾಂ ಕುರಪ ಬಲ್ಲವರೊಬ್ಬರಂ ಕಾಣದಳುತ ನಡೆವಂ ೨೫

ಕಿಲಬರ್ಗೆ ಕಾದ ಸಂಕಲೆಯು ಕಾಲ್ಗಳಿಗಿಕ್ಕಿ
ಸಲೆ ಮೇಲು ಮೊನೆ ಮುಳ್ಳಹಾದಿಯೊಳು ಮುಖವಡೆಯ
ಳೆಳದೆಳೆದುಕೊಂಡು ಪೋಪರು ಕಿಲರನಲ್ಲಿ ತಲೆಗೂದಲಂ ಕಟ್ಟಿ ಬಿಡದೇ
ಅಲೆದು ತೂನುತ್ತೊಯ್ವರನ್ಯ ದೈವಕ್ಕೆರಗಿ
ಸಲೆ ಮುಟ್ಟಿ ಮಣ್ಣಿಟ್ಟವರ ಹಣೆಯ ಸೀಳಿ ಸಂ
ಕಲೆಯ ಬಳೆಗಳ ಕಾಸಿತಂಡಿಡುತ್ತೀಳ್ಕೊಂಬರಂಗಾರ ಮಾರ್ಗದಲ್ಲೀ ೨೬

ನೆಟ್ಟನನ್ಯಾಯದೊಡವೆಗಳನುಂಡಿರ್ದವರ
ಹೊಟ್ಟೆಗಳ ಸೀಳಿ ಕೊಬ್ಬಿರ್ದ ಕರುಳಲ್ಲಿ ತಂ
ದಿಟ್ಟು ಕಾದಿರ್ದಸಂಕಲೆಯನೆಳೆದೊಯ್ವರನ್ಯರ್ಗೆ ಪರದೈವಗಳಿಗೇ
ಕಟ್ಟಿಕ್ಕಿಂದ ನೆಗಪಿದ ಕೈಗೆಳೆರಡರೊಳ
ಗಿಟ್ಟು ದೂತರು ತಪ್ತ ಶೃಂಖಲಾ ಬಂಧಮುಮ
ನಟ್ಟಡಿಯೊಳವರ ಬಾಯಿಗಳನೊದೆವುತ್ತ ಕೊಂಡೊಯಿವರಾ ದಾರಿಯಲ್ಲೀ ೨೭

ಗರ್ವದಿಂ ತಲೆಯ ನೆಗಪಿರ್ದವರ ಕೊರಲಲ್ಲಿ
ದರ್ವೀಕರೋನ್ನತದ ಪಾಶಮಂ ಕಟ್ಟಿ ಬಳಿ
ಕುರ್ವಿಯೊಳಗೆಳೆವರ್ಶೈ ಶಿವನಿಂದೆ ಕೊಂಡೆಯಂ ಸಿಷ್ಠೂರ ಭಾಷೆಗಳನೂ
ಕುರ್ವಿ ನುಡಿದವರ ನಾಲಗೆದಿವಿದು ಕಾದಿರ್ದ
ಸರ್ವತೋಮುಖದ ಲೋಹದ ದಸಿಗಳಿಂ ಬಲಿದ
ಖರ್ವವೆನೆ ಕಾದ ಸರಪಳಿಗಟ್ಟಿ ತೂಗುವರು ದೂತರೀಶ್ವಭೀತರೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಗಲಲ್ಲಿಯರ್ಧಚಂದ್ರಾಕೃತಿಯ ಹಸ್ತವಿ
ಟ್ಟಗಲಿಸುತ್ತಿತ್ತು ನೂಂಕಿ ಕೆಡಪುತ್ತೊದೆದು
ಬಗೆಯುದೊಯಿವರು ಪರಾಂಗನೆಗಳುಪಿದವರ ಶಿಶ್ನೆಯ ವೃಷಣದಾದಿಯಲ್ಲೀ
ಹುಗಿಲುಗಳೆವುತ ಕಾದ ಸರಪಣಿಯ ಸೇರಿಸುತ
ಬಿಗಿಯ ಕಟ್ಟುತ್ತಲೆಳೆವರು ವೃಷಭತತಿಯ ಮೂ
ಗಿಗೆ ನೇಣನಿಕ್ಕಿದರ ನಾಸಿಕತೆ ತಪ್ಪುಯೋಗುಣವನಿಡುತೊಯ್ವುತಿಹರೂ ೨೯

ಕದಪುಗಳ ವಿರಳದೊಳು ಕೋದು ಕೆಲರಂ ಕೆಲರ
ಹೃದಯುಮಂ ಬೆನ್ನವಧಿಯಾಗಿ ತಿವಿವುತ ಪೋಣಿ
ಸಿದ ದಾರಮಂ ಪಿಡಿದು ಕೆಲರನಾ ಗಲ್ಲಮಂ ಖಂಡಿಯಂ ಮಾಡಿ ಕಟ್ಟೀ
ತುದಿಯ ನೇಣಂ ಹಿಡಿದು ಕೆಲಬರಂ ತುಟಿಯೆರಡ
ನದಿರೆ ಚುಚ್ಚುತ್ತ ಕಟ್ಟಿದ ರಜ್ಜುವಿಂಗೆ ಮಾಣ
ಣದೆ ಸೆಳೆವರಾ ದಾರಿಯಲ್ಲಿ ಯಮಭಟರು ಪಾಪಿಗಳುರಸ್ಥಲದ ನಟರೂ ೩೦

ಶಿವನಿಂದೆ ಗುರುನಿಂದೆಯಂ ಕೇಳಿದವರ ಕ
ರ್ಣವನೆರಡನಾ ಕಪಾಲಂಬರಂ ದಸಿಯಿಂದ
ಶಿವಿದಲ್ಲಿ ಕಾಸಿರ್ದ ಸರೆಪಳಿಯನಿಟ್ಟು ಬಳಿಕೆಳೆದೊಯ್ವುತಿಹರನಿಬರಾ
ತವೆ ಕಾಲ್ಗಳಂ ಕಡಿದು ಮೊಣ್ಣಗಾಲೊಳು ನಡೆಸಿ
ಯವರ ಬೆನ್ನಂ ಕಾದ ಕಬ್ಬುನದ ದಡಿಯಲ್ಲಿ
ಕವಿಕವಿದು ತನತನಗೆ ಬಡಿವುತ್ತ ಪೊಡೆವುತ್ತ ಕೊಂಡೊಯಿವರಾ ದೂತರೂ ೩೧

ಅರೆಗೊರಲ ಕೊಯ್ದು ಕೆಲರಂ ಕೆಲಬರಂ ಶಿಶ್ನೆ
ಯರಿದು ಕೆಲರಂ ಬೃಹತ್ತಂ ಸೊಪ್ಪುಗುಟ್ಟುತಂ
ತರೆಬರಂ ಕುಡಿಯುಳ್ಳೆಗಳನಿರಿದು ಕರುಳ ಹಿರಿವುತ್ತ ಸರ್ವಾಂಗದಲ್ಲೀ
ಹಿರಿಯ ಕಬ್ಬೊಣಂನ್ನದಸಿಗಳ ಹೆಟ್ಟಿ ಕುಂತಮು
ದ್ಗರ ಮುಖ್ಯದಾಯುಧಂಗಳೊಳರಿದು ಪೊಡೆವುತ್ತ
ಲಿರೆ ದೈನ್ಯದಿಂದ ಮೊರೆಯಿಡುತಲತ್ತಿತ್ತೋಡಿಯಾಡಿ ಕಂಗೆಡುತ ಬಹರೂ ೩೨

ಪಾಪಿಗಳಿಗಿದು ಬಾಧೆಯಲ್ಲ ತಪ್ಪಂ ಮಾಡೆ
ಭೂಪನ ಸಮೀಪಕ್ಕೆ ಖಳರಂ ತಳಾರರಾ
ಟೋಪದಿಂ ಪಿಡಿತರುತ ನಡುವೆ ಮಾಡುವ ಬಾಧೆಯೈಸೆ ಮುಂದಿತರ ವಿಧಿಯಾ
ಏಪೇಳ್ವೆನೈಯ್ಯ ಕೇಳಿರೆ ದಾರುವನದೊಳಿಹ
ತಾಪಸರಿರಾಯೆನುತ್ತಂ ಸುಖಾವಹಮೂರ್ತಿ
ರೂಪನಾನಂದದಿಂ ನಿರವಿಸುತಿರ್ದನಾ ಕೀರ್ತಿ ಬಹುದಿಕ್ಪ್ರಪೂರ್ತೀ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಳಿ ಕುಂಭಜನೆಂದನೆಲೆ ಷಣ್ಮುಖನೆ ಸುಸ
ದ್ಗುರುವೆಯಾ ಮೊದಲು ಧರ್ಮಂಗಳಂ ಮಾಡಿರ್ದ
ನರರಿಗೀ ನರಕಿಗಳು ಯಮನ ಪಟ್ಟಣದ ಸೀಮೆಯೊಳೆರಡು ತೆಱದಬಟ್ಟೇ
ಇರದೆ ಕೂಡುವವೆ ಕೂಡಿದ ಬಳಿಕ ಪುಣ್ಯ ಪಾ
ಪರುಗಳು ಭಯಂಗಳಂ ತಾಗಳೇನಪ್ಪುದಾ
ಪರಿಯ ಬಿತ್ತರಿಸೆಂದ ಮುನಿಗಳಿಗೆ ನುಡಿದ ಶಿವಕುವರ ನತ್ಯಧಿಕರಾ ೩೪

ಪುಣ್ಯಪುರುಷರ್ಗಳಂದಣವನಾ ಮಣಿಮಯದ
ಗಣ್ಯದುತ್ತಮದ ಪಲ್ಲಕ್ಕಿಯುಂ ಕರಿ ಹಯ ಹಿ
ರಣ್ಯರಥ ಪುಷ್ಪಕಾದಿಯನಡರಿ ದಿವ್ಯ ವಸ್ತ್ರಾಭರಣ ಭೂಷಣದೊಳೂ
ವಾಣ್ಯಮಲ ಸತ್ಕಾರಮಂ ಯಮನ ಭಟರು ನೈ
ಪುಣ್ಯವೆನೆ ನುಡಿವುತ್ತ ದಿವ್ಯಾನ್ನಪಾನಾಗ್ರ
ಗಣ್ಯ ತಾಂಬೂಲಾದಿ ಸತ್ಕಾರಮಂ ಮಾಡೆ ಕೈಕೊಳುತ ಬರುತಿರ್ಪರೂ ೩೫

ಅವರ ಕಾಣುತ್ತ ಪಾಪಿಗಳು ನುಡಿವರು ದೂತ
ನಿವಹವೇ ಕ್ಷುಧೆಗನ್ನಮಂ ತೃಷೆಗೆಯುದಕಮಂ
ತವೆ ಶೀತಕನಲನಂ ಲಸದೂಷ್ಣಕಂ ಹಿಮಾದಿಗಳನವರ್ಗಿತ್ತು ನೀವೂ
ಸವಿಲಾಸದಿಂದ ಸತ್ಕರಿಸುತಿರ್ದಪ್ಪಿರಂ
ಮ್ಮುಮನಂತು ರಕ್ಷಿಸಲ್ಬೇಡವೇ ಎಂದು ದೈ
ನ್ಯವನಾಡಿ ನುಡಿವರಂ ನೋಡುತ್ತಲಾ ದೂತರೇಗೆಯ್ದರೆಂದೆನಲ್ಕೇ ೩೬

ಹಳೆಯ ಮಲವಧಿಕ ದುರ್ಗಂಧದಿಂ ಬಿಗೆ ಬೀಸಿ
ಹುಳಿತಿರ್ದದಂ ತಮ್ಮ ಕೆರಹುಗಾಲಿಂ ಮೆಟ್ಟಿ
ಬಳಿಕ ತತ್ಕ್ರಿಮಿಯುಕ್ತವಾದ ಕಾಲಿಂದಲಂತವರ ಬಾಯಿಗಳನೊದೆವುತಾ
ಬಳಿಕೊದೆದು ನುಡಿವರೀ ಧರ್ಮಿಷ್ಠರಾದವರ
ನಿಳೆಯಲ್ಲಿ ಕಂಡು ನಗುವಿರಿ ಮಾಡಲಿಲ್ಲದಂ
ತೆಳಸುವಿರಿ ನಾಚಿಕೆಗಳಿಲ್ಲವೇ ಎನುತಲಡಿಗಡಿಗೊದೆವರಾ ಜೀವಿಯಾ ೩೭

ಇಂತು ಬಡಿಯಿಸಿಕೊಂಬವರ ನೋಡುತತಿ ಕರುಣ
ದಿಂ ತರಂಬಿಡಿದು ಬರುತಿಪ್ಪ ಧರ್ಮಿಷ್ಠರ್ಗೆ
ಯಂತಕಂ ಸೌಂದರ್ಯರೂಪುಳ್ಳ ರಾಯನಾಗುತ್ತ ವಸ್ತ್ರಾಭರಣದಿಂ
ಮುಂತೆ ಕೆಲಬಲದ ಮನ್ನೆಯ ಮಕುಟವರ್ಧನರ
ಕಾಂತೆಯರ ಸೌಂದರದ ಕರಣಿಕರ ವಿಭವದಿಂ
ಸಂತಸದೊಳಿರ್ದು ಬಂದಧಿಕ ಪುಣ್ಯಾತ್ಮರಂ ಕಂಡು ಸಭೆಸಹಿತಲೇಳ್ವಂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದಿರುವಂದೆಱಗಿ ಕೊಂಡೊಯ್ದು ನವರತ್ನ ಪೀ
ಠದೊಳಿರಿಸಿ ಸುಪ್ರಸನ್ನಾನನದಿನಂತವರ
ಪದಯುಗ್ಮಮಂ ತಾನೆ ತೊಳೆದಗಲಿಕೊಡಿದ ವಿಶೇಷಾಪ್ತರಂದದಿಂದಾ
ಮುದದಿಂದ ಸತ್ಕರಿಸಿ ಧನ್ಯರ್ರೈ ನೀವು ಮಾ
ಡಿದೆವೆಂದು ಪರರಿಗೆನಬೇಡ ನಿಮ್ಮಾತ್ಮಂಗೆ
ವಿದಿತ ಸುಖವನೆ ಮಾಡಿಕೊಂಬಿರೈಲೇಸು ಲೇಸೆಂದು ವಿನಯುವ ನುಡಿವನೂ ೩೯

ಧರ್ಮವಂ ಮಾಡಿದಿರಿ ಮರ್ತ್ಯದೊಳಗದಱಿಂದ
ಕೂರ್ಮೆಯಿಂ ಸಿಂಗರಿಸಿದೀ ವಿಮಾನಂಗಳಂ
ಕರ್ಮದಿಂದೇಱಿಯಾ ಸ್ವರ್ಗಕ್ಕೆ ಪೋಗಿ ಸುರವನಿತೆಯರ ಸಂಗದಿಂದಾ
ಪೆರ್ಮೆಯಿಂದಿರ್ದಿಳೆಯೊಳೆಸಗಿದಿರಿ ನೀವಲ್ಪ
ಕರ್ಮಂಗಳಂ ದಿದ್ಯ ಪುಣ್ಯಮಂ ಭೋಗಿಸಿದ
ವರ್ಮತ್ತೆಯುಳಿದ ದೋಷವನಿಲ್ಲಿ ಬಂದುಂಬಿರೆನುತಲಟ್ಟುವನವರನೂ ೪೦

ಎನೆ ಕುಂಭಜಂ ನುಡಿದನೆಲೆ ಷಣ್ಮುಖಾಗ್ರಗ
ಣ್ಯನೆ ಪುಣ್ಯವಂತರ್ಗೆ ಯಮನಿರ್ಪರೂಪನಾ
ತನ ಲಸತ್ಸತ್ಕಾರಮಂ ಕೇಳ್ದೆನಿನ್ನು ಪಾಪಿಗಳಿಗೆಂತಹನಂತಕಂ
ಅನಿತ ಪೇಳೆನಲಾಗಿ ಕೇಳೆಂದು ನುಡಿದನು
ರ್ವನಘೋರವತಿ ಭಯಂಕರವಪ್ಪ ಕಾಲನಂ
ನೆನೆಯಲಂಜಿಕೆ ಪುಟ್ಟಿದಪ್ಪುದೆಂಬಂತೋಲಗದೊಳಿರ್ಪನೆಂತೆಂದೊಡೇ ೪೧

ಘೋರತರಮೆನಿಸಿದೋಲಗಶಾಲೆಯಲ್ಲಿಯಾ
ಸೂರಿಯನ ಮಗನಪ್ಪ ಯಮನಲ್ಲಿ ನಿಷಧಗಿರಿ
ಚಾರು ನೀಲಾಂಜನಾದ್ರಿಗಳಿಗಡಿಮುಡಿ ಕೈಗಳೊದಗಿದವೊ ಪೇಳೆಂದೆನೇ
ಆ ರೌದ್ರವಾಗಿ ಮಿಸುಗುವ ಕೋರದಾಡೆಯಿಂ
ಕ್ರೂರತ್ವದಿಂದ ಗಂಟಿಕ್ಕಿರ್ದಪುರ್ಬಿನಿಂ
ಧೀರತೆಯ ರಕ್ತನೇತ್ರಂಗಳ ಭಯಂಕಾರದಿಂದ ನೋಡುತ್ತಿರ್ಪನೂ ೪೨

ಮೇಲಕಡರಿದ ಮುಯ್ಯುರೋಮದಿಂ ಕುಂತಮಂ
ಪೋಲುವಗ್ಗಳದ ಮೀಸೆಗಳಿಂದ ಮಿಡಿವುತಾ
ಸ್ಫಾಲನದಿನೊದರುತಿಹ ತುಟಿಗಳಿಂ ಹದಿನೆಂಟು ತೋಳುಗಳಿನಾಯುಧಗಳಿಂ
ಸ್ಥೂಲ ಯಮದಂಡಮಂ ಪಿಡಿದು ಜಡಿವುತ್ತಂ ಕ
ರಾಲ ಮುಖಮಂ ನೆಗಪಿ ನೋಡುತ್ತಲತಿಶಯು ವಿ
ಶಾಲದೆದೆ ಭುಜದುನ್ನತಂಗಳಿಂದತಿ ಭಯಂಕರದಿ ನಿರುತಂ ಬಳಿಕ್ಕಾ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿರಿಯ ಕೋಣನನೇಱಿಕೊಂಡು ಕಂಗಳೊಳು ಪೇ
ರುರಿ ಹೊರಡುತಿರೆ ರಕ್ತಮಾಲ್ಯಾಂಬರಂಗಳಿಂ
ದರರೆಯಾ ಪ್ರಳಯಕಾಲದ ಮೇಘದಂತೆ ಘೂರ್ಮಿಸುವ ನಿಷ್ಠುರರಾವದಿಂ
ಶರನಿಧಿಯನೇಳನೊಂದೇ ಬಾರಿ ಕುಡಿದಪನೊ
ಭರದಿಂದ ಲೋಕಮಂ ನುಂಗಿದಪನೋ ಮಹೋ
ತ್ಕರದಗ್ನಿಯಂ ಕಾರಿದಪನೋ ಯೆಂದೆನೆ ಭಯಂಕರವ ಬೀರುತ್ತಿರ್ಪನೂ ೪೪

ಕಾಲಾನಲಪ್ರಭೆಯ ತಳೆದಲ್ಲಿ ಮೃತ್ಯುವಾ
ಕಾಲನ ಸಮೀಪದೊಳು ಮೆಱೆಯಿತ್ತು ಮನ್ನೆಯರು
ಕಾಲನಂಜನದ ಗಿರಿಯಂತಾ ಕೃತಾಂತನೆಂಬಾತಂ ಭಯಂಕರನಲಾ
ಮೇಲೆಯಂತಾ ಮಾರಿಯುಗ್ರದ ಮಹಾ ಮಾರಿ
ಕಾಲಾರಾತ್ರಾತಿ ಧಾರುಣಿಯೆಂಬ ಸತಿಯರಂ
ತೋಲೈಸೆ ಮೆಱೆವಂ ಪರೇತರಾಜಂ ಧೈರ್ಯನ್ನೈಜದುಃಖದ ಸಮಾಜಾ ೪೫

ಕ್ಷಯು ಪಾಂಡು ಮುಖ್ಯವಾಗಿರ್ದಖಿಲ ರೋಗ ಸಂ
ಚಯವಲ್ಲಿ ರೂಪಾಗಿ ನಿಂದು ಯಮರಾಜ ನಿ
ನ್ನಯ ಬೆಸನದೇನಾರ ಹಿಡಿವೆವಾರಂ ಬಾಧೆಯಂ ಮಾಳ್ಪೆವಾರ ಕೊಂದೂ
ರಯದಿಂದ ನಿನ್ನೆಡೆಗೆ ತಹೆವೆಂದು ನುಡಿವುತ್ತ
ಲಯುತಪ್ರಯುತವಿರಲು ಮೆಱೆವನಾ ಯಮಧರ್ಮ
ನಿಯತ ಮಾರ್ಗಿಯ ಶರ್ಮನತ್ಯುಗ್ರತರ ಕರ್ಮ ಸನ್ಮಾರ್ಗಜನದ ವರ್ಮಾ ೪೬

ಖಂಡೆಯಂಗಳ ಹೆಗಲೊಳಾಂತಿಟ್ಟಿಗಳ ಪಿಡಿದು
ಕೊಂಡು ಬತ್ತಳಿಕೆಯಂಬಂ ತೆಗೆದು ಬಿಗಿದ ಕೋ
ದಂಡಕಳವಡಿಸಲುಜ್ಜುಗಿಸಿ ಪಾಶವನೆರಡು ಕೈಯಿಂದಲಳವಡಿಸುತಾ
ದಂಡಪಾಣಿಯ ಕಣ್ಣ ಸನ್ನೆಯಂ ಹಾರುತು
ದ್ದಂಡದಿಂ ಹಲವಾಯುಧವನಾಂತು ಯಮಭಟರ
ತಂಡ ಕೋಟಾಕೋಟಿಯೋಲೈಸೆ ಮೆಱೆವನಾ ಚಂಡಬಲಯಮರಾಜನೂ ೪೭

ಇಂತತಿ ಮಹಾ ಭಯಂಕರ ರೌದ್ರದೋಲಗದೊ
ಳಂತಕನಿರುತ್ತಿರಲು ಯಮಭಟರು ಪಾಪಿಗಳ
ನಂತರಂ ತಂದು ಮುಂದೊಪ್ಪಿಸಿದೊಡವರ ಕಂಡಾ ಪ್ರಳಯ ಕಾಲದಲ್ಲಿ
ಮುಂತೆ ಘೂರ್ಮಿಸುತೆಱಗುತಿರ್ಪ ಸಿಡಿಲೆನೆ ಭಯವ
ನಾಂತ ರೂಪಿನ ಚಿತ್ರಗುಪ್ತರಂ ನೋಡುತ್ತ
ಲಂತಲ್ಲಿ ಗರ್ಜಿಸುತಲಿವರ ಪಾಪಂಗಳೇನೇನೆಂಬನಾ ಕೃತಾಂತಂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇವರು ಮಾಡಿದ ಪುಣ್ಯಪಾಪಂಗಳಿನಿತೆಂದು
ಜವನಕೂಡಾ ಚಿತ್ರಗುಪ್ತರಾಡಲು ಮುಂದೆ
ತವೆ ನಡುಗುತಿಪ್ಪ ಪಾಪಾತ್ಮರಂ ತಾನೆ ನುಡಿಸುವನು ಯಮನಾಲಿಸಲ್ಕೇ"
ತವಕದಿಂದೆಲೆಲೆ ದುಃಕರ್ಮಂಗಳಂ ಮಾಡಿ
ದವರು ಬಂದಿರೆ ಪರದ್ರವ್ಯಂಗಳಂ ಕೊಂಡು
ಭುವನದೊಳು ಸುಖಿಸಿಕೊಂಡಿರ್ದ ಪಾತಕರಿರಾ ಬಂದಿರೇ ಎಂದು ನುಡಿವಂ ೪೯

ರೂಪು ಯೌವ್ವನವುಂಟೆನಿಪ್ಪ ಗರ್ವಂಗಳಿಂ
ದಾ ಪರಸ್ತ್ರೀಯರಂ ರಮಿಸಿದಜ್ಞಾನರೆನಿ
ಪಾ ಪಾದರಿಗರಿರಾ ಬಂದಿರೇಯಲ್ಪಸುಖಕಾಗಿ ಕೋಟಾನುಕೊಟೀ
ಆ ಪಾತಕಂಗಳಂ ಘಳಿಸಿ ಕೊಂಡವರು ನಾ
ನಾಪರಿಗಳಿಂ ಬಡಿಸಿಕೊಂಬುದಕೆ ಬಂದಿರೈ
ಭಾಪೆಂದು ನಗುತ ನುಡಿವಂ ಚಿತ್ರಗುಪ್ತನಾ ತಪ್ತವಚನಾದಿಕ್ಲುಪ್ತಾ ೫೦

ನಾವು ಬಲ್ಲಿದರಾಗಿ ಪರರ ಕೊಂದಿರಿದೆವಂ
ದಾವಗಂ ಧರೆಯಲ್ಲಿ ಕೊಬ್ಬುತಿರ್ಪಿರಿ ನಿಮಗೆ
ಸಾವಿಲ್ಲವೆಂದಿರ್ದಿರೈಸಲೇಯನ್ಯರ್ಗೆ ಮಾಡಿದುದೆ ನಿಮಗೆ ನೀವೂ
ಸಾವಿರ ಮಡಿಯು ಕೊಲೆಯು ಗಳಿಸಿತಂದವರಿನ್ನು
ಬೇವಿರೈ ನರಕಮಂಡಲದೊಳರಿವಿರೇ ಯೆನು
ತ್ತಾ ವಿಶೇಷದ ಚಿತ್ರಗುಪ್ತರಾಡುವ ನುಡಿಗೆ ನಡುಗುವರು ಪಾಪಿಷ್ಟರೂ ೫೧

ಹಿಂದೆ ನೀವಿಡರಿಚಿದ ಕರ್ಮವೆಮ್ಮಯ ದೂತ
ರೆಂದೆನಿಪ ಮಾಳ್ಕೆಯಾಗುತ್ತ ನೀವೆಸಗಿದುದ
ದೊಂದಕ್ಕೆ ಸಾವಿರದ ಮಾಳ್ಕೆಯಿಂ ಬಡಿವರೈ ತಣಿವಂತೆ ಕೊಲಿಸಿಕೊಳ್ಳಿ
ಇಂದಿಲ್ಲಿ ನಿಮ್ಮ ಕೊಂದವರಿಗಂ ದೋಷವಿ
ಲ್ಲೆಂದರಿಯಿರೆನುತ ಮೂದಲಿಪನಾ ಚಿತ್ರಗು
ಪ್ತಂ ದಯಾಸಹಜನಾ ಸಜ್ಜನಂ ಮಂಧ್ಯಸ್ಥನಾಗಿ ತಪ್ಪಿಲ್ಲೆಂಬಿನಂ ೫೨

ಎಲೆ ರಾಜರಿರ ದುರಾಚಾರಿಗಳಿರಾ ನೀವು
ನೆಲದಲ್ಲಿಯಾ ಪ್ರಜೆಯು ನರೆದು ಸಣ್ಣಿಸುತಕಟ
ಕೊಲುವಿರೈ ಸ್ಥಿರವೆನುತ್ತಲ್ಪಕಾಲದ ಭೋಗಕಾಗಿಯನ್ಯಾಯಂಗಳಾ
ಹಲವನೆಸಗುತ್ತಲಂತಾ ಬ್ರಹ್ಮ ವಿಷ್ಣುಗಳ
ವಿಲಯಾಂತದೊಳು ಕೆಡೆವ ನರಕಕ್ಕೆ ಪಕ್ಕಾಗು
ತಲೆ ಬಾಧೆಗೊಳಗಾದಿರೈಯೆಂದು ನುಡಿವುತಿರ್ದಂ ಚಿತ್ರಗುಪ್ತನಲ್ಲೀ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿಂಗರಿಸಿಕೊಂಡೋಲಗದೊಳು ಗದ್ದುಗೆಯಲ್ಲಿ
ಹಾಂಗಿರುತ್ತವನ ಕೊಲ್ಲಿರಿ ಎಂದು ಕೊಲಿಸುತ್ತ
ತುಂಗಕುಚೆಯರ ಕೂಟದಿಂದಿಪ್ಪಿರ್ರೈ ಸಲೆಯುವರು ನೊಂದುದನರಿಯಿರ್ರೈ
ಕಂಗೆಡುವ ಮಾತ್ರದಿಂದೆಮ್ಮ ದೂತರು ನಿಮ್ಮ
ವಂಗವಿಸಿ ಬಡಿವಾಗ ನೆನೆವಿರ್ರೈನೋವ ನೀ
ಪಾಂಗೆಂದನಂತಕಾಲಂ ನೋಡಿರ್ರೈಯೆಂದು ಭಯವಚನವಂ ನುಡಿವರೂ ೫೪

ಉರ್ವಿಪತಿಗಳಿರ ನಿಮ್ಮಯ ರಾಜ್ಯವೆಲ್ಲಿಯಾ
ದುರ್ವಿಚಾರದ ಪಿಶುನರೆಲ್ಲಿ ಚತುರಂಗಬಲ
ದುರ್ವದಲ್ಲಿರ್ದಪ್ಪುದನ್ಯಾಯದಿಂದ ಗಳಿಸಿಕೊಂಡ ಭಂಡಾರವೆಲ್ಲೀ
ಕೊರ್ವಿದ ಕುಚಂಗಳಬಲೆಯರೆಲ್ಲಿ ಸುತರೆಲ್ಲಿ
ಸರ್ವರೊಡರಿಚಿದ ದೋಷಕ್ಕೆ ಬಡಿಯಿಸಿಕೊಂಬ
ರೊರ್ವರೊರ್ವರೆ ಬಂದಿರ್ರೈನ್ನೃಪರೆನುತ್ತ ಮೂದಲಿಸುವಂ ಚಿತ್ರಗುಪ್ತಂ ೫೫

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯಾ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣವಂ ಕೊರ್ತು ಪದನಂ ಮಾಡಿದಂ ೫೬

ಇದು ವೀರಶೈವ ಷಟ್ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತ ವ್ರತಾಚಾರ ಚಿತ್ಕ್ರಿಯಾ
ಪ್ರದಹಲಗೆಯಾಚಾರ್ಯನಖಿಳ ಮಾಹೇಶ್ವರ ಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತ ದೊಳಗಾ
ದುದು ಚಿತ್ರಗುಪ್ತವಚನಕೆ ಮೂಱು ಕಾಂಡದಿಂ ಮೇಲೆ ಹದಿನೆಂಟು ಸಂಧೀ ೫೭

ಅಂತು ಸಂಧಿ ೧೮ ಕ್ಕಂ ಪದನು ೯೫೭ ಕ್ಕಂ ಗ್ರಂಥ ೭೮ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೫

ಸುಖಾವಹಮೂರ್ತಿಯು ಋಷಿಗಳಿಗೆ ನರಕಯಾತನೆಯಂ ತಿಳಿಸುವಿಕೆ

ಘೋರ ರೌರವ ವಾದ್ಯವೀಚ್ಯಂತ ನರಕಂಗ
ಳೋರಣಂಗಳೊಳು ಬಾಧಿಸಿಕೊಂಡವರ್ಗಳಾ
ನಾರಕವನುಂಡು ತೀರಿಸಿದರುಜ್ಜುಗಿಸಿದರು ಜನನಕ್ಕೆಕರ್ಮಗುಣದಿಂ

ಎರಡುಷ್ಣವೆರಡು ಶ್ತೈತ್ಯಂಗಳಾ ಶೀತೋಷ್ಣ
ವೆರಡು ಮುಟ್ಟಿಲ್ಬಾರದತಿ ಸೂಕ್ಷ್ಮವೆನಿಸಿರ್ದ
ವೆರಡು ವಸ್ತುಗಳೆಂಟು ಕೂಡಿ ತನುವಾದ ಹಗಲಿರುಳುರಿಯು ಮೂಱು ಕಣ್ಣಾ
ನಿರುತಿಯನಲರ ಮಧ್ಯದಾ ಜಗುನೆ ಮೆಲ್ನಡೆಯು
ಬರಿಜಗಿ ವಿವೆಸರನಂಣನ ಮತಿಗೆ ಮೆಚ್ಚಿದುರು
ತರ ಶಾಂತಮಲ್ಲ ಜಯ ಕಲ್ಲ ವೋಹದ ಮಗಳ ನಲ್ಲ ನೀನಲ್ಲದಿಲ್ಲಾ ೧

ಆ ಕಾಷ್ಟಕೂಟಂಗೆ ಕೋಟಿಮಡಿ ಯೆನಿಸುವ ವಿ
ವೇಕಿ ಸಾನಂದದೇವರ ತೆಱದ ಲಿಂಗನಿ
ಷ್ಠಾಕಲಿತ ಶಿವನ ಸಮತಾಸತ್ಯ ನಿತ್ಯತ್ವಶಾಂತಿ ಸದ್ಭಾವ ಸುದಯಾ
ಶ್ರೀಕರಾಮಳಮೂರ್ತಿ ಸಿದ್ಧರಾಮೇಶ್ವರ
ಸ್ವೀಕಾರ ಹಸ್ತಕ ಮಲಜ ಪರಬ್ರಹ್ಮ ಚಿ
ತ್ಪ್ರಕಟಗುರುಸ್ವಾಮಿ ಶಾಂತನಂಜೇಶ ಮತ್ಪ್ರಾಣೇಶಮೂರ್ತಿ ಶರಣೂ ೨

ಇಂತೆಂಬ ಚಿತ್ರಗುಪ್ತರ ನುಡಿಯ ಕೇಳಿ ಭೂ
ಕಾಂತರುಗಳಾದಿಯಾದಿಳೆಯ ಪಾಪಿಗಳಲ್ಲಿ
ಚಿಂತಿಸುವರೀ ನರಕವುಂಟೆಂಬುದಱಿದೊಡಾ ದೋಷಮುಂಬಿಟ್ಟು ಪುಣ್ಯಾ
ಸಂತತಿಯ ಧರ್ಮವುಂ ಮಾಡದೇ ಅಕ್ಕಟ ಕೃ
ತಾಂತಬಾಧೆಗೆ ಸಿಕ್ಕಿದೆವು ಕೆಟ್ಟೆವೆನುತಿರ
ಲ್ಕಂತವೆಲ್ಲವನಾಲಿಸುತ್ತಲಾರ್ಭಡಿಸಿ ನುಡಿವಂ ಯಮಂ ಕ್ರೋಧದಿಂದಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘುಡಿ ಘುಡಿಸಿಯಾ ವೇಳೆ ಯಮನುಗ್ರ ವಚನದಿಂ
ನುಡಿದನೆಲೆ ಚಂಡ ಮಹಾಚಂಡರಿರ ನೀವು
ಹಿಡಿಕೊಳ್ಳಿ ಹೂಂಯೆಂಬ ಮಾತ್ರದಿಂದೆದ್ದವರನಾ ಭಟರು ಘರ್ಜಿಸುತಾ
ಎಡದ ಕಾಲಿಂದೊದೆದು ಧಿಂಮೆಂದು ಬಿದ್ದವದಿ
ರಡಿಗಳಂ ಕೈಯಿಂದೆ ಪಿಡಿದೆತ್ತಿ ತಿಟ್ರೆಂದು
ಗಡಬಡಿಸಿ ತಿರುಪಿ ಬೊಬ್ಬಿಡುತಲಾಕಾಶಕ್ಕೆ ಇಡುವರಾ ದೋಷದಿಂದಾ ೪

ಒಡನೆ ತಿಟ್ರನೆ ತಿಱುಗುತಾಕಾಶದಿಂ ಕೆಳಗೆ
ಕೆಡೆವವರ ಕಾಲೆರಡ ಪಿಡಿದು ಘೂರ್ಮಿಸಿ ಕಾದು
ಕಿಡಿಗೆದಱುತಿಪ್ಪ ಕಲ್ಲಿನ ಮೇಲೆಯಾಸ್ಫಾಲಮೆನಲು ಹೊಡೆದಪ್ಪಳಿಸಲು
ಒಡನೆ ಜಜ್ಜರಿಯಾಗಲಂತವರು ಹರಣಮಂ
ಬಿಡಲಿಲ್ಲವಂತಲ್ಲಿ ವಾಯು ಪೂರಿಸೆ ಮತ್ತೆ
ಪಡೆವರಾ ಜೀವಮಂ ಮೇಲಪ್ಪ ಭಂಗವನದೇನೆಂದು ಬಣ್ಣಿಸುವೆನೂ ೫

ಚೇತರಿಸಿಕೊಂಡವರುಗಳನಲ್ಲಿ ಪಿಡಿದೆತ್ತಿ
ಯಾ ತೆಱದೊಳಡಿಗಡಿಗೆ ಕೊಲುವಲ್ಲಿ ನುಡಿವನಾ
ಧೂರ್ತರ್ಗೆ ಸಕಲ ನರಕಂಗಳಂ ತತ್ಕೃತಾನ್ವಯದೊಳುಣಿಸೆಂದು ಪೇಳೀ
ಸೂತ ಸುತನಾಜ್ಞೆಯಿಂದಾ ಪಾತಕರ್ಗಳನ
ದೇ ತೆಱದೆ ಬಾಧಿಪರೆನಿಪ್ಪುದಂ ಬಳಿಕ ವಿ
ಖ್ಯಾತನೆನಿಸುವ ಸುಖಾವಹಮೂರ್ತಿ ನುಡಿದನಂದಾ ತಾಪಸವ್ರಾತಕೇ ೬

ಯಮನಾಜ್ಞೆಯಿಂದ ಪಾಪಿಗಳ ಬಾಧಿಪರಾವ
ನಮಲ ಮುನಿಗಳಿರ ಬಿತ್ತರಿಸುವೆನು ಕೇಳಿರೈ
ಕ್ರಮದೊಳಾ ಬ್ರಹ್ಮಾಂಡ ಭುವನಕೋಶವನು ಸುರುವಲ್ಲಿ ಕಾಲಾಗ್ನಿರುದ್ರಾ
ರಮಣನಂತಾ ಕೆಳಗಣಾಂಡದಗ್ರದೊಳುಪ
ಕ್ರಮಿಸಿ ಯುತ್ಪತ್ತಿ ಸಂಹಾರಮಂ ಮಾಡುತ್ತ
ಸುಮಹಿಷನೆಂದಿರ್ಪ್ಪನೆಂದು ಪೇಳಿದ ಬಗೆಗಳಂ ಬಲ್ಲಿರೈ ಬಳಿಕಾ ೭

ಕಾಲಾಗ್ನಿರುದ್ರನಾಳುವ ಭುವನವಿಹುದದಱ
ಮೇಲಿಹುದು ನರಕಮಂಡಲವಂತೆಯಾ ನರಕ
ದಾಲಯೋಪರಿಯಲ್ಲಿ ಕೂಷ್ಮಾಂಡಗಣವರನ ಲೋಕವೊಪ್ಪುತ್ತಿರ್ಪುದೂ
ಆ ಲೋಕದುಪರಿಯ ಮಹಾತಳಾದ್ಯಖಿಲ ಪಾ
ತಾಳ ವಿಪ್ಪವು ಕಣಾ ತತ್ಪ್ರಕಾರವನಱಿ ವಿ
ಶಾಲವಹ ನಿರಯಭೂಮಿಯನಲ್ಲಿ ಬಿತ್ತರಿಪೆನೆಂದನಾ ಗುರುರಾಯನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾತಾಳವೇಳಱಿಂ ಕೆಳಗೆ ಕೂಷ್ಮಾಂಡವಿ
ಖ್ಯಾತನ ಮಹಾಲೋಕದಡಿಯಲ್ಲಿ ನೆರೆ ಮಹಾ
ಘಾತ ನರಕಂಗಳಿಪ್ಪತ್ತೆಂಟುಕೋಟಿಯೊಂದೊಂದಱಡಿಯಲ್ಲಿಪ್ಪವೂ
ಆ ತೆಱನ ತರುವಾಯ ನೊರೆವೆನ್ನೈ ನರಕಂ ಮ
ಹಾ ತಮಸ್ಸಿನೊಳಿಪ್ಪವಂತವರ ನಾಮವನ
ಹೋ ತಪಸ್ವಿಗಳಿರಾ ಕೇಳಿಯೆಂದಾಗ ಬಿತ್ತರಿಸಿದಂ ಗುರುರಾಯನೂ ೯

ಮೊದಲೊಂದುಕೋಟಿ ಘೋರಾಖ್ಯನರಕಂ ಬಳಿ
ಕ್ಕದಱ ಕೆಳಗಂ ಸುಘೋರವದೆರಡು ಮೂಱೆನಿಸು
ವುದು ಬಳಿಕ್ಕತಿಘೋರವಾ ನಾಲ್ಕಱೊಳು ಮಹಾಘೋರವಂತೈದರಲ್ಲೀ
ಹೆದರಿಸುವ ಘೋರರೂಪಂ ಷಷ್ಠಿಯಲ್ಲಿಯು
ಗ್ಗದ ತರಳತಾರವೇಳಱೊಳಂ ಭಯಾವಹಂ
ತದದಸ್ಥವೆಂಟಱೊಳಗಂ ಕಾಳರಾತ್ರಿ ನವಮದೊಳಂ ಭಯೋತ್ಕಟವಲಾ ೧೦

ಹತ್ತರೊಳು ಚಂಡವಾ ಹನ್ನೊಂದಱಲ್ಲಿ ಕೇ
ಳ್ಮೃತ್ತಾ ಮಹಾಚಂಡ ವೈಯ್ಯ ಹನ್ನೆರಡಱೊಳು
ದಾತ್ತವರಂ ಚಂಡಕೋಲಾಹಲಂ ಹದಿಮೂಱಱೊಳ್ಪ್ರಚಂಡಂ ಬಳಿಕ್ಕಾ
ಅತ್ತ ಹದಿನಾಲ್ಕಱೊಳು ಪದ್ಮವೈ ಹದಿನೈದೆ
ನುತ್ತಿಪ್ಪ ತಾಣಕ್ಕೆ ಪದ್ಮವತಿ ಘೋಡಶದ
ತತ್ಪ್ರಕಾರ ಭೀಮಾಭೀಮವೈಯ್ಯ ಹದಿನೇಳಱೊಳ್ ಭೂಷಣವಲಾ ೧೧

ಹದಿನೆಂಟರಲ್ಲಿಯಾ ಕರಾಳವಾ ಹತ್ತೊಂಬ
ತುದಿತ ವಿಕರಾಳವಿಪ್ಪತ್ತಱೊಳು ವಜ್ರವಾ
ತದತಸ್ಥದಿಪ್ಪತ್ತವೊಂದಾ ತ್ರಿಕೋಣವಿಪ್ಪತ್ತೆರಡೂ ಪಂಚಕೋಣ
ತದಸ್ಥದಿಪ್ಪತ್ತಮೂಱೂ ಸುದೀರ್ಘಮ
ಭ್ಯುದಯಮಿರ್ಪತ್ತನಾಲ್ಕಱೊಳು ಪರಿವರ್ತುಳಂ
ಚದುರಕೀಳಿರ್ಪತ್ತ ಐದಱೊಳು ಸಪ್ತಭೌಮಾಖ್ಯವೆನಿಸುವ ನರಕವೈ ೧೨

ಇಪ್ಪತ್ತಆರಾಷ್ಟ ಭೌಮವೈ ದೀಪ್ತವೇ
ಇಪ್ಪತ್ತ ಏಳಲಾ ಮಾಯಾಖ್ಯನರಕವೇ
ಇಪ್ಪತ್ತಯೆಂಟಲಾ ನೃಪನರಕವೊಂದೊಂದಕ್ಕೈದ್ದೈದು ಗಣನೆಯಲ್ಲೀ
ಯಿಪ್ಪವಷ್ಟಾವಿಂಶತಿಯು ಕೋಟಿಗಳಿಗೆಯುಂ
ತಪ್ಪವಾನೂಱನಾಲ್ವತ್ತು ಕೋಟಿಗಳನೊರೆ
ದಿಪ್ಪೆವೈ ಕೇಳೆಂದನಾ ಕುಂಭಸಂಭವಂಗೊಲಿದು ತಾರಕಮರ್ದನಂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘೋರಾಖ್ಯವೇ ಮೊದಲ ರಾಜನರಕಂ ಬಳಿ
ಕ್ಕೋರಂತೆಯುದಕ್ಕೈದು ನಾಯಕನರಕವಿನ್ನು
ಕೌರವಂ ತನ್ಮಹಾಕೌರವತಮಶ್ಶೀತಶಿದವುಷ್ಣ ವೈದಿಂತೆಲ್ಲಕೀ
ನಾರಕವ್ವೈದ್ವೈದನೊಂದಾಗಿ ಪೇಳ್ವೆಂ ಸು
ಘೋರ ಸುತಪಸ್ತೀಕ್ಷ್ಣ ಪದ್ಮಸಂಜೀವಕದ
ಸೇರುವೆಯು ಸರವಮಹಾಭಕ್ಷಣವಿಲೋಮಮಂ ಸುಭೀಮಮಂ ಸಕಂಟಕವಲಾ ೧೪

ಪ್ರಕಟದಿಂ ತೀವ್ರವೇಗಿಯುಂ ಕರಾಳನು ಬಳಿಕ
ವಿಕರಾಳನುಂ ಪ್ರಕಂಪನ ಮಹಾಪದ್ಮಮುಂ
ಸಕುಟಿಲ ಸುಪದ್ಮವಾಕಾಲವರ್ತಂ ಗರ್ಜನಂ ಸೂಚಿಮುಖ ಸುನೇಮೀ
ಅಕಟ ಖಾದಕ ಸುಪ್ರಪೀಡ ಕುಂಭೀಪಾಕ
ಸಕಲದ ಸುಪಾಕವಾ ಕ್ರಕಚವತಿಧಾರುಣಾ
ಧಿಕದೊಳಂಗಾರರಾಶಿಯು ಭವನಮಂತಸೃಕ್ಪೂಯಯಾಹ್ರದಂಗಳಿನ್ನೂ ೧೫

ಅರರೆಯಾ ತೀಕ್ಷ್ಣಾಯಸಸ್ತುಂಡ ಶಕುನಿಯು
ತ್ಕರ ಮಹಾಸಂವರ್ತಕಕ್ರತು ಸುತಪ್ತಜತು
ವಗಲೇಪನಂ ಮಾರಿಮಾಂಸೋದ್ರವಸ್ತ್ರಪುಚ್ಛಾಶ್ವಸಂ ನಿರುಚ್ಛ್ವಾಸವೂ
ಇರದಾ ಸುದೀರ್ಘವಾ ಕೂಟಶಾಲ್ಮಲಿದುರಿ
ಷ್ಟರತಿಸು ಮಹಾನಾದವಾ ಪ್ರಭಾಥಂ ಮಹೋ
ತ್ಸರ ಸುಪ್ರಭಾವನಂ ವೃಕ್ಷಮೋಘಂ ವ್ರಕಂ ಶಲ್ಯ ಸಿಂಹಾಸ್ಯವಿನ್ನೂ ೧೬

ಮತ್ತೆಯಾ ವ್ಯಾಘ್ರೇಭಲಪನಶ್ವಶೂಕರಾ
ಜೋತ್ತಮದ ಮಹಿಷ ಮೇಷಂ ಹಯಾನನವವರ
ವೃತ್ತಿನೊಳ್ತಾವ ಕುಂಭೀರವಕ್ತ್ರಾಖ್ಯಸರ್ಪಂ ಕೂರ್ಮ ವಾಯುಸಾಸ್ಯೋ
ದಾತ್ತಗೃಧ್ರೋಲೂಕವಾಜಳೂಕಾಸ್ಯಮು
ದ್ಯೃತ್ತರದಶಾರ್ದೂಲ ಕಪಿ ಕರ್ಕಟಂ ಗಂಡ
ವೆತ್ತ ತತ್ಪೂತಿವಕ್ತ್ರಂ ರಕ್ತನೇತ್ರವಾ ಪೂತಿಮೃತ್ತಿಕೆಗಳೆಂದೂ ೧೭

ಬಳಿಕ ಕಣ ಧೂಮ್ರಧೂಮಸ್ತುಷಾಗ್ನಿ ಕ್ರಿಮಿಯ
ದಳವಟ್ಟಮೇಧ್ಯಯಪ್ರತಿಕಾರರುಧಿರಾನ್ನ
ದೊಳು ಭೋಜನಾದಿಲಾಲಾಭಕ್ಷಂ ತಭಕ್ಷಂ ಸರ್ವಭಕ್ಷ್ಯವಲ್ಲೀ
ಖಳ ಸುಧಾರಣ ಸಕಂಟಸುವಿಶಾಲಂ ವಿಕಟ
ಕಳೊಳು ಕಟಘಾತನಮುಮಂಬರೀಕ್ಷಂವಿಕಲ
ದೊಳಗೆ ವೈತರಣಿಯು ನದೀ ವೃತಾತಪ್ತಲೋಹದ ಶಯನಮೇಕಪಾದಂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನುಜಾಪ್ರತಪ್ತವಸಿತಾಳವನಘೋರವು
ಸ್ತ್ರಿನಿಕಾಯಭಂಗಪ್ರಪೀಡನಂ ತಿಲವತಸಿ
ಘನದಿಕ್ಷುಯಂತ್ರ ಕೂಟಾಶಪ್ರಮರ್ಧನ ಮಹಾಚುಲ್ಲಿಯಾ ಸುಚುಲ್ಲೀ
ಅನಿತಱೊಳು ತಪ್ತಲೋಹ ಮಯೀ ಮಹಾಶಿಲಾ
ಖ್ಯ ನಿಜ ಪರ್ವತವಹೋಕ್ಷುರಧಾರೆಯಲ್ಲಿ ಮ
ಲನ ಮೂತ್ರಾದಿ ವಿಷ್ಟಾಂಡ ಕೂಪಂ ಕ್ಷಾರಕೂಪಂ ಕಶಾತನುಕಣಾ ೧೯

ಮುಸಲಮುಮುಲೂಖಲಾಹ್ವಯಯ:ಂತ್ರವಂತಲ್ಲಿ
ಎಸೆವುದು ಶಿಲಾಶಕಲಲಾಂಗುಲಂತಾಲಪ
ತ್ರಸಮೇತದಸಿಗಗನಮುಂ ಮಹಾಮುಸಕಮಂಟಪ ಸುಸಂಮೋಹನಾಖ್ಯಾ
ಎಸೆವಸ್ಥಿಭಂಗವಾ ತಪ್ತಶೂಲಮಯಗುದ
ವಸಮು ಬಹುದುಃಖಂ ಮಹಾ ದುಃಖಿಕಲ್ಮಶದ
ವಿಸಮುದಸುಮಲ ಮಲಂ ಹಾಲೋಹಾಲೋರೂಪವಾಸುರೂಪತವೆನಾಗಾ ೨೦

ಏಕಪಾದಂ ತ್ರಿಪಾದಂ ಶೀವ್ರ ವಿಚರಂತಿ
ಯೇ ಕೇಳ್ವದಿಪ್ಪತ್ತಯೆಂಟುಗಣನೆಗಳಿಂದು
ಹಾಕೋಟಿಗಳ್ಗೆಯೊಂದೊಂದಕಯಿದಯಿದಲಾ ನೂಱನಾಲ್ವತ್ತುಕೋಟೀ
ಜೋಕೆಯೊಳು ರೌರವಾದಿಯ ವೀಚಿಯಂತದಿನ
ನೇಕ ನರಕಿಗಳಲ್ಲಿ ಬೇವುತಿಪ್ಪರು ಕಣಾ
ನೀ ಕೇಳು ಕುಂಭಜಯೆಂದು ಬಿತ್ತರಿಸಿದಂ ಶ್ರೀಕರದ ಶಿಖಿವಾಹನಂ ೨೧

ಕಾಲಾಗ್ನಿರುದ್ರಭವನೋಪರಿಯ ನರಕವಾ
ಸ್ಥೂಲ ಪುಟಮೂವತ್ತಮೂಱು ವೊಂಭತ್ತುಲ
ಕ್ಷಾಲಯದ ಗುಣಿತವಿಪ್ಪತ್ತವೊಂಭತ್ತುಕೋಟಿಯುಲಕ್ಷವೆಪ್ಪತ್ತಲಾ
ಲೀಲೆಯಿಂ ಮತ್ತೆ ಮೂವತ್ತೆರಡು ಲಕ್ಷದ ವಿ
ಶಾಲಮುಂ ಕೂಡೆ ಮೂವತ್ತು ಕೋಟಿಗಳದಱ
ಮೇಲೆರೆಡು ಲಕ್ಷಗಾವುದದಲ್ಲಿಪ್ಪತ್ತೆಂಟು ಕೋಟಿಗಳಧೋನರಕವೈ ೨೨

ಆಗಮೋಕ್ತಪ್ರಕಾರದನೊಳಂಡಜಾಂಡತಳ
ಭಾಗದುಃಪರಿಯೊಳು ಕಾಲಾಗ್ನಿರುದ್ರಾವನಿಯ
ಮೇಗಿಪ್ಪ ನರಕಂ ಮಹಾ ನರಕವಾ ರಾಜನರಕವಾರಾಜರಾಜೀ
ಶಾಗರಿಷ್ಮದ ನರಕಯಿಂತಲ್ಲಿ ನಾಲ್ಕು ತೆಱ
ವಾಗಿಪ್ಪವೊಂದೊಂದಕೆಂಟೆಂಟು ನರಕ ಮಂ
ತೇಗೆಯಿದು ಮೆಱೆವ ಭಯದಧಿಕ ಮೂವತ್ತೆರಡನೊರೆವೆನ್ನೈ ಕಂದ ಕೇಳೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೌರವಧ್ವಾಂತ ಶೀತೋಷ್ಣ ಸಂತಾಪಂ ಮ
ಹೋರುತರದಬ್ಜಂ ಮಹಾಂಬುಜಂಗಳು ಮಿವಳಿ
ಸೇರುವೆಯು ಕಾಲಸೂತ್ರಂಗಳೆಂಟಾ ಮೊದಲ ನರಕಕ್ಕೆ ಸೂಚೀಮುಖಾ
ಘೋರತರಕಾಲಖಡ್ಗಂ ಮಹಾಕ್ಷುರಲಸ
ದ್ಧಾರೆಯುಂತಂಬರೀಷೇಷ್ಟಕಂ ತಪ್ತಕಾಂ
ಗಾರಂ ಮಹಾದಾಹಕಂ ತಾಪವೆಂಟಾ ಮಹಾನರಕವೆಂದಱಿವುದೂ ೨೪

ಲಾಕ್ಷಾಪ್ರತೀಪ ಮಾಂಸಾದಂ ನಿರುಚ್ಛ್ವಾಸ
ವಕ್ಷಯುದ ಸೋಚ್ಛ್ವಾಸಯುಗಾದ್ರಿಶಾಲ್ಮಲೀ
ಭೂಕ್ಷುತ್ಪಿಪಾಶಾ ಕ್ರಿಮಿಗಳೆಂಟು ರಾಜಾಖ್ಯವೆಂಬ ನರಕಕ್ಕೆ ಬಳಿಕಾ
ಈಕ್ಷಿಸಲ್ಕಾಗಿ ಲೋಹಸ್ತಂಭ ವಿಣ್ಮೂತ್ರ
ಭಕ್ಷಣಾಂಧಃಕೀಟವೈ ತರಣಿನದಿ ಕುಂಭ
ನಿಕ್ಷಿಪ್ತಪಾಕ ಕೌರವವೆಂದು ರಾಜರಾಜೇಶ ನರಕಕ್ಕಾದವೂ ೨೫

ಈ ನಾಲ್ಕು ಮುಖ್ಯ ನರಕಕ್ಕೆ ಮೂವತ್ತೆರಡು
ನಾನಾ ವಿಚಿತ್ರಬಂಧನ ನರಕವಂತಧಿಕ
ಹಾನಿಯಿಪ್ಪತ್ತೆಂಟು ನೃಪನರಕಕ್ಕೈದೈದು ನೂಱನಾಲ್ವತ್ತುಕೋಟೀ
ಭಾನುಸುತನಾಜ್ಞೆಯಿಂದಂ ದೂತರಂತಾಮು
ಹಾ ನರಕದಲ್ಲಿ ತತ್ಸ್ವಮದಿಂದ ಬಾಧಿಪುದ
ನೇನ ಬಣ್ಣಿಪೆನಾಲಿಸೈಕುಂಭಜಾಯೆಂದು ನಿರವಿಸಿದನಾ ಷಣ್ಮುಖಂ ೨೬

ಆಗಳಾವುಲ ಸಂಕ್ಷಯಂಗಳಾ ವಿಜ್ಞಾನ
ಯೋಗ ಸಂನ್ಯಾಸವಂತಲ್ಲವೇಯುಗ್ಗಳದ
ಭೋಗಂಗಳಿಂದಳಿಯುವೆಂದು ಸುರುತಿಪ್ಪಾಗಮಪ್ರಾಮಾಣ್ಯದಿಂ
ನಾಗಧರನಧಿಕಾರಿಯಮುನವರ ಪಾಪಮಂ
ರಾಗದಿಂದುಂಡು ಕಳೆಯಲು ಬೇಕೆನುತ್ತಂ ಮ
ಹಾಗಣಿತ ನರಕದೊಳು ಪಾಪಿಗಳ ಪಾಪಮಂ ಕಳೆಯಲೆಂದೇ ನುಡಿದನೂ ೨೭

ದೂತರಂ ಕರೆದಂತಕಂ ನುಡಿದನೀ ಮಹಾ
ಪಾತಕಂಗಳ ಮಾಡಿದವರನಾ ಕೌರವಂ
ವೈತರಣಿಯುಂತವಿದ್ಯಾದ್ಯಖಿಳದಲ್ಲಿ ಶೋಷಿಪುದೆಂದು ನಿರವಿಸಲ್ಕೇ
ಧಾತುಗಳ ಮಲತತಿಯ ಕಳೆವಂತೆಯಾ ಮಹಾ
ಪಾತಾಳದಿಂ ಕೆಳಗಣಧಿಕ ನರಕದೊಳು ಮ
ತ್ತಾತಗಳ ಬಾಧಿಸುವ ಬಗೆಗಳ ವಿಚಿತ್ರಮಂ ಕೇಳೆಂದು ನಿರವಿಸಿದನೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗಳಾ ಪಾಪಿಗಳ ತಂದು ಸಂಕಲೆಗಳಂ
ರಾಗಿಸಲು ಕಾಸಿಕೊಂಡೆಯ್ತುರುತ್ತಂತವರ
ಕೈಗಳೊಳಗಿಕ್ಕಿಸಾವಿರಯೋಜನೋನ್ನತದ ವೃಕ್ಷಂಗಳಗ್ರದಲ್ಲೀ
ಕೂಗುತಿರಲೇಱಿಶತಭಾರಲೋಹದ ಗುಂಡ
ನೇಗೆಯ್ದು ಕಾಲಲ್ಲಿ ಕಟ್ಟಿ ಯಮಭಟರಲ್ಲಿ
ತೂಗುವರು ದಿವ್ಯಸಾಹಸ್ರವರುಷಂಬರು ಸಾಯದೇ ನೋವುತಿಹರೂ ೨೯

ಕಾಲಲ್ಲಿ ಬಾರ್ಯೈಸಿ ಕಟ್ಟಿರ್ದ ಕಡುಗಾಯಿ
ದಾ ಲೋಹದಾ ಗುಂಡುಗಳು ತಲೆಯುಸೆದೆ ಬೆನ್ನ
ಜೋಲುತ್ತ ಹೊಡೆವುತಿರೆ ಕಿಱುಗತ್ತಿಗಳ ಸರಪಣಿಯು ಕಶಾದಂಡಂಗಳಾ
ಜ್ವಾಲೆಯಿಂ ಕಾಸಿ ಹೊಡೆಯಲು ಕರುಳು ಖಂಡಂಗ
ಳಾಲೇಕವಿಲ್ಲದಿಲ್ಲಾ ಕಡೆಗೆ ಚಿಗಿವುತಿರೆ
ಕಾಲಭಟರಿಂತು ಕೊಲುವರು ಕರ್ಮಿಗಳ ಬಾಧೆಗಳನಕಟ ಕೇಳಬಹುದೇ ೩೦

ಲೋಹಮಯವಹ ಕಶಾದಂಡದಗ್ಗದ ಘಾಯ
ವಾಹಜರ್ಝ್ಝುರಿತವಾಗಿರಲೆಱೆದು ಬಾಯಲ್ಲಿ
ಬೇಹುಪ್ಪುನೀರ ಕಾಸುತ್ತೆಱೆದು ತಾಮ್ರ ಸೀಸಾರ ಕೂಟಾದಿರಸವಾ
ದಾಹಮಪ್ಪಂತೆ ಲೇಪಿಸೆ ಬೇಹುತಿಹರೈಸೆ
ಕಾಹುರದ ಮರಣವಿಲ್ಲೈಕೋಟಿವತ್ಸರಂ
ಸಾಹಸಿಗದೂತರಕಟಾ ಬಾಧಿಪರದೇಕೆ ಮಾಡುವರೊ ಪಾಪಂಗಳಾ ೩೧

ನಡುನೆತ್ತಿಯಲ್ಲಿ ಹೆಗ್ಗರಗಸವನಿಟ್ಟಿರಿದೆ
ರಡು ಭಾಗಮಾಡಿ ಕೊಪ್ಪರಿಗೆಯೆಣ್ಣೆಯೊಳು
ಪಿಡಿತಂದು ಹಾಕಿಬೇಯಿಸಲು ಬವಣೆಯು ಕಾಯುಮಾಳ್ಕೆಯಿಂ ಕೋಟಿವರುಷಾ
ಒಡನೆ ಬೇವುತ್ತಿಪ್ಪರೈ ಸಲೆ ಸಾಯರೀ
ಪೊಡವಿಯೊಳಗಿದನಱಿದು ಕಿಂಚಿತ್ತುಸುಖಕಾಗಿ
ಯೊಡರಿಚುವರೇಕೆ ಪಾಪಂಗಳನಿದಂ ಕೇಳಿ ಬಿಡಬೇಡವೇ ಮನುಜರೂ ೩೨

ಕೊಳೆತ ಮಲವಧಿಕ ದುರ್ಗಂಧವಂತದಱಲ್ಲಿ
ಹುಳುಗಳೊಟ್ಟಿಲು ನೆತ್ತರಾ ಕೀವು ಮಾಂಸವ
ಗ್ಗಳವಾಗಿ ತುಂಬಿರ್ದಬಾವಿಯೊಳು ಪಾಪಿಗಳ ಮೆಯ್ಗಳಂ ಕುಸುರಿದರಿದೂ
ಯಿಳಿಯ ಹಾಕಿದೊಡದ್ದುತೆದ್ದು ಮುಳುಗುತ್ತಕಿಸು
ಕುಳದ ರಸಮಂ ಕುಡಿವುತುಬ್ಬಸದೆ ಸಂಕಟಂ
ಗೊಳುತೇಳೆ ಲೋಹದ ತುಂಡದ ಕಾಗೆಗಳು ಕದ್ರುಕಿ ತಿನುತ
ಬಾಧಿಸುತಿಪ್ಪವೂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಿಸುಕುಳದ ಬಾವಿಯಿಂ ತಡಿಯು ಸಾರ್ದವರ್ಗಳಂ
ಮುಸುರಿ ನಾಯ್ಗಳು ಕರಡಿ ಹುಲಿಗಳುರೆಕಚ್ಚಿ ಮಾ
ಮಸಕದಿಂ ತಿನುತಿಪ್ಪವಾ ಪಾಪಿಗಳ ಮತ್ತೆ ತಂದು ಕೆಂಡದ ರಾಸಿಯಾ
ಅಸದಳದ ಮೇಲೆ ಹಾಕುತ್ತ ಕಟ್ಟಿಗೆಯು ಹೊ
ತ್ತಿಸಿ ಮೀನು ಬೇವಂತೆ ಬೇವರಾ ಸಾಸಿರ ಬ
ರಿಸವಕಟ ಸಾಯಲಿಲ್ಲದ ನೋವನುಂಬರಿದನಱಿಯಬೇಡವೆ ಮನುಜರೂ ೩೪

ಕಡುಗಾದ ಶೂಲವೆದೆಯಲ್ಲಿ ಪೋಣಿಸಲು ಬೆ
ನ್ನಡೆಯಲ್ಲಿ ಮೊನೆದೋಱಿ ದಿವ್ಯಸಾಸಿರವರುಷ
ವಡರಿ ನೋವರು ಸಂದು ಸಂದ ಕಡಿಕಡಿದು ಹೆಗ್ಗಾಣದೊಳು ಪಾತಕರನು
ಒಡನೆ ಹಾಕುತ ನಿಟಿಲು ನಿಟಿಲೆನಲ್ಕರವುತಿ
ಪ್ಪೆಡೆಯಲ್ಲಿ ಸಾವುಬಾರದು ಕೋಟಿವತ್ಸರಂ
ಮೃಡನ ಭಜನೆಯನಱಿಯದಜ್ಞಾನಿಗಳು ಭಂಗಬಡುವರೇ ವಣ್ಣಿಸುವೆನೂ ೩೫

ಗುರುನಿಂದೆ ಶಿವಭಕ್ತನಿಂದೆಯಂ ಕೇಳ್ದವಂ
ದಿರನೆರಡು ಕರ್ಣಾಂತರಾಳದೊಳು ಕರ್ಬೊನ್ನ
ಸನಳ ಕೆಂಗಲಿಸೆ ಕಾಸುತ್ತಲಿಮ್ಮೊನೆದೋಱಿತಿವಿದಲ್ಲಿ ದೋರೆಗಳೆದಾ
ವಿರಳದೊಳು ತವರ ಹಿತ್ತಾಳೆ ಸೀಸಂ ಕಾಸಿ
ದರಗುಗಳ ರಸವ ನೆಱಿವರು ತನ್ನಿಮಿತ್ತದಿಂ
ದರರೆ ನಿಂದಕರ ನುಡಿಯಂ ಕೇಳಬಾರದದಱಿಂದವೆಂದಱಿ ಕುಮಾರಾ ೩೬

ಪರಸತಿಯುರಂ ಕಾಮದೃಷ್ಟಿಯಿಂ ನೋಡೆ ಸ
ದ್ಗುರುವಿನೊಳು ಹುಬ್ಬುಗಂಟಿಕ್ಕಿ ಕೋಪಿಸಿದವಂ
ದಿರ ಕಂಗಳಲ್ಲಿ ಕೆಂಗವಿಸಿ ಕಾಸಿದ ಸೂಜಿಗಳ ತುಂಬಿ ಹೆಟ್ಟಿಯಲ್ಲೀ
ಕರಗೆ ಕಾಸಿದ ಪಂಚಲೋಹರಸಮಂ ಕಾದು
ಪಿರಿದುಕ್ಕುತಿಪ್ಪ ತೈಲಂಗಳಂ ಪೊಯ್ದುಕೊಲು
ವರು ಕಣಾ ತತ್ಪ್ರಕಾರವನುಳಿದು ಲಿಂಗಮಂ ನೋಡುವುದು ಭಕ್ತಿಯಿಂದೇ ೩೭

ಒಂದು ನೆವದಿಂದೆ ಪರವನಿತೆಯುರ ಮಯ್ಯನಾ
ನಂದಕಾಯದೊಳು ಸೋಂಕಿದ ದೇಹದಲ್ಲಿಯಾ
ಛಂದದಿಂ ಕಾದ ಸೂಜಿಯು ಬಲಿದು ಕಾದ ರಸವೆಱಿವರನ್ಯಾಂಗನೆಯನೂ
ಬಂದಪ್ಪಿದರ ಲೋಹದೆಲವವದು ಕಾಯ್ದು ಮು
ಳ್ಳಿಂದಿರ್ಪುದಂ ತಬ್ಬಿಸುತ್ತ ಕರ್ಬೊನ್ನದಡಿ
ಯಿಂದ ಬೊಬ್ಬಿಟ್ಟು ಬಡಿವರು ಬೆನ್ನ ಭಟರು ಬೇವುತ ನೋವುತಿಹರಧಮರೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾರದಾರಿಕ ಪುರುಷರಿಗೆ ವನಿತೆಯಂತೆಯಾ
ನಾರಿಗಾಕೆಯ ಮಿಂಡನಂದದಿಂ ಲೋಹದಿಂ
ದೋರಂತೆ ಕೆಂಗಲಿಸಿ ಮಾಡಿ ಕಾಸುತ್ತ ತಬ್ಬಿಸುವರಾಹಾಯೆಂದೊಡೇ
ಧಾರಿಣಿಯೊಳಜ್ಞಾನಿಗಳಿರ ನೀವಂದೀ ಪ್ರ
ಕಾರವೆಂದಱಿದು ಪಾದರವನುಳಿದಿರ್ದರೇ
ನಾರಕಿಗಳಿರ ಯೆನುತ್ತಿರ್ಬರಂ ಕಾಯ್ದುಕಬ್ಬೊನ್ನದಡಿಯಿಂ ಹೊಡೆವರೂ ೩೯

ಲೋಹಕುಂಭದೊಳೆಣ್ಣೆಯಂ ಪೊಯ್ದು ಪಾಪಿಗಳ
ನೋಹೊ ತುಂಬುತ್ತ ಮುಚ್ಚುಳವನಿಟ್ಟೆಳೆಗಿಚ್ಚ
ನಾಹದಂತಪ್ಪದಂದದೆ ಬೆಳಗಿ ಬೇಯಿಸಲು ನೂಱು ಸಾವಿರ ವತ್ಸರಂ
ಬೇಹಣಲ್ಲದೆ ಸಾಯಲಿಲ್ಲವಿಂತಿದನಱಿದು
ಕಾಹುರದ ದುರ್ಮಾರ್ಗವೃತ್ತಿಗಳ ಬಿಟ್ಟರ
ಲ್ಲೇಹುದೈ ಕಂದ ಕೇಳೆಂದು ಬೋಧಿಸಿದನಾನಂದದಿಂ ಗುರುರಾಯನೂ ೪೦

ಕಡಿಖಂಡವಂ ಮಾಡಿ ಕಲ್ಲೊರಲೊಳಿಕ್ಕುತ್ತ
ಪಿಡಿದು ಕಾದಿರ್ದಕಬ್ಬೊನ್ನ ಪೇರೊನಕೆಯಿಂ
ದಿಡಿವಲ್ಲಿ ಸಾಯಲಿಲ್ಲದ ನೋವನುಣುತಿಹರನಂತಕಾಲಂ ಬಳಿಕ್ಕಾ
ಕಡುಗತ್ತಲೆಯ ಕೂಪದೊಳಗೆ ಹಾಯ್ಕಲು ತುಂಬಿ
ಕಡಜಂಗಳೆಱಗಿ ತಿನುತಿರ್ಪವಂತಾ ಗಾಯ
ದೆಡ ಕೀತ ಹುಣ್ಣಲ್ಲಿ ಹುಳು ಮುಸುರಿ ತಿನಲು ಮೊರೆಯಿಡುವರಾ ಪಾಪಿ
ನರರೂ ೪೧

ಪೇರುರಿಯ ಮಧ್ಯದೊಳು ಹೊಗಿಸೆ ಮೊರೆಯಿಡುತಲಾ
ನಾರಕಿಗಳಿತ್ತತ್ತ ಲೋಡುತಿರ್ದೊಡೆ ಯಮನ
ವೀರಭಟರಾಲ್ದು ಕಬ್ಬೊನ್ನದಡಿಯಿಂದೆಂಟು ದಸೆಗಳಿಂ ಬಡಿವುತಿಹರೂ
ಆರೈಯ್ಯಲಿನ್ನು ಶಿವಭಕ್ತರೊಳಗತ್ಯಹಂ
ಕಾರದೊಳು ಬೆರೆತುಕೊಂಡಿರ್ದಾತನಂ ಮಹಾ
ಘೋರವಧೆಯೆಂತೆನಲು ಬಿತ್ತರಿಸುವೆಂ ಕೇಳೆನುತ್ತ ನುಡಿದಂ ಷಣ್ಮುಖಂ ೪೨

ಕೆಡಹಿ ಮುಖವಡಿಯಾಗೆ ಕಾಲೆರಡ ಕಟ್ಟಿ ಬೆ
ನ್ನಡೆಯಲ್ಲಿ ಮೆಟ್ಟಿ ಮುಂದಲೆವಿಡಿದು ಹಿಂದಕ್ಕೆ
ಜಡಿದೆತ್ತಿ ತಳದ ಕಾಲಂ ಕೊರಲನಮರಿಚುತ್ತನ್ಯೋನ್ಯ ರಜ್ಜುವಿಂದಾ
ದೃಢದಿಂದ ಪಿಂಡಬಂಧಾಖ್ಯವೆನೆ ಕಟ್ಟಿಯಾ
ಕಡಜಂಗಳಂ ತುಂಬಿಗಳ ಬಿಟ್ಟು ಬಲ್ಪಿನಿಂ
ಕಡಿಯಿಸಲು ಘೋಳಿಟ್ಟೊಡಾ ಘಾಯದೊಳು ಕಾದ
ಪಂಚಲೋಹವನೆಱೆವರೂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಸುಕದಂದದೊಳಿಂತು ಮೂಡೆಗಟ್ಟಿಂದ ಬಂ
ಧಿಸಿಯವನ ಮೇಲೆ ಸಗಣಿಯು ಮೆತ್ತಿ ಕೆಮ್ಮಣ್ಣ
ಕೆಸರ ಬಳಿದುನ್ನತದ ಬೆರಣೆಗಳಸೊಡ್ಡಿ ನಡುವಿಟ್ಟು ಮೇಲಿಕ್ಕಿ ಮುಸುಕೀ
ಹೊಸ ಕಿಚ್ಚನಿಡೆ ಬೇವರಾ ಕೋಟಿವರುಷವಂ
ತೆಸೆವರಲ್ಲದೆ ಸಾಯರೆಂಬಲ್ಲಿ ಗರ್ವಮಂ
ರಸೆಯಲ್ಲಿ ಬಿಟ್ಟು ಬದುಕುವದು ಬುದ್ಧಿಯು ಬಲ್ಲವರ್ಗಳಿದು ಪರಮಾರ್ಥವೂ ೪೪

ಮುರುಡಕರೆಯು ಕಲ್ಲಲ್ಲಿ ಉಪ್ಪುನೀರಂ ಬಿಟ್ಟು
ನರಕಿಗಳ ಕೆಡಪಿ ಪಿಡಿವುತ್ತಲಾ ಚಂದನದ
ಕೊರಡ ತೇವಂತೆ ತೇಯಲ್ಕಸ್ಥಿ ಕಾಣಬರೆ ಕಾದಿರ್ದ ಪಂಚಲೋಹಾ
ದುರು ಕಟಾಹದೊಳು ಹಾಕುತ್ತ ಭಂಗಿಸುವರು
ರ್ವರೆಯಲ್ಲಿಯನ್ಯಾಯವಿತ್ತದಿಂ ಹೆಚ್ಚಿರ್ದ
ಕರಿರಗಳನೆನಲಾಗಿ ಪಾಪಭೀತಿಯೊಳು ನಡೆವಾತಂಗೆ ಸರಿಯದಾರೂ ೪೫

ಕಟ್ಟಿ ತಲೆಕೆಳಗಾಗಿ ತಳದಲ್ಲಿ ಪೆರ್ಗಿಚ್ಚ
ನೊಟ್ಟಿದೊಡೆ ಬೇವುತಿಪ್ಪರು ಸಾಯರಂಗದೊಳು
ಕಟ್ಟಧಿಕ ತಪ್ತ ಘನವಜ್ರಲೇಪವನು ಲೇಪಿಸುವರ್ಕೈ ನಿಜ ಗೃಹದೊಳೂ
ಒಟ್ಟಿದ ಧನವಿರ್ದು ದಾನವಿಲ್ಲದರ ಕಡಿ
ದಿಟ್ಟು ಚಿಮ್ಮುಟವೊನೆಯೊಳವರ ಖಂಡವನುಗಿದು
ಕೊಟ್ಟು ತಿನಿಸುವರೆನಲು ದಾನವಂ ಮಾಡಿ ಬಾಳ್ವುದು ಬುದ್ಧಿಯುಳ್ಳವರ್ಗಳೂ
೪೬

ಶಿವಗರ್ಪಿಸದ ಪುಷ್ಪವಂ ವಾಸಿಸುತ ಮುಟ್ಟಿ
ದವರ ಮೂಗಿನೊಳು ತಲೆಯಲ್ಲಿ ಲೋಹದ ದಸಿಗ
ಳವು ಮೂಟು ಮೊನೆಯಾಗಿ ಕೆಂಗಲಿಸಿ ಕಾದಿರ್ದವಂ ಬಲಿದು ಘಾಯದಲ್ಲೀ
ನವ ತಾಮ್ರ ಮುಖ್ಯರಸವಂ ಕಾಸಿ ಹೊಯಿವರೆನೆ
ಭುವಿಯಲ್ಲಿ ನಿಷ್ಕಾರಣಂ ಪಾಪತತಿಯು ಮಾ
ಡುವರೇನು ಕಾರಣಂ ಕೇಳೆನುತ್ತಿರ್ದ್ದನಾ ಷಣ್ಮುಖಂ ಕುಂಬಜಂಗೇ ೪೭

ಜಂಗಮಕೆ ಗುರುವಿಂಗೆ ಶಿವಗಿರ್ದಬಹುಪದಾ
ರ್ಥಂಗಳಂ ಸವಿದವರ ನಾಲಗೆಗಳಲ್ಲಿ ತ
ಪ್ತಂಗಳಾರ್ಗಿದ ಲೋಹದ ದಸಿಯ ಬಲಿದು ಕಾದಿರ್ದತೈಲವನೆಱೆವರೂ
ಲಿಂಗಭಕ್ತರ ನಿಂದಿಸಿದವರಂ ನೆಱೆಕೊಂಡೆ
ಯಂಗಳಂ ಹೇಳಿದರ ನೆದೆಯು ಮೆಟ್ಟುತ ಕಾದು
ಕೆಂಗಲಿಸುವಿಕ್ಕುಳದೊಳವರ ನಾಲಿಗೆಗಳಂ ಕೀಳುವರು ಯಮದೂತರೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಗೆಯ್ದು ಮೂಢರಿಗೆಯನ್ಯಾಯದಿಂದ ಮಿ
ಥ್ಯಾಗಮಂಗಳನೊರೆದವರ ನಾಲಗೆಗೆ ಕೋದು
ನೇಗಿಲಗ್ರದಗುಳುವನುಳುವರಾ ಗುರುತಾಯಿತಂದೆಗಳ ಝಂಕಿಸಿದನಾ
ಬೇಗದಿಂ ಮುಖದಲ್ಲಿ ಜಿಹ್ವೆಯೊಳು ವಜ್ರಮಯ
ವಾಗಿರ್ದ ಜಿಗುಳೆಗಳ ಬಿಟ್ಟು ಲೋಹದ ರಸವ
ನಾಘಾಯದಲ್ಲಿ ಕೆಂಗಲಿಸುತಿರಲೆಱೆವರಾ ದಂಡಪಾಣಿಯ ದೂತರೂ ೪೯

ಅನ್ಯಧನಕಾಸೆಮಾಡುತ ಕೈಯ್ಯನೀಡಿರ್ದ
ಮಾನ್ಯನ ಕರಂಗಳಂ ಖಂಡಿಪರು ಕಾಲಿಂ ಭ
ವಾನ್ಯಧೀಶನ ಗೋವನೀಶಭಕ್ತರನಾ ಶಿವಾಗಮದ ಪುಸ್ತಕವನೂ
ಹೂನ್ಯವಱಿಯದೆ ಮುಟ್ಟಿದನ ಕಾಲಕಡಿದು ಯಮ
ಸೈನ್ಯದ ಭಟರು ತಪ್ತ ಶಂಖುಗಳ ಬಲಿದು ಸೌ
ಜನ್ಯರಹಿತರ ಘಾಯದೊಳು ತಪ್ತಲೋಹರಸವೆರೆವರ್ಬೈಬಲ್ಪಿನಿಂದಾ ೫೦

ಪಾಣಿಪಾದೋದ್ಭವದ ದೋಷಿಗಳನಾ ಮಹಾ
ಸ್ಥಾಣುವಿನ ಗೇಹವಾರಾಮವಾಟಿಗಳುಮಾ
ತಾಣದ ಮಠಾಂಗಣಕುಪದ್ರವಂ ವ್ಯಾಯಾಮಮುದ್ವರ್ತನಾಭ್ಯಂಗನಾ
ಏಣಾಕ್ಷಿಯರ ಕೂಟವಾ ಸ್ನಾನಪಾನವ
ಕ್ಷೀಣ ಶೌಚಾಚಮಾನ ದ್ಯೂತವಂ ಮಾಡೆ
ತೂಣನ ಭಟರು ಕಡಿವುತಾಲೆಯಿಂದಾಡಿದಡೆ ಮೃತವಿಲ್ಲದೇ ನೋವರ್ಪ ೫೧

ಆವರು ಚಂದ್ರಾರ್ಕರುಳ್ಳನ್ನೆಗಂ ನಿರಯದೊಳು
ನವೆದು ಬೇವರು ಶಿವಾಯತನ ಪರಿಯಂತದೊಳು
ಶಿವನ ತೋಟದೊಳು ಮೂತ್ರಂಗಳಂ ಮಲವಂ ವಿಸರ್ಜಿಸಿದವನ ಶಿಶ್ನಿಯಾ
ತವೆ ಬೃಹತ್ತಂ ತಳದೊಳಡೆಗಲ್ಲನಿಕ್ಕುತ್ತ
ತಿವಿದು ಹೊಡೆವರು ಹಿರಿಯ ಕಬ್ಬೊನ್ನ ದಂಡದೊಳು
ಲವಚೂರ್ಣಮಪ್ಪಂತೆಯಂತಲ್ಲಿ ಕಾದ ಸೂಜಿಗಳ ಬಲಿಬಲಿದು ಕಾಯ್ದಾ ೫೨

ಪಂಚಲೋಹದ ರಸವನಱೆವರು ಮಲವಬಿಟ್ಟ
ನಂ ಬೇಗದಿಂದವನ ಗುದದೊಳಗೆ ಕಾಯಿದುಕಡು
ಕೆಂಚಾದ ಹಿರಿಯ ಸೂನಂಗಿಗಳ ಹಾರೆಯಂ ನೆತ್ತಿತನಕಂ ಹಾಯಿಸೀ
ಕಂಚುಮೊದಲಾದವರ ಕಾದ ರಸಮಂ ಹೊಯ್ದು
ಮುಂಚೆರಡು ಕಡೆಯಲ್ಲಿ ವಜ್ರಬಂಧವನಿಡಲು
ಸಂಚರಿಸಿ ಮೊರೆಯಿಡುವರಾ ಕೋಟಿಬರಿಸ ಬಿಸಿಯಾರದಂತಸು ಪಾರದೂ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧನವಿದ್ದು ಕಾಲವಟಿಂದೆಯ್ತಂದ ಸತ್ಪಾತ್ರ
ಜನಕೆ ಕೊಡದಾತಗಂನ್ನವನಿಕ್ಕದ ಹಿರಿಯು
ತನುವಿನೊಳಗಣ ಮಾಂಸಖಂಡಮಂ ಕೊಯಿಕೊಯ್ದುದ್ರಕ್ತವುಂ ಹಿಳಿದುಹಿಳಿದೂ
ತಿನಿಸಿ ಕುಡಿಸುತ್ತೆರಡು ಕಾಲನಗಲಿಸಿ ಕಟ್ಟಿ
ಯನವರತಮೆಯ್ದೆ ತಲೆಕೆಣಕಾಗಿ ಕೋಟ್ಯಬ್ದ
ದನಿತು ಪರಿಯಂತರಂ ಮೊರೆಯಿಡುವರೆಂಬುದಂ ತಿಳಿಯದೆ ಮೂಢಜನರೂ ೫೪

ಕತ್ತಲೆಗಳಿಂದ ದಂಶಾದಿಬಾಧೆಗಳಿಂದ
ಒತ್ತಿ ಕಾಸುವ ಕಡಿವ ಸೀಳುವುತ್ಪಾತದಿಂ
ಮತ್ತೆ ಕಿಸುಕುಳದಲ್ಲಿ ತೇಂಕಾಡುವದಟಿಂದ ಕ್ಷುತ್ಪಿಪಾಸಂಗಳಿಂದಾ
ಸತ್ತಪ್ಪೆನೆನೆ ಸಾವು ಬಾರದಿಪ್ಪುದರಿಂದು
ದಾತ್ತ ದುಃಖದೊಳಿಪ್ಪ ಪಾಪಿಗಳ ಕೂಡಿ ನುಡಿ
ವುತ್ತಿಪ್ಪರಾ ಯಮನ ದೂತರೆಲೆ ದುಷ್ಕರ್ಮಿಗಳಿರ ಕೇಳಿರೆಯೆನುತ್ತಾ ೫೫

ಪುತ್ರಮಿತ್ರಕಳತ್ರರಕ್ಷಣನಿಮಿತ್ತದಿಂ
ಯತ್ರಕುತ್ರಾಪಿ ಮಾಡಿದರಲಾ ಪಾಪವುಂ
ಚಿತ್ರವಿಧಿಯಿಂದ ಒಡಿಯಿಸಿಕೊಂಬುದಕ್ಕೆ ನೀವೊಬ್ಬೊಬ್ಬರೇ ಬಂದಿರ್‍ರೈ
ಶತ್ರುಗಳವಂದಿರ್‍ರೈಸಲೆಯೊರ್ಬರಂ ತೋಱಿ
ನೇತ್ರತ್ರಯನ ಭಜನೆಯೊಂದೆ ರಕ್ಷಿಪುದಲಾ
ಧಾತ್ರಿಗೆಂತಕ್ಕೆ ನೀವೆಯಿದೆ ಧರ್ಮವನೆಯಾರ್ಜಿಸಿಯೆಂಬರಾ ದೂತರೂ ೫೬

ನೀವು ತಂದುದನುಂಡು ಸುಖಿಸಿಕೊಂಡಿರ್ದವರ
ದಾವೆಡೆಯೊಳಿರ್ದಪರು ಮೂಢಪಾತಕರಿರಾ
ಆವ ತೆಱದಿಂದ ಮಾಡಿದ ಪಾಪವುಂಡಲ್ಲದೇ ಹರಿಯದಿದು ನಿಶ್ಚಯಂ
ಆವಗಂ ಹಗಲಿರುಳು ವಿಶ್ರಮತೆಯಿಲ್ಲದಕ
ಟಾ ವಿಶೇಷದ ಬಾಧೆಗೊಳುತಿರ್ದಪಿರಿಯೆಂಬ
ಜೀವಿತೇಶ್ವರಭೃತ್ಯರಂ ಮರಳಿ ಪಾಪಕರ್ಮಿಗಳು ಬೆಸಗೊಳುತಿರ್ಪರೂ ೫೭

ಎಂತಕ್ಕೆ ಮರ್ತ್ಯದೊಳು ದೇಹವುಂ ತೊಟ್ಟರಾ
ವಿಂತಪ್ಪ ಬಾಧೆಯಂ ಕಂಡುಂಡು ದಣಿದವರು
ಕಾಂತೆ ಸುತರಕ್ಷಣಾರ್ಥದೊಳಿನ್ನು ದೋಷಂಗಳಂ ಮಾಡೆವೀಶಭಕ್ತಾ
ತಿಂತಿಣಿಯ ಸೇವೆಯಿಂದಿಹೆವದಂತಿರಲಿ ನರ
ಕಾಂತರದೊಳಾವಾವ ಪಾಪಿಗಳಿಗೆನಿತುಕಾ
ಲಂ ತದ್ವಿಚಾರಮಂ ಪೇಳಿರೇ ನೀವೆನಲು ದೂತರವರೊಳು ನುಡಿವರೂ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವ ಗುರುವಿನ ಧನವನಪಹರಿಸಿದವರೀ ಮ
ಹೀ ವಳಯವುಳ್ಳನ್ನಬರವಧಿಕ ನರಕದೊಳು
ಬೇವರು ಮಹಾಪಾತಕಂಗಳೆಂಬವ ಕೇಳ್ದು ಬಲ್ಲಿರೇಯುವರೆಸಗಿದಾ
ಜೀವರಾ ಚಂದ್ರಾರ್ಕರುಳ್ಳನ್ನೆಗಂ ಭಾಪು
ಸಾವಿಲ್ಲದುಂಬರ್ಬೈ ನರಕಷುಂ ಹದಿನಾಲ್ಕು
ಲಾ ವಿವಿಧ ಕಲ್ಪಂ ಮಹಾಪಾತಕರ್ಗೆಯದರ್ಧವುಪಪಾತಕವಲಾ ೪೯

ಶೇಷಪಾತಕಿಗಳವರರ್ಧಕಾಲಂ ಮಿಕ್ಕ
ದೋಷಂಗಳವರರ್ಧದಲ್ಲಿಯುಂಬರು ಸರ್ಪ
ಭೂಷಣನ ಭಕ್ತಪದ ಪೂಜೆಯಂ ಮಾಡಿದಪೆನೆಂದು ಹಿಂದಣ ದುರ್ಗುಣಾ
ದೋಷಾದಿಗಳ ಬಿಟ್ಟು ಸದ್ಭಾವಿಯಾಗೆ ಪರಿ
ತೋಷಿಯಪ್ಪನು ಶಂಭುವರಳೆಯೊಟ್ಟಿಲನಂತ
ಶೇಷವೆನಲಗ್ನಿ ಸುಡುವಂತೆ ಸುಡುವುದು ಪಾಪವಂ ಗುರುತ್ತುಮನ ಕರುಣಾ ೫೦

ಪಾಪಪುರುಷನ ರೂಪದೆಂತೆನಲು ಕೇಳಿರೈ
ಪಾಪಿಗಳಿರಾ ಬ್ರಹ್ಮಹತ್ಯವೇ ಶಿರವ ಲಾ
ಭಾಪುರೇ ಸ್ವರ್ಣಚೋರಗತೆಯೆರಡು ಭುಜವಾ ಸುರಾಪಾನವೇ ಹೃದಯವೈ
ಓಪ ಗುರುತಲ್ಪವೇ ಕಟಿದ್ವಯಮಿವಂದಿರಾ
ಲಾಪಕೂಟವೆ ಪಾದಯುಗ್ಮಂಗಳಪ್ಪವು ಮ
ಹಾಪಾತಕಂಗಳೇ ಪ್ರತ್ಯಂಗವುಪಪಾತಕಂಗಳೇ ರೋಮಂಗಳೂ ೫೧

ಅರರೆ ರಕ್ತಸ್ಮಶ್ರುಸುವಿಲೋಚನಂ ಖಡ್ಗ
ವರ ಚರ್ಮಧರಕೃಷ್ಣಗರ್ಭೀಕೃತಂ ಕಣಾ
ಪರಿಕಿಸಲ್ಕಿದು ಪಾಪರೂಪಿಂತಿವೆಯ್ದೆ ನಿಮ್ಮಂ ಪೊದ್ದದಂತೆ ನಡೆದೂ
ಧರೆಯನೆಂತಕ್ಕಯಿದಿದೆಡೆ ಬದುಕಿಯೆಂದು ಪೇ
ಳ್ದರು ದೂತರಾ ಪಾಪಿಗಳ್ಗವರು ಕೇಳ್ವರೈ
ಮರಳಿ ಯಿಂತಪ್ಪ ಪಾಪಂಗಳುಂಡವರು ಬಳಿಕೇನಪ್ಪರೆಂದಾಗಳೂ ೫೨

||ಸಾಕ್ಷಿ|| ಬ್ರಹ್ಮಹತ್ಯಾ ಶಿರಷ್ಕಂಚ ಸ್ವರ್ಣಸ್ತೇಯಂ ಭುಜದ್ವಯಂ
ಸುರಾಪಾನಂ ಚ ಹೃದಯಂ ಗುರುತಲ್ಪಂ ಕಟಿದ್ವಯಂ ೧

ತತ್ಸಂಯೋಗ ಪದದ್ವಂದ್ವ ಮಂಗಪ್ರತ್ಯಂಗಪಾತಕಂ
ಉಪಪಾತಕ ರೋಮಾಣಿ ರಕ್ತಸ್ಮಶ್ರುವಿಲೋಚನಂ ೨

ಖಡ್ಗಚರ್ಮಧರಂ ಕೃಷ್ಣ ಕುಕ್ಷಿರೂಪಂ ವಿಚಿಂತಯೇತ್ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳುತಿಹ ಪಾಪಿಗಳಿಗಾಯುಮನದೂತರುಱಿ
ಹೇಳುವರು ನರರು ಮಾಡಿದ ಪಾಪವೆಲ್ಲ ಶೇ
ಷಾಳಿಯಿಲ್ಲದ ತೆಱದೊಳುಂಡು ಬಳಿಕಾ ನರಕದಿಂ ಬಂದು ಮರ್ತ್ಯದಲ್ಲೀ
ಆಳೋಕಿಸಲ್ಕೆ ಮೊದಲಾ ಸ್ಥಾವರದೊಳು ವೃ
ಕ್ಷಾಳಿ ಲತಿಕಾಗುಲ್ಮತತಿ ತೃಣಾದಿಗಳಹ ಸ
ಮೇಳದುದ್ಭಿದವೊಂದಱೊಂದರೊಳು ಸಾಹಸ್ರ ಜನ್ಮದೊಳು ಬರವೇಳ್ಕಲಾ ೬೩

ಬಳಿಕಲಲ್ಲಿಂ ಬಂದು ಹುಟ್ಟಬೇಕಯ್ಯ ಕಿಱು
ಪುಳುಗಳಾ ಸ್ವೇದಜಂಗಳುವವಱೊಳೊಂದೊಂದ
ಱೊಳು ಸಹಸ್ರದ ಗಣನೆಯುಪ್ಪ ಜನ್ಮದೊಳವರ ಭೇದ ಕೀಟಕದೊಳುದಿಸೀ
ಕಳೆದು ಬಳಿಕಲ್ಲಿಂದಲಂಡಜಂಗಳು ಪಕ್ಷಿ
ಕುಳಮವಱೊಳೊಂದೋದು ಗರ್ಭದೊಳು ಸಾಹಸ್ರ
ದಳತೆಯೊಳ್ಬರ ವೇಳ್ಕುಮಲ್ಲಿಂ ಜರಾಯುಜವೆನಿಸುವ ಮೃಗಾದಿಯು ಜನ್ಮವೈ ೬೪

ಆ ಜರಾಯುಜವೆಂದೆನಲು ಮಾಸುಮುಸುಕಿ ಬೆಳೆ
ವಾಜೀವವಱೊಳಗೆ ಮೃಗಜನ್ಮವೆನಿತಾ ಸ
ಮಾಜವೊಂದಱೊಳು ಸಾವಿರಬಾರಿಯೊಗೆದೊಗೆದು ಪಶುಜನ್ಮದಲ್ಲಿ ಹುಟ್ಟೀ
ನೈಜದ ಸಹಸ್ರಜನ್ಮದೊಳುದಿಸುತೆಂತಕ್ಕೆ
ಹೋ ಜನನವಪ್ಪುದಿವದಿರ ಯೋನಿಯಲ್ಲಿಯುಕ
ಟಾ ಜಗದ ಮಾನುಷ್ಯರಱಿಯರೀ ಜನ್ಮವತ್ಯಪೂರ್ವಮಿದೆಂಬುದಂ ೬೫

ಕುರುಡನೆಂತಕ್ಕೆ ಲಾವುಗೆವಿಡಿದ ತೆಱನಂತೆ
ಮರನನಾ ಹುಳು ಕೊಱೆವುತಿರಲವಱೊಳಂತಕ
ಕ್ಷರದ ರೂಪೆನಿಸುವ ಘುಣಾಕ್ಷರದ ತೆಱದಿಂದ ಪಣ್ತೆರ್ದ ತಾಳೆಹಣ್ಣಿಂ
ಚರಣದಿಂ ಕಾಗೆಯುಲುಗಲು ಬೀಳ್ದು ಬೋಳ್ದಲೆಯ
ನರನಲ್ಲಿಗಾವೇಳೆ ಬರಲು ಶಿರ ಒಡೆವುದೆಂ
ಬರಿದಪ್ಪ ಕಾಕತಾಳೀನ್ಯಾಯದಿಂದ ನರಜನ್ಮವಹುದಪೂರ್ವಂ ೬೬

ನೀಚೋನ್ನತದ ಮನುಜರಾಗಿ ಪುಟ್ಟುವರಲ್ಲಿ
ವಾಚಿಸುವ ನರಕಯಾತನೆಮುಖ್ಯಮಂ ಕೇಳಿ
ನೀಚತ್ವಮಪ್ಪ ಪರಧನ ಪಾರದಾರಿಕಂ ಹಿಂಸೆಯೆಂಬವನು ಬಿಟ್ಟೂ
ಆಚಾರದಿಂ ನಡೆದು ಮರಳಿ ಯಮನೂರಕಡೆ
ಯಾ ಚಿತ್ರವಧೆ ಜನ್ಮದತ್ತ ಪೋಗದ ಮನುಜ
ನೇ ಚದುರನಾತನಿಂದ್ರಾದಿಭೋಗಕಧಿಕಶಿವಮಾರ್ಗಮಂ ಸಾರ್ವನೂ ೬೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದಿಂತು ಯಮದೂತರುಸುರುವರಲಾ ನರಕ
ದಿಂದಬೇವವರಿಗೆನುತಾ ಕುಂಭಜಾತಗಾ
ಸ್ಕಂದನುಸುರಿದನೀ ಪ್ರಕಾರದಿಂ ಬಹುನರಕಯಾತನೆಗಳಂ ನೋಡಲೂ
ಒಂದಕ್ಕೆ ಒಂದಧಿಕವತಿದುಃಖವತಿಭಯಮಂ
ಕುಂದದದ್ಭುತವಿದೇಳರ್ಬುದಗ್ರಂಥದೊಳ
ಗಂ ದಯದೊಳಲ್ಪದಿಂದೊರೆದೆವೆಂದಲ್ಲಿ ಮತ್ತೊಂದು ವಚನವನಾಡಿದಂ ೬೮

ಆ ಮಹಾಘೋರವತಿಘೋರವೆನಿಸುವ ನರಕ
ಸಾಮರ್ಥ್ಯಕಲ್ಪನಲಪ್ರಭಾಬಾಧೆಯಹ
ವೈ ಮುನಿಯೆಯವನುಸುರಲಿಲ್ಲವೇಕೆನಲಾಗಿ ನರಹೃದಯದವರು ಕೇಳ್ದಾ
ಆ ಮಾತ್ರದಿಂ ಘುಮ್ಮನೆ ಸಾವರೆಂದೆನುತ
ಸಾಮರ್ಥ್ಯಶಿವಸುತನ ವಚನಂ ಸುಖಾವಹ ಮ
ಹಾ ಮೂರ್ತಿಯುಸುರ್ದುದಂ ಕೆಂಚವೀರಾಖ್ಯಂಗೆ ನುಡಿದನಾ
ಹಲಗೆಯಾರ್ಯಂ ೬೯

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಿಕಾರ್ಯಂ
ಶೀಲಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರವೀರಶೈವಾಮೃತಪುರಾಣಂ ಕೂರ್ತು ಪದನಂ ಮಾಡಿದಂ ೭೦

ಇದು ವೀರಶೈವ ಷಟ್‌ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತ ವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ನರಕಯಾತನಾಪೂರ್ವಕಾಂಡತ್ರಯೈಕೋನವಿಂಶತಿ ಸಂಧಿಯೈ ೭೧

ಅಂತು ಸಂಧಿ ೧೯ ಕ್ಕಂ ಪದನು ೧೦೨೭ ಕ್ಕಂ ಗ್ರಂಥ ೭೧ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೬

ಪಿಂಡೋತ್ಪತ್ತಿ ದಶವಾಯುಲಕ್ಷಣವುಂ ಪೇಳುವಿಕೆ

ಉದ್ವಿಜಸ್ವೇದಜಾಂಡಜ ಜರಾಯುಜದೊಳಂ
ತದ್ಬಹುಲಜನನ ಪಿಂಡೋತ್ಪತ್ತಿ ಧಾತುವಿಲ
ಸದ್ಬುಧರು ತಿಳಿವ ದಶವಾಯುಗುಣವುಂ ಕೂರ್ತು ಬಿತ್ತರಿಪೆನೆಂದನಾರ್ಯಂ

ಶ್ರೀಯತೀಶ್ವರರಭಿಪ್ರಾಯ ಸುಪ್ರದವಿಮಲ
ಕಾಯ ಸುರನಾಥ ನಾರಾಯಣಾಜಾಮರನಿ
ಕಾಯ ಪೂಜಿತಚರಣತೋಯಜಾಮಳಿನ ನಿರಪಾಯ ನಿರ್ಮಲ ಗಿರೀಶಾ
ಸ್ವಾಯತ್ತಬಹುರಕ್ಷಮಾಯಾವಿದುರ ಕಾ
ತ್ಯಾಯನೀ ಸುಪ್ರಾಣನಾಯಕಾ ಭವಲಸದ
ಜೇಯ ಶಾಂಭವ ಮಹಾಭಾಯಾತ್ಮಚಾರಿ ಶಿವರಾಯ ಜಯಶಾಂತಮಲ್ಲಾ ೧

ಸಪ್ತಾಶ್ವಘನತೇಜ ಸಪ್ತಸೋಪಾನವರ
ಸಪ್ತಲಾಸಿತ ಹಸನ ಸಪ್ತಯುಗಜಗದಧಿಪ
ಸಪ್ತಧಾತು ತ್ರಿಗುಣ ಸಪ್ತವ್ಯಸನದೂರ ಸಪ್ತಾರ್ಚಿಸುಪ್ರತಾಪಾ
ತಪ್ತಕಾಂಚನರೂಪನಪ್ಪ ಸರ್ವೇಶ್ವರ
ಕ್ಲುಪ್ತ ತತ್ವಾಧಿಪತಿಯಾಗಿ ರಾರಾಜಿಪ ಸು
ಷುಪ್ತಿ ಮದ್ರಕ್ಷಕಾ ಶಾಂತನಂಜೇಶ್ವರಶಿವಾಪ್ತ ಜಯ ಗುರುವೆ ಪರವೇ ೨

ಇಂತಪ್ಪ ನರಕಯಾತನೆಯ ಕಥೆಯಂ ಕೇಳಿ
ಸಂತೋಷದಿಂ ಕೆಂಚವೀರಾಹ್ವಯಂ ಕೃಪಾ
ಕಾಂತ ಗುರುದೇವಂಗೆ ಬಿನ್ನವಿಸಿದಂ ಜೀಯ ನಿರಯವುಂ ಕಳೆದ ಜೀವಾ
ಸಂತಾನವುದ್ಬಿಜದ ಸ್ವೇದಜಾಂಡಜಗಳಿಂ
ಮುಂತಾಣ ಜರಾಯು ಪಶುಯೋನಿಗಳ ಕಳೆವುತ್ತ
ಲೆಂತಕ್ಕೆ ಮಾನುಷ್ಯ ಜನ್ಮ ಪಿಂಡೋತ್ಪತ್ತಿಯಪ್ಪುದಂ ನಿರವಿಸೆಂದಾ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಲು ಹಲಗೆಯ ದೇಶಿಕಂ ನುಡಿವುತಿರ್ದನೆಲೆ
ತನುಜ ಕೇಳ್ಳೈ ದಾರುವನವಾಸಿಗಳಿಗೆ ಘ
ಮ್ಮನೆ ಸುಖಾವಹಮೂರ್ತಿ ಶಿವಧರ್ಮದುತ್ತರಗ್ರಂಥದೊಳು ಕುಂಭಜಂಗೇ
ಮನವೊಲ್ದು ಷಣ್ಮುಖಂ ಪಿಂಡದುತ್ಪತ್ತಿಯಂ
ನೆನೆದು ಶಿವನಂ ಪೇಳ್ದನೆಂದುಸುರಿದರ್ಥಮಂ
ಮುನಿಗಳಿಗೆ ಬಿತ್ತರಿಸಿದುದನೊರೆವೆನೆಂದನಾನಂದಮಯುವಹ ಶಿಷ್ಯಗೇ ೪

ಆ ಪಿಂಡದುತ್ಪತ್ತಿಯೆಂತೆನಲು ಕೂರ್ತು ಕೇ
ಳೈಪವಿತ್ರಾತ್ಮಜಾನಂತರಂ ನರಕದೊಳ್
ಪಾಪಂಗಳುಂಡು ಕಳೆದೀಗ ಧರ್ಮಾದೇವ ಕೇವಲಾದೆಂದು ಮತ್ತೆ
ರೂಪಿಸಲ್ಕ್ಷಣಮಾತ್ರದಿಂದ ಭೂತೇಭ್ಯ ಎನ
ಲೋಪ ಸುಶರೀರ ಮುಪಪದ್ಯತೇ ಯೆನಲಾಗಿ
ಭಾಪುರೇ ಯಂತೆ ಧರ್ಮದಿನಧಿಕ ದೇವತ್ವಮಪ್ಪುದೈಪರಿಭಾವಿಸೇ ೫

ಅತಿಮಿಶ್ರವಾದ ಕರ್ಮಂಗಳಿಂದೀಯಾತ್ಮ
ತತಿಯಂಗವಪ್ಪುದಾ ಭೂತಪರಿಮಾಣದು
ನ್ನತಿಯಿಂದಲಹುದೈ ಚತುರ್ವಿಧದೊಳುದ್ಭಿದಂ ತರು ಗುಲ್ಮ ಭೇದವೆನಿಕುಂ
ಸುತ ಕೇಳ್ಕ್ರಿಮಿಕೀಟಕಾದಿಯಾ ಸ್ವೇದಜಂಕ್ಷತಪಕ್ಷಿಸ
ಕೃತ ಪಕ್ಷಿ ಸರ್ಪ ನಕ್ರಂ ಮತ್ಸ್ಯಕೂರ್ಮ ಸಂ
ತತಿಯಂಡಜಂ ಚತುಷ್ಪದ ಮನುಷ್ಯರು ಜರಾಯುಜವೆಂದು ತಿಳಿ ಕುಮಾರಾ ೬

ತತ್ರ ಸಿಕ್ತಾ ಜಲೈರೆಂಬರ್ಥದಿಂ ನನೆದು
ಧಾತ್ರಿಯಂತೂಷ್ಮಮಾವೆನಲಾ ಪ್ರಪಾಚಿತಾ
ಚಿತ್ರೇಣ ವಾಯುನಾ ವ್ಯೂಹಮಾನೇಚ ಬೀಜತ್ವಮುಪಪದ್ಯವೆನಲೂ
ಕ್ಷೇತ್ರದೊಳು ಬೀಜ ಮುಷ್ಣೋದಕದಿನುಬ್ಬುತ ಪ
ವಿತಿತೋಚ್ಛೂನ ತಾಮೆನೆ ಮೃದುತ್ವಂ ಚಯೆನೆ
ಪುತ್ರಕೇಳಾ ಬಿತ್ತು ಬೇರುಬಿಡುವುದು ವಿಲಸದುದ್ಭಿದೋತ್ಪತ್ತಿಯಿಂ ನೂ ೭

ಮೂಲದಿಂದಂಕುರೋತ್ಪತ್ತಿಯಂಕುರದಿಂದ
ವಾಲ ಸತ್ಪರ್ಣಸಂಭವವೆಲೆಗಳಿಂದ ವಾ
ನಾಲವಾ ನಾಳದಿಂ ಗೆಣ್ಣು ತತ್ಕಾಂಡದಿಂ ಕುಸುಮವಾ ಕುಸುಮದಿಂದಾ
ಮೇಲೆ ತುಷವಾ ತುಷಾಂತರವಲ್ಲಿ ತುಂಬುವುದು
ಹಾಲು ಬಲಿದದು ತಾನೆ ತಂಡುಲವಹೇ ಬಲಿದು
ಕಾಲಾಂತದಿಂದೋಷಧಿಗಳೊಣಗುವವು ಕಣಾ ತರುವಾಯೊಳಿನ್ನು ಕೇಳೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜವೆ ಮೊದಲು ಶಾಳಿ ಹದಿನೇಳು ಧಾನ್ಯಂಗಳೆಂ
ಬವು ಕಣಾ ಧಾನ್ಯಂಗಳೋಷಧಿಗಳೆಂದೆನು
ತ್ತವೆ ಪೇಳ್ದರುಳಿದ ಚಣವಾದಿಯಾ ಕ್ಷುದ್ರಧಾನ್ಯಂಗಳೊಂದಿತ್ತು ಕೂಡೀ
ಪ್ರವರದಷ್ಟಾದಶಂ ಲೂನಮರ್ದಿತಮುದು
ತ್ಪವನಸೂರ್ಪಾಲೂಖಲಾದಿಯಂತ್ರಾದಿಯಿಂ
ವಿವಿಧ ಸಂಸ್ಕಾರ ತಂಡುಲ ಮುಖ್ಯ ಜಲವಹ್ನಿಪಾಕಂಗಳಂ ಮಾಳ್ಪದೂ ೯

ಪರಿಣಾಮವೆಯ್ದುವವು ಷಡ್ವಿಧಾಹಾರದಿಂ
ದಿರದೆಯಾ ಭಕ್ಷ್ಯಭೋಜ್ಯಂ ಪೇಯ ಲೇಹ್ಯಮು
ತ್ಕರದ ಚೋಷ್ಯಂ ಪಿಚ್ಛಿಲಂಗಳಾ ಮಧುರಂ ಕಷಾಯಃ ಕಟುಕಾಮ್ಲ ತಿಕ್ತಾ
ತರುವ ಸಮಿತೆಗಳಾಱು ತೆಱದನ್ನಮಂ ಸ್ಥೂಲ
ಪರಿಮಿತದ ಕಬಳಂಗಳಿಂದುಂಬರಂಗನಾ
ಪುರುಷರಾ ಕ್ಷುತ್ತಿಂಗೆ ಶಾಂತಿಯಾಗುತ್ತುದರಮಂ ತುಂಬುವುದು ಬಳಿಕ್ಕಾ ೧೦

ಒಂದಾಗಿ ಕೂಡಿದಾಹಾರವಾ ಪ್ರಾಣಕಾ
ನಂದಮಂ ಕೊಡುವುದು ಸಮಾಯುವಾ ಮಧ್ಯದೊಳು
ನಿಂದೆರಡು ತೆಱನ ಪೃಥಗನ್ನಂ ಪೃಥಗ್ಜಲಂಗಳ ಮಾಡಿ ತೋಱಿಯಗ್ನೀ
ಯಿಂದ ಮೇಲುದಕವದಱಿಂ ಮೇಲೆಯನ್ನಮಂ
ತಂದಿರಿಸಿಯಾ ಪ್ರಾಣಮಾರುತಂ ಜಲದಡಿಯ
ನಿಂದಗ್ನಿಯಂ ಪ್ರಬಲಮಂ ಮಾಡಿಯೊಳಗಂ ಪುನಃ ಪಾಕ ಮಿಂತಪ್ಪದೂ ೧೧

ವಾಯುವಗ್ನಿಗೆ ಸಹಾಯಂ ಪ್ರಬಲಮಂ ಮಾಡ
ಲಾಯಗ್ನಿಯಾ ನೀರನೂಷ್ಣಮಂ ಮಾಡಲಾ
ತೋಯದಿಂದಂ ಪಾಕಮಪ್ಪುದನ್ನಂ ಪಕ್ವಮಂತೆರಡು ತೆಱವಪ್ಪದೂ
ಆಯೆರಡು ತೆಱನೊಳಗೆ ಬೇಱಿರಸವಾ ಕಿಟ್ಟ
ಓಯರದೊಳದು ಬೇಱಿ ಮಲವೆ ಹನ್ನೆರಡು ತೆಱ
ನೈಯಲ್ಲಿ ಕಿಟ್ಟವಾ ದೇಹದಿಂದಂ ಬಹಿಷ್ಕರಿಸೂದು ಕೇಳೆಂದನೂ ೧೨

ಕರ್ಣಾಕ್ಷಿ ನಾಸಿಕಾ ಜಿಂಹ್ವೆದಂತಂ ಶಿಶ್ನಿ
ವರ್ಣಿಸಲು ಗುದನಖಂ ಸ್ವೇದ ಕಫ ವಿಣ್ಮೂತ್ರ
ಕೀರ್ಣ ಮಲ ವೀದ್ವಾಶಸ್ಥಾನದಿಂದ ಪೊಱಮಡುವುದಾ ಪ್ರಾಣವಾಯೂ
ನಿರ್ಣಯಂ ಹೃದಯದೊಳ್ಪ್ರತಿಬದ್ಧವಾಗುತ್ತು
ದೀರ್ಣನಾಡಿಗಳಖಿಳದಲ್ಲಿಯಂತಾ ರಸವ
ಪೂರ್ಣಮಂ ಮಾಡಿ ತೃಪ್ತಿಯನೆಯ್ದಿಸುತ್ತ ಬಲವರ್ಧನಂ ಮಾಡುತಿಹುದೂ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ವಾಯುವಖಿಳ ನಾಡಿಗಳಿಗಿಂತೀ ರಸ
ಪ್ರಾವರಣಮಂ ಮಾಡಿ ನಾಡಿನಾಡಿಯ ಪೊಗು
ತ್ತೋವಿಯೂಷ್ಣದಿ ರಸದಿ ಪಾಕಮಂ ಮಾಡುತಿಹುದಂಗದೊಳು ಪಾಕದ್ವಯಂ
ಯೀ ವಿಧಂ ಮತ್ತೆ ಚರ್ಮಾವೇಷ್ಟವೆಲ್ಲೆಡೆಯೊ
ಳೋವಿ ರುಧಿರಂ ಪುಟ್ಟುವುದು ನರಂ ಶಿರವಸ್ಥಿ
ಯಾ ವಿವಿಧ ನಖದೆಲುವಿನೊಳಗಿಪ್ಪ ಮಜ್ಜೆಗಳು ಪುಟ್ಟುವವು
ತತ್ಕ್ರಮದೊಳೂ ೧೪

ಆ ಮಜ್ಜೆಯಿಂ ಕರಣ ಕೈವಲ್ಯ ಶುಕ್ಲವೇ
ಸಾಮರ್ಥ್ಯದಾ ಪ್ರಸವ ರೂಪವೀ ಹನ್ನೆರಡ
ಲಾ ಮುನಿಯೇ ಕೇಳನ್ನ ಪರಿಣಾಮವೆಂದಱಿವುದನ್ನದಿಂ ರೇತಸ್ಸಲಾ
ಆ ಮಹಾತೇಜದಿಂದಂಗಸಂಭವವಲ್ಲೈ
ಈ ಮಾಳ್ಕೆಯಿಂ ತಿಳಿವುದೆಂದು ತಾರಕವದನ
ತಾಮರಸಚಂದ್ರನಮರೇಂದ್ರ ಪಾಲಿತೋಪೇಂದ್ರ ನಿಸ್ತ್ರಂದ್ರ ನೊರೆದಂ ೧೫

ಇನ್ನನ್ವಯಾಂತರದ ಶುಕ್ಲೋದಯದ ಬಗೆಯ
ನೆನ್ನವನೆ ಕೇಳ್ವೆಯ್ಯ ಸುವಿವೇಕದಿಂದಲುಂ
ಡನ್ನವೇಳ್ದಿನಕೆ ರಸಮಪ್ಪುದಾ ರಸವೇಳು ದಿನಕೆ ರಕ್ತಂ ರಕ್ತವೂ
ಉನ್ನತದ ಮಾಂಸವಹುದಾ ಮಾಂಸವೇಳುದಿನ
ಕನ್ನಾಡೆ ಮೇಧಸ್ಸು ಮೇಧಸ್ಸವೇಳ್ದಿನಕೆ
ಸನ್ನದ್ಧದಿಂದಸ್ಥಿಯಹುದಸ್ಥಿಯೇಳ್ದಿನಕೆ ಮಜ್ಜೆಯಪ್ಪುದು ಬಳಿಕ್ಕಾ ೧೬

ಆ ಮಜ್ಜೆಯೇಳುದಿನಕಂ ಶುಕ್ಲವಹುದಲಾ
ಈ ಮಹಾಶುಕ್ಲದಿಂದುತ್ಪತ್ತಿಯಿನ್ನು ಕೇ
ಳೈ ಮಗನೆ ಸಪ್ತಧಾತುವಿನ ವರ್ಣಂ ತತ್ವಕರ್ಮಂಗಳಂ ಕ್ರಮದೊಳೂ
ಪ್ರಾಮಾಣ್ಯರಸ ಕಪಿಲವರ್ಣವಿಳೆಯಂಶಿಕವ
ದಾ ಮಯ್ಯನಳಿಕಿಸುತಿಹುದು ರಕ್ತಂ ನೀಲ
ವೇ ಮಹದ್ವರ್ಣವಪ್ಪವಿನಂಶಿಕಂ ಶರೀರವ ನಡುಗಿಸುತ್ತಿರ್ಪುದೂ ೧೭

ಆ ಮಾಂಸಕಂ ರಕ್ತವರ್ಣವೇಧಾತಲಾ
ಧೂಮದ್ವಜಾಂಶಿಕಮಂಗಮಂ ಕಳವಳಿಪು
ದೈಮೇಧಸಿಂಗೆ ಮಾಂಜಿಷ್ಟವನಿಲಾಂಶಿಕವೈ ಬೆದರಿಪುದು ತನುವನೂ
ಪ್ರೇಮದಿಂದಸ್ಥಿಯಾ ಕೃಷ್ಣವರ್ಣಂ ಕಣಾ
ವ್ಯೋಮದಂಶಿಕಂ ಶರೀರಮಂ ಮರುಳೆನಿಸು
ವಾ ಮಾತನಾಡಿಸುತ್ತಿಹುದಿನ್ನು ಮಜ್ಜೆಯಾ ತಾಮ್ರವರ್ಣಂ ಬಳಿಕ್ಕಾ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂರನಂಶಿಕ ಒತ್ತರವದೊತ್ತಿದಂದದಿಂ
ನಾರಯ್ಯೆ ಕಳವಳವನೆಸಗುವುದು ಶುಕ್ಲಕೆ ಕು
ಮಾರ ಕೇಳ್ವೆ ಶ್ವೇತವರ್ಣವಾ ಚಂದ್ರನಂಶಿಕಂ ಕಳೇವರವನೂ
ಚಾರು ಕಂಪನಕ ಕಳವಳಂಗಳಂ ಮಾಳ್ಪುದಿ
ನ್ನಾ ರಮ್ಯ ದಶವಾಯುಗಳ ವರ್ಣಮಂ ಸ್ಥಾನ
ದೋರಣಂ ಕರ್ಮಂಗಳಂ ಪೇಳ್ವೆನೈಯ್ಯ ತರುವಾಯೊಳಿನ್ನೆಂತೆಂದೊಡೇ ೧೯

ಮೊದಲೊಳಾ ಪ್ರಾಣಮಾರುತನಿಂದ್ರನೀಲವ
ರ್ಣದೊಳಿಪ್ಪುದದುವೆ ಹೃದಯ ಸ್ಥಾನದೊಳಗಿರ್ದು
ಮುದದೊಳಂಗುಷ್ಠಾದಿ ಮಸ್ತಕಾಂತಂವರಂ ಸಂಪ್ರಾಣವೆಯ್ದಿ ಸುತ್ತಾ
ಹದುಳದಿಂದುಶ್ವಾಸಮಂ ಕೊಡೆ ನಿಶ್ವಾಸ
ಮೊದವಿಸುತ್ತನ್ನ ಜೀರ್ಣ ಕರಣಂಗಳಂ
ಪದಪಿಂದ ಮಾಡಿಸುತ್ತಿಹುದದಱಿಂ ಮುಂದಪಾನವಾಯುವನೊರೆವೆನೂ ೨೦

ಪರಿಕಿಸಲಪಾನಮರುತಂ ಹರಿತವರ್ಣವ
ಚ್ಚರಿಯೆನೆ ಗುದಾಲಯದೊಳಿರ್ದು ಮಲಮೂತ್ರಮಂ
ಪಿರಿದುಂ ವಿಸರ್ಜನಂ ಮಾಡಿಸಿಯಧೋದ್ವಾರಮಂ ಬಲಿವುತಂ ಸರಸಮಂ
ಸರಿಸಕ್ಕತಿವ್ಯಾಪ್ತಿಯುಂ ಮಾಡಿಸುತ್ತಿಹುದು
ತರುಣ ಕೇಳಾ ವ್ಯಾನವಾಯು ಭಾವಿಸಲಿಕುರು
ತರದ ಗೋಕ್ಷೀರವರ್ಣಮನಾಂತು ಸರ್ವಾಂಗಸಂಧಿಯಲ್ಲಿರ್ದು ಮೇಣೂ ೨೧

ಮುದುಡಿಕೊಂಡುಂ ನೀಡಿಕೊಂಡಿಹುದ ನನುಗೊಳಿಸು
ತುದಕನ್ನಮನೆಯ್ದಿ ತುಂಬಿಸುತ್ತಿಹುದು ಮೇ
ಣದುವಲ್ಲದಂತುದಾನಾನಿಲನು ಮೆಳೆಮಿಂಚಿನೆಸೆವ ವರ್ಣಮನೆ ತಾಳ್ದು
ಅದುವೆ ಕಂಠದೊಳಿರ್ದು ಸೀನು ಕೆಮ್ಮುಂ ಸ್ವಪ್ನ
ಮೊದವಿಸುತ್ತಂ ವರ್ಧಿಯಾ ನಿರೋಧಂಗಳಂ
ಪದಪಿಂದಲೆಯ್ದಿ ಸುತ್ತನ್ನರಸಮಾಹಾರದುತ್ಥಾಪನಂ ಮಾಳ್ಪುದೂ ೨೨

ಆ ಸಮಾನಾನಿಲಂ ನೀಲವರ್ಣಂ ನಾಭಿ
ಯಾ ಸೌಖ್ಯದಾಲಯದೊಳಿರ್ದು ವಿನುತಾಪಾದ
ಭಾಸುರ ಸುಮಸ್ತಕಾಂತದೊಳು ಪಸರಿಕೊಂಡಿರುತ್ತ ಕೊಂಡನ್ನರಸಮಂ
ಲೇಸಾಗಿ ಬಹು ರೋಮನಾಳಕ್ಕೆ ಹಂಚಿಕ್ಕಿ
ಸಾಸದಿಂದಿಹುದಿಂದಿಹುದಿವೈದ್ಯೆ ಪ್ರಾಣಪಂಚಕಂ
ದೋಷವಿಲ್ಲದನೆ ಕೇಳಿನ್ನು ನಾಗಾದಿ ವಾಯುಗಳ ಬಗೆಯಂ ಪೇಳ್ವೆನೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೀತವರ್ಣಂ ರೋಮನಾಳದೊಳಗಿರ್ದು ಚಲ
ನಾತಿಶಯುವಿಲ್ಲದೇ ಹಾಡಿಸುತ್ತಿಹುದಲ್ಲೆ
ಈ ತೆಱನಲಾ ನಾಗವಾಯುಂ ವಿನ್ನಾ ಕೂರ್ಮವಾರುತಂ ಸ್ವೇತವರ್ಣಂ
ಖ್ಯಾತೋದಕಂ ಲಲಾಟದೊಳಿರ್ದು ಶರೀರಮಂ
ತಾ ತಾಳ್ದು ಪುಷ್ಟಿಯಂ ಮಾಡಿಕೊಂಡಾ ಬಾಯ
ನೇ ತೆಱೆವುತಂ ಮುಚ್ಚುತಂ ನೇತ್ರದಲ್ಲಿಯುನ್ಮೀಲನಂ ಮಾಡಿಸುವುದೂ ೨೪

ಕೃಕರಮಾರುತನಂಜನದ ವರ್ಣವೆಯ್ದಿ ನಾ
ಸಿಕದಗ್ರದೊಳಗಿರುತ್ತಾ ಕ್ಷುಧಾದಿಯ ಧರ್ಮ
ನಿಕರಮಂ ನೆಗಳಿ ಗಮನಾಗಮನಸಂತತಿಯ ಮಾಡಿಸುತ್ತಿಹುದು ಮತ್ತೇ
ಪ್ರಕಟದಿಂ ದೇವದತ್ತಾನಿಲಂ ವಿಮಲಸ್ಫ
ಟಿಕವರ್ಣ ಗುಹ್ಯ ಕಟಿಸಂಸ್ಥಿತಂ ಕುಳಿತಿರ
ಲ್ಕಕಟ ಮಲಗಿಸಿಯೇಳಿಸುತ ನಿಲಿಸಿ ಚೇತರಿಸಿಯೊರಲಿ ಮಾತಾಡಿಸುವುದೂ ೨೫

ಆ ಧನಂಜಯವಾಯು ನೀಲವರ್ಣಂ ಕೇಳ್ಮ
ಹಾಧಾಮವೇ ಬ್ರಹ್ಮರಂಧ್ರದೊಳಿರುತ್ತಲಂ
ಬೋಧಿರಾವಂಗಳಂ ಕಿವಿಯಲ್ಲಿ ಘೋಷಿಸುತ ಮರಣವಹ ಕಾಲದಲ್ಲೀ
ರೋಧಿಸುತ್ತಿಲ್ಲೆನಿಸುವಿಂತು ದಶವಾಯುಗಳ
ಲೈಧೀರ ನೀಂ ಕೇಳಿದಾ ಕಂಟಕಾದಿಗಳ
ಶೋಧನೆಯ ಯೋನಿಯೊಳು ಶುಕ್ಲ ಒಳಪೊಕ್ಕು ಪಿಂಡಂ ನಿಲ್ವುದಂ
ಪೇಳ್ವೆನೂ ೨೬

ಭೂಲೋಕಪಾವನ ಕಕುದ್ಗಿರಿಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನೆಂಜೇಶ್ವರಾಂಘ್ರಿ ಪಂಕಜಭೃಂಗಮಲ್ಲ್ಯಣಾರ್ಯಂ
ಶೀಲಷ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೨೭

ಇದು ವೀರಶೈವ ಷಟ್ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವತನ್ನಾ
ಪದ ಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರ ಶೈವಾಮೃತದೊಳಗಾ
ದುದು ವಾಯುಭೇದವೆಂತೆನೆ ಮೂಱುಕಾಂಡದಿಂ ಮೇಲೆ ಯಿಪ್ಪತ್ತುಸಂಧೀ ೨೮

ಅಂತು ಸಂಧಿ ಕ್ಕಂ ೨೦ ಪದ ೧೦೫೫ ಕ್ಕಂ ಗ್ರಂಥ ೭೧ ಕ್ಕಂ ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೭

ರಜಸ್ವಿನೀಫಲ, ಪಿಂಡಜನನಾದಿ ಕ್ರಮಗಳಂ ತಿಳಿಸುವಿಕೆ

ಆ ರಜಸ್ಸಾದ ಫಲವಮಂ ಪಿಂಡಜನನವಮಂ
ನಾರಿಯುದರದೊಳರ್ಭಕಂ ಪಲವು ಜನ್ಮದ ವಿ
ಚಾರಬಾಧಾ ಸ್ಮರಣವಮಂ ಮಾಳ್ಪ ಬಗೆಯ ಬಿತ್ತರಿಸಿದಂ ಹಲಗೆಯಾರ್ಯಂ

ನಿನ್ನ ಕರುಣಾ ಕ್ರೋಧವಮಂ ಶ್ವೇತಕಾಲರುಟಿ
ನಿನ್ನಯ ತಪೋವಿಲಾಸಂಗಳಂಗಜಗಿರಿಜೆ
ನಿನ್ನ ಕಾಟಂಗಳಂ ಶುಲಭತೆಯನೋಹಿಲಂ ಸೊಡ್ಡಾಳ ಬಾಚರಸರೂ
ಮುನ್ನವೇ ಬಲ್ಲರದಟಿಂದಾಯುಸಂ ಪೊರ್ದ
ದುನ್ನತದ ಸುಖವನೊಲಿದಿತ್ತು ಪಾಲಿಪುದು ನೀ
ನೆನ್ನನೆಲೆ ಶಾಂತಮಲ್ಲೇಶ್ವರಸ್ವಾಮಿ ಜಯ ಮಹಿಮಾವರೂಥನೇಮೀ ೧

ಕರವೀರದನುಜಂಗೆಯಾ ಪುಲಿತ್ತಡಿಯುರಿಗೆ
ಯುರುತರಶ್ವೇತಂಗೆ ಚಂದ್ರಮತಿಗೊಲಿದ ಸೌಂ
ದರದ ಕಣಿಗಿಲೆಯ ಸಂಪಗೆಯ ಸೇವಂತಿಗೆಯ ಮಲ್ಲಿಗೆಯ ಸಸ್ಯಾಳಿಯಾ
ಹರುಷದಿಂ ಬಿತ್ತಿಸಿದೆಯಾ ತೋಂಟದಲರ್ಗಳಿಂ
ಹರನನರ್ಚಿಸಿದರ್ಗೆ ಜನ್ಮ ಜನ್ಮಾಂತರೋ
ತ್ಕರ ಭವಂಗಳ ಕೆಡಿಪ ಶಾಂತನಂಜೇಶ್ವರಾ ರಕ್ಷಿಪುದು ಸದ್ಭಕ್ತರಂ ೨

ಆ ನವ್ಯ ಸತಿಪುರುಷರೊಡಗೂಟದಿಂದಲ್ಲ
ದೇನಾದೊಡಿರುಹೆ ಕಡೆಯಾನೆ ಮೊದಲಾಗಿರ್ದ
ನಾನಾ ಸಜೀವರಾಸಿಗಳಿಗುತ್ಪತ್ತಿಗಳು ದೊರಕೊಳ್ಳವೆಂತೆಂದೊಡೇ
ನೀನಱಿವುದೆಸೆವ ಮೊಸರಿದ್ದೊಡಂ ಕಡೆಗೋಲ
ತಾನಿಟ್ಟು ಮಥಿಸಿದಲ್ಲದೇ ಬೆಣ್ಣೆಯಾಗ ದೈ
ಜ್ಞಾನಿ ನೀಂ ಕೇಳ್ನಾದ ಬಿಂದುವಿಂದಲ್ಲದಾಗದು ಜನನವದು ನಿಶ್ಚಯಂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದೊಡಾ ನಾದ ಬಿಂದೂತ್ಪತ್ತಿಯುಹ ಪಿಂಡ
ಭೇದವೆಂತೆನಲಾಗಿ ಪುಷ್ಪವಿಲ್ಲದೊಡೆ ಫಲ
ವಾದಪ್ಪುದೇ ಇಲ್ಲವದುಕಾರಣಂ ವನಿತೆ ಪುಷ್ಪವತಿಯಾದಲ್ಲದೇ
ಸಾದರದೆ ಗರ್ಭವಾಗದು ಪುಷ್ಪವತಿಯಾಗೆ
ಮೋದದಿಂ ತತ್ಪುಷ್ಪವಲರಲಾ ಬಿಂದುವಾ
ಹ್ಲಾದದಿಂದೊಳಪೊಗಲು ಪಿಂಡವಪ್ಪುದು ಕಣಾ ತತ್ಪ್ರಕಾರವನೊರೆವೆನೂ ೪

ಅಂತಾ ರಜಸ್ಸಾದ ವಾರ್ತೆಯುಂ ದೂತನೋ
ರಂತೆ ಪೇಳಲ್ಕೆ ಬಂದಾತನಂ ನೋಡಿಯುದ
ಯಂತಸ್ಥವಱಿವುದಾಗಾರ್ಗ್ಯಮುನಿ ಕಲ್ಪಿಸಿದ ಬಗೆಯಿಂ ಫಲವನಱಿವುದೂ
ಎಂತೆಂದೊಡಿಂದ್ರನೊಳಗಿರ್ದು ಕೇಳಲು ಸೂರ್ಯ
ನಂತುದಯಿಸುವ ಕಾಲದೊಳು ಕಂಡಳಾ ನೆರೆದ
ಕಾಂತೆಯುಟ್ಟುದು ಬಳಿದು ತೊಗರೆಳೆಯದೆಡದ ತೊಡೆಯೊಳು
ರುಧಿರವಿಳಿಯಿತಲ್ಲಾ ೫

ಪಗರದಂ ಕಂಡು ಪೇಳರು ಮೊದಲು ಗಂಡು ತ
ತ್ತರುಣಿಗುದಯಿಪುದೆಂದು ಪೇಳ್ವುದಗ್ನಿಯೊಳು ನಿಂ
ದಿರೆ ದೂತನಾ ಮೊದಲ ಜಾವದೊಳ್ಕಂಡಳುಟ್ಟುದು ಹಱಿದ ಬಿಳಿಯ ಸೀರೇ
ಎರಡು ಸೆರಗಿನೊಳು ಹೊಗರೆಳೆ ತೆಂಕಲೊಳಗಾಕೆ
ಶಿರವಾಗಿ ಮಲಗಿರ್ದು ರತಿಸುಖವನೆಸಗಿದಳು
ಪುರುಷನೊಳಗವನ ಬಲದೊಡೆ ಬಲದಕೈ ರುಧಿರವಾದುದನ್ಯರು ಕಂಡರೂ ೬

ಆಕೆ ಹೆಣ್ಣಂ ಪಡೆವಳೆಂದು ಪೇಳ್ವುದು ದೂತ
ನಾಕಾಲದಿಕ್ಕಿನೊಳಗಿರ್ದು ಕೇಳಲು ಪೇಳ್ವ
ದೈ ಕಂಡಳೆರಡನೆಯ ಜಾವದೊಳಗಾಗಲುಟ್ಟುದು ದಸರಿ ಪಗರು ಕಂಡೂ
ಈಕೆ ಮೈನೆರೆದಳೆಂದರುಮವಳು ಮೂವರಂ
ಗೀ ಕರಿಸಿದರು ಹಿಂದೆ ಮೊದಲ ವಿಟನೇ ಬಡಿದು
ಮೂಕುತಿಯ ಕಳೆದುಕೊಂಡೊಯ್ದನೈ ಭಾಗ್ಯವುಳ್ಳವಳು ಗಂಡಂ ಪಡೆವಳೈ ೭

ನೈರುತ್ಯದಲ್ಲಿ ಕೇಳಲು ಮೂಱು ಜಾವವಾ
ನಾರಿ ಮೈನೆರೆದಳುಟ್ಟುದು ಹೂಮುಡಿಯುದೊಂದು
ಸೀರೆ ನಿದ್ರೆಯೊಳು ಕನಸಂ ಕಂಡಳೈ ಮೊದಲು ಗಂಡುಮಗನಂ ಪಡೆವಳೈ
ವಾರಿಧೀಶದಿಕ್ಕಿನೊಳಗಿದ್ದು ದೂತಂ ವಿ
ಚಾರಿಸಲು ನಾಲ್ಕು ಜಾವಂ ಬಣ್ಣವುಟ್ಟಳದ
ಕೋರಣದ ಹೊಗರೆಳೆ ನೃಪಾತ್ಮಜರೊಳವಳು ನೆರೆದಳು
ಬಳಿಕ್ಕೆಡದೊಡೆಯೊಳು ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರೆಳ್ದು ಮತ್ತಿಯುಂಟವಳ ಬಲದೊಡೆಯಲ್ಲಿ
ಸೋರಿತ್ತು ರುಧಿರವಾದಿಯೊಳು ಗಂಡಪ್ಪನ್ನೆ
ಮಾರುತನೊಳೈದನೆಯು ಜಾವವುಟ್ಟುದು ನೀಲಿ ಯೆಡದ ತೊಡೆಯಲ್ಲಿಳಿದುದೂ
ಆ ರುಧಿರವಂತವಳ ಬಲದ ತೊಡೆಯೊಳು ಮತ್ತಿ
ಸೇರಿತವರೆಯು ಹುಗ್ಗಿಯುಂಡಳಂತವಳುಟ್ಟ
ಸೀರೆಯು ಸೆರಂಗನಿಲಿ ತಿಂದಿತ್ತು ಮುನ್ನ ಹೆಣ್ಣಂ ಪಡೆವಳಿದು ನಿಶ್ಚಯಂ ೯

ಆ ಕುಬೇರನ ದಿಕ್ಕಿನಲ್ಲಿ ಬೆಸಗೊಳಲಾಗಿ
ಯಾಕೆಯಾಱನೆಯ ಜಾವದೊಳಲ್ಲೆಯುಟ್ಟಿರ್ದು
ದೇ ಕೆಂಪು ಕೂಡಿರ್ದ ಸೀರೆ ಬಲದೊಡೆಯಲ್ಲಿ ಮತ್ತಿ ಕನಸಿನೊಳಾನೆಯಾ
ಆಕಸ್ಮಿಕದೆ ಕಂಡಳಂತಾಗ ಪತಿಯಲ್ಲಿ
ತಾ ಕೂಡಿದಳು ಮೊದಲು ಗಂಡ ಪಡೆವಳು ದೂತ
ನೇ ಕೇಳಲೀಶಾನ್ಯದಲ್ಲಿ ಬೆಳಗಂ ಜಾವದಲ್ಲಿ ಕಂಡಳು ಬಳಿಕ್ಕಾ ೧೦

ಉಟ್ಟುದಂತುದಯರಾಗದ ಕಿಱುಗೆಯುಂತೆಡದ
ಬಟ್ಟದೊಡೆಯೊಳು ರುಧಿರವಿಳಿಯಿತ್ತು ಮುನ್ನವಾ
ಹೆಟ್ಟುಗೆಯದಿಬ್ಬರೊಳು ನೆರೆದಳೊಬ್ಬನವನ ಕಲೆ ಬಲದ ದೆಸೆಯಲ್ಲಿ ಉಂಟು
ನೆಟ್ಟನಾ ಗಂಡನೊಳಗಶ್ಲಾಘ್ಯವಂತೆಯ್ಯೆ
ಪುಟ್ಟುವುದು ಪೆಣ್ಣು ಕೆಲದಿನದ ಮೇಲಾಕೆಗಂ
ಕಟ್ಟೆಸಕದಾತಿಥಿಗಳಂ ಕೂಡೆ ಬಿತ್ತರಿಪೆನೆಂದನಾ ಗಾರ್ಗ್ಯಮುನಿಪಾ ೧೧

ಆ ಪಾಡ್ಯದಲ್ಲಿ ಕಂಡೊಡೆ ಜಾರೆ ಬಿದಿಗೆಯೊಳು
ಪಾಪಿ ದಾರಿದ್ರೆಯಾ ತದಿಗೆಯೊಳು ಧನಿಕೆ ನಿ
ರ್ವ್ಯಾಪಾರಿ ಸಂತೋಷಿ ಚೌತಿಯೊಳು ಕಳ್ಳೆಯೆಲ್ಲಾಯುಷ್ಯದವಳು ಮುಂದೇ
ಶ್ರೀ ಪಂಚಮಿಯೊಳು ಪುತ್ರರ ಪಡೆವಳಾಷಷ್ಠಿ
ಯೇ ಪರಮ ರೋಗವಳಿವಂ ಮಾಡುವುದು ಬಳಿ
ಕ್ಕಾ ಪುಣ್ಯವಂತೆ ಸಪ್ತಮಿಯೊಳೆನ್ನಷ್ಟಮಿಯೊಳಂ ಕುಲಕೆ ಹೊಱಗಪ್ಪಳು ೧೨

ನವಮಿಯೊಳು ಧನವಂತೆ ಭೋಗಿ ಬಹುಪುತ್ರರಂ
ಸವಿನಯದೊಳಂ ಪಡೆವಳಾ ದಶಮಿಯಲ್ಲ ರಾ
ಜ್ಯವನಾಳುವಳು ಬಳಿಕ್ಕೇಕಾದಶಿಯೊಳಧಿಕ ಸುಖಿಯಲಾ ದ್ವಾದಶಿಯೊಳೂ
ಅವಿಚಾರಿ ಕಡುಮೂರ್ಖೆ ಬಹು ಪುತ್ರರಂ ಪಡೆವು
ತವೆ ಕಡೆಯ ಕೂಸು ಹರಿದಾಡುತಿರಲಾ ಸುತ
ಪ್ರವರ ಮಾತಾ ಪಿತರ ಮರಣವಿನ್ನಾತ್ರಯೋದಶಿಯಲ್ಲಿ ಮೈನೆರೆದೊಡೇ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘನ ಭಾಗ್ಯವಂತೆ ರಕ್ಕಸಿಯಾ ಚತುರ್ದಶಿಯ
ದಿನದಲ್ಲಿ ಗಂಡಂಗೆ ಬೆಟ್ಟಿತ್ತು ಮಿಕ್ಕಿರ್ದ
ಜನರಿಗೊಳ್ಳಿದಳು ಪೌರ್ಣಮಿಯೊಳೆಲ್ಲರೊಳು ಸತ್ಪ್ರೀತಿಯುಳ್ಳವಳು ಬಳಿಕಾ
ಧನರಹಿತೆ ದಾರಿದ್ರ್ಯೆಯಮವಾಸೆಯಲ್ಲಿ ಕೇ
ಳ್ತನೆಯ ವಾರದ ಲಕ್ಷಣಂ ಬಿತ್ತರಿಪೆ
ನಿನವಾಗದೊಳು ರೋಗಿ ಸೋಮವಾರದೊಳುಂ ಪತಿವ್ರತೆಯೆನಿಸಿಕೊಂಬಳೂ ೧೪

ಮಂಗಳಂ ದುಃಖಿ ಬುಧವಾರ ಪುತ್ರೋತ್ಸಾಹೆ
ಯಂಗನೆಯೆ ಗುರುವಾರ ಸೌಭಾಗ್ಯವಂತೆಯಾ
ಸಾಂಗತ್ಯ ಶುಕ್ರವಾರದೊಳು ಬಹುಪುತ್ರರಂ ಪಡೆವಳಾ ಧನವಂತೆಯೈ
ಪಿಂಗೆ ಶನಿವಾರದೊಳು ಸರ್ವನಾಸ್ತಿಗಳಿಂ ಮ
ನಂಗೊಳಿಪ ನಕ್ಷತ್ರ ಫಲವಶ್ವಿನಿಯೊಳು ದಿ
ವ್ಯಾಂಗಿ ಮುತ್ತೈದೆ ತನ್ನಯ ಜಿಂಹ್ವೆವೆಗ್ಗಳಂ ತಾನೆ ಮನೆಗೊಡತಿಯುಹಳೂ ೧೫

ಭರಣಿಯೊಳು ಜಾರೆ ಪುತ್ರರ ಪಡೆವಳ್ಳೈ ಕೇಳು
ತರುಣ ಕೃತ್ತಿಕೆಯಲ್ಲಿ ಬಂಜೆಯಾ ದೋಷದು
ತ್ನರೆ ರೋಹಿಣೀ ಸೊಬಗಿಯತಿಶಯ ಪ್ರಿಯವಚನೆಯುಪ್ಪಳಾ ಮೃಗಶಿರೆಯೊಳೂ
ಪರ ಪುರುಷಮೋಹಿಯುಕ್ತಿಯನಾಳ್ಳಳಾದ್ರ್ರೆಯೊಳು
ಪಿರಿದಪ್ಪ ರೋಗಿ ಕುಲಗೆಟ್ಟು ಹೋಹಳು ಮುಂದೆ
ಪರಿವಿಡಿಯೊಳಾ ಪುನರ್ವಸುವಿನೊಳು ಸಿರಿವಂತೆ ಲೇಸಾಗಿಯೆ ಬಾಳ್ವಳೂ ೧೬

ಆ ಪುಷ್ಯದಲ್ಲಿ ತನಯರ ಪಡೆವಳೊಲವಿಂ ಮ
ಹಾ ಪುರುಷಭಕ್ತೆಯಾಶ್ಲೇಷೆಯೊಳು ವೈನರೆದ
ಡಾ ಪುತ್ರನಾಸ್ತಿಯಾ ಕರ್ಮಿ ಮಘೆಯೊಳಗೆಯಭಿಮಾನಿಯಾ ಹುಬ್ಬೆಯಲ್ಲೀ
ಪಾಪಿ ನೆರೆಮುಂಡೆಯುತ್ತರೆಯಲ್ಲಿ ಕುಲಗೆಡು
ತ್ತಾ ಪಣ್ಯವಧುವಾಗಿಯೂರನಾಳುವಳಲ್ಲೈ
ಭಾಪು ಹಸ್ತದೊಳು ಸುಖಿಯಾ ದ್ರವ್ಯಮುಪಕಾರಿ ಚಿತ್ತೆಯೊಳು
ಪತಿಮೋಹಿಯ್ಯೈ ೧೭

ಸ್ವಾತಿಯೊಳು ಕಡುಚಪಳೆ ಸಾಯಿಗುತ್ತವನುಳ್ಳ
ಳೈ ತಿಳಿ ವಿಶಾಖೆಯೊಳು ವಿಧವೆಯನುರಾಧೆಯೊಳು
ಘಾತಿಸುವ ರಕ್ಕಸಿಯದಾರಿಗಲ್ಲದೆ ತಿರಿದು ತಿಂಬಳಾ ಜೇಷ್ಠೆಯಲ್ಲೀ
ಜಾತಿಗೆಡುತಂ ಹಲವು ಬಾಳ ಬಾಳ್ವಳು ಮೂಲ
ದಾ ತರುಣಿಯಃಧವೆಯಾಗುತ ರಂಡೆಯುಪ್ಪಳೈ
ಯೇತು ಪೂರ್ವಾಷಾಢದಲ್ಲಿ ತೊತ್ತೆನಿಸಿಪ್ಪ ಪಾಪಿಯುಪ್ಪಳು ಬಳಿಕ್ಕಾ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉತ್ತರಾಷಾಢದೊಳು ಸುಖಿಯಾಗಿಯುೂರನಾ
ಳುತ್ತಿಪ್ಪಳಾ ಶ್ರವಣದಲ್ಲಿ ಧರ್ಮಿಷ್ಠೆಯೈ
ತತ್ತರುಣಿಗರಿಗಳುಂಟಾ ಧನಿಷ್ಠೆಯೊಳು ಪತಿಭಕ್ತೆಯಾ ಶತಭಿಷಾಖ್ಯಾ
ತತ್ತಿಥಿಯೊಳಪಕೀರ್ತಿಯುತೆ ಕಿಸುರುಗಾರ್ತಿಯೈ
ಮತ್ತೆ ಪೂರ್ವಾಭಾದ್ರಪದೆಯಲ್ಲಿ ಪುಣ್ಯವು
ಳ್ಳುತ್ತಮಳು ಬಂಜೆಯುಂದುತ್ತರಾ ಭಾದ್ರಪದೆಯಲ್ಲಿ ಸುಖಿ ಸಿರಿವಂತೆಯೈ ೧೯

ರೇವತಿಯೊಳಭಿಮಾನಿಯುಂತಿರ್ದು ಪುರುಷಂಗೆ
ಸಾವನೊಡರಿಚುವಧಮೆಯಿನ್ನು ಯೋಗಂಗಳಂ
ಭಾವಶುದ್ಧದೊಳು ಕೇಳತಿಗಂಡದೊಳ್ವ್ಯತೀಪಾತವಾ ವ್ಯಾಘಾತವೂ
ಆ ವಜ್ರವಿಷ್ಕಂಭವೈ ಧೃತಿಪರಿಘಶೂಲ
ದಾವಳಿಯ ಗಂಡವಿಪ್ಪತ್ತೇಳರೊಳಗೆಯಿಂ
ತೀ ಒಂಭತೇಕಷ್ಟಭದ್ರೆಯಾ ಸ್ಥಿರಕರಣವಲ್ಲದುಳಿದವು ಶುಭವಲಾ ೨೦

ಮೇಷದೊಳು ಜಾರೆ ವೃಷಭದೊಳು ಧನಕನಕದ ವಿ
ಶೇಷಭೋಗಿಣಿ ಮಿಥುನದಲ್ಲಿ ಪುತ್ರರ ಜನನಿ
ರೋಷಿ ಕರ್ಕಟದಲ್ಲಿ ಬಹುಸುತರ ತಾಯೆನಿಪ ರೋಗಿ ಸಿಂಹದೊಳು ಪತಿಯಾ
ದ್ವೇಷಿ ಸುತರ ಪಿಡಿದೆಯಿದಿ ತನ್ನವರನಭಿ
ಲಾಸೆಯಿಂ ಸೇರುವಳು ಕನ್ನೆಯೊಳು ಸೂನೃತದ
ಭಾಷಣದೊಳತ್ತೆಮಾವಂದಿರಿಗೆ ಹಿತವೆ ಗಂಡನೊಳು ನಿರ್ಮೋಹಿಯುಹಳೂ ೨೧

ತೊಲೆಯಲ್ಲಿ ಸಾಧುಗಳು ಮೆಚ್ಚೆ ನಡೆವಳು ನೆರೆದ
ಲಲನೆ ವೃಶ್ಚಿಕದೊಳನ್ಯಾಯುವಂಚನೆಕಾರ್ತಿ
ಸಲೆ ಧನುವಿನೊಳು ಗಾಡಿಕಾರ್ತಿ ಧನವುಳ್ಳವಳು ಮಕರದೊಳು ಮೈನೆರೆದೊಡೇ
ಲಲನನಂ ತೊರೆದು ಬಹುಬುದ್ಧಿಯಿಂದಪ್ಪಳು
ಜ್ವಳ ಕುಂಭದೊಳು ಸೂಳೆ ಮೀನದೊಳು ಕಂಡೊಡಾ
ಹಲಬರಿಂ ಹಳಿಸಿಕೊಂಬಳು ಲಗ್ನಫಲವ ಮೇಷಾದಿಕ್ರಮದೊಳೊರೆವೆನೂ ೨೨

ಚೋರೆ ಶುಚಿ ಶುಭಗೆ ಗೋತ್ರಾಧಾರೆ ನಿಜಪತಿಯ
ವೈರಿ ದೈನ್ಯಾಶೀಲೆ ಬಹುಸುತೆಯುನುಳ್ಳವಳು
ಚೋರಿ ನಿಸ್ಸಾರೆ ಧೃತೆ ಬಂಜೆ ವಿಧವಾಧಿಕವಿಕಾರಿಯೆಂದೆನಿಸಿಕೊಂಬಾ
ಈರಾರು ರಾಸಿಗಳ ಲಗ್ನಂಗಳಂ ಸುವಿ
ಸ್ತಾರದಿಂ ಪೇಳ್ದೆನೈ ಕರಾತಳವಮಳಕದಿಂ
ದಾ ರಮ್ಯವಾದಾಗ್ರಹೋಧಯದ ಫಲಗಳಂ ಬಿತ್ತರಿಪೆವಿನ್ನು ಕೇಳೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನಯು ಕೇಳ್ಕೆಗ್ರಹೋದಯದ ಫಲಮಂ ಬಳಿ
ಕ್ಕಿನನುದಯದಲ್ಲಿ ಪತಿಯುಳಿವನ್ನೆ ಕನಕಾಹಿ
ಜನಿಸುವೆಡೆಯಲ್ಲಿ ಸಂತತಿಯುತಿಗುವಿನಸುತಂ ಕೇತುಗಳ ಸಂಭವದೊಳೂ
ವನಿತೆಗಂ ವೈಧವ್ಯ ಚಂದ್ರನೊಳಗಲ್ಪಾಯು
ವೆನಿಸಿ ತದ್ವುಧನುದಯದಲ್ಲಿ ಬಹುಸುತರಪಡೆ
ವನಘೆ ತನ್ನಯ ಪುರುಷನೊಳು ಬಾಳ್ವಳೆಂಬುದೇ ಗಾರ್ಘ್ಯಮತದೊಳು
ಪೇಳ್ವುದೂ ೨೪

ಎಂದು ಕುಂಭಜ ಮುನೀಶಂಗೆ ಷಣ್ಮುಖನೊರೆದು
ದಂ ದಾರುವನವಾಸಿಗಳು ಕೇಳುತಿರ್ದೊಡಾ
ನಂದವೆನಿಸುವ ಸುಖಾವಹಮೂರ್ತಿಯೊರೆದುದಂ ಬಿತ್ತರಿಸಲಾಚಾರ್ಯನೂ
ಮುಂದಿರ್ದ ಶಿಷ್ಯಂಗೆ ವಿಸ್ತರಿಸಿ ಮೈನೆರೆದ
ವಂದಿರ ಫಲಂಗಳಂ ಪೇಳ್ದಿರುದಯಿಸಿ ಬಲಿದ
ಕಂದಂಗಳಿಗೆ ಫಲವದೇನೆಂದು ಕೇಳೆ ನಿರವಿಸುತಿರ್ದನಾಚಾರ್ಯನೂ ೨೫

ಆ ರಜಸ್ನಾದ ಮೂಱನೇ ದಿನದೊಳಂ ಗರ್ಭ
ವೋರಂತೆ ನಿಂದೊಡಲ್ಲಿ ಹುಟ್ಟಿದ ಮಗಂ
ಚೋರನಪ್ಪಂ ನಾಲ್ಕು ದಿನದಲ್ಲಿ ಪಾಪಿಯುಹನಂತೈದು ದಿವಸದಲ್ಲೀ
ಸಾರಸದ್ಬುದ್ಧಿಯಿಂ ಬಾಳ್ವನಾರ್ದಿವಸದೊಳು
ಘೋರವ್ರತಭ್ರಷ್ಟನಹನೇಳು ದಿನದೊಳಾ
ಕ್ರೂರನಲ್ಲದ ದಯಾಪರನಪ್ಪನೆಂಟು ದಿನದಲ್ಲಿ ದಾರಿದ್ರನಹನೂ ೨೬

ಒಂಭತ್ತನೆಯ ದಿವಸದಲ್ಲಿ ಧನಿಕಂ ದಶಕ
ವೆಂಬ ದಿನದಲ್ಲಿ ಕಾಮುಕನು ಹನ್ನೊಂದು ದಿನ
ವೆಂಬೆಡೆಯೊಳತಿಕಾಮಿ ಹನ್ನೆರಡು ದಿನದಲ್ಲಿ ಕೋಪಿ ಹದಿಮೂರು ದಿವಸಾ
ವೆಂಬಲ್ಲಿ ಪಂಡಿತಂ ಹದಿನಾಲ್ಕುದಿನ ರೋಗಿ
ಕುಂಭಿನಿಯು ರಾಜನಾ ಹದಿನೈದು ದಿನದಲ್ಲಿ
ಸಾಂಬಕರುಣದೊಳು ಹದಿನಾಱು ದಿನದೊಳು ಮಹಾ
ಶಿವಯೋಗಿಯೆಂದೆನಿಪನೂ ೨೭

ಸನಯದಿಂದಾ ರಜಸ್ನಾಗಿರ್ದ ಹದಿನಾಱು
ದಿನದಿಂದ ಮೇಲೆ ಸತಿಪುರುಷರೊಂದಿದೊಡೇನು
ತನಯರಾಗರು ಮೊದಲು ಶುಕ್ಲಶೋಣಿತವಾತ್ಮಸಂಬಂಧಕಾಲದಲ್ಲೀ
ಅನುಪಮ ಮುಹೂರ್ತದೊಳು ಭಾಗ್ಯದಾರಿದ್ರ ರೋ
ಗನಿಕಾಯವೆಡರು ದುಃಖಂಗಳಾ ಫಲದಿಂದ
ವನಿಯೊಳಪ್ಪವು ಮತ್ತೆ ಯುಕ್ತಿಯಿಂ ತಾಂ ಮಾಡಿಕೊಂಬೆನೆಂದೆನಲಾಗಲೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ತ್ರೀಪುರುಷತನುಚೇಷ್ಟೆಯಿಂದಪ್ಪ ಫಲಗಳಂ
ಪಾಪರಹಿತನೆ ಕೇಳು ಮೂತ್ರಸಂಗ್ರಹದೊಳಿ
ದ್ದಾ ಪೆಣ್ಣುಗಂಡನೊಡಗೂಡೆ ಕೂಷ್ಟವ್ಯಾಧಿಯಾತ್ಮಜರು ಜನಿಸುವರಲಾ
ಓಪರೀರ್ವರು ಮಲಿನರಾಗಿರಲು ಜಡಮೂಢ
ನಾ ಪುತ್ರನಿಸ್ಸು ದುರ್ಗಂಧ ದಂಪತಿಗಳಿಂ
ದೇಪೇಳ್ವೆನಲ್ಲಿ ತನು ನಾರುವಾತಂ ಪುಟ್ಟುವಂ ಕಣ್ಣುಮುಚ್ಚಿ ಕೂಡೆ ೨೯

ಕುರುಡನಾ ಕೈಕಾಲ ಮುದುಡಿ ರಮಿಸಲು ಪಂಗು
ತರುಣನಪ್ಪಂ ನಡುಗುತೊಂದೆಯಾ ಕ್ಷಯರೋಗಿ
ತರಳನಹನಂಜುತ್ತ ಸಂಭೋಗವಂ ಮಾಡಿಯಾ ಪಾಂಡುರೋಗಿಯಪ್ಪಂ
ಇರದೆಯಾ ವ್ಯಾಧಿಗಳಿನಾ ರೋಗಿಸುತನಪ್ಪ
ವರ ರಜಸ್ನಾದದಿನವೊದಲಾಗಿ ಗರ್ಭವಾ
ಸರಿ ದಿನದೊಳಾ ಗಂಡು ವಿಷಮದಿನದೊಳು ಬಿಂದುಗೂಡೆ ಪೆಣ್ಮಗುವಪ್ಪುದೂ
೩೦

ಬಿಂದು ಪ್ರವೇಶಕಾಲದೊಳು ಗುದುಗುದುಸಿ ತದು
ಪಿಂದಾದ ತೀಂಟೆಯಂ ಗಜಗೇಹದಾಕೆಗಂ
ಕಂದರಾಗರು ಬಂಜೆಯಾಗಿರ್ಪಳಾ ಪುರುಷಪೇತನದೊಳಂತು ವೇಣೂ
ಒಂದಿನಿತು ತದ್ವಿಕಾಸದ ಪುಷ್ಪಮಂ ತೊಲಗಿ
ನಿಂದೊಡಾ ವೀರ್ಯ್ಯ ನಿಃಫಲವಾಗಿ ಸುತರಾಗ
ರೆಂದಱಿಯಬೇಕು ಪುರುಷನ ಬೀಜದತಿಶಯದೊಳಪ್ಪರಾ ವರಪುತ್ರರೂ ೩೧

ಸತಿಯು ರಕ್ತಾಧಿಕದೊಳಂ ಹೆಣ್ಣು ಸಮವ
ಗುಿತಮಿರೆ ನಪುಂಸಕಂ ಪುಟ್ಟುವಂ ಕೂಟದೊ
ಳ್ಪತಿಗೆ ಚಂದ್ರಸ್ವರಂ ವನಿತೆಗೆ ಸವಿಸ್ವರದೊಳೊಂದೆ ಪುತ್ರಾಭಿಜನನಂ
ವ್ಯತಿರೇಕದಿಂದ ಕನ್ಯಾಭಿಜನನಂ ಸಮಾ
ನತೆಯು ಸೂರ್ಯಸ್ವರದೊಳಂ ನಪುಂಸಕನಲಾ
ಕ್ರ್ರತಚಂದ್ರಸುಸ್ವರಸಮಾನದಿಂ ಪುಟ್ಟುವಳು ನೆಱೆ ಶಿಖಂಡಿಯೆನಿಪ್ಪಳೂ ೩೨

ಸೂರ್ಯಚಂದ್ರಸ್ವರಂ ಸಮವೆನಿಸಿ ಕೂಡಲಾ
ವೀರ್ಯಸ್ಖಲನದಿಂದೆ ಕುಬ್ಜನುದ್ಭವಮಪ್ಪ
ಕಾರ್ಯವ್ಯೆಪತಿಯ ಮನವನ್ಯ ವನಿತೆಯೊಳಂಗನೆಯ ಚಿತ್ತವನ್ಯನಲ್ಲೀ
ಪೂರ್ಯವಾಗಿರಲವಳಿ ಮಕ್ಕಳುದಿಪರು ಕಣಾ
ಸ್ಥೈರ್ಯ ಪುರುಷನ ಮನಂ ಸತಿಯಲ್ಲಿ ವನಿತೆ ಸೌಂ
ದರ್ಯನನ್ಯನ ನೆನದು ಕೂಡಲಾ ಜಾರೆ ಹುಟ್ಟುವಳೆಂಬುದಿದು ನಿಶ್ಚಯಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ತ್ರೀಯು ಚಿತ್ತವೆ ತನ್ನ ಪುರುಷನೊಳು ಪುರುಷನ
ನ್ಯಾಯದಿಂ ಪರಸತಿಯು ನೆನೆಯಲು ದಿಸಿದಕಂದ
ನೇಯುವಂ ಜಾರನ್ನೈ ಸಮಕಳೆಯು ಸದ್ಭಾವದಿಂದಲೀರ್ವರು ಕೂಡಲೂ
ಈಯುವನಿಯೊಳು ಸರ್ವಲಕ್ಷಣದ ಸುತನಭಿ
ಪ್ರಾಯದಿಂ ಪುಟ್ಟುವಂ ಪುರುಷಲಿಂಗಾಂಗಿಯಾ
ಸ್ತ್ರೀಯಂಗವೈಕಾರಿಯಾಗೆ ರವಿಃಸಲು ಪುಣ್ಯಪಾಪಿಸುತನುದ್ಭವಿಸುವಂ ೩೪

ಪುರುಷನಂಗವಿಕಾರಿಯಾಗಿ ಲಿಂಗಧ್ಯಾನಿ
ತರುಣಿಯಾಗಲು ಪುಣ್ಯಪಾಪಿಯುಹ ಮಗಳುದಯ
ವರರೆ ಸತಿಪುರುಷರುತ್ತುಮ ಲಿಂಗದಂಘ್ರಿಯಂ ನೆನೆವುತ್ತ ಕೂಡಲಾಗೀ
ಪರಮ ಶಿವಯೋಗಿಯಾದಪನಲಾ ಮತ್ತೆ ಕೇ
ಳಱಿದೆನಿಪ ನಾಡಿ ರೋಮಾಸ್ಥಿ ಪುರುಷೇಂದ್ರಿಯದಿ
ನುರುಚರ್ಮಮಾಂಸ ರುಧಿರಂಗಳಾ ತಾಯರಕ್ತದಿಸುದ್ಭವಂ ಬಳಿಕ್ಕಾ ೩೫

ವರಸುಕೃತದಿಂ ದೇವತಾಪುರುಷನಹನು ಮ
ತ್ತುರುತರದ ದುಷ್ಕರ್ಮವುಂ ಮಾಡಲಾತನುಂ
ತರದೊಳೆಂಭತ್ತುನಾಲ್ಕುಂ ಲಕ್ಷ ಜೀವರಾಸಿಗಳೊಳುದಿಸುತ್ತಿಪ್ಪನೂ
ಅರರೆಯಾ ಪುಣ್ಯಪಾಪದ ಮಿಶ್ರದಿಂದೆಯಾ
ನರಜನ್ಮವಂತಧಿಕ ಪುಣ್ಯದುತ್ತಮರ
ಶರಿರದೊಳಗೊಗೆವನಾ ಬಹಳ ಕಿಲ್ಬಿಷದಿಂದೆ ಕೀಳ್ಜಾತಿಯೊಳು ಜನಿಸುವಂ ೩೬

ಮಾನಸದಿ ಕರ್ಮದಿಂದಂತ್ಯಜಾತಿಗಳಲ್ಲಿ
ತಾನುದಯಿಸಿಪಂ ವಾಚಿಕದಿನಖಿಳ ಖಗಕುಲಮೃ
ಗಾನೀಕದಲ್ಲಿ ಸಂಭವಿಪಂ ಶರೀರ ಕರ್ಮದಿ ತರುಲತಾದಿ ನರರಾ
ಸ್ಥಾನದೊಳು ಜನಿಸುವಂ ನರಕಂಗಳುಂಡವಂ
ನಾನಾ ಪ್ರಕಾರದಿಂ ತೊಳಲಿ ಸುಖದುಃಖದಿನ
ನೂನ ಸ್ವಕರ್ಮಫಲದಿಂ ಪಿಂಡವುದ್ಭವಿಪುದಂ ಕೂಡೆ ಬಿತ್ತರಿಸುವೆಂ ೩೭

ರುತುಕಾಲದಲ್ಲಿ ನಿರ್ದೋಷಯೋನಿಯೊಳು ಸತಿ
ಪತಿರತಿಗಳಲ್ಲಿ ನಿಷ್ಕ್ರಾಂತ ಶುಕ್ಲಪ್ರವೇ
ಶಿತವಾಗೆ ಪುರುಷ ರೇತಸ್ಸು ವನಿತೆಯು ರಕ್ತಮುಭಯುವೊಂದುತ್ತಿರಲ್ಕೇ
ಅತಿಶಯಪ್ರಾಣವಾಯುಸ್ಪರ್ಶದಿಂ ಕರಣ
ಯುತ ಜೀವದಲ್ಲಿ ಪುಗಲೇಕದಿನದಲ್ಲಿಯೂ
ರ್ಜಿತ ಕಲಲವೆಂಬ ಪೆಸರಂ ತಾಳುತ್ತೈದು ದಿವಸಂಬರಂ ಮೆರೆದಿಪ್ಪುದೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಪಂಚದಿನದಲ್ಲಿ ಬುದ್ಬುಧಂ ತಾನಾಗಿ
ಯೇ ಪೇಳ್ವೆನೇಳನೆಯ ದಿವಸ ಪರಿಯಂತವಿಹು
ದೈಪುತ್ರ ಸಪ್ತವಾಸರದಲ್ಲಿಯಂತದೇ ನಾಮವಾ ಮಾಂಸ ಪೇಶೀ
ಈ ಪೆಸರಿನಿಂದ ಹದಿನಾಲ್ಕು ದಿವಸಂಬರವು
ಮಾಪಿಂಡವಿರ್ದಲ್ಲಿ ರಕ್ತಮಾಂಸಾದ್ಯಢ
ವ್ಯಾಪಾರಿಯಾಗಿರುತ್ತಲ್ಲಿಂದ ಬಳಿಕಲಿಪ್ಪತ್ತೈದು ದಿವಸದಲ್ಲೀ ೩೯

ಬೀಜಕ್ಕೆಯಂಕುರಂ ತೋರ್ಪಂದವಪ್ಪುದೈ
ನ್ಯೆಜದಿಂ ಮಾಂಸಮಾತ್ರಕ್ಕೆರಡು ತೊಡೆ ಭುಜ
ವ್ಯಾಜ ಶಿರದಂತವೆನಿಪ್ಪೈದು ಮೊಳೆಯುಪ್ಪವಂತೆರಡು ತಿಂಗಳೊಳು ಕೊರಲೂ
ಓಜೆಯಿಂ ಮಸ್ತಕಸ್ಕಂದವಾ ಪೃಷ್ಟವಂ
ಸೋಜನಿತ ಕುಕ್ಷಿಕರ ಚರಣ ಪಾರ್ಶ್ವಂಕಟಿಸ
ಮಾಜಗಾತ್ರಂ ಮೂಱು ತಿಂಗಳೊಳು ಸರ್ವಾಂಗದಂಕುರದ ಸಂಧಿಗಳಲಾ ೪೦

ಪುಟ್ಟುವವು ನಾಲ್ಕು ತಿಂಗಳೊಳು ಬೆರಲಪ್ಪವೈ
ಕಟ್ಟೆಸಕದೈದಱೊಳುಮಾ ಕರ್ಣ ನಾಸಿಕಂ
ನೆಟ್ಟನಾಱಱೊಳು ಗುಹ್ಯಂ ದಂತಪಙ್ಕ್ತಿಗಳು ನಖಕರ್ಣವಿರಳಂಗಳೂ
ಪುಟ್ಟುವವುಪಸ್ಥಂ ಮೇಢ್ರಂ ಪಾಯುನಾಭಿಗಳು
ಪುಟ್ಟುವವು ಮೆಯ್ಯ ಸಂಧುಗಳೇಳುಮಾಸದೊಳು
ತೊಟ್ಟನಂಗಂಗಳಾ ಪ್ರತ್ಯಂಗ ಕೇಶಂಗಳೆಂಟು ಮಾಸದೊಳಪ್ಪವೂ ೪೧

ಆಯೆಂಟು ಮಾಸದೊಳು ನರರೋಮ ಸಹಿತಶುಭ
ಕಾಯನಾಗುತ್ತಲಿಂತಲ್ಲಿ ಪಂಚಾತ್ಮಕ ಸ
ಮಾಯುಕ್ತ ಪರಿಪಕ್ವನಾಗಿರ್ದು ತಾಯಿ ಕೊಂಡಾ ಷಡ್ರಸಾನ್ನರಸಮಂ
ಓಯಾರದಿಂ ನಾಭಿಸೂತ್ರಬಂಧದಿನೀಂಟಿ
ಯಾಯಣುಗನತಿಶಯದೆ ವರ್ಧಿಸುತ್ತಿಹನಲಾ
ನ್ಯಾಯದಿಂದಾವೇಳೆಯುಪ್ಪದಾ ಪೂರ್ವಸಂಸ್ಮರಣ ಶಿವಕಾರುಣ್ಯದಿಂ ೪೨

ಹಿಂದೆ ಕೋಟಾಕೋಟಿ ಜನ್ಮದೊಳು ತಾಂ ಹುಟ್ಟಿ
ಹೊಂದಿರ್ದುದಂ ಪರಮ ಗರ್ಭೋಪನಿಷದರ್ಥ
ದಿಂದಱೀವನಿರುಳು ನಿದ್ರೆಯೊಳು ಕಂಡಿರ್ದ ಕನಸಂ ಪಗಲೊಳೆಚ್ಚರುತ್ತಾ
ಒಂದೊಂದವೆಲ್ಲವಱೀವಂತಷ್ಟಮಾಸದೊಳು
ಸಂದೇಹಿಸದೆ ತಾಯ ಗರ್ಭದೊಳಗೂರ್ಧ್ವಮುಖ
ದಿಂದಲಾದರ್ಭಕಂ ವಿನುತ ದಿವ್ಯಜ್ಞಾನದರ್ಭಕಂ ನೆನೆದು ನುಡಿವಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂರ್ವದೊಳು ನಾನುದಯಿಸದ ಯೋನಿಯಿಲ್ಲವೈ
ಸರ್ವ ಜೀವಸ್ತನ್ಯಪಾನವಮಂ ಮಾಡಿಯುಂ
ತರ್ವರ್ತಿಯಾಗಿಕೊಂಡೆನು ಬಹುವಿಧಾಹಾರವಮಂ ಬಳಿಕ್ಕೀ ಗರ್ಭವಮಂ
ನಿರ್ವಹಿಸಿಯೊಗೆದೆನಾದೊಡೆ ಹಿಂದಣಂತಲ್ಲ
ವೂರ್ವಿಯೊಳು ಪಾಪಂಗಳೆಂಬವಂ ಮಾಡೆನಾಂ
ಗರ್ವಮಂ ಬಿಟ್ಟು ಸದ್ಭಾವದಿಂ ಶಂಕರನ ಭಜಿಸಿ ಮುಕ್ತಿಯುನೆಯ್ದುವೆಂ ೪೪

ಶಿವಶಾಸ್ತ್ರ ಶಿವಪುರಾಣಂಗಳಂ ಭಕ್ತಿಯಿಂ
ದವೆ ಕೇಳ್ವೆನಧಿಕ ಸನ್ಮಾರ್ಗದಿಂದಾಂ ವರ್ತಿ
ಸುವೆನಖಿಳ ನರಕಮಂ ಕಂಡೆನುಂಡೆಂ ದಣಿದೆನಕ್ಕಟಾ ಹಿಂದೆಯಾನೂ
ವಿವಿಧ ಗರ್ಭಂಗಳಂ ಹೊಕ್ಕಲ್ಲಿ ಬಾಧೆಯಿಂ
ನವೆವುದಂ ನೆನೆಯಬಹುದೇ ಎಂದೆನುತ್ತಲಂ
ತವರ ಸಂಕಟವನಾ ಗರ್ಭಸ್ಥನಱಿವುದಂ ಕೇಳೆಂದನಾ ಷಣ್ಮುಖಂ ೪೫

ಗಿರಿಬಂದು ಮೇಲೆ ಬಿದ್ದಿರ್ದಂತೆ ಮಾಸು ಮುಸು
ಕಿರಲಧಿಕ ಬಾಧೆ ಕಾದಿರ್ದಂಬುಧಿಯ ನೀರೊ
ಳಿರರೆ ಮುಳುಗುತ್ತುಬ್ಬಸಂಗೊಂಡ ಮಾಳ್ಕೆಯಿಂ ಗರ್ಭೋದಕದೊಳುಮುಳುಗೇ
ಮರಣೋಪಮಾನದುಃಖಂ ಲೋಹಕುಂಭದೊಳ
ಗಿರಿಸಿ ಎಣ್ಣೆಯು ಹೊಯ್ದು ಮುಚ್ಚಿ ಬೇಯಿಸಿ ಬೇವ
ಪರಿಯಿಂದ ಜಠರಾಗ್ನಿಯಿಂ ದಗ್ಧವಾಗುತಿರ್ಪಂ ಗರ್ಭದೊಳಗರ್ಭಕಂ ೪೬

ಕಾದ ಸೂಜಿಗಳ ಸರ್ವಾಂಗದೊಳು ಬಲಿವುತಿರ
ಲಾ ದುಃಖದಿಂದಲತಿಶಯ ಸಮಾನೋದರದ
ಬಾಧೆಯುಂತಾ ಸ್ಥಿರಚರಾದಿಗಳಿಗಂ ಗರ್ಭವತಿ ನಿಗ್ರಹಂ ಬಳಿಕ್ಕಾ
ಮೇದಿನಿಯೊಳಂ ಮರಳಿ ತಾಯ ಪೊಡೆಯೊಗದಂತೆ
ಮಾದೇವನಂ ಭಜಿಸಬೇಕದಕೆ ನೋಱಮಡಿ
ಯಾದ ಸಂಕಟವಲಾ ಯೋನಿಯಿಂ ಪೊಱಮಡುವ ಚಿಂತೆಯದನೇನೆಂಬೆನೂ ೪೭

ಕಂಬಿಯುಚ್ಚಿನೊಳಿಕ್ಕಿಸಮದೊಳಂ ಪಿಡಿದು
ಚೆಂಬೊನ್ನ ಸರಿಗೆಯುಂ ನಿಗುರ ತೆಗೆವಂತೆ ಬಳಿ
ಕಂ ಬಲ್ಲಿತಪ್ಪಾಲೆಗಾಣಂಗಳಲ್ಲಿಯುರೆಯುಲಿಯಿಕ್ಷುತಿಲವಾವಗಂ
ತುಂಬಿರ್ದ ರಸವಿಳಿದು ನಿಸ್ಸಾರವಪ್ಪಂದ
ದಿಂ ಬರಲುಬೇಕಲಾ ಯೋನಿಯಿಂ ಶಿಶುವದಱ
ನಿಂ ಬಹುಲ ದುಃಖವೇಗಂಗದೊಳಗಣ ಧಾತುಗಣನೆಯುಂ ಬಿತ್ತರಿಪೆನು ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ದೇಹವೆಂಬ ಮನೆಗಸ್ಥಿಯೇ ಮೇಲ್ವಲಗೆ
ತೊಲೆ ಮುಂಡಿಗೆಗಳವಂ ನರವೆಂಬ ಪಾಶವೇ
ಬಲಿದು ಕಟ್ಟಿರ್ಪವಾ ರಕ್ತಮಾಂಸಂಗಳೇ ಮೆತ್ತಿರ್ದ ಮಣ್ಣು ಮೂತ್ರಾ
ಮಲವಲ್ಲಿ ಭಾಜನಂ ಕೇಶರೋಮಂಗಳೇ
ಹುಲುವೊದಕೆ ರೋಗಾಳಿಯಲ್ಲಿಯ ಕುಟುಂಬವೈ
ಸಲೆಜಿಂಹ್ವೆಯೇ ಬಾಗಿಲೆಂಟು ಖಂಡಿಗಳೇ ಗವಾಕ್ಷಂಗಳೆನಿಸಿಪ್ಪವೂ ೪೯

ತುಟಿಯೆರಡು ತಾರುಗದವುಗುಳು ಪಲ್ಲಗುಳಿಯುು
ತ್ಕಟದ ನಾಡಿ ಸ್ವೇದವಾ ಪ್ರವಾಹಂರಾಳ್ಕೆ
ಘಟಿಸಿ ಕಫ ಪಿತ್ತಸಪರಿಪ್ಲು ತಜರಾಮರಣ ಕಾಲಚಕ್ರಾಗ್ನಿಯಲ್ಲೀ
ನಟಿಸಿ ಕಾಮಕ್ರೋಧವೆಂಬಿಂಧನಂಗಳಿಂ
ಪಟುವಾಗುತಿಹ ಮಹಾ ವ್ಯಸನದಿಂ ಮರ್ದಿತದೆ
ಸಟೆಯಾದ ಭೋಗತೃಷ್ಣಾತುರಂ ಮೂಢ ರಾಗದ್ವೇಷವಶವೆನಿಪುದೂ ೫೦

ಆಯುತದ ಸಂವರ್ತಿತಾಂಗಪ್ರತ್ಯಂಗಂ ಜ
ರಾಯುು ಪರಿವೇಷ್ಟಿತಂ ದೇಹಸಂಕಟವೆನಿಸು
ವೀ ಯೋನಿಯಲ್ಲಿ ಹೊರಡುವ ಬಾಧೆಯೇ ಬೇಡ ಕಲ್ಪಕಲ್ಪಾಂತದಲ್ಲೀ
ಚೀಃಯೆನಿಪ ವಿಣ್ಮೂತ್ರರಕ್ತಸಿಕ್ತಂಗಳ
ನ್ಯಾಯತನುವರ್ತಿ ಪಂಜರಯುುತಂ ಭಾವಿಸಲು
ಹೇಯುವಂತೆಸೆವಂಗ ಕಿನ್ನಾಟಕೋಟಿರೋಮಗಳುಂಟವಱಗಣನೇ ೫೧

ಭಾಸುರ ಶತತ್ರಯಂ ಷಷ್ಟಧಿಕಯುಕ್ತಪಂ
ಚಾಸೀತಿಸಾಹಸ್ರಸಾರ್ಧತ್ರಿಕೋಟಿಯೆಂ
ಬೀಸು ಮೂರ್ವರೆಕೋಟಿಯೆಂಬತ್ತೈದುಸಾವಿರದ್ಧ ಮುನ್ನೂಱಱುವತ್ತಲಾ
ಆ ಸಕಲ ರೋಮದಂಗದೊಳು ದೃಶ್ಯಾದೃಶ್ಯ
ವೇ ಸಹಜವಾಗಿಯನಿತಕ್ಕನಿತುನಾಡಿಯುುಂ
ಟೈಸೆ ಯಂತಲ್ಲದೊಡೆಯಂತರ್ಗತೋದಕಂ ಬೆಮರಾಗಿಪೊಱಮಡುವುದೇ ೫೨

ದಂತವಾದ್ವಾತ್ರಿಂಶದಧಿಕವಿಂಶತಿನಖಂ
ಮುಂತೊಂದು ಮಾನ ಪಿತ್ಥಂ ಶ್ಲೇಷ್ಮವಾಱಮಾ
ನಂತದಾಶಾಪಲದ್ವಿದಶವದಱರ್ಧಮಾಂಸಂ ಹತ್ತುಪಲಮೇಧಸಂ
ಅಂತಾ ಮಹಾರಕ್ತವಾ ಪಲಲವಾಮಜ್ಜೆ
ಯಂತದಱಿೊಳರ್ಧವಾ ಶುಕ್ಲವರವನವಲಾ
ಯಿಂತೀ ಮಹಾಶುಕ್ಲದಿಂದೇಹಬಲವರ್ಧನಂ ಶಕ್ತಶತಫಲವಲಾ ೫೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಮಂ ಕೂಡೆ ಹಿರಿದಲ್ಲ ಕಿಱಿದೆನಿಸದೆಯು
ಖರ್ವಪುರುಷನ ತೂಕ ಪಲಸಹಸ್ರಂ ಕಣಾ
ಚರ್ವಿತದ ಭಕ್ಷಣದ ಪಾನೀಯ್ಯಸಂಬಂಧ ಮಲಮೂತ್ರವಪ್ರಮಾಣಂ
ಪೂರ್ವದಾತ್ಮಂ ಚಿರಂ ದೇಹವೆಂಬೀಗೃಹಂ
ನಿರ್ವಾಣಯುಕ್ತಿಯಿಂದಸ್ಥಿರಂ ವರಭೃಂಗ
ಮೌರ್ವಿಯಾತನ ಭಂಜಿಸಿದನ ಭಜಿಸುವದದೇ ಸಾಧನಂ ನರರಱಿಯರೂ ೫೪

ಅವಿಶುದ್ಧ ಶುಕ್ಲ ಶೋಣಿತದ ಸಂಬಂಧದಿಂ
ದವೆಯಾದುದಿಂತಿದಂ ಶುದ್ಧವೆಂದಜ್ಞಮಾ
ನವರು ಮರೆದೀ ದೇಹಪೋಷಣಕ್ಕಖಿಳ ದುಷ್ಕರ್ಮಂ ಮಾಡುತಿಹರೂ
ಅವರಲಾ ಜಠರಗರ್ದಭರೂಪರೀಶರೀ
ರವನದೇವಂಣಿಪೆಂ ಮಲಮೂತ್ರಮಾಂಸದಿಂ
ದವೆ ಹೀನಜಲವೊಂದಿ ಹುಳಿವುದಕೆಕೊಳೆವುದಕೆ ಕಾರಣವಿದೆಂದಱಿಯರೂ ೫೫

ಕುಂಭವೊಂದಱೊಳು ಜಲಮಂ ತುಂಬಿ ಮೇಲೆಸೌ
ರಂಭದಿಂ ಮುಚ್ಚಿ ಬಾಯಂ ಕಟ್ಟಿಯುದಗಂಗೆ
ಯಂಭಸ್ಸಿನಿಂ ತೊಳೆದು ಕಸ್ತೂರಿ ಗಂಧ ಪುಷ್ಪಾಭರಣವಸ್ತ್ರಂಗಳಿಂ
ದಂಭತ್ವದಿಂದಲಂಕರಿಸಲಾ ಶೋಭನಾ
ರಂಭದಿಂದದು ಶುದ್ಧವಪ್ಪುದೇ ಮನುಜರಾ
ಶುಂಭತ್ವದಿಂ ಹಡಿಕೆಯಾದಂಗವಂ ನಾಡೆ ಸಿಂಗರಿಸುತಿಪ್ಪರಕಟಾ ೫೬

ನಿರ್ಮಲೋದಕವಮಲ ವಸ್ತ್ರಕಸ್ತುರಿ ಮುಖ್ಯ
ಶರ್ಮಲೇಪನವಸ್ತು ದಿವ್ಯಾನ್ನತಾಂಬೂಲ
ಭರ್ಮಾಖ್ಯಚಂಪಕಾ ಮಲ್ಲಿಕಾ ಜಾತಿಮುಖವಾದ ಪುಷ್ಪಂಗಳೆಲ್ಲಾ
ಆರ್ಮಾನಸರ ಸೋಂಕಲಪವಿತ್ರವಾಗುತ್ತ
ನೀರ್ಮಿಂದುದಿದುವೆ ಮೈಲಿಗೆ ಬೆಮರನಾಂತುದುಮಿ
ವರ್ಮೊದಲೊಳುಂಡು ಮುಡಿದೆಂಜಲೀ ತಂಬುಲವೆನುತ್ತ ಹೇಹಂಮಾಳ್ಪರೂ ೫೭

ಆವುದೊಂದುತ್ತುಮದ ವಸ್ತು ಮನುಜರ ಸೋಂಕೆ
ಪಾವನತ್ವಂ ಪೋಗಿ ಛೀಯೆನಿಸಿಕೊಂಬವ್ವೆ
ಭೂವಳಯದೊಳಗನ್ಯರೇ ಬೇಡವ್ವೆ ತನ್ನ ತನುವಿಂ ಬಹಿಷ್ಕರಿಸಿದಾ
ಆ ವಾಯು ತನ್ನಂಗದಿಂದ ಪೊಱಮಟ್ಟು ಮಲ
ವೇ ವಿಶೇಷದ ಹೇಹವಾಗಿ ಮೂಗಂ ಮುಚ್ಚಿ
ದೀ ವಿಚಾರದ ನೀಚದೇಹಮಂ ನಂಬಿಕೊಂಡಿಪ್ಪ ನರರೇಂ ಮೂಢರೋ ೫೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಗವ್ಯಂ ವೃತ್ತಿಕಾ ನಿರ್ಮಲೋದಕಗ
ಳಿಂ ಚಾರತರದಿಂದ ತೊಳೆದಡೇಂ ದೇಹಪ್ರ
ಪಂಚುವದು ಶುದ್ಧವಪ್ಪುದೆ ಮಸಿಯ ಪಾಲಿಂದ ತೊಳೆಯಲದು ಬಿಳಿದಪ್ಪುದೇ
ವಂಚಿಸದೆ ಬಲ್ಪಿಂದಲಲುಬಿ ಕುದಿಸುತ ತೊಳೆಯೆ
ಮುಂಚಿರ್ದ ತೆಱದೊಳಲ್ಲದೆ ಕರಿಯ ಕಂಬಳಿಯ
ದೇಂ ಚಚ್ಚರದಿ ಶುಭ್ರವಪ್ಪುದೇ ಯತ್ನದಿಂದಧಮ ತನು ಶುಚಿಯುಪ್ಪುದೇ ೫೯

ಗಿರಿಯಿಂದಲೊಸರಿ ಪರಿವಂತೆ ತನ್ನಯ ಕಳೇ
ವರದಿಂದ ಕಫ ಮೂತ್ರ ಪಿತ್ಥಂಗಳುದಿಸಿ ಸ
ರ್ವರಿಗೆ ತನಗಂ ಹೇಹಮಂ ಹುಟ್ಟಿಸುವ ತನುವ ಶುದ್ಧಮಂ ಮಾಳ್ಪೆನೆಂಬಾ
ನರನದೇಂ ಶುದ್ಧವಪ್ಪನೆ ತೈಲಮಂ ಪೂಸಿ
ಯುರುತರೋದಕವೆಱದು ಕಂಬಿಯಂ ಕಟ್ಟಿಕು
ಕ್ಕುರನ ಬಾಲಂ ನೇರವಪ್ಪುದೇ ಯಿದನಱಿದು ತೊರೆದಕಟಾ ವಿರಕ್ತೀ ೬೦

ಉತ್ತುಮಸ್ಥಲವಾದ ಭೂಮಿಯೆಡೆಗಂ ಮನುಜ
ರೆತ್ತಾನುವೊಂದು ದಿನವಿದ್ದಲ್ಲಿ ಮಲಮಂ ಬಿ
ಡುತ್ತಿರಲದ ಪವಿತ್ರಭೂಮಿಯಹುದದಱಿಂದ ಲೋಕವೆಲ್ಲಂ ಪವಿತ್ರಂ
ಮತ್ತಧಮ ದೇಹಿ ತಾನಪವಿತ್ರನೆಂದಱಿದು
ಚಿತ್ತಶುದ್ಧದೊಳು ದೇಹಪರಕ್ತಿಯಿಲ್ಲದೆ ಕೆ
ಡುತ್ತಿಪ್ಪರೀ ಲೋಕದವರೆಂದು ನೆನೆವನರ್ಥಕನದೇಂ ವರ್ಣಿಸುವೆನೂ ೬೧

ನಗದನಿತು ವೃತ್ತಿಕೆಯನಿಕ್ಕಿ ಗಂಗೆಗಳವಾ
ರಿಗಳೆನಿತುಮನಿತು ನೀರಿಂ ತೊಳೆಯೆ ಶುಚಿಯಹನೆ
ಮಿಗೆ ತೀರ್ಥಸುಸ್ನಾನ ತಪದಿಂದ ದುಷ್ಟಾತ್ಮನಪ್ಪವಂ ಶುದ್ಧನಹನೇ
ಜಗದಲ್ಲಿ ಭಾಗೀರಥೀನದಿಯೊಳುಂ ನಾಯ
ತೊಗಲ ತೊಳೆಯಲ್ಕದು ಪವಿತ್ರವಪ್ಪುದೆ ಮನದೊ
ಳಗೆ ರೋಶವಿರ್ದಶನಮಂ ಬಿಟ್ಟು ದೇಹಬಣಗಿಸಲದೇಂ ಫಲವಪ್ಪುದೇ ೬೨

ಭಾವಶುದ್ಧಿಯೆ ಮಿಗಿಲೆನಿಪ್ಪ ಶೌಚಂ ಕಣಾ
ಆವನೋರ್ವಂ ಪುರುಷನೆಯ್ದೆ ದೇಶಾಂತರದ
ಠಾವಿಂದ ಬಂದು ಯೌವನೆಯಾದ ಮಗಳು ನಮಿಸಲ್ಕೆ ತರ್ಕೈಸಿಕೊಳಲು
ಮೋವು ಉತ್ತುಮ ಮೋಹವದು ಬೇಱೆ ನಿಜಸತಿಯ
ನಾ ವಿಷಯದೊಳಗಪ್ಪುವುದು ಬೇಱೆಯಪ್ಪಂತೆ
ಭೂವಳಯದೊಳು ನಿಂದ್ಯವಸ್ತುವಂ ಬಿಟ್ಟನಿಂದ್ಯಂಗಳಂ ಕೈಕೊಳ್ವುದೂ ೬೩

CC0. In Public Domain. Jangamwadi Math Collection, Varanasi

ನೆಟ್ಟನಾ ಸ್ತನ್ಯಪಾನಾರ್ಥಿ ಶಿಶು ಯೌವನೆಯ
ಬಟ್ಟಮೊಲೆಯಂ ಪಿಡಿಯೆ ಕಾಮವಿಲ್ಲದೆ ಹಾಲು
ತೊಟ್ಟಿಡಲು ತೋರೆವ ಬಗೆಯೊಂದಾ ಪುರುಷ ಕರಗ್ರಹಣದಿಂ ಮೈರ್ಝುಮ್ಮಿಡೇ
ತೊಟ್ಟನೊದಗುವ ಸೌಖ್ಯವದು ಬೇಱೆಯಪ್ಪಂತೆ
ಕಟ್ಟೆಸಕದಿಂ ಮನವನನ್ಯಾಯ ವಸ್ತುಗಳೊ
ಳಿಟ್ಟರರೆ ಸದ್ಭಾವಕಳವಡಿಸುವಾತನೇ ಸುಜನನೆಂದಱಿದಿಪ್ಪುದೂ ೬೪

ಈ ನಾಡಮಣ್ಣನೀರಿಟ್ಟಂಗಮಂ ತೊಳೆದು
ಲೇನಾಯ್ತು ಚಿತ್ತಮಂ ತೊಳೆಯಬೇಕೈಯ್ಯಸು
ಜ್ಞಾನಾಮಲಾಂಬುವಿಂ ವೈರಾಗ್ಯಮೃತ್ತಿಕೆಯನಿಟ್ಟವಿದ್ಯೆಗಳೆನಿಸುವಾ
ಆ ನಿಖಿಳ ವಿಣ್ಮೂತ್ರಮಂ ತೊಳೆದನೇ ಶುದ್ಧ
ನೈನಿರುತವೆಂದಱಿಯಬೇಕಲಾ ಪ್ರೌಢರೀ
ಹಾನಿಗೊಳಗಪ್ಪದೇಹವನೆ ರಕ್ಷಿಪೆನೆಂದೊಡಂತದತಿಶಯವಪ್ಪುದೇ ೬೫

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವಡಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲ್ಯಣಾರ್ಯ್ಯಂ
ಶೀಲಪಟ್ಸ್ಥಲಿಹಲಗೆಯಾಚಾರ್ಯ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೬೬

ಇದು ವೀರಶೈವ ಷಟ್ಸ್ಥಲಮಾರ್ಗ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಗರ್ಭದರ್ಭಕನುಡಿ ಮೂಱು ಕಾಂಡಮೇಲಿಪ್ಪತ್ತುಒಂದು ಸಂಧೀ ೬೭

ಅಂತು ಸಂಧಿ ೨೧ ಕ್ಕಂ ಪದನು ೧೧೨೨ ಕ್ಕಂ ಗ್ರಂಥ ೬೧ ಕ್ಕಂ

ಮಂಗಳಮಹಾ

ಶ್ರೀ ಶ್ರೀ ಶ್ರೀ

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೮

ಗರ್ಭಸ್ಥ ಶಿಶುವು ಪೂರ್ವಜನ್ಮಸ್ಮರಣೆಯಂ ಮಾಡುವಿಕೆ

ಆ ಗರ್ಭದರ್ಭಕಂ ಪೂರ್ವಜನ್ಮದ ಕರ್ಮ
ದಾಗುಹೋಗಿಂದಾದ ಚಿಹ್ನಮಂ ಸ್ಮರಿಪನಂ
ದಾಗಮಾರ್ಥದೊಳು ಹಲಗೆಯು ದೇಶಿಕಂ ಕೆಂಚವೀರಾಹ್ವಯಂಗೊರೆದನೂ

ಶೃಂಗಾರವಗಜೆಯಿಂ ವೀರವಲಗುಗಳಿಂದ
ಪಾಂಗುವಿಂ ಕರುಣವಾ ತ್ರಿಪುರಂಗಳಂ ಸುಟ್ಟ
ಕಂಗಿಡಿಯಿನದ್ಭುತಂ ಸೇವಿಸುವ ಭೂತಗಣದಿಂ ಹಾಸ್ಯವಹಿಯಿಂ ಭಯಂ
ಹಾಂಗೆ ಭೀಭತ್ಸಾನೆದೊವಲಿಂದೆ ಕೂಗುವ ಶಿ
ರಂಗಳಿಂ ರೌದ್ರವಿಂದುವಿನಿಂದೆ ಶಾಂತಿಯಾ
ಕಂಗೊಳಿಪ ನವರಸಂಗಳಿನೆಸೆವ ಶಾಂತಮಲ್ಲೇಶ ಜಯಸುಪ್ರಕಾಶಾ ೧

ಸಮದನೆನಿಸುವ ಪಂಚಮೇಢ್ರನಾ ನರಸಿಂಹ
ಕುಮತಿಯಾ ವ್ಯಾಳಾಸುರಂ ದಕ್ಷನಸುರಪತಿ
ತಮರೈವರಂ ಕೊಂದ ಪಂಚವಿರೇಶರ್ಗೆ ರುದ್ರಂ ಪ್ರಸಾದವಿತ್ತಾ
ಕ್ರಮವಿಧಾನದೆ ಶಿಷ್ಯಪೂರ್ವದೋಷಂಗಳಂ
ಶಮನಮಂ ಮಾಡಬೇಕೆಂದು ಗಣಪರ್ವದೊಳು
ಸಮತಿಗಳ ಮಾಡಿಸುವ ಶಾಂತನಂಜೇಶ ಗುರುರಾಯ ಜಯದಿವ್ಯಕಾಯಾ ೨

ಮತ್ತೆಯಷ್ಟಮ ಮಾಸಮಂ ಕಳೆದ ಶಿಶು ಚಿಂತಿ
ಸುತ್ತಿಹುದು ರಾಜ್ಯದಿಂ ಧರ್ಮ ಧನ ಸೌಖ್ಯಂಗಳ
ಳುತ್ತಂಮಂಗಳುಮಪ್ಪವೆಯ್ದೆ ಮರುಜನ್ಮದೊಳಧರ್ಮಮಂ ಮಾಡಿದವರೂ
ಸತ್ತುಹುಟ್ಟಿದ ಬಳಿಕ ಲೆಂತಪ್ಪರೆನಲಾಗಿ
ಬಿತ್ತಂಪೆನಿಳೆಯೊಳಾಕ್ಷಯರೋಗಿಯಾಗಿ ನವೆ
ವುತ್ತಿಪ್ಪನೈಬ್ರಹ್ಮಹತಿಯು ಮಾಡಿದವನೆಂದಱಿಯಬೇಕೈ ತಜ್ಞರೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂತೆಯಿಂ ಕಪ್ಪಾದ ಹಲ್ಲುಗಳು ಮೆಱೆವುತಿ
ಪ್ಪಾತನೇ ಮುನ್ನ ಸುರೆಯಂ ಕುಡಿದನೆಂದಱಿವು
ದೈ ತರುಣ ಬಳಿಕಗುರು ಕೆಟ್ಟಿರ್ದವಂ ಮೊದಲ ಜನನದೊಳು ಚಿಹ್ನಂಗಳಾ
ಆತನೆಂದಱಿವುದೈದು ಶರ್ಮನುಂ ಹೆಳವ
ನೇ ತೆಱದಿ ಕುರುಡರಿವರೆಯ್ದೆ ಗುರುತಲ್ಪಗರ
ಲಾ ತಿಳಿಯೆ ಕಿವುಡನೇ ಮೊದಲ ಜನ್ಮದೊಳು ದೇಶಿಕನಿಂದೆಯಂ ಕೇಳ್ದವಂ ೪

ಉನ್ನತದ ಮೂಕನಾಗಿರ್ದವಂ ಪೂರ್ವದೊಳು
ತನ್ನ ತಾನೇ ಹೊಗಳಿಕೊಂಡವಂ ಪ್ರತಿಹಸ್ತ
ನನ್ನಯದೊಳಂ ಸ್ವಾಮಿನಿಂದಕನಪಸ್ಮಾರಕಂ ಗುರುವ ಜರೆದಾತನೈ
ತನ್ನ ಮೈಯ್ಯೊಳು ಬಗಂಧರವಾದವಂ ದೇಶಿ
ಕನ್ನಿರೂಪಿಸೆ ಮೀಱಿದಾತಂ ಸ್ವಮಲವನೆ
ತಿನ್ನುತೀವಜ್ರಿಯ ಮರಿಗಳೆಂದು ಬಾಳ್ವನೇಯಾರ್ಯನೊಳು ಮತ್ಸರಿಸಿದಂ ೫

ಐಸಲೇ ದುಃಪ್ರಜ್ಞನೇ ಗುರುನಿರೂಪವನು
ದಾಸೀನಮಂ ಮಾಡಿದಂ ಕಲಾರಹಿತ
ನಾಸುರದ ಕೋಪಿಯೇ ಗುರುವಿನೊಳು ಹುಸಿಯನುಡಿದಾತಂ ಶಿರೋರೋಗಿಯೈ
ಭಾಸುರದ ಗುರುನಿರೂಪಕ್ಕೆ ಸೊಗಸದವನೈ
ಹೇಸಿಕೆಯ ಚಾಂಡಾಲನಾದನೇ ಗುರುಪೇಳಿ
ದೈಸು ಸತ್ಕರ್ಮಮಂ ಮಾಡದಾ ಗುರುವ ಧಿಕ್ಕರಿಸಿದವನೆಂದಱಿವುದೂ ೬

ಎನೆ ಕೆಂಚವೀರಾಹ್ವಯಂ ನುಡಿದನೆಲೆ ಗುರುವೆ
ಜನನಾಥನಾ ತ್ರಿಶಂಕುವೆನಿಪ್ಪವಂ ಮುನ್ನೆ
ಮುನಿ ಗುರುವಶಿಷ್ಟಶಾಪದಿನನಾಮಿಕನಾದುದಿಂತೀಗಳಿಂತೀ ಕರ್ಮವೇ
ತನಯ ಕೇಳಹುದೆಂದು ಹಲಗೆಯಾರ್ಯಂ ನುಡಿದ
ನನಘ ಕೇಳಾ ಕಥೆಯದೆಂತೆನೆ ಹರಿಶ್ಚಂದ್ರ
ಜನಕನಾ ನಿಜಗುರುವಿನೆಡೆಗೆಯ್ದಿ ವಂದಿಸುತ ನಿಂದಿರ್ದ ಕಾಲದಲ್ಲೀ ೭

ಆ ವಶಿಷ್ಠಂ ನುಡಿದನೊಲವಿಂ ತ್ರಿಶಂಕುಸ
ದ್ಭಾವರಾ ನಿನ್ನಿಷ್ಟವೇನೆಂದು ಕೇಳಲೆಲೆ
ದೇವ ರಂಭೆಯ ಕೂಟಮಂ ಸ್ವಪ್ನದಲ್ಲಿ ನಾ ಕಂಡೆನದ ಸಿದ್ಧಿಸುವುದಾ
ನೀವು ಕರುಣಿಪುದೆನಲು ಹಯಮೇಧಮಂ ಮಾಡೆ
ದೇವೇಂದ್ರಪದವಪ್ಪುದವಳೊರ್ವಳಲ್ಲಖಿಳ
ದೇವತಾಸ್ತ್ರೀಯರೇ ನಿನ್ನ ಭೋಗಸ್ತ್ರೀಯರಪ್ಪರೈ ಮಗನೆಯೆಂದಂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನಲಶ್ವಮೇಧಯಜ್ಞದ ಬಗೆಯದೆಂತು ಪೇ
ಳ್ಮುನಿನಾಥಯೆನೆ ಲಕ್ಷಣಾಶ್ವಿಮರಿಯಂ ಕಾಣ್ಬ
ದಿನದಲ್ಲಿ ಹೊನ್ನಹರಿವಾಣದೊಳು ತದ್ವಿಧಾನದೊಳಾಂತು ಕಗ್ಗತ್ತಲೇ
ವನೆಯಲ್ಲಿ ಸಲಹಿ ಹದಿನೆಂಟು ತಿಂಗಳು ಕಳೆದ
ವಿನುತ ಹಯರತ್ನಮಂ ಬಿಟ್ಟದಱ ಹಜ್ಜೆಪಾ
ಯನಿತನಿತರೊಳು ಹೊಸ ಹೊನ್ನ ಹೊಯಿ ಹೊಯಿದು ಕೊಂಡದೇ
ಕಂಗೆಟ್ಟು ಬೀಳ್ವನ್ನಗಂ ೯

ಪರಿದೆಯ್ದಿಯಾ ಹೊನ್ನನೆಲ್ಲಮಂ ದಾನಿಮಿ
ತ್ತರಸ ಕೇಳಿಂತು ಶತಯಜ್ಞಮಂ ಮಾಡಿದಡೆ
ಸುರಪತಿಯ ಪದಮಪ್ಪುದೆನಲು ತ್ರಿಶಂಕುವೆಂದಂ ನಾನಿನಿತು ಕೋಟಲೇ
ವೆರಸಿ ಮಾಡುವೊಡೆ ನೀನಾರ ಹಿಂದಂ ಹಿರಿಯ
ಗುರುವಾದೆ ಸುಮ್ಮನೆ ಮಾಡಿಕೊಡಲಿಲ್ಲವೇ
ಹಿರಿಯನೇ ನೀನೆನಲು ಕೋಪಿಸುತ ಶಾಪಮಂ ಹಿಡಿ ಎಂದನಾ ವಶಿಷ್ಠನೂ ೧೦

ಎಲವೊ ನೀನೆಮ್ಮೊಳಿದಿರುತ್ತರವನಾಡಿದ್ಯೆ
ಹೊಲೆಯನಾಗೆನಲಾಗಿ ನಿನ್ನ ಗುರುತನವೊಂದು
ಹುಲುಗೆ ಸಮವ್ಯೆ ನಿನಗೆ ಕೋಟಿಮಡಿಯಾದ ವಿಶ್ವಾಮಿತ್ರದೇವಚರಣಾ
ಜಲಜಮಂ ಕಂಡು ಪಡೆದಪ್ಪೆನೆನುತಂ ಹೋಗಿ
ತಲೆಯನಂಘ್ರಿಗೆ ಸಾರ್ಚೆ ಕೌಶಿಕಂಗೆಱಗೆ ಭೂ
ತಲನಾಥ ನೀನೇನು ಕಾರಣಂ ಬಂದೆಯೆಮ್ಮೆಡೆಗೆಂದನಾ ಮುನೀಶಂ ೧೧

ಯತಿಯ ಕಂಡಾ ಭಕ್ತಿಯಿಂದಂ ತ್ರಿಶಂಕುಭೂ
ಪತಿ ಬಿನ್ನಪಂಗೆಯ್ದನೆಲೆ ಗೂರೂತ್ತಮ ನೀನೆ
ಗತಿಯೆಂದು ಬಂದೆನೆನಲೇಂ ಕಾರಣಂ ಭೂಪ ಯನೆ ಜೀಯ್ಯವಾಶಿಷ್ಠನೂ
ರತಿ ರಂಭೆಯೊಳಗಾಗಬೇಕೆನಲು ನೀಂ ಶತ
ಕ್ರತುವ ಮಾಡೆನೆ ಸುಮ್ಮನೀಯ್ಯೆನಲ್ಕುಱಿ ಕೋಪಿ
ಸುತ ಹೊಲೆಯನಾಗೆಂದು ಶಾಪಮಂ ಕೊಟ್ಟನೆನ್ನಂ ಸಲಹು
ಜೀಯ್ಯಯೆಂದಂ ೧೨

ಹರುಷಿಸಿದನಲ್ಲಿ ವಿಶ್ವಾಮಿತ್ರನಾ ಪರಂ
ಪರೆಯಿಂದ ಬಂದ ವ್ಯೆರದ ವಶಿಷ್ಠಮಾಡ
ಲರಿದಾದುದಂ ಮಾಡಿಕೊಟ್ಟಪೆನು ನಾನೆಂದು ಮಗನೆ ಬಾರೆಂದರಸನಾ
ಕರೆದೊಂದು ಪುಷ್ಪಕದೊಳಿರಿಸಿಯೋಲೆಯನೊಂದ
ಬರೆಸಿ ಸಾಮಾರ್ಥ್ಯಮುನಿಗಳ ಕೂಡಿಕೊಟ್ಟಲ್ಲಿ
ಧರೆಯಿಂದಲಾ ಸ್ವರ್ಗಕಟ್ಟಿದಂ ರಾಯನಂ ಬಂದರಾ ಸುರಪುರಕ್ಕೇ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಮರಾವತಿಯ ಪೊಗುತ್ತಲ್ಲಿ ಪುಷ್ಪಕದಿಂದ
ಲಮಮ ಭೂಪನನಿಳಿಪಿ ತಂದೂರ ಪೊಕ್ಕಲ್ಲಿ
ವಿಮಲ ಯತಿಗಳು ಭೂಪನುಂ ಬರಲು ಕಾಣುತಾ ಸ್ವರ್ಗವಾಸಿಗಳೆಲ್ಲರೂ
ಕ್ರಮದಿಂದ ನೀವಾರೆನುತ್ತ ಕೇಳಲು ಮುನ್ನ
ಕಮಲಭವನೊಡನೆ ವಾದಿಸಿದ ವಿಶ್ವಾಮಿತ್ರ
ರಮಣೀಯ್ಯಮುನಿನಿರೂಪಂ ಬೆರಸಿ ಬಂದೆವೆಂದೀಯ್ಯಲವರೋದಿದರಲಾ ೧೪

ಶ್ರೀಮದನುಪಮ ಶಿವಪದಾಬ್ಜ ಸಾಮರ್ಥ್ಯವಿ
ಶ್ವಾಮಿತ್ರಮುನಿವರಂ ದಿಕ್ಪಾಲಸುರರು ದಿವಿ
ಜಾಮರರ್ಗೆ ಕಳುಪಿದ ನಿರೂಪಂ ತ್ರಿಶಂಕುಭೂಪಾಲಂಗೆ ದೇವೇಂದ್ರನಾ
ಆ ಮಹಾ ಪಟ್ಟಮಂ ಕಟ್ಟಿ ಕಟ್ಟಿದೊಡೆ ಸುರ
ಭೂಮಿಯಂ ಬಿಟ್ಟೋಡಿಯಲ್ಲಿ ಸುಟ್ಟು ನಿ
ರ್ಧೂಮಮಂ ಮಾಡುವೆಂ ಸ್ವರ್ಗಮಂ ನಿಜಲಿಖಿತವೆಂದಿರಲ್ಕವರೋದುತಾ ೧೫

ಕೆಟ್ಟೆವಿನ್ನಾವು ತಳುವಂ ಮಾಡೆ ಸ್ವರ್ಗಮಂ
ಸುಟ್ಟುರುಪುವಂ ಮುನೀಶ್ವರನೆಂದವರ್ಚಿದರಿ
ಕಟ್ಟಿದರು ದೇವೇಂದ್ರಪಟ್ಟಮಂ ಕೂರ್ತಾ ತ್ರಿಶಂಕುಭೂಪಾಲಕಂಗೇ
ನೆಟ್ಟನಾ ಸಪ್ತರುಷಿಗಳನು ಮಂತ್ರಾಕ್ಷತೆಯ
ನಿಟ್ಟು ಹರಸುವೊಡೆ ಕರೆವಲ್ಲಿ ವಾಶಿಷ್ಟನೇ
ಕಟ್ಟಧಿಕ ನವನೆಮ್ಮ ಶಿಷ್ಯಂ ಗುರುದ್ರೋಹಿಯೆಂದವನ ಬಗೆಯ ಪೇಳ್ದಂ ೧೬

ಕೇಳಿ ಸಗ್ಗದ ನಿವಾಸಿಗಳೆಲ್ಲ ಸಂತಸಂ
ದಾಳಿದರು ಲೂಟಿಯಿಂದಿನ್ನು ಪಟ್ಟದೊಳು ಭೂ
ಪಾಳರೆಂದುಂ ಕುಳಿತುದಿಲ್ಲ ವಿಶ್ವಾಮಿತ್ರನನ್ಯಾಯದಿಂ ಕಳಿಪಿದಂ
ಕಾಳುತನದಿಂದ ಗುರುವಾಜ್ಞೆಯಂ ಮೀಱಿದಾ
ವ್ಯಾಳನಂ ತಗುಳ ಸಂದೆಗವೇಕೆನುತ್ತಂ ಥ
ಡಾಳಿಸುತ ನೂಕಿದರು ಚಕ್ರಿಕಾಪತನನ ನರಕಕ್ಕೆಯಾ ದೇವರ್ಕಳೂ ೧೭

ತಿಱು ತಿಱನೆ ತಿರಿಗಿಬೀಳುತ್ತಲ್ಲಿ ಭೂಭುಜಂ
ಮೊಱೆಯೊ ವಿಶ್ವಾಮಿತ್ರಗುರುವೆಯೆನುತ್ತ ಬರ
ಲೆಱಕದಿಂ ದೆಡೆಯಲ್ಲಿ ಬಂದಾಂತುಕೊಂಡು ಸುರಧೇನು ಸುರವೃಕ್ಷ ಪರುಷಾ
ಕಱಿವ ಹಯನೇ ಕಾಮಧೇನು ಚಿಂತಾರತ್ನ
ಉಱಿ ರಂಭೆ ಯೂರ್ವಸಿ ತಿಲೋತ್ತಮಾದಿಗಳಾದ
ಸಱಿಮಿಂಡಿಯರೊಳಹೋ ಪ್ರತಿಮಹಾಸ್ವರ್ಗಮಂ ಕಟ್ಟಿಕೊಟ್ಟಂ
ಮನಿಪನೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಲೆ ಸರ್ವಭೋಗದಿಂದಂ ಭೋಗಿಸುತ್ತಿರಲು
ವಲಯಕಟಕಂ ರತ್ನ ಮುಖ್ಯಭೂಷಣವೆಲ್ಲ
ಹೊಲೆತನದ ಭಂಗಾರವಪ್ಪವಾ ನುಡಿದ ನುಡಿ ಹೊಲೆ ಮೊರಹಿನಿಂ ಬಪ್ಪವೂ
ಎಲೆ ಗುರುವೆ ಕೆಟ್ಟೆ ನಿನ್ನಯ ಕರುಣವಾಗಿರ್ದು
ಹೊಲೆತನಂ ಬಿಡದಯ್ಯ ಸಾಮರ್ಥ್ಯನೆಂದು ಮುನಿ
ತಿಲಕ ಸಾರಿದೆನೆನ್ನ ರಕ್ಷಿಪುದನಾಮಿಕತ್ವವ ಕಳೆಯಬೇಕೆಂದನೂ ೧೯

ಮಗನೆಯಂಜದಿರೆಂದು ಸಂತೈಸಿ ಬಂದಾಗ
ವಿಗಡ ವಿಶ್ವಾಮಿತ್ರಮುನಿ ವಶಿಷ್ಠಾಧಿಪನ
ಮಗನೋರ್ವನಂ ಮತ್ತೆ ನೂಱು ಮಕ್ಕಳ ಕೊಂದೆನೆಂಬ ಲಜ್ಜೆಯ ನೋಡದೇ
ಮೊಗಗೇಡಿತನದೊಳಾ ವಾಶಿಷ್ಠನಾಲಯಂ
ಬೊಗಲು ವಿಶ್ವಾಮಿತ್ರನಂ ಕಂಡು ವಾಶಿಷ್ಠ
ನಗಜೇಶನಿಷ್ಠನೇಳ್ತಂದು ವಂದಿಸುತ ಬಿಜಯಂಗೈಸಿ ತಂದನಾಗಾ ೨೦

ಆ ಪಾದ್ಯವರ್ಘ್ಯವಾಚಮನಾದಿಗಳನೆಸಗಿ
ತಾಪಸರು ಬೆಱಗಾಗುತೀತನೆಯ್ತಂದು ದಿ
ನ್ನೇಪರಿಯೊ ಒದ್ಧವೈರವನುಳಿದು ನಡೆತಂದನೆನುತಿರಲು ಸತ್ಕರಿಸುತಾ
ಆ ಪೊತ್ತು ಮಡಗಿಕೊಂಡಿರ್ದು ಬೆಳಗಾದಲ್ಲಿ
ಪಾಪವಿರಹಿತ ವಶಿಷ್ಠಂ ಕೇಳ್ದನಾಂತವ
ಶ್ರೀಪಾದ ಸೇವೆಯಂ ಮಾಳ್ಪುದೇನನೆ ನುಡಿದನಲ್ಲಿ ವಿಶ್ವಾಮಿತ್ರನೂ ೨೧

ನೆಟ್ಟನಾ ಒಂದು ವಸ್ತುವ ಬೇಡಿದಪೆವದಂ
ಕೊಟ್ಟಪ್ಪವೆಂದಡುಸುರುವೆವೆನಲು ನೀತಿಯುಳ
ವಟ್ಟ ಸತ್ಪಾತ್ರವಾವನ ಕೂರ್ತು ಬಂದಲ್ಲಿ ದೇಹಮುಖ್ಯವನೀವುದೂ
ಕಟ್ಟಧಿಕವೆಂದು ಬಲ್ಲೆಂ ನಿರವಿಸೆಂದೆನಲು
ದಿಟ್ಟತನದಿಂ ನುಡಿದ ನಾಂ ಬೇಳ್ಪುದೀಗೆನ್ನ
ಪೆಟ್ಟಯರ್ಥಂ ತಪ್ಪದಯ್ಯ ಮುನಿ ಹುಸಿ ಮಹಾದೋಷವೆಂಬುದ
ಬಲ್ಲೆಯೈ ೨೨

ಇನ್ನು ಸಂದೇಹವೇತಕೆ ಬೇಡಿದಪೆವು ಮಹಿ
ಮೋನ್ನತಿಯ ನಿಮ್ಮ ಶಿಷ್ಯಂ ತ್ರಿಶಂಕುಕ್ಷಿತಿಪ
ನೆನ್ನ ಕಂಡವನ ರಕ್ಷಿಸಬೇಕು ನಿಮಗೆಮಗೆ ಭೇದವಿನಿತಿಲ್ಲವೈಯ್ಯಾ
ಇನ್ನವನ ಹೊಲೆತನವ ಕಳೆಯ ಬೇಕೆನಲಾಗಿ
ನನ್ನಿವಂತರ ದೇವನಾಗಲಿಯೆನುತ್ತಲವ
ನನ್ನಯವನೀಕ್ಷಿಸದೆ ಕೊಟ್ಟಂ ವಿಶಾಪಮಂ ಶುಚಿಯಾಗಿ ಬಾಳಲೆಂದೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮಾತಿಗಾ ವಶಿಷ್ಠನ ಪಾದದೊಳು ಬೀಳ
ಲಾ ಮುನಿಪನುಱೆ ಮರಳಿ ವಂದಿಸುತೆ ಕಳುಪಲಾ
ಭೂಮಿಪಂಗಂ ಮೂಱುಶಂಖವರುಷಾಯುಷ್ಯಮಂ ಕೊಟ್ಟು ರಕ್ಷಿಸಿದನೂ
ಈ ಮಾಳ್ಕೆಯುದಱಿಂದ ಗುರುವಿನೊಳುಕೆಟ್ಟು ನುಡಿ
ದಾ ಮಾನುಷನೆ ಹೊಲೆಯನಪ್ಪುದೇ ನಿಜವೆನಲ್
ಸ್ವಾಮಿಯರ್ಭಕನ ನುಡಿ ಮತ್ತಾವ ಚಿಹ್ನದರ್ಥಂಗಳಂ ಪೇಳೆಂದನೂ ೨೪

ಪಾಪಿಷ್ಠನಾದವಂ ಪೂರ್ವದೊಳು ಪತಿತನ
ಪ್ಪಾಪುರುಷನಗ್ನಿ ಕುಷ್ಠಂಗಳೆಂಬಾ ರೋಗಿ
ಯೇ ಪೆಣ್ಣುಮುಟ್ಟಲೆಯೊಳಿರೆ ರಮಿಸಿದಾತನೆಂದಱಿವುದೈ ಕೇಳು ಬಳಿಕಾ
ಏಪೇಳ್ವೆನ್ನೈ ಬಟ್ಟದೊನ್ನಾಗಿ ತೋಱುತಿಹ
ಕಾಪುರುಷನೇ ಮುನ್ನ ವಸ್ತ್ರವಂ ಕದ್ದವನ
ಲಾ ಪಿರಿಯ ಬಿಳಿದಪ್ಪ ತೊನ್ನುಳ್ಳವನೆ ಪೂರ್ವದೊಳು ಬೆಳ್ಳಿಯು ಕದ್ದವಂ ೨೫

ಪಾದಾಕ್ಷಿರೋಗಿಯಾಗಿದ್ದವಂ ಪೂರ್ವಜ
ನ್ಮೋದಯದೊಳಾ ಮಾತೃ ಪಿತೃ ಗುರು ತಪಸ್ವಿರೋ
ಗಾದಿಗಳೊಳಂ ನವೆವಂ ಬಾಲ ವೃದ್ಧ ಶರಣಾಗತರ ರಕ್ಷಿಸದವಂ
ಸಾದರದೊಳಲ್ಪಾಯುವಪ್ಪನದೆಂತೆನಲ್ಕಾದಿ
ಲ್ಕಾದಿಯೊಳು ಸತ್ಪಾತ್ರಕಿತ್ತಪೆನೆನುತ್ತಾಡಿ
ದಾ ದಾನವೀಯ್ಯದವನಾಗರ್ಭಿಯೆ ಯುವರ ರಕ್ಷಾಪಹರಣದವನೂ ೨೬

ಆ ಜಲೋದರಿಯಾದ ಮಾನವಂ ಪೂರ್ವದೊಳು
ನೈಜದಿಂದಾರೆನೆ ತಪೋಧಿಕಾನುಷ್ಠಾನ
ಪೂಜಾಗ್ರಸತ್ಕಾರಕಂ ವಿರೋಧವ ನೆಸಗಿದವನಿನ್ನುಮಂಗಹೀನಾ
ಈ ಜಗದೊಳಂ ಬಲಾಧಿಕನಾಗಿರುತ್ತ ತ
ನ್ನೋಜೆಯಿಂದಾಶ್ರೈಸಿ ಕೊಂಡಿರ್ಪ ದುರ್ಬಲಸ
ಮಾಜನಂ ರಕ್ಷಿಸದವಂ ಬಳಿಕ ಜೀರ್ಣದೋಷಂ ಬಿಡದೆನವವನೆನಲೂ ೨೭

ಅನ್ನಾಪಹಾರಿ ಜಿಹ್ವಾರೋಗಿಯಾರೆನಲು
ಅನ್ನಯದೊಳಾ ಪಕ್ಷಪಾತಕವ್ಯವಹಾರಿ
ಮುನ್ನವೇ ಕೂಡಿರ್ದ ಬಂಧುಗಳನಗಲಿ ಕೋಟಲೆಗೊಂಬುತಿಪ್ಪಾತನೇ
ಉನ್ನತಿಕೆಯಿಂದಂನಯ ಪ್ರವರ್ತಿತ ಧರ್ಮ
ಭಿನ್ನನೈ ಮಲಭಕ್ಷಸೂಕರನಪೂರ್ವವೇ
ಜನ್ನಕ್ಕೆ ದೇವತಾಪಸ ಕಲ್ಪಿತಾನ್ನಮಂ ಮೇಲಱಿಯದುಂಡಾತನೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಪ್ರಮೇಹದ ರೋಗಿಯಾರೆನಲು ಪರ್ವಕಾ
ಲಪ್ರೇಮಮಯಿಥುನಿಯಲ್ಲೈ ಕೇಶವಲ್ಪದವ
ನೇ ಪ್ರಯೋಜನ ನಿಜಾಂಗನೆಯಲ್ಲಿ ಮೋಹದಿಂ ನೆರೆಯದಾತಂ ಬಳಿಕ್ಕಾ
ಭೂಪ್ರಜೆಗಳಿಂದ ಭಂಗಿಸಿಕೊಂಬವಂ ಕ್ಷೀಣ
ನೇಪ್ರವರ ಮಿತ್ರಬಂಧುಸ್ವಜನ ಸುಜನರಂ
ಕ್ಷಿಪ್ರದಿಂದವಮನ್ನಣೆಯೊಳು ಕಂಡಾತನೆಂದಱುವುದೈ ಶಾಸ್ತ್ರಮತದಿಂ ೨೯

ಆ ಕಪೋಲವ್ಯಾಧಿಯಾತ್ಮನಾರೆನಲಾಗಿ
ಯಾ ಕಾಲದೊಳಗೆ ಬಂದತಿಥಿಗಿಕ್ಕದೆಯುಂಡ
ನೇ ಕಣಾ ನಿಜಪತ್ನಿಯಾಗಲಿ ಕೋಟಲೆಗೊಂಬವಂ ಮುನ್ನದಾರೆಂದೊಡೇ
ಲೋಕಮಿತ್ರಾಸ್ತಮಯದಲ್ಲಿ ಬಂದಾಶ್ರಿತಾ
ನೀಕಕ್ಕೆಯಾಲಯವನೀಯ್ಯದಾತಂ ಪಡೆದ
ನೇಕ ವಸ್ತುವನೀಗಿದಾತನೇ ಸ್ವಾಮಿ ಮಿತ್ರಾವಳಿಯನುಪಚರಿಸದಂ ೩೦

ಸರ್ವದುಃಖಾಶ್ರಯದೊಳಿಪ್ಪಾತನಾರೆನಲು
ಪೂರ್ವದೊಳು ವಿಶ್ವಾಸಪರರರ್ಥಮಂ ನಾಡೆ
ಕೊರ್ವಿನಿಂದಪಹರಿಸಿದಂ ಕಣಾ ಬರಿದೆ ತನ್ನಿಂ ತಾನೆ ನೋವಾತನೂ
ಊರ್ವಿಯೊಳು ಮುನ್ನಮಿಥ್ಯಾಗುಣದೊಳಿರ್ದವಂ
ಖರ್ವನಾಗಿರ್ದವನದಾರೆನಲು ಮೊದಲೊಳಾಂ
ಸರ್ವ ಮಿಗಿಲೆಂಬಹಂಕಾರೀಕನಯ್ಯ ಲೂತಿಯ ಹುಣ್ಣನುಳ್ಳಾತನೂ ೩೧

ಆರೆನಲಯೋಗ್ಯವಾಗಿರ್ದಗೋವೇಱದವ
ನೈರಸೆಯೊಳಂ ಹುಟ್ಟುಗುರುಡನಾಗಿರ್ದವನ
ದಾರೆನಲು ಗೋಹತ್ಯಮಂ ಮಾಡಿದಾತನ್ನೈಗೋಕುಲಂ ನಾಶವಪ್ಪಾ
ನಾರೆನಲು ಗೋವುಗಳಿಗಂ ದುಃಖವೆಸಗಿದವ
ನೊರಂತೆ ಗೋವಿರ್ದ ಯಶ್ಶಿಪಿಟಿನಾಶಂಕು
ಮಾರ ಕೇಳ್ಗಂಡಮಾಲೆಯವನಾ ಶಿವಭವನ ಮುಖ್ಯದೊಳಗುಗುಳಿದವನೂ ೩೨

ಮತ್ತೆ ಚಾಂಡಾಲನಾರೆನೆ ಮಹಾಕ್ರೋಧಿಯಾ
ಗುತ್ತಿರ್ದವಂ ನಾರುತಿಪ್ಪಮೂಗುಳ್ಳಾತ
ನೆತ್ತಲುಂ ಚಾಡಿಕಾಱಂ ವದನದುರ್ಗಂಧಿಯಾ ಕೊಂಡೆಯದ ಸೂಚಕಂ
ತತ್ತನ್ಮೃಗವ್ಯಾಧನಾಗಿರ್ದವಂ ಮುನ್ನ
ಕೃತ್ತಿಮತ್ರಪು ಚಾಮರಂ ಸೀಸರಜತಮನು
ದಾತ್ತಕೌಟಿಲ್ಯದಿಂ ಮಾರಿದಂ ನವೆದುಕೂಲಿಯ ಮಾಳ್ಪನೇ ಕುಂಬರಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಲೋಕವಿಲ್ಲವೆಂಬಾತನೇ ಗಾಣಿಗಂ
ಧರೆಯಲ್ಲಿ ಗಳರೋಗಿಯೇಯಭಕ್ಷಣಭಕ್ಷಿ
ಯಿರದೆ ಮೂಕನುಮು ಶೀಲಜ್ಞಾನಿಯನ್ಯಾಯಿಯಲ್ಲಿ ದಾನಂಗೊಂಡವಂ
ಪರಮಾಂಧಕನೆ ಪುಸ್ತಕಂಗಳಂ ಕದ್ದವಂ
ಚಿರಶಾಸ್ತ್ರಮಂ ನೋಡಿ ವಕ್ತೃತ್ವವಿಲ್ಲದಿಹ
ನರನೀಗ ಪೂರ್ವದೊಳು ಪುಣ್ಯಕಥನಾಪೇಕ್ಷಿಯಾಗಿ ವರ್ತಿಸಿದಾತನೂ ೩೪

ಧರ್ಮಿಷ್ಠರಂ ಮುಳಿವುತಜ್ಞಾನದಿಂ ನೋಡಿ
ಧರ್ಮೆಳ್ಳೆಗಣ್ಣರಹರು ರುಗುಪಾಯಾತನೇ
ಕರ್ಮದಿಂ ಸಾಧು ತಾಪಸಿ ದೇವತಾ ಗುರುಶಿವಜ್ಞಾನದೂಪಕನಲಾ
ಒರ್ವ ನೋಡಲು ಹುಳುಕುಹಲ್ಲಾತನಾರೆನಲು
ಶರ್ಮದಾನದಲಿರ್ದು ದೂಷ್ಯನಾಗಿರ್ದವಂ
ಪೆರ್ಮೆಯುಹ ಪಾಂಡುರೋಗಿಯೆ ಮುನ್ನದೇವ ಗುರುಭಕ್ತರರ್ಥಾಪಹಾರೀ ೩೫

ಅಂಗಹೀನನೆ ಮುನ್ನ ಕೂಪ ವೃಕ್ಷಂ ತಟಾ
ಕಂಗಳಂ ಭಿನ್ನಮಂ ಮಾಡಿದವನಾಸ್ವಸಮು
ಯಂಗಳೊಳಗಿರ್ದನ್ಯ ಪಕ್ಷಪಾತಕನಾರೆನಲ್ಕೊಡೆಯುಗೆರಡ ಬಗೆದಾ
ಲೆಂಗಿಯ್ಯೆ ಸರ್ವರೊಳು ಮಧ್ಯಸ್ಥನಲ್ಲದನ
ಹಂಗೆ ಮುನ್ನಂ ಕಳ್ಳರಿಗೆ ಸಖಂ ಬಹುಲ ರೋ
ಗಂಗಳಿಂ ನವೆವವಂ ಭೃತ್ಯರಂ ನೋಯಿಸುತ ಹಿಡಿದ ಛಲವಂ ಬಿಡದವಂ ೩೬

ಆವನೊರ್ವನ ವನಿತೆ ಜಾಱೆಯಾಗಿಪ್ಪಳವ
ನೀ ವಸುಧೆಯೊಳು ಮುನ್ನ ಪಾದರಿಗನೆಂದಱಿವು
ದೈ ವಾತರೋಗಿಯೆ ಸ್ವಾಮಿಮಿತ್ರದ್ರೋಹಿ ದುಶ್ಚರ್ಮದಾತನೀಗಾ
ಗೋವುಗಳನಿಟ್ಟಡೆಯು ಹಟ್ಟಿಯೊಳು ಕೂಡಿದನ
ಲಾ ವಿಚಾರಿಸಲಾ ಮಧುಪ್ರಮೇಹದ ರೋಗಿ
ನೋವಂತೆ ತುರಗ ವಿಖ್ಯಾತವಾಹನವೇಱಿದನು ಹಂದಿಯಾದಾತನೂ ೩೭

ಧರ್ಮಪತ್ನೀಷ್ವಾಪ್ಯಮೈಥುನಂ ಗೆಯ್ದವಂ
ಪೆರ್ಮೆಯಿಂ ಕ್ಲೀಬನಾದಾತಂ ಸ್ವಗೋತ್ರಜಾ
ತರ್ಮಹಿಯೊಳಂ ಸವರ್ಣಾಂಗನೆಯರಂ ನೆರೆದವಂ ಬಳಿಕಲಭಿಜೇಯುದಾ
ಕರ್ಮಿಯಾ ಪಿತೃವನಿತೆ ಪಿತೃಭಗಿನಿಗಳಿಪಿದಂ
ವರ್ಮಿಷ್ಟ ಕೇಳ್ಸ್ಫುಟಿತವದನಾಕ್ಷರಾಗಿರ್ಪ
ವರ್ಮನ್ನ ಪರರನಪವಾದದಿಂ ನಿಂದಿಸಿದರೆಂದಱಿವುದೈಕುಮಾರಾ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಸರ್ವಾರಂಭವಿಫಲನಾಗಿರ್ದವನು
ದಾತ್ತದ ಕೃತಜ್ಞನ್ನೈ ಕುಷ್ಠ ಕುಂಟಂ ಪಂಗು
ವಿತ್ತಹೀನಾಂಧ ಸ್ಫುಟಿತಪಾದಪಾಣಿ ಬಹು ಪೀಡಿತಂ ಜೀರ್ಣಮಲಿನಾ
ವೆತ್ತರುವೆ ಪೊದ್ದು ನೀರಡಿಕೆ ಹಸುವಿಂದ ಬೇ
ಸತ್ತಾ ಪಿಶಾಚಿರೂಪಿಂದಿರುತ್ತಂ ಮುಱಿದ
ಚಿತ್ತರು ಬಹು ಪ್ರಲಾಪಿಗಳಿವರು ಪೂರ್ವಜನ್ಮದೊಳು ಪೊಂಗುಳ್ಳರೆನಿಕುಂ ೩೯

ಸ್ತ್ರೀಯ ವಶವಾಗಿರ್ದವರು ದುರ್ಭಗಾಂಗನಾ
ಸೇಯರಾಸ್ಯಾನ್ನಪಾನಾದಿ ಮೈಥುನ ನಿರುತ
ರಯಿವರುಂ ಮುನ್ನ ಪುಣ್ಯಕಥಾಪರಾಙ್ಮುಖರಲ್ಲೈಯಿನ್ನು ಸರ್ವಾರ್ಥಮಂ
ಈ ಯುವನಿಪರು ಸೆಳೆದುಕೊಂಡೊದೆದು ಬಂಧಿಸಲು
ಬಾಯಳಿದರೇ ಮುನ್ನ ದೇವಾಗ್ನಿ ಗುರುವೃದ್ಧ
ರಾಯುಗ್ರರಂ ಪಳಿದು ಬಲ್ಪಿಂದ ಕನ್ನೆಯಂ ನೆರೆದಧಮರೆಂದಱಿವುದೂ ೪೦

ನ್ಯೂನಾಂಗರಾಗಿ ದುರ್ವಸ್ತ್ರಮಂ ಹೀನಾನ್ನ
ಪಾನಮಂ ಸ್ವೀಕರಿಸಿಯಲ್ಪಾಯುಷಂ ಜಾರ
ತಾನೀತಿಪರತಂತ್ರರಾ ವ್ಯಾಧಿದುಃಖಿತರು ಚೇಟೀಪರಿಗೃಹೀತರೂ
ಈ ನರರದಾರೆನಲು ಪೂರ್ವದೊಳು ಪೃಥ್ವಿಪುಣ್ಯ
ಹೀನರನ್ಯರ ನಿಂದಿಸುವರೆಂದು ತಿಳಿವುದೈ
ಸೂನುವೇಯಂತಪ್ಪವರ್ಗಱಿದ ಬಳಿಕ ಸನ್ಮಾರ್ಗವೇ ಸುಪ್ರಧಾನಂ ೪೧

ಆ ಯಶಸ್ನಾನಶೌಚಂ ಪಂಚಗವ್ಯಸು
ಪ್ರಾಯಶ್ಚಿತಂಗಳಿಂ ಕರ್ಮಂಗಳಾಗಲಿಕು
ಪಾಯದಿಂ ಕಳೆದು ಮೋಕ್ಷವನೆಯ್ದುವವರಪೂರ್ವಂ ಮಾಡಿದೀದೋಷವಾ
ಈಯುವನಿಯೊಳಗಿಂತು ಕೋಟಿಜನ್ಮಂ ತೊಳಲಿ
ಯಾಯುಸಂಬಟ್ಟಾತನಾನಲಾಯೆಂದಭಿ
ಪ್ರಾಯುಮಂ ನೆನೆವನರ್ಭಕನೆಂದು ಬಿತ್ತರಿಸುತಿರ್ದನಾ ಗುರುರಾಯನೂ ೪೨

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲ್ಯಣಾರ್ಯ್ಯಂ
ಶೀಲ ಷಟ್ಸ್ಥಲಿ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ವೀರಶೈವ ಷಟ್ಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದುಪೂರ್ವಕರ್ಮವುಸುರ್ದೆಡೆವಮೂಱುಕಾಂಡದವೇಲಿಪ್ಪತ್ತೆಯೆರಡು
ಸಂಧಿ ೪೪

ಅಂತು ಸಂಧಿ ೨೨ ಕ್ಕಂ ಪದನು ೧೧೬೬ ಕ್ಕಂ ಗ್ರಂಥ ೭೧ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೬೯

ಸಾಮುದ್ರಿಕಾಲಕ್ಷಣಗಳಂ ತಿಳಿಸುವಿಕೆ

ಸಾಮುದ್ರಿಕದ ಲಕ್ಷಣಂಗಳಂ ಶಾಸ್ತ್ರಸು
ಪ್ರಾಮಾಣ್ಯದಿಂದರ್ಭಕಂ ಸ್ಮರಿಪನೆಂಬುದಂ
ಸ್ವಾಮಿ ನಿರವಿಪುದೆನಲು ಹಲಗೆಯಾರ್ಯಂ ಕೆಂಚವೀರಾಹ್ವಯಂಗೊರೆದನೂ

ಶಾಂಕರಾದಿಯ ಕಾಂತದಂತಿಮ ವಿಮಲಮಧ್ಯ
ದಂಕಿತ ಸಮುಲ್ಲೇಖನತ್ರಿತಯ ವಿಶ್ವನುತ
ಸಂಕಲಿತದಾ ದ್ವಯಂ ಶ್ರೀ ಜಗತ್ಪ್ರೇರಕದ ಪಂಚಕಾಕ್ಷರಮಿವಾಱೂ
ತಾಂ ಕೂಡಿ ಪೆಸರಾದ ಶಾಂತ ಮಲ್ಲೇಶ್ವರಾ
ನೀಂ ಕರುಣದಿಂ ರಕ್ಷಿಸಯ್ಯ ನಿರ್ಮಳ ನಿಷ್ಕ
ಳಂ ಕನಿರುಪಾಧಿಕ ಜ್ಯೋತಿ ವಿಖ್ಯಾತಿ ಜಯ ಸಾತಿಶಯದ ಚಿದರಾತೀ ೧

ಆ ಭರ್ತೃಹರಿಯಂಗ ಚಿಹ್ನಂಗಳಂ ಕಂಡು
ಶೋಭನದ ರಾಯನೆಂದಱಿದಂ ಗಡಾ ವಿಪ್ರ
ನೀ ಭವ್ಯಮಹಿಮಾ ಸಮಗ್ರತಾ ದುಷ್ಟನಿಗ್ರಹ ಶಿಷ್ಟಪರಿಪಾಲನಾ
ವೈಭವಗಣಾಡಂಬರಾಚಾರದಿವ್ಯವರ
ದಾ ಭಯೋತ್ತಮ ಹಸ್ತನೆಂದೆನಿಪ ಮೇಲಣ ಗುಹಾ
ಹಾಭವನ ಶಾಂತನಂಜೇಶನೇ ಶಿವನೆನ್ನದಾತ ನಿನ್ನೇಂ ಮೂಢನೋ ೨

ಮತ್ತೆ ಗುರುರಾಯನಂಘ್ರಿಗೆ ಸುತಂ ಬಿನ್ನಪವೆ
ನುತ್ತಿರ್ದನಾ ಗರ್ಭದರ್ಭಕಂ ನೆನದಲ್ಲಿ
ತತ್ತತ್ಪ್ರಕಾರದಿಂ ಪೂರ್ವಜನ್ಮದ ಚಿಹ್ನಮಂಗದೊಳಗುಂಟೆನುತ್ತಾ
ಬಿತ್ತರಿಸಿದಂ ಬಳಿಕ್ಕಾ ಮನುಷ್ಯಾಂಗಕ
ಚ್ಚೊತ್ತಿದಂತಿಪ್ಪ ಸಾಮುದ್ರಿಕದ ಲಕ್ಷಣದು
ದಾತ್ತಮಂ ನಿರವಿಸೆನೆ ನುಡಿದನಾ ದೇಶಿಕಂ ಶಿವಧರ್ಮಶಾಸ್ತ್ರದಲ್ಲೀ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನರನ ದೇಹದ ಲಕ್ಷಣಂಗಳಂ ಬಿತ್ತರಿಪೆ
ನರರೆಯ್ಕೈದ್ಯೆ ದೀರ್ಘವಾಗಿರ್ಪವಾನಾಲ್ಕು
ಸರಿಕಿಸಲು ಗುಡ್ಡನಾ ಪಂಚಸೂಕ್ಷ್ಮಂ ಪಡುನ್ನತವಿನ್ನು ಸಪ್ತರಕ್ತಾ
ದಿರವು ಮೂಱಲ್ಲಿ ಗಂಭೀರ ಪ್ರಯುತವೆಂದು
ಪರಮ ಸುಖಿಯಿನ್ನ ದೀರ್ಘದಿನಿಪ್ಪವಾವವನೆ
ನಿರವಿಸುವೆನೆಂದು ಬಿತ್ತರಿಸಿದಂ ದೇಶಿಕಂ ಸಂತಸಂ ಪೊಱಪೊಣ್ಮಲೂ ೪

ತೋಳುಗಳು ನಯನಾಂತರಂಗಳಾಹನುಗಳಾ
ಮೇಳವದ ನಾಸಿಕಂ ಸ್ತನದಂತರಂಗಳುಂ
ಕೇಳ್ಕೈದು ದೀರ್ಘವಾಗಿಪ್ಪುದುತ್ತುಮವಿನ್ನು ಕೊರಲಾ ಪ್ರಜನನದಲ್ಲೀ
ಪೇಳಲಾ ಪೃಷ್ಟಜಂಘೆಗಳು ನಾಲ್ಕುಂ ಹ್ರಸ್ವ
ದೋಳಿ ಲೇಸುಳಿದ ದೇಹದೊಳಂ ಪ್ರಮಾಣವೇ
ಆಳಾಪಿಸಲು ಸೌಖ್ಯವಿನ್ನೈದು ಸೂಕ್ಷ್ಮಂಗಳಾದವಂ ಬಿತ್ತರಿಸುವೆಂ ೫

ಅಂಗುಲಿಯ ಗೆಣ್ಣುಗಳು ಕೇಶಮುಂ ಚರಣದಂ
ತಂಗಳು ನಖಂಗಳೈದಿನ್ನು ಪರಿಕಿಸಲುನ್ನ
ತಂಗಳಂ ಪೇಳ್ವೆನಾಱಂ ಶಿರಂ ಭಾಳವಾ ಕಂಕುಳಿದೆ ಹೆಡತಲೆ ಮೊಗಂ
ಹಾಂಗೇಳು ರಕ್ತವಾಗಿಪ್ಪವಂಗಾಲು ಬಳಿ
ಕಂಗೈಗಳುಗುರು ನಾಲಗೆಯೆರಳ್ತುಟಿ ಚೆಲ್ವ
ಕಂಗಡೆಗಳಾ ತಾಳುಗೆಗಳಿಂನು ಮೂಱು ಗಂಭೀರವಾದವನುಸುರುವೆಂ ೬

ಸ್ವರವು ತತ್ಸತ್ವವುಂ ನಾಭಿಯಿನ್ನಾ ಪೃಥುವ
ನೊರೆವೆನೆದೆಯುಂ ಲಲಾಟಂ ಮುಖಂಗಳು ಕಣಾ
ಪರಮ ಲಕ್ಷಣವಿನ್ನು ನಾಡಿಯುಂ ಸುಸ್ವರಂ ನಯವಾಗಿ ಮೆಱೆಯುತಿಹುದೂ
ಬರಿಯೆರಡು ಸುಸಮಾಹಿತತ್ವದಿಂದಂ ಕಿವಿಗ
ಳೆರಡು ಮೃದುವಾಗಿ ತುಟಿಯೆರಡು ಪೀನತೆಯಿಂದ
ಶಿರವು ಹೆಗಲೆರಡು ವಿಪುಲತ್ವದಿಂ ನಾಭಿ ಬಲಮುರಿಯಿಂದ ರಾಜಿಸೂದೂ ೭

ಪಾದ ಪಾಣಿಗಳೆರಡು ವಿಪುಲತ್ವದಿಂ ದೃಷ್ಟಿ
ಸಾದರದ ನಯವಾಗಿ ಪೂಜ್ಯತೆಯೊಳಿಹುದಲಾ
ಆದವೇನೆಂಬಲ್ಲಿ ಮೃದುವಲ್ಪವಾ ಕೇಶ ನಖ ರೋಮ ದಂತಂಗಳೂ
ಆದಿವಿಡಿದುತ್ತುಮಚ್ಛಾಯೆಯಿಂದಂ ಜನಾ
ಹ್ಲಾದದಿಂದಿಪ್ಪುದ್ಯೆ ತಿಳಿವುದುತ್ತುಮ ಪುರುಷ
ನಾದವಂಗಿನ್ನು ಪಂಚಸ್ನೇಹವಾಗಿಪ್ಪ ಲಕ್ಷಣವನೊರೆವೆನೆಂದಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ನೇಹವೆಂದೊಡೆ ನಯಂ ಕೇಳಸ್ಥಿದಂತಸಂ
ವ್ಯೂಹದಾ ತ್ವಕ್ಸ್ನಖ ಕೇಶಂಗಳೈದಿವಿ
ನ್ನಾಹಾಂತರಸ್ಥಿತಂಗಳ ಬಹಿಷ್ಕರಿಸಿರ್ದ ಕಾರ್ಯದಿಂದಱಿಯಬಹುದೂ
ಮೋಹಿರ್ದದಂತಲಸದಸ್ಥಿಗಳೊಳೆಸೆದಿಹ
ಸ್ನೇಹಮಂ ನಲವಿಂದ ನರದ ನಯಮಂ ಮಹಾ
ಸ್ನೇಹಕೇಶಂಗಳೀ ಪಂಚಪ್ರಕಾರಕ್ಕೆ ವಿವರ ಫಲಮಂ ಪೇಳ್ವೆನೂ ೯

ಸೌಭಾಗ್ಯವಪ್ಪುದಸ್ಥಿಸ್ನೇಹದಿಂದಂತ
ದಾಭಾಸಿನಿಂದ ಭೋಜನವಲಾ ತ್ವಕ್ಕಿನಿಂ
ಶೋಭನದ ಸೌಖ್ಯಂ ನಖಸ್ನೇಹದಿಂ ಧನಂ ಕೇಶದಿಂದಾಯುಷ್ಯವೂ
ಏಭಿರೇವತಿ ಪಂಚಸ್ನಿಗ್ಧದಿಂ ಕೀರ್ತಿಸಲು
ಲಾಭವಪ್ಪುದು ರತ್ನ ಕಟಕಕೇಯೂರ ಮುಖ್ಯ
ಖ್ಯಾಭರಣ ರಾಜ್ಯವನಿತಾ ಪುತ್ರಪೌತ್ರವರ್ಧನನಾಗಿ ಮಿಗೆ ಬಾಳ್ವನೂ ೧೦

ಮನದಲ್ಲಿ ಪೀನವಾಗಿರಲಾಗಿಯಂತೆಯಾ
ತನುವಿನೊಳು ಸೌಖ್ಯವಾಗಿಹುದಲಾ ವೃಕ್ಷದೊಳ
ಗೆನಿತು ಸಾರಂಬಹಿರ್ವಲಯದೊಳಗಂತು ನಯನಾದಿಗಳು ನಯದೊಳಿಪ್ಪಾ
ಅನುವಿನಿಂ ಜ್ಞಾನವಾ ಮತಿವಂತನಾಗಿ ನೆಱೆ
ಜನನಾಥನಾಗಿ ಬುದ್ಧಿಯನುಳ್ಳನಪ್ಪನೈ
ವಿನುತ ಧರ್ಮೋತ್ತರದೊಳಿರಲು ಸುಸ್ವರವಂತನೆನಿಸಿ ಕೀರ್ತಿಯೊಳೆಸೆವನೂ ೧೧

ಸುಪ್ರಭೆಯೊಳೊಪ್ಪುವಾತಂ ಮಾಂಸಲಂಸ್ನಿಗ್ಧ
ನಾ ಪ್ರೇಮ ದರುಶನಂ ಸಂಧಿಯೊಳು ಸೌಖ್ಯವೆನಿ
ಪಾ ಪ್ರಾರ್ಥನೆಯ್ದೆ ದೀರ್ಘಾಯುಷ್ಯನೆಂದು ಲಕ್ಷಣದೊಳಱಿವುದು ನಲ್ವಿನಿಂ
ಈ ಪ್ರಕಾರದೊಳು ಧರಣೀತಳದೊಳೆಯ್ದೆ ಸ
ರ್ವಪ್ರಯತ್ನದೊಳು ಸಾಮುದ್ರಿಕದ ಲಕ್ಷಣಂ
ಭೂ ಪ್ರಸಿದ್ಧತೆಯಿಂದ ತಿಳಿವುದೈ ಕಂದ ಎಂದೊರೆವುತಿರ್ದಂ ಬಳಿಕ್ಕಾ ೧೨

ಅವಲಕ್ಷಣಂಗಳಾ ಗುಡ್ಡನಾಗುತ್ತ ಕೈ
ಯ್ಯವನ ಕಾಲ್ತಲೆಯೆದೆಮೊಗಂ ಹೆಗಲು ತೋಳು ತುಟಿ
ಕಿವಿ ಪಣೆಗಳಿರಲು ಲಕ್ಷಣಪುರುಷನಲ್ಲ ವಿಸಾ ವಿವರ್ಣಂ ಬಳಿಕ್ಕಾ
ಭುವಿಯೊಳಾ ವಿಭ್ರಾಂತನಕ್ಷಿ ನಯವಿಲ್ಲದಿಂ
ತಿವರ್ರೈಕನಿಷ್ಠರಿಂನಾ ನಾಸಿಕಂ ಶ್ರೇಷ್ಠ
ದವನದಱಿನಕ್ಷಿಸಾಮ್ಯಂ ಮೊಗಂ ಸುಮನೋಹರಂ ತಥಾಶೀಲವೆಯ್ದೇ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೀಲವೆಂತೆಂತು ಮನವಂತೆಂತು ಸತ್ವವಂ
ತಾ ಲಲಿತ ಸತ್ವದಿಂದಂ ಗುಣಂ ಸದ್ಗುಣ
ಕ್ಕಾಲಯಂ ಸುಪ್ರಭೆಯನುಳ್ಳವಂ ಶ್ರೇಷ್ಠನೈ ಧನವಂತನಹನು ಶಾಸ್ತ್ರ
ಜಾಲವಂತಂ ದ್ರವ್ಯವಾನಪ್ಪನೆಯ್ದೆ ಭೂ
ಪಾಲನಪ್ಪಂ ಮತ್ತೆ ಗೋವೆಂತು ಶುದ್ಧವಾ
ಶೀಲ ವರ್ತನೆ ಯುಳ್ಳನಂತವನ ನುಡಿಯೆ ಸಾರಸವಕ್ಕಿಯಿಂದವೆಸೆವಾ ೧೪

ಆ ಲಲಿತ ಸುಸ್ವರಂ ಸತ್ವವುಳ್ಳವನಲ್ಲೈ
ಮೇಲೆಯಾಜಾನು ಬಾಹುಗಳಿಲ್ಲದಂಗೆ ಸೌ
ಖ್ಯಾಲಯದ ಸಿರಿಯಾಗದಯ್ಯ ಮಾಂಸಲಗಿನಿತು ಸುಖವಾಗದೆಂದಱಿವುದೂ
ಸ್ಥೂಲ ಭಾರಂಗ ಸುಗ್ರೀವಗಾಗದು ಕಣಾ
ಬಾಲನೇ ನಾಸ್ತಿಸುಸ್ವರನೆ ಭಿಕ್ಷುಕನಲಾ
ಲಾಲಿಸಲು ನಸು ನಾಸಿಕನೆಯಜ್ಞನಿವರು ದುಃಖಿತರೆಂದು ಕೇಳಿ ವಿವರಿಸೇ ೧೫

ಬಳಿಕಾ ಮಹಾಕರ್ಣರುಂ ಮಹಾನಾಸಿಕರು
ವಿಳಸಿತ ಮಹಾಪಾದಕುಕ್ಷಿಮುಖವುಳ್ಳ ನಿ
ರ್ಮಳರಾ ಸುಬದ್ಧವಾಗಿದ್ದ ದೃಢನಯನದವರೈ ಶತಾಯುಷ್ಯರಹರೂ
ಇಳೆಯೊಳೈಶ್ವರ್ಯ ಧನಧಾನ್ಯವಿರ್ದಂತವ
ಕ್ಕೆಳಸದೇ ಪದಾರ್ಥಂಗಳಲ್ಲಿ ನಿರ್ಮೋಹದ
ಗ್ಗಳವಾದ ಗುಣನಿಕರದಿಂದಲಲ್ಪಾಯುಷ್ಯನೆಂದೆಱಿವುದೈ ಕುಮಾರಾ ೧೬

ರೋಮದೊಳು ತೊವಲುಗುರು ಪಲ್ಗಳಲ್ಲಿಯಾ
ಸಾಮಾನ್ಯವಾದ ನಯವಾಗಲಲ್ಪಾಯುಷ್ಯ
ವೈ ಮಗನೆ ನೇತ್ರಗೋಕ್ಷೀರವರ್ಣಾಭದಿಂ ಕೆಂಪಿನೆಳೆಗಡೆಯಕ್ಷಿಯಾ
ಧಾಮದೊಳು ನಡುಗಪ್ಪಿನಗ್ಗಳದಿನಾಯತದಿ
ನಾ ಮಹಾಕ್ಷಿಗಳು ಶುಭಮಂ ಕೊಡುವವೈ ಮತ್ತೆ
ಭೂಮಿಯೊಳು ಕೆಟ್ಟುಗುರಿನವನೇ ಧನಹೀನನೈ ದುರ್ಗಂಧಿ ಭೋಗಿಯಲ್ಲಂ ೧೭

ಅಲ್ಲಿ ಬೆಟ್ಟಿತ್ತಾದ ಯೆಲುವಿನಾತಗೆ ದೊರಕ
ಲಿಲ್ಲವಾ ವೃಷ್ಟಾನ್ನವಾ ಸತ್ವವುಳ್ಳಾತ
ಗಿಲ್ಲವೈ ದುಃಖವಿನ್ನಾಶನೈರ್ದಂತಕೇಶಾನಖೇಂದ್ರಿಯಸೀರ್ಯಗೇ
ಇಲ್ಲವೈ ಮರಣವತಿ ಬೇಗದಿಂ ದಿನ್ನು ಕೇ
ಳ್ವಲ್ಲಹನೆ ಸಾಮಾನ್ಯ ತೇಜಸ್ಸುವಾಣಿ ನುಡಿ
ಯಲ್ಲಿ ನೆಲಸಿರೆ ಹರುಷ ಸುಪ್ರೀತಿಯಾ ಸುಪ್ರಸಾದಂಗಳಿಸಿತೂ ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವ ಕರ್ಮಂಗಳೊಳಗಾ ವ್ಯಸನದೊಳು ಧೈರ್ಯ
ಮೂರ್ವಿಯೊಳಗಿನಿತು ಕಾಯಕದ ಸದ್ಗುಣವಲೇ
ಪೂರ್ವಸಾತ್ವಿಕವಾವಗುಂಟವಂಗಂದಾಯು ಸುಸ್ಥಿರಂ ನೆಲೆಗೊಂಬುದೂ
ಪಾರ್ವತೀಶನ ಭಕ್ತಿಸದ್ಭಾವಿಯೆನಿಸುವನ
ಖರ್ವದ ರಜೋಗುಣಾಧಿಕನು ಕಾವ್ಯವನಱಿದು
ಗರ್ವವಿರಹಿತ ಕಲಾಧಿಕನಾಗಿ ಸತಿಯರೊಳು ಸಾರ್ವಕಾಮಿಕನೆನಿಸನೈ ೧೯

ಆ ತಮೋಗುಣಿ ವಂಚಕಂ ಕ್ರೋಧಿ ಮೂರ್ಖನಿ
ದ್ರಾತಿಶಯನೈ ಬಳಿಕ್ಕೀ ಮೂಱುಗುಣಮಿಶ್ರ
ದಾತಂಗನಂತ ಭೇದಂಗಳುಂಟಿನ್ನು ದುಂದುಭಿಕ ನಾಮದ ಗುಣವನೂ
ಪ್ರೀತಿಯಿಂ ಕೇಳು ಚಂದನವಗರುಪದ್ಮವೇ
ಲಾತಮಾಲೋತ್ಪಲ ಗಜೇಂದ್ರಮದಧಾರೆಯಾ
ಭೂತಿ ಗಂಧಂಗಳುಳ್ಳವರು ಸತ್ವಂಗಳಿಂದ್ರಿಯ ಪಟುತ್ವವನುಳ್ಳರೂ ೨೦

ಗುರುತರದವರು ಪದ್ಮಕುಮುದದಳಲೋಚನರು
ಕರಮೆಸೆವ ತೇಜದಧಿಕರು ಹಸ್ತಪಾದೋತ್ತ
ಮರು ಸುಖಿಗಳಾ ಚಪಲಮಾಂಸಲರು ರೂಕ್ಷಸಸ್ಥೂಲದ ಸೆರೆಯನುಳ್ಳರೂ
ನರಕಾಬ್ಧಿಯಿಂ ಶೋಷಿಸುತ್ತಿಪ್ಪರೀ ಮಹಾ
ಪುರುಷರ್ಗೆ ದುಂದುಭಿಕ ನಾಮವೈ ಕೇಳಿನ್ನು
ತರುಣ ಸೌಖ್ಯದನಖಂ ಕೂರ್ಮನಾಕೃತಿಸತ್ಪ್ರವಾಳವರ್ಣಾಂಘ್ರಿಯವರೂ ೨೧

ನಯವಾಗಿಯರ್ಧಚಂದ್ರಾಕೃತಿಯ ಪದದವರು
ಸ್ವಯದ ಭೋಗಿಗಳಲ್ಲೈ ಕೇಳ್ವುದಿನ್ನಾ ಸ್ವಲ್ಪ
ಮಯ ಶುಕ್ಲರೂಕ್ಷದೃಢ ದೀರ್ಘನಖದರು ಸ್ವೈಜಪರಿವರ್ಜಿತರು ಬಳಿಕ್ಕಾ
ನಿಯತದಿಂ ಸ್ಫಟಿಕ ಶಂಖಪ್ರಭೆಯಿನಂತಾ ಬಿ
ಳಿಯ ಕುದುರೆಯಂತಪ್ಪ ಗುರನುಳ್ಳವರು ನಿಜಾ
ನ್ವಯದ ತೇಜೋವರ್ಜಿತರು ಕಣಾ ಮಗನೆ ಮುಂದೆಂತೆನಲು ಬಿತ್ತರಿಸುವೆಂ ೨೨

ನೀಹಾರಿಯಾಗಿ ಪಾಂಡಿತ್ಯದಿಂ ನಯವಾಗಿ
ಬೇಹ ನುಡಿಯುಳ್ಳಾತನೇ ಗುಣಜ್ಞಂ ಕಣಾ
ಊಹಿಸಲು ಕಾಕನಾದಂ ಕೆಟ್ಟಮಾತನಾಡುವನಪೂಜ್ಯಂ ಬಳಿಕ್ಕಾ
ದೇಹಾಗಿಹ್ರಸ್ವವಂತತಿ ದೀರ್ಘವಾ ಸ್ಥೂಲ
ವಾಹ ಕೃಶನತಿಕೃಷ್ಣನತಿ ಗೌರವಾಗಿರ್ದ
ದೇಹದೊಳಗಂ ಸತ್ಯವಿಲ್ಲವೆಂದಱಿವುದೈ ಮತ್ತೆ ಹೇಳುವೆನು ಕೇಳೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘೂಕನಯುನಂ ಕಾಗೆಗಳ ನೇತ್ರವೆಸೆವ ಮಂ
ಡೂಕನಕ್ಷಿಯು ಪೋಲ್ವ ಕಣ್ಣು ಹರಿಗಡ್ಡದವ
ನೈ ಕಷ್ಟಬುದ್ಧಿಯಾತಂ ಕಣಾಕಸ್ಮಿತದಪಂಡಿತಂ ಕಡು ಗಿಡ್ಡನೂ
ಪ್ರಾಕಟದೊಳೂರ್ಧ್ವವಾಗಿರ್ದವಂ ಮೂರ್ಖನಾ
ಕಾಕತ್ವದಿಂ ಶೀಲವಂ ಮಾಡಿಕೊಂಡವಂ
ಲೋಕದೊಳತೀವ ಶುಚಿಯೆಂಬಂತೆ ನಡೆವವಂ ಗಂಭೀರವಿಲ್ಲದವನೂ ೨೪

ಮತ್ತೊಂದು ಕಣ್ಣಾತನುರುಗಿರ್ದ ಮೂಗನುಂ
ಸುತ್ತಿ ತನುವಂ ತುಂಬಿಕೊಂಡಿರ್ದ ರೋಮದನು
ದಾತ್ತನೆನಿಸುವ ಸೆರೆಯ ಮೆಯ್ಯನುಳ್ಳವರಿವರು ದುಷ್ಟ ಮತಿಗಳು ಬಳಿಕ್ಕಾ
ಅತ್ತೆರಡು ಬಗೆಯಾದ ಗಡ್ಡ ಮೂಗುಳ್ಳವಂ
ಚಿತ್ತವಿಕಲಂ ಮೇಲ್ದುಟಿಯೆ ಹ್ರಸ್ವ ದೀರ್ಘವಾ
ಯತ್ತವಾದವರಿನಿತು ಪಾಪರೂಪರುಗಳೆಂದಱಿವುದೈ ವರ ಕುಮಾರಾ ೨೫

ಗಿಳಿಯಂತೆ ಸವಿನುಡಿಯು ಹಂಸೆಯಂದದೊಳು ನಡೆ
ಗಳನುಳ್ಳವರು ಯೋಗ್ಯ ರಾಜರಪ್ಪರು ಕಣಾ
ಬಳಿಕಲುದ್ರೇಕವುಡುಗದೆ ಮದಂ ಬಿಡದೆ ಗರ್ವಂಗಳಿಂದಂ ನಡೆವುತಾ
ಹಳಿಯ ಬೆಕ್ಕಾಕೋಳಕು ಹುಲಿಯಾನೆ ಪಾಲ್ವಕ್ಕಿ
ಗಳ ಪೋಲ್ವ ಮೋರೆಯುಳ್ಳವರನಿಬರಜ್ಞಾನಿ
ಗಳು ಕಣಾ ಕೇಳಿನ್ನೆನುತ್ತ ಬಿತ್ತರಿಸುತಿರ್ದಂ ಶಿಷ್ಯಗಾಚಾರ್ಯನೂ ೨೬

ತಿರ್ರೈದು ನಡೆವವಂ ಸ್ತಬ್ಧತೆಯನುಳಿದವಂ
ಮೇರೆಯೊಳು ಸಂಸ್ಕಾರ ಸನ್ಮತದೊಳಿಪ್ಪರೀ
ಧಾರುಣಿಯೊಳಂ ಧನ್ಯರೈ ಮತ್ತೆ ಮುಕ್ಕಾಗಿಯುನ್ನತದ ತುಟಿಗಳುಳ್ಳಾ
ಕ್ರೂರಭಗ್ನಂ ದೀರ್ಘವಾಹ್ರಸ್ವದಂತವಂ
ತೋರಿಯಿಂ ಸೆಡೆದು ತಗ್ಗಿದ ಮೂಗುಗಳೊಳೆಸೆವ
ನಾರಿಯುರು ಪುರುಷರಜ್ಞಾನಿಗಳು ಸನ್ಮಾರ್ಗದವರಲ್ಲವೆಂದಱಿವುದೂ ೨೭

ಸರಿಸದುತ್ತುಮದ ನಾಸಿಕ ವಿಪುಲನೇತ್ರಬಂ
ಧುರನಯುದ ಪುರ್ಬು ಚೆಲ್ವಾದ ಪಣೆಕರ್ಣಂಗ
ಳರು ಶಾಂತಿಮುಖ ಸುಪ್ರಸನ್ನನಾಗಿರ್ದ ಮನುಜಂ ಪೂಜ್ಯನೆಂದೆನಿಸುವಂ
ಹರಿಣಶಿಶುಕುಕ್ಷಿಯಾತಂ ಜಾರನಹನು ಕು
ಕ್ಕುರನ ಜಂಬುಕನ ತೋಳನ ದೊಡ್ಡಿತಪ್ಪ ಸೂ
ಕರನ ಪೋಲುವ ಹೊಟ್ಟೆಯಾತಂ ದರಿದ್ರನೆಂದಱಿವುದೈ ವರಕುಮಾರಾ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧೂರ್ತನ್ನೆ ಸೆರೆ ಬಹಳವಾಗಿರ್ದವಂ ಬಳಿಕ
ಕೂರ್ತು ಬಳಲಿದಗೆ ವಾಹನತತಿಯ ಹಸುವಿನಿಂ
ದಾರ್ತನಾದಂಗನ್ನಮಂ ತೃಷಿತನಾದವಂಗುದಕಮಂ ಧರೆಯೊಳು ಭಯಾ
ವರ್ತಿಯಾದವನಿಗಭಯಂಗಳಂ ಕೊಟ್ಟು ಸಂ
ಪೂರ್ತಿಯಾಗಲ್ಕೆ ಪರಪುರುಷಾರ್ಥಿಯಾದವಂ
ಕೀರ್ತಿವಡೆದಿಹನೆಂದು ಪುರುಷಲಕ್ಷಣಮಂ ನಿರೂಪಿಸಿದನಾಚಾರ್ಯನೂ ೨೯

ತನಯ ಪುರುಷರ ಲಕ್ಷಣಂಗಳಂ ಕೇಳಿದಾ
ವನಿತೆಯರ ಸರ್ವಾಂಗದಲ್ಲಿ ರಾಜಿಸುವ ಬಿ
ಣ್ಪಿನ ಗುಣಂಗಳನು ಲಕ್ಷಣತತಿಯು ಬಿತ್ತರಿಪೆನೆಂತೆನಲು ವಿನುತ ಸಾಮ್ರಾ
ವೆನಿಸದಿಹ ಹಸ್ತಪಾದಾಂಗುಲಿನ ಖೋಷ್ಟಂದ
ಶನ ಭಾಳ ಜಿಂಹಾಗ್ರಕೇಶವುಳ್ಳಳು ಕಪ್ಪೆ
ಯನೆ ಪೋಲ್ವ ಪೊಟ್ಟೆಯಾಲದ ಹಣ್ಣ ಪೋಲ್ವಂಗದಳು ನೃಪಗೆ ಯೋಗ್ಯಳಲ್ಲಂ
೩೦

ವಿಸ್ತೀರ್ಣವಾದ ಪೊಱವಾರನುಳ್ಳವಳು ಸಂ
ಶಸ್ತದಿಂದಲ್ಪಮಧ್ಯಾಯತೇಕ್ಷಣೆ ಮಹಾ
ಪ್ರಸ್ತುತಮಹೇಶ್ವರಗೆ ಯೋಗ್ಯಳೆನಿಪ್ಪ ತನ್ವಿಯಶ್ಯಾವೆ ಮೃದುಭಾಷಿಣೀ
ಆಸ್ತಿಕ್ಯ ಕುಂದೇಂದು ಶಂಖ ದಂತಂಗಳಗ
ಭಸ್ತಿಮಯ ಸೌಂದರಾಂಗದ ವನಿತೆಯೇ ವಿಪುಲ
ಕಸ್ತೂರಿ ಮುಖ್ಯಲೇಪನ ವಸ್ತ್ರಮಾಲ್ಯಭೂಷಣದ ಸಿರಿಯುಳ್ಳವಳಲಾ ೩೧

ಹರಡುಗಳು ಬೆರಳು ಸೆರೆ ಗೂಢವಾಗಿ ಬಡನಡುವಿ
ನುರುರಕ್ತಚರಣವಾ ಕೆಂಬೆಳೆಯ ಕಡೆಗಣ್ಣ
ತರುಣಿ ಸುಖಿಯುಹಳಿನ್ನು ಹಸ್ತರೇಖೆಗಳ ಬಗೆ ಪದ್ಮಮಾಲಾಂಕುಶಾದೀ
ಕರಮೆಸೆವ ಸತ್ತಿಗೆಯದಧಿಕನಂದ್ಯಾವರ್ತ
ದಿರವಿಂ ಪ್ರದಕ್ಷಿಣಂಗಳ ಹಸ್ತವುಳ್ಳ ಸೌಂ
ದರಿಯಧಿಕ ಭೋಗಸಂಪನ್ನೆಯೆಂದರರೆ ಸಾಮುದ್ರಿಕದ ಲಕ್ಷಣವಲಾ ೩೨

ಆವೆಗಳ ಮೆಯ್ಯಂತೆ ನಯವಿಲ್ಲದಡಿಯ ಬೆರ
ಲೇ ಮೇಲಕಾಗಿರ್ದ ಕನ್ನೆಯಂ ಬಿಡುವುದೈ
ಭೂಮಿಯಂ ಮಡತುದಿಗಳಲ್ಲದಾ ನಡುವಜ್ಜೆ ಸೋಂಕದಿಪ್ಪವಳೆ ಪತಿಯಾ
ಪ್ರೇಮಿಯುತ್ತಮೆಯಲಾ ಕಿಱುಕುಣಿಕೆ ನೆಲಮುಟ್ಟ
ದಾ ಮಹಿಳೆ ವಿಧವೆ ಮರು ಮೂಱು ಬಾಳಂ ಬಾಳು
ತಾ ಮೇಲಣಾಣ್ಮನೊಳು ಸುಖವಿಪ್ಪಳೈಸೆಯುದಱಿಂದ ಲವಲಕ್ಷಿಣಿಯಲಾ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೆಡಕಾದ ಕಾಲವಳು ಮುಖವಿಕಾರತೆಯುವಳು
ಅಡರಿರ್ದ ರೋಮದವಳೋಷ್ಠದುನ್ನತದವಳು
ತಡವು ಮಾಡದೆ ಗಂಡನಂ ತಿಂಬಳ್ಳೆ ಬೆನ್ನ ಸುಳಿಯವಳು ಮುಂಡೆಯುಹಳೂ
ಒಡನೆ ಪೊಕ್ಕುಳ ಸುಳಿಯ ವನಿತೆ ನಿಟ್ಟೈದೆಯ್ಕೆ
ಬಿಡದೆ ಕಟಿಯೂವರ್ತೆಗಾಗವ್ಯೆ ಮಕ್ಕಳಿ
ನ್ನೊಡಲ ಮೇಲಣ ಸುಳಿಯವಳ್ಗೆಯಂತಾಶ್ವಶುರನಳಿವನೆಂಬುದು ನಿಶ್ಚಯಂ ೩೪

ಭಾಳದಾವರ್ತದಿಂದೇವರನ ಮರಣವ್ಯೆ
ಕೇಳು ಕಟಿ ಜೋಲುತಿರೆ ಪುರುಷನಂತಾ ಸಗ್ಗ
ದಾಲಯವನೆಯ್ದುವಂ ಸಂಚಲದ ನೋಟವಂತೂರ್ಧ್ವವಾದಾಲೋಕನಂ
ಮೇಳವದ ವನವೃಕ್ಷ ಮೋಹವುಳ್ಳಾಬಗೆಯು
ಕೇಳಿ ಬೇರವಳು ವಾನರೀ ಗಾನ ನೃತ್ಯವಾ
ದ್ಯಾಳಾಪಿಯೇ ಪೂರ್ವಸಂಬಂಧ ಗಂಧರ್ವನಿತೆಯೆಂದಱಿ ಕುಮಾರಾ ೩೫

ಶೀತಲ ಸುಗಂಧಮೋಹಿನಿಯಾಗಿ ಸರ್ವರೊಳ್
ಪ್ರೀತಿಯಂ ನುಡಿವಲ್ಪವುಂಬಿನಿಸು ಕಿನಿಸುಗಳೊ
ಳಾ ತರುಣಿಯೇ ದೇವಸತಿಯಿನ್ನನಿಂದ್ಯ ಚಾರಿತ್ರೆ ಗುರುಭಕ್ತಿಯಧಿಕಾ
ಪಾತಿವ್ರತಾ ದೇವತಾಭಕ್ತೆ ಮಾನುಷೆಯು
ಲ್ಲೈ ತರುಣ ಮುರಿದ ಮನದವಳುಗ್ರಕಟುಕಭಾ
ಷಾತೀವ್ರೆ ಪುರುಷಮೋಹಿನೀಯಲ್ಲದವಳು ರಾಕ್ಷಸಿಯೆನಿಸುವಳು ಬಳಿಕ್ಕಾ ೩೬

ಶೌಚವಿಲ್ಲದ ಕುರೂಪಿಣಿ ಭಯಂಕರ ವಿಲಸ
ದಾಚಾರರಹಿತೆಯಾ ಸ್ವೇದ ಮಲದಿಗ್ಧೆಯಾ
ಪೈಶಾಚ ಸಂಜ್ಞಾ ವನಿತೆಯ್ಕೆ ಗುಪ್ತಪಾಪಿಯಾ ಪತ್ತಡಸಿದಾಪ್ತರ್ಕಳಾ
ಔಚಿತ್ಯರಕ್ಷಣೆಯ ಮಾಡದಜ್ಞಾನಿ ಮ
ತ್ತಾ ಚಿತ್ತದಲ್ಲಿ ದುರ್ಬುದ್ಧಿಯೆಂ ನೆನೆವ ದು
ರ್ವಾಚಿಯೇ ಮಾರ್ಜಾಲರೂಪಿಯೆಂದಱಿವುದ್ಯೆ ಗುಣಗಣಪ್ರಜ್ಞ ಪುತ್ರಾ ೩೭

ಅಭಿಮಾನವಱಿಯದ ಪವಿತ್ರಭಕ್ಷಿಣಿಯಾಗಿ
ಶುಭವಾಕ್ಯ ಸತ್ಕಾರವಱಿಯದಿರ್ಪವಳೆ ಗಾ
ರ್ದಭಿಯಲ್ಲೈ ಮತ್ತೆ ಮಾವನನತ್ತೆಯಂ ಜಱಿದು ತಾಯ ಲೆಕ್ಕಿಸದೆ ತನ್ನಾ
ವಿಭುವಿನೆಡೆಯೊಳು ಭಕ್ತಿಯಿಲ್ಲದವಳೇ ಧರೆಯೊ
ಳಭಿಕೆಯೆನಿಸುವಳು ನಾರದಿಯಲ್ಲಿ ಪೇಳ್ದನಾ
ರುಭು ಮುನೀಶ್ವರನಂಗನಾ ಲಕ್ಷಣಂಗಳಂ ಕೇಳೆಂದನಾಚಾರ್ಯನೂ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಸ್ತರೇಖೆಗಳ ಬಗೆಯುಂ ಕರುಣದಿಂ ನಿನಗೆ
ವಿಸ್ತರಿಸುವೆಂ ಕೇಳು ಕಳಸ ಸಿಂಹಾಸನಂ
ಹಸ್ತಿರಥಯೂಪವಾ ಶ್ರೀವತ್ಸಮಾಲೆ ಕುಂಡಲ ಚಾಮರಂ ಕುಶಾದ್ರೀ
ಪ್ರಸ್ತುತಧ್ವಜ ತೋಮರಂ ಸ್ವಸ್ತಿಕಂ ಮತ್ಸ್ಯ
ಶಸ್ತವೇದಿಕೆ ಶಂಖವಾ ವ್ಯಜನ ಮಂಬುಜಂ
ನ್ಯಸ್ತಾಪತ್ರಾದಿ ಪಾಣಿಪಾದದೊಳಿರ್ದಡರಸನಗಸಿಯರಪ್ಪರೂ ೩೯

ಅಣಿಯುರದೊಳಿನ್ನು ಕೇಳೈ ನಿಗೂಢತೆಯಪ್ಪ
ಮಣಿಬಂಧದಿಂ ವಿರಾಜಿಪ ಸೂರ್ಯಸಂಭವ ತ
ರುಣಪದ್ಮಗರ್ಭೋಪಮದ ಹಸ್ತದಬಳೆ ಭೂಪತಿರಾಣಿವಾಸವಹಳೂ
ಕಣೆದಿರುವ ಸೆಳೆವಂಗುಲಿಯು ಪರ್ವದಾ ನಿಮ್ನ
ವಣಿಯುರದನೋನ್ನತ ಸುರೇಖೆಯುಳ್ಳವಳು ಧಾ
ರಿಣಿಯಲ್ಲಿ ನಿಟ್ಟೈದೆಯಾಗಿ ಬಾಳ್ವಳು ಕಣಾ ಮುಂದೆ ಪೇಳುವೆನು ಕೇಳೂ ೪೦

ಬೆರಲೈದರಾದ್ಯಂತವಳೆದು ಮಣಿಬಂಧದೆಡೆ
ಯಿರಿಸಿ ಮಧ್ಯಂಗುಲಿಗೆಯಾ ಸೂತ್ರವಿಡಲದಕೆ
ಪಿರಿದೆನಿಸಿಕೊಂಡಿರ್ದೊಡಲ್ಲದೊಡೆ ಸತಿಯು ಪಾದದೊಳೂರ್ಧ್ವರೇಖೆಯಿರಲೂ
ಧರೆಯುಂ ಪರಾಕ್ರಮದೊಳಾಳುತಿಪ್ಪಧಿಕ ಭೂ
ವರಗವಳು ವಧುವಪ್ಪಳೀಕೆಯು ಸಲಕ್ಷಣದೊ
ಳರಸು ಚಿರವಪ್ಪನೆಂಬುದ ಕೇಳೆನುತ್ತ ಬಿತ್ತರಿಸಿದಂ ಗುರುರಾಯನೂ ೪೧

ಆ ಕಿಱುವೆರಲ್ವುದಿ ಪವಿತ್ರಾಂಗುಲಿಯ ತುದಿಯು
ರೇಖೆಯುಲ್ಲಿಗೆ ಬರಲು ಪರಮಾಯುವಪ್ಪನಿ
ನ್ನಾ ಕಡಿಮೆಯನಿತಸಿತು ಭಾಗದಿಂದಾಯುಷ್ಯವರುಷಂಗಳಿಳಿತವಹುದೂ
ಆ ಕೈಯ್ಯ ಹೆಬ್ಬೆರಲ ಮೊದಲನಾ ಪ್ರಜ್ಞನಾ
ಲೋಕಿಸಲ್ಪ್ರಸವರೇಖೆಗಳಿರಲು ಪುರುಷಗೆಯು
ನೇಕ ಸೌಭಾಗವುಳ್ಳವನಹಂ ಸ್ತ್ರೀಯಾಗೆ ಲಕ್ಷಣೋನ್ನತೆಯೆನಿಪಳೂ ೪೨

ಆಯತದೊಳಿಚ್ಛಿನ್ನ ದೀರ್ಘಾಯೆನಲ್ಕೆ ಬೃಹ
ದಾಯುಷಸ್ಥಾಸ್ವಲ್ಪವಾದಾಯುಷಂ ಛಿನ್ನ
ದೀ ಯುಕ್ತಿಯಿಂದಂ ಲಘುಪ್ರಮಾಣಂ ಪಾದದಿಂ ಹರಡು ಪರಿಯಂತರಂ
ಆಯೊಂದಲಾ ಪ್ರಥಮವಾ ಜಂಘೆಯುಲ್ಲಿಗಂ
ತಾಯುಳತೆಯೇ ದ್ವಿತೀಯ್ಯಂ ಜಾನುಸಹಿತೆನಿಂ
ತಾಯುಗ್ರಮೇಢ್ರೋರುಮುಷ್ಕಾಚ ಎನುತಂ ಶ್ರುತಿಯುಲ್ಯೆ ತರುವಾಯೊಳು ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಭಿಸ್ಫುಟಿಶ್ಚತುರ್ಥಂಗಳೆಂಬರು ಮೇಲೆ
ಶೋಭನೋದರಪಂಚಮಮಂ ಹೃದಯು ಷಷ್ಠ್ಮವೈ
ವೈಭವಸ್ಥನಯುಗ್ಮಮು ಸಪ್ತಮಂ ತೃಣಿಗಳಲ್ಲಿ ಗಳೋಷ್ಠ ಕಂದರದೊಳು
ಹೈಭಲರೆಯಷ್ಟಮಂ ನವಮಂ ಸಭೃಣಿನೇತ್ರ
ವೈಭಾಳವೇ ದಶಮವಿಂತಿದು ಶರೀರದ ಮ
ಹಾ ಭೇದವಶುಭಕಶುಭಂ ಶುಭಕೆ ಶುಭವಂಪ್ರಮುಖ್ಯದ ದಶಾಫಲವಲಾ ೪೪

ಇದು ವರಾಹವಿರತಿಕ್ರುತ ಸ್ತ್ರೀ ಮಹಾಲಕ್ಷ
ಣದ ಬಗೆಯನೇಕ ದೇಶದೊಳು ಪೇಳ್ವೆವು ಕಣಾ
ಸದಮಲದ ರಕ್ತ ಪೃಥುಪದ್ಮನೇತ್ರಾಸ್ನಿಗ್ಧದೀರ್ಘಾದೀರ್ಘಾಸಿತಾಗ್ರವೆನಿಸೀ
ಮೃದುವಾದ ಕೇಶಂ ಗುರೂರುಜಘನಾಲ್ಪ ಮ
ಧ್ಯದ ತೆಳ್ವಸುರ ತೋರವೊಲೆಯು ತಾಮ್ರಾಧರೋ
ಷ್ಟದ ಹಸ್ತಪಾದಾಯತಾಕ್ಷಿ ನಾಸಾ ಭ್ರೂಲಲಾಟ ಗಂಡದಳುತ್ತಮೆ ೪೫

ಆಕೆಯಿನ್ನುದ್ಭ್ರಾಂತಲೋಚನಾ ಚಿತ್ರಾಕ್ಷಿ
ಕೇಕರಾಮರ್ದಳಸಮಾನ ಮಧ್ಯಮೆ ಯಾಮಿ
ಪಾಕಲಿತ ಬಹುಲಾಂಛನೆ ಚಪಲೆಯೆತ್ಯುನ್ನತೋಷ್ಠಂಗಳುಬ್ಬಿದ ಕದಪಿನಾ
ಆ ಕಪಿಲ ರೂಕ್ಷಕೇಶದಳ ಶಶಮೃಗಸೂಕ
ರಾಕೃತಿಯು ನಯು ತನುಚ್ಛವಿಯೂರು ಜಘನವೇ
ವೈಕಾರವಿವೃತ್ತವಪ್ರದಕ್ಷಿಣ ನಾಭ್ಯುಪಾಂಗುಲಿಯುಳಧಮವನಿತೇ ೪೬

ಗುರುತರೋನ್ನತ ಜಘನ ಸಮವಿಮಲದಶನ ಬಂ
ಧುರ ಸುಮುಖಿಕರಚರಣಸೌಖ್ಯವುಳ್ಳಬಳೆಯೆ
ನರಪತಿಯ ವಧುವಾಗಿ ತಂದೆತಾಯತ್ತೆಮಾವಂದಿರೊಳು ಸುಖವಿಪ್ಪಳೂ
ಧರೆಯಲ್ಲಿ ಕೃಷ್ಣ ಪಿಂಗಳದೇಹಿ ಕಾಲು ಮೊಗ
ಸೆರೆಗಳುಬ್ಬುತ್ತ ತಾಮ್ರಚ್ಛವಿಯು ನಖವಲ್ಲಿ
ಯಿರಲಲ್ಲಿ ಭಗ್ನವಕ್ರಪ್ಲವಗನಾಸಿಕದ ವಿಷಮದಂತಾಕ್ಷಿಯಧಮೇ ೪೭

ಸುಪ್ರಸನ್ನಾಸ್ಯದ ಸುಸೂಕ್ಷ್ಮಘನನೀಲಕೇ
ಶ ಪ್ರಚುರವಂಬುಜಚ್ಛತ್ರ ಗಜರಥದರೇ
ಖಪ್ರಯುತಕರದಬಲೆ ರಾಜವಧುವೆನಿಸಿ ಸುಖದಿಂ ಬಾಳುತಿಪ್ಪಳಿನ್ನೂ
ಸುಪ್ರದರ್ಶಿತ ರೋಮ ಮುಖ ವಿರಳ ದಂತಂಗ
ಳಪ್ರಹಸಿತಾನನಂ ವಲಿತ ನಾಸಿಕ ದಾಹ
ನುಪ್ರನಿರ್ಮಾಂಸದವಳಗ್ರಜಾನುಜ ಪತಿಪಿತಾದಿಗಳ ಸಂಹರಿಪಳೂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಂಭೀರ ಪಿಂಗಳ ಬೃಹನ್ನಯುನದಲ್ಲಿ ಗಳ
ದಂಭಸ್ಸಿನಿಂದಕ್ಷಣಾಗ್ರನಾಸಾಹ್ರಸ್ವ
ದಿಂ ಭುಜಂ ಮೆಟಿಯಲಾ ಘೂಕಮುಖದ ಧೃತಿಯ
ಕೃಶಾಂಗಿಯುವಲಕ್ಷಣೆಯಲಾ
ಕುಂಭಿನಿಯೊಳಂ ವಿಶಾಲದ ಲಲಾಟಂ ಹನುಗ
ಳಿಂ ಭರ್ತ್ರುಲಕ್ಷ್ಮಿಹರೆಯೆನಿಪಳಭ್ಯುನ್ನತದ
ಶುಂಭನ್ಮಹಾಕಕ್ಷಲಕ್ಷಣಾಕ್ಷಿಗಳಧಿಕ ಗಂಭೀರಮಪ್ಪಧನಿಯಾ ೪೯

ಪಾದಪಾಣಿಗಳು ಶುಭರೇಖೆಗಳ ನಖಚರಣ
ಸಾದರಾಕ್ಷಿಗಳ ತಾಮ್ರಚ್ಛವಿಯ ಲಕ್ಷಣಕೃ
ಶೋದರಿ ಮದೇಭ ಹಂಸೆಯ ನಡೆಯುವಳು ರಾಜಪತ್ನಿಯೆನಿಪಳು ನತಾಗ್ರಾ
ವಾದ ನಾಸಿಕ ತುರಗಗಜ ನೇತ್ರನೇಲ್ವಭುಜೆ
ವೋದವರತಿಪ್ಪಪ್ರಹೀಣೆ ಹಯಹೇಷಿತದ
ನಾದೆಯುಂ ರಾಜರ್ಗೆ ಯೋಗ್ಯವಲ್ಲೆಂದು ಬಿಡುವುದು ಲಕ್ಷಣಾಧೀಶರೂ ೫೦

ಕರಕಮಲದಲ್ಲಿ ರೇಖೆಗಳ ಮಯವಾಗಿ ಬಂ
ಧುರ ನಿಮ್ನದಾಯತ ಲಲಾಟ ರೇಖೆಗಳನುಳ್ಳ
ಳರಸಂಗೆ ವಧುವೆನಿಸಿಕೊಂಡಾ ವಸಂತ ತಿಲಕಾಭಿಧಾನದೊಳೆಸೆವಳು
ಇರದೆಯುಪಚಿತಹನುಮ್ವುಗಾಂಕಾಸ್ಯವೃತ್ತೋರು
ವೆರಡು ದೀರ್ಘಂ ಪೀನಬಾಹುಗುಣವೃದ್ಧಿ ಸೌಂ
ದರ ಕುಸುಮಮಾಲ್ಯಾಂಗನಂ ಮಾಲಿನೀನಾಮಿಯೆಪ್ಪವಳು ಸೇವಿಸುವಳೂ ೫೧

॥ವಸಂತತಿಲಕವೃತ್ತ॥ ರೇಖಾಮಯಂ ಯದಿಕರೇ ಜಲಜಾತಪತ್ರಂ
ನಿಮ್ನಾಯತಂ ಯದಿ ಭವೇಚ್ಛಲಲಾಟಲೇಖಾ
ಲೋಕೇಶ್ವರಂ ವಿಹಿತ ವಿತ್ತಪತಿಂತು ನಾರೀ
ಕ್ಷಿಪ್ರಂ ವಸಂತತಿಲಕಾ ಸಮುಪೈತಿ ಲಕ್ಷ್ಮೀಃ ೧

॥ಮಾಲಿನೀವೃತ್ತ॥ ಉಪಚಿತಹನುಮಾಸ್ಯಂ ಚಾರುವೃತ್ತೋಯುಗ್ಮಂ
ಮೃಗಪತಿ ಸದೃಶಾಸ್ಯಂ ದೀರ್ಘಪೀನಾಂ ಸ ಬಾಹುಂ
ತಮಿತ ಗುಣಸಮೃದ್ಧಂ ರಾಜಲಕ್ಷ್ಮೀಸಹಾಯಂ
ಸ ಕುಸುಮ ಮಿವನಾರೀ ಸೇವತೇ ಮಾಲಿನೀ ಭೂಃ ೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಳ ದಶನವನುಳ್ಳ ನಿರ್ಮಾಂಸಿಕಾನನದ
ವರ ನಿನಾದವಾ ಕುಟಿಲಪದ ಗಭೀರಾಕ್ಷವ
ವತ್ಸ್ಯರು ಬಹಿರ್ವಿನತಾಂಗುಲಿ ಕ್ಷಯಕರದಿನೆಸೆವ ಪುರುಷನಂ ಕಂಡು ಲಕ್ಷ್ಮೀ
ಯಿರದೆ ಪೊರ್ದದೆ ಪೋಪಳೆಂತೆನಲು ವನದೊಳಗೆ
ಕರಮುಗ್ರದಾ ವ್ಯಾಘ್ರನಂ ನೋಡಿ ಭೀತಿಯಿಂ
ಹರಿಣಿಯೋಡುವುದೆಂತು ಮುಂಚೆ ಹರಿಣೀವೃತ್ತವೆಂದಱಿವುದೈ ಕುಮಾರಾ ೫೨

॥ಹರಿಣೀವೃತ್ತ॥ ವಿರಳಂ ದಶನಂ ನಿರ್ಮಾಂಸಾಸ್ಯಂ ಖರಸ್ವರ ಭಾಷಿಣಂ
ಕುಟಿಲ ಚರಣಂ ಗಂಭೀರಾಕ್ಷಂ ಬಹಿರ್ವಿನತಾಂಗುಲಿಂ
ಕ್ಷಯಕರ ನರಂ ತಂದೃಷ್ಟ್ವಾಶ್ರೀರ್ವ್ರಜೇತ್ಯನಪೇಕ್ಷಿಣೀ
ವ್ಯಗಪತಿ ಭಯಾದುದ್ವಿಗ್ನಾಂಗೀ ವನೇ ಹರಿಣೀಯಥಾ ೩

ಸಮವಾದ ಸಂಶ್ಲಿಷ್ಟಪಾದವಾ ಕರ್ಣನಖ
ಸಮಿತಿ ಚಿಪ್ಪಿನ ತೆಱದಿನಂತನುದ್ವಂಧವೆನಿ
ಪಮಲ ಜಂಘೆಯು ಮೃಗಾಧಿಪ ಕಟಿಶ್ಯೇನ ನಯನದ ರಿಪುಸ್ತ್ರೀಯರಕ್ಷೀ
ಗವುರಿದಂಜನವಳಿಯಲಾಗಿ ದುಃಖಿಸಲತಿ
ಕ್ರಮಿಸಿ ಪರಸೇನೆಯುಂ ಗೆಲ್ವಂ ನೃಪನಂ ವರಿಪ
ರಮಣಿಯಾ ಶಿಖರಿಣಿಯೆನಿಪ್ಪಳೈ ಕೇಳೆನುತ್ತಿರ್ದನಂದಾಚಾರ್ಯನೂ ೫೩

॥ಶಿಖರಿಣೀವೃತ್ತ॥ ಸಮಶ್ಲಿಷ್ಟಾಪಾದಶ್ರವಣ ಕರಜಾಶುಕ್ತಿಸದೃಶಾಃ
ಅನುದ್ವೃದ್ಧೇಜಂಘೇ ಮೃಗಪತಿಕಟಿಶ್ಯೇನಯನಃ
ಗುಣ್ಯೈರ್ಯೇಭಿರ್ಯುಕ್ತೋ ರಿಪುಯುವತಿನೇತ್ರಾಂಜನ
ಹರಃಪ್ರಣೇತಾ ಸೇನಾನಾಂ ಯದಿ ಭವತಿ ಸಾಸ್ಯಾಚ್ಛಿಖರಿಣೀ ೪

ಕರದೊಳಾ ಪ್ರಸಾದ ನಾಗಧ್ವಜಚ್ಛತ್ರ
ಕರಿಮಕರ ರಥವಜ್ರಶಂಖಕುಂಭಾಬ್ಜವೊ
ಪ್ಪಿರೆ ರೇಖೆಯಾ ಸ್ನಿಗ್ಧಗಂಭೀರರೂಪಿಂದನಾಮಿಕಾಂಗುಲಿಯು ಮೊದಲಾ
ಯಿರದಾ ಲತಾವೇಷ್ಟವಂಶಲೇಖೆಗಳಿರ್ದ
ನರಪನಂ ಪೃಥ್ವಿಕುಲವಧು ಹರುಷನೊಳು ಕೂರ್ತು
ನೆರೆವಂತಲಾ ಶ್ರದ್ಧರಾಶ್ರೀಯಿದಿಲ್ಲಿ ಮುಗಿಯಿತ್ತು ಸಾಮುದ್ರಿಕವೂ ೫೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯು ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯಂ
ಶೀಲ ಪಟ್ಟಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತ ಪುರಾಣಮಂ ಕೊರ್ತು ಪದನಂ ಮಾಡಿದಂ ೫೫

ಇದು ವೀರಶೈವಪಟ್ಟಸ್ಥಲಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಸುಸಾಮೂದ್ರೀಕದೆಡೆ ಮೂಱುಕಾಂಡ ಮೇಲಿಪ್ಪತ್ತಮೂಱು ಸಂಧೀ ೫೬

ಅಂತು ಸಂಧಿ ೨೩ ಕ್ಕಂ ಪದನು ೧೨೨೧ಕ್ಕಂ ಗ್ರಂಥ ೭೫ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೭೦

ಕಾಲಜ್ಞಾನ ಮರಣಚಿಹ್ನಂಗಳಂ ತಿಳಿಸುವಿಕೆ

ಪ್ರಜ್ಞಾತ್ವದಿಂದರ್ಭಕಂ ಗರ್ಭದಲ್ಲಿ ಕಾ
ಲಜ್ಞಾನ ಮರಣಚಿಹ್ನಂಗಳಂ ತಿಳಿದು ಬಳಿ
ಕಜ್ಞಾನಪ್ಪಂ ವಿಷ್ಣುವಾಯುವಿಂದೊಂಭತ್ತನೆಯ ಮಾಂಸಪೂರ್ಣದಲ್ಲೀ

ಕಿವಿಯೊಳಿರ್ದುದಕೆ ತಲೆಯಾಭರಣವಳ್ಕುವುದು
ತವೆ ಕೈಯ್ಯೊಳಿರ್ದೊಂದು ಜೀವವದೞಲುಪ ಕೇ
ಳುವ ಸೊಗಸಿಗೆಳಸುತ್ತ ನಿನ್ನಡಿಯ ಕಾಣುತ್ತ ಬೆದಱೂದು ನಿನ್ನ ಫಣೆಯೇ
ಭವನವಾಗಿರ್ದುದೇ ನಿನ್ನ ಶಿರದೆಡೆಯ ವಾ
ಸವನುಳ್ಳುದಕ್ಕೆಯಂಜೂದು ಗಡ ನಿನ್ನನೆನೆ
ವವರ ಕಾಣುತ್ತ ಯಮನಳ್ಕನೇ ಶಾಂತಮಲ್ಲೇಶ ಪೇಳಘವಿನಾಶಾ ೧

ತಾನೊಂದು ಪೆರ್ವಕ್ಕಿಪಾಱಿ ಬಿಸಿಲೊಳು ಬಪ್ಪ
ಮಾನನಿಧಿ ಭಕ್ತಂಗೆ ನೆಳಲಾಗೆ ಶಂಕರ
ಸ್ಥಾನಭೋಗಂ ಖಗಕ್ಕಾಯ್ತು ಗಡ ಚರಲಿಂಗವಿಪ್ಪ ಸಿಂಹಾಸನಕ್ಕೇ
ನಾನಾ ವಿಚಿತ್ರದುಪ್ಪರಿಗೆಗಳ ನಿರ್ಮಿಸು
ತ್ತಾ ನಮಿತ ಜನಕೆ ಕೃಪೆಯಿಂ ತ್ರಿಕಾಲೋಚಿತ
ಜ್ಞಾನಮಂ ಬೋಧಿಸುವ ಶಾಂತನಂಜೇಶ್ವರಸ್ವಾಮಿ ಜಯ ದಿವ್ಯನಾಮೀ ೨

ಸಾಮುದ್ರಿಕದ ಲಕ್ಷಣವ ನಿಂತು ನರಗರ್ಭ
ಧಾಮದರ್ಭಕನು ಚಿಂತಿಸುತಿಪ್ಪನಿನ್ನು ಕೇ
ಳೈ ಮಗನೆ ಯಾ ಶಿಶುವೆ ಶಿವನಗಜೆಗೊರೆದ ಕಾಲಜ್ಞಾನಮಂ ನೆನೆವುದಾ
ಪ್ರೇಮದಿಂ ಬಿತ್ತರಿಪೆನೆಂದು ಷಣ್ಮುಖನೊರೆದ
ನೈ ಮಹಾ ಕುಂಭಜಗದಂ ಸುಖಾವಹಮೂರ್ತಿ
ಯಾ ಮುನಿಗಳಿಗೆ ಪೇಳ್ದುದಂ ನುಡಿವೆನೆಂದನಾ ಹಲಗೆಯಾರ್ಯ್ಯಂ ಕರುಣದೇ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತೆನಲು ಪಲವು ಶಾಸ್ತ್ರಂಗಳೊಳು ನೋಡಿದೊಡ
ನಂತ ಕುಹಕಂಗಳಹ ವಿದ್ಯವುಂಟಾಗಿರ್ದೊ
ಡಂತವೇಂ ಫಲವಯ್ಯ ತನ್ನ ಮರಣದ ಕಾಲಮಂ ತಿಳಿದು ಸದ್ಗತಿಯನೂ
ಚಿಂತಿಸಲು ಬೇಕಲಾ ಮಗನೆ ಕಲಿ ಹಂದೆಗಳಿ
ಗಂತುಕಾಲಂ ಸಮಂವೃತಿನಿಶ್ಚಯಂ ತನಗೆ
ಯಂತಕನ ಭಯವ ತಪ್ಪಿಸಿಕೊಂಬ ಯುಕ್ತಿಯಂ ಮಾಡಿಯೆಕೊಳಲ್ಪಪ್ಪುದೂ ೪

ನಾಸಿಕದ ನಾಡಿಯೆರಡಱೊಳು ನಡೆವುತ್ತಿಹ
ಶ್ವಾಸಂ ಸಮಾನದಿಂ ನಡೆಯಬೇಕಲ್ಲದೊಂ
ದೇ ಸ್ವರಂ ನಡೆಯಲದು ಮರಣಚಿಹ್ನಂ ಕಣಾ ತತ್ತ್ವಮವನಿನ್ನು ಕೇಳೂ
ಆ ಸುಸ್ವರಂಗಳಂಗುಲಿ ಷೋಡಶಂ ಬಹಿ
ರ್ವಾಸಕ್ಕೆ ನಿರ್ಗಮಿಸಿ ಪನ್ನೆರಡು ಮೊಳ ಪೋಗು
ತೈಸಱೊಳುನಾಲ್ಕಂಗುಲಂಪೊಱಗೆಯುಳಿವುದನಿತಾಯುಷ್ಯಹಾನಿಯಾಹುದೂ ೫

ಕೂಡೆ ರೇಚಕ ಪೂರಕಂಗಳಱುವತ್ತಾಗೆ
ನಾಡೆಯಾ ಪ್ರಾಣಾಸುಯಾಮವಂತದು ಬಳಿ
ಕ್ಕಾಡಂಬರದೊಳೆಯಱುವತ್ತುಮಡಿಯಾಗಲೊಂದೇ ಘಳಿಗೆಯಾ ಘಳಿಗೆಯಾ
ರೂಢಿಸುತ್ತಱುವತ್ತನೊಂದಿಸಲು ದಿನವಲಾ
ಗಾಡಿಯಿಪತ್ತೊಂದು ಸಾಸಿರದ ಅಱುನೂಱ
ನಾಡಿ ತೋಱಲು ಹಂಕಣಾ ಪೂರಕಂ ಸಕಾರಂ ರೇಚಕಂ ಹಂಸವೈ ೬

ಹಂ ಕಾರವೇ ಪೂರಕಂ ಸಕಾರಂ ರೇಚ
ಕಂ ಕಣಾ ಹಂಸ ಎನೆ ರೇಚಿಪುದೆನುತ್ತ ಯೋ
ಗಾಂ ಕರಾ ಸೋಹಮೆಂಬರು ಮಹಾ ಶಿವಭಕ್ತರಾ ಮಹಾಪ್ರಣವವೆನಿಪಾ
ಓಂಕಾರದುಚ್ಚರಣೆಯಂ ಮಾಳ್ಪರಯ್ಯ ನಿಃ
ಶಂಕರಿಪ್ಪತ್ತವೊಂದುಂ ಸಾವಿರದ ಮೇಲೆ
ತಾಂ ಕೂಡಿದಱುನೂಱು ದಿನಒಂದಕದಱೊಳಗೆ ಹೀನಂಗಳಂ ಪೇಳ್ವೆನೂ ೭

ಒಂದು ಹಂಸಂಗೆ ಪೂರಕವಲಾ ದ್ವಾದಶಂ
ನಿಂದುಳಿವುದೇ ನಾಲ್ಕು ಬೆರಲೆನಲು ಪಾದವುಳಿ
ದೊಂದುವುದು ಮೂಱು ಪಾದಂಕಣಾ ಪ್ರಾಣಾಸುಯಾಮವಾ ಘಳಿಗೆ ದಿವಸಾ
ಒಂದು ತಿಂಗಳಿಗೇಳುವರೆ ದಿನಂ ಹಾನಿಯು
ತೊಂದು ವರುಷಕೆ ಮೂಱು ತಿಂಗಳ್ಯೆನೂಱಕ್ಕೆ
ಕುಂದುವುದದಿಪ್ಪತ್ತಐದುಳಿವುದೆಪ್ಪತ್ತಐದು ವರುಷವೆ ಬಳಿಕ್ಕಾ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂತೆಂದೊಡೀಡಪಿಂಗಳದಂತರದೊಳು ನಲ
ವಿಂ ತಳ್ತು ಪಂಚತತ್ತ್ವದೊಳಗೈದೇ ಘಳಿಗೆ
ಮುಂಚೆ ನಡೆಯಲು ನೂಱಯಿಪ್ಪತ್ತುವರುಷ ಬದುಕುವನಾಱು ಘಳಿಗೆ ನಡೆಯೆ
ಸಂತಸದೆ ನೂಱು ಸಪ್ತಕ್ಕೆ ಯೆಂಭತ್ತಷ್ಟ
ಕಂ ತರುಣ ಷಷ್ಠ ಹತ್ತಕ್ಕೆಯೈವತ್ತು ನಿ
ಶ್ಚಿಂತ ಹದಿನೈದಕ್ಕೆ ನಾಲ್ವತ್ತು ವಿಂಶತಿಗೆ ವರುಷಮೂವತ್ತಱಿವುದೂ ೯

ಘಳಿಗೆ ಮೂವತ್ತಕ್ಕೆ ಹದಿನೈದು ವರುಷವೈ
ಬಳಿಕ ನಾಲ್ವತ್ತಕ್ಕೆ ಹತ್ತು ವರುಷಂ ಕೇಳು
ಕಳೆವು ದೈವತ್ತಾಗಲೈದು ವರುಷಂ ಕಣಾ ದಿವರಾತ್ರೆಯಲ್ಲಿ ಬಿಡದೇ
ಹೊಳೆವೊಂದಱಲ್ಲಿ ನಡೆವುತ್ತಿರ್ದೊಡಾಱು ತಿಂ
ಗಳಿಗಾತನಳಿವನೆಂಬ ದು ನಿಶ್ಚಯಂ ಮುಂದೆ
ತಿಳಿವಂತೆಯಾನೆ ಪೇಳುವೆನೆಂದನಾಚಾರ್ಯಮೂರ್ತಿ ವಿಗತಾನತಾರ್ತಿ ೧೦

ಕುಳಿತಲ್ಲಿ ಯೆರಡು ನಿಂದಲ್ಲಿ ನಾಲ್ಕಾ ನಡೆಗ
ಳೊಳಗೆಂಟು ಮಲಗಿದೆಡೆಯಲ್ಲಿ ಹದಿನಾಱು ರತಿ
ಯೊಳಗೆ ಮೂವತ್ತೆರಡು ಕೇಳೀ ಪ್ರಕಾರದಿಂ ಸೂಸುತಿಪ್ಪವಾಯೂ
ಒಳಗೆ ನಿಂದೊಡೆ ಹಿಂದೆ ಪೇಳ್ದ ಕ್ಷಯುದ ದಿನಂ
ಗಳು ಮಿಲ್ಲದಾಯುಷ್ಯವೆಯಿದಾ ಹೆಚ್ಚುವೈದ್ಯ್ಯ
ತಿಳಿವುದದಱಿಂ ಮರುತನಂ ಸೂಸಲೀಯ್ಯದವನಾಯು ವರ್ಧಿಸುತಿರ್ಪುದೂ ೧೧

ನಾಲಗೆಯ ಕೊನೆಯು ಕಾಣದೊಡೊಂದು ದಿನ ಕಳೆವ
ನೈ ಲಸನ್ನಾಸಿಕಾಗ್ರಂ ಕಾಣ ಕಾಣಿಸದೊಡೆ ಸುರ
ರಾಲಯಕೆ ನಾಲ್ಕು ದಿನದೊಳಗೆಯ್ದುವಂ ಕಣ್ಣ ಮಾರ್ಪೊಳಪು ಕಾಣಿಸದೊಡೇ
ಮೇಲಯಿದು ದಿನವತಿ ಪುರ್ವಿನಗ್ರಂಗಳುಮ
ನಾಲೋಕಿಸಲು ತೋಱದಿರಲಾಱು ದಿನದಲ್ಲಿ
ಕಾಲಮಂ ಮಾಡುವಂ ಮನುಜನೆಂಬುದನಱಿವುದಯ್ಯ ಕೇಳೀ ಮತದೊಳೂ ೧೨

ಶಿರದಲ್ಲಿ ಅಂಗೈಯ್ಯನಿಟ್ಟು ತನ್ನಾಸಿಕದ
ಸರಿಸದೊಳು ಮುಂಗಯ್ಯಿರಲ್ಕೂರ್ಧ್ವದೃಷ್ಟಿಯಂ
ಪರಿಕಿಸಲು ಸಣ್ಣಗಿಹುದಲಾ ವಿಪರೀತದಿಂದಲದು ದೊಡ್ಡನಾಗೀ
ನರನ ನೋಟಕ್ಕೆ ಕಾಣಿಸಲಾಗಿಯಂತವನ
ಮರಣ ಒಂದೇ ತಿಂಗಳೆಂದಱಿದು ದೋಷಮಂ
ಪರಿಹರಿಸಿ ದಾನಧರ್ಮಂಗಳಂ ಮಾಡಿ ಮುಂದಕ್ಕೆಯೊದಗಿಸಿಕೊಂಬುದೂ ೧೩

CC0. In Public Domain. Jangamwadi Math Collection, Varanasi

ಸುಟ್ಟುಂಬೆಯೆಂಬ ಬೆರಲಂ ದೀಪಕಂ ಮಱೆಯು
ನಿಟ್ಟಸಿಡೆಯಂಗುಲಿಯೊಳಡಗಲು ಶುಭಂ ಕಣಾ
ಬೊಟ್ಟಿಂದ ಹೊಱಸೂಸಲಳಿವನ್ಯೆ ದಶದಿನಕೆ ಮತ್ತೆ ಕಡೆಗಣ್ಣ ಬೆರಲಾ
ತುಟ್ಟ ತುದಿಯಿಂದೊತ್ತೆ ಮಾರ್ಪೊಳಪಿನಾಲಿಯಾ
ಕಟ್ಟೆಸಕದಿಂ ತೋಱದಿರಲಿರೆಡು ಮೂಱಯಿದು
ಕಟ್ಟಿರ್ದ ದಿನದಳಿವು ಮೀಱದೊಡೆ ತಿಂಗಳೊಂದಕ್ಕೆ ಸಾವಂ ನಿಶ್ಚಯಂ ೧೪

ತುಱುಕುಳಿಗಳಂ ಧ್ರುವಮೆನಿಪ್ಪ ನಕ್ಷತ್ರಮಂ
ಪೆಱೆಯೊಳಗೆ ತೋಱುತಿಹ ಕಪ್ಪರುಂಧತಿಗಳಂ
ನೆಱೆಕಾಣದಿರಲಾಱು ತಿಂಗಳಿಗೆ ಮರಣವೈ ಬಲಗೈಯ್ಯ ನಡುವೆರಲನೂ
ಎಱಕದಿಂ ಮಡಿದು ನೆಲದೊಳಗೆ ಕೈಯ್ಯೂರಿದೊಡೆ
ಯುಱೆ ಮೂರು ಬೆರಲೇಳ್ವನವನೂರಿ ಬೆರಲು ಮೂ
ಱಱ ಮಾಳ್ಕೆಯಿಂ ಪವಿತ್ರದ ಬೆರಲು ಮೇಲಕೇಳಲ್ಕೆ ತಿಂಗಳಿಗೆ ಮರಣಂ ೧೫

ಆವಗಂ ನಡೆವಲ್ಲಿ ಕೈ ಹಿಂದೆ ಪೋಪುದೈ
ಭಾವಿಸಲು ನಡೆವಂಘ್ರಿಯೊಡನೊಡನೆ ಪೋಗಲ್ಕೆ
ಸಾವು ತಿಂಗಳಿಗೆ ನಡೆಯಲು ಹೆಜ್ಜೆ ಕಡಿದಾಗಿ
ತೀವಿ ನೀರೊಳು ಬಾಯ ಮುಕ್ಕುಳಿಸಿ ರವಿಯತ್ತ
ಲೋವಿಯುಗಳಲ್ಕಿಂದ್ರ ಧನುವಿನಂತಿರ್ಪುದೈ
ಆ ವಿಚಾರವನುಳಿಯ ಲೇಕವಮಾಸಕ್ಕೆ ಮೃತವೀ ತ್ರಿವಿಧಕಿನ್ನು ಮುಂದೇ ೧೬

ತೋರವಾಗಿರ್ದವಂ ಮಿಗೆ ಸಣ್ಣನಾದೊಡಂ
ಧಾರುಣಿಯೊಳಲ್ಪಾಂಗಿಯೆ ಸ್ಥೂಲವಾದೊಡಂ
ಸಾರ ಸದ್ಗುಣಿಯೆ ದುರ್ಗುಣಿಯಾದೊಡಂ ಕಷ್ಟಮನುಜನುತ್ತಮನಾದೊಡಂ
ಓರೊಂದು ತಿಂಗಳಿಗೆ ಮರಣವೈ ಮಲ ಮೂತ್ರ
ವಾರಯ್ಯೆ ಸೀನು ಮೂಱಕೊಮ್ಮೆ ಪೊಱಮಟ್ಟೊಡಂ
ಸೂರಪ್ರಭಾ ನಿಜಾಂಗದ ನೆಳಲ ತಲೆಗಾಣದಿರಲಾಱು ತಿಂಗಳಳಿವೂ ೧೭

ಬಿಸಿಲಲ್ಲಿ ಕುಳಿತು ನೋಡುತ್ತಿರಲು ಕಣ್ಗೆ ಕಾ
ಣಿಸುವುದಾ ನಿರ್ಮುತ್ತಿನಂತೆ ಹಾವಿನ ಹೆಡೆಯು
ಎಸಕದಿಂ ತೋರ್ಪುದಂತಾಗದೊಡೆಯುಱದಿಂಗಳಳಿವು ಬೆಳಗಿನೊಳಿರುತ್ತಾ
ನೊಸಲಲ್ಲಿ ಮುಗಿದಿರ್ದಕೈಯ್ಯನಂತಲ್ಲಿ ನಿ
ಟ್ಟಿಸಲಾ ಸ್ವಭಾವದಿಂದಿರೆ ಸುಖಂ ಬಾಳೆಯುವೊ
ಲಸವಸದೊಳಿರೆ ಮಾಸ ಷಣ್ಮರಣವೆಂದು ಶಿವಪೂಜಾದಿಗಳ ಮಾಳ್ಪುದೂ ೧೮

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಯುಖಿಳ ನಕ್ಷತ್ರ ಶಶಿ ರವಿಗಳೆಯ್ದೆ ವಿ
ಚ್ಛಾಯದಿಂ ತೋಱುವೊಡೆ ಸಚ್ಛಿದ್ರವಾಗಿರಲು
ಪಾಯದಿಂದೊಂದು ಹಲವಾಗಿರ್ದೊಡೊಂದು ವರುಷಕೆ ಮರಣವಿನಬಿಂಬವೂ
ಯೇಯೊಗಳುವೇಂ ಬಡಗಲಾ ಮೂಡಲೊಳು ತೆಂಕ
ಲಾಯುಬ್ಧಿಪನ ದೆಶೆಗಳಲ್ಲಿ ಮುಕ್ಕಾಗಿರಲು
ಸಾಯದಿಹರೇ ಕ್ರಮದೊಳಾಱು ನಾಲ್ಕುಂ ಮೂಱೆರಡು
ತಿಂಗಳೊಳಗಱಿವುದೂ ೧೯

ನೀರೊಳಗೆ ನೋಡಲಿನನಲ್ಲಿ ಹತ್ತಿರ ತೋಱೆ
ಮಾರಣಂ ದಶದಿನಂ ಛಿದ್ರವಾಗಿರಲೈದ
ಲಾ ರವಿಯೆ ಸೀಳಿರಲ್ನಾಲ್ಕು ಕರಿದಾಗಿ ತೋಱಲು ಮೂಱು ದಿವಸದಲ್ಲೀ
ಓರಂತೆ ಹೊಗೆಯಂತಿರಲ್ಕೆರಡದೇ ಕಾಣ
ಬಾರದಿರಲೆಂಟು ಜಾವದೊಳೆ ಮೃತವಿಂತೀ ಪ್ರ
ಕಾರದಿಂದಱಿದು ಪರಲೋಕಕ್ಕೆ ಸಾಧನದ ದಾನದ ಧರ್ಮವೇ ಮುಖ್ಯವೂ ೨೦

ಚರಣಮಂ ಬಡಿದು ತೂನಲ್ಕೆ ಯೊರ್ವಂ ತನ್ನ
ಕರದಿಂದ ಮಣಿಕಾಲ ಮಡಿಸಂದಿನಲ್ಲಿರಿಸೆ
ಬೆರಲ ನಡು ಮಿಡಿದಡೊಳ್ಳಿತು ಮಿಡಿಯದಿರಲೆರಡು ತಿಂಗಳಿಗೆ ಮರಣವಿನ್ನಾ
ಪರಿಯಿಂದ ಮಣಿಕೈಯ್ಯ ಸಂಧಿಯಂ ಮುಟ್ಟಲಾ
ಸ್ಫುರಣೆಯಿಲ್ಲದೊಡೆರಡು ದಿನ ಕಳೆವನೆಂದು ಧಿ
ಕ್ಕರಿಸಿ ದುರ್ಮಾರ್ಗಮಂ ಗುರುಲಿಂಗಚರಸೇವೆಯಂ ಮಾಡು ನಿಶ್ಚಯದೊಳು ೨೧

ಅಂಗಾಲ್ಗೆ ಅಲತಿಗೆಯ ಪೂಸಿ ತೊಳೆದೀಕ್ಷಿಸಲು
ಕಂಗೆ ಬಿಳಿದಾಗಲೊಂಭತ್ತು ದಿನ ಕಳೆವನೈ
ಮುಂಗಡೆಯೊಳಿನನ ನೋಡಲು ಕಾಣದಿರಲೆರಡು ದಿನವಲ್ಲಿ ಸಾವನಿನ್ನೂ
ಹಾಂಗೀಕ್ಷಿಸಲ್ಕೆ ನಾಲ್ದೆಸೆಯಲ್ಲಿ ಕಾಣಿಸೆ ಪ
ತಂಗನಾ ನಾಲ್ಕು ಘಳಿಗೆಯೆ ಮೃತಂ ನಾಲ್ಕು ದಿವ
ಸಂಗಳಿಗೆ ಮರಣವೆಂದಱಿದು ಪರಲೋಕಸಾಧನ ಮುಕ್ತಿಯಂ ನೆನೆವುದೂ ೨೨

ಇನನ ನಡುವೆ ಛಿದ್ರವಾಗಲಳಿವಂ ಹತ್ತು
ದಿನಕಿಂದು ಸೂರ್ಯನೇ ಕರಿದಾಗಿರಲು ಬಳು
ವನೆ ಕಾಣೆ ಹನ್ನೆರಡು ದಿವಸ ಕಳೆವಂ ಕಣಾ ದಿತ್ಯ ಚಂದ್ರರು ತಾರಗೇ
ಇನಿಸು ವಿರಳಂಗಳಾದೊಡೆ ತಮ್ಮ ಸುಪ್ರಭಾ
ವನೆಗಳಂ ಬಿಟ್ಟಿರ್ದೊಡಂ ನಾಲ್ಕು ದಿವಸಕಾ
ಮನುಜನಳಿವಂ ಕಾಣಲಾಗಿಯದಱಿಂ ಮುಕ್ತಿಯುಪ್ಪ ಕಾರ್ಯವ ನೆನೆವನೂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರಚರಣದಂಗುಲಿಗಳುಂ ನಯನ ನಾಸಿಕಂ
ಪರಿಸನಂಗೆಯ್ಯೆ ಬೆಟ್ಟಿತ್ತಾಗಿ ತೋಱಿದೊಡೆ
ಮರಣವಂತೇಳುದಿನಕುದಯಕಾಲದೊಳು ಸೂರ್ಯಂ ತನಗೆ ಕಾಣಿಸದಿರೇ
ವರ ಮೃತಂ ಪಟ್ಕಘುಸ್ರಕ್ಕೆರಡು ಕಯ್ಯನಾ
ಲ್ವೆರಲ ನಡನಡುವೆ ಪೆಣಕೆಯೊಳಿಟ್ಟು ಹೆಡಕತ್ತಿ
ಲಿರದಿಟ್ಟು ತೂನೆ ಬಾರದೊಡೆ ಶುಭವವು ಹಿರಿದು ಬರಲು ತಿಂಗಳಿಗೆ ಮರಣಂ ೨೪

ಹಸ್ತಪಾದಂಗಳಂ ತೊಳೆಯಲೊಣಗಿದಹಾಂಗೆ
ದುಸ್ತರದೊಳಿರಲಾಱು ದಿನಕೆ ಮರಣಂ ತನು ಸ
ಮಸ್ತಮಂ ತೊಳೆದಲ್ಲಿ ಪೊಟ್ಟೆಯಾರಿದರೆ ಮೂರ್ದಿನ ಕಳೆವನಿನ್ನು ಬಾಯೀ
ಶಸ್ತನಾಸಿಕ ಗುದಾದಿಯ ರಂಧ್ರದೊಳು ಶೈತ್ಯ
ವಸ್ತು ಪವನಂ ಯತ್ತದೇವ ನರನಂತಾಗ
ಳಸ್ತಮಿಸುವಂ ಶೀಘ್ರದಲ್ಲಿ ಮಾಡೂದುಚಿತವೈ ದಾನಧರ್ಮಂಗಳಾ ೨೫

ನಯನದೊಳು ನೀರು ಸುರಿವುತ್ತಿರಲು ದಂತಸಂ
ಚಯವಲ್ಲಿ ನಿರ್ದ್ರವದೊಳಂ ಪತ್ತುತಿರೆ ದಿನ
ದ್ವಯಕಳಿವನ್ಯೆ ನೆಳಲ ಕಾಣದೊಡೆ ಬಳಿಕಲಂತೆರಡಾಗಿ ತೋರಿಸಿದೊಡೇ
ಭಯವೇಕೆ ದಿನವೆರಡಕಂ ಮರಣವೀಗ ನಿ
ಶ್ಚಯ ವೀಕ್ಷಿಸಲ್ಕೆ ದೆಸೆ ಹಸುರಾಗಿ ಕಾಣಿಸಲು
ರಯದಿಂದಲೆರಡು ದಿನದೊಳಗಳಿವನಱಿದು ಮಾಡ್ವೈ ದಾನ ಧರ್ಮಂಗಳಾ ೨೬

ಕನ್ನಡಿಯ ನೋಡಲಾ ಪ್ರತಿಬಿಂಬವಿಲ್ಲದೊಡೆ
ತನ್ನ ನಿಜರೂಪು ವಿಪರೀತದಿಂ ತೋಱಿದೊಡ
ವನ್ನಾಡೆ ಮೂಱು ತಿಂಗಳಿಗಳಿವನಾ ವಾರಿ ದರ್ಪಣಂಗಳೊಳು ತಲೆಯಾ
ಉನ್ನತಾಂಗಂ ತೋಱದಿರಲೊಂದು ವರುಷ ಮರ
ಣನ್ನೋಡೆ ಸರ್ವಾಂಗದಲ್ಲಿ ಸಿರಿಗಂಧಮಂ
ಚೆನ್ನಾಗಿ ಪೂಸಲೆದೆಯಾಱಿದೊಡೆ ಹತ್ತುದಿನಕಂ ಸಾವನೆಂದಱಿವುದೂ ೨೭

ಮೇಲೆ ಕಾಲಜ್ಞಾನಮಂ ಪಲವನಱಿದೊಡೇಂ
ಲೋಲ ಛಾಯಾಪುರುಷನಂ ತಿಳಿಯಬೇಕು ಮೇಣ್
ಲೀಲೆಯಿಂದಾತ್ಮತತ್ವವನುಱಿದೆ ಪರತತ್ವಮಂ ನಿಚ್ಚ ಕಲ್ತಿರ್ದೊಡೇ
ಸಾಲದೆ ಯಿದೊಂದೆ ಪರಮಾರ್ಥದಿಂದಂ ಪೇಳು
ಮಾಲಿಸ್ಯವಿಲ್ಲದಾನಂದದಿಂದಂ ನೋಡೆ
ಹೋ ಲೇಸು ಕಷ್ಟಮಂ ಪರರ್ಗೆ ತನಗಱಿಯಲ್ಕೆ ಬಪ್ಪುದೈಕಂದ ಕೇಳೂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಛಾಯುಪುರುಷನ ನೋಡುವಾ ಕಾಲವಾವುದೆನೆ
ಯೋಯುರದ ಕಾರ್ತೀಕ ಮಾರ್ಗಶಿರಪೌರ್ಣಮಿಯು
ಜೇಯು ಚಾತುರ್ದಶೀ ರವಿಪ್ರಕಾಶವನುಳ್ಳ ಕಾಲದೊಳು ಪದ್ಮಾಸನಾ
ಆ ಎರಡು ಪಾದಸವುನಾಗಿ ನಿಂದಂತಾತ್ರ
ಯೀ ಯಂಗನಂ ಮನವನಿಟ್ಟು ನೀಕ್ಷಿಸೈ
ಯ್ಯಾ ಯವಸರಂ ಪ್ರಭಾಮಧ್ಯದೊಳು ಮನುಜಾಕೃತಿಯೊಳು
ಕಾಣಿಸುತಿಪ್ಪದೂ ೨೯

ರವಿಯನೇಕಾಗ್ರಚಿತ್ತದೊಳು ನಿಟ್ಟಿಸುತಿರ್ದು
ಕುವರ ಘುಮ್ಮನೆ ಮೇಲೆ ನೋಡಲ್ಕೆಯಲ್ಲಿ ಕಾ
ಣುವನಲಾ ಛಾಯಾ ಪುರುಷನಾತನಾಗ ತನ್ನಯ ಚಿತ್ತದೊಳಗೆ ಪುರುಷರೂಪಾ
ಪ್ರವಿಮಲದೊಳಿರೆ ಶುಭಂ ತಚ್ಛಾಯಮಾನುಷಂ
ಧವಳಮಾಗಿರೆ ಸುಖಂ ಕರಿದಾಗೆಯಶುಭವೈ
ಭುವಿಗೆ ರಕ್ತಚ್ಛಾಯಮಾಗಿರಲ್ತಚ್ಛಾಯೆಯಿಂ ರಕ್ತಮಯ ಕಂಟಕಂ ೩೦

ಕನಕಚ್ಛಪಯೊಳಿರಲು ರುಜೆಯೊಲೆದು ತೋಱಿದೊಡೆ
ದಿನ ವಾರಕಂ ಹಾನಿ ಬಹುವರ್ಣದಿಂದಲಾ
ಮನುಜಾಂಗಿಯಿರೆ ಪಲವು ದೋಷವೆಡೆಗೊಂಬುದೆಡಗೈಯ್ಯಿಲ್ಲದಿರಲದಕ್ಕೇ
ವಿನುತ ಕ್ಷಣ್ಮಾಸಕಳಿವಂ ಬಲದ ಕೈಯಿಲ್ಲ
ವೆನೆ ಮೂಱು ತಿಂಗಳಿಗೆ ಸಾವನೆಡಗಾಲಲ್ಲ
ದನ ನಿರೀಕ್ಷಿಸಲು ಹದಿನೈದು ದಿನದಂದಿಂಗೆ ಮರಣವೆಂಬುದು ನಿಶ್ಚಯಂ ೩೧

ಬಲದ ಕಾಲಿಲ್ಲದಿರೆ ತಿಂಗಳಾಱಕ್ಕಳಿವ
ನೆಲೆ ಮೈಯಖಂಡವಿಲ್ಲದೆ ಶುಷ್ಕನಾಗಿರಲು
ಸಲೆ ತಿಂಗಳೊಂದಕ್ಕೆ ಮೃತಿಯಲಾ ವಾಮಕರ ಪಾದವಿರಹಿತದೊಳೊಮ್ಮೆ
ಚೆಲುವಕ್ಷಿಗಂ ತೋಱೆ ನಾಲ್ಕು ತಿಂಗಳ ದಿನಕೆ
ವಿಲಯವಾ ಛಾಯಾನರಂ ಕೃಷ್ಣವಾಗಿ ಕಾ
ಣಲು ಪಕ್ಷಕಂ ಧೂಮ್ರವೇಳು ದಿನವದು ತೋಱೆಯಡಗೆ ಮರಣಂ
ತ್ರಿದಿವಸಂ ೩೨

ಬಳಿಕಲಾ ಛಾಯಾಪುರುಷನ ನೀಕ್ಷಿಸಲು ತಲೆ
ಕೆಳಗಾಗಿ ತೋಱೆ ದಶದಿನಕೆ ಮರಣಂ ಕಣಾ
ವಿಳಸಿತದ ಶಿರವಿಲ್ಲದಿರಲೈದುದಿನಕೆ ಮರಣಂ ನೋಡಿ ನೋಡುತಿರಲೂ
ಇಳೆಯಲ್ಲಿ ಬಿದ್ದೊಡೊಂದೇ ದಿವಸದೊಳು ನಾಕ
ನಿಳಯುವೆಯ್ದುವನಲಾ ತಲೆಗೆ ಕರವಿಟ್ಟೊರಗ
ಲಳಿವನೈ ತಿಂಗಳಿಗೆ ವೃತ್ತಾಕೃತಿಯೊಳಿರಲು ನಾಲ್ಕುತಿಂಗಳ್ಗೆ ಮರಣಂ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡು ಕೈಗಳ ಕಾಣದಿರಲು ವಿಂಶತಿದಿನಕೆ
ಮರಣಂ ಶಿರೋ ಹಸ್ತವಿಲ್ಲದಿರೆ ಪಕ್ಷದೊಳು
ಪರಲೋಕವೆಯ್ದುವಂ ಕಾಲ್ಗಳೆರಡಿಲ್ಲದಿರಲಾಗಿ ದಶದಿನಕಳಿವನೈ
ತರುಣ ಬಲಗೈಗಾಲ್ಗಳಿಲ್ಲದಿರೆ ನವದಿನಾಂ
ತರದಲ್ಲಿ ಸಾವನೆರಡುಂ ತೋಳ್ಗಳಿಲ್ಲದಾ
ಪುರುಷನಂ ಕಾಣೆ ಹದಿನಾಲು ದಿನಕಳಿವನೆಂದೇ ಮಾಡು ಸತ್ಕೃತ್ಯಮಂ ೩೪

ಎಡದ ಕೈ ಬಲಗಾಲು ಮೋಟಾಗಿರಲ್ಕಾಗಿ
ಪೊಡವಿಯೊಳಗನ್ಯರ್ಗೆ ನೋಡೆ ತನಗಾದೊಡಂ
ಮಡಿವನೈ ಪಂಚದಿವಸಕ್ಕೆಂದೆನುತ್ತ ಕಾಲಜ್ಞಾನಮಯ ಶಾಸ್ತ್ರಮಂ
ಮಡದಿಯುದರದೊಳರ್ಭಕಂ ನೆನೆವನೆಂದೆನುತ
ಕೊಡನ ಮಗನೊಳು ಶಿವಕುಮಾರನೊರೆದುದನಿತ್ತ
ನುಡಿದನಾ ಮುನಿನಿಕರಕಂ ಸುಖಾವಹಮೂರ್ತಿ ಕೇಳೆಂದನಿತ್ತಲಾರ್ಯ್ಯಂ ೩೫

ಸರ್ವ ದೋಷಾಶ್ರಯವಿದೆಂದರಿದ ಬಳಿಕಾವ
ನೋರ್ವನೀ ದೇಹಮಂ ರಕ್ಷಿಸುವನೆಂದಕಟ
ನಿರ್ವಾಣಪದದತ್ತಲೆಳಸದವನಜ್ಞನೆನುತೊಂಭತ್ತನೆಯ ಮಾಸದಾ
ಗುರ್ವಿನಗ್ಗಳದ ಬಸುರಿಗೊಳಗಿರುತ್ತರ್ಭಕನು
ಮೂರ್ವಿಯೊಳು ಬಂದಳಂ ತಾಂ ಕೆಡೆಂ ಪಡೆವೆನಾ
ಪಾರ್ವತೀಶನ ಕೃಪೆಯನೆನುತಿರಲು ವಿಷ್ಣುಮಾಯಾವಾಯು ತೀಡುವುದಲಾ ೩೬

ಆ ನೆಗಪಿದುತ್ತುಮಾಂಗವದಧೋಮುಖವಾಗಿ
ಯೋನಿಯಂತ್ರಪ್ರಪೀಡತೆಯಿಂದ ಶುದ್ಧವ
ಜ್ಞಾನಿಯಾಗುತ್ತೆಲ್ಲಮಂ ಮರೆದು ಮೂರ್ಛೆಯಿಂ ಬಹಿರಂಗವಾಯುವಿಂದಾ
ತಾನುದಿಸಿ ಮೂಢತೆಯೊಳಿಹುದಲಾ ಮುನಿಯೆ ಕೇ
ಳಾನಿಘ್ರವಲ್ಲವಿಂತಪ್ಪ ಶಾಸ್ತ್ರವನರಿವು
ತೇನೆಂಬೆನೋಡಿ ಕೇಳುತ್ತ ಮರುಳಪ್ಪ ಮಾನವರ ನಿನ್ನೇನೆಂಬೆನೂ ೩೭

ಹಗಲಲ್ಲಿ ಸರಿಸವಾಗಿದ್ದ ಬಟ್ಟೆಯೊಳು ಮೆ
ಲ್ಲಗೆ ಪೋಗುವಾತನತಿ ಸತ್ವಾಧಿಕಂ ಹಸ್ತ
ಯುಗವನಿಕ್ಕಡೆಯೊಳಿರ್ವರು ಕೊಡಲು ಹಜ್ಜೆ ಹಜ್ಜೆಗೆ ಬೀಳ್ವ ಮಾಸುಷ್ಯನಾ
ನಗೆಯ ಕಡೆಯುಂ ಕಾಣಲಾದುದಾ ಮನುಜರೊಳು
ಮಿಗೆ ಲಕ್ಷಣಾಚಾರ್ಯ್ಯರೊರೆವುತಿರಲರಿದರಿದು
ಜಗದಲ್ಲಿ ಭಂಡರಾಗುತ ಮರೆದು ದುಷ್ಕೃತ್ಯವೆಸಗುವರದೇಂ ಮೂಢರೋ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದಮಲಕುಮಾರಕಾ ನಿನಗೆ ಪೇಳಿದೆವಲಾ
ಮೊದಲು ಧರ್ಮಾಧರ್ಮವುಂ ಪಾಪಿಗಳ ಯುಮುಂ
ಸದೆವ ಬಗೆಯಂ ನರಕದೊಳು ನೊಂದು ಕಳೆದು ನಾನಾಯೋನಿಯೊಳು ತೊಳಲುತಾ
ಬೆದಬೆದನೆ ಬೆಂದುಬಳಿಕೀ ಮನುಜಗರ್ಭದೊಳು
ಪುದಿದಿರ್ಪ ಸಂಕಟವನಿನ್ನು ಮತ್ತಾ ಬಾಲ
ನುದಯಿಸಿದ ಬಳಿಕ ಸಂಸಾರಹೇಹವನೊರೆವೆನೆಂದನಾ ಹಲಗೆಯಾರ್ಯ್ಯಂ ೩೯

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಱ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗಮಲ್ಲಣಾರ್ಯ್ಯಂ
ಶೀಲಪಟ್ಸ್ಥಲಿಹಲಗೆಯಾಚಾರ್ಯನಾ ಶಿಷ್ಯ
ವಕೌಲಿಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲ ವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೪೦

ಇದು ವೀರಶೈವಪಟ್ಸ್ಥಲಮಾರ್ಗಿಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿಕ್ಕಿಯಾ
ಪ್ರದ ಹಲಗೆಯಾಚಾರ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಸುಕಾಲಜ್ಞಾನಕಾ ಮೂಱುಕಾಂಡ ಮೇಲಿಪ್ಪತ್ತು ನಾಲ್ಕು ಸಂಧೀ ೪೧

ಅಂತು ಸಂಧಿ ೨೪ ಕ್ಕಂ ಪದನು ೧೨೬೨ ಕ್ಕಂ ಗ್ರಂಥ ೭೫ ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧಿ: ೭೧

ಸಂಸಾರ ಹೇಯ ವಿಷಯಂಗಳಂ ನಿರೂಪಿಸುವಿಕೆ

ಬಾಲ ಯವ್ವನ ವೃದ್ಧತಾ ಶ್ರೀದರಿದ್ರವೀ
ಭೂಲೋಕ ದಿವಿ ನರಕ ಮುಖ್ಯಂಗಳೇ ದುಃಖ
ದಾಲಯದ ಸಂಸಾರ ಹೇಹವೊರೆದಂ ಸುಖಾವಹಮೂರ್ತಿ ಲೀಲೆಪೂರ್ಣಂ

ನೀನಖಿಲ ಜಗದೊಡೆಯನ್ಯೆ ತಿರಿಯಲೇಕೆನಲು
ಮಾನಿನಿಯೆ ನೀವನೇಕ ಪ್ರಕಾರಂಗಳನ
ವೀನ ಯವ್ವನ ರೂಪ ನುಳ್ಳವರ ನೀಕ್ಷಿಸಲು ಮನೆಮನೆಯ ಹೋಗುವಡೆಮಗೇ
ಈ ನೆವದೊಳೆಯ್ತಂದೆವೆನಲಾದಿವೃದ್ಧಂಗಿ
ದೇನೆನಲು ವೃದ್ಧತೆಯು ತೊಲಗಿಸುವ ನಿಮ್ಮಧರ
ಪಾನದಿಚ್ಛೆಯು ಸುಸನ್ಮಾರ್ಗಿಗಳು ನಾವೆಂಬ ಶಾಂತಮಲ್ಲೇಶ್ವರ ಜಯಾ ೧

ಬಾಲ ಯವ್ವನವೃದ್ಧತಾ ದುಃಖವುಂ ಕಳೆದು
ಚೀಲಾಳಗಂ ನಂಬಿಯಣ್ಣಗಂ ಮಿಸುಪ ತಿರು
ನೀಲ ಕಂಠರ್ಗೆ ಸಮುಮೋಕ್ಷಮುಂ ಸರ್ವೇಶ್ವರನೆ ಕಾರುಣ್ಯದಿಂ
ಈ ಲಸದ್ವರ್ತಮಾನದೊಳು ಸಂಸಾರಹೇ
ಹಾಲಾಪಬೋಧೆಯುಂ ಶಿಷ್ಯರ್ಗೆ ನಿರವಿಸುವ
ಮೇಲಣ ಗವಿಯ ಶಾಂತನಂಜೇಶ ಶರಣಾಗು ಚಾಗುರೇ ನೀನೆ ಮೇಗೂ ೨

ಮತ್ತೆಯಾ ಕುಂಭಜಂ ಷಣ್ಮುಖಸ್ವಾಮಿಗೆಱ
ಗುತ್ತ ಧರ್ಮಾಧರ್ಮಚಾ ನರಕಯಾತನೆಯ
ನುತ್ತಮದ ಪಿಂಡ ಜನನಂಗಳಂ ನಿರವಿಸಿದಿರದು ಮನಃಪ್ರಿಯವಾದುದು
ಉತ್ತಮನೆ ಗರ್ಭದುಃಖವನೆ ಯನುಭವಿಸಿ ಜಡ
ವೆತ್ತಿರ್ದಯೋನಿಯಂತ್ರದ ಬಾಧೆಯಿಂದಲು
ತ್ಪತ್ತಿಯಾದವನ ಸಂಸಾರ ಹೇಹಸ್ಥಿತಿಯು ದೇವ ಕೃಪೆಯಿಂದೊರೆವುದೂ ೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನೆ ಷಣ್ಮುಖಂ ನುಡಿದನಾ ಶಿಶುವಿನಿಂದ್ರಿಯಂ
ಘನತೆಯಿಲ್ಲದ ಕಾರಣಂ ಮಹಾದುಃಖಮೇ
ಣನುನಯದೆ ಸರ್ವ ಸುಪದಾರ್ಥದಿಚ್ಛೆಯನಾಂತು ಮಿಗೆ ನುಡಿವೊಡಂ ಮಾಳ್ಪೊಡಂ
ತನಗೆ ಶಕ್ತಿಯು ನೆರೆಯದಿಹದುಃಖವಾದಂತು
ಜನಿಸುವೆಡೆಯೊಳ್ಮೂಢ ರೋಗ ಬಾಲಗ್ರಹಂ
ವಿನುತ ಶೈಶವರುಜೆಗಳಡಸಿದುರುತರ ದುಃಖ ಬಹುದುಃಖದಿಂ ನೋವನೂ ೪

ಹಸಿವು ನೀರಡಿಕೆಯಿಂ ಲಟಿಲಟಿಸುತಿಹ ಬಾಧೆ
ಎಸೆವ ಮಲಮೂತ್ರಂಗಳಂ ಭಕ್ಷಿಸುವ ಬಾಧೆ
ಶಿಶುಗೆ ಕಿವಿಗಳನು ಚುಚ್ಚುವ ಬಾಧೆ ಮಿಗೆ ತಂದೆ ತಾಯಿಗಳು ಕೊಲುವ ಬಾಧೆ
ಒಸೆದೋದುವೆಡೆಯೊಳಣ್ಣಗಳ ಶಿಕ್ಷೆಯು ಬಾಧೆ
ಬಿಸಯದೇಳ್ಗೆಯು ಬಾಧೆಯವ್ವನದೊಳಿಂತು ಸಂ
ಧಿಸುವುದತ್ಯಾಸೆಯಿಂ ಸಂತಸವದಿಲ್ಲ ಜೀವರ್ಗೆಂದನಾ ಷಣ್ಮುಖಂ ೫

ನೇತ್ರದೊಳು ಕಂಡ ವನಿತೆಯು ಕೂಡಬೇಕು ನಿಜ
ಗಾತ್ರದೊಳಗಪ್ಪುವೆನೆನುತ್ತ ದೊರಕದೆ ಪೋದ
ಮಾತ್ರದಿಂ ನರಗೆ ದುಃಖಂ ರಾತ್ರಿಯಾಗೆ ಕಾಮಾಗ್ನಿಯಧಿಕಾರದುಃಖಂ
ಮಿತ್ರೋದಯದ ಹಗಲೊಳರ್ಥಮಂ ಘಳಿಸುವ ಪ
ವಿತ್ರ ದುಃಖಂಗಳೀ ತೆಱದಿಂದ ಮನುಜಗಣಂ
ಮಾತ್ರ ಸುಖವಿಲ್ಲ ನಾನಾ ತೆಱದೊಳಿನ್ನು ಸತಿಯರ ಕೂಟಸುಖವೆಂತೆನೇ ೬

ಆ ಬಿಂದು ಸಂಸ್ಖಲನದಿಂದಾದ ಸುಖವೆಂಬು
ದೇ ಬೆಮರ ಹನಿಯನಿತು ತೃಪ್ತಿಮಿಗಳೊಳಗಿರೆ ಮ
ಹಾ ಬಾಧೆಯೊ ತೀಂಟೆಯಿಂದಪ್ಪ ತುರಿಯುಹುಗುಳಗಳೊಡೆಯೆ ಕಿವಿತುಹೊರಟೂ
ತಾ ಬಿದ್ದ ಸುಖದನಿತು ಬಳಿಕಲಾ ದುಃಖದವೊ
ಲಾ ಬಹುಲ ಹೇಹವ್ಯೆ ಕೀಂತ ಕುರುವೊಡೆದನಿತ
ಲೇ ಬಯಲಿ ನೀ ಸ್ತ್ರೀಯ ಕೂಟಸುಖವಧಿಕವೆನುತುಸುರುತಿರ್ಪರು ಗಾಂಪರೂ ೭

ಮಡದಿಯರ ಮೋಹಕೂಟಂಗಳೆಂತೆನಲಾಗಿ
ತಡೆದಿರ್ದ ಮಲಮೂತ್ರಮಂ ಬಹಿರ್ಭೂಮಿಯೊಳು
ಬಿಡುವನಿತು ಸುಖವೆಂಬರಾ ವಿವೇಕಿಗಳಜ್ಞರದನತಿ ವಿಶೇಷವೆಂದೂ
ನುಡಿವರಾ ನಾರಿಯರ ವಸ್ತುರೂಪರು ದೋಷ
ದಡರುಗಳು ಪುಣ್ಯವೆಂದೆಂಬರಳೆವೆಟ್ಟಕ್ಕೆ
ಕಿಡಿಗಳಾ ಮೃತ್ಯುಗಳ ಪಡಿಗಳೆನ್ನದೆ ಸತಿಯ ನುಡಿಯನಾಡುವನಜ್ಞನೂ ೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ನಾರಿಯರು ಮಾಳ್ಪ ಸನ್ಮಾನವೆಂಬುದೆಯ
ಮಾನಕ್ಕೆ ಕಾರಣಂ ಬಂಧುಗಳು ಮಾಡುತಿ
ಪ್ಪಾ ನೇಹವೇ ವಿರೋಧಕ್ಕೆ ನೆಲೆವನೆಯುಲಾ ಯೌವ್ವನದ ಕೊಬ್ಬೆಂಬುದೂ
ಮಾನವನ ಮುಪ್ಪಿಂಗೆ ಮೊದಲಬೀಜಂ ಕಣಾ
ತಾನಿನಿತುಪದ್ರವಂಗಳು ಮಿಲ್ಲದಿಪ್ಪವನ
ನಾನೆಂದುವುಂ ಕಾಣೆನಾ ಜರೆಯು ಹೇಹವನದೇನೆಂದು ಬಣ್ಣಿಸುವೆನೂ ೯

ನರೆಯಿಂದ ಮೆಯ್ಯುವಳಿಯಿಂದ ಶಿಥಿಲತೆಯ ಜ
ರ್ಝುರವಾದ ತನುವಿಂದ ನಡುಗುದಲೆಯುಬಲೆಯುರ
ಪುರುಷರಂದಿನ ಯೌವ್ವನಂ ರೂಪವನ್ಯೋನ್ಯ ಮೋಹನಂ ದೇಹದೊಡನೇ
ಅರರೆ ಶಿಥಿಲತೆಯಾಗಿ ನಿರ್ಮೋಹದಿಂದಲೀ
ಧರೆಯಲ್ಲಿ ಮಿಗೆ ದುಃಖಿಕೊಳಗಾಗುತಿರ್ದವಂ
ದಿರಿಗಕಟ ದೇಹದ ವಿರಕ್ತಿ ದೊರಕೊಳ್ಳದಜ್ಞಾನ ದತಿಶಯುವೆಂತುಟೋ ೧೦

ಅರರೆ ಮೊದಲಲ್ಲಿ ತನ್ನಾಜ್ಞೆಯೊಳಗಾಗಿಪ್ಪ
ತರುಣಿ ಸುತ ಪೌತ್ರ ಭೃತ್ಯರು ಸೇವಕರು ದಾಸಿ
ಯರುಗಳು ಮನಾಚಾರದಿಂದುಂದಾಸೀನದಿಂ ನುಡಿದು ಬಯಿವುತ ಜಡಿವುತಾ
ಪರಿಕಿಸುತ್ತಾಂಡುಗಚ್ಚುತ್ತ ಶಕ್ತಿಯೊಳು ಮೋ
ವರು ಧರ್ಮಕಾಮ್ಯಾರ್ಥ ಮೋಕ್ಷಕೆಂದೆಂದುವುಂ
ಬರಲಿಲ್ಲ ತನಗೈಸೆಯುದನಱಿದು ಯೌವ್ವನದೊಳೇ ಧರ್ಮಮಂ ಮಾಳ್ಪುದೂ ೧೧

ವಾತ ಪಿತ್ಥಶ್ಲೇಷ್ಮವೈಷಮ್ಯದಿಂದ ನಾ
ನಾ ತೆಱದ ರೋಗಂಗಳುದಯುವಪ್ಪವು ಕಣಾ
ಮಾತೇನು ನೇಹವಾಮಯುದ ಪಂಜರವಲಾ ನೂಱೆಂಟು ಮೃತ್ಯುವಿಪ್ಪಾ
ಈ ತನುವಿಗನ್ಯ ವೈರಿಗಳುಂಟೆಯುವಱೊಳಂ
ತೋಱವದ ಕಾಲಮೃತ್ಯುವದೊಂದು ಮಿಗಿಲೆನಿಪು
ದೈ ತರುಣ ಮಿಕ್ಕವಾಗಂತುಕವೆನಿಪ್ಪ ಪೆಸಱಿಂದಂಗದೊಳಿರ್ಪವೂ ೧೨

ಆಗಂತುಕಂಗಳೌಷಧದಿಂದ ಶಾಂತಿಯುಹ
ವೈ ಗರಿಮೆಯುಹ ಕಾಲಸಂಜ್ಞೆಯಾ ಜಪ ದಾನ
ಯಾಗಂಗಳಿಂದ ಪೋಗದೆ ಕೊಲ್ವುದೈ ಮತ್ತೆ ಬಹು ರೋಗಶಸ್ತ್ರಂಗಳಾ
ನಾಗಾದಿ ವಿಷದಷ್ಟ ಜೀವಂಗಳಭಿಚಾರ
ವೀಗಳಂತಾ ಕಾಲಮೃತ್ಯುಭೂಷಂ ಪೊಗುವ
ಬಾಗಿಲ್ವೈ ಕೇಳೆಂದು ಪೇಳುತಿರ್ದಂ ಕುಂಭಜಂಗೆಯಾ ತಾರಕಾರೀ ೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲಸಂಜ್ಞಾ ಮೃತ್ಯುವಾದ ನೆವದಿಂ ಪುಗಲು
ಮೇಲೆಯಾ ಧನ್ವಂತ್ರಿಮುಖ್ಯ ವೈದ್ಯರುಗಳಿಂ
ಭೂಲೋಕದೌಷಧಿಗಳಿಂ ತಪ ಧ್ಯಾನ ಮಂತ್ರಾದಿಯಿಂ ಬಾಂಧವರ್ಗಳಿಂ
ಶ್ರೀ ಲಲಿತವಹ ರಸಾಯನ ಜಪ ಮಹಾಯಾಗ
ಜಾಲದಿಂದಂ ಮಹಾತ್ಮರಿಗಾಗದೆನಲಾಗಿ
ಯಾಲಸೆ ಸರರ್ಗಳಿಂ ರಕ್ಷಿಸುವಡಳವೆಯೆನುತ್ತ ನಿರವಿಸುತಿರ್ದನೂ ೧೪

ನಾಸ್ತಿ ಮೃತ್ಯುಗೆ ಸಮಾನದ ದುಃಖವಿಳೆಯಲ್ಲಿ
ನಾಸ್ತಿ ಮೃತ್ಯುಗೆ ಸಮಾನದ ಭಯಂ ಭಾವಿಸಲು
ನಾಸ್ತಿ ಮೃತ್ಯುಗೆ ಸಮಾನದ ತ್ರಾಸವಗ್ಗಳಂ ಸರ್ವ ದೇಹಿಗಳಿಗೆಲ್ಲಾ
ಶಸ್ತ ಭಾರ್ಯಾ ಪುತ್ರ ಮಿತ್ರಾಣಿ ರಾಜ್ಯ ಸು
ಪ್ರಸ್ತುತೈಶ್ವರ್ಯ ಸಶುಭಾನಿಯಾಬಧ್ನನಿ
ದುಸ್ತರದ ವೈರಾಣಿ ಸರ್ವಾಣಿ ಮೃತ್ಯುಛಿಂದಂತಿ ಯೆಂಬುದೆ ತಪ್ಪದೈ ೧೫

ಏಕಱಿಯದಿರ್ದಪ್ಪರೆಲ್ಲಾ ಜನಂಗಳೀ
ಲೋಕದೊಳು ಸಾಹಸ್ರ ಜನದ ಮಧ್ಯದೊಳೆಯಾ
ಲೋಕಿಸಲು ನೂಱಬ್ದವುಂ ತಪ್ಪದೇ ಬದುಕುವಾತನುಂಟೋ ಇಲ್ಲವೋ
ಜೋಕೆಯೆಂಭತ್ತು ಎಪ್ಪತ್ತು ಬಳಿಕಱುವತ್ತ
ಲಾ ಕೂಡೆಯ್ವತ್ತು ಹತ್ತೈದು ವರುಷವಂ
ಬೀ ಕಾರ್ಯವಿಂದೀಗ ಮರಣವೆಂದಱಿಯರೀ ಸ್ಥಿರವೆಂದು ಕೊಬ್ಬುತಿಹರೂ ೧೬

ಬಳಿಕಲಾವವನಿಗೆನಿತಾಯುಷ್ಯವಾವರುಷ
ದೊಳಗರ್ಧವೈ ಸಲೆ ಬದುಕುವರ ದೆಂತೆನಲು
ತಿಳುಪುವೇಂ ದಿನಕೆಂಟು ಜಾವವೆಚ್ಚತ್ತುಕೊಂಡಿರಲಿಲ್ಲವಲ್ಲಿ ರಾತ್ರೇ
ಯೊಳು ಯಾಮ ಚಾತುಷ್ಕದಲ್ಲಿ ಸತ್ತಂತಿರ್ಪ
ನಿಳೆಯೊಳದುಕಾರಣಂ ನೂಱು ವರುಷಂ ಬದುಕ
ಕಳೆದು ಸರಿಭಾಗವೈವತ್ತು ವತ್ಸರದ ಬಾಳುವೆಯುಂತಲಾ ಜನಕ್ಕೇ ೧೭

ಬಾಲ ಯೌವ್ವನದೊಳಜ್ಞಾನಿಯಾಗಿಹನು ಮಿಗೆ
ಮೇಲೆಯುಂತಾ ಹರೆಯದಲ್ಲಿ ಧರ್ಮಾರ್ಥವುಂ
ಲೋಲಕಾಮಂ ಮೋಕ್ಷವೆಂಬವಂ ತಾನುಳಿವುತನ್ಯಾಯ ವಿಷಯಿಯಾಗೀ
ಸ್ಥೂಲ ವೃದ್ಧತ್ವದೊಳ್ನೆಱಿ ಹೇಹಕೊಡಲಾಗಿ
ಯಾಲೋಕಿಸಲ್ಗೆ ಜನನಾದಿ ಜರೆ ಕಡೆಯಾಗಿ
ಮೂಲರೋಗಂ ಮೃತ್ಯುವಧಿಕ ಶೋಕಂ ವಿರೋಧಂ ಮನುಜಗೆಡೆಗೊಂಬವೂ
೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುಕಾರಣದೊಳಗಲ್ಪಾಯುಷ್ಯನಾಗಿ
ಳ್ದದಱ ಕಡೆಯಲ್ಲಿ ಮರಣವನೆಯ್ದಿ ನರಕಮುಮ
ನದಿರದಾವಗಮುಂಡು ಹಲವು ಯೋನಿಯೊಳೊಗೆದು
ಱಾಟಳದ ಘಟದಂದದಿಂ
ಒದಗಿ ತಿರುಗುತ್ತಖಿಳ ದೇಹ ದೇಹಂಗಳೊಳು
ವಿದಿತ ಬಾಧೆಯನುಣ್ಣುತೀ ಪ್ರಕಾರದಿ ಜೀವ
ಹದುಳಿರದೆ ನಾಶವೆಯ್ದದೆ ಮನುಜ ಕಾಯದುರು ಮರಣಸಂಕಟವೆಂತೆನೇ ೧೯

ಸಾವಕಾಲದೊಳಾ ಮಹಾ ತಮಂ ಕವಿದಂತೆ
ಬೇವಂಗೆ ಕಾದ ಸೂಜಿಯು ಸಂದು ಸಂದಿನೊಳು
ತೀವಿ ಬರೆವಂತಿರ್ದ ದುಃಖದೊಳು ಹಾ ಪಿತಾ ಹಾ ಮಾತೆ ವನಿತೆ ಹಾ ಹಾ
ಏವೆನಕ್ಕಟ ಯೆಂದು ಮೊಱೆಯಿಡುವರಾ ಕಪ್ಪೆ
ಹಾವಿನಗ್ರದ ವದನದೊಳು ಸಿಕ್ಕಿದಂದದಿಂ
ದಾವಗಂ ಮೃತ್ಯುವಿನ ಬಾಯ ತುತ್ತಾಗಿರ್ದಕಾರಣದೊಳೇವೊಗಳ್ವೆನೂ ೨೦

ಸುತ್ತಿಬಳಸಿರ್ದ ಬಾಂಧವರು ಹಿತವುಳ್ಳವರ
ಳುತ್ತಿರಲು ನಿಶ್ವಾಸದೀರ್ಘ ಉಷ್ಣಂಗಳಿಂ
ಬತ್ತಿರ್ದ ಬಾಯಿ ಗಂಟಲುಗಳಾರುತಿರ್ಪ ಕಾಲದೊಳಗಾ ಮಂಚವಾ
ಮುತ್ತಿ ಎಂತೈಯ್ಯ ನಿನಗೆಂಬವರ ಬಾಧೆ ಬಳಿ
ಕತ್ತಲಿತ್ತಂ ಹಾಯಿಕುತ್ತ ನೀರಂ ಮಿಗೆ ಬಿ
ಡುತ್ತಿರಲು ಬಾಯಿಗದು ಬಾಧಿಸುವ ನೀರಾಗುತಿರೆ ಸಂಕಟಂಗೊಳ್ವನೂ ೨೧

ನೆಲದಲಿರ್ದಾತನಾ ಮಂಚಮಂ ಬಯಸುವಂ
ಸಲೆ ಖಟ್ವದಿಂದಿಳೆಯನೆಳಸುವಂಪುದಿದಿರ್ದ
ಮಲಮೂತ್ರದಿಂ ವಿವಸ್ತ್ರದೆ ಲಜ್ಜೆಯಂ ತೊರೆವುತೆದೆಕೊರಲ್ಗಳು ಮೊಣಗುತಾ
ಸಲಿಲಮಂ ಬಯಸುತ್ತ ಲಂತಪ್ಪ ಬಾಧೆಯೊಳು
ಸಲೆ ಗಳಿಸಿದರ್ಥಮಂ ನೆನನೆನದು ದುಃಖದಿಂ
ಮಲಮಲಂ ಮರುಗುತಜ್ಞಾನದಿಂ ತನ್ನ ಗೃಹರಕ್ಷಣೆಗೆ ಚಿಂತಿಸುವನೂ ೨೨

ಆ ವೇಳೆ ನೆಲಕೆ ಹತ್ತಲು ಬೀಳೆಯಮನವರು
ತೀವಿ ಕೊರಲೊಳು ಪಾಶಮಂ ಬೀರಿ ತೂನಲತಿ
ನೋವುಂಡೆ ಕೂಡೆ ಗುಱುಗುಱುಗುಟ್ಟಿಯಾತನಾದೇಹ ಪೂರ್ವಾಕಾರದಿಂ
ಆವಾವರವರವರ ತೆಱದಿ ಬರೆ ಸೂಕ್ಷ್ಮವಹ
ಜೀವವದು ಪುಲ್ಜಿಗುಳಿಯಂತಾದಿವಿಡಿದಿಹ ಕ
ಳೇವರವನುಳಿದು ಮತ್ತೊಂದು ಕಾಯುವ ಪೊಕ್ಕುಕರ್ಮಗತಿಗಳೆನೆಯ್ದುವಂ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಮರಣದಿಂದ ತಿರಿವುದು ಮಹಾ ದುಃಖವೈ
ಮಾ ಮರ್ಘರೆಸಾವೆಂಬುದಲ್ಪದುಃಖಂ ಕಣಾ
ಯಾ ಮಹೀತಳದಲ್ಲಿ ಯಾಚನೆಗೆ ಸಮವಾದ ಬಾಧೆಯಿಲ್ಲೆಂದುವೆಂದೂ
ಶ್ರೀ ಮಹಾವಿಷ್ಣುವಾ ಬಲಿಯ ದಾನವನಿನಿತು
ಭೂಮಿಯಂ ಬೇಳ್ಪಲ್ಲಿ ಗುಡ್ಡನಾದನು ಕಣಾ
ಸಾಮರ್ಥ್ಯನಾಗಲುತ್ತಮ ನಾಗಲನ್ಯರಂ ಬೇಡಲತಿ ಕಿಱಿದಪ್ಪನೂ ೨೪

ಆರಯ್ಯೆ ಲಘುವಪ್ಪುದಾ ಹುಲ್ಲು ಹುಲ್ಲಿಂದ
ಬೂರವತಿ ಲಘುವಲಾ ಬೂರದಿಂ ಲಘುವಪ್ಪ
ರಾರೆನಲು ಯಾಚಕನೆನಲ್ಕೆಯಾ ತೃಣತೂಲಮಂ ವಾಯುಕೊಂಡೊಯಿವುದೂ
ಧಾರುಣಿಯೊಳೀ ಬೇಡುವವನ ಕೊಂಡೊಯ್ಯದಾ
ಮಾರುತನೆನಲ್ಕೆಮ್ಮನೇನಾದೊಡಂತಾ ವಿ
ಕಾರಿ ಬೇಳ್ಸನೊ ಎಂದು ಭಯದಿಂದಲೋಡಿತಲ್ಲದೊಡಿವನ ಕೊಂಡೊಯ್ಯದೇ ೨೫

ಆವ ಕೋಟಲೆಯಿಲ್ಲದುಂಡುಕೊಂಡಿಹರೆಂಬ
ಜೀವರಿಗೆ ಹಸಿದಾಗ ಲಟಲಟಿಪ ದುಃಖವಂ
ತಾವಿಶೇಷದೊಳುಂಡೊಡುಬ್ಬಸಂ ಗೊಳುತಿಪ್ಪ ಬಾಧೆಯಾ ದಿವ್ಯಾನ್ನವಾ
ಸೇವಿಸಲು ಸವಿ ಗಂಟಲಿಂದಿಳಿದ ಬಳಿಕಿಲ್ಲ
ವಾ ವಾಯುಭೇದದಿಂ ಮರಳಿಸಲು ಹೇಹದಿಂ
ನೋವನಿನಿತಪ್ಪ ಕಾರಣದಿಂದ ಭೋಜನಂ ಸುಖವೆ ಸುಜ್ಞಾನಿಗಳಿಗೇ ೨೬

ಸರ್ವರೋಗಕ್ಕೆ ಮಿಗಿಲಾಗಿರ್ದ ರೋಗವೀ
ಯೂರ್ವಿಯೊಳು ಕ್ಷುಧೆಯದನೌಷಧಂಗೊಳಲಾವ
ನೋರ್ವಂಗೆಯಾಕ್ಷಣಂ ಮಾಣ್ಗು ಹರಿಯದ ರೋಗವೀಯಂಗವಳಿವನ್ನೆಗಂ
ಖರ್ವವಲ್ಲದ ಮರಣ ಕಾರಣಂ ಹಸಿವೆಂಬ
ಗುರ್ವಧಿಕದುಃಖವೆಂದನ್ನ ಸುಖಮಂ ತಿಳಿದು
ಪಾರ್ವತೀಪತಿಯ ಗಳಿಪನೇ ಪ್ರೌಢನುಳಿದ ಮಾನವರಜ್ಞರೈ ೨೭

ಇರುಳಲ್ಲಿ ಸುಖದಲ್ಲಿ ನಿದ್ರೈಗೈದಪೆನೆಂಬ
ನರಗಾವ ಸಂತೋಷವೈ ಜಾಡ್ಯದಿಂ ಬೀಳ್ದು
ಮರಣವಲ್ಲದೆಯಖಿಳ ದುಃಸ್ವಪ್ನದೊಳು ನೋವ ಕಾರಣವದುದಯದಲ್ಲೀ
ಪರಿಣಾಮವೇನುಂಟು ಮಲಮೂತ್ರವೊತ್ತೆ ದು
ಷ್ಕರವಾಗುತಿದೆಯೆಂದು ನೆನೆವ ದುಃಖಂಗಳು
ತ್ಕರ ಕೃಷಿಗಳಧಿಕ ವಾಣಿಜ್ಯ ಪಠಣಾದಿಗಳನಾರ್ಜಿಸುವ ಪಿರಿಯ ದುಃಖಂ ೨೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಧ್ಯಾಹ್ನದೊಳು ಕ್ಷುತ್ಪಿಪಾಸಂಗಳಿಂ ನರಂ
ಬಾಧ್ಯನಾಗಿರ್ಪನಾ ತೃಪ್ತಿಯಿಂ ಕಾಮದಿಂ
ವಧ್ಯನೆನಿಸುವನಿನ್ನು ಹಿಮದಲ್ಲಿ ನಡುಗುವತಿ ಕಾಲವೆಂದಿಗೆ ಪೋಪುದೋ
ಸಾಧ್ಯವಲ್ಲೆಂದಳಲುವಂ ಗ್ರೀಷ್ಮದೂಷ್ಣ ಸಾ
ನ್ನಿಧ್ಯಕೇಗೆಯ್ದವೀ ಮಳೆಗಾಲವಾಯ್ತದಕೆ
ಬುಧ್ಯಗ್ರವೇನೆಂಬ ನದಱಿಂದ ಕಾಲವಾವುದು ಸುಖಂ ಮಾನುಷ್ಯಗೇ ೨೯

ಧನವನಾರ್ಜಿಸುವ ಕಾಲದೊಳಧಿಕ ದುಃಖವಾ
ಧನವಾದ ಬಳಿಕಲಿಂಬಿಡುವ ದುಃಖಂಗಳಾ
ಧನವೆಯ್ದೆ ಹಾನಿಯಾಗಲು ಜೀವವೆ ಹೋದ ಮಾಳ್ಕೆಯಿಂದಧಿಕ ದುಃಖಂ
ಮನೆಗೆ ಬಳಸಿದ ವಿತ್ತಮಂ ಲೆಕ್ಕಿಸುತ ಪೋಯಿ
ತಿನಿತರ್ಥವೆಂದು ಮಲಮಲನೆ ಮಱುಗುವ ದುಃಖ
ವೆನಿತು ಬಾಧೆಯ ಮಾಡುತಿಪ್ಪದಂತಾ ದ್ರವ್ಯವೆಂಬುದೇನ್ಸೈಯ್ಯಸುಖವೂ ೩೦

ಘಳಿಸಿದರ್ಥಂ ಚೋರರಿಂದೆಯ್ದೆ ಪೋಪುದೊ
ಜಲಧಿಯೊಳ್ಮುಳುಗುವದೊ ಕಿಚ್ಚಿನಿಂದೆಲ್ಲೊಡವೆ
ಗಳು ಬೇವವೋಕಂಡದಾಯಾದ್ಯರೊಯ್ವರೋ ಭೂಮೀಶರಱೆದು ಪಿಡಿದೂ
ಗಳಕೆ ಹಗರಿಕ್ಕಿಬಾಧಿಸುತಲಿಳ್ಕೊಂಬರೋ
ಯಿಳೆಯಲ್ಲಿ ಬಯ್ತೊಡೆಯೊಳೆಯ್ದೆ ತೊಲಗುವದೆನು
ತ್ತಳಲುವರು ದೇಹಿಗಳಿಗೆಂತು ಮೃತ್ಯುವಿನ ಭಯಮಂತರ್ಥಪತಿನರರಿಗೇ ೩೧

ಆಕಾಶದೊಳು ಮಾಂಸಮಂ ಕಚ್ಚಿ ಪಕ್ಷಿಯೊಂ
ದೇಕತೆಯೊಳೆಯ್ದುತಿರೆ ಹಲವು ಖಗನಿಕರವದ
ನಾಕರಿಸಿಕೊಳಲೆಂದು ಕಡಿದಾಡಿ ಜಗುಳಿ ಧರೆಯೊಳು ಬೀಳೆ ಪಿಡಿದ ನಾಯ್ಗೆ
ಈ ಕಡೆಯ ಜಗಳವದನೊಂದು ಶುನಕಂ ತಂದು
ಪಾಕೆ ನೀರೊಳು ಮೀನ್ಗೆ ವಿಲಗವಪ್ಪಂತೆಯು
ಸ್ತೋಕ ಧನವೆಲ್ಲಿರ್ದುದಲ್ಲಿ ಕಾಳಗವಲಾದ್ರವ್ಯದಿಂದೇನು ಸುಖವೈ ೩೨

ಧನವೊದಗಿದಲ್ಲಿಯಜ್ಞಾನಮಂ ಮಾಡುವುದು
ತನುವನೇ ಕೆಡಿಸೂದು ಹಾನಿಯಾದಲ್ಲಿಯಾ
ರ್ಜನೆಯ ಕಾಲದೊಳಧಿಕ ಸಂಕ್ಲೇಶಮಂ ಮಾಳ್ಪುದೀ ಎತ್ತಮೆಂದು ತಿಳಿದೂ
ಅನಿಶಮುಂ ದ್ರವ್ಯಮುಂ ಘಳಿಸಬೇಕೆಂದು ಕೆ
ಮ್ಮನೆ ಕುದಿವನಜ್ಞಾನಿಯ್ಯೆ ಯಥಾ ಲಾಭ ತು
ಷ್ಟನೆ ಸುಖಿ ಕಣಾ ದೇಹವಸ್ಥಿರಂ ಪರಲೋಕಸಾಧನವೆ ಕರ್ತವ್ಯವೈ ೩೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದುಕಾರಣಂ ದ್ರವ್ಯಪತಿ ಸರ್ವದುಃಖಿಯೈ
ಸದಮಲಜ್ಞಾನಿ ಸರ್ವಾರ್ಥನಿಸ್ಪೃಹನೆ ಸುಖಿ
ಯೊದಗಿರ್ದ ಭೋಗಿಯೈ ಸಂಸಾರಿಗೆಂತೆನೆ ವಿವಾಹವಾದಪ್ಪೆನೆಂಬಾ
ಮೊದಲಲ್ಲಿಯೇ ದುಃಖವೇಂಗನೆಗೆ ಮಕ್ಕಳಾ
ಗದ ದುಃಖವೆಂತಕ್ಕೆ ಗರ್ಭವಾಗಲ್ಕಿನ್ನು
ಬದುಕುವಳೊ ಹೆರಲಾರದಳಿವಳೊ ಯೆಂದೆಂಬ ದುಃಖದಿಂ
ಮರುಗುತಿಹನೂ ೩೪

ಪ್ರವಿಸಿತ್ತು ಗರ್ಭವಂಗನೆಂಬ ದುಃಖಮು
ದ್ಭವವಾಗಲಾ ಶಿಶುಗೆ ಮಲಮೂತ್ರದುರ್ಗಂಭ
ವವಿರತಂ ದುಃಖವಾ ಪುತ್ರದಂತೋದ್ಭವಾದಿಯ ರುಜಾದುಃಖವಿನ್ನೂ
ತವೆ ಪಶುವ ಕಾಣೆನೆಲ್ಲಿಗೆ ಹೊಯ್ತೊ ಕೃಷೆ ಕೆಟ್ಟು
ದವನಿ ಬೆಳೆಯದು ಕುದುರೆಯಾರೊಯ್ದರೋ ಬರು
ತ್ತಿವೆ ಮಳೆಯ ಚಿಹ್ನಂಗಳೆನ್ನ ಮನೆ ನನೆವುತ್ತಿದೇಗೆಯ್ವೆನೆಂಬ ದುಃಖಂ ೩೫

ವನಿತೆ ಬಾಲಾಪತ್ಯಳಾಗಿರ್ದಪಳು ನೀರಿಂ
ಧನವಗ್ನಿಗೆಂತು ಬಾಣತಿಯನಾರೈಯ್ಯಬೇ
ಕಿನಗೊಬ್ಬರಿಲ್ಲೆಂಬ ದುಃಖವೆನ್ನಯ ನಂಟರಲ್ಲಿಯುತ್ಸಹವಪ್ಪುದೂ
ಅನಿಬರ್ಗೆ ಮಾಡಬೇಕೆಂದೆಂಬ ದುಃಖವಾ
ತನುವಾಸೆಯಿಂದೆನ್ನೊಳಂ ಪೋರ್ವನೋ ಗೆಲುವ
ಡನುವಾವುದೆನಗೆಂಬ ದುಃಖದಿಂದಂ ಮಲಮಲಂ ಮಱುಗುವಂ ಜೀವನೂ ೩೬

ಈ ಮಗಳನಾರ್ಗೀವೆನಿವಳತ್ತೆಮಾವಂದಿ
ರಾ ಮನೆಯವರು ಗಂಡನೆಂತಹ ಕ್ರೂರರಹ
ರೋ ಮತ್ತೆ ಮಡಗಿಕೊಂಡಿರೆ ನೆರೆದ ಮಗಳಪಖ್ಯಾತಿಯಹುದೆಂಬ ದುಃಖಂ
ಏ ಮಾಳ್ಕೆಯಿಂದ ಸುಖವಿಲ್ಲ ಸಂಸಾರಿಗಳಿ
ಗೀ ಮಹಿಯೊಳದುಕಾರಣಾನಲಸ್ತಂಭಿಯುಂ
ತಾ ಮಧ್ಯದೊಳಗಿರ್ದು ತತ್ಪ್ರಪಂಚಗಳಂ ಪೊರ್ದದಿರ್ಪವನಪೂರ್ವಂ ೩೭

ಆ ಕುಟುಂಬದ ಚಿಂತೆಯೇ ತನಗೆ ಗತಿಯಾಗಿ
ಲೋಕದೊಳಗಿರ್ಪವಂ ಕೇಳಿದ ಶಿವಾಗಮ
ಶ್ಲೋಕಾರ್ಥಮುಂ ಶೀಲಮುಂ ಸದ್ಗುಣಂಗಳೆಲ್ಲಾ ಕೆಡುವೆಂತೆಂದೊಡೇ
ಪಾಕವಾಗದ ಹಸಿಯ ಮಡಕೆಯೊಳು ನೀರನವಿ
ವೇಕದಿಂ ಪೊಯ್ಯಲಾ ಭಾಂಡವೇಯೊಡೆದು ಕೆ
ಟ್ಟಾ ಕುಂಭದಿಂ ಜಲಂ ವ್ಯರ್ಥವಪ್ಪಂತಪ್ಪುದೆಂಬುದೇ ಸಿದ್ಧಾಂತವೈ ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೂತಳದೊಳೆಲ್ಲಾ ಭಯಂಗಳೊಳು ತನತನ್ನ
ಜಾತಿಗಳ ಭಯುವೇ ಮಿಗಿಲೆಂತೆನಲ್ಕೊಂದ ಸಂ
ಪೂತ ವಸ್ತುವನೆರಡು ನಾಯಿಗಳು ತಿನಲೆಂದು ಕಚ್ಚಿಯಾಡುವ ಮಾಳ್ಕೆಯಿಂ
ಖ್ಯಾತಿ ಧನ ರಾಜ್ಯಸಂಪತ್ತಿನಿಂ ಕೇಡಿಲ್ಲ
ದಾತನಿಳೆಯೊಳಗದೆಂದುಂ ನೋಡಲಿಲ್ಲಲಾ
ಮಾತೇನು ಬಳಿಕಲೊಬ್ಬೊಬ್ಬರಂ ಗೆಲುವೆವೆಂದೆನುತವರು ಕೆಡುತಿಪ್ಪರೈ ೩೯

ಚಕ್ರವರ್ತಿಗಳೊಳಗೆ ಕಾರ್ತಿವೀರ್ಯ್ಯಂ ಮಹಾ
ವಿಕ್ರಮಾಧಿಕನೆನುತ್ತಿರ್ದನಾಚಾರವನು
ಪಕ್ರಮಿಸಲಾಗಿಯಾ ಜಮದಗ್ನಿಯಣುಗನಾತನ ಬಾಹುಸಾಹಸ್ರಮಂ
ಆಕ್ರಮಿಸಿ ತರಿದನೆನೆಯಾ ಪರಶುರಾಮುಗಂ
ವಕ್ರವಾಗುತ್ತಮೀಗಂ ಪೋಗಲೀಯ್ಯದಾ
ನಕ್ರಸಾಗರದೊಳಗೆ ಕೆಡೆವಂತೆ ಮಾಡನೇ ದಶರಥಾತ್ಮಜರಾಮನೂ ೪೦

ಆ ರಾಮನೇ ನಿಜಾನ್ವಯ ಕೃಷ್ಣನಾದಲ್ಲಿ
ಆ ರಾಕ್ಷಸಾಧಿಪ ಜರಾಸಂಧನಿಂದ ಬಡಿ
ಹೋರಿಯಾಗುತ್ತ ಚೌರಾಸಿ ದುರ್ಗಂಗಳಂ ಪೊಕ್ಕು ಭಂಗಂಬಡೆಯನೇ
ಓರಂತೆಯಾ ಮಾಗದನೆ ಭೀಮನಿಂದಂ ವಿ
ದಾರಿಸಿಕೊಳನೆ ಮಹಾನಾಗಾಯುತತ್ರಾಣಿ
ಯಾರುಭಟೆಯುಡಗಿ ಯಂಜನೆಯ ತನುಜನ ಬಾಲದಿಂದ ಭಂಗಂಬಡೆಯನೇ ೪೧

ಆ ಹನೂಮಾನುವೇ ಸೂರ್ಯನಂ ಬಡಿವೆನಂ
ದೂಹಿಸೆ ನಿಜಾಯುಧದೊಳೆಣಗಲಿಕ್ಕಡೆಯಾಗಿ
ವಾಹಿನೀಪತಿಯಲ್ಲಿ ಬೀಳನೆಯಂತಪ್ಪರವಿ ಪರಾಕ್ರಮಿಯೆಂದೊಡೇ
ಆಹ ಮೇಘಂಗಳಿಂದಂ ತೇಜವೆ ಮರೆಃ
ಹೋಹೆಡೆಯೊಳೆಗೆಯ್ದನಾ ಮುಗಿಲುಗಳು ಗಂಧ
ವಾಹನಿಂ ಹರಿದು ಹೋಗನೆಯಾ ಮಹಾನಿಲನ ಪರ್ವತಂಗಳು ತಡೆಯುವೇ ೪೨

ಶೈಲಂಗಳೆಂಬೊಡವರಗ್ಗಳವದೇಂ ಪ್ರಳಯ
ಕಾಲಾಗ್ನಿಯಿಂ ಬೆಂದುಹೋಗನೆಯಾ ಮಹಾ
ಜ್ವಾಲನಂ ಮಿಗಿಲೆನಲು ವಿಲಯೋದಕದೊಳು ನಂದದೇ ವಾರಿ ಮಿಗಿಲೆಂದೊಡೇ
ಮೇಲೆಯುಜ್ವಲವಾದ ಘರ್ಮಕಾಲದೊಳಂಶು
ಮಾಲಿಯಿಂ ಬಯಲಪ್ಪುದಾ ಸೂರ್ಯನಧಿಕವೆಂ
ದಾಲಿಸುವೊಡಾ ಶರಧಿಯಲ್ಲಿ ಬೀಳುವನದಱಿನಗ್ಗಳರ ಪೇಳಲಳವೇ ೪೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ರವಿಮುಖ್ಯ ದೇವತೆಗಳಾಲೋಕಮಂ
ಪೆತ್ತ ಬೊಮ್ಮನದೊಂದು ದಿನದಲ್ಲಿ ಮಡಿವರೈ
ಮತ್ತನುಜ ಕೇಳ್ವೊಡಾ ಬೊಮ್ಮನೇಯಧಿಕವೆಂದೆಂಬೊಡಾ ದೇವತೆಗಳಾ
ವೊತ್ತಸಹಿತಂತೊಂದನಿಕ್ಕಿ ಸೊನ್ನೆಗಳನಿ
ಪ್ಪತ್ತೈದಕೊಟ್ಟುಗುಣಿಸಲದೆ ನಿಧಿಯದಱ
ಯಿತ್ತಱದ ಗಣನೆಗಳ ದೇವತಾಬ್ದದೊಳು ವಿಧಿ ಸತ್ತುಹೋಹನು ನಿಶ್ಚಯಂ ೪೪

ಆದುಕಾರಣಂ ಯಿಳೆಯ ಸಂಸಾರದಲ್ಲಿ ಸುಖ
ಒದಗಲಱಯದು ನಿಶ್ಚಯದೊಳಿದಂ ನೀಂ ವಿವೇ
ಕದೊಳಱವುತಂ ವಿಹಾಯೋಧಿಕ ಜಗನ್ನಾಥ ಪರಮಾತ್ಮನವ್ಯಯನನೂ
ಮುದದಿಂದಲಱದತಿಶಯಂಗಳಭಿಮಾನವೆನಿ
ಸಿದ ದುರ್ಗುಣಂಗಳಂ ಬಿಡಬೇಹುದೆಂದು ಪೇ
ಳಿದನಲಾ ಕುಂಭಜಾತಂಗೆ ಷಣ್ಮುಖನೆನುತ್ತಿರ್ದನಾ ಗುರುರಾಯನೂ ೪೫

ಆರಯ್ಯಲೀ ಜಗತ್ಪ್ರಾಣಿನಿಕರಂಗಳೊಳು
ಶೂರನಿನ್ನಾರು ಪಂಡಿತನಾರು ನಿರ್ಮಲೋ
ದಾರಿಯಾದವನು ಸರ್ವಮಂ ಬಲ್ಲನಿನ್ನೇನುವಱಯದವ ಮೂರ್ಖನಹನೂ
ಆರಱವನಿಂದಾವನೆನಿತ ಬಲ್ಲವನನಿತ
ಳಾ ರಸೆಯೊಳಧಿಕನಾ ಹದಿನಾಲ್ಕು ಲೋಕಕೆ ಮ
ಹಾರಾಯನಾದ ಸರ್ವಜ್ಞನೊಬ್ಬನೆ ಬಲ್ಲನಧಿಕನೆಂದಱ ಕುಮಾರಾ ೪೬

ಸಾತಿಶಯದಿಂದೆ ದೇವೇಂದ್ರಂಗೆ ಬಾಧೆಯನಿ
ವಾತಕವಚರು ಮಾಡುತಿರಲವರನರ್ಜುನಂ
ಧೂತಿಸುತ ಗೆಲಿದನಂತಪ್ಪರ್ಜುನಂ ಜರಕನಂಬಿನಿಂ ಕೃಷ್ಣನಳಿಯೇ
ಓತವನ ಸತಿಯರಾರ್ರೈಕೆಗಂ ಬರಲಾಗಿ
ಯಾ ತರುಣ ವಿಟ ಶಬರರಾ ಹರಿಯ ಹೆಂಡಿರಂ
ಆತನರ್ಜುನನನೆಳೆದುಕೊಂಡೊಯ್ದು ಹಾನಿಯಾಗದೆ ಪಾರ್ಥಗೇ ೪೭

ನೃಪರು ರಾಜ್ಯವನಾಳುತಿರ್ದಪ್ಪರಂತವರಿ
ಗಪರಮಿತ ಭೋಗವೆಂದೆನಬೇಡವಾ ಬಾಧೆ
ಯುಪಮಿಸಲು ಬಪ್ಪುದೇ ಪತಿರಾಜರಲ್ಲ ಭೂಧನಸತಿಯರಾದಾ
ನೆಪದಿಂದ ಬಂದ ಜಗಳಕ್ಕೆ ಸಂಧಿಯನು ಮಾ
ಡಿಪೆನೆಂಬ ದುಃಖವಂತಲ್ಲವೇಕಾದಿಯಾ
ದ್ವಿಪ ಮುಖ್ಯಸೇನೆಗಂ ತನಗಂಕ್ಷತಂ ಮರಣವವಧಿಯಪ್ಪಧಿಕದುಃಖಂ ೪೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನಣ್ಣ ತಮ್ಮಂದಿರಱಿವರೋ ಪುತ್ರನೇ
ಯಿನ್ನೇನು ಸಂದೇಹವೆಂದೆನುತ ಕೊಲ್ವನೋ
ಮನ್ನೆಯರು ಮರಳಿಬೀಳುವರೊ ರಿಪುಗಳು ಬಾಣಸಿಯರಾದಿಯಾದವರೊಳೂ
ಅನ್ನಯದ ಮದ್ದು ಮರುವಡಿಯಿಂದ ಮಡಿಪರೋ
ಕನ್ನೆಯರು ಸವತಿಮಚ್ಚರದಿಂದ ಮುಳಿವರೋ
ಇನ್ನಾನದಾವಾಗಲಳಿವೆನೋ ಎಂದು ನಿಚ್ಚಂ ಬೆದಱುತಿರ್ಪನರಸಂ ೮೯

ಹೊದೆವವೆರಡೇ ಸೀರೆ ಯಿಂದಳದ ಹಚ್ಚಡಂ
ಅದಕೆ ನಾನಾ ಚಿತ್ರಪತ್ರವಸ್ತ್ರಾಳಿಗಳು
ಪುದಿದ ಬೊಕ್ಕಸವನಾರ್ಜಿಪೆನೆಂಬ ದುಃಖ ಒಂದೇ ಗೋವುಕಱೆದ ಹಾಲಂ
ಮಧುರದೊಳು ಕೊಂಬನಿತು ಬಱಿದೆ ಕೀಲಾರಗಳ
ನೊದಗಿಸುವ ದುಃಖ ಒಮ್ಮಾನಕ್ಕಿಯಟ್ಟೋಗ
ರದ ತೃಪ್ತನಖಿಳ ಧಾನ್ಯಂಗಳಂ ಘಳಿಸಿ ಲಟಲಟಿಸುತಿಪ್ಪಂ ಭೂಪನೂ ೫೦

ಅರೆಮಂಚತಲ್ಪದನಿತೇ ತನ್ನ ಶಯನಕ್ಕೆ
ಧರೆಯ ಘೋಳಿಡಿಸಿ ನಾನಾ ತೆಱದ ರಾಜಮಂ
ದಿರವನೊಡರಿಪ ದುಃಖವೋರ್ವವನಿತೆಯ ತೃಪ್ತಿಗೆಯ್ದದಿಹ ರತಿಯಾತನೂ
ತರುಣಿಯರನಂತ ಸಾಹಸ್ರಮಂ ಕೂಡಿಯುವ
ದಿರ ಮಲಮಲಂ ಮಱುಗಿಸುತ್ತದಱಿಂ ಮುಂದೆ
ನರಕಮಂ ಘಳಿಸಿಕೊಂಬಾ ದುಃಖ ಭೂನಾಥರಿಗೆ ಸುಖವದಿನಿತಿಲ್ಲವೈ ೫೧

ಮಾಂಗಲ್ಯಕಳಶಪೂರ್ಣೋದಕಂಗಳು ತನ್ನ
ಮುಂಗಡೆಯೊಳಿರ್ದವೆಂಬಲ್ಲಿ ಫಲವೇನು ನರ
ಕಂಗಳಂ ತೊಲಗಿಸಲ್ಕಾರ್ಪವೇಯುದಯಕಾಲದೊಳು ಶುಭವಾದ್ಯಂಗಳೂ
ಅಂಗಣದೊಳುಲಿವುತಿರ್ದಪವರಸು ನಾನೆಂಬ
ಹಂಗಹಂಕಾರವೈಸಲೇ ತನಗೆಯಾ ಪುರಜ
ನಂಗಳಿಗೆ ಬೇಱಾಗಿ ತೋರ್ಪವೇ ನಿಷ್ಕಾರಣದ ಭೋಗವರಸುಗಳಿಗೇ ೫೨

ಸರ್ವಾಭರಣವಿಟ್ಟುಕೊಂಡಿರ್ದನೆಂದೆಂಬ
ಗರ್ವವೈಸಲೆ ದೇಹಕವು ಭಾರವಲ್ಲವೇ
ಸರ್ವಲೇಪನವಂಗದೊಳು ಘರ್ಮಮಲಿನದಿಂದಂ ನಾರ್ವ ಮಲವಲ್ಲವೇ
ಸರ್ವಗೀತಕ್ಕೆ ಮೊಱೆಯಿಟ್ಟಳುವವರ್ಗಂವೆ
ಕೊರ್ವಿದ ಕುಚಂಗಳಬಲೆಯರ ನೃತ್ಯಂಗಳಿಂ
ತುರ್ಪಿ ತೆಗೆಯಲ್ಕರಂ ಕೈಕಾಲ ನಾಡಿ ಪುನ್ಮಾದಗಳ ಬಗೆಯಲ್ಲವೇ ೫೩

CC0. In Public Domain. Jangamwadi Math Collection, Varanasi

ಬಡವರಾಗಿರ್ದವರಿಗತಿ ಬಾಧೆ ತಮತಮ್ಮ
ಮಡದಿಯರು ಮಕ್ಕಳುಗಳನ್ಯಾಯ ವೃತ್ತಿಗಳ
ನೊಡರಿಚುವರೆಂದೆಂಬ ಬಾಧೆಯಿನಿತಿಲ್ಲರಸನುದಯಸ್ತಮಾನದಲ್ಲೀ
ನಡುವಿರುಳೊಳಾರು ಮುನಿದಪರೆನುತ್ತಂ ಬಾಯ
ಬಿಡುತ ಬಾಳ್ದಳಿ ಧರೆಯಂ ನರಕದೊಳು ಮುಂದೆ
ಕೆಡುವರಸುಗಳಿಗಾವ ಸುಖವಿನ್ನು ದೇವತಾದಿಗಳ ಬಾಧೆಯನೊರೆವೆನೂ ೫೪

ಇನ್ನು ದೇವತ್ವಮಂ ಪಡೆದೆನತಿ ಭೋಗದಿಂ
ದುನ್ನತಸ್ವರ್ಗದೊಳಗಿಪ್ಪೆನೆಂದೆನ್ನದಿರಿ
ಮನ್ನಿಸುತ ಪಟ್ಟಮಂ ಕಟ್ಟಿ ದೇವೇಂದ್ರನಾಗಿರ್ದಾವನುಂ ಮಾಡಿದಾ
ತನ್ನ ಸುಕೃತಂ ಪೋಗಲೋಲಯಿಪ ನಿರ್ಜರರು
ತನ್ನ ತೋಳಬಲೆಯರು ಬೇಱೆಯೊಬ್ಬನ ಬಳಿಗೆ
ತನ್ನ ಲೆಕ್ಕಿಸದೆ ಹೋಗಲು ಕಂಡು ಬೆದಬೆದನೆ ಬೇವುತಿಪ್ಪಖಿಳದುಃಖಂ ೫೫

ನರನಾಗಿ ಮಾಡಿರ್ದ ಸುಕೃತದಿಂ ಸ್ವರ್ಗಮಂ
ವರ ಪುಷ್ಪಕದೊಳೆಯ್ದಿ ರಂಭೆಯೂರ್ವಶಿಮುಖ್ಯ
ತರುಣಿಯರು ಸೇವಿಸಲು ಭೋಗಿಸುತ್ತಿರ್ದು ಮಾಡಿದ ಪುಣ್ಯಸಂಕ್ಷಯದೊಳು
ಇರದೆ ಸವೆದುದು ನಿನ್ನ ಪುಣ್ಯವೆಂದಲ್ಲಿರ್ದು
ಸುರರು ನೂಂಕಲು ಮರದ ಮೊದಲ ಕಡಿಯಲು ಬೀಳ್ವ
ಪರಿಯಂತೆ ಚಕ್ರಿಕಾಪತನವೆಂದೆನಿಸುತಿಹ ನರಕದೊಳು ಬೀಳ್ವ ದುಃಖಂ ೫೬

ಆ ಸಗ್ಗದಲ್ಲಿಗೆಯಿದಿದ ಮನುಜಸಂತತಿಗ
ದೇ ಸುಖವದಿಲ್ಲವನ್ಯೋನ್ಯವೈರಂಗಳುಂ
ಟಾ ಸುರದ ದನುಜರಟ್ಟುಳಿ ಹಲವು ರೋಗಂಗಳುಂಟಲ್ಲಿಯಲ್ಲದಿರಲು
ಭಾಸುರದ ಧನ್ವಂತ್ರಿಯೆಂಬವರದೇಕಿಹರು
ಸಾಸವುಂಟಲ್ಲಿ ಧರ್ಮಕ್ಷಯದ ಕಾಲದೊಳು
ಹೇಸದಾ ನರಕವುಂಡಖಿಳಯೋನಿಗಳೊಳಗೆ ತಿರುಗಬೇಕಾದ ದುಃಖಂ ೫೭

ಅದು ಹೋಗಲಯ್ಯ ಮರಮಟ್ಟೆಯಾಗಿರ್ಪೆನಂ
ಬುದು ಜನಂ ಬಳಿಕಲಂತಿಳೆಯಲ್ಲಿ ಪುಟ್ಟಿದು
ದ್ಭಿದಕಾದೊಡಂ ಮೇಣು ಸುಖವುಂಟೆ ಕೊಡಲಿಯಿಂದಂ ಕಡಿಸಿಕೊಂಬ ದುಃಖಂ
ಸದೆದು ಪೆರ್ಗುಂಡಿನೊಳು ಸೊಪ್ಪಾಗುತಂ ಬೆನ್ನ
ಪುದಿದಿರ್ದ ತೊಗಟನೆತ್ತಲ್ಕೆಯುಚಱಿಂದ ನೋ
ವುದು ದುಃಖವಕ್ಕಟಾ ವೃಕ್ಷವಾದೊಡೆ ಬಾಧೆ ಬಿಡುವುದೇ ಜೀವತತಿಗೇ ೫೮

Digitization by eGangotri and Sarayu Trust. Funding by MoE-IKS

ಬಲುಗಾಳಿ ಬೀಸಲಾಗಿದ್ದ ಪೂಗಾಯ್ದಗಳು
ಳ್ಳೆಲೆಗಳುದುರುವ ದುಃಖ ಮಲ್ಲಿ ಮಳೆಯೊನಲಿಂದೆ
ನೆಲೆನೆಯ್ದಿ ಕೊರೆದಿರಲು ಬೇರುಸಹಿತಂ ಮೀಂಟಿಬಿದ್ದೊಣಗಿ ಸಾವ ದುಃಖಂ
ಸಲೆ ಮತ್ತಗಜಕುಲಂ ಮುರಿದಿಡಲು ಕೊಂಬುಗಳು
ಪಲವು ಕಡೆಯಲ್ಲಿ ಮೋಟಾಗಿಯಂತಾವಗಂ
ಮಲಮಲಂ ಮಱುಗುತಿಹ ದುಃಖವಂತಾ ಮಹೀರುಹವಾದಡೇನು ಸುಖವೈ ೫೯

ಪಾವುಗಳಿಗಾದೊಡಂ ಹಸಿವುಂಟಿ ಹಸಿವಿನಿಂ
ದಾವಗಂ ನೀರಡಿಕೆಯಿಂ ವ್ಯಥಾ ಕ್ರೋಧದಿಂ
ನೋವ ದುಃಖಂ ಜೋಗಿಗಳು ಮಂತ್ರದಿಂ ಪಿಡಿದು ಪೆಟ್ಟಿಯೊಳು ಮುದುಡಿ
ತುಂಬೀ
ಆ ವಿಷದ ಪಲ್ಕುರಿದು ಬಿಡದೆ ಕಾಡುವ ದುಃಖ
ಪಾವನಾದೊಡೆ ಕಂಡು ನಿಷ್ಕಾರಣದೊಳು ದಂ
ಡಾವಳಿಗಳಿಂ ಶಿಲೆಗಳಿಂ ಬಡಿದು ಹಾಕುತಿಪರೆನಲಧಿಕ ಹಾನಿಯಲಾ ೬೦

ಕ್ರಿಮಿ ಕೀಟಕಂಗಳಿಗೆ ಬಾಧೆಯುಗ್ಗಳವಲಾ
ಕ್ರಮದೊಳಾಕಸ್ಮಿಕಂ ಜನನ ಮರಣಂಗಳವ
ನಮಮ ಕೆಲಜೀವತತಿ ಭಕ್ಷಿಸಲು ವಿಲಯವೈಯ್ದುವ ದುಃಖ ವಿಭ ಮುಖ್ಯದಾ
ಅಮಿತ ಪದಹತಿಗಳಿಂದೆಯಿದೆ ಮರ್ದಿಸಿಕೊಂಬ
ಸುಮಹನ್ಮಹಾ ದುಃಖಮಾರ್ಜನಾದಿಗಳೊಳಾ
ಕ್ರಮಿಸಿ ಸರ್ವರ ಕೊಲ್ವ ದುಃಖವೆಂದೆನಲಾಗಿ ಸುಖವಿನಿತು ತಲೆದೋರ್ವುದೇ ೬೧

ಮೃಗಜಾತಿಗಳಿಗಾದೊಡಂ ಸುಖಂದೋಱುಗುಮೆ
ಯಗಣಿತದ ಮಳೆಗಾಳಿಯುಷ್ಣ ಶೀತಂಗಳಿಂ
ಮಿಗೆ ನೋವ ದುಃಖವಾ ಬೇಂಟೆಕಾಱರು ಬಲೆಗಳಿಂ ಪಾಯ್ಕಿ ಪಿಡಿದು ಬಳಿಯಂ
ತೆಗೆದಿರಿದು ಕೊಲ್ವ ದುಃಖಂ ದುಷ್ಟವಾಗಿಪ್ಪ
ಮಿಗವಲ್ಪ ಜೀವಿಗಳ ಕೊಲುತಿಪ್ಪವಾಗಿಯಾ
ವಗ ದುಃಖ ವಲ್ಪವಲ್ಲಂತೆಯಾ ಸುಖವುಂಟೆ ಸರ್ವಮಂ ನೀಂ ಭಾವಿಸೈ ೬೨

ಕರಿನಿಕರಕಾದ ಬಾಧೆಗಳನಿನ್ನೇವೆಳ್ವೆ
ನಿರವಧಿಕ ತೃಷೆ ಬುಭುಕ್ಷಾದಿಗಳಿನಾವಗಂ
ನರಲುವತಿಶಯ ದುಃಖ ಯೆಂತಕ್ಕೆಯಿರುಬಱುಗಳನೊಡರಿಚುತ ಪಿಡಿದು ತಂದೂ
ನರರಂಕುಶಾದಿಗಳಿನಾವಗಂ ಬಾಧಿಸುವ
ಪಿರಿಯ ದುಃಖಂ ಪ್ರತಿಗಜಂಗಳೊಳು ಕಾದಿ ಮಡಿ
ವುರು ದುಃಖ ವರಸುಗಳ ಯುದ್ಧದೊಳು ಸರ್ವಾಯುಧಂಗಳಿಂ ಸಾವ ದುಃಖಂ
೬೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತನ್ನ ಸಂಬಂಧದಾನೆಗಳ ಬಿಟ್ಟಾವಾಗ
ಳುನ್ನತದ ದುಃಖದಿಂದಂ ನೆನವ ಬಾಧೆಯ್ಕೆ
ಸನ್ನುತ ಕ್ರಿಮಿಕೀಟ ಪಶು ಪುಲ್ಲು ಮರ ಮೊಟ್ಟೆ ಮುಖ್ಯವಾಗಿರ್ದವಕ್ಕಂ
ತನ್ನಿರಂತರ ಬಾಧೆಯಿಲ್ಲದೇ ಸುಖಮನಿನಿ
ತನ್ನನೆಯಲುಂಟೆ ಹೇಳೆಂದು ತಾರಕವೈರಿ
ಸನ್ನುತಿಯ ಮಾಡಿ ಕೇಳುವ ಕುಂಭಜಾತಂಗೆ ಪೇಳುತಿರ್ದಂ ಕೂರ್ಮೆಯಿಂ ೬೪

ಈ ಪರಿಯೊಳೆಯಿದೆ ತಿರಿಯಗ್ಜಾತಿಯಲ್ಲಿ ನಾ
ನಾ ಪರಿಯೊಳುದಯಿಸುವ ದುಃಖವಿನ್ನೆಂತಕ್ಕೆ
ಯೋಜ ನರಜನ್ಮದೊಳು ಗರ್ಭದೊಳಗುಬ್ಬಸದ ಬಾಧೆ ಯೋನಿಯಂತ್ರಾ
ದಾಪೀಡನೆಯ ಬಾಧೆ ಬಾಲರೋಗಾದಿಗಳ
ಸೋಪಾಧಿಕದ ಬಾಧೆ ಗುರು ಶಾಸನಾದಿಗಳ
ಲಾ ಪಿರಿಯ ಯವ್ವನದ ಕಾಮ ವೃದ್ಧತೆ ರೋಗ ಮರಣ ಬಾಧೆಗಳು ಪಿರಿದೂ ೬೫

ವಾಣಿಜ್ಯವಾ ಕೃಷಿಗಳತಿಶಯ ವಿರೋಧಾನ್ಯ
ರಾಣತಿಯ ಬಾಧೆಯನ್ಯೋನ್ಯ ವೈರಂಗಳಿಂ
ಮೇಣು ಹೋರುವ ಬಾಧೆ ರೋಗಂಗಳಿಂ ನವೆವ ಬಾಧೆಯಂತಾ ರಮಿಸುವಾ
ರಾಣೆಯರೊಳಂ ಮುನಿಸುಗಳ ವಿಯೋಗಂಗಳಧು
ರೀಣ ಬಾಧಾ ಮರಣದಿಂದ ಯಾಚನೆಯ ದ
ಕ್ಷೀಣವೆನಿಸುವ ಬಾಧೆಯದಱಿಂದ ಜೀವಜಾಲಕ್ಕೆ ಸುಖವಿಲ್ಲವಿನಿತೂ ೬೬

ಆರರೆ ಕಾರ್ಪಣ್ಯ ಮಾತ್ಸರ್ಯ ದಂಭಂಗಳುರು
ತರ ಮಹಾತೃಣ ಲಘುತ್ವಂ ಯಾಚನಾ ಭಾವ
ಪರಿಭವಂ ತೃಪ್ತಿ ಕುಸಿದಂ ದಾಸಭಾವಂಗಳಿಂದಪ್ಪ ಪಿರಿಯ ದುಃಖಂ
ಇರದದಿಷ್ಟಾನಿಷ್ಟ ಸಂಪ್ರಯೋಗಂಗಳಾ
ತರದಿಂದ ವಿಪ್ರಯೋಗಂ ಬಳಿಕ ದುರ್ಭಿಕ್ಷ
ಕರಣ ದುರ್ಭಗ ಮೂರ್ಖತಾ ದರಿದ್ರಾದಿಗಳ ಬಾಧೆ ನರಸಂಕುಳಕ್ಕೀ ೬೭

ಮಿಗೆ ರಾಜಿಪಥರೋತ್ತರದ ಭಾವದಿಂದಲಾ
ನಗರಿ ರಾಷ್ಟ್ರಂಗಳತ್ಯಧಿಕ ವಿಭ್ರಮಗಳಾ
ವಗಮೊಪ್ಪ ವನ್ಯೋನ್ಯದ ವಿಷಯದಾ ದುಃಖಮನ್ಯೋನ್ಯಾಭಿಭವದಿಂದಲೇ
ಸೊಗಸುವಂತರ್ಬಹಿಶ್ಶಾಸ್ತ್ರಕೋಪಾದಂಗೆ
ದಗಣಿತ ದುಃಖದಿಂದರಿರಾಜನಾದಂಗೆ
ಜಗದಲ್ಲಿ ಯಣುಮಾತ್ರ ಸುಖವಿಲ್ಲ ಸದ್ವಿರಕ್ತನೆ ಯೋರ್ವನೇಸುಖಿಯಲ್ಲೈ ೬೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನುಜಂಗೆ ನರಜನ್ಮದಿಂ ಬಾಧೆ ಸಾವಲ್ಲಿ
ಘನ ದುಃಖವೆಂತಕ್ಕೆ ಸಗ್ಗವೇಯಲ್ಲಲ್ಲಿ
ವನಿತಾದಿ ಕೂಟಕಾಲದೊಳೆಸೆವ ದುಃಖ ಭೋಗಸಂಕ್ಷಯವಾಗಲೂ
ಅನಿತು ದುಃಖಂ ಮರಳಿ ನರಕವುಂಡಖಿಳ ಜೀ
ವನದಲ್ಲಿ ನಾನಾ ವಿರೋಧಂಗಳೊಬ್ಬುಳಿಯು
ಜನನ ದುಃಖಂಗಳವರಿಂ ಜೀವಜಾಳಕಣುತ್ರ ಸುಖವುಂಟೆ ತಿಳಿಯೈ ೧೯

ದೇವತಾದಿಗಳಿಗೇಂ ಸುಖವುಂಟೆ ರೋಗದಿಂ
ನೋವರಾ ಸೋಮಾಕ್ಷರೋಗಿಯೈ ಮತ್ತೆಯುಂ
ತಾವಗಂ ಮಾರ್ತಾಂಡ ಭಾನುಗಂ ಕುಷ್ಟರೋಗಂ ವರುಣನೆಂಬಾತಗೇ
ಏವೇಳ್ವೆನೈ ಜಲೋದರವಲ್ತೆ ಪೂಷನಂ
ಬಾ ವಿಭಾಕರಗೆ ಪಲ್ಗಳದು ಹೋಗಿರ್ದವಂ
ತಾ ವೀರಭದ್ರನುಗ್ರದೊಳು ದಕ್ಷನ ಮಖವನಾಲ್ದು ಹೊಕ್ಕಾಗಳಿನ್ನೂ ೨೦

ತಲೆ ಹೋದುದಾ ಯಜ್ಞನಾಗಿದ್ದವಂಗದೇ
ಎಲೆಲೆಯಟ್ಟಿಭ್ಯಾಂಚ ಸಂಧಿತವೆನಿಪ್ಪರ್ಥ
ವಲಘುತರನೈ ತನ್ನಿಮಿತ್ತದಿಂ ಯಜ್ಞಂಗೆ ತಚ್ಛಿರೋರೋಗವಾಯ್ತು
ಸಲೆ ದಕ್ಷಗಂ ಮಹಾಜ್ವರ ದುಃಖವಂತೆಸೆವ
ಜಲಜಸಂಭವಗಂಪರಾರ್ಧದ್ವಿಕಾಲದೊಳು
ವಿಲಯುವೆನಲಾತನಿಂದುದ್ಭವಿಸಿದಖಿಳ ಜೀವರ್ಗೆತ್ತಲಯ್ಯ ಸುಖವೂ ೨೧

ಹರಿಗಂ ವಿಚಾರಿಸಲು ಹಲವು ತೆಱದಿಂ ಜನ್ಮ
ಮರಣವಾ ಮಾಯಾಯಿ ಯುಹತನಂ ಸ್ತ್ರೀವಧೋ
ತ್ಕರ ದೋಷವಧಿಕ ಕಾಮಾಸಕ್ತಭಾವವಾ ಪಾಂಡವರ ಕಾರಣದೊಳೂ
ಹಿರಿಯು ಬಂಡಿಯು ಬೋವನಾಗಿರ್ದ ಬಾಧೆಯು
ರ್ವರೆಯಲ್ಲಿ ರಕ್ಕಸರ ಬಡಿಹೋರಿಯಾಗಿ ಸಾ
ಗರ ಮುಖ್ಯದೊಳು ಹೊಕ್ಕು ತನ್ನ ಸತಿಯರ ಬೇಡರೊಯಿದಪಖ್ಯಾತಿ
ದುಃಖಂ ೨೨

ಸುರತತಿಗನಿತ್ಯವಾಸಪ್ರಭಾವಾನಾಂಚ
ಉರುತರದೊಳುಚ್ಛೃಣಾನಾಂತು ಪಾತನವೆಂಬ
ಪರಿಯಿಂದವನ್ಯೋನ್ಯವಾ ಮಹೀಯುಸ್ತ್ವಮನ್ಯೋನ್ಯಮಪಿ ಭಕ್ಷಣಮೆನೇ
ಅರರೆ ಯಿಂತೀ ಪ್ರಕಾರದೊಳು ರಾಗಾದಿಯಿಂ
ಪರಿಭವದ ದೋಷದಿಂದಜ್ಞಾನ ಭಾವದಿಂ
ಬರಿದು ಕೋಟಲೆಗೊಳುತ್ತಿಪ್ಪರಾ ನಿರ್ಜರರು ಸುಖವಿನಿತು ತೋಱದಕಟಾ ೨೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವತೆಗಳಿಗೆ ಕಲ್ಪಕಲ್ಪದೊಳು ಕ್ಷಯಮುಪ್ಪು
ದೈ ವಿಚಾರಿಸೆ ಸಕಾಮಕ್ರೋಧವೆಲ್ಲಿಯುಂ
ಟಾ ವೇಳೆಯಲ್ಲಿ ದೋಷಂಗಳುಂಟೆಂಬುದೇ ನಿಶ್ಚಯಂ ಸರ್ವಕೆಲ್ಲಾ
ಆವಗಂ ದುಃಖವೆಂಬುದು ನಿಜಂ ಸುಖವಿನಿತ
ದಾವಾವ ಬಗೆಯೊಳಿಲ್ಲೆಂದು ನಿಶ್ಚೈಯಿಪುದಿ
ನ್ನಾ ವಿರಕ್ತಿಯೊಳುಂಟು ಮಿಕ್ಕ ಕಾರಣದೊಳಿಲ್ಲೆಂಬುದೇ ಪರಮಾರ್ಥವೈ ೭೪

ಯಿಂತೀ ಪ್ರಕಾರದಿಂದ ಚರಾಚರ ಜೀವ
ಕಂ ತಳ್ತು ದುಃಖವೈ ಕೇಳ್ದಿರೈ ತಾಪಸರ
ತಿಂತಿಣಿಯದಾದ ಬಳಿಕಂತಪ್ಪ ಜೀವರಂ ರಕ್ಷಿಸುವರಾರೆಂದೊಡೇ
ಕಂತು ಮರ್ದನ ಪರಶಿವಂ ಮಹಾಪರಿಪೂರ್ಣ
ಶಾಂತಸ್ವಭಾವಂ ಪರಿತ್ರಾತನಖಿಳ ವೇ
ದಾಂತಗಮ್ಯಂ ಭವಾಂಬುಧಿಯಿಂದಲುದ್ಧರಿಪ ಕಾರುಣ್ಯಗುಣ ಸಮಗ್ರಂ ೭೫

ಭವವೆಂಬ ರೋಗಕ್ಕೆ ದಿವ್ಯೌಷಧಿಸ್ವರೂ
ಪವನಕ್ಕಱಿಂತಾಳಿ ಸರ್ವರಂ ಮಿಗೆ ರಕ್ಷಿ
ಸುವನೀಶನಾ ಸ್ವರ್ಗದಪರ್ಗದಾಯಕನೆನುತ್ತಱಿದು ಬುದ್ಧಿಯಿಂದಾ
ಶಿವನ ಸರ್ವೇಶನ ಮಹಾದೇವನಂ ಕೀರ್ತಿ
ಸುವನೆ ಬುದ್ಧಿಯನುಳ್ಳವಂ ನಿಜಂ ಸತ್ಯವೆಂ
ದವನ ನಾಗಸ್ತ್ಯಂಗೆ ಪೇಳ್ದಂ ಮಹೇಶ್ವರನ ಪುತ್ರನೆನಿಸುವ ಷಣ್ಮುಖಂ ೭೬

ಆ ಗುಹಂ ಮುನಿಪತಿಗೆ ಪೇಳ್ದನೀ ಸಂಸಾರ
ವೇ ಗಹನ ದೋಷಮಿಂತಿದನಪಹರಿಪೆನೆಂದೊ
ಡಾಗದುಳಿದವರಿಂದ ಶಿವನೆ ತಥ್ಯತಥ್ಯವಾ ಶಿವನ ತೋಱಿಕೊಡುವಾ
ಶ್ರೀಗುರೂತ್ತಮನುಂಟು ತದ್ಗುರುವಿನಂಘ್ರಿಯಂ
ರಾಗದಿಂ ಕಂಡು ತತ್ಕೃಪೆಯು ಪಡೆವುದೆ ಮುಖ್ಯ
ವೀಗ ಕೇಳೆಂದು ಬಿತ್ತರಿಸಿದಂ ವರ ಸುಖಾವಹಮೂರ್ತಿ ಶುಭ್ರಕೀರ್ತಿ ೭೭

ಎಲೆ ದಾರುವನವಾಸಿಮುನಿಗಳಿರ ನೀವುದು
ರ್ಮಲಿನರಾಗುತ್ತ ನಿಮ್ಮೆಲ್ಲರಂ ಬಱದಲ್ಲಿ
ಸಲಹಿದುತ್ತಮ ಗೌತಮನ ಮೇಲೆ ನಿಷ್ಕಾರಣಂ ಗೋವಧಾದೋಷಮಂ
ಪಲವು ದುರ್ಬುದ್ಧಿಯಿಂ ದೊರಗಿಸಿದೊಡಾತನಾ
ಮಲಹರನ ಕೃಪೆಯಿಂದ ಕಳೆದು ಗಂಗೆಯನೆ ಭೂ
ತಲದಲ್ಲಿ ಪರಿಸಿ ನಿಮ್ಮಂ ಶಾಪಿಸಲ್ಕೆ ದುರ್ಮಾರ್ಗಿಗಳು ನೀವಾದಿರೈ ೭೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರಿಯಜರು ಜಿನ ಬುದ್ಧ ಭೈರವಾದಿಗಳನೇ
ಗುರು ದೈವವೆಂದು ಗೌತಮನೊಡನೆ ವಾದಿಸುತ
ಪರಿಭವಂ ಬಡೆದಿರಾ ವಿಷ್ಣುಸಹಿತಂ ತನ್ನಿಮಿತ್ತದಿಂನು ಸಕಲಾ
ಗುರುವಪ್ಪನೇ ಶಿವಂ ಸತ್ಯ ಸತ್ಯಂ ಶಿವಾ
ತ್ಪರ ನಾಸ್ತಿಯುದಱಿಂದ ನೀವು ಶಿವನಂಘ್ರಿಯುಂ
ಸ್ಮರಿಸಿ ಕೀರ್ತಿಸಿ ಭಜಿಸಿಯೆಂದನಂದಾ ಸುಖಾವಹಮೂರ್ತಿ ಸುಪ್ರವರ್ತೀ ೭೯

ವಿಹಿತದಿಂದಿಂತಾ ಶಿವಾಧಿಕ್ಯಮಂ ಮಹೋ
ತ್ಸಹದಿಂದ ಪೇಳೆ ಕೇಳುತ್ತ ಹರುಷಿಸಿ ಸುಖಾ
ವಹ ಮೂರ್ತಿಯಂಘ್ರಿಗಳಿಗಾ ದಾರುವನವಾಸಿಗಳು ಸಾಷ್ಟಾಂಗವೆರಸೀ
ಸಹಜದಿಂ ವಂದಿಸುತ ಜಯ ಜಯ ಧ್ವಾನದಿಂ
ಮಹಿಯಲ್ಲಿ ಕೀರ್ತಿಸಿ ಕೃತಾರ್ಥರಾದೆವು ನಿಮ್ಮ
ಮಹಿಮೆಯುಂ ಪೊಗಳಲಳವೇ ದೇವ ಜೀಯ್ಯ ಶರಣಾಗು ಶರಣಾಗೆಂದರೂ ೮೦

ಹರಿಮುಖ್ಯವಾದ ದೇವತೆಗಳಂ ಹುಲ್ಲಿಂಗೆ
ಸರಿಗಂಡೆವಯ್ಯ ಶಿವನೆ ಮಿಗಿಲು ಮಿಗಿಲೆಂದು
ಕರುಣದಿಂ ತಿಳಿಪಿದಿರಿ ಬಿಟ್ಟೆವ ಜ್ಞಾನಮಯಸಮಯ ವರ್ತನೆಯೆಲ್ಲವಾ
ಗುರುಮೂರ್ತಿ ಶಿವನಿಂದ ಮಿಗಿಲಿಲ್ಲ ಮಿಗಿಲಿಲ್ಲ
ನಿರುತದಿಂದಱಿದೆವಱಿದೆವು ಶಿವನೆ ನೀವಲಾ
ಗುರುವೆಂಬ ಶಿವನೆಂಬ ಭೇದವಿನಿತಿಲ್ಲ ನಂಬಿದೆವು ಗುರುವೇಯೆಂದರೂ ೮೧

ಆ ರಮಾಕರನಾದ ದೇಶಿಕಂ ನುಡಿದನಾ
ದಾರುವನವಾಸಿಗಳೆನಿಪ್ಪ ಮುನಿಗಳಿಗೆ ನೀ
ವಾರಾಧಿಸುತ್ತಿರಿ ಮಹೇಶನಂ ಜ್ಞಾನಕ್ರಿಯಾಭರಿತ ಸದ್ಭಕ್ತಿಯಿಂ
ಆರಯ್ದು ದಿವ್ಯಬೋಧೆಯ ನಿನ್ನು ಮುಂದೊಂದು
ಕಾರಣದೊಳೊರೆವೆನೆಂದುಸುರಿದಂ ನಿಖಿಳ ಲೋ
ಕಾರಾಧ್ಯಕೀರ್ತಿ ವಿಲಸತ್ಪ್ರಭಾ ವಿಸ್ಫೂರ್ತಿ ಸತ್ಸುಖಾವಹ ಸುಮೂರ್ತೀ ೮೨

ಕಾದ ಕಬ್ಬುನದ ಮೇಲುದಕಮಂ ಬಿಡೆ ನಿರ್ಮ
ಲೋದಕಂ ಚೊಯ್ಯೆಂದು ಬಯಲಪ್ಪುದಂತಜ್ಞ
ನಾದಾತಗೊರೆದ ಬೋಧಾಧಿಕಂ ತಾವರೆಯ ಪತ್ರದೊಳು ಬಿದ್ದ ನೀರೂ
ಸಾದರದಿ ಹೊಳೆವಂತೆ ಮಧ್ಯಮರಿಗುಸುರ್ದುದಾ
ಹ್ಲಾದಿಸುವ ಚಿಪ್ಪನೊಳು ಬಿದ್ದನೀರ್ಬಲಿದು ಮು
ತ್ತಾದಂತುಟಾಯ್ತು ಮುನಿಗಳಿಗೆ ತದ್ಗುರು ಬೋಧೆಯುತ್ಯಧಿಕಮಪ್ಪವೇದೇ ೮೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಹಳ ಪರಿಯಿಂದ ಕೀರ್ತಿಸುತಿರಲ್ಕಾ ಸುಖಾ
ವಹಮೂರ್ತಿಯಾಗಲಂತರ್ಧಾನವೆಯ್ದಲು
ತ್ಸಹವರತು ಬಡವನೆಂತಕ್ಕೆ ನವನಿಧಿಯ ಪಡೆದಿರ್ದಡೆ ಬಯಲಾಗಲೂ
ಎಹಗಪ್ಪುದಂತೆ ದುಃಖಂ ಮಾಡುತೆಚ್ಚರು
ತ್ತಹಹ ಚಿಂತಿಸಲೇಕೆ ದೇಶಿಕಂ ಪೇಳ್ದ ನಿ
ಗ್ರಹ ಶಿವಧ್ಯಾನ ಪೂಜೆಯೆ ಸಾಲ್ಗುಮೆಂದೀಶಭಜನೆಯಿಂದಿರ್ದರವರೂ ೮೪

ಎಂದು ಹಲಗೆಯ ದೇಶಿಕಂ ಮುಗಿದಕೈವೆರಸಿ
ನಿಂದು ಕೇಳುವ ಕೆಂಚವೀರಾಹ್ವಯಂಗೆನಲ
ವಿಂದೊರೆದನೀ ತ್ರಯೋವಿಂಶತ್ಸುಖಾವಹ ಯೆನಿಪ್ಪ ಕಥೆಯಂ ಕೇಳಿದಾ
ಕಂದಯೆನುತಂ ಪೇಳ್ದ ಬೋಧೆಯಂ ಪದನ ಮಾ
ಡೆಂದ ವೀರೇಶನಪರಾವತಾರನ ವಚನ
ದಿಂದಲೊಡರಿ ಚಿದನಾ ಗುರುಭಕ್ತನನ್ವಯೋದ್ಧರಣನಹ ಮಲ್ಲಣಾರ್ಯ್ಯಂ ೮೫

ಸಾಂಗದಿಂ ಭಕ್ತಹೃದಯಾಂಭೋಜದೊಳ್ಪೊಳೆವ
ಜಂಗಮದ ಮಕುಟದೊಳು ಶೂನ್ಯವಂತಾ ಶೂನ್ಯ
ಲಿಂಗಮಧ್ಯದ ಚಿದಂಬರದಲ್ಲಿ ಶಿವಶಕ್ತಿಯಾಕ್ರಮದ ಪಂಚಶಕ್ತೀ
ಹಾಂಗೆ ನಾದಾಂತರದ ಮಾಹೇಶಲೀಲೆಗಳೆ
ಹೀಂಗೆಯಾ ಕಲ್ಪದೊಳುಂಟೆನುತ್ತಲು
ತ್ತುಂಗ ವರ ವೀರಶೈವಾಮೃತದೊಳೀ ಸುಖಾವಹಮೂರ್ತಿ ಪರಿಸಮಾಪ್ತಂ ೮೬

ಭೂಲೋಕಪಾವನ ಕಕುದ್ಗಿರಿ ಸುದಾಕ್ಷಿಣ್ಯ
ಕೈಲಾಸವದಟ ಮೇಲಣ ಗವಿಯ ಸಿಂಹಾಸ
ನಾಲಂಕೃತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ್ಯಂ
ಶೀಲ ಪಟ್ಟಸ್ಥಲಿಹಲಗೆಯಾಚಾರ್ಯ್ಯನ ಶಿಷ್ಯ
ಮೌಲಿ ಮಣಿ ಕೆಂಚವೀರಾಹ್ವಯಂಗೊರೆದ ಸುವಿ
ಶಾಲವರ ವೀರಶೈವಾಮೃತಪುರಾಣಮಂ ಕೂರ್ತು ಪದನಂ ಮಾಡಿದಂ ೮೭

ಇದು ವೀರಶೈವಮಾರ್ಗಿ ಸದ್ಭಾವ
ಸದನ ಸುವಿರಕ್ತವ್ರತಾಚಾರ ಚಿತ್ಕ್ರಿಯಾ
ಪ್ರದ ಹಲಗೆಯಾಚಾರ್ಯ್ಯನಖಿಳ ಮಾಹೇಶ್ವರಹಿತಾರ್ಥದಿಂ ಕೇಳ್ವ ತನ್ನಾ
ಪದ ಪದ್ಮ ಮಧುಕರಂ ಕೆಂಚವೀರಾಖ್ಯಂಗೆ
ಮುದದೆ ಪೇಳ್ದೀ ವೀರಶೈವಾಮೃತದೊಳಗಾ
ದುದು ಲೀಲೆ ಕಾಂಡ ಮುಗಿದೆಡೆ ಮೂಱುಕಾಂಡ ಮೇಲಿಪ್ಪತ್ತೈದು ಸಂಧೀ ೮೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತು ಸಂಧಿ ೨೫ಕ್ಕಂ ಪದ ೧೩೫೦ಕ್ಕಂ ಗ್ರಂಥ ೭೫ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

ಅಂತು ಕಾಂಡ ೪ಕ್ಕಂ ಪದ ೧೩೫೦ಕ್ಕಂ ಗ್ರಂಥ ೭೫ಕ್ಕಂ
ಮಂಗಳಮಹಾ
ಶ್ರೀ ಶ್ರೀ ಶ್ರೀ

ಪ್ರಥಮ ಕಾಂಡ ೧ಕ್ಕೆ ಪದ ೪೬ ಗ್ರಂಥ ೨೩೦. ದ್ವಿತೀಯ ಕಾಂಡ ಸಂಧಿ ೧೩ಕ್ಕಂ ಪದ ೭೬೦ ಗ್ರಂಥ ೯೨. ತೃತೀಯಕಾಂಡಕ್ಕೆ ಸಂಧಿ ೨೪ ಸಂಧಿ ೨೪, ಪದ ೧೨೫೯, ಗ್ರಂಥ ೧೨೦. ಚತುರ್ಥಕಾಂಡಕ್ಕೆ ಸಂಧಿ ೨೫, ಪದ ೧೩೫೦.

ಅಂತು ಕಾಂಡ I ಸಂ. ೯ ಪದ ೪೭ + ೨೩೦, II ಸಂ. ೧೩ ಪದ
ಗ್ರಂಥ ೭೫ ಪದ ೭೬೦ + ೨, ಗ್ರಂಥ ೯೨ III ಸಂ. ೨೪, ಪದ ೧೨೫೯ + ೩
ಗ್ರಂಥ ೧೨೦ IV ಸಂ. ೨೫, ಪದ ೧೩೫೦ + ೪ ಗ್ರಂಥ ೭೫ ಅಂತು ಸಂ. ೭೧ ಪ
ಮಂಗಳಮಹಾ
ಶ್ರೀ ಶ್ರೀ ಶ್ರೀ

ವೀರಶೈವರ್ಗೆ ಬೇರಾವಧರ್ಮ ಶಾಸ್ತ್ರವೇ
ಕಾರಯ್ಯ ಶಿವಧರ್ಮ ಸತ್ಪುರಾಣವೆಸಕಲ
ಸಾರ ಧರ್ಮಂಗಳಂ ಪೇಳ್ದಪುದು ಲಿಂಗಬಾಹ್ಯಗ್ರ್ಘಟಿತಮಪ್ಪ ಧರ್ಮಂ
ಧಾರುಣಿಯೊಳಾ ಪರಾಶರಯಾಜ್ಞವಲ್ಕ್ಯ ಮನು
ನಾರದಾದಿಗಳು ಪೇಳಿದುದೈಸೆ ಶಿವಭಕ್ತ
ರಾರಾದೊಡಂ ಶಿವಾಜ್ಞೆಯೊಳಾದ ಧರ್ಮಮಂ ಪೊರ್ದಿ ಬಾಳ್ವುದು ಸನ್ಮತಂ

[ನಂಜುಂಡ ಶಿವಕವಿ ವಿರಚಿತ]

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8814

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi